REGD. NO. M. 3616

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | ಸಂಚಿಕೆ ೩೫
VOL. 35 | NO. 35

ಉಡುಪಿ, 3—5—1956

ದೇಶದ ಯುವಜನರ ನಡತೆ

ಸಾರ್ವಜನಿಕ ಸ್ಥಳಗಳಲ್ಲಿ ಹೆಣ್ಣು ಮಕ್ಕಳ ವಿಷಯದಲ್ಲಿ ಯುವಜನರು ನಡೆದುಕೊಳ್ಳುವ ರೀತಿಯನ್ನು ಕುರಿತು ದೂರು ಈಚೆಗೆ ಪತ್ರಿಕೆಗಳಲ್ಲೂ ಇತರ ಕಡೆಗಳಲ್ಲೂ ಬಂದಿದೆಯಷ್ಟೆ? ಬಸ್ ಸ್ಟ್ಯಾಂಡು, ಅಂಗಡಿ ಬೀದಿ, ಚೌಕಗಳು ಮುಂತಾದ ಕಡೆಗಳಲ್ಲೂ ಬಸ್ಸುಗಳಲ್ಲಿಯೂ ಕೆಲವು ಮಂದಿ ಯುವಕರು ಹೆಂಗಸರ ವಿಷಯದಲ್ಲಿ ವಿಹಿತವಾಗಿ ನಡೆದುಕೊಳ್ಳುತ್ತಿಲ್ಲವೆಂಬುದೇ ಆ ದೂರು ಇಂಥ ಚಿಂತಾಕರವಾದ ಪುಕಾರಿಗೆ ಅವಕಾಶವಾಗಿರುವುದರಿಂದ ಸಮಾಜದಲ್ಲಿ ಸಭ್ಯತೆಯೂ ಘನತೆಯೂ ಕಡಿಮೆಯಾಗುತ್ತಿವೆಯೆಂದು ಅನ್ನಿಸುತ್ತದೆ.

ಈ ಪರಿಸ್ಥಿತಿ ಬಂದಿರುವುದಕ್ಕೆ ಕಾರಣಗಳು ನಾಲ್ಕಾರಿವೆ; ಮನೆಗಳಲ್ಲೇ ಗುರುಹಿರಿಯರ ಶಿಸ್ತು ಹೋಗುತ್ತಿದೆ. ಜನರ ಮನಸ್ಸಿನ ಮೇಲೆ ಮತಧರ್ಮದ ಹಿಡಿತ ಸಡಿಲವಾಗುತ್ತಿದೆ. ಲೋಕಾಭಿಪ್ರಾಯದ ಭೀತಿ ಮರೆಯಾಗುತ್ತಿದೆ. ಅಸಭ್ಯವರ್ತನೆಗಳನ್ನು ತೋರಿಸುವ ಪುಸ್ತಕಗಳೂ ಚಿತ್ರಗಳೂ ಅತಿಶಯವಾಗಿ ಪ್ರಚಾರಕ್ಕೆ ಬಂದಿವೆ.

ಹಣವಂತರೂ ಪ್ರಬಲರೂ ಹೊಸ ಹೊಸ ಒಯ್ಯಾರಗಳನ್ನೂ ಫ್ಯಾಶನ್ನುಗಳನ್ನೂ ಪ್ರೋತ್ಸಾಹಿಸುತ್ತಿದ್ದಾರೆ ಸ್ವಾತಂತ್ರ್ಯದ ವಿಷಯದಲ್ಲಿ ತಪ್ಪು ಕಲ್ಪನೆಗಳು ಹರಡಿವೆ. ಅಂಕೆಯಲ್ಲಿಟ್ಟು ದಾರಿತೋರಿಸಬೇಕಾದವರು ಅಂಜಿಕೆಯಿಂದಲೋ ಅಸಡ್ಡೆಯಿಂದಲೋ ಸುಮ್ಮನಿರುತ್ತಿದ್ದಾರೆ. ಸಂಪ್ರದಾಯ ಮರ್ಯಾದೆಗಳ ವಿಷಯದಲ್ಲಿ ಗೌರವ ಕಡಿಮೆಯಾಗುತ್ತಿದೆ ವಿದ್ಯಾವಂತರೂ ಸಹ ತಮ್ಮ ಮಾತುಕತೆಯಲ್ಲಿ ಮರ್ಯಾದೆ ಮರೆತು ಮನಸ್ವೀ ನಡೆಯುತ್ತಿದ್ದಾರೆ ಹದ್ದು ಮೀರಿದ ಮಾತುಗಳಿಗೂ ಲಜ್ಜೆಗೆಟ್ಟ ನಡತೆಗಳಿಗೂ ವಿರೋಧವಿಲ್ಲದ ಸ್ವೈರಣೆ ಕೊಡಲಾಗುತ್ತಿದೆ ಪ್ರದರ್ಶನದ ಅಭ್ಯಾಸವೂ ಜಂಬದ ಅಭ್ಯಾಸವೂ ಸಾಮಾನ್ಯವಾಗುತ್ತಿವೆ ಹೀಗೆ ನಾನಾ ಕಾರಣಗಳಿಂದ ಸಮಾಜದ ಅಂತಸ್ತು ಕೆಳಗಿಳಿಯುತ್ತಿದೆ.

ಇದು ಸರಿಹೋಗಬೇಕಾದರೆ ತಿದ್ದುಪಾಟು ಅನೇಕ ಕಡೆಗಳಿಂದ ಅನೇಕ ರೀತಿಗಳಲ್ಲಿ ಆಗಬೇಕಾಗಿದೆ. ಕೇವಲ ಯುವ ಜನರನ್ನು ಬೈದರೆ ಪ್ರಯೋಜನವಾಗದು. ಏಕೆಂದರೆ ಹೆಣ್ಣುಮಕ್ಕಳ ಪ್ರಚೋದನಾತ್ಮಕ ನಡವಳಿಕೆಯಿಲ್ಲದಿದ್ದರೆ ಕೆಟ್ಟ ಬುದ್ಧಿಯ ತರುಣರೂ ಸಾಮಾನ್ಯವಾಗಿ ತಾವಾಗಿ ದುಡುಕಿ ನಡೆಯುವಷ್ಟು ಸಾಹಸ ಪಡರಾಗುವುದಿಲ್ಲ. ಹೆಣ್ಣು ಮಕ್ಕಳಿಗೂ ತಮ್ಮ ಶೀಲದ ಕುರಿತು ಜಾಗರೂಕತೆ ಇದ್ದಷ್ಟೇ ವಿನಯ, ಒಯ್ಯಾರ, ಬೆಡಗು, ಬಿನ್ನಾಣಗಳಿಗೆ ಒಂದು ಎಲ್ಲೆ ಇದೆ ಎಂಬ ಸತ್ಯವೂ ಹೊಳೆಯಬೇಕು. ಶಿಷ್ಟ ಸಂಪ್ರದಾಯಗಳ ಮೇಲಿನ ಶ್ರದ್ಧೆಯನ್ನು ಸರ್ವರೀತಿಯಿಂದ ಕುದುರಿಸುವುದೇ ಈ ತಿದ್ದುಪಾಡುಗಳ ಮುಖ್ಯ ಉದ್ದೇಶ

ಸಮಾಜದ ಯೋಗಕ್ಷೇಮವೂ ಅದರ ಗೌರವಾರ್ಹತೆಯೂ ಅದರ ನಿಡಿಬಲಕ್ಕೂ ಮಾನವಮರ್ಯಾದೆಗಳಿಗೂ ತಕ್ಕಂತೆ ಇರುತ್ತವೆ. ಮರ್ಯಾದೆಯೆಂದರೆ ಒಬ್ಬ ಮನುಷ್ಯ ವ್ಯಕ್ತಿಯಿಂದ ಇನ್ನೊಬ್ಬ ವ್ಯಕ್ತಿಗೆ ನೈಜವಾಗಿ ಸಲ್ಲಬೇಕಾದ ಮನ್ನಣೆ ಇದು ಒಳ್ಳೆಯ ರಾಷ್ಟ್ರಕ ಜೀವನಕ್ಕೆ ಮೂಲಭೂತವಾದ ಸಂಗತಿ. ಈ ದೃಷ್ಟಿಯಿಂದ ಸಾರ್ವಜನಿಕ ಸ್ಥಳಗಳಲ್ಲಿ ತೋರಬೇಕಾದ ನಡತೆಯ ವಿಷಯದಲ್ಲಿ ತೀವ್ರವಾಗಿ ಗಮನವೂ ಶೋಧನ ಕಾರ್ಯವೂ ಅತ್ಯವಶ್ಯ.

ಇದಕ್ಕಾಗಿ ಬೆಂಗಳೂರಿನ ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆಯ ವ್ಯಾಸಂಗ ಗೋಷ್ಠಿಯ ಕಾರ್ಯ ಸಮಿತಿಯು ಇತ್ತೀಚೆಗೆ ಸಭೆ ಸೇರಿ ವಿಷಯವನ್ನು ನಾನಾ ನೆಲೆಯಿಂದ ಮಥಿಸಿ ಮಾಡಿದ ಸೂಚನೆಗಳೂ ನೀಡಿದ ಸಲಹೆಗಳೂ ಬಹಳ ಅಮೂಲ್ಯವಾಗಿವೆ.

ಮುಖ್ಯವಾಗಿ ನಮ್ಮ ವಿದ್ಯಾರ್ಥಿಗಳು ಘನತೆ-ಗೌರವಗಳ ವಿಷಯದಲ್ಲಿ ಮನಃಪೂರ್ವಕವಾಗಿ ಶ್ರದ್ಧೆ ತೋರಬೇಕು. ಮರ್ಯಾದೆಯಿಲ್ಲದ ನಡವಳಿಕೆಯ ಸಂದರ್ಭ ತಮ್ಮ ಗಮನಕ್ಕೆ ಬಂದಾಗ ಅದನ್ನು ಪ್ರತಿಭಟಿಸಿ, ಹಾಗೆ ನಡೆದವರನ್ನು ಎಚ್ಚರಿಸಲು ಪ್ರತಿಯೊಬ್ಬ ಯುವಕನೂ ಸಿದ್ಧನಾಗಿರಬೇಕು. ಯಾರ ವಿಷಯದಲ್ಲಿ ತಾನು ಸೋದರನಂತೆ ವರ್ತಿಸಬೇಕೋ ಅವರ ವಿಷಯದಲ್ಲಿ ಇತರರು ಬೇರೆ ರೀತಿಯಲ್ಲಿ ವರ್ತಿಸಿದರೆ ಅದು ತನಗಾದ ಅಪಮಾನವೆಂದೇ ಅವನು ಭಾವಿಸಬೇಕು.

ವಿದ್ಯಾರ್ಥಿನಿಯರೂ ಉಪಾಧ್ಯಾಯಿನಿಯರೂ ತಮ್ಮ ವಸ್ತ್ರಾಲಂಕಾರಗಳ ವಿಷಯದಲ್ಲಿಯೂ ನಡೆನುಡಿಗಳಲ್ಲಿಯೂ ಮರ್ಯಾದೆಯ ದೃಷ್ಟಿಯಿಂದ ಜಾಗರೂಕರಾಗಬೇಕು. ಈ ವಿಷಯವನ್ನು ತಾತ್ಸಾರ ಮಾಡುವುದರಿಂದಲೂ ಶಿಷ್ಟ ಸಮ್ಮತವಲ್ಲದ ಅಭಿಪ್ರಾಯಗಳನ್ನು ತೋರುವುದರಿಂದಲೂ ದೊಡ್ಡ ದೊಡ್ಡ ಪ್ರಮಾದಗಳಿಗೆ ದಾರಿಯಾದೀತು. ವಿದ್ಯಾರ್ಥಿನಿಯರು ಒಗ್ಗಟ್ಟಿನಿಂದಲೂ ಧೈರ್ಯದಿಂದಲೂ ಇದ್ದು, ತಮಗೆ ಸಲ್ಲಬೇಕಾದ ಮರ್ಯಾದೆಯನ್ನು ಯಾರು ಮೀರುತ್ತಾರೋ ಅವರನ್ನು ಎಚ್ಚರಿಸಲು ತಪ್ಪಬಾರದು.

ಈ ವಿಷಯದಲ್ಲಿ ಹೆಣ್ಣು ಮಕ್ಕಳ ತಾಯ್ತಂದೆಯ ಜವಾಬ್ದಾರಿ ತುಂಬಾ ಮುಖ್ಯವಾದದ್ದು: ಸದಾಚಾರವನ್ನು ಅವರಿಗೆ ಕಲಿಸಿ ಅವರನ್ನು ತಿದ್ದಬೇಕಾದವರೇ ಹೆತ್ತವರು. ಅವರೇ ಉದಾಸೀನರಾಗಿದ್ದಲ್ಲಿ ಚಿಕ್ಕವರನ್ನು ಆಕ್ಷೇಪಿಸುವುದರಿಂದ ಪ್ರಯೋಜನವಾಗಲಾರದು. ಮೊದಲು ನಮ್ಮ ಮನೆಗಳಲ್ಲಿ ಶಿಸ್ತು ನೆಲೆಗೊಳ್ಳಬೇಕು.

ವಿಶ್ವವಿದ್ಯಾನಿಲಯದವರೂ ವಿದ್ಯಾ ಇಲಾಖೆಯವರೂ ಈ ವಿಷಯದಲ್ಲಿ ಮಾಡಬೇಕಾದ ಕೆಲಸ ತುಂಬಾ ಇದೆ. ನಗರಗಳು ಈಗ ಅಪಾರವಾಗಿ ಬೆಳೆದಿವೆ. ಅಧಿಕ ಸಂಖ್ಯೆಗಳಲ್ಲಿ ಹೊರಗಿನಿಂದ ಬಂದು ತಮ್ಮ ಮನೆಮಠಗಳಿಂದ ದೂರವಾಗಿ ಹಾಸ್ಟೆಲುಗಳಲ್ಲೂ ಹೋಟೇಲುಗಳಲ್ಲೂ ವಾಸವಾಗಿರುವ ವಿದ್ಯಾರ್ಥಿಗಳ ನಡೆನುಡಿಗಳನ್ನು ತಿದ್ದಬಲ್ಲ ಒಂದು ಸಂಸ್ಥೆಯೂ ಇಲ್ಲ. ಈ ಕೆಲಸ ಮಾಡಬಲ್ಲವು ಸರಕಾರ ಮತ್ತು ವಿಶ್ವವಿದ್ಯಾನಿಲಯ ವಿಶ್ವವಿದ್ಯಾನಿಲಯದವರು ಈ ಬಗ್ಗೆ ಹೆಚ್ಚು ಶ್ರದ್ಧೆ ವಹಿಸಿ ವಿದ್ಯಾರ್ಥಿಗಳಿರುವ ಎಲ್ಲ ಜಾಗಗಳನ್ನು ತನಿಖೆ ಮಾಡಿ ವಿದ್ಯಾರ್ಥಿಗಳ ನೀತಿ ನಿಯಮಗಳನ್ನು ಕ್ರಮಕ್ಕೆ ತರಲು ಏರ್ಪಾಟು ಮಾಡಬೇಕು ಈ ವಿದ್ಯಾರ್ಥಿ ಜನತೆಯಾದರೂ ನಾನಾ ಮಟ್ಟಗಳ, ನಾನಾ ಹಿನ್ನೆಲೆಗಳ, ಹಾಗೂ ನಾನಾ ಸಂಸ್ಕಾರಗಳ ವಿವಿಧ ವರ್ಗಗಳವರಿಂದಾದ ಒಂದು ದೊಡ್ಡ ಸಂಕೀರ್ಣ ಸಮಾಜ. ಹೀಗಿರುವ ಕಾರಣ ಇದರ ಮನೋಭಾವವನ್ನೂ ವರ್ತನೆಯನ್ನೂ ತಿದ್ದುವುದು ಮತ್ತು ಅವರಲ್ಲಿ ಶೀಲಸಮರಸತೆ, ಸಾಮೂಹಿಕ ಆತ್ಮ ಸಂಯಮಗಳನ್ನು ಪ್ರೋತ್ಸಾಹಿಸುವುದು ವಿಶ್ವವಿದ್ಯಾನಿಲಯದ ತೀವ್ರ ಗಮನಕ್ಕೆ ತಕ್ಕ ವಿಷಯವಾಗಿದೆ. ಇಲ್ಲದೆ ಶೀಘ್ರದಲ್ಲೇ ಒಳ್ಳೆಯ ರಾಷ್ಟ್ರಕವಾಗಿ ವಿಕಾಸ

(೧೨ನೇ ಪುಟ ನೋಡಿರಿ)

ಆಯ್ಕೆಯೇ ಮುಖ್ಯ!

ಯೋಗ್ಯ ವ್ಯವಹಾರದಲ್ಲಿ ಸರಿಯಾದ ಆಯ್ಕೆಮಾಡುವ ನೈಪುಣ್ಯವಿಲ್ಲದೆ ವ್ಯಾಪಾರಿಗಳು ಸಫಲರಾಗುವುದು ಬಹಳ ವಿರಳ.

ವ್ಯಾಪಾರದಲ್ಲಿ ಹಣಕಾಸಿನ ಸಮಸ್ಯೆಗಳನ್ನು ಬಿಡಿಸುವುದು ದಕ್ಷ ಬೇಂಕುಗಳನ್ನು ತಮ್ಮ ಬೇಂಕರರನ್ನಾಗಿ ಆಯ್ದುಕೊಳ್ಳುವುದನ್ನೆ ಅವಲಂಬಿಸಿರುವುದು.

ವ್ಯವಹಾರದಲ್ಲಿ ನಿಮಗೇನಾದರೂ ಆರ್ಥಿಕ ಸಮಸ್ಯೆಗಳಿದ್ದು, ವಿಶಾಲ ಅನುಭವವುಳ್ಳ ಮತ್ತು ನಿಜವಾದ ಹಿತಾಸಕ್ತಿಯುಳ್ಳ ಬೇಂಕಿನ ಸಹಾಯದ ಅಗತ್ಯಬಿದ್ದರೆ ನಿಮ್ಮ ಸೌಕರ್ಯಕ್ಕಾಗಿ ನಮ್ಮೆಡೆಗೆ ಬನ್ನಿರಿ.

ನಿಮಗೆ ನೆರವು ನೀಡಲು ನಮಗೆ ಆನಂದವೆನಿಸುವುದು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಸ್ಥಾಪನೆ: 1925.

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವ್ಯವಹಾರದಲ್ಲಿ ಪ್ರಜಾಪ್ರಭುತ್ವದ ಯಶಸ್ಸು

ಅಜ್ಞರಿಗಿತ್ತ ಮತದಾನದ ಹಕ್ಕಿನಿಂದ ಅಪಾಯವೇ ಹೆಚ್ಚು

ವ್ಯವಹಾರದಲ್ಲಿ ಪ್ರಜಾಪ್ರಭುತ್ವವೆಂದರೆ ಕೆಲವೇ ನಿರ್ಣಯಗಳಿಗೂ ಹಲವಾರು ಸಂಶಯಗಳಿಗೂ ನಮ್ಮನ್ನೊಯ್ಯುವ ಅತಿರೇಕ ಚರ್ಚೆ ಎಂದರ್ಥ. ನೆಪೋಲಿಯನನಿಗನುಸಾರ, ಸಂಶಯವೇ ಆತ್ಮಘಾತದ ಮಾರ್ಗದಲ್ಲಿಟ್ಟ ಪ್ರಥಮ ಪದ.

ನಾವಿಂದು ಪ್ರಜಾಪ್ರಭುತ್ವದ ಹೆಸರಿನಲ್ಲಿ ತರ್ಕಕ್ಕಾಗಿ ತರ್ಕವನ್ನೂ ವಿರೋಧಕ್ಕಾಗಿ ವಿರೋಧವನ್ನೂ ಮಾಡುತ್ತಿದ್ದೇವೆ ಇವೆಲ್ಲದರ ಮೂಲರಹಸ್ಯವು ಅಗ್ಗದ ಪ್ರಚಾರವನ್ನೂ ಪ್ರಾಮುಖ್ಯತೆಯನ್ನೂ ಪಡೆಯುವುದಾಗಿದೆ. ಪರಿಪಕ್ವವಾದ ಸಲಹೆಯನ್ನೂ ತೀರ್ಮಾನವನ್ನೂ ನಾವು ತಳ್ಳಿಬಿಡುತ್ತೇವೆ; ವಿಶ್ವಾಸದ ಪರೀಕ್ಷೆಯಲ್ಲಿ ಉತ್ತೀರ್ಣರಾದ ಯೋಗ್ಯತಾವಂತರ ಅರ್ಹತೆಯನ್ನು ಪ್ರಶ್ನಿಸುತ್ತಿದ್ದೇವೆ.

ಇಷ್ಟನ್ನೂ ಮಾಡುವುದು ಸೇವೆಯ ಹೆಸರಿನಲ್ಲಿ—ಜನಸೇವೆಗಾಗಿಯೇ ನಾವು ಗುಂಪುಗಳನ್ನೂ ಪಕ್ಷಗಳನ್ನೂ ಕಟ್ಟಿಕೊಳ್ಳುತ್ತೇವೆ. ನಾವೇ ಅವುಗಳ ಮುಖಂಡರೆಂದು ಘೋಷಿಸುತ್ತೇವೆ. ಅಜ್ಞ ಜನರ ಮುಂದೆ ಸತ್ಯ ಸಂಗತಿಗಳನ್ನು ವಿರೂಪಗೊಳಿಸಿ ಮಂಡಿಸುತ್ತೇವೆ. ಹೀಗೆ ಜನರಲ್ಲಿ ಅತೃಪ್ತಿ ಮತ್ತು ಅಸಮಾಧಾನಗಳನ್ನು ಹುಟ್ಟಿಸುತ್ತೇವೆ. ಈ ಭಂಡವಾಳದಿಂದ ಲಾಭ ಹೊಂದುವುದೇ ನಮ್ಮ ಪ್ರಯತ್ನ!

ಹೇಯವಾದ ಈ ಪ್ರಯತ್ನದಲ್ಲಿ ನಿರತರಾಗಿರುವಾಗ ನಾವು ಯಾರ ಸೇವೆಯನ್ನು ಮಾಡುತ್ತೇವೆಂದು ಹೇಳುತ್ತಾ ಬಂದಿದ್ದೇವೊ ಅವರಿಗೆ ಆ ಸಂಸ್ಥೆಗೆ ದುರಸ್ತಿಗೊಳಿಸಲ್ಪಡಲಾಗದಷ್ಟು ದುರವಸ್ಥೆಯನ್ನು ತರುವ ವರೆಗೂ ಮುಂದರಿಯುತ್ತೇವೆ. ಪ್ರಜಾಪ್ರಭುತ್ವದ ಈ ರೋಗವು ಎಷ್ಟು ವಿಪರೀತ ಹಾವಳಿ ನಡೆಸುತ್ತಿದೆಯೆಂದರೆ ಸಾಮಾಜಿಕ ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಔದ್ಯಮಿಕ ಸಂಘ—ಸಂಸ್ಥೆಗಳು ಸಹ ಇದರಿಂದ ಮುಕ್ತವಾಗಿಲ್ಲ.

• ರಾಗದಲ್ಲಿ ಎಲ್ಲ ತೊಂದರೆಗಳಿಗೂ ರಾಮಬಾಣದಷ್ಟು ಪ್ರಭಾವಿಯಾದ ಪರಿಹಾರ ಮಾರ್ಗವೆಂದು ತೋರುವ ಪ್ರಜಾಪ್ರಭುತ್ವವು ನಿತ್ಯ ವ್ಯವಹಾರದಲ್ಲಿ ಇಷ್ಟು ಹೆಚ್ಚಿನ ಕೆಡುಕನ್ನು ಮಾಡುತ್ತಿರುವುದಾದರೂ ಹೇಗೆ? ಇದಕ್ಕಿರುವ ಉತ್ತರ ಒಂದೇ—ಪ್ರಜಾಪ್ರಭುತ್ವದ ಯಶಸ್ವಿ ಕಾರ್ಯಾಚರಣೆಗೆ ಅವಶ್ಯವೆನಿಸಿದ ಸಂಗತಿಗಳು ಸಂಖ್ಯಾ ಪ್ರಮಾಣದಲ್ಲಿ ಅತಿ ಹೆಚ್ಚಿವೆಯಲ್ಲದೆ ಅವು ಯಾವುದೇ ಸಮಾಜದಲ್ಲಿ ಅಸ್ತಿತ್ವದಲ್ಲಿ ಉಳಿಯುವುದು ತೀರ ಕಷ್ಟವೆನ್ನುವಷ್ಟು ಸಂಕೀರ್ಣವೂ ಆಗಿವೆ ಎಂಬುದೇ ಆ ಉತ್ತರ.

ಬೇರೆ ಬೇರೆ ಜನರಿಂದಲೂ ಪಕ್ಷಗಳಿಂದಲೂ ನಡೆಯುತ್ತಿರುವ ಘರ್ಷಣಾತ್ಮಕ ಪ್ರಚಾರದ ನಡುವೆಯೂ ವಿಷಯವೊಂದನ್ನು ಅದರ ನಿಜ ಯೋಗ್ಯತೆಯ ಮೇಲಿಂದ ತೀರ್ಮಾನಿಸುವಷ್ಟು ಶಕ್ತವಾದ ನಿಷ್ಪಕ್ಷಪಾತ ದೃಷ್ಟಿ ಮತ್ತು ಬುದ್ಧಿವಂತಿಕೆಯುಳ್ಳವರಾಗಿ ಮತದಾರರಿರುವುದು ಪ್ರಜಾಪ್ರಭುತ್ವದ ಪ್ರಥಮಾವಶ್ಯಕತೆಯಾಗಿದೆ. ಈ ಮತದಾರರು ತಮ್ಮ ಮನಸ್ಸಾಕ್ಷಿಯಂತೆ ನಡೆಯ ತೀರುವಷ್ಟು ಪ್ರಾಮಾಣಿಕರೂ ಧೈರ್ಯಶೀಲರೂ ಆಗಿರಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಕೊಟ್ಟ ಸಮಸ್ಯೆಯೊಂದರ ಆಧಿಂದ ಇತಿಹಾಸ ವೃತ್ತಾಂತವೆಲ್ಲವನ್ನೂ ಕೂಲಂಕಷವಾಗಿ ತಿಳಿದುಕೊಳ್ಳುವ ಇಚ್ಛೆಯನ್ನೂ ಅದಕ್ಕೆ ತಕ್ಕ ಸಮಯವನ್ನೂ ಮತದಾರರು ಹೊಂದಿರಬೇಕಾಗಿದೆ.

ಕೇವಲ ಆಲಸ್ಯದಿಂದಾಗಿ ಮತದಾನವನ್ನು ಮಾಡದೆ ಸುಮ್ಮನುಳಿಯುವ ಅಥವಾ ಒಬ್ಬ ಸ್ನೇಹಿತನ ದಾಕ್ಷಿಣ್ಯಕ್ಕಾಗಿಯೋ ಸ್ವಂತ ಪ್ರಯೋಜನಕ್ಕಾಗಿಯೋ ಮತದಾನ ಮಾಡುವ ಮತದಾರರೇ ನಮ್ಮಲ್ಲಿ ಹೆಚ್ಚಿಗಿದ್ದರೆ ಚುನಾವಣೆಯ ಫಲಿತಾಂಶವೇನಾಗಬಹುದು? ಆಗ ನಾವು ತೃತೀಯ ಶ್ರೇಣಿಯ ವ್ಯಕ್ತಿಗಳೇ ಉನ್ನತ ಸ್ಥಾನಕ್ಕೇರುತ್ತಿರುವುದನ್ನು ಕಾಣುತ್ತೇವೆ.

ಪ್ರಚಾರ ಮಾಡುವಷ್ಟು ಮಾಡಿ ಇದಿರಾಳಿಗಳ ವಿರುದ್ಧ ಸುಳ್ಳಿನ ಕಂತೆಗಳನ್ನೆಸೆಯಬಲ್ಲಷ್ಟು ಸಮಯ ಮತ್ತು ಶಕ್ತಿ ಇದ್ದವರೇ ಚುನಾವಣೆಯಲ್ಲಿ ಸ್ಪರ್ಧಿಸುತ್ತಾರೆ. ನಿಜವಾಗಿಯೂ ಯೋಗ್ಯತೆ ಮತ್ತು ಅರ್ಹತೆಯುಳ್ಳ ಜನರು ಅಂಥ ಪ್ರಚಾರಕನೊಡನೆ ಯಶಸ್ವಿಯಾಗಿ ಸ್ಪರ್ಧಿಸುವುದು ಸಾಧ್ಯವಾಗಲಾರದೆಂಬ ಮತ್ತೀ ಕಾರಣದಿಂದಾಗಿ ಚುನಾವಣೆಯಲ್ಲಿ ಸೋಲುವುದಷ್ಟೇಯಲ್ಲ, ಇಷ್ಟರ ವರೆಗೆ ಪ್ರಸಿದ್ಧವಾಗಿದ್ದ ಗೌರವಕ್ಕೂ ತಿಲಾಂಜಲಿ ಕೊಡಬೇಕಾಗಿ ಬರುವುದೆಂಬ ಭಯದಿಂದ ಚುನಾವಣೆಯ ರಂಗಕ್ಕೆ ಕಾಲನ್ನೆ ಹಾಕುವುದಿಲ್ಲ.

ಸಾಮಾನ್ಯವಾಗಿ ಪ್ರತಿಯೊಬ್ಬ ಉಮೇದ್ವಾರನೂ ತನಗೆ ಸಂಬಂಧಿಸಿದ ಸಂಸ್ಥೆಯ ಹಿತಾಸಕ್ತಿಗಳನ್ನು ಹೃದಯದಲ್ಲಿ ಸದಾ ಪೂಜ್ಯ ಭಾವದಲ್ಲಿಟ್ಟುಕೊಂಡು ಪ್ರಚಾರದಲ್ಲಿ ಇದಕ್ಕೆ ಆತಂಕವಾಗದ ತಂತ್ರವನ್ನೆ ಬಳಸಬೇಕೆಂದು ಅಪೇಕ್ಷಿಸಲಾಗುತ್ತದೆ. ಈ ಹಾಗು ಇತರ ಅನೇಕ ಬಗೆಯಿಂದ ಪ್ರಜಾಪ್ರಭುತ್ವದಯಶಸ್ಸಿಗೆ ಆವಶ್ಯಕ ವಾದ ವಾತಾವರಣವೇ ನಷ್ಟಪ್ರಾಯವೆನಿಸಿರುವಾಗ ನಾವು ಪ್ರಜಾಪ್ರಭುತ್ವ ಪದ್ಧತಿಯನ್ನು ರಾಜಕೀಯ ಕ್ಷೇತ್ರದಲ್ಲಾದರೂ ಷೋಡಶ ಕಳಾಪೂರ್ಣವಾಗಿ—ಅಂದರೆ, ಸಂಪೂರ್ಣವಾಗಿ—ಆಚರಿಸ ಹೋಗುವುದು ಅಪೇಕ್ಷಣೀಯವಲ್ಲ; ಭದ್ರವೂ ಅದಲ್ಲ.

ಜನರಲ್ಲಿ ಅತಿ ಹೆಚ್ಚಿನವರು ಅನಕ್ಷರಸ್ಥರಾಗಿರುವಾಗ ಮತ್ತು ಅವರ ರಾಜಕೀಯ ಪ್ರಜ್ಞೆಯು ಜಾಗೃತವಾಗಿಲ್ಲದಿರುವಾಗ ಪ್ರಬುದ್ಧ ಮತದಾನ ಪದ್ಧತಿಯ ಮೇಲೆ ನಿಂತಿರುವ ಪ್ರಜಾಪ್ರಭುತ್ವದ ಮಾತನ್ನಾಡುವುದೆಂದರೆ ಕೂಸಿಗೆ ಮುಂಚೆ ಕುಲಾವಿ ಹೊಲಿಸಿದಂತೆ—ಅಥವಾ ಕುದುರೆಯ ಮುಂದೆ(ಹಿಂದೆಯಲ್ಲ)ಗಾಡಿಯನ್ನು ತಂದು ನಿಲ್ಲಿಸಿದಂತೆ! ಹೇಳಿದುದನ್ನು ಕೇಳಿ ಮನವರಿಕೆ ಮಾಡಿಕೊಳ್ಳಬಲ್ಲಷ್ಟು ಚೇತನವಿರುವ ಕೆಲವೇ ಜನರಲ್ಲಿ ಸಹ ಪ್ರಶ್ನಾರ್ಹವಾದ ವಿಷಯವನ್ನು ಅಭ್ಯಸಿಸುವ ಆಸಕ್ತಿಯಾಗಲೀ ಸಮಯವಾಗಲೀ ಇರುವವರು ಬಹಳ ವಿರಳ.

ಹೀಗಾಗಿ ಬೇರೆಲ್ಲ ರೀತಿಯಿಂದ ಬುದ್ಧಿವಂತರಾದ ಮತದಾರರೂ ಚುನಾವಣೆಯಲ್ಲಿ ಒಬ್ಬ ವಿಶಿಷ್ಟ ಉಮೇದ್ವಾರನಿಗೆ ತಮ್ಮ ಅತ್ಯಮೂಲ್ಯವಾದ ಮತದಾನವನ್ನು ಮಾಡಿ ಕೈ ತೊಳೆದುಕೊಳ್ಳುತ್ತಾರೆ; ಅನೇಕ ಸಂದರ್ಭಗಳಲ್ಲಿ ಮತದಾನ ಮಾಡಿದವರ ಒಟ್ಟು ಸಂಖ್ಯೆಯನ್ನು ವಿಶ್ಲೇಷಿಸಿದರೆ, ನಮ್ಮ ಜನರಲ್ಲಿ ಹೆಚ್ಚಿನವರಿ ಚುನಾವಣೆಯ ಕುರಿತು ಏನೇನೂ ಆ ಕ್ತಿಯಿಲ್ಲವೆಂದು ವ್ಯಕ್ತವಾಗುತ್ತದೆ (ಇತ್ತೀಚಿಗೆ ಚುನಾವಣೆನಡೆದ ಒಂದು ಮ ತದಾನ ಕಟ್ಟೆಗೆ ಊರಿನ ಸರಕಾರಿ ಅಧಿ ಕಾರಿಗಳಿಬ್ಬರ ಹೊರತಾಗಿ ಬೇರಾರೂ ಮತದಾನಕ್ಕಾಗಿ ಬಂದಿರಲಿಲ್ಲ!) ಉಮೇ ದುವಾರನಾಗಿ ನಿಂತ ವ್ಯಕ್ತಿಯು ನಮ್ಮ ಸಂಬಂಧಿಕನಾಗಿರದಿದ್ದರೆ ಅಥವಾ ನಮ್ಮ ನ್ನು ಮೊದಲೇ ಕಂಡು ಮಾತನಾಡಿದ ವನಾಗಿದ್ದರೆ ಚುನಾವಣೆಯಲ್ಲಿ ಭಾಗವ ಹಿಸುವ ಕಷ್ಟ ನಮ್ಮಲ್ಲಿ ಯಾರೊಬ್ಬ ಗೂ ಬೇಡ!

ಮತದಾನವನ್ನು ಯೋಗ್ಯ ರೀತಿಯ ಮಾಡುವುದು ನಮ್ಮ ಆದ್ಯ ಕರ್ತವ್ಯ ವೆಂದೂ ನಾವೀ ಹೊಣೆಗಾರಿಕೆಯನ್ನು ಜಾರಿಸಿಕೊಳ್ಳಬಾರದೆಂದೂ ನಮ್ಮ ಪ್ರ ನಿಧಿಯಾಗಿ ಕೆಲಸ ಮಾಡಲು ನಿಜವಾಗಿ ಅರ್ಹತೆ ಪಡೆದಾತನು ನಮ್ಮನ್ನು ಮೊದ ಲೇ ಕಂಡು ಮಾತನಾಡಿಸಿರಲಿ, ಇಲ್ಲದಿರ ಲಿ, ಆತನಿಗೆ ಪವಿತ್ರವಾದ ನಮ್ಮ ಮತ ವನ್ನು ನೀಡಲು ತಪ್ಪಲಾಗದೆಂದೂ ತಿ ದ ಮತದಾರರು ನಮ್ಮಲ್ಲಿ ಅತ್ಯಲ್ಪ ಇಂಥ ಜಾಗೃತಿಯೇ ಮೂಡಿಲ್ಲ

ರಾಜಕೀಯ ರಂಗದಲ್ಲಿ ಚುನಾವಣೆ ಯು ಯಾವುದಕ್ಕೂ ಹೇಸದ ಲಜ್ಜೆಗೆಟ್ಟ ಆಟವಾಗಿ ಪರಿಣಮಿಸಿದೆ. ಮರುಳು ಭಾ ವನೆಗಳಿಂದ ರಾಜಕಾರಣಿಗಳು ಸಾಮಾ ನ್ಯ ಜನರ ತಲೆಯನ್ನು ತುಂಬಿಸುತ್ತಾರೆ ಅಧಿಕಾರ ಗ್ರಹಣಕ್ಕಾಗಿ ಜನರಲ್ಲಿ ವರ್ಗ ಕಲಹ ಹಾಗು ಜಾತೀಯ ಈರ್ಷ್ಯೆಯ ನ್ನು ಹುಟ್ಟಿಸುತ್ತಾರೆ. ನಮ್ಮ ಹೆಚ್ಚಿನ ರಾಜಕೀಯ ಮುಖಂಡರಿಗೆ ಹೇಗಾದರೂ ಮಾಡಿ ತನ್ನ ಪಕ್ಷವನ್ನು ಜೀವ ದ ಡುವುದೇ ಮುಖ್ಯೋದ್ದೇಶ. ಇದಕ್ಕಾಗಿ ವರು ಅಧಿಕಾರಾರೂಢವಾದ ಪಕ್ಷವನ್ನು ಕೈಗೆಸಿಕ್ಕಿದ ಕೋಲಿನಿಂದ ಮನಸ್ಸಿಗೆ ಬಂ ದಂತೆ ಹೊಡೆಯುತ್ತಾರೆ! ಹೀಗೆ ಅವರ ದೇಶದ ಒಟ್ಟು ಭದ್ರತೆಯನ್ನೂ ಶಕ್ತಿಯ ನ್ನೂ ಹಾಳುಗೆಡವುತ್ತಾರೆ.

ನಾವಿನ್ನೂ ಇದರ ಅಪಾಯಕಾರಿ ಪ ಣಾಮಗಳ ಕುರಿತು ಆಲೋಚನೆಮಾಡ ಲು ತೊಡಗಿಲ್ಲ. ಏಕೆಂದರೆ ಮುಂದರಿ ಬೇರೆ ದೇಶಗಳಲ್ಲಿ ವ್ಯಕ್ತವಾದಂತೆ ದೇಶ ಭಕ್ತಿಯು ನಮ್ಮ ಯಾವ ಮಟ್ಟದಲ್ಲಿ ಯೂ ಉಳಿದಿಲ್ಲ. ಸುಶಿಕ್ಷಿತ ಜನರು ಸ ಬೇರೆ ಬೇರೆ ಪಕ್ಷಗಳ ಅಲ್ಲಸಲ್ಲದ ಅಪಪ್ರ ಚಾರ ಮತ್ತು ದೀರ್ಘ ಭಾಷಣೆಯ ಮ ತುಗಳ ಬೋನಿನೊಳಗೆ ಸಿಲುಕಿಬೀಳ

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. 3—೪—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ನಗ್ಗಾಲುಗಳು ನ್ಯಾಯಕರ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ಅನೇಕ ಮುಖವಾದ ಸಾಮಾಜಿಕ ವಿಮೆ

ಬ್ರಿಟನಿನಲ್ಲಿ ಪ್ರಜೆಗಳ ಯೋಗಕ್ಷೇಮಾಭಿವೃದ್ಧಿಗೆ ಕೈಗೊಂಡ ಕ್ರಮ

ಭಾರತದಲ್ಲಿಂದು ಕಾರ್ಮಿಕರಿಗೆ ತಾವು ಅನುಭವಿಸಬೇಕಾಗಿ ಬರುವ ತೊಂದರೆಗಳ ವಿರುದ್ಧ ರಕ್ಷಣೆಕೊಡುವ ವಿಮಾಯೋಜನೆಯನ್ನು ವಿಸ್ತರಿಸಲಾಗುತ್ತದೆ. ಲಕ್ಷಾಂತರ ಮಂದಿ ಕಾರ್ಖಾನೆಯಲ್ಲಿ ದುಡಿಯುವ ಕೆಲಸಗಾರರು ಈ ಯೋಜನೆಯ ಪ್ರಯೋಜನವನ್ನು ಪಡೆಯುತ್ತಿದ್ದಾರೆ. ಇತ್ತೀಚೆಗೆ ಭಾರತ ಸರಕಾರವು ಜೀವ ವಿಮಾ ಕಂಪೆನಿಗಳ ವ್ಯವಹಾರವನ್ನೂ ತನ್ನ ಕೈಗೆ ತೆಗೆದುಕೊಂಡಿದೆ; ಮತ್ತು ಸದ್ಯದಲ್ಲಿಯೇ ಜೀವವಿಮೆಯ ಮೇಲ್ವಿಚಾರಣೆಯನ್ನು ನಡೆಸಲು ಹಾಗು ಅದನ್ನು ಪ್ರಗತಿಪರ ವಿಧಾನವನ್ನನುಸರಿಸಿ ವಿಸ್ತರಿಸಲು ಒಂದು ಸರಕಾರಿ ಮಂಡಳವನ್ನು ...ವ ಎಲ್ಲ ಸಿದ್ಧತೆ ನಡೆದಿದೆ.

...ಧುನಿಕ ಜಗತ್ತಿನಲ್ಲಿ ಅನೇಕ ಬಗೆಯ ...ಾ ಯೋಜನೆಗಳು ಅನಿವಾರ್ಯವಾ...ರಣವಹಿಸುವಷ್ಟು ಪ್ರಾಮುಖ್ಯತೆಯ ಪಡೆದಿವೆ. ಕಲ್ಯಾಣ ರಾಷ್ಟ್ರವನ್ನು ...ಗೊಳಿಸಬೇಕೆಂದು ಪ್ರತಿಯೊಂದು ...ದ ನಾಯಕರು ಹಾರೈಸಿರುವುದರಿಂ... ಈ ಬಗೆಯಾಗಿ ವಿಮೆಯ ಕ್ಷೇತ್ರ ... ವ್ಯಾಪಕಗೊಳಿಸಲಾಗುತ್ತದೆ. ಅ...ರಿಕ ಮತ್ತು ಬ್ರಿಟನುಗಳಲ್ಲಿ ಸಾಮಾಜಿಕ ...ಾ ಯೋಜನೆಯು ಪಡೆದಿರುವಷ್ಟು ...ಗಳನ್ನು ಬೇರಾವ ದೇಶವೂ ಪಡೆ... ಎನ್ನಬಹುದು. ನಾವೀ ಲೇಖನದಲ್ಲಿ ...ನಿನಲ್ಲಿ ರಾಷ್ಟ್ರೀಯ ವಿಮಾ ಸೌಲ...ಳನ್ನು ಪ್ರಜೆಗಳಿಗೆ ಕೊಡುತ್ತಿರುವ ...ಯನ್ನು ಗೋರ್ಡನ್ ಕ್ಯಾಮಿಂಗ್ಸ್ ...ಬ ಮಹಾಶಯರ ಬರವಣಿಗೆಯ ಆ...ರದ ಮೇಲೆ ವಿವರಿಸಲಿದ್ದೇವೆ.

ಬ್ರಿಟನಿನ ಸಾಮಾಜಿಕ ಇತಿಹಾಸದಲ್ಲಿ ...೮ನೇ ಇಸವಿಯ ಜುಲಾಯಿ ೫ನೇ ...ರೀಕು ಹೊಸ ಅಧ್ಯಾಯವನ್ನು ತೆರೆ...ತು: ಏಕೆಂದರೆ, ಅಂದು ಪ್ರತಿಯೊಬ್ಬ ...ಡಸು, ಹೆಂಗಸು ಮತ್ತು ಮಗುವಿಗೆ ...ಟ್ಟಿಲಿನಿಂದ ಸ್ಮಶಾನದ ವರೆಗೆ ಬೇಕಾ... ಎಲ್ಲ ಸೌಲಭ್ಯಗಳನ್ನು ಒದಗಿಸಿಕೊಡು... ಸಂಯುಕ್ತ ಸಾಮಾಜಿಕ ಭದ್ರತಾ ವ್ಯ...ಸ್ಥೆಯ ಅಂಗವಾಗಿ ರಾಷ್ಟ್ರೀಯ ವಿ...ಾ ಯೋಜನೆಯನ್ನು ಪ್ರಾರಂಭಿಸಲಾ...ತು. ಸಂಯುಕ್ತ ಸಾಮಾಜಿಕ ಭದ್ರ... ವ್ಯವಸ್ಥೆಯಲ್ಲಿ ನಾಲ್ಕು ಮುಖ್ಯ ಅಂ...ಳಿವೆ: (೧) ಪ್ರತಿಯೊಬ್ಬನಿಗೂ ದೊರ...ವ ರಾಷ್ಟ್ರೀಯ ಆರೋಗ್ಯ ಸೇವಾ ...ಲಭ್ಯ; (೨) ಎರಡು ಅಥವಾ ಹೆಚ್ಚು ...ಕ್ಕಳಿರುವ ಪ್ರತಿ ಕುಟುಂಬಕ್ಕೆ ಮೊದ...ನ ಮಗುವನ್ನು ಹೊರತುಪಡಿಸಿ ಉಳಿ...ವುಗಳ ಸಂಖ್ಯಾ ಪ್ರಮಾಣವನ್ನನುಸರಿ... ಕೊಡಲಾಗುವ ಕೌಟುಂಬಿಕ ತುಟ್ಟಿ...ತ್ತೆಯ ಕ್ರಮ; (೩) ಅಗತ್ಯ ಬಿದ್ದವರಿಗೆ ...ಹಾಯ ಸಲ್ಲಿಸುವ ಒಂದು ವಿಧಾನ; ಮ...ತು (೪) ಔದ್ಯಮಿಕ ಅಪಘಾತಗಳ ...ರುದ್ಧ ರಕ್ಷಣೆ ಕೊಡುವ ವಿಷಯವೂ ...ಡಕವಾಗಿರುವ ರಾಷ್ಟ್ರೀಯ ವಿಮಾ ...ೋಜನೆ. ಕೊನೆಯ ಯೋಜನೆಯ ಪ್ರ...ೋಜನಪಡೆಯಲಿಕ್ಕಾಗಿ ವಂತಿಗೆಯನ್ನು ...ಬೇಕಾಗುತ್ತದೆ; ಆದರೆ ಮೊದಲಿನ ಮೂರು ಸೌಲಭ್ಯಗಳನ್ನು ಸಾಮಾನ್ಯ ತೆರಿಗೆ ಹಣದಿಂದ ಸರಕಾರವು ಒದಗಿಸಿಕೊಡುತ್ತದೆ.

ಸುಮಾರು ೪೦ ವರ್ಷಗಳ ಅಲ್ಪಾವಧಿಯಲ್ಲಿ ಅನೇಕ ಹಂತಗಳ ಮೂಲಕ ಈಗಿನ ರಾಷ್ಟ್ರೀಯ ವಿಮಾ ಸೌಲಭ್ಯ ಪದ್ಧತಿಯನ್ನು ಅಭಿವೃದ್ಧಿಗೊಳಿಸಲಾಯಿತು. ವಂತಿಗೆಯನ್ನು ತೆರಬೇಕಾಗಿಲ್ಲದ ನಿವೃತ್ತಿ ವೇತನದ ಸಣ್ಣ ರೂಪದಲ್ಲಿ ಪ್ರಾರಂಭವಾದ (೧೯೦೮) ಈ ಯೋಜನೆಯು ೧೯೪೨ನೇ ವರ್ಷದಲ್ಲಿ ಪ್ರಕಟವಾದ ಪ್ರಸಿದ್ಧ ಬೆವರಿಜ್ ವರದಿಯ ಆಧಾರದ ಮೇಲೆ ೧೯೪೬ರಲ್ಲಿ ವಿಸ್ತೃತ ಬದಲಾವಣೆಗಳಿಗೊಳಪಟ್ಟು, ವ್ಯಾಪಕವಾಯಿತು. ಈಗ ರಾಷ್ಟ್ರೀಯ ವಿಮಾ ಸೌಲಭ್ಯಯೋಜನೆಯು ಶಾಲೆಯನ್ನು ಬಿಡುವ ಪ್ರಾಯವನ್ನು ಹೊಂದಿದ ಎಲ್ಲ ನಾಗರಿಕರಿಗೂ ಅನ್ವಯವಾಗುತ್ತದೆ; ಅವರು ಯಾವದೇ ಸಾಮಾಜಿಕ ವರ್ಗಕ್ಕೆ ಸೇರಿರಲಿ, ಅವರ ಆದಾಯದ ಪ್ರಮಾಣವು ಎಷ್ಟೇ ಆಗಿರಲಿ, ಭೇದಭಾವವನ್ನೇನೂ ಮಾಡಲಾಗುವುದಿಲ್ಲ. ಒಂದು ವಿಮಾಕಾರ್ಡಿನ ಮೇಲೆ ವಾರಕ್ಕೊಂದರಂತೆ ವಂತಿಗೆಯ ಚೀಟನ್ನು ಅಂಟಿಸುತ್ತಿದ್ದರೆ ಸಾಕು. ಅನಾರೋಗ್ಯ, ನಿರುದ್ಯೋಗ, ವೃದ್ಧಾಪ್ಯ, ಕೆಲಸ ಮಾಡುವಾಗ ಘಟಿಸಿದ ಅಪಘಾತ, ಮರಣ, ವೈಧವ್ಯ ಇವೆಲ್ಲ ತೊಂದರೆ ಮತ್ತು ಕಠಿಣ ಪ್ರಸಂಗಗಳಲ್ಲಿ ನಗದಿ ಹಣದ ಸೌಲಭ್ಯವನ್ನು ಈ ವಂತಿಗೆ ದೊರಕಿಸಿಕೊಡುತ್ತದೆ. ಇಡೀ ಕುಟುಂಬಕ್ಕೆ ಇದು ಅನ್ವಯವಾಗುತ್ತದೆ; ಕೆಲವು ವಿಶಿಷ್ಟ ಪ್ರಾಯಗಳ ನಡುವೆ ವಿಮೆಯು ಕಡ್ಡಾಯವಾಗಿರುತ್ತದೆ.

ವಂತಿಗೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಬಹುದು: ಇವುಗಳಲ್ಲಿ ಹಿರಿಯ ವರ್ಗವು ೨೨೫೦೦೦೦೦ ಸ್ತ್ರೀಪುರುಷರನ್ನೊಳಗೊಳ್ಳುತ್ತದೆ; ಮೆನೇಜಿಂಗ್ ಡೈರೆಕ್ಟರ್ ಪದವಲ್ಲಿರುವವರಿಂದ ಹಿಡಿದು ಕಸ ಗುಡಿಸುವವರ ವರೆಗಿನ ವೇತನ ಪಡೆದು, ಒಡೆಯನಿಗಾಗಿ ಕೆಲಸ ಮಾಡುವ ನೌಕರ ವರ್ಗವನ್ನಿದು ವ್ಯಾಪಿಸುತ್ತದೆ. ಅನಂತರ ಬರುವುದೇ ಅಂಗಡಿಕಾರರು, ವೈದ್ಯರು ಮತ್ತಿತರ ರೀತಿಯಲ್ಲಿ ಸ್ವತಂತ್ರ ಉದ್ಯೋಗ ನಡೆಸುವವರು ಸೇರಿದ ವರ್ಗ–ಇಲ್ಲಿ ಇಂಥ ೧೫೦೦೦೦೦ ಮಂದಿ ವಿಮಾ ಯೋಜನೆಯ ಲಾಭವನ್ನು ಪಡೆಯುತ್ತಿದ್ದಾರೆ. ಕೊನೆಯದಾಗಿ ಸ್ವಂತ ಲಾಭಕ್ಕಾಗಿ ದುಡಿಯದ ೫೦೦೦೦೦ ಜನರ ಗುಂಪು ಈ ಯೋಜನೆಯ ಕಕ್ಷೆಯಲ್ಲಿ ಬರುತ್ತದೆ. ಇವೆಲ್ಲರಿಂದ ಪಡೆಯಲಾಗುವ ವಂತಿಗೆಯು ಅವರು ಸೇರಿರುವ ಗುಂಪು, ಅವರ ಲಿಂಗ, ಅವರ ಪ್ರಾಯವು ೧೮ ವರ್ಷಕ್ಕಿಂತ ಹೆಚ್ಚಿಗಿದೆಯೋ ಅಥವಾ ಕಡಿಮೆಯೋ ಎಂಬ ವಿಷಯ ಇತ್ಯಾದಿಗಳನ್ನು ಹೊಂದಿಕೊಂಡು ವ್ಯತ್ಯಾಸಗೊಳ್ಳುತ್ತವೆ. ವಿಮೆಯ ಸೌಲಭ್ಯವನ್ನು ಅಪೇಕ್ಷಿಸದ ಪ್ರತಿಯೊಬ್ಬ ಪ್ರಜೆಯ ಸಂಗತಿಯಲ್ಲಿ ಸರಕಾರವು ತನ್ನದೆಂಬ ವಂತಿಗೆಯನ್ನು ಕೊಡುತ್ತದೆ. ನೌಕರ ವರ್ಗದ ಸಂಗತಿಯಲ್ಲಿ ಪ್ರತಿಯೊಬ್ಬ ನೌಕರನ ಸಾಪ್ತಾಹಿಕ ವಂತಿಗೆಗೆ ಹತ್ತಿರವೆನಿಸುವಷ್ಟು ವಂತಿಗೆಯನ್ನು ಒಡೆಯನಾದವನು ನೀಡುತ್ತಾನೆ.

ವಿಮೆಯಿಂದ ಪಡೆಯುವ ಪ್ರಯೋಜನಗಳು ಅನೇಕ ವಿಧವಾಗಿದ್ದು ಇವು ಅನಾರೋಗ್ಯ, ನಿರುದ್ಯೋಗ, ಔದ್ಯಮಿಕ ಅಪಘಾತ, ಮಾತೃತ್ವ, ವೈಧವ್ಯ, ಅನಾಥ ಶಿಶುಗಳ ಪಾಲನೆಗಾಗಿ ರಕ್ಷಕರಿಗೆ ಕೊಡಲಾಗುವ ಧನ ಸಹಾಯ, ನಿವೃತ್ತಿ ವೇತನ ಮತ್ತು ಮರಣೋತ್ತರ ಕ್ರಿಯೆಗಳಿಗಾಗಿ ಹಣಕಾಸಿನ ನೆರವಿಗೆ ಸಂಬಂಧಿಸಿವೆ. ನೌಕರ ವರ್ಗದ ಎಲ್ಲ ವಂತಿಗೆದಾರರೂ ಮೇಲಿನೆಲ್ಲ ಪ್ರಯೋಜನಗಳಿಗೆ ಬಾಧ್ಯರಾಗಿದ್ದಾರೆ. ಸ್ವತಂತ್ರವಾಗಿ ಉದ್ಯೋಗ ಕೈಗೊಂಡವರಿಗೆ ನಿರುದ್ಯೋಗ ಮತ್ತು ಔದ್ಯಮಿಕ ಅಪಘಾತದ ಪ್ರಯೋಜನಗಳು ಸಿಗುವುದಿಲ್ಲ. ನಿರುದ್ಯೋಗಿಗಳಾದವರು ಮಾತೃತ್ವ, ಔದ್ಯಮಿಕ ಅಪಘಾತ ಮತ್ತು ನಿರುದ್ಯೋಗದ ವಿರುದ್ಧ ಪ್ರಯೋಜನವನ್ನು ಪಡೆಯುವುದಿಲ್ಲ.

ವಿಮಾ ನಿಧಿಯಿಂದ ಪ್ರತಿ ವರ್ಷವೂ ೫೦ರಲ್ಲಿ ಒಂದಂಶದಷ್ಟು ಅನಾರೋಗ್ಯದ ವಿರುದ್ಧ ರಕ್ಷಣೆ ಕೊಡುವ ಕ್ರಮಕ್ಕೆ ವಿನಿಯೋಗವಾಗುತ್ತದೆ. ಈ ಹಣವನ್ನು ಪಡೆಯುವುದು ಬಹಳ ಸುಲಭ: ಕಾಯಿಲೆ ಬಿದ್ದಾಗ ಮತ್ತು ಕೆಲಸ ಮಾಡಲಾರದಾಗ ವಿಮೆಯ ಈ ಪ್ರಯೋಜನಕ್ಕೆ ಬಾಧ್ಯನಾದವನು ಈ ವಿಷಯವೂ ನಮೂದನೆಗೊಂಡಿರುವ ವೈದ್ಯರ ಸಿಫಾರಸು ಪತ್ರವನ್ನು ಸ್ಥಳೀಯ ನಿವೃತ್ತಿ ವೇತನ ಮತ್ತು ರಾಷ್ಟ್ರೀಯ ವಿಮಾ ಕಾರ್ಯಾಲಯಕ್ಕೆ ಕಳಿಸಿದರಾಯಿತು. (ಇಂಥ ಕಾರ್ಯಾಲಯಗಳು ಬ್ರಿಟನಿನಲ್ಲಿ ೯೦೦ ಇವೆ.) ಆಮೇಲೆ ಆತನ ವಂತಿಗೆಯ ವಿವರಗಳನ್ನು ಕೇಂದ್ರ ಕಾರ್ಯಾಲಯದಲ್ಲಿ ಪರಿಶೀಲಿಸಲಾಗುತ್ತದೆ; ಮತ್ತು ಎಲ್ಲವೂ ಸರಿಯಿದ್ದರೆ ಕೊಡಬೇಕಾದ ಹಣವನ್ನು ಟಪ್ಪಾಲು ಕಚೇರಿಯಲ್ಲಿ ಮುರಿಸಬಹುದಾದ ಡ್ರಾಫ್ಟಿನ ರೂಪದಲ್ಲಿ ಕೊಡಲಾಗುತ್ತದೆ. ಈ ಹಣವು ಸಾಮಾನ್ಯವಾಗಿ ಒಂದು ವಾರದ ಹೊತ್ತಿಗೆ, ಅಂದರೆ ಎರಡನೇ ಸಲ ಇಂಥ ಹಣದ ಪ್ರಯೋಜನ ಪಡೆಯಬಯಸಿ ಅರ್ಜಿ ಸಲ್ಲಿಸುವಾಗ ಸಿಗುತ್ತದೆ. ಅನಾರೋಗ್ಯವು ದೀರ್ಘವಾಗಿದ್ದರೆ ಪರಿವಾರ ವೈದ್ಯರ ಸಿಫಾರಸು ಪತ್ರವನ್ನು ಕಳಿಸಬೇಕು: ವೈದ್ಯರು ಮೊದಲೇ ದೀರ್ಘಾವಧಿಯ ತನಕ ಸಿಫಾರಸು ಪತ್ರವಿತ್ತಿದ್ದರೆ, ಅನಾರೋಗ್ಯದಿಂದ ಸಂಪೂರ್ಣ ಬಿಡುಗಡೆಯಾಗುವುದಕ್ಕೆ ಒಂದು ವಾರದ ಮೊದಲೊಮ್ಮೆ ಸಿಫಾರಸು ಪತ್ರ ಕಳಿಸುವುದು ಅಗತ್ಯ.

ನಿರುದ್ಯೋಗದ ಸಂಗತಿಯಲ್ಲಿ, ಈ ಸಂಬಂಧದ ಪ್ರಯೋಜನವನ್ನು ಪಡೆಯಲು ಅಪೇಕ್ಷಿಸುವವರು ಬ್ರಿಟನಿನಲ್ಲಿರುವ ೧೦೦೦ ಉದ್ಯೋಗ ವಿನಿಮಯ ಕಾರ್ಯಾಲಯಗಳಲ್ಲಿಯಾವುದಾದರೊಂದರಲ್ಲಿತಮ್ಮ ಹೆಸರನ್ನು ದಾಖಲುಮಾಡಿಸಿ ಕೊಳ್ಳಬೇಕು: ಆ ಕಾರ್ಯಾಲಯವು ಹಣವನ್ನು ಕೊಡುತ್ತದೆ; ಅಲ್ಲದೆ ಆತನಿಗೆ ಆದಷ್ಟು ಬೇಗನೆ ಹೊಸ ಕೆಲಸವೊಂದನ್ನು ಕೊಡಿಸಲು ನೋಡುತ್ತದೆ.

ವೈಧವ್ಯದ ಸಂಗತಿಯಲ್ಲಿ ಗಂಡನ ವಿಮೆಯ ಮೇಲೆ ವಿಧವೆಗೆ ಪ್ರಯೋಜನಗಳನ್ನೊದಗಿಸಲಾಗುತ್ತದೆ. ಬೇರೆ ಬೇರೆ ವಯಸ್ಸಿನ ಹಾಗು ಬೇರೆ ಬೇರೆ ಪರಿಸ್ಥಿತಿಗೊಳಗಾದ ವಿಧವೆಯ ಅವಶ್ಯಕತೆಗಳೂ ತೊಂದರೆಗಳೂ ಭಿನ್ನ ಭಿನ್ನವಾಗಿವೆ ಎಂಬ ಸತ್ಯಾಂಶವನ್ನು ಯೋಜಕರು ಮನಗಂಡು ವೈವಿಧ್ಯಪೂರ್ಣವಾದ ಪ್ರಯೋಜನಾಂಶಗಳನ್ನು ನೀಡಲು ಏರ್ಪಾಡು ಮಾಡಿದ್ದಾರೆ. ಹೆಚ್ಚು ಕಡಿಮೆ ಎಲ್ಲ ಸಂಗತಿ

(೧೦ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮಾ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/3; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.



ಪರಿಶೀಲಕ ಸಮಿತಿಯ ಮುಂದೆ ರಾ. ಪು. ವಿಧೇಯಕ

ಕಾಸರಗೋಡಿನ ಕನ್ನಡಿಗರ ಅಭಿಪ್ರಾಯದ ನಿರೂಪಣೆ

ಲೋಕ ಸಭೆಯು ರಾಜ್ಯಗಳ ಪುನಾರಚನೆಗೆ ಸಂಬಂಧಿಸಿದ ವಿಧೇಯಕವನ್ನು ಪರಿಶೀಲಕ ಸಮಿತಿಗೆ ಒಪ್ಪಿಸಿ ಕೊಡಲು ಸಮ್ಮತಿಸಿದ ಬಳಿಕ ಇದೀಗ ರಾಜ್ಯ ಸಭೆಯೂ ಈ ನಿರ್ಣಯಕ್ಕೆ ಅನುಮೋದನೆ ನೀಡಿದೆ. ಪರಿಶೀಲಕ ಸಮಿತಿಯು ವರದಿಯು ಮೇ ೧೪ನೇ ತಾರೀಕಿಗೆ ಲೋಕ ಸಭೆಯ ಮುಂದೆ ಮಂಡಿಸಲ್ಪಡಬೇಕೆಂದು ನಿರ್ದೇಶಿಸಲಾಗಿದೆ. ರಾಜ್ಯ ಸಭೆಯಲ್ಲಿ ವಿಧೇಯಕದ ಕುರಿತು ಮಾತನಾಡಿದ ದಕ್ಷಿಣ ಕನ್ನಡದ ಕಾಂಗ್ರೆಸು ಪ್ರತಿನಿಧಿ ಶ್ರೀ ಕೆ. ಸದಾನಂದ ಹೆಗ್ಡೆಯವರು ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಪ್ರದೇಶವನ್ನು ಕರ್ನಾಟಕದಲ್ಲಿಯೇ ಉಳಿಯಗೊಡಬೇಕೆಂದು ಬಹಳ ಸಮರ್ಥವಾಗಿ ಪ್ರತಿಪಾದಿಸಿದ್ದಾರೆ. ಪ್ರಜೆಗಳ ಮನೋಭಾವನೆ ಮತ್ತು ಅಭಿಪ್ರಾಯ, ಸಾಂಸ್ಕೃತಿಕ ಹಿನ್ನೆಲೆ, ಆರ್ಥಿಕ ಹಾಗು ಪ್ರಾದೇಶಿಕ ಸಂಬಂಧ ಇತ್ಯಾದಿ ಯಾವ ವಿಷಯವನ್ನು ಆಧರಿಸಿ ರಾಜ್ಯಗಳ ಪುನಾರಚನೆಯನ್ನು ಮಾಡಹೋದರೂ—ಚಂದ್ರಗಿರಿ ಹೊಳೆಯ ಉತ್ತರಕ್ಕಿರುವ ಕಾಸರಗೋಡಿನ ಪ್ರದೇಶವು ಕರ್ನಾಟಕದಲ್ಲಿ ಸೇರ್ಪಡೆ ಹೊಂದದಿರುವುದು ಸಾಧ್ಯವೇ ಇಲ್ಲ ಎಂಬುದಾಗಿ ಶ್ರೀ ಹೆಗ್ಡೆಯವರು ವಾದಿಸಿದ್ದಾರೆ.

ಸೀಮಾ ಸಮಿತಿಯ ಬೇಡಿಕೆ

ಆದರೆ ಲೋಕ ಸಭೆಯಲ್ಲಿ ಕಾಸರಗೋಡಿನ ಸಮಸ್ಯೆಯನ್ನು ಪ್ರಸ್ತಾಪಿಸಿ ಇಷ್ಟು ಸ್ಪಷ್ಟವಾಗಿ ಯಾವ ಸದಸ್ಯರೂ ಮಾತನಾಡಲಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯಿಂದ ಲೋಕ ಸಭೆಗೆ ಆರಿಸಿ ಹೋಗಿದ್ದ ಕಾಂಗ್ರೆಸ್ ಪ್ರತಿನಿಧಿಗಳು ತುಟಿ ಬಿಚ್ಚಿರಲಿಲ್ಲ; ಬಹುಶಃ ಅವರ ಕೈವಾಡವು ಪರಿಶೀಲಕ ಸಮಿತಿಯು ಮಾಡಬಹುದಾದ ಸಿಫಾರಸುಗಳಲ್ಲಿ ಪ್ರತಿಫಲನ ಹೊಂದುವುದೆಂಬ ನಿರೀಕ್ಷೆಯಲ್ಲಿ ಸದ್ಯಕ್ಕೆ ತೃಪ್ತಿ ಪಟ್ಟುಕೊಳ್ಳಬೇಕೆಂದು ಕಾಣುತ್ತದೆ. ಹೈದರಾಬಾದಿನ ಸ್ವತಂತ್ರ ಸದಸ್ಯ ಶ್ರೀ ಶಿವಮೂರ್ತಿ ಸ್ವಾಮಿಯವರು ಗಡಿ ವಿವಾದಗಳ ಇತ್ಯರ್ಥಕ್ಕಾಗಿ ಸೀಮಾ ಸಮಿತಿಗಳನ್ನು ನೇಮಿಸಬೇಕೆಂದು ಒತ್ತಿ ಹೇಳಿದ್ದಾರೆ. ಹೊಸ ರಾಜ್ಯಗಳನ್ನು ಭಾಷೆಯ ಆಧಾರದ ಮೇಲೆ ರಚಿಸಬೇಕೆಂಬ ಅಭಿಪ್ರಾಯ ಅವರದು. ಕನ್ನಡ ಪ್ರದೇಶಗಳ ನೂತನ ಒಕ್ಕೂಟವನ್ನು ಕರ್ನಾಟಕವೆಂದೇ ಕರೆಯಬೇಕೆಂದೂ ಈಗ ಈ ಬಗ್ಗೆ ಎದ್ದಿರುವ ವಿವಾದವನ್ನು ಪರಿಹರಿಸುವ ಸುಲಭ ಮಾರ್ಗವೆಂದರೆ ಹೊಸ ರಾಜ್ಯದ ಶಾಸನಾಂಗಕ್ಕೆ ಹೆಸರನ್ನು ಆಯ್ದುಕೊಳ್ಳಲು ಬಿಡುವ ಕ್ರಮವೆಂದೂ ಅವರು ಹೇಳಿದ್ದಾರೆ.

"ಕರ್ನಾಟಕ ಎಂದೇ ಹೆಸರಿರಲಿ"

ಹೈದರಾಬಾದಿನ ಕಾಂಗ್ರೆಸು ಪ್ರತಿನಿಧಿ ಸ್ವಾಮಿ ರಮಾನಂದ ತೀರ್ಥರು ಹೊಸ ಆಂಧ್ರ ರಾಜ್ಯಕ್ಕೆ ಆಂಧ್ರ ಪ್ರದೇಶವೆಂಬ ಹೆಸರಿಡಬೇಕೆಂದು ಹೇಳುತ್ತಿದ್ದಂತೆಯೇ ಕನ್ನಡ ಪ್ರದೇಶಗಳೆಲ್ಲ ಒಟ್ಟುಗೂಡಿ ಹೊಸ ರಾಜ್ಯವಾಗುವಾಗ ಅದನ್ನು ಕರ್ನಾಟಕ ಎಂಬ ಹೆಸರಿನಿಂದಲೇ ಕರೆಯಬೇಕು ಎಂದಿದ್ದಾರೆ. ಮೈಸೂರೇತರ ಕನ್ನಡ ಪ್ರದೇಶಗಳಲ್ಲಿರುವ ಸರಕಾರಿ ನೌಕರರ ವೇತನ ಪ್ರಮಾಣಾದಿಗಳ ಬಗ್ಗೆ ತಾನು ಯಾವ ಭರವಸೆಯನ್ನೂ ಕೊಡುವ ಹಾಗಿಲ್ಲವೆಂದೂ ಅವುಗಳನ್ನು ಪುನರ್ವಿಮರ್ಶಿಸುವ ಆವಶ್ಯಕತೆ ಬಂದೀತೆಂದೂ ಮೈಸೂರಿನ ಮುಖ್ಯ ಮಂತ್ರಿಗಳು ಹೇಳಿರುವುದಕ್ಕೆ ಅವರು ಬಲವಾಗಿ ಆಕ್ಷೇಪಿಸಿದ್ದಾರೆ. ವಿಧೇಯಕವೇ ಅಂಥ ಭರವಸೆಯನ್ನು ಕೊಟ್ಟಿರುವಾಗ ಸಂಸತ್ತಿಗಲ್ಲದೆ ಬೇರಾರಿಗೂ—ಅವರು ಎಷ್ಟೆ ಉನ್ನತ ಸ್ಥಾನದಲ್ಲಿರಲಿ—ಅದನ್ನು ಬದಲಾಯಿಸುವ ಅಧಿಕಾರವಿಲ್ಲ ಎಂದಿದ್ದಾರೆ ರಮಾನಂದ ತೀರ್ಥರು. ಈಗಿನ ಬೀದರ ಜಿಲ್ಲೆಯಿಂದ ಕರ್ನಾಟಕಕ್ಕೆ ಹೋಗುವ ನಾಲ್ಕು ತಾಲೂಕುಗಳನ್ನು ಪ್ರತ್ಯೇಕ ಜಿಲ್ಲೆಯಾಗಿಡಬೇಕೆಂದೂ ಈ ಜಿಲ್ಲೆಗೆ ಕಲಬುರ್ಗೆಯ ಕೆಲವು ಪ್ರದೇಶಗಳನ್ನು ಸೇರಿಸಬೇಕೆಂದೂ ಅವರು ಸೂಚಿಸಿದ್ದಾರೆ.

ಬಳ್ಳಾರಿಯ ಬಗ್ಗೆ ಆಂಧ್ರರು

ಆಂಧ್ರದ ಶ್ರೀ ಬಿ. ರಾಮಚಂದ್ರ ರೆಡ್ಡಿಯವರು ಫಜಲಾಲಿ ಆಯೋಗವು ಸಿಫಾರಸು ಮಾಡಿದಂತೆ ಬಳ್ಳಾರಿಯ ಕೆಲವು ತಾಲೂಕುಗಳನ್ನು ಆಂಧ್ರಕ್ಕೆ ವರ್ಗಾಯಿಸುವುದು ಅತ್ಯಗತ್ಯವೆಂದರು. ಡಾ. ಎಂ. ವಿ. ಗಂಗಾಧರ ಶಿವರೆಂಬ ಇನ್ನೊಬ್ಬ ಆಂಧ್ರ ಸದಸ್ಯರು ಆಧುನಿಕ ತ್ರಿಮೂರ್ತಿಗಳೆಂದು ಫಜಲಾಲಿ ಆಯೋಗದ ಸದಸ್ಯರನ್ನು ಕರೆಯುತ್ತಾ ಬಳ್ಳಾರಿಯು ರಾಯಲ ಸೀಮೆಗೆ ತೀರ ಹೊಂದಿಕೊಂಡಿದೆಯೆಂದೂ ಆದುದರಿಂದ ಫಜಲಾಲಿ ಆಯೋಗ ಹೇಳಿದಂತೆ ಬಳ್ಳಾರಿಯ ಕೆಲವು ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಿ ಬಿಡಬೇಕೆಂದೂ ಅಭಿಪ್ರಾಯಪಟ್ಟರು. ಶ್ರೀ ಬಿ. ರಾಮ ಚಂದ್ರ ರೆಡ್ಡಿ ಎಂಬ ನಾಗದೊಬ್ಬ ಆಂಧ್ರ ಸದಸ್ಯರು ಸಹ ಬಳ್ಳಾರಿಯ ಕೆಲ ವಂಶವನ್ನು ಆಂಧ್ರಕ್ಕೆ ವರ್ಗಾಯಿಸಬೇಕೆಂದರಲ್ಲದೆ ಬಳ್ಳಾರಿಯನ್ನು ಪ್ರತಿನಿಧಿಸುವ ಸದಸ್ಯರು ಮೈಸೂರಿನಲ್ಲಿ ಈ ಪ್ರದೇಶವನ್ನು ಸೇರಿಸುವ ವಿಷಯದಲ್ಲಿ ತಮ್ಮ ಸ್ಥಾನಕ್ಕೆ ರಾಜೀ ನಾಮೆ ಕೊಟ್ಟು ಮರು ಚುನಾವಣೆ ನಡೆಯಲೆಂದು ಹೇಳಿ ಆಹ್ವಾನ ಕೊಟ್ಟಿದ್ದಾರೆಂದೂ ಹೇಳಿದರು. ಮೈಸೂರಿನ ಪ್ರಜಾ ಸಮಾಜವಾದಿ ಪ್ರತಿನಿಧಿ ಶ್ರೀ ಗುರುಪಾದ ಸ್ವಾಮಿಯವರು ಮೈಸೂರಿನ ಶಾಸನಾಂಗವು ಬೇಕಾದಲ್ಲಿ ಬೇಕಾದಾಗ ಹಲವು ರಾಜ್ಯಗಳು ಕೂಡಿ ದೊಡ್ಡ ರಾಜ್ಯಗಳು ರಚಿಸಲ್ಪಡಬಹುದೆನ್ನುವ ಗೊತ್ತುವಳಿ ಸ್ವೀಕರಿಸಿರುವುದನ್ನು ಪ್ರಸ್ತಾಪಿಸುತ್ತಾ ಇದರ ಹಿಂದೆ ರಾಜಕೀಯ ದುರುದ್ದೇಶವಿದೆ ಎಂದರು. ಮೈಸೂರಿನ ಮುಖ್ಯ ಮಂತ್ರಿಗಳು ರಾಜ್ಯದಲ್ಲಿರುವ ವಿವಿಧ ಬಗೆಯ ಶಕ್ತಿಗಳನ್ನೆಲ್ಲ ನಿಯಂತ್ರಿಸಿ, ಸಂತೈಸಿ, ಅವನ್ನು ತೃಪ್ತಿಪಡಿಸಲು ಈ ಗೊತ್ತುವಳಿಯನ್ನು ತಂದರು. ಅಧಿಕಾರದಲ್ಲಿರುವ ಪಕ್ಷದ ಹಾಗು ಸ್ವಂತ ಪ್ರಯೋಜನಾರ್ಥವಾಗಿ ಈ ಆಟವನ್ನು ಆಡಲಾಯಿತು ಎಂದು ಆರೋಪಿಸಿದರು.

ವಲಯ ಮಂಡಳಗಳು

ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಶ್ರೀಮನ್ನಾರಾಯಣರು ವಲಯ ಮಂಡಳಗಳು ಸಾಮಾಜಿಕ ಹಾಗು ಆರ್ಥಿಕ ಪುರೋಗತಿಯನ್ನು ಯೋಜನಾಬದ್ಧವಾಗಿ ಸಾಧಿಸಲು ನೆರವಾಗುತ್ತವೆ ಎಂದರು; ಅಲ್ಪಸಂಖ್ಯಾಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸುವುದಕ್ಕೂ ಇವುಗಳಿಂದ ಸಹಾಯ ಸಲ್ಲುವುದೆಂದು ಆಶಿಸಿದರು. ಈ ಉದ್ದೇಶಗಳನ್ನು ಸಂಪೂರ್ಣವಾಗಿ ವಲಯ ಮಂಡಳಗಳು ತಮ್ಮ ವ್ಯವಹಾರದ ಮೂಲಕ ಸಾಧಿಸಿ ಕೊಟ್ಟರೆ ಆ ಮೇಲೆ ಅವುಗಳಿಗೆ ಕಾರ್ಯಾಧಿಕಾರವನ್ನು ಬೇಕಾದರೆ ಕೊಡುವ ಕುರಿತು ಪರ್ಯಾಲೋಚಿಸ ಬಹುದು ಎಂದರು. ಕೇಂದ್ರದ ಮಾಜಿ ಕೂಲಿಕಾರ ಸಚಿವ ಶ್ರೀ ವಿ. ವಿ. ಗಿರಿಯವರು ಐದು ವರ್ಷಗಳ ಬಳಿಕ ವಲಯ ಮಂಡಳಗಳ ಸ್ಥಾನದಲ್ಲಿ ವಲಯ ರಾಜ್ಯಗಳು ಸ್ಥಾಪಿಸಲ್ಪಡಬೇಕೆಂದೂ ಇದನ್ನು ವಿಧೇಯಕದಲ್ಲಿ ಸ್ಪಷ್ಟವಾಗಿ ನಮೂದಿಸುವುದೇ ವಿಹಿತವೆಂದೂ ಹೇಳಿದರು. ರಾಜ್ಯಗಳು ಪುನಾರಚನೆಯ ವಿಧೇಯಕವನ್ನು ಚರ್ಚಿಸುವ ಬದಲಿಗೆ ಭಾರತವನ್ನು ಏಕಘಟಕ ರಾಷ್ಟ್ರವಾಗಿ ಘೋಷಿಸಲು ನೋಡುತ್ತಿದ್ದರೆ ಮುಂಬಯಿ, ಕಲ್ಕತ್ತ ಮುಂತಾಗಿ ಯಾರು ಎಲ್ಲಿಗೆ ಬೇಕಾದರೆ ಹೋಗಲಿ—ಅದು ತನ್ನದೇ ಭೂಮಿ ಎಂದು ಭಾವಿಸಲು ಎಡೆ ಸಿಗುತ್ತಿತ್ತು ಎಂದರು. ವಲಯ ಮಂಡಳಗಳಿಂದ ವಲಯ ರಾಜ್ಯ, ಮತ್ತಲ್ಲಿಂದ ಏಕಘಟಕ ಭಾರತ — ಇದೇ ನಾವು ಗಮಿಸಬೇಕಾದ ಯೋಗ್ಯ ಮಾರ್ಗ ಎಂದರು. ಗವರ್ನರರ ಕೈಗೆ ಅಲ್ಪ ಸಂಖ್ಯಾಕ ವರ್ಗದ ಹಿತಾಸಕ್ತಿಗಳ ರಕ್ಷಣೆಯ ಭಾರವನ್ನು ಒಪ್ಪಿಸಿ ಕೊಟ್ಟಷ್ಟರಿಂದ ತೃಪ್ತಿಪಡಲು ಆಧಾರವಿಲ್ಲವೆಂದೂ ಗವರ್ನರರು ರಾಜ್ಯದ ಮುಖ್ಯ ಮಂತ್ರಿಯ ಸಲಹೆಯಂತೆ ನಡೆಯುವ ಘಟನಾತ್ಮಕ ವರಿಷ್ಠರೆಂಬುದೇ ಇದಕ್ಕಿರುವ ಆಕ್ಷೇಪವೆಂದೂ ಕೇಂದ್ರದಿಂದಲೇ ಯೋಗ್ಯ ಅಧಿಕಾರಿಗಳನ್ನು ಈ ಉದ್ದೇಶಕ್ಕೆ ನೇಮಿಸುವುದು ವಿಹಿತವೆಂದೂ ಅವರು ಸೂಚಿಸಿದರು. ಕೇಂದ್ರ ಗೃಹ ಖಾತೆಯ ಕೈಕೆಳಗೆ ಈ ಅಧಿಕಾರಿಗಳು ಕೆಲಸ ಮಾಡಿ ಯೋಗ್ಯ ಸಲಹೆಗಳನ್ನು ನೀಡಬೇಕೆಂದರು.

ಗೃಹ ಮಂತ್ರಿಗಳ ಉತ್ತರ

ತಮ್ಮ ಉತ್ತರದಲ್ಲಿ ಗೃಹ ಮಂತ್ರಿಗಳು ಅಸ್ತಿತ್ವಕ್ಕೆ ಬರಲಿರುವ ಹೊಸ ರಾಜ್ಯಗಳು ತಮ್ಮಲ್ಲಿಯೇ ಪರಸ್ಪರ ವಿಚಾರ ವಿನಿಮಯ ಮತ್ತು ಸಂಧಾನದ ಮಾತುಕತೆಗಳನ್ನು ನಡೆಸಿ ಗಡಿವಿವಾದಗಳನ್ನು ಪರಿಹರಿಸಿಕೊಳ್ಳಬೇಕೆಂಬುದೇ ತನ್ನ ಅಪೇಕ್ಷೆ ಎಂದರು. ಆದಾಗ್ಯೂ ಎಲ್ಲೆಲ್ಲಿ ಅಗತ್ಯವೆಂದು ಕಂಡು ಬರುವುದೋ ಅಲ್ಲಲ್ಲಿ ಸೀಮಾ ಸಮಿತಿಗಳನ್ನು ನೇಮಿಸಲು ಕೇಂದ್ರ ಸರಕಾರಕ್ಕೆ ಅಧಿಕಾರವಿದೆಯೆಂದೂ ಈ ಹೆಜ್ಜೆಯನ್ನಿಡಲು ಅತಂಕವೇನೂ ಇಲ್ಲವೆಂದೂ ಹೇಳಿದರು. ಮೈಸೂರು ಮತ್ತು ಬೇರೆ ಕೆಲವು ರಾಜ್ಯಗಳ ಹೈ ಕೋರ್ಟು ನ್ಯಾಯಾಧೀಶರ ವೇತನ ಪ್ರಮಾಣವನ್ನು ಹೆಚ್ಚಿಸಲು ಕೇಂದ್ರದ ಅಭ್ಯಂತರವೇನೂ ಇಲ್ಲವೆಂದರು. ಆದರೆ ಭಾರತದ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಸಲಹೆಯನ್ನಿಲ್ಲಿ ಕೇಳ ಬೇಕಾಗಿ ಬರಬಹುದೆಂಬ ಸೂಚನೆಯಿತ್ತರು. ವಲಯ ಮಂಡಳಗಳಲ್ಲಿ ಸೇರುವ ಎಲ್ಲ ರಾಜ್ಯಗಳಿಗೆ ಒಬ್ಬನೇ ಗವರ್ನರನಿರಬೇಕು. ಸರಕಾರಿ ನೌಕರಿಗೆ ಉಮೇದ್ವಾರರ ಆಯ್ಕೆ ಮಾಡಲು ಒಂದೇ ಮಂಡಳವಿರಬೇಕು ಒಂದೇ ಹೈಕೋರ್ಟು ಇರಬೇಕು ಎಂದು ಮಾಡಲಾದ ಸೂಚನೆಗಳನ್ನು ಪ್ರಸ್ತಾಪಿಸುತ್ತಾ ಸಂಬಂಧಿಸಿದ ರಾಜ್ಯಗಳು ಇಷ್ಟ ಪಟ್ಟರೆ ಅವಕ್ಕೆ ತಮ್ಮ ಆಕ್ಷೇಪವಿಲ್ಲವೆಂದರು. ವಲಯ ಮಂಡಳಗಳಿಗೆ ಕಾರ್ಯಾಧಿಕಾರವನ್ನು ಕೊಡಲು ಹೋದರೆ ರಾಜ್ಯಗಳ ಆಂತರಿಕ ಸ್ವಾತಂತ್ರ್ಯವನ್ನು ಕಡೆಗಣಿಸಿದಂತಾಗುತ್ತದೆ ಎಂಬ ಭಯವನ್ನವರು ವ್ಯಕ್ತಪಡಿಸಿದರು. ಇವು ಸಲಹೆಯನ್ನಷ್ಟೆ ಕೊಡುತ್ತವೆ—ಈ ಸಲಹೆಗಳನ್ನು ಸ್ವೀಕರಿಸುವುದೂ ಬಿಡುವುದೂ ರಾಜ್ಯದ ಇಚ್ಛೆ ಎಂದರು.

(೯ನೇ ಪುಟ ನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಕಮ್ಯುನಿಸ್ಟರಿಗೆ ಪ್ರತಿಸರಕಾರವನ್ನು ರಚಿಸುವ ಇಚ್ಛೆ

ರಕ್ಷ್ಯದ ಧೋರಣೆಗೆ ಆತಂಕವಾಗದಂತೆ ನೆಹರುಗಳಿಗೆ ಬೆಂಬಲ ಕೊಡುವ ನಿಶ್ಚಯ

ಕಳೆದ ಮಹಾಚುನಾವಣೆಯ ಕಾಲದಲ್ಲಿ ಮತ್ತು ಆ ಬಳಿಕ ಸಹ ಸ್ವಲ್ಪ ಕಾಲದ ವರೆಗೆ ಭಾರತವು ಸ್ವತಂತ್ರವಾಗಿದೆ ಎಂಬ ಸಾಮಾನ್ಯ ತಿಳಿವಳಿಕೆಯನ್ನು ಹೊಂದುವುದಕ್ಕೂ ಒಡಂಬಡದಿದ್ದ ನಮ್ಮಲ್ಲಿಯ ಕಮ್ಯೂನಿಸ್ಟರು ಸ್ಟಾಲಿನ್ನರ ಮರಣಾನಂತರದ ಈ ಎರಡು–ಮೂರು ವರ್ಷಗಳ ಅವಧಿಯಲ್ಲಿ ರಶ್ಯದ ಧೋರಣೆಯು ಯಾವ ಪ್ರಕಾರ ಕ್ರಾಂತಿಕಾರಿ ಬದಲಾವಣೆಗಳನ್ನು ಹೊಂದುತ್ತಾ ಬಂತೋ ಅದೇ ರೀತಿಯಲ್ಲಿ ತಮ್ಮ ನಿಲುವೆಯನ್ನು ಬದಲಾಯಿಸಿಕೊಳ್ಳುತ್ತಾ ಬಂದಿದ್ದಾರೆ. ಜನತಾರಾಜ್ಯದ ಹೆಸರಿನಲ್ಲಿ ಸರ್ವಾಧಿಕಾರವನ್ನು ನಡೆಸುವುದೇ ಕಮ್ಯುನಿಸ್ಟರ ಸಂಪ್ರದಾಯವಾಗಿದ್ದರೂ ಕೂಡ ಪ್ರಜಾಪ್ರಭುತ್ವ ಪದ್ಧತಿಯಿಂದ ಅಧಿಕಾರ ಕ್ಷೇತ್ರದಲ್ಲಿ ಚಂಚು ಪ್ರವೇಶಗೈಯುವ ಸಾಧ್ಯತೆ ಇದ್ದರೆ. ಅದರ ಪ್ರಯೋಜನವನ್ನು ಪಡೆಯ ತೀರುವ ಹುಮ್ಮಸ್ಸನ್ನು ಇವರು ತೋರಿಸಿದ್ದಾರೆ. ಹಿಂಸಾತ್ಮಕ ವಿಧಾನವನ್ನು ಬಹಿರಂಗವಾಗಿ ಅಲ್ಲಗಳೆಯುವಷ್ಟು ಸ್ಮೃತಿ ಬಲವಿಲ್ಲದಿದ್ದರೂ ಈ ಕಮ್ಯುನಿಸ್ಟರು ಶಾಂತಿಯ ಮಾತನ್ನಾಡಿ ಜನಪ್ರಿಯತೆ ಸಂಪಾದಿಸುವ ಸಂಚನ್ನು ಬಿಸಡದೆ ಬಿಟ್ಟಿರುವುದಿಲ್ಲ.

ಧೋರಣೆಯ ಬದಲಾವಣೆ

ರಶ್ಯದ ಧೋರಣೆಯಂತೆ ತಾಳ ಹಾಕುವ ತಮ್ಮ ಬುದ್ಧಿಯನ್ನು ಪಾಲ್ಘಾಟಿನಲ್ಲಿ ಈಸ್ಟೆಯಷ್ಟೆ ಜರಗಿದ ಸುದೀರ್ಘ ಅಧಿವೇಶನ ಕಾಲದಲ್ಲಿ ಭಾರತೀಯ ಕಮ್ಯೂನಿಸ್ಟರು ಪ್ರದರ್ಶಿಸಿದರು. ಯುಗೊಸ್ಲಾವಿಯದಲ್ಲಿ, ಬ್ರಿಟನಿನಲ್ಲಿ ಮತ್ತಿತರೆಡೆ ರಶ್ಯದ ನಾಯಕರು ತಾವು ತಪ್ಪಿಬಿದ್ದುದುಂಟೆಂದು ಬಹಿರಂಗವಾಗಿ ಒಪ್ಪಿಕೊಂಡ ಧಾಟಿಯನ್ನೆ ಅನುಸರಿಸಿ ಇವರು ಸಹ ಈಗ ಭಾರತವು ಸ್ವತಂತ್ರವಾಗಿದೆ ಎಂದು ಮನಗಂಡವರಂತೆ ನಡೆದು ಕೊಂಡಿದ್ದಾರೆ. ಕಮ್ಯೂನಿಸ್ಟರ ಪರಿಷತ್ತಿನಲ್ಲಿ ಸ್ವೀಕೃತವಾದ ಗೊತ್ತುವಳಿಯೊಂದು ಕಳೆದ ಕೆಲವು ವರ್ಷಗಳಲ್ಲಿನ ಘಟನೆಗಳೂ ಭಾರತ ಸರಕಾರದ ಧೋರಣೆಯಲ್ಲಾದ ಪರಿವರ್ತನೆಗಳೂ ಸಾಮ್ರಾಜ್ಯ ಶಾಹಿತ್ವದ ವಿರುದ್ಧ ಪಕ್ಷವಿತ್ತ ಎಚ್ಚರಿಕೆಯ ಸತ್ಯವನ್ನು ಮನಗಾಣಿಸಿವೆ ಎಂದು ಹೇಳುತ್ತದೆ. ಆದರೆ ಧೋರಣೆ ಬದಲಾಯಿಸಿದ ಆರೋಪವನ್ನು ಕಮ್ಯೂನಿಸ್ಟರು ಭಾರತ ಸರಕಾರದ ಮೇಲೆ ಹೇರುವುದಕ್ಕಾಗಿ ಅತ್ತ ನಿರೀಕ್ಷೆಯನ್ನು ಮಾಡಿಕೆಂಡು ತಮ್ಮ ಹಿಂದಿನ ನಿಲುವೆಗೂ ಈಗಿನ ನಿಲುವೆಗೂ ಇರುವ ಅಜಗಜಾಂತರವನ್ನು ಮನಗಾಣಲು ಹೋಗಿದ್ದರೆ ಅದು ಸರಿಯಾದ ಕ್ರಮವಾಗುತ್ತಿತ್ತೆಂದು ತೋರುತ್ತದೆ. ೧೯೪೭ನೇ ಆಗೋಸ್ತು ೧೫ರಂದಾಗಲೀ ೧೯೫೦ನೇ ಜನವರಿ ೨೬ರಂದಾಗಲೀ ಭಾರತವು ಪಡೆದಿರಲಿಲ್ಲವೆಂದು ಕಮ್ಯುನಿಸ್ಟರು ಹೇಳುತ್ತಾ ಬಂದಿದ್ದ ಸಾರ್ವಭೌಮಾಧಿಕಾರ ಸಂಪನ್ನ ಸ್ವತಂತ್ರ ಗಣ ರಾಜ್ಯದ ಸ್ಥಾನಮಾನವು ಈಗ ಅದಕ್ಕೆ ಸಿಕ್ಕಿದೆ ಎಂದು ಕಮ್ಯುನಿಸ್ಟರು ಹೇಳುವ ಮಾತಿನ ಅರ್ಥ ಅವರಿಗೇ ಗೊತ್ತು. ಶಾಂತಿಯ ಉದ್ದೇಶವನ್ನು ಎತ್ತಿ ಹಿಡಿಯುತ್ತಿರುವುದು ಶ್ಲಾಘನೀಯವೆಂದು ಗೊತ್ತುವಳಿಯ ಮೂಲಕ ಸಾರುವ ಕಮ್ಯುನಿಸ್ಟರು ತಮ್ಮ ಕಣ್ಣನ್ನು ಬಹಳ ತಡವಾಗಿ ತೆರೆದರೆಂದು ನಿಷ್ಪಕ್ಷಪಾತ ನಿರೀಕ್ಷಕರ ಅಭಿಪ್ರಾಯ.

"ಗಾಳಿ ಬಂದಂತೆ ಕೊಡೆ"

ನೆಹರುಗಳು ಭಾರತೀಯ ರಾಜಕಾರಣದ ಸೂತ್ರಧಾರಿತ್ವವನ್ನು ವಹಿಸಿಕೊಂಡ ಗಳಿಗೆಯಿಂದ ಇಂದು ಭಾರತದ ಯಾವ ಸಾಧನೆಗಳಿಗಾಗಿ ಕಮ್ಯುನಿಸ್ಟರು ಸಹ ಹೊಗಳುವಂತಾಗಿದೆಯೊ ಅವುಗಳಿಗಾಗಿ ನೆಹರೂರ ಧುರೀಣತ್ವದಲ್ಲಿ ಕಾಂಗ್ರೆಸು ಅವಿಶ್ರಾಂತವಾಗಿ ಪ್ರಯತ್ನಪಡುತ್ತಾ ಬಂದಿದೆ; ಹೊರತು ಕಮ್ಯೂನಿಸ್ಟರ ಮನೋಭಾವನೆಯು ಬದಲಾಗುವುದಕ್ಕೆ ಕೆಲವೇ ಸಮಯದ ಹಿಂದೆ ಆಕಸ್ಮಿಕವಾಗಿ ಭಾರತ ಸರಕಾರದ ನಿಲುವೆ ಬದಲಾದದ್ದಲ್ಲ. ಉದಾತ್ತ ತತ್ವಗಳನ್ನು ನಮ್ಮ ಸರಕಾರವು ತಾನು ಅಸ್ತಿತ್ವಕ್ಕೆ ಬಂದ ನಿಮಿಷದಿಂದಲೇ ಪ್ರತಿಪಾದಿಸುತ್ತಾ ಬಂದಿರುವುದು ಪ್ರಾಯಶಃ ಕಮ್ಯುನಿಸ್ಟರನ್ನು ಬಿಟ್ಟು ಉಳಿದೆಲ್ಲರಿಗೂ ಗೊತ್ತಿದ್ದ ವಿಷಯ. ಆದುದರಿಂದ ಈಗ ಕಮ್ಯುನಿಸ್ಟರು ನೆಹರೂರ ಧೋರಣೆ ಸರಿ ಎಂದು ಹೇಳುತ್ತಿರುವರೆಂಬುವದಕ್ಕಾಗಿ ನಾವು ಇಷ್ಟರ ವರೆಗೆ ಇಟ್ಟುಕೊಂಡ ನಂಬಿಗೆ ಅರೆ ಮನಸ್ಸಿನದಾಗಿತ್ತೆಂಬು ತೋರಗೊಡುವ ಆಗತ್ಯವಿಲ್ಲ. ಅಲ್ಲದೆ ಕಮ್ಯೂನಿಸ್ಟರು ಈಗಲೂ ನೆಹರುಗಳ ಯಾವ ಕೆಲವು ವಿಶಿಷ್ಟ ಧೋರಣೆಗಳನ್ನು ವಿರೋಧಿಸುತ್ತಿದ್ದಾರೊ ಅವನ್ನಾದರೂ ಇನ್ನೂ ಕೆಲವು ವರ್ಷಗಳಲ್ಲಿ ಹೊಗಳಲು ಪ್ರಾರಂಭಿಸಬಹುದೆಂಬ ಸಂಭವವನ್ನು ನಾವು ಕಡೆಗಣಿಸುವುದು ಬೇಡ. ಕಮ್ಯೂನಿಸ್ಟರು ತಮ್ಮ ಮನೋಭಾವನೆಯನ್ನು ಗಾಳಿ ಬಂದಂತೆ ಕೊಡೆಹಿಡಿಯುವ ಗಾದೆಯಂತೆ ಬದಲಾವಣೆಗೆ ಗುರಿ ಪಡಿಸುತ್ತಿರುವುದು ಈಗಾಗಲೇ ಸ್ಪಷ್ಟವಾಗಿರುವುದರಿಂದ ನಾವು ಅವರ ತೀರ್ಮಾನಗಳ ಮೇಲೆ ಭಾರತದ ಭವಿಷ್ಯತ್ತನ್ನು ಆಧರಿಸಬೇಕಾಗಿಲ್ಲ. ನೆಹರುಗಳ ನಿಲುವೆಯೇ ದೇಶಕ್ಕೆ ಹಿತವೆಂಬ ಅಚಲ ವಿಶ್ವಾಸ ನಮಗಿದ್ದರೆ. ಅಷ್ಟೇ ಸಾಕು. ಅಂಥ ವಿಶ್ವಾಸವಿಲ್ಲದಿದ್ದರೆ ಅದನ್ನು ಕಮ್ಯುನಿಸ್ಟರ ಪ್ರಶಂಸೆಯ ಮಾತು ಕೇಳಿ ಹೃದಯದಲ್ಲಿ ಚಿಗುರೊಡೆಯಲು ಬಿಡುವುದು ಅನಾವಶ್ಯಕ.

ಅನಪೇಕ್ಷಿತ ಬುದ್ಧಿವಾದ

ಹೆಚ್ಚು ಹೆಚ್ಚು ಜನರು ಭಾರತ ಸರಕಾರವು ಕಳೆದ ಒಂಭತ್ತು ವರ್ಷಗಳಿಂದ ಅನುಸರಿಸುತ್ತಾ ಬಂದಿರುವ ಧೋರಣೆಯ ಉಪಯುಕ್ತತೆ ಮತ್ತು ಯೋಗ್ಯತೆಗಳನ್ನು ಮನಗಂಡರೆ ನಮಗದು ಸಂತೋಷದ ವಿಷಯ. ನಾವು ಕಮ್ಯುನಿಸ್ಟರಿಗೆ ಈಗಲಾದರೂ ಸ್ವಲ್ಪ ಮಟ್ಟಿಗೆ ಬುದ್ಧಿ ಬಂದಿರುವುದಕ್ಕೆ ಹರ್ಷವನ್ನೆ ಸೂಚಿಸುತ್ತೇವೆ. ಕಾಶ್ಮೀರದ ಕುರಿತು ಹುಟ್ಟಿಕೊಟ್ಟ ಕ್ಕನ್ನದ ಎಂಟು ವರ್ಷಗಳನ್ನು ನಿರಾತಂಕವಾಗಿ ಕಳೆದಿದ್ದ ರಶ್ಯದ ನಾಯಕರು ತಮ್ಮ ಭಾರತ ಸಂದರ್ಶನ ಕಾಲದಲ್ಲಿ ಅದು ಭಾರತದ ಅಂಗವೆಂದು ಘೋಷಿಸಿದಂತೆ, ಈಗ ಭಾರತೀಯ ಕಮ್ಯುನಿಸ್ಟರು ಯುದ್ಧ ವಿರಾಮ ರೇಖೆಯನ್ನೇ ಆಧರಿಸಿ ಕಾಶ್ಮೀರದ ಸಮಸ್ಯೆಯನ್ನು ಇತ್ಯರ್ಥಗೊಳಿಸುವ ನೆಹರುಗಳ ಸೂಚನೆ ಸರಿ ಎಂದು ಹೇಳಲು ಹೊರಟಿದ್ದಾರೆ. ಪಾಕಿಸ್ತಾನದೊಡನೆ ಘರ್ಷಣೆ ನಡೆಯುವ ಸಂಭವದ ಕುರಿತು ಜಾಗರೂಕತೆಯಿಂದಿರಬೇಕೆಂದು ಕಮ್ಯೂನಿಸ್ಟರು ಭಾರತ ಸರಕಾರಕ್ಕೆ ಎಚ್ಚರಿಕೆ ಕೊಡಲೂ ಹೋಗಿದ್ದಾರೆ: ಸ್ವಾತಂತ್ರ್ಯವನ್ನು ದೇಶಕ್ಕೆ ಸಂಪಾದಿಸಿ ಕೊಟ್ಟ ಮಹಾಸಂಸ್ಥೆಯಾದ ಕಾಂಗ್ರೆಸಿಗೆ ಮತ್ತದರ ಧುರೀಣರಿಗೆ ಈ ಬುದ್ಧಿವಾದವನ್ನು ಹೇಳ ಹೋಗುವ ಅಗತ್ಯವೇನೇನೂ ಇಲ್ಲದಿದ್ದರೂ ಕಮ್ಯುನಿಸ್ಟರು ಆ ಚಪಲವನ್ನು ತೋರಿಸಿರುವುದು ಸ್ವಪ್ರಯೋಜನಾರ್ಥಕವಾದ ಪ್ರಚಾರ ತಂತ್ರ. ಒಳ್ಳೆಯದಾದರೆ ನಮ್ಮದೂ ಅಂಗ ಅದರಲ್ಲಿದೆ ಎಂದು ತೋರಿಸಿಕೊಳ್ಳುವುದಕ್ಕಾಗಿ ಹಾಕುವ ಬುನಾದಿ ಇದು; ಕೆಟ್ಟದಾದರೆ ನಾವು ಹೇಳಿದಂತೆ ಕಾಂಗ್ರೆಸಿಗರು ಯಾವುದೋ ಒಂದು ಕ್ಷುಲ್ಲಕ ವಿಷಯದಲ್ಲಿ ನಡೆದುಕೊಳ್ಳಲಿಲ್ಲವೆಂದು ಜಾರಿಕೊಳ್ಳುವುದು ಕಮ್ಯುನಿಸ್ಟರ ಜನ್ಮಜನಿತ ಸ್ವಭಾವ.

ನೆರವಿನ ಭರವಸೆ

ಜನತೆಯ ಹಿತಾಸಕ್ತಿಗಳ ರಕ್ಷಣೆಯನ್ನು ಮಾಡುವ ನೆಲೆಯಿಂದ ಕಮ್ಯುನಿಸ್ಟರು ಭಾರತ ಸರಕಾರಕ್ಕೆ ರಕ್ಷಣೆ, ಶಾಂತಿ ಮತ್ತು ವಿದೇಶಗಳ ಮೇಲಿನ ಆರ್ಥಿಕ ಅವಲಂಬನೆಯನ್ನು ತಗ್ಗಿಸುವ ಕ್ರಮಗಳಲ್ಲಿ ಹಾರ್ದಿಕ ಸಹಕಾರವನ್ನು ಕೊಡುವರೆಂಬ ಭರವಸೆಯು ಪಾಲ್ಘಾಟಿನಿಂದ ಬಂದಿದೆ. ಕಾಂಗ್ರೆಸ್ಸನ್ನೊಳಗೊಂಡು ಎಲ್ಲ ಪಕ್ಷಗಳ, ಸಂಗತಗಳ ಸಂಯುಕ್ತ ರಾಷ್ಟ್ರೀಯ ಆಂದೋಲನವನ್ನು ಸಂಘಟಿಸಿ ರಾಷ್ಟ್ರದ ಭದ್ರತೆ ಮತ್ತು ರಕ್ಷಣೆ ಮಾಡಬೇಕೆಂಬುದು ಕಮ್ಯೂನಿಸ್ಟರ ಬಯಕೆಯಾಗಿದೆ. ಅವರಿಗೆ ಕಾಂಗ್ರೆಸಿನಲ್ಲಿ ಕೆಲವು ಧುರೀಣರು ಈ ರಾಷ್ಟ್ರೀಯ ಉದ್ದೇಶಕ್ಕೆ

(೭ನೇ ಪುಟ ನೋಡಿರಿ)



NAVAYUGA

Popular Kannada Weekly

Founder:—

Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೩-೫-'೫೬	೩೫

ಲಂಡನಿನ ಸಮಾಲೋಚನೆ

ರಶ್ಯದ ಪ್ರಧಾನ ಮಂತ್ರಿಗಳೂ ಆ ದೇಶದಲ್ಲಿ ಅಧಿಕಾರಸ್ಥಾನ ಪಡೆದಿರುವ ಪಕ್ಷದ ಕಾರ್ಯದರ್ಶಿಯವರೂ ಆದ ಬುಲ್ಗಾನಿನ್ ಮತ್ತು ಖ್ರುಶ್ಚೇಫರ ಬ್ರಿಟನಿನ ಯಾತ್ರೆಯು ಈಗ ಪರಿಸಮಾಪ್ತಿಯಾಗಿದೆ; ಮತ್ತು ಈ ಮಾದರಿಯ ಎಲ್ಲ ಸಂದರ್ಶನಗಳ ಅಂತ್ಯದಲ್ಲಿ ಮಾಮೂಲಿನಂತೆ ಹೊರಡುವ ಸಂಯುಕ್ತ ಪ್ರಕಟಣೆಯೂ ಬಹಿರಂಗಗೊಂಡಿದೆ. ಆದರೆ ಆಶಾದಾಯಕವಾದ, ಅಥವಾ ಉತ್ತೇಜಕವಾದ, ಯಾವುದೇ ನಿರ್ಣಯವಾದುದನ್ನು ಈ ಹೇಳಿಕೆ ತಿಳಿಸಿಲ್ಲ—"ಮಧುರವೂ ಸೌಹಾರ್ದಪೂರ್ಣವೂ ಆದ ವಾತಾವರಣದಲ್ಲಿ ಮಾತುಕತೆ ನಡೆಯಿತು" ಎಂಬ ಸೌಮ್ಯ ಉಲ್ಲೇಖವೂ ಹೇಳಿಕೆಯಲ್ಲಿಲ್ಲ. ಬದಲಿಗೆ "ನೇರ ಹಾಗು ವಾಸ್ತವಿಕ" ದೃಷ್ಟಿಕೋಣದಿಂದ ಸಮಾಲೋಚನೆ ನಡೆಸಲಾಯಿತೆಂದು ಹೇಳಿಕೆಯು ತಿಳಿಸುತ್ತದೆ. ಹೇಳಿಕೆಯನ್ನು ಸಂಪೂರ್ಣವಾಗಿ ಅಭ್ಯಸಿಸಿದ ಬಳಿಕ ರಶ್ಯವಾಗಲೀ ಬ್ರಿಟನಾಗಲೀ ತಮ್ಮ ಹಿಂದಿನ ನಿಲುಮೆಗಳ ವಿಷಯದಲ್ಲಿ ರಿಯಾಯತಿಯನ್ನು ತೋರಿಸಿ, ಹಾಗೆ ತೀರ ನಿಕಟವಾದ ಸಂಬಂಧವನ್ನು ಉಭಯ ದೇಶಗಳ ನಡುವೆ ಸ್ಥಾಪಿಸುವ ಸಾಹಸಪರ ಕೆಲಸಕ್ಕೇನೂ ಇಳಿಯಲಿಲ್ಲವೆಂದು ಮನವರಿಕೆಯಾಗುತ್ತದೆ. ಬ್ರಿಟನ್ನಿನ ಪ್ರಧಾನಿಗಳು ಹೇಳಿದಂತೆ ದೂರಗಾಮಿ ಪರಿಣಾಮಗಳ ದೃಷ್ಟಿಯಿಂದ ಮಾತ್ರ ಲಂಡನಿನ ಸಮಾಲೋಚನೆಯನ್ನು "ಪ್ರಾರಂಭದ ಪ್ರಾರಂಭ" ಎಂಬ ಮನೋಭಾವನೆಯಿಂದ ನೋಡಬಹುದು. ಒಳ್ಳೆಯ ಬುನಾದಿಯನ್ನು ಇನ್ನೂ ಹಾಕಿಲ್ಲವಾದರೂ ಅದಕ್ಕಾಗಿ ಪ್ರಾಸ್ತಾವಿಕ ಸಿದ್ಧತೆಯನ್ನು ನಡೆಸಲಾಗಿದೆ; ಸಂಬಂಧ ಸ್ಥಾಪನೆಯ ಕ್ಷೇತ್ರದಲ್ಲಿ ಕಳೆಗಳನ್ನು ಕೀಳುವ ಅಥವಾ ಉಳುಮೆಯ ಕೆಲಸ ನಡೆದಿದೆ ಎಂದಿದರ ಅರ್ಥ. ಮಧ್ಯಪೂರ್ವದಲ್ಲಿ ಅರಬರೂ ಯೆಹೂದ್ಯರೂ ಹೊಡೆದಾಡಿಕೊಳ್ಳುವುದನ್ನು ನಿಲ್ಲಿಸಲು ಸಂಯುಕ್ತ ರಾಷ್ಟ್ರಸಂಘವು ಮಾಡಬಹುದಾದ ಪ್ರಯತ್ನಗಳಿಗೆ ಸಹಕಾರವನ್ನು ಉಭಯ ದೇಶಗಳೂ ಕೊಡುವವೆಂಬ, ಹೊರತೋರಿಕೆಗೆ ಹೇಳಿಕೆಯಲ್ಲಿರುವ, ಏಕಮಾತ್ರ "ತೃಪ್ತಿದಾಯಕ ನಿಶ್ಚಯ"ವೂ ಸಹ ಅರಬರಿಗೂ ಯೆಹೂದ್ಯರಿಗೂ ಶಸ್ತ್ರಗಳ ಪೂರೈಕೆ ಮಾಡಲಾಗದೆಂಬ ನಿರ್ಧಾರದ ಮಟ್ಟಕ್ಕೆ ಬ್ರಿಟನನ್ನಾಗಲೀ ರಶ್ಯವನ್ನಾಗಲೀ ತಂದಿಲ್ಲವೆಂದ ಮೇಲೆ ತೃಪ್ತಿಗೆ ಬಲವಾದ ಆಧಾರವುಳಿಯುವುದಿಲ್ಲ. ಬ್ರಿಟನು ತನ್ನನ್ನು ಮಿತ್ರ ರಾಷ್ಟ್ರಗಳೊಡನೆ ಬಿಗಿದಿರುವ ಕಟ್ಟುಗಳನ್ನು ಸ್ವಲ್ಪನಾದರೂ ಸಡಿಲಿಸುವ ಸಾಹಸವನ್ನು ತೋರದೆ ಬಿಮ್ಮನೆ, ತುಂಬು ಗಾಂಭೀರ್ಯದಿಂದಲೇ ಸಮಾಲೋಚನೆಯ ಅವಧಿಯಲ್ಲಿ ಕುಳಿತಿತ್ತು—ಬ್ರಿಟನಿಗೂ ಅದರ ಮಿತ್ರರಿಗೂ ನಡುವೆ ವೈಮನಸ್ಯವನ್ನು ತರಬೇಕೆಂಬ ಉದ್ದೇಶವನ್ನು ಪ್ರಕಟವಾಗಿ ರಶ್ಯದ ನಾಯಕರು ಪ್ರತಿಪಾದಿಸಿರದಿದ್ದರೂ ಅವರು ಅದನ್ನು ಬಯಸಿದ್ದರೆಂದು ಬ್ರಿಟನಿನ ಪ್ರಧಾನ ಮಿತ್ರ ರಾಷ್ಟ್ರವಾದ ಅಮೇರಿಕದ ಭಾವನೆಯಾಗಿದ್ದಿತು. ತಮ್ಮ ಮಿತ್ರಭೇದದ ತಂತ್ರ ವಿಫಲವಾಯಿತೆಂದೋ ಏನೋ—ಬುಲ್ಗಾನಿನ್ನರು ಇತರ ದೇಶಗಳೊಡನೆ ಬ್ರಿಟನಿಗಿರುವ ಸಂಬಂಧವನ್ನು ಕೆಡಿಸುವುದು ರಶ್ಯದ ಇಚ್ಛೆಯಲ್ಲ ಎಂದು ಹೊರಡುವ ಮುಂಚೆ ತಿಳಿಸಿ, ಎಲ್ಲವೂ ಚೆನ್ನಾಗಿದೆ ಎಂಬ ಭಾವನೆಯನ್ನು ಹುಟ್ಟಿಸಿದರು. ಅಮೇರಿಕದ ಪ್ರಭಾವ ವರ್ಚಸ್ಸಿನಿಂದ ಬ್ರಿಟನು ಮುಕ್ತವಾಗಿಲ್ಲದಿರುವುದು ತೀರ ಕಹಿಯಾಗಿ ರಶ್ಯದ ಪ್ರಭೃತಿಗಳಿಗೆ ಕಂಡು ಬಂದರೂ ಅದನ್ನು ತೋರಗೊಡದೆ "ಅಮೇರಿಕದೊಡನೆ ರಶ್ಯದ ಸಂಬಂಧವು ಮಧುರವಾಗುವಂತೆ ಬ್ರಿಟನು ನಮಗೆ ಸಹಾಯ ಸಲ್ಲಿಸಬಲ್ಲುದು" ಎಂಬ ಸದಾಶಯವನ್ನು ಬುಲ್ಗಾನಿನ್ನರು ಪ್ರಕಟಿಸಿದರು. ಖ್ರುಶ್ಚೇಫರು ಜಲಜನಕ ಬಾಂಬು, ಆಕಾಶ ಬಾಣ ಇತ್ಯಾದಿ ಯುದ್ಧ ಸಿದ್ಧತೆಯ ದೊಡ್ಡ ಮಾತುಗಳ ದೃಷ್ಟಿಯಲ್ಲಿ ರಶ್ಯವು ಬ್ರಿಟನಿಗಿಂತ, ಅಷ್ಟೇಕೆ, ಅಮೇರಿಕಕ್ಕಿಂತ ಸಹ ಹೆಚ್ಚು ಮುಂದುವರಿದಿದೆ ಎಂಬುದಾಗಿ ಪ್ರಚಾರ ಮಾಡಲು ಹಿಂಜರಿಯಲಿಲ್ಲ. ಯುದ್ಧಪೂರ್ವದಲ್ಲಿ ಬ್ರಿಟನರು ಅನುಸರಿಸಿದ ನೀತಿಯಿಂದಲೇ ಹಿಟ್ಲರನಿಗೆ ರಶ್ಯವನ್ನು ದಾಳಿಗೆ ಗುರಿಪಡಿಸುವ ಸಾಹಸವುಂಟಾಯಿತೆಂದು ಆರೋಪಿಸಲೂ ಅವರು ಸಂಕೋಚಪಡಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಆಕ್ರಮಣವೇನಾದರೂ ನಡೆದ ಪಕ್ಷದಲ್ಲಿ ರಶ್ಯಕ್ಕೆ ಒಮ್ಮೆಲೆ ಪೆಟ್ಟು ತಗಲಬಾರದೆಂಬ ಉದ್ದೇಶದಿಂದಲೇ ಯುದ್ಧೋತ್ತರದಲ್ಲಿ ರಶ್ಯವು ಪೂರ್ವ ಯುರೋಪಿನ ಸಣ್ಣ ರಾಷ್ಟ್ರಗಳನ್ನು ತನ್ನ ಪ್ರಭಾವದಲ್ಲಿರಿಸಿಕೊಂಡಿತು—ಇವುಗಳನ್ನೆಲ್ಲ ವಶಪಡಿಸಿಕೊಂಡು, ರಶ್ಯದ ಹತ್ತಿರ ಬರುವುದಕ್ಕೆ ಪಾಶ್ಚಾತ್ಯ ರಾಷ್ಟ್ರಗಳಿಗೆ ಸಮಯ ಬೇಕಾಗುತ್ತದೆ ಎಂಬುದರಿಂದ ರಶ್ಯವು ಕಳೆದ ಮಹಾಯುದ್ಧದಲ್ಲಿ ಏನಿಲ್ಲೆಂದರೂ ೧೦-೧೨ ಮಿಲಿಯ ಜೀವಗಳಿಗೆ ಕಡಿಮೆಯಾಗದಂತೆ ಕೊಟ್ಟ ಬಲಿದಾನದ ಆವಶ್ಯಕತೆ ಬರಲಾರದು ಎಂದೆಲ್ಲ ರಶ್ಯ ಲೆಕ್ಕಹಾಕಿದೆ: ಇದರ ತಳಹದಿಯನ್ನು ತಪ್ಪಿಸಲು ಬ್ರಿಟನರು ನಡೆಸಿದ ಪ್ರಯತ್ನಗಳು ಫಲಕೊಟ್ಟಿಲ್ಲ— ಪೂರ್ವ ಯುರೋಪಿನ ರಾಜಕೀಯ ಕೈದಿಗಳ ಬಿಡುಗಡೆಯ ಪ್ರಶ್ನೆಗಳನ್ನು ರಶ್ಯದ ಪ್ರಭೃತಿಗಳ ಮುಂದಿಟ್ಟ ಸಂದರ್ಭದಲ್ಲಿ ಖ್ರುಶ್ಚೇಫರಿಗೂ ಆಂಗ್ಲ ಅತಿಥೇಯರಿಗೂ ಕೈಗೆ ಕೈ ಹತ್ತುವುದೋ ಎಂಬಷ್ಟು ಉಗ್ರವಾಗ್ವಾದ ನಡೆಯಿತು: ಕಿಡಿಯುಗುಳುವ ಪ್ರಸಂಗವಿದಾಯಿತು. ಆದಾಗ್ಯೂ ರಶ್ಯದ ನಾಯಕರು ಬ್ರಿಟನಿನಲ್ಲಿ ಔದ್ಯಮಿಕ ಕ್ಷೇತ್ರದಲ್ಲಿ ತಲೆದೋರಿರುವ ಕ್ಷೋಭೆಯನ್ನು ಮನಗಂಡು ಉದಾರ ಮನಸ್ಸಿನ ಕೊಡುಗೆಯನ್ನು ನೀಡಿದ್ದಾರೆ—೧೦೦೦ ಮಿಲಿಯ ಪೌಂಡುಗಳಷ್ಟು ಬೆಲೆಯ ಸರಕುಗಳ ವ್ಯಾಪಾರ ಮಾಡಿರೆಂದು ಬ್ರಿಟನಿಗೆ ಆಮಂತ್ರಣವಿತ್ತಿದ್ದಾರೆ; ಈ ದನ್ನರ ಹೇಳಿಕೆಯಂತೆ, ಈ ಸರಕುಗಳಲ್ಲಿ ಕನಿಷ್ಠ ಮೂರರಲ್ಲಿ ಎರಡಂಶದಷ್ಟಾದರೂ ಪಾಶ್ಚಾತ್ಯ ಮಿತ್ರರು ಕಮ್ಯುನಿಸ್ಟರ ರಾಷ್ಟ್ರಗಳಿಗೆ ರಫ್ತುಮಾಡುವ ವಿಷಯದಲ್ಲಿ ಸ್ವಯಮೇವ ಹಾಕಿಕೊಂಡ ನಿಯಂತ್ರಣ ಕ್ರಮಗಳಿಗೆ ಒಳಗಾಗಿಲ್ಲ. ಆದುದರಿಂದ ರಶ್ಯದೊಡನೆ ವ್ಯಾಪಾರದ ಲಾಲಸೆಯು ಬ್ರಿಟನಿನ ಸರಕಾರಕ್ಕೂ ಜನರಿಗೂ ಹೆಚ್ಚಿಕೊಳ್ಳಬಹುದು. ವ್ಯಾಪಾರವು ರಾಜಕೀಯ ಸೌಮನಸ್ಯವನ್ನು ಸ್ಥಾಪಿಸುವ ಮಾರ್ಗವಾದೀತೆಂಬ ನಂಬಿಕೆಯನ್ನು ಎರಡೂ ದೇಶಗಳವರು ಪಡೆದಿದ್ದಾರೆ. ಆದುದರಿಂದ ಈ ಮಟ್ಟಿಗೆ ಭವಿಷ್ಯದಲ್ಲಿ ಒಳ್ಳೆಯ ಫಲಗಳು ಸಿಗುವ ಆಶೆಯನ್ನಿಟ್ಟುಕೊಂಡರೆ ತಪ್ಪಾಗದು. ಬೇರೆಲ್ಲ ದೃಷ್ಟಿಯಲ್ಲಿ ಒಬ್ಬರಿನ್ನೊಬ್ಬರ ಮನೋಭಾವನೆಯನ್ನು ಸ್ವಲ್ಪ ಹೆಚ್ಚು ಸ್ಪಷ್ಟವಾಗಿ ಹಾಗು ಹತ್ತಿರದ ಸಂಪರ್ಕ ಬಲದಿಂದ ತಿಳಿದುಕೊಳ್ಳುವುದಕ್ಕಿಂತ ಹೆಚ್ಚಿನದೇನೂ ನಡೆದಿಲ್ಲ. ಇಂಥ ತಿಳುವಳಿಕೆಯೇ ಸಾಮಾನ್ಯವಾಗಿ ಸಂಶಯಗ್ರಸ್ತ ಮನಸ್ಸನ್ನು ಶುಚಿಪಡಿಸುವ ಸಾಧನವೆಂಬುದಕ್ಕಾಗಿ ನಾವು ಅನ್ಯಥಾ (ಅಂದರೆ ತಾತ್ಕಾಲಿಕ ಪರಿಣಾಮದ ದೃಷ್ಟಿಯಿಂದ) ಕ್ಷುಲ್ಲಕವಾದ ಈ ಸಾಧನೆಗೂ ಮಹತ್ವ ಕೊಡುತ್ತೇವೆ.

ಹೊಸ ಔದ್ಯಮಿಕ ಧೋರಣೆ

ವಿಸ್ತೃತ ಪ್ರಮಾಣದಲ್ಲಿ ಸರಕಾರಿ ಕೈವಾಡ

ಭಾರತ ಸರಕಾರವು ಎಂಟು ವರ್ಷಗಳಿಗೂ ಹೆಚ್ಚು ಪೂರ್ವದಲ್ಲಿ ಘೋಷಿಸಿದ್ದ ಔದ್ಯಮಿಕ ಧೋರಣೆಯನ್ನು ಇಷ್ಟು ದಿನಗಳಲ್ಲಿ ನಡೆದ ಘಟನೆಗಳ ಹಾಗು ಪರಿವರ್ತಿತ ವಾತಾವರಣದ ಹಿನ್ನೆಲೆಯಲ್ಲಿ ಪುನರ್ವಿಮರ್ಶಿಸಿ, ಹೊಸ ಧೋರಣೆಯನ್ನು ಇದೀಗ ಸಾರಿದೆ. ಪ್ರಧಾನ ಮಂತ್ರಿಗಳು ಪ್ರಕಟಪಡಿಸಿದ ನೂತನ ನಿಲುಮೆಯಂತೆ, ಸರಕಾರದ ಕೈವಾಡವು ಔದ್ಯಮಿಕ ಕ್ಷೇತ್ರದಲ್ಲಿ ಇನ್ನುಮುಂದೆ ಹಿಂದಿಗಿಂತಲೂ ವಿಸ್ತೃತ ಪ್ರಮಾಣದಲ್ಲಿರುತ್ತದೆ. ಸಾಮಾನ್ಯವಾಗಿ ಖನಿಜಗಳನ್ನು ಆಧರಿಸಿದ ಎಲ್ಲ ಕೈಗಾರಿಕೆಗಳೂ ಸರಕಾರದ ವಶದಲ್ಲಿರುತ್ತವೆ.

ಮಗಳಿಗೂ ಪಾಲು

ಲೋಕಸಭೆಯು ಈಗ ಹಿಂದು ಉತ್ತರಾಧಿಕಾರ ವಿಧೇಯಕದ ಮೇಲೆ ಚರ್ಚೆಯನ್ನು ನಡೆಸಿದೆ. ಮಗಳಿಗೆ ಸಹ ತಂದೆಯ ಆಸ್ತಿಯಲ್ಲಿ ಮಗನಷ್ಟೆ ಅಧಿಕಾರವನ್ನು ಪಾಲಿನ ರೂಪದಲ್ಲಿ ಕೊಡುವ ಈ ಮಸೂದೆಗೆ ಹೆಚ್ಚಿನ ಸ್ತ್ರೀ ಸದಸ್ಯರ ಬೆಂಬಲ ವ್ಯಕ್ತವಾಗಿದೆ. ಆದರೆ ಇದನ್ನು ವಿರೋಧಿಸುವ ಸದಸ್ಯರೂ ಇದ್ದಾರೆ- ಮತ್ತಿವರವಾದವೂ ತೂಕವುಳ್ಳದ್ದಾಗಿದೆ ಎನ್ನಬಹುದು.

ಮುಂಬಯಿ ನಗರ

ರಾಜ್ಯ ಸಭೆಯಲ್ಲಿ ರಾಜ್ಯಗಳ ಪುನಾರಚನೆಗೆ ಸಂಬಂಧಿಸಿದ ವಿಧೇಯಕದ ಚರ್ಚೆ ನಡೆದಾಗ ಫಜಲಾಲಿ ಆಯೋಗದಲ್ಲಿ ಸದಸ್ಯರಾಗಿದ್ದ ಪಂಡಿತ ಹೃದಯನಾಥ ಕುಂಜ್ರೂರವರು ಮುಂಬಯಿ ಮತ್ತು ಗುಜರಾಥಗಳನ್ನೊಳಗೊಂಡ ದ್ವಿಭಾಷಾ ರಾಜ್ಯವನ್ನು ರಚಿಸುವುದು ಸಾಧ್ಯವಿಲ್ಲವಾದರೆ, ಮುಂಬಯಿ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸುವುದೇ ಯುಕ್ತವೆಂದಿದ್ದಾರೆ. ಕೇಂದ್ರದ ಹಿಂದಿನ ಕಾಯಿದೆಮಂತ್ರಿ ಡಾ. ಅಂಬೇಡ್ಕರರೂ ಮುಂಬಯಿಯನ್ನು ಮಹಾರಾಷ್ಟ್ರದಲ್ಲಿಡಬೇಕೆಂದು ವಾದಿಸಿದ್ದಾರೆ.

ನೆಹರುಗಳ ಸಮಾಲೋಚನೆ

ಪ್ರಧಾನಿ ನೆಹರುಗಳು ಸಂಸತ್ತಿನ ಕಾಂಗ್ರೆಸು ಪಕ್ಷದ ಮಹಾರಾಷ್ಟ್ರೀಯ ಸದಸ್ಯರನ್ನು ಗೋಪ್ಯ ಸಮಾಲೋಚನೆಗೆ ಕಳೆದ ವಾರ ಆಹ್ವಾನಿಸಿ ಬಿಚ್ಚು ಮನಸ್ಸಿನಿಂದ ಮುಂಬಯಿ ನಗರದ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಂಡರು. ನಿರೀಕ್ಷಕರ ಅಭಿಪ್ರಾಯದಂತೆ, ಈಗ ಮುಂಬಯಿ ನಗರವು ಕೇಂದ್ರಾಧೀನ ಪ್ರದೇಶವಾಗಿಯೇ ರೂಪುಗೊಂಡರೂ ನಿರ್ದಿಷ್ಟ ಸಮಯದಲ್ಲಿ ಅದನ್ನು ಮಹಾರಾಷ್ಟ್ರದಲ್ಲಿ ಸೇರಿಸಬಹುದು. ಮುಂಬಯಿಯ ಜನಮತವನ್ನು ಇದಕ್ಕಾಗಿ ಸಂಗ್ರಹಿಸುವ ತೀರ್ಮಾನವಾಗಬಹುದು.

ದಕ್ಷಿಣ ಪ್ರದೇಶ

ಮದ್ರಾಸು ಸರಕಾರದ ಸಾರ್ವಜನಿಕ ಕಾಮಗಾರಿ ಖಾತೆಯ ಸಚಿವರಾದ ರಾಮನಾಡಿನ ರಾಜ ಶ್ರೀ ಸೇತುಪತಿಯವರು ದಕ್ಷಿಣ ಪ್ರದೇಶಕ್ಕೆ ಪ್ರಕಟ ಬೆಂಬಲವನ್ನು ಕಳೆದವಾರ ಕೊಟ್ಟರು. ಮೈಸೂರಿನ ಶಾಸನಾಂಗವು ದಕ್ಷಿಣ ಪ್ರದೇಶಕ್ಕೆ ಅನುಕೂಲಾಭಿಪ್ರಾಯವನ್ನು ಪ್ರಕಟಿಸಿರುವಾಗ ಮತ್ತು ಕೇರಳದಲ್ಲಿ ಹರಿದು ವ್ಯರ್ಥವಾಗುವ ನೀರನ್ನು ತಮಿಳುನಾಡಿಗೆ ಹರಿಸಿ, ತಮಿಳುನಾಡಿನ ರೈತರು ಕೃಷಿಯನ್ನು ಸಮೃದ್ಧಪಡಿಸಿಕೊಳ್ಳಲು ದಕ್ಷಿಣ ಪ್ರದೇಶವು ಉಪಯುಕ್ತವೆನಿಸಿರುವಾಗ— ಈ ಯೋಜನೆಯನ್ನು ಮೂಲೆಗುಂಪು ಮಾ

NOTICE.

Notice is hereby given that Share Certificate No. 2162 for 5 shares issued by The Vijaya Bank, Limited, to Sri. Balkunjeguthu Chennu Shetty, S/o Monu Shetty, Prabhat Bhuvan, 1533 Shukrawar Peth, Poona No. 2, is reported to be lost and an application has been received for a fresh Share Certificate in the place of the original. Any person having any objection what-soever for the issue of a fresh Share Certificate in the applicant's name, should communicate immediately to the undersigned. If no objection is filed with the undersigned within 15 days from this date, a fresh Share Certificate in the place of Share Certificate No. 2162 for 5 shares, will be issued in the name of Sri B. Chennu Shetty.

The Vijaya Bank, Ltd.,
Head Office, MANGALORE-3.
Dated: 1—5—1956.

(*Sd.*) B. Mahabala Shetty,
Secretary.

ಪ್ರಯತ್ನವು ದೇಶದ್ರೋಹವೆಂದು ಮಂತ್ರಿಗಳು ಸಾರಿದರು.

ಓದುಗರ ಅವಗಾಹನೆಗೆ

ಭಾರತ ಸರಕಾರವು ಈಗ ಚಲಾವಣೆಯಲ್ಲಿರುವ ಅಶೋಕ ಸ್ತಂಭದ ಮುದ್ರೆಯಿರುವ ಎಲ್ಲ ನೋಟುಗಳನ್ನು ಅಕ್ಟೋಬರ ತಿಂಗಳ ೩೧ನೇ ತಾರೀಖಿನ ಬಳಿಕ ಚಲಾವಣೆಯಲ್ಲಿಡಲಾಗದೆಂದು ತೀರ್ಮಾನಿಸಿದೆ. ಈ ನೋಟುಗಳ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬ್ಯಾಂಕ್ ಆಫ್ ಮೈಸೂರ್, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ರಿಜರ್ವ್ ಬ್ಯಾಂಕ್ ಆಫ್ ಇಂಡಿಯಾ ಅಥವಾ ರಿಜರ್ವ್ ಬ್ಯಾಂಕಿನ ಏಜಂಟರಾಗಿ ಕೆಲಸ ಮಾಡುವ ಟ್ರೆಜರಿಗಳಲ್ಲಿ ಅಶೋಕ ಸ್ತಂಭದ ಚಿತ್ರವಿರುವ ನೋಟುಗಳಿಗಾಗಿ ವಿನಿಮಯ ಮಾಡಿಕೊಳ್ಳಬೇಕಾಗಿದೆ.

(೫ನೇ ಪುಟದಿಂದ)

…ಬದ್ಧವಿದ್ದಾರೆಂದು ತೋರಿದೆ. ಇತರ ಪಕ್ಷಗಳೊಡನೆ ಸೇರಿಕೊಳ್ಳದೆ ಏಕಾಕಿಯಾಗಿ ನಡೆಯುವ ಕಾಂಗ್ರೆಸಿನ ಪ್ರವೃತ್ತಿಕೆಯು ಕಮ್ಯುನಿಸ್ಟರಿಗೆ ಮೆಚ್ಚುಗೆಯಾಗಿಲ್ಲ. ಆದರೆ ದುರ್ಜನರ ಸಂಗ ಸಜ್ಜನ ನಾಶಕ್ಕೆ ಪ್ರಥಮ ಸೋಪಾನ ಎಂಬ ಸುಭಾಷಿತವನ್ನು ಕಾಂಗ್ರೆಸಿಗರು ಹೇಗೆ ಮರೆತಿರಬಲ್ಲರು? ಕಮ್ಯುನಿಸ್ಟರ ಮತ್ತು ಜಾತೀಯವಾದಿ ಪಕ್ಷಗಳ ಪ್ರಬಲ ವೈಖರಿ ಮತ್ತು ತೀರ ಸಂಕುಚಿತವಾದ, ತಮ್ಮ ಮೂಗಿನ ನೇರಕ್ಕೆ ಮಾತನಾಡುವ ದೃಷ್ಟಿಕೋಣದ ತಿಳುವಳಿಕೆಯ ಪರಿಚಯ ವಿದ್ದವರಿಗಾದರೂ ಸಾಧ್ಯವಿದ್ದಷ್ಟು ಮಟ್ಟಿಗೆ ಇವರೆಲ್ಲರನ್ನೂ ಹೊರಗಿನಿಂದ ಹೊರಗೆಯೇ ಇಡುವ ಮನಸ್ಸಾಗುವುದು ನಿಶ್ಚಯ.

ವಿರೋಧದ ಸಂಘಟನೆ

ಒಂದು ಪರಿಮಿತ ಕಾರ್ಯಕ್ರಮವನ್ನಾದರೂ ಆಚರಣೆಗಿಳಿಸಲು ಶಕ್ತವಾದ ಸಂಯುಕ್ತ ಸರಕಾರವನ್ನು ರಚಿಸುವ ಧ್ಯೇಯವನ್ನು ಪಾಲ್ಘಾಟಿನ ಪರಿಷತ್ತು ಪಕ್ಷದ "ಸಂದೇಶ" ಪಲ್ಲವಿಯಾಗಿ ಸ್ವೀಕರಿಸಿದೆ. ಕಾಂಗ್ರೆಸಿನೊಡನೆ ಸಹ ಕೂಡಿಕೊಂಡು ಕಲೆಯುವ ಆತುರವನ್ನು ಪ್ರದರ್ಶಿಸಿದ ಕಮ್ಯುನಿಸ್ಟರು ಹಾಗೆ ಹೇಳಿದ ನಾಲಿಗೆಯಿಂದಲೇ ಶಾಸನಾಂಗದ ಒಳಗಡೆ ಪ್ರಜಾಸತ್ತಾತ್ಮಕ ವಿರೋಧವನ್ನು ಸಂಘಟಿಸುವುದು ತಮ್ಮ ಪ್ರಯತ್ನವೆಂದೂ ಹೇಳಿದ್ದಾರೆ. ಇದನ್ನು ತಮ್ಮ ಪಕ್ಷದಲ್ಲಿ ಹುಟ್ಟಿದ ಒಂದು ಒಡಕನ್ನು ಸರಿಪಡಿಸುವ ಭರದಲ್ಲಿ ಮಾಡಿದ ವಿಲಕ್ಷಣ ತೀರ್ಮಾನವೆಂದೇ ಹೇಳಬೇಕಾಗುತ್ತದೆ. ನೆಹರು ಸರಕಾರದೊಡನೆ ಸರ್ವ ರೀತಿಯಲ್ಲಿ ಸಹಕರಿಸಬೇಕೆಂಬ ಜೋಶಿ ಗುಂಪಿಗೆ ಪಕ್ಷದ ಮೂರರಲ್ಲಿ ಒಂದಂಶಕ್ಕಿಂತಲೂ ಹೆಚ್ಚು ಜನರ ಬೆಂಬಲವಿದೆ ಎಂದು ಈಗಾಗಲೇ ವ್ಯಕ್ತವಾಗಿದೆ.

ಆದರೂ ಸಹಕಾರ

ಆದುದರಿಂದ ಪ್ರತಿಪಕ್ಷದ ಸ್ಥಾನದಲ್ಲಿ ಅಥವಾ ಪ್ರತಿ ಸರಕಾರರಚನೆಯ ಹುಮ್ಮಸ್ಸಿನಲ್ಲಿದ್ದರೂ ಜನರಿಗೆ ಅತ್ಯಧಿಕ ಪ್ರಯೋಜನವಾಗುವಂತೆ ನೋಡಿಕೊಳ್ಳುವ ಉದ್ದೇಶವನ್ನಿಟ್ಟುಕೊಂಡು ಎಲ್ಲ ಅಭಿವೃದ್ಧಿ ಪ್ರಯತ್ನಗಳಲ್ಲಿ ಭಾಗವಹಿಸುವ ಉತ್ಸಾಹವನ್ನು ಕಮ್ಯುನಿಸ್ಟರು ತೋರಿಸಿದ್ದಾರೆ. ಕಮ್ಯುನಿಸ್ಟರ ಪ್ರೇರಣೆ ಇಲ್ಲದಿದ್ದರೂ ಮೊದಲಿನ ಯೋಜನೆಯ ಅವಧಿಯಲ್ಲಿ ಸ್ವೇಚ್ಛೆಯಿಂದ ಕಾಂಗ್ರೆಸು ಸರಕಾರದೊಡನೆ ಜನರು ವಿಸ್ತೃತ ಪ್ರಮಾಣದಲ್ಲಿ ಸಹಕಾರ ಕೊಟ್ಟಿದರಿಂದ ಜನರ ಈ ಉತ್ಸಾಹವನ್ನು ಸ್ವಪ್ರಯೋಜನಾರ್ಥವಾಗಿ ಬಳಸಿಕೊಳ್ಳುವ ವ್ಯಭಿಚಾರ ಬುದ್ಧಿಯಿಂದ ಜನಿಸಿದ ನಿರ್ಣಯವಿದು ಎನ್ನುವಷ್ಟು ತಡವಾಗಿ ಕಮ್ಯೂನಿಸ್ಟರಿಗೆ ಅಭಿವೃದ್ಧಿ ಪ್ರಯತ್ನಗಳು ಒಳ್ಳೆಯವೆಂದೂ ಅವುಗಳಲ್ಲಿ ಸಹಕರಿಸಬೇಕೆಂದೂ ಆಲೋಚನೆಯಾಗಿದೆ. ಸಮಾಜವಾದವು ತಾತ್ವಿಕ ಕ್ಷೇತ್ರದಿಂದ ವ್ಯವಹಾರಕ್ಷೇತ್ರಕ್ಕಿಳಿಯುವಾಗ ಕಾಂಗ್ರೆಸಿಗರಕೈಯಲ್ಲಿ ಜನರಿಗೆ ಬಾಧಕವಾದ ರೀತಿಯಲ್ಲಿ ವಿರೂಪಹೊಂದುವುದೆಂದು ಕಮ್ಯುನಿಸ್ಟರು ಟೀಕಿಸದೆ ಬಿಟ್ಟಿಲ್ಲ. ಆದರೆ ಜನರಿಗೆ ಮಾತ್ರ ಭಾರತ ಸರಕಾರವು ಪ್ರತಿಪಾದಿಸುತ್ತಿರುವ ಸಮಾಜವಾದಿ ಮಾರ್ಗವು ಇಲ್ಲಿಯ ಪರಿಸ್ಥಿತಿಗೆ ಒಪ್ಪುವಂತೆ ಹೊಸತಾಗಿ ರಚಿತವಾಗುತ್ತಿದೆ ಎಂದು ಚೆನ್ನಾಗಿ ಗೊತ್ತು. ಅದು ಇತರ ದೇಶಗಳು ಅನುಸರಿಸಿದ ವಿಧಾನದ ಅನುಕರಣವಾಗಿಲ್ಲ. (ಬರೆದು ಬಂದುದು)

ಬ್ರಿಟನಿನಲ್ಲಿ ನಿರ್ಮಿಸಲಾದ ಅತ್ಯಾಧುನಿಕ ಮಾದರಿಯ ವಿಮಾನ-ಅದನ್ನು ಬಾಂಬು ದಾಳಿಗಾಗಿ ಉಪಯೋಗಿಸಲಾಗುತ್ತದೆ.

ಉಡುಪಿ.

ವರ್ಧಂತಿ—ಪಣಿಯಾಡಿ ಶಾಲೆಯ ವರ್ಧಂತಿಯು ತಾ. 22ರಲ್ಲಿ ಶ್ರೀ ಟಿ. ಎ. ಪೈ. ಎಂ. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ಜರಗಿತು. ತಹಸೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯ ನವರು ಬಹುಮಾನವಿತರಣೆ ಗೈದರು. ಹಿಂದಿನ ದಿನ ಹೆತ್ತವರ ದಿನಾಚರಣೆಯು ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತಿಸಿದರು.

ನೇಕಾರ ಸಂಘದ ಮಹಾಸಭೆಯು—ತಾ. 23ರಲ್ಲು ಶ್ರೀ ಕೆ. ದಾಸ ಸೇರಿಗಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ದೇವಿಡ್ ಕರ್ಕಡರು ವರದಿಯನ್ನೋದಿದರು. ಬಳಿಕ ನೂತನ ವರ್ಷದ ಅಧಿಕಾರಿಗಳ ಚುನಾವಣೆ ನಡಯಿತು. ಜಿಲ್ಲಾ ನೇಕಾರ ಸಮ್ಮೇಳನದಲ್ಲಿ ಪಾಸಾದ ನಿರ್ಣಯಗಳಿಗೆ ಬೆಂಬಲ ನೀಡಲಾಯಿತು.

ನಗರಸಭೆಯು—ತಾ. 28ರಲ್ಲು ಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಚಾಲ್ತಿ ವರುಷದ ಬಜೇಟನ್ನು ಮಂಜೂರುಮಾಡುವಾಗ ರಸ್ತೆ ಖಾತೆಗೆ ನಿಂಗಡಿಸಿಡಲಾದ ರೂಪಾಯಿ 20,000/-ವನ್ನು ರೂ 12,000ಕ್ಕೆ ತಗ್ಗಿಸಿದ ಕುರಿತು ಚರ್ಚೆ ನಡೆದು ಕೊನೆಗೆ 20,000/ವನ್ನ ಇರಗೊಡಿಸುವಂತೆ ಸರಕಾರಕ್ಕೆ ಪುನಃ ವಿನಂತಿಸಲಾಯಿತು.

ಹೆದ್ದಾರಿ ಸಪ್ತಾಹವು ಉಡುಪಿ ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ತಾ. 27ರಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಟಿ. ಎಮ್. ಎ. ಪೈಗಳು ಸಪ್ತಾಹವನ್ನು ಉದ್ಘಾಟಿಸುತ್ತಾ ಅದರ ಮಹತ್ವವನ್ನು ವಿವರಿಸಿದರು. ಎಂ. ಎಲ್. ಎ. ಗಳಾದ ಎಸ್ ಎಸ್. ಕೊಳ್ಕೆಬೈಲ್ ಮತ್ತು ಟಿ. ಎ. ಪೈಗಳು ಹಿಂದಿನ, ಇಂದಿನ ಮತ್ತು ಮುಂದಿನ ರಸ್ತೆಗಳ ಕುರಿತು ಭಾಷಣವಿತ್ತರು. ಅಧ್ಯಕ್ಷ ಶ್ರೀ ಕುಡ್ವರು ನೂರು ವರ್ಷಗಳ ಹಿಂದಿನ ದಾರಿಯ ಪರಿಸ್ಥಿತಿಯನ್ನೂ, ಈಗಿನ ಪ್ರಗತಿಯನ್ನೂ ವಿವರಿಸಿ ಭಾಷಣವಿತ್ತರು. ಶ್ರೀ ಎಮ್. ಎಸ್. ಕ್ರಾಸ್ಟಯವರು ಸಪ್ತಾಹ ಆಚರಣೆಯ ಹಿನ್ನೆಲೆಯನ್ನು ಹೇಳಿ ಧನ್ಯವಾದವನ್ನಿತ್ತರು. ಕೊನೆಗೆ ಈ ಸಂಬಂಧ ಏರ್ಪಡಿಸಿದ ವಸ್ತು ಪ್ರದರ್ಶನವನ್ನು ಉದ್ಘಾಟಿಸಲಾಯಿತು. ರಾತ್ರಿ ಚಿತ್ರಪ್ರದರ್ಶನವಿತ್ತು.

ಬಿರುಗಾಳಿ ಮತ್ತು ಮಳೆ — ತಾ 29 ಮತ್ತು 30 ರಲ್ಲಿ ಉಡುಪಿ ಮತ್ತು ಆಸು ಪಾಸುಗಳಲ್ಲಿ ಬಿರುಗಾಳಿಯಿಂದ ಕೂಡಿದ ಭಾರಿ ಮಳೆ ಸುರಿಯಿತು. ಹಲವು ಕಡೆಗಳಲ್ಲಿ ಮರಗಿಡಗಳು ಗಾಳಿಯಬುತ್ತದದಿಂದ ಉರುಳಿಬಿದ್ದವು. ಕೆಲವು ಕಡೆ ಮನೆಗಳ ಮಾಡಿನ ಹುಲ್ಲು ಚಾವಣಿಯು ಹಾರಿಸಲ್ಪಟ್ಟಿತು. ಮಲ್ಪೆ ಮೊದಲಾದ ಕರಾವಳಿಯಲ್ಲಿ ಸಾಮಾನು ಹೇರಿದ ಮತ್ತು ಮೀನು ಹಿಡಿಯಲು ಹೋದ ಮಂಜುಗಳು ದೋಣಿಗಳು ಹಾನಿಗೆ ಈಡಾಗಿವೆಯಾಗಿ ತಿಳಿದು ಬರುತ್ತದೆ. ಮಂಗಳೂರು ಮೊದಲಾದ ಕಡೆಗಳಲ್ಲಿಯೂ ಇಂತಹ ಅಪಘಾತಗಳು ಸಂಭವಿಸಿರುವುದಾಗಿಯೂ ಈ ಇಡೀ ಜಿಲ್ಲೆಗೆ ಲಕ್ಷಗಟ್ಟಲೆ ಹಾನಿ ಸಂಭವಿಸಿರುವುದಾಗಿಯೂ ವರದಿಯಾಗಿದೆ.

ಸ್ಥಾಪಕರ ದಿನಾಚರಣೆ—ತಾ. 30ನೇ ಸಂಜೆ ಮುಕುಂದ ನಿವಾಸದಲ್ಲಿ ನವ ಉಡುಪಿಯ ಶಿಲ್ಪಿ ಡಾ. ಟಿ ಎಮ್. ಎ. ಪೈಗಳ ಜನ್ಮದಿನಾಚರಣೆಯು ಕೆನರಾ ಮ್ಯೂಚುವಲಿನ ಚೀಫ್ ಏಜಂಟರಾದ ಕಮ್ಮರ್ಶಿಯಲ್ ಕೋರ್ಪೊರೇಶನ್ ಓಫ್ ಇಂಡಿಯಾ ಲಿಮಿಟೆಡ್ ಇವರ ನೇತೃತ್ವದಲ್ಲಿ ಆಚರಿಸಲ್ಪಟ್ಟಿತು. ಉಪಾಹಾರ ಸತ್ಕಾರವಾದ ಮೇಲೆ ಕೋರ್ಪೋರೇಶನಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ. ಟಿ. ರಮೇಶ ಯು. ಪೈಗಳು ಸ್ವಾಗತಿಸಿ, ಡಾ. ಪೈಗಳಿಂದ 1935ರಲ್ಲಿ ಸ್ಥಾಪಿಸಲ್ಪಟ್ಟ ಕೆನರಾ ಮ್ಯೂಚುವಲಿನ ಅಭಿವೃದ್ಧಿಯನ್ನು ವಿವರಿಸಿದರು. ಗತವರ್ಷದಲ್ಲಿ ಅತ್ಯಧಿಕ ವಿಮಾ ವ್ಯವಹಾರವನ್ನು ಮಾಡಿದ ಸುಮಾರು ನೂರು ಏಜಂಟರಿಗೆ ಪಾರಿತೋಷ ಕೊಡಲಾಯಿತು. ಬಳಿಕ ಶ್ರೀಗಳಾದ ರೊಕ್ಕಿ ಫೆರ್ನಾಂಡಿಸ್, ಎ. ಜಿ. ಅಳ್ವ, ಟಿ. ಎ. ಪೈ, ಎಮ್. ಎಲ್. ಎ. ವೈಕುಂಠ ಬಾಳಿಗ ಎಮ್. ಎಲ್. ಎ. ಇವರು ಡಾ. ಮಾಧವ ಪೈಗಳ ಕಾರ್ಯದಕ್ಷತೆ ಅಚಲ ನಿರ್ಧಾರ, ಅವರಿಂದ ಜನ್ಮತಾಳಿದ ಸಂಘ ಸಂಸ್ಥೆಗಳ ಜನತಾ ಸೇವೆ ಮತ್ತು ಪ್ರಗತಿಯನ್ನು ವಿವರಿಸಿದರು. ಡಾ. ಪೈಗಳು ತನ್ನನ್ನು ಸತ್ಕರಿಸಿ ಅಭಿನಂದಿಸಿದುದಕ್ಕೆ ಆಭಾರ ಸೂಚಿಸಿ, ವಿಮಾ ರಾಷ್ಟ್ರೀಕರಣವನ್ನು ಸ್ವಾಗತಿಸಿ ಅದು ಕಡ್ಡಾಯ ವಿಮಾ ಯೋಜನೆಯಿಂದಲೇ ಯಶಸ್ಸು ಪಡೆದೀತೆಂದೂ, ಸರಕಾರದ ಕಾರ್ಯಗಳಿಗೆ ಬೆಂಬಲ ನೀಡಬೇಕೆಂದೂ ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಡಾ. ಸುಂದರರಾಮ ಪೈಗಳು ಡಾ. ಮಾಧವ ಪೈಗಳಿಂದ ಜನ್ಮತಾಳಿದ ಸಂಘ ಸಂಸ್ಥೆಗಳು ಅಖಿಲ ಭಾರತದಲ್ಲಿಯೇ ಪ್ರಖ್ಯಾತವಾಗಿವೆಯೆಂದೂ, ಇಂತಹ ಶಕ್ತಿಯ ವ್ಯಕ್ತಿಯ ಜನ್ಮದಿನವನ್ನು ಪ್ರತಿ ವರ್ಷವೂ ಸಾರ್ವತ್ರಿಕವಾಗಿ ಆಚರಿಸುವಂತಾಗಬೇಕೆಂದೂ ತಮ್ಮ ಭಾಷಣದಲ್ಲಿ ಹೇಳಿದರು. ಟಿ. ರಮೇಶ ಪೈಗಳು ಧನ್ಯವಾದಗಳನ್ನರ್ಪಿಸಿದರು. ಸಭಾರಂಭದಲ್ಲಿ ಎಲ್ಲ ಡೈರೆಕ್ಟರರನ್ನು ಇಂದೇ ಕಂಪೆನಿಯ ಚಾರ್ಜ ವಹಿಸಿದ ಕಸ್ಟೋಡಿಯನ್ ಶ್ರೀ ಸುಂದರಂ ಅವರನ್ನು ಹಾರಗಳನ್ನರ್ಪಿಸಿ ಗೌರವಿಸಲಾಯಿತು.

ಪಂಚನಬೆಟ್ಟು—ಶಾಲೆಯ ವರ್ಧಂತಿಯು ತಾ. 29ರಲ್ಲಿ ತಹಸೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಟಿ ಎ. ಪೈಗಳು ನೂತನ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು.

ಕಟಪಾಡಿ—ಅಂಬಾಡಿ ಪಿ. ವಿ. ಎಸ್. ಶಾಲೆಯ ವಾರ್ಷಿಕೋತ್ಸವವು ಎಸ್. ವಿ. ಎಸ್. ಹಾ| ಎ| ಶಾಲೆಯಲ್ಲಿ ತಾ. 30ರಲ್ಲಿ ಶ್ರೀ ಎಚ್. ಸಂಜೀವರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 456-N./50 ತಾ. 12-12 50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ಅವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಅನುಕೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

DO YOU KNOW?

Married COUPLE never attain PARENTHOOD unless and until the WIFE is cured of the STOMACH-PAIN etc. arising during PERIODS and the HUSBAND builds up greater VIGOUR and STAMINA.

DT. AMBLAY RAMASWAMIER'S
93 Yrs. Renowned, Well Tried, Most Efficacious

SANTHANA SINDHURA

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY.

MADANA VILASA

(Pills for Men) Reduces EXCESS HEAT, Increases SPERMS, Restores VIGOUR, VITALITY and the qualities of a HE-MAN, 15 Pills for 1 month. Rs. 8—8—0.

THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.

PRICE:— One set for both (8 Packets & 4 Pills) Rs. 7 (13 Sh) by M. O. or P. O. No V. P. P. Tri-colour CATALOGUE FREE. Please send 2½ As. Stamps for reply to:—

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, Post Box 9, MYSORE (South India).

ಪುತ್ತೂರು— ಹೆದ್ದಾರಿ ಸಪ್ತಾಹವು ಪುತ್ತೂರಲ್ಲಿ ತಾ. 25ರಲ್ಲು ಡಾ॥ ನಾಗಪ್ಪ ಆಳ್ವ ಅಧ್ಯಕ್ಷತೆಯಲ್ಲಿ ಜರಗಿತು. ಸಪ್ತಾಹವನ್ನು ಶ್ರೀ ಕೆ. ವೆಂಕಟ್ರಮಣ ಗೌಡ, ಎಮ್. ಎಲ್. ಎ, ಅವರು ಉದ್ಘಾಟಿಸುತ್ತಾ, ದ. ಕ. ಜಿಲ್ಲೆಯಲ್ಲಿ ಸರಕಾರವು ಕೈಕೊಂಡಿರುವ ಸಾರಿಗೆ ಸೌಕರ್ಯಗಳ ಅಭಿವೃದ್ಧಿಯ ಕುರಿತು ವಿವರ ನೀಯಿತ್ತು, ಇನ್ನು ಮುಂದೆ ಕೈಕೊಳ್ಳಲಿರುವ ಬೇರೆಬೇರೆ ಸಾರಿಗೆ ಅಭಿವೃದ್ಧಿ ಯೋಜನೆಗಳಲ್ಲಿ ಜನರು ಹೆಚ್ಚಿನ ಆಸಕ್ತಿಯಿಂದ ಸರಕಾರದೊಡನೆ ಸಹಕರಿಸಬೇಕಾದ ಆವಶ್ಯಕತೆಯನ್ನು ಸೂಚಿಸಿದರು. ಪುತ್ತೂರು ಡಿವಿಜನಲ್ ಆಫೀಸರ್ ಶ್ರೀ ಟಿ. ವಿ. ಪಿ. ಕುರುಪ್, ಡಾ॥ ಕೃಷ್ಣ ಭಟ್, ಶ್ರೀಗಳಾದ ಬಿ. ರಾಮಚಂದ್ರ ರಾವ್, ಸೀತಾರಾಮ ರೈ ಮೊದಲಾದವರು ಮಾತನಾಡುತ್ತಾ ಮಲೆನಾಡು ಪ್ರದೇಶಕ್ಕೆ ಇನ್ನೂ ಹೆಚ್ಚಿನ ಸಾರಿಗೆ ಸಂಪರ್ಕದ ಅವಶ್ಯಕತೆಯನ್ನು ವ್ಯಕ್ತಪಡಿಸಿದರು. ಅಸಿಸ್ಟಾಂಟ್ ಇಂಜಿನಿಯರ್ ಶ್ರೀ ಪ್ರಭುಗಳು ಧನ್ಯವಾದಗಳನ್ನಿತ್ತರು.

ಶಿರ್ಲಾಲು— ಸ್ಥಳೀಯ ಅಭಿವೃದ್ಧಿ ಯೋಜನೆಯ ಸಹಾಯದಿಂದ ಕಟ್ಟಿಸಲಾದ ಸೈಂಟ್ ಜೋಸೆಫ್ಸ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ತಾ 27ರಲ್ಲು ಉಡುಪಿ ತಹಶೀಲ್ದಾರ್ ಶ್ರೀ ಲಿಂಗಪ್ಪಯ್ಯನವರು ಉದ್ಘಾಟಿಸಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಕುಕ್ಕಿಕಟ್ಟೆ—ಇಲ್ಲಿಯ ಎಯಿಡೆಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ತಾ. 28ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಗಿರಿಯಣ್ಣ ಸೆಟ್ಟರು ಸ್ವಾಗತ ಮಾತುಗಳನ್ನಾಡಿದರು. ಮುಖ್ಯೋಪಾಧ್ಯಾಯ ಶ್ರೀ ಶಿವರಾಮ ಸೆಟ್ಟರು ವರದಿಯನ್ನೋದಿದರು. ಶ್ರೀ ಗಿಲ್ಬರ್ಟ್ ಸಾಲಿನ್ಸರು ಸ್ವಸ್ತಿವಾಚನ ಮಾಡಿದರು. ಬಳಿಕ ಜನಮನರಂಜನ ಕಾರ್ಯಕ್ರಮಗಳಾದುವು.

ಪಕಳೆ—ಸುಧಾರಿತ ರೀತಿಯಲ್ಲಿ ಅತೀ ಹೆಚ್ಚು ಬೆಳೆಯನ್ನು ಬೆಳೆಸಿ ದ. ಕ. ಜಿಲ್ಲೆಗೆ ಪ್ರಥಮ ಬಹುಮಾನವನ್ನು ಪಡೆದ ಶ್ರೀ ಗೋವಿಂದರಾಜ ಹೆಗ್ಡೆಯವರು ದಿಲ್ಲಿಯಲ್ಲಿ ಸೇರಿದ ಅಖಿಲ ಭಾರತ ರೈತ ಸಮ್ಮೇಳನದಲ್ಲಿ ಭಾಗವಹಿಸಿ ಮರಳಿ ಬಂದುದರ ಗೌರವಾರ್ಥವಾಗಿ ಅವರಿಗೆ ಇಲ್ಲಿಯ ಬಾಸೆಲ್ ಮಿಶನ್ ಶಾಲಾ ಹಳೇ ವಿದ್ಯಾರ್ಥಿ ಸಂಘದವರು ತಾ. 22ರಲ್ಲಿ ಸತ್ಕಾರ ಕೂಟವಿತ್ತು ಗೌರವಿಸಿದರು. ಡಾ॥ ಎಸ್. ಭವಾನಿ ಶಂಕರ ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ರಾಜೀವ ಕೋಟ್ಯಾನ್, ಕೆ. ಆನಂದ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಬೇಳ— ಇಲ್ಲಿಯ ಹರಿಜನ ವೆಲ್‌ಫೇರ್ ಶಾಲಾ ದಿನವು ತಾ. 21ರಲ್ಲು ಶಾಲಾ ಪರೀಕ್ಷಾಧಿಕಾರಿ ಶ್ರೀ ವಿ. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಪಟ್ಲ— ಹಿರೆಬೆಟ್ಟು ಪಟ್ಲ ಲೋಕಮಾನ್ಯ ತಿಲಕ ಹಾ॥ ಎ॥ ಶಾಲಾ ವರ್ಧಂತ್ಯುತ್ಸವವು ತಾ 22ರಲ್ಲು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಂ. ಗೋವಿಂದ ಶೆಟ್ಟರು ಸ್ವಾಗತಿಸಿದರು. ಶ್ರೀ ಎಚ್. ಸದಾಶಿವ ಹೆಗ್ಡೆರು ಸಂದೇಶಗಳನ್ನು ಓದಿದರು. ಪ್ರೊಫೆಸರ್ ಶ್ರೀ ಕೆ. ಬಿ. ರಾಮಕೃಷ್ಣರಾಯರು ಪಾರಿತೋಷ ವಿತರಣೆ ಮಾಡಿದರು.

ಕಮ್ಮಣ್ಣು— ಸ್ಥಳೀಯ ಅಧ್ಯಾಪಕ ಕೇಂದ್ರದ ವಾರ್ಷಿಕೋತ್ಸವವು ತಾ 25ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಬೋರ್ಡ್ ಅಧ್ಯಕ್ಷ ಶ್ರೀ ಗೋವಿಂದ ಉಡುಪರು ಧ್ವಜಾರೋಹಣ ಮಾಡಿದರು. ಶ್ರೀಗಳಾದ ಜಿ. ಶ್ರೀನಿವಾಸ ರಾವ್, ಸೀನಪ್ಪ ಹೆಗ್ಡೆ ಮೊದಲಾದವರ ಭಾಷಣಗಳಾದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಕೇಂದ್ರದಲ್ಲಿ ಖಿಡ್ಡಾಯ ಶಿಕ್ಷಣ ಯಶಸ್ವಿಯಾಗಿದೆ ಎಂದರು

ನೀಲೇಶ್ವರ—ರೈತ ಸಭೆ ಮತ್ತು ಪರಸೆ ಕೋಳಿ ಬಾವಿ ಪ್ರದರ್ಶನವು ತಾ. 25ರಲ್ಲಿ ನೀಲೇಶ್ವರ ಸರಕಾರಿ ತೆಂಗಿನ ಪರಿಶೋಧನಾ ಕ್ಷೇತ್ರದ ತೋಟದಲ್ಲಿ ಶ್ರೀ. ಇ. ಕೆ. ನಂಬಿಯಾರ್, ಎಲ್. ಜಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪರಸೆಕೋಳಿ ಬಾವಿಗಳನ್ನು ಸ್ಥಾಪಿಸುವ ಕ್ರಮವನ್ನು ಮಂಗಳೂರಿನ ಕಾರ್ಯಾಲಯದಿಂದ ಸಕಲ ಸಲಕರಣೆಗಳಿಂದೊಡಗೂಡಿ ಬಂದ ವ್ಯವಸಾಯ ಯಾಂತ್ರಿಕ ಮೇಲ್ವಿಚಾರಿ ಶ್ರೀ ದಾಸಪ್ಪಯ್ಯ ಪೂಜೆ, ಅವರು ಪ್ರತ್ಯಕ್ಷ ವಿವರಿಸಿದರು.

ಕ್ಷೇತ್ರದ ಸುಪರಿಂಟೆಂಡೆಂಟ್ ಶ್ರೀ. ಎಸ್. ಡಿ. ಎಸ್. ಆಲ್ಬುಕರ್ಕ್ ಅವರು ಕ್ಷೇತ್ರದ ಕಾರ್ಯಕಲಾಪಗಳನ್ನು ವಿವರಿಸಿ ಮರಳು ಭೂಮಿಯಲ್ಲಿರುವ ತೆಂಗಿನ ತೋಟಗಳಿಗೆ ನೀರಿನ ಆವಶ್ಯಕತೆಯನ್ನು ಒತ್ತಿ ಹೇಳಿದರು. ಸಭಾಧ್ಯಕ್ಷರು ಇಂತಹ ಸಭೆಗಳ ಆವಶ್ಯಕತೆಯನ್ನು ತಿಳಿಸಿ ದ. ಕ. ಜಿಲ್ಲೆಯ ಪಡುಕರಾವಳಿಯಲ್ಲಿ ಪರಸೆಕೋಳಿ ಬಾವಿಗೆ ಉಜ್ವಲ ಭವಿಷ್ಯವಿದೆ ಎಂದರು. ಶ್ರೀಗಳಾದ ಕೆ. ತೇಜಪ್ಪ ಸೆಟ್ಟಿ, ಬಿ. ಎನ್. ಪಟ್ಟತ್ತಾನ್, ಎ. ಎಸ್. ಸಯಿದ್, ಕೆ. ವಿ. ಕುಂಞಂಬು ಮೊದಲಾದವರು ಭಾಷಣವಿತ್ತರು.

ಕೋಟೇಶ್ವರ— ಇಲ್ಲಿಯ ಬೋರ್ಡು ಹೈಸ್ಕೂಲಿನ ವರ್ಧಂತ್ಯುತ್ಸವವು ತಾ 24ರಲ್ಲು ಕುಂದಾಪುರ ಡಿ॥ ಮುನ್ಸಿಫ್ ಶ್ರೀ ಎಚ್. ಲಕ್ಷ್ಮಣ ಸಾಲಿಯಾನರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಕಡೆಕಾರು— ಸಮಾಜ ಕಲ್ಯಾಣ ಯೋಜನೆಯನ್ವಯ ರಚಿತವಾದ ಸ್ಥಳೀಯ ಶ್ರೀ ಸುಹಾಗಣಪತಿ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ಪ್ರವೇಶೋತ್ಸವವು ತಾ. 27ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ॥ ಟಿ. ಎಂ. ಎ. ಪೈಗಳು ಸ್ವಾಗತ ಭಾಷಣ ಮಾಡಿದರು. ಡಿವಿಜನಲ್ ಪ್ಯಾಪೇಸ್ ಇಂಜಿನಿಯರ್ ಶ್ರೀ ಎಮ್. ಎಸ್. ಶ್ರಾಟಿಯವರು ಕಟ್ಟಡವನ್ನು ಉದ್ಘಾಟಿಸಿದರು. ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ. ಅವರು ಬಹುಮಾನ ವಿತರಣೆ ಮಾಡಿದರು. ಆರಂಭದಲ್ಲಿ ಶ್ರೀ ಕೆ. ಶ್ರೀಧರ ಶೆಟ್ಟರು ಕಟ್ಟಡ ರಚನೆಯ ವರದಿ ಓದಿದರು. ಮರುದಿನಸ ಹಳೆವಿದ್ಯಾರ್ಥಿ ಸಂಘದ ವರ್ಧಂತ್ಯುತ್ಸವವು ಶ್ರೀ ಎ. ಜಿ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಾಸರಗೋಡಿನಲ್ಲಿ ಕರ್ನಾಟಕ ಪರಿಷತ್ತು— ಕಾಸರಗೋಡಿನ ವಿಷಯವಾಗಿ ಕೊನೆಯ ಹಟನಾತ್ಮಕ ಪ್ರಯತ್ನವನ್ನು ಮಾಡುವರೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಮತ್ತು ಸ್ಥಳೀಯ ಕಮಿಟಿಯ ಪರವಾಗಿ ಎರಡು ಶಿಷ್ಟ ಮಂಡಳಗಳು ದಿಲ್ಲಿಗೆಹೊರಡಲಿವೆ. ಅವು ಹಿಂತಿರಳುವ ತನಕ ಸತ್ಯಾಗ್ರಹವನ್ನು ಅನಾಮತು ಗೊಳಿಸಲಾಗಿದೆ. ಹೋದ ಕಾರ್ಯವು ಜಯಪ್ರದವಾಗದಿದ್ದರೆ ಮುಂದೆ ಮಾಡತಕ್ಕದ್ದೇನು ಎಂಬುದನ್ನು ನಿರ್ಧರಿಸಲು ಮೇ ತಿಂಗಳ ಮೂರನೇ ವಾರದಲ್ಲಿ ಕಾಸರಗೋಡಿನಲ್ಲಿ ಕರ್ನಾಟಕ ಪರಿಷತ್ತನ್ನು ಜರಗಿಸಬೇಕೆಂದು ನಿಶ್ಚಯಿಸಲಾಗಿದೆ. ಆ ಬಗ್ಗೆ ಸ್ವಾಗತ ಸಮಿತಿಯನ್ನು ರಚಿಸಲಾಗಿದೆ ಎಂದು ಮುಂತಾಗಿ ಕರ್ನಾಟಕ ಪ್ರಾಂತೀಕರಣ ಸಮಿತಿ ಅಧ್ಯಕ್ಷ ಶ್ರೀ ಎಮ್. ಉಮೇಶರಾಯರು ತಿಳಿಸುತ್ತಾರೆ.

ಕಾರ್ಕಳ—ಹೆದ್ದಾರಿ ಸಪ್ತಾಹವು ತಾ. 25ರಲ್ಲಿ ಕಾರ್ಕಳ ಬೋರ್ಡು ಹೈಸ್ಕೂಲಿನಲ್ಲಿ ಶ್ರೀ ಎನ್. ಎಮ್. ಅದ್ಯಂತಾಯರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀ ಆರ್. ಹರಿ ಶೆಣೈಯವರು ಹೆದ್ದಾರಿ ಪ್ರದರ್ಶನದ ಉದ್ಘಾಟನೆಯನ್ನು ಮಾಡಿದರು. ಶ್ರೀಗಳಾದ ಬಿ. ಎಸ್. ಭಾಸ್ಕರ ರೈ, ವಿ. ರಮಲಾನ್, ಪಿ. ಎಸ್. ತಿಮ್ಮಪ್ಪ ಸೆಟ್ಟಿ ಮೊದಲಾದವರ ಭಾಷಣಗಳಾದುವು. ಶ್ರೀ ವಿ. ಎಲ್. ನಾಗೇಂದ್ರರವರು ಹೆದ್ದಾರಿ ಪ್ರಗತಿಯ ವರದಿಯನ್ನೋದಿದರು. ಶ್ರೀ. ನಾಗೇಶ ಪುರೋಲರವರು ಧನ್ಯವಾದಗಳನ್ನಿತ್ತರು.

ಬನ್ನಾಡಿ—ಮಂತ್ರಿ ಸುಬ್ರಹ್ಮಣ್ಯಂರವರು ಇಂದೇ ವ್ಯವಸ್ಥೆ ಮಾಡಲಾದ ಜಾನುವಾರು ಪ್ರದರ್ಶನವನ್ನು ಉದ್ಘಾಟಿಸಿದರು, ಶ್ರೀ ಎಸ್, ಎಸ್. ಕೊಳ್ಕೆಬೈಲ್, ಎಮ್. ಎಲ್. ಎ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಸುಬ್ಬಣ್ಣ ಹೆಗ್ಡೆಯವರು ಸ್ವಾಗತಿಸಿದರು ಶ್ರೀಗಳಾದ ಎಚ್. ಶೇಷಗಿರಿ ನಾವಡ ಮತ್ತು ಕೆ. ಆನಂದ ಶೆಟ್ಟರು ಕ್ರಮವಾಗಿ ಬನ್ನಾಡಿ ಮತ್ತು ಶಿರಿಯೂರ ಪಂಚಾಯತು ಬೋರ್ಡುಗಳ ಕಡೆಯಿಂದ ಮಂತ್ರಿಗಳಿಗೆ ಮಾನಪತ್ರವನ್ನಿತ್ತರು. ಎಮ್. ಎಲ್. ಎ. ಗಳಾದ ಶ್ರೀ ಟಿ. ಎ. ಪೈ, ಮೊದಲಾದವರು ಮಾತನಾಡಿದರು.

ಕುತ್ಪಾಡಿ— ಎಲಿಮೆಂಟರಿ ಶಾಲೆಯ ವರ್ಧಂತಿಯೂ ಹೊಸಕಟ್ಟಡದ ಮತ್ತು ಕ್ರೀಡಾರಂಗದ ಉದ್ಘಾಟನೆಯೂ ಶ್ರೀ ವಕೀಲ್ ಬಿ. ಶೀನಪ್ಪ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ತಾ. 21ರಲ್ಲಿ ನೆರವೇರಿತು. ಕರೆಸ್ಪೋಂಡೆಂಟ್ ಶ್ರೀ ಪಿ. ರಾಮದಾಸ ನಾಯ್ಕರವರು ಸ್ವಾಗತಿಸಿದರು. ಶ್ರೀ ಕೆ. ಆರ್. ಶೆಣೈಯವರು ಕಟ್ಟಡದ ವರದಿಯನ್ನಿತ್ತರು. ತಹಸಿಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರು ಕ್ರೀಡಾರಂಗವನ್ನು ಉದ್ಘಾಟಿಸಿದರು.

ಬೆಳ್ತಂಗಡಿ- ಗ್ರಾಮಾಭಿವೃದ್ಧಿ ಸಂಘದ ಆಶ್ರಯದಲ್ಲಿ ಬೆಳ್ತಂಗಡಿ ತಾಲೂಕಿನ ತಣ್ಣೀರು ಪಂತ, ಮಚ್ಚಿನ, ಉರ್ವಾಲ್ ಮತ್ತು ಕಾಣಿಯೂರಲ್ಲಿ (ಪದ್ಮುಂಜ) ಕಟ್ಟಿಸಲಾದ ಬೋರ್ಡು ಶಾಲಾ ಕಟ್ಟಡಗಳನ್ನು ತಾ 26ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್, ಅವರು ಉದ್ಘಾಟಿಸಿದರು. ಮೊದಲಿನ ಎರಡು ಸಮಾರಂಭಗಳ ಅಧ್ಯಕ್ಷತೆಯನ್ನು ವಕೀಲ್ ಶ್ರೀ ಎಮ್. ಕೆ. ದೇವರಾಜರೂ ಕೊನೆಯ ಎರಡು ಸಮಾರಂಭಗಳ ಅಧ್ಯಕ್ಷತೆಯನ್ನು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ॥ ಕೆ. ಕೆ. ಹೆಗ್ಡೆಯವರೂ ವಹಿಸಿದ್ದರು ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ ಮೊದಲಾದವರು ಹಾಜರಿದ್ದರು.

ಎಮರ್ಾಳು— ಸ್ಥಳೀಯ ಬೋರ್ಡು ಹಾ. ಎ. ಶಾಲೆಯ ಹೆತ್ತವರ ಸಭೆಯು ತಾ 24ರಲ್ಲಿ ಧರ್ಮಸ್ಥಳ ಶ್ರೀ ರತ್ನವರ್ಮ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಂದರ್ಭದಲ್ಲಿ ಶ್ರೀ ಹೆಗ್ಗಡೆಯವರು ಶಾಲಾ ಕಟ್ಟಡಕ್ಕೆ ರೂ. 501 ದಾನಮಾಡಿದರು.

ಫಲಿಮಾರು - ಸ್ಥಳೀಯ ಬೋರ್ಡು ಹಾ॥ ಎ. ಶಾಲೆಯ ವರ್ಧಂತ್ಯುತ್ಸವವು ತಾ 24ರಲ್ಲು ಧರ್ಮಸ್ಥಳದ ಶ್ರೀ ರತ್ನವರ್ಮ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಸ್ವಾಮಿಗಳವರ ನೇತೃತ್ವದಲ್ಲಿ ಜರಗಿತು.

ಶಿರ್ವ— ಸ್ಥಳೀಯ ಗ್ರಾಮಾಭಿವೃದ್ಧಿ ಸಮಿತಿಯ ಸಭೆಯು ತಾ 23ರಲ್ಲು ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ರಸ್ತೆ, ಬಾವಿ, ಕಟ್ಟಡಗಳಿಗಾಗಿ ಒಟ್ಟು ರೂಪಾಯಿ 1,27,000 ವೆಚ್ಚದ ಅಂದಾಜು ತಯಾರಿಸಲಾಯಿತು.

ಕುಂದಾಪುರ— ಸ್ಥಳೀಯ ಅಧ್ಯಾಪಕ ಕೇಂದ್ರದ ಕಡೆಯಿಂದ, ಸದ್ಯವೇ ನಿವೃತ್ತರಾಗಲಿರುವ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರಿಗೆ, ಬೀಳ್ಕೊಡುವ ಸಮಾರಂಭವು ಈಚೆಗೆ ಶ್ರೀ ವೈ. ಮಂಜಯ್ಯ ಸೆಟ್ಟಿ, ಎಲ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಎಲ್. ಕಾರಂತ, ಎಮ್. ಎಮ್. ಹೆಗ್ಡೆ, ವೆಂಕಟ್ರಾಯ ಶೆಣೈ, ಕೃಷ್ಣರಾವ್ ಮೊದಲಾದವರು ಮುಖ್ಯ ಅತಿಥಿಯ ಗುಣಗಾನ ಮಾಡಿದರು.

ದ. ಕ. ಜಿಲ್ಲಾ ಮಜೂರರ ಪ್ರಥಮ ಸಮ್ಮೇಳನವು-ತಾ. 29ರಲ್ಲು ದ. ಕ. ಜಿಲ್ಲಾ ಹಿಂದ್ ಮಜ್‌ದೂರ್ ಸಭೆಯ ನೇತೃತ್ವದಲ್ಲಿ ಕುಂದಾಪುರ ಎಡ್ವೊಕೇಟ್ ಶ್ರೀ ವಿ. ಶ್ರೀನಿವಾಸ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಮಹಾಬಲ ರೈಗಳು ಸಭಾ ವರದಿಯನ್ನೊಪ್ಪಿಸಿದರು. ನಂತರ ದಿವಂಗತ ಶ್ರೀ ಆಚಾರ್ಯ ನರೇಂದ್ರ ದೇವರ ಆತ್ಮಕ್ಕೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು. ಏರುತ್ತಿರುವ ಆಹಾರ ಧಾನ್ಯಗಳ ಬೆಲೆಯನ್ನು ತಡೆಗಟ್ಟುವಂತೆ ಸರಕಾರವನ್ನು ಕೇಳಿಕೊಳ್ಳುವ, ಮಜೂರರ ಸ್ಟೇಟ್ ಇನ್ಶೂರೆನ್ಸ್ ಪದ್ಧತಿಯನ್ನು ಈ ಜಿಲ್ಲೆಗೂ ಅನ್ವಯಿಸಬೇಕೆನ್ನುವ ಮಜೂರರಿಗೆ ಪ್ರೊವಿಡೆಂಟ್ ಫಂಡ್ ಸೌಕರ್ಯ ಒದಗಿಸಿ ಕೊಡಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು. ಶ್ರೀಮತಿ ಹನ್ನಾ ತಿಯೋಫಿಲ್, ಶ್ರೀಗಳಾದ ಟಿ ಮೋಹನರಾವ್, ಸಿ. ಗೋವಿಂದನ್, ಎಮ್. ಕೃಷ್ಣಪ್ಪ ಸೆಟ್ಟಿ, ಕೆ ಟಿ. ಶ್ರೀಧರನ್ ಮೊದಲಾದವರು ಮಜೂರ ಸಂಘಟನೆ ಕುರಿತು ಭಾಷಣವಿತ್ತರು. ಮಳೆಯ ದೆಸೆಯಿಂದ ಬಹಿರಂಗ ಸಭೆಯು ಪೂರ್ಣ ಕಾರ್ಯಕ್ರಮ ಜರಗಲಿಲ್ಲ,

ತಿದ್ದುಪಡಿ— ಕಳೆದ ಸಂಚಿಕೆಯ 9ನೇ ಪುಟದಲ್ಲಿ ಪ್ರಕಟವಾದ ಉಡುಪಿ ಡಿ॥ ಮು॥ ಕೋರ್ಟಿನ O. S. 81/56ನೇ ನಂಬ್ರವು ತನಖೆ ಬಗ್ಗೆ ತಾ 1-6-56ರ ಬದಲಿಗೆ ತಾ 8—6—56ಕ್ಕೆ ಇಟ್ಟಿದೆ ಎಂತ ತಿದ್ದಿ ಓದುವುದು.

ಸಂ. ನ.

ದಯಮಾಡಿ ಚಂದಾಹಣವನ್ನು ಕಳುಹಿಸಿಕೊಡಿರಿ.

* 17 jewels, Glucidor Balance, Antimagnetic, Nivarox hairspring.

	5120	5311	7926
Chromium Front Steel Back	Rs. 130/-	Rs. 130/-	—
Full Stainless Steel Case	Rs. 155/-	Rs. 155/-	Rs. 150/-
20 Microns Rolled Gold Steel Back	Rs. 160/-	Rs. 160/-	Rs. 160/-

M. VAMAN NAYAK & SONS,
POST BOX NO. 8. MANGALORE-2.

INSIST ON BENTEX STRAPS & BRACELETS

(೧೨ನೇ ಪುಟದಿಂದ)

ಿದೆ. ಆದ್ಯಂತವಾಗಿ ಪಾಲು (Art) ಕಾಗದದಲ್ಲಿ ಮುದ್ರಿತವಾಗಿರುವ ಈ ಕೈಪಿಡಿಯು ಬ್ಯಾಂಕಿನ ಸ್ಥಾಪನೆ ಮತ್ತು ಬೆಳವಣಿಗೆಯ ಇತಿಹಾಸ, ಈ ಕಾಲಾವಧಿಯಲ್ಲಿ ಅದು ಮುಂದಿಟ್ಟ ಪ್ರಾಮುಖ್ಯ ಹೆಜ್ಜೆಗಳು ಇತ್ಯಾದಿ ವಿಷಯಗಳ ಬಗ್ಗೆ ಪರಿಚಯಾತ್ಮಕ ಲೇಖನಗಳಿಂದಲೂ ಪಡಿಯಚ್ಚುಗಳ ಸಮರ್ಥನೆಯಿಂದಲೂ ಕೂಡಿದೆ. ಕೈಪಿಡಿಯನ್ನು ಸಂಪಾದಿಸಿದವರು ಪ್ರತಿ ಪುಟದಲ್ಲಿಯೂ ವಿಷಯಕ್ಕೊಪ್ಪುವ ಮತ್ತು ವಿಷಯದ ತಿರುಳನ್ನು ಕೆಲವೇ ಶಬ್ದಗಳ ಅವ್ಯಕ್ತಪಡಿಸುವ ಮುತ್ತಿನಂಥ ಮಾತುಗಳ ಕೋದಿ, ಆಕರ್ಷಣೆಯನ್ನು ಹೆಚ್ಚಿಸಿರಿ.

ಮಂಗಳೂರಿನ ಒಂದಾಣೆ ಮಾಲಿಕೆಯಲ್ಲಿ ಪ್ರಕಟವಾಗಿರುವ ಶ್ರೀ ಮುರನ ಶಂಕರನಾರಾಯಣ ಭಟ್ಟರ "ನೆಕ್ಟರ್ ಗಾಂಧೀಜಿ ಅಥವಾ ನಿಸರ್ಗ ಚಿಕಿತ್ಸೆ ಮತ್ತು ಗಾಂಧೀಜಿ" ಎಂಬ ಚಿಕ್ಕ ಪುಸ್ತಕವು ಗಾಂಧೀಜಿಯವರ ಜೀವನದ ನಿತ್ಯಾಂಗವಾಗಿದ್ದರೂ ಹೆಚ್ಚಿನವರ ಗಮನ ಅಷ್ಟಾಗಿ ಸೆಳೆಯದಿದ್ದ ಮಹತ್ತ್ವದ ವಿಷಯವೊಂದರ ಮೇಲೆ ಸ್ಪಷ್ಟ ಪ್ರಕಾಶವನ್ನು ಚೆಲ್ಲುತ್ತದೆ. ಗಾಂಧೀಜಿಯವರು ೧೯೪೫ನೇ ವರ್ಷದ ಬಳಿಕ ನಿಸರ್ಗ ಚಿಕಿತ್ಸೆಯನ್ನು ಬಹಳವಾಗಿ ಪ್ರತಿಪಾದಿಸಿದರು. ರಾಮನಾಮವು ಹೇಗೆ ಸಕಲ ದುರಿತಗಳ ತಾರಕವಾಗಿದೆಯೋ ಹಾಗೆ ನಿಸರ್ಗ ಚಿಕಿತ್ಸೆಯೂ ಸಕಲ ರೋಗಗಳಿಗೂ ರಾಮಬಾಣವೆಂದು ಗಾಂಧೀಜಿ ಅಭಿಪ್ರಾಯಪಡುತ್ತಿದ್ದರು. ರಾಜಕೀಯ ಜಂಜಡದ ನಡುವೆ ಪಕೀಲ ಗಾಂಧಿಯು ವ್ಯಕ್ತಪಡಿಸಿದ ಈ ವೈದ್ಯಕೀಯ ವಿಷಯ ಜನರ ದೃಷ್ಟಿಯನ್ನು ಕ್ಷಿಪ್ರದಲ್ಲಿ ಆಕರ್ಷಿಸಲಿಲ್ಲ— ಈಗಲಾದರೂ ಅದು ಸೆಳೆಯಲ್ಪಡುವಂತೆ ಲೇಖಕರು ಮಾಡಿರುವುದು ಸ್ತುತ್ಯ. ಸರಳ ಶೈಲಿಯಲ್ಲಿ ಅವರು ಗಾಂಧೀಜಿಯ ವಿಚಾರಗಳನ್ನು ಸ್ವಾನುಭವದ ಸಮರ್ಥನೆಯೊಡನೆ ನಿರೂಪಿಸಿದ್ದಾರೆ.

ಬೆಂಗಳೂರಿನ ಚಿಕ್ಕಪೇಟೆಯಲ್ಲಿರುವ ವಾಣಿ ಪ್ರಕಾಶನದವರು ಆರಾಣೆ ಬೆಲೆ "ಸುಲೋಚನೆ" ಎಂಬ ಕಾದಂಬರಿಯು ಪ್ರಕಟಿಸಿದ್ದಾರೆ. ಇದನ್ನು ಬರೆದ ಪ್ರೊ. ಶೇಷಗಿರಿ ರಾಯರು ಆಕರ್ಷಕವಾಗಿದ್ದು ಓದಿಸಿಕೊಂಡು ಹೋಗುವ ಶೈಲಿಯನ್ನು ಬಳಸಿದ್ದಾರೆ. ಆದರೆ ಅವರು ನಿರೂಪಿಸಿದ ಕತೆಯು ನಮಗೆ ಶ್ರೀ ವಿ. ಎಂ. ಇನಾಂದಾರರ "ಶಾಪ" ಕಾದಂಬರಿಯು ವಸ್ತುವನ್ನು ನೆನಪಿಗೆ ತಂದು ಕೊಡುತ್ತದೆ.

ಶ್ರೀ ರವಿ ಪ್ರಸಾದ ಜ್ಯೋತಿಷಾಲಯದವರಿಂದ ಪ್ರಕಾಶಿತವಾದ ದುರ್ಮುಖಿ ಸಂವತ್ಸರದ "ಉಡುಪಿ ಪಂಚಾಂಗ"ವು ಆರಾಣೆ ಬೆಲೆಗೆ ಪೇಟೆಯಲ್ಲಿ ಮಾರಾಟಕ್ಕೆ ಬಂದಿದೆ. ಇದರಲ್ಲಿ ಆರ್ಯಭಟೀಯ ದೃಗ್ಗಣಿತದ ಪ್ರಕಾರ ನಿತ್ಯ ಪಂಚಾಂಗವನ್ನು ಸಿದ್ಧಗೊಳಿಸಲಾಗಿದೆ. ಕೊನೆಯಲ್ಲಿ ಶುದ್ಧ ದೃಗ್ಗಣಿತದ ಪ್ರಕಾರ ಇದೇ ವಿವರವನ್ನು ಕೊಡುವ ಪರಿಶಿಷ್ಟವೂ ಇದೆ. ಜ್ಯೋತಿಷ್ಯ ವಿಷಯಗಳಿಗೆ ಸಂಬಂಧಪಟ್ಟ ಅನೇಕ ಉಪಯುಕ್ತ ಸಂಗತಿಗಳನ್ನು ಕೊಟ್ಟಿರುವುದೂ ದ್ವಾದಶರಾಶಿಯವರ ಮಾಸಿಕ ಭವಿಷ್ಯವನ್ನು ಪ್ರಕಟಿಸಿರುವುದೂ ಈ ಪಂಚಾಂಗದ ವೈಶಿಷ್ಟ್ಯ.

ಮಂಗಳೂರಿನಲ್ಲಿ ಕಾರ್ಯಾಲಯವನ್ನಿಟ್ಟು ನಡೆದಿರುವ "ಕೌತ್ ಕೆನರಾ ಮಾರ್ಕೆಟಿಂಗ್ ಕಮಿಟಿ"ಯ ೧೯೫೫ನೇ ವರ್ಷದ ವರದಿಯು ಈಗ ಪ್ರಕಟವಾಗಿದೆ. ಇದರ ಅವಲೋಕನದಿಂದ ನಮ್ಮ ಜಿಲ್ಲೆಯಲ್ಲಿ ತೆಂಗಿಗಿಂತಲೂ ಅಡಿಕೆಯು ರೊಕ್ಕದ ಪೈರಿನ ದೃಷ್ಟಿಯಿಂದ ಹೆಚ್ಚು ಜನಪ್ರಿಯವಾಗಿದೆ ಎಂಬ ವಿಷಯವು ತಿಳಿದುಬರುತ್ತದೆ. ಮಂಗಳೂರಿನ ಬಂದರವೇ ತೆಂಗು, ಅಡಿಕೆ ಮತ್ತವುಗಳ ಉಪವಸ್ತುಗಳ ಮುಖ್ಯ ವ್ಯಾಪಾರ ಕೇಂದ್ರ. ಆದರೆ ನಿಯಮಿತ ವ್ಯಾಪಾರ ಕೇಂದ್ರವೊಂದನ್ನು ಬಂದರ ಪ್ರದೇಶದಲ್ಲಿ (ಅಥವಾ ಅದಕ್ಕೆ ಹತ್ತಿರ) ನೆಲೆಗೊಳಿಸುವುದು ಕಮಿಟಿಗೆ ಹಣಾಭಾವದ ದೆಸೆಯಿಂದ ಇನ್ನೂ ಶಕ್ಯವಾಗಿಲ್ಲ. ಸರಕಾರಕ್ಕೆ ಸಲ್ಲಿಸಿದ ಮನವಿಗಳನ್ನು ಸಹಾನುಭೂತಿಯಿಂದ ಪರ್ಯಾಲೋಚಿಸುವ ಅಗತ್ಯವಿದೆ ಎಂದು ವರದಿಯಲ್ಲಿದೆ. ಬೆಲೆಗಳು ಸಾಕಷ್ಟು ಏರಿಕೆಯಲ್ಲಿದ್ದುದೆಂದೂ ತೆಂಗು ಮತ್ತು ಅಡಿಕೆಗಳ ವ್ಯವಸಾಯವನ್ನು ಭತ್ತ ಮತ್ತಿತರ ಆಹಾರ ಧಾನ್ಯಗಳಾಗುವ ಬೆಳೆಗೆ ಹಾನಿಯಾಗದಂತೆ ವಿಸ್ತರಿಸುವ ಸಾಧ್ಯತೆ ಜಿಲ್ಲೆಯಲ್ಲಿ ಸಾಕಷ್ಟು ನೆಚ್ಚಿದೆಯೆಂದೂ ವರದಿ ಹೇಳುತ್ತದೆ.

ಮುಂಬಯಿಯ ಮಿನರ್ ಇಂಡಿಯಾ ಪ್ರೈವೇಟ್ ಹೈಸ್ಕೂಲಿನ "ಮಾಧವಿ" ಎಂಬ ಮುದ್ರಿತ ಪತ್ರಿಕೆಯು ಕೆಲವು ಉತ್ತಮ ಲೇಖನಗಳಿಂದಲೂ ಇತರ ಲಘು ಬರೆಹಗಳಿಂದಲೂ ಪ್ರಕಟವಾಗಿದೆ. ಕನ್ನಡವಲ್ಲದೆ ಹಿಂದೀ ವಿಭಾಗ, ಇಂಗ್ಲಿಷ್ ವಿಭಾಗಗಳೂ ಇವೆ, ಸಂಸ್ಥೆಗೆ ಸಂಬಂಧಿಸಿದ ಚಟುವಟಿಕೆಗಳೂ ಸಂಚಿಕೆಯಲ್ಲಿ ಚಿತ್ರಸಹಿತ ನಿರೂಪಿತವಾಗಿವೆ.

ಶಿರ್ವದಿಂದ ಪ್ರಕಟವಾಗುವ "ವೀಣಾ" ಮಾಸಿಕದ ೧೯೫೬ನೇ ಎಪ್ರೀಲಿನ ಸಂಚಿಕೆಯು ಶ್ರೀಮಜ್ಜಗದ್ಗುರು ಗೌರವಾರ್ಪಣ ಸಂಚಿಕೆಯಾಗಿ ಹೊರಬಂದಿದೆ. ಶೃಂಗೇರಿಯ ಸ್ವಾಮಿಗಳು ಈ ಜಿಲ್ಲೆಯಲ್ಲಿ ದಿಗ್ವಿಜಯ ಕೈಗೊಂಡ ಸಂದರ್ಭವನ್ನು ನೆನೆದು ಸಂಪಾದಿಸಿದ ಈ ಸಂಚಿಕೆಯಲ್ಲಿ ಅದ್ವೈತ ಮತದ ಮೇಲೆ ಹಲವು ಒಳ್ಳೆಯ ಲೇಖನಗಳಿವೆ. ಜಿಲ್ಲೆಯ ವಿದ್ವಾಂಸರು ಇವನ್ನು ಬರೆದಿದ್ದಾರೆ. ಸಂಪಾದಕ ಎಸ್. ಎನ್. ರಾಯರಿಂದ ರಚಿತವಾದ ನಾಟಕ, ಕವನಗಳೂ ಇವೆ.

ಸುರತ್ಕಲ್ಲಿನ ವಿದ್ಯಾದಾಯಿನೀ ಹೈಸ್ಕೂಲಿನ ವಿದ್ಯಾರ್ಥಿ ಸಂಸ್ಥೆಯ ಪತ್ರಿಕೆಯಾದ ನವೋದಯದ ೧೯೫೬ನೇ ವಾರ್ಷಿಕಾಂಕವು ಮುದ್ದಾದ ಮುದ್ರಣ ಕನ್ನಡ, ಹಿಂದಿ, ಮತ್ತು ಇಂಗ್ಲಿಷ್ ವಿಭಾಗಗಳೊಂದಿಗೆ ಸಚಿತ್ರವಾಗಿ ಪ್ರಕಟವಾಗಿದೆ. ವೈವಿಧ್ಯಪೂರ್ಣವಾದ ಇಲ್ಲಿಯ ಲೇಖನಗಳು ಚಿಕ್ಕವಾಗಿದ್ದರೂ ಸ್ವಾರಸ್ಯವಾಗಿವೆ. ಹೆಚ್ಚಿನ ಮಕ್ಕಳಿಗೆ ಅವಕಾಶವನ್ನು ಒದಗಿಸಿಕೊಡಲಾಗಿರುವುದು ಈ ಸಂಚಿಕೆಯ ಮಟ್ಟಿಗೆ ಎತ್ತಿ ಹೇಳಬೇಕಾದ ವಿಷಯ.

ಹೈದರಾಬಾದು ಸರಕಾರದ ಸುದ್ದಿ ಮತ್ತು ಸಾರ್ವಜನಿಕ ಸಂಬಂಧಗಳ ಖಾತೆಯು ರಾಜ್ಯದ ಅನೇಕ ಮುಖವಾದ ಪ್ರಗತಿಯನ್ನು ವಿವರಿಸುವ ಒಂದು ಪ್ರಕಟಣೆಯನ್ನು "ಹೈದರಾಬಾದು: ೧೯೫೦-೧೯೫೬" ಎಂಬ ಹೆಸರಿನಲ್ಲಿ ಕನ್ನಡಿಗರ ಅನುಕೂಲಕ್ಕಾಗಿ ಅವರ ಭಾಷೆಯಲ್ಲಿ ಹೊರಡಿಸಿದೆ. ನಕ್ಷೆಗಳಿಂದಲೂ ಚಿತ್ರಗಳಿಂದಲೂ ಲೇಖನಗಳಿಂದಲೂ ಇಲ್ಲಿ ನಿರೂಪಿತವಾದ ವಿಷಯಗಳನ್ನು ಪುಸ್ತಕೀಕರಿಸಿ ಪ್ರಜೆಗಳಿಗೆ ಪ್ರಗತಿಯ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಡಲಾಗಿದೆ.

ಬೆಂಗಳೂರಿನಿಂದ ಹೊರಡುವ "ಸರಸ್ವತಿ" ಮಾಸಿಕದ ಯುಗಾದಿ ಸಂಚಿಕೆಯಲ್ಲಿ ಮಕ್ಕಳ ಏಳಿಗೆ, ವಯಸ್ಕ ಮಹಿಳೆಯರಿಗೆ ಶಿಕ್ಷಣ ಇತ್ಯಾದಿ ಹೆಂಗಸರಿಗೆ ಸಂಬಂಧಿಸಿದ ವಿಷಯಗಳ ಕುರಿತು ಮನನೀಯ ಲೇಖನಗಳಿವೆ.

ಮಂಗಳೂರು

ಕೇಂದ್ರದ ಉಪಸಚಿವರಿಗೆ ಸ್ವಾಗತ

—ಮಂಗಳೂರು ನಗರ ಸಭೆಯ ಪರವಾಗಿ ತಾ. ೨೪ರಲ್ಲಿ ಸಂಜೆ ಕೇಂದ್ರದ ಉಪಸಚಿವ ಶ್ರೀ. ಎಮ್. ವಿ. ಕೃಷ್ಣಪ್ಪನವರಿಗೆ ನಗರ ಸಭಾಧ್ಯಕ್ಷ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತವಿತ್ತು ಗೌರವಿಸಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ, ದೇಶದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಆಹಾರ ಸ್ವಾವಲಂಬನೆಗಾಗಿ ಕೈಕೊಂಡ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿದರು. ಮಂಗಳೂರಿನ ಆವಶ್ಯಕತೆಗಳ ಕಡೆಗೆ ತಾನು ನಿಗಾ ಕೊಡುವುದಾಗಿ ಭರವಸೆಯಿತ್ತರು.

ಭಗಿನಿ ಸಮಾಜ ಮಹಾಸಭೆಯು

ತಾ. ೨೬ರಲ್ಲಿ ಶ್ರೀಮತಿ ಕಮಲಾ ಎಸ್. ಆಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರುಷದ ವರದಿ ವಾಚನವಾದ ಬಳಿಕ ಹೊಸವರ್ಷದ ಕಾರ್ಯನಿರ್ವಾಹಕರಾಗಿ ಶ್ರೀಮತಿಯರಾದ ರಮಾಬಾಯಿ ವಿ. ಪೈ, ಇ. ಸೋನ್ಸ್, ಮುಕ್ತಾ ಪಂಡಿತ್, ಭಾನುಮತಿ ಎಸ್. ರಾವ್, ಕಮಲ ಎಸ್. ಆಳ್ವ, ಕಲ್ಯಾಣಿ ಡಿ. ಶೆಟ್ಟಿ, ವಿಮಲಾ ಕಾಮತ್, ಶಾಂತೇರಿ ಪ್ರಭುಗಳು ಆರಿಸಲ್ಪಟ್ಟರು.

ದ. ಕ. ಜಿಲ್ಲಾ ಸಹಕಾರಿ ಪರಿಷತ್ತು— ತಾ. ೨೫ರಲ್ಲಿ ಸುರತ್ಕಲ್ ವಿದ್ಯಾದಾಯಿನಿ ಶಾಲೆಯಲ್ಲಿ ಕೇಂದ್ರಸರಕಾರದ ಉಪ ಆಹಾರಮಂತ್ರಿ ಶ್ರೀ ಎಮ್. ವಿ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬಯಿ ರಾಜ್ಯದ ಸಹಕಾರಿ ಮಂತ್ರಿ ಶ್ರೀ ಎಮ್. ಪಿ. ಪಾಟೀಲರು ಪರಿಷತ್ತನ್ನು ಉದ್ಘಾಟಿಸಿದರು. ಸ್ವಾಗತಸಮಿತಿ ಅಧ್ಯಕ್ಷ ಶ್ರೀ ಎಸ್. ನರ್ಸಪ್ಪಯ್ಯನವರ ಸೂಚನೆಯಂತೆ ಜಿಲ್ಲೆಯ ಸಹಕಾರಿ ಚಳವಳಿಯ ಪ್ರಮುಖರೆಂದೊಬ್ಬರಾದ ಮುಳ್ಕದ ಶ್ರೀ ಐತಪ್ಪ ರೈಗಳ ನಿಧನಕ್ಕಾಗಿ ದುಃಖ ಪ್ರದರ್ಶಿಸಲಾಯಿತು. ನಂತರ ಸಹಕಾರಿ ಚಳವಳಿಗೆ ಸಂಬಂಧಿಸಿದ ಹಲವು ನಿರ್ಣಯಗಳಾದುವು. ಕಾಸರಗೋಡು ತಾಲೂಕು ಈ ಜಿಲ್ಲೆಯಿಂದ ಪ್ರತ್ಯೇಕವಾಗಲಿದ್ದು ಇದರಿಂದ ಜಿಲ್ಲೆಯ ಸಹಕಾರಿ ಚಳವಳಿಗೆ ತುಂಬಾ ಬಾಧಕ ಬರಲಿರುವುದರಿಂದ, ಕಾಸರಗೋಡು ತಾಲೂಕಿನ ಉತ್ತರ ಭಾಗವನ್ನು ನಿಯೋಜಿತ ಮೈಸೂರು ರಾಜ್ಯದಲ್ಲಿ ಸೇರಿಸಬೇಕೆಂದೂ ಕೇಳಿಕೊಳ್ಳಲಾಯಿತು.

ಸಭಾಧ್ಯಕ್ಷ ಶ್ರೀ ಕೃಷ್ಣಪ್ಪನವರು ತಮ್ಮ ಭಾಷಣದಲ್ಲಿ, ನಮ್ಮ ದೇಶದ ಆಹಾರ ಪರಿಸ್ಥಿತಿಯನ್ನು ವಿವೇಚಿಸಿ, ಆಹಾರದಲ್ಲಿ ಸ್ವಾವಲಂಬನೆಗೆ ಇರುವ ಪ್ರಾಮುಖ್ಯತೆಯನ್ನು ಪ್ರಸ್ತಾಪಿಸಿ ಸದ್ಯವೇ ದ. ಕ. ಜಿಲ್ಲೆಯು ಮೈಸೂರಿನ ಒಂದು ಭಾಗವಾಗುವುದರಿಂದ ಇಲ್ಲಿಯ ಅಭಿವೃದ್ಧಿ ಇನ್ನಷ್ಟು ಸುಗಮವಾಗಲಿದೆ ಎಂದರು. ಪರಿಷತ್ತಿನ ಅಂತ್ಯದಲ್ಲಿ ಶ್ರೀ ಪಿ. ಕಾಂಬರಿರಾಯರು ಧನ್ಯವಾದಗಳನ್ನಿತ್ತರು.

ಬೊಂಬಾಯಿ ಕನ್ನಡಿಗರ ಕೋರಿಕೆ

ಮುಂಬಯಿಯ ಜವಾಹರಲಾಲ್ ರಾತ್ರಿ ಶಾಲೆಯಲ್ಲಿ ತಾ. ೨೨ರಲ್ಲಿ ದ. ಕ. ಜಿಲ್ಲೆಯ ಕನ್ನಡಿಗರ ಸಭೆಯು ಶ್ರೀ ಜೋಕಿಂ ಆಳ್ವ, ಎಮ್. ಪಿ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಸರಗೋಡು ಕನ್ನಡ ಸಮಿತಿ ಕಾರ್ಯದರ್ಶಿ ಶ್ರೀ ಯು. ಲಕ್ಷ್ಮಣ್ಣ ರೈಗಳು ಸಭೆ ಕರೆದುದರ ಉದ್ದೇಶವನ್ನು ತಿಳಿಸಿ ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರದಲ್ಲಿರುವ ಕನ್ನಡಿಗರಿಗೆ ಆದ ಅನ್ಯಾಯವನ್ನು ವಿವರಿಸಿ ಆ ಭಾಗವನ್ನು ಸೂಚಿತ ಕರ್ನಾಟಕದಲ್ಲಿಯೇ ಇರಗೊಡಿಸುವಂತೆ ಕೇಂದ್ರ ಸರಕಾರವನ್ನು ಕೇಳಿಕೊಳ್ಳುವ ಆವಶ್ಯಕತೆಯನ್ನು ವ್ಯಕ್ತಪಡಿಸಿದರು. ಶ್ರೀಗಳಾದ ಸಿ. ಎಚ್. ಗಂಜಲ್, ಎ. ಎಸ್. ಕಂಬಳಿ, ಎಸ್. ಆರ್. ಕಾಂತಿ ಮೊದಲಾದವರು ಸಾಲೋಚಿತ ಮಾತುಗಳನ್ನಾಡಿದರು. ಬಳಿಕ ಕಾಸರಗೋಡು ತಾಲೂಕಿನ ಉತ್ತರ ಭಾಗವನ್ನು ಕೇರಳಕ್ಕೆ ಸೇರಿಸದೆ ಕರ್ನಾಟಕದಲ್ಲಿಯೇ ಇರಗೊಡಿಸಬೇಕೆಂದು ಕೇಂದ್ರ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ಬೊಂಬಾಯಿ ರಾಜಾಪುರ ಸಾರಸ್ವತ ಸಂಘದ ಮಹಾ ಸಭೆಯು— ತಾ. ೧೯ರಲ್ಲಿ ಶ್ರೀ ಬಿ. ಎ. ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಡಿ. ಡಿ. ಪ್ರಭುಗಳು ಗತವರ್ಷದ ವರದಿಯನ್ನೋದಿದರು. ಬಳಿಕ ರಾಜಾಪುರ ಸಾರಸ್ವತ ಸಮಾಜದ ಅತೀ ಬಡ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಧರ್ಮಾರ್ಥ ವಿದ್ಯಾರ್ಥಿವೇತನ ಕೊಡಬೇಕೆಂದು ನಿರ್ಧಾರವಾಗಿ ಆ ಬಗ್ಗೆ ಅರ್ಜಿಗಳನ್ನು ತಾ 15—6—56ರ ತನಕ ಸ್ವೀಕರಿಸಬೇಕೆಂದಾಯಿತು.

(೧ನೇ ಪುಟದಿಂದ)

"ಆಂಧ್ರವು ಬಳ್ಳಾರಿಯ ತುಣುಕೊಂದನ್ನು ವರ್ಗಾಯಿಸುವ ಬಗ್ಗೆ ಆತುರವನ್ನೇನು ತೋರಿಸಿಲ್ಲ. ವಾಂಛೂ ಮತ್ತು ವಾಂಚೂ ಶಿಫಾರಸಿನಂತೆ ಬಳ್ಳಾರಿಯನ್ನು ಮೈಸೂರಿಗೆ ಕೊಡಲಾಗಿದೆ. ತುಂಗಭದ್ರೆಯ ಅಣೆಕಟ್ಟಿನ ನೆಪದಿಂದ ಮಾತ್ರ ಬಳ್ಳಾರಿಯ ಕೆಲವು ಪ್ರದೇಶಗಳನ್ನು ಆಂಧ್ರಕ್ಕೆ ಕೊಡಬೇಕೆಂದು ಫಜಲಾಲಿ ಆಯೋಗ ಹೇಳಿದೆ. ಈ ಅಣೆಕಟ್ಟಿನ ಉತ್ತಮ ನಿರ್ವಹಣೆಯ ಹೊಣೆಯ ಬಗ್ಗೆ ನಮಗೆ ಭರವಸೆ ದೊರೆತಿದೆ—ಮತ್ತು ಕೇಂದ್ರವೇ ಈ ಜವಾಬ್ದಾರಿ ಹೊರುತ್ತದೆ. "ಎನ್ನುತ್ತಾ ಗೃಹ ಮಂತ್ರಿಗಳು ಬಳ್ಳಾರಿಯನ್ನು ಆಂಧ್ರಕ್ಕೆ ವರ್ಗಾಯಿಸಲು ನಿರಾಕರಿಸಿದರು.

ರೂ. 1000ದ ವರೆಗೆ ಸಾಲವು

ಯಾವ ಜಾಮೀನು, ಆಸ್ತಿ, ಅಡವು ಇಲ್ಲದೆನೇ ಬರೀ ನಿಮ್ಮ ದಸ್ತಾತಿನ ಮೇಲೆ ಕೊಡಲಾಗುವುದು. ನೂರಕ್ಕೆ ಮೇಲ್ಪಟ್ಟ ಅರ್ಜಿದಾರರು ಈಗಾಗಲೇ ಸೌಕರ್ಯಗಳನ್ನು ಪಡೆದಿರುತ್ತಾರೆ. ಹೆಚ್ಚಿನ ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ.

Bombay Mercantile Co.,
Bombay-23.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಕೀಲುಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ವೀರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು. ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0.

ಪುಲಿಯೂರ್ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೩—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅನೇಕ ಮುಖವಾದ ಸಾಮಾಜಿಕ ವಿಮೆ

(೪ನೇ ಪುಟದಿಂದ)

ಯಲ್ಲಿ ಮಕ್ಕಳ ಸಂಖ್ಯೆಗನುಸಾರ ಹೆಚ್ಚಿಕೊಳ್ಳುವ ವಿಧವೆಯ ಭತ್ತೆಯನ್ನು ವೈಧವ್ಯ ಪ್ರಾಪ್ತಿಯಾದ ಮೊದಲಿನ ೧೩ ವಾರಗಳ ವರೆಗೆ ಸುಲಭ ಜೀವನ ನಿರ್ವಹಣ ಸಾಧ್ಯವಾಗುವಂತೆ ಕೊಡಲಾಗುತ್ತದೆ. ಅನಂತರ ಶಾಲಾ ಪ್ರಾಯದ ಮಕ್ಕಳು ವಿಧವೆಗಿದ್ದರೆ, ಮಕ್ಕಳ ಸಂಖ್ಯೆಯನ್ನು ಹೊಂದಿಕೊಂಡು ಹೆಚ್ಚಾಗುವ ಕ್ರಮವನ್ನನುಸರಿಸಿ ಭತ್ತೆಯನ್ನು ವಿಧವಾ ಮಾತೆಗೆ ಕೊಡಲಾಗುತ್ತದೆ. ವಿಧವಾ ಮಾತೆಯರು ವಾರಕ್ಕೆ ಮೂರು ಪೌಂಡುಗಳಿಗೆ ಮೀರದಷ್ಟು ಮಾತ್ರ ಹಣವನ್ನು ಬೇರೆ ಉದ್ಯೋಗದಿಂದ ಸಂಪಾದಿಸುತ್ತಿದ್ದರೆ, ಭತ್ತೆಯಲ್ಲಿ ಕಡಿತವನ್ನು ಮಾಡಲಾಗುವುದಿಲ್ಲ. ಮಕ್ಕಳಿಲ್ಲದ ಮತ್ತು ೫೦ ವರ್ಷ ಪ್ರಾಯವಾಗದ ಹೆಂಗಸು ವಿಧವೆಯಾದರೆ (ಅಥವಾ ಅವಳ ದಾಂಪತ್ಯ ಜೀವನಾವಧಿಯು ಹತ್ತು ವರ್ಷಕ್ಕಿಂತ ಕಡಿಮೆಯಾಗಿದ್ದರೆ) ಮತ್ತು ಕೆಲಸ ಮಾಡುವಷ್ಟು ಸಶಕ್ತಳಿದ್ದರೆ, ಆಕೆಗೆ ವೈಧವ್ಯದ ಪ್ರಯೋಜನವು ವೈಧವ್ಯದ ಮೊದಲನೇ ೧೩ ವಾರಗಳ ಬಳಿಕ ಸಿಗುವುದಿಲ್ಲ.

ಹತ್ತು ಪೌಂಡುಗಳ ಮಾತೃತ್ವದ ಭತ್ತೆಯನ್ನು ಗಂಡನ ಅಥವಾ ಹೆಂಡತಿಯ (ಅಂದರೆ ಈಗ ಮಗುವಿನ ತಾಯಿ) ವಿಮೆಗಳಲ್ಲಿ ಯಾವುದಾದರೊಂದರ ಮೇಲೆ ಕೊಡಲಾಗುತ್ತದೆ. ಮನೆಯಲ್ಲಿಯೇ ಹೆರಿಗೆಯಾಗುವುದಾದರೆ ಪುನಃ ೪ ಪೌಂಡುಗಳಷ್ಟು ಹಣವನ್ನು ಕೊಡಲಾಗುತ್ತದೆ. ಅದಲ್ಲದೆ ಮಗುವಿನ ತಾಯಿಯು ವಿಮೆಯನ್ನು ಪಡೆದಿದ್ದರೆ ಹೆರಿಗೆಗೆ ೧೧ ವಾರಗಳಷ್ಟು ಹಿಂದಿನಿಂದ ಪ್ರಾರಂಭಿಸಿ ಒಟ್ಟು ೧೮ ವಾರಗಳ ವರೆಗೆ ವಾರಕ್ಕೆ ಎರಡು ಪೌಂಡಿನಂತೆ ಹಣದ ಪ್ರಯೋಜನವನ್ನವಳು ಪಡೆಯುತ್ತಾಳೆ. ಮದುವೆಯಾದ ಹೆಂಗಸರು ಸಾಮಾನ್ಯವಾಗಿ ಗಂಡಂದಿರ ವಿಮೆಯ ಪ್ರಯೋಜನವನ್ನು ಮಾತೃತ್ವದ ಮಟ್ಟಿಗೆ ಪಡೆಯುವಂತಾದರೂ ತಾವು ಸ್ವತಃ ಯಾವುದಾದರೊಂದು ಉದ್ಯೋಗವನ್ನು ಪಡೆದಿದ್ದರೆ ಮತ್ತು ಹಾಗೆ ವಿಮೆಗಾಗಿ ವಂತಿಗೆ ಕೊಡುತ್ತಿದ್ದರೆ ಅನಾರೋಗ್ಯದ ಕಾಲದಲ್ಲಿ ಸಹಾಯವನ್ನು ಪಡೆಯುವುದೇ ಮುಂತಾದ ಪ್ರಯೋಜನಗಳಿಗೆ ಭಾಗಿಯಾಗಬಲ್ಲರು.

ಮೇಲಿನೆಲ್ಲವುಗಳಿಗಿಂತಲೂ ಉದ್ಯೋಗದಿಂದ ನಿವೃತ್ತರಾದವರಿಗೆ ಕೊಡುವ ನಿವೃತ್ತಿ ವೇತನವು ಉಲ್ಲೇಖನೀಯವಾದ ಸೌಲಭ್ಯ. ೧೯೫೬ನೇ ಮಾರ್ಚಿ ೩ನೇ ತಾರೀಕಿಗೆ ಮುಗಿದ ವರ್ಷದಲ್ಲಿ ಬಹುಮುಖವಾದ ವಿಮಾಯೋಜನೆಯಂತೆ ಜನರು ಒಟ್ಟಾರೆ ೭೫೯ ಮಿಲಿಯ ಪೌಂಡುಗಳಷ್ಟು ಪ್ರಯೋಜನವನ್ನು ಪಡೆದಿರುವರೆಂದು ಅಂದಾಜು; ಇದರಲ್ಲಿ ನಿವೃತ್ತಿವೇತನವನ್ನು ನೀಡಲಿಕ್ಕಾಗಿ ಕೊಟ್ಟ ಹಣದ ಮೊತ್ತವೇ ೪೫೭ ಮಿಲಿಯ ಪೌಂಡು. ಗಂಡಸರಿಗೆ ೬೫ ವರ್ಷ ಪ್ರಾಯ ಮತ್ತು ಹೆಂಗಸರಿಗೆ ೬೦ ವರ್ಷ ಪ್ರಾಯವಾದ ಬಳಿಕ ಈ ವೇತನವು ವಾರಕ್ಕೆ ಎರಡು ಪೌಂಡಿನಂತೆ ಸಿಗುತ್ತದೆ. ಮದುವೆಯಾಗಿ ಹೆಂಡತಿಯು ಜೀವಂತಳಿರುವ ಗಂಡಸಿನ ಸಂಗತಿಯಲ್ಲಿ ವಾರಕ್ಕೆ ಇನ್ನೂ ಒಂದೂಕಾಲು ಪೌಂಡು ಹೆಚ್ಚು ಹಣವು ಸಿಗುತ್ತದೆ.

ಜನರು ಸಾಧ್ಯವಿದ್ದಷ್ಟು ಹೆಚ್ಚು ವರ್ಷಗಳವರೆಗೆ ಕೆಲಸಮಾಡಬೇಕೆಂಬ ಉದ್ದೇಶದಿಂದ ಮೇಲೆ ಹೇಳಿದ ಪ್ರಾಯವಾದ ಬಳಿಕ ಸಹ ಕೆಲಸಮಾಡಿದ ಪ್ರತಿ ೨೫ ವಾರಗಳ ಅವಧಿಗೆ ಪ್ರತಿ ವಾರಕ್ಕೆ ಒಂದೂವರೆ ಶಿಲಿಂಗುಗಳಂತೆ ನಿವೃತ್ತಿ ವೇತನವನ್ನು ಹೆಚ್ಚಿಸಲಾಗುತ್ತದೆ. ಮದುವೆಯಾದ ಗಂಡಸು ತನ್ನ ೬೫ನೇ ಪ್ರಾಯ ಸಂದ ಬಳಿಕವೂ ಹೆಚ್ಚು ಕೆಲಸ ಮಾಡಿದರೆ ಮತ್ತು ಆತನ ಹೆಂಡತಿಯು ಆಗ ಜೀವಂತಳಿದ್ದರೆ, ಹೆಂಡತಿಯ ಹೆಸರಿನಲ್ಲಿ ಹಾಗೆ ಹೆಚ್ಚು ಕೆಲಸ ಮಾಡಿದ ಪ್ರತಿ ವಾರಕ್ಕೆ ಒಂದು ಶಿಲಿಂಗಿನಂತೆ ಅಧಿಕ ವೇತನ ಪಡೆಯುತ್ತಾನೆ. ಹೀಗೆ ಹೆಚ್ಚು ಕೆಲಸ ಮಾಡುತ್ತಾ ಗಂಡಸು ೭೦ ವರ್ಷ ಮತ್ತು ಹೆಂಗಸು ೬೫ ವರ್ಷ ವಯಸ್ಸನ್ನು ಮುಗಿಸಿದರೆ ಆ ಮೇಲೆ ಅವರು ಕೆಲಸ ಮಾಡಲಿ, ಮಾಡದಿರಲಿ, ಹೆಚ್ಚಿನ ದರದಲ್ಲಿಯೇ ನಿವೃತ್ತಿ ವೇತನವನ್ನು ಕೊಡಲಾಗುತ್ತದೆ. ಹೀಗೆ ಮದುವೆಯಾಗಿ ಹೆಂಡತಿ ಜೀವಂತಳಿರುವ ಒಬ್ಬ ಗಂಡಸು ೭೦ ವರ್ಷ ಪ್ರಾಯದ ವರೆಗೆ ಕೆಲಸ ಮಾಡುತ್ತಿದ್ದರೆ ಆ ಮೇಲೆ ಕೆಲಸ ಮಾಡಲಿ, ಮಾಡದಿರಲಿ, ವಾರಕ್ಕೆ ೫೫ ಶಿಲಿಂಗಿನಂತೆ ತನ್ನ ಹೆಸರಿನಲ್ಲಿಯೂ ವಾರಕ್ಕೆ ೩೫ ಶಿಲಿಂಗನ್ನು ತನ್ನ ಹೆಂಡತಿಯ ಹೆಸರಿನಲ್ಲಿಯೂ ಪಡೆಯಬಲ್ಲನು. ಈಗ ೩೦೦೦೦೦೦ ಹೆಂಗಸರನ್ನೊಳಗೊಂಡು ಒಟ್ಟು ೪೫೦೦೦೦೦ ಜನರು ನಿವೃತ್ತಿ ವೇತನವನ್ನು ಪಡೆಯುತ್ತಿದ್ದಾರೆ. ಆದರೆ ಬ್ರಿಟನಿನಲ್ಲಿ ಮುದುಕರೂ ಮುದುಕಿಯರೂ ಹೆಚ್ಚು ಆರೋಗ್ಯವಂತರಾಗಿ ದೀರ್ಘ ಕಾಲದ ವರೆಗೆ ಬಾಳುವುದರಿಂದ ಮುಂದಿನ ೨೫ ವರ್ಷಗಳಲ್ಲಿ ನಿವೃತ್ತಿ ವೇತನದ ವೆಚ್ಚವು ಈಗಿನದರ ಇಮ್ಮಡಿಯಾದೀತೆಂಬ ಭಯವಿದೆ.

ಯುದ್ಧೋತ್ತರದಲ್ಲಿ ರಚಿಸಲಾದ ಸಾಮಾಜಿಕ ಯೋಜನೆಗಳಲ್ಲೆಲ್ಲ ಔದ್ಯಮಿಕ ಅಪಘಾತದ ಬಗ್ಗೆ ಮಾಡಲಾದ ಪರಿಹಾರ ಯೋಜನೆಯು ಕ್ರಾಂತಿಕಾರಿ ಸ್ವರೂಪವನ್ನು ಹೊಂದಿದೆ. ಈ ಯೋಜನೆಯನ್ನು ಸರಕಾರವು ಕಾರ್ಯಗತಗೊಳಿಸುವುದಕ್ಕೆ ಮುಂಚೆ ಕೆಲಸಗಾರರಿಗಾದ ಅಪಘಾತಗಳಿಗೆ ಪರಿಹಾರವನ್ನು ಕೊಡುವುದು ಒಡೆಯರ ಕರ್ತವ್ಯವಾಗಿದ್ದಿತು. ಆದರೆ ಈ ಬಗ್ಗೆ ಒಡೆಯರಿಗೆ ಸಲ್ಲಿಸಲಾದ ಮನವಿಗಳು ನ್ಯಾಯ ಸ್ಥಾನದಲ್ಲಿ ಕಚ್ಚಾಡದೆ ಇತ್ಯರ್ಥ ಹೊಂದುವುದು ವಿರಳವಾಗಿದ್ದಿತು. ಈ ವಿಲಕ್ಷಣ ಪರಿಸ್ಥಿತಿಯು ಸರಕಾರವು ಕೈಗೊಂಡ ಕ್ರಮದಿಂದ ನಿವಾರಣೆಯಾಗಿದೆ. ತರಬೇತಿ ಪಡೆಯಲಿಕ್ಕಾಗಲೀ ಸಾಮಾನ್ಯ ಕೆಲಸದಲ್ಲಿಯೇ ಆಗಲಿ ಒಡೆಯನೊಬ್ಬನ ಕೈಕೆಳಗೆ ಉದ್ಯೋಗ ಪಡೆದ ಎಲ್ಲರಿಗೂ ಪ್ರಾಯದ ಮಿತಿ ಇಲ್ಲದೆ ಅಶಕ್ತತೆ, ಅಂಗವಿಹೀನತೆ, ಅಪಘಾತದಿಂದಾದ ಅಥವಾ ಸುಮಾರು ನಾಲ್ವತ್ತು ಬಗೆಯ ಔದ್ಯಮಿಕ ರೋಗಗಳಿಂದಾದ ಮರಣದ ಸಂಗತಿಯಲ್ಲಿ ಪರಿಹಾರವು ಸಿಗುತ್ತದೆ. ಅಂಗವಿಹೀನತೆಯ ಪ್ರಯೋಜನಾಂಶಗಳನ್ನು ಅಪಘಾತವಾದ ಬಳಿಕ ಆತನು ಸಂಪಾದನೆಯ ಬೇರೆ ದಾರಿ ಹುಡುಕಿರುವನೆಂಬ ಕಾರಣದಿಂದ ನಿಲ್ಲಿಸಲಾಗುವುದಿಲ್ಲ. ತಾನು ಹಿಂದೆ ಮಾಡುತ್ತಿದ್ದ ಕೆಲಸಕ್ಕಿಂತ ಕಡಿಮೆ ಅಂತಸ್ತಿನ ಕೆಲಸವನ್ನು ಮಾಡಬೇಕಾಗಿ ಬಂದರೆ, ಕೆಲಸವಿಲ್ಲದೆಯೇ ಹೋದರೆ ಅಥವಾ ಇನ್ನೊಬ್ಬನು ತನ್ನ ಯೋಗಕ್ಷೇಮವನ್ನು ಬಳಿಯಲ್ಲಿದ್ದು ವಿಚಾರಿಸಿಕೊಂಡು ಹೊಟ್ಟೆಗೆ ಹಿಟ್ಟು ಕಾಣಿಸುವಂಥ ದಾರುಣ ಪರಿಸ್ಥಿತಿಯಲ್ಲಿ ಅಪಘಾತದಿಂದ ಅಂಗವಿಹೀನತೆ ಹೊಂದಿದ ಕೆಲಸಗಾರನಿದ್ದರೆ, ಆತನಿಗೆ ಸಲ್ಲಿಸುವ ಪರಿಹಾರ ಧನದ ಮೊತ್ತವನ್ನು ವಿಶೇಷ ಅಧಿಕಾರದಿಂದ ಹೆಚ್ಚಿಸಲಾಗುತ್ತದೆ.

ಔದ್ಯಮಿಕ ಅಪಘಾತಗಳ ಪರಿಹಾರ ಯೋಜನೆಯನ್ನು ಹೊರತುಪಡಿಸಿ ಉಳಿದೆಲ್ಲವುಗಳ ಪ್ರಯೋಜನ ಹೊಂದಬೇಕಾದರೆ ವಂತಿಗೆಯ ಕನಿಷ್ಠ ಸಂಖ್ಯೆಯ ನಿರ್ಬಂಧವಿದೆ. ಈ ಬಗೆಯಾಗಿ ಅರ್ಹತೆ ಹೊಂದಿದವರಿಗೂ ಹೊಂದದವರಿಗೂ ಸಮಾನವಾಗಿ ಅನ್ವಯವಾಗುವ ಯೋಜನೆಯೆಂದರೆ ರಾಷ್ಟ್ರೀಯ ಸಹಾಯ. ಈ ಸಹಾಯವನ್ನು ಪಡೆಯಲು ವಿಮೆಗೆ ವಂತಿಗೆ ಕೊಡಲು ಪ್ರಾರಂಭಿಸಬೇಕೆಂಬ ನಿರ್ಬಂಧವೂ ಇಲ್ಲ. ಪ್ರತಿಯೊಬ್ಬ ನಾಗರಿಕನೂ ಇದಕ್ಕೆ ಬಾಧ್ಯನಾಗಿದ್ದಾನೆ. ಒಬ್ಬನಿಗೆ ಆತನ ಆದಾಯ ಮತ್ತು ಭಂಡವಾಳದ ಮಿತಿಗೊಳಪಟ್ಟು ಆಗತ್ಯ ಜೋರಾಗಿದೆಯೆ ಎಂಬುದೇ ಇದಕ್ಕೆ ಅರ್ಹತೆ—ಅಂಥ ಆಗತ್ಯವಿದ್ದರೆ ತನ್ನ ಅನಾರೋಗ್ಯ ಕಾಲದಲ್ಲಿ, ನಿರುದ್ಯೋಗದ ಅವಧಿಯಲ್ಲಿ ಅಥವಾ ವೃದ್ಧಾಪ್ಯದಲ್ಲಿ ಈ ಸಹಾಯವನ್ನು ಯಾಚಿಸಿ ಯಾರು ಬೇಕಾದರೂ ಮನವಿಯನ್ನು ಸಲ್ಲಿಸಬಹುದು. ಹೀಗೆ ಅನೇಕ ಮುಖ ಪಡೆದಿರುವ ಈ ವಿಮಾ ಯೋಜನೆಯು ಬದಲಾಗುತ್ತಿರುವ ಆರ್ಥಿಕ ಪರಿಸ್ಥಿತಿ, ಏರುತ್ತಿರುವ ಜೀವನ ಮಟ್ಟ ಇತ್ಯಾದಿಗಳನ್ನು ಹೊಂದಿಕೊಂಡು ಆಗಾಗ್ಗೆ ತಿದ್ದುಪಡಿಗೊಳಗಾಗಿದೆ. ಅಲ್ಲದೆ ಇದೇ ಸಮಯದಲ್ಲಿ ಬೇರೆ ಅನೇಕ ದೇಶಗಳೊಡನೆ ಪರಸ್ಪರ ವಿನಿಮಯ ಒಪ್ಪಂದಗಳನ್ನು ಮಾಡಿಕೊಂಡು ಈ ಪ್ರಯೋಜನಕ್ಕೆ ಭಾಗಿಯಾಗುವ ಜನರು ಒಂದು ಊರಿನಿಂದ ಇನ್ನೊಂದಕ್ಕೆ ಹೋಗುತ್ತಿದ್ದರೂ ಸಹ ಯಾವುದೇ ಸೌಲಭ್ಯಕ್ಕೆ ಹೊರತಾಗದಂತೆ ನೋಡಿಕೊಳ್ಳುವ ಜಾಗ್ರತೆಯನ್ನು ವಹಿಸಲಾಗಿದೆ. ನಮ್ಮ ದೇಶದಲ್ಲಿ ಸಹ ಈ ಮಾದರಿಯ ಸಾಮಾಜಿಕ ಲಾಭದ ಮತ್ತು ಭದ್ರತೆ ಹಾಗು ಕ್ಷೇಮಾಭಿವೃದ್ಧಿಗಳನ್ನು ಸಾಧಿಸುವ ಯೋಜನೆಯು ಬೇಗನೆ ಬಂದರೆ ಯಾರಿಗೆ ತಾನೆ ಆನಂದವಾಗದು?

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.



'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 dated 12-12-1950 of the Director fo public Instructions Madras.

ವ್ಯವಹಾರದಲ್ಲಿ ಪ್ರಜಾಪ್ರಭುತ್ವದ ಯಶಸ್ಸು

(೨ನೇ ಪುಟದಿಂದ)

; ಅನಕ್ಷರಸ್ಥರೂ ಅಜ್ಞರೂ ಆಗಿರುವ ;ಾನ್ಯ ಜನರ ಪಾಡೇನು?

;ಕ್ಷಗಳ ಧುರೀಣರೆನಿಸುವವರಾದರೂ ;ೀಧ ಹಾಗು ದ್ವೇಷಭಾವನೆಯ ವ್ಯಾ ;ಶದ ಮೇಲೇರನಿಂತು ಜನಪ್ರಿಯತೆ ;ನ್ನು ಗಳಿಸಲು ಹಾಗು ಹಾಗೆ ಮುಖಂ ;ದು ಘೋಷಿಸಿಕೊಳ್ಳಲ್ಪಡಲು ಹವ ;ವುದು ತೀರ ಸುಲಭ ಮಾರ್ಗವೆಂಬ ವನ್ನು ಉಪೇಕ್ಷಿಸಿಬಿಡುತ್ತಾರೆ. ಯಾ ಆಗಲಿ, ಆತನಿಗೆ ಲಾಭತರು ನ್ನೆ ಮಾಡುವ ಭರವಸೆಯನ್ನು ;ಟ್ಟರೆ ಸಾಕು—ನಿಮ್ಮ ಸುತ್ತ ಪ್ರದಕ್ಷಿಣೆ ಹೊಡೆದು, ನಿಮ್ಮ ಖಂಡತ್ವವನ್ನು ಮನ್ನಿಸಲು ಆತನು ನಾಗುವ ಪರಿಸ್ಥಿತಿಯಲ್ಲಿ ಇಂದಿನ ;ತವಿದೆ. ಕೆಲವು ಕಹಿ ಗುಳಿಗೆಗಳನ್ನು ಗಲೇ ಬೇಕಾದ ಸಂದರ್ಭವೊದಗಿದಾ ;ಂಗಿ ಬಿಡುವಂತೆ ಅನುಯಾಯಿಗಳ ;ವೊಲಿಸಬಲ್ಲಾತನೇ ನಿಜವಾದ ಮು ;ನೆಂಬ ಸತ್ಯದ ಅರಿವು ಇರುವ ಜನ ;?

;ಾಜ್ಯಗಳ ಪುನಾರಚನೆಯ ಪ್ರಶ್ನೆಯ ಮುಂಬಯಿ ನಗರದ ಕುರಿತು ನಡೆ ;ವ ಹಗರಣವನ್ನೂ ಒಟ್ಟೊಟ್ಟಿಗೆ ನಾ ;ಪ್ರಜಾಪ್ರಭುತ್ವದ ಇಂದಿನ ಸರಿಸ್ಥಿತಿ ಅವಲೋಕನೆಗಾಗಿ ನಿದರ್ಶನದ ರೂ ;ಲ್ಲಿ ವಿಮರ್ಶಿಸೋಣ! ಯಾವುದೇ ತೀ ;ನವನ್ನು ನಾವಿಲ್ಲಿ ಹೇಳ ಹೋಗು ;ಲ್ಲ—ಪ್ರಜಾಪ್ರಭುತ್ವದ ಯಶಸ್ಸಿನ ;ನೆಯು ವ್ಯವಹಾರದಲ್ಲಿ ಎದುರಿಸಬೇ ;ುವ ಆತಂಕವನ್ನು ನಿವೇದಿಸುವುದೇ ನಮ್ಮ ಉದ್ದೇಶ.

;ಾಕಷ್ಟು ದೀರ್ಘ ಕಾಲದ ಪರಿ ;; ಮತ್ತು ಅಭ್ಯಾಸದ ಬಳಿಕ ಲಾಲಿ ಆಯೋಗವು ತನ್ನ ವರದಿ ;ನ್ನು ಒಪ್ಪಿಸಿತು. ಇದನ್ನು ಎಲ್ಲ ;ತ್ರದಲ್ಲಿಯೂ ಬಹಳ ದಿನಗಳ ವರೆಗೆ ;ರ್ಚಿಸಲಾಯಿತು; ಮರು ಚರ್ಚೆಯೂ ;ಯಿತು. ಚರ್ಚೆಯ ಹೊತ್ತಿಗೆಪರಸ್ಪ ;ರುದ್ಧವಾದ ಭಿನ್ನಾಭಿಪ್ರಾಯಗಳಲ್ಲಿ ;ಯೊಂದನ್ನೂ ಸಮಾನಶಕ್ತಿ ಹಾಗು ;ೇಶದೊಡನೆ ವ್ಯಕ್ತಪಡಿಸಲಾಯಿತು.

ತಮ್ಮ ಪಕ್ಷದ ಪ್ರತಿಪಾದನೆ ಮಾತು ;ರು ತಮ್ಮ ದೃಷ್ಟಿಕೋಣವೊಂದೇ ಯಾದುದೆಂಬ ಆಲೋಚನೆಯನ್ನು ;ಡಿದರೇ ಹೊರತು— ಇದಿರಾಳಿಯ ;ಷ್ಟಿಕೋಣದಲ್ಲಿ ಸಹ ಸತ್ಯವಿರಬಹು ದೆಂಬುದನ್ನು ಗಮನಿಸಲು ಹೋಗಲಿಲ್ಲ. ಸಂಬಂಧಿಸಿದ ಎಲ್ಲರೂ ಅಭಿಪ್ರಾಯ ಸ್ವಾತಂತ್ರ್ಯದ ಸುಖವನ್ನು ಸಂಪೂರ್ಣ ವಾಗಿ ಅನುಭವಿಸಲೆಂಬಂತೆ ಕಿಡಿಯು ಗುಳುವ ಭಾಷಣಗಳನ್ನು ಬಿಗಿದರು; ಲೇಖನಗಳನ್ನು ಬರೆದರು.

ತಾವು ಮಾಡುವ ಕೆಲಸದ ಪರಿಣಾ ಮವೇನಾದೀತೆಂಬುದನ್ನು ಮುಂದಾಗಿ ಊಹಿಸಿ ತಿಳಿಯ ಬಲ್ಲಷ್ಟು ವಿವೇಕವುಳ್ಳ ದೊಡ್ಡವರೇ ಇವರಾಗಿದ್ದರು. ಆವರಲ್ಲಿ ಯಾರಿಗೂ ಆ ನಂತರ ಉದ್ಭವಿಸಿದ ಯುದ್ಧಸದೃಶ ಪ್ರಕರಣವು ಆಶ್ಚರ್ಯ ವನ್ನು ತಂದಿರುವುದು ಸಾಧ್ಯವಿಲ್ಲ. ಅವ ರೆಲ್ಲರೂ ತಮಗೇನೂ ಅಪಾಯ ವಾಗದಷ್ಟು ದೂರದಲ್ಲಿ ಭದ್ರ ವಾಗಿದ್ದು ನಗರದಲ್ಲಿ ನಡೆದ ಲೂಟಿ, ದರೋಡೆ ಮತ್ತು ಘಾತಕಗಳ ನಾಟಕವನ್ನು ನೋಡುತ್ತಾ ಕುಳಿತರು.

ದೊಂಬಿ ನಡೆದ ಆ ದಿನಗಳಲ್ಲಿ ಅತಿ ಹೆಚ್ಚು ನಷ್ಟಕ್ಕೆ ಗುರಿಯಾದವರೆಂದರೆ ಮುಂಬಯಿ ನಗರದ ರಾಜಕೀಯದಲ್ಲಿ ಏನೇನೂ ಆಸಕ್ತಿಯಿಲ್ಲದ ಜನರು! ಕಿರಾ ಣಿ ಅಂಗಡಿಯಾತ ಸಾಮಾನ್ಯ ವ್ಯಾಪಾರಿ ಆಫೀಸಿನ ನೌಕರ, ದಾರಿಹೋಕ ಜನರು, ಪಾಪದ ಹೆಂಗಸರು ಮತ್ತು ಚಿಕ್ಕ ಮಕ್ಕ ಳು ಗೂಂಡಾಗಿರಿಗೆ ಬಲಿಯಾದರು

ಸರಕಾರವು ಇತ್ತು-ಎಲ್ಲಿ? ಭಯಂಕರ ಪಿಶಾಚಿಗೂ ಆಳ ಸಮುದ್ರಕ್ಕೂ ನಡುವೆ! ಏನು ಮಾಡಿದರೂ ಪ್ರಜಾಪ್ರಭುತ್ವದಲ್ಲಿ ಕಷ್ಟ ತಪ್ಪದು. ದೊಂಬಿ ನಡೆಸುವವರ ಮತ್ತು ದೊಂಬಿಗೆ ಪ್ರತ್ಯಕ್ಷ ಹಾಗು ಪ ರೋಕ್ಷವಾಗಿ ಸಹಾಯ ಮತ್ತು ಪ್ರೋ ತ್ಸಾಹನೆಯಿತ್ತವರ ವಿರುದ್ಧ ಸರಕಾರವು ವಜ್ರ ಮುಷ್ಟಿಯ ಕಠಿಣ ಕ್ರಮಗಳನ್ನು ಕೈಗೊಂಡ ಪಕ್ಷದಲ್ಲಿ ರಾಜಕೀಯ ರಂಗದ ಪ್ರತಿ ಪಕ್ಷಗಳಿಗೆ ವಿಶೇಷ ಬೊಬ್ಬೆ ಹೊಡೆ ಯಲು ಸಂದರ್ಭವನ್ನು ಒದಗಿಸಿಕೊಟ್ಟಂತೆ ಮತ್ತು ಅವುಗಳ ಟೀಕೆಯ ಆಯುಧವ ನ್ನು ಹರಿತಗೊಳಿಸಿದಂತೆ ಆಗುತ್ತದೆ! ಉ ಪೇಕ್ಷೆಯಿಂದ ಸರಕಾರವು ವರ್ತಿಸಿದರೆ, ಜನರ ಪ್ರಾಣವನ್ನೂ ಆಸ್ತಿಪಾಸ್ತಿಗಳನ್ನೂ ರಕ್ಷಿಸುವ ತನ್ನ ಆದ್ಯ ಕರ್ತವ್ಯಕ್ಕೆ ಸರಕಾ ರವು ಬಾಹಿರವಾದಂತಾಗುತ್ತದೆ.

ದುರಾದೃಷ್ಟದಿಂದ ನಾವು ರೂಪಿಸಿ ಕೊಂಡಿರುವ ರಾಜಕೀಯ ಪ್ರಣಾಳಿಯಲ್ಲಿ ಪ್ರತಿಪಕ್ಷಗಳ ಧುರೀಣರು ಸರಕಾರಕ್ಕೆ ಧಕ್ಕೆಯನ್ನು ಕೊಡುವುದರಲ್ಲಿಯೇ ಸದಾ ಕಾಲ ಮಗ್ನರಾಗಿರುವ ಹಾಗಾಗಿದೆ—ದೇ ಶವನ್ನು ವಿನಾಶದ ಕಡೆಗೆ ತಮ್ಮ ಕೃತಿಯು ಸಾಗಿಸುವುದೆಂಬ ಅಂಶವನ್ನೂ ಅವರು ಲೆಕ್ಕಿಸುವುದಿಲ್ಲವೆನ್ನುವಂತಾಗಿದೆ. ಇದಕ್ಕೆ ಲ್ಲ ಅವಕಾಶವಿಲ್ಲದಿದ್ದರೆ ಪ್ರಜಾಪ್ರಭುತ್ವ ವು ಅಪಾಯದಲ್ಲಿದೆ ಎಂದು ನಾವೆಲ್ಲ ಬೊ ಬ್ಬೆ ಹೊಡೆಯುತ್ತೇವೆ. ಆದರೆ ನಿಜವಾಗಿ ಆಗ ತಳದಲೆದ್ದು ಕಾಣುವುದೆಂದರೆ ಪ್ರಜಾ ಪ್ರಭುತ್ವಕ್ಕೆ ತಗಲುವ ಅಪಾಯ ಮಾತ್ರ!

ದೇಶದಲ್ಲಿ ಲಭ್ಯವಿರುವ ಶ್ರೇಷ್ಠ ಮೇ ಧಾವಿಗಳಿಂದ ಕೂಡಿದ, ಬಲಿಷ್ಠವೂ ಭದ್ರ ವೂ ಆದ ಕೇಂದ್ರ ಸರಕಾರವೊಂದನ್ನು ರ ಚಿಸುವುದೇ ಇವೆಲ್ಲ ರೋಗಗಳಿಗಿರುವ ಚಿ ಕಿತ್ಸಾಕ್ರಮ. ಪಕ್ಷ ಪ್ರಧಾನ ಸರಕಾರವು ಅಸ್ತಿತ್ವದಲ್ಲಿರುವ ದೇಶಗಳಲ್ಲಿ ಸಹ, ಯು ದ್ಧಕಾಲದ ಆವಶ್ಯಕತೆಗಾಗಿ ಸಮ್ಮಿಶ್ರ ಸರಕಾರವನ್ನು ರಚಿಸುವುದು ಅಪರೂಪವ ಲ್ಲ—ನಮ್ಮ ಅನುಭವದೊಳಗಿನ ಮಾತು.

ಯುದ್ಧ ಕಾಲದಲ್ಲಿ ನಾವು ಒಬ್ಬಿಬ್ಬ ರು ಶತ್ರುಗಳನ್ನು ಮಾತ್ರ ಪ್ರತಿಭಟಿಸಬೇ ಕಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಕಳೆ ದ ಹಲವು ದಶಕಗಳಿಂದ ಇಷ್ಟರದ ಆ ರ್ಥಿಕ ಪ್ರಗತಿಯ ಮಾರ್ಗವನ್ನೇ ಮುಚ್ಚಿ ರುವ ಅನೇಕ ವೈರಿಗಳೊಡನೆ ಸೆಣಸಾಡ ಬೇಕಾಗಿದೆ. ಅಜ್ಞಾನ ಅನಕ್ಷರತೆ, ಅಂಧ ವಿಶ್ವಾಸ, ಜಾತೀಯತೆ ಮತ್ತು ಎಲ್ಲಕ್ಕೂ ಹೆಚ್ಚಾಗಿ “ಸರ್ವರೀತಿಯ” ದಾರಿದ್ರ್ಯಗ ಳೇ ನಮ್ಮ ಶತ್ರುಗಳಾಗಿವೆ. ರಾಜಕೀಯ ವಾಗಿ ನಮಗಿಷ್ಟ ಆತಂಕವೀಗ ಸ್ವಾತಂ ತ್ರ್ಯ ಪ್ರಾಪ್ತಿಯ ಮೆಸೆಯಿಂದ ನಿವಾರಣೆ ಗೊಂಡಿರುವುದರಿಂದ ಎಷ್ಟು ಕಡಿಮೆ ಅವ ಧಿಯಲ್ಲಿ ಸಾಧ್ಯವೋ ಅಷ್ಟು ಬೇಗ ಆರ್ಥಿ ಕ ಸ್ವಾತಂತ್ರ್ಯವನ್ನು ಪಡೆಯುವ ಮಾ ರ್ಗದಲ್ಲಿ ಸಾಗುವುದು ನಮ್ಮ ಸದ್ಯದ ಕೆಲಸ.

ಎಲ್ಲ ರಾಜಕೀಯ ಪಕ್ಷಗಳ ಅಂತಿಮ ಧ್ಯೇಯವು ಈ ಸಾಮಾಜಿಕ ಹಾಗು ಆರ್ಥಿಕ ಸ್ವರೂಪದ ಶತ್ರುಗಳನ್ನು ಜಯಿ ಸುವುದೇ ಆಗಬೇಕು; ದೇಶದಲ್ಲಿರುವ ಪ್ರತಿಯೊಬ್ಬನಿಗೂ ತಿನ್ನಲಿಕ್ಕೂ ಉಣ್ಣ ಲಿಕ್ಕೂ ಕೊರತೆ ಇರಬಾರದು. ಈ ಉದ್ದೇಶವನ್ನು ಸ್ವೀಕರಿಸಿದ ಪಕ್ಷದ ಲ್ಲಿ ಈ ಮಹಾಗುರಿಯ ಸಾಧನಾಮಾರ್ಗ ದ ಕುರಿತಾಗಿ ಕಚ್ಚಾಟ ನಡೆಸುವುದೇಕೆ? ನಮ್ಮ ಈ ಘನತರವಾದ, ಮಹತ್ತರವಾ ದ ಕಾರ್ಯದ ಮುಂದೆ ಕ್ಷುಲ್ಲಕತರಗಳೂ ಭಿನ್ನಾಭಿಪ್ರಾಯಗಳೂ ಚಿಕ್ಕದಾಗು ತ್ತವೆ; ಅರ್ಥಹೀನವೆನಿಸುತ್ತವೆ ಯೋಗ್ಯ ರೊಡನೆ ಕೂಡಿಕೊಂಡು ರಚಿಸಿದ ಸಮ್ಮಿ ಶ್ರ ಸರಕಾರವು ನಿತ್ಯದ ಸಾಮಾನ್ಯ ಕಂ ಪನಗಳಿಗೇನೂ ಬಲಿಯಾಗದೆ ದೇಶದ ಮುಂದಿರುವ ಪ್ರಾಮುಖ್ಯ ಸಮಸ್ಯೆಗಳ ಕಡೆಗೆಯೇ ದೃಷ್ಟಿಯು ಕೇಂದ್ರೀಕೃತವಾ ಗುವಂತೆ ಮಾಡಬಲ್ಲುದು.

ಅಪೇಕ್ಷಿತ ಐಕ್ಯವನ್ನೂ ಭದ್ರತೆಯನ್ನೂ ಸಾಧಿಸಲು ನಮ್ಮ ಘಟನೆಯಲ್ಲಿ ಮಾಡ ಬೇಕಾದ ತಿದ್ದುಪಡಿಗಳೇನು? ಈ ವಿಷ ಯದ ನಿರ್ಧಾರವು ಮೇಲೆ ನಿರೂಪಿಸಿದ ಎಲ್ಲ ಸಂಗತಿಗಳೊಂದಿಗೆ, ಸರ್ವಾಧಿಕಾರ ತ್ವವನ್ನು ನೆಲೆಗೊಳಿಸುವ ಆ ಇನ್ನೊಂದು ಧ್ರುವದ ಹತ್ತಿರ ಸರಿಯುವುದು ಸಹ ಯೋಗ್ಯವಲ್ಲವೆಂಬ ವಿವೇಕದ ಹಿನ್ನೆಲೆಯ ಲ್ಲಿ ಆಗಬೇಕಾಗಿದೆ. ನಮ್ಮ ಇಂದಿನ ಘಟ ನೆಯಲ್ಲಿ ವ್ಯವಹಾರ ಮೂಲ್ಯಕ್ಕಿಂತ ಆದರ್ಶದ ಆಡಂಬರವೇ ಅಧಿಕವೆಂಬು ದನ್ನಂತೂ ಮರೆಯಬಾರದು.

ಆದುದರಿಂದ ಇಂದಿನ ಆದರ್ಶ ಘಟನೆ ಯನ್ನು ಯಶಸ್ವಿಯಾಗಿ ಕಾರ್ಯಾಚರಣೆ ಗಿಳಿಸುವಷ್ಟು ಮತ್ತು ಹಾಗೆ ಪ್ರಜಾಪ್ರ ಭುತ್ವವನ್ನು ಪರಿಪಾಲಿಸುವಷ್ಟು ಉತ್ತ ಮವಾದ ವಾತಾವರಣವು ಜನಮನದಲ್ಲಿ ಯೂ ಸಾಂಪತ್ತಿಕ ಸ್ಥಿತಿಯಲ್ಲಿಯೂ ಉಂ ಟಾಗುವ ವರೆಗೆ ನಾವು ಘಟನೆಗೆ ತಿದ್ದು ಪಡಿಯನ್ನು ಮಾಡುವುದೇ ಹಿತಕರ. ನ ಮ್ಮ ವಿಶಾಲ ಹಿತದೃಷ್ಟಿಯಿಂದ, ಈ ತಿ ದ್ದುಪಡಿಯು ವ್ಯಕ್ತಿ ಸ್ವಾತಂತ್ರ್ಯವನ್ನು ಒಂದು ಮಿತಿಯೊಳಗಿರಿಸುವಂತಿದ್ದರೂ ಸಹ, ನ್ಯಾಗತಿ ಸದಿರಲಾಗದು. ನಾವಿಂದು ಪ್ರಜಾಪ್ರಭುತ್ವದ ಸವಿ ನೋಡುವ ಉ ತ್ಸಾಹದ ಭರದಲ್ಲಿ ಒಂದು ಗಟುಕು ಹೆ ಚ್ಚಾಗಿಯೇ ಕುಡಿದಿದ್ದೇವೆ. ನಮ್ಮ ಪಾಲಿ ಗಿದು ನುಂಗಲಾರದ ತುತ್ತಾಗಿದೆ. ನಾವು ತುತ್ತಿನ ಗಾತ್ರವನ್ನು ನಮ್ಮ ರಾಜಕೀಯ ಜಾಗೃತಿಯ ಮಟ್ಟಕ್ಕೆ ತಕ್ಕಂತೆ ಸದ್ಯ ಸಣ್ಣದು ಮಾಡಿಕೊಳ್ಳೋಣ!

—ಶ್ರೀ ಎಸ್. ಟಿ. ದಲಾಲರ ಲೇಖನದ ಆಧಾರ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ ದ. ಕನ್ನಡ.
ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, UDIPI, S. KANARA.

ಕುಮಾರಿ ಬಿಲ್ಲೆಗಳು
(Govt. Regd.)
ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ
ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ
ಅತ್ಯುತ್ತಮ ಔಷಧಿ. ಬೆಲೆ ರೂ. ೫/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!
P. DEVEE & Co. (N. J.) CALCUTTA—40.
ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ರಶಿಯದ ಸಾಮಾಜಿಕ ವಿಮಾ ಯೋಜನೆ

"ಸೋವಿಯಟ್ ರಶ್ಯದ ನಾಗರಿಕರಿಗೆ, ಮುಪ್ಪಿನ ವಯಸ್ಸಿನಲ್ಲಿಯೂ, ಅಸ್ವಸ್ಥತೆಯ ಅಥವಾ ಅಶಕ್ತತೆಯ ಸಮಯದಲ್ಲಿಯೂ ಕೂಡ, ತಮ್ಮ ನಿರ್ವಹಣೆಯ ಸೌಲಭ್ಯವನ್ನು ಪಡೆಯಲು ಹಕ್ಕು ಉಂಟು.

"ಕಾರಖಾನೆಗಳ, ಕಚೇರಿಗಳ ಕೆಲಸಗಾರರ ಸಾಮಾಜಿಕ ವಿಮೆಯ ವಿಸ್ತೃತಾಭಿವೃದ್ಧಿಯನ್ನು ರಾಜ್ಯದ ವೆಚ್ಚದಿಂದ ಮಾಡುವುದರ ಮೂಲಕವೂ, ಕಾರ್ಮಿಕ ಜನತೆಗಾಗಿ ಏರ್ಪಡಿಸಲಾಗಿರುವ ಉಚಿತ ವೈದ್ಯಕೀಯ ಸೇವೆಯ ವ್ಯವಸ್ಥೆಯ ಮೂಲಕವೂ, ಮತ್ತು ಕಾರ್ಮಿಕ ಜನತೆಯ ಉಪಯೋಗಕ್ಕಾಗಿ ಇರುವ ಆರೋಗ್ಯ ಧಾಮಗಳ ವಿಸ್ತೃತವಾದ ಜಾಲಬಂಧ (ನೆಟ್‌ವರ್ಕ್) ವ್ಯವಸ್ಥೆಯಿಂದಲೂ (ಕಾರ್ಮಿಕ ಜನತೆಯ) ಈ ಹಕ್ಕು ಸುರಕ್ಷಿತವಾಗಿ ಖಚಿತಗೊಳಿಸಲ್ಪಟ್ಟಿದೆ"—ಎಂದು ಸೋವಿಯಟ್ ಒಕ್ಕೂಟದ ಘಟನೆಯು ಹೇಳುತ್ತದೆ.

ಸೋವಿಯಟ್ ಒಕ್ಕೂಟದಲ್ಲಿ ಸಾಮಾಜಿಕ ಭದ್ರತೆಯ ರೂಪಗಳು ಈ ಕೆಳಗೆ ನಮೂದಿಸಲ್ಪಟ್ಟಂತಿವೆ—ನಗದು (ಸೌಲಭ್ಯಗಳು, ನಿವೃತ್ತಿ ವೇತನಗಳು), ವೃತ್ತಿ ಶಿಕ್ಷಣ ಮತ್ತು ಪುನಃ ಶಿಕ್ಷಣ, ವಿಶ್ರಾಂತಿ ನಿಲಯಗಳು, ಆರೋಗ್ಯಧಾಮಗಳು, ತರುಣರ ಶಿಬಿರಗಳು ಮತ್ತು ಅಶಕ್ತರಿಗಾಗಿ ಪೋಷಣ ಗೃಹಗಳು.

ಸುಧಾರಿಸಲಾದ ಜೀವನ ಪರಿಸ್ಥಿತಿಗಳಿಗೋಸ್ಕರವಾಗಿಯೂ, ಕಾರಖಾನೆ-ಕಚೇರಿ ಕೆಲಸಗಾರರ ಅತ್ಯುನ್ನತವಾದ ಭೌತಿಕ ಸಾಂಸ್ಕೃತಿಕ ಪ್ರಮಾಣಗಳಿಗೋಸ್ಕರವಾಗಿಯೂ, ಸಾಮಾಜಿಕ ವಿಮೆಯು ರಶ್ಯದಲ್ಲಿ ಒಂದು ಮಹತ್ವಪೂರ್ಣವಾದ ಅಂಶವಾಗಿದೆ. ಮುಪ್ಪಿನ ವಯಸ್ಸಿನಲ್ಲಿಯೂ, ದೀರ್ಘಕಾಲೀನ ಶ್ರಮದ ತರುವಾಯವೂ, ಅಶಕ್ತ ಪರಿಸ್ಥಿತಿಯಲ್ಲಿಯೂ, ಸಂಪಾದನೆಯನ್ನು ಮಾಡುತ್ತಿದ್ದ ಪೋಷಕರನ್ನು ಕಳೆದುಕೊಂಡಾಗಲೂ, ಅಸ್ವಸ್ಥತೆಯ ಕಾಲದಲ್ಲಿಯೂ ಭೌತಿಕ ಭದ್ರತೆಯನ್ನೂ; ತಾಯಿ ಮತ್ತು ಮಗುವಿಗಾಗಿ ಸುರಕ್ಷಿತತೆಯ ಭರವಸೆಯನ್ನೂ; ಆರೋಗ್ಯಧಾಮದಲ್ಲಿ ಆರೋಗ್ಯ ಚಿಕಿತ್ಸೆಗಳು, ವಿರಾಮಧಾಮಗಳಲ್ಲಿ ವಸತಿ, ಇತ್ಯಾದಿಗಳನ್ನೂ—ಸಾಮಾಜಿಕ ವಿಮಾ ಪದ್ಧತಿಯು ಒಳಗೊಂಡಿದೆ.

ಆಯವ್ಯಯ ಪತ್ರಿಕೆಯಲ್ಲಿ ಪ್ರತ್ಯೇಕಿಸಿಡಲಾದ ನಿಧಿಗಳಿಂದ ಇವುಗಳ ನಿರ್ವಹಣೆಯ ಖರ್ಚು ಸರಕಾರದಿಂದ ಒದಗಿಸಲ್ಪಡುತ್ತದೆ. ಈ ಉದ್ದೇಶದ ಸಲುವಾಗಿ ಕಾರ್ಮಿಕರು ತಮ್ಮ ಗಳಿಕೆಯ ಹಣದಿಂದ ಏನೂ ಸಲ್ಲಿಸುತ್ತಿಲ್ಲ.

ಸಾಮಾಜಿಕ ವಿಮೆಗೆ ಸಂಬಂಧಪಟ್ಟ ಪ್ರತಿಯೊಂದು ವಿಷಯದ ವ್ಯವಸ್ಥೆಯೂ ಕಾರ್ಮಿಕರ ಸಂಘಗಳಿಗೆ ಒಪ್ಪಿಸಿಕೊಡಲ್ಪಟ್ಟಿದೆ. ಈ ನಿಧಿಗಳು—ಇವು ಮೊತ್ತದಲ್ಲಿ ನೂರಾರು ಕೋಟಿ ರೂಬಲ್ಲುಗಳಷ್ಟಾಗುತ್ತವೆ—ಈ ಸಂಘಟನೆಗಳಿಂದಲೇ ಚಲಾಯಿಸಲ್ಪಡುತ್ತವೆ.

ವಿಶ್ರಾಂತಿ ಗೃಹಗಳನ್ನೂ, ಆರೋಗ್ಯಧಾಮಗಳನ್ನೂ, ಶಿಶುಪೋಷಣಾಲಯಗಳನ್ನೂ, ಶಿಶುವಿಹಾರಗಳನ್ನೂ, ಕ್ರೀಡಾಮಂದಿರಗಳನ್ನೂ, ಪುಸ್ತಕಾಲಯಗಳನ್ನೂ ಮತ್ತು ವಿಹಾರೋದ್ಯಾನಗಳನ್ನೂ ಕಾರ್ಮಿಕ ಸಂಘಗಳು ಕಟ್ಟಿಸುತ್ತವೆ, ಅವುಗಳನ್ನು ಪೀಠೋಪಕರಣಗಳಿಂದ ಸಜ್ಜುಗೊಳಿಸುತ್ತವೆ. ಕಾರಖಾನೆ ಮತ್ತು ಕಚೇರಿ ಕಾರ್ಮಿಕರ ಉನ್ನತ ಶಿಕ್ಷಣ ಪ್ರಾಪ್ತಿಗೋಸ್ಕರವಾಗಿಯೂ, ಯಾಂತ್ರಿಕ ಕೌಶಲ್ಯದ ತರಬೇತಿಗೋಸ್ಕರವಾಗಿಯೂ, ಅವರ ಸಾಂಸ್ಕೃತಿಕ ಪ್ರಮಾಣವನ್ನು ಅಭಿವೃದ್ಧಿಗೊಳಿಸುವುದಕ್ಕಾಗಿಯೂ ಕೂಡ, ಅವು ಖರ್ಚಿನ ವ್ಯವಸ್ಥೆಯನ್ನು ಮಾಡುತ್ತವೆ.

ಇದಿಷ್ಟು ಸೋವಿಯಟ್ ಒಕ್ಕೂಟದಲ್ಲಿನ ಸಾಮಾಜಿಕ ವಿಮೆಯ ನಿಬಂಧನೆಯ ಮುಖ್ಯಾಂಶ. ಸೋವಿಯಟ್ ಒಕ್ಕೂಟದ ನಾಗರಿಕರಲ್ಲಿ ಪ್ರತಿಯೊಬ್ಬನೂ, ತನ್ನ ಭವಿಷ್ಯತ್ತಿನ ಬಗ್ಗೆ ನಿಶ್ಚಿಂತೆಯಿಂದಿರುತ್ತಾನೆ, ಏಕೆಂದರೆ, ಸರಕಾರವೇ ತನ್ನ ಯೋಗಕ್ಷೇಮದ ಬಗ್ಗೆ ಆಸಕ್ತಿಯನ್ನು ವಹಿಸುತ್ತಿದೆ ಎಂಬುದನ್ನೂ ತನ್ನ ಆಪತ್ತಿನ ದಿನಗಳಲ್ಲಿ ತನಗೆ ಸಹಾಯವು ದೊರೆಯದೆ ಹೋಗುವುದಿಲ್ಲ

ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರಿಯವರಿಗೆ ಗವರ್ನರ್ ಜನರಲ್ ಸ್ಥಾನವನ್ನು ಬಿಟ್ಟು ಕೊಟ್ಟು ಸ್ವತಂತ್ರ ಭಾರತದ ಘಟನೆಯನ್ನು ತಯಾರಿಸಲು ಡಾ. ರಾಜೇಂದ್ರ ಪ್ರಸಾದರ ಅಧ್ಯಕ್ಷತೆಯಲ್ಲಿ ಸಮಿತಿಯೊಂದು ಕೆಲಸಮಾಡುತ್ತಿರುವುದನ್ನು ನೋಡಿ ತೃಪ್ತಿ ಪಟ್ಟು ತೆರಳಿದ್ದ ಲಾರ್ಡ್ ಮೌಂಟ್ ಬೇಟನ್ ಅವರು ಈಚೆಗೆ ಒಂದು ವಾರದ ಸಂದರ್ಶನಾರ್ಥ ಭಾರತಕ್ಕೆ ಆಂಗ್ಲ ಸಾಮ್ರಾಜ್ಯದ ಮುಖ್ಯ ನೌಕಾಧಿಪತಿಯ ನೆಲೆಯಿಂದ ಪತ್ನಿ ಸಹಿತರಾಗಿ ಬಂದರು. ರಾಜಧಾನಿಯಲ್ಲಿ ರಾಷ್ಟ್ರಾಧ್ಯಕ್ಷರೊಡನೆ ಅವರು ಮಾತುಕತೆ ನಡೆಸುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು. ಸ್ವತಂತ್ರ ಭಾರತದ ನೌಕಾಸೇನೆಯ ಅಭಿವೃದ್ಧಿಯ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸುತ್ತಾ ಮೌಂಟ್ ಬೇಟನ್ ತಮ್ಮ ಸರ್ವಸಹಕಾರದ ಭರವಸೆಯನ್ನು ನೀಡಿ ಹೋಗಿದ್ದಾರೆ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಆರ್ಯ ಸಂಸ್ಕೃತಿ—

(ಶ್ರೀ ಪರಮಹಂಸ ಶ್ರೀ ಶ್ರೀಧರ ಸ್ವಾಮಿಗಳವರ ದಿವ್ಯ ಸಂದೇಶ) ಪ್ರಕಾಶಕರು: ಶ್ರೀ ಶ್ರೀಧರ ಭಕ್ತ ಮಂಡಲಿ, ಸಾಗರ. ಬೆಲೆ: ?

ತಮ್ಮ ಕಳೆದ ಚಾತುರ್ಮಾಸ ದೀಕ್ಷೆಯ ಅಂತ್ಯದಲ್ಲಿ ಶ್ರೀ ಶ್ರೀಧರ ಸ್ವಾಮಿಗಳವರು ಅನುಗ್ರಹಿಸಿದ ದಿವ್ಯ ಸಂದೇಶವನ್ನು ಮೇಲಿನ ಪುಸ್ತಕದ ರೂಪದಲ್ಲಿ ಅವರ ಭಕ್ತ ಮಂಡಲಿಯು ಪ್ರಕಟಿಸಿದೆ. ಶಿಥಿಲವಾಗುತ್ತಾ ನಡೆದಿರುವ ಹಿಂದೂ ಧರ್ಮದ ಪುನರುಜ್ಜೀವನ ಕಾರ್ಯದಲ್ಲಿ ಒಂದು ಮಹತ್ವದ ಹೆಜ್ಜೆಯನ್ನು ಮುಂದಿಟ್ಟಿದೆ. ಏಕೆಂದರೆ, ಈ ಪುಸ್ತಕದಲ್ಲಿರುವ ವಿಷಯಗಳು ಹಿಂದೂಮತಾವಲಂಬಿಗಳ ಸ್ವಾಭಿಮಾನವನ್ನು ಜಾಗೃತಗೊಳಿಸುವಂತಿವೆ; ಅವರ ಆತ್ಮ ವಿಶ್ವಾಸವನ್ನು ಹೆಚ್ಚು ದೃಢವಾಗಿ ಮಾಡುವಂತಿವೆ; ಅವರಿಗೆ ಸ್ವಸ್ವರೂಪದ ದರ್ಶನವಾಗುವಂತೆ ಮಾಡುವಷ್ಟು ಪ್ರಭಾವಿಯಾಗಿವೆ. ಪ್ರತಿಯೊಬ್ಬ ಹಿಂದುವೂ ಅವಶ್ಯವಾಗಿ ತಿಳಿದಿರಲೇ ಬೇಕಾದ ಮತ್ತು ಹಿಂದೂ ಮತದಲ್ಲಿ ಆಸಕ್ತರಾದ ಎಲ್ಲರೂ ಮನನ, ಪಠಣಗಳಿಂದ ಲಾಭ ಹೊಂದಬಹುದಾದ ಅಮೂಲ್ಯ ವಿಷಯಗಳು ಈ ಪುಸ್ತಕದಲ್ಲಿ ಸಾಂದರ್ಭಿಕ ಶಾಸ್ತ್ರಾಧಾರ ಸಹಿತವಾಗಿ ಸರಳವೂ ಸುಲಭ ಗ್ರಾಹ್ಯವೂ ಆದ ಭಾಷಾ ಶೈಲಿಯಲ್ಲಿ ನಿರೂಪಿಸಲಾಗಿವೆ. ನಿತ್ಯ ವ್ಯವಹಾರದಲ್ಲಿಟ್ಟುಕೊಳ್ಳಬೇಕಾದ ಸಾಮಾನ್ಯ ನಡವಳಿಕೆಗಳಿಂದ ಹಿಡಿದು ಮೋಕ್ಷಸಾಧನೆಯ ಗಹನ ವಿಷಯದವರೆಗಿನ ಎಲ್ಲ ಕರ್ಮಾಂಗಗಳಿಗೂ ಸಂಬಂಧಿಸಿ ಇಲ್ಲಿಯ ವಿವರಣೆ ಸಾಗಿದೆ. ವಿಶ್ವಧರ್ಮವೊಂದಿರುವುದಾದರೆ ಅದು ಆರ್ಯರಿಂದ ಪ್ರತಿಪಾದಿತವಾದ ಹಿಂದೂ ಧರ್ಮವೇ ಎಂಬ ಶ್ರೀ ಶ್ರೀಧರ ಸ್ವಾಮಿಗಳ ಅಭಿಪ್ರಾಯವು ಬಹಳ ಸಮರ್ಥವಾಗಿ ಪುಸ್ತಕದಲ್ಲಿ ವ್ಯಕ್ತವಾಗಿದೆ. ಅವರು ಆಂಗ್ಲ ಭಾಷೆಯ ಗ್ರಂಥಗಳನ್ನೂ ಉದ್ಧರಿಸಿ ತಮ್ಮ ಪಕ್ಷದ ಮಂಡನೆಯನ್ನು ಮಾಡಲು ಹಿಂಜರಿದಿಲ್ಲ. ಪುಸ್ತಕದ ನಾಲ್ಕು ಮುಖ್ಯ ಭಾಗಗಳಲ್ಲಿ ಕೊನೆಯದು ಭಾರತದ ಇಂದಿನ ಪರಿಸ್ಥಿತಿಗೆ ಸಂಬಂಧಿಸಿದ ವಿಷಯಗಳ ಕುರಿತು ಸ್ವಾಮಿಗಳ ದೃಷ್ಟಿಕೋಣ ಹೇಗಿದೆ ಎಂಬುದನ್ನು ತಿಳಿಸುತ್ತದೆ: ವಿಧವಾ ವಿವಾಹ, ಪುನರ್ವಿವಾಹ, ಹರಿಜನೋದ್ಧಾರ, ಸ್ತ್ರೀ ಪುರುಷ ಸಹಚರ್ಯ ಮತ್ತು ಸಹಶಿಕ್ಷಣ ಇತ್ಯಾದಿ ಜ್ವಲಂತ ಪ್ರಶ್ನೆಗಳ ವಿಷಯದಲ್ಲಿ ಇಂದಿನ ಸುಧಾರಕರು ತಳೆದಿರುವ ನಿಲುವೆಯನ್ನು ಸ್ವಾಮಿಗಳವರು ಒಪ್ಪುವುದಿಲ್ಲ. ಮಗಳನ್ನು ಮಗನಂತೆಯೇ ತಂದೆಯ ಉತ್ತರಾಧಿಕಾರಿಯಾಗಿ ಮಾಡುವುದೂ ಸ್ವಾಮಿಗಳ ದೃಷ್ಟಿಯಲ್ಲಿ ಧರ್ಮ ವಿರುದ್ಧ. ತಮ್ಮ ತೀರ್ಮಾನಕ್ಕೆ ಶಾಸ್ತ್ರ, ಸ್ಮೃತಿ ಮತ್ತು ಸೂಕ್ತಿಗಳ ಧಾರ್ಮಿಕ ಆಧಾರಗಳನ್ನು ಸ್ವಾಮಿಯವರು ಇತ್ತು ಕೊಟ್ಟಿದ್ದಾರೆ; ಮತ್ತು ಅವರು ಬಹಳ ಬಲವಾಗಿಯೂ ಸತ್ವಯುತವಾಗಿಯೂ ತನ್ನ ನಿಲುವೆಯನ್ನು ಸಮರ್ಥಿಸಿಕೊಂಡಿದ್ದಾರೆ. ಸುಧಾರಕರು ಸ್ವಾಮಿಗಳ ವಿರೋಧದ ಅಂತರ್ಯವನ್ನೂ ಅದರ ತಿರುಳನ್ನೂ ತಿಳಿದಿರುವರಾದರೆ ಆತ್ಮ ನಿರೀಕ್ಷಣೆ ಮಾಡಿಕೊಳ್ಳುವ ಅವಕಾಶವೊಂದು ಬಂದೊದಗುತ್ತದೆ; ವಿಷ್ಣು ಜನರ ಗಮನಕ್ಕೆ ಬಾರದೆಯೇ ಹೋಗಿರಬಹುದಾದ ಸಂಗತಿಗಳು ಸ್ವಾಮಿಗಳ ಪ್ರವಚನದಿಂದ ವೇದ್ಯವಾಗುತ್ತವೆ. ಹೀಗೆ ಒಟ್ಟಿನಲ್ಲಿ ಈ ಪುಸ್ತಕವು ಶ್ರದ್ಧಾವಂತ ಹಿಂದುಗಳಿಗೆ ಅನುಷ್ಠಾನ ವೇದಾಂತವನ್ನು ಉಪದೇಶಿಸುತ್ತದೆ, ಸುಧಾರಕರ ಕಣ್ಣಿಗೆ ಅಂಜನವನ್ನು ಹಾಕಲೇಳುತ್ತದೆ.

ಎಂಬುದನ್ನೂ ಪ್ರತಿಯೊಬ್ಬ ನಾಗರಿಕನೂ ತಿಳಿದಿದ್ದಾನೆ. ಆದರೆ ಅಲ್ಲಿ ವ್ಯಕ್ತಿಗೆ ಪ್ರಜಾಪ್ರಭುತ್ವಾತ್ಮಕ ಪದ್ಧತಿಯಂತೆ ಸಲ್ಲುವ ಗೌರವ ಸಿಗುತ್ತಿಲ್ಲವೆಂಬುದನ್ನು ಭಾರತೀಯ ಓದುಗರು ಮರೆಯಲಾಗದು.

ಲಘು ಪರಿಚಯ

● ಉಡುಪಿಯ ಮಹಾತ್ಮಾಗಾಂಧಿ ಸ್ಮಾರಕ ಕಾಲೇಜಿನ ಆರನೇ ವಾರ್ಷಿಕಾಂಕ (೧೯೫೬) ಬಹಳ ಸುಂದರವಾಗಿ ಮುದ್ರಣಗೊಂಡು ಆಕರ್ಷಕ ರೀತಿಯಲ್ಲಿ ಪ್ರಕಟವಾಗಿ ತನ್ನ ಎಂದಿನ ವೈಶಿಷ್ಟ್ಯವನ್ನು ಕಾಪಾಡಿಕೊಂಡು ಬಂದಿದೆ. ಇಲ್ಲಿ ಲೇಖನಾದಿಗಳನ್ನು ಬರೆದವರಲ್ಲಿ ಹೆಚ್ಚಿನವರು ವಿದ್ಯಾರ್ಥಿಗಳಾಗಿದ್ದರೂ ಸಹ ಅವೆಲ್ಲವೂ ವಿದ್ವತ್ಪೂರ್ಣವಾಗಿವೆ: ವಿಚಾರ ಪ್ರಚೋದಕವಾಗಿವೆ. ಇಂಗ್ಲಿಷ್, ಕನ್ನಡ, ಸಂಸ್ಕೃತ ಮತ್ತು ಹಿಂದೀ ವಿಭಾಗಗಳೆಲ್ಲವಕ್ಕೂ ಈ ಮಾತು ಅನ್ವಯಿಸುತ್ತದೆ. ಕಾಲೇಜಿನ ಚಟುವಟಿಕೆಯ ಸಂಪೂರ್ಣ ಪರಿಚಯ ಮಾಡಿಕೊಡುವ ಚಿತ್ರಗಳೂ ವರದಿಯೂ ವಾರ್ಷಿಕಾಂಕದಲ್ಲಿವೆ.

❀ ಮೊನ್ನೆಯಷ್ಟೆ ಸುವರ್ಣಮಹೋತ್ಸವವನ್ನು ಆಚರಿಸಿದ ದಿ ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನ್, ಲಿಮಿಟೆಡ್, ಎಂಬೀ ಸಂಸ್ಥೆಯು ರಾಷ್ಟ್ರಾಭಿವೃದ್ಧಿಗೆ ತಾನು ಸಲ್ಲಿಸಿದ ಸೇವೆಯ ದಾಖಲೆಗಳನ್ನೊಳಗೊಂಡ ಒಂದು ಕೈಪಿಡಿಯನ್ನು "Bank Serves the Nation" ಎಂಬ ಹೆಸರಿನಲ್ಲಿ ಪ್ರಕಟ

(೯ನೇ ಪುಟ ನೋಡಿರಿ)

(೧ನೇ ಪುಟದಿಂದ)

ಗೊಂಡು ರಾಷ್ಟ್ರದ ಭವಿಷ್ಯವನ್ನು ಕೈಗೆತೆಗೆದುಕೊಳ್ಳಲಿರುವ ಇಂದಿನ ವಿದ್ಯಾರ್ಥಿಗಣದ ಯೋಗಕ್ಷೇಮದಲ್ಲಿ ಆಸಕ್ತಿ ಹೊಂದಿರುವ ಎಲ್ಲರೂ ಈ ಸಮಸ್ಯೆಯನ್ನು ಕೂಲಂಕಷವಾಗಿ ವಿಮರ್ಶಿಸುವುದು ಸಹ ಇಷ್ಟವಾಗಿದೆ.

ಪತ್ರಿಕೆಗಳೂ ಸಾರ್ವಜನಿಕ ಸಂಸ್ಥೆಗಳೂ ಶಾಸನ ಸಭೆಗಳೂ ಈ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕು. ಸಂಪಾದಕರುಗಳೂ ಪತ್ರಿಕಾಲೇಖಕರೂ ಅವಕಾಶ ದೊರೆತಾಗಲೆಲ್ಲ ಮಾನ ಮರ್ಯಾದೆಗಳ ಮತ್ತು ನೀತಿ-ಸೌಜನ್ಯಗಳ ವಿಷಯದಲ್ಲಿ ಜನಕ್ಕೆ ತಿಳುವಳಿಕೆಕೊಡುತ್ತಿರಬೇಕು. ಅಂಧ ವಿಶ್ವಾಸಗಳನ್ನು ಖಂಡಿಸುವ ಭರದಲ್ಲಿ ಯಾರೂ ಶಿಷ್ಟ ಸಂಪ್ರದಾಯಗಳ ಎಲ್ಲೆಯನ್ನು ಮೀರಿ ಅಸಭ್ಯ ವರ್ತನೆಯನ್ನು ಪ್ರೋತ್ಸಾಹಿಸಲು ಹೋಗಬಾರದು.

ದೇಶದ ಯುವಜನರ ನಡತೆಯ ಈ ವಿಷಯವು ಯಾರೋ ಕೆಲವು ವ್ಯಕ್ತಿಗಳ ಸ್ವಂತ ಜೀವನಕ್ಕೆ ಮಾತ್ರವೇ ಸಂಬಂಧಪಟ್ಟದ್ದಲ್ಲ. ಒಟ್ಟು ಸಮಾಜದ ಶೀಲಕ್ಕೂ ನಿತ್ಯ ಘಟನೆಗಳಿಗೂ ಸಂಬಂಧಪಟ್ಟದ್ದು. ಅದು ಆಟವರಿಂದ ಸರ್ವರೂ ಈ ವಿಷಯದಲ್ಲಿ ಶ್ರದ್ಧಾವಂತರಾಗಬೇಕು—ಎಂದು ಒತ್ತಿಯೊತ್ತಿ ಹೇಳಬಿಚ್ಛಿಸುತ್ತೇವೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨-೦-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty, at the Navayuga Press, Udipi S. India

REGD. NO. M. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 10—5—1956

ಸಂಚಿಕೆ ೩೬
NO. 36

ಮದ್ರಾಸು ಶಾಸನಾಂಗದ ಮೇಲ್ಮನೆಯ ಸದಸ್ಯರಾದ ಶ್ರೀ ಕೆ. ಬಾಲಸುಬ್ರಮಣ್ಯ ಅಯ್ಯರರ ಹೆಸರಿನಲ್ಲಿ ಒಂದು ಖಾಸಗಿ ಮಸೂದೆಯು ಸರಕಾರದ ಗಜೆಟಿನಲ್ಲಿ ಅಧಿಕೃತ ರೀತಿಯಲ್ಲಿ ಈ ತಿಂಗಳಾದಿಯಲ್ಲಿ ಪ್ರಕಟವಾಗಿದೆ. ಸಾರ್ವಜನಿಕರ ಅವಗಾಹನೆಗಾಗಿ ಪ್ರಚುರಪಡಿಸಲಾದ ಈ ಮಸೂದೆಯ ಹೆಸರು "ಮದ್ರಾಸ್ ಪ್ರೊಹಿಬಿಶನ್ ಆಫ್ ಡಿಫೇಸಿಂಗ್ ಆಫ್ ವಾಲ್ಸ್ ಎಂಡ್ ಡಿಸ್ಪ್ಲೇ ಆಫ್ ಪೋಸ್ಟರ್ಸ್ ಆಕ್ಟ್ ೧೯೫೬" ಎಂದಿದೆ. ಈ ವಿಧೇಯಕದ ಮೇಲೆ ಚರ್ಚೆ ನಡೆದು ಈ ಬಗೆಯ ಶಾಸನವನ್ನು ತರಬೇಕೆ, ಬೇಡವೆ ಎಂಬ ವಿಚಾರ ಶಾಸನಾಂಗದ ಸಮ್ಮತಿಯಿಂದ ಇನ್ನು ತೀರ್ಮಾನವಾಗಬೇಕಾಗಿದೆ. ಆದಾಗ್ಯೂ ಒಂದು ವಿಷಯವನ್ನು ನಾವು ಪ್ರಕೃತ ಪರಿಸ್ಥಿತಿಯಲ್ಲಿ ಈ ಮಸೂದೆಯ ಕುರಿತು ಹೇಳಬಹುದು—ಅದೇನೆಂದರೆ, ಈ ಮಸೂದೆಯು ಪೇಟೆಯ ಜನರಲ್ಲಿ ವ್ಯಾಪಕವಾಗಿರುವ ದುಷ್ಟ ಹವ್ಯಾಸ ಅಥವಾ ಅನಪೇಕ್ಷಣೀಯ ಚಪಲವೊಂದರ ನಿಯಂತ್ರಣದ ಕುರಿತು ಆಲೋಚಿಸುವ ಮನೋಭಾವವನ್ನು ಜನರಲ್ಲಿ ಮೂಡಿಸುವಷ್ಟು ಸಮರ್ಥವಾಗಿದೆ.

ಮಸೂದೆಯ ಉದ್ದೇಶ ಮತ್ತು ಕಾರಣಗಳನ್ನು ಹೀಗೆ ವಿವರಿಸಲಾಗಿದೆ: "ಇತ್ತೀಚೆಯ ವರ್ಷಗಳಲ್ಲಿ ಬೀದಿ ಮತ್ತು ಮಾರ್ಗಗಳಿಗೆ ಎದುರಾಗಿರುವ ಗೋಡೆಗಳ ಮೇಲೆ—ಅವು ಸಾರ್ವಜನಿಕ ಸಂಸ್ಥೆಗಳ ಹಿತಾಸಕ್ತಿಗಿರಲಿ, ಅಥವಾ ಖಾಸಗಿ ಜನರಿಗೇ ಸೇರಿರಲಿ—ಜಾಹೀರಾತಿನ ಉದ್ದೇಶದಿಂದ ಕೂಡಿದ ಪ್ರಕಟಣೆಗಳನ್ನು ಪೋಸ್ಟರುಗಳ ರೂಪದಲ್ಲಿ ಅಂಟಿಸುವ ಹವ್ಯಾಸವು ಬಹಳ ಹೆಚ್ಚಿಕೊಂಡಿದೆ; ಮತ್ತು ಆಸ್ತಿಪಾಸ್ತಿಗಳನ್ನು ಪಡೆದಿರುವ ಸಾರ್ವಜನಿಕ ಸಂಸ್ಥೆ ಹಾಗು ಖಾಸಗಿ ವ್ಯಕ್ತಿಗಳಿಗೆ ಕ್ರೋಧೆಯನ್ನುಂಟು ಮಾಡುವಷ್ಟು ಹೆಚ್ಚಾಗಿ ಗೋಡೆಗಳ ಅಂದ ಕೆಟ್ಟಿದೆ. ಈ ಬಗೆಯ ಕಾರ್ಯಗಳನ್ನು ಪ್ರತಿಬಂಧಿಸುವುದು ಅವಶ್ಯವಿದೆ. ಚಲಚ್ಚಿತ್ರ ಪ್ರದರ್ಶನ ಮಂದಿರಗಳ ಮತ್ತು ನಾಟಕಾದಿಗಳನ್ನು ಅಭಿನಯಿಸಲು ಯೋಗ್ಯವಾದ ಸಭಾಸದನಗಳ ಪಾಲಕರು ಸಹ ವಿಶೇಷವಾಗಿ ಇತ್ತೀಚೆಯ ವರ್ಷಗಳಲ್ಲಿ ಅನಾವಶ್ಯಕವಾಗಿ ವಿಶಾಲವಾದ ಮತ್ತು ನೋಡಲು ಅಷ್ಟೊಂದು ಉಚಿತವಲ್ಲದ ಪೋಸ್ಟರುಗಳನ್ನು ಹಚ್ಚುತ್ತಿರುವುದು ಕಂಡು ಬಂದಿದೆ. ಇವು ಸಾರ್ವಜನಿಕ ಸಭ್ಯತೆಯನ್ನು ಭಂಗಿಸುವುದಷ್ಟೇಯಲ್ಲ, ಇವುಗಳನ್ನು ನೋಡುವ ಕುತೂಹಲದಿಂದ ಬೀದಿಗಳಲ್ಲಿ ಜನರು ಸೇರಿಯುವ ದೆಸೆಯಿಂದಾಗಿ ವಾಹನಾ

ಗೋಡೆಗಳ ಹಣೆಬರಹ!

ದಿಗಳ ಓಡಾಟಕ್ಕೆ ಅಡ್ಡಿಯುಂಟಾಗುವಂತೆ ಸಹ ಇವು ಮಾಡುತ್ತವೆ. ಹೀಗೆ ಈ ಬಗೆಯ ಜಾಹೀರಾತುಗಳು ಸಂಬಂಧಪಟ್ಟ ನಗರ ಅಥವಾ ಪೇಟೆಯ ಅಂದಚಂದವನ್ನು ಕೆಡಿಸುವುದಲ್ಲದೆ, ರಾಜ್ಯದ ಪ್ರಜೆಗಳ ದೃಷ್ಟಿಯಲ್ಲಿಯೂ ಹೊರಗಿನವರ ದೃಷ್ಟಿಯಲ್ಲಿಯೂ ಸಾರ್ವಜನಿಕ ಸಭ್ಯತೆಯನ್ನು ಹಾಳುಗೆಡವುತ್ತವೆ. ಇಂಥ ಅಭ್ಯಾಸಗಳನ್ನು ಇನ್ನು ಮುಂದೆಯಾದರೂ ನಿಲ್ಲಿಸುವುದು ಅಪೇಕ್ಷಣೀಯವೆಂದು ಭಾವಿಸಲಾಗಿದೆ."

ಶ್ರೀ ಅಯ್ಯರರು ವಿಲಕ್ಷಣವಾದ ಒಂದು ಕೆಟ್ಟ ಅಭ್ಯಾಸದ ಕಡೆಗೆ ನಮ್ಮ ಗಮನವು ಹರಿಯುವಂತೆ ಮಾಡಿದ್ದಾರೆ. ಯಾವ ಪಟ್ಟಣವನ್ನು ಬೇಕಾದರೆ ತೆಗೆದುಕೊಳ್ಳಲಿ, ಅಲ್ಲಿ ಬೀದಿಗೆದುರಾಗಿರುವ ಗೋಡೆಯು ತುಂಬ ನಾನಾ ಬಗೆಯ ಜಾಹೀರಾತುಗಳು ಹಚ್ಚಲ್ಪಟ್ಟಿರುವುದನ್ನು ನಾವು ಕಾಣಬಹುದು. ಜನಸಂಚಾರ ಅಥವಾ ವಾಹನಾದಿಗಳ ಓಡಾಡ ಹೆಚ್ಚಿರುವಲ್ಲೆಲ್ಲ ಹಚ್ಚಲ್ಪಡುವ ಜಾಹೀರಾತುಗಳ ಪ್ರಮಾಣವೂ ಅತಿ ಹೆಚ್ಚು. ಜನರ ಗಮನವನ್ನು ವಿಶಿಷ್ಟ ವಿಷಯವೊಂದರ ಕಡೆಗೆ ಆಕರ್ಷಿಸುವುದೇ ಈ ಜಾಹೀರಾತುಗಳ ಮುಖ್ಯೋದ್ದೇಶ. ಆದರೆ ಅದರಿಂದಾಗುವ ಕೆಡುಕುಗಳ ಕಡೆಗೆ ಜಾಹೀರಾತಿನ ಪ್ರಕಟಣೆಯನ್ನು ಹಚ್ಚುವವರು ಏನೇನೂ ಗಮನವನ್ನು ಕೊಡುವುದಿಲ್ಲ. ಪ್ರತಿನಿತ್ಯವೂ ನೂರಾರು ಏಣಿಗಳನ್ನು ಒಂದು ಗೋಡೆ ಮೇಲೆ ಏರಿಸಿ, ಪ್ರಕಟಣೆಗಳನ್ನು ಅಂಟಿಸುವ ಹಾಗು ಹಳೆಯದನ್ನು ತೆಗೆಯುವ ಕೆಲಸ ನಡೆದರೆ, ಒಂದು ಮಣ್ಣಿನ ಗೋಡೆಯು ಎಷ್ಟು ಸಮಯದ ವರೆಗೆ ತಾಳೀತು? ಅದರ ಮಣ್ಣು ಎದ್ದು ಹೋದರೆ ಆಶ್ಚರ್ಯವಿಲ್ಲ! ಅಂಥ ಮನೆಯ ಅಥವಾ ಕಟ್ಟಡದ ಒಡೆಯರಿಗೆ ಆಗುವ ಹಾನಿಗೆ ಹೊಣೆಯಾರು? ಎಲ್ಲ ಮನೆಯ ಓರಣ ಮತ್ತು ಸೌಂದರ್ಯವನ್ನು ಕೆಡಿಸಿದರೆ, ಪೇಟೆಯಲ್ಲಿ ತಿರುಗಾಡುವ ಜನರ ಸದಭಿರುಚಿಯೂ ನಷ್ಟವಾಗಲಾರದೆ? ಹೊರತೋರಿಕೆಗೆ ಇದೇನೂ ಹಾನಿಕರವಾದ ಕೆಲಸವಾಗಿ ಕಾಣುವುದಿಲ್ಲ—ಆದರೆ ಸ್ವಲ್ಪ ಆಳವಾಗಿ ವಿಚಾರಿಸಿದರೆ ಸಾರ್ವಜನಿಕರ ಮೇಲೆ ಈ ದುಷ್ಟ ಚಟ ಅಥವಾ ಚಪಲದಿಂದಾಗುವ ಹಾನಿಯು ಉಪೇಕ್ಷಿಸುವಂಥದಲ್ಲವೆನಿಸುತ್ತದೆ.

ಗೋಡೆಯ ಮೇಲೆ ನಾಲ್ಕು ರಸ್ತೆ ಕೂಡುವಲ್ಲಿ ಹಚ್ಚಿದ ಚಿತ್ರಗಳನ್ನು ನೋಡುತ್ತಾ ನಿಂತವನಿಗೆ ಹಿಂದೆ ಮುಂದೆ ವಾಹನಾದಿಗಳು ಹೋಗುತ್ತಿರುವುದರ ಸೂಚನೆ ಸಕಾಲಕ್ಕೆ ಆಗಲಾರದು. ಆಗ ಢಿಕ್ಕಿ ಹೊಡೆಯುವುದು ತಪ್ಪಿದ್ದಲ್ಲ. ಚಲಚ್ಚಿತ್ರಗಳಲ್ಲಿ ಎಷ್ಟೋ ವಯಸ್ಕರಿಗೆ ಮಾತ್ರ ನೋಡಲು ಅರ್ಹವಾದವುಗಳೆಂದು ತೀರ್ಮಾನಿಸಲಾಗಿವೆ-ಇವುಗಳನ್ನ ಸಣ್ಣವರು ನೋಡಲಾಗದೆಂದು ಭಾವಿಸಲಾದ ಸನ್ನಿವೇಶಗಳ ಚಿತ್ರವನ್ನೂ ಸಾರ್ವಜನಿಕ ರೀತಿಯಲ್ಲಿ ಗೋಡೆಗಳಿಗೆ ಅಂಟಿಸಿ ಪ್ರಕಟಿಸಿದರೆ, ಮೂಲೋದ್ದೇಶಕ್ಕೆ ಭಂಗ ಬರುತ್ತದೆಂಬುದು ಸಂಶಯಾತೀತವಾದ ವಿಷಯ. ಗೋಡೆಯ ಮೇಲೂ ರಸ್ತೆಗಳ ಮೇಲೂ ಬರೆಯುವ ಚಟವು ಈಚೆಗೆ, ಚುನಾವಣೆಗಳ ಆವಶ್ಯಕ ಅಂಗವೊ ಎಂಬಂತೆ, ಬಹಳವಾಗಿ ಬಲಿತಿದೆ. ಇಂಥವರಿಗೇ ಮತವನ್ನು ಕೊಡಿರಿ ಎಂದು ಬಗೆ ಬಗೆಯ ಬಣ್ಣಗಳಲ್ಲಿ ನಾನಾ ರೀತಿಯ ಚಿತ್ರಗಳೊಡನೆ ಗೋಡೆಗಳಲ್ಲೂ ಮಾರ್ಗಗಳಲ್ಲೂ ಬರೆಯಲಾಗುತ್ತದೆ. ಹೀಗೆ ಬರೆದು ಸೌಂದರ್ಯವನ್ನು ಕೆಡಿಸಿದ ಕೋಪವೇ ಮಾಲಿಕನನ್ನು ಕಾಡುತ್ತಿರುವಾಗ, ಗಾಯದ ಮೇಲಿನ ಬೊಕ್ಕೆಯಂತೆ ಬರೆದ ಮಾತುಗಳಿಂದ ಉರಿವೆದ್ದ ಪ್ರತಿಪಕ್ಷೀಯರು ಸೆಗಣಿ ಮುದ್ದೆಯೋ ಮಸಿಯನ್ನೋ ಆ ಪ್ರಕಟಣೆ ಮತ್ತು ಚಿತ್ರ ಬರೆಹಗಳ ಮೇಲೆ ಎಸೆದು ಗೋಡೆಯ ಸ್ವರೂಪವನ್ನು ಮತ್ತಷ್ಟು ಕೆಡಿಸಿಬಿಡುತ್ತಾರೆ! ಇವೆಲ್ಲವನ್ನೂ ನಾವು ಎಷ್ಟರ ವರೆಗೆ ಸಹಿಸಿ ಕುಳಿತಿರಬಹುದು?

ಜನರಲ್ಲಿ ಒಳ್ಳೆಯ ಬುದ್ಧಿ ಮೂಡಿ ಬರುವ ದಾರಿಯನ್ನು ಕಾಯುವುದೇನೊ ಹಿತಕರವಾದ ವಿಷಯ— ಆದರೆ ಜನರ ಗಮನ ಇತ್ತ ಹರಿಯುವಂತೆ ಏನಾದರೂ ಕ್ರಮ ತೆಗೆದು ಕೊಳ್ಳಬೇಡವೆ? ಪ್ರಸ್ತುತ ಮಸೂದೆಯು ಈ ದಿಸೆಯಲ್ಲಿ ಮುಂದಿಟ್ಟ ಪ್ರಥಮ ಹೆಜ್ಜೆಯೆಂದು ನಾವು ಭಾವಿಸುತ್ತೇವೆ. ಈ ಮಸೂದೆಯು ಮಂಜೂರಾತಿಯನ್ನು ಪಡೆಯುವುದೋ, ಬಿಡುವುದೋ ಎಂಬ ವಿಷಯದಲ್ಲಿ ನಾವೀಗ ಏನನ್ನೂ ಹೇಳುವ ಹಾಗಿಲ್ಲ. ಆದರೆ ಮಸೂದೆಯ ಸದಾಶಯವನ್ನು ನಾವು ಸಂಪೂರ್ಣವಾಗಿ ಬೆಂಬಲಿಸುತ್ತೇವೆ. "ಈ ಗೋಡೆಯಲ್ಲಿ ನೋಟೀಸು ವಗೈರೆ ಹಚ್ಚಕೂಡದು" ಎಂದು ಮಾಲಿಕರು ಬರೆದು ಹಾಕಿದರೂ ಆ ಮನೆಯ ಮಾಲಿಕನೇ ತನ್ನೀ ಬರವಣಿಗೆಯಿಂದ ಸಾರ್ವಜನಿಕರಿಗೆ ನೋಟೀಸು ವಗೈರೆ ಹಚ್ಚಲು ಅನುಮತಿ ನೀಡಿದ್ದಾನೆಂದೂ-ಕನಿಷ್ಠಪಕ್ಷ ತನ್ನ ಉದ್ದೇಶಕ್ಕೆ ವಿಹಿತವಲ್ಲದ ರೀತಿಯಲ್ಲಿ ತಾನೇ ನಡೆದುಕೊಂಡಿರುವನೆಂದೂ—ಭಾವಿಸಿ ಜನರು ಆ ಗೋಡೆಯಲ್ಲಿ ಧಾರಾಳವಾಗಿ ನೋಟೀಸು ಹಚ್ಚಲು ಧಾವಿಸುವರೆಂದ ಮೇಲೆ ನಮ್ಮ ಜನರ ಬುದ್ಧಿ ಮತ್ತು ಸಭ್ಯತೆಯ ವಿಷಯದಲ್ಲಿ ನಾವು ತೃಪ್ತಿ

(೧೨ನೇ ಪುಟ ನೋಡಿ)

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ – ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಗತ್ತಿನ ಏಕಮಾತ್ರ ಹಿಂದು ಸಾರ್ವಭೌಮ - ಮಹೇಂದ್ರ

ಮಹೋನ್ನತ ಹಿಮಾಲಯದ ತಪ್ಪಲಿನಲ್ಲಿರುವ ನೇಪಾಳ ರಾಜ್ಯವು ಮೊನ್ನೆ ಎರಡನೇ ದಿನಾಂಕ ವೈಭವಯುಕ್ತ ಉತ್ಸವವನ್ನು ಆಚರಿಸಿತು. ಅಂದು ಅರಸ ಮಹೇಂದ್ರರ ಪಟ್ಟಾಭಿಷೇಕ ಮತ್ತು ಕಿರೀಟ ಧಾರಣೆಯು ವೇದೋಕ್ತ ರೀತಿಯಲ್ಲಿ ಸಾಂಗವಾಗಿ ಜರಗಿತು.

ನೇಪಾಳದ ಅರಸರೊಬ್ಬರೇ ಈಗ ಹಿಂದು ಜನಾಂಗದ ಪಾಲಿನ ಏಕ ಮಾತ್ರ ಸಾರ್ವಭೌಮ ಮಹಾರಾಜಾಧಿರಾಜನೆನಿಸಿಕೊಂಡಿದ್ದಾರೆ. ಬೇರೆಲ್ಲ ಹಿಂದು ಅರಸರು ಈಗ ಪತನಗೊಂಡಾಗಿದೆ. ಆದುದರಿಂದ ಧರ್ಮಶಾಸ್ತ್ರಗಳಲ್ಲಿ ವರ್ಣಿಸಲ್ಪಟ್ಟ-ವಿಧಿವಿಧಾನಗಳಂತೆ ಹಿಂದು ರಾಜನು ಅಧಿಕಾರ ಗ್ರಹಣ ಮಾಡುವ ಉತ್ಸವದ ವೀಕ್ಷಣೆ ಮಾಡಬಯಸುವವರಿಗೆ ಅದೊಂದು ಅತ್ಯಪೂರ್ವವಾದ, ಒಂದು ತಲೆಮಾರಿಗೊಮ್ಮೆಯಷ್ಟೇ ಸಾಮಾನ್ಯವಾಗಿ ನೋಡ ಸಿಗುವ, ಉತ್ಸವ.

ಹನುಮಾನ ಢೋಕ ಅರಮನೆಯೇ ಈ ಉತ್ಸವದ ಕೇಂದ್ರಸ್ಥಾನ. ಇದು ಅರಸು ಮನೆತನದ ಹಳೆಯ ಅರಮನೆಯಾಗಿದೆ; ನಾಲ್ನೂರೈವತ್ತು ವರ್ಷಗಳಷ್ಟು ಪುರಾತನವಾಗಿದೆ. ಪಟ್ಟಾಭಿಷೇಕದ ಉತ್ಸವಕ್ಕೆ ಎರಡು ದಿನ ಮೊದಲೇ ಅಂದರೆ ಎಪ್ರೀಲಿನ ೩೦ರಂದೇ, ಈ ಅರಮನೆಯಲ್ಲಿ ಪೂರ್ವಾಂಗ ಸಮಾರಂಭವೆಂದು ಹೆಸರಾದ ವೇದೋಕ್ತ ಸಿದ್ಧತೆಗಳನ್ನು ರಾಜ ಪುರೋಹಿತರ ನೇತೃತ್ವದಲ್ಲಿ ಪ್ರಾರಂಭಿಸಲಾಯಿತು.

ನಾಲ್ವರು ಪುರೋಹಿತರು ಅಂದು ಮುಂಜಾನೆ ಪವಿತ್ರಾಗ್ನಿಯನ್ನು ಪ್ರತಿಷ್ಠಿಸಿ, ಬಾಳೆಎಲೆಯಲ್ಲಿ ಜೇನುತುಪ್ಪ, ಹಾಲು, ಬಾರ್ಲಿ, ಹವಿಸ್ಸುಗಳನ್ನು ಹೋಮಿಸಿದರು; ಮತ್ತು ನವಗ್ರಹಗಳನ್ನೂ ದೇವೇಂದ್ರನನ್ನೂ ವಿಘ್ನೇಶ್ವರನನ್ನೂ ಆವಾಹಿಸಿ ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲಿ ಉಪಸ್ಥಿತರಿದ್ದು ಸಕಲ ವಿಘ್ನಗಳನ್ನೂ ದೂರೀಕರಿಸಿ ಅನುಗ್ರಹಿಸಬೇಕೆಂದು ಅರಸು ಮಹೇಂದ್ರರ ಪರವಾಗಿ ಪ್ರಾರ್ಥಿಸಿದರು. ರಾಜನನ್ನು ದೈವಿಕ ಶಕ್ತಿ ಸಂಪನ್ನನಾಗಿಯೂ ರಾಜವೈಭವ ಯುಕ್ತನನ್ನಾಗಿಯೂ ಮಾಡಬೇಕೆಂದು ಸಹ ಅವರು ಕರಮುಗಿದು ಬೇಡಿಕೊಂಡರು.

ಜೋಯಿಸರೂ ರಾಜ ಪುರೋಹಿತರೂ ಸೇರಿ ಪಟ್ಟಾಭಿಷೇಕ ಮುಹೂರ್ತಕ್ಕೆ ಯೋಗ್ಯವೆಂದು ನಿರ್ಧರಿಸಿದ್ದ ಮೇ ೨ನೇ ದಿನಾಂಕದ ಪೂರ್ವಾಹ್ಣ ೧೦-೩೩ ತಾಸಿಗೆ ಸರಿಯಾಗಿ ಉತ್ಸವದ ಮುಖ್ಯಾಂಗವು ನೆರವೇರಿತು. ಇದರಲ್ಲಿ ಭಾಗ ವಹಿಸಿ ಸಕಲ ಕಾರ್ಯಕಲಾಪಗಳನ್ನು ನೋಡಿ ಸಂತೋಷಗೊಳ್ಳಲು ಸಂಯುಕ್ತ ರಾಷ್ಟ್ರ ಸಂಘದ ಪ್ರತಿನಿಧಿಗಳೂ ಭಾರತ, ಚೀನ, ಬ್ರಿಟನ್, ಅಮೇರಿಕ, ಫ್ರಾನ್ಸ್, ಬರ್ಮ, ಸ್ವಿಜರ್‌ಲೇಂಡ್, ಜಪಾನ್, ಲಾವೋಸ್, ಕಂಬೋಡಿಯ, ಇಂಡೋನೇಶಿಯ, ಸಿಂಹಳ, ಥೈಲೆಂಡ್, ಪಾಕಿಸ್ತಾನ್ ಮತ್ತು ಅಫಘಾನಿಸ್ಥಾನಗಳ ಪ್ರತಿನಿಧಿಗಳೂ ನೆರೆಯ ಸಿಕ್ಕಿಂ ಮತ್ತು ಭೂತಾನ ರಾಜರಿಂದ ಕಳಿಸಲಾದ ಪರಿವಾರದವರೂ ಬಂದಿದ್ದರು.

ವೇದೋಕ್ತ ಕ್ರಮದಂತೆ ವೈಭವಯುಕ್ತ ಪಟ್ಟಾಭಿಷೇಕ

ನೇಪಾಳದ ಅರಸರು ಉತ್ಸವದಲ್ಲಿ ಭಾಗವಹಿಸಲಿಕ್ಕಾಗಿ ಬಿಳಿ ಬಾಳುವ ಅಂಬಾರಿಯನ್ನು ಹಾಕಿದ್ದ ರಾಜದಂತಿಯ ಮೇಲೇರಿ ಹನುಮಾನ ಢೋಕ ಅರಮನೆಗೆ ಸಹಧರ್ಮಿಣಿ ರಾಣಿ ರತ್ನಾದೇವಿಯರೊಡನೆ ಮೈಲು ಉದ್ದದ ಮೆರವಣಿಗೆಯಲ್ಲಿ ಆಗಮಿಸಿದರು. ಮಾರ್ಗದ ಇಕ್ಕೆಲಗಳಲ್ಲಿಯೂ ಆಬಾಲವೃದ್ಧರ ವರೆಗೆ ಎಲ್ಲ ನಾಗರಿಕರೂ ಮಂತ್ರಿ ಮತ್ತಿತರ ಅಧಿಕಾರಿ ವರ್ಗದವರಿಂದ ಕೂಡಿದ್ದ ಈ ಮೆರವಣಿಗೆಯನ್ನು ಕೌತುಕದಿಂದ ಕಂಡು ಆನಂದಿಸಿದರು; ಜಯ ಘೋಷಗಳಿಂದ ತಮ್ಮ ಪುಳಕವನ್ನು ವ್ಯಕ್ತಪಡಿಸಿದರು.

ಅರಸು ಮಹೇಂದ್ರ ಮತ್ತು ರಾಣಿ ರತ್ನಾದೇವಿ

ದೇವ ಪೂಜೆಗಳನ್ನು ಪತ್ನಿ ಸಹಿತರಾಗಿ ನಡೆಸಿದ ತರುವಾಯ ಅರಸ ಮಹೇಂದ್ರರು ಹಿಮಾಲಯದ ಬೆಟ್ಟಗಳ ತುದಿಯಿಂದ ಹಿಡಿದು ಸಮುದ್ರ ತಟದ ವರೆಗಿನ ೧೩ ಬೇರೆ ಬೇರೆ ಭೂ ಪ್ರದೇಶಗಳಿಂದ ತಂದಿದ್ದ ಮಣ್ಣನ್ನು ಲೇಪಿಸಿಕೊಂಡರು; ಮತ್ತು ಸಪ್ತಸಾಗರಗಳಿಂದಲೂ ಪುಣ್ಯತೀರ್ಥಗಳಿಂದಲೂ ಪವಿತ್ರ ನದಿಗಳಿಂದಲೂ ತಂದಿದ್ದ ಶುದ್ಧೋದಕದಿಂದ ಸ್ನಾನಗೈದರು. ರಾಣಿಯೂ ಈ ವಿಧಾನಗಳನ್ನು ಪ್ರತ್ಯೇಕ ಕೊಠಡಿಯಲ್ಲಿ ಅನುಸರಿಸಿ ಪಟ್ಟಾಭಿಷೇಕಕ್ಕೆ ಸಿದ್ಧಳಾದಳು.

ಧರ್ಮ ಶಾಸ್ತ್ರಾನುಸಾರವಾಗಿ ಹಿಂದು ರಾಜನ ಪಟ್ಟಾಭಿಷೇಕ ಮತ್ತು ಕಿರೀಟ ಧಾರಣೆಯ ಉತ್ಸವವೆಂದರೆ ಈ ಸಾರ್ವಭೌಮನಿಗೂ ಆತನ ಪ್ರಜೆಗಳಿಗೂ ನಡುವೆ ನಡೆಯುವ ಒಂದು ಪವಿತ್ರ ಒಪ್ಪಂದ; ಆದುದರಿಂದ ಸಮಾಜದ ನಾಲ್ಕೂ ವರ್ಣಗಳ ಪ್ರತಿನಿಧಿಗಳು ಉತ್ಸವದಲ್ಲಿ ಸಹಭಾಗಿಗಳಾಗಿ ಅರಸನನ್ನು ತಮ್ಮ ವರಿಷ್ಠನನ್ನಾಗಿ ಸ್ವೀಕರಿಸಬೇಕಾಗುತ್ತದೆ.

ಪಟ್ಟಾಭಿಷೇಕಕ್ಕೆ ಸಜ್ಜುಗೊಳಿಸಲಾದ ಮಂಟಪದ ಪೂರ್ವಭಾಗದಲ್ಲಿ ನಿಂತು ಬ್ರಾಹ್ಮಣನೊಬ್ಬನು ಸುವರ್ಣಕುಂಭದಿಂದ ರಾಜನಿಗೆ ಘೃತಾಭಿಷೇಕವನ್ನೂ ದಕ್ಷಿಣ ದಿಕ್ಕಿನಲ್ಲಿ ಕ್ಷತ್ರಿಯನೊಬ್ಬನು ರಜತ ಕುಂಭದಿಂದ ಕ್ಷೀರಾಭಿಷೇಕವನ್ನೂ ಪಶ್ಚಿಮ ಪಾರ್ಶ್ವದಿಂದ ವೈಶ್ಯನೊಬ್ಬನು ತಾಮ್ರ ಕುಂಭದಿಂದ ಮೊಸರಿನ ಅಭಿಷೇಕವನ್ನೂ ಉತ್ತರ ಭಾಗದಲ್ಲಿ ಶೂದ್ರನೊಬ್ಬನು ಹಿತ್ತಾಳೆಯ ಕುಂಭದಿಂದ ಜೇನು ತುಪ್ಪದ ಅಭಿಷೇಕವನ್ನೂ ಮಾಡಿ ರಾಜನು ಅಧಿಕಾರಕ್ಕೆ ಬರಲು ತಮ್ಮ ಸಮ್ಮತಿಯನ್ನು ಸಮಾಜದ ಆಯಾ ವರ್ಣದವರ ಪರವಾಗಿ ನೀಡಿದರು. ರಾಜ ಪುರೋಹಿತರು ರಾಜನಿಗೆ ವಿವಿಧ ಔಷಧಿಗಳ ಮತ್ತು ಪುಷ್ಪಗಳ ಸುಗಂಧ ತೈಲವನ್ನು ಪೂಸಿದರು. ರಾಜಜ್ಯೋತಿಷ್ಯರು ಚಿನ್ನದ ಪಾತ್ರೆಯಿಂದ ಶುದ್ಧ ನೀರನ್ನು ರಾಜನಿಗೆ ಚಿಮುಕಿಸಿದರು.

ಈ ಪ್ರಕಾರವಾಗಿ ಅಭಿಷಿಕ್ತರಾದ ದೆಸೆಯಿಂದ ಅಗ್ನಿ ಪ್ರಕಾಶವನ್ನೂ ಸೂರ್ಯ ತೇಜಸ್ಸನ್ನೂ ಇಂದ್ರ ಶಕ್ತಿಯನ್ನೂ ಪಡೆದು ಪಾರಿಶುದ್ಧ್ಯ ಮಹೋನ್ನತಿ ಮತ್ತು ರಾಜ ವೈಭವದಲ್ಲಿಯೇ ಅದ್ವಿತೀಯನೆನಿಸಿದ ಅರಸು ಮಹೇಂದ್ರರು ಮತ್ತೆ ಸಿಂಹಾಸನವನ್ನೇರಿ ಕುಳಿತರು. ಈ ಸಿಂಹಾಸನವನ್ನು ಎತ್ತು, ಹುಲಿ, ಬೆಕ್ಕು ಚಿರತೆಗಳ ಚರ್ಮದ ಹಾಸಿನ ಮೇಲೆ ರಚಿಸಲಾಗಿದ್ದಿತು. ಅರಸರ ವಾಮ ಭಾಗದಲ್ಲಿ ರಾಣಿ ರತ್ನಾದೇವಿಯವರು ಉಚಿತಾಸನದಲ್ಲಿ ಮಂಡಿಸಿದ್ದರು.

ಆಗ ಸಭಾಸದರ ಜಯಘೋಷ ಹಾಗೂ ಬ್ರಾಹ್ಮಣರ ವೇದ ಮಂತ್ರ ಘೋಷಗಳ ನಡುವೆ ೮೭ ವರ್ಷ ಪ್ರಾಯದ ವೃದ್ಧ ರಾಜಗುರುಗಳು ಚಿನ್ನ, ಬೆಳ್ಳಿಗಳ ಕಸೂತಿ ಕೆಲಸ ಮಾಡಿದ್ದ ರೇಶ್ಮೆಯ ಪೋಷಾಕನ್ನು ಧರಿಸಿ ತಮ್ಮ ವರದಹಸ್ತದಿಂದ ಪಟ್ಟವೆಂದು ಪ್ರಸಿದ್ಧವಾಗಿರುವ ಬಂಗಾರದ ಹರಿವಾಣವನ್ನೆತ್ತಿ ಪೂಜ್ಯ ಭಾವದಿಂದ ೩೬ ವರ್ಷದ ತರುಣ ರಾಜ ಮಹೇಂದ್ರರ ಶಿರೋಭಾಗದಲ್ಲಿಟ್ಟರು. ಈ ಪಟ್ಟದ ಮೇಲೆ ದೇವ, ದೇವತೆಗಳ ಚಿತ್ರಗಳನ್ನು ಬರೆಯಲಾಗಿದೆ; ಪೌರಾಣಿಕ ಆಖ್ಯಾಯಿಕೆಗನುಸಾರವಾಗಿ ರೂಢವಾಗಿರುವ ನಂಬಿಕೆಯಂತೆ, ಶ್ರೀರಾಮಚಂದ್ರ ದೇವರ ತಲೆಯ ಮೇಲಿಟ್ಟಿದ್ದ ಪಟ್ಟವೇ ಈಗ ನೇಪಾಳದ ಅರಸರ ತಲೆಯ ಮೇಲೆ ನೆಲಸಿದ ಪಟ್ಟ.

ರಾಜಗುರುವು ಈ ಪಟ್ಟದ ಮೇಲೆ ರಾಜಮುಕುಟವನ್ನು ತದನಂತರ ಗಂಭೀರ ಭಾವದೊಡನೆ ಮಂಡಿಸಿದರು. ಈ ಸುವರ್ಣ ಮುಕುಟವು ವಜ್ರ, ವೈಢೂರ್ಯ, ಪಚ್ಚೆ, ಮುತ್ತು ಮತ್ತಿತರ ಅತ್ಯಮೂಲ್ಯ ಹರಳುಗಳಿಂದ ಖಚಿತವಾಗಿದೆ. ಹೊಳೆದು ಶೋಭಿಸುವ ಈ ಕಿರೀಟದ ಭಾರವನ್ನಾಗಲೀ ಬೆಲೆಯನ್ನಾಗಲೀ ಎಂದೂ ಗೊತ್ತುಪಡಿಸಿದ್ದಿಲ್ಲ.

ಕಿರೀಟಧಾರಿಗಳಾದ ಅರಸು ಮಹೇಂದ್ರರು ಕಂಠಹಾರಗಳು, ಉಂಗುರಗಳು, ಕಂಕಣಗಳು, ಸೊಂಟ ಪಟ್ಟಿ, ಕಡಗಗಳು ಇತ್ಯಾದಿ ಮಣಿ ಮುತ್ತು ಖಚಿತ ಆಭರಣಗಳನ್ನೂ ಮಿರುಗುವ ಒರೆಯುಳ್ಳ ಖಡ್ಗವನ್ನೂ ಬಿಳಿಬಾಳುವ ದುಕೂಲವನ್ನೂ ಧರಿಸಿದ್ದರು. ರಾಣಿ ರತ್ನಾದೇವಿಯವರು ಸಹ ಅತ್ಯಮೂಲ್ಯ ಉಡುಪನ್ನುಟ್ಟು, ಉಚಿತ ಆಭರಣಗಳನ್ನು ತೊಟ್ಟು ಕುಳಿತಿದ್ದರು. ಅವರ ತಲೆಯ ಮೇಲೆ ಕೂಡ ರಾಣಿಯ ಪಟ್ಟವನ್ನೂ ಮುಕುಟವನ್ನೂ ರಾಜ ಗುರುಗಳು ಇಟ್ಟರು.

(೧೧ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ
ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?
ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು
ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?
ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:
ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಬೊಂಬಾಯಿ, ಮದರಾಸು, ಕಲ್ಕತ್ತಾ

ಪಾಶ್ಚಾತ್ಯ ಪಟ್ಟಣಗಳಲ್ಲಿ ಸ್ತ್ರೀಯರೇ ಅತ್ಯಧಿಕ

ಜಾಗತಿಕ ಜನಗಣನಾಮೀಮಾಂಸೆಯ ಕೆಲವು ವಿವರಗಳು

ಜನಸಂಖ್ಯೆಯು ಹೆಚ್ಚುತ್ತಿದೆ ಎಂಬ ಮಾತನ್ನು ಪ್ರತಿದಿನವೂ ಕೇಳುತ್ತಿರುವ ಭಾರತೀಯರಿಗೆ ಜಗತ್ತಿನ ಒಟ್ಟು ಜನಸಂಖ್ಯೆಯು ಇಂದು ಹಿಂದಿನೆಲ್ಲ ದಾಖಲೆಗಳನ್ನು ಮೀರಿ ಅತಿ ಹೆಚ್ಚಿನ ಮಟ್ಟದಲ್ಲಿ ನಿಂತಿದೆ ಎಂಬುದನ್ನು ಕೇಳಿದರೆ ಹೇಗಾದೀತು! ಎಲ್ಲ ಪ್ರಾಮುಖ್ಯ ಪ್ರದೇಶಗಳಲ್ಲಿಯೂ ಜನಸಂಖ್ಯೆ ಹೆಚ್ಚುತ್ತಿರುವ ವೇಗ ಮತ್ತು ಪ್ರಮಾಣಗಳು ಹಿಂದಿಗಿಂತ ತೀವ್ರತರವೂ ಅಧಿಕ ತರವೂ ಆಗಿವೆ. ಏಶಿಯದ ನಗರಗಳಲ್ಲಿ ಹೆಂಗಸರಿಗಿಂತ ಗಂಡಸರು ಹೆಚ್ಚಿಗಿದ್ದರೂ ಅಮೇರಿಕ ಮತ್ತು ಯುರೋಪು ಖಂಡಗಳ ಪಟ್ಟಣಗಳಲ್ಲಿ ಹೆಂಗಸರೇ ಗಂಡಸರಿಗಿಂತ ಹೆಚ್ಚು!

ಕುತೂಹಲಜನಕವಾದ ಮೇಲಿನ ವಿಷಯಗಳನ್ನು ಈ ಮಾದರಿಯ ಬೇರೆ ಹಲವು ವಿಷಯಗಳ ಜೊತೆಗೆ ಸಂಯುಕ್ತ ರಾಷ್ಟ್ರ ಸಂಘದ ಪ್ರಕಟಣೆಯೊಂದು ವ್ಯಕ್ತಪಡಿಸುತ್ತದೆ. ೧೯೫೪ನೇ ವರ್ಷಕ್ಕೆ ಸಂಬಂಧಿಸಿದ "ಡೆಮೊಗ್ರಾಫಿಕ್ ಇಯರ್ ಬುಕ್" ಎಂಬ ಹೆಸರಿನ ಈ ಪ್ರಕಟಣೆಯು ಜನಸಂಖ್ಯೆಯ ವೃದ್ಧಿ ಅಥವಾ ಕ್ಷಯವನ್ನು ಕುರಿತಾದ ಸಮಸ್ಯೆಯ ಮೇಲೆ ನಾನಾ ದೃಷ್ಟಿಕೋಣಗಳನ್ನು ಚೆಲ್ಲಿ ಕೂಲಂಕಷವಾದ ಸಮೀಕ್ಷೆಯನ್ನು ನಡೆಸಿ ಅತ್ಯಂತ ವಿಶ್ವಾಸಾರ್ಹವಾದ ತೀರ್ಮಾನಗಳನ್ನು ನೀಡುವ ಜಗತ್ತಿನ ಏಕಮಾತ್ರ ಗ್ರಂಥವೆಂದು ಖ್ಯಾತಿಯನ್ನು ಪಡೆದಿರುತ್ತದೆ.

೧೯೫೪ನೇ ವರ್ಷದ ಮಧ್ಯಾವಧಿಯಲ್ಲಿ ಜಗತ್ತಿನ ಜನಸಂಖ್ಯೆಯು ೨೪೫೪ ದಶಲಕ್ಷವಾಗಿದ್ದಿತು. ಇದರಲ್ಲಿ ೫೫%, ಅಂದರೆ, ೧೩೫೧ ದಶಲಕ್ಷ ಜನರು ರಶ್ಯಕ್ಕೆ ಸೇರಿದ ಪ್ರದೇಶವನ್ನು ಬಿಟ್ಟು ಉಳಿದ ಏಷ್ಯ ಖಂಡದಲ್ಲಿದ್ದರು. ಯುರೋಪಿನಲ್ಲಿ ೪೦೪ ದಶಲಕ್ಷ; ಅಮೇರಿಕದಲ್ಲಿ ೩೩೭ ದಶಲಕ್ಷ; ಆಫ್ರಿಕದಲ್ಲಿ ೨೧೦ ದಶಲಕ್ಷ; ರಶ್ಯದಲ್ಲಿ ೨೧೪ ದಶಲಕ್ಷ; ಮತ್ತು ಸಾಗರವಾಸಿ ದ್ವೀಪ ಸಮುದಾಯಗಳಲ್ಲಿ (ಆಸ್ಟ್ರೇಲಿಯವೂ ಸೇರಿ) ೧೩ ದಶಲಕ್ಷ ಜನರಿದ್ದರು. ಹೆಚ್ಚು ಜನಭರಿತ ಪ್ರದೇಶಗಳೆಂದರೆ ಕೆಂಪುಚೀನ (೫೮೩ ದಶಲಕ್ಷ), ಭಾರತ (೩೭೭ ದಶಲಕ್ಷ), ರಶ್ಯ (೨೧೪ ದಶಲಕ್ಷ) ಅಮೇರಿಕದ ಸಂಯುಕ್ತ ರಾಜ್ಯ (೧೬೩ ದಶಲಕ್ಷ), ಜಪಾನು (೮೮ ದಶಲಕ್ಷ), ಇಂಡೋನೇಶಿಯ (೮೧ ದಶಲಕ್ಷ) ಮತ್ತು ಪಾಕಿಸ್ತಾನ (೮೦ ದಶಲಕ್ಷ).

ಇಂದು ಜನಸಂಖ್ಯೆಯು ಹೆಚ್ಚುತ್ತಿರುವ ಬಗೆಯನ್ನು ೩೦—೪೦ ವರ್ಷಗಳ ಹಿಂದಿನ ಪರಿಸ್ಥಿತಿಯೊಡನೆ ಹೋಲಿಸಿ ನೋಡಿದರೆ ಜನಸಂಖ್ಯೆಯು ಬಿಡದೆ ಬದಲಾವಣೆಯನ್ನು ಹೊಂದುತ್ತಾ ಬರುತ್ತಿದೆ ಎಂಬ ವಿಷಯವು ಸ್ಪಷ್ಟವಾಗುತ್ತದೆ. ಈ ಬದಲಾವಣೆಯು ವಾತಾವರಣ ಮತ್ತು ಸಾಮಾಜಿಕ ಸ್ಥಿತಿಗತಿಗಳ ಮತ್ತು ಯುದ್ಧ ಹಾಗು ರಾಜಕೀಯ ಘರ್ಷಣೆಗಳ ಪರಿಣಾಮವಾಗಿ ಉಂಟಾಗುವ ವಲಸೆ ಹೋಗುವಿಕೆ, ಮರಣ ಪ್ರಮಾಣ ಮತ್ತು ಮನುಷ್ಯನಲ್ಲಿರುವ ಪ್ರಜೋತ್ಪಾದನ ಶಕ್ತಿಯ ಫಲವತ್ತತೆಯನ್ನು ಅವಲಂಬಿಸಿದೆ ಎನ್ನಬಹುದು.

೧೯೩೦—೫೪ನೇ ವರ್ಷಗಳ ನಡುವೆ ಏಶ್ಯದ ಜನ ಸಂಖ್ಯೆಯು ೨೧ ದಶ ಲಕ್ಷದಷ್ಟು ಪ್ರತಿ ವರ್ಷವೂ ಹೆಚ್ಚುತ್ತಾ ಹೋಯಿತು. ಲ್ಯಾಟಿನ (ದಕ್ಷಿಣ) ಅಮೇರಿಕ ದೇಶಗಳಲ್ಲಿ ಈ ಪ್ರಮಾಣ ೪ ದಶ ಲಕ್ಷ; ಉತ್ತರ ಅಮೇರಿಕ, ಆಫ್ರಿಕ, ಯುರೋಪು ಮತ್ತು ರಶ್ಯಗಳಲ್ಲಿದು ೩ ದಶ ಲಕ್ಷ; ಸಾಗರವಾಸಿ ದ್ವೀಪ ಸಮುದಾಯಗಳಲ್ಲಿ ಮೂರೂ ಕಾಲು ಲಕ್ಷ ಆಗಿದ್ದಿತು. ಆದಾಗ್ಯೂ ಜನ ಸಂಖ್ಯೆಯು ತೀವ್ರವಾಗಿ ಮತ್ತು ಅತ್ಯಧಿಕ ಪ್ರಮಾಣದಲ್ಲಿ ವೃದ್ಧಿ ಹೊಂದಿದ ಪ್ರದೇಶವೆಂದರೆ ಸಾಗರವಾಸಿ ದ್ವೀಪ ಸಮುದಾಯಗಳೆಂದು ತಿಳಿದಿದೆ. ಅಲ್ಲಿ ಪ್ರಜಾಜನನ ವೃದ್ಧಿಯು ವರ್ಷಕ್ಕೆ ೨.೬% ಮಟ್ಟದಲ್ಲಿದ್ದಿತು. ದಕ್ಷಿಣ ಅಮೇರಿಕದಲ್ಲಿದು ೨.೪%, ಉತ್ತರ ಅಮೇರಿಕದಲ್ಲಿ ೧.೬%, ಮತ್ತು ರಶ್ಯದಲ್ಲಿ ೧.೫%. ಯುರೋಪಿನಲ್ಲಿ ಇದಕ್ಕಿಂತಲೂ ಕಡಿಮೆ ಮಟ್ಟದಲ್ಲಿ ಜನ ಸಂಖ್ಯೆ ವೃದ್ಧಿಯಾಯಿತು. ಆದರೆ ಎಲ್ಲ ದೇಶಗಳಲ್ಲಿಯೂ ಹಿಂದಿನ ದಾಖಲೆಗಳನ್ನು ಮೀರಿ ಜನ ಸಂಖ್ಯೆಯು ಹೆಚ್ಚಿಕೊಂಡಿತೆಂಬುದು ಗಮನೀಯವಾದ ವಿಷಯ.

ಜನರು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ವಲಸೆಹೋಗುವುದರಿಂದ (ಉದಾ: ಪಾಕಿಸ್ತಾನಿ ಪ್ರದೇಶವಾದ ಪೂರ್ವ ಬಂಗಾಲದಿಂದ ಭಾರತದ ಪಶ್ಚಿಮ ಬಂಗಾಲಕ್ಕೆ ನಿರಾಶ್ರಿತರಾಗಿ ಬರುವುದು) ಈಗ ಒಂದು ದೇಶದ ಜನಸಂಖ್ಯಾ ಪ್ರಮಾಣದ ಮೇಲೆ ಆಗುತ್ತಿರುವ ಪರಿಣಾಮವು ಅಷ್ಟು ವಿಶೇಷವಾಗಿಲ್ಲ: ಆದುದರಿಂದ ಜನಸಂಖ್ಯೆಯಲ್ಲಾಗಿರುವ ಹೆಚ್ಚಳವನ್ನು ನಾವು ಮರಣ ಪ್ರಮಾಣವು ಕಡಿಮೆಯಾಗುತ್ತಿರುವುದಕ್ಕೂ ಪ್ರಜೋತ್ಪಾದನ ಶಕ್ತಿಯ ಫಲವತ್ತತೆ ಹೆಚ್ಚಿರುವುದಕ್ಕೂ ಅನ್ವಯಿಸಬೇಕಾಗಿದೆ.

ಸಂಯುಕ್ತ ರಾಷ್ಟ್ರ ಸಂಘದ ಪ್ರಕಟಣೆಗನುಸಾರ, ತೀರ ಹಿಂದುಳಿದ ಪ್ರದೇಶಗಳಲ್ಲಿ ಮಕ್ಕಳ ಜನನ ಪ್ರಮಾಣವು ಅತಿ ಹೆಚ್ಚಾಗಿರುತ್ತದೆ; ಆದರೆ ಇಲ್ಲಿ ಮರಣ ಪ್ರಮಾಣವೂ ಉಳಿದೆಲ್ಲ ಕಡೆಗಳಿಗಿಂತ ಅಧಿಕವಿರುತ್ತದೆ. ಹೀಗಾಗಿ ಜನನ-ಮರಣ ಸಂಖ್ಯೆಗಳ ನಡುವೆ ಉಳಿಯುವ ಶಿಲ್ಕು ಕಡಿಮೆ. ಮುಂದುವರಿದ ದೇಶಗಳಲ್ಲಿ ಜನನ ಪ್ರಮಾಣವು ಕಡಿಮೆ; ಮರಣ ಪ್ರಮಾಣವೂ ಕಡಿಮೆ— ಇವೆರಡರ ನಡುವೆ ಉಳಿಯುವ ಶಿಲ್ಕು ಸಹ ಕಡಿಮೆ.

ಆದರೆ ಇದೇ ಮಾತನ್ನು ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಂಡು ಜೀವನ ಮಟ್ಟವನ್ನು ಎತ್ತರಿಸಲು ಪ್ರಯತ್ನಿಸುತ್ತಿರುವ ಹಿಂದುಳಿದ ರಾಷ್ಟ್ರಗಳ (ಉದಾ: ಸಿಂಹಳ) ಸಂಗತಿಯಲ್ಲಿ ಅನ್ವಯಿಸುವಂತಿಲ್ಲ. ಇಲ್ಲಿ ಮರಣ ಪ್ರಮಾಣವು ಕಡಿಮೆಯಾಗಿದೆ; ಆದರೆ ಜನನ ಪ್ರಮಾಣವು ಏರಿಕೆಯಲ್ಲಿಯೇ ಉಳಿದಿದೆ-ಹೀಗಾಗಿ ಬದುಕಿ ಉಳಿಯುವವರ ಸಂಖ್ಯಾಪ್ರಮಾಣ ಬಹಳ ಹೆಚ್ಚು. ಜನಸಂಖ್ಯೆಯು ಬಹಳ ಕ್ಷಿಪ್ರದಲ್ಲಿ ಹೆಚ್ಚುತ್ತಲಿದೆ ಎಂದೇ ಇದರ ಅರ್ಥ. ಸುಧಾರಿತ ಜೀವನವು ಜನನ ನಿಯಂತ್ರಣ ಕ್ರಮಗಳನ್ನು ಜನರಲ್ಲಿ ಇನ್ನೂ ರೂಢಮಾಡಿಲ್ಲ. ಆಧುನಿಕ ಚಿಕಿತ್ಸಾ ವಿಧಾನಗಳಿಂದ ಆಯುಷ್ಯವೃದ್ಧಿ ಮಾಡುವುದನ್ನು ಮಾತ್ರ ಜನರು ಈ ಪ್ರದೇಶದಲ್ಲಿ ಕಲಿತಿದ್ದಾರೆ.

ತೀವ್ರತರವಾಗಿ ಜನಸಂಖ್ಯೆಯು ವೃದ್ಧಿಯಾದ ದೇಶಗಳು: ವೆನೆಜುವೆಲಾ (೩%) ಪನಾಮ (೨.೯%), ಸಿಂಹಳ (೨.೮%), ಮೆಕ್ಸಿಕೊ (೨.೭%). ತೀರ ಸಿಥಿಲವಾಗಿ ಜನಸಂಖ್ಯೆಯು ವೃದ್ಧಿಗೊಂಡ ದೇಶಗಳು: ಸೋಲೆಂಡು ಮತ್ತು ಪೋರ್ಚುಗಾಲ (.೯%), ಪಾಕಿಸ್ತಾನ ಮತ್ತು ಸ್ಪೈಯಿನು (.೮%). ಮತ್ತು ಆಯರ್ಲೆಂಡು (.೦೪%)

ಪಾಕಿಸ್ತಾನ, ಥೈಲೆಂಡು, ಹೈಟಿ, ಸಿಂಹಳ, ಯುಗೊಸ್ಲಾವಿಯ, ಭಾರತ, ಕೊರಿಯ ಇತ್ಯಾದಿ ದೇಶಗಳಲ್ಲಿ ಜನಸಂಖ್ಯೆಯ ಐದರಲ್ಲಿ ನಾಲ್ಕಂಶಕ್ಕಿಂತಲೂ ಹೆಚ್ಚು ಹಳ್ಳಿಗಳಲ್ಲಿ ವಾಸಿಸುವ ಪ್ರಜೆಗಳಾಗಿದ್ದಾರೆ. ಇದಕ್ಕೆ ತೀರ ವಿರುದ್ಧವಾಗಿ ಇಂಗ್ಲೆಂಡಿನಲ್ಲೂ ಬ್ರಿಟನಲ್ಲೂ ೭೦% ಜನರು ನಗರವಾಸಿಗಳಾಗಿದ್ದಾರೆ. ಇವೆರಡು ಕೊನೆಗಳ ನಡುವೆ ರುಮೇನಿಯ (ನಗರವಾಸಿಗಳು ೨೩%), ಜಪಾನು (೬೭%), ಫ್ರಾನ್ಸು (೫೬%) ಮತ್ತು ಅಮೇರಿಕದ ಸಂಯುಕ್ತ ರಾಜ್ಯ (೬೪%) ಇವುಗಳಲ್ಲಿ ಜನರು ಹೆಚ್ಚು ಹೆಚ್ಚು ನಗರವಾಸಿಗಳಾಗಿ ನಡೆಯುವ ಒಲವನ್ನು ಈಚೆಗಿನ ವರ್ಷಗಳಲ್ಲಿ ತೋರಿಸುತ್ತಿದ್ದಾರೆ.

ರಶ್ಯದಲ್ಲಿರುವ ದೊಡ್ಡ ದೊಡ್ಡ ಪಟ್ಟಣಗಳ ಕುರಿತು ವಿಶೇಷ ಮಾಹಿತಿ ತಿಳಿದಿಲ್ಲ—ಹಾಗೆಯೇ ಹವಾನಾ, ಮನಿಲ, ಮೊಂಟೆವಿಡಿಯೊ ಮುಂತಾದ ಹತ್ತು ಲಕ್ಷಕ್ಕಿಂತಲೂ ಹೆಚ್ಚು ಜನಸಂಖ್ಯೆ ಇರಬಹುದೆಂದು ಭಾವಿಸಲಾಗಿರುವ ನಗರಗಳ ಕುರಿತೂ ವಿಶೇಷ ಮಾಹಿತಿ ಲಭ್ಯವಾಗಿಲ್ಲ. ಇವನ್ನೆಲ್ಲ ಹೊರತುಪಡಿಸಿದರೆ ಜಗತ್ತಿನ ಐದು ದೊಡ್ಡ ಪಟ್ಟಣಗಳಾಗಿ ಅಮೇರಿಕದ ನ್ಯೂಯಾರ್ಕ್ (ಜನಸಂಖ್ಯೆ ೧೨೩೦೦೦೦೦), ಬ್ರಿಟನಿನ ಲಂಡನ್ (೮೭೦೦೦೦೦), ಜಪಾನಿನ ಟೋಕಿಯೋ (೬೩೦೦೦೦೦), ಕೆಂಪು ಚೀನದ ಶಾಂಘಾಯಿ (೬೨೦೦೦೦೦) ಮತ್ತು ಫ್ರಾನ್ಸಿನ ಪ್ಯಾರಿಸ್ (೪೮೦೦೦೦೦) ಇವು ಮೆರೆಯುತ್ತವೆ. ಹತ್ತು ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆಯನ್ನು ಪಡೆದಿರುವ ಪಟ್ಟಣಗಳು ಐವತ್ತಕ್ಕಿಂತ ಹೆಚ್ಚಿವೆ: ಇವುಗಳಲ್ಲಿ ೧೯ ಯುರೋಪಿನಲ್ಲೂ ೧೮ ಅಮೇರಿಕದಲ್ಲೂ ೧೩ ಏಶ್ಯದಲ್ಲೂ ನೆಲೆಗೊಂಡಿರುತ್ತವೆ.

ಅಮೇರಿಕ ಮತ್ತು ಯುರೋಪು ಖಂಡಗಳ ನಗರಗಳಲ್ಲಿ ಹೆಂಗಸರೇ ಗಂಡಸರಿಗಿಂತ ಹೆಚ್ಚು ಆದರೆ ಏಶ್ಯ ಮತ್ತು ಅರಬ ರಾಷ್ಟ್ರಗಳಲ್ಲಿ ಹೆಂಗಸರಿಗಿಂತ ಗಂಡಸರೇ ಜಾಸ್ತಿ. ಉದಾಹರಣೆಗಾಗಿ ಭಾರತದ ಒಂದು ಲಕ್ಷಕ್ಕಿಂತ ಹೆಚ್ಚು ಜನರಿರುವ ನಗರಗಳಲ್ಲಿ ೧೦೦ ಮಂದಿ ಹೆಂಗಸರಿಗೆ ೧೨೭ರಂತೆ ಗಂಡಸರಿದ್ದಾರೆ; ಸಿಂಹಳದಲ್ಲಿ ೧೦೦ ಮಂದಿ ಹೆಂಗಸರಿಗೆ ೧೬೩ರಂತೆ ಗಂಡಸರಿದ್ದಾರೆ. ಆದರೆ ಡೆನ್ಮಾರ್ಕ, ಸ್ವೀಡನು, ಬ್ರಿಟನುಗಳಲ್ಲಿ ೧೦೦

(೧೦ನೇ ಪುಟ ನೋಡಿರಿ)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಸವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೇರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕ್ಲೇಸ್, ಲೋಕೆಟ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ವಸ್ತುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—58ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ಪಶ್ಚಿಮ ಬಂಗಾಳ-ಬಿಹಾರ ರಾಜ್ಯಗಳ ವಿಲಯನವಿಲ್ಲ

ಜನಾಭಿಪ್ರಾಯವನ್ನು ಮನ್ನಿಸುತ್ತಿದ್ದೇನೆಂದು ರ್‍ಯಾಯವರ ಸ್ಪಷ್ಟೀಕರಣ

ಮೇ ೩ನೇ ದಿನಾಂಕ ರಾಜ್ಯ ಸಭೆಯಲ್ಲಿ ಗೃಹ ಮಂತ್ರಿ ಪಂಡಿತ ಪಂತರು ರಾಜ್ಯಗಳ ಪುನಾರಚನೆಯ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಿಕೊಡಬೇಕೆಂಬ ಸೂಚನೆಯ ಮೇಲೆ ನಡೆದ ಚರ್ಚೆಯನ್ನು ಉತ್ತರಿಸುತ್ತಾ ಭಾಷಣ ಮಾಡುವಾಗ ಬಂಗಾಳ ಮತ್ತು ಬಿಹಾರಗಳ ವಿಲೀನೀಕರಣದ ವಿಚಾರವನ್ನು ಬಿಟ್ಟುಗೊಡಲಾಗಿದೆ ಎಂದು ತಮಗೆ ಅಧಿಕೃತವಾಗಿ ಯಾರೂ ಹೇಳಿಲ್ಲವೆಂದು ತಿಳಿಸಿದರು. ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ. ಬಿಧನ ಚಂದ್ರ ರ್‍ಯಾಯವರು ಆ ಸಮಯದಲ್ಲಿ ಹೊಸ ದೆಹಲಿಯಲ್ಲಿದ್ದರು. ಆದರೆ ಇದೇ ಹೊತ್ತಿಗೆ ಕಲ್ಕತ್ತದಲ್ಲಿ ವಿಶೇಷ ಘಟನೆಯೊಂದು ನಡೆಯಿತು: ಡಾ. ಮೇಘನಾದ ಶಹಾರ ನಿಧನದಿಂದ ತೆರವಾದ ವಾಯುವ್ಯ ಕಲ್ಕತ್ತದ ಮತದಾರ ಕ್ಷೇತ್ರಕ್ಕೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸಿನ ಹುರಿಯಾಳು ಶ್ರೀ ಅಶೋಕ ಸೇನರನ್ನು (ಬಿದ್ದ ಮತ ೫೫೮೫೦) ಬಂಗಾಳ-ಬಿಹಾರ ವಿಲಯನದ ವಿರೋಧಕರ ಮುಖಂಡ ಶ್ರೀ ಮೈತ್ರರು (ಬಿದ್ದ ಮತ ೮೮೯೬೪) ಸೋಲಿಸಿ, ಗೆದ್ದು ಬಂದರೆಂಬ ಸಮಾಚಾರವು ಪ್ರಕಟವಾಯಿತು.

ರ್‍ಯಾಯವರ ಪ್ರಕಟಣೆ

ಮುಖ್ಯ ಮಂತ್ರಿ ಡಾ. ರ್‍ಯಾಯವರು ಕಲ್ಕತ್ತಕ್ಕೆ ಆಗಮಿಸಿದೊಡನೆಯೇ (ಮೇ ೩) ಮಂತ್ರಿ ಮಂಡಳದಲ್ಲಿರುವ ತನ್ನ ಸಹಕಾರ್ಯಕರ್ತರೊಡನೆ ವಿಚಾರ ವಿನಿಮಯವನ್ನು ನಡೆಸಿದರು. ವಾಯುವ್ಯ ಕಲ್ಕತ್ತದಲ್ಲಿ ನಡೆದ ಉಪಚುನಾವಣೆಯ ಫಲಿತಾಂಶದಿಂದ ಜನರಿಗೆ ಬಂಗಾಳ-ಬಿಹಾರಗಳ ವಿಲಯನವು ಮನಸ್ಸಿಗೆ ಬಂದಿಲ್ಲವೆಂದು ಸ್ಪಷ್ಟವಾಗಿದೆ ಎಂದು ಈ ಸಮಾಲೋಚನೆಯ ಬಳಿಕ ಮುಖ್ಯ ಮಂತ್ರಿಗಳು ತೀರ್ಮಾನ ಮಾಡಿದರು. ಆದುದರಿಂದ ವಿಲಯನದ ಸೂಚನೆಯನ್ನು ಹಿಂದೆಗೆದುಕೊಳ್ಳುವುದೇ ಪ್ರಕೃತ ಪರಿಸ್ಥಿತಿಯಲ್ಲಿ ಸೂಕ್ತವೆಂದವರು ನಿರ್ಣಯಿಸಿದರು. ಈ ಸಂಬಂಧದಲ್ಲಿ ಅವರು ಪತ್ರಿಕೆಗಳಿಗಿತ್ತ ಹೇಳಿಕೆಯು ಹೀಗೆನ್ನುತ್ತದೆ-"ಕಳೆದ ಎರಡು-ಮೂರು ತಿಂಗಳುಗಳಿಂದ ಜನರು ಒಪ್ಪುವುದಿಲ್ಲವಾದರೆ ಈ ಬಗೆಯ ವಿಲಯನವನ್ನು ಅವರ ಮೇಲೆ ಹೇರಲಾಗುವುದಿಲ್ಲವೆಂದು ನಾನು ಹೇಳುತ್ತಾ ಬಂದಿದ್ದೇನೆ. ಈ ಮಟ್ಟಿಗೆ ಜನಾಭಿಪ್ರಾಯವು ಹೇಗಿದೆ ಎಂಬುದನ್ನು ತಿಳಿದುಕೊಳ್ಳುವ ಪ್ರಜಾಸತ್ತಾತ್ಮಕ ತಂತ್ರಗಳಲ್ಲಿ ಈ ವಿಷಯವನ್ನೆ ಮುಖ್ಯವಾಗಿಟ್ಟುಕೊಂಡು ನಡೆಸಿದ ಚುನಾವಣೆಯಲ್ಲಿ ಜನರು ಹೇಗೆ ಮತದಾನ ಮಾಡುವರೆಂಬುದನ್ನು ನೋಡುವುದೂ ಒಂದು. ಈಚೆಗೆ ವಿಧಾನ ಸಭೆಯಲ್ಲೊಂದು ಮತ್ತು ಕಲ್ಕತ್ತದಲ್ಲಿ ಇನ್ನೊಂದು—ಹೀಗೆ ಎರಡು ಉಪಚುನಾವಣೆಗಳಾಗಿವೆ. ಬಂಗಾಳ ಮತ್ತು ಬಿಹಾರಗಳ ವಿಲಯನದ ಕುರಿತು ಬಂಗಾಳಿಗಳ ಅಭಿಪ್ರಾಯವನ್ನು ಮಿಡ್ನಾಪುರದ ಚುನಾವಣಾ ಫಲಿತಾಂಶವು ವ್ಯಕ್ತಪಡಿಸಿತೆಂದು ಹೇಳುವಂತಿಲ್ಲವಾದರೂ ವಿಲಯನ ವಿರೋಧಿ ಸಮಿತಿಯ ಕಾರ್ಯದರ್ಶಿಯಾಗಿದ್ದು ವಿಲಯನವನ್ನು ವಿರೋಧಿಸುವ ತಳಹದಿಯ ಮೇಲೆಯೇ ಮತವನ್ನು ಯಾಚಿಸಿದ ಶ್ರೀ ಮೈತ್ರರನ್ನು ಜನರು ಬೆಂಬಲಿಸಿರುವುದು ನಾನು ಮಾಡಿದ್ದ ವಿಲಯನ ಸೂಚನೆಯನ್ನು ಈ ನಗರದ ಜನರು ಒಪ್ಪಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತದೆ.

ಹಿಂದೆಗೆದ ಸೂಚನೆ

"ಒಲ್ಲದ ಜನರ ಮೇಲೆ ನಿರ್ಣಯವನ್ನು ಬಲಾತ್ಕಾರವಾಗಿ ಹೇರುವ ಪ್ರಶ್ನೆಯೇ ಇಲ್ಲ. ಒಂದು ವೇಳೆ ಸಂಸತ್ತೇ ಬಂಗಾಳ ಬಿಹಾರಗಳ ವಿಲಯನದ ತೀರ್ಮಾನ ಮಾಡಿದರೂ ಜನರಿಗೆ ಅದು ಬೇಡವಾಗಿದ್ದರೆ ಉಭಯ ರಾಜ್ಯಗಳ ಐಕ್ಯ ವೃದ್ಧಿಯ ಮೂಲೋದ್ದೇಶವೆಂದೂ ಈಡೇರಲಾರದು. ನಿನ್ನೆ ಪ್ರಕಟವಾದ ಚುನಾವಣಾ ಫಲಿತಾಂಶವು ನನ್ನನ್ನು ವಿಚಾರಕ್ಕೆ ಹಚ್ಚಿದೆ. ವಿಲಯನದ ಸೂಚನೆಯ ಕುರಿತು ಬಿಹಾರಿನ ಮುಖ್ಯ ಮಂತ್ರಿಗಳಿಗೆ ಕಳಿಸಿದ ಸೂಚನೆಯನ್ನು ಮುಂದೊತ್ತಬೇಕೆ, ಬೇಡವೆ ಎಂಬ ಜಿಜ್ಞಾಸೆ ನನ್ನಲ್ಲೆದ್ದಿದೆ. ಯಾವುದೇ ಒಂದು ವಿಷಯದ ಮೇಲೆ ಈ ಬಗೆಯ ಒಂದು ಚುನಾವಣೆಯ ಫಲಿತಾಂಶವು ಜನಾಭಿಪ್ರಾಯವನ್ನು ಖಚಿತವಾಗಿ ತಿಳಿಯಪಡಿಸಲಾರದೆಂದು ಹೇಳಿದರೆ ತಪ್ಪಾಗಲಾರದೆಂಬುದು ನಿಜ. ಆದಾಗ್ಯೂ ಜನರು ಈಗ ಕೊಟ್ಟಿರುವ ತೀರ್ಮಾನವನ್ನು ಉಪೇಕ್ಷಿಸುವಂತಿಲ್ಲವೆಂಬುದೂ ಅಷ್ಟೇ ಸತ್ಯ. ನನ್ನ ಮಟ್ಟಿಗೆ ೨೪ನೇ ಜನವರಿಯಂದು ಉಭಯ ರಾಜ್ಯಗಳ ವಿಲಯನದ ಕುರಿತು ನಾವು ಮಾಡಿದ ಸೂಚನೆಯಲ್ಲಿ ಸಂಪೂರ್ಣ ವಿಶ್ವಾಸ ಈಗಲೂ ನನಗಿದೆ. ಪಶ್ಚಿಮ ಬಂಗಾಳದ ಸಮಸ್ಯೆಯು ಅದಕ್ಕೆ ಒಂದು ಸಣ್ಣ ತುಣುಕನ್ನು (ಫಜಲಾಲಿ ಆಯೋಗದ ಶಿಫಾರಸಿನಂತೆ ಬಿಹಾರದಿಂದ ತೆಗೆದು) ಜೋಡಿಸಿದ ಮಾತ್ರಕ್ಕೆ ಬಗೆಹರಿಯಲಾರದೆಂದೇ ನನಗೆ ತೋರುತ್ತದೆ. ಹಾಗಿದ್ದರೂ ಸಹ, ಸಂಸತ್ತಿಗೆ ಮೊನ್ನೆ ನಡೆದ ಚುನಾವಣೆಯಲ್ಲಿ ವ್ಯಕ್ತವಾದ ಜನಾಭಿಪ್ರಾಯದ ಮುಂದೆ ನಾನು ತಲೆಯನ್ನು ಬಗ್ಗಿಸಬೇಕಾಗಿದೆ; ಆದುದರಿಂದ ನನ್ನ ಮಟ್ಟಿಗೆ ನಾನು ಸಾರ್ವಜನಿಕರ ಮುಂದಿನಿಂದ ಈ ಸೂಚನೆಯನ್ನು ಹಿಂದೆಗೆಯಲಿಚ್ಛಿಸುತ್ತೇನೆ. ಈ ವಿಷಯವನ್ನು ನಾನು ಕೇಂದ್ರ ಸರಕಾರಕ್ಕೆ ತಿಳಿಸುವವನಿದ್ದೇನೆ. ನಮ್ಮ ನೆರೆಕರೆಯವರೊಡನೆ ಹೆಚ್ಚು ನಿಕಟ ಸಂಪರ್ಕವನ್ನು ಸಾಧಿಸುವಲ್ಲಿ ಬಂಗಾಳದ ಜನತೆಯು ಸರಿಯಾದ ನಿರ್ಣಯಕ್ಕೆ ಮುಂದಿನ ದಿನಗಳಲ್ಲಿಯಾದರೂ ಬರಲಿ ಎಂದಿಲ್ಲಿ ಆಶಿಸುತ್ತೇನೆ."

ದಕ್ಷಿಣ ಪ್ರದೇಶ

ಹೀಗೆ ಬಂಗಾಳ-ಬಿಹಾರ ವಿಲಯನದ ಸೂಚನೆ ಈಗ ಮುರಿದು ಬಿದ್ದಿದೆ. ಈ ಸೂಚನೆಯು ಕಾಂಗ್ರೆಸಿನ ಹಾಗು ಭಾರತ ಸರಕಾರದ ವರಿಷ್ಠರ ಪಾಲಿಗೆ "ಹಾಲಾಹಲದ ನಡುವೆ ಜನಿಸಿದ ಅಮೃತ" ಎಂದು ಕಂಡಿದ್ದಿತು. ಆದುದರಿಂದಲೇ ದೇಶದ ಮುಂದೆ ಇದನ್ನು ಮಹಾ ಆದರ್ಶವಾಗಿ ಅಮೃತಸರದ ಕಾಂಗ್ರೆಸು ಅಧಿವೇಶನದಲ್ಲಿ ಮಂಡಿಸಲಾಯಿತು. ಉಳಿದ ರಾಜ್ಯಗಳೂ ಈ ದಾರಿಯನ್ನು ತುಳಿಯಬೇಕೆಂದು ಸಭಸದ ಪ್ರಚಾರವೂ ನಡೆಯಿತು. "ದಕ್ಷಿಣ ಪ್ರದೇಶ"ದ ರಚನೆಯ ಬಗೆಗಂತೂ ಬಹಳವಾಗಿ ಮುಂಗಿಯೂದಲಾಯಿತು. ಮೇ ೩ನೇ ದಿನಾಂಕದಷ್ಟು ಈಚೆಗೆ ಗೃಹ ಮಂತ್ರಿ ಪಂಡಿತ ಪಂತರು ರಾಜ್ಯ ಸಭೆಯಲ್ಲಿ ಮಾತನಾಡುತ್ತಾ 'ಈಗ ಸಹ ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳಲ್ಲಿ ಯಾವುದಾದರೆರಡ, ಅಥವಾ ಮೂರೂ ಸೇರಿ ದಕ್ಷಿಣ ಪ್ರದೇಶವೆಂಬ ದೊಡ್ಡ ರಾಜ್ಯದ ರಚನೆಗೆ ದಾರಿ ಮಾಡಿಕೊಡಲು ನೋಡುವುದೇ ನಮ್ಮ ಪ್ರಯತ್ನ. ದಕ್ಷಿಣದ ರಾಜ್ಯಗಳು ದೊಡ್ಡದಾಗಬೇಕೆಂಬುದೇ ನಮ್ಮ ಅಪೇಕ್ಷೆ' ಎಂದಿದ್ದರು. ಆರ್ಥಿಕ ಪ್ರಗತಿ ಮತ್ತು ಯೋಜನಾ ಬದ್ಧವಾದ ಅಭಿವೃದ್ಧಿಗಳಿಗೆ ವಿಶಾಲವಾದ ರಾಜ್ಯಗಳೇ ಹಿತವೆಂದವರು ಈ ಸಂದರ್ಭದಲ್ಲಿ ಒತ್ತಿ ಹೇಳಿದರು. ಈಗ ದಕ್ಷಿಣ ಪ್ರದೇಶದ ಕಲ್ಪನೆಯ ಜನಕನೆನಿಸಿದ "ಪೂರ್ವ ಪ್ರದೇಶ"ದ ಅಸ್ತಿತ್ವಕ್ಕೆಯೇ ಕುಠಾರಾಘಾತವಾಗಿರುವುದರಿಂದ ದಕ್ಷಿಣ ಪ್ರದೇಶದ ಕುರಿತು ಉದ್ದುದ್ದ ಮಾತನಾಡುವುದು ಇನ್ನಾದರೂ ನಿಂತೀತೆಂದು ಆಶಿಸಬಹುದು. ಈ ಆಶೆಗೆ ಜನಾಭಿಪ್ರಾಯವನ್ನೆ ಅವಲಂಬಿಸಿ ಹೇಳುವುದಾದರೆ ಬಲವಾದ ಆಧಾರವಿದೆ—ಕನ್ನಡಿಗರ ಮಟ್ಟಿಗಂತೂ ಈ ನಮ್ಮ ತೀರ್ಮಾನ ಸತ್ಯ. ಆದರೆ ಕನ್ನಡಿಗರು "ನಂಖಂಡ"ರ ಕುರಿತು ನಾವು ಹೀಗೆನ್ನುವಂತಿಲ್ಲ. ಹೈದರಾಬಾದಿನಲ್ಲಿ ಮೈಸೂರಿನ ಮುಖ್ಯ ಮಂತ್ರಿಗಳು ಅಕ್ಟೋಬರ ೧ನೇ ತಾರೀಕಿನ ಬಳಿಕ ಕರ್ನಾಟಕದ ಎಲ್ಲ ಕಡೆಯ ಶಾಸನಾಂಗದ ಸದಸ್ಯರು ಒಟ್ಟು ಸೇರಿ ದಕ್ಷಿಣ ಪ್ರದೇಶದ ಕುರಿತು ತೀರ್ಮಾನಕ್ಕೆ ಬರುವರೆಂದಿದ್ದಾರೆ. ಅವರಿಗೆ ಮತ್ತು ದಕ್ಷಿಣದ ಬೇರೆ ಕೆಲವು ಧುರೀಣರಿಗೆ ಇನ್ನೂ ದಕ್ಷಿಣ ಪ್ರದೇಶದ ಮೇಲೆ ಮಮತೆ ಉಳಿದಿದೆ—ಇದು ಜನರ ದೃಷ್ಟಿಯುಲ್ಲಂತೂ ಆಶ್ಚರ್ಯಕರವಾದ ವಿಷಯ.

ಕ್ಷಿಪ್ರ ಕ್ರಮಕ್ಕೆ ಒತ್ತಾಯ

ಇರಲಿ— ಈಗ ರ್‍ಯಾ-ಸಿಂಹ ಪ್ರಕಟಣೆಯ ಸಮಾಧಿಯಾಗಿರುವುದರಿಂದ ಬಂಗಾಳ ಮತ್ತು ಬಿಹಾರಗಳನ್ನು ಪ್ರತ್ಯೇಕ ರಾಜ್ಯಗಳಾಗಿಯೇ ಹೊಸ ಚೌಕಟ್ಟಿನಲ್ಲಿ ಉಳಿಸುವ ಬಗ್ಗೆ ಸಂಸತ್ತು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಈ ಸಂಬಂಧದ ಮಸೂದೆಯ ಮೇಲೆ ಬಂಗಾಳ ಮತ್ತು ಬಿಹಾರಗಳ ಶಾಸನಾಂಗದ ಅಭಿಪ್ರಾಯವನ್ನು ಕೇಳಿ ತಿಳಿದುಕೊಳ್ಳಬೇಕಾಗಿದೆ. ಉಭಯ ರಾಜ್ಯಗಳ ಗಡಿಯ ವಿಷಯದಲ್ಲಿ ಭಾರತ ಸರಕಾರವು ಹಿಂದೆ ಕೊಟ್ಟಿರುವ ತೀರ್ಮಾನವೇ ಈಗಲೂ ಸಿಂಧುವೆಂದು ಗೃಹ ಮಂತ್ರಿ ಪಂತರು ಹೇಳಿದ್ದಾರೆ. ಈ ತೀರ್ಮಾನದ ತಳಹದಿಯ ಮೇಲೆ ಮುಂದಿನ ಕೆಲಸವನ್ನು ನಡೆಸಲು ವಿಳಂಬಿಸಲಾಗದೆಂದು ಪಶ್ಚಿಮ ಬಂಗಾಳದ ಸಂಸತ್ಸದಸ್ಯರು ಗೃಹ ಮಂತ್ರಿಗಳನ್ನು ಮನವಿಯೊಂದರ ಮೂಲಕ ಒತ್ತಾಯಿಸಿದ್ದಾರೆ. ಅಲ್ಲದೆ ಈ ಮಸೂದೆಯನ್ನಾದರೂ ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಈಗ ಪರಿಶೀಲಿಸುತ್ತಿರುವ ಸಂಸತ್ಸದಸ್ಯರ ಸಮಿತಿಗೆಯೇ ಒಪ್ಪಿಸಿಕೊಡಬೇಕೆಂದು ಸಹ ಆಗ್ರಹಪಡಿಸಿದ್ದಾರೆ. ಪಡಿಸಿ ಹೇಳಲಾಗುತ್ತದೆ. ಮಸೂದೆಯನ್ನು ತಯಾರಿಸಿ ಆಯಾ ರಾಜ್ಯಗಳ ಶಾಸನಾಂಗದ ಅಭಿಪ್ರಾಯ ತಿಳಿದುಕೊಳ್ಳಲು ನಾಲ್ಕೈದು ವಾರಗಳ ಅವಧಿಯಾದರೂ ಬೇಕಾದೀತು. ಸಂಸತ್ತಿನ ಪ್ರಸ್ತುತ ಅಧಿವೇಶನವನ್ನು ಆ ಮಿತಿಯ ವರೆಗೆ ಮುಂದರಿಸಿಕೊಂಡು ಹೋಗುವುದಕ್ಕೆ ಸದಸ್ಯರ ಅಭಿಪ್ರಾಯ ಅನುಕೂಲವಾಗಿಲ್ಲ. ಹೊಸದೆಹಲಿಯ ಸೆಖೆಯು ತಡೆಯಲಾರದಷ್ಟು ವಿಪರೀತವಾಗಿರುವುದರಿಂದ (೧೧೫-F) ಆದಷ್ಟು ಬೇಗನೆ ಈ ಸಲದ ಅಧಿವೇಶನವನ್ನು ಮುಗಿಸ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಬಿಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಬೇಕೆಂದೂ ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಪುನಃ ಕೈಗೆತ್ತಿಕೊಂಡು ಚರ್ಚಿಸಲು ಆಗೋಸ್ಟಿನ ಪ್ರಾರಂಭದಲ್ಲಿ ವಿಶೇಷ ಅಧಿವೇಶನವನ್ನು ನೆರೆಯಿಸಬೇಕೆಂದೂ ಸಾಮಾನ್ಯವಾಗಿ ಸದಸ್ಯರ ಅಭಿಪ್ರಾಯ.

ಮುಂಬಯಿ ನಗರದ ಹಗರಣ

ಸಂಪತ್ತಿನ ಹೆಚ್ಚಿನ ಸದಸ್ಯರು ಹೀಗೆ ರಾಜ್ಯಗಳ ಪುನಾರಚನೆಯ ವಿಧೇಯಕವನ್ನು ತಡವಾಗಿ ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಹೇಳಲು ಮುಂಬಯಿ ನಗರದ ಕುರಿತು ನಡೆದಿರುವ ಹಗರಣವೂ ಒಂದು ಕಾರಣ. ಈ ಮೊದಲಿನ ನಿರ್ಧಾರದಂತೆ ಕೇಂದ್ರಾಧೀನ ಪ್ರದೇಶವಾಗಿ ಮುಂಬಯಿ ನಗರವು ರೂಪುಗೊಳ್ಳುತ್ತದೆ—ಆದರೆ ಕೇಂದ್ರಾಧೀನ ಪ್ರದೇಶಗಳ ಆಡಳಿತ ಕ್ರಮದ ವಿವರಗಳು ಇನ್ನೂ ಗೊತ್ತುಪಡಿಸಲ್ಪಟ್ಟಿಲ್ಲ. ಪರಿಶೀಲಕ ಸಮಿತಿಗೆ ಇದೇ ೧೪ನೇ ದಿನಾಂಕದೊಳಗೆ ವರದಿಯೊಪ್ಪಿಸಬೇಕೆಂದು ಆದೇಶಕೊಡಲಾಗಿದೆ- ಇಷ್ಟು ಅಲ್ಪಾವಧಿಯಲ್ಲಿ ಅದು ರಾಜ್ಯಗಳ ಪುನಾರಚನೆಯ ಮಸೂದೆಯಲ್ಲಿ ಏನೇನೂ ಕೊರತೆಯಿಲ್ಲದಂತೆ ಅದನ್ನು ಪರಿಷ್ಕರಿಸಲಾರದೆಂದು ಈಗ ಅಭಿಪ್ರಾಯ ಪಡಲಾಗುತ್ತದೆ. ಮಾತ್ರವಲ್ಲ, ಮುಂಬಯಿ ನಗರದ ಪ್ರಶ್ನೆಯನ್ನು ಜನಾಭಿಪ್ರಾಯಕ್ಕೆ ಸಮ್ಮತವಾಗುವ ರೀತಿಯಲ್ಲಿ ಪರಿಹರಿಸಲು ಪ್ರಧಾನಮಂತ್ರಿಗಳು ಪುನಃ ಇಚ್ಛೆಯನ್ನು ವ್ಯಕ್ತಪಡಿಸಿರುವುದರಿಂದ ಅವರ ಹೊಸ ಪ್ರಯತ್ನಗಳು ಫಲಕಾರಿಯಾಗುವಂತೆ ಸಾಕಷ್ಟು ಕಾಲಾವಕಾಶವನ್ನು ಕೊಡಬೇಕೆಂದೂ ಹೇಳಲಾಗುತ್ತದೆ. ಈಗಿನ ಮುಂಬಯಿ ಮತ್ತು ಸೌರಾಷ್ಟ್ರಗಳಿಗೆ ಫಜಲಾಲಿ ಆಯೋಗವು ಸೂಚಿಸಿದ ವಿದರ್ಭವನ್ನು ಸೇರಿಸಿ ದೊಡ್ಡ ದ್ವಿಭಾಷಾ ರಾಜ್ಯವನ್ನು ರಚಿಸಿ ಮುಂಬಯಿ ನಗರದ ಕುರಿತು ಎದ್ದಿರುವ ವಿವಾದವನ್ನು ಸದ್ಯಕ್ಕೆ ಇತ್ಯರ್ಥಪಡಿಸುವುದು ವಿಹಿತವೆಂಬ ಸೂಚನೆಗೆ ಮರಳಿ ಬಲ ಬಂದಿದೆಯಂತೆ—ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸು ಕಳೆದ ಅಕ್ಟೋಬರದಲ್ಲಿ ಮೊತ್ತ ಮೊದಲು ಸ್ವೀಕರಿಸಿದ ಗೊತ್ತುವಳಿಯಲ್ಲಿ ಈ ಸೂಚನೆ ಅಡಕವಾಗಿದ್ದಿತು. ಗುಜರಾತಿಗಳದು ಪಥ್ಯವೆನಿಸದ ದೆಸೆಯಿಂದ ಕಾಂಗ್ರೆಸಿನ ವರಿಷ್ಠರು ಈ ನಿರ್ಣಯದ ವಿರೋಧಕರಾಗಿ ನಿಂತರು. ಈಗಲಾದರೂ ಗುಜರಾತಿಗಳ ಪ್ರತಿಕ್ರಿಯೆ ಬದಲಾದ ಸೂಚನೆಯಿಲ್ಲ. ದೇಶದ ಹಿತವೆಂಬ ದೊಡ್ಡ ಮಾತಿನ ಮುಂದೆ ಅವರು ತಮ್ಮ ನಿಲುಮೆ ಬದಲಿಸಬಹುದೆಂದು ಆಶೆಯನ್ನಷ್ಟೆ ವ್ಯಕ್ತಪಡಿಸಲಾಗುತ್ತದೆ. ಇದಲ್ಲದಿದ್ದರೆ, ಮುಂಬಯಿಯು ಮಹಾರಾಷ್ಟ್ರದ ಅಂಗವೆಂದು ಒಪ್ಪುತ್ತಾ ಬಂದಿರುವ ಸಂಗತಿಯನ್ನನುಸರಿಸಿ ಮಹಾರಾಷ್ಟ್ರದಲ್ಲಿ ಅದನ್ನು ಸೇರಿಸುವುದೇ ಸೂಕ್ತವಾದ ಉಪಾಯವೆನಿಸುತ್ತದೆ.

— — —

ಗೀತೆಯ ಕೈಗನ್ನಡಿ

0 -12—0

ನವಯುಗ ಪ್ರೆಸ್, ಉಡುಪಿ.

ಭೂಸುಧಾರಣೆಯ ಕುರಿತು ಸಮಾಲೋಚನೆ

ಬದಲಾವಣೆಯ ವೇಗ ಅತಿಯಾಗಕೂಡದೆಂಬ ಮನೋಭಾವ

ರಾಜಧಾನಿಯಾದ ಹೊಸ ದಿಹಲಿಯಲ್ಲಿ ಕಳೆದ ವಾರ ರಾಷ್ಟ್ರೀಯ ಅಭಿವೃದ್ಧಿ ಮಂಡಳವು ಸಭೆ ಸೇರಿ, ಎರಡನೇ ಪಂಚವಾರ್ಷಿಕ ಯೋಜನೆಯ ಕರಡಿನ ಮೇಲೆ ಸಮಾಲೋಚನೆಗಳನ್ನು ನಡೆಸಿತು. ಸಾಮಾನ್ಯವಾಗಿ ಭೂಸುಧಾರಣೆಯ ಪ್ರಶ್ನೆಯೊಂದನ್ನು ಬಿಟ್ಟು ಉಳಿದೆಲ್ಲ ವಿಷಯಗಳಲ್ಲಿ ಕರಡನ್ನು ಅನುಮೋದಿಸಲಾಯಿತು. ಭೂಸುಧಾರಣೆಯ ಮಟ್ಟಿಗೆ ಮಾತ್ರ ರಾಜ್ಯಗಳ ಮುಖ್ಯ ಮಂತ್ರಿಗಳು ನಾನಾ ಬಗೆಯ ಆತಂಕಗಳನ್ನು ವಿವರಿಸಿದರು. ಮುಖ್ಯವಾಗಿ, ಭೂ ಹಿಡುವಳಿಯ ಪರಮ ಮಿತಿಯೊಂದನ್ನು ನಿರ್ಣಯಿಸುವ ಸಾಧ್ಯತೆಯ ಕುರಿತು ಅವರೆಲ್ಲರೂ ಸಂದೇಹವನ್ನು ವ್ಯಕ್ತಪಡಿಸಿದರು. ಈ ಕ್ರಮವನ್ನು ಕೈಗೊಳ್ಳುವುದರ ಆವಶ್ಯಕತೆಯ ಕುರಿತಾಗಿ ಯೋಜನಾ ಆಯೋಗವು ತಳೆದಿದ್ದ ನಿಲುಮೆಯ ಯೋಗ್ಯತೆಯನ್ನು ಸಹ ಅವರು ಪ್ರಶ್ನಿಸಿದರು. ಪರಿಣಾಮದಲ್ಲಿ, ಭಾರತ ಸರಕಾರದವರು ಎರಡನೇ ಯೋಜನೆಯ ಕರಡಿನಲ್ಲಿ ಯೋಜನಾ ಆಯೋಗವು ಭೂಸುಧಾರಣೆಯ ವಿಷಯದಲ್ಲಿ ಏನನ್ನು ಹೇಳಿದೆಯೊ ಅದನ್ನೆಲ್ಲ ಅಳಿಸಿ ಹಾಕಿ, ಹೊಸತಾಗಿ ಆ ಸಮಸ್ಯೆಯನ್ನು ಬಿಡಿಸುವ ಕುರಿತು ವಿವರಗಳನ್ನು ಪೂರೈಸಲು ನೋಡುವುದೆಂದು ತಿಳಿದು ಬರುತ್ತದೆ.

ಮಧ್ಯಸ್ಥರ ಉಚ್ಚಾಟನೆ

ಸಾಗುವಳಿದಾರರಿಗೂ ಸರಕಾರಕ್ಕೂ ನಡುವೆ ಮಧ್ಯಸ್ಥರು ಇರಲಾಗದೆಂಬ ತತ್ವಕ್ಕೆ ಸಾಮಾನ್ಯ ಒಪ್ಪಿಗೆಯು ಎಲ್ಲ ರಾಜ್ಯಗಳಿಂದಲೂ ದೊರೆತಿದೆ. ಎಲ್ಲ ರಾಜ್ಯಗಳೂ ಈ ಕುರಿತು ಕ್ರಮ ತೆಗೆದುಕೊಂಡಿವೆ; ಅಥವಾ ತೆಗೆದು ಕೊಳ್ಳಲು ಹವಣಿಸಿವೆ. ಆದರೆ ಭೂ ಹಿಡುವಳಿಗೊಂದು ಪರಮ ಮಿತಿಯನ್ನು ನಿರ್ಧರಿಸುವುದು ಸುಲಭವೆನಿಸಿಲ್ಲ. ಭೂಸಾಗುವಳಿಯ ಪದ್ಧತಿ, ಒಕ್ಕಲುತನದ ಕ್ರಮ, ಭೂಮಿಯ ಫಲವತ್ತತೆ ಮತ್ತಿತರ ಯೋಗ್ಯತೆ, ನೀರಾವರಿಯ ಅನುಕೂಲತೆ ಇತ್ಯಾದಿ ಸಂಗತಿಗಳು ರಾಜ್ಯದಿಂದ ರಾಜ್ಯಕ್ಕಷ್ಟೇ ಅಲ್ಲ, ರಾಜ್ಯದೊಳಗೆ ಸಹ ಒಂದು ಪ್ರದೇಶದಿಂದ ಇನ್ನೊಂದಕ್ಕಾಗುವಾಗ ವ್ಯತ್ಯಾಸಗೊಳ್ಳುತ್ತವೆ. ಆದುದರಿಂದ ಭಾರತಕ್ಕೆಲ್ಲ ಅನ್ವಯವಾಗುವಂತೆ ಒಂದೇ ಧೋರಣೆಯನ್ನು ಅನುಸರಿಸುವುದು ಎಷ್ಟಕ್ಕೂ ಸಾಧ್ಯವಿಲ್ಲ. ಮಾತ್ರವಲ್ಲ. ಭೂ ಹಿಡುವಳಿಯ ಪರಮ ಮಿತಿಯನ್ನು ಎಕ್ರೆಗಳ ಲೆಕ್ಕದಲ್ಲಿ ನಿರ್ಧರಿಸುವುದೂ ಸುಲಭವಲ್ಲ. ಈ ಕಾರಣಕ್ಕಾಗಿಯೇ ಹಲವು ರಾಜ್ಯಗಳು ಬಹಳ ನಿಧಾನವಾಗಿ ಮುಂದಡಿಯನ್ನಿಡುತ್ತವೆ; ಮತ್ತು ಈ ಕಷ್ಟವನ್ನು ಕಂಡೇ ಎರಡನೇ ಯೋಜನೆಯ ಕರ್ತರು ಭೂಹಿಡುವಳಿಯ ಪರಮ ಮಿತಿಯನ್ನು ಸಾಗುವಳಿಯ ಒಟ್ಟು ಆದಾಯದ ತಳಹದಿಯ ಮೇಲೆ ತೀರ್ಮಾನಿಸುವ ಉಪಾಯವನ್ನು ಕೈಗೊಂಡರು. ಆದರೆ ಹೀಗೆ ಆದಾಯದ ಮಿತಿಯನ್ನು ಅನುಸರಿಸುವುದು ಸಹ ಇಷ್ಟವಲ್ಲವೆಂದೂ ಅದರಿಂದ ತೊಂದರೆಗಳ ಪರಿಹಾರ ಸಂಪೂರ್ಣವಾಗಿ ಆಗಲಾರದೆಂದು ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯಲ್ಲಿ ಅಭಿಪ್ರಾಯ ಪಡಲಾಗಿದೆ.

ಮುಖ್ಯ ಮಂತ್ರಿಗಳ ಅಭಿಪ್ರಾಯ

ಕ್ಷಿಪ್ರವೂ ಕ್ರಾಂತಿಕಾರಿಯೂ ಆದ ಯಾವುದೇ ಬದಲಾವಣೆಯನ್ನು ಭೂಸುಧಾರಣೆಯ ವಿಷಯದಲ್ಲಿ ಕೈಗೊಳ್ಳಲಾಗದೆಂದು ಎಚ್ಚರಿಕೆಯನ್ನು ಕೆಲವು ಮುಖ್ಯಮಂತ್ರಿಗಳು ಕೊಟ್ಟರೆಂದು ತಿಳಿದು ಬಂದಿದೆ. ಕೃಷಿಯ ಉತ್ಪನ್ನ ಪ್ರಮಾಣದ ಮೇಲೆ ದುಷ್ಪರಿಣಾಮವನ್ನು ಮಾಡುವ ಮತ್ತು ಕೃಷಿ ಕ್ಷೇತ್ರದಲ್ಲಿನ ಭದ್ರತೆಯನ್ನೇ ಕೆಡಿಸುವ ಕ್ರಮಗಳು ಅಪೇಕ್ಷಣೀಯವಲ್ಲವೆಂದಿವರ ವಾದ. ಮೈಸೂರಿನ ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರು ಈ ವಾದವನ್ನು ಮಂಡಿಸಿದವರಲ್ಲೆಲ್ಲ ಅಗ್ರಗಣ್ಯರೆನ್ನಬಹುದು. ಯೋಜನೆಯ ಕರಡಿನಂತೆ, ಸಾಮಾನ್ಯ ಕೌಟುಂಬಿಕ ಹಿಡುವಳಿಯೆಂದು ನಿರ್ಧರಿಸಲಾಗಿರುವ ೧೬೦೦ ರೂಪಾಯಿಗಳ ನಿವ್ವಳ ವಾರ್ಷಿಕ ಆದಾಯದ ಭೂಮಿಯ ಮೂರು ಪಾಲಿನಷ್ಟನ್ನು ಹಿಡುವಳಿಯ ಪರಮ ಮಿತಿ ಎಂದು ಗೊತ್ತುಪಡಿಸಿದರೆ ಹಳ್ಳಿಯಲ್ಲಿ ಸಂಪತ್ತನ್ನು ಆರ್ಜಿಸಲು ಪ್ರಬಲ ಆತಂಕವನ್ನು ಒಡ್ಡಿದಂತಾಗುತ್ತದೆಂದೂ ಜನರು ಹಳ್ಳಿಗಳನ್ನು ತೊರೆದು ಪೇಟೆಗೆ ವಲಸೆ ಹೋಗಲು ತೊಡಗಬಹುದೆಂದೂ ಅವರು ತಿಳಿಸಿದರು. ಹಳ್ಳಿಯ ಜನತೆಗೆ ಏಳಿಗೆ ಹೊಂದುವ ಅವಕಾಶವನ್ನು ಎಷ್ಟಕ್ಕೂ ಕಡಿಮೆ ಮಾಡಕೂಡದೆಂಬ ಸಾಮಾನ್ಯ ಅಭಿಪ್ರಾಯವು ಈ ಕುರಿತು ನಡೆದ ಚರ್ಚೆಯಲ್ಲಿ ವ್ಯಕ್ತವಾಯಿತೆಂದು ಪ್ರಕಟಣೆಯೊಂದು ಹೇಳುತ್ತದೆ. ಆದರೆ ಭೂಸುಧಾರಣೆಯು ಆದಾಯದಲ್ಲಿರುವ ಅಪಾರ ವ್ಯತ್ಯಾಸದ ನಿವಾರಣೆಯನ್ನೇ ತನ್ನ ಉದ್ದೇಶವಾಗಿಟ್ಟುಕೊಂಡಿದೆ ಎಂಬ ಇನ್ನೊಂದು ಸರಿ ವಿರುದ್ಧವಾದ ಅಭಿಪ್ರಾಯವೂ ಚರ್ಚೆಯಲ್ಲಿ ಮಂಡಿಸಲ್ಪಟ್ಟಿತು. ಹೆಚ್ಚು ಜನಂಗೆ ಅಭಿವೃದ್ಧಿಯ ಅವಕಾಶವನ್ನೊದಗಿಸುವುದಕ್ಕಾಗಿಯೇ ಭೂಹಿಡುವಳಿಯ ಪರಮ ಮಿತಿ ನಿರ್ಣಯ ಅವಶ್ಯವೆಂಬವಾದವಿದು. ಅಂತೂ ರಾಜ್ಯ ಸರಕಾರಗಳಿಗೆ ವಿಶಿಷ್ಟ ಪರಿಸ್ಥಿತಿಯನ್ನನುಸರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಬಿಡುವುದೇ ಅಖಿಲ ಭಾರತಕ್ಕೆಲ್ಲ ಒಂದೇ ಧೋರಣೆಯನ್ನು ಅನ್ವಯಿಸುವುದಕ್ಕಿಂತ ಒಳ್ಳೆಯದೆಂಬ ವ್ಯಾವಹಾರಿಕ ಮೂಲ್ಯದ ತೀರ್ಮಾನಕ್ಕೆ ಎಲ್ಲರೂ ಬಂದರು.

ವಿರೋಧಕರ ನಿಲುಮೆ.

ವರ್ಷಕ್ಕೆ ೩೬೦೦ ರೂಪಾಯಿಗಳ ನಿವ್ವಳ ಆದಾಯವು ನಿರ್ದಿಷ್ಟಪಡಿಸಿದ ಪರಮ ಮಿತಿಯ ಭೂಹಿಡುವಳಿಯಿಂದ ಪ್ರತಿ ವರ್ಷವೂ ಬಂದೇ ತೀರುವುದೆಂದು ನಂಬುವುದು ಹೇಗೆ? ಎಂಬ ಮೂಲಭೂತ ಪ್ರಶ್ನೆಯೇ ಇಲ್ಲಿ ವಿವಾದವೇಳುವಂತೆ ಮಾಡಿತು. ಹಣ ಮತ್ತು ಸರಕಿನ ಪರಸ್ಪರ ಸಂಬಂಧವು ಯಾವ ಕಾಲದಲ್ಲಿಯೂ ಸ್ಥಿರವಾಗಿರುವುದಿಲ್ಲ. ಒಂದು ರೂಪಾಯಿಗೆ ಸಿಗುವ ಅಕ್ಕಿಯು ಕಾಲಕಾಲಕ್ಕೆ ಬೇರೆ ಬೇರೆ ಪ್ರಮಾಣದಲ್ಲಿರುವುದೆಂಬುದು ಅನುಭವ ಸಿದ್ಧವಾದ ವಿಷಯ. ಕೃಷಿಯಿಂದ ದೊರೆತ ಉತ್ಪನ್ನಗಳ ಬೆಲೆಯನ್ನು ಸ್ಥಿರವಾಗಿಡಲು ಸರಕಾರವು ಕ್ರಮಗಳನ್ನು ಕೈಗೊಂಡರೆ

(೮ನೇ ಪುಟ ನೋಡಿರಿ)

PT. AMBLAY RAMASWAMIER'S 98 Yrs. Renowned, Specifics

— SANTHANA SINDHURA —

(Pkts. for Women) Routs out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHER-HOOD, by ending STERILITY.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN,

THOUSANDS without CHILDREN 16-18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE Reyly with details of the disease.

A. RAMASWAMIERSON & CO.

628, "SANTHANA SINDHURA SADANA"

Hundred Ft. Road, Rice Mill Cross, MYSORE (South India).

ಮಹಿಳಾ ಸಾಹಿತ್ಯ! ನವೀನ ಪುಸ್ತಕ!

ಕುಮಾರಿ ಸಿ. ಯಶೋದಾ ಅವರು ಬರೆದ

ಬಾಳಿನ ಬೆಳಕು

ಬಾಳಿನ ನೈಜ ಚಿತ್ರಗಳನ್ನು ಹೃದಯಂಗಮವಾಗಿ ಚಿತ್ರಿಸುವ ಐದು ನೂತನ ಕತೆಗಳ ಸಂಗ್ರಹ. ಸ್ತ್ರೀ ಪುರುಷರೆಲ್ಲರೂ ಅವಶ್ಯ ಓದಲೇ ಬೇಕಾದ ಬಾಳ್ನೋಟಗಳು!

ಬೆಲೆ 0—12—0. (0—14—0 ಕಳಿಸಿದರೆ ಒಂದು ಪ್ರತಿಯನ್ನು ಬುಕ್ ಪೋಸ್ಟು ಮಾಡಬಹುದು.)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಬುಕ್ ಡಿಪ್ಪೋ, ಉಡುಪಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೦-೫-'೫೨	೩೬

ಕಾಂಗ್ರೆಸಿನ ಕಾರ್ಯಕ್ರಮ

ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರುಗಳ ಮತ್ತು ಕಾರ್ಯದರ್ಶಿಗಳ ಸಮ್ಮೇಳನವೊಂದು ಹೊಸ ದಿಹಲಿಯಲ್ಲಿ ಕಳೆದ ವಾರ ಜರಗಿ ಕಾಂಗ್ರೆಸನ್ನು ಸರ್ವ ರೀತಿಯಿಂದಲೂ ಬಲಗೊಳಿಸುವ ಮತ್ತು ಚೈತನ್ಯಯುಕ್ತವಾಗಿಯೂ ಚಟುವಟಿಕೆತುಂಬಿರುವಂತೆಯೂ ಮಾಡುವ ಉಪಾಯುಗಳನ್ನವರು ಪರ್ಯಾಲೋಚಿಸಿದ್ದಾರೆಂದು ವರದಿಯಾಗಿದೆ. ಸಂಸ್ಥೆಯ ಸಂಘಟನೆ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಆಗಾಗ್ಗೆ ಇಂಥ ಸಮಾಲೋಚನೆಗಳನ್ನು ನಡೆಸುವುದು ತೀರ ಅಪೇಕ್ಷಣೀಯವಾದ ವಿಷಯವೇ ನಿಜ. ಈ ಸಲದ ಸಮ್ಮೇಳನಕ್ಕಂತೂ ಇನ್ನೂ ಒಂದು ದೃಷ್ಟಿಯಿಂದ ಮಹತ್ವವು ಬರುತ್ತದೆ— ಮುಂದಿನ ಕೆಲವು ತಿಂಗಳುಗಳಲ್ಲಿ ಮಹಾ ಚುನಾವಣೆಯು ಭಾರತದಾದ್ಯಂತ ನಡೆಯಲಿರುವುದರಿಂದ ಅದರಲ್ಲಿ ಯಶಸ್ವಿ ಸ್ಪರ್ಧೆಯನ್ನು ಹೂಡಲು ಕಾಂಗ್ರೆಸು ಈಗಿನಿಂದಲಾದರೂ ಸಿದ್ಧತೆಯನ್ನು ನಡೆಸುವುದು ಅತ್ಯಾವಶ್ಯಕವಾಗಿದೆ: ಇದನ್ನು ಮೊನ್ನೆಯಷ್ಟೇ ಜರಗಿದ ಸಮ್ಮೇಳನದಲ್ಲಿ ಮನಗಂಡಿರುವರೆಂದು ಭಾವಿಸಲು ಎಡೆಯಿದೆ ಗೃಹಮಂತ್ರಿ ಪಂಡಿತ ಪಂತರು ಸಮ್ಮೇಳನದಲ್ಲಿ ಮಾತನಾಡುತ್ತಾ ಕಾಂಗ್ರೆಸಿಗರು ಐಕ್ಯ ಮನೋಭಾವವನ್ನೂ ರಚನಾತ್ಮಕ ಕಾರ್ಯಗಳಲ್ಲಿ ಆಸಕ್ತಿಯನ್ನೂ ಹೊಂದಿ ನಿಷ್ಠೆಯಿಂದಲೂ ಶ್ರದ್ಧೆಯಿಂದಲೂ ಜನಸೇವೆಯಲ್ಲಿ ನಿರತರಾಗಿರುವುದನ್ನೆ ಚುನಾವಣೆಯಲ್ಲಿನ ಯಶಸ್ಸು ಮತ್ತು ಇನ್ನಿತರ ಕಾಲದಲ್ಲಿನ ಜನಪ್ರಿಯತೆ ಅವಲಂಬಿಸಿವೆ ಎಂದಿರುವರೆಂದು ತಿಳಿದು ಬರುತ್ತದೆ. ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರಾದರೂ ಇದೇ ಮಾತನ್ನು ಒತ್ತಿ ಹೇಳುತ್ತಾ ಕಾಂಗ್ರೆಸಿನ ಸದಸ್ಯತ್ವವನ್ನು ಪಡೆದ ಜನರ ಸಂಖ್ಯಾ ಪ್ರಮಾಣಕ್ಕಿಂತಲೂ ನಮಗೆ ಅಂಥವರ ಯೋಗ್ಯತೆಯೇ ಮುಖ್ಯವಾದುದಾಗಿರಬೇಕೆಂದು ನುಡಿದರೆಂದು ಹೇಳಲಾಗಿದೆ. ವಿಶೇಷ ಚಟುವಟಿಕೆಗಳನ್ನು ಕಾಂಗ್ರೆಸಿನ ಸದಸ್ಯರೆಲ್ಲರೂ ತೋರಿಸಬೇಕು; ಈಗಾಗಲೇ ಸಕ್ರಿಯ ಸದಸ್ಯರೆನಿಸಿ ಕೊಂಡವರು ತಮ್ಮ ಕಾರ್ಯಕ್ಷಮತೆಯನ್ನು ಇನ್ನಷ್ಟು ವರ್ಧಿಸಿಕೊಳ್ಳಬೇಕು –ಒಟ್ಟಾರೆ ಮೇಲೆ ಜನಸೇವೆಯ ನಾನಾ ರಂಗಗಳಲ್ಲಿ ಕಾಂಗ್ರೆಸಿಗರು ಏಕೋಭಾವದಿಂದ ಪ್ರವೇಶಿಸಿ ಪರಿಶ್ರಮವಹಿಸಿ ಕೆಲಸ ಮಾಡಬೇಕು ಎಂದವರ ಉಪದೇಶ. ಹೀಗೆ ಕಾಂಗ್ರೆಸಿಗರಿಗೆ ಬುದ್ಧಿವಾದವನ್ನು ಹೇಳುವವರ ಕೊರತೆ ಇಡಿ ಎಂದು ನಮಗೆ ತೋರುತ್ತಿಲ್ಲ-ಕೆಲಸ ಮಾಡುವವರ ಅಭಾವವೇ ಕಾಂಗ್ರೆಸಿನಲ್ಲಿದೆ ಎಂದು ನಮ್ಮ ಅಭಿಪ್ರಾಯ. ಚುನಾವಣೆಯ ಕಾಲವು ಸಮೀಪಿಸಿದಾಗ ಹೀಗೆ ಕಾಂಗ್ರೆಸಿಗರಿಗೆ ಎಚ್ಚರಿಕೆಯನ್ನು ಕೊಟ್ಟಷ್ಟಕ್ಕೆ ಪ್ರಯೋಜನ ಲಭ್ಯವಾಗುವುದೆಂದು ವರಿಷ್ಠರು ತಿಳಿದುಕೊಂಡರೆ ಅದು ತಪ್ಪೆನಿಸುವುದು ಖಂಡಿತ ಅಷ್ಟೇ ಏಕೆ, ಹಾಸ್ಯಾಸ್ಪದವಾದ ಕೃತಕ ಉತ್ಸಾಹವೆಂದೂ ಜನತೆ ಭಾವಿಸುವುದು ತಪ್ಪದು. ಚುನಾವಣೆಯ ಕಾಲದಲ್ಲಿಯಷ್ಟೆ ತಮ್ಮನ್ನು ಕಾಣುವವಷ್ಟು ಔದಾರ್ಯವನ್ನು ತೋರಿಸಿ, ಮೆತ್ತಗೆ ಮಾತನಾಡುವಷ್ಟು ಸೌಜನ್ಯವನ್ನು ಪ್ರದರ್ಶಿಸಿ, ಮತದಾನವನ್ನು ಯಾಚಿಸಿ, ಆದರ ಭರವಸೆಯನ್ನು ಪಡೆದು ಹೋದ ಸ್ಥಳೀಯ ಧುರೀಣರು, ಮತ್ತೆ ತಮ್ಮನ್ನು ವಿಚಾರಿಸಿಕೊಳ್ಳಲು ಬಂದೇ ಇಲ್ಲವೆಂಬ ಸತ್ಯ ಸಂಗತಿಯನ್ನು ಮತದಾರರಾದವರು ಮರೆಯುವಂತಿಲ್ಲ. ಆದುದರಿಂದ ಕೇವಲ ಚುನಾವಣೆಗಾಗಿಯೇ ನಡೆಸುವ ಚಟುವಟಿಕೆಯು ಸಂಸ್ಥೆಯ ಶ್ರೇಯಸ್ಸಿನ ದೃಷ್ಟಿಯಿಂದ ಹೆಚ್ಚು ಪ್ರಯೋಜಕವೆನಿಸಲಾರದು. ಚುನಾವಣೆಯ ಕಾಲದ ಉತ್ಸಾಹದ ಕಾಲಂಶದಷ್ಟಾದರೂ ಲವಲವಿಕೆಯು ಚುನಾವಣೆಯ ಬಳಿಕದ ಐದು ವರ್ಷಗಳ ವರೆಗೂ ಸ್ಥಿರವಾಗಿ ನಮ್ಮ ಕಾರ್ಯಕರ್ತರಲ್ಲಿ ಉಳಿದರೆ, ಮತ್ತು ಆಗ ಕೆಲಸದಲ್ಲಿ ನಿರತರಾದ ಜನರಲ್ಲಿ ಹತ್ತಕ್ಕೊಬ್ಬನಂತೆಯಾದರೂ ಸದಾಕಾಲ ರಚನಾತ್ಮಕ ಕ್ರಿಯೆಗಳಲ್ಲಿ ಆಸಕ್ತಿ ವಹಿಸುತ್ತಾ ಹೋದರೆ—ಸಂಸ್ಥೆಯ ಹೆಸರು ಕೆಡದೆ, ಜನರ ಪಾಲಿಗೆ ಗೌರವಾರ್ಹವಾಗಿಯೇ ಉಳಿಯುವ ಆಶೆಯನ್ನು ಕಟ್ಟಿಕೊಳ್ಳಬಹುದು. ಹಾಗೇನೂ ಆಗುವಂತಿಲ್ಲವಾದರೆ, ಚುನಾವಣೆಯ ಉತ್ಸಾಹವನ್ನು ನದಿಗಳಿಗೆ ಬರುವ ನೆರೆಯ ನೀರಿನೊಡನೆ ಹೋಲಿಸಬೇಕಾಗುತ್ತದೆ— ಕಾಂಗ್ರೆಸಿನ ವರಿಷ್ಠರು ನೆರೆಯ ನೀರಿನಂತಿರುವ ಉತ್ಸಾಹವೇ ಕಾಂಗ್ರೆಸಿನಲ್ಲಿರಬೇಕೆಂದು ಎಷ್ಟಕ್ಕೂ ಹೇಳಿದವರಲ್ಲವೆಂದು ನಾವು ನಂಬುತ್ತೇವೆ. ಅವರು ವಿಧಾಯಕ ಚಟುವಟಿಕೆಗಳನ್ನೆ ಕಾಂಗ್ರೆಸಿನ ಜೀವನಾಡಿ ಎಂದು ಭಾವಿಸಿರುವರೆಂದೇ ನಮ್ಮ ವಿಶ್ವಾಸ. ಕಾಂಗ್ರೆಸಿನ ಸದಸ್ಯತ್ವ ಹೆಚ್ಚುತ್ತಾ ಹೋಗಬೇಕು: ಅವರಲ್ಲಿ ಯೋಗ್ಯತಾವಂತರೇ ಅಧಿಕ ಸಂಖ್ಯೆಯಲ್ಲಿರಬೇಕು; ಇವರೆಲ್ಲರೂ ರಚನಾತ್ಮಕ ರಂಗದಲ್ಲಿ ವಿಶೇಷ ಆಸಕ್ತಿ ವಹಿಸಿ ದುಡಿಯಬೇಕು; ರಾಜಕೀಯ ರಂಗದ ಕೆಲಸಗಾರರಿಗಿಂತಲೂ ಮಾನಸೇವೆ ನಡೆಸುವ ಈ ಕಾರ್ಯಕರ್ತರಿಗೆ ಹೆಚ್ಚಿನ ಮನ್ನಣೆಸಲ್ಲಬೇಕು — ಎಂಬೀ ಮಾತಿನಲ್ಲಿ ಕಾಂಗ್ರೆಸಿನ ವರಿಷ್ಠರ ಅಭಿಪ್ರಾಯಗಳನ್ನ ಮೊನ್ನೆಯ ಸಮ್ಮೇಳನದ ಕಾರ್ಯಕಲಾಪಗಳ ಮೇಲಿಂದ ಸಂಗ್ರಹಿಸಬಹುದು. ಈ ಉದ್ದೇಶಕ್ಕಾಗಿ ಅವರು ಅಷ್ಟಾಂಗಗಳ ಕಾರ್ಯಕ್ರಮವೊಂದನ್ನು ಎಲ್ಲ ಕಾಂಗ್ರೆಸಿಗರ ಅನುಸರಣೆಗಾಗಿ ನಿಗದಿಗೊಳಿಸಿದ್ದಾರೆ: ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಯ ರಂಗದಲ್ಲಿ ಜನತೆಯ ಮಂತಿಗೆ ಹೆಚ್ಚುಹೆಚ್ಚಾಗಿ ಸಿಗುವಂತೆಯೂ ಜನರಿಗೆ ಉಪಯುಕ್ತವಾದ ಕೆಲಸಗಳೇ ನಡೆಯುವಂತೆಯೂ ನೋಡಿಕೊಳ್ಳುವುದು, ಅಭಿವೃದ್ಧಿ ಪ್ರಯತ್ನಗಳಲ್ಲಿ ಸ್ಥಳೀಯ ಸಂಸ್ಥೆಗಳೂ ಊರಿನ ಮುಖಂಡರೂ ಹೆಚ್ಚು ಆಸಕ್ತಿವಹಿಸುವಂತೆ ಉತ್ತೇಜನೆ ಕೊಡುವುದು, ಶ್ರಮದಾನ ಮತ್ತಿತರ ಸಾರ್ವಜನಿಕ ಸಹಕಾರದ ಕಾರ್ಯಕ್ರಮಗಳನ್ನು ಸಂಘಟಿಸುವುದು— ಇವುಗಳಲ್ಲಿ ಕಾಂಗ್ರೆಸಿಗರು ವಿಶೇಷ ಪಾತ್ರವನ್ನು ವಹಿಸುವುದು ಇಷ್ಟವೆಂದು ಹೇಳಲಾಗಿದೆ. ಸಮಾಜವಿಕಾಸ ಯೋಜನೆಯ ಅಧಿಕಾರಿಗಳಾದ ಶ್ರೀ ಡೇಯವರು ಜನರಲ್ಲಿ ಉತ್ಸಾಹವನ್ನು ಹುಟ್ಟಿಸುವ ಸ್ಥಳೀಯ ಧುರೀಣತ್ವವಿಲ್ಲದಿದ್ದರೆ, ಕೇವಲ ಸರಕಾರಿ ಮಟ್ಟದ ಅಧಿಕಾರಿಗಳ ಕೆಲಸದಿಂದಲೇ ಜನರ ಮನೋಭಾವನೆಯಲ್ಲಿ ಕ್ರಾಂತಿಕಾರಿ ಪರಿವರ್ತನೆಗಳನ್ನು ರೂಢಿಸುವುದು ಸಾಧ್ಯವಾಗದೆಂದು ಹೇಳಿದ್ದಾರೆ. ಆದುದರಿಂದ ಕಾಂಗ್ರೆಸಿಗರು ಅತ್ಯವಶ್ಯವಾಗಿ ಕೈಗೊಳ್ಳಬೇಕಾದ ಕೆಲಸಗಳಲ್ಲಿ ಮೇಲಿನದಕ್ಕೆ ಅಗ್ರಸ್ಥಾನ ಸಲ್ಲುವುದೆನ್ನಬಹುದು. ಎರಡನೇ ಸ್ಥಾನವು ಸಾಗುವಳಿದಾರರ ಯೋಗಕ್ಷೇಮಾಭಿವೃದ್ಧಿಯ ಉದ್ದೇಶದಿಂದ ನಡೆಸುವ ಕೆಲಸಗಳಿಗೆ ಸಲ್ಲುತ್ತದೆ: ಸರಕಾರದವರು ಸಾಗುವಳಿದಾರರ ಹಿತಾಸಕ್ತಿಗಳನ್ನು ರಕ್ಷಿಸುವ ಶಾಸನ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯವನ್ನು ಮಾಡುತ್ತಿದ್ದಂತೆಯೇ ಸ್ವತಃ ಸಾಗುವಳಿದಾರರ ಕಷ್ಟಗಳೇನೆಂಬುದನ್ನು ವಿಚಾರಿಸಿ, ಅವುಗಳ ನಿವಾರಣೆಗೆ ಪ್ರಯತ್ನಶೀಲರಾಗುವುದೂ ಸ್ಥಳೀಯ ಕಾಂಗ್ರೆಸಿಗರ ಕರ್ತವ್ಯ. ಸರಕಾರವು ಸಾಗುವಳಿದಾರರಿಗೆ ರಕ್ಷಣೆ ಕೊಡುವ ಉದ್ದೇಶದಿಂದ ಮಾಡಿದ ಶಾಸನಗಳ ಉಪಯುಕ್ತತೆಯನ್ನು ಇವರು ಪ್ರಚಾರಪಡಿಸಬೇಕು; ಸಾಲ, ಧನ ಸಹಾಯ, ಉತ್ತಮ ಜಾತಿಯ ಸುಧಾರಿತ ಗೊಬ್ಬರ ಮತ್ತು ಬೀಜಗಳ ಪೂರೈಕೆ, ಜಾನುವಾರುಗಳ ತಳಿ ಸಂವರ್ಧನೆ ಮತ್ತು ರೋಗ ನಿವಾರಣೆ ಇತ್ಯಾದಿ ಕ್ಷೇತ್ರಗಳಲ್ಲಿ ಸರಕಾರದ ಔದಾರ್ಯದ ಪ್ರಯೋಜನವು ಹೆಚ್ಚು ಸಂಖ್ಯೆಯ ರೈತರಿಗೆ ಸಿಗುವಂತೆ ಕಾಂಗ್ರೆಸು ಕಾರ್ಯಕರ್ತರು ನೋಡಿಕೊಳ್ಳಲು ತಪ್ಪಬಾರದು. ಹರಿಜನೋದ್ಧಾರ, ಖಾದಿ ಮತ್ತು ಗ್ರಾಮೋದ್ಯೋಗಗಳ ಪ್ರಚಾರ, ಸಾಮಾಜಿಕ ಶಿಕ್ಷಣವನ್ನು ನೀಡುವ ಚಟುಪಟಿಕೆಗಳ ಸಂಘಟನೆ, ಸಾಂಸ್ಕೃತಿಕ ಪುನರುಜ್ಜೀವನದಲ್ಲಿ ಆಸಕ್ತಿಯ ಪೋಷಣೆ, ಶಿಸ್ತು ಮತ್ತು ತರಬೇತಿಯ ಕೇಂದ್ರಗಳ ನಡೆಸುವಿಕೆ ಇತ್ಯಾದಿ ಕಾರ್ಯಕ್ರಮಗಳು ಆನಂತರ ಬರುತ್ತವೆ. ಕಲ್ಯಾಣ ರಾಜ್ಯದ ಸ್ಥಾಪನೆಯನ್ನು ಸಮಾಜವಾದಿ ಆದರ್ಶದ ತಳಹದಿಯ ಮೇಲೆ ಮಾಡಲು ಉದ್ದೇಶಿಸುವ ಕಾಂಗ್ರೆಸಿನಂಥ ಪ್ರಬಲ ರಾಷ್ಟ್ರೀಯ ಸಂಸ್ಥೆಯು ತನ್ನ ಶಕ್ತಿಯನ್ನು ಮೇಲಿನ ಮಾದರಿಯ ಚೈತನ್ಯಪೂರ್ಣ ಕ್ರಿಯೆಗಳಿಂದಾಗಿಯೇ ಬೆಳೆಸಿಕೊಳ್ಳಬಲ್ಲುದು. ಮೂಲಭೂತವಾದ ಈ ಸತ್ಯವನ್ನು ಕೇವಲ ಚುನಾವಣೆಯ ಮಟ್ಟಿಗಷ್ಟೇ ಕಾಂಗ್ರೆಸಿಗರು ನೆನಪಿಡದೆ— ಸದಾಕಾಲವೂ ಸ್ಮರಣೆಯಲ್ಲಿಟ್ಟುಕೊಂಡು ಸ್ಫೂರ್ತಿಗೊಳ್ಳುವರೆಂದು ನಾವು ಆಶಿಸುತ್ತೇವೆ.

ಮಗಳಿಗೂ ಮಗನಂತೆ ಪಾಲು
ಲೋಕ ಸಭೆಯ ಬಹುಮತದ ಬೆಂಬಲ

ಲೋಕ ಸಭೆಯಲ್ಲಿ ಹಿಂದು ಉತ್ತರಾಧಿಕಾರ ವಿಧೇಯಕದ ಚರ್ಚೆಯು ಇದೇ ಬುಧವಾರ ಮುಕ್ತಾಯಗೊಂಡಿದೆ: ರಾಜ್ಯ ಸಭೆಯಲ್ಲಿ ಈ ಮೊದಲೇ ಈ ವಿಧೇಯಕವು ಕೆಲವು ತಿದ್ದುಪಡಿಗಳೊಡನೆ ಸ್ವೀಕಾರಗೊಂಡಿದೆ; ಆದರೆ ಈಗ ಲೋಕ ಸಭೆಯು ಬೇರೆ ಕೆಲವು ತಿದ್ದುಪಡಿಗಳನ್ನು ಮಾಡಿರುವುದರಿಂದ ಇದೇ ಗುರುವಾರ (ದಿನಾಂಕ ೧೦) ರಾಜ್ಯ ಸಭೆಯು ಪುನಃ ವಿಧೇಯಕದ ಮೇಲೆ ಚರ್ಚೆಯನ್ನು ಪ್ರಾರಂಭಿಸುವುದೆಂದು ತಿಳಿದು ಬರುತ್ತದೆ.

ಕಾಂಗ್ರೆಸಿಗರಿಂದಲೂ ಆಕ್ಷೇಪ

ಚರ್ಚೆಯ ಕಾಲದಲ್ಲಿ ಅನೇಕ ಕಾಂಗ್ರೆಸು ಸದಸ್ಯರು ಇಂಥ ವಿಧೇಯಕದ ಔಚಿತ್ಯವನ್ನು ಕುರಿತು ಸಂದೇಹ ವ್ಯಕ್ತಪಡಿಸಿದರು. ಮಗಳಿಗೂ ಮಗನಂತೆಯೇ ಪಾಲುಕೊಡುವ ಪದ್ಧತಿಯನ್ನು ವಿಧ್ಯುಕ್ತರೀತಿಯಲ್ಲಿ ಪುರಸ್ಕರಿಸುವುದು ಅಪೇಕ್ಷಣೀಯವಲ್ಲವೆಂದು ಕಾಂಗ್ರೆಸಿನ ಮಾಜಿ ಅಧ್ಯಕ್ಷ ಶ್ರೀ ಟಂಡನ್ನರಂಥವರು ಹೇಳಿದರು. ಶ್ರೀಮತಿ ಉಮಾ ನೆಹರುರಂಥ ಮಹಿಳಾ ಸದಸ್ಯರು ಸಹ ಅದೆ ಮನಸ್ಸಿನ ಬೆಂಬಲವನ್ನಷ್ಟೆ ಮಸೂದೆಗೆ ನೀಡಿದರು. ಆದರೆ ಸಭೆಯ ಬಹುಮತದ ಅಭಿಪ್ರಾಯವು ವಿಧೇಯಕಕ್ಕೆ ಅನುಕೂಲವಿದ್ದಿತು; ಕೆಲವು ತಿದ್ದುಪಡಿಗಳನ್ನೂ ಸಭೆ ಒಪ್ಪಿಕೊಂಡಿತು

ವಿಶೇಷವಾದ ತೆರಿಗೆ

ಯೋಜನಾ ಆಯೋಗವು ಎರಡನೇ

ಮಂಗಳೂರಿನಲ್ಲಿ ಕೇಂದ್ರ ಮಂತ್ರಿಗಳು

ಭಾರತ ಸರ್ಕಾರದ ಸಂಪರ್ಕ ಖಾತೆಯ ಮಂತ್ರಿಗಳಾದ ಶ್ರೀ ಜಗಜ್ಜೀವನ ರಾಮರು ಮಂಗಳೂರಿಗೆ ತಾ. ೬ರಂದು ಆಗಮಿಸಿದರು. ಮಂಗಳೂರಿನ ನಗರಸಭೆಯ ಪರವಾಗ ಅವರನ್ನು ಮಾನಪತ್ರವಿತ್ತು ಸತ್ಕರಿಸಲಾಯಿತು. ವಾಣಿಜ್ಯ ಸಂಘದವರು ಅವರಿಗೊಂದು ಮಾನಪತ್ರವನ್ನು ಅರ್ಪಿಸಿದರು. ಬಂದರ ಪ್ರದೇಶವನ್ನೂ ಅವರು ಸಂದರ್ಶಿಸಿ ಅಲ್ಲಿ ನೀಡಲಾದ ಮನವಿಯನ್ನೂ ಸ್ವೀಕರಿಸಿದರು. ಮಂತ್ರಿಗಳು ತಮ್ಮ ಅಲ್ಪಾವಧಿ ಸಂದರ್ಶನ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಹರಿಜನ ವಿದ್ಯಾರ್ಥಿ ಸಮ್ಮೇಳನವನ್ನು ಉದ್ಘಾಟಿಸಿದರಲ್ಲದೆ ಕಾಂಗ್ರೆಸು ಕಾರ್ಯಕರ್ತರನ್ನು ಉದ್ದೇಶಿಸಿ ಭಾಷಣವಿತ್ತರು. ಅಂದೇ ಅಪರಾಹ್ನ ಮುಂಬಯಿಗೆ ಅವರು ತೆರಳಿದರು.

ಯೋಜನೆಯ ಅವಧಿಯಲ್ಲಿ ತೆರಿಗೆಗಳ ಮೂಲಕ ಸಂಗ್ರಹಿಸಬೇಕೆಂದ ಹಣವನ್ನು ೫೦ ಕೋಟಿ ರೂಪಾಯಿಗಳಿಂದ ೭೫೦ ಕೋಟಿ ರೂಪಾಯಿಗಳಿಗೇರಿಸಬೇಕೆಂದು ಈಗ ಸಂಕಲ್ಪಿಸಿದೆ. ಇದರಿಂದ ಜನರಲ್ಲಿ ಹೆಚ್ಚಿನ ಹಣವುಳಿಯದೆ ಅತಿ ಪ್ರಸರಣ ಹಾವಳಿ ಬಹಳಷ್ಟು ತಗ್ಗುವುದೆನ್ನಲಾಗಿದೆ: ಇತರ ದೇಶಗಳೊಡನೆ ಹೋಲಿಸಿದರೆ ಭಾರತದಲ್ಲಿ ರಾಷ್ಟ್ರೀಯ ಆದಾಯದ ೭% ಮಾತ್ರ ವಿಧಿಸುವ ಕರಭಾರದ ಪ್ರಮಾಣವು ತೀರ ಕಡಿಮೆಯೆಂದು ಕಂಡು ಬರುತ್ತದೆ. ಅಲ್ಲದೆ ಯೋಜನೆಗಾಗಿ ಹಣ ಬೇಕಾಗಿರುವುದರಿಂದ ಜನರಿಂದಲೇ ಅದನ್ನು ಪಡೆಯಲು ನೋಡುವುದು ವಿಹಿತವೆಂದು ಸರಕಾರ ಭಾವಿಸಿದೆ. ಪ್ರಮುಖ್ಯವಾಗಿ ಮಾರಾಟಕರ, ಭೂಕಂದಾಯದ ಮೇಲೆ ವಿಶೇಷ ತೆರಿಗೆ, ಕೃಷಿಯ ಆದಾಯದ ಮೇಲೆ ತೆರಿಗೆ, ನೀರಾವರಿ ಮತ್ತು ಅಭಿವೃದ್ಧಿ ತೆರಿಗೆ ಇವೆಲ್ಲ ಹೆಚ್ಚಿಕೊಳ್ಳುತ್ತವೆ.

ಅಭಿವೃದ್ಧಿ ಕಾರ್ಯಕ್ರಮ

ರಾಷ್ಟ್ರೀಯ ಅಭಿವೃದ್ಧಿ ಮಂಡಳದ ಸಭೆಯಲ್ಲಿ ಮಾತನಾಡುತ್ತಾ ನೆಹರೂಗಳು 'ಆದಷ್ಟು ಬೇಗನೇ ನಾವು ದೇಶದಲ್ಲಿ ಔದ್ಯೋಗೀಕರಣವನ್ನು ಸಾಧಿಸಬೇಕೆಂದಿದ್ದೇವೆ' ಎಂದಿದ್ದಾರೆ. ಕೈಗಾರಿಕೆಗಳು ಬೆಳೆಯದಿದ್ದರೆ ಸಂಪತ್ತು ಮತ್ತು ಉದ್ಯೋಗದ ನೆಲೆಯಿಂದ ಪ್ರಗತಿಯೇನೂ ಆಗಲಾರದು; ರಾಷ್ಟ್ರದ ಸ್ವಾತಂತ್ರ್ಯವನ್ನು ಅಬಾಧಿತವಾಗಿಡುವುದು ಕೂಡ ಸಾಧ್ಯವಾಗಲಾರದು ಎಂದು ನೆಹರುಗಳ ಅಭಿಪ್ರಾಯ. ದೇಶದ ಔದ್ಯೋಗೀಕರಣವು ಭಾರವಾದ, ಮೂಲಭೂತ ಕೈಗಾರಿಕೆಗಳ, ತಳಹದಿಯ ಮೇಲೆ ನಿಂತಿರಬೇಕೆಂದೂ ಅವರು ತಿಳಿಸಿದ್ದಾರೆ. ಇಷ್ಟರಿಂದ, ಕೃಷಿ ಕ್ಷೇತ್ರವನ್ನು ದೇಶವು ಅಲಕ್ಷಿಸಬಹುದೆಂದು ಅರ್ಥವಲ್ಲ—ಆಹಾರೋತ್ಪಾದನೆಗೆ ನಾವು ಇನ್ನು ಮುಂದೆಯೂ ಹೆಚ್ಚಿನ ಮಹತ್ವವನ್ನು ಕೊಡಲೇಬೇಕು. ವಾಸ್ತವಿಕವಾಗಿ, ನಮ್ಮ ಔದ್ಯೋಗೀಕರಣದ ಆಶೆಯು ವಿಪುಲ ಆಹಾರೋತ್ಪಾದನೆಯಲ್ಲಿ ಕೊರತೆಯನ್ನು ದೇಶವು ಅನುಭವಿಸಲಿಕ್ಕಿಲ್ಲವೆಂಬ ಭರವಸೆಯ ಮೇಲೆ ಆಧರಿತವಾಗಿದೆ' ಎಂದಿದ್ದಾರೆ ನೆಹರು.

ಕಮ್ಯುನಿಸ್ಟರ ಹೃದಯ

ಕೇಂದ್ರದ ಕೂಲಿಕಾರ ಸಚಿವ ಶ್ರೀ ಖಂಡೂಭಾಯಿ ದೇಸಾಯಿಯವರು ಪಾಟ್ನಾಟಿನಲ್ಲಿ ಈಚೆಗೆ ನಡೆದ ಕಮ್ಯುನಿಸ್ಟರ ಪರಿಷತ್ತಿನ ಕಾರ್ಯಕಲಾಪಗಳ ಕುರಿತು ಮಾತನಾಡುತ್ತಾ ಕಮ್ಯುನಿಸ್ಟರ ಧೋರಣೆಯಲ್ಲಿ ಈಗ ಕಂಡು ಬರುತ್ತಿರುವ ಬದಲಾವಣೆಯು ತಾತ್ಕಾಲಿಕ ಸ್ವರೂಪದ್ದೂ ಕುತಂತ್ರದಿಂದ ಕೂಡಿದ್ದೂ ಆಗಿದ್ದರೆ ನಾವು ಜಾಗರೂಕತೆಯಿಂದಿರಬೇಕಾಗಿದೆ ಎಂದು ಎಚ್ಚರವಿತ್ತಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಭಾರತೀಯ ಕಮ್ಯುನಿಸ್ಟರು ಪಕ್ಷದ ತಾಳಕ್ಕೆ ಸರಿಯಾಗಿ ಹೆಜ್ಜೆ ಹಾಕುತ್ತಾ ಬಂದಿದ್ದಾರೆ; ಅವರು ನಮ್ಮ ದೇಶದೊಡನೆ ನಾವು ರಷ್ಯವನ್ನು ಸ್ಥಾಪಿಸಲು ಆಸಮರ್ಥರಂತೆ ತೋರಿಸಿಕೊಂಡಿದ್ದಾರೆ. ಪರದೇಶವೊಂದರ ಆದರ್ಶ ಮತ್ತು ಸಂಬಂಧವನ್ನು ತೊರೆದರೆ ಮತ್ತು ಈಗ ಕಮ್ಯುನಿಸ್ಟರು ತೋರಿಸಿರುವ ಧೋರಣೆಯ ಬದಲಾವಣೆಯು ನಿಜವಾದುದಾಗಿದ್ದರೆ, ಅವರು ಭಾರತೀಯ ರಾಜಕೀಯ ರಂಗದ ಪ್ರತಿಪಕ್ಷದ ಸ್ಥಾನದಲ್ಲಿ ಇರಲು ಅರ್ಹರೆಂದು ಶ್ರೀ ದೇಸಾಯಿಯವರ ಅಭಿಮತ. ಶಾಂತ ಹಾಗು ಪ್ರಜಾಸತ್ತಾತ್ಮಕ ಮಾರ್ಗದಿಂದ ದೇಶವನ್ನು ಪುನಾರಚಿಸುವ ಕಾರ್ಯದಲ್ಲಿ ಯಾರಿಂದ ನೆರವಿನ ಹಸ್ತ ದೊರೆತರೂ ಅದನ್ನು ಸ್ವೀಕರಿಸಲು ಸಿದ್ಧವಿರಬೇಕೆಂದೂ ಅವರೆಂದರು.

ಪರಿಮಿತಸಹಕಾರ

ಮದ್ರಾಸಿನ ಶಾಸನಾಂಗದಲ್ಲಿ ಕಮ್ಯುನಿಸ್ಟರ ಧುರೀಣರಾದ ಶ್ರೀ ಪಿ. ರಾಮಮೂರ್ತಿಯವರು ಕಾಂಗ್ರೆಸಿನೊಡನೆ ತಮ್ಮ ಪಕ್ಷವು ಸೇರಿ ಸಂಯುಕ್ತರಂಗವನ್ನು ರಚಿಸುವ ಪ್ರಶ್ನೆಯಿಲ್ಲವೆಂದು ಹೇಳಿದ್ದಾರೆ. ಆದರೆ ರಾಷ್ಟ್ರದ ಆರ್ಥಿಕ ನೆಲೆಗಟ್ಟನ್ನು ಬಲಗೊಳಿಸುವ, ಸ್ವಾತಂತ್ರ್ಯವನ್ನು ಶಕ್ತಿ ಸಂಪನ್ನವಾಗಿ ಮಾಡುವ ಮತ್ತು ಜನತೆಗೆ ಬಾಧಕವಾದ ಧೋರಣೆಗಳ ವಿರುದ್ಧ ಹೋರಾಡುವ ಮತ್ತು ಅಭಿವೃದ್ಧಿಯನ್ನೂ ಪ್ರಜಾಸತ್ತೆಯನ್ನೂ ಕುಂಠಿತಗೊಳಿಸುವ ಕ್ರಮಗಳನ್ನು ಪ್ರತಿಭಟಿಸುವ ವಿಷಯಗಳಲ್ಲಿ ಕಾಂಗ್ರೆಸಿಗರ ಮತ್ತು ಕಾಂಗ್ರೆಸು ಸಮಿತಿಗಳ ಸಹಕಾರವನ್ನು ತಮ್ಮ ಪಕ್ಷವು ಯಾಚಿಸುವುದು, ಎಂದಿದ್ದಾರೆ. ಚುನಾವಣೆಯಲ್ಲಿ ಮುಖ್ಯ ಯುದ್ಧವು ಧೋರಣೆಯ ಸಂಬಂಧದಲ್ಲದೆ – ಆಳ್ವ ಆಳುತ್ತಿರುವ ಕಾಂಗ್ರೆಸೊಂದು ಕಡೆ, ಮತ್ತು ಉಳಿದ ಪ್ರಜಾಸತ್ತಾತ್ಮಕ ಶಕ್ತಿಗಳೊಂದು ಕಡೆ ಇರಬೇಕೆಂದು ತಮ್ಮ ಪಕ್ಷದ ತೀರ್ಮಾನವೆಂದಿದ್ದಾರೆ ಅವರು.

ಉಡುಪಿ

ಮಠದ ಆನೆಯ ಮರಣ— ಶ್ರೀ ಕೃಷ್ಣಮಠದ ಆನೆಯು ತಾ ೮ರಲ್ಲು ಬೆಳಗಿನ ಝಾವದಲ್ಲಿ ಮರಣಹೊಟ್ಟಿತು. ಸಂಜೆ ಮಠದ ರಾಜಾಂಗಣದ ಬದಿಯಲ್ಲಿ ದೇಹವನ್ನು ಹೂಗಿಯಲಾಯಿತು. ಆನೆಯ ಕಳೇಬರವನ್ನು ನೋಡಲು ಪ್ರಾತಃಕಾಲದಿಂದ ಜನರು ಗುಂಪು ಗುಂಪಾಗಿ ಬಂದಿದ್ದರು,

ಕುಟುಂಬಯೋಜನಾ ಸಮಿತಿ— ಅಖಿಲಭಾರತ ಕುಟುಂಬಯೋಜನಾ ಸಂಘದ ಶಾಖಾ ಸ್ಥಾಪನಾ ಸಭೆಯು ತಾ ೨ರಲ್ಲು ಡಾ| ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಟಿ. ಎ. ಪೈ, ಎಮ್. ಎಲ್. ಎ, ಅವರು ಸಭೆಯ ಉದ್ದೇಶಗಳನ್ನು ವಿವರಿಸಿದರು. ಶ್ರೀ ಟಿ. ರಮೇಶ ಪೈಗಳು ಯೋಜನೆಯ ಘಟನಾವಳಿಗಳನ್ನು ಸಭೆಯ ಮುಂದಿರಿಸಿದರು. ನಂತರ ಉಡುಪಿ ಶಾಖೆಯೊಂದು ಸ್ಥಾಪಿಸಲ್ಪಟ್ಟು ಕಾರ್ಯವಾಹೀ ಸಮಿತಿಗೆ ಡಾ| ಟಿ. ಎಮ್. ಎ. ಪೈ ಅಧ್ಯಕ್ಷ, ಡಾ| ಪದ್ಮ ರಾವ್, ಡಾ. ಪಿ. ಆರ್. ನಾಯರ್, ಡಾ| ಬಿ. ಬಿ. ಸೆಟ್ಟಿ ಉಪಾಧ್ಯಕ್ಷರು. ಶ್ರೀಮತಿಗಳು ಪ್ರೇಮಾ ಪೈ, ಇಂದಿರಾ ರಾವ್ ಮತ್ತು ಶ್ರೀ ರಮೇಶ ಪೈ, ಕಾರ್ಯದರ್ಶಿಗಳು, ಶ್ರೀಗಳಾದ ಎಮ್. ಡಿ. ಕಾಮತ್ ಎಚ್. ಎಸ್. ರಾವ್, ಕೆ. ಕೆ. ಪೈ, ಎ ಜೆ. ಆಳ್ವ; ಡಾ| ಮೋಹನದಾಸ ಪೈ, ಡಾ|| ಕೆ. ಎಲ್. ಐತಾಳ್, ಶ್ರೀಮತಿಗಳು ಅನುಸೂಯಾ ಬಿ. ಸೆಟ್ಟಿ, ಕಣ್ಣನ್ ಆರಿಸಲ್ಪಟ್ಟರು.

ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನ—ಗೌಡಸಾರಸ್ವತ ಬ್ರಾಹ್ಮಣ ಸಮಾಜದ ಶ್ರೀ ಲಕ್ಷ್ಮೀ ವೆಂಕಟೇಶ ದೇವಸ್ಥಾನವು ಸ್ಥಾಪನೆಗೊಂಡು ಇದೀಗ ಅರುವತ್ತು ವರ್ಷಗಳು ಆಗುವುದರಿಂದ ಈ ಬಾರಿ ಇದೇ ತಾ. ೨೬ರಲ್ಲು ಪ್ರತಿಷ್ಠಾ ದಿನವನ್ನು ವಿಶೇಷ ಕಾರ್ಯಕ್ರಮಗಳಿಂದ ಆಚರಿಸಬೇಕಾಗಿ ಸಮಾಜದವರು ನಿಶ್ಚಯಿಸಿದ್ದು ಆ ಬಗ್ಗೆ ಒಂದು ಸಮಿತಿಯನ್ನು ಡಾ| ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಸ್ಥಾಪಿಸಲಾಗಿದೆ. ಈ ವಿಶೇಷ ಸಮಾರಂಭಕ್ಕೆ ಶ್ರೀ ಮಠಾಧೀಶರನ್ನು ಆಹ್ವಾನಿಸಬೇಕೆಂದೂ ನಿರ್ಧರಿಸಲಾಗಿದೆ ಎಂದು ತಿಳಿದು ಬರುತ್ತದೆ,

---

ಕಿದಿಯೂರು— ಸ್ಥಳೀಯ ಹಾ| ಪ್ರಾ| ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ತಹಶೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ ತಾ ೧೭ರಲ್ಲು ನೆರವೇರಿಸಲಿರುವರು. ಸರ್ವರಿಗೂ ಸ್ವಾಗತವಿದೆಯೆಂದು ಶಾಲಾ ಮೆನೇಜರ್ ಶ್ರೀ ಎ. ನಾರಾಯಣ ತಂತ್ರಿಗಳು ತಿಳಿಸುತ್ತಾರೆ.

ಬಡಾನಿಡಿಯೂರು– ಕರ್ನಾಟಕ ಸಂಘದ ವಾರ್ಷಿಕೋತ್ಸವವು ತಾ ೩ರಲ್ಲಿ ಶ್ರೀ ಬಿ. ನಾರಾಯಣ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ಧನಂಜಯರಾವ್, ಜಿ. ಶ್ರೀನಿವಾಸ ರಾವ್ ಇವರ ಕವಿತೆಗಳನ್ನೋದಿದರು. ಶ್ರೀಗಳಾದ ಕೆ. ವಿಶ್ವಂಭರ ಉಪಾಧ್ಯಾಯ, ವೈಕಾಡಿ ವೆಂಕಟಕೃಷ್ಣರಾವ್ ಇವರು ಭಾಷಣವಿತ್ತರು. ಅಂತ್ಯದಲ್ಲಿ ಸಂಗೀತ, ಯಕ್ಷಗಾನಗಳಾದುವು.

ಕುಂದಾಪುರ— ಬಂಟ್ವಾಡಿ ದಿ ನ್ಯೂ ಎಯಿಡೆಡ್ ಎಲಿಮೆಂಟರಿ ಶಾಲಾ ವರ್ಧಂತ್ಯುತ್ಸವವು ಜಿಲ್ಲಾ ಬೋರ್ಡು ಮೆಂಬರ್ ಶ್ರೀ ಎಚ್. ಮುತ್ತಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ತರ್ ಶ್ರೀ ಪಿ. ಯು, ಎಸ್. ಶಾಸ್ತ್ರಿ ರು ವರದಿವಾಚನ ಮಾಡಿದರು. ಶ್ರೀ ರಾಜೀವ ಸೆಟ್ಟರು ವಂದನೆಗಳನ್ನರ್ಪಿಸಿದರು.

ಕಾಪು—ದಂಡತೀರ್ಥ ಹಾ| ಪ್ರಾ| ಶಾಲೆಯ ವರ್ಧಂತಿ ಸಮಾರಂಭವು ಈಚೆಗೆ ಶ್ರೀ ಟಿ. ಎ. ಪೈ. ಎಮ್. ಎಲ್. ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಂದರ್ಭದಲ್ಲಿ ಶಾಲೆಯ ಹೊಸ ಕಟ್ಟಡವನ್ನು ಶ್ರೀ ಪೈ, ಮಂಜಯ್ಯ ಶೆಟ್ಟರು ಉದ್ಘಾಟಿಸಿದರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ದಿವಂಗತ ಕಾಪು ಮುದ್ದಣ್ಣ ಸೆಟ್ಟರ ಭಾವಚಿತ್ರವನ್ನು ಅನಾವರಣ ಮಾಡಿದರು.

ಬಂಟಕಲ್ಲು-ಶಿರ್ವ:— ರಾಜಾಪುರದ ಬಾಲಾವಲಿಕಾರ್ ಸಾರಸ್ವತ ಸಮ್ಮೇಳನದ ಸ್ವಾಗತ ಹಾಗೂ ಕಾರ್ಯಕಾರೀ ಸಮಿತಿ ಸಭೆಯು ತಾ. ೬ರಲ್ಲು ಶ್ರೀ ಅಪ್ಪು ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಸಮ್ಮೇಳನವನ್ನು ತಾ. ೨೦ರಲ್ಲು ಶ್ರೀ ಕುಕ್ಕಾಡಿ ಮುಕುಂದ ನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿಸಬೇಕೆಂದೂ ಸಮ್ಮೇಳನದ ಉದ್ಘಾಟನೆಯನ್ನು ಶ್ರೀ ಮಂಜೇಶ್ವರ ಗೋವಿಂದ ಪೈಗಳವರಿಂದ ನೆರವೇರಿಸಬೇಕೆಂದೂ ತೀರ್ಮಾನಿಸಲಾಯಿತು.

ಕರ್ನಾಟಕ ಸಂಘ ಮದ್ರಾಸು

ಕರ್ನಾಟಕ ಸಂಘದ ವಾರ್ಷಿಕೋತ್ಸವವು ಹೋಟೆಲ್ ದಾಸಪ್ರಕಾಶದ ದಾಸಮಂದಿರದಲ್ಲಿ ನಡೆಯಿತು. ಸಂಘದ ಸದಸ್ಯರಿಂದ ಅ·ನ ಕೃಷ್ಣರಾಯರಿಂದ ರಚಿತವಾದ "ಅದದ್ದೇನು" ಎಂಬ ನಾಟಕವು ಅಂದವಾಗಿ ಅಭಿನಯಿಸಲ್ಪಟ್ಟಿತು. ಶ್ರೀ. ಕೆ. ಯಸ್. ಪುರುಷೋತ್ತಮ ಇವರ ಕೃಷ್ಣಿಯಾಟ, ಸ್ನಾಯುಪ್ರದರ್ಶನ ಇತ್ಯಾದಿ ಕಾರ್ಯಕ್ರಮಗಳೂ ಮತ್ತು "ಹೆಂಡತಿಯ ಗುಲಾಮ ಗಂಡ" ಎಂಬ ಪ್ರಹಸನವು ಯಶಸ್ವಿಯಾಗಿ ನಡೆದವು.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: ೦—೨—೦

ನವಯುಗ ಪ್ರೆಸ್ ಉಡುಪಿ





ಭಾರತೀಯ ರೈಲ್ವೆಗಳು ಕ್ಷಿಪ್ರ ಪ್ರಗತಿಯನ್ನು ಹೊಂದಿ, ಭಾರತೀಯ ನಾಗರಿಕರಿಂದ ಜೀವನವನ್ನು ಸುಖಮಯಗೊಳಿಸಿರುತ್ತವೆ. ಪೆರಂಬೂರಿನ ಕಾರ್ಖಾನೆಯಲ್ಲಿ ತಯಾರಾದ ಉಕ್ಕಿನ ಅಖಂಡ ಗಾಡಿಯನ್ನು ಎಡಗಡೆಯೂ ಚಿತ್ತರಂಜನದ ಕಾರ್ಖಾನೆಯಲ್ಲಿ ತಯಾರಾದ ರೈಲ್ವೆಯ ಯಂತ್ರವನ್ನು ಬಲಗಡೆಯೂ ಕಾಣಬಹುದು.

(೫ನೇ ಪುಟದಿಂದ)

ಮಾತ್ರ ಏನಾದರೂ ಪ್ರಯೋಜನವಾದೀತು. ಆದರೆ ಇಲ್ಲಿ ಸಹ, ಸಂಪೂರ್ಣ ಪ್ರಯೋಜನದ ಆಶೆಗೆ ಎಡೆಯಿರುವುದಿಲ್ಲ. ಯಾಕೆಂದರೆ, ಕೃಷಿಯ ಉತ್ಪನ್ನಗಳು ಭಾರತದಲ್ಲಿ ಮಳೆ ಮತ್ತು ಹವಾಮಾನವನ್ನು ಬಹಳಷ್ಟು ಹೊಂದಿಕೊಂಡಿವೆ. ಆದುದರಿಂದ ಕೃಷಿಯ ಉತ್ಪನ್ನವು ತೀರ ಅನಿಶ್ಚಿತ ಪರಿಸ್ಥಿತಿಯಲ್ಲಿರುವ ಹಳ್ಳಿಗಳಲ್ಲಿ ಸಮಾಜವಾದಿ ಮಾದರಿ ಸಮಾಜ ರಚನೆಯ ಪ್ರಯೋಗವನ್ನು ಪ್ರಾರಂಭಿಸುವುದಕ್ಕಿಂತ ಪೇಟೆಗಳಲ್ಲಿಯೇ ಇದನ್ನಾರಂಭಿಸುವುದು ವಿಹಿತ. ಪೇಟೆಯಲ್ಲಿ ಎಲ್ಲರೂ ಹೆಚ್ಚಾಗಿ ನಿಶ್ಚಿತ ಮಾಸಿಕ ವೇತನಕ್ಕೆ ದುಡಿಯುವವರಾಗಿದ್ದಾರೆ; ಅಲ್ಲದೆ ಈ ಬಗ್ಗೆ ಯೋಗ್ಯ ಅಂಕೆ—ಸಂಖ್ಯೆಗಳ ಆಧಾರವನ್ನು ಸಂಗ್ರಹಿಸುವುದೂ ಕಷ್ಟವಲ್ಲ ಎಂದಲ್ಲ ಹೇಳಲಾಗುತ್ತವೆ..

ಹಿಡುವಳಿಗಳ ಗಣತಿ

ಅರ್ಥ ಸಚಿವ ಶ್ರೀ ದೇಶಮುಖರು ಕೆಲವು ದಿನಗಳ ಹಿಂದೆ ಲೋಕ ಸಭೆಯಲ್ಲಿ "ಭೂಮಿಯು ಬಹಳ ಮಿತವಾದ ಪ್ರಮಾಣದಲ್ಲಿದೆ; ಮತ್ತಿದರ ಅಭಾವ ನಿವಾರಣೆಗಾಗಿಯೇ—ಅಂದರೆ ಹೆಚ್ಚು ಜನರಿಗೆ ಭೂಮಿಯನ್ನು ಒದಗಿಸಿಕೊಡುವುದಕ್ಕಾಗಿಯೇ — ಭೂಹಿಡುವಳಿಗೊಂದು ಪರಮ ಮಿತಿ ನಿರ್ಣಯಿಸುವುದು ಅವಶ್ಯ" ಎಂದಿದ್ದರು. ಈ ನಿಲುವೆಯನ್ನು ಎಲ್ಲರೂ ಒಪ್ಪುವುದಿಲ್ಲ. ಭೂಮಿಯ ಅಭಾವವಿರುವ ಪಕ್ಷದಲ್ಲಿ ಜನರನ್ನು ಕೃಷಿಯ ಹೊರಗಿನ ಕ್ಷೇತ್ರಗಳಲ್ಲಿ ನೆಲೆಗೊಳಿಸಬೇಕು—ಅವರಿಗೆ ಬೇರೆ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕು ಎಂದು ಅರ್ಥ ಸಚಿವರ ನಿಲುವೆಯನ್ನು ಖಂಡಿಸಲಾಗುತ್ತದೆ. ಅದೂ ಅಲ್ಲದೆ ಭೂಹಿಡುವಳಿಗೊಂದು ಪರಮ ಮಿತಿ ನಿರ್ಧರಿಸಲು ಹೋದರೂ ಎಷ್ಟು ಜನರಿಗೆ ಭೂಮಿಯನ್ನು ಹೊಸದಾಗಿ ಕೊಡಿಸಬಹುದು?—ಈಗ ಮದ್ರಾಸು, ಆಂಧ್ರ, ಹೈದರಾಬಾದು, ಮೈಸೂರು, ಕೊಡಗು, ಮುಂಬಯಿ, ಮಧ್ಯ ಪ್ರದೇಶ, ಸೌರಾಷ್ಟ್ರ, ಪಂಜಾಬ, ಪೆಪ್ಸು, ಬಿಹಾರ, ಕಚ್ಛ, ದೆಹಲಿ, ಅಜ್ಮೀರ, ಭೋಪಾಳ, ವಿಂಧ್ಯ ಪ್ರದೇಶ, ಹಿಮಾಚಲ ಪ್ರದೇಶ, ಮಧ್ಯ ಭಾರತ ಎಂಬೀ ಹದಿನೆಂಟು ರಾಜ್ಯಗಳಲ್ಲಿ (ಇವುಗಳ ಒಟ್ಟು ವಿಸ್ತಾರವು ಭಾರತದ ವಿಸ್ತೀರ್ಣದ ಮೂರರಲ್ಲಿ ಎರಡಾಂಶದಷ್ಟಾಗುತ್ತದೆ) ಹತ್ತು ಎಕ್ರೆಗಿಂತ ಕಡಿಮೆ ವಿಸ್ತಾರದ ಹಿಡುವಳಿಗಳು ೩೬೮೪೬೮೩೦ ಇವೆಯೆಂದೂ ೧೦ ರಿಂದ ೫೦ ಎಕ್ರೆ ವರೆಗಿನ ಹಿಡುವಳಿಗಳು ೬೦೫೪೯೫೬ ಇವೆಯೆಂದೂ ೫೦ ರಿಂದ ೧೦೦ ಎಕ್ರೆ ವರೆಗಿನ ಹಿಡುವಳಿಗಳು ೮೩೪೮೬೨ ಇವೆಯೆಂದೂ ೧೦೦ ರಿಂದ ೫೦೦ ಎಕ್ರೆ ವರೆಗಿನ ಹಿಡುವಳಿಗಳು ೧೪೬೫೨೪ ಇವೆಯೆಂದೂ ೫೦೦ ರಿಂದ ೧೦೦೦ ಎಕ್ರೆ ವರೆಗಿನ ಹಿಡುವಳಿಗಳು ೩೯೮೫ ಇವೆಯೆಂದೂ ತಿಳಿದುಬರುತ್ತದೆ. ಸಾವಿರ ಎಕ್ರೆಗಿಂತಲೂ ಹೆಚ್ಚಿರುವ ಹಿಡುವಳಿಗಳು ಕೇವಲ ೧೬೪೯.

ಮಿತ ಪ್ರಯೋಜನ

ಪಶ್ಚಿಮ ಬಂಗಾಲದಲ್ಲಿ ೩೩ ಎಕ್ರೆಗಿಂತ ಹೆಚ್ಚಿರುವ ಹಿಡುವಳಿ ೧೩೫೩೩ ಮಾತ್ರ; ಒರಿಸ್ಸದಲ್ಲಿ ೧೦ ಎಕ್ರೆಗಿಂತ ಹೆಚ್ಚಿರುವ ಹಿಡುವಳಿ ಕೇವಲ ೫೬೦೧೩; ಮಣಿಪುರದಲ್ಲಿ ಈ ಸಂಖ್ಯೆ ೧೩೭೬; ತ್ರಿಪುರದಲ್ಲಿ ೪೯೦; ಉತ್ತರಪ್ರದೇಶದಲ್ಲಿ ೭೩೩೪೯೭೭ ಇಲ್ಲಿ ೨೫ ಎಕ್ರೆಗಿಂತ ಹೆಚ್ಚಿರುವ ಹಿಡುವಳಿ ೧೧೧೦೫೦೪ ಮಾತ್ರ. ರಾಜಸ್ಥಾನದಲ್ಲಿ ೫೦ ಎಕ್ರೆಗಿಂತ ಹೆಚ್ಚಿರುವ ಹಿಡುವಳಿ ೨೪೬೬. ತಿರು-ಕೊಚ್ಚಿಯಲ್ಲಿ ೧೦ ಎಕ್ರೆಗಿಂತ ಹೆಚ್ಚಿರುವ ಹಿಡುವಳಿ ೯೩೫೦. ಈ ಸ್ಥಿತಿಯುಳ್ಳಾಗಿರುವಾಗ ಎಕ್ರೆಗಳ ಲೆಕ್ಕದಲ್ಲಿ ಹಿಡುವಳಿಯ ಮಿತಿ ನಿರ್ಣಯಿಸಿದರೆ ಎಷ್ಟು ಮಂದಿಗೆ ಪ್ರಯೋಜನವಾದೀತು? ಆದಾಯದ ಮೇಲಿನ ಮಿತಿಯೂ ಅಷ್ಟು ಉಪಯುಕ್ತವಾಗುವುದಿಲ್ಲವೆಂದು ಹೇಳಿದ ಮೇಲೆ ಸುಲಭದ ದಾರಿಯೇನೂ ತೋರುವುದಿಲ್ಲ. ರಾಜ್ಯ ಸರಕಾರಗಳಲ್ಲಿ ಕೆಲವು ಉತ್ಸಾಹದಿಂದ ಮುಂದರಿದು ಶಾಸನ ಮೂಲಕ ಭೂಹಿಡುವಳಿಯ ಪರಮ ಮಿತಿಯನ್ನು ನಿರ್ಧರಿಸಿವೆಯೇನೊ ನಿಜ ಆದರೆ ಈ ಶಾಸನವನ್ನು ಕಟ್ಟುನಿಟ್ಟಾಗಿ ಜಾರಿಗೆ ತರುವುದೇನೂ ಇಷ್ಟರ ವರೆಗೆ ಸಾಧ್ಯವಾಗಿಲ್ಲ. ಕೆಲವು ರಾಜ್ಯಗಳು ಇನ್ನು ಮುಂದೆ ಒಬ್ಬನ ಒಡೆತನದಲ್ಲಿರಬಹುದಾದ ಭೂಹಿಡುವಳಿಯ ಪರಮ ಮಿತಿಯನ್ನಷ್ಟೆ ನಿರ್ಧರಿಸಲು ಹೋಗಿವೆ— ಅಂತೂ ಭೂಸುಧಾರಣೆಯ ವಿಷಯವು ಆಲೋಚಿಸಿದಷ್ಟು ಹೆಚ್ಚು ಜಟಿಲತರವಾಗುತ್ತಾ ಕಂಡುಬಂದಿದೆ. ಒಂದಲ್ಲ ಒಂದು ರೀತಿಯಲ್ಲಿ ಈ ಸಮಸ್ಯೆಯು ಹೊಸ ತೊಡಕುಗಳನ್ನು ತಂದೊಡ್ಡುತ್ತಿದೆ. ಇದಕ್ಕೆ ಅವಕಾಶವಿಲ್ಲದಂತೆ ಮತ್ತು ಹೆಚ್ಚಿನ ಜನರಿಗೆ ಹಿತವಾಗುವಂತೆ ಸಮಸ್ಯೆಯನ್ನು ಬಿಡಿಸಲು ಭಾರತ ಸರಕಾರವು ಹೊಸ ಉಪಾಯಗಳನ್ನು ಹುಡುಕತೊಡಗಿವೆ ಈ ಹುಡುಕಾಟದ ಫಲಿತಾಂಶವನ್ನು ತಿಳಿಯಲು ಜನರು ಕುತೂಹಲರಾಗಿರುವುದು ಸಹಜ.

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 517/1953
R. E. P. 163/1956

ಅರ್ಜಿದಾರ—ರಾಮಚಂದ್ರ ಶೇಟ್.

ಯೆದ್ರಿರು — 1 ಸುಬ್ರಾಯ ಪ್ರಭು ಪೋತಿವಾರಿಸುದಾರರು 2ನೇ ಲಾಗಾಯ್ತಿನ ಎದ್ರಿರು. 2 ಶೇಶಗಿರಿ ಪ್ರಭು ಯಾನೆ ವಿಶ್ವನಾಥ ಪ್ರಭು —1ನೇ ಎದ್ರಿ ಮಗ ಈತನು ಸ್ವತಹಾ ಮತ್ತು ಈತನ ಮಕ್ಕಳು 4ನೇ ಎದ್ರಿ ಮೈನರ ಗಣಪತಿ, 5ನೇ ಎದ್ರಿ ಮೈನರ ಸುರೇಶ, 6ನೇ ಎದ್ರಿ ಮೈನರ ಬಾಬು, ಕೂಡಾ 3 ಜನರ ಗಾರ್ಡಿಯನ್ ಆಗಿ ಕೂಡಾ,

3ನೇ ಎದ್ರಿ ವೆಂಕಟ್ರಮಣ ಪ್ರಭು—1ನೇ ಎದ್ರಿ ಮಗ, ಈತನು ಸ್ವತಹಾ ಮತ್ತು ಮೈನರ ಮಗ 7 ನೇ ಎದ್ರಿ ಮೈನರ ಶ್ರೀನಿವಾಸ ಗಾರ್ಡಿಯನ್ ಆಗಿ ಕೂಡಾ,

8 ಗುಲಾಬಿ ಯಾನೆ ಲಕ್ಷ್ಮಿ ಅಮ್ಮ—1ನೇ ಎದ್ರಿ ವಿಧವೆ. ಎಲ್ಲಾ ಎದ್ರಿರು ಕುಂದಾಪುರ ತಾಲ್ಲೂಕು ತೆಕ್ಕಟ್ಟೆ ಗ್ರಾಮದಲ್ಲಿರುವವರು.

ಮೇಲೆ ಕಾಣ್ಸಿದ ಅಮ್ಲಜ್ಯಾರಿಯಲ್ಲಿ ಎದ್ರಿರಿಗೆ ಆನತಕ್ಕ ಸೇಲ್ ನೋಟೀಸಿನ ಕುರಿತು ತಾರೀಕು 16-6-56ಕ್ಕೆ ಸದ್ರಿ ಕೋರ್ಟಿನಲ್ಲಿ ತನ್ನಿಗೆ ಇತ್ಯೋಸಾಗಿಯದೆ ಆ ಕುರಿತು ಆಕ್ಷೇಪಗಳಿದ್ದರೆ ಮೇಲಿನ ಕೋರ್ಟಿನಲ್ಲಿ ಹ್ಯಾಜರು ಮಾಡಿಕೊಳ್ಳತಕ್ಕದ್ದು ತಿಳಿದಿರುವದು.

K. Soorappa Shetty,
Advocate for Petitioner.

ಮೊಕ್ಕಾಂ ಕುಂದಾಪುರ, 5-5-56.

ಮಕ್ಕಳ ಮಗ್ಗಿಪುಸ್ತಕ

೧

0—1—0

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ನಗರ ಸಭೆಯು—ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಈಚೆಗೆ ಜರಗಿ 1956-57ನೇ ವರ್ಷದಲ್ಲಿ ರಸ್ತೆಗಳ ದುರುಸ್ತಿ ಬಗ್ಗೆ ರೂ. 1,35,000/- ನ್ನು ಮಂಜೂರುಮಾಡಲಾಯಿತು. ಭಿಕ್ಷುಕರಿಗಾಗಿ ಒಂದು 'ವಿಶಿಷ್ಟ ಗೃಹ' ಮತ್ತು 'ಉದ್ಯೋಗ ಕೇಂದ್ರ'ಗಳನ್ನು ಸರಕಾರದ ಅಪ್ಪಣೆ ದೊರೆತೊಡನೆ ತೆರೆಯಬೇಕೆಂಬ ನಿರ್ಧಾರವಾಯಿತು.

ಮತದಾರರ ಪಟ್ಟಿ— ಮಂಗಳೂರಿನ ವಿಧಾನಸಭಾ ಕ್ಷೇತ್ರದ ಮತದಾರರ ಪಟ್ಟಿಯು 1956ರಲ್ಲಿ ಅದ ತಿದ್ದುಪಡಿಯೊಂದಿಗೆ ತಯಾರಾಗಿದ್ದು ಅದು ತಾಲೂಕು ಕಚೇರಿ ಮತ್ತು ಮತದಾರ ಕ್ಷೇತ್ರಗಳಲ್ಲಿ ಇದೇ ತಾ. 21ರ ತನಕ ಸಾರ್ವಜನಿಕರ ಉಪಯೋಗಕ್ಕೆ ದೊರೆಯುವುದು. ಏನಾದರೂ ವ್ಯತ್ಯಾಸಗಳಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗೆ ತಾ 21ರ ಮೊದಲು ಅರ್ಜಿಮಾಡಿ ಸರಿಪಡಿಸಿಕೊಳ್ಳುವ ಹಕ್ಕು ಪ್ರತಿಯೊಬ್ಬ ಮತದಾರನಿಗೂ ಇರುವುದು.

ಶ್ರೀ ಬಿ ಮೋಹನ ಬಾಳಿಗರು— ಮಂಗಳೂರಿನ ಅಡ್ವೊಕೇಟ್ ಶ್ರೀ ಬಿ. ವೈಕುಂಠ ಬಾಳಿಗ, ಎಮ್.ಎಲ್.ಎ, ಅವರ ಪುತ್ರ ಶ್ರೀ ಬಿ. ಮೋಹನ ಬಾಳಿಗರು ವ್ಯಾಪಾರ ವಾಣಿಜ್ಯ ಸಂಬಂಧದ ಹೆಚ್ಚಿನ ವ್ಯಾಸಂಗಕ್ಕಾಗಿ ಇದೇ ತಾ. 5ರಲ್ಲು ಅಮೇರಿಕಾ ಪ್ರವಾಸ ಕೈಕೊಂಡರು.

ಜಿಲ್ಲಾ ಕಲೆಕ್ಟರರ ಪತ್ರಿಕಾ ಗೋಷ್ಠಿ—ಈಚೆಗೆ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜರುಗಿದ ಪತ್ರಿಕಾ ಗೋಷ್ಠಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಮಾತನಾಡುತ್ತಾ, ಕಳೆದ ಮಾರ್ಚ ತಿಂಗಳಲ್ಲಿ ಅಂತ್ಯವಾದ ವರ್ಷದಲ್ಲಿ ಸ್ಥಳೀಯ ಅಭಿವೃದ್ಧಿ ಕಾರ್ಯಗಳಿಗಾಗಿ ರೂ. 8,33,868 ವೆಚ್ಚವಾಗಿದೆ ಎಂದರು. ಕಲ್ಯಾಣ ಯೋಜನೆ ರಾಷ್ಟ್ರೀಯ ವಿಸ್ತರಣ ಕ್ಷೇತ್ರ ಯೋಜನೆಗಳ ಮೇರೆಗೆ ಈ ಜಿಲ್ಲೆಯಲ್ಲಿ ಕೈಕೊಳ್ಳಲಾದ ಕಾರ್ಯಗಳನ್ನು ವಿವರಿಸಿ ಜಿಲ್ಲೆಯ ಅಭಿವೃದ್ಧಿ ಇಡೀ ಸಂಸ್ಥಾನದಲ್ಲಿ ಅತ್ಯುತ್ಕೃಷ್ಟವಾಗಿದೆ; ಮೂಡಬಿದಿರೆಯ "ಸಮಾಜ ಮಂದಿರ" ಸಾಧಾರಣ ರೂ 22,000 ವೆಚ್ಚದಿಂದ ಕಟ್ಟಲಾಗಿದ್ದು ಸಂಸ್ಥಾನದ ದೊಡ್ಡ ಕಟ್ಟಡಗಳಲ್ಲೊಂದಾಗಿದೆ; ಶಾಲಾ ಮಕ್ಕಳ ಕ್ರೀಡಾ ಭೂಮಿ ಅಭಿವೃದ್ಧಿಯು ಹಿಂದಿಗಿಂತ ಎಂಟೂವರೆ ಪಾಲಿನಷ್ಟು ಹೆಚ್ಚಾಗಿದೆ ಎಂದರು.

ಎರಡನೇ ಪಂಚವಾರ್ಷಿಕ ಯೋಜನೆಯ ವಿಚಾರದಲ್ಲಿ ಮಾತನಾಡುತ್ತಾ, ಜಿಲ್ಲೆಯ ಪಂಚಾಯತುಗಳೇ ಮೊದಲಾದ ಸಾರ್ವಜನಿಕ ಅಂಗಸಂಸ್ಥೆಗಳು ಜಿಲ್ಲಾ ಯೋಜನಾ ಸಮಿತಿಗೆ ಅವುಗಳ ಕ್ಷೇತ್ರಗಳಿಗೆ ಸಂಬಂಧಿಸಿದ ಒಂದೊಂದು ಯೋಜನೆಯನ್ನು ಒಪ್ಪಿಸಬೇಕಾಗಿದೆ ಎಂದೂ, ಜಿಲ್ಲಾ ಸಮಿತಿ ಇವನ್ನೆಲ್ಲಾ ಪರಿಶೀಲಿಸಿ ಅವನ್ನು ಕೇಂದ್ರೀಕರಿಸಿ ಪೂರ್ಣವಾದ ಯೋಜನೆಯನ್ನು ಯೋಜನಾಸಮಿತಿಗೆ ಇದೇ ಜುಲೈ ತಿಂಗಳಲ್ಲಿ ಒಪ್ಪಿಸುವುದೆಂದರು.

ಮಂಗಳೂರು ಅಥವಾ ಉಡುಪಿಯಲ್ಲಿ ಒಂದು ಪ್ರಬುದ್ಧ ಬಂದರದ ರಚನೆ, ಕಲ್ಯಾಣಪುರ ಮಾಬುಕಳ ಗಂಗೊಳ್ಳಿ ಉಪ್ಪುಂದಗಳಿಗೆ ಸೇತುವೆಗಳ ನಿರ್ಮಾಣ, ಮತ್ತ್ಯೆಯಲ್ಲಿ ಮೀನುಗಳನ್ನು ತಣ್ಣಗಿರಿಸುವ ಯಂತ್ರಾಲಯ ಕೆಲಕಾಲ ಉಳಿಯುವಂತೆ ಹಣ್ಣುಗಳಿಗಾಗಿ ಒಂದು ಕೈಗಾರಿಕೆಯ ವ್ಯವಸ್ಥೆ; ಚಿಕ್ಕ ಪ್ರಮಾಣದಲ್ಲೊಂದು ಕಾಗದದ ಕಾರ್ಖಾನೆ ಮತ್ತು ಸಕ್ಕರೆ ಕಾರ್ಖಾನೆ ಇತ್ಯಾದಿಗಳನ್ನು ಜಿಲ್ಲಾ ಯೋಜನೆಯಲ್ಲಿ ಕೂಡಿಸಿಕೊಳ್ಳುವ ಯೋಜನೆ ತನ್ನದೆಂದು ಕಲೆಕ್ಟರರು ಹೇಳಿದರು. ಬಿ. ಸಿ. ಜಿ. ದಾಳಿನ ಕುರಿತು 1953ರಿಂದ 1956ನೆ ಎಪ್ರಿಲ್ ತಾ 31ರ ತನಕ ಈ ಜಿಲ್ಲೆಗೆ ಸಂಬಂಧಿಸಿದ ಎಲ್ಲಾ ಅಂಕೆ ಸಂಖ್ಯೆಗಳನ್ನು ಪ್ರಕಟಪಡಿಸಿದರು. ಈ ಅವಧಿಯಲ್ಲಿ ಜಿಲ್ಲೆಯಲ್ಲಿ ಒಟ್ಟು 67856 ಮಂದಿ ದಾಳು ಹಾಕಿಸಿಕೊಂಡಿರುವರು.

ಜನರು ಪಿಕೆಟಿಂಗ್, ರೈಲ್ವೆ ಕಂಬಿ ಕೀಳುವುದು ಇತ್ಯಾದಿ ಅಕೃತ್ಯಗಳಲ್ಲಿ ಭಾಗಿಗಳಾಗಬಾರದೆಂದು ಕಲೆಕ್ಟರರು ಜಿಲ್ಲೆಯ ಜನರಲ್ಲಿ ವಿಶೇಷ ವಿನಂತಿ ಮಾಡಿಕೊಂಡರು...ರೆ

ಕಾಸರಗೋಡಿನ ಶಿಷ್ಟ ಮಂಡಲ ಡಿಲ್ಲಿಗೆ

ಕಾಸರಗೋಡು ಪ್ರಾಂತೀಕರಣ ಸಮಿತಿಯ ಕಡೆಯಿಂದ ಶ್ರೀಗಳಾದ ಕೆ. ಆರ್. ಕಾರಂತ ಎಮ್. ಉಮೇಶರಾವ್, ಬಿ. ಎಸ್. ಕಕ್ಕಿಲ್ಲಾಯ, ಎಮ್. ಎಸ್. ಕಡಂಬಳಿತ್ತಾಯ, ಡಾ| ಕೆ. ಎ. ಶೆಟ್ಟಿ ಮತ್ತು ಡಾ| ಪಿ. ಎಸ್. ಶಾಸ್ತ್ರಿಗಳಿರುವ ಶಿಷ್ಟಮಂಡಲ ಡಿಲ್ಲಿಗೆ ಹೋಗಿದೆ. ಪ್ರಾಂತ ಪುನರ್ರಚನಾ ಮಸೂದೆ ಪಾರ್ಲಿಮೆಂಟಿನ ಮುಂದೆ ಚರ್ಚೆಗೆ ಬರುವ ಮೊದಲು ಸಿಲೆಕ್ಟ್ ಕಮಿಟಿಯಲ್ಲಿ ಚರ್ಚಿಸಲ್ಪಡುವ ವೇಳೆ ಏನಾದರೂ ತಿದ್ದುಪಡಿ ಮಾಡಲು ಶಕ್ಯವಿದೆಯೇ ಎಂಬುದನ್ನು ನಿರೀಕ್ಷಿಸಲು ಈ ಶಿಷ್ಟಮಂಡಲ ತೆರಳಿರುವುದಾಗಿದೆ. ಕಾಂಗ್ರೆಸ್ ಕಮಿಟಿ ಪತಿಯಿಂದಲೂ ಇನ್ನೊಂದು ಶಿಷ್ಟಮಂಡಳ ಹೊರಟಿರುವುದು ಅದರಲ್ಲಿ ಜಿಲ್ಲಾ ಕಾಂಗ್ರೆಸ್‌ಕಮಿಟಿ ಅಧ್ಯಕ್ಷ ಡಾ| ಯು. ಪಿ. ಮಲ್ಯ, ಉಪಾಧ್ಯಕ್ಷ ಶ್ರೀ ಕೆ. ಆರ್. ಆಚಾರ್ ಮತ್ತು ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟಿಯಿರುವರು.

ಜಿಲ್ಲಾ ಬೋರ್ಡ್ ಸಭೆಯು— ತಾ. 7ರಲ್ಲು ಡಾ| ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಬೋರ್ಡಿನ ನಿಯಮಿತ ಸಭೆಗಳಿಗೆ ಹಾಜರಾಗದೆ ಸದಸ್ಯತನವನ್ನು ಕಳಕೊಂಡ ಶ್ರೀಮತಿ ಬಿ. ಎಸ್. ಪಿಂಟೊ ಮತ್ತು ಶ್ರೀ ಕೆ. ಸುಂದರನವರ ಸದಸ್ಯತ್ವವನ್ನು ಊರ್ಜಿತಗೊಳಿಸಲಾಯಿತು. ಸ್ಥಳೀಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಅಲ್ಲಲ್ಲಿ ಕಟ್ಟಲಾಗುತ್ತಿರುವ ಶಾಲಾ ಕಟ್ಟಡ, ರಸ್ತೆಗಳ ವೆಚ್ಚದಲ್ಲಿ ಜಿಲ್ಲಾ ಬೋರ್ಡ್ ನೇಕಡಾ 1...ರಷ್ಟು ವಂತಿಗೆ ಕೊಡಲು ಒಪ್ಪಿಗೆಕೊಟ್ಟಿತು.

ಜಿಲ್ಲಾ ಬೋರ್ಡಿನ ಉಪಯೋಗಕ್ಕೆ ದೀ...ನ್ನು ಕೊಂಡುಕೊಳ್ಳಲು ರೂಪಾಯಿ 15,00... ಮಂಜೂರುಮಾಡಲಾಯಿತು. ಮಂಜೇಶ್ವರ ಕುಂಬಳೆ ಮತ್ತು ಕಾಸರಗೋಡುಗಳಿಗೆ ಮಂಗಳೂರಿನಿಂದ ವಿದ್ಯುತ್ ಸರಬರಾಯಿ ಮಾಡುವ ಕಾರ್ಯಕ್ರಮವನ್ನು ಶೀಘ್ರಗೊಳಿಸುವಂತೆ ಸರಕಾರವನ್ನು ಒತ್ತಾಯಿಸುವ ನಿರ್ಧಾರವಾಯಿತು. ಜಿಲ್ಲಾ ಬೋರ್ಡ್ ರಸ್ತೆಗಳ ದುರುಸ್ತಿಗಾಗಿ 1956-57ನೆ ವರ್ಷಕ್ಕೆ ರೂ3,21,5... ವೆಚ್ಚದ ಸೂಚನೆಗಳನ್ನು ಡಿವಿಜನಲ್ ಎಂಜಿನಿಯರರು ಮಂಡಿಸಿದುದನ್ನು ಚೌಕಶಿಗಾಗಿ ಶ್ರೀಗಳಾದ ಬಿ. ಎಮ್. ಹೆಗ್ಡೆ, ಎ. ಕೃಷ್ಣ ಶೆಟ್ಟಿ, ಬಿ ಎಸ್. ಭಾಸ್ಕರ ರೈ, ಡಾ. ನಾ...ಪ್ಪ ಆಳ್ವ ಮತ್ತು ಬೋರ್ಡಿನ ಅಧ್ಯಕ್ಷ, ಉಪಾಧ್ಯಕ್ಷರಿಗೆ ಬಿಡಲಾಯಿತು. ಕುಂದಾಪುರ ತಾಲೂಕಿನ ಸಿದ್ದಾಪುರದ ಪ್ರಾಥಮಿಕ ಶಾಲೆಯನ್ನು ಹಾಯರ್ ಎಲಿಮೆಂಟರಿಯನ್ನಾಗಿ ಮಾಡುವ, ಶಂಕರನಾರಾಯಣ ಬೋ. ಶಾಲೆಯನ್ನು ಹೈಸ್ಕೂಲ್ ಆಗಿರೂಪಾಂತರಿಸುವ, ಬೆಳ್ವೆ ಹಾ. ಎ. ಶಾಲೆಯಲ್ಲಿ ಸಂಬಳರದ್ದುಗೊಳಿಸುವ ಮೊದಲಾದ ನಿರ್ಣಯಗಳಾದುವು. ಬೊಂಬಾಯಿಯ ಡಾ. ಎಸ್. ಎ...ರಾಯರು ಪಡುಬಿದ್ರೆ ಬೊ. ಹಾ. ಎ ಶಾಲೆ ಎಂಟನೆ ತರಗತಿಯ ವಿದ್ಯಾರ್ಥಿಗೆ ವರ್ಷ...ತಿಯೂ ಶ್ರೀ ಮತ್ತು ಶ್ರೀಮತಿ ಪಿ. ಅ...ತ ಶೆಣೈಯವರ ಸ್ಮಾರಕವಾಗಿ ವಿದ್ಯಾರ್ಥಿ...ನ ಕೊಡುವೆನೆಂದುದಕ್ಕೆ ಆಭಾರ ಸೂ...ಸ್ವೀಕರಿಸಬಹುದೆಂದಾಯಿತು.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ:0-12-0.

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0

ಭಾರತದ ಕರ್ಣ

"ಭಾರತದ ಕರ್ಣನು ದಿ! ಕಿಲ್ಲೆಯವರಿಗೆ ಒಲಿದಿದ್ದ..ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣ ಸಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು. (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ ಉಡುಪಿ

ಹೊಸ ಪುಸ್ತಕಗಳು

...ಕ ಪ್ರಕಾಶಕರಲ್ಲಿ ವಿನಂತಿ.

ಕನ್ನಡದಲ್ಲಿ ಪ್ರಕಟವಾಗುವ ಹೊಸ ಪು...ಕಗಳ ಬಗೆಗೆ ಇಂದಿಗೂ ಒಂದು ಕಡೆ ವಿವ...ಳು ದೊರೆಯುವುದಿಲ್ಲ; ಮುಂಬಯಿಯಲ್ಲಿ...ವ ಕನ್ನಡ ಸಾಹಿತ್ಯ ಕೂಟವು ಈ ಕೆಲಸ...ನ್ನು ಕೈಕೊಳ್ಳಬೇಕೆಂದು ನಿರ್ಧರಿಸಿದೆ. ಕಾ...ಕಾಲಕ್ಕೆ ಹೊಸ ಪುಸ್ತಕಗಳನ್ನು ಪರಿಶೀಲಿ...ಪತ್ರಿಕೆಗಳಲ್ಲಿ ವಿಮರ್ಶೆಯನ್ನು ಮಾಡುವು...ನ್ನೂ ಒಂದು ವರುಷದಲ್ಲಿ ಪ್ರಕಟವಾದ...ಲ್ಲ ಪುಸ್ತಕಗಳ ಒಂದು ಸೂಚಿಯನ್ನು ಪು...ಕರೂಪದಲ್ಲಿ ಕೊಡಬೇಕೆಂಬುದನ್ನೂ ಗೊ...ಮಾಡಿ ಸಾಹಿತ್ಯ ಕೂಟವು ಈಗಾಗಲೇ ...ರ್ಯ ಪ್ರವೃತ್ತವಾಗಿದೆ.

ಆದರೆ ಲೇಖಕರು ಹಾಗೂ ಪ್ರಕಾಶಕರ ...ಹಕಾರವಿಲ್ಲದೆ ಈ ಕೆಲಸ ಯಶಸ್ವಿಯಾಗ...ರದು. ಕಾರಣ, ಅವರು, ೧೯೫೬ನೇ ವರು...ದ ಇದು ವರೆಗಿನ ಮತ್ತು ಮುಂದಿನ ತಮ್ಮ ...ಸ್ತಕದ ಹೆಸರು, ಬರೆದವರು, ಸಾಹಿತ್ಯ ...ಕಾರ, ವಿಷಯ, ಬೆಲೆ, ಪುಟ ಸಂಖ್ಯೆ, ಆ...ತ್ತಿ ಇತ್ಯಾದಿ ವಿವರ ಗಳನ್ನು ಒಂದು ಕಾರ್ಡಿ...ಮೇಲೆ ಬರೆದು ತಿಳಿಸಿದರೆ ಸಾಕು. ವಿವರ...ಳನ್ನು ಕನ್ನಡ ಸಾಹಿತ್ಯ ಕೂಟ, ೨, ವೆಂಕ...ಟೇಶ ನಿವಾಸ, ಭಾವುದಾಜಿ ರೋಡ್, ಮುಂ...ಬಯಿ ೧೯ ಈ ವಿಳಾಸಕ್ಕೆ ಕಳಿಸಿ ಲೇಖಕ-ಪ್ರಕಾಶಕರು ಸಹಕರಿಸಬೇಕೆಂದು ವಿನಂತಿ.

ದಿನಕರ ದೇಸಾಯಿ,
ಅಧ್ಯಕ್ಷರು,
ಕನ್ನಡ ಸಾಹಿತ್ಯ ಕೂಟ, ಮುಂಬಯಿ.

ನೋಟೀಸು

ಉಡುಪಿ ತಾಲೂಕು ಶಿವಳ್ಳಿ ಗ್ರಾಮ ಕ...ಂಬಳ್ಳಿಯಲ್ಲಿರುವ ಪುತ್ತೂರು ಅನಂತರಾಮ ...ಟ್ಟ ನಾದ ನಾನು ಈ ಮೂಲಕ ಸರ್ವಜನ...ಗೂ ತಿಳಿಯಪಡಿಸುವದೇನೆಂದರೆ ನನ್ನ ತಮ್ಮ ...ಧಾರಣ ನಲವತ್ತ ಮೂರು ವರುಷ ಪ್ರಾಯ ...ಪುತ್ತೂರು ಗುರುರಾಜ ಭಟ್ಟನು ಕಳೆದ ೨ ...ರ್ಷಗಳಿಂದೀಚೆಗೆ ದೇಹಾರೋಗ್ಯವೂ ಬುದ್ಧಿ...ಸ್ವಾತ್ಸ್ಥ್ಯವೂ ಇಲ್ಲದೆ ಸಿಕ್ಕಾಬಟ್ಟೆ ತಿರುಗುತ್ತಿ...ದ್ದು ಹಲಕೆಲವರಿಂದ ಅನಾವಶ್ಯಕ ಸಾಲ...ಡೆಯುತ್ತಾನಾಗಿಯೂ ತಿಳಿಯುತ್ತೇನೆ. ಆತ...ನಿಗೆ ಸಾಲಮಾಡುವ ಅಗತ್ಯ ಹಾಗೂ ಅವಶ್ಯ...ತೆ ಏನೂ ಇಲ್ಲದಿರುವದರಿಂದ ಆತನಿಗೆ ಯಾ...ರಾದರೂ ಸಾಲಕೊಟ್ಟಲ್ಲಿ ಅದು ಸಿಂಧುವಾಗ...ತಕ್ಕದ್ದಲ್ಲ ಮತ್ತು ಆತನ ಪಿತ್ರಾರ್ಜಿತ ಆಸ್ತಿ...ಯೂ ಅದಕ್ಕೆ ಬಾಧ್ಯಸ್ತವಾಗತಕ್ಕದ್ದಲ್ಲ.

ಈ ನೋಟೀಸಿಗೆ ವ್ಯತಿರಿಕ್ತವಾಗಿ ಯಾರಾ...ದರೂ ವರ್ತಿಸಿದ್ದಲ್ಲಿ ಅದಕ್ಕೆ ಅವರೇ ಜವಾ...ಬ್ದಾರರಾಗುವರು ತಿಳಿದಿರಲಿ.

P. Anantharama Bhatta
ಉಡುಪಿ, ಕರಂಬಳ್ಳಿ, 7—5—1956

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

O. S. 517/1953
R. E P 163/1956
R. E A. 166/1956

ಅರ್ಜಿದಾರ— ರಾಮಚಂದ್ರ ಶೇಟ್.

ಎದ್ರಿರು — 1 ಸುಬ್ರಾಯ ಪ್ರಭು ಪೋ...ಕಿವಾಡಿಸುದಾರರು 2ನೇ ಲಾಗಾಯ್ತಿನ ಎದ್ರಿರು. 2 ಶೇಷಗಿರಿ ಪ್ರಭು ಯಾನೆ ವಿಶ್ವನಾಥ ಪ್ರಭು —1ನೇ ಎದ್ರಿ ಮಗ ಈತನು ಸ್ವತಹಾ ಮತ್ತು ಈತನ ಮಕ್ಕಳು 4ನೇ ಎದ್ರಿ ಮೈನರ ಗಣಪತಿ, 5ನೇ ಎದ್ರಿ ಮೈನರ ಸುರೇಶ, 6ನೇ ಎದ್ರಿ ಮೈನರ ಬಾಬು, ಕೂಡಾ 3 ಜನರ ಗಾರ್ಡಿಯನ್ ಆಗಿ ಕೂಡಾ,

3ನೇ ಎದ್ರಿ ವೆಂಕಟ್ರಮಣ ಪ್ರಭು—1ನೇ ಎದ್ರಿ ಮಗ, ಈತನು ಸ್ವತಹಾ ಮತ್ತು ಮೈನರ ಮಗ 7 ನೇ ಎದ್ರಿ ಮೈನರ ಶ್ರೀನಿವಾಸ ಗಾರ್ಡಿಯನ್ ಆಗಿ ಕೂಡಾ.

8 ಎಲಾಬಿ ಯಾನೆ ಲಕ್ಷ್ಮಿ ಅಮ್ಮ 1ನೇ ಎದ್ರಿ ವಿಧವೆ. ಎಲ್ಲಾ ಎದ್ರಿರು ಕುಂದಾಪುರ ತಾಲ್ಲೂಕು ತೆಕ್ಕಟ್ಟೆ ಗ್ರಾಮದಲ್ಲಿರುವವರು.

ಮೇಲೆ ಕಾಣ್ಸಿದ ಅಮ್ಲಜ್ಯಾರಿಯಲ್ಲಿ ಆಗತಕ್ಕ ಎಪ್ರಿಲ ಪಕ್ಕಿನ ಸ್ಥಿರಆಸ್ತಿಯ ಲಿಲಾವಿನಲ್ಲಿ ದರ್ಖಾಸ್ತಿಗೆ ನಿಲ್ಲುವ ಬಗ್ಗೆ ಅರ್ಜಿದಾರನು ದಾಖಲ್ಲು ಮಾಡಿದ ಮೇಲಿನ ಅರ್ಜಿಯು ತಾರೀಕು 15-6-56ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಇಸೋಣಾಗಿಯದೆ ಆ ಕುರಿತು ಆಕ್ಷೇಪಗಳಿದ್ದರೆ ಮೇಲಿನ ಕೋರ್ಟಿನಲ್ಲಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು ತಿಳಿದಿರುವದು.

K. Soorappa Shetty
Advocate for Petitioner.

ಮೊಕ್ಕಾಂ ಕುಂದಾಪುರ, 5-5-56.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಸಾಹಿತ್ಯ ಪರಿಷತ್ತಿನ ನಾಟಕ ಸ್ಪರ್ಧೆಯ ಫಲಿತಾಂಶ:

ಕನ್ನಡ ಸಾಹಿತ್ಯ ಪರಿಷತ್ತು ನಡೆಸಿದ ನಾಟಕ ಸ್ಪರ್ಧೆಯಲ್ಲಿ ಈ ಕೆಳಗೆ ಕಂಡ ನಾಟಕಗಳಿಗೆ ಬಹುಮಾನ ಬಂದಿದೆ.

ಪ್ರಥಮ ಬಹುಮಾನ: 300 ರೂಪಾಯಿಗಳು "ಕೈಗೆ ಬಂದ ತುತ್ತು" ಬರೆದವರು ಶ್ರೀ ಗೋವಿಂದರಾಯ ನಂ. 62, 'ಅಂಬಿಕಾ ನಿವಾಸ್' ಬಸವನಗುಡಿ, ಬೆಂಗಳೂರು-4.

ದ್ವಿತೀಯ ಬಹುಮಾನ: 150 ರೂಪಾಯಿಗಳು. "ನಿರ್ಮಲಾ" ಬರೆದವರು ಶ್ರೀ ಕೆ. ಎ. ಎನ್. ರಾವ್, F/8, ನಿಸ್ಸಾಮ್ ಕಾಲೋನಿ, ಬಿ. ಹೆಚ್. ಯು. ಬೆನಾರಿಸ್.

ತೃತೀಯ ಬಹುಮಾನ: 100 ರೂಪಾಯಿಗಳು. "ಶಿಲ್ಪ ಸಂಗೀತ" ಬರೆದವರು ಸಮೇತನ ಹಳ್ಳಿ ರಾಮರಾಯರು ಆರೋಗ್ಯ ಶಿಕ್ಷಣ ಕೇಂದ್ರ, ಗಾಂಧಿನಗರಂ.

ಈ ಸ್ಪರ್ಧೆಗೆ ಒಟ್ಟು 59 ಜನ ನಾಟಕಕಾರರಿಂದ 65 ನಾಟಕಗಳು ಬಂದಿದ್ದವು. ಹತ್ತು ಹನ್ನೆರಡು ನಾಟಕಗಳು ಉತ್ತಮವಾದವುಗಳೆಂದು ಪರಿಗಣಿತವಾದವುಗಳನ್ನು ಸಾಹಿತ್ಯ ಪರಿಷತ್ತೇ ಪ್ರಕಟಿಸುವ ಯೋಚನೆ ಮಾಡಿದೆ.

ಜಿ. ವೆಂಕಟಸುಬ್ಬಯ್ಯ.
ಗೌರವ ಕಾರ್ಯದರ್ಶಿಗಳು.

ತಾ. 1-5-1956

'ಪ್ರಕಾಶ' ಕತಾ ಸ್ಪರ್ಧೆ

ತರುಣ ಬರಹಗಾರರನ್ನು ಉತ್ತೇಜಿಸುವ ಉದ್ದೇಶದಿಂದ 'ಪ್ರಕಾಶ'ವು ಕತಾ ಸ್ಪರ್ಧೆಯೊಂದನ್ನು ಏರ್ಪಡಿಸುವುದು. ಉಮೇದ್ವಾರರು ಸ್ವತಃ ಬರೆದ, ಇಷ್ಟರ ತನಕ ಪ್ರಕಟವಾಗದ ಕತೆಯನ್ನು ಮಾತ್ರ ಗಮನಿಸಲಾಗುವುದು. ಅಶ್ಲೀಲ, ಅನೀತಿಪರ, ತರ್ಜುಮೆ ಅಥವಾ ಆಧಾರದ ಮೇಲೆ ಬರೆದಿರುವ ಕತೆಗಳನ್ನು ಸ್ವೀಕರಿಸಲಾಗುವುದಿಲ್ಲ. ಕತೆಯು ಟೈಪ್ಡಾಗಿದ್ದು 1000 ಶಬ್ದಗಳಿಗೆ ಮಿಕ್ಕಿರಬಾರದು. ಅತ್ಯುತ್ತಮವೆಂದು ಸಂಪಾದಕ ಮಂಡಳಿಯವರು ತೀರ್ಮಾನಿಸುವ ಮೂರು ಕತೆಗಳಿಗೆ ರೂ. 25, 15, ಮತ್ತು 10ರ ಪ್ರಥಮ, ದ್ವಿತೀಯ ತೃತೀಯ ಬಹುಮಾನ ಕೊಡಲಾಗುವುದು. ಪ್ರಕಟಣಾಯೋಗ್ಯವಿರುವ ಇತರ ಕತೆಗಳಿಗೂ ಇನ್ನಿತರ ಪುರಸ್ಕಾರಗಳನ್ನು ಕೊಡಬಹುದು.

ಉಮೇದ್ವಾರರು ಸ್ಪರ್ಧೆಯ ಕತೆಗಳನ್ನು ತಾರೀಕು 25-5 1956 ರೊಳಗೆ ರಿಜಿಸ್ಟ್ರಿನಿಂದ ಕಳುಹಿಸಬೇಕು. ಫಲಿತಾಂಶವನ್ನು ಜೂನ್ 5ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಬಹುಮಾನಿತ ಕತೆಗಳು 'ಪ್ರಕಾಶ'ದಲ್ಲಿ ಕ್ರಮವಾಗಿ ಪ್ರಕಟಿಸಲ್ಪಡುವುವು.

ಸಂ॥

ಸೂಚಿತ ಮಹಾ ಮೈಸೂರು ರಾಜ್ಯರಚನೆಯು:— ಮುಂದಿನ ಆಕ್ಟೋಬರ ತಿಂಗಳಾರಂಭದಲ್ಲಿ ಆಗಲಿರುವುದರಿಂದ ಬೊಂಬಾಯಿ, ಮದ್ರಾಸು, ಹೈದರಾಬಾದು ಮತ್ತು ಕೊಡಗು ನೆರೆರಾಜ್ಯಗಳ ಮತ್ತು ಮೈಸೂರು ಸ್ಟೇಟಿನ ಹಲವಾರು ಸಮಸ್ಯೆಗಳು ಪರಿಶೀಲನೆಗೊಳಗಾಗಬೇಕಾದುದರಿಂದ ಮಂತ್ರಿ ಮಟ್ಟದಲ್ಲಿ ಅಂತರಾಜ್ಯ ಸಮಿತಿಯೊಂದು ರಚಿಸಲಾಗಿದೆ. ಈ ಸಮಿತಿಗೆ ಮೈಸೂರ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷರಾಗಿಯೂ, ಮುಂಬಯಿ ಸಹಕಾರಿ ಮಂತ್ರಿ ಶ್ರೀ ಎಮ್. ಪಿ. ಪಾಟೀಲ್, ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಮ್. ಪೂಣಚ್ಚ ಮತ್ತು ಮದ್ರಾಸಿನ ಆರೋಗ್ಯ ಮತ್ತು ಸಹಕಾರಿ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಸದಸ್ಯರಾಗಿಯೂ ಇರುವರು. ಈ ತಿಂಗಳ ಮಧ್ಯದಲ್ಲಿ ಸಮಿತಿಯ ಸಭೆಯು ಜರುಗಲಿರುವುದು ಎಂಬ ಪತ್ರಿಕಾ ಪ್ರಕಟಣೆ ಹೊರಟಿದೆ.

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5—1955).

ಕನ್ನಡದಲ್ಲಿ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

ಬರೆದವರು: ಕುಮಾರಸ್ವಾಮಿ

ಪುಟಗಳು: ೧೫೮ ಬೆಲೆ: ರೂ. ೧—೪—೦

●

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

* * *

ಇದು ಕನ್ನಡ ಸಾರಸ್ವತ ಲೋಕಕ್ಕೆ ಬಹು ಅಮೂಲ್ಯವಾದ ಕಾಣಿಕೆ. ಕನ್ನಡ ಜನತೆ, ಅದರಲ್ಲೂ ವಿದ್ಯಾರ್ಥಿ ವೃಂದ, ಇಂಥ ಪುಸ್ತಕ ಪಡೆಯಲು ಪುಣ್ಯ ಮಾಡಿರಬೇಕು. ಕಾದಂಬರಿ ಪ್ರಿಯರಾದ ವಾಚಕರು ಪ್ರಯತ್ನ ಪೂರ್ವಕವಾಗಿ ಈ ಪುಸ್ತಕದ ಕಡೆ ಗಮನ ಹರಿಸಬೇಕು. ಹಾಲಿನ ಸಾರವನ್ನೆಲ್ಲ ಭಟ್ಟಿ ಇಳಿಸಿದ ಹಾಲು ಕೋವಾದಂತಿದೆ ಇಲ್ಲಿಯ ವಿಷಯ ಸಂಪತ್ತು.

—ಜನಪ್ರಗತಿ, ಬೆಂಗಳೂರು.

ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸದೆ ಕೆಳಗಿಡಬಾರದ ಕತೆ, ಕಾದಂಬರಿಗಳಿರಬಹುದು. ಆ ಮಟ್ಟಕ್ಕೆ ಪ್ರಬಂಧಗಳ ಪುಸ್ತಕಗಳಿರುವುದು ಕಡಿಮೆ. ಆದರೆ ಈ ಪುಸ್ತಕ ಅಂಥ ಶಕ್ತಿ ಪಡೆದಿದೆ. ಇಂಥ ಪುಸ್ತಕಗಳಿಂದ ಕನ್ನಡ ಓದುಗರಿಗೆ ತುಂಬ ಉಪಕಾರವಾಗುತ್ತದೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಈ ಪುಸ್ತಕ ಒಂದು ಭೂಷಣ.

--ಪ್ರಪಂಚ, ಹುಬ್ಬಳ್ಳಿ.

ಜೀವನದ ಪ್ರಸಂಗಾನುಭವಗಳನ್ನು ನೀತಿ ಮತ್ತು ಸಿದ್ಧಾಂತದ ಒರೆಗಲ್ಲಿಗೆ ಹಚ್ಚಿಕೊಂಡು ಜೀವನ ದರ್ಶನವನ್ನು ಮಾಡಿಕೊಂಡ ಸನ್ನಿವೇಶಗಳ ಚಿತ್ರಣವೇ ಈ ಪುಸ್ತಕ.

—ಪ್ರಜಾಮತ, ಬೆಂಗಳೂರು.

ಪುಸ್ತಕದ ಭಾಷೆ ಚೆನ್ನಾಗಿದೆ; ಹೇಳಬೇಕಾದುದನ್ನು ಬಹಳ ಸುಂದರವಾಗಿ ಲೇಖಕರು ಹೇಳಿದ್ದಾರೆ. ಒಂದೊಂದು ಪ್ರಬಂಧಕ್ಕೂ ಸಮುಚಿತವಾಗಿ ಅದಕ್ಕೆ ಸಂಬಂಧ ಪಟ್ಟಂತೆ ಒಂದು ಸಣ್ಣ ಕತೆಯನ್ನು ಕೊಡಲಾಗಿದೆ. ಇದರಿಂದ ಪ್ರಬಂಧಕ್ಕೆ ಒಂದು ಒಳ್ಳೆಯ ಮುನ್ನುಡಿಯೂ ಆ ಪ್ರಬಂಧವನ್ನು ಓದಲು ಬೇಕಾದ ಮನೋಧರ್ಮವೂ ಸಿಗುತ್ತದೆ.

— ನವಭಾರತ ಮಂಗಳೂರು.

ಬದುಕಿನ ಬಂಗಾರಕ್ಕೆ ಅಂಟಿಕೊಂಡಿರ ಬಹುದಾದ ಕಿಲುಬನ್ನು ತಿಕ್ಕಿ ಅದನ್ನು ತಳತಳಿಸುವಂತೆ ಮಾಡುವ ಬಗೆ ಹೇಗೆಂದು ಲೇಖಕರು ಇಲ್ಲಿ ತಿಳಿಸುತ್ತಾರೆ. ವ್ಯಾವಹಾರಿಕ ತತ್ವಜ್ಞಾನವನ್ನು ಬಹಳ ಸೊಗಸಾಗಿ ಈ ಪ್ರಬಂಧಗಳು ಪ್ರತಿಪಾದಿಸುತ್ತವೆ. ಪ್ರತಿ ಪ್ರಬಂಧದ ಪ್ರಾರಂಭದಲ್ಲಿ ಕೊಟ್ಟ ಆಖ್ಯಾಯಿಕೆಯೂ ಪುಸ್ತಕದ ತುಂಬೆಲ್ಲ ಬರುವ ಮಹಾಪುರುಷರ ಜೀವನಪ್ರಸಂಗಗಳೂ ಕುಮಾರಸ್ವಾಮಿಯವರ ವಿಶಾಲವಾದ ಓದಿಗೆ ನಿದರ್ಶನವಾಗಿವೆಯಲ್ಲದೆ ಅವರ ಲೇಖನಕ್ಕೆ ಒಂದು ಅಪರೂಪವಾದ ಮೆರುಗನ್ನೂ ಕೊಡುತ್ತವೆ. ಇಂಥ ತಿಳಿಯಾದ ವ್ಯಾವಹಾರಿಕ ವಿವೇಕವನ್ನು ಕಾಂತಾಸಂಮಿತಿಯಿಂದ ಬೋಧಿಸುವ ಪುಸ್ತಕ ಕನ್ನಡದಲ್ಲಿ ಇದೇ ಮೊದಲೆಂದರೆ ತಪ್ಪಾಗದು. ನಾಗರಿಕತೆಯ ಪ್ರಭಾವದಿಂದ ಹೆಚ್ಚು ಜಟಿಲವಾಗುತ್ತಿರುವ ಜೀವನವನ್ನು ಎದುರಿಸಿ ಅಪ್ರತಿಭರಾಗುತ್ತಿರುವ ಸಾಮಾನ್ಯ ಜನರಿಗೆ ಇದು ತುಂಬ ಉಪಯುಕ್ತವಾದ ಪುಸ್ತಕ.

—ಕರ್ಮವೀರ ಹುಬ್ಬಳ್ಳಿ.

ಈ ಬರೆಹಗಳ ಒಳಗೆ ಅಡಗಿರುವ ತತ್ವ ಗಂಭೀರವಾದುದು. ಆದರೆ ಅದನ್ನು ವಿವರಿಸಿದ ರೀತಿ ಆಕರ್ಷಕವಾಗಿದೆ; ಮನೋರಂಜಕವಾಗಿದೆ. ಪ್ರತಿಯೊಂದು ಬರೆಹದ ಆರಂಭದಲ್ಲಿ ಅದರ ತಿರುಳನ್ನು ಸಂಕೇತಿಸುವ ಪುಟ್ಟ ಕಥೆ, ಸುಲಲಿತವಾದ ಶೈಲಿ, ಮನಸ್ಸನ್ನು ಸೆರೆಹಿಡಿಯುವಂಥ ನಿರೂಪಣೆಗಳಿಂದಾಗಿ ಈ ಕೃತಿ ಎಲ್ಲ ಬಗೆಯ ಓದುಗರಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. ಪಳಸಿದ ವಸ್ತುಗಳ ಕಥೆ ಕಾದಂಬರಿಗಳಿಂದ ದಣಿದವರಿಗೆ ಈ ಬರೆಹಗಳು ಉಲ್ಲಾಸ ನೀಡುತ್ತವೆ.

—ರಾಷ್ಟ್ರಮತ, ಮಂಗಳೂರು.

ಒಂದು ಒಳ್ಳೆಯ ಪುಸ್ತಕವನ್ನು ಓದಿದಾಗ ನಾನು ಹಿಗ್ಗಿದೆ ಎಂದು ಹೇಳುವ ಮಾತಿಗೆ ಇದು ಯೋಗ್ಯ ಉದಾಹರಣೆ. ಜಟಿಲ, ಕುಟಿಲತಮವಾದ ಬದುಕಿನ ಹದರು ಪದರುಗಳನ್ನು ಬಿಚ್ಚಿ ಸಮಸ್ಯೆಗಳನ್ನು ಕೆದಕಿ, ಒಂದು ಸಿದ್ಧಾಂತಕ್ಕೆ ಬರುವಲ್ಲಿ ಲೇಖಕರ ವಿಶಾಲ ಅನುಭವ, ಸೂಕ್ಷ್ಮ ದೃಷ್ಟಿ, ತರ್ಕ ಸರಣಿ, ಕಾವ್ಯಮಯ ಭಾಷೆ ಇವು ಇದನ್ನು "ಕನ್ನಡದ ಒಂದು ಹೊಸ ಬಗೆಯ ರಚನೆ" ಯನ್ನಾಗಿ ಮಾಡಿವೆ. ಶ್ರೀ ಕುಮಾರಸ್ವಾಮಿಯವರು ಹೊಸ ಹಾದಿ ತುಳಿದಿದ್ದಾರೆ. ಕೆಲವರಾದರೂ ಹಿಂಬಾಲಿಸಬಹುದಾದ ನವ್ಯ ಪಥ ಹಿಡಿದಿದ್ದಾರೆ. ರಸಮಯವಾದ, ವೈವಿಧ್ಯ ಪೂರ್ಣವಾದ ಪುಟ್ಟ ಪುಟ್ಟ ಕಥೆಗಳು ಈ ಪ್ರಬಂಧಗಳ ನವೀನತೆಯ ಜೋಗುಳ ಹೇಳುತ್ತವೆ. ಪ್ರಬಂಧದ ವಸ್ತುವನ್ನು ಹಿಂಜಿ, ಸಮರ್ಥಿಸಿ, ತರ್ಕಿಸುವಲ್ಲಿ ಲೇಖಕರ ನಾಲ್ಕು ದಿಟ್ಟಿನ ನೋಟವನ್ನು ಕಂಡು ಇವರ ಬಹುಶ್ರುತಿಗೆ ಆಶ್ಚರ್ಯ ಪಡುತ್ತೇವೆ. ಶೈಲಿ ಕಾವ್ಯಮಯವೂ ಸರಳವೂ ಆಗಿದೆ. ಸಣ್ಣ ಸಣ್ಣ ವಾಕ್ಯಗಳು ಪುಟ್ಟ ಮಕ್ಕಳು ಪುಟ ಪುಟ ಓಡಾಡಿದುದರ ಅನುಭವವನ್ನು ತರುತ್ತವೆ. ಸರಳ ನುಡಿ, ನಿಚ್ಚಳ ವೈಖರಿಗಳಿಗೆ ಒಪ್ಪವಿಟ್ಟಂತೆ, ಗಾದೆಮಾತುಗಳನ್ನೂ ಅನುಭವದ ನುಡಿಗಳನ್ನೂ ಲೀಲಾಜಾಲವಾಗಿ ಬಳಸಿದ್ದಾರೆ. ಇದೊಂದು ವ್ಯವಹಾರ ಜ್ಞಾನದ ಪುಟ್ಟ ವಿಶ್ವಕೋಶ.

—ಪುಸ್ತಕ ಪ್ರಪಂಚ, ಮೈಸೂರು.

When it is recognised that the orderly progress of any State depends upon each individual conducting oneself with a full realisation of one's duties and obligations, the usefulness of this publication will be evident.

—The Hindu, Madras.

ಪ್ರತಿಗಳು ಸಿಕ್ಕುವ ಸ್ಥಳ:

(1) ನವಯುಗ ಪ್ರೆಸ್, ಉಡುಪಿ.

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಪಾಶ್ಚಾತ್ಯ ಪಟ್ಟಣಗಳಲ್ಲಿ ಸ್ತ್ರೀಯರೇ ಅತ್ಯಧಿಕ

(೨ನೇ ಪುಟದಿಂದ)

ಮಂದಿ ಹೆಂಗಸರಿಗೆ ೮೭ರಂತೆ ಗಂಡಸರಿದ್ದಾರೆ; ಅಮೇರಿಕದಲ್ಲಿ ೫೩ ಗಂಡಸರಿದ್ದಾರೆ; ಅರ್ಜೆಂಟೀನದಲ್ಲಿ ೯೭ ಗಂಡಸರಿದ್ದಾರೆ. ಹಳ್ಳಿ ಮತ್ತು ಪಟ್ಟಣಗಳಲ್ಲಿ ಜನರು (ಸ್ತ್ರೀಯರೂ ಪುರುಷರೂ) ಹೀಗೆಲ್ಲ ಹಂಚಿ ಬೀಳುವುದಕ್ಕೆ ಕುಟುಂಬದ ಸಾಮಾನ್ಯ ಪ್ರಮಾಣ, ಅದರ ಸದಸ್ಯರ ವೃತ್ತಿ, ಶಿಕ್ಷಣ, ದಾಂಪತ್ಯ ಇತ್ಯಾದಿ ಕಾರಣಗಳು ಇರುತ್ತವೆ. ಸಾಮಾನ್ಯವಾಗಿ ಹಳ್ಳಿಯ ಕುಟುಂಬಗಳ ಪ್ರಮಾಣವು ದೊಡ್ಡದು. ಉದಾಹರಣೆಗೆ ದಕ್ಷಿಣ ಅಮೇರಿಕದ ದೇಶಗಳಲ್ಲಿಯೂ ಭಾರತ, ಜಪಾನು ಮುಂತಾದ ಏಶ್ಯದ ರಾಷ್ಟ್ರಗಳಲ್ಲಿಯೂ ಸಾಮಾನ್ಯ ಕುಟುಂಬದ ಪ್ರಮಾಣವು ೪.೫ರಿಂದ ೫.೯ ಜನರ ವರೆಗೆ ಇರುತ್ತದೆ. ಆದರೆ ಮಧ್ಯ ಮತ್ತು ಉತ್ತರ ಯುರೋಪಿನ ರಾಷ್ಟ್ರಗಳಲ್ಲಿದು ತೀರ ಕಡಿಮೆಯಾಗಿರುತ್ತದೆ. ಉದಾಹರಣೆಗೆ ಸ್ವೀಡನಿನಲ್ಲಿ ೩.೯; ಅಯರ್ಲೆಂಡಿನಲ್ಲಿ ೪.೩.

ಪ್ರತಿಯೊಂದು ದೇಶದಲ್ಲಿಯೂ ಗಂಡಸರೇ ಶ್ರಮವಹಿಸಿ ಕೆಲಸಮಾಡುತ್ತಾರೆ. ಇಂಥವರ ಪ್ರಮಾಣ ೫೯%. ಹೆಂಗಸರೂ ಹೆಚ್ಚು ಶ್ರಮದ ಕೆಲಸದಲ್ಲಿ ದುಡಿಯುವುದುಂಟು; ಆದರೆ ಅವರ ಪ್ರಮಾಣ ಕಡಿಮೆ—೨೨%. ಹೆಚ್ಚಾಗಿ ಹೆಂಗಸರು ಗೃಹಕೃತ್ಯದ ಕೆಲಸದಲ್ಲಿಯೂ ಮಕ್ಕಳ ಪಾಲನೆ ಪೋಷಣೆಯಲ್ಲಿಯೂ ನಿರತರಾಗಿರುತ್ತಾರೆ. ಹೊರತು ಮನೆಯ ಹೊರಗಿನ ಕಾಯಕಷ್ಟದ ಕೆಲಸಕ್ಕೆ ಹೋಗುವುದು ವಿರಳ. ಕೆಲವು ತೀರ ಜಡ ಪ್ರದೇಶಗಳನ್ನು ಹೊರತುಪಡಿಸಿದರೆ ಸಾಮಾನ್ಯವಾಗಿ ಗಂಡಸರಲ್ಲಿ ೫೦ ರಿಂದ ೭೦% ವರೆಗೆ ಏನಾದರೊಂದು ಸಂಪಾದನೆಯ ದಾರಿಯನ್ನು ಹಿಡಿದವರಿರುತ್ತಾರೆ—ಮುಂದರಿದ ದೇಶಗಳಲ್ಲಿಯೇ ಉದ್ಯೋಗನಿರತರಾದವರ ಸಂಖ್ಯೆ ಹೆಚ್ಚು.

ಭಾರತದಲ್ಲಿ ೧೯೪೧-೫೦ ವರ್ಷಗಳ ಅವಧಿಯಲ್ಲಿ ಸಾಮಾನ್ಯವಾಗಿ ಗಂಡುಮಕ್ಕಳು ೩೨.೫ ವರ್ಷ ಪ್ರಾಯದವರೆಗೆ, ಹೆಣ್ಣುಮಕ್ಕಳು ೩೧.೭ ವರ್ಷ ಪ್ರಾಯದ ವರೆಗೆ ಬದುಕುವ ಲಕ್ಷಣ ಕಂಡುಬಂತು. ನೆದರ್ಲೆಂಡಿನಲ್ಲಿ ೧೯೫೦-೫೨ನೇ ವರ್ಷದ ಅವಧಿಯಲ್ಲಿ ಗಂಡಸರು ೭೦.೬ ಮತ್ತು ಹೆಂಗಸರು ೭೨.೯ ವರ್ಷ ಪ್ರಾಯದವರೆಗೆ ಬದುಕುವ ಅಂದಾಜು ತೋರಿ ಬಂತು. ಕೇಂದ್ರ ಮತ್ತು ಉತ್ತರ ಯೂರೋಪಿನ ದೇಶಗಳಲ್ಲಿ ಮರಣ ಪ್ರಮಾಣವು ಜಗತ್ತಿನಲ್ಲಿಯೇ ಕಡಿಮೆಯಾಗಿರುವುದರಿಂದ ಅಲ್ಲಿ ದೀರ್ಘ ಕಾಲದ ವರೆಗೆ ಬಾಳುವ ಜನರೇ ಅಧಿಕ.

ಸಾಮಾನ್ಯವಾಗಿ ಸಿಂಹಳ, ಭಾರತ ಮತ್ತು ದಕ್ಷಿಣ ಆಫ್ರಿಕದಲ್ಲಿರುವ ಏಶ್ಯಾ ಜನಾಂಗದವರನ್ನು ಹೊರತುಪಡಿಸಿದರೆ ಎಲ್ಲ ದೇಶಗಳಲ್ಲಿಯೂ ಹೆಂಗಸರು ಗಂಡಸರಿಗಿಂತ ಎರಡರಿಂದ ಏಳು ವರ್ಷಗಳ ವರೆಗೆ ಹೆಚ್ಚು ಕಾಲ ಬಾಳುತ್ತಾರೆ. ಭಾರತದಲ್ಲಿ ಗಂಡಸರು ಹೆಂಗಸರಿಗಿಂತ ೦.೮ ವರ್ಷ, ದಕ್ಷಿಣ ಆಫ್ರಿಕದಲ್ಲಿರುವ ಏಶ್ಯ ಜನಾಂಗದವರಲ್ಲಿ ೧ ವರ್ಷ, ಸಿಂಹಳದಲ್ಲಿ ೨.೧ ವರ್ಷ ಹೆಚ್ಚು ಸಮಯದ ವರೆಗೆ ಸಾಧಾರಣವಾಗಿ ಬದುಕುತ್ತಾರೆ.

ಮದುವೆ ಮತ್ತು ದಾಂಪತ್ಯ ವಿಚ್ಛೇದನದ ದಾಖಲೆಯು ಬೇರೆ ಬೇರೆ ಸಾಮಾಜಿಕ ಪರಿಸ್ಥಿತಿ, ಪದ್ಧತಿಗಳು ಮತ್ತು ಜೀವನದ ಬಗೆಯನ್ನು ಬಿಂಬಿಸುತ್ತ ಮದುವೆಯಾದ ಜನರ ಪ್ರಮಾಣವು ದೇಶದಿಂದ ದೇಶಕ್ಕೆ ಭಿನ್ನವಾಗಿರುತ್ತದೆ. ಸಾಮಾನ್ಯವಾಗಿ ಹೇಳುವುದಾದರೆ ಮುಂದರಿದ ರಾಷ್ಟ್ರಗಳಲ್ಲಿ ಹೆಚ್ಚು ಜನರು ಮದುವೆಯಾಗುತ್ತಾರೆ; ಹಿಂದುಳಿದ ರಾಷ್ಟ್ರಗಳಲ್ಲಿ ಮದುವೆಯಾಗುವವರು ಕಡಿಮೆ. ಇದಕ್ಕೆ ಅಪವಾದವೆಂದರೆ ಅರಬ ರಾಷ್ಟ್ರಗಳು. ಅಲ್ಲಿ ಮದುವೆಯಾದವರ ದಾಮಾಶಯವು ಬಹಳ ಹೆಚ್ಚು. ಉದಾಹರಣೆಗಾಗಿ ಈಜಿಪ್ಟಿನಲ್ಲಿ ೨೫-೨೯ ವರ್ಷ ಪ್ರಾಯದ ಹೆಂಗಸರಲ್ಲಿ ೮೭% ವಿವಾಹಿತರಾಗಿದ್ದರು. ಬೆಲ್ಜಿಯಮಿನಲ್ಲಿ ಈ ಪ್ರಮಾಣ ೭೩%; ಆದರೆ ಹೈಟಿಯಲ್ಲಿ ಕೇವಲ ೧೨%.

ದಕ್ಷಿಣ ಅಮೇರಿಕದ ದೇಶಗಳಲ್ಲಿ ಜನರು ಸಣ್ಣ ವಯಸ್ಸಿನಲ್ಲಿಯೇ ಮದುವೆಯಾಗುತ್ತಾರೆ; ಆದರೆ ಮದುವೆಯಾಗುವವರೇ ಕಡಿಮೆ. ಆದರೆ ಭಾರತ ಮತ್ತು ಅರಬ ರಾಷ್ಟ್ರಗಳಲ್ಲಿ ಮದುವೆಯಾಗುವವರು ಬಹಳ ಹೆಚ್ಚು—ಆದರೆ ಮದುವೆಯಾದವರ ಜೀವನವು ವೈಧವ್ಯ ಅಥವಾ ದಾಂಪತ್ಯ ವಿಚ್ಛೇದನದ ಪರಿಣಾಮವಾಗಿ ಬರಡಾಗುವುದೂ ಅಷ್ಟೇ ಹೆಚ್ಚು. ಭಾರತದ ನಿದರ್ಶನವನ್ನು ತೆಗೆದುಕೊಂಡರೆ ೨೫-೩೪ ವಯಸ್ಸಿನ ಹೆಂಗಸರಲ್ಲಿ ೮೯% ವಿವಾಹಿತೆಯರಿರುತ್ತಾರೆ. ಆದರೆ ೫೫-೬೪ನೇ ವರ್ಷದ ಅವಧಿಯಲ್ಲಿ ೬೦% ವಿಧವೆಯರಾಗುತ್ತಾರೆ! ಗಂಡಸರಲ್ಲಿ ಮರಣ ಪ್ರಮಾಣವು ಹೆಚ್ಚೆಂಬುದೇ ಇದಕ್ಕೆ ಕಾರಣವೆನ್ನುವಂತಿಲ್ಲ. ಸಮಾಜದ ಮುಖ್ಯಾಂಗದಲ್ಲಿ ವಿಧವಾ ವಿವಾಹವು ನಿಷಿದ್ಧವಾಗಿರುವುದೂ ಹೆಂಗಸರ ಈ ಶೋಚನೀಯಾವಸ್ಥೆಗೆ ಮುಖ್ಯ ಕಾರಣ.

ಪ್ರತಿ ೧೦೦೦ ಜನಸಂಖ್ಯೆಗೆ ಅನ್ವಯಿಸಿ ನಡೆದ ಮದುವೆಗಳು ಐರ್ಲೆಂಡನ್ನು ಬಿಟ್ಟು ಉಳಿದ ಯುರೋಪು, ಅಮೇರಿಕದ ಸಂಯುಕ್ತ ರಾಜ್ಯ, ಕೆನಡ, ದಕ್ಷಿಣ ಆಫ್ರಿಕದ ಐರೋಪ್ಯ ಜನಾಂಗ ಇಲ್ಲೆಲ್ಲ ಅತಿ ಹೆಚ್ಚಾಗಿದ್ದವು. ಐರ್ಲೆಂಡಿನಲ್ಲಿಯೂ ದಕ್ಷಿಣ ಅಮೇರಿಕದ ದೇಶಗಳಲ್ಲಿಯೂ ಮದುವೆ ಬಹಳ ಕಡಿಮೆ ನಡೆಯಿತು. ಆದರೆ ದೀರ್ಘಾವಧಿಯ ಲೆಕ್ಕವನ್ನು ಹಾಕಿದರೆ ೧೦೦೦ ಜನಸಂಖ್ಯೆಗೆ ೮ರಂತೆ ಮದುವೆಯಾಗುತ್ತಿದ್ದ ೧೯೩೦ನೇ ವರ್ಷದಲ್ಲಿಯ ಹಿಂದುಳಿದ ದೇಶದ ಸ್ಥಿತಿಯು ೧೯೫೪ನೇ ವರ್ಷಕ್ಕಾಗುವಾಗ ತುಂಬ ಸುಧಾರಿಸಿರುವುದು ವ್ಯಕ್ತವಾಗುತ್ತದೆ. ೧೯೩೦-೩೪ನೇ ವರ್ಷಗಳಲ್ಲಿ ಅತಿ ಹೆಚ್ಚು ಮದುವೆಗಳು ನಡೆದಿದ್ದ ದೇಶಗಳಲ್ಲೀಗ ಮದುವೆಯು ನಿಧಾನವಾಗತೊಡಗಿದೆ. ಮೆಕ್ಸಿಕೊದಲ್ಲಿ ೧೯೩೦-೩೪ರಲ್ಲಿ ಪ್ರತಿ ಸಾವಿರ ಜನಸಂಖ್ಯೆಗೆ ೩.೯ರಂತೆ ಮದುವೆ ನಡೆದಿದ್ದರೆ ೧೯೫೦-೫೪ರಲ್ಲಿ ೭.೭ರಂತೆ ನಡೆದಿದೆ. ಬೆಲ್ಜಿಯಮಿನಲ್ಲೂ ಫ್ರಾನ್ಸಿನಲ್ಲೂ ಈ ಪ್ರಮಾಣವು ಕ್ರಮವಾಗಿ ೧೧.೫ರಿಂದ ೭.೯ ಮತ್ತು ೧೧ರಿಂದ ೭.೫ ಮದುವೆಗಳಿಗೆ ಇಳಿದಿದೆ.

ಮದುವೆಗಳು ನಡೆಯುವ ಪ್ರಮಾಣವು ಹೊಸತಾಗಿ, ಶಾಸನ ಬದ್ಧವಾಗಿ, ಅಸ್ತಿತ್ವಕ್ಕೆ ಬರುವ ಕುಟುಂಬಗಳ ಸಂಖ್ಯೆಯನ್ನಷ್ಟೆ ಒದಗಿಸದೆ, ಜನಸಂಖ್ಯೆಯ ಏರಿಳಿತಗಳನ್ನು ಹೊಸ ಮದುವೆಗಳ ಮೇಲಿನ ನಿಯಂತ್ರಣದಿಂದ ಹೇಗೆ ಹದ್ದಿನಲ್ಲಿಡಬಹುದೆಂದೂ ತೋರಿಸಿ ಕೊಡುತ್ತವೆ. ಜನನ ಪ್ರಮಾಣವನ್ನು ಹೆಚ್ಚಿಸಲೂ ತಗ್ಗಿಸಲೂ ಮದುವೆಯಾಗುವ ಪ್ರಮಾಣದ ಮೇಲೆ ಸಮಯೋಚಿತ ಹಿಡಿತವನ್ನಿಡುವುದರಿಂದ ಸಹಾಯ ದೊರಕುತ್ತದೆ. ಭಾರತದಲ್ಲಿ ಕಳೆದ ಒಂದು ದಶಕದಲ್ಲಿ ಹೆಣ್ಣು ಮಕ್ಕಳ ಮದುವೆಯ ವಯಸ್ಸು ಸುಮಾರು ನಾಲ್ಕರಿಂದ ಐದು ವರ್ಷಗಳಷ್ಟು ಮುಂದೆ ಬಿದ್ದಿದೆ— ಪರಿಣಾಮದಲ್ಲಿ ಜನಸಂಖ್ಯಾ ವೃದ್ಧಿಯು ಗಣನೀಯವಾಗಿ ತಗ್ಗಿದೆ. ಹಿಂದೆ ಬೇಗ ಮದುವೆಯಾಗಿ ಆರು ಮಕ್ಕಳನ್ನು ಹೆರುತ್ತಿದ್ದ ಹೆಂಗಸರ ಮಗಳಂದಿರೇ ಈಗ ತಡ ಮದುವೆಯಾಗಿ ನಾಲ್ಕೇ ಮಕ್ಕಳನ್ನು ಹೆರುತ್ತಿದ್ದಾರೆ- ಎಂಬುದು ಸ್ಪಷ್ಟವಾಗಿ ಗೋಚರಿಸುವಷ್ಟು ಸ್ತ್ರೀ ಶಿಕ್ಷಣ ಮತ್ತಿತರ ಕಾರಣಗಳಿಂದಾಗಿ ಮದುವೆಯ ವಯಸ್ಸು ಮುಂದೆ ಬಿದ್ದುದರಿಂದ ಜನಸಂಖ್ಯೆಯ ಮೇಲೆ ಪರಿಣಾಮವಾಗಿದೆ.

ಅಂಕೆಸಂಖ್ಯೆಗಳು ಇನ್ನೊಂದು ಕುತೂಹಲದಾಯಕ ವಿಷಯವನ್ನೂ ತೋರ್ಪಡಿಸುತ್ತವೆ - ಎಲ್ಲಿ ಮದುವೆಯ ಪ್ರಮಾಣವು ಕಡಿಮೆಯಾಗಿರುತ್ತದೊ ಅಲ್ಲಿ ಹುಟ್ಟುವ ಮಕ್ಕಳ ಸಂಖ್ಯೆಯು ಅತ್ಯಧಿಕವೆಂಬ ವಿಷಯವೇ ಅದು. ಪ್ರಜೋತ್ಪಾದನ ಶಕ್ತಿಯ ಫಲವತ್ತತೆಯೊಂದೇ ಹೆಚ್ಚು ಮಕ್ಕಳ ಜನನಕ್ಕೆ ಕಾರಣವೆಂದು ಭಾವಿಸುವುದು ಸರಿಯಾಗಲಿಕ್ಕಿಲ್ಲ. ಶಾಸನಬದ್ಧವಾಗಿ ಅಥವಾ ವಿಧ್ಯುಕ್ತ ರೀತಿಯಲ್ಲಿ ನಡೆಯುವ ಮದುವೆಗಳು ಕಡಿಮೆಯಾದರೂ ಸ್ತ್ರೀಪುರುಷರ ಅನೈತಿಕ ಸಂಬಂಧದಿಂದ ಉಂಟಾದ ಅನೌರಸ ಸಂತಾನದ ಪ್ರಮಾಣವೇ ಹುಟ್ಟುವ ಮಕ್ಕಳ ಸಂಖ್ಯಾಬಾಹುಳ್ಯ ಹೆಚ್ಚುವುದಕ್ಕೆ ಕಾರಣವಾಗಿರಬಹುದು. ೧೯೩೦ ರಿಂದೀಚೆಗೆ, ಜಗತ್ತಿನ ೩೩ ರಾಷ್ಟ್ರಗಳಲ್ಲಿ ಜನನ ಪ್ರಮಾಣ ಹೆಚ್ಚಿದೆ. ೩೧ ರಾಷ್ಟ್ರಗಳಲ್ಲಿ ಕಡಿಮೆಯಾಗಿದೆ. ಜಪಾನು ಮತ್ತು ಪ್ಯೂಟೋರಿಕೊಗಳಲ್ಲಿ ಜನನನಿಯಂತ್ರಣ ಕ್ರಮಗಳ ಬಳಕೆ ಮತ್ತು ಗರ್ಭಪತನವನ್ನು ಶಾಸನಬದ್ಧಗೊಳಿಸಿದ ಕಾರಣದಿಂದ ಶಿಶು ಜನನ ಪ್ರಮಾಣ ತಗ್ಗಿತು. ಈ ಪ್ರಮಾಣ ಹೆಚ್ಚಿದೆಕಡೆಗಳಲ್ಲಿ ಇತರ ಕಾರಣಗಳೊಂದಿಗೆ ಸರಕಾರದ ಪುಸ್ತಕಗಳಲ್ಲಿ ಮಕ್ಕಳು ಹುಟ್ಟಿದ ಸಂಗತಿಯನ್ನು ದಾಖಲೆ ಮಾಡಿಸುವ ಕ್ರಮವು ಹೆಚ್ಚು ಜನಪ್ರಿಯವಾಗುತ್ತಾ ಬಂದಿರುವುದನ್ನೂ ಉಲ್ಲೇಖಿಸಬಹುದು.

ರೂ. 1000ದ ವರೆಗೆ ಸಾಲವು

ಯಾವ ಜಾಮೀನು, ಆಸ್ತಿ, ಅಡವು ಇಲ್ಲದೆನೇ ಬರೇ ನಿಮ್ಮ ದಸ್ಕತಿನ ಮೇಲೆ ಕೊಡಲಾಗುವುದು. ನೂರಕ್ಕೆ ಮೇಲ್ಪಟ್ಟ ಅರ್ಜಿದಾರರು ಈಗಾಗಲೇ ಸೌಕರ್ಯಗಳನ್ನು ಪಡೆದಿರುತ್ತಾರೆ. ಹೆಚ್ಚಿನ ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ.

Bombay Mercantile Co.,
Bombay-23.



ಮುಚ್ಚಿದರೆ ಮುಗಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ.—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.

ಗಮನಿಸಿರಿ! ಪರೀಕ್ಷಿಸಿ ನೋಡಿರಿ!! ಸುಖ ಪಡೆಯಿರಿ!!!

ನಿಮ್ಮ ಮೇಲ್ಮೆಗಾಗಿ ಲಕ್ಷಿಸಿರಿ.

ಹೆಚ್ಚು ಹೇಳುವುದರಿಂದೇನು? ಹಸಿವೇ ಇಲ್ಲದಿದ್ದರೂ, ಜೀರ್ಣಶಕ್ತಿ ಸಂಪೂರ್ಣವಾಗಿ ಹೋಗಿದ್ದರೂ, ದೇಹವು ಬಹಳವಾಗಿ ಕ್ಷೀಣಿಸಿ ಮೂಳೆ ಚರ್ಮಗಳು ಕಾಣುವ ಹಾಗಿದ್ದರೂ, ಕಣ್ಣುಗಳು ಗುಳಿಬಿದ್ದಿದ್ದು ಹಿಂದೆಲೆಯನ್ನು ಹೋಗಿ ಸೇರಿದ್ದರೂ, ಬಲ, ಚಟುವಟಿಕೆ, ಧೈರ್ಯಗಳಿಲ್ಲದೆ ಹೋದರೂ ಶುಕ್ಲವೂ, ಇಂದ್ರಿಯವೂ, ಪೂರ್ತಿಯಾಗಿ ನಿಂತುಹೋಗಿದ್ದರೂ, ಮೇಹ ಮೊದಲಾದ ವ್ಯಾಧಿಗಳಿಂದ ನರಳುತ್ತಿದ್ದರೂ ನಮ್ಮ "ಮನ್ಮಥ ಚಿಂತಾಮಣಿ ಲೇಹ್ಯ" ಸೇವನೆಯಿಂದ ಸಂಪೂರ್ಣ ಸುಖದೊರೆಯುವದು. ಅಲ್ಲದೆ ಆರೋಗ್ಯಭಾಗ್ಯವನ್ನೂ ಪಡೆಯಬಹುದು, ಇಂತಹ ಜೀವದಾಯಕವಾದ ಅಮೃತ ಸಮಾನವಾದ ರಸಾಯನವು

ಪೌಂಡು ಒಂದಕ್ಕೆ ರೂ. 5—0—0.

ಮಲಿಯಾಳ ಮೆಡಿಕಲ್ ಹಾಲ್, ತಿರುವನಂತಪುರಂ (Trivandrum).

ಅಪೇಕ್ಷಕರಿಗೆ ಕ್ಯಾಟ್ಲಾಗು ಇನಾಂ.

(೨ನೇ ಪುಟದಿಂದ)

ುತ್ಸವವು ಈ ರಸ ಘಟ್ಟವನ್ನು ಮು ಾಗ ಪುರೋಹಿತರು ವೇದ ಮಂತ್ರ ್ನು ಪಠಿಸಿದರು; ಶಂಖಗಳೂ ಮಂಗ ಾದ್ಯಗಳೂ ಮೊಳಗಿದವು; ರಾಷ್ಟ್ರೀ ಗೀತೆಯನ್ನು ಆಕರ್ಷಕವಾಗಿ ಬ್ಯಾಂ ಳು ನುಡಿಸಿದವು; ತೋಪುಗಳನ್ನು ಿ ರಾಜರಿಗೆ ಗೌರವವನ್ನು ಅರ್ಪಿ ಯಿತು. ನೆರೆದಿದ್ದ ಪ್ರಜಾಪ್ರಮುಖ ್ಹ ಸಭಾಸದರನ್ನೂ ಉದ್ದೇಶಿಸಿ ಗುರುಗಳು ಶುದ್ಧ ಸಂಸ್ಕೃತದಲ್ಲಿ ಜನರುಗಳೇ! ಈಗ ಅಭಿಷಿಕ್ತ ುವಾತನೇ ನಿಮ್ಮೆಲ್ಲರ ಅರಸು. ನೇ ಬ್ರಾಹ್ಮಣರಿಗೆಲ್ಲ ರಾಜನಾಗಿರುವ ವ." ಎಂದು ಯಜುರ್ವೇದದಲ್ಲಿ ್ರಸಾದ ಘೋಷಣೆಯನ್ನು ಮಾಡಿ .

ಸಮಾರಂಭದ ಕೊನೆಯ ಭಾಗ ; ಅರಸ ಮಹೇಂದ್ರರು, ಹಾರಾಜಾಧಿರಾಜನೆಂಬ ನೆಲೆ ವ ತನ್ನ ಪ್ರಜೆಗಳಿಂದಲೂ ಪ್ರತಿ ಪರಿವಾರಗಳಿಂದಲೂ ಮಂತ್ರಿಗಳಿಂ ಉಚ್ಚ–ನೀಚ ಸ್ಥಾನದವರೆಂಬ ತಮ್ಯ ಭಾವವಿಲ್ಲದೆ ನಿಷ್ಠಾಸೂಚಕ ಾಮುಗಳನ್ನೂ ಪಟ್ಟಕಾಣಿಕೆಗಳನ್ನೂ ಕರಿಸಿದರು.

ುಚಿತ ವಸ್ತ್ರಗಳಿಂದ ಭೂಷಿತರಾದ ಪ್ರಮುಖರೆಲ್ಲ ತಮ್ಮ ಅಂತಸ್ತಿನ ಾನುಸಾರವಾಗಿ ಒಬ್ಬೊಬ್ಬರೇ ಸಿಂ ಸನದೆಡೆಗೆ ಭಯಭಕ್ತಿವಿನಯ ಪುರ ವಾಗಿ ಮುಂಬಂದು ಮೊಣಕಾಲೂರಿ ಸ್ಕರಿಸಿ ಕಾಣಿಕೆಯಿತ್ತು ಹಿಂದೆ ಸರಿ . ಮಂತ್ರಿಗಳು, ರಾಣರು, ಭೂಮಾ ರ., ವ್ಯಾಪಾರಿಗಳು, ಪ್ರಾಚೀನ ಜ ಗದ ವಂಶ್ಯರುಗಳು ಎಲ್ಲರೂ ಹೀಗೆ ವನೆಯನ್ನರ್ಪಿಸಿದರು.

ಮೇಲೆ ಅರಸು ಮಹೇಂದ್ರರು ತ ಪ್ರಜೆಗಳನ್ನು ಉದ್ದೇಶಿಸಿ "ನಾನು ಇಂ ದ ಯಾವಾಗಲೂ ನನ್ನೀದೇಶದ ದೇವರೆಂದೇ ಭಾವಿಸಿ ಅದರ ಏಳಿಗ ಗಾಗಿ ಪ್ರಯತ್ನಿಸುತ್ತೇನೆ' ಎಂದು ಸಾ ು. ಅಲ್ಲದೆ ರಾಜಗುರುಗಳು ಉಪ ಸಿದಂತೆ ಶುದ್ಧ ಸಂಸ್ಕೃತದಲ್ಲಿ "ಈ ಿಗೆ ರೂಢವಾಗಿರುವ ಶಾಸನವನ್ನೂ' ಶಾಸ್ತ್ರೋಕ್ತವಾದುದೆಲ್ಲವನ್ನೂ ರಾ ರಣಕ್ಕೆ ವಿರೋಧವೆನಿಸದುದೇನಿದೆ ಅದನ್ನೂ ಹಿಂದೆಮುಂದೆ ನೋಡದೆ ವರ್ತಿಸಿ ನಡೆದುಕೊಳ್ಳುತ್ತೇನೆ: ನು ನಾನು ಎಂದೆಂದಿಗೂ ಏಕಪಕ್ಷೀಯ ಾರ ನಡೆಸುವುದಿಲ್ಲ" ಎಂದು ಪ್ರತಿ ಯನ್ನು ಪ್ರಜೆಗಳ ಮುಂದೆ ಕೈಗೊಂ .

ನೇಪಾಳದ ಈ ಹಿಂದು ಅರಸರ ಬಿರು ವಳಿ ಬಹಳ ಕುತೂಹಲಜನಕವಾಗಿದೆ. ್ತಿ ಶ್ರೀ ಗಿರಿರಾಜ ಚಕ್ರ ಚೂಡಾಮ ಜಸ್ವಿ ರಾಜಾನ್ಯ ಪ್ರಜವಾಳ ನಾರಾ ೇತ್ಯಾದಿ ವಿವಿಧ ಬಿರುದಾವಳಿ ವಿರಾ ಾನ ಮಹೋನ್ನತ ಸ್ತ್ರೋಜ್ವಲ ಾಳ ತಾರಾ ತ್ರಿಶಕ್ತಿ ಪಟ್ಟ ಅತಿ ಪ್ರವಾಳ ಗೋರ್ಖಾ ದಕ್ಷಿಣ ಹು ಶ್ರೀ ಪಂಚ ಮಹಾರಾಜಾಧಿರಾಜ ಹೇಂದ್ರ ವೀರವಿಕ್ರಮ ಜಂಗ್ ಬಹ ್ರ್ ಶಮ್‌ಶೇರ್ ಜಂಗ್ ಶಹಾ ವಾನ್ ಸದಾ ಸಮರ ವಿಜಯಿ



ಭಾರತದೊಡನೆ ನೇಪಾಳದ ಸಂಬಂಧ ಗಾಢವಾಗಿದೆ—ಈಚೆಗೆ ಅರಸು ಮಹೇಂದ್ರರು ಪತ್ನಿಯೊಡನೆ ಭಾರತ ಸಂಚಾರ ಕೈಗೊಂಡಿದ್ದರು. ಅವರ ಸ್ವಾಗತಕಾಲದ ಈ ಚಿತ್ರದಲ್ಲಿ ರಾಷ್ಟ್ರಾಧ್ಯಕ್ಷ ಡಾ. ಪ್ರಸಾದ,ಪ್ರಧಾನಿ ನೆಹರು,ಉಪರಾಷ್ಟ್ರಾಧ್ಯಕ್ಷ ಡಾ.ರಾಧಾಕೃಷ್ಣನ್ನರನ್ನು ಕಾಣಬಹುದು.

ನಾವ್" ಎಂದು ಈ ಬಿರುದು ಸಾಗು ತ್ತದೆ.

ಅರಸು ಮಹೇಂದ್ರರು ಭಾರತೀಯ ಸೇನೆಯ ಮೇಜರ್ ಜನರಲ್ ಆಗಿದ್ದಾರೆ; ಭಾರತದ ಗೋರ್ಖಾ ಪಲಟಣ ದಳದ ಕರ್ನಲ್–ಇನ್–ಚೀಫ್ (ಮುಖ್ಯಸ್ಥ) ಆಗಿದ್ದಾರೆ. ಆದುದರಿಂದ ಭಾರತದ ಸೇನೆಯ ಪರವಾಗಿ ಪೂರ್ವ ವಿಭಾಗದ ಮುಖ್ಯ ಸೇನಾಪತಿ ಜನರಲ್ ಸಂತ್ ಸಿಂಘರು ಒಂದು ಶ್ರೇಷ್ಠ ದರ್ಜೆಯ ಖಡ್ಗವನ್ನು ಒರೆ ಸಹಿತವಾಗಿ ಕಾಣಿಕೆ ನೀಡಿದ್ದಾರೆ.

ಭಾರತ ಸರಕಾರವು ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ನರ ಧುರೀಣತ್ವದಲ್ಲಿ ಮೂರು ಜನರ ಪ್ರತಿನಿಧಿ ಮಂಡಳವನ್ನು ತನ್ನ ಶುಭಾಶಯಗಳೊಡನೆ ಈ ನೆರೆಯ ರಾಜ್ಯದ ಅರಸರ ಪಟ್ಟಾಭಿಷೇಕ ಕಾಲಕ್ಕೆ ಕಳಿಸಿದ್ದಿತು. ಡಾ. ರಾಧಾಕೃಷ್ಣನ್ನರ ವಿಮಾನವು ನೇಪಾಳದ ರಾಜಧಾನಿಯಾದ ಕಾತಮಂಡುವಿನಲ್ಲಿ ಇಳಿದೊಡನೆಯೇ ನೆರೆದ ಜನಸ್ತೋಮವು 'ಹಿಂದುಸ್ಥಾನಿ–ನೇಪಾಳಿ ಭಾಯಿ ಭಾಯಿ' ಎಂದೂ "ಭಾರತ್ ಕಾ ಮಂಗಲ್ ಹೋ' ಎಂದೂ ಜಯ ಘೋಷ ಮಾಡಿತು.

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಈ ಸಂದರ್ಭದಲ್ಲಿ ಕಳಿಸಿದ ಶುಭ ಸಂದೇಶದಲ್ಲಿ ಅರಸು ಮಹೇಂದ್ರರಿಗೆ ವ್ಯಕ್ತಿಗತ ಜೀವನದಲ್ಲಿ ಸುಖಶಾಂತಿ ಸಮೃದ್ಧಿಗಳನ್ನು ಕೋರಿದ್ದರಲ್ಲದೆ ನೇಪಾಳದಲ್ಲಿ ಅವರ ಆಡಳಿತೆಯು ಪ್ರಜಾಕ್ಷೇಮವನ್ನು ಮಾಡಲೆಂದೂ ಆಶಿಸಿದ್ದರು. ಅಷ್ಟೇಯಲ್ಲ — ಮುಂಬರುವ ವರ್ಷಗಳಲ್ಲಿ ನಮ್ಮೆರಡು ರಾಷ್ಟ್ರಗಳ ನಡುವೆ ಸ್ನೇಹ,ತಿಳಿವಳಿಕೆಗಳು ಇನ್ನಷ್ಟು ಗಾಢವಾಗಲೆಂದೂ ಲೋಕ ಶಾಂತಿ ಮತ್ತು ಮಾನವತೆಯ ಸುಖದ ದೃಷ್ಟಿಯಿಂದ ಹೆಚ್ಚಿನ ಸಹಕಾರ ನೆಲೆಗೊಳ್ಳಲೆಂದೂ ಹಾರೈಸಿದ್ದರು.

ಕಳೆದ ವರ್ಷ ನಿಧನ ಹೊಂದಿದ ನೇಪಾಳದ ದೊರೆ ತ್ರಿಭುವನರ ಪಟ್ಟಾಭಿಷೇಕವು ನಾಲ್ವತ್ತೇಳು ವರ್ಷಗಳ ಹಿಂದೆ ಜರಗಿದ್ದಿತು. ಅರಸು ಮಹೇಂದ್ರರ ತಂದೆಯಾದ ತ್ರಿಭುವನರ ಈ ಪಟ್ಟಾಭಿಷೇಕ ಕಾಲದಲ್ಲಿ ಬ್ರಿಟನಿನ ಪರವಾಗಿ ಕಾತಮಂಡುವಿನಲ್ಲಿದ್ದ ರೆಸಿಡೆಂಟರೂ ಅವರ ಪರಿವಾರದವರೂ ಸಪತ್ನೀಕರಾಗಿ ಭಾಗವಹಿಸಿದ್ದರು. ಆದರೆ ಬೇರೆ ಯಾವುದೇ ದೇಶದ ಪ್ರತಿನಿಧಿಗಳು ಬಂದಿರಲಿಲ್ಲ.

ನೇಪಾಳವನ್ನು "ಕಲ್ಯಾಣ ರಾಜ್ಯ" ವಾಗಿ ರೂಪಿಸುವ ಇಚ್ಛೆಯನ್ನು ಅರಸು ಮಹೇಂದ್ರರು ಈಗ ಪ್ರಕಟಿಸಿದ್ದಾರೆ. ರಾಣರ ವಜ್ರ ಮುಷ್ಟಿಯ ಹಿಡಿತದಿಂದ ನೇಪಾಳವನ್ನು ೧೯೫೦ನೇ ವರ್ಷದಲ್ಲಿ ತಪ್ಪಿಸಿ, ಪ್ರಜಾಸತ್ತೆಗೆ ಸಾಕಷ್ಟು ಅನುಕೂಲವನ್ನು ಹಿಂದಿನ ರಾಜರಾದ ತ್ರಿಭುವನರು ಕಲ್ಪಿಸಿ ಕೊಟ್ಟರು. ಆದರೆ ನೇಪಾಳದ ರಾಜಕೀಯ ಪಟುಗಳು ರಾಷ್ಟ್ರದ ಕ್ಷೇಮ ಚಿಂತನೆಗೆ ಹೆಚ್ಚು ಮಹತ್ವ ಕೊಡದೆ ಪರಸ್ಪರ ಕಚ್ಚಾಟದಲ್ಲಿ ಮುಳುಗಿದುದರಿಂದ ಸ್ಥಿರವಾದ ಪ್ರಜಾಸತ್ತಾತ್ಮಕ ಆಡಳಿತೆವು ಅಲ್ಲಿ ನೆಲೆಗೊಳ್ಳುವುದು ಕಷ್ಟವಾಗಿ ಪರಿಣಮಿಸಿದೆ.

ಈಗ ಅಲ್ಲಿ ಟಂಕ ಪ್ರಸಾದ ಆಚಾರ್ಯರ ಮುಖ್ಯ ಮಂತ್ರಿತ್ವದಲ್ಲಿ ಸರಕಾರವು ಪ್ರಜಾಹಿತದ ಉದ್ದೇಶದಿಂದ ಕೆಲಸಮಾಡುತ್ತಿದೆ. ೧೯೫೭ನೇ ಅಕ್ಟೋಬರದಲ್ಲಿ ಪ್ರಜಾಸತ್ತೆಯ ತಳಹದಿಯಂತೆ ಚುನಾವಣೆ ನಡೆಸಲಾಗುವುದೆಂದು ಅರಸರು ಘೋಷಿಸಿದ್ದಾರೆ. ಅವರು ತರುಣರೂ ಉತ್ಸಾಹಿಗಳೂ ಪ್ರಜಾ ಹಿತೈಷಿಗಳೂ ಆಗಿದ್ದು ಯೋಜನಾಬದ್ಧ ಅಭಿವೃದ್ಧಿಯಲ್ಲಿ ಆಸಕ್ತಿ ವಹಿಸಿದ್ದಾರೆ. ನೇಪಾಳದ ಆದಾಯದ ಮುಖ್ಯ ಸ್ತ್ರೋತವಾಗಿರುವ ಅರಣ್ಯಗಳ ಅಭಿವೃದ್ಧಿಗೂ ಅಭಿವೃದ್ಧಿಗೆ ಮುಖ್ಯ ಅಂಶಕವಾಗಿರುವ ಸಾರಿಗೆ-ಸಂಪರ್ಕಗಳ ಕೊರತೆಯನ್ನು ದೂರೀಕರಿಸುವುದಕ್ಕೂ ಪ್ರಯತ್ನಿಸುತ್ತಿದ್ದಾರೆ.

ಎಲ್ಲ ಬಗೆಯಿಂದಲೂ ನೇಪಾಳವನ್ನು ಅತ್ಯಾಧುನಿಕ ಮಟ್ಟಕ್ಕೆ ಎತ್ತರಿಸುವುದು ಅವರ ಅಪೇಕ್ಷೆ. ಸಂಯುಕ್ತ ರಾಷ್ಟ್ರ ಸಂಘದಲ್ಲಿ ತನ್ನ ರಾಜ್ಯಕ್ಕೆ ಈಚೆಗೆ ದೊರಕಿದ ಸದಸ್ಯತ್ವದ ಬಲದಿಂದ ಅವರು ಹೆಚ್ಚು ರಾಷ್ಟ್ರಗಳ ಮನ್ನಣೆ ಪಡೆದಿರುವುದು ವ್ಯಕ್ತವಾಗಿದೆ. ಅವರಿಗೆ ಎಲ್ಲರ ಸ್ನೇಹ ಸಹಕಾರ ಬೇಕು — ಭಾರತದೊಡನೆಯಂತೂ ಈ ಹಿಂದು ರಾಜರ ಸಂಪರ್ಕ ಅನ್ಯೋನ್ಯ ಮೈತ್ರಿಯದು ಇವರಿಗೂ ಇವರ ನಾಡಿಗೂ ಶುಭವಾಗಲಿ!



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

(೧ನೇ ಪುಟದಿಂದ)

ಪಟ್ಟುಕೊಳ್ಳುವುದಕ್ಕೆ ಎಡೆಯೇ ಸಿಗದು. ಈ ರೋಗಕ್ಕೇನಾದರೂ ಚಿಕಿತ್ಸೆಯನ್ನು ಅತ್ಯವಶ್ಯವಾಗಿ ಮಾಡಲೇಬೇಕು- ಸಾರ್ವಜನಿಕರು ತುಸುವಾದರೂ ಕಣ್ಣನ್ನು ತೆರೆದು ಈ ಪಿಡುಗಿನ ಪ್ರತಿಬಂಧದ ಕುರಿತು ಆಲೋಚನೆ ಮಾಡಲು ತೊಡಗಬೇಕು- ಇದು ತೀರ ಅವಶ್ಯವಾದ ವಿಷಯವೆಂಬುದರಲ್ಲಿ ಪೇಟೆಗಳಲ್ಲಿರುವ ಮನೆ—ಮಠ—ಮಂದಿರ—ಸಭಾಸದನಗಳ ಮಾಲಿಕರ ಆಕ್ಷೇಪವಿರಲಾರದು.

ಮಸೂದೆಯನ್ನು ತಂದವರು ಇಂಥ ಜಾಹೀರಾತುಗಳ ಉಪಯುಕ್ತತೆಯನ್ನು ಮನಗಾಣಲ್ಲವೆಂದೇನೂ ಭಾವಿಸಬಾರದು. ಗೋಡೆಗಳ ಅಂದಗೆಡಿಸುವ ಚಪಲಮಾತ್ರ ಒಳ್ಳೆಯದಲ್ಲವೆಂದವರ ಅಭಿಪ್ರಾಯ. ಜಾಹೀರಾತುಗಳನ್ನು ಪ್ರಕಟಿಸಲು ವಿಶಿಷ್ಟ ಸ್ಥಳಗಳನ್ನು ಕಾಯ್ದಿಡಬೇಕೇ ಹೊರತು, ಸಿಕ್ಕ ಗೋಡೆಗಳಲ್ಲೆಲ್ಲ ಹಚ್ಚುವುದಲ್ಲ. ಇದಕ್ಕಾಗಿ ಸ್ಥಳೀಯ ಸಂಸ್ಥೆಗಳು ಯೋಗ್ಯ ಪ್ರದೇಶಗಳನ್ನು ನಿಗದಿಗೊಳಿಸಬೇಕು. ಇಲ್ಲಿ ಹಚ್ಚುವ ಜಾಹೀರಾತುಗಳಿಗಾಗಿ ಹಣವನ್ನು ವಸೂಲು ಮಾಡಬಹುದು. ಜಾಹೀರಾತುಗಳು ಯಾವುದೇ ರೀತಿಯಲ್ಲಿ ಸಾರ್ವಜನಿಕ ಸಭ್ಯತೆಯನ್ನು ಕೆಡಿಸುವ ಅಥವಾ ಹಿತಾಸಕ್ತಿಗಳಿಗೆ ಭಂಗವನ್ನು ತರುವ ರೀತಿಯಲ್ಲಿರದಂತೆ ಔಚಿತ್ಯವರಿತು ಪ್ರಕಟಣೆಯನ್ನು ಹಚ್ಚಗೊಡುವ ಅಥವಾ ಬಿಡುವ ಅಧಿಕಾರವು ಸ್ಥಳೀಯ ಸಂಸ್ಥೆಯವರಿಗಿರಬೇಕು.

ಹೀಗೆ ನಿರ್ದಿಷ್ಟ ಪಡಿಸಿದ ರೀತಿಯಲ್ಲಲ್ಲದೆ ಬೇರಾವುದೇ ರೀತಿಯಲ್ಲಿ ಪ್ರಕಟಣೆಗಳನ್ನು ಹಚ್ಚಿದರೆ ಅಥವಾ ಗೋಡೆಗಳಲ್ಲಿ ಬರೆದರೆ ಹಾಗೆ ಬರೆದವನಿಗೆ ಪ್ರಥಮ ತಪ್ಪಿಗೆ ೧೦೦ ರೂಪಾಯಿ ವರೆಗೆ ಹೋಗಬಹುದಾದ ದಂಡ ಅಥವಾ ಒಂದು ವಾರದ ವರೆಗಿನ ಸೆರೆಮನೆವಾಸದ ಶಿಕ್ಷೆ ವಿಧಿಸಬೇಕು, ಆ ಮೇಲಿನ ಅಪರಾಧಗಳಿಗೆ ೧೦೦೦ ರೂಪಾಯಿ ವರೆಗಿನ ದಂಡ ಅಥವಾ ಒಂದು ತಿಂಗಳ ವರೆಗಿನ ಶಿಕ್ಷೆ ಕೊಡಬೇಕು. ಯಾವನೇ ಪ್ರಕಾಶಕನು (ಅಥವಾ ಮುದ್ರಕನು) ಅನಧಿಕೃತ ಸ್ಥಳಗಳಲ್ಲಿ ಪ್ರಕಟಣೆಗಳನ್ನು ಹಚ್ಚಿಸಿದರೆ ಅಥವಾ ಬರೆಸಿದರೆ ಮೊದಲ ತಪ್ಪಿಗೆ ೫೦೦ ರೂಪಾಯಿ ವರೆಗಿನ ದಂಡ ಅಥವಾ ಒಂದು ವಾರದ ವರೆಗಿನ ಸೆರೆಮನೆಗೂ ಅನಂತರದ ತಪ್ಪುಗಳ ಸಂಗತಿಯಲ್ಲಿ ೧೦೦೦ ರೂಪಾಯಿ ವರೆಗಿನ ದಂಡ ಮತ್ತು ಎರಡುವಾರಗಳ ವರೆಗಿನ ಸಜೆಗೂ ಆತನನ್ನು ಗುರಿಪಡಿಸಬೇಕು. ಚಲಚ್ಚಿತ್ರ ಮಂದಿರ ಅಥವಾ ನಾಟ್ಯ ಗೃಹಾದಿಗಳ ಮಟ್ಟಿಗೆ ಮೊದಲ ತಪ್ಪಿಗೆ ದಂಡವು ೧೦೦೦ ರೂಪಾಯಿ ವರೆಗೂ ಅನಂತರದ್ದಕ್ಕೆ ೨೦೦೦ ರೂಪಾಯಿ ವರೆಗೂ ವಿಧಿಸಲ್ಪಡಬೇಕು-ಅಲ್ಲದೆ ಚಲಚ್ಚಿತ್ರ ಪ್ರದರ್ಶನಾದಿ ಕೆಲಸಕ್ಕಿತ್ತ ಲೈಸೆನ್ಸನ್ನೆ ರದ್ದುಪಡಿಸಬೇಕು-ಎಂದು ಮುಂತಾಗಿ ಈ ಮಸೂದೆ ಹೇಳುತ್ತದೆ.

ಪ್ರಕಾರವಾಗಿ ಶಾಸನವನ್ನೆ ಕಟ್ಟಿ ಚಟವೊಂದನ್ನು ಪ್ರ ಸುವುದರ ಔಚಿತ್ಯ ಎಷ್ಟೇ ರ್ಶವಾಗಿರಲಿ, ಶಾಸನ ಮ ನಿಯಂತ್ರಿಸಲ್ಪಡುವಷ್ಟು ಅಸ ನಾವು ಬಾಳಲಾಗವೆಂಬುದು ನಿಜ. ನಮ್ಮಲ್ಲಿ ವಿವೇಕೋದಯವ ಕು-ಅದೇ ಚೆಲುವಾದಜೀವನದ ವ್ಯರ್ಥ ಕೀಟಲೆ ಕೊಡುವುದೂ ಬ್ಬರನ್ನು ನೋಯಿಸುವ ರೀತಿಯ ರ್ಶಿಸುವುದೂ ಇಷ್ಟವಾದುದಲ್ಲವೆಂ ಸದ್ವಿವೇಕ ಬುದ್ಧಿಯನ್ನು ಎಲ್ಲ ಕರಣ ಪಡೆಯಬೇಕು. ಮು ಚುನಾವಣೆಯ ಚಟುವಟಿಕೆಯ ಇಂಥ ಮನೋಭಾವನೆ ಉಂಟಾಗ ಹಾಗಾಗಲಿ ಎಂದು ನಾವು ಆಶಿಸ

ಹೊಸದೆಹಲಿಯಲ್ಲಿ ಈಚೆಗೆ ಅಖಿಲ ಭಾರತ ಕೃಷಿಕರ ಸಮ್ಮೇಳನವು ಜರಗಿತು. ಇವರಲ್ಲಿ ಕೃಷಿ ಪಂಡಿತರೆಂದು ಬಿರುದನ್ನು ಪ ಗು ರಾಜ್ಯ ಸರಕಾರಗಳು ಏರ್ಪಡಿಸಿದ್ದ ಬೆಳೆಗಳ ಸ್ಪರ್ಧೆಯಲ್ಲಿ ಬಹುಮಾನಿತರಾದ ಸುಮಾರು ೧೫೦೦ ಮಂದಿ ರೈತರು ಭಾಗವಹಿಸಿ ಉಡುಪಿ ತಾಲೂಕಿನ ಶ್ರೀ ಗೋವಿಂದ ರಾಜ ಹೆಗ್ಡೆಯವರೂ ಈ ಸಮ್ಮೇಳನಕ್ಕೆ ಹೋಗಿದ್ದರು. ಚಿತ್ರದಲ್ಲಿ ರಾಷ್ಟ್ರಾಧ್ಯಕ್ಷರು ಉದ್ಘಾಟನಾ ಭಾಷಣ ಮಾಡುತ್ತಿರುವುದನ್ನು ಕಾಣಬಹುದು.

ಬ್ರಿಟನಿನ ಕೂಲಿಕಾರ ಪಕ್ಷದ ನೂತನ ಮುಖಂಡ ಹ್ಯೂ ಗೈಟ್‌ಸ್ಕೇಲ್ ಬ್ರಿಟನಿನ ಸಂಚಾರ ಕೈಗೊಂಡಿದ್ದ ರಷ್ಯದ ಪ್ರಭೃತಿಗಳನ್ನು ಬಹಳ ಆತ್ಮೀಯತೆಯಿಂದ ಕಂಡು ಮಾತನಾಡಿ, ಸತ್ಕಾರ ಕೂಟಕ್ಕೆ ಆಮಂತ್ರಿಸಿದರು. ಈ ಸಮಾರಂಭ ಕಾಲದಲ್ಲಿ ಮಾತ್ರ ವಿಲಕ್ಷಣ ವಾಗ್ವಾದವು ಆತಿಥಿಗಳಿಗೂ ಆತಿಥೇಯರಿಗೂ ನಡುವೆ ನಡೆಯಿತು. ಪೂರ್ವ ಯುರೋಪಿನಲ್ಲಿ ಸೆರೆಮನೆಯಲ್ಲಿರುವ "ಸೋಷಲಿಸ್ಟ್ ಡೆಮೊಕ್ರಾಟ್" ಮುಖಂಡರ ಬಿಡುಗಡೆಗಾಗಿ ಬ್ರಿಟನಿನ ಕೂಲಿಕಾರರು ರಷ್ಯದ ನಾಯಕರನ್ನು ಒತ್ತಾಯಿಸಿ ಪ್ರಶ್ನೆಗಳ ಸುರಿಸುಳಿ ಕರೆದರು. ಆಗಮ್ರುಶ್ಚೆಫರಿಂದ ನಿಂದೆಗೊಳಗಾಗ ಬೇಕಾಯಿತು. ರಷ್ಯಕ್ಕೆ ಮರಳಿದ ಬಳಿಕ ಬುಲ್ಗಾನಿನ್ನರು "ನಮ್ಮ ಬ್ರಿಟನಿನ ಸಂಚಾರವನ್ನು ಹಾಳುಗೆಡವಲು ಅಲ್ಲಿಯ ಕೂಲಿಕಾರ ಪಕ್ಷದ ಧುರೀಣರು ನೋಡಿದರು" ಎಂದು ದೂರಿಟ್ಟರು. ಖ್ರುಶ್ಚೆಫರು "ನಮ್ಮ ಆಂತರಿಕ ವ್ಯವಹಾರದಲ್ಲಿ ಅವರು ಕೈಹಾಕ ಹೋದುದು ತೀರ ತಪ್ಪು. ನಾವು ನಮ್ಮಿಂದಾದ ತಪ್ಪುಗಳನ್ನು ತಿದ್ದಿಕೊಳ್ಳಲು ಪ್ರಯತ್ನಿಸುತ್ತಿದ್ದೇವೆಂದ ಮಾತ್ರಕ್ಕೆ ಕೂಲಿಕಾರ ಧುರೀಣರು ದುಡುಕಿ ನಡೆದರೂ ಸೈರಿಸುವೆವೆಂದರ್ಥವಲ್ಲ" ಎಂದರು. ಗೈಟ್‌ಸ್ಕೆಲ್ ಇದಕ್ಕೆ ಹೇಳುವ ಸಮಾಧಾನವಿಷ್ಟೆ: "ಸ್ಪಷ್ಟ ಮಾತುಕತೆಯಿಂದ ವಾತಾವರಣ ತಿಳಿಯಾಯಿತು; ನಾವಿಬ್ಬರೂ ಪರಸ್ಪರರನ್ನು ಚೆನ್ನಾಗಿ ತಿಳಿಯುವಂತಾಯಿತು.



ಪ್ರಯಾಣಕರ ಪ್ರವಾಸವನ್ನು ಸುಖಮಯಗೊಳಿಸಲು ಆಧುನಿಕ ಮಾದರಿಯ ಗಾಡಿಗಳನ್ನು ಕಟ್ಟಲು ರೈಲ್ವೆ ಇಲಾಖೆ ಪ್ರಯತ್ನಶೀಲವಾಗಿರುವಂತೆ, ತನ್ನ ಸಿಬಂಧಿಯ ಯೋಗಕ್ಷೇಮದ ಕಡೆಗೂ ಹೆಚ್ಚಿನ ಗಮನವನ್ನು ಕೊಡುತ್ತದೆ. ಭಾರತದಲ್ಲಿ ೨೫ ಸುಸಜ್ಜಿತ ಆಸ್ಪತ್ರೆಗಳೂ ೪೦೦ ಚಿಕಿತ್ಸಾಲಯಗಳೂ ರೈಲ್ವೆಯ ಕಡೆಯಿಂದ ನಡೆಸಲ್ಪಡುತ್ತವೆ. ಚಿತ್ರದಲ್ಲಿ ಇಂಥದೊಂದು ರೈಲ್ವೆ ಆಸ್ಪತ್ರೆಯ ಒಳಗಿನ ನೋಟವನ್ನು ವೀಕ್ಷಿಸಬಹುದು.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22. UDIPI, S. K.

ಉಡುಪಿ. ಡಿ. ಮು. ಕೋರ್ಟ

O. S. No. 99/195

M. ಲಕ್ಷ್ಮೀನಾರಾಯಣ ಕಲ್ಕೂರ

ಮತ್ತು

ಅನಂತಯ್ಯ ಸೋಮಯಾಜಿ ಕೊ ವಾದಿರು. ಇವರೊಳಗೆ—

ಸದ್ರಿ ವ್ಯಾಜ್ಯದ 2 ನೇ ಪ್ರತಿವಾ ತಾರಾಮ ಸೋಮಯಾಜಿ- ಕೋ ಸೋಮಯಾಜಿರ ಮಗ— ಉಡುಪಿ ತಾ ಟಿಪಾಡಿ ಗ್ರಾಮ- ಇವರಿಗೆ ಈ ಮೂ ಸುವುದೇನೆಂದರೆ:—

ವಾದಿಯು ಪ್ರತಿವಾದಿರ ಮೇಲೆ ನಿವೃತ್ತಿ ಬಗ್ಗೆ ದಾಕ್ಲು ಮಾಡಿರುವ ವ್ಯಾಜ್ಯವು ತಾ 18-9-1956ಕ್ಕೆ ಸದ್ರಿ ವ್ಯಾಜ್ಯದಲ್ಲಿ ನಿಮಗೆ ಉದಾ ಕ್ಲು ಮಾಡಿ ವ್ಯವಹರಿಸುವುದಿದ್ದಲ್ಲಿ ತಾ 18-6 1956ನೇ ದಿವಸ ಘಂಟೆಗೆ ಮೇಲ್ಕಂಡ ಕೋರ್ಟು ಮ ಖ-ವ-ವಕೀಲರ ಮುಖಾಂತರ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ನಿಮ್ಮನ್ನು ಏಕಪಕ್ಷ ಮಾಡಿ ಸದ್ರಿವ್ಯಾಜ್ಯ ಲು ಮಾಡಲ್ಪಡುವುದು.

P. V. Ache

Vakil for Pl

ಉಡುಪಿ ತಾ 8.5.56.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ ' ಯುಗ' ವಾರಪತ್ರಿಕೆಯನ್ನು ತರಿ ಳ್ಳಬಹುದೆಂದು Roc. No. 4 N./50 ತಾ. 12-12 50ನೇ ಡಿಂಗ್ಸಿನಂತೆ ಮದ್ರಾಸು ಸರಕಾರದ ಕ್ಟರ್ ಆಫ್ ಪಬ್ಲಿಕ್ ಇನ್ಸ್ಟ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ತ್ರ ಸೆಕೆಂಡರಿಶಾಲೆಗಳವರು ನವ ಕ್ಕೆ ಚಂದಾದಾರರಾಗಿ ತರಿಸಿ ಪ್ರೋತ್ಸಾಹಿಸುವಂತೆ ಈ ಮೂಲಕ ತಿಸಿಕೊಳ್ಳಲಾಗಿದೆ.

ಮೆನೇಜ

Edited, Printed & Published By K. H. Shetty, at the Navayuga Press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | ಉಡುಪಿ, 17—5—1956 | ಸಂಚಿಕೆ ೩೭

VOL. 35 | NO. 37

ಗಾಂಧೀಜಿಯಿಂದ ದೂರ....?

'ನಾವಿಂದು ಮೋಹನದಾಸ ಕರಮಚಂದ ಗಾಂಧೀಯವರಿಗಿಂತಲೂ ಕಾರ್ಲ್ ಮಾರ್ಕ್ಸ್ ಮಹಾಶಯನನ್ನೆ ಹೆಚ್ಚಾಗಿ ಅನುಸರಿಸುತ್ತಿರುವಂತೆ ಕಾಣುತ್ತದೆ. ಭಾರತದ ಎಲ್ಲ ಸರಕಾರಗಳೂ ಸಮಾಜವಾದವನ್ನು ತಮ್ಮ ಗುರಿಯಾಗಿ ಸ್ವೀಕರಿಸಿವೆ ಎಂಬ ನೆಲೆಯಿಂದ ವಿಚಾರಿಸುವಾಗ ನಮ್ಮ ದೇಶಕ್ಕೆ ಇದು ಎಷ್ಟರ ಮಟ್ಟಿಗೆ ಒಳ್ಳೆಯದನ್ನು ತರಬಲ್ಲುದೋ ತಿಳಿಯದು. ಒಬ್ಬ ನಾಯಕನ ಸ್ಥಾನದಲ್ಲಿ ಇನ್ನೊಬ್ಬನನ್ನು ಸ್ಥಾಪಿಸುವುದು ಇಂದಿನ ಹವ್ಯಾಸವಾಗಿದೆ— ನಮಗೆ ಬೇಕಾಗಿಯೋ ಅಥವಾ ಬೇಡವಾಗಿಯೊ, ಗಾಂಧೀಜಿಯವರಿಗಿಂತಲೂ ನಾವು ಮಾರ್ಕ್ಸ್‌ನಿಗೆ ಹೆಚ್ಚು ಗೌರವವನ್ನು ಕೊಡುತ್ತಿದ್ದೇವೆ"

—ಮೇಲಿನಂತೆ ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಉದ್ಗರಿಸಿದರೆಂದು ಬೆಂಗಳೂರಿನಿಂದ ವಾರ್ತಾ ಸಂಸ್ಥೆಯೊಂದು ಇದೇ ೧೨ನೇ ದಿನಾಂಕ ವರದಿ ಮಾಡಿದೆ. ಮಾರ್ಕ್ಸ್‌ರ ತತ್ತ್ವಗಳನ್ನು ಒಂದೊಂದೇಯಾಗಿ ಕೈಗೆತ್ತಿಕೊಂಡು ನೋಡಿದಲ್ಲಿ ಅವುಗಳೊಡನೆ ಹೊಂದಿಕೊಳ್ಳಲು ಮತ್ತು ಆ ಆದರ್ಶಗಳೊಡನೆ ಸಾಮರಸ್ಯವನ್ನು ಸ್ಥಾಪಿಸಲು ನಾವೆಷ್ಟು ಸಮರ್ಥರಾಗಬಹುದೋ ತಿಳಿಯದು. ಆದರೂ ಹೊರತೋರಿಕೆಗೆ ನಾವು ಮಾರ್ಕ್ಸ್‌ನಿಗೆ ಹತ್ತಿರವಾಗುತ್ತಿರುವಂತೆ ಅನೇಕರ ಮನಸ್ಸಿಗೆ ಭಾಸವಾಗುತ್ತಿರುವುದೆಂಬುದನ್ನು ಮರೆಮಾಚಿ ಪ್ರಯೋಜನವಿಲ್ಲ. ಇಷ್ಟರವರೆಗೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯೇ ಕೇಳಿಬರುತ್ತಿದ್ದ ಮಾತುಗಳು ಈಗ ಬೆಂಗಳೂರಿನಂಥ ಭಾರತೀಯ ನಗರದಲ್ಲಿ ಜನತಾನಾಯಕರೊಬ್ಬರ ಬಾಯಿಯಿಂದಲೇ ಬರುವಂತಾಗಿರುವುದು ಕಾಲಗತಿಯನ್ನು ಸೂಚಿಸುತ್ತದೆ.

ಮಾರ್ಕ್ಸ್, ಲೆನಿನ್, ಸ್ಟಾಲಿನ್ ಮಹಾಶಯರುಗಳ ಪಟ್ಟಶಿಷ್ಯತ್ವವನ್ನು ಹೊಂದಿದ ನಮ್ಮ ಕಮ್ಯೂನಿಸ್ಟ್ ಬಂಧುಗಳನ್ನು ವಿಚಾರಿಸಿದ ಪಕ್ಷದಲ್ಲಿ ಅವರು ಶ್ರೀ ಹನುಮಂತಯ್ಯನವರ ಮನಸ್ಸಿನಲ್ಲಿ ಮೂಡಿದ ಭಾವನೆಗಳನ್ನು ಒಪ್ಪುವುದು ಸಂಶಯಕರ. ಏಕೆಂದರೆ ಕಮ್ಯೂನಿಸ್ಟರಿಗೆ ಭಾರತ ಸರಕಾರದ "ಧೋರಣೆಯಲ್ಲಿ ಬದಲಾವಣೆ" ಕಂಡುಬರುತ್ತಿದ್ದರೂ ಅದು ಮಾರ್ಕ್ಸ್‌ನ ತತ್ತ್ವಗಳಿಗೆ ಒಪ್ಪುವ ನಿಲುವೆಯೇ ಆಗಿದೆ ಎಂಬ ನಂಬಿಕೆಯಾಗಿಲ್ಲ. ಕಮ್ಯೂನಿಸ್ಟರು ದೇಶದೊಳಗಿನ ವ್ಯವಹಾರಗಳ ಕುರಿತು ಕಾಂಗ್ರೆಸು ಸರಕಾರಗಳ ಕಾರ್ಯಕ್ರಮವನ್ನು ಟೀಕಿಸುತ್ತಿರುವ ಪರಿಯೇ ಮಾರ್ಕ್ಸ್‌ನ ತತ್ತ್ವಗಳಿಗೂ ಸರಕಾರದ ನಿಲುಮೆಗೂ ತಾಳಮೇಳವಿಲ್ಲವೆಂಬುದನ್ನು ಸ್ಪಷ್ಟಗೊಳಿಸುತ್ತದೆ. ಆದುದರಿಂದ ಕಮ್ಯೂನಿಸ್ಟರ ದೃಷ್ಟಿಯ ಮೂಲಕ ನೋಡಿದರೆ, ಹನುಮಂತಯ್ಯನವರ ಉದ್ಗಾರದಲ್ಲಿ ಆಂತರಿಕ ಧೋರಣೆಯು ಮುಟ್ಟಿಗಿರುವ ಸತ್ಯಾಂಶ ಅತ್ಯಲ್ಪ.

ಕಮ್ಯೂನಿಸ್ಟೇತರರಲ್ಲಿ ಮಾತ್ರ ಕೆಲವರಿಗೆ ಈ ಉದ್ಗಾರದಲ್ಲಿ ನಿಜವಿದೆ ಎಂದೆನಿಸುತ್ತದೆ. ದೇಶದೊಳಗೆ ರೂಢಿಗೆ ಬರುತ್ತಿರುವ ಹಲವು ಸುಧಾರಣೆಗಳು ಈ ಭಾವನೆಯನ್ನು ಪೋಷಿಸುತ್ತವೆ. ಸಮಾಜವಾದವೆಂಬ ಶಬ್ದವು ಇಂದು ಆಳುವ ಪಕ್ಷದ ಪಲ್ಲವಿಯಾಗಿದೆ. ಮತ್ತಿದು ಜನಪ್ರಿಯವಾಗುತ್ತಿರುವಂತೆಯೂ ತೋರ ಹತ್ತಿದೆ. ವ್ಯಕ್ತಿಗೆ ಸಲ್ಲಬೇಕಾದ ಪ್ರಜಾಸತ್ತಾತ್ಮಕ ಮಹತ್ವವು ನಿಧಾನವಾಗಿ ಕಡಿಮೆಯಾಗುತ್ತಾ ಬಂದು ಸಾಮಾಜಿಕ ಸ್ವಾಮ್ಯವೆಂಬ ಕೇಂದ್ರಿತ ವ್ಯವಸ್ಥೆಯು ಸಮಷ್ಟಿಯ ಕಲ್ಯಾಣದ ಸೋಗಿನಲ್ಲಿ ತಲೆ ಎತ್ತತೊಡಗಿದೆ. ವ್ಯಕ್ತಿಯ ಮೇಲೆ ಅವಿಶ್ವಾಸವೂ ಸಮಾಜದ ಹಿತದರ್ಶಿಗಳೆನ್ನುವ ಕೆಲವೇ ಜನರ ಅಧಿಕಾರಾಟೋಪವೂ ಇಂದು ಪ್ರಕಟವಾಗಿ ಜನರ ಗಮನಕ್ಕೆ ಬರುತ್ತಿವೆ ಎನ್ನಬಹುದು.

ಪಕ್ಷದ ವರಿಷ್ಠರೆಂದುದನ್ನು ಹೌದಪ್ಪಗಳಂತೆ ಒಪ್ಪಿಕೊಳ್ಳಬೇಕಾಗುವ ಶಿಸ್ತಿನ ಬಂಧನ, ಕೈಗಾರಿಕೆಗಳೆಲ್ಲವನ್ನೂ ಸರಕಾರವೇ ದಕ್ಷ ರೀತಿಯಲ್ಲಿ ನಡೆಸಿಕೊಂಡು ಹೋಗಬಲ್ಲುದೆಂಬ ಭ್ರಾಂತಿಯ ವಾತಾವರಣ, ಭೂಹಿಡುವಳಿಗೂ ಆದಾಯಕ್ಕೂ ಮಿತಿ ಹಾಕುವುದರಿಂದ ಮತ್ತು ಒಂದು ವರ್ಗವನ್ನು ಸುಲಿದು ಇನ್ನೊಂದು ವರ್ಗದ ಶಹಭಾಸು ಗಳಿಸುವುದರಿಂದ ರಾಷ್ಟ್ರದ ಉದ್ಧಾರವಾಗುವುದೆಂಬ ಮೂರ್ಖಲೆಕ್ಕಾಚಾರ—ಇವೆಲ್ಲವುಗಳೂ ಪ್ರಜಾಪ್ರಭುತ್ವವು ಹೆಸರಿಗಷ್ಟೇ ಉಳಿದಿದೆ ಎಂಬುದನ್ನೂ ದೇಶವು ಸರಕಾರಿ ಸರ್ವಾಧಿಕಾರದ ಕಡೆಗೆ ಸಾಗುತ್ತಿದೆ ಎಂಬುದನ್ನೂ ಸೂಚಿಸುತ್ತಿರುವಂತೆ ಅಭಿಪ್ರಾಯ ಪಡುವವರು ಹೆಚ್ಚುತ್ತಿರುವ ಹಾಗೆ ತೋರುತ್ತದೆ.

ದೇಶದೊಳಗಿನ ಇವೆಲ್ಲ ಲಕ್ಷಣಗಳು ಮಾರ್ಕ್ಸ್‌ನ ತತ್ತ್ವವೇ ನಮಗೆ ಪ್ರಿಯವೆನಿಸಿರುವುದರ ಪ್ರತಿಬಿಂಬ ಎನ್ನಲಾಗುತ್ತದೆ. ನಮಗೆ ಗ್ರಾಮೋದ್ಯೋಗಗಳ ವಿಸ್ತರಣೆಗಿಂತಲೂ ಮೂಲ ಕೈಗಾರಿಕೆಗಳ ಸ್ಥಾಪನೆ ಮತ್ತು ಬೆಳವಣಿಗೆಯೇ ಮುಖ್ಯವೆನಿಸಿದೆ. ಭೂಮಾಲಿಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಅವರ ಹೃದಯ ಪರಿವರ್ತನೆಗೆ ದುಡಿಯುವ ಕ್ರಮಕ್ಕಿಂತಲೂ ಶಾಸನಿಕ ಬಲಾತ್ಕಾರವೇ ಸೂಕ್ತವೆನಿಸಿದೆ. ವ್ಯಕ್ತಿಯ ಬುದ್ಧಿ ಕೌಶಲ್ಯಗಳ ನಿರಾತಂಕ ವಿಕಾಸಕ್ಕೆ ಅನುಕೂಲ ಕಲ್ಪಿಸುವ ಬದಲಿಗೆ ಅವುಗಳು ರಾಜ್ಯ ನಿಯೋಜಿತ ಅಚ್ಚಿನಲ್ಲಿಯೇ ರೂಪುಗೊಳ್ಳಬೇಕೆಂಬ ಲವಲವಿಕೆ ಮೂಡಿಕೊಂಡಿದೆ. ಇದು ಗಾಂಧೀಜಿಗೆ ಪ್ರಿಯವಾದ ಸಂಗತಿಗಳಂತೂ ಅಲ್ಲವೇ ಅಲ್ಲ— ಮಾರ್ಕ್ಸ್‌ನ ಮನೋಭಾವದೊಡನೆಯೇ ಇದಕ್ಕೆ ಹೋಲಿಕೆ ಹೆಚ್ಚು.

ನಾವು ಗಾಂಧೀಜಿಯ ಉಪದೇಶಗಳನ್ನು ಕಡೆಗಣಿಸಿಲ್ಲವೆಂದು ವಾದಿಸುವವರ ಬಲ ಕಡಿಮೆಯಾಗಿದೆ ಎಂದಿದರ ಅರ್ಥವಲ್ಲ. ಅನ್ಯಾಯದ ಪರಿಮಾರ್ಜನೆಗೆ ಒತ್ತಾಯದ ಕ್ರಮಗಳನ್ನು ಅನುಸರಿಸಲೇ ಬಾರದೆಂದು ಗಾಂಧೀಜಿ ಹೇಳಿಲ್ಲ. ಸತ್ಯಾಗ್ರಹದ ಪವಿತ್ರ್ಯಕ್ಕೆ ಅದರಲ್ಲಿದ್ದ ಒತ್ತಾಯದ ಅಂಶದಿಂದ ಕಳೆ ಕೂಡಿದೆಯೇ ಹೊರತು ಕಳಂಕ ಬಂದಿಲ್ಲ ಎಂದು ಮುಂತಾಗಿ ಈ ಗುಂಪು ತನ್ನ ನಿಲುವೆಯನ್ನು ವಿವರಿಸಬಲ್ಲುದು. ದೇಶದೊಳಗಿನ ಸುಧಾರಣೆಗಳು ಗಾಂಧೀಜಿ ಪ್ರತಿಪಾದಿಸಿದ ಸಾಮಾಜಿಕ ಪದ್ಧತಿಗೆ ಅನುಕೂಲ ಪರಿಸ್ಥಿತಿಯನ್ನು ನಿರ್ಮಿಸಲಿಕ್ಕಾಗಿಯೇ ಅವಶ್ಯವೆನಿಸಿವೆ ಎಂದವರು ಹೇಳಬಹುದು.

ಉದಾಹರಣೆಗೆ, ಕೈನೂಲನ್ನು ಜನಪ್ರಿಯಗೊಳಿಸಲು ಸರಕಾರವು ಪ್ರಚಾರ ಮತ್ತು ಪ್ರೋತ್ಸಾಹದ ಸೌಮ್ಯಮಾರ್ಗವನ್ನು ಹಿಡಿದಿದೆ—ಗಿರಣಿಗಳನ್ನು ಒತ್ತಾಯದ ಮೂಲಕ ಮುಚ್ಚಿಬಿಟ್ಟರೆ, ಜನರು ಬೆತ್ತಲೆ ತಿರುಗಾಡಬೇಕಾಗಿ ಬರಲಾರದೆ ಎಂಬ ವ್ಯಾವಹಾರಿಕ ಮುನ್ನೋಟದೊಡನೆ ಗಾಂಧೀಜಿಯ ಆದರ್ಶದ ತುಲನೆಯನ್ನು ಸರಕಾರ ಮಾಡುವುದು ತಪ್ಪಲ್ಲ.

([illegible]ನೇ ಪುಟ ನೋಡಿರಿ)

ಶೀಘ್ರ ಬೆಳವಣಿಗೆ

ಒಟ್ಟು ವ್ಯವಹಾರ ಧನ

1926 — ರೂ. 17,355/-
1936 — ರೂ 35,45,544/-
1946 — ರೂ. 4,26,07,093/-
1955 — ರೂ. 8,70,31,700/-
1956 ಮಾರ್ಚಿ 31ಕ್ಕೆ 9 ಕೋಟಿ ರೂಪಾಯಿ

ಇಂತಹ ಬೆಳವಣಿಗೆಗೆ ನಮ್ಮ ಗ್ರಾಹಕರ ಹಿತೇಚ್ಛೆಯೇ ಕಾರಣ —
ಗ್ರಾಹಕರಲ್ಲಿ ಹಿತೇಚ್ಛೆ ಬೆಳೆಯಲು ನಮ್ಮ ಸೇವೆಯಲ್ಲಿ ಅವರಿಗುಂಟಾದ
ತೃಪ್ತಿಯೇ ಕಾರಣವೆಂದು ನಾವು ನಂಬಿರುವೆವು

ಮಾನವೀಯ ದೃಷ್ಟಿ, ವೈಯಕ್ತಿಕ ನಿಕಟ ಸಂಪರ್ಕವನ್ನು ನಮ್ಮ ಗ್ರಾಹಕರೊಂದಿಗೆ
ಇರಿಸಿಕೊಳ್ಳಬೇಕೆಂದೂ ನಾವು ಒಲ್ಲೆವು

ನಮ್ಮ ಯಾವುದೇ ಶಾಖೆಗೆ ದಯಮಾಡಿಸಿ ನೀವೇಕೆ ಪರಿಚಯ ಪಡಿಯುವುದಿಲ್ಲ?
ನಾವು ನಿಮ್ಮ 'ಬೇಂಕು' ಆಗಬಯಸುತ್ತೇವೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್
ಪ್ರಧಾನ ಕಾರ್ಯಾಲಯ ಉಡುಪಿ, ದ: ಭಾರತ.

ವಾರ್ಷಿಕ ಚಂದಾ.
ರೂ ೫—೦೨—೦

NAVAYUGA WEEKLY. UDIPI.

ಬಿಡಿ ಸಂಚಿಕೆ
ಎರಡಾಣೆ

ಗುರುದೇವ ಠಾಕೂರರ ತುಂಬು ಜೀವನ

ದೇಶದ ಶಿಶುಗಳ ಏಳಿಗೆಗಾಗಿ ಅವರಿಂದ ಸಂದ ಸೇವೆ

ಬರೆದವರು: ಹೊಯಿಸಳ.

ಶ್ರೀ ರವೀಂದ್ರನಾಥ ಠಾಕೂರರು ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ಆರಂಭವಾದ ಹೊಸದರಲ್ಲಿ ಜನಿಸಿ, ಅದು ಮುಕ್ತಾಯವಾಗಿ ಸ್ವರಾಜ್ಯವು ಕೈಗೆ ಬರುವ ಸಮಯಕ್ಕೆ ತುಸು ಮುಂಚೆ ಸ್ವರ್ಗಸ್ಥರಾದರು. 1861 ರಿಂದ 1941ರ ತನಕ ಹರಿದುಬಂದ ಅವರ ಎಂಭತ್ತು ವರ್ಷದ ಜೀವನವು ಬಾಲ ಭಾರತೀಯರ ಶಿಕ್ಷಣಕ್ಕೆ ಮೀಸಲಾಗಿತ್ತು. ಭಾರತಕ್ಕೊಂದು ಸ್ಥಾನವೂ, ಭಾರತದಿಂದ ವಿಶ್ವಕ್ಕೊಂದು ವಾದರಿಯೂ, ವಿಶ್ವಮಾನವನ ರೂಪುರೇಷೆಗಳೂ ಶ್ರೀ ರವೀಂದ್ರರ ಉಜ್ವಲ ವ್ಯಕ್ತಿತ್ವದಿಂದ ದೊರೆತವು. ಶ್ರೀ ಗಾಂಧೀಜಿಯವರ ಜೀವನದಂತೆ ರವೀಂದ್ರರ ಬಾಳು ಸಹ ನಮ್ಮ ನಾಡು ಎಚ್ಚೆತ್ತುಕೊಳ್ಳುವುದಕ್ಕೆ ಅವಕಾಶಗಳನ್ನು ಒದಗಿಸಿತು. ಈ ಪುಣ್ಯಾತ್ಮರು ದೇಹಧಾರಣೆ ಮಾಡಿ ತಮ್ಮ ಜೀವನ ಜಲದಿಂದ ನಾಡಿನ ಮಾಲಿನ್ಯವನ್ನೆಲ್ಲ ತೊಳೆದು, ನಮ್ಮದಿದು ಉಜ್ವಲ ಭಾರತವೆಂದು ನಾವು ಹೆಮ್ಮೆಯಿಂದ ಕರೆದು ನಲಿದಾಡಲು ಕಾರಣರಾದರು. ಶ್ರೀ ರವೀಂದ್ರನಾಥ ಠಾಕೂರರ ೬0 ವರ್ಷದ ತುಂಬು ಜೀವನವು ಪ್ರಪಂಚದ ಉದ್ಧಾರಕ್ಕೆ ಮೀಸಲಾಗಿತ್ತು.

ಸ್ವಾತಂತ್ರ್ಯಸಮರದ ಕಾವು ಆರುವುದಕ್ಕೆ ಮುಂಚಿತವಾಗಿ 1861ರಲ್ಲಿ ಮೇ ತಿಂಗಳ 8ರಲ್ಲಿ ಹುಟ್ಟಿದ ರವೀಂದ್ರರು 1941ರ ಆಗಸ್ಟು 7ರ ಒಳಗೆ ತಮ್ಮ ಇಹ ಜೀವನದ ಧ್ಯೇಯೋದ್ದೇಶಗಳೆಲ್ಲವನ್ನೂ ಫಲಕ್ಕೆ ತಂದುಕೊಂಡು ಮಾಯವಾದರು. ಅವರ ಜೀವನ ಪೂರ್ಣತೆಗೊಂದು ವಿಶ್ವಭಾರತಿಯು ಮುದ್ರೆಯನ್ನೊತ್ತಬಹುದು. ಶ್ರೀ ಗಾಂಧೀಜೀಯವರು ಭಾರತ ಆಡಳಿತಕ್ಕೆ ವಿಶ್ವದಲ್ಲೊಂದು ಸ್ಥಾನವನ್ನು ಕಲ್ಪಿಸಿಕೊಟ್ಟರು. ಅದೇ ರೀತಿಯಾಗಿ ಶ್ರೀ ರವೀಂದ್ರರು ಭಾರತ ಸಂಸ್ಕೃತಿಗೊಂದು ನಿಶ್ಚಿತ ಪದವಿಯನ್ನೊದಗಿಸಿದರು.

ದ್ವಾರಕಾನಾಥ ಠಾಕೂರರ ಸಂಸಾರದಲ್ಲಿ ಜನಿಸಿ, ಅರಮನೆಯ ಹಿರಿ ಸಂಸಾರದಲ್ಲಿ ಅಣ್ಣಂದಿರು, ಅಕ್ಕಂದಿರು, ತಂದೆ ಮತ್ತು ತಾಯಿಯರ ತೋಳತೆಕ್ಕೆಯಲ್ಲಿ ಪ್ರೇಮ ಪುತ್ಥಳಿಯಾಗಿ ದಿವಂಗತ ರವೀಂದ್ರರು ಬೆಳೆದರು. ಕೆಲವು ಕಾಲ ಆಳುಕಾಳುಗಳ ದಬ್ಬಾಳಿಕೆಯಲ್ಲಿ ಇರಬೇಕಾಗಿ ಬಂದರೂ ಮುನಿಷಿಜಿಯವರ ಕವಿತೆ ಕತೆಗಳನ್ನು ಸೀಮೆ ಎಣ್ಣೆ ದೀಪದ ಮಂಕು ಬೆಳಕಿನಲ್ಲಿ ಕೇಳುತ್ತಾ ಮಲಗಬೇಕಾಗಿದ್ದರೂ, ಆಗಾಗ್ಗೆ ಧ್ಯಾನಪ್ರಿಯ ರಬೀಬಾಬುವು ಅರಮನೆಯಲ್ಲೊಂದು ಅಭುಕ್ತ ಮೂಲೆಯಲ್ಲಿದ್ದ ಮೌನದಲ್ಲಿ ತನ್ನದೇ ಆದ ಊಹಾ ಪ್ರಪಂಚದಲ್ಲಿ ರಾಮ ರಾವಣರ ಮತ್ತು ಯಕ್ಷ ಗಂಧರ್ವರ ಸಂಗಡ ಕಾಲ ಕಳೆಯುತ್ತಿದ್ದರು. ಎಂಟೇ ವರ್ಷದ ವೇಳೆಗೆ ಸುತ್ತಣ ವಾತಾವರಣವನ್ನೆಲ್ಲ ದೂಡಿಕೊಂಡು ಮೇಲೆದ್ದು ಬಂದು ಇವರ ವ್ಯಕ್ತಿತ್ವವು ಅರಳಿತು. ರವೀ ಬಾಬು ಗೀತಕಾರನಾದ. ಇವನ ಸಂಗೀತವನ್ನು ಮನೆಯವರಲ್ಲದೆ ನೆರೆಹೊರೆಯವರೂ ಕೇಳುತ್ತ ಬಂದರು.

ಈ ನಡುವೆ ವೇತ್ರಹಸ್ತರಾದ ಉಪಾಧ್ಯಾಯರು ಬಂದೇ ಬಂದರು. ಶಾಲೆಯ ವಾತಾವರಣವೂ ಕೂಡಿ ಬಂತು; ಆದರೆ



ಯಾವುದರಿಂದಲೂ ಸೋಲದೆ ಶ್ರೀ ರವೀಂದ್ರ ಬಾಲಕನು ಕವಿಯಾಗಿಯೇ ಉತ್ತೀರ್ಣನಾದನು. ಇಪ್ಪತ್ತು ವರ್ಷಗಳ ಒಳಗೇ ಇಂಗ್ಲೆಂಡು ಪ್ರವಾಸ ಮುಗಿದು, ಇಂಗ್ಲಿಷ್ ಭಾಷೆಯ ಅಭ್ಯಾಸವಾಗಿ, ಮಹರ್ಷಿ ದೇವೇಂದ್ರನಾಥರೆಂದು ವಿಖ್ಯಾತಧ್ಯಾನಿಯಾದ ತಂದೆಯವರ ಸಹವಾಸ ದೊರೆತು, ಬರಹಗಾರರೂ, ಸಂಗೀತಗಾರರೂ ಆದ ಸೋದರನಾದ ಅಣ್ಣ, ಅತ್ತಿಗೆಯವರ ಉತ್ತೇಜನ ದೊರೆತು ಶ್ರೀ ರಬೀ ಬಾಬುವು ಬರಹಗಾರನಾದ ಇಂಗ್ಲೆಂಡಿನ ಬಾಲ ಕವಿ ಚಾಟರ್ಟನ್ನನಂತೆ ತಾನು ಸಹ ಪದ್ಯಬರೆವ ಹಂಬಲ ಬಂತು. ಬರವೇ ಬಿಟ್ಟ ಹತ್ತೊಂಬತ್ತು ವರ್ಷದ ಹರೆಯ ಭಾನುಸಿಕ್ತ ಠಾಕೂರನೆಂಬ ಗುಪ್ತ ನಾಮದಲ್ಲೊಂದು ಪ್ರೇಮಗೀತ ಮಾಲಿಕೆಯನ್ನು ಅದು ಪ್ರಕಾಶಕ್ಕೆ ಬಂತು. ಯುರೋಪಿಗೂ ಹೋಯಿತು. ಅದೊಂದು ಪುರಾತನ ಮೈಥಿಲೀ ಗೀತೆಗಳ ಮಾದರಿಯೆಂದು ವಿಖ್ಯಾತಿಪಡೆದು ಜರ್ಮನಿಯಲ್ಲೊಬ್ಬ ಭಾರತೀಯನಿಗೆ ಡಾಕ್ಟರೇಟ್ ಡಿಗ್ರಿಯನ್ನು ಕೊಡಿಸಿತು.

ಚಿಕ್ಕಂದಿನಿಂದ ಅವರ ಜೀವನಲತೆ ಪೂರ್ಣ ಪುಷ್ಪ ಫಲಗಳನ್ನು ಕೊಡುತ್ತಾ ಬಂದಿತು. ಅವರಿಗೆ ದೊರೆತ ಶಿಕ್ಷಣವೇನೂ ಸಾಮಾನ್ಯವಲ್ಲ. ಲಾವಣ್ಯ ಮೂರ್ತಿಯೂ, ಪ್ರೇಮ ಮೂರ್ತಿಯೂ, ಮಧುರ ಗೀತಕಾರನೂ ಆದ ರವೀಂದ್ರ, ಯುವಕನನ್ನು ಕಂಡವರೆಲ್ಲ ಏನಾದರೂ ಕೆಲಸ ಸೂಚಿಸುತ್ತಿದ್ದರು. ಮೊದಲಾಗಿ ಎಚ್ಚೆತ್ತ ಜಲಪಾತವನ್ನು ಬರೆದರೆನ್ನಬಹುದು. ಅನಂತರ ಅನೇಕ ಭಾಷಾಂತರಗಳ ಸಂಗಡ ಇಂಗ್ಲಿಷ್ ಭಾಷೆಯಿಂದ ಷೇಕ್ಸಪಿಯರನ ಮ್ಯಾಕ್‌ಬೆತ್ ಹಾಗು ಸಂಸ್ಕೃತದಿಂದ ಶಾಕುಂತಲಗಳ ಭಾಷಾಂತರಗಳನ್ನು ಮಾಡಲೇಬೇಕಾಯಿತು. ಇಪ್ಪತ್ತು ವರ್ಷ ಕಳೆಯುವಲ್ಲಿ ರವೀಂದ್ರರಿಗೆ ಪ್ರಕೃತಿಯ ಲಾವಣ್ಯಮಯದರ್ಶನವಾಯಿತು. ನಾಲ್ವತ್ತರೊಳಗೆ ವಿಶ್ವರೂಪಿ ದೇವದರ್ಶನವಾಯಿತು. ಇದಿಇವರ ಕಾವ್ಯಗಳಿಗೆ ಅನುರಮುದ್ರೆಯೊತ್ತುತ್ತ ಬಂದಿತು. ಭಾರತ ಸಂಸ್ಕೃತಿಯ ಕೀಲೆನಿಸಿದ ಗಾಯತ್ರಿ ಮಂತ್ರವೂ, ವೇದೋಪನಿಷತ್ತುಗಳ ನವನೀತವೂ ಶ್ರೀ ಠಾಕೂರರ ಬರಹಗಳಲ್ಲಿ ಸಮರಸವಾಗಿ ಬೆರೆತು ಬಂದವು.

1913ರಲ್ಲಿ ಅಂದರೆ ರವೀಂದ್ರರ ಐವತ್ತೆರಡನೇ ವಯಸ್ಸಿನಲ್ಲಿ ನೋಬೆಲ್ ಬಹುಮಾನ ದೊರೆಯಿತು. ಈ ಮಹಾ ಕವಿಯಿಂದ ಭಾರತಕ್ಕೊಂದು ಗೌರವ ಸಂದಿತು, ಭಾರತ ಸಂಸ್ಕೃತಿ ಗಂಗೆಯು ಥೇಮ್ಸ್, ಸ್ಪ್ರೈನ್, ಓಲ್ಗ, ಹೊಯಾಂಗ್ ಹೋ ನದಿಗಳೊಡನೆ ಸಂಗಮವಾಯಿತು ಆರುವತ್ತರ ವೇಳೆಗೆ ಶ್ರೀ ಕವಿಯು ಶಿಕ್ಷಕಶ್ರೇಷ್ಠನಾಗಿ ವಿಶ್ವಭಾರತಿ ಕಲಾ ನಿಲಯವನ್ನು ರೂಪುಗೊಳಿಸಿದನು. ಕಡೆಗೆ ಎಂಬತ್ತು ತುಂಬುವ ತನಕ ತನ್ನ ಜೀವನ ಸಂಸ್ಕೃತಿಯ ಫಲವಾದ ವಿಶ್ವ ಭಾರತಿಗೊಂದು ಶಾಶ್ವತ ಸ್ಥಾನವನ್ನು ಕಲ್ಪಿಸಿಕೊಟ್ಟರು. ಈ ನಡುವೆ ಸುಖ ಕಟು ಬ ಜೀವನದಲ್ಲಿ ಬೆರೆತು ಇದ್ದುದು. ಹದಿನೆಂಟು ವರ್ಷ ಮಾತ್ರ. ಪತ್ನೀ ವಿಯೋಗವಾದ ಕೂಡಲೆ ಮಕ್ಕಳ ನಿರ್ವಹಣ, ಅನಂತರ ತಂದೆ, ಮಗಳು, ಮಗ ಮುಂತಾದವರ ಮರಣ ದರ್ಶನಗಳಾದುವು. ಹೀಗಾದರೂ ದುಃಖದಿಂದ ವೈಮನಸ್ಯದೆ ದೇಶಕ್ಕಾಗಿ, ಸಾಹಿತ್ಯಕ್ಕಾಗಿ, ಸೇವೆ ಮಾಡಲು ವ್ರತ ತೊಟ್ಟರು.

ಶ್ರೀ ರವೀಂದ್ರರ ರಾಜಕೀಯ ಸೇವೆಯು 1905ರಲ್ಲಿ ಅವರ ನಲ್ವತ್ತನೇ ವಯಸ್ಸಿನಲ್ಲಿ ಆರಂಭವಾಯಿತು. ಅವರ ಶಿಕ್ಷಣ ಕಾರ್ಯವು ಸುಮಾರು ಇಪ್ಪತ್ತೆರಡನೇ ವಯಸ್ಸಿನಲ್ಲೇ ಬೋಲ್ಪುರದ ಬಳಿಯಲ್ಲಿರುವ ಶಾಂತಿನಿಕೇತನದಲ್ಲಿ ಆರಂಭಗೊಂಡಿತು. ಅವರಿಗೆ ಗಾಂಧೀಜೀಯವರ ಭೇಟಿಯು 1915ರಲ್ಲಿ ಆಯಿತು. ಶ್ರೀ ಬಾಪೂಜಿಯವರು ಶ್ರೀ ರವೀಂದ್ರ ಕವಿಯ ವ್ಯಕ್ತಿತ್ವವನ್ನು ಕಂಡುಕೊಂಡರು. ದಿ ಗ್ರೇಟ್ ಗಾರ್ಡಿಯನ್ ಆಫ್ ಇಂಡಿಯಾ, ಶ್ರೀ ಗುರುದೇವರೆಂದು ಅವರೇ ನಾಮಕರಣ ಮಾಡಿದರು. ಇವರಿಬ್ಬರು ಅವತಾರಿಗಳ ಪ್ರೇಮವು ಅಮೃತಮಯವಾಗಿತ್ತು. ರಾಜಕೀಯದಲ್ಲಿ ಪರಸ್ಪರ ಭಾವನೆಗಳು ಬೇರೆ ಬೇರೆಯಾಗಿದ್ದರೇನಂತೆ, ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ದೇಶಸೇವಕರಾಗಿದ್ದರಲ್ಲವೆ!

ಮಹಾ ಭಾರತದ ಶ್ರೀಕೃಷ್ಣನೂ ಗೋಕುಲದ ಶ್ರೀಕೃಷ್ಣನೂ ಒಂದೇ ವ್ಯಕ್ತಿಯಾಗಿಯೇ ರಾಜಕೀಯದಲ್ಲಿ ಭಾಗವಹಿಸಿದ್ದ ದೇಶಭಕ್ತ ರವೀಂದ್ರನೂ, ಕವಿಶಿಕ್ಷಕನಾದ ವಿಶ್ವಭಾರತಿ ರವೀಂದ್ರನೂ ಒಂದೇ

(೨ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ರಾಷ್ಟ್ರದಾದ್ಯಂತ ಹಳ್ಳಿಗಳ ಪುನರುಜ್ಜೀವನ

ದೇಶದ ಏಳಿಗೆಯ ಬೆಂಗೋಲಾಗಿ ಸಮಾಜ ವಿಕಾಸ ಯೋಜನೆ

ಉತ್ತರ ಪ್ರದೇಶದಲ್ಲಿರುವ ನೈನೀತಾಲ ಬೆಟ್ಟದೂರಿನಲ್ಲಿ ಒಂದು ವಾರದ ಹಿಂದೆ ಅಖಿಲ ಭಾರತ ಅಭಿವೃದ್ಧಿ ಕಮಿಷನರ ಪರಿಷತ್ತು ಜರಗಿತು. ಇದನ್ನು ಉದ್ದೇಶಿಸಿ ಭಾಷಣ ಮಾಡಿದ ಯೋಜನಾ ಆಯೋಗದ ಉಪಾಧ್ಯಕ್ಷ ಶ್ರೀ. ವಿ. ಟಿ. ಕೃಷ್ಣಮಾಚಾರಿಯವರು ಹಳ್ಳಿಗಳಲ್ಲಿ ಜನಪ್ರಿಯವಾಗುತ್ತಿರುವ ರಾಷ್ಟ್ರೀಯ ವಿಸ್ತರಣಾಸೇವೆ ಮತ್ತು ಸಮಾಜವಿಕಾಸಯೋಜನೆಗಳ ಮುಖ್ಯೋದ್ದೇಶವು ಕೃಷಿಕ್ಷೇತ್ರದ ಉತ್ಪತ್ತಿಯನ್ನು ಸರ್ವ ರೀತಿಯಲ್ಲೂ ಹೆಚ್ಚಿಸುವುದಾಗಿದೆ ಎಂದರು.

ಹಳ್ಳಿಯ ಜನರಿಗೆ ರಚನಾತ್ಮಕ ಕಾರ್ಯಗಳ ಹೊಸ ತಿಳಿವಳಿಕೆಯನ್ನು ನೀಡಿ ಅವರಲ್ಲಿ ಜಾಗೃತಿಯನ್ನುಂಟು ಮಾಡುವ ಈ ಯೋಜನೆಗಳು ನವಭಾರತವನ್ನು ಕಲ್ಯಾಣ ರಾಜ್ಯವಾಗಿ ರೂಪುಗೊಳಿಸುವ ಸಾಮಾನ್ಯ ಉದ್ದೇಶದ ಸಹಜ ಅಂಗವಾಗಿ ಮೂಡಿ ಬಂದಿವೆ ಎಂದೂ ಅವರು ಹೇಳಿದರು. ನಾವು ಉದ್ದೇಶಿಸಿರುವ ಸಾಮಾಜಿಕ ಬದಲಾವಣೆಗಳನ್ನು ತರುವುದಕ್ಕಾಗಿ ಸಂಪ್ರದಾಯಿಕತೆಗೂ ತಾಂತ್ರಿಕ ವಿಜ್ಞಾನಕ್ಕೂ ಸಂಬಂಧವನ್ನು ಕಲ್ಪಿಸಿಕೊಡುವ ಈ ಬಗೆಯ ಯೋಜನೆಗಳು ಅತ್ಯಾವಶ್ಯಕವಾಗಿವೆ ಎಂದವರು ಅಭಿಪ್ರಾಯಪಟ್ಟರು.

ಉದ್ಯೋಗದ ಅವಕಾಶಗಳನ್ನು ಹೆಚ್ಚಿಸಲು ಈ ಯೋಜನೆಗಳಿಗೆ ಸಾಧ್ಯವಾಗಬೇಕು; ಭೂಸುಧಾರಣೆಯೇ ಮುಂತಾದ ಕ್ರಾಂತಿಕಾರಿಕ್ರಮಗಳನ್ನು ಇವು ಜನಪ್ರಿಯಗೊಳಿಸಲು ಸಮರ್ಥವಾಗಬೇಕು; ಸಮಾಜದ ಒಟ್ಟು ಪ್ರಯೋಜನಕ್ಕಾಗಿ ಸ್ವೇಚ್ಛೆಯಿಂದ ಶ್ರಮದಾನ ಮಾಡುವ ಹಾಗೂ ನಾನಾ ಬಗೆಯಂದ ವಂತಿಗೆಗಳನ್ನು ನೀಡುವ ಮನೋಭಾವವನ್ನು ನಾಗರಿಕರಲ್ಲಿ ಇವು ಹುಟ್ಟಿಸಬೇಕು. ಮಾಡಿದ ಅಭಿವೃದ್ಧಿ ಕೆಲಸಗಳನ್ನು ಶಾಶ್ವತವಾದ ತಳಹದಿಯಲ್ಲಿ ನಿಲ್ಲಿಸಿ ಅವುಗಳನ್ನೆಲ್ಲ ಸುರಕ್ಷಿತ ರೀತಿಯಲ್ಲಿ ಕಾಪಾಡಿಕೊಂಡು ಹೋಗುವ ವ್ಯವಸ್ಥೆಯೂ ಏರ್ಪಡಬೇಕು- ಎಂದು ಮುಂತಾಗಿ ಶ್ರೀ ಕೃಷ್ಣಮಾಚಾರಿಯವರು ಸಲಹೆಯನ್ನೂ ಕೊಟ್ಟರು.

ಯೋಜನಾ ಆಯೋಗದ ಅಧ್ಯಕ್ಷರಾಗಿರುವ ಪ್ರಧಾನಿ ಶ್ರೀ ನೆಹರುಗಳು ಈ ಪರಿಷತ್ತಿಗೊಂದು ಸಂದೇಶವನ್ನು ಕಳುಹಿಸಿ ಭಾರತದಲ್ಲಿ ಸಮಾಜವಾದಿ ಮಾದರಿಯ ಸಮಾಜವನ್ನು ರಚಿಸಲು ಅವಶ್ಯವಾದ ತಳಹದಿಯನ್ನು ನಿರ್ಮಿಸುವುದರಲ್ಲಿ ಸಮಾಜ ವಿಕಾಸ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವೆಗಳ ಪಾತ್ರವು ಹಿರಿದೆಂದು ತಿಳಿಸಿದರು. ಎರಡನೇ ಯೋಜನೆಯ ಅವಧಿಯಲ್ಲಿ ಈ ಕಾರ್ಯಕ್ರಮಗಳನ್ನು ರಾಷ್ಟ್ರದಾದ್ಯಂತ ವಿಸ್ತರಿಸುವ ಘನವಾದ ಉದ್ದೇಶವನ್ನಿಟ್ಟುಕೊಳ್ಳಲಾಗಿದೆ ಎನ್ನುತ್ತಾ ಪ್ರಧಾನಿಗಳು ಎಲ್ಲರಿಂದಲೂ ಈ ಕಾರ್ಯಕ್ರಮವು ಪರಿಶ್ರಮ ಪೂರ್ವಕವಾದ ದುಡಿಮೆಯನ್ನು ಬಯಸುತ್ತದೆ ಎಂದರು. ದಕ್ಷ ತಾಂತ್ರಿಕರನ್ನು ಇದಕ್ಕಾಗಿ ತರಬೇತಿಗೊಳಿಸಬೇಕಾಗುತ್ತದೆ.— ಎಲ್ಲಕ್ಕಿಂತ ಹೆಚ್ಚಾಗಿ ಜನತೆಯ ಉತ್ಸಾಹಪೂರ್ಣ ಸಹಕಾರ ಮತ್ತು ಅಭಿವೃದ್ಧಿ ಪ್ರಯತ್ನಗಳಲ್ಲಿ ವಿಶ್ವಾಸ ಇದಕ್ಕೆ ಅವಶ್ಯವೆನಿಸುತ್ತದೆ ಎಂದಿದ್ದಾರೆ ನೆಹರು.

ಸಮಾಜದ ಸಾರ್ವಾಂಗಿಕ ಅಭಿವೃದ್ಧಿಯನ್ನು ಈ ಯೋಜನೆಗಳು ಉದ್ದೇಶಿಸಿದ್ದರೂ ಮುಖ್ಯವಾಗಿ ಇವು ಕೃಷಿ ಕ್ಷೇತ್ರದಲ್ಲಿ ಹೆಚ್ಚಿನ ಉತ್ಪಾದನೆಯನ್ನು ಕೈಗೂಡಿಸಿ ಆ ರಂಗವು ಸಮೃದ್ಧವಾಗುವಂತೆ ನೋಡಿಕೊಳ್ಳಬೇಕೆಂದೂ ಇದರ ಜೊತೆಗೆ ಸಹಕಾರಿ ತತ್ವದ ತಳಹದಿಯ ಮೇಲೆ ಗ್ರಾಮೋದ್ಯೋಗಗಳನ್ನು ಪ್ರಗತಿಪರ ರೀತಿಯಲ್ಲಿ ಸಂಘಟಿಸಿ ಆರ್ಥಿಕ ಬುನಾದಿಯನ್ನು ನಮ್ಮ ಹಳ್ಳಿಗಳಿಗೆ ಈ ಯೋಜನೆಗಳು ಹಾಕಿಕೊಡಬೇಕೆಂದೂ ತಮ್ಮ ಸಂದೇಶದಲ್ಲಿ ನೆಹರುಗಳು ಅಪೇಕ್ಷೆಪಟ್ಟರು. ಗ್ರಾಮ ಸೇವಕರೂ ಗ್ರಾಮ ಪಂಚಾಯತುಗಳೂ ಈ ವಿಷಯದಲ್ಲಿ ವಿಶೇಷ ಆಸಕ್ತಿ ವಹಿಸಬೇಕೆಂದು ಅವರು ಕೇಳಿಕೊಂಡರು.

ಹೆಚ್ಚು ಕಡಿಮೆ ಈ ಪರಿಷತ್ತಿನ ಹೊತ್ತಿಗೆ ಸರಿಯಾಗಿಯೇ ಹಳ್ಳಿಗಳಲ್ಲಿನ ಈ ಅಭಿವೃದ್ಧಿ ಕಾರ್ಯಕ್ರಮಗಳ ಯಶಸ್ಸನ್ನು ವಿಮರ್ಶಾತ್ಮಕ ದೃಷ್ಟಿ ಕೋನದಿಂದ ನಿರ್ಧರಿಸಲು ನೇಮಕವಾದ ಮಂಡಳದ ವರದಿಯು ಪ್ರಕಟವಾಗಿದೆ. ಹಳ್ಳಿಯ ಅಭಿವೃದ್ಧಿ ಕಾರ್ಯಕ್ರಮಗಳ ಮೂಲೋದ್ದೇಶವು ವ್ಯವಹಾರದಲ್ಲಿ ಎಷ್ಟರ ಮಟ್ಟಿಗೆ ಸಿದ್ಧಿಸಿದೆ ಎಂಬುದೇ ಈ ಮಂಡಳದ ವರದಿಯು ಬಿಂಬಿಸುವ ಮುಖ್ಯ ವಿಷಯ- ಕಾರ್ಯಸಿದ್ಧಿಗೆ ಕೈಗೊಳ್ಳಬಹುದಾದ ಕ್ರಮಗಳ ಸೂಚನೆಯನ್ನು ಈ ಮಂಡಳ ತನ್ನ ವರದಿಯಲ್ಲಿ ಮಾಡುವುದಕ್ಕೇನೂ ಆಕ್ಷೇಪವಿಲ್ಲ.

ಮಂಡಳದ ಈ ಸಲದ ವರದಿಯು ಹಿಂದಿನೆರಡು ವರದಿಗಳಿಗಿಂತ ತುಸು ಹೆಚ್ಚು ವಿಮರ್ಶಾತ್ಮಕವಾಗಿದೆ— ಟೀಕೆ ಅವಶ್ಯವಿದ್ದ ಪ್ರಸಂಗಗಳನ್ನು ಅದು ಟೀಕಿಸದೆ ಬಿಟ್ಟಿಲ್ಲವೆಂದು ಹೇಳಬಹುದು ಆದರೆ ಪ್ರಶಂಸೆ ಸಲ್ಲಬೇಕಾದಲ್ಲಿ ಅದು ಹೊಗಳಲೂ ತಪ್ಪಿಲ್ಲ: "ಕಳೆದ ಮೂರು ವರ್ಷಗಳಲ್ಲಿ ನಡೆದ ಸಾಮಾಜಿಕ ಅಭಿವೃದ್ಧಿ ಚಟುವಟಿಕೆಗಳಿಂದಾದ ಮುಖ್ಯ ಪರಿಣಾಮವು ಭೌತಿಕ ಅಭಿವೃದ್ಧಿಗಳಿಗಿಂತಲೂ ಹೆಚ್ಚಾಗಿ ಜನರ ಮತ್ತು ಅಧಿಕಾರಿಗಳ ಮನೋಭಾವದಲ್ಲಿ ಮೂಡಿರುವ ಬದಲಾವಣೆಯಲ್ಲಿದೆ' ಎಂದು ವರದಿಯಲ್ಲಿ ಹೇಳಿರುವುದು ಗಮನಾರ್ಹವಾದ ವಿಷಯ.

"ಜನರು ಪ್ರಗತಿಯ ಅಭಿಲಾಷೆಯನ್ನು ಚೆನ್ನಾಗಿ ಮುಂದಿಟ್ಟುಕೊಂಡಿದ್ದಾರೆ; ಅಲ್ಲದೆ ತಮಗೆ ಉಪಯುಕ್ತವೆಂದು ಕಂಡ ಯಾವುದೇ ಅಭಿವೃದ್ಧಿ ಪ್ರಯತ್ನವನ್ನು ಕೈಗೊಳ್ಳಲು ಮತ್ತು ಅದಕ್ಕೆ ಧಾರಾಳವಾಗಿ ವಂತಿಗೆಯನ್ನು ನೀಡಲು ಒಪ್ಪಿ ಮುಂಬಂದಿದ್ದಾರೆ. ತಮ್ಮ ಅತ್ಯಾವಶ್ಯಕವಾದ ಅಗತ್ಯಗಳನ್ನು ಪೂರೈಸಲು ಯೋಜನಾಧಿಕಾರಿಗಳಿಂದ ನೀಡಲಾದ ಯಾವುದೇ ಅವಕಾಶವನ್ನು ಅವರು ಸ್ವಾಗತಿಸಿದ್ದಾರೆ; ಮತ್ತದಕ್ಕೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ತಮ್ಮ ಪಾಲಿನ ವಂತಿಗೆಯನ್ನಿತ್ತು ಮತ್ತು ಸಹಕಾರವಿತ್ತು ಬೆಂಬಲಿಸಿದ್ದಾರೆ" ಎಂದು ವರದಿಯಲ್ಲಿದೆ.

ಅಭಿವೃದ್ಧಿ ಪ್ರಯತ್ನಗಳು ಮುಖ್ಯವಾಗಿ ಕೆಲವು ಚಟುವಟಿಕೆಗಳನ್ನು ಹಳ್ಳಿಗಳಲ್ಲೂ ಕಾಣುವಂತಾಗಿ ಮಾಡಿವೆ: ಹೊಸ ರಸ್ತೆಗಳನ್ನು ರಚಿಸುವುದು, ನೀರಿನ ಪೂರೈಕೆಗಾಗಿ ವ್ಯವಸ್ಥೆಯನ್ನೇರ್ಪಡಿಸುವುದು ಆಸ್ಪತ್ರೆಗಳನ್ನೂ ಶಿಶುವಿಹಾರಗಳನ್ನೂ ಹೆರಿಗೆಯ ಕೇಂದ್ರಗಳನ್ನೂ ನೆಲೆಗೊಳಿಸುವುದು, ಶಾಲೆಗಳಿಗಾಗಿ ಕಟ್ಟಡಗಳನ್ನು ನಿರ್ಮಿಸುವುದು, ಆರೋಗ್ಯ ರಕ್ಷಣೆಗಾಗಿ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಳ್ಳುವುದು, ವಯಸ್ಕರ ಶಿಕ್ಷಣ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಸಂಘಟಿಸುವುದು—ಇವೆಲ್ಲ ರಂಗಗಳಲ್ಲಿ ನಡೆದಿರುವ ಕೆಲಸವು ನಿಜಕ್ಕೂ ಉಲ್ಲೇಖನೀಯ ಪ್ರಮಾಣದಲ್ಲಿದೆ.

ಆದರೆ ಪ್ರಧಾನಿ ನೆಹರುಗಳು ಅಪೇಕ್ಷಿಸಿದ ಎರಡು ಮುಖ್ಯ ರಂಗಗಳಾದ ಕೃಷಿ ಮತ್ತು ಗ್ರಾಮೋದ್ಯೋಗಗಳಲ್ಲಿ ನಡೆದಿರುವ ಪ್ರಗತಿ ಕಣ್ಣಿಗೆ ಕಟ್ಟುವಂತಿಲ್ಲದಿರುವುದು ವಿಷಾದಕರ: ಕೃಷಿ ಕ್ಷೇತ್ರದಲ್ಲಿಯ ಪ್ರಗತಿಯು ಸುಧಾರಿತ ಬೀಜ ಮತ್ತು ಗೊಬ್ಬರಗಳ ಬಳಕೆಗೆ ಮಾತ್ರ ಮಿತವಾಗಿದೆ, ಕೊರತು ಸುಧಾರಿತ ಸಲಕರಣೆಗಳು, ಸಹಕಾರಿ ತಳಹದಿಯ ಮೇಲೆ ಸಾಗುವಳಿ ಮತ್ತು ಸರಕುಗಳ ಮಾರಾಟ, ಜಾನುವಾರುಗಳ ಪಾಲನೆ, ಪೋಷಣೆ, ತುಂಡು ಹೊಲಗಳ ಸಂಯೋಜನೆ ಇತ್ಯಾದಿ ಶಾಶ್ವತ ಸ್ವರೂಪದ ಹಾಗು ಅತಿಮಹತ್ವದ ಕೆಲಸಗಳಿನ್ನೂ ಪ್ರಾರಂಭವಾಗಿಲ್ಲ. ಗ್ರಾಮೋದ್ಯೋಗಗಳ ರಂಗ ಕೃಷಿ ಕ್ಷೇತ್ರಕ್ಕಿಂತಲೂ ಬಹಳಷ್ಟು ಹಿಂದುಳಿದಿದೆ—ಅಲ್ಲಿ ಕೆಲಸವನ್ನಿನ್ನೂ ಪ್ರಾರಂಭಿಸಿಯೇ ಇಲ್ಲನೆಂದರೆ ತಪ್ಪಾಗದೆನ್ನುವಷ್ಟು" ಅಲ್ಪ ಪ್ರಮಾಣದಲ್ಲಿದೆ ನಡೆದ ಕೆಲಸ,

ಇದಕ್ಕೆ ಕಾರಣವಿದೆ—ಹೆಸರಿಗೇನೊ ಹಳ್ಳಿಯ ಈ ಅಭಿವೃದ್ಧಿ ಕಾರ್ಯಕ್ರಮಗಳು ಮೂರು ವರ್ಷದ ಅವಧಿಯನ್ನು ಪೂರೈಸಿವೆ; ಆದರೆ ನಿಜವಾಗಿ ಮೊದಲನೆರಡು ವರ್ಷಗಳಲ್ಲಿ ಈ ಕೆಲಸಗಳಿಗೆ ಅವಶ್ಯವಿದ್ದ ಅಧಿಕಾರಿಗಳನ್ನು ತರಬೇತಿಗೊಳಿಸುವುದರಲ್ಲಿ ಮತ್ತು ಅವರು ಸ್ವತಃ ಸ್ವಲ್ಪ ಮಟ್ಟಿನ ಅನುಭವವನ್ನು ತಮಗೆ ತೀರ ಹೊಸವಾದ ಈ ಕ್ಷೇತ್ರದಲ್ಲಿ ಸಂಪಾದಿಸುವುದರಲ್ಲಿ ಕಳೆಯಿತು; ತಾಂತ್ರಿಕ ಹಾಗು ಇನ್ನಿತರ ನೆರವನ್ನು ಒದಗಿಸಿಕೊಳ್ಳುವುದರಲ್ಲಿ ಈ ಅವಧಿ ವಿನಿಯೋಗವಾಯಿತು; ಎಲ್ಲಕ್ಕಿಂತ ಹೆಚ್ಚಾಗಿ ಜನರನ್ನು ಈ ಕಾರ್ಯಕ್ರಮಗಳ ಕಡೆಗೆ ಆಕರ್ಷಿಸಲು ಇಷ್ಟು ಸಮಯ ಅತ್ಯಗತ್ಯವಾಗಿ ಪರಿಣಮಿಸಿತು. ಆದುದರಿಂದ ನಿಜವಾಗಿ ಕೆಲಸ ನಡೆದ ಅವಧಿಯು ಕೊನೆಯ ಒಂದು ವರ್ಷಕ್ಕೆ ಸೀಮಿತವಿದೆ ಎಂದು ಭಾವಿಸುವುದೇ ಲೇಸು. ಇಲ್ಲಿ ನಡೆದ ಕೆಲಸವು ಎಷ್ಟಕ್ಕೂ ತಿರಸ್ಕಾರಣೀಯವಾಗಿಲ್ಲ; ಉಪೇಕ್ಷಿಸುವಷ್ಟು ಅಲ್ಪವಾಗಿಲ್ಲ—ಎಂಬುದೇ ತೃಪ್ತಿಕರವಾದ ಸತ್ಯ.

ಮೂರು ವರ್ಷಗಳ ಅನುಭವವನ್ನು ಸಂಪಾದಿಸಿದ ಬಳಿಕವೂ ನಾವು ಎಲ್ಲ ಅಡಂಕಗಳನ್ನು ಗೆದ್ದಿದ್ದೇವೆಂದು ಹೇಳುವಂತಿಲ್ಲ—ವರದಿಯಲ್ಲಿ ಇದನ್ನು ಸ್ಪಷ್ಟಗೊಳಿಸಲಾಗಿದೆ. ಉದಾಹರಣೆಗೆ ತಾಂತ್ರಿಕ ವಿಭಾಗವು ಇನ್ನೂ ಬಲಶಾಲಿಯಾಗಿಲ್ಲ; ತಾಂತ್ರಿಕ ವಿಭಾಗ, ಅಧಿಕಾರಿ ವಿಭಾಗ ಮತ್ತು ಜನತಾ ವಿಭಾಗಗಳೆಂಬ ಮೂರು ಮುಖ್ಯಾಂಗಗಳಲ್ಲಿ ಪರಸ್ಪರ ಸಾಮರಸ್ಯ ಮತ್ತು ನಿಕಟ ಸಹಕಾರದ ಅಭಾವ ಇನ್ನೂ ದೂರವಾಗಿಲ್ಲ. ಗ್ರಾಮ ಸೇವಕರೂ ಗ್ರಾಮ ಪಂಚಾಯತುಗಳೂ ನಿರ್ವಹಿಸಬೇಕಾದ ಪಾತ್ರವು ಅಚ್ಚುಕಟ್ಟಾದ ರೀತಿಯಲ್ಲಿ ಇಷ್ಟರ ವರೆಗೆ ರೂಪುಗೊಂಡಿಲ್ಲ. ಜನರಿಗೆ ಸುಲಭದಲ್ಲಿ ಮನವರಿಕೆಯಾಗುವ ಕೆಲಸಗಳ ಕಡೆಗಷ್ಟೆ ಗಮನ ಹರಿದಿದೆ

(೧೦ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಹಿಂದು ವಾರೀಸು ವಿಧೇಯಕದ ಆಶಯ

ಪ್ರತಿನಿಧಿಗಳು ವ್ಯಕ್ತಪಡಿಸಿದ ವಿವಿಧ ಅಭಿಪ್ರಾಯ

ನಮ್ಮ ಹಿಂದಿನ ಸಂಚಿಕೆಯಲ್ಲಿ ಸಂಕ್ಷಿಪ್ತವಾಗಿ ತಿಳಿಸಿದಂತೆ, ಲೋಕ ಸಭೆಯು ಹಿಂದು ಉತ್ತರಾಧಿಕಾರ ವಿಧೇಯಕವನ್ನು ಕೆಲವು ತಿದ್ದುಪಡಿಗಳೊಡನೆ ಅನುಮೋದಿಸಿದೆ; ಈ ತಿದ್ದುಪಡಿಗಳಾದ ದೆಸೆಯಿಂದ ರಾಜ್ಯ ಸಭೆಯು ವಿಧೇಯಕವನ್ನು ಪುನಃ ಪರಿಶೀಲಿಸುವ ಅಗತ್ಯ ಬಿದ್ದಿದೆ. ಏನೇ ಆಗಲಿ— ಈ ವಿಧೇಯಕವು ಬೇಗನೇ ಶಾಸನವಾಗಿ ಜಾರಿಗೆ ಬರುವುದರಲ್ಲಿ ಈಗ ಯಾವ ಸಂಶಯವೂ ಕಾಣುತ್ತಿಲ್ಲ. ಆದುದರಿಂದ ನಮ್ಮ ಪ್ರತಿನಿಧಿಗಳು ಈ ವಿಧೇಯಕದ ಕುರಿತು (ಲೋಕ ಸಭೆಯಲ್ಲಿ) ಏನು ಅಭಿಪ್ರಾಯಪಟ್ಟರೆಂಬುದನ್ನೂ ಅವರ ಅಭಿಪ್ರಾಯಗಳಿಗೆ ಬಂದ ಬೆಲೆ ಏನೆಂಬುದನ್ನೂ ಸುಸುವಾದರೂ ತಿಳಿದು ಕೊಂಡರೆ ಈ ವಿಧೇಯಕವನ್ನು ಕುರಿತಾದ ನಮ್ಮ ಮನೋಧರ್ಮದ ಮೇಲೆ ಯೋಗ್ಯ ಪರಿಣಾಮವಾಗಬಲ್ಲದು.

ವಿಧೇಯಕದ ಪ್ರಥಮ ಹಾಗು ತೃತೀಯ ವಾಚನಗಳ ಕಾಲದಲ್ಲಿ ಸದಸ್ಯರ ಸಾಮಾನ್ಯ ಅಭಿಪ್ರಾಯಗಳು ವ್ಯಕ್ತವಾಗಿವೆ; ದ್ವಿತೀಯ ವಾಚನ ಕಾಲದಲ್ಲಿ ವಿಧೇಯಕದ ಲೋಪದೋಷಗಳ ವಿವರವಾದ ಪರಿಶೀಲನೆ ನಡೆದು ತಿದ್ದುಪಡಿಗಳ ಸೂಚನೆ, ವಿಚಾರ ವಿನಿಮಯ ಮತ್ತು ಅನುಮೋದನೆ ಅಥವಾ ನಿರಾಕರಣೆಗಳು ನಡೆದಿವೆ. ವಿಷಯದ ಸಂಲಭ ಗ್ರಹಣದ ಉದ್ದೇಶದಿಂದ ನಾವು ಸಾಮಾನ್ಯ ಪ್ರತಿಕ್ರಿಯೆಯನ್ನು ಮೊದಲಿಗೆ ತಿಳಿಯಲೆತ್ನಿಸೋಣ!

ಚರ್ಚೆಯನ್ನು ಮೊದಲು ಪ್ರಾರಂಭಿಸಿದವರು ಉತ್ತರ ಪ್ರದೇಶದ ಕಾಂಗ್ರೆಸು ಮಹಿಳೆಯಾದ ಶ್ರಿಮತಿ ಶಿವರಾಜವತಿ ನೆಹರು. ಇವರು ಮಗನೊಂದಿಗೆ ಮಗಳಿಗೆ ಸಹ ಸಮಾನವಾದ ಪಾಲನ್ನು ತಂದೆಯ ಆಸ್ತಿಯಲ್ಲಿ ಕೊಡಬೇಕಾದ ಅಗತ್ಯವಿಲ್ಲವೆಂದರು! ಇಂಥ ಸಮಾನ ಪಾಲನ್ನು ಕೊಡಲು ಉದ್ದೇಶಿಸಿದ ಈ ಮಸೂದೆಯು ದೇಶದ ಮಹಿಳೆಯರಿಗೆ ಬೇಡಿದುದಕ್ಕಿಂತಲೂ ಹೆಚ್ಚು ನೀಡಿದೆ ಎಂದರು. "ಒಬ್ಬ ಮಗಳಿಗೆ ಈಗ ತಂದೆ, ತಾಯಿ ಮತ್ತು ಗಂಡನೆಂಬ ಮೂರು ಕಡೆಗಳಿಂದ ಹಣ ಮತ್ತು ಆಸ್ತಿಪಾಸ್ತಿಗಳು ಲಭ್ಯವಾಗುತ್ತವೆ; ಆದರೆ ಮಗನ ಪಾಲಿಗೆ ಮಾತ್ರ ತಂದೆಯೊಬ್ಬರಿಂದ ಮಾತ್ರವೇ ಸಿಗುತ್ತದೆ; ಈ ಮಗನ ಮೇಲೆಯೇ ಕುಟುಂಬದ ಸಾಲ ಸೋಲಗಳ ಭಾರವೂ ಕುಟುಂಬ ನಿರ್ವಹಣೆಯ ಹೊಣೆಯೂ ಬಿದ್ದಿರುತ್ತವೆ. ಇವುಗಳನ್ನು ದೃಷ್ಟಿಯಲ್ಲಿಟ್ಟುಕೊಂಡಾದರೂ ಮಗನಿಗೆ ಸಲ್ಲುವ ಪಾಲನ್ನು ಹೆಚ್ಚಿಸಬೇಕು. ಮಗಳಿಗೆ ಮಗನ ಪಾಲಿಗೆ ಸಮಾನವಾದ ಪಾಲನ್ನು ಕೊಟ್ಟರೆ ಹಿಂದೂ ಕುಟುಂಬಗಳ ವಾತಾವರಣವೇ ಕೆಟ್ಟು ಹೋಗಬಹುದು" ಎಂದು ಮುಂತಾಗಿ ಅವರು ಹೇಳಿದರು

ಹಿಂದು ಮಹಾಸಭೆಯ ಶ್ರೀ. ವಿ. ಜಿ. ದೇಶಪಾಂಡೆಯವರು ವಿಧೇಯಕವನ್ನು ವಿರೋಧಿಸಿದರು. "ದೇಶದಲ್ಲಿ ಆರ್ಥಿಕ ಕ್ರಾಂತಿಯನ್ನುಂಟು ಮಾಡಲು ಬಯಸಿದ ಈ ಮಸೂದೆಯ ಪುರಸ್ಕರ್ತರು ವಿಷಯಗಳನ್ನು ಭಾವನಾತ್ಮಕ ಅಥವಾ ರಮಣೀಯ ದೃಷ್ಟಿಕೋಣದಿಂದ ನೋಡದೆ ವೈಜ್ಞಾನಿಕ ಹಾಗು ವಾಸ್ತವಿಕತೆಯ ಸ್ವಚ್ಛ ಬೆಳಕಿನಲ್ಲಿ ವೀಕ್ಷಿಸಬೇಕು' ಎಂದವರು ಕೇಳಿಕೊಂಡರು. ತಂದೆಯ ಮರಣಾನಂತರ ಮಗನು ನಿರ್ವಹಿಸಬೇಕಾದ ಕೆಲವು ಹೊಣೆಗಾರಿಕೆಗಳವೆಯೆಂದೂ ಮಗಳಿಗೆ ಸಹ ಮಗನಷ್ಟೆ ಪಾಲನ್ನು ತಂದೆಯ ಆಸ್ತಿಪಾಸ್ತಿಯಲ್ಲಿ ಕೊಟ್ಟರೆ ಆ ದಾಮಾಶಯಕ್ಕನುಗುಣವಾಗಿ ಮಗನು ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಚ್ಯುತನಾಗುವುದು ತಪ್ಪದೆಂದೂ ಅವರು ತಿಳಿಸಿದರು.

ಮಧ್ಯ ಪ್ರದೇಶದ ಕಾಂಗ್ರೆಸು ಮಹಿಳೆ ಶ್ರೀಮತಿ ಅನುಸೂಯಾಬಾಯಿ ಬೋರ್ಕರರು ವಿಧೇಯಕವನ್ನು ಸಮರ್ಥಿಸುತ್ತಾ ಘಟನೆಯು ಸಾಮಾಜಿಕ, ಆರ್ಥಿಕ ಹಾಗು ಶಾಸನಿಕ ರಂಗಗಳಲ್ಲಿ ಪುರುಷರಂತೆ ಮಹಿಳೆಯರಿಗೂ ಸಮಾನಾಧಿಕಾರವಿದೆ ಎಂದಿರುವುದನ್ನು ನೆನಪಿಗೆ ತಂದು ಕೊಟ್ಟರು. ಆದುದರಿಂದ ತಂದೆಯ ಆಸ್ತಿಯಲ್ಲಿ ಮಗಳಿಗೂ ಮಗನಂತೆಯೇ ಸಮಾನಪಾಲನ್ನು ಕೊಡುವುದಕ್ಕೆ ವಿರೋಧ ಸೂಚಿಸುವ ಹಾಗಿಲ್ಲವೆಂದವರು ಅಭಿಪ್ರಾಯಪಟ್ಟರು. "ತಂದೆಯ ಆಸ್ತಿಯಲ್ಲಿ ಮಗಳಿಗೆ ಪಾಲುಕೊಡುವುದರಿಂದ ಅಂಥ ಮಗಳ ಗೌರವವನ್ನು ಹೆಚ್ಚಿಸಿದಂತಾಗುತ್ತದೆ. ಈಗ ಮಹಿಳೆಯರನ್ನು ಕುಟುಂಬದಲ್ಲಿ ಆಶ್ರಿತರಂತೆ ನಡೆಸಿಕೊಳ್ಳಲಾಗುತ್ತಿದೆ; ಈ ಕೀಳು ದೆಸೆಯು ತಪ್ಪಿ ಅವರು ಪುರುಷರೊಡನೆ ಸಮಾನತೆಯ ಸ್ಥಾನಮಾನವನ್ನು ಹೊಂದುವಂತೆ ಮಾಡುವುದು ತೀರ ಅಗತ್ಯ" ಎಂದರವರು. ಸಭೆಯು ಅವರ ಮಾತುಗಳನ್ನು ಕರತಾಡನದೊಡನೆ ಸ್ವಾಗತಿಸಿತು.

ಪಂಜಾಬಿನ ಕಾಂಗ್ರೆಸು ಸದಸ್ಯ ಪಂಡಿತ ಠಾಕೂರ ದಾಸ ಭಾರ್ಗವರು ವಿಧೇಯಕಕ್ಕೆ ಸಮ್ಮತಿಯನ್ನು ಕೊಡಲಿಲ್ಲ. ಅರ್ಥಗರ್ಭಿತ ಟೀಕೆಯ ಸುರಿಮಳೆಗರೆಯುತ್ತಾ ಅವರು "ಆಸ್ತಿಪಾಸ್ತಿಯ ಉತ್ತರಾಧಿಕಾರಿತ್ವದ ಮಟ್ಟಿಗೆ ಸ್ತ್ರೀ ಪುರುಷರಲ್ಲಿ ಸಮಾನತೆ ಇರಬೇಕೆಂಬುದೇ ಹೌದಾದರೆ, ತನ್ನ ಮಾವನ ಆಸ್ತಿಯಲ್ಲಿ ಪುರುಷನಿಗೇಕೆ ಸಮಾನ ಪಾಲು ಕೊಡಬಾರದು?" ಎಂದವರು ಪ್ರಶ್ನಿಸಿದರು. "ಇವತ್ತಿನ ಪರಿಸ್ಥಿತಿಯಲ್ಲಿ ತನ್ನ ಮುದಿ ತಾಯ್ತಂದೆಯರ ಮತ್ತು ಕುಟುಂಬದ ಇತರರ ಯೋಗಕ್ಷೇಮವನ್ನು ನೋಡಿಕೊಳ್ಳುವ ಹೊಣೆ ಮಗನ ಮೇಲೆ ಬಿದ್ದಿದೆ. ಹಿಂದು ಮಹಿಳೆಯರು ಈ ಜವಾಬ್ದಾರಿಯನ್ನು ಹೊರುವಂತೆ ಸಮಾಜ ಅಪೇಕ್ಷಿಸಿಲ್ಲ. ಈ ವಿಧೇಯಕವು ಹಿಂದುಗಳ ಕೌಟುಂಬಿಕ ಜೀವನವನ್ನೇ ಹಾಳುಗೆಡವುತ್ತದೆ. ಮಗಳಾದವಳಿಗೆ ಮಗನಿಗಿಂತಲೂ ಹೆಚ್ಚು ಮೂಲಗಳಿಂದ ಆಸ್ತಿಪಾಸ್ತಿಗಳು ಸಿಗುವ ಸಂಭವವನ್ನು ಈ ವಿಧೇಯಕವು ತಂದು ಕೊಟ್ಟಿದೆ' ಎಂದರವರು. ಕೌಟುಂಬಿಕ ಸೌಖ್ಯವನ್ನು ಹಿಂದುಗಳಲ್ಲಿ ಅಪೇಕ್ಷಿಸುವುದಾದರೆ ಕನಿಷ್ಠ ಪಕ್ಷ ಭೂಮಿಯ ರೂಪದಲ್ಲಿರುವ ಆಸ್ತಿಯನ್ನಾದರೂ ವಿಧೇಯಕದ ಕಕ್ಷೆಯಿಂದ ಹೊರತು ಪಡಿಸಬೇಕೆಂದು ಅವರು ಆಗ್ರಹದಿಂದ ವಿನಂತಿಸಿದರು.

ತಿರು-ಕೊಚ್ಚಿಯ ಕಾಂಗ್ರೆಸು ಸದಸ್ಯ ಶ್ರೀ ಕೆ. ಎಸ್. ದಾಮೋದರ ಮೆನೊನ್ನರು ವಿಧೇಯಕಕ್ಕೆ ಬೆಂಬಲವಿತ್ತು ಸಾತ ನಾಡಿದರು. "ಕೇರಳದಲ್ಲಿರುವ ಮಾತೃಪ್ರಧಾನ ಉತ್ತರಾಧಿಕಾರ ಪದ್ಧತಿಯು ಅಲ್ಲಿಯ ಸಾಮಾಜಿಕ ಜೀವನವನ್ನು ತಿಲಾಂಶವೂ ಕೆಡಿಸಿಲ್ಲ; ಅಲ್ಲಿ ಮಹಿಳೆಯರು ಪುರುಷರಿಗಿಂತ ಹೆಚ್ಚಲ್ಲದಿದ್ದರೆ ಸಮಾನ ಸ್ಥಾನಮಾನಗಳನ್ನಾದರೂ ಪಡೆದಿರುವರೆಂಬುದನ್ನು ಸ್ಮರಣೆಯಲ್ಲಿಟ್ಟು ಕೊಂಡರೆ ಮಹಿಳೆಯರಿಗೆ ವಿಧೇಯಕದಲ್ಲಿ ಉದ್ದೇಶಿಸಿದ ಅಧಿಕಾರವನ್ನು ಕೊಡುವುದರಿಂದ ಹಿಂದು ಸಮಾಜವು ಏನೂ ನಷ್ಟವನ್ನನುಭವಿಸಬೇಕಾಗಿ ಬರದು" ಎಂದವರು ಸಾರಿದರು. ನಿಜವಾಗಿ ಯಾದರೆ ವಾತ್ಸಲ್ಯದಷ್ಟೆ ಹೇಗೆ ಮಗನನ್ನೂ ಮಗಳನ್ನೂ ಹೆತ್ತವರು ಸಮಾನವಾಗಿ ಕಾಣುತ್ತಾರೋ ಹಾಗೆಯೇ ಉತ್ತರಾಧಿಕಾರದ ಮಟ್ಟಿಗೂ ಈ ಸಮಾನ ಭಾವನೆ ಒಡಮೂಡಿ ಬರಬೇಕು ಎಂದವರು ಅಪೇಕ್ಷಿಸಿದರು.

ಪಂಜಾಬಿನ ಕಾಂಗ್ರೆಸು ಮಹಿಳೆ ಶ್ರೀಮತಿ ಸುಭದ್ರಾ ಜೋಶಿಯವರು ಮಾತನಾಡುತ್ತಾ ಇಂದಿನ ಆರ್ಥಿಕ ಪರಿಸ್ಥಿತಿಯು ತಾಯಿಯಂಥ ಆತ್ಮೀಯ ಸಂಬಂಧಿಕಳು ಸಹ ಪ್ರೀತಿ, ವಾತ್ಸಲ್ಯ, ಪಾಲನೆ-ಪೋಷಣೆ ಇತ್ಯಾದಿಗಳಲ್ಲಿ ಗಂಡು-ಹೆಣ್ಣು ಮಕ್ಕಳಲ್ಲಿ ಭೇದಭಾವ ಮಾಡುವಂತೆ ಪ್ರೇರೇಪಿಸಿದೆ ಎಂದು ಆರೋಪಿಸಿದರು. "ಹೆಣ್ಣು ಮಗುವು ಕುಟುಂಬದಲ್ಲಿ ಹುಟ್ಟಿದರೆ ಅದು ಹೊರಗೆ ಹೋಗುವ ಬಾಬೆಂದೇ ಪರಿಗಣಿಸಲಾಗುತ್ತದೆ ಮಹಿಳೆಯರಿಗೆ ಪುರುಷರಂತೆಯೇ ಸಮಾನಾಧಿಕಾರವನ್ನಿತ್ತರೆ ಮಾತ್ರ ಅವರು ಸ್ವಪ್ರತಿಷ್ಠೆಯನ್ನುಳಿಸಿಕೊಂಡು ಸ್ವಂತ ಕಾಲಮೇಲೆ ನಿಂತು ಬಾಳಬಲ್ಲರು" ಎಂದವರು ಪ್ರತಿಪಾದಿಸಿದರು.

ಜನಸಂಘದ ಶ್ರೀ ಯು. ಎಂ. ತ್ರಿವೇದಿಯವರು ವಿಧೇಯಕವನ್ನು ಉಗ್ರವಾಗಿ ಖಂಡಿಸುತ್ತಾ ಹಿಂದು ಸಮಾಜಕ್ಕೆ ಮಾತ್ರ ಅನ್ವಯವಾಗುವಂತೆ ಈ ಶಾಸನವನ್ನು ತರಲಿಚ್ಛಿಸಿ ಉಳಿದ ಸಮಾಜಗಳನ್ನು ಅವುಗಳಷ್ಟಕ್ಕೆ ಬಿಟ್ಟುದೇಕೆಂದು ಕೇಳಿದರು. "ಆಸ್ತಿಕರ ಶಾಸನವನ್ನು ಪರಿಶೀಲನೆಗಾಗಿ ಮಂಡಿಸಿದ ದಿನವೇ ಈ ಸರಕಾರವು ಹಿಂದು ಸಂಯುಕ್ತ ಕುಟುಂಬದ ನಾಶವನ್ನು ಬಯಸಿದೆ ಎಂದು ಸ್ಪಷ್ಟವಾಗಿದ್ದಿತು. ಮಹಿಳೆಯರಿಗೆ ಸಮಾನಾಧಿಕಾರವನ್ನು ಕೊಡುವುದು ಸರಕಾರದ ಉದ್ದೇಶವಾಗಿರದೆ ಹಿಂದುಗಳ ಖಾಸಗಿ ಆಸ್ತಿಯನ್ನು ನಾಶಪಡಿಸುವುದೇ ಈ ಮಸೂದೆಯ ಹೇತು" ಎಂದವರು ಆರೋಪಿಸಿದರು. ಸಂಯುಕ್ತ ಕುಟುಂಬದ ಅಸ್ತಿತ್ವಕ್ಕೆ ಭಂಗವನ್ನು ತರುವ ಈ ಮಸೂದೆಯು ಹಿಂದುಗಳ ಪರಂಪರಾಗತ ಸಾಮಾಜಿಕ ಭದ್ರತಾ ಕ್ರಮಕ್ಕೆ ಕುಠಾರಾಘಾತವಾಗಿದೆ ಎಂದವರು ವಿಷಾದಿಸಿದರು.

ಮುಂಬಯಿಯ ಕಾಂಗ್ರೆಸು ಪ್ರತಿನಿಧಿ ಶ್ರೀ ಜಿ. ಎಸ್. ಅಕ್ಲೇಕರರು ಮದುವೆಯಾಗದ ಮಗಳಿಗೆ ಮಾತ್ರ ತಂದೆಯ ಆಸ್ತಿಪಾಸ್ತಿಯಲ್ಲಿ ಅಧಿಕಾರವಿರಬೇಕೆಂದೂ ಆವಳ ವಿವಾಹಾನಂತರ ತಂದೆಯಿಂದ ಬಂದ ಆವಳ ಆಸ್ತಿಪಾಸ್ತಿಯು ಸಹೋದರರಿಗೆ ವಾಪಸಾಗಬೇಕೆಂದೂ ಸೂಚಿಸಿದರು. ಮಹಿಳೆಗೆ ಅವಳ ಗಂಡನ ಆಸ್ತಿಯಲ್ಲಿ ಸಮಾನ ಪಾಲು ನೀಡುವ ಕ್ರಮವೇ ಸೂಕ್ತವೆಂದು ಸಹ ಅವರು ತಿಳಿಸಿದರು.

ಮದ್ರಾಸಿನ ಸ್ವತಂತ್ರ ಸದಸ್ಯರಾದ ಶ್ರೀ ಎಸ್. ಆರ್. ಎ. ಸ್ವಾಮಿಯವರು ಮಸೂದೆಯು ಶಾಸನವಾಗುವುದೆಂಬ ನಿರೀಕ್ಷೆಯಿಂದ ಖಾಸಗಿ ಆಸ್ತಿ ಪಾಸ್ತಿಗಳ ವಿಭಜನೆಯು ಈಗಾಗಲೇ ಹೆಚ್ಚಿನ ಪ್ರಮಾಣದಲ್ಲಿ ನಡೆದಿದೆಯೆಂದೂ ಆದಕಾರಣ ಅವರುಗಳಿಗೆ ಸಹ ಸಮಾನಪಾಲು ಸಿಗಬೇಕೆಂಬ ಮಸೂದೆಯ ಉದ್ದೇಶ ವಿಫಲವಾಗಬಾರದೆಂದಿದ್ದರೆ ಐದು ಅಥವಾ ಹತ್ತು ವರ್ಷಗಳಷ್ಟು ಹಿಂದಿನ ಸಮಯದಿಂದ ಈ ಶಾಸನ ಅನ್ವಯವಾಗುತ್ತದೆಂ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ನೀತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ— ಬೆಂಗಳೂರು-2.

(2) ಷಾ ಕಂಪೆನಿ— ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಮಗಳಿಗೆ ಸಮಾನಾಧಿಕಾರ ಬೇಕೆಂದು ಸಮರ್ಥಕರ ಬೆಂಬಲ

ಕೌಟುಂಬಿಕ ಜೀವನದ ಸರ್ವನಾಶವಾಗುವುದೆಂದು ವಿರೋಧಕರ ಖಂಡನೆ

ದು ಹಾರುವುದು ಇಷ್ಟವೆಂದೂ ಸಲಹೆಯಿತ್ತರು.

ಕಾಂಗ್ರೆಸಿನ ಪತಿಯಿಂದ ಉತ್ತರ ಪ್ರದೇಶದಲ್ಲಿ ಗೆದ್ದು ಬಂದ ಮಹಿಳೆ ಶ್ರೀಮತಿ ಉಮಾ ನೆಹರುರವರು ಭೂಸಂಬಂಧದ ಆಸ್ತಿಯನ್ನು ಮಸೂದೆಯ ವ್ಯಾಪ್ತಿಯಿಂದ ಹೊರಗಿಡಬೇಕೆಂದುಒತ್ತಾಯಿಸಿದರು. ಭೂ ಹಿಡುವಳಿಗಳು ಒಡೆದು ಚೂರಾಗದಂತೆ ಮಾಡಲು ಇದು ಅವಶ್ಯವೆಂದರು. ಮಾಜಿ ಕಾಂಗ್ರೆಸಾಧ್ಯಕ್ಷ ಶ್ರೀ ಪುರುಷೋತ್ತಮದಾಸ ಟಂಡನ್ನರು ಈ ಬಗೆಯ ಶಾಸನವನ್ನು ತಂದಪಕ್ಷದಲ್ಲಿ ಕಾಂಗ್ರೆಸು ಚೂರು ಚೂರಾಗಿ ಸಿಡಿದು ಬೀಳುವುದೆಂದು ಭವಿಷ್ಯ ಹೇಳಿದರು! "ಈ ವಿಧೇಯಕದ ಪ್ರತಿಪಾದಕರು ಪಾಶ್ಚಾತ್ಯ ವಿಚಾರ ಮತ್ತು ರೀತಿ ನೀತಿಗಳಿಂದ ಪ್ರಭಾವಿತರಾಗಿದ್ದಾರೆ. ಪಾಶ್ಚಾತ್ಯ ಜೀವನದ ಒಳ್ಳೆಯ ಅಂಶಗಳನ್ನು ಗ್ರಹಿಸಲು ನನ್ನ ಆಕ್ಷೇಪವಿಲ್ಲ. ಆದರೆ ನಮ್ಮ ಪ್ರಾಚೀನ ಸಂಸ್ಕೃತಿ, ಸಂಪ್ರದಾಯ ಮತ್ತು ಪದ್ಧತಿಗಳ ಮೇಲೆ ಗದಾಪ್ರಹಾರ ಮಾಡಿ ಕೌಟುಂಬಿಕ ಜೀವನವನ್ನು ಪುಡಿಗೈಯುವ ಈ ಮಸೂದೆ ಖಂಡನಾರ್ಹ" ಎಂದರು. "ಮಗಳಿಗೆ ತನ್ನ ಗಂಡನ ಆಸ್ತಿಯಲ್ಲಿಯಷ್ಟೆ ಪಾಲಿರಬೇಕು. ಹೀಗೆ ಮಹಿಳೆಯರಿಗೆ ಸಮಾನಾಧಿಕಾರ ಕೊಡಬೇಕು ಅವಿವಾಹಿತ ಮಹಿಳೆಗೆ ಬೇಕಾದರೆ ತಂದೆಯ ಆಸ್ತಿಯಲ್ಲಿ ಪಾಲು ಕೊಡಬಹುದು; ಆದರೆ ಅವಳ ವಿವಾಹಾನಂತರ ಅದು ಸಹೋದರರಿಗೆ ವಾಪಸಾಗಬೇಕು. ಇಂಥ ವ್ಯವಸ್ಥೆಯಿಲ್ಲದ ಪ್ರಸ್ತುತ ಮಸೂದೆ ಯೋಗ್ಯವಲ್ಲ. ಮಗಳಿಗೆ ತಂದೆಯ ಆಸ್ತಿಪಾಸ್ತಿಯಲ್ಲಿ ಸಮಾನ ಪಾಲಿಂಬೇಕೆ ಎಂಬ ಪ್ರಶ್ನೆಯಲ್ಲಿ ಹಳೆಯ ಮಹಿಳೆಯರ ಅಭಿಪ್ರಾಯವನ್ನು ತಿಳಿದುಕೊಳ್ಳಬೇಕಲ್ಲದೆ 'ಕೊನ್ನಾಟ್ ಪ್ಲೇಸ್' ಪತಂಗಗಳೊಡನಲ್ಲ" ಎಂದು ಅವರು ವಾದಿಸಿದರು.

ಶ್ರೀ ಎಸ್. ಎಸ್. ಮೋರೆ ಎಂಬ ಮುಂಬಯಿಯ ಸ್ವತಂತ್ರ ಸದಸ್ಯರು ಟಂಡನ್ನರ ಕೊನೆಯ ಉದ್ಗಾರಕ್ಕೆ ಪ್ರಬಲ ಆಕ್ಷೇಪವೆತ್ತಿ ಸುಶಿಕ್ಷಿತರೂ ಸ್ವಂತ ಸಂಪಾದನೆ ಮಾಡಿ ಗೌರವಾರ್ಹ ಜೀವನ ನಡೆಸುವವರೂ ಆದ ಮಹಿಳೆಯರ ವಿಷಯದಲ್ಲಿ ಲಘು ಭಾಷಣ ಸಲ್ಲದೆಂದರು. ವಿಷಯದ ಕಡೆಗೆ ತಿರುಗಿ ಅವರು ಹಳೆಯ ಜನರನ್ನು ಸುಧಾರಣೆಗಳ ವಿಷಯದಲ್ಲಿ ವಿಚಾರಿಸಬೇಕೆಂಬ ನಿಲುವೇಯು ಅಯೋಗ್ಯವೆಂದು ನಿದರ್ಶನಪೂರ್ವಕ ಹೇಳಿದರು. "ಬ್ರಿಟಿಶರು ಸತೀಸಹಗಮನ ಪದ್ಧತಿಯನ್ನು ಬಹಿಷ್ಕರಿಸಿದಾಗ ಭಾರತದಲ್ಲಿದ್ದ ಸಂಪ್ರದಾಯವಾದಿಗಳು ಹಿಂದು ಸಮಾಜವು ನಾಯಿಗಳ ಪಾಲಾಗುತ್ತವೆಂದು ಆಕ್ರೋಶಗೈದರು. ವಿಧವೆಯರಿಗೆ ಪುನರ್ವಿವಾಹದ ಅಧಿಕಾರ ನೀಡುವ ಶಾಸನವನ್ನು ಮಾಡಿದಾಗಲೂ ಹೀಗೆಯೇ ಬೊಬ್ಬೆ ಹಾಕಲಾಯಿತು. ಇವುಗಳಿಗೆಲ್ಲ ಮಹತ್ವ ಕೊಡಬಾರದು" ಎಂದವರು ನುಡಿದರು. ನಾವು ಸಮಾಜವಾದಿ ಪದ್ಧತಿಯಲ್ಲಿ ಸಾಗಬಯಸುವವಾದರೆ ಆಸ್ತಿಪಾಸ್ತಿಯ ವಿಷಯದಲ್ಲಿ ಪುರುಷರೊಡನೆ ಸ್ತ್ರೀಯರನ್ನೂ ಸಮಾನತೆಯಿಂದ ನಡೆಸಿಕೊಳ್ಳಬೇಕು. ಕಾಂಗ್ರೆಸು ಪಕ್ಷವು ಕಳೆದ ಚುನಾವಣೆಯಲ್ಲಿ ಈ ವಿಷಯವನ್ನುಘೋಷಿಸಿ ಜನರ ಸಮ್ಮತಿಯನ್ನು ಈ ಸುಧಾರಣೆಯ ಮಟ್ಟಿಗೆ ಪಡೆದಿದೆ ಆದುದರಿಂದ ಈ ವಿಷಯದಲ್ಲಿ ಹೆಜ್ಜೆ ಹಿಂದೆಡ ಕೂಡದು ಎಂದವರು ತಿಳಿಸಿದರು.

ಕಾಂಗ್ರೆಸಿನ ಶ್ರೀ ಸಿ. ಡಿ. ದೇಶಪಾಂಡೆ ಎಂಬ ಉತ್ತರ ಪ್ರದೇಶದ ಸದಸ್ಯರು ಹಿಂದುಗಳಿಗೆ ಮಾತ್ರವೇ ಅನ್ವಯವಾಗುವಂತೆ ಈ ಶಾಸನ ತಂದುದನ್ನು ಆಕ್ಷೇಪಿಸಿದರು. "ನನಗೆ ಮಗಳಂದಿರ ಮೇಲೆ ಮಮತೆ ಇಲ್ಲವೆಂದು ಯಾರೂ ತಿಳಿಯುವುದು ಬೇಡ. ಆದರೆ ವಿವಾಹದ ನಂತರವೂ ಮಗಳಿಗೆ ತಂದೆಯ ಆಸ್ತಿಪಾಸ್ತಿಯಲ್ಲಿ ಪಾಲಿನ ಅಧಿಕಾರವಿರುವುದು ಸಲ್ಲದು" ಎಂದರವರು. ರಾಜಮಾತಾ ಕಮಲೇಂದುಮತಿ ಶಹಾರೆಂಬ ಸ್ವತಂತ್ರ ಮಹಿಳಾ ಸದಸ್ಯರು ಮಾತನಾಡುತ್ತಾ ಸುಖವಾದ ಹಿಂದು ಕೌಟುಂಬಿಕ ವಾತಾವರಣವನ್ನು ವಿಧೇಯಕವು ಕೆಡಿಸುವುದೆಂದೂ ಮಗಳಿಗೆ ಸಲ್ಲಬಹುದಾದ ಆಸ್ತಿಪಾಸ್ತಿಯ ಮೇಲೆಯೇ ಕಣ್ಣುಳ್ಳ ಹೊಸ ಬಗೆಯ ಮದುವೆಗಳೇ ಇನ್ನು ಮುಂದೆ ನಡೆಯುವುವೆಂದೂ ಹೇಳಿದರು. ಮದ್ರಾಸಿನ ಕಾಂಗ್ರೆಸು ಸದಸ್ಯ ಶ್ರೀ ಆರ್. ವೆಂಕಟರಾಮನ್ನರು ಮುಸ್ಲಿಂ ಮತ್ತು ಕ್ರಿಶ್ಚಿಯನ್ನರಲ್ಲಿ ಮಹಿಳೆಯರಿಗೆ ಉತ್ತರಾಧಿಕಾರವಿವೆಯೆಂದೂ ಹಿಂದುಗಳಲ್ಲಿ ಮಾತ್ರ ಇಲ್ಲವೆಂದೂ ಈ ವಿಧೇಯಕವು ಹಿಂದು ಮಹಿಳೆಯರನ್ನು ಇನ್ನಿತರ ಸಮಾಜದ ಮಹಿಳೆಯರ ಸಾಲಿಗೆ ತರುವುದೆಂದೂ ಟೀಕಾಕಾರರಿಗೆ ವಿದಿತಪಡಿಸಿದರು. ಮಧ್ಯ ಪ್ರದೇಶದ ಕಾಂಗ್ರೆಸಿಗರಾದ ಶ್ರೀಮತಿ ಮಿನಿಮಾತಾರವರು ತಮ್ಮ ಭಾಷಣದಲ್ಲಿ ಮಹಿಳೆಗೆ ಆಸ್ತಿಪಾಸ್ತಿಯಲ್ಲಿ ಅಧಿಕಾರ ಇಲ್ಲದೆಸೆಯಿಂದಲೇ ಸೂಳೆಗಾರಿಕೆಯಂಥ ಸಾಮಾಜಿಕ ಕೆಡುಕುಗಳಿಗೆ ಅವಕಾಶ ದೊರೆತಿದೆ ಎಂದರು. ಮದ್ರಾಸಿನ ಕಾಂಗ್ರೆಸು ಮಹಿಳೆ ಶ್ರೀಮತಿ ಅಮ್ಮು ಸ್ವಾಮಿನಾಥನ್ನರು ಕೇರಳ ನಿದರ್ಶನವನ್ನಿತ್ತು ಹೆಂಗಸಿಗೆ ಆಸ್ತಿಪಾಸ್ತಿಯಲ್ಲಿ ಅಧಿಕಾರ ಕೊಟ್ಟರೆ ಯಾವುದೂ ಕೆಟ್ಟು ಹೋಗುವುದಿಲ್ಲ ಎಂದು ವಿಧೇಯಕವನ್ನು ಸಮರ್ಥಿಸಿದರು. ಎಲ್ಲ ಜವಾಬ್ದಾರಿ ಸ್ಥಾನಗಳಲ್ಲೂ ಇಂದು ಹೆಂಗಸರಿರುವಾಗ ಈ ವಿಧೇಯಕದ ಆಶಯವನ್ನು ಖಂಡಿಸುವುದು ಆಶ್ಚರ್ಯಕರವೆಂದರವರು.

ಹಿಂದು ಮಹಾಸಭೆಯ ಶ್ರೀ ಎನ್. ಸಿ. ಚಟರ್ಜಿಯವರು ಈ ವಿಧೇಯಕವು ವಕೀಲರಿಗೆ ಸ್ವರ್ಗ ಸಂಪತ್ತನ್ನು ತಂದುಕೊಡುವುದೆಂದು ಟೀಕಿಸಿದರು. ಮಗಳಿಗೆ ಪಾಲು ಸಿಗುವ ಉದ್ದೇಶವುಳ್ಳದಾಗಿದ್ದರೂ ಈ ಮಸೂದೆಯು ವಕೀಲರ ಕಿಸೆ ತುಂಬಿಸುವುದರಲ್ಲಿ ಪರಿಣಾಮಗೊಳ್ಳುವುದೆಂದವರು ಅಭಿಪ್ರಾಯಪಟ್ಟರು. ಕಮ್ಯುನಿಷ್ಟ ಸದಸ್ಯರಾದ ಡಾ. ರಾಮರಾಯರು ಮಸೂದೆಯ ಆರನೇ ಸೂತ್ರವು ಮಗಳಿಗೆ ಇನ್ನೂ ಅನ್ಯಾಯ ಮಾಡುತ್ತದೆ ಎಂದರು. ಇನ್ನೊಬ್ಬ ಕಮ್ಯುನಿಸ್ಟ ಸದಸ್ಯರಾದ ಶ್ರೀಮತಿ ರೇಣು ಚಕ್ರವರ್ತಿಯವರು "ಈ ಮಸೂದೆಯು ಮಹಿಳೆಯರಿಗೆ ಏನೂ ಕೊಟ್ಟಿಲ್ಲವೆನ್ನಲಾಗದು—ಇದು ಸರಿಯಾದ ದಾರಿಯಲ್ಲಿಟ್ಟ ಹೆಜ್ಜೆ. ಪ್ರಾಚೀನ ಸಂಸ್ಕೃತಿಯು ನಾಶವಾಗುತ್ತದೆನ್ನುವವರ ನಿಲುಮೆಯ ಮೇಲೆ ಸಂಪಾದಿಸಿದ ವಿಜಯವಿದು. ಇಡೀ ಭಾರತಕ್ಕೆಲ್ಲ ಒಂದೇ ವಾರೀಸು ಶಾಸನ ಅನ್ವಯವಾಗುವುದಕ್ಕೆ ಹಾಕಿದ ನಾಂದಿಯಿದು" ಎಂದರು. ಲೋಕ ಸಭೆಯ ಅಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರರು 'ಈ ಮಸೂದೆಯು ದೇಶದ ಸಹೋದರಿಯರಲ್ಲಿ ಭದ್ರತೆಯ ಭಾವನೆಯನ್ನುಂಟು ಮಾಡುತ್ತದೆ ಎಂದರು. ಹಿಂದು ಸಮಾಜವು ಎಂದೂ ಸ್ಥಿರವಾದ ಕಟ್ಟುಕಟ್ಟಳೆಗಳ ಬಂಧನಕ್ಕೆ ಸಿಲುಕಿರಲಿಲ್ಲವೆಂದವರು ಸ್ಮೃತಿ ಶಾಸ್ತ್ರಗಳ ಮೂಲಕ ವಿವರಿಸಿ ಕಾಲಕ್ಕೆ ತಕ್ಕ ಈ ಮಸೂದೆಯನ್ನು ತಂದು ಪ್ರಾಮುಖ್ಯ ಹೆಜ್ಜೆ ಮುಂದಿಟ್ಟುದಕ್ಕೆ ಅವರು ಸರಕಾರವನ್ನೂ ಅದನ್ನು ಸ್ವಾಗತಿಸಿದುದಕ್ಕೆ ಸದಸ್ಯರನ್ನೂ ಅಭಿನಂದಿಸಿದರು.

ಕಾನೂನು ಮಂತ್ರಿ ಶ್ರೀ ಎಚ್. ವಿ. ಪಾಟಸ್ಕರರು ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತಾ ಈ ವಿಧೇಯಕವನ್ನು ನಿರ್ವಿಕಾರ ಚಿತ್ತತೆಯಿಂದ ನೋಡಬೇಕೆಂದು ವಿನಂತಿಸಿದರು. ಸಾಮಾಜಿಕ ನ್ಯಾಯವನ್ನು ಸ್ಥಾಪಿಸುವುದೇ ಇದರ ಮುಖ್ಯೋದ್ದೇಶವೆಂದವರು ಘೋಷಿಸಿದರು. ಈ ಮಸೂದೆಯನ್ನು ವಿರೋಧಿಸಿ ಮಾಡಲಾದ ಎಲ್ಲ ವಾದಗಳೂ ಹಿಂದು ವಿಧವೆಗೆ ಆಸ್ತಿಯನ್ನು ಉತ್ತರಾಧಿಕಾರ ಪದ್ಧತಿಯಂತೆ ಪಡೆಯಲು ೧೯೩೭ರಲ್ಲಿ ಮಾಡಲಾದ ಶಾಸನದ ವಿರುದ್ಧ ಹೇಳಿದ ವಿಷಯಗಳ ಪುನರುಚ್ಚಾರವೆಂದವರು ಹೇಳಿದರು. "ಸಮಾಜದಲ್ಲೀಗ ವಿಧವೆಯರ ಸ್ಥಾನಮಾನವು ಹಿಂದಿಗಿಂತ ಹಿತವಾಗಿಲ್ಲವೆ?" ಎಂದವರು ಪ್ರಶ್ನಿಸಿದರು. ಪ್ರಾಚೀನ ಋಷಿ ಮುನಿಗಳಿಂದ ಹಿಡಿದು ಇಂದಿನ ವರೆಗೆ ಹಿಂದು ಶಾಸನಗಳು ಅನೇಕ ಪರಿವರ್ತನೆಗಳಿಗೆ ಗುರಿಯಾಗಿವೆ ಎನ್ನುತ್ತಾ, ಈಗ ಮಗಳನ್ನೂ ಉತ್ತರಾಧಿಕಾರದ ಸಂಬಂಧದಲ್ಲಿ ಮಗನ ಮಟ್ಟಕ್ಕೆ ತರಲು ಕಾಲವು ಪರಿಪಕ್ವವಾಗಿವೆ ಎಂದರು. "ವಿವಾಹಿತೆ ಅಥವಾ ಅವಿವಾಹಿತೆ ಎಂದು ಮಗಳಂದಿರಲ್ಲಿ ಭೇದಭಾವ ಮಾಡಕೂಡದು—ಏಕೆಂದರೆ ಅವಿವಾಹಿತೆಯಾಗಿದ್ದರೂ ಒಬ್ಬ ಮಗಳು ಸುಶಿಕ್ಷಿತಳಾಗಿದ್ದು ಒಳ್ಳೆಯ ನೌಕರಿಯಲ್ಲಿರಬಹುದು; ವಿವಾಹಿತೆಯಾಗಿದ್ದರೂ ಗಂಡನನ್ನು ಕಳೆದುಕೊಂಡು ಹಲವು ಮಕ್ಕಳ ತಾಯಿಯಾಗಿ ಇನ್ನೊಬ್ಬ ಮಗಳು ನಿರ್ಗತಿಕಳಾಗಿರಬಹುದು. ಈ ವಿಷಯದಲ್ಲಿ ತಾರತಮ್ಯ ಅಗತ್ಯವಿದ್ದರೆ ಅದನ್ನು ತಂದೆಯೇ ಉಚಿತ ಮರಣ ಶಾಸನದ ಮೂಲಕ ಮಾಡಬಹುದು— ಕಾನೂನು ಇಲ್ಲಿ ಹಸ್ತಕ್ಷೇಪ ಮಾಡುವುದು ವಿಹಿತವಲ್ಲ" ಎಂದು ಮಂತ್ರಿಗಳು ಅಭಿಪ್ರಾಯಪಟ್ಟರು. ಭೂಸಂಬಂಧದ ಆಸ್ತಿಯ ಕುರಿತಾದ ಟೀಕೆಯನ್ನು ಉತ್ತರಿಸುತ್ತಾ ಹಿಡುವಳಿಯು ಕನಿಷ್ಠ ಮಿತಿಗಿಂತಲೂ ಕೆಳಗೆ ತುಂಡಾಗಿ ಹೋಗದಂತೆ ಬೇರೆ ವಿಧಾನದಿಂದ ತಡೆಯಬಹುದು ಎಂದರು.

ಪ್ರಧಾನಿ ನೆಹರುಗಳು ವಿಧೇಯಕದ ಕುರಿತು ಮಾತನಾಡುತ್ತಾ ಇದೊಂದು ಪ್ರಾಮುಖ್ಯವಾದ ಹಾಗು ಒಂದು ರೀತಿಯಲ್ಲಿ ಕ್ರಾಂತಿಕಾರಿಯಾದ ಹೆಜ್ಜೆ ಎಂದರು. ಮಸೂದೆಯಲ್ಲಿ ಕೆಲವೆಡೆ ಲೋಪ

(ಅನೇ ಪುಟ ನೋಡಿರಿ)

PT. AMBLAY RAMASWAMIER'S 98 Yrs. Renowned, Specifics
— SANTHANA SINDHURA —
(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY.
— MADANA VILASA —
(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN,
THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.
Please send 2½ As. Stamps for CATALOGUE Reply with details of the disease.
A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?
ಮನೆ-ಮದ್ದು
HOME REMEDIES
ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಯಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಚಿಕಿತ್ಸಾ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೭-೫-'೫೬	೩೭

ಎರಡನೇ ಯೋಜನೆ

ಪ್ರಧಾನಮಂತ್ರಿ ಶ್ರೀ ಜವಾಹರಲಾಲ ನೆಹರುರವರು ಸಂಸತ್ತಿನ ಮುಂದೆ ಎರಡನೇ ಯೋಜನೆಯ ಕರಡನ್ನು ಸೂಚಿತ ಪ್ರತಿಕ್ರಿಯೆ ಮತ್ತಿತರ ವಿವರ ಮಾಹಿತಿಗಳೊಡನೆ ಅವಗಾಹನೆಗಾಗಿ ಇದೇ ಮಂಗಳವಾರದಂದು ಮಂಡಿಸಿದ್ದಾರೆ; ಮತ್ತು ಸಂಸತ್ತಿನ ಉಭಯ ಸಭೆಗಳೂ ಇಷ್ಟರಲ್ಲೇ ಈ ಸಂಬಂಧದ ಚರ್ಚೆಗಳನ್ನು ಪ್ರಾರಂಭಿಸಲಿವೆ. ನಮ್ಮ ಎರಡನೇ ಯೋಜನೆಯು ವಿಶೇಷ ಆತುರದಿಂದ ಕೂಡಿದೆಯೆಂದೂ ಸಾಕಷ್ಟು ಸಾಧನಸಂಪತ್ತಿಲ್ಲದೆಯೇ ಸಾಗುವ ಮಹತ್ವಾಕಾಂಕ್ಷೆಯನ್ನು ಪ್ರದರ್ಶಿಸಿದೆಯೆಂದೂ ವ್ಯವಹಾರದಲ್ಲಿ ಅದರ ಯಶಸ್ಸು ತೀರ ಅನಿಶ್ಚಿತವಾಗಿದೆಯೆಂದೂ ಶ್ರೀ ಕೆ. ಸಿ. ನಿಯೋಗಿಯವರಂಥ ಸಮರ್ಥ ಅರ್ಥಶಾಸ್ತ್ರಜ್ಞರು ಯೋಜನಾ ಆಯೋಗದ ಸದಸ್ಯನೆಂಬ ನೆಲೆಯಿಂದ ಭಿನ್ನಾಭಿಪ್ರಾಯದ ಟಿಪ್ಪಣಿಯ ಮೂಲಕ ಹೇಳಿರುವರಾದರೂ ಸರಕಾರವು ಈ ನಿಲುಮೆಯನ್ನು ಒಪ್ಪುವುದಿಲ್ಲ. ಬೆಲೆಗಳ ಏರಿಕೆ ಇತ್ಯಾದಿಗಳಿಂದ ಜನರಿಗೆ ತ್ರಾಸವಾಗಲಾರದೆಂದು ಸರಕಾರ ನಂಬುತ್ತದೆ; ತೆರಿಗೆಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸುವುದರಿಂದಲೂ ಉತ್ಪಾದನೆಯ ವೇಗವನ್ನು ಅಧಿಕಗೊಳಿಸುವುದರಿಂದಲೂ ಅತಿ ಪ್ರಸರಣದ ಹಾವಳಿಯನ್ನು ನಿಯಂತ್ರಣದಲ್ಲಿಡಬಹುದೆಂಬುದೇ ಅದರ ವಿಶ್ವಾಸ. ಶ್ರೀ ದೇಶಮುಖರಂಥ ಅನುಭವಿ ಅರ್ಥ ಸಚಿವರ ಕೈಯಲ್ಲಿ ಪ್ರಥಮ ಪಂಚ ವಾರ್ಷಿಕ ಯೋಜನೆಯು ಈ ಮಾತುಗಳ ಸತ್ಯವನ್ನು ಸಾಕಷ್ಟು ಮನವರಿಕೆ ಮಾಡಿಕೊಟ್ಟಿದೆ—ಆದುದರಿಂದ ನಾವು ಸರಕಾರದ ನಿಲುಮೆಯು ವ್ಯವಹಾರಾತೀತವಾದುದೆಂದು ಭಾವಿಸಬೇಕಾಗಿಲ್ಲ. ಯೋಜನೆಯು ಭಾರವಾದ ಮೂಲಭೂತ ಕೈಗಾರಿಕೆಗಳ ಅಭಿವೃದ್ಧಿಗೆ ವಿಶೇಷ ಮಹತ್ವವನ್ನು ಕೊಟ್ಟಿದ್ದರೂ ಮೊದಲನೇ ಯೋಜನೆಯ ಅನೇಕ ವೈಶಿಷ್ಟ್ಯಗಳನ್ನದು ಉಳಿಸಿಕೊಂಡು ಹೋಗುತ್ತದೆ. ಮುಖ್ಯವಾಗಿ ಕೃಷಿ ಕ್ಷೇತ್ರದಲ್ಲಿಯೂ ಸ್ಥಳೀಯ ಅಭಿವೃದ್ಧಿ ರಂಗದಲ್ಲಿಯೂ ಅದು ಹಿಂದಿನಂತೆಯೇ ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಜನತಾ ಸಹಕಾರಕ್ಕೆ ಅತಿ ಹೆಚ್ಚಿನ ಅವಕಾಶವಿರುವ ಇವೆರಡು ರಂಗಗಳಲ್ಲಿ ಉಲ್ಲೇಖನೀಯವಾದ ಚಟುವಟಿಕೆಯು ವ್ಯಕ್ತವಾಗಬೇಕಾಗಿದೆ. ಸರಕಾರದ ಕಡೆಯಿಂದ ಪ್ರಚಾರವು ಎಷ್ಟು ಭರದಿಂದ ನಡೆಯುತ್ತದೋ ಅಷ್ಟು ಮಟ್ಟಿಗೆ ಇಂಥ ಚಟುವಟಿಕೆಯ ವೇಗ ವೃದ್ಧಿಯಾಗುತ್ತದೆಂದು ಸೂಚಿಸಲು ನಾವು ಬಯಸುತ್ತೇವೆ. ಪ್ರಧಾನಿಗಳು ಪ್ರಚಾರದ ಹಲವು ತಂತ್ರಗಳನ್ನು ವಿವರಿಸಿದ್ದಾರೆ. ಆದರೆ ಹಳ್ಳಿಯ ನಿರಕ್ಷರಕುಕ್ಷಿ ನಾಗರಿಕರನ್ನು ಈ ತಂತ್ರಗಳು ಎಷ್ಟರ ಮಟ್ಟಿಗೆ ಮುಟ್ಟುತ್ತವೆ ಎಂಬುದರ ಮೇಲೆಯೇ ಜನತಾ ಸಹಕಾರದ ಪ್ರಮಾಣವು ಅವಲಂಬಿಸಿದೆ. ಮೊದಲನೇ ಯೋಜನೆಯಲ್ಲಿ ಪ್ರಚಾರ ತಂತ್ರಗಳು ಗಣನೀಯವಾದ ಪರಿಣಾಮವೇನನ್ನೂ ತೋರಿಸಿಲ್ಲವೆಂಬುದು ಒಪ್ಪತಕ್ಕ ವಿಚಾರ. ಜನರಿಗೆ ತಿಳಿಸಿ ಹೇಳುವ ಹಾಗು ಅವರ ಮನವೊಲಿಸುವ ಪರಿಣಾಮಕಾರಿ ಉಪಾಯಗಳ ಬಲವು ಎರಡನೇ ಯೋಜನೆಗೆ ಧನಬಲದಷ್ಟೆ ಅವಶ್ಯವಾದುದೆಂದು ಸರಕಾರ ಮನಗಾಣಬೇಕು— ಪತ್ರಿಕೆಗಳ ಮಾಧ್ಯಮವನ್ನು ಸಹ ಇತರ ವಿಧಾನಗಳೊಂದಿಗೆ ಉಪಯೋಗಪಡಿಸಿಕೊಳ್ಳಲು ಸರಕಾರ ತಪ್ಪಬಾರದು. ಜನರ ಸಂಪರ್ಕವನ್ನು ವಿಶೇಷವಾಗಿ ಪಡೆದಿರುವ ಪತ್ರಿಕೆಗಳ ಕೂಡೆ ನಿಕಟ ಸಂಪರ್ಕವನ್ನು ಇರಿಸಿಕೊಂಡು ಸರಕಾರವು ಸಾಗಿದರೆ ಅದರ ಎಲ್ಲ ಕಲ್ಯಾಣಪ್ರದ ಕಾರ್ಯಕ್ರಮಗಳ ಯಶಸ್ಸು ಹತ್ತಿರವಾಗಬಲ್ಲುದು.

ಮೃತ್ಯುಪತ್ರ ಮಾಡಿಟ್ಟಿರದ ಹಿಂದುವಿನ ಆಸ್ತಿ

ಉತ್ತರಾಧಿಕಾರ ವ್ಯವಸ್ಥೆಯ ಕ್ರೋಢೀಕರಣ

ಲೋಕಸಭೆಯು ಹಿಂದು ವಾರೀಸು ವಿಧೇಯಕದ ಪರಿಶೀಲನೆಯ ಕಾಲದಲ್ಲಿ ಒಟ್ಟು ೨೭ ತಿದ್ದುಪಡಿಗಳನ್ನು ಸ್ವೀಕರಿಸಿದೆ—ಇವುಗಳಲ್ಲಿ ಕೆಲವು ಶಬ್ದ ಪ್ರಯೋಗಗಳ ಬದಲಾವಣೆಗೆ ಸಂಬಂಧಿಸಿದ್ದರೆ ಮತ್ತೆ ಕೆಲವು ವಿಧೇಯಕದ ಸ್ವರೂಪದ ಮೇಲೆಯೇ ಗಂಭೀರ ಪರಿಣಾಮ ಮಾಡುವಂತಿವೆ. ಹೀಗೆ ತಿದ್ದುಪಡಿ ಹೊಂದಿದ ಸ್ವರೂಪದಲ್ಲಿ ವಿಧೇಯಕವನ್ನು ರಾಜ್ಯಸಭೆಯು ಪುನಃ ಪರಿಶೀಲನೆಗೆ ತೆಗೆದುಕೊಂಡು, ಲೋಕಸಭೆಯು ಮಾಡಿದ ಎಲ್ಲ ತಿದ್ದುಪಡಿಗಳಿಗೂ ತನ್ನ ಸಮ್ಮತಿಯನ್ನು ಇದೇ ಮಂಗಳವಾರ (ದಿನಾಂಕ ೧೫) ನೀಡಿದೆ. ಇನ್ನು ಈ ವಿಧೇಯಕವು ರಾಷ್ಟ್ರಾಧ್ಯಕ್ಷರ ಬಳಿಗೆ ಅವರ ಅನುಮತಿಗಾಗಿ ಹೋಗುತ್ತದೆ—ಮತ್ತು ಹೀಗೆ ಅನುಮತಿಪಡೆದ ಬಳಿಕ ಸರಕಾರದ ಅಧಿಕೃತ ಗಜೆಟಿನಲ್ಲಿ ಪ್ರಸಿದ್ಧಿಪಡಿಸಿದ ತಾರೀಕಿನಿಂದ ಶಾಸನರೂಪದಲ್ಲಿದು ಜ್ಯಾರಿಗೆ ಬರುತ್ತದೆ.

ಮಸೂದೆಯು ಶಾಸನವಾಗಿ ಸ್ವರೂಪಗೊಂಡು ಜ್ಯಾರಿಗೆ ಬಂದಬಳಿಕ ಹಿಂದು ಸಮಾಜದಿಂದ ಅದು ಅಪೇಕ್ಷಿಸುವುದೇನು ಮತ್ತು ಅದರ ವ್ಯಾಪ್ತಿಯು ಎಷ್ಟು ಮಟ್ಟಿಗಿದೆ ಎಂಬುದನ್ನು ಚರ್ಚಿಸಲು ಇಲ್ಲಿ ನಾವು ಹೋಗುವುದಿಲ್ಲ—ಓದುಗರ ಅವಗಾಹನೆಗಾಗಿ ಲೋಕಸಭೆಯು ಮಾಡಿದ ಮುಖ್ಯ ತಿದ್ದುಪಡಿಗಳನ್ನಷ್ಟೆ ನಾವಿಲ್ಲಿ ಪ್ರಸ್ತಾಪಿಸುತ್ತೇವೆ.

ಮಸೂದೆಯ ಮೂರನೇ ಸೂತ್ರದಲ್ಲಿರುವ "ಸಂಬಂಧವುಳ್ಳ" ಎಂಬ ಶಬ್ದದ ಅರ್ಥ ವ್ಯಾಪ್ತಿಯ ಬಗ್ಗೆ ತುಸು ಚರ್ಚೆ ನಡೆಯಿತು. "ನ್ಯಾಯ ಸಮ್ಮತ ಬಾಂಧವ್ಯವಿಂತ ಸಂಬಂಧವುಳ್ಳ" ಎಂಬುದೇ ಶಬ್ದದ ಅರ್ಥವೆಂದು ಮಸೂದೆ ಹೇಳುತ್ತದೆ. ಈ ಅರ್ಥದ ಕಕ್ಷೆಯನ್ನು ಅನೌರಸ ಸಂತಾನಕ್ಕೂ ಅನ್ವಯವಾಗುವಂತೆ ವಿಸ್ತರಿಸಬೇಕೆಂದು ಕೆಲವು ಸದಸ್ಯರು ಪ್ರಯತ್ನಿಸಿದರು. ಮಕ್ಕಳನ್ನು ಅವುಗಳ ಹುಟ್ಟಿನ ಪರಿಸ್ಥಿತಿಯ ನೆಪದಿಂದ ಶಿಕ್ಷಿಸಲಾಗದೆಂಬುದೇ ಇವರ ವಾದ. ಮಂತ್ರಿಗಳು ಈ ತಿದ್ದುಪಡಿಯನ್ನು ಒಪ್ಪಲಿಲ್ಲ—ಸದಸ್ಯರು ಉಲ್ಲೇಖಿಸಿದ ರೀತಿಯ ತೊಂದರೆಗಳು ಕೇವಲ ಕಲ್ಪನೆಗಳೆಂದು ಅವರು ಮೂಲ ವ್ಯಾಖ್ಯೆಗೆ ಅಂಟಿಕೊಂಡರು.

ವಿಶೇಷ ವಿವಾಹ ಶಾಸನದ ೨೧ನೇ ಸೂತ್ರಕ್ಕೊಳಪಟ್ಟು ಭಾರತೀಯ ವಾರೀಸು ಶಾಸನವು ಅನ್ವಯವಾಗುವ ಯಾವುದೇ ಆಸ್ತಿಪಾಸ್ತಿಗೆ ಹಿಂದು ವಾರೀಸು ಶಾಸನವು ಅನ್ವಯವಾಗುವುದಿಲ್ಲವೆಂಬ ೫ನೇ ಸೂತ್ರಕ್ಕೆ ಸಭೆ ಸಮ್ಮತಿಸಿತು; ಆದರೆ ಹಿಂದಿನ ಸಂಸ್ಥಾನಿಕರಿಗೂ ಭಾರತ ಸರಕಾರಕ್ಕೂ ನಡುವೆ ಆದ ಒಪ್ಪಂದಗಳು ಅನ್ವಯವಾಗುವ ಆಸ್ತಿಪಾಸ್ತಿಗಳಿಗೂ ಈ ಶಾಸನ ಅನ್ವಯವಾಗುವುದಿಲ್ಲವೆಂಬ ವಾಕ್ಯವು ತುಸು ಟೀಕೆಗೊಳಗಾಯಿತು. ಶ್ರೀ ವಿ. ಜಿ. ದೇಶಪಾಂಡೆಯವರು ಮಸೂದೆಯ ಉದ್ದೇಶವನ್ನು ಸಾಮಾಜಿಕ ನ್ಯಾಯ ಸ್ಥಾಪನೆ ಮತ್ತಿತರ ಉದಾತ್ತ ಶಬ್ದಗಳಲ್ಲಿ ವರ್ಣಿಸಲಾಗುತ್ತಿದ್ದರೂ ಹಿಂದಿನ ರಾಜ-ಮಹಾರಾಜರ ಆಸ್ತಿಪಾಸ್ತಿಗಳ ರಕ್ಷಣೆಯೇ ಅದರ ಉದ್ದೇಶವೆಂಬಂತೆ ತೋರುವುದು ಹಿತಕರವಲ್ಲವೆಂದರು. ಸಭೆಯು ಕೊಚ್ಚಿಯ ಮಹಾರಾಜರ ಒಂದಾನೊಂದು ಆಸ್ತಿಗೆ ಸಹ ಈ ಮಸೂದೆಯ ವ್ಯಾಪ್ತಿಯನ್ನು ವಿಸ್ತರಿಸುವ ತಿದ್ದುಪಡಿಗೆ ಒಪ್ಪುವ ಮೂಲಕ ದೇಶಪಾಂಡೆಯವರ ನಿಲುಮೆಯನ್ನು ತಿರಸ್ಕರಿಸಿತು.

ಮಸೂದೆಯ ಆರನೇ ಸೂತ್ರವು ವಿಶೇಷವಾದ ಚರ್ಚೆಗೊಳಗಾಯಿತು— ಸಂಯುಕ್ತ ಕುಟುಂಬಗಳ ಆಸ್ತಿಪಾಸ್ತಿಯನ್ನು ಮಸೂದೆಯ ವ್ಯಾಪ್ತಿಗಿಂತ ಹೊರಗಿಡಬೇಕೆಂಬವರ ವಾದವನ್ನು ಮನ್ನಿಸಲಾಗದೆಂದೂ, ಏಕೆಂದರೆ ದೇಶದಲ್ಲಿ ಹೆಚ್ಚಿನ ಆಸ್ತಿಪಾಸ್ತಿಯು ಈ ವರ್ಗಕ್ಕೆಯೇ ಸೇರುತ್ತದೆಂದೂ ಶ್ರೀ ಸಿ. ಸಿ. ಶಹಾರಂಥವರು ಹೇಳಿದರು. ಮಂತ್ರಿಗಳು ಈ ಸೂತ್ರವನ್ನು ವಿಶೇಷವಾದ ತಿದ್ದುಪಡಿಗೊಳಪಡಿಸಿ ವಿರೋಧಕರ ನಿಲುಮೆಗೂ ಸಮರ್ಥಕರ ವಾದಕ್ಕೂ ನಡುವೆ ಸೇತುವೆ ಹಾಕಲು ನಿರ್ಧರಿಸಿದರು. ಮಿತಾಕ್ಷರ ಪದ್ಧತಿಯಲ್ಲಿ ಹಸ್ತಕ್ಷೇಪವನ್ನು ವಿಶೇಷವಾಗಿ ಮಾಡದೆ ಮಗಳಿಗೂ ಒಂದು ಪಾಲು ಒದಗಿಸಿಕೊಡುವುದೇ ತನ್ನ ಉದ್ದೇಶವೆಂದವರು ತಿಳಿಸಿದರು.

ತಮ್ಮ ತಿದ್ದುಪಡಿಯ ಆಶಯವನ್ನು ಮಂತ್ರಿಗಳು ಹೀಗೆ ವಿವರಿಸಿದರು— (೧) ತಂದೆಯ ಭಾಗದಲ್ಲಿಯಷ್ಟೆ ಮಗಳಿಗೆ ಪಾಲು ಕೊಡುವುದು ಹೊರತು ಅವಿಭಕ್ತ ಗಂಡುಮಕ್ಕಳ ಭಾಗದಲ್ಲಿಯಲ್ಲ; (೨) ವಿಭಕ್ತ ಗಂಡುಮಗನಿಗೆ ತಂದೆಯ ಭಾಗದಲ್ಲಿ ಪಾಲು ಕೇಳುವ ಅಧಿಕಾರವುಳಿಯುವುದಿಲ್ಲ; ಮತ್ತು (೩) ತಂದೆಯ ಜೀವಿತಾವಧಿಯಲ್ಲಿ ಮಗನು ಹಿಸೆಪಡೆದು ಬೇರೆಯಾಗಕೂಡದೆನ್ನುವ ಈಗಿನ ನಿಲುಮೆಯನ್ನು ಸಾಮಾನ್ಯವಾಗಿ ರಕ್ಷಿಸುತ್ತದೆ. ಪಾಟಸ್ಕರರ ಹೇಳಿಕೆಯಂತೆ ಮೇಲಿನೆಲ್ಲ ಪರಿಣಾಮಗಳು ಸಂಯುಕ್ತ ಕುಟುಂಬದ ಅಸ್ತಿತ್ವಕ್ಕೆ ಪೋಷಕವಾಗಿವೆ ಮತ್ತು ಹಿಸೆಪಡೆದು ಬೇರೆಯಾಗುವ ಮನೋಭಾವವನ್ನು ನಿಯಂತ್ರಿಸುತ್ತವೆ.

ಮರಣಶಾಸನವಿಲ್ಲದೆ ಮೃತ್ಯುಹೊಂದಿದ ಹಿಂದು ಗಂಡಸಿನ ಆಸ್ತಿಪಾಸ್ತಿಯ ಉತ್ತರಾಧಿಕಾರವು ಯಾವ ಕ್ರಮದಲ್ಲಿ ಹೋಗಬೇಕೆನ್ನುವ ೮ನೇ ಸೂತ್ರದ ಮೇಲೆ ತುಂಬ ಚರ್ಚೆ ನಡೆಯಿತು. ಒಬ್ಬ ವಿಧವೆಯು ಪುನರ್ವಿವಾಹವಾದರೆ ಆವಳಿಗೆ ತನ್ನ ಮೊದಲಿನ ಗಂಡನ ಆಸ್ತಿಪಾಸ್ತಿಯಲ್ಲಿ ಹಕ್ಕು ಉಳಿಯಕೂಡದೆಂದು ಅನೇಕರು ಆಗ್ರಹಪೂರ್ವಕ ಹೇಳಿದರು. ಇನ್ನೊಬ್ಬ ಸದಸ್ಯರು ಗಂಡನನ್ನು ತ್ಯಜಿಸಿದ ಮಹಿಳೆಗೆ ಆತನ ಆಸ್ತಿ ಪಾಸ್ತಿಯಲ್ಲಿ ಯಾವುದೇ ಅಧಿಕಾರವಿರಕೂಡದೆಂದು ಸೂಚಿಸಿದರು. ಬೇರೆ ಕೆಲವು ಸದಸ್ಯರು ಮರಣಶಾಸನ ಮಾಡದೆ ಸಾಯುವ ಹಿಂದು ಗಂಡಸಿನ ಆಸ್ತಿಪಾಸ್ತಿಗೆ ೩೨ ಬಗೆಯ ಸಂಬಂಧಿಕರನ್ನು ಉತ್ತರಾಧಿಕಾರಿಗಳ ಪಟ್ಟಿಯಲ್ಲಿ ಸೇರಿಸಿರುವುದು ವಿಹಿತವಲ್ಲ; ಈ ಸಂಬಂಧಿಕರನ್ನು ಕಡಿಮೆ ಮಾಡಬೇಕು ಎಂದು ಸಲಹೆ ನೀಡಿದರು. ಹಾಗಲ್ಲದಿದ್ದರೆ ಸರಕಾರಕ್ಕೆ ಯಾವುದೇ ಆಸ್ತಿಯೂ ಉತ್ತರಾಧಿಕಾರಿಗಳಿಲ್ಲವೆಂಬ ನೆಪದಿಂದ ಸಿಗಲಾರದೆಂದು ಅವರು ಹೇಳಿದರು.

ಮಂತ್ರಿಗಳು ತಿದ್ದುಪಡಿಗಳನ್ನು ನಿರಾಕರಿಸುತ್ತಾ ಸರಕಾರಕ್ಕೆ ಮರಣ ಶಾಸನರಹಿತ ಆಸ್ತಿಪಾಸ್ತಿಗಳ ಒಡೆತನದಂಥ ಸಂಶಯಾತ್ಮಕ ಆದಾಯ ಸ್ರೋತದ ಮೇಲೆ ಕಣ್ಣಿಲ್ಲವೆಂದರು; ಆಸ್ತಿಯ ಮೇಲೆ ತೆರಿಗೆ ಹಾಕಲು ಇರುವ ಪ್ರತ್ಯಕ್ಷ ಶಕ್ತಿಯಿಂದಲೇ ಸರಕಾರವು ತೃಪ್ತಿಪಡುವುದೆಂದರು. ಉಳಿದವರ ನಿಲುಮೆಯನ್ನೂ ಒಪ್ಪದೆ ಹೋದರು.

ಅನುಬಂಧದಲ್ಲಿ ಹೇಳಿದ ಪ್ರಥಮ ಶ್ರೇಣಿಯ ಉತ್ತರಾಧಿಕಾರಿಗಳಲ್ಲಿ ಆಸ್ತಿಪಾಸ್ತಿಯನ್ನು ಹಂಚುವ ವಿವರಗಳಿಗೆ ಸಂಬಂಧಿಸಿದ ೧೦ನೇ ಸೂತ್ರದ ಚರ್ಚೆಯ ಕಾಲದಲ್ಲಿ ಮಗಳಿಗೆ ಸಲ್ಲುವ ಪಾಲನ್ನು ಮಗನದರ ಅರ್ಧಕ್ಕೆ ಇಳಿಸುವ ನಿರರ್ಥಕ ಪ್ರಯತ್ನವೊಂದು ಮಸೂದೆಯ ವಿರೋಧಕರ ಕಡೆಯಿಂದ ನಡೆಯಿತು. ಇದನ್ನು ಬೇರೆ ಕೆಲವು ಸದಸ್ಯರು ಪ್ರತಿಭಟಿಸಿದರು. ೬ನೇ ಸೂತ್ರಕ್ಕೆ ತಿದ್ದುಪಡಿಯನ್ನು ಅಂಗೀಕರಿಸುವ ಮೂಲಕ ಈಗಾಗಲೇ ಮಿತಾಕ್ಷರ ಪದ್ಧತಿಯ ಆಸ್ತಿಪಾಸ್ತಿಯಲ್ಲಿ ಮಗಳ ಪಾಲನ್ನು ಶೂನ್ಯಕ್ಕೆ ಹತ್ತಿರ ತರಲಾಗಿದೆ; ಈಗ ಮಗನ ಪಾಲಿನ ಅರ್ಧದಷ್ಟೆ ಮಗಳಿಗೆ ಸಿಗಬೇಕೆಂದು ಹೇಳಿದರೆ ಮಸೂದೆಯ ಉದ್ದೇಶ ಸಂಪೂರ್ಣವಾಗಿ ಕೆಡುತ್ತದೆ ಎಂದಿವರು ವಾದಿಸಿದರು. ಮಂತ್ರಿಗಳು ಮಗಳ ಪಾಲನ್ನು ಅರೆವಾಸಿಗಿಳಿಸಬೇಕೆಂದು ಪ್ರಯತ್ನಿಸಿದ ಸದಸ್ಯರ ನಿಲುಮೆಗೆ ಆಶ್ಚರ್ಯವನ್ನೂ ವಿಷಾದವನ್ನೂ ಸೂಚಿಸಿದರು. ಇದೇ ಮಸೂದೆಯ ಹಿನ್ನೆಲೆಯಲ್ಲಿ ವಿಚಾರಿಸಿ ಮಗಳ ಪಾಲನ್ನು ಮಗನದರ ಅರೆವಾಸಿಗಿಳಿಸುವುದು ಸೂಕ್ತವೇ ಎಂದು ಸಭೆ ತೀರ್ಮಾನಿಸಲಿ ಎಂದರು. ಸಭೆಯು ಮಗಳ ಪಾಲನ್ನು ಇಳಿಸಬೇಕೆಂಬ ವಿರೋಧಕರ ತಿದ್ದುಪಡಿಯನ್ನು ನಿರಾಕರಿಸಿತು.

ಆದರೆ ಪ್ರಥಮ ಶ್ರೇಣಿಯ ಉತ್ತರಾಧಿಕಾರಿಗಳಲ್ಲಿ ತಾಯಿಯನ್ನು ಸೇರಿಸಬೇಕೆಂದು ಕಾಂಗ್ರೆಸಿನ ಶ್ರೀ ಬರ್ಮನ್ನರು ತಂದ ತಿದ್ದುಪಡಿಯನ್ನು ಲೋಕ

ಸಭೆ ಅನುಮೋದಿಸಿತು. ಮರುಮಕ್ಕತ್ತಾಯಂ ಮತ್ತು ಅಳಿಯ ಸಂತಾನ ಪದ್ಧತಿಗಳಲ್ಲಿ ತಾಯಿಗೆ ವಿಶೇಷ ಸ್ಥಾನಮಾನವಿದೆಯೆಂದೂ ಆ ದೃಷ್ಟಿಯಿಂದ ಉಳಿದ ಹಿಂದು ವರ್ಗಗಳಲ್ಲಿಯೂ ತಾಯಿಯ ಪ್ರಾಮುಖ್ಯತೆಯನ್ನು ಹೆಚ್ಚಿಸಲು ಈ ತಿದ್ದುಪಡಿ ಸಹಾಯಕವಾಗುವುದೆಂದೂ ಹೇಳಲಾಯಿತು. ಪ್ರಧಾನಿ ನೆಹರುಗಳು ಈ ಸೂಚನೆಯನ್ನು ಸಮರ್ಥಿಸಿ ಭಾಷಣವಿತ್ತರು. "ತಂದೆಯನ್ನು ಸಹ ತಾಯಿಯ ಸಾಲಿಗೆಯೇ ಯಾಕೆ ತರಬಾರದು—ಆತನನ್ನು ದ್ವಿತೀಯ ಶ್ರೇಣಿಯ ಉತ್ತರಾಧಿಕಾರಿ ಸ್ಥಾನದಲ್ಲಿಯೇ ಏಕಿಡಬೇಕೆಂಬ ಪ್ರಶ್ನೆ ಇಲ್ಲಿ ಬರಬಹುದು; ಮತ್ತು ತಾಯಿಯ ಸ್ಥಾನಮಾನವನ್ನು ಎತ್ತಲು ಮುಂದಿಟ್ಟಷ್ಟೇ ಶಕ್ತಿಯುತವಾದ ವಾದವನ್ನು ಈ ಮಟ್ಟಿಗೂ ಮಾಡಬಹುದು ಆದರೆ ತಂದೆಯ ಸ್ಥಾನಮಾನವನ್ನು ದ್ವಿತೀಯ ಶ್ರೇಣಿಯಲ್ಲಿಡುವುದೇ ವಿಹಿತವೆಂದು ನನಗೆ ತೋರುತ್ತದೆ" ಎಂದರು ನೆಹರು. ಇದಕ್ಕೆ ಸಭೆ ಒಪ್ಪಿತು.

ತನ್ನಿಂದ ಸಂಪಾದಿತವಾದ ಯಾವುದೇ ಆಸ್ತಿಪಾಸ್ತಿಯ ಮೇಲೆ ಮಹಿಳೆಗೆ ಸಂಪೂರ್ಣಾಧಿಕಾರವಿರುವುದೇ ಹೊರತು ಇಷ್ಟರವರೆಗೆ ಇದ್ದಂತೆ ಪರಿಮಿತಾಧಿಕಾರವಲ್ಲವೆಂಬ ೧೬ನೇ ಸೂತ್ರದಲ್ಲಿ ಬದಲಾವಣೆಗಳಾಗಬೇಕೆಂದು ಕೆಲವು ಸದಸ್ಯರು ಹೇಳಿದರು. ಚರ್ಚೆಯ ಬಳಿಕ "ಇನಾಮು, ಮರಣಶಾಸನ, ನ್ಯಾಯಸ್ಥಾನದ ಆದೇಶ ಮತ್ತಿತರ ಶಾಸನಬದ್ಧ ಕರಾರುಗಳ ಪರಿಣಾಮವಾಗಿ ಪರಿಮಿತ ಅಧಿಕಾರವನ್ನಷ್ಟೇ ನೀಡುವ ಆಸ್ತಿ ಪಾಸ್ತಿಗಳಿಗೆ ಈ ಸೂತ್ರದ ಮುಖ್ಯಾಂಶವು ಅನ್ವಯವಾಗತಕ್ಕದ್ದಲ್ಲ" ಎಂಬ ತಿದ್ದುಪಡಿಯನ್ನು ಮಂತ್ರಿಗಳ ಒಪ್ಪಿಗೆಯಂತೆ ಸ್ವೀಕರಿಸಲಾಯಿತು.

ಹಿಂದು ಮಹಿಳೆಯೊಬ್ಬಳು ಮರಣಶಾಸನದ ಮುಂಚೆ ಮೃತ್ಯುವಶಳಾದರೆ ಆಕೆಯ ಆಸ್ತಿಪಾಸ್ತಿಯು ಉತ್ತರಾಧಿಕಾರಿಗೆ ಯಾವಕ್ರಮದಲ್ಲಿ ಹಂಚಿಹೋಗಬೇಕೆಂದು ಹೇಳುವ ೧೭ನೇ ಸೂತ್ರಕ್ಕೆ ತಿದ್ದುಪಡಿಮಾಡಲು ಸಭೆ ಒಪ್ಪಿತು. ಇದರ ಪ್ರಕಾರ ಇಂಥ ಆಸ್ತಿಪಾಸ್ತಿಯು (೧) ಮೊದಲಿಗೆ ಮೃತಳ ಗಂಡು ಗಂಡು ಮತ್ತು ಹೆಣ್ಣು ಮಕ್ಕಳು, ಮತ್ತು ಈ ಮೊದಲೇ ಮರಣ ಹೊಂದಿರಬಹುದಾದ ಗಂಡು ಮತ್ತು ಹೆಣ್ಣು ಮಕ್ಕಳ ಮಕ್ಕಳು, (೨) ಎರಡನೇಯದಾಗಿ ಗಂಡನ ಉತ್ತರಾಧಿಕಾರಿಗಳು (೩) ಮೂರನೇದಾಗಿ ತಂದೆ ಮತ್ತು ತಾಯಂದಿರು, (೪) ನಾಲ್ಕನೇದಾಗಿ ತಂದೆಯ ಉತ್ತರಾಧಿಕಾರಿಗಳು, ಮತ್ತು (೫) ಕೊನೆಯದಾಗಿ, ತಾಯಿಯ ಉತ್ತರಾಧಿಕಾರಿಗಳು—ಇವರ ಪಾಲಿಗೆ ಹೋಗುತ್ತದೆ. (ಈ ಸೂತ್ರದ ಆಶಯವು ಸ್ವತಂತ್ರವಾಗಿಲ್ಲ—೧೬ (೨) ಎಂಬ ಇನ್ನೊಂದು ಉಪಸೂತ್ರದ ವಿಶೇಷ ವ್ಯಾಪ್ತಿಗೊಳಪಟ್ಟಿದೆ ಎಂಬುದನ್ನಿಲ್ಲಿ ಮರೆಯಲಾಗದು. ಇದರಲ್ಲಿ ತಿದ್ದುಪಡಿಯಾಗಿಲ್ಲ.)

ಉತ್ತರಾಧಿಕಾರ ಹೊಂದಿದ ಮಹಿಳೆಗೆ ಕುಟುಂಬದ ಮನೆಯಲ್ಲಿ ಪಾಲನ್ನು ಕೇಳುವ ಅಧಿಕಾರವಿಲ್ಲವೆಂಬ ೨೩ನೇ ಸೂತ್ರದ ಮೇಲೆ ಹೆಚ್ಚಿನ ಟೀಕೆಯು ಕೇಳಬಂತು; ಆ ಮನೆಯಲ್ಲಿ ವಾಸಿಸುವ ಮಟ್ಟಿಗೆ ಮಹಿಳೆಯರನ್ನು ಅರ್ಹರಾಗಿ ಮಾಡುವ ಪರಿಸ್ಥಿತಿಗಳನ್ನು ವಿಸ್ತರಿಸಬೇಕೆಂದೂ ಹಲವರು ವಿನಂತಿಸಿದರು. ಮಧ್ಯಮವರ್ಗದ ಕುಟುಂಬಗಳಲ್ಲಿ ಹೆಚ್ಚಿನವರಿಗೆ ವಾಸದ ಮನೆಯೊಂದೇ ಇರುವ ಆಸ್ತಿಯಾಗಿದೆ—ಆದುದರಿಂದ ಈ ಮನೆಯ ಮೇಲೆ ಹೆಣ್ಣುಮಕ್ಕಳಿಗೆ ಅಧಿಕಾರಬರುವ ಸಂದರ್ಭಗಳು ಆದಷ್ಟು ಹೆಚ್ಚಾಗಿರಬೇಕೆಂದು ಶ್ರೀಮತಿ ರೇಣು ಚಕ್ರವರ್ತಿ ಹೇಳಿದರು. ಶ್ರೀ ಸಿ. ಸಿ. ಶಹಾರು ಈ ಸೂಚನೆಯನ್ನು ಒಪ್ಪಲಿಲ್ಲ. ಗಂಡು ಮಕ್ಕಳೆಲ್ಲ ಒಟ್ಟಿಗಿರಲು ಇಷ್ಟಪಟ್ಟಿರುವಾಗ ಮಗಳು ತನ್ನ ಅಧಿಕಾರ ಚಲಾಯಿಸಲು ಬಂದರೆ, ಗಂಡು ಮಕ್ಕಳೆಲ್ಲ ಒಟ್ಟು ಸೇರಿ ಮನೆಯನ್ನು ಮಾರಿಬಿಡುವ ಪ್ರಸಂಗ ಬಂದೀತೆಂದು ಅವರು ಎಚ್ಚರಿಸಿದರು.

ಮಂತ್ರಿಗಳು ಉತ್ತರ ಕೊಡುತ್ತಾ ಮಗಳಾದವಳು ತನ್ನ ಗಂಡ ಮತ್ತವನ ಸಕಲ ಪರಿವಾರದೊಡನೆ ತಂದೆಯ ಮನೆಯಲ್ಲಿ ತಳವೂರುವುದನ್ನು ತಪ್ಪಿಸಲಿಕ್ಕಾಗಿ ಈ ಮಿತಿಯನ್ನು ಹಾಕುವುದು ಅವಶ್ಯವಾಯಿತೆಂದು ತಿಳಿಸಿದರು. ವಿಧವೆಯರ ಸಂಗತಿಯಲ್ಲಿ ಗಂಡನು ಸ್ವಂತ ಮನೆಯನ್ನು ಬಿಟ್ಟು ಹೋಗಿದ್ದರೂ ಆಕೆಯು ತಂದೆಯ (ಕುಟುಂಬದ) ಮನೆಯಲ್ಲಿ ಅಧಿಕಾರ ಪಡೆದಿರುವಳೆಂಬ ತಿದ್ದುಪಡಿ ಮಾಡಲು ಅವರು ಒಪ್ಪಿದರು. ಇದು ಅಂಗೀಕಾರವಾಯಿತು. ಆದರೆ ಗಂಡನಿಂದ ಪ್ರತ್ಯೇಕಗೊಂಡ ಮಗಳಿಗೂ ಕುಟುಂಬದ ಮನೆಯಲ್ಲಿ ಅಧಿಕಾರವಿದೆ ಎನ್ನುವ ತಿದ್ದುಪಡಿಯನ್ನು ಸ್ವೀಕರಿಸಲು ಅವರು ನಿರಾಕರಿಸಿದರು—ಸಭೆಯಲ್ಲಿ ಆಗ ಎದ್ದಿದ್ದ ಗೊಂದಲದ ವಾತಾವರಣವಿಟ್ಟು ಗಡಿಬಿಡಿಯ ಮತದಾನದಲ್ಲಿ ಮಂತ್ರಿಗಳು ತಮ್ಮ ವಿರೋಧವನ್ನು ಪ್ರಕಟಿಸುವುದಕ್ಕೆ ಮೊದಲೇ ಈ ತಿದ್ದುಪಡಿ ಸ್ವೀಕಾರವಾಗಿ ಹೋದುದರಿಂದ ಮಂತ್ರಿಗಳೂ ಪ್ರಧಾನ ಮಂತ್ರಿಗಳೂ ಸಭಾಧ್ಯಕ್ಷರ ಹೇಳಿಕೆಯಂತೆ ಸಂವರ್ತಿತ ಪರಿಸ್ಥಿತಿಗೆ ಬದ್ಧರಿರಲು ಒಪ್ಪಿದರು.

ಮಸೂದೆಯ ೩೨ನೇ ಸೂತ್ರದ ಮೇಲೆಯೂ ತುಸು ಚರ್ಚೆ ನಡೆದು ಕೆಲವು ತಿದ್ದುಪಡಿಗಳನ್ನು ಸೂಚಿಸಲಾಯಿತು. ಯಾವನೇ ಹಿಂದುವು ಮರಣಶಾಸನ ಅಥವಾ ಇತರ ರೀತಿಯಿಂದ ತನ್ನ ಆಸ್ತಿಪಾಸ್ತಿಯ ಮೂರರ ಒಂದಂಶಕ್ಕಿಂತ ಹೆಚ್ಚಿನದನ್ನು ಪರಾಧೀನಗೊಳಿಸಲಾಗದೆಂದು ಒಬ್ಬರು ಸೂಚನೆ ಮಂಡಿಸಿದರೆ, ಇನ್ನೊಬ್ಬರು ಹೆಂಡತಿ ಮತ್ತು ಮಕ್ಕಳಿಗಲ್ಲದೆ ಇತರರ ಹೆಸರಿಗೆ ಆಸ್ತಿಪಾಸ್ತಿಯ ಅರೆವಾಸಿಗಿಂತ ಹೆಚ್ಚಿನದನ್ನು ಯಾವನೇ ಹಿಂದುವು ಬರೆದು ಹಾಕಬಾರದು ಎಂದು ಸಲಹೆ ನೀಡಿದರು. ಮಂತ್ರಿಗಳು ಈ ತಿದ್ದುಪಡಿಗಳನ್ನು ವಿರೋಧಿಸಿದರು. ಆದರೆ ಮಸೂದೆಯ ಅನುಬಂಧದಲ್ಲಿ ಹೇಳಲಾದ ಪ್ರಥಮ ಶ್ರೇಣಿಯ ಉತ್ತರಾಧಿಕಾರಿಗಳ ಉದರ ನಿರ್ವಹಣೆಗೆ ಮರಣ ಶಾಸನ ಅಥವಾ ಬೇರಾವುದೇ ಬಗೆಯಿಂದ ಆಸ್ತಿಪಾಸ್ತಿಯನ್ನು ಪರಾಧೀನ ಪಡಿಸುದಕ್ಕೆ ಇರುವ ಅಧಿಕಾರವು ಬಾಧಕವನ್ನು ತರಲಾಗದೆಂದು ಹೇಳುವ ತಿದ್ದುಪಡಿಯನ್ನು ಸಭೆಯು ಸ್ವೀಕರಿಸುವಂತೆ ಮಾಡಿದರು.

ಉಡುಪಿ

ನಗರ ಸಭೆಯು— ತಾ 11ರಲ್ಲು ಸಂಜೆ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಡಾ. ಸಿ. ಜಿ. ಆಚಾರ್ಯರ ಸವಾಲುಗಳಿಗೆ ಲಿಖಿತಉತ್ತರ ನೀಡಲಾಯಿತು. ಭಾರತ ಸೇವಕ ಸಮಾಜದ ಕಡೆಯಿಂದ ಕಟ್ಟಿಸಲಾಗುವ ಅಜ್ಜರಕಾಡು ನಾಟಕಾಲಯ ಕಟ್ಟೋಣ ನಿರ್ಮಾಣದ ಸಲುವಾಗಿ ಲ್ಯಾಸನ್ನು ಮಾಫಿ ಬಿಡಬಹುದೆಂದಾಯಿತು. ಮುನಿಸಿಪಲ್ ಹಾ. ಎ. ಶಾಲಾ ಕಟ್ಟಡ ರಿಪೇರಿಬಗ್ಗೆ ರೂಪಾ 1400 ವೆಚ್ಚಮಾಡುವ ಕುರಿತು ಚರ್ಚೆ ನಡೆದು ಕೊನೆಗೆ ಅದನ್ನು ಬಾಕಿಇಡಲಾಯಿತು. ಮುನಿಸಿಪಲ್ ಕ್ಷೇತ್ರದಲ್ಲಿಯ ರಸ್ತೆ, ಆರೋಗ್ಯ ಇತ್ಯಾದಿ ಸೌಕರ್ಯಗಳ ಸುಧಾರಣೆ ಕುರಿತು ಸಲಹೆ ಕೊಡಲು ಶ್ರೀಗಳಾದ ಬಿ. ವಾಸುದೇವ ರಾವ್, ಸಿ. ವಿ. ಆಚಾರ್ಯ, ಪಿ. ಮೈಕಲ್, ಇಮಾಮ್ ಸಾಹೇಬ್, ಕೆ. ಕೆ. ಪೈ ಮತ್ತು ಶ್ರೀಮತಿ ಎಲ್. ಎಮ್. ಫೆರ್ನಾಂಡಿಸರಿರುವ ಕಮಿಟಿ ರಚಿಸಲಾಯಿತು. ಈ ಕಮಿಟಿಯ ವರದಿಯನ್ನು ದ. ಕ. ಜಿಲ್ಲೆಯ ದ್ವಿತೀಯ ಪಂಚವಾರ್ಷಿಕ ಯೋಜನೆಗೆ ಸೇರಿಸುವುದೆಂದಾಯಿತು.

ಸ್ಥಳಾಭಾವದಿಂದ ಹೆಚ್ಚಿನ ಜಿಲ್ಲಾ ಸಮಾಚಾರವನ್ನು ಪ್ರಕಟಿಸಲಾಗದುದಕ್ಕಾಗಿ ವಿಷಾದಿಸುತ್ತೇವೆ. ಸಂ| ಸ.

ನೋಟೀಸ್

ಕುಂದಾಪುರ ತಾಲ್ಲೂಕು ಆಲಬಾಡಿ ಗ್ರಾಮದಲ್ಲಿರುವ ಹೆಬ್ಬಾಡಿ ಮನೆ ಸೂರಮ್ಮ ಶೆಡ್ತಿ ಮಗಳು ಚಿಕ್ಕ ಯಾನೆ ರುಕ್ಮಿಣಿ ಶೆಡ್ತಿಯು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದ್ರೆ—

ನಾನು ವ ನನ್ನ ಮೈನರ್ ಮಕ್ಕಳು, ನನ್ನ ತಾಯಿ ಸೂರಮ್ಮ ಶೆಡ್ತಿ ನನ್ನ ಅಣ್ಣ ಬಡಿಯ ಶೆಟ್ಟಿ ನನ್ನ ತಮ್ಮಂದಿರು ರಾಮಣ್ಣ ಶೆಟ್ಟಿ, ನರಸಿಂಹ ಶೆಟ್ಟಿ, ನನ್ನ ತಂಗಿ ನಾಗಮ್ಮ ಶೆಡ್ತಿ ವ ಅವಳ ಮೈನರ್ ಮಕ್ಕಳು ಕೂಡಾ ಅಳಿಯ ಕಟ್ಟು ಆಚರಿಸುವದೆಂದು ಅವಿಭಕ್ತ ಕುಟುಂಬದ ಮೆಂಬರರಾಗಿದ್ದು ನಮ್ಮ ಕುಟುಂಬಕ್ಕೆ ನನ್ನ ಅಜ್ಜಿ ತುಂಗಮ್ಮ ಶೆಡ್ತಿಯು ತಾ. 12-5-1934ರಲ್ಲು ರಿಜಿಸ್ಟ್ರು ಸಿರಿ ಬರ್‍ಸಿ ಕೊಟ್ಟ ವ್ಯವಸ್ಥಾ ಪತ್ರ ಪ್ರಕಾರ ಬಂದ ಸ್ಥಿರಾಸ್ತಿ ಕಟ್ಟಡಗಳು ಚರಸೊತ್ತು ವಗೈರೆ ಇರುತ್ತದೆ. ಸದ್ರಿ ಆಸ್ತಿ ಉತ್ಪತ್ತಿಯೂ ನಮ್ಮ ಕುಟುಂಬದ ಜೀವನಕ್ಕೆ ಸಾಕಷ್ಟು ಇದೆ. ನಮ್ಮ ಕುಟುಂಬಕ್ಕೆ ಇದ್ದ ಸಾಲವು ನನ್ನ ತಾಯಿ ಸೂರಮ್ಮ ಶೆಡ್ತಿಯು ನನ್ನ ಗಂಡ ಸೂರ್ಯಣ್ಣ ಶೆಟ್ರಿಗೆ 12-5-1954ರಲ್ಲು ರಿಜಿಸ್ಟ್ರು ಸಿರಿ ಮುನಿಗುತ್ತಾ ಕಾಲಾವಕ್ತಾವೇಜನು ಬರಕೊಟ್ಟು ಸಂದಾಯವಾಗಿರುವಲ್ಲಿ ನಮ್ಮ ಕುಟುಂಬಕ್ಕೆ ಬೇರೆಯಷ್ಟನ್ನಾದ್ರೂ ಸಾಲ ಇರುವುದಿಲ್ಲ. ನಮ್ಮ ಕುಟುಂಬಕ್ಕೆ ಎಷ್ಟನ್ನಾದ್ರೂ ಸಾಲ ಮಾಡುವ ಗರ್ಜಿನ ಆಗತ್ಯತೆ ಕೂಡಾ ಇರುವುದಿಲ್ಲ. ಹೀಗಿರುವಲ್ಲಿ ನನ್ನ ತಾಯಿ ವ ಸಹೋದರರು ಮತ್ತು ಸಹೋದರಿ ಕೂಡಾ ಕಳೆದ ಡಿಸಂಬರ ತಿಂಗಳ ಲಾಗಾಯ್ತು ನನಗೆ ವಿಮುಖರಾಗಿದ್ದು ನನ್ನ ಮೇಲೆ ದ್ವೇಷ ಸಾಧಿಸುತ್ತಾ ಬಂದು ನನಗೂ, ನನ್ನ ಮಕ್ಕಳಿಗೂ ಕುಟುಂಬದ ಮನೆಯಲ್ಲಿ ಜೀವನ ನಡಿಸದೆ ಇದ್ದ ನಿಮಿತ್ತ ಕಳೆದ ಡಿಸಂಬರ ತಿಂಗಳ ಲಾಗಾಯ್ತು ನಾನು ವ ನನ್ನ ಮೈನರ್ ಮಕ್ಕಳು ಪ್ರತ್ಯೇಕ ನಮ್ಮ ಖರ್ಚಿನಿಂದ ಜೀವನ ನಡ್ಸಿಕೊಂಡು ಬಂದಿರುತ್ತೇವೆ. ನಾನು ವ ನನ್ನ ಮಕ್ಕಳ ಬಗ್ಗೆ ಖರ್ಚಿ ವ ಅದನಾರ್ತ ಕೇಳುವಂಥಾದ್ದು ಅಲ್ಪಾದ ಇರುತ್ತದೆ. ಹೀಗಿರುವಲ್ಲಿ ನನಗೆ ವಿಮುಖರಾಗಿರುವ ನನ್ನ ತಾಯಿ ವಗೈರೆಯವರು ನನಗೂ ವ ನನ್ನ ಮಕ್ಕಳಿಗೂ ನಷ್ಟಕ್ಕೆ ಗುರಿಪಡಿಸಿ ತಾವು ಅಕ್ರಮ ಲಾಭ ಹೊಂದುವ ದುರಾಲೋಚನೆಯಿಂದ ನಮ್ಮ ಕುಟುಂಬಕ್ಕೆ ಸಾಲವುಂಟೆಂತ ತೋರಿಸುವ ಬಗ್ಗೆ ಸುಳ್ಳು ವ ಕಲ್ಪನಾ ರಿಕಾರ್ಡು ಮಾಡುವ ಕೆಟ್ಟ ಇರಾದೆಯುಳ್ಳವರಾಗಿ ನನಗೆ ಪರಸ್ಪರ ವರ್ತಮಾನವಿದೆ. ಅಂತಹ ರಿಕಾರ್ಡು ಮಾಡಿದ್ದಲ್ಲಿ ನನ್ನ ವ ನನ್ನ ಮಕ್ಕಳಿಗೆ ನ್ಯಾಯವಾಗಿದ್ದ ಹಕ್ಕಿಗೆ ಬಾಧಿಸತಕ್ಕದ್ದಲ್ಲ. ವ ಸದ್ರಿ ಕಲ್ಪನೆ ಸಾಲಗಳು ನನ್ನ ವ ನನ್ನ ಮಕ್ಕಳ ಮೇಲೆ ಹೊಣೆಯಾಗತಕ್ಕದ್ದಲ್ಲ.

|| ಈ ಎರಡು ಗೆರೆ ಚಿಕ್ಕ ಯಾನೆ ರುಕ್ಮಿಣಿ ಶೆಡ್ತಿ ರುಜು.

ಆಲ್ಬಾಡಿ, ತಾ. 15-5-1956.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED

H. Office: UDIPI (S.India).

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ. ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

Applications are invited for the post of a Manager in The Coondapoor Co-operative Town Bank Ltd. so as to reach the undersigned before 31—5—56 The qualification required is S. S. L. C. with Co-operative training or B. Com. with Co-operation as special subject. The starting salary will be Rs. 50/-, plus dearness allowance etc. Rs. 25/. The selected candidate shall be required to furnish security.

H. Laxminarayanayya,
Hon. Secretary,
The Coondapoor Co-operative Town Bank Ltd., Coondapoor.
Date 10—5—56.

ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಸತ್ಕಾರಕೂಟ— ಈಚೆಗೆ ಅಮೇರಿಕಾದಿಂದ ಹೆಚ್ಚಿನ ಶಿಕ್ಷಣಪಡೆದು ಸ್ವದೇಶಕ್ಕೆ ಹಿಂತೆರಳಿದ ಶ್ರೀ ಶ್ರೀನಿವಾಸ ವಿ. ಕುದ್ವರಿಗೆ ಸ್ವಾಗತವೀಯಲು ತಾ. 12ರಲ್ಲಿ ಸಿ. ಪಿ. ಸಿ. ಮುಸ್ತಿಕರ ಸಂಬಂಧಪಟ್ಟ ಸಂಸ್ಥೆಗಳ ಸಿಬಂಧಿಯವರು ಸತ್ಕಾರಕೂಟವನ್ನೇರ್ಪಡಿಸಿದರು. ಶ್ರೀ ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಮ್. ದೇವದಾಸ ಕುದ್ವರು ಮುಖ್ಯ ಅತಿಥಿಗೆ ಮಾನಪತ್ರವನ್ನಿತ್ತರು.

ಭಾಷಣ— ತಾ. 13ರಲ್ಲಿ ಸಂಜೆ ಕಥೋಲಿಕ್ ಕ್ಲಬ್ಬಿನಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಆನೆಕಾಲು ರೋಗ ನಿಯಂತ್ರಣಾಧಿಕಾರಿ ಡಾ| ಎಚ್. ಸುಬ್ರಹ್ಮಣ್ಯಂರವರು ದಕ್ಷಿಣ ಕನ್ನಡದ ಮಂಗಳೂರು ನಗರ ಮತ್ತು ಮದರಾಸು ಹಾಗೂ ತಿರುಕೊಚ್ಚಿ ರಾಜ್ಯದ ಕೆಲವು ಪಟ್ಟಣಗಳಲ್ಲಿ ಕಂಡುಬರುತ್ತಿರುವ ಆನೆಕಾಲು ರೋಗ, ಅದರ ಹಬ್ಬುವಿಕೆ ಮತ್ತದನ್ನು ಕಟ್ಟುಮಟ್ಟಿಗೆ ತಡೆಗಟ್ಟುವ ವಿಧಾನಗಳ ಕುರಿತು ಮಾತನಾಡಿದರು. ಜಿಲ್ಲಾ ವೈದ್ಯಾಧಿಕಾರಿ ಡಾ| ಮಾರುತಿರಾಯರು ಸಭಾಧ್ಯಕ್ಷತೆ ವಹಿಸಿದ್ದರು. ಜಿ. ಸೋಮಶೇಖರ ರಾಯರು ಸ್ವಾಗತ ಭಾಷಣಮಾಡಿದರು. ಡಾ| ಎಫ್. ಕೊಯಿಲೋರವರು ಕುಷ್ಠರೋಗದ ಕುರಿತು ಮಾತನಾಡಿದರು. ಮಿ| ಎಡ್ವರ್ಡ್ ಸಾಲ್ಡಾನರು ಧನ್ಯವಾದಗಳನ್ನಿತ್ತರು.

(೫ನೇ ಪುಟದಿಂದ)

ದೋಷಗಳಿರಬಹುದಾದರೂ — ಅದನ್ನು ಆದರ್ಶ ಶಾಸನವಾಗಿ ಭಾವಿಸುವಂತಿಲ್ಲವೆಂದೇ ಇಟ್ಟುಕೊಂಡರೂ— ನಮ್ಮ ವಿಚಾರಧಾರೆಯ ಮುಖವನ್ನಿದು ಬದಲಾಯಿಸಿದೆ; ಜಡತೆಯನ್ನು ದೂರೀಕರಿಸಿದೆ ಎಂದು ನುಡಿದರು. "ರಾಜಕೀಯ ಹಾಗು ಆರ್ಥಿಕ ಕ್ರಾಂತಿಗಳಲ್ಲದೆ ನಾವು ಸಾಮಾಜಿಕ ಕ್ರಾಂತಿಯನ್ನು ಕೂಡ ಸಾಧಿಸಬೇಕಾಗಿದೆ; ಇವು ಮೂರೂ ಒಟ್ಟಿಗೆ ನಡೆದರೆ ಮಾತ್ರ ಭಾರತವು ತನ್ನ ಪರಂಪರೆಯನ್ನು ಉಳಿಸಿಕೊಂಡು ಭವಿಷ್ಯತ್ತನ್ನು ಭವ್ಯಗೊಳಿಸಬಲ್ಲುದು" ಎಂದು ನೆಹರು ಸಾರಿದರು. ಮಾಜಿ ಕಾಂಗ್ರೆಸಾಧ್ಯಕ್ಷ ಶ್ರೀ ಟಂಡನ್ನರು ವ್ಯಕ್ತಪಡಿಸಿದ ವಿರೋಧವನ್ನು ಪ್ರಸ್ತಾಪಿಸುತ್ತಾ ನೆಹರುಗಳು "ಹಿಂದೆ ಶ್ರೀ ಟಂಡನ್ನರು ಭಾರತಕ್ಕೆ ರೈಲ್ವೆಗಳು ಬಂದಿರುವುದಕ್ಕೆ ಅಸಂತೋಷವನ್ನು ವ್ಯಕ್ತಪಡಿಸಿದ್ದರೆಂದು ಕೇಳಿದ್ದೇನೆ; ಆದರೆ ಈಗ ನಮಗೆಲ್ಲರಿಗೂ ರೈಲ್ವೆಗಳು ಬಂದುದರಿಂದ ಲಾಭವಾಯಿತೇ ಹಾನಿಯಾಯಿತೇ ಎಂಬುದು ಚೆನ್ನಾಗಿ ತಿಳಿದಿದೆ—ನಾವೆಲ್ಲರೂ ವಿಮಾನ ಮೂಲಕ ಪ್ರಯಾಣಿಸುವುದಾಗದಿದ್ದರೆ ರೈಲನ್ನೆ ಆಶ್ರಯಿಸುತ್ತಿದ್ದೇವೆ!" ಎಂದರು. ನಾವು ಸಮಾಜದ ಅಸ್ತಿತ್ವಕ್ಕೆ ಭಂಗ ತರಲು ಇಚ್ಛಿಸುವುದಿಲ್ಲ— ಅದರೊಡನೆ ಹೊಂದಿಕೊಂಡು ಹೋಗುವ ಬಗೆಯನ್ನಷ್ಟೆ ಚಿಂತಿಸುತ್ತಿದ್ದೇವೆ ಎಂದೂ ನೆಹರು ಹೇಳಿದರು.

[ಮಸೂದೆಯ ಬೇರೆ ಬೇರೆ ಸೂತ್ರಗಳ ಪರಿಶೀಲನೆ ಮತ್ತು ನಿರ್ಣಯಗಳ ವಿವರಕ್ಕೆ ಮಧ್ಯ ಪುಟವನ್ನು ನೋಡಿರಿ.]

ರೂ. 1000ದ ವರೆಗೆ ಸಾಲವು

ಯಾವ ಜಾಮೀನು, ಆಸ್ತಿ, ಆಡವು ಇಲ್ಲದೇ ಬರೇ ನಿಮ್ಮ ದಸ್ತಕತಿನ ಮೇಲೆ ಕೊಡಲಾಗುವುದು. ನಮಗೆ ಮೇಲ್ಪಟ್ಟ ಅರ್ಜಿದಾರರು ಈಗಾಗಲೇ ಸೌಕರ್ಯಗಳನ್ನು ಪಡೆದಿರುತ್ತಾರೆ. ಹೆಚ್ಚಿನ ವಿವರಗಳಿಗೆ ಇಂಗ್ಲೀಷಿನಲ್ಲಿ ಬರೆಯಿರಿ.

Bombay Mercantile Co.,
Bombay-23.

ದ. ಕ. ಬಿಲ್ಲವ ಯೂನಿಯನ್ - ಆಡಳಿತ ಸಭೆಯು ತಾ 6ರಲ್ಲಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಜರಗಿ, ಶ್ರೀಗಳಾದ ಬಿ. ಆರ್. ಕರ್ಕೇರ (ಅಧ್ಯಕ್ಷ), ಬಿ. ಮೋನಪ್ಪ (ಉಪಾಧ್ಯಕ್ಷ) ಎ. ತಿಮ್ಮಪ್ಪ (ಕಾರ್ಯದರ್ಶಿ), ಕೆ. ಕೃಷ್ಣಪ್ಪ (ಸಹಾಯಕ ಕಾರ್ಯದರ್ಶಿ), ಎಚ್. ಟಿ. ಪಂಡಿತ್ (ಕೋಶಾಧಿಕಾರಿ) ಗಳಾಗಿ ಆರಿಸಲ್ಪಟ್ಟರು.

ಜಿಲ್ಲಾ ನೋನ್ ಗಜೆಟೆಡ್ ಸರಕಾರಿ ನೌಕರರ ಸಂಘದ— ವಿಶೇಷ ಮಹಾ ಸಭೆಯು ತಾ 7ರಲ್ಲಿ ಉಪಾಧ್ಯಕ್ಷ ಶ್ರೀ ಎಲ್. ಮಸ್ಕರೇಂಞಾಸರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಮತ್ತು ಪ್ರಾಂತೀಯ ಸರಕಾರಗಳ ನೋನ್‌ಗಜೆಟೆಡ್ ನೌಕರರ ವೇತನಗಳಲ್ಲಿರುವ ತಾರತಮ್ಯಗಳನ್ನು ಹೋಗಲಾಡಿಸುವಂತೆ ಕೇಂದ್ರ ಸರಕಾರದವರು ಸೂಕ್ತ ಕಾರ್ಯಕ್ರಮ ಕೈಕೊಳ್ಳಬೇಕೆಂದು ಕೇಂದ್ರ ಸರಕಾರವನ್ನು ವಿನಂತಿಸುವ ಗೊತ್ತುವಳಿಯಾಯಿತು. ಹೊಸ ಮೈಸೂರು ರಾಜ್ಯ ರಚನೆಯ ಬಳಿಕ ಸರಕಾರೀ ನೌಕರರ ಪರಿಸ್ಥಿತಿಯ ಕುರಿತಾದ ಮನವಿಯೊಂದನ್ನು ಸಂಬಂಧಪಟ್ಟವರಿಗೆ ಕಳುಹಿಸಿಕೊಡಲು ಕಾರ್ಯನಿರ್ವಾಹಕ ಮಂಡಳಿಗೆ ಅಧಿಕಾರವೀಯಲಾಯಿತು.

ದುಃಖಸೂಚಕ ಸಭೆ— ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ ಹಾಗೂ ಯೂತ್ ಕಾಂಗ್ರೆಸಿನ ಅವಸರದ ಸಭೆಯೊಂದು ತಾ. 10ರಲ್ಲಿ ಶ್ರೀ ಎಚ್. ಕೆ. ತಿಂಗಳಾಯರ ಅಧ್ಯಕ್ಷತೆಯಲ್ಲಿ ಜರಗಿ, ನಿಷ್ಠಾವಂತ ಕಾಂಗ್ರೆಸ್ ಕಾರ್ಯಕರ್ತ ಶ್ರೀ ಜಿ. ಐತಪ್ಪ ಸೆಟ್ಟಿರ ಅಕಾಲ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

ಶ್ರಮಿಕ ಸಂಘ— ದ. ಕ. ಜಿಲ್ಲಾ ಗೇರುಬೀಜ ಶ್ರಮಿಕ ಸಂಘದ ಮಹಾಧಿವೇಶನವು ತಾ 6ರಲ್ಲಿ ಸಂಜೆ ಕೇಂದ್ರ ಮೈದಾನದಲ್ಲಿ ಶ್ರೀ ಪ್ರಭಾಕರ ಘಾಟೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಕೃಷ್ಣರಾಯರು ಸಮ್ಮೇಳನವನ್ನು ಉದ್ಘಾಟಿಸುತ್ತಾ, ಮಜೂರರು ತಮ್ಮ ಕೋರಿಕೆಗಳಬಗ್ಗೆ ನ್ಯಾಯಬದ್ಧವಾದ ರೀತಿಯನ್ನು ಅನುಸರಿಸಬೇಕಲ್ಲದೆ ಮುಷ್ಕರ ಮೊದಲಾದ ಕ್ರಮಗಳನ್ನು ಅನುಸರಿಸುವುದು ಸರಿಯಲ್ಲವೆಂದೂ, ಮಾಲಿಕರೂ ಕಾಲಕ್ಕನುಗುಣವಾಗಿ ಮಜೂರರ ಹಿತಕಾಯಿದೆಗಳನ್ನು ಜಾರಿಗೊಳಿಸಲು ಸರಕಾರವು ತೀವ್ರ ಕಾರ್ಯಕ್ರಮ ಕೈಕೊಳ್ಳುವುದು ಅವಶ್ಯವೆಂದೂ ಹೇಳಿದರು.

ರೋಟರಿ ಕ್ಲಬ್ಬಿನ ಸಭೆಯು— ತಾ 10ರಲ್ಲಿ ರಾತ್ರಿ ಶ್ರೀ ವಿ. ಎಸ್. ಕುದ್ವರ ಅಧ್ಯಕ್ಷತೆಯಲ್ಲಿ ಜರಗಿತು. ಅಮೇರಿಕಾದಿಂದ ಮರಳಿಬಂದ ಶ್ರೀ ಶ್ರೀನಿವಾಸ ವಿ. ಕುದ್ವರು 'ಅಮೇರಿಕದಲ್ಲಿ ಭಾರತೀಯ ವಿದ್ಯಾರ್ಥಿಯೊಬ್ಬನ ಅನುಭವಗಳು' ಎಂಬ ವಿಷಯದಲ್ಲಿ ಮಾತನಾಡುತ್ತಾ ಅಮೇರಿಕಾದಲ್ಲಿ ಶಿಕ್ಷಣಕ್ಕಾಗಿ ಹೋದ ವಿದ್ಯಾರ್ಥಿಗಳಿಗೆ ಎಲ್ಲಾ ಸೌಲಭ್ಯಗಳು ದೊರೆಯುತ್ತವೆ ಎಂದರು.

ಸೇವಾದಳ ಶಿಬಿರದ ಉದ್ಘಾಟನೆ

ಮಂಗಳೂರು ಯೂತ್ ಕಾಂಗ್ರೆಸಿನ ಕಡೆಯಿಂದ ಜರಗುವ ಹತ್ತು ದಿವಸಗಳ ಸೇವಾದಳ ಶಿಬಿರವನ್ನು ಡಾ। ಕೆ. ನಾಗಪ್ಪ ಆಳ್ವರು ತಾ. 11ರಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಉದ್ಘಾಟಿಸುತ್ತಾ ಸೇವಾದಳದ ಮಹತ್ವವನ್ನು ವಿವರಿಸಿದರು ಶ್ರೀ ಬಿ. ಮಸೋಜರ್, ಅವರು ಶಿಬಿರದ ಶಿಕ್ಷಕರಿರುವರು.

ಸೂಚಿತ ಮೈಸೂರು ರಾಜ್ಯದಲ್ಲಿ— ಹೊಸ್ಸವೇ ಸೇರಲಿರುವ ಐದು ಬೇರೆ ಬೇರೆ ಆಡಳಿತ ಕ್ಷೇತ್ರಗಳಿಗೆ ಒಳಪಟ್ಟ ವಿಭಾಗಗಳಿರುವುದರಿಂದ ಹೊಸ ರಾಜ್ಯಭಾರದಲ್ಲಿ ಸಹಕಾರಿ ವ್ಯವಸ್ಥೆಯು ಹೇಗಿರಬೇಕೆಂಬುದರ ಕುರಿತು ಮೈಸೂರಿನ ಮುಖ್ಯಮಂತ್ರಿ ಸಹಕಾರಿ ಇಲಾಖಾ ಮಂತ್ರಿ ಮೊದಲಾದವರೊಡನೆ ವಿಚಾರ ವಿನಿಮಯ ಮಾಡಲು ಶ್ರೀಗಳಾದ ಮೊಳಹಳ್ಳಿ ಶಿವರಾವ್ ಮತ್ತು ಎಸ್. ನರಸಪ್ಪಯ್ಯ, ಎಮ್. ಎಲ್. ಸಿ. ಯವರು ತಾ 15ರಲ್ಲಿ ಮಂಗಳೂರಿನಿಂದ ಹೊರಟು ತಾ 16 ರಲ್ಲಿ ಮೈಸೂರು ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಭೇಟಿಯಾಗಲಿರುವರು.

ನಗರ ಸಭೆಯು— ತಾ 14ರಲ್ಲಿ ಅಧ್ಯಕ್ಷ ಶ್ರೀ ಕೆ ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. 1956—57ನೇ ವರ್ಷಕ್ಕೆ ಕೆಲವು ಹೊಟೇಲುಗಳಿಗೆ ಲ್ಯಾಸೆನ್ಸು ಕೊಡಲು ನಿರಾಕರಿಸಿದ ಬಗ್ಗೆ ಹೋಟೆಲ್ ಮಾಲಕರು ಮಾಡಿದ ಅಪೀಲು ಅರ್ಜಿಗಳು ತನ್ನಿಬಗ್ಗೆ ಆರೋಗ್ಯಸಮಿತಿಗೆ ಒಪ್ಪಿಸಲಾಯಿತು. ನಗರ ಸಭೆಯ ಖರ್ಚು ವೆಚ್ಚಗಳ ಮಂಜೂರಾತಿಯ ಪ್ರಶ್ನೆ ಚರ್ಚೆಗೆ ಬಂದಾಗ ಕಳೆದ ನವರಾತ್ರಿ ಕಾಲದಲ್ಲಿ ನಗರ ಸಭೆಯ ಸೊತ್ತುಗಳಿಗೆ ಆದ ರೂಪಾಯಿ 1646ರ ಹಾನಿ ವಿಚಾರ ಚರ್ಚೆ ನಡೆಯಿತು. ಕೊನೆಗೆ ಅಧ್ಯಕ್ಷರು ಇನ್ನು ಮುಂದೆ ಇಂತಹ ನಷ್ಟ ನಗರ ಸಭೆಗೆ ಆಗದಂತೆ ಆವಶ್ಯಕ ಕ್ರಮ ಕೈಕೊಳ್ಳಲಾಗುವುದೆಂದು ಹೇಳಿದ ಬಳಿಕ ಕೋರಿಕೆಯು ಮಂಜೂರಾಯಿತು.

ಮಂತ್ರಿ ಶ್ರೀ ಭಕ್ತವತ್ಸಲಂ— ಮದ್ರಾಸು ಸರಕಾರದ ಕೃಷಿ ಹಾಗೂ ಅಭಿವೃದ್ಧಿ ಇಲಾಖೆಯ ಮಂತ್ರಿ ಶ್ರೀ ಎಮ್. ಭಕ್ತವತ್ಸಲಂ ಅವರು ಇದೇ ತಾ. 29ರಲ್ಲಿ ದ. ಕ. ಜಿಲ್ಲೆಗೆ ಆಗಮಿಸುವರು. ಅಪರಾಹ್ನ ಕೊಕ್ಕಡಕ್ಕೆ ಹೋಗಿ ಅಲ್ಲಿ ಜಾನುವಾರು ಅಭಿವೃದ್ಧಿ ಸಲಹಾ ಸಮಿತಿಯಲ್ಲಿ ಭಾಗ ವಹಿಸಿ ರಾತ್ರಿ ಅಲ್ಲಿಯೇ ಉಳಕೊಳ್ಳುವರು.

ತಾ 21ರಲ್ಲಿ ಕುಂದಾಪುರ ಪ್ರಯಾಣವನ್ನು ಕೈಕೊಂಡು ಮೊಳಹಳ್ಳಿ, ಹೊಂಬಾಡಿ— ಮಂಡಾಡಿ ಕಾರ್ಯಕ್ರಮ ತೀರಿಸಿ ಪುನಹ ಕುಂದಾಪುರಕ್ಕೆ ಬಂದು ಅಲ್ಲಿಯ ಮತ್ತು ಬಸ್ರೂರಿನ ಕಾರ್ಯಕ್ರಮ ಮುಗಿಸುವರು. ತಾ 22 ರಲ್ಲಿ ಮುಲಜಿತ್, ನಾವುಂದ, ಕಂಬದಕೋಣೆ ಕಾರ್ಯಕ್ರಮಗಳನ್ನು ತೀರಿಸಿ ಕುಂದಾಪುರಕ್ಕೆ ಮರಳಿ ಮಂಗಳೂರಿಗೆ ಬಂದು ಸಂಜೆ ರೈಲು ಹತ್ತುವರು.

ಕಥೋಲಿಕ್ ಕ್ಲಬ್ ದಿನಾಚರಣೆ

ಮಂಗಳೂರು ಕಥೋಲಿಕ್ ಕ್ಲಬ್ ದಿನಾಚರಣೆಯು ತಾ. 6ರಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶ ಶ್ರೀ ಪಿ. ಎ. ನಜರೇತರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜೋನ್ ಗೊನಾಲ್ವೀಸರು ಸ್ವಾಗತ ಭಾಷಣವಿತ್ತರು. ಚೆಯರ್ ಶ್ರೀ ರಾಯು. ಕಣ್ಣಪ್ಪನವರು ಕ್ಲಬ್ಬಿನ ಸ್ಮೃತಿ ವಾಚನ ಮಾಡಿದರು. ಫಾ. ಡಿ. ಪಿಂಟೋರವರು ಉತ್ತರವಿತ್ತರು. ಮಂಗಳೂರು ಬಿಶೋಪ್ ಡಾ। ಬಿ. ಎಸ್. ಪೇರಿಸ್ ಮತ್ತು ಕ್ಲಬ್ಬಿನ ಮಾಜಿ ಡ್ಯಾರೆಕ್ಟರ್ ದಿ| ಫಾ| ಎಲ್. ಯಿಸ್ ಮಸ್ಕರೇಂಞಾಸ್‌ರವರ ಭಾವ ಚಿತ್ರಗಳನ್ನು ಅಧ್ಯಕ್ಷರು ಅನಾವರಣ ಮಾಡಿದರು. ನಂತರ ಕ್ಲಬ್ ದಿನಾಚರಣೆ ನಿಮಿತ್ತ ಏರ್ಪಡಿಸಲಾದ ಪಂದ್ಯಾಟಗಳಲ್ಲಿ ವಿಜಯಿಗಳಾದವರಿಗೆ ಪಾರಿತೋಷ ವಿತರಣೆ ಮಾಡಲಾಯಿತು.

ದಲಿತ ವರ್ಗಗಳ ಸಮಾಜಸೇವ ಸಮಿತಿಯ ಮನವಿ— ಕರ್ನಾಟಕ ಪ್ರಾಂತೀಯ ದಲಿತವರ್ಗಗಳ ಸಮಾಜಸೇವಾ ಲೀಗಿನ ಪರವಾಗಿ ಅಧ್ಯಕ್ಷ ಶ್ರೀ ಎಸ್. ಜಿ. ಸಾಲ್ಯಾನ್ನರು ಕೇಂದ್ರದ ಸಂಪರ್ಕ ಶಾಖೆಯ ಮಂತ್ರಿ ಶ್ರೀ ಜಗಜ್ಜೀವನರಾಮರಿಗೆ ಮನವಿಯೊಂದನ್ನರ್ಪಿಸಿದರು. ದ. ಕ. ಜಿಲ್ಲೆಯ ಪರಿಜನರ ಪೆತ್ತದ ಕೈಗಾರಿಕೆ, ಎಲುಬುಗೊಬ್ಬರ, ಕುರಿ ಹಣೆಯುವುದು ಚಾಪೆ ನೇಯುವುದು, ಹುಲ್ಲಿನ ಕೆಲಸ, ಸುಣ್ಣ ತಯಾರಿ, ಪಾದರಕ್ಷೆ ಮತ್ತಿತರ ಕೆಲವು ವೃತ್ತಿಗಳಲ್ಲಿ ನಿಪುಣರಿದ್ದರೂ ಅವರಿಗೆ ಅವುಗಳನ್ನು ಕೈಕೊಳ್ಳಲು ಸಾಕಷ್ಟು ಸೌಕರ್ಯಗಳಿಲ್ಲ ಆದುದರಿಂದ ಎರಡನೆ ಪಂಚವಾರ್ಷಿಕ ಯೋಜನೆಯಲ್ಲಿ ಈ ಜಿಲ್ಲೆಯ ಹರಿಜನರಿಗೆ ಸರಕಾರಿ ಸ್ಥಳಗಳಲ್ಲಿ ವಸತಿ ಕೇಂದ್ರಗಳನ್ನು ಸ್ಥಾಪಿಸಿ, ಸಹಕಾರಿ ಸಂಘಗಳನ್ನು ಸ್ಥಾಪಿಸಿ ಈ ಕೈಗಾರಿಕೆಗಳನ್ನು ಅವರು ಕೈಗೊಳ್ಳುವಂತೆ ಸಹಾಯ ನೀಡಬೇಕು. ಅದಕ್ಕಾಗಿ ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಪ್ರಥಮವಾಗಿ ಐದುಲಕ್ಷ ರೂಪಾಯಿಯನ್ನು ಈ ಜಿಲ್ಲೆಯಲ್ಲಿ ಉಪಯೋಗಿಸುವಂತೆ ಜಿಲ್ಲಾ ಕಲೆಕ್ಟರರ ವಶ ಕೊಡಬೇಕು ಎಂಬಿತ್ಯಾದಿ ಕೋರಿಕೆಗಳು ಮನವಿಯಲ್ಲಿದ್ದವು. ಶ್ರೀ ಪಿ. ಕನುಲಾಕ್ಷನವರು ಪರಿಜನರ ಪರವಾಗಿ ಅರ್ಪಿಸಿದ ವಿನಂತಿಯಲ್ಲಿ ಈ ಜಿಲ್ಲೆಯಲ್ಲಿ ಉದ್ಯೋಗಿಗಳಾದ ಹರಿಜನರು ತುಂಬಾ ಇದ್ದು ಅವರಿಗೆ ಎಲ್ಲಾ ಸರಕಾರಿ ಇಲಾಖೆಗಳಲ್ಲಿ ಕೆಲಸ ಒದಗಿಸಿಕೊಡಬೇಕು. ಕಾಸರಗೋಡು ತಾಲೂಕು ಚಂದ್ರಗಿರಿ ನದಿಯ ಉತ್ತರ ಭಾಗ ಕರ್ನಾಟಕದಲ್ಲೇ ಉಳಿಯುವಂತಾಗಬೇಕು ಎಂದು ಕೇಳಿಕೊಳ್ಳಲಾಗಿತ್ತು.

ದೇವಿಪುರ — ತಲಪಾಡಿ ಶ್ರೀ ದುರ್ಗಾಪ್ರಸಾದಿಕ ಹಾ. ಪ್ರಾ. ಶಾಲೆಯ ವರ್ಧಂತ್ಯುತ್ಸವವು ತಾ. 6ರಲ್ಲಿ ಶ್ರೀ ಕಲ್ಯಾರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಎಂ. ಆರ್. ಶಾಸ್ತ್ರಿಗಳು ಕಾಲೋಚಿತ ಮಾತುಗಳನ್ನಾಡಿದರು.

ಹೊಂಬಾಡಿ ಮಂಡಾಡಿ— ಸ್ಥಳೀಯ ವಿವೇಕೋದಯ ಎಯಿಡೆಡ್ ಎಲಿಮೆಂಟರಿ ಶಾಲೆಯ ವಾರ್ಷಿಕೋತ್ಸವವು ತಾ. 6ರಲ್ಲಿ ಬೆಳಿಗ್ಗೆ ಧ್ವಜ ವಂದನೆ ಮತ್ತು ಶ್ರೀ ಎಸ್. ಕೃಷ್ಣಪ್ಪ ಹೆಗ್ಡೆಯವರಿಂದ ಮಕ್ಕಳಿಗೆ ತಿಂಡಿ ಹಂಚೋಣ ಕಾರ್ಯಕ್ರಮದಿಂದ ಪ್ರಾರಂಭವಾಯಿತು. ಸಂಜೆ ಸಾರ್ವಜನಿಕ ಸಭೆಯು ಕುಂದಾಪುರದ ಡಿ. ಮುನ್ಸಿಫ್ ಶ್ರೀ ಎಚ್. ಕೃಷ್ಣ ಸಾಲಿಯಾನರ ಅಧ್ಯಕ್ಷತೆಯಲ್ಲಿ ಜರಗಿತು.

'NAVAYUGA' WEEKLY
is in the list of periodicals and Newspapers approved for use in Secondary Schools as per proceedings Roc- No 466 N/50 dated 13-12-1950 of the Director of public Instruction Madras.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಾಗಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೋಟ—ಸ್ಥಳೀಯ ಶ್ರೀ ಶಾಂಭವಿ ವಿದ್ಯಾದಾಯಿನಿ ಪ್ರಾಥಮಿಕ ಶಾಲಾ ವರ್ಧಂತಿಯುತ್ಸವವು ತಾ. 7ರಲ್ಲು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಸ್ಥಾಪಕರಾದ ಶ್ರೀ ಶೇಷ ಕಾರಂತರ ಭಾವಚಿತ್ರವನ್ನು ಅಧ್ಯಕ್ಷರು ಅನಾವರಣ ಮಾಡಿದರು. ಶ್ರೀ ಕೆ. ಎಲ್. ಕಾರಂತರು ಶಾಲಾ ಕಟ್ಟಡ ದುರುಸ್ತಿ ಬಗ್ಗೆ ಊರವರ ಸಹಾಯವನ್ನು ಅಪೇಕ್ಷಿಸಿದರು. ಶ್ರೀ ಎಚ್. ಪರಮೇಶ್ವರ ಐತಾಳರು ಸ್ವಸ್ತಿ ವಾಚನ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ಪರಮೇಶ್ವರ ಮಯ್ಯನವರು ಧನ್ಯವಾದಗಳನ್ನಿತ್ತರು.

ಇದೇ ಶಾಲೆಯ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ತಾ. 8ರಲ್ಲು ಶ್ರೀ ಎಸ್. ಜಿ. ಲಕ್ಷ್ಮೀನಾರಾಯಣನವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ರಾಮಕೃಷ್ಣ ಹಂದೆ, ಕೆ. ಎಸ್. ತುಂಗ, ಎಮ್. ಪರಮೇಶ್ವರಯ್ಯ ಮೊದಲಾದವರು ಸಂದರ್ಭೋಚಿತವಾಗಿ ಮಾತನಾಡಿದರು.

ಶಿರ್ವ—ಸ್ಥಳೀಯ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘದ ಆಶ್ರಯದಲ್ಲಿ ತಾ. 6ರಲ್ಲು ಶ್ರೀ ಯು. ಯಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಬಂಟರ ಯಾನೆ ನಾಡವರ' ಎಂಬ ಶಬ್ದಗಳನ್ನು ಲೋಪಗೊಳಿಸಿ ಬರೇ ವಿದ್ಯಾವರ್ಧಕ ಸಂಘವೆಂದು ಹೆಸರಿಡಲಾಯಿತು. ಶಿರ್ವ ಹಿಂದೂಹೈಸ್ಕೂಲಿನ ಏಳಿಗೆ ಬಗ್ಗೆ ಸೂಕ್ತ ಕ್ರಮ ಕೈಕೊಳ್ಳುವರೆ ಶ್ರೀಗಳಾದ ಯು. ಎಸ್. ನಾಯಕ್ (ಅಧ್ಯಕ್ಷ) ಡಾ| ಕುಪ್ಪಣ್ಣಾಚಾರ್ಯ [ಉಪಾಧ್ಯಕ್ಷ] ಕೆ. ಜಿ. ಬಲ್ಲಾಳ್ [ಲೇಖಕ] ಎಸ್. ಅಣ್ಣಯ್ಯ ಹೆಗ್ಡೆ [ಕಾರ್ಯದರ್ಶಿ] ಗಳಾಗಿರುವ ಸಮಿತಿ ಯೊಂದನ್ನು ರಚಿಸಲಾಯಿತು.

ಮಾಯಿಪಾಡಿ— ತಾ. 8ರಲ್ಲು ಮಾಯಿಪಾಡಿ ಅರಮನೆ ವಠಾರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ, ಸಾಮೂಹಿಕ ಶಿಕ್ಷಣ ಕೇಂದ್ರವೊಂದನ್ನು ಶ್ರೀ ಎಸ್. ಕೆ. ನಾಯನಾರ್, ಅವರು ಉದ್ಘಾಟಿಸಿದರು. ಮಾಯಿಪಾಡಿ ತರಬೇತಿ ಶಾಲೆಯ ಹೆಡ್ಮಾಸ್ತರ್ ಶ್ರೀ ಕೆ. ರಾಮಕೃಷ್ಣ ಸೆಟ್ಟರು ಭಾಷಣಮಾಡುತ್ತಾ ಸಾಮೂಹಿಕ ಶಿಕ್ಷಣದ ವಿವಿಧ ಅಂಗಗಳನ್ನು ವಿಶದೀಕರಿಸಿ, ಕೇಂದ್ರವನ್ನು ತೆರೆಯಲು ಸಾಕರ್ಯಗಳನ್ನೊದಗಿಸಿದ ರಾಷ್ಟ್ರೀಯ ವಿಸ್ತರಣಾ ಇಲಾಖೆಯವರನ್ನು ಅಭಿನಂದಿಸಿದರು. ಶ್ರೀ ಕೆ. ತಿಮ್ಮಣ್ಣ ಆಳ್ವರು ಧನ್ಯವಾದಗಳನ್ನಿತ್ತರು.

ಸೂಡ—ಕಟಪಾಡಿ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಆಡಳಿತೆಗೆ ಒಳಪಟ್ಟ ಸ್ಥಳೀಯ ಶ್ರೀ ಸುಬ್ರಹ್ಮಣ್ಯ ಹಾಯರ್ ಎಲಿಮೆಂಟರಿ ಶಾಲೆಯ ಬಗ್ಗೆ ಸಮಾಜ ವಿಕಾಸ ಯೋಜನೆಯನ್ವಯ ಕಟ್ಟಿಸಲಾದ ನೂತನ ಕಟ್ಟಡದ ಉದ್ಘಾಟನೆಯು ದಿನಾಂಕ 13 ರಂದು ಜಿಲ್ಲಾ ಪ್ರೋಜೆಕ್ಟ್ ಎಗ್ಸಿಕ್ಯೂಟಿವ್ ಅಫೀಸರರಾಗಿರುವ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾಕ್ಷೇತ್ರದಲ್ಲಿ ಸಂಘದ ಚಟುವಟಿಕೆಗಳ ಪರಿಚಯವನ್ನು ಮಾಡಿಕೊಟ್ಟು ಸ್ವಾಗತ ಭಾಷಣವನ್ನು ಶ್ರೀ ಪಿ. ರಾಮದಾಸ ನಾಯಕರು ಮಾಡಿದರು. ಶ್ರೀ ಕೆ. ಆರ್. ಶೆಣೈಯವರು ನೂತನ ಕಟ್ಟಡದ ರಚನೆಯ ಕುರಿತಾದ ವರದಿಯನ್ನೂ ಶಾಲಾ ಮುಖ್ಯ ಅಧ್ಯಾಪಕ ಶ್ರೀ ಎಮ್. ಅನಂತಪ್ಪ ಕಿಣಿಯವರು ಶಾಲೆಯ ಸಂಕ್ಷಿಪ್ತ ವರದಿಯನ್ನೂ ಒಪ್ಪಿಸಿದರು. ಪಾರಿತೋಷಕ ವಿತರಣೆಯಾದ ಬಳಿಕ ಅಧ್ಯಕ್ಷ ಭಾಷಣವಾಯಿತು. ಸಂಘದ ಅಧ್ಯಕ್ಷ ಶ್ರೀ ಯು. ಎಸ್. ನಾಯಕರು ಧನ್ಯವಾದ ಸಮರ್ಪಿಸಿದ ಬಳಿಕ ಮನೋರಂಜನೆಯ ಕಾರ್ಯಕ್ರಮಗಳಾದುವು.

ದಿ ವಿಜಯಾ ಬೇಂಕ್ ಲಿಮಿಟೆಡ್, ಕಾರ್ಕಳ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ ಅವರಿಗೆ ಬಿಟ್ಟ ರಿಜಿಸ್ಟ್ರ ನೋಟೀಸು ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವದೇನೆಂದರೆ—ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾರೀಕು 21—5—56ನೇ ಸೋಮವಾರ ಮಧ್ಯಾಹ್ನ ಗಂಟೆ 3ಕ್ಕೆ ಯಾ ಬೇಂಕಿನವರಿಗೆ ಯುಕ್ತ ಕಂಡ ತಾರೀಕಿಗೆ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲ್ಪಡುವುವು. ಏಲಂನಲ್ಲಿ ಹುಟ್ಟಿಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ವೈಯಕ್ತಿಕ ಜವಾಬ್ದಾರಿಯಿಂದ ಬೇಂಕಿಗೆ ಬರುವ ಐವೇಜನ್ನು ವಸೂಲುಮಾಡಲಾಗುವುದೆಂಬುದನ್ನು ಈ ಮೂಲಕ ತಿಳಿಸಲಾಗಿಯದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ 31-3-56 ಬರತಕ್ಕ ಮೊಬಲಗು.		
150/55	ಶ್ರೀ ಟಿ. ಸಿನ್ನ ಸ್ವಾಮಿ, ತನ್ನಾಸಿ ಬೋಯನವರ ಮಗ ಕಂಟ್ರಾಕ್ಟರ್, ಪುಲ್ಕೇರಿ, ಕಾರ್ಕಳ.	53	0	0
202/55	ಶ್ರೀ ಸುಂದರ ಶೆಟ್ಟಿ, ಮಹಾಬಲ ಶೆಟ್ರ ಮಗ, ಕೆಳಮನೆ, ಕಾಡೂರು ಗ್ರಾಮ, ಪೋಸ್ಟು ಬೈ‸ರು.	70	5	0
248/55	ಶ್ರೀ ಗೋಪ ಶೆಟ್ಟಿ, ನಾಗಪ್ಪಶೆಟ್ರ ಅಳಿಯ, ಮೇಲು ಮುಗಂಟಿ ಮನೆ, ಮರ್ಣೆ ಗ್ರಾಮ, ಪೋಸ್ಟು ಅಜೆಕಾರು.	68	13	0
335/55	ಶ್ರೀ ನಾಗರಾಜ ಕಟ್ಟಡ, ಅನಂತಪ್ರಭ ಕಟ್ಟಡರ ಅಳಿಯ, ಪಾಂಡಬೆಟ್ಟು ಮನೆ, ಕೊಳಕೆ ಇರ್ವತ್ತೂರು ಗ್ರಾಮ, ಪೋಸ್ಟು ಕಾರ್ಕಳ.	49	3	0

Karkala }
11-5-56 }

K. Gopalkrishna Shetty
Agent.

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,
'NAVAYUGA'
Post Box No. 22, UDIPI, S. K.

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5—1955).

ಕನ್ನಡದಲ್ಲಿ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

ಬರೆದವರು: **ಕುಮಾರಸ್ವಾಮಿ**

ಪುಟಗಳು: ೧೫೮ ಬೆಲೆ: ರೂ. ೧—೪—೦

●

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

* * *

ಇದು ಕನ್ನಡ ಸಾರಸ್ವತ ಲೋಕಕ್ಕೆ ಬಹು ಅಮೂಲ್ಯವಾದ ಕಾಣಿಕೆ. ಕನ್ನಡ ಜನತೆ, ಅದರಲ್ಲೂ ವಿದ್ಯಾರ್ಥಿ ವೃಂದ, ಇಂಥ ಪುಸ್ತಕ ಪಡೆಯಲು ಪುಣ್ಯ ಮಾಡಿರಬೇಕು. ಕಾದಂಬರಿ ಪ್ರಿಯರಾದ ವಾಚಕರು ಪ್ರಯತ್ನ ಪೂರ್ವಕವಾಗಿ ಈ ಪುಸ್ತಕದ ಕಡೆ ಗಮನ ಹರಿಸಬೇಕು. ಹಾಲಿನ ಸಾರವನ್ನೆಲ್ಲ ಭಟ್ಟಿ ಇಳಿಸಿದ ಹಾಲು ಜೇನಿನಂತಿದೆ ಇಲ್ಲಿಯ ವಿಷಯ ಸಂಪತ್ತು.

—ಜನಪ್ರಗತಿ, ಬೆಂಗಳೂರು.

ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸದೆ ಕೆಳಗಿಡಬಾರದ ಕತೆ, ಕಾದಂಬರಿಗಳಿರಬಹುದು. ಆ ಮಟ್ಟಕ್ಕೆ ಪ್ರಬಂಧಗಳ ಪುಸ್ತಕಗಳಿರುವುದು ಕಡಿಮೆ. ಆದರೆ ಈ ಪುಸ್ತಕ ಅಂಥ ಶಕ್ತಿ ಪಡೆದಿದೆ. ಇಂಥ ಪುಸ್ತಕಗಳಿಂದ ಕನ್ನಡ ಓದುಗರಿಗೆ ತುಂಬ ಉಪಕಾರವಾಗುತ್ತದೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಈ ಪುಸ್ತಕ ಒಂದು ಭೂಷಣ.

—ಪ್ರಪಂಚ, ಹುಬ್ಬಳ್ಳಿ.

ಜೀವನದ ಪ್ರಸಂಗಾನುಭವಗಳನ್ನು ನೀತಿ ಮತ್ತು ಸಿದ್ಧಾಂತದ ಒರೆಗಲ್ಲಿಗೆ ಹಚ್ಚಿಕೊಂಡು ಜೀವನ ದರ್ಶನವನ್ನು ಮಾಡಿಕೊಂಡ ಸನ್ನಿವೇಶಗಳ ಚಿತ್ರಣವೇ ಈ ಪುಸ್ತಕ.

—ಪ್ರಜಾಮತ, ಬೆಂಗಳೂರು.

ಪುಸ್ತಕದ ಭಾಷೆ ಚೆನ್ನಾಗಿದೆ; ಹೇಳಬೇಕಾದುದನ್ನು ಬಹಳ ಸುಂದರವಾಗಿ ಲೇಖಕರು ಹೇಳಿದ್ದಾರೆ. ಒಂದೊಂದು ಪ್ರಬಂಧಕ್ಕೂ ಮುಂಚಿತವಾಗಿ ಅದಕ್ಕೆ ಸಂಬಂಧ ಪಟ್ಟಂತೆ ಒಂದು ಸಣ್ಣ ಕತೆಯನ್ನು ಕೊಡಲಾಗಿದೆ. ಇದರಿಂದ ಪ್ರಬಂಧಕ್ಕೆ ಒಂದು ಒಳ್ಳೆಯ ಮುನ್ನುಡಿಯೂ ಆ ಪ್ರಬಂಧವನ್ನು ಓದಲು ಬೇಕಾದ ಮನೋಧರ್ಮವೂ ಸಿಗುತ್ತದೆ.

—ನವಭಾರತ ಮಂಗಳೂರು.

ಬದುಕಿನ ಬಂಗಾರಕ್ಕೆ ಅಂಟಿಕೊಂಡಿರ ಬಹುದಾದ ಕಿಲುಬನ್ನು ತಿಕ್ಕಿ ಅದನ್ನು ತಳತಳಿಸುವಂತೆ ಮಾಡುವ ಬಗೆ ಹೇಗೆಂದು ಲೇಖಕರು ಇಲ್ಲಿ ತಿಳಿಸುತ್ತಾರೆ. ವ್ಯಾವಹಾರಿಕ ತತ್ವಜ್ಞಾನವನ್ನು ಬಹಳ ಸೊಗಸಾಗಿ ಈ ಪ್ರಬಂಧಗಳು ಪ್ರತಿಪಾದಿಸುತ್ತವೆ. ಪ್ರತಿ ಪ್ರಬಂಧದ ಪ್ರಾರಂಭದಲ್ಲಿ ಕೊಟ್ಟ ಆಖ್ಯಾಯಿಕೆಯೂ ಪುಸ್ತಕದ ತುಂಬೆಲ್ಲ ಬರುವ ಮಹಾಪುರುಷರ ಜೀವನಪ್ರಸಂಗಗಳೂ ಕುಮಾರಸ್ವಾಮಿಯವರ ವಿಶಾಲವಾದ ಓದಿಗೆ ನಿದರ್ಶನವಾಗಿವೆಯಲ್ಲದೆ ಅವರ ಲೇಖನಿಗೆ ಒಂದು ಅಪರೂಪವಾದ ಮೆರುಗನ್ನೂ ಕೊಡುತ್ತವೆ. ಇಂಥ ರೀತಿಯಾದ ವ್ಯಾವಹಾರಿಕ ವಿವೇಕವನ್ನು ಕಾಂತಾಸಂಮಿತಿಯಿಂದ ಬೋಧಿಸುವ ಪುಸ್ತಕ ಕನ್ನಡದಲ್ಲಿ ಇದೇ ಮೊದಲೆಂದರೆ ತಪ್ಪಾಗದು. ನಾಗರಿಕತೆಯು ಪ್ರಭಾವದಿಂದ ಹೆಚ್ಚು ಜಟಿಲವಾಗುತ್ತಿರುವ ಜೀವನವನ್ನು ಎದುರಿಸಿ ಅಪ್ರತಿಭರಾಗುತ್ತಿರುವ ಸಾಮಾನ್ಯ ಜನರಿಗೆ ಇದು ತುಂಬ ಉಪಯುಕ್ತವಾದ ಪುಸ್ತಕ.

—ಕರ್ಮವೀರ ಹುಬ್ಬಳ್ಳಿ.

ಈ ಬರೆಹಗಳ ಒಳಗೆ ಅಡಗಿರುವ ತತ್ವ ಗಂಭೀರವಾದುದು. ಆದರೆ ಅದನ್ನು ವಿವರಿಸಿದ ರೀತಿ ಆಕರ್ಷಕವಾಗಿದೆ; ಮನೋರಂಜಕವಾಗಿದೆ. ಪ್ರತಿಯೊಂದು ಬರೆಹದ ಆರಂಭದಲ್ಲಿ ಅದರ ತಿರುಳನ್ನು ಸಂಕೇತಿಸುವ ಪುಟ್ಟ ಕಥೆ, ಸುಲಲಿತ ವಾದ ಶೈಲಿ, ಮನಸ್ಸನ್ನು ಸೆರೆಹಿಡಿಯುವಂಥ ನಿರೂಪಣೆಗಳಿಂದಾಗಿ ಈ ಕೃತಿ ಎಲ್ಲ ಬಗೆಯ ಓದುಗರಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. ಹಳಸಿದ ವಸ್ತುಗಳ ಕಥೆ ಕಾದಂಬರಿಗಳಿಂದ ದಣಿದವರಿಗೆ ಈ ಬರೆಹಗಳು ಉಲ್ಲಾಸ ನೀಡುತ್ತವೆ.

—ರಾಷ್ಟ್ರಮತ, ಮಂಗಳೂರು.

ಒಂದು ಒಳ್ಳೆಯ ಪುಸ್ತಕವನ್ನು ಓದಿದಾಗ ನಾನು ಹಿಗ್ಗಿದೆ ಎಂದು ಹೇಳುವ ಮಾತಿಗೆ ಇದು ಯೋಗ್ಯ ಉದಾಹರಣೆ. ಜಟಿಲ, ಕುಟಿಲತಮವಾದ ಬದುಕಿನ ಹದರು ಹದರುಗಳನ್ನು ಬಿಚ್ಚಿ ಸಮಸ್ಯೆಗಳನ್ನು ಕೆದಕಿ, ಒಂದು ಸಿದ್ಧಾಂತಕ್ಕೆ ಬರುವಲ್ಲಿ ಲೇಖಕರ ವಿಶಾಲ ಅನುಭವ, ಸೂಕ್ಷ್ಮ ದೃಷ್ಟಿ, ತರ್ಕ ಸರಣಿ, ಕಾವ್ಯಮಯ ಭಾಷೆ ಇವು ಇದನ್ನು "ಕನ್ನಡದ ಒಂದು ಹೊಸ ಬಗೆಯ ರಚನೆ" ಯನ್ನಾಗಿ ಮಾಡಿವೆ. ಶ್ರೀ ಕುಮಾರಸ್ವಾಮಿಯವರು ಹೊಸ ಹಾದಿ ತುಳಿದಿದ್ದಾರೆ. ಕೆಲವರಾದರೂ ಹಿಂಬಾಲಿಸಬಹುದಾದ ನವ್ಯ ಪಥ ಹಿಡಿದಿದ್ದಾರೆ. ರಸಮಯವಾದ, ವೈವಿಧ್ಯ ಪೂರ್ಣವಾದ ಪುಟ್ಟ ಪುಟ್ಟ ಕಥೆಗಳು ಈ ಪ್ರಬಂಧಗಳ ನವೀನತೆಯ ಜೋಗುಳ ಹೇಳುತ್ತವೆ. ಪ್ರಬಂಧದ ವಸ್ತುವನ್ನು ಹಿಂಜಿ, ಸಮರ್ಥಿಸಿ, ತರ್ಕಿಸುವಲ್ಲಿ ಲೇಖಕರ ನಾಲ್ಕು ನಿಟ್ಟಿನ ನೋಟವನ್ನು ಕಂಡು ಅವರ 'ಬಹುಶ್ರುತಿ'ಗೆ ಆಶ್ಚರ್ಯ ಪಡುತ್ತೇವೆ. ಶೈಲಿ ಕಾವ್ಯಮಯವೂ ಸರಳವೂ ಆಗಿದೆ. ಸಣ್ಣ ಸಣ್ಣ ವಾಕ್ಯಗಳು ಪುಟ್ಟ ಮಕ್ಕಳು ಪುಟು ಪುಟು ಓಡಾಡುವುದರ ಅನುಭವವನ್ನು ತರುತ್ತವೆ. ಸರಳ ನುಡಿ, ವಿಚಾರ ವೈಖರಿಗಳಿಗೆ ಒಪ್ಪವಿಟ್ಟಂತೆ, ಗಾದೆಮಾತುಗಳನ್ನೂ ಅನುಭವದ ನುಡಿಗಳನ್ನೂ ಲೀಲಾಜಾಲವಾಗಿ ಬಳಸಿದ್ದಾರೆ. ಇದೊಂದು ವ್ಯವಹಾರ ಜ್ಞಾನದ ಪುಟ್ಟ ವಿಶ್ವಕೋಶ.

—ಪುಸ್ತಕ ಪ್ರಪಂಚ, ಮೈಸೂರು.

When it is recognised that the orderly progress of any State depends upon each individual conducting oneself with a full realisation of one's duties and obligations, the usefulness of this publication will be evident.

—The Hindu, Madras.

ಪ್ರತಿಗಳು ಸಿಕ್ಕುವ ಸ್ಥಳ:

(1) ನವಯುಗ ಪ್ರೆಸ್, ಉಡುಪಿ.

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಷ್ಟ್ರದಾದ್ಯಂತ ಹಳ್ಳಿಗಳ ಪುನರುಜ್ಜೀವನ

(೩ನೇ ಪುಟದಿಂದ)

ಯಲ್ಲದೆ, ಸಮಾಜದ ಶಾಶ್ವತ ಕ್ಷೇಮವನ್ನು ಉದ್ದೇಶವಾಗಿಟ್ಟುಕೊಂಡ ಮತ್ತು ಸಮೃದ್ಧಿಯನ್ನು ಸ್ಥಿರವಾದ ನೆಲಗಟ್ಟಿನಲ್ಲಿ ನಿಲ್ಲಿಸಬಲ್ಲ ಪ್ರಗತಿಪರ ಕ್ರಮಗಳೇನೂ ಕೈಗೊಳ್ಳಲ್ಪಟ್ಟಿಲ್ಲ— ಇವೆಲ್ಲ ಲೋಪ, ದೋಷಗಳ ನಿವಾರಣೆಗೆ ನಾವಿನ್ನು ಮುಂದೆ ಪ್ರಯತ್ನಿಸಬೇಕಾದದ್ದು ಆದ್ಯ ಕರ್ತವ್ಯ.

ಸುಲಭ ಸೌಕರ್ಯ ಸಾಧನಗಳನ್ನು ಒದಗಿಸಬಲ್ಲ ಕಾರ್ಯಕ್ರಮಗಳು ಹಳ್ಳಿಗಳಲ್ಲಿ ಈಗಾಗಲೇ ಜನಪ್ರಿಯವಾಗಿವೆ: ಗ್ರಾಮಸ್ಥರ ವಂತಿಗೆಯನ್ನೂ ಸಹಕಾರ ಧನ ಸಹಾಯವನ್ನೂ ಆಧರಿಸಿ ಕೈಗೊಳ್ಳಲಾದ ಈ ಕಾರ್ಯಕ್ರಮಗಳು ಒಳ್ಳೆಯ ವೇಗವನ್ನು ಪಡೆದು ಬೆಳೆಯುತ್ತಿವೆ; ಜನರಿಗೆ ಇವು ಮೆಚ್ಚಿಕೆಯಾಗಿವೆ. ಇಲ್ಲದಿದ್ದರೆ ಜನರಿಂದ ವಂತಿಗೆಯಾಗಲೀ ಶ್ರಮ ದಾನವಾಗಲೀ ಮೋಪು ಮತ್ತಿತರ ಸಾಧನಗಳ ಪೂರೈಕೆಯಾಗಲೀ ಆಗುತ್ತಿರಲಿಲ್ಲ. ಹೀಗೆ ಸಹಕಾರ ನೀಡುತ್ತಿರುವವರ ಸಂಖ್ಯಾ ಪ್ರಮಾಣವೂ ಬಂದ ಸಹಾಯದ ಪ್ರಮಾಣವೂ ದಿನ ದಿನಕ್ಕೂ ಹೆಚ್ಚುತ್ತಿದೆ. ಆದರೆ ಗ್ರಾಮಸ್ಥರ ಸಹಕಾರವು ಸರಕಾರವು ಅಪೇಕ್ಷಿಸಿದ ೫೦ : ೫೦ (ಅಂದರೆ ಸರಕಾರದ ವಂತಿಗೆಯಷ್ಟೆ) ಮಟ್ಟದಲ್ಲಿ ನಿಜಕ್ಕೂ ಬರುತ್ತಿದೆಯೆ, ಅದು ಸ್ವೇಚ್ಛೆಯಿಂದಲೇ ಬರುತ್ತಿದೆಯೆ - ಎಂಬ ವಿಷಯವನ್ನು ವರದಿಯು ವಿಮರ್ಶಿಸಲು ಹೋಗಿಲ್ಲವೆಂದು ಕಾಣುತ್ತದೆ.

ಒಂದು ವೇಳೆ ಅಂಥ ವಿಮರ್ಶೆಯನ್ನು —ಅಂದರೆ ಹಳ್ಳಿಗರು ಕೊಟ್ಟಿರುವರೆನ್ನಲಾದ ವಂತಿಗೆಯ ಪ್ರಮಾಣ ಇತ್ಯಾದಿಗಳ ಸತ್ಯಾನ್ವೇಷಣೆಯನ್ನು— ಮಾಡುತ್ತಿದ್ದರೆ ಸರಕಾರವು ತಾನು ಕೊಡುತ್ತಿರುವ ಸಹಾಯದ ಮಟ್ಟವನ್ನು ತಗ್ಗಿಸಬಹುದೆಂಬ ಸೂಚನೆಯನ್ನು ಮಾಡುತ್ತಿರಲಿಲ್ಲವೆಂದು ನಮಗೆನಿಸುತ್ತದೆ. ಈ ಸಲಹೆಯನ್ನು ಕೊಡುವಾಗ ವರದಿಯನ್ನು ಬರೆದವರು ಹಳ್ಳಿಯ ಜನರಲ್ಲಿ ಈಗಾಗಲೇ ಉತ್ಸಾಹ ಬೆಳೆದು ಬಂದಿದೆ ಎಂಬ ಮತ್ತು ತಮ್ಮ ಅಭ್ಯುದಯಕ್ಕಾಗಿ ಸರ್ವ ರೀತಿಯಿಂದ ನೆರವನ್ನು ತಾವೇ ಸ್ವೇಚ್ಛೆಯಿಂದ ಒದಗಿಸಿಕೊಳ್ಳುವುದು ಅಪೇಕ್ಷಣೀಯವೆಂಬ ಜಾಗೃತಿ ಮೂಡಿದೆ ಎನ್ನುವ ತಿಳುವಳಿಕೆಯನ್ನು ಹೊಂದಿರುವರೆಂಬುದು ಸ್ಪಷ್ಟ. ಆದರೆ ಇಷ್ಟು ಸುಲಭದ ತೀರ್ಮಾನವನ್ನು ಹೊಂದುವುದು ನಮಗಂತೂ ಇಷ್ಟವೆನಿಸುವುದಿಲ್ಲ. ನಮ್ಮ ಹಳ್ಳಿಗರು ಒಮ್ಮೆಲೆ ಇಷ್ಟು ಹೆಚ್ಚು ಪ್ರಮಾಣದಲ್ಲಿ ಉತ್ಸಾಹವನ್ನು ತುಂಬಿಕೊಂಡಿರುವರೆಂಬುದು ನೂರಕ್ಕೆ ಐವತ್ತರಷ್ಟೂ ಸತ್ಯವಲ್ಲ.

ಅಧಿಕಾರಿಗಳಾಗಲೀ ಸರಕಾರವಾಗಲೀ ಅಥವಾ ಉಪರೋಕ್ತ ವರದಿಯನ್ನೊಪ್ಪಿಸಿದ ಮಂಡಳಿಯಂಥವುಗಳಾಗಲೀ ಈ ಮಟ್ಟಿಗೆ ಎಚ್ಚರಿಕೆಯಬೇಕು: ಆದರೆ, ವರದಿಯು ಹೇಳಿದ ಇನ್ನೊಂದು ವಿಷಯದ ಮಟ್ಟಿಗೆ ನಮ್ಮ ಸಂಪೂರ್ಣ ಅನುಮೋದನೆ ಇದೆ— ಹಳ್ಳಿಗಳ ಅಭಿವೃದ್ಧಿಯು ಸಮಾನ ರೂಪದಲ್ಲಿ ಎಲ್ಲೆಡೆಗೂ ವ್ಯಾಪಿಸಬೇಕೆಂಬುದೇ ಅದು. ಪ್ರಧಾನ ಮಂತ್ರಿಗಳಾದರೂ ಇದೇ ವಿಷಯವನ್ನು ಅನೇಕ ವೇಳೆ ಪ್ರತಿಪಾದಿಸಿದ್ದಾರೆ. ಭಾರತದ ಪ್ರತಿಯೊಂದೂ ಪ್ರದೇಶ— ಅಂದರೆ ಕೊನೆಯಲ್ಲಿ ಪ್ರತಿಯೊಂದೂ ಹಳ್ಳಿ— ಅಭಿವೃದ್ಧಿ ಹೊಂದುವಂತಾಗಬೇಕೆಂಬುದೇ ಅವರ ನಿರ್ಧಾರ ಆದರೆ ಸ್ಥಳೀಯ ಮುಖಂಡತ್ವ ಎಲ್ಲೆಡೆಯಲ್ಲೂ ಒಂದೇ ರೀತಿಯ ಉತ್ಸಾಹದಿಂದ ಕೂಡಿಲ್ಲವೆಂಬುದೇ ಇಲ್ಲಿ ಬರುವ ತೊಂದರೆ— ನಾವು ಸಾಧ್ಯವಾದಷ್ಟು ಕ್ಷಿಪ್ರದಲ್ಲಿ ಇಂಥ ಧ್ಯೇಯ ಸಾಧಿಸಬೇಕೆಂಬ ಸಂಕಲ್ಪವಿಟ್ಟು, ಕೆಲಸ ಮಾಡುವುದೇ ಇಲ್ಲಿ ತೆರೆದಿರುವ ಮಾರ್ಗ; ಹೊರತು ಮೂರೇ ವರ್ಷಗಳಲ್ಲಿ ಮಾಡಿ ಮುಗಿಸುವೆವೆಂಬ ಛಲದಿಂದ ಹೊರಟರೆ, ಆ ಛಲಕ್ಕೆ ಸರಿಯಾದ ರೀತಿಯ ಅನುಕೂಲತೆಗಳು ಎಲ್ಲೆಡೆಯಲ್ಲಿ ಸಿಗುವುದು ಸಂಶಯ.

ಅಭಿವೃದ್ಧಿಯು ನಿರಂತರವಾದ ಒಂದು ಕಾರ್ಯಕ್ರಮ-ಎಂಬ ವರದಿಯಲ್ಲಿನ ವಾಕ್ಯವು ಶಾಶ್ವತ ಸತ್ಯವನ್ನೆ ನಿರೂಪಿಸುತ್ತದೆ. ಆದರೆ ಅವಧಿ ನಿರ್ಬಂಧವು ಅಭಿವೃದ್ಧಿಗೆ ತೀರ ಅತ್ಯಾವಶ್ಯಕವಾದುದಲ್ಲ. ಕಟ್ಟುನಿಟ್ಟಾದ ನಿಲುವೆಯೂ ಇಲ್ಲಿ ಯೋಗ್ಯವಾದುದಲ್ಲ. ವರದಿಯಲ್ಲಿಯೇ ಇದನ್ನು ತೋರಿಸುವ ಕೆಲವು ಸಂಗತಿಗಳಿವೆ: ಕೆಲಸವು ಕೊನೆಯ ವರ್ಷದಲ್ಲಿಯಷ್ಟೆ ನಡೆಯಿತೆಂದು ಮೊದಲೇ ಹೇಳಿದ್ದೇವೆ. ಸರಕಾರವು ನಿಗದಿಗೊಳಿಸಿದ ಪ್ರಮಾಣದಲ್ಲಿ ಹಣವನ್ನು ಈ ಅವಧಿಯಲ್ಲಿಯೇ ವೆಚ್ಚಮಾಡುವುದು ಸಾಧ್ಯವಾಗಿಲ್ಲವೆಂಬುದನ್ನು ಇನ್ನೊಂದು ನಿದರ್ಶನವಾಗಿ ಕೊಡಬಹುದು. (ಹಣವನ್ನು ಖರ್ಚುಮಾಡುವುದೂ ಒಂದು ಸಮಸ್ಯೆ!) ಸುಧಾರಿತ ಬೀಜ, ಗೊಬ್ಬರಗಳು ಎಲ್ಲ ಬಗೆಯ ಭೂಮಿಗೂ ಸಮಾನವಾಗಿ ಅನ್ವಯವಾಗುವುದಿಲ್ಲ—ಇದಕ್ಕೆ ತಕ್ಕ ವೈವಿಧ್ಯಪೂರ್ಣ ಪೂರೈಕೆಯಿಲ್ಲದೆ, ಕಟ್ಟುನಿಟ್ಟಾದ, ಇಕ್ಕಟ್ಟಾದ ಮಾರ್ಗದಲ್ಲಿ ಮುಂದುವರಿದರೆ ಪ್ರಯೋಜನ ಸಿಗದೆಂಬ ಸತ್ಯವು ಅನುಭವಕ್ಕೆ ಬಂದಿರುವುದು ಮತ್ತೊಂದು ನಿದರ್ಶನ. ಆದುದರಿಂದ ವರದಿಯಲ್ಲಿ (೧) ದೀರ್ಘಕಾಲೀನ ಪರಿಣಾಮ (೨) ಪರಿಸ್ಥಿತಿಗೆ ಹೊಂದಿಕೊಳ್ಳುವಂತ ಸ್ವಾತಂತ್ರ್ಯ ಮತ್ತು (೩) ಯೋಗ್ಯರೀತಿಯ ಹಾಗು ಸ್ಥಿರವಾದ ಮೇಲ್ತನಿಖೆ—ಎಂಬ ಮೂರು ಮುಖ್ಯ ಅಂಶಗಳ ಕಡೆಗೆ ಗಮನಹರಿಸಬೇಕೆಂದು ಎತ್ತಿ ಹೇಳಲಾಗಿದೆ.

ಗ್ರಾಮ ಪಂಚಾಯತುಗಳನ್ನು ಹಳ್ಳಿಯ ಅಭಿವೃದ್ಧಿ ಕಾರ್ಯಕ್ರಮದ ಜೀವಾಳವಾಗಿ ರೂಪುಗೊಳಿಸುವ ವಿಷಯವನ್ನು ವರದಿ ಪುರಸ್ಕರಿಸಿದೆ. ಇಂಥ ಪಂಚಾಯತುಗಳು ಕೆಲಸಮಾಡುತ್ತಿದ್ದಲ್ಲಿಯೇ ಪ್ರಗತಿಯ ವೇಗ ಹೆಚ್ಚಾಯಿತೆಂದು ಅದು ಹೇಳಿದೆ; ಈ ಬಗೆಯ ಪ್ರಗತಿಪರ ಕಾರ್ಯಕ್ರಮಗಳಲ್ಲಿ ಆಸಕ್ತಿವಹಿಸಿದ ದೆಸೆಯಿಂದ ಗ್ರಾಮಪಂಚಾಯತುಗಳು ಜನರ ಗೌರವ ಭಾವನೆಯನ್ನು ಸಂಪಾದಿಸಿವೆ ಎಂದೂ ವರದಿ ತಿಳಿಸಿದೆ. ಗ್ರಾಮ ಪಂಚಾಯತುಗಳಂಥ ಸ್ಥಳೀಯ ಸಂಸ್ಥೆಗಳಿಗೆ ಕೇವಲ ಧನ ಸಹಾಯ ನೀಡಿದರೆ ಸಾಲದು— ಗ್ರಾಮ ಪಂಚಾಯತುಗಳ ಶಕ್ತಿ ಹೆಚ್ಚುವಂತೆ ಯೋಗ್ಯ ಮಾರ್ಗದರ್ಶನ ಮತ್ತು ಕ್ರಿಯಾತ್ಮಕ ಸಹಕಾರವೂ ಸರಕಾರದಿಂದ ಬರಬೇಕು. ಜನರಿಂದಲೂ ಇದು ಸಿಗಬೇಕು ಎಂದು ವರದಿಯು ಸೂಚಿಸಿದೆ. ಹಳೆಯ ಮಾದರಿಯನ್ನೆ ಮುಂದರಿಸಿಕೊಂಡು ಹೋಗುವ ಇಚ್ಛೆಯನ್ನು ಹೊಂದಿದರೆ ಗ್ರಾಮ ಪಂಚಾಯತುಗಳಿಗೆ ಭವಿಷ್ಯವಿರಲಾರದು— ಬದಲಾಗುತ್ತಿರುವ ಸಮಾಜದೊಡನೆ ಹೊಂದಿಕೊಂಡು ಜಾಗೃತ ಸಾಮಾಜಿಕರ ಕ್ಷೇಮಾಭ್ಯುದಯವನ್ನೆ ಚಿಂತಿಸುವ ಚೈತನ್ಯಯುಕ್ತ ಸಂಸ್ಥೆಯಾಗಿ ಬಾಳುವುದರಲ್ಲೆ ಗ್ರಾಮ ಪಂಚಾಯತುಗಳ ಭವಿಷ್ಯವಿದೆ ಎಂದು ವರದಿಯು ಎಚ್ಚರಿಕೆಯನ್ನು ಕೊಟ್ಟಿದೆ.

ಕೃಷಿ ಕ್ಷೇತ್ರದಲ್ಲಿ ಸುಧಾರಣೆಗಳನ್ನು ಅಳವಡಿಸಿಕೊಳ್ಳುವ ಸ್ವಾಗತಾರ್ಹ ಮನೋಭಾವವನ್ನು ಸಾಗುವಳಿದಾರರು ಸಾಕಷ್ಟು ಕ್ಷಿಪ್ರವಾಗಿಯೇ ತೋರಿಸಿರುವರೆಂದು ವರದಿಯು ತಿಳಿಸಿದೆ. ತಮಗೆ ನಿರ್ಧಾರಯುತವಾಗಿ ಲಾಭವನ್ನೂ ಪ್ರಯೋಜನವನ್ನೂ ತಂದು ಕೊಡುವ ಯಾವುದೇ ಕ್ರಮಗಳನ್ನು ಅನುಸರಿಸಲು ರೈತರು ಹಿಂದುಳಿದಿಲ್ಲವೆಂದು ಅದು ಸಾರುತ್ತದೆ. ಉಚಿತ ಮಾದರಿಯ ಸುಧಾರಿತ ಕೃಷಿ ಸಲಕರಣೆಗಳ ಪೂರೈಕೆಯ ದೃಷ್ಟಿಯಿಂದಲಾದರೂ ಗ್ರಾಮೋದ್ಯೋಗಗಳು ಅತ್ಯಧಿಕ ಚೈತನ್ಯ ಯುಕ್ತವಾಗಿ ಬೆಳೆಯಬೇಕೆಂದು ಅದು ಅಪೇಕ್ಷಿಸಿದೆ. ಹಾಗೆಯೇ ಗ್ರಾಮ ಸೇವಕರು ಕೇವಲ ಪೂರೈಕೆಯ ಈ ವ್ಯವಸ್ಥೆಯನ್ನಷ್ಟೆ ಮಾಡುವ ಯಂತ್ರಗಳಾಗಿರದೆ ರೈತರ ವಿಶಿಷ್ಟ ಸಮಸ್ಯೆಗಳ ಪರಿಹಾರದಲ್ಲಿ ಮುತುವರ್ಜಿ ವಹಿಸಿ ದುಡಿಯುವ ತಿಳಿವಳಿಕೆ ಹೊಂದಿದ ಮಾರ್ಗದರ್ಶಿಗಳಾಗಬೇಕೆಂದು ವರದಿ ಹೇಳಿದೆ.

"ಗ್ರಾಮಸ್ಥರ ಸ್ನೇಹಿತ, ಹಿತೈಷಿ, ಮಾರ್ಗದರ್ಶಿ ಎಂಬುದಾಗಿ ಗ್ರಾಮ ಸೇವಕನ ಪಾತ್ರವನ್ನು ವರ್ಣಿಸಲಾಗಿದೆ. ಜನರನ್ನು ಹೆಚ್ಚು ಪ್ರಯತ್ನಶೀಲರಾಗುವಂತೆ ಮಾಡುವ, ಅವರಿಗೆ ಒಳ್ಳೆಯದಾಗಿ ಜೀವನ ನಡೆಸಲು ಕಲಿಸಿಕೊಡುವ, ಅವರಿಗೆ ಇದಕ್ಕಾಗಿ ಏನು ಕೆಲಸಗಳನ್ನು ವ್ಯಾವಹಾರಿಕ ಕ್ಷೇತ್ರದಲ್ಲಿ ಕೈಗೊಳ್ಳಬೇಕೆಂದು ಮನವೊಲಿಸುವಿಕೆಯ ಮೂಲಕ ತಿಳಿಸಿ ಹೇಳುವ ಪಾತ್ರ ಅವನದು. ಇಲ್ಲಿ ಕೃಷಿ ಕ್ಷೇತ್ರದ ಚಟುವಟಿಕೆಗೆ ಪ್ರಾಧಾನ್ಯ ಸಲ್ಲುತ್ತದೆ— ಅವನಿಗೆ ಇದಕ್ಕೆಂದೇ ವಿಶೇಷ ತರಬೇತಿ ಕೊಡಲಾಗಿದೆ. ಆದರೆ ತನ್ನ ಕಾರ್ಯಕ್ಷೇತ್ರದಲ್ಲಿ ಗ್ರಾಮ ಸೇವಕನು ಈ ಎಲ್ಲ ಸಂಗತಿಗಳನ್ನೂ ಮರೆತು ಬಿಟ್ಟಿರುತ್ತಿದೆ.—ಅವನಿಂದ ಸಲ್ಲುವ ಸೇವೆಯು ಮೂಲೋದ್ದೇಶಕ್ಕೆ ಏನೇನೂ ಹೊಂದಿಕೊಳ್ಳುವುದಿಲ್ಲ. ಈ ಅಂತರವು ತುಂಬಿಬರಬೇಕು." ಎಂದು ವರದಿಯು ಗ್ರಾಮ ಸೇವಕರ ಚಟುವಟಿಕೆಯ ಕುರಿತು ವಿಮರ್ಶಾತ್ಮಕ ಅಭಿಪ್ರಾಯವನ್ನಿತ್ತಿದೆ.

ಕೈಗೂಡಿಸಿದ ಪ್ರತಿಯೊಂದೂ ಅಭಿವೃದ್ಧಿ ಕಾರ್ಯಕ್ರಮವನ್ನು ಶಾಶ್ವತರೀತಿಯಲ್ಲಿರಗೊಡಿಸಲು, ಗ್ರಾಮಸೇವಕನು ಉಚಿತವ್ಯವಸ್ಥೆಗಳನ್ನು ಜನತಾ ಸಹಕಾರ ಹಾಗು ಸರಕಾರ ಸಹಾಯದಿಂದ ಏರ್ಪಡಿಸಲು ಎಷ್ಟಕ್ಕೂ ತಪ್ಪಬಾರದೆಂದು ವರದಿಯು ಹೇಳುತ್ತದೆ. ಇದು ತೀರ ಮುಖ್ಯವಾದ ವಿಷಯ—ಶಾಲೆಯನ್ನಾಗಲೀ ಆಸ್ಪತ್ರೆಯನ್ನಾಗಲೀ ಕಟ್ಟಿಸುವುದು ಮುಖ್ಯವಲ್ಲ; ರಸ್ತೆಯನ್ನು ನಿರ್ಮಿಸುವುದೇ ದೊಡ್ಡ ಕೆಲಸವಲ್ಲ. ಇವೆಲ್ಲವನ್ನೂ ಕೊನೆಯವರೆಗೆ ಉಳಿಸಿಕೊಂಡು ಹೋಗುವ, ಮೇಲ್ತನಿಖೆಯನ್ನು ಮಾಡುತ್ತಾ ಹೋಗುವ ಏರ್ಪಾಡು ಮಾಡುವುದೇ ದೊಡ್ಡ ಕೆಲಸ. ಹಳ್ಳಿಗರ ಉತ್ಸಾಹ ಕ್ಷಣಿಕವಾದುದಾಗಿದ್ದರೆ, ಕೇವಲ ಒತ್ತಾಯ ಅಥವಾ ದಾಕ್ಷಿಣ್ಯಗಳೇ ಅವರ ಪ್ರೇರಕ ಶಕ್ತಿಯಾಗಿದ್ದರೆ, ಇಂಥ ವ್ಯವಸ್ಥೆ ಲಭ್ಯವಾಗಲಾರದು. ಸರಕಾರವೇ ಈ ಭಾರ ಹೊರಬೇಕಾದರೆ, ಜನತಾ ಸಹಕಾರ ದೊರೆತಿದೆ ಎಂಬ ಮಾತಿಗೇನೂ ಮಹತ್ವ ಉಳಿಯದು. ನಮ್ಮ ಜನರು ಈ ಸತ್ಯವನ್ನು ಗಂಭೀರವಾಗಿ ಗಮನಿಸಬೇಕು—ಮತ್ತು ಮನೋಭಾವವನ್ನು ರಾಷ್ಟ್ರಾಭ್ಯುದಯಕ್ಕೆ ಪೋಷಕವಾಗುವಂತೆ ತಿದ್ದಿಕೊಳ್ಳಬೇಕು—ಎಂಬುದೇ ನಮ್ಮ ಆಶಯ.

ಮಕ್ಕಳ ಮಗಿಪುಸ್ತಕ

೧

0—1— 0

ನವಯುಗ ಪ್ರೆಸ್, ಉಡುಪಿ.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರೆಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ವಸ್ತುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

Head Office: Tenkapet, **Udipi**, S. K. *Phone:* 6



ಕುಮಾರಿ ಚಿತ್ರಿಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಗುರುದೇವ ಠಾಕೂರರ ತುಂಬು ಜೀವನ

(೨ನೇ ಪುಟದಿಂದ)

... ಆದರೆ ರವೀಂದ್ರರು ಮಿಗಿಲಾಗಿ ... ಪ್ರೇಮಿ ಅಂತೇ ಭಾರತ ಶಿಶು ...ಣವಲ್ಲಿ ಹಲವುಬಗೆಯಾಗಿ ತಮ್ಮ ...ನವನ್ನು ಕಳೆದರು. ಭಾರತದ ಶ್ರೀ ...ನನ್ನು ಮರೆತರೂ ನವನೀತ ಚೋ... ...ದ, ಕಡೆಗೋಲು ಧರಿಯಿಂದ ಗೋ... ...ಬಾಲನನ್ನು ಮರೆಯಲಾಗದು. ...ಯೋ ಸ್ವರಾಜ್ಯ ಚಳುವಳಿಗಾರನಾ... ...ಮತ್ತು "ಗೋರಾ" ಬರೆದುಕೊಟ್ಟ ...ಕೂರರನ್ನ ಮರೆತರೂ "ಪೋಸ್ಟ್‌ಮಾಸ್ಟರ್" ...ಮ, ಶಿಶುಗೀತೆ ಹಾಡಿ, ಶಾಂತಿನಿಕೇತ... ...ಲ್ಲಿ ವಿಶ್ವಭಾರತಿಯೆಂಬ ವಿದ್ಯಾವಟಿ... ...ವನ್ನೂ ನೆಟ್ಟು ಬೆಳೆಸಿದ ...ದೇವನನ್ನು ಮರೆಯಲಾಗದು. ಶ್ರೀ ರವೀಂದ್ರ ಗುರುದೇವರು ತಮ್ಮ ...ನೇ ವಯಸ್ಸಿನಲ್ಲೇ ಶಾಂತಿನಿಕೇತನಾ... ...ವನ್ನು ತಮ್ಮ ಮಕ್ಕಳೂ ಸೇರಿ ...ವಿದ್ಯಾರ್ಥಿಗಳಿಂದ ಆರಂಭಿಸಿದರು. ...ಮಕ್ಕಳಿಗ ಕಲಿಸಲಾಗಿ ತಾವೇ ಅವರ ...ಗಡ ಹೊಸ ಹೊಸ ಭಾಷೆಗಳನ್ನೂ ...ಗಳನ್ನೂ ಕಲಿತರು— ಸಾಹಿತ್ಯದಿಂ... ...ಜ್ಞಾನ ಹಾಗು ಜ್ಯೋತಿಷ ಶಾಸ್ತ್ರದ ...ಕೆ ಎಲ್ಲವನ್ನೂ ಪರಿಚಯ ಮಾಡಿ ...ಡು ಎಲ್ಲದಕ್ಕೂ ನಿದರ್ಶನವಾಗಿ ...ಯ ಪುಸ್ತಕಗಳನ್ನೂ ರಚಿಸಿದರು. ...ತ ಕಲಿಸುವ ಮಕ್ಕಳಿಗಾಗಿ ವಿಶ್ವಮತ ...ಬೋಧಿಸಿದರು. ಪ್ರಕೃತಿಯ ಸಂ... ...ಧ ತಪ್ಪಬಾರದೆಂದು ಮರಗಳ ಬಳಿ... ...ಯಲ್ಲಿಯೇ ಪಾಠ ಪ್ರವಚನಗಳನ್ನು ಸಾಗಿಸಿದರು, ಶಿಸ್ತು ಪಾಲನೆ, ಸತ್ಯ ರಕ್ಷಣೆ, ಆರೋಗ್ಯ ಪಾಲನೆ ಹಾಗು ಸಮಾಜ ಜೀವನಗಳನ್ನು ಶಾಂತಿನಿಕೇತನ ಮತ್ತು ಶ್ರೀನಿಕೇತನಗಳ ಜೀವನ ನಿಯಮಗಳಲ್ಲಿ ಅಳವಡಿಸಿದರು. ಸಾಹಿತ್ಯ ಪಾಠಕ್ಕೆ ಭಾವ ಜೀವನಕ್ಕೆ ನಾಟಕ, ನೃತ್ಯ, ಗೀತೆ ಇತಿ ಮುಖ್ಯವೆಂದರಿತು ಆಶ್ರಮದಲ್ಲೊಂದು ರಂಗಮಂಚವನ್ನೇರ್ಪಡಿಸಿ ತಾವೇ ಮೊದಲು ವೇಷಹಾಕಿಕೊಂಡು ನಾಟಕ ಹೂಡಿದರು. ಭಾರತ ಸಂಸ್ಕೃತಿಯು ಅಜಂತ ಗುಹೆಗಳಲ್ಲಿ ರೂಪಿತವಾದುದನ್ನು ಅರಿತು, ಅದೇ ಹಾದಿಯಲ್ಲಿ ಚಿತ್ರಶಿಲ್ಪ ಅಭ್ಯಾಸ ಮಾಡುವುದಕ್ಕಾಗಿ ಕಲಾಭವನವನ್ನು ಏರ್ಪಡಿಸಿದರು. ಮತ್ತು ಹಳ್ಳಿಗಳ ಸಂಪರ್ಕವಿಲ್ಲದಿದ್ದರೆ ಯುವಕ ಯುವತಿಯರ ವಿದ್ಯಾಭ್ಯಾಸ ಪರಿಪೂರ್ಣವಾಗದೆಂದರಿತು ಶ್ರೀನಿಕೇತನವನ್ನು ಆರಂಭಿಸಿದರು. ಈಗ ಶ್ರೀ ನೆಹರೂರವರ ನೇತೃತ್ವದಲ್ಲಿ ವಿಶ್ವಭಾರತಿ ಸಕಲ ಕಲಾನಿಲಯವು ಬೆಳೆದು ಬರುತ್ತಲಿದೆ.

ಮಕ್ಕಳಿಗಾಗಿ ಶ್ರೀ ರವೀಂದ್ರರು 'ಅಂಚೆಮನೆ. ಕಾಬೂಲಿವಾಲಾ' ಮೊದಲಾದ ಕತೆ ಕವಿತೆ ನಾಟಕಗಳನ್ನು ಬರೆದರು. ಅವರು ಬರೆದ ಸಾಹಿತ್ಯ ರೂಪುಗಳೆಲ್ಲವೂ ಅಪೂರ್ವವಾಗಿ, ಭಾವಪೂರ್ಣವಾಗಿ, ಅರ್ಥ ಗಂಭೀರತಗಳಾಗಿರುವುದರಿಂದ ಮಕ್ಕಳಿಗೆ ಆಕರ್ಷಣೀಯವಾಗಿವೆ. ಶರದುಸ್ಸವದಲ್ಲಿ ಮೋಘೇರ ಕೋಲೆ, ರೋದ್ ಹಸೇಛೇ, ಬಾದಲ್ ಗೇಛೇ, ಟೂಟೇ ಎನ್ನುವಾಗ ಮೋಡದತೊಡೆಯಲ್ಲಿ ಬಿಸಿಲು ಮಗು ನಗುತ್ತಿದೆಯೆನ್ನುತ್ತಾರೆ. ಬಾದಲ, ಜೌವುಲ ಬಾಜಾಯ್, ಬಾಜಾಯ್, ಬಾಜಾಯ್ ರೇ— ಏತಾಯ್, ಪಾತಾಯ್, ಟೂಪುರು, ಟೂಪುರು, ನೂಪುರ ಮಾಧುರ, ಭಾಜೇ ಎನ್ನುವಾಗ ಮಳೆಗಾಲವೆಂಬ ಬೂದಿಬಡಕ ಜೋಗಿಯು ಗಗ್ಗರ ಹಾಕಿದ ಕಾಲಲ್ಲಿ ಕುಣಿತ ಕಟ್ಟಿದ್ದಾನೆ ಎನ್ನುವರು. ಓಗೋ ಆಮಾದೇರ ಶಾಂತಿನಿಕೇತನ ಎಂದು ಹಾಡುವಾಗ ಶಾಂತಿನಿಕೇತನವೊಂದು ತಾಯಿ ಮನೆಯಾಗುತ್ತದೆ. ಅಲ್ಲಿನ ಮರ ಬಳ್ಳಿಗಳೆಲ್ಲ ಅಣ್ಣ ಅಕ್ಕಂದಿರಾಗುತ್ತಾರೆ. ನಿತ್ಯ ಪ್ರಾರ್ಥನೆಯಲ್ಲಿ ||ಪಿತಾನೋಸಿ, ಪಿತಾನೋ ಬೋಧಿ ಮಾಮಾಹಿಂಸೀಃ|| ಎಂದು ಹೇಳುವಾಗ ದೇವರೇ ತಂದೆಯಾಗುತ್ತಾನೆ. ಆ ದೇವ ಪಿತೃವು ಒಳ್ಳೆಯದನ್ನೇ ಆಗ ಮಾಡುತ್ತಾನೆ. ಈ ರೀತಿಯಲ್ಲಿ ಕುಣಿದು ಕುಪ್ಪಳಿಸಿ ಬೆಳೆದ ಮಕ್ಕಳು ಎಂಥಾ ನಾಟಕವಾಡುತ್ತಾರೆ. ಶ್ರೀ ಗುರುದೇವರೇ ಬಾಲಕ ಬಾಲಕಿಯರಿಗಾಗಿ ಬರೆದ ನಾಟಕಗಳನ್ನು ಆಡುತ್ತಿದ್ದರು.

ಪೋಸ್ಟ್‌ಮಾಸ್ಟರ್‌ದಲ್ಲಿ ಅಮಲ ನೆಂಬವನು ನಿತ್ಯ ರೋಗಿಯಾಗಿದ್ದು ತನ್ನ ಭಾವನೆಯ ಪ್ರಪಂಚದಲ್ಲೇ ಕಾಲಕಳೆದು ಮಡಿಯುತ್ತಾನೆ. ಈ ಪ್ರಪಂಚದ ಕಾವಲುಗಾರನೂ, ಅಂಚೆಯವನೂ, ಮೊಸರು ಮಾರುವವನೂ ಮತ್ತು ವೈದ್ಯನೂ ಸಹ ಅಮಲನಿಗೆ ದಿವ್ಯರೂಪಿಗಳಾಗುತ್ತಾರೆ. ಮುಕುಟ ನಾಟಕದಲ್ಲಿ ಅಣ್ಣ ತಮ್ಮಂದಿರು ಪರಸ್ಪರ ಹೇಗಿರಬೇಕೆಂದು ತಿಳಿಯುತ್ತಾರೆ. ಇಂಥಾ ನಾಟಕಗಳು ವಸಂತಕ್ಕೂ, ವರ್ಷಕ್ಕೂ, ಶರದಕ್ಕೂ ಶಿಶಿರಕ್ಕೂ ಇವೆ. ಕತೆಯ ಪ್ರಪಂಚದಲ್ಲಿ ಶ್ರೀ ರವೀಂದ್ರರು ಮಾದರಿ ಮಕ್ಕಳನ್ನು ಸೃಷ್ಟಿಸಿದರು. ಛೂಟಿಯಲ್ಲಿ ಫಟಿಕನಂಥ ಅಣ್ಣನು ಪುಟಾಣಿಗಿದ್ದರೂ ಸ್ನೇಹಪರ, ಪ್ರೇಮಪರನೆಂದು ತಿಳಿಯುತ್ತದೆ. ಪೋಸ್ಟ್‌ಮಾಸ್ಟರನಲ್ಲಿ ಆಳಾದ ರಾಯಿಚರಣನು ಎಂಥಾ ಸ್ವಾಮಿಭಕ್ತಿಯನ್ನು ತೋರಿಸಿಯಾನೆಂದು ವ್ಯಕ್ತವಾಗುತ್ತದೆ. ಕಾಬೂಲಿವಾಲಾದಲ್ಲಿ ಮಿನ್ನಿಯ ಶಿಶುಭಾವನೆಯಿಂದ ಪರಪ್ರಾಂತೀಯರಲ್ಲಿ ಎಂಥಾ ಅನುಕಂಪವಿರಬೇಕೆಂದು ತಿಳಿಯುತ್ತದೆ

ಶಿಶು ಕವಿತೆಗಳಲ್ಲಿ ಮಗುವನ್ನು ಯಾವ ರೀತಿಯಲ್ಲಿ ಕಂಡುಕೊಳ್ಳಬೇಕೆಂದು ಅವರು ವಿವರಿಸುತ್ತಾರೆ. ಧೂಳಿನಲ್ಲಿರುವ ಕೂಸು ಮೋಡದ ನಡುವಿನ ಚಂದ್ರನಂತೆ ಮಗುವನ್ನು ಮನ್ನಿಸುವ ತಾಯಿ ತಂದೆಯರು ಅರ್ಥಮಾಡಿಕೊಳ್ಳುವರು. ಮಗುವು ವಿರೋಧಿಸಿದ ಅವನ ಅವನು ತಾಯಿಯನ್ನು ಪ್ರಪಂಚದ ಭೀತಿಯಿಂದ ಪಾರು ಮಾಡುತ್ತಾನೆ. ಪರಲೋಕದಲ್ಲಿರುವ ಕೂಸಾದರೂ ತನ್ನ ತಾಯಿಯನ್ನಗಲಿ ಹೋಗುವುದಿಲ್ಲ. ಹೂವಿನ ಪರಿಮಳವಾಗಿಯಾದರೂ ತಾಯಿಯ ಬಳಿ ಸುಳಿದಾಡುತ್ತದೆ. ಈ ರೀತಿಯಾಗಿ ಮಕ್ಕಳ ಚಲನವಲನಗಳ ಅರ್ಥವನ್ನು ಹೇಳಿದ ಮೇಲೆ ಮಕ್ಕಳ ಮನಸ್ಸನ್ನು ಅರಿತು ನಡೆಯಿರೆಂದು ಸಾರಿ ಸಾರಿ ಹೇಳುತ್ತಾರೆ. ಛೂಟಿಯಲ್ಲಿ ತಾಯಿಯು ಮಗನ ಒರಟುತನಕ್ಕೆ ಕಾರಣವನ್ನರಿಯದೆ ಅವನನ್ನು ಕೈಯ್ಯಾರ ಕೊಂದಳು ಕಾಬೂಲಿವಾಲಾದಲ್ಲಿ ಮಿನ್ನಿ ಯ ಹಾದಿಯಲ್ಲಿ ಹೋಗಿ ಪರದೇಶಿಯ ನಡೆವಳಿಕೆಗೆ ಕಾರಣವನ್ನು ಮೊದಲೇ ಅರಿತಿದ್ದರೆ ಕಷ್ಟವಿರುತ್ತಿರಲಿಲ್ಲ ಪೋಸ್ಟ್‌ಮಾಸ್ಟರನಲ್ಲಿ ಅಮಲನ ಮನಸನ್ನರಿತು ಗಾಳಿ ಬಿಸಿಲಲ್ಲಿ ಓಡಾಡಲು ಬಿಟ್ಟಿದ್ದರೆ ಅವನು ಅಷ್ಟು ಬೇಗ ಸಾಯುತ್ತಿರಲಿಲ್ಲ ಈ ರೀತಿಯಾಗಿ ಮಕ್ಕಳ ಪರವಾಗಿ ಬರೆದ ಪದ್ಯ ಗದ್ಯ ನಾಟಕ ಕೃತಿಗಳು ಸುಮಾರಾಗಿ ರವೀಂದ್ರ ರಚನಾವಳಿಯ 26 ಗ್ರಂಥಗಳಲ್ಲಿ ಮೂರನೆ ಒಂದು ಭಾಗವೇ ಇರಬಹುದು.

ಒಟ್ಟಿನ ಮೇಲೆ ಮಕ್ಕಳಿಗಾಗಿ ಶ್ರೀ ರವೀಂದ್ರರು ಅಮರ ಸಾಹಿತ್ಯವನ್ನು ಒದಗಿಸಿದರು. ಮಕ್ಕಳಿಗಾಗಿ ಶಾಂತಿನಿಕೇತನದಲ್ಲಿ ಸನಾತನಾಶ್ರಮವನ್ನೂ ಸ್ಥಾಪಿಸಿದರು. ಅವರ ಗ್ರನೆಯ ಫಲಗಳೆಲ್ಲ ಇಡಿಯ ಪ್ರಪಂಚಕ್ಕೇ ಒಪ್ಪಿಗೆಯಾದವು. ಎಂಥಾ ಕಷ್ಟ ಬಂದಾಗಲೂ, ನೆಚ್ಚಿದವರೆಲ್ಲ ಕೈ ಬಿಟ್ಟಾಗಲೂ, ಎಕ್ಲ ಚಲೋ, ಎಕ್ಲ ಚಲೋ, ಓರೇ ಹೇ ಅಭಾಗಾ ಏಕ್ಲ ಚಲೋ, ಎಂತ ಒಬ್ಬರೇ ಮುನ್ನುಗ್ಗಿದರು. ಭಾರತ ಸಂಸ್ಕೃತಿ ಛಾಪದ ಮುದ್ರೆಯನ್ನೊಡೆದು ಅದರ ಭಾವಗಳನ್ನು ಮತ್ತೆ ಬಿತ್ತಿ ಬೆಳೆದರು. ಅದರ ಸವಿಯಾಗಿ ವಿಶ್ವ ಭಾರತೀ ಸಂಸ್ಥೆಯೂ, ಜನಗಣ ಮನ ಗೀತೆಯೂ ಉಳಿದಿವೆ. ಈ ಶಾಂತಿನಿಕೇತನದ ಅಮೃತ ಶಿಲೆಯಲ್ಲಿ ಸಪ್ತಪರ್ಣಿ ಛಾಯೆಯಲ್ಲಿ ಕೆತ್ತಿರುವಂತೆ ಶ್ರೀ ರವೀಂದ್ರರ ನೆನಪು ನಮ್ಮ ಪ್ರಾಣಕ್ಕೆ ವಿಶ್ರಾಂತಿಯನ್ನೂ, ಮನಸ್ಸಿಗೆ ಆನಂದವನ್ನೂ ಆತ್ಮಕ್ಕೆ ಶಾಂತಿಯನ್ನೂ ತಂದುಕೊಡುತ್ತದೆ.

ತಿನಿ ಆಮಾರ್ ಪ್ರಾಣೇರ್ ಆರಾಮ್
ತಿನಿ ಆಮಾರ್ ಮನೇರ್ ಆನಂದ
ತಿನಿ ಆಮಾರ್ ಆತ್ಮಾರ್ ಶಾಂತಿ

[ಗುರುದೇವ ಠಾಕೂರರ ಜಯಂತಿಯಂದು (ತಾ 8-5-1956) ಬೆಂಗಳೂರು ಆಕಾಶವಾಣಿಯ ಮೂಲಕ ಮಾಡಿದ ಭಾಷಣ]

ಮುಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

...ಗರ ಹಿತಸಾಧನೆಗಾಗಿ 1929ರಲ್ಲಿ ...ಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

MOOLKY BANK LTD., MULKI.



ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೋಸಿಟ್ ವಾಲ್ಟ್

ಮಂಗಳೂರು—3.

(೧ನೇ ಪುಟದಿಂದ)

ವ್ಯಕ್ತಿಗಿಂತ ಎಷ್ಟೋಪಾಲು ಹೆಚ್ಚಿನ ಜವಾಬ್ದಾರಿ ಸರಕಾರಕ್ಕಿದೆ; ಆದುದರಿಂದ ಅದರ ಕಾರ್ಯಕ್ರಮದಲ್ಲಿ ಗಾಂಭೀರ್ಯ ಹೆಚ್ಚು; ಹಲವು ಮುಖದ ಪರಾಮರ್ಶೆ ಅತ್ಯಾವಶ್ಯಕ; ಆದುದರಿಂದಲೇ ಮೆಲು ನಡೆಯು ಅನಿವಾರ್ಯ. ಸಮಾಜವನ್ನು ವಿಕೇಂದ್ರೀಕೃತ ಆರ್ಥಿಕ ವ್ಯವಸ್ಥೆಯ ಮೇಲೆ ಪುನರ್ಘಟಿಸಬೇಕಾಗಿದ್ದರೂ ಮೂಲ ಕೈಗಾರಿಕೆಗಳ ಪೂರೈಕೆ ಇಲ್ಲದಿದ್ದರೆ ಪ್ರಗತಿಸಾಧ್ಯವಾಗದು. ಸರಕುಗಳ ನಿರ್ಮಿತಿಗೆ ಅತ್ಯಾವಶ್ಯಕವಾದ ಕಬ್ಬಿಣದಂಥ ಕಚ್ಚಾವಸ್ತು, ನಿತ್ಯೋಪಯೋಗದ ವಸ್ತುಗಳನ್ನು ಉತ್ಪಾದಿಸಬಲ್ಲ ಸಾಧನವನ್ನು ರಚಿಸುವ ಮಹಾಯಂತ್ರ ಇವೆಲ್ಲ ನಮಗೆ ವಿಕೇಂದ್ರೀಕೃತ ಪದ್ಧತಿಗಾದರೂ ಬೇಕೇ ಬೇಕು. ಅದನ್ನು ಪೂರೈಸಲು ಸ್ವಲ್ಪ ಅವಧಿಯನ್ನು ತೆಗೆದುಕೊಳ್ಳಲು ಹವಣಿಸಿದ ಮಾತ್ರಕ್ಕೆ ಗಾಂಧೀಜಿಯಿಂದ ದೂರ ಹೋದೆವೆನ್ನುವುದು ಸಮಂಜಸವಾಗಲಾರದು—ಎಂಬ ವಾದವು ಹುರುಳಿಲ್ಲದುದೇನೂ ಅಲ್ಲ.

ಆರ್ಥಿಕ ಕ್ಷೇತ್ರಕ್ಕಿಂತಲೂ ಸಾಮಾಜಿಕ ಕ್ಷೇತ್ರದ ಚಟುವಟಿಕೆಗಳನ್ನು ನೋಡಿದರೆ ಗಾಂಧೀಜಿಗೆ ಪ್ರಿಯವಾದ ಕೆಲಸಗಳನ್ನೆ ಭಾರತದಲ್ಲಿ ಮಾಡುತ್ತಿದ್ದೇವೆಂಬ ಸತ್ಯ ಮನವರಿಕೆಯಾಗುತ್ತದೆ. ಮಹಿಳೋದ್ಧಾರಕ್ಕಾಗಿ ಕೈಗೊಂಡಿರುವ ಕ್ರಮಗಳು ಗಾಂಧೀಜಿಗೆ ಮೆಚ್ಚಿಕೆಯಾದವುಗಳೇ ಆಗಿವೆ; ಅಸ್ಪೃಶ್ಯರ ಉದ್ಧಾರಕ್ಕಾಗಿ ರೂಪಿಸಿದ ಕಾರ್ಯಕ್ರಮಗಳಾದರೂ ಗಾಂಧೀಜಿಯ ಹೃದಯಕ್ಕೊಗ್ಗುವಂತಿವೆ; ಮದ್ಯಪಾನ ಪ್ರತಿಬಂಧದಂಥ ಸಾಹಸಪರ ಶಾಸನವು ಗಾಂಧೀಜಿಯ ಆದರ್ಶಕ್ಕೆ ತೀರ ಒಪ್ಪುತ್ತದೆ; ಖಾದಿ ಮತ್ತು ಗ್ರಾಮೋದ್ಯೋಗಗಳ ಕುರಿತು ವಹಿಸಿರುವ ಉದಾರ ವರ್ತನೆ ಮತ್ತು ನೀಡುತ್ತಿರುವ ಅಪಾರ ಸಹಾಯವು ಗಾಂಧೀಜಿಗೆ ಸಮಾಧಾನ ತರುವಂತಿರುವುದು ಸತ್ಯ. ಇವೆಲ್ಲ ವಿಷಯಗಳನ್ನು ಪರ್ಯಾಲೋಚಿಸಿದರೆ ನಾವು ಮಾರ್ಕ್ಸನ ಅನುಸರಣೆಯನ್ನೆ ಮಾಡುತ್ತಿದ್ದೇವೆಂಬ ನಿರ್ಣಯಕ್ಕೆ ಬರುವುದು ಸರಿಯಾಗಿ ಕಾಣುವುದಿಲ್ಲ. ಗಾಂಧೀಜಿಯ ಆದರ್ಶದಿಂದ ನಾವು ಮೂರು ಮಾರು ದೂರವಿರಬಹುದೆಂದು ಒಪ್ಪಿಕೊಳ್ಳುವುದಕ್ಕೆ ಅಡ್ಡಿಯಿಲ್ಲ—ಆದರೆ ಮಾರ್ಕ್ಸನ ಆದರ್ಶದಿಂದ ನೂರು ಮಾರಿನಷ್ಟು ದೂರದಲ್ಲಿದ್ದೇವೆ ಎಂಬುದೇ ನಮಗೆ ಇಲ್ಲಿರುವ ಸಮಾಧಾನ.

ದೇಶದೊಳಗಿನ ಧೋರಣೆಯ ಕುರಿತು ಕಮ್ಯುನಿಸ್ಟರು ಅಸಹನೆಪಟ್ಟುಕೊಳ್ಳುವುದು ಈ ಕಾರಣದಿಂದ ತೀರ ಸಹಜ: ಅವರು ವಿದೇಶ ಧೋರಣೆಯ ಕುರಿತಾಗಿ ಯಾವರೂ ಸಂತೋಷಪಡುವುದಕ್ಕೆ ಕಾರಣ ಸಾಲದು. ರಾಜಕೀಯ ಕುಯುಕ್ತಿಯಿಂದ ರಶ್ಯವು ಭಾರತದ ವಿದೇಶ ಧೋರಣೆಯನ್ನು ಹೊಗಳಿರುವುದರಿಂದ ಇಲ್ಲಿಯ ಕಮ್ಯುನಿಸ್ಟರು ಆ ಪ್ರಶಂಶಾ ವಾಕ್ಯಗಳನ್ನು ಪುನರುಚ್ಚರಿಸಿದರು; ಹೊರತು, ಅವರ ಆರಾಧ್ಯ ದೈವವಾದ ಮಾರ್ಕ್ಸನ ತತ್ವಗಳಿಗೆ ಭಾರತದ ನಿಲುವು ಅನುಗುಣವಾದುದೆಂಬುದೇ ಇದರ ಕಾರಣವಲ್ಲ. ಆದುದರಿಂದ ಕಮ್ಯುನಿಸ್ಟರ ಅನುಮೋದನೆಯಲ್ಲಿ ಪೂಜ್ಯ ಭಾವವೇನೂ ಇಲ್ಲ— ಆದರೆ ಭಾರತ ಸರಕಾರದ ಮಟ್ಟಿಗೆ ಹೇಳುವುದಾದರೆ ಗಾಂಧೀಜಿಯ ಆದರ್ಶಪರ ಉಪದೇಶಗಳ ಮೇಲೆ ಅದಕ್ಕೆ ಪರಮ ವಿಶ್ವಾಸವಿರುವುದು ಪ್ರತಿಯೊಂದು ಸಂದಿಗ್ಧ ಪ್ರಸಂಗದಲ್ಲಿಯೂ ಕಂಡು ಬಂದಿದೆ. ಮಗನ ಕಿವಿ ಹಿಂಡಿ ಬುದ್ಧಿ ಹೇಳಲು ಹಿಂಜರಿಯದ ತಂದೆಯಂತೆ ದೇಶದೊಳಗಿನ ವ್ಯವಹಾರದ ಮಟ್ಟಿಗೆ ಕಂಡು ಬಂದ ಸರಕಾರವು ವಿದೇಶ ಧೋರಣೆಯ ಮಟ್ಟಿಗೆ ಮಗನಿಗೆ ಹೊಡೆದಾತನಮ್ಮೆ ಮುಟ್ಟಿ ಹೋಗುವುದೂ ಅನ್ಯಾಯವೆಂಬ ಜಾಗೃತ ಪ್ರಜ್ಞೆಯನ್ನು ತೋರಿಸುತ್ತದೆ: ಅಷ್ಟು ಸಂಯಮ ಮತ್ತು ಸಹನೆ ಅದರದು.

ಇದೇ ಗಾಂಧೀಜಿಯ ಉಪದೇಶದ ನಿಜಪ್ರಭಾವ. ಸಾಹತುವಾದಕ್ಕೆ ವಿರೋಧವನ್ನು ವ್ಯಕ್ತಪಡಿಸುವ ಯಾವ ಸಂದರ್ಭವನ್ನೂ ಭಾರತ ಸರಕಾರ ಬಿಟ್ಟುಕೊಟ್ಟಿಲ್ಲ-ಆದರೆ ಹಿಂಸಾಮಾರ್ಗವನ್ನು ಅವಲಂಬಿಸಲಾಗದೆಂಬ ಗಾಂಧೀಜಿಯ ಪವಿತ್ರ ವಾಕ್ಯವನ್ನದು ಮರೆತಿಲ್ಲ. ಹೃದಯಶುದ್ಧಿಯಿಂದಲೇ ಕಲ್ಯಾಣವೆಂಬ ಗಾಂಧೀಜಿಯ ತತ್ವವನ್ನು ಭಾರತ ಸರಕಾರವು ವಿದೇಶ ವ್ಯವಹಾರದಲ್ಲಿ ಎಲ್ಲರಿಗೂ ಮುಂದಟ್ಟುಪಡಿಸಿದೆ — ನೈತಿಕ ಶಕ್ತಿ ಸಂಪನ್ನ ರಾಷ್ಟ್ರವೊಂದಿದ್ದರೆ ಅದು ಭಾರತವೆಂದು ಎಲ್ಲರೂ ಬೆರಳೆತ್ತಿ ತೋರಿಸುವಂತೆ ಅದು ಶುದ್ಧ ವರ್ತನೆಯನ್ನಿಟ್ಟುಕೊಂಡಿದೆ. ಸತ್ಯಪಥ ಅದಕ್ಕೆ ಬಹಳ ಪ್ರಿಯವಾಗಿದುವುದನ್ನು ಕಾಶ್ಮೀರ ಪ್ರಶ್ನೆಯ ಕುರಿತಾದ ನಿಲುಮೆಯಿಂದ ನಿಷ್ಪಕ್ಷಪಾತಿಗಳು ತಿಳಿದುಕೊಳ್ಳಬಲ್ಲರು. ಸೌಮ್ಯ ವ್ಯವಹಾರ, ಸ್ನೇಹಪ್ರಿಯತೆ, ಸ್ವಾವಲಂಬನದ ಉತ್ಕಟೇಚ್ಛೆ, ಸ್ವಾತಂತ್ರ್ಯರಕ್ಷಣೆಯ ಸಂಕಲ್ಪ - ಇತ್ಯಾದಿ ಎಲ್ಲ ಕಲ್ಯಾಣಗುಣಗಳೂ ಗಾಂಧೀಜಿಯಿಂದ ದತ್ತವಾದವುಗಳೆಂದು ಪ್ರಾಜ್ಞಂ ಮತ.

ಸತ್ಯ ಹೀಗಿರುವುದರಿಂದ ಗಾಂಧೀಜಿಯನ್ನು ಬಿಟ್ಟು ನಾವು ದೂರ ಸರಿಯುತ್ತಿದ್ದೇವೆಂದು ಹೇಳಹೋಗುವುದು ಎದೆಗಾರಿಕೆಯಾದೀತು—ಶ್ರೀ ಹನುಮಂತಯ್ಯನವರು ಮಾತಿಗಾಗಿ ತೆಗೆದ ಉದ್ಗಾರವೆಂದಿಷ್ಟೇ ನಾವು ಈ ಲೇಖನದ ಮೊದಲು ಉಲ್ಲೇಖಿಸಿದ ಮಾತುಗಳನ್ನು ಪರಿಗಣಿಸಬೇಕಲ್ಲದೆ, ಅದು ಅವರು ಸಂಪೂರ್ಣ ವಿಮರ್ಶೆಯ ಬಳಿಕ ಕೈಗೊಂಡ ತೀರ್ಮಾನವಾಗಿರಲಿಕ್ಕಿಲ್ಲ. ನಮಗಂತೂ ಮಾರ್ಕ್ಸನ ಹತ್ತಿರಕ್ಕೆ ನಾವು ಸರಿಯುತ್ತಿದ್ದೇವೆಂದು ತೋರುತ್ತಿಲ್ಲ— ಕೆಲವು ಆರ್ಥಿಕ ಚಟುವಟಿಕೆಗಳು ನಮ್ಮಲ್ಲಿ ಆ ಭ್ರಾಂತಿಯನ್ನು ಹುಟ್ಟಿಸಬಹುದು; ಕಮ್ಯುನಿಸ್ಟರು ತಮ್ಮದೂ ಒಪ್ಪಿಗೆ ಇದೆ ಎನ್ನುವ ಕೆಲವು ವಿದೇಶ ವ್ಯವಹಾರ ಸಂಬಂಧದ ನಿಲುವುಗಳು ಇಂಥ ಕಲ್ಪನೆಗೆ ಎಡೆಕೊಡಬಹುದು ಆದರೆ ಗಾಂಧೀಜಿ ವಹಿಸಿದ್ದ ಮೂಲಭೂತ ನಿಲುವೆಗೂ ಅವರು ಪ್ರತಿಪಾದಿಸಿದ ಆದರ್ಶಕ್ಕೂ ಭಾರತ ಸರಕಾರದ ಇಂದಿನ ನಿಲುವೆಯು ಘಾತಕವಾಗಿದೆ ಎಂದು ಹೇಳುವುದು ಅತಿರೇಕವಾದ ಗಾಂಧೀಜಿಯ ವ್ಯಕ್ತಿತ್ವದ ವ್ಯಾಪ್ತಿಯು ಮಾರ್ಕ್ಸನ ಚಟುವಟಿಕೆಯ ಕ್ಷೇತ್ರವನ್ನು ಬಹಳಷ್ಟು ಮೀರಿ ನಿಲ್ಲುತ್ತದೆ; ಅವರು ಭಾರತದ ಮೇಲೆ ಬೀರಿದ ಪ್ರಭಾವವು ಮಾರ್ಕ್ಸನದಕ್ಕಿಂತಲೂ ಎಷ್ಟೋ ಪಾಲು ಹೆಚ್ಚು ಚೈತನ್ಯ ಯುಕ್ತವಾಗಿದೆ — ಈಗಿನ ಧುರೀಣರ ಮನೋಭಾವದ ಮೇಲೆ ಗಾಂಧೀಜಿಗಿರುವ ಹಿಡಿತದ ಬಿಗಿಯು ಮಾರ್ಕ್ಸನ ಮುಷ್ಟಿಗಿಂತಲೂ ಅತ್ಯಧಿಕ ಶಕ್ತಿಯುಳ್ಳದ್ದೆಂಬುದು ನಿಸ್ಸಂಶಯ. ಯಾವ ದೃಷ್ಟಿಯಿಂದ ನೋಡಿದರೂ ಭಾರತೀಯರ ಪಾಲಿಗೆ ಗಾಂಧೀಜಿಯದು ಪೂರ್ಣ ವ್ಯಕ್ತಿತ್ವ: ಮಾರ್ಕ್ಸನದು ಖಂಡ ವ್ಯಕ್ತಿತ್ವ. ಖಂಡವೆಂದೂ ಪೂರ್ಣ ತೇಜಸ್ಸನ್ನು ಪಡೆಯಲಾರದು: ನಾವೆಂದೂ ಮಾರ್ಕ್ಸನ ಅನುಯಾಯಿಗಳಾಗುವಂತಿಲ್ಲ; ನಮಗೆ ಗಾಂಧೀಜಿಯೇ ಮಾರ್ಗ ದರ್ಶಕ.

(ಬರೆದು ಬಂದುದು).

ಭಾರತದ ರಾಷ್ಟ್ರಾಧ್ಯಕ್ಷರಿಗೆ ಚೀನದಿಂದ ಹೊಸತಾಗಿ ಈ ದೇಶಕ್ಕೆ ರಾಯಭಾರಿಯಾಗಿ ಬಂದಿರುವ ಪಾನ್ ತ್ಸು-ಲೀಯವರು ತಮ್ಮ ಅಧಿಕಾರ ಪತ್ರಗಳನ್ನು ಈಚೆಗೆ ಒಪ್ಪಿಸಿದರು. ಉಭಯ ದೇಶಗಳ ನಡುವೆ ಗೆಳೆತನವು ದೃಢವಾಗಿ ಬೆಳೆದು ಬರುತ್ತಿರುವುದನ್ನು ಅವರು ಅಮೂಲ್ಯವೆಂದು ಪರಿಗಣಿಸಿದ್ದಾರೆ. ಚಿತ್ರದಲ್ಲಿ ಅವರನ್ನು ಪ್ರಧಾನಿ ನೆಹರುಗಳೊಂದಿಗೆ ಗರಸಲ್ಲಾಪ ನಿರತರಾಗಿ ಕಾಣಬಹುದು.

ರೆಸ್ಸೆಲ್ಲರ ದೃಷ್ಟಿಯಲ್ಲಿ ಭರತ ಖಂಡ

ಜಗದ್ವಿಖ್ಯಾತ ತತ್ವವೇತ್ತರಾದ ಬರ್ಟ್ರೆಂಡ್ ರಸ್ಸೆಲ್ ಪ್ರಚಲಿತ ಭಾರತದ ಕುರಿತು ಪಡುತ್ತಿರುವ ಅಭಿಪ್ರಾಯದ ಪರಿಚಯವು ಶ್ರೀ ವಿ. ಕೆ. ಕೃಷ್ಣ ಮೆನೊನ್ನರಿಂದ ಸಂಪಾದಿತವಾದ "ಎನ್ವೋಯ್" ("ರಾಯಭಾರಿ") ಎಂಬ ಮಾಸಿಕದ ಮೂಲಕ ನಮ್ಮೆಲ್ಲರಿಗೀಗ ಆಗುವಂತಾಗಿದೆ. ಈ ಪತ್ರಿಕೆಗೆ ಕೊಟ್ಟ ಸಂದರ್ಶನ ಕಾಲದಲ್ಲಿ ರಸ್ಸೆಲ್ಲರಿತ್ತ ಹೇಳಿಕೆಗಳು ಭಾರತದ ನಿಲುವು ಎಷ್ಟು ಉದಾತ್ತವಾಗಿದೆ ಎಂಬುದನ್ನು ತೋರಿಸಿಕೊಡುತ್ತವೆ.

ಭಾರತ ಸರಕಾರವು ಯಾವುದೇ ಪಕ್ಷದೊಡನೆ ವಿಶೇಷ ಒಲವನ್ನಿಡದೆ ತಟಸ್ಥ ಧೋರಣೆಯನ್ನನುಸರಿಸುತ್ತಾ ಹೋಗುವುದರಿಂದ ಒಳ್ಳೆಯ ಕೆಲಸವನ್ನು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಮಾಡುತ್ತಿದೆ ಎಂದಿದ್ದಾರೆ ಈ ತತ್ವಜ್ಞಾನಿ. ಈ ತಾಟಸ್ಥ್ಯ ಧೋರಣೆಯನ್ನು ಮುಂದರಿಸುವುದೇ ಭಾರತಕ್ಕೆ ವಾಸಿ ಎಂದವರ ಅಭಿಪ್ರಾಯ.

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿನ ತ್ವೇಷ ನಿವಾರಣೆ ಮಾಡುವುದಕ್ಕೆ ಶ್ರೀ ಜವಾಹರಲಾಲ ನೆಹರುಗಳ ಧೋರಣೆ ಸಹಾಯಕವಾಗಿದೆಯೆ ಎಂಬ ಪ್ರಶ್ನೆಗೆ ಅವರು ಹೌದೆಂದು ಉತ್ತರವಿತ್ತರು.

ಇನ್ನೊಂದು ಪ್ರಶ್ನೆಗೆ ಉತ್ತರ ರೂಪದಲ್ಲಿ ರಸ್ಸೆಲ್ಲರು ತಮಗೆ ಭಾರತದ ವಿಷಯದಲ್ಲಿ ಪ್ರಿಯವಾದುದೇನೆಂಬುದನ್ನು ಹೀಗೆ ಬಣ್ಣಿಸಿದರು—'ಮೊದಲೇ ಹೇಳಿದಂತೆ ನನಗೆ ಜಾಗತಿಕ ಕ್ಷೇತ್ರದಲ್ಲಿ ಭಾರತದ ತಟಸ್ಥ ಹಾಗು ಶಾಂತಿಪ್ರಿಯ ಧೋರಣೆ ಮೆಚ್ಚಿಕೆಯಾಗಿದೆ; ದೇಶದಲ್ಲಿ ಔದ್ಯೋಗೀಕರಣವನ್ನು ಸಾಧಿಸಿ, ಕಮ್ಯುನಿಸ್ಟರ ರೀತಿಯನ್ನನುಸರಿಸದೆಯಲ್ಲ, ಪ್ರಜಾಸತ್ತಾತ್ಮಕ ಪದ್ಧತಿಯಂತೆ ಸಮಾಜವನ್ನು ಅಭಿವೃದ್ಧಿಗೊಳಪಡಿಸುವ ಭಾರತದ ಪ್ರಯತ್ನವೂ ನನಗೆ ಪ್ರಿಯವಾಗಿದೆ; ಆಹಾರದ ಅಭಾವ ಮತ್ತು ಜನಸಂಖ್ಯೆಯ ಹೆಚ್ಚಳವಿರುವ ಕಾರಣ ಜನನ ನಿಯಂತ್ರಣಕ್ಕೆ ಮಹತ್ವಕೊಡಬೇಕೆಂಬ ತಿಳಿವಳಿಕೆ ಭಾರತಕ್ಕೆ ಬಂದಿರುವುದನ್ನು ಕಂಡು ಸಹ ನಾನು ಹರ್ಷಿತನಾಗಿದ್ದೇನೆ."

ಭಾರತದ ಕುರಿತು ತನಗೆ ಸರಿಕಾಣದುದನ್ನು ಅವರು ಹೀಗೆ ವಿವರಿಸಿದರು—"ಬೇರೆ ದೇಶಗಳಿಗಿಂತ ತಮ್ಮ ದೇಶವೇ ನೈತಿಕ ದೃಷ್ಟಿಯಲ್ಲಿ ಉನ್ನತವಾಗಿದೆ ಎಂದು ಕೆಲವು ಭಾರತೀಯರು ಭಾವಿಸುವುದು ನನಗೆ ಸರಿಬಂದಿಲ್ಲ. ಅವರ ಈ ನಿಲುವು ಸತ್ಯವಲ್ಲ. ನಿಮ್ಮ ದೇಶದಲ್ಲಿನ ಬಾಲವಿವಾಹ, ದನಕರುಗಳು, ಮತಧರ್ಮ ಇತ್ಯಾದಿಗಳ ಕಡೆಗೆ ಕಣ್ಣುಹಾಕಿದರೆ ಇದು ಗೊತ್ತಾಗುತ್ತದೆ."

ಪನ್ನ್ಯಾಸ ಕೊಡಲಾತನ್ನನ್ನು ಭಾರತಕ್ಕೆ ಆಮಂತ್ರಿಸಿದರೆ ಏನುಮಾಡುವೆನೆಂಬುದನ್ನು ಅವರು ಇನ್ನೊಂದು ಪ್ರಶ್ನೆಗೆ ಉತ್ತರ ರೂಪದಲ್ಲಿ ಹೀಗೆಂದು ತಿಳಿಸಿದರು—"ವರ್ಣಭೇದ ಭಾವನೆಯನ್ನು ಹೋಗಲಾಡಿಸುವ, ಜನಸಂಖ್ಯೆಯನ್ನು ನಿಯಂತ್ರಿಸುವ ಆವಶ್ಯಕತೆಗಳ ಕುರಿತಾಗಿಯೂ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತದ ಪಾತ್ರದ ಬಗ್ಗೆಯೂ ನಾನು ಮಾತನಾಡಲಿಚ್ಛಿಸುತ್ತೇನೆ. ಏಶಿಯ ಮತ್ತು ಯೂರೋಪುಗಳಸಂಬಂಧದಲ್ಲಿ ಆಗುತ್ತಿರುವ ಪ್ರಬಲ ಬದಲಾವಣೆಗಳ ಕುರಿತಾಗಿಯೂ ನಾನು ಮಾತನಾಡುತ್ತೇನೆ. ವಾಸ್ಕೋಡಗಾಮನಿಂದ ದ್ವಿತೀಯ ಮಹಾಯುದ್ಧದ ಅಂತ್ಯ ಕಾಲದ ವರೆಗೆ ಯೂರೋಪು ಮೇಲಿತ್ತಿದ್ದರೂ ಈಗ ಚಕ್ರಗತಿ ಬದಲಾಗಿದೆ—ಏಶ್ಯವೇ ಮೇಲ್ಪಂಗಕ್ಕೆ ಬರತೊಡಗಿವೆ."

ಭಾರತ ಮತ್ತಿತರ ಏಶ್ಯದ ರಾಷ್ಟ್ರಗಳಿಗೆ ರಷ್ಯವು ಕೊಡುತ್ತಿರುವ ಸಹಾಯದ ಕುರಿತು ಅವರ ಅಭಿಪ್ರಾಯವನ್ನು ಕೇಳಲು, "ಅವರು ಬಳವನರು ಕೊಡುವುದರ ಹತ್ತರಲ್ಲಿ ಒಂದಂಶವನ್ನನ್ನು ರಶಿಯದವರು ಕೊಡದಿದ್ದರೂ ಅನೇಕಕ್ಕೆ ತೋರಿಸುತ್ತಿರುವ ಗೌರವ ಹತ್ತು ಪಾಲಿನಷ್ಟು ಕೃತಜ್ಞತೆಯನ್ನು ರಶ್ಯ (ಏಶ್ಯದ ಜನರು) ಏಕೆ ತೋರ್ಪಡಿಸುತ್ತಿದ್ದಾರೆಂಬುದೇ ನನಗೆ ತಿಳಿಯದು" ಎಂದರವರು.

"ಇಂದಿನ ಜಗತ್ತಿನಲ್ಲಿ ಭಾರತವು ಏನಾದರೂ ಒಳ್ಳೆಯ ಮಾತಿಗೆಯನ್ನು ನೀಡಬೇಕಿದ್ದರೆ ಅದು ಜನನ ನಿಯಂತ್ರಣದ ಮಟ್ಟಿಗೆ ನಿಜಕ್ಕೂ ಪರಿಣಾಮಕಾರಿಯಾದ ಪದ್ಧತಿಯನ್ನು ಕಂಡುಹಿಡಿಯುವುದಾಗಿದೆ" ಎಂದು ರಸ್ಸೆಲ್ಲರು ಹೇಳಿದ್ದಾರೆ ಸರಳವೂ ವ್ಯಾವಹಾರಿಕವೂ ಮತ್ತು ಸತ್ಪರಿಣಾಮಕಾರಿಯೂ ಆಗಿ ವಿಶಾಲವಾದ ಗ್ರಾಮೀಣ ಸಮಾಜವನ್ನುಳ್ಳ ಭಾರತದಲ್ಲೆಲ್ಲ ಬಳಕೆಗೆ ಬರಬಲ್ಲ ಜನನ ನಿಯಂತ್ರಣ ಸಂಶೋಧನೆಗೆ ಮನಸ್ಸು ಹಾಕಬೇಕು. ಇದರ ಫಲಿತಾಂಶವು ಒಂದು ಮಾತ್ರೆಯನ್ನು ನುಂಗುವಷ್ಟು ಸುಲಭೋಪಾಯ ಸಾಕೆನ್ನುವಂತಿರಬೇಕು. ಈ ಉಪಾಯವನ್ನು ಬಳಸಲು ಎಲ್ಲ ಗ್ರಾಮಗಳ ಎಲ್ಲ ಸ್ತ್ರೀಯರಿಗೆ ತಕ್ಕ ಶಿಕ್ಷಣ ನೀಡಬೇಕು. ಹೀಗೆ ಭಾರತವು ವಿಶ್ವದಲ್ಲೆಲ್ಲ ಜನ ಸಂಖ್ಯೆಯ ನಿಯಂತ್ರಣಕ್ಕೆ ಮಾರ್ಗದರ್ಶಿಯಾಗಬಲ್ಲುದು."

"ಗಾಂಧೀಜಿ ಮತ್ತು ನೆಹರುಗಳನ್ನು ಬಿಟ್ಟರೆ ನೀವು ಭೇಟಿಯಾದ ಅತಿ ಹೆಚ್ಚು ಆಕರ್ಷಕ ವ್ಯಕ್ತಿ ಯಾರು?" ಎಂದು ಪ್ರಶ್ನೆ ಹಾಕಿದಾಗ ಅವರು "ನನ್ನ ಸಾಲಿನಲ್ಲಿಯೇ ಇರುವವರೊಬ್ಬರು—ರಾಧಾಕೃಷ್ಣನ್: ಕಣ್ಸೆಳೆಯುವ ವ್ಯಕ್ತಿತ್ವ ಹಾಗು ವಿಶಾಲ ಮನೋಭಾವದ ತತ್ವಜ್ಞಾನಿ—ನಿಜಕ್ಕೂ ತತ್ವ ಪ್ರತಿಭೆಯುಳ್ಳಾತ" ಎಂದು ಉತ್ತರವಿತ್ತರು.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 24—5—1956

ಸಂಚಿಕೆ ೩೮
NO. 38

ಪರಿಮಿತ ಆದಾಯ

ಸಂಸತ್ತಿನ ಉಭಯ ಸಭೆಗಳೂ ಖಾಸಗಿಯಾಗಿ ಸದಸ್ಯರು ಮಂಡಿಸಿದ ಗೊತ್ತುವಳಿಗಳನ್ನು ಚರ್ಚೆಗೆ ಕೆಲವೊಮ್ಮೆ ತೆಗೆದುಕೊಳ್ಳುವುದುಂಟು. ಸಾಮಾನ್ಯವಾಗಿ ಸರಕಾರದ ಗಮನವನ್ನು, ಸದಸ್ಯರು ಪ್ರಾಮುಖ್ಯವೆಂದು ಭಾವಿಸುವ ವಿಷಯದ ಕಡೆಗೆ ಸೆಳೆಯುವುದೇ ಇದರ ಉದ್ದೇಶ.

ಈ ತಿಂಗಳಲ್ಲಿ, ರಾಜ್ಯಸಭೆಯ ಮುಂದೆ ಶ್ರೀ ಬಿ. ಕೆ. ಮುಖರ್ಜಿ ಎಂಬ ಸದಸ್ಯರಿಂದ ಮಂಡಿಸಲಾದ, ವ್ಯಕ್ತಿಯ ವರಮಾನಕ್ಕೆ ಪರಮ ಮಿತಿಯೊಂದನ್ನು ಗೊತ್ತುಪಡಿಸಬೇಕೆಂಬ ಆಶಯದ, ಮಸೂದೆಯ ಮೇಲೆ ಚರ್ಚೆ ನಡೆಯಿತು. ಲೋಕಸಭೆಯಲ್ಲಿ ಸಹ ಇದೇ ಆಶಯದ ಮಸೂದೆಯೊಂದು ಶ್ರೀ ವಿಭೂತಿ ಮಿಶ್ರರೆಂಬ ಸದಸ್ಯರಿಂದ ಮಂಡಿಸಲ್ಪಟ್ಟಿತು. ರಾಜ್ಯಸಭೆಯು ಈ ಮಸೂದೆಯ ವಿಚಾರಣೆಯನ್ನು ಅರ್ಧಕ್ಕೆಯೇ ನಿಲ್ಲಿಸಿ, ಅದನ್ನು ಹೆಚ್ಚು ವಿವರವಾಗಿ ಪರಿಶೀಲಿಸಲು ನಿರಾಕರಿಸಿದೆ. ಲೋಕಸಭೆಯಲ್ಲಿ ಏನಾಗುವುದೋ, ಇನ್ನು ತಿಳಿದುಬರಬೇಕಷ್ಟೆ!

ಸರಕಾರವಾಗಲೀ ಸದಸ್ಯರಾಗಲೀ ಈ ವಿಷಯದ ಕುರಿತು ಅನಾದರಣೆ ತಳೆದಿರುವರೆಂದು ಇದರ ಅರ್ಥವಲ್ಲ: ಅದರ ವ್ಯಾವಹಾರಿಕತೆಯ ಕುರಿತಷ್ಟೇ ಇವರೆಲ್ಲರಿಗೂ ಸಂದೇಹ. ರಾಜ್ಯಸಭೆಯಲ್ಲಿ ಮಂಡಿಸಲಾದ ಗೊತ್ತುವಳಿಯು ವ್ಯಕ್ತಿಯ ವರಮಾನದ ಪರಮ ಮಿತಿಯನ್ನು ವರ್ಷಕ್ಕೆ ೩೫,೦೦೦ ರೂಪಾಯಿಗಳೆಂದು ನಿಗದಿಗೊಳಿಸಬೇಕಾಗಿ ಹೇಳುತ್ತದೆ; ಈ ಬಗ್ಗೆ ಪ್ರಥಮ ಹೆಜ್ಜೆಯಾಗಿ ಕೇಂದ್ರ ಸರಕಾರದ ನೌಕರರ ಸಂಬಳವನ್ನು ತಿಂಗಳಿಗೆ ೧೮೦೦ ರೂಪಾಯಿಗೆ ಮೀರದಂತೆ ವ್ಯವಸ್ಥೆಗೊಳಿಸಬೇಕೆಂದು ಅದು ತಿಳಿಸುತ್ತದೆ.

ಮಸೂದೆಯ ಪರವಾಗಿ ಎಲ್ಲ ಸದಸ್ಯರೂ ಮಾತನಾಡಿದ್ದಾರೆ; ಕನಿಷ್ಠ ಪಕ್ಷದಲ್ಲಿ, ಅದರ ಸದಾಶಯವನ್ನಾದರೂ ಮೆಚ್ಚಿ ಮಾತನಾಡಿದ್ದಾರೆ. ಭಾರತದಲ್ಲಿ ತಲಾ ವರಮಾನವು ವರ್ಷಕ್ಕೆ ೩೫೦ ರೂಪಾಯಿಯಷ್ಟು ಸಹ ಇಲ್ಲದಿರುವಾಗ ೩೫೦೦೦ ರೂಪಾಯಿಯೆಂಬುದಾಗಿ ವರಮಾನದ ಪರಮ ಮಿತಿಯನ್ನು ನಿರ್ಣಯಿಸಿದರೂ ವ್ಯಕ್ತಿ-ವ್ಯಕ್ತಿಗಳ ನಡುವೆ ಆದಾಯದೊಳಗಿನ ಅಂತರವು ಗಣನೀಯವಾಗಿ ತಗ್ಗುವುದಿಲ್ಲವೆಂದು ಹೆಚ್ಚಿನ ಸದಸ್ಯರು ಅಭಿಪ್ರಾಯಪಟ್ಟರು. ಆದಾಯದೊಳಗಿನ ಈ ಅಂತರವು ೧೦ರಿಂದ ೩೦ ಪಾಲಿಗಿಂತ ಯಾವ ಕಾಲದಲ್ಲೂ ಹೆಚ್ಚಾಗದಂತೆ ಮಾಡುವುದು ಸಮಾಜವಾದಿ ಮಾದರಿಯ ಸಮಾಜರಚನೆಯ ಧ್ಯೇಯವುಳ್ಳ ಸರಕಾರದ ಕರ್ತವ್ಯವೆಂದು ಅವರೆಲ್ಲರೂ ಹೇಳಿದರು.

ಕೇವಲ ಕೇಂದ್ರ ಸರಕಾರದ ನೌಕರರ ಮಟ್ಟಿಗಷ್ಟೆ ವರಮಾನದ ಪರಮ ಮಿತಿಯನ್ನು ಗೊತ್ತುಪಡಿಸಿದರೆ ಸಾಲದು; ಎಲ್ಲ ಬಗೆಯ ನೌಕರಿಗಳಲ್ಲಿರುವವರಿಗೂ ಇದನ್ನು ವಿಸ್ತರಿಸಬೇಕು. ಮಾತ್ರವಲ್ಲದೆ, ವ್ಯಾಪಾರ, ವಾಣಿಜ್ಯ, ಕೃಷಿ ಇತ್ಯಾದಿ ಯಾವುದೇ ರಂಗದಲ್ಲಿ ವ್ಯಕ್ತಿಯೊಬ್ಬನಿರಲಿ, ಎಲ್ಲರಿಗೂ ಸಮನಾಗಿ ಈ ನಿಯಮ ಅನ್ವಯವಾಗಬೇಕು ಎಂದು ಸಾಮಾನ್ಯವಾಗಿ ಎಲ್ಲ ಸದಸ್ಯರು ಒತ್ತಾಯಿಸಿದರು.

ಮಹಾತ್ಮಾ ಗಾಂಧೀಜಿಯವರು ವ್ಯಕ್ತಿಯ ಆದಾಯ ಮತ್ತು ವ್ಯಕ್ತಿಗಳ ನಡುವೆ ಆದಾಯದಲ್ಲಿರುವ ಅಪಾರ ಅಂತರವನ್ನು ಕುರಿತು ಏನು ಹೇಳಿದ್ದರೆಂಬುದನ್ನು ಅನೇಕ ಸದಸ್ಯರು ನೆನಪಿಗೆ ತಂದುಕೊಟ್ಟರು. ಎಲ್ಲ ದೃಷ್ಟಿಯಿಂದಲೂ ವಿಲಾಸೋಪೇತ ಜೀವನವನ್ನು ನಿರುತ್ಸಾಹಗೊಳಿಸಬೇಕೆಂದೂ ಹಣಕ್ಕಲ್ಲ, ಶ್ರಮಕ್ಕೆ ಹೆಚ್ಚಿನ ಗೌರವ ಕೊಡಲ್ಪಡಬೇಕೆಂದೂ ಇದಕ್ಕಾಗಿ ಆದಾಯದ ಮೇಲೆ ಮಿತಿ ನಿರ್ಧರಿಸುವುದು ಅವಶ್ಯವೆಂದೂ ಸದಸ್ಯರೆಲ್ಲ ಪ್ರತಿಪಾದಿಸಿದರು.

ಕಾಂಗ್ರೆಸಿಗರಿಂದ ಹಿಡಿದು ಕಮ್ಯೂನಿಸ್ಟರ ವರೆಗೆ ಎಲ್ಲ ರಾಜಕೀಯ ಪಕ್ಷಗಳವರ ಗುರಿಯು ವ್ಯಕ್ತಿಯ ಕ್ಷೇಮಾಭ್ಯುದಯಕ್ಕೆ ಸಹಕಾರಿಯಾದ ವಾತಾವರಣವನ್ನು ಏರ್ಪಡಿಸುವುದೇ ಆಗಿರುವುದರಿಂದ ಆದಾಯದ ಪರಮ ಮಿತಿಯನ್ನು ಗೊತ್ತುಪಡಿಸುವುದಕ್ಕೆ ಯಾರೂ ವಿರೋಧವನ್ನು ರಾಜಕೀಯ ಕ್ಷೇತ್ರದಲ್ಲಿ ವ್ಯಕ್ತಪಡಿಸುವಂತಿಲ್ಲವೆಂದು ಸಹ ಕೆಲವು ಸದಸ್ಯರು ಹೇಳಿದರು. ರಾಜ ಮಹಾರಾಜರ ಪರಂಪರೆಗೂ ಜಮೀನುದಾರಿ ಇನಾಂದಾರಿ ಪದ್ಧತಿಗಳಿಗೂ ಕೊನೆಯನ್ನು ತಂದಿರುವ ನಾವು ಈಗ ಇನ್ನೂ ಒಂದು ಪ್ರಗತಿಪರ ಹೆಜ್ಜೆಯನ್ನು ಈ ಮಸೂದೆಯ ಆಶಯದಂತೆ ನಡೆಯುವ ಮೂಲಕ ಮುಂದಿಡಬೇಕೆಂದು ಸದಸ್ಯರು ಸಲಹೆ ನೀಡಿದರು.

ಲೋಕಸಭೆಯಲ್ಲಿ ನಡೆದ ಅಪೂರ್ಣ ಚರ್ಚೆಯಲ್ಲಿ ಸಹ ಸದಸ್ಯರು ಈ ಮಸೂದೆಗೆ ಬೆಂಬಲವಿತ್ತು ಮಾತನಾಡಿದರು. ಭೂ ಹಿಡುವಳಿಯ ಮೇಲೆ ಮಿತಿಹಾಕುವುದು ಅನ್ಯಾಯವಲ್ಲದಿದ್ದರೆ, ಮತ್ತದು ಆವಶ್ಯಕವಾದರೆ ಆದಾಯದ ಮೇಲೆ ಸಹ ಮಿತಿಯೊಂದಿರುವುದು ಅನಿವಾರ್ಯವೆಂದಿಲ್ಲಿ ಹೇಳಲಾಯಿತು. ಇನ್ನು ಮುಂದೆ ಪರಿಹಾರ ಧನದ ಹಂಚುವಿಕೆಯ ಪ್ರಶ್ನೆ ಬಂದಾಗ ಈ ವಿಷಯವನ್ನು ಮರೆಯಕೂಡದೆಂದೂ ರಾಜ ಮಹಾರಾಜರಿಗೆ ಕೊಡಲಾಗುತ್ತಿರುವ ಖಾಸಗಿ ಹಣದ ಮೊತ್ತವನ್ನು ಈ ಹಿನ್ನೆಲೆಯಲ್ಲಿ ಪುನಃ ವಿಮರ್ಶಿಸಿ ನಿಗದಿಗೊಳಿಸಬೇಕೆಂದೂ ಸಲಹೆ ಬಂತು.

ವ್ಯಕ್ತಿಯ ಯೋಗ್ಯತೆಯು ಷೋಡಶಕಳಾಪೂರ್ಣವಾಗಿ ವ್ಯಕ್ತವಾಗಬೇಕಾದರೆ ಅದಕ್ಕೆ ಹಣದ ರೂಪದಲ್ಲಿ ಪ್ರತಿಫಲವು ಅವಶ್ಯವೆಂದು ಕೆಲವರು ಹೇಳಿದ ಮಾತುಗಳನ್ನು ಹೆಚ್ಚಿನ ಸದಸ್ಯರು ನಿರಾಕರಿಸಿದರು. ಗಾಂಧಿ, ಬುದ್ಧರಂಥ ಮಹಾತ್ಮರನ್ನು ಪಡೆದ ಈ ದೇಶದ ನಾಗರಿಕರಲ್ಲಿ ಸೇವಾಪರಾಯಣತೆಯು ರಕ್ತಗತವಾಗಿ ಬಂದಿರಬೇಕಾದ ಗುಣ; ಈ ಗುಣವನ್ನು ಜಾಗೃತಗೊಳಿಸಲು ನಾವು ನೋಡಬೇಕು, ಹೊರತು ಧನದ ಆಮಿಷವನ್ನು ತೋರಿಸುವುದು ಸಲ್ಲದು ಎಂದು ಆಕ್ಷೇಪವನ್ನು ಉತ್ತರಿಸಲಾಯಿತು.

ಚರ್ಚೆಯ ಕಾಲದಲ್ಲಿ ಉಳಿದವರಿಗಿಂತ ಭಿನ್ನವಾಗಿ, ಎದ್ದು ತೋರುವಷ್ಟು ಪ್ರಭಾವಿಯಾಗಿ, ಕಾಣುವ ಸಲಹೆಗಳನ್ನು ಒಬ್ಬಿಬ್ಬರು ಸದಸ್ಯರು ಮುಂದಿಟ್ಟರು. ಇವರಿಗನುಸಾರವಾಗಿ, ಈಗ ಬೇಕಾದುದು ಆದಾಯದ ಮೇಲೆ ಮಿತಿ ಹಾಕುವ ಶಾಸನವಲ್ಲ; ಕನಿಷ್ಠ ಆದಾಯವು ಇಂತಿಷ್ಟಿರಬೇಕೆಂದು ನಿಗದಿಗೊಳಿಸಿ, ಅದನ್ನು ಸಾಧಿಸಲು ಕೈಗೊಳ್ಳಬೇಕಾದ ಕ್ರಮ. ಎಲ್ಲರೂ ಸುಗಮವಾದ ಸುಖಕರವಾದ ಜೀವನವನ್ನು ನಡೆಸುವುದೇ ನಮ್ಮ ಉದ್ದೇಶವಾಗಿರಬೇಕು— ಇದಕ್ಕೆ ಅನುಕೂಲವಾಗುವಂತೆ ಪ್ರತಿಯೊಬ್ಬ ವ್ಯಕ್ತಿಯ ಆದಾಯವು ಹೆಚ್ಚಿಕೊಳ್ಳುವಂತೆ ಪ್ರಯತ್ನ ಅವಶ್ಯ, ಎಂದಿವರೆಂದರು.

ಮತ್ತೊಬ್ಬ ಸದಸ್ಯರು, ಆದಾಯದ ಮೇಲೆ ಮಿತಿಯನ್ನು ಹಾಕಲು ಹೊರಟರೆ, ಅಂಥ ಶಾಸನವನ್ನು ಕಾರ್ಯಗತಗೊಳಿಸುವುದು ಬಹಳ ಕಷ್ಟಕರವಾಗಿ ಪರಿಣಮಿಸಬಹುದು ಎಂದರು. ಈಗಾಗಲೇ ನಾವು ಪಡೆದಿರುವ ಅನುಭವವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿರುವ ಮತ್ತು ಅಷ್ಟರಿಂದಲೇ ನಮ್ಮ ಧ್ಯೇಯವು ಹೆಚ್ಚಿನಂಶ ಸಾಧಿಸಲ್ಪಡುವ ಉಪಾಯವನ್ನು ಅನುಸರಿಸುವುದು ಹಿತಕರವೆಂದವರು ಹೇಳಿದರು. ಕರಭಾರವನ್ನು ತಾರ

(೯ನೇ ಪುಟ ನೋಡಿರಿ)

ಪ್ರಕಟಣೆ

S. V. H. HIGH SCHOOL.

ಶ್ರೀ ವಿಷ್ಣುಮೂರ್ತಿ ಹಯವದನ ಸ್ವಾಮಿ ಹೈಸ್ಕೂಲು.

(ವಿಶಾಲ ಕರ್ನಾಟಕದ ಉತ್ತಮ ತರಗತಿಯ ಗುರುಕುಲ ಹೈಸ್ಕೂಲು)

ವಿಶ್ವೇಂದ್ರನಗರ — ಇನ್ನಂಜೆ — ದ. ಕ.

ಸ್ಥಾಪಕರು:— ಶ್ರೀ ಸೋದೆ ವಾದಿರಾಜ ಮಠದ ದಿವಂಗತ ಪೂಜ್ಯ ಶ್ರೀ ವಿಶ್ವೇಂದ್ರ ತೀರ್ಥ ಶ್ರೀ ಪಾದಂಗಳವರು.

ಪೋಷಕರು:— ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮ ತೀರ್ಥ ಶ್ರೀ ಪಾದಂಗಳವರು.

ಹೊಸ ವರ್ಷದ ಶಾಲಾರಂಭ:— 1—6—1956.

S. S. L. C. ವರೆಗಿನ ಯೋಗ್ಯ ಶಿಕ್ಷಣ— ಉತ್ತಮ ಫಲಿತಾಂಶ— ತರಬೇತಾದ ಉಪಾಧ್ಯಾಯ ವರ್ಗದವರ ಹತ್ತಿರದ ನಿವಾಸ— ಪಾಠೇತರ ಚಟುವಟಿಕೆಗಳಲ್ಲಿ ವಿಶೇಷ ಗಮನ— ಸುವಿಶಾಲ ಆಟದ ಬಯಲು— ತರಬೇತಾದ ಉಪಾಧ್ಯಾಯರ ಕಲಿಯುವಿಕೆ ಮತ್ತು ತಕ್ಕ ಮೇಲ್ವಿಚಾರಗಳಿಂದ ಡ್ರಿಲ್ ಮತ್ತು ಆಟಗಳು— ಇಲಾಖಾಧಿಕಾರಿಗಳಿಂದ ಯೋಗ್ಯ ಅಭಿಪ್ರಾಯ— ಭವ್ಯ ಶಾಲಾ ಮಂದಿರಗಳು— ಹಳ್ಳಿಯ ಆರೋಗ್ಯಕರ ವಾತಾವರಣ.

ಶ್ರೀ ವಾದಿರಾಜ ಗುರುಕುಲ—ಹೋಸ್ಟೇಲು.

(ಹೈಸ್ಕೂಲಿನ ನೆರೆಯಲ್ಲಿಯೇ).

ಯೋಗ್ಯ ಮೇಲ್ವಿಚಾರವಿರುವ ಬಾಲಕ ಬಾಲಿಕೆಯರ ಬೇರೆ ಬೇರೆ ಶಾಖೆಗಳು— ಬ್ರಾಹ್ಮಣರ ಅಡುಗೆ— ಆರೋಗ್ಯ ಮತ್ತು ರುಚಿಕರ ಸಸ್ಯಾಹಾರ— ಅತಿ ಕಡಿಮೆ ದರ— 3 ಊಟಗಳು— ಪ್ರತ್ಯೇಕ ಹಣ ತೆತ್ತಲ್ಲಿ ಕಾಫಿ, ತಿಂಡಿ, ಹಾಲು, ಮೊಸರುಗಳ ಉತ್ತಮ ಏರ್ಪಾಡು— ವೈದ್ಯಕೀಯ ಸಹಾಯ— ಉಳಕೊಳ್ಳಲು ಗಾಳಿ ಬೆಳಕು ಹಾಗೂ ಉಪಕರಣಗಳಿಂದ ಸುಸಜ್ಜಿತವಾದ ವಿಶಾಲ ಕೋಣೆಗಳು— ಕಡಾವಳಿಯ ಯೋಗ್ಯ ಸವೆ— ಚಿಕ್ಕ ಮಕ್ಕಳ ಆರೈಕೆ ನೋಡಲು ಯೋಗ್ಯ ಏರ್ಪಾಡು.

ಹುಡುಗಿಯರ ಶಾಖೆ ಪ್ರತ್ಯೇಕ.

ವಾರ್ಡನ್ ಮುಖ್ಯೋಪಾಧ್ಯಾಯರು— ವಿಶೇಷ ಮಾಹಿತಿ ಬಗ್ಗೆ ಇವರಿಗೆ ಬರೆಯಿರಿ.

S. V. H. Education Society,
Vishwendranagar,
INNANJE, S. K.
Dated. 17—5—1956.

P. S. Acharya,
Correspondent & Treasurer.

ರಾಷ್ಟ್ರೀಕರಣದಲ್ಲಿ ತಾರತಮ್ಯ ದೃಷ್ಟಿಯು ಅತ್ಯಾವಶ್ಯಕ

ಸ್ವಾನುಭವಸಿದ್ಧಿಯ ಪ್ರಾಯೋಗಿಕ ಪರೀಕ್ಷೆಗಳೇ ಸದ್ಯಕ್ಕೆ ಶ್ರೇಯಸ್ಕರ

ಭಾರತ ಸರಕಾರದ ಔದ್ಯಮಿಕ ಧೋರಣೆಯನ್ನು ನಿರೂಪಿಸುವ ಇತ್ತೀಚೆಯ ಹೇಳಿಕೆಯು ಸೀತಿಕೆಯು ರಾಷ್ಟ್ರೀಕರಣದ ಪರವಾಗಿ ಎರಡು ಕಾರಣಗಳನ್ನು ಮುಂದಿಡುತ್ತದೆ: ಸಮಾಜವಾದಿ ಮಾದರಿಯ ಸಮಾಜರಚನೆಯ ಧ್ಯೇಯ ಸ್ವೀಕಾರವೊಂದು ಕಾರಣ; ಕ್ಷಿಪ್ರವೂ ಯೋಜನಾಬದ್ಧವೂ ಆದ ಅಭಿವೃದ್ಧಿಯ ಬಯಕೆಯು ಇನ್ನೊಂದು ಕಾರಣ.

ಸಮಾಜವಾದದಲ್ಲಿ ರಾಷ್ಟ್ರೀಕರಣವು ಅತ್ಯಾವಶ್ಯಕವಾದ ಅಂಗವೆಂಬ ಭಾವನೆಯನ್ನು ಸಮಾಜವಾದಿ ವಿಚಾರಧಾರೆಯಾಗಲೀ ನಡವಳಿಕೆಯ ಕ್ರಮವಾಗಲೀ ಪುರಸ್ಕರಿಸುವುದಿಲ್ಲವೆಂದು ನನ್ನ ಮತ. ಬ್ರಿಟನಿನ ಸಮಾಜವಾದಿ ಪಕ್ಷವು ತಾನು ಅಧಿಕಾರದಲ್ಲಿದ್ದ ಐದು ವರ್ಷಗಳ ಅವಧಿಯಲ್ಲಿ ರಾಷ್ಟ್ರೀಕರಣದ ಬಗ್ಗೆ ಪ್ರಯೋಗಗಳನ್ನು ನಡೆಸಿದ್ದರೂ ಈಗ ಅದಕ್ಕೆ ವಿರುದ್ಧ ಪ್ರತಿಕ್ರಿಯೆಯನ್ನು ಕೊಡುತ್ತಿರುವುದು ಸರ್ವ ಶ್ರುತವಿದೆ.

ರಾಷ್ಟ್ರೀಕರಣದಿಂದ ಸಮಾಜವಾದಿ ಸಮಾಜದ ಯಾವುದೇ ಧ್ಯೇಯವು ಕೈಗೂಡಿಯೇ ತೀರುವುದೆಂಬ ನಂಬಿಕೆಗೆಡೆಯಿಲ್ಲವೆನ್ನುವ ಮನೋಭಾವವಿಂದು ಬಲಿಯುತ್ತಿದೆ. ಇದಕ್ಕೆ ವಿರುದ್ಧವಾಗಿ, ಇಡೀ ಸಮಾಜವನ್ನು ಪ್ರತಿನಿಧಿಸುವ ಸಂಸತ್ತು ನಿಯಂತ್ರಣೋದ್ದೇಶದ ಹಾಗು ಆರ್ಥಿಕ ಸ್ವರೂಪದ ಶಾಸನಗಳನ್ನು ಮಾಡಿದರೆ, ರಾಷ್ಟ್ರೀಕರಣಕ್ಕಿಂತಲೂ ಹೆಚ್ಚು ಉತ್ತಮ ರೀತಿಯಲ್ಲಿ ಸಮಾಜವಾದಿ ಆದರ್ಶವನ್ನು ಸಾಧಿಸಬಹುದೆಂಬ ತಿಳಿವಳಿಕೆ ಬರತೊಡಗಿದೆ.

ತಾತ್ವಿಕ ಸಮಾಜವಾದದ ಪಿತನೆಂದು ನಾವು ಕಾರ್ಲ್ ಮಾರ್ಕ್ಸ್ ಮಹಾಶಯನನ್ನು ಪರಿಗಣಿಸುವುದಾದರೆ, ಉತ್ಪಾದನೆಯ ಎಲ್ಲ ಸಾಧನೆಗಳ ಸಾಮಾಜೀಕರಣಕ್ಕೆ ಆತನು ತನ್ನ ವಿಚಾರದಲ್ಲಿ ಕೇಂದ್ರ ಸ್ಥಾನವನ್ನಿತ್ತನೆಂಬುದು ವೇದ್ಯವಾಗುವುದೆಂಬ ವಿಷಯ ಸತ್ಯ. ಆಸ್ತಿಪಾಸ್ತಿಯುಳ್ಳ ವರ್ಗಕ್ಕೂ ಸರಕಾರಕ್ಕೂ ಭೇದವಿದೆ ಎಂದು ಮಾರ್ಕ್ಸನು ತಿಳಿದುಕೊಳ್ಳದೆ, ಅವೆರಡೂ ಒಂದೇ ಎಂಬ ಊಹೆಗೈದನು. ಆದುದರಿಂದ ಭಂಡವಾಳಗಾರರಿಗೂ ಕಾರ್ಮಿಕರಿಗೂ ನಡುವೆ ನ್ಯಾಯವನ್ನೆತ್ತಿ ಹಿಡಿಯುವುದಕ್ಕೋಸ್ಕರ ಸರಕಾರವನ್ನು ಅವಲಂಬಿಸುವಂತಿಲ್ಲವೆಂದವನು ಬಗೆದನು.

ಪ್ರತಿಫಲವನ್ನು ಯೋಗ್ಯ ರೀತಿಯಲ್ಲಿ ಹಂಚಿ, ಹಾಕುವುದು, ಆದಾಯಪ್ರಮಾಣದಲ್ಲಿರುವ ವೈಪರೀತ್ಯವನ್ನು ನಿವಾರಿಸುವುದು ಮತ್ತು ಕೆಲಸದ ವಾತಾವರಣವು ತೃಪ್ತಿಕರವಾಗಿರುವಂತೆ ಮಾಡುವುದು— ಈ ಪ್ರಕಾರ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಉತ್ಪಾದನೆಯ ಸಾಧನೆಗಳನ್ನು ಸಾಮಾಜೀಕರಣಕ್ಕೆ ಗುರಿಪಡಿಸುವ ಆವಶ್ಯಕತೆಯು ಪ್ರಜಾಪ್ರಭುತ್ವಾತ್ಮಕ ಆಡಳಿತ ವ್ಯವಸ್ಥೆಗೊಳಪಟ್ಟ ದೇಶಗಳಲ್ಲಿ ಉಳಿದಿಲ್ಲ. ಏಕೆಂದರೆ ಉಚಿತ ಶಾಸನಗಳನ್ನು ರಚಿಸುವ ಮೂಲಕ ಇವೆಲ್ಲ ಉದ್ದೇಶಗಳನ್ನೂ ಹೆಚ್ಚು ಸುಲಭದಲ್ಲಿ ಕೈಗೂಡಿಸಬಹುದು.

ತಮ್ಮ "ಸಾಮಾನ್ಯ ಸಿದ್ಧಾಂತ" ಎಂಬ ಗ್ರಂಥದಲ್ಲಿ ಲಾರ್ಡ್ ಕೇನ್ಸ್ ಮಹಾಶಯರು ೧೯೩೦ನೇ ಇಸವಿಯ ಹೊತ್ತಿಗಾದಂಥ ಆರ್ಥಿಕ ವಿಷಮತೆಯನ್ನು ನಿವಾರಿಸಿ, ಆರ್ಥಿಕ ಚಟುವಟಿಕೆಯು ಹೆಚ್ಚಿಕೊಳ್ಳುವಂತೆ ಉತ್ತೇಜನೆಯನ್ನು ಕೊಡಲು ಔದ್ಯಮಿಕ ಕ್ಷೇತ್ರದಲ್ಲಿ ಸರಕಾರ ಭಾಗ ವಹಿಸುವುದು ಸರಿ ಎಂದಿದ್ದಾರೆ. ಇದು ಅಧ್ಯಕ್ಷ ರೂಸ್‌ವೆಲ್ಟರಿಂದ "ನ್ಯೂ ಡೀಲ್" ಎಂದು ಪ್ರಸಿದ್ಧವಾದ ಕಾರ್ಯಕ್ರಮದ ವೈಜ್ಞಾನಿಕ ಸಮರ್ಥನೆಯಾಗಿದೆ ಎನ್ನಬಹುದು. ಈ ಕಾರ್ಯಕ್ರಮವು ಆರ್ಥಿಕ ಚಟುವಟಿಕೆಗಳ ಪುನರುಜ್ಜೀವನಕ್ಕೆ ನೆರವಾಯಿತೇನೊ ನಿಜ; ಆದರೆ ಇದರಿಂದ ವಾಣಿಜ್ಯ ವ್ಯವಹಾರಕ್ಷೇತ್ರದ ಮುಂದಾಳುಗಳಲ್ಲಿ ಉಂಟಾದ ಸಂಶಯವು ಭಂಡವಾಳವು ಔದ್ಯಮಿಕ ಕ್ಷೇತ್ರಕ್ಕೆ ಹರಿದು ಬರುವಲ್ಲಿನ ತಡೆಗೂ ನಿಧಾನಕ್ಕೂ ಎಡೆಕೊಟ್ಟಿತು.

ಕೈಗಾರಿಕೆಗಳಲ್ಲಿ ಸರಕಾರವು ಭಾಗ ವಹಿಸುವಂತೆ ಮಾಡಿದ "ನ್ಯೂ ಡೀಲ್" ಪ್ರಯೋಗವು ಹೀಗೆ ನಮಗೆ ಪಾಠವನ್ನೂ ಎಚ್ಚರಿಕೆಯನ್ನೂ ಕೊಡುತ್ತದೆ: ಕೆಲವೊಂದು ನಿಶಿಷ್ಟ ಪರಿಸ್ಥಿತಿಗಳಲ್ಲಿ ರಾಷ್ಟ್ರೀಕರಣವು ಉಪಯುಕ್ತ ಪ್ರಯೋಜನಗಳನ್ನು ಮುಟ್ಟಿಸಬಲ್ಲುದೆಂಬುದೇ ಪಾಠ; ಆದರೆ ಇಂಥ ಪ್ರಯೋಜನಕ್ಕೆ ಮಿತಿಯೊಂದಿದೆ ಎಂಬುದೇ ಎಚ್ಚರಿಕೆ.

ಆದುದರಿಂದ ತಮ್ಮ ಪುಸ್ತಕದಲ್ಲಿ ಲಾರ್ಡ್ ಕೇನ್ಸ್ ಹೀಗೆ ತೀರ್ಮಾನವನ್ನಿತ್ತರು— "ಉತ್ಪಾದನೆಯ ಸಾಧನೆಗಳ ಒಡೆತನವನ್ನು ಸಂಪಾದಿಸುವುದೇ ಸರಕಾರದ ಪಾಲಿನ ಮುಖ್ಯ ಕೆಲಸವಲ್ಲ. ಉತ್ಪಾದನೆಯ ಸಾಧನೆಗಳನ್ನು ಶಕ್ತಿಯುತವಾಗಿ ಮಾಡಬಲ್ಲ ಮೂಲಗಳ ಪೂರೈಕೆ ಎಷ್ಟಿದೆಯೆಂದು ಗೊತ್ತುಹಚ್ಚಲು ಮತ್ತು ಮೂಲ ಪ್ರತಿಫಲವನ್ನು ನಿರ್ಧರಿಸಲು ಸಮರ್ಥವಾದರೆ, ಆವಶ್ಯವಿದ್ದುದೆಲ್ಲವನ್ನೂ ಸರಕಾರವು ಮಾಡಿತೆಂದಾಗುತ್ತದೆ."

ಬೇರೆ ಮಾತುಗಳಲ್ಲಿ ಇದನ್ನು ಹೀಗೆ ಹೇಳಬಹುದು: ಸರಕಾರವು ಒಂದು ಸಾಮಾನ್ಯ ಯೋಜನೆಯನ್ನು ರೂಪಿಸಬೇಕು; ಮತ್ತು ಎಲ್ಲ ಆರ್ಥಿಕ ಚಟುವಟಿಕೆಗಳೂ— ಅವು ಸರಕಾರದಿಂದ ನಡೆಸಲ್ಪಡಲಿ, ಅಥವಾ ಖಾಸಗಿ ಸಾಹಸಿಗರ ವ್ಯವಸ್ಥೆಗೊಳಪಟ್ಟಿರಲಿ— ಈ ಯೋಜನೆಗೆ ಅನುಗುಣವಾಗಿರಬೇಕು.

ಭಾರತವೀಗ ಮೊದಲನೇ ಪಂಚವಾರ್ಷಿಕ ಯೋಜನೆಯನ್ನು ಮುಗಿಸಿ ಎರಡನೇ ಯೋಜನೆಯಲ್ಲಿ ಪದಾರ್ಪಣ ಮಾಡಿದೆ. ನನ್ನ ದೃಷ್ಟಿಯಲ್ಲಿ ಮೊದಲನೇ ಯೋಜನೆಯನ್ನು "ಯೋಜನೆ" ಎಂದು ಕರೆಯುವುದೇ ತಪ್ಪು; ಅದು ಅಲ್ಲೊಂದು, ಇಲ್ಲೊಂದು ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಳ್ಳುವ ಒಂದು ಸಾಮಾನ್ಯ ಕಾರ್ಯಕ್ರಮ ಮಾತ್ರ. ಪ್ರಾಯಶಃ ಸಮಾಜ ವಿಕಾಸ ಯೋಜನೆಯನ್ನು ಹೊರತುಪಡಿಸಿದರೆ, ಉಳಿದೆಲ್ಲ ಅಭಿವೃದ್ಧಿ ಪ್ರಯತ್ನಗಳ ಮೂಲ ಹಂದರವನ್ನು ರಾಷ್ಟ್ರೀಯ ಸರಕಾರವು ಅಧಿಕಾರಕ್ಕೆ ಬರುವ ಮೊದಲೇ ಗೊತ್ತುಪಡಿಸಲಾಗಿದ್ದಿತು.

ಅಂದಿನಿಂದ ಎರಡು ಬದಲಾವಣೆಗಳಾಗಿವೆ—ಆಹಾರದ ಪೂರೈಕೆಯಲ್ಲಾದ ಅಭಿವೃದ್ಧಿಯೂ ಬೆಲೆಗಳಲ್ಲಿ ಕಂಡು ಬಂದ ಸ್ಥಿರತೆಯೂ ಲಭ್ಯವಿರುವ ಸಾಧನ ಸಂಪತ್ತುಗಳನ್ನು ಕೊರತೆ ಧನ ವಿನಿಯೋಗ ಪದ್ಧತಿಯಿಂದ ಹೆಚ್ಚಿಸುವುದನ್ನು ಸಾಧ್ಯವಾಗಿ ಮಾಡಿದವು. ಇದು ಮೊದಲನೆಯ ಬದಲಾವಣೆಯಾದರೆ, ಯುದ್ಧೋತ್ತರದಲ್ಲಿಯೇ ಮೊದಲ ಬಾರಿಗೆ ಭಾರತವೂ ಸೇರಿ ಎಲ್ಲ ರಾಷ್ಟ್ರಗಳೂ ಆರ್ಥಿಕ ಚಟುವಟಿಕೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅನುಕೂಲ ವಾತಾವರಣವೇರ್ಪಟ್ಟಿರುವುದೇ ಎರಡನೇಯದು.

ಸಾಮಾನ್ಯವಾಗಿ ಮೊದಲನೇ ಯೋಜನೆಯು ಯಶಸ್ವಿಯಾಗಿದೆ ಎನ್ನುವ ಸಂಗತಿಯು ಅಭಿಮಾನವನ್ನುಂಟು ಮಾಡುವಂತಿದ್ದರೂ ಎರಡನೇ ಯೋಜನೆಯ ಬುನಾದಿಯ ಕುರಿತು ಇಷ್ಟೇ ತೃಪ್ತಿಕರವಾದ ನಿಲುಮೆ ವಹಿಸುವುದು ಯೋಗ್ಯವಲ್ಲ. ಎರಡನೇ ಯೋಜನೆಯು ನಿಜವಾದ ಅರ್ಥದಲ್ಲಿ ಸರ್ವಗ್ರಾಸಿ ಯೋಜನೆಯಾಗಿದೆ. ಅದು ಅಲ್ಲೊಂದು, ಇಲ್ಲೊಂದು ಅಭಿವೃದ್ಧಿ ಕಾರ್ಯಕ್ರಮಗಳ ಸಂಯೋಜಿತ ರೂಪವಲ್ಲ—ಆರ್ಥಿಕ ಚಟುವಟಿಕೆ ಕಂಡು ಬರುವಲ್ಲ ರಂಗಗಳ ಒಕ್ಕೂಟವದು. ಅದರ ವ್ಯಾಪ್ತಿ ಬಹಳ ಹೆಚ್ಚು: ಅದು ಅಪೇಕ್ಷಿಸುವ ಭಂಡವಾಳವೂ ಹಣವೂ ಅತ್ಯಧಿಕ.

ಎರಡನೇ ಯೋಜನೆಗೆ ಬೇಕಾದ ಹಣವೆಲ್ಲವನ್ನು ತೆರಿಗೆ ಅಥವಾ ಸಾಲಗಳಿಂದಲೇ ಪೂರೈಸುವುದು ಸಾಧ್ಯವಿಲ್ಲವಾಗಿದೆ; ಆದುದರಿಂದಲೇ ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅವಲಂಬಿಸುವುದು ಅನಿವಾರ್ಯವೆನಿಸಿದೆ. ಇದು ಅನೇಕ ಜವಾಬ್ದಾರಿಗಳಿಗೂ ನಷ್ಟದ ಸಂಶಯಗಳಿಗೂ ಎಡೆ ಕೊಡುತ್ತದೆ. ಇದೊಂದು ಮಹಾ ಕಷ್ಟವಾದರೆ, ಇಷ್ಟು ವಿಸ್ತಾರವಾದ ಯೋಜನೆಯು ಕಾರ್ಯಾಚರಣೆಗೆ ಅಂಕೆಸಂಖ್ಯೆಗಳಆಧಾರದ ಮತ್ತು ಪರಸ್ಪರ ಹೊಂದಿಕೆಯ ಅಭಾವವು ಇನ್ನೂ ಹೆಚ್ಚಿನ ಕಷ್ಟ. ಆದುದರಿಂದ ಕಾರ್ಯಾಚರಣೆಯ ಹೊತ್ತಿಗೆ ಒಂದಕ್ಕೊಂದು ತಾಳಮೇಳ ಎಷ್ಟಕ್ಕೂ ಸರಿಯಲ್ಲವೆಂದು ಉದ್ಗರಿಸಬೇಕಾಗಿ ಬರುವ ಪ್ರಸಂಗಗಳು ಅನೇಕ ಇರುವುದು ನಿಶ್ಚಯ.

ನಾನು ಎರಡನೇ ಯೋಜನೆಯ ಈ ಅಂಶಗಳಿಗೆ ಗಮನ ಸೆಳೆಯಲು ವಿಶೇಷ ಕಾರಣವೊಂದಿದೆ: ಯೋಜನೆಯಲ್ಲಿ ನಿರೂಪಿತವಾದ ಧ್ಯೇಯದ ಆವಶ್ಯಕತೆಗಳಿಗೆ ಹೊಂದಿಕೊಳ್ಳುವಂತೆ ಆರ್ಥಿಕ ಅಭಿವೃದ್ಧಿಯನ್ನು ನಿರ್ದೇಶಿಸುವ ಮಾತ್ರದನ್ನು ಕೇಂದ್ರೀಕರಿಸುವ ಕೆಲಸವು ಎಷ್ಟು ದೊಡ್ಡದಾಗುತ್ತದೆಯೆಂದರೆ, ಸರಕಾರನೇ ನೇರಾಗಿ ಔದ್ಯಮಿಕ ಕ್ಷೇತ್ರದಲ್ಲಿ ಪ್ರವೇಶಿಸಿ ಕೈಗಾರಿಕೆಗಳ ಒಡೆತನವನ್ನೂ ಆಡಳಿತವನ್ನೂ ವಹಿಸಿಕೊಳ್ಳುವುದರಿಂದ ಈ ಭಾರವು ಸರ್ವಥಾ ಹೊರಲಾಗದ ಮಟ್ಟವನ್ನು ಮುಟ್ಟುತ್ತದೆ. ನನ್ನ ಅಭಿಪ್ರಾಯದಲ್ಲಿ ಇದು ಸರಕಾರದ ಆರ್ಥಿಕ ಹಾಗು ಆಡಳಿತ ಸಾಧನ ಸಂಪತ್ತಿಯ ಮೇಲೆ ಬಿದ್ದ ಅನಾವಶ್ಯಕವಾದ ಭಾರ.

ರಾಷ್ಟ್ರೀಕರಣ ಅನವಶ್ಯವೆಂದು ಸರಕಾರವು ಭಾವಿಸುವಂತೆ ಮಾಡಿದ ಎರಡನೇ ಸಂಗತಿಯು ಕೈಗಾರಿಕೆಗಳ ಕ್ಷಿಪ್ರ ಅಭಿವೃದ್ಧಿಯ ಕುರಿತಾದ ಆತುರ. ಈ ವಿಷಯದಲ್ಲಿ ನನ್ನ ಅಭಿಪ್ರಾಯವು ಸರಕಾರಿ ಸಂಸ್ಥೆಗಳಿಗೂ ಆಡಳಿತಗಾರರಿಗೂ ರಾಷ್ಟ್ರೀಕರಣದ ಮೂಲಕ ಸ್ಥಿರ ಅಭಿವೃದ್ಧಿಯನ್ನು ಸಾಧಿಸುವ ಸಾಮರ್ಥ್ಯವಿಲ್ಲವೆನ್ನುವುದೇ ಆಗಿದೆ.

ನನ್ನ ನಂಬಿಕೆಯಂತೆ, ಭಾರತವು ತನ್ನ ವಿಸ್ತಾರ ಮತ್ತು ಜನಸಂಖ್ಯೆಯ ದೃಷ್ಟಿಕೋಣದಿಂದ ನೋಡಿದಾಗ ತೀರ ಕಡಿಮೆ ಆಡಳಿತ ಪ್ರಭಾವಕ್ಕೊಳಗಾದ ದೇಶವಾಗಿದೆ. ಸರಕಾರದ ಸಾಮಾನ್ಯ ಕರ್ತವ್ಯಗಳ ಮಟ್ಟಿಗೆ ಸಹ ಇಲ್ಲಿ ಆಡಳಿತವು ಸಾಕಷ್ಟು ಸಬಲವಾಗಿಲ್ಲ. ಸ್ವತಂತ್ರ ಭಾರತದ ಸರಕಾರವು "ಸರಕಾರ"ವೆಂಬ ನೆಲೆಯಿಂದ ಒಳ್ಳೆಯದನ್ನು ಮಾಡಿದ್ದರೆ, ಅದಕ್ಕೆ ಬ್ರಿಟನರು ತಯಾರಿಸಿಟ್ಟ ಪ್ರಥಮ ಶ್ರೇಣಿಯ ಆಡಳಿತ ಯಂತ್ರವು ಸುಸ್ಥಿತಿಯಲ್ಲಿಯೇ ನಮ್ಮ ನಾಯಕರಿಗೆ ದೊರೆತುದು ಕಾರಣ.

ಸರಕಾರಿ ನೌಕರರು ತಮ್ಮ ನಿರ್ಧಾರಗಳಲ್ಲಿ ಬಹಳ ನಿಧಾನವಾಗಿರುತ್ತಾರೆ.

(೧೧ನೇ ಪುಟ ನೋಡಿರಿ).

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪ್ರೊಸಿಟ್ ವಾಲ್ಟ್
ಮಂಗಳೂರು—3.

ಬುದ್ಧ ಪರಿನಿರ್ವಾಣ ಜಯಂತ್ಯುತ್ಸವ

ಮಾನವನ ಪೀಡೆಗಳಿಗೆ ಪರಿಹಾರ ಬೋಧಿಸಿದ ಅವತಾರ ಪುರುಷ

ಮಾನವೇತಿಹಾಸದಲ್ಲಿ ಬುದ್ಧ ಭಗವಾನರಿಗೆ ಅದ್ವಿತೀಯವಾದ ಸ್ಥಾನವು ಸಲ್ಲುತ್ತದೆ. ಮಾನವನನ್ನು ಪೀಡೆಗಳಿಂದ ನಿವಾರಣೆಗೊಳಿಸುವ ಸಲುವಾಗಿ ಸೇವಾಪರಾಯಣತೆಯ ಮನೋಭಾವದಿಂದ ದುಡಿದವರಲ್ಲೆಲ್ಲ ಅವರು ಮಹಾತ್ಮರು: ಆಧ್ಯಾತ್ಮಿಕ್ಕೆ ಸಲ್ಲುತ್ತಿದ್ದ ಮಹತ್ವ ಮತ್ತು ಪಾವಿತ್ರ್ಯವನ್ನು ವ್ಯವಹಾರ ಕ್ಷೇತ್ರದಲ್ಲಿ ಧರ್ಮಸಮ್ಮತ ಜೀವನವನ್ನು ನಡೆಸುವುದಕ್ಕೂ ವ್ಯಕ್ತಿಯೊಬ್ಬನೇ ವಿವೇಚನೆ ಹೊಂದುವ ತಂತ್ರವನ್ನು ಸಾಮೂಹಿಕ ವಿವೇಚನೆಯ ಉಪಾಯಕ್ಕೂ ಪರಿವರ್ತಿಸಿದವರಲ್ಲೆಲ್ಲ ಬುದ್ಧ ದೇವರೇ ಮೊದಲಿಗರೆನ್ನಬಹುದು.

ತನ್ನ ವ್ಯಕ್ತಿತ್ವದ ಮತ್ತು ವ್ಯವಹಾರೋಪದೇಶಗಳ ಪ್ರಭಾವದಿಂದ ಬುದ್ಧ ಭಗವಾನರು ತಮ್ಮ ಪ್ರೇಮಪೂರಿತ ಸದ್ವರ್ತನೆಯಿಂದ ಯುಗ-ಯುಗಗಳವರೆಗೆ ಜನರಿಗೆ ಧರ್ಮ ಪಥವನ್ನು ತೋರಿಸುವ ಶಿಷ್ಯ ಪರಂಪರೆಯನ್ನು ಪಡೆದರು.

ಇತಿಹಾಸಕಾಲದ ಭಾರತೀಯರಲ್ಲೆಲ್ಲ ಅವರು ಶ್ರೇಷ್ಠರು: ನಮಗಂತೂ ಅವರೊಬ್ಬ ದೇವರ ಅವತಾರ ಪುರುಷ; ವ್ಯಾಸ, ರಾಮ, ಕೃಷ್ಣರಂತೆಯೇ ಬುದ್ಧ ಕೂಡ. ಅವರಾಡಿದ ಮಾತುಗಳು, ಅವರು ಬದುಕಿದ ರೀತಿನೀತಿಗಳು ಎಲ್ಲವೂ ಭಾರತೀಯರಾದ ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿವೆ. ಅವರ ವ್ಯಕ್ತಿತ್ವದ ಪ್ರಭಾವವು ಅಚ್ಚಳಿಯದೆ ನಮ್ಮ ಸುಪ್ತ ಪ್ರಜ್ಞೆಯಲ್ಲಿ ಉಳಿದಿರುತ್ತದೆ.

ಭಾರತ, ಬರ್ಮ, ಸಿಂಹಳ, ಚೀನ, ಜಪಾನು ಮತ್ತು ಆಗ್ನೇಯ ಏಶ್ಯದ ರಾಷ್ಟ್ರಗಳೆಲ್ಲವನ್ನೂ "ಬೌದ್ಧ ಭೂಮಿ" ಎಂಬ ನೆಲೆಯಿಂದ ಬುದ್ಧ ದೇವರು ಒಂದುಗೂಡಿಸಿದ್ದಾರೆ. ಈ ವಲಯದಲ್ಲಿರುವ ಎಲ್ಲ ಜನರಿಗೂ ಬುದ್ಧ ದೇವರು ನೀಚ ಹಾಗೂ ನಶ್ವರ ಭೌತಿಕ ವ್ಯವಹಾರಗಳಾಚೆಗಿನ ಉತ್ತಮವೂ ಭವ್ಯವೂ ಆದ ಜೀವನದ ದರ್ಶನ ಮಾಡಿಸುವ ಅಗ್ನಿಸ್ತಂಭ!

*

ಬುದ್ಧ ನಾಮದಿಂದ ಪ್ರಸಿದ್ಧನಾದ ಗೌತಮನು ಭಾರತಕ್ಕೂ ನೇಪಾಳಕ್ಕೂ ಇರುವ ಗಡಿಗೆ ತೀರ ಸಮೀಪದಲ್ಲಿ ನೇಪಾಳದೊಳಗಿರುವ ಲುಂಬಿನೀಯಲ್ಲಿ ಕ್ರಿಸ್ತಪೂರ್ವ ೬೨೪ನೇ ವರ್ಷದಲ್ಲಿ ಜನಿಸಿದನು. ಆತನ ತಾಯಿ ಮಾಯಾವತಿ; ತಂದೆಯು ಕಪಿಲ ವಸ್ತುವನ್ನು ರಾಜಧಾನಿಯಾಗಿಟ್ಟುಕೊಂಡು ಶಾಕ್ಯ ವಂಶಜರಿಗೆಲ್ಲ ಮುಖ್ಯಸ್ಥನಾಗಿ ಆಳುತ್ತಿದ್ದ ಶುದ್ಧೋದನ.

ಇನ್ನೂ ಏಳು ದಿನಗಳ ಕೂಸಾಗಿರುವಾಗಲೇ ಗೌತಮನು ಮಾತೃವಿಹೀನನಾದನು; ತಾಯಿಯ ಸಹೋದರಿಯಾದ ಗೋತಮಿಯೆಂಬವಳು ಈತನನ್ನು ಪಾಲಿಸಿ, ಪೋಷಿಸಿದಳು. ೧೬ನೇ ವರ್ಷದಲ್ಲಿ ಆತನಿಗೆ ಯಶೋಧರೆಯೊಡನೆ ಮದುವೆಯಾಯಿತು. ರಾಜಕುಮಾರನಿಗೆ ಒಪ್ಪುವ ವೈಭವೋಪೇತ ಜೀವನವನ್ನಾತನು ಕೆಲವು ವರ್ಷಗಳ ವರೆಗೆ ನಡೆಸಿದನು. ೨೪ನೇ ವರ್ಷದಲ್ಲಿ ಆತನ ಒಬ್ಬನೇ ಮಗನಾದ ರಾಹುಲನು ಹುಟ್ಟಿದನು. ತನ್ನ ೨೯ನೇ ವರ್ಷದಲ್ಲಿ ಗೌತಮನು ಈ ಪ್ರಾಪಂಚಿಕ ಸುಖವನ್ನು ಸಂಪೂರ್ಣವಾಗಿ ತ್ಯಜಿಸಿದನು.

ವೈಶಾಲಿಯ ಸಾಂಖ್ಯ ತತ್ತ್ವವೇತ್ತರೊಬ್ಬರೊಡನೆ ಶಿಷ್ಯತ್ವವನ್ನು ಗ್ರಹಿಸಿ ಆಶಾರಹಿತ ಮನೋಭಾವವನ್ನು ಗೌತಮನು ಹೊಂದಿದನು. ಮುಂದೆ ಅರಸು ಬಿಂಬಿಸಾರನು ತಪೋಜೀವನವನ್ನು ಬಿಟ್ಟುಗೊಡೆಂದು ನೀಡಿದ ಬೋಧನೆಯನ್ನು ತಿರಸ್ಕರಿಸಿ, ರಾಜಗೃಹದಲ್ಲಿದ್ದ ರುದ್ರಕನೆಂಬ ಸಂತನ ಶಿಷ್ಯನಾದನು. ಕೆಲಸಮಯದ ಬಳಿಕ ಐದು ಮಂದಿ ಬ್ರಾಹ್ಮಣರ ಸಂಸರ್ಗದಲ್ಲಿದ್ದು ಕಠಿಣ ತಪಶ್ಚರ್ಯೆಯಲ್ಲಿ ಆತನು ಮಗ್ನನಾದನು.

ಇಷ್ಟು ಹೊತ್ತಿಗೆ ಗೌತಮನು ಉಪನಿಷತ್ತುಗಳ ಉಪದೇಶವನ್ನು ಚೆನ್ನಾಗಿ ಮನಗಂಡಿದ್ದನು. ಇಂದ್ರಿಯಗಳ ನಿಗ್ರಹ, ಮನಸ್ಸಿನ ಮೇಲೆ ಯಜಮಾನತ್ವವನ್ನು ಸಂಪಾದಿಸಿ ಕೊಡುವ ಯೋಗಾಭ್ಯಾಸ, ಜನನ-ಮರಣಗಳ ಸಂಕೋಲೆಯಿಂದ ಬಿಡುಗಡೆ ಹೊಂದುವುದಕ್ಕೆ ಇವುಗಳಿಂದಾಗುವ ಸಹಾಯ-ಎಲ್ಲವನ್ನೂ ಉಪನಿಷತ್ತುಗಳ ಬೋಧನೆಯ ಮೂಲಕ ಆತನು ಮನವರಿಕೆ ಮಾಡಿಕೊಂಡನು. ಪ್ರತ್ಯೇಕ ಅಸ್ತಿತ್ವವನ್ನು ಕೊನೆಗಾಣಿಸುವ ಮೂಲಕ ಎಲ್ಲ ಪೀಡೆಗಳನ್ನೂ ಪರಿಹರಿಸುವ, ಮತ್ತು ಪರಿಶುದ್ಧವಾದ ಶಾಂತಿ ಮತ್ತು ನಿಷ್ಕಳಂಕವಾದ ಆನಂದದೆಡೆಗೊಯ್ಯುವ ಪರಾಸತ್ಯದ ಹೊಳಹು ಆತನಿಗೆ ಇದರಿಂದ ಉಂಟಾಯಿತು.

ಸನಾತನ ಸಂಪ್ರದಾಯಕ್ಕೊಪ್ಪುವ ಕಠಿಣ ತಪಶ್ಚರ್ಯೆಯನ್ನು ಮಾಡಿದರೂ ಗೌತಮನಿಗೆ ಹೊಳಹಿನ ರೂಪದಲ್ಲಿ ಆತ್ಮಶಾಂತಿಯ ಮಾರ್ಗವಷ್ಟೇ ಗೋಚರಿಸಿತಲ್ಲದೆ, ನಿಜವಾಗಿ ಆತ್ಮಶಾಂತಿಯು ಅನುಭವಕ್ಕೆ ಬಂದಿಲ್ಲ. ಚಿಂತೆಯು ಆತನ ಹೃದಯವನ್ನು ತ್ಯಜಿಸಿಹೋಗಿರಲಿಲ್ಲ. ಜನರು ಅನುಭವಿಸಬೇಕಾಗಿ ಬರುವ ಪೀಡೆಗಳು ತನ್ನವೇ ಎನ್ನುವಷ್ಟು ಆತನು ನೊಂದುಕೊಂಡನು. ಅಸತ್ಯವೂ ಅನಿತ್ಯವೂ ಆದ ಭೌತಿಕ ಆದರ್ಶಗಳ ಹಿಂದೆ ಓಡುತ್ತಿರುವವರ ಅಜ್ಞಾನವನ್ನು ಕಂಡಾತನು ಬಹಳವಾಗಿ ಕಳವಳಗೊಂಡನು. ತನ್ನ ಕಾಲದ ಧಾರ್ಮಿಕ ವ್ಯವಹಾರಗಳನ್ನು ಅಭ್ಯಸಿಸಿದಾಗ ಆತನಿಗೆ ಅವುಗಳು ನಿಷ್ಪ್ರಯೋಜಕವಾದ ಸಮಾರಂಭಗಳಿಂದಲೂ ವೈಭವಗಳಿಂದಲೂ ಕೂಡಿರುವಂತೆ ಕಂಡವೇ ಹೊರತು, ಉಪಯುಕ್ತವಾದ ಸೂಕ್ತಿಗಳ ಪ್ರತಿಪಾದನೆಯೇನೂ ವ್ಯಕ್ತವಾಗಲಿಲ್ಲ.

ಆಧ್ಯಾತ್ಮಿಕ ತಪಶ್ಚರ್ಯೆಯು ಆಯ್ದ ಕೆಲವೇ ಮಂದಿಗಷ್ಟೆ ಮೋಕ್ಷದ ದಾರಿಯನ್ನು ದೊರಕಿಸಿ ಕೊಡಬಲ್ಲುದಲ್ಲದೆ, ಜನಸಾಧಾರಣರೆಲ್ಲರಿಗಲ್ಲವೆಂಬ ಅಭಿಪ್ರಾಯವು ಆತನಲ್ಲಿ ಮೂಡಿತು. ಸಾಮಾನ್ಯ ಮನುಷ್ಯನನ್ನು ಆಧ್ಯಾತ್ಮಿಕ ತಪಶ್ಚರ್ಯೆಯ ಕಠಿಣತೆಯು ಗೊಂದಲದಲ್ಲಿಯೂ ಸಂದೇಹದಲ್ಲಿಯೂ ಕೆಡಹುವುದೆಂದವನು ತಿಳಿದುಕೊಂಡನು. ಆದುದರಿಂದ ಮಾನವೋದ್ಧಾರಕ್ಕಾಗಿ ಹೊಸ ಸೂಚನೆಗಳು ಬೇಕೆಂದು ಆತನು ನಿರ್ಣಯಗೈದನು.

ಗೌತಮನ ಮನಸ್ಸು ಹರಿಯುವ ಈ ದಾರಿಯನ್ನು ಕಂಡು ಆತನ ಬ್ರಾಹ್ಮಣ ಸಂಗಾತಿಗಳು ಇದು ಧರ್ಮ ಮಾರ್ಗವಲ್ಲವೆಂದು ಭಾವಿಸಿ, ಆತನನ್ನು ಬಿಟ್ಟು ದೂರ ಸಾಗಿದರು. ಹೀಗೆ ಏಕಾಕಿಯಾಗಿಯೂ ಮಿತ್ರಹೀನನಾಗಿಯೂ ಈಗಿನ ಬುದ್ಧಗಯಾದಲ್ಲಿ ಒಂದು ಅಶ್ವತ್ಥ ವೃಕ್ಷದ ನೆರಳಿನಲ್ಲಿ ಕುಳಿತು, ಗೌತಮನು ಮಾನವನ ಪೀಡಾ ಪರಿಹಾರದ ಉಪಾಯವೇನೆಂದು ಚಿಂತನೆಗೈದನು. ವೃಕ್ಷ ದೇವತೆಯ ವ್ಯಕ್ತ ಸ್ವರೂಪನೆಂದೀತನನ್ನು ತಪ್ಪು ತಿಳಿದುಕೊಂಡು ಸುಜಾತಾಳೆಂಬವಳು ಆತನಿಗೆ ತಿನಿಸುಣಿಸುಗಳನ್ನಿತ್ತು ರಕ್ಷಿಸಿದಳು. ಕೆಲವು ಕಾಲದ ತರುವಾಯ ತನ್ನ ೩೫ನೇ ವಯಸ್ಸಿನಲ್ಲಿ ಗೌತಮನಿಗೆ ಜ್ಞಾನೋದಯವಾಯಿತು. ಆತನು ಬುದ್ಧನಾದನು!

*

ಜ್ಞಾನೋದಯಗೊಂಡ ಬುದ್ಧನು ಆರ್ಯ ಸತ್ಯಗಳ ಪ್ರತಿಪಾದನೆ ಮಾಡಹತ್ತಿದನು. ಆಧ್ಯಾತ್ಮಿಕ ತಪಶ್ಚರ್ಯೆ, ವೈಭವಯುಕ್ತ ಸಮಾರಂಭಗಳ ಕಾರ್ಯಕ್ರಮಾದಿಗಳನ್ನು ಆತನು ತಿರಸ್ಕರಿಸಿ, ಇವುಗಳಿಂದ ಪೀಡಾಪರಿಹಾರ ಅಸಾಧ್ಯವೆಂದನು.

ಜೀವನದಲ್ಲಿ ಅಮಿತ ಆಶೆಗಳೂ ಅವುಗಳ ತೃಪ್ತಿಗಾಗಿ ನಿರಂತರ ಪ್ರಯತ್ನಗಳೂ ಇರುವ ವರೆಗೆ ಪೀಡೆಗಳು ತಪ್ಪಿದ್ದಲ್ಲವೆಂದವನು ಕಂಡುಕೊಂಡನು. ವಿಲಾಸವೂ ಕೋಪವೂ ಆತ್ಮಶಾಂತಿಯನ್ನು ತಾರದೆ, ಮನುಷ್ಯನನ್ನು ನೋವು-ನರಳಿಕೆಗಳ ಕಡೆಗೆ ಒಯ್ಯುವುವೆಂದಾತನು ಮನವರಿಕೆ ಮಾಡಿಕೊಂಡನು. ಆದುದರಿಂದ ಪ್ರತಿಯೊಬ್ಬನೂ ತನ್ನನ್ನು ಆಶೆ ಮತ್ತು ಮೋಹಗಳಿಂದ ದೂರವಿಡಬೇಕೆಂದಾತನು ಪ್ರತಿಪಾದಿಸಿದನು. ಇದರಲ್ಲಿ ಯಶಸ್ಸು ದೊರೆತ ಮಾತ್ರಕ್ಕೆ ಜನನ-ಮರಣಗಳ ನಿರಂತರ ಸರಪಣಿಯಿಂದ ಬಿಡುಗಡೆ ಸಿಗುವುದೆಂದವನು ಉಪದೇಶಿಸಿದನು.

ಆಶಾನಾಶವನ್ನು ಅಥವಾ ಲಾಲಸೆಗಳ ದಮನವನ್ನು ಸ್ವನಿಯಂತ್ರಣದಿಂದ ಮಾತ್ರವೇ ಸಾಧಿಸಬಹುದೆಂದಾತನು ತಿಳಿಸಿ ಹೇಳಿದನು. ಸ್ವನಿಯಂತ್ರಣಧನ್ಯನಾದವನಿಗೆ ಆಶೆ, ವ್ಯಾಮೋಹಗಳ ಪೀಡೆಯಾಗದೆ, ಅಜ್ಞಾನದ ಕತ್ತಲು ಅಡಗಿ, ಜ್ಞಾನದ ಬೆಳಕು ಆತನನ್ನು ಆವರಿಸುವುದೆಂದವನು ನುಡಿದನು. ನೋವು-ನರಳಿಕೆಗಳಿಂದ ವಿರಹಿತನಾದ ಈ ಮಹಾಮಾನವನು ಉಳಿದೆಲ್ಲರನ್ನೂ ಸಹೃದಯತೆ, ಸಾಂತಃಕರಣ ಕರುಣಾಭಾವ ಮತ್ತು ಪ್ರೀತಿ ಪುರಸ್ಸರವಾಗಿ ನೋಡತೊಡಗುವನೆಂದೂ ಪ್ರೇಮವು ಇಲ್ಲಿ ಸಂಪೂರ್ಣ ವಿಕಸಿತಗೊಳ್ಳುವುದೆಂದೂ ಬುದ್ಧನು ಉಪದೇಶಿಸಿದನು.

ಸಮಸ್ಯೆಯ ಪರಿಹಾರ ಮಾರ್ಗವೊಂದನ್ನು ಹೀಗೆ ಕಂಡುಕೊಂಡ ಗೌತಮ ಬುದ್ಧನು ಸಾರಾನಾಥಕ್ಕೆ ತೆರಳಿ ಅಲ್ಲಿ ಆಷಾಢ ಪೂರ್ಣಿಮೆಯಂದು ಮೊದಲಬಾರಿಗೆ ಧರ್ಮಚಕ್ರ ಪ್ರವರ್ತನಗೈದನು: ತನ್ನ ಶಿಷ್ಯಂದಿರಿಗೆಲ್ಲ ಅಷ್ಟಾಂಗ ಕಾರ್ಯಕ್ರಮಗಳುಳ್ಳ ನಿರ್ವಾಣ ಪಥವನ್ನು ವಿವರಿಸಿ ಹೇಳಿದನು.

ಶೀಲವು ಅತಿ ಪ್ರಾಮುಖ್ಯವಾದುದೆಂದಾತನು ಜನರಿಗೆ ತಿಳಿಸಿದನು: ಸತ್ಯ ವಚನ, ಸರಿಯಾದ ಕಾರ್ಯ, ಜೀವನ ನಿರ್ವಹಣೆಯ ಸರಿಯಾದ ರೀತಿಗಳು ಶೀಲದಲ್ಲಿ ಬರುತ್ತವೆ. ಚಿತ್ತ ಅಥವಾ ಸಮಾಧಿಯೂ ಮನುಷ್ಯನ ಕಲ್ಯಾಣಕ್ಕೆ ಅವಶ್ಯವೆಂದು ಬುದ್ಧನ ಅಭಿಪ್ರಾಯ: ಸರಿಯಾದ ರೀತಿಯಲ್ಲಿ ಪ್ರಯತ್ನ, ಸರಿಯಾದ ಮನೋಭಾವ, ಸರಿಯಾದ ಧ್ಯಾನಗಳು ಸಮಾಧಿ ಸ್ಥಿತಿಯನ್ನು ತರುತ್ತವೆ. ಅನಂತರ ಬರುವುದೇ ಪ್ರಜ್ಞೆ: ಅಂದರೆ ದೃಢ ಸಂಕಲ್ಪ ಮತ್ತು ಸತ್ಯವನ್ನು ಸರಿಯಾಗಿ ತಿಳಿದುಕೊಳ್ಳುವ ಉತ್ಕಟ ಭಾವ.

ಶೀಲ, ಚಿತ್ತ (ಅಥವಾ ಸಮಾಧಿ) ಮತ್ತು ಪ್ರಜ್ಞೆಗಳೆಂಬ ಹಂತವನ್ನು ಮುಟ್ಟಿದ ಬಳಿಕ ನಿರ್ವಾಣ ಪಥವು ದೃಗ್ಗೋಚರವಾಗುತ್ತದೆ. ನಿರ್ವಾಣವು ರೋಗರುಜನೆಗಳಿಗಾಗಲೀ ಮರಣ ಅಥವಾ ಕ್ಷೀಣತೆಗಾಗಲೀ ಅಶುದ್ಧಿಗಾಗಲೀ ಒಳಪಟ್ಟಿಲ್ಲ. ಇದು ಅದ್ವಿತೀಯವಾದ ಅತ್ಯುನ್ನತವಾದ ಗುರಿಯಾಗಿದೆ. ಕೇವಲ ಪ್ರಾರ್ಥನೆ ಮತ್ತು ಹೋಮ ಹವನಾದಿಗಳಿಂದ ಇದನ್ನು ಸಂಪಾದಿಸುವುದು ಸಾಧ್ಯವಿಲ್ಲ. ಧರ್ಮ ಸಮ್ಮತವಾದ ರೀತಿಯಲ್ಲಿ ಸ್ವತಃ ಜೀವನ ನಡೆಸುವುದು, ವಿಚಾರ ಮಾಡುವುದು, ಮತ್ತು ಜ್ಞಾನ ಸಂಪಾದಿಸುವುದು— ಒಟ್ಟಿನಲ್ಲಿ ತನಗೆ ತಾನೇ ದೀಪವಾಗಿ ವರ್ತಿಸುವುದು ಈ ಗುರಿಯನ್ನು

(೧೦ನೇ ಪುಟ ನೋಡಿರಿ)

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ ಕಪ್, ಶೀಲ್ಡು ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. ೨೦—೩—೫೬ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, Udipi, S. K. *Phone:* 6

ಭಾರತದಲ್ಲಿ ಬೌದ್ಧ ಮತದ ಪ್ರಸಾರ

ಹಿಂದೂಮತದೊಡನೆ ಹೋಲಿಕೆ ಅಧಿಕವಾದಂತೆ ಆಕರ್ಷಣೆ ಇಳಿಯಿತು

ಬೌದ್ಧ ಮತವು ಪ್ರಾರಂಭದಲ್ಲಿ ಮಿತ ಪ್ರಮಾಣದ ಯಶಸ್ಸನ್ನು ಭಾರತದಲ್ಲಿ ಗಳಿಸಿತು. ಬುದ್ಧನ ಮಹಾ ಪರಿನಿರ್ವಾಣದ ನಂತರ ಮೊದಲೆರಡು ಶತಮಾನಗಳಲ್ಲಿ ದೇಶದಲ್ಲಿ ಇತರ ವಿರಕ್ತ ಚಳವಳಿಗಳಿಂದ ಬೌದ್ಧ ಮತವನ್ನು ಗುರುತಿಸುವುದಕ್ಕಾಗುತ್ತಿರಲಿಲ್ಲ. ಮೌರ್ಯರ ಕಾಲದಲ್ಲಿ ಪ್ರಸಾರಣೆಯು ಹೆಚ್ಚಿನಶಕ್ತಿಸಾಮರ್ಥ್ಯವನ್ನು ಪಡೆದು ಬೌದ್ಧಮತವು ಪ್ರತ್ಯೇಕ ಮತವಾಗಿ ಉದಯಿಸಿತು.

ಮೌರ್ಯರು ಈ ಮತವನ್ನು ವಿಶ್ವದ ಮುಖ್ಯ ಮತಗಳ ಸಾಲಿಗೆ ಸೇರಿಸಿದರು. ಬೌದ್ಧಮತವು ಟಿಬೆಟ್, ಟರ್ಕಿಸ್ಥಾನ, ಚೀನಾ, ಕೊರಿಯಾ, ಜಪಾನ, ಬರ್ಮಾ, ಸಯಾಂ, ಕಾಂಬೋಡಿಯಾ ಮತ್ತು ಮಲಯ ಪರ್ಯಾಯ ದ್ವೀಪಗಳಲ್ಲಿ ಹರಡಿತು.

ಅಶೋಕನ ಪೋಷಣೆ

ಅಶೋಕ ಚಕ್ರವರ್ತಿಯ ಕಾಲದಲ್ಲಿ ತೃತೀಯ ಬೌದ್ಧ ಪರಿಷತ್ತು ನಡೆಯಿತು. ಅಶೋಕ ಚಕ್ರವರ್ತಿಯ ಪೋಷಣೆಯಲ್ಲಿ ಬೌದ್ಧ ಮತವು ಪ್ರಸರಿಸಿತು. ಚಕ್ರವರ್ತಿಯ ಪ್ರತಿಭೆಯಿಂದ ಬೌದ್ಧ ಮತವು ವಿಶ್ವ ಮತವಾಗಿ ಪರಿಣಮಿಸಿತು. ತನ್ನ ಶಿಲಾ ಶಾಸನಗಳಲ್ಲಿ ತಾನು ಧರ್ಮ ಪ್ರಚಾರಕ ಮಂಡಲಿಗಳನ್ನು ಸಿರಿಯಾ, ಈಜಿಪ್ಟ ಮತ್ತು ಸೈರಿನೈಕ, ಮೆಸಿಡೋನಿಯಾಗಳಿಗೆ ಕಳುಹಿಸಿದ್ದಾಗಿ ಅಶೋಕನು ಹೇಳಿಕೊಂಡಿರುತ್ತಾನೆ. ಚೋಳ, ಕೇರಳಪುತ್ರ, ಸತ್ಯಪುತ್ರ ಮತ್ತು ಸಿಂಹಳ ದ್ವೀಪಗಳಿಗೆ ಕೂಡ ಧರ್ಮ ಪ್ರಚಾರಕ ಮಂಡಲಿಗಳನ್ನು ಕಳುಹಿಸಲಾಗಿತ್ತು. ನೇಪಾಳ, ಕಾಶ್ಮೀರ ಮತ್ತು ಸುವರ್ಣ ಭೂಮಿಗಳಿಗೆ ಕೂಡ ಅಶೋಕನು ಧರ್ಮಪ್ರಚಾರಕರನ್ನು ಕಳುಹಿಸಿದ್ದನೆಂದು ಪ್ರತೀತಿಯಿದೆ.

ಬೌದ್ಧಮತ ಪ್ರಚಾರಕ್ಕಾಗಿ ಕಳುಹಿಸಿದ ಈ ಧರ್ಮ ಪ್ರಚಾರಕರು ದೇಶದ ಒಳಗೂ ಹೊರಗೂ ಮಹತ್ತರ ರೀತಿಯಲ್ಲಿ ಯಶಸ್ಸುಗಳಿಸಿದರು. ಅಶೋಕನ ತರುವಾಯದ ಕಾಲದ ಶಿಲಾ ಶಾಸನಗಳೂ ಬೌದ್ಧ ಸ್ಮಾರಕಗಳೂ ಇದನ್ನು ಸಮರ್ಥಿಸುತ್ತವೆ. ಸಿವ ೯ಆದಶ್ಯಕಂ ವರ್ಷಗಳ ನಂತರ ಇಂದು ಸಿಂಹಳ ದ್ವೀಪದ ಕ್ಯಾಂಡಿಯಿಂದ ಹಿಡಿದು ಜಪಾನಿನ ಕಾಮಕುರಾದವರೆವಿಗೂ ಗೌತಮ ಬುದ್ಧನ ಪ್ರಶಾಂತ ಮುಖವು ಜನರು ಪರಸ್ಪರ ವಿನಿಮಯದಿಂದ ವರ್ತಿಸಬೇಕೆಂದೂ, ಶಾಂತಿಯನ್ನು ಪ್ರೀತಿಸಬೇಕೆಂದೂ ಸಾರುವುದು.

ಹೀನಯಾನ-ಮಹಾಯಾನ

ಕ್ರಮಕ್ರಮೇಣ ರೀತಿಯಲ್ಲಿ ಬೌದ್ಧಮತವು ಪ್ರಚಾರಕ್ಕೆ ಬಂದಿದ್ದು ಅನೇಕ ಬೌದ್ಧ ಪಂಥಗಳ ಉದಯದಲ್ಲಿ ಪರಿಣಾಮಗೊಂಡಿತು. ತತ್ವಗಳಲ್ಲಿನ ವ್ಯತ್ಯಾಸಗಳಿಗಿಂತ ಹೆಚ್ಚಾಗಿ ಭೌಗೋಳಿಕ ಅಂಶಗಳಿಂದ ಈ ಪಂಥಗಳು ಉದಯಿಸಿದವು. ಮುಂದೆ ಈ ಪಂಥಗಳು ಅದೃಶ್ಯವಾಗಿ ಎರಡು ಮುಖ್ಯ ರೂಪಗಳನ್ನು ತಾಳಿದವು. ಸಿಂಹಳದ್ವೀಪ ಹಾಗೂ ದಕ್ಷಿಣ ಭಾರತಗಳಲ್ಲಿ ಹೀನಯಾನ ಪಂಥವು ಪ್ರಬುದ್ಧ ಮಾನಕ್ಕೆ ಬಂದಿತು. ಹೀನಯಾನ ಸ್ವರೂಪದಲ್ಲಿ ಬುದ್ಧನನ್ನು ದೇವರೆಂದು ಪೂಜಿಸದೆ ಬೋಧಕನೆಂದು ಆರಾಧಿಸುವರು. ಕುಶಾನರು, ತಾರ್ತರರು ಮತ್ತು ಮಂಗೋಲರ ಆಗತ್ಯಗಳಿಗೆ ಅನುಗುಣವಾಗಿ ಮಹಾಯಾನ ಪಂಥವು ಬುದ್ಧನನ್ನು ದೇವರೆಂದು ಸಾರಿತು. ಚೀನ, ಜಪಾನ್, ಟಿಬೆಟ್ ಮತ್ತು ಮಂಗೋಲಿಯಾಗಳಲ್ಲಿ ಈ ಸ್ವರೂಪದ ಬೌದ್ಧ ಮತವು ಪ್ರಚಾರಕ್ಕೆ ಬಂದಿತು.

ಸಂಗರ ಆಳ್ವಿಕೆಯಲ್ಲಿ ಬೌದ್ಧ ಮತವು ರಾಜರ ಕೃಪಾ ಶ್ರಯವನ್ನು ಕಳೆದುಕೊಂಡಿತು. ಪುಷ್ಯಮಿತ್ರ ಸಂಗನಂತೂ ಬೌದ್ಧ ಮತೀಯರನ್ನು ಹಿಂಸಿಸಿದನು. ಸಂಗ-ಕನ್ವರ ಕಾಲದಲ್ಲಿ ಬೌದ್ಧ ಮತವು ಜನಪ್ರಿಯತೆಗಳಿಸಿ ಪ್ರಗತಿಗಳಿಸಿತು. ಬಾರ್ಹುತ ಸ್ತೂಪ ಕಾರ್ಲಗು ಹೆಗಳು ಮತ್ತು ಸಾಂಚಿಸ್ತೂಪಗಳು ಈ ಕಾಲಕ್ಕೆ ಸೇರಿವೆ. ಬೌದ್ಧ ಮತವು ಸನ್ಯಾಸ ಧರ್ಮದಿಂದ ಜನಪ್ರಿಯ ಧರ್ಮವಾಗಿ ಅಭಿವೃದ್ಧಿ ಪಡೆಯಿತು.

ಗ್ರೀಕರಲ್ಲಿ ಪ್ರಚಾರ

ಈ ಕಾಲದಲ್ಲಿ ಬೌದ್ಧ ಮತವನ್ನು ಉತ್ತರದಲ್ಲಿ ಗ್ರೀಕರು ಅನುಸರಿಸಿದರು, ಮಿನಾಂಡರ್ ದೊರೆಯು ಈ ಮತದ ಅಗ್ರಣೀಯನಾಗಿದ್ದನು. ಮೊಗ್ಗಲಿಪುತ್ತ ತಿಸ್ಸಾ, ಧರ್ಮ ರಕ್ಷಿತನೆಂಬ ಗ್ರೀಕ್ ವೃದ್ಧನೊಬ್ಬನನ್ನು ಧರ್ಮ ಪ್ರಚಾರ ಕಾರ್ಯಕ್ಕಾಗಿ ಚುನಾಯಿಸಿದನು. ಧರ್ಮ ರಕ್ಷಿತನು ಅಪರಾಂತಕಕ್ಕೆ ತೆರಳಿ ಭಗವಾನ್ ಬುದ್ಧನ ತತ್ವಗಳನ್ನು ಯಶಸ್ವಿಯಾಗಿ ಉಪದೇಶಿಸಿ ಸಹಸಾರು ಮಂದಿ ಸ್ತ್ರೀ, ಪುರುಷರನ್ನೂ ರಾಜ ಮನೆತನದವರನ್ನೂ ಮತಾಂತರಗೊಳಿಸಿದನು. ಭಾರತದಲ್ಲಿನ ಗ್ರೀಕರು ನೂತನ ರೀತಿಯ ಬೌದ್ಧ ಕಲೆಯನ್ನು ಸೃಷ್ಟಿಸಲು ಕಾರಣ ಭೂತರಾದರು. ಇಂಡೋ-ಗ್ರೀಕ್ ಕಲೆಯೆಂದು ಪ್ರಖ್ಯಾತವಾದ ಈ ನೂತನ ಬೌದ್ಧ ಕಲೆಯು ಪಂಜಾಬ್ ಹಾಗೂ ವಾಯುವ್ಯ ಭಾರತದಲ್ಲಿ ಬೆಳೆವಣಿಗೆ ಪಡೆಯಿತು.

ಕಾನಿಷ್ಕನ ಆಳ್ವಿಕೆಯು ಬೌದ್ಧ ಮತದ ಇತಿಹಾಸದಲ್ಲಿ ಹೆಗ್ಗುರುತೆನ್ನಬಹುದು. ಇವನು ಈ ಮತದ ಮಹಾಪೋಷಕನಾಗಿದ್ದನಲ್ಲದೆ ಬೌದ್ಧ ಮತದ ಸ್ವರೂಪವನ್ನು ರೂಪುಗೊಳಿಸಿದ ಬೌದ್ಧ ಮಹನೀಯರಲ್ಲಿ ಒಬ್ಬನೆಂದು ಸಂಪ್ರದಾಯಗಳು ತಿಳಿಸುತ್ತವೆ. ಈ ಕಾಲದಲ್ಲಿಯೇ ಬೌದ್ಧ ಮತದ ನೂತನ ರೂಪವಾದ ಮಹಾಯಾನವು ಸೃಷ್ಟಿಗೊಂಡಿತು.

ಗುಪ್ತರ ಆಶ್ರಯ

ಗುಪ್ತರ ಕಾಲದಲ್ಲಿ ಬೌದ್ಧ ಮತಕ್ಕೆ ಹೊಸ ರೀತಿಯ ಬೆಂಬಲ ದೊರೆಯಿತು. ಗುಪ್ತ ಚಕ್ರವರ್ತಿಗಳು ಭಾಗವತರಾಗಿದ್ದಾಗ್ಯೂ ಬ್ರಾಹ್ಮಣ ಮತದ ಅನುಯಾಯಿಗಳಾದಾಗ್ಯೂ, ಇವರು ಬೌದ್ಧ ಮತದ ವಿಷಯದಲ್ಲಿ ಸಹಾನುಭೂತಿ ಹೊಂದಿದ್ದರು ಈ ಸಂದರ್ಭದಲ್ಲಿ ಭಾರತವನ್ನು ಸಂದರ್ಶಿಸಿದ ಚೀನೀ ಯಾತ್ರಿಕರು ಬೌದ್ಧ ಮತವು ಉಚ್ಛ್ರಾಯ ಸ್ಥಿತಿಯಲ್ಲಿದ್ದುದನ್ನು ಬಣ್ಣಿಸಿದ್ದಾರೆ. ಮಥುರಾ, ಸಾರನಾಥ, ನಲಂದಾ, ಅಜಂತಾ, ಭಾಗ್ ಮತ್ತು ಧನ್ಯಾಗ್ ಲತಕಗಳಲ್ಲಿನ ಬೌದ್ಧ ಕಲೆಯ ಅವಶೇಷಗಳು ಕೂಡ ಗುಪ್ತರ ಕಾಲದಲ್ಲಿ ಬೌದ್ಧ ಮತವು ಗಳಿಸಿದ ಅಭ್ಯುದಯವನ್ನು ಪ್ರತಿಪಾದಿಸುತ್ತವೆ.

ಭಾರತದಲ್ಲಿ ಬೌದ್ಧ ಮತದ ಸ್ಪಷ್ಟನೆಯ ಚಿತ್ರವು ಏಳನೆಯ ಶತಮಾನದ ಮಧ್ಯ ಭಾಗದಿಂದ ದೊರೆಯುತ್ತಿರುವ ದಾಖಲೆಗಳಿಂದ ತಿಳಿದು ಬರುವುದು ಹರ್ಷವರ್ಧನನು ತನ್ನ ಕೊನೆಗಾಲದಲ್ಲಿ ಮಹಾಯಾನ ಬೌದ್ಧ ಮತದ ಅನುಯಾಯಿಯಾದನು. ಪಶ್ಚಿಮದಲ್ಲಿ ಮೈತ್ರಕ ವಂಶದ ರಾಜರ ಕೈಕೆಳಗೆ ವಲ್ಲಭಿಯು ಬೌದ್ಧ ಮತದ ಕೇಂದ್ರವಾಯಿತು.

ಹರ್ಷನ ಬಳಿಕ

ಬೌದ್ಧ ಮತದ ಬೆಳೆವಣಿಗೆಗೆ ಪ್ರತಿಕೂಲವಾಗಿದ್ದ ಅರಾಜಕತೆ ಹರ್ಷನ ಆಳ್ವಿಕೆಯ ನಂತರದ ಶತಮಾನದಲ್ಲಿ ಕಾಣಿಸಿತು. ಬೌದ್ಧ ಮತವು ಉತ್ತರ ಭಾರತದಲ್ಲಿ ಕಾಶ್ಮೀರ, ಸ್ವಾತ್ ಕಣಿವೆ. ವಲ್ಲಭಿ ಮುಂತಾದ ಪ್ರದೇಶಗಳಲ್ಲಿ ಮಾತ್ರವೇ ಪ್ರಚಾರದಲ್ಲಿತ್ತು. ಆದರೆ ಈ ಮತದ ಸ್ಥಿತಿಗತಿಗಳು ತೃಪ್ತಿಕರವಾಗಿರಲಿಲ್ಲ. ಭಾರತದ ಇತರ ಭಾಗಗಳಿಂದ ಬೌದ್ಧ ಮತವು ನಿಧಾನವಾಗಿ ಕಣ್ಮರೆಯಾಗುತ್ತಿದ್ದಂತೆಯೇ ಪೂರ್ವ ಭಾರತದಲ್ಲಿ ಪಾಲರ ಆಳ್ವಿಕೆಯಲ್ಲಿ ಪುನರುಜ್ಜೀವನಗೊಂಡಿತು ನಲಂದವು ಇಡೀ ಬೌದ್ಧ ಪ್ರಪಂಚದಲ್ಲಿ ಕ್ರಿ. ಶ. ಆರನೇ ಶತಮಾನದಿಂದ ಒಂಭತ್ತನೇ ಶತಮಾನದ ವರೆವಿಗೂ ಮುನ್ನೂರು ವರ್ಷ ಕಾಲ ಪ್ರಭಾವ ಬೀರಿತು. ಪಾಲರ ಆಳ್ವಿಕೆಯಲ್ಲಿ ಜಗದಲ್ ಮತ್ತು ವಿಕ್ರಮಪುರಿ, ವಿಕ್ರಮಶಿಲ ಮತ್ತು ಓದಂತಪುರಿಗಳಲ್ಲಿ ಸ್ಥಾಪಿತಗೊಂಡ ನೂತನ ಸಂಸ್ಥೆಗಳು ಮಹತ್ತರವಾದ ಪ್ರಾಮುಖ್ಯತೆಗಳಿಸಿದವು.

ಭಾರತದಲ್ಲಿ ಬೌದ್ಧಮತದ ಅವನತಿಗೆ ಅನ್ಯಮತ ದ್ವೇಷ ಹಾಗೂ ಕಿರುಕುಳವೇ ಮುಖ್ಯ ಕಾರಣವೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. ಈ ಅಭಿಪ್ರಾಯಕ್ಕೆ ನಿಜವಾದ ಸಾಕ್ಷ್ಯವಾವುದೂ ಇಲ್ಲ. ಇತ್ತೀಚಿನ ಬೌದ್ಧ ಕೃತಿಗಳು ಬೌದ್ಧ ಮತವು ಹಿಂದೂಮತಕ್ಕೆ ಕ್ರಮೇಣವಾಗಿ ಸಾಮೀಪ್ಯಪಡೆಯಿತೆಂಬುದನ್ನು ಸ್ಪಷ್ಟಪಡಿಸಿವೆ. ಬುದ್ಧರ ಸಂಖ್ಯೆಯನ್ನು ಹೆಚ್ಚಿಸಲಾಯಿತಲ್ಲದೆ ಅವರಿಗೆ ದೇವತ್ವವನ್ನೂ ಕೊಡಲಾಯಿತು. ಬೋಧಿ ಸತ್ವರನ್ನು ಉನ್ನತ ಪದವಿಗೆ ಏರಿಸಿ ಜ್ಞಾನ ಪ್ರಸಾರಕರೆಂದು ಆರಾಧಿಸಲಾಯಿತು. ಬೋಧಿಸತ್ವರಿಗೆ ಪತ್ನಿಯರನ್ನು ಅಧ್ಯಾರೋಪಿಸಲಾಯಿತು. ಹಿಂದೂದೇವ ದೇವತೆಗಳಿಂದ ಇವರನ್ನು ಹೆಸರುಗಳಲ್ಲಿ ವಿನಹ ಬೇರ್ಪಡಿಸುವುದು ಅಸಾಧ್ಯವಾಯಿತು.

DT. AMBLAY RAMASWAMIER'S 98 Yrs. Renowned Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. • Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,
'NAVAYUGA'
Post Box No. 22, UDIPI, S. K.

ಸಾರ್ವತ್ರಿಕ ಚುನಾವಣಾ ಶಾಸನದ ಪರಿಷ್ಕಾರ

ಪ್ರತಿಪಕ್ಷಗಳಿಂದ ಕಾಂಗ್ರೆಸಿಗರ ಬಗ್ಗೆ ಆಕ್ಷೇಪ

ಲೋಕ ಸಭೆಯು ಚುನಾವಣೆಗಳನ್ನು ಸರಳಗೊಳಿಸುವ ಶಾಸನದ ಪರಿಶೀಲನೆಯನ್ನು ಕಳೆದ ವಾರ ನಡೆಸಿ, ಕೆಲವು ತಿದ್ದುಪಡಿಗಳನ್ನು ಅಂಗೀಕರಿಸಿತು. ಪರಿಶೀಲಕ ಸಮಿತಿಯು ವಹಿಸಿದ್ದ ನಿಲುಮೆಯನ್ನು ಕಾನೂನು ವ್ಯವಹಾರಗಳ ಮಂತ್ರಿ ಶ್ರೀ ಪಾಟಸ್ಕರರು ಪ್ರಾರಂಭದಲ್ಲಿ ವಿವರಿಸಿದರು.

ರಾಜ್ಯಗಳ ಶಾಸನಾಂಗಗಳಿಗೂ ಸಂಸತ್ತಿಗೂ ಏಕ ಕಾಲದಲ್ಲಿ ಚುನಾವಣೆಗಳನ್ನು ನಡೆಸಲಾಗುವುದೆಂದು ಅವರು ತಿಳಿಸಿದರು. ಆದರೆ ಇಂಗ್ಲೆಂಡಿನಲ್ಲಿ ಮಾಡಲಾಗುತ್ತಿರುವಂತೆ ಒಂದೇ ದಿನದಲ್ಲಿ ಭಾರತದ ಎಲ್ಲೆಡೆಯಲ್ಲೂ ಚುನಾವಣೆಗಳು ನಡೆಯುವಂತೆ ಮಾಡುವುದು ಸಾಧ್ಯವಿಲ್ಲವೆಂದವರು ಹೇಳಿದರು. ಕೆಲವು ದಿನಗಳ ಅಥವಾ ವಾರಗಳ ಅಂತರವಿರುವುದು ಈ ದೊಡ್ಡ ದೇಶದಲ್ಲಿ ಅನಿವಾರ್ಯವಾಗಿದೆ ಎಂದವರು ಅಭಿಪ್ರಾಯಪಟ್ಟರು.

ಮತಗಳ ಎಣಿಕೆ

ಮತಗಳ ಎಣಿಕೆಗೆ ಸಂಬಂಧಿಸಿದ ಈಗಿನ ನಿಯಮಗಳನ್ನು ಪರಿಷ್ಕರಿಸುವುದು ಅತ್ಯವಶ್ಯವೆಂಬ ಕೆಲವು ಸದಸ್ಯರ ನಿಲುಮೆಯನ್ನು ಪ್ರಸ್ತಾಪಿಸುತ್ತಾ ಶ್ರೀ. ಪಾಟಸ್ಕರರು ಈ ಮಟ್ಟಿಗೆ ಇಂಗ್ಲೆಂಡಿನಲ್ಲಿ ಅನುಸರಿಸುತ್ತಿರುವ ಕ್ರಮಕ್ಕಿಂತ ಇಲ್ಲಿನದು ಹೆಚ್ಚು ಭಿನ್ನವಾಗಿಲ್ಲವೆಂದರು. ಆದಾಗ್ಯೂ ಇಂಗ್ಲೆಂಡಿನಲ್ಲಿಯಂತೆ ಶೀಘ್ರದಲ್ಲಿಯೇ ಎಣಿಕೆಯನ್ನು ಮುಗಿಸಿ, ಪರಿಣಾಮವನ್ನು ಸಾರುವುದಕ್ಕೆ ಇಲ್ಲಿ ಸಾಧ್ಯವಾಗದಿರುವುದಕ್ಕೆ ಬೇರೆ ಕಾರಣಗಳಿವೆ ಎಂದರು. ಈ ಕಾರಣಗಳಲ್ಲಿ ಮತಘಟ್ಟಗಳ ವಿಶಾಲ ಪ್ರಮಾಣ, ಚುನಾವಣೆಯ ವಿಷಯದಲ್ಲಿ ಪರಿಣತರಾದ ದಕ್ಷ ಜನರ ಅಭಾವ, ಮತದಾರರ ಸಂಖ್ಯೆಯಲ್ಲಾಗುತ್ತಿರುವ ಹೆಚ್ಚಳ ಇತ್ಯಾದಿಗಳು ಉಲ್ಲೇಖನೀಯವೆಂದರು. ಆದಾಗ್ಯೂ ಮದ್ರಾಸು, ಮುಂಬಯಿಯಂಥ ಕೆಲವು ರಾಜ್ಯಗಳಲ್ಲಿ ಸ್ಪೃಹಣೀಯವಾದಷ್ಟು ಸ್ವಲ್ಪ ಸಮಯದಲ್ಲಿ ಮತಗಳ ಎಣಿಕೆ ನಡೆದಿದೆ; ಈ ಉದಾಹರಣೆಯನ್ನು ಇತರ ರಾಜ್ಯಗಳೂ ಅನುಸರಿಸುವುವೆಂದು ನಂಬುತ್ತೇನೆ ಎಂದು ಮಂತ್ರಿಗಳು ಆಶಿಸಿದರು.

ಚುನಾವಣೆಯಲ್ಲಿ ಉಮೇದ್ವಾರರಾಗಿ ನಿಲ್ಲುವ ಜನರ ಅರ್ಜಿಗಳನ್ನು ಪರಿಶೀಲಿಸಿ ಸ್ವೀಕರಿಸುವ ಅಥವಾ ನಿರಾಕರಿಸುವ ಕೆಲಸವು ವಿಶೇಷ ಹೊಣೆಗಾರಿಕೆಯದಾಗಿರುವುದರಿಂದ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರರ ಕೈಯಲ್ಲಿ ಈ ಅಧಿಕಾರವಿರಬಾರದೆಂದೂ ರಿಟರ್ನಿಂಗ್ ಆಫೀಸರರಿಗೆಯೇ ಈ ಜವಾಬ್ದಾರಿಯನ್ನು ಬಿಟ್ಟುಕೊಡಬೇಕೆಂದೂ ಮಸೂದೆಯಲ್ಲಿ ಮಾಡಲಾಗಿರುವ ನಿರ್ಧಾರವನ್ನು ಅವರು ಸಮರ್ಥಿಸಿದರು.

ದೂರಿಡಲು ಅವಕಾಶ

ಅನ್ಯಾಯವು ಚುನಾವಣೆಯಲ್ಲಿ ನಡೆದಿದೆ ಎಂಬುದಾಗಿ ಭಾವಿಸಿ ಮಾಡಲಾದ ದೂರುಗಳ ವಿಚಾರಣೆಗೆ ಒಬ್ಬನೇ ವ್ಯಕ್ತಿಯಿಂದ ಕೂಡಿದ ನ್ಯಾಯ ಮಂಡಳಿಗಳನ್ನು ರಚಿಸುವುದು ಇಷ್ಟವೆಂದೂ ಇದರಿಂದ ಅರ್ಜಿಗಳ ವಿಚಾರಣೆಯನ್ನು ಅತಿ ಶೀಘ್ರದಲ್ಲಿ ದೇಶದಾದ್ಯಂತ ನಡೆಸಲು ಸಾಧ್ಯವಾಗುವುದೆಂದೂ ಮಸೂದೆಯಲ್ಲಿ ಅಡಕವಾಗಿರುವ ಸಂಗತಿಯನ್ನು ಮಂತ್ರಿಗಳು ವಿವರಿಸಿದರು. ವಿಚಾರಣೆಯನ್ನು ಆರು ತಿಂಗಳುಗಳೊಳಗೆ ಮುಗಿಸುವ ಸರ್ವ ಪ್ರಯತ್ನ ಮಾಡಬೇಕೆಂದೂ ಈ ವಿಚಾರಣೆಯ ಫಲಿತಾಂಶವಾಗಿ ಹೇಳಲಾದ ತೀರ್ಮಾನದ ವಿರುದ್ಧ ಹೈಕೋರ್ಟಿಗೆ ಅಪೀಲು ಮಾಡಿಕೊಳ್ಳಲು ಅವಕಾಶವಿರಬೇಕೆಂದೂ ಮಸೂದೆಯಲ್ಲಿರುವ ಅಂಶವನ್ನು ಸಹ ಅವರು ವಿಶದಪಡಿಸಿದರು. ಮತದಾನವನ್ನು ಕಡ್ಡಾಯಗೊಳಿಸಬೇಕೆಂದು ಕೆಲವು ಸದಸ್ಯರು ಆಗ್ರಹಪಡಿಸಲು, ಮಂತ್ರಿಗಳು ಇದು ವ್ಯಾವಹಾರಿಕವಾಗಲಾರದೆನ್ನುತ್ತಾ ಮತದಾನ ಮಾಡಲೇಬೇಕೆಂದು ವ್ಯಕ್ತಿಯನ್ನು ಒತ್ತಾಯಿಸುವುದು ಯೋಗ್ಯವಲ್ಲವೆಂದೂ ಅಲ್ಲದೆ ಅನಕ್ಷರಸ್ಥರು ಅತ್ಯಧಿಕವಾಗಿರುವ ಮತ್ತು ಜನಸಂಖ್ಯೆ ಅಪಾರವಾಗಿರುವ ಈ ದೇಶದಲ್ಲಿ ಕಡ್ಡಾಯ ಕ್ರಮವನ್ನು ರೂಢಿಗೆ ತರಲು ತಕ್ಕ ವ್ಯವಸ್ಥೆ ಮಾಡುವುದು ಕಷ್ಟವೆಂದೂ ಹೇಳಿದರು.

ಪ್ರತಿಪಕ್ಷದ ಒತ್ತಾಯ

ಚರ್ಚೆಯ ವೇಳೆ ಕೆಲವು ಮಹತ್ವದ ಸಂಗತಿಗಳಲ್ಲಿ ಸರಕಾರದ ನಿಲುಮೆ ಬದಲಾಗಬೇಕೆಂದು ಸದಸ್ಯರು ಮುಖ್ಯವಾಗಿ ಪ್ರತಿಪಕ್ಷದವರು ಒತ್ತಾಯಿಸಿದರು. ವ್ಯಕ್ತಿಯೊಬ್ಬನು ಎರಡು ವರ್ಷಗಳಿಗಿಂತ ಹೆಚ್ಚು ಕಾಲದ ವರೆಗೆ ಸೆರೆಮನೆಯಲ್ಲಿದ್ದರೆ, ಆತನು ಚುನಾವಣೆಯಲ್ಲಿ ಸ್ಪರ್ಧಿಸಲು ಅನರ್ಹನೆಂದಿರುವ ನಿಯಮವು ಸರ್ವಥಾ ಯೋಗ್ಯವಲ್ಲವೆಂದು ಸದಸ್ಯರು ಪ್ರತಿಪಾದಿಸಿದರು. ನೈತಿಕ ಅನಾಚಾರಗಳಿಗಾಗಿ ಸೆರೆಮನೆ ವಾಸದ ಶಿಕ್ಷೆಗೆ ಗುರಿಯಾದವರನ್ನಷ್ಟೆ ಅನರ್ಹರಾಗಿ ಮಾಡಬೇಕಲ್ಲದೆ ರಾಜಕೀಯ ಚಳವಳದಲ್ಲಿ ಭಾಗವಹಿಸಿದವರನ್ನಲ್ಲ. ಕಾಂಗ್ರೆಸು ಪಕ್ಷದವರೇ ಒಂದು ಕಾಲದಲ್ಲಿ ಈ ರೀತಿಯ ಪ್ರತಿಪಾದನೆ ಮಾಡಿದ್ದರು–ಈಗ ಅದಕ್ಕೆ ವಿರುದ್ಧ ಹೋಗಬಾರದೆಂದು ಇವರು ಒತ್ತಾಯಿಸಿದರು.

ಮಂತ್ರಿಗಳು ಇದನ್ನು ಉತ್ತರಿಸುತ್ತಾ ಚುನಾವಣಾ ಮಂಡಳಿಗೆ ನೈತಿಕ ಪತನವಿಲ್ಲದ ಪ್ರಸಂಗಗಳಲ್ಲಿ ಅನರ್ಹತೆಯೂ ಇಲ್ಲವೆಂದು ತೀರ್ಮಾನಿಸುವುದು ಸಂದೇಹವಿಲ್ಲವೆಂದರು. ಕೇವಲ ಸತ್ಯಾಗ್ರಹದಲ್ಲಿ ಭಾಗವಹಿಸಿದುದಕ್ಕಾಗಿ ಶಿಕ್ಷೆ ಹೊಂದಿದ ವ್ಯಕ್ತಿಯನ್ನು ಅನರ್ಹನಾಗಿ ಮಾಡುವ ಇಚ್ಛೆ ಅದಕ್ಕಿಲ್ಲವೆಂದರು.

ನೆರವಿನ ಯಾಚನೆ

ಉಮೇದುವಾರರಾದವರು ಇಂಥಿಂಥ ಸರಕಾರಿ ನೌಕರರಿಂದ ಸಹಾಯವನ್ನು ಯಾಚಿಸಲೇ ಕೂಡದೆಂದು ನಿಷೇಧಿಸುವ ನೌಕರರ ಪಟ್ಟಿಯನ್ನು ಪರಿಷ್ಕರಿಸಿ, ಎಲ್ಲ ವರ್ಗದ ಸರಕಾರಿ ನೌಕರರಿಗೂ ಅದು ಅನ್ವಯವಾಗುವಂತೆ ವಿಸ್ತರಿಸಬೇಕು; ಚುನಾವಣೆಯಲ್ಲಿ ಮಹಾತ್ಮಾ ಗಾಂಧೀಯವರ ಚಿತ್ರದ ಉಪಯೋಗವನ್ನು ಪಡೆಯದಂತೆ ನಿರ್ಬಂಧಿಸಬೇಕು; ಮಂತ್ರಿಗಳು, ಉಪಮಂತ್ರಿಗಳು ಮತ್ತಿತರ ಸರಕಾರಿ ಪದಾಧಿಕಾರಿಗಳು ಚುನಾವಣೆಯ ಬಗ್ಗೆ ಸರಕಾರದ ಕಾರುಗಳನ್ನು ಉಪಯೋಗಿಸಬಾರದು; ಸರಕಾರದಲ್ಲಿರುವ ಸ್ಥಾನದ ಬಲವನ್ನು ತಮ್ಮ ಲಾಭಕ್ಕಾಗಿ, ತಮ್ಮ ಪಕ್ಷದ ಲಾಭಕ್ಕಾಗಿ ಬಳಸಿಕೊಳ್ಳಬಾರದು ಎಂದೆಲ್ಲ ಪ್ರತಿಪಕ್ಷದ ಸದಸ್ಯರು ಸೂಚಿಸಿದರು.

ಚುನಾವಣೆಯ ಪ್ರಕಟಣೆಯನ್ನು ಹೊರಡಿಸಿದ ದಿನದಿಂದ ಚುನಾವಣೆಯ ಫಲಿತಾಂಶವನ್ನು ಪ್ರಕಟಿಸಿದ ದಿನದವರೆಗಿನ ಚುನಾವಣಾ ವೆಚ್ಚದ ಲೆಕ್ಕವನ್ನು ಫಲಿತಾಂಶ ಪ್ರಕಟವಾದ ೩೦ ದಿನಗಳೊಳಗಾಗಿ ಕಳಿಸಬೇಕೆಂದು ಮಸೂದೆ ಹೇಳುತ್ತದೆ. ಇದರಲ್ಲಿ ಚುನಾವಣಾ ಮಂಡಳಿಯಿಂದ ಮನ್ನಣೆ ಪಡೆದ ಪಕ್ಷಗಳು ಮಾಡಿದ ವೆಚ್ಚವನ್ನು ಕಾಣಿಸಬಾರದೆಂದು ಇರುವ ಉಪನಿಯಮವನ್ನು ರದ್ದುಪಡಿಸಬೇಕೆಂದು ಶ್ರೀ ಹುಂಡಿ ವಿಷ್ಣು ಕಾಮತರು ತಂದ ತಿದ್ದುಪಡಿಯು ಮಂಜೂರಾಯಿತು.

ಕಾಮತರ ವಾದ

ತಮ್ಮ ತಿದ್ದುಪಡಿಯು ದೊಡ್ಡ ಪಕ್ಷಗಳು ಮಿತಿಮೀರಿ ವೆಚ್ಚವನ್ನು ತಮ್ಮ ಪಕ್ಷದಿಂದ ಸ್ಪರ್ಧಿಸುವವರ ಪರವಾಗಿ ಮಾಡದಂತೆ ನಿರ್ಬಂಧಿಸುವುದೆಂದು ಕಾಮತರ ಅಭಿಪ್ರಾಯ. ಆದರೆ ವಾಸ್ತವದಲ್ಲಿ ಆ ಆಶಯವು ತಿದ್ದುಪಡಿಯ ಸ್ವೀಕಾರದಿಂದ ಈಡೇರುವುದು ಸಂಶಯವೆಂಬುದನ್ನು ಹಿಂದಿನಿಂದ ಕಂಡುಕೊಂಡ ಅವರು ತಿದ್ದುಪಡಿಗೆ ಹಿನ್ನೆಲೆಯಾಗಿ ನಿಂತ ಸಂಗತಿಗಳನ್ನು ವ್ಯವಹಾರದಲ್ಲಿ ಪರಿಗಣಿಸಬೇಕೆಂದು ಮಸೂದೆಯ ಅಂತಿಮ ವಾಚನದ ಕಾಲದಲ್ಲಿ ಹೇಳಿದರು. ಮಂತ್ರಿಗಳು ಇದನ್ನು ಪ್ರಸ್ತಾಪಿಸಿ, "ನ್ಯಾಯ ಸ್ಥಾನಗಳು ಭಾವನೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳವು, ಶಬ್ದಗಳಿಗೆ ಮಾತ್ರ ಮಹತ್ವ ಕೊಡುತ್ತವೆ" ಎಂಬ ಸತ್ಯವನ್ನು ಸ್ಮರಣೆಗೆ ತಂದು ಕೊಟ್ಟರು.

ಮಸೂದೆಯ ತೃತೀಯ ವಾಚನ ಕಾಲದಲ್ಲಿ ಸದಸ್ಯರು ಮಂತ್ರಿಗಳನ್ನು ಅವರ ಸೌಹಾರ್ದಪೂರ್ಣ ನಡವಳಿಕೆಗಾಗಿ ಅಭಿನಂದಿಸಿದರು. ಮಂತ್ರಿಗಳು ತಮ್ಮ ಭಾಷಣದಲ್ಲಿ ಈ ಮಸೂದೆಯನ್ನು ಅಧಿಕಾರಾರೂಢ ಪಕ್ಷದ ನೆಲೆಯಿಂದ ವಿಚಾರಿಸಲು ಹೋಗದೆ ಚುನಾವಣೆಯು ಸರಳವೂ ಸುಗಮವೂ ಸ್ವತಂತ್ರವೂ ಆಗಿ ನಡೆಯುವಂತೆ ಮಾಡುವ ದೃಷ್ಟಿಕೋಣವನ್ನು ಸರಕಾರ ಇಟ್ಟುಕೊಂಡಿತೆಂದು ತಿಳಿಸಿದರು. ಕಮ್ಯುನಿಸ್ಟರನ್ನು ಉದ್ದೇಶಿಸಿಯೋ ಎಂಬಂತೆ ಸಚಿವರು "ಬೇರೆ ದೇಶಗಳ ಸಂಸ್ಥೆಗಳತ್ತ ಮುಖ ತಿರುಗಿಸುತ್ತಿದ್ದವರು ಸಹ ಈಗ ಈ ದೇಶಕ್ಕೆ ಸಾಂಸತ್ತಿಕ ಪ್ರಜಾಪ್ರಭುತ್ವವೇ ಲೇಸೆಂದು ಮನಗಂಡಿರುವುದು ಶುಭಕರ" ಎಂದರು.

ಅಣುಶಕ್ತಿ ಜನಕ ಯಂತ್ರ

ಜಲಶಕ್ತಿಯಿಂದ ಕೆಲಸ ಮಾಡುವ ಅಣುಶಕ್ತಿ ಜನಕ ಯಂತ್ರವೊಂದನ್ನು ಭಾರತದಲ್ಲೀಗ ಕಟ್ಟಲಾಗುತ್ತಿದ್ದು ಅದು ಇನ್ನೆರಡು ತಿಂಗಳಲ್ಲಿ ಉತ್ಪಾದನೆಯನ್ನು ಪ್ರಾರಂಭಿಸುವುದೆಂದು ಪ್ರಧಾನಿಗಳು ಮೊನ್ನೆ ಸಂಸತ್ತಿನಲ್ಲಿ ತಿಳಿಸಿದ್ದಾರೆ. ಅವರು ಮುಂದರಿದು, ಕೆನಡಾ ಸರಕಾರದಿಂದ ಕೊಲೊಂಬೋ ಯೋಜನೆಯ ಆಶ್ರಯದಲ್ಲಿ ಭಾರತಕ್ಕೆ ದಾನವಾಗಿ ಕೊಡಲಾಗುವ ಅಣುಶಕ್ತಿ ಜನಕ ಯಂತ್ರವು ಇನ್ನೆರಡು ವರ್ಷಗಳಲ್ಲಿ ಉತ್ಪಾದನೆಯನ್ನು ಪ್ರಾರಂಭಿಸಬಹುದೆಂದೂ ಹೇಳಿದ್ದಾರೆ. ಮುಂಬಯಿಯಲ್ಲಿ ನೆಲೆಗೊಳ್ಳಲಿರುವ ಈ ಯಂತ್ರವು ೭ ಕೋಟಿ ರೂಪಾಯಿ ಬೆಲೆಯುಳ್ಳದ್ದಾಗಿರುತ್ತದೆ. ಈ ದಾನದ ಸಂಬಂಧದಲ್ಲಿ ಸಕಲ ಸಹಕಾರ ನೀಡುವ ಒಪ್ಪಂದವೊಂದಕ್ಕೆ ಈಚೆಗೆ ಹೊಸ ದೆಹಲಿಯಲ್ಲಿ ಉಭಯ ಸರಕಾರಗಳ ಪರವಾಗಿ ಸಹಿಹಾಕಲಾಯಿತು. ಚಿತ್ರದಲ್ಲಿ ಒಪ್ಪಂದಕ್ಕೆ ಸಹಿ ಹಾಕುತ್ತಿರುವ ದೃಶ್ಯವನ್ನು ನೋಡಬಹುದು. (ಇಲ್ಲಿ ಕುಳಿತಿರುವವರು ಎಡದಿಂದ ಬಲಕ್ಕೆ ಕ್ರಮವಾಗಿ ಡಾ. ಹೋಮಿ ಜೆ. ಭಾಭಾ, ಕೆನಡದ ರಾಯಭಾರಿ ಎಸ್ಕೋಟ್ ರೀಡ್, ಪ್ರಧಾನಿ ನೆಹರು ಮತ್ತು ಶ್ರೀ ವಿ. ಕೆ. ಕೃಷ್ಣ ಮೆನನ್.)

NAVAYUGA
Popular Kannada Weekly
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೪-೫-'೫೬	೩೮

ಮಹಾ ಪರಿನಿರ್ವಾಣ

ನಾವಿಂದು ಗೌತಮ ಬುದ್ಧನ ೨೫೦೦ನೇ ಪರಿನಿರ್ವಾಣ ಜಯಂತ್ಯುತ್ಸವವನ್ನು ಆಚರಿಸುತ್ತಿದ್ದೇವೆ. ಇದು ನಿಜಕ್ಕೂ ಬಹಳ ಪವಿತ್ರವಾದ ಉತ್ಸವ; ಭಾರತೀಯರಾದ ನಮ್ಮೆಲ್ಲರ ಪಾಲಿಗೆ ಅಭಿಮಾನಾಸ್ಪದವಾದ ಪರ್ವದಿನ. ಸಾಮಾನ್ಯವಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜನರು ಹುಟ್ಟಿದ ಹಬ್ಬಗಳನ್ನು ಆಚರಿಸುತ್ತಾರೆ. ಆದರೆ ಭಾರತದಲ್ಲಿ ಮರಣದ ದಿನಗಳನ್ನು "ಶ್ರಾದ್ಧ" ರೂಪದಲ್ಲಿ ಆಚರಿಸುವ ಸಂಪ್ರದಾಯವಿದೆ; ಹುಟ್ಟಿದ ಹಬ್ಬದ ಆಚರಣೆಯು ಜನರಲ್ಲಿ ಅಷ್ಟು ಮನ್ನಣೆಯನ್ನು ಪಡೆದಿಲ್ಲ. ಇದಕ್ಕೆ ಸಬಲ ಕಾರಣವಿದೆ — ಮತ್ತಿದು ತರ್ಕಪೂರ್ಣವೂ ಆಗಿದೆ: ವ್ಯಕ್ತಿಯೊಬ್ಬನು ಜನಿಸಿದಾಗ, ಆತನು ಜೀವನದಲ್ಲಿ ಎಷ್ಟು ಧನ್ಯನಾದಾನು ಅಥವಾ ಆತನ ಜೀವನದಿಂದ ಎಷ್ಟು ಜನರಿಗೆ ಉಪಕಾರವಾದೀತು, ಅಥವಾ ಆತನು ಎಷ್ಟು ಜನರ ಉದ್ಧಾರಕ್ಕೆ ಕಾರಣನಾದಾನು ಎಂಬ ವಿಷಯ ನಮಗಾರಿಗೂ ಗೊತ್ತಾಗುವುದಿಲ್ಲ. ಆತನು ಮರಣ ಹೊಂದಿದ ಹೊತ್ತಿಗಾದರೆ, ಜೀವನದಲ್ಲಿ ಆತನು ಏನು ಒಳ್ಳೆಯ ಕೆಲಸ ಮಾಡಿದನು ಅಥವಾ ಕೆಟ್ಟ ಕೆಲಸ ಮಾಡಿದನೆಂದು ತಿಳಿದುಕೊಳ್ಳುವುದು ಕಷ್ಟವಲ್ಲ. ಅದುದರಿಂದ ಒಳ್ಳೆಯ ಕೆಲಸವನ್ನು ಮಾಡಿದಾತನು ಇನ್ನಿಲ್ಲವಲ್ಲ ಎಂಬ ಭಾವನೆಯಿಂದ ನಾವು ಹಾಗೆ ಆ ಮನುಷ್ಯನ ನೇರ ಸಂಬಂಧ ತಪ್ಪಿ ಹೋದ ದಿನವನ್ನು ಹೆಚ್ಚು ನೆನಪಿಡುವುದು ವಾಸ್ತವಿಕ. ಅದೂ ಅಲ್ಲದೆ, ಎಲ್ಲ ಜನರ ಜಾತಕಗಳನ್ನೂ ಅವರು ಹುಟ್ಟಿದ ಹೊತ್ತಿಗೆ ಬರೆದಿಟ್ಟಿರುವರೆಂದು ಹೇಳಲಿಕ್ಕಾಗದು — ಆದರೆ ಮಹಾಪುರುಷನೊಬ್ಬನು ಮರಣ ಹೊಂದಿದ ದಿನವನ್ನು ಯಾರೊಬ್ಬರೂ ಮರೆಯರು. ಆದುದರಿಂದ ಭಾರತದಲ್ಲಿ ಮರಣ ದಿನವನ್ನೆ ಸಂಭ್ರಮದಿಂದ ಉತ್ಸವ ರೂಪದಲ್ಲಿ ಆಚರಿಸುವ ಸತ್ಸಂಪ್ರದಾಯವು ಬೆಳೆದು ಬಂದಿದೆ. ಗೌತಮ ಬುದ್ಧನ ವಿಷಯದಲ್ಲಿಯಾದರೂ ನಾವು ಇದನ್ನೆ ಮಾಡುತ್ತಿದ್ದೇವೆ. ಬೌದ್ಧ ಮತವು ಭಾರತದಲ್ಲಿ ಇಂದು ಪ್ರತ್ಯೇಕವಾದೊಂದು ಪಂಥದ ರೂಪದಲ್ಲಿ ವಿಶೇಷ ಪ್ರಾಬಲ್ಯವನ್ನು ಪಡೆದಿಲ್ಲವೇನೊ ನಿಜ; ಹಾಗೆಯೇ ಭಾರತ ಸರಕಾರವು "ಸೆಕ್ಯುಲರ್" ಎಂಬ ಆಂಗ್ಲ ಪದವನ್ನು ಪುರಸ್ಕರಿಸುತ್ತಿರುವ "ಜಾತ್ಯತೀತ" ವೆಂದು ಸಾಮಾನ್ಯವಾಗಿ ಕರೆಯಲಾಗುವ ಸಂಪ್ರದಾಯಾನುವರ್ತಿಯೆಂಬುದೂ ನಿಜ. ಆದಾಗ್ಯೂ ನಾವಿಂದು ಭಾರತೀಯರಾಗಿ, ಸರಕಾರಿ ಮಟ್ಟದಲ್ಲಿ ಸಹ ಗೌತಮ ಬುದ್ಧನ ಮಹಾ ಪರಿನಿರ್ವಾಣ ಜಯಂತ್ಯುತ್ಸವವನ್ನು ಆಚರಿಸುತ್ತಿರುವುದಕ್ಕೆ ವಿಶೇಷವಾದ ಹಿನ್ನೆಲೆಯಿದೆ. ಭಾರತವು ಜಾತ್ಯತೀತ ರಾಷ್ಟ್ರವೆಂಬುದರ ಅರ್ಥವೇನೆಂದು ಹಲವು ಧುರೀಣರು ನೂರಾರು ಬಾರಿ ವಿವೇಚಿಸಿದ್ದಾರೆ— ಇದರ ಪ್ರಕಾರ, ಸರಕಾರವು ಯಾವುದೇ ಒಂದು ವಿಶಿಷ್ಟ ಮತ ಅಥವಾ ಪಂಥದ ಪ್ರತಿಪಾದನೆ ಮಾಡದು; ಎಲ್ಲ ಮತ, ಪಂಥಗಳಿಗೂ ವಿಕಾಸ ಹೊಂದಲು ಸಮಾನಾವಕಾಶ ನೀಡುವುದು ಎಂಬ ಅರ್ಥವು ಜಾತ್ಯತೀತ ರಾಷ್ಟ್ರವೆಂಬ ಪದಸಮುಚ್ಚಯಗಳಿಗೆ ಬರುತ್ತದೆ. ಅದುದರಿಂದ ಸರಕಾರಿ ಮಟ್ಟದಲ್ಲಿ ನಾವು ಈ ಮಹಾ ಪರಿನಿರ್ವಾಣ ದಿನವನ್ನು ಆಚರಿಸುವುದು ತಪ್ಪೆಂದೂ ಘಟನೆಗೆ ವಿರುದ್ಧವೆಂದೂ ಹೇಳಲಿಕ್ಕಾಗದು. ಉಳಿದ ಮತ-ಪಂಥಗಳ ವಿಷಯದಲ್ಲೂ ಇಷ್ಟೇ ಉದಾರವಾದ ವರ್ತನೆಯನ್ನು ಸರಕಾರ ತೋರ್ಪಡಿಸಬೇಕೆಂದು ಜನರು ಬೇಡಿಕೆಯನ್ನು ಮುಂದಿಡಬಹುದು: ಉದಾಹರಣೆಗಾಗಿ ಕ್ರೈಸ್ತನ ೨೦೦೦ನೇ ಜಯಂತ್ಯುತ್ಸವವನ್ನು ಭಾರತದಲ್ಲಿ ಸಹ ಸಂಭ್ರಮದಿಂದ ಆಚರಿಸಬೇಕೆಂದು ಜನರು ಸರಕಾರವನ್ನು ಒತ್ತಾಯಿಸಬಹುದು. ಈಗಿನ ಸರಕಾರಿ ಧೋರಣೆಯಂತೆ ಈ ಬೇಡಿಕೆಗೆ ಆಗ ಮನ್ನಣೆ ಸಿಗಬೇಕಾಗುತ್ತದೆ. ಆದರೆ ಈ ವಿಷಯದಲ್ಲಿ ಈಗಲೇ ವಚನಬದ್ಧವಾಗಿರುವುದು ನಮಗಾಗಲೀ ನಮ್ಮ ಸರಕಾರಕ್ಕಾಗಲೀ ಸಾಧ್ಯವಿಲ್ಲ ಆದರೆ ಈಗ ಮಾಡಿದ ನಿರ್ಣಯವೊಂದು "ಪೂರ್ವಾಚಾರ" ("ಪ್ರಿಸೀಡೆಂಟ್") ಎನಿಸಿಕೊಳ್ಳಬಲ್ಲುದು. ಬುದ್ಧದೇವನ ವಿಷಯದಲ್ಲಿ ಆತನು ಭಾರತೀಯನೇ ಆಗಿರುವುದರಿಂದ ಮತ್ತು ಆತನ ಮುಖ್ಯ ಕಾರ್ಯಕ್ಷೇತ್ರವು (ಆತನ ಜನನ ನೇಪಾಳದಲ್ಲಾಗಿದ್ದರೂ ಸಹ) ಭಾರತವೇ ಆಗಿದ್ದುದರಿಂದ ಕ್ರೈಸ್ತನಿಗಿಂತಲೂ ಹೆಚ್ಚಿನ ಉದಾರ ವರ್ತನೆಗೆ ಆತನು ಭಾರತೀಯರಲ್ಲಿ ಪಾತ್ರನಾಗಿರುವನೆಂಬ ಮಾತನ್ನೂ ಇಲ್ಲಿ ಸ್ಮರಣೆಗೆ ತಂದುಕೊಳ್ಳಬಹುದು. ಅವೇನೇ ಇರಲಿ— ಗೌತಮ ಬುದ್ಧನ ಜೀವನವು ಭಾರತೀಯರೆಲ್ಲರ ಮೇಲೆ ವಿಶೇಷವಾದ ಪ್ರಭಾವವನ್ನು ಮಾಡಿರುವುದನ್ನಂತೂ ಮರೆಯಲಾಗದು. ಆತನು ಧರ್ಮವೆಂದರೇನು, ಧಾರ್ಮಿಕ ಜೀವನವೆಂದರೇನು ಎಂಬುದನ್ನು ಮರೆತ ಜನರಿಗೆ ಈ ದಿವ್ಯ ತತ್ತ್ವಗಳನ್ನು ಬೌದ್ಧರ ನಂಬಿಕೆಯಂತೆ ಹೇಳುವುದಾದರೆ "ಪುನಃ" ಬೋಧಿಸಿದನು. ಪ್ರೀತಿ, ಕರುಣೆ, ದಯೆಗಳಿಂದ ಕೂಡಿದ ವರ್ತನೆಯೇ ಮನುಷ್ಯ ದೇಹಿಯನ್ನು ನಿಜವಾದ ಅರ್ಥದಲ್ಲಿ ಮನುಷ್ಯನಾಗಿ ಮಾಡುವುದೆಂದು ಹೇಳಿದ ಗೌತಮ ಬುದ್ಧನು ಅಲ್ಲಿಯ ವರೆಗೆ ಕಾಡು ಜನರಂತಿದ್ದವರ ಪಾಲಿನ ನಾಗರಿಕತೆಯ ನವೋದಯಕ್ಕೆ ಕಾರಣನಾದನು; ಮಾನವನ ವಿಚಾರಧಾರೆಯ ದಿಕ್ಕನ್ನೇ ಇಷ್ಟು ಪ್ರಭಾವಿಯಾಗಿ ತಿರುಗಿಸಿದ ಬುದ್ಧ ದೇವನ ವ್ಯಕ್ತಿತ್ವವನ್ನು ನಾವು ೨೫೦೦ ವರ್ಷಗಳ ಬಳಿಕ ಊಹಿಸಿದರೂ ಮೈ ಜುಮ್ಮೆನ್ನುತ್ತದೆ; ಪುಳಕವೇಳುತ್ತದೆ. ಹೀಗೆ ಮಾನವ ನಾಗರಿಕತೆಯ ಪೋಷಕನಾದ ಆ ಮಹಾತ್ಮನು ಮನುಷ್ಯನ ವ್ಯಕ್ತಿಗತ ಜೀವನವನ್ನು ಸಹ ಸಾಮಾಜಿಕ ಜೀವನದಷ್ಟೆ ಸುಖಮಯವಾಗಿ ಮಾಡಲು ಪ್ರಯತ್ನಪಟ್ಟನು. ಆತ್ಮ ದೀಪವನ್ನು ಪ್ರಜ್ವಲಿಸಲು ಆತನು ನೀಡಿದ ದಿವ್ಯೋಪದೇಶವು ಸಾರ್ವಕಾಲಿಕ ಸತ್ಯದಿಂದ ಕೂಡಿದೆ— ಆದುದರಿಂದಲೇ ಇವು "ಆರ್ಯ" ಸತ್ಯಗಳಾಗಿವೆ. ಶಾಂತಿಯ ಸಂದೇಶ, ತೃಪ್ತಿಯ ಸಂದೇಶ, ಪ್ರೀತಿಯ ಸಂದೇಶವನ್ನು ಜಗತ್ತಿನಾದ್ಯಂತ ಅತ್ಯಂತ ಪ್ರಭಾವಿಯಾಗಿ ಬೀರಿದ ಗೌತಮ ಬುದ್ಧನು ಭಾರತೀಯ ಸಂಸ್ಕೃತಿಯ ಪುನರುಜ್ಜೀವನ ಹಾಗು ವಿಕಾಸಕ್ಕೆ ಮಹಾಸೇವೆಯನ್ನು ಸಲ್ಲಿಸಿದ ಮಹಾನುಭಾವ: ಆದುದರಿಂದಲೇ ನಮ್ಮ ಪಾಲಿಗೆ ಆತನೊಬ್ಬ ಅವತಾರ ಪುರುಷ. ಆತನು ಬೋಧಿಸಿದ ತತ್ತ್ವಗಳು ಭಾರತೀಯರ ಜೀವನದಲ್ಲಿ ಇಂದಿಗೂ ಹಾಸುಹೊಕ್ಕಾಗಿ ಸೇರಿಕೊಂಡಿರುವುದನ್ನು ಕಾಣಬಹುದು; ಸಾಮಾನ್ಯ ಗೃಹಸ್ಥರ ನಿತ್ಯಜೀವನದಲ್ಲಿಯೂ ಅದು ಪ್ರತಿಫಲಿತವಾಗಿರುವುದನ್ನು ಕಾಣಬಹುದು. ಇದೇ ಸಮಾಜದ ಪ್ರತಿನಿಧಿಯಾಗಿರುವ ಭಾರತ ಸರಕಾರವು ನೆಹರುಗಳ ಹಿಂತನದಲ್ಲಿ ಭಾರತೀಯ ಸಂಸ್ಕೃತಿಗೊಪ್ಪುವಂಥ ಭವ್ಯವೂ ದಿವ್ಯವೂ ಆದ ನಿಲುವನ್ನು ಎತ್ತಿಹಿಡಿದಿದೆ: ಬುದ್ಧದೇವನು ಅಂದು ಹೇಳಿದ ಮಾತುಗಳನ್ನೆ ಮೊನ್ನೆ ಮೊನ್ನೆಯವರೆಗೆ ಗಾಂಧೀಜಿ ಹೇಳುತ್ತಿದ್ದರು; ಇಂದು ವಿನೋಬಾ ಭಾವೆ ಹೇಳುತ್ತಿದ್ದಾರೆ— ನೆಹರುಗಳು ಹೇಳುತ್ತಿದ್ದಾರೆ. ಅವರು ಹೇಳಿದಂತೆ ಕಾರ್ಯದಲ್ಲಿಯೂ ಬುದ್ಧದೇವನ ಆದರ್ಶವನ್ನನುಸರಿಸಿ ತಮ್ಮ ಮಾತುಗಳ ಆಶಯವನ್ನು ಬಿಂಬಿಸಲು ಪ್ರಯತ್ನಪಟ್ಟಿರುತ್ತಾರೆ. ನುಡಿಗೆ ತಕ್ಕ ನಡೆ ಅವರದು. ನಾವಾದರೂ ಇದೇ ಮಾದರಿಯನ್ನು ಅನುಸರಿಸಿದರೆ ಮಾತ್ರ ಬುದ್ಧ ಜಯಂತ್ಯುತ್ಸವವನ್ನು ಆಚರಿಸಿ ಧನ್ಯರೆನಿಸಿಕೊಳ್ಳಬಹುದು. ಈಗಾಗಲೇ ನಮ್ಮಲ್ಲಿ ರಕ್ತಗತವಾಗಿರುವ ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯಗಳಿಗೊಪ್ಪುವ ಗುಣಗಳನ್ನು ಇನ್ನಷ್ಟು ಪೋಷಿಸಲು, ಸುಪ್ತವಾಗಿರುವ ಸದ್ಗುಣಗಳನ್ನು ಜಾಗೃತಗೊಳಿಸಲು, ಸಂಕಲ್ಪ ಶಕ್ತಿಯನ್ನು ಹೊಂದಲು ಈ ಉತ್ಸವ ನಮಗೆಲ್ಲರಿಗೆ ಸಹಾಯ ಮಾಡುತ್ತದೆ. ಇದರಿಂದ ನಾವು ಸ್ಫೂರ್ತಿಯನ್ನು ಅವಶ್ಯವಾಗಿಯೂ ಹೊಂದೋಣ!

ಬೆಂಗಳೂರಿನಲ್ಲಿ ಮಂತ್ರಿ ಮಟ್ಟದ ಸಮಾಲೋಚನೆ
ಹೊಸ-ಮೈಸೂರು ರಾಜ್ಯದ ಸಮಸ್ಯೆಗಳ ಪರಿಶೀಲನೆ

ಬೆಂಗಳೂರಿನಲ್ಲಿ ಮಂತ್ರಿ ಮಟ್ಟದ ಸರಿಷತ್ತೊಂದು ನೂತನ ಕರ್ನಾಟಕ ರಾಜ್ಯದ ಸಮಸ್ಯೆಗಳನ್ನು ಪರಿಶೀಲಿಸಿ, ತಕ್ಕ ನಿವಾರಣೋಪಾಯಗಳನ್ನು ಕಂಡು ಹಿಡಿಯುವುದರಲ್ಲಿ ನಿರತವಾಗಿದೆ. ಮೈಸೂರಿನ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ಈ ಪರಿಷತ್ತಿನಲ್ಲಿ ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟಿ, ಕೊಡಗಿನ ಮುಖ್ಯ ಮಂತ್ರಿ ಶ್ರೀ. ಪೂಣಚ್ಚ, ಮುಂಬಯಿಯ ಮಂತ್ರಿ ಶ್ರೀ. ಎಂ. ಪಿ. ಪಾಟೀಲ ಮತ್ತು ಹೈದರಾಬಾದಿನ ಮಂತ್ರಿ ಶ್ರೀ. ಮೇಲ್ಕೋಟೆ ಇವರಿದ್ದಾರೆ.

ಪರಸ್ಪರ ಸಾಮರಸ್ಯ

ಶ್ರೀ. ಹನುಮಂತಯ್ಯನವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಕನ್ನಡ ನಾಡಿನ ಬೇರೆ ಬೇರೆ ಭಾಗಗಳನ್ನು ಸಂಯೋಜಿಸಲು ನೆರವಾಗುವ ಮಾತುಕತೆಗಳನ್ನಿ ಇನ್ನು ಮುಂದೆ ನಾವೆಲ್ಲರೂ ಆಡುತ್ತಿರಬೇಕೆಂದೂ ಭಿನ್ನಾಭಿಪ್ರಾಯಗಳನ್ನು ಹೆಚ್ಚಿಸುವ ವಿಷಯಗಳನ್ನು ಪ್ರಸ್ತಾಪಿಸುವುದು ಅಪಾಯಕರವೆಂದೂ ಹೇಳಿದರು. ಪರಸ್ಪರ ಸಾಮರಸ್ಯವನ್ನು ಹೆಚ್ಚಿಸುವ ರೀತಿಯಲ್ಲಿ ನಮ್ಮೆಲ್ಲರ ವರ್ತನೆ ಇರಬೇಕೆಂದು ಅವರು ಅಭಿಪ್ರಾಯಪಟ್ಟರು.

ಸಾಂಸ್ಕೃತಿಕ ಐಕ್ಯ

ಆಚಾರ್ಯ ವಿನೋಬಾ ಭಾವೆಯವರು ಈಗ ತಮಿಳು ನಾಡಿನಲ್ಲಿ ತಮ್ಮ ಭೂದಾನ ಪಾದ ಯಾತ್ರೆಯನ್ನು ಮಾಡುತ್ತಿದ್ದಾರೆ. ಅವರು ಪತ್ರಿಕೋದ್ಯಮಿಗಳ ಮುಂದೆ ಮಾತನಾಡುವ ಪ್ರಸಂಗ

ಎರಡನೇ ಯೋಜನೆಯ ವಿವರಗಳೀಗ ಸಾರ್ವಜನಿಕರ ಮುಂದಿವೆ; ಸಂಸತ್ಸದಸ್ಯರ ಅನುಮೋದನೆಗೆ ಇದನ್ನು ಪ್ರಧಾನ ಮಂತ್ರಿಗಳು ಕಳೆದವಾರ ಒಪ್ಪಿಸಿದ್ದಾರೆ. ಯೋಜನೆಯಲ್ಲಿ ಸುಶಿಕ್ಷಿತರ ಆಸಕ್ತಿಯನ್ನು ಹೆಚ್ಚಿಸಲು ವಿಚಾರಗೋಷ್ಠಿಯಂಥ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ. ಈಚೆಗೆ ಹೊಸ ದೆಹಲಿಯಲ್ಲಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ಸಹ ಭಾಗವಹಿಸಿದ ವಿಚಾರಗೋಷ್ಠಿಯೊಂದು ನಡೆಯಿತು. ಆಗ ಈ ವಿದ್ಯಾರ್ಥಿಗಳು ಸಮೀಪದ ಹಳ್ಳಿಗೆ ಭೇಟಿಯಿತ್ತು ಗೋಧಿಯ ಬೆಳೆಗೆ ಸುಧಾರಿತ ಬೀಜ ಮತ್ತಿತರ ಆಧುನಿಕ ಪದ್ಧತಿಗಳ ಉಪಯೋಗದಿಂದಾಗುವ ಪ್ರಯೋಜನವನ್ನು ಪ್ರತ್ಯಕ್ಷ ಕಂಡರು.

...ಂದಾಗ ದಕ್ಷಿಣ ಪ್ರದೇಶದ ಕುರಿತಾಗಿ ...ಗೆಂದರು—"ರಾಜಕೀಯವಾಗಿ ದಕ್ಷಿಣ ಭಾರತದ ಕೆಲವು ರಾಜ್ಯಗಳನ್ನು ಒಂದುಗೂಡಿಸಿ ವಿಶಾಲವಾದ ಹೊಸ ರಾಜ್ಯವನ್ನು ರಚಿಸುವ ಪ್ರಯತ್ನವನ್ನು ಮಾಡುವುದಕ್ಕೆ ಮುಂಚೆ ಸಾಂಸ್ಕೃತಿಕ ಸಾಮರಸ್ಯವನ್ನು ಇಲ್ಲಿ ನೆಲೆಗೊಳಿಸಲು ...ಕ್ಕ ಪ್ರಯತ್ನ ನಡೆಯುವುದು ತೀರ ಅವಶ್ಯಕ. ಇದಾಗದೆ ರಾಜಕೀಯ ಕ್ರಮ ...ನ್ನಷ್ಟೆ ಕೈಗೊಂಡರೆ ಅದು ನಿರರ್ಥಕ."

ಕನ್ನಡಿಗರ ಸಮಸ್ಯೆ

ಹೊಸ ಕನ್ನಡ ರಾಜ್ಯದ ಕುರಿತಾಗಿಯೂ ಇದೇ ಮಾತನ್ನು ನಾವು ಹೇಳಬಹುದು. ಕರ್ನಾಟಕವು ಮೂಲತಃ ಒಂದೇ ಪ್ರದೇಶವಾಗಿದ್ದರೂ ...ದು ಹರಿದು ಹಂಚಿಹೋದ ದೆಸೆಯಿಂದ ಸಂಸ್ಕೃತಿಯಲ್ಲಿ ಸಾಕಷ್ಟು ವೈವಿಧ್ಯ ಕಂಡುಬರುತ್ತಿದೆ; ಅದು ಭಾಷೆಯಲ್ಲಿಯೂ ...ಾವೀ ವ್ಯತ್ಯಾಸವನ್ನು ಗುರುತಿಸಬಹುದು. ಆದುದರಿಂದ ದಕ್ಷಿಣ ಪ್ರದೇಶದಂಥ ದೊಡ್ಡ ಮಾತನ್ನು ಆಡಿಕೊಳ್ಳುವ ಬದಲು ಕನ್ನಡದ ಬೇರೆ ಬೇರೆ ಭಾಗಗಳಲ್ಲಿ ...ನ ಸಾಮಾನ್ಯರ ಮಟ್ಟದಲ್ಲಿ ನಿಕಟ ಬಾಂಧವ್ಯದ ವ್ಯವಸ್ಥೆಯನ್ನು ಏರ್ಪಡಿಸಬೇಕು; ಇದಕ್ಕಾಗಿ ಪ್ರಯತ್ನಶೀಲರಾಗುವುದು ಕರ್ನಾಟಕದ ಹಿತೈಷಿಗಳ ಆದ್ಯ ಕರ್ತವ್ಯ.

ಪ್ರದೇಶ ಕಾಂಗ್ರೆಸಿನ ನಿಶ್ಚಯ

ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧಿವೇಶನವು "ಕರ್ನಾಟಕ" ಎಂಬ ಹೆಸರನ್ನು ನೂತನ ರಾಜ್ಯಕ್ಕೆ ಇಡಬೇಕೆಂದು ಗೊತ್ತುವಳಿಯನ್ನು ಸ್ವೀಕರಿಸಿದೆ. ಕನ್ನಡದ ಎಲ್ಲ ಪ್ರದೇಶಗಳ ನಡುವೆ ಸಾಮ್ಯನನ್ನು ಹುಟ್ಟುವಂತೆ ...ಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ...ತುರವನ್ನೂ ಅದು ಪ್ರದರ್ಶಿಸಿದೆ. ಮೈಸೂರಿನ ಮುಖ್ಯ ಮಂತ್ರಿಗಳು ಅಧ್ಯಕ್ಷರಾಗಿರುವ ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರು ಉಪಾಧ್ಯಕ್ಷರಾಗಿರುವ ಮತ್ತು ಬೇರೆ ಸುಮಾರು ೨೦ ಮಂದಿ ಸದಸ್ಯರುಳ್ಳ ಸಮಿತಿಯೊಂದು ಈ ಉದ್ದೇಶದಿಂದ ಏರ್ಪಟ್ಟಿದೆಯಾಗಿ ಸಹ ಕೇಳಿದ್ದೇವೆ.

ಮುಂದಿರುವ ಕಾರ್ಯ

ನೂತನ ರಾಜ್ಯಕ್ಕೆ ಸಲ್ಲುವ ಪಾಲಿನ ಕುರಿತು, ಇಲ್ಲಿ ಸೇರುವ ಸರಕಾರಿ ಅಧಿಕಾರಿಗಳ ವೇತನ ಮತ್ತು ಜ್ಯೇಷ್ಠತ್ವಕ್ರಮ ನಿರ್ಧಾರದ ಕುರಿತು, ಇಲ್ಲಿಯ ಅಭಿವೃದ್ಧಿ ಪ್ರಯತ್ನಗಳ ಪ್ರಾಶಸ್ತ್ಯಾನುಕ್ರಮಣಿಕೆಯನ್ನು ಸಿದ್ಧಗೊಳಿಸುವ ಕುರಿತು ಬೆಂಗಳೂರಿನಲ್ಲಿ ಈಗ ಸೇರಿರುವ ಮಂತ್ರಿಮಟ್ಟದ ಪರಿಷತ್ತು ಮತ್ತು ಉಪರೋಕ್ತ ವಿಶೇಷ ಸಮಿತಿಗಳು ವಿಚಾರವಿನಿಮಯ ನಡೆಸುವುವೆಂದು ನಂಬಲಾಗಿದೆ. ಹೊಸ ರಾಜ್ಯದ ವ್ಯವಹಾರವು ಆದಷ್ಟು ಸುಗಮವಾಗಿ ಸಾಗುವಂತೆ ಮಾಡುವುದೇ ಈ ಸಮಾಲೋಚನೆಗಳ ಉದ್ದೇಶ.

ಉಡುಪಿ

ಶ್ರೀ ಲಕ್ಷ್ಮೀವೆಂಕಟೇಶ ದೇವಸ್ಥಾನ- ಇದರ 60ನೇ ಪ್ರತಿಷ್ಠಾ ವರ್ಧಂತಿ ಮಹೋತ್ಸವವು ತಾ. 26—5—56ರಲ್ಲಿ ಶ್ರೀ ಕಾಶೀ ಮಠಾಧೀಶ ಶ್ರೀಮತ್ ಸುಧೀಂದ್ರ ತೀರ್ಥ ಶ್ರೀಪಾದಂಗಳವರ ಸಮಕ್ಷಮದಲ್ಲಿ ವಿಶೇಷ ಕಾರ್ಯಕ್ರಮಗಳಿಂದ ಜರಗಲಿರುವುದೆಂದೂ, ಸ್ವಜಾತಿ ಬಾಂಧವರೆಲ್ಲರೂ ಬಂದು ಸಹಕರಿಸಬೇಕೆಂದೂ ವರ್ಧಂತಿ ಸಮಿತಿಯ ಅಧ್ಯಕ್ಷರಾದ ಡಾ| ವಿ. ಸುಂದರರಾಮ ಪೈಗಳು ವಿನಂತಿಸುತ್ತಾರೆ.

ಅ. ಭಾ. ಮಾಧ್ವಸಮ್ಮೇಳನವು- ಇದೇ ತಾ. 27; 28 ರಲ್ಲಿ ಕೋಯಮುತ್ತೂರಲ್ಲಿ ಜರಗಲಿದ್ದು, ಅದಕ್ಕೆ ಪೂರ್ವಸಿದ್ಧತೆಗಳೆಲ್ಲಾ ನಡೆದಿವೆ. ಈ ಸಮ್ಮೇಳನಕ್ಕೆ ಎಲ್ಲಾ ಕಡೆಯ ಮಾಧ್ವರೂ ಸರ್ವ ಸಹಕಾರವನ್ನೀಯಬೇಕಾಗಿ ಮಂಡಳದ ಅಧ್ಯಕ್ಷ ಶ್ರೀ ವಿಶ್ವೇಶ ತೀರ್ಥರು ಕರೆಯುತ್ತಿದ್ದಾರೆ.

ಪತ್ರ ವ್ಯವಹಾರ:

ಕೊಂಡಾಡಿಯ ಸತ್ಯಾಗ್ರಹ ಪ್ರಕರಣ

ಉಡುಪಿಯ ಸರ್ಕಲ್ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಹೆಸರಿಗೆ ಕಳಂಕವನ್ನು ತರುವ ಮತ್ತು ರಾಜಕೀಯ ಲಾಭವನ್ನು ಪಡೆಯುವ ದುರುದ್ದೇಶದಿಂದ ಅನಾವಶ್ಯಕವಾದ ಅನ್ನ ಸತ್ಯಾಗ್ರಹ ಪ್ರಕರಣವೊಂದು ಕೊಂಡಾಡಿಯಲ್ಲಿ ಪ್ರೋತ್ಸಾಹಿಸಲ್ಪಡುತ್ತಿರುವುದನ್ನು ಈಚೆಗೆ ನಮ್ಮ ಕಡೆಯ ಜನರು ಗಮನಿಸಿರಬಹುದು.

ಶ್ರೀಮತಿ ಗೌರಮ್ಮನೆಂಬ ಮಹಿಳೆಯೊಬ್ಬರು ತನಗೆ ಅನ್ಯಾಯವಾಗಿದೆ ಎಂದು ಹೇಳುತ್ತಾ, ಅದರ ಪರಿಮಾರ್ಜನೆಗಾಗಿ ಅನ್ನ ಸತ್ಯಾಗ್ರಹ ಕೈಗೊಂಡಿದ್ದುದಾಗಿದೆ; ಅವರ ಬೆಂಬಲಕ್ಕೆ ಹಿಂದ್ ಕಿಸಾನ್ ಪಂಚಾಯತಿನ ಧುರೀಣರೆನಿಸಿದ ಕೆಲವರು ನಿಂತು ಸಕಲ ರೀತಿಯಲ್ಲಿ ಉತ್ತೇಜನವೀಯುತ್ತಿದ್ದಾರೆ.

ಶ್ರೀ ಹೆಗ್ಡೆಯರ ಕುಟುಂಬದ ಆಶ್ರಯದಲ್ಲಿ ತಾನು ಒಕ್ಕಲುತನ ಮಾಡಿಕೊಂಡು ಬರುತ್ತಿದ್ದ ಭೂಮಿಯಿಂದ ತನ್ನನ್ನು ಬಿಡಿಸಿದುದು ಸರಿಯಲ್ಲವೆಂದೂ ಆ ಭೂಮಿ ತನಗೆ ವಾಪಾಸಾಗಬೇಕೆಂದೂ ಈ ಮಹಿಳೆಯು ಆಗ್ರಹಪಟ್ಟು, ಅನ್ನ ಸತ್ಯಾಗ್ರಹ ಕೈಗೊಂಡಿರುವರೆಂದು ಜನಜನಿತವಾಗಿದೆ.

ಈ ಮಹಿಳೆಯು ಕ್ರಮಪ್ರಕಾರ ಸೋದೆ ಚೀಟಿಯನ್ನು ಕೊಟ್ಟಾಗಿದೆಯೆಂದೂ ಒಕ್ಕಲುತನ ಮಾಡಿಕೊಂಡಿದ್ದ ಕಾಲದಲ್ಲಿನ ಕೃತಗೇಣಿಗಾಗಿ ಪರಿಹಾರವನ್ನು ಸ್ವೀಕರಿಸಲು ಪಂಚಾಯತುದಾರರ ಮುಂದೆ ಒಪ್ಪಿದ್ದರೆಂದೂ ಅವರೆ ಈಗ ಮಾತ್ರ ಹಿಂದ್ ಕಿಸಾನ್, ಪಂಚಾಯತಿನವರ ಪ್ರೋತ್ಸಾಹನೆಗೊಳಗಾಗಿ ತಾನು ಒಪ್ಪಿದ್ದ ಸಂಗತಿಗಳಿಗೆ ಬೆಲೆ ಕೊಡದೆ ಅನ್ನ ಸತ್ಯಾಗ್ರಹ ಕೈಗೊಂಡಿರುವರೆಂದೂ ಸತ್ಯ ವಿಷಯ ತಿಳಿದವರು ವಿರಳ.

ಸತ್ಯಾಗ್ರಹ, ಅದರಲ್ಲೂ ಅನ್ನ ಸತ್ಯಾಗ್ರಹ, ತಾವು ಒಪ್ಪಿದ್ದ ನ್ಯಾಯವನ್ನು ತಾನೇ ಪರರ ಹೇಳಿಕೆಗೊಳಗಾಗಿ ನಿರಾಕರಿಸುವ ಜನರ ಕೈಯಲ್ಲಿ ಎಂಥ ಪಾವಿತ್ರ್ಯವನ್ನು ಪಡೆದೀತು? ಅಪವಿತ್ರವಾದ ನೆಲೆಗಟ್ಟಿರುವ ಈ ಸತ್ಯಾಗ್ರಹಕ್ಕೆ ಉತ್ತೇಜನೆ ಕೊಡುತ್ತಿರುವವರು ನ್ಯಾಯವನ್ನೆ ಮಾಡುತ್ತಿದ್ದಾರೆಂದು ಹೇಗೆ ಹೇಳಬಹುದು?

ಗಾಂಧೀಜಿಯವರು ಅನೈತಿಕವಾದ "ಸತ್ಯಾಗ್ರಹ" ಕ್ರಮಕ್ಕೆ ಪುರಸ್ಕಾರ ವಿತ್ತಿದ್ದೇ ಇಲ್ಲ. ಸತ್ಯಾಗ್ರಹಿಯು ವ್ಯಕ್ತಿಶಃ ಎಂಥ ಯೋಗ್ಯತೆಪಡೆದಿರಬೇಕೆಂದು ಈ ಮಹಾತ್ಮರು ಹೇಳಿದ್ದಾರೋ ಆ ಯೋಗ್ಯತೆ ಶ್ರೀಮತಿ ಗೌರಮ್ಮನವರಂಥ ಸಾಮಾನ್ಯ ಮಹಿಳೆಯಲ್ಲಿ ಕಾಣಿಸುತ್ತಿಲ್ಲ. ಎಂದಮೇಲೆ, ಈ ಮಹಿಳೆಯ ಅನ್ನ ಸತ್ಯಾಗ್ರಹ ತೀರ ಅನುಚಿತವಾದ ಕಾರ್ಯ.

ಇವೆಲ್ಲಕ್ಕಿಂತಲೂ ಹೆಚ್ಚು ವಿಲಕ್ಷಣವಾದ ಸ್ವರೂಪವೊಂದು ಈ ಅನಪೇಕ್ಷಿತ ಅನ್ನ ಸತ್ಯಾಗ್ರಹಕ್ಕಿದೆ: ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಕೈವಾಡವು ಈ ಮಹಿಳೆಗೆ ಆಕೆಯ ಒಕ್ಕಲುತನದ ವಿಷಯದಲ್ಲಿ ಆಗಿದೆ ಎನ್ನಲಾದ "ಅನ್ಯಾಯ"ದಲ್ಲಿ ಏನೇನೂ ಇಲ್ಲ!

ಆಕೆಯು ಮಾಡುತ್ತಿದ್ದ ಒಕ್ಕಲು ಭೂಮಿಯು ಶ್ರೀ ಹೆಗ್ಡೆಯವರ ತಾಯಿಯ ಪಾಲಿನದು; ಶ್ರೀ ಹೆಗ್ಡೆಯವರು ಕುಟುಂಬದಿಂದ ಪಾಲುಪಡೆದು ಹಲವು ವರ್ಷಗಳಿಂದ ಬೇರೆಯೇ ಇರುತ್ತಿದ್ದಾರೆ. ಇವರು ನ್ಯಾಯ ದೊರಕಿಸಿಕೊಡಬೇಕೆಂದು ಆ ಹೆಂಗಸು ಅಪೇಕ್ಷಿಸುವುದೇ ತಪ್ಪಲ್ಲವಾದರೂ ಇವರ ಮಾತೂ ನಡೆಯದೆ ಹೋದರೆ ಅದು ಸ್ವಾಭಾವಿಕವೆನ್ನುವಷ್ಟು ವಿವೇಚನೆ ಹೆಂಗಸಿಗಿರಬೇಕು. ಅಂಥ ವಿನಂತಿ ಮಾಡಿಕೊಳ್ಳುವುದಕ್ಕೆ ಅನ್ನಸತ್ಯಾಗ್ರಹವಂತೂ ಅನಾವಶ್ಯಕ.

ಹೀಗಿರುತ್ತಾ ತಾನು ಅನ್ಯಾಯವೆಂದು ಭಾವಿಸಿದ ಕ್ರಮಕ್ಕೆ ಎಷ್ಟಕ್ಕೂ ಹೊಣೆಗಾರರಲ್ಲದ ಶ್ರೀ ಹೆಗ್ಡೆಯವರು ವಾಸಿಸುತ್ತಿರುವ ಮನೆಗೆ ಸಮೀಪದ ರಸ್ತೆಯಲ್ಲಿ ಅನ್ನಸತ್ಯಾಗ್ರಹ ಕೈಗೊಂಡಿರುವುದಾಗಲೀ ಸತ್ಯಾಗ್ರಹಕ್ಕೂ ಅವರಿಗೂ ಸಂಬಂಧವುಂಟೆಂದು ಜನರು ಭಾವಿಸುವಂತೆ ಆ ಹೆಂಗಸಿನ ಪರವಾದ ಜನರು ವಿಷಯವನ್ನು ವರ್ಣಿಸುವುದಾಗಲೀ ಬಹಳ ಗಂಭೀರವಾದ ತಪ್ಪು.

ಸಭ್ಯಗೃಹಸ್ಥನೊಬ್ಬನ ತೇಜೋವಧೆಯನ್ನು ಇಷ್ಟು ಹೀನ ಕ್ರಮದಿಂದ ಮಾಡುತ್ತಿರುವ ಈ "ಅನ್ನಸತ್ಯಾಗ್ರಹ" ಅಂಥ ಪವಿತ್ರ ಶಬ್ದಗಳು ಪ್ರತಿಪಾದಿಸುವ ಘನವಾದ ತತ್ತ್ವಗಳಿಗೆ ಎಷ್ಟಕ್ಕೂ ಹೊಂದಿಕೆಯಾಗಿಲ್ಲ. ಎಲ್ಲ ರೀತಿಯಿಂದಲೂ ಅನೈತಿಕವೂ ಅನುಚಿತವೂ ಆಗಿರುವ ಈ ಅನ್ನಸತ್ಯಾಗ್ರಹವು ರಾಜಕೀಯ ಕುಹಕನೆನಿಸೀತಲ್ಲದೆ, ವಿವೇಕ ಸಮ್ಮತವಾಗಲಾರದು.

—ಸತ್ಯಸಂಗತಿ ತಿಳಿದವ.



ಕೆನಡಾ ಸರಕಾರವು ಕೊಲೊಂಬೋ ಯೋಜನೆಯಂತೆ ಭಾರತ ಸರಕಾರಕ್ಕೆ ದಾನ ಕೊಡಲು ನಿರ್ಧರಿಸಿರುವ ಅಣುಶಕ್ತಿಜನಕ ಯಂತ್ರದ ಮಾದರಿ ಚಿತ್ರ.

ಪ್ರಾಂತೀಯ ಪಶು ಸಂಪತ್ತು ಅಭಿವೃದ್ಧಿ ಸಮಿತಿಯ ಸಭೆಯು — ತಾ. 20ರಲ್ಲಿ ಕೈಲ್ಯಾಲದಲ್ಲಿ ಮದ್ರಾಸಿನ ಕೃಷಿ ಮಂತ್ರಿ ಶ್ರೀ ಎಂ. ಭಕ್ತವತ್ಸಲಂ ರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಬೇರೆ ಬೇರೆ ಕಡೆಯಿಂದ ಬಂದ ಸದಸ್ಯರು ವಿಚಾರವಿನಿಮಯ ಮಾಡಿ ಧಾರ್ಮಿಕ ಸಂಸ್ಥೆಗಳು ಪಶುಪಾಲನಾ ಕ್ಷೇತ್ರವನ್ನು ನಡೆಸಿಕೊಂಡು ಬಂದು ಆಯಾ ಪ್ರದೇಶದ ಶಾಲಾ ಮಕ್ಕಳಿಗೆ ಧರ್ಮಾರ್ಥ ಹಾಲು ಹಂಚಬಹುದು, ಇದನ್ನು ಪೌರ ಸಭೆಗಳೂ ಇತರ ವಿಶ್ವಸ್ತ ಸಂಸ್ಥೆಗಳೂ ಕೈಕೊಳ್ಳಬಹುದು. ಮೊದಲಾದ ಸೂಚನೆಗಳು ಪರಿಷತ್ತಿನಲ್ಲಿ ಸ್ವೀಕೃತವಾದವು. ದ. ಕ. ಜಿಲ್ಲಾ ಪಶು ಸಂಪತ್ತು ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಡಾ. ಕೆ. ಬಾಳಪ್ಪ ಶೆಟ್ಟರು ಧನ್ಯವಾದವನ್ನಿತ್ತರು.

ರಾಮಕುಂಜ— ಬೋರ್ಡು ಶಾಲೆಯ ನವೀನ ಕಟ್ಟಡದ ಉದ್ಘಾಟನೆಯು ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಕೃಷಿಮಂತ್ರಿ ಶ್ರೀ ಭಕ್ತವತ್ಸಲಂ ರವರಿಂದ ನೆರವೇರಿಸಲ್ಪಟ್ಟಿತು. ಇದೇ ಸಂದರ್ಭದಲ್ಲಿ ಶಾಲಾ ಸಮಿತಿಯ ಕಡೆಯಿಂದ ಡಾ. ಕೆ. ಬಾಳಪ್ಪ ಶೆಟ್ಟರು ಮಂತ್ರಿಗಳಿಗೆ ಮನವಿಯೊಂದನ್ನು ಅರ್ಪಿಸಿ ಒಕ್ಕಲು ಹಿತ ರಕ್ಷಣೆಯ ಕಾರ್ಯವನ್ನು ಶೀಘ್ರವಾಗಿ ಕೈಕೊಳ್ಳಬೇಕೆಂದು ಕೇಳಿಕೊಂಡರು. ಡಾ. ರಾಜೇಂದ್ರ ಪ್ರಸಾದರ ಮತ್ತು ನೆಹರುಗಳ ಭಾವಚಿತ್ರಗಳನ್ನು ಶ್ರೀಗಳಾದ ಕೆ. ವೆಂಕಟರಮಣ ಗೌಡ ಎಂ. ಎಲ್. ಎ. ಮತ್ತು ವೈ. ಮಂಜಯ್ಯ ಹೆಗ್ಡೆಯವರು ಅನುಕ್ರಮವಾಗಿ ಅನಾವರಣ ಮಾಡಿದರು.

ಶಿರ್ವ-13-5-56ರಲ್ಲಿ ಶಿರ್ವ ಕೇಂದ್ರದ ಅಧ್ಯಾಪಕ ಸಂಘದವರು ಸೆಂಟರ್ ಶಾಲಾ ಭವನದಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಸಂಜೀವ ಭಟ್ ಎಂ. ಎ. ಎಲ್. ಟಿ. ಅವರನ್ನು ಬೀಳ್ಕೊಳ್ಳುವ ಸಮಾರಂಭವನ್ನು ವೆರಿ ರೆವೆಂಡ್ ಫಾದರ್ ಎಚ್. ಗೋನ್ಸಾಲ್ವಿಸ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಕಾರ್ಯದರ್ಶಿ ಬಿ. ಬಿ. ಶೆಟ್ಟಿಯವರು ವಿದ್ಯಾಧಿಕಾರಿಗಳಿಗೆ ಮಾನಪತ್ರವನ್ನು ಅರ್ಪಿಸಿದರು.

ಸಭಿಕರಲ್ಲಿ ಶ್ರೀ ಗೋಪಾಲ ಕೃಷ್ಣರಾವ್, ಶ್ರೀ ಪಾಸ್ಕಲ್ ಮಿನೆಜಸ್, ಆ. ಗೋವಿಂದಾಚಾರ್ಯ ಮೊದಲಾದವರು ಶ್ರೀಯುತರ ಗುಣಗಾನವನ್ನು ಮಾಡಿದರು. ಅನಂತರ ವಿದ್ಯಾಧಿಕಾರಿಗಳು ನಲವು ಹಿತಸೂಚನೆ ಕೊಟ್ಟರು. ಅನಂತರ ಲಘುಪಾಹಾರ ಗ್ರೂಪ್ ಫೋಟೋದೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 24/1953.

R. E. P. 129/1956

ಅರ್ಜಿದಾರ. K. ರಾಮಚಂದ್ರಯ್ಯ.

ಎದ್ರಿರು. 1. ಕೃಷ್ಣ ಹೆಬ್ಬಾರ 2. ಗೋಪಾಲ ಹೆಬ್ಬಾರ 3. ಪದ್ಮಾವತಿ ಅಮ್ಮ 4. ಮೈನರ ...ಜು 5. ಮೈನರ ಸುಂದರ.

ಕುಂದಾಪುರ ತಾಲ್ಲೂಕು ಕುಂಭಾಶಿ ಗ್ರಾಮದ ಕೊರವಡಿಯಲ್ಲಿರುವ ಶ್ರೀನಿವಾಸ ಹೆಬ್ಬಾರರ ಮಗ ಗೋಪಾಲ ಹೆಬ್ಬಾರರಿಗೆ ಈ ಮೂಲಕ ತಿಳಿಯ ಪಡಿಸುವುದೇನೆಂದರೆ,

ಅರ್ಜಿದಾರನು ಎದ್ರಿರ ಮೇಲೆ ಪಡೆದ ಮೇಲಿನ ಡಿಕ್ರಿಯ ಹಣ ಬರಮಾಡಿಕೊಳ್ಳುವ ...ದಾಖಲು ಮಾಡಿದ ಮೇಲಿನ ಅನುಲ್ಲಾಂಘ ತಾ. 5-6-1956ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಖಿಗೆ ಮೇಲಿನ ಕೋರ್ಟುಮುಂದೆ ಹಗಲು 11 ಗಂಟೆಗೆ ಖಾಸ್ತಾಗಿ ಹಾಜರು ಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಲ್ಪಟ್ಟಿಯದೆ.

N. S. Parameshwaraiah
Advocate for Petr

Date 5-5-1956 Coondapoor

ಮಂಗಳೂರು

ಬುದ್ಧ ಜಯಂತಿ— ಎಲ್ಲ ಸಂಘ ಸಂಸ್ಥೆಗಳು ಸೇರಿ ತಾ 24ರಂದು ಬುದ್ಧ ಜಯಂತಿಯನ್ನು ವಿವಿಧ ಕಾರ್ಯಕ್ರಮಗಳಿಂದ ಆಚರಿಸುವ ವ್ಯವಸ್ಥೆ ಕೈಕೊಂಡಿವೆ.

ಡಿಲ್ಲಿಗೆ ತೆರಳಿದ ಶಿಷ್ಟ ಮಂಡಲಗಳು — ಕಾಸರಗೋಡನ್ನು ಕರ್ನಾಟಕದಲ್ಲಿಯೇ ಇರಿಸಬೇಕೆಂದು ಕೊನೆಯದಾಗಿ ಕೇಂದ್ರ ಸರಕಾರವನ್ನೂ ಪಾರ್ಲಿಮೆಂಟ್ ನೇಮಿಸಿದ ಜೋಯಿಂಟ್ ಸಿಲೆಕ್ಟ್ ಕಮಿಟಿಯನ್ನು ಬಿನ್ನವಿಸಿಕೊಳ್ಳಲು ತೆರಳಿದ್ದ ಶಿಷ್ಟ ಮಂಡಲಗಳೆರಡೂ ಹಿಂದೆ ಮರಳಿವೆ. ಸಾಧ್ಯವಾದ ಎಲ್ಲಾ ಪ್ರಯತ್ನಗಳನ್ನೂ ಎರಡೂ ಶಿಷ್ಟ ಮಂಡಲಗಳು ಮಾಡಿರುವವೆಂದೂ, ಸಿಲೆಕ್ಟ್ ಕಮಿಟಿಯ ಸದಸ್ಯರೆಲ್ಲ ನ್ಯಾಯವಾದೀ ಕೇಳಿಕೆಯನ್ನು ಒಪ್ಪಿಕೊಂಡಿರುವರೆಂದೂ ಗೃಹ ಮಂತ್ರಿಗಳು ಕೂಡಾ ಆಶಾವಾದ ವ್ಯಕ್ತಗೊಳಿಸಿದ್ದಾರೆಂದೂ ಗೊತ್ತಾಗಿದೆ.

ಡಿಪ್ರೆಸ್ಡ್ ಕ್ಲಾಸಸ್ ಲೀಗಿನ ಸಭೆಯು ತಾ. 13ರಲ್ಲಿ ಕೆ. ಈಶ್ವರ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಸೇರಿ ಇದೇ ಫೆಬ್ರವರಿಯಲ್ಲಿ ಜರಗಿಸಬೇಕೆಂದಿದ್ದ ಪರಿಷತ್ತನ್ನು ಮುಂದಿನ ಡಿಸೆಂಬರದಲ್ಲಿ ಜರಗಿಸುವ ನಿರ್ಧಾರ ಮಾಡಿದೆ.

ಬಹುಮಾನ ವಿತರಣೆ— ಜಿಲ್ಲಾ ನಾಟ್ಯ ಕಲೋತ್ಸವ ಸಮಿತಿಯ ಆಶ್ರಯದಲ್ಲಿ ಇತ್ತೀಚೆಗೆ ಜರಗಿದ ನಾಟಕ ಸ್ಪರ್ಧೆಯ ಬಹುಮಾನವನ್ನು ತಾ. 20ರಲ್ಲಿ ಮಾನ್ಯಮಂತ್ರಿ ಭಕ್ತವತ್ಸಲಂ ರವರು ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ವಿತರಣೆ ಮಾಡಿದರು.

ಕಟಪಾಡಿ—ತಾ 13ರಂದು ಸ್ಥಾನಿಕ ಅಭಿವೃದ್ಧಿ ಯೋಜನೆಯಿಂದ ಕಟ್ಟಲಾದ ಹೆರಿಗೆ ಕೇಂದ್ರದ ಹೊಸಕಟ್ಟಡದ ಉದ್ಘಾಟನೆಯು ಶ್ರೀ ಟಿ. ಎ. ಪೈ. ಎಂ. ಎಲ್. ಎ. ಅವರಿಂದ ಶ್ರೀ ವಕೀಲ್ ಬಿ. ಶೀನಪ್ಪ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿಸಲ್ಪಟ್ಟಿತು. ಡಾ| ಕೆ. ಜಿ. ಶೆಣೈಯವರು ಸ್ವಾಗತ ಭಾಷಣ ಮಾಡಿದರು. ವರದಿಯನ್ನು ಶ್ರೀಮತಿ ಕಂಸುಮಾ ನಾಯಕರು ಒಪ್ಪಿಸಿದರು. ಅಧ್ಯಕ್ಷರ ಮತ್ತು ಸಭಿಕರ ಭಾಷಣ ಧನ್ಯವಾದಗಳಿಂದ ಸಭಾಂತ್ಯವಾಯಿತು.

ಪೆರ್ಡೂರು—ಇದೇ ತಾ 13ರಂದು ಪೆರ್ಡೂರು ಸಹಕಾರಿ ಸಂಘದ ಹೊಸ ಕಟ್ಟಡದ ಉದ್ಘಾಟನೆಯು ಶ್ರೀ ಮೊಳಹಳ್ಳಿ ಶಿವರಾಯರಿಂದ ಶ್ರೀ ಕೆ. ಜಿ ಬಲ್ಲಾಳರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಎ. ನಾರಾಯಣ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಎಸ್. ನರ್ಸಪ್ಪಯ್ಯ ಎಂ ಎಲ್ ಸಿ. ಯವರು ಸಹಕಾರಿ ತತ್ವವನ್ನು ವಿವರಿಸಿದರು.

ಕಲಾಮಂಡಳಿಯ ವಾರ್ಷಿಕೋತ್ಸವವು ತಾ. 2ರಲ್ಲಿ ಬಿ. ಇ. ಎಂ. ಹಾ. ಪ. ಶಾಲೆಯಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಶ್ರೀ ಕು. ಶಿ. ಹರಿದಾಸ ಭಟ್ ಎ. ಜಿ ಅಳ್ವೆ ಮೊದಲಾದವರ ಭಾಷಣದೊಂದಿಗೆ ನೆರವೇರಿತು.

ಹೊಂಬಾಡಿ ಮಂಡಾಡಿ-ವಿವೇಕೋದಯ ಶಾಲೆಯ ವಾರ್ಷಿಕೋತ್ಸವವು ತಾ 6ರಲ್ಲಿ ಮುನ್ಸಿಫ್ ಶ್ರೀ. ಎಚ್. ಲಕ್ಷ್ಮಣ ಸಾಲಿಯಾನರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿತು.

ನೀಲಾವರ—ಮಹಿಷಮರ್ದಿನಿ ಹಾ| ಪ್ರಾ| ಶಾಲೆಯ ನೂತನ ಭವನದ ಉದ್ಘಾಟನೆಯನ್ನು ತಹಸೀಲ್ದಾರ್ ಶ್ರೀ. ಕೆ. ಲಿಂಗಪ್ಪಯ್ಯನವರು ತಾ 13ರಲ್ಲಿ ನೆರವೇರಿಸಿದರು. ಶಾಲಾ ಡಿ| ಇನ್ಸ್ಪೆಕ್ಟರ್ ಶ್ರೀ. ಬಿ. ಪಿಂಟೋರವರು ಪಂಡಿತ ನೆಹರೂರವರ ಭಾವ ಚಿತ್ರವನ್ನು ಅನಾವರಣ ಮಾಡಿದರು.

ಬೈಲ್ಲೆ—ಇದೇ ತಾ. 13ರಲ್ಲಿ ಬೋರ್ಡ್ ಪ್ರಾಥಮಿಕ ಶಾಲೆಯ ಹೊಸ ಕಟ್ಟಡ ಉದ್ಘಾಟನೆಯು ಶ್ರೀ. ಬಿ. ಎಸ್ ಬಾಸ್ಕರ ರೈಯವರ ಅಧ್ಯಕ್ಷತೆಯಲ್ಲಿಯೂ, ಬಾಲ ವಿಹಾರ ಕೇಂದ್ರದ ಉದ್ಘಾಟನೆಯು ಶ್ರೀ ಎಸ್. ಪರಮೇಶ್ವರಯ್ಯನವರಿಂದಲೂ, ಶಾಲೆಯ ವರ್ಧಂತ್ಯುತ್ಸವವು ಶ್ರೀ ಬಿ.ಆರ್. ಕಕೇರರ ಅಧ್ಯಕ್ಷತೆಯಲ್ಲಿಯೂ ನೆರವೇರಿತು. ಶ್ರೀ ಎಚ್ ಎಲ್ ಪಂಡೆಯವರು ಶಾಲಾ ವರದಿಯನ್ನೂ ಶ್ರೀ ಎಸ್. ಕೆ. ಹಾಳಂಬೆಯವರು ಕಟ್ಟಡ ರಚನೆಯ ಆಯ ವ್ಯಯದ ವಿವರವನ್ನೂ ಸಭೆಯ ಮುಂದಿಟ್ಟರು. ಶ್ರೀ ಎಮ್. ಎಮ್ ಹೆಗ್ಡೆಯವರ ಭಾಷಣವಾದ ಮೇಲೆ ಮಕ್ಕಳ ವಿನೋದಾವಳಿ ಅಧ್ಯಕ್ಷರ ಭಾಷಣ ಧನ್ಯವಾದಗಳಿಂದ ಸಭಾ ಅಂತ್ಯವಾಯಿತು.

ಕುಂಜಾಲು—ಇದೇ ತಾ 16ರಲ್ಲಿ ವಿಶ್ವಕೀರ್ತಿ ಹಾ. ಪ. ಶಾಲೆಯ ನೂತನ ವಿಶ್ವಕೀರ್ತಿ ಭವನದ ಪ್ರವೇಶೋತ್ಸವವು ಶಾಲಾ ಪರೀಕ್ಷಾಧಿಕಾರಿಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯ ಕ್ರಮಗಳಿಂದ ನೆರವೇರಿತು. ಮನೇಜರ್ ಡಾ. ಕೆ. ಕೆ. ಕಲ್ಕೂರರು ಧನ್ಯವಾದಗಳನ್ನಿತ್ತರು. ಮೂರದ ನುಹಸೀಯರಿಗೆ ಸಮ್ಮಿಶ್ರ ಭೋಜನ ಕೊಟ್ಟಿತ್ತು.

ಮಂಚಿನ - ತಾ. 1?ರಲ್ಲಿ ಸ್ಥಳೀಯ ಬೋರ್ಡ್ ಶಾಲೆಯ ವರ್ಧಂತಿಯು ಬೆಳ್ತಂಗಡಿ ತಹಸಿಲ್ದಾರ ಶ್ರೀ ಕೆ. ದೇವೇಂದ್ರನವರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿತು. ಶ್ರೀ ಕೆ ಸಂಜೀವನವರು ಸ್ವಾಗತಿಸಿದರು. ಶ್ರೀ ಕೆ. ಧರ್ಮಪ್ಪನವರು ವರದಿಯನ್ನೋದಿದರು. ಹಿತ ಚಿಂತಕರ ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಎಮ್. ತಿಮ್ಮಯ್ಯ ಬಂಗೇರರು ಧನ್ಯವಾದಗಳನ್ನು ಸಮರ್ಪಿಸಿದರು. ವಿವಿಧ ವಿನೋದಾವಳಿಗಳೊಂದಿಗೆ ಸಭಾಂತ್ಯವಾಯಿತು.

ಶಿರ್ವ—ಹಿಂದೂ ಜ್ಯೂನಿಯರ್ ಎಲಿಮೆಂಟರಿ ಶಾಲೆಯವರ್ಧಂತ್ಯುತ್ಸವವೂ ಹಳೇ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವೂ, ಇದೇ ತಾ 13 ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ. ಕೆ. ಸಂಜೀವ ಭಟ್ಟರ ಅಧ್ಯಕ್ಷತೆಯಲ್ಲಿ ಯಥಾಸಾಂಗವಾಗಿ ನೆರವೇರಿಸಲ್ಪಟ್ಟಿತು.

ಮುಜೂರು--ಕೆರೆಂಪಾಡಿ— ಇಲ್ಲಿಯ ಶ್ರೀ ರಾಮ ಹಾ. ಪ. ಶಾಲೆಯ ವರ್ಧಂತಿಯು ತಾ. 13ರಲ್ಲಿ ಶ್ರೀ ಟಿ. ಎ. ಪೈ ಎಮ್ ಎಲ್ ಎ. ಗಳ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯ ಕ್ರಮಗಳಿಂದ ವಿಜೃಂಭಣೆಯಿಂದ ನೆರವೇರಿತು.

ಎಡಮಂಗಲ—ಬೋರ್ಡ್ ಶಾಲೆಯ ವಾರ್ಷಿಕೋತ್ಸವವು ತಾ. 8ರಲ್ಲಿಪಟೇಲ್ ಶ್ರೀ ಕೆ. ಬಿ. ವಿಠಲ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು.

ಕಾಪು— ಸ್ಥಳೀಯ ತೆಂಗು ಮತ್ತು ತಾಳೆ ಬೆಲ್ಲ ತಯಾರಕರ ಸಹಕಾರ ಸಂಘದ ನೂತನ ಕಟ್ಟಡದ ಪ್ರವೇಶೋತ್ಸವವು ತಾ. 6 ರಲ್ಲಿ ಉಡುಪಿ ನಗರ ಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು.

ಕಡಿಯೂರು— ಎಯ್ಡೆಡ್ ಹಾ. ಪ. ಶಾಲೆಯ ನೂತನ ಕಟ್ಟಡದ ಉದ್ಘಾಟನೆಯನ್ನು ತಾ. 12ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ನೆರವೇರಿಸಿದರು. ಉಡುಪಿ ನಗರ ಸಭಾಪತಿ ಶ್ರೀ ಕೆ ಕೆ. ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಸದ್ಯವೇ ನಿವೃತ್ತರಾಗುವ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರಿಗೆ ಮಾನಪತ್ರವನ್ನು ಶಾಲಾ ಮೆನೇಜರರು ಅರ್ಪಿಸಿದರು. ಸಭಿಕರ ಭಾಷಣ ಶ್ರೀ ಕೆ. ಕೆ. ತಂತ್ರಿಗಳಿಂದ ವಂದನಾರ್ಪಣೆಯಾಗಿ ಸಭಾಂತ್ಯವಾಯಿತು. ಬೆಳಿಗ್ಗೆ ಶ್ರೀ ಎ. ಜೆ. ಅಳ್ವೆಯವರು ಧ್ವಜ ಅರಳಿಸಿದರು.

ಇದೇ ಶಾಲೆಯ ವರ್ಧಂತಿಯು ತಾ. 19ರಲ್ಲಿ ಶ್ರೀ ಟಿ. ಎಲ್. ರಾಯರ ಅಧ್ಯಕ್ಷತೆಯಲ್ಲಿಯೂ ಮರುದಿನ ಹಳೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಎಡ್ವಕೇಟ್ ಶ್ರೀ ವಿ. ಜಿ. ಕೆದಿಲ್ಲಾಯರ ಅಧ್ಯಕ್ಷತೆಯಲ್ಲಿಯೂ ವಿವಿಧ ಕಾರ್ಯಕ್ರಮಗಳಿಂದ ಜರಗಿದವು.

ಕಡೆಕಾರು— ಸುಬ್ರಹ್ಮಣ್ಯ ಶಾಲೆಯಲ್ಲಿ ತಾ. 12ರಲ್ಲಿ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ಶ್ರೀ ಎ. ಜೆ. ಅಳ್ವೆಯವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಭಾವಚಿತ್ರ ಅನಾವರಣವನ್ನು ನೆರವೇರಿಸಿದರು.

ಮೂಲ್ಕಿ— ಇದೇ ತಾ. 19ರಲ್ಲಿ ಮೂಲ್ಕಿಯ ಶ್ರೀ ಪಿ. ಪಾಸ ಸೆಟ್ಟರ ಮನೆಯ ಸಮೀಪ ಒಕ್ಕಲೆಬ್ಬಿಸುವುದನ್ನು ಪ್ರತಿಭಟಿಸುವುದೆಂದು ಪ್ರದರ್ಶನ ಹೂಡಿದ ಸಾಲ್ವರನ್ನು ಮೂಲ್ಕಿ ಪೋಲೀಸಿನವರು ಬಂಧಿಸಿರುವರೆಂದು ತಿಳಿದುಬರುತ್ತದೆ.

ಪುತ್ತೂರು— ತಾ. 19ರಲ್ಲಿ ಅಖಿಲ ಕರ್ನಾಟಕ ಹರಿಜನ ಸಮ್ಮೇಲನವು ಬೋರ್ಡ್ ಶಾಲೆಯಲ್ಲಿ ಶ್ರೀ ಡಿ. ಎನ್. ಕೃಷ್ಣಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಮೈಸೂರು ವಿಧಾನ ಸಭೆಯ ಉಪಾಧ್ಯಕ್ಷ ಶ್ರೀ ಚೆನ್ನಿಗ ರಾಮಯ್ಯನವರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಸ್. ಗೋಪಾಲ ಸಾಲಿನ್ಸರು ಸ್ವಾಗತಭಾಷಣ ಮಾಡಿದರು. ಶ್ರೀ ಎ. ಕೃಷ್ಣಪ್ಪನವರು ಅತಿಥಿಗಳ ಪರಿಚಯ ಮಾಡಿದರು. ಉದ್ಘಾಟಕರೂ ಅಧ್ಯಕ್ಷರೂ ಹರಿಜನ ಸಮಸ್ಯೆಗಳನ್ನು ವಿವರಿಸಿದರು. ಅನಂತರ ಡಾ. ಕೆ. ನಾಗಪ್ಪಾಳ್ವ, ಶ್ರೀಗಳಾದ ಕೆ. ಆರ್. ಅನಾರ್, ಕೆ. ಕೆ. ಸಿ[illegible] ಡಾ. ಯು. ಪಿ. ಮಲ್ಯ ಮೊದಲಾದವರು ಮಾತನಾಡಿದರು.

ದೇಲಂಪಾಡಿ— ಶ್ರೀ ಗೋಪಾಲಕೃ[illegible] ಯಕ್ಷಗಾನ ಸಂಘದ ವಾರ್ಷಿಕೋತ್ಸವ[illegible] ತಾ. 17—5—56ರಲ್ಲಿ ಶ್ರೀ ಮರಕ್ಕಿಣಿ [illegible] ಕರನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ [illegible] ವೇರಿತು.

ಶ್ರೀ ಕೀ. ವ. ಕೇಶವರು ಸಂಘದ [illegible] ವಾಗಿ ಸುಸ್ವಾಗತವನ್ನು ಕೋರಿದರು. [illegible] ರಮಾನಂದ ಬನಾರಿಯವರು ವರದಿ ವಾಚ[illegible] ವನ್ನು ಮಾಡಿದರು. ಶ್ರೀ ಪುಂಡೂರು ಗೋ[illegible] ಲ ಕೃಷ್ಣ ಪುಣಿಂಚಿತ್ತಾಯರು, ಶ್ರೀ ಕೆ. [illegible] ಟ್ಟಣ್ಣ ಗೌಡರು ಹಾಗೂ ಶ್ರೀ ಗೋಪಾ[illegible] ಮಾಸ್ತರರು ಭಾಷಣಮಾಡಿದರು.

ಕುಂದಾಪುರ— ತಾ. 21ರಲ್ಲಿ ಕುಂದಾಪುರ ತಾಲೂಕು ಬೆಲ್ಲತಯಾರಕರ ಸಂಘಗಳ ಸಮೇಳನವನ್ನು ಮದ್ರಾಸು ಸರಕಾರ[illegible] ಕೃಷಿ ಮಂತ್ರಿಗಳಾದ ಶ್ರೀ ಎಂ. ಭಕ್ತವತ್ಸಲಂ ರವರು ಉದ್ಘಾಟಿಸಿದರು. ಅವರು ತ[illegible] ಭಾಷಣದಲ್ಲಿ ಪಾನನಿರೋಧದಿಂದಾಗಿ ಜ[illegible] ಗಾರ ಕಷ್ಟವನ್ನೂ, ಅದರಿಂದ ಅದ ಸತ್ತ[illegible] ಯೋಜನೆಗಳನ್ನೂ ವಿವರಿಸಿದರು. ಈ ಪಾ[illegible] ರೋಧದಿಂದಾಗಿ ಎಷ್ಟೋ ಮುತ್ತೇದಾರ[illegible] ಬಂದ ಕಷ್ಟವನ್ನು ಪರಿಹರಿಸಲು ಸರಕಾ[illegible] ಹಲವಾರು ಯೋಜನೆಗಳನ್ನು ಕೈಗೊಂ[illegible] ಯೆಂದರು. ಈ ಸಮ್ಮೇಳನದ ಅಧ್ಯಕ್ಷತೆ[illegible] ಯನ್ನು ಶ್ರೀ ಎಸ್. ಎನ್. ಸುವರ್ಣ ಎ[illegible] ಎಲ್. ಎ. ರವರು ವಹಿಸಿದ್ದರು. ಶ್ರೀ ಕೆ. [illegible] ಗ ಪೂಜಾರಿ ಯವರು ಸ್ವಾಗತಭಾಷಣ [illegible] ಡಿದರು. ಶ್ರೀಗಳಾದ ಎಂ. ಎಂ. ಹೆಗ್ಡೆಯವರು ವರದಿಯನ್ನೋದಿದರು. ಮತ್ತು ಮಂ[illegible] ಗಳಿಗೆ ಮನವಿಯೊಂದನ್ನು ಅರ್ಪಿಸಿದರು.

ಅದಿನ ಬೆಳಿಗ್ಗೆ ಮಂತ್ರಿಗಳು ಮೂಡಬಿ[illegible] ಸಾಣೂರು, ಮುದ್ರಾಡಿಗಳಲ್ಲಿಯ ಸಮ[illegible] ಮಂದಿರಗಳನ್ನು ಸಂದರ್ಶಿಸಿ, 'ಮೊಳಹಳ್ಳಿ ಬೋರ್ಡ್ ಹಾ. ಪ. ಶಾಲೆಯ ನೂತನ ಕಟ್ಟಡದ ಉದ್ಘಾಟನೆ ಗೈದರು. ನಂತರ ಹೊಂಬಾಡಿ ಮಂಡಾಡಿಯ ವಿವೇಕೋದಯ ಎಯಿಡೆಡ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡವನ್ನು ಉದ್ಘಾಟಿಸಿದರು. ಈ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ ರವರು ವಹಿಸಿದ್ದರು.

ಶ್ರೀ ವೈ. ಮಂಜಯ್ಯ ಶೆಟ್ಟಿ ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಕುಂದಾಪುರದ ಸರಕಾರಿ ಆಸ್ಪತ್ರೆಯ ಹೊಸ ವಿಭಾಗದ ಉದ್ಘಾಟನೆಯು ಮಂತ್ರಿಗಳಿಂದ ನೆರವೇರಿತು. ಶ್ರೀ ವೈ. ಮಂಜಯ್ಯ ಶೆಟ್ಟರ ಅಧ್ಯಕ್ಷತೆಯಲ್ಲಿ ಗಾಂಧಿ ಉಪವನದ ಉದ್ಘಾಟನೆಯು ಮಂತ್ರಿ ಶ್ರೀ ಭಕ್ತವತ್ಸಲಂ ರವರಿಂದ ನೆರವೇರಿತು.

ಬೊಂಬಾಯಿ - ಬೊಂಬಾಯಿಯ ದ. ಕ ಜಿಲ್ಲಾ ಬ್ರಾಹ್ಮಣರ ನಿವಾಸಿಗರು ನಗರದ ಸಾಯನ್ ಮಾತುಂಗ ಎಸ್ಟೇಟಿನ ಕ್ಷೇತ್ರದಲ್ಲಿ ಮೂರು ಲಕ್ಷ ರೂಪಾಯಿ ವೆಚ್ಚದಿಂದ ಕೃಷ್ಣ ದೇವಾಲಯ ಭವನ ಮತ್ತು ದ. ಕ. ಜಿಲ್ಲಾ ಬ್ರಾಹ್ಮಣ ನಿವಾಸಿಗಳಿಗಾಗಿ ವಸತಿ ಬ್ಲಾಕುಗಳನ್ನು ಸ್ಥಾಪಿಸಲು ನಿರ್ಧರಿಸಿದ್ದಾರೆ.

ದೇವಾಲಯ ಮತ್ತು ಭವನದ ಶಂಕುಸ್ಥಾಪನೆಯನ್ನು ತಾ. 13ರಲ್ಲಿ ಡಾ. ಎಮ್. ಆರ್. ರಾಯರು ನೆರವೇರಿಸಿದರು.

ಸತ್ಕಾರ ಸಮಾರಂಭ— ಉಡುಪಿ ಎಮ್. ಜಿ. ಎಮ್. ಕಾಲೇಜಿನಲ್ಲಿ ಕಲಿತು ಈಗ ಬೊಂಬಾಯಿಯಲ್ಲಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರಿಗೆ ಸತ್ಕಾರವಿತ್ತು ಗೌರವಿಸಿದರು. ಪ್ರಿನ್ಸಿಪಾಲರು ವಿದ್ಯಾರ್ಥಿಗಳನ್ನು ಆಶೀರ್ವದಿಸುತ್ತಾ, ನೀವು ಯಾವ ಪರಿಸ್ಥಿತಿಯಲ್ಲಿದ್ದರೂ ನಿಮ್ಮ ಕಾಲೇಜನ್ನು ಮರೆಯಬೇಡಿ ಎಂದರು.

ಅಖಿಲಭಾರತ ಸಂಸ್ಕೃತ ಸಾಹಿತ್ಯ ಸಮ್ಮೇಳನವು— ಜೂನ್ ತಿಂಗಳ ತಾ. 2ರಿಂದ 4ರ ವರೆಗೆ ಬೊಂಬಾಯಿಯಲ್ಲಿ ಜಗನ್ನಾಥ ಪುರಿ ಪೀಠದ ಶ್ರೀ ಭಾರತೀ ಕೃಷ್ಣತೀರ್ಥ ಶಂಕರಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗುವುದು. ಈ ಬಗ್ಗೆ ಸರ್ವ ಸಿದ್ಧತೆಗಳಾಗುತ್ತಿವೆ.

The Vijaya Bank, Ltd., Brahmavar.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು, ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಅಡವಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವದೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸಲು ವ ಬಡ್ಡಿಯನ್ನು ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ ಸದ್ರಿಯವರು ನಮ್ಮಲ್ಲಿ ಅಡವಿಟ್ಟ ನಗಗಳನ್ನು ಇದೇ ಬರುವ ತಾ 2-6-56ನೇ ಶನಿವಾರ ಅಪರಾಹ್ನ ಗಂಟೆ 2ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಸೊಬಲಗು ಬಡ್ಡಿ ಸಮೇತ 31-3-56ರ ವರೆಗೆ ರೂ.	ಆ.
784/54	ತೋಮಸ್ ಸೋಜ, ಜೋಸೆಫ್ ಸೋಜರ ಮಗ, ಬಾಗಿ ಬೆಟ್ಟು ಆರೂರು ಗ್ರಾಮ, ಪೋಸ್ಟು ಕುಂಜಾಲು	19	9
867/54	ಕೆ. ಮಹಾಬಲ ಮಧ್ಯಸ್ಥ, ನರಸಿಂಹ ಮಧ್ಯಸ್ಥರ ಮಗ, ಬೈಕಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ	113	15
1018/54	ರಾಮ ಗಾಣಿಗ, ನಾಗಪ್ಪ ಗಾಣಿಗರ ಮಗ, ಸೊನ್ನಗಾರ ಬೆಟ್ಟು, ನೀಲಾವರ ಗ್ರಾಮ, ಪೋಸ್ಟು ನೀಲಾವರ	16	6
320/55	N. ಶ್ರೀನಿವಾಸ ನಾಯ್ಕ, ನಾರ್ಣಪ್ಪ ನಾಯ್ಕರ ಮಗ, ಕಚ್ಚೂರು ಗ್ರಾಮ, ಪೋಸ್ಟು ಬಾರ್ಕೂರು	163	9
969/55	ಚಂದು ಪೂಜಾರಿ, ಬಚ್ಚ ಪೂಜಾರಿ ಅಳಿಯ, ಚೇರ್ಕಾಡಿ ಗ್ರಾಮ, ಪೋಸ್ಟು ಚೇರ್ಕಾಡಿ.	85	0
1053/54	ಅಣ್ಣಪ್ಪ ಸೆಟ್ಟಿ, ಕೃಷ್ಣಮ್ಮ ಸೆಡ್ತಿಯರ ಮಗ, ಹೊರೆಪಾಲು, ಹೇರೂರು ಗ್ರಾಮ, ಪೋಸ್ಟು ಬ್ರಹ್ಮಾವರ	40	7

ಬ್ರಹ್ಮಾವರ, 21-5-'56.

ಬಿ. ಬಾಸ್ಕರ ಸೆಟ್ಟಿ, ಏಜಂಟ್.

(೧ನೇ ಪುಟದಿಂದ)

ತವ್ಯಾನುಸಾರ ರೂಪಾಯಿಗೆ ಹದಿನೈದೂವರೆ ಆಣೆಗಳಷ್ಟು ಹೆಚ್ಚಿಸಿದರೆ, ಆಗ ಮಸೂದೆಯ ಉದ್ದೇಶ ಈಡೇರುದಷ್ಟೇ ಅಲ್ಲದೆ, ಸರಕಾರಕ್ಕೆ ಸಹ ಆದಾಯ ಸಿಗುವುದೆಂದು ಅವರು ತಿಳಿಸಿದರು.

ಪ್ರಧಾನ ಮಂತ್ರಿ ನೆಹರುಗಳು ರಾಜ್ಯಸಭೆಯಲ್ಲಿ ಈ ಮಸೂದೆಯ ಕುರಿತು ಮಾತನಾಡುತ್ತಾ ಇದರ ಉದ್ದೇಶವು ಸಹಾನುಭೂತಿಗೆ ಪಾತ್ರವಾಗಿದ್ದರೂ ಸರಕಾರ ಈ ಶಾಸನವನ್ನು ಕೈಗೊಂಡ ಮಾತ್ರಕ್ಕೆ ಉದ್ದೇಶವು ಕೈಗೂಡಲಾರದೆಂದೂ ಬದಲಿಗೆ, ನಾವೆಣಿಸಿದ ಕಲ್ಯಾಣತ್ವದ ಪರಿಣಾಮಗಳ ಸ್ಥಾನದಲ್ಲಿ ಸಮಾಜಕ್ಕೆ ಕಿರುಕುಳವನ್ನುಂಟು ಮಾಡುವ ದುಷ್ಪರಿಣಾಮಗಳೇ ಕಾಣಿಸಬಹುದೆಂದೂ ಅಭಿಪ್ರಾಯಪಟ್ಟರು.

ಮಸೂದೆಯು ಪ್ರಸ್ತಾಪಿಸಿದ ವಿಷಯದ ಬಗ್ಗೆ ಎರಡು ದೃಷ್ಟಿಯಿಂದ ವಿವೇಚನೆ ಮಾಡಬಹುದು: ನಿರ್ದಿಷ್ಟ ಪಡಿಸಿದ ಮಿತಿಯೊಂದಕ್ಕಿಂತ ಹೆಚ್ಚು ಉದ್ದವಾಗಿರುವ ಪ್ರತಿಯೊಬ್ಬನ ತಲೆಯನ್ನು ತುಂಡರಿಸುವುದೇ ಸಮಾಜ ವಾದವೆಂದು ಭಾವಿಸುವ ಅದರ ವಿವೇಚನೆಯೊಂದು ಬಗೆಯದು; ಈ ಸರಳವಾದ ರೀತಿಯಲ್ಲಿ ವಿಲಾಸರಹಿತ ಜೀವನವನ್ನು ನಡೆಸುವ ಆದರ್ಶ ಇನ್ನೊಂದು ಬಗೆಯದು. ನಾವು ಇವೆರಡರ ನಡುವೆ ಇದ್ದೇವೆ: ನಮ್ಮ ಮಟ್ಟಿಗೆ ಹೇಳುವುದಾದರೆ, ಭಾರತದಲ್ಲಿ ಸಮಾಜ ಘಾತಕ ರೀತಿಯಲ್ಲಿ ಯಾರನ್ನೂ ನಡೆಯಗೊಡುವುದು ಅಸಾಧ್ಯ ಆದಾಯ. ದಲ್ಲಿರುವ ಅಂತರವನ್ನು ನಿವಾರಿಸುವುದು ಸಹ ಅನಿವಾರ್ಯ. ಹಣಕ್ಕೆ ಸಮಾಜದಲ್ಲಿರುವ ಭೀಭತ್ಸಕರ ಹಾಗು ಜುಗುಪ್ಸಾವಹ ಸ್ಥಾನವನ್ನು ದೂರಪಡಿಸುವುದು ಸಹ ಅತ್ಯಾವಶ್ಯಕ. ಆದರೆ ಶಾಸನವಿಲ್ಲಿ ನಿಷ್ಪ್ರಯೋಜಕ—ಎಂದರು ನೆಹರು.

ಸಮಾಜವಾದವೆಂದರೆ ಬಡತನವಲ್ಲ—ಈ ಬಡತನದ ಸಮಾನ ಹಂಚಿಕೆಯೇ ನಾವು ಸಾಧಿಸಲು ಬಯಸುತ್ತಿರುವ ಆದರ್ಶವಲ್ಲ. ಸಮಾಜದ ವಶಕ್ಕೆ ನೀಡಬಹುದಾದಷ್ಟು ಯೋಗ್ಯತೆಯುಳ್ಳ ವಸ್ತುವಿರುವಲ್ಲಿ ಮಾತ್ರ ಸಮಾಜವಾದ ಹಿತಕರ: ನಮಗೆ ಸಂಪತ್ತು ಬೇಕು: ಸಂಪತ್ತನ್ನು ಉತ್ಪಾದಿಸಿ ಕೊಡುವ ಸಾಧನಗಳು ಬೇಕು: ಇವೆಲ್ಲ ಕೆಲವೇ ವಿಶಿಷ್ಟ ಹಿತಾಸಕ್ತಿಯುಳ್ಳ ವ್ಯಕ್ತಿಗಳಲ್ಲಿ ಸಿಹಿತವಾಗಿರದೆ, ಸಮಾಜಾಧಿಷ್ಠಿತವಾಗಿರಬೇಕು. ಆದುದರಿಂದ ನಮ್ಮ ದೇಶದಲ್ಲಿ ಹೆಚ್ಚು ಸಂಪತ್ತು ಉಂಟಾಗುವಂತೆ ಹೆಚ್ಚು ಉತ್ಪಾದನೆಯನ್ನು ಮಾಡುವುದೂ ಆ ಉತ್ಪಾದನೆ ಮತ್ತು ಸಂಪತ್ತಿನ ಸಮಾನ ವಿತರಣೆಗಾಗಿ ಶ್ರಮಿಸುವುದೂ ಶುಭಕರ.

ಹಣವುಳ್ಳವರಿಗೆ ಮಾತ್ರ ಪ್ರಗತಿಯ ಅವಕಾಶಗಳು ಲಭ್ಯವಾಗುತ್ತವೆ— ಉಳಿದವರಿಗಲ್ಲ ಎನ್ನುವ ವಾದದ ಕುರಿತು ನೆಹರುಗಳು ಹೀಗೆಂದರು: ನಮ್ಮ ದೇಶದ ಪ್ರತಿಯೊಬ್ಬನಿಗೂ ದೈಹಿಕ, ಮಾನಸಿಕ, ಬೌದ್ಧಿಕ ಹಾಗೂ ಆಧ್ಯಾತ್ಮಿಕ ವಿಕಾಸವನ್ನು ಹೊಂದಲು ಸಮಾನಾವಕಾಶವಿರಬೇಕೆಂಬುದು ಒಪ್ಪತಕ್ಕ ಮಾತು. ಆದರೆ ನಾವಿದನ್ನು ಸಾಧಿಸಲು ಸಂಪತ್ತು ಬೇಕೇ ಬೇಕು. ಮಿತ ವ್ಯಯವನ್ನು ಮಾಡಬಹುದು; ಆದರೆ ಇಷ್ಟರಿಂದಲೇ ಸಂಪತ್ತು ಗಣನೀಯವಾಗಿ ಹೆಚ್ಚಿಕೊಳ್ಳಲಾರದು. ನಾವೀಗ ಹೆಚ್ಚು ಸಂಬಳ ಅಥವಾ ಆದಾಯ ಹೊಂದಿದವರ ವರಮಾನವನ್ನು ಮಿತಿಗೊಳಪಡಿಸುವುದರಿಂದ ಮಾನಸಿಕ ಸಂತೋಷವನ್ನು ಪಡೆಯಬಹುದು, ಹೊರತು, ಅದಕ್ಕಿಂತ ಹೆಚ್ಚು ಪರಿಣಾಮಕಾರಿಯಾದ ಸಂಪತ್ತಿನ ಉತ್ಪಾದನೆಯೆಂಬ ಕೆಲಸವನ್ನು ಇಷ್ಟರಿಂದಲೇ ಮಾಡಿದಂತಾಗುವುದಿಲ್ಲ. ಆರ್ಥಿಕ ಪರಿಸ್ಥಿತಿಯು ಇಷ್ಟರಿಂದಲೇ ಸುಧಾರಣೆಯಾಗಲಾರದು—ಬದಲಿಗೆ ಅದು ಕೆಡಲೂ ಬಹುದು. ಆದುದರಿಂದ ನಾವು ಮೊದಲಿಗೆ ಎಲ್ಲರ ಜೀವನ ಮಟ್ಟವನ್ನು ಎತ್ತರಿಸಿಕೊಳ್ಳಲು ಶಕ್ತಿಯನ್ನು ನೀಡುವ ಸಂಪತ್ತಿನ ಉತ್ಪಾದನೆಗೆ ಹೆಚ್ಚು ಮಹತ್ವ ಕೊಡಬೇಕು— ಉಳಿದೆಲ್ಲವೂ ಗೌಣ.

ಕೊಂಡಾಡಿ ಸತ್ಯಾಗ್ರಹದ ಕುರಿತು ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಪ್ರಕಟಣೆ

ಈಗ ಕೊಂಡಾಡಿಯಲ್ಲಿ ಜರಗುತ್ತಿರುವ ಸತ್ಯಾಗ್ರಹಕ್ಕೆ ನನ್ನ ಹೆಸರನ್ನು ಅನಾವಶ್ಯಕವಾಗಿ ಎಳೆದುಕೊಳ್ಳಲಾಗಿಯದೆ. ಶ್ರೀಮತಿ ಗೌರಮ್ಮನವರು ನನ್ನ ಪಕ್ಷಲಾಗಿರಲಿಲ್ಲ ನಮ್ಮ ಕುಟುಂಬದ ಆಸ್ತಿ ವಿಭಾಗವು ಸುಮಾರು ಹತ್ತು ವರುಷಗಳ ಹಿಂದೆ ಆಗಿದ್ದು ನಾವು ನಮ್ಮ ಆಸ್ತಿಗಳನ್ನು ಪ್ರತ್ಯಪ್ರತ್ಯೇಕ ಅನುಭೋಗಿಸಿಕೊಂಡು ಬರುತ್ತಿದ್ದೇವೆ. ಅಲ್ಲದೆ ನಮ್ಮ ಕುಟುಂಬದೊಳಗೆ ಪಾಲಾದ ಲಾಗಾಯ್ತು ನಾನು ಇತರ ಮೆಂಬರರಿಗಿಂತ ಪ್ರತ್ಯೇಕವಾಗಿ ವಾಸಿಸಿಕೊಂಡು ಬರುವದು ಜನರಿಗೆ ತಿಳಿದ ವಿಷಯವಾಗಿದೆ. ಗೌರಮ್ಮನವರು ಬೇಸಾಯ ಮಾಡುತ್ತಿದ್ದ ಆಸ್ತಿ ನನ್ನ ತಾಯಿಯ ಪಾಲಿಗೆ ಹೋಗಿರುತ್ತದೆ.

ಸತ್ಯ ಸಂಗತಿ ಹೀಗಿರುವಾಗ ಬರೇ ರಾಜಕೀಯ ಬಣ್ಣವನ್ನು ಕೊಡುವ ಉದ್ದೇಶದಿಂದ ಸತ್ಯಾಗ್ರಹವನ್ನು ನಾನು ಪ್ರತ್ಯೇಕವಾಗಿ ವಾಸಿಸುತ್ತಿರುವಲ್ಲಿ ಮಾಡುತ್ತಿದ್ದಾರೆ, ಅಲ್ಲದೆ ಗೌರಮ್ಮನವರು ನನ್ನ ಪಕ್ಷಲಾಗಿದ್ದರೆಂದು ಕೂಡಾ ಪ್ರಕಟವಾಗುತ್ತಲಿದೆ.

ಶ್ರೀಮತಿ ಗೌರಮ್ಮನವರು ಬೇಸಾಯ ಮಾಡುತ್ತಿದ್ದ ಆಸ್ತಿ ನನ್ನ ಅಧಿಕಾರದೊಳಗಿಲ್ಲದಿರುವದರಿಂದಲೂ, ಆ ವಿವಾದದಲ್ಲಿ ನನ್ನ ಕೈವಾದವೇನೂ ಇಲ್ಲದಿರುವದರಿಂದಲೂ, ಈ ಸತ್ಯಾಗ್ರಹಕ್ಕೂ ನನಗೂ ಯಾವ ರೀತಿಯ ಸಂಬಂಧವಿಲ್ಲವೆಂದು ಈ ಮೂಲಕ ತಿಳಿಯಪಡಿಸುತ್ತೇನೆ. ಈ ವಿಚಾರವಾಗಿ ಕೆಲವು ಮಹನೀಯರ ಅಪೇಕ್ಷೆ ಪ್ರಕಾರ ನಾನು ಒಬ್ಬ ಸಾರ್ವಜನಿಕ ವ್ಯಕ್ತಿಯಾಗಿ, ಆ ವಿವಾದವನ್ನು ನ್ಯಾಯವಿದ್ದಂತೆ ತೀರ್ಮಾನ ಮಾಡಿಕೊಳ್ಳಲು ಸಂಬಂಧಪಟ್ಟವರಿಗೆ ಈ ಮೊದಲೇ ವಿನಂತಿ ಮಾಡಿಕೊಂಡಿರುವ ಸಂಗತಿಯನ್ನು ಕೂಡಾ ತಿಳಿಸಲಿಚ್ಛಿಸುತ್ತೇನೆ.

ಬಿ. ಕೃಷ್ಣಯ್ಯ ಹೆಗ್ಡೆ.

16—5—1956.

ಕನ್ನಡದಲ್ಲಿ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5—1955).

ಹೈಸ್ಕೂಲುಗಳ IV ಮತ್ತು Vನೇ ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯ ಮಂಜೂರಾತಿ ಪಡೆದಿದೆ.

ಪುಟಗಳು: ೧೫೮ ಬೆಲೆ: ರೂ. ೧—೪—೦

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

ಇದು ಕನ್ನಡ ಸಾರಸ್ವತ ಲೋಕಕ್ಕೆ ಬಹು ಅಮೂಲ್ಯವಾದ ಕಾಣಿಕೆ. ಕನ್ನಡ ಜನತೆ, ಅದರಲ್ಲೂ ವಿದ್ಯಾರ್ಥಿ ವೃಂದ, ಇಂಥ ಪುಸ್ತಕ ಪಡೆಯಲು ಪುಣ್ಯ ಮಾಡಿರಬೇಕು. ಕಾದಂಬರಿ ಪ್ರಿಯರಾದ ವಾಚಕರು ಪ್ರಯತ್ನ ಪೂರ್ವಕವಾಗಿ ಈ ಪುಸ್ತಕದ ಕಡೆ ಗಮನ ಹರಿಸಬೇಕು, ಹಾಲಿನ ಸಾರವನ್ನೆಲ್ಲ ಭಟ್ಟಿ ಇಳಿಸಿದ ಹಾಲು ಖೋವದಂತಿದೆ ಇಲ್ಲಿಯ ವಿಷಯ ಸಂಪತ್ತು.

—ಜನಪ್ರಗತಿ, ಬೆಂಗಳೂರು.

ಓದುವುದಕ್ಕೆ ಪ್ರಾರಂಭಿಸಿದರೆ ಮುಗಿಸದೆ ಕೆಳಗಿಡಬಾರದ ಕತೆ, ಕಾದಂಬರಿಗಳಿರಬಹುದು. ಆ ಮಟ್ಟಕ್ಕೆ ಪ್ರಬಂಧಗಳ ಪುಸ್ತಕಗಳಿರುವುದು ಕಡಿಮೆ. ಆದರೆ ಈ ಪುಸ್ತಕ ಅಂಥ ಶಕ್ತಿ ಪಡೆದಿದೆ. ಇಂಥ ಪುಸ್ತಕಗಳಿಂದ ಕನ್ನಡ ಓದುಗರಿಗೆ ತುಂಬ ಉಪಕಾರವಾಗುತ್ತದೆ. ಕನ್ನಡ ಸಾಹಿತ್ಯ ಭಂಡಾರಕ್ಕೆ ಈ ಪುಸ್ತಕ ಒಂದು ಭೂಷಣ.

--ಪ್ರಪಂಚ, ಹುಬ್ಬಳ್ಳಿ.

ಜೀವನದ ಪ್ರಸಂಗಾನುಭವಗಳನ್ನು ನೀತಿ ಮತ್ತು ಸಿದ್ಧಾಂತದ ಒರೆಗಲ್ಲಿಗೆ ಹಚ್ಚಿಕೊಂಡು ಜೀವನ ದರ್ಶನವನ್ನು ಮಾಡಿಕೊಂಡ ಸನ್ನಿವೇಶಗಳ ಚಿತ್ರಣವೇ ಈ ಪುಸ್ತಕ.

—ಪ್ರಜಾಮತ, ಬೆಂಗಳೂರು.

ಪುಸ್ತಕದ ಭಾಷೆ ಚೆನ್ನಾಗಿದೆ; ಹೇಳಬೇಕಾದುದನ್ನು ಬಹಳ ಸುಂದರವಾಗಿ ಲೇಖಕರು ಹೇಳಿದ್ದಾರೆ. ಒಂದೊಂದು ಪ್ರಬಂಧಕ್ಕೂ ಮುಂಚಿತವಾಗಿ ಅದಕ್ಕೆ ಸಂಬಂಧ ಪಟ್ಟಂತೆ ಒಂದು ಸಣ್ಣ ಕತೆಯನ್ನು ಕೊಡಲಾಗಿದೆ. ಇದರಿಂದ ಪ್ರಬಂಧಕ್ಕೆ ಒಂದು ಒಳ್ಳೆಯ ಮುನ್ನುಡಿಯೂ ಆ ಪ್ರಬಂಧವನ್ನು ಓದಲು ಬೇಕಾದ ಮನೋಧರ್ಮವೂ ಸಿಗುತ್ತದೆ.

— ನವಭಾರತ ಮಂಗಳೂರು.

ಬದುಕಿನ ಬಂಗಾರಕ್ಕೆ ಅಂಟಿಕೊಂಡಿರ ಬಹುದಾದ ಕಿಲುಬನ್ನು ತಿಕ್ಕಿ ಅದನ್ನು ತಳತಳಿಸುವಂತೆ ಮಾಡುವ ಬಗೆ ಹೇಗೆಂದು ಲೇಖಕರು ಇಲ್ಲಿ ತಿಳಿಸುತ್ತಾರೆ. ವ್ಯಾವಹಾರಿಕ ತತ್ವಜ್ಞಾನವನ್ನು ಬಹಳ ಸೊಗಸಾಗಿ ಈ ಪ್ರಬಂಧಗಳು ಪ್ರತಿಪಾದಿಸುತ್ತವೆ. ಪ್ರತಿ ಪ್ರಬಂಧದ ಪ್ರಾರಂಭದಲ್ಲಿ ಕೊಟ್ಟ ಆಖ್ಯಾಯಿಕೆಯೂ ಪುಸ್ತಕದ ತುಂಬೆಲ್ಲ ಬರುವ ಮಹಾಪುರುಷರ ಜೀವನಪ್ರಸಂಗಗಳೂ ಕುಮಾರಸ್ವಾಮಿಯವರ ವಿಶಾಲವಾದ ಓದಿಗೆ ನಿದರ್ಶನವಾಗಿವೆಯಲ್ಲದೆ ಅವರ ಲೇಖನಿಗೆ ಒಂದು ಅಪರೂಪವಾದ ಮೆರುಗನ್ನೂ ಕೊಡುತ್ತವೆ. ಇಂಥ ತಿಳಿಯಾದ ವ್ಯಾವಹಾರಿಕ ವಿವೇಕವನ್ನು ಕಾಂತಾಸಂಮಿತಿಯಿಂದ ಬೋಧಿಸುವ ಪುಸ್ತಕ ಕನ್ನಡದಲ್ಲಿ ಇದೇ ಮೊದಲೆಂದರೆ ತಪ್ಪಾಗದು. ನಾಗರಿಕತೆಯ ಪ್ರಭಾವದಿಂದ ಹೆಚ್ಚು ಜಟಿಲವಾಗುತ್ತಿರುವ ಜೀವನವನ್ನು ಎದುರಿಸಿ ಅಪ್ರತಿಭರಾಗುತ್ತಿರುವ ಸಾಮಾನ್ಯ ಜನರಿಗೆ ಇದು ತುಂಬ ಉಪಯುಕ್ತವಾದ ಪುಸ್ತಕ.

—ಕರ್ಮವೀರ ಹುಬ್ಬಳ್ಳಿ.

ಈ ಬರೆಹಗಳ ಒಳಗೆ ಅಡಗಿರುವ ತತ್ವ ಗಂಭೀರವಾದುದು. ಆದರೆ ಅದನ್ನು ವಿವರಿಸಿದ ರೀತಿ ಆಕರ್ಷಕವಾಗಿದೆ; ಮನೋರಂಜಕವಾಗಿದೆ. ಪ್ರತಿಯೊಂದು ಬರೆಹದ ಆರಂಭದಲ್ಲಿ ಅದರ ತಿರುಳನ್ನು ಸಂಕೇತಿಸುವ ಪುಟ್ಟ ಕಥೆ, ಸುಲಲಿತವಾದ ಶೈಲಿ, ಮನಸ್ಸನ್ನು ಸೆರೆಹಿಡಿಯುವಂಥ ನಿರೂಪಣೆಗಳಿಂದಾಗಿ ಈ ಕೃತಿ ಎಲ್ಲ ಬಗೆಯ ಓದುಗರಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. ಹಳಸಿದ ವಸ್ತುಗಳ ಕಥೆ ಕಾದಂಬರಿಗಳಿಂದ ದಣಿದವರಿಗೆ ಈ ಬರೆಹಗಳು ಉಲ್ಲಾಸ ನೀಡುತ್ತವೆ.

—ರಾಷ್ಟ್ರಮತ, ಮಂಗಳೂರು.

ಒಂದು ಒಳ್ಳೆಯ ಪುಸ್ತಕವನ್ನು ಓದಿದಾಗ ನಾನು ಹಿಗ್ಗಿದೆ ಎಂದು ಹೇಳುವ ಮಾತಿಗೆ ಇದು ಯೋಗ್ಯ ಉದಾಹರಣೆ. ಜಟಿಲ, ಕುಟಿಲತನವಾದ ಬದುಕಿನ ಪದರು ಪದರುಗಳನ್ನು ಬಿಚ್ಚಿ ಸಮಸ್ಯೆಗಳನ್ನು ಕೆದಕಿ, ಒಂದು ಸಿದ್ಧಾಂತಕ್ಕೆ ಬರುವಲ್ಲಿ ಲೇಖಕರ ವಿಶಾಲ ಅನುಭವ, ಸೂಕ್ಷ್ಮ ದೃಷ್ಟಿ, ತರ್ಕ ಸರಣಿ, ಕಾವ್ಯಮಯ ಭಾಷೆ ಇವು ಇದನ್ನು “ಕನ್ನಡದ ಒಂದು ಹೊಸ ಬಗೆಯ ರಚನೆ” ಯನ್ನಾಗಿ ಮಾಡಿವೆ. ಶ್ರೀ ಕುಮಾರಸ್ವಾಮಿಯವರು ಹೊಸ ಹಾದಿ ತುಳಿದಿದ್ದಾರೆ. ಕೆಲವರಾದರೂ ಹಿಂಬಾಲಿಸಬಹುದಾದ ನವ್ಯ ಪಥ ಹಿಡಿದಿದ್ದಾರೆ. ರಸಮಯವಾದ, ವೈವಿಧ್ಯ ಪೂರ್ಣವಾದ ಪುಟ್ಟ ಪುಟ್ಟ ಕಥೆಗಳು ಈ ಪ್ರಬಂಧಗಳ ನವೀನತೆಯ ಜೋಗುಳ ಹೇಳುತ್ತವೆ. ಪ್ರಬಂಧದ ವಸ್ತುವನ್ನು ಹಿಂಜಿ, ಸಮರ್ಥಿಸಿ, ತರ್ಕಿಸುವಲ್ಲಿ ಲೇಖಕರ ನಾಲ್ಕು ದಿಟ್ಟಿನ ನೋಟವನ್ನು ಕಂಡು ಇವರ ‘ಬಹುಶ್ರುತಿ’ಗೆ ಆಶ್ಚರ್ಯ ಪಡುತ್ತೇವೆ. ಶೈಲಿ ಕಾವ್ಯಮಯವೂ ಸರಳವೂ ಆಗಿದೆ. ಸಣ್ಣ ಸಣ್ಣ ವಾಕ್ಯಗಳು ಪುಟ್ಟ ಮಕ್ಕಳು ಪುಟ ಪುಟನೆ ಓಡಾಡಿದಂತಹ ಅನುಭವವನ್ನು ತರುತ್ತವೆ. ಸರಳ ನುಡಿ, ವಿಚಾರ ವೈಖರಿಗಳಿಗೆ ಒಪ್ಪವಿಟ್ಟಂತೆ, ಗಾದೆಮಾತುಗಳನ್ನೂ ಅನುಭವದ ನುಡಿಗಳನ್ನೂ ಲೀಲಾಜಾಲವಾಗಿ ಬಳಸಿದ್ದಾರೆ. ಇದೊಂದು ವ್ಯವಹಾರ ಜ್ಞಾನದ ಪುಟ್ಟ ವಿಶ್ವಕೋಶ.

—ಪುಸ್ತಕ ಪ್ರಪಂಚ, ಮೈಸೂರು.

When it is recognised that the orderly progress of any State depends upon each individual conducting oneself with a full realisation of one's duties and obligations, the usefulness of this publication will be evident.

—The Hindu, Madras.

ಪ್ರತಿಗಳು ಸಿಕ್ಕುವ ಸ್ಥಳ:

(1) ನವಯುಗ ಪ್ರೆಸ್, ಉಡುಪಿ.

(2) ನವಭಾರತ ಪುಸ್ತಕ ಭಂಡಾರ, ಉಡುಪಿ.

ಬುದ್ಧ ಪರಿನಿರ್ವಾಣ ಜಯಂತ್ಯುತ್ಸವ

(೩ನೇ ಪುಟದಿಂದ)

ಮುಟ್ಟಲು ಇರುವ ಏಕಮಾತ್ರ ಮಾರ್ಗ.

*

ಕೆಲವು ಪಾಶ್ಚಾತ್ಯ ವಿದ್ವಾಂಸರಿಂದ ಪ್ರೋತ್ಸಾಹನೆಗೊಂಡ ಅಪಾಯಕಾರಿ ನಂಬಿಕೆಯೊಂದು ಬುದ್ಧದೇವರ ವಿಷಯದಲ್ಲಿ ಇರುವಂತೆ ಕಾಣುತ್ತದೆ—ಈ ನಂಬಿಕೆಗೊಳಪಟ್ಟು, ಹಿಂದೂ ಮತವೇನನ್ನು ಪ್ರತಿಪಾದಿಸಿತೋ ಅದಕ್ಕಿಂತ ತೀರ ಭಿನ್ನವಾದ ಅಥವಾ ಅದಕ್ಕೆ ತೀರ ಘಾತಕವಾದ ತತ್ತ್ವಗಳನ್ನು ಬುದ್ಧನು ಪ್ರತಿಪಾದಿಸಿದನೆಂದೂ ಆತನು ದೇವರ ಅಸ್ತಿತ್ವವನ್ನು ಅಲ್ಲಗಳೆದನೆಂದೂ ಹೇಳುವವರು ಚೆನ್ನಾಗಿ ವಿಚಾರಮಾಡಿಲ್ಲವೆನ್ನಬೇಕಾಗುತ್ತದೆ.

ಬುದ್ಧನು ವಾಸ್ತವವಾಗಿ ಹಿಂದೂ ಮತವನ್ನೆಂದೂ ಅಲ್ಲಗಳೆದಿಲ್ಲ. ತನಗೆ ಹಿಂದೆ ಆಗಿ ಹೋಗಿದ್ದ ವ್ಯಾಸರಂತೆ, ತನ್ನ ಬಳಿಕ ಜನ್ಮವೆತ್ತಿದ ಶಂಕರರಂತೆ, ಬುದ್ಧನೂ ಹದಿನಾರಾಣೆ ಹಿಂದುವೇ ಆಗಿದ್ದನು.

ಅನೇಕ ಸಂದರ್ಭಗಳಲ್ಲಿ ಈ ಗುರುವು ಪ್ರಕೃತಿಯ ಅಂತಿಮ ವೈಭವವನ್ನು ವರ್ಣಿಸಲು ನಿರಾಕರಿಸಿದನೆಂಬುದು ನಿಜ. ಆತ್ಮ ಮತ್ತು ಪರಮಾತ್ಮ ಸಂಬಂಧಿಯಾದ ಪ್ರಶ್ನೆಗಳನ್ನು ಕೇಳಿದಾಗಲೆಲ್ಲ ಬುದ್ಧದೇವನು ಸುಮ್ಮನಿರುತ್ತಿದ್ದನೆಂಬುದೂ ನಿಜ.

ಬುದ್ಧದೇವನ ಮೌನವೇ ನಿರಾಕರಣೆಯಾಗಲಾರದು. ಆತನು ಉದ್ದೇಶಪೂರ್ವಕವಾಗಿ ಈ ತೀರ ಕೊನೆಯ ಸಮಸ್ಯೆಗಳ ವಿಷಯದಲ್ಲಿ ಮೌನ ಧಾರಣೆಯನ್ನು ಮಾಡಿದವನೆಂದು ಭಾವಿಸುವುದೇ ಲೇಸು. ಅವರ ಮನೋಭಾವವನ್ನು ನಾವು ಹೀಗೆ ವರ್ಣಿಸಬಹುದು—

"ಓಂ ಅಮಿತಾಯ!

"ಯಾವುದನ್ನು ಅಳೆಯುವುದು ಅಸಾಧ್ಯವೋ ಅದನ್ನು ಮಾತಿನಿಂದ ಅಳೆಯಲು ಹೋಗಬೇಡ;

"ಎಷ್ಟು ಮುಳುಗಿದರೂ ನೆಲ ಕಾಣಲಾಗದ ವಿಚಾರ ಧಾರೆಯಲ್ಲಿ ಮುಳುಗಲು ಹೋಗಬೇಡ;

"ಇವುಗಳ ಕುರಿತು ಯಾರು ಪ್ರಶ್ನೆ ಕೇಳಿದರೂ ತಪ್ಪನ್ನೇ ಮಾಡುತ್ತಾರೆ; ಯಾರು ಉತ್ತರವನ್ನು ಹೇಳ ಹೊರಟರೂ ತಪ್ಪನ್ನೇ ಮಾಡುತ್ತಾರೆ; ಆದುದರಿಂದ ಏನೂ ಕೇಳಬೇಡ; ಹೇಳಬೇಡ."

ನಾವು ಇಷ್ಟರಿಂದಲೇ ಬುದ್ಧದೇವನ ಮನೋಭಾವ ಹೇಗಿತ್ತೆಂದು ಗ್ರಹಿಸಬಹುದು. ತನ್ನಿಂದ ಎಷ್ಟೆಲ್ಲ ರೀತಿಯಲ್ಲಿ ಸಾಧ್ಯವೋ ಅಷ್ಟು ಬಗೆಯಿಂದ ಈ ಗುರುವು ಆಧ್ಯಾತ್ಮಿಕ ತಪಶ್ಚರ್ಯೆ ಮತ್ತು ತತ್ತ್ವ ಜಿಜ್ಞಾಸೆಯಿಂದ ಜನರನ್ನು ಪರಾವೃತ್ತರನ್ನಾಗಿ ಮಾಡಿ ಅವರಿಂದ ಸುಲಭದಲ್ಲಿ ಅನುಸರಿಸಲ್ಪಡಬಹುದಾದ ಜೀವನದ ನಡವಳಿಕೆಗಳಿಗೆ ಮಹತ್ವವನ್ನು ಕೊಡಲು ಹೋದನು. ಧರ್ಮ ಸಮ್ಮತವಾದ ಜೀವನವನ್ನು ನಡೆಸಿರೆಂದು ಹೇಳುವ ಸುಲಭದ ದಾರಿಯನ್ನೆ ಆತನು ಅನುಸರಿಸಿದನು:- ಎಲ್ಲಿ, ಏನು, ಎಲ್ಲಿಂದ ಎಂಬಿತ್ಯಾದಿ ಕೇವಲ ಕುತೂಹಲದ ಪ್ರಶ್ನೆಗಳಿಂದ ಮತ್ತವುಗಳ ಉತ್ತರಗಳಿಂದ ಮನುಷ್ಯನ ಮನಸ್ಸು ಕಲ್ಪನಾಲೋಕದಲ್ಲಿ ವಿಹರಿಸುವಂಥ ಅನುಭವವನ್ನು ಹೊಂದದೆ, ಅನುಭವಿಸಿ ಸುಖಿಸಬಹುದಾದ ನಿತ್ಯಜೀವನದ ತತ್ತ್ವಗಳ ಕಡೆಗೆಯೇ ಹೆಚ್ಚು ಗಮನವನ್ನು ಮನಸ್ಸುಕೊಡುವಂತೆ ಮಾಡುವುದೇ ಈ ಗುರುವಿನ ಮುಖ್ಯೋದ್ದೇಶ.

ಭೌತಿಕ ಮಟ್ಟಕ್ಕಿಂತಲೂ ಹೆಚ್ಚಿನ ಯೋಗಶಕ್ತಿಯ ಅದ್ಭುತ ಪ್ರದರ್ಶನವನ್ನು ತನ್ನ ಶಿಷ್ಯಂದಿರ ಮುಂದೆ ಮಾಡುವುದು ಬುದ್ಧನಿಗೆ ಇಷ್ಟವಿರಲಿಲ್ಲ. ಅದ್ಭುತಗಳನ್ನು ಮಾಡಿತೋರಿಸುವ ಅಭ್ಯಾಸವನ್ನು ಅವನು ಮೆಚ್ಚುತ್ತಿರಲಿಲ್ಲ. ಭವಿಷ್ಯ ಹೇಳುವುದು, ಪ್ರಿಯ ವಾಕ್ಯವನ್ನಷ್ಟೆ ಆಡುವುದು, ದೈವಶಕ್ತಿಗಳ ಅನುಗ್ರಹ ಸಂಪಾದಿಸಿ ಅವುಗಳನ್ನು ಪ್ರದರ್ಶಿಸುವುದು-ಇಂಥವೆಲ್ಲ ಕೆಳಮಟ್ಟದ ಕೆಲಸಗಳು: ಇವುಗಳಿಂದ, ಸಂತೋಷದಲ್ಲಿರುವವರ ಕುರಿತು ಪ್ರೀತಿ, ಸಂಕಷ್ಟದಲ್ಲಿರುವವರ ಕುರಿತು ಕರುಣೆ, ಸದ್ವರ್ತನೆಯನ್ನಿಟ್ಟುಕೊಂಡವರ ಬಗ್ಗೆ ಸಂತೋಷ, ಕುತಂತ್ರಿಗಳ ಬಗ್ಗೆ ಸಮಚಿತ್ತತೆ ಪ್ರಧಾನವಾಗಿರುವ ನಿಜವಾದ ಆತ್ಮವಿಕಾಸಕ್ಕೆ ಆತಂಕವುಂಟಾಗುತ್ತದೆ; ಚ್ಯುತಿ ಬರುತ್ತದೆ ಎಂದು ಬುದ್ಧದೇವನ ಅಭಿಪ್ರಾಯ.

ನಡತೆಯ ಈ ಸ್ವರ್ಣಸೂತ್ರವನ್ನು ಹಾಕಿಕೊಟ್ಟ ಬುದ್ಧದೇವನು ಮನವೊಲಿಸಬಲ್ಲ ಪ್ರತಿಪಾದನಾ ಕ್ರಮದಿಂದಲೂ ಪರಿಪೂರ್ಣ ಶಾಂತಿ, ಗಹನವಾದ ತಿಳಿವಳಿಕೆ ಮತ್ತು ವ್ಯಾಪಕವಾದ ಕರುಣೆಗಳಿಂದ ಕೂಡಿದ ವ್ಯಕ್ತಿತ್ವದ ಪ್ರಭಾವದಿಂದಲೂ ತನ್ನ ಬೋಧನೆಯನ್ನು ಎಲ್ಲ ಜನರ ಬಳಿಗೂ ಮುಟ್ಟಿಸಲು ಸಮರ್ಥನಾದನು.

ತನ್ನ ೩೫ನೇ ವಯಸ್ಸಿನಲ್ಲಿ ಬುದ್ಧನೆನಿಸಿದ ಈ ಗುರುವು ಮುಂದೆ ಕುಶೀ ನಗರದಲ್ಲಿ ಮಹಾಪರಿನಿರ್ವಾಣವನ್ನು ಹೊಂದುವವರೆಗಿನ ೪೫ ವರ್ಷಗಳ ದೀರ್ಘ ಕಾಲದವರೆಗೆ ನಿರಂತರ ಪ್ರವಾಸಗೈಯುತ್ತಾ ಸಂಭಾಷಣೆಗಳಿಂದಲೂ ಉಪದೇಶಗಳಿಂದಲೂ ತನ್ನ ಸಂದೇಶವನ್ನು ನಾಲ್ದೆಸೆಗೆ ಮುಟ್ಟಿಸಿದನು.

ಗಯೆ, ನಲಂದ, ರಾಜಗೃಹ, ಪಾಟಲಿಪುತ್ರಗಳಲ್ಲಿ ಅವರ ಉಪದೇಶದ ಪರಿಣಾಮ ಅತ್ಯಧಿಕವಾಯಿತು. ವೈಶಾಲಿ ಮತ್ತು ಕೌಶಾಂಬಿಗಳಲ್ಲಿಯೂ ಅವರು ಕೆಲವು ಕಾಲ ನೆಲಸಿದರು. ತನ್ನ ಕೊನೆಯ ೨೧ ವರ್ಷಗಳಲ್ಲಿ ಅವರು ಅನುಯಾಯಿಗಳಿಗಾಗಿ ಶಿಸ್ತಿನ ಶಾಸನಗಳನ್ನು ಕ್ರೋಢೀಕರಿಸಲೂ ಪ್ರಯತ್ನಿಸಿದರು. ಉಚ್ಚ-ನೀಚ ಭೇದಭಾವವಿಲ್ಲದೆ ಎಲ್ಲರೂ ಈ ಗುರುವನ್ನು ಆಶ್ರಯಿಸಿ ವಿಮೋಚನೆಯ ಮಾರ್ಗವೇನೆಂದು ತಿಳಿದರು. ತಪೋಧನರಾದ ಬ್ರಾಹ್ಮಣರು, ಕ್ಷತ್ರಿಯ ರಾಜರು, ಸಂಪತ್ಸಮೃದ್ಧಿಯುಳ್ಳ ವೈಶ್ಯರು, ಸೇವಾಪರಾಯಣರಾದ ಶೂದ್ರರು, ಹೆಚ್ಚೇಕೆ, ವೈಶಾಲಿಯ ಅಮರಪಾಲಿಯಂಥ ರಾಜನರ್ತಕಿಯರು ಸಹ ಬುದ್ಧದೇವನ ಉಪದೇಶ ವಾಕ್ಯಗಳಿಂದ ಪ್ರಭಾವಿತರಾದರು.

*

ಬುದ್ಧಧರ್ಮವು (ಸ್ವತಃ ಈ ಗುರುವೇ ಒಮ್ಮೆ ಹೇಳಿದ್ದಂತೆ) ಸುಮಾರು ಒಂದು ಸಾವಿರ ವರ್ಷದವರೆಗೆ ಉಚ್ಛ್ರಾಯಾವಸ್ಥೆಯನ್ನು ಭಾರತದಲ್ಲಿ ಹೊಂದಿ, ಕೊನೆಗಿಲ್ಲಿ ಅವಸಾನಕ್ಕೆ ಸಂದಿತು. ಪಾಶ್ಚಾತ್ಯ ವಿದ್ವಾಂಸರು ಹೇಳುವಂತೆ ಬ್ರಾಹ್ಮಣರ ಕೈವಾಡವು ಈ ನಾಶಕ್ಕೆ ಕಾರಣವೆನ್ನಲಾಗುವುದಿಲ್ಲ. ಅರಸರು ಬೌದ್ಧ ವಿಹಾರಗಳನ್ನು ಹಾಳುಗೆಡವಿದರೆಂಬುದೂ ಇದರ ಹೇತುವಲ್ಲ. ಬೌದ್ಧಧರ್ಮವು ಬೆಳೆದು ಬಂದಂತೆ, ಅದರ ತಿರುಳಿನೊಡನೆ ಹೊಟ್ಟು ಸಹ ಬೆಳೆಯಿತು ಎಂಬುದೇ ನಿಜವಾದ ಕಾರಣ. ಬುದ್ಧದೇವನು ಸ್ವತಃ ತನ್ನ ಜೀವನದಲ್ಲಿ ಅನುಷ್ಠಿಸಿದ, ಉಪದೇಶಿಸಿದ, ಜನಪ್ರಿಯಗೊಳಿಸಿದ ತತ್ತ್ವಗಳು ಈ ದೀರ್ಘಕಾಲದಲ್ಲಿ ಯಾರಿಗೂ ಅರಿವಾಗದಂತೆ ಜನರ ನಿತ್ಯ ವ್ಯವಹಾರದಲ್ಲಿ ತಾವಾಗಿಯೇ ಬೇರುಬಿಟ್ಟು ಭಾರತೀಯ ಜೀವನದ ನಡತೆಯೊಂದಿಗೆಯೇ ಸೇರಿಹೋಗಿ, ಬೌದ್ಧಮತವೊಂದು ಆಶ್ರಯಸ್ಥಾನವೆಂಬ ಭಾವನೆ ತಪ್ಪಿಹೋದುದು ಇದಕ್ಕೆ ಇನ್ನೊಂದು ಕಾರಣ.

ಮತ್ತೊಂದು ಕಾರಣವನ್ನು ಕೊಡಬೇಕಾಗಿದ್ದರೆ, ಆಶಾನಾಶವೆಂಬ ನಕಾರಾತ್ಮಕ ಸಿದ್ಧಾಂತವು ಸಾಮಾನ್ಯ ಜನರಿಗೆ ಅಷ್ಟು ರುಚಿಸಲಿಲ್ಲ. ಉಪನಿಷತ್ತುಗಳಲ್ಲಿ ಮನುಷ್ಯನ ವೈಭವಯುಕ್ತ ಸಂಪನ್ನಾವಸ್ಥೆಯ ವರ್ಣನೆಯ ಕಡೆಗೆಯೇ ಜನರು ಪುನಃ ಒಲವುಳ್ಳವರಾದರೆಂದೂ ಹೇಳಬಹುದು.

ಹಿಂದೂ ಮತಕ್ಕೂ ಬೌದ್ಧ ಮತಕ್ಕೂ ವ್ಯತ್ಯಾಸವನ್ನು ಗುರುತಿಸುವುದು ಸಹ ಕಷ್ಟವೇ: ಶೀಲವೆಂದು ಬುದ್ಧನು ಹೇಳಿರುದನ್ನು ಉಪನಿಷತ್ತು ತಪಸ್ಸೆಂದು ಕರೆಯುತ್ತದೆ; ಚಿತ್ತ (ಅಥವಾ ಸಮಾಧಿ) ಎಂಬ ಬುದ್ಧನ ಪದವು ಉಪನಿಷತ್ತಿನ ಯೋಗದ ನೆನಪನ್ನು ತರುತ್ತದೆ; ಪ್ರಜ್ಞೆ ಎಂದು ಬುದ್ಧನು ಕರೆದ ವಿಷಯವು ಉಪನಿಷತ್ತಿನಲ್ಲಿ ಪರಾವಿದ್ಯೆ ಎನ್ನಲ್ಪಡುತ್ತದೆ; ನಿರ್ವಾಣವೆಂಬುದೇ ಉಪನಿಷತ್ತುಗಳು ಮೋಕ್ಷ, ಕೈವಲ್ಯ, ಸಂಸಿದ್ಧಿ ಎಂದು ಮುಂತಾಗಿ ಕರೆದಿರುವ ಆ ಅಂತಿಮ ಧ್ಯೇಯವಾಗಿರುತ್ತದೆ.

ಬುದ್ಧದೇವನ ಉಪದೇಶಗಳ ಸಾರವು ಶ್ರೀ ಕೃಷ್ಣನು ಭಗವದ್ಗೀತೆಯಲ್ಲಿ ಹೇಳಿದುದರೊಡನೆ ತೀರ ಹೋಲಿಕೆಯನ್ನು ಪಡೆದಿದೆ—

"ಯಾರನ್ನೂ ದ್ವೇಷಿಸದೆ ಎಲ್ಲರಲ್ಲಿಯೂ ಪ್ರೀತಿಯನ್ನೇ ಇಡುವವನೂ

"ಸಂಕಷ್ಟಕ್ಕೀಡಾದವರೊಡನೆ ಕರುಣೆಯನ್ನು ವ್ಯಕ್ತಪಡಿಸುವವನೂ

"ತಾನು, ತನ್ನದೆಂಬ ಅಹಂಕಾರದಿಂದ ವರ್ಜಿತನಾದವನೂ

"ಸುಖ, ದುಃಖಗಳಿಂದಲೂ ಮೇಲೆ ತನ್ನನ್ನು ತಾನು ನಿಲ್ಲಿಸಿಕೊಂಡಿರುವವನೂ

"ತನ್ನಲ್ಲಿದ್ದುದರಿಂದಲೇ ಸಂತುಷ್ಟನಾಗಿರುವಾತನೂ

"ತನ್ನ ಮೇಲೆ ಪ್ರಭುತ್ವವನ್ನು ಹೊಂದಿರುವಷ್ಟು ಮನಸ್ಸು ಪಕ್ವವಿರುವಾತನೂ

"ಅಚಲ ಶ್ರದ್ಧೆಯುಳ್ಳವನಾಗಿ ನನಗೆ ಎಲ್ಲವನ್ನೂ ಅರ್ಪಿಸಿರುವವನೂ

"—ಆಗಿ, ಯಾರಿರುವನೋ ಆತನೆ ನನಗೆ ಅತ್ಯಂತ ಪ್ರಿಯನು"

ಸರ್ವಾರ್ಪಣವನ್ನು ಯಾವನ ಪಾದಮೂಲಗಳಲ್ಲಿ ಮಾಡಿ ನಾವು ಪುನೀತರಾಗಬಹುದೋ ಅಂಥ ಅವತಾರ ಪುರುಷನೆ ಬುದ್ಧನು! ಈ ಮಹಾಗುರುವಿನ ೨೫೦೦ನೇ ಪರಿನಿರ್ವಾಣ ಜಯಂತ್ಯುತ್ಸವವನ್ನು ಇದೇ ವೈಶಾಖಪೂರ್ಣಿಮೆಯಂದು (ಮೇ ೨೪) ರಾಷ್ಟ್ರಾದ್ಯಂತ ಆಚರಿಸುತ್ತಿರುವ ಭಾರತೀಯರೂ ಬೌದ್ಧ ಜಗತ್ತೂ ನಿಜಕ್ಕೂ ಪುಣ್ಯಶಾಲಿ! ಈ ಪರ್ವಕಾಲವು ನಮ್ಮೆಲ್ಲರಲ್ಲಿ ನೂತನೋತ್ಸಾಹವನ್ನೂ ಆತ್ಮವಿಕಾಸವನ್ನೂ ಶಾಂತಿ ಮತ್ತು ಆನಂದಗಳನ್ನೂ ಉಂಟುಮಾಡಲಿ!

(ಶ್ರೀ ಕೆ. ಎಂ. ಮುನಶಿಯವರ ಲೇಖನದ ಆಧಾರ)

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 229/56

I. A. No. 536/56

D. B. ಅಂತಯ ಶೆಟ್ಟಿ

—ವಾದಿ ಅರ್ಜಿದಾರ

ಮತ್ತು

1. B. ರಾಮಣ್ಣ ಶೆಟ್ಟಿ, 2. ನಾರಾಯಣ ಶೆಟ್ಟಿ, 3. B. ಗೋವಿಂದ ಶೆಟ್ಟಿ 4. ಬಚ್ಚ ಪೂಜಾರಿ, 5. ತಿಂಮ ಪೂಜಾರಿ 6. ಸೂರ ಪೂಜಾರಿ, 7. ಗಿರಿಯ ಪೂಜಾರಿ 8. ಶೀನ ಪೂಜಾರಿ, 9. ಬಾಬಣ್ಣ ಪೂಜಾರಿ 10. ಪೇದ್ರು ಶ್ರಾಸ್ತ ಪ್ರತಿವಾದಿರ ಯದ್ರ

ಇವರೊಳಗೆ—

ಉಡುಪಿ ತಾಲ್ಲೂಕು ಕುಮ್ರಗೋಡು ಗ್ರಾಮದ ಬೆಟ್ಟುಕುದ್ರುಲ್ಲಿರುವ ಸರ್ವೆನಂಬ್ರ 6 A ಯೆಕ್ರೆ 6—34 ನೇ ಪೊರಂಬೋಕು ಸ್ಥಳವನ್ನೂ ಗವರ್ನಮೆಂಟಿನವರು ವಾದಿಗೆ ನ್ಯಾದಗೇಣಿ ಕೊಟ್ಟಿದ್ದಾಗಿದ್ದು—ಅದ್ರಲ್ಲಿ ಕುಮ್ರಗೋಡ ವ ಹಂದಾಡಿ ಗ್ರಾಮಕ್ಕೆ ಸೇರಿದ ಬೆಟ್ಟಕುದ್ರುನ ನಿವಾಸಿಕರಿಗಾಗಲೀ—ಸದ್ರಿ ಗ್ರಾಮಗ ವ ಸರಹದ್ದಿನ ಇತರ ಗ್ರಾಮಗಳ ಬೇರೆ ವಾಸಿಕರಿಗಾಗಲೀ ದನಕರುಗಳನ್ನು—ಮೇಯಿಸಲಿಕ್ಕಾಗಲೀ ಶವಗಳನ್ನು ದಫನಮಾಡಲಿಕ್ಕಾಗಲೀ—ಹುಗಿಯಲಿಕ್ಕಾಗಲೀ ಹಕ್ಕಿಲ್ಲದ್ದರಿಂದ—ಆ ಪ್ರಕಾರ ವರ್ತಿಸುವಂತೆ ಸದ್ರಿಯೆಲ್ಲಾ ನಿವಾಸಿಕರ ಮೇಲೆ ಕಾಯಂ ಇಂಜಂಕ್ಷನ್ ಕೊಡಬೇಕಾಗಿ ಸದ್ರಿ ವ್ಯಾಜ್ಯದಲ್ಲಿ ಪ್ರಾರ್ಥಿಸಿ ಪ್ರತಿವಾದಿರನ್ನು ಸದ್ರಿ ಎಲ್ಲಾ ನಿವಾಸಿಕರ ಪ್ರತಿನಿಧಿಗಳಾಗಿ ವ್ಯಾಜ್ಯದಲ್ಲಿ ಸೇರಿ ವಾದಿಯು ದಾವಾ ಮಾಡಿದ್ದಾಗಿರುತ್ತದೆ—ಆದ್ದರಿಂದ ಸದ್ರಿ ವ್ಯಾಜ್ಯವನ್ನು ತನಿಖೆಗೆ ಇಟ್ಟಿರುವ ತಾರೀಕು 20—6—56ಕ್ಕೆ ಸದ್ರಿ ವ್ಯಾಜ್ಯ ನಿವೃತ್ತಿಗಳ ಕುರಿತು ಆಕ್ಷೇಪ ಹೇಳತಕ್ಕವರು ಆ ದಿನ ಸದ್ರಿ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹಿರುಮಾಡಿಕೊಳ್ಳಬಹುದಾಗಿರುತ್ತದೆ.

P. Padmanabha Rao
Vakil for Plaintiff.

Dated. 17-5-56 Udipi.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್ಸ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, UDIPI, S. KANARA.

ರಾಷ್ಟ್ರೀಕರಣದಲ್ಲಿ ತಾರತಮ್ಯ ದೃಷ್ಟಿಯು ಅತ್ಯಾವಶ್ಯಕ

(೨ನೇ ಪುಟದಿಂದ)

ದಿನಸವರೇನು ಮಾಡಿದ್ದಾರೆಂಬುದರ ಲೆಯೇ ಬಹಳ ಹೆಚ್ಚು ಅವಲಂಬನೆ ಹೊಂದಿದ್ದಾರೆ; ಹಾಕಿದ ಗೆರೆಯನ್ನು ತ ದೆ ಶಾಸನಿಕ ಮೂಲ್ಯಗಳಿಗೆ ಮಹತ್ವ ಡುವ ಕೆಲಸದ ಬಗೆಯ ಮೇಲೆಯೇ ವರು ಹೆಚ್ಚು ಶ್ರದ್ಧೆಯನ್ನು ತೋರಿಸು ತ್ತಾರೆ; ಪರಿಸ್ಥಿತಿಗೆ ಹೊಂದಿಕೊಂಡು ಹೋ ವಂತೆ ವ್ಯವಹಾರವನ್ನು ವಿಸ್ತರಿಸುವ ಥವಾ ಕುಗ್ಗಿಸುವ ಯಾವುದೇ ಪ್ರಯೋ ವನ್ನು ನಡೆಸಲು ಅಥವಾ ಹೆಜ್ಜೆಯನ್ನು ದಲಾಯಿಸಲು ಬಹಳಷ್ಟು ಹೆದರು ತ್ತಾರೆ.

ನಷ್ಟವಾಗಬಹುದೆಂಬ ಸಂಶಯಗಳಿಂದ ವರದಿರುವ ಎದೆಗಾರಿಕೆಯಾಗಲೀ ಉತ್ಸಾಹವಾಗಲೀ ಸ್ವೇಚ್ಛೆಯಾಗ ೀ ತಪ್ಪುಗಳಾದರೂ ಚಿಂತಿಲ್ಲ, ಣ ಹೋದರೂ ಚಿಂತಿಲ್ಲವೆನ್ನುವ ಮ ನೋಭಾವವಾಗಲೀ ಸರಕಾರಿ ನೌಕರ ಲ್ಲಿಲ್ಲ—ಆದರೆ ಇವೆಲ್ಲವೂ ಔದ್ಯಮಿಕ ಂಸ್ಥೆಯೊಂದರ ಮಟ್ಟಿಗೆ ತೀರ ಅವಶ್ಯಕ. ಇತ್ತೀಚೆಯ ವರ್ಷಗಳಲ್ಲಿಯಾದರೂ ಭಾರತದ ಸರಕಾರಿ ನೌಕರರ ಮನೋ ಭಾವ ಸುಧಾರಿಸಿದೆಯೇ ಎಷ್ಟಕ್ಕೂ ಇಲ್ಲ. ಕೇಂದ್ರದಲ್ಲಿ ಕುಳಿತು ಅಧಿಕಾರ ಚಲಾ ಯಿಸುವವರಿಗೆ ಕಾರ್ಯರಂಗದ ನಿತ್ಯ ಸಮಸ್ಯೆಗಳ ತಿಳಿವಳಿಕೆ ಇಲ್ಲವೇ ಇಲ್ಲ; ಯಾಂತ್ರಿಕ ರೀತಿಯಲ್ಲಿ, ಅನಿಷ್ಟ ಮೆಲ್ಲ ಅವರು ಆದೇಶಗಳನ್ನು ಕೊಡುತ್ತಾರೆ. ರಾಜಕೀಯ ನಾಯಕರು ಸರಕಾರದಲ್ಲಿ ಪ್ರವೇಶಿಸಿದ ತರುವಾಯ ಈ ಅಧಿಕಾರಿ ಗಳು ಮಂತ್ರಿಗಳ ಅಭಿಪ್ರಾಯವೇ ತಮ್ಮ ದನ್ನುವ ದೃಷ್ಟಿಯನ್ನು ಹೊಂದಿ ಅದಕ್ಕೆ ತಕ್ಕಂತೆ ನಡೆದುಕೊಳ್ಳುವರಲ್ಲದೆ, ತಮ್ಮ ಅನುಭವಕ್ಕೆ ನ್ಯಾಯವಾದ ತೀರ್ಮಾನ ವನ್ನು ಸಲಹೆ ನೀಡುವ ಹೊತ್ತಿಗೆ ಹೇಳುವುದಿಲ್ಲ.

ಯೋಜನೆಯನ್ನು ಕಾರ್ಯಗತಗೊಳಿ ಸುವಲ್ಲಿ ಇನ್ನೂ ಅನೇಕ ಬಗೆಯ ತೊಂದರೆಗಳಿವೆ— ರಾಜ್ಯಗಳ ಪುನಾರಚನೆಯಿಂದುಂಟಾದ ಸ್ಥಾನ ಪಲ್ಲಟ, ಕೆಲವು ನೆರೆಯ ರಾಷ್ಟ್ರಗಳ ಸಂ ಬಂಧದಲ್ಲಿ ಉಂಟಾಗಿರುವ ಕ್ಷೋಭೆ, ಈ ಕಿಗಷ್ಟೇ ವಿಶಾಲವಾಗಿ ತಲೆಎತ್ತುತ್ತಿರುವ ತಿ ಪ್ರಸರಣದ ಭಯ ಇವೆಲ್ಲವೂ ಸರ ಕಾರಕ್ಕೆ ಕಷ್ಟವನ್ನೊಡ್ಡುತ್ತವೆ. ಆದುದ ರಿಂದ ಯೋಜನೆಯಲ್ಲಿ ಉದ್ದೇಶಿಸಿದ ಧ್ಯೇ ಯಗಳಿಗೆ ಅನುಗುಣವಾಗಿ ಸಾಮಾನ್ಯ ಆರ್ಥಿಕ ಚಟುವಟಿಕೆಯನ್ನು ನಿಯಂತ್ರಿ ಸುವುದೇ ಸರಕಾರದ ಮೇಲೆ ಬಿದ್ದ ಭಾರ ವಾಗುತ್ತದೆ. ಹೀಗಿರುವಾಗ ವಿಶಿಷ್ಟ ಕೈಗಾರಿಕೆಗಳಲ್ಲಿ ಸರಕಾರವೇ ಭಾಗವಹಿಸ ಲು ಹೋದರೆ ಕುರುವಿನ ಮೇಲೆ ಬೊಕ್ಕೆ ಎದ್ದ ಪರಿಣಾಮವಾದೀತು.

ಸರಕಾರಿ ಅಧಿಕಾರಿಗಳ ಆಡಳಿತಕ್ಕೆ ಕೈಗಾರಿಕೆಗಳನ್ನು ಬಿಡದೆ, ಕೋರ್ಪೊರೇ ಶನುಗಳ ವಶಕ್ಕೆ ಇವನ್ನು ಬಿಟ್ಟರೆ ಇಂಥ ಆತಂಕಗಳಿಗೆ ಎಡೆಯಿಲ್ಲವೆಂದು ಕೆಲವರು ಹೇಳಬಹುದು. ಆದರೆ ವ್ಯವಹಾರದಲ್ಲಿ ಇಂಥ ಕೋರ್ಪೊರೇಶನುಗಳನ್ನು ಸಂಘ ಟಿಸಿದ ಮಾತ್ರಕ್ಕೆ ಸರಕಾರದ ಜವಾಬ್ದಾ ರಿಯು ಕಡಿಮೆಯಾಗದು. ಕೋರ್ಪೊರೇ ಶನುಗಳಿಗೆ ಎಷ್ಟೇ ಸ್ವಾಯತ್ತಾಧಿಕಾರವ ನ್ನು ಕೊಡಲಿ, ಸಾರ್ವಜನಿಕ ಹಣದ ವೆ ಚ್ಚದ ಮೇಲೆ ಕಣ್ಣಿಡಬೇಕಾಗಿ ಬರುವ ತನ್ನ ಜವಾಬ್ದಾರಿಯನ್ನು ಸರ ಕಾರವು ತಪ್ಪಿಸಿಕೊಳ್ಳಲಾರದು. ಆದು ದರಿಂದ ಕೋರ್ಪೊರೇಶನುಗಳ ಕಾರ್ಯ ಕಲಾಪದ ಮೇಲೆ ಅದು ಹತ್ತಿರದ ಮೇ ಲ್ವಿಚಾರಣೆ ನಡೆಸುತ್ತಿರಬೇಕಾಗುತ್ತದೆ; ಅದೂ ಅಲ್ಲದೆ, ಸಾರ್ವಜನಿಕ ಹಿತಕ್ಕೆ ಸಂಬಂಧಿಸಿದಂತೆ ತನ್ನ ಧೋರಣೆಗಳನ್ನು ಕೋರ್ಪೊರೇಶನುಗಳಿಗೆ ನಿರ್ದೇಶಿಸು ವುದು ಸರಕಾರದ ಅಭ್ಯಾಸ.

ಸಾರ್ವಭೌಮಾಧಿಕಾರವನ್ನು ಮೊದ ಲ ಬಾರಿಗೆ ಪಡೆದಿರುವ ಈ ದೇಶದಲ್ಲಿ ಸಾರ್ವಜನಿಕ ಹಿತವೆಂಬ ಪದಗಳ ಅರ್ಥ ವ್ಯಾಪ್ತಿಯನ್ನು ಆದಷ್ಟು ಹೆಚ್ಚಿಸಿ, ನಿಜ ವಾಗಿ ದೈನಂದಿನ ಕೆಲಸಗಳಿಗೆ ಸಂಬಂ ಧಿಸಿದವುಗಳೆಂದೇ ಅನುಭವಸ್ಥರಿಗೆ ತೋ ರುವ ವಿಷಯಗಳ ಮೇಲೆ ಸಹ ಸರಕಾರಿ ನಿರ್ದೇಶನವನ್ನು ಕೊಡುವುದು ಹವ್ಯಾಸ ವಾಗಿ ಹೋಗಿದೆ. ಮಂತ್ರಿಗಳು ಕೋರ್ಪೊ ರೇಶನುಗಳ ಆಡಳಿತೆಗೆ ಜವಾಬ್ದಾರರೆಂಬ ನೆಲೆಗೆ ಸಂಸತ್ತಿನಲ್ಲಿಪ್ರಶ್ನೆಗಳಿಗವರು ಉತ್ತ ರ ಕೊಡುವ,ಧೋರಣೆಗಳ ಬಗ್ಗೆ ವಿವರಣೆ ನೀಡುವ ಪ್ರಸಂಗಗಳನ್ನು ನಾವಿಲ್ಲಿ ಸ್ಮರಿ ಸಬಹುದು.

ಆದುದರಿಂದ ರಾಷ್ಟ್ರೀಕರ ಣದ ವಿಷಯದಲ್ಲಿ ಸರಕಾ ರವು ಇವತ್ತಿನ ಪರಿಸ್ಥಿತಿಯಲ್ಲಿ ಮುಂಗಾಣಿಕೆಯಿಂದಲೂ ವಿಶೇಷ ಜಾಗರೂ ಕತೆಯಿಂದಲೂ ನಡೆಯುವುದು ವಾಸಿ. ರಾಷ್ಟ್ರೀಕರಣದ ಪ್ರಯೋಗಗಳು ನಿರಾ ಶಾದಾಯಕ ಫಲಗಳಲ್ಲಿ ಪರಿಣಮಿಸಿದರೆ ಸರಕಾರವು ಕಟ್ಟಬೇಕೆಂದು ಬಯಸಿರುವ ಸಮಾಜರಚನೆಯ ಕುರಿತಾದಪ್ರತಿಕ್ರಿಯೆ ಯು ಅತ್ಯಂತ ಗಂಭೀರವೂ ಅನಿಷ್ಟ ಪ್ರ ದವೂ ಆಗಬಹುದು.

ಆದುದರಿಂದ ರಾಷ್ಟ್ರೀಕರಣವು ತನ್ನ ವ್ಯಾಪ್ತಿಯಲ್ಲಿ ವಿಶೇಷ ಮಿತಿಯನ್ನು ಹೊಂ ದಿರುವುದು ಅತ್ಯಾವಶ್ಯಕ; ಕೆಲವು ವರ್ಗದ ಕೈಗಾರಿಕೆಗಳಿಗೆ ರಾಷ್ಟ್ರೀಕರಣವನ್ನು ಅ ನ್ವಯಿಸಬಾರದು, ಬದಲಿಗೆ ಕೆಲವು ಆ ಯ್ದ ಕೈಗಾರಿಕೆಗಳಿಗೆ ಮಾತ್ರ ಸ್ವಾನುಭ ವಾಪೇಕ್ಷೆಯುಳ್ಳ ಪ್ರಯೋಗಗಳ ರೂಪದ ಲ್ಲಿ ಅನ್ವಯಿಸಬೇಕು.

ಒಂದು ಕೈಗಾರಿಕೆಯನ್ನು ರಾಷ್ಟ್ರೀಕ ರಿಸುವಾಗ ಎರಡು ಸಂಗತಿಗಳನ್ನು ಮು ಖ್ಯವಾಗಿ ವಿಚಾರಿಸಬೇಕು: (೧) ರಾಷ್ಟ್ರ ಹಿತದ ದೃಷ್ಟಿಯಿಂದ ಅದು ತೀರ ಅವಶ್ಯ ವೆಂದು ಮನವರಿಕೆಯಾಗುವಂತಿ ರಬೇಕು; (೨) ಸಾರ್ವಜನಿಕರಿಗೂ ಆ ಕೈಗಾರಿಕೆಗೆ ಸಂಬಂಧಿಸಿದವರಿಗೂ ಅಂತಿಮ ತೀರ್ಮಾನಕ್ಕೆ ಸರಕಾರವು ಬರಲು ಇದ್ದ ಕಾರಣಗಳ ಸ್ಪಷ್ಟ ತಿಳಿ ವಳಿಕೆಯನ್ನು ಮಾಡಿಕೊಡಬೇಕು.

ಈ ತಳಹದಿಯ ಮೇಲೆ ಸರಕಾರದ ಧೋರಣೆಯನ್ನು ನಿಲ್ಲಿಸಿದರೆ, ಅದು ರಾ ಷ್ಟ್ರೀಕರಣದಲ್ಲಿ ಅತ್ಯಾವಶ್ಯಕವಾದ ತಾರತಮ್ಯ ದೃಷ್ಟಿಯನ್ನು ವ್ಯಕ್ತಪಡಿಸಿ ದಂತೆ ಆಗುತ್ತದೆ. ಸರಕಾರಿ ನಿರ್ಣಯವು ಆಧರಿತವಾದ ತಾರತಮ್ಯ ದೃಷ್ಟಿಯ ಯೋಗ್ಯತೆಯನ್ನು ವಿಚಾರಣೆಯ ಮೂ ಲಕ ಅಳೆಯುವ ಅಧಿಕಾರವು ಸರಕಾರದ ಕೈಯಲ್ಲಿಯೇ ಇರಬಾರದು— ಅದಕ್ಕೆ ಸಾಕಷ್ಟು ಜ್ಞಾನ ಸಂಪನ್ನರೂ ಅನು ಭವಸ್ಥರೂ ತಮ್ಮ ನ್ಯಾಯ ತೀರ್ಮಾನ ದ ಬಗ್ಗೆ ಜನರ ಮತ್ತು ಸಂಬಂಧಿಸಿದ ಎಲ್ಲರ ವಿಶ್ವಾಸವನ್ನು ಪಡೆಯುವಷ್ಟು ಅರ್ಹತೆಯುಳ್ಳವರೂ ಆದ ನಾಗರಿಕರ ಸ್ವತಂತ್ರ ಮಂಡಳಿಯನ್ನು ಏರ್ಪಡಿಸು ವುದು ಹಿತಕರ.

ಉನ್ನತಾಧಿಕಾರ ಸ್ಥಾನಗಳಲ್ಲಿ ರಾಷ್ಟ್ರೀ ಕರಣದ ಕುರಿತು ಲಘು ಭಾಷಣವು ಎಷ್ಟಕ್ಕೂ ಸಲ್ಲದು. ದೇಶಕ್ಕೆ ತನ್ನ ಅಭಿವೃದ್ಧಿಗಾಗಿ ಇಂದು ಖಾಸಗಿ ರಂಗ ದಲ್ಲಿರುವ ಎಲ್ಲ ಸಂಸ್ಥೆಗಳೂ ಅತ್ಯಾವಶ್ಯಕವಾಗಿ ಬೇಕಾಗಿವೆ ಎಂಬು ದೊಂದೇ ನನ್ನೀ ನಿಲುವೆಯ ಕಾರಣ ವಲ್ಲ—ಪ್ರಜಾಸತ್ತಾತ್ಮಕಸಮಾಜದಲ್ಲಿ ವಾ ಸ್ತವವಾಗಿ ಅತ್ಯಂತ ಮಹತ್ವದ ಸ್ವಾತಂ ತ್ರ್ಯವೆನಿಸಿದ ವ್ಯವಹಾರ ಸ್ವಾತಂತ್ರ್ಯಕ್ಕೆ ಸರಕಾರದ ಧೋರಣೆಯಿಂದ ಆತಂಕವಾ ಗುವುದಕ್ಕೆ ವ್ಯಾವಹಾರಿಕವಾದ ಅಥವಾ ತಾತ್ವಿಕವಾದ ಯಾವುದೇ ನ್ಯಾಯಸಮ್ಮ ತ ಕಾರಣವಿದೆ ಎಂದು ನನಗೆ ತೋರುತ್ತಿ ಲ್ಲ ಎಂಬ ವಿಷಯವೂ ನನ್ನ ಉಪರೋಕ್ತ ನಿಲುವೆಯ ಪ್ರಬಲ ಕಾರಣ.

ಯಾವುದೇ ಕೈಗಾರಿಕೆಯನ್ನು ರಾಷ್ಟ್ರೀ ಕರಿಸುವುದಕ್ಕೆ ಮುಂಚೆ ಅದರ ಆವಶ್ಯಕತೆ ಮತ್ತು ಅರ್ಹತೆಯ ಸಂಪೂರ್ಣ ವಿವೇ ಚನೆ ನಡೆಯಬೇಕು. ಸರಕಾರದ ಪರಿಷ್ಕೃ ತ ಔದ್ಯಮಿಕ ಧೋರಣೆಯು ಸರಕಾರಿ ಹಾಗು ಖಾಸಗಿ ಕೈಗಾರಿಕೆಗಳಿಗೆ ಅವಕಾ ಶವಿತ್ತಿದ್ದರೂ ಅಭಿವೃದ್ಧಿಯ ವೇಗಕ್ಕೆ ಮ ಹತ್ವಕೊಡುವ ವ್ಯಾಜದಲ್ಲಿ ಸರಕಾರಿ ರಂ ಗಕ್ಕೆ ಅತಿರೇಕ ಪ್ರಾಮುಖ್ಯತೆಯನ್ನು ಸ ಲ್ಲಿಸಲಾಗಿದೆ. ಭಾರತದಲ್ಲಿ ಕೆಲವು ವಿಶಿಷ್ಟ ಕೈಗಾರಿಕೆಗಳ ಬೆಳವಣಿಗೆಗೆ ಸರ ಕಾರದ ಕೈವಾಡವು ಅಗತ್ಯವಾಗಿದೆ ಎಂಬುದನ್ನು ಒಪ್ಪಬಹುದಾಗಿದ್ದರೂ ಖಾ ಸಗಿ ರಂಗದ ಕೈವಾಡವೇ ಸಾಮಾನ್ಯ ಅ ನುಭವವಾಗುವಂತೆ ನಮ್ಮ ನಿಲುವೆಯ ನ್ನು ರೂಪಿಸಿಕೊಳ್ಳುವುದು ಶುಭಕರ. ಇ ದನ್ನು ಬಿಟ್ಟು ರಾಷ್ಟ್ರೀಕರಣವೇ ಸರ್ವ ಶ್ರೇಷ್ಠವಾದುದೆಂಬ ಅನುಭವವು—ಸಾ ಮಾನ್ಯವಾಗಿಯಲ್ಲ, ವಿರಳ ಕ್ಷೇತ್ರದಲ್ಲಿಯೇ ಆಗಲಿ—ಆಗ ಬೇಕಾದ ಪರಿಸ್ಥಿತಿ ಇದೆ ಯೆಂದು ಸರಕಾರಕ್ಕೆ ಅನಿಸಿದರೆ ಅದನ್ನು ಸಂಶಯಾತೀತ ತಳಹದಿಯ ಮೇಲೆ ಮ ನವರಿಕೆ ಮಾಡಿಕೊಡಲು ಅದು ತಪ್ಪ ಬಾರದು.

ಅಭಿವೃದ್ಧಿಯನ್ನು ಹೊಂದುತ್ತಿರುವ ಭಾರತದಂಥ ಸ್ವತಂತ್ರ ರಾಷ್ಟ್ರದಲ್ಲಿ ಸಂ ರಕ್ಷಣೆಗೆ ಅಗತ್ಯವಾದ ಸಾಧನ ಯಂತ್ರ ಗಳು, ಸಾರಿಗೆಯ ಅನುಕೂಲತೆಯನ್ನೊದ ಗಿಸಿ ಕೊಡುವ ರೈಲ್ವೆ, ತಂತಿ ವಿಭಾಗಗ ಳು ಇತ್ಯಾದಿ ಕೆಲವು ಸರಕಾರಿ ನಿಯಂತ್ರ ಣದಲ್ಲಿರುವುದು ಒಳ್ಳೆಯದೆಂಬುದರಲ್ಲಿ ಪ್ರ ತಿವಾದವಿಲ್ಲ. ಆದರೆ ಜೀವ ವಿಮೆಯಂಥ ಕ್ಷೇತ್ರದಲ್ಲಿಯೂ ರಾಷ್ಟ್ರೀಕರಣಕ್ಕೆ ಮನ ಸ್ಸು ಮಾಡಿದ್ದು ಯೋಗ್ಯವಲ್ಲ.

ಇನ್ನೂ ಒಂದು ಉದಾಹರಣೆ ಕೊಡು ವುದಾದರೆ ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣವೂ ಅನಾವಶ್ಯಕ. ಚಿನ್ನವು ಬೆಲೆಯಲ್ಲಿ ಏರಿಳಿತವುಳ್ಳ ವಸ್ತು; ವಿನಿಮ ಯ ವ್ಯವಹಾರಕ್ಕಾಗಿ ಕಾದಿಟ್ಟ ನಿಧಿಯ ನೆಲೆಯಿಂದ ಚಿನ್ನದ ಮಹತ್ವ ಈಗ ಕುಗ್ಗು ತ್ತಲಿದೆ. ಗಣಿಗಳಲ್ಲಿ ಈಗ ಸಿಗುವ ಚಿನ್ನದ ಪ್ರಮಾಣವಾದರೂ ಅತ್ಯಲ್ಪವಾಗಿದ್ದು ಇ ದರಿಂದ ಕರ್ಚು ಉತ್ಪತ್ತಿಯ ಪ್ರಮಾಣ ದೊಡನೆ ಹೋಲಿಸಿದಾಗ ಹೆಚ್ಚೆನಿಸುತ್ತದೆ. ಆದುದರಿಂದ ರಾಷ್ಟ್ರೀಕರಣವು ಇಲ್ಲಿ ಲಾಭಕರವಲ್ಲ.

ಖಾಸಗಿ ಸಂಸ್ಥೆಗಳು ಗಂಭೀರ ಅಕ್ರಮ ವ್ಯವಹಾರಗಳಿಂದ ದೂಷಿತವಾಗಿವೆ ಎಂ ದು ಸರಕಾರಿ ವಕ್ತಾರರು ಹೇಳುತ್ತಿರುವು ದುಂಟು: ಸುಮಾರು ಒಂದು ಶತಮಾನದ ಷ್ಟು ದೀರ್ಘಕಾಲದಿಂದ ಅನೇಕ ಶಾಖೋ ಪಶಾಖೆ ಮತ್ತು ವೈವಿಧ್ಯವನ್ನೊಳಗೊಂ ಡು ಅಸ್ತಿತ್ವದಲ್ಲಿರುವ ಸ್ವತಂತ್ರ ಖಾಸಗಿ ಸಂಸ್ಥೆಗಳ ಚರಿತ್ರೆಯನ್ನು ವಿಶಾಲವಾದ ಕ್ಷೇ ತ್ರದಲ್ಲಿ ಇತ್ತೀಚೆಗಷ್ಟೇ ಪ್ರಾರಂಭವಾದ ಸರಕಾರಿ ಒಡೆತನದ ಇತಿಹಾಸದೊಡನೆ ತುಲನೆಮಾಡಿದಾಗ ಈ ಅಪರಾಧಗಳು ಹೆಚ್ಚೆಂದು ಕಾಣಬಹುದು. ಆದರೆ ಇದು ತೀರ ಬಲಹೀನವಾದ ತೀರ್ಮಾನ; ಏಕೆಂ ದರೆ ಚಟುವಟಿಕೆ, ಕ್ಷೇತ್ರ ವಿಸ್ತಾರ ಮತ್ತು ಚರಿತ್ರೆಯ ಅವಧಿಯಲ್ಲಿ ತುಂಬ ವೈಪರೀ ತ್ಯವಿಲ್ಲದೆ. ಸರಕಾರದ ಅತಿದೊಡ್ಡ ಉದ್ಯ ಮವಾದ ರೈಲ್ವೆ ಇಲಾಖೆಯು ಮಂತ್ರಿಯಾ ಗಿಯೂ ಖಾಸಗಿ ರಂಗದ ಅತಿದೊಡ್ಡ ಉದ್ಯಮವಾದ ಟಾಟಾ ಕಂಪೆನಿ ಮತ್ತು ಜುಕ್ಕಿನ ಕಾಬೂರ್‌ನೆಯ ಮೇಲ್ವಿಚಾರಕ ನಾಗಿಯೂ ಅನುಭವ ಪಡೆದ ನನ್ನಲ್ಲಿ ಇಂಥ ಹೋಲಿಕೆಗಳು ಏನೇನೂ ವಿಶ್ವಾಸ ವನ್ನು ರಾಷ್ಟ್ರೀಕರಣದ ಪರವಾಗಿ ಹುಟ್ಟಿ ಸುವುದಿಲ್ಲ.

[ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಅಧ್ಯಕ್ಷ ಡಾ, ಜಾನ್ ಮಥಾಯಿಯವರ ಭಾಷಣ ದಿಂದ ಉದ್ಧೃತ].



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದು ವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಮಹಾಪರಿನಿರ್ವಾಣದ ಅಂತರ್ಯ

ತ್ರಿಕಾಯ ಸ್ವರೂಪಿ ಬುದ್ಧ

ಬೌದ್ಧ ಜಗತ್ತಿಗೆ ಈ ಸಲ ಮೇ ೨೪ರಂದು ಬಂದಿರುವ ವೈಶಾಖಪೂರ್ಣಿಮೆಯು ಅತಿ ಮಹತ್ವದ ವಿಷಯ. ಬೌದ್ಧ ಜಗತ್ತಿನ ಎಲ್ಲರೂ ಈ ಮಹತ್ವವನ್ನು ಒಪ್ಪುತ್ತಾರೆಂದೇನಲ್ಲ—ಆದರೆ ಬೌದ್ಧ ಜಗತ್ತಿನ ಐಕ್ಯ ಮತ್ತು ಒಮ್ಮತದ ರಕ್ಷಣೆಯ ಉದ್ದೇಶದಿಂದ ಎಲ್ಲರೂ ಈ ವೈಶಾಖ ಪೂರ್ಣಿಮೆಯಂದು ಆಚರಿಸಲಿರುವ ಬುದ್ಧನ ೨೫೦೦ನೇ ಪರಿನಿರ್ವಾಣ ಜಯಂತ್ಯುತ್ಸವದಲ್ಲಿ ಭಾಗಿಯಾಗಲು ಸಮ್ಮತಿಸಿದ್ದಾರೆ.

ಹೀನಾಯಾನ ಶಾಖೆಯ ಪ್ರಕಾರ, ಬುದ್ಧ ಭಗವಾನನ ಜೀವನದಲ್ಲಿಯ ನಾಲ್ಕು ಮುಖ್ಯ ಪ್ರಸಂಗಗಳಲ್ಲಿ ಮೂರು ವೈಶಾಖ ಪೂರ್ಣಿಮೆಯಂದು ಜರಗಿವೆ: ಇವಾವುವೆಂದರೆ, ಲುಂಬಿನಿಯಲ್ಲಿ ಜನ್ಮ; ಬುದ್ಧಗಯಾದಲ್ಲಿ ಜ್ಞಾನೋದಯ; ಮತ್ತು ಕುಶೀನಗರದಲ್ಲಿ ಪರಿನಿರ್ವಾಣ. ಸಾರಾನಾಥದಲ್ಲಿ ಧರ್ಮಚಕ್ರವನ್ನು ಪ್ರಥಮಾವರ್ತಿ ಪ್ರವರ್ತನಗೈದ ಘಟನೆಯೊಂದು ಮಾತ್ರ ಆಷಾಢಪೂರ್ಣಿಮೆಯಂದು ಜರಗಿತು.

ಮಹಾಯಾನ ಪಂಥದವರು ಮಾತ್ರ ಜ್ಞಾನೋದಯವಷ್ಟೇ ವೈಶಾಖಪೂರ್ಣಿಮೆಯಂದು ಜರಗಿತೆಂದು ಹೇಳುತ್ತಾರೆ. ಆದರೆ ಸಾಮಾನ್ಯವಾಗಿ ಹೀನಯಾನ ಪಂಥದ ಅಭಿಪ್ರಾಯವನ್ನೇ ಮನ್ನಿಸಲಾಗುತ್ತದೆ. ಇದಕ್ಕನುಸಾರ, ಬುದ್ಧನ ಜನನವು ಕ್ರಿಸ್ತಪೂರ್ವ ೬೨೪ರಂದು ಆಯಿತು; ಮರಣವು ಎಂಭತ್ತು ವರ್ಷಗಳ ತರುವಾಯ ಕ್ರಿಸ್ತ ಪೂರ್ವ ೫೪೪ರಂದು ಘಟಿಸಿತು. ಅಂದರೆ ಈ ಮಹಾ ಪರಿನಿರ್ವಾಣ ಘಟಿಸಿ ಇಂದಿಗೆ ೨೫೦೦ ಸಂವತ್ಸರವಾಯಿತು.

ಬುದ್ಧ ಪರಿನಿರ್ವಾಣ ಜಯಂತ್ಯುತ್ಸವವು ಜಗತ್ತಿನಲ್ಲಿ ಬೌದ್ಧ ಧರ್ಮದ ಕಡೆಗೆ ಜನರ ಗಮನವು ಹೆಚ್ಚಾಗಿ ಹರಿಯುವಂತೆ ಮಾಡದಿರದು. ಆದರೆ ಜನರು ಉತ್ಸವದ ಬಾಹ್ಯ ವೈಭವದಿಂದ ಮಾತ್ರ ಪ್ರಭಾವಿತರಾದರೆ ಈ ಉದ್ದೇಶವು ಈಡೇರಲಾರದು. ಮಹಾ ಪರಿನಿರ್ವಾಣದ ನಿಜವಾದ ಅರ್ಥವನ್ನು ಅವರೆಲ್ಲರೂ ಗ್ರಹಿಸಬೇಕು. ಬುದ್ಧದೇವನ ವಿಷಯದಲ್ಲಿ "ತ್ರಿಕಾಯ" ಎಂದೇನು ಹೇಳಲಾಗುತ್ತದೋ ಆ ವ್ಯಕ್ತಿತ್ವದ ಪರಿಚಯದಿಂದ ಮಾತ್ರ ಇದು ಸಾಧ್ಯವಾಗಬಲ್ಲುದು.

ಬುದ್ಧದೇವನ ತ್ರಿಕಾಯಗಳು ಹೀಗಿವೆ: ನಿರ್ಮಾಣಕಾಯ; ಸಂಭೋಗಕಾಯ; ಮತ್ತು ಧರ್ಮಕಾಯ. ಚರಿತ್ರೆಯ ಪಾಲಿಗೆ ಗೌತಮ ಬುದ್ಧನೆಂಬ ಹೆಸರಿನಿಂದ ಕರೆಗೊಳಿಸಿದ ಕಾಯವೇ ನಿರ್ಮಾಣ ಕಾಯ. ಇಲ್ಲಿರುವುದು ಕೇವಲ ಭೌತಿಕ ಶರೀರ.

ಎರಡನೆಯದಾದ ಸಂಭೋಗ ಕಾಯವು ಸಾಮಾನ್ಯ ಶರೀರ ಸ್ಥಿತಿಗಿಂತಲೂ ಉನ್ನತವೂ ಉತ್ತಮವೂ ಆದ ಮಟ್ಟವನ್ನು ಮುಟ್ಟಿದ ಮತ್ತು ಮಾನಸಿಕವಾಗಿ ಧ್ಯಾನ ಮತ್ತು ಸಮಾಧಿಯಲ್ಲಿ ನಿರತವಾದ ಬೋಧಿಸತ್ವ ಸ್ವರೂಪಿ ಶರೀರ. ಈ ಶರೀರವು ಕಾಲದ ಮಟ್ಟಿಗೆ ಅಮಿತತ್ವವನ್ನೂ ಶರೀರ ಧರ್ಮದ ಮಟ್ಟಿಗೆ ಅತ್ಯುನ್ನತ ತೇಜಸ್ಸನ್ನೂ ಪಡೆದಿರುತ್ತದೆ. "ಅಮಿತ ಭಾ" ಎಂದಿದನ್ನು ಕರೆಯುವುದು ಸಂಪ್ರದಾಯ.

ಧರ್ಮಕಾಯವು ಆ ಪರಮ ಸತ್ಯಕ್ಕಿಂತ ಭಿನ್ನವಾಗಿಲ್ಲ. ಶೂನ್ಯವೆಂದೇನನ್ನು ಕರೆಯುತ್ತೇವೋ ಅದಕ್ಕೂ ಈ ಧರ್ಮಕಾಯಕ್ಕೂ ವ್ಯತ್ಯಾಸವಿಲ್ಲ. ಬುದ್ಧನ ಪ್ರಕೃತಿಯ ಗಹನವಾದ, ನಿಜವಾದ ರೂಪವಿದು: ಇದರ ಕುರಿತು ನಾವೇನು ಹೇಳ ಹೊರಟರೂ ಸರಿಯಾಗಲಾರದು. ಏಕೆಂದರೆ, ಅದನ್ನು ಯಾವ ತರ್ಕದಬಲದಿಂದಲೂ ಹೀಗೆ ಎಂಬುದಾಗಿ ವಿವರಿಸುವಂತಿಲ್ಲ. ಅದು ಇದೆ; ಅಥವಾ ಇಲ್ಲ; ಅಥವಾ ಎರಡೂ ಆಗಿದೆ; ಅಥವಾ ಎರಡೂ ಆಗಿಲ್ಲ—ಎಂದು ಹೇಗೆ ಹೇಳ ಹೊರಟರೂ ತಪ್ಪೇ ಆಗುತ್ತದೆ!

ಮಾನವ ನಾಗರಿಕತೆಯ ವಿಕಾಸಕ್ಕೆ ಅತ್ಯದ್ಭುತ ರೀತಿಯಲ್ಲಿ ಪ್ರೋತ್ಸಾಹವನ್ನಿತ್ತ ಬೌದ್ಧ ಧರ್ಮವು ಕಲಾಕ್ಷೇತ್ರದಲ್ಲಿ ತೋರಿಸಿದ ಕೈವಾಡವು ಅನ್ಯಾದೃಶ. ಚಿತ್ರದಲ್ಲಿ ಪದ್ಮಪಾಣಿ ಬೋಧಿಸತ್ವನನ್ನು ನೋಡಬಹುದು.



ಮಧ್ಯ ಏಶ್ಯದ ಗೋಬಿ ಮರುಭೂಮಿಯ ಗುಹೆಯೊಂದರಲ್ಲಿ ೧೫೦೦ ವರ್ಷಗಳ ಹಿಂದೆ ಬರೆಯಲಾದ ಈ ಭಿತ್ತಿ ಚಿತ್ರಗಳು ಗೌತಮ ಬುದ್ಧನ ಜೀವನದ ನಾಲ್ಕು ದೃಶ್ಯಗಳನ್ನು ಕಲಾತ್ಮಕವಾಗಿ ವ್ಯಕ್ತಪಡಿಸುತ್ತವೆ.

ಸಾಮಾನ್ಯ ತಿಳಿವಳಿಕೆಯಂತೆ ಬುದ್ಧನ ಧರ್ಮಕಾಯವು ಕಾಲಾತೀತವಾದುದಾಗಿದೆ; ಸಂಭೋಗ ಕಾಯವು ಕಾಲದ ಮಟ್ಟಿಗೆ ಅಮಿತತ್ವವನ್ನು ಪಡೆದಿದೆ. ಆದುದರಿಂದ ಮಹಾ ಪರಿನಿರ್ವಾಣವೆಂದೇನನ್ನು ನಾವು ಕರೆಯುತ್ತೇವೋ ಅದು ಕೇವಲ ನಿರ್ಮಾಣಕಾಯಕ್ಕಷ್ಟೆ ಅನ್ವಯಿಸುವ ವಿಷಯ ಮನುಷ್ಯದೇಹ ಧಾರಿಯಾಗಿ ಈ ಮಹಾ ಚೈತನ್ಯವು ಪರಿನಿರ್ವಾಣ ಹೊಂದಿದ ಘಟನೆಯಷ್ಟೆ ಇಲ್ಲಿಗೆ ಅನ್ವಯವಾಗುತ್ತದೆ.

ವಾಸ್ತವವಾಗಿ ಬುದ್ಧನೆಂದೂ ಜನಿಸುವುದೆಂಬಿಲ್ಲ; ಅಥವಾ ಮೃತನಾಗುವುದೂ ಇಲ್ಲ. ಸಂಭೋಗ ಕಾಯವೇ ಕಾಲಾನುಕಾಲಕ್ಕೆ ದೇದೀಪ್ಯಮಾನವಾಗಿ ಬೆಳಗಿ ಕಾಲದಲ್ಲಿ ಸಂದುಹೋಗುತ್ತದೆ ಎಂದು ನಾವು ಗ್ರಹಿಸಿದರೆ ತಪ್ಪಾಗಲಾರದು. ಬೌದ್ಧ ಗ್ರಂಥವೊಂದರ ಪ್ರಕಾರ, ಶಾಕ್ಯ ಮುನಿಯೇ ಈ ಅಂಶವನ್ನು ವಿವರಿಸಿದ್ದಾನೆ: ಜ್ಞಾನೋದಯವೂ ಮಹಾ ಪರಿನಿರ್ವಾಣವೂ ತಥಾಗತನ ಉಪಾಯ ಕೌಶಲ್ಯಗಳೆಂದು ಶಾಕ್ಯ ಮುನಿಯ ವಾಕ್ಯವು ತಿಳಿಸುತ್ತದೆ.

ತನ್ನ ಮಾತನ್ನು ಕೇಳದ ಮಕ್ಕಳಿಗೆ ಬುದ್ಧಿ ಕಲಿಸುವುದಕ್ಕಾಗಿ ವೈದ್ಯನು ಊರು ಬಿಟ್ಟು ಹೋಗಿ ತಾನು ಸತ್ತೆನೆಂಬ ವಾರ್ತೆಯನ್ನು ಅವರ ಕಿವಿಗೆ ಮುಟ್ಟಿಸಿದರೆ—ಆಗ ಆ ಮಕ್ಕಳು ಹೇಗೆ ತಂದೆಯ ಮಾತನ್ನು ಕೇಳದುದಕ್ಕಾಗಿ ಪಶ್ಚಾತ್ತಾಪಪಟ್ಟು ಆತನು ಹೇಳಿದ್ದ ಚಿಕಿತ್ಸಾಕ್ರಮವನ್ನೆ ಅನುಸರಿಸಿ ಧನ್ಯರಾಗುವರೋ ಅದೇ ರೀತಿ ಜನರಲ್ಲಿ ಧರ್ಮಸಮ್ಮತ ಜೀವನವನ್ನು ನಡೆಸುವ ಮನೋಭಾವವನ್ನು ಹುಟ್ಟಿಸಲಿಕ್ಕಾಗಿಯಷ್ಟೆ ತಥಾಗತನು ಮಹಾ ಪರಿನಿರ್ವಾಣದ ಉಪಾಯ ಹೂಡುವನೆಂದು ಶಾಕ್ಯ ಮುನಿಗಳ ಅಭಿಪ್ರಾಯ.

ಬುದ್ಧದೇವನ ಈ ಕುಶಲ ಉಪಾಯವನ್ನು ಕರುಣೆ ಎಂದು ಕರೆಯಲಾಗುತ್ತದೆ. ಈ ಕರುಣೆಯು ಕೇವಲ ಭಾವನಾತ್ಮಕ ಮಟ್ಟದಲ್ಲಿಯಷ್ಟೆ ವಿಹರಿಸುವುದಿಲ್ಲ; ಪೀಡಿತ ಜನರ ಉದ್ಧಾರಕ್ಕಾಗಿ ವಿಶ್ವದಾದ್ಯಂತ ಕ್ರಿಯಾಶೀಲವಾಗಿರುವ ಶೂನ್ಯದ ಚೈತನ್ಯಯುಕ್ತ ಸ್ವರೂಪವೇ ಇದು. ಇದೇ ಧರ್ಮದ ತಿರುಳೆನಿಸಿದ ಧರ್ಮ; ಇದೇ ಶಾಶ್ವತ ಸಾಮರಸ್ಯ. ಆದುದರಿಂದ ಬುದ್ಧದೇವನ ಅಪಾರ ಕರುಣೆಯೊಡನೆ ಧ್ಯಾನದ ಮಾಧ್ಯಮದ ಮೂಲಕ ಸಂಪರ್ಕವನ್ನು ಸ್ಥಾಪಿಸಿ, ಆ ಕರುಣೆಯಿಂದ ನಮ್ಮ ಜೀವನವನ್ನು ಪುನೀತಗೊಳಿಸುವುದೇ ಈ ಭೌತಿಕ ಪ್ರಪಂಚದಲ್ಲಿ ಅವತರಿಸಿ, ತನ್ನ ನಿರ್ಮಾಣಕಾಯವನ್ನು ಅದೃಶ್ಯಗೊಳಿಸಿದ ಬುದ್ಧನ ಆ ಮಹಾಪರಿನಿರ್ವಾಣದ ನೆನಪಿನಿಂದ ಪ್ರೇರಿತರಾಗಿ ನಾವು ಮಾಡಬೇಕಾದ ಕರ್ತವ್ಯ.

ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 31—5—1956

ಸಂಚಿಕೆ ೩೯
NO. 39

ದೇಶದ ಗಳಿಕೆಯ ವೇಗ

ಪ್ರಧಾನಿ ನೆಹರೂಗಳು ಲೋಕಸಭೆಯ ಮುಂದೆ ನಮ್ಮ ಎರಡನೇ ಯೋಜನೆಯ ತತ್ವಗಳಿಗೂ ಉದ್ದೇಶಗಳಿಗೂ ಅದರಲ್ಲಿ ಅಡಕವಾದ ಅಭಿವೃದ್ಧಿಯ ಕಾರ್ಯಕ್ರಮಗಳಿಗೂ ಸಾಮಾನ್ಯವಾದ ಒಪ್ಪಿಗೆಯನ್ನು ಅಪೇಕ್ಷಿಸಿ ಮಂಡಿಸಿದ ಗೊತ್ತುವಳಿಯ ಕುರಿತು ಕಳೆದ ವಾರ ಲೋಕಸಭೆಯಲ್ಲಿ ಮಾತನಾಡುತ್ತಾ ದೇಶದ ಜನತೆಯ ಗಳಿಕೆಯ ವೇಗವನ್ನು ಹೆಚ್ಚಿಸಲಿಕ್ಕೂ ರಾಷ್ಟ್ರೀಯ ಉತ್ಪನ್ನದ ಪ್ರಮಾಣವನ್ನು ಅಧಿಕಗೊಳಿಸಲಿಕ್ಕೂ ಸರಕಾರವು ತುಂಬ ಮಹತ್ವವಿತ್ತಿರುವುದನ್ನು ಪ್ರಸ್ತಾಪಿಸಿದರು. ಕಳೆದ ಮಹಾ ಯುದ್ಧಕ್ಕೆ ಹಿಂದಿನ ವರ್ಷಗಳಲ್ಲಿ, ಮಾತಿಗೆ ಹೇಳುವುದಾದರೆ, ಭಾರತವು ವಸಾಹತುಶಾಹಿ ಆಳಿಕೆಗೆ ಒಳಪಟ್ಟಿದ್ದ ದೀರ್ಘಕಾಲದಲ್ಲಿ, ಭಾರತೀಯರ ಆದಾಯವು ಏರಿಳಿತಗಳಿಲ್ಲದೆ, ತೀರ ಹೀನ ಮಟ್ಟದಲ್ಲಿತ್ತೆಂದು ಅವರು ಅಂಕೆ ಸಂಖ್ಯೆಗಳೊಡನೆ ರುಜುಪಡಿಸಿದರು.

ಆದರೆ, ಸ್ವಾತಂತ್ರ್ಯೋತ್ತರದಲ್ಲಿ ಈ ತಟಸ್ಥಾವಸ್ಥೆಯು ಪರಿಹಾರಗೊಂಡಿತು, ಮೊದಲನೆಯ ಪಂಚವಾರ್ಷಿಕ ಯೋಜನೆಯು ಜನರ ಜೀವನ ಮಟ್ಟವನ್ನು ಸಾಕಷ್ಟು ತೃಪ್ತಿಕರವಾದ ರೀತಿಯಲ್ಲಿ ಎತ್ತರಿಸುವ ಸಾಧ್ಯತೆಯನ್ನು ಸಂದೇಹಾತೀತ ವಿಷಯವಾಗಿ ಮಾಡಿತು ಎಂದರು ನೆಹರು. ಮೊದಲನೇ ಯೋಜನೆಯ (೧೯೫೧) ಪ್ರಾರಂಭಕ್ಕಿಂತ ಎರಡನೆ ಯೋಜನೆಯ (೧೯೫೬) ಪ್ರಾರಂಭಕ್ಕಾಗುವ ಐದು ವರ್ಷಗಳಲ್ಲಿ ರಾಷ್ಟ್ರೀಯ ಉತ್ಪನ್ನವು ಗಣನೀಯವಾಗಿ ಅಧಿಕಗೊಂಡು ವರ್ಷಕ್ಕೆ ೧೦೮೦೦ ಕೋಟಿ ರೂಪಾಯಿಗಳ ಮಟ್ಟವನ್ನು ಮುಟ್ಟಿದೆ ಎಂದವರು ಈ ಹೆಚ್ಚಳವು ಮೂರನೇ ಯೋಜನೆಯ ಪ್ರಾರಂಭದಲ್ಲಿ ೧೩೪೮೦ ಕೋಟಿ ರೂಪಾಯಿಯಾಗುವುದೆಂದು ಅವರು ತಿಳಿಸಿದರು ಆಗ (೧೯೬೧) ತಲಾ ಒಂದರ ವಾರ್ಷಿಕ ಆದಾಯವು ಈಗಿನ (೧೯೫೬) ೨೮೧ ರೂಪಾಯಿಗಳ ಬದಲಿಗೆ ೩೩೧ ರೂಪಾಯಿಗಳಾಗುವುದೆಂದರು ನೆಹರು.

ಅವರು ಮುಂದರಿದು, ಆ ಬಳಿಕದ ಕಾರ್ಯಕ್ರಮಗಳನ್ನೂ ಹೀಗೆ ವಿವರಿಸಿದರು— 'ಮೂರನೇ ಯೋಜನೆಯನ್ನು ಕಾರ್ಯರೂಪದಲ್ಲಿಳಿಸುವ ಮೂಲಕ ರಾಷ್ಟ್ರೀಯ ಆದಾಯವನ್ನು ವರ್ಷಕ್ಕೆ ೧೭೩೬೦ ಕೋಟಿ ರೂಪಾಯಿಗಳಿಗೆ (ತಲಾ ಒಂದರ ವಾರ್ಷಿಕ ಆದಾಯ ೩೯೬ ರೂಪಾಯಿ) ಏರಿಸುವುದು ನಮ್ಮ ಇಚ್ಛೆ ನಾಲ್ಕನೇ ಯೋಜನೆಯ ಕಾರ್ಯಕ್ರಮವು ರಾಷ್ಟ್ರೀಯ ಆದಾಯವನ್ನು ೨೧೬೮೦ ಕೋಟಿ ರೂಪಾಯಿಗಳಿಗೂ (ತಲಾ ಒಂದರ ಆದಾಯ ವರ್ಷಕ್ಕೆ ೪೬೬ ರೂ) ಐದನೇ ಯೋಜನೆಯು ೨೭೨೭೦ ಕೋಟಿ ರೂಪಾಯಿಗಳಿಗೂ (ತಲಾ ಒಂದರ ವಾರ್ಷಿಕ ಆದಾಯ ೫೪೬ ರೂ) ಮುಟ್ಟಿಸುವುದೆಂದು ನಮ್ಮ ವಿಶ್ವಾಸ.' ಹೀಗೆ ೧೯೫೧ರಿಂದ ಪ್ರಾರಂಭವಾದ ಯೋಜನಾಬದ್ಧ ಅಭಿವೃದ್ಧಿ ಕಾರ್ಯಕ್ರಮವು ೨೫ ವರ್ಷಗಳ ಬಳಿಕ, ಅಂದರೆ ೧೯೭೬ರಲ್ಲಿ, ತಲಾ ಒಂದರ ಆದಾಯವನ್ನು ಇಮ್ಮಡಿಗೊಳಿಸುವುದೆಂದು ನಮ್ಮ ಧುರೀಣರ ಅಭಿಪ್ರಾಯ

ಯೋಜನಾ ಆಯೋಗದ ಸಹಕಾರ್ಯದರ್ಶಿ ಶ್ರೀ ತಾರ್ಲೋಕ್ ಸಿಂಘರ ಆಕಾಶವಾಣಿ ಭಾಷಣವೊಂದರ ಪ್ರಕಾರವಾಗಿ, ನಾವು ೧೯೫೧ರಿಂದ ೧೯೬೧ನೇ ಇಸವಿಯ ನಡುವಣ ೧೦ ವರ್ಷಗಳ ಪ್ರಗತಿಯನ್ನು ವೀಕ್ಷಿಸಿದರೂ ಸಾಕು, ಅಭಿವೃದ್ಧಿ ಪ್ರಯತ್ನಗಳು ಸಫಲವನ್ನು ಕೊಟ್ಟಿರುವ ವಿಷಯ ಮನವರಿಕೆಯಾಗುವುದು ಖಂಡಿತ ಅವರ ಹೇಳಿಕೆಯಂತೆ, ಮೊದಲನೇ ಯೋಜನೆಯು ರಾಷ್ಟ್ರೀಯ ಉತ್ಪನ್ನವನ್ನು ೧೮% ಹೆಚ್ಚಿಸಿದೆ, ತಲಾ ಒಂದರ ಆದಾಯವನ್ನು ೧೦% ಅಧಿಕಗೊಳಿಸಿದೆ. (ಜನಸಂಖ್ಯೆಯು ಬೆಳೆಯುತ್ತಾ ಹೋಗುವುದರಿಂದ ಮತ್ತು ಈ ವೇಗದೊಡನೆ ಅಭಿವೃದ್ಧಿಯ ವೇಗವು ಹೊಂದಿಕೊಳ್ಳದೆ ಹಿಂದೆ ಬೀಳುತ್ತಿರುವುದರಿಂದ ಹೀಗೆ ತಲಾ ಒಂದರ ಆದಾಯವು ಹಿಂದೆ ಬೀಳುತ್ತಿದೆ ನಮ್ಮ ಮುಂದಿನ ಎಲ್ಲ ಯೋಜನೆಗಳಲ್ಲೂ ಇದೊಂದು ಎದ್ದು ಕಾಣಿಸುವ ವೈಶಿಷ್ಟ್ಯ) ಎರಡನೇ ಯೋಜನೆಯು ರಾಷ್ಟ್ರೀಯ ಉತ್ಪನ್ನವನ್ನು ೨೫% ಹೆಚ್ಚಿಸಲಿದೆ, ಆಗ ತಲಾ ಒಂದರ ಆದಾಯವು ೧೮% ಹೆಚ್ಚುತ್ತದೆ ಹೀಗೆ ಒಟ್ಟು ಹತ್ತು ವರ್ಷಗಳಲ್ಲಿ ರಾಷ್ಟ್ರೀಯ ಉತ್ಪನ್ನವು ೪೭% ಮತ್ತು ತಲಾ ಒಂದರ ಆದಾಯವು ೩೦% ಹೆಚ್ಚುವುದನ್ನು ಅಸಾಧಾರಣವಾದ ಸಾಧನೆಯಾಗಿ ಭಾವಿಸಬಹುದು

ಮೊದಲನೇ ಯೋಜನೆಯ ಅನುಭವದ ಬಲದಿಂದ ಹೀಗೆಲ್ಲ ಲೆಕ್ಕಹಾಕಲಾಗುತ್ತದೆ ಆದರೆ ಮೊದಲನೇ ಯೋಜನೆಯ ಅನುಭವವು ದೃಢವಾದ ತಳಹದಿಯ ಮೇಲೆ ನಿಂತಿದೆ ಎಂದು ಭಾವಿಸುವಂತಿದೆಯೆ? ಈ ವಿಷಯದಲ್ಲಿ ವಿಚಾರಕರು ಸಂಶಯಪಡುತ್ತಿದ್ದಾರೆ ಈ ಸಂಶಯಕ್ಕಾದರೂ ಸರಕಾರಿ ಅಂಕೆ ಸಂಖ್ಯೆಗಳೇ ಮೂಲ. ಕಳೆದ ವಾರ ಪ್ರಕಟವಾಗಿರುವ ರಾಷ್ಟ್ರೀಯ ಉತ್ಪನ್ನ ಮತ್ತು ಆದಾಯದ ಅಂಕೆ ಸಂಖ್ಯೆಗಳು ಮೊದಲನೇ ಯೋಜನೆಯ ಸಾಧನೆಯಾದರೂ ನಿಜವಾಗಿ ಈಗ ವರ್ಣಿಸಲ್ಪಟ್ಟಿರುವಷ್ಟು ಅಗಾಧವಾಗಿರಲಾರದೆಂಬ ಸಂಶಯಕ್ಕೆ ಎಡೆಯನ್ನು ಕೊಡುತ್ತವೆ

ಸರಕಾರದಿಂದ ಪ್ರಕಟವಾಗಿರುವ ಈ ಅಂಕೆ ಸಂಖ್ಯೆಗಳು ಭಾರತದ ರಾಷ್ಟ್ರೀಯ ಉತ್ಪನ್ನವು ೧೯೫೪-೫೫ನೇ ವರ್ಷದಲ್ಲಿ ೧೦೨೮೦ ಕೋಟಿ ರೂಪಾಯಿಗಳೆಂದು ಹೇಳುತ್ತವೆ; ಈ ಸಂಖ್ಯೆಯು ೧೯೫೩-೫೪ ಮತ್ತು ೧೯೫೨—೫೩ರಲ್ಲಿ ಕ್ರಮವಾಗಿ ೧೦೦೪೦ ಕೋಟಿ ಮತ್ತು ೯೮೭೦ ಕೋಟಿ ರೂಪಾಯಿಗಳಾಗಿದ್ದಿತು. ಇದಕ್ಕನುಸಾರವಾಗಿ ೧೯೫೨-೫೩, ೧೯೫೩-೫೪ ಮತ್ತು ೧೯೫೪-೫೫ನೇ ವರ್ಷಗಳಲ್ಲಿ ತಲಾ ಒಂದರ ವಾರ್ಷಿಕ ಆದಾಯವು ೨೫೬, ೨೬೬ ಮತ್ತು ೨೬೯ ರೂಪಾಯಿಗಳಾಗಿವೆ. ಎಂದರೆ, ೧೯೫೩-೫೪ನೇ ವರ್ಷಕ್ಕಿಂತ ೧೯೫೪--೫೫ನೇ ವರ್ಷಕ್ಕಾಗುವಾಗ ಸರಾಸರಿಯಾಗಿ ವ್ಯಕ್ತಿಯ ಉತ್ಪನ್ನವು ಹೆಚ್ಚಿಕೊಳ್ಳಲಿಲ್ಲವೆಂದೇ ಅರ್ಥವಾಗುತ್ತದೆ ಇವಕ್ಕೆ ಜನಸಂಖ್ಯೆಯ ಹೆಚ್ಚಳ ಮತ್ತು ಅಭಿವೃದ್ಧಿಯ ವೇಗಗಳಲ್ಲಿ ಸಾಮರಸ್ಯವಿಲ್ಲದುದೊಂದೇ ಮುಖ್ಯವಾದ ಕಾರಣ

ರಾಷ್ಟ್ರೀಯ ಉತ್ಪನ್ನದ ದೃಷ್ಟಿಯಿಂದ ನೋಡುವುದಾದರೂ ಪರಿಸ್ಥಿತಿಯು ಹೆಚ್ಚು ಆಶಾಜನಕವಾಗಿಲ್ಲ ೧೯೫೨-೫೩ನೇ ವರ್ಷಕ್ಕಿಂತ ೧೯೫೩-೫೪ನೇ ವರ್ಷಕ್ಕಾಗುವಾಗ ರಾಷ್ಟ್ರೀಯ ಉತ್ಪನ್ನದಲ್ಲಿ ೬% ಹೆಚ್ಚಳವು ಕಂಡು ಬಂತು, ಆದರೆ ೧೯೫೩-೫೪ನೇ ವರ್ಷಕ್ಕಿಂತ ೧೯೫೪-೫೫ನೇ ವರ್ಷಕ್ಕಾಗುವಾಗ ಈ ಹೆಚ್ಚಳವು ೧.೩% ಆಯಿತು. ಈ ಇಳಿತವು ಏನನ್ನು ಸೂಚಿಸುತ್ತದೆ? ಜನಸಂಖ್ಯೆಯು ಹೆಚ್ಚಾಗಿದ್ದರೂ, ದುಡಿಯಬಹುದಾದ ಕೈಗಳು ಹೆಚ್ಚಿಕೊಂಡಿದ್ದರೂ, ಅವು ಚನ್ನಾಗಿ ದುಡಿದಿಲ್ಲವೆಂದೇ ಇದರ ಅರ್ಥ. ಸರಕಾರದ ಪರವಾಗಿ ಇನ್ನೂ ಒಂದು ಕಾರಣವನ್ನು ಕೊಡಲಾಗಿದ್ದು, ಅದರಲ್ಲಿ ಸತ್ಯವುಂಟೆಂಬುದು ನಿಜ: ಅದೇನೆಂದರೆ ಕೃಷಿಕ್ಷೇತ್ರದಲ್ಲಿ ಉತ್ಪಾದನೆಯು ೧೯೫೩-೫೪ನೇ ಸಾಲಿಗಿಂತ ಮರುವರ್ಷ ಒಮ್ಮೆಲೇ ಹೆಚ್ಚಿಕೊಂಡಿತು. ಆದರೆ ಆ ಮೇಲೆ ಅದು ಏರಲಿಲ್ಲ.

ಭಾರತವು ಕೃಷಿ ಪ್ರಧಾನವಾದ ದೇಶ ಇಲ್ಲಿ ಬರಗಾಲ ಮತ್ತು ಮಹಾಪೂರಗಳೇ ಕೃಷಿಗಿರುವ ಆತಂಕ ಎಂದರೆ ನಿಸರ್ಗ ದೇವತೆಯ ಅನುಗ್ರಹದ ಮೇಲೆಯೇ ಇಲ್ಲಿಯ ಕೃಷಿಕ್ಷೇತ್ರದ ಉತ್ಪನ್ನ ಅವಲಂಬನೆಗೊಂಡಿದೆ ಪಂಚವಾರ್ಷಿಕ ಯೋಜನೆ

(೧೨ನೇ ಪುಟ ನೋಡಿರಿ)

Approved by the Text Book Committee of Madras, for non detailed study in higher Forms (vide Page 7, Fort St. George Gazette, Part I—B dated 4—5—1955)

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಒಗೆಯ ಗ್ರಂಥ

ಬದುಕು ಬಂಗಾರ

(ಬರೆದವರು ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ

ಕಳೆದ ವರ್ಷ ಕೆಲವು ಖಾಸಗಿ ಹೈಸ್ಕೂಲುಗಳಲ್ಲಿ ಉಪಪಠ್ಯ ಪುಸ್ತಕವಾಗಿ ಉಪಯೋಗಿಸಲ್ಪಟ್ಟಿದೆ ಈ ವರ್ಷ ಜಿಲ್ಲಾ ಬೋರ್ಡಿನ ಎಲ್ಲಾ ಶಾಲೆಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ

ಪುಟಗಳು ೧೫೮ ಬೆಲೆ ರೂ ೧—೮—೦

ಪ್ರತಿಗಳಿಗೆ ಬರೆಯಿರಿ

ನವಯುಗ ಪ್ರೆಸ್, ಉಡುಪಿ.

ವಾರ್ಷಿಕ ಚಂದಾ: ರೂ ೫—೧೨—೦

NAVAYUGA WEEKLY, UDIPI.

ಬಿಡಿ ಸಂಚಿಕೆ ಎರಡಾಣೆ

ಹಿಂದುಗಳ ಧಾರ್ಮಿಕ ಭಾವನೆಯ ಸುಧಾರಕ -- ಗೌತಮ

ಜಡತೆಯ ಬದಲು ಚಟುವಟಿಕೆಯ ಕಡೆ ಗಮನ ಸೆಳೆದ ಮಹನೀಯ

ಭಾರತದಲ್ಲಿರುವ ನಮ್ಮ ಪಾಲಿಗೆ ಈ ದೇಶದ ಧಾರ್ಮಿಕ ಪರಂಪರೆಯ ಉಜ್ವಲ ಪ್ರತಿನಿಧಿಯಾಗಿ ಬುದ್ಧ ಭಗವಾನನಿದ್ದಾನೆ; ಆತನು ತನ್ನ ಹೆಜ್ಜೆಯ ಗುರುತುಗಳನ್ನು ಭಾರತದಲ್ಲೆಲ್ಲ ಬಿಟ್ಟು ಹೋಗಿದ್ದಾನೆ; ಈ ದೇಶದ ನಡವಳಿಕೆ ಮತ್ತು ನಂಬಿಕೆಗಳೆಂಬ ಆತ್ಮದ ಮೇಲೆ ಆತನು ತನ್ನ ಅಚ್ಚನ್ನೊತ್ತಿರುತ್ತಾನೆ.

ಅಲ್ಲಲ್ಲಿಯ ಪರಂಪರೆಗನುಸರಿಸಿ ಜಗತ್ತಿನ ಅನ್ಯಭಾಗಗಳಲ್ಲಿ ಬುದ್ಧನ ಉಪದೇಶಗಳು ವಿಶಿಷ್ಟ ಸ್ವರೂಪವನ್ನು ಪಡೆದಿವೆ. ಆದರೆ ಇಲ್ಲಿ, ಬುದ್ಧನ ಜನ್ಮಭೂಮಿಯಲ್ಲಿ, ಅದು ಸಾಂಸ್ಕೃತಿಕ ಕ್ಷೇತ್ರವನ್ನು ಸಂಪೂರ್ಣವಾಗಿ ಪ್ರವೇಶಿಸಿ, ನಮ್ಮ ಸಂಸ್ಕೃತಿಯೊಡನೆ ಅವಿಭಾಜ್ಯವೆನಿಸಿದ ಸಾಮರಸ್ಯವನ್ನೂ ಸಮ್ಮಿಳಿತವನ್ನೂ ಹೊಂದಿದೆ. ಒಂದು ರೀತಿಯಿಂದ ನೋಡಿದರೆ, ಆಧುನಿಕ ಹಿಂದೂ ಮತದ ಮೂಲ ಪುರುಷನೇ ಬುದ್ಧ.

ಬುದ್ಧನು ಹೊಸ ಬಗೆಯ ಸ್ವತಂತ್ರ ಮನುಷ್ಯನನ್ನು ರೂಪಿಸಲು ಪ್ರಯತ್ನಶೀಲನಾದನು. ಯಾವುದೇ ತೊಂದರೆ, ಕಿರುಕುಳಗಳಿಲ್ಲದ, ತನ್ನ ಭವಿಷ್ಯತ್ತನ್ನು ತಾನೇ ರೂಪಿಸಿಕೊಳ್ಳುವುದರಲ್ಲಿ ಆಸಕ್ತನಾದ, ತನ್ನ ಆತ್ಮವೇ ಬೆಳಕೆಂದು ಭಾವಿಸುವ ಮನುಷ್ಯರನ್ನಾಗಿ ಜನರೆಲ್ಲರನ್ನು ಪರಿವರ್ತಿಸುವುದು ಆತನ ಘನವಾದ ಉದ್ದೇಶ.

ಆತನು ಮಾನವತೆಯ ಆರಾಧನೆಗೈದನು—ಈ ಮಾನವಾರಾಧನೆಯು ವರ್ಣ ಮತ್ತು ರಾಷ್ಟ್ರಗಳ ಮಿತಿಯನ್ನೂ ಮೀರಿ ಪಸರಿಸಿತು. ನಾವು ಪ್ರಜ್ಞಾವಂತರಾಗಬೇಕೆಂದೂ ಕರುಣೆಯನ್ನ ತೋರಬೇಕೆಂದೂ ಬುದ್ಧನು ಹೇಳಿದನು.

ನಾವು ಪ್ರತಿಪಾದಿಸುವ ಪಂಥದ ಮೇಲಿಂದಾಗಲೀ ನಾವು ಮುಂದಲೆಗೆ ಹಚ್ಚಿಕೊಳ್ಳಬಹುದಾದ ಪಟ್ಟಿಯ ಮೇಲಿಂದಾಗಲೀ ನಾವು ಬೊಟ್ಟೆಹಾಕುತ್ತಿರಬಹುದಾದ ಪಲ್ಲವಿಗಳ ಮೇಲಿಂದಾಗಲೀ ನಮ್ಮ ಯೋಗ್ಯತೆಯು ನಿರ್ಣಯಿಸಲ್ಪಡುವುದಿಲ್ಲ—ತ್ಯಾಗಪೂರ್ವಕವಾದ ಕಾರ್ಯ ಮತ್ತು ಸಹೋದರ ಭಾವನೆಗಳೇ ಇಂಥ ನಿರ್ಣಯಕ್ಕೆ ಬರುವಲ್ಲಿನ ಆಧಾರವೆಂದು ಬುದ್ಧನು ಸಾರಿದನು.

ಮನುಷ್ಯನು ನಿಜಕ್ಕೂ ಬಹಳ ದುರ್ಬಲನಾಗಿದ್ದಾನೆ. ವೃದ್ಧಾಪ್ಯಕ್ಕೂ ರೋಗರುಜಿನಗಳಿಗೂ ಮೃತ್ಯುವಿಗೂ ಆತನು ಗುರಿಯಾಗಿದ್ದಾನೆ. ಆದಾಗ್ಯೂ ತನ್ನ ಅಜ್ಞಾನ ಮತ್ತು ಅಹಂಕಾರಕ್ಕೋಸ್ಕರ ವೃದ್ಧರನ್ನೂ ರೋಗಿಗಳನ್ನೂ ಮೃತರನ್ನೂ ಮನವಾರೆ ನಿಂದಿಸುತ್ತಾನೆ! ಇದೆಂದೂ ಸರಿಯಾದುದಲ್ಲ ಎಂದು ಬುದ್ಧನ ವಾಣಿಯು ಉಪದೇಶಿಸುತ್ತದೆ.

ನಮ್ಮ ನಡತೆ ಹೇಗಿರಬೇಕು? ತನ್ನಂತೆಯೇ ಮನುಷ್ಯನಾಗಿರುವ ಯಾವನನ್ನೇ ಆಗಲಿ, ರೋಗಗ್ರಸ್ತನಾಗಿರುವಾಗ, ವೃದ್ಧಾಪ್ಯದಿಂದ ಬಳಲುತ್ತಿರುವಾಗ, ಮರಣೋನ್ಮುಖನಾಗಿರುವಾಗ ಜುಗುಪ್ಸೆಯಿಂದ ಯಾರೇ ಆಗಲಿ ನೋಡಿದ ಪಕ್ಷದಲ್ಲಿ ಹಾಗೆ ನೋಡಿದಾತನು ತನಗೆ ತಾನೇ ಅನ್ಯಾಯವಮಾಡಿಕೊಂಡಂತಾಗುತ್ತದೆ.

ಮಾರ್ಗದಲ್ಲಿ ಕುಂಟುತ್ತಾ ಜಾರುತ್ತಾ ನಡೆಯುವಾತನೊಡನೆ ಕೋಪಿಸಿಕೊಳ್ಳಕೂಡದು; ಏಕೆಂದರೆ, ಆತನು ಮೆಟ್ಟಿರಬಹುದಾದ ಪಾದರಕ್ಷೆಗಳು ಯಾವ ಬಗೆಯವೆಂದೂ ಆತನು ಹೊತ್ತಿರಬಹುದಾದ ಭಾರ ಎಷ್ಟೆಂದೂ ನಮಗೆ ತಿಳಿದಿರಲಾರದು. ನೋವು ಎಂದರೇನೆಂಬುದನ್ನು ನಾವು ತಿಳಿದವರಾಗಿದ್ದರೆ, ನೋವಿನಿಂದ ನರಳುವ ಎಲ್ಲರ ಸಹೋದರರು ನಾವಾಗುತ್ತೇವೆ—ಇದು ಬುದ್ಧ ವಾಣಿ!

ಬೌದ್ಧ ಮತವು ತೀರ ಹೊಸತಾದ ಮತ್ತು ಸ್ವತಂತ್ರವಾದ ಪಂಥವೊಂದನ್ನು ಪ್ರಾರಂಭಿಸಲಿಲ್ಲ. ಹಿಂದುಗಳ ಬಹಳ ಪ್ರಾಚೀನವಾದ, ಸನಾತನವಾದ ನಂಬಿಕೆಯಿಂದಲೇ ಒಡೆದು, ಬೆಳೆದ ಕವಲದು. ಆಧ್ಯಾತ್ಮಿಕ ಮತ್ತು ನೈತಿಕ ಕ್ಷೇತ್ರಗಳ ಮೂಲಭೂತಾಂಶಗಳಲ್ಲಿನ ನಂಬಿಕೆಯ ಮಟ್ಟಿಗೆ ಬುದ್ಧನು ಸಂಪ್ರದಾಯಾನುವರ್ತಿಯಾದನು; ಆದರೆ ಆಗಿನ ಕಾಲದಲ್ಲಿ ರೂಢಿಯಲ್ಲಿದ್ದ ಕೆಲವು ಆಚಾರಗಳಿಗೆ ಮಾತ್ರ ಆತನು ವಿರುದ್ಧವಾಗಿ ನಿಂತನು. ವೈದಿಕರ ವೈಭವಯುಕ್ತ ಸಮಾರಂಭಗಳ ಆವಶ್ಯಕತೆಯು ಅವನಿಗೆ ಎಳ್ಳಷ್ಟು ಕಂಡುಬರಲಿಲ್ಲ.

ಧಾರ್ಮಿಕ ಆಚಾರ ಕ್ಷೇತ್ರದಲ್ಲಿ ಸುಧಾರಣೆಯನ್ನು ಮಾಡಿ, ಮೂಲಭೂತ ಸೂತ್ರಗಳ ಕಡೆಗೆಯೇ ಜನರ ಗಮನವು ಹರಿಯುವಂತೆ ಮಾಡುವುದು ಬುದ್ಧನ ಮುಖ್ಯೋದ್ದೇಶ. ಈ ಪ್ರಕಾರವಾಗಿ ಯಾರು ಹಿಂದೂ ಧರ್ಮದ ಮೂಲ ಚೌಕಟ್ಟಿಗೆ ಹೊಂದಿಕೊಂಡು ಜಾಗೃತ ಪ್ರಜ್ಞೆಯ ಸಂದೇಶವನ್ನು ಬೀರುತ್ತಾರೋ ಅವರೆಲ್ಲರನ್ನೂ ಹಿಂದುಗಳು ಅವತಾರ ಪುರುಷರೆಂದು ಕರೆಯುತ್ತಾರೆ. ಮಾನವ ಜಾತಿಯ ಕಲ್ಯಾಣಕ್ಕಾಗಿ ಕಾಲಕಾಲಕ್ಕೆ ಅವತಾರವೆತ್ತುವ ಮಹಾ ವಿಷ್ಣುವಿನ ಒಂಭತ್ತನೇ ಅವತಾರವೇ ಬುದ್ಧನೆಂದು ನಮ್ಮೆಲ್ಲರ ವಿಶ್ವಾಸ.

ಬುದ್ಧನು ತನ್ನೀ ಅವತಾರಕಾಲದಲ್ಲಿ ಹಿಂದುಗಳನ್ನು ವೈಭವಯುಕ್ತ ಸಮಾರಂಭಗಳೇ ಮುಖ್ಯವಾಗಿದ್ದ ಆಚಾರಗಳಿಂದಲೂ ಅವುಗಳೇ ಮಹತ್ವದ ವಿಷಯಗಳೆಂಬುದಾಗಿದ್ದ ತಪ್ಪು ಗ್ರಹಿಕೆಗಳಿಂದಲೂ ಹಿಂದುಗಳನ್ನು ಬಿಡುಗಡೆಗೊಳಿಸಲು ನೋಡಿದನು. ವಿವಿಧ ಆಚಾರಗಳ ಪರಿಣಾಮವಾಗಿ ಮೂಲ ಹಿಂದೂ ಧರ್ಮಕ್ಕೆ ವ್ಯವಹಾರದಲ್ಲಿ ಅಂಟಿಕೊಂಡ ಕಿಲ್ಬಿಷವನ್ನು ತಿಕ್ಕಿ ತೊಳೆದು ದೂರಗೊಳಿಸಲು ಆತನು ಹೆಣಗಿದನು.

ಅವತಾರ ಪುರುಷನೆಂಬ ನಂಬಿಕೆಯನ್ನು ನಾವು ಉಳಿಸಿಕೊಂಡರೆ, ಆಗ ನಾವು ನಮ್ಮ ಪೂರ್ವಜರ ವಿಷಯದಲ್ಲಿ ಯಾವುದೇ ಅನ್ಯಾಯವನ್ನು ಮಾಡುತ್ತಿದ್ದೇವೆಂಬ ದೈನ್ಯಕ್ಕೆಡೆಯಿಲ್ಲದೆಯೇ, ಹಿಂದೂ ಧರ್ಮದಲ್ಲಿ ಬುದ್ಧನು ಮಾಡಿದ ಸುಧಾರಣೆಯನ್ನು ನಿರ್ವಿಕಾರ ಚಿತ್ತದಿಂದ ಸ್ವೀಕರಿಸುವ ಮನೋಭಾವವು ಅವಶ್ಯವಾಗಿಯೂ ಉಂಟಾಗುತ್ತದೆ.

ಕಪಿಲವಸ್ತುವಿನಂಥ ಸಣ್ಣ ರಾಜ್ಯದಲ್ಲಿ ಅತಿ ಹೆಚ್ಚಿನ ವೈಭವದಿಂದ ಜೀವನ ನಡೆಸಿ, ಕೊನೆಗೆ ಆತ್ಮಜಾಗೃತಿಯನ್ನೂ ಜ್ಞಾನೋದಯವನ್ನೂ ಹೊಂದಿ ಬುದ್ಧನಾದ ಗೌತಮನು ೪೫ ವರ್ಷಗಳ ವರೆಗೆ ಧ್ಯಾನದಲ್ಲಿರುವ ಸೌಂದರ್ಯ, ತ್ಯಾಗದಲ್ಲಿರುವ ಆನಂದ, ಜನಜೀವನದಲ್ಲಿರುವ ಮಾಧುರ್ಯ ಮತ್ತು ಸಮಾನತೆಯ ಮಹಿಮೆಗಳನ್ನು ನಿರಂತರವಾಗಿ ಬೋಧಿಸಿದನು.

ತನ್ನ ಪ್ರಿಯ ಶಿಷ್ಯನಾದ ಆನಂದನನ್ನು ಕುರಿತು ಆತನೊಮ್ಮೆ ಹೀಗೆಂದಿದ್ದನು: "ಎಲ್ಲವೂ ನಾಶವಾಗುತ್ತವೆ; ಆದುದರಿಂದ ನಿನ್ನ ವಿಮೋಚನೆಯನ್ನು ನೀನೇ ಕಷ್ಟಪಟ್ಟು ಸಾಧಿಸು."

ಇವಾತನ ಕೊನೆಯ ನುಡಿಗಳೆನ್ನಲಾಗುತ್ತದೆ. ಹೀಗೆನ್ನುತ್ತಿದ್ದಂತೆ ಆತನ ಎಲ್ಲ ನಂಬಿಕೆಗಳೂ ಎಲ್ಲ ವಿಚಾರಗಳೂ ಮಾಯವಾಗಿ, ತಾನೊಬ್ಬ ವ್ಯಕ್ತಿಯೆಂಬ ಭಾವನೆಯೂ ನಾಶವಾಗಿ, ಆತ್ಮವು ಆಧ್ಯಾತ್ಮಿಕ ಕ್ಷೇತ್ರದಲ್ಲಿ ಲೀನವಾಯಿತು. ಇಲ್ಲಿಗೆ ಗೌತಮನ ಬುದ್ಧಾವತಾರವು ಪರಿಸಮಾಪ್ತಿಯಾಯಿತು; ಆತನು ಮಹಾಪರಿನಿರ್ವಾಣವನ್ನೈದಿದನು.

ಬುದ್ಧನ ಜೀವನಕ್ಕೆ ವ್ಯಕ್ತಿಗತ ಹಾಗು ಸಾಮಾಜಿಕವೆಂಬ ಎರಡು ಬದಿಗಳಿವೆ. ನಮ್ಮೆಲ್ಲರಿಗೆ ಪರಿಚಿತವಾಗಿರುವ ಬುದ್ಧನ ವಿಗ್ರಹವು ಯೋಗಿಯದು; ಧ್ಯಾನಾಸಕ್ತನಾದ, ತನ್ನಲ್ಲಿಯೇ ತಾನು ಲೀನನಾದ ಮುದ್ರೆಯದು. ಹೀನಯಾನವೆಂದು ಇಂದು ಯಾವ ಪಂಥವನ್ನು ಕರೆಯಲಾಗುತ್ತದೋ ಆ ಪಂಥಕ್ಕೆ ಸಂಬಂಧಿಸಿದ ವಿಶ್ವಾಸವನ್ನು ಈ ಮುದ್ರೆ ವ್ಯಕ್ತಪಡಿಸುತ್ತದೆ. ಅಶೋಕ ಚಕ್ರವರ್ತಿಯು ಇದರಲ್ಲಿ ನಂಬಿಕೆಯನ್ನಿಟ್ಟಿದ್ದನು. ಈ ಪಂಥದವರಿಗೆ ಬುದ್ಧನು ದೇವರಲ್ಲ, ಮನುಷ್ಯ; ಒಬ್ಬ ಉಪದೇಶಕ, ಹೊರತು ಮೋಕ್ಷದಾಯಕನಲ್ಲ.

ಇನ್ನೊಂದು ಬದಿಯು ಬುದ್ಧನನ್ನು ಸಮಾಜ ಜೀವಿಯಾಗಿ ತೋರ್ಪಡಿಸುತ್ತದೆ. ಜನರ ನೋವು ನರಳಿಕೆಗಳನ್ನು ಕಂಡು, ಅವರ ಜೀವನದಲ್ಲಿ ಪ್ರವೇಶಿಸುವ ಆತುರವನ್ನು ಹೊಂದಿ, ಹಾಗೆ ಅವರ ದುಃಖಶಮನಮಾಡಿ, "ಬಹುಜನ ಹಿತಾಯ"ವೆಂಬ ನೀತಿಯಂತೆ ತನ್ನ ಸಂದೇಶವನ್ನು ನಾಲ್ಕೆಡೆಗಳಿಗೂ ಮುಟ್ಟಿಸುವ ಹಂಬಲವನ್ನಿಲ್ಲಿ ಬುದ್ಧನಿಗೆ ಆರೋಪಿಸಲಾಗುತ್ತದೆ. ಮಾನವತೆಯ ಮೇಲಿನ ಕರುಣೆಯ ಆಧಾರದ ಮೇಲೆ ಮಹಾಯಾನವೆಂಬ ಬೌದ್ಧ ಸಂಘವು ಹಿಂದಿನಿಂದ ಬೆಳೆಯಿತು. ಕುಶಾನರೂ ಗುಪ್ತರೂ ಇದನ್ನು ಪೋಷಿಸಿದರು. ಎಲ್ಲರಿಗೂ ಮೋಕ್ಷ, ಭಕ್ತಿಯ ಶಿಸ್ತು ಮತ್ತು ಸೇವಾಪರಾಯಣತೆಯ ಜೀವನವನ್ನು ಈ ಪಂಥ ಪ್ರತಿಪಾದಿಸುತ್ತದೆ.

ಸದ್ಯಕ್ಕೆ ಹೀನಯಾನ ಪಂಥವು ಸಿಂಹಳ, ಬರ್ಮ ಮತ್ತು ಥೈಲೇಂಡುಗಳಲ್ಲಿಯೂ ಮಹಾಯಾನ ಪಂಥವು ನೇಪಾಳ, ಟಿಬೇಟು, ಕೊರಿಯ, ಚೀನ ಮತ್ತು ಜಪಾನುಗಳಲ್ಲಿಯೂ ವ್ಯಾಪಿಸಿರುತ್ತದೆ. ಈ ಪಂಥಗಳಲ್ಲಿನ ವ್ಯತ್ಯಾಸವೇನೇ ಇರಲಿ ಕೆಲವು ವಿಷಯಗಳ ಮಟ್ಟಿಗೆ ಇಲ್ಲಿಯವರೆಲ್ಲರೂ ಒಪ್ಪುತ್ತಿವೆ.

ನಿದರ್ಶನಾರ್ಥವಾಗಿ, ಬೋಧಿವೃಕ್ಷದಡಿಯಲ್ಲಿ ಕುಳಿತು ಧ್ಯಾನಾಸಕ್ತನಾಗಿದ್ದಾಗ ಗೌತಮನಿಗೆ ಜ್ಞಾನೋದಯವಾಯಿತು; ನೋವು-ನರಳಿಕೆಗಳಿಂದ ದೂರವಾದ ಜಗತ್ತಿನ ಕಡೆಗೆ ಆತನು ಸಂಕೇತವನ್ನಿತ್ತನು; ಜ್ಞಾನಮಾರ್ಗದಿಂದ ನಡೆದು ಜನನ ಮರಣಗಳ ಚಕ್ರದಿಂದ ವಿಮೋಚನೆ ಹೊಂದುವಂತೆ ಆತನು ಹೇಳಿದನು —ಎಂದು ಎಲ್ಲರೂ ನಂಬಿದ್ದಾರೆ. ಇದು ಬೌದ್ಧಧರ್ಮದ ತಿರುಳು; ಇದೇ ಭಾರತದ ನೆಲದಲ್ಲಿ ಬುದ್ಧನು ಬಿಟ್ಟಿರುವ ತಾಯಿಬೇರು.

ಎಲ್ಲ ಧರ್ಮಗಳೂ ಮಾನವನ ಪ್ರಕೃತಿಯಲ್ಲಿ ಬದಲಾವಣೆಯನ್ನೆ ಉದ್ದೇಶವಾಗಿಟ್ಟುಕೊಂಡಿವೆ; ಇನ್ನೊಂದು ಜನ್ಮವಿದೆ ಎಂಬ ಕಲ್ಪನೆಯು ಹಿಂದು ಮತ್ತು ಬೌದ್ಧ ಮತಗಳ ಉಪದೇಶದ ಕೇಂದ್ರ ಸ್ಥಾನದಲ್ಲಿದೆ ಎನ್ನಬಹುದು. ಮನುಷ್ಯನು ಒಬ್ಬನೇ ಅಗಿಲ್ಲ—ಆತನು ಅನೇಕ ದೇಹಧಾರಣೆ ಮಾಡುತ್ತಾನೆ. ಆತನು ನಿದ್ರಾಸಕ್ತನಾಗಿರಬಹುದು; ಆತನು ಸ್ವಯಂಜಾಗೃತಿಯನ್ನು ಹೊಂದಲೂ ಬಹುದು. ಆದುದರಿಂದ ಆತನು ಎಚ್ಚರಬೇಕು; ತನ್ನೊಳಗೆಯೇ ಆತನು ಸಾಮರಸ್ಯವನ್ನು ಸ್ಥಾಪಿಸಬೇಕು, ಹೀಗೆ ಸ್ವತಂತ್ರನಾಗಬೇಕು. ಇದೇ ನಮ್ಮ ಧರ್ಮದ ತಿರುಳು. ಪ್ರಾಚೀನ ಗ್ರೀಕರೂ ಇದರಲ್ಲಿ ವಿಶ್ವಾಸ ಹೊಂದಿದ್ದರು.

ಗ್ರೀಕರ ನಂಬಿಕೆಯಂತೆ, ಮನುಷ್ಯನೊಂದು ಧಾನ್ಯದ ಬೀಜ. ಆ ಬೀಜವು ಒಂದು ಧಾನ್ಯವಾಗಿ ಮರಣ ಹೊಂದಬ

(೧೧ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೇ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೋಸಿಟ್ ವಾಲ್ಟ್

ಮಂಗಳೂರು—3.

ಇನ್ನು ನೂರು ವರ್ಷಗಳಲ್ಲಿ ಜಗತ್ತು

ಪ್ರತಿಭೆಯೊಂದಿದ್ದರೆ ಎಲ್ಲವೂ ಕ್ಷೇಮ

ಅಸ್ಸಾಮಿನ ನವಗಂಗದಲ್ಲಿ ಕೈಯಿಂದ ಭತ್ತ ಕುಟ್ಟುವ ಕೈಗಾರಿಕೆಯ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವ ಅಧಿಕಾರಿಯೊಬ್ಬರಿದ್ದಾರೆ. ಶ್ರೀ ರಾಮಕೃಷ್ಣ ಸಿಂಹ ಎಂದವರ ಹೆಸರು. ಭಾರತ ಸರಕಾರದ ನೌಕರರಾಗಿರುವ ಇವರು ಇದೀಗ ಸರಕಾರಕ್ಕೆ ಒಂದು ಮನವಿಯನ್ನು ಸಲ್ಲಿಸಿ, ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ನಮ್ಮ ನಿತ್ಯೋಪಯೋಗದ ಕೆಲಸಗಳಿಗೆ ಬೇಕಾದ ಶಕ್ತಿಯಾಗಿ ಪರಿವರ್ತಿಸಬಹುದು ಎಂಬ ಸೂಚನೆಯನ್ನು ನೀಡಿದ್ದಾರೆ. ಚಿಕ್ಕ ಪುಟ್ಟ ವೈಜ್ಞಾನಿಕ ಸಂಶೋಧನೆಗಳನ್ನು ಈಗಾಗಲೇ ಮಾಡಿ ಹೆಸರಾಗಿರುವ ಶ್ರೀ ಸಿಂಹರು ತನಗೆ ದ್ರವ್ಯ ಸಹಾಯವನ್ನಿತ್ತರೆ, ಈ ಬಗ್ಗೆ ವಿಶೇಷ ಸಂಶೋಧನೆಗಳನ್ನು ನಡೆಸಲು ಸಾಧ್ಯವಾಗುವುದೆಂದು ಹೇಳಿದ್ದಾರೆ.

ಈಗ ನಾವು ಉಗಿ, ನೀರು ಮತ್ತು ಗ್ಯಾಸುಗಳಿಂದ ಮಾತ್ರ ಶಕ್ತಿಯನ್ನು ಸಂಪಾದಿಸುತ್ತಿದ್ದೇವೆ. ನೀರಿನ ಬಳಕೆಯಿಂದ ಉಂಟಾದ ಶಕ್ತಿಯೇ ಇವುಗಳಲ್ಲೆಲ್ಲ ಬಹಳ ಅಗ್ಗ. ಆದರೆ, ಜಲಪಾತಗಳಿರುವಲ್ಲಿ ಮಾತ್ರ ಈ ಶಕ್ತಿಯ ಉತ್ಪಾದನೆಯು ಸಾಧ್ಯ. ಆದುದರಿಂದ ದೇಶದ ಯಾವ ಭಾಗದಲ್ಲಿ ಬೇಕಾದರೂ ನೀರಿನಿಂದುಂಟಾಗುವ ಶಕ್ತಿಗಿಂತಲೂ ಅಗ್ಗದಲ್ಲಿ ಶಕ್ತಿಯನ್ನು ಉತ್ಪಾದಿಸುವ ಸಾಧ್ಯತೆಯುಂಟೇ ಹೇಗೆಂದು ತಿಳಿಯುವುದು ಪ್ರಯೋಜನಕರ. ಭೂಮಿಯ ಗುರುತ್ವಾಕರ್ಷಣ ಶಕ್ತಿಯನ್ನು ನಮ್ಮ ಪ್ರಯೋಜನಕ್ಕೆ ಬಳಸುವ ಪ್ರಯೋಗಗಳನ್ನು ಈ ದೃಷ್ಟಿಯಿಂದ ವಿವೇಚಿಸಬೇಕು—ಎಂಬುದಾಗಿ ಶ್ರೀ ಸಿಂಹರ ಅಭಿಪ್ರಾಯ.

ಭಾರತವು ಹೀಗೆ ಸಂಶೋಧನೆಯ ಕ್ಷೇತ್ರದಲ್ಲಿ ಸಣ್ಣ ಹೆಜ್ಜೆಯನ್ನು ಮುಂದಿಡಲು ಉಪಕ್ರಮಿಸುತ್ತಿರುವಾಗ, ಅತ್ತ ಅಮೇರಿಕದಲ್ಲಿ ಮನುಷ್ಯನ ಮೇಧಾಶಕ್ತಿಯು ಈಗ ಅದ್ಭುತಗಳಾಗಿ ನಮಗೆ ತೋರಬಹುದಾದ ಅನೇಕ ಕೆಲಸಗಳು ಇನ್ನೊಂದು ಶತಮಾನದ ಬಳಿಕ ತೀರ ಸಾಮಾನ್ಯ ಕಾರ್ಯಗಳಾಗಿ ಕಾಣಿಸುವ ಸಾಧ್ಯತೆ ಇದೆ ಎನ್ನಲು ಹೋಗಿದ್ದಾರೆ. "ಕೆಲಿಫೋರ್ನಿಯ ಸ್ಕೂಲ್ ಆಫ್ ಟೆಕ್ನಾಲಜ" (ಯಂತ್ರ ಶಾಸ್ತ್ರ ವಿದ್ಯಾಲಯ, ಕೆಲಿಫೋರ್ನಿಯ) ಇಲ್ಲಿಯ ವಿಜ್ಞಾನಿಗಳು ಕೆಲವರು ನೂರು ವರ್ಷಗಳಾಚೆಯ ದಿನಗಳಲ್ಲಿ ಏನೆಲ್ಲ ನಡೆದೀತೆಂದು ಭಾವಿಸುವರೆಂಬ ವಿಷಯವನ್ನು ಅಮೇರಿಕದ ಪ್ರಸಿದ್ಧ ಪತ್ರಿಕೆಯಾದ ನ್ಯೂಯೋರ್ಕ್ ಟೈಮ್ಸ್ ವರದಿ ಮಾಡಿದೆ.

ಇನ್ನು ನೂರು ವರ್ಷಗಳಲ್ಲಿ ಒಬ್ಬನಿರುವ ಸ್ಥಾನದಲ್ಲಿ ಮೂರು ಮಂದಿ ಇರುತ್ತಾರೆ; ಈಗ ದೊರಕುತ್ತಿರುವ ಕಚ್ಚಾ ವಸ್ತುಗಳು ಆಗ ಬಹಳ ತುಟ್ಟಿಯಾಗುತ್ತವೆ. ಆದಾಗ್ಯೂ ಯಾರಿಗಾದರೂ ಆಹಾರ, ಶಕ್ತಿ, ಅಥವಾ ಬೇರಾವುದೇ ಸುಖಜೀವನದ ಸಾಧನದ ಅಭಾವವಾದೀತೆಂದು ಭಯಪಡುವುದು ಅಗತ್ಯವಿಲ್ಲ ಎಂದು ಈ ವಿಜ್ಞಾನಿಗಳು ಭರವಸೆ ಕೊಡುತ್ತಾರೆ. ಶ್ರೇಷ್ಠ ಯಂತ್ರ ಶಾಸ್ತ್ರವು ಮನುಷ್ಯನ ಎಲ್ಲ ಭೌತಿಕ ಪಿಪಾಸೆಗಳನ್ನೂ ಕಾರ್ಖಾನೆಗಳಲ್ಲಿ ತಯಾರಾದ ಸರಕುಗಳಿಂದ (ಆಹಾರವೂ ಇದರಲ್ಲಿ ಬಂತು) ಪೂರೈಸಲು ಆಗ ನೋಡುತ್ತದೆ; ಜಗತ್ತಿನ ಎಲ್ಲ ಆವಶ್ಯಕತೆಗಳೂ ಕಾರ್ಖಾನೆಗಳ ದೆಸೆಯಿಂದ ಪೂರೈಸಲ್ಪಡುವ ಈ ಯುಗವನ್ನು ಯಾಂತ್ರಿಕ ನಾಗರಿಕತೆಯ ಅತ್ಯುನ್ನತಾವಸ್ಥೆ ಎನ್ನಬಹುದು.

ಜಗತ್ತಿನಲ್ಲಿ ಇಂದು ಜನಸಂಖ್ಯೆಯು ೨೬೦ ಕೋಟಿಯಷ್ಟಿದೆ; ಇನ್ನು ನೂರು ವರ್ಷಗಳಲ್ಲಿ ಈ ಜನಸಂಖ್ಯೆಯ ಪ್ರಮಾಣವು ೭೦೦ ಕೋಟಿಯಾಗುತ್ತದೆ. ಮನುಷ್ಯನ ಆವಶ್ಯಕತೆಗಳ ಪಟ್ಟಿಯೂ ಇಂದಿಗಿಂತ ಹಲವು ಪಟ್ಟು ಉದ್ದವಾಗಿ ಬೆಳೆಯುತ್ತದೆ. ಈಗ ಬಳಕೆಯಲ್ಲಿರುವ ಎಲ್ಲ ಕಚ್ಚಾ ವಸ್ತುಗಳೂ ಮನುಷ್ಯನ ಆವಶ್ಯಕತೆಗಳನ್ನು ಪೂರೈಸಲಾಗದಷ್ಟು ವಿರಳವಾಗುತ್ತವೆ. ಆದರೇನು? ಯಂತ್ರ ಶಾಸ್ತ್ರದಲ್ಲಿ ಮನುಷ್ಯನ ಮೇಧಾಶಕ್ತಿಯು ಸಾಧಿಸಬಹುದಾದ ಪ್ರಗತಿಯ ದೆಸೆಯಿಂದ, ಈಗ ಯಾವ ಉಪಯೋಗಕ್ಕೂ ಬಳಸಲ್ಪಡದೆ ವಿಪುಲ ಪ್ರಮಾಣದಲ್ಲಿ ವ್ಯರ್ಥ ಬಿದ್ದಿರುವ ಸೂರ್ಯನ ಬೆಳಕು, ಗಾಳಿ, ಸಮುದ್ರದಲ್ಲಿರುವ ನೀರು ಮತ್ತು ಸಾಮಾನ್ಯ ಶಿಲೆ ಇತ್ಯಾದಿ ಕಚ್ಚಾವಸ್ತುಗಳನ್ನೆ ಬಳಸಿ ಎಲ್ಲ ಆವಶ್ಯಕತೆಗಳನ್ನು ಪೂರೈಸಲಾಗುವುದು ನಿಶ್ಚಯ!

ನೂರು ವರ್ಷಗಳಾಚೆಗಿನ ೭೦೦ ಕೋಟಿ ಜನರಿಗೆ ೭೦೦೦ ಕೋಟಿ ಟನ್ನುಗಳಷ್ಟು ಕಲ್ಲಿದ್ದಲಿನ ಅಗತ್ಯ ಬೀಳುತ್ತದೆ. ಈ ಲೆಕ್ಕದಲ್ಲಿ ಈಗಿರುವ ಕಲ್ಲಿದ್ದಲಿನ ನಿಕ್ಷೇಪವು ದೀರ್ಘಕಾಲದ ವರೆಗೆ ಉಳಿಯಲಾರದು. ಆದುದರಿಂದ ಈಗ ಕಚ್ಚಾ ಪೆಟ್ರೋಲಿಯಮನ್ನು ಶುದ್ಧೀಕರಿಸುವ ಕಾರ್ಖಾನೆಗಳಂತೆ ಶಿಲೆಯನ್ನು ಕುಟ್ಟಿ ಪುಡಿಮಾಡಿ ವಿಶ್ಲೇಷಿಸಿ ಶಕ್ತಿಸಾಧನಗಳನ್ನು ಸಂಪಾದಿಸಿಕೊಳ್ಳುವ ಕೆಲಸವು ನಡೆಯಬಹುದೆಂದು ವಿಜ್ಞಾನಿಗಳ ಅಂದಾಜು. ಒಂದು ಟನ್ನಿನಷ್ಟು ಶಿಲೆಯಲ್ಲಿ (ಗ್ರಾನೈಟ್) ನಾಲ್ಕು ಗ್ರ್ಯಾಂ ಯುರೇನಿಯಂ ಮತ್ತು ಹನ್ನೆರಡು ಗ್ರ್ಯಾಂ ಥೋರಿಯಂ ಇವೆ. ಅಣುಶಕ್ತಿ ಜನಕ ಯಂತ್ರದ "ಬ್ರೀಡರ್" ಮಾದರಿಯಲ್ಲಿ ಇಷ್ಟನ್ನು ಉಪಯೋಗಿಸಿದರೆ ೫೦ ಟನ್ನು ಕಲ್ಲಿದ್ದಲಿನಿಂದ ಹುಟ್ಟುವ ಶಕ್ತಿಗೆ ಸಮಾನವಾದ ಶಕ್ತಿ ದೊರೆಯುತ್ತದೆ; ಅಲ್ಲದೆ ಬೇರೆ ಅನೇಕ ಖನಿಜಗಳು ಉಪವಸ್ತುಗಳ ರೂಪದಲ್ಲಿ ಸಿಗುತ್ತವೆ.

ಅಣುಶಕ್ತಿಯನ್ನು ಸಮುದ್ರದ ನೀರನ್ನು ಶುದ್ಧಪಡಿಸುವುದಕ್ಕೂ ಈ ಕ್ರಿಯೆಯಿಂದ ಖನಿಜ ಪದಾರ್ಥಗಳನ್ನು ಸಹ ಸಂಪಾದಿಸಲಿಕ್ಕೂ ಉಪಯೋಗಿಸಬಹುದೆಂದು ವಿಜ್ಞಾನಿಗಳು ಹೇಳುತ್ತಾರೆ. ದ್ರವ ರೂಪದ ಇಂಧನ ದ್ರವ್ಯಗಳನ್ನೂ ಪ್ಲಾಸ್ಟಿಕ್ಕಿನ ಬೇರೆ ಬೇರೆ ನಮೂನೆಗಳನ್ನೂ ಅಣುಶಕ್ತಿಯಿಂದ ತಯಾರಿಸಬಹುದೆಂದೂ ಅವರ ಅಭಿಮತ.

ಉಣ್ಣುವ ೭೦೦ ಕೋಟಿ ಬಾಯಿಗಳ ಗತಿಯೇನು? ವಿಜ್ಞಾನಿಗಳ ಅಭಿಪ್ರಾಯದಂತೆ, ಈಗ ಆಹಾರ ದ್ರವ್ಯಗಳಲ್ಲಿ ಹೆಚ್ಚಿನವನ್ನು ಸುಮ್ಮನೆ ಹಾಳುಗೆಡವಲಾಗುತ್ತದೆ! ಉಪಯುಕ್ತ ರೀತಿಯಲ್ಲಿ ಈಗ ಲಭ್ಯವಿರುವ ಆಹಾರವನ್ನು ಉಪಯೋಗಿಸುವುದಾದರೆ ಜಗತ್ತಿನ ಈಗಿನ ಜನಸಂಖ್ಯೆಯ ೫೦೦ ಪಾಲಿನಷ್ಟು ಜನರು ಆಹಾರದ ವಿಷಯದಲ್ಲಿ ನಿಶ್ಚಿಂತೆಯಿಂದ ಇರಬಲ್ಲರು!

ಎಲ್ಲ ಆಹಾರವೂ ಸಸ್ಯಗಳಿಂದಲೇ ನೇರಾಗಿ ಅಥವಾ ಅಪ್ರತ್ಯಕ್ಷ ರೂಪದಲ್ಲಿ ಬರುತ್ತದೆಯಷ್ಟೆ? ಸಾಮಾನ್ಯ ಅಂದಾಜಿನ ಪ್ರಕಾರ, ಈಗ ಆಹಾರದ ಉತ್ಪಾದನೆಯಲ್ಲಿ ಮೂರನೇ ಒಂದಂಶದಷ್ಟನ್ನು ಇಲಿ ಮುಂತಾದ ಮನುಷ್ಯೇತರ ಪ್ರಾಣಿಗಳೂ ಕೀಟಗಳೂ ತಿಂದು ಹಾಕುತ್ತವೆ; ಅಥವಾ ಹಾಳುಗೆಡವುತ್ತವೆ. ಸುಮಾರು ಅರೆವಾಸಿಯಷ್ಟನ್ನು ಮನುಷ್ಯನೇ ಎತ್ತು, ಕೋಣ, ಎಮ್ಮೆ, ದನ ಇತ್ಯಾದಿ ಸಾಕುಪ್ರಾಣಿಗಳಿಗೆ ತಿನ್ನಿಸುತ್ತಾನೆ; ಇವುಗಳಿಂದ ತಾನಿತ್ತ ಆಹಾರಕ್ಕೆ ಪ್ರತಿಯಾಗಿ ಮಾಂಸ, ಬೆಣ್ಣೆ, ಹಾಲು, ಮೊಟ್ಟೆ ಇತ್ಯಾದಿಗಳ ರೂಪದಲ್ಲಿ ಆಹಾರ ವಸ್ತುಗಳನ್ನು ಸಂಪಾದಿಸುತ್ತಾನೆ. ಆದರೆ ಪ್ರಾಣಿಗಳು ಹೀಗೆ ಮನುಷ್ಯನಿಗೆ ವಾಪಸು ಕೊಡುವ ಆಹಾರ ಪದಾರ್ಥಗಳ ಯೋಗ್ಯತೆಯು ಅವುಗಳು ತಿನ್ನಲು ಉಪಯೋಗಿಸಿದ ಮೂಲ ಆಹಾರ ವಸ್ತುವಿನ ಹತ್ತರಲ್ಲಿ ಒಂದಂಶದಷ್ಟು ಮಾತ್ರವಿರುತ್ತದೆ!

ಇವೆಲ್ಲ ರೀತಿಯ ನಷ್ಟಗಳನ್ನು ನಿವಾರಿಸಬೇಕು. ನಿಜ ಹೇಳುವುದಾದರೆ ಮನುಷ್ಯಸಹಿತನಾಗಿ ಎಲ್ಲ ಪ್ರಾಣಿಗಳು ಆಹಾರವಾಗಿ ಉಪಯೋಗಿಸಬಹುದಾದ ಸಸ್ಯ ದ್ರವ್ಯಗಳ ಒಂದಂಶದಷ್ಟನ್ನೆ ಉಪಯೋಗಿಸಿಕೊಳ್ಳುತ್ತವೆ. ಅನ್ನ ಉಣ್ಣುವ ನಾವು ಭತ್ತದ ಸಿಪ್ಪೆಯನ್ನೂ ತೌಡನ್ನೂ ಸಸಿಯನ್ನೂ ಉಪಯೋಗಿಸದೆ ಜಾನುವಾರುಗಳಿಗದನ್ನ ತಿನ್ನಿಸುತ್ತೇವೆ. ಜೋಳದ ದಂಟು, ಕಬ್ಬಿನ ಸಿಪ್ಪೆ ಇತ್ಯಾದಿಗಳನ್ನು ಪ್ರಾಣಿಗಳೂ ತಿನ್ನುವುದಿಲ್ಲ-ಬೆಂಕಿ ಉರಿಸಲಿಕ್ಕಷ್ಟೆ ಅವರ ಉಪಯೋಗ ಮಾಡುತ್ತೇವೆ! ಇಂಥ ನಷ್ಟಗಳನ್ನೂ ಹೋಗಲಾಡಿಸುವುದು ಆವಶ್ಯಕ.

ಆಹಾರಾಭಾವವಿದೆ ಎಂದಾದರೆ, ಆಗ ಮನುಷ್ಯನು ಸ್ವಯಮೇವ ಜಾಗ್ರತೆ ವಹಿಸುತ್ತಾನೆ; ನಷ್ಟವನ್ನು ಸಾಧ್ಯವಿದ್ದೆಲ್ಲ ರೀತಿಯಿಂದ ತಪ್ಪಿಸಲು ಹೆಣಗುತ್ತಾನೆ. ಮುಂದಿನ ವರ್ಷಗಳಲ್ಲಿ ಜಾನುವಾರುಗಳಿಗೂ ಇತರ ಪ್ರಾಣಿಗಳಿಗೂ ಮೊದಲು ಸಸ್ಯಾಹಾರವನ್ನು ತಿನ್ನಿಸಿ ಅವುಗಳಿಂದ ತನ್ನ ಆಹಾರವನ್ನು ಪಡೆಯುವ ಈಗಿನ ಕ್ರಮವನ್ನು ಮನುಷ್ಯನು ಬದಲಿಸುವ ಸಂಭವವೇ ಹೆಚ್ಚು. ಸಸ್ಯಾಹಾರವನ್ನು ನೇರಾಗಿ ತಾನೇ ಉಪಯೋಗಿಸುವ ಮನಸ್ಸು ಮನುಷ್ಯನಿಗಾಗಬಹುದು (ಭಾರತದ ಪ್ರಾಚೀನ ಋಷಿ ಮುನಿಗಳು ಮಾಂಸಾಹಾರವನ್ನು ವರ್ಜ್ಯವೆಂದು ಹೇಳಿ, ಸಸ್ಯಾಹಾರವನ್ನೇ ಪುರಸ್ಕರಿಸಿದ್ದುದರ ರಹಸ್ಯ ಈಗಲಾದರೂ ತಿಳಿದು ಬಂತು!) ಈ ನೇರ ಕ್ರಮಕ್ಕೆ ಹೊಂದಿಕೊಳ್ಳುವುದು ಮನುಷ್ಯನ ಪಾಲಿಗೆ ಕಷ್ಟವೆನಿಸಿದರೆ, ಆತನು ಸಮುದ್ರದ ನೀರನ್ನು ಶುದ್ಧೀಕರಿಸಿ, ಆದರಿಂದ ೧೦೦ ಕೋಟಿ ಎಕ್ರೆಯಷ್ಟು ಹೊಸ ಭೂಮಿಯನ್ನು ಕೃಷಿಗೆ ಅಳವಡಿಸಿಕೊಂಡಾನು! ಇಷ್ಟಾಗಿಯೂ ಆಹಾರಾಭಾವ ಉಳಿದರೆ, ಯಂತ್ರ ಶಾಸ್ತ್ರವು ಸಾಗರ ಮಧ್ಯದಲ್ಲಿ ಕೃಷಿಯನ್ನು ಮಾಡುವ ತಿಳಿವಳಿಕೆಯನ್ನು ಮನುಷ್ಯನಿಗೆ ನೀಡಬಲ್ಲದು.

ಹೀಗೆ ವಿಜ್ಞಾನಿಗಳು ನೀವು ಯಾವ ವಿಷಯದಲ್ಲೂ ಜನ ಸಂಖ್ಯೆ ಹೆಚ್ಚುತ್ತಿದೆ ಎಂದು ಚಿಂತಿಸುವುದು ಬೇಡ ಎನ್ನುತ್ತಾರೆ. ಆದರೆ ಈ ಭರವಸೆಯ ಮಾತಿನ ನಡುವೆಯೂ ಒಂದು ಎಚ್ಚರಿಕೆಯನ್ನು ಅವರು ಕೊಡುತ್ತಿದ್ದಾರೆ: ಅದೇನೆಂದರೆ ಯಂತ್ರ ವಿಜ್ಞಾನದ ಈ ಅದ್ಭುತಗಳು ಮನುಷ್ಯನ ಮೇಧಾಶಕ್ತಿಯ ಮೇಲೆ

(೧೨ನೇ ಪುಟ ನೋಡಿರಿ)

50 ವರ್ಷಗಳು—
—ಒಂದು ಉತ್ತಮ ವಯಸ್ಸು
ಐವತ್ತು ವರ್ಷಗಳ ಹಿಂದೆ ಕೆನರಾ ಬೇಂಕ್ ತನ್ನ ಸಾಂಘಿಕ ಅಸ್ತಿತ್ವವನ್ನು ಪ್ರಾರಂಭಿಸಿತು. ಈಗ ಐವತ್ತು ವರ್ಷಗಳ ಬಳಿಕ, ಈ ಐದು ದಶಮಾನಗಳ ನಮ್ಮ ಅನುಭವವನ್ನು ಇನ್ನೂ ತಾರುಣ್ಯದ ಉತ್ಸಾಹಪರ ಮನೋಭಾವದೊಂದಿಗೆ ನಮ್ರಪೂರ್ವಕ ಕ್ರೋಢೀಕರಿಸುತ್ತೇವೆ. 1906ರಿಂದಲೂ ಈ ವರ್ಷಗಳನ್ನು ಫಲಪ್ರದವಾಗಿಯೂ ಅಭಿವೃದ್ಧಿ ಮತ್ತು ಆನಂದದಾಯಕವಾಗಿಯೂ ಮಾಡಿದ ನಿಮಗೆಲ್ಲರಿಗೂ ನಮ್ಮ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.
ಕೆನರಾ ಬೇಂಕ್ ಲಿಮಿಟೆಡ್
1906 = ಸರ್ವ ಜನೋಪಯೋಗೀ ಬೇಂಕ್ = 1956

ಎರಡನೇ ಯೋಜನೆಯ ಸಮಾಲೋಚನೆ

ಸರಕಾರಿ ಜೀವವಿಮಾ ಮಂಡಳ ರಚಿಸುವ ನಿರ್ಧಾರ

ಸಂಸತ್ತಿನ ಎರಡೂ ಮನೆಗಳು ವಿಸರ್ಜನೆ ಹೊಂದುವುದಕ್ಕೆ ಮುಂಚೆ ಎರಡನೇ ಯೋಜನೆಯ ತತ್ವ, ಉದ್ದೇಶ ಮತ್ತು ಕಾರ್ಯಕ್ರಮಗಳಿಗೆ ಸಾಮಾನ್ಯ ಒಪ್ಪಿಗೆಯನ್ನು ವ್ಯಕ್ತಪಡಿಸುವಂತೆ ಪ್ರಧಾನಿಗಳು ಕೇಳಿ ಕೊಂಡರು; ಅವರ ಈ ವಿನಂತಿಗೆ ಬೆಂಬಲ ರೂಪದ ಮಾತುಗಳನ್ನೆ ಸದಸ್ಯರು ಆಡಿದರೆಂದು ಹೇಳಬಹುದು. ಕೆಲವು ವಿವರಗಳ ಮಟ್ಟಿಗೆ ಪ್ರತಿಪಕ್ಷದವರಾದ ಪ್ರಜಾ ಸಮಾಜವಾದಿಗಳೂ ಕಮ್ಯೂನಿಸ್ಟರೂ ಸ್ವಲ್ಪ ಭಿನ್ನಾಭಿಪ್ರಾಯವನ್ನು ಪ್ರದರ್ಶಿಸಿದರೇನೊ ನಿಜ; ಆದರೆ ಯೋಜನೆಯ ಸದಾಶಯಗಳನ್ನು ಅವರು ಸಹ ಮನ್ನಿಸಿದರು.

ಕೃಷಿ ಕ್ಷೇತ್ರದ ಉತ್ಪನ್ನ

ಲೋಕ ಸಭೆಯ ಮುಂದೆ ಮಾತನಾಡುತ್ತಾ ನೆಹರುಗಳು ಎರಡನೇ ಯೋಜನೆಯಲ್ಲಿ ಕೃಷಿಯ ಉತ್ಪಾದನೆಯನ್ನು ೧೫% ಹೆಚ್ಚಿಸಬೇಕೆಂದು ಮೊದಲು ನಿರ್ಧರಿಸಿದ್ದರೂ ಈಗ ೩೫ರಿಂದ ೪೦% ಹೆಚ್ಚಳವನ್ನು ಸಾಧಿಸಬೇಕೆಂದು ಸಂಕಲ್ಪಿಸಲಾಗಿದೆ ಎಂದರು. ಇದರಿಂದ ದೇಶದೊಳಗಿನ ಆಹಾರಾವಶ್ಯಕತೆಯನ್ನು ಪೂರೈಸುವುದಲ್ಲದೆ, ಹೊರದೇಶಗಳಿಗೆ ನಿರ್ಯಾತವನ್ನು ಸಹ ಮಾಡಿ, ವಿನಿಮಯಕ್ಕೆ ಉಪಯುಕ್ತವಾದ ಹಣವನ್ನು ಸಂಪಾದಿಸುವುದಕ್ಕೆ ಸಾಧ್ಯವಾಗುವುದೆಂದು ಅವರು ಹೇಳಿದರು. ಅರ್ಥಸಚಿವರ ಅಂದಾಜಿನಂತೆ ಸುಮಾರು ೪೦೦ ಕೋಟಿ ರೂಪಾಯಿಗಳಷ್ಟು ಹಣವನ್ನು ಆಹಾರ ದವಸಗಳ ನಿರ್ಯಾತದಿಂದ ಎರಡನೇ ಯೋಜನೆಯ ಅವಧಿಯಲ್ಲಿ ಸಂಪಾದಿಸಲಾಗುತ್ತದೆ. ರಾಷ್ಟ್ರೀಯ ವಿಸ್ತರಣೆ ಮತ್ತು ಸಮಾಜ ವಿಕಾಸ ಯೋಜನೆಗಳ ಕಾರ್ಯಾಚರಣೆಯಿಂದ ಸುಮಾರು ೩೦ ಲಕ್ಷ ಟನ್ನುಗಳಷ್ಟು ಯೋಜನೆಯಲ್ಲಿ ಹೇಳಿದುದಕ್ಕಿಂತ ಹೆಚ್ಚು ಆಹಾರದವಸಗಳು ಉತ್ಪಾದನೆಯಾಗಬಹುದೆಂದು ಅರ್ಥಸಚಿವರ ವಿಶ್ವಾಸ.

ಕೈಗಾರಿಕೆಗಳ ನಿರ್ವಹಣೆ

ಸರಕಾರವು ತನ್ನ ಕೈಗೆ ತೆಗೆದುಕೊಂಡ ಕೈಗಾರಿಕೆಗಳ ಆಡಳಿತವನ್ನು ಹೇಗೆ ನಿರ್ವಹಿಸಿಕೊಂಡು ಹೋಗಬೇಕೆಂದಿದೆ ಎಂಬ ವಿಷಯವನ್ನು ಪ್ರಸ್ತಾಪಿಸುತ್ತಾ ನೆಹರುಗಳು ಇಂಥ ಕೈಗಾರಿಕೆಗಳ ವಿಷಯದಲ್ಲಿ ಸಂಸತ್ತು ದೈನಂದಿನ ಆಡಳಿತೆಯ ಬಗ್ಗೆ ನಿರ್ದೇಶನವನ್ನು ಕೊಡುತ್ತ ಕೂಡಲಾರದು; ಅದು ವ್ಯಾವಹಾರಿಕವಲ್ಲ ಎಂದರು. ಔದ್ಯಮಿಕ ಸಂಸ್ಥೆಗಳಲ್ಲಿ ಕ್ಷಿಪ್ರದಲ್ಲಿ ದೃಢ ನಿರ್ಧಾರಗಳನ್ನು ಕೈಗೊಳ್ಳಬೇಕಾದ ಅವಶ್ಯಕತೆ ಬಹಳ ಹೆಚ್ಚಾಗಿ ಕಂಡುಬರುತ್ತದೆ. ಇದಕ್ಕೆ ಅವಕಾಶವಿಲ್ಲದಿದ್ದರೆ ಆ ಕೈಗಾರಿಕೆಯ ನಾಶ ಕಟ್ಟಿಟ್ಟದ್ದು. ಆ ಸ್ಥಳದಲ್ಲಿದ್ದ ವ್ಯಕ್ತಿಗೆ ಸ್ವಪ್ರೇರಣೆ ಮತ್ತು ಸ್ವಬುದ್ಧಿಯಿಂದ ನಿರ್ಧಾರಕ್ಕೆ ಬರುವ ಅವಕಾಶವನ್ನೂ ಸ್ವಾತಂತ್ರ್ಯವನ್ನೂ ನೀಡದಿದ್ದರೆ—ಸರಕಾರಿ ಆಡಳಿತದ ದೀರ್ಘ ವಿಧಾನಗಳೇ ಇಲ್ಲಿಯೂ ಅನ್ವಯವಾಗಬೇಕೆಂದು ವಾದಿಸಿದರೆ— ಫಲಿತಾಂಶವು ಹಿತವಾಗದು. ರಷ್ಯದ ಉಪಸಭಾಪತಿ ಮಿ.ಮಿಕೋಯನ್ನರು ಆದೇಶದಲ್ಲಿ ಅನೇಕ ವರ್ಷಗಳ ಪ್ರಯೋಗದ ಬಳಿಕ ಸರಕಾರಿ ಕೈಗಾರಿಕೆಗಳ ಆಡಳಿತ ವ್ಯವಸ್ಥೆಯ ಮಟ್ಟಿಗೆ ಅಲ್ಲಿದ್ದ ವ್ಯಕ್ತಿಯ ವಿಚಕ್ಷಣತೆ ಪ್ರಕಟವಾಗಗೊಡಬೇಕೆಂದೂ ಸರಕಾರದ ನೇರ ನಿಯಂತ್ರಣವಿಲ್ಲಿ ಸಲ್ಲದೆಂದೂ ಹೇಳಿರುವರೆಂದರು ನೆಹರು.

ಖಾಸಗಿ ರಂಗದ ಕಾರ್ಯ

ಯೋಜನೆಯ ಕುರಿತು ರಾಜ್ಯ ಸಭೆಯಲ್ಲಿ ಮಾತನಾಡುತ್ತಾ ನೆಹರುಗಳು ಖಾಸಗಿ ರಂಗದ ಉಚ್ಚಾಟನೆ ಮಾಡಬೇಕೆನ್ನುವ ತೀವ್ರವಾದಿಗಳಿಗೆ ತಾಳ್ಮೆಯನ್ನು ಉಪದೇಶಿಸಿದರು. ಸಮಾಜವಾದವನ್ನು ರೂಢಿಸಬೇಕಾದರೆ ಖಾಸಗಿ ರಂಗದ ಚಟುವಟಿಕೆಗಳನ್ನೆಲ್ಲ ಸರಕಾರವೇ ತನ್ನ ಕೈಗೆ ತೆಗೆದುಕೊಳ್ಳಬೇಕೆನ್ನುವುದು ಮಕ್ಕಳ ದಡ್ಡತನದ ಕೆಲಸ ಎಂದು ನೆಹರು ಹೇಳಿದರು. ಖಾಸಗಿ ರಂಗವೂ ಸಾರ್ವಜನಿಕ ರಂಗವೂ ಯೋಜನೆಯ ಚೌಕಟ್ಟಿನಲ್ಲಿ ಕೆಲಸ ಮಾಡುತ್ತಾ ಹೋಗಬೇಕೆಂದು ಹೇಳುತ್ತಾ ಸಾರ್ವಜನಿಕ ರಂಗವು ದೇಶದ ಆರ್ಥಿಕ ಚಟುವಟಿಕೆಯಲ್ಲಿ ಸಹಜ ರೀತಿಯನ್ನನುಸರಿಸಿ ಖಾಸಗಿ ರಂಗಕ್ಕಿಂತ ಎಷ್ಟೋ ಪಾಲು ಹೆಚ್ಚು ಮಹತ್ವದ ಪಾತ್ರ ವಹಿಸುವಂತೆ ನೋಡಿಕೊಳ್ಳುವುದೇನೊ ಆವಶ್ಯಕ ಎಂದರು. ಆದರೆ ಸಾರ್ವಜನಿಕ ರಂಗವು ವಿಸ್ತರಿಸುವುದಕ್ಕೆ ಬೇರೆ ವಿಶಾಲವಾದ ಸ್ಥಳವಿರುವಾಗ, ಈಗಾಗಲೇ ಅಸ್ತಿತ್ವದಲ್ಲಿರುವ ಖಾಸಗಿ ರಂಗದ ಸಾಮಾನ್ಯ ಕೈಗಾರಿಕೆಗಳನ್ನು ವಶಪಡಿಸಿಕೊಳ್ಳುವುದು ಬುದ್ಧಿವಂತಿಕೆಯಾಗಲಾರದೆಂದರು ನೆಹರು. ಭೂಹಿಡುವಳಿಗೊಂದು ಮಿತಿ ಹಾಕುವ ಪ್ರಶ್ನೆಯತ್ತ ತಿರುಗಿ ನೆಹರುಗಳು ಇಂಥ ವಿಷಯಗಳಲ್ಲಿ ಉತ್ಪಾದನೆಯ ಹೆಚ್ಚಳಕ್ಕೆ ತೊಂದರೆಯಾಗದಂತೆ ವಿಶೇಷ ಜಾಗರೂಕತೆ ವಹಿಸಬೇಕಾಗಿದೆ; ಶಾಸನದ ಮೂಲಕ ಒಮ್ಮೆಲೇ ಇವುಗಳನ್ನು ಇತ್ಯರ್ಥಿಸುವುದು ಕಷ್ಟಕರವೆಂದರು.

ಚುನಾವಣಾ ಶಾಸನ

ರಾಜ್ಯ ಸಭೆಯು ಚುನಾವಣೆಯ ವಿಧಾನಗಳನ್ನು ಸರಳಗೊಳಿಸುವ ಶಾಸನವನ್ನು ಲೋಕ ಸಭೆಯು ಅಂಗೀಕರಿಸಿದ ರೀತಿಯಲ್ಲೇ ಸ್ವೀಕರಿಸದೆ, ಅದಕ್ಕೊಂದು ತಿದ್ದುಪಡಿಯನ್ನು ಮಾಡಿದೆ. ಪರಿಣಾಮದಲ್ಲಿ ಈ ಮಸೂದೆಯು ಪುನಃ ಲೋಕ ಸಭೆಯ ಮುಂದೆ ಹೋಗಬೇಕಾದ ಆವಶ್ಯಕತೆ ಬಂದಿದೆ. ಈ ಮಸೂದೆಯ ಲೋಪ-ದೋಷಗಳ ಕುರಿತು ಬಹಳ ವಿಷದವಾಗಿಯೂ ವಿಮರ್ಶಾತ್ಮಕವಾಗಿಯೂ ಮಾತನಾಡಿದವರಲ್ಲಿ ಸ್ವತಂತ್ರ ಸದಸ್ಯರಾದ ಪಂಡಿತ ಹೃದಯನಾಥ ಕುಂಜ್ರುರ ಹೆಸರು ಉಲ್ಲೇಖನೀಯ. ಅವರು ೪ನೇ ಸೂತ್ರಕ್ಕೊಂದು ತಿದ್ದುಪಡಿ ಸೂಚಿಸಿದರು. ಇದಕ್ಕನುಸಾರವಾಗಿ, ಚುನಾವಣೆಗಳಲ್ಲಿ ಹುರಿಯಾಳು ಸ್ಥಾನಕ್ಕೆ ಅರ್ಜಿ ಸಲ್ಲಿಸಿದವರ ಮತ್ತು ಚುನಾವಣೆಯ ಫಲಿತಾಂಶದ ವಿವರಗಳನ್ನು ತಿಳಿಸುವ ಪದ್ಧತಿಯನ್ನು ಲೋಕಸಭೆ ಮತ್ತು ರಾಜ್ಯಗಳ ಶಾಸನಾಂಗದ ಕೆಳಮನೆಗಷ್ಟೇ ಮಿತವಾಗಿ ಅನ್ವಯಿಸದೆ, ರಾಜ್ಯ ಸಭೆ ಮತ್ತು ರಾಜ್ಯಗಳ ಶಾಸನಾಂಗಗಳ ಮೇಲ್ಮನೆಗೆ ಸಹ ವಿಸ್ತರಿಸಬೇಕಾಗಿದೆ. ಕಾನೂನು ವ್ಯವಹಾರಗಳ ಮಂತ್ರಿ ಶ್ರೀ ಪಾಟಸ್ಕರರು ಈ ಸೂಚನೆಯನ್ನು ಒಪ್ಪಿಕೊಂಡರು; ಸಭೆಯೂ ಇದಕ್ಕೆ ಒಪ್ಪಿಗೆ ನೀಡಿತು.

ಜೀವವಿಮಾ ನೌಕರರು

ಇದೇ ಸೋಮವಾರ ರಾಜ್ಯಸಭೆಯು ದೇಶದ ಜೀವವಿಮಾ ರಂಗವನ್ನು ರಾಷ್ಟ್ರೀಕರಿಸುವ ಮತ್ತು ಈ ರಂಗದ ಆಡಳಿತ ನೋಡಿಕೊಳ್ಳಲು ಶಾಸನಬದ್ಧವಾದ ಮಂಡಳವೊಂದನ್ನು ನೇಮಿಸುವ ಮಸೂದೆಯ ಮೇಲೆ ಚರ್ಚೆಯನ್ನು ಪ್ರಾರಂಭಿಸಿತು. ಈ ಸಂದರ್ಭದಲ್ಲಿ ಮಾತನಾಡುತ್ತಾ ಅರ್ಥಸಚಿವ ಶ್ರೀ ದೇಶಮುಖರು ಈಗ ವಿಮಾ ಕಂಪೆನಿಗಳಲ್ಲಿ ಉದ್ಯೋಗದಲ್ಲಿರುವ ಎಲ್ಲ ಕೆಲಸಗಾರರನ್ನೂ ಸೂಚಿತ ಮಂಡಳವು ತನ್ನ ಅಧೀನದಲ್ಲಿ ತೆಗೆದುಕೊಳ್ಳುವುದೆಂದೂ ಯಾರನ್ನೂ ಕೆಲಸದಿಂದ ತೆಗೆದುಹಾಕಲಾಗುವುದಿಲ್ಲವೆಂದೂ ಹೇಳಿದರು. ಉದ್ಯೋಗಸ್ಥರ ಸಂಖ್ಯೆಯು ಬಹಳ ವಿಶೇಷವಾಗಿದ್ದರೂ ಸೂಚಿತ ವಿಮಾ ಮಂಡಳವು ತನ್ನ ಕಾರ್ಯಕ್ಷೇತ್ರವನ್ನೂ ವ್ಯವಹಾರವನ್ನೂ ಕಾಲಾನುಕ್ರಮದಲ್ಲಿ ವಿಸ್ತರಿಸುವ ಮೂಲಕ ತನ್ನ ಅಧೀನದಲ್ಲಿರುವ ಎಲ್ಲ ಉದ್ಯೋಗಸ್ಥರಿಗೂ ಕೈತುಂಬ ಕೆಲಸ ಕೊಡಿಸಲು ಸಮರ್ಥವಾಗುವುದೆಂಬ ಆಶಯವನ್ನವರು ವ್ಯಕ್ತಪಡಿಸಿದರು.

ತಿದ್ದುಪಡಿಗಳ ಸ್ವೀಕಾರ

ಲೋಕ ಸಭೆಯು ಈಗಾಗಲೇ ಈ ಮಸೂದೆಯನ್ನು ಕೆಲವು ತಿದ್ದುಪಡಿಗಳೊಡನೆ ಅಂಗೀಕರಿಸಿದೆ. ಇವುಗಳ ಪ್ರಕಾರ, ಸೂಚಿತ ವಿಮಾ ಮಂಡಳವು ಅಸ್ತಿತ್ವಕ್ಕೆ ಬರುವ ದಿನದ ಒಂದು ವರ್ಷದ ಪೂರ್ವದಲ್ಲಿ ನಿರಂತರವಾಗಿ ಕೆಲಸದಲ್ಲಿದ್ದ ಚೀಫ್ ಏಜೆಂಟರ ನೌಕರರನ್ನು ಸೂಚಿತ ಮಂಡಳವು ತನ್ನ ನೌಕರ ವರ್ಗದಲ್ಲಿ ಸೇರಿಸಿಕೊಳ್ಳುತ್ತದೆ; ಅಲ್ಲದೆ ಚೀಫ್ ಏಜಂಟರ ಕೈಕೆಳಗೆ ಪೂರ್ಣಾವಧಿಯ ನೌಕರರಾಗಿ ದುಡಿಯುತ್ತಿದ್ದು ಇದೇ ಜನವರಿ ೧೯ನೇ ತಾರೀಕಿನ ಬಳಿಕ ಕೆಲಸದಿಂದ ತೆಗೆಯಲ್ಪಟ್ಟವರನ್ನು ಸಹ ಸೂಚಿತ ಮಂಡಳವು ತನ್ನ ನೌಕರ ವರ್ಗದಲ್ಲಿ ಸೇರಿಸಿಕೊಳ್ಳುತ್ತದೆ. ಪ್ರಮುಖ ಘೋರಣೆಯ ಪ್ರಶ್ನೆಯೊಂದರಲ್ಲಿ ಪ್ರಜಾ ಸಮಾಜವಾದಿ ಧುರೀಣ ಶ್ರೀ ಅಶೋಕ ಮೆಹತರು ಮಂಡಿಸಿದ ತಿದ್ದುಪಡಿ ಮಾತ್ರ ನಿರಾಕೃತವಾಯಿತು. ಸೂಚಿತ ವಿಮಾ ಮಂಡಳದ ಲೆಕ್ಕಪತ್ರಗಳ ಪರಿಶೀಲನೆಯ ಅಧಿಕಾರಿಗಳನ್ನು ಸರಕಾರವು ಆಡಿಟರ್ ಜನರಲರ ಸಲಹೆಯಂತೆ ನೇಮಿಸಬೇಕೆಂದೂ ಆಡಿಟರ್ ಜನರಲರಿಗೆ ವಿಮಾ ಮಂಡಳದ ಲೆಕ್ಕ ಪತ್ರಗಳ ಪರೀಕ್ಷೆ ನಡೆಸಲು ಸ್ವಲ್ಪ ಮಟ್ಟಿನ ಅಧಿಕಾರವಿರಬೇಕೆಂದೂ ಈ ತಿದ್ದುಪಡಿ ಹೇಳಿದ್ದಿತು.

ಅರ್ಥ ಸಚಿವರ ವಾದ

ಲೆಕ್ಕ ಪತ್ರಗಳ ಪರಿಶೀಲನೆಯ ವಿಷಯದಲ್ಲಿ ತನ್ನ ಅಭಿಪ್ರಾಯಕ್ಕೂ ಆಡಿಟರ್ ಜನರಲರು ಹೊಂದಿರುವ ನಿಲುವಿಗೂ ವ್ಯತ್ಯಾಸವಿದೆ ಎಂಬುದನ್ನು ಶ್ರೀ ದೇಶಮುಖರು ಮಸೂದೆಯ ಪ್ರಥಮ ವಾಚನದ ಚರ್ಚೆಗೆ ಉತ್ತರಿಸುವಾಗಲೇ ಹೇಳಿದ್ದರು. ಸೂಚಿತ ವಿಮಾ ಮಂಡಳವು ಪ್ರಾಮಾಣಿಕ ಅಂಕೆ-ಸಂಖ್ಯೆಗಳು ಲಭ್ಯವಿಲ್ಲದ ದೆಸೆಯಿಂದ ತನ್ನ ವ್ಯವಹಾರದಲ್ಲಿ ನಡುಗುತ್ತಿಲ್ಲದಿರಬೇಕಾದರೆ, ಆಡಿಟರ್ ಜನರಲರ ವಶಕ್ಕೆ ಲೆಕ್ಕ ಪತ್ರಗಳ ಪರಿಶೀಲನೆಯ ಕೆಲಸವನ್ನು ಒಪ್ಪಿಸ ಕೂಡದು. ಜೀವ ವಿಮೆಯಂಥ ವಿಶೇಷ ಚಟುವಟಿಕೆಯ ಕ್ಷೇತ್ರದಲ್ಲಿ ವಾಡಿಕೆಯ ಸರಕಾರಿ ಲೆಕ್ಕ ಪರಿಶೋಧನಾ ವಿಧಾನವು ಉಪಯುಕ್ತವಾಗದು. ವಿಮಾ ಮಂಡಳದ ಪ್ರಾರಂಭ ದಿನಗಳಲ್ಲಿಯಾದರೂ ನಾವು ಇಂಥ ತೊಂದರೆಯನ್ನು ತಪ್ಪಿಸಬೇಕು. ಸಾರ್ವಜನಿಕ ಹಣವನ್ನು ವೆಚ್ಚ ಮಾಡುವ ಈ ವಿಮಾ ಮಂಡಳದ ಮೇಲೆ ಸಂಸತ್ತು ಅಂದಾಜು ಸಮಿತಿಯ ಮೂಲಕ ನಿಯಂತ್ರಣವನ್ನು ಉಳಿಸಿಕೊಳ್ಳಬಲ್ಲದು. ಇದು ಇಚ್ಛಿತ ಪರಿಣಾಮ ಮಾಡುವುದಿಲ್ಲವೆಂದು ಅನುಭವವು ಹೇಳುವುದಾದರೆ, ಹಿಂದಿನಂದ ಆಡಿಟರ್ ಜನರಲರ ನೇತೃತ್ವದಲ್ಲಿಯೇ "ವಿಶೇಷ" ಲೆಕ್ಕ ಪರಿಶೋಧನಾ ವ್ಯವಸ್ಥೆಯನ್ನು ವಿಮಾ ಮಂಡಳದ ಮಟ್ಟಿಗೆ ನೇಮಿಸುವ ಕುರಿತು ಪರ್ಯಾಲೋಚಿಸಬಹುದು. ಈಗಂತೂ ಸರಕಾರದ ಪೂರ್ವಾನುಮತಿಯ ಮೇರೆಗೆ ವಿಮಾ ಮಂಡಳವು ನೇಮಿಸುವ ಜನರಿಂದಲೇ ಲೆಕ್ಕ ಪರಿಶೀಲನೆ ನಡೆಯುವುದು ಹಿತಕರವೆಂದು ಅರ್ಥ ಸಚಿವರು ವಾದಿಸಿ, ಜಯಶೀಲರಾದರು.

ಆಡಳಿತ ವಿಧಾನ

ವಿಮಾ ಕಂಪೆನಿಗಳಿಗೆ ಸರಕಾರವು ೪೫೦ ಲಕ್ಷ ರೂಪಾಯಿಗಳಷ್ಟು ಪರಿಹಾರ ಧನವನ್ನು ಕೊಡಬೇಕಾಗಿ ಬರುವುದೆಂದು ಅರ್ಥಸಚಿವರು ತಿಳಿಸಿದರು. ವಿಮಾ ಕಂಪೆನಿದಾರರ ವಿಷಯದಲ್ಲಿ ಇದು ನ್ಯಾಯ ಸಮ್ಮತ ಪರಿಹಾರವಾಗುವುದೆಂದೂ ದೇಶದ ವಿಷಯದಲ್ಲಿಯಾದರೂ ಇದು ಅನ್ಯಾಯದ್ದಾಗಲಾರದೆಂದೂ ಅವರು ಹೇಳಿದರು. ಸೂಚಿತ ವಿಮಾ ಮಂಡಳದ ನಿತ್ಯ ವ್ಯವಹಾರದಲ್ಲಿ ವಿಕೇಂದ್ರೀಕೃತ

PT. AMBLAY RAMASWAMIER'S 98 Yrs. Renowned Specifics
— SANTHANA SINDHURA —
(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHER-HOOD by ending STERILITY. Price: 12 Pkts. Rs. 6—0—0.
— MADANA VILASA —
(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.
THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.
Please send 2½ As. Stamps for CATALOGUE, Price, Etc., mentioning the age of the Couple and History of the Disease.
A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಪದ್ಧತಿಯನ್ನನುಸರಿಸುವುದು. ಕೇಂದ್ರ ಮಂಡಳವು ಧೋರಣೆ ಮತ್ತು ನಿಧಿಗಳ ನಿಕ್ಷೇಪದಂಥ ಮಹತ್ವದ ವಿಷಯಗಳಲ್ಲಿ ಮಾರ್ಗದರ್ಶನ ಮಾಡಿ ಪ್ರಾದೇಶಿಕ ಕಾರ್ಯಾಲಯಗಳಿಗೆ ಉಳಿದ ಅಧಿಕಾರವನ್ನು ಬಿಟ್ಟುಕೊಡುತ್ತದೆ. ಈ ಪ್ರಾದೇಶಿಕ ಕಾರ್ಯಾಲಯಗಳಾದರೂ ತಮ್ಮ ಕೈಕೆಳಗಿನ ವಿಭಾಗ ಕಾರ್ಯಾಲಯಗಳಿಗೆ ಹೆಚ್ಚಿನ ಅಧಿಕಾರವನ್ನಿತ್ತು ಅವು ಮಂಡಳದ ಪ್ರಧಾನ ಕಾರ್ಯಾಲಯಗಳಂತೆ ಕೆಲಸ ಮಾಡಗೊಡುತ್ತವೆ ಎಂದರು. ವಿಮಾ ಮಂಡಳದಲ್ಲಿ ನೌಕರರಿಗೆ ಪ್ರಾತಿನಿಧ್ಯವೀಯುವ ಪ್ರಶ್ನೆಯನ್ನು ಕೂಲಿಕಾರ ಖಾತೆಯು ಎರಡನೇ ಯೋಜನೆಯ ಧೋರಣೆಯ ಹಿನ್ನೆಲೆಯಲ್ಲಿ ವಿಮರ್ಶಿಸಿದ ಬಳಿಕ ನಿರ್ಧರಿಸಬೇಕಾಗುವುದೆಂದೂ ಆದರೆ ಪಾಲಿಸಿದಾರರ ನೇರ ಪ್ರಾತಿನಿಧ್ಯಕ್ಕೆ ವ್ಯವಸ್ಥೆ ಮಾಡುವುದು ಕಷ್ಟವೆಂದೂ ಅರ್ಥ ಸಚಿವರು ಹೇಳಿದರು.

ಪರಿಮಿತ ಆದಾಯ

ವ್ಯಕ್ತಿಯ ಆದಾಯಕ್ಕೊಂದು ಮಿತಿಯನ್ನು ಹಾಕಬೇಕೆಂಬ ಉದ್ದೇಶದಿಂದ ಲೋಕ ಸಭೆಯಲ್ಲಿ ಖಾಸಗಿ ರೂಪದಿಂದ ಶ್ರೀ ವಿಭೂತಿ ಮಿಶ್ರಾರು ಮಂಡಿಸಿದ್ದ ಗೊತ್ತುವಳಿಯ ಮೇಲೆ ಕಳೆದ ವಾರ ಚರ್ಚೆಯು ಮುಂದರಿಯಿತು. ಕಾಂಗ್ರೆಸಿನ ಶ್ರೀ ಭಾಗವತ ಝಾ ಆಜಾದರು ಮೂಲ ಗೊತ್ತುವಳಿಯ ಸ್ಥಾನದಲ್ಲಿ ತಿದ್ದಿದ ಗೊತ್ತುವಳಿಯನ್ನು ತನ್ನ ಪರವಾಗಿ ಮಂಡಿಸಿದರು. ಇದು "ದೇಶದಲ್ಲಿರುವ ಬೇರೆ ಬೇರೆ ವರ್ಗಗಳ ನಡುವೆ ಆದಾಯದಲ್ಲಿರುವ ವ್ಯತ್ಯಾಸವನ್ನು ಆದಷ್ಟು ಮಟ್ಟಿಗೆ ಕಡಿಮೆಗೊಳಿಸಲು" ಸರಕಾರವು ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಹೇಳುತ್ತದೆ. ಅರ್ಥ ಸಚಿವ ಶ್ರೀ ದೇಶಮುಖರು ಈ ತಿದ್ದಿದ ಗೊತ್ತುವಳಿಯನ್ನು ಸ್ವೀಕರಿಸಲು ಒಪ್ಪಿದರು. ಅರ್ಥಸಚಿವರು ಈ ಸಂದರ್ಭದಲ್ಲಿ ಮಾತನಾಡುತ್ತ ಶ್ರೀ ಮಿಶ್ರಾರು ಹೇಳಿದಂತೆ ಆದಾಯಕ್ಕೆ ಮಿತಿಯನ್ನು ಹಾಕಲು ಸರಕಾರವೀಗ ಕ್ರಮತೆಗೆದುಕೊಳ್ಳುವ ಸ್ಥಿತಿಯಲ್ಲಿಲ್ಲ ಎಂದರು. ಆದರೆ ಅವರು ಹಾಗೆ ಕೇಳಿರುವುದರ ಹಿನ್ನೆಲೆಯನ್ನು ಪರಾಮರ್ಶಿಸಿ, ಈ ಗೊತ್ತುವಳಿಯ ಹಿಂದಿರುವ ಭಾವನೆಗಳನ್ನು ಗೌರವಿಸಿ, ಸರಕಾರವು ತಿದ್ದಿದ ಗೊತ್ತುವಳಿಯನ್ನು ಸ್ವೀಕರಿಸುವುದೆಂದರು. ಆದಾಯ ಮತ್ತು ಆರ್ಥಿಕ ರಂಗದ ವಿಷಮತೆಯನ್ನು ನಿಧಾನವಾಗಿ ನಿವಾರಿಸುವುದೇ ಸರಕಾರದ ಧೋರಣೆಯಾಗಿದೆ ಎಂದವರು ಭರವಸೆ ನೀಡಿದರು.

ಆದಾಯ ಹಾಗೂ ಕರಭಾರ

ಶ್ರೀಮಂತರ ಮೇಲೆ ಹೆಚ್ಚು ಹೆಚ್ಚು ತೆರಿಗೆಯನ್ನು ಹಾಕುವಮೂಲಕ ವಿಷಮತೆಯ ನಿವಾರಣೆ ಮಾಡಬಹುದೆಂದು ಸೂಚಿಸಿದವರ ನಿಲುಮೆಯನ್ನು ಪ್ರಸ್ತಾಪಿಸುತ್ತಾ ಶ್ರೀ ದೇಶಮುಖರು ಸಮಯವು ಪಕ್ವವೆನ್ನಿಸಿದಾಗ ಸರಕಾರವು ಅವಶ್ಯವಾಗಿಯೂ ಸೂಕ್ತ ತೆರಿಗೆ ಸೂಚನೆಗಳನ್ನು ಸದಸ್ಯರ ಮುಂದಿಡುವುದೆಂದರು. ಈ ಪ್ರಕಾರವಾಗಿ ಜನರಲ್ಲಿ ಭಾವನಾತ್ಮಕ ತೃಪ್ತಿಯನ್ನುಂಟುಮಾಡಲು ಪ್ರಯತ್ನಿಸಲಾಗುವುದೆಂದವರು ಹೇಳಿದರು. "ನೇರವಾಗಿ ಕೊರಿಸಬಹುದಾದ ತೆರಿಗೆಯು ಮಿತಿ ಮಾರ ತೊಡಗಿದೆ

ಪಾಕಿಸ್ತಾನದಲ್ಲಿ ಮರಳಿ ರಾಜಕೀಯ ಬಿಕ್ಕಟ್ಟು

ಪೂರ್ವ ಮತ್ತು ಪಶ್ಚಿಮ ವಿಭಾಗಗಳ ಅವ್ಯವಸ್ಥೆಯ ನಡುವೆ ಕೇಂದ್ರದ ತೊಳಲಾಟ

ಪಾಕಿಸ್ತಾನವು ಇಂದು ಅಂತಃಕಲಹದಿಂದ ತುಂಬಿದ ದೇಶವಾಗಿದೆ. ಅಲ್ಲಿ ಕೆಲವು ತಿಂಗಳ ಹಿಂದೆ ಕೇಂದ್ರ ಸರಕಾರದ ವಿಷಯದಲ್ಲಿ ತೀವ್ರ ಕ್ಷೋಭೆಯುಂಟಾಯಿತು; ಅದಕ್ಕೆ ಹಿಂದೆ ಪೂರ್ವ ಬಂಗಾಲದ ಚುನಾವಣೆಗಳಿಂದಾಗಿ ರಾಜಕೀಯ ವಾತಾವರಣ ಹದಗೆಟ್ಟಿತು; ಸ್ವಲ್ಪ ಸಮಯದ ಹಿಂದೆ ಪಶ್ಚಿಮ ಪಾಕಿಸ್ತಾನಿ ಪ್ರದೇಶಗಳನ್ನೆಲ್ಲ ಏಕಘಟಕವಾಗಿ ರೂಪಿಸುವ ಪ್ರಯತ್ನದ ವಿಷಯದಲ್ಲಿ ರಂಪಾಟ ನಡೆಯಿತು. ಈಗ ಪೂರ್ವ-ಪಶ್ಚಿಮವಾಗಿ ವಿಭಾಗ ಹೊಂದಿರುವ ಪಾಕಿಸ್ತಾನಿ ಪ್ರದೇಶಗಳೆಂಬ ಪ್ರಜಾಸತ್ತಾತ್ಮಕ ರಥದ ಗಾಲಿಗಳೆರಡೂ ಮುರಿದ ಸ್ಥಿತಿಯು ಅಲ್ಲಿ ಕಂಡು ಬರುತ್ತದೆ. ಅಕ್ಕಪಕ್ಕದ ಶ್ವಾಸಕೋಶಗಳು ಕೆಟ್ಟರೆ, ನಡುವಿನ ಹೃದಯದ ಗತಿ ಏನಾದೀತೊ ಆ ಕೇಡಿನ ಗಳಿಗೆಯು ಪಾಕಿಸ್ತಾನಿ ಕೇಂದ್ರ ಸರಕಾರಕ್ಕೆ ಕಾದಿದೆ ಎನ್ನಬಹುದು.

ಘಟನಾತ್ಮಕ ಬಿಕ್ಕಟ್ಟು

ಪೂರ್ವ ಬಂಗಾಲದಲ್ಲಿ ಪಾಕಿಸ್ತಾನದ ಹಿಂದಿನ ಪ್ರಧಾನಿ ಮಹಮ್ಮದಾಲಿಗಳಿಂದ "ದೇಶ ದ್ರೋಹಿ" ಎನ್ನಿಸಿದ್ದ ಫಜಲುಲ್ ಹಕ್ಕರು ಗವರ್ನರರಾಗಿದ್ದಾರೆ. ಅಲ್ಲಿ ಅಬು ಹುಸ್ಸೇನ್ ಸರಕಾರದ ಮಂತ್ರಿಮಂಡಳ ಅಧಿಕಾರದಲ್ಲಿದ್ದಿತು. ಈ ಮಂತ್ರಿ ಮಂಡಳವು ಶಾಸನಾಂಗದ ಅಧಿವೇಶನವು ಕಳೆದ ವಾರ ಜರಗಿದಾಗ ಮುಂಗಡ ಪತ್ರವನ್ನು ಮಂಡಿಸಲು ಅಪ್ಪಣೆಯನ್ನು ಕೇಳಿತು. ಆಗ ಪ್ರತಿಪಕ್ಷದ ಸದಸ್ಯರು ಪಾಕಿಸ್ತಾನದ ಘಟನಾ ಸಮಿತಿಯ ಅಧಿವೇಶನವು ಮುಕ್ತಾಯಗೊಂಡ ಮಾರ್ಚಿ ೩ನೇ ತಾರೀಕಿನ ಬಳಿಕ ಕೂಡಲೇ ಮುಂಗಡ ಪತ್ರವನ್ನು ಮಂಡಿಸಬೇಕಿತ್ತೆಂದು ಘಟನಾತ್ಮಕ ಹಾಗು ತಾಂತ್ರಿಕ ಮಹತ್ವದ ಪ್ರಶ್ನೆಯನ್ನೆತ್ತಿ, ಮುಂಗಡ ಪತ್ರವನ್ನು ಮಂಡಿಸಲಾಗದೆಂದು ಪ್ರತಿಪಾದಿಸಿದರು. ರಾಜ್ಯದ ಶಾಸನಾಂಗವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲು ಸರಕಾರದ ಮಂತ್ರಿ ಮಂಡಳವು ತಪ್ಪಿದೆ ಎಂದು ಆರೋಪಿಸಲಾಯಿತು. ಹೀಗೆ ಏಳೂವರೆ ತಾಸುಗಳ ವರೆಗೆ ಚರ್ಚೆ ನಡೆದ ಬಳಿಕ ಸಭಾಧ್ಯಕ್ಷರು ಮುಂಗಡ ಪತ್ರವನ್ನು ಮಂಡಿಸಲು ಅಪ್ಪಣೆಯನ್ನು ನಿರಾಕರಿಸಿದರು.

ಶಾಸನಾಂಗದ ಅಪಮಾನ

ತನ್ನ ನಿರ್ಣಯದಲ್ಲಿ ಸಭಾಧ್ಯಕ್ಷರು ಸರಕಾರವು ಶಾಸನಾಂಗದ ಕಾರ್ಯಕ್ರಮವನ್ನು ನಿರ್ಧರಿಸುವಾಗ ತನ್ನನ್ನು ವಿಚಾರಿಸಿಲ್ಲವೆಂದೂ ಸಂಬಂಧಿಸಿದ ನಡವಳಿಕೆಯ ನಿಯಮಗಳನ್ನು ಮಂತ್ರಿ ಮಂಡಳವು ಉಲ್ಲಂಘಿಸಿದೆಯೆಂದೂ ಹೇಳಿದರು. ಇದರಿಂದ ಮಂತ್ರಿ ಮಂಡಳವು ಕೆಲಸ ಮಾಡುವುದೇ ಅಸಾಧ್ಯವಾಗಿ ಪರಿಣಮಿಸಿತು. ಇಂಥ ಸಂದರ್ಭವನ್ನು ತಂದೊಡ್ಡಿದ ಸಭಾಧ್ಯಕ್ಷರ ನಿರ್ಣಯವು ದೊಡ್ಡ ಪ್ರಮಾದವಾಗಿದೆ ಎಂದು ಸರಕಾರದವರು ಹೇಳಿಕೆಯನ್ನಿತ್ತಿದ್ದಾರೆ; ಪಾಕಿಸ್ತಾನದ ವಿದೇಶ ಮಂತ್ರಿ ಶ್ರೀ ಹಮಿದುಲ್ ಹಕ್ ಚೌಧರಿಯವರು ಸಹ ಸಭಾಧ್ಯಕ್ಷರು ತಮ್ಮ ಅಧಿಕಾರದ ಮಿತಿಯನ್ನು ಮೀರಿ ವರ್ತಿಸಿದ್ದಾರೆಂದು ಆರೋಪಿಸಿದ್ದಾರೆ. ಮುಂಗಡ ಪತ್ರವನ್ನು ಮಂಡಿಸುವಲ್ಲಿ ವಿಳಂಬವಾಗಿದೆ ಎಂಬ ಆರೋಪದ ಕುರಿತು ಸಭೆಯೇ ನಿರ್ಣಯ ಕೊಡಬೇಕಿತ್ತಲ್ಲದೆ ಸಭಾಧ್ಯಕ್ಷರಲ್ಲ ಎಂದಿವರು ಹೇಳಿದ್ದಾರೆ; ಕಾನೂನು ಸಭಾಧ್ಯಕ್ಷರಿಗೆ ಹೀಗೆ ನಿರ್ಣಯ ಕೊಡುವ ಅಧಿಕಾರ ನೀಡಿಲ್ಲವೆಂದವರ ಅಭಿಪ್ರಾಯ. ಸಭಾಧ್ಯಕ್ಷರ ತೀರ್ಮಾನವು ಶಾಸನಾಂಗದ ಅಪಮಾನವೆಂದಿದ್ದಾರೆ ಚೌಧರಿ.

ರಾಷ್ಟ್ರಾಧ್ಯಕ್ಷರ ಕ್ರಮ

ಏನೇ ಆಗಲಿ, ಸಭಾಧ್ಯಕ್ಷರು ಮಂತ್ರಿ ಮಂಡಳದ ವರ್ತನೆಯನ್ನು ನಿಷೇಧಿಸಿದ್ದಷ್ಟೇ ಅಲ್ಲ, ಅಧಿವೇಶನವನ್ನೆ ಮುಂದೂಡಿದರು. ಇದರಿಂದುಂಟಾದ ಗಂಭೀರ ಪರಿಸ್ಥಿತಿಯನ್ನು ಅವಲೋಕಿಸಿದ ಗವರ್ನರರು ಶಾಸನಾಂಗವನ್ನೆ ವಿಸರ್ಜಿಸಿದರು. ಗವರ್ನರರಿಂದ ಬಂದ ವರದಿಯನ್ನು ನೋಡಿದ ಪಾಕಿಸ್ತಾನಿ ರಾಷ್ಟ್ರಾಧ್ಯಕ್ಷ ಇಸ್ಕಂದರ್ ಮಿರ್ಜಾರು ಪೂರ್ವ ಬಂಗಾಲದಲ್ಲಿ ಅಧ್ಯಕ್ಷರ ಆಳ್ವಿಕೆಯನ್ನು ಹೇರಿದರು. ಹೀಗೆ ಅಲ್ಲಿ ಪುನಃ ಕೇಂದ್ರಾಡಳಿತೆಯೇ ಬಂದೊದಗಿದೆ. ಪೂರ್ವ ಬಂಗಾಲವಿಂದು ದಕ್ಷ ಸರಕಾರವಿಲ್ಲದೆ ಎಲ್ಲ ಬಗೆಯ ತೊಂದರೆಗಳನ್ನು ಅನುಭವಿಸುತ್ತಿದೆ. ಅಲ್ಲಿ ಆಹಾರದ ತೀವ್ರ ಅಭಾವವು ಕಾಣಿಸಿಕೊಂಡಿದ್ದು ಸರಕಾರದ ಪ್ರಯತ್ನಗಳು ಜನರಿಗೆ ಸಾಕಷ್ಟು ಸಮಾಧಾನವನ್ನುಂಟುಮಾಡುವಷ್ಟು ಪ್ರಭಾವಿಯಾಗಿಲ್ಲ. ಭಾರತದ ಸರಕಾರವು ಈ ಬಾಂಧವರ ಕರುಣಾಜನಕ ಸ್ಥಿತಿಯನ್ನವಲೋಕಿಸಿ ೩೦೦೦೦ ಟನ್ನು ಅಕ್ಕಿಯನ್ನು ದಾನವಿತ್ತಿದೆ. ಆದರೆ ಅಲ್ಲಿಯ ಸರಕಾರವೇ ಜಡವಾಗಿರುವಾಗ ಯಾರೇನು ಮಾಡಬಲ್ಲರು!

ಕೇಂದ್ರದ ಅನಾಸ್ಥೆ

ಪಶ್ಚಿಮ ಪಾಕಿಸ್ತಾನದಲ್ಲಿ ಡಾ. ಖಾನ ಸಾಹೇಬರು ಮುಖ್ಯ ಮಂತ್ರಿಗಳಾಗಿ ನೇಮಕವಾಗಿದ್ದರು. ಆದರೆ ಮುಸ್ಲಿಂ ಲೀಗಿನ ಸದಸ್ಯರಿಗೆ ಈ ಸ್ವತಂತ್ರ ವ್ಯಕ್ತಿಯು ಮುಖ್ಯ ಮಂತ್ರಿ ಸ್ಥಾನದಲ್ಲಿರುವುದು ರುಚಿಸಲಿಲ್ಲ. ಆದುದರಿಂದ ಅವರೆಲ್ಲ ಒಟ್ಟುಸೇರಿ ತಮ್ಮ ಪಕ್ಷದ ಧುರೀಣನನ್ನೆ ಪಶ್ಚಿಮ ಪಾಕಿಸ್ತಾನದ ಮುಖ್ಯ ಮಂತ್ರಿಯಾಗಿ ಮಾಡಬೇಕೆಂದು ಹೇಳತೊಡಗಿದರು. ಪರಿಣಾಮದಲ್ಲಿ ಡಾ. ಖಾನ ಸಾಹೇಬರ ಮಂತ್ರಿ ಮಂಡಳದೊಡನೆ ಲೀಗಿನ ಸದ

(೭ನೇ ಪುಟನೋಡಿರಿ)

MAHATMA GANDHI MEMORIAL COLLEGE, UDIPI.

The College re-opens for Senior classes on Monday June, 18, 1956. Admissions to the Pre-University Course and the B. A. Degree Course of the Madras University will commence as soon as the results of the Public and Intermediate University examinations are published. Copies of the Application Form and Prospectus are available at the College Office. Limited seats in the College Hostel for students who apply early.

The following subjects are offered for the Pre-University Course:

PART I: (i) English (ii) Kannada, Hindi or Sanskrit.

PART II: Optional subjects. (in prescribed combination)

Group A: Mathematics, Physical Sciences with basic Mathematics, Natural Science.

Group B: World History, Elements of Commerce, Logic and Advanced English.

B. A. Degree Course.

Part I: English.

Part II: Kannada or Hindi.

Part III: Group iv b (Economics Main and History subsidiary)

H. Sunder Rao,
PRINCIPAL.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೩೧-೫-'೫೬	೩೯

ಸಾರ್ವಜನಿಕ ಹಣ

ಸಾಮಾನ್ಯವಾಗಿ ಸರಕಾರದ ಎಲ್ಲ ಕಾರ್ಯಕಲಾಪಗಳೂ ಜಡವಾಗಿರುತ್ತವೆ: ಆಲಸ್ಯ ಮತ್ತು ಅಸಡ್ಡೆಗಳಿಗೆ ಅಲ್ಲಿರುವಷ್ಟು ಅವಕಾಶವು ಖಾಸಗಿ ರಂಗದಲ್ಲಿರುವುದಿಲ್ಲ. ಹೊಣೆಗಾರಿಕೆಯನ್ನು ತಪ್ಪಿಸಿಕೊಳ್ಳುವ ಪ್ರವೃತ್ತಿಯೇ ಸರಕಾರದ ಕೆಲಸಗಳಲ್ಲಿ ಕಾಣಿಸುವುದು ಹೆಚ್ಚು. ಹಣಕಾಸಿನ ಪ್ರಶ್ನೆ ಬಂದಾಗಲಂತೂ ಜವಾಬ್ದಾರಿಯನ್ನು ಮೂಲೆಗುಂಪು ಮಾಡಲಾಗುತ್ತದೆ ಎನ್ನಬಹುದು. ವ್ಯರ್ಥವಾಗಿ ಹಣವನ್ನು ವೆಚ್ಚ ಮಾಡುವುದು ಸರಕಾರಕ್ಕೆ ಮಾತ್ರ ಸಾಧ್ಯವೆನ್ನುವಂತೆ ಹೊಣೆಗೇಡಿ ವರ್ತನೆಯನ್ನು ಅಧಿಕಾರಿಗಳಾದವರು ತೋರ್ಪಡಿಸುವುದು ತೀರ ಸಾಧಾರಣವಾದ ವಿಷಯ. ಲೆಕ್ಕ ಪತ್ರಗಳ ಪರಿಶೀಲನೆಯೇನೋ ನಡೆಯುತ್ತದೆ—ಆದರೆ, ಈ ಪರಿಶೀಲನೆಯ ಫಲಿತಾಂಶ ವ್ಯಕ್ತವಾಗುವುದಕ್ಕೆ ಕನಿಷ್ಠ ಎರಡು ವರ್ಷಗಳ ಕಾಲವಾದರೂ ಬೇಕಾಗುತ್ತದೆ. ಖಾಸಗಿ ಕಂಪೆನಿಗಳು ತಿಂಗಳು-ಎರಡು ತಿಂಗಳೊಳಗೆ, ಹೆಚ್ಚೆಂದರೆ, ಆರು ತಿಂಗಳೊಳಗೆ ಲೆಕ್ಕಪತ್ರಗಳ ಪರಿಶೀಲನೆಯನ್ನು ಮುಗಿಸಿ ಬಿಡುತ್ತವೆ— ಆದರೆ ಈ ದಕ್ಷತೆ ಸರಕಾರಿ ರಂಗದಲ್ಲಿಲ್ಲ. ಸರಕಾರದ ಕಾರ್ಯಕಲಾಪಗಳ ವ್ಯಾಪ್ತಿಯು ಬಹಳ ಹೆಚ್ಚಿರುವುದರಿಂದ ದೀರ್ಘ ಸಮಯವು ಪರಿಶೀಲನೆಗೆ ಅವಶ್ಯವಾಗುವುದೆಂದು ವಾದಿಸಬಹುದು-ಆದರೆ ಈ ದೀರ್ಘ ವಿಳಂಬವು ಸಾರ್ವಜನಿಕರ ವಿಶ್ವಾಸಕ್ಕೆ ವ್ಯತ್ಯಯವನ್ನು ತರುವುದೆಂಬೂ ನಂಬಿಕೆಯನ್ನು ಕೆಡಿಸುವುದೆಂದೂ ಹೇಳದಿರಲಾಗುವುದಿಲ್ಲ ಎರಡು ವರ್ಷಗಳ ಬಳಿಕ ಇಂಥಿಂಥ ಅಕ್ರಮಗಳು ನಡೆದಿವೆ, ಇಂತಿಷ್ಟು ಹಣವು ವ್ಯರ್ಥವಾಗಿ ವೆಚ್ಚಗೊಂಡಿದೆ-ಎಂದು ವರದಿಮಾಡಿದರೆ ಸಂಬಂಧಿಸಿದ ಅಧಿಕಾರಿಯನ್ನು ಪತ್ತೆಹಚ್ಚುವುದಕ್ಕಾಗಲೀ ಆತನಿಂದ ಘಟಿಸಿದ ತಪ್ಪಿಗೆ ಪರಿಹಾರವನ್ನು ಕೇಳಿ ವಸೂಲುಮಾಡುವುದಕ್ಕಾಗಲೀ ತಕ್ಷೀರು ಕ್ರಮಗಳನ್ನು ನಡೆಸಲಿಕ್ಕಾಗಲೀ ಸಾಕಷ್ಟು ಬಲವಾದ ಆಧಾರಗಳು ದೊರೆಯದೆ ಹೋಗಬಹುದು. ಒಂದು ತಪ್ಪಿನ ಜವಾಬ್ದಾರಿಯನ್ನು ಯಾರ ತಲೆಯ ಮೇಲೆ ಹೊತ್ತುಹಾಕಬೇಕೆಂಬುದರ ವಿಷಯದಲ್ಲಿ ಸರಕಾರವು ದ್ವಂದ್ವ ಪ್ರಸಂಗವನ್ನು ಎದುರಿಸಬೇಕಾಗಿ ಬರುತ್ತಿರುವುದು ನಿತ್ಯಾನುಭವದ ಮಾತು. ಹೀಗಿರುವಾಗ ಲೆಕ್ಕ ಪರಿಶೋಧನೆಯ ಕ್ರಮದಲ್ಲಿ ಕ್ರಾಂತಿಕಾರಿ ಪರಿವರ್ತನೆಗಳನ್ನು ರೂಢಿಸಬೇಕಾದ ಆವಶ್ಯಕತೆ ಬಹಳ ಹೆಚ್ಚಿದೆ. ಕಳೆದ ವಾರ ಲೋಕ ಸಭೆಯ ಮುಂದೆ ಮಂಡಿಸಲಾದ ಲೆಕ್ಕ ತಪಾಸಣೆಯ ಒಂದು ವರದಿ ಯಾದರೂ ಇದೇ ಅಭಿಪ್ರಾಯವನ್ನು ಪುಷ್ಟೀಕರಿಸುತ್ತದೆ ಎನ್ನಬಹುದು. ಅದು ಅನೇಕ ಅನುಚಿತ ಕಾರ್ಯಗಳನ್ನು ಬೆಳಕಿಗೆ ತಂದಿದೆ. ಮಂತ್ರಿಗಳ ಆದಾಯವನ್ನು ತೆರಿಗೆ ವಸೂಲಿಯ ಉದ್ದೇಶದಿಂದ ಲೆಕ್ಕಕ್ಕೆ ತೆಗೆದು ಕೊಳ್ಳುವಾಗ ವಿಶೇಷ ರಿಯಾಯತಿ ತೋರಿಸಲಾಗಿದೆಯೆಂಬೂ ಈ ರಿಯಾಯತಿಯು ನ್ಯಾಯ ಸಮ್ಮತವೆನಿಸುವುದು ಸಂಶಯವೆಂದೂ ವರದಿ ಹೇಳುತ್ತದೆ. ಹಣವನ್ನು ವೆಚ್ಚ ಮಾಡುವಾಗ ನಡೆದ ಹೊಣೆಗೇಡಿ ಕೆಲಸಗಳ ವಿವರವನ್ನು ವರದಿಯು ದುಂದುಗಾರಿಕೆ, ಲಾಭದಾಯಕವಲ್ಲದ ವ್ಯಾಪಾರ, ವ್ಯಕ್ತಿಗಳ ಲಾಭಕ್ಕೆ ಸರಕಾರಿ ಹಣದ ಉಪಯೋಗ, ನಿರುಪಯುಕ್ತ ಬಾಡಿಗೆ ಪತ್ರ, ಮುಂತಾದ ಹೆಸರಿನಲ್ಲಿ ನೀಡಿದೆ. ಸತ್ಕಾರ ಸಮಾರಂಭಗಳಿಗೆ ವೆಚ್ಚ ಮಾಡುವ ಹಣವು ಮಿತಿಮೀರುತ್ತಿದೆಯೆಂದೂ ೭೧೦ ರೂಪಾಯಿಗಳ ವೆಚ್ಚವನ್ನು ಮೀರಲಾರದೆಂದು ಅಂದಾಜು ಮಾಡಿದ ಎರಡು ಸಮಾರಂಭಗಳಲ್ಲಿ ವಾಸ್ತವಿಕ ವೆಚ್ಚವು ೨೦೦೦ ರೂಪಾಯಿಗಳಾಗಿದಯೆಂದೂ ವರದಿ ಹೇಳಿದೆ. ಪರದೇಶಗಳ ವಿದ್ಯಾರ್ಥಿ ವೃಂದವೊಂದಕ್ಕೆ ಮೊದಲೊಮ್ಮೆ ಅಂಡರ್ ಸೆಕ್ರೆಟರಿಯಿಂದ ಸತ್ಕಾರವಾಯಿತು; ಮತ್ತೊಮ್ಮೆ ಜ್ಯೊಂಟ್ ಸೆಕ್ರೆಟರಿಯವರಿಂದ ಸತ್ಕಾರ ನಡೆಯಿತು; ಪುನಃ ಎರಡು ಸಲ ಪಾರ್ಲಿಮೆಂಟರಿ ಸೆಕ್ರೆಟರಿಯು ಸತ್ಕರಿಸಿದನು—ಇದರ ಅರ್ಥವೇನೆಂದು ವರದಿ ಪ್ರಶ್ನಿಸಿದೆ. ಒಬ್ಬ ಜ್ಯೊಂಟ್ ಸೆಕ್ರೆಟರಿಯು ತನಗೆ ವಿದೇಶಕ್ಕೆ ವರ್ಗವಾದ ನೆಪದಲ್ಲಿ ಒಂದು ಸತ್ಕಾರವನ್ನೇರ್ಪಡಿಸಿದನೆಂದೂ ಆದರ ವೆಚ್ಚವನ್ನು (ರೂ. ೧೬೩೫) ಸರಕಾರದ ಆತಿಥ್ಯ ನಿಧಿಯ ಲೆಕ್ಕಕ್ಕೆ ಹಾಕಿದನೆಂದೂ ವರದಿ ತಿಳಿಸುತ್ತದೆ. ಇಂಥ ವ್ಯವಹಾರಗಳು ಅಪರೂಪವೆಂದೂ ಅವುಗಳು ಒಳಗೊಳ್ಳುವ ಹಣದ ಮೊತ್ತವು ಅತ್ಯಲ್ಪವೆಂದೂ ಹೇಳಿದ ಮಾತ್ರಕ್ಕೆ ಜನತೆ ಸಮಾಧಾನದ ಉಸಿರನ್ನು ಬಿಡಲಾರದು. ಬೆಳಕಿಗೆ ಬಾರದೆ ಹೋಗುವ ಪ್ರಸಂಗಗಳೆಷ್ಟಿವೆಯೋ, ಸುಳ್ಳು ಲೆಕ್ಕಗಳನ್ನು ತೋರಿಸಿ ಎಷ್ಟು ಮೋಸ ನಡೆಯುತ್ತದೋ ಎಂಬ ಹೆದರಿಕೆಯನ್ನು ಇಂಥ ಕೆಲವು ಘಟನೆಗಳು ಬಲಗೊಳಿಸುತ್ತವೆ. ವರದಿಯು ಒಂದೆಡೆ, ಭಾರತದ ರಾಯಭಾರಿ ಕಚೇರಿಯೊಂದರಲ್ಲಿ ಸರಕಾರದ ಪೂರ್ವಾನುಮತಿಯಿಲ್ಲದೆ ಮೋಟಾರು ಕಾರುಗಳನ್ನು ಖರೀದಿಮಾಡಲಾಯಿತೆಂದೂ ಇದರಲ್ಲಿ ಅಧಿಕಾರಿಯ ಹೆಂಡತಿಯ ಕೈವಾಡವೇ ಕಂಡುಬಂದಿದೆಯೆಂದೂ ಹಾಗೆ ಕೊಂಡುಕೊಂಡ ಕಾರೊಂದನ್ನು ಅಧಿಕಾರಿಯ ಬಂಧುವೊಬ್ಬನ ಉಪಯೋಗಕ್ಕೆ ಬಿಡಲಾಯಿತೆಂದೂ ವಿಷಾದಪೂರ್ವಕವಾಗಿ ತಿಳಿಸಿದೆ. ಇನ್ನೊಂದು ರಾಯಭಾರಿ ಕಚೇರಿಯಲ್ಲಿ ಬೆಳ್ಳಿಯ ಕೆಲವು ಉಪಕರಣಗಳನ್ನು ಅಪಹರಿಸಿ ಅವುಗಳ ಸ್ಥಾನದಲ್ಲಿ ಅಧಿಕಾರಿಯು ತನ್ನ ಕೀಳುಲೋಹದ ಉಪಕರಣಗಳನ್ನು ಇಟ್ಟಿರುವನೆಂದೂ ವರದಿ ಹೇಳಿದೆ. ಸಾಮಾನ್ಯ ಸೊತ್ತುಗಳ ಅಪಹಾರಕ್ಕೂ ಹೇಸದ ಅಧಿಕಾರಿಗಳು ನಮ್ಮ ರಾಯಭಾರಿ ಕಚೇರಿಗಳಲ್ಲಿರುವರೆಂಬುದು ಬಹಳ ಶೋಚನೀಯವಾದ ವಿಷಯ. ಭಾರತೀಯ ಸಂಸ್ಕೃತಿ, ಸಂಪ್ರದಾಯಗಳ ಉದಾತ್ತ ಪರಂಪರೆಯನ್ನು ಪೋಷಿಸಿಕೊಂಡು, ಜಗತ್ತಿನ ಗೌರವಾದರಗಳನ್ನು ಸಂಪಾದಿಸಿಕೊಡಬೇಕಾಗಿರುವ ಈ ರಾಯಭಾರಿ ಕಚೇರಿಯ ಅಧಿಕಾರಿಗಳೇ ಚಾರಿತ್ರ್ಯಭ್ರಷ್ಟರಾಗಿದ್ದಾರೆ ಎಂಬ ಮಾತು ನಮ್ಮ ಸ್ವಾಭಿಮಾನವನ್ನು ಚುಚ್ಚುತ್ತದೆ! ರಾಯಭಾರಿ ಕಚೇರಿಯನ್ನು ನೆಲೆಗೊಳಿಸುವ ಉದ್ದೇಶದಿಂದ ಬೇರೊಂದೆಡೆ ಸ್ವಲ್ಪ ಸ್ಥಳವನ್ನು ಕೊಂಡುಕೊಂಡ ಕತೆಯಾದರೂ ಬುದ್ಧಿಯ ದಿವಾಳಿತನವನ್ನೇ ಪ್ರತಿಬಿಂಬಿಸುತ್ತದೆ. ಕೋರ್ಟಿನ ಏಲಮಿನಲ್ಲಿ ಐದು ಲಕ್ಷ ರೂಪಾಯಿ ಕೊಟ್ಟು ಕೊಂಡು ಕೊಂಡ ಭೂಮಿಯದು—ಇಲ್ಲಿ ಮಧ್ಯವರ್ತಿಗಳಿಬ್ಬರಿಗೆ ಒಂದು ಲಕ್ಷ ರೂಪಾಯಿಗೂ ಸ್ವಲ್ಪ ಹೆಚ್ಚು ಕಮಿಶನನ್ನು ಕೊಡಲಾಯಿತು ಎಂದರೆ ನಂಬುವುದೇ ಕಷ್ಟ. ಅದರಲ್ಲೂ ಇಂಥ ಕಮಿಶನನ್ನು ಕೊಡಬೇಕಾಗಿ ಬರೆದೆಂದು ಮೊದಲು ಸರಕಾರಕ್ಕೆ ಹೇಳಿ, ಹಿಂದಿನಿಂದ ಕೊಟ್ಟುದಂತೂ ಇನ್ನೊಂದು ಚೋದ್ಯ. ಬ್ರಹ್ಮಪುತ್ರ ನದಿಯಲ್ಲಿ ಓಡಾಡಿಸಲು ರಾಷ್ಟ್ರೀಯ ಹೆದ್ದಾರಿ ಇಲಾಖೆಯ ಉಪಯೋಗಕ್ಕಾಗಿ ೧೬೦೦೦ ರೂಪಾಯಿಗಳ ವೆಚ್ಚದಲ್ಲಿ ಒಂದು ನೌಕೆಯನ್ನು ಕೊಂಡುಕೊಳ್ಳಲಾಯಿತು; ತೆಗೆದು ಕೊಳ್ಳುವಾಗಲೇ ಜೀರ್ಣವಾಗಿದ್ದ ಈ ನೌಕೆಯ ದುರಸ್ತಿಗೆ ೬೬೦೦೦ ರೂಪಾಯಿ ವ್ಯಯವಾಯಿತು. ಆದರೇನು? ನೌಕೆಯು ಉಪಯೋಗಿಸುವ ಸ್ಥಿತಿಯನ್ನು ಹೊಂದಲಿಲ್ಲ. ಹೀಗೂ ಒಂದು ವ್ಯಾಪಾರ ಮಾಡುವುದಾದರೆ ಅಥವಾ ದುರಸ್ತಿ ಕೈಗೊಳ್ಳುವುದಾದರೆ, ದುಡ್ಡಿಗೇನೂ ಬೆಲೆ ಇಲ್ಲವೆಂದೇ ಅಧಿಕಾರಿಗಳು ತಿಳಿದಿರುವರೆಂದು ಭಾವಿಸಬೇಕಾಗುತ್ತದೆ. ವ್ಯಕ್ತಿಯೊಬ್ಬನು ಎಂದಾದರೂ ಹೀಗೆ ದುಂದುಗಾರಿಕೆ ಮಾಡಬಲ್ಲನೆ ಎಂಬುದಿಲ್ಲಿ ವಿಚಾರಿಸಬೇಕಾದ ಅಂಶ: ಇಂಥ ಹಲವಾರು ಅಕ್ರಮಗಳು ವರದಿಯಲ್ಲಿವೆ. ಅವುಗಳನ್ನು ನೋಡಿದರೆ, ಖಾಸಗಿಯಾಗಿ ವ್ಯಕ್ತಿಯು ಮಾಡಲಾಗದ ಖರ್ಚು, ಹೊರಲಾಗದ ನಷ್ಟ ಇತ್ಯಾದಿಗಳಿಗೆ ಸರಕಾರವನ್ನು ಗುರಿಪಡಿಸುವ ಅಧಿಕಾರಿಗಳ ಅಪ್ರಮಾಣಿಕತೆ, ದೂರದರ್ಶಿತ್ವ, ಮಿತವ್ಯಯ ಇತ್ಯಾದಿ ಮಾತುಗಳನ್ನು ಕಲಿತವರೇ ಅಲ್ಲವೆಂಬ ವಿಷಾದಕರ ತೀರ್ಮಾನಕ್ಕೆ ನಾವು ಬರಬೇಕಾಗುತ್ತದೆ. ತೆರಿಗೆ ಹಣವನ್ನು ಅಗ್ಗದ ದುಡ್ಡೆಂದು ಸರಕಾರಿ ಅಧಿಕಾರಿಗಳು ಭಾವಿಸುವುದು ಎಷ್ಟು ಕಷ್ಟಕರವಲ್ಲದು: ಅಲ್ಲಿ ಹೊಣೆಗೇಡಿತನವು ನಿಜಕ್ಕೂ ನಿಂದನೀಯ. ಜನರಿಗೆ ಸರಕಾರದ ಮಂತ್ರಿ ಸ್ಥಾನದಲ್ಲಿರುವ ಕೆಲವರ ವ್ಯಕ್ತಿತ್ವದ ಪ್ರಭೆಯಾಗಲೀ ರಾಜಕೀಯ ಪಲ್ಲವಿಗಳಾಗಲೀ ಬಹಳ ಕಾಲದ ವರೆಗೆ ಆಕರ್ಷಣೀಯ ವಿಷಯವಾಗಿ ಉಳಿಯಲಾರವು— ದೈನಂದಿನ ಆಡಳಿತ ಕ್ರಮವೇ ಜನರ ಸುಖ-ದುಃಖಗಳಿಗೆ ಉತ್ತರವಾದಿಯಾಗಿದೆ. ಆದುದರಿಂದ ಸಾರ್ವಜನಿಕ ಹಣದ ವಿನಿಯೋಗದಲ್ಲಿ ಹೆಚ್ಚು ದಕ್ಷತೆ ಮತ್ತು ಮಿತವ್ಯಯ ಅತ್ಯಾವಶ್ಯಕ.

ಉಡುಪಿ

ಬುದ್ಧ ಜಯಂತಿಯು— ಯುವಕ ಕಾಂಗ್ರೆಸಿನ ಆಶ್ರಯದಲ್ಲಿ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಟಿ. ಎ. ಪೈಗಳು ದೇಶಕ್ಕಾಗಿ ಬುದ್ಧನ ಉಪದೇಶವು ತುಂಬಾ ಅಗತ್ಯವೆಂದರು. ಶ್ರೀಗಳಾದ ಬನ್ನಂಜೆ ರಾಮಾಚಾರ್ಯ, ಮೋಹನ ರಾಯರು ಮಾತನಾಡಿದ ಮೇಲೆ ಬುದ್ಧನ ಜೀವನ ಧರ್ಮ ತತ್ವಗಳನ್ನು ಅಧ್ಯಕ್ಷರು ವಿವರಿಸಿದರು; ಶ್ರೀ ಎ. ಜಿ ಅಪ್ಪೆಯವರು ಆಭಾರ ಸೂಚಿಸಿದರು.

ಕವಿರಾಜ ದವಾಖಾನೆಯಲ್ಲಿ ಶ್ರೀ ಉಪೇಂದ್ರ ಅನಂತ ಪೈಗಳು ಬುದ್ಧನ ಪ್ರತಿಮೆಯನ್ನು ಅನಾವರಣ ಮಾಡಿದರು. ಶ್ರೀ ಡಾ. ಪಿ. ಆರ್. ನಾಯಕ್ ಶ್ರೀ ಎ. ಜಿ. ಅಪ್ಪೆ ಮೊದಲಾದವರು ಭಾಷಣಮಾಡಿದರು.

ಡಾ. ಬಿ. ಬಿ. ಸೆಟ್ಟಿರ ಭಾಷಣ— ಡಾ. ಟಿ. ಎಂ. ಎ. ಪೈಗಳ ಅಧ್ಯಕ್ಷತೆಯಲ್ಲಿ ಸೇರಿದ ಕುಟುಂಬ ಯೋಜನಾ ಸಮಿತಿಯ ಮುಂಬರರನ್ನು ಉದ್ದೇಶಿಸಿ ಇತ್ತೀಚೆಗೆ ಡಾ. ಬಿ. ಬಿ. ಸೆಟ್ಟರು ಭಾಷಣಮಾಡಿ ವಿಶೇಷವಾಗಿ ಪ್ರಬಲಿಸುತ್ತಿರುವ ಜನಸಂಖ್ಯೆಯನ್ನು ನಾವು ತಡೆಯಲು ಸಮರ್ಥರಾದರೆ ನಮ್ಮ ಹಲವು ಸಮಸ್ಯೆಗಳು ದೂರವಾಗುವುವು ಎಂದು ಮುಂತಾಗಿ ಕುಟುಂಬ ಯೋಜನೆಯ ಕುರಿತು ಭಾಷಣಮಾಡಿದರು; ಅಧ್ಯಕ್ಷ ಡಾ. ಪೈಗಳು ಯೋಜನಾ ಬದ್ಧ ಜೀವನವೇ ಸಾಂಸಾರಿಕ ಜೀವನದಲ್ಲಿ ಅತ್ಯವಶ್ಯಕವೆಂದು ಮುಂತಾಗಿ ಹೇಳಿದರು.

ನಗರಸಭೆ— ಸಭೆಯು ತಾ. ೨೦ರಲ್ಲಿ ವೈಸ್ ಚೆಯರ್‌ಮೇನ್ ಶ್ರೀ ಬಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಸರಕಾರದ ಸೂಚನೆಯಂತೆ ನಗರ ಕ್ಷೇತ್ರದೊಳಗಿರುವ ಹುಲ್ಲುಗಾವಲನ್ನಾಗಿ ಉಪಯೋಗಿಸಬಹುದಾದ ಸ್ಥಳಗಳನ್ನು ನೋಡಿ ವರದಿಯೊಪ್ಪಿಸಲು ಕಮಿಶನರನ್ನು ಕೇಳಲಾಯಿತು. ಕಲ್ಸಂಕ ಸೇತುವೆಯನ್ನು ಪುನಾ ರಚಿಸುವ ಖರ್ಚಿನಲ್ಲಿ ಕಾಲಂಶವನ್ನು ಕೊಡಲು ಡಿವಿಜನಲ್ ಇಂಜಿನಿಯರರ ಪತ್ರಕ್ಕೆ ಒಪ್ಪಿಗೆಯನ್ನಿತ್ತಲ್ಲದೆ ಆ ಕಾರ್ಯವನ್ನು ಶೀಘ್ರವಾಗಿ ಮಾಡಬೇಕೆಂದೂ ಕೇಳಿಕೊಳ್ಳಲಾಯಿತು.

ಎರಡನೇ ವಾರ್ಷಿಕ ಅಧಿವೇಶನ— ಅಖಿಲಭಾರತ ಅಂಚೆ ಕೆಲಸಗಾರರ ಸಂಘದ (ಮೂರನೇ ವರ್ಗ) ದ. ಕ. ಜಿಲ್ಲಾ ವಿಭಾಗ ಶಾಖೆಯ ಎರಡನೇ ವಾರ್ಷಿಕ ಮಹಾಧಿವೇಶನದ ಬಹಿರಂಗ ಸಭೆಯು ಇದೇ ತಾ. ೨೭ರಲ್ಲಿ ಸ್ಥಳೀಯ ಮೋಡರ್ನ್ ಹಾಯರ್ ಎಲಿಮೆಂಟರೀ ಶಾಲಾ ಕಟ್ಟಡದಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಏ. ರವರ ಅಧ್ಯಕ್ಷತೆಯಲ್ಲಿ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಎಸ್. ಎ. ಸಲಾಮ್ ಅವರಿಂದ ಉದ್ಘಾಟಿಸಲ್ಪಟ್ಟಿತು. ಉದ್ಘಾಟಕರು ತನ್ನ ಭಾಷಣದಲ್ಲಿ ಕೆಲಸಗಾರರ ಕೇಳಿಕೆಗಳನ್ನು ಸರಕಾರವು ಗಮನಿಸಬಹುದೆಂದೂ ಕೆಲಸಗಾರರು ಸೌಹಾರ್ದದಿಂದ ಪ್ರಾಮಾಣಿಕತೆಯಿಂದ ದುಡಿಯಬೇಕೆಂದೂ ತನ್ನಿಂದಾದ ಸಹಕಾರ ನೀಡಲು ತಾನು ಸಿದ್ಧನೆಂದೂ ಹೇಳಿದರು. ಕಾರ್ಯದರ್ಶಿ ಶ್ರೀ ಕೆ. ಪಿ. ಆಚಾರ್ಯರು ಯೂನಿಯನ್ನಿನ ಚಟುವಟಿಕೆಗಳ ವರದಿಯನ್ನು ಓದಿದ ಮೇಲೆ ಯೂನಿಯನ್ನಿನ ಅಧ್ಯಕ್ಷರಾದ ವಕೀಲ್ ಬಿ. ಗಂಗಾಧರ ದಾಸರು ಭಾಷಣಮಾಡಿ ಮೇಲಾಧಿಕಾರಿಗಳು ಸಂಘದ ಕಡೆಗೆ ತೋರುತ್ತಿರುವ ಪ್ರೀತಿ ವಿಶ್ವಾಸಗಳನ್ನೂ, ಸಂಘದ ಕಾರ್ಯಕಲಾಪಗಳನ್ನೂ ಹೇಳಿದರು. ಸಭಿಕರ ಭಾಷಣಗಳಾದ ಮೇಲೆ ಅಧ್ಯಕ್ಷ ಶ್ರೀ ಟಿ. ಎ. ಪೈಗಳು ತಮ್ಮ ವಿಚಾರ ಪ್ರಚೋದಕ ಭಾಷಣದಲ್ಲಿ

Navayuga Enterprise Ltd., Udipi.

NOTICE

The register of members and share transfer books of the Company will remain closed from the 15th June 1956 to 30th June, 1956 (both days inclusive).

(By order of the Board)

Office of the Company,
PALUKOTE, UDIPI,
Date, 20—5—1956.

K. Honnayya Shetty,
Managing Director.

ಅಂಚೆ ಇಲಾಖೆಯು ದೇಶಕ್ಕೆ ಸಲ್ಲಿಸುತ್ತಿರುವ ...ಯನ್ನು ಕೊಂಡಾಡಿ ಪ್ರತಿ ಕೆಲಸಗಾರರೂ ...ಸಾರ್ಥತೆಯ ಮಾದರಿಯಾಗಬೇಕೆಂದೂ ...ಯ ಪಂಚವಾರ್ಷಿಕ ಯೋಜನೆಯ ಅಂ...ರ್ಯವೇನೆಂಬುದನ್ನೂ ಹೇಳಿದರು. ಧನ್ಯವಾ...ಳೊಂದಿಗೆ ಪರಿಷತ್ತು ಕೊನೆಗೊಂಡಿತು.

ಶ್ರೀ ಯಸ್. ವಿ. ಕುಡ್ವರಿಗೆ ಸ...ರ— ಇತ್ತೀಚೆಗೆ ಅಮೇರಿಕದಲ್ಲಿ ಸುಮಾ ಮೂರೂವರೆ ವರ್ಷಗಳ ವಿದ್ಯಾ ವ್ಯಾಸಂ...ನ್ನು ಮುಗಿಸಿಕೊಂಡು ಸ್ವದೇಶಕ್ಕೆ ಬಂದಿ...ರ ಮಂಗಳೂರಿನ ಶ್ರೀ ಯಸ್. ವಿ. ಕು...ಗೆ ಶ್ರೀ ಟಿ. ಎ. ಪೈಗಳು ತಾ. 27ರಲ್ಲಿ ...ಕುಂದ ನಿವಾಸದಲ್ಲಿ ಭೋಜನ ಸತ್ಕಾರ ...ತ್ತ ಗೌರವಿಸಿದರು. ಶ್ರೀ ಪೈಗಳು ಅತಿಥಿಗ ...ಪರಿಶ್ರಮವನ್ನು ಶ್ಲಾಘಿಸಿ ಅವರಿಂದ ದೇಶ ಹೆಚ್ಚಿನ ಸೇವೆ ಸಲ್ಲುವಂತಾಗಲಿ ಎಂದು ...ರೈಸಿದರು. ಅತಿಥಿಗಳು ಅಮೇರಿಕದ ತನ್ನ ...ಭವವನ್ನು ವಿವರಿಸಿ ಸಭಿಕರ ಪ್ರಶ್ನೆಗಳಿ...ಕ್ಕೆ ಉತ್ತರವಿತ್ತರು.

...ಒಂನೇ ಪ್ರತಿಷ್ಠಾ ವರ್ಧಂತಿ— ...ಲಕ್ಷ್ಮೀ ವೆಂಕಟೇಶ ದೇವಸ್ಥಾನದ ಈ ...ಹೋತ್ಸವವು ಇದೇ ತಾ 26ರಲ್ಲಿ ವಿಶೇಷ ...ಯ ದೇವತಾದಿ ಕಾರ್ಯಕ್ರಮಗಳಿಂದ ..., ಮಹಾ ಸಮಾರಾಧನೆ, ಉತ್ಸವಾದಿಗ...ದಲೂ ಯಶಸ್ವಿಯಾಗಿ ನೆರವೇರಿತು. ತಾ. ...ರಲ್ಲಿ ಶ್ರೀ ಕಾಶೀ ಮಠಾಧೀಶ ಶ್ರೀಮತ್ ...ಇಂದ್ರ ತೀರ್ಥ ಶ್ರೀ ಪಾದಂಗಳವರನ್ನು ...ಭ್ರಮದಿಂದ ಸ್ವಾಗತಿಸಿ, ಅವರ ಸಮ್ಮುಖ...ದಿಯೇ ಎಲ್ಲಾ ಕಾರ್ಯಕ್ರಮಗಳನ್ನು ನೆರ...ರಿಸಲಾಯಿತು.

ವಸತಿ ನಿರ್ಮಾಣದ ಸೌಕರ್ಯ— ...ಕಾರದ ವಸತಿ ನಿರ್ಮಾಣ ಸೌಕರ್ಯ ...ಯೋಜನೆಯನ್ವಯ ಸಾಲಕೊಡಲು ಮಂಗ...ರು ಸರ್ಕಲಿಗೆ ಒಂದುವರೆ ಲಕ್ಷರೂಪಾಯಿ ...ಲಿದ್ದು ಆದರಲ್ಲಿ ಉಡುಪಿ ಕೋ-ಓಪರೇಟಿ... ಬಿಲ್ಡಿಂಗ್ ಸೊಸೈಟಿಯು 75 ಸಾವಿರವ... ರೂ. 8 ಸಾವಿರದಿಂದ 10 ಸಾವಿರದ ...ಕ ಸಾಲಕೊಟ್ಟು ಉಪಯೋಗಿಸುವ ನಿರೀ...ಕ್ಷೆಯಲ್ಲಿದೆ. ಹೆಚ್ಚಿನ ವಿವರಗಳನ್ನು ಮೇಲಿನ ...ಸೈಟಿಯ ಕಾರ್ಯದರ್ಶಿಯಿಂದ ತಿಳಿಯ...ಬಹುದು.

ಮಣಿಪಾಲ— ತಾ. 24ರಲ್ಲಿ ಬುದ್ಧ ...ಯಂತಿ ಸಂಬಂಧ ಡಾ. ಟಿ. ಮಾಧವ ಪೈ...ರಿಂದ ಬುದ್ಧನ ಪ್ರತಿಮೆಯ ಅನಾವರಣ ...ಕೆಯಿತು. ಭಜನೆ, ಹರಿಕಥಾದಿ ಕಾರ್ಯ...ಕ್ರಮಗಳೂ ಇದ್ದುವು.

(೫ನೇ ಪುಟದಿಂದ)

ಸ್ಯರು ಅಸಹಕಾರವನ್ನು ಮಾಡಹತ್ತಿದರು. ಕೇಂದ್ರ ಸರಕಾರವು ಲೀಗಿನ ವರ್ತನೆಗೊಳಗಾಗಿದ್ದರೂ ವಾಸ್ತವದಲ್ಲಿ ಅದು ಸಮ್ಮಿಶ್ರ ಮಂತ್ರಿಮಂಡಳವಾಗಿರುವುದರಿಂದ ಈ ವಿಚಾರದಲ್ಲಿ ಕೈ ಹಾಕಲು ಬಯಸಲಿಲ್ಲ. ಪಶ್ಚಿಮ ಪಾಕಿಸ್ತಾನದ ಶಾಸನಾಂಗವೇ ಈ ವಿಷಯವನ್ನು ತೀರ್ಮಾನಿಸಲಿ ಎಂಬ ನಿಲುಮೆ ಅದರದು. ಡಾ. ಖಾನ ಸಾಹೇಬರಂಥ ವರ್ಚಸ್ವಿ ಧುರೀಣರ ಕೈಯಲ್ಲಿ ಆಡಳಿತಾಧಿಕಾರ ಉಳಿಯಬೇಕೆಂಬುದು ಈ ಅನಾಸಕ್ತ ಭಾವದ ನಿಜವಾದ ಕಾರಣ.

ತೀವ್ರ ತಿಕ್ಕಾಟ

ಶಾಸನಾಂಗದ ಅಧಿವೇಶನವು ಕಳೆದ ವಾರ ಜರಗಿದಾಗ, ಅದು ಕೋಲಾಹಲದ ಹಾಗು ಕಲಹದ ರಂಗ ಭೂಮಿಯಾಗಿ ಪರಿಣಮಿಸಿತು. ಜನರಿಂದ ನೇರವಾಗಿ ಚುನಾವಣೆ [ಹೊಂದಿದವರಲ್ಲವಾದರೂ ಜನರ ಪ್ರತಿನಿಧಿಗಳೆಂಬ ಗೌರವದ ಸ್ಥಾನವನ್ನು ಏರಿದ್ದ ಶಾಸನಾಂಗದ ಸದಸ್ಯರು ಪ್ರಜಾಪ್ರಭುತ್ವದ ಹೆಸರಿಗೆ ತೀರ ಕಳಂಕ ಪ್ರಾಯವಾದ ರೀತಿಯಲ್ಲಿ ವರ್ತಿಸಿದರು. ಡಾ. ಖಾನ ಸಾಹೇಬರು ಮುಸ್ಲಿಂ ಲೀಗಿನ ಪ್ರಭಾವವನ್ನು ಬಗ್ಗು ಬಡೆಯಲೆಂಬಂತೆ ಹೊಸತಾಗಿ ರಿಪಬ್ಲಿಕನ್ ಪಕ್ಷವೆಂಬ ಹೆಸರಿನಿಂದ ತನ್ನ ಅನುಯಾಯಿಗಳನ್ನೆಲ್ಲ ಒಂದು ನೆರೆಯಲ್ಲಿ ಒಂದು ಗೂಡಿಸಿದ್ದುದರಿಂದ ಈ ಪಕ್ಷದವರಿಗೂ ಮುಸ್ಲಿಂ ಲೀಗಿನ ಸದಸ್ಯರಿಗೂ ತೀವ್ರ ತಿಕ್ಕಾಟ ಉಂಟಾಯಿತು. ಸಭಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಾಗ ತಾತ್ಕಾಲಿಕ ಅಧ್ಯಕ್ಷರು ತಮ್ಮ ಹಕ್ಕಿನ ಮತವನ್ನು ಕೊಡಬೇಕಾದ ಪರಿಸ್ಥಿತಿ ಬಂತು. ಈ ಮತದ ಚಲಾವಣೆಯ ಪರಿಣಾಮವಾಗಿ ಡಾ. ಖಾನ ಸಾಹೇಬರು ವಿಜಯಗಳಿಸಿದರು.

ಅಸಭ್ಯ ಪ್ರದರ್ಶನ

ಈಗ ನ್ಯಾಯಸ್ಥಾನದ ಮುಂದೆ ಸಭಾಧ್ಯಕ್ಷರ ಚುನಾವಣೆಯನ್ನು ಅಕ್ರಮವೆಂದು ಸಾರುವಂತೆ ವಿನಂತಿಯನ್ನು ಮುಸ್ಲಿಂ ಲೀಗಿನ ಧುರೀಣರು ಸಲ್ಲಿಸಿದ್ದಾರೆ. ಅದೇ ಹೊತ್ತಿಗೆ ಶಾಸನಾಂಗದ ಅಧಿವೇಶನದಲ್ಲಿ ಯಾವ ಕೆಲಸವೂ ಸುಸೂತ್ರವಾಗಿ ನಡೆಯದಂತೆ ರಂಪಾಟ ವೆಬ್ಬಿಸುವುದರಲ್ಲಿಯೂ ಅವರು ನಿರತರಾಗಿದ್ದಾರೆ. ಪ್ರಶ್ನೆಯ ಮೇಲೆ ಪ್ರಶ್ನೆ ಹಾಕುವುದು, ಪ್ರತಿಯೊಂದು ವಿಷಯಕ್ಕೂ ಪ್ರತಿಭಟನೆಯೊಡ್ಡುವುದು, ವಿಧಿ ಬಿಂದುಗಳನ್ನೆತ್ತಿ ಸಭಾಧ್ಯಕ್ಷರ ಬುದ್ಧಿವಂತಿಕೆಯ ಪರೀಕ್ಷೆ ನಡೆಸುವುದು, ಕೇಕೆ ಹಾಕುವುದು, ಬೊಬ್ಬೆರಿಯುವುದು, ನಾಚಿಕೆಗೇಡೆಂದು ಕೂಗುವುದು – ಇತ್ಯಾದಿ ಕೆಲಸಗಳಲ್ಲಿ ಮುಸ್ಲಿಂ ಲೀಗಿನ ಸದಸ್ಯರು ಆಸಕ್ತಿ ತೋರಿಸುತ್ತಿರುವರಲ್ಲದೆ, ಪ್ರತಿನಿಧಿಗಳಾಗಿ ತಾವು ನಿರ್ವಹಿಸಬೇಕಾದ ಕರ್ತವ್ಯದ ಕಡೆಗೆ ಅವರು ದೃಷ್ಟಿ ಹರಿಸುತ್ತಿಲ್ಲ. ಮುಂಗಡ ಪತ್ರದ ಮಂಡನೆಯು ಅಶ್ಲೀಲ ನಡೆದಿದ್ದು, ಖಾನ ಸಾಹೇಬರ ಮಂತ್ರಿ ಮಂಡಳಕ್ಕೆ ಪತನದ ದಾರಿ ಕಾಣಿಸಲು ಮುಸ್ಲಿಂ ಲೀಗು ಸರ್ವ ಪ್ರಯತ್ನಗಳನ್ನು ಮಾಡುತ್ತಿದೆ: ಆದರೆ ಸೋಲು ಸುಲಭದಲ್ಲಿ ಡಾ. ಖಾನ ಸಾಹೇಬರಿಗೆ ಆಗಲಾರದು.

ಖಾನ ಸಾಹೇಬರ ನಿರ್ಧಾರ

ಏಕೆಂದರೆ, ಡಾ. ಖಾನ ಸಾಹೇಬರ ಹೊಸ ಪಕ್ಷವು ಈಗಾಗಲೇ ೩೩ ಮಂದಿ ಸದಸ್ಯರುಳ್ಳ ಶಾಸನಾಂಗದಲ್ಲಿ ೧೭೧ ಮಂದಿಯ ಬೆಂಬಲ ಪಡೆದಿದೆ. ಸಭಾಧ್ಯಕ್ಷರ ಚುನಾವಣೆಯ ಕಾಲದಲ್ಲಿ ತಾವು ಪ್ರಚಾರದ ಪ್ರಭಾವಕ್ಕೆ ಒಳಗಾಗಿ ಡಾ. ಖಾನ ಸಾಹೇಬರ ಪಕ್ಷವು ನಿಲ್ಲಿಸಿದ್ದ ಹುರಿಯಾಳುವನ್ನು ಬೆಂಬಲಿಸಿದ್ದಾಗಿ ದೂರಿ ಕೊಂಡಿದ್ದ ಮುಸ್ಲಿಂ ಲೀಗಿನ ಸದಸ್ಯರು ಸಹ ಈಗ ಡಾ. ಖಾನ ಸಾಹೇಬರ ಪಕ್ಷವನ್ನು ಸ್ವೇಚ್ಛೆಯಿಂದ ಸೇರಿಕೊಂಡಿದ್ದಾರೆ. ಡಾ. ಖಾನ ಸಾಹೇಬರು ಮುಸ್ಲಿಂ ಲೀಗಿನ ಸದಸ್ಯರ ಅಸಭ್ಯ ವರ್ತನೆಗಳಿಂದ ಕೆರಳಿಕೊಂಡು ಈ ಕುತಂತ್ರಗಳಿಗೆ ಬಗ್ಗುವವ ತಾನಲ್ಲವೆನ್ನುತ್ತಿದ್ದಾರೆ. ರಾಜಕೀಯದಲ್ಲಿ ತನಗೆ ಆಸಕ್ತಿ ಇಲ್ಲವೆಂದೂ ಪ್ರಜೆಗಳ ಕ್ಷೇಮಾಭ್ಯುದಯವನ್ನು ಸಾಧಿಸಲಿಕ್ಕಾಗಿ ಆಡಳಿತ ಯಂತ್ರದ ಶುದ್ಧೀಕರಣವನ್ನು ಮಾಡುವುದೇ ತನ್ನ ಉದ್ದೇಶವೆಂದೂ ಇದಕ್ಕಾಗಿಯೇ ತಾನು ಅಧಿಕಾರ ಸ್ಥಾನದಲ್ಲಿದ್ದೇನೆಂದೂ ಅವರು ಮುಸ್ಲಿಂ ಲೀಗಿನ ಸದಸ್ಯರನ್ನೊಳಗೊಂಡು ಎಲ್ಲರಿಗೂ ಸ್ಪಷ್ಟಪಡಿಸಿದ್ದಾರೆ. ಪಾಕಿಸ್ತಾನಿ ಜನತೆಯ ದೃಷ್ಟಿಯಿಂದ ಇದು ಸ್ವಾಗತಾರ್ಹವಾದ ನಿಲುಮೆಯಾಗಿದೆ-ಆದರೆ ಮರಣೋನ್ಮುಖವಾಗಿರುವ ಮುಸ್ಲಿಂ ಲೀಗಿದು ಬೇಕಾಗಿಲ್ಲವೆಂಬುದು ಸ್ಪಷ್ಟ!

ಕೊಂಡಾಡಿ ಸತ್ಯಾಗ್ರಹ ಕೊನೆಗೊಳಿಸಲ್ಪಟ್ಟಿತು— ಬಾಳ್ಕಟ್ಟಬೀಡು ರುಕ್ಮಿಣಿ ಹೆಗ್ಗಡ್ತಿಯರ ಒಕ್ಕಲಾಗಿದ್ದ ಗೌರಮ್ಮನೆಂಬವರು ರಾಜಕೀಯ ಪಕ್ಷವೊಂದರ ವತಿಯಿಂದ ಕಿರುಕುಳಕ್ಕೆ ಗುರಿಯಾಗಿದ್ದು ಅವರ ಸಿದ್ಧಿಗೆಂದು ಧನಿಯ ಪುತ್ರ ಶ್ರೀ ಬಾಳ್ಕಟ್ಟಬೀಡು ಕೃಷ್ಣ ಹೆಗ್ಗಡೆಯವರು ಪ್ರತ್ಯೇಕವಾಗಿ ವಾಸಿಸುತ್ತಿರುವ ಕೊಂಡಾಡಿ ಗುತ್ತಿನ ಸಮೀಪದ ರಾಜರಸ್ತೆಯ ಅಂಚಿನಲ್ಲಿ ತಾ. 12ರಿಂದ ಕೈಗೊಂಡಿದ್ದ ಅನ್ನ ಸತ್ಯಾಗ್ರಹವು ತಾ. 28ರಲ್ಲಿ ಕೊನೆಗೊಳಿಸಲ್ಪಟ್ಟಿರುವುದು. ಜಿಲ್ಲಾ ಕಲೆಕ್ಟರರಿಂದ ಹಿರಿಯಡ್ಕ ಪೋಲೀಸ್ ಸಬ್ ಇನ್ಸ್‌ಪೆಕ್ಟರರಿಗೆ ಸೆಟ್ಲ್‌ಮೆಂಟಿಗನುಕೂಲಿಸುವಂತೆ ಉಪವಾಸವನ್ನು ನಿಶ್ಯರ್ತವಾಗಿ ಹಿಂದೆಗೆದು ಕೊಳ್ಳುವಂತೆ ಕೇಳಿಕೊಳ್ಳಬೇಕೆಂಬರ್ಥದ ತಂತಿ ಬಂದಿತ್ತೆಂದೂ, ಅದಕ್ಕೆ ಗೌರಮ್ಮನವರು ಒಪ್ಪಿದರೆಂದೂ, ಅಂದೇ ಅವರನ್ನು ಉಡುಪಿ ಸರಕಾರಿ ಆಸ್ಪತ್ರೆಗೆ ತಂದು ದಾಖಲು ಮಾಡಲಾಗಿದೆಯೆಂದೂ ಆಸ್ಪತ್ರೆಯಲ್ಲಿ ಅವರು ಚೇತರಿಸಿಕೊಳ್ಳುತ್ತಿರುವರೆಂದೂ ತಿಳಿದು ಬರುತ್ತದೆ.

ಮುಡಿ— ಸ್ಥಳೀಯ ಏಕೋಪಾಧ್ಯಾಯರ ಶಾಲಾ ಕಟ್ಟಡವು ಶ್ರೀ ರೊಕ್ಕಿ ಫೆರ್ನಾಂಡೀಸರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಗಳಿಂದ ಉದ್ಘಾಟಿಸಲ್ಪಟ್ಟಿತು. ಶಾಲಾ ಕರೆಸ್ಪೊಂಡೆಂಟ್ ಡಾ. ಟಿ. ಎಮ್. ಎ. ಪೈಗಳು ಸ್ವಾಗತ ಭಾಷಣ ಮಾಡಿದರು.

ಪೆರ್ಕಳ— ಬಾಸೆಲ್ ಮಿಶನ್ ಶಾಲಾ ಕಟ್ಟಡದಲ್ಲಿ ಹಳೇ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಬುದ್ಧ ಜಯಂತಿಯು ಶ್ರೀ ಬಿ. ರಂಗನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಯು. ಗಿರಿಧರ ರಾವ್, ರಾಜೀವ ಕೋಟ್ಯಾನ್, ಶ್ರೀ ಕೆ. ಆನಂದ ಸೆಟ್ಟಿ ಮೊದಲಾದವರು ಭಾಷಣಮಾಡಿದರು.

ಕುಂಕರ್ಾಲು— ಪಂಚಾಯತು ಬೋರ್ಡಿನವರು ಸ್ಥಾನಿಕ ಅಭಿವೃದ್ಧಿ ಯೋಜನೆಯ ನೆರವಿನಿಂದ ನಿರ್ಮಿಸಿದ ಕುಂಜಾರು – ಬಂಟಕಲ್ ರಸ್ತೆ ಮತ್ತು ಶಂಕರಪುರ ಸಾರ್ವಜನಿಕ ಬಾವಿ ಇವುಗಳ ಉದ್ಘಾಟನೆಯು ತಾ. 20ರಲ್ಲಿ ರೆ. ಫಾ. ಎ. ಜೆ. ಪಿಂಟೋರವರ ಅಧ್ಯಕ್ಷತೆಯಲ್ಲಿ ಶ್ರೀ. ಟಿ. ಎ. ಪೈಗಳಿಂದ ನೆರವೇರಿಸಲ್ಪಟ್ಟಿತು.

ಪೆರ್ಡೂರು— ಬಿ. ಇ. ಎಮ್. ಎಲಿಮೆಂಟರಿ ಶಾಲೆಯ ಸುವರ್ಣ ಮಹೋತ್ಸವ ಸ್ಮಾರಕ ಭವನದ ಉದ್ಘಾಟನೆಯು ತಾ. 26ರಲ್ಲಿ ಶ್ರೀ ಎನ್. ಎಸ್. ಪರಮೇಶ್ವರಯ್ಯ ಇವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಗಳಿಂದಲೂ, ಬಾಲವಿಹಾರ ಕೇಂದ್ರದ ಉದ್ಘಾಟನೆಯು ಶ್ರೀ ಬಿ. ಪಿಂಟೊ ಅವರಿಂದಲೂ ಸುವರ್ಣ ಮಹೋತ್ಸವವು ಶ್ರೀ ಎಂ. ಮುತ್ತಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿಯೂ ನೆರವೇರಿತು.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚು ಇಲ್ಲದೆ (ನವಯುಗದ ಖಾತೆಗೆ) ರವಾನೆ ಮಾಡಬಹುದು.

ಮೆನೇಜರ್.
ನವಯುಗ, ಉಡುಪಿ.

ಎರಡನೇ ಯೋಜನೆಯು ದೇಶದಲ್ಲಿ ಉಕ್ಕಿನ ಉತ್ಪಾದನೆಯನ್ನು ನಾಲ್ಕು ಪಾಲಿನಷ್ಟು (ಅಂದರೆ ಈಗಿನ ೧೩ ಲಕ್ಷ ಟನ್ನುಗಳಿಂದ ೪೫ ...ಲಕ್ಷ ಟನ್ನುಗಳಿಗೆ) ಬೆಳೆಸಬೇಕೆಂದು ನಿರ್ಧರಿಸಿದೆ. ಈ ಹೆಚ್ಚಳವನ್ನು ಖಾಸಗಿ ರಂಗದಲ್ಲಿರುವ ಭದ್ರಾವತಿಯ ಕಾರ್ಖಾನೆ ಮತ್ತು ತಾತಾರವರ ಕಾ...ರ್ಖಾನೆಗಳ ವಿಸ್ತರಣೆಯಿಂದಲೂ ಪಶ್ಚಿಮ ಬಂಗಾಳದ ದುರ್ಗಾಪುರ, ಒರಿಸ್ಸದ ರೂರ್ಕೇಲ ಮತ್ತು ಮಧ್ಯ ಪ್ರದೇಶದ ಭಿಲಾಯಿಗಳಲ್ಲಿ ಭಾರತ ...ರಕಾರವೇ ಸ್ಥಾಪಿಸಲಿರುವ ಹೊಸ ಕಾರ್ಖಾನೆಗಳಿಂದಲೂ ಸಾಧಿಸಲಾಗುತ್ತದೆ. ಉಕ್ಕಿನ ಪೂರೈಕೆಯು ಚಿಕ್ಕ ಹಾಗು ದೊಡ್ಡ ಪ್ರಮಾಣದ ...ತರ ಯಂತ್ರೋದ್ಯಮಗಳ ವಿಕಾಸಕ್ಕೆ ಹೆಚ್ಚಿನ ನೆರವನ್ನು ನೀಡುವುದರಿಂದ ಇತ್ತ ವಿಶೇಷ ಗಮನವನ್ನು ಸರಕಾರ ಪೂರೈಸಿದೆ. ತಾಂತ್ರಿಕ ...ಜ್ಞರನ್ನು ಸಿದ್ಧಗೊಳಿಸುವಂತೆ ತರಬೇತಿ ವ್ಯವಸ್ಥೆಯೂ ಕಾರ್ಖಾನೆಯನ್ನು ನೆರೆಗೊಳಿಸುವುದಕ್ಕೆ ಪೂರ್ವಭಾವಿಯಾದ ಕೆಲಸವೂ ಈಗ ಸಾಗಿದೆ. ...ಚಿತ್ರದಲ್ಲಿ ಉಕ್ಕಿನ ಕಾರ್ಖಾನೆಯ ಒಳನೋಟವನ್ನು ಕಾಣಬಹುದು.

ಮಂಗಳೂರು

ಜಿಲ್ಲಾ ಅಭಿವೃದ್ಧಿ ಸಂಘ— ಇವರ ಆಶ್ರಯದಲ್ಲಿ ಜರಗಿದ ಕಳೆದ ವರ್ಷ ಪುಷ್ಪೋದ್ಯಾನ ಮತ್ತು ತರಕಾರಿ ತೋಟಗಳ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಕೊಡುವ ಸಮಾರಂಭವು ತಾ. 24ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಕೊಡಿಯಾಲ್ ಬೈಲಿನ ರಾವ್ ಭವನದಲ್ಲಿ ನೆರವೇರಿತು. ಆರಂಭದಲ್ಲಿ ಜತೆ ಕಾರ್ಯದರ್ಶಿ ಶ್ರೀ ಪಿ. ಆರ್. ರಂಗನಾಥ ಪೂಂಜರು ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರು ಬಹುಮಾನ ಹಂಚಿ ಇಂಥ ಸ್ಪರ್ಧೆಗಳನ್ನು ದೊಡ್ಡ ಮಟ್ಟದಲ್ಲಿ ಏರ್ಪಡಿಸುವುದು ಒಳ್ಳೆದೆಂದು ಸೂಚಿಸಿ ಪೂಂಜ ದಂಪತಿಗಳ ಕಾರ್ಯಾಸಕ್ತಿಯನ್ನು ಶ್ಲಾಘಿಸಿದರು. ಜತೆ ಕಾರ್ಯದರ್ಶಿ ಟಿ. ಎನ್. ಆರಾನ್ನರು ಆಭಾರ ಸೂಚಿಸಿದರು.

ದ. ಕ. ಪ್ರಕಾಶಕರ ಸಂಘವು— ಇತ್ತೀಚೆಗೆ ಸ್ಥಾಪನೆಯಾಗಿದ್ದು ಇದರ ಆಶ್ರಯದಲ್ಲಿ ತಾ. 22ರಲ್ಲಿ ಶ್ರೀ ಯು. ಜಿ. ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ದ. ಭಾರತದ ಭಾಷೆಗಳ ಪುಸ್ತಕ ಸಮಿತಿಯ ಮಾರ್ಕೆಟಿಂಗ್ ಆಫೀಸರ್ ಶ್ರೀ ಎಲ್. ಆರ್. ರಾಯರು ತಮ್ಮ ಟ್ರಸ್ಟಿನ ಸ್ಥಾಪನೆ, ಉದ್ದೇಶಾದಿಗಳನ್ನು ವಿವರಿಸಿದರು.

ಮಹಾಸಭೆ— ಟಿಪ್ರೆಸ್ಡ್ ಕ್ಲಾಸಸ್ ಲೀಗಿನ ಮಹಾಸಭೆಯು ಇದೇ ತಾ. 27ರಲ್ಲಿ ಶ್ರೀ ಕೆ. ಈಶ್ವರ ನವರ ಅಧ್ಯಕ್ಷತೆಯಲ್ಲಿ ಜರಗಿ, ಗೌರವ ಕಾರ್ಯದರ್ಶಿಗಳ ರಾಜೀನಾಮೆಯನ್ನು ಸ್ವೀಕರಿಸಲಾಯಿತಲ್ಲದೆ, ಹರಿಜನ ಪರಿಷತ್ತನ್ನೂ, ಇನ್ನೊಂದು ಮಹಾಸಭೆಯನ್ನೂ ಅಕ್ಟೋಬರದಲ್ಲಿ ಕರೆಯಬೇಕೆಂದಾಯಿತು.

ಯೂತ್ ಕಾಂಗ್ರೆಸ್— ಇದೇ ತಾ. 27ರಲ್ಲಿ ಕಾಂಗ್ರೆಸ್ ಕಚೇರಿ ವಠಾರದಲ್ಲಿ ಡಾ. ಕೆ. ನಾಗಪ್ಪಾಳ್ವರಿಂದ ಧ್ವಜಾರೋಹಣ ನಡೆದನಂತರ ಸದ್ರಿಯವರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಸೇರಿದ ಚರ್ಚಾಕೂಟದ ಸಭೆಯಲ್ಲಿ ಅಂದಿನ ಮುಖ್ಯ ಭಾಷಣಕರ್ತರಾದ ಶ್ರೀ ಕೆ. ವಿಶ್ವನಾಥ ಕಾಮತ್, ಮುನಿಸಿಪಲ್ ಕೌನ್ಸಿಲರ್ ಇವರು ವಿಜ್ಞಾನದ ವಿಚಾರವಾಗಿ ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಯುವಕರು ವಿಜ್ಞಾನದ ವಿಚಾರದಲ್ಲಿ ವಹಿಸಬೇಕಾದ ಧೋರಣೆಯನ್ನು ವಿವರಿಸಿದರು.

ಶ್ರೀ ಕಾರಂತರ ಆಯ್ಕೆ— ಅಖಿಲ ಭಾರತ ಸಾಹಿತ್ಯ ಸಂಘಟನೆಗಾಗಿ ಕನ್ನಡದ ಪ್ರತಿನಿಧಿಯಾಗಿ ಶ್ರೀ ಕೋಟ ಶಿವರಾಮ ಕಾರಂತರನ್ನು ಆರಿಸಲಾಗಿದೆ ಎಂದು ತಿಳಿದು ಬರುತ್ತದೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಸುನಂಬ್ರ 113/1955.

ರಾಮಣ್ಣ ಭಟ್ ದಾಸು ಭಟ್ರ ಮಗ. ಪಳೆಯಂಗಡಿ ಗ್ರಾಮ —ವಾದಿ.

ಮತ್ತು

ಕೂಸು ಹೆಂಗ್ಸು ವಗೈರೆ—ಪ್ರತಿವಾದಿಯು.

ಸಪ್ಲಮೆಂಟ್ 4ನೇ ಪ್ರತಿವಾದಿ, ದಾಸು ದೇವಾಡಿಗ ಕೂಸು ಹೆಂಗ್ಸಿನ ಮಗ ಪಳೆಯಂಗಡಿ ಗ್ರಾಮದಲ್ಲಿ ಇರುವವರಿಗೆ—

ವಾದಿಯು ಚಾಲಗೇಣಿ ಬಾಕಿ ಮ ಆಸ್ತಿ ಸ್ವಾಧೀನತೆ ಕೇಳಿ ನಿಮ್ಮ ಮೇಲೆ ಕೂಡಾ ಮಾಡಿದ ಈ ದಾವೆಯು ನಿಮ್ಮ ಹಾಜರಾತಿಯ ಬಗ್ಗೆ ಮೇಲ್ಕಂಡ ಕೋರ್ಟಿನಲ್ಲಿ ತಾ. 14—6—1956ನೇ ಬೆಳಿಗ್ಗೆ 10 ಗಂಟೆಗೆ ಇಟ್ಟಿರುವದರಿಂದ ಸದರಿ ದಾವೆಯ ವಿಷಯದಲ್ಲಿ ನಿಮ್ಮ ಉದಾಹರಣೆಯು ಇರುವಲ್ಲಿ ನೀವು ಸ್ವತಹಾ ಅಥವಾ ವಕೀಲರ ಮೂಲಕ ಹಾಜರಾಗಿ ಜ್ವಾಹೀರುಮಾಡಿಕೊಳ್ಳಬಹುದಾಗಿಯೂ, ತಪ್ಪಿದಲ್ಲಿ ಸದರಿ ದಾವೆಯು ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲ್ಪಡುತ್ತದೆಂಬುದಾಗಿಯೂ ಈಮೂಲಕ ನಿಮಗೆ ತಿಳಿಯಪಡಿಸೋಣಾಗುತ್ತದೆ.

A. N. S. Achar.
Advocate for plff.
Karkala 28—5—1956.

ಮಲ್ಪೆ—ಭದ್ರಾವತಿ ರೈಲುದಾರಿ— ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಳ್ಳಲ್ಪಡಬಹುದಾದ ರೈಲುದಾರಿ ಯೋಜನೆಯ ಕುರಿತಾಗಿ, ಮದ್ರಾಸು ಶಾಸನ ಸಭಾ ಸದಸ್ಯರಾದ ಶ್ರೀ ಟಿ. ಅನಂತ ಪೈಗಳು ಕಳೆದ ಶನಿವಾರ ಸ್ಥಳೀಯ ಯುವಕ ಕಾಂಗ್ರೆಸ್ಸಿನ ಸದಸ್ಯರನ್ನುದ್ದೇಶಿಸಿ ಭಾಷಣ ಮಾಡುತ್ತಾ, ಸರಕಾರದ ಗಮನವನ್ನು ಮಲ್ಪೆ—ಭದ್ರಾವತಿ ರೈಲುದಾರಿ ವಿಸ್ತರಣದ ಕಡೆಗೆ ಸೆಳೆದರು.

ದ್ವಿತೀಯ ಪಂಚವರ್ಷ ಯೋಜನೆಯ ಅವಧಿಯಲ್ಲಿ ಕಲ್ಲಿದ್ದಲು ಗಣಿಗೂ ಉಕ್ಕು-ಕಬ್ಬಿಣ ಕಾರ್ಖಾನೆಗೂ ರೈಲುದಾರಿ ಸಂಪರ್ಕವನ್ನು ಏರ್ಪಡಿಸುವ ಕುರಿತಾಗಿ ಒಂದು ಸಲಹೆ ಇದೆ. ಈ ಸಲಹೆಯಿಂದಾಗಿ, ದಕ್ಷಿಣ ಭಾರತಕ್ಕೆ ಸಂಬಂಧಿಸಿದಂತೆ ಪ್ರಾಮುಖ್ಯತೆ ಇದ್ದರೂ, ರೈಲುದಾರಿ ಬಡಾವಣೆಯ ಒಂದು ಸದವಕಾಶವನ್ನು ದಕ್ಷಿಣ ಭಾರತವು ಕಳೆದುಕೊಂಡಿತೆನ್ನಬೇಕು.

ದಕ್ಷಿಣ ಭಾರತದಲ್ಲಿ, ಭದ್ರಾವತಿಯಲ್ಲಿ ಮಾತ್ರ ಕಬ್ಬಿಣ—ಉಕ್ಕು ಕಾರ್ಖಾನೆಯು ಸ್ಥಾಪಿಸಲ್ಪಟ್ಟಿದೆ. "ಮೈಸೂರು ಕಬ್ಬಿಣ—ಉಕ್ಕು ಕಾರ್ಖಾನೆ"ಯು ಬೆಳೆಯದೇ ಇರಲು ಮುಖ್ಯವಾದ ಅಡಚಣೆ ಎಂದರೆ, ಭದ್ರಾವತಿಯ ಸಮೀಪ ಕಲ್ಲಿದ್ದಲು ಸರಬರಾಜು ಕೇಂದ್ರವಿಲ್ಲದಿರುವುದೇ ಆಗಿದೆ. ಭದ್ರಾವತಿಗೆ ತೀರ ಸಮೀಪವಾಗಿರುವ—ಭದ್ರಾವತಿಗೆ ಕಲ್ಲಿದ್ದಲು ಸಿಗುವ ಒಂದೇ ಒಂದು ಕೇಂದ್ರವೆಂದರೆ, ಬಿಹಾರಿನ ಕಲ್ಲಿದ್ದಲು ಗಣಿ. ಬಿಹಾರಿನಿಂದ ಭದ್ರಾವತಿಗೆ ಕಲ್ಲಿದ್ದಲನ್ನು ಸಾಗಿಸುವುದೆಂದರೆ ಅಧಿಕ ಖರ್ಚಿನ ಬಾಬತೆಯೇ ಆಗಿದೆ. ಅದೂ ಅಲ್ಲದೆ ಅಷ್ಟು ದೊಡ್ಡ ಪ್ರಮಾಣದಲ್ಲಿ—1951ನೇ ಇಸವಿಯಲ್ಲಿ 76 ಸಾವಿರ ಟನ್ನು ಮತ್ತು 1961ರಲ್ಲಿ 13,600 ಟನ್ನು ಕಲ್ಲಿದ್ದಲನ್ನು ಬಿಹಾರಿನಿಂದ ಭದ್ರಾವತಿಗೆ ಸಾಗಿಸುವುದೆಂದರೆ ಅಧಿಕ ಖರ್ಚಿನ ವಿಷಯವೇ ಆಗಿರುತ್ತದೆ. ಸರಕಾರವು ಭದ್ರಾವತಿ—ಮಲ್ಪೆಯ ರೈಲುದಾರಿಯನ್ನು ಕಾರ್ಯರೂಪಕ್ಕೆ ತರುವುದರಲ್ಲಿ ಭದ್ರಾವತಿಯ ಉಕ್ಕಿನ ಕಾರ್ಖಾನೆಯೂ ಪ್ರಾದುರ್ಭಾವಕ್ಕೇರಲು ಸಾಧ್ಯವುಂಟು; ಮತ್ತು ಖರ್ಚನ್ನು ಮಿತಗೊಳಿಸಲೂ ಎಡೆಯುಂಟು. ಈ ರೈಲುದಾರಿಯನ್ನು "ಪಶ್ಚಿಮ ಪ್ರಬುದ್ಧ ಬಂದರಗಳ ಬೆಳವಣಿಗೆಯ ಮಂಡಳಿ"ಯು ಈಗಾಗಲೇ ಶಿಫಾರಸು ಮಾಡಿದೆ. ಅದೂ ಅಲ್ಲದೆ, ಈ ರೈಲುದಾರಿಯನ್ನೇರ್ಪಡಿಸುವುದರಿಂದ, ಈಗಾಗಲೇ ಸರಕಾರದ ಗಮನದಲ್ಲಿರುವ ಮುಂಬಯಿ - ಮಂಗಳೂರುಗಳ ಕರಾವಳಿ ಗಂಟಿ ರೈಲುದಾರಿಗೂ ಆಸ್ಪದವು ದೊರೆತಂತಾಗುತ್ತದೆ. ಕಲ್ಲಿದ್ದಲು ಗಣಿಯಿಂದ ಮಂಗಳೂರಿಗೆ ರೈಲನ್ನು ವಿಸ್ತರಿಸುವುದಾದರೆ, ಮಂಗಳೂರಿನಿಂದ ನಂತರ ಮಲ್ಪೆಗೂ ಆ ಮೂಲಕ ಭದ್ರಾವತಿಗೂ ರೈಲುದಾರಿಯನ್ನು ಏರ್ಪಡಿಸಲೂ ಸಾಧ್ಯವಿದೆ ಮತ್ತು ಪಶ್ಚಿಮ ಕರಾವಳಿಯ ಮಂಗಳೂರು—ಮಲ್ಪೆಯ ಎರಡು ಬಂದರಗಳೂ ಬೆಳೆಯಲು ಸಾಧ್ಯವಾಗುತ್ತದೆ, ಎಂದು ಶ್ರೀ ಪೈಗಳು ಹೇಳಿದರು.

ಭರತ ನಾಟ್ಯ— ಪ್ರದರ್ಶನವೊಂದು ತಾ. 27ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಮೂಡಬಿದ್ರೆ ಸರಸ್ವತಿ ಸೇವಾ ಸಂಘದ ಸಹಾಯಾರ್ಥವಾಗಿ ಯಶಸ್ವಿಯಾಗಿ ನಡೆಯಿತು.

ಬುದ್ಧ ಜಯಂತಿ ಸಮಾರಂಭವು— ಬಿಷೊಂಟ್ ಶಾಲೆಯಲ್ಲಿ ಡಾ. ಎಂ. ಕೇಶವ ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ಮಠದ ಅಧ್ಯಕ್ಷರಾದ ಸ್ವಾಮಿ ಆದಿ ದೇವಾನಂದರ ಭಾಷಣದೊಡನೆ ಜರಗಿತು. ಅತ್ತಾವರ ರಾತ್ರಿ ಶಾಲೆಯಲ್ಲಿ ಶ್ರೀ ಎಚ್. ಭಾಸ್ಕರ ರಾಯರ ಅಧ್ಯಕ್ಷತೆಯಲ್ಲಿ ಬುದ್ಧ ಜಯಂತಿ ಕಾರ್ಯಕ್ರಮಗಳಾದುವು. ಅಲ್ಲದೆ ಅಂದೇ ಬೆಳಿಗ್ಗೆ ರಾಷ್ಟ್ರಕವಿ ಎಂ. ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಬುದ್ಧನ ಜೀವನ ಮತ್ತು ಸಂದೇಶ ಎಂಬೀ ಕುರಿತು ವಿಚಾರ ಗೋಷ್ಠಿಯೊಂದು ನೆರವೇರಿತು. ಡಾ. ಎಂ. ಎಸ್. ಶಾಸ್ತ್ರಿಗಳು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಕೆ. ಆರ್. ಆಚಾರ್ಯ; ಎಂ. ಎಸ್. ಮಾಧವ ರಾವ್, ಬಿ. ಪಿ. ಕಕ್ಕಿಲ್ಲಾಯ, ಡಾ. ಎಮ್. ದಾಮೋದರ ಶೆಣೈ, ಶ್ರೀಮತಿ ಶಾರದಾ ಬ್ಯಾ ಘಾಟೆ ಮೊದಲಾದವರು ಭಾಷಣಮಾಡಿ ಪ್ರೀತಿ ಕರುಣೆಗಳೇ ಬುದ್ಧನ ಸಂದೇಶವೆಂದೂ, 'ನೀನು ಜ್ಯೋತಿಯಾಗಿ ನಿನ್ನನ್ನು ಅರಿತುಕೊಳ್ಳಬೇಕೆ'ಂದೂ ವಿಶ್ವಶಾಂತಿಯನ್ನು ಯುದ್ಧ ವಿರೋಧವನ್ನು ಬುದ್ಧನು ಬೋಧಿಸಿದ್ದಾನೆಂದೂ ಸಾರಿದರು. ಅಧ್ಯಕ್ಷರು ಬುದ್ಧನ ಕಾಲನಿರ್ಣಯ, ಧಾರ್ಮಿಕ ತತ್ವದ ಕುರಿತು ವಿಚಾರಾತ್ಮಕ ಭಾಷಣ ಮಾಡಿದರು.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ಸುರತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—9—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 6

ಜನಪ್ರಿಯ ಪುಸ್ತಕದ ನೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿವೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಿರ್ವ— ಮಿತ್ರಬೆಟ್ಟು ಒಂಟಿ ಉಪಾಧ್ಯಾಯ ಶಾಲಾ ಕಟ್ಟಡದ ಉದ್ಘಾಟನಾ ಸಮಾರಂಭವು ಡಾ. ಕೆ. ನಾಗಪ್ಪಾಳ್ವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರಿಂದ ತಾ 25ರಂದು ನೆರವೇರಿಸಲ್ಪಟ್ಟಿತು. ಶಾಲಾ ಕಟ್ಟಡವು ಭಾರತ ಸೇವಕ ಸಮಾಜದ ವತಿಯಿಂದ ಶ್ರೀ ಸೋದೆ ವಾದಿರಾಜ ಮಠದ ಸ್ವಾಮಿಗಳವರ, ಮತ್ತು ಹಳ್ಳಿಗರ ಸಹಾಯದಿಂದ ಸ್ಥಾನಿಕ ಯೋಜನೆಯನ್ವಯ ಕಟ್ಟಸಲಾಗಿದೆ. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾವ್, ಮತ್ತು ಸೈಂಟ್ ಮೇರೀಸ್ ಹೈಸ್ಕೂಲಿನ ಮುಖ್ಯೋಪಾಧ್ಯಾಯ ಶ್ರೀ ಎಲ್. ಮೆಂಡೋನ್ಸರು ಭಾಷಣಮಾಡಿದ ಮೇಲೆ ಅಧ್ಯಕ್ಷ ಡಾ. ಆಳ್ವರು ಶ್ರೀ ಪೈಗಳ ಅಸಾಧಾರಣ ಕಾರ್ಯದಕ್ಷತೆಯನ್ನು ಕೊಂಡಾಡಿ ರಾಮರಾಜ್ಯದ ಕನಸು ನನಸಾಗಬೇಕಾದರೆ ಜನರು ಮುಂದೆ ಬಂದು ದುಡಿಯಬೇಕೆಂದರು. ಶ್ರೀ ಎ. ಜೆ. ಆಲ್ವೆಯವರು ಧನ್ಯವಾದಗಳನ್ನಿತ್ತರು.

ಪಿಲಾರು— ಪ್ರತಿನಾ ಹಾಯರ್ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈಗಳಿಂದ ನೆರವೇರಿಸಲ್ಪಟ್ಟಿತು. ಶ್ರೀ ರೋಕ್ಕಿ ಫೆರ್ನಾಂಡಿಸರು ಸಂದರ್ಭೋಚಿತ ಭಾಷಣಮಾಡಿದರು. ಶಾಲಾ ವಯಸ್ಸಿನ ಹೆಮ್ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸಿ ಮುಂದಿನ ತಾಯಂದಿರನ್ನು ಸುಶಿಕ್ಷಿತರನ್ನಾಗಿ ಮಾಡಬೇಕೆಂದು ಉದ್ಘಾಟಕರೂ, ಜಿಲ್ಲೆಯ ಕ್ರೈಸ್ತ ಮಿಶನರಿಗಳ ವಿದ್ಯಾ ವಿಷಯಕ ಚಟುವಟಿಕೆಗಳನ್ನು ವಿವರಿಸಿ ಅಧ್ಯಕ್ಷರೂ ಭಾಷಣಮಾಡಿದರು.

ಆಲೂರು— (ಕುಂದಾಪುರ) ತಾ. 20ನೇ ಬೆಳಿಗ್ಗೆ ಶೃಂಗೇರಿ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಸ್ವಾಮಿಗಳವರು ಪಟೇಲ್ ಲಕ್ಷ್ಮೀನಾರಾಯಣ ಜೋಯಿಸರವರಲ್ಲಿ ಪಾದಪೂಜೆ, ಭಿಕ್ಷೆ, ಭಕ್ತಾದಿಗಳಿಂದ ಕಾಣಿಕೆ ವಗೈರೆಗಳನ್ನು ಸ್ವೀಕರಿಸಿ ಫಲ ಮಂತ್ರಾಕ್ಷತೆಯಿತ್ತು ಮುಂದಿನ ಮುಕ್ಕಾಂಗೆ ತೆರಳಿದರು.

ಹೇರೂರು— ಶ್ರೀ ಮಹಾಲಿಂಗೇಶ್ವರ ಸ್ವಾಮಿ ಎಲಿಮೆಂಟರಿ ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ತಾ. 25ರಲ್ಲಿ ಶ್ರೀ ಕೆ. ಜಿ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ರಾಮದಾಸ ನಾಯಕರು ಸ್ವಾಗತಿಸಿದರು. ಶ್ರೀ ಕೆ. ಆರ್. ಶೆಟ್ಟಿಯವರು ವರದಿಯನ್ನೊಪ್ಪಿಸಿದರು. ಅಧ್ಯಕ್ಷರು ಈ ಶಾಲೆಯನ್ನು ನಡೆಸುತ್ತಿರುವ ಕಟಪಾಡಿ ಯಸ್. ವಿ. ಯಸ್. ವಿದ್ಯಾವರ್ಧಕ ಸಂಘದ ಕಾರ್ಯಕಲಾಪಗಳನ್ನು ಕೊಂಡಾಡಿ, ವಿದ್ಯಾಸಂಸ್ಥೆಗಳ ಪ್ರಗತಿಗೆ ಉತ್ತಮ ಆಡಳಿತವೂ, ಸಂತೃಪ್ತ ಸಿಬ್ಬಂದಿಯೂ, ಜನರ ಸಹಕಾರವೂ ಮುಖ್ಯವೆಂದರು.

ನೀಲಗಿರಿ ದಾಸ ಪ್ರಕಾಶದಲ್ಲಿ ಮಕ್ಕಳ ಕೂಟ— ದಾಸಪ್ರಕಾಶದ ಮಾಲಿಕರಾದ ಶ್ರೀ ಕೆ. ಸೀತಾರಾಮ ರಾಯರು ಇದೇ ತಾ. 23ರಲ್ಲಿ ವಾರ್ಷಿಕ ಮಕ್ಕಳ ಕೂಟವನ್ನು ದಾಸಪ್ರಕಾಶ ಭವನದಲ್ಲಿ ಮಾನ್ಯ ಮಂತ್ರಿ ಶ್ರೀ ಸಿ. ಸುಬ್ರಹ್ಮಣ್ಯರವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ನಿರ್ಪಡಿಸಿದ್ದರು. ಅಲಂಕೃತ ಮಂದಿರದಲ್ಲಿ ಅನೇಕರು ಉಪಸ್ಥಿತರಿದ್ದರು. ಉಪಾಹಾರ ನಂತರ ಶ್ರೀ ಸೀತಾರಾಮ ರಾಯರು ಎಲ್ಲರನ್ನೂ ಸ್ವಾಗತಿಸಿ ಭಾಷಣಮಾಡಿ ಮಕ್ಕಳ ಕೂಟದ ಕಾರ್ಯಕಲಾಪವನ್ನು ವಿವರಿಸಿದರು. ಮಂತ್ರಿಗಳು ಶ್ರೀ ಸೀತಾರಾಮ ರಾಯರ ಶ್ರದ್ಧಾಭಕ್ತಿಗಳನ್ನು ಕೊಂಡಾಡಿ, ಅವರ ಕಾರ್ಯಗಳಿಗೆ ಶುಭವನ್ನು ಕೋರಿದರು. ಬಳಿಕ ಪಂದ್ಯಾಟಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನವಿತರಣೆ ಮಾಡಿದರು. ಸುಮಾರು 20 ತರದ ಪಂದ್ಯಾಟಗಳಲ್ಲಿ ನೂರು ಇನ್ನೂರು ಮಕ್ಕಳು ಭಾಗವಹಿಸಿದ್ದರು. ಜಯಶೀಲರಾದ ಮಕ್ಕಳಿಗೆ ಸುಮಾರು ಇಪ್ಪತ್ತು ಕಪ್ಪುಗಳನ್ನು ಕೊಡಲಾಯಿತು. ಬಾಲಕರ ಚಾಂಪಿಯನ್ ಕಪ್ಪನ್ನು ಕುಮಾರ ಚಂದ್ರಶೋಭನನಿಗೂ ಬಾಲಕಿಯರ ಚಾಂಪಿಯನ್ ಕಪ್ಪನ್ನು ಕುಮಾರಿ ಮುತ್ತಮ್ಮ ಮುದ್ದಪ್ಪ ಎಂಬವಳಿಗೂ ಕೊಡಲಾಯಿತು. ಶ್ರೀ ಸೀತಾರಾಮ ರಾಯರ ವ್ಯವಸ್ಥೆಯು ಶ್ಲಾಘನೀಯವಿದೆ.

ರಾಜಪುರ ಯಾತ್ರಾ ಭಾಲಾವಲಿಕಾ

ರ್ ಸಾರಸ್ವತ ಸಮ್ಮೇಳನ— ಈ ಸಮ್ಮೇಳನವು ಉಡುಪಿ ತಾಲೂಕಿನ ಬಂಟಕಲ್ಲಿನಲ್ಲಿ ಇದೇ ತಾ. ೨೦ರಲ್ಲಿ ಶ್ರೀ ಮುಕುಂದನಾರಾಯಣ ನಾಯಕ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ರಾಷ್ಟ್ರಕವಿ ಶ್ರೀ ಗೋವಿಂದ ಪೈಗಳು ಸಮ್ಮೇಳನವನ್ನು ಉದ್ಘಾಟಿಸುತ್ತಾ ಹಿಂದೂಸ್ಥಾನದಲ್ಲಿ ದಶವಿಧ ಬ್ರಾಹ್ಮಣರಿರುವರು. ಅವರಲ್ಲಿ ಗೌಡಾದಿ ಪಂಚಕ ಮತ್ತು ದ್ರಾವಿಡಾದಿ ಪಂಚಕ ಎಂಬ ಎರಡು ಭೇದ. ಈ ಭೇದವು ಎಂದು ಆಯಿತೆನ್ನುವ ವಿಚಾರ ಗೊತ್ತಿಲ್ಲ. ಗೌಡಾದಿ ಪಂಚಕ ಎಂದು ಹೇಳುವ ಶಬ್ದವೇ ಸಮರ್ಪಕವಲ್ಲ. ಉತ್ತರ ದೇಶದಿಂದ ಗೌಡಾದಿ ಪಂಚಕವು ದಕ್ಷಿಣದೇಶಕ್ಕೆ ಬಂತು. ಸರಸ್ವತೀ ನದೀತೀರದಿಂದ ಬಂದವರಾದುದರಿಂದ ಸಾರಸ್ವತರೆಂಬ ಹೆಸರು ಬಂತು. ಉತ್ತರ ದೇಶದ ಪಂಜಾಬು, ಕಾನ್ಯಕುಬ್ಜ, ಉತ್ಕಲಾ ಒರಿಸ್ಸಾ ಮೊದಲಾದ ಕಡೆಗಳಲ್ಲಿ ಸಾರಸ್ವತ ವರ್ಗದವರಿರುತ್ತಾರೆ. ನಮ್ಮ ಪ್ರಧಾನ ಮಂತ್ರಿ ಶ್ರೀ ನೆಹರೂರವರು ಕಾಶ್ಮೀರಾ ಸಾರಸ್ವತ ವರ್ಗಕ್ಕೆ ಸೇರಿದ ಕಾಶ್ಮೀರೀ ಬ್ರಾಹ್ಮಣರು ಉತ್ತರ ದೇಶದಲ್ಲಿ ಕಷ್ಟವು ಬಂದುದರಿಂದ ಗೌಡಾದಿ ಪಂಚಕವು ಅಲ್ಲಿಂದ ಹೊರಟು ಗೋವೆಯಲ್ಲಿ ಬಂದು ನೆಲಸಿತು. ಗೋವೆಯಲ್ಲಿರುವ ಭಾರ್ದೇಶಕಾರರು, ಪಡ್ನೆಕರರು ಆಯಾಯ ಸ್ಥಳದ ಹೆಸರನ್ನೇ ತಮ್ಮ ಪಂಗಡಕ್ಕೆ ಇಟ್ಟುಕೊಂಡರು. ಉದಾಹರಣೆಗೆ ಸಾರ್ದೇಶಿರ್, ಪಡ್ನೆ, ಸಾಷ್ಟಿ, ಷಣ್ಣವತಿ ಇತ್ಯಾದಿಗಳು. ಷಣ್ಣವತಿಯೆಂಬ ಶಬ್ದದಿಂದ ಶೇಣ್ವೈ ಎನ್ನುವ ಹೆಸರು ಈಗ ಚಿತ್ರಾಪುರ ಸಾರಸ್ವತ ಬ್ರಾಹ್ಮಣರೆಂದು ಕರೆಯಲ್ಪಡುತ್ತಿರುವ ವರ್ಗಕ್ಕೆ ಬಂತು ಈ ಪಂಗಡಗಳೊಳಗೆ ಪರಸ್ಪರ ಮೇಲು ಕೀಳೆನ್ನುವ ಭೇದಭಾವನೆಯು ಸುಮಾರು ೪೫೦ ವರ್ಷಗಳ ಹಿಂದೆ ಪ್ರಾರಂಭವಾಗಿ ಬೇರೆಬೇರೆ ಪಂಗಡಗಳು ತಲೆದೋರಿದುವು.

೧೯೦೮ರಲ್ಲಿ ಅಮ್ಮೆಂಬಳ ಶ್ರೀ ಸುಬ್ರಾಯ ಪೈಗಳು ಈ ಸಾರಸ್ವತ ಪರಿಷತ್ತೊಂದನ್ನು ಜರಗಿಸಿದರು. ಆ ಹೊತ್ತಿಗೆ ಇದಕ್ಕೆ ರಾಜಕೀಯ ಬಣ್ಣ ಬಳಿದು ಪೋಲೀಸಿನವರು ಪ್ರತಿಭಟನೆಯನ್ನು ವ್ಯಕ್ತಪಡಿಸಿದರು. ಶ್ರೀ ಸುಬ್ರಾಯ ಪೈಗಳು 'ಇದು ರಾಜಕೀಯ ಹೊರತಾಗಿದ್ದು' ಎಂದು ಹೇಳಿದರು. ೧೯೧೦ರಲ್ಲಿ 'ಸಂಯುಕ್ತ ಸಾರಸ್ವತ ಪರಿಷತ್ತು' ಗಂಗೊಳ್ಳಿ ಶ್ರೀ ರಘುವೇಂದ್ರ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಾರಸ್ವತ ಸಮಾಜದಲ್ಲಿ ಅನೇಕ ಪಂಗಡ ಇರುವುದಾದರೂ, ಅವರ ಮೂಲ ವೊಂದೇ ಎಂದು ಅವರು ಹೇಳಿದರು ಅಗ ಕುಡಾಲ್ ದೇಶಸ್ಥ ಸಾರಸ್ವತರೂ, ಶೆಣೈ ಕಾರ್ ಸಾರಸ್ವತರೂ, ನಾವು ನಿಮ್ಮ ಪಂಗಡಕ್ಕೆ ಸೇರಿದವರಲ್ಲವೆಂತಲೂ, ನಾವು ಬೇರೆ ಪಂಗಡದವರೆಂತಲೂ ವಾದಿಸಿದರು. ಆದರೂ ಈ ಸಾರಸ್ವತರೆಂಬುದು ಎಲ್ಲರೂ ಒಂದೇ, ಇದರಲ್ಲಿ ಮೇಲು ಕೀಳೆಂಬ ಭಾವನೆ ಇರಕೂಡದು. ವಿಶಾಲ ದೃಷ್ಟಿಯಿರಬೇಕು-ಎಂದು ವಿಚಾರಾತ್ಮಕ ಭಾಷಣವಿತ್ತರು. ಶ್ರೀಗಳಾದ ಟಿ. ಎ. ಪೈ. ಎಂ. ಎಲ್. ಎ, ಆರ್. ಕೆ. ಪ್ರಭು, ಉಪೇಂದ್ರ ಶ್ರೀನಿವಾಸ ನಾಯಕ್ ಇವರು ಸನಾತನಾದಿ ಸಾರಸ್ವತ ವರ್ಗದವರೆಲ್ಲ ಒಂದಾಗಿ ಸಾಂಘಿಕ ಶಕ್ತಿಯನ್ನು ಬೆಳಗಿಸಿಕೊಳ್ಳಬೇಕೆಂದರು. ಆರಂಭದಲ್ಲಿ ಶ್ರೀ ಯು. ಯಸ್. ನಾಯಕರು ಧ್ವಜಾರೋಹಣ ಮಾಡಿದರು. ಶ್ರೀ ಕಡ್ತಲ್ ಮಂಜುನಾಥ ನಾಯ್ಕರು ಸ್ವಾಗತ ಭಾಷಣ ಮಾಡಿದರು.

ಅನಂತರ ಶ್ರೀ ಕೆ. ಮುಕುಂದನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿದ ಬಹಿರಂಗ ಅಧಿವೇಶನದಲ್ಲಿ ಹಿಂದುಳಿದ ವರ್ಗಗಳಿಗೆ ಸರಕಾರವು ಕೊಡುವ ಎಲ್ಲಾ ಸೌಕರ್ಯಗಳನ್ನು ಈ ಸಮಾಜದವರಿಗೆ ಕೊಡಬೇಕೆಂದು ವಿನಂತಿಸಿಕೊಳ್ಳುವ, ಸಮಾಜದ ದೇವಸ್ಥಾನ ಸಂಘ ಸಂಸ್ಥೆಗಳನ್ನು ಅಭಿವೃದ್ಧಿಗೊಳಿಸಬೇಕೆನ್ನುವ ವಧು ದಕ್ಷಿಣೆ ಮತ್ತು ವರದಕ್ಷಿಣೆಯ ಕ್ರಮವನ್ನು ಖಂಡಿಸುವ ಬಂಟಕಲ್ಲಿನಲ್ಲಿ ವಿದ್ಯಾವರ್ಧಕ ಸಂಸ್ಥೆಯನ್ನು ಸ್ಥಾಪಿಸಬೇಕೆನ್ನುವ, ಕೊಂಡಾಡಿ ಸತ್ಯಾಗ್ರಹದ ಕುರಿತು ಕಳವಳವನ್ನು ವ್ಯಕ್ತಪಡಿಸುವ, ಸಮಾಜದ ಪಂಗಡಗಳಲ್ಲಿ ಸಹಭೋಜನ, ವಿವಾಹ ಸಂಬಂಧಗಳು ಬೆಳೆಯಬಹುದಂತೆ ಸಂಘಟನೆಯಾಗಬೇಕೆನ್ನುವ, ಇತ್ಯಾದಿ ನಿರ್ಣಯಗಳಾದುವು. ಶ್ರೀ ನೀರೆ ಶ್ಯಾಮ ನಾಯ್ಕರು, ಶ್ರೀರಾಮ ಮಂದಿರಕ್ಕೆಂದು ಸಂಗ್ರಹಿಸಿದ ನಿಧಿಯನ್ನು ವಿದ್ಯಾವರ್ಧಕ ಸಂಘಕ್ಕೆ ಕೊಡುವ ಸೂಚನೆಯು ಅಂಗೀಕರಿಸಲ್ಪಟ್ಟಿತು. ಸಭಿಕರಲ್ಲಿ ಹಲವರು ಸನಾತನಾದಿ ಸಮಾಜದ ಅಭಿವೃದ್ಧಿಯನ್ನು ಕೋರಿದ ಮೇಲೆ ಅಧ್ಯಕ್ಷರು ದ. ಕನ್ನಡ ಜಿಲ್ಲೆಗೆ ನಿರಾಶ್ರಿತರಾಗಿ ಬಂದ ಈ ಸಮಾಜದವರ ಚಾರಿತ್ರಿಕ ಹಿನ್ನೆಲೆ ಹಾಗೂ ಇಂದಿನ ಪರಿಸ್ಥಿತಿಯನ್ನು ವಿವರಿಸಿ ಎಲ್ಲರೂ ಒಂದಾಗಿ ವಿದ್ಯೆಯಲ್ಲಿ ಮುಂದರಿಯಬೇಕೆಂದು ಕೋರಿದರು. ಶ್ರೀ ಎಸ್. ರಾಮಚಂದ್ರ ನಾಯ್ಕರು ಆಭಾರ ಸೂಚಿಸಿದರು. ರಾತ್ರಿ ಶ್ರೀ ಭದ್ರಗಿರಿ ಕೇಶವ ಪೈಗಳಿಂದ ಹರಿಕಥಾ ಕಾಲಕ್ಷೇಪವು ನಡೆಯಿತು.

ಬೆಳ್ತಂಗಡಿ - ಬೋರ್ಡ್ ಎಲಿಮೆಂಟರೀ ಶಾಲೆಯ ನೂತನ ಕಟ್ಟಡದ ಉದ್ಘಾಟನೆಯು ಇದೇ ತಾ ೨೩ರಲ್ಲಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಡಾ ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಯಚ್. ನರಸಿಂಹನವರಿಂದ ನೆರವೇರಿಸಲ್ಪಟ್ಟಿತು. ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ತಮ್ಮ ಭಾಷಣದಲ್ಲಿ ಪಂಚವಾರ್ಷಿಕ ಯೋಜನೆಗಳಂಥ ಕಾರ್ಯಕ್ರಮಗಳಲ್ಲಿ ಶಿಕ್ಷಣ ಪ್ರಚಾರವೂ ಒಂದೆಂದೂ, ಉಪಾಧ್ಯಾಯರ ಸ್ಥಾನಮಾನ ಹಾಗೂ ಪರಿಸ್ಥಿತಿಗಳ ಸುಧಾರಣೆಗಾಗಿ ಸರಕಾರವೂ ಸ್ಥಾನಿಕ ಸಂಸ್ಥೆಗಳೂ ಪ್ರಯತ್ನಿಸುತ್ತಿವೆ. ಆದರೆ ಅವರ ಸಂಖ್ಯೆಯು ದೊಡ್ಡದಿರುವುದರಿಂದ ಈ ಕೆಲಸವು ಬೇಗನೇ ಬಿಡಿಸಲಿಕ್ಕಾಗದ ಸಮಸ್ಯೆಯಂತಾಗಿದೆಯೆಂದೂ ಜನತೆಯ ಬೆಂಬಲವಿದ್ದರೆ ಇದು ಕೈಗೂಡೀತೆಂದೂ ಹೇಳಿದರಲ್ಲದೆ ಈ ಶಾಲೆಯನ್ನು ಹಾಯರ್ ಎಲಿಮೆಂಟರಿಯಾಗಿ ಮಾರ್ಪಡಿಸುವ ಪ್ರಯತ್ನವನ್ನು ಜಿಲ್ಲಾ ಬೋರ್ಡ್ ಮಾಡುವುದೆಂದೂ ಹೇಳಿದರು. ಸಭಿಕರ ಭಾಷಣಗಳಾಗಿ ಸಭಾಂತ್ಯವಾಯಿತು.

ಕೊಳಂಬೆ— ಸ್ಥಳೀಯ ಬುನಾದಿ ಶಾಲೆಯ ವರ್ಧಂತಿಯು ಶ್ರೀ ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಮರುದಿನ ಶಾಲಾ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಬುದ್ಧ ಜಯಂತಿಯು ಜರಗಿತು.

ಬಾರ್ಕೂರು— ಇದೇ ತಾ. ೨೪ರಲ್ಲಿ ಸಮಾಜ ಮಂದಿರದ ಉದ್ಘಾಟನೆಯು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಲೆಕ್ಟರ್, ಶ್ರೀ ಎಂ. ಜಿ. ರಾಜಾರಾಮರಿಂದ ನೆರವೇರಿಸಲ್ಪಟ್ಟಿತು. ತಹಶೀಲ್ದಾರ ಶ್ರೀ. ಕೆ. ಲಿಂಗಪ್ಪಯ್ಯನವರು ಧ್ವಜ ವಂದನೆ ಮಾಡಿದರು. ಶ್ರೀ. ಕೆ. ಯಜ್ಞನಾರಾಯಣ ರಾಯರು ಸ್ವಾಗತ ಭಾಷಣ ಮಾಡಿದರು ಸಭಿಕರಲ್ಲಿ ಶ್ರೀಗಳಾದ ಟಿ. ಎ. ಪೈ ಎಂ. ಎಲ್. ಎ, ಎಚ್. ರಾಮಕೃಷ್ಣ ಹಂದೆಯವರು ಸ್ಥಳೀಯ ಅಭಿವೃದ್ಧಿ ಯೋಜನೆಯ ಕುರಿತು ಭಾಷಣ ವಿತ್ತರು. ಅಧ್ಯಕ್ಷ ಡಾ. ಪೈಗಳು ದ್ವಿತೀಯ ಪಂಚವಾರ್ಷಿಕ ಯೋಜನೆ ಯಶಸ್ವಿಯಾಗುವಂತೆ ನಾವೆಲ್ಲರೂ ಸಹಕರಿಸಬೇಕೆಂದರು.

ಬೈರಂಜೆ—ಶ್ರೀ ಶಾರದ ಎಯ್ಡೆಡ್ ಎಲಿಮೆಂಟರೀ ಶಾಲಾ ವರ್ಧಂತ್ಯುತ್ಸವವು ತಾ. ೧೯ರಲ್ಲಿ ಶ್ರೀ ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಶಾರಾನಾಥ ಹೆಗ್ಡೆಯವರು ಸ್ವಾಗತ ಭಾಷಣ ಮಾಡಿದರು. ಸಭಿಕರಲ್ಲಿ ಶ್ರೀ ಆರ್. ಭೋಜ ಹೆಗ್ಡೆ, ಕೆ. ಗೋಪಾಲ ನಾಯಕ್, ಪಿ. ನಾರಾಯಣ ಸೆಟ್ಟಿ, ವೈ. ಪಾಂಡುರಂಗ ಶಾಸ್ತ್ರಿ, ಇವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶಾಲಾ ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿಗಳಾದುವು.

ಬೈಂದೂರು – ದ ಕ. ಜಿಲ್ಲೆಯ ಹೆಸರಾಂತ ವರ್ತಕರ ಹಾಗೂ ಬಂಟ ಮನೆತನದವರಾಗಿದ್ದ ಶ್ರೀ ಯಡ್ತರೆ ಕೃಷ್ಣ ಶೆಟ್ಟರು ಕಳೆದ ತಾ. ೧೦ರಲ್ಲಿ ನಿಧನಗೊಂಡರೆಂದು ತಿಳಿಸಲು ವಿಷಾದವಾಗುತ್ತದೆ. ಮರಣ ಕಾಲದಲ್ಲಿ ಇವರ ಪ್ರಾಯ ಸುಮಾರು ೭೦ ಎಂದು ತಿಳಿಯಲ್ಪಡುತ್ತದೆ.

ಕಾಪು—ಇದೇ ತಾ. ೨೧ರಲ್ಲಿ ಪೋಸ್ಟು ಆಫೀಸಿನ ಎದುರು ಡಾ. ಯಂ. ಬಾಲಕೃಷ್ಣ ಶೆಟ್ಟರ ನೂತನ ಡಿಸ್ಪೆನ್ಸರಿಯ ಪ್ರಾರಂಭ ಉತ್ಸವವು ವಿಜೃಂಭಣೆಯಿಂದ ನೆರವೇರಿತು.

ಕುಂದ ಬಾರಂದಾಡಿ— ಇದೇ ತಾ. ೨೩ರಂದು ರಾ. ವಿ. ಯೋಜನೆಯ ಆಶ್ರಯದ ಲ್ಲಾದ ಬೋರ್ಡ್ ಶಾಲಾ ಹೊಸ ಕಟ್ಟಡದ ಉದ್ಘಾಟನೆಯು ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮ ಅವರಿಂದ ಶ್ರೀ ಹಲಸನಾಡ್ ಸದಾಶಿವಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಸಿಂ. ಶಿ. ಭಟ್ಟರು ವರದಿಯೋದಿದ ಮೇಲೆ ವಕೀಲ್ ಶ್ರೀ ವಿ. ಶ್ರೀನಿವಾಸ ಭಟ್ಟರು ಕಾರ್ಯವನ್ನು ಪ್ರಶಂಸಿಸಿದರು ಜಿಲ್ಲಾ ಕಲೆಕ್ಟರರು ರೂರಲ್ ಆಸ್ಪತ್ರೆ, ಶಾಲಾ ಬಾವಿ ಮತ್ತು ವಿಹಾರ ಕೇಂದ್ರವನ್ನು ಊರವರ ಸಹಾಯದೊಡನೆ ಮಾಡಿಸುವ ಭರವಸೆಯಿತ್ತರು. ಕಟ್ಟಡ ಕಮಿಟಿಯ ಅಧ್ಯಕ್ಷ ಶ್ರೀ ಕೊಳ್ಕೆಬೈಲು ಸೂರಪ್ಪ ಸೆಟ್ಟರು ಧನ್ಯವಾದವನ್ನಿತ್ತ ಮೇಲೆ ಮುಟ್ಟು ಸ್ವಾಮಿ ಮತ್ತು ಪಾರ್ಟಿಯಿಂದ ನರ್ತನ ಕಾರ್ಯಕ್ರಮಗಳಾದುವು.

ಸುರತ್ಕಲ್—ಮುಕ್ಕ ಗಂಗಯ್ಯ ಸ್ಮಾರಕ ಫಂಡಿನ ವಾರ್ಷಿಕೋತ್ಸವವು ತಾ. ೨೦ರಲ್ಲಿ ಶ್ರೀ ಹಳೆಯಂಗಡಿ ಕೇಶವ ರಾಯರ ಅಧ್ಯಕ್ಷತೆಯಲ್ಲಿ ವರದಿ ವಾಚನ, ಬಹುಮಾನ ಹಂಚೋಣ, ಭಾಷಣ, ನಾಟಕ ಪ್ರದರ್ಶನಾದಿ ಕಾರ್ಯಕ್ರಮದಿಂದ ಜರಗಿತು.

ಶಿರೂರು—ಎಯ್ಡೆಡ್ ಶಾಲಾ ವರ್ಧಂತ್ಯುತ್ಸವವು ತಾ. ೨೦ರಲ್ಲಿ ಶ್ರೀ ಬಿ. ಪಿಂಟೊರವರ ಅಧ್ಯಕ್ಷತೆಯಲ್ಲಿ, ಶ್ರೀ ಎಸ್. ಶಿವರಾಮ ಶೆಟ್ಟರ ಸ್ವಸ್ತಿ ವಾಚನ, ಶ್ರೀ ಕೆ. ರಾಜೀವ ಸೆಟ್ಟರ ನಿಯೋಜಿತ ಭಾಷಣ ಶಾಲಾ ಮಕ್ಕಳ ವಿವಿಧ ವಿನೋದಾವಳಿಗಳಿಂದ ನೆರವೇರಿತು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 43/1956.

ಚಂದ್ರಶೇಖರ ಸೆಟ್ಟಿ —ಅರ್ಜಿದಾರ.

1 ಅಕ್ಕಯ್ಯ ಸೆಡ್ತಿ. ಸೈಲಾಡಿ ಶಿವರಾಮ ಸೆಟ್ರ ವಿಧವೆ. —ಎದುರು.

2 ಗುಲಾಬಿ ಸೆಡ್ತಿ, 3 ರತ್ನಾವತಿ ಸೆಡ್ತಿ. 4 ತಿಮ್ಮಪ್ಪ ಸೆಟ್ಟಿ, 5 ಸುಧಾಕರ ಸೆಟ್ಟಿ, 6 ಪ್ರಾಯಸ್ಥರ ಸವಿತಾ— 1ನೇ ಎದುರಿಯ ಮಕ್ಕಳು. 5,6ನೇ ಯವರ ಗಾರ್ಡಿಯನ್ ತಾಯಿ 1ನೇ ಎದುರಳು.

7 ಪ್ರಾಯಸ್ಥರ ಬಾಲಕೃಷ್ಣ. 8 ವಿಮಲ 9 ವತ್ಸಲಾ. 10 ದಿವಾಕರ. 11 ಜಯಕರ— ಎರಡನೇ ಎದುರಿಯ ಮಕ್ಕಳು. 7ರಿಂದ 11ನೇ ವರೆಗಿನವರ ಗಾರ್ಡಿಯನ್ ತಾಯಿ 2ನೇ ಎದುರಳು.

12 ಸದಾಶಿವ— 3ನೇ ಎದುರಿಯ ಮಗ ಗಾರ್ಡಿಯನ್ ತಾಯಿ 3ನೇ ಎದುರಳು.

ಕುಂದಾಪುರ ಕಸಬೆಯಲ್ಲಿರುವವರು.

ಸದ್ರಿ ಎದುರಿಗೆ ವ, ಇತರ ಸಮಸ್ತರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ,

1ನೇ ಎದುರಳ ಗಂಡ ವ, ಮಿಕ್ಕ ಎದುರರ ತಂದೆ ವ, ಅಜ್ಜನಾದ ಸೈಲಾಡಿ ಶಿವರಾಮ ಸೆಟ್ರಿಗೆ ಬರತಕ್ಕ ಮೇಲಿನ ಅರ್ಜಿಯಲ್ಲಿ ಕಾಣುವ ಡಿಕ್ರಿಗಳ ಹಣ ವಸೂಲು ಮಾಡುವರೆ ರೆಕ್ಕಾರ್ಡಾದ ಎದುರರಿಂದ ರಜಿಸ್ಟ್ರಿ ವಿಕ್ರಯ ಪಡೆದ ಅರ್ಜಿದಾರನಿಗೆ ಸದ್ರಿ ಡಿಕ್ರಿಗಳ ಹಣ ವಸೂಲುಮಾಡುವರೆ ವಾರೀಸು ಸರ್ಟಿಫಿಕೇಟು ಕೊಡಿಸಬೇಕೆಂತ ಅರ್ಜಿದಾರನು ದಾಖಲುಮಾಡಿದ ಮೇಲಿನ ಅರ್ಜಿಯನ್ನು ತಾ. 9 - 6—1956ಕ್ಕೆ ತನಿಖೆಗೆ ಇಟ್ಟಿರುತ್ತಾರೆ. ಆ ಕುರಿತು ಯಾರದ್ದಾದರೂ ಆಕ್ಷೇಪಯಿದ್ದರೆ ಆ ದಿವಸ ಹಗಲು 11 ಘಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷ ತೀರ್ಮಾನದಿಂದ ಅರ್ಜಿ ತೀರ್ಮಾನಿಸಲಾದೀತೆಂತ ತಿಳಿಸಿರುತ್ತದೆ.

(By order of the court)

Y. Tejappa Shetty.

Advocate for plff.

Coondapoor 26—6—1956.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ. ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಕ್ಕಳ ಮಗ್ಗಿಪುಸ್ತಕ

0—1—0

ರಖಂ ದರಗಳಿಗೆ ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

ಗೌತಮನ ಪರಮೋಪದೇಶ

ಇಂದಿಗೂ ಅದು ಮಾನವ ಜಾತಿಗೆ ತಾರಕ

ಗೌತಮನು ಮಹಾ ಪರಿನಿರ್ವಾಣವನ್ನೈದಿ ಸರ್ವ ಕಾಲಕ್ಕೂ ಬುದ್ಧನಾಗಿ ಇಂದಿಗೆ ೨೫೦೦ ಸಂವತ್ಸರಗಳಾದುವು: ಸಮಯದ ಒರೆಗಲ್ಲಿಗೆ ಆತನ ಬೋಧನೆಗಳೂ ಸಂದೇಶಗಳೂ ಹಚ್ಚಲ್ಪಟ್ಟು ಇಂದಿಗೂ ಅವು ಪವಿತ್ರವೂ ಶುದ್ಧವೂ ಆಗಿ ಉಳಿದಿರುವುದೊಂದು ವಿಶೇಷ. ಈ ದೀರ್ಘ ಕಾಲದಲ್ಲಿ ಜಗತ್ತಿನ ಸ್ವರೂಪವೇ ತೀವ್ರ ಮಾರ್ಪಾಟುಗಳನ್ನು ಹೊಂದಿದ್ದರೂ ಸಹ, ವಿಶ್ವ ಶಾಂತಿ ಮತ್ತು ಸಹನೆಯ ಕುರಿತು ಬುದ್ಧನಿತ್ತ ಸಂದೇಶವು ತನ್ನ ಕಡೆಗೆ ಎಲ್ಲರನ್ನೂ ಏಕರೀತಿಯಾಗಿ ಆಕರ್ಷಿಸುತ್ತಿದೆ.

ನಾವು ಆಧುನಿಕ ಯುಗಕ್ಕೆ ಅಥವಾ ಇಂದಿನ ವಿಚಾರ ಧಾರೆಗೆ ಯಾವ ವಿಶಿಷ್ಟ ಮೂಲ ಭೂತಾಂಶಗಳು ತಳಹದಿಯಾಗಿವೆ ಎನ್ನುತ್ತೇವೋ ಆ ಲಕ್ಷಣಗಳನ್ನೆ ಬುದ್ಧನ ಉಪದೇಶಗಳು ಪಡೆದಿರುವುದು ಅಭಿಮಾನದ ವಿಷಯ. ನಿಜವಾದ ಅರ್ಥದಲ್ಲಿ ಬುದ್ಧನು ತರ್ಕಶಾಸ್ತ್ರಿಯಾಗಿದ್ದನು: ಆತನು ನ್ಯಾಯ ಅಥವಾ ತರ್ಕ ಶುದ್ಧಿಗೆ ಮಹತ್ವವನ್ನಿತ್ತನು. ತನ್ನ ಬುದ್ಧಿ ಬಲದಿಂದಲೇ ಆತ್ಮ ಪ್ರಕಾಶದ ಆವರಣದಲ್ಲಿಯೇ ಪ್ರತಿಯೊಬ್ಬನೂ ತನ್ನನ್ನು ಪರಿಶುದ್ಧಗೊಳಿಸಿಕೊಳ್ಳಬೇಕೆಂದವನು ಬುದ್ಧ.

ಉನ್ನತವಾದೀ ಆದರ್ಶವನ್ನು ಮುಟ್ಟಲು, ಆತನು ಅಷ್ಟಾಂಗ ಕಾರ್ಯಕ್ರಮಗಳನ್ನು ನಿರೂಪಿಸಿದನು. ಇವನ್ನು ನೀತಿ ಸೂತ್ರಗಳೆಂದು ಕರೆಯಬಹುದು. ಆರ್ಯ ಸತ್ಯಗಳೆಂದು ಹೆಸರಾದ ಈ ಸೂತ್ರಗಳೂ ಕೊಲಬೇಡ, ಕಳಬೇಡ, ವ್ಯಭಿಚರಿಸಬೇಡ, ಸುಳ್ಳಾಡಬೇಡ, ಮಾದಕಪೇಯದ ಸೇವನೆ ಮಾಡಬೇಡವೆಂಬ ಪಂಚ ಆದೇಶಗಳೂ ಯಾವುದೇ ಮತದವನಿರಲಿ—ಆತನಿಗೂ ಮಾನ್ಯವಾದವುಗಳೇ ಆಗಿರುವುದರಲ್ಲಿ ಸಂದೇಹವಿಲ್ಲ. ಸಮಸ್ತ ಜಗತ್ತಿಗೆ ಇವು ಅನ್ವಯವಾಗುತ್ತವೆ.

ಬುದ್ಧನು ಏನನ್ನು ಉಪದೇಶಿಸಿದನೋ ಅದೆಲ್ಲವೂ ಸ್ವಾನುಭವದಿಂದ ಸಿದ್ಧವಾದುದಾಗಿದೆ; ತನ್ನ ನಿತ್ಯ ವ್ಯವಹಾರದಲ್ಲಿ ಆತನು ರೂಢಿಸಿಕೊಂಡುದಾಗಿದೆ. ಆದುದರಿಂದ ಅವುಗಳ ವ್ಯಾವಹಾರಿಕ ಯೋಗ್ಯತೆಯು ಸಂಶಯಾತೀತ ರೀತಿಯಲ್ಲಿ ಸಿದ್ಧವಾಗಿದೆ. ಆತನು ಜನರ ಮುಂದೆ ನಿರ್ವಾಣವೆಂಬ ಮಹಾನಂದ ಪದದ ಆದರ್ಶವನ್ನಿಟ್ಟನು, ನಿಜ; ಆದರೆ ಅದೇ ಹೊತ್ತಿಗೆ, ವ್ಯಕ್ತಿಯು ಸ್ವಪ್ರಯತ್ನ ಧನ್ಯನಾಗಬೇಕೆಂದೂ ಆತನು ಹೇಳಿದನು.

ತಾನು ಎಷ್ಟಾದರೂ ಒಬ್ಬ ಗುರುವಿಗಿಂತ, ಅಥವಾ ಸಲಹೆಗಾರನಿಗಿಂತ ಹೆಚ್ಚಿನದೇನನ್ನೂ ಜನರಿಗೆ ಮಾಡುವಂತಿಲ್ಲ; ತಾನು ಮಾರ್ಗವನ್ನು ಸೂಚಿಸಬಹುದೇ ಹೊರತು, ಅದರಲ್ಲಿ ನಡೆದು ಹೋಗುವ ಕರ್ತವ್ಯ ಭಾವನೆಯೂ ಕ್ಷಮತೆಯೂ ಅನುಯಾಯಿ ಜನತೆಯಲ್ಲಿ ವ್ಯಕ್ತಿಗತವಾಗಿ ಬಂದಿರುವುದು ಅವಶ್ಯಕ ಎಂದೇ ಬುದ್ಧನು ನಂಬಿದ್ದನು. ಆದುದರಿಂದಲೇ ಆತ್ಮ ದೀಪವನ್ನು ಆಶ್ರಯಿಸಿ, ಸ್ವಬುದ್ಧಿಯ ಬಲದಿಂದ ವಿಮೋಚನೆಯ ದಾರಿಯನ್ನು ಕಂಡುಕೊಳ್ಳಿರೆಂದು ಬುದ್ಧನು ಹೇಳುವಂತಾಯಿತು. ಈ ಆತ್ಮ ದೀಪವನ್ನು ಉಜ್ವಲವಾಗಿ ಬೆಳಗಿಸಲು ಆತನ ಆರ್ಯಸತ್ಯಗಳೂ ಪಂಚಶೀಲಗಳೂ ನೆರವಾಗುತ್ತವೆ ಎಂಬುವನ್ನು ಮಾತ್ರ ಎಲ್ಲರೂ ಒಪ್ಪಬಹುದು.

ಕರ್ಮಕ್ಕೆ ಬೌದ್ಧ ಮತದಲ್ಲಿ ಎತ್ತರವಾದ ಸ್ಥಾನವನ್ನು ಕೊಡಲಾಗಿದೆ. ಕರ್ಮದ ಮೇಲೂ ಕಾರಣ ಮತ್ತು ಪರಿಣಾಮಗಳ ಸರಪಣಿ ಕ್ರಿಯೆಯ ಮೇಲೂ ಬುದ್ಧನಿಗೆ ವಿಶ್ವಾಸವಿತ್ತು. ಆರ್ಯ ಸತ್ಯಗಳನ್ನೂ ಪಂಚಶೀಲಗಳನ್ನೂ ಅನುಸರಿಸುವ ಮೂಲಕ ಯಾರು ಬುದ್ಧಿ ಶಕ್ತಿಯನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುತ್ತಾರೊ ಅವರು ಕೇವಲ ಒಳ್ಳೆಯ ಕೆಲಸದಲ್ಲಿಯೇ ನಿರತರಾಗುವರೆಂಬ ವಿಷಯದಲ್ಲಿ ಸಹ ಆತನು ನಂಬಿಕೆಯನ್ನಿಟ್ಟಿದ್ದನು. ಧರ್ಮ ಯಾವುದು, ಅಧರ್ಮ ಯಾವುದು ಎಂಬುದನ್ನು ಸ್ವಬುದ್ಧಿಯಿಂದ ಉಪದೇಶಗಳ ಸಲಹೆ ಪಡೆದು ತಿಳಿದುಕೊಳ್ಳುವುದರಲ್ಲಿ ವ್ಯಕ್ತಿಯು ಜಯಶೀಲನಾಗಬಲ್ಲನೆಂದು ಬುದ್ಧನು ಭಾವಿಸಿದ್ದನು. ಆತನ ದೃಷ್ಟಿಯಲ್ಲಿ ಮನುಷ್ಯನ ಹುಟ್ಟು ಮತ್ತು ಸಾವಿಗೆಯೇ ಜೀವನಾವಧಿ ಮುಗಿಯಲಿಲ್ಲ— ಜನನ ಮತ್ತು ಮರಣಗಳಿರುವ ಈ ಬಗೆಯ ಅನೇಕ ಜನ್ಮಗಳು ಜೀವನಿಗಿವೆ. ಆದರೆ, ಆತನು ಒಳ್ಳೆಯ ಮಾರ್ಗವನ್ನನುಸರಿಸಿದರೆ ನಿರ್ವಾಣ ಸುಖವನ್ನು ಕ್ಷಿಪ್ರದಲ್ಲಿ ಹೊಂದಬಲ್ಲನು. ಈ ನಿರ್ವಾಣವು ಮಾಡಿಕೆಯ ಸ್ವರ್ಗಸುಖಕ್ಕಿಂತಲೂ ಹೆಚ್ಚಿನದು.

ಪ್ರೀತಿ, ಅಹಿಂಸೆ ಮತ್ತು ಶಾಂತಿಗಳ ಪರವಾಗಿ ಬುದ್ಧನು ವಹಿಸಿದ ಉದಾತ್ತವಾದ ನಿಲುವೆಯು ಜನಜನಿತವಾಗಿದೆ. ಆತನ ನೀತಿ ಸೂತ್ರಗಳಲ್ಲಿ ಈ ಗುಣಗಳಿಗೆ ಅತ್ಯಂತ ಗೌರವದ ಸ್ಥಾನವಿದೆ. ಪ್ರಾಚೀನಕಾಲದಲ್ಲಿ ಬೌದ್ಧ ಮತದ ಪ್ರಸಾರಕ್ಕೂ ಜನಪ್ರಿಯತೆಗೂ ಕಾರಣವಾದ ಗುಣಗಳಿವೆಂದು ನಾವು ಭಾವಿಸಿದರೂ ತಪ್ಪಾಗದು. ಭಾರತೀಯ ವಿಚಾರಧಾರೆಯ ಮೇಲೆ ಈ ಗುಣಗಳು ಬೀರಿರುವ ಪ್ರಭಾವವು ಅದರಿಂದ ನಮ್ಮ ಸಂಸ್ಕೃತಿಯಲ್ಲಿ ವ್ಯಕ್ತವಾದ ಮಹಿಮೆಯೂ ಅನ್ಯಾದೃಶವಾಗಿವೆ. ಇವತ್ತಿಗಾದರೂ ಭಾರತೀಯ ಮನೋಭಾವವು ಈ ಉದಾತ್ತ ಗುಣಗಳ ಕುರಿತು ವಿಶೇಷವಾದ ಆಸಕ್ತಿಯನ್ನು ಪ್ರದರ್ಶಿಸುತ್ತಿರುವುದನ್ನು ಕಾಣಬಹುದು.

ಭಾರತದ ಸನಾತನ ಧಾರ್ಮಿಕ ಪರಂಪರೆಯು ಬುದ್ಧನ ಮೇಲೆ ಅಚ್ಚಳಿಯದ ಮುದ್ರೆಯನ್ನೊತ್ತಿದ್ದರೂ ಸಹ ಆತನು ಸ್ವತಂತ್ರ ಮಹಾವಿಚಾರಕನಾಗಿದ್ದನು; ಮತ್ತು ತನ್ನ ನಿರ್ಣಯಗಳಲ್ಲಿ ಆತನು ಬಹಳಮಟ್ಟಿಗೆ ಯಾರದೇ ಅನುಕರಣೆಯನ್ನು ಮಾಡದವನಾಗಿದ್ದನು ಎಂದು ಹೇಳಿದರೆ ತಪ್ಪಾಗದು. ಜಗತ್ತಿನ ಬೇರೆಯಾವುದೇ ಮತಸ್ಥಾಪಕನೂ ಬುದ್ಧನ ಮಟ್ಟಕ್ಕೆ ಬಂದುದಿಲ್ಲ.

ಧಾರ್ಮಿಕ ಕ್ಷೇತ್ರದ ಸುಧಾರಕರು ಮಾಡಬೇಕಾದ ಕರ್ತವ್ಯವೆಂದರೆ, ಗೊಂದಲದ ಭಾವನೆಯ ನಿವಾರಣೆ ಮತ್ತು ನೈತಿಕ ಶಿಥಿಲತೆಯ ಪರಿಹಾರ. ಬುದ್ಧನು ತನ್ನ ಜೀವನದಲ್ಲಿ ಯಾವ ಪರಮ ಸತ್ಯ ಮತ್ತು ಪರಿಪೂರ್ಣತೆಯ, ಸಾಕ್ಷಾತ್ಕಾರ ಮತ್ತು ಸ್ವಾನುಭವದ ಮಾರ್ಗವನ್ನು ತಿಳಿದುಕೊಂಡನೋ ಆ ಮಾರ್ಗವು ಇಂದಿಗಾದರೂ ಜನರು ನಡೆದುಹೋಗುವಷ್ಟು ಯೋಗ್ಯವಾಗಿ ಕಳೆದ ಇಪ್ಪತ್ತೈದು ಶತಮಾನಗಳ ಒತ್ತಡವು ಬಿದ್ದಿದ್ದರೂ ಉಳಿದಿರುವುದು ಸ್ಫೂರ್ತಿದಾಯಕವಾದ ವಿಚಾರ.

ಆಶೆಯೇ ಎಲ್ಲ ದುಃಖಗಳ ಮೂಲವೆಂದಾತನು ಬುದ್ಧ. ನೀತಿಯ ನಡವಳಿಕೆಯಂತೆ ನಡೆದುದಾದರೆ ಮನುಷ್ಯನು ತ್ಯಾಗ ಬುದ್ಧಿಯನ್ನು ಸುಲಭದಲ್ಲಿ ಪೋಷಿಸಿಕೊಳ್ಳಬಲ್ಲನೆಂದು ಬುದ್ಧನು ಕಂಡುಕೊಂಡನು. ಸ್ವೇಚ್ಛೆಯಿಂದ ತ್ಯಾಗಕ್ಕೆ ಸಿದ್ಧರಾಗಬೇಕೆನ್ನುವ ಸಿದ್ಧಾಂತವು ವಿನೋಬಾ ಭಾವೆಯಂಥವರ ಜೀವನದಿಂದ ಇಂದಿಗಾದರೂ ಭಾರತೀಯರ ಮುಂದೆ ಸಾಕಾರಗೊಂಡು ನಿಂತಿದೆ.

ಬೆಂಕಿಯನ್ನು ಬೆಂಕಿಯಿಂದಲ್ಲ, ನೀರಿನಿಂದ ಮಾತ್ರವೇ ಹೇಗೆ ಉಪಶಮಿಸಬಹುದೋ ಅದೇ ರೀತಿಯಲ್ಲಿ ಹಿಂಸೆಯನ್ನು ಹಿಂಸೆಯಿಂದಲ್ಲ. ಅಹಿಂಸೆಯಿಂದ ನಿಯಂತ್ರಣದಲ್ಲಿಡಬಹುದೆಂದು ಬುದ್ಧನು ಹೇಳಿದನು. ಅಶೋಕನ ಜೀವನದ ಕಳಿಂಗ ಯುದ್ಧ ಮತ್ತು ಆ ನಂತರದ ಘಟನೆಗಳು ಇದಕ್ಕೆ ಐತಿಹಾಸಿಕ ನಿದರ್ಶನವಾಗಿವೆ. ಶಾಂತಿ, ಪ್ರೀತಿ, ತ್ಯಾಗ, ಅಹಿಂಸೆಯಂಥ ಉದಾತ್ತ ತತ್ತ್ವಗಳಿಗೆ ಅಪಜಯವೆಂದಿಗೂ ಇಲ್ಲವೆಂಬ ಅಚಲ ವಿಶ್ವಾಸ ಬುದ್ಧನದು.

ಗೌತಮ ಬುದ್ಧನೆಂದೂ ತನ್ನನ್ನು ದೇವರೆಂದು ಹೇಳಿಕೊಳ್ಳಲಿಲ್ಲ; ಆತನನ್ನು ದೇವರೆಂದೂ ಅವತಾರವೆಂದೂ ಕರೆಯುವವರು ನಾವು! ಆತನು ಸಮಾಜದ ಕೆಡುಕುಗಳ ವಿರುದ್ಧ ತನ್ನ ಸ್ವರವನ್ನೆತ್ತಿದ ಸುಧಾರಕನೆಂದು ವೈಜ್ಞಾನಿಕ ದೃಷ್ಟಿಯಲ್ಲಿ ವಿವೇಚಿಸಿ ಹೇಳಬಹುದು. ಆತನು ಅಂಧ ವಿಶ್ವಾಸವನ್ನು ಪುರಸ್ಕರಿಸಲಿಲ್ಲ; ಮೂಢಾಚಾರಗಳ ದಾಸ್ಯವನ್ನು ಒಪ್ಪಲಿಲ್ಲ; ಸಾಂಪ್ರದಾಯಿಕ ಪ್ರಾರ್ಥನೆಯ ಹಿಂದೆ ಹೃದಯ ಶುದ್ಧಿಯಿಲ್ಲದೆ ಹೋದರೆ ಅದು ನಿಷ್ಪ್ರಯೋಜಕವೆಂದಾತನು ಘೋಷಿಸಿದ.

ಜಾತಿ ಭೇದಗಳನ್ನು ಬುದ್ಧನೆಂದೂ ಎತ್ತಿ ಹಿಡಿಯಲಿಲ್ಲ; ಅಸ್ಪೃಶ್ಯತೆಯ ಆವಶ್ಯಕತೆಯನ್ನು ಆತನು ಮನ್ನಿಸಲಿಲ್ಲ; ದೇವ—ದೇವತೆಗಳ ಹಾಗೂ ಭೂತಗಳ ಪ್ರೀತ್ಯರ್ಥವಾಗಿ ಪ್ರಾಣಿ ಬಲಿಕೊಡುವುದನ್ನಾತ ಪುರಸ್ಕರಿಸಲಿಲ್ಲ. ಹೀಗೆ ಆತನು ಸಾಂಪ್ರದಾಯಿಕ ವಿಚಾರಗಳಲ್ಲಿ ಕೆಡುಕೆನಿಸಿದವುಗಳನ್ನು ನಿವಾರಣೆ ಮಾಡಲು ಸದಾಕಾಲ ಪ್ರಯತ್ನಶೀಲನಾದನು.

ಆದರೇನು? ಆತನೊಬ್ಬನ ಪ್ರಯತ್ನವು ಸಾಲದೆ ಹೋಯಿತು— ಇಂದಿಗಾದರೂ ನಾವು ಮೂಢಾಚಾರಗಳಿಂದ ವಿಮೋಚನೆ ಹೊಂದಿಲ್ಲ; ಕೆಡುಕಿನ ಮಾರ್ಗವನ್ನು ಬಿಟ್ಟು ಸತ್ಪಥಗಾಮಿಗಳಾಗುವ ನಿರ್ಧಾರಕ್ಕೆ ಬರುವುದು ದೌರ್ಬಲ್ಯದ ದಾಸರಾದ ನಮಗೆ ಸಾಧ್ಯವಾಗಿಲ್ಲ. ಒಂದು ದೇಶವು ಅಲ್ಲಿ ಹುಟ್ಟಿದ ಉಪದೇಶಕರ ಸಂಖ್ಯಾ ಪ್ರಮಾಣದ ಮೇಲಿಂದ ಗೌರವಾರ್ಹವಾಗುವುದಿಲ್ಲ; ಅನುಯಾಯಿ ಜನತೆಯ ನೀತಿ ನಡತೆಗಳೇ ಆದರ ಸಂಪಾದಿಸಿಕೊಡುವ ಸಾಧನ ಎಂಬುದನ್ನು ನಾವು ಇನ್ನಾದರೂ ತಿಳಿದು, ಒಳ್ಳೆಯವರಾಗಿ ಬಾಳೋಣ!

The Vijaya Bank, Ltd , Kaup.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಕಾಪು

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಈ ಬೇಂಕಿನಲ್ಲಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗದೆ ಇದ್ದುದರಿಂದಲೂ ಅವರಿಗೆ ಬಿಟ್ಟ ರಜಿಸ್ಟ್ರ ನೋಟೀಸು ಜಾರಿಯಾಗದೆ ವಾಪಾಸು ಬಂದಿರುವುದರಿಂದಲೂ ಈ ಮೂಲಕ ತಿಳಿಯಪಡಿಸುವುದೇನೆಂದರೆ—ಸದ್ರಿಯವರು ಅಡವಿಟ್ಟ ನಗಗಳನ್ನು ಇದೇ ತಾರೀಕು 16—6—1956ನೇ ಶನಿವಾರ ಪೂರ್ವಾಹ್ನ ಗಂಟೆ 11ಕ್ಕೆ ಯಾ ಬೇಂಕಿನವರಿಗೆ ಯುಕ್ತ ಕಂಡ ತಾರೀಕಿಗೆ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲ್ಪಡುವುವು. ಏಲಂನಲ್ಲಿ ಹುಟ್ಟಿಬಂದ ಐವೇಜು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ದೇಹಜವಾಬ್ದಾರಿಯಿಂದ ಬೇಂಕಿಗೆ ಬರ ಐವೇಜನ್ನು ವಸೂಲುಮಾಡಲಾದೀತೆಂಬುದನ್ನು ಈ ಮೂಲಕ ತಿಳಿಸೋಣಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ತಾ. 31-3-56ಕ್ಕೆ ಬರತಕ್ಕ ಮೊಬಲಗು ರೂ.	ಆ.	ಪೈ
206/53	ಮುದ್ದು ಸೆಟ್ಟಿ, ಮೂಜ ಸೆಟ್ರ ಅಳಿಯ, ಪನಿಯೂರು ಮುತ್ತಯ ಸೆಟ್ರ ಮನೆ, ಪೋಸ್ಟು ಉಚ್ಚಿಲ.	11	2	0
312/53	ಕರಿಯ ಸೆಟ್ಟಿ, ನಾಗ ಸೆಟ್ರ ಅಳಿಯ, ಕಾಪು ಕೊರಗ ಸೆಟ್ರ ಮನೆ, ಪಡುಗ್ರಾಮ, ಪೋಸ್ಟು ಕಾಪು.	45	13	0
593/54	ಶ್ರೀಮತಿ ಕಮಲ ಮರಕಾಲ್ತಿ, ತುಂಗು ಮರಕಾಲ್ತಿಯ ಮಗಳು ಪೊಳಿಪು ಪಟ್ಣ ಪಡುಗ್ರಾಮ ಪೋಸ್ಟು ಕಾಪು.	14	11	0
609/54	ಅಬ್ದುಲ್ ಶುಕೂರ್, ಬುಡಾನ್ ಸಾಹೇಬರ ಮಗ, ಮಲ್ಲಾರು ಗ್ರಾಮ ಪೋಸ್ಟು ಮಲ್ಲಾರು.	72	2	0
818/54	ಅಬ್ದುಲ್ ವಾಹಬ್, ಜಾಫರ್ ಸಹೇಬರ ಮಗ, ಮಲ್ಲಾರು ಗ್ರಾಮ, ಪೋಸ್ಟು ಮಲ್ಲಾರು.	41	7	0
947/54	ಸೀನ ಎಮ್. ಪುತ್ರನ್, ವೈಂದ ಶ್ರೀಯಾನರ ಮಗ, ಕೈಪೂಂಜಾಲು ಉಳಿಯಾರಗೋಳಿ, ಪೋಸ್ಟು ಉಳಿಯಾರಗೋಳಿ.	80	13	0
89/55	ಎಮ್. ರಾಮಪ್ಪ ಟೀಚರ್, ಗವರ್ನ್‌ಮೆಂಟ್ ಫಿಶರೀಸ್ ಸ್ಕೂಲ್, ಪಡುಬಿದ್ರಿ.	355	8	0

The Vijaya Bank Ltd, Kaup
Date 22—5—1956

K. Sitarama Shetty.
AGENT.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 dated 12-12-1950 of the Director of public Instructions Madras.

ಹಿಂದೂಗಳ ಧಾರ್ಮಿಕ ಭಾವನೆಯ ಸುಧಾರಕ— ಗೌತಮ

(೩ನೇ ಪುಟದಿಂದ)

ದು; ಅಥವಾ ಯೋಗ್ಯ ಭೂಮಿಯಲ್ಲಿ ಬಿತ್ತಲ್ಪಟ್ಟು ಬೇರೆಯೇ ಜನ್ಮವನ್ನು ಹೊಂದಿ ಸಸ್ಯ ರೂಪದಲ್ಲಿ ಪ್ರಕಟವಾಗಬಹುದು. ಒಂದು ಸೇರು ಗೋಧಿ ನಮ್ಮಲ್ಲಿ ಇದ್ದರೆ, ಅದನ್ನು ಬೀಸಿ, ಬ್ರೆಡ್ಡನ್ನು ತಯಾರಿಸಲೂ ಬಹುದು; ಬದಲಿಗೆ, ಅದನ್ನು ಹಸನಾದ ಭೂಮಿಯಲ್ಲಿ ಬಿತ್ತಿ, ಒಂದು ಕಾಳಿಗೆ ನೂರು ಕಾಳಿನಂತೆ ಗೋಧಿಯನ್ನು ಕೊಯ್ಯಲೂ ಬಹುದು.

ಸಂತ ಪಾಲ್ನಲನು ಕ್ರೈಸ್ತನ "ಪುನರುತ್ಥಾನ"ದ ಕುರಿತು ಮಾತನಾಡುವಾಗ ಇದೇ ಭಾವನೆಯನ್ನು ಹೊಂದಿದ್ದನು: "ನೀನೇನು ಬಿತ್ತಿರುವಿಯೋ ಅದು ಸತ್ತೇ ಹೋಗಿದೆ, ಚಟುವಟಿಕೆ ತೋರಿಸುವಂತಿಲ್ಲವೆಂದು ನಿಮ್ಮ ಎಣಿಕೆ ಇರಬಹುದು. ಆದರೆ ಸತ್ಯ ಹೀಗಿಲ್ಲ. ನೀವು ಸಹಜ ದೇಹವನ್ನು ಬಿತ್ತಿದ್ದೀರಿ; ಅದೀಗ ದೈವಿಕ ಶರೀರವಾಗಿ ಪುನರುತ್ಥಾನ ಹೊಂದಿದೆ!"

ಇಲ್ಲಿ ವ್ಯಕ್ತವಾದ ಪರಿವರ್ತನೆಯು ಮೂಲಕ್ಕಿಂತ ತೀರ ಭಿನ್ನವಾದುದಾಗಿದೆ. ಮನುಷ್ಯನೆಂದೂ ಪರಿಪೂರ್ಣನಲ್ಲ. ಆತನ ದೃಶ್ಯ ಸ್ವರೂಪವೇ ಕೊನೆಯದಲ್ಲ. ಆತನು ತನ್ನನ್ನು ತಾನೇ ಮಾರ್ಪಡಿಸಿಕೊಳ್ಳಬಲ್ಲ, ಮೊದಲಿನದಕ್ಕಿಂತ ತೀರ ಭಿನ್ನವಾದ ಜನ್ಮವನ್ನು ಹೊಂದಬಲ್ಲ ಜೀವನಾಗಿದ್ದಾನೆ. ಈ ಬದಲಾವಣೆಯನ್ನು ಸಾಧಿಸುವುದು, ಹೊಸ ಜನ್ಮವೆತ್ತುವ ತಂತ್ರವನ್ನು ಅನುಸರಿಸುವಂತೆ ಮನುಷ್ಯನನ್ನು ಒತ್ತಾಯಿಸುವುದು, ಇದಕ್ಕೆ ತಕ್ಕ ಜಾಗೃತಿಯನ್ನು ಹುಟ್ಟಿಸುವುದು, ಈ ಆದರ್ಶದತ್ತ ಸಾಗುವಂತೆ ಮನವೊಲಿಸುವುದು ಎಲ್ಲ ಧರ್ಮಗಳ ಉದ್ದೇಶ.

ಬೌದ್ಧ ಧರ್ಮವೂ ಇದಕ್ಕೆ ಅಪವಾದವಲ್ಲ. ಆದರೆ ನಾವು ಸತ್ತ ಬಳಿಕವೇ ಇನ್ನೊಂದು ಜನ್ಮವನ್ನು ಹೊಂದಬೇಕೆಂದಿಲ್ಲ. ಮೊದಲಿನ ಕರ್ಕಶ ಮನೋಭಾವನೆಯನ್ನೂ ಕಪಟ ವರ್ತನೆಗಳನ್ನೂ ಅವಿನಯ-ಅವಿದ್ಯೆಗಳನ್ನೂ ತೊರೆದರೆ, ನಮ್ಮ ಗುಣಶೀಲ ನಡತೆ ವರ್ತನೆಗಳು ಸಹಜವಾಗಿ ಪರಿವರ್ತನೆಗೊಂಡು, ನಾವು ತೀರ ಹೊಸಬರಾಗುತ್ತೇವೆ.

ಬುದ್ಧನ ಅಭಿಪ್ರಾಯದಂತೆ, ಕಾಲಕ್ಕೆ, ಸಂಸಾರಕ್ಕೆ ವಶವಾಗಿ ನಾವಿರುವುದರ ಕಾರಣವೇ ಅವಿದ್ಯೆ; ನಮ್ಮ ಸ್ವರೂಪವೇನೆಂಬುದರ ನಿಜವಾದ ತಿಳಿವಳಿಕೆ ನಮಗಿಲ್ಲದಿರುವುದೇ ಇವೆಲ್ಲ ಸಂಕಷ್ಟಗಳ ಮೂಲ. ಆದುದರಿಂದ ನಾವು ಅವಿದ್ಯೆಯಿಂದ ವಿದ್ಯೆಯತ್ತ ಮುಖವನ್ನು ತಿರುಗಿಸಬೇಕು; ಆ ಎತ್ತರಕ್ಕೆ ಬೆಳೆಯಬೇಕು. ಆ "ಬೋಧಿ" ಅಥವಾ ಜ್ಞಾನವು ನಮಗೆ ಪ್ರಾಪ್ತವಾದಾಗ ನಮಗೆ ಎಲ್ಲವನ್ನೂ ಸಮದೃಷ್ಟಿಯಿಂದ ನೋಡುವ ಯೋಗ್ಯತೆಯೂ ಲಭಿಸುತ್ತದೆ.

ಇವೆಲ್ಲ ವಿಷಯಗಳಲ್ಲಿ ಬುದ್ಧನು ವೇದವು ಹೇಳುವ ಮಾರ್ಗವನ್ನೆ ಹಿಡಿದು ನಡೆದಿದ್ದಾನೆ: ಅದೇ ತತ್ತ್ವದ ಆಶ್ರಯವನ್ನು ಹೊಂದಿ ಕೇವಲ ಜ್ಞಾನದಿಂದ ಲಭಿಸುವ ನಿತ್ಯತ್ವದ ಪ್ರತಿಪಾದನೆಯನ್ನು ಮಾಡಿದ್ದಾನೆಂದು ನಮಗೆ ತೋರುತ್ತದೆ.

ಆದುದರಿಂದಲೇ ಬುದ್ಧನೆಂದೂ ತಾನು ಹೊಸ ಧರ್ಮವೊಂದನ್ನು ಸಾರುತ್ತಿದ್ದೇನೆಂದು ಹೇಳಿಕೊಳ್ಳಲಿಲ್ಲ. ಆ ಭಾವನೆಯೂ ಆವನಲ್ಲಿ ಇದ್ದಂತಿಲ್ಲ. ಆತನು ಹಿಂದುವಾಗಿಯೇ ಹುಟ್ಟಿದನು; ಹಿಂದುವಾಗಿಯೇ ಬಾಳಿದನು; ಹಿಂದುವಾಗಿಯೇ ಮರಣಗೊಂಡನು. ಆದರೆ ಹೀಗೆ ಬಾಳಿದ ತನ್ನ ಜೀವನವನ್ನು ಪ್ರಾಚೀನ ಹಿಂದೂ—ಆರ್ಯ ಸಂಸ್ಕೃತಿಯ ಉಚ್ಚ ಆದರ್ಶಗಳ ಕಡೆಗೆ ಜನರು ಲಕ್ಷ್ಯವನ್ನು ಹೊರೈಸುವಂತೆ ಒತ್ತಾಸೆ ನೀಡಲೂ ಉಪಯೋಗಿಸಿಕೊಂಡನು.

ಬುದ್ಧವಾಣಿಯಲ್ಲಿಯೇ ಹೇಳುವುದಾದರೆ, "ನಾನು ಹಳೆಯ ದಾರಿಯನ್ನೆ ನೋಡಿದ್ದೇನೆಂದು ಹೇಳಬಹುದು. ಆ ದಾರಿಯು ಹಳೆಯ ಕಾಲದಲ್ಲಿ ಜ್ಞಾನಾರ್ಜನೆ ಮಾಡಿಕೊಂಡ ಮಹಾಮುನಿಗಳು ತುಳಿದ ಮಾರ್ಗವೆಂಬುದೊಂದು ಹೆಚ್ಚುಗಾರಿಕೆಯಾಗಿದೆ. ಆ ದಾರಿಯಲ್ಲಿ ನಾನೂ ನಡೆದು ಏನನ್ನು ಚೆನ್ನಾಗಿ ಕಂಡೆನೋ ಅನುಭವಿಸಿದೆನೋ ಅದನ್ನೆ ನಾನು ಭಿಕ್ಷು—ಭಿಕ್ಷುಣಿಯರಿಗೆ ಮತ್ತು ನನ್ನ ಅನುಯಾಯಿಗಳಾದ ಸ್ತ್ರೀ-ಪುರುಷರಿಗೆ ಹೇಳುತ್ತಿದ್ದೇನೆ."

ಧಾರ್ಮಿಕ ರಂಗದಲ್ಲಿ ಭಾರತದ ಹುಡುಕಾಟವು ಹೋಲಿಕೆಯಿಲ್ಲದ ಭದ್ರತೆ, ಅಭಯ, ಮೋಕ್ಷ, ನಿರ್ವಾಣ - ಇವುಗಳಿಗಾಗಿದೆ. ಆದುದರಿಂದ ಮನುಷ್ಯನ ಪಾಲಿಗೆ, ಭೌತಿಕ ವಿಷಯಗಳ ಮಟ್ಟಕ್ಕಿಂತ ಮೇಲೆ ತನ್ನನ್ನು ಸ್ವಯಂ ಎತ್ತರಿಸಿಕೊಳ್ಳುವ, ಇಂದ್ರಿಗಳ ದಾಸ್ಯದಿಂದ ದೂರವಿರುವ, ಕತ್ತಲೆಯ ಆವರಣವನ್ನು ಭೇದಿಸಿ ಬೆಳಕಿನ ಹಾಗು ನಿತ್ಯ ಚೈತನ್ಯದ ನೆಲೆಯೆಡೆಗೆ ಹೋಗುವ ಕ್ರಿಯೆಗಳಲ್ಲಿ ನಿರತನಾಗುವುದು ತೀರ ಸಹಜವಾದೊಂದು ಕರ್ಮ.

ಬುದ್ಧನು ಜ್ಞಾನದಿಂದ, ಆತ್ಮ ಪ್ರಕಾಶದಿಂದ, ಈ ನಿತ್ಯ ಚೈತನ್ಯದ ಅನುಭವ ಮಾಡಿಕೊಳ್ಳುವ ಮಾರ್ಗವನ್ನು ಜನರಿಗೆ ತಿಳಿಸಿ ಹೇಳಿದನು. ಆತನ ಮಾತಿನಲ್ಲಿಯೇ ಹೇಳುವುದಾದರೆ "ಈ ಮಹಾನಿರ್ವಾಣಪದದಲ್ಲಿ ವೃದ್ಧಾಪ್ಯವಿಲ್ಲ; ಭಯವಿಲ್ಲ; ರೋಗರುಜಿನಗಳಿಲ್ಲ; ಜನನ ಮರಣಗಳ ಚಕ್ರಬಂಧವಿಲ್ಲ; ಆತುರ ಮತ್ತು ವಾಸನೆಗಳಿಲ್ಲ— ಕರ್ಮಕಾಂಡದ ಚಟುವಟಿಕೆಯೂ ನಾಸ್ತಿ!"

ಸ್ವಾರ್ಥಪರವಾದ ಎಲ್ಲ ಆಶೆ ಅಭಿಲಾಷೆಗಳೂ ನಾಶವಾಗುವ ಮಾರ್ಗದಲ್ಲಿ ಬುದ್ಧನು ಜನರಿಗೆ ನಡೆಯಲು ಹೇಳಿದನು. ಭಯ ಮತ್ತು ಆತುರಗಳ ನಿವಾರಣೆಗೆ ಇದೊಂದೇ ಆತನ ದೃಷ್ಟಿಯಲ್ಲಿರುವ ಮಾರ್ಗ. ಮನುಷ್ಯನಾದವನು ಇಷ್ಟನ್ನಾದರೂ ಸಾಧಿಸಲು ಸಮರ್ಥನಾದರೆ, ಸರಿಯಾದ ಅನುಭವವೊಂದನ್ನು ಪಡೆಯುವನೆಂದು ಬುದ್ಧನ ಅಭಿಪ್ರಾಯ.

ಆದರೆ ಈ ಅನುಭವವು ಸ್ವರ್ಗ ಸದೃಶವಾಗಿರಬಹುದಾದರೂ ಸ್ವರ್ಗವಾಸವಲ್ಲ. ಉಪನಿಷತ್ತುಗಳು ಹೇಗೆ ಮೋಕ್ಷವನ್ನು ಬ್ರಹ್ಮಾದಿಗಳ ಲೋಕದಲ್ಲಿ ವಾಸಿಸುವ ಅವಸ್ಥೆ ವಿಶೇಷದಿಂದ ಪ್ರತ್ಯೇಕವೆನ್ನುತ್ತವೋ ಹಾಗೆಯೇ ಬುದ್ಧನು ಪ್ರತಿಪಾದಿಸುವ ನಿರ್ವಾಣವೂ ಈ ಸುಖಾನುಭವಕ್ಕಿಂತ ಭಿನ್ನವಾದುದಾಗಿದೆ. ಉಪನಿಷತ್ತುಗಳು "ನೇತಿ" ಎಂದೇನನ್ನು ಕರೆದಿವೆಯೊ ಬುದ್ಧನೂ ಅದೇ ನಿತ್ಯ ಚೈತನ್ಯವನ್ನು ಮಹಾನಿರ್ವಾಣ ರೂಪದಲ್ಲಿ ಗುರುತಿಸಿದ್ದಾನೆ.

ತನ್ನನ್ನು ಬ್ರಹ್ಮಭೂತನೆಂದು, ಅಂದರೆ ತಾನೇ ಸ್ವಯಂ ಬ್ರಹ್ಮನೆಂದು, ಬುದ್ಧನು ಕರೆದುಕೊಂಡಿದ್ದಾನೆ. ಸಾಮಾನ್ಯ ಜನರು ದೇವರನ್ನು ನಂಬುವ ನೆಪದಲ್ಲಿ ಕರ್ಮಶೂನ್ಯರಾಗಿರುವುದನ್ನು ಆತನು ಕಂಡ, ನಿರ್ವಾಣ ಪದವು ದೇವರಿಗಿಂತಲೂ ದೊಡ್ಡ ಸ್ಥಿತಿಯನ್ನು ಸೂಚಿಸುವುದೆಂದು ಬುದ್ಧನು, ಉಪನಿಷತ್ತುಗಳ ವಾದವನ್ನನುಸರಿಸಿ, ಬೋಧಿಸಿದನು.

ದೇವರು ತಮಗೆ ಎಲ್ಲವನ್ನೂ ಮಾಡುತ್ತಾನೆ; ತಾವಾಗಿ ಮಾಡಿಕೊಳ್ಳಬೇಕಾದುದೇನೂ ಇಲ್ಲ; ಯಾವ ಕೆಲಸವನ್ನೂ ತಾವು ಮಾಡಬೇಕಾಗಿಲ್ಲವೆಂಬ ಜನರ ಜಡತ್ವವನ್ನು ನಿರ್ಮೂಲನಮಾಡಲು ಬುದ್ಧನು ಪ್ರಯತ್ನಪಟ್ಟನು. ಆಧ್ಯಾತ್ಮಿಕ ಪ್ರಭೆಯು ಒಳಗಿನ ವಾತಾವರಣದಲ್ಲಿಯಷ್ಟೆ ಜಾಜ್ವಲ್ಯಮಾನವಾಗಿ ಬೆಳಗುವುದೆಂದೂ ನಿಷ್ಕ್ರಿಯತೆಯಾಗಲೀ ಮೂರ್ಖ ನಂಬಿಕೆಯಾಗಲೀ ಇದಕ್ಕೆ ಸಹಾಯಕವಲ್ಲವೆಂದೂ ಆತನು ಜನರಿಗೆ ತಿಳಿಸಲು ಹೆಣಗಿದನು.

ಬುದ್ಧನ ಕಾಲದಲ್ಲಿ ಸುಶಿಕ್ಷಿತರೆನಿಸಿದವರು ದೇವರೆಂದರೇನೆಂದು ವರ್ಣಿಸಲು ತಮ್ಮೆಲ್ಲ ಶಕ್ತಿಯನ್ನು ಉಪಯೋಗಿಸುತ್ತಿದ್ದರು. ಇದು ತೀರ ವ್ಯರ್ಥವಾದುದೆಂದೂ ಈ ಬಗೆಯ ಒಣ ಚರ್ಚೆಗಳಿಂದ ಯಾವ ಪ್ರಯೋಜನವೂ ಲಭಿಸುವುದಿಲ್ಲವೆಂದೂ ಬುದ್ಧನು ಭಾವಿಸಿದನು. ಅತನ ಸಮಕಾಲೀನರಾದ ಜನ ಸಾಮಾನ್ಯರು ದೇವರ ದಯೆ ಇದ್ದಂತಾಗಲಿ ಎನ್ನುವಷ್ಟು ಮೂಢರಾಗಿದ್ದರು; ದೇವರು ಐಂದ್ರಜಾಲ ಶಕ್ತಿಯಿಂದ ತಮ್ಮ ಸಂಕಷ್ಟಗಳನ್ನು ಪರಿಹರಿಸುವನೆಂಬಂಥ ಅಂಧ ವಿಶ್ವಾಸವದು. ದೇವರು ನಮ್ಮನ್ನು ಕ್ಷಮಿಸಲು ಶಕ್ತನೆಂದ ಮೇಲೆ, ನಮ್ಮ ಜೀವನ ಹೇಗಿದ್ದರೇನು ಎಂದು ಭಾವಿಸುವಷ್ಟು ಮಟ್ಟಿನ ದುರ್ಗತಿಯದು. ಇದನ್ನು ಬುದ್ಧನು ಸಹಿಸಲಿಲ್ಲ; ಮೆಚ್ಚಲಿಲ್ಲ.

ಬುದ್ಧನು ಅಂಧ ವಿಶ್ವಾಸ ಮತ್ತು ಅಜ್ಞಾನಗಳ ವಿರುದ್ಧ ದಂಗೆಯೇಳುವಾಗಿನ ದಿವಸಕ್ಕೆ ಈ ಪರಿಸ್ಥಿತಿಯೇ ಹೇತು. ಜನರಲ್ಲಿ ಮೂಢವಾಗಿದ್ದ ಧರ್ಮವು, ಧಾರ್ಮಿಕ ಭಾವನೆಯು ಇಷ್ಟು ಕಳಾಹೀನವೂ ಕರ್ಮಶೂನ್ಯವೂ ವ್ಯಕ್ತಿಯ ನೈತಿಕ ಮೌಲ್ಯ ರಕ್ಷಣೆಯ ವಿಷಯದಲ್ಲಿ ಉಪೇಕ್ಷಾ ಭಾವಯುಕ್ತವೂ ಆಗಿರುವುದನ್ನು ಕಂಡ ಬುದ್ಧನು ಅವುಗಳ ನಿಷ್ಪ್ರಯೋಜಕತ್ವವನ್ನು ಮನಗಾಣಿಸಿಕೊಡಲು ನಿರ್ಧರಿಸಿದನು. ತರ್ಕವು ಸ್ವಪ್ರತಿಷ್ಠೆಗೂ ಇದು ದ್ವೇಷ ಭಾವನೆಗೂ ಅನ್ಯಾಯ ಅಸಂತೋಷ ಮತ್ತು ಹಿಂಸೆಗಳಿಗೂ ಮಾರ್ಗ ಮಾಡಿಕೊಡುವುದನ್ನು ಮುಂದಾಗಿ ಕಂಡುಕೊಂಡು ಇಂಥ ತರ್ಕದ ಬದಲು ಕರ್ಮವನ್ನು ಪ್ರತಿಷ್ಠಾಪಿಸಲು ಬುದ್ಧನು ಯತ್ನವನ್ನು ಮಾಡಿದನು.

ಹಿಂದು, ಜೈನ ಬೌದ್ಧ ಮತ್ತು ಸಿಕ್ಖರಿಗೆಲ್ಲ ಸಂಸಾರವೊಂದು ಕೊನೆಯಿಲ್ಲದ ಪ್ರವಾಹವೆಂಬ ಭಾವನೆ ಸಾಮಾನ್ಯವಾದುದಾಗಿದೆ. ಇದರಲ್ಲಿ ದೇವತೆಗಳೂ ಸ್ಥಿರರೂಪಿಗಳಲ್ಲ—ಮರಣವೂ ಸ್ಥಿರವಲ್ಲ; ಏಕೆಂದರೆ ಈ ಮರಣವೇ ಪುನರ್ಜನ್ಮದಲ್ಲಿ ಪರಿಣತವಾಗುತ್ತದೆ. ಈ ದೃಷ್ಟಿಯಿಂದ ಒಂದು ಜನ್ಮದ ನಡವಳಿಕೆಯೇ ಆತನನ್ನು ಶಾಶ್ವತವಾದ ಸ್ಥಾನವೊಂದಕ್ಕೆ ಮುಟ್ಟಿಸುವುದು ಕಷ್ಟ.

ಆದಾಗ್ಯೂ ಬುದ್ಧನು ತೀರ ನಿರಾಶಾದಾಯಕ ದೃಷ್ಟಿಕೋಣವನ್ನು ಹೊಂದಿದ. ಮನುಷ್ಯನು ತನ್ನ ಮೇಲೆ ನಿಯಂತ್ರಣವನ್ನು ಇಟ್ಟುಕೊಳ್ಳಬಲ್ಲನೆಂದು ಹೇಳುತ್ತಾನೆ: ಸ್ವನಿಯಂತ್ರಣ ಧನ್ಯನಾದ ಮನುಷ್ಯನು ತನ್ನ ಅದೃಷ್ಟವನ್ನು ತಾನೇ ರೂಪಿಸಿಕೊಳ್ಳಬಲ್ಲನೆನ್ನುತ್ತಾನೆ. ನಾವು ಕಾಲವನ್ನು ಗೆದ್ದು ಕಾಲಾತೀತರಾಗಬಹುದು; ಸಂಸಾರವನ್ನು ಗೆದ್ದು ನಿರ್ವಾಣವನ್ನೈದಬಹುದ. ಇದಕ್ಕೆಲ್ಲ ಆತ್ಮಪ್ರಕಾಶದಿಂದ ಕಂಡುಕೊಂಡ ನೀತಿಯ ಕರ್ಮಮಾರ್ಗದಲ್ಲಿ ಕ್ರಮಿಸುವುದು ಆವಶ್ಯಕ—ಎಂದಿದ್ದಾನೆ ಬುದ್ಧ.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

NOTICE.

In the Court of the District Munsif of Coondapur.

S. C. No. 193/1956

Between:

Gangamma —Plaintiff.

and

Kristappa Shetty Son of Arekallumane Manjayya Shetty residing at Balkur village Coondapoor Taluk. —Defendant.

To

The defendant Kristappa Shetty.

Please take notice that the above suit filed by the plaintiff against you for the recovery of the mulgeni rent due to her stands posted to 6-6-1956. This is to inform you that if you fail to appear before the above court at 11 A. M. on that day either in person or through a duly instructed pleader you will be declared exparte and the suit will be decreed in your absence.

Sd. K. Ramappayya,
B. A. B. L.
Advocate for plaintiff,

Coondapoor 25-5-56

ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

(೧ನೇ ಪುಟದಿಂದ)

ಯ ಕಾರ್ಯಕ್ರಮಗಳಿಂದಾಗಿ ಈ ಕ್ಷೇತ್ರದ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದು ಸುಲಭಸಾಧ್ಯವಾಗಿಲ್ಲ ವೆಂಬುದನ್ನು ೧೯೫೧-೫೬ನೇ ಸಾಲಿನ ಅನುಭವವೇ ತೋರಿಸಿಕೊಡುತ್ತದೆ. ನಮ್ಮ ದೇಶದಲ್ಲಿ ಒಂದು ತೆನೆಯು ಬೆಳೆಯುವಲ್ಲಿ ಎರಡನ್ನು ಬೆಳೆಯುವ ಪ್ರಯೋಗಕ್ಕೆ ಜನರಿನ್ನೂ ಸಿದ್ಧರಾಗಿಲ್ಲ; ಮೊದಲನೇ ಯೋಜನೆಯ ಪರಿಣಾಮವಾಗಿ ದೊರೆತ ನೀರಾವರಿಯ ಅನುಕೂಲತೆಗಳು ಮತ್ತು ಈ ಅವಧಿಯಲ್ಲಿ ಹೊಸತಾಗಿ ಜಾಗುಮಾಡಿದ ಭೂಮಿಯ ವಿಸ್ತಾರಗಳು ಸಹ ರಾಷ್ಟ್ರೀಯ ಉತ್ಪನ್ನವನ್ನು ಶ್ಲಾಘನೀಯ ಮಟ್ಟಕ್ಕೆ ಎತ್ತರಿಸಿಲ್ಲ.

೧೯೫೫ನೇ ಇಸವಿಯ ಹೊತ್ತಿಗಿದ್ದ ಅನ್ನಕ್ಷಾಮದ ಗಂಭೀರ ಪರಿಸ್ಥಿತಿಯೊಡನೆ ಹೋಲಿಸಿದರೆ, ೧೯೫೪ನೇ ವರ್ಷದಲ್ಲಿ ಆಹಾರ ಧಾನ್ಯ ಮತ್ತಿತರ ಕೃಷಿ ಉತ್ಪನ್ನಗಳ ಹೆಚ್ಚಳವು ೨೧% ಆಗಿದೆ ಎಂದು ತೋರಬಹುದು. ಇದನ್ನೆ ಆಧರಿಸಿ ನಾವು ಎರಡನೇ ಯೋಜನೆಯ ಅವಧಿಯಲ್ಲಿ ೪೨% ಹೆಚ್ಚಳವನ್ನು ಸಾಧಿಸುವ ನಿರೀಕ್ಷೆಯನ್ನೂ ಇಟ್ಟುಕೊಳ್ಳಬಹುದು. ಆದರೆ ಈ ಮಾತುಗಳು ಕೇವಲ ನಿರೀಕ್ಷೆಯಾಗಿಯೇ ಉಳಿಯುತ್ತವೆಯೋ ಎಂಬ ಸಂಶಯವೀಗ ಬಲವಾಗಿದೆ. ವೆಚ್ಚ ಮಾಡುವ ಹಣಕ್ಕೂ ಅದು ಹೆಚ್ಚಿಸುವ ಉತ್ಪಾದನೆಗೂ ಚೊಕ್ಕ ಸಂಬಂಧವಿದ್ದಂತೆ ನಮ್ಮ ಯೋಜನೆಗಳ ಅನುಭವ ತಿಳಿಸುವುದಿಲ್ಲ. ಕೈಗಾರಿಕೆಗಳಿಗೆ ಎರಡನೇ ಯೋಜನೆಯು ಎಷ್ಟೇ ಪ್ರಧಾನ ಸ್ಥಾನವನ್ನಿತ್ತರೂ ಕೃಷಿ ಕ್ಷೇತ್ರವನ್ನು ತುಸುವಾದರೂ ಉಪೇಕ್ಷೆಯಿಂದ ನೋಡುವುದು ಸಲ್ಲದೆಂಬುದೇ ನಾವಿಲ್ಲಿ ಕಲಿಯಬೇಕಾದ ಪಾಠ. ಇದನ್ನು ಸರಕಾರ ಗಮನಿಸಿದೆ ಎಂಬುದಕ್ಕೆ ಎರಡನೇ ಯೋಜನೆಯು ಕೃಷಿರಂಗದಲ್ಲಿರಿಸಿಕೊಳ್ಳಬೇಕಾದಗುರಿಯನ್ನು ೧೫% ಹೆಚ್ಚಳದಿಂದ ೪೦% ಮಾಡಿರುವುದೇ ನಿದರ್ಶನ.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ '**ನವಯುಗ**' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ತತ್ವ ರಸಾಯನ—

ಬರೆದವರು: ಎಸ್. ಆರ್. ಚಂದ್ರ. ಪ್ರಕಾಶಕರು: ಯುವಕರ ಸಂಘ, ಕಳಂಜಬಾಳಿಲ, ಪೋಸ್ಟು ಕಳಂಜ, ದಕ್ಷಿಣ ಕನ್ನಡ. ಬೆಲೆ: ರೂ. ೧—೦—೦.

ಕಬೀರನ ತತ್ವಪ್ರಧಾನ ಗೀತೆಗಳ ಕನ್ನಡ ಅನುವಾದವು ಈ ಪುಸ್ತಕದಲ್ಲಿ ಪದ್ಯರೂಪದಲ್ಲಿಯೆ ಪ್ರಕಟವಾಗಿದೆ. ಈ ಪದ್ಯಗಳು ಮೂಲದ ಸೊಗಸನ್ನು ಚೆನ್ನಾಗಿ ಉಳಿಸಿಕೊಂಡಿವೆ; ಭಾವವ್ಯಂಜಕವಾಗಿವೆ; ಅವುಗಳನ್ನು ಬರೆದ ಶೈಲಿಯು ಪ್ರೌಢವಾಗಿದ್ದರೂ ಹೃದಯಂಗಮವಾಗಿದೆ; ಪದ ಪ್ರಯೋಗ ಮತ್ತು ನಿರೂಪಣೆಯ ರೀತಿಗಳು ಬಹಳ ಆಕರ್ಷಕವಾಗಿವೆ. ಪಾರಮಾರ್ಥಿಕ ಚಿಂತನೆಗೆ ಇಲ್ಲಿ ಪ್ರಾಧಾನ್ಯವಿದ್ದರೂ ಸಹ ದೈನಂದಿನ ನಡವಳಿಕೆಗಳು ಹೇಗಿರಬೇಕೆಂಬ ಬಗ್ಗೆ ಯೋಗ್ಯ ದಿಗ್ದರ್ಶನವೂ ಈ ಪದ್ಯಗಳಲ್ಲಿ ದೊರಕುತ್ತದೆ. ಕವಿಗಳು ಪ್ರತಿ ಪದ್ಯದ ಭಾವಗಳನ್ನು ಸರಿಯಾಗಿ ಗ್ರಹಿಸುವುದಕ್ಕೆ ತುಂಬ ಸಹಾಯಕವಾದ ಟಿಪ್ಪಣಿಗಳನ್ನು ಆಯಾ ಪುಟದಲ್ಲಿಯೇ ನೀಡಿದ್ದಾರೆ; ಇವು ಅವರ ವಿಶಾಲವಾದ ಓದಿಗೂ ಉನ್ನತ ಜ್ಞಾನಕ್ಕೂ ನಿದರ್ಶನವಾಗಿವೆ. ಅಪರೇ ಕವಿ ಮತ್ತು ಕಾವ್ಯ ಪರಿಚಯವನ್ನು ಕುರಿತೊಂದು ವಿಮರ್ಶಾತ್ಮಕ ಲೇಖನವನ್ನೂ ಪ್ರಾರಂಭದಲ್ಲಿ ಬರೆದಿದ್ದಾರೆ. ಇದು ಈ ಪುಸ್ತಕವನ್ನು ಓದಲು ಅವಶ್ಯವಾದ ಮನೋಧರ್ಮವನ್ನು ನಮ್ಮಲ್ಲಿ ಉಂಟುಮಾಡುತ್ತದೆ. ವೇದಾಂತ ಹಾಗು ಭಕ್ತಿ ಸಂಪ್ರದಾಯಗಳ ತತ್ವಗಳನ್ನು ಭಟ್ಟಿ ಇಳಿಸಿ ಪಂಡಿತರಂತೆ ಪಾಮರರಿಗೂ ಅರ್ಥವಾಗುವಂತೆ ಹೇಳಿರುವ ಶ್ರೀ ಚಂದ್ರರನ್ನು ನಾವು ಮನಸಾರೆ ಅಭಿನಂದಿಸುತ್ತೇವೆ.

ಮಕ್ಕಳ ಹಾಡುಗಳು—

ಬರೆದವರು: ಕೆ. ಎಸ್. ಪದ್ಮನಾಭ ಆಚಾರ್ಯ. ಪ್ರಕಾಶಕರು: ಬಂದಾಣೆ ಮಾಲೆ, ರಥಬೀದಿ, ಮಂಗಳೂರು. ಬೆಲೆ: ರೂ ೦-೧-೦.

ಇದು ಪ್ರಾಥಮಿಕ ಶಾಲೆಯ ಮೇಲ್ತರಗತಿಗಳಿಗೆ (೩—೫) ಉಪಯುಕ್ತವಾದ ಪದ್ಯಗಳಿಂದ ಕೂಡಿದ ಪುಸ್ತಕ. ಮುಖ್ಯವಾಗಿ ಬುನಾದಿ ಶಿಕ್ಷಣವನ್ನು ಹೊಂದುತ್ತಿರುವ ಮಕ್ಕಳಿಗೆ ಇದು ಪ್ರಯೋಜಕವಾಗಬಲ್ಲುದು. ಇಲ್ಲಿ ಬುನಾದಿ ಶಿಕ್ಷಣದ ವಿವಿಧ ಚಟುವಟಿಕೆಗಳಿಗೆ ಸಂಬಂಧಿಸಿಯೇ ಪದ್ಯಗಳನ್ನು ರಚಿಸಲಾಗಿದೆ. ಸ್ವತಃ ಪಂಡಿತರೂ ಸಂಗೀತ ವಿಶಾರದರೂ ಆಗಿರುವ ಕವಿಗಳು ಬೇರೆಬೇರೆ ಧಾಟಿಗಳಲ್ಲಿ ಸುಮಧುರವಾಗಿ ಹಾಡಬಹುದಾದ ರೀತಿಯಲ್ಲಿ ಈ ಪದ್ಯಗಳನ್ನು ಬರೆದಿದ್ದಾರೆ. ಮಕ್ಕಳ ಸಾಹಿತ್ಯವು ಇಷ್ಟು ಅಗ್ಗ ಬೆಲೆಯಲ್ಲಿ ಪ್ರಚಾರಕ್ಕೆ ಬಂದಿರುವುದಾದರೂ ಇದೇ ಪ್ರಾಯಶಃ ಮೊದಲನೇ ಸಲವೆಂದು ಕಾಣುತ್ತದೆ.

ಮಕ್ಕಳ ಮಲ್ಲಿಗೆ—

ಬರೆದವರು: "ಮುದ್ದು". ಪ್ರಕಾಶಕರು: ಕಲಾನಿಲಯ, ಫಲಿಮಾರು, ದಕ್ಷಿಣ ಕನ್ನಡ. ಬೆಲೆ: ರೂ. ೦—೪—೦.

ಇದೊಂದು ಬಾಲಗೀತೆಗಳ ಸಂಕಲನ. ಬೇರೆ ಬೇರೆ ಛಂದಸ್ಸಿನಲ್ಲಿ ಮಕ್ಕಳ ಮನಸ್ಸು ಒಪ್ಪುವ ಪದ್ಯಗಳನ್ನಿಲ್ಲಿ ಬರೆದಿದ್ದಾರೆ. ಪ್ರಾಥಮಿಕ ಶಾಲೆಯ ಮಕ್ಕಳ ಮಟ್ಟದಲ್ಲಿ ಇವಿವೆ. ಹೊಸಬರು—ಆದುದರಿಂದ ಅಲ್ಲಿ-ಇಲ್ಲಿ ತುಸು ತಪ್ಪುಗಳಿರುವುದು ಸಹಜ. (ಉದಾ: "ಜೀವನವೇ ಬಲು ಸೊಗಸುಂಟು" ಪುಟ ೨— ಇದನ್ನು ತಿದ್ದಿ "ಜೀವನದಲಿ ಬಲು ಸೊಗಸುಂಟು" ಎನ್ನಬಹುದು.") ಆದರೆ ಇವೆಲ್ಲ ಗೌಣ—ಕಾರಣ ಅವರ ಪ್ರಯತ್ನವು ಸಾಕಷ್ಟು ಫಲದಾಯಕವಾಗಿದೆ ಎಂದು ಹೇಳಲು ನಾವೇನೂ ಸಂಕೋಚಪಡಬೇಕಾಗಿಲ್ಲ.

ಬಾಲಗೀತೆ—

ಬರೆದವರು: ಕೆ. ಸಿ. ಜಯರಾಮ ಶೆಟ್ಟಿ. ಪ್ರಕಾಶಕರು: ಕೆ. ಜಗನ್ನಾಥ ಶೆಟ್ಟಿ, ಕಡಂದಲೆ, ದಕ್ಷಿಣ ಕನ್ನಡ. ಬೆಲೆ: ರೂ. ೦-೪-೦.

ಪ್ರಾಥಮಿಕ ಶಾಲೆಯ ಮಕ್ಕಳ ಉಪಯೋಗಕ್ಕಾಗಿ ಬರೆದ ಪದ್ಯಗಳ ಈ ಸಂಕಲನವು ಕೆಲವು ಒಳ್ಳೆಯ ಕವಿತೆಗಳಿಂದ ಕೂಡಿದ್ದರೂ ಶೈಲಿ ಮತ್ತು ಪದ ಪ್ರಯೋಗಗಳಲ್ಲಿ ಶುದ್ಧಿಯನ್ನು ಕಾಯ್ದುಕೊಂಡು ಅರ್ಥಗ್ರಹಣಕ್ಕೂ ಭಾವವ್ಯಂಜಕತೆಗೂ ಕವಿಗಳು ಹೆಚ್ಚು ಮಹತ್ವ ಕೊಡುವ ಆವಶ್ಯಕತೆ ಇಲ್ಲದಿಲ್ಲವೆನ್ನಬೇಕಾಗುತ್ತದೆ. (ಉದಾ:

"ರವಿ ಮುಳುಗಿದ ಗಾಳಿ ಬೀಸೋದು ತಂಪು
ಸವಿಯಾಗಿ ಪಕ್ಷಿಗಳ್ ಹಾಡುವ ಇಂಪು
ಗವಿಸೇರಿದವು ಮೃಗಗಳು ತೋಷದಿಂದೆ
ತವಕದಿ ಪಕ್ಷಿಗಳ್ ಚಿಲಿಪಿಲಿಯಿಂದ"

—ಪುಟ 30

ಎಂಬೀ ಪದ್ಯವನ್ನು ಹೀಗೆ ತಿದ್ದಿ ಬರೆಯಬಹುದು:

"ರವಿ ಮುಳುಗಿದ ಗಾಳಿ ಬರುತಿದೆ ತಂಪು
ಸವಿ ನಿದ್ದೆ ಮಾಡು ನಾ ಹಾಡುವ ಇಂಪು
ಗವಿತೊರೆದವು ಮೃಗಗಳು ತೋಷದಿಂದ
ತವಕದಿ ಗೂಡ ಸೇರಿದೆ ಪಕ್ಷಿ ವೃಂದ")

ಇಷ್ಟು ಹೇಳಿದ ಮಾತ್ರಕ್ಕೆ ಈ ಲೇಖಕರ ಯೋಗ್ಯತೆಯ ಕುರಿತು ನಾವು ಕೀಳು ಅಭಿಪ್ರಾಯ ಹೊಂದಿರುವೆವೆಂದು ಭಾವಿಸಲಾಗದು— "ದೀಪಾವಳಿ", "ತೆಂಗಿನ ಮರ", "ಕನ್ನಡ ನುಡಿ", ಇತ್ಯಾದಿ ಒಳ್ಳೆಯ ಕವಿತೆಗಳೂ ಇಲ್ಲಿವೆ. "ದಾರಿ" ಎಂಬ ಕವನದಲ್ಲಿ ವ್ಯಕ್ತವಾದ ಕಲ್ಪನೆಯು ಶ್ಲಾಘನೀಯವಾಗಿದೆ. ಅನುಭವ ಹೆಚ್ಚಿದಂತೆ ಒಳ್ಳೆಯ ಕವಿತೆಗಳನ್ನಿವರು ಬರೆಯಬಲ್ಲರು.

—ವಿಮರ್ಶಕ.

ಮಹಾತ್ಮಾ ಬುದ್ಧ



ಲೋಕದ ಬೆಳಕು...

(೩ನೇ ಪುಟದಿಂದ)

ಯನ್ನೆ ಅವಲಂಬಿಸಿವೆ ಎಂಬುದೇ ಈ ಎಚ್ಚರಿಕೆಯ ಹಿನ್ನೆಲೆಯಲ್ಲಿರುವ ವಿಷಯ. ಕಚ್ಚಾ ವಸ್ತುಗಳ, ಶಕ್ತಿ ಸ್ರೋತಗಳ ಅಥವಾ ಆಹಾರ ದವಸಗಳ ಅಭಾವ ಅಥವಾ ಪರಿಮಿತಿಯು ನಾಳೆಯ ಜಗತ್ತನ್ನು ಕಂಗೆಡಿಸಲಾರದು; ಮೇಧಾ ಶಕ್ತಿಯೊಂದೇ ನಮ್ಮ ಸಾಧನೆಗಳಿಗೊಂದು ಮಿತಿಹಾಕಬಲ್ಲುದು. ಸಾಕಷ್ಟು ಬುದ್ಧಿವಂತರಾದ ಜನರು ಲಭ್ಯವಿಲ್ಲದೆ ಹೋದರೆ, ಜಗತ್ತು ಮುನ್ನಡೆಯನ್ನು ಹೊಂದಲಾರದೆ, ಹಿಂದುಳಿಯಬಹುದು; ನಾಶವನ್ನೂ ಹೊಂದಬಹುದು.

ಬುದ್ಧಿವಂತರಾದ ಜನರನ್ನು ಹೆಚ್ಚಿಸುವುದಕ್ಕಾಗಿ ವೈಜ್ಞಾನಿಕ ತರಬೇತಿ ಕೇಂದ್ರಗಳನ್ನು ಅತ್ಯಧಿಕ ಪ್ರಮಾಣದಲ್ಲಿ ತೆರೆಯಬೇಕೆಂದು ಈ ವಿಜ್ಞಾನಿಗಳು ಸಲಹೆ ನೀಡಿದ್ದಾರೆ. ಆದರೆ ಈ ಬುದ್ಧಿವಂತರೂ ಜಗತ್ತನ್ನು ಉಳಿಸಲು ಅಸಮರ್ಥರಾಗಬಹುದು: ಯಂತ್ರವಿಜ್ಞಾನದ ಪ್ರಗತಿಯನ್ನು ನೋಡಿದ ಆಟ್ಟಹಾಸದಲ್ಲಿ ಕೆಲವು ಮೂರ್ಖರು ಮೈಮರೆತು ಪ್ರಳಯಕಾರಿ ವಿಧ್ವಂಸಕ ಕೃತ್ಯಗಳಲ್ಲಿ ನಿರತರಾಗಬಹುದು. ಇದಕ್ಕೆ ಅವಕಾಶವಿರಕೂಡದು: ಏಕೆಂದರೆ ಯಾಂತ್ರಿಕ ನಾಗರಿಕತೆಯು ಯಾವವೇ ನಾಶವನ್ನು ತಡೆದುಕೊಂಡು ಬಾಳಲಾರದು. ಹೇಗೆ ಒಂದು ದೊಡ್ಡ ಕಾರ್ಖಾನೆಯಲ್ಲಿರುವ ಸಾಮಾನ್ಯ ಯಂತ್ರದ ಮೊಳೆಗೂ ಅತಿ ಮಹತ್ವದ ಸ್ಥಾನವಿದೆಯೋ ಹಾಗೆಯೇ ಯಾಂತ್ರಿಕ ನಾಗರಿಕತೆಯ ಪ್ರತಿಯೊಂದೂ ರಂಗಕ್ಕೆ ವಿಶೇಷ ಸ್ಥಾನವಿದೆ; ಈ ರಂಗಗಳಲ್ಲಿ ಒಂದಕ್ಕೆಯೇ ಆಗಲಿ ಅಲ್ಪ ಪ್ರಮಾಣದ ಧಕ್ಕೆ ತಗಲಿದರೂ ಸಾಕು, ನಾಗರಿಕತೆಯ ಭವನವೇ ಇಡಿಯಾಗಿ ಕುಸಿದು ಬೀಳಬಹುದು.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

Edited, Printed & Published by K. H. Shetty, at the Navayuga press, Udipi S. India

IEGD. NO. M. 78619

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 7—6—1956

ಸಂಚಿಕೆ ೪೦
NO. 40

ಹಿಂಸಾಚಾರದ ಖಂಡನೆ

ಮೇ ೨೫ನೇ ದಿನಾಂಕದಂದು ಮುಂಜಾನೆ ಪಶ್ಚಿಮ ಬಂಗಾಳದ ಖರಗಪುರದಲ್ಲಿ ನಡೆದ ರೈಲ್ವೆ ದುರಂತವನ್ನು ಯಾರೂ ಮರೆತಿರಲಾರರು. ರೈಲು ಬಂಡಿಯು ನಿಲ್ದಾಣದ ಸಮೀಪ ಬರುತಿದ್ದಾಗಲೇ ಮೊದಲೇ ಸತ್ಯಾಗ್ರಹ ಹೂಡಿದ್ದ ರೈಲ್ವೆ ಕೆಲಸಗಾರರು ಬಂಡಿಯನ್ನು ಆಕ್ರಮಿಸಿ ಡ್ರೈವರರನ್ನು ಎಳೆದುದರಿಂದ ಸುಮಾರು ೩೩ ಮಂದಿಗೆ ಗಾಯವಾಗಿದ್ದು ಅವರಲ್ಲಿ ೧೪ ಮಂದಿಯ ಅವಸ್ಥೆಯು ಚಿಂತಾಜನಕವಾಗಿರುತ್ತದೆ.

ಭಾರತವು ಅನಾದಿ ಕಾಲದಿಂದಲೂ ಅಹಿಂಸೆಯನ್ನು ಸಾರಿದ ದೇಶ. ಮೊನ್ನೆ ೨೪ರಂದು ದೇಶದ ಹಲವು ಭಾಗಗಳಲ್ಲಿ ನಡೆದ ಬುದ್ಧ ಪರಿನಿರ್ವಾಣದ ವೈಭವಪೂರ್ಣ ಆಚರಣೆಯ ಮರುದಿನವೇ ಇಂತಹ ಮಹಾದುರಂತವು ನಡೆಯಿತು. ಮಹಾತ್ಮಾ ಗಾಂಧಿಯವರು ಸತ್ಯಾಗ್ರಹವೆಂಬ ಶಾಂತಿಮಾರ್ಗವನ್ನು ಯಾವ ಘನ ಉದ್ದೇಶಕ್ಕಾಗಿ ಭಾರತೀಯರಿಗೆ ನೀಡಿದ್ದರೋ, ಅದನ್ನು ತೊರೆದು ತೀರ ಸಾಮಾನ್ಯವಾದ ವಿಷಯಗಳಿಗೂ ಇಂದು ಸತ್ಯಾಗ್ರಹವು ಇಳಿಯುತ್ತಿದೆ. ಪಂಡಿತ ನೆಹರುಗಳ ಮಾತುಗಳಲ್ಲಿ ಹೇಳುವುದಾದರೆ, ಭಾರತದಲ್ಲಿ "ಕಲ್ಲೆಸೆಯುವವನೂ ಸತ್ಯಾಗ್ರಹಿ, ನಿಯಮೋಲ್ಲಂಘನ ಮಾಡುವವನೂ ಸತ್ಯಾಗ್ರಹಿ, ಒಬ್ಬನ ತಲೆಯೊಡೆಯುವವನೂ ಸತ್ಯಾಗ್ರಹಿ!"

ಹಿಂಸೆಯೆಂದರೆ ಒಬ್ಬನ ಪ್ರಾಣವನ್ನು ತೆಗೆಯುವುದು ಮಾತ್ರವಲ್ಲ, ಅವನನ್ನು ನೋಯಿಸುವುದು ಕೂಡಾ ಎಂಬುದನ್ನು ಗಮನಿಸಬೇಕು. ಇದರಿಂದಾಗಿಯೇ ನೆಹರುಗಳು ಮೇ ೩೧ರಂದು ಲೋಕಸಭೆಯಲ್ಲಿ "ಕೊಲೆಗಾರನನ್ನಾದರೂ ಒಂದು ವೇಳೆ ಕ್ಷಮಿಸಬಹುದು; ಆದರೆ ಹಿಂಸಾಚಾರಿಯನ್ನಲ್ಲ" ಎಂದರು. ಇದು ನಿಜವಾಗಿಯೂ ಒಪ್ಪತಕ್ಕ ಮಾತು.

ಸರ್ವೋದಯ ಸಮ್ಮೇಳನದಲ್ಲಿ ಶ್ರೀ ವಿನೋಬಾ ಭಾವೆಯವರು ಕೂಡಾ ಸತ್ಯಾಗ್ರಹದ ಸ್ಥಾನವು ಇಳಿಯುತ್ತಾ ಬಂದಿರುವುದನ್ನು, ಪ್ರತಿಯೊಂದು ಕಾರ್ಯಕ್ಕೂ ಸತ್ಯಾಗ್ರಹ ಮಾಡುವುದನ್ನು ಖಂಡಿಸಿದ್ದಾರೆ. "ಸತ್ಯಾಗ್ರಹವನ್ನು ಆತ್ಮಶುದ್ಧಿಗಾಗಿಯೇ ಕೈಗೊಳ್ಳಬೇಕು. ಬೇರೆ ಯಾವ ವಿಧಾನಗಳಲ್ಲಿಯೂ ಕಾರ್ಯವನ್ನು ಇತ್ಯರ್ಥಿಸಲಾಗದಾಗಿದ್ದರೆ ಆಗ ಮಾತ್ರ ಅಂತಿಮಾಸ್ತ್ರವಾಗಿ ಉಪಯೋಗಿಸಬಹುದು ಇಲ್ಲವಾದರೆ, ಅದು ಗುಬ್ಬಿಯ ಮೇಲೆಸೆದ ಬ್ರಹ್ಮಾಸ್ತ್ರವಾದೀತು! ಸತ್ಯಾಗ್ರಹದ ಪಾವಿತ್ರ್ಯ ನಾಶವಾದೀತು" ಎಂದಿದ್ದಾರೆ ಅವರು.

ಈ ಎಲ್ಲಾ ವಿದ್ಯಮಾನಗಳನ್ನು ಅನುಲಕ್ಷಿಸಿ, ಇದೇ ಜೂನ್ ೧ರಂದು ಬೊಂಬಾಯಿಯಲ್ಲಿ ನಡೆದ ಅಖಿಲಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಹಿಂಸಾಚಾರ ಹಾಗೂ ರಾಕ್ಷಸೀಕೃತ್ಯಗಳನ್ನು ತಡೆಯಬೇಕೆಂದು ದೇಶದ ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿಯೊಂದು ಪಕ್ಷ ಮತ್ತು ಸಂಸ್ಥೆಗೆ ಬಿನ್ನವಿಸಿಕೊಂಡಿತು. ದಿನೇ ದಿನೇ ಹೆಚ್ಚುತ್ತಿರುವ ಹಿಂಸೆ, ಅತ್ಯಾಚಾರ ಹಾಗೂ ರಾಕ್ಷಸೀ ಕೃತ್ಯಗಳನ್ನೂ ಜನತೆಯ ಜೀವನ ಮತ್ತು ಅಭ್ಯಾಸಿಕ ಮಟ್ಟಗಳನ್ನು ಇಳಿಸುತ್ತಿರುವ ಉದ್ರೇಕಜನಕ ಕಾರ್ಯಗಳನ್ನೂ ಬಹಿಷ್ಕರಿಸಬೇಕೆಂದು ಜನತೆಗೆ ಕಾಂಗ್ರೆಸು ಕರೆಯಿತ್ತಿತು.

ಹಿಂಸಾಖಂಡನ ವಿಷಯಕ ಠರಾವನ್ನು ಪಶ್ಚಿಮ ಬಂಗಾಳದ ಪ್ರಧಾನಿ ಡಾ. ಬಿ. ಸಿ ರಾಯ್ ಅವರು ಸಭೆಯ ಮುಂದಿಡುತ್ತಾ, ತಾವು ಒಮ್ಮೆ ಒಬ್ಬನು ರಕ್ತಪೂರಿತ ಅಂಗಿಯೊಂದನ್ನು ಕಿಕ್ಕಿರಿದ ಜನಸಂದಣಿಯಲ್ಲಿ ಎಸೆದು, ಆ ಜನರಲ್ಲಿ ಹಿಂಸೆಯ ಮನೋಭಾವವನ್ನು ಜಾಗ್ರತಗೊಳಿಸಿದ್ದನ್ನು ನೋಡಿದ ಘಟನೆಯ ಉಲ್ಲೇಖ ಮಾಡಿದರು. "ಅಂತಹ ಮನುಷ್ಯನು ನಿಜವಾಗಿ ಹಿಂಸಾಚಾರ ಮಾಡುವವನಿಗಿಂತ ಹೆಚ್ಚಿನದನ್ನು ಮಾಡುತ್ತಾನೆ" ಎಂದರು.

ಪ್ರಧಾನಿ ನೆಹರೂರವರು "ಸಮಾಜವಾದಿ ತಳಹದಿಯಲ್ಲಿ ಭಾರತದ ನಿರ್ಮಾಣವಾಗಲಿರುವ ಈ ಕಾಲದಲ್ಲಿ ಸಂಪು, ಸತ್ಯಾಗ್ರಹಗಳಿಂದ ಕೆಡುಕುಂಟಾಗುವುದಲ್ಲದೆ ಒಳಿತೆಂದಿಗೂ ಆಗದು. ಇವುಗಳು ದೇಶದ ಪ್ರಗತಿಪಥದಲ್ಲಿ ಎಸೆಯಬಹುದಾದ ಕಂಟಕಗಳು" ಎಂದಿದ್ದಾರೆ. ಯಾವ ರೀತಿಯಲ್ಲೇ ಆಗಲಿ, ಸತ್ಯಾಗ್ರಹವು ಕೀಳುಮಟ್ಟಕ್ಕಿಳಿಯಬಾರದೆಂದೂ ಕೇಳಿಕೊಂಡಿದ್ದಾರೆ.

ಖರಗಪುರದ ರೈಲ್ವೆ ದುರಂತದ ಹಿನ್ನೆಲೆಯನ್ನು ಪ್ರಸ್ತಾಪಿಸುತ್ತಾ ಅವರು, ತಾವು ಟ್ರೇಡ್ ಯೂನಿಯನ್‌ಗಳನ್ನು ಸ್ವಾಗತಿಸುವುದಾದರೂ, ಅವು ತನ್ನ ಸದಸ್ಯರನ್ನು ರಾಷ್ಟ್ರವಿಘಾತಕವಾದ ರೀತಿಯಲ್ಲಿ ಮುನ್ನಡೆಸದೆ, ಶಿಸ್ತು, ಸಂಯಮಗಳಿಗನುಗುಣವಾಗಿ ಕೊಂಡೊಯ್ಯಬೇಕು ಎಂದು ಅಭಿಪ್ರಾಯಪಟ್ಟರು. ಖರಗಪುರಕ್ಕೆ ತಾನು ಸುಮಾರು ಎರಡು ತಿಂಗಳ ಹಿಂದೆ ಹೋಗಿದ್ದಾಗ, ಅಲ್ಲಿಯ ರೈಲ್ವೆ ಕೆಲಸಗಾರರು ಪ್ರೀತ್ಯಾದರಗಳಿಂದ ತನ್ನನ್ನು ಸ್ವಾಗತಿಸಿದುದನ್ನು ತಿಳಿಸುತ್ತಾ ಕೆಲಸಗಾರರನ್ನು ತಪ್ಪು ದಾರಿಯಲ್ಲಿ ನಡೆಸುವ ಟ್ರೇಡ್ ಯೂನಿಯನ್‌ಗಳೇ ದೇಶದಲ್ಲಿ ಆಗಿಂದಾಗ್ಗೆ ನಡೆಯುವ ಹಿಂಸೆ, ಮತ್ತು ಪಾಶವೀಕೃತ್ಯಗಳಿಗೆ ಕಾರಣವೆಂದರು.

ಇಕ್ಕಡೆ ಜನರಲ್ಲಿಯೂ ಧುರೀಣರಲ್ಲಿಯೂ ಭಿನ್ನಾಭಿಪ್ರಾಯಗಳಿರುವುದು ಸಹಜ. ಆದರೆ ಪ್ರತಿಯೊಂದು ಭಿನ್ನಾಭಿಪ್ರಾಯಕ್ಕೂ ಸತ್ಯಾಗ್ರಹವನ್ನು ಆರಂಭಿಸಿದರೆ, ಅದೂ ಒಂದು ದೊಡ್ಡ ಹಿಂಸೆಯಾಗುವುದೆಂಬುದನ್ನು ಲಕ್ಷಿಸಬೇಕು. ಅಂಥ ಹಿಂಸೆಯು ಎಷ್ಟೆಷ್ಟು ಮಹತ್ತರವಾದ ಗಂಡಾಂತರಗಳಿಗೆ ತಳಪಾಯವಾಗುವುದೆಂಬುದನ್ನು ಖರಗಪುರದ ರೈಲು ದುರಂತದ ಹಿನ್ನೆಲೆ ಹಾಗೂ ಪರಿಣಾಮಗಳಿಂದ ತಿಳಿಯಬಹುದು. ಅಲ್ಲಿ ನಡೆದ ಹಿಂಸೆಗೆ ಕಾರಣೀಭೂತರು ಯಾರೇ ಆಗಿರಲಿ, ಅವರೆಂದೂ ದೇಶಕ್ಕಾಗಿ ಒಳಿತನ್ನು ಮಾಡಲಿಲ್ಲ. ಆದುದರಿಂದ, ಸತ್ಯಾಗ್ರಹವನ್ನು ಮಾಡುವುದಕ್ಕೆ ಮೊದಲು, ವಿವಾದವನ್ನು ಇನ್ನಾವ ರೀತಿಯಿಂದಲಾದರೂ ಬಗೆಹರಿಸಬಹುದೆ ಎಂಬುದನ್ನು ತಿಳಿದುಕೊಳ್ಳಬೇಕು; ಮತ್ತು ಅಂತಿಮಾಸ್ತ್ರವನ್ನಾಗಿ ಮಾತ್ರ ಸತ್ಯಾಗ್ರಹವನ್ನು ಕೈಗೊಳ್ಳಬೇಕು. ಆಗ, 'ಸತ್ಯಾಗ್ರಹ'ದ ಪಾವಿತ್ರ್ಯಕ್ಕೆ ಕುಂದು ಬರಲಾರದು. ಗಾಂಧೀಜಿಯವರು ಹಾಕಿಕೊಟ್ಟ ಮಾರ್ಗದಲ್ಲಿಯೇ ನಾವು ಮುನ್ನಡೆದು ಭವ್ಯ ಭಾರತದ ನಿರ್ಮಾಣದಲ್ಲಿ ಆಸಕ್ತರಾಗಬಹುದು.



'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 dated 12-12-1950 of the Director of public Instructions Madras·

ಪ್ರಾಚೀನ ಭಾರತದಲ್ಲಿ ಯಾಂತ್ರಿಕ ತಂತ್ರದ ಪರಿಜ್ಞಾನ

ಅಗ್ನ್ಯಾದ್ಯಸ್ತ್ರಗಳೂ ಕೀಲುಗೊಂಬೆಗಳೂ ವಿಷಕನ್ಯೆಯರೂ ವಿಮಾನಗಳೂ ಸಾಮಾನ್ಯವಾಗಿದ್ದ ಕಾಲ

ಪ್ರಾಚೀನ ಭಾರತದಲ್ಲಿ ಯಂತ್ರಗಳು ಉಪಯೋಗಿಸಲಾಗುತಿದ್ದವು. ಅವುಗಳನ್ನು ಸಿದ್ಧ ಮಾಡಲಾಗುತಿದ್ದಿತು. ಆಕಾಶಯಾನಗಳನ್ನುಪಯೋಗಿಸುವಲ್ಲಿಯೂ ನಮ್ಮ ಹಿರಿಯರು ಸಮರ್ಥರಾಗಿದ್ದರು. ವಿಮಾನ ಸಂಚಾರ ನಡೆಯುತಿತ್ತಲ್ಲದೆ ವೈಮಾನಿಕ ಯುದ್ಧಗಳೂ ನಡೆಯುತಿದ್ದವು. ಆದರೆ ಪ್ರಾಚೀನ ಭಾರತದಲ್ಲಿ ವಿಮಾನಗಳನ್ನು ಕೊಳ್ಳೆಯಿಡುವದಕ್ಕೆಂದಿಗೂ ಉಪಯೋಗಿಸಲಾಗುತಿದ್ದಿಲ್ಲ. ಆದರೆ ಗಜಸಮೂಹವನ್ನು ಓಡಿಸುವದಕ್ಕಾಗಿ ಯುದ್ಧ ಭೂಮಿಯಲ್ಲಿ ವಿಮಾನಗಳನ್ನು ಉಪಯೋಗಿಸಲಾಗುತ್ತಿರುವದಕ್ಕೆ ಬೇಕಾದಷ್ಟು ಉಲ್ಲೇಖಗಳು ದೊರೆಯುತ್ತಿವೆ. ವಿಮಾನಗಳ ಭಾರಿಸಪ್ಪಳದಿಂದಲೇ ಗಜಗಳು ಬೆದರಿ ಹೋಗುತ್ತಿದ್ದವು.

ಮಾನವ ಕೌಶಲದಿಂದ ಅಚೇತನ ವಸ್ತುಗಳನ್ನೆಲ್ಲ ನಿಯಂತ್ರಿಸುವದಕ್ಕಾಗಿ ಯಂತ್ರಗಳ ಉಪಯೋಗ ಮಾಡಲಾಗುತಿದ್ದಿತು. ಪ್ರಾಚೀನ ಭಾರತದಲ್ಲಿ ಬಡಿಗರೇ ಈ ಯಂತ್ರಗಳನ್ನು ಮಾಡುತಿದ್ದರು. ಹಿಂದುಗಡೆ ಅವರೇ ಶಿಲ್ಪಿಗಳಾದರು; ಬಣ್ಣದ ಕಲೆಯನ್ನು ಕಲಿತರು. ಶಕರನ್ನು ಸೋಲಿಸಿದ ಗೌತಮಿ ಪುತ್ರ ಶಾತಕರ್ಣಿಯವರಂಥ ಪ್ರಾಚೀನ ಅರಸರು ಜಾತಿ ಪದ್ಧತಿಯನ್ನು ಪುನರುಜ್ಜೀವಿಸಿದರು; ಜ್ಞಾನವನ್ನು ಎರಡನೆಯವರಿಗೆ ಮಾಡಿಕೊಡದೆ ವಂಶಪರಂಪರವಾಗಿ ಅದು ನಡೆದುಕೊಂಡುಬರಲೆಂಬ ಉದ್ದೇಶದಿಂದ ಅವರು ಹಾಗೆ ಮಾಡಿದರೆಂದು ಹೇಳಲಾಗುತ್ತದೆ. ಹಳೆಯ ಜಾತಿಪದ್ಧತಿಯಲ್ಲಿ ಕಲಾ ತಂತ್ರವನ್ನೆಲ್ಲ ಗುಪ್ತವಾಗಿಡಲಾಗುತಿತ್ತು, ಅವುಗಳ ಗುಟ್ಟನ್ನೆಲ್ಲ ತಂದೆ ಮಗನಿಗೆ ಮಗ ತನ್ನ ಮಗನಿಗೆ ಹೀಗೆ ವಂಶಪರಂಪರೆಯಿಂದ ಹೇಳಿಕೊಡಲಾಗುತಿತ್ತು.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಯಂತ್ರಗಳ ಉಪಯೋಗದ ಬಗ್ಗೆ ಬೇಕಾದಷ್ಟು ವಿವರಗಳು ದೊರೆಯುವವು. ಬೌದ್ಧ ಸಾಹಿತ್ಯದಲ್ಲಿಯೂ ಯುದ್ಧ ಕಾಲದಲ್ಲಿ ಅರಸರು ಮತ್ತು ಸೇನಾಪತಿಗಳು ಉಪಯೋಗಿಸಿದ ವಿವಿಧ ಯಂತ್ರ ಯಂತ್ರೋಪಕರಣಗಳ ಉಲ್ಲೇಖವನ್ನು ಕಾಣಬಹುದು. ೬ ಮತ್ತು ೭ನೇ ಶತಮಾನಗಳಿಂದ ಈಚೆಗೆ ಯಂತ್ರಗಳ ಉಲ್ಲೇಖವನ್ನು ಹೆಚ್ಚಿಗೆ ಕಾಣಬಹುದು. ಬಾಣ ಕವಿಯ ಹರ್ಷಚರಿತ್ರ, ಭಗವತಿ ಸೂತ್ರ (ಜೈನ ಸಾಹಿತ್ಯ) ಮತ್ತು ವಾತ್ಸ್ಯಾಯನನ ಕಾಮಸೂತ್ರಗಳಲ್ಲಿ ಅರಸರಿಗೆ ಯಂತ್ರಗಳ ಜ್ಞಾನವಿರುವದರ ಆವಶ್ಯಕತೆಯನ್ನು ಪ್ರತಿಪಾದಿಸಿ ಯವನರ ಹಾವಳಿಯನ್ನು ತಡೆಯುವದಕ್ಕೆ ಇದೇ ಅವಶ್ಯವೆಂದು ಹೇಳಲಾಗಿದೆ.

ತನ್ನ ಬೀಗನ ಕೊಲೆ ಮಾಡಿ ಫರಾರಿಯಾದ ರಾಜ್ಯಶ್ರೀಯನ್ನು ರಾಜಧಾನಿಯಿಂದ ಎತ್ತಿಕೊಂಡು ಹೋಗುತಿದ್ದ ಗೌಡದೇಶದ ಅರಸನಾದ ಪ್ರತೀಹಾರನ ವಿರುದ್ಧ ಯುದ್ಧಕ್ಕೆ ಹೊರಟಿದ್ದ ಹರ್ಷನಿಗೆ ಅವನ ಅರಮನೆಯ ಕವಿಯೊಬ್ಬನು ಆಕಾಶ ಯಂತ್ರ (ವಿಮಾನ)ದ ಸಹಾಯದಿಂದ ನಿನ್ನನ್ನು ತಮ್ಮ ವಶಕ್ಕೆ ಒಯ್ಯಬಹುದಾದ ಯವನರ ಬಗ್ಗೆ ಜಾಗ್ರತರಾಗಿದ್ದಿರಿ ಎಂದು ಸಲಹೆ ನೀಡಿದ ಉಲ್ಲೇಖವು ಬಾಣನ ಹರ್ಷ ಚರಿತ್ರೆಯಲ್ಲಿ ಇದೆ.

ದಂಡಿ ಕವಿಯ ದಶಕುಮಾರ ಚರಿತ್ರೆಯಲ್ಲಿಯೂ ಯಂತ್ರಗಳ ಮಹತ್ವದ ಉಲ್ಲೇಖ ಬರುವದು. ದಂಡಿಯು ಬರೆದ ಅಪ್ರಕಾಶಿತ ಅವಂತಿ ಸುಂದರಿ ಎಂಬ ಆತ್ಮ ಚರಿತ್ರೆಯಲ್ಲಿ ಇಬ್ಬರು ಶಿಲ್ಪಿಗರ ಉಲ್ಲೇಖವಿದೆ. ಇವರು ಯಾಂತ್ರಿಕ ಹಂಸೆಗಳನ್ನು ಮತ್ತು ವೈಮಾನಿಕ ರಥಗಳನ್ನು ತಯಾರು ಮಾಡಿದ್ದರೆಂದು ಉಲ್ಲೇಖವಿದೆ.

ವೈರೋಚಕನು ಚಂದ್ರಗುಪ್ತನ ಪಟ್ಟಾಭಿಷೇಕ ಗೃಹದ ಮಹಾದ್ವಾರದಲ್ಲಿ ಯಂತ್ರ ತೋರಣವನ್ನು ಕಟ್ಟಿಸಿ ಅವನನ್ನು ಕೊಲ್ಲುವ ಹಂಚಿಕೆ ಹಾಕಿದ್ದನು. ಆದರೆ ಕೌಟಿಲ್ಯನಿಗೆ ಈ ಗೋಪ್ಯ ಗೊತ್ತಾದ್ದರಿಂದ ಅವನು ಅದಕ್ಕೆ ಪ್ರತಿ ಹಂಚಿಕೆಯನ್ನು ಹಾಕಿ ವೈರೋಚಕನ ಉದ್ದೇಶವನ್ನು ನಿರರ್ಥಕಗೊಳಿಸಿದನು. ವೈರೋಚಕನನ್ನು ಕೊಲ್ಲುವದಕ್ಕಾಗಿ ಕೌಟಿಲ್ಯನು ದಾರುವರ್ಮನೆಂಬ ಶಿಲ್ಪಿಯೊಬ್ಬನನ್ನು ನೇಮಿಸಿದನು. ಈ ಒಳಸಂಚಿಗೆ ಮುಖ್ಯ ಕಾರಣನಾಗಿದ್ದ ಪರ್ವತಕೇಶ್ವರನನ್ನು ವಿಷದಿಂದ ತುಂಬಿದ ಯಾಂತ್ರಿಕ ಹುಡುಗಿಯೊಂದನ್ನು ಕಾಣಿಕೆ ಕೊಟ್ಟು ಕೊಲ್ಲಿಸಲಾಯಿತು. ವಿಶಾಖದತ್ತನು ಬರೆದ ಮುದ್ರಾರಾಕ್ಷಸದಲ್ಲಿ ಇದೆಲ್ಲವನ್ನು ವಿವರಿಸಲಾಗಿದೆ.

ಆ ಯುದ್ಧ ಗೃಹದಲ್ಲಿ ಬೇರೆ ಬೇರೆ ಬಗೆಯ ಯಂತ್ರೋಪಕರಣಗಳಿದ್ದವೆಂದು ಕೌಟಿಲ್ಯನು ಹೇಳುತ್ತಾನೆ. ಯಂತ್ರಗಳು ಸ್ಥಿರ ಮತ್ತು ಚರ ಎರಡು ಬಗೆಯಾಗಿದ್ದವು ಸರ್ವತೋಭದ್ರವೆಂಬ ಸ್ಥಿರ ಯಂತ್ರವು ಹದನಾದ ಗಾಲಿಗಳುಳ್ಳದ್ದು ಅದನ್ನು ಗೋಡೆಗೆ ಇಟ್ಟಿದ್ದು ಸುತ್ತಲೆಲ್ಲ ಕಲ್ಲುಗಳನ್ನು ಒಗೆಯುತ್ತ ಅದು ಅಲ್ಲಿಯೇ ತಿರುಗುತ್ತಿದ್ದಿತು. ಬಾಹುದಗ್ನ ವೆಂಬ ಯಾಂತ್ರಿಕ ಬಾಣ ಹೊಡೆಯುವವನನ್ನು ಗೋಡೆಯ ಹಿಂದೆ ನಿಲ್ಲಿಸಲಾಗಿತ್ತು. ಗೋಡೆಯಲ್ಲಿ ಮಾಡಿದ ಏರ್ಪಾಡಿನಿಂದ ಬಾಣಗಳು ಒಗೆಯಲ್ಪಡುತ್ತಿದ್ದವು. ಬಾಣ ಹೊಡೆಯುವವನ ಸಂರಕ್ಷಣೆಗಾಗಿ ಚರ್ಮದ ರಕ್ಷಣೆಕವೊಂದಿದ್ದಿತು. ವಿಶ್ವಘಾತಿಯು ಶತ್ರುವಿನ ಮಾರ್ಗದಲ್ಲಿ ಇಡಲಾಗುತಿತ್ತು, ಅವನು ಬಂದ ಕೂಡಲೆ ಅದು ಅವನ ಮೈಮೇಲೆ ಬಿದ್ದು ಅವನನ್ನು ಕೊಂದು ಬಿಡುವಂತೆ ಯಾಂತ್ರಿಕ ವ್ಯವಸ್ಥೆ ಮಾಡಲಾಗಿದ್ದಿತು. ಸಂಘಾತಿಯು ಅಗ್ನ್ಯಸ್ತ್ರವು ಶತ್ರುವಿನ ಕೋಟೆಯ ಮೇಲೆ ಬೆಂಕಿ ಹಚ್ಚಲು ಇದನ್ನು ಉಪಯೋಗಿಸಲಾಗುತಿತ್ತು. ಪರ್ಜನ್ಯಕ ಮತ್ತು ಉದಕ ಯಂತ್ರಗಳೂ ಇದ್ದವು.

ಚಲಯಂತ್ರಗಳು ಮೂರು ಬಗೆಯಾಗಿದ್ದವೆಂದು ಉಲ್ಲೇಖವಿದೆ. ಕೋಟೆಯ ಹೊರಗೆ ಇರಿಸಲ್ಪಟ್ಟ ಪಂಚಾಲಿಕಾ ಎಂಬ ಯಂತ್ರವು ಸಮೀಪಕ್ಕೆ ಬಂದ ಶತ್ರುಸೈನ್ಯವನ್ನು ಹದನಾದ ಸಲಾಕೆಗಳಿಂದ ಚೂರು ಚೂರಾಗಿ ಮಾಡುತಿದ್ದಿತು. ಕೋಟೆಯ ಗೋಡೆಗಳ ಮೇಲೆ ದೇವದಂಡವೆಂಬ ತೋಫನ್ನು ಇಡಲಾಗುತ್ತಿತ್ತು. ಗೋಡೆಯನ್ನು ಹತ್ತುವಂತೆ ಶತ್ರುಗಳನ್ನು ಪ್ರತಿಬಂಧಿಸಲು ಸೂಕರಿಕವೆಂಬ ಆಯುಧವನ್ನು ತೂಗಹಾಕಲಾಗುತ್ತಿತ್ತು. ಶತ್ರುಗಳನ್ನು ನೀತಿಗೆಡಿಸಲು ಬಿರುಗಾಳಿಯನ್ನೆಬ್ಬಿಸಲು ತಾಳವೃಂತವನ್ನು ಉಪಯೋಗಿಸುತಿದ್ದರೆಂದು ಕೌಟಿಲ್ಯನು ಹೇಳಿರುವನು. ಫಿಲಾಸ್ಟ್ರೆಟಸ್‌ನು ಅಲೆಕ್ಝಾಂಡರನ ಭಾರತ ದಾಳಿಯನ್ನು ವರ್ಣಿಸುವಾಗ ಭಾರತೀಯರು ಆಕಾಶದಿಂದ ಬೀಸುವ ಬಿರುಗಾಳಿ ಗುಡುಗು ಮಿಂಚಿನಂಥವುಗಳನ್ನುಪಯೋಗಿಸಿ ಶತ್ರುಗಳನ್ನು ಓಡಿಸುತಿದ್ದರೆಂದು ಹೇಳಿರುವನು... ಪುರಾಣಗಳಲ್ಲಿಯ ವಾಯುವ್ಯಾಸ್ತ್ರವಿದಾಗಿರಬಹುದು. ಒತ್ತಿದ ಕೂಡಲೆ ಚಲಿಸುವ, ತಿರುಗಿಸಿದ ಕೂಡಲೆ ಚಲಿಸುವ ಮತ್ತು ಭಾರದಿಂದ ಚಲಿಸುವ ಹೀಗೆ ಮೂರು ಬಗೆಯ ಯಂತ್ರಗಳಿದ್ದವೆಂದು ಭಟ್ಟಸ್ವಾಮಿನ್ ಹೇಳಿರುವರು.

ರಾಮಾಯಣ ಮಹಾಭಾರತಗಳಲ್ಲಿಯೂ ಯಂತ್ರಗಳ ಉಪಯೋಗವಿಲ್ಲದಿಲ್ಲ. ಇಂದ್ರನ ಧ್ವಜಸ್ತಂಭಕ್ಕೆ ಯಾಂತ್ರಿಕ ಜೋಡಣೆ ಇದ್ದಿತೆಂದು ಉಲ್ಲೇಖವಿದೆ. ಅಯೋಧ್ಯಾನಗರವನ್ನು ಎಲ್ಲ ಬಗೆಯ ಯಂತ್ರಗಳಿಂದ ರಕ್ಷಿಸಲಾಗಿತ್ತೆಂದೂ ಲಂಕಾನಗರವೂ ಇದೇ ರೀತಿಯಾಗಿ ಯಂತ್ರಗಳಿಂದ ಸುಭದ್ರಗೊಳಿಸಲಾಗಿತ್ತೆಂದೂ ಉಲ್ಲೇಖವಿದೆ.

ಮೌರ್ಯರ ಕಾಲದಿಂದ ಪ್ರಾರಂಭವಾಗಿ ೭ನೇ ಶತಮಾನದವರೆಗೆ ಪ್ರಸಾರ ಹೊಂದುತ್ತ ಬಂದ ಜೈನ ಸೂತ್ರಗಳಲ್ಲಿ ಮಹಾಶಿಲಾ ಸಂಕಟಸಂಗ್ರಾಮ ಮತ್ತು ರಥ—ಮುಸಲ ಸಂಗ್ರಾಮದ ವರ್ಣನೆಯಿದೆ. ಮೊದಲನೆಯದು ಸುತ್ತಲೂ ಸಣ್ಣ ದೊಡ್ಡ ಕಲ್ಲುಗಳನ್ನು ತೂರುತ್ತಿದ್ದ ಯಂತ್ರವಾಗಿದ್ದರೆ ಎರಡನೆಯದು ಶತ್ರುಗಳ ಸಮೂಹದಲ್ಲಿ ಹೊಕ್ಕು ಅವರನ್ನು ಸದೆಬಡಿಯುತ್ತಿದ್ದ ಯಂತ್ರವಾಗಿತ್ತು. ಶತ್ರುಸಮೂಹವನ್ನು ನಾಶಮಾಡುವದಕ್ಕಾಗಿ ಅರಸರು ಇವನ್ನುಪಯೋಗಿಸುತ್ತಿದ್ದರು. ಯುದ್ಧದಲ್ಲಿ ಅಗ್ನಿವರ್ಷಕ ಬಾಣಗಳನ್ನುಪಯೋಗಿಸಬಾರದೆಂದು ಮನು ಸ್ಪಷ್ಟವಾಗಿ ಹೇಳಿದ್ದರಿಂದ ಅರಸರು ಆ ಬಗೆಯ ಅಸ್ತ್ರಗಳನ್ನುಪಯೋಗಿಸುತ್ತಿರಲಿಲ್ಲ. ಆದರೂ ಕೌಟಿಲ್ಯನು ಕೆಲಬಗೆಯ ಮದ್ದುಗುಂಡುಗಳನ್ನುಲ್ಲೇಖಿಸಿರುವನು. ಜಿ. ಅಪರ್ಟ್ ಮತ್ತು ಇಲಿಯಟ ಇವರು ಈ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ ಪ್ರಾಚೀನ ಭಾರತೀಯರು ಮದ್ದುಗುಂಡುಗಳನ್ನುಪಯೋಗಿಸುತ್ತಿದ್ದರೆಂದೂ ಮದ್ದು ಭಾರತದಲ್ಲಿಯೇ ಹುಟ್ಟಿತ್ತೆಂದೂ ಅಭಿಪ್ರಾಯಪಟ್ಟಿರುವರು.

ಯವನರ ಕಾಲದಿಂದ ಭಾರತದಲ್ಲಿ ಯಂತ್ರಯುಗ ಪ್ರಾರಂಭವಾಯಿತೆಂದು ಹೇಳಬಹುದು. ಯವನರು ಯಂತ್ರಗಳಲ್ಲಿ ಬಹಳ ಕುಶಲರಾಗಿದ್ದರು. ಭಾರತದಲ್ಲಿ ಯಂತ್ರಾಚಾರ್ಯರಿದ್ದರೂ ಮೇಲೆ ಹೇಳಿದಂತೆ ಅವರು ಅವುಗಳ ಪ್ರಸಾರ ಮಾಡದೆ ಆ ವಿದ್ಯೆಯನ್ನು ತಮ್ಮ ಮನೆತನದ ಮಟ್ಟಿಗೆ ಮರ್ಯಾದಿತವಾಗಿಟ್ಟುಕೊಂಡದ್ದರಿಂದ ಆ ಕಲೆಯು ನಾಶವಾಗಲಿಕ್ಕೆ ಕಾರಣವಾಯಿತು. ಹರ್ಷ ಚರಿತ್ರ, ದಶ

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮಾ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ.

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಅಮೃತಾಂಜನ

ಎಲ್ಲಾ ನೋವುಗಳಿಗೆ ಸಿದ್ಧೌಷಧ

ಎಲ್ಲಾ ತರದ ... ೬೦ ವರ್ಷ ... ನೋವುಗಳಿಗೆ ... ಪ್ರಾಯದ

ಮಾರ್ಕೆಟ್ ಡಾಕ್ಟರ್

ಅಮೃತಾಂಜನ ಲಿ. ಬೊಂಬಾಯಿ, ಮದ್ರಾಸು, ಕಲ್ಕತ್ತಾ

ಮೊದಲನೇ ಯೋಜನೆಯ ಸಾಧನೆ

ನಾಲ್ಕನೇ ವರ್ಷಾಂತ್ಯದಲ್ಲಿ ಪ್ರಗತಿಯ ಚಿತ್ರ

ಯೋಜನಾ ಆಯೋಗದವರು ಕೆಲ ದಿನಗಳ ಹಿಂದೆ ಪ್ರಕಟಿಸಿದ ಪ್ರಥಮ ಪಂಚವಾರ್ಷಿಕ ಯೋಜನೆಯ ನಾಲ್ಕನೇ ವರ್ಷದ ಪ್ರಗತಿಯವರದಿಯಲ್ಲಿ ಭಾರತದ ಆರ್ಥಿಕ ಪರಿಸ್ಥಿತಿಯು, ಪಂಚವಾರ್ಷಿಕ ಯೋಜನೆಯ ಪ್ರಾರಂಭದ ದಿನಗಳಿಗಿಂತ ಗಮನಾರ್ಹವಾದ ರೀತಿಯಲ್ಲಿ ಯೋಜನೆಯ ನಾಲ್ಕನೆ ವರ್ಷದ ಕೊನೆಯ ವೇಳೆಗೆ ಸುಧಾರಿಸಿದೆ ಮತ್ತು ಆರ್ಥಿಕ ವ್ಯವಸ್ಥೆಯು ದೃಢತೆಯಿಂದ ಕೂಡಿದೆ ಎಂದು ಅಭಿಪ್ರಾಯಪಡಲಾಗಿದೆ. ಔದ್ಯೋಗಿಕ ಕ್ಷೇತ್ರದಲ್ಲಿ ಹಿಂದಿನ ಎರಡು ವರ್ಷಗಳ ಮಟ್ಟಕ್ಕಿಂತಲೂ ಹೆಚ್ಚಾದ ಬಂಡವಳವನ್ನು ವಿನಿಯೋಗಿಸಿ ಕಾರ್ಯವನ್ನು ತೀವ್ರಗೊಳಿಸಲಾಗುತ್ತಿದೆ. ವ್ಯಾವಸಾಯಿಕ ಉತ್ಪಾದನೆಯು ಉನ್ನತ ಮಟ್ಟವನ್ನು ಸಾಮಾನ್ಯವಾಗಿ ಉಳಿಸಿಕೊಂಡಿದ್ದರೆ, ಕೈಗಾರಿಕೋತ್ಪಾದನೆಯನ್ನು ಹೆಚ್ಚಿಸಲಾಗಿದೆ. ಈ ಅವಧಿಯಲ್ಲಿ ವಿದೇಶೀ ವ್ಯಾಪಾರದ ಪರಿಮಾಣವು ವಿಸ್ತೃತವಾಗಿದೆ. ಸಾರ್ವಜನಿಕರು ಯೋಜನೆಗೆಂದು ಹೇರಳ ಹಣವನ್ನು ಒದಗಿಸಲು ಸಾಧ್ಯವಾಗಿದೆ.

ಯೋಜನೆಯ ನಾಲ್ಕನೆಯ ವರ್ಷದಲ್ಲಿ ಹಿಂದಿನ ವರ್ಷಗಳಲ್ಲಿ ಚೇತನ ಲಕ್ಷಣವನ್ನು ತೋರಿಸಿದ ವಾಣಿಜ್ಯ ವ್ಯಾಪಾರೋದ್ಯಮಗಳು ಮತ್ತಷ್ಟು ಬಲಗೊಂಡುವು. ಬಂಡವಾಳದ ಮಾರುಕಟ್ಟೆಯೂ ಚೇತನ ಮನೋಭಾವವನ್ನು ಉಳಿಸಿಕೊಂಡಿತು. ಅಭಿವೃದ್ಧಿ ಸಂಬಂಧ ಚಟುವಟಿಕೆಗಳನ್ನು ಹೆಚ್ಚಿಸಿದುದರಿಂದ ಉದ್ಯೋಗಾವಕಾಶಗಳು ಹೆಚ್ಚಿದ್ದರೂ, ನಿರುದ್ಯೋಗ ಪರಿಸ್ಥಿತಿಯು ಕಷ್ಟತರವಾಗಿಯೇ ಉಳಿದಿದೆ.

ಅಗತ್ಯದ ವಸ್ತುಗಳ ಉತ್ಪಾದನೆಯಿಂದ ಪೂರೈಕೆ ಮತ್ತು ಬೇಡಿಕೆಗಳ ನಡುವೆ ಇದ್ದ ಅಸಮಾನತೆಯನ್ನು ಹೋಗಲಾಡಿಸುವುದು, ಆರ್ಥಿಕ ಹಾಗೂ ಮೇಲ್ಪಡಳಿತ ವಿಭಾಗಗಳಲ್ಲಿ ವಿವೇಚನೆಯಿಂದ ಧನ ವಿನಿಯೋಗಿಸುವುದು ಎಂಬ ಯೋಜನೆಯ ನಿರ್ದಿಷ್ಟ ಗುರಿಗಳ ಸಾಧನೆಯು ಯಶಸ್ವಿಯಾಗಿ ನಡೆಯುತ್ತಿದೆ ಎಂದು ವರದಿಯು ಉಲ್ಲೇಖಿಸಿದೆ.

ವ್ಯಾವಸಾಯಿಕೋತ್ಪಾದನೆಯು ೧೯೪೯–೫೦ ಹುಟ್ಟುವಳಿಯೊಂದಿಗೆ ತುಲನೆಮಾಡಿದರೆ, ನೂರಕ್ಕೆ ೧೪ರಷ್ಟೂ, ೧೯೫೦–೫೧ ರೊಂದಿಗೆ ತೂಗಿ ನೋಡಿದರೆ ನೂರಕ್ಕೆ ೧೯ರಷ್ಟೂ, ಹೆಚ್ಚಿದೆ. ೧೯೫೪–೫೫ರಲ್ಲಿ ಗೋಧಿ ಮತ್ತಿತರ ದ್ವಿದಳ ಧಾನ್ಯಗಳ ಬೆಳೆಯು ಹೆಚ್ಚಿದರೆ, ಆಸ್ಸಾಮ್, ಬಿಹಾರ್, ಒರಿಸ್ಸಾ ಮತ್ತು ಪಶ್ಚಿಮ ಬಂಗಾಳಗಳಲ್ಲಿ ನೆರೆಯ ಹಾವಳಿಯಿಂದ ಅಕ್ಕಿಯ ಉತ್ಪಾದನೆ ಕಡಿಮೆಯಾಯಿತು. ಇದರಿಂದಾಗಿ ೧೯೫೪–೫೫ರಲ್ಲಿ ಆಹಾರಧಾನ್ಯಗಳ ಒಟ್ಟು ಉತ್ಪತ್ತಿ ೬೮೫ ಲಕ್ಷ ಟನ್‌ಗಳಿಂದ (೧೯೫೩-೫೪ ಉತ್ಪತ್ತಿ) ೬೫೬ ಲಕ್ಷ ಟನ್‌ಗಳಿಗಿಳಿಯಿತು. ಇದನ್ನು ೧೯೪೯–೫೦ರವರೊಂದಿಗೆ ಹೋಲಿಸಿದರೆ, ೧೧೬ ಲಕ್ಷ ಟನ್ನಿನಷ್ಟು ಹೆಚ್ಚಾಗಿದ್ದು ಯೋಜನೆಯ ಗುರಿಯನ್ನು ಮೀರಿದೆ. ಯೋಜನೆಯ ಮೊದಲನೆಯ ನಾಲ್ಕು ವರ್ಷಗಳಲ್ಲಿ ನೀರಾವರಿಗೆ ಒಳಪಡಿಸಿದ ಜಮೀನುಗಳ ವಿಸ್ತೀರ್ಣ ಸುಮಾರು ೧೦೩ ಲಕ್ಷ ಎಕ್ರೆಗಳು. ಇದರಲ್ಲಿ ೪೦ ಲಕ್ಷ ಎಕ್ರೆಗಳು ದೊಡ್ಡ ನೀರಾವರಿ ಯೋಜನೆಗಳಿಂದಲೂ, ೬೩ ಲಕ್ಷ ಎಕ್ರೆಗಳು ಸಣ್ಣ ಯೋಜನೆಗಳಿಂದಲೂ ಸಾಗುವಳಿಯಾಗುತ್ತಿವೆ.

೧೯೫೪ – ೫೫ರಲ್ಲಿ ಕೈಗಾರಿಕಾ ಕ್ಷೇತ್ರವು ಸಾಕಷ್ಟು ಪ್ರಗತಿಯನ್ನು ತೋರಿಸಿವೆ. ಕೆಲವು ಹೊಸ ವಸ್ತುಗಳನ್ನು ದೇಶದಲ್ಲಿ ಪ್ರಪ್ರಥಮವಾಗಿ ಉತ್ಪಾದಿಸಲಾಯಿತು. ೧೯೪೬ರಲ್ಲಿ ೧೦೦ ಎಂದಿಟ್ಟುಕೊಂಡರೆ, ಕೈಗಾರಿಕೋತ್ಪಾದನೆಯು ೧೯೫೩–೫೪ರಲ್ಲಿ ೧೩೭ ಮತ್ತು ೧೯೫೪–೫೫ರಲ್ಲಿ ೧೪೪ಕ್ಕೆ ಏರಿದೆ. ರೂಪನಾರಾಯಣ ಪುರದ ಹಿಂದುಸ್ತಾನ್ ಕೇಬಲ್ ಕಾರ್ಖಾನೆ ಉತ್ತರ ಪ್ರದೇಶ ಸರಕಾರದ ಸಿಮೆಂಟ್ ಕಾರ್ಖಾನೆ, ಜಲಹಳ್ಳಿಯ ಹಿಂದೂಸ್ತಾನ್ ಮೆಷಿನ್‌ಟೂಲ್ಸ್ ಕಾರ್ಖಾನೆ, ಪಿಂಪ್ರಿಯ ಪೆನ್‌ಸಿಲಿನ್ ಕಾರ್ಖಾನೆ ಮತ್ತು ಮಧ್ಯಪ್ರದೇಶ ಸರಕಾರದ ನ್ಯೂಸ್‌ಪ್ರಿಂಟ್ ಕಾರ್ಖಾನೆ ಎಂಬ ಈ ಐದು ದೊಡ್ಡ ಕಾರ್ಖಾನೆಗಳು ಯೋಜನೆಯ ನಾಲ್ಕನೆ ವರ್ಷದಲ್ಲಿ ಉತ್ಪಾದನೆಗೆ ಉಪಕ್ರಮಿಸಿದುವು. ಎರಡು ಪೆಟ್ರೋಲಿಯಂ ಶುದ್ಧೀಕರಣ ಕಾರ್ಖಾನೆಗಳು ನಿರ್ಮಾಣಗೊಂಡು ಈಗಾಗಲೇ ಉತ್ಪಾದನೆಗೆ ತೊಡಗಿವೆ.

ಗಿರಣಿ ವಸ್ತ್ರಗಳ ಉತ್ಪಾದನೆಯು ಯೋಜನಾಗುರಿಯನ್ನು ಮೀರಿದೆ. ರೈಲ್ವೆ ಯೆಂಜಿನ್, ಸಿಮೆಂಟ್ ಮತ್ತು ಅಮೋನಿಯಂ ಸಲ್ಫೇಟುಗಳ ಉತ್ಪಾದನೆಯು ಯೋಜನಾಗುರಿಗಳನ್ನು ಕ್ರಮವಾಗಿ ನೂರಕ್ಕೆ ೮೫, ೮೨ ಮತ್ತು ೭೯ ರಷ್ಟನ್ನು ಸಾಧಿಸಲಾಯಿತು. ಕಬ್ಬಿಣ, ಉಕ್ಕು ಮತ್ತು ಸೆಣಬಿನ ವಸ್ತುಗಳ ಉತ್ಪಾದನೆಯಲ್ಲಿಯೂ ಗಣನೀಯವಾದ ಪ್ರಗತಿಯನ್ನು ಸಾಧಿಸಲಾಗಿದೆ.

ರೈಲ್ವೆಗಳಲ್ಲಿ ಪುನರ್ವ್ಯವಸ್ಥೆಯ ಕಾರ್ಯಕ್ರಮಗಳನ್ನು ಮಾಡುತ್ತಿರುವುದರಿಂದ ರೈಲ್ವೆಗಳಲ್ಲಿ ಸರಕುಗಳ ರವಾನೆಯು ಸುಧಾರಿಸುತ್ತಿದೆ. ೧೯೫೩–೫೪ ಕ್ಕಿಂತ ೧೯೫೪–೫೫ ರಲ್ಲಿ ಈ ರವಾನೆಯು ನೂರಕ್ಕೆ ೬ರಷ್ಟು ಹೆಚ್ಚಿತು. ಸರಕು ಸಾಗಣೆಯ ಬೇಡಿಕೆಯೂ ಹೆಚ್ಚುತ್ತಿರುವುದರಿಂದ ಈ ವಿಷಯದಲ್ಲಿ ಇನ್ನೂ ಹೆಚ್ಚಿನ ಸೌಲಭ್ಯಗಳು ಅವಶ್ಯಕವಾಗಿವೆ. ೧೯೫೪–೫೫ರಲ್ಲಿ ೮೦ ಮೈಲು ಉದ್ದದ ಹೊಸ ರೈಲುಮಾರ್ಗಗಳನ್ನೂ ಹಾಕಲಾಯಿತು. ಮತ್ತು ಕಳಚಿದ್ದ ೨೯೩ ಮೈಲುಗಳಷ್ಟು ಉದ್ದದ ರೈಲುಮಾರ್ಗಗಳನ್ನು ಪುನಃ ಜೋಡಿಸಲಾಯಿತು. ೧೪೦ ಮೈಲುಗಳ ಹೆದ್ದಾರಿಗಳನ್ನೂ ೫ ದೊಡ್ಡ ಸಂಕಗಳನ್ನೂ ೫೪–೫೫ರಲ್ಲಿ ರಾಷ್ಟ್ರೀಯ ಹೆದ್ದಾರಿ ಕಾರ್ಯಕ್ರಮದಂತೆ ನಿರ್ಮಿಸಲಾಯಿತು. ಈಗಿರುವ ರಸ್ತೆಗಳಲ್ಲಿ ೧೨೦೦ ಮೈಲುಗಳ ರಸ್ತೆಯನ್ನು ದುರಸ್ತಿಮಾಡಲಾಯಿತು. ಅಂತಾರಾಜ್ಯಗಳ ರಸ್ತೆಗಳು ಮತ್ತು ಆರ್ಥಿಕ ಮಹತ್ವದ ರಸ್ತೆಗಳ ರಚನೆಗಾಗಿ ೧೦ ಕೋಟಿ ರೂಪಾಯಿಗಳನ್ನು ಒದಗಿಸಲಾಯಿತು. ಮತ್ತು ಈ ರಸ್ತೆಗಳ ಕಾರ್ಯವು ತೃಪ್ತಿಕರವಾಗಿ ಮುಂದುವರಿಯುತ್ತಿದೆ. ಶಿಕ್ಷಣ, ವೈದ್ಯಕೀಯ ಸೇವೆ ಹಾಗೂ ಸಾರ್ವಜನಿಕ ಆರೋಗ್ಯಗಳಲ್ಲಿಯೂ ಯೋಜನೆಯ ನಾಲ್ಕನೇ ವರ್ಷದಲ್ಲಿ ಹಿಂದಿನ ವರ್ಷಕ್ಕಿಂತಲೂ ಹೆಚ್ಚು ಉತ್ತಮವಾದ ಪ್ರಗತಿಯನ್ನು ಸಾಧಿಸಲಾಗಿದೆ.

ಗ್ರಾಮಾಂತರ ಜನಸಂಖ್ಯೆಯ ಕಾಲು ಭಾಗದಷ್ಟು ಪ್ರದೇಶಗಳಲ್ಲಿ ಹಬ್ಬಬೇಕಾದ ಸಾಮುದಾಯಿಕ ಯೋಜನೆಗಳು ತೃಪ್ತಿಕರವಾಗಿ ಸಾಗಿವೆ. ಇದಕ್ಕಾಗಿ ತೆರೆಯಬೇಕಾದ ೧೨೦೦ ಕಾರ್ಯಕ್ಷೇತ್ರಗಳಲ್ಲಿ ೭೨೬ ಕ್ಷೇತ್ರಗಳು ಈಗಾಗಲೇ ಕಾರ್ಯವನ್ನು ಕೈಗೊಂಡಿದ್ದು ೫೩೭ ಲಕ್ಷ ಜನಸಂಖ್ಯೆಯ ೮೩೦೦೦ ಗ್ರಾಮಗಳಲ್ಲಿ ಕೆಲಸ ಮಾಡುತ್ತಿವೆ.

ಪ್ರಥಮದಲ್ಲಿ ನಿಶ್ಚಯಿಸಿದ ಮೊಬಲಗು, ಯೋಜನೆಯ ಕೆಲವು ಬಾಬುಗಳಲ್ಲಿ ತಕ್ಕ ಪ್ರಮಾಣದಲ್ಲಿ ಉದ್ಯೋಗಾವಕಾಶವನ್ನು ಕಲ್ಪಿಸಲು ಸಾಲದೆಂದು ತಿಳಿದು ಪುನಃ ೨೮೪ ಕೋಟಿ ರೂಪಾಯಿಗಳನ್ನು ಸೇರಿಸಿದುದರಿಂದ ಒಟ್ಟು ೨೩೫೭ ಕೋಟಿ ರೂಪಾಯಿಗಳಿಗೆ ಯೋಜನೆಯ ಪ್ರಮಾಣವು ಬೆಳೆಯಿತು. ಯೋಜನೆಗಾಗಿ ೧೯೫೧-೫೨ರಲ್ಲಿ ೨೫೯ ಕೋಟಿ, ೧೯೫೨-೫೩ರಲ್ಲಿ ೨೬೮ ಕೋಟಿ, ೧೯೫೩-೫೪ರಲ್ಲಿ ೩೪೦ ಕೋಟಿ ರೂಪಾಯಿಗಳು ಖರ್ಚಾಗಿದ್ದರೆ, ೧೯೫೪-೫೫ರಲ್ಲಿ ಪರಿಷ್ಕರಿಸಿದ ಅಂದಾಜು ಪಟ್ಟಿಯಂತೆ ೫೧೪ ಕೋಟಿ ರೂಪಾಯಿಗಳು ವೆಚ್ಚವಾಗುತ್ತವೆ. ೧೯೫೫–೫೬ರ ಅಂದಾಜು ಪಟ್ಟಿಯಲ್ಲಿ ೭೩೪ ಕೋಟಿ ರೂಪಾಯಿಗಳನ್ನು ಒದಗಿಸಿದೆ.

೧೯೫೪–೫೫ರಲ್ಲಿ ಬಂಡವಾಳದ ಮಾರುಕಟ್ಟೆಯು ಸ್ಥಿತಿಸ್ಥಾಪಕ ಸ್ಥಿತಿಯಲ್ಲಿ

(೧೦ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಕೃಷಿಕರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5—1955).

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಕಳೆದ ವರ್ಷ ಕೆಲವು ಖಾಸಗಿ ಹೈಸ್ಕೂಲುಗಳಲ್ಲಿ ಉಪಪಠ್ಯ ಪುಸ್ತಕವಾಗಿ ಉಪಯೋಗಿಸಲ್ಪಟ್ಟಿದೆ.

ಈ ವರ್ಷ ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು: ೧೫೮ ಬೆಲೆ: ರೂ. ೧—೪—೦.

ಪ್ರತಿಗಳಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ.

ಕೆಲವು ಉತ್ತಮ ಪುಸ್ತಕಗಳು.

ಬದುಕುಬಂಗಾರ	(ಕುಮಾರಸ್ವಾಮಿ)	1	8
ಯುಗವಾಣಿ	(ಕು. ಶಿ. ಹರಿದಾಸಭಟ್)	0	8
ಘಂಟಮಾರಾ	(,,)	2	0
ಏಶಿಯದ ಸಂಪತ್ತು	(,,)	3	0
ಅಂತರಂಗದ ಕತೆಗಳು	(ಸಂಕಲನ)	1	4
ಸ್ವಪ್ನಲೋಕ	(ಕಾರ್ತಿಕೇಯ)	0	8
ನೀತಿವಿನೋದ ಕತೆಗಳು		0	12
ಸೇವಾಪಥ	(ಸೇಟ್ ಗೋವಿಂದಾಸ್)	0	8
ಸರಸ್ವತಿ	(ಡಾ। ಎಂ. ಮಾಧವಾಚಾರ್ಯ)	0	12
ಗೀತೆಯ ಕೈಗನ್ನಡಿ	(ಚಿದಂಬರಯ್ಯ)	0	12
ಭಾರತದ ಕರ್ಣ	(ಎಸ್. ಎಸ್. ಶೆಟ್ಟಿ)	0	6
ಪ್ರಾಚೀನ ತುಳುನಾಡು	(,,)	2	0
ಮುರಳಿ	(,,)	0	12
ಮಧುವನ	(ಸಂಕಲನ)	3	0
ಕಾವ್ಯಸಾಮ್ರಾಜ್ಯ	(,,)	1	8
ಶವಗಳ ಸಾಗಾಟ	(ಕಳ್ಳಿ ಪೇಟೆ)	0	12
ಕವಿತಾಕಾಮಿನಿ	(ಎಸ್. ವೆಂಕಟರಾಜ)	2	0
ಆಕಾಶಗಂಗೆ		1	10
ಜೀವನ ಸಂಗ್ರಾಮ	(ಪಿ. ಶೀನ ಶೆಟ್ಟಿ)	1	8
ವೀರಭಕ್ತ	(ಕೆ. ಕೆ. ಶೆಟ್ಟಿ)	1	4
ಪ್ರೇಮವಿಜಯ	,,)	1	0

ಏಜಂಟರು ಬೇಕು. ಶರ್ತಗಳಿಗೂ ನಮ್ಮಲ್ಲಿ ದೊರೆಯುವ ಇತರ ಕವಿಗಳ ಪುಸ್ತಕಗಳ ಕೆಟಲಾಗಿಗೂ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಿದ್ಧಾರ್ಥ ನಗರದಲ್ಲಿ ಕಾಂಗ್ರೆಸಿನ ಅಧಿವೇಶನ

ಗೋವೆಯ ಜನರ ಹೋರಾಟಕ್ಕೆ ಸರ್ವಾನುಮತದ ಬೆಂಬಲ

ಪ್ರಸ್ತುತ ವಾರದ ಸುದ್ದಿಯಲ್ಲಿ ಮುಂಬಯಿ ನಗರಕ್ಕೆ ಹೆಚ್ಚಿನ ಪ್ರಾಶಸ್ತ್ಯವು ಬಂದಿದೆ. ಕಳೆದ ವಾರ ಈ ಮಹಾನಗರದಲ್ಲಿ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಅಧಿವೇಶನವು ನೆರೆಯಿತು; ಈ ಅಧಿವೇಶನಕ್ಕೆ ಆಗಮಿಸಿದ್ದ ದೇಶದ ಧುರೀಣರ ವಿರುದ್ಧ ಮುಂಬಯಿಯನ್ನು ಮಹಾರಾಷ್ಟ್ರದಲ್ಲಿಯೇ ಉಳಿಯಗೊಡಬೇಕೆಂದು ಹೇಳುತ್ತಿರುವವರ ಹೇಯ ಮತಪ್ರದರ್ಶನ ನಡೆಯಿತು; ಇದೇ ಹೊತ್ತಿಗೆ ಪ್ರ

ಶ್ರೀ ಢೇಬರರು

* *

ಧಾನ ಮಂತ್ರಿ ನೆಹರುಗಳಿಂದ ಮುಂಬಯಿಯು ಕನಿಷ್ಠ ಐದು ವರ್ಷಗಳವರೆಗಾದರೂ ಕೇಂದ್ರಾಧೀನ ಪ್ರದೇಶವಾಗಿಯೇ ಸುಸಾರಚಿತ ರಾಜ್ಯಗಳ ನಕ್ಷೆಯಲ್ಲಿ ಉಳಿಯುವುದೆಂಬ ಘೋಷಣೆಯೂ ಮಾಡಲ್ಪಟ್ಟಿತು. ಹೀಗಾಗಿ ನಾವು ಬಹಳ ದಿನಗಳಿಂದ ಆತ್ಯಾತುರದಿಂದ ನಿರೀಕ್ಷಿಸುತ್ತಿದ್ದಂಥ ಗಳಿಗೆಗಳು ಈಗ ತೀರಿ ಹೋಗಿವೆ; ಉದ್ವೇಗವೂ ಸಂದುಹೋಗಿದೆ—ಎನ್ನಬಹುದು.

ಐಕ್ಯ ಭಾವನೆ ಆವಶ್ಯಕ

ಸಮಿತಿಯ ಅಧಿವೇಶನವನ್ನು ಮುಂಬಯಿ ನಗರದಲ್ಲಿ ನೈಋತ್ಯ ಭಾಗದಲ್ಲಿರುವ ಲಾಯಿಡ್ಸ ಬಯಲಿನಲ್ಲಿ ಸಿದ್ಧಾರ್ಥ ನಗರವೆಂದು ಗೌತಮ ಬುದ್ಧನ ಸವಿ ನೆನಪಿನಿಂದ ಕರೆಯಲಾದ ವಿಶೇಷ ಮಂಟಪದಲ್ಲಿ ನೆರೆಯಿಸಲಾಗಿದ್ದಿತು. ಪ್ರಾರಂಭದಲ್ಲಿ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಧ್ವಜಾರೋಹಣ ಕಾರ್ಯವನ್ನು ನೆರವೇರಿಸಿದರು. ಮುಂಬಯಿಯು ದೇಶದ ಬಲಶಾಲಿಯಾದ ಕೋಟೆಯೆಂದೂ ದೇಶವು ಧುರೀಣತ್ವಕ್ಕಾಗಿ ಹಿಂದೆ ಅನೇಕ ಸಲ ಮುಂಬಯಿಯತ್ತ ನೋಡಿದೆಯೆಂದೂ ಶ್ರೀ ಢೇಬರರು ಈ ಸಂದರ್ಭದಲ್ಲಿ ಕೃತಜ್ಞತೆಯಿಂದ ನೆನೆದರು. ಅವರು ಈ ಸಂದರ್ಭದಲ್ಲಿ ರಾಜ್ಯಗಳ ಪುನರಚನೆಯ ಪ್ರಶ್ನೆಯನ್ನು ಎತ್ತಿಕೊಂಡು ವಿಘಾತಕವೂ ಒಡಕನ್ನುಂಟುಮಾಡುವವೂ ಆದ ದುಷ್ಟ ಶಕ್ತಿಗಳನ್ನು ದಮನಿಸಲು ನಮ್ಮೆಲ್ಲ ಬಲವನ್ನು ಉಪಯೋಗಿಸಬೇಕೆಂದೂ ರಾಷ್ಟ್ರಕ್ಕೆ ಐಕ್ಯ ಮತ್ತು ಪ್ರೇಮದ ಸಂದೇಶವನ್ನು ನೀಡುವುದೇ ಪ್ರತಿಯೊಬ್ಬ ರಾಷ್ಟ್ರೀಕನ- ಮುಖ್ಯವಾಗಿ ಕಾಂಗ್ರೆಸಿಗನ-ಕರ್ತವ್ಯವಾಗಿರಬೇಕೆಂದೂ ಬೋಧಿಸಿದರು. ಭಿನ್ನಾಭಿಪ್ರಾಯಗಳು ಪ್ರಜಾಸತ್ತಾತ್ಮಕ ರಾಷ್ಟ್ರಕ್ಕೆ ಸಹಜವಾದುದಾಗಿವೆ; ಆದರೆ ಇಷ್ಟರಲ್ಲಾಗಿಯೇ ದೇಶದಲ್ಲಿ ಅನೈಕ್ಯಭಾವವು ವ್ಯಕ್ತವಾಗುತ್ತಿರಬೇಕೆಂದು ಭಾವಿಸಲಾಗದು. ಭಿನ್ನಾಭಿಪ್ರಾಯಗಳು ಎಷ್ಟೇ ಇರಲಿ, ರಾಷ್ಟ್ರದ ಐಕ್ಯಕ್ಕೆ ಮತ್ತು ಪರಸ್ಪರ ಸದ್ಭಾವನೆಗೆ ಭಂಗಬಾರದಂತೆ ಪ್ರಚಂಡ ತಾಳ್ಮೆಯಿಂದ ನಾವು ಕೆಲಸ ಮಾಡಲು ತಪ್ಪಬಾರದು ಎಂದೂ ಶ್ರೀ ಢೇಬರರು ತಿಳಿಸಿದರು.

ಕಾಂಗ್ರೆಸಿಗರ ಕರ್ತವ್ಯ

ಅಧಿವೇಶನವು ೩೦ ಸಾವಿರ ಪ್ರೇಕ್ಷಕರ ಹರ್ಷಧ್ವನಿಯೊಡನೆ ವಿಧ್ಯುಕ್ತರೀತಿಯಲ್ಲಿ ಪ್ರಾರಂಭವಾದಾಗ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ತಾವು ಧ್ವಜಾರೋಹಣ ಕಾಲದಲ್ಲಿ ಹೇಳಿದ್ದ ಕೆಲವು ಸಂಗತಿಗಳನ್ನೆ ಪುನಃ ವಿಸ್ತರಿಸಿ ಒತ್ತಿ ಹೇಳಿದರು; ಮುಖ್ಯವಾಗಿ ಕಾಂಗ್ರೆಸಿಗರ ಗಮನವು ಯಾವ ವಿಷಯಗಳ ಕಡೆಗೆ ಅವಶ್ಯವಾಗಿ ಇಂದು ಹರಿಯಬೇಕಾಗಿದೆ ಎಂಬುದನ್ನವರು ಈ ಸಂದರ್ಭದಲ್ಲಿ ದಿಗ್ದರ್ಶಿಸಿದರು. ಅರುವತ್ತು ವರ್ಷಗಳ ಹಿಂದಿನಿಂದಲೂ ಕಾಂಗ್ರೆಸು ತನ್ನ ಧ್ಯೇಯವನ್ನು ಶಿಸ್ತಿನ ರೀತಿಯಿಂದಲೂ ಪ್ರಜಾಸತ್ತಾತ್ಮಕ ಪದ್ಧತಿಯಿಂದಲೂ ಸಾಧಿಸಬೇಕೆಂದು ಹೇಳುತ್ತಾ ಬಂದಿದೆ. ಈಗಲಾದರೂ ನಾವು ಇದೇ ಪರಂಪರೆಯಂತೆ ನಡೆಯಬೇಕಲ್ಲದೆ ದಾರಿ ಬಿಟ್ಟು ದೂರ ಹೋಗಲಾಗದು. ಕಾಂಗ್ರೆಸಿನಂಥ ವಿಶಾಲವಾದ ಮತ್ತು ರಾಷ್ಟ್ರದಲ್ಲಿಯೇ ಪ್ರಚಂಡವಾದ ಸಂಸ್ಥೆಯಲ್ಲಿ ಭಿನ್ನಾಭಿಪ್ರಾಯಗಳಿರುವುದೇ ತಪ್ಪಲ್ಲ; ಅದು ಸಹಜ. ಆದಾಗ್ಯೂ ದೇಶದಲ್ಲಿ ರಾಜಕೀಯ ಪ್ರತಿಪಕ್ಷಗಳು ತೀರ ದುರ್ಬಲವಾಗಿರುವಾಗ, ಜನರಿಗೆ ತಕ್ಕ ಮಾರ್ಗದರ್ಶನವನ್ನು ಮಾಡುವ ಗಂಭೀರವೂ ಮಹತ್ವಪೂರ್ಣವೂ ಆದ ಹೊಣೆಗಾರಿಕೆಯು ಕಾಂಗ್ರೆಸಿನ ಮೇಲೆ, ಈ ಸಂಸ್ಥೆಯ ಸದಸ್ಯರ ಮೇಲೆ ಬಿದ್ದಿದೆ. ಭಿನ್ನಾಭಿಪ್ರಾಯಗಳನ್ನು ಶಾಂತವಾಗಿ ನಿವಾರಿಸಿಕೊಂಡು ಹೋಗಬೇಕು; ತಪ್ಪು ತಿಳುವಳಿಕೆಗಳನ್ನು ದೂರಪಡಿಸಬೇಕು. ನಮ್ಮ ಆದರ್ಶ ತತ್ವಗಳಿಗೂ ನಡತೆ ವರ್ತನೆಗಳಿಗೂ ನಡುವೆ ತಾಳಮೇಳ ಚೆನ್ನಾಗಿರಬೇಕು— ಎಂದು ಮುಂತಾಗಿ ಅವರು ನುಡಿದರು.

ಸೈನಿಕ ಒಪ್ಪಂದಗಳ ಭರ್ತ್ಸನೆ

ಮುಂದೆ ಸಭೆಯಲ್ಲಿ ಅಂತಾರಾಷ್ಟ್ರೀಯ ವಿಷಯಗಳಿಗೆ ಸಂಬಂಧಿಸಿದ ಗೊತ್ತುವಳಿಯು ಮಂಡಿಸಲ್ಪಟ್ಟು ಸ್ವೀಕಾರಗೊಂಡಿತು. ಇದನ್ನು ಗೃಹಮಂತ್ರಿ ಶ್ರೀ ಗೋವಿಂದ ವಲ್ಲಭ ಪಂತರು ಮಂಡಿಸಿದರು. ಅಂತಾರಾಷ್ಟ್ರೀಯ ವಾತಾವರಣವು ಈಗ ಸ್ವಲ್ಪ ಮಟ್ಟಿಗೆ ಸುಧಾರಿಸಿರುವುದಕ್ಕೆ ಗೊತ್ತುವಳಿಯಲ್ಲಿ ಸಮಾಧಾನವನ್ನು ವ್ಯಕ್ತಪಡಿಸಲಾಗಿದೆ. ಆದರೆ ಸೀಟೋ ಮತ್ತು ಬಗ್ದಾದಗಳ ಹೆಸರು ಹೊತ್ತಿರುವ ಸೈನಿಕ ಒಪ್ಪಂದಗಳಿಂದ ಶಾಂತಿಗೆಂದೂ ಪೋಷಣೆ ದೊರೆಯದೆಂಬ ಭಾರತದ ದೃಢಾಭಿಪ್ರಾಯವನ್ನು ಮರಳಿ ಈ ಗೊತ್ತುವಳಿಯು ಎತ್ತಿ ಹೇಳುತ್ತದೆ. ಈ ನಿರ್ಣಯದ ಅನುಮೋದನೆಯನ್ನು ಶ್ರೀ ವಿ. ಕೆ. ಕೃಷ್ಣಮೆನೊನ್ನರು ಮಾಡುತ್ತಾ ಪ್ರಧಾನ ಮಂತ್ರಿಗಳು ಸದ್ಯವೇ ಕೈಗೊಳ್ಳಲಿರುವ ಪಶ್ಚಿಮ ದೇಶಗಳ (ಅಮೇರಿಕ ಮತ್ತು ಬ್ರಿಟನುಗಳ) ಸಂಚಾರವು ಆ ರಾಷ್ಟ್ರಗಳ ಮೇಲೆ ಭಾರತದ ನಿಲುವೆಯನ್ನು ಇನ್ನಷ್ಟು ಪ್ರಭಾವಿಯಾದ ರೀತಿಯಲ್ಲಿ ಅಚ್ಚೊತ್ತಲು ನೆರವಾದೀತೆಂದು ಆಶಿಸಿದರು: ಹೀಗೆ ಸೀಟೊ ಮತ್ತಿತರ ತತ್ಸಮಾನ ಸೈನಿಕ ಒಪ್ಪಂದಗಳ ವಿಷಯದಲ್ಲಿ ಭಾರತದ ನಿಲುಮೆಯನ್ನು ಮೆಚ್ಚಲು ಆ ರಾಷ್ಟ್ರಗಳಿಗೆ ಸಾಧ್ಯವಾದೀತೆಂದು ಅವರು ನುಡಿದರು. ಏಶಿಯದಲ್ಲಿ ಭಾರತ, ಬರ್ಮಾ, ಇಂಡೋನೇಶಿಯ, ಸಿಂಹಳದಂಥ ಪ್ರಮುಖ ರಾಷ್ಟ್ರಗಳು ಸೇರಿರದ, (ಅವುಗಳಿಂದ ಭರ್ತ್ಸನೆಗೆಯೇ ಗುರಿಯಾಗಿರುವ) ಸೀಟೋ ಒಪ್ಪಂದವು "ಆಗ್ನೇಯ ಏಶಿಯದ ಸಂರಕ್ಷಣೆ" ಎಂಬ ಪದಸಮೂಹದ ಉಪಯೋಗಕ್ಕೆ ಅರ್ಹವಾಗಿಲ್ಲ; ಅರಬ ರಾಷ್ಟ್ರ



ಪಂಡಿತ ಪಂತರು

* *

ಗಳಲ್ಲಿ ಹೆಸರುವಾಸಿಯಾಗಿರುವ ಸೌದಿ ಅರೇಬಿಯ, ಐಗುಪ್ತ ಇತ್ಯಾದಿಗಳ ಸದಸ್ಯತ್ವವನ್ನು ಹೊಂದಿರದೆ ಅವುಗಳ ತೀವ್ರ ವಿರೋಧಕ್ಕೆ ಗುರಿಯಾಗಿರುವ ಬಗ್ದಾದಿನ ಒಪ್ಪಂದವೂ ಏಶ್ಯದ ಜನರಿಗೆ ಬೇಡವಾದುದಾಗಿದೆ. ಕೇವಲ ಪಾಶ್ಚಾತ್ಯ ರಾಷ್ಟ್ರಗಳ ಸದಸ್ಯತ್ವಕ್ಕೆ ಮತ್ತು ಕೈವಾಡಕ್ಕೆ ಹೆಚ್ಚಿನ ಪ್ರಾಶಸ್ತ್ಯವಿತ್ತಿರುವ ಈ ಸೈನಿಕ ಒಪ್ಪಂದಗಳಿಂದ ಅಪಾಯ ತಪ್ಪದು— ಎಂದು ಅಧಿವೇಶನದಲ್ಲಿ ಅಭಿಪ್ರಾಯಪಡಲಾಯಿತು.

ಕಾಶ್ಮೀರದ ಭವಿಷ್ಯ

ಸೀಟೋ ಮತ್ತು ಬಗ್ದಾದಿನ ಸೈನಿಕ ಒಪ್ಪಂದಕ್ಕೆ ಭಾಗಿಯಾದ ರಾಷ್ಟ್ರಗಳ ಪರಿಷತ್ತುಗಳು ಪ್ರತ್ಯೇಕವಾಗಿ ಇತ್ತೀಚೆಗೆ ಕ್ರಮವಾಗಿ ಕರಾಚಿಯಲ್ಲೂ ಟೆಹರಾನಿನಲ್ಲೂ ಜರಗಿದಾಗ ಕಾಶ್ಮೀರದ ಭವಿಷ್ಯತ್ತನ್ನು ಕುರಿತು ಅವು ಮಾಡಿದ ಉಲ್ಲೇಖವನ್ನು ಕಾಂಗ್ರೆಸು ಕಟುವಾಗಿ ಖಂಡಿ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೩೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ—ಚಿಂತಾಮಣಿ.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, Udipi, S. K. *Phone:* 6

ಕೇಂದ್ರಾಧೀನ ಪ್ರದೇಶವಾಗಿಯೇ ಮುಂಬಯಿಯನ್ನುಳಿಸುವ ನಿಶ್ಚಯ

ಶಾಂತಿ ಕೆಡಿಸಿಕೊಂಡಿರುವುದೇ ಈ ಕಟು ನಿರ್ಧಾರದ ಕಾರಣವೆಂದು ನೆಹರು

ಸಿತು. ಕಾಶ್ಮೀರವು ಸರ್ವ ರೀತಿಯಿಂದಲೂ ಭಾರತದ ಅವಿಭಾಜ್ಯ ಅಂಗವಾಗಿದ್ದು ನಮ್ಮ ನಿಲುಮೆಯನ್ನು ಬದಲಿಸುವ ಪ್ರಶ್ನೆಯೇ ಇಲ್ಲಿಲ್ಲ. ಭಾರತ ಸರಕಾರವು ಅಕ್ರಮವಾಗಿ ಸೈನ್ಯ ಶಕ್ತಿಯ ಬಲದಿಂದ ಕಾಶ್ಮೀರವನ್ನು ತನ್ನ ವರ್ಚಸ್ಸಿನಲ್ಲಿ ಇಟ್ಟುಕೊಂಡಿದೆ ಎಂದು ಹೇಳುವುದರಲ್ಲಿ ನ್ಯಾಯವಿಲ್ಲ: ಏಕೆಂದರೆ ಭಾರತವು ತಾನಿತ್ತ ವಚನದಂತೆ ಕಾಶ್ಮೀರದ ಜನಾಭಿಪ್ರಾಯವೇನೆಂಬುದನ್ನು ಜನರಿಂದ ಚು

ಶ್ರೀ ವಿ. ಕೆ. ಕೃಷ್ಣ ಮೆನೊನ್ನರು

**

ನಾಯಿತ ಘಟನಾ ಸಮಿತಿಯ ತೀರ್ಮಾನದ ಮೇಲಿಂದ ನಿರ್ಧರಿಸಿದೆ: ಈ ತೀರ್ಮಾನವು ಭಾರತದಲ್ಲಿ ಕಾಶ್ಮೀರದ ಸೇರ್ಪಡೆಗೆ ಅನುಕೂಲವಾಗಿದೆ. ಆದುದರಿಂದ ಪಾಕಿಸ್ತಾನದ ನಿಲುಮೆಯು ಕೇವಲ ಅಪಪ್ರಚಾರದಿಂದ ಕೂಡಿದೆ ಎಂದು ಪಂತರಾದಿಯಾಗಿ ಧುರೀಣರು ಹೇಳಿದರು. ಭಾರತದ ಸಾರ್ವಭೌಮಾಧಿಕಾರ ಕ್ಷೇತ್ರದ ಸಮಸ್ಯೆಗಳ ವಿಷಯದಲ್ಲಿ ಇತರರು ಹಸ್ತಕ್ಷೇಪಮಾಡುವುದನ್ನು ನಾವೆಂದಿಗಾದರೂ ಸಹಿಸೆವೆಂದು ಶ್ರೀ ಮೆನೆನ್ನರು ಸಾರಿದರು.

ಕಾಶ್ಮೀರದಲ್ಲಿ ಮುಸ್ಲಿಮರೇ ಬಹು ಸಂಖ್ಯಾಕರೆಂಬುದಕ್ಕಾಗಿ ಅದು ಪಾಕಿಸ್ತಾನದಲ್ಲಿ ಸೇರಬೇಕೆಂದು ಪಾಕಿಸ್ತಾನಿ ಸರಕಾರವು ಹೂಡುತ್ತಿರುವ ವಾದಕ್ಕೆ ಭಾರತೀಯ ಮುಸ್ಲಿಮರು ಕಿವಿಗೊಡುವಂತಿಲ್ಲ: ಜನಾಭಿಪ್ರಾಯದ ಮೇಲೆ ನಿರ್ಧಾರವನ್ನು ರೂಪಿಸಬೇಕಲ್ಲದೆ ಮತ ಧರ್ಮದ ತಳಹದಿಯ ಮೇಲಲ್ಲ. ಇಂಥ ಜನಾಭಿಪ್ರಾಯವು ಘಟನಾ ಸಮಿತಿಯ ತೀರ್ಮಾನದ ಮೂಲಕ ಎಂದೋ ವ್ಯಕ್ತವಾಗಿದೆ ಎಂದು ಮೌಲಾನಾ ಹಫೀಜುರ ರಹಮಾನರೆಂಬ ಮುಸ್ಲಿಂ ಸದಸ್ಯರು ಈ ಸಂದರ್ಭದಲ್ಲಿ ಭಾಷಣವಿತ್ತರು.

ಗೋವೆಯ ಹೋರಾಟ

ಭಾರತದಲ್ಲಿರುವ ಪೋರ್ಚುಗೀಜರ ವಸಾಹತುಗಳ ಸಂಬಂಧದಲ್ಲಿ ಕಾಂಗ್ರೆಸಿನ ನಿಲುಮೆಯನ್ನು ಪುನರುಚ್ಚರಿಸುವ ಗೊತ್ತುವಳಿಯೂ ಈ ಅಧಿವೇಶನದಲ್ಲಿ ಸ್ವೀಕಾರವಾಯಿತು. ಶ್ರೀ ಮುರಾರ್ಜಿ ದೇಸಾಯಿಯವರು ಈ ವಿಷಯದ ಮೇಲೆ ಮಾತನಾಡುತ್ತಾ ಗೋವೆ ಮತ್ತಿತರ ಪೋರ್ಚುಗೀಜರ ಕೈಯಲ್ಲಿರುವ ಭಾರತೀಯ ಪ್ರದೇಶಗಳಲ್ಲಿಯ ಜನರು ಕೈಗೊಂಡಿರುವ ವಿಮೋಚನಾ ಹೋರಾಟವು ಭಾರತೀಯರ ಸಂಪೂರ್ಣ ಸಹಾನುಭೂತಿಗೆ ಪಾತ್ರವಾಗಿದೆ ಎಂದರು. ಗೊತ್ತುವಳಿಯು ಭಾರತದ ಜನರೆಲ್ಲರೂ ಪೋರ್ಚುಗೀಜರು ತಮ್ಮ ವಸಾಹತುಗಳಲ್ಲಿ ನಡೆಸುತ್ತಿರುವ ಛಲನೆ ಮತ್ತು ದಬ್ಬಾಳಿಕೆಗಳ ಕಡೆಗೆ, ಹಾಗು ಸತ್ಯಾಗ್ರಹಿಗಳನ್ನು ಪೋರ್ಚುಗೀಜರು ನಡೆಸಿಕೊಳ್ಳುತ್ತಿರುವ ಅಮಾನುಷ ರೀತಿಯ ಕಡೆಗೆ ಜಗತ್ತಿನ ಜನರ ಹಾಗು ಸರಕಾರಗಳ ಗಮನ ಹರಿಯಬೇಕೆಂದು ಅಪೇಕ್ಷಿಸುತ್ತಿರುವುದನ್ನು ಪ್ರಸ್ತಾಪಿಸಿದೆ. ಶ್ರೀ ದೇಸಾಯಿಯವರು ಇದನ್ನು ಒತ್ತಿ ಹೇಳುತ್ತಾ ಭಾರತ ಸರಕಾರವೂ ಜಗತ್ತಿನ ರಾಷ್ಟ್ರಗಳ ಗಮನವನ್ನು ಈ ವಿಷಯದ ಕಡೆಗೆ ಸೆಳೆಯಲು ಉನ್ನತಮಟ್ಟದಲ್ಲಿ ಪ್ರಯತ್ನ ಮಾಡುತ್ತಿದೆ ಎಂದರು. ಸಂಯುಕ್ತ ರಾಷ್ಟ್ರಸಂಘದ ಘಟನೆಯಲ್ಲಿ ಉಲ್ಲೇಖಿತವಾಗಿರುವ ಉನ್ನತ ನಡವಳಿಕೆಯ ಮಟ್ಟಕ್ಕೆ ಪೋರ್ಚುಗೀಜರು ಇನ್ನೂ ಬಂದಿಲ್ಲದಿರುವುದನ್ನು ಆ ವಿಶ್ವಸಂಸ್ಥೆಯು ಕಡೆಗಣಿಸಲಾಗದೆಂದೂ ಅವರು ಅಪೇಕ್ಷಿಸಿದರು. ವಸಾಹತುಗಳ ವಿಮೋಚನೆಗಾಗಿ ಭಾರತ ಸರಕಾರದವರು ಕೈಗೊಂಡಿರುವ ಕ್ರಮಗಳನ್ನು ವಿಫಲಗೊಳಿಸಲು ಕೆಲವು ಭಾರತೀಯರೇ ಕಳ್ಳ ವ್ಯಾಪಾರಾದಿ ವಾಮ ಮಾರ್ಗಗಳಿಂದ ನೆರವಾಗುತ್ತಿರುವುದನ್ನು ಗೊತ್ತುವಳಿಯು ನಿಷೇಧಿಸುತ್ತಿರುವುದರ ಕಡೆಗೂ ಅವರು ಭಾರತೀಯರ ಕಣ್ಸೆಳೆದರು. ಯಾವ ಪರಿಸ್ಥಿತಿಯಲ್ಲಿಯೇ ಆಗಲಿ, ಹಿಂಸಾಮಾರ್ಗವನ್ನು ಅವಲಂಬಿಸಲು ಭಾರತ ಸರಕಾರವು ಸಿದ್ಧವಿಲ್ಲ; ಗೋವೆಯ ವಿಮೋಚನೆಗಾಗಿ ಆತುರ ಹೊಂದಿರುವ ಭಾರತೀಯರು ಇದನ್ನು ಚೆನ್ನಾಗಿ ತಿಳಿದು, ಈ ನೀತಿಯೊಡನೆ ಸಹಕರಿಸುವುದು ಅವಶ್ಯ ಎಂದೂ ದೇಸಾಯಿ ತಿಳಿಸಿದರು. ಬಲಾತ್ಕಾರದಿಂದ ಗೋವೆಯನ್ನು ಭಾರತದೊಡನೆ ಸೇರಿಸುವುದು ಸರಕಾರದ ಅಥವಾ ಕಾಂಗ್ರೆಸಿನ ಇಚ್ಛೆಯಲ್ಲವೆಂದೂ ವಸಾಹತು ಆಳಿಕೆಯಿಂದ ಗೋವೆ ವಿಮೋಚನೆ ಹೊಂದುವುದೇ ಮುಖ್ಯವೆಂದೂ ಹಾಗೆ ವಿಮೋಚನೆಗೊಂಡ ತರುವಾಯ ಅದು ಭಾರತದೊಡನೆ ಸೇರುವ ಅಥವಾ ಬಿಡುವ ವಿಷಯದ ನಿರ್ಧಾರ ಮಾಡಲು ಸ್ವತಂತ್ರವಿದೆಯೆಂದೂ ಮುರಾರ್ಜಿ ಸ್ಪಷ್ಟಪಡಿಸಿದರು.

ಹಿಂಸಾಚಾರದ ಖಂಡನೆ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಶಾಂತಿಮಾರ್ಗವನ್ನು ಪ್ರತಿಪಾದಿಸಲು ನಿರ್ಧರಿಸಿರುವುದಕ್ಕೆ ಅನುಗುಣವಾಗಿ ದೇಶದೊಳಗೆ ಸಹ ಶಾಂತ ವಿಧಾನವನ್ನೆ ಅನುಸರಿಸುವ ಆವಶ್ಯಕತೆಯನ್ನು ಕಾಂಗ್ರೆಸಿನ ಈ ಅಧಿವೇಶನವು ಒತ್ತಿ ಹೇಳಿತು. ಪ್ರಧಾನ ಮಂತ್ರಿಗಳು ಬಹಳ ಸ್ಫೂರ್ತಿಯಿಂದ ಮಾತನಾಡುತ್ತಾ ಹಿಂಸಾಚರಣೆಯ ಖಂಡನೆಯನ್ನು ಮಾಡಿದರು. ಈಗ ತೀರ ಸಾಮಾನ್ಯವಾಗುತ್ತಿರುವ "ಸತ್ಯಾಗ್ರಹ"ವನ್ನು ಅವರು ಭಾರತೀಯರ ಜೀವನದಲ್ಲಿ ಹಿಂಸಾಚರಣೆಯು ಧರಿಸಿರುವ ಹೊಸ ಮುಖವಾಡವೆಂದು ಕರೆಯುವಷ್ಟು ಬೇಸರದಿಂದ ಮಾತನಾಡಿದರು. ಇಂದಿನ ಪರಿಸ್ಥಿತಿಯಲ್ಲಿ ಯಾವನಾದರೊಬ್ಬನು ತುಂಬಿದ ಸಭೆಯಲ್ಲಿ ಘೋಷಣೆ ಮಾಡಿ ಅಥವಾ ಮತಪ್ರದರ್ಶನ ಮಾಡಿ ಸುಲಭದಲ್ಲಿ ಸತ್ಯಾಗ್ರಹಿ ಎನಿಸಿಕೊಳ್ಳಬಹುದು: ಪುಂಡುತನದಿಂದ ನಡೆದು ವೀರನೆನಿಸಿಕೊಳ್ಳಲೂ ಬಹುದು. ಆದರೆ ದೇಶದ ಗೌರವವು ಇಂಥ ವರ್ತನೆಗಳಿಂದ ಹೆಚ್ಚಿಕೊಳ್ಳಲಾರದು: ಸತ್ಯಾಗ್ರಹದ ಮೂಲ ಕಲ್ಪನೆಗಿದು ಎಷ್ಟಕ್ಕೂ ಹೊಂದಿಕೆಯಾಗದು ಎಂದರವರು. ದೇಶದಲ್ಲಿಂದು ಕ್ಷುದ್ರಮನೋವೃತ್ತಿಯೂ ಅಪ್ರಾಮಾಣಿಕತೆಯೂ ಹೊಣೆಗೇಡಿ ವರ್ತನೆಯೂ ಬೆಳೆಯುತ್ತಿರುವುದನ್ನು ಪ್ರಸ್ತಾಪಿಸುತ್ತಾ ನೆಹರುಗಳು ಸರಕಾರವು ಹಿಂಸಾಚರಣೆಯನ್ನು ಎಷ್ಟಕ್ಕೂ ಸಹಿಸದೆಂದು ಘೋಷಿಸಿದರು. ಚುನಾವಣೆಗಳಲ್ಲಿ ಜಯ ಸಂಪಾದನೆಯಾಗುವ ಅಥವಾ ಬಿಡುವ ವಿಷಯವು ಎಷ್ಟಕ್ಕೂ ದೊಡ್ಡದಲ್ಲ; ಜನರು ಶಿಸ್ತು ಮತ್ತು ಶಾಸನಬದ್ಧ ರೀತಿಯಿಂದ ವರ್ತಿಸುವುದೇ ಮುಖ್ಯವಾದ ವಿಷಯ ಎಂದರು ನೆಹರು. ಅಜ್ಞ ಜನರನ್ನೂ ಜನಸಾಧಾರಣರನ್ನೂ ಹೊಣೆಗೇಡಿ ಮುಖಂಡರು ಉದ್ರೇಕಿಸಿ ಬಿಡುತ್ತಾರೆಂದೂ ಆದರೆ ಹಿಂದಿನಿಂದ ಈ ಉದ್ರಿಕ್ತ ಪರಿಸ್ಥಿತಿಯನ್ನು ಉಪಶಮನಿಸುವುದು ಅಸಾಧ್ಯವಾಗುತ್ತಿಲ್ಲವೆಂದೂ ಆದುದರಿಂದಲೇ ಹಿಂಸಾಚರಣೆಗಳು ಅತಿರೇಕವಾಗು



ಪ್ರಧಾನಿ ನೆಹರು

**

ತ್ತಿವೆಯೆಂದೂ ನೆಹರು ವಿವರಿಸಿದರು. ಕಾರ್ಮಿಕ ಚಳವಳಿಯು ಕೂಲಿಕಾರರ ಕಲ್ಯಾಣ ಸಾಧನೆಯ ಉದ್ದೇಶದಿಂದ ಮಾಡಿಕೊಳ್ಳುವ ಸಂಘಟನೆಯಾಗಬೇಕಲ್ಲದೆ, ಹಿಂಸಾಚರಣೆಗೆ ದಾರಿ ಮಾಡಿಕೊಡಲಾಗದು ಎಂದೂ ಅವರು ಪ್ರಸ್ತುತ ಕಾರ್ಮಿಕ ಚಳವಳದ ಸ್ವರೂಪವನ್ನು ಟೀಕಿಸಿ ಮಾತನಾಡಿದರು. ಹೊಣೆಗೇಡಿಗಳ ಕೈಗೆ ಕಾರ್ಮಿಕರು ಸಿಗದಂತೆ ಜಾಗರೂಕತೆ ವಹಿಸಬೇಕೆಂದೂ ಅವರು ಕಾಂಗ್ರೆಸಿಗರಲ್ಲಿ ವಿಶೇಷ ಮನವಿಮಾಡಿಕೊಂಡರು.

ಅಲ್ಪಸಂಖ್ಯಾಕ ವರ್ಗ

ಪುನರ್ಘಟಿತ ರಾಜ್ಯಗಳಲ್ಲಿ ಭಾಷೆಯ ದೃಷ್ಟಿಯಿಂದ ಅಲ್ಪ ಸಂಖ್ಯಾಕರೆನಿಸುವ ವರ್ಗಗಳ ಹಿತ ರಕ್ಷಣೆಯ ಬಗ್ಗೆ ಕೈಗೊಳ್ಳಬೇಕಾದ ವಿಶೇಷ ಕ್ರಮಗಳ ಕುರಿತು ಒಂದು ಗೊತ್ತುವಳಿಯನ್ನು ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಫಜಲಲಿ ಆಯೋಗವು ಈ ಸಂಬಂಧದಲ್ಲಿ ನೀಡಿರುವ ಸಲಹೆಗಳ ಕಡೆಗೆ ಜನರಾಗಲೀ ಧುರೀಣರಾಗಲೀ ವಿಶೇಷ ಗಮನವನ್ನು ಪೂರೈಸಿಲ್ಲದಿರುವುದು ದುರ್ದೈವವೆಂದು ಕಾಂಗ್ರೆಸಿನ ಈ ಸಭೆಯಲ್ಲಿ ಅಭಿಪ್ರಾಯಪಡಲಾಯಿತು. ಆದುದರಿಂದ ಈ ವಿಷಯದ ಕುರಿತು ಮತ್ತೊಮ್ಮೆ ಸ್ಪಷ್ಟವಾಗಿ ತನ್ನ ನಿಲುಮೆಯನ್ನು ಸಾರುತ್ತಾ ಯಾವ್ಯಾವ ಬಗೆಯಿಂದ ಅಲ್ಪಸಂಖ್ಯಾಕ ವರ್ಗದ ಹಿತಾಸಕ್ತಿಗಳ ರಕ್ಷಣೆ ಮಾಡಬಹುದೆಂದು ವಿವರಿಸಿದೆ: ಮುಖ್ಯವಾಗಿ ಮಾತೃ ಭಾಷೆಯಲ್ಲಿ ಶಿಕ್ಷಣ, ಸರಕಾರದ ನಿರ್ದಿಷ್ಟ

(೭ನೇ ಪುಟ ನೋಡಿರಿ)

ಕೆನರಾ ಬೇಂಕ್ ಜುಬಿಲಿ ವಿದ್ಯಾನಿಧಿ

ಸಾಲರೂಪದ ವಿದ್ಯಾರ್ಥಿವೇತನಗಳು

ಉಚ್ಚ, ತಾಂತ್ರಿಕ ವಿದ್ಯಾಭ್ಯಾಸವನ್ನು ಮುಂದೆ ಸಾಗಿಸಲಿಚ್ಛಿಸುವ ಮತ್ತು ಹಣದ ಸಹಾಯವನ್ನು ಬಯಸುವ ವಿಶಿಷ್ಟಯೋಗ್ಯತೆಯುಳ್ಳ ವಿದ್ಯಾರ್ಥಿಗಳು ನಿಧಿಯ ಕಾರ್ಯದರ್ಶಿಗಳಿಗೆ ಅರ್ಜಿ ಬರಕೊಳ್ಳಬಹುದು. ಎಲ್ಲಾ ಅರ್ಜಿಗಳು, ಅಂಚೆ ಮತ್ತು ಇತರ ವೆಚ್ಚಗಳಿಗಾಗಿ ರೂ. 1/-ನ್ನು ನಗದಿಯಾಗಿ ಇಲ್ಲವೆ ಮನಿಯಾರ್ಡರು ಮೂಲಕ ತೆತ್ತರೆ ಸಿಗುವ ಆರಿಸಿದ ಫಾರ್ಮಿನಲ್ಲಿಯೇ ಬರೆಯಲ್ಪಟ್ಟು ಜೂನ್ 30ರೊಳಗೆ ಕಾರ್ಯದರ್ಶಿಗಳಿಗೆ ಮುಟ್ಟಬೇಕು.

ಕಾರ್ಯದರ್ಶಿ,

ಕೆನರಾ ಬೇಂಕ್ ಜುಬಿಲಿ ವಿದ್ಯಾನಿಧಿ,

111/118 ಸಿಲ್ವರ್ ಜ್ಯುಬಿಲಿ ಪಾರ್ಕ್ ರಸ್ತೆ,

ಬೆಂಗಳೂರು—2.

ಈ ಸ್ಥಳದ ದಾನ: ಕೆನರಾ ಬೇಂಕ್ ಲಿಮಿಟೆಡ್.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health,

Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೭-೬-'೫೬	೪೦

ಕಾಸರಗೋಡು

ಇನ್ನು ಕೆಲವೇ ದಿನಗಳಲ್ಲಿ, ಅಂದರೆ ಇದೇ ೧೮ನೇ ತಾರೀಕಿನಂದು, ಸಂಸತ್ತಿನ ಸಂಯುಕ್ತ ಪರಿಶೀಲಕ ಸಮಿತಿಯು ರಾಜ್ಯಗಳ ಪುನಾರಚನೆಯ ವಿಷಯದಲ್ಲಿ ಸರಕಾರವು ತಂದಿರುವ ಮಸೂದೆಯಲ್ಲಿ ತಿದ್ದುಪಡಿಗಳ ಆವಶ್ಯಕತೆಯನ್ನು ಸರ್ಯಾಲೋಚಿಸಲಿಕ್ಕಿದೆ. ಮಸೂದೆಯಲ್ಲಿ ಈ ಸಮಿತಿಯು ಯಾವ ವಿಷಯಗಳ ಬಗ್ಗೆ ತಿದ್ದುಪಡಿಯನ್ನು ಮಾಡುವುದಿಲ್ಲವೊ ಆ ವಿಷಯಗಳು ಮತ್ತೆ ಸಂಸತ್ತಿನಲ್ಲಿ ಚರ್ಚೆಯ ವೇಳೆ ತಿದ್ದುಪಡಿಗೊಳಗಾಗುವ ಸಂಭವವು ಅತ್ಯಲ್ಪವಾಗಿರುತ್ತದೆ. ಆದುದರಿಂದ ನಮ್ಮ ಜಿಲ್ಲೆಯ ಕಾಸರಗೋಡು ತಾಲೂಕಿನಲ್ಲಿ ಚಂದ್ರಗಿರಿ ಅಥವಾ ಪಯಸ್ವಿನಿ ಹೊಳೆಗಳ ಉತ್ತರಕ್ಕಿರುವ ಭೂಭಾಗವನ್ನು ಸೂಚಿತ ಕರ್ನಾಟಕ ರಾಜ್ಯದಲ್ಲಿಯೇ ಇರಗೊಳಿಸಬೇಕೆಂದು ಜನರೂ ಧುರೀಣರೂ ಹೇಳುತ್ತಾ ಬಂದಿರುವ ಮಾತಿಗೆ ಬೆಲೆ ಬರುವಂತೆ ಪರಿಶೀಲಕ ಸಮಿತಿಯ ಮಟ್ಟದಲ್ಲಿಯೇ ಹೆಚ್ಚಿನ ಚಟುವಟಿಕೆಯು ವ್ಯಕ್ತವಾಗಬೇಕಾಗಿದೆ. ಜಿಲ್ಲೆಯ ಮಹಾಜನರ ಪರವಾಗಿ, ಮುಖ್ಯವಾಗಿ ಮನನೊಂದಿರುವ ಮುಖ್ಯ ಕಾಸರಗೋಡು ತಾಲೂಕಿನ ಮಹಾ ಜನರ ಪರವಾಗಿ, ಜಿಲ್ಲಾ ಕಾಂಗ್ರೆಸಿನದೊಂದು ಶಿಷ್ಟ ಮಂಡಳವು ಡಾ. ಯು. ಪಿ. ಮಲ್ಯರ ನೇತೃತ್ವದಲ್ಲಿ ಹೊಸ ದೆಹಲಿಗೆ ಹೋಗಿ ಬಂದಿದೆ; ಶ್ರೀ. ಕೆ. ರಾಮಕೃಷ್ಣ ಕಾರಂತರ ಧುರೀಣತ್ವದಲ್ಲಿ ಇನ್ನೊಂದು ಶಿಷ್ಟ ಮಂಡಳವೂ ಹೊಸದೆಹಲಿಗೆ ಇದೇ ಸಮಯದಲ್ಲಿ ಹೋಗಿ ಬಂದಿದೆ. ನಮ್ಮ ಜನ ಪ್ರತಿನಿಧಿಗಳು ಪರಿಶೀಲಕ ಸಮಿತಿಯ ಮುಂದೆ ಕಾಸರಗೋಡು ತಾಲೂಕಿನ ವಿಷಯದಲ್ಲಿ ಕನ್ನಡಿಗರ ನಿಲುಮೆಯನ್ನು ಸ್ಪಷ್ಟ ಪಡಿಸಲಿಕ್ಕೂ ಸರಕಾರದ ಮೇಲೆ ಜನರ ನಿಜಾಭಿಪ್ರಾಯವನ್ನು ಬಿಂಬಿಸಲಿಕ್ಕೂ ಮನುಷ್ಯನಿಗೆ ಸಾಧ್ಯವಾದ ಎಲ್ಲ ಪ್ರಯತ್ನಗಳನ್ನೂ ಮಾಡಿದ್ದಾರೆಂದೂ ಈಗಲೂ ಮಾಡುತ್ತಿದ್ದಾರೆಂದೂ ಆದುದರಿಂದ ಜನರ ಮಾತಿಗೆ ಕಿವಿಗೊಡದ ಕಿವುಡರೆಂದು ಈ ಜನಪ್ರತಿನಿಧಿಗಳನ್ನು ದೂರುವುದರಲ್ಲಿ ನ್ಯಾಯವಿಲ್ಲವೆಂದೂ ಶ್ರೀ ಕಾರಂತರ ಶಿಷ್ಟ ಮಂಡಳಿಯಲ್ಲಿದ್ದ ಸದಸ್ಯರಲ್ಲಿಯೇ ಒಬ್ಬರು ತಿಳಿಸಿದ್ದಾರೆ. ಹೊಸದೆಹಲಿಯಿಂದ ಶ್ರೀ ಬಿ. ಶಿವರಾಯರು (ಇವರೇ ಕಾಸರಗೋಡಿನ ಜನರು ಲೋಕ ಸಭೆಗೆ ಚುನಾಯಿಸಿರುವ ಪ್ರತಿನಿಧಿಗಳು) ಒಂದು ಪ್ರಕಟಣೆಯಲ್ಲಿ ತಮ್ಮ ಪ್ರಯತ್ನಗಳನ್ನು ಮುಂದೊತ್ತುತ್ತಿರುವುದಾಗಿ ನಿಂತು ಪಿಸಿಸುವರಲ್ಲದೆ ಪರಿಶೀಲಕ ಸಮಿತಿಯ ಮುಂದೆ ತಕ್ಕ ಕಾಗದ ಪತ್ರ ಮತ್ತು ನಕ್ಷೆಗಳನ್ನು ಮಂಡಿಸಿ, ಕಾಸರಗೋಡಿನ ಕನ್ನಡಿಗರಿಗೆ ಆಗಿರುವ ಅನ್ಯಾಯದ ಸ್ಪಷ್ಟ ಕಲ್ಪನೆಯಾಗುವಂತೆ ನೋಡಿರುವುದಾಗಿಯೂ ಹೇಳಿದ್ದಾರೆ. ಈ ಅನ್ಯಾಯದ ಪರಿಮಾರ್ಜನೆಯಾಗಬೇಕೆಂಬ ವಿಷಯದಲ್ಲಿ ಜಿಲ್ಲೆಯ ಯಾವುದೇ ರಾಜಕೀಯ ಪಕ್ಷಗಳ ನಡುವೆ ಮತಭೇದವಿಲ್ಲದಿರುವುದು ಕಾಸರಗೋಡು ಕನ್ನಡಿಗರ ನಿಲುಮೆಗೆ ನ್ಯಾಯಸಮ್ಮತವಾದುದೆಂಬುದಕ್ಕೆ ಇನ್ನೊಂದು ದೊಡ್ಡ ನಿದರ್ಶನವೆಂದು ತೃಪ್ತಿಯಿಂದ ಶ್ರೀ ಶಿವರಾಯರು ಹೇಳಿದ್ದಾರೆ. ಪರಿಶೀಲಕ ಸಮಿತಿಯು ಗಮನಿಸಬೇಕಾದ ವಿಷಯಗಳಲ್ಲಿ ಇದೂ ಒಂದಾಗಿದೆ. ಮುಂಬಯಿ ನಗರದ ಭವಿಷ್ಯ ನಿರ್ಧಾರದಲ್ಲಿಯಾದರೆ ಕೆಲವು ರಾಜಕೀಯ ಧುರೀಣರ ನಡುವೆ ಮತಭೇದವಿದೆ; ಕಾಸರಗೋಡು ಮುಖ್ಯ ತಾಲೂಕಿನ ವಿಷಯದಲ್ಲಿ ಹಾಗಿಲ್ಲ—ಎಲ್ಲ ಪಕ್ಷಗಳೂ ಜನರೂ ಏಕಕಂಠದಿಂದ ಕೇರಳ ಮತ್ತು ಕರ್ನಾಟಕಗಳ ಗಡಿಯನ್ನು ಚಂದ್ರಗಿರಿ ಹೊಳೆ ಎಂದೇ ತೀರ್ಮಾನಿಸಬೇಕೆಂದು ಘೋಷಿಸುತ್ತಿದ್ದಾರೆ. ಸ್ವಾತಂತ್ರ್ಯ ಸಾಧನೆಯ ಪರಮೋಚ್ಚ ಧ್ಯೇಯಕ್ಕಲ್ಲದೆ, ಬೇರಾವ ಸಂದರ್ಭದಲ್ಲಿಯೂ ನಮ್ಮ ಜಿಲ್ಲೆಯ ಜನಾಭಿಪ್ರಾಯವು ಹೀಗೆ, ಇಷ್ಟು ಸಬಲವಾಗಿ, ಅಪಸ್ವರವಿಲ್ಲದೆ ಒಂದು ಗುರಿಯ ಸಾಧನೆಗಾಗಿ ವ್ಯಕ್ತವಾದಂತಿಲ್ಲ. ಇದರ ಮೇಲಿಂದಲೇ ಕಾಸರಗೋಡಿನ ಕನ್ನಡಿಗರಿಗೆ ಆಗಿರುವ ಅನ್ಯಾಯವು ಎಷ್ಟು ದೊಡ್ಡದೆಂಬುದನ್ನು ಮನಗಾಣಬಹುದು. ಆದುದರಿಂದ ಸಂಸತ್ತಿನ ಸಂಯುಕ್ತ ಪರಿಶೀಲಕ ಸಮಿತಿಯು ಇವೆಲ್ಲ ಸಂಗತಿಗಳನ್ನು ಗಮನಿಸಲು ಎಷ್ಟು ಮಾತ್ರಕ್ಕೂ ತಪ್ಪಬಾರದು—ಆದು ಲಘುಮನೋವೃತ್ತಿಯಿಂದ ಈ ವಿಷಯವನ್ನು ನೋಡಬಾರದು. "ಕಾಸರಗೋಡು ಯಾವ ರಾಜ್ಯದಲ್ಲಿದ್ದರೇನು; ಭಾರತದಿಂದ ಅದು ಹೊರಗೆಂದೂ ಹೋಗದು" ಎಂಬಂಥ ದೊಡ್ಡ ಮಾತುಗಳನ್ನಾಡಿ ಅನ್ಯಾಯಕ್ಕೊಳಗಾದ ಜನರನ್ನು ಸಮಾಧಾನಗೊಳಿಸಬಹುದೆಂಬ ಭ್ರಾಂತಿಯನ್ನದು ಬಿಡಬೇಕು: ಏಕೆಂದರೆ ಕೇರಳಕ್ಕೆ ಸೇರಿಸಿದರೂ ಭಾರತದಲ್ಲಿಯೇ ಉಳಿಯುವ ಕಾಸರಗೋಡು ತಾಲೂಕನ್ನು ಕರ್ನಾಟಕದಲ್ಲಿ ಸೇರ್ಪಡೆಗೊಳಿಸಿದರೂ ಅದು ಭಾರತದಲ್ಲಿಯೇ ಉಳಿಯುತ್ತದೆ: ಜನಾಭಿಪ್ರಾಯವನ್ನು ಈ ಕ್ರಿಯೆಯಿಂದ ಮನ್ನಿಸಿದಂತಾಗುತ್ತದೆ ಎಂಬುದೇ ಇಲ್ಲಿಯ ಹೆಚ್ಚುಗಾರಿಕೆ. ಆದಕಾರಣ ಪರಿಷ್ಕಾರ ತರ್ಕ ದೃಷ್ಟಿಯಿಂದ ನೋಡಿದರೂ ಪ್ರಜಾಪ್ರಭುತ್ವದ ಜೀವಾಳವಾದ ಜನಾಭಿಪ್ರಾಯ ಮನ್ನಣೆಯ ಸಿದ್ಧಾಂತಕ್ಕೆಯೇ ಗೆಲುವಾಗಬೇಕು; ಭಾರತದ ಪ್ರತಿನಿಧಿ ಸಂಸ್ಥೆಯಾದ ಸಂಸತ್ತಿನ ವ್ಯವಹಾರದಲ್ಲಿ ಈ ಸಿದ್ಧಾಂತ ಪ್ರತಿಫಲಿಸಬೇಕು. ಮುಂಬಯಿಯ ವಿಷಯದಲ್ಲಿ ಕೊಟ್ಟ ಬಗೆಯ ಕಾರಣಗಳಿಂದ ಕಾಸರಗೋಡಿನ ಕನ್ನಡಿಗರಿಗೆ ಅಪಮಾನ ಮಾಡಲು ಧುರೀಣರು—ಅವರು ಬೇಕಾದರೆ ಪ್ರಧಾನ ಮಂತ್ರಿಗಳೇ ಆಗಿರಲಿ—ದಯವಿಟ್ಟು ಹೋಗಬಾರದು. ಇದೇ ನಮ್ಮ ಕಳಕಳಿಯ, ಪ್ರಾಯಶಃ ಕೊನೆಯ, ಬಿನ್ನಹ.

ಪಶ್ಚಿಮ ರಾಷ್ಟ್ರಗಳಿಗೆ ಪ್ರಧಾನಿಗಳ ಆಹ್ವಾನ

"ಗೋವೆಯ ಕುರಿತು ಮೌನ ನಿಮಗೇಕೆ?"

ಮುಂಬಯಿಯಲ್ಲಿ ಗೋಮಾಂತಕರ ಸಭೆಯೊಂದರಲ್ಲಿ ಮಾತನಾಡುತ್ತಾ ಪ್ರಧಾನಿ ನೆಹರುಗಳು ಗೋವೆಯನ್ನು ತೀರ ಅಶಿಷ್ಟ ಮಾದರಿಯ ವಸಾಹತೆಂದು ಬಣ್ಣಿಸಿದರಲ್ಲದೆ, ಪೋರ್ಚುಗಾಲದ ನೀತಿಯ ಕುರಿತು ಏನೇನೂ ಅಭಿಪ್ರಾಯವನ್ನು ವ್ಯಕ್ತಪಡಿಸದೆ ತಟಸ್ಥ ಧೋರಣೆಯನ್ನು ಪಶ್ಚಿಮದ ರಾಷ್ಟ್ರಗಳು ವಹಿಸುತ್ತಿರುವುದೇಕೆ ಎಂದು ಪ್ರಶ್ನಿಸಿದರು. ಸಂಯುಕ್ತ ರಾಷ್ಟ್ರ ಸಂಘದ ಉನ್ನತ ಆದರ್ಶಗಳಿಗೆ ತೀರ ಅಸಂಗತವಾದ ರೀತಿಯಲ್ಲಿ ನಡೆದುಕೊಳ್ಳುತ್ತಿರುವ ಪೋರ್ಚುಗಾಲದ ವಿರುದ್ಧ ಜಗತ್ತಿನ ರಾಷ್ಟ್ರಗಳೆಲ್ಲವೂ ತಮ್ಮ ಧ್ವನಿಯನ್ನೆತ್ತಬೇಕೆಂದವರು ಆಶೈಸಿದರು.

ಫ್ರೆಂಚರಿಗೆ ಕೃತಜ್ಞತೆ

ಕಾಂಗ್ರೆಸು ಅಧಿವೇಶನವು ಮುಂಬಯಿಯಲ್ಲಿ ಸೇರಿದಾಗ, ಭಾರತದಲ್ಲಿ ಫ್ರೆಂಚರಿಗಿದ್ದ ಸ್ವಾಮ್ಯಗಳ ವಿಧ್ಯುಕ್ತ ಹಾಗು ಶಾಸನ ಬದ್ಧ ವರ್ಗಾವಣೆಯನ್ನು ಕಳೆದ ವಾರ ಫ್ರಾನ್ಸಿನ ಸರಕಾರವು ಭಾರತ ಸರಕಾರಕ್ಕೆ ಮಾಡಿದುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಲಾಯಿತು.

ವಿಷಾದಕರ ತೀರ್ಮಾನ

ನೆಹರುಗಳು ಮುಂಬಯಿ ನಗರದ ಭವಿಷ್ಯದ ಕುರಿತು ಹೇಳಿದ ಮಾತುಗಳಿಂದ ಮಹಾರಾಷ್ಟ್ರೀಯರಿಗೆ ತೀವ್ರ ವಿಷಾದವಾಗಿದೆ. ಶ್ರೀ ಗಾಡ್ಗೀಳರಂಥ ಧುರೀಣರು, ಸಂಸತ್ತು ನಿರ್ಣಯವನ್ನು ಕೊಡಬೇಕಾಗಿರುವ ವಿಷಯದಲ್ಲಿ ವ್ಯಕ್ತಿಯೊಬ್ಬನೇ ನಿರ್ಧಾರಾತ್ಮಕ ಹೇಳಿಕೆ ಕೊಡುವುದೆಂದರೆ ಪ್ರಜಾಪ್ರಭುತ್ವಕ್ಕೆ ಅಸಂಗತ; ಗೃಹಮಂತ್ರಿಗಳು ಸಂಸತ್ತಿನಲ್ಲಿ ನೀಡಿದ್ದ ಆಶ್ವಾಸನೆಗೂ ಹೊಂದಿಕೆಯಾಗದ ವಿಷಯವಿದು ಎಂದಿದ್ದಾರೆ. ಅವರು ಮತ್ತೆ ಬೇರೆ ಕೆಲವು ಮಹಾರಾಷ್ಟ್ರೀಯ ಧುರೀಣರು ಕಾಂಗ್ರೆಸನ್ನು ತ್ಯಜಿಸಲೂ ಬಹುದೆನ್ನಲಾಗುತ್ತದೆ.

ಉಡುಪಿ

ಶ್ರೀ ವೀರಣ್ಣ ಗೌಡರ ಆಗಮ—ಮೈಸೂರಿನ ಶಾಸನ ಸಭೆಯ ಸದಸ್ಯರೂ, ... ದೇಶ ಕಾಂಗ್ರೆಸ್ ಸಮಿತಿಯ ಸದಸ್ಯರೂ ... ಶ್ರೀ ವೀರಣ್ಣ ಗೌಡರೂ, ಭದ್ರಾವತಿಯ ... ಬಿ. ಮಾಧವ ಆಚಾರ್ಯ ಎಂ.ಎಲ್.ಎ. ... ರೂ ಕಳೆದ ತಾ. ೩ರಂದು ಉಡುಪಿಗೆ ... ಮಿಸಿದರು. ಸ್ಥಳೀಯ ಯುವಕಕಾಂ... ಸದಸ್ಯರನ್ನುದ್ದೇಶಿಸಿ ಶ್ರೀ ಗೌಡರು ... ಭಾಷಣವಿತ್ತರು. ಶ್ರೀ ಗೌಡರು ತಮ್ಮ ... ಣದಲ್ಲಿ ದ್ವಿಕರ್ನಾಟಕ ವಾದವನ್ನು ... ದಿಸಿದರಲ್ಲದೆ, ಮೈಸೂರು ಎಂಬ ಹೆಸರೇ ... ದಿನ ಕರ್ನಾಟಕಕ್ಕೆ ಸರಿಹೋಗುತ್ತದೆ ... ಒತ್ತಿ ಹೇಳಿದರು. ಶ್ರೀ ಟಿ. ಎ. ... ಸ್ವಾಗತಿಸುತ್ತಾ ಕರ್ನಾಟಕದ ನಾಯ... ರೂ ಏಕಾಭಿಪ್ರಾಯವುಳ್ಳವರಾಗಿರಬೇಕು ... ದು ತಿಳಿಸಿದರು. ಅಲ್ಲದೆ ಎಲ್ಲರೂ ಒಗ್ಗ... ದ ದುಡಿದು ತಮಗೆ ದೊರೆತಿರುವ ಸ... ಶವನ್ನು ಸದುಪಯೋಗ ಪಡಿಸಿಕೊಳ್ಳ... ದೂ ಸೂಚಿಸಿದರು.

ನಿಧನ—ಸ್ಥಳೀಯ ಬೋರ್ಡ್ ... ಲಿನ ಸಮರ್ಥ ಹಾಗೂ ಜನಪ್ರಿಯ ... ಯಿಂಗ್ ಅಧ್ಯಾಪಕರಾಗಿದ್ದ ಶ್ರೀ ಯು. ... ಕೃಷ್ಣರಾಯರು ಕೆಲಸಮಯದಿಂದ ಅಸ್ವ... ದಿದ್ದು ಚಿಕಿತ್ಸೆಗಾಗಿ ಮದ್ರಾಸಿಗೆ ತೆ... ಅಲ್ಲಿ ಕಳೆದ ತಾ. 19ರಲ್ಲಿ ನಿಧನಗೊ... ಲು ವಿಷಾದವಾಗುತ್ತದೆ. ದಿವಂಗತರಿಗೆ ... ಲಿನಲ್ಲಿ ಕೇನ್ಸರ್ ಆಗಿತ್ತೆಂದು ತಿಳಿಯಬ...

ಉಪಾಹಾರ ಸತ್ಕಾರ— ... ಮ್ಯುಚುವಲಿನ ಎಕೌಂಟೆಂಟ್ ಶ್ರೀ ... ಸುಬ್ಬರಾಯರು ತಾನು ಶ್ರೀಮತಿ ಗಿರಿ... ರನ್ನು ತಾ. 4ರಲ್ಲು ವಿವಾಹವಾದ ಸ... ತಾ. 6ರಲ್ಲಿ ಅಜ್ಜರಕಾಡು ತಮ್ಮ ನಿವಾ... ಉಪಾಹಾರ ಕೂಟವೊಂದನ್ನೇರ್ಪಡಿಸಿ...

ಮಣಿಪಾಲ— ಸ್ಥಳೀಯ ಹೈಸ್ಕೂ... ಅನುಭವಪ್ರಧಾನ ಅಧ್ಯಾಪಕರಾದ ಶ್ರೀ ... ಪುಂಡಲೀಕ ಶೆಣೈಯವರು ಇದೇ ತಾ... ದ ನಿವೃತ್ತರಾಗಿ ಅವರ ಸ್ಥಾನದಲ್ಲಿ ... ಬೋರ್ಡ್ ಹೈಸ್ಕೂಲಿನ ನಿವೃತ್ತ ಹೆ... ರಾದ ಶ್ರೀ ಬಿ. ಶ್ಯಾಮರಾಯ ಶೆಟ್ಟರು ... ಕಗೊಂಡಿರುವರು. ಶ್ರೀಯುತರು ಜಿಲ್ಲಾ... ದಿನಲ್ಲಿ ಹೆಸರುಗಳಿಸಿದ ಉಪಾಧ್ಯಾ... ದ್ದು ಕುಂದಾಪುರ, ಕಾರ್ಕಳ ಬೋರ್ಡ್ ... ಗಳ ಹೆಚ್ಚಿನ ಪ್ರಗತಿಗೆ ಕಾರಣರಾಗಿ, ... ಪ್ರಶಸ್ತ್ಯಾದರಗಳಿಸಿರುವರು. ಇವರ ... ಅಧ್ಯಾಪಕತನದಲ್ಲಿ ಮಣಿಪಾಲ ಹೈ... ಇನ್ನಷ್ಟು ಪ್ರಗತಿಹೊಂದಬಹುದೆಂದು ... ಲಾಗಿದೆ.

MAHATMA GANDHI MEMORIAL COLLEGE, UDIPI

The College re-opens for Senior classes on Monday June, 1956. Admissions to the Pre-University Course and the B Degree Course of the Madras University will commence as as the results of the Public and Intermediate University examinat are published. Copies of the Application Form and Prospectus available at the College Office. Limited seats in the College H for students who apply early.

The following subjects are offered for the Pre-University C

PART I: (i) English (ii) Kannada, Hindi or Sanskr

PART II: Optional subjects. (in prescribed combinat

Group A: Mathematics, Physical Sciences with Mathematics, Natural Science.

Group B: World History, Elements of Commerce, and Advanced English.

B. A. Degree Course.

Part I: English.

Part II: Kannada or Hindi.

Part III: Group iv b (Economics Main and History subsidiary)

H. Sunder R

PRINCIPAL.

(೫ನೇ ಪುಟದಿಂದ)

ಕಾರ್ಯಗಳಿಗಾಗಿ ಅಲ್ಪ ಸಂಖ್ಯಾಕರ ಭಾಷೆಗೆ ಮನ್ನಣೆ, ನೌಕರಿ ಸ್ಥಾನಗಳಿಗೆ ಉಮೇದ್ವಾರರನ್ನು ಆರಿಸುವಾಗ ನಿಷ್ಪಕ್ಷಪಾತತನ, ಈ ಆಯ್ಕೆಗಳಲ್ಲಿ ಅಲ್ಪಸಂಖ್ಯಾಕರ ಭಾಷೆಗೂ ಐಚ್ಛಿಕ ಭಾಷೆ ಎಂಬ ಸ್ಥಾನಮಾನ, ಇತರ ಎಲ್ಲ ಕ್ಷೇತ್ರಗಳಲ್ಲಿಯೂ ಅಲ್ಪಸಂಖ್ಯಾಕ ವರ್ಗಕ್ಕೆ ಉಳಿದವರೊಡನೆ ಸಮಾನ ಅಂತಸ್ತು -ಇತ್ಯಾದಿಗಳನ್ನು ಕಾಯ್ದುಕೊಂಡು ಹೋಗುವ ಆವಶ್ಯಕತೆ ಇದೆ ಎಂದು ಅಭಿಪ್ರಾಯಪಡಲಾಗಿದೆ. ಯಾವದೇ ಪರಿಸ್ಥಿತಿಯಲ್ಲಿಯೂ ಅಲ್ಪಸಂಖ್ಯಾಕರ ಮನಸ್ಸನ್ನು ನೋಯಿಸಬಾರದು; ಅಸಂತುಷ್ಟಿಗೆ ಎಡೆಕೊಡಬಾರದು; ಪ್ರತ್ಯೇಕತೆಯ ಭಾವನೆಗೆ ಅವಕಾಶ ನೀಡಕೂಡದು; ಭಾರತೀಯ ಪ್ರಜೆಗಳೆಂಬ ಗೌರವಾದರಗಳು ಇವರಿಗೂ ಸಲ್ಲಬೇಕು ಎಂಬುದೇ ಕಾಂಗ್ರೆಸು ಕೈಗೊಂಡಿರುವ ನಿಶ್ಚಯದ ಸಾರ.

ನಾಳೆಯ ಮುಂಬಯಿ ನಗರ

ಮೇಲಿನ ಗೊತ್ತುವಳಿಯ ಮೇಲೆ ಮಾತನಾಡುವ ಸಂದರ್ಭವನ್ನು ಪ್ರಧಾನ ಮಂತ್ರಿಗಳು ಭಾರತ ಸರಕಾರವು ಮುಂಬಯಿ ನಗರದ ವಿಷಯದಲ್ಲಿ ಕೈಗೊಂಡಿರುವ ನಿರ್ಧಾರದ ಸಮಂಜಸತೆಯನ್ನು ವ್ಯಕ್ತಪಡಿಸಲು ಉಪಯೋಗಿಸಿಕೊಂಡರು. ಮುಂಬಯಿಯು ಕನಿಷ್ಠ ಐದು ವರ್ಷಗಳ ವರೆಗಾದರೂ ಕೇಂದ್ರಾಧೀನ ಪ್ರದೇಶವಾಗಿಯೇ ಉಳಿಯುತ್ತದೆ: ಅನಂತರ ಯಾವುದಾದರೊಂದು ರೀತಿಯಿಂದ ಜನಾಭಿಪ್ರಾಯವನ್ನು ತಿಳಿದುಕೊಂಡು ಅದು ಮಹಾರಾಷ್ಟ್ರದೊಡನೆ ಸೇರುವ (ಅಥವಾ ಬಿಡುವ) ವಿಷಯದಲ್ಲಿ ತೀರ್ಮಾನ ಮಾಡಲಾಗುತ್ತದೆ. ಈಗ ಮುಂಬಯಿ ನಗರದ ವಿಷಯದಲ್ಲಿ ಜನರ ಭಾವನೆಯು ತೀರ ಉದ್ರಿಕ್ತವಾಗಿದೆ; ಮತ್ತು ಈ ಉದ್ರಿಕ್ತ ಪರಿಸ್ಥಿತಿಯಲ್ಲಿ ಕಟುವಾಗಿಯೇ ನಡೆದುಕೊಳ್ಳಬೇಕಾಗುತ್ತದೆ. ಮುಂಬಯಿ ನಗರದ ಜನರು ಶಾಂತತೆಯನ್ನು ಕೆಡಿಸಿಕೊಂಡುದರಿಂದ ಆ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸುವ ಅಥವಾ ಬಿಡುವ ವಿಷಯವನ್ನು ಮುಂದಕ್ಕೆ ಹಾಕಬೇಕಾಗಿ ಬಂದಿರುತ್ತದೆ ಎಂದು ಮುಂತಾಗಿ ನೆಹರು ಹೇಳಿದರು. ಮುಂಬಯಿ ನಗರ ಸಹಿತವಾದ ಗುಜರಾಥ ಮತ್ತು ಮಹಾರಾಷ್ಟ್ರ ರಾಜ್ಯಗಳಿಗೆ ಒಂದೇ ಹೈಕೋರ್ಟು ಇರುವುದೆಂದೂ ಸಾರ್ವಜನಿಕ ಸೇವಾ ಮಂಡಳ ಸಹ ಒಂದೇ ಇರುವುದು ಹಿತವೆಂದೂ ನೆಹರು ನುಡಿದರು. ಮಾನವೀಯ ದೃಷ್ಟಿಯಿಂದ ಮುಂಬಯಿ ನಗರದ ಜನರನ್ನು ನಡೆಸಿಕೊಳ್ಳಬೇಕಾಗಿದೆ: ಅಲ್ಲಿಯ ಔದ್ಯಮಿಕ ಹಾಗೂ ವಾಣಿಜ್ಯ ಚಟುವಟಿಕೆಗಳಿಗೆ ಆತಂಕ ಮಾಡಬಾರದಾಗಿದೆ. ಕೊಲಬಾ, ಠಾಣಾ ಇತ್ಯಾದಿ ಮಹಾರಾಷ್ಟ್ರ ಪ್ರದೇಶಗಳೊಡನೆ ಇರುವ ಅದರ ನೇರ ಸಂಬಂಧವನ್ನು ಸಹ ಮುಂಬಯಿಯನ್ನು ಕೇಂದ್ರಾಧೀನ ಪ್ರದೇಶವಾಗಿ ಉಳಿಯಗೊಡಿಸುವ ನಿರ್ಧಾರವು ಕೆಡಿಸದಿರಬೇಕಾಗಿದೆ. ಇವೆಲ್ಲದಕ್ಕೂ ಅನುಕೂಲವಾಗುವಂತೆ ಸರಕಾರವು ತಕ್ಕ ವ್ಯವಸ್ಥೆಯನ್ನು ಏರ್ಪಡಿಸುವುದು ಎಂದರು ನೆಹರು. ತಾತ್ಕಾಲಿಕವಾಗಿಯಾದರೂ ಮಹಾರಾಷ್ಟ್ರದ ರಾಜಧಾನಿಯನ್ನು ಮುಂಬಯಿಯಲ್ಲಿಡುವುದಕ್ಕೆ ಘಟನಾತ್ಮಕ ಹಾಗು ವ್ಯಾವಹಾರಿಕ ತೊಂದರೆಗಳಿವೆ ಎಂದು ನೆಹರು ಸ್ಪಷ್ಟಪಡಿಸಿದರು.

ಎರಡನೇ ಯೋಜನೆ

ಪ್ರಸ್ತುತ ಅಧಿವೇಶನವು ಎರಡನೇ ಯೋಜನೆಯ ಉದ್ದೇಶಗಳನ್ನು ಮೆಚ್ಚಿ, ಜನರು ಯೋಜನೆಯೊಡನೆ ಸಹಕರಿಸಬೇಕೆಂದು ಹೇಳುವ ಗೊತ್ತುವಳಿಯನ್ನು ಸ್ವೀಕರಿಸಿದೆ. ನೆಹರುಗಳು ಈ ಸಂದರ್ಭದಲ್ಲಿ ಮಾತನಾಡುತ್ತಾ ಆಹಾರವಸ್ತುಗಳ ಮತ್ತು ಬಟ್ಟೆಬರೆಗಳ ಬೆಲೆಗಳ ಮೇಲೆ ಸದಾ ಕಣ್ಣಿಟ್ಟು, ಅತಿ ಪ್ರಸರಣದ ಭಯವನ್ನು ದೂರಗೊಳಿಸುವ ಸಾಧ್ಯತೆಯನ್ನು ವಿವರಿಸಿದರು. ಈಗ ದೇಶಕ್ಕೆ ಇರುವ ಭಯವು ಅತಿ ಪ್ರಸರಣದ್ದಲ್ಲ; ಜನರು ಸಂಪು ಮತ್ತು ಮತಪ್ರದರ್ಶನಗಳಿಂದ ಉತ್ಪಾದಕ ಕಾರ್ಯಗಳಿಗೆ ಒಡ್ಡುತ್ತಿರುವ ಆತಂಕಗಳದೇ ನಮಗಿರಬೇಕಾದ ಹೆದರಿಕೆ ಎಂದರವರು. ಯೋಜನಾ ಕಾರ್ಯಗಳಿಗೆ ಅವಶ್ಯಕವಾದ ಸರಕುಗಳ ಪೂರೈಕೆಗೆ ವಿಘ್ನವನ್ನುಂಟುಮಾಡುವ ಕ್ರಮಗಳನ್ನು ಅವರು ಖಂಡಿಸಿದರು. ಅಧಿವೇಶನವು ಸಂಸ್ಥೆಯ ಸಂಘಟನೆಗೆ ಸಂಬಂಧಿಸಿದ ಕೆಲವು ನಿರ್ಣಯಗಳನ್ನೂ ಸ್ವೀಕರಿಸಿತು. ಇವುಗಳಲ್ಲಿ ಒಂದು, ಪುನರ್ಘಟಿತ ರಾಜ್ಯಗಳಲ್ಲಿ ಪ್ರತಿಯೊಂದಕ್ಕೆ ಒಂದರಂತೆ ಪ್ರದೇಶ ಕಾಂಗ್ರೆಸು ಸಮಿತಿಗಳೂ ಚುನಾವಣೆಗೆ ಉಮೇದ್ವಾರರನ್ನು ಆರಿಸುವ ಮಂಡಳಗಳೂ ಇರಬೇಕೆಂದು ಹೇಳುತ್ತದೆ. ಆಂಧ್ರ ಮತ್ತು ತೆಲಂಗಾಣದ ಮಟ್ಟಿಗೆ ಮಾತ್ರ ಪ್ರತ್ಯೇಕ ವ್ಯವಸ್ಥೆ ಇರುತ್ತದೆ. ಈ ಅಧಿವೇಶನದಲ್ಲಿ ನಡೆದ ವಿಶೇಷ ಘಟನೆಯೆಂದರೆ ಶ್ರೀ ವಿ. ಕೆ. ಕೃಷ್ಣ ಮೆನೊನ್ನರನ್ನು ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಆರಿಸಿದುದಾಗಿದೆ. ಜನರ ದೃಷ್ಟಿಯನ್ನು ಸೆಳೆದ ವಿಷಯವೆಂದರೆ, ಅಧಿವೇಶನ ರಂಗದಾಚೆ ಮುಂಬಯಿಯನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆನ್ನುವವರು ನಡೆಸಿದ ಮತಪ್ರದರ್ಶನ ಮತ್ತು ಗೊಂದಲ. ಇದನ್ನು ಹತೋಟಿಗೆ ತರಲಿಕ್ಕಾಗಿ ಪೋಲೀಸರು ಹಲವು ಸಲ ಗುಂಡು ಹಾರಿಸಿದರು. ಕೆಲವು ಸಾವು ನೋವುಗಳೂ ಆದವು. ಆದರೆ ಈಗ ಪರಿಸ್ಥಿತಿ ಶಾಂತವಾಗಿದೆ; ಚಿಂತೆಗೇನೂ ಕಾರಣವಿಲ್ಲ.

ಯಕ್ಷಗಾನಕ್ಕೊಂದು ಕಲಾಮಂದಿರ

ತಾ. 24-6-56ಕ್ಕೆ ವಿಚಾರ ವಿನಿಮಯ ಸಭೆ

ತಾ. ೨೭-೫-'೫೬ರಂದು ಮಂಗಳೂರು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಜರಗಿದ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮಂಡಲಿಯ ಪತ್ತನೆಯ ವಾರ್ಷಿಕೋತ್ಸವದ ಅಧ್ಯಕ್ಷ ಸ್ಥಾನವನ್ನು ವಹಿಸಿದ ಶ್ರೀ. ಎಚ್. ನರಸಿಂಹ, ಬಿ. ಎ., ಜಿಲ್ಲಾ ಸಮಾಜ ವಿಕಾಸ ಯೋಜನಾಧಿಕಾರಿ ಇವರು ತಮ್ಮ ಅಧ್ಯಕ್ಷ ಭಾಷಣದಲ್ಲಿ "ಯಕ್ಷಗಾನವು ನಮ್ಮ ಜಿಲ್ಲೆಯ ವಿಶಿಷ್ಟ ಕಲೆ; ನಮ್ಮ ಜಿಲ್ಲೆಗೆ ಮಂಗಳೂರು ಕೇಂದ್ರ ಸ್ಥಾನ; ಹೀಗಿರುತ್ತ ಮಂಗಳೂರಿನಲ್ಲಿ ಒಂದು ಯಕ್ಷಗಾನ ಕಲಾಮಂದಿರವು ಅತ್ಯಾವಶ್ಯಕ" ಎಂಬುದಾಗಿ ಸ್ಪಷ್ಟೀಕರಿಸಿದರು. ಆ ದಿವಸದ ಯಕ್ಷಗಾನ ಸಮಾರಂಭದಲ್ಲಿ ನನ್ನ ಮಿತ್ರರುಗಳಾದ ಶ್ರೀ. ಕೋಟಿಕುಂಜ ಮಹಾಬಲ ನೋಂಡರು, ಯರಿಕ್ಕಳ ಈಶ್ವರಪ್ಪಯ್ಯನವರು, ಎಮ್. ಆರ್. ಶಾಸ್ತ್ರಿಗಳು, ಎಂ. ಎ. ಹರಿದಾಸ್, ಶೇಣಿ ಗೋಪಾಲಕೃಷ್ಣ ಭಟ್ಟರು, ಗೋಪಾಲಕೃಷ್ಣ ಸಂಘದ ಒಬ್ಬರು ಸದಸ್ಯರು ಮತ್ತು ನಾನು ಭಾಗವಹಿಸಿದ್ದೆವು. ಯಕ್ಷಗಾನಕ್ಕೆ ಸಂಬಂಧಿಸಿದ ಎಲ್ಲರ ಅನುಮತಿ ಮೇರೆಗೆ ಸ್ತುತ್ಯ ಕಾರ್ಯವನ್ನು ಮಹಾಜನ[…] ಸಹಾಯ ಪ್ರೋತ್ಸಾಹಿಸಲು ದೊರೆ[…] ವದಾದರೆ ಕೈಕೊಳ್ಳಲು ನಾವು (ಅಂ[…] ಯಕ್ಷಗಾನ ಕಲಾವಿದರ ಪರವಾ[…] ನಾನು ಆಡಿದ ಮಾತು, ಸಿದ್ಧರಿದ್ದೇವೆಂ[…] ಸಭೆಯ ಮುಂದೆ ಹೇಳಿರುವೆನು. ಆ[…] ಯುಕ್ತ ಈ ಸಲಹೆಯನ್ನು ವಿಚಾರಿಸು[…] ಬಗ್ಗೆ ಮತ್ತು ಸಾಧ್ಯವೆಂದಾದರೆ ಕಾಯ[…] ಕ್ರಮವನ್ನು ಕೈಕೊಳ್ಳುವ ವಿಧಾನವ[…] ಆಲೋಚಿಸಲು ಮಹಾಜನರ ಮತ[…] ಯಕ್ಷಗಾನ ಕಲಾವಿದರ ಅಭಿಪ್ರಾಯ[…]ನ್ನು ತಿಳಿಯುವ ಸಲುವಾಗಿ ಇದೇ ತಾ[…] 24—6—56 ಆದಿತ್ಯವಾರ ಸಂಜೆ ಗಂ[…] ೫ಕ್ಕೆ ಮಂಗಳೂರು ಶ್ರೀ ಮಹಾ ಗಣ[…] ದೇವಸ್ಥಾನದಲ್ಲಿ ಸಭೆ ಸೇರುವುದಾಗಿ ನಿ[…]ಯಿಸಿರುವುದರಿಂದ ಜಿಲ್ಲೆಯ ಎಲ್ಲಾ [ಯ]ಕ್ಷಗಾನ ಕಲಾವಿದರೂ ಮಹಾ ಜನ[…] ಅಂದು ತಮ್ಮ ಸಲಹೆಗಳನ್ನೂ ಸಹಾ[ನು]ಭೂತಿಯನ್ನೂ ತೋರಿಸಬೇಕಾಗಿ ಪ[್ರಾ]ರ್ಥಿಸುತ್ತೇನೆ.

ಕೆ ಬಾಲಕೃಷ್ಣ ರಾವ್, ಎಡ್ವೊಕೇ[ಟ್]
(ಯಕ್ಷಗಾನ ಕಲಾವಿದರ ಪರವಾಗಿ)

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚು ಇಲ್ಲದೆ (ನವಯುಗದ ಖಾತೆಗೆ) ಜಮೆ ಮಾಡಬಹುದು.

ಮೆನೇಜರ್.
ನವಯುಗ, ಉಡುಪಿ.



ಅಚ್ಚಿನಲ್ಲಿದೆ .... ಅಚ್ಚಿನಲ್ಲಿದೆ

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ.
ಅವರ

ವೈಜ್ಞಾನಿಕ ಗ್ರಂಥ

ಹಿರೋಶಿಮಾದಿಂದ ಜಿನೀವ

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ ಅಣುಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಶ್ರೀ ಶಿವರಾಮ ಕಾರಂತರ ಮುನ್ನುಡಿ

ನಿರೀಕ್ಷಿಸಿರಿ! ನಿರೀಕ್ಷಿಸಿರಿ!

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂಭಾಷಣೆಯಲ್ಲೆಲ್ಲ ಪ್ರತಿಯೊಂದು ದೃಶ್ಯದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ..........ಶೈಲಿಯು ಚಲೋದಿದೆ"
—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0—4—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕಿನ್ನಿಗೋಳಿ— ರೆ| ಫಾ| ಬಿ. ಎ. ಡಿ'ಸೋಜ, ಹೆಡ್‌ಮಾಸ್ತರ್, ಪೊಂಪೀ ಹ್ಯಾಸ್ಕೂಲ್, ಇವರ ಅಧ್ಯಕ್ಷತೆಯಲ್ಲಿ ಕಳೆದ ತಾ. ೩೧ರಂದು ಸ್ಥಳೀಯ ಲಿಟ್ಲ್ ಫ್ಲವರ್ ಹ್ಯಾಸ್ಕೂಲ್ ಕಾನ್ವೆಂಟಿನ ಬೆಳ್ಳಿ ಹಬ್ಬ ಸಮಾರಂಭವು ವಿಜೃಂಭಣೆಯಿಂದ ಜರಗಿತು. ವಿವಿಧ ವಿನೋದಾವಳಿಗಳು ಯಶಸ್ವಿಯಾಗಿ ಜರಗಿತು.

ಕುಂಬಳೆ— ಸ್ಥಳೀಯ ಬೋ. ಹಾ. ಎ. ಶಾಲೆಯಲ್ಲಿ ಇದೇ ತಾ. ೧ರಂದು ಮಂಜೇಶ್ವರ ಬ್ಲೋಕ್ ಸಲಹಾ ಸಮಿತಿಯ ಸಭೆಯು ಶ್ರೀ ಟಿ. ವಿ. ಪಿ. ಕುರುಪ್, ಆರ್. ಡಿ. ಓ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಎಂ. ಪಿ. ಕೃಷ್ಣನ್ ನಾಯರ್, ತಹಶೀಲ್ದಾರ್, ರವರು ಪ್ರಗತಿಯ ವಿವರವಾದ ವರದಿಯನ್ನೋದಿದರು. ಸಭೆಯಲ್ಲಿ ಚರ್ಚೆಯು ನಡೆಯಿತು. ಬರುವ ಸಭೆಯು ಇದೇ ಜುಲೈ ತಿಂಗಳಲ್ಲಿ ಪೈವಳಿಕೆಯಲ್ಲಿ ಜರಗಿಸಲಾಗುವುದೆಂದು ತಿಳಿದು ಬರುತ್ತದೆ.

ದೇರ್ಳಕಟ್ಟೆ— ಡಾ. ಬಾಲಕೃಷ್ಣ ಮುದ್ದ ತಲ್ಲಂಗಡಿ ಇವರ ಇಂಗ್ಲಿಷ್-ಆಯುರ್ವೇದ ಆಸ್ಪತ್ರೆಯ ನವೀನ ಕಟ್ಟಡದ ಉದ್ಘಾಟನೆಯನ್ನು ಸಿಟಿಲ ಕರ್ನಾಟಕ ಆಯುರ್ವೇದ ಮಂಡಲದ ಅಧ್ಯಕ್ಷರಾದ ಡಾ. ಗೋಪಾಲ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ವೈದ್ಯಗುರು ಡಾ ಎಮ್. ಆರ್ ಭಟ್ಟರು ತಾ. 27-5 56 ರಲ್ಲಿ ನೆರವೇರಿಸಿದರು.

ಕಡೆಶಿವಾಲ್ಯ— ತಾ. 29 – 5 — 56 ರಂದು ಸ. ವಿ. ಯೋಜನೆಯ ನೆರವಿನಿಂದ ರಚಿಸಲಾದ ಆಮ್ಟೆ ರಸ್ತೆ, ದೇವಸ್ಥಾನದ ರಸ್ತೆ, ಮಕ್ಕಳ ಶಿಶುವಿಹಾರ ಕೇಂದ್ರಗಳನ್ನು ಶ್ರೀ ಸರಪಾಡಿ ಸರ್ಪಪ್ಪಯ್ಯ ಎಮ್. ಎಲ್. ಸಿ. ಇವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಲೆಕ್ಟರ್ ಎಂ. ಜಿ. ರಾಜಾರಾಮ್ ಐ. ಎ. ಯಸ್. ಇವರು ಉದ್ಘಾಟಿಸಿದರು. ವರದಿಯನ್ನು ಶ್ರೀ ಭುಜಂಗ ಸೆಟ್ಟರು ಓದಿದರು. ಶ್ರೀ ಕೆ. ಆರ್. ಆಚಾರ್, ಪ್ರೊಜೆಕ್ಟ್ ಆಫೀಸರ್ ಶ್ರೀ ಎಚ್. ನರಸಿಂಹ, ವಿಶಲಾಕ್ಷಿ ರೈ, ಡಿ. ಬಿ. ಮೆಂಬರ್, ಉಪ್ಪಣ್ಣ ನ್ಯಾಕರು, ಪಿ. ಶ್ರೀನಿವಾಸ ರಾವ್ ಮೊದಲಾದವರು ಹಿತವಚನ ನುಡಿದರು. ಆ ಬಳಿಕ ಯುವಕ ಸಂಘಕ್ಕೆ ಬೇಟೆಯಿತ್ತು, ಲಘು ಉಪಹಾರ ಛಾಯಾಚಿತ್ರ ಮೊದಲಾದ ವಿವಿಧವಿನೋದಾವಳಿಗಳೊಂದಿಗೆ ಸಮಾರಂಭವು ಅಂತ್ಯವಾಯಿತು.

ಸುರತ್ಕಲ್— ಕುಲಾಲ ಪರಸ್ಪರ ಸಹಾಯಕಸಭೆಯ ವಾರ್ಷಿಕಾಧಿವೇಶನವು ಮೇ ದಿನಾಂಕ ೨೭ರಂದು ಪಂಚಾಯತಬೋರ್ಡ್ ಪ್ರಾಥಮಿಕ ಶಾಲಾ ಮಂದಿರದಲ್ಲಿ ದ. ಕ. ಜಿಲ್ಲಾಬೋರ್ಡ್ ಉಪಾಧ್ಯಕ್ಷರೂ, ದ. ಕ. ಬಿಲ್ಲವ ಯೂನಿಯನ್ ಅಧ್ಯಕ್ಷರೂ ಆದ ಶ್ರೀ ಪಿ ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಸಂಭ್ರಮದಿಂದ ಜರಗಿತು ಶ್ರೀ ಕೃಷ್ಣ ಎನ್. ಬಂಗೇರರಿಂದ ಸ್ವಾಗತಭಾಷಣ, ಶ್ರೀ ಬೋಳಯ್ಯ ಶೆಟ್ಟರಿಂದ ಸಭಾಧಿಪರ ಪರಿಚಯ ಭಾಷಣ ಹಾಗೂ ಶ್ರೀ ಎಸ್. ಬಾಬು ಬಂಗೇರರಿಂದ ಅಧ್ಯಕ್ಷರಿಗೆ ಪುಷ್ಪಹಾರಾರ್ಪಣಗಳಾದ ಬಳಿಕ ವರದಿವಾಚನ ಪಾರಿತೋಷವಿತರಣೆಗಳಾದುವು.

ಸಭಿಕರಲ್ಲಿ ಶ್ರೀಗಳಾದ ಎಸ್. ಆರ್. ಹೆಬ್ಬಾರ್, ಸಹಕಾರಿ ಎಡ್ಮಿನಿಸ್ಟ್ರೇಟಿವ್ ಇನ್ಸ್‌ಪೆಕ್ಟರ್ ಕಾಂತಪ್ಪ, ಸುರತ್ಕಲ್ ಪಟೇಲ ಉಪೇಂದ್ರ ಕಾಮತ್, ಬೋಳಯ್ಯ ಸೆಟ್ಟಿ, ಬಾಳ ಶೀನ ಶೆಟ್ಟಿ ವಗೈರೆರು ಸಂಸ್ಥೆಯ ಕಾರ್ಯಕಲಾಪಗಳನ್ನು ಪ್ರಶಂಸಿಸಿ, ಸಂದರ್ಭೋಚಿತ ಹಿತಸೂಚನೆಗಳ ಸುರಸ ಭಾಷಣಗಳನ್ನಿತ್ತರು. ಕೊನೆಗೆ ಅಧ್ಯಕ್ಷರು ತನ್ನ ಭಾಷಣದಲ್ಲಿ ಕುಲಾಲ ಸಮಾಜೋನ್ನತಿಗಾಗಿ ದುಡಿಯುತ್ತಿರುವೀಸಭೆಯು ರಾತ್ರಿ ಶಾಲಾ, ವಾಚನಾಲಯ, ಪುಸ್ತಕಾಲಯ, ಭಜನಾಮಂಡಳಿಗಳ ಮೂಲಕ ಸಾರ್ವಜನಿಕರ ಪ್ರೇಮಾಭಿಮಾನಗಳನ್ನು ಗಳಿಸಿಕೊಳ್ಳಲು ಪ್ರಯತ್ನಿಸುವುದಕ್ಕಾಗಿ ಮೆಚ್ಚುಗೆಯನ್ನು ವ್ಯಕ್ತಪಡಿಸಿ, ಈ ಸಂಸ್ಥೆಯ ಘನಕಾಂಕ್ಷೆಯಾದ ಸ್ವತಂತ್ರ ಕಟ್ಟಡ ನಿರ್ಮಾಣಕಾರ್ಯವು ತ್ವರ್ಯದಲ್ಲೇ ಕೈಗೂಡುವಂತೆ ಸಾರ್ವಜನಿಕರು ಸ್ವಪರಹಸ್ತಗಳಿಂದ ಸಹಾಯ ಸಹಕಾರಗಳನ್ನೀವುದು ಮುಖ್ಯಕರ್ತವ್ಯವೆಂಬಿತ್ಯಾದಿ ನುಡಿದು, ರೂ. 101/-ರ ಚೆಕ್ಕನ್ನು ಉದಾರ ದಾನವಾಗಿತ್ತು ಸಭಾನಂದ ಗೊಳಿಸಿದರು.

ಆ ಮೇಲೆ ರಾತ್ರಿ ಶಾಲಾ ವಿದ್ಯಾರ್ಥಿಗಳಿಂದ "ಸತ್ಯ ಹರಿಶ್ಚಂದ್ರ" ನಾಟಕವೂ. "ಕನ್ನಿಗ ಸಾವಿತ್ರಿ ಎಂಬ ತುಳು ಪ್ರಹಸನವೂ ಅಭಿನಯಿಸಲಾಗಿ, ನಾಟಕದಲ್ಲಿ ಉತ್ತಮವಾಗಿ ನಟಿಸಿದ್ದ ಭುಜಂಗ ಶೆಟ್ಟಿ (ವಿಶ್ವಾಮಿತ್ರ), ದತ್ತಾತ್ರಯ (ತಾರಾಮತಿ), ಆಲಿಯಬ್ಬ (ಡಂಗುರ), ಪ್ರಸನ್ನದಲ್ಲಿ, ರಾಮಣ್ಣ (ಕನ್ನಿಗ ಸಾವಿತ್ರಿ), ಎಂಬೀ ನಾಲ್ವರಿಗೆ ಬಹುಮಾನ ಪಂಚೋಣ ಹಾಗೂ ಶ್ರೀ ಕೃಷ್ಣ ಎನ್. ಬಂಗೇರರಿಂದ ಧನ್ಯವಾದಾರ್ಪಣೆಯೊಂದಿಗೆ ರಾತ್ರಿ ಗಂಟೆ 10ಕ್ಕೆ ಅಧಿವೇಶನವು ಮುಕ್ತಾಯಗೊಂಡಿತು.

ಕಾರ್ಕಡ— ಕಳೆದ ತಾ. ೨೯ರಂದು ಸ್ಥಳೀಯ ಬೋ. ಎ. ಶಾಲೆಯ ಹಳೆವಿದ್ಯಾರ್ಥಿ ಸಂಘದ ದಿನಾಚರಣೆಯು ಜಿ. ಬೋ. ಅಧ್ಯಕ್ಷರಾದ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷರಾದ ಶ್ರೀ ಬಿ. ವಿ. ಐತಾಳರು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ರಾಮಚಂದ್ರ ಕಾರಂತರು ವರದಿಯನ್ನೊಪ್ಪಿಸಿದರು. ಶ್ರೀ ಎ. ಜಿ. ಅಲ್ಸೆಯವರು 'ಯೋಜನೆ ಮತ್ತು ಜನಾಂಗ' ಎಂಬ ವಿಷಯದ ಕುರಿತೂ, ಶ್ರೀಗಳಾದ ಎಂ. ಎಂ. ಹೆಗ್ಡೆ ಮತ್ತು ಎನ್. ಎಸ್. ಪರಮೇಶ್ವರಯ್ಯನವರು ಹಳೆವಿದ್ಯಾರ್ಥಿಗಳ ಕರ್ತವ್ಯದ ಕುರಿತೂ ಭಾಷಣವಿತ್ತರು. ಶಾಲೆಯ ಕೆಲವೊಂದು ಅಭಿವೃದ್ಧಿಯನ್ನು ಕೋರುವ ಮನವಿಯೊಂದು ಸಂಘದ ಉಪಾಧ್ಯಕ್ಷರಿಂದ ಜಿ. ಬೋ. ಅಧ್ಯಕ್ಷರಿಗೆ ಅರ್ಪಿಸಲ್ಪಟ್ಟಿತು. ಅಧ್ಯಕ್ಷರು ಕೋರಿಕೆಗಳನ್ನು ಪರಿಶೀಲಿಸಿ ಸಾಧ್ಯವಾದುದನ್ನು ಬೇಗನೆ ಮಾಡುವುದಾಗಿ ತಮ್ಮ ಭಾಷಣದಲ್ಲಿ ಹೇಳಿದರು. ಜನಾರ್ಧನ ಮಧ್ಯಸ್ಥರು ಧನ್ಯವಾದಗಳನ್ನರ್ಪಿಸಿದರು. ವಿವಿಧ ವಿನೋದಾವಳಿಗಳು ಜರಗಿದುವು.

ಸೂಡ— ಶ್ರೀ ಟಿ. ಎ. ಪೈ, ಎಂ. ಎಲ್. ಎ ಇವರ ಅಧ್ಯಕ್ಷತೆಯಲ್ಲಿ ದಿನಾಂಕ ೩ರಂದು ಸ್ಥಳೀಯ ಬೋ. ಎ. ಶಾಲೆಯ ವರ್ಧಂತಿಯುತ್ಸವವು ಜರಗಿತು. ಶ್ರೀಗಳಾದ ಎಸ್. ಜಯರಾಮರಿಂದ ಪರಿಚಯ ಭಾಷಣ, ಎಸ್. ಮುದ್ದಣ್ಣ ಹೆಗ್ಡೆಯವರಿಂದ ಮಾನಪತ್ರ ಸಮರ್ಪಣೆಗಳಾದ ಬಳಿಕ, ವರದಿವಾಚನ, ಬಹುಮಾನ ವಿತರಣೆ, ಭಾಷಣಗಳಾದುವು. ಅಧ್ಯಕ್ಷರ ಭಾಷಣಾನಂತರ, ಶಾಲೆಯ ಹೆಡ್ಮಾಸ್ತರರಾದ ಶ್ರೀ ಕೆ. ತ್ಯಾಂಪಣ್ಣ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು. ವಿವಿಧವಿನೋದಾವಳಿ, ಸ್ಪರ್ಧೆಗಳು ಯಶಸ್ವಿಯಾಗಿ ಜರಗಿದುವು.

ಕಡಂದಲೆ— 26-5-1956ರಲ್ಲು ಬೋ. ಹಾ. ಎ. ಶಾಲಾ ವಾರ್ಷಿಕೋತ್ಸವವು ಜಿಲ್ಲಾ ಬೋರ್ಡ್ ಅಧ್ಯಕ್ಷರಾದ ಡಾ. ಕೆ. ಕೆ. ಹೆಗ್ಗಡೆಯವರ ಮತ್ತು ಜಿಲ್ಲಾ ಬೋರ್ಡ್ ಸದಸ್ಯರಾದ ಎಸ್. ಡಿ. ಸಾಮ್ರಾಜ್ಯರವರುಗಳ ಅಧ್ಯಕ್ಷತೆಯಲ್ಲಿ ಜರಗಿತು. ಧ್ವಜ ವಂದನೆ, ವಿದ್ಯಾರ್ಥಿ ಮತ್ತು ಹಳೆ ವಿದ್ಯಾರ್ಥಿಗಳ ಪಂದ್ಯಾಟ, ಛದ್ಮವೇಶ ಮುಂತಾದುವು ನಡೆದ ಬಳಿಕ —ಶ್ರೀ ದೇವಣ್ಣ ಶ್ಯಾನುಭೋಗರಿಂದ ಮಕ್ಕಳಿಗೆ ತಿಂಡಿಯನ್ನು ಹಂಚಲಾಯಿತು. ಸಾಯಂಕಾಲ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ನಾರಾಯಣ ಶೆಟ್ರಿಂದ ಶಾಲಾ ವರದಿ ವಾಚನವಾದ ನಂತರ, ಸಭಿಕರಲ್ಲಿ ಮೂಡಬಿದಿ, ಸಮಾಜ ಶಿಕ್ಷಣ ಸಂಘಟಕರಾದ ಶ್ರೀ ದಯಾನಂದ ರಾಯರ ಭಾಷಣವಾಯಿತು ಡಾ. ಕೆ. ಕೆ. ಹೆಗ್ಗಡೆಯವರು ಶಾಲಾ ಹಿತವನ್ನು ಕೋರಿ, ಶಾಲೆಗೆ ಒದಗಿದ ಶಿಕ್ಷಕರ ಅಭಾವವನ್ನು ಹೋಗಲಾಡಿಸುವೆನಾಗಿ ಭರವಸೆಯುಕ್ತವಾದ ಕೆಲವು ಅಮೂಲ್ಯ ಸೂಚನೆಯನ್ನು ಕೊಟ್ಟರು ಮತ್ತು ಶ್ರೀ ಎಸ್. ಡಿ ಸಾಮ್ರಾಜ್ಯರವರು ಗ್ರಾಮಕ್ಕೂ ಶಾಲೆಗೂ ಹಿತವನ್ನು ಬಯಸಿದರು ವಿವಿಧ ವಿನೋದಾವಳಿಗಳು ಪ್ರೇಕ್ಷಣೀಯವಾಗಿ ನಡೆದವು

ಕಾರ್ಕಳ— ದಿನಾಂಕ ೧ರಂದು ಶ್ರೀ ಕೆ. ಪಾಂಡುರಂಗ ನಾಯಕರ ಅಧ್ಯಕ್ಷತೆಯಲ್ಲಿ, ಸ್ಥಳೀಯ ಸರಸ್ವತಿ ಸಂಗೀತ ಶಾಲೆಯ ಶ್ರೀ ಕೆ. ಕೆ. ವ್ಯಾಸಕೃಷ್ಣರು, ದ. ಕ. ನಾಟ್ಯ ಕಲೋತ್ಸವಸಮಿತಿಯ ಆಶ್ರಯದಲ್ಲಿ ಜರಗಿದ ಸ್ಪರ್ಧೆಯಲ್ಲಿ, ಸಂಗೀತದಲ್ಲಿ ಪ್ರಶಸ್ತಿ ಮತ್ತು ಬಹುಮಾನಗಳಿಸಿದುದಕ್ಕೆ ಅಭಿನಂದಿಸುವ ಸಭೆಯೊಂದು ಜರಗಿತು. ಶ್ರೀ ಕೆ. ಶ್ರೀನಿವಾಸ ಹೆಬ್ಬಾರರ ಪರಿಚಯ ಭಾಷಣಾನಂತರ ಶ್ರೀಗಳಾದ ಎಸ್. ಆರ್. ಆಚಾರ್, ಕೆ. ವಿ. ಎಸ್. ಉಪಾಧ್ಯಾಯ, ಡಿ. ವೆಂಕಟೇಶ ಭಟ್, ಎಂ. ಗೋವಿಂದ ರಾವ್ ಮತ್ತು ಡಾ| ಎಂ. ಜಿ ಆರ್. ಸಂಪಿಗೆತ್ತಾಯರವರು ಭಾಷಣವಿತ್ತರು. ಅಧ್ಯಕ್ಷರ ಭಾಷಣ, ಲಘೂಪಹಾರಗಳಾದ ಬಳಿಕ ಶ್ರೀ ಕೆ. ಶ್ರೀನಿವಾಸ ರೆಡ್ಡಿಯವರು ಧನ್ಯವಾದಗಳನ್ನರ್ಪಿಸಿದರು.

ಪೆರಾಜೆ— ಕಳೆದ ತಾ. 27ರಂದು, ಸ್ಥಳೀಯ ಪ್ರಾಥಮಿಕ ಶಾಲಾ ನೂತನ ಭವನದ ಉದ್ಘಾಟನೆಯು ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರಿಂದ ಜರಗಿತು. ಮಂಗಳೂರು ನಗರಸಭಾಪತಿಗಳಾದ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಅಧ್ಯಕ್ಷತೆವಹಿಸಿದ್ದರು. ನೇರಳಕಟ್ಟೆ ವಿವಿಧೋದ್ದೇಶ ಸಹಕಾರಿ ಸಂಘವು ಸ್ಥಳೀಯಾಭಿವೃದ್ಧಿ ಯೋಜನೆ ಮೇರೆಗೆ ಈ ಕಟ್ಟಡವನ್ನು ನಿರ್ಮಿಸಿತ್ತು. ಸಂಘದ ಕಾರ್ಯದರ್ಶಿಗಳಾದ ಶ್ರೀ ಪಿ. ಶ್ರೀನಿವಾಸರು ಸ್ವಾಗತಿಸಿದರು. ಉಚಿತವಾಗಿ ಬಂದ ಡಿ. ಕೃಷ್ಣರಾಯರ ಮತ್ತು ಮ. ಗಾಂಧೀಜಿಯವರ ಭಾವಚಿತ್ರಗಳು ಅಧ್ಯಕ್ಷರಿಂದ ಮತ್ತು ಪುತ್ತೂರಿನ ಆರ್. ಡಿ. ಓ ರಾದ ಶ್ರೀ ಟಿ. ವಿ. ಪಿ. ಕುರುಪರಿಂದ ಅನಾವರಣ ಗೈಲ್ಪಟ್ಟಿತು, ಉದ್ಘಾಟನಾ ಭಾಷಣ, ಅಧ್ಯಕ್ಷ ಭಾಷಣಗಳೊಡನೆ ಸಭೆಯು ಮುಕ್ತಾಯಗೊಂಡಿತು.

ಕೊಕ್ಕರ್ಣೆ— ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. ೩೩ರಂದು ಸ್ಥಳೀಯ ಬೊ. ಹಾ. ಎ. ಶಾಲೆಯ ವರ್ಧಂತಿಯುತ್ಸವವು ಜರಗಿತು. ಶ್ರೀಗಳಾದ ಕೆ. ರಾಜೀವ ಶೆಟ್ಟರಿಂದ ಸ್ವಸ್ತಿ ವಾಚನವೂ, ಕೊನೆಗೆ ಎ. ಹಿರಿಯಣ್ಣ ಶೆಟ್ಟರಿಂದ ಧನ್ಯವಾದ ಸಮರ್ಪಣೆಯೂ ನಡೆಯಿತು ಮನರಂಜನಾ ಕಾರ್ಯಕ್ರಮಗಳೊಂದಿಗೆ ಉತ್ಸವವು ಯಶಸ್ವಿಯಾಗಿ ಕೊನೆಗೊಂಡಿತು.

ಪುತ್ತೂರು— ತಾಲೂಕು ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯೊಂದು ಇತ್ತೀಚಿಗೆ ಇಲ್ಲಿ ಜರಗಿತು ಸಭೆಯು ಮದ್ರಾಸ್ ಸರಕಾರದ ವಿದ್ಯಾಶ್ವೇತ ಪತ್ರದ ಕುರಿತು ಚರ್ಚೆ ನಡೆಸಿ ಕೆಲವು ಸೂಚನೆಗಳನ್ನು ಸರಕಾರಕ್ಕೆ ಕಳುಹಿಸಲು ನಿಶ್ಚೈಸಿತು, ಸೂಚನೆಗಳು ಕಡ್ಡಾಯ ಶಿಕ್ಷಣ, ಅಧ್ಯಾಪಕರ ಸಂಬಳ, ಹಿಂದಿ-ಇಂಗ್ಲೀಷ್ ಶಿಕ್ಷಣ, ಇ. ಎಸ್. ಎಲ್. ಸಿ. ಪರೀಕ್ಷೆ ಇವೇ ಮೊದಲಾದುವುಗಳ ಕುರಿತಾಗಿತ್ತು.

PT. AMBLAY RAMASWAMIER'S 98 Yrs. Renowned, Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHER-HOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 25 Pills for 1 month Rs. 7—8—0.

THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತವೆ!!

P. DEVEE & Co. (N. J.) CALCUTTA–40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಮಂತ್ರಿಗಳ ಆಗಮನ

ಕಳೆದ ೩೦. ೩ರಂದು ಕೇಂದ್ರದ ವಿದೇಶಾಂಗ ಮಂತ್ರಿಗಳಾದ ಡಾ. ಸಯ್ಯದ್ ಮಹಮೂದರು ಇಲ್ಲಿಗೆ ಆಗಮಿಸಿದ್ದರು.

ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ನಗರ ಸಭೆಗೆ ಆಗಮಿಸಿದ ಮಂತ್ರಿಗಳನ್ನು ಸ್ವಾಗತಿಸುತ್ತಾ, ಜಿಲ್ಲೆಯ ಕೆಲವು ಕೋರಿಕೆಗಳನ್ನು ಮಂತ್ರಿಗಳ ಮುಂದಿಟ್ಟರು. ಮಂತ್ರಿಗಳು ಉತ್ತರ ಕೊಡುತ್ತಾ — ನಾವೆಲ್ಲ ಕಷ್ಟಪಟ್ಟು ದುಡಿಯಬೇಕೆಂದು ಸೂಚಿಸಿದರಲ್ಲದೆ, ಮಂಗಳೂರಿಗೆ ಭಾಷಣ ತೋರಿದರು.

ಮುಂದೆ ಮಂತ್ರಿಗಳು ಸ್ಥಳೀಯ ಅಜಿಜುದ್ದೀನ್ ರಸ್ತೆಯ ಮುನ್ಸಿಪಲ್ ಶಾಲೆಯಲ್ಲಿ ಮುಸ್ಲಿಂ ಬ್ರದರ್‌ಹುಡ್ಡಿನ ಆಶ್ರಯದಲ್ಲಿ ಜರಗಿದ ಒಂದು ಸಾರ್ವಜನಿಕ ಸಭೆಯಲ್ಲಿ ಭಾಗವಹಿಸಿದರು.

ಆರಂಭದಲ್ಲಿ ನಗರಸಭಾ ಸದಸ್ಯರಾದ ಶ್ರೀ ಹುಸೈನ್ ಎಂ ಝಿಯಾರವರು ಮಂತ್ರಿಗಳಿಗೆ ಹಾರವನ್ನರ್ಪಿಸಿದರು. ಶ್ರೀ ಮಹಮ್ಮದ್ ಕಮಾಲರು ಬ್ರದರ್‌ಹುಡ್ಡಿನ ಪರವಾಗಿ ಮಾನಪತ್ರವನ್ನರ್ಪಿಸಿದರು. ಡಾ. ಮಹಮೂದರು ತಮ್ಮ ಭಾಷಣದಲ್ಲಿ, ಜಾತ್ಯಾತೀತ ಘೋಷಣೆಯೆಂದರೇನೆಂದು ವಿವರವಾಗಿ ತಿಳಿಸಿದರಲ್ಲದೆ, ಭಾರತದಲ್ಲಿ ಮುಸ್ಲಿಮರಿಗೆ ಸಮಾನವಾದ ಅವಕಾಶವಿದೆ ಎಂದರು. ಬ್ರಿಟಿಷರು ಹಿಂದು-ಮುಸ್ಲಿಮರೊಳಗೆ ಭೇದವನ್ನು ಕಲ್ಪಿಸಿದರೆಂದೂ, ಪಾಕಿಸ್ಥಾನದ ಸ್ಥಿತಿ ಈಗ ಬಹಳ ಶೋಚನೀಯವಾಗಿದೆಯೆಂದೂ ಅವರು ನುಡಿದರು. ಮುಸ್ಲಿಂ ಲೀಗಿನ ಹಳೆಯ ಧೋರಣೆಯನ್ನು ಇನ್ನು ಅನುಸರಿಸಬಾರದು. ಪಾಕಿಸ್ಥಾನವು ಭಾರತದ ವಿಭಜನೆಯ ನಂತರ, ಭಾರತದಲ್ಲೇ ಉಳಿದ ಮುಸ್ಲಿಮರನ್ನು ಲೆಕ್ಕದಿಂದ ತೆಗೆದುಹಾಕಿದೆ. ಆದುದರಿಂದ ನಾವು ಇಲ್ಲಿನ ಸರಕಾರ, ಜನತೆಯೊಂದಿಗೆ ಸಹಕಾರದಿಂದ ಮುನ್ನಡೆಯಬೇಕು ಎಂದು ಸೂಚಿಸಿದರು. ಬ್ರದರ್‌ಹುಡ್ಡಿಗೆ ಹಿತವಚನಗಳನ್ನು ಹೇಳುತ್ತಾ ಮಾನ್ಯ ಮಂತ್ರಿಗಳು ಬ್ರದರ್ ಹುಡ್ ಸಾಮಾಜಿಕ ಕಾರ್ಯಗಳಲ್ಲಿ ಪ್ರವೇಶಿಸಬೇಕೆಂದೂ, ಆರ್ಥಿಕಾಭಿವೃದ್ಧಿಗಾಗಿ ಹೆಣಗಿ, ಬಡವರ ಉದ್ಧಾರಕ್ಕಾಗಿ ಹೋರಾಡಬೇಕೆಂದು ಕೇಳಿಕೊಂಡರು. ಶ್ರೀ ಮಹಮ್ಮದ್ ಕಮಾಲರ ವಂದನಾರ್ಪಣೆಯೊಡನೆ ಸಭೆಯು ಕೊನೆಗೊಂಡಿತು.

ಬಳಿಕ ಮಂತ್ರಿಗಳು ಕಾಂಗ್ರೆಸ್ ಕಚೇರಿಗೆ ಭೇಟಿಯಿತ್ತರು. ಶ್ರೀ ಕೆ. ಆರ್. ಆಚಾರ್ ರವರು ಮಂತ್ರಿಗಳನ್ನು ಸ್ವಾಗತಿಸಿದರು. ಮಂತ್ರಿಗಳು ಮಾತನಾಡುತ್ತಾ ಮತ, ಜಾತಿ ಮೊದಲಾದ ಸಂಕುಚಿತ ಭಾವನೆಗಳನ್ನು ತೊರೆದು ಕಾಂಗ್ರೆಸಿಗರು ಒಗ್ಗಟ್ಟಿನಿಂದ ದುಡಿಯಬೇಕು ಎಂದು ತಿಳಿಸಿದರು. ಶ್ರೀ ಎಫ್. ಎಕ್ಸ್. ಡಿ. ಪಿಂಟೊ ಅಭಿನಂದಿಸಿದರು.

ಬೆಳಗಿನ ರೈಲಿನಲ್ಲಿ ಬಂದ ಮಂತ್ರಿಗಳು, ಅದೇ ದಿನ ಅಪರಾಹ್ನ ವಿಮಾನ ಮೂಲಕ ಹಿಂತೆರಳಿದರು.

ನಗರ ಸಭೆ— ಕೆ. ಸೂರ್ಯನಾರಾಯಣ ಅಡಿಗ, ನಗರ ಸಭಾಪತಿ ಮಂಗಳೂರು ಇವರ ಅಧ್ಯಕ್ಷತೆಯಲ್ಲಿ ದಿನಾಂಕ ೨೬ರಂದು ಸ್ಥಳೀಯ ನಗರ ಸಭೆಯ ಒಂದು ಸಾಮಾನ್ಯ ಸಭೆಯು ಜರಗಿತು. ಸಭೆಯು ಮಾಜಿ ಸದಸ್ಯ ಎಮ್. ಎಸ್. ಪ್ರಭುರವರ ನಿಧನಕ್ಕಾಗಿ ಸಂತಾಪ ಸೂಚಿಸಿ, ಸ್ಥಳೀಯ ಭಗಿನೀ ಸಮಾಜ ಮತ್ತು ಶಿಶು ಸಂಗೋಪನಾ ಕೇಂದ್ರಕ್ಕೆ ಸಹಾಯ ಧನ ಕೊಡುವುದಾಗಿ ಸಭೆಯು ನಿರ್ಧರಿಸಿದುದಲ್ಲದೆ, ಸಣ್ಣ ಕೈಗಾರಿಕೆ ಮತ್ತು ಮಾಪಿಳ್ಳಾ ಪ್ಲೇಗ್ ಶಿಬಿರದ ಅಭಿವೃದ್ಧಿಗಾಗಿ ಯೋಜನೆಗಳು ತಯಾರಿಸಲ್ಪಟ್ಟು ಟೌನ್ ಪ್ಲಾನಿಂಗಿನ ಡೈರೆಕ್ಟರರ ಅನುಮತಿಗಾಗಿ ಕಳುಹಿಸಲ್ಪಟ್ಟಿತು.

ವಾರ್ಷಿಕೋತ್ಸವ:— ದಿನಾಂಕ ೨೩ರಂದು ಸ್ಥಳೀಯ ಬಂದರ ಕೆಲಸಗಾರರ ಸಂಘದ ಎರಡನೇಯ ವಾರ್ಷಿಕೋತ್ಸವವು ನಗರಸಭಾಧಿಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಸ್ವಾಗತ ಭಾಷಣ ಮತ್ತು ಇತರ ಭಾಷಣಗಳು ಜರಗಿದುವು.

ರೈತ ಸಂಘ— ದಿನಾಂಕ ೨೭ರಂದು ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ರೈತ ಸಂಘದ ಕಾರ್ಯಕಾರಿ ಸಮಿತಿಯ ಒಂದು ಸಭೆಯು ಜರಗಿತು. ಮೂಲ್ಕಿ ರೈತ ಸತ್ಯಾಗ್ರಹದ ಕುರಿತು ಸೂಚನೆ ಇತ್ಯಾದಿಗಳು ನೀಡಲ್ಪಟ್ಟುವು. ಸಂಘಟಿಸಲ್ಪಟ್ಟ ಒಂದು ದಳವನ್ನು ಮೂಲ್ಕಿಗೆ ಕಾಲ್ನಡಿಗೆಯಾಗಿ ಕಳುಹಿಸಬೇಕೆಂದು ನಿಶ್ಚೈಸಲಾಯಿತು.

ಗೇರುಬೀಜ ಮಜೂರರ ಸಂಘ— ಶ್ರೀ ಎ. ಶಾಂತಾರಾಮ ಪೈಯವರ ಅಧ್ಯಕ್ಷತೆಯಲ್ಲಿ ದಿನಾಂಕ ೨೭ರಂದು ಸ್ಥಳೀಯ ಗೇರುಬೀಜ ಮಜೂರರ ಸಂಘದ ವಾರ್ಷಿಕ ಮಹಾಸಭೆಯು ಜರಗಿತು. ಲೆಕ್ಕಪತ್ರ ಪರಿಶೀಲನೆ, ಠರಾವುಗಳು ನಡೆದುವು. ಶ್ರೀಗಳಾದ ಎ. ಶಾಂತಾರಾಮ ಪೈ (ಅಧ್ಯಕ್ಷ), ವಿ. ಲಿಂಗಪ್ಪ ಸುವರ್ಣ (ಕಾರ್ಯದರ್ಶಿ), ಮೋನಪ್ಪ ಶೆಟ್ಟಿ (ಕೋಶಾಧಿಕಾರಿ) ಮತ್ತು ೨೨ ಮಂದಿ ಸದಸ್ಯರಿರುವ ಒಂದು ಸಮಿತಿಯನ್ನು ರಚಿಸಲಾಯಿತು. ಭಾಷಣಗಳ ಬಳಿಕ ಸಭೆಯು ಕೊನೆಗೊಂಡಿತು.

ಗೋಪಾಲಕೃಷ್ಣ ಯಕ್ಷಗಾನ ಮಂಡಳಿಯ ವಾರ್ಷಿಕೋತ್ಸವವು— ಕಳೆದ ತಾ. 26 ಮತ್ತು 27ರಂದು ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀಗಳಾದ ನಗರ ಸಭಾಸದಸ್ಯ ಮಡೀಲ್ ಶ್ರೀನಿವಾಸ ನಾಯಕ್ ಮತ್ತು ಜಿಲ್ಲಾ ಸಮಾಜವಿಕಾಸ ಯೋಜನಾಧಿಕಾರಿ ಎಚ್. ನರಸಿಂಹ ಇವರುಗಳ ಅಧ್ಯಕ್ಷತೆಯಲ್ಲಿ ಕ್ರಮಪ್ರಕಾರವಾಗಿ ಯಕ್ಷಗಾನ ಮತ್ತಿತರ ಕಾರ್ಯಕಲಾಪಗಳಿಂದ ಯಶಸ್ವಿಯಾಗಿ ಜರಗಿತು.

ಶ್ರೀ ವಿರಣ್ಣ ಗೌಡರ ಭಾಷಣ— ಕಳೆದ ತಾ. ೩ರಂದು ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಜರಗಿದ ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಶ್ರೀ ವೀರಣ್ಣ ಗೌಡ, ಎಂ. ಎಲ್. ಎ. (ಮೈಸೂರು)ರವರು ಭಾಷಣ ವಿತ್ತರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ. ಯು. ಪಿ. ಮಲ್ಯರು ಈ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಮಾಧವಾಚಾರ್ಯ ಎಂ. ಎಲ್. ಎ. (ಮೈಸೂರು) ರವರು ಶ್ರೀ ಗೌಡರ ಪರಿಚಯ ಮಾಡಿಕೊಟ್ಟರು. ಶ್ರೀ ಗೌಡರು ತಮ್ಮ ಭಾಷಣದಲ್ಲಿ ತಾನೇಕೆ ಪ್ರಾ. ಸು. ವರದಿಯನ್ನು ವಿರೋಧಿಸಿ ಮೈಸೂರು ಪ್ರತ್ಯೇಕವಾಗುಳಿಯಬೇಕೆಂದು ಚಳವಳ ಹೂಡಿದೆನೆಂದು ಆಧಾರ ಪೂರ್ವಕ ವಿವರಿಸಿದರಲ್ಲದೆ, ಇನ್ನು ತಾನು ಪ್ರಜಾಪ್ರಭುತ್ವ ಸರಕಾರಕ್ಕೆ ತಲೆಬಾಗಿ, ಹೊಸ ಪ್ರಾಂತದ ಅಭಿವೃದ್ಧಿಗಾಗಿ ಹೋರಾಡುವೆನೆಂದು ತಿಳಿಸಿದರು. ಜಿಲ್ಲಾ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಕೆ. ಶೆಟ್ಟರ ಧನ್ಯವಾದದೊಡನೆ ಸಭೆಯು ಕೊನೆಗೊಂಡಿತು.

ಪೋರ್ಟ್ ಎಂಡ್ ಡೋಕ್ ವರ್ಕರ್ಸ್ ಯೂನಿಯನಿನ ವಾರ್ಷಿಕೋತ್ಸವವು ಪೋರ್ಟ್ ಆಫೀಸಿನ ಆವಾರದಲ್ಲಿ ಕಳೆದ ತಾ. ೨೩ರಂದು ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಕೆ. ನಾಗಪ್ಪ ಆಳ್ವರು ಸ್ವಾಗತಿಸಿದರು. ಭಾಷಣ, ಅಧ್ಯಕ್ಷ ಭಾಷಣ, ವಿನೋದಾವಳಿಗಳು ಜರಗಿದುವು. ಶ್ರೀ ಕೊರಗಪ್ಪ ಕರ್ಕೇರರು ಧನ್ಯವಾದಗಳನ್ನಿತ್ತರು. ಮುಂದಿನ ವರ್ಷದ ಕಾರ್ಯಕಾರಿ ಸಮಿತಿಗೆ ಶ್ರೀಗಳಾದ ಡಿ. ಮೋಹನ ರಾವ್ (ಅಧ್ಯಕ್ಷ), ಡಾ. ಕೆ. ನಾಗಪ್ಪ ಆಳ್ವ, ಬಿ. ಸುಬ್ಬಣ್ಣ ಶೆಟ್ಟಿ (ಉಪಾಧ್ಯಕ್ಷರು), ಜೋನ್ ರೇಗೋ (ಕೋಶಾಧ್ಯಕ್ಷ), ಸಿ. ಎ. ಆಂಡ್ರ್ಯೂಸ್ ಮತ್ತು ಕೆ. ನಾರಾಯಣ ಕರ್ಕೇರ (ಕಾರ್ಯದರ್ಶಿಗಳು) ಇವರುಗಳು ಆರಿಸಲ್ಪಟ್ಟರು.

ಯುವಕ ಕಾಂಗ್ರೆಸ್ ಅಧ್ಯಯನ ವರ್ಗವು— ದಿನಾಂಕ ೩ರಂದು ಜಿಲ್ಲಾ ಕಾಂಗ್ರೆಸಿನ ಉಪಾಧ್ಯಕ್ಷರಾದ ಶ್ರೀ ಕೆ. ಆರ್. ಆಚಾರ್‌ರವರ ಅಧ್ಯಕ್ಷತೆಯಲ್ಲಿ ಜರಗಿತು.

ಶುಭ ಕೋರಿಕೆಯ ಸತ್ಕಾರ— ಪ್ರಿಂಡಸ್ನ ದಿನಾಂಕ ೩ರಂದು ಸ್ಥಳೀಯ ಶ್ರೀರಾ. ಕೃ. ವಿ. ಭವನದ ಮಾಜಿ ನಿವಾಸಿಗಳ ಸಂಘದವರು, ವಿಜಯ ಬ್ಯಾಂಕಿನ ಕಟ್ಟಡದಲ್ಲಿ ಜರಗಿಸಿದರು. ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಕೆ. ಕೆ. ಹೆಗ್ಡೆಯವರು ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭವು ನೀಲಚಕ್ರ ಪದಕವನ್ನು ಪಡೆದ ಶ್ರೀ ವಿ. ಪ್ರಭಾಕರ ಹೆಗ್ಡೆ, ಇಂಡೋನೇಶ್ಯಕ್ಕೆ ಅಂತಾರಾಷ್ಟ್ರೀಯ ಕಾರ್ಮಿಕ ಸಂಘದ ಪರವಾಗಿ ಕಾರ್ಮಿಕರ ಸ್ಥಿತಿಗತಿಯನ್ನು ಪರಿಶೀಲಿಸಲು ಹೋಗುವ ಶ್ರೀಗಳಾದ ಕರುಣಾಕರ ಅಡ್ಯಂತಾಯ, ಮೋಹನ ಪೂಂಜಾ, ಲಕ್ಷ್ಮಣ ಪೈ ಹಾಗೂ ವಿದೇಶಕ್ಕೆ ತೆರಳಲಿರುವ ಶ್ರೀ ರಾವ್ ಸಾಹೇಬ್ ಪಿ. ಆರ್. ಆರ್. ಪೂಂಜಾ, ಇವರುಗಳಿಗೆ ಶುಭವನ್ನು ಕೋರಿತು. ಶ್ರೀ ಪಿ. ಜಯರಾಮರು ಸ್ವಾಗತಿಸಿದರು. ಶುಭ ಕೋರಿಕೆ ಭಾಷಣಗಳಾದ ಬಳಿಕ, ಅತಿಥಿಗಳು ತಮಗೆ ಗೌರವ ಸಲ್ಲಿಸಿದುದಕ್ಕೆ ಕೃತಜ್ಞತೆಯನ್ನು ಅರ್ಪಿಸಿದರು. ಅಧ್ಯಕ್ಷರ ಭಾಷಣಾನಂತರ ಶ್ರೀ ಪಿ. ಜಿ. ಶೆಟ್ಟರ ವಂದನಾರ್ಪಣೆಯೊಂದಿಗೆ ಸಭೆಯು ಕೊನೆಗೊಂಡಿತು.

ಕಮ್ಯೂನಿಸ್ಟ್ ಪಾರ್ಟಿಯ ಸಾರ್ವಜನಿಕ ಸಭೆಯು— ಕಳೆದ ತಾ. ೩ರಂದು ಸ್ಥಳೀಯ ಗಣಪತಿ ಹೈಸ್ಕೂಲಿನಲ್ಲಿ ಜರಗಿತು. ಶ್ರೀ ಬಿ. ವಿ. ಕಕ್ಕಿಲ್ಲಾಯರು ಈ ಸಭೆಯ ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಅತಿಥಿಗಳಾಗಿದ್ದ ಭಾರತದ ಕಮ್ಯೂನಿಸ್ಟ್ ಪಾರ್ಟಿಯ ಕೇಂದ್ರ ಕಮಿಟಿಯ ಸದಸ್ಯರೂ, ಕರ್ನಾಟಕ ಕಮ್ಯುನಿಸ್ಟ್ ಪಾರ್ಟಿಯ ಕಾರ್ಯದರ್ಶಿಗಳೂ ಆದ ಶ್ರೀ ಎನ್. ಎಲ್. ಉಪಾಧ್ಯಾಯರು ತಮ್ಮ ಭಾಷಣದಲ್ಲಿ - ಸರಕಾರವು ಹೆಚ್ಚಿನ ತೆರಿಗೆಯನ್ನು ಹಾಕಿ, ಸಾಮಾನುಗಳ ಬೆಲೆಯನ್ನು ಹೆಚ್ಚಿಸುವುದನ್ನು ವಿರೋಧಿಸಿದರು. ದ್ವಿ. ಪಂ. ವಾ. ಯೋಜನೆಗೆ ಕಮ್ಯುನಿಸ್ಟ್ ಪಾರ್ಟಿಯ ಬೆಂಬಲವಿದೆಯೆಂದು ಸೂಚಿಸಿದರು. ಗುಡಿಕೈಗಾರಿಕೆ, ವೈದ್ಯಕೀಯ ಸಹಾಯ ಇತ್ಯಾದಿ ಯೋಜನೆಗಳಿರುವುದನ್ನು ಹೊಗಳಿದರು. ಶ್ರೀ ಕೇಶವ ಕಾಮತರ ಭಾಷಣದ ನಂತರ ಸಭೆಯು ಕೊನೆಗೊಂಡಿತು.

ಪ್ರೊ. ಎಂ. ಮರಿಯಪ್ಪ ಭಟ್ಟ ಎಂ. ಎ. ಎಲ್. ಟಿ.— ಇವರು 'ಲಂಡನ್ ಸ್ಕೂಲ್ ಆಫ್ ಓರಿಯಂಟಲ್ ಸ್ಟಡೀಸ್'ನಲ್ಲಿ ಭಾಷಾ ವಿಜ್ಞಾನದಲ್ಲಿ ಸಂಶೋಧನೆಯನ್ನು ಮುಗಿಸಿ ಭಾರತಕ್ಕೆ ಹಿಂತಿರುಗಿರುತ್ತಾರೆ. ಬ್ರಿಟಿಷ್ ಕೌನ್ಸಿಲ್ ಇವರಿಗೆ ವಿದ್ಯಾರ್ಥಿವೇತನ ಕೊಟ್ಟಿತು.

ವಂಚನೆಗೆ ಶಿಕ್ಷೆ— ಹಲವಾರು ಜನರನ್ನು ತಾನು ಅಧಿಕಾರಿ, ತನಗೆ ಹಲವು ಅಧಿಕಾರಿಗಳ ಪರಿಚಯವಿದೆ ಎಂದು ಹೇಳಿಕೊಂಡು ನಟಿಸಿ ಹಲವು ಜನರನ್ನು ವಂಚಿಸಿ, ಹಣ ಪಡೆದಿದ್ದ ಕಂಕನಾಡಿಯ ವಿಲಿಯಂ ಪಿಂಟೋ ಎಂಬವನಿಗೆ ಏಳು ಆರೋಪಗಳ ಮೇಲೆ ತಲಾ ಎರಡೆರಡು ವರ್ಷಗಳಂತೆ ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಡಿ. ನೊರೋನ್ಹರು ಶಿಕ್ಷೆ ವಿಧಿಸಿರುವರು. ಎಲ್ಲಾ ಶಿಕ್ಷೆಗಳನ್ನೂ ಒಮ್ಮೆಯೇ ಅನುಭವಿಸಬೇಕೆಂದು ತೀರ್ಪಿತ್ತಿರುವರು.

ಶ್ರೀ ನೂಜಿಬೈಲು ವೆಂಕಟ ರಾಮಯ್ಯ— ನವರು ರಷ್ಯಾ ದೇಶದ ವೈರ್‌ಲೆಸ್ಸಿಂಗ್ ತರಬೇತಿ ಕೇಂದ್ರದಲ್ಲಿ ವಿಶೇಷ ತರಬೇತಿ ಪಡೆದು ಉತ್ತೀರ್ಣರಾಗಿ ಸ್ವದೇಶಕ್ಕೆ ಮರಳಿರುವರು.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—

ನವಯುಗ ಪ್ರೆಸ್ ಉಡುಪಿ

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ ದ. ಕನ್ನಡ.

ಯಾವದೇ ತರದ ಹ್ಯಾಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIPI,** S. KANARA.

ಮುಚ್ಚಿದರೆ ಮುಗಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟಿ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮೊದಲನೇ ಯೋಜನೆಯ ಸಾಧನೆ

(೯ನೇ ಪುಟದಿಂದ)

ದ್ದು ಸಾರ್ವಜನಿಕರಿಂದ ಸಾಲ ಎತ್ತುವ ವಿಚಾರವು ಉತ್ತೇಜನಕಾರಿಯಾಗಿತ್ತು. ಬೆಲೆಗಳು ಮತ್ತು ಸರ್ಕಾರೀ ಸಾಲಪತ್ರಗಳ ಪ್ರತಿಫಲಗಳು ಸ್ಥಿಮಿತವಾಗಿದ್ದುವು. ಯೋಜನೆಯ ಪ್ರಥಮ ವರ್ಷದಲ್ಲಿ ಆಹಾರ ಧಾನ್ಯ ಹಾಗೂ ಇತರ ವಸ್ತುಗಳನ್ನು ಆಮದು ಮಾಡಿದುದರಿಂದ ೧೪೨ ಕೋಟಿ ರೂಪಾಯಿಗಳಷ್ಟು ಕೊರತೆ ಕಂಡಿತ್ತು. ಆದರೆ ಯೋಜನೆಯ ನಾಲ್ಕನೇ ವರ್ಷದಲ್ಲಿ ಅದು ೯ ಕೋಟಿಗೆ ಇಳಿದಿದೆ. ಇದರಿಂದ ಆಂತರಿಕ ಉತ್ಪಾದನೆಯ ಹೆಚ್ಚಳವನ್ನು ಸುಲಭದಿಂದ ತಿಳಿದುಕೊಳ್ಳಬಹುದು.

ಯೋಜನೆಯ ಪ್ರಥಮದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಮತ್ತು ವ್ಯಕ್ತಿಯ ವರಮಾನವು ಕ್ರಮವಾಗಿ ನೂರಕ್ಕೆ ೧೮ ಮತ್ತು ೪ರಷ್ಟು ಹೆಚ್ಚಿದೆ. ೧೯೫೪-೫೫ರಲ್ಲಿ ಮತ್ತೆ ನೂರಕ್ಕೆ ೨೧/೨-೩ರಷ್ಟು ರಾಷ್ಟ್ರೀಯ ಆದಾಯವು ಏರಿದೆ. ಹೀಗೆಯೇ ೫೫-೫೬ರಲ್ಲಿಯೂ ನೋಡಿಕೊಳ್ಳಲಾಗುತ್ತದೆ. ಆಗ ಯೋಜನೆಯ ಕೊನೆಯಲ್ಲಿ ರಾಷ್ಟ್ರೀಯ ವರಮಾನವು ನಿರ್ದಿಷ್ಟ ಗುರಿಯಾದ ಸೇಕಡಾ ೧೧ಕ್ಕಿಂತ ೧೮ಕ್ಕೆ ಏರುತ್ತದೆ. ಹಾಗೆಯೇ ವ್ಯಕ್ತಿಯ ವರಮಾನವು ಸುಮಾರು ಸೇಕಡಾ ೧೦ರಷ್ಟು ಹೆಚ್ಚುವುದೆಂದು ನಂಬಲಾಗಿದೆ.

ಉದ್ಯೋಗಕ್ಕೆ ಸಂಬಂಧಿಸಿದ ಬಂಡವಾಳವು ಖಾಸಗೀ ಕ್ಷೇತ್ರದಲ್ಲಿ ೧೯೫೦-೫೧ರಲ್ಲಿ ಹಾಕಿದಷ್ಟು ೧೯೫೨-೫೩ ಮತ್ತು ೧೯೫೩-೫೪ರಲ್ಲಿ ಹಾಕಲ್ಪಡದಿದ್ದರೂ, ೧೯೫೪-೫೫ರಲ್ಲಿ ಮತ್ತೊಮ್ಮೆ ಏರಿತು. ದೇಶದ ಉತ್ಪಾದನೆಯು ಹೆಚ್ಚಿದೆ. ಯಂತ್ರೋಪಕರಣಗಳು, ಲೋಹಗಳು ಮತ್ತು ವಾಹನಗಳ ಆಮದು ಮಾತ್ರ ೧೯೫೨-೫೩ ಮತ್ತು ೧೯೫೩-೫೪ರಲ್ಲಿ ಕಡಿಮೆಯಾಗಿದೆ.

ದೊಡ್ಡ ದೊಡ್ಡ ಅಭಿವೃದ್ಧಿ ಯೋಜನಾ ಕಾರ್ಯಗಳು ಎಲ್ಲಿ ನಡೆಯುತ್ತವೆಯೋ ಅಲ್ಲಿ ಉದ್ಯೋಗದ ಪರಿಸ್ಥಿತಿಯು ಅನುಕೂಲವಾಗಿದೆ. ಪಂಚ ವಾರ್ಷಿಕ ಯೋಜನಾವಧಿಯಲ್ಲಿ ೪೫ ಲಕ್ಷ ಜನರಿಗೆ ಉದ್ಯೋಗ ಸಿಗುವುದಾದರೂ ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯು ಇದ್ದೇ ಇರುವುದು. ಕಾರ್ಮಿಕ ಬಲಕ್ಕೆ ಸೇರಿಸಿಕೊಳ್ಳುವಷ್ಟು ವೇಗವಾಗಿ ಉದ್ಯೋಗಾವಕಾಶಗಳು ಹೆಚ್ಚಿಲ್ಲದಿರುವುದೇ ಈ ಸಮಸ್ಯೆಗೆ ಕಾರಣ.

ನಾಲ್ಕನೆಯ ವರ್ಷದಲ್ಲಿ ವ್ಯಯಿಸಲಾದ ೫೧೪ ಕೋಟಿ ರೂಪಾಯಿಗಳಲ್ಲಿ ೨೬೭ ಕೋಟಿ ವಿಮೇತಿಯ ಆಯವ್ಯಯದಿಂದ, ೨೬ ಕೋಟಿ ವಿದೇಶೀಯ ನೆರವಿನಿಂದ, ೨೨೧ ಕೋಟಿ ಸಾರ್ವಜನಿಕ ವಿಭಾಗದಿಂದ ಬಂದಿವೆ. ಕೇಂದ್ರವು ೩೦೩ ಕೋಟಿ ರೂಪಾಯಿಯನ್ನೂ ೨೧೧ ಕೋಟಿ ರೂಪಾಯಿಯನ್ನು ರಾಜ್ಯಸರಕಾರವೂ ವ್ಯಯಿಸಿವೆ.

ಸಾರ್ವಜನಿಕರು ತಮ್ಮ ಉಳಿತಾಯವನ್ನು ಸರಕಾರದ ಸಾಲಗಳಲ್ಲಿ ವಿನಿಯೋಗಿಸಿದ್ದಾರೆ. ಯೋಜನೆಯ ನಾಲ್ಕು ವರ್ಷಗಳಲ್ಲಿ ಕೇಂದ್ರ ಹಾಗೂ ರಾಜ್ಯಗಳು ಎತ್ತಿದ ದೀರ್ಘಾವಧಿ ಸಾಲಗಳು ೧೨೨ ಕೋಟಿ ರೂಪಾಯಿಗಳು. ಅಧಿಕ ತೆರಿಗೆಗಳಿಂದ ಯೋಜನೆಯ ಅವಧಿಯಲ್ಲಿ ೨೩೦ ಕೋಟಿ ರೂಪಾಯಿ ಎತ್ತುವುದೆಂದು ಭಾವಿಸಿದ್ದರೂ, ನಾಲ್ಕು ವರ್ಷಗಳಲ್ಲಿ ಕೇವಲ ೫೩ ಕೋಟಿಯಷ್ಟನ್ನು ಮಾತ್ರ ಎತ್ತಲಾಗಿದೆ. ೧೯೫೫-೫೬ರಲ್ಲಿ ೩೨ ಕೋಟಿ ರೂಪಾಯಿಯಷ್ಟು ಬರುವುದೆಂದು ಅಂದಾಜುಮಾಡಲಾಗಿದೆ.

ಕೇಂದ್ರವು ರಾಜ್ಯಸರಕಾರಗಳಿಗೆ ಕೊಡುವ ಹಣಕಾಸಿನ ನೆರವು ಪ್ರಾರಂಭದ ಯೋಜನೆಯಂತೆ ೨೨೯ ಕೋಟಿ ರೂಪಾಯಿಗಳಾಗಿದ್ದರೂ ಅದನ್ನು ೩೬೦ ಕೋಟಿಗೆ ಏರಿಸಲಾಗಿದೆ. ಮೊದಲನೆಯ ನಾಲ್ಕು ವರ್ಷಗಳಲ್ಲಿ ೨೨೮ ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ ಎಂದು ಅಂದಾಜು ಮಾಡಲಾಗಿದೆ.

ಮೊದಲನೆಯ ಮೂರು ವರ್ಷಗಳಲ್ಲಿ ೧೨೯ ಕೋಟಿ ರೂಪಾಯಿಗಳನ್ನು ವಿದೇಶೀಯ ನೆರವಿಂದ ಬಳಸಲಾಗಿದೆ. ನಾಲ್ಕನೆಯ ವರ್ಷ ಸು. ೨೬ ಕೋಟಿಗಳಷ್ಟನ್ನು ಅಂದಾಜುಪಟ್ಟಿಯಲ್ಲಿ ಸೂಚಿಸಲಾಗಿದೆ. ಆದರೆ, ನಿಜವಾಗಿ ಈ ವರ್ಷದಲ್ಲಿ ಬಳಸುವ ರೂ. ೧೬.೭ ಕೋಟಿಗಳೆಂದು ಅಂದಾಜುಮಾಡಲಾಗಿದೆ.



ಕೊಚ್ಚಿಯಿಂದ ೨೧೩ ಮೈಲು ನೈಋತ್ಯದಲ್ಲಿ ೭೨ ವರ್ಷಗಳ ಹಿಂದೆ ಕಟ್ಟಲಾದ ಮಿನಿಕೋಯ್ ದ್ವೀಪದ ದೀಪಸ್ತಂಭವನ್ನು ಬ್ರಿಟನಿನ ಸರಕಾರವು ಈಚೆಗೆ ವಿಧ್ಯುಕ್ತ ರೀತಿಯಲ್ಲಿ ಭಾರತ ಸರಕಾರಕ್ಕೆ ವರ್ಗಾಯಿಸಿ ಕೊಟ್ಟಿತು. ಬ್ರಿಟನಿನಿಂದ ಪೂರ್ವ ಏಶಿಯದ ರಾಷ್ಟ್ರಗಳಿಗೆ ಹೋಗಿ ಬರುವ ದಾರಿಯಲ್ಲಿ ನಿಂತಿರುವ ಈ ದೀಪಸ್ತಂಭವು ಪ್ರತಿನಿತ್ಯ ಹಲವಾರು ನೌಕೆಗಳಿಗೆ ದಾರಿಯನ್ನು ತೋರಿಸಿ ಕೊಡುತ್ತದೆ.

ಹೆಚ್ಚು ಪ್ರಮಾಣದಲ್ಲಿ ಗೊಬ್ಬರವನ್ನು ಹಾಕುವುದು — ಸರಕಾರದವರು, ರೆವಿನ್ಯೂ ಬೋರ್ಡಿನವರ ಹತೋಟಿಗೊಳಪಟ್ಟು 1956-57ರ ಬಗ್ಗೆ, 1956ನೇ ಮೇ ತಿಂಗಳಿಂದ ನವಂಬರ ತಿಂಗಳ ವರೆಗೆ ನೀಲಗಿರಿ ಮತ್ತು ಮದ್ರಾಸು ಜಿಲ್ಲೆಗಳ ವಿನಾ ಇತರ ಸಮಸ್ತ ಜಿಲ್ಲೆಗಳಲ್ಲಿ ಬತ್ತದ ಪೈರಿಗೆ "ಹೆಚ್ಚು ಪ್ರಮಾಣದಲ್ಲಿ ಗೊಬ್ಬರ ಹಾಕುವ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವುದಕ್ಕೆ ಮಂಜೂರಾತಿಯನ್ನಿತ್ತಿರುವರು. ಸ್ಥಳೀಕ ಆವಶ್ಯಕತೆಗಳಿಗೆ ಮತ್ತು ಪರಿಸ್ಥಿತಿಗನುಸಾರವಾಗಿ ಈ ಯೋಜನೆಯನ್ನು ಪ್ರತಿ ಜಿಲ್ಲೆಯಲ್ಲಿ ಪ್ರಾರಂಭಿಸಲಾಗುವುದು. ಈ ಉದ್ದೇಶದ ಬಗ್ಗೆ ನೇಮಕಮಾಡಲ್ಪಡಲಿರುವ ವಿಶೇಷ ರೀತಿಯ ರೆವಿನ್ಯೂ ಸಿಬ್ಬಂದಿಯವರಿಂದ ಈ ಬಗ್ಗೆ ಹಣ ಸಾಲಗಳನ್ನು ಮಂಜೂರು ಮಾಡಲಾಗುವುದು. ಆದರೆ ರಾಷ್ಟ್ರೀಯ ವಿಸ್ತರಣಾ ಯೋಜನ ಪ್ರದೇಶಗಳಲ್ಲಿ ಹಿಂದಿನ ವರ್ಷದಂತೆಯೇ ಈ ಹಣ ಸಾಲಗಳನ್ನು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರುಗಳು ಮಂಜೂರು ಮಾಡುವರು. ಪ್ರತಿ ವ್ಯಕ್ತಿಗೆ ಪರಮಾವಧಿಯಾಗಿ ರೂ. 500/-ರ ತನಕ, ಪ್ರತಿ ಎಕ್ರೆಗೆ ರೂ. 3 ಪ್ರಕಾರ ವ್ಯಕ್ತಿಯ ಸ್ವಂತ ಜವಾಬ್ದಾರಿ ಮೇಲೆ ಹಣ ಸಾಲ ಮಂಜೂರು ಮಾಡಲಾಗುವುದು. ಈ ಬಗ್ಗೆ ರೂ. 61 ಲಕ್ಷಗಳ ಮೊಬಲಗನ್ನು ಮಂಜೂರುಮಾಡಲಾಗಿದೆ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಾಗಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ
ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ- ರೂ. ೨-೦-೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಮತೀರ್ಥ
ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಪ್ರಾಚೀನ ಭಾರತದಲ್ಲಿ ಯಾಂತ್ರಿಕ ತಂತ್ರದ ಪರಿಜ್ಞಾನ

(೨ನೇ ಪುಟದಿಂದ)

ಪವಾರ ಚರಿತ್ರ ಮತ್ತು ಭೋಜನ ಸಮರಾಂಗಣ ಸೂತ್ರಧಾರ ಗ್ರಂಥಗಳಲ್ಲಿ ಯವನರು-ಗ್ರೀಕರು–ಬೇರೆಬೇರೆ ಯಂತ್ರಗಳಲ್ಲಿ ತರಬೇತಿ ಹೊಂದಿದ್ದರೆಂದು ಉಲ್ಲೇಖವಿದೆ. ಭೋಜನ ಗ್ರಂಥವು ಬಹಳ ಮಹತ್ವದ್ದಾಗಿದೆ ದಶಕುಮಾರ ಚರಿತ್ರೆಯಲ್ಲಿ ವಿಮಾನಗಳ ವರ್ಣನೆ ಹೆಚ್ಚಾಗಿದೆ. ವಿಮಾನಗಳು ಆಗ ಬಳಕೆಯಲ್ಲಿದ್ದವೆಂಬಷ್ಟು ವರ್ಣನೆ ಅದರಲ್ಲಿ ಬಂದಿದೆ. ಹರ್ಷಚರಿತ್ರೆಯಲ್ಲಿ ಯಂತ್ರಗಳ ವರ್ಣನೆ ಹೆಚ್ಚಿಗಿದೆ.

ದಂಡಿಯ ಅವಂತಿ ಸುಂದರಿಯಲ್ಲಿ ಇಬ್ಬರು ಕಲಾಕುಶಲ ಅಣ್ಣತಮ್ಮಂದಿರ ಕತೆಯಿದೆ, ಅವರಲ್ಲಿ ಹಿರಿಯನಾದ ಪ್ರಾಣಧರನು ಹೆಚ್ಚು ಹಣ ಹಾಳುಮಾಡಿದ್ದರಿಂದ ಬಂಧುಗಳಿಬ್ಬರೂ ದಿವಾಳಿ ತೆಗೆದರು. ಆಗ ಪ್ರಾಣಾಧರನು ಕಾಂಚಿಪುರ ಅರಸನ ಅರಮನೆಯಿಂದ ಹಣವನ್ನು ಕಳವುಮಾಡುವ ಹಂಚಿಕೆ ಹುಡುಕಿದನು. ಅವನು ಎರಡು ಯಾಂತ್ರಿಕ ಹಂಸಗಳನ್ನು ಸಿದ್ಧಪಡಿಸಿದನು. ಅವುಗಳಿಗೆ ಹಗ್ಗ ಕಟ್ಟಿದನು ಆ ಹಂಸಗಳು ಹಗ್ಗದಗುಂಟ ಮೇಲೆ ಕೆಳಗೆ ಹೋಗಿ ಅರಸನ ತಿಜೋರಿಯ ಹತ್ತಿರ ಹೋಗಿ ಚುಂಚುಗಳಿಂದ ಅದನ್ನು ತೆಗೆದು ವಜ್ರವೈಡೂರ್ಯಾದಿಗಳೊಡನೆ ಮರಳುತ್ತಿದ್ದವು. ನಿತ್ಯವೂ ಹೀಗೆ ಕಳವಾಗುತ್ತಿದ್ದುದನ್ನು ನೋಡಿ ಅರಸನು ಭದ್ರ ಕಾವಲಿಟ್ಟು ಈ ಜಾಣ ಕಳ್ಳರನ್ನು ಹಿಡಿದನು. ಒಂದು ದಿನ ಅರಸನು ಆ ಹಂಸಗಳ ದಾರವನ್ನು ಕತ್ತರಿಸಿದನು. ಆ ಬಂಧುಗಳಿಗೆ ಇದು ಕೂಡಲೆ ಗೊತ್ತಾಯಿತು. ತಾನು ಮಾಡಿದ ವೈಮಾನಿಕ ರಥವನ್ನೇರಿ ಹೋಗಿ ಪಾರಾಗಲು ಪ್ರಾಣಧರನು ತಮ್ಮನಿಗೆ ಹೇಳಿದನು. ಆದರೆ ಪ್ರಾಣಧರನ ಸಂಬಂಧಿಕರೆಲ್ಲ ಆ ರಥವನ್ನು ಹತ್ತಿದ್ದರಿಂದ ತಮ್ಮನಿಗೆ ಸ್ಥಳ ಸಿಕ್ಕಲಿಲ್ಲ. ತನ್ನ ವಿಮಾನದಲ್ಲಿ ಬರುವನಾಗಿ ಅವನು ಹೇಳಿದನು. ಪ್ರಾಣಧರನ ವಿಮಾನವು ಒಂದು ಜಿಗಿತಕ್ಕೆ ೮೦೦ ಯೋಜನ ಹೋದರೆ ರಾಜ್ಯಧರನು ತನ್ನ ವಿಮಾನದಲ್ಲಿ ಒಂದು ಜಿಗಿತಕ್ಕೆ ೨೦೦ ಯೋಜನ ಮಾತ್ರ ಹಾರಿದನು. ಎರಡನೆಯ ಸಲ ಪ್ರೇರಣಾ ಶಕ್ತಿಯಿಂದ ಮತ್ತು ೨೦೦ ಮೈಲು ಜಿಗಿದನು ಈ ರಾಜ್ಯಧರನು ಯಾಂತ್ರಿಕ ಮನುಷ್ಯರನ್ನು ಮಾಡಿ ಅವರಿಂದ ಕೆಲಸ ಮಾಡಿಸುತ್ತಿದ್ದ ಕಥೆಯೂ ಬೃಹತ್ಕಥಾದಲ್ಲಿ ಮತ್ತು ಭಟ್ಟ ಸ್ವಾಮಿನ್‌ನ ಪುಸ್ತಕದಲ್ಲಿ ವರ್ಣಿಸಲಾಗಿದೆ. ನರವಾಹನದತ್ತನು ಈ ಇಬ್ಬರು ಬಂಧುಗಳ ಪತ್ತೆಹಚ್ಚಿ ರಾಜ್ಯಧರನ ವಿಮಾನದ ಸಹಾಯದಿಂದ ಕರ್ಪೂರಸಂಭವಕ್ಕೆ ಹೋಗಿ ತನ್ನ ಕನಸಿನ ರಾಣಿಯನ್ನು ಮದುವೆಯಾದ ಕಥೆಯೂ ವರ್ಣಿತವಾಗಿದೆ.

ನರವಾಹನದತ್ತನಿಗೆ ಮರಳುವ ಇಚ್ಛೆಯಾದಾಗ ಅವನ ಮಾವನು ಪ್ರಾಣಧರನ ಸುದ್ದಿಯನ್ನು ಕೇಳಿ ಅವನ ವಿಮಾನದಲ್ಲಿ ಹೋಗಬಹುದೆಂದು ಹೇಳಿದನು. ಪ್ರಾಣಧರನು ೧೦೦೦ ಜನರಿಗೆ ಕೂಡ್ರಲು ಬರುವಂಥ ಯಾನವನ್ನು ಅರಸನಿಗೆ ಕೊಟ್ಟನು. ಇವೆಲ್ಲದರ ಕಥೆ ಬೃಹತ್ಕಥೆಯಲ್ಲಿ ಚೆನ್ನಾಗಿ ವರ್ಣಿಸಲ್ಪಟ್ಟಿದೆ

ಬೌದ್ಧ ಸಾಹಿತ್ಯದಲ್ಲಿ ಕೆಲ ಮನೋರಂಜಕ ಕತೆಗಳಿವೆ. ಮಧ್ಯ ದೇಶದಲ್ಲಿ ಬಣಗಾರನೊಬ್ಬನು ಯವನ ದೇಶಕ್ಕೆ ಹಾರಿ ಯಂತ್ರಾಚಾರ್ಯನೊಬ್ಬನ ಮನೆಗೆ ಹೋದನು. ಆ ಯಂತ್ರಾಚಾರ್ಯನು ಯಾಂತ್ರಿಕ ದಾಸಿಯೊಬ್ಬಳನ್ನು ಮಾಡಿ ಭಾರತೀಯ ಕಲಾಕಾರನ ಸೇವೆಗೆ ನೇಮಿಸಿದನು. ಆ ಯಾಂತ್ರಿಕ ದಾಸಿಯು ಭಾರತೀಯನ ಪಾದ ತೊಳೆದು ಹೋಗುವಾಗ ಭಾರತೀಯ ಮಾತಾಡಲು ಉಪಕ್ರಮಿಸಿದನು. ಆದರೆ ತನ್ನ ಮಾತಿಗೆ ಉತ್ತರ ಬಾರದ್ದನ್ನು ನೋಡಿ ಅವನು ಯಾಂತ್ರಿಕ ಗೊಂಬೆಯ ಸರಪಳಿಯೆಳೆದನು. ಕೂಡಲೆ ಆ ಗೊಂಬೆಯು ಬಿದ್ದಿತು. ಭಾಷಾಜು ವಸ್ತುವಿನಲ್ಲಿ ಈ ಕತೆ ಬಂದಿದೆ.

ಯಂತ್ರಾಚಾರ್ಯನಿಗೆ ಮುಯ್ಯ ತೀರಿಸಬೇಕೆಂದು ಭಾರತೀಯ ಕಲಾಕಾರ ಬಯಸಿ ಉರುಲು ಹಾಕಿಕೊಂಡು ಸಾಯುವ ತನ್ನ ಬಣ್ಣದ ಚಿತ್ರವನ್ನು ಸಿದ್ಧಪಡಿಸಿದನು. ಕೆಲಸಮಯದ ನಂತರ ಯಂತ್ರಾಚಾರ್ಯನು ಅಲ್ಲಿಗೆ ಬಂದು ಮುರಿದು ಬಿದ್ದ ಯಾಂತ್ರಿಕ ದಾಸಿಯನ್ನು ನೇತು ಹಾಕಿಕೊಂಡ ಬಣಗಾರನನ್ನು ನೋಡಿ ವಿಷಾದಪಟ್ಟು ಅವನು ಕೂಡಲೆ ರಾಜನಲ್ಲಿಗೆ ಹೋಗಿ ಈ ದುರಂತ ದೃಶ್ಯವನ್ನು ನೋಡಲು ಅಧಿಕಾರಿಗಳನ್ನು ಕರೆತಂದನು. ಬಣಗಾರನ ಹೆಣವನ್ನೆತ್ತಲು ಅಧಿಕಾರಿಗಳು ಸಲಕರಣೆಗಳನ್ನು ತರಲು ಹೋದಾಗ ಅವನು ಅಡಗಿಕೊಂಡಿದ್ದ ಸ್ಥಳದಿಂದ ಎದ್ದು ಬಂದು ಎಲ್ಲರನ್ನು ಚಕಿತಗೊಳಿಸಿದನು.

ರಾಮಾಯಣ ಮಹಾಭಾರತಗಳಲ್ಲಿ ಕೂಡ ಯವನರಲ್ಲಿ ಈ ವಿದ್ಯೆಯಿದ್ದಿತೆಂದು ಉಲ್ಲೇಖವಿದೆ. ಆಯಾ ದಾನವರೊಡನೆ ನಡೆದ ಯುದ್ಧ ಮತ್ತು ದಾನವರ ಶಿಲ್ಪಿಯಾದ ಮಯ ಮತ್ತು ದೇವತೆಗಳ ಶಿಲ್ಪಿಯಾದ ವಿಶ್ವಕರ್ಮನ ಕತೆಗಳು ಪುರಾಣಗಳಲ್ಲಿ ಬರುವವು ವೇದಗಳಲ್ಲಿ ಕೂಡ ಈ ಶಿಲ್ಪಿಗಳ ಉಲ್ಲೇಖವಿದೆ. ಅಸುರರು ಇರಾಣ ಮತ್ತು ವಾಯುವ್ಯ ಸರಹದ್ದ ಪ್ರಾಂತಗಳೊಡನೆ ಸಂಬಂಧವಿಟ್ಟಿದ್ದರೆಂಬುದನ್ನು ನೆನೆದರೆ ಭಾರತೀಯರು ಈ ದೇಶಗಳಿಗೆ ಯಾಂತ್ರಿಕ ಜ್ಞಾನವನ್ನು ನೀಡಿದ್ದರೆಂಬುದು ಸ್ಪಷ್ಟವಾಗುವದು.

ಸ್ವಪ್ನವಾಸದತ್ತದಲ್ಲಿಯೂ ಆಕಾಶ ರಥದ ಉಲ್ಲೇಖವಿದೆ. ಬಸುರಿಯಾದ ಉದಯನ ರಾಣಿಯು ವಿಮಾನ ಸಂಚಾರ ಮಾಡಬಯಸಿದಳು. ವಿಶ್ವಲಾ ಎಂಬ ಶಿಲ್ಪಿಯು ಈ ವಿದ್ಯೆಯನ್ನು ಬಹಿರಂಗಪಡಿಸಲು ಬಯಸದೆ ನಗರವನ್ನು ಬಿಟ್ಟನು. ಆದರೆ ವತ್ಸರಾಜನ ಮತ್ತೊಬ್ಬ ರಾಜಶಿಲ್ಪಿಯು ಆಕಾಶಯಂತ್ರವನ್ನು ತಯಾರು ಮಾಡಿ ಉದಯನನ ಬಯಕೆಯನ್ನು ತೀರಿಸಿದನು.

ಭೋಜರಾಜನು ಈ ಸಂದರ್ಭದಲ್ಲಿ ಬರೆದ ಪುಸ್ತಕ ಬಹಳ ಮಹತ್ವದ್ದಾಗಿದೆ. ೧೧ನೇ ಶತಮಾನದಲ್ಲಿ ಬರೆದ ಈ ಪುಸ್ತಕ ಇನ್ನೂ ಅಪ್ರಕಾಶಿತವಿದೆ. ಭೋಜನು ಸ್ವಯಂವಾಹಕ ಮತ್ತು ಸ್ಕೃತ್ಯೇರಿಯ ಎಂಬ ಎರಡು ಬಗೆಯ ಯಂತ್ರಗಳನ್ನುಲ್ಲೇಖಿಸಿರುವನು. ಅಂತರಿತ ಮತ್ತು ಬಾಹ್ಯ ಎಂಬ ಮತ್ತೆರಡು ಪ್ರಭೇದಗಳಿವೆ ಪೃಥ್ವಿ ಅಪ್ ತೇಜ ವಾಯು ಆಕಾಶ ಈ ಪಂಚಭೂತಗಳಿಂದ ಈ ಯಂತ್ರಗಳನ್ನು ಮಾಡಲು ಸಾಧ್ಯ: ಈ ಪಂಚಭೂತಗಳಲ್ಲದೆ ತಾಮ್ರ, ತವರು, ಕಬ್ಬಿಣ ಮತ್ತು ಬೆಳ್ಳಿಯನ್ನು ಉಪಯೋಗಿಸುವದರಿಂದ ಮತ್ತು ಕಟ್ಟಿಗೆ ಮತ್ತು ಜವಳಿಯನ್ನುಪಯೋಗಿಸುವದರಿಂದ ಯಂತ್ರಗಳ ಉಪಯುಕ್ತತೆ ಹೆಚ್ಚುವದೆಂದು ಹೇಳಲಾಗಿದೆ. ಕವಿಯು ಯಂತ್ರಗಳಲ್ಲಿಯ ವಿವರಣೆಗಳನ್ನೆಲ್ಲ ಬರೆದಿರುವನು. ಯಂತ್ರರಚನೆಯು ಪ್ರಾರಂಭದಿಂದ ಅದರ ಚಾಲನೆ ಉಪಯುಕ್ತತೆ ಮೊದಲಾದ ೨೦ ಬಗೆಗಳನ್ನು ಲೇಖಕನು ಉಲ್ಲೇಖಿಸಿರುವನು. ಧಾರಾಗೃಹಗಳು ಕಾರಂಜಿಗಳು ಯಾಂತ್ರಿಕ ವಾಹನಗಳು ಮೊದಲಾದವನ್ನೆಲ್ಲ ಈ ಪುಸ್ತಕದಲ್ಲಿ ವರ್ಣಿಸಲಾಗಿದೆ ಕೆಳ ಅಂತಸ್ತಿನಲ್ಲಿಟ್ಟ ವಸ್ತುಗಳನ್ನು ಮೇಲಂತಸ್ತಿಗೆ ಯಂತ್ರಗಳ ಮೂಲಕ ಒಯ್ಯಬಹುದು. ಕ್ಷೀರಾಬ್ಧಿಶಯನದಂಥ ಯಾಂತ್ರಿಕ ಹಾಸಿಗೆಯನ್ನು ಸರ್ಪದ ಶ್ವಾಸದಂತೆ ಮೇಲಿನಿಂದ ಕೆಳಗೆ ಒಯ್ಯಬಹುದೆಂದೂ ಭೋಜನು ಬಣ್ಣಿಸಿರುವನು ನೀರಿನಲ್ಲಿ ಅಗ್ನಿಯನ್ನು ಹುಟ್ಟಿಸುವದು ಮತ್ತು ಬೆಂಕಿಯಲ್ಲಿ ನೀರನ್ನು ಉತ್ಪಾದಿಸುವದು ಇದ್ದ ವಸ್ತುವನ್ನು ಇಲ್ಲದಂತೆ ಮಾಡುವ ಮಾಟದ ಕತೆಗಳೂ ಇದರಲ್ಲಿ ಇರುವವು.

ವಿಶಾಲವಾದ ತೆರೆದ ಪಾತ್ರೆಯ ಪರಿಧಿಯಲ್ಲಿ ಹಸ್ತಿದಂತದ ಚಿತ್ರಗಳು ಹಲ್ಲಿನಂತಹ ಚೂರುಗಳಿರುವವು. ಮಧ್ಯದಲ್ಲಿರುವ ಹೆಂಗಸಿನ ಚಿತ್ರವು ಪ್ರತಿನಾಡಿಕೆಗೊಮ್ಮೆ ಒಂದು ಚಿತ್ರವನ್ನು ಮೇಲಕ್ಕೆತ್ತುವದು ಎಂದು ಭೋಜನು ಒಂದು ಯಂತ್ರದ ಬಣ್ಣನೆ ಮಾಡಿರುವನು.

ಅವನು ಇಂಥ ಕಾಲಸೂಚಿ ಯಂತ್ರಗಳ ವರ್ಣನೆ ಮಾಡಿರುವನು. ಜ್ಯೋತಿಷ್ಯ ಶಾಸ್ತ್ರದ ಗೋಲವನ್ನು ವರ್ಣಿಸಲಾಗಿದೆ. ಅದರಲ್ಲಿ ದಿನ ಸೂಚಿಸುವ ಮತ್ತು ಗ್ರಹಗಳ ಗತಿಯನ್ನು ತಿಳಿಸುವ ಸೂಜಿಗಳಿವೆ. ಇವೆಲ್ಲ ಯಂತ್ರಗಳನ್ನು ಲೇಖಕನು ಸ್ವತಃ ನೋಡಿ ವಿವರಿಸಿದ್ದಾಗಿ ಪುಸ್ತಕದಲ್ಲಿ ಉಲ್ಲೇಖವಿದೆ. ಶಯ್ಯಾಗೃಹದ ಯಾಂತ್ರಿಕ ಉಪಕರಣಗಳನ್ನು ಭೋಜನು ಬಣ್ಣಿಸಿದ್ದಾನೆ. ಯಾಂತ್ರಿಕ ಹಾಡುವ ಹಕ್ಕಿಗಳ (ವರಂಗಲಿನ ಕಾಕತೀಯ ಅರಸರು ಇವನ್ನುಪಯೋಗಿಸುತ್ತಿದ್ದರೆಂದು ಹೇಳಿಕೆ) ಸ್ವಯಂಚಾಲಿತ ಸಂಗೀತ ಸಾಧನಗಳು, ಧ್ವನಿ ಮಾಡುವ ರಥ ಮತ್ತು ಯಾಂತ್ರಿಕ ಉಪಕರಣಗಳನ್ನು ಭೋಜನು ವರ್ಣಿಸಿರುವನು. ಸೋಮೇಶ್ವರ ಮಾನಸೋಲ್ಲಾಸದಲ್ಲಿಯೂ ಇವುಗಳ ಉಲ್ಲೇಖವಿದೆ. ೧೨ನೇ ಶತಮಾನದ ಪ್ರಾರಂಭದಲ್ಲಿ ಕಲ್ಯಾಣ ಚಾಲುಕ್ಯ ಅರಸರು ಇದನ್ನು ಸಂಗ್ರಹಿಸಿರುವರು.

ಯುದ್ಧದಲ್ಲಿ ಉಪಯುಕ್ತವಾದ ಯಂತ್ರಗಳನ್ನು ಭೋಜನು ಬಣ್ಣಿಸಿರುವನು. ಶತಘ್ನೀ ಉಷ್ಟ್ರಗ್ರೀವ ವರಿಯಂತ್ರ ಮತ್ತು ಕಟ್ಟಿಗೆ ಆನೆಯ ವರ್ಣನೆಯಿದೆ. ಪಾರಜಕ್ಕೆ ಉಷ್ಣತೆಯನ್ನು ಕೊಟ್ಟು ಯಾಂತ್ರಿಕ ಶಕ್ತಿಯನ್ನುತ್ಪಾದಿಸಿ ಆಕಾಶಯಾನಗಳನ್ನು ನಡೆಸಲಾಗುತ್ತಿತ್ತೆಂದು ಭೋಜನು ಬಣ್ಣಿಸಿರುವನು.

ಭೋಜನ ಪುಸ್ತಕದಲ್ಲಿ ಧಾರಾಗೃಹ ಮಹತ್ವದ ಪಾತ್ರವಹಿಸಿವೆ. ನೀರು ಮೇಲಕ್ಕೇರುವದು ಕೆಳಗೆ ಬೀಳುವದು, ಕಾರಂಜಿಗಳ ಸಿರಿಜಗಳು ಮತ್ತು ಉದ್ಯಾನದ ಉಪಕರಣಗಳು ನೀರಿನಲ್ಲಿ ಕಟ್ಟಿದ ಜಲಮಗ್ನ ಮೊದಲಾದ್ದನ್ನು ರಮ್ಯವಾಗಿ ವರ್ಣಿಸಿದ್ದಾನೆ.

ಯಾಂತ್ರಿಕ ಗೊಂಬೆಗಳು ಮೊದಲಾದ್ದು ಸೋಮದೇವನ ಕಥಾಸರಿತ್ಸಾಗರದಲ್ಲಿ ವರ್ಣಿತವಾಗಿದೆ. ಇವೆಲ್ಲ ಗೊಂಬೆಗಳು ಅತ್ತಿತ್ತ ಚಲಿಸಿ ಗೆಳೆಯರನ್ನು ಸಂತೋಷಗೊಳಿಸುತಿದ್ದವು. ಸೋಮಪ್ರಭೆಯು ತನ್ನ ಗೆಳತಿಯಾದ ಮದನಮಾಚಕಳನ್ನು ತನ್ನ ಯಾಂತ್ರಿಕ ಗೊಂಬೆಗಳಿಂದ ಸಂತೋಷಪಡಿಸಿದ್ದಲ್ಲದೆ ತನ್ನ ಯಾಂತ್ರಿಕ ವಾಹನವನ್ನ ಅವಳ ಸಂತೋಷ ವಿಹಾರಕ್ಕಾಗಿ ಕೊಟ್ಟಳೆಂದು ವರ್ಣನೆಯಿದೆ.

ಇದೆಲ್ಲವನ್ನು ನೋಡಿದರೆ ಪ್ರಾಚೀನ ಭಾರತದಲ್ಲಿ ಯಾಂತ್ರಿಕ ತಂತ್ರವೆಲ್ಲ ಅವಗತವಾಗಿತ್ತೆಂಬುದು ಸ್ಪಷ್ಟವಾಗುವದು. ಕಳೆದ ಹದಿನೈದು ಶತಮಾನಗಳಿಂದ ಆಧ್ಯಾತ್ಮಿಕತೆಯಲ್ಲಿ ನಾವು ಹೆಚ್ಚು ತಲ್ಲೀನರಾಗಿ ಇವನ್ನೆಲ್ಲ ಅಲಕ್ಷಿಸಿದ್ದೇವೆ. ಈಗ ಆಧ್ಯಾತ್ಮಿಕ ಮತ್ತು ಅಧಿಭೌತಿಕಗಳ ಸುಂದರ ಸಮನ್ವಯವನ್ನು ಸಾಧಿಸಿ ಈ ಯಾಂತ್ರಿಕತಂತ್ರಗಳನ್ನು ಪುನರುಜ್ಜೀವನಗೊಳಿಸುವದು ಅವಶ್ಯಕವಾಗಿದೆ. ಈ ಕೆಲಸಕ್ಕೆ ಸರಕಾರದ ಪ್ರೋತ್ಸಾಹನೆ ಅವಶ್ಯವೆಂದು ಪ್ರತ್ಯೇಕ ಹೇಳಬೇಕಿಲ್ಲ.

[ಮದ್ರಾಸು ವಿಶ್ವವಿದ್ಯಾನಿಲಯದ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ವಿ. ರಾಘವನ್ನರ ಭಾಷಣದಿಂದ ಉದ್ಧೃತ]

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಗೀತೆಯ ಕೈಗನ್ನಡಿ

0–12–0

ನವಯುಗ ಪ್ರೆಸ್, ಉಡುಪಿ.

ಪೂಜ್ಯ ವಿನೋಬಾಜಿಯವರ ಸಾಧುವಾಣಿ

ನಿಮ್ಮ ವಿಚಾರದಲ್ಲಿ ನಿಮಗಿರಬೇಕಾದ ಶ್ರದ್ಧೆಯು ಎಂದೂ ಶಿಥಿಲವಾಗಬಾರದು. ಅದು ಯಾವಾಗಲೂ ಸ್ಥಿರವಾಗಿಯೂ ಬಲವತ್ತರವಾಗಿಯೂ ಇರಬೇಕು. ಶ್ರದ್ಧೆಯೆಂದರೇನೆನ್ನುವಿರಾ? ಸದ್ವಿಚಾರದಲ್ಲಿ ಬುದ್ಧಿಯನ್ನು ಸ್ಥಿರಗೊಳಿಸುವುದೇ ಶ್ರದ್ಧೆಯೆನ್ನುವೆನು. ಅಂಥ ಶ್ರದ್ಧೆಯೇ ಮನುಷ್ಯನಿಗೆ ಬಲವನ್ನು ಕೊಡುತ್ತದೆ, ಮನುಷ್ಯ ಜೀವನವನ್ನು ಉತ್ತಮಗೊಳಿಸುತ್ತದೆ, ಎಲ್ಲ ರೀತಿಯಲ್ಲೂ ಮನುಷ್ಯನಿಗೆ ಪ್ರೇರಣೆಯನ್ನುಂಟುಮಾಡುತ್ತದೆ. ಯಾವನೊಬ್ಬ ಮನುಷ್ಯನ ಮನಸ್ಸಿನಲ್ಲಿ ಒಂದು ಸದ್ವಿಚಾರವುತ್ಪನ್ನವಾಯಿತೆಂದರೆ, ಅದು ಭೂಮಂಡಲವೆಲ್ಲೆಲ್ಲ ಹಬ್ಬುವುದು. ಇದನ್ನು ಎಲ್ಲ ಜನರು ಒಪ್ಪದಿರಬಹುದು. ಆದರೆ, ವಿಚಾರದ ಪ್ರಚಾರಕ್ಕಾಗಿ ಆಕಾಶವೆಲ್ಲ ತೆರೆದಿರುತ್ತದೆಂಬುದನ್ನು ತಿಳಿದವರು ಬಲ್ಲರು. ವಿಚಾರದ ಪ್ರಚಾರವು ರೇಡಿಯೋ ಒಂದರಿಂದಲೇ ಆಗದು. ರೇಡಿಯೋಕ್ಕಿಂತಲೂ ಶಕ್ತಿಶಾಲಿಯಾದ ಸಾಧನವು— ಆಕಾಶವು ಇರುತ್ತದೆ. ಆಕಾಶದಲ್ಲಿ ವಾಯುವು ಸಂಚರಿಸುವಂತೆ ವಿಚಾರಗಳೂ ಚಲಿಸುತ್ತಿವೆ. ಅದನ್ನು ಯಾರೂ ತಡೆಯಲಾಗುವುದಿಲ್ಲ. ಆ ವಿಚಾರಗಳು ನೇರಾಗಿ ಮನುಷ್ಯನ ಹೃದಯವನ್ನೆ ಸ್ಪರ್ಶಿಸುತ್ತವೆ. ಇದೀಗ ವಿಚಾರದ ಮಹಿಮೆಯು. ಆದಕಾರಣ ನಾವು ನಮ್ಮ ವಿಚಾರಗಳಲ್ಲಿ ಶ್ರದ್ಧೆಯನ್ನಿಡಬೇಕು. ನಾವು ಶ್ರದ್ಧಾಪೂರ್ವಕವಾಗಿ ಯಾವುದೊಂದು ಸಾಧನೆಗೆ ಕೈ ಹಚ್ಚಿದರೆ, ಆ ಸಾಧನೆಯ ಅನುರೂಪವಾದ ಆಚರಣೆಯನ್ನೂ ಮಾಡಬೇಕು. ಈಗಲಾದರೂ ನಮಗೆ ವಿಚಾರಗಳಲ್ಲಿ ವಿಶ್ವಾಸವೇ ಕಡಿಮೆ, ಮಾತ್ರವಲ್ಲದೆ, ನಮ್ಮಲ್ಲಿ ಸಾತತ್ಯವೂ ಸ್ಥಿರತೆಯೂ ಸಾಕಷ್ಟಿಲ್ಲ; ಆದುದರಿಂದ ಮನುಷ್ಯನು ಆಲಸ್ಯವಶನಾಗಿ, ಸ್ವಲ್ಪ ಕಾಲ ಕೆಲಸಮಾಡಿ ಆ ಮೇಲೆ ಸುಮ್ಮನೆ ಕುಳಿತುಕೊಳ್ಳುತ್ತಾನೆ.

ನಾನು ಭೂಮಾಲಿಕನಾಗಿದ್ದೇನೆಂಬ ವಿಚಾರವು ಅಮಂಗಲವು, ನಾನು ಭೂಮಿಯ ಸೇವಕನೆಂಬುದು ಮಂಗಲವು. ಈ ವಿಚಾರವನ್ನು ಲೋಕದವರೆಲ್ಲ ಒಪ್ಪಬೇಕೆಂಬುದರಲ್ಲಿ ನನಗೆ ಸಂದೇಹವಿಲ್ಲ. ಆದ ಕಾರಣ ಎಲ್ಲ ಕಾರ್ಯಕರ್ತರು ಸತತ ಕಾರ್ಯ ಮಾಡುತ್ತಿರಬೇಕು. ನಮ್ಮ ಶರೀರವು ಮಲಿನವಾಗಿರುತ್ತದಾದರೂ ಅದರಿಂದ ನಾವು ಒಳ್ಳೆ ಕೆಲಸವನ್ನು ಮಾಡಿಸಿ ಅಸ್ವಚ್ಛ ಶರೀರವನ್ನೂ ಪವಿತ್ರವಾಗಿಡಬಲ್ಲೆವು. ಹಾಗೆಯೆ ಸದ್ವಿಚಾರಗಳ ಮೂಲಕ ನಮ್ಮಲ್ಲಿ ಪ್ರತಿಯೊಬ್ಬರೂ ದೃಢ ವಿಶ್ವಾಸಿಗಳಾಗಬೇಕು. ಆ ವೇಳೆ ಶಕ್ತಿ ಶಾಲಿಗಳೂ ಆಗಬೇಕು.

(ದ. ಕ. ಜಿಲ್ಲಾ ಭೂದಾನ ಸಮಿತಿ)

"ಸರಸ್ವತಿ"

(Estd. 1920)

ಕನ್ನಡ ಮಾಸಪತ್ರಿಕೆ

ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.

ಸಂಪಾದಕೆ:— ಆರ್. ಕಲ್ಯಾಣಮ್ಮ.

ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.

ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅರಳೆಪೇಟೆ, ಬೆಂಗಳೂರು2.
ಫೋನ್ ನಂ. 3303.

ಮಕ್ಕಳ ಮಗ್ಗಿಪುಸ್ತಕ

0—1—0

ರಖಂ ಪರಗಳಿಗೆ ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

ಕಳೆದ ತಾ. ೩೦ರಂದು ಬಂಟಕಲ್ಲಿನಲ್ಲಿ ಜರಗಿದ ರಾಜಾಪುರ ಯಾ ಭಾಲಾವಲಿಕಾರ್ ಸಾರಸ್ವತ ಸಮ್ಮೇಲನದಲ್ಲಿ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಉದ್ಘಾಟನಾ ಭಾಷಣ ಮಾಡುತ್ತಿರುವುದು. ಕುಳಿತವರು ಸಭಾಧ್ಯಕ್ಷ ಶ್ರೀ ಮುಕುಂದ ನಾರಾಯಣ ನಾಯಕ್ ಮತ್ತು ಶ್ರೀಗಳಾದ ಟಿ. ಎ. ಪೈ, ಪಾಂಗಾಳ ಜನಾರ್ದನ ನಾಯಕ್.

ಮಹಾತ್ಮರ ಮನನೀಯ ವಿಚಾರಗಳು

ನಮಗೆ ಬೇಕಾದುದೆಷ್ಟು?

ಒಂದು ರೀತಿಯಿಂದ ನೋಡಿದರೆ ನಾವೂ ಕಳ್ಳರೆಂದು ಹೇಳಬೇಕಾಗುವದು. ನನಗೆ ಕೂಡಲೆ ಅಗತ್ಯವಿರದ ಯಾವುದೊಂದು ಒಡವೆಯನ್ನು ತೆಗೆದು ಇಟ್ಟುಕೊಂಡಲ್ಲಿ ನಾನದನ್ನು ಇನ್ನೊಬ್ಬರಿಂದ ಕಸಿದುಕೊಂಡಂತೆ. ನಮ್ಮ ಅವಶ್ಯಕತೆಗಳಿಗಾಗಿ ನಿಸರ್ಗವು ದಿನದಿನಕ್ಕೆ ಬಾಚೂ ತಪ್ಪದೆ, ಸಾಕಷ್ಟನ್ನು ಸೃಷ್ಟಿಸುತ್ತದೆಂದು ನಾನು ಎದೆತಟ್ಟಿ ಹೇಳಬಲ್ಲೆ. ಪ್ರತಿಯೊಬ್ಬರು ತಮಗೆ ಸಾಕಾಗುವಷ್ಟನ್ನು ಮಾತ್ರ ತೆಗೆದುಕೊಂಡರೆ ಜಗತ್ತಿನಲ್ಲಿ ಬಡತನಕ್ಕೆ ಎಡೆ ಇರುತ್ತಿರಲಿಲ್ಲ. ಪ್ರಪಂಚದಲ್ಲಿ ಯಾರೂ ಹೊಟ್ಟೆಗಿಲ್ಲದೆ ಅಸುವ ನೀಗುತ್ತಿರಲಿಲ್ಲ. ಆದರೆ ಎಲ್ಲಿಯ ವರೆಗೆ ನಾವೀ ವಿಷಮತೆಗೆ ಎಡೆಗೊಡುತ್ತಿರುವೆವೊ ಅಲ್ಲಿಯ ವರೆಗೆ ನಾವು ಕದಿಯುತ್ತಿರುವೆವೆಂದು ಹೇಳಬೇಕಾಗುತ್ತದೆ.

ನಾನು ಸಮಾಜವಾದಿಯಲ್ಲ, ಉಳ್ಳವರಿಂದ ಆಸ್ತಿಯನ್ನು ಕಿತ್ತುಕೊಳ್ಳುವ ಆಸೆ ನನಗಿಲ್ಲ; ಆದರೆ ಕತ್ತಲಿಂದ ಬೆಳಕನ್ನು ಕಾಣಬೇಕೆನ್ನುವವರು ಈ ನಿಯಮವನ್ನು ಪಾಲಿಸಬೇಕೆನ್ನುವದು ನನ್ನ ವೈಯಕ್ತಿಕ ಮತವಾಗಿದೆ. ಯಾರ ಆಸ್ತಿಯನ್ನು ಕಿತ್ತುಕೊಳ್ಳುವದೂ ನನಗೆ ಬೇಡ. ಹಾಗೆ ಮಾಡಿದಲ್ಲಿ ಅಹಿಂಸೆಯ ಹಾದಿಯಿಂದ ನಾನು ಕದಲಿದಂತೆ. ನನಗಿಂತ ಯಾರಾದರೂ ಹೆಚ್ಚಿಗೆ ಧೈರ್ಯವುಳ್ಳವರಿದ್ದರೆ, ಇರಲಿ. ಆದರೆ ನನ್ನ ಬಾಳಿನ ನಿಯಮದ ಮಟ್ಟಿಗೆ ಹೇಳುವದಾದರೆ, ನನಗೆ ಬೇಡವಾದುದನ್ನು ಸಂಗ್ರಹಿಸುವದು ನನಗೆ ಬೇಕಾಗಿಲ್ಲವೆಂದು ಹೇಳುವೆ.

ಭಾರತದಲ್ಲಿ ಮೂವತ್ತು ಲಕ್ಷ ಜನರಿಗೆ ಒಪ್ಪೊತ್ತು ಊಟ ಸಿಕ್ಕುತ್ತದೆ, ಅದೂ ಕೇವಲ ಒಂದು ರೊಟ್ಟಿ, ಒಂದು ತುಸು ಉಪ್ಪು ಆದರೆ ಆಯಿತು. ಆದರೆ ಸ್ನಿಗ್ಧ ಪದಾರ್ಥದ ಲವಲೇಶವೂ ಇರುವದಿಲ್ಲ. ಈ ಲಕ್ಷಾವಧಿ ಜನರಿಗೆ ಅನ್ನ ಅರಿವೆ ಹಾಯಾಗಿ ದೊರೆಯುವ ತನಕ ನಮ್ಮ ನಿಮ್ಮ ಹತ್ತಿರದ್ದುದನ್ನು ಇಟ್ಟುಕೊಳ್ಳಲು ನಮಗೆ ಯಾವದೇ ಹಕ್ಕು ಪ್ರಾಪ್ತವಾಗಲಾರದು. ತಿಳಿದವರಾದ ನೀವು— ನಾವು, ನಮ್ಮ ಅವಶ್ಯಕತೆಗಳಲ್ಲಿ ಹೆಚ್ಚು ಕಡಿಮೆ ಮಾಡಿಕೊಳ್ಳಬೇಕು; ಅಂದರೇನೆ ಈ ಈ ಜನರಿಗೆ ರೋಗಕ್ಕೆ ಮದ್ದು, ಹೊಟ್ಟೆಗೆ ಅನ್ನ ಹಾಗು ತೊಟ್ಟುಕೊಳ್ಳಲು ಅರಿವೆ ಸಿಕ್ಕುವಂತಾಗಿದೆ.

●

ವ್ಯಕ್ತಿ, ಪ್ರಜಾಸತ್ತೆ ಹಾಗು ಸಮಾಜ

ಪ್ರಜಾಸತ್ತೆ ಹಾಗು ಶಿಸ್ತು, ದೇಹ ಮತ್ತು ನೆರಳು ಇದ್ದಂತೆ. ಮಾನವೀಯ ಇಲ್ಲವೆ ದೈವಿಕ ಹೀಗೆ ಎಲ್ಲ ಬಗೆಯ ಕಾಯದೆಗಳಿಗೆ ವಾಡಿಕೆಯಾಗಿ ಬಗ್ಗಿ ನಡೆಯುವ ರೂಢಿ ಇರುವಾತನಿಗೆ ಪ್ರಜಾಸತ್ತೆ ಸಹಜವಾಗಿ ಮೈಗೂಡುತ್ತದೆ. ಸ್ವಭಾವದಿಂದ ಹಾಗು ಸಂಸ್ಕಾರದಿಂದ ನಾನು ಪ್ರಜಾಸತ್ತಾವಾದಿಯೆಂದು ಹೇಳಿಕೊಳ್ಳುತ್ತೇನೆ. ಪ್ರಜಾಸತ್ತೆಯ ಸೇವಕರಾಗಬೇಕೆಂಬ ಮಹತ್ವಾಕಾಂಕ್ಷೆಯುಳ್ಳವರು ಪ್ರಜಾಸತ್ತೆಯ ಈ ಪ್ರಥಮ ಒರೆಗಲ್ಲಿನಿಂದ ಪರೀಕ್ಷಿಸಿಕೊಳ್ಳಲಿ. ಪ್ರಜಾಸತ್ತಾವಾದಿಗೆ ಸ್ವಾರ್ಥದ ಲವಲೇಶವೂ ಸೋಕಕೂಡದು. ಸ್ವಂತದ ಇಲ್ಲವೆ ಸ್ವಪಕ್ಷದ ಉತ್ಕರ್ಷ ಕುರಿತು ಕನವರಿಸುವ ಬದಲು ಅವನು ಯಾವಾಗಲೂ ಸಮಸ್ತ ಪ್ರಜೆಗಳ ಚಿಂತನ ಮಾಡುತ್ತಿರಬೇಕು. ಆಗ ಮಾತ್ರ ಆತನಿಗೆ ಅಸಹಕಾರಯೋಗದ ಅಧಿಕಾರ ಪ್ರಾಪ್ತವಾಗುತ್ತದೆ. ಸ್ವಂತದ ತತ್ವಗಳನ್ನು ಬದಿಗಿರಿಸಿ ತನ್ನನ್ನು ತಾನು ಹತ್ತಿಕ್ಕಿಕೊಳ್ಳಬೇಕೆಂದು ನಾನು ಹೇಳುವುದಿಲ್ಲ. ಸಹಜವಾದ ಹಾಗು ಪ್ರಾಮಾಣಿಕ ಮತಭೇದದಿಂದ ನಮ್ಮ ಧ್ಯೇಯಕ್ಕೆ ಕುಂದು ಉಂಟಾಗುವದೆಂದೂ ನನಗನಿಸುವುದಿಲ್ಲ. ಆದರೆ ಸಮಯ ಸಾಧಕತೆ, ಕಣ್ಮರೆಸು ಇಲ್ಲವೆ ಕೃತ್ರಿಮ ಸಂಧಾನಗಳಿಂದ ಹೀಗಾಗುವುದು ಖಚಿತ. ನೀವು ಮತಭೇದವನ್ನು ವ್ಯಕ್ತಪಡಿಸುವದೇ ಅವರೆ ನಿಮ್ಮ ಮತಗಳು ನಿಮ್ಮ ಆಂತರಿಕ ತತ್ವಗಳನ್ನು ಒಡಮೂಡಿಸಬೇಕಲ್ಲದೆ ಕೇವಲ ನಿಮ್ಮ ಪಕ್ಷಕ್ಕೆ ಅನುಕೂಲ ಘೋಷಣೆಗಳೆನಿಸಬಾರದು.

ವೈಯಕ್ತಿಕ ಸ್ವಾತಂತ್ರ್ಯಕ್ಕೆ ನಾನು ಮಹತ್ವಕೊಡುತ್ತೇನೆ. ಆದರೆ ಮನುಷ್ಯನು ಮೂಲತಃ ಸಮಾಜಜೀವಿಯೆಂಬುದನ್ನು ನೀವು ಮರೆಯಕೂಡದು. ಸಾಮಾಜಿಕ ಪ್ರಗತಿಗೆ ಅನುಗುಣವಾಗಿ ತನ್ನ ವ್ಯಕ್ತಿತ್ವವನ್ನು ಒಗ್ಗಿಸಿಕೊಳ್ಳುತ್ತ ಅವನು ತನ್ನ ಸದ್ಯದ ಸ್ಥಾನವನ್ನು ಪಡೆದಿದ್ದಾನೆ. ನಿರಂಕುಶ ವ್ಯಕ್ತಿವಾದವು ಪಾಶವೀ ವ್ಯಕ್ತಿಯ ಕುರುಹಾಗಿದೆ. ವ್ಯಕ್ತಿಸ್ವಾತಂತ್ರ್ಯ ಹಾಗು ಸಾಮಾಜಿಕ ನಿರ್ಬಂಧ ಇವುಗಳ ಸುವರ್ಣ ಮಧ್ಯವನ್ನು ಸಾಧಿಸಲು ನಾವು ಕಲಿತಿದ್ದೇವೆ. ಇಡಿಯ ಸಮಾಜದ ಕಲ್ಯಾಣವನ್ನು ನೆನೆದು ಸ್ವಯಂಪ್ರೇರಣೆಯಿಂದಲೇ ಸಾಮಾಜಿಕ ನಿರ್ಬಂಧಕ್ಕೆ ಒಳಗಾಗುವದರಿಂದ ವ್ಯಕ್ತಿಯ ಏಳ್ಗೆ ಹಾಗು ವ್ಯಕ್ತಿಯನ್ನೊಳಗೊಂಡ ಸಮಾಜದ ಏಳ್ಗೆ ಎರಡೂ ಸಾಧಿಸುತ್ತವೆ.

—ಮಹಾತ್ಮಾ ಗಾಂಧೀ

ಶೀಘ್ರ ಬೆಳವಣಿಗೆ

ಒಟ್ಟು ವ್ಯವಹಾರ ಧನ

1926 — ರೂ. 17,355/-

1936 — ರೂ. 35,45,544/-

1954 — ರೂ. 4,26,07,093/-

1955 — ರೂ. 8,70,31,700/-

1956 ಮಾರ್ಚ 31ಕ್ಕೆ 9 ಕೋಟಿ ರೂಪಾಯಿ

ಇಂತಹ ಬೆಳವಣಿಗೆಗೆ ನಮ್ಮ ಗ್ರಾಹಕರ ಹಿತೇಚ್ಛೆಯೇ ಕಾರಣ — ಗ್ರಾಹಕರಲ್ಲಿ ಹಿತೇಚ್ಛೆ ಬೆಳೆಯಲು ನಮ್ಮ ಸೇವೆಯಲ್ಲಿ ಅವರಿಗುಂಟಾದ ತೃಪ್ತಿಯೇ ಕಾರಣವೆಂದು ನಾವು ನಂಬಿರುವೆವು.

ಮಾನವೀಯ ದೃಷ್ಟಿ, ವೈಯಕ್ತಿಕ ನಿಕಟ ಸಂಪರ್ಕವನ್ನು ನಮ್ಮ ಗ್ರಾಹಕರೊಂದಿಗೆ ಇರಿಸಿಕೊಳ್ಳಬೇಕೆಂದೂ ನಾವು ಬಲ್ಲೆವು.

ನಮ್ಮ ಯಾವುದೇ ಶಾಖೆಗೆ ದಯಮಾಡಿಸಿ ನೀವೇಕೆ ಪರಿಚಯ ಪಡೆಯುವುದಿಲ್ಲ?

ನಾವು ನಿಮ್ಮ 'ಬೇಂಕು' ಆಗಬಯಸುತ್ತೇವೆ.

●

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

Edited, Printed & Published by K. H. Shetty, at the Navayuga press, Udipi S. India

REGD. NO. M. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | VOL. 35

ಉಡುಪಿ, 14—6—1956

ಸಂಚಿಕೆ ೪೧ | NO. 41

ಶೀಘ್ರ ನ್ಯಾಯದಾನ ಆವಶ್ಯಕ

ನಮ್ಮ ಶಾಸನಗಳು ಸರಳವಾಗಿರಬೇಕು; ಮತ್ತು ಜನರಿಗೆ ಶೀಘ್ರವಾಗಿ ನ್ಯಾಯದಾನವು ದೊರಕಬೇಕು ಎಂದು ಹೇಳುತ್ತಾ ಬಂದಿರುವ ಮಾತು ಈಗ ರಾಜ್ಯದ ಪ್ರಮುಖರ ಗಮನವನ್ನು ಸೆಳೆದಿರುವುದು ಶುಭ ಲಕ್ಷಣ. ಕಳೆದ ವಾರ ಕೆಲವು ಸಮಾರಂಭಗಳಲ್ಲಿ ಭಾಗವಹಿಸಿದ ಮದ್ರಾಸು ಹೈಕೋರ್ಟಿನ ನ್ಯಾಯಾಧೀಶರುಗಳೂ ಭಾರತ ಸರಕಾರದ ಅಟರ್ನಿ ಜನರಲರೂ ಈ ವಿಷಯವನ್ನು ಎತ್ತಿ ಮಾತನಾಡಿದರು.

ಸರಕಾರವು ಈಗ ಒಂದು ಆಯೋಗವನ್ನು ಭಾರತದ ಅಟರ್ನಿ ಜನರಲರಾದ ಶ್ರೀ ಎಂ. ಸಿ. ಸೆಟಲ್‌ವಾಡರ ಅಧ್ಯಕ್ಷತೆಯಲ್ಲಿ ನೇಮಿಸಿ, ಈಗಿನ ಶಾಸನಗಳನ್ನು ಪುನರ್ವಿಮರ್ಶಿಸುವ ಕೆಲಸವನ್ನು ಒಪ್ಪಿಸಿ ಕೊಟ್ಟಿದೆ. ಈ ಆಯೋಗವು ಅತ್ಯವಶ್ಯವಾಗಿ ವಿಚಾರಿಸಬೇಕಾದ ಮುಖ್ಯ ವಿಷಯಗಳಲ್ಲಿ ಸರಳ ಶಾಸನ ಮತ್ತು ಶೀಘ್ರ ನ್ಯಾಯದಾನವು ಅಗ್ರ ಸ್ಥಾನವನ್ನು ಪಡೆಯಬೇಕೆಂದು ನಮ್ಮ ಅಭಿಪ್ರಾಯ.

ನಮ್ಮ ಈಗಿನ ಶಾಸನಗಳು ವಿಶೇಷವಾಗಿ ಕಾನೂನಿಗೆ ಸಂಬಂಧಪಟ್ಟ ನಿಯಮಾವಳಿಗಳು, ಆಂಗ್ಲೋಸೇಕ್ಸನರ ಪದ್ಧತಿಯಿಂದ ಪ್ರೇರಿತವಾಗಿವೆ ಎಂದು ಟೀಕಿಸುವವರಿದ್ದಾರೆ. ಆದರೆ ಶ್ರೀ ಎ. ಎಸ್. ಪಿ. ಅಯ್ಯರರು ಹೇಳಿರುವಂತೆ, ನ್ಯಾಯದಾನದ ಮಟ್ಟಿಗೆ ಭಾರತೀಯ ನ್ಯಾಯ ಮತ್ತು ಆಂಗ್ಲರ ನ್ಯಾಯ ವೆಂಬ ವ್ಯತ್ಯಾಸ ಇರುವುದಿಲ್ಲ. ನ್ಯಾಯವು ಎಲ್ಲರಿಗೂ ಒಂದೇಯಾಗಿದೆ. ಸತ್ಯವು ಹೇಗೋ ನ್ಯಾಯವು ಸಹ ಎಲ್ಲ ಜನಕ್ಕೂ ಎಲ್ಲ ಪರಿಸ್ಥಿತಿಯಲ್ಲಿಯೂ ತನ್ನ ಸ್ವರೂಪದಲ್ಲಿ ಬದಲಾವಣೆಯಿಲ್ಲದೆ ಅನ್ವಯವಾಗುತ್ತದೆ.

ಆದರೆ, ಮನುಷ್ಯ ನಿರ್ಮಿತ ನ್ಯಾಯದಾನಪದ್ಧತಿಯಲ್ಲಿ ಕೆಲವು ಲೋಪದೋಷಗಳು ಇರುವುದು ತೀರ ಸಹಜ. ನಮ್ಮ ಎಲ್ಲಬಗೆಯ ಕಾನೂನು ವ್ಯವಹಾರಗಳೂ ಒಂದಲ್ಲದಿದ್ದರೊಂದು ದೃಷ್ಟಿಯಿಂದ ದೋಷಯುಕ್ತವಾಗಿವೆ. ಉದಾಹರಣೆಗೆ ಕ್ರಿಮಿನಲ್ ಕಾನೂನು ವ್ಯಭಿಚಾರವಾಡಿದ ಗಂಡಸನ್ನು ಸೆರೆಮನೆಗೆ ಕಳುಹಿಸುತ್ತದೆ; ಆದರೆ ಯಾರ ಸಹಾಯವಿಲ್ಲದೆ ಆ ಗಂಡಸು ವ್ಯಭಿಚರಿಸುವುದು ಸಾಧ್ಯವಿರಲಿಲ್ಲವೊ ಆ ಹೆಂಗಸನ್ನು ಬಿಟ್ಟುಬಿಡುತ್ತದೆ. ಶ್ರೀಮಂತೆಯಾದ ಹೆಂಡತಿಯು ತನ್ನ ಬಡ ಗಂಡನಿಂದ ಅಶನಾರ್ಥವನ್ನು ಪಡೆಯಬಲ್ಲಳು; ಆದರೆ ಬಡ ಗಂಡನು ಶ್ರೀಮಂತೆಯಾದ ಹೆಂಡತಿಯಿಂದ ಈ ಸೌಕರ್ಯವನ್ನು ಪಡೆಯಲಾರನು.

ಆದುದರಿಂದ ಯಾವುದು ನ್ಯಾಯ, ಯಾವುದು ಅನ್ಯಾಯ ಎಂಬುದನ್ನು ಸರ್ವಸಮ್ಮತ ರೀತಿಯಲ್ಲಿ ತೀರ್ಮಾನಿಸ ಹೋಗುವುದು ಬಹಳ ತ್ರಾಸದಾಯಕವಾದ ಕೆಲಸ. ಮಾನವನ ಜ್ಞಾನಕ್ಕಿದೊಂದು ಆಹ್ವಾನ. ಆದುದರಿಂದ ಹಿಂದಿನ ಕಾಲದಲ್ಲಿ ದೇಶ, ಕಾಲ, ಸ್ಥಳಗಳಿಗನುಸಾರವಾಗಿ ನ್ಯಾಯ ದಾನವನ್ನು ಮಾಡುತ್ತಿದ್ದರು; ಈ ನ್ಯಾಯದಾನದ ಕೆಲಸವು ಧರ್ಮವೆಂಬ ಅದ್ವಿತೀಯ ಶಬ್ದದ ವ್ಯಾಖ್ಯೆಗನುಗುಣವಾಗಿರುತ್ತಿತ್ತಲ್ಲದೆ ಮಹಾಜ್ಞಾನಿಗಳೂ ತಪೋಧನರೂ ಸಜ್ಜನರೆಲ್ಲರ ಗೌರವಾದರಗಳಿಗೆ ಪಾತ್ರರಾದವರೂ ಆದ ಋಷಿ, ಮುನಿಗಳಿಂದ ನಿರ್ವಹಿಸಲ್ಪಡುತ್ತಿದ್ದಿತು. ರಾಜ-ಮಹಾರಾಜರುಗಳು ಸಹ ಧರ್ಮಸಂದೇಹ ತಲೆದೋರಿದಾಗ ಇವರನ್ನೆ ಆಶ್ರಯಿಸುತ್ತಿದ್ದರು.

ನಾವು ಹಿಂದಿನ ವಾತಾವರಣವನ್ನೆ ಈಗ ಸೃಷ್ಟಿಸಲು ಸಾಧ್ಯವಿಲ್ಲವೆಂಬುದು ನಿಜ. ಆದುದರಿಂದ ಈಗಿನ ಕಾಲಕ್ಕೆ ತಕ್ಕುದಾದ ರೀತಿಯಲ್ಲಿಯೇ ನಾವು ನ್ಯಾಯದಾನ ಪದ್ಧತಿಯನ್ನು ಪುನರ್ಘಟಿಸಲುಹೋಗಬೇಕು. ಪ್ರಜಾಪ್ರಭುತ್ವಕ್ಕೆ ಅನನ್ಯವೃಕ ಮಹತ್ವವು ಪ್ರಾಪ್ತವಾಗಿರುವ ಈ ದಿನಗಳಲ್ಲಿ ಶಾಸನ, ಆಡಳಿತಗಳಂತೆ ನ್ಯಾಯದಾನವೂ ಈ ಪದ್ಧತಿಯ ಪ್ರಮುಖ ಅಂಗವಾಗಿರುತ್ತದೆ. ನ್ಯಾಯದಾನವು ತೀರ ಸ್ವತಂತ್ರವಾಗಿರಬೇಕು ಎಂಬುದು ಪ್ರಜಾಪ್ರಭುತ್ವದ ವೈಶಿಷ್ಟ್ಯಪೂರ್ಣ ಸಿದ್ಧಾಂತ.

ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವಗಳಿಗಿಂತಲೂ ನ್ಯಾಯವೇ ಹೆಚ್ಚಿನದೆಂದು ನಮ್ಮ ಘಟನೆಯು ಹೇಳುತ್ತದೆ ಮೊದಲಿನ ಮೂರೂ ಅಂಶಗಳು ಪ್ರಜಾಪ್ರಭುತ್ವದಲ್ಲಿ ನ್ಯಾಯ ಸಮ್ಮತ ರೀತಿಯಲ್ಲಿಯೇ ವ್ಯಕ್ತವಾಗಬೇಕಾಗಿವೆ. ಆದುದರಿಂದ ಪ್ರಜಾಪ್ರಭುತ್ವದ ಸರ್ವ ಗುಣಗಳು ನ್ಯಾಯದಾನದ ಪಾವಿತ್ರ್ಯವನ್ನು ಆಧರಿಸಿರುತ್ತವೆ ಎನ್ನಬಹುದು. ನಿತ್ಯ ವ್ಯವಹಾರಗಳಲ್ಲಿ ಪ್ರಜೆಗಳನ್ನು ಆಡಳಿತವು ಎಷ್ಟುಮಟ್ಟಿಗೆ ಸುಖಿಯಾಗಿ ಮಾಡುವುದೆಂಬುದು ಪ್ರಜಾಪ್ರಭುತ್ವದ ಯಶಸ್ಸಿನ ಮಾನದಂಡ ಹೇಗೋ ಹಾಗೆಯೇ ಸಂದಿಗ್ಧ ಪ್ರಸಂಗಗಳಲ್ಲಿ ನ್ಯಾಯದಾನ ಪದ್ಧತಿಯು ಜನಗಳ ಕಲ್ಯಾಣವನ್ನೆಂತುಮಾಡುವುದೆಂಬುದು ಸಹ ಪ್ರಜಾಪ್ರಭುತ್ವದ ಪ್ರಯೋಜನವನ್ನು ಅಳೆಯುವ ಇನ್ನೊಂದು ಮಾನದಂಡ.

ಆದುದರಿಂದ ನ್ಯಾಯದಾನ ಪದ್ಧತಿಯು ಆಡಳಿತದಂತೆಯೇ ತೀರ ಸರಳವೂ ಸುಗಮವೂ ಆಗಿರಬೇಕು. ತಾಲೂಕು ಕಚೇರಿಯ ಮುಂದೆ ಅರ್ಜಿ ಹಿಡಿದು ಗಂಟೆಗಟ್ಟಳೆ ಕಾದು ಕುಳಿತಿರಬೇಕಾಗುವ ಮತ್ತು ದೂರದ ಹಳ್ಳಿಯಿಂದ ಪ್ರತಿ ದಿನ ಈ ಅರ್ಜಿಯ ಸಂಬಂಧದ ವಿಚಾರಣೆಗೆಂದು ನಡೆದು ಬರಬೇಕಾಗುವ ಪ್ರಸಂಗವೆಂತು ಆಡಳಿತ ರಂಗದಲ್ಲಿ ತಪ್ಪಬೇಕೋ ಅಂತೆಯೇ ನ್ಯಾಯದಾನ ಕ್ಷೇತ್ರದಲ್ಲಿಯೂ ತಂಟೆ-ತಗಾದೆಗಳೂ, ದೂರು-ಅಪರಾಧಗಳು ವಿಳಂಬವಿಲ್ಲದೆ ಇತ್ಯರ್ಥ ಹೊಂದಬೇಕು. ಪ್ರತಿಯೊಂದೂ ಅರ್ಜಿಯನ್ನು ಅರ್ಧಮರ್ಧ ವಿಚಾರಿಸಿ ಅಡಿಗೆ ಹಾಕಿ, ನಾಲ್ಕಾರು ತಿಂಗಳುಗಳ ಬಳಿಕ, ಅಥವಾ ಏಳೆಂಟು ವರ್ಷಗಳ ಬಳಿಕ ತೀರ್ಮಾನವನ್ನು ಹೇಳುವ ಹವ್ಯಾಸ ಮತ್ತು ಅಭ್ಯಾಸ ಆದಷ್ಟು ಕಡಿಮೆಯಾಗಬೇಕು.

ಶಾಸನಗಳು ಸರಳವಾಗಿಲ್ಲದಿರುವುದರಿಂದ ಮತ್ತು ಜನರಿಗೆ ಅರ್ಥವಾಗುವಂತಿಲ್ಲದಿರುವುದರಿಂದ ನ್ಯಾಯಸ್ಥಾನಕ್ಕೆ ಅಲೆದಾಡಬೇಕಾದ ಪ್ರಸಂಗಗಳು ಅಧಿಕವಾಗುತ್ತವೆ. ಇದನ್ನು ನಮ್ಮ ಶಾಸನಕರ್ತರು ಅವಶ್ಯವಾಗಿ ಗಮನಿಸಬೇಕು. ಹಾಗೆಯೇ ನ್ಯಾಯದಾನಪದ್ಧತಿಯನ್ನು ಸುಗಮಗೊಳಿಸಿ, ಶೀಘ್ರವಾಗಿ ಪ್ರಕರಣವು ತೀರ್ಮಾನವಾಗುವುದಕ್ಕೆ ಅನುಕೂಲಿಸುವಂತೆ, ಚಲಿಸುವ ನ್ಯಾಯಾಲಯಗಳಿರಬೇಕು. ಇದರಿಂದ ಕಕ್ಷಿಗಾರರು ಪ್ರತಿಸಲವೂ ತಮ್ಮ ಸಾಕ್ಷಿಗಾರರ ಸಮೂಹದೊಡನೆ ದೂರದ ನ್ಯಾಯಾಲಯಕ್ಕೆ ಓಡುವ ಪ್ರಸಂಗ ತಪ್ಪುತ್ತದೆ. ಅಲ್ಲದೆ ವಕೀಲರಾದವರು ಸಹ ಒಂದೇ ಸ್ಥಳದ ಹಲವಾರು ಕೇಸುಗಳನ್ನು ಕೈಗೆ ತೆಗೆದುಕೊಂಡು, ಏಕಕಾಲದಲ್ಲಿ ಹಲವು ನ್ಯಾಯ ಸ್ಥಾನಗಳಲ್ಲಿ ಇರಬೇಕಾದ ಆವಶ್ಯಕತೆಯನ್ನು ತಪ್ಪಿಸಲು ಏನೇನೋ ನೆಪಹೇಳಿ ನ್ಯಾಯಸ್ಥಾನದ ಸಮಯವನ್ನು ವ್ಯರ್ಥಗೊಳಿಸುವ ಸಂಭವವೂ ನಿವಾರಣೆಯಾಗುತ್ತದೆ.

ವಕೀಲರಾದವರು ಅಡ್ಡ ಪ್ರಶ್ನೆಗಳನ್ನು ಆದಷ್ಟು ಕಡಿಮೆಮಾಡಿದರೆ, ನ್ಯಾಯಸ್ಥಾನದಲ್ಲಿ ಪ್ರಕರಣದ ಇತ್ಯರ್ಥಕ್ಕೆ ವಿಳಂಬವಾಗುವುದಿಲ್ಲವೆಂದು ಅಟರ್ನಿ ಜನರಲರು ಒಂದು ಸೂಚನೆಯನ್ನು ಮುಂದಿಟ್ಟಿದ್ದಾರೆ. ಅವಶ್ಯವಿದ್ದುದಕ್ಕಿಂತ ಹೆಚ್ಚು ಅಡ್ಡ ಪ್ರಶ್ನೆಗಳನ್ನು ಹಾಕಬಾರದು ಎಂದವರಭಿಪ್ರಾಯ. ಈ ಆಯೋಗವು ನ್ಯಾಯದಾನಪದ್ಧತಿಯಲ್ಲಿ ಆಸಕ್ತಿಯುಳ್ಳ ಜನರನ್ನು ವಿಚಾರಿಸುತ್ತಾ ಹೋದಂತೆ ಈ ಬಗೆಯ ಬೇರೆ ಸೂಚನೆಗಳು ಸಹ ಅದರ ಗಮನಕ್ಕೆ ಬರಬಹುದು. ಅಂತೂ ಜನರ ಮನಸ್ಸಿಗೆ ಸುಲಭದಲ್ಲಿ ಅರ್ಥವಾಗುವಂತೆ ಶಾಸನಗಳೂ ವಿಧಿನಿಯಮಗಳೂ ಇರಬೇಕು; ಮತ್ತು ನ್ಯಾಯದಾನ ಪದ್ಧತಿಯು ತೀರ ಸರಳವಾಗಿದ್ದು ನ್ಯಾಯವನ್ನು ಅಪೇಕ್ಷಿಸುವವರಿಂದ ದೊಡ್ಡ ಮೊತ್ತದ ಹಣವನ್ನು ವೆಚ್ಚಮಾಡಿಸುವಂತಿರಕೂಡದು. ಭಾರತದಂಥ ಬಡ ಹಾಗು ನಿರಕ್ಷರ ಕುಕ್ಷಿ ಜನರುಳ್ಳ ದೇಶಕ್ಕೆ ಈ ಸೌಲಭ್ಯಗಳಿಲ್ಲದೆ ಹೋದರೆ ಪ್ರಜಾಪ್ರಭುತ್ವದ ಸವಿ ಉಣ್ಣಲು ಸಿಗದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕೆಲೆಂಡರಿನ ಸುಧಾರಣೆ ನಡೆದ ಕತೆ

ಜಗತ್ತಿಗೆ ಒಂದೇ ಪಂಚಾಂಗವಿರಬೇಕೆಂದು ಭಾರತ ಸರಕಾರದ ಅಭಿಪ್ರಾಯ

ಕಾಲಚಕ್ರವು ಉರುಳುತ್ತಲೇ ಇರುತ್ತದೆ. ಇನ್ನಿಲ್ಲವಾದ ನಿನ್ನೆಯಷ್ಟೇ ಹುಟ್ಟಿ ಬರಲಿರುವ ನಾಳೆಯ ಅನುಭವವೂ ಅದ್ಭುತ ರಮ್ಯವಾಗಿರುತ್ತದೆ. ಪ್ರಾಚೀನ ಕಾಲದಿಂದಲೂ ಜನರನ್ನು ಬಿಡದೆ ಬರುತ್ತಿರುವ ಹಗಲು ಮತ್ತು ರಾತ್ರಿಗಳು, ಕೆಲವೊಮ್ಮೆ ದೀರ್ಘವಾಗಿಯೂ ಮತ್ತೆ ಕೆಲವೊಮ್ಮೆ ಸಣ್ಣದಾಗಿಯೂ ಇರುವ ಈ ದಿನಮಾನಗಳು, ಮನುಷ್ಯನನ್ನು ಚಕಿತಗೊಳಿಸಿರುತ್ತವೆ.

ಸಾಮಾನ್ಯ ಮನುಷ್ಯನಿಗೆ ಸಹ ಅರ್ಥವಾಗುವ ರೀತಿಯಲ್ಲಿ ಸಮಯವನ್ನು ಅಳೆದು ಹೇಳುವ ವಿಚಾರವು ನಾಗರಿಕತೆಯ ತೀರ ಮೊದಲಿನ ಅವಸ್ಥೆಯಲ್ಲಿಯೇ ಪ್ರಾಬಲ್ಯಕ್ಕೆ ಬಂದಿತ್ತೆಂದು ಹೇಳಬಹುದು. ಕ್ರಿಸ್ತಪೂರ್ವ ೨೫೦೦ ವರ್ಷಗಳ ಹೊತ್ತಿಗೆ, ಬೆಬಿಲೋನಿಯ ಮಹಾ ಸಾಮ್ರಾಜ್ಯದ ದಿನಗಳಿಗೆ ತುಸು ಮುಂಚೆ, ಮೆರೆದಿದ್ದ ಸಿಂಧು ಪ್ರದೇಶದ ನಾಗರಿಕತೆಯ ಕಾಲದಲ್ಲಿ ಸಾಮಾಜಿಕ ಹಾಗು ಧಾರ್ಮಿಕ ಸಮಾರಂಭಗಳಿಗೆ ಪ್ರಶಸ್ತವಾದ ಕಾಲವನ್ನು ನಿರ್ಣಯಿಸುವ, ಸಮಯವನ್ನು ಅಳೆದು ತೋರಿಸುವ ಪದ್ಧತಿಯು ರೂಢಿಯಲ್ಲಿದ್ದಿತು.

ವೈದಿಕ ಆರ್ಯರ ಆಗಮನವಾದ ಬಳಿಕ, ಸಮಯವನ್ನು ಅಳೆದು ನೋಡುವ ಕಲೆಯಲ್ಲಿ ಪರಿಣತಿಯು ತೀರ ಅತ್ಯಾವಶ್ಯಕವೆನಿಸಿತು. ಕೇವಲ ಧಾರ್ಮಿಕ ಸಮಾರಂಭಗಳಿಗಾಗಿಯಷ್ಟೇ ಅಲ್ಲ, ಆರ್ಥಿಕ ದೃಷ್ಟಿಕೋಣದಿಂದಲೂ ಸಮಯವನ್ನು ಅಳೆಯುವ ವಿಧಾನವು ಅಗತ್ಯವಾಗಿದೆ ಎಂದವರು ಕಂಡುಕೊಂಡರು.

ಮುಖ್ಯವಾಗಿ ಕೃಷೀವಲರಾಗಿದ್ದ ಆರ್ಯರು ಮಳೆಯು ಯಾವಾಗ ಬರುವುದೆಂಬುದನ್ನೂ ಬೀಜವನ್ನು ಯಾವಾಗ ಬಿತ್ತಿದರೆ ಫಸಲು ಒಳ್ಳೆಯದಾಗುವುದೆಂಬುದನ್ನೂ ಫಸಲನ್ನು ಕೊಯ್ಯಲು ಪ್ರಶಸ್ತ ದಿನವು ಯಾವುದೆಂಬುದನ್ನೂ ಗುಣಿಸಿ ನೋಡಲು ಹತ್ತಿದರು. ಕಾಲ ವಿಭಜನೆ, ಸಮಯದ ಅಳತೆಗಳಿಗೆ ಹೀಗೆ ಅವರು ವಿಶೇಷ ಮಹತ್ವವನ್ನಿತ್ತರು. ದೇವರ ಪೂಜೆ ಮತ್ತು ವಿವಾಹಾದಿ ಸಮಾರಂಭಗಳಿಗೆಂತೋ ಕೃಷಿ ಕ್ಷೇತ್ರದ ಚಟುವಟಿಕೆಗೆ ಸಹ "ಶುಭ ಮುಹೂರ್ತ"ಗಳನ್ನು ಕೇಳಿ ತಿಳಿದುಕೊಳ್ಳುವುದು ಹಿತಕರವೆಂದವರು ನಂಬಿದ್ದರು.

ಋಗ್ವೇದ ಮತ್ತಿತರ ಪ್ರಾಚೀನ ಗ್ರಂಥಗಳಲ್ಲಿ ಸಹ ಶರದೃತು, ಹೇಮಂತ ಋತು ಇತ್ಯಾದಿಗಳ ವರ್ಣನೆಯನ್ನು ನಾವು ನೋಡಬಹುದು. ಈ ಋತುಮಾನಗಳಿಗೆ ಸಂಬಂಧಿಸಿ ತಿಂಗಳುಗಳ ಹೆಸರುಗಳೂ ಕೆಲವು ನಕ್ಷತ್ರಗಳೂ ಪ್ರಾಚೀನವಾದೀ ಸಾಹಿತ್ಯದಲ್ಲಿ ಉಲ್ಲೇಖಗೊಂಡಿವೆ. ಋಗ್ವೇದದಲ್ಲಿ ಗ್ರಹಗಳ ಉಲ್ಲೇಖಮಾತ್ರ ವಿರಳವಾಗಿಯೇ ದೊರಕುತ್ತದೆ. ಗ್ರಹಗಳ ಮಟ್ಟಿಗೆ ಬೆಬಿಲೋನಿಯದ ನಾಗರಿಕತೆಯ ಕಾಲದಲ್ಲಿಯೇ ವಿಶೇಷ ಸಂಶೋಧನೆ ನಡೆಯಿತೆಂದು ಹೇಳಬಹುದು.

ಮೂವತ್ತು ದಿನಗಳುಳ್ಳ ಒಂದು ತಿಂಗಳು, ಹನ್ನೆರಡು ತಿಂಗಳುಳ್ಳ ಒಂದು ವರ್ಷ ಎಂಬುದಾಗಿ ಋಗ್ವೇದ ಕಾಲದಲ್ಲಿ ಆರ್ಯರು ಕಾಲವನ್ನು ಅಳೆದಿದ್ದರು. ಕ್ರಿಸ್ತಪೂರ್ವ ೧೩೦೦—೨೫೦ ವರ್ಷಗಳ ವರೆಗೆ ಮೆರೆದಿದ್ದ ವೇದಾಂಗ ಜ್ಯೋತಿಷವೆಂಬ ವಿಜ್ಞಾನ ಶಾಖೆಯು ಭಾರತದಲ್ಲಿ ಅನೇಕ ಅನುಯಾಯಿಗಳನ್ನು ಪಡೆದಿತ್ತಲ್ಲದೆ, ವಿದೇಶಿ ವರ್ಚಸ್ಸಿನಿಂದಲೂ ದೂರವಾಗಿತ್ತೆಂದು ತಿಳಿದುಬರುತ್ತದೆ.

ಕ್ರಿಸ್ತಶಕ ೪೦೦ನೇ ವರ್ಷದ ಹೊತ್ತಿಗೆ ಭಾರತೀಯ ಜ್ಯೋತಿಷ್ಕರು ಸೂರ್ಯ ಸಿದ್ಧಾಂತವನ್ನು ಬರೆದರು. ಈ ವೈಜ್ಞಾನಿಕ ಸಿದ್ಧಾಂತವನ್ನು ಹಿಂದಿನಿಂದ ವರಾಹಮಿಹಿರ, ಆರ್ಯಭಟ್ಟ ಮತ್ತಿತರ ಪ್ರತಿಭಾವಂತರು ಬೆಳೆಯಿಸಿದರು. ಭಾಸ್ಕರಾಚಾರ್ಯರ ಸಿದ್ಧಾಂತ ಶಿರೋಮಣಿ ಎಂಬುದು ಸಹ ಇಷ್ಟೇ ಪ್ರಮುಖ್ಯವಾದ ಶಾಸ್ತ್ರವಿಭಾಗವಾಗಿದೆ. ಆದರೆ ಪಂಡಿತರು ಹೆಚ್ಚಿದಂತೆ, ಭಾರತದಲ್ಲಿ ಬೇರೆಬೇರೆ ಶಕಗಳನ್ನು ಅನುಸರಿಸುವ ಮತ್ತು ಬೇರೇಬೇರೆ ಸಿದ್ಧಾಂತಗಳನ್ನು ಅನುಸರಿಸುವ ಪರಿಪಾಟವೂ ಬೆಳೆಯಿತು. ಇಂದಿಗೂ ಇದು ತಪ್ಪಿಲ್ಲ.

ಆರ್ಯರು ಪ್ರಾಚೀನಕಾಲದ ಪಾಶ್ಚಾತ್ಯ ರಾಷ್ಟ್ರಗಳಲ್ಲಿಯ ಜ್ಯೋತಿರ್ವಿಜ್ಞಾನದ ಮೇಲೆ ಏನು ಪ್ರಭಾವವನ್ನು ಬೀರಿದರು, ಮತ್ತಿದಕ್ಕೆ ಪ್ರತಿಯಾಗಿ ಭಾರತೀಯರು ಪಾಶ್ಚಾತ್ಯರಿಂದ ಹೇಗೆ ಪ್ರಭಾವಿತರಾದರು ಎಂಬುದನ್ನು ತಿಳಿದುಕೊಂಡರೆ ಅದು ಅಪ್ರಸ್ತುತವಾಗಲಾರದು. ಭಾರತದಲ್ಲಿ ಹಲವು ಬಗೆಯ ಪಂಚಾಂಗಗಳನ್ನು ನಾವಿಂದು ಅನುಸರಿಸುತ್ತಿರುವುದಕ್ಕೆ ನಮ್ಮಲ್ಲಿ ಹುಟ್ಟಿಕೊಂಡ ಸಿದ್ಧಾಂತಗಳಲ್ಲಿಯ ವೈವಿಧ್ಯದಷ್ಟೇ ವಿದೇಶಗಳಲ್ಲಿಯ ಪದ್ಧತಿಗಳು ಬೀರಿದ ವರ್ಚಸ್ಸು ಸಹ ಕಾರಣವಾಗಿದೆ ಎಂಬುದನ್ನು ಅಲ್ಲಗಳೆಯಲಾಗದು.

ಮೊದಲೇ ಹೇಳಿದಂತೆ, ಆರ್ಯರಿಗೆ ಕೃಷಿಕ್ಷೇತ್ರದ ಚಟುವಟಿಕೆಗಳಿಗಾಗಿ ಸಹ ಕಾಲವನ್ನು ಅಳೆದು ಸಮಯಾನುಕೂಲತೆಯನ್ನು ನಿರ್ಧರಿಸುವುದು ಅವಶ್ಯವೆಂಬ ಪರಿಜ್ಞಾನವಿದ್ದಿತು. ವೈದಿಕ ನಾಗರಿಕತೆಯು ಸಂಶೋಧಿಸಿದ ಕಾಲಮಾನದ ಪದ್ಧತಿಯನ್ನು ಆ ಸಮಯದ ಇತರ ನಾಗರಿಕ ದೇಶಗಳು ಸಹ ಆರ್ಯರು ಬಳಸಿದ ಉದ್ದೇಶಗಳಿಗಾಗಿಯೇ ಬಳಸಹತ್ತಿದರು.

ಯಜುರ್ವೇದವು ಅಸ್ತಿತ್ವಕ್ಕೆ ಬಂದ ಸಮಯದಷ್ಟಕ್ಕೆ ವೇದಾಂತ ಜ್ಯೋತಿಷವು ಪರಿಪಕ್ವಾವಸ್ಥೆಯನ್ನು ಹೊಂದಿದ್ದಿತು: ಆದುದರಿಂದ ವಸಂತ ಋತುವಿನಲ್ಲಿ ಸೂರ್ಯನು ಭೂಮಧ್ಯ ರೇಖೆಯನ್ನು ದಾಟುವನೆಂಬ ತಿಳಿವಳಿಕೆಯು ಆ ಕಾಲದ ಆರ್ಯರಿಗಿದ್ದಿತು. ಇದಕ್ಕಾಗಿಯೇ ಅವರು ಹೀಗೆ ಭೂಮಧ್ಯ ರೇಖೆಯನ್ನು ಸೂರ್ಯನು ದಾಟುವ ದಿನದಿಂದ ಹೊಸ ವರ್ಷವನ್ನು ಲೆಕ್ಕ ಹಾಕುವ ಸಂಪ್ರದಾಯವನ್ನಿಟ್ಟುಕೊಂಡಿದ್ದರು. ಸೂರ್ಯನು ಇಂಥ ದಿನವೇ ಭೂಮಧ್ಯ ರೇಖೆಯನ್ನು ದಾಟಿ ಹೋಗುವನೆಂದು ಅವರೆಂತು ಕಂಡು ಹಿಡಿದರೆಂಬುದು ಇನ್ನೂ ಸ್ಪಷ್ಟಗೊಂಡಿಲ್ಲ; ಇರಲಿ.

ಮಹಾಭಾರತದಲ್ಲಿ ಬರುವ ಉದಂಕನ ಕತೆಯು ವರ್ಷಕ್ಕೆ ಹನ್ನೆರಡು ತಿಂಗಳುಗಳೆಂದೂ ಇವನ್ನು ಪ್ರತಿ ಎರಡು ತಿಂಗಳಿಗೊಂದರಂತೆ ಆರು ಋತುಗಳಲ್ಲಿ ವಿಭಾಜಿಸಲಾಗಿದೆಯೆಂದೂ ಹೇಳುತ್ತದೆ. ಆದರೆ ಸೌರ ವರ್ಷವು ೩೬೫.೧/೪ ದಿನಗಳುಳ್ಳದ್ದಾಗಿರುವುದರಿಂದ ಆರ್ಯರಿಗೆ ಬಹು ಬೇಗನೆ ತಮ್ಮ ವರ್ಷದ ಅವಧಿಯು ಬಹಳ ಗಿಡ್ಡವಾಗಿದೆ ಎಂದು ಗೊತ್ತಾಯಿತು. ಆದುದರಿಂದ ಅವರು ಅಧಿಕಮಾಸಗಳನ್ನು ಕೆಲವೊಂದು ವರ್ಷಗಳಿಗೆ ಸೇರಿಸುವ ಮೂಲಕ ಈ ಕೊರತೆಯನ್ನು ನಿವಾರಿಸಲು ನೋಡಿದರು. ಪ್ರತಿ ಐದು ವರ್ಷಗಳಿಗೆ ಒಂದು ಅಧಿಕಮಾಸವನ್ನು ಸೇರಿಸುವುದು ಅವರ ಸಂಪ್ರದಾಯ. ಪ್ರಾಯಶಃ "ಯುಗ"ವೆಂದು ಏನನ್ನು ನಾವಿಂದು ಕರೆಯುತ್ತೇವೋ ಆ ಕಲ್ಪನೆ ಸಹ ಪ್ರಾಯಶಃ ಮಹಾಭಾರತ ಕಾಲದಲ್ಲಿಯೇ ಉಂಟಾಯಿತು.

ಶಾತವಾಹನರು ಆಳುತ್ತಿರುವವರೆಗೆ (ಕ್ರಿಸ್ತ ಶಕ ೨೦೦) ವೇದಾಂತ ಜ್ಯೋತಿಷವು ಭಾರತೀಯ ಅರಸರಿಂದ ಪೋಷಣೆಯನ್ನು ಹೊಂದಿತು. ಅನಂತರ ಪ್ರಾಯಶಃ ಸಿದ್ಧಾಂತ ಜ್ಯೋತಿಷವು ರಾಜ ಮನ್ನಣೆಗೆ ಪಾತ್ರವಾಯಿತು. ಆದರೆ ಕ್ರಿಸ್ತ ಶಕ ೪೦೦ ನೇ ವರ್ಷಕ್ಕೂ ಮುಂಚೆ ಇಂಥ ರಾಜಮನ್ನಣೆ ಪಡೆದ ನಿದರ್ಶನವು ನಮಗೆ ದೊರೆತಿಲ್ಲ. ಪಂಜಾಬು ಮತ್ತು ಗಂಗೆಯ ಬಯಲುಗಳ ಮೇಲೆ ಈ ಮಧ್ಯಾವಧಿಯಲ್ಲಿ ನಿರಂತರವಾಗಿ ನಡೆದ ಧಾಳಿಯು—ಮೆಸಿಡೋನಿಯರು, ಗ್ರೀಕರು, ಪಲ್ಲವ ಅಥವಾ ಪಾರ್ಥಿಯಾನರು, ಶಕರು, ಕುಶಾನರು ಎಲ್ಲರೂ ಮುನ್ನುಗ್ಗಿ ಬಂದ ರಭಸವು—ಭಾರತದ ನಾಗರಿಕ ಪ್ರದೇಶಗಳ ಶಾಂತಿ, ಸುವ್ಯವಸ್ಥೆಗಳನ್ನು ಭಂಗಪಡಿಸಿತು. ಆದುದರಿಂದ ಜ್ಯೋತಿರ್ವಿಜ್ಞಾನದ ಕುರಿತು ಆಲೋಚಿಸುವಷ್ಟು ಜನರಲ್ಲಿ ನೆಮ್ಮದಿ ಇರಲಿಲ್ಲ.

ಭಾರತೀಯ ರಂಗದಲ್ಲಿ ಹೀಗೆ ವಿಪ್ಲವ ತಲೆದೋರಿದ್ದಾಗ, ಅತ್ತ ಯುರೋಪ್ಯ ಹಾಗು ಮಧ್ಯಪೂರ್ವದ ರಾಷ್ಟ್ರಗಳಲ್ಲಿ ಜ್ಯೋತಿರ್ವಿಜ್ಞಾನದ ಬಗ್ಗೆ ಹೆಚ್ಚಿನ ಆಸಕ್ತಿ ಕುದುರಿತು. ಗಣಿತ ಶಾಸ್ತ್ರದ ಜ್ಞಾನವು ವಿಶೇಷವಾಗಿ ಬೆಳೆಯಹತ್ತಿತು. ಆದಾಗ್ಯೂ ಆಕಾಶದಲ್ಲಿ ಚಲಿಸುವ ಗ್ರಹ, ನಕ್ಷತ್ರಾದಿಗಳ ಸ್ಥಾನವನ್ನು ಗಣಿತ ಸೂತ್ರಗಳ ಚೌಕಟ್ಟಿಗೊಳಪಡಿಸುವುದು ಸುಲಭಸಾಧ್ಯವಾದೀತೆಂಬ ನಂಬಿಕೆ ಬಹುಕಾಲದ ವರೆಗೆ ಮೂಡಿಬರಲಿಲ್ಲ.

ಕ್ರಿಸ್ತ ಶಕ ನಾಲ್ಕನೇ ಶತಮಾನದಲ್ಲಿ ಭಾರತೀಯರು ದಶಮಾಂಶ ಪದ್ಧತಿಯನ್ನು ಅನ್ವೇಷಿಸಿದರು. ಇದನ್ನು ಗ್ರೀಕರೂ ಸಿಥಿಯಾನರೂ ಕೂಡಲೇ ಅನುಸರಿಸಿದರು; ಹಿಂದಿನಿಂದ ಪಹ್ಲವಿ ಅರಸರ ಆಳಿಕೆಯ ಹೊತ್ತಿಗೆ ಅರಬರು ಸಹ ಈ ಪದ್ಧತಿಯನ್ನು ಸ್ವೀಕರಿಸಿದರು. ಈ ಅರಬರೇ ಆಕಾಶದಲ್ಲಿ ತೋರುತ್ತಿರುವ ಗ್ರಹ, ನಕ್ಷತ್ರಗಳ ಚಲನೆ ಮತ್ತು ವೈಶಿಷ್ಟ್ಯಗಳ ನಿಷ್ಕರ್ಷೆಗೆ ಭಾರತೀಯ ಗಣಿತ ಶಾಸ್ತ್ರದ ಸಹಾಯವನ್ನು ಅಮಿತ ಪ್ರಮಾಣದಲ್ಲಿ ಉಪಯೋಗಿಸಿಕೊಂಡು, ಯಶಸ್ವಿ ಸಂಶೋಧನೆಗಳನ್ನು ನಡೆಸಿದರು.

(೧೧ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI

ಶ್ವೇತೇತರರ ಅಗ್ನಿಕುಂಡ -- ದಕ್ಷಿಣ ಆಫ್ರಿಕ

ವರ್ಣಭೇದ ಧೋರಣೆಯ ನರಕ ಪೀಡನೆ

ಸಂಯುಕ್ತ ರಾಷ್ಟ್ರಸಂಘದ ಹತ್ತನೇ ವಾರ್ಷಿಕಾಧಿವೇಶನದಲ್ಲಿ ಸ್ವೀಕರಿಸಲಾದ ಒಂದು ಗೊತ್ತುವಳಿಯಂತೆ, ಭಾರತ ಸರಕಾರವು ತಾನೇ ಉಪಕ್ರಮಿಸಿ, ದಕ್ಷಿಣ ಆಫ್ರಿಕ ಸರಕಾರಕ್ಕೆ ಈಚೆಗೆ ಪತ್ರವೊಂದನ್ನು ಬರೆದು, ಅಲ್ಲಿರುವ ಭಾರತೀಯರ ಪ್ರಶ್ನೆಯನ್ನು ನೇರ ಮಾತುಕತೆಗಳ ಮೂಲಕ ಪರ್ಯಾಲೋಚಿಸುವ ವಿಷಯ ಪ್ರಸ್ತಾಪಿಸಿದೆ ಎಂದೀಗ ತಿಳಿದುಬಂದಿದೆ. ದಕ್ಷಿಣ ಆಫ್ರಿಕ ಸರಕಾರದ ವರ್ಣಭೇದ ನೀತಿಯ ಕರಾಳ ಪರಿಣಾಮಗಳಿಗೆ ತುತ್ತಾದವರಲ್ಲಿ ಭಾರತೀಯ ವಲಸೆಗಾರರೂ ಸೇರಿದ್ದಾರೆ.

ಮಹಾತ್ಮಾಗಾಂಧಿಯವರು ತಮ್ಮ ರಾಜಕೀಯ ಜೀವನವನ್ನು ಇದೇ ದಕ್ಷಿಣ ಆಫ್ರಿಕದಲ್ಲಿ ತೊಡಗಿದ್ದರು. ಅವರು ವರ್ಣಭೇದ ಧೋರಣೆಯ ವಿರುದ್ಧ ಕೊಟ್ಟ ಹೋರಾಟವು ಇಂದಿಗೂ ಮುಂದರಿದುಕೊಂಡು ಬಂದಿದೆ. ಕೇವಲ ಹಿಂದೀಯರ ಮತ್ತು ಆಫ್ರಿಕನ್ನರ ಚಳವಳಿಯಾಗಿ ಇದು ಒಂದು ಉಳಿದಿಲ್ಲವೆಂಬುದೊಂದು ಶುಭಲಕ್ಷಣ: ಮಾನವನ ಹಕ್ಕುಬಾಧ್ಯತೆಗಳ ವಿಷಯದಲ್ಲಿ ಮತ್ತು ಸಮಾನ ಅಂತಸ್ತಿನ ಸಂಗತಿಯಲ್ಲಿ ನಂಬಿಕೆಯುಳ್ಳ ಎಲ್ಲರೂ ವರ್ಣಭೇದ ಧೋರಣೆಯಿಂದ ಪ್ರೇರಿತವಾದ ಎಲ್ಲ ಕರಾಳ ಶಾಸನಗಳ ವಿರುದ್ಧ ಸಿಂಗೆ ಎದ್ದಿದ್ದಾರೆ.

ಮೊನ್ನೆ ಮೊನ್ನೆಯಷ್ಟೇ ಟ್ರೇವರ್ ಹಡ್ಲ್‌ಸ್ಟನ್ ಎಂಬ ಕ್ರೈಸ್ತ ಪಾದ್ರಿಗಳನ್ನು ದಕ್ಷಿಣ ಆಫ್ರಿಕದಿಂದ ಅವರ ಸ್ವದೇಶವಾದ ಬ್ರಿಟನಿಗೆ ಮರಳಿ ಕಳಿಸಲಾಯಿತು. ವರ್ಣಭೇದ ಧೋರಣೆಯನ್ನು ಅವರು ವಿರೋಧಿಸಿದುದೇ ಈ "ಶಿಕ್ಷೆ"ಯ ಹೇತು. ಈ ಪಾದ್ರಿಯು ಸೋಫಿಯಾಟೌನ್ ಎಂಬ ಆಫ್ರಿಕದ ಕರಿಯರ ಹಿಂದುಳಿದ ಪ್ರದೇಶದಲ್ಲಿ ೧೯೪೩ರಿಂದ ಇದ್ದರು. ಕೇವಲ ಆಧ್ಯಾತ್ಮಿಕ ಚಟುವಟಿಕೆಗಳಿಗಷ್ಟೆ ತನ್ನ ಶಕ್ತಿಯನ್ನು ವಿನಿಯೋಗಿಸದೆ, ಸಾಮಾಜಿಕ ಸುಧಾರಣೆಗಳ ಕಡೆಗೆ ಸಹ ಇವರು ಮನಸ್ಸು ಹಾಕಿದರು. ಇದೇ ಅವರ ದೊಡ್ಡ "ತಪ್ಪು" ಎಂದು ದಕ್ಷಿಣ ಆಫ್ರಿಕದ ಸರಕಾರ ಭಾವಿಸಿತು.

ದಕ್ಷಿಣ ಆಫ್ರಿಕದಲ್ಲಿಂದು "ಆಫ್ರಿಕನ್ ರಾಷ್ಟ್ರೀಯ ಸರಕಾರ"ವೇ ಅಧಿಕಾರದಲ್ಲಿದೆ— ಆದರೆ ಈ ಸರಕಾರವು ತನ್ನ ಹೆಸರಿಗೆ ತಾನೇ ಅಪಮಾನವಾಡಿಕೊಳ್ಳುತ್ತಿದೆ. ಏಕೆಂದರೆ ತೀರ ಅಲ್ಪ ಸಂಖ್ಯಾತರಾದ ಬಿಳಿಯರೇ ಈ ಸರಕಾರದ ದೃಷ್ಟಿಯಲ್ಲಿ ರಾಷ್ಟ್ರೀಯರೂ ಆಫ್ರಿಕನ್ನರೂ ಆಗಿದ್ದಾರೆ. ಆಫ್ರಿಕದ ನಿಜವಾದ ನಿವಾಸಿಗಳು "ಬಂಟು" ಎಂಬುದಾಗಿಯೂ ಕರೆಯಲ್ಪಡುತ್ತಿದ್ದಾರೆ. ಈ ಬಂಟುಗಳನ್ನು ಬಂಟತನಕ್ಕೆ, ಎಂದರೆ ತನ್ನ ದಾಸ್ಯಕ್ಕೆ ಒಳಪಡಿಸಿಕೊಳ್ಳುವುದೇ ಬಿಳಿ ತೊಗಲಿನವರ ಹಂಬಲ.

ತಾವು ಅಭಿಮಾನದಿಂದ "ಆಫ್ರಿಕದ ರಾಷ್ಟ್ರೀಯ ಸರಕಾರ"ವೆಂದು ಕರೆಯುತ್ತಿರುವ ಆಡಳಿತ ಯಂತ್ರವನ್ನು ಸ್ಥಾಪಿಸಿಕೊಂಡಂದಿನಿಂದ ಬಿಳಿಯರು ತಮ್ಮ ಸರ್ವೋಪರಿ ಕಾರ್ಯಕ್ರಮಗಳಲ್ಲಿ ಒಂದು ವಿಷಯಕ್ಕೆ ಅತ್ಯಂತ ಮಹತ್ವವನ್ನಿತ್ತಿದ್ದಾರೆ. ಅದೇ ವರ್ಣಭೇದ ಧೋರಣೆ. ಈ ಧೋರಣೆಯನ್ನು ವಿಸ್ತೃತ ಕ್ಷೇತ್ರಗಳಲ್ಲಿ ಕಾರ್ಯರೂಪಕ್ಕೆ ಇಳಿಸಲು ಭಗೀರಥ ಪ್ರಯತ್ನವನ್ನು ಮಾಡಲಾಗುತ್ತಿದೆ. ಪ್ರತಿ ವರ್ಷವೂ ಈ ಧೋರಣೆಯು ತನ್ನ ಕರಾಳ ನಾಲಿಗೆಯನ್ನು ದೂರ ದೂರಕ್ಕೂ ಚಾಚಿ, ಕರಿಯರನ್ನು ಹಿಂಸೆಗೆ ಗುರಿಪಡಿಸುತ್ತಿದೆ. ಆದಾಗ್ಯೂ ಈ "ರಾಷ್ಟ್ರೀಯ" ಸರಕಾರವು ವರ್ಣಭೇದ ಧೋರಣೆಯು ಕಾರ್ಯಗತಗೊಳ್ಳುವ ವೇಗ ಬಹಳ ನಿಧಾನವಾಗಿದೆ ಎಂದು ರೋದಿಸುತ್ತಿದೆ. ಬಿಳಿಯರ ಸಾಮಾನ್ಯ ಅಭಿಪ್ರಾಯವೇ ಇದೆನ್ನಬಹುದು.

ಸರಕಾರಕ್ಕೆ ತಗಲಿರುವ ವ್ಯಥೆ ನಿಜಕ್ಕೂ ದೊಡ್ಡದು: ಯಾವ್ಯಾವ ಬಗೆಯಿಂದ ಲೆಕ್ಕ ಹಾಕಿದರೂ ಇನ್ನು ೩೦೦ ವರ್ಷಗಳೊಳಗೆ ಕರಿಯರನ್ನು ಬಿಳಿಯರ ಚಟುವಟಿಕೆಗಳಿಂದ ಸಂಪೂರ್ಣವಾಗಿ ಪ್ರತ್ಯೇಕವಿಡುವುದು ಅದಕ್ಕೆ ಸಾಧ್ಯವೆನಿಸುತ್ತಿಲ್ಲ-ಬಿಳಿಯರಿಗೂ ಕರಿಯರಿಗೂ ಯಾವ ತರದ ಸಂಪರ್ಕವೂ ನೇರ ವ್ಯವಹಾರವೂ ಇಲ್ಲದಂತಾಗಬೇಕಾದರೆ ಕೈಗೊಳ್ಳಬೇಕಾದ ಕ್ರಮಗಳೇನು ಎಂದು ವಿಚಾರಿಸಲು ಟೋಮ್ಲಿನ್‌ಸನ್ ಸಮಿತಿಯನ್ನು ದಕ್ಷಿಣ ಆಫ್ರಿಕ ಸರಕಾರ ಈಚೆಗೆ ನೇಮಿಸಿತು. ಬಿಳಿಯರ ಹಕ್ಕುಗಳ ಸ್ಥಾಪನೆಯ ವೇಗವು ಮಂತ್ರಿ ಮಂಡಳದ ವ್ಯವಹಾರಗಳಿಗಿಂತಲೂ ಕ್ಷಿಪ್ರವಾಗಿ ಸಾಗಬೇಕೆಂಬ ಬಿಳಿ ಪ್ರತಿಪಕ್ಷೀಯರ ಬೇಡಿಕೆಯಿಂದಾಗಿ ಈ ಸಮಿತಿ ಏರ್ಪಟ್ಟಿತು. ಸಮಿತಿಯ ವರದಿಯು ಅಷ್ಟೇನೂ ಆಶಾಜನಕವಾಗಿಲ್ಲ. "ಬಂಟುಸ್ತಾನ"ವೆಂದು ಕರೆಯಲಾಗುವ ಪ್ರತ್ಯೇಕ ಸ್ವಾವಲಂಬಿ ವಸತಿ ಕೇಂದ್ರಗಳನ್ನು ಆಫ್ರಿಕದ ಕರಿಯರಿಗಾಗಿ ಏರ್ಪಡಿಸಲಿಕ್ಕೆ ಪ್ರಥಮದ ಹತ್ತು ವರ್ಷಗಳಲ್ಲಿ ೧೧೦ ಕೋಟಿ ಪೌಂಡು ಸ್ಟರ್ಲಿಂಗನ್ನು ವ್ಯಯಿಸಬೇಕಾಗುತ್ತದೆಂದು ಈ ಸಮಿತಿ ಹೇಳಿದೆ.

ಅಷ್ಟು ಮಾತ್ರವಲ್ಲ, ಈ ಶತಮಾನದ ಕೊನೆಯಲ್ಲಿಯೂ—ಎನಿತು ಮೊತ್ತ ದೊಡ್ಡ ಮೊತ್ತವನ್ನು ಬೇಕಾದರೆ ಬಂಟುಸ್ತಾನದ ನಿರ್ಮಿತಿಗಾಗಿ ವ್ಯಯಿಸಲಿ— ಬಿಳಿಯರಿಂದ ಕರಿಯರನ್ನು ದೂರವಿಡುವುದು ಸಾಧ್ಯವಾಗದೆ ಹೋದೀತೆಂದೂ ಅನೇಕ ಮಿಲಿಯ ಬಂಟುಗಳು ಬಿಳಿಯರ ವಸತಿ ಕೇಂದ್ರದಲ್ಲಿಯೇ ತಳವೂರುವುದು ನಿಲ್ಲದೆಂದೂ ಸಮಿತಿ ಅಭಿಪ್ರಾಯಪಟ್ಟಿದೆ. ಈ ಪರಿಸ್ಥಿತಿಯಲ್ಲಿ ಸರಕಾರದ ಸದಸ್ಯರಿಗೆ ಬಂಟುಸ್ತಾನಕ್ಕಾಗಿ ವ್ಯರ್ಥ ಹಣವನ್ನು ಸುರಿಯುತ್ತಿರುವುದರಿಂದ ಎಷ್ಟರ ಪ್ರಯೋಜನ ಸಿಕ್ಕೀತೆಂದು ತೋರದಾಗಿದೆ. ತಮ್ಮವರಿಗೆ (ಬಿಳಿಯರಿಗೆ) ವಿಶೇಷ ರಕ್ಷಣೆಯನ್ನೇನೂ ಕೊಡುವಂತಿಲ್ಲವಾದರೆ, ಸುಮ್ಮನೆ ಮಿಲಿಯಗಟ್ಟಳೆ ಪೌಂಡು ಸ್ಟರ್ಲಿಂಗನ್ನು ಬಂಟುಸ್ತಾನಕ್ಕಾಗಿ ಉಪಯೋಗಿಸಿ ಸಿಗುವ ಪುರುಷಾರ್ಥವೇನು ಎಂದವರು ಸಂದೇಹ ಪೀಡಿತರಾಗಿದ್ದಾರೆ. ಆದರೆ ಅಧಿಕಾರದಾಹವುಳ್ಳ ಪ್ರತಿಪಕ್ಷೀಯ ಬಿಳಿಯರು ಅವರ ಮೇಲೆ ಒತ್ತಾಯವನ್ನು ಹೇರುತ್ತಿದ್ದಾರೆ: ಆದುದರಿಂದ ಲಗಾಮನ್ನು ಭದ್ರವಾಗಿ ಹಿಡಿದುಕೊಂಡು ದಣಿದ ಕುದುರೆಯನ್ನೆ ಮತ್ತಷ್ಟು ಓಡಿಸಬೇಕಾದ ಪೇಚಿನ ಪ್ರಸಂಗದಲ್ಲಿ ಸರಕಾರ ಬಿದ್ದಿದೆ.

ದಕ್ಷಿಣ ಆಫ್ರಿಕದ ರಾಷ್ಟ್ರೀಯ ಸರಕಾರಗಳು ಬಿಳಿ ಜನರ ಸಂತೃಪ್ತಿಗಾಗಿ ವರ್ಣಭೇದ ಶಾಸನಗಳನ್ನು ವಿಸ್ತೃತಗೊಳಿಸುತ್ತಲೂ ಬಿಗಿಯಾಗಿಸುತ್ತಲೂ ಬಂದಿವೆ. ದೈನಂದಿನ ಅವಶ್ಯಕತೆಗಳಿಗನುಸಾರವಾಗಿ ವಿಸ್ತಾರಗೊಳ್ಳುವುದೇ ವರ್ಣಭೇದ ಧೋರಣೆಯ ವೈಶಿಷ್ಟ್ಯವೆಂದು ದಕ್ಷಿಣ ಆಫ್ರಿಕದ ಸ್ಥಳೀಯ ವ್ಯವಹಾರ ಮಂತ್ರಿಗಳು ಬಿಳಿಯರ ಒತ್ತಾಯವನ್ನು ಉತ್ತರಿಸುತ್ತಾ ಹೇಳಿದ್ದಾರೆ. ಬಂಟುಗಳನ್ನು ಪ್ರತ್ಯೇಕಿಸಿಡುವ ಅವಶ್ಯಕತೆಯು ದಿನದಿನಕ್ಕೂ ಅವರಿಗೆ ಹೆಚ್ಚಾಗಿ ಕಾಣಿಸುತ್ತಿದೆ. ಶಾಸನದಲ್ಲಿ ಈ ಬಗ್ಗೆ ಯಾವುದೇ ಕೊರತೆಯಾಗಲೀ ಉಪಾಯವಾಗಿ ಜಾರಿಹೋಗಲು ಒಂದು ಎಡೆಯಾಗಲೀ ಇಲ್ಲದಂತೆ ಮಾಡಲು ದಕ್ಷಿಣ ಆಫ್ರಿಕದ ಸರಕಾರ ಪ್ರಯತ್ನಶೀಲವಾಗಿದೆ.

ಸ್ಥಳೀಯ ಆಫ್ರಿಕನ್ನರ (ಕರಿಯರ) ಎಲ್ಲ ಚಟುವಟಿಕೆಗಳ ಮೇಲೂ ವರ್ಣಭೇದ ಧೋರಣೆಯಿಂದ ಪ್ರೇರಿತವಾದ ಶಾಸನವು ಸಹನಾತೀತ ನಿಯಂತ್ರಣವನ್ನು ಹೇರುತ್ತಿದೆ. ಬಸ್ಸುಗಳಲ್ಲಿ ಕೆಲವು ಸ್ಥಾನಗಳನ್ನು-ನಾವು "ಮಹಿಳೆಯರಿಗಾಗಿ ಪ್ರತ್ಯೇಕ" ಎಂದು ಬರೆದಿಡುವಂತೆ—ಬಿಳಿಯರಿಗಾಗಿಯೇ ಪ್ರತ್ಯೇಕ ಕಾದಿರಿಸುವ ವಹಿವಾಟು ಈಗ ಕೇಪ್‌ಟೌನ್ ನಗರಕ್ಕೂ ವ್ಯಾಪಿಸಿದೆ. ಅಮೇರಿಕದಲ್ಲಿ ನೀಗ್ರೋಗಳನ್ನು ಪ್ರತ್ಯೇಕಿಸಿಡಲು ಈ ಬಗೆಯ ಶಾಸನಗಳಿವೆ: ಇವನ್ನು ಅಲ್ಲಿಯ ನ್ಯಾಯಸ್ಥಾನಗಳು ಮರಳಿ ಮರಳಿ ಕ್ರಮಬಾಹಿರವೆಂದು ಸಾರುತ್ತಿವೆ. ದಕ್ಷಿಣ ಆಫ್ರಿಕದ ಮಟ್ಟಿಗೆ ನ್ಯಾಯಸ್ಥಾನಗಳಿಗೆ ಹೋಗುವವರೂ ಇಲ್ಲವೇನೋ—ಅಂಥ ದಾರುಣ ಪರಿಸ್ಥಿತಿ ಅಲ್ಲಿಯದು.

ಬಿಳಿಯರ ವಸತಿಸ್ಥಾನಗಳನ್ನು ಕರಿಯರು ಪ್ರವೇಶಿಸಬಾರದು- ಪ್ರವೇಶಿಸಿದರೆ ಅವರಿಗೆ ಬೆತ್ತದೇಟುಗಳು ಶಿಕ್ಷೆಯ ರೂಪದಲ್ಲಿ ಸಿಗುತ್ತವೆ. ವಿಹಾರ ಕೇಂದ್ರಗಳನ್ನು ಸಹ ಬಿಳಿಯರಿಗೆ ಬೇರೆ, ಕರಿಯರಿಗೆ ಬೇರೆ ಎಂದು ಪ್ರತ್ಯೇಕಿಸಲಾಗುತ್ತದೆ. ಎಲ್ಲ ಪ್ರಾಮುಖ್ಯ ರೈಲ್ವೆಗಳಲ್ಲಿ ವರ್ಣಭೇದಧೋರಣೆಯನ್ನು ಪಾಲಿಸಲಾಗುತ್ತದೆ. ಕೇಪ್‌ಟೌನ್ ನಗರದಲ್ಲಿ ಈಗಲೂ ಕೆಲವು "ತಟಸ್ಥ" ರೈಲ್ವೆಗಳೂ ಓಡಾಡುತ್ತವೆ—ಸರಕಾರವು ಈ ಅಸಂಬದ್ಧ ಆಚರಣೆಯನ್ನು ಇನ್ನಿಲ್ಲವಾಗಿಸಲು ತಕ್ಕ ಕ್ರಮ ತೆಗೆದುಕೊಳ್ಳುವ ಭರವಸೆಯನ್ನು ಪ್ರತಿಪಕ್ಷೀಯ ಬಿಳಿಯರಿಗೆ ನೀಡಿದೆ. ಆಟದ ರಂಗದಲ್ಲಿ ಸಹ ಪ್ರತ್ಯೇಕತೆ ಅವಶ್ಯವೆಂದು ಬಿಳಿಯರಿಗೆ ತೋರಿದೆ. ಬಿಳಿ ಜಟ್ಟಿಗಳು ಕರಿಜಟ್ಟಿಗಳೊಡನೆ ಯಾವ ಸಂದರ್ಭದಲ್ಲೂ ಹೆಣಗಾಡುವುದಿಲ್ಲವೆಂದು ಸ್ವಪ್ರೇರಣೆಯಿಂದ ನಿರ್ಧರಿಸಿದ್ದಾರೆ! ಸರಕಾರದ ಶಾಸನಿಕ ಕ್ರಮಗಳ ವೇಗ ಕುಂದಿದೆ ಎಂಬ ಬಿಳಿಯರ ಅಭಿಪ್ರಾಯವು ಎಷ್ಟು ತೀವ್ರವಾಗಿದೆ ಎಂಬುದಕ್ಕೆ ಇದೊಂದೇ ನಿದರ್ಶನ ಸಾಕು.

ವರ್ಣಭೇದ ಧೋರಣೆಯು ಮಾನವೀಯತೆಯನ್ನು ಧಿಕ್ಕರಿಸಿ ದಕ್ಷಿಣ ಆಫ್ರಿಕದಲ್ಲಿ ನಡೆದಿದೆ. ಅಲ್ಲಿ ಬಿಳಿಯರಿಗೂ ಕರಿಯರಿಗೂ ಪಾಸಿಸಲು ಪ್ರತ್ಯೇಕ ವಸತಿ ಕೇಂದ್ರಗಳು ರೂಪಿತವಾಗುತ್ತಿವೆ. ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ ಮತ್ತು ರಾಜಕೀಯ ಕ್ಷೇತ್ರಗಳಲ್ಲಿಯೂ ಈ ಪ್ರತ್ಯೇಕತೆ ಎದ್ದು ಕಾಣಿಸುತ್ತಿದೆ. ಸಂತೆಗಳೂ ಬಿಳಿಯರಿಗೆ ಬೇರೆ ಕರಿಯರಿಗೆ ಬೇರೆ ರೂಪುಗೊಂಡಿವೆ. ವೈದ್ಯಕೀಯ ಪಥಕಗಳ ಸಹಾಯವನ್ನು ಸಹ ಚರ್ಮದ ಬಣ್ಣ ನೋಡಿಯೇ ನೀಡಲಾಗುತ್ತದೆ: ಗಾಯಗೊಂಡ ದಾರಿಗನೊಬ್ಬನು ನೋವಿನಿಂದ ನರಳುತ್ತಾ ಮರಣ ಭಯದಿಂದ ತತ್ತರಿಸುತ್ತಾ ಆಸ್ಪತ್ರೆಯನ್ನು ಸೇರದೆ ಬಿದ್ದಿರಬೇಕಾಗಿ ಬರುವ ಸಂದರ್ಭಗಳು ಅಪರೂಪವಲ್ಲ—ಆತನನ್ನು ಹೊತ್ತುಕೊಂಡು ಹೋಗಬೇಕಾಗಿದ್ದ ಸಜಾತೀಯ ಪಥಕ (ಅಂದರೆ ಕರಿಯ ಗಾಯಾಳುವಿಗೆ ಕರಿಯ ಪಥಕ, ಬಿಳಿಯನಿಗೆ ಬಿಳಿಯ ಪಥಕ) ಬಾರದೆ, ವಿರುದ್ಧ ಪಥಕ ಬಂದಿತೆಂಬುದೇ ಯಾತನೆಯ ಅವಧಿ ಹೀಗೆ ಹೆಚ್ಚಿಕೊಳ್ಳುವುದಕ್ಕೆ, ಶುಶ್ರೂಷೆಯು ವಿಳಂಬವಾಗುತ್ತಿರುವುದಕ್ಕೆ ಕಾರಣ. ಕವಿ "ಕುವೆಂಪು" ಇಂಥ ಸನ್ನಿವೇಶಗಳನ್ನು ಭಾರತದಲ್ಲಿ ಸಹ ನೆನೆದು ಹೀಗೆ ಹಾಡಿದ್ದಾರೆ:

"ಪಂಚಮರ ಶಿಶುವೊಂದು ಕೆರೆಯಲ್ಲಿ
ಮುಳುಗುತಿರೆ
ದಡದಲ್ಲಿ ಮಿಂಯುತ್ತ ನಿಂದಿರುವ ನಾನು
ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು
ಸುಮ್ಮನಿದ್ದರೆ ಶಾಸ್ತ್ರ ಸಮ್ಮತವದೇನು?"

(೧೫ನೇ ಪುಟ ನೋಡಿರಿ)

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ಸಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮುದ್ದಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ಚುನಾವಣೆಗಾಗಿ ರಾಜಕೀಯ ಪಂಗಡಗಳ ಗೆಳೆತನ

ಇನ್ನು ಮುಂದೆ ಅಧಿಕೃತ ಮನ್ನಣೆಯನ್ನದು ಪಡೆಯುವಂತಿಲ್ಲ

ಒಂದು ವಿಶಿಷ್ಟ ರಾಜಕೀಯ ಪಕ್ಷವನ್ನು ಪ್ರಚಂಡ ಸೋಲಿಗೆ ಗುರಿಪಡಿಸುವ ಉದ್ದೇಶದಿಂದ ಉಳಿದ ಬೇರೆ ಬೇರೆ ರಾಜಕೀಯ ಪಕ್ಷಗಳು ತಮ್ಮ ಮೂಲ ಧ್ಯೇಯ ಮತ್ತು ಧೋರಣೆಗಳು ಭಿನ್ನವಾಗಿದ್ದರೂ ಸಹ ಚುನಾವಣೆಯ ಪಟ್ಟಿಗೆ ಸಾಮಾನ್ಯ ಘೋಷಣಾ ಪತ್ರವನ್ನು ಹೊರಡಿಸಿ, ಗೆಳೆತನದ ಬೆಸುಗೆ ಹಾಕಿ, ಹೋರಾಟವನ್ನು ಕೊಡುವ ಸಂಪ್ರದಾಯ ಈಚೆಗೆ ಬಲಿತಿದೆ. ತಿರು-ಕೊಚ್ಚಿಯಲ್ಲಿ ಪ್ರತಿಪಕ್ಷಗಳು ಇಂಥ "ಅನೈತಿಕ" ಸ್ನೇಹವನ್ನು ಮಾಡಿಕೊಂಡಿದ್ದರೆ, ಆಂಧ್ರದಲ್ಲಿ ಕಾಂಗ್ರೆಸಿನಂಥ ಮಹಾ ಸಂಸ್ಥೆಯೇ ಈ ಆರೋಪಕ್ಕೆ ಪಾತ್ರವಾಯಿತು. ಒಂದೇ ಚುನಾವಣೆಯ ಗುರುತಿನ ಮೇಲೆ ಬೇರೆ ಬೇರೆ ಪಕ್ಷಗಳವರು ಮತಕೇಳಲು ಹೋಗುತ್ತಿದ್ದುದರಿಂದ, ಉಮೇದುವಾರರ ಮೂಲ ಪಕ್ಷದ ವಿಷಯದಲ್ಲಿ ಪರ್ಯಾಲೋಚನೆ ಮಾಡುವ ಅವಕಾಶ ಮತದಾರರಿಗೆ ಸಿಗುತ್ತಿರಲಿಲ್ಲ; ಸಿಕ್ಕಿದರೂ ಅವರು ನಿರುಪಾಯರಾಗುತ್ತಿದ್ದರು.

ಆಯೋಗದ ಹೇಳಿಕೆ

ಚುನಾವಣೆಗಳ ಮೇಲ್ವಿಚಾರಣೆಯನ್ನು ಹೊತ್ತಿರುವ ಆಯೋಗವು ಕಳೆದ ವಾರ ಹೊರಡಿಸಿದ ಪ್ರಕಟಣೆಯೊಂದು ಚುನಾವಣೆಗಾಗಿ ರಾಜಕೀಯ ಪಕ್ಷಗಳು ಮಾಡಿಕೊಳ್ಳಬಹುದಾದ ಸ್ನೇಹ ಸಂಬಂಧಕ್ಕೆ ಇನ್ನು ಮುಂದೆ ಮಾನ್ಯತೆ ದೊರೆಯದೆಂದು ಸ್ಪಷ್ಟವಾಗಿ ಹೇಳಿದೆ; ಮತ್ತು ಸ್ಥಳೀಯ, ಪ್ರಾದೇಶಿಕ ಅಥವಾ ದೇಶ ವ್ಯಾಪಿ ಸ್ವರೂಪಗಳಲ್ಲಿ ಇನ್ನುಮುಂದೆ ರಾಜಕೀಯ ಪಕ್ಷಗಳ ಗೆಳೆತನವೇರ್ಪಡುವ ಸಂಭವವನ್ನು ಇಲ್ಲವಾಗಿ ಮಾಡಿದೆ. ತಮ್ಮ ಪಕ್ಷಕ್ಕೂ ಗೌರವದ ಸ್ಥಾನವಿರಬೇಕೆಂಬ ಬಯಸುವ ಧುರೀಣರು ಸ್ವತಂತ್ರ ಚಿಹ್ನೆಯ ಮೇಲಿಂದಲೇ ತಮ್ಮ ಪಕ್ಷದ ಹುರಿಯಾಳುಗಳು ಚುನಾವಣೆಯಲ್ಲಿ ಸ್ಪರ್ಧಿಸುವಂತೆ ನೋಡಿಕೊಳ್ಳಬೇಕಾಗಿದೆ—ಹಾಗಲ್ಲದೆ ಬೇರೆ ಪಕ್ಷಗಳೊಡನೆ ಸ್ನೇಹ ಬೆಳೆಸಿ, ಆ ಪಕ್ಷಗಳ ಚಿಹ್ನೆಯ ಅಂಗೀಕಾರ ಮಾಡಲು ಹೋದರೆ ತಮ್ಮ ಪಕ್ಷಕ್ಕೆ ಚುನಾವಣಾ ಆಯೋಗದ ದೃಷ್ಟಿಯಲ್ಲಿ ಲಭಿಸಬೇಕಾದ ನ್ಯಾಯವಾದ ಸ್ಥಾನಮಾನಗಳಿಗವರು ಎರವಾಗಬೇಕಾಗುತ್ತದೆ.

ನಿದರ್ಶನಾತ್ಮಕ ಕಾರಣ

ಆಯೋಗವು ಈ ನಿಷ್ಠುರ (ಆದರೆ ಸ್ವಾಗತಾರ್ಹ) ನಿಲುಮೆಯನ್ನು ವಹಿಸುವಂತೆ ಮಾಡಿದ ಸಂಗತಿಯು ಸ್ವಾರಸ್ಯವಾಗಿದೆ. ಆಂಧ್ರದಲ್ಲಿ ಕಳೆದ ಸಲ ಚುನಾವಣೆ ನಡೆದಾಗ ಕಾಂಗ್ರೆಸಿನೊಡನೆ ಕೃಷಿಕರ ಲೋಕಪಕ್ಷವೂ ಆಂಧ್ರ ಪ್ರಜಾಪಕ್ಷವೂ ಮೈತ್ರಿಮಾಡಿಕೊಂಡವು. ಪ್ರಜಾಪಕ್ಷದ ಕೆಲವು ಉಮೇದುವಾರರು ತಮಗೆ ಕಾಂಗ್ರೆಸಿನ ಚಿಹ್ನೆಯೇ ಇರಲೆಂದು ಹೇಳಿದರು. ಆದರೆ ತಮ್ಮ ಪಕ್ಷವು ಚುನಾವಣೆಯ ಮೈತ್ರಿಯನ್ನು ಮಾಡಿಕೊಂಡ ಸಂಗತಿಯನ್ನಾಗಲೀ ತಾವು ಪ್ರಜಾಪಕ್ಷದ ಉಮೇದುವಾರರೆಂಬುದನ್ನಾಗಲೀ ಆಯೋಗಕ್ಕೆ ತಿಳಿಸಲಿಲ್ಲ. ಸ್ನೇಹ ಬೆಳೆಸಿಕೊಂಡ ಪಕ್ಷಗಳೂ ಇದನ್ನು ಹೇಳಲಿಲ್ಲ. ಹೀಗಾಗಿ ಆಯೋಗವು ಚುನಾವಣೆಯಲ್ಲಿ ಯಾವ್ಯಾವ ಪಕ್ಷಕ್ಕೆ ಎಷ್ಟು ಮತಗಳು ಬಿದ್ದಿವೆ ಎಂದು ಒಟ್ಟಾರೆ ಲೆಕ್ಕ ಮಾಡುವಾಗ ಕಾಂಗ್ರೆಸಿನ ಚಿಹ್ನೆಯ ಮೇಲೆ ಸ್ಪರ್ಧಿಸಿದ್ದ (ಆದರೆ ನಿಜವಾಗಿ ಪ್ರಜಾಪಕ್ಷಕ್ಕೆ ಸೇರಿದ್ದ) ಉಮೇದುವಾರರಿಗೆ ಬಿದ್ದ ಮತಗಳನ್ನು ಕಾಂಗ್ರೆಸಿನ ಲೆಕ್ಕಕ್ಕೆಯೇ ಸೇರಿಸಿತು. ಇದರಿಂದಾಗಿ ಪ್ರಜಾಪಕ್ಷಕ್ಕೆ, ಅದರ ಚಿಹ್ನೆಯ ಮೇಲೆ, ದೊರೆತ ಮತಗಳು ಒಟ್ಟು ಮತಗಳ ೩% ಸಹ ಇಲ್ಲವೆಂದಾಯಿತು. ಹೀಗಾಗಿ ಆಯೋಗವು ಈ ಪಕ್ಷಕ್ಕಿತ್ತ ಅಧಿಕೃತ ಮನ್ನಣೆಯನ್ನು ಹಿಂದೆಗೆಯಿತು. ಇದು ಸರಿಯಲ್ಲವೆಂದೂ ಕಾಂಗ್ರೆಸಿನ ಚಿಹ್ನೆಯ ಮೇಲೆ ಸ್ಪರ್ಧಿಸಿದ್ದ ತಮ್ಮ ಪಕ್ಷದ ಉಮೇದುವಾರರ ಮತಗಳನ್ನು ತಮ್ಮ ಪಕ್ಷದ ಲೆಕ್ಕಕ್ಕೆಯೇ ತೆಗೆದುಕೊಳ್ಳಬೇಕೆಂದೂ ಪ್ರಜಾಪಕ್ಷದವರು ಪ್ರತಿಪಾದಿಸಿದರು. ಈಗ ಆಯೋಗಕ್ಕೆ ಈ ವಿಷಯವು ಮಂದಟ್ಟಾಗಿದೆ. ಆದುದರಿಂದ ಆಂಧ್ರ ಪ್ರಜಾ ಪಕ್ಷಕ್ಕೆ ರಾಜ್ಯಪಕ್ಷದ ಸ್ಥಾನಮಾನವನ್ನು ಅದು ನೀಡಿದೆ. ಆದರೆ, ಇನ್ನುಮುಂದೆ ಗೊಂದಲಗಳಾಗದಂತೆ ಜಾಗರೂಕತೆಯಿಂದಿರಲು ಕೆಲವು ಕ್ರಮಗಳನ್ನು ತೆಗೆದುಕೊಂಡಿದೆ.

ಮುಂದಿನ ನಿಯಮ

ಚುನಾವಣೆಯ ಸಲುವಾಗಿ ರಾಜಕೀಯ ಪಕ್ಷಗಳು ಪರಸ್ಪರ ಮಾಡಿಕೊಳ್ಳಬಹುದಾದ ಮೈತ್ರಿಗೆ ಮಾನ್ಯತೆಕೊಡುವುದಿಲ್ಲವೆಂಬುದು ಇವುಗಳಲ್ಲಿ ಒಂದು. ಅಂತೆಯೇ, ಇನ್ನುಮುಂದೆ ಯಾರಾದರೊಬ್ಬ ಉಮೇದುವಾರನು ಅಧಿಕೃತ ಪಕ್ಷದ ಕಡೆಯಿಂದ ಸ್ಪರ್ಧಿಸಿರುವನೆಂದಾಗಬೇಕಾದರೆ, ಆತನು ತನ್ನ ಉಮೇದುವಾರಿಕೆಯನ್ನು ಹಿಂದೆಗೆಯುವ ದಿನಕ್ಕೆ ಪೂರ್ವದಲ್ಲಿ ಆತನು ತಮ್ಮ ಪಕ್ಷದ ಉಮೇದುವಾರನೆಂದು ಚುನಾವಣಾಧಿಕಾರಿಗಳಿಗೆ ಆ ಪಕ್ಷವು ತಿಳಿಸಬೇಕು; ಅಲ್ಲದೆ ಸಂಬಂಧಿಸಿದ ಹುರಿಯಾಳುವೂ ಇದನ್ನು ಆ ಅವಧಿಯೊಳಗೆ ದೃಢೀಕರಿಸಬೇಕು. ಅಧಿಕೃತ ಮನ್ನಣೆಯನ್ನು ಪಡೆದಿರದ ಯಾವುದಾದರೊಂದು ರಾಜಕೀಯ ಪಕ್ಷವು ಅಂಥ ಮನ್ನಣೆಯನ್ನು ಅಪೇಕ್ಷಿಸುವ ಪಕ್ಷದಲ್ಲಿ ತನ್ನ ಪಕ್ಷದ ಉಮೇದುವಾರರಿಗಾಗಿ ಒಂದು ಸ್ವತಂತ್ರ ಚಿಹ್ನೆಯನ್ನು ಆರಿಸಬೇಕಲ್ಲದೆ ಈ ಚಿಹ್ನೆಯನ್ನೇ ತನ್ನ ಪರವಾಗಿ ಸ್ಪರ್ಧಿಸುವ ಎಲ್ಲ ಉಮೇದುವಾರರೂ ಅಂಗೀಕರಿಸುವಂತೆ ನೋಡಬೇಕು. ಹಾಗೆಯೇ ತಾನು ನಿಲ್ಲಿಸಿದ ಹುರಿಯಾಳುಗಳ ಯಾದಿಯನ್ನು ಹುರಿಯಾಳ್ತನವನ್ನು ಹಿಂದೆಗೆದುಕೊಳ್ಳುವ ಅವಧಿಗೆ ಮುಂಚಿತವಾಗಿ ಚುನಾವಣಾಧಿಕಾರಿಗಳಿಗೆ ಈ ಪಕ್ಷವು ಒಪ್ಪಿಸಬೇಕು; ಮತ್ತಿದನ್ನು ಆಯಾ ಹುರಿಯಾಳುಗಳು ಈ ಅವಧಿಯಲ್ಲಿ ದೃಢೀಕರಿಸಬೇಕು. ಈ ಕ್ರಮವನ್ನು ಅನುಸರಿಸದ ಹುರಿಯಾಳುಗಳ ಸಂಗತಿಯಲ್ಲಿ ಅವರು ಇಂಥದೊಂದು ಪಕ್ಷಕ್ಕೆ ಸೇರಿದವರೆಂಬ ವಾದವನ್ನು ಆಯೋಗವು ಇನ್ನು ಮುಂದೆ ಮನ್ನಿಸದು.

ವ್ಯಕ್ತಿಯ ಆದಾಯಕ್ಕೊಂದು ಮೇಲ್ಪಟ್ಟದ ಮಿತಿ

"ಆಕರ್ಷಕ, ಆದರೆ ಅರ್ಥಹೀನ" ಸೂಚನೆ

ಎರಡನೇ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವ ಸಂಬಂಧದಲ್ಲಿ ತೆರಿಗೆಗಳ ಮೂಲಕ ಸರಕಾರದ ಆದಾಯವನ್ನು ಹೇಗೆ ಹೆಚ್ಚಿಸಬಹುದೆಂದು ಸೂಚನೆಗಳನ್ನು ಮಾಡಲು ಬ್ರಿಟನಿನ ಪ್ರಸಿದ್ಧ ಶಾಸ್ತ್ರಜ್ಞರಾದ ಪ್ರೊ. ಕಾಲ್ಡೊರ್ ಎಂಬ ಮಹಾಶಯರನ್ನು ಭಾರತ ಸರಕಾರವು ಆಹ್ವಾನಿಸಿತು. ಇವರು ತಮ್ಮ ವರದಿಯಲ್ಲಿ ಭಾರತದಲ್ಲಿ ತೆರಿಗೆ ಪದ್ಧತಿಯ ಸುಧಾರಣೆ ನಡೆಯಬೇಕಾದ ಅನೇಕ ವಿಧಾನಗಳನ್ನು ಬಹಳ ವಿವರವಾಗಿ ಚರ್ಚಿಸಿದ್ದಾರೆ; ಮತ್ತು ಅತ್ಯಂತ ಉಪಯುಕ್ತವಾದ ಸಲಹೆಗಳನ್ನು ಮಾಡಿದ್ದಾರೆ. ಈ ವರದಿಯ ಉತ್ತಮಾಂಶಗಳನ್ನು ಸರಕಾರವು ಅಂಗೀಕರಿಸಿದರೆ, ಹೆಚ್ಚು ತೆರಿಗೆಯನ್ನು ಎತ್ತುವುದು ಸರಕಾರಕ್ಕೆ ಸಾಧ್ಯವಾಗುವುದಲ್ಲದೆ, ತೆರಿಗೆ ತಪ್ಪಿಸಿಕೊಳ್ಳುವವರ ಸಂಖ್ಯಾ ಪ್ರಮಾಣವೂ ತಗ್ಗುತ್ತದೆ.

ಆನುಷಂಗಿಕವಾಗಿ ಈ ತಜ್ಞರು ಭಾರತದಲ್ಲಿ ವ್ಯಕ್ತಿಯ ಆದಾಯಕ್ಕೊಂದು ಮಿತಿಯನ್ನು ಹಾಕಬೇಕೆಂದು ಮಾಡಲಾಗುತ್ತಿರುವ ಸೂಚನೆಯ ಯೋಗ್ಯತೆಯನ್ನೂ ಚರ್ಚಿಸಿದ್ದಾರೆ. ತಮ್ಮ ದೃಷ್ಟಿಯಲ್ಲಿ ಈ ಸೂಚನೆಯು "ಆಕರ್ಷಕ, ಆದರೆ ಅರ್ಥಹೀನ" ಎಂದು ವರ್ಣಿಸುತ್ತಾ, ಸಂಪತ್ತನ್ನು ಖಾಸಗಿಯಾಗಿ ಅನುಭವಿಸಲು ಬಿಡುವವರೆಗೆ ವ್ಯಕ್ತಿಗತ ಆದಾಯಕ್ಕೊಂದು ಮಿತಿಯನ್ನು ಗೊತ್ತುಪಡಿಸಿದ ಮಾತ್ರಕ್ಕೆ ಆರ್ಥಿಕ ಏರುಪೇರುಗಳನ್ನು ಸರಿಪಡಿಸಲು ಸಾಧ್ಯವಿಲ್ಲ ಎಂದಿವರು ತಿಳಿಸಿದ್ದಾರೆ.

ಸಮಾಜವಾದಿ ಮಾದರಿಯ ಸಮಾಜ ರಚನೆಯ ಧ್ಯೇಯವುಳ್ಳ ಭಾರತದಲ್ಲಿ ಸಾರ್ವಜನಿಕ ರಂಗವು ಲಭ್ಯವಿರುವ ಅತ್ಯುತ್ತಮ ಪ್ರತಿಭಾವಂತರನ್ನು ತನ್ನೆಡೆಗೆ ಆಕರ್ಷಿಸಲು ಸಮರ್ಥವಾಗಬೇಕು. ಖಾಸಗಿ ಉದ್ಯಮದಾರರು ನೀಡುವಷ್ಟೇ ಆಕರ್ಷಕವಾದ ಸಂಬಳ ರೂಪದ ಪ್ರತಿಫಲವನ್ನು ಕೊಡಲು ಸಾರ್ವಜನಿಕ ರಂಗವು ಹಿಂಜರಿಯಬಾರದೆಂದೇ ಇದರ ಅರ್ಥ ಎಂದು ಈ ತಜ್ಞರು ತಮ್ಮ ನಿಲುಮೆಯನ್ನು ಮತ್ತಷ್ಟು ವಿಶದೀಕರಿಸಿದ್ದಾರೆ. ವ್ಯಾಪಕವೂ ಪರಿಣಾಮಕಾರಿಯೂ ಆದ ತೆರಿಗೆ ಕ್ರಮಗಳಿಂದ ಸಾಂಪತ್ತಿಕ ವಿಷಮತೆಯನ್ನು ನಿವಾರಿಸಲು ಪ್ರಯತ್ನಿಸಬೇಕೆಂಬ ಬಗ್ಗೆ ಸೂಚನೆಗಳನ್ನು ಸಾರ್ವಜನಿಕವಾಗಿ ಕೊಡುವುದೇ ಅಪೇಕ್ಷಣೀಯವಲ್ಲದೆ, ವ್ಯಕ್ತಿಗತ ಆದಾಯಕ್ಕೆ ಮಿತಿ ಹೇರುವ ಮಾತನ್ನಾಡುವುದಲ್ಲ ಎಂದಿವರು ಸ್ಪಷ್ಟವಾಗಿ ಹೇಳಿದ್ದಾರೆ.

ಅತ್ಯುನ್ನತವಾದ ನೈತಿಕ ಹಾಗು ಸಾಮಾಜಿಕ ಭಾವನೆಗಳಿಂದ ವ್ಯಕ್ತಿಗತ ಆದಾಯಕ್ಕೆ ಮಿತಿ ಹಾಕುವ ಮಾತುಗಳನ್ನಾಡಬಾಗುತ್ತದೆ ಎಂದೂ ಸ್ಪಬಹುದು. ಆದರೆ "ಆದಾಯ" ಎಂಬ ಶಬ್ದದ ನಿಜವಾದ ಅರ್ಥವೇನು? ವಾರ್ಷಿಕ ಉತ್ಪನ್ನದ ಮೇಲೆ ಮಾತ್ರ ಕಣ್ಣಿಡದೆ ಉಪಭೋಗದ ಸಂಪತ್ತನ್ನೆ ಇಡಿಯಾಗಿ ಈ ಮಿತಿಗೆ ಗುರಿಪಡಿಸಿದರೆ ಮಾತ್ರ ಸ್ವಲ್ಪಮಟ್ಟಿನ ಪ್ರಯೋಜನವಾದೀತು.

ಆದರೆ ಈ ಬಗೆಯಿಂದ ಆಲೋಚಿಸಿ, ಲಾಭಹೊಂದುವ ಸ್ಥಿತಿಯಲ್ಲಿ ಭಾರತದಂಥ ದರಿದ್ರ ಭೂಮಿಯು ಈಗ ಇರುವುದಿಲ್ಲ. ಆರ್ಥಿಕ ಪ್ರೇರಣೆಯನ್ನೊದಗಿಸುವ ಸಾಧನೆಗಳನ್ನು ನಾಶಪಡಿಸುವುದರಿಂದ ಪರಿಣಾಮಗಳು ಸಹ ವಿನಾಶಕಾರಿಯಾಗುತ್ತವೆಂದು ರಶಿಯಾ ದೇಶವೀಗ ಕಂಡುಕೊಂಡು ತನ್ನ ತಪ್ಪನ್ನು ತಿದ್ದಿಕೊಂಡಿದೆ. ಜೀವನ ಮಟ್ಟವು ಅತ್ಯುನ್ನತವಾಗಿರುವ ಅಮೇರಿಕದಲ್ಲಿ ವ್ಯಕ್ತಿಗತ ಆದಾಯಕ್ಕೊಂದು ಮಿತಿ ಹಾಕುವ ಸೂಚನೆ ವ್ಯವಹಾರ್ಯವಾದೀತೋ ಏನೋ—ಏನೇ ಆಗಲಿ, ಭಾರತವು ಈ ಪ್ರಯೋಗಕ್ಕೆ ಹೇಳಿಸಿದ ರಂಗಭೂಮಿಯಾಗಿಲ್ಲ. ಭಾರತದಲ್ಲಿ ಆರ್ಥಿಕ ವಿಷಮತೆಯ ನಿವಾರಣೆ ಮಾಡುವುದಕ್ಕೆ ವ್ಯಾಪಕವೂ ಪರಿಣಾಮಕಾರಿಯೂ ಆದ ತೆರಿಗೆ ಕ್ರಮಗಳೇ ಸೂಕ್ತ—ಎಂದು ಈ ತಜ್ಞರ ಅಭಿಪ್ರಾಯ.

ಭೂಹಿಡುವಳಿಗೊಂದು ಪರಮ ಮಿತಿಯನ್ನು ಹಾಕಬೇಕೆಂಬ ಸೂಚನೆಯಲ್ಲಿ ಸ್ವಲ್ಪಮಟ್ಟಿನ ಯೋಗ್ಯತೆ ಇರಬಹುದು—ಆದರೆ ಈ ಆಧಾರದ ಮೇಲೆ ವ್ಯಕ್ತಿಗತ ಆದಾಯಕ್ಕೊಂದು ಪರಮ ಮಿತಿಯನ್ನು ಗೊತ್ತುಪಡಿಸುವ ಸೂಚನೆಯೂ ಯೋಗ್ಯವಾದುದೆಂದು ಭಾವಿಸಲಾಗದು ಎಂದು ಇವರು ಎಚ್ಚರಿಕೆ ಕೊಟ್ಟ

(೯ನೇ ಪುಟ ನೋಡಿರಿ)

PT. AMBLAY RAMASWAMIER'S 98 Yrs. Renowned, Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ತೆರಿಗೆ ಸುಧಾರಣೆಗಾಗಿ ಬಹುಮುಖ ಸೂಚನೆ

ಭೂಕಂದಾಯವನ್ನು ಇಮ್ಮಡಿಗೊಳಿಸಿದರೂ ತಪ್ಪಿಲ್ಲವೆಂದು ತಜ್ಞರ ವರದಿ

ಬ್ರಿಟನಿನ ಆರ್ಥಿಕ ತಜ್ಞರಾದ ಪ್ರೊ. ನಿಕೊಲಸ್ ಕಾಲ್ಡೋರರನ್ನು ಭಾರತ ಸರಕಾರವು ತೆರಿಗೆ ವಿಧಾನಗಳಲ್ಲಿ ಸುಧಾರಣೆಗಳನ್ನು ಸೂಚಿಸಲು ಕರೆದಿದ್ದು ಅವರ ವರದಿಯು ಇದೀಗ ಪ್ರಕಟವಾಗಿದೆ. ಈ ವರದಿಯು ಮುಖ್ಯವಾಗಿ ಸರಕಾರಕ್ಕೆ ಉಪಯುಕ್ತ ಸಲಹೆಗಳನ್ನು ಕೊಡುವಂತಿದ್ದರೂ ಸಹ ಸಾಮಾನ್ಯ ನಾಗರಿಕರು ತಿಳಿದುಕೊಂಡಿದ್ದರೆ ಒಳ್ಳೆಯದೆನಿಸುವ ವಿಷಯಗಳೂ ಇದರಲ್ಲಿವೆ ಎನ್ನಬಹುದು. ವರದಿಯು ಕ್ಲಿಷ್ಟ ಅಂಶಗಳು ಸರಕಾರಕ್ಕೆ ಸಂಬಂಧಿಸಿಯೂ ಸರಳ ವಿಷಯಗಳು ಜನರಿಗೆ ಅನ್ವಯಿಸಿಯೂ ಇವೆ ಎಂದು ಸ್ಥೂಲವಾಗಿ ಹೇಳಿದರೆ ತಪ್ಪಾಗದು.

ಯೋಜನೆಗಾಗಿ ತೆರಿಗೆ

ಭಾರತದ ರಾಷ್ಟ್ರೀಯ ಆಕಾಂಕ್ಷೆಯು ನೆರವೇರುವಿಕೆಗೆ ಈಗಿಂತಲೂ ಹೆಚ್ಚು ದಕ್ಷವಾದ ಮತ್ತು ಸಮಾನವಾಗಿ ವಿತರಣೆ ಹೊಂದಿದ ತೆರಿಗೆ ಪದ್ಧತಿಯು ಅವಶ್ಯವೆಂದು ವರದಿ ಮೊದಲಿಗೇ ಹೇಳುತ್ತದೆ. ಈಗ ಭಾರತದಲ್ಲಿ ಕೇಂದ್ರ ಹಾಗು ರಾಜ್ಯ ಸರಕಾರಗಳು ಒಟ್ಟಿಗೆ ಒಟ್ಟು ರಾಷ್ಟ್ರೀಯ ಆದಾಯದ೭% ಅಂಶವನ್ನು ತೆರಿಗೆಯ ರೂಪದಲ್ಲಿ ಎತ್ತುತ್ತಲಿವೆ. ಆದರೆ, ಕಳೆದ ಐದಾರು ವರ್ಷಗಳ ತೆರಿಗೆಯ ಅನುಭವದ ಬಲದಿಂದ ಹೇಳುವದಾದರೆ, ರಾಷ್ಟ್ರೀಯ ಉತ್ಪನ್ನ ಮತ್ತು ಆದಾಯಗಳಲ್ಲಿ ಕೈಗೂಡಿರುವ ಹೆಚ್ಚಳಕ್ಕೆ ಅನುಗುಣವಾಗಿ ತೆರಿಗೆ ವಸೂಲಿಯ ಮೊತ್ತವು ಹೆಚ್ಚಿಲ್ಲ. ಪಾಶ್ಚಾತ್ಯ ದೇಶಗಳ ತೆರಿಗೆ ಪದ್ಧತಿಗೂ ಭಾರತದ್ದಕ್ಕೂ ಇರುವ ವ್ಯತ್ಯಾಸಗಳಲ್ಲಿ ಇದು ಉಲ್ಲೇಖನೀಯ— ಎಂದಿದೆ ಈ ವರದಿ.

ಎರಡನೇ ಯೋಜನೆಯು ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಿಗೆ ಐದು ವರ್ಷಗಳ ಯೋಜನಾವಧಿಯಲ್ಲಿ ೪೫೦ ಕೋಟಿ ರೂಪಾಯಿಗಳನ್ನು ತೆರಿಗೆಯ ಮೂಲಕ ಸಂಗ್ರಹಿಸಬೇಕೆಂದು ಹೇಳಿದೆ. ಕೊರತೆ ಧನ ವಿನಿಯೋಗವನ್ನು ೧೨೦೦ ಕೋಟಿ ರೂಪಾಯಿಗಳಷ್ಟು ಮಟ್ಟಿಗೆ ಮಾಡಲಾಗುತ್ತದೆ. ಆದಾಗ್ಯೂ ಮತ್ತೆ ೪೦೦ ಕೋಟಿ ರೂಪಾಯಿಗಳ ಅಂತರವು ತುಂಬಿಸಲ್ಪಡದೆ ಉಳಿಯುತ್ತದೆ. ಇದನ್ನು ಪ್ರಸ್ತಾಪಿಸುತ್ತಾ ವರದಿಗಾರರು ತನ್ನ ದೃಷ್ಟಿಯಲ್ಲಿ ವರ್ಷಕ್ಕೆ ೧೫೦ ಕೋಟಿ ರೂಪಾಯಿಗಳ, ಅಂದರೆ ಒಟ್ಟಾರೆ ೭೫೦ ಕೋಟಿ ರೂಪಾಯಿಗಳ, ಮಿತಿಗೂ ಮಿಕ್ಕಿದ ಪ್ರಮಾಣದಲ್ಲಿ ಕೊರತೆ ಧನ ವಿನಿಯೋಗ ಮಾಡುವುದು ಭಾರತಕ್ಕೆ ಸಾಧ್ಯವಾಗದೆಂದು ಹೇಳಿದ್ದಾರೆ. ಆದುದರಿಂದ ಹೊಸ ತೆರಿಗೆಗಳಿಂದಲೇ ಎರಡನೇ ಯೋಜನೆಯ ಕೊರತೆಗಳ ನಿವಾರಣೆಯಾಗುವುದಾದಲ್ಲಿ ವರ್ಷಕ್ಕೆ ೨೫೦ ಕೋಟಿ ರೂಪಾಯಿಗಳಂತೆ, ಒಟ್ಟಿಗೆ ೧೨೫೦ ಕೋಟಿ ರೂಪಾಯಿ ತೆರಿಗೆಯಿಂದ ಸಂಪಾದಿಸಲ್ಪಡಬೇಕು; ಕೊರತು ಯೋಜನೆಯಲ್ಲಿ ಹೇಳಿದಂತೆ ೪೫೦ಕೋಟಿ ರೂಪಾಯಿಯಲ್ಲ ಎಂದೀ ತಜ್ಞರ ಅಭಿಪ್ರಾಯ. ತನ್ನ ಈ ನಿಲುಮೆಯು ಹೆಚ್ಚಿನ ತಜ್ಞರಿಗೆ ಸಮ್ಮತವಾದೀತೆಂಬ ನಂಬಿಕೆಯನ್ನು ಸಹ ಅವರು ವ್ಯಕ್ತಪಡಿಸಲು ಮರೆತಿಲ್ಲ.

ಸಮಕಾಲಿಕದ ವಿತರಣೆ

ಉಪರೋಕ್ತ ಗುರಿಯನ್ನು ಮುಟ್ಟುವುದು ತೀರ ಅಸಾಧ್ಯವೆಂದೇನೂ ಭಾವಿಸಬೇಕಾಗಿಲ್ಲವೆಂಬ ಭರವಸೆಯನ್ನು ವರದಿಯು ನೀಡುತ್ತದೆ. ತೆರಿಗೆ ಹೇರುವುದಕ್ಕೆ ಹೊಣೆಗಾರರಾದವರಲ್ಲಿ ಹೆಚ್ಚಿನ ಧೈರ್ಯ ಬೇಕು; ಮತ್ತು ತೆರಿಗೆ ಪದ್ಧತಿಯನ್ನೇ ಆಮೂಲಾಗ್ರ ಬದಲಾವಣೆಗೆ ಗುರಿಪಡಿಸಬೇಕು ಎಂಬುದಿಷ್ಟೆ ಇಲ್ಲಿಯ ಪ್ರಾಥಮಿಕ ಅವಶ್ಯಕತೆ. ಸಾಮಾನ್ಯವಾಗಿ ಹೊಸ ತೆರಿಗೆಗಳ ಭಾರವು ಜನಸಾಧಾರಣರ ಮೇಲೆಯೇ ಹಂಚಿಬೀಳುತ್ತದೆ. ಆದರೆ ಇದೇ ಸಮಯದಲ್ಲಿ ಉಳ್ಳವರೆನಿಸಿದ ಅಲ್ಪಸಂಖ್ಯಾಕ ವರ್ಗದ ವಿಷಯದಲ್ಲಿ ಪ್ರಗತಿಪರ ತೆರಿಗೆ ಕ್ರಮಗಳನ್ನು ಅನ್ವಯಿಸುವುದು ಸಹ ಇಷ್ಟವಾಗಿದೆ.

ಭಾರತದ ಜನಸಂಖ್ಯೆಯಲ್ಲಿ ಉಳ್ಳವರೆನಿಸಿದ ಜನರ ಪ್ರಮಾಣವು ೧% ಸಹ ಇಲ್ಲ. ಆದಾಗ್ಯೂ ಅವರ ಮೇಲೆ ಹೆಚ್ಚಿನ ಕರಭಾರವು ಬೀಳಬೇಕಾಗಿದೆ—ಏಕೆಂದರೆ ಹಾಗಿಲ್ಲದಿದ್ದರೆ ತೆರಿಗೆಯ ಭಾರಕ್ಕೆ ಜನಸಾಧಾರಣರೇ ಹೆಗಲುಕೊಡಬೇಕಾಗುವ ಪ್ರಸಂಗ ತಪ್ಪದು: ಜನರು ಹೀಗೆ ತ್ರಾಸವನ್ನನುಭವಿಸುವಾಗ ಶ್ರೀಮಂತರೆನಿಸಿದವರು ಮತ್ತಷ್ಟು ಶ್ರೀಮಂತರಾಗುವ ಸಂಭವವು ದೂರವಾಗದು. ಪ್ರಜಾಪ್ರಭುತ್ವ ಪದ್ಧತಿಯನ್ನೂ ಸಮಾಜವಾದಿ ಮಾದರಿಯ ಸಮಾಜ ರಚನೆಯನ್ನೂ ಧ್ಯೇಯವಾಗುಳ್ಳ ಭಾರತದಲ್ಲಿ ಈ ಅಪ್ರಿಯ ಪ್ರಸಂಗಗಳ ನಿವಾರಣೆ ಅತ್ಯಾವಶ್ಯಕವಾಗಿದೆ. ವರದಿಯಲ್ಲಿ ಈ ಅಂಶಗಳನ್ನು ಮಹತ್ವಪೂರ್ಣವೆಂದು ಪರಿಗಣಿಸಿದ್ದು, ಸೂಚನೆಗಳು ಇವಕ್ಕೆ ತಕ್ಕ ರೀತಿಯಲ್ಲಿವೆ ಎನ್ನಬಹುದು.

"ಆದಾಯ"ದ ಅರ್ಥ

ನೇರವಾಗಿ ಇಂದು ಭಾರತದಲ್ಲಿ ವಿಧಿಸಲ್ಪಡುವ ತೆರಿಗೆಯು ಒಳ್ಳೆಯ ಕ್ರಮ-ನಿಯಮಗಳಿಂದ ಪರಿಪುಷ್ಟವಾಗಿಲ್ಲವೆಂದು ವರದಿಯಲ್ಲಿ ಹೇಳಲಾಗಿದೆ. "ಆದಾಯ" ಎಂಬುದನ್ನು ಶಾಸನಿಕವಾಗಿ ನಿಷ್ಕರ್ಷಿಸಿರುವ ವ್ಯಾಖ್ಯೆಯು ದೋಷಯುಕ್ತವಾಗಿರುವುದೇ ಇದರ ಮುಖ್ಯ ಕಾರಣ. ಕೆಲವು ವರ್ಗದ ತೆರಿಗೆದಾರರು ಈ ದೋಷಯುಕ್ತ ವ್ಯಾಖ್ಯೆಯ ದುರುಪಯೋಗವನ್ನು ಪಡೆದು ನಿಜವಾಗಿ ಕೊಡಬೇಕಾಗಿರುವ ತೆರಿಗೆಯನ್ನು ತಪ್ಪಿಸಿಕೊಳ್ಳುತ್ತಿದ್ದಾರೆ. ತೆರಿಗೆದಾರರು ಒಪ್ಪಿಸಬೇಕಾದ ರಿಟರ್ನುಗಳಲ್ಲಿ ಸಾಕಷ್ಟು ಮಾಹಿತಿಯು ಲಭ್ಯವಾಗಿರುವುದಿಲ್ಲ—ಮಾತ್ರವಲ್ಲದೆ ಈ ಮಾಹಿತಿಗಳು ಆ ವಿಶಿಷ್ಟ ತೆರಿಗೆದಾರನ ಆರ್ಥಿಕ ಹಾಗು ಸಾಂಪತ್ತಿಕ ವ್ಯವಹಾರಗಳ ಹಿನ್ನೆಲೆಯಲ್ಲಿ ಎಷ್ಟು ಮಟ್ಟಿಗೆ ಸತ್ಯವಾಗಿವೆ ಎಂಬುದನ್ನು ಗೊತ್ತುಪಡಿಸಿಕೊಳ್ಳುವುದಕ್ಕೂ ಈ ರಿಟರ್ನುಗಳ ಸ್ವರೂಪವು ಅವಕಾಶವೀಯುತ್ತಿಲ್ಲ.

ಹೀಗಾಗಿ ಲಾಭವನ್ನೂ ಆದಾಯವನ್ನೂ ಕಡಿಮೆ ತೋರಿಸುವುದು, ಅಥವಾ ಅಡಗಿಸಿಡುವುದು ಅಥವಾ ತನಗೇನೂ ನಷ್ಟವಾಗದಂತೆ ಇನ್ನೊಬ್ಬರ ಹೆಸರಿಗೆ ತನ್ನ ಸಂಪತ್ತನ್ನು ತೆರಿಗೆ ತಪ್ಪಿಸಲಿಕ್ಕಾಗಿಯೇ ವರ್ಗಾಯಿಸುವುದು ಇತ್ಯಾದಿ ಅಕ್ರಮಗಳು ಹೆಚ್ಚುತ್ತಲಿವೆ. ಇವುಗಳ ನಿವಾರಣೆಯಾಗುವಂತೆ ಯಾವ್ಯಾವ ಉಪಾಯಗಳನ್ನು ಅನುಸರಿಸಬೇಕೆನ್ನುತ್ತಾ ವರದಿಯು ಇನ್‌ಕಮ್ ಟ್ಯಾಕ್ಸ್, ಕ್ಯಾಪಿಟಲ್ ಗೈನ್ಸ್ ಟ್ಯಾಕ್ಸ್, ಆನ್ಯುಯಲ್ ಕ್ಯಾಪಿಟಲ್ ಟ್ಯಾಕ್ಸ್, ಪರ್ಸನಲ್ ಎಕ್ಸ್‌ಪೆಂಡಿಚರ್ ಟ್ಯಾಕ್ಸ್ ಮತ್ತು ಗಿಫ್ಟ್ ಟ್ಯಾಕ್ಸ್ ಎಂಬ ಐದು ಪ್ರಮುಖ ತೆರಿಗೆ ಕ್ರಮಗಳನ್ನು ಒಬ್ಬ ವ್ಯಕ್ತಿಯ ಮೇಲೆ ಏಕಕಾಲದಲ್ಲಿ ಅನ್ವಯಿಸಬೇಕೆಂದೂ ಇದರಿಂದ ಆತನ ಹೇಳಿಕೆಯಲ್ಲಿ ತಪ್ಪು ಸಂಗತಿಗಳಿರುವ ಸಂಭವ ಬಹಳ ಮಟ್ಟಿಗೆ ದೂರವಾಗುವುದೆಂದೂ ಹೇಳಿದೆ.

ಲೆಕ್ಕ ಪತ್ರಗಳ ಪರೀಕ್ಷೆ

ಆದಾಯದ ಮೇಲೆ ಈಗ ೯೨% ತೆರಿಗೆಯನ್ನು ಅತಿದೊಡ್ಡ ಮಟ್ಟದಲ್ಲಿ ಹಾಕಲಾಗುತ್ತವೆ. ಇದು ೪೫% ಮಿತಿಗೆ ಇಳಿಯಬೇಕೆಂದು ವರದಿ ತಿಳಿಸಿದೆ. ಆನ್ಯುಯಲ್ ಕ್ಯಾಪಿಟಲ್ ಟ್ಯಾಕ್ಸನ್ನು ೧೫ ಲಕ್ಷಕ್ಕಿಂತ ಹೆಚ್ಚಿನ ಕ್ಯಾಪಿಟಲ್ ವೆಲ್ಯೂವಿಗೊಳಪಟ್ಟವರ ಮೇಲೆ ಹೆಚ್ಚೆಂದರೆ ೧ ೧/೨% ಹಾಕಬೇಕು. ಪರ್ಸನಲ್ ಎಕ್ಸ್‌ಪೆಂಡಿಚರ್ ಟ್ಯಾಕ್ಸಿನ ಪರಮ ಮಿತಿಯು ತಲೆಯೊಂದಕ್ಕೆ ವರ್ಷಕ್ಕೆ ೫೦೦೦೦ ರೂಪಾಯಿಗಿಂತ ಹೆಚ್ಚು ನಿವ್ವಳ ವೆಚ್ಚವಾಗುವ ಸಂಗತಿಯಲ್ಲಿ ೩೦೦% ಇರಬೇಕು; ಗಿಫ್ಟ್ ಟ್ಯಾಕ್ಸಿನ ಪರಮ ಮಿತಿಯು ೮೦% ಮೀರಬಾರದು. ಕ್ಯಾಪಿಟಲ್ ಗೈನ್ಸ್ ಟ್ಯಾಕ್ಸನ್ನು ಇನ್‌ಕಮ್ ಟ್ಯಾಕ್ಸಿನ ಪರಮ ಮಿತಿಯ ಮಟ್ಟದಲ್ಲಿ (೪೫%) ಇಡಬೇಕು—ಎಂದು ವರದಿಯಲ್ಲಿದೆ.

ತಮ್ಮ ವ್ಯವಹಾರಗಳ ಆದಾಯದ ಮೇಲಿನ ತೆರಿಗೆಯಿಂದ ಜನರು ತಪ್ಪಿಸಿಕೊಳ್ಳುವುದನ್ನು ನಿವಾರಿಸಲಿಕ್ಕಾಗಿ ವರದಿಯು ೫೦೦೦೦ ರೂಪಾಯಿಗಳಿಗಿಂತ ಹೆಚ್ಚು ಆದಾಯವಿರುವ ವ್ಯಕ್ತಿಗಳ ಮತ್ತು ೧೦೦೦೦೦ರೂಪಾಯಿಗಳಿಗಿಂತ ಹೆಚ್ಚು ಆದಾಯವಿರುವ ಸಂಸ್ಥೆಗಳ ಲೆಕ್ಕ ಪತ್ರಗಳ ಪರಿಶೋಧನೆಯನ್ನು ಕಡ್ಡಾಯವಾಗಿ ನಡೆಸಬೇಕೆಂದು ಸೂಚಿಸಿದೆ. ಈ ಲೆಕ್ಕಪತ್ರ ಪರಿಶೋಧಕರಿಗೆ ಸಲ್ಲಬೇಕಾದ ವೇತನದಲ್ಲಿ ಅರೆವಾಸಿಯನ್ನು ಸರಕಾರ ಕೊಡಬೇಕೆಂದೂ ವರದಿ ಹೇಳಿದೆ. ತೆರಿಗೆ ಹಾಕುವ ಅಧಿಕಾರಿಗಳಿಗೆ ಲೆಕ್ಕಪತ್ರಗಳ ಪರಿಶೀಲನೆಯನ್ನು ಸಮರ್ಪಕವಾಗಿ ನಡೆಸಲು ಅನುಕೂಲತೆಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸಬೇಕೆಂದೂ ತೆರಿಗೆ ತಪ್ಪಿಸಿಕೊಂಡವರ ಮೇಲೆ ಕಠಿಣ ಶಿಕ್ಷಾಕ್ರಮಗಳನ್ನು ತೆಗೆದುಕೊಳ್ಳಲು ತಪ್ಪಬಾರದೆಂದೂ ವರದಿ ಒತ್ತಿ ಹೇಳಿದೆ.

ಭೂಕಂದಾಯ ಏರಲಿ!

ಸೂಚಿತ ಸುಧಾರಣೆಗಳಿಂದ (ಹೊಸ ತೆರಿಗೆ ಹಾಗು ಹಳೆಯ ಪದ್ಧತಿಗಳಲ್ಲಿಯ ಲೋಪದೋಷಗಳ ನಿವಾರಣೆಯ ಪರಿಣಾಮವಾಗಿ) ವರ್ಷಕ್ಕೆ ೧೦೦ ಕೋಟಿಗೂ ಹೆಚ್ಚು ತೆರಿಗೆಯು ವಸೂಲಾಗಬಹುದೆಂದು ಅಂದಾಜು. ಈಗ ತಪ್ಪಿಸಿಕೊಳ್ಳಲ್ಪಡುತ್ತಿದ್ದ ತೆರಿಗೆಯಲ್ಲಿ೨೦–೩೦ ಕೋಟಿಯಷ್ಟಾದರೂ ಪ್ರತಿ ವರ್ಷ ಇನ್ನು ಮುಂದೆ ಸಿಗಬಹುದು. ಆದುದರಿಂದ ಎರಡನೇ ಯೋಜನೆಯ ಅವಶ್ಯಕತೆಗಳನ್ನು ಪೂರೈಸುವುದರಲ್ಲಿ ಈ ಸಲಹೆಗಳಿಂದ ಹೆಚ್ಚಿನ ಸಹಾಯವಾಗುತ್ತದೆ. ಬಾಕಿ ಉಳಿದ ಹಣವನ್ನು ಭೂಕಂದಾಯ ಮತ್ತು ಅಬಕಾರಿ ಸುಂಕಗಳಿಂದ ತುಂಬಿಸಿಕೊಳ್ಳಲು ಪ್ರಯತ್ನ ಮಾಡಬೇಕು.

ಈಗ ಭೂಕಂದಾಯವು ೫೦ ಕೋಟಿ ರೂಪಾಯಿಯಷ್ಟು ವಸೂಲಾಗುತ್ತದೆ; ಇದು ಕೃಷಿ ಕ್ಷೇತ್ರದ ಉತ್ಪತ್ತಿಯ ಬೆಲೆಯಲ್ಲಿ ೧% ಸಹ ಆಗುವುದಿಲ್ಲ. ಭೂಕಂದಾಯವನ್ನು ಬಹಳ ಸಮಯದಿಂದ ಬಾಕಿ ಬಿದ್ದಿರುವ ಕಂದಾಯ ಪುನರ್ನಿರ್ಣಯದ ಪರಿಣಾಮವಾಗಿಯಾಗಲೀ ಅಥವಾ ಸ್ವೇಚ್ಛೆಯಿಂದ ಕಂದಾಯವನ್ನು ಸರಕಾರವು ಹೆಚ್ಚಿಸುವುದರಿಂದಾಗಲೀ ಇಮ್ಮಡಿಗೊಳಿಸಿ ೧೦೦ ಕೋಟಿ ರೂಪಾಯಿಗಳ ಮಟ್ಟಕ್ಕೆ ತಂದರೂ ಅದು ಉತ್ಪನ್ನದ ೨% ಅಂಶವಷ್ಟೆ ಆಗುತ್ತದೆ. ಆದುದರಿಂದ ಇದೆಂದೂ ಹೆಚ್ಚಿನ ಹೊರೆಯೆನಿಸಲಾರದು—ಎಂದು ವರದಿ ತಿಳಿಸಿದೆ. ಇನ್ನು ಬಾಕಿ ಬೀಳುವ ಹಣವನ್ನು ಕೆಲವು ವಸ್ತುಗಳಿಗೆ ಮಾತ್ರ ಮಿತವಾಗಿರುವ ಅಬಕಾರಿ ಸುಂಕದಿಂದ ಪಡೆಯಬಹುದೆಂದೂ ಆದರೆ ಈ ಮಾರ್ಗವನ್ನು ಅನಿವಾರ್ಯವೆನಿಸಿದಾಗ ಮಾತ್ರ ಅವಲಂಬಿಸಬೇಕೆಂದೂ ಎಚ್ಚರಿಕೆಯನ್ನು ವರದಿಯು ಕೊಡುತ್ತದೆ.

(೬ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956
THE CANARA BANKING CORPORATION LIMITED
H. Office: UDIPI (S.India).

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc· No· 466 N/50 dated 12-12-1950 of the Director of public Instructions Madras·

NAVAYUGA

Popular Kannada Weekly

Founder:—

Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೪-೬-'೫೨	೪೧

ಪ್ರವಾಸೋದ್ಯಮದ ಅಭಿವೃದ್ಧಿ

ಪ್ರೇಕ್ಷಣೀಯ ಸ್ಥಳಗಳನ್ನು ಸಂದರ್ಶಿಸಿ ಬರಬೇಕೆನ್ನುವ ಮಾನವನ ಸಹಜ ಆಕಾಂಕ್ಷೆಯನ್ನು ಉದ್ಯಮವಾಗಿ ಪೋಷಿಸಿ ಬೆಳೆಸಿಕೊಂಡು ಹೋಗುವುದು ಇಂದಿನ ಪರಿಪಾಟವಾಗಿದೆ ಎನ್ನಬಹುದು. ಹೀಗಾಗಿ, ಪ್ರತಿಯೊಂದು ದೇಶವೂ ತನ್ನಲ್ಲಿ ವೈಶಿಷ್ಟ್ಯಗಳು ಈ ಪ್ರಕಾರವಾಗಿವೆ ಎಂದು ಪ್ರಚುರಪಡಿಸಿ, ಸಂದರ್ಶಕರ ಸಂದಣಿಯನ್ನು ಆಕರ್ಷಿಸಿಕೊಳ್ಳುತ್ತಲಿದೆ; ಮತ್ತಿದಕ್ಕೆ ಭಾರತವೇನು ಅಪವಾದವಾಗಿಲ್ಲ. ಪ್ರಾಚೀನ ಸಂಸ್ಕೃತಿಯ ತವರೂರಾದ, ಮತ್ತು ಶತಮಾನಗಳುರುಳಿ ಹೋದರೂ ಆ ಸಾಂಸ್ಕೃತಿಕ ಪರಂಪರೆಯು ಅಳಿದು ಹೋಗದೆ ಬಾಳಿ ಬಂದಿರುವ, ಈ ನಾಡಿನಲ್ಲಿ ಪ್ರವಾಸಿಕರ ಕಣ್ಮನಾನಂದದಾಯಕವಾದ ಸ್ಥಳಗಳೂ ಸನ್ನಿವೇಶಗಳೂ ಸಂಗತಿಗಳೂ ಸಹಸ್ರ ಗಟ್ಟಳೆಯಲ್ಲಿವೆ. ಸಂಶೋಧನೆ ಮತ್ತು ಉಚ್ಚ ವ್ಯಾಸಂಗದ ದೃಷ್ಟಿಯಿಂದಲೂ ಈ ಸ್ಥಳಗಳಿಗೆ ಸಂದರ್ಶನವಿತ್ತು ಪ್ರತ್ಯಕ್ಷ ಅಭ್ಯಾಸವನ್ನು ನಡೆಸುವುದು ಹೆಚ್ಚು ಅಪೇಕ್ಷಣೀಯವೆನಿಸಿದೆ. "ಇಂಡೋಲಜಿ" ಯಂಥ ಶಾಸ್ತ್ರ ವಿಭಾಗವಾಗಲೀ ಶಿಲ್ಪ ಚಮತ್ಕಾರ, ಭಿತ್ತಿ ಚಿತ್ರಾಂಕನಾದಿ ಕಲಾ ವಿಷಯಗಳಾಗಲೀ ಪ್ರತ್ಯಕ್ಷ ಸಂದರ್ಶನ ಮತ್ತು ಅಭ್ಯಾಸದಿಂದಲೇ ಅನುಭವವನ್ನು ಹೆಚ್ಚು ಪರಿಪುಷ್ಟವಾಗಿ ಮಾಡತಕ್ಕವುಗಳಾಗಿವೆ. ಆದುದರಿಂದ ಪಾಶ್ಚಾತ್ಯ ವಿದ್ಯಾರ್ಥಿವೃಂದವೂ ಕಲಾವಿದರೂ ಈ ದೇಶಕ್ಕೆ ಹಿಂಡುಗೂಡಿ ಬರುವಂತಾಗಿದೆ. ಸ್ವದೇಶ ಬಾಂಧವರು ಸಹ ಪವಿತ್ರ ಕ್ಷೇತ್ರಗಳೆಂಬ ಆಧ್ಯಾತ್ಮಿಕ ಭಾವನೆಯಿಂದ ಪ್ರೇರಿತರಾಗಿಯೂ ಮತ್ತು ಪಾಶ್ಚಾತ್ಯರಂತೆ ಕಲಾಕ್ಷೇತ್ರದ ಜಿಜ್ಞಾಸುಗಳಾಗಿಯೂ—ಏನಿಲ್ಲದಿದ್ದರೂ ವಿಹಾರಪ್ರಿಯರಾಗಿಯೂ—ಇಲ್ಲೆಲ್ಲ ಸುತ್ತಾಡುತ್ತಾರೆ. ಆದುದರಿಂದ ಇಂಥವರಿಗೆಲ್ಲ ಸಕಲಾನುಕೂಲತೆಗಳಿರುವಂತೆ ನೋಡಿಕೊಳ್ಳುವುದು ಅತ್ಯಾವಶ್ಯಕವಾಗಿ ಸರಕಾರವು ಗಮನಿಸಬೇಕಾದ ವಿಷಯ. ಉದಾಹರಣೆಗೆ, ಅಜಂತ ಮತ್ತು ಎಲ್ಲೋರಗಳಿಗೆ ಹೋಗಲು ಸುಗಮ ಮಾರ್ಗವಿರಬೇಕು; ಹೋದಲ್ಲಿ ವಿಶ್ರಾಂತಿ ಹೊಂದಲು ಆಧುನಿಕ ಮಾದರಿಯ ಗೃಹಗಳೂ ಅತ್ಯಗತ್ಯ. ಆದರೆ ಪ್ರಕೃತ ಹೀಗಿಲ್ಲ—ರೈಲುದಾರಿಯಾಗಿ ನಾವೀ ಪ್ರೇಕ್ಷಣೀಯ ಸ್ಥಳಗಳನ್ನು ಸೇರಲಾರೆವು—ವಿಶ್ರಾಂತಿಗೃಹಗಳ ಪುಟ್ಟವು ಏನೇನೂ ತೃಪ್ತಿಕೊಡುತ್ತಿಲ್ಲ. ಕನ್ನಡ ನಾಡಿನಲ್ಲಿಯೇ ಇರುವ ಜೋಗದ ಜಲಪಾತದ ನಿದರ್ಶನವಾದರೂ ಹೀಗೆಯೇ. ಅಲ್ಲಿಯ ಬಂಗಲೆಯಲ್ಲಿರುವ ಕೋಣೆಗಳು ಬಂದು ಹೋಗುವ ಜನರ ಸಂಖ್ಯಾ ಪ್ರಮಾಣದ ಮೇಲಿಂದ ಎಷ್ಟಕ್ಕೂ ಸಾಲವು; ಮಾತ್ರವಲ್ಲ ಹೋಟೇಲಿನ ಸೌಕರ್ಯವು ಆ ಸ್ಥಳದಲ್ಲಿ ಎಷ್ಟಕ್ಕೂ ಸಮಾಧಾನಕರವಾಗಿಲ್ಲ. ಪ್ರವಾಸಿಗಳಿಗೆ ಇದರಿಂದಾಗಿ ಸ್ಥಳ ಸಂದರ್ಶನದ ಆನಂದವೆಲ್ಲವೂ ಬೇಸರವೇ ತಲೆದೋರುತ್ತದೆ; ಮತ್ತು ತ್ರಾಸದಾಯಕವೆನಿಸಿದ ಅವರ ಅನುಭವವು ಅಲ್ಲಿಗೆ ಬರಲಿರುವ ಪ್ರವಾಸಿಕರನ್ನು ನಿರುತ್ಸಾಹಿಗಳಾಗಿ ಮಾಡುತ್ತದೆ. ಅಖಿಲ ಭಾರತದ ದೃಷ್ಟಿಯಿಂದ ಪ್ರಖ್ಯಾತವಾದ ಸ್ಥಳಗಳಲ್ಲಿಯೇ ಈ ಬಗೆಯ ಅನಾನುಕೂಲತೆಗಳು ವಿದ್ಯಮಾನವಿವೆ— ಎಂದ ಮೇಲೆ, ಒಳನಾಡಿನ ಪ್ರವಾಸ ಕೇಂದ್ರಗಳ ಕುರಿತು ಮಾತನಾಡುವುದೇ ಬೇಡ. ಉದಾಹರಣೆಗೆ, ನಮ್ಮ ಜಿಲ್ಲೆಯ ಕೋಣ್ಸೆಪಾರಿನ ಸುಂದರ ಸಮುದ್ರ ಕೃತ ಷಟ್ಕೋನಾಕಾರದ ಹರಳು ಕಲ್ಲಿನ ರಚನೆಯನ್ನು ನೋಡಹೋಗಲು ಲಾಂಚಿನ ವ್ಯವಸ್ಥೆ ಇಲ್ಲ; ಜಮಾಲಾಬಾದಿನ ಕೋಟೆಯನ್ನೇರಿ ಹೋಗುವ ಮಾರ್ಗವನ್ನು ಮೋಟಾರು ಚಲಾವಣೆಗೆ ಸಹ ಅನುಗೊಳಿಸಿಲ್ಲ. ಇವುಗಳಿಂದ ಪ್ರವಾಸಪ್ರಿಯರಿಗೆ ಅನೇಕ ಕಿರುಕುಳಗಳನ್ನು ಅನುಭವಿಸಬೇಕಾಗಿ ಬರುತ್ತದೆ; ಮತ್ತು ಅಷ್ಟು ಮಟ್ಟಿಗೆ ಅವರ ಉತ್ಸಾಹವು ಇಳಿದು ಹೋಗುತ್ತದೆ. ಒಳನಾಡಿನ ಪ್ರವಾಸೋದ್ಯಮವು ಸಹ ಪ್ರಸಿದ್ಧ ಸ್ಥಳಗಳಿಗೆ ಸಂಬಂಧಿಸಿದ ಪ್ರವಾಸೋದ್ಯಮದಷ್ಟೆ ಮಹತ್ವಪೂರ್ಣ ವಿಷಯವಾಗಿದೆ ಎಂಬುದನ್ನು ಎಷ್ಟು ಮಾತ್ರಕ್ಕೂ ಮರೆಯಲಾಗದು. ಸೌಕರ್ಯಗಳನ್ನು ಹೆಚ್ಚಿಸಲು ಹೋಗುವುದರಿಂದ ಕರ್ಚು ಹೆಚ್ಚಿಕೊಳ್ಳುವುದಲ್ಲದೆ ಪ್ರತಿಫಲವು ಲಾಭದಾಯಕವಾಗಲಾರದೆಂದು ಯಾರಾದರೂ ಭಾವಿಸುವಂತಾದರೆ ಅದು ತಪ್ಪು. ನಮ್ಮ ಜನರೀಗ ಹೆಚ್ಚು ಸೌಲಭ್ಯ-ಸೌಕರ್ಯಗಳನ್ನು ಅಪೇಕ್ಷಿಸುತ್ತಿದ್ದಾರೆ; ಮತ್ತು ಅವುಗಳ ಉಪಯೋಗ ಮಾಡಿಕೊಳ್ಳುವುದನ್ನೂ ಕಲಿತಿದ್ದಾರೆ. ಒಂದೇ ಉದಾಹರಣೆ ಕೊಡುವುದಾದರೆ, ಉಡುಪಿಯಲ್ಲಿ ಸಿಟಿ ಸರ್ವಿಸುಗಳು ಜನಪ್ರಿಯವಾಗಿವೆಯಷ್ಟೇ ಅಲ್ಲ `ಲಾಭದಾಯಕವೆನಿಸಿವೆ; ಜಿಲ್ಲೆಯಲ್ಲಿ ಬಸ್ಸುಗಳ ಓಡಾಟ ಬಹಳ ಹೆಚ್ಚಿಕೊಂಡಿವೆ; ಧರ್ಮಸ್ಥಳದಂಥ ಪವಿತ್ರ ಕ್ಷೇತ್ರಕ್ಕೆ ಬಸ್ಸಿನ ಮೂಲಕ ನೇರ ಸಂಪರ್ಕವನ್ನು ಒದಗಿಸಿದುದರಿಂದ ಆ ಪುಣ್ಯ ಧಾಮದ ಯಾತ್ರೆ ಕೈಗೊಂಡು ಧನ್ಯರೆನಿಸುವವರ ಸಂಖ್ಯೆ ಗಣನೀಯವಾಗಿ ಅಧಿಕಗೊಂಡಿದೆ. ಇವೆಲ್ಲವುಗಳಿಂದ ಸರಕಾರವೊಂದೇ ಪ್ರವಾಸೋದ್ಯಮದ ಅಭಿವೃದ್ಧಿಗಾಗಿ ಪ್ರಯತ್ನ ಕೈಗೊಳ್ಳಬೇಕಾಗಿದೆ ಎಂದು ತಿಳಿದುಕೊಳ್ಳದೆ, ಸಾರ್ವಜನಿಕ ಮುಂದಾಳುಗಳು—ಮುಖ್ಯವಾಗಿ ಉದ್ಯಮಶೀಲರು—ಈ ದಿಸೆಯಲ್ಲಿ ಇಡಬಹುದಾದ ಹೆಜ್ಜೆಗಳೂ ಹಲವಿವೆ ಎಂಬ ಸತ್ಯ ಮನವರಿಕೆಯಾಗುತ್ತದೆ. ಈ ಉದ್ಯಮಶೀಲರ ಸಾಹಸಗಳಿಗೆ ಉತ್ತೇಜನೆಯನ್ನೂ ಮನ್ನಣೆಯನ್ನೂ ಕೊಡಲು ಸರಕಾರ ಹಿಂಜರಿಯಬಾರದು. ಪ್ರವಾಸೋದ್ಯಮದ ಅಭಿವೃದ್ಧಿಗೆ ಸರಕಾರವು ನಡಸಲಿರುವ ಕೆಲವು ಕೋಟಿ ರೂಪಾಯಿಗಳ ವೆಚ್ಚದ ಕಾರ್ಯಕ್ರಮಕ್ಕಿಂತಲೂ ಉದ್ಯಮಶೀಲರು ವ್ಯಕ್ತಿಗತ ಹೊಣೆಯ ಮೇಲೆ ಏರ್ಪಡಿಸಬಹುದಾದ ಸೌಕ

ಅಮೇರಿಕದ "ಶಾಂತಿ ವಿಮೆ"ಯ ಯೋಜನೆ

ವಿದೇಶ ಸಹಾಯ ಏಕೆ ಬೇಕೆಂಬ ಕುರಿತು ಸಮಾಧಾನ

ಅಮೇರಿಕದ ವಿದೇಶ ಸಚಿವರಾದ ಡಲ್ಲೇಸರು ತಮ್ಮ ದೇಶವು ಜಾಗತಿಕ ಮಟ್ಟದಲ್ಲಿ ಶಕ್ತಿ ಸಂಪನ್ನವಾಗಿರುವಂತೆ ನೋಡಿಕೊಳ್ಳಲು ಬೇರೆ ಬೇರೆ ರಾಷ್ಟ್ರಗಳೊಡನೆ ಮೈತ್ರಿ ಸ್ಥಾಪನೆ ಮಾಡಿಕೊಳ್ಳುವುದೂ ಅವುಗಳಿಗೆ ಯೋಗ್ಯ ಸಹಾಯವನ್ನು ನೀಡುವುದೂ ಅತ್ಯಾವಶ್ಯಕವೆಂದಿದ್ದಾರೆ. ಇದಕ್ಕಾಗಿ ಸಲ್ಲಿಸಲಾಗುವ ಸೈನಿಕ ಹಾಗು ಆರ್ಥಿಕ ಸಹಾಯ ಯೋಜನೆಗಳನ್ನು "ಶಾಂತಿ ವಿಮೆ"ಗಾಗಿ ತೆರುವ ಪ್ರೀಮಿಯಮೆಂದು ಅವರು ವರ್ಣಿಸಿದ್ದಾರೆ.

ವೆಚ್ಚದ ಮೊತ್ತ

ಆಕ್ರಮಣವನ್ನು ಪ್ರತಿಭಟಿಸಲು ನಮ್ಮ ಶಕ್ತಿಯನ್ನು ಉನ್ನತ ಮಟ್ಟದಲ್ಲಿಡಬೇಕು; ಮತ್ತು ಆಕ್ರಮಣವೇ ಇಲ್ಲದಂತಾಗುವಷ್ಟು ಈ ಶಕ್ತಿಯು ಪ್ರಬಲವಾಗಿರಬೇಕು ಎಂದೆನ್ನುತ್ತಾ ಈ ಕಾರಣಕ್ಕಾಗಿಯೇ ಶಾಂತಿ ವಿಮೆಗಾಗಿ ಸಲ್ಲಿಸಬೇಕಾಗುವ ಚಂದಾ ಹಣವು ಅತಿ ದೊಡ್ಡ ಮೊತ್ತದ್ದಾಗಿರುತ್ತದೆ ಎಂದು ಡಲ್ಲೇಸರು ವಿವರಿಸಿದರು. ವರ್ಷಕ್ಕೆ ಸುಮಾರು ೪೦೦೦ ಮಿಲಿಯ ಡಾಲರುಗಳನ್ನು ಇದಕ್ಕಾಗಿ ವ್ಯಯಿಸಲಾಗುತ್ತಿದೆಯೆಂದೂ ಇದರಲ್ಲಿ ೩೬೦೦ ಮಿಲಿಯ ಡಾಲರು ವೆಚ್ಚವನ್ನು ಅಮೇರಿಕದ ಸ್ವಂತ ಸೈನಿಕ ಕೇಂದ್ರಗಳ ಅಭಿವೃದ್ಧಿಗಾಗಿ ಬಳಸಲಾಗುತ್ತದೆಯೆಂದೂ ಅವರು ತಿಳಿಸಿದರು.

ಭಾರತಕ್ಕೆ ಸಹಾಯ

ಆ ದೇಶದ ಪ್ರತಿನಿಧಿ ಸಭೆಯಲ್ಲಿ ಕಳೆದ ವಾರ ವಿದೇಶ ಸಹಾಯದ ಯೋಜನೆಯು ಚರ್ಚೆಗೆ ಬಂದಾಗ ಭಾರತವು ಪಶ್ಚಾತ್ತಾಪರಹಿತ ರೀತಿಯಲ್ಲಿ ತಾಟಸ್ಥ್ಯ ಭಾವನೆ ವಹಿಸಿರುವುದಕ್ಕಾಗಿ ಮತ್ತು ಯುಗೋಸ್ಲಾವಿಯವು ರಶಿಯದೊಡನೆ ಪುನಃ ಸಲಿಗೆಯ ಸಂಬಂಧವನ್ನು ಬೆಳೆಸಿಕೊಳ್ಳಲು ಹವಣಿಸುತ್ತಿರುವುದಕ್ಕಾಗಿ ಈ ಎರಡು ರಾಷ್ಟ್ರಗಳಿಗೆ ಅಮೇರಿಕವು ಸಹಾಯ ನೀಡಲಾಗದೆಂಬ ಆಕ್ಷೇಪದ ಬಗ್ಗೆ ತುರುಸಿನ ಚರ್ಚೆ ನಡೆಯಿತು. ಆದರೆ, ಕೊನೆಯಲ್ಲಿ ಈ ಆಕ್ಷೇಪವು ಬಿದ್ದುಹೋದುದರಿಂದ, ಭಾರತಕ್ಕೆ ೭೦ ಮಿಲಿಯ ಡಾಲರುಗಳಷ್ಟು ಸಹಾಯವು ಸಾಲ ಮತ್ತು ವಸ್ತುಗಳ ರೂಪದಲ್ಲಿ ಸಿಗುವಂತಾಗಿದೆ.

ಐಸೆನ್‌ಹೋವರರಿಗೆ ಅಸ್ವಾಸ್ಥ್ಯ

ಅಧ್ಯಕ್ಷ ಐಸೆನ್‌ಹೋವರರಿಗೆ ಕರುಳಿನ ಬಾಧೆಯಿಂದ ಅಸ್ವಾಸ್ಥ್ಯವುಂಟಾಗಿದೆ. ಅವರನ್ನು ಕೂಡಲೇ ಶಸ್ತ್ರ ಚಿಕಿತ್ಸೆಗೆ ಗುರಿಪಡಿಸಲಾಯಿತು. ಇದು ಯಶಸ್ವಿಯಾಗಿದೆಯೆಂದೂ ಐಸೆನ್‌ಹೋವರ್ ತೃಪ್ತಿಕರವಾದ ರೀತಿಯಲ್ಲಿ ಸುಧಾರಿಸುತ್ತಿದ್ದಾರೆಂದೂ ವರದಿಗಳು ಹೇಳುತ್ತವೆ. ಆದರೆ ಇನ್ನು ನಾಲ್ಕಾರು ವಾರಗಳ ವರೆಗೆ ಅವರು ತಮ್ಮ ಕೆಲಸಗಳನ್ನು ಸಂಪೂರ್ಣವಾಗಿ ನೋಡಿಕೊಳ್ಳಲು ಶಕ್ತರಾಗಲಿಕ್ಕಿಲ್ಲ. ಹೀಗಾಗಿ ಬರುವ ತಿಂಗಳಲ್ಲಿ ಭಾರತದ ಪ್ರಧಾನಿ ನೆಹರುಗಳು ಅವರೊಡನೆ ಸಮಾಲೋಚನೆ ನಡೆಸುವುದು ಸಾಧ್ಯವಾದೀತೊ ಸಂಶಯ. ಇಂಥ ಸಮಾಲೋಚನೆ ನಡೆದರೂ ಅದು ಅಮೇರಿಕದ ಧೋರಣೆಯ ವಿಷಯದಲ್ಲಿ ದೂರಗಾಮಿ ಪರಿಣಾಮ ಮಾಡೀತೋ ಎಂಬುದೂ ಸಂದೇಹ. ಏಕೆಂದರೆ, ಈ ಅಸ್ವಾಸ್ಥ್ಯವನ್ನು ವೈದ್ಯರು "ಮಹತ್ವದ್ದಲ್ಲ, ತೀರ ಸಾಮಾನ್ಯ" ಎಂದು ಕರೆದಿದ್ದರೂ ಅಧ್ಯಕ್ಷ ಚುನಾವಣೆ ನಡೆಯುವ ಈ ವರ್ಷದಲ್ಲಿ ಪ್ರತಿಪಕ್ಷೀಯರು ಐಕರ ಹುರಿಯಾಳುತನವನ್ನು ನಿಂದಿಸಲು ಇದೊಂದು ಕಾರಣವಾದೀತು. ಚುನಾಯಿಸಿ ಬರುವ ಭರವಸೆ ಇಲ್ಲದ ವ್ಯಕ್ತಿಯೊಡನೆ ನಡೆಸುವ ಸಮಾಲೋಚನೆ ಎಷ್ಟಾದರೂ ನಿಷ್ಪ್ರಯೋಜಕ.

ಟಿಟೋರ ಭೇಟಿ

ಯುಗೋಸ್ಲಾವಿಯದ ಅಧ್ಯಕ್ಷ ಟಿಟೋರವರು ರಶ್ಯಕ್ಕೆ ಸೌಹಾರ್ದ ಸಂದರ್ಶನವನ್ನು ನೀಡಿದ್ದಾರೆ; ಕಳೆದ ವರ್ಷ ರಶ್ಯದ ಪ್ರಭೃತಿಗಳು ಸ್ಟಾಲಿನ್ನರು ಮಾಡಿದ್ದ ತಪ್ಪನ್ನು ತಿದ್ದಿಕೊಂಡು, ಯುಗೊಸ್ಲಾವಿಯಕ್ಕೆ ನೀಡಿದ ಭೇಟಿಗಿದು ಉತ್ತರರೂಪದಲ್ಲಿದೆ. ಟಿಟೋರವರ ಪ್ರೀತ್ಯರ್ಥವಾಗಿ ಎಂಬಂತೆ, ಸ್ಟಾಲಿನ್ನರ ಆಶ್ರಯದಲ್ಲಿ ಬೆಳೆದಿದ್ದ ಮೊಲೊಟೋವರನ್ನು ವಿದೇಶ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವಂತೆ ರಶ್ಯದ ಸರಕಾರ ಮನವೊಲಿಸಿದೆ. ಈ ಮಂತ್ರಿ ಸ್ಥಾನವು ಪ್ರಾವ್ಡಾ ಪತ್ರಿಕೆಯ ಸಂಪಾದಕರಾಗಿದ್ದ ಡಿಮಿಟ್ರಿ ಶೆಪಿಲೋವರಿಗೆ ಈಗ ದೊರೆತಿದೆ.

ರ್ಯಗಳೇ ಹೆಚ್ಚು ಪೋಷಕ. ಭಾರತ ಸರಕಾರದ ಸಾರಿಗೆ ಹಾಗೂ ಇಲಾಖೆಯ ಉಪಮಂತ್ರಿಗಳ ಅಧ್ಯಕ್ಷತೆಯಲ್ಲಿ ಹೊಸದೆಹಲಿಯಲ್ಲಿ ಕಳೆದವಾರ ಅಧಿವೇಶನವನ್ನು ನಡೆಸಿದ ಕೇಂದ್ರ ಪ್ರವಾಸೋದ್ಯಮ ಸಲಹಾಮಂಡಳಿಯು ಈ ಮುಖ್ಯ ವಿಷಯಗಳತ್ತ ಸಾರ್ವಜನಿಕರ ಗಮನ ಹರಿಯುವಂತೆ ಮಾಡಲು ತಪ್ಪಿರುವುದು ವಿಷಾದಕರ. ಸರಕಾರದ ಕಾರ್ಯಕ್ರಮವೊಂದೇ ಪ್ರವಾಸೋದ್ಯಮದ ಅಭಿವೃದ್ಧಿ ಮಾಡಬಲ್ಲುದೆಂಬ ಭ್ರಾಂತಿಯಲ್ಲಿರುವಂತೆ ಅದರ ಕಾರ್ಯಕಲಾಪವಿತ್ತೆಂಬ ವರದಿ ನಮಗೆ ನಿರಾಸೆ ಮಾಡಿದೆ. ಇನ್ನಾದರೂ ಈ ತಪ್ಪು ತಿದ್ದಲ್ಪಡಲೆಂದು ಆಶಿಸುತ್ತೇವೆ.

ದಯಮಾಡಿ ಚಂದಾಹಣ ವನ್ನು ಕಳಿಸಿಕೊಡಿರಿ.

(೫ನೇ ಪುಟದಿಂದ)

ವಿರೋಧ ಬೇಡ

ಸದ್ಯಕ್ಕೆ ತೆರಿಗೆಯಿಂದ ವಿನಾಯತಿಯನ್ನು ಪಡೆದಿರುವ ಅನೇಕ ಬಗೆಯ ಸಂಪತ್ತಿನ ಮೇಲೆ ಹೊಸತಾಗಿ ತೆರಿಗೆಯನ್ನು ಹೇರುವ ಈ ಸೂಚನೆಗಳಿಂದ ತೆರಿಗೆಯ ಆದಾಯ ಮೂಲವು ವಿಸ್ತಾರವಾಗುತ್ತದೆ. ಕೇವಲ "ಆದಾಯ" ತೆರಿಗೆಯೊಂದರ ಮೇಲೆ "ಪ್ರಗತಿಪರ" ತೆರಿಗೆ ಹೊರಿಸುವುದಕ್ಕಿಂತಲೂ ಎಲ್ಲ ವಿಧದ ಸಂಪತ್ತಿನ ಮೇಲೆ—ಅಂದರೆ ಸಂಪತ್ತು, ಆದಾಯ ಮತ್ತು ವೆಚ್ಚ—ತೆರಿಗೆ ಹೇರುವುದು ಇಷ್ಟವಾಗಿದೆ. ಹೀಗೆ ತೆರಿಗೆ ಪದ್ಧತಿಯನ್ನು ಸುಧಾರಿಸಿದರೆ, ಈಗಿಗಿಂತ ದರಗಳನ್ನು ಕೆಳಮಟ್ಟಕ್ಕೆ ತಂದು ಸಾಮಾನ್ಯ ಮಟ್ಟದಲ್ಲಿ ನಿಲ್ಲಿಸುವುದಕ್ಕೆ ನೋಡಿದರೂ ಒಟ್ಟಿನಲ್ಲಿ ಬಾಧಕ ಬರಲಾರದು ಎಂಬುದು ಈ ತಜ್ಞರು ಸೂಚಿಸಿದ ಸಲಹೆಗಳಲ್ಲಿ ಅಡಕವಾದ ಸಿದ್ಧಾಂತ.

ಹೀಗೆ ತೆರಿಗೆಯ ದರವನ್ನು ಕೆಳಗಿಳಿಸುವುದಕ್ಕೆ ಭಾರತದಲ್ಲಿ ಪ್ರಬಲ ವಿರೋಧವಿರಬಹುದು-ಆದರೆ, ತನ್ನ ದೃಷ್ಟಿಯಲ್ಲಿ ಈ ವಿರೋಧಕ್ಕೆ ಅರ್ಥವಿಲ್ಲ ಎಂದಿದ್ದಾರೆ ಸಲಹೆ ನೀಡಿದ ಈ ತಜ್ಞ. ತನ್ನ ನಿಲುವನ್ನು ವಿವರಿಸುತ್ತಾ ವರದಿಯಲ್ಲಿ ಹೇಳಲಾದ ಸಲಹೆಗಳಿಂದ ತೆರಿಗೆಯನ್ನು ತಪ್ಪಿಸಿಕೊಳ್ಳುವ ಪ್ರವೃತ್ತಿಯ ಮೇಲೆ ಒಳ್ಳೆಯ ನಿಯಂತ್ರಣ ನಿಲ್ಲುವುದೆಂದೂ ತೆರಿಗೆ ಕೊಡಬೇಕಾದ ಸಂಗತಿಗಳು ಹೆಚ್ಚುತ್ತವೆಯೆಂದೂ ಅವರು ಹೇಳಿದ್ದಾರೆ. ತೆರಿಗೆಯು ಹೆಚ್ಚಿಗಿದ್ದರೆ, ಅದರಿಂದ ತಪ್ಪಿಸಿಕೊಳ್ಳಬೇಕೆಂಬ ಮನೋಭಾವವೂ ಬಲಿಯುತ್ತದೆ ಎಂಬ ಮನೋವೈಜ್ಞಾನಿಕ ದೃಷ್ಟಿಯೂ ತನ್ನದೆಂದು ಅವರೆಂದಿದ್ದಾರೆ. ತೆರಿಗೆಯ ಮೂಲಗಳನ್ನು ವಿಸ್ತರಿಸಿರುವುದರಿಂದ ಪ್ರಗತಿಪರ ತೆರಿಗೆಗೆ ಆತಂಕವಾಗದೆಂದೂ ಅವರು ಭರವಸೆ ನೀಡಿದ್ದಾರೆ.

ಆಕ್ಷೇಪಕ್ಕೆ ಉತ್ತರ

ವರದಿಯನ್ನು ಮುಗಿಸುವುದಕ್ಕೆ ಮುಂಚೆ ಎರಡು ಸಂಭಾವ್ಯ ಆಕ್ಷೇಪಗಳನ್ನೂ ಈ ತಜ್ಞರು ಉಲ್ಲೇಖಿಸಿ, ಉತ್ತರಿಸಿದ್ದಾರೆ. ಭಾರತವು 'ಹಿಂದುಳಿದ" ದೇಶವಾಗಿರುವುದರಿಂದ ಪಾಶ್ಚಾತ್ಯ ದೇಶಗಳ ಪದ್ಧತಿಯನ್ನು "ಮುಂದುವರಿದ" ತೆರಿಗೆ ಕ್ರಮಗಳನ್ನು ಇಲ್ಲಿ ಬಳಸುವುದು ವ್ಯಾವಹಾರಿಕವಲ್ಲ ಎಂಬುದು ಈ ಆಕ್ಷೇಪಗಳಲ್ಲೊಂದು. ಇದಕ್ಕೆ ತಜ್ಞರ ಉತ್ತರವಿಂತಿದೆ—ಭಾರತವು ಆರ್ಥಿಕ ಕ್ಷೇತ್ರದಲ್ಲಿ ಹಿಂದುಳಿದಿದೆ ಎಂದ ಮಾತ್ರಕ್ಕೆ ತೆರಿಗೆ ಪದ್ಧತಿಯಲ್ಲೂ ಹಿಂದುಳಿಯಬೇಕೆಂದು ಹೇಳಲಾಗದು. ಭಾರತದಲ್ಲಿ ಈಗಿರುವ ತೆರಿಗೆ ಪದ್ಧತಿಯು ವಾಸ್ತವಿಕವಾಗಿ ಬ್ರಿಟನ್ನಿನ ಅನುಕರಣೆಯಾಗಿದ್ದು, ಬ್ರಿಟನ್, ಅಮೇರಿಕಗಳಲ್ಲಿಯಷ್ಟೇ ಕ್ಲಿಷ್ಟವೂ ತೊಡಕಿನದೂ ಆಗಿದೆ. ಹಿಂದುಳಿದ ಮತ್ತು ಮುಂದರಿದ ರಾಷ್ಟ್ರಗಳಲ್ಲಿಯ ವ್ಯತ್ಯಾಸವು ನೇರವಾದ ತೆರಿಗೆಗಳ ಸ್ವರೂಪದ ಮೇಲೆಯಲ್ಲ, ಆ ತೆರಿಗೆಗಳು ಅನ್ವಯವಾಗುವ ಜನರ ಸಂಖ್ಯಾಪ್ರಮಾಣದ ಮೇಲೆ ಹೊಂದಿಕೊಂಡಿದೆ. ಬ್ರಿಟನ್ನಿನಲ್ಲಿ ಆದಾಯ ತೆರಿಗೆ ಕೊಡುವವರ ಸಂಖ್ಯೆಯು ೧೭೦ ಲಕ್ಷ, ಅಂದರೆ ಆದಾಯವುಳ್ಳ ಜನರ ೭೦%. ಆಗಿದೆ. ಆದರೆ ಭಾರತದಲ್ಲಿ ಆದಾಯ ತೆರಿಗೆ ಕೊಡುವವರು ೧೦ ಲಕ್ಷ ಸಹ ಇಲ್ಲ; ಈ ಸಂಖ್ಯೆಯು ಆದಾಯವುಳ್ಳ ಜನರ ೧% ಮಾತ್ರ ಆಗುತ್ತದೆ. ಆದುದರಿಂದ ತೆರಿಗೆ ಸುಧಾರಣೆಯು ಹಿಂದುಳಿದ ದೇಶಕ್ಕೆ ಯೋಗ್ಯವಲ್ಲವೆಂಬ ಪ್ರಶ್ನೆ ಇಲ್ಲಿ ಬರುವುದಿಲ್ಲ.

ಎರಡನೇ ಆಕ್ಷೇಪವೆಂದರೆ, ತೆರಿಗೆಯನ್ನು ತಪ್ಪಿಸಲು ಸುಲಭಾವಕಾಶವಿಲ್ಲದಿದ್ದರೆ, ಚಿನ್ನದ ರೂಪದಲ್ಲಿ ಸಂಪತ್ತನ್ನು ಸಂಗ್ರಹಿಸಿಟ್ಟುಕೊಂಡು, ಹಾಗೆ ತೆರಿಗೆಯಿಂದ ಜನರು ತಪ್ಪಿಸಿಕೊಳ್ಳಬಹುದು ಎಂಬುದು: ಇದಕ್ಕೆ ಉತ್ತರ ಹೀಗಿದೆ—ತೆರಿಗೆ ತಪ್ಪಿಸಿಕೊಳ್ಳುವುದು ಹೆಚ್ಚಾದರೆ, ತೆರಿಗೆಯ ಭಾರವನ್ನು ಪ್ರಗತಿಪರವಾಗಿ ಜನರಲ್ಲಿ ಹಂಚಿ ಹಾಕಿ, ಹಾಗೆ ಆರ್ಥಿಕ ವಿಷಮತೆಯ ನಿಧಾನ ನಿವಾರಣೆಮಾಡುವ ಸಂಕಲ್ಪವೇ ವ್ಯರ್ಥವಾಗುತ್ತದೆ. ತೆರಿಗೆ ತಪ್ಪಿಸಿಕೊಳ್ಳುವುದಕ್ಕೆ ತೆರಿಗೆ ಬಹಳ ಭಾರವಾಗಿರುವುದೇ ಮುಖ್ಯ ಕಾರಣ. ಆದುದರಿಂದ ತೆರಿಗೆಯನ್ನು ತಗ್ಗಿಸುವ ಸೂಚನೆಯನ್ನೇ ಅಂಗೀಕರಿಸಬೇಕು. ಆಗ ಸಹಜವಾಗಿಯೇ ಚಿನ್ನದ ರೂಪದಲ್ಲಿ ಸಂಗ್ರಹಮಾಡಿಕೊಳ್ಳುವ ಪ್ರವೃತ್ತಿ ಹತೋಟಿಯಲ್ಲಿ ಉಳಿಯಬಲ್ಲುದು. ಅಂತೂ, ತೆರಿಗೆ ಪದ್ಧತಿಯಲ್ಲಿ ತೆರಿಗೆ ತಪ್ಪಿಸಿಕೊಳ್ಳುವುದಕ್ಕೆ ಇರುವ ಅವಕಾಶಗಳು ಆದಷ್ಟು ವಿರಳವಾಗಿರಬೇಕು.

ಉಡುಪಿ

ಸಾಹಿತ್ಯ ಗೋಷ್ಠಿ — ಶ್ರೀ ಫಲಿಮಾರು ಮಠದ ಶ್ರೀ ರಘುವಲ್ಲಭ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ದಿನಾಂಕ ೭ರಂದು ಸ್ಥಳೀಯ ಕಲಾವೃಂದ ವಾಗ್ವರ್ಧಿನೀ ಸಭೆಯ ಸಾಹಿತ್ಯಗೋಷ್ಠಿಯು ಜರಗಿತು. ಶ್ರೀ ಕೆ. ಸುಬ್ರಹ್ಮಣ್ಯ ಉಪಾಧ್ಯಾಯರು ಸ್ವಾಗತಿಸಿದರು. ಶ್ರೀಗಳಾದ ಪಿ. ವಿಷ್ಣುಮೂರ್ತಿ ಭಟ್ಟರಿಂದ ಪಂಪಭಾರತದೊಳಗಣ ರಾಜಸೂಯಾಧ್ವರದ ಅಗ್ರಪೂಜೆಯ ಸಾಹಿತ್ಯಭಾಗದ ವಿವರಣೆ ಮತ್ತು ಆರ್. ಎಸ್. ವೈಲಾಯರಿಂದ ಇಂದು ನಮಗೆ ಬೇಕಾಗಿರುವ ಸಾಹಿತ್ಯವೆಂಬುದರ ಕುರಿತು ಭಾಷಣವು ಜರಗಿತು. ಶ್ರೀ ಪಾದಂಗಳವರು ತಮ್ಮ ಅಧ್ಯಕ್ಷಭಾಷಣದಲ್ಲಿ ಸಾಹಿತ್ಯವು ಧರ್ಮದ ತಳಹದಿಯಲ್ಲಿ ರಚಿತವಾದರೆ, ಅದು ಜೀವನದ ಪೂರ್ಣತೆಯನ್ನು ತುಂಬುವುದು ಎಂದು ಸೂಚಿಸಿದರು. ಸಂಘದ ಕಾರ್ಯದರ್ಶಿಗಳಾದ ಶ್ರೀ ಯಾದವ ಸರಳಾಯರ ಧನ್ಯವಾದದೊಡನೆ ಸಭಾಂತ್ಯವಾಯಿತು.

ಬನ್ನಂಜೆ ಹರಿಜನ ಶಾಲಾ ಕಟ್ಟಡದ ಉದ್ಘಾಟನೆಯು— ತಾ. ೧೧ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮ್ ಅವರಿಂದ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಈ ಕಟ್ಟಡವು ಸ್ಥಾನಿಕ ಅಭಿವೃದ್ಧಿ ಯೋಜನೆಯಂತೆ ಕಟ್ಟಲಾಗಿದ್ದು, ಅದರ ಮೇಲ್ವಿಚಾರಣೆಯನ್ನು ವಹಿಸಿ, ಶ್ರಮಿಸಿದ ಭಾರತ ಸೇವಕ ಸಮಾಜದ ಕಾರ್ಯದರ್ಶಿ ಶ್ರೀ ಎ. ಜೆ. ಆಳ್ವಯವರು ಸ್ವಾಗತಿಸಿದರು. ಅಲ್ಪಾವಧಿಯಲ್ಲಿ ಕಟ್ಟಡ ನಿರ್ಮಾಣಕಾರ್ಯದಲ್ಲಿ ಯಶಸ್ವಿಗಳಾದ ಶ್ರೀ ಬಿ. ಮಹೇಶ ಹೆಗ್ಡೆಯವರಿಗೆ ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರು ಗುರುತೊಂದನ್ನು ಅರ್ಪಿಸಿದರು. ಜಿಲ್ಲಾಧಿಕಾರಿಗಳು ತಮ್ಮ ಭಾಷಣದಲ್ಲಿ ಪಂಚವಾರ್ಷಿಕಯೋಜನೆಯು ಯಶಸ್ವಿಯಾಗಿ ಎಲ್ಲರೂ ದುಡಿಯಬೇಕೆಂದು ವಿನಂತಿಸಿದರು. ಶ್ರೀ ಪೈಗಳು ಜಿಲ್ಲಾಧಿಕಾರಿಗಳ ಪರವಾಗಿ ಮತ್ತೊಂದು ಪಾರಿತೋಷಕವನ್ನು ಶ್ರೀ ಹೆಗ್ಡೆಯವರಿಗೆ ಅರ್ಪಿಸಿದರು. ಡಾ. ಟಿ. ಎಂ. ಎ. ಪೈಗಳು ಹಾಜರಿದ್ದ 51 ಹುಡುಗರಿಗೆ ಅಂಗಿ ವಸ್ತ್ರಗಳನ್ನು ಹಂಚುವುದಾಗಿ ಸಾರಿದರು. ಜಿಲ್ಲಾಧಿಕಾರಿಗಳು ಶಾಲೆಯ ಉಳಿದ ಮಕ್ಕಳಿಗೆ ಉಡುಪು ಕೊಡಲು 50 ರೂಪಾಯಿ ಸಹಾಯಧನವಿತ್ತರು. ಶ್ರೀಗಳಾದ ಯು. ರಾಮಚಂದ್ರ, ಯಸ್. ಎಲ್. ನಾರಾಯಣ ಭಟ್, ಪಿ. ಎಸ್. ಸೆಟ್ಟಿ, ಮೊದಲಾದವರು ಮಾತನಾಡಿದ ಮೇಲೆ ಎ. ಜೆ. ಆಳ್ವರವರು ಅಭಿನಂದಿಸಿದರು.

ಪೆರಂಪಳ್ಳಿ ಶಾಲಾ ಕಟ್ಟಡದ ಉದ್ಘಾಟನೆಯು—ತಾ. 11ರಲ್ಲಿ ಜಿಲ್ಲಾ ಕಲೆಕ್ಟರ್ ಎಂ. ಜಿ. ರಾಜಾರಾಮರಿಂದ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು. ಶ್ರೀ ಎಸ್. ಎಮ್. ಶಿವತ್ತಾಯರು ಸ್ವಾಗತಿಸಿ, ವರದಿಯನ್ನೊಪ್ಪಿಸಿದರು. ಕಲೆಕ್ಟರರು ಪರ್ಯಾಯ ಅದಮಾರು ಮಠಾಧಿಪತಿಗಳಾದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರ ಭಾವಚಿತ್ರವನ್ನು ಅನಾವರಣಗೊಳಿಸಿದರು. ಶ್ರೀ ಟಿ.ಎ. ಪೈಗಳು ಶ್ರೀ ಪಿ. ಎನ್. ರಾಮರಾಯರು ಶಾಲೆಗೆ ಉಚಿತವಾಗಿ ಇತ್ತ ಗಡಿಯಾರವನ್ನು ಸ್ವೀಕರಿಸಿ, ಕಟ್ಟೋಣ ಕಟ್ಟಲು ಸಹಾಯಕರಾದವರಿಗೆ ಬಹುಮಾನಗಳನ್ನಿತ್ತರು. ಶ್ರೀ ನರಸಿಂಹ ಉಪಾಧ್ಯಾಯರು ಸ್ವಸ್ತಿವಾಚನ ಮಾಡಿದ ಮೇಲೆ ಶಿವಳ್ಳಿ ಪಂಚಾಯತ ಅಧ್ಯಕ್ಷರಾದ ಶ್ರೀ ಟಿ. ರಮೇಶ ಯು. ಪೈಗಳು ಶಾಲೆಗೆ ಶುಭವನ್ನು ಹಾರೈಸಿದರು.

ಖಾಸಗಿ ಶಾಲಾ ಅಧ್ಯಾಪಕ ಸಂಘ— ಇದರ ಕಾರ್ಯಕಾರೀ ಮಂಡಳಿಯ ಸಭೆಯು ತಾ. 10 ರಂದು ಶ್ರೀ ಟಿ. ಕೆ. ಶ್ರೀನಿವಾಸರ ಅಧ್ಯಕ್ಷತೆಯಲ್ಲಿ ಜರಗಿ, ಕೆಲವು ಖಾಸಗಿ ಶಾಲೆಗಳಲ್ಲಿ ಸರಕಾರದಿಂದ ಸಿಗುವ ಸಂಬಳವನ್ನು ಉಪಾಧ್ಯಾಯರಿಗೆ ಹಂಚುವಲ್ಲಿ ಕಡಿತಮಾಡುವ ಕುರಿತು ಚರ್ಚಿಸಿ, ಆ ವಿಚಾರವನ್ನು ಶ್ರೀ ಟಿ. ಎ. ಪೈಗಳ ಗಮನಕ್ಕೆ ತರಬೇಕೆಂದೂ, ಶ್ರೀ ಪೈಗಳು ಈ ವಿಚಾರದಲ್ಲಿ ಸಹಕರಿಸಬೇಕೆಂದೂ ವಿನಂತಿಸಲಾಯಿತು. ಉಡುಪಿ ಸರಕಾರಿ ಬುನಾದಿ ತರಬೇತಿ ಶಾಲೆಗಳಲ್ಲಿಯೇ ಉಪಾಧ್ಯಾಯರಿಗೆ ಬುನಾದಿ ಶಿಕ್ಷಣದ ತರಬೇತಿ ವ್ಯವಸ್ಥೆಯನ್ನು ಮಾಡಬೇಕೆನ್ನುವ, ಖಾಲಿ ಸ್ಥಳಗಳನ್ನು ಉಪಾಧ್ಯಾಯರಿಗೆ ಕೊಟ್ಟು, ಅವರಿಗೆ ಮನೆ ಕಟ್ಟಲು ಸಹಾಯವನ್ನೊದಗಿಸಬೇಕೆನ್ನುವ, ಸಮಾಜಹಿತ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಮುಖಾಂತರ ಗ್ರಾಮಸೇವಕರನ್ನು ಆರಿಸುವಾಗ ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಮೊದಲನೇ ಪ್ರಾಶಸ್ತ್ಯವನ್ನು ಕೊಡಬೇಕೆನ್ನುವ, ಭಾವೀ ಕರ್ನಾಟಕದಲ್ಲಿ ಉಪಾಧ್ಯಾಯರ ಸಂಬಳವನ್ನು ಕಡಿಮೆ ಮಾಡಬಾರದೆನ್ನುವ, ಇತ್ಯಾದಿ ನಿರ್ಣಯಗಳಾದುವು. ಕಾರ್ಯದರ್ಶಿ ಶ್ರೀ ಫ್ರಾನ್ಸಿಸ್ ದಾಂತಿಯವರು ಧನ್ಯವಾದಗಳನ್ನಿತ್ತರು.

ಎಸ್. ಎಸ್. ಎಲ್. ಸಿ. ಪರೀಕ್ಷಾ ಫಲಿತಾಂಶ—ವು ಇತ್ತೀಚೆಗೆ ಪ್ರಕಟವಾಗಿದ್ದು ಕುಳಿತ ಸಾಧಾರಣ ೬೩,೧೭೧ ಮಂದಿ ವಿದ್ಯಾರ್ಥಿಗಳಲ್ಲಿ ೪೮% ಮಂದಿ ಪಾಸಾಗಿರುವರೆಂದು ತಿಳಿಯಬರುತ್ತದೆ. ದ. ಕ. ಜಿಲ್ಲೆಗಳ ಶಾಲೆಯ ಪೈಕಿ ಕುಂದಾಪುರ ಸೈಂಟ್ ಜೋಸೆಫ್ಸ್ ಹುಡುಗಿಯರ ಶಾಲೆಯು ಪ್ರಥಮ (೧೦೦%) ಮತ್ತು ಮಂಗಳೂರಿನ ಬೆಸೆಂಟ್ ಬಾಲಿಕಾ ಪಾಠಶಾಲೆಯು ದ್ವಿತೀಯ (೯೬%) ಸ್ಥಾನಗಳನ್ನು ಪಡೆದಿರುತ್ತವೆ. ಅಲ್ಲದೆ ಜಿಲ್ಲೆಯ ಹೆಚ್ಚಿನ ಶಾಲೆಗಳಲ್ಲಿ ೫೦% ಕ್ಕಿಂತಲೂ ಹೆಚ್ಚಿನ ಫಲಿತಾಂಶ ಬಂದಿರುವುದು ಸಂತೋಷಕರ.

ಬೀಳ್ಕೊಡುವ ಸಮಾರಂಭ—ದಿನಾಂಕ ೧೦ರಂದು ಶ್ರೀ ಎಸ್. ಜಗನ್ನಾಥ ಶೆಟ್ಟರ ಅಧ್ಯಕ್ಷತೆಯಲ್ಲಿ, ಉಡುಪಿ ಮುಳಿಯಾಳಿ ಪಾಯನ ಶಾಲೆಯ ವಿದ್ಯಾರ್ಥಿಗಳು ಇಲ್ಲಿಯ ಸರಕಾರಿ ಶಾಲೆಯಿಂದ ಕಾಸರಗೋಡು ಸರಕಾರಿ ಮುಸ್ಲಿಂ ಶಾಲೆಗೆ ತೆರಳಲಿರುವ ಶ್ರೀ ಕೆ. ಬಾಲಕೃಷ್ಣನವರನ್ನು ಬೀಳ್ಕೊಳ್ಳುವ ಸಮಾರಂಭವೊಂದನ್ನು ಜರಗಿಸಿದರು. ಶ್ರೀ ಬಾಲಕೃಷ್ಣರ ಕಲಾಸೇವೆಯನ್ನು ಹೊಗಳಿ ಶ್ರೀಗಳಾದ ಕೆ. ಆನಂದನ್, ವಿ. ದಾಮೋದರಭಟ್ಟರವರು ಭಾಷಣವಿತ್ತರು. ಅಧ್ಯಕ್ಷರ ಸಮಯೋಚಿತ ಭಾಷಣ, ಶ್ರೀ ಬಾಲಕೃಷ್ಣರ ಕೃತಜ್ಞತಾ ಭಾಷಣ ಮತ್ತು ಶ್ರೀ ಕೆ ಅಪ್ಪುರವರ ಧನ್ಯವಾದಗಳೊಡನೆ ಸಭೆಯು ಕೊನೆಗೊಂಡಿತು.

ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾ ವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜನಾನ್ನಾರೆ	1	8
33	ಬಾಳಿನ ಬೆಸಗು	1	0
34	ಲೋಕಾನುವ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ವಿವರವಾದ ಕೆಟಲಾಗಿಗೆ ಬರೆಯಿರಿ
ನವಭಾರತ ಬುಕ್ ಡಿಪೋ, ಉಡುಪಿ.

ರೂ. 1000ದ ವರೆಗೆ ಸಾಲವು

ಯಾವ ಜಾಮೀನು, ಆಸ್ತಿ, ಅಡವು ಇಲ್ಲದೆನೇ ಬರೇ ನಿಮ್ಮ ದಸ್ಕತಿನ ಮೇಲೆ ಕೊಡಲಾಗುವುದು. ನೂರಕ್ಕೆ ಮೇಲ್ಪಟ್ಟ ಅರ್ಜಿದಾರರು ಈಗಾಗಲೇ ಸೌಕರ್ಯಗಳನ್ನು ಪಡೆದಿರುತ್ತಾರೆ. ಹೆಚ್ಚಿನ ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ.

Bombay Mercantile Co.,
Bombay-23.

ಅಚ್ಚಿನಲ್ಲಿದೆ .... ಅಚ್ಚಿನಲ್ಲಿದೆ

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ.
ಅವರ
ನವೀನ ಗ್ರಂಥ

ಹಿರೋಶಿಮಾದಿಂದ ಜಿನೀವ

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ ಅಣುಶಕ್ತಿಯ
ಸಚಿತ್ರ ವಿವೇಚನಾ ಗ್ರಂಥ
ಶ್ರೀ ಶಿವರಾಮ ಕಾರಂತರ ಮುನ್ನುಡಿ

ನಿರೀಕ್ಷಿಸಿರಿ! ನಿರೀಕ್ಷಿಸಿರಿ!

ಭಾರತದ ಗುರುಕುಲ
ಮದರಾಸು ಸರಕಾರದಿಂದ
ಸಂಭಾವನೆ ಪಡೆದಗ್ರಂಥ.
ಬೆಲೆ: 0 8 0
ಅಂತರಂಗ ಕಾರ್ಯಾಲಯ ಉಡುಪಿ

ಭೂಮಾಲಿಕರಲ್ಲಿ ವಿಜ್ಞಾಪನೆ

ವಿಶ್ವಶಾಂತಿಯನ್ನು ಬೋಧಿಸುತ್ತಿರುವ ಭಾರತದ ಸರ್ವಾಂಗೀಣ ಉನ್ನತಿ ಅಭಿವೃದ್ಧಿಗೆ ಆಂತರಿಕ ಶಾಂತಿಯೂ ಮುಖ್ಯವಾಗಿರುವುದು. ವ್ಯಕ್ತಿವ್ಯಕ್ತಿಗಳೊಳಗೆ, ವರ್ಗವರ್ಗಗಳೊಳಗೆ ಪರಸ್ಪರ ಅಪನಂಬಿಕೆ,ಅವಿಶ್ವಾಸದಿಂದ ನಿರ್ಮಿತವಾದ ವಾತಾವರಣದಲ್ಲಿ ಶಾಂತಿ ಭಂಗಕರ ದುರ್ಘಟನೆಗಳು ಸಂಭವಿಸುತ್ತಿರುವುದನ್ನು ನಾವು ಲಕ್ಷಿಸಬಹುದು

ಉದಾಹರಣೆಗಾಗಿ ಭೂಮಾಲಿಕ-ಒಕ್ಕಲುಗಳ ಪರಿಸ್ಥಿತಿಯನ್ನು ಪರಿಶೀಲಿಸೋಣ. ಅನೇಕ ಭೂಮಾಲಿಕರು ತಮ್ಮ ಒಕ್ಕಲುಗಳ ಸುಖ ದುಃಖಗಳಲ್ಲಿ ಸಹಭಾಗಿಗಳಾಗಿದ್ದು ನ್ಯಾಯ ಧರ್ಮದಲ್ಲಿ ನಡೆಯುತ್ತಿದ್ದಾರೆ. ಅಂತೆಯೇ ಹಲವಾರು ಒಕ್ಕಲುಗಳೂ ಪ್ರಾಮಾಣಿಕತೆಯಿಂದ ತಮ್ಮ ಪಾಲಿನ ಕರ್ತವ್ಯ ನೆರವೇರಿಸುತ್ತ ಧಣಿಯನ್ನು ಗೌರವಪೂರ್ವಕವಾಗಿ ನೋಡಿಕೊಳ್ಳುತ್ತಿದ್ದಾರೆ. ಆದರೆ ಕೆಲವೇ ಜನ ಭೂಮಾಲಿಕ ಒಕ್ಕಲುಗಳ ಬೇಜವಾಬ್ದಾರಿತನದ ದುರ್ನಡತೆಗಳಿಂದ ಘರ್ಷಣೆಯುಂಟಾಗಿ ಇತರ ಧಣಿ-ಒಕ್ಕಲುಗಳ ಪರಸ್ಪರ ಸೌಜನ್ಯ, ಸ್ನೇಹಾರ್ದತೆಗೂ ಭಂಗವುಂಟಾಗುವ ಪರಿಸ್ಥಿತಿಯನ್ನು ಕಾಣಬಹುದು.

ಇದನ್ನು ತಿದ್ದಲು ಕಾನೂನು ಅಗತ್ಯವೆಂದು ಹೇಳಬಹುದು. ಇಂತಹ ಕಾನೂನುಗಳು ನಮ್ಮ ಜಿಲ್ಲೆಗೆ ಬರುವುದೆಂದು ಎಲ್ಲರೂ ಬಲ್ಲರು. ಆದರೆ ಯಾವುದೇ ಕಾನೂನಿಗೂ ಒಂದು ಇತಿಮಿತಿ ಇದೆ. ಇರುವ ಕಾನೂನಿನಿಂದ ಹೇಗೆ ತಪ್ಪಿಸಿಕೊಳ್ಳುವುದೆಂಬುದನ್ನು ಕಂಡುಕೊಳ್ಳಬಲ್ಲ ಚಾಣಕ್ಯರು ನಮ್ಮಲ್ಲಿ ಇದ್ದೇ ಇರುವರು. ಆದುದರಿಂದ ಧಣಿ ಒಕ್ಕಲುಗಳ ಸಂಬಂಧದಲ್ಲಿ ಅಭಿವೃದ್ಧಿಯುಂಟಾಗಬೇಕಾದರೆ ಮೊದಲು ಅವರೊಳಗಿನ ಅಪನಂಬಿಕೆ ಹೋಗಬೇಕು. ಇಂತಹ ಒಂದು ವಾತಾವರಣವನ್ನುಂಟು ಮಾಡಲು ಭಾರತಸೇವಕಸಮಾಜದ ಪರವಾಗಿ ಭೂಮಾಲಕರಿಂದ ಬರಹ ಮೂಲಕದ ಆಶ್ವಾಸನೆಯನ್ನು ಬಯಸುತ್ತೇವೆ. ನಾವು ಆಶ್ವಾಸನೆಯನ್ನು ಕೇಳುತ್ತಿರುವ ಭೂಮಾಲಕರು ಇಷ್ಟರ ತನಕ ಪ್ರಾಮಾಣಿಕ ರೀತಿಯಲ್ಲಿ ವರ್ತಿಸುತ್ತಿರಲಿಲ್ಲವೆಂಬ ಅಪನಂಬಿಕೆ ನಮ್ಮಲ್ಲಿದೆ ಎಂದು ಯಾರೂ ಭಾವಿಸಬಾರದಾಗಿ ವಿನಂತಿ. ಅವರಲ್ಲಿರುವ ಉದ್ದೇಶವು ಕಲ್ಯಾಣಹಿತವಾಗಿದೆ ಎಂಬುದನ್ನು ಹತ್ತು ಸಮಸ್ತರೂ, ಒಕ್ಕಲುಗಳೂ ತಿಳಿಯಬೇಕು; ತನ್ಮೂಲಕ ಪರೋಕ್ಷ ಅಥವಾ ಅಪರೋಕ್ಷವಾಗಿರಬಹುದಾದ ಎಂತಹದೇ ಅವಿಶ್ವಾಸಕ್ಕೆ ಎಡೆ ಇಲ್ಲದಂತಾಗಬೇಕೆಂಬುದೇ ನಮ್ಮ ಗುರಿಯಾಗಿರುತ್ತದೆ.

ನಾವು ಅಪೇಕ್ಷಿಸುವ ಆಶ್ವಾಸನೆಗಳು ಎರಡು: ಒಂದನೆಯದಾಗಿ ಗೇಣಿಕೊಡುತ್ತಿರುವ ಒಕ್ಕಲುಗಳನ್ನು ಒಕ್ಕಲುತನದಿಂದ ಎಬ್ಬಿಸುವುದಿಲ್ಲ; ಎರಡನೆಯದಾಗಿ ಕೊಟ್ಟಗೇಣಿಗೆ ಯಥಾರ್ಥ ರಶೀದಿ ಕೊಡುವೆವು ಎಂದು. ಇದೇನೂ ಹೊಸವಿಷಯವಲ್ಲ, ಕಾರ್ಯಾಚರಣೆಗೆ ವಿರುದ್ಧವಾದುದೂ ಅಲ್ಲ. ಭೂಮಾಲಕರ ಈ ರೀತಿಯ ವೈಯುಕ್ತಿಕ ಆಶ್ವಾಸನೆ ನಮ್ಮಲ್ಲಿದ್ದರೆ, ಅವರ ಒಕ್ಕಲುಗಳ ಸಂರಕ್ಷಣೆಯೂ ಯಿತೆಂಬ ಸಮಾಧಾನವುಂಟಾಗಿ ವಾತಾವರಣವು ಉತ್ತಮಗೊಳ್ಳುವುದು.

ಭೂಮಾಲಿಕರು ನಮ್ಮೊಂದಿಗೆ ಸಹಕರಿಸಬೇಕಾಗಿ ವಿನಂತಿ.

ಟಿ. ಎ. ಪೈ ಎಂ. ಎಲ್. ಎ.
ಅಧ್ಯಕ್ಷ, ಭಾರತ ಸೇವಕ ಸಮಾಜ.

ಉಡುಪಿ ತಾ. 10 6 – 1956.

ಕಾರ್ಕಳ— ಡಾ. ಯಂ. ಜಿ. ಆರ್. ಸಂಪಿಗೆತ್ತಾಯರ ಅಧ್ಯಕ್ಷತೆಯಲ್ಲಿ, ಸ್ಥಳೀಯ ಎಸ್. ವಿ. ಟಿ. ಗರ್ಲ್ಸ್ ಹಾಯಸ್ಕೂಲಿನಲ್ಲಿ, ಕಾರ್ಕಳ ತಾಲೂಕು ಎಲಿಮೆಂಟರಿ ಶಾಲಾ ಉಪಾಧ್ಯಾಯರ ಸಂಘದ ಪರವಾಗಿ, ಸದ್ಯವೇ ನಿವೃತ್ತರಾಗಲಿರುವ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ಸಂಜೀವ ಭಟ್ಟರವರನ್ನು ಬೀಳ್ಕೊಳ್ಳುವ ಸಮಾರಂಭವು ದಿನಾಂಕ ೯ರಂದು ಜರಗಿತು ಸಂಘದ ಅಧ್ಯಕ್ಷರಾದ ಶ್ರೀ ಎ. ಪಾಂಡುರಂಗ ಶೆಣೈಗಳು ಸ್ವಾಗತಿಸಿದರು. ಕಾರ್ಯದರ್ಶಿಗಳಾದ ಶ್ರೀ ಸಿ. ಮಾಧವ ಕಾಮತರು ಅಭಿನಂದನಾಪತ್ರವನ್ನರ್ಪಿಸಿದರು.



ನೇಪಾಳದಲ್ಲಿರುವ ಲುಂಬಿಣಿಯಲ್ಲಿ ಬುದ್ಧ ದೇವನು ಮಾಯಾದೇವಿಯ ಗರ್ಭದಲ್ಲಿ ಅವತರಿಸಿದನೆಂದು ಪ್ರತೀತಿ. ಸಾಲ ವೃಕ್ಷದ ನೆರಳಿನಲ್ಲಿ ಬುದ್ಧನನ್ನು ಮಾಯಾದೇವಿ ಪ್ರಸವಿಸಿದಾಗ ಆ ಮರವು ಅಕಾಲವಾಗಿದ್ದರೂ ಒಮ್ಮೆಲೆ ಪುಷ್ಪ ಸಮೃದ್ಧಿಯಿಂದ ಕೂಡಿತೆಂದು ಹೇಳಲಾಗುತ್ತದೆ. ಈ ಪವಿತ್ರ ಸ್ಥಳದಲ್ಲಿ ಅಶೋಕನು ನೆಡಿಸಿದ ಸ್ಮಾರಕ ಸ್ತಂಭವನ್ನು ಈಚೆಗೆ ಅನೇಕರು ಸಂದರ್ಶಿಸಿದರು.

ಆಮಂತ್ರಿತರೂ, ಸಂಘದ ಸದಸ್ಯರುಗಳೂ ಶ್ರೀ ಭಟ್ಟರ ಪ್ರಯೋಜನವು ಇನ್ನು ಮುಂದೂ ಶಿಕ್ಷಣ ಪ್ರಪಂಚಕ್ಕೂ, ಶಿಕ್ಷಕರಿಗೂ ದೊರೆಯಲೆಂದು ಆಶಿಸಿದರು. ಶ್ರೀ ಭಟ್ಟರು ತಮ್ಮ ಭಾಷಣದಲ್ಲಿ, ತಮಗಿತ್ತ ಸತ್ಕಾರಕ್ಕೆ ಆಭಾರವನ್ನು ಸೂಚಿಸಿದರಲ್ಲದೆ, ಉಪಾಧ್ಯಾಯರುಗಳಿಗೆ ಹಿತಸೂಚನೆಗಳನ್ನಿತ್ತರು.

* ದಿನಾಂಕ ೨ರಂದು ಸ್ಥಳೀಯ ವಕೀಲರಾದ ಶ್ರೀ ಎಂ. ಮುಕುಂದ ಕಾಮತರು ರಕ್ತ ಒತ್ತಡದಿಂದಾಗಿ ಮೃತರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರ ಪ್ರಾಯವು ಸುಮಾರು ೬೨ ವರ್ಷಗಳಾಗಿದ್ದು, ಇವರು ಸ್ಥಳೀಯ ವಕೀಲ ಸಮೂಹದಲ್ಲಿ ಅತ್ಯಂತ ಹಿರಿಯರಾದ್ದರು.

ಸೂಡ— ಕಳೆದ ತಾ. 29ರಂದು ಜರಗಿದ ಬೋರ್ಡು ಶಾಲಾ ವರ್ಧಂತಿಯ ದಿನ ಬೆಳಿಗ್ಗೆ ಶಾಲಾಮಕ್ಕಳಿಗೆ ಶ್ರೀ ಕಲ್ಬೊಟ್ಟು ಗುತ್ತು ವಾಸು ಶೆಟ್ರು ಸಿಹಿತಿಂಡಿ ಹಂಚಿದುದು ಶ್ಲಾಘನೀಯ.

ಘಜೀರು – ದಿನಾಂಕ ೬ರಂದು ಸಮಾಜವಿಕಾಸ ಯೋಜನೆಯವರ ಸಹಾಯದಿಂದಲೂ, ಸ್ಥಳೀಯ ಪಂಚಾಯತಿನ ಅಧ್ಯಕ್ಷ ಶ್ರೀ ಪಿ. ಆರ್. ಆಳ್ವರ ಮತ್ತು ಉಪಾಧ್ಯಕ್ಷ ಶ್ರೀ ಎ. ವೆಂಕಪ್ಪ ಅತಿಕಾರಿಗಳ ಹಾಗೂ ಊರವರ ಸಹಕಾರದಿಂದಲೂ ನೂತನವಾಗಿ ಕಟ್ಟಲ್ಪಟ್ಟ ಸ್ಥಳೀಯ ವನಿತಾ ಸಮಾಜ ಮಂದಿರವನ್ನು ಗಿಲ್ಡ್ ಆಫ್ ಸರ್ವೀಸ್‌ನ ಉಪಾಧ್ಯಕ್ಷರಾದ ಶ್ರೀಮತಿ ಶಾಂತೇರಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರವರು (ಜಿಲ್ಲಾ ಕಲೆಕ್ಟರ್ ಎಂ. ಜಿ. ರಾಜಾರಾಮರ ಪತ್ನಿ) ಉದ್ಘಾಟಿಸಿದರು. ಗಿಲ್ಡ್ ಆಫ್ ಸರ್ವೀಸಿನ ಅಧ್ಯಕ್ಷರಾದ ಶ್ರೀಮತಿ ಕಮಲಾ ಎಸ್. ಆಳ್ವರು, ಸಮಾಜ ಸಂಘಟಕರಾದ ಕುಮಾರಿ ವಿಶಾಲಾಕ್ಷಿ, ಡಾ. ಎ. ವಿ. ಶೆಟ್ಟಿ ಮೊದಲಾದ ಊರ ಹಾಗೂ ಪರವೂರ ಮಹನೀಯರುಗಳು ಸಭೆಯಲ್ಲಿ ಉಪಸ್ಥಿತರಿದ್ದರು. ವನಿತಾ ಸಮಾಜದ ಅಧ್ಯಕ್ಷೆಯರಾದ ಶ್ರೀಮತಿ ಸರಸ್ವತಿ ವಿ. ಅತಿಕಾರಿಗಳು ವರದಿವಾಚನ ಮಾಡಿದರು. ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರು ತಮ್ಮ ಉದ್ಘಾಟನಾ ಭಾಷಣದಲ್ಲಿ ಮಹಿಳೆಯರಿಗೆ ಹಿತವಚನಗಳನ್ನಾಡಿದರಲ್ಲದೆ, ಸ್ಥಳೀಯ ಮಹಿಳೆಯರ ಚಟುವಟಿಕೆಯ ಕುರಿತು ಆಶ್ಚರ್ಯ ಮತ್ತು ಸಂತೋಷವನ್ನು ವ್ಯಕ್ತಪಡಿಸಿದರು. ಸಭಿಕರ ಭಾಷಣಗಳಾದ ಬಳಿಕ, ಅಧ್ಯಕ್ಷೆಯರ ಭಾಷಣವಾಯಿತು.

ಮಹಿಳಾ ಸಂಘಕ್ಕೆ ಶ್ರೀಮತಿಯರಾದ ರಾಜಲಕ್ಷ್ಮಿ ರಾಜಾರಾಮ್, ಕಮಲಾ ಎಸ್. ಆಳ್ವ ಮತ್ತು ಶಾಂತೇರಿ ಪ್ರಭುಗಳು ಧನಸಹಾಯವನ್ನಿತ್ತರು. ಶ್ರೀ ಪಿ. ಯನ್. ಶೆಟ್ಟರು ವನಿತಾ ಸಮಾಜದ ಪರವಾಗಿ ಧನ್ಯವಾದಗಳನ್ನರ್ಪಿಸಿದರು. ಶ್ರೀಗಳಾದ ಪಿ. ಆರ್. ಆಳ್ವ ಎ. ವೆಂಕಪ್ಪ ಅತಿಕಾರಿಗಳು ಅತಿಥಿಗಳಿಗೂ ಸಭಿಕರಿಗೂ ಊಟ, ಉಪಹಾರಗಳನ್ನು ಏರ್ಪಡಿಸಿದ್ದರು.

ಪುತ್ತೂರು — ಸ್ಥಳೀಯ ಆರ್ಯ ಸಮಾಜದ ಶ್ರೀ ಸರಸ್ವತೀ ಸೇವಾ ಸಂಘದ ವಾರ್ಷಿಕ ಮಹಾಸಭೆಯು ಕಳೆದ ತಾ. ೩ರಂದು ಶ್ರೀ ಯಂ. ರಾಮಣ್ಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನವಾದ ಬಳಿಕ ಹಲವಾರು ಠರಾವುಗಳು ಪಾಸುಮಾಡಲ್ಪಟ್ಟುವು. ಸಭಿಕರ ಭಾಷಣ, ಅಧ್ಯಕ್ಷರ ಭಾಷಣ ಮತ್ತು ಕಾರ್ಯದರ್ಶಿ ಶ್ರೀ ಕೆ. ಕೊರಗಪ್ಪ ನಾಯ್ಕರ ಧನ್ಯವಾದಗಳೊಡನೆ ಸಭಾಂತ್ಯವಾಯಿತು.

ಮಂದರ್ತಿ — ಸ್ಥಳೀಯ ಶ್ರೀ ಮಂಗಾರ ಪರಮೇಶ್ವರಿ ಪ್ರಾಥಮಿಕ ಶಾಲೆಯ ಹಳೆವಿದ್ಯಾರ್ಥಿ ಸಂಘದ ಪ್ರಾರಂಭಿಕ ಮಹಾಧಿವೇಶನವು ಇದೇ ತಾ. 12–6–56ನೇ ಆದಿತ್ಯವಾರ ಅಪರಾಹ್ನ ಗಂಟೆ 3ಕ್ಕೆ ಕೋಟೇಶ್ವರ ಬೋರ್ಡು ಹೈಸ್ಕೂಲಿನ ಅಧ್ಯಾಪಕರಾದ ಶ್ರೀ ಕೆ. ರಾಮಚಂದ್ರ ಉಡುಪ, ಬಿ. ಎ. ಬಿ. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದು ಹಳೆವಿದ್ಯಾರ್ಥಿಗಳೊಬ್ಬರು ತಿಳಿಸುತ್ತಾರೆ.

ಮಂಜೇಶ್ವರ— ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯ ವರ್ಧಂತ್ಯುತ್ಸವವು ದಿನಾಂಕ ೩ರಂದು, ಉಡುಪಿ ಉತ್ತರ ಶ್ರೇಣಿಯ ಶಾಲೆಯ ಪರೀಕ್ಷಾಧಿಕಾರಿಗಳಾದ ಶ್ರೀ ವಿಟ್ಠಲ್ ಪಾಳ್‌ರವರ ಅಧ್ಯಕ್ಷತೆಯಲ್ಲಿ ಜರಗಿತು. ವಿವಿಧ ವಿನೋದಾವಳಿ ಮತ್ತು ಇತರ ಚಟುವಟಿಕೆಗಳೊಡನೆ ಸಭೆಯು ಯಶಸ್ವಿಯಾಗಿ ಕೊನೆಗೊಂಡಿತು.

ಪಂಜಿನಡ್ಕ— ಕೊಲೆಕಾಡಿ ವಿದ್ಯಾಪ್ರಚಾರಿಣೀ ಪಾಠಶಾಲೆಯ ವಿದ್ಯಾರ್ಥಿ ೬ ೧೯೫೬ನೇ ಇಸವಿಯ ಇ. ಎಸ್. ಎಲ್. ಸಿ. ಸರಕಾರಿ ಪರೀಕ್ಷೆಯಲ್ಲಿ ಎಲ್ಲರೂ ತೇರ್ಗಡೆಹೊಂದಿರುವರು. ಇವರಿಗೆ ಬಹುಮಾನ ಕೊಡುವ ಸಮಾರಂಭವು ದಿನಾಂಕ ೬ರಂದು ಜರಗಿತು. ದಿವಂಗತ ಎ. ಬಾಬು ಶೆಟ್ಟರ ಸ್ಮಾರಕ ನಿಧಿಯಿಂದ ಬಹುಮಾನಗಳನ್ನು ಕೊಡಲಾಗಿತ್ತು.

ಬೆಳ್ಳಾರೆ— ಕಾಸರಗೋಡು ಸರ್ಕಲ್ ಸಹಕಾರ ಸಂಘದ ಸೀನಿಯರ್ ಇನಸ್ಪೆಕ್ಟರರಾದ ಶ್ರೀ ಕೆ. ಪಿ. ನರಸಿಂಗರಾಯರ ನೇತೃತ್ವದಲ್ಲಿ ಬೆಳ್ಳಾರೆ ಗ್ರಾಮದಲ್ಲಿ ಒಂದು ಗ್ರಾಮಾಂತರ ವಸತಿ ಗೃಹ ನಿರ್ಮಾಣ ಸಹಕಾರ ಸಂಘದ ಸ್ಥಾಪನೆಯಾಯಿತು. ಆಡಳಿತ ಮಂಡಳಿಗೆ ಶ್ರೀಗಳಾದ ಕೋಟಿ ಸೀತಾರಾಮಯ್ಯ (ಅಧ್ಯಕ್ಷ), ಬಿ. ಕಿಟ್ಟಣ್ಣ ರೈ (ಉಪಾಧ್ಯಕ್ಷ), ಮತ್ತು ಪಿ. ಆನಂದ (ಕಾರ್ಯದರ್ಶಿ) ಇವರುಗಳು ಆರಿಸಲ್ಪಟ್ಟರು. ಶ್ರೀಯುತ ರಾಯರು ಜನರಿಗೆ ಈ ಸಂಸ್ಥೆಯು ಒದಗಿಸುವ ಸಹಾಯಗಳನ್ನು ವಿವರಿಸಿ ಹೇಳಿದರು. ಸುಳ್ಯ ಎಕ್ಸ್‌ಟೆಂಶನ್ ಆಫೀಸರರಾದ ಶ್ರೀ ಎ. ಪಿ. ಶಾಂತಪ್ಪನವರು ಜನರು ಇದರಿಂದ ಸಿಗಬಹುದಾದ ಎಲ್ಲಾ ಸಹಾಯವನ್ನೂ ಪಡೆಯಲು ಕೇಳಿಕೊಂಡರು.

ಮೈಸೂರು ದಾಸಪ್ರಕಾಶದಲ್ಲಿ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವ— ದಾಸಪ್ರಕಾಶ್ ಗ್ರೂಪ್ ಆಫ್ ಹೋಟೇಲ್ಸ್ ಮಾಲಿಕರಾದ ಶ್ರೀ. ಕೆ. ಸೀತಾರಾಮರಾಯರು, ಮೈಸೂರಿನ ಮೋಡರ್ನ್ ಕೆಫೆ, 'ದಾಸಪ್ರಕಾಶ'ದ ಶ್ರೀರಾಮ ಮಂದಿರದಲ್ಲಿ ದಿನಾಂಕ ೭ ಮತ್ತು ೮ರಂದು ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವನ್ನು ವಿಜೃಂಭಣೆಯಿಂದ ಜರಗಿಸಿದರು.

ದಿನಾಂಕ ೭ನೇ ಸಾಯಂಕಾಲ ಅಸ್ಥಾನ ವಿದ್ವಾನ್ ಚೌಡಯ್ಯನವರ ಪಿಟೀಲು ವಾದನ, ಬಾಲಕರಿಂದ ಭಜನೆ, ಶ್ರೀ ಅಗರಂ ರಂಗಯ್ಯ ಶ್ರೀ ಪೇಜಾವರ ಮಠದ ಶ್ರೀ ಪಾದಂಗಳವರು ಶ್ರೀ ರಾಘವೇಂದ್ರಾಚಾರ್ಯರು ಮೊದಲಾದವರಿಂದ ಭಾಷಣಗಳಾದುವು. ಕೊನೆಗೆ ಶ್ರೀ ಬಿ. ಎಸ್. ಸುಬ್ಬರಾಯರು ಧನ್ಯವಾದಗಳನ್ನಿತ್ತರು.

ದಿನಾಂಕ ೮ರಂದು ಹನುಮಂತೋತ್ಸವವು ಜರಗಿತು, ಇದರ ಅಂಗವಾಗಿ ಬಡವರಿಗೆ ಭೋಜನದ ಏರ್ಪಾಡು ನಡೆದಿತ್ತು. ಸಾಯಂಕಾಲ ಮಕ್ಕಳಿಂದ ಸಂಗೀತ, ಭರತನಾಟ್ಯಗಳು ಜರಗಿದುವು. ಮೆರವಣಿಗೆ ಪ್ರಸಾದ ವಿತರಣೆಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ದಿ| ಕಿಲ್ಲೆಯವರ ಪುಸ್ತಕಗಳು

ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ:0–12–0.

ಪ್ರಾಚೀನ ತುಳುನಾಡು
(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)
150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2–0–0

ಭಾರತದ ಕರ್ಣ
"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು". (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0–6–0

ನಿಮಗೆ ಬೇಕಾದ ಪ್ರತಿಗಳಿಗೆಬರೆಯಿರಿ:
ನವಭಾರತ ಪುಸ್ತಕ ಭಂಡಾರ ಉಡುಪಿ

ಮಂಗಳೂರು

ಶ್ರೀ ಕೆ. ಸಂಜೀವ ಭಟ್ಟರಿಗೆ ಸತ್ಕಾರ — ದಿನಾಂಕ ೫ರಂದು ಸ್ಥಳೀಯ ...ಯೋ ಹೈಸ್ಕೂಲಿನವರು, ಸದ್ಯವೇ ನಿವೃತ್ತರಾಗಲಿರುವ ದ. ಕ. ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಕೆ. ಸಂಜೀವ ಭಟ್ಟರಿಗೆ ... ಸತ್ಕಾರಕೂಟವನ್ನೇರ್ಪಡಿಸಿದ್ದರು. ...ಲಿನ ಹೆಡ್ಮಾಸ್ತರರು ವಿದ್ಯಾಧಿಕಾರಿಗಳ ...ಗಾನವಾಡಿದರಲ್ಲದೆ, ವಿದ್ಯಾರ್ಥಿಗಳ ಪರ ...ಒಂದು ಮಾನಪತ್ರವನ್ನು ಸಮರ್ಪಿಸ...ಯಿತು.

ಪುರಜನರ ಸಂಘದ ನಿರ್ಣಯ — ಇತ್ತೀಚೆಗೆ ಸ್ಥಳೀಯ ಪುರಜನರ ಸಂಘದ ಆರೋಗ್ಯ ಸಮಿತಿಯ ಸಭೆಯೊಂದು ...ತು. ವೆಬ್‌ಸ್ಟರ್ ಮಾರ್ಕೆಟಿನೊಳಗೆ ...ವ ಜಾನುವಾರುಗಳನ್ನು ತಡೆಗಟ್ಟಬೇಕು, ...ವನ್ನು ನಿಶ್ಚಿತ ಸ್ಥಳದಲ್ಲಿ ಹಾಕಬೇಕು, ...ತ್ರದೊಡ್ಡಿಯನ್ನು ಶುಚಿಯಾಗಿರಿಸಬೇಕು, ...ಸ್ಯ,ತರಕಾರಿ ಮಾರಲು ಸಿಮೆಂಟು ಪ್ಲಾಟ್‌ಫಾರ್ಮ್ ರಚಿಸಬೇಕು ಎಂಬಿತ್ಯಾದಿ ನಿರ್ಣಯಗಳಾದುವು.

ಅಕ್ಕಿಯ ಬೆಲೆ ಕಡಿಮೆಯಾಗಬೇಕೆಂದು ಕಲೆಕ್ಟರರಲ್ಲಿ ನಿವೇದನೆ— ...ತ್ತಿರುವ ಅಕ್ಕಿಯ ಬೆಲೆಯಿಂದಾಗಿ ಮಳೆಗಾಲದಲ್ಲಿ ಪಂಚಿನ ಮಜೂರರಿಗೆ ಕಷ್ಟವಾಗುವುದು; ಆದುದರಿಂದ ಅದನ್ನು ನಿಯಂತ್ರಿಸಬೇಕೆಂಬ ಒಂದು ನಿವೇದನೆಯನ್ನು ಸ್ಥಳೀಯ ...ಜೂರರ ಸಂಘದ ಆಶ್ರಯದಲ್ಲಿ ಸ್ಥಳೀಯ ...ಒಂದು ...ಂಪು ಕಲೆಕ್ಟರಿಂದ ಶ್ರೀ ಎಂ. ... ರಾಜಾರಾಮರಲ್ಲಿ ನಿವೇದಿಸಿಕೊಂಡಿದೆ. ...ಕ್ಟರರು ನಿವೇದನೆಯನ್ನು ಸಹಾನುಭೂತಿಯಿಂದ ಕಂಡು, ಇದನ್ನು ಸರಕಾರದ ಗಮನಕ್ಕೆ ತರುವೆನಾಗಿ ತಿಳಿಸಿರುವರು.

ಜಿಲ್ಲಾ ಬೋರ್ಡು ಸಭೆಯು — ...ನೇ ತಾ. 18ನೇ ಸೋಮವಾರ ಅಪರಾಹ್ನ ...15ಕ್ಕೆ ನಡೆಯಲಿರುವುದು. ಅಲ್ಲದೆ ಅಂದೇ ... ಗಂಟೆಗೆ ಸ್ಥಳೀಯ ಸಮಿತಿಯೊಂದಕ್ಕೆ ಸದಸ್ಯರನ್ನು ಚುನಾಯಿಸುವ ಸಲುವಾಗಿ ವಿಶೇಷ ಸಭೆಯೊಂದೂ ನೆರವೇರಲಿದೆ.

ಪುರಜನರ ಸಂಘದ ನಿವೇದನೆ— ...ಲ್ವೇ ನಿಲ್ದಾಣಕ್ಕೆ ಹೋಗುವ ಮಾರ್ಗಗಳನ್ನು ...ಗಲವಾಗಬೇಕು, ರೈಲ್ವೆ ಪ್ಲೇಟ್‌ಫೋರ್ಮಿನಲ್ಲಿ ಪ್ರಯಾಣಿಕರಿಗೆ ಕುಳಿತುಕೊಳ್ಳಲು ಸೌಕರ್ಯವನ್ನು ಒದಗಿಸಿಕೊಡುವುದರಲ್ಲಿ ತಮ್ಮ ...ರ್ಸನ್ನು ಉಪಯೋಗಿಸಬೇಕೆಂದು ಪ್ರಾದೇಶಿಕ ರೈಲ್ವೇ ಸಲಹಾ ಸಮಿತಿಯ ಸದಸ್ಯರಾದ ಶ್ರೀ ವಿ. ಎಸ್. ಕುಡ್ವರೊಡನೆ, ಸ್ಥಳೀಯ ಪುರಜನರ ಸಂಘದ ಪ್ರಯಾಣಿಕರ ಮತ್ತು ...ರಿಗೆ ಉಪಸಮಿತಿಯ ಉಪಾಧ್ಯಕ್ಷರುಗಳಾದ ಡಾ. ಎ. ಎಫ್. ಕ್ಯಾಲೊ, ಶ್ರೀ ಕೆ. ನರಸಿಂಹ ಪೈ ಮತ್ತು ಕಾರ್ಯದರ್ಶಿಗಳಾದ ಎ. ಕೆ. ಸೇವಕರು ನಿವೇದಿಸಿಕೊಂಡಿರುವರು.

ಸಂತೋಷಕೂಟ — ಸ್ಥಳೀಯ ಜೈಹಿಂದ್ ನಾಟಕ ಸಂಘದವರು ದ.ಕ. ಜಿಲ್ಲಾ ನಾಟಕ ಸ್ಪರ್ಧೆಯಲ್ಲಿ, ತಾವು ಅಭಿನಯಿಸಿದ ‹ಅಲೆಕ್ಸಾಂಡರ್› ನಾಟಕವು ಬಹುಮಾನ ಪಡೆದುದಕ್ಕಾಗಿ ಒಂದು ಸಂತೋಷಕೂಟವನ್ನು ಡಾ. ನಾಗಪ್ಪ ಆಳ್ವರ ಅಧ್ಯಕ್ಷತೆಯಲ್ಲಿ ಮೋಹಿನಿವಿಲಾಸದಲ್ಲಿ ದಿನಾಂಕ ೧೦ರಂದು ಜರಗಿಸಿದರು. ಡಾ. ಆಳ್ವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಇಂದು ನಾಟಕದ ಬೆಳವಣಿಗೆಗೆ ಏನು ತೊಡಕಾಗಿದೆ ಎಂದು ತಿಳಿಸಿದರಲ್ಲದೆ, ನಟರಿಗೆ ಕೆಲವು ಹಿತವಚನಗಳನ್ನಾಡಿದರು. ಶ್ರೀ ಜಯರಾಮರ ಸ್ವಾಗತ ಭಾಷಣಾನಂತರ ಶ್ರೀಗಳಾದ ಕೆ. ಆರ್. ಆಚಾರ್, ಬಿ. ವಿ. ಬಾಳಿಗ, ಕೆ. ಕೆ. ಶೆಟ್ಟಿ, ವಿ. ಜಿ. ಶಾಸ್ತ್ರಿ, ಎಚ್. ಕೆ. ತಿಂಗಳಾಯ, ಎಮ್. ವಸಂತಕುಮಾರ, ಕುಮಾರಿ ಸುಶೀಲ ಮೊದಲಾದವರು ಭಾಷಣವಿತ್ತರು. ನಾಟಕಕರ್ತ ಶ್ರೀ ಬೇಲಗದ್ದೆ ಅಪ್ಪಯ್ಯನವರ ಧನ್ಯವಾದದೊಡನೆ ಸಭಾಂತ್ಯವಾಯಿತು.

ನೃತ್ಯ ಪ್ರದರ್ಶನ:– ಶ್ರೀ ವಿ. ಯಸ್. ಕುಡ್ವರ ಅಧ್ಯಕ್ಷತೆಯಲ್ಲಿ ದಿನಾಂಕ ೧೦ರಂದು ಸ್ಥಳೀಯ ಡೋನ್‌ಬೋಸ್ಕೊ ಹಾಲಿನಲ್ಲಿ ಮಂಗಳೂರಿನ ನೃತ್ಯ ಕಲಾವಿದರಾದ ಮಾಸ್ಟರ್ ವಿಠ್ಠಲ್ ಮತ್ತು ಶಿಷ್ಯರಿಂದ ನೃತ್ಯಪ್ರದರ್ಶನವು ಜರಗಿತು. ಪ್ರದರ್ಶಿಸಲ್ಪಟ್ಟ ನೃತ್ಯಗಳಲ್ಲಿ ಛಾಯಾ ದೀಪಾರಾಧನಾ, ಕಾಳಿಯ ಮರ್ದನ, ಕಲ್ಯಾಣ ಜತಿಸ್ವರಂ ಮತ್ತು ಮಾಯಾಮೃಗ ನೃತ್ಯಗಳು ಜನರ ಮೆಚ್ಚುಗೆಗೆ ಪಾತ್ರವಾಯಿತಲ್ಲದೆ, ಜನರಿಗೆ ಉತ್ತಮ ಮನರಂಜನೆಯನ್ನು ನೀಡಿತು. ಅಧ್ಯಕ್ಷರ ಭಾಷಣಾನಂತರ, ಶ್ರೀ ಜಿ. ಪರಮೇಶ್ವರ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಶ್ರೀನಿವಾಸ ಕುಡ್ವರಿಗೆ ಸತ್ಕಾರ– ಶ್ರೀ ಮುರಳಿ ಭೀಮ ರಾಯರ ಅಧ್ಯಕ್ಷತೆಯಲ್ಲಿ, ಸ್ಥಳೀಯ ಕೆನರಾ ವರ್ಕ್ ಶಾಪ್ಸಿನ ಜನರಲ್ ಮೆನೇಜರರೂ, ಇತ್ತೀಚೆಗೆ ಅಮೇರಿಕದಲ್ಲಿ ಲೋಹವಿಜ್ಞಾನದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆದು ಹಿಂತಿರುಗಿರುವ ಶ್ರೀ ಶ್ರೀನಿವಾಸ ಕುಡ್ವರಿಗೆ ಮೋಹಿನೀ ವಿಲಾಸದಲ್ಲಿ ದಿನಾಂಕ ೯ರಂದು ಸತ್ಕಾರಕೂಟವೊಂದು ಏರ್ಪಟ್ಟಿತು, ಶ್ರೀ ಶ್ರೀನಿವಾಸ ಉಡುಪರು ಸ್ವಾಗತಿಸಿದರು. ಸಭಿಕರಲ್ಲಿ ಶ್ರೀಗಳಾದ ಕೆ. ಆರ್. ಆಚಾರ್, ಎಸ್. ಮುಕುಂದ ರಾವ್, ಬಿ. ಎಮ್. ಇದಿನಬ್ಬ ಮತ್ತು ಪಿ. ಕೆ. ನಾರಾಯಣ ರವರು ಭಾಷಣವಿತ್ತರಲ್ಲದೆ ಶ್ರೀಯುತರ ಅನುಭವವು ಭಾರತದ ಉದ್ಯಮಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಸಹಾಯಕವಾಗಲೆಂದು ಹಾರೈಸಿದರು.

ಶ್ರೀ ಕುಡ್ವರು ಅಮೇರಿಕದ ವೃತ್ತ ಪತ್ರಿಕೆಗಳ ಕುರಿತು ಮಾತನಾಡುತ್ತಾ ಅಲ್ಲಿನ ಪ್ರತಿ ಮನೆಯವರೂ ಎರಡಾದರೂ ಪತ್ರಿಕೆಯನ್ನು ಕೊಳ್ಳುತ್ತಾರೆ, ಅಲ್ಲದೆ ಪ್ರತಿ ಸಣ್ಣ ಪಟ್ಟಣದಲ್ಲೂ ಒಂದಾದರೂ ದಿನ ಪತ್ರಿಕೆಯು ಪ್ರಕಟವಾಗುತ್ತದೆ ಎಂದರು. ಜನತೆಯು ಜಾಹೀರಾತಿನ ಬೆಲೆ ತಿಳಿದಿರುವದರಿಂದ ಪತ್ರಿಕೆಗಳಿಗೆ ಹೆಚ್ಚು ಜಾಹೀರಾತುಗಳು ದೊರಕುತ್ತವೆ. ಇದರಿಂದಾಗಿ ಪತ್ರಿಕೆಯು ಹೆಚ್ಚು ದಪ್ಪವಾಗಿಯೂ ಕಡಿಮೆ ಕ್ರಯದಲ್ಲೂ ಜನರಿಗೆ ಸಿಗುತ್ತದೆ ಎಂದರಲ್ಲದೆ ಭಾರತದಲ್ಲಿ ಇನ್ನೂ ಜಾಹೀರಾತಿನ ಕ್ರಮವು ಬೆಳೆಯಬೇಕಾಗಿದೆ ಎಂದರು.

ಅಧ್ಯಕ್ಷರು ತಮ್ಮ ಅಧ್ಯಕ್ಷಭಾಷಣದಲ್ಲಿ ಶ್ರೀ ಕುಡ್ವರನ್ನು ಅಭಿನಂದಿಸಿ, ಜಿಲ್ಲಾ ಕೈಗಾರಿಕಾ ಕ್ಷೇತ್ರವು ಅಭಿವೃದ್ಧಿಹೊಂದುವಂತೆಯೂ, ಬಹಳ ಮುಂದುವರಿಯುವಂತೆಯೂ ಇವರ ಅನುಭವವು ಉಪಯೋಗಿಸಲ್ಪಡಲಿ ಎಂದು ಹಾರೈಸಿದರು.

ಶ್ರೀ ಎಚ್. ಮಂಜುನಾಥ ನಾಯಕರ ವಂದನಾರ್ಪಣೆಯೊಂದಿಗೆ ಸಭೆಯು ಕೊನೆಗೊಂಡಿತು.

ಜಿಲ್ಲಾ ಬಲ್ಯಾಯ ಮಹಾಜನ ಸಂಘ— ವಾರ್ಷಿಕ ಮಹಾಸಭೆಯು ತಾ. ೩ರಲ್ಲಿ ಶ್ರೀ ಬಿ. ಆರ್. ಮಂಜುನಾಥಯ್ಯ (ರಿಟೆಯರ್ಡ್ ಅಸಿಸ್ಟಾಂಟ್ ಇಂಜಿನಿಯರ್) ಇವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಎನ್. ಎನ್. ಸುವರ್ಣ, ಎಂ. ಎಲ್. ಎ, ಎ. ಕೆ. ಸೇವಕ್ ಮೊದಲಾದವರ ಭಾಷಣಗಳಾದುವು.

ಮಂಗಳೂರಿನ ಕಾಫಿ ರಶ್ಯಕ್ಕೆ— ಭಾರತದ ಕಾಫಿ ಬೋರ್ಡಿನ ಆದೇಶಕ್ಕನುಸಾರವಾಗಿ ಸುಮಾರು ನಲ್ವತ್ತು ಲಕ್ಷರೂಪಾಯಿ ಬೆಲೆಯ ಕಾಫಿಬೀಜವನ್ನು ಇಲ್ಲಿಂದ ಕೊಚ್ಚಿ ಮೂಲಕ ರಶ್ಯಕ್ಕೆ ರವಾನಿಸಲಾಗಿದೆ.

ಲಕ್ಷ್ಮಣ ಬಾಬನಿ ಪೈ ಸ್ಮಾರಕ ಪ್ರಕಾಶನ

ಉತ್ತರ ಕನ್ನಡದ ಅಂಕೋಲೆಯ ದಿ. ಲಕ್ಷ್ಮಣ ಬಾಬನಿಪೈಯವರ ಸ್ಮಾರಕಾರ್ಥವಾಗಿ, ಅವರಿಂದಲೇ ಸಾಧಾರಣ ೧೯ನೇ ಶತಮಾನಾಂತ್ಯದಲ್ಲಿ ಬರೆಯಲ್ಪಟ್ಟಿರುವ ಭಾರತೀಯ ಸಾಂಸ್ಕೃತಿಕ ಉದ್ಗ್ರಂಥಗಳನ್ನು ಪ್ರಕಟಿಸುವ ಯೋಜನೆಯಿಂದ, ಮೇಲಿನ ಸಂಸ್ಥೆಯು ಸ್ಥಾಪಿಸಲ್ಪಟ್ಟಿರುತ್ತದೆ. ಈ ಸಂಸ್ಥೆಯು ಈಗ ೧೭ ಸಂಪುಟಗಳಲ್ಲಿ ಋಗ್ವೇದದ ಕನ್ನಡ ಭಾಷಾಂತರವನ್ನು ಪ್ರಕಟಿಸಲು ನಿಶ್ಚೈಸಿರುತ್ತದೆ. ಜಗತ್ತಿನ ಉತ್ತಮ ಪುಸ್ತಕಗಳಲ್ಲಿ ಒಂದಾಗಬಹುದಾದ ಈ ಪುಸ್ತಕದ ಪ್ರಕಟಣೆಯು ಮುಗಿದ ಬಳಿಕ ಮಹರ್ಷಿ ವೇದವ್ಯಾಸರಿಂದ ರಚಿತವಾದ ‹ಮಹಾಭಾರತ›ದ ಕನ್ನಡ ಅನುವಾದವನ್ನು ೩೦ ಸಂಪುಟಗಳಲ್ಲಿ ಪ್ರಕಾಶಿಸಲು ನಿಶ್ಚೈಯಿಸಿರುತ್ತದೆ. ಮುಂದೆ ಕ್ರಮವಾಗಿ ಯಜುರ್ವೇದ, ಸಾಮವೇದ, ಅಥರ್ವಣ ವೇದಗಳ ಕನ್ನಡ ಅನುವಾದಗಳನ್ನು ೧೪ ಸಂಪುಟಗಳಲ್ಲಿ ಪ್ರಕಟಿಸಲಾಗುವುದು, ಹೀಗೆ ಪ್ರಕಟವಾಗುವ ಪುಸ್ತಕಗಳ ಒಟ್ಟು ಸಂಪುಟಗಳು ೬೦ ಆಗಿದ್ದು ಪ್ರತಿ ಸಂಪುಟದ ಬೆಲೆಯು ೫ ರೂಪಾಯಿಗಳಾಗಿವೆ. ಆದುದರಿಂದ ಒಟ್ಟು ಸಂಪುಟಗಳ ಬೆಲೆಯು ೩೦೦ ರೂಪಾಯಿಗಳಷ್ಟಾಗುವುದು. ಆದರ ಪ್ರಕಟಣಾ ಕಾರ್ಯವು ಸುಗಮಗೊಳ್ಳುವಂತೆ ರೂ ೧೦೦ನ್ನು ಕೊಟ್ಟು ಆಜೀವ ಸದಸ್ಯರಾಗುವವರಿಗೆ ಮೇಲಿನ ೬೦ ಸಂಪುಟಗಳನ್ನು ಕೊಡಲಾಗುವುದಲ್ಲದೆ, ಅವರಿಗೆ ಸಾಧಾರಣ ರೂ. ೩೦೦ರಷ್ಟು ಉಳಿತಾಯವಾಗುವುದು. ಈ ಮೊದಲೇ ಶ್ರೀ ರಂ. ರಾ. ದಿವಾಕರ, ರಾಜ್ಯಪಾಲ, ಬಿಹಾರ್. ಇವರೇ ಮೊದಲಾದ ಏಳು ಮಂದಿ ಆಜೀವ ಸದಸ್ಯರಾಗಿರುವರು. ಆದುದರಿಂದ ಯಾರಾದರೂ ಇಚ್ಛಿಸುವವರು ರೂ. ೧೦೦ರ ಚೆಕ್ಕನ್ನು ಅಥವಾ ಮನಿಯಾರ್ಡರು ಕಳುಹಿಸಿ, ಈ ಕಾರ್ಯವು ಸಾಂಗವಾಗಿ ಕೊನೆಗೊಳ್ಳುವಂತೆ ಸಹಕರಿಸಬೇಕಾಗಿ ಮೇಲಿನ ಸಂಸ್ಥೆಯ ಮಾಲಕರು ತಿಳಿಸುತ್ತಾರೆ. ಹಣ ಕಳುಹಿಸುವವರು ಈ ವಿಳಾಸಕ್ಕೆ ಕಳುಹಿಸಬಹುದು. ಲಕ್ಷ್ಮಣ ಬಾಬನಿ ಪೈ ಸ್ಮಾರಕ ಪ್ರಕಾಶನ, ಗೋಡ್ಕೆ ಬಿಲ್ಡಿಂಗ್, ಜಯಚಾಮರಾಜ ನಗರ, ಹುಬ್ಬಳ್ಳಿ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ಸ.)

ಬುದ್ಧದೇವ—

ಬರೆದವರು: ಶಿವಂ. ಪ್ರಕಾಶಕರು: ಮಿತ್ರ ಮಂಡಳ, ಕುಮಟ ಬೆಲೆ: ರೂ. ೦—೬—೦.

ಬುದ್ಧನ ೨೫೦೦ನೇ ಪರಿನಿರ್ವಾಣ ಜಯಂತ್ಯುತ್ಸವವನ್ನು ಆಚರಿಸುತ್ತಿರುವ ಹೊತ್ತಿಗೆ ಸರಿಯಾಗಿ ಪ್ರಕಟವಾಗಿರುವ ಈ ಚಿಕ್ಕ ಪುಸ್ತಕವು ಗೌತಮ ಬುದ್ಧನ ಜೀವನವನ್ನೂ ಉಪದೇಶವನ್ನೂ ಬಹಳ ಸರಳ ಮಾತುಗಳಲ್ಲಿ, ಆದರೆ ತುಂಬ ಆಕರ್ಷಕ ಶೈಲಿಯಲ್ಲಿ, ವಿವರಿಸುತ್ತದೆ. ಇಲ್ಲಿ ಎತ್ತಿ ಹೇಳಲಾದ ಘಟನೆಗಳು ಬುದ್ಧನ ಜೀವನದ ಮಹತ್ವದ ಅಂಶವನ್ನೊಳಗೊಂಡಿದ್ದು ಓದುಗರ ಮೇಲೆ ಬಹಳ ಪ್ರಭಾವವನ್ನು ಮಾಡುವಂತಿವೆ. ತುಸುದೊಡ್ಡ ಅಕ್ಷರದಲ್ಲಿ ಮುದ್ರಿತವಾಗಿರುವ ಈ ಪುಸ್ತಕದಿಂದ ಈಗತಾನೆ ಅಕ್ಷರಾಭ್ಯಾಸಹೊಂದಿದ ಹೊಸಬರಿಗೆ ಅಂದರೆ (ವಯಸ್ಕರಿಗೆ) ಸಹ ಹೆಚ್ಚಿನ ಪ್ರಯೋಜನ ಆಗಬಲ್ಲುದು.

ಲಘು ಪರಿಚಯ

ಬೈಂದೂರಿನ ಶ್ರೀ ಹಡುವರಿ ಸುಬ್ಬಣ್ಣ ಸೆಟ್ಟಿಯವರು "ಗಾದೆಯ ಗುಚ್ಛ" ಎಂಬ ಒಂದು ಕಿರು ಹೊತ್ತಿಗೆಯನ್ನು ನಾಲ್ಕಾಣೆ ಬೆಲೆಗೆ ಪ್ರಕಟಿಸಿದ್ದಾರೆ. ಇದರಲ್ಲಿ ಐನೂರು ಜನಪ್ರಿಯ ಗಾದೆಗಳನ್ನು ಪ್ರಕಟಿಸಲಾಗಿದೆ. ಅಕಾರಾದಿಯಾಗಿ ಈ ಗಾದೆಗಳನ್ನು ಪೋಣಿಸಿರುವುದರಿಂದ ಓದುಗರು ವಿಶೇಷ ಉಪಕಾರವನು ಹೊಂದಬಲ್ಲರು.

ಧಾರವಾಡದ ಭಾರತ್ ಬುಕ್‌ಡಿಪೋದವರು ಶ್ರೀ ಬಿ ಎಂ. ಕಿತ್ತೂರರು ಬರೆದಿರುವ "ಜ್ಞಾನಕಿರಣ" ಎಂಬ ಪುಸ್ತಕವನ್ನು ಎಂಟಾಣೆ ಬೆಲೆಗೆ ಪ್ರಕಟಿಸಿದ್ದಾರೆ. ಈ ಪುಸ್ತಕವು ಸಾಕ್ಷರತೆಯ ಪ್ರಚಾರಕ್ಕೆ ಬಹಳ ಉಪಯುಕ್ತವಾಗಿದೆ ಎಂದು ಶೈಕ್ಷಣಿಕ ಕ್ಷೇತ್ರದ ಅನುಭವಿಕರಿಂದ ಪ್ರಶಂಸೆ ಪಡೆದಿರುವುದನ್ನು ಪುಸ್ತಕದ ವಾಚನದಿಂದ ತಿಳಿಯಬಹುದು. ಆಯಾ ಅಕ್ಷರದ ಸಂಬಂಧವನ್ನು ಆ ಅಕ್ಷರದಿಂದ ಪ್ರಾರಂಭವಾಗುವ ಪ್ರಾಣಿ, ಪಕ್ಷಿಗಳ ಆಕಾರದೊಡನೆ ಜೋಡಿಸಿರುವುದು ಮತ್ತು ಹಾಗೆ ಅಕ್ಷರ ಕಲಿಯುವವರ ಮನೋಭಾವದ ಮೇಲೆ ಪ್ರಭಾವವನ್ನು ಬೀರಿ, ಕಲಿಯುವಿಕೆಯನ್ನು ಸುಲಭಮಾಡುವುದು ಇಲ್ಲಿ ಬಳಸಲಾದ ವಿಶಿಷ್ಟ ತಂತ್ರವೆನ್ನಲಾಗಿದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಜನರು ಈ ಪುಸ್ತಕದಿಂದ ಪ್ರಯೋಜನಹೊಂದಬಹುದಾದ ಸಂಭವ ಅತ್ಯಲ್ಪ. ಏಕೆಂದರೆ, ಉತ್ತರಕರ್ನಾಟಕದ ಬಳಕೆಯ ಶಬ್ದಗಳೇ ಇಲ್ಲಿವೆ—ಅವಾಗ್ಯೂ ಉತ್ತರಕರ್ನಾಟಕದವರಿಗೆ ಇದು ಉಪಯುಕ್ತವೆನಿಸೀತೆಂದು ನಮಗೆ ತೋರುತ್ತದೆ.

—ವಿಮರ್ಶಕ.

(೪ನೇ ಪುಟದಿಂದ)

...ತ್ತಾರೆ. ಭಾರತದಲ್ಲಿ ಸಾಮಾನ್ಯವಾಗಿ ಭೂಹಿಡುವಳಿಯ ಪ್ರಮಾಣವು ಸಣ್ಣದಾಗಿರುತ್ತದೆ. ಆದುದರಿಂದ ಈ ಸಾಮಾನ್ಯ ಹಿಡುವಳಿಗಿಂತ ದೊಡ್ಡ ಹಿಡುವಳಿಯು ಆರ್ಥಿಕವಾಗಿ ಉಪಯುಕ್ತವೆನಿಸುವ ಪ್ರಮೇಯವಿಲ್ಲ. ಇಂಥ ದೊಡ್ಡ ಹಿಡುವಳಿಗಳಿಂದ ರೈತರನ್ನು ಶೋಷಣೆಗೆ ಗುರಿಮಾಡುವ ಮತ್ತು ರೈತರ ಉತ್ಸಾಹವನ್ನು ಕುಂದಿಸಿ ಉತ್ಪಾದನೆಯನ್ನು ತಗ್ಗಿಸುವ ದುಷ್ಪರಿಣಾಮವೇ ಆಗುತ್ತದೆ. ಆದರೆ, ಯಾವುದಾದರೊಂದು ಔದ್ಯಮಿಕ ಅಥವಾ ಅಧಿಕಾರಯುಕ್ತ ಹುದ್ದೆಯಲ್ಲಿದ್ದು, ಯಶಸ್ವಿಯಾಗಿ ಕೆಲಸ ನಿರ್ವಹಿಸಿ ಪಡೆಯುವ ಸಂಬಳಕ್ಕೆ ಮಿತಿಹಾಕದೆ ಇರುವುದರಿಂದ ಇಂಥದೇನೂ ಕೆಟ್ಟ ಫಲ ದೊರೆಯದು. ಆದುದರಿಂದ ಸಾರ್ವಜನಿಕರಂಗದಲ್ಲಿ ಮತ್ತು ಸರಕಾರಿ ಹುದ್ದೆಗಳಲ್ಲಿ ವೇತನವನ್ನು ತಗ್ಗಿಸಿ ಸಮಾನತೆಯ ಸ್ಥಾಪನೆ ಮಾಡಬಹುದೆಂಬ ನಿಲುವೇ ವಿಹಿತವಲ್ಲ ಎಂದೇ ತಜ್ಞರು ಸಾರಿದ್ದಾರೆ.

ಮುಚ್ಚಿದರೆ ಮುಗಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ

ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೧೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,

ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ).

ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಪಸ್ಮಾರ ಮತ್ತು ಭೂತೋನ್ಮಾದ ನಿರ್ಮೂಲನ

ಅಪಸ್ಮಾರ, ಭೂತೋನ್ಮಾದ, ಮೊಲನಾಗರು ಬೇನೆಯಿಂದ ನರಳುವವರು ಆತ್ಯಾಶ್ಚರ್ಯಕರವಾದ ಈ ಬೇರನ್ನು ಮೂಸಿದೊಡನೆ ಒಂದೂ ಕಾಲು ಇಂಚು ಉದ್ದದ ಕಪ್ಪು ಬಣ್ಣದ ಕ್ರಿಮಿಯೊಂದು ಹೊರಗೆ ಬರುವುದು. ನಂತರ ಈ ಬೇನೆಯು ಮಾಯವಾಗುವುದು.

ಇಂಗ್ಲಿಷಿನಲ್ಲಿ ಬರೆಯಿರಿ:—

Sri 108 Mahatma Ambar Das
P. O. CHITRAKOT, U. P.

ಗ್ರಹಣಗಳ ದುಷ್ಪರಿಣಾಮ

ವಿಷಾಕ್ತ ಕಿರಣಗಳಿಂದ ರಕ್ಷಣೆ ಮತ್ತು ಶುದ್ಧಿ ಅವಶ್ಯಕ

ಪ್ರಧಾನ ಮಂತ್ರಿ ಶ್ರೀ ನೆಹರುಗಳು ಬುದ್ಧ ಪರಿನಿರ್ವಾಣ ಜಯಂತ್ಯುತ್ಸವದ ಸಂದರ್ಭ ಸಾರ್ವಜನಿಕ ಭಾಷಣವನ್ನು ಹೊಸದೆಹಲಿಯಲ್ಲಿ ಮಾಡಿದಾಗ, ಆನುಷಂಗಿಕವಾಗಿ ಅಂದಿನ ಚಂದ್ರಗ್ರಹಣವನ್ನು ಪ್ರಸ್ತಾಪಿಸಿ, ಭಾರತೀಯರ ಗ್ರಹಣ ಕಾಲದ ಚಟುವಟಿಕೆಗಳನ್ನು ಟೀಕಿಸಿದರು.

ಧಾರ್ಮಿಕ ಸ್ವರೂಪದ ಅಂಧಶ್ರದ್ಧೆಗಳನ್ನು ಬಲವಾಗಿ ಖಂಡಿಸುತ್ತಾ ನೆಹರುಗಳು ಸೂರ್ಯ ಮತ್ತು ಚಂದ್ರರಿಗೆ ಆಗುವ ಗ್ರಹಣಗಳ ವಿಷಯದಲ್ಲಿ ಭಾರತೀಯರು ಸರಿಯಾದ ಜ್ಞಾನವನ್ನು ಹೊಂದಿಲ್ಲವೆಂದು ಹೇಳಿದರು. ತಮ್ಮ ಈ ನಿಲುವನ್ನು ವಿವರಿಸುವಾಗ ಗ್ರಹಣಕಾಲದಲ್ಲಿ ಜನರು ನದಿಗಳಲ್ಲಿ ಸ್ನಾನ ಮಾಡುವುದನ್ನೂ ಉಪವಾಸ ಆಚರಿಸುವುದನ್ನೂ ನಿಂದಿಸಿದರು.

"ನದಿಯಲ್ಲಿ ಸ್ನಾನಮಾಡುವುದಾಗಲೀ ಉಪವಾಸ ಮಾಡುವುದಾಗಲೀ ಕೆಟ್ಟದೆಂದು ನಾನು ಹೇಳುವುದಿಲ್ಲ. ಆದರೆ, ಗ್ರಹಣದ ನೆಸೆಯಿಂದಾಗಿ—ಆ ಕಾರಣಕ್ಕಾಗಿ—ಮಾಡುವ ಉಪವಾಸವೂ ಸ್ನಾನವೂ ಸಂಪೂರ್ಣವಾಗಿ ತಪ್ಪು" ಎಂದವರು ತಮ್ಮ ಭಾಷಣದಲ್ಲಿ ಘೋಷಿಸಿದರು.

"ನಮ್ಮ ಜನರ ತಲೆಯಲ್ಲಿ ಒಂದು ಭ್ರಾಮಕ ಕಲ್ಪನೆ ಇದೆ: ಗ್ರಹಣವೆಂದು ಆಗುತ್ತದೋ, ಆಗ ರಾಹುವು ಚಂದ್ರನನ್ನು ಕಬಳಿಸುವನೆಂಬುದೇ ಅದು. ಈ ಅಸಂಬದ್ಧ ತಿಳಿಗೇಡಿ ನಿಲುಮೆಯನ್ನು ಸ್ವೀಕರಿಸುವಷ್ಟು ನಾವು ಮೂರ್ಖರಾಗಿದ್ದೇವೆಯೆ? ಗ್ರಹಣವು ನದಿಯಲ್ಲಿ ಸ್ನಾನ ಮಾಡುವುದರಿಂದಾಗಲೀ ಉಪವಾಸ ಆಚರಿಸುವುದರಿಂದಾಗಲೀ ಜಪಮಾಲೆಯನ್ನು ತಿರುಗಿಸುವುದರಿಂದಾಗಲೀ ಅಂತ್ಯವಾಗುವುದಿಲ್ಲ. ಭೂಮಿಯ ನೆರಳು ಚಂದ್ರನ ಮೇಲೆ ಬೀಳುವುದು ನಿಂತಾಗಲೇ ಗ್ರಹಣವು ಕೊನೆಗೊಳ್ಳುತ್ತದೆ. ಗೌತಮ ಬುದ್ಧನು ಧರ್ಮದ ಹೆಸರಿನಲ್ಲಿ ರೂಢವಾಗಿದ್ದ ಇಂಥ ಅಂಧಶ್ರದ್ಧೆಗಳ ವಿರುದ್ಧ ಹೋರಾಡಲೆಂದೇ ಜನಿಸಿದ" ಎಂದು ಪ್ರಧಾನಿಗಳು ಹೇಳಿದರು.

* *

ಮದ್ರಾಸಿನ "ಹಿಂದು" ಪತ್ರಿಕೆಗೆ ಈ ಸಂಬಂಧದಲ್ಲಿ ಶ್ರೀ ವಿ. ಜಿ. ರಾಮಚಂದ್ರನ್ ಎಂಬವರು ಪತ್ರವೊಂದನ್ನು ಬರೆದು, ಶ್ರೀ ನೆಹರುಗಳು ವಹಿಸಿರುವ ನಿಲುಮೆಯು ದೋಷಯುಕ್ತವಾದುದೆಂದು ಸ್ಪಷ್ಟಪಡಿಸಿದ್ದಾರೆ. ಅವರ ಪತ್ರದ ಸಾರಾಂಶ ಇಂತಿದೆ:

ಸೂರ್ಯ ಮತ್ತು ಚಂದ್ರ ಗ್ರಹಣಗಳು ಮನುಷ್ಯರಿಗೂ ಪ್ರಾಣಿಗಳಿಗೂ ಸಸ್ಯಗಳಿಗೂ ಜೀವಕ್ಕೆ ಅಪಾಯಕಾರಿಯಾದ ವಾತಾವರಣವನ್ನು ಗ್ರಹಣ ಕಾಲಾವಧಿಯಲ್ಲಿ ಉಂಟುಮಾಡುತ್ತವೆ ಎಂಬುದು ಅನುಭವಸಿದ್ಧವಾದ ವಿಷಯವಾಗಿದೆ. ವೈಜ್ಞಾನಿಕ ಅಭಿಪ್ರಾಯವು ಸಹ ಇದನ್ನು ವಿಶದೀಕರಿಸಿ, ಗ್ರಹಣ ಕಾಲಾವಧಿಯಲ್ಲಿ ವಾತಾವರಣದಲ್ಲಿ ಕಲೆತ ಅಶುದ್ಧ ಕಿರಣಗಳು ಸಾಮಾನ್ಯವಾಗಿ ಜೀವರಾಶಿಯ ಮೇಲೆ ಪ್ರತಿಕೂಲ ಪರಿಣಾಮವನ್ನು ಮಾಡುತ್ತವೆಂದು ಹೇಳುತ್ತದೆ. ಆದುದರಿಂದಲೇ ಗ್ರಹಣ ಕಾಲಾವಧಿಯಲ್ಲಿ ನಿಷ್ಕ್ರಿಯತೆಯನ್ನು (ಉಪವಾಸವನ್ನು) ಮತ್ತು

ಸ್ನಾನವನ್ನು ವಿಧಿಸಲಾಗಿದೆ. ಹೀಗೆ ಹಿಂದು ನಂಬಿಕೆಯು ಗ್ರಹಣದ ಸಂಬಂಧದಲ್ಲಿ ಉಪವಾಸವನ್ನೂ ದೇಹಶುದ್ಧಿಗಾಗಿ ಸ್ನಾನವನ್ನೂ ಮನೋನೈರ್ಮಲ್ಯಕ್ಕಾಗಿ ಪ್ರಾರ್ಥನೆಯನ್ನೂ ಮನ್ನಿಸಿದೆ. ಅದು ವೈಜ್ಞಾನಿಕ ಅಭಿಪ್ರಾಯಗಳಿಗೆ ಅನುಗುಣವಾಗಿಯೇ ಇದೆ ಎಂದು ಸಿದ್ಧವಾಗುತ್ತದೆ.

ತಿಳಿವಳಿಕೆಯು ಇಷ್ಟಿಲ್ಲದೆ ಜನರು ಸಹ ಅಪಾಯ ಮುಕ್ತತೆಯ ಮಾರ್ಗವನ್ನು ಹಿಡಿಯಬೇಕೆಂಬುದೇ ರಾಹು ಮತ್ತು ಕೇತುಗಳು ಸೂರ್ಯ ಮತ್ತು ಚಂದ್ರರನ್ನು ನುಂಗುತ್ತವೆಂಬ ಕತೆಯ ಮೂಲವಾಗಿದೆ. ಹಿಂದುಗಳಿಗೆ ಗ್ರಹಗಳ ಚಲನೆಯ ವಿಷಯ ತಿಳಿದಿರಲಿಲ್ಲವೆಂದು ಭಾವಿಸಲಾಗದು. ವಾಸ್ತವದಲ್ಲಿ ನಮ್ಮ ಜ್ಯೋತಿಷ್ಯರು ಸೆಕೆಂಡಿಗೆ ಸರಿಯಾಗಿ, ಗ್ರಹಣ ಕಾಲ ಮತ್ತು ಅವಧಿಯನ್ನು ಬಹಳ ಮುಂಚೆಯೇ ಭವಿಷ್ಯವಾಕ್ಯದಂತೆ ಹೇಳಬಲ್ಲರು. ಮಹಾ ಸತ್ಯಗಳನ್ನು ಕತೆಗಳಿಂದಲೂ ಪೌರಾಣಿಕ ಆಖ್ಯಾಯಿಕೆಗಳಿಂದಲೂ ಜನರ ಮನಸ್ಸಿನ ಮೇಲೆ ಬಿಂಬಿಸುವುದು ಹಿಂದುಗಳದೊಂದು ಸನಾತನ ಸಂಪ್ರದಾಯ; ಅಥವಾ ಕುಶಲ ತಂತ್ರ. ಆದುದರಿಂದ ಪ್ರಸಿದ್ಧರಾದ ಭಾರತೀಯ ಪುರುಷರು ಸನಾತನರಾದ ಹಿಂದು ನಂಬಿಕೆಗಳನ್ನು ಸಮಯಾಸಮಯ ಭೇದವಿಲ್ಲದೆ ಟೀಕಿಸುವುದು ತೀರ ವಿಷಾದಕರ. ಒಂದು ನಂಬಿಕೆಯನ್ನು ಟೀಕಿಸುವುದಕ್ಕೆ ಮುಂಚೆ ಆ ನಂಬಿಕೆಯನ್ನು ಆಳವಾಗಿ ಅಭ್ಯಸಿಸಬೇಕು. ಸ್ವತಃ ಆ ನಂಬಿಕೆಯಂತೆ ನಡೆದಿರಬೇಕು. ಹೀಗೆ ಯಾರು ಮಾಡುವುದಿಲ್ಲವೋ ಮತ್ತು ಕ್ಷಣಾರ್ಧದಲ್ಲಿಯೇ ಯಾರು ತಾವು ಹುಟ್ಟಿಬಂದಿರುವ ನಂಬಿಕೆಯ ವಾತಾವರಣವನ್ನು ತ್ಯಜಿಸಿ ಇನ್ನೊಂದರತ್ತ ಧಾವಿಸುವರೋ ಅವರಲ್ಲಿ ವಿಶ್ವಾಸವಿಡುವುದು ಸಲ್ಲದೆಂದು ಗಾಂಧೀಜಿ ಹೇಳಿದ್ದಾರೆ. ನಮ್ಮ ಜಾತ್ಯತೀತ ರಾಷ್ಟ್ರದ ಮಹಾ ನಾಯಕರು ಬೌದ್ಧ ಧರ್ಮದ ಕುರಿತು ತೀವ್ರಾಸಕ್ತಿ ತಳೆದಿರುವುದಾದರೂ ಒಂದು ಜೋದ್ಯವೇ-ಏಕೆಂದರೆ ೧೯೨೭ರಲ್ಲಿ ಮಹಾತ್ಮಾ ಗಾಂಧಿಯವರು ಬೌದ್ಧ ಧರ್ಮದ ಕುರಿತು ಸಿಂಹಳದಲ್ಲಿ ಮಾತನಾಡುತ್ತಾ ಬೌದ್ಧಧರ್ಮದಲ್ಲಿ ಒಳ್ಳೆಯದೆನ್ನುವುದೇನಿದೆಯೋ ಅದು ಹಿಂದೂ ಧರ್ಮದಲ್ಲಿದೆ ಎಂದಿದ್ದರು.

* *

ಇದೇ ಪತ್ರದ ವಿಷಯದಲ್ಲಿ ಬೇರೆ ಎರಡು ಪತ್ರಗಳೂ "ಹಿಂದು" ಪತ್ರಿಕೆಯಲ್ಲಿ ಪ್ರಕಟವಾಗಿವೆ. ಶ್ರೀ ತಿರು ವೆಂಕಟನಾಥನ್ ಎಂಬವರು ಗಾಂಧೀಜಿಯವರ ಬೇರೆ ಕೆಲವು ಮಾತುಗಳನ್ನು ಹೀಗೆ ಉದ್ಧರಿಸಿದ್ದಾರೆ:

"ಅತ್ಯಮೂಲ್ಯವಾದ ಹರಳುಗಳುಳ್ಳ ಸೀಮಾತೀತವಾದ ಸಾಗರದಂತೆ ಹಿಂದೂ ಧರ್ಮವಿದೆ. ನೀವು ಎಷ್ಟು ಆಳವಾಗಿ ಮುಳುಗುತ್ತೀರೋ ಅಷ್ಟು ಅಮೂಲ್ಯವಾದ ಹರಳುಗಳನ್ನು ಎತ್ತಬಲ್ಲಿರಿ. ಹಿಂದೂ ಧರ್ಮದಲ್ಲಿ ದೇವರು ಹಲವು ನಾಮಧಾರಿಯಾಗಿದ್ದಾನೆ. ಸಾವಿರಾರು ಜನರು ಶ್ರೀರಾಮ ಮತ್ತು ಶ್ರೀಕೃಷ್ಣರನ್ನು ಐತಿಹಾಸಿಕ ಮಹಾಪುರುಷರೆಂದು ನಂಬಿದ್ದಾರೆ; ಸಾಹಿತ್ಯಿಕವಾಗಿ, ದೇವರೇ ಮಾನುಷರೂಪಧಾರಿಯಾಗಿ ಭೂಮಿಯಲ್ಲಿ ಅವತರಿಸಿದನೆನ್ನುತ್ತಾರೆ. ಚರಿತ್ರೆ, ಕಲ್ಪನೆ ಮತ್ತು ಸತ್ಯಗಳು ಇಲ್ಲಿ ಎಷ್ಟು ಅಭೇಧ್ಯವಾಗಿ ಮಿಶ್ರಣಗೊಂಡಿವೆಯೆಂದರೆ ಅವುಗಳನ್ನು ಬೇರ್ಪಡಿಸುವುದು ಎಷ್ಟಕ್ಕೂ ಸಾಧ್ಯವಿಲ್ಲ." ಆದುದರಿಂದ ಸರಿಯಾದ ತಿಳಿವಳಿಕೆಯೊಂದೇ ಯೋಗ್ಯ ನಂಬಿಕೆಯತ್ತ ಒಯ್ಯಬಲ್ಲುದೆಂದು ಈ ಪತ್ರ ಲೇಖಕರ ಆಶಯ.

ಶ್ರೀ ವಿ. ಕೆ. ದೊರೆಸ್ವಾಮಿ ಎಂಬ ಇನ್ನೊಬ್ಬ ಪತ್ರ ಲೇಖಕರು ಹೀಗೆನ್ನುತ್ತಾರೆ:

ನಮ್ಮ ಜನರು (ಜಗತ್ತಿನ ಬೇರೆ ಜನಗಳಂತೆಯೆ) ಪ್ರಾಚೀನ ಕಾಲದಲ್ಲಿ ಗ್ರಹಣಗಳ ಪ್ರತಿಕೂಲ ಪರಿಣಾಮಗಳನ್ನು ತಿಳಿದಿದ್ದರೆಂಬುದಕ್ಕಾಗಿಯಲ್ಲ — ಸರಿಯಾಗಿ ವಿವರಿಸಲು ತಮಗೆ ಸಾಧ್ಯವಾಗದಿದ್ದ ರೀತಿಯಲ್ಲಿ ಆಕಾಶದಲ್ಲಿನ ಈ ಗ್ರಹಗಳು ವರ್ತಿಸಿದಾಗ ಉಂಟಾದ ಭಯ ಮತ್ತು ಗೌರವ ಭಾವನೆಯಿಂದ ಪ್ರೇರಿತರಾಗಿ ಗ್ರಹಣ ಕಾಲವನ್ನು ಶ್ರದ್ಧಾಭಕ್ತಿಯಿಂದ ಆಚರಿಸುತ್ತಿದ್ದರು. ರಾಹು ಮತ್ತು ಕೇತುಗಳ ಕತೆಯು ತಿಳಿವಳಿಕೆ ಅಷ್ಟಾಗಿ ಇಲ್ಲದ ಜನರ ಮೇಲೆ ಉತ್ತಮ ಪ್ರಭಾವವನ್ನು ಬೀರಲು ಯೋಗ್ಯವಾಗಿದೆ ಎಂದು ಭಾವಿಸುವುದು ಸರಿಯಲ್ಲ. ಜನರನ್ನು ಅಜ್ಞಾನದಲ್ಲಿಟ್ಟಷ್ಟೂ ಅವರಲ್ಲಿ ಅಂಥ ಶ್ರದ್ಧೆಯು ಬೆಳೆಯುತ್ತದೆ. ಈಗ ಜ್ಯೋತಿರ್ವಿಜ್ಞಾನವು ಎಷ್ಟು ಬೆಳೆದಿದೆಯೆಂದರೆ ಆಕಾಶದ ಅನೇಕ ಚಮತ್ಕಾರಗಳನ್ನು ಸರಿಯಾಗಿಯೇ ಇಂದು ನಾವು ವಿವರಿಸಲು ಶಕ್ತರಾಗಿದ್ದೇವೆ. ನಮ್ಮ ಜ್ಞಾನವನ್ನು ಪ್ರಕಾಶಮಾನಗೊಳಿಸುವ ಈ ಬಾಗಿಲನ್ನು ಇನ್ನು ಮುಂದೆ ಸಹ ಮುಚ್ಚಗೊಡುವುದು ಒಳ್ಳೆಯದಲ್ಲ. ನಮ್ಮ ಜೋಯಿಸರಿಗೆ ಗ್ರಹಣಕಾಲವನ್ನು ಬಹಳ ಮುಂಚೆಯೇ ಹೇಳುವ ಜ್ಞಾನವಿದೆ ಎಂಬುದರಿಂದ ಗ್ರಹಗಳ ಚಲನೆಯ ವಿಷಯವು ಹಿಂದುಗಳಿಗೆ ಪ್ರಾಚೀನ ಕಾಲದಲ್ಲಿ ಸಹ ಗೊತ್ತಿತ್ತೆಂದು ಹೇಳಲಾಗದು. ಗಣಿತ ಸೂತ್ರಗಳ ಸಹಾಯದಿಂದ ಜ್ಯೋತಿರ್ವಿಜ್ಞಾನವು ಗ್ರಹಣಗಳ ಸಮಸ್ಯೆಯನ್ನು ಅರ್ಥೈಸುವುದಕ್ಕೆ ಬಹಳ ಮುಂಚೆಯೇ—ಇಂದಿಗೆ ನಾಲ್ಕು ಸಾವಿರ ವರ್ಷ ಪೂರ್ವದಲ್ಲಿ-ಬೆಬಿಲೋನಿಯದ ಚಾಲ್ಡೀನರು ನಿರಂತರ ನಿರೀಕ್ಷಣೆಯ ಫಲಿತಾಂಶ ರೂಪದಲ್ಲಿ ಪ್ರತಿ ೧೮ ವರ್ಷ ಮತ್ತು ೧೧ ದಿನಗಳಿಗೆ ಗ್ರಹಣಗಳು ಮರಳಿ ಘಟಿಸುತ್ತವೆ ಎಂದು ಕಂಡುಕೊಂಡಿದ್ದರು. ಈ ಸಿದ್ಧಾಂತವನ್ನು ಯಾಂತ್ರಿಕವಾಗಿ ಅವರು ಅನುಸರಿಸುತ್ತಿದ್ದರು. ಆಗಿನ ಕಾಲದಲ್ಲಿ ಗ್ರಹಗಳ ಚಲನೆಯ ಕುರಿತು ಎಷ್ಟು ಅಜ್ಞಾನವಿದ್ದಿತೆಂಬುದನ್ನು ವಿವರಿಸುವುದಕ್ಕಿಂತ ಊಹಿಸುವುದೇ ಮೇಲು.

* *

ಈ ಪತ್ರಗಳ ಮೇಲಿಂದ ನಾವು ಹೀಗೆ ತೀರ್ಮಾನಿಸಬಹುದು: ಗ್ರಹಣಗಳು ವಿಷಾಕ್ತ ಕಿರಣಗಳನ್ನು ಹುಟ್ಟಿಸುತ್ತವೆ. ಮತ್ತವು ಜೀವರಾಶಿಗಳ ಮೇಲೆ ದುಷ್ಪರಿಣಾಮ ಮಾಡುತ್ತವೆ. ಇವುಗಳಿಂದ ದೂರವಾಗಲು ಉಪವಾಸ, ಜಪತಪ, ಮತ್ತು ಸ್ನಾನಗಳು ಪ್ರಯೋಜಕವಾಗಿವೆ. ಪ್ರಾಚೀನ ಕಾಲದಲ್ಲಿ ಜನರು ಈ ಮಹತ್ವವನ್ನು ತಿಳಿದಿಲ್ಲದಿರಬಹುದು; ಆದರೆ ಪ್ರಜ್ಞಾಶೀಲರೆನಿಸಿದ, ಜ್ಞಾನಿಗಳಾದ ಋಷಿಮುನಿಗಳು ಈ ತಿಳಿವಳಿಕೆಯನ್ನು ಸ್ಪಷ್ಟವಾಗಿ ಹೊಂದಿದ್ದರು. ಗ್ರಹಣವೇತರಿಂದಾಗುತ್ತದೆಂಬ ವಿಷಯವು ಇಲ್ಲಿ ಗೌಣ—ಅದರ ದುಷ್ಪರಿಣಾಮಗಳೇ ಪ್ರಾಮುಖ್ಯವಾಗಿ ಗಮನಿಸಬೇಕಾದ ವಿಷಯ. ನಮ್ಮ ಶಾಲೆಗಳಲ್ಲಿ ಇದನ್ನೂ ತಿಳಿಸಬೇಕಲ್ಲದೆ ಭೂಮಿಯ ನೆರಳು ಚಂದ್ರನ ಮೇಲೆ ಬೀಳುವ ವಿಷಯವನ್ನಷ್ಟೇ ತಿಳಿಸಿದರೆ ಸಾಲದು.

Approved by the Text Book Committee of Madras, for non-detailed study in higher Forms (vide Page 7, Fort St. George Gazette, Part I—B dated 4—5—1955).

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯಿಂದ ಮಂಜೂರಾತಿ ಪಡೆದಿದೆ.

ಕಳೆದ ವರ್ಷ ಕೆಲವು ಖಾಸಗಿ ಹೈಸ್ಕೂಲುಗಳಲ್ಲಿ ಉಪಪಠ್ಯ ಪುಸ್ತಕವಾಗಿ ಉಪಯೋಗಿಸಲ್ಪಟ್ಟಿದೆ.

ಈ ವರ್ಷ ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು: ೧೫೮. ಬೆಲೆ: ರೂ. ೧—೪—೦.

ಪ್ರತಿಗಳಿಗೆ ಬರೆಯಿರಿ:

ನವಯುಗ ಪ್ರೆಸ್, ಉಡುಪಿ.

ಗೀತೆಯ ಕೈಗನ್ನಡಿ

0-12-0

ನವಯುಗ ಪ್ರೆಸ್, ಉಡುಪಿ.

ಕೆಲೆಂಡರಿನ ಸುಧಾರಣೆ ನಡೆದ ಕತೆ

(೨ನೇ ಪುಟದಿಂದ)

ತೀಯರು ವರ್ಷ, ಋತು, ತಿಂ ನಗಳಲ್ಲದೆ, ದಿನಗಳನ್ನು ತಿಥಿಯ ಲ್ಲಿ ಹಾಗು ಧ್ರುವ, ಘಳಿಗೆ, ಗೆಗಳ ರೂಪದಲ್ಲಿ ವಿಭ ಬಗೆಯನ್ನೂ ಇನ್ನು ಹೊತ್ತಿ ಂಡುಕೊಂಡಿದ್ದರು. ವರ್ಷದ ಯ ಹಿಂದೆ ಬೀಳದಂತೆ ಅಧಿಕ ತಂತ್ರವನ್ನು ಉಪಯೋಗಿಸು . ಈಗಿನ ಮಾರ್ಚ್ ೨೧ನೇ ತಾ ಸರಿಯಾಗುವ ದಿನವೇ ಅವರ ವರ್ಷ.

ಷ್ಟಸಿದ್ಧಾಂತ, ಪೈತಾಮಹ ಸಿ , ರೋಮಕ ಸಿದ್ಧಾಂತ, ಪೌಲಿಶ ತ ಎಂದು ಮುಂತಾಗಿ ಹಲವು ಸಿ ಗಳನ್ನು ಭಾರತದಲ್ಲಿ ಆಗ ಕಾಣ ಾಗಿದ್ದಿತು. ಕೊನೆಯವೆರಡು ಪಾ ಪ್ರಭಾವದ ನಿದರ್ಶನವಾಗಿವೆ: ಶಕಾರಂಭದ ಹೊತ್ತಿಗೆ ಇಲ್ಲಿಗೆ ಾದ ಜ್ಯೋತಿರ್ವಿಜ್ಞಾನ ಪದ್ಧತಿಗ . ರೋಮಕ ಸಿದ್ಧಾಂತವು ಆರ್ಯ ರ್ಷಕ್ಕೆ ೩೬೫೧/೪ ದಿನಗಳೆಂದು ಹಾ ಕ್ಷಕ್ಕೆ ತೀರ ಸಮೀಪವೆನಿಸುವಂತೆ, ೩೬೫.೨೪೬೭ ದಿನಗಳೆಂದ ಕೂ ನ್ನುತ್ತದೆ. ಪೌಲಿಶ ಸಿದ್ಧಾಂತ ಯ ರನೆಂದು ಭಾರತೀಯರು ಕರೆಯು ಈಜಿಪ್ಟಿನ ಅಲೆಕ್ಝಾಂಡ್ರಿಯ ನಗ ಾಲಸನಿಂದ ಬಂದುದಾಗಿದೆ. ಉ , ವಾರಣಾಸಿ ಮತ್ತು ಅಲೆಕ್ಝಾಂ ಗಳ ಅಕ್ಷಾಂಶಕ್ಕೆ ಸಂಬಂಧವನ್ನು ಸ್ಥಾಂತವು ಒಂದೆಡೆ ಹೇಳುತ್ತದೆ.

ರ್ಯ ಸಿದ್ಧಾಂತವು ಶಾತವಾಹನ ಕೆಯ ಬಳಿಕ ವೇದಾಂಗ ಜ್ಯೋತಿ ಮೂಲೆಗುಂಪಾದಾಗ ಮೆರೆಯತೊ . ಈಗಲೂ ಅದು ಮಹತ್ವದ ಸ್ಥಾ ಪಡೆದಿದೆ; ಆದರೆ ಕಾಲಾನುಕಾಲ ನೇಕ ತಿದ್ದುಪಡಿಗಳಿಗದು ಒಳಗಾ ಕ್ರಿಸ್ತಶಕ ಹತ್ತನೇ ಶತಮಾನದಲ್ಲಿ ಮ್ಮಣಿ ಆರ್ಯಭಟ್ಟನು ಪ್ರತಿಪಾದಿ ರ್ಯ ಸಿದ್ಧಾಂತವು ಸಹ ಈಗ ಬ ಲ್ಲಿದೆ. ನಾಲ್ಕನೇ ಶತಮಾನದಲ್ಲಿ ಮಹತ್ವದ "ಆರ್ಯಭಟ್ಟೀಯಂ" ಜ್ಯೋತಿರ್ವಿಜ್ಞಾನ ವಿಷಯಕ ಗ್ರಂ ನ್ನು ಬರೆದ ಆರ್ಯಭಟ್ಟನ ಸೀಳಿಗೆ ಸವನೆಂದು ಹೇಳಲಾಗುತ್ತದೆ. ಕ್ರಿ ಏಳನೇ ಶತಮಾನದಲ್ಲಿದ್ದ ಬ್ರಹ್ಮ ನ ಬ್ರಹ್ಮ ಸಿದ್ಧಾಂತವೂ ಭಾಸ್ಕರಾ ರ್ಯನ ಸಿದ್ಧಾಂತ ಶಿರೋಮಣಿಯೂ ಗೂ ಪ್ರಚಾರದಲ್ಲಿವೆ. ಆದರೆ ಇವಾವು ಸಂದೇಹಾತೀತವಾಗಿ ಉಳಿದಿಲ್ಲವೆಂ ೀ ಅವುಗಳಲ್ಲಿನ ದೋಷ.

ಭಾರತವು ಬೇರೆ ಬೇರೆ ರಾಜರ ಆಶ್ರಯ ಪಡೆದ ಜೋಯಿಸರು ತಾವಾಗಿಯೇ ತೊಡಗಿಸಿದ ಭಿನ್ನ ಶಕಗಳ ಗಣನೆಗೂ ಹೆಸರಾಗಿದೆ. ಸಾಮಾನ್ಯವಾಗಿ ಶಾಲಿವಾಹನ ಶಕವು ಅನುಸರಿಸಲ್ಪಡುತ್ತಿದ್ದರೂ ಸಹ ವಿಕ್ರಮ ಶಕ ಮತ್ತಿತರ ಲೆಕ್ಕಗಳೂ ಪ್ರಚಾರದಲ್ಲಿವೆ. ಪ್ರಾಯಶಃ ಈ ಗೊಂದಲ ಮತ್ತು ಗದ್ದಲದ ವಾತಾವರಣವನ್ನು ಓದುವಾದರೂ ತಿಳಿಗೊಳಿಸುವುದಕ್ಕಾಗಿಯೇ ಕಲಿಯುಗ ವರ್ಷ ಸಂಖ್ಯೆಯನ್ನು ಹೇಳಲು ನಮ್ಮಲ್ಲಿಯ ಜೋಯಿಸರು ಪ್ರಾರಂಭಿಸಿದರೆಂದು ಕಾಣುತ್ತದೆ. ಈ ಕಲಿಯುಗವು (ಲೌಕಿಕ ಶಕವೆಂದು ಇದರ ಸಾಮಾನ್ಯ ಹೆಸರು) ಹಸ್ತಿನಾಪುರದ ಸಿಂಹಾಸನವನ್ನು ಯುಧಿಷ್ಠಿರನು ಏರಿದ ೨೭ನೇ ವರ್ಷದಂದು (ಕ್ರಿಸ್ತಪೂರ್ವ ೩೧೦೨) ಪ್ರಾರಂಭವಾಗುತ್ತದೆ.

ಕೆಲವು ಕೃತಿಗಳಲ್ಲಿ ವರ್ಷಗಳನ್ನು ಲೆಕ್ಕಿಸಲು ಕುತೂಹಲದಾಯಕವಾದ ಪದ್ಧತಿಯೊಂದನ್ನು ಹೇಳಲಾಗಿದೆ. ಯುಧಿಷ್ಠಿರನು ಸಿಂಹಾಸನವನ್ನೇರುವಾಗ ಸಪ್ತರ್ಷಿ ಮಂಡಲವು ಕೃತ್ತಿಕಾನಕ್ಷತ್ರದಲ್ಲಿತ್ತೆಂದು ಸಾಮಾನ್ಯ ವಿಶ್ವಾಸ. ಸಪ್ತರ್ಷಿ ಮಂಡಲವು ೨೭ ನಕ್ಷತ್ರಗಳ ಗುಂಪನ್ನು ದಾಟಿ ಹೋಗಿ ಪುನಃ ಕೃತ್ತಿಕಾ ನಕ್ಷತ್ರದ ಸಂಸರ್ಗದಲ್ಲಿ ಬರಬೇಕಾದರೆ ಸರಿಯಾಗಿ ೧೦೦ ವರ್ಷಗಳ ಅವಧಿಯನ್ನು ತೆಗೆದುಕೊಳ್ಳುತ್ತದೆ. ಸುಮಾರು ೨೭೦೦ ವರ್ಷಗಳ ವರೆಗೆ ಈ ಗಣನೆಯೇ ಲೌಕಿಕ ಶಕವೆಂಬ ಹೆಸರಿನಿಂದ ರೂಢಿಯಲ್ಲಿತ್ತೆಂದು ನಂಬಲು ಆಧಾರಗಳಿವೆ. ಆದರೆ, ಮುಂದೆ ಈ ಪದ್ಧತಿ ಉಳಿಯಲಿಲ್ಲ.

ವೈದಿಕ ಆರ್ಯರಂತೆ ಐಗುಪ್ತರು ಸಹ ಚಾಂದ್ರಮಾನ ಪಂಚಾಂಗವನ್ನು ಅನುಸರಿಸಲು ತಮ್ಮ ನಾಗರಿಕತೆಯ ಮೊದಲಲ್ಲಿ (ಕ್ರಿಸ್ತ ಪೂರ್ವ ೪೫೦೦) ಕಲಿತಿದ್ದರು. ಅವರು ಚಂದ್ರನ ಚಲನೆಯಂತೆ ತಮ್ಮ ವರ್ಷಗಳನ್ನು ಹೊಂದಿಸಿಕೊಳ್ಳುತ್ತಿದ್ದರು. ಮೂವತ್ತು ದಿನಗಳ ತಿಂಗಳು, ಹನ್ನೆರಡು ತಿಂಗಳುಗಳ ವರ್ಷಗಳನ್ನು ಅವರು ಲೆಕ್ಕಿಸುತ್ತಿದ್ದರು.

ಆದರೆ ಬಹಳ ಬೇಗನೆ, ನ್ಯೈಲಿನಲ್ಲಿ ನೆರೆಯು ಪಂಚಾಂಗದಲ್ಲಿ ಲೆಕ್ಕ ಹಾಕಿದ ಹೊತ್ತಿಗೆ ಸರಿಯಾಗಿ ಬರುತ್ತಿಲ್ಲವೆಂದೂ ವರ್ಷಕ್ಕೆ ೩೬೦ ದಿನಗಳಲ್ಲ, ೩೬೫ ದಿನಗಳಿರುವುದೇ ಇದರ ಕಾರಣವೆಂದೂ ಕಂಡುಕೊಂಡರು ಆದುದರಿಂದ ಅವರು ಚಾಂದ್ರಮಾನ ವರ್ಷವನ್ನು ಬಿಟ್ಟು ಸೌರಮಾನ ವರ್ಷವನ್ನು ಪರಿಗಣಿಸಲು ತೊಡಗಿದರು. ವರ್ಷಕ್ಕೆ ಹೆಚ್ಚಿದ ಐದು ದಿನಗಳನ್ನು ಕೊನೆಯ ತಿಂಗಳಿಗೆ ಜೋಡಿಸಿ ಅವಧಿ ಬೆಳೆಸಿದರು. ಈ ಐದು ದಿನಗಳಲ್ಲಿ ರಾಷ್ಟ್ರೀಯ ಉತ್ಸವವನ್ನು ಆಚರಿಸುತ್ತಿದ್ದರು.

ಬೇಬಿಲೋನಿಯ, ಮೆಸೊಪೊಟೇಮಿಯ ಮತ್ತು ಸೀರಿಯಗಳಲ್ಲಿ ಕ್ರಿಸ್ತಪೂರ್ವ ೮ನೇ ಶತಮಾನದಲ್ಲಿ ಆಳುತ್ತಿದ್ದ ಚಾಲ್ಡೀನರು ಪರಿಪೂರ್ಣಾವಸ್ಥೆಯನ್ನುಮುಟ್ಟಿದ ಪಂಚಾಂಗವನ್ನು ಸಿದ್ಧಗೊಳಿಸಿದರು. ಕಾಲಕ್ಕೆ ಸರಿಯಾಗಿ ಮಳೆಯಾಗಲೀ ನೆರೆಯಾಗಲೀ ಬರುವ ಅನುಭವ ಅವರಿಗಿರಲಿಲ್ಲ. ಆದುದರಿಂದ ಅವರು ಕಾಲದ ಅಳತೆಗೆ ಬೇರೆಯೇ ವಿಧಾನವನ್ನು ಅನುಸರಿಸಿದರು. ಒಂದು ಸ್ತಂಭವನ್ನು ಭೂಮಿಯಲ್ಲಿ ನೆಟ್ಟು, ಅದರ ನೆರಳಿನ ಮೇಲಿಂದ ಅವರು ಕಾಲಗಣನೆ ಮಾಡಹತ್ತಿದರು.

ಬೇರೆ ಬೇರೆ ಗ್ರಹಗಳ ಚಲನೆಯನ್ನೂ ಅವರು ಗೊತ್ತುಹಚ್ಚಿದರು; ಮತ್ತು ಆ ಆಧಾರದ ಮೇಲೆ ಅವರು ತಿಂಗಳುಗಳನ್ನೂ ದಿನಗಳು ಹೆಸರಿಸಿದರು. ಮಾತ್ರವಲ್ಲದೆ, ಏಳು ದಿನಗಳ ಒಂದು ವಾರವನ್ನು ಸಹ ಪ್ರಾರಂಭಿಸಿದರು. ಬೆಬಿಲೋನಿಯದ ಪಂಚಾಂಗಗಳಲ್ಲಿ ಗ್ರಹಗಳನ್ನು ಹೆಸರಿಸಲಾದ ರೀತಿಯನ್ನೆ ಹಿಂದಿನಿಂದ ಭಾರತೀಯ ಜೋಯಿಸರು ಅನುಸರಿಸಿದರು. ಗ್ರಹಗಳಿಗೆ ಸಂಸ್ಕೃತ ಹೆಸರುಗಳನ್ನಿಡಲಾಯಿತೆಂಬುದಿಷ್ಟೆ ವ್ಯತ್ಯಾಸ.

ಐಗುಪ್ತರ ಸೌರಮಾನ ವರ್ಷವನ್ನು ಹಿಂದಿನಿಂದ ಗ್ರೀಕರೂ ರೋಮನರೂ ಅಂಗೀಕರಿಸಿದರು. ಈ ವರ್ಷದಲ್ಲಿ ಆರು ತಾಸಿನಷ್ಟು ಕಾಲವು ಲೋಪವಾಗಿದ್ದ ದೆಸೆಯಿಂದ ಪಶ್ಚಿಮ ಜಗತ್ತಿನ ಅನೇಕ ಐತಿಹಾಸಿಕ ಘಟನೆಗಳ ಮೇಲೆ ಇದರ ಅಗಾಧ ಪರಿಣಾಮವು ವ್ಯಕ್ತವಾಯಿತು. ರೋಮನರು ಬಹಳಪೂರ್ವದಲ್ಲಿಹತ್ತುತಿಂಗಳುಗಳುಳ್ಳ ೩೦೪ ದಿನಗಳ ವರ್ಷವನ್ನು ಅನುಸರಿಸುತ್ತಿದ್ದರು. ಇದು ಈಗಿನ ಮಾರ್ಚ್ ತಿಂಗಳಲ್ಲಿ ತೊಡಗಿ ದಶಂಬರದಲ್ಲಿ ಮುಗಿಯುತ್ತಿತ್ತೆಂದು ತಿಳಿದುಬರುತ್ತದೆ. ಚಳಿಗಾಲದ ಎರಡು ತಿಂಗಳುಗಳಲ್ಲಿ ಹಿಮವರ್ಷವಾಗುತ್ತಿರುವ ದೆಸೆಯಿಂದ ಕೃಷಿಕ್ಷೇತ್ರದ ಚಟುವಟಿಕೆಗಳು ನಡೆಯುತ್ತಿಲ್ಲ. ಆದುದರಿಂದ ಆ ಸಮಯವನ್ನೆ ಲೆಕ್ಕಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ.

ಆದರೆ ಮುಂದೆ ರೋಮನರಿಗೆ ಈ ೬೧ ದಿನಗಳನ್ನು ಲೋಪಿಸುವುದರಿಂದ ಅನೇಕ ತಪ್ಪುಗಳಾಗುತ್ತವೆಂಬುದು ಮನವರಿಕೆಯಾಯಿತು. ಕ್ರಿಸ್ತಪೂರ್ವ ೭೧೩ನೇ ವರ್ಷದ ಹೊತ್ತಿಗೆ ರೋಮಕರಾಜನಾದ ನ್ಯೂಮಾಪೋಂಪೀಲಿಯಸನು ವರ್ಷಕ್ಕೆ ಎರಡು ತಿಂಗಳುಗಳನ್ನು ಸೇರಿಸಿದನು; ಮತ್ತು ಒಂದು ವರ್ಷಕ್ಕೆ ೩೫೫ ದಿನಗಳೆಂದು ಸಾರಿದನು. ಇಕ್ಕಡೆಗಳಿಗೂ ಮುಖವುಳ್ಳ "ಜೇನಸ್" ಎಂಬ ನಾಮಾಭಿಧಾನದ ದೇವತೆಯ ಹೆಸರಿನಲ್ಲಿ ವರ್ಷದ ಪ್ರಾರಂಭ ಮಾಸವನ್ನು ಜನವರಿ ಎಂದಾತನು ಕರೆದನು. ಮಾರ್ಚಿಗೆ ಮುಂಚೆ ಫೆಬ್ರವರಿ ಎಂಬ ಹೊಸ ತಿಂಗಳನ್ನು ಸೇರಿಸಿದನು. ಆಯಾ ಕಾಲಕ್ಕೆ ಮತ್ತು ಋತುಮಾನದ ಲೆಕ್ಕಕ್ಕೆ ವ್ಯತ್ಯಾಸವಾಗದಂತೆ ಎರಡು–ಮೂರು ವರ್ಷಗಳಿಗೊಮ್ಮೆ ಅಧಿಕ ಮಾಸವನ್ನು (ಅದರ ಅವಧಿ ೨೨ ಅಥವಾ ೨೩ದಿನ,ಸೇರಿಸುವಸಂಪ್ರದಾಯವನ್ನೂ ಆತನು ಪ್ರಾರಂಭಿಸಿದನು. ಆದರೆ ಈ ಅಧಿಕ ಮಾಸದ ಸೇರ್ಪಡೆಯಲ್ಲಿ ಲೆಕ್ಕ ತಪ್ಪಲು ಹೆಚ್ಚಿನ ಅವಕಾಶವಿದ್ದ ದೆಸೆಯಿಂದ, ಈ ಗಣಿತ ನಿರುಪಯೋಗಿಯೆನಿಸಿತು.

ರೋಮಕ ರಾಜನಾದ ಜೂಲಿಯಸ್ ಸೀಜರನು ಐಗುಪ್ತವನ್ನು ಗೆದ್ದ ತರುವಾಯ ಕ್ರಿಸ್ತ ಪೂರ್ವ ೪೪ನೇ ವರ್ಷದಲ್ಲಿ ಒಂದು ವರ್ಷವನ್ನು ೩೬೫೧/೪ ದಿನಗಳುಳ್ಳದ್ದಾಗಿ ಪರಿಗಣಿಸಬೇಕೆಂಬ ಐಗುಪ್ತ ಜೋಯಿಸನೊಬ್ಬನ ಸಲಹೆಯನ್ನು ಸ್ವೀಕರಿಸಿದನು. ಇದಕ್ಕಾಗಿ ಅಧಿಕ ಮಾಸದ ಲೆಕ್ಕದಲ್ಲಿ ಐಗುಪ್ತರ ಪದ್ಧತಿಯು ಅನುಸರಿಸಲ್ಪಟ್ಟಿತು. ಈತನೇ ಮಾರ್ಚಿಯ ಬಳಿಕದ ಐದನೇ ವರ್ಷವನ್ನು ಜೂಲಾಯಿ ಎಂದು ಪುನಃ ನಾಮಕರಣಗೈದನು. ಆಗೊಸ್ತಿನ್ ಎಂಬ ಇನ್ನೊಬ್ಬ ರೋಮನ ರಾಜನು ಜೂಲಾಯಿಯ ಬಳಿಕದ ತಿಂಗಳನ್ನು ಆಗೋಸ್ತು ಎಂದು ಹೆಸರಿಸಿದನು. ಇವರಿಬ್ಬರೂ ಸರ್ವಾಧಿಕಾರಿಗಳನ್ನು ಸಂತೋಷಪಡಿಸಲು ಫೆಬ್ರವರಿ ತಿಂಗಳಿಂದ

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ. ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್ಸ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, **UDIPI**, S. KANARA.

ಕುಮಾರಿ ಬಿಳ್ಳಿಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466–N/50 ತಾ. 12–12–50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಎರಡು ದಿನಗಳನ್ನು ತೆಗೆದು ಜುಲಾಯಿ ಮತ್ತು ಆಗೋಸ್ತಿಗೆ ೩೧ ದಿನಗಳೆಂದು ಸಾರಲಾಯಿತು. ಕ್ರೈಸ್ತ ಸಮಾಜವು ರೋಮನರ ಸಾಮ್ರಾಜ್ಯಕಾಲದಲ್ಲಿ ಇದೇ ಸುಧಾರಿತ ವರ್ಷವನ್ನು ಮನ್ನಿಸಿತು.

ರೋಮನರ ಈ ಕೆಲಂಡರಿನ ದೆಸೆಯಿಂದ ದೀರ್ಘಕಾಲದ ಬಳಿಕ, ಕಾಲಮಾನದಲ್ಲಿ ವ್ಯತ್ಯಾಸವುಂಟಾಗುತ್ತದೆಂದು ವ್ಯಕ್ತವಾಯಿತು. ಕ್ರಿಸ್ತಶಕ ೩೨೫ರಂದು ದಶಂಬರದ ೨೫ನೇ ತಾರೀಕು ಬಿದ್ದ ಕ್ರೈಸ್ತರ ಪರ್ವದಿನವೊಂದು ಕ್ರಿಸ್ತಶಕ ೧೫೮೨ನೇ ವರ್ಷದ ಹೊತ್ತಿಗೆ ಹತ್ತು ದಿನಗಳಷ್ಟು ಹಿಂದೆ ಹೋಯಿತು. ಇದನ್ನು ಕಂಡ ಆಗಿನ ಪೋಪ್ ಗುರುಗಳು (ಗ್ರೆಗರಿ XIII) ಒಂದು ಆಜ್ಞೆಯನ್ನು ವಿಧಿಸಿ, ೧೫೮೨ನೇ ವರ್ಷದ ಅಕ್ಟೋಬರ ೫ನೇ ಶುಕ್ರವಾರವನ್ನು ಅಕ್ಟೋಬರ ೧೫ನೇ ಶುಕ್ರವಾರವೆಂದು ಪರಿಗಣಿಸಬೇಕಾಗಿ ಸಾರಿದರು; ಅಲ್ಲದೆ ೪೦೦ರಿಂದ ಭಾಗಿಸಲ್ಪಡದ ಯಾವುದೇ ವರ್ಷಕ್ಕೆ ಅಧಿಕ ಮಾಸವಿರಕೂಡದೆಂದೂ ಘೋಷಿಸಿದರು. ಇದರಿಂದಾಗಿ ೩೩೦೦ ವರ್ಷಗಳಿಗೊಮ್ಮೆ ಮಾತ್ರ ಒಂದು ದಿನಗಳಷ್ಟು ಕಾಲವು ಕೆಲಂಡರು ಪ್ರಕಾರ ಹಿಂದೆ ಬೀಳುತ್ತದೆ; ಇಷ್ಟು ಮಟ್ಟಿಗೆ ತಪ್ಪು ಸುಧಾರಿಸಲ್ಪಟ್ಟಿತು. ಈ ಕೆಲಂಡರನ್ನೆ ನಾವೀಗ ಎಲ್ಲರೂ ನಿತ್ಯ ವ್ಯವಹಾರದಲ್ಲಿ ಉಪಯೋಗಿಸುತ್ತಿದ್ದೇವೆ. ೧೮ನೇ ಶತಮಾನದಲ್ಲಿ ಮೊದಲ ಬಾರಿಗೆ ಈ ಕೆಲಂಡರನ್ನು ಭಾರತದಲ್ಲಿ ಉಪಯೋಗಕ್ಕೆ ತರಲಾಯಿತು.

ಈ ಗ್ರೆಗೋರಿಯನ್ ಕೆಲಂಡರಿನಲ್ಲಿ ಸಹ ಅನೇಕ ಲೋಪದೋಷಗಳಿವೆ; ಕೆಲವು ಗೊಂದಲಗಳಿಗೆ ಅದು ಅವಕಾಶವಿತ್ತಿದೆ. ತಿಂಗಳುಗಳಲ್ಲಿ ಒಂದಕ್ಕೆ ೨೮ದಿನ, ಕೆಲವಕ್ಕೆ ೩೦ದಿನ, ಬೇರೆ ಕೆಲವಕ್ಕೆ ೩೧ದಿನ ಹೀಗೆ ವ್ಯತ್ಯಾಸವಿದೆ ಅಲ್ಲದೆ ಈ ತಿಂಗಳುಗಳು ಒಂದೊಂದೂ ಬೇರೆ ಬೇರೆ ವಾರದ ದಿನಗಳಲ್ಲಿ ಪ್ರಾರಂಭವಾಗುತ್ತವೆ. ಕ್ರೈಸ್ತಜಗತ್ತಿನಲ್ಲಿ ಸಹ ಈಸ್ಟರ್ ಮುಂತಾದ ಕೆಲವು ಹಬ್ಬಗಳ ಮುಹೂರ್ತವನ್ನು ಗೊತ್ತುಪಡಿಸುವಾಗ ಕೆಲಂಡರಿನ ಗಣನೆಯೊಂದೇ ಸಾಕಾಗುವುದಿಲ್ಲವೆಂಬುದು ಅನುಭವಸಿದ್ಧವಾಗಿದೆ. ಆದುದರಿಂದ ಭಾರತಸರಕಾರವು ಈ ಕೆಲಂಡರಿನ ಸುಧಾರಣೆ ನಡೆಯಬೇಕೆಂದು ಸಲಹೆ ಮಾಡಿದೆ. ಭಾರತಸರಕಾರದ ಅಭಿಪ್ರಾಯಾನುಸಾರ, ಜನವರಿ, ಎಪ್ರಿಲ್, ಜುಲಾಯಿ ಮತ್ತು ಅಕ್ಟೋಬರ ತಿಂಗಳುಗಳ ಪ್ರಾರಂಭ ದಿನವನ್ನು ಆದಿತ್ಯವಾರವೆಂದೂ ತಿಂಗಳಿಗೆ ೩೧ ದಿನವೆಂದೂ ನಿಗದಿ ಮಾಡಬೇಕು. ಫೆಬ್ರವರಿ, ಮೇ, ಆಗೋಸ್ತು ಮತ್ತು ನವಂಬರ ತಿಂಗಳುಗಳ ಪ್ರಾರಂಭ ದಿನವನ್ನು ಬುಧವಾರವೆಂದೂ ತಿಂಗಳಿಗೆ ೩೦ ದಿನವೆಂದೂ ನಿಗದಿ ಮಾಡಬೇಕು. ಮಾರ್ಚ್, ಜೂನ್, ಸಪ್ಟಂಬರ ಮತ್ತು ದಶಂಬರ ತಿಂಗಳುಗಳ ಪ್ರಾರಂಭ ದಿನವನ್ನು ಶುಕ್ರವಾರವೆಂದೂ ತಿಂಗಳಿಗೆ ೩೦ ದಿನವೆಂದೂ ಪರಿಗಣಿಸಬೇಕು. ದಶಂಬರದ ಕೊನೆಯ ಅಂದರೆ ೩೧ನೇ ದಿನವನ್ನು ಜಾಗತಿಕ ರಜಾದಿನವೆಂದು ಘೋಷಿಸಬೇಕು; ಅದಕ್ಕೆ ಪ್ರತ್ಯೇಕ ಹೆಸರಿಲ್ಲ.

ಇದರಿಂದ ತಿಂಗಳುಗಳು ಇಂಥ ದಿನದಲ್ಲಿಯೇ ಪ್ರಾರಂಭವಾಗುತ್ತವೆಂದು ಮೊದಲೇ ತಿಳಿದಿರುತ್ತದೆ; ಮತ್ತು ರಜಾದಿನಗಳಲ್ಲಿ ತಿಂಗಳು ಪ್ರಾರಂಭವಾಗುವ ಪ್ರಮೇಯ ತಪ್ಪುತ್ತದೆ. ಎಲ್ಲ ಸರಕಾರಗಳೂ ಈ ಕೆಲಂಡರನ್ನು ಸ್ವೀಕರಿಸುವ ಸಂಭವ ಹೆಚ್ಚಿರುವುದರಿಂದ, ಸರಕಾರಗಳು ತಮ್ಮ ಕೆಲಸವನ್ನು ಪರಸ್ಪರ ಸಮನ್ವಯಗೊಳಿಸಿಕೊಂಡು ಹೋಗಬಹುದು. ಇಲ್ಲಿ ಒಂದು ಪ್ರಸಂಗವನ್ನು ನೆನೆದರೆ ತಪ್ಪಾಗಲಾರದು: ಈ ವರ್ಷದ ಜನವರಿ ೧ನೇ ತಾರೀಕು ಆದಿತ್ಯವಾರ ಪ್ರಾರಂಭವಾಯಿತು; ಇಂಗ್ಲೆಂಡಿನ ರಾಣಿಯು ಹೊಸ ವರ್ಷದ ಸಂದೇಶವನ್ನು ಹೇಳುವ ಸಂಪ್ರದಾಯದಂತೆ ತನ್ನ ಪೂರ್ವಸಿದ್ಧ ಭಾಷಣವನ್ನು ಎಲ್ಲ ಪತ್ರಿಕೆಗಳಿಗೂ ಕಳಿಸಿಕೊಟ್ಟಿದ್ದಳು. ಆದರೆ ಆದಿತ್ಯವಾರಇಂಥಸಂದೇಶವನ್ನೋದುವ ಸಂಪ್ರದಾಯವಿರಲಿಲ್ಲ: ಆದುದರಿಂದ ಪತ್ರಿಕಾ ಸಂಪಾದಕರೊಡನೆ ಸೋಮವಾರ ೨ನೇ ತಾರೀಕಿಗೆ ಮುಂಚೆ ಈ ಸಂದೇಶ ಪ್ರಕಟಿಸಬಾರದೆಂದು ಮುಂದಾಗಿ ಕೇಳಿಕೊಳ್ಳಲಾಯಿತು. ಆದರೆ ಲಂಡನಿನ ಒಂದು ಪತ್ರಿಕೆ ಮಾತ್ರ ಈ ಸಂದೇಶವನ್ನು ಆದಿತ್ಯವಾರವೇ ಪ್ರಕಟಿಸಿತು. "ಇಲ್ಲಿ ನಿಮಗೊಂದು ಹೊಸ ಸುದ್ದಿ ಇದೆ—ಆದರೆ ನೀವಿದನ್ನು ನಾಳೆ ಓದಬೇಕಾಗಿದೆ" ಎಂದದು ಬರೆಯಿತು. ಸಂಪಾದಕರ ವಿವರಣೆ ಕೇಳಿದಾಗ "ನಮ್ಮದು ಪತ್ರಿಕಾ ಧರ್ಮ: ಇದರಂತೆ ದೊರೆತ ಸುದ್ದಿಯನ್ನು ಆದಷ್ಟು ಬೇಗ ಜನರಿಗೆ ತಿಳಿಸುವುದೇ ನಮ್ಮ ಕರ್ತವ್ಯ" ಎಂಬ ಉತ್ತರ ಬಂತು!

(೩ನೇ ಪುಟದಿಂದ)

ಇದೇ ಬಗೆಯ ಪ್ರಶ್ನೆಯನ್ನು ಮೊನ್ನೆ ಬಿಳಿಯರೇ ಒಬ್ಬರು ದಕ್ಷಿಣ ಆಫ್ರಿಕದ ಪಾರ್ಲಿಮೆಂಟಿನಲ್ಲಿ ಹಾಕಿದರು. ಅವರು ಕ್ರೈಸ್ತರ ಪವಿತ್ರ ಗ್ರಂಥವಾದ ಬೈಬಲಿನ ವಾಕ್ಯವನ್ನು ಉಲ್ಲೇಖಿಸುತ್ತಾ ಮಾನವಜಾತಿಯಲ್ಲಿ ಭೇದಭಾವನೆ ಸಲ್ಲದೆಂದು ಪ್ರತಿಪಾದಿಸಿದರು. ಪಾರ್ಲಿಮೆಂಟಿನಲ್ಲಿ ಬೈಬಲನ್ನು ಓದಿ ಹೇಳುವುದು ಕ್ರಮಬದ್ಧವಲ್ಲವೆಂದು, ಸಭಾಧ್ಯಕ್ಷರು ಈ ಸದಸ್ಯರ ವರ್ತನೆಯ ಕುರಿತಿದ್ದ ಆಕ್ಷೇಪವನ್ನು ವಿಚಾರಿಸಿ ತೀರ್ಮಾನವಿತ್ತರು. ತಾವು ನಂಬಿಕೊಂಡಿರುವೆವೆಂದು ಹೇಳುವ ಧರ್ಮದ ಸಂದೇಶವೇನು, ಪರಿಪಾಲಿಸಿಕೊಂಡು ಬರುವ ರೂಢಿಯ ಮರ್ಮವೇನು, ಧರ್ಮಕ್ಕೂ ಈ ರೂಢಿಗೂ ಇರುವ ಹೋಲಿಕೆಯೇನು ಎಂದು ವಿಚಾರಿಸುವಷ್ಟು ಔದಾರ್ಯವಾಗಲೀ ವಿವೇಕವಾಗಲೀ ಇದ್ದವರು ಇಂಥ ಗಾಢ ತಪ್ಪುಗಳನ್ನು ಮಾಡುವುದು ಅಸಂಭವ.

ರಾಷ್ಟ್ರೀಯ ಪ್ರತಿನಿಧಿ ಸಭೆಯು ತಾನು ದಕ್ಷಿಣ ಆಫ್ರಿಕದ ಬಿಳಿಯರನ್ನು ಮಾತ್ರ ಪ್ರತಿನಿಧಿಸುತ್ತಿದ್ದೇನೆಂದು ಹೇಳುತ್ತಿಲ್ಲ; ಅದು ಬಂಟುಗಳನ್ನೂ ಪ್ರತಿನಿಧಿಸುತ್ತದೆ. ಒಂದು ಕೋಟಿ ಬಂಟುಗಳ ಪ್ರತಿನಿಧಿಗಳಾಗಿ ಏಳು ಬಿಳಿ ಸದಸ್ಯರನ್ನು ಹೆಸರಿಸಲಾಗಿದೆ! ಎಂಥ ಅಸಂಬದ್ಧ! ಬಂಟುಗಳ ಸ್ಥಿತಿಯನ್ನು ಸುಧಾರಿಸಲು ಏನೇನೂ ಪ್ರಯತ್ನವನ್ನು ಸರಕಾರ ಕೈಗೊಳ್ಳುತ್ತಿಲ್ಲ. ಬಂಟುಗಳಲ್ಲಿ ಕೇವಲ ಏಳು ಮಂದಿ ವಕೀಲರಾಗಿದ್ದಾರೆ ಮತ್ತು ೩೦ ಮಂದಿ ಮಾತ್ರ ವೈದ್ಯರಾಗಿದ್ದಾರೆ ಎಂಬ ಸತ್ಯಸಂಗತಿಯ ಮೇಲಿಂದಲೇ ಸ್ಥಳೀಯ ಜನರಿಗೆ (ಕರಿಯರಿಗೆ) ಈ ಅಲ್ಪಸಂಖ್ಯಾಕ ಬಿಳಿಯರ "ರಾಷ್ಟ್ರೀಯ" ಸರಕಾರವು ನೀಡುತ್ತಿರುವ ಸೌಲಭ್ಯಗಳ ಸ್ಪಷ್ಟ ಕಲ್ಪನೆ ನಮಗಾದೀತು.

ಸಾಮಾನ್ಯವಾಗಿ ಕ್ರೈಸ್ತರಾದಿಯಾಗಿ ಎಲ್ಲ ಮಾನವಾರಾಧಕರೂ ವರ್ಣಭೇದ ಧೋರಣೆಯನ್ನು ಉಗ್ರವಾಗಿ ಟೀಕಿಸುತ್ತಿದ್ದಾರೆ; ಬಲವಾಗಿ ಖಂಡಿಸುತ್ತಿದ್ದಾರೆ. ಆದರೆ ರಾಜಕೀಯಕ್ಕೂ ಮಾನವತೆಗೂ ಎಂಟಾದರೂ ಸಂಬಂಧ ಅನ್ಯೋನ್ಯವಾಗಿತ್ತೇ ಎಂಬ ಸಂಶಯವನ್ನು—ಇತರ ವಿಷಯಗಳಂತೆ-ವರ್ಣಭೇದ ಧೋರಣೆ ಸಹ ಸುಸ್ಪಷ್ಟೀಕರಿಸುತ್ತಿದೆ. ರಾಜಕೀಯವಾಗಿ ತಮ್ಮ ಅಧಿಕಾರವೇ ಆಚಂದ್ರಾರ್ಕ ಉಳಿಯಬೇಕೆನ್ನುವ ಬಿಳಿತೊಗಲಿನ ವಲಸೆಗಾರರು ನೆಲದ ಮಕ್ಕಳಾದ ಆಫ್ರಿಕನ್ನರನ್ನು ನಾಗರಿಕ ಅಧಿಕಾರಗಳಿಂದಲೂ ವ್ಯಕ್ತಿ ಸ್ವಾತಂತ್ರ್ಯದಿಂದಲೂ ಬಾಹಿರಗೊಳಿಸಿ, ಬಿಳಿಯರ ಗುಲಾಮಗಿರಿಗೆ ತಳ್ಳುವ ಕಾರ್ಯವನ್ನು ನಡೆಸಿದ್ದಾರೆ. ಒಳ್ಳೆಯ ಪರಿಶ್ರಮಿಗಳಾದ ಕರಿಯರು ಬಿಳಿಯರೊಡನೆ ಸೇರಿ ಬುದ್ಧಿವಂತರಾದಾರೆಂದೋ ಏನೋ—ಕಾರ್ಮಿಕರಂಗದಲ್ಲಿ ಸಹ ಪ್ರತ್ಯೇಕತೆಯ ಸಿದ್ಧಾಂತವನ್ನು ಸರಕಾರ ರೂಢಿಸಲು ಹವಣಿಸಿದೆ. ಟ್ರೇಡ್ ಯೂನಿಯನ್ ಸಂಘಗಳು ಬಿಳಿಯರಿಗೆ ಬೇರೆ, ಕರಿಯರಿಗೆ ಬೇರೆಯಾಗುತ್ತವೆ; ಅಲ್ಲದೆ ಕೆಲವು ವಿಶಿಷ್ಟ ಕೆಲಸಗಳನ್ನು ಪೂರ್ವನಿಶ್ಚಿತ ವರ್ಣದವರಿಗೆಯೇ ಕೊಡುವ ಆಸೆ ಸರಕಾರದ್ದಾಗಿದೆ.

ಎಲ್ಲಿ ತಿರುಗಾಡುತ್ತಿದ್ದರೂ ಕರಿಯನು ತನ್ನ ಗುರುತಿನ ಕಾರ್ಡನ್ನು ಹಿಡಿದುಕೊಂಡಿರಬೇಕು; ಹೀಗೆ ತನ್ನ ಮಾತೆಯ ಮಡಿಲಲ್ಲಿಯೇ ಆತನು ದಾಸನಾಗಿದ್ದಾನೆ. ಪ್ರತ್ಯೇಕ ವಸತಿಯ ಏರ್ಪಾಡುಗಳನ್ನು ಮಾಡುವುದರಲ್ಲಿ ಕೊಳಕು ವಸತಿಗಳ ನಿರ್ಮೂಲನೋದ್ದೇಶವಿದೆ ಎಂದು ಸರಕಾರ ಹೊರಜಗತ್ತಿಗೆ ಹೇಳುತ್ತದೆ: ಆದರೆ ಬಿಳಿಯರು ನೆಲಸಿರುವ ಸುಂದರ ನಗರಗಳಿಂದಲೇ ಕರಿಯರ ಉಚ್ಚಾಟನೆಯಾಗಿ, ಆ ಕರಿಯರಿಗಷ್ಟೇ ಹೊಸ ವಸತಿ ಕೇಂದ್ರಗಳು ಸಿದ್ಧವಾಗುತ್ತವೆ; ಹೊರತು ಕಿಟಿಕಿ ಬಾಗಿಲುಗಳಿಲ್ಲದೆ, ಸರಿಯಾದ ಮಾಡು ಸಹ ಇಲ್ಲದೆ ಹರಕುಮುರುಕಾಗಿ ಬಿದ್ದಿರುವ, ಕರಿಯರೇ ವಿಶೇಷವಾಗಿ ವಾಸಿಸುವ, ಸಣ್ಣ ಪಟ್ಟಣಗಳ ಕಡೆಗೆ ಸರಕಾರದ ಗಮನ ಹರಿದಿಲ್ಲ. ದಕ್ಷಿಣ ಆಫ್ರಿಕದಲ್ಲಿ ಹೀಗೂ ನಡೆದಿದೆ ನೋಡಿ!

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು
HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ಮಕ್ಕಳ ಮಗ್ಗಿಪುಸ್ತಕ
0—1—0

ರಖಂ ದರಗಳಿಗೆ ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

4 Edited, Printed & Published by K. H. Shetty, at the Navayuga press, Udipi S. India

Licensed to Post without Prepayment

ನವಯುಗ

ಸಂಪುಟ ೩೫ | VOL. 35

ಉಡುಪಿ, 21—6—1956

ಸಂಚಿಕೆ ೪೨ | NO. 42

ಜನಮತದ ದರ್ಶನ

ದಿವಂಗತ ವಲ್ಲಭಭಾಯಿ ಪಟೇಲರಷ್ಟೇ ದೃಢ ಸಂಕಲ್ಪ ಮತ್ತು ಸ್ಥಿರಾಭಿಪ್ರಾಯವುಳ್ಳ ಧುರೀಣರು— ನೆಹರೂರವರನ್ನು ಅವರ ವ್ಯಕ್ತಿತ್ವದ ಇತರ ವೈಶಿಷ್ಟ್ಯಗಳ ದೆಸೆಯಿಂದ ಹೊರತುಪಡಿಸಿದರೆ— ಭಾರತದಲ್ಲಿ ಇಬ್ಬರೇ ಸಿಗುತ್ತಾರೆ: ಮೊದಲನೆಯವರೇ ಶ್ರೀ ಸಿ. ರಾಜಗೋಪಾಲಾಚಾರಿ; ಎರಡನೆಯವರೇ ಶ್ರೀ ಮುರಾರ್ಜಿ ದೇಸಾಯಿ.

"ವಜ್ರಾದಪಿ ಕಠೋರಾಣಿ, ಮೃದೂನಿ ಕುಸುಮಾದಪಿ" ಎಂಬುದಾಗಿ ಭೀಮಸೇನನ ವಿಷಯದಲ್ಲಿ ಏನನ್ನು ಹೇಳಲಾಗುತ್ತದೋ ಆ ಮಾತು ಇವರಿಬ್ಬರೂ ಧುರೀಣರಿಗೆ ಚೆನ್ನಾಗಿ ಅನ್ವಯವಾಗುತ್ತದೆ. ಅವರು ಮಾತನಾಡುವಾಗ ತಾವು ಆಡುವ ಪ್ರತಿಯೊಂದೂ ಮಾತು ಸತ್ಯದರ್ಶನ ಮಾಡುವಂಥದು, ರಾಷ್ಟ್ರಕಲ್ಯಾಣ ಸಾಧಕವಾದುದು ಎಂಬ ಶ್ರೇಷ್ಠ ಪ್ರಜ್ಞೆಯಿದ್ದೇ ಅವರು ಮಾತನಾಡುತ್ತಾರೆ. ಆದುದರಿಂದ ಅವರ ಅಭಿಪ್ರಾಯವು ಸುಲಭದಲ್ಲಿ ಬದಲಾವಣೆಗೊಳಪಡುವುದಿಲ್ಲ.

ಅಭಿಪ್ರಾಯದಲ್ಲಿ ಪ್ರಾಮಾಣಿಕತೆಯೂ ಮತಭೇದಗಳುಂಟಾದಾಗ ಅದಕ್ಕೆ ಸಹ ಪ್ರಾಮಾಣಿಕ ತಳಹದಿಯೂ ಇರುವುದು ಪ್ರಜಾಪ್ರಭುತ್ವದ ಸಲ್ಲಕ್ಷಣಗಳಲ್ಲೊಂದು. ಧುರೀಣರಾಗಿ ಯಾರಿದ್ದಾರೋ ಅವರಲ್ಲಿ ಗಾಳಿಬಂದತ್ತ ಕೊಡೆ ತೂರುವ ಮನೋಭಾವ (ಅದನ್ನೇ ಚಿತ್ತಚಾಂಚಲ್ಯವೆಂದು ಕರೆಯಲಾಗುತ್ತದೆ) ಎಷ್ಟಕ್ಕೂ ಇರಕೂಡದು. ಅವರ ನಿರ್ಣಯಗಳು ಸಾಧುವಾಗಿರಬೇಕು, ನಿಜ. ಆದರೆ ಅವುಗಳು ಲಘುವಾಗಿರಕೂಡದು—ಶೀಘ್ರ ಬದಲಾವಣೆಗಳಿಗೆ ಒಳಪಡುವಷ್ಟು ಅವಿವೇಕತನದ ಫಲವೂ ಆಗಿರಲಾಗದು.

ರಾಜಾಜಿಯವರು ಕೆಲವು ದಿನಗಳ ಹಿಂದೆ ಧುರೀಣರಾದವರು ಜನಸಾಧಾರಣರಿಗೆ ಮಾರ್ಗದರ್ಶನವನ್ನು ಮಾಡಲು ಹೆದರಬಾರದೆಂದು ಹೇಳಿದ್ದರು; ತಮ್ಮ ನಂಬಿಕೆ ಮತ್ತು ವಿಶ್ವಾಸವನ್ನು ಧೈರ್ಯ, ಸಾಹಸಗಳಿಂದ ಜನರ ಮುಂದಿಡಲು ಧುರೀಣರು ಹಿಂಜರಿಯಲಾಗದೆಂದೂ ಅವರು ಹೇಳಿದ್ದರು. ದಕ್ಷಿಣ ಪ್ರದೇಶದ ರಚನೆಯು ಒಳ್ಳೆಯದೆಂಬುದು ಧುರೀಣರಲ್ಲಿ ಯಾರಿಗಾದರೂ ಅನಿಸಿದರೆ, ಅಂಥವರು, ಜನಜಂಗುಳಿಯು ಇದಕ್ಕೆ ವಿರೋಧಾಭಿಪ್ರಾಯವನ್ನು ಹೊಂದಿದೆ ಎಂಬ ಕಾರಣಕ್ಕಾಗಿ ತಮ್ಮ ಪ್ರಾಮಾಣಿಕ ಅಭಿಮತವನ್ನು ಬಚ್ಚಿಡಲಾಗದು ಎಂದಿದ್ದರು ರಾಜಾಜಿ.

ಈಗ ಅಹಮ್ಮದಾಬಾದಿನಿಂದ ಬಂದ ಸುದ್ದಿಯು ಶ್ರೀ ಮುರಾರ್ಜಿ ದೇಸಾಯಿಯವರು ಸಹ ಇದೇ ಬಗೆಯ ನಿಲುಮೆಯನ್ನು ಹೊಂದಿದ್ದಾರೆಂದು ತಿಳಿಸುತ್ತದೆ. ರಾಜಕೀಯ ಶಾಸ್ತ್ರದ ಹೆರೋಲ್ಡ್ ಲಾಸ್ಕಿ ಮಂಡಳದ ಸದಸ್ಯರು ಕೇಳಿದ ಪ್ರಶ್ನೆಗಳಿಗೆ ಉತ್ತರವೀಯುತ್ತಾ ಅವರು ವಿವರಿಸಿದ ವಿಷಯಗಳು ಬಹಳ ಮನೋಜ್ಞವಾಗಿವೆ. ಪ್ರಜಾಪ್ರಭುತ್ವದ ನಿಜವಾದ ರಹಸ್ಯವನ್ನು ತಿಳಿಯಬಯಸುವವರಿಗೆ ಅವು ಕೈದೀವಿಗೆಯಾಗಿವೆ ಎನ್ನಬಹುದು.

ಜನಾಭಿಪ್ರಾಯವು ಸುಸ್ಪಷ್ಟರೀತಿಯಲ್ಲಿ ವ್ಯಕ್ತವಾದಾಗ ಅದಕ್ಕೆ ಮನ್ನಣೆಯನ್ನು ಕೊಟ್ಟು ಸ್ವೀಕರಿಸಬೇಕೇ ಬೇಡವೇ ಎಂದು ಅವರನ್ನು ಪ್ರಶ್ನಿಸಲಾಯಿತು. ಇದಕ್ಕೆ ಉತ್ತರ ರೂಪದಲ್ಲಿ ಶ್ರೀ ದೇಸಾಯಿಯವರು "ಸಾಮಾನ್ಯ ಜನಾಭಿಪ್ರಾಯಕ್ಕೂ ಜನಜಂಗುಳಿಯ ಅಭಿಪ್ರಾಯಕ್ಕೂ ವ್ಯತ್ಯಾಸವಿದೆ ಎಂಬುದನ್ನು ಮೊದಲು ನೆನಪಿಡಬೇಕು" ಎಂದರು.

ರಾಷ್ಟ್ರದ ಹಿತವು ಏತರಲ್ಲಿದೆ ಎಂಬುದರ ಸಂಪೂರ್ಣ ಪರಿಜ್ಞಾನವಿಲ್ಲದೆ ಕೇವಲ ಸ್ವಾರ್ಥ ಮತ್ತು ದುರುದ್ದೇಶಗಳಿಂದ ಜನಜಂಗುಳಿಯನ್ನು ಅಡ್ಡದಾರಿಗೊಯ್ದು ಮತಪ್ರದರ್ಶನ, ಸುದೀರ್ಘ ಮನವಿ, ಭಾಷಣ, ಗೊಂದಲಗಳಿಂದ "ಜನಮತದ ದರ್ಶನ" ಮಾಡಿಸಿವೆವೆಂದು ಹೇಳಿಕೊಳ್ಳುವ ಕುಹಕ ಧುರೀಣರು ನಮ್ಮಲ್ಲಿದ್ದಾರೆ. ಹೀಗೆ ವ್ಯಕ್ತವಾದ ಜನಜಂಗುಳಿಯ ಅಭಿಪ್ರಾಯವು ಎಂದಿಗೂ ಮನ್ನಣೆಗೆ ಪಾತ್ರವಲ್ಲ ಎಂಬುದಾಗಿ ಅವರು ಕಂಠೋಕ್ತವಾಗಿ ಸಾರಿದರು. ಜನಜಂಗುಳಿಯ ಈ ಬಗೆಯಿಂದ ಮಾಡಬಹುದಾದ ಒತ್ತಾಯಕ್ಕೆ ತಲೆಬಾಗುವುದೆಂದರೆ ಪ್ರಜಾಪ್ರಭುತ್ವದ ಸಿದ್ಧಾಂತಕ್ಕೆ ಕೊಡಲಿಯೇಟು ಕೊಟ್ಟಂತೆ ಎಂದರು.

ದೇಶದ ಹಿತದೃಷ್ಟಿಯಿಂದ ಎಷ್ಟೋ ವೇಳೆ ತೀರ ಅಪ್ರಿಯವೆನಿಸಬಹುದಾದ ಮಾತುಗಳನ್ನು ಧುರೀಣನು ಹೇಳಬೇಕಾಗುತ್ತದೆ; ಜನರು ಮೆಚ್ಚದ ನಿಲುವೆಯನ್ನು ವಹಿಸಬೇಕಾಗುತ್ತದೆ; ಜನರು ಯೋಗ್ಯವೆಂದು ಭಾವಿಸದ ಕೃತ್ಯಗಳನ್ನೂ ಮಾಡಬೇಕಾಗುತ್ತದೆ. ಜನರನ್ನು ತಪ್ಪುದಾರಿಯಿಂದ ಪರಾವೃತ್ತರನ್ನಾಗಿ ಮಾಡುವುದೇ ಇಲ್ಲಿ ಧುರೀಣನ ಉದ್ದೇಶ; ಅವರಿಗೆ ಯಾವುದು ಸರಿಯಾದುದೆಂಬುದನ್ನು ತಿಳಿಸಿ ಹೇಳುವುದೇ ಇಲ್ಲಿ ಧುರೀಣನು ನಿರ್ವಹಿಸುತ್ತಿರುವ ಕರ್ತವ್ಯ—ಎಂದರು ಶ್ರೀ ಮುರಾರ್ಜಿ.

ಜನಜಂಗುಳಿಯು ಯಾವುದೇ ನಿರ್ಣಯವನ್ನು ಮಾಡಿದರೂ ಅದು ಯೋಗ್ಯವೆನಿಸಲಾರದು—ಎಲ್ಲ ಜನರನ್ನೂ ಎಲ್ಲ ಕಾಲದಲ್ಲಿಯೂ ಎಲ್ಲ ವಿಷಯಗಳಲ್ಲೂ ಸಲಹೆಗಾಗಿ ಆಶ್ರಯಿಸುವುದು ಪ್ರಜಾಪ್ರಭುತ್ವವಲ್ಲ. ಹೀಗೆ ಪ್ರಜಾಪ್ರಭುತ್ವವು ಕೆಲಸವನ್ನು ನಿರ್ವಹಿಸಲಾರದು. ಜನರು ಶಾಂತ ವಾತಾವರಣದಲ್ಲಿ ಸಂಪೂರ್ಣ ಪರ್ಯಾಲೋಚನೆ ನಡೆಸಿ, ತಮ್ಮ ಪ್ರತಿನಿಧಿಗಳನ್ನು ಚುನಾಯಿಸಿ ಕಳಿಸಬೇಕು. ಜನರ ವಿಶ್ವಾಸವನ್ನು ಹೀಗೆ ಪಡೆದ ಪ್ರತಿನಿಧಿಗಳಾದರೂ ಶಾಂತ ವಾತಾವರಣದಲ್ಲಿ ಸಂಪೂರ್ಣ ಪರ್ಯಾಲೋಚನೆ ನಡೆಸಿಯೇ ತಮ್ಮ ಅಭಿಪ್ರಾಯವನ್ನು ಹೇಳಬೇಕು. ಇಲ್ಲಿ ಉದ್ವೇಗಕ್ಕಾಗಲೀ ಭಾವನಾಪರವಶತೆಗಾಗಲೀ ಸ್ಥಾನವಿಲ್ಲ. ವೈಚಾರಿಕ ಬುದ್ಧಿಗೆಯೇ ಪ್ರಾಧಾನ್ಯ.

ಯಾವ ಕಾಲಕ್ಕೂ ಜನಜಂಗುಳಿಯ ಅಭಿಪ್ರಾಯಕ್ಕೆ ಮನ್ನಣೆಯನ್ನು ಕೊಡುವುದು ಧುರೀಣರಿಗಾಗಲೀ ಪ್ರತಿನಿಧಿಗಳಿಗಾಗಲೀ ಪ್ರಜಾಪ್ರಭುತ್ವಕ್ಕೆಯೇ ಆಗಲೀ ಶೋಭೆ ತರುವ ವಿಷಯವಾಗದು. ಧುರೀಣರೂ ಪ್ರತಿನಿಧಿಗಳೂ ತಮ್ಮ ನಿಲುವೆಯನ್ನು—ಅದು ಜನಾಭಿಪ್ರಾಯಕ್ಕೆ ವಿರುದ್ಧವಿದ್ದಾಗ—ಚೆನ್ನಾಗಿ ಮನದಟ್ಟುಪಡಿಸಬೇಕು; ಮತ್ತು ಜನರ ಮನೋಭಾವನೆಯನ್ನು ಪರಿವರ್ತಿಸಲು ಹೀಗೆ ಶ್ರಮಿಸಬೇಕು. ತಮ್ಮದು ತೀರ ಪ್ರಾಮಾಣಿಕವಾದ ವಿಶ್ವಾಸವೆಂದು ಜನರಿಗೆ ಮನವರಿಕೆ ಮಾಡಿಕೊಡಬೇಕು.

ಇಷ್ಟಾಗಿಯೂ ಜನಾಭಿಪ್ರಾಯವು ಧುರೀಣರಿಗೆ ಅಥವಾ ಪ್ರತಿನಿಧಿಗಳಿಗೆ ಅನುಕೂಲವಾಗಿ ಮಾರ್ಪಡದಿದ್ದಲ್ಲಿ, ಜನರೇ ಈ ಪ್ರತಿನಿಧಿಯನ್ನು ಅಥವಾ ಧುರೀಣನನ್ನು ಸ್ಥಾನಚ್ಯುತನಾಗಿ ಮಾಡುವ ಪ್ರಸಂಗ ಬರುತ್ತದೆ. ಆ ಕಾಲದಲ್ಲಿ ಧುರೀಣನಾದವನು ಗೌರವದಿಂದ ಹಿನ್ನೆಲೆಗೆ ಸರಿದು ನಿಲ್ಲಬೇಕು.

ಧುರೀಣರು ಸದಾಕಾಲ ದೋಷರಹಿತ ಬುದ್ಧಿಯನ್ನು ಹೊಂದಿರುವರೆಂದೇನಿಲ್ಲ—

(೧೨ನೇ ಪುಟ ನೋಡಿರಿ)

ಶೀಘ್ರ ಬೆಳವಣಿಗೆ

ಒಟ್ಟು ವ್ಯವಹಾರ ಧನ

1926 — ರೂ. 17,355/-

1936 — ರೂ. 35,45,544/-

1954 — ರೂ. 4,26,07,093/-

1955 — ರೂ. 8,70,31,700/-

1956 ಮಾರ್ಚಿ 31ಕ್ಕೆ 9 ಕೋಟಿ ರೂಪಾಯಿ

ಇಂತಹ ಬೆಳವಣಿಗೆಗೆ ನಮ್ಮ ಗ್ರಾಹಕರ ಹಿತೇಚ್ಛೆಯೇ ಕಾರಣ —
ಗ್ರಾಹಕರಲ್ಲಿ ಹಿತೇಚ್ಛೆ ಬೆಳೆಯಲು ನಮ್ಮ ಸೇವೆಯಲ್ಲಿ ಅವರಿಗುಂಟಾದ
ತೃಪ್ತಿಯೇ ಕಾರಣವೆಂದು ನಾವು ನಂಬಿರುವೆವು

ಮಾನನೀಯ ವೃತ್ತಿ, ವೈಯಕ್ತಿಕ ನಿಕಟ ಸಂಪರ್ಕವನ್ನು ನಮ್ಮ ಗ್ರಾಹಕರೊಂದಿಗೆ
ಇರಿಸಿಕೊಳ್ಳಬೇಕೆಂದೂ ನಾವು ಬಲ್ಲೆವು.

ನಮ್ಮ ಯಾವುದೇ ಶಾಖೆಗೆ ದಯಮಾಡಿಸಿ ನೀವೇಕೆ ಪರಿಚಯ ಪಡೆಯುವುದಿಲ್ಲ?
ನಾವು ನಿಮ್ಮ 'ಬೇಂಕು' ಆಗಬಯಸುತ್ತೇವೆ

●

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಶೋಷಕ ಜಮೀನುದಾರಿಕೆಗೆ ತಡೆ

ಸತ್ಯವಾಗುತ್ತಿರುವ ಮಹಾತ್ಮರ ಭವಿಷ್ಯ ವಾಕ್ಯ

ಸುಮಾರು ೩೦ ವರ್ಷಗಳ ಹಿಂದೆ ದಕ್ಷಿಣದ ಭೂಮಾಲೀಕರ ಗುಂಪೊಂದನ್ನು ಉದ್ದೇಶಿಸಿ ಮಾತನಾಡುತ್ತಾ ಮಾನವೀಯ ಸಹೋದರತೆಯನ್ನು ಸಾಗುವಳಿ ಮಾಡುತ್ತಿರುವ ರೈತರ ಅನುಭವಕ್ಕೆ ಬರಗೊಡಿಸದಿದ್ದರೆ ಭೂಮಿಯಲ್ಲಿ ಕಳೆ ಮತ್ತು ಮುಳ್ಳುಕಂಟಿಗಳಲ್ಲದೆ ಬೇರೇನೂ ಬೆಳೆಯಲಾರದು ಎಂಬುದಾಗಿ ಮಹಾತ್ಮಾ ಗಾಂಧೀಜಿಯವರು ಎಚ್ಚರಿಕೆಯನ್ನಿತ್ತರು.

ಭೂಮಿಯಲ್ಲಿ ಕಳೆ ಮತ್ತು ಮುಳ್ಳುಕಂಟಿಗಳಲ್ಲ, ದವಸ ಧಾನ್ಯಗಳು ಬೆಳೆಯಬೇಕೆಂಬುದಕ್ಕಾಗಿ, ಮತ್ತು ಈ ರೀತಿಯಲ್ಲಿ ಸಾಗುವಳಿದಾರರನ್ನೂ, ಅವರ ಪ್ರತಿನಿಧಿಗಳಾಗಿರುವವರನ್ನೂ ಒಟ್ಟಿಗೆ ತರಬೇಕೆಂಬುದಕ್ಕಾಗಿ ಮುಂದಿಟ್ಟ ಹೆಜ್ಜೆಗಳಲ್ಲಿ ಜಮೀನುದಾರಿ ಮತ್ತಿತರ ಮಧ್ಯವರ್ತಿಗಳ ನಿರ್ಮೂಲನವು ಮೊದಲನೆಯದೆನ್ನಬಹುದು.

ಜಮೀನುದಾರಿ ಪದ್ಧತಿಯನ್ನು ೧೭೯೩ರಲ್ಲಿ ಗವರ್ನರ ಜನರಲರಾಗಿದ್ದ ಲಾರ್ಡ್ ಕಾರ್ನವಾಲೀಸರು ಬಂಗಾಳದಲ್ಲಿ ಪ್ರಾರಂಭಿಸಿದರು. ಹಿಂದಿನಿಂದ ಈ ಪದ್ಧತಿಯನ್ನು ಮದ್ರಾಸು, ಒರಿಸ್ಸ, ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ ಇತ್ಯಾದಿಗಳಲ್ಲೂ ಅನುಸರಿಸಲಾಯಿತು. ಜಮೀನುದಾರಿ ಪದ್ಧತಿಯ ನಿರ್ಮೂಲನದಲ್ಲಿ ಕೊನೆಯದಾಗಿ ಕಾರ್ಯ ಪ್ರವೃತ್ತವಾದದ್ದು ಬಂಗಾಳ ರಾಜ್ಯವಾಗಿದೆ. ೧೯೫೦ನೇ ಫೆಬ್ರವರಿಯಲ್ಲಿ ಈ ರಾಜ್ಯದಲ್ಲಿ ಜಮೀನುದಾರಿಕೆಯನ್ನು ನಾಶಪಡಿಸುವ ಶಾಸನಕ್ಕೆ ರಾಷ್ಟ್ರಾಧ್ಯಕ್ಷರ ಸಮ್ಮತಿ ದೊರೆಯಿತು.

೧೯೫೩ನೇ ಮಾರ್ಚಿಯಷ್ಟು ಈಚೆಗೆ ಜರ್ದ್ವಾನದ ಮಹಾ ರಾಜಾಧಿರಾಜರು ಬ್ರಿಟಿಷ್ ಇಂಡಿಯಾ ಎಸೋಸಿಯೇಶನಿನ ಅಧ್ಯಕ್ಷಸ್ಥಾನದಿಂದ ಮಾತನಾಡುತ್ತಾ "ಭೂಮಾಲಕತ್ವವನ್ನು ಸಂಪೂರ್ಣವಾಗಿ ನಾಶಪಡಿಸುವ" ಕ್ರಮಗಳ ವಿರುದ್ಧ ಗದೆಯನ್ನೆತ್ತಿದರು. ಆದರೆ ಈಗ ದೇಶವು ತನ್ನ ಯೋಜನೆಯನ್ನು ಮುಂದರಿಸಿಕೊಂಡು ಹೋಗುತ್ತಿದೆ; ಸರಕಾರವು ಗೊತ್ತುಪಡಿಸಿದ ಪರಿಹಾರಧನವನ್ನು ಭೂಮಾಲಕ ಮಹನೀಯರು ಸ್ವೀಕರಿಸುತ್ತಿದ್ದಾರೆ. ಹೀಗಾಗಿ ಹಿಂದೆ ಆರ್ಥಿಕ ಹಾಗು ಸಾಮಾಜಿಕ ರಂಗದಲ್ಲಿ ಭೂಮಾಲಕರ ಗುಲಾಮರಾಗಿದ್ದ ಸಾಗುವಳಿದಾರರೂ ಹಿಂದಿನ ಕತೆಯನ್ನು ಮರೆಯಹತ್ತಿದ್ದಾರೆ ಎನ್ನಬಹುದು.

ಕಳೆದ ಒಂದೂವರೆ ಶತಮಾನಗಳಿಗೂ ಹೆಚ್ಚಿನ ಅವಧಿಯಲ್ಲಿ ಸಾಗುವಳಿದಾರರ ಶೋಷಣೆಯೇ ಭಾರತದ ವಿಶೇಷ ವಿದ್ಯಮಾನವಾಗಿದ್ದಿತು. ವಾಸ್ತವಿಕವಾಗಿ ಮಾನವರ ನಡುವೆ ವರ್ಗಭೇದವನ್ನು ನಿರ್ಮಿಸಿ ಅದನ್ನು ಶಾಶ್ವತವಾಗಿಡುವ ಪ್ರಯತ್ನಗಳೂ ಶೋಷಣೆ ಮತ್ತು ದಬ್ಬಾಳಿಕೆಯ ಈ ಪದ್ಧತಿಯೂ ಈಸ್ಟ್ ಇಂಡಿಯಾ ಕಂಪೆನಿ ಮತ್ತು ಅದರ ಪ್ರತಿನಿಧಿ ಲಾರ್ಡ್ ಕಾರ್ನವಾಲೀಸರ ಧ್ಯೇಯವೇ ಆಗಿದ್ದಿತು.

ಲಂಡನಿನಲ್ಲಿ ಕಂಪೆನಿಯ ಬೋರ್ಡ್ ಆಫ್ ಡೈರೆಕ್ಟರರಿಗೆ ಕಳಿಸಿದ್ದೊಂದು ಪತ್ರದಲ್ಲಿ ಲಾರ್ಡ್ ಕಾರ್ನವಾಲೀಸರು ಹೀಗೆ ಬರೆದರು: "ಬೇರೆಲ್ಲ ವಿಷಯಗಳಿಂದ ಸ್ವತಂತ್ರವಾಗಿರುವ ಸಂಗತಿಯೊಂದಿದೆ—ವ್ಯವಸ್ಥಿತ ರೀತಿಯಲ್ಲಿ ವರ್ಗ ಭೇದವನ್ನು ಮಾಡುವುದು ಕಂಪೆನಿಯ ಹಿತಾಶಕ್ತಿಯನ್ನು ಪೋಷಿಸಿಕೊಂಡು ಹೋಗುವ ದೃಷ್ಟಿಯಿಂದ ಅತ್ಯಾವಶ್ಯಕವಾದುದಾಗಿದೆ ಎಂದು ನಾನು ಭರವಸೆಕೊಡಬಲ್ಲೆ. ಇಂಥ ಕ್ರಮವು ನಾಗರಿಕ ಸಮಾಜದಲ್ಲಿ ಶಾಂತಿ—ಸುವ್ಯವಸ್ಥೆಗಳ ಪಾಲನೆಗೆ ಭಾರತದಲ್ಲಿ ಅತ್ಯಾವಶ್ಯಕವಾಗಿರುತ್ತದೆ".

ಕಾಂಗ್ರೆಸಿನ ಇತಿಹಾಸಕಾರರೂ ಸದ್ಯ ಮಧ್ಯಪ್ರದೇಶದ ಗವರ್ನರರೂ ಆಗಿರುವ ಡಾ। ಪಟ್ಟಾಭಿ ಸೀತಾರಾಮಯ್ಯನವರು ಕಾಯಂ ಭೂಕಂದಾಯ ಪದ್ಧತಿಯನ್ನು "ಸುಲಭ ನಿಯಂತ್ರಣಕ್ಕೆ ಸಾಧ್ಯವಾಗುವ ಆರ್ಥಿಕ ಹಾಗು ಸಾಮಾಜಿಕ ಘಟಕಗಳ ನಿರ್ಮಿತಿಗಾಗಿಯೂ ದೇಶವನ್ನು ವಿದೇಶೀಯರಿಗೆ ಆಳುವುದು ಸುಲಭವಾಗುವಂತೆಯೂ ಲಾರ್ಡ್ ಕಾರ್ನವಾಲೀಸರಿಂದ ಉದ್ದೇಶಪೂರ್ವಕವಾಗಿ ಪ್ರಾರಂಭಿಸಲ್ಪಟ್ಟಿರುವ ಸ್ಥಳೀಯ ಪ್ರಭುತ್ವ ಕ್ರಮ" ಎಂದು ವಿವರಿಸಿದ್ದಾರೆ.

ಬೇರೆ ಬೇರೆ ರಾಜ್ಯಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ಮೆರೆಯುತ್ತಿದ್ದ ಈ ಭೂಮಾಲಕ, ಜಮೀನುದಾರರನ್ನು ಒಂದು ವರ್ಗವಾಗಿ ತೆಗೆದುಕೊಂಡರೆ ಅವರು ಕೇವಲ ಸೋಮಾರಿಗಳೂ ದಬ್ಬಾಳಿಕೆಗಾರರೂ ಆಗಿದ್ದರು. ಇವರಲ್ಲಿ ಹೆಚ್ಚಿನವರು ಮಿತಿ ಮೀರಿ ಗೇಣಿಯನ್ನು ವಸೂಲು ಮಾಡುತ್ತಿದ್ದರು; ಅಲ್ಲದೆ ಬಿಟ್ಟಿಯಾಗಿ ಕೆಲಸವನ್ನೂ ಸಾಗುವಳಿದಾರರಿಂದ ಮಾಡಿಸುತ್ತಿದ್ದರು. ಈ ಭೂಮಾಲಿಕರಲ್ಲಿ ಅನೇಕರು ರಾಜ್ಯಗಳ ರಾಜಧಾನಿಗಳಲ್ಲಿ ಅಥವಾ ಬೆಟ್ಟ ನಿವಾಸಗಳಲ್ಲಿ ವೈಭವೋಪೇತ ಜೀವನವನ್ನು ನಡೆಸುತ್ತಿದ್ದರು. ಸಂಗತಿ ಹೀಗಿದ್ದುದರಿಂದಲೇ ಭಾರತವನ್ನು "ಮಹಾರಾಜರ ಮತ್ತು ಆನೆಯ ಹಿಂಡುಗಳ ದೇಶ" ಎಂದು ಪಾಶ್ಚಾತ್ಯರು ಕರೆಯುವಂತಾಯಿತು. ಅತಿವೃಷ್ಟಿ ಜನ್ಯ ಮಹಾಪೂರಗಳಾಗಲೀ ಅನಾವೃಷ್ಟಿಜನ್ಯ ಕ್ಷಾಮ ಡಾಮರಗಳಾಗಲೀ ಈ ವರ್ಗದವರಲ್ಲಿ ಚಿಂತೆ ಹುಟ್ಟಿಸುತ್ತಿರಲಿಲ್ಲ. ಏಕೆಂದರೆ, ಸಾಗುವಳಿದಾರರಿಂದ ರೈತರು ತಮಗೆ ಕೊಡಬೇಕಾದ ಗೇಣಿ ಮತ್ತಿತರ ವಸ್ತುಗಳನ್ನು ಕೊಟ್ಟೇ ತೀರಲು ಬದ್ಧರೆಂಬುದೇ ಈ ಭೂಮಾಲಿಕರ ನಿಲುವೆಯಾಗಿದ್ದಿತು.

ಬಂಗಾಲದ ಟಾಗೋರರು, ಹೈದರಾಬಾದಿನ ಸಾಲಾರ ಜಂಗರು, ಮದ್ರಾಸಿನ ಶಿವಗಂಗೆಯಲ್ಲಿಯ ಜಮೀನುದಾರರು, ಆಂಧ್ರದ ವಿಜಯ ನಗರ ಮಹಾರಾಜರು, ಪಾಕಿಸ್ತಾನದ ಪ್ರಥಮ ಪ್ರಧಾನಿ ಲಿಯಾಕತಾಲಿಖಾನರ ಮನೆತನದವರು ಮುಂತಾಗಿ ಕೆಲವು ಭೂಮಾಲಿಕರು ಕಲೆ ಮತ್ತು ಶಿಕ್ಷಣಗಳನ್ನು ಪ್ರೋತ್ಸಾಹಿಸಿದರೆಂದೂ ಧರ್ಮ ಶಾಲೆಗಳನ್ನು ಕಟ್ಟಿಸಿ ನಿರ್ಗತಿಕರಿಗೆ ನೆರವಿತ್ತರೆಂದೂ ಒಪ್ಪಲು ನಾವು ನಿರಾಕರಿಸಬೇಕಾಗಿಲ್ಲ. ಇತಿಹಾಸಕಾರರು ಉಲ್ಲೇಖಿಸಿಲ್ಲವೆಂದ ಮಾತ್ರಕ್ಕೆ ಅನೇಕ ಭೂಮಾಲಿಕರು ತಮಗೆ ತೆರಬೇಕಾಗಿದ್ದ ಗೇಣಿಯನ್ನು ಕಡಿಮೆ ಮಾಡಿದ, ಅಥವಾ ಮಾಫಿ ಬಿಟ್ಟ ನಿದರ್ಶನಗಳಿಲ್ಲವೆಂದು ಹೇಳುವಂತೆಯೂ ಇಲ್ಲ. ಆದರೆ ಇಂಥ ನಿದರ್ಶನಗಳಿದ್ದುದು ಬಹಳ ವಿರಳ—ಸಾವಿರಕ್ಕೊಂದೂ ಇಲ್ಲ!

"ಭಾರತದಲ್ಲಿ ಭೂಸುಧಾರಣೆ" ಎಂಬ ಕಿರು ಹೊತ್ತಗೆಯಲ್ಲಿ ಕಾಂಗ್ರೆಸಿನ ಆರ್ಥಿಕ ಹಾಗು ರಾಜಕೀಯ ಸಂಶೋಧನಾ ವಿಭಾಗದ ಕಾರ್ಯದರ್ಶಿ ಶ್ರೀ ಎಚ್. ಡಿ. ಮಾಳವೀಯರು ಸಾಗುವಳಿದಾರರನ್ನು ಭೂಮಾಲಿಕರು ಅನ್ಯಾಯವಾಗಿ ಶೋಷಿಸುತ್ತಿದ್ದ ಬಗೆಯನ್ನು ಮನಕರಗುವಂತೆ ವಿವರಿಸಿದ್ದಾರೆ—"ಉತ್ತರ ಪ್ರದೇಶದ ಕೆಳಮಟ್ಟದ ಅಧಿಕಾರಿಯೊಬ್ಬನು ೧೯೩೩ರಲ್ಲಿ ಹೀಗೆಂದಿದ್ದಾನೆಂದು ವದಂತಿ: ಪ್ರತಾಪಗಢ ಜಿಲ್ಲೆಯ ಉಪವಿಭಾಗವಾದ ಪಟ್ಟಿಯ ಪ್ರತಿಯೊಂದೂ ತಾಲೂಕು ಮತ್ತು ಜಮೀನುದಾರಿಯಲ್ಲಿನ ಒಕ್ಕಲುಗಳು ಗೇಣಿಯಲ್ಲದೆ ಇನ್ನೂ ಹೆಚ್ಚಿಗೆ ಹಣವನ್ನು ಜಮೀನುದಾರನು ಕೇಳಿದಷ್ಟು ಕೊಡಬೇಕೆಂದು ನಿರ್ಬಂಧಿಸಲಾಯಿತು. ಇವುಗಳಿಗೆ ನಾನಾ ಬಗೆಯ ಹೆಸರುಗಳಿದ್ದವು.

"ಈ ಜಿಲ್ಲೆಯ ತಾಲೂಕುದಾರ ಠಾಕುರಾಣಿಯೊಬ್ಬಳಿಗೆ ಕಾಲಿನಲ್ಲೊಂದು ಬೊಕ್ಕೆ ಎದ್ದಿತು. ಈ ನೋವಿನ ಬಾಧೆ ನಿವಾರಣೆಯಾಗಲಿಕ್ಕೋಸ್ಕರ ಅವಳು ಸುಮಾರು ೧೫೦೦೦ ರೂಪಾಯಿಗಳನ್ನು ಫಕೀರರಿಗೆ ದಾನಮಾಡಿದಳು ಇಷ್ಟು ಹಣವನ್ನು ಅವಳ ಒಕ್ಕಲುಗಳಿಂದ ಒತ್ತಾಯಪೂರ್ವಕ ಪಡೆಯಲಾಯಿತು. ಇನ್ನಾವುದೇ ಹಣವನ್ನು ಲೆಕ್ಕಪುಸ್ತಕದಲ್ಲಿ ಬರೆದಿಡುತ್ತಿದ್ದದ್ದು ನನಗೆ ತಿಳಿಯದು. ನಿರ್ದಾಕ್ಷಿಣ್ಯವಾಗಿ ಭೂಮಾಲಿಕರು ಹಣದ ಬೇಡಿಕೆಯನ್ನು ಹೊರಿಸುತ್ತಿದ್ದರು ಇದರ ಪರಿಣಾಮವಾಗಿ ಅನೇಕ ತಾಲೂಕುಗಳಲ್ಲಿ ಸಾಗುವಳಿದಾರ ಒಕ್ಕಲುಗಳು ಅಸ್ತಿತ್ವದಲ್ಲಿರುವುದೇ ಕಷ್ಟವಾಗಿ ಪರಿಣಮಿಸಿರುತ್ತದೆ."

ಬಂಗಾಳದ ಬಕೇರ್‌ಗಂಜ್ ಜಿಲ್ಲೆಯ ಕಂದಾಯ ವರದಿಯೊಂದರ ಪ್ರಕಾರ, ನ್ಯಾಯವಾದ ಗೇಣಿಯ ಹೊರತಾಗಿ ಪ್ರತಿವರ್ಷ ಈ ಜಿಲ್ಲೆಯಲ್ಲಿ ವಸೂಲಾಗುತ್ತಿದ್ದ ಹಣವು ೩೦ ಲಕ್ಷ ರೂಪಾಯಿಯಷ್ಟಿದ್ದಿತು. ಇದು ಸರಕಾರಕ್ಕೆ ಈ ಜಿಲ್ಲೆಯಿಂದ ಒಟ್ಟಾರೆ ಮೇಲೆ ದೊರೆಯುತ್ತಿದ್ದ ಕಂದಾಯದ ಮೊತ್ತಕ್ಕಿಂತಲೂ ಹೆಚ್ಚು!

ಭೂಮಾಲಿಕರು ತಮ್ಮ ಮರ್ಜಿಗನುಸಾರ ಈ ಅನ್ಯಾಯದ ತೆರಿಗೆಗಳನ್ನು ಹೊರಿಸುತ್ತಿದ್ದರು. ಮದುವೆಯಾದರೆ ತೆರಿಗೆ, ಸಾಮಾಜಿಕ ಅಪರಾಧಗಳ ಹೆಸರಿನಲ್ಲಿ ದಂಡ, ಕೆಲವು ವಿಧದ ವ್ಯಾಪಾರ ನಡೆಸುತ್ತಿರುವ ನೆಪದಲ್ಲಿ ಸುಂಕ—ಹೀಗೆಲ್ಲ ಇದ್ದಿತು. ನ್ಯಾಯವಾದ ಗೇಣಿಯು ೩೦ರಿಂದ ೧೦೦% ಪಾಲಿನಷ್ಟು ಹೆಚ್ಚು ಹಣವನ್ನು ಅಕ್ರಮವಾಗಿ ಒಕ್ಕಲುಗಳಿಂದ ಭೂಮಾಲಿಕರು ವಸೂಲು ಮಾಡಿಕೊಳ್ಳುತ್ತಿದ್ದರು ತನ್ನ ಸ್ವಂತ ಸಾಲವನ್ನು ತೆರಲಿಕ್ಕಾಗಿ ಗೇಣಿಯ ಎರಡೂವರೆ ಪಾಲಿನಷ್ಟು ಹಣವನ್ನು ಒಕ್ಕಲುಗಳಿಂದ ವಸೂಲು ಮಾಡಿದ್ದ ನಿದರ್ಶನಗಳೂ ಕಂಡು ಬರುತ್ತವೆ.

ಮದ್ರಾಸು ರಾಜ್ಯದ ತಂಜಾವೂರು ಜಿಲ್ಲೆಯ ಮಾಯಾವರಂ ತಾಲೂಕಿನಲ್ಲಿ ಐದೇ ವರ್ಷಗಳಷ್ಟು ಹಿಂದೆ ಮಿರಾಸದಾರರೆಂದು ಕರೆಯಲ್ಪಡುವ ಭೂಮಾಲಿಕರು ಪನ್ನೈಯಾಲರೆಂಬ ಹೆಸರಿರುವ ಸಾಗುವಳಿದಾರರನ್ನು ನಡೆಸಿಕೊಳ್ಳುತ್ತಿರುವ ರೀತಿಯು ತೀರ ಅಮಾನುಷವಾಗಿತ್ತೆಂದು ಕಾಂಗ್ರೆಸಿನ ಭೂಸುಧಾರಣಾ ಸಮಿತಿಯು ವರದಿ ಮಾಡಿದೆ. "ಮನುಷ್ಯನ ಶೋಷಣೆ ನಡೆಯುವ ತೀರ ಕೀಳ್ಮಟ್ಟದ ನಿದರ್ಶನವಿಲ್ಲಿದೆ" ಎನ್ನುತ್ತಾ ಸಮಿತಿಯು "ಈ ಬಗೆಯ ಪರಿಸ್ಥಿತಿಯನ್ನು ಮುಂದರಿಯಗೊಡುವುದೆಂದರೆ ದೇಶಕ್ಕೆ ಅಪಮಾನ ಮಾಡಿದಂತೆ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯಕ್ಕೆ ಮಸಿಬಳಿದಂತೆ" ಎಂದು ಹೇಳಿತು.

ಭೂರಹಿತರ ಹಾಗು ಸಾಗುವಳಿದಾರ ಒಕ್ಕಲುಗಳ ಶೋಷಣೆಯು ತಾಂಡವವಾಡುತ್ತಿದ್ದ ರಾಜ್ಯವೆಂದು ಹೈದರಾಬಾದು ಪರಿಗಣಿಸಲ್ಪಟ್ಟಿದ್ದಿತು. ಭೂಸುಧಾರಣೆಯ

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ರ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
೨. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಕ್ಷ-ಕಿರಣ ಪರೀಕ್ಷೆಯು ಅಪಾಯರಹಿತವಲ್ಲ!

ಅಣುವಿಕಿರಣಶೀಲತೆಯು ಇದರಿಂದ ಅಧಿಕವಾಗುವುದಂತೆ

ಅಣು ಮತ್ತು ಜಲಜನಕ ಬಾಂಬುಗಳ ಸ್ಫೋಟನಗಳು ಜೀವರಾಶಿಯ ಮೇಲೆ ಮಾಡುವ ಗಂಭೀರ ದುಷ್ಪರಿಣಾಮಗಳ ಕುರಿತ ನಡೆಸಿದ ಸಂಶೋಧನೆಯು ಬಹಳ ರೋಮಾಂಚಕವಾದ ಸಂಗತಿಯೊಂದು ವ್ಯಕ್ತವಾಗುವ ಅವಕಾಶವನ್ನೀಗ ನೀಡಿದೆ—ಯಾವ ವಿಕಿರಣ ಶೀಲತೆಯು ಜೀವರಾಶಿಯ ನಾಶವನ್ನು ಮಾಡುವುದೆಂದು ಮೊನ್ನೆ ಮೊನ್ನೆಯ ವರೆಗೆ ಹೇಳಲಾಗುತ್ತಿದ್ದಿತೋ ಅದು ಅಣು ಅಥವಾ ಜಲಜನಕ ಬಾಂಬುಗಳ ಸ್ಫೋಟನ, ಅಥವಾ ಅಣುಶಕ್ತಿ ಜನಕ ಯಂತ್ರಗಳ ಮೂಲಕವಷ್ಟೇ ಉಂಟಾಗಬೇಕಾಗಿಲ್ಲ; ವೈದ್ಯಕೀಯ ತಜ್ಞರು ಈಗಲೀಗ ಧಾರಾಳವಾಗಿ ಚಿಕಿತ್ಸಾಕ್ರಮದಲ್ಲಿ ಅನುಸರಿಸುವ ಕ್ಷ-ಕಿರಣ (ಎಕ್ಸ್‌ರೇ) ಪ್ರಯೋಗಗಳಿಂದಲೂ ವಿಕಿರಣ ಶೀಲತೆ ವ್ಯಾಪಿಸುತ್ತದೆ ಎಂಬುದೀಗ ಖಚಿತವಾಗಿ ತಿಳಿದು ಬಂದಿದೆ.

ಅಮೇರಿಕ ಮತ್ತು ಬ್ರಿಟನುಗಳ ಪ್ರಖ್ಯಾತ ವಿಜ್ಞಾನಿಗಳು ಸ್ವತಂತ್ರ ರೀತಿಯಲ್ಲಿ ಸಂಶೋಧನೆಯನ್ನು ನಡೆಸಿ ಈ ಸಮಾನ ತೀರ್ಮಾನಕ್ಕೆ ಬಂದಿದ್ದಾರೆ. ಅಣು ಮತ್ತು ಜಲಜನಕ ಬಾಂಬುಗಳ ಸ್ಫೋಟನ ಕಾಲದಲ್ಲಿ ಉಂಟಾದ ಧೂಳು ಏನೇನು ಪರಿಣಾಮ ಮಾಡಬಹುದೆಂಬುದನ್ನು ಕಂಡು ಹಿಡಿಯಲು ಬ್ರಿಟನಿನ ವೈದ್ಯಕೀಯ ಮಂಡಳವು ಒಂದು ವರ್ಷದ ಹಿಂದೆ ಸಮಿತಿಯೊಂದನ್ನು ನೇಮಿಸಿದ್ದಿತು. ಇದರಲ್ಲಿ ವೈದ್ಯಕೀಯ ಸಂಶೋಧನಾ ಮಂಡಳದ ಕಾರ್ಯದರ್ಶಿ ಸರ್ ಹ್ಯಾರೋಲ್ಡ್ ಹಿಮ್ಸ್‌ವರ್ಥ್, ಅಣುಶಕ್ತಿ ಸಂಶೋಧನ ವಿಭಾಗದ ದಿಗ್ದರ್ಶಕರಾದ ಸರ್ ಜೋನ್ ಕೊಕ್‌ಕ್ರೋಫ್ಟ್, ಅಂತಾರಾಷ್ಟ್ರೀಯ ಪ್ರಭಾಕಿರಣ ಸಂರಕ್ಷಣ ಮಂಡಳದ ಅಧ್ಯಕ್ಷ ಸರ್ ಅರ್ನೆಸ್ಟ್ ರೋಕ್ ಕಾರ್ಲಿಂಗ್ ಮುಂತಾದವರಿದ್ದರು. ಅಮೇರಿಕದ ಸಂಶೋಧನ ಮಂಡಳವು ಸಹ ಒಂದು ವರ್ಷದ ಹಿಂದೆ ರೋಕ್ ಫೆಲರ್ ನಿಧಿಯ ಸಹಾಯದಿಂದ ಕೆಲಸವನ್ನು ಪ್ರಾರಂಭಿಸಿತು. ಅಮೇರಿಕದ ರಾಷ್ಟ್ರೀಯ ವಿಜ್ಞಾನ ಮಂಡಳದ ಅಧ್ಯಕ್ಷ ಡಾ. ಡೆಟ್ಲೇ ಬ್ರೋಂಕ್ ಈ ತಂಡದ ನೇತೃತ್ವವನ್ನು ವಹಿಸಿದ್ದರು.

ಎರಡೂ ಸಮಿತಿಗಳ ವರದಿಯ ಮುಖ್ಯಾಂಶಗಳನ್ನು ಮೊನ್ನೆ ೧೨ನೇ ತಾರೀಕಿನಂದು ಪ್ರಕಟಿಸಲಾಯಿತು. ಇದಕ್ಕೆ ಎರಡು ದಿನಗಳ ಪೂರ್ವದಲ್ಲಿ ಅಮೇರಿಕದ ಪತ್ರಿಕೆಯೊಂದರಲ್ಲಿ ಡಾ. ಹೆರ್ಮನ್ ಜೆ. ಮುಲ್ಲರ್ ಎಂಬ ಪ್ರಖ್ಯಾತ ವಿಜ್ಞಾನಿಯು "ಜಲಜನಕ ಬಾಂಬುಗಳ ಸ್ಫೋಟನದ ಅನಾಹುತಗಳು ಸಹನಾತೀತವಾಗಿವೆ" ಎಂದು ಬರೆದ ಲೇಖನವು ಪ್ರಕಟವಾಗಿದ್ದಿತು. ೧೯೪೬ನೇ ವರ್ಷದಲ್ಲಿ ದೇಹ ಶಾಸ್ತ್ರ ಮತ್ತು ವೈದ್ಯಕೀಯ ವಿಜ್ಞಾನದ ನೋಬೆಲ್ ಪಾರಿತೋಷಕವನ್ನು ಪಡೆದಿದ್ದ ಡಾ. ಮುಲ್ಲರರ ಹೇಳಿಕೆಯಂತೆ "ಅಪಾಯ ರಹಿತ"ವೆಂದು ಇಷ್ಟರವರೆಗೆ ಭಾವಿಸುತ್ತಿದ್ದ ಪ್ರಭಾಕಿರಣಗಳ ಸಂಪರ್ಕವಾದರೂ ಸಾಕು—ನಮ್ಮ ಆಯುಷ್ಯದ ಅವಧಿಯು ತಗ್ಗುತ್ತದೆ. ಪ್ರತಿನಿತ್ಯವೂ ನಾವು ಪ್ರಭಾ ಕಿರಣಗಳನ್ನು ಪಡೆಯುತ್ತಾ ಇದ್ದರೆ, ಈ ಪ್ರಭಾ ಕಿರಣದ ಪ್ರತಿಯೊಂದು ಘಟಕವು ನಮ್ಮ ಆಯುಷ್ಯವನ್ನು ಸಾಮಾನ್ಯವಾಗಿ ಐದು ದಿನಗಳಿಂದ ಎರಡು ವಾರಗಳಷ್ಟು ಕಡಿಮೆ ಮಾಡುತ್ತದೆ. ಇದರ ಹೊರತಾಗಿ ಅಣು ವಿಕಿರಣ ಶೀಲತೆಯು ಜೀವಕಣಗಳ ರಚನೆಯ ಕ್ರಮದಲ್ಲಿ ವ್ಯತ್ಯಾಸವನ್ನುಂಟುಮಾಡಬಲ್ಲುದು; ತತ್ಪರಿಣಾಮವಾಗಿ ಹೀಗೆ ವ್ಯತ್ಯಸ್ತ ಕ್ರಮದಿಂದ ರೂಪಗೊಂಡ ಜೀವಕಣಗಳುಳ್ಳ ಜನರಿಗೆ ಹುಟ್ಟುವ ಮಕ್ಕಳು ಮಂದ ಬುದ್ಧಿಯವರೂ ವಿಶೇಷವಾದ ರಕ್ತದ ಒತ್ತಡವುಳ್ಳವರೂ ಗಾಯ ಮತ್ತು ರೋಗಗಳಿಂದ ತೀವ್ರ ಗುಣಹೊಂದಲಾರದ ಪ್ರಕೃತಿಯವರೂ ಆಗುತ್ತಾರೆ. ಎಲ್ಲಕ್ಕಿಂತ ಹೆಚ್ಚಾಗಿ ಜನನೇಂದ್ರಿಯಗಳ ಮೇಲುಂಟಾದ ಅಣುವಿಕಿರಣ ಶೀಲತೆಯ ದುಷ್ಪರಿಣಾಮವು ಸಂತಾನ ಪಾರಂಪರ್ಯವಾಗಿ ಉಳಿಯುತ್ತದೆ; ಅಪ್ರಬುದ್ಧಾವಸ್ಥೆಯಲ್ಲಿಯೇ ಸಾಯುವ, ಬದುಕಿಉಳಿದರೂ ಪ್ರಜೋತ್ಪಾದನೆ ಮಾಡುವ ಶಕ್ತಿಯನ್ನು ಕಳೆದುಕೊಂಡ ಹತ ಭಾಗ್ಯರು ಇವರ ಗುತ್ತಾರೆ.

ಡಾ. ಮುಲ್ಲರರು ವ್ಯಕ್ತಪಡಿಸಿದ ಮೇಲಿನ ಅಭಿಪ್ರಾಯಗಳನ್ನು ಅಮೇರಿಕ ಮತ್ತು ಬ್ರಿಟನುಗಳಲ್ಲಿ ನೇಮಕವಾದ ಎರಡೂ ಸಮಿತಿಗಳು ಅನುಮೋದಿಸಿವೆ ಎನ್ನಬಹುದು. ಆದರೆ ಅವು ಅಣು ಮತ್ತು ಜಲಜನಕ ಬಾಂಬುಗಳ ಸ್ಫೋಟನಕ್ಕಾಗಿ ಮಾತ್ರ ನಾವು ಹೆದರಿಕೊಳ್ಳಬೇಕಾಗಿಲ್ಲವೆಂಬ ಮಾತನ್ನೂ ಹೇಳುತ್ತವೆ; ನಿಜವಾಗಿ ನಾವು ಭಯಗೊಳ್ಳಬೇಕಾದ ಸಂಗತಿಗಳು ಬೇರೆಯೂ ಇವೆ ಎಂದೀ ಸಮಿತಿಗಳ ಅಭಿಪ್ರಾಯ. ಅಣುವಿಕ ಶಸ್ತ್ರಾಸ್ತ್ರಗಳ ಸ್ಫೋಟನ ಪ್ರಯೋಗವು ಮುಂದರಿಸಲ್ಪಡದಿದ್ದರೆ—ಅದು ಅಸಂಭವ—ಈಗ ಈ ಸ್ಫೋಟನಗಳಿಂದುಂಟಾದ ಪ್ರಭಾಕಿರಣಗಳ ವ್ಯಾಪನೆಯು ನಮ್ಮನ್ನು ಚಿಂತೆಗೀಡುಮಾಡಬೇಕಾಗಿಲ್ಲ; ಏಕೆಂದರೆ ಅದರಿಂದಾಗಬಹುದಾದ ಹಾನಿಯು ಅತ್ಯಲ್ಪ ಎಂದಿವೆ ಈ ಸಮಿತಿಗಳು. ಪ್ರತಿಯೊಬ್ಬನೂ ಭೂಮಿಯಲ್ಲಿ ಜನ್ಮವೆತ್ತಿದಂದಿನಿಂದ ಅಣು ವಿಕಿರಣ ಶೀಲತೆಗೆ ಗುರಿಯಾಗಿದ್ದಾನೆ. ಆದರೆ ಪ್ರಭಾಕಿರಣಗಳ ಸಂಪರ್ಕಕ್ಕೆ ಅಥವಾ ಪ್ರಭಾವಕ್ಕೆ ಆತನು ಬೀಳುವ ವೇಗವನ್ನು ಕೃತಕ ವಿಧಾನಗಳಿಂದ (ಉದಾ: ಅಣುಬಾಂಬಿನ ಸ್ಫೋಟನ) ಹೆಚ್ಚಿಸಿದರೆ ಆತನು ಕಾಲಾಂತರದಲ್ಲಿ ಗಂಭೀರ ದುಷ್ಪರಿಣಾಮಗಳನ್ನು ಎದುರಿಸಬೇಕಾಗಿ ಬರುವುದೆಂದು ಸಮಿತಿಗಳ ಅಭಿಪ್ರಾಯ.

ಪ್ರಭಾಕಿರಣಗಳ ಪ್ರಭಾವಕ್ಕೆ ಒಬ್ಬ ಮನುಷ್ಯನು ಎಷ್ಟರ ಮಟ್ಟಿಗೆ ಬಿದ್ದಿರುವನೆಂಬುದನ್ನು ಅಳೆಯುವ ಸಾಧನವಿದೆ. ಸಾಮಾನ್ಯವಾಗಿ ೧೦೦೦ ಘಟಕದ ವರೆಗೆ ಈ ಪ್ರಭಾವ ಬೀಳಬಹುದು; ಇದರಿಂದ ರಕ್ಷಣೆ ಪಡೆಯಲು ವಿಶೇಷ ಸಾಧನಗಳೇ ಬೇಕು. ಆದುದರಿಂದ ಜನಸಾಧಾರಣರ ಪಾಲಿಗೆ ೧೦೦ ಘಟಕಗಳ ಮಿತಿಯೇ ಗಂಭೀರ ದುಷ್ಪರಿಣಾಮಕ್ಕೆ ಅವರನ್ನು ತಳ್ಳಲು ಸಾಕಾಗದೇನು. ಈ ದುಷ್ಪರಿಣಾಮಗಳಿಂದ ರಕ್ಷಣೆ ಪಡೆಯಲು ಬಯಸುವವರೆಲ್ಲರೂ ೧೦ ಘಟಕಗಳ ಮಿತಿಯನ್ನು ಮೀರದೊಡನೆಯೇ ತಜ್ಞರ ಆಶ್ರಯ ಮತ್ತು ಸಲಹೆ ಪಡೆಯಲು ತಪ್ಪಬಾರದು ಎಂದು ಅಮೇರಿಕದ ವರದಿಯು ಹೇಳುತ್ತದೆ. ಹೀಗೆ ಮನುಷ್ಯನಿಗೆ ಅಷ್ಟಾಗಿ ಬಾಧಕವಿಲ್ಲವೆಂದು ಹೇಳಲಾದ ೧೦ ಘಟಕಗಳ ಪರಮ ಮಿತಿಯಲ್ಲಿ, ಸುಮಾರು ನಾಲ್ಕೂವರೆ ಘಟಕದಷ್ಟನ್ನು ಒಬ್ಬ ಮನುಷ್ಯನು ಮೂವತ್ತು ವರ್ಷಗಳ ಅವಧಿಯಲ್ಲಿ ಭೂಮಿಯಲ್ಲಿ ನಿಕ್ಷೇಪರೂಪದಲ್ಲಿ ಬಿದ್ದಿರುವ ಯುರೇನಿಯಂ ಮುಂತಾದ ವಿಕಿರಣಶೀಲ ಧಾತು, ವಾತಾವರಣವನ್ನು ನುಗ್ಗಿ ನಮ್ಮೆಡೆಗೆ ಧಾವಿಸುತ್ತಿರುವ ವಿಶ್ವಕಿರಣಗಳು ಇತ್ಯಾದಿ ನೈಸರ್ಗಿಕ ವಿಧಾನಗಳಿಂದ ಲೀಲೆಪಡೆಯುತ್ತಾನೆ. ಸುಮಾರು ಒಂದು ಘಟಕದಷ್ಟನ್ನು ಅಣು-ಮತ್ತು ಜಲಜನಕ ಬಾಂಬುಗಳ ಸ್ಫೋಟನದಿಂದುಂಟಾದ ವಿಕಿರಣಶೀಲತೆಯಿಂದ ಪಡೆಯುತ್ತಾನೆ. ಕ್ಷ-ಕಿರಣ ಪರೀಕ್ಷೆಗೆ ಒಳಪಡುವ ದೆಸೆಯಿಂದ ಸುಮಾರು ಮೂರೂವರೆ ಘಟಕಗಳಷ್ಟು ಪ್ರಭಾವಕ್ಕೆ ಮನುಷ್ಯನು ಸಾಮಾನ್ಯವಾಗಿ ಬೀಳುತ್ತಾನೆ. ಅಂದರೆ, ಅಪಾಯರಹಿತ ಮಿತಿಯ ಮೂರರಲ್ಲಿ ಒಂದಂಶವು ಕ್ಷ-ಕಿರಣ ಪರೀಕ್ಷೆಗಳ ದೆಸೆಯಿಂದಲೇ ಮುಟ್ಟಲ್ಪಡುತ್ತದೆ ಎಂದಾಯಿತು.

ಅಣು ಬಾಂಬು ಮತ್ತು ಜಲಜನಕ ಬಾಂಬುಗಳ ಸ್ಫೋಟನ ಪ್ರಯೋಗವು ಹೆಚ್ಚು ಹೆಚ್ಚು ಪ್ರಮಾಣದಲ್ಲೀಗ ನಡೆಯುತ್ತಾ ಹೋಗುತ್ತಿರುವುದರಿಂದ ಅವುಗಳಿಂದ ಮನುಷ್ಯನು ಪ್ರಭಾವಿತನಾಗುವ ಮಟ್ಟವು ಈಗಿನ ಒಂದು ಘಟಕದಲ್ಲಿಯೇ ಇನ್ನು ಮುಂದೆ ಉಳಿಯಲಾರದು. ಅದು ಹೆಚ್ಚುತ್ತಾ ಹೋಗುವುದು ನಿಶ್ಚಯ. ಯಾವ ಕಾರಣದಿಂದಲೇ ಆಗಲಿ ನಾವು ಅಪಾಯರಹಿತ ಮಿತಿ (೧೦ ಘಟಕ)ಯನ್ನು ಮೀರದಂತೆ ಮುಂಜಾಗರೂಕತೆಯನ್ನು ವಹಿಸುವುದು ಬಹಳ ಅಪೇಕ್ಷಣೀಯವಾಗಿದೆ. ರಾಜಕೀಯ ಮೂರ್ಖರ ಮೇಲೆ ಜನತೆಗೆ ನಿಯಂತ್ರಣವಿಲ್ಲದಿರುವಷ್ಟು ಕಾಲ, ಅಣು ಬಾಂಬು ಮತ್ತು ಜಲಜನಕ ಬಾಂಬುಗಳ ಪ್ರಯೋಗಗಳು ಮುಂದರಿಯುತ್ತಾ ಹೋಗುವುದರಲ್ಲಿ ಅನುಮಾನವಿಲ್ಲ. ಆದುದರಿಂದ ಇವುಗಳಿಂದ ಹೆಚ್ಚಿಕೊಂಡ ಅಪಾಯದ ಅಂಶವನ್ನು ನಾಗರಿಕರು ತಮ್ಮ ಸ್ವಬುದ್ಧಿಯಿಂದ ಅನುಸರಿಸಲ್ಪಡಬಹುದಾದ ಬೇರೆ ಉಪಾಯಗಳಿಂದ ತಗ್ಗಿಸಿಕೊಳ್ಳಲು ಪ್ರಯತ್ನಮಾಡುವುದು ಆವಶ್ಯಕ. ಇಂಥ ಪ್ರಯತ್ನಗಳಲ್ಲಿ ಕ್ಷ—ಕಿರಣ ಪರೀಕ್ಷೆಗಳನ್ನು ಆದಷ್ಟು ವಿರಳವಾಗಿ ಮಾಡುವುದು ಒಂದಾಗಿದೆ. ತೀರ ಅಗತ್ಯ ಮತ್ತು ಅನಿ

(೧೦ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕೆ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿನಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦
ಸಣ್ಣ ಬಾಟ್ಲಿಗೆ ರೂ. ೨—೦—೦

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೇರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. ೨೯—೩—೫೬ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ದಶಮಾಂಶ ನಾಣ್ಯ ಪದ್ಧತಿಯಲ್ಲಿ ವ್ಯವಹಾರ

ಸಾರ್ವಜನಿಕರು ಗಮನಿಸಬೇಕಾದ ವಿಷಯಗಳು

ಬರುವ ೧೯೫೭ನೇ ಎಪ್ರೀಲಿನ ೧ನೇ ತಾರೀಕಿನಿಂದ ದಶಮಾಂಶ ಪದ್ಧತಿಯ ಹೊಸ ನಾಣ್ಯಗಳನ್ನು ಚಲಾವಣೆಗೆ ತರಲಾಗುತ್ತದೆ. ಈ ಪದ್ಧತಿಯಲ್ಲಿ ರೂಪಾಯಿಯ ಬೆಲೆಯು ಈಗಿನಂತೆಯೇ ಉಳಿಯುತ್ತದೆ; ಅಲ್ಲದೆ ರೂಪಾಯಿ ಎಂಬುದೇ ಮುಖ್ಯ ನಾಣ್ಯವೂ ಹೌದು. ಆದರೆ, ಈಗಿನ ಎಂಟಾಣೆ, ನಾಲ್ಕಾಣೆ, ಎರಡಾಣೆ, ಒಂದಾಣೆ, ಅರ್ಧಾಣೆ ಪಾವಾಣೆ ಮತ್ತು ಪೈ ಎಂಬ ನಾಣ್ಯಗಳು ಮುಂದೆ ಉಳಿಯುವುದಿಲ್ಲ. ಬದಲಿಗೆ ೫೦ ನಯೇ ಪೈಸೆ, ೨೫ ನಯೇ ಪೈಸೆ, ೧೦ ನಯೇ ಪೈಸೆ, ೫ ನಯೇ ಪೈಸೆ, ೨ ನಯೇ ಪೈಸೆ ಮತ್ತು ೧ ನಯಾ ಪೈಸಾವೆಂಬ ನಾಣ್ಯಗಳು ಬಳಕೆಗೆ ಬರುತ್ತವೆ. ರೂಪಾಯಿಯನ್ನು ಈಗಿನಂತೆ ೧೯೨ ಪೈ ಅಥವಾ ೬೪ ಪಾವಾಣೆಯಾಗಿಯಲ್ಲ, ೧೦೦ ನಯೇ ಪೈಸೆಯಾಗಿ ವಿಭಾಜಿಸುವುದೇ ಈ ಬದಲಾವಣೆಯ ಮುಖ್ಯ ತಿರುಳು.

ಹೊಸ ನಾಣ್ಯಗಳ ವಿಷಯದಲ್ಲಿ ಸಾರ್ವಜನಿಕರಿಗೆ ಚೆನ್ನಾಗಿ ಬಳಕೆಯಾಗುವುದಕ್ಕೆ ಸರಕಾರವು ಸುಮಾರು ಮೂರು ವರ್ಷಗಳ ಅವಧಿಯನ್ನು ಕೊಟ್ಟಿರುತ್ತದೆ. ಈ ಮಧ್ಯಾವಧಿಯಲ್ಲಿ ನಯೇ ಪೈಸೇಗಳೂ ಈಗಿನ ಪೈ, ಪಾವಾಣೆ ಆಣೆ ಇತ್ಯಾದಿಗಳೂ ಜೊತೆಯಲ್ಲಿಯೇ ಬಳಸಲ್ಪಡುತ್ತವೆ. ಎರಡಕ್ಕೂ ಮನ್ನಣೆಯು ದೊರಕುತ್ತದೆ. ಪೇಟೆಯಲ್ಲಿ ವಸ್ತುವೊಂದು ಬೇಕಾದರೆ, ನಾವು ನಯೇ ಪೈಸೆಯನ್ನಿತ್ತು ಅದನ್ನು ಕೊಂಡುಕೊಳ್ಳಬಹುದು; ಅಥವಾ ಈಗಿನಂತೆ ಪಾವಾಣೆ, ಆಣೆ, ಎರಡಾಣೆ ಇತ್ಯಾದಿಗಳನ್ನಿತ್ತು ಖರೀದಿಮಾಡಲೂ ಬಹುದು. ಇಲ್ಲಿ ಏಳುವ ಒಂದೇ ಒಂದು ತೊಂದರೆ ಹೀಗಿದೆ—ಉದಾ: ಈಗಿನ ನಾಣ್ಯದಲ್ಲಿ ಎರಡಾಣೆ, ಒಂಭತ್ತು ಪೈ ಬೆಲೆಯ ವಸ್ತುವಿಗೆ ದಶಮಾಂಶ ಪದ್ಧತಿಯಲ್ಲಿ ಎಷ್ಟು ನಯೇ ಪೈಸೆ ಬೆಲೆಯಾಗುತ್ತದೆ?

ಎರಡು ಬೇರೆ ಬೇರೆ ಬಗೆಯ ನಾಣ್ಯ ಪದ್ಧತಿಗಳಲ್ಲಿ ಬೆಲೆಯ ಸಂಬಂಧವು ಪರಸ್ಪರ ಹೇಗಿದೆ ಎಂಬುದನ್ನು ನಿರ್ದಿಷ್ಟಪಡಿಸಿದರೆ ಮೇಲೆ ಹೇಳಿದ ರೀತಿಯ ತೊಂದರೆಗಳಿಂದ ಮುಕ್ತರಾಗಬಹುದು. ಭಾರತ ಸರಕಾರದ ಹಣಕಾಸಿನ ವಿಭಾಗವು ಈ ಸಂಬಂಧವನ್ನು ನಿರ್ದಿಷ್ಟವಾಗಿ ಹೇಳುವ ಕೋಷ್ಟಕಗಳನ್ನು ಸಾರ್ವಜನಿಕರ ಅವಗಾಹನೆಗಾಗಿ ಕಳೆದವಾರ ಪ್ರಕಟಿಸಿದೆ. ಈ ಕೋಷ್ಟಕಗಳ ಸಹಾಯದಿಂದ ನಾವು ಹೆಚ್ಚಿನ ಕಷ್ಟವಿಲ್ಲದೆ, ತಲೆಯನ್ನು ವಿಶೇಷ ಬಿಸಿಮಾಡಿಕೊಳ್ಳುವ ಅಗತ್ಯವಿಲ್ಲದೆ, ಈಗಿನ ಆಣೆ, ಪೈಗಳಲ್ಲಿ ಹೇಳಲಾದ ಮೊತ್ತಕ್ಕೆ ನಯೇ ಪೈಸೆಯಂತೆ ಬೆಲೆಯನ್ನೂ ನಯೇ ಪೈಸೇಯಲ್ಲಿ ಹೇಳಲಾದ ಮೊತ್ತಕ್ಕೆ ಈಗಿನ ಆಣೆ, ಪೈಗಳಲ್ಲಿ ಬೆಲೆಯನ್ನೂ ಸುಲಭದಲ್ಲಿ ಹೇಳಬಹುದು.

ಭಾರತ ಸರಕಾರವು ಹಳೆ ಮತ್ತು ಹೊಸ ನಾಣ್ಯಗಳ ಸಂಬಂಧವು ಈ ಕೆಳಗಿನಂತೆ (ಮಧ್ಯಾವಧಿಯಲ್ಲಿ) ಸಾಮಾನ್ಯವಾಗಿ ಉಳಿಯುವುದೆಂದು ಹೇಳಿದೆ—

ಸದ್ಯದ ಪದ್ಧತಿ	ದಶಮಾಂಶ ಪದ್ಧತಿ
ಪಾವಾಣೆ	೧ ನಯಾ ಪೈಸಾ
ಅರ್ಧಾಣೆ	೨ ನಯೇ ಪೈಸೆ
ಒಂದಾಣೆ	೫ ನಯೇ ಪೈಸೆ
ಎರಡಾಣೆ	೧೦ ನಯೇ ಪೈಸೆ
ನಾಲ್ಕಾಣೆ	೨೫ ನಯೇ ಪೈಸೆ
ಎಂಟಾಣೆ	೫೦ ನಯೇ ಪೈಸೆ
ರೂಪಾಯಿ	೧೦೦ ನಯೇ ಪೈಸೆ

ಮೇಲಿನ ಕೋಷ್ಟಕದಲ್ಲಿ ಹೇಳಲಾದ ೨೫, ೫೦ ಮತ್ತು ೧೦೦ ನಯೇ ಪೈಸೇಗಳಿಗೆ ತೀರ ಸರಿಸಮಾನವಾದ ನಾಣ್ಯಗಳು ಈಗಿನ ನಾಲ್ಕಾಣೆ, ಎಂಟಾಣೆ ಮತ್ತು ರೂಪಾಯಿಗಳಾಗಿವೆ. ಉಳಿದ ನಾಲ್ಕು ಬಗೆಯ ನಾಣ್ಯಗಳಿಗೆ ಈಗಿನ ನಾಣ್ಯಗಳು ಬೆಲೆಯಲ್ಲಿ ತೀರ ಸರಿಸಮಾನವೆನಿಸುವುದಿಲ್ಲ. ಆದಾಗ್ಯೂ ಅವನ್ನು ಮಧ್ಯಾವಧಿಯಲ್ಲಿ ಬಳಸಿಕೊಳ್ಳಬಹುದು. ೧೯೫೭ನೇ ಎಪ್ರೀಲಿನ ೧ನೇ ದಿನದಂದು ಎರಡನೇ ವರ್ಗದ ನಾಣ್ಯಗಳನ್ನೆ (ಅಂದರೆ ೧ ನಯಾ ಪೈಸ ಹಾಗು ೨, ೫ ಮತ್ತು ೧೦ ನಯೇ ಪೈಸೆಗಳನ್ನು) ಚಲಾವಣೆಗೆ ತರಲಾಗುತ್ತದೆ. ಉಳಿದುವನ್ನು (ಅಂದರೆ ೨೫, ೫೦ ಮತ್ತು ೧೦೦ ನಯೇ ಪೈಸೇಯ ನಾಣ್ಯಗಳನ್ನು) ಹಿಂದಿನಿಂದ ಚಲಾವಣೆಗೆ ತರುವುದೇ ಸರಕಾರದ ನಿರ್ಧಾರ.

ಹೊಸ ನಾಣ್ಯಗಳನ್ನು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಚಲಾವಣೆಗೆ ತಂದಂತೆ, ಈಗಿನ (ಆಗ ಹಳೆಯದಾಗುವ) ನಾಣ್ಯಗಳನ್ನು ವಾಪಸು ಪಡೆಯಲಾಗುತ್ತದೆ. (ಸದ್ಯದ ನಾಣ್ಯಗಳ ಮುದ್ರಣ ಕಾರ್ಯವನ್ನು ಈಗಾಗಲೇ ಸ್ಥಗಿತಗೊಳಿಸಲಾಗಿರುವುದರಿಂದ ಈ ಕಾರ್ಯವು, ಸಾರ್ವಜನಿಕರಿಗೆ ಚಿಲ್ಲರೆಯ ಅಭಾವದ ತೊಂದರೆಯನ್ನುಂಟು ಮಾಡುತ್ತಿದ್ದರೂ, ನಾಳೆ ಸುಖಕರವಾಗುತ್ತದೆ.) ಈಗಿನ ಎಲ್ಲ ನಾಣ್ಯಗಳನ್ನೂ ವಾಪಸು ಪಡೆದು ಹೊಸ ನಾಣ್ಯಗಳಲ್ಲೇ ಜನರು ವ್ಯವಹರಿಸುವ ವರೆಗಿನ ಮಧ್ಯಾವಧಿಯಲ್ಲಿ ಎರಡೂ ಬಗೆಯ ನಾಣ್ಯಗಳು ಬಳಕೆಯಲ್ಲಿ ಉಳಿಯುವುದರಿಂದ ಕೋಷ್ಟಕಗಳ ಪರಿಚಯವು ನಮಗಿರುವುದು ಅತ್ಯಾವಶ್ಯಕ. ಭಾರತ ಸರಕಾರವು ಪ್ರಕಟಿಸಿರುವ ೨ನೇ ನಂಬ್ರದ ಕೋಷ್ಟಕವು ಹೀಗಿದೆ—

ಕೋಷ್ಟಕ—II

ಈಗಿನ ಪೈಗಳು ——>

ಈಗಿನ ಆಣೆಗಳು	೦	೩	೬	೯
೦	—	೨	೩	೫
೧	೬	೮	೯	೧೧
೨	೧೨	೧೪	೧೬	೧೭
೩	೧೯	೨೦	೨೨	೨೩
೪	೨೫	೨೭	೨೮	೩೦
೫	೩೧	೩೩	೩೪	೩೬
೬	೩೭	೩೯	೪೧	೪೨
೭	೪೪	೪೫	೪೭	೪೮
೮	೫೦	೫೨	೫೩	೫೫
೯	೫೬	೫೮	೫೯	೬೧
೧೦	೬೨	೬೪	೬೬	೬೭
೧೧	೬೯	೭೦	೭೨	೭೩
೧೨	೭೫	೭೭	೭೮	೮೦
೧೩	೮೧	೮೩	೮೪	೮೬
೧೪	೮೭	೮೯	೯೧	೯೨
೧೫	೯೪	೯೫	೯೭	೯೮
೧೬	೧೦೦	—	—	—

ನಯೇ ಪೈಸೆಗಳಲ್ಲಿ ಬೆಲೆ ——>

ಪ್ರಸ್ತುತ ಕೋಷ್ಟಕವು ಮೂರು, ಆರು, ಮತ್ತು ಒಂಭತ್ತು ಪೈಗಳಿಗನುಗುಣವಾಗಿ ಮತ್ತು ೧ರಿಂದ ೧೬ ಆಣೆಗಳ ವರೆಗೆ ನಯೇ ಪೈಸೆಗಳಲ್ಲಿ ಬೆಲೆಯನ್ನು ತಿಳಿಸುತ್ತದೆ. ನಡುವಿನ ಇತರ ಪೈಗಳಿಗೆ (ಉದಾ: ಏಳು ಪೈ, ಹನ್ನೊಂದು ಪೈ ಇತ್ಯಾದಿ) ನಯೇ ಪೈಸೆಗಳಲ್ಲಿ ಬೆಲೆಯನ್ನು ಹೇಳುವುದಿಲ್ಲ. ಈಗ ಪೈಗಳನ್ನು ಯಾವುದೇ ವ್ಯಾಪಾರದಲ್ಲಿ ಬಳಸುವುದು ಬಹಳ ವಿರಳ. ಪಾವಾಣೆಯೇ ಈಗಿನ ಕನಿಷ್ಠ ನಾಣ್ಯವಾಗಿ ಪರಿಣಮಿಸಿದೆ. (ಬೇಡುವವರಿಗೆ ಭಿಕ್ಷೆ ಕೊಡುವಾಗ ಮಾತ್ರ ಪೈಯನ್ನು ಉಪಯೋಗಿಸುವುದುಂಟು!) ಆದುದರಿಂದ ಸಾರ್ವಜನಿಕರ ನಿತ್ಯ ವ್ಯವಹಾರದ ಮಟ್ಟಿಗೆ ಈ ಕೋಷ್ಟಕವು ಯಥೇಷ್ಟ ಸಾಕು. ಬ್ಯಾಂಕು ಮತ್ತಿತರ ಸಂಘ ಸಂಸ್ಥೆಗಳ ಹಾಗು ಅಂಗಡಿಕಾರರ ಲೆಕ್ಕಪತ್ರಗಳಲ್ಲಿ ಪೈಗಳು ಅವಶ್ಯವಾಗಿಯೂ ಬರೆಯಲ್ಪಡುತ್ತವೆ. ಈ ವಿಶಿಷ್ಟ ವರ್ಗದವರಿಗಾಗಿ ಸರಕಾರವು ತಯಾರಿಸಿದುವ ೧ನೇ ನಂಬ್ರದ ಕೋಷ್ಟಕವು ಉಪಯುಕ್ತವಾಗಿದೆ. ಇದರಲ್ಲಿ ಪ್ರತಿ ಆಣೆ, ಮತ್ತು ಪ್ರತಿ ಪೈಗೆ ನಯೇ ಪೈಸೆಯಲ್ಲಿ ಬೆಲೆ ಹೇಳಲಾಗಿದೆ (ಉದಾ: ಏಳಾಣೆ ಹನ್ನೊಂದು ಪೈಯ ಬೆಲೆ ೪೯ ನಯೇ ಪೈಸೆ.) ಈ ಕೋಷ್ಟಕ ಬಹಳ ದೀರ್ಘವಾಗಿರುವುದರಿಂದ ಮತ್ತು ಜನಸಾಧಾರಣರಿಗಿದು ಅಷ್ಟು ಅಗತ್ಯವಿಲ್ಲವಾದುದರಿಂದ ನಾವದನ್ನು ಇಲ್ಲಿ ಕೊಟ್ಟಿಲ್ಲ

ನಾವು ಕೊಟ್ಟಿರುವ ಸರಳ ಕೋಷ್ಟಕವನ್ನು ಉಪಯೋಗಿಸುವುದು ಹೇಗೆ? ಉದಾಹರಣೆಯೊಂದನ್ನು ತೆಗೆದುಕೊಳ್ಳೋಣ—ಈಗಿನ ಐದಾಣೆ ಮತ್ತು ಆರು ಪೈಗೆ ಎಷ್ಟು ನಯೇ ಪೈಸೆಗಳಾಗುತ್ತವೆ? ಕೋಷ್ಟಕದಲ್ಲಿ ತೀರ ಎಡಗಡೆ ಮೇಲಿನಿಂದ ಕೆಳಗೆ ಆಣೆಗಳ ಸಂಖ್ಯೆಯನ್ನು ಕೊಡಲಾಗಿದೆ; ತೀರ ಮೇಲ್ಗಡೆಗೆ ಎಡದಿಂದ ಬಲಕ್ಕೆ ಪೈಗಳ ಸಂಖ್ಯೆಯನ್ನು ಕೊಡಲಾಗಿದೆ. ಬಾಕಿ ಎಲ್ಲ ಸಂಖ್ಯೆಯು ನಯೇ ಪೈಸೆಯನ್ನು ಸೂಚಿಸುತ್ತದೆ. ಐದಾಣೆ, ಆರು ಪೈಗೆ ಸಮಾನವಾದ ನಯೇ ಪೈಸೆ ಎಷ್ಟೆಂದು ಹುಡುಕಬೇಕಾದರೆ, ಆಣೆಗಳ ಸಾಲಿನಲ್ಲಿ ೫ ಎಂದು ಬರೆದ ಸಂಖ್ಯೆಯ ನೇರಕ್ಕೆ ಎಡದಿಂದ ಬಲಕ್ಕೆ ದೃಷ್ಟಿಹಾಯಿಸಬೇಕು; ಅದೇ ಹೊತ್ತಿಗೆ ಪೈಗಳ ಸಾಲಿನಲ್ಲಿ ೬ ಎಂದು ಬರೆದ ಸಂಖ್ಯೆಯ ನೇರಕ್ಕೆ ಮೇಲಿನಿಂದ ಕೆಳಗೆ ನೋಟ ಓಡಿಸಬೇಕು—ಆಗ ಇವೆರಡೂ ೩೪ ಎಂದು ನಯೇ ಪೈಸೆ ವಿಭಾಗದಲ್ಲಿ ಬರೆದಿರುವ ಸಂಖ್ಯೆಯ ಮೇಲೆ ಒಟ್ಟು ಕೂಡುತ್ತವೆ. ಈ ೩೪ ಎಂಬುದೇ ಐದಾಣೆ, ಆರು ಪೈಗೆ ಸಮಾನವಾದ ನಯೇ ಪೈಸೆ ಆಗಿರುತ್ತದೆ. ಹೀಗೆ ಯಾವುದೇ ಆಣೆ, ಪೈ ಬೆಲೆಯನ್ನು ಇದೇ ಪದ್ಧತಿಯನ್ನನುಸರಿಸಿ ಜನರು ನಿಮಿಷ ಮಾತ್ರದಲ್ಲಿ ತಿಳಿದುಕೊಳ್ಳಬಹುದು.

ಈ ಕೋಷ್ಟಕವನ್ನು ಯಾವುದೇ ವ್ಯಾಪಾರದಲ್ಲಿ ಹಣವನ್ನು ಕೊಡುವ ಗಳಿಗೆ ಬಂದಾಗ ಅನುಸರಿಸುವುದೇ ಸೂಕ್ತವಾದ ಕ್ರಮ. ಬೇರೆ ಬೇರೆ ಬೆಲೆಯ ಹಲವಾರು ವಸ್ತುಗಳನ್ನು ಕೊಂಡ-ಕೊಂಡ ತರುವಾಯ, ಅಥವಾ ಒಂದೇ ಬೆಲೆಯ ಹಲವು ವಸ್ತುಗಳನ್ನು ಖರೀದಿ ಮಾಡಿದ ತರುವಾಯ, ಇವೆಲ್ಲದಕ್ಕೆ ಒಟ್ಟಿಗೆ ಎಷ್ಟು ಹಣವಾಗುತ್ತದೆಂದು ನಿರ್ಧರಿಸಿ, ಈ ಒಟ್ಟು ಮೊಬಲಗಿಗೆ ಸಂಬಂಧಿಸಿನಂತೆ ನಯೇ

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸಿರಖು ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3⅓%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ



ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆಗಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು 1.

(3) ಅಂಬಿಕ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಪೈಸೆಗಳು ಎಷ್ಟಾಗುತ್ತವೆ ಎಂದು ಕಂಡು ಹಿಡಿಯುವುದೇ ವ್ಯಾಪಾರದಲ್ಲಿ ಅನುಸರಿಸಬೇಕಾದ ಸೂಕ್ತ ಕ್ರಮ. ಉದಾ: ಒಂದು ಪೆನ್ಸಿಲಿಗೆ ಒಂದಾಣೆ, ಆರು ಪೈ (ಅಥವಾ ಒಂದೂವರೆ ಆಣೆ) ಬೆಲೆ ಎಂದಿಟ್ಟುಕೊಳ್ಳೋಣ; ನಮಗೆ ಒಂದು ಡಜನು ಪೆನ್ಸಿಲು ಬೇಕು. ಆಗ ನಾವು ಒಂದು ಡಜನಿಗೆ ಎಷ್ಟು ನಯೇ ಪೈಸೆ ಕೊಡಬೇಕು? ಲೆಕ್ಕವನ್ನು ಈಗ ನಾವು ಮಾಡುವ ಕ್ರಮದಲ್ಲಿಯೇ ಮೊದಲು ಮಾಡಬೇಕು. ಅಂದರೆ ೩/೨ × ೧೨ = ೧೮ ಆಣೆ ಎಂಬುವೇ ಉತ್ತರ; ಅಂದರೆ ಒಂದು ರೂಪಾಯಿ, ಎರಡಾಣೆ ಎಂದಾಯಿತು. ರೂಪಾಯಿ ನಾಣ್ಯವು ದಶಮಾಂಶ ಪದ್ಧತಿಯಲ್ಲಿ ಸಹ ಅದೇ ಬೆಲೆಯನ್ನು ಅದೇ ಹೆಸರಿನಲ್ಲಿ ಪಡೆದಿರುತ್ತದೆ. ಎರಡಾಣೆಗೆ ಕೋಷ್ಟಕದ ಪ್ರಕಾರ ೧೨ ನಯೇ ಪೈಸೆಗಳಾಗುತ್ತವೆ. ಆದುದರಿಂದ ನಾವು ಕೊಡಬೇಕಾದ ಹಣ ಒಂದು ರೂಪಾಯಿ ಮತ್ತು ೧೨ ನಯೇ ಪೈಸೆ.

ಹೀಗೆ ಲೆಕ್ಕವನ್ನು ಮಾಡುವ ಬದಲು ಒಂದು ಪೆನ್ಸಿಲಿಗೆ ಒಂದೂವರೆ ಆಣೆ, ಅಂದರೆ ೯ ನಯೇ ಪೈಸೆ ಎಂದೂ ಡಜನು ಪೆನ್ಸಿಲಿಗೆ ೯ × ೧೨ = ೧೦೮ ನಯೇ ಪೈಸೆಗಳೆಂದೂ ಲೆಕ್ಕ ಹಾಕುವುದು ಸರಿಯಾದ ಕ್ರಮವಲ್ಲ. ನಯೇ ಪೈಸೆಗಳಿಗೂ ಈಗಿನ ಪೈ, ಪಾವಾಣೆಗಳಿಗೂ ಸಂಬಂಧವನ್ನು ಜೋಡಿಸುವಾಗ ಅವುಗಳಿಗೆ ಸರಿಸಮಾನವಾದ ಬೆಲೆಯನ್ನೇ ಎಲ್ಲೆಡೆಯಲ್ಲೂ ಕೊಡುವುದು ಸಾಧ್ಯವಾಗಿಲ್ಲ. ಉದಾ: ಈಗಿನ ಒಂದಾಣೆಯ ಬೆಲೆಯು ನಿಜವಾಗಿ ೬ ಪೈಸೆಗಿಂತಲೂ ೧/೪ ಪೈಸೆಯಷ್ಟು ಹೆಚ್ಚಾಗಿದೆ. ೧೯೫೫ನೇ ಭಾರತೀಯ ನಾಣ್ಯಗಳ (ತಿದ್ದುಪಡಿ) ಶಾಸನದ ೧೪ (೨) ನೇ ಸೂತ್ರದಲ್ಲಿ ಹೇಳಿದ ಪ್ರಕಾರವಾಗಿ "ಪೂರ್ಣಾಂಕದೊಡನೆ ಹೊಂದಿಸಿ" (rounding off) ಈ ಬೆಲೆಗಳ ಸಂಬಂಧವನ್ನು ಜೋಡಿಸಲಾಗಿದೆ. ಆದುದರಿಂದ ಪ್ರಸ್ತುತ ಉದಾಹರಣೆಯಲ್ಲಿ ನಾಲ್ಕು ಪೈಸೆಗಳಷ್ಟು ವ್ಯತ್ಯಾಸಕ್ಕೆ ಅವಕಾಶವಾಯಿತು ಹೀಗೆ ಬೆಲೆಗಳಲ್ಲಿ ಹೆಚ್ಚು ಕಡಿಮೆಗಳಾಗಿ ಗ್ರಾಹಕರಾಗಲೀ ವ್ಯಾಪಾರಿಯಾಗಲೀ—ತೀರ ಹೆಚ್ಚಿನ ನಷ್ಟಕ್ಕೆ ಒಳಪಡದಂತಾಗಲು ಸರಕಾರವು ವಿಧಿಸಿರುವ ಸಮಂಜಸ ಕ್ರಮವನ್ನೇ (ನಾವು ಮೊದಲು ವಿವರಿಸಿದಂತೆ) ಅನುಸರಿಸಬೇಕು. ಇಷ್ಟಾಗಿಯೂ ಕೆಲವು ಸಂದರ್ಭಗಳಲ್ಲಿ ಉಭಯ ಪಕ್ಷಗಳಲ್ಲೊಬ್ಬರಿಗೆ ನಷ್ಟವಾಗಬಹುದು—ಆಗ ಅದು ಪ್ರತಿಪಕ್ಷಕ್ಕೆ ಆದ ಲಾಭವೆಂದು ಸಮಾಧಾನಪಟ್ಟುಕೊಂಡು ಮಧ್ಯಾವಧಿಯಲ್ಲಿ ದಿನತಳ್ಳುವುದೇ ಲೇಸು—ಬೇರೇನೂ ಉಪಾಯವಿಲ್ಲ!

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N/50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈ ಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಮನನೊಂದ ಮರಾಠರ ಮನೋಭಾವನೆ

ನೆಹರುಗಳ ಹೇಳಿಕೆಯಿಂದ ಬೇಸರಿಸಿದ ಧುರೀಣರ ರಾಜೀನಾಮೆ

ಮರಾಠರ ಪಾಲಿಗೆ ಭಾರತ ಸರಕಾರವು ಮುಂಬಯಿ ನಗರದ ಕುರಿತು ವಹಿಸಿರುವ ನಿಲುಮೆಯು ತೀರ ಅಪ್ರಿಯವೆನಿಸಿದೆ. ಮುಂಬಯಿಯು ನ್ಯಾಯವಾಗಿ ಮಹಾರಾಷ್ಟ್ರದ ಅಂಗವಾಗಿದೆ ಎಂದು ತಾವು ಸ್ವತಃ ಒಪ್ಪುತ್ತಿದ್ದರೂ ನೆಹರುಗಳು ಅದನ್ನು ಮಹಾರಾಷ್ಟ್ರದಲ್ಲಿ ಸೇರಿಸಲು ಒಪ್ಪದಿರುವುದನ್ನು ಅರ್ಥ ಮಾಡಿಕೊಳ್ಳುವುದೇ ಮರಾಠರಿಗೆ ಕಷ್ಟವಾಗಿದೆ ಐದು ವರ್ಷಗಳ ಬಳಿಕ ಈ ನಗರದ ನಾಗರಿಕರಿಗೆ ಭವಿಷ್ಯತ್ತಿನ ವಿಷಯದಲ್ಲಿ ನಿರ್ಧಾರ ಕೈಗೊಳ್ಳುವ ಅವಕಾಶವೊದಗಿಸಲಾಗುವುದು, ಈಗ ಕಾಲವು ಇದಕ್ಕೆ ಪಕ್ವವಾಗಿಲ್ಲ ಎಂಬ ನೆಹರೂರ ವಾದಸರಣಿಯನ್ನು ಅನುಸರಿಸುವುದು ಸಹ ಸಾಮಾನ್ಯ ಮರಾಠರಿಗಿಂತಲೋ ಮರಾಠರ ಮುಖಂಡರಿಗೂ ಸಾಧ್ಯವಾಗುತ್ತಿಲ್ಲ.

ಆಕ್ಷೇಪದ ಉದ್ಗಾರ

ಸಂಸತ್ತಿನ ಮುಂದೆ ರಾಜ್ಯಗಳ ಪುನಾರಚನೆಯ ಇಡೀ ಪ್ರಶ್ನೆಯು ಇರುತ್ತಾ ಪ್ರಧಾನಿ ನೆಹರುಗಳು ಸಾರ್ವಜನಿಕ ಸಭೆಯಲ್ಲಿ ಮುಂಬಯಿ ನಗರದ ಕುರಿತು ಆಡಿರುವ ಮಾತುಗಳು ಕ್ರಮಬದ್ಧವೇ—ಎಂದು ಪ್ರಜಾಪ್ರಭುತ್ವದ ಕೈವಾರಿಗಳು ಆಕ್ಷೇಪವೆತ್ತಿದ್ದಾರೆ. ನ್ಯಾಯಾಲಯದ ಮುಂದಿರುವ ಯಾವುದಾದರೊಂದು ವಿಷಯದ ಕುರಿತು ಬಹಿರಂಗವಾಗಿ ಅಭಿಪ್ರಾಯ ಪ್ರಕಟಿಸುವುದು ಹೇಗೆ ಕ್ರಮವಿರುದ್ಧವೆನಿಸುವುದೋ ಹಾಗೆಯೇ ಪರಿಶೀಲಕ ಸಮಿತಿಯು ಪರ್ಯಾಲೋಚನೆ ಮಾಡುತ್ತಿರುವ ವಿಷಯದ ಕುರಿತು ಪ್ರಧಾನಿ ಸ್ಥಾನದಂಥ ಜೊಣೆಗಾರ ಪದವಿಯಲ್ಲಿರುವವರು ಆದೇಶ ಕೊಡುವ ಹಾಗಿನ ಮಾತುಗಳನ್ನಾಡುವುದು ಸಲ್ಲದು— ಎನ್ನಲಾಗುತ್ತದೆ.

ಟೀಕೆಯಲ್ಲಿ ನ್ಯಾಯವಿಲ್ಲ

ಮೇಲಿನ ಆಕ್ಷೇಪದಲ್ಲಿ ವಿಮರ್ಶೆ ಮಾಡಿದರೆ ಹುರುಳು ಸಿಗಲಾರದು—ನೆಹರುಗಳು "ಮುಂಬಯಿಯನ್ನು ಮಹಾರಾಷ್ಟ್ರದಲ್ಲೀಗ ಸೇರಿಸುವುದಿಲ್ಲ" ಎಂದು ಹೇಳಿದ ಮಾತು ಆಕ್ರಮವಾದ ಪಕ್ಷದಲ್ಲಿ, "ಮುಂಬಯಿಯನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕು" ಎಂದು ಮಹಾರಾಷ್ಟ್ರದ ಜನರೂ ಧುರೀಣರೂ ಕೇಳಿಕೆಯನ್ನು ಬಹಿರಂಗವಾಗಿ ಮುಂದಿಡುವುದು ಸಹ ತಪ್ಪೇ ಆಗುತ್ತದೆ. ನ್ಯಾಯವು ಈ ವಿಷಯದಲ್ಲಿ ಪಕ್ಷಪಾತ ಮಾಡುವದಕ್ಕೆ ಎಡೆ ಕೊಡುವುದಿಲ್ಲ. ನಮ್ಮಲ್ಲಿ ನಡೆದು ಬಂದ ಸಂಪ್ರದಾಯದಂತೆ, ಸಂಸತ್ತಿನಲ್ಲಿ ಚರ್ಚೆಯಾಗುತ್ತಿರುವಾಗಲೂ ಅದು ಕೊನೆಯ ನಿರ್ಣಯವನ್ನು ಸ್ವೀಕರಿಸಿದ ಬಳಿಕವೂ ಯಾವದೇ ವಿಷಯದ ಮೇಲೆ ವ್ಯಕ್ತಿಗೆ ತನ್ನ ಅಭಿಪ್ರಾಯವನ್ನು ಪ್ರಕಟಿಸುವುದಕ್ಕೆ ಸ್ವಾತಂತ್ರ್ಯವಿದೆ—ಅದು ಅಪರಾಧದ ಮಟ್ಟವನ್ನು ಮುಟ್ಟದಿದ್ದರೆ ಸರಿ!

ಮನನೊಂದ ಮರಾಠರು

ನೆಹರುಗಳ ಹೇಳಿಕೆಯಿಂದ ಮನನೊಂದ ಮರಾಠ ಕಾಂಗ್ರೆಸಿಗರು ಪುಣೆಯಲ್ಲಿ ಕಳೆದ ವಾರ ಅಧಿವೇಶನವನ್ನು ಜರಗಿಸಿದರು. ಇಲ್ಲಿ ಧುರೀಣರಲ್ಲಿ ಮತ್ಯೈಕ್ಯವಾಗಲಿಲ್ಲ. ಹೀಗಾಗಿ ಪ್ರದೇಶ ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯೇ ಒಮ್ಮತದ ಗೊತ್ತುವಳಿಯೊಂದನ್ನು ಮುಂದಿಡುವುದಕ್ಕೆ ಸಾಧ್ಯವಾಗಲಿಲ್ಲ. ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರೂ ಶ್ರೀ ಚವ್ಹಾಣರಂಥ ಮಂತ್ರಿಗಳೂ ಮುಂಬಯಿ ನಗರದ ವಿಷಯದಲ್ಲಿ ನೆಹರೂ ತೆಗೆದುಕೊಂಡಿರುವ ನಿಲುಮೆಯನ್ನು ವಿಷಾದಕರವೆಂದು ವರ್ಣಿಸಿದರು. ಮರಾಠರು ಕಿಡಿಗೇಡಿ ವರ್ತನೆಗಳಲ್ಲಿ ನಿರತರಾದುದಕ್ಕೂ ಅವರು ವ್ಯಸನಿಸಿದರು. ಇನ್ನಾದರೂ ವರಿಷ್ಠರಿಗೆ ಬುದ್ಧಿ ಬರಲಿ ಎಂದು ಹಾರೈಸಿದರು; ಜನರಿಗೆ ಸಂಯಮದ ಉಪದೇಶ ನೀಡಿದರು.

ಪ್ರದೇಶ ಕಾಂಗ್ರೆಸಿನ ಗೊತ್ತುವಳಿ

ಆದರೆ ಜನರ ಮನೋಭಾವನೆ ಹೇಗೆ ಹರಿಯುತ್ತದೆ ಮತ್ತು ಜನರ ಪ್ರತಿನಿಧಿಗಳೆನಿಸುವವರಲ್ಲಿಯೂ ಹಲವರ ಭಾವನೆ ಹೇಗೆ ಪ್ರವಹಿಸುತ್ತದೆ ಎಂಬುದರ ದಿಗ್ದರ್ಶನವು ಅಲ್ಲಿ ಅಂತಿಮವಾಗಿ ಕೈಗೊಂಡ ನಿರ್ಣಯದಿಂದ ದೊರೆಕುತ್ತದೆ. ಮುಂಬಯಿ ಸರಕಾರದ ಕಂದಾಯ ಮಂತ್ರಿ ಶ್ರೀ ಹಿರೆಯವರು ನ್ಯಾಯವಾಗಿ ಮಹಾರಾಷ್ಟ್ರದಲ್ಲಿ ಸೇರಿಸಲ್ಪಡಬೇಕಾದ ಪ್ರದೇಶಗಳ ವಿಷಯದಲ್ಲಿ ಭಾರತ ಸರಕಾರ ವಹಿಸಿದ ನಿಲುಮೆ ಶೋಚನೀಯವೆಂದರು; ಅಷ್ಟೇಯಲ್ಲ, ಸರಕಾರಿ ಸ್ಥಾನಗಳಿಗೆ ರಾಜೀನಾಮೆಯನ್ನಿತ್ತು ಜನರಲ್ಲಿ ಬೆರೆತು, ಅವರಿಗೆ ಮಾರ್ಗದರ್ಶನ ಮಾಡಬಯಸುವವರಿಗೆ ಅವಕಾಶವೀಯಬೇಕು ಎಂದೂ ಪ್ರತಿಪಾದಿಸಿದರು. ಈ ಆಶಯದ ಗೊತ್ತುವಳಿಯು ಬಹುಮತದಿಂದ ಸ್ವೀಕಾರವಾಯಿತು.

ಹಿರೆಯವರ ರಾಜೀನಾಮೆ?

ಪರಿಣಾಮದಲ್ಲಿ ಶ್ರೀ ಹಿರೆಯಂಥವರು ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಸಂಭವ ಹೆಚ್ಚಾಗಿದೆ— ಇದು ಕಾಂಗ್ರೆಸಿನ ಶಿಸ್ತಿಗೆ ವಿರೋಧವಾಗಿಲ್ಲ; ಕಾಂಗ್ರೆಸಿನ ವಿಷಯದಲ್ಲಿ ಜನರ ಅಭಿಪ್ರಾಯವನ್ನು ಸಂಘಟಿಸುವುದೇ ತನ್ನ ನಿಲುಮೆಯು ತಿರುಳು ಎಂದಿದ್ದಾರೆ ಹಿರೆ. ಶ್ರೀ ಗಾಡ್ಗೀಳರು ತಾನು ಸಂಸತ್ತಿನಲ್ಲಿ ಮುಂಬಯಿಯನ್ನು ಮಹಾರಾಷ್ಟ್ರದಲ್ಲಿರಿಸಬೇಕೆಂದು ತಿದ್ದುಪಡಿ ಮಂಡಿಸುವುದಾಗಿಯೂ ಈ ಪ್ರಯತ್ನಕ್ಕೆ ಯಶಸ್ಸು ಸಿಗದಿದ್ದರೆ ವಿಧೇಯಕಕ್ಕೆ ವಿರುದ್ಧ ಮತವನ್ನಿತ್ತು ಮುಂದಿನ ಕ್ರಮ ಕೈಗೊಳ್ಳುವುದಾಗಿಯೂ ಹೇಳಿದ್ದಾರೆ. ಇದು ರಾಜೀನಾಮೆಯಾಗಬಹುದು; ಅಥವಾ ಕಾಂಗ್ರೆಸಿನಿಂದ ಪ್ರತ್ಯೇಕ ಉಳಿಯುವುದೂ ಆದೀತು.

ದೇಶಮುಖರು ಏನಂತೆ?

ರಾಜೀನಾಮೆಯ ವಿಷಯದಲ್ಲಿ ಪುನಃ ಸ್ಪಷ್ಟವಾಗಿ ಕೇಳಿ ಬರುತ್ತಿರುವ ಸಂಗತಿಗಳು ಭಾರತ ಸರಕಾರದ ಅರ್ಥ ಸಚಿವ ಶ್ರೀ ಸಿ. ಡಿ. ದೇಶಮುಖರ ಸುತ್ತ ಕೇಂದ್ರಿತವಾಗಿವೆ. ಮುಂಬಯಿ ಪ್ರಶ್ನೆಯ ಬಗ್ಗೆ ಇವರಿಗೂ ಭಾರತ ಸರಕಾರಕ್ಕೂ ತೀವ್ರ ಭಿನ್ನಾಭಿಪ್ರಾಯವಿರುವುದು ಎಂದೋ ವ್ಯಕ್ತವಾಗಿದೆ. ತಾನು ಮತದಾರರ ಅಭಿಪ್ರಾಯದಂತೆ ನಡೆದುಕೊಳ್ಳಬೇಕಾಗಿದೆ; ಮನಸ್ಸಾಕ್ಷಿಗನುಸಾರ ಕರ್ತವ್ಯ ನಿರ್ವಹಿಸಬೇಕಾಗಿದೆ. ಪಕ್ಷದ ಶಿಸ್ತಿನ ಬಂಧನ ಅಥವಾ ಸರಕಾರದ ಸಾಮೂಹಿಕ ಹೊಣೆಗಾರಿಕೆಯು ಪ್ರಶ್ನೆಗೆ ಸಲ್ಲುವ ಸ್ಥಾನ ಅನಂತರದ್ದೆಂದು ಶ್ರೀ ದೇಶಮುಖರು ಹೇಳುತ್ತಾ ಬಂದಿದ್ದಾರೆ.

ಅರಿತ ವೃತ್ತಗಳಿಗನುಸಾರ—

ಈಗ ನೆಹರುಗಳು ಪುನಃ ಹೇಳಿಕೆ ನೀಡಿ, ಮುಂಬಯಿ ನಗರದ ಕುರಿತು ಭಾರತ ಸರಕಾರದ ನಿರ್ಣಯ ಬದಲಾಗುವ ಸಂಭವವಿಲ್ಲವೆಂಬುದನ್ನು ಸ್ಪಷ್ಟಗೊಳಿಸಿರುವುದರಿಂದ, ದೇಶಮುಖರು ನಿಶ್ಚಯವಾಗಿಯೂ ರಾಜೀನಾಮೆ ಕೊಟ್ಟು ಮಂತ್ರಿಮಂಡಳದಿಂದ ಹೊರ ಬರುವರೆಂದು ತಿಳಿದು ಬರುತ್ತದೆ, ಶ್ರೀ ನೆಹರುಗಳು ತಮ್ಮ ಪಾಶ್ಚಾತ್ಯ ರಾಷ್ಟ್ರಗಳ ಪ್ರವಾಸದಿಂದ ಮರಳಿ ಬಂದ ಬಳಿಕ ದೇಶಮುಖರು ರಾಜೀನಾಮೆ ಕೊಡುವರೆಂದೂ ಇದಕ್ಕೆ ಮುಂಚೆ ಸಂಸತ್ತಿನ ಮುಂದೆ ತಮ್ಮ ರಾಜೀನಾಮೆಯ ಮೇಲೆ ಪ್ರಕಾಶ ಚೆಲ್ಲುವ ಹೇಳಿಕೆ ಕೊಡುವ ಸಂಭವವಿದೆಯೆಂದೂ ಅರಿತ ವೃತ್ತಗಳು ಹೇಳುತ್ತವೆ.

ಸಮರ್ಥ ಅರ್ಥಸಚಿವ

ಶ್ರೀ ದೇಶಮುಖರು ರಾಜೀನಾಮೆ ಕೊಟ್ಟು ಹೊರ ಬಂದರೆ, ಅರ್ಥ ಮಂತ್ರಿ ಸ್ಥಾನಕ್ಕೆ ಯಾವ ಸಮರ್ಥರು ಬರುವರೆಂದು ಈಗ ಖಚಿತವಾಗಿಲ್ಲ. ಪಂಡಿತ ಪಂತರ ಹೆಸರು ಕೇಳಿ ಬರುತ್ತಿದ್ದರೂ ಅರ್ಥ ಸಚಿವರಂಥ ಸ್ಥಾನಕ್ಕೆ ಅಧ್ಯರೇ ಬೇಕೆಂಬುದು ಸ್ಪಷ್ಟ. ಡಾ. ಜಾನ್ ಮಥ್ಥಾಯವರು ರಾಜೀನಾಮೆ ಕೊಟ್ಟು ತೆರವಾಗಿದ್ದ ಅರ್ಥ ಸಚಿವಸ್ಥಾನಕ್ಕೆ ಆಗ ಪ್ರತ್ಯೇಕ ಶಾಖೆ ಇಲ್ಲದಿದ್ದ ಶ್ರೀ ಗೋಪಾಲ ಸ್ವಾಮಿ

(೮ನೇ ಪುಟ ನೋಡಿರಿ)

PT. AMBLAY RAMASWAMIER'S 98 Yrs. Renowned Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow *in the Urine*, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.

628, "SANTHANA SINDHURA SADANA"

Hundred Ft. Road, Rice Mill Cross, MYSORE (South India).

NAVAYUGA

Popular Kannada Weekly

Founder:—

Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೧-೬-'೫೬	೪೨

ಜನಾಂಗದ ಮುಖಭಂಗ

ರಾಜಾಜಿಯವರು ಮದ್ರಾಸಿನಲ್ಲಿ ಸುದ್ದಿಸಂಸ್ಥೆಯೊಂದರ ಪ್ರತಿನಿಧಿಯೊಡನೆ ಇದೇ ೧೭ನೇ ತಾರೀಕಿನಂದು ಮಾತನಾಡುತ್ತಾ ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಇನ್ನೈದು ವರ್ಷಗಳ ವರೆಗೆ ಮುಂದೂಡಬೇಕೆಂದೂ ಹೀಗೆ ಉದ್ರಿಕ್ತ ಭಾವನೆಗಳು ತಣ್ಣಗಾಗುವುದಕ್ಕೆ ಮತ್ತು ದೇಶದಲ್ಲಿ ವಿವೇಕ ಶೀಲತೆಯೇ ವಿಜಯ ಪಡೆಯುವುದಕ್ಕೆ ಅವಕಾಶಮಾಡಿಕೊಡಬೇಕೆಂದೂ ಸಲಹೆ ಮಾಡಿದ್ದಾರೆ. ನಂಬಿಕೆಗೂ ನಡತೆಗೂ ನಿರಂತರ ಘರ್ಷಣೆಯಾಗುತ್ತಿರುವುದು ಆರೋಗ್ಯದ ಲಕ್ಷಣವಲ್ಲ; ಒಳ್ಳೆಯ ಹಾಗು ಭದ್ರವಾದ ಆಡಳಿತಕ್ಕೆ ನಾವೇನು ಸರಿ ಎಂದು ತಿಳಿದಿರುವೆವೋ ಅದಕ್ಕೂ ನಾವೇನು ಮಾಡಲು ಹೋಗುತ್ತೇವೋ ಆ ಕಾರ್ಯಕ್ಕೂ ನಡುವೆ ಸಾಮರಸ್ಯವಿರುವುದು ಅತ್ಯಾವಶ್ಯಕವಾದ ವಿಷಯ ಎಂದು ರಾಜಾಜಿಯವರು ಹೇಳಿ, ಈಗ ರಾಜ್ಯಗಳ ಪುನಾರಚನೆಯನ್ನು ಮಾಡಲು ಹೋಗುವುದೆಂದರೆ ಸರಕಾರಿ ಧುರೀಣರು ತಮ್ಮ ನಂಬಿಕೆಗೆ ದ್ರೋಹ ಬಗೆದಂತೆಯೇ ಎಂದು ಧ್ವನಿಸಿದ್ದಾರೆ. ಉದಾಹರಣೆಯೊಂದನ್ನು ಈ ಸಂದರ್ಭದಲ್ಲಿ ಕೊಡುತ್ತಾ ರಾಜಾಜಿಯವರು ಮುಂಬಯಿ ನಗರವು ಕೇಂದ್ರದ ನೇರ ಆಡಳಿತೆಯನ್ನು ಸ್ವೀಕರಿಸಿ, ಕೊನೆಯ ನಿರ್ಣಯದ ಮಟ್ಟಿಗೆ ಐದು ವರ್ಷಗಳ ವರೆಗೆ ಕಾದು ಕುಳಿತಿರ ಬೇಕಾದರೆ, ರಾಜ್ಯ ಪುನಾರಚನೆಯ ಪ್ರಶ್ನೆಯನ್ನೆ ಇನ್ನೈದು ವರ್ಷ ಅಮಾನತಿಡುವುದರಲ್ಲಿ ತಪ್ಪೇನು ಎಂದು ಕೇಳಿದ್ದಾರೆ. "ಬಹಳ ತಡವಾಯಿತು" ಎಂಬ ಉತ್ತರವೊಂದೇ ಈ ಪ್ರಶ್ನೆಗೆ ಬಂದೀತೆಂದೂ ಆದರೆ ಈಗ ಚರ್ಚೆ ಮತ್ತು ಭಾವನಾಪರವಶತೆಗಿಂತ ಹೆಚ್ಚಿನದೇನೂ ನಡೆದಿಲ್ಲವಾದುದರಿಂದ ಹೆಜ್ಜೆ ಮುಂದಿಟ್ಟಿದ್ದೇವೆಂದು ನಿರುಪಾಯತೆಯನ್ನು ತೋರಿಸಿ ರಾಜ್ಯಗಳ ಪುನಾರಚನೆಗೆ ಕೈಯಿಕ್ಕಬೇಕಾಗಿಲ್ಲವೆಂದೂ ರಾಜಾಜಿಯ ಅಭಿಪ್ರಾಯ. ಅವರ ದೃಷ್ಟಿಯಲ್ಲಿ ಭಾರತವು ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಶಾಂತ ರೀತಿಯಲ್ಲಿ ಪರಿಶೀಲಿಸಿದರೆ ತೋರುವ ಮಾರ್ಗಗಳು ಕೇವಲ ಎರಡು:(೧) ಯಾವುದೇ ವಿಶಿಷ್ಟ ಜಾತಿ, ವರ್ಗ ಅಥವಾ ಭಾಷಾ ಪ್ರದೇಶದ ಹಿತಾಸಕ್ತಿಯೊಂದನ್ನೆ ಧ್ಯೇಯವಾಗಿಟ್ಟುಕೊಳ್ಳದೆ, ಅಲ್ಪ ಸಂಖ್ಯಾಕ ವರ್ಗದ ಭದ್ರತೆಯನ್ನು ಕೆಡಿಸದೆ, ಏಳ್ಗೆ ಹಾಗು ಸಂಪೂರ್ಣ ಭೌತಿಕ ಅಭಿವೃದ್ಧಿಯನ್ನು ಸಾಧಿಸುವುದೇ ಧ್ಯೇಯವಾಗುಳ್ಳ ಸರಕಾರ ಹಾಗು ಶಾಸನಾಂಗದ ಪ್ರತಿನಿಧಿಗಳಿರುವ "ವಿಶಾಲ" ರಾಜ್ಯಗಳನ್ನು ರೂಪಿಸುವುದು ಅಥವಾ (೨) ಇಡೀ ಭಾರತವನ್ನೆ ಜಿಲ್ಲೆಗಳಾಗಿ ವಿಂಗಡಿಸಿ, ಪ್ರತಿಯೊಂದು ಜಿಲ್ಲೆಗೂ ಅಧಿಕಾರಿಯೊಬ್ಬನಿದ್ದು, ಆತನು ಈ ಜಿಲ್ಲೆಯ ಆಡಳಿತಕ್ಕೆ ಸಂಪೂರ್ಣ ಹೊಣೆಗಾರನಾಗಿರುವಂತೆಯೂ ಕೇಂದ್ರ ಸರಕಾರದ ಆದೇಶವನ್ನು ಸದಾ ಪಾಲಿಸುತ್ತಿರುವಂತೆಯೂ ಕೇಂದ್ರ ಶಾಸನಾಂಗವೊಂದೇ ಅಸ್ತಿತ್ವದಲ್ಲಿರುವಂತೆಯೂ ಆಗುವ ಏಕ ಘಟಕ ವಿಧಾನವನ್ನು ಅನುಸರಿಸುವುದು—ಇವೇ ಅವೆರಡು ಉಪಾಯಗಳು. ರಾಜಾಜಿಯು ಸೂಚನೆಗಳನ್ನು ನೀಡಲು ಅರ್ಹತೆಪಡೆದಿರುವರು ಮತ್ತು ಅವರಿಗೆ ಆ ಮಟ್ಟಿಗಿರುವ ಸ್ವಾತಂತ್ರ್ಯವು ಪ್ರಶ್ನಾತೀತವಾದುದು ಎಂಬ ಬಗ್ಗೆ ನಮಗೇನೂ ಆಕ್ಷೇಪವಿಲ್ಲ. ಆದರೆ ದೇಶವೂ ಜನತೆಯೂ ಕಳೆದ ೩೦ ವರ್ಷಗಳಿಗೂ ಮೇಲ್ಪಟ್ಟು ಕ್ರಮಿಸಿ ಬಂದ ದಾರಿಯು ತಪ್ಪೆಂದು ಸಿದ್ಧಮಾಡಿ ತೋರಿಸಲು ಅವರು ಕೊಡುವ ಕಾರಣಗಳು ನಂಬಿಕೆಯನ್ನು ಹುಟ್ಟಿಸುವಷ್ಟು ಯೋಗ್ಯತೆಯಿಂದ ಕೂಡಿಲ್ಲ. ಭಾವೋದ್ರೇಕವನ್ನು ರಾಜ್ಯಗಳ ಪುನಾರಚನೆಯ ಪ್ರಶ್ನೆ ಹುಟ್ಟಿಸಿದೆ—ಆದುದರಿಂದ ಈ ಉದ್ರಿಕ್ತಭಾವನೆಗಳು ತಣ್ಣಗಾಗುವುದಕ್ಕೆ ಐದು ವರ್ಷಗಳ ಅವಧಿಯನ್ನು ಕೊಡೋಣ ಎಂಬವರ ನಿಲುಮೆಯಾಗಿದೆ. ಮುಂಬಯಿ ನಗರದ ವಿಷಯದಲ್ಲಿ ಪ್ರಧಾನಿಗಳು ಜನರ ಮೇಲೆ ಭಾರತ ಸರಕಾರದ ನಿರ್ಣಯ (ಅದು ಎಷ್ಟೇ ಅಸಮಂಜಸವಾದುದಾಗಿರಲಿ)ವನ್ನು ಹೇರಲು ಈಗ (ಅವರ ಬತ್ತಳಿಕೆಯ ಬೇರೆ ಎಲ್ಲ ಬಾಣಗಳೂ ವಿಫಲಗೊಂಡ ಬಳಿಕ) ಆಧರಿಸಿರುವ (ಕು)ತರ್ಕವೂ ಇದೇ ಮಾದರಿಯದಾಗಿದೆ. ಇನ್ನೈದು ವರ್ಷಗಳ ಬಳಿಕವಾದರೂ ಮುಂಬಯಿ ನಗರದ ಕುರಿತು ಉದ್ರಿಕ್ತರಾಗಿರುವ ಮಹಾರಾಷ್ಟ್ರೀಯರ ಮನೋಭಾವನೆಯು ಶಾಂತವಾಗುವುದೆಂದು ಹೇಳಲು ಆಧಾರವೇನು? ತ್ರಿಶಂಕು ಸ್ವರ್ಗದಂಥ ಅನಿಶ್ಚಿತ ಪರಿಸ್ಥಿತಿಯಲ್ಲಿರುವಷ್ಟು ದಿನವೂ ಮನೋಭಾವನೆಗಳು ತಲ್ಲಣಗೊಂಡಿರುತ್ತವೆ; ಅವು ಶಾಂತವಾಗುವುದಿಲ್ಲ—ಸದಾ ಗೊಂದಲಮಯವಾಗಿರುತ್ತವೆ. ಇದು ಮನೋವಿಜ್ಞಾನದ ಸಾಮಾನ್ಯ ಪರಿಜ್ಞಾನವಿದ್ದವರೂ ಒಪ್ಪಬೇಕಾದ ವಿಷಯ. ಪ್ರೋತ್ಸಾಹಕರವಾದ ವಾತಾವರಣವಿಲ್ಲದಿದ್ದರೆ ಭಾವೋದ್ರೇಕಗಳು ತಮ್ಮಷ್ಟಕ್ಕೆ ಶಮನ ಹೊಂದುತ್ತವೆ ಎಂಬುದೇನೂ ನಿಜ. ಆದರೆ ಮುಂಬಯಿ ನಗರವು ಕೇಂದ್ರಾಧೀನ ಪ್ರದೇಶವಾಗಿ ಆಳಲ್ಪಡುವುದೇ ಉರಿಯುವ ಬೆಂಕಿಯ ಜ್ವಾಲೆಗೆ ತುಪ್ಪವಾಗುತ್ತದೆ! ಮುಂಬಯಿ ಮಹಾರಾಷ್ಟ್ರದಲ್ಲಿಲ್ಲವಲ್ಲವೆಂಬ ಕೊರಗೇ ಭಾವನೆಗಳು ತಣಿಯದಂತೆ ತಡೆಗಟ್ಟುತ್ತದೆ. ಆದುದರಿಂದ ಭಾವಾವೇಗದ **ಮಾತನ್ನೆತ್ತಿ**, ರಾಜ್ಯಗಳ ಪುನಾರಚನೆ, ಮುಂಬಯಿ ನಗರದ ಭವಿಷ್ಯ ಮುಂತಾದ ವಿಷಯಗಳಲ್ಲಿ ನಿರ್ಣಯವೊಂದನ್ನು ಹೇಳಲು ಅಥವಾ ಹೇರಲು ಹೋಗುವುದು ರಾಜಕೀಯ ಮುತ್ಸದ್ದಿತನವಲ್ಲ; ದಿವಾಳಿತನ! ಮುಂಬಯಿ ನಗರದ ವಿಷಯದಲ್ಲಿ ಭಾರತ ಸರಕಾರವೂ (ಕಾಂಗ್ರೆಸಿನ ವರಿಷ್ಠರೂ) ಈಚೆಗಿನ ವರ್ಷಗಳಲ್ಲಿ ಮಾಡಿದ ತಪ್ಪುಗಳನ್ನೆ ಸುಧಾರಿಸುವುದು ಸಾಧ್ಯವಿಲ್ಲವೆಂದಾದರೆ, ರಾಜ್ಯಗಳ ಪುನಾರಚನೆಯಂಥ ಪ್ರಶ್ನೆಯ ಸಂಗತಿಯಲ್ಲಿ ಬಹಳ ಹಳೆಯ ಕಾಲದಲ್ಲಿ ಮಾಡಿದ "ತಪ್ಪು" ಈಗ ತಿದ್ದಲ್ಪಡಬೇಕೆಂದು ಕೇಳುವುದರಲ್ಲಿ ವ್ಯಾವಹಾರಿಕತೆಯೇ ಇಲ್ಲವೆನ್ನಬೇಕಾಗುತ್ತದೆ. ಜೆವಿಪಿ ವರದಿಯೇ, ಮುಂಬಯಿ ನಗರದ ಭವಿಷ್ಯತ್ತನ್ನು ದ್ವಂದ್ವಮಯ ವಿಷಯವಾಗಿ ಮಾಡಿತು; ಫಜಲಾಲಿ ಆಯೋಗವು ಹೆಚ್ಚಿನ ಪ್ರಸಂಗಗಳಲ್ಲಿ ಏಕ ಭಾಷೆಯ ಘಟಕಗಳನ್ನು ಶಿಫಾರಸು ಮಾಡಿ, ಮುಂಬಯಿ ನಗರದ ಪ್ರಶ್ನೆ ಬಂದಾಗ ನ್ಯಾಯವಾಗಿ ಅದು ಸಲ್ಲಬೇಕಾಗಿದ್ದ ಮಹಾರಾಷ್ಟ್ರೀಯರಿಗೂ ಗುಜರಾಥಿಗಳಿಗೂ (ವಿದರ್ಭ ರಹಿತ) ದ್ವಿಭಾಷಾ ರಾಜ್ಯದ ಕೊಡುಗೆಯನ್ನಿತ್ತಿತು. ಈ ತಪ್ಪನ್ನ ಸ್ವಲ್ಪ ಮಟ್ಟಿಗಾದರೂ ತಿದ್ದಲು ಪ್ರಯತ್ನಿಸಿ ವಿದರ್ಭ ಸಹಿತವಾದ ಎಲ್ಲ ಮರಾಠಿ ಭಾಷೆಯ ಪ್ರದೇಶವನ್ನೂ ಗುಜರಾಥಿ ಭಾಷೆಯಾಡುವ ಪ್ರದೇಶವೆಲ್ಲವನ್ನೂ ಸೇರಿಸಿ ದ್ವಿಭಾಷಾ ರಾಜ್ಯವಾಗಿ ಹೊಸ ಮುಂಬಯಿ ರಾಜ್ಯವನ್ನು ರೂಪಿಸಬೇಕೆಂದು ಮಹಾರಾಷ್ಟ್ರದ ಪ್ರದೇಶ ಕಾಂಗ್ರೆಸು ಗೊತ್ತುವಳಿಯನ್ನು ಕಳೆದ ಅಕ್ಟೋಬರದಲ್ಲಿ ಅಂಗೀಕರಿಸಿತು. ಇದನ್ನು ಒಪ್ಪಿಕೊಂಡಿದ್ದರೆ, ಎಲ್ಲವೂ ತೊಂದರೆಯಿಲ್ಲದೆ ಕೊನೆಗೊಳ್ಳುತ್ತಿತ್ತೆಂಬುದು ಸ್ಪಷ್ಟ. ಆಗ ಭಾರತ ಸರಕಾರ ಪುನಃ ತಪ್ಪು ನಿರ್ಣಯವನ್ನು ಕೈಗೊಂಡುದರಿಂದಲೇ ಈಗಿನ ಎಲ್ಲ ಗೊಂದಲಗಳೂ ಉಂಟಾಗಿವೆ—ಭಾರತ ಸರಕಾರವು ಕೆಲವೇ ತಿಂಗಳುಗಳ ಹಿಂದೆ ಮಾಡಿದ ತಪ್ಪನ್ನು ತಿದ್ದಿಕೊಳ್ಳಲಾರದಾದರೆ, ಭಾರತೀಯರು ಕಾಂಗ್ರೆಸಿನಲ್ಲಿ ಮಹಾತ್ಮಾ ಗಾಂಧೀಯವರು ಪ್ರವೇಶಿಸಿದ ಆ ಪವಿತ್ರ ದಿನಗಳಿಂದ ಭಾಷಾ ರಾಜ್ಯದ ಕುರಿತು ವಹಿಸುತ್ತಾ ಬಂದ ಆಸಕ್ತಿಯನ್ನು ತ್ಯಜಿಸಿಬಿಡಬೇಕು ಎಂದು ಬೋಧಿಸುವುದು ತೀರ ಮೂರ್ಖತನ. ಕಳೆದ ಮೂರು ದಶಕಗಳಲ್ಲಿ ಕೇವಲ ಚರ್ಚೆಯಷ್ಟೇ ನಡೆದುದಲ್ಲ; ನಡೆದ ಚರ್ಚೆಯಾದರೂ ಒಣ ಹರಟೆಯಲ್ಲ; ಏಕ ಭಾಷೆಯ ರಾಜ್ಯಗಳಿಂದ ಆಡಳಿತವು ಯಾವ ರೀತಿಯಲ್ಲೂ ಕೆಡುವುದಿಲ್ಲ; ಬದಲು ಸುಗಮ ಆಡಳಿತಕ್ಕದು ಪೋಷಕವಾಗುತ್ತದೆ ಎಂಬ ಸಿದ್ಧಾಂತಕ್ಕೆ ವಾಸ್ತವಿಕತೆಯ ಪುಷ್ಟಿಯನ್ನು ಮೂವತ್ತು ವರ್ಷಗಳ ಅನುಭವವೇ ನೀಡಿದೆ. ಧುರೀಣರು ದೋಷರಹಿತರಾಗಿಯೇ ಇದ್ದಾರೆನ್ನಲು ಬರುವುದಿಲ್ಲ; ಆದರೆ ಕಳೆದ ನಾಲ್ಕಾರು ತಿಂಗಳುಗಳನ್ನು ಹೊರತುಪಡಿಸಿದರೆ, ಬಾಕಿ ಉಳಿದ ಮೂವತ್ತು, ಮೂವತ್ತೈದು ವರ್ಷಗಳ ಅವಧಿಯಲ್ಲಿ ಶಾಂತ ಪರ್ಯಾಲೋಚನೆಯನ್ನೆ ರಾಜ್ಯಗಳ ಪುನಾರಚನೆಯ ಮಟ್ಟಿಗೆ ನಡೆಸುತ್ತಾ ಬಂದ ಭಾರತೀಯ ಜನಾಂಗವು ದೋಷಯುಕ್ತ ತೀರ್ಮಾನ ಕೈಗೊಂಡಿದೆ ಎಂದು ಆರೋಪಿಸುವುದು ಎದೆಗಾರಿಕೆಯ ಮಾತು! ಈ ಅಲ್ಪಾವಧಿಯ ಭಾವೋದ್ರೇಕವಾದರೂ ಜನರ ಅಭಿಮತದಂತೆ ತೀರ್ಮಾನಗಳಾದರೆ ಒಡನೆಯೇ ತಣಿದು ಹೋಗುತ್ತದೆ.(ಅಂಥ ತೀರ್ಮಾನಗಳಾಗುವವರೆಗೆ ಮಾತ್ರ ಅದು ತಣಿಯಲಾರದು) ಹೀಗೆ ಅನುಕೂಲ ತೀರ್ಮಾನಗಳನ್ನೇನೂ ಮಾಡಹೋಗದೆ, ನೆಹರೂರವರು ಮುಂಬಯಿ ನಗರದ ಪ್ರಶ್ನೆಯಲ್ಲಿ ಮಹಾರಾಷ್ಟ್ರೀಯ ಜನತೆಯ ತೇಜೋವಧೆ ಮಾಡಲು ಹವಣಿಸಿದ್ದರೆ, ರಾಜಾಜಿಯವರು ಭಾರತೀಯ ಜನಾಂಗದ ತೇಜೋವಧೆ ಮಾಡುತ್ತಿದ್ದಾರೆ. ವ್ಯಕ್ತಿಯೊಬ್ಬನು ಜನಾಂಗದ ತೇಜೋವಧೆ ಮಾಡುತ್ತಿರುವುದನ್ನು ಪ್ರಜಾಪ್ರಭುತ್ವವಾದಿ ರಾಷ್ಟ್ರವೆಂದಿಗೂ ಮನ್ನಿಸದು; ಸಹಿಸಿ ಕುಳಿತಿರದು. ಪೌರುಷಹೀನತೆಯೇ ಶಾಂತ ಪರ್ಯಾಲೋಚನೆಯ ಪರ್ಯಾಯ ಪದವಲ್ಲ. ಜನಾಂಗಕ್ಕೆ ಅತಿಯಾಗಿ ಬುದ್ಧಿ ಹೇಳುವ ಹಿರಿಯರೂ ಮಸ್ತರೂ ಇದನ್ನು ನೆನಪಿಡುವುದು ಶ್ರೇಯಸ್ಕರ!

೫೭ನೇ ಮಾರ್ಚಿಯೊಳಗೆ ಚುನಾವಣೆ

ಕಾಂಗ್ರೆಸಿನ ಕಾರ್ಯದರ್ಶಿಗಳ ಪರಿಪತ್ರ

ಚುನಾವಣೆಯ ಕಮಿಶನರಾದ ಶ್ರೀ ಸುಕುಮಾರ ಸೇನರು ದೇಶದಲ್ಲಿ ಮುಂದಿನ ಮಹಾಚುನಾವಣೆಯು ೧೯೫೭ನೇ ಮಾರ್ಚಿಯೊಳಗೆ ನೆರವೇರುವುದೆಂದು ಪ್ರಕಟಗೊಳಿಸಿದ್ದಾರೆ. ಆಂಧ್ರ ರಾಜ್ಯದಲ್ಲಿ ಲೋಕ ಸಭೆಗೆ ಮಾತ್ರ ಚುನಾವಣೆ ನಡೆಯುತ್ತದೆ; ಉಳಿದೆಲ್ಲ ಪ್ರದೇಶಗಳಲ್ಲಿ ರಾಜ್ಯಗಳ ಶಾಸನಾಂಗಕ್ಕೂ ಲೋಕ ಸಭೆಗೂ ಏಕ ಕಾಲದಲ್ಲಿ ಚುನಾವಣೆ ಜರಗುತ್ತದೆ.

ಶ್ರೀಮನ್ನಾರಾಯಣರ ಪರಿಪತ್ರ

ಕಾಂಗ್ರೆಸು ಪಕ್ಷದ ಕಾರ್ಯದರ್ಶಿ ಶ್ರೀಮನ್ನಾರಾಯಣರು ಪರಿಪತ್ರವೊಂದನ್ನು ಪ್ರದೇಶ ಕಾಂಗ್ರೆಸುಗಳಿಗೂ ರಾಜ್ಯ ಶಾಸನಾಂಗಗಳ ಧುರೀಣರಿಗೂ ಕಳಿಸಿ ಮುಂದಿನ ಚುನಾವಣೆಗಾಗಿ ಉಮೇದುವಾರರನ್ನು ಆರಿಸಲು ಅನುಸರಿಸಬೇಕಾದ ವಿಧಾನಗಳನ್ನು ತಿಳಿಸಿದ್ದಾರೆ. ಇದೇ ಆಗೋಸ್ತು ಮತ್ತು ಸಪ್ತಂಬರ ತಿಂಗಳುಗಳ ಪೂರ್ವಾರ್ಧದಲ್ಲಿ ಸ್ಥಳೀಯ ಅಭಿಪ್ರಾಯವನ್ನು ಸಂಗ್ರಹಿಸಿ ಪ್ರತಿಯೊಂದು ಮತದಾರ ಸಂಘಕ್ಕೆ ನಿಲ್ಲಿಸತಕ್ಕ ಉಮೇದುವಾರರ ಹೆಸರುಗಳನ್ನು ಸೂಚಿಸಬೇಕೆಂದೂ ಅಕ್ಟೋಬರ ೩೧ರೊಳಗೆ ಪ್ರದೇಶ ಕಾಂಗ್ರೆಸು ತನ್ನ ಶಿಫಾರಸಿನೊಡನೆ ಉಮೇದುವಾರರ ಪಟ್ಟಿಯನ್ನು ಕೇಂದ್ರ ಚುನಾವಣೆ ಮಂಡಳಕ್ಕೆ ಕಳಿಸಿಕೊಡಬೇಕೆಂದೂ ಈ ಮಂಡಳವು ದಶಂಬರ ೧೫ರೊಳಗೆ ತನ್ನ ಅಂತಿಮ ಆಯ್ಕೆಯನ್ನು ನಡೆಸುವುದೆಂದೂ ಈ ಪರಿಪತ್ರವು ತಿಳಿಸುತ್ತದೆ.

ಪರಿಷತ್ತಿನ ಅಧ್ಯಕ್ಷರು

ಕನ್ನಡ ಸಾಹಿತ್ಯ ಪರಿಷತ್ತಿನ ೪೧ ವರ್ಷಗಳ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಅಧ್ಯಕ್ಷಸ್ಥಾನಕ್ಕಾಗಿ ಮೊನ್ನೆ ೧೭ನೇ ದಿನಾಂಕ ತುರುಸಿನ ಸ್ಪರ್ಧೆ ನಡೆಯಿತು. ಉಮೇದುವಾರರಲ್ಲಿ ಶ್ರೀ ಎಚ್. ಶ್ರೀಕಂಠಯ್ಯನವರಿಗೆ ೫, ಶ್ರೀ ಅ. ನ. ಕೃಷ್ಣರಾಯರಿಗೆ ೫೦ ಮತ್ತು ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಗಳಿಗೆ ೫೪ ಮತಗಳು ಬಿದ್ದು, ಶ್ರೀ ಶಾಸ್ತ್ರಿಯವರು ಜಯಶೀಲರಾದರು. ಪರಿಷತ್ತಿನ ಕಾರ್ಯಕಾರಿ ಸಮಿತಿಗೆ ಮದ್ರಾಸು ಕರ್ನಾಟಕದ ಪ್ರತಿನಿಧಿಯಾಗಿ ನಮ್ಮ ಜಿಲ್ಲೆಯ ಸುರತ್ಕಲ್ಲಿನ ವಿದ್ಯಾದಾಯಿನಿ ಹೈಸ್ಕೂಲಿನ ಮುಖ್ಯೋ

...ಧ್ಯಾಯರಾದ ಶ್ರೀ ಎಂ. ವಾಸುದೇವ ...ಯರು ಆರಿಸಲ್ಪಟ್ಟಿದ್ದಾರೆ.

ಪ್ರಧಾನಿಗಳ ಪ್ರವಾಸ

ನೆಹರೂಗಳು ಕಾಮನ್‌ವೆಲ್ತ್ ಪ್ರಧಾನಿಗಳ ಪರಿಷತ್ತಿನಲ್ಲಿ ಭಾಗವಹಿಸಲು ...ರತದಿಂದ ಹೊರಟಿದ್ದು ಇದೇ ೨೨ ...ದು ಅವರು ಲಂಡನನ್ನು ತಲಪ...ದ್ದಾರೆ. ಲಂಡನಿನಿಂದ ಅವರು ಜುಲಾ...ಯ ೬ನೇ ತಾರೀಕಿನಂದು ಅಮೇರಿಕ ರಾಜಧಾನಿಗೆ ಹೊರಟು ಅಧ್ಯಕ್ಷರೊಡನೆ ಸಮಾಲೋಚಿಸುತ್ತಾರೆ. ೨ನೇ ಜುಲಾಯಿಗೆ ಲಂಡನಿಗವರು ಮ...ಳಿಬಂದು, ಅಲ್ಲಿಂದ ಪಶ್ಚಿಮ ಜರ್ಮನಿ, ಫ್ರಾನ್ಸ್, ಬ್ರಿಯೋನಿ, ಕೈರೋ, ಬೀರತ್ ಮಾರ್ಗವಾಗಿ ೨೨ನೇ ಜುಲಾಯಿಗೆ ಹೊಸದೆಹಲಿಯನ್ನು ಸೇರುವುದು ಅವರ ಕಾರ್ಯಕ್ರಮ.

ಗೋವೆಯ ಆಂದೋಲನ

ಗೋವೆಯಲ್ಲೀಗ ರಾಷ್ಟ್ರೀಯರ ಚಟುವಟಿಕೆ ಬಹಳ ಹೆಚ್ಚಿದೆ. ಪೋರ್ಚುಗಾಲದ ಮೇಲೆ ಭಾರತದೊಡನೆ ಸೌಹಾರ್ದಪೂರ್ಣ ಒಡಂಬಡಿಕೆಗೆ ಬರಲು ಒತ್ತಾಯಗಳೂ ಹೆಚ್ಚುತ್ತಿವೆ. ಇದರಿಂದ ಡಾ. ಸಾಲಝಾರರು ಮೆತ್ತಗಾಗಿರುವರೋ ಎಂಬಂ... ಗೋವೆಯ ಆಕಾಶವಾಣಿಯು ಭಾರತದೊಡನೆ ಮಾತುಕತೆ ನಡೆಸಲು ಪೋರ್ಚುಗಾಲವು ತಯಾರಿದೆ ಎಂದಿತು. ಆದರೆ ಗೋವೆಯ ಮೇಲಿನ ಸಾರ್ವಭೌಮಾಧಿಕಾರವನ್ನು ಭಾರತಕ್ಕೆ ವರ್ಗಾಯಿಸುವ ಮೂಲಭೂತಾಂಶಕ್ಕೆ ಪೋರ್ಚುಗಾಲಿನ ಮನ್ನಣೆ ಸಿಗದ ಹೊರತು ಯಾವ ಮಾತುಕತೆಗಳನ್ನೂ ನಡೆಸುವುದು ಸಾಧ್ಯವಿಲ್ಲವೆಂದು ಭಾರತ ಸರಕಾರದ ಅಭಿಪ್ರಾಯ.

ದಶಮಾಂಶ ನಾಣ್ಯ

ರಾಜಾಜಿಯವರು ದಶಮಾಂಶ ಪದ್ಧತಿಯ ನಾಣ್ಯಗಳನ್ನು ಚಲಾವಣೆಗೆ ತರುವ ವಿಷಯದಲ್ಲಿ ತನ್ನ ಅಭಿಪ್ರಾಯವನ್ನು ...ಗೆಂದು ತಿಳಿಸಿದ್ದಾರೆ: "ಜನರ ನಿತ್ಯಜೀವನದ ಮೇಲೆ ಪರಿಣಾಮ ಮಾಡುವ ...ದಲಾವಣೆಗಳನ್ನು ಜ್ಯಾರಿಗೆ ತರುವಾಗ ...ವು ಸರ್ವಾಧಿಕಾರಿಗಳೂ ಸಲಹೆಗಳನ್ನು ಸ್ವೀಕರಿಸಲು ಒಪ್ಪದವರೂ ಆಗಬಾರದು. ...ನ್ನ ಸಲಹೆಯಂತೆ ನಡೆಯಬಾದರೆ, ಈಗಿನ ನಾಣ್ಯಾವಣೆಯ ಬೆಲೆಯಲ್ಲಿ ಏನೂ ವ್ಯತ್ಯಾಸವಾಗಬಾರದು. ಬದಲಿಗೆ ಒಂದು ರೂಪಾಯಿಗೆ ೧೦೦ ಪಾವಾಣೆ ಎಂದು ನಿಗದಿಗೊಳಿಸಬೇಕು. ಆಗ ಈಗಿನ ೨೫ ರೂಪಾಯಿಯ ಹೊಸ ೧೬... ರೂಪಾಯಿಗಳಿಗೆ ಸಮಾನವಾಗುತ್ತವೆ. ಈಗಿನ ಎಲ್ಲ ನಾಣ್ಯಗಳೂ ಬಳಕೆಯಲ್ಲಿ ಉಳಿಯುತ್ತವೆ; ಈಗಿನ ರೂಪಾಯಿಯೊಂದನ್ನು ಮಾತ್ರ ಕ್ರಮೇಣ ಹಿಂದೆಗೆದು ಕೊಳ್ಳಬಹುದು. ಬೆಲೆ ನಿರ್ಣಯದಲ್ಲಿ ಯಾವ ತರದ ಕಷ್ಟವೂ ಆಗಲಾರದು; ಅಲ್ಲದೆ ಪೂರ್ಣಾಂಕವೊಡನೆ ಹೊಂದಿಸುವ ತಂತ್ರದ ದೆಸೆಯಿಂದಾಗಿ ನಷ್ಟಕ್ಕೆ ಜನರನ್ನು ಗುರಿಪಡಿಸುವ ಪ್ರಮೇಯವೂ ತಪ್ಪುವುದು. ಬದಲಾವಣೆಯನ್ನು ಮೇಲಿನಿಂದ ಕೆಳಗಲ್ಲ, ಕೆಳಗಿನಿಂದ ಮೇಲೆ ರೂಢಿಸುವುದೇ ನನ್ನ ಸಲಹೆಯ ತಿರುಳು. ಬದಲು ಸರಕಾರವು ಹಠ ಹಿಡಿದು ತಾನು ಪ್ರಕಟಿಸಿದ ಕೋಷ್ಟಕದಿಂದ ತೊಂದರೆಗಳು ನಿವಾರಣೆಯಾಗುವುದೆಂದು ಹೇಳಿದರೆ, ಜನರ ಕಷ್ಟ ದೂರವಾಗದು ಸುಶಿಕ್ಷಿತರನ್ನು ಸಹ ಗಲಿಬಿಲಿಗೊಳಿಸುವಷ್ಟು ಸಂಕೀರ್ಣವಾಗಿ ಈ ಕೋಷ್ಟಕವಿದೆ; ಆದುದರಿಂದ ನಿರಕ್ಷರಕುಕ್ಷಿ ಜನರಿಗದು ನಿಷ್ಪ್ರಯೋಜಕ."

ಕಾಶ್ಮೀರ ಪ್ರಶ್ನೆ

ಸಿರಿಯಾದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ಬೊಖಾರಿಯವರು ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಭಾರತದೊಡನೆ ಯುದ್ಧವು ಅನಿವಾರ್ಯ; ನಮ್ಮಲ್ಲಿ ಶಕ್ತಿ ಇರತ್ತಿದ್ದರೆ ನಾವೆಂಥೋ ಕೈ ತೋರಿಸಿ ಬಿಡುತ್ತಿದ್ದೆವು ಎಂಬರ್ಥದ ಮಾತನ್ನಾಡಿರುವರೆಂದು ಪ್ರಕಟವಾಗಿದ್ದಿತು. ಪಾಕಿಸ್ತಾನದ ಸರಕಾರವು ಈಗ ಬೊಖಾರಿಯವರ ಭಾಷಣದ ವರದಿ ತಪ್ಪಾಗಿದೆ ಎಂದು ತಿಳಿಸಿದೆ. ಕಾಶ್ಮೀರ ಪ್ರಶ್ನೆಯು ಶೀಘ್ರ ತೀರ್ಮಾನವಾಗದಿದ್ದರೆ ಶಾಂತಿಗೆ ಅಪಾಯ ತಪ್ಪದು ಎಂದು ಬೊಖಾರಿಯವರು ಹೇಳಿದ್ದರು ಎಂದು ಪಾಕಿಸ್ತಾನಿ ಸರಕಾರ ತಿಳಿಸುತ್ತದೆ. ಕಾಶ್ಮೀರ ಪ್ರಶ್ನೆಯನ್ನು ಪಾಕಿಸ್ತಾನವು ಸಂಪ್ರದಾಯಕ್ಕೆ ವಿರುದ್ಧವಾಗಿ ಕಾಮನ್‌ವೆಲ್ತ್ ಪ್ರಧಾನಿಗಳ ಪರಿಷತ್ತಿನಲ್ಲಿ ಎತ್ತುವದೆಂದು ಪಾಕಿಸ್ತಾನಿ ವಿದೇಶ ಸಚಿವರು ವಿದಿತಪಡಿಸಿದ್ದಾರೆ.

ರಾಯಭಾರಿಯ ಹಿತವಚನ

ಭಾರತದಲ್ಲಿ ಪಾಕಿಸ್ತಾನದ ರಾಯಭಾರಿಯಾಗಿರುವ ಮತ್ತು ಪದ್ಯವೇ ಈ ಸ್ಥಾನದಿಂದ ನಿವೃತ್ತಿ ಹೊಂದಲಿರುವ ರಾಜ ಗಜ್ನಾಫರಾಲಿಯವರು ಭಾರತ ಮತ್ತು ಪಾಕಿಸ್ತಾನಗಳ ನಡುವೆ ಯುದ್ಧದ ಮಾತನ್ನಾಡುವುದು ಮೂರ್ಖತನ, ಅದು ಕೇವಲ ಹುಚ್ಚು ಎಂದಿದ್ದಾರೆ. ಪಾಕಿಸ್ತಾನಿ ಕುಟುಂಬಗಳ ಬಾಂಧವರು ಭಾರತದಲ್ಲಿಯೂ ಭಾರತೀಯ ಕುಟುಂಬಗಳ ಬಾಂಧವರು ಪಾಕಿಸ್ತಾನದಲ್ಲಿಯೂ ವಾಸಿಸುತ್ತಿರುವಾಗ ತಂಟೆಗಳನ್ನು ಬಗೆಹರಿಸಲು ಯುದ್ಧವನ್ನು ಆಶ್ರಯಿಸುವುದರಿಂದ ಕೇಡು ತಪ್ಪದು. ಉಭಯ ರಾಷ್ಟ್ರಗಳಲ್ಲಿ ಸ್ನೇಹ ಸಂವರ್ಧನೆಯಾಗಬೇಕು; ಕಾಶ್ಮೀರ ಪ್ರಶ್ನೆಯು ಸಮಾಧಾನಕರ ರೀತಿಯಲ್ಲಿ ಇತ್ಯರ್ಥವಾದರೆ ಸ್ನೇಹ ಸಂಬಂಧ ಸಾಧ್ಯವಾಗುವುದು ಎಂದಿದ್ದಾರೆ ಈ ರಾಯಭಾರಿ.

ದ. ಕ. ಜಿಲ್ಲಾ ಬೋರ್ಡು ಸಭೆ

ಜಿಲ್ಲಾ ಬೋರ್ಡಿನ ವಿಶೇಷ ಸಭೆಯು ತಾ. 18ರಲ್ಲಿ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಬೋರ್ಡಿನ ಕಾಮಗಾರಿ ಮತ್ತು ಸಂಪರ್ಕಶಾಖೆಯ ಸ್ಥಾಯೀ ಸಮಿತಿಗೆ ಜಿಲ್ಲಾ ಬೋರ್ಡು ಸದಸ್ಯರಾದ ಶ್ರೀ ಎ. ನಾರಾಯಣ ಹೆಗ್ಡೆ ಮತ್ತು ಜಿಲ್ಲಾ ಬೋರ್ಡು ಸದಸ್ಯರಲ್ಲದ ಶ್ರೀ ಕೆ. ಅಣ್ಣಪ್ಪ ಭಂಡಾರಿಯವರು ಏಕಮತದಿಂದ ಆರಿಸಲ್ಪಟ್ಟರು.

ಬೋರ್ಡಿನ ಅವಸರದ ಸಭೆಯು ವಿಶೇಷ ಸಭೆ ಮುಗಿದಬಳಿಕ ಜರಗಿ ಕುಂದಾಪುರ ತಾಲೂಕಿನ ಶಂಕರನಾರಾಯಣದಲ್ಲಿ ಚಾಲ್ತಿ ವರುಷದಲ್ಲಿಯೇ ಹಾ. ಎ. ಶಾಲೆಯನ್ನು ಹ್ಯಾಸ್ಕೂಲಾಗಿ ಮಾಡಬೇಕೆಂದು ಬೋರ್ಡಿನಲ್ಲಾದ ನಿರ್ಣಯ ಹಾಗೂ ಆ ಕುರಿತು ಸರಕಾರದಿಂದ ಬಂದ ಹುಕುಮನ್ನು ಪರಿಶೀಲಿಸಲಾಯಿತು. ಹ್ಯಾಸ್ಕೂಲನ್ನು ತೆರೆಯುವ ವಿಚಾರದಲ್ಲಿ ಜಿಲ್ಲಾ ಬೋರ್ಡಿನಿಂದ ಅಪೇಕ್ಷಿಸಿದ ರಿಯಾಯತಿಗಳಿಗೊಳಪಟ್ಟು ಕಾರ್ಯ ಮುಂದರಿಸಲು ತನಗೆ ಬೋರ್ಡಿನ ಅನುಮತಿ ಬೇಕಾಗಿದೆ. ಎಂದು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಹೇಳಿದರು. ಬಳಿಕ ಕೆಲವೊಂದು ಚರ್ಚೆನಡೆದು ಹ್ಯಾಸ್ಕೂಲು ತೆರೆಯುವರೆ ಕಾರ್ಯವನ್ನು ಪ್ರಾರಂಭಿಸುವ ಪೂರ್ಣ ಜವಾಬ್ದಾರಿ ಅಧ್ಯಕ್ಷರ ಮೇಲಿದೆ ಎಂದು ಸಭೆಯು ಅಭಿಪ್ರಾಯವಾಯಿತು.

ಬೋರ್ಡಿನ ಸಾಮಾನ್ಯಸಭೆಯು ಜರಗಿದಾಗ ಶ್ರೀ ಬಿ. ಸುಂದರಯ್ಯ ಹೆಗ್ಡೆಯವರು ಜಿಲ್ಲೆಯ ಎಲ್ಲಾ ಹ್ಯಾಸ್ಕೂಲುಗಳಲ್ಲಿಯೂ ಕೆಲಸಮಾಡುವ ಅಧ್ಯಾಪಕರಿಗೆ ಇದೇ ಜೂನ್ ತಿಂಗಳಾರಂಭದಿಂದ ಸರಕಾರಿ ನಿಶ್ಚಿತ ಸಂಬಳ ಮಟ್ಟಕ್ಕನುಸಾರವಾಗಿ ವೇತನವನ್ನು ಕೊಡಬೇಕೆಂಬ ನಿರ್ಣಯವನ್ನು ಮಂಡಿಸಿದರು. ಮದ್ರಾಸು ರಾಜ್ಯದ ಹದಿಮೂರು ಜಿಲ್ಲಾ ಬೋರ್ಡುಗಳ ಪೈಕಿ ಏಳು ಜಿಲ್ಲಾ ಬೋರ್ಡುಗಳು ಈಗಾಗಲೇ ತಮ್ಮ ಅಂಕಿತದಲ್ಲಿರುವ ಹ್ಯಾಸ್ಕೂಲು ಅಧ್ಯಾಪಕರಿಗೆ ಸರಕಾರಿ ನಿಶ್ಚಿತ ಸಂಬಳವನ್ನು ಕೊಡುತ್ತಿರುವುದರಿಂದ, ಈ ಬೋರ್ಡು ನಿರ್ಣಯಕ್ಕೆ ಸರಕಾರದ ಮಾನ್ಯತೆ ಪಡೆಯುವುದು ಕಷ್ಟವಾಗಲಾರದೆಂದು ಹೇಳಿದರು. ನಂತರ ನಿರ್ಣಯವು ಏಕಮತದಿಂದ ಪಾಸಾಯಿತು.

ಸಭಾರಂಭದಲ್ಲಿ ನಿಯಮಿತ ಸಭೆಗಳಿಗೆ ನೈರುಹಾಜರಾದ ಪುತ್ತೂರಿನ ಶ್ರೀ ವೈ. ಸಂಜೀವ ಶೆಣೈಯವರ ಮೆಂಬರಿಕೆಯನ್ನು ಸರ್ವಾನುಮತದಿಂದ ಊರ್ಜಿತಗೊಳಿಸಲಾಯಿತು. ಉಡುಪಿ ತಾಲೂಕು ಗರಡಿಮಜಲು ಬೋರ್ಡು ಹಾ. ಎ. ಶಾಲಾ ಕಟ್ಟಡದ ನಿರ್ಮಾಣಕ್ಕೆ ಸ್ಥಳವನ್ನು ಶ್ರೀಮತಿ ಸುಲೋಚನಾ ದೇವಿಯವರು ದಾನವಾಗಿ ಕೊಟ್ಟುದನ್ನು ಸ್ವೀಕರಿಸಲಾಯಿತು. ವರ್ಧಮಾನಯಲ್ಲಿ ಸಮಾಜಸಿಕಾಸಯೋಜನೆಯ ನೇರಿಗೆ ರೂಪಾಯಿ 11,600ರ ವೆಚ್ಚದಲ್ಲಿ ಕಟ್ಟಲಾಗುತ್ತಿರುವ, ಕಾಲುಸಂಕದ ವೆಚ್ಚಕ್ಕೆ ಜಿಲ್ಲಾ ಬೋರ್ಡು ಸೇಕಡಾ 15ರಷ್ಟು ವಂತಿಗೆ ಕೊಡಬೇಕೆನ್ನುವ, ಅಂತೆಯೇ ಮಾಳದಲ್ಲಿ ಕಟ್ಟಲಾಗುತ್ತಿರುವ ಶಾಲಾ ಕಟ್ಟಡಕ್ಕೆ ವಂತಿಗೆ ಕೊಡಬೇಕೆನ್ನುವ, ಅಜೆಕಾರು ಹಾ. ಎ. ಶಾಲೆಗೆ ಗ್ರಾಮಸ್ಥರು ರೂಪಾಯಿ 8000 ವೆಚ್ಚದಲ್ಲಿ ಕಟ್ಟಿಸಿರುವ ಕಟ್ಟಡಕ್ಕೆ ರೂ. 500 ವಂತಿಗೆ ಕೊಡಬೇಕೆನ್ನುವ ಕುಕ್ಕಜೆ ಬೋರ್ಡು ಎಲಿಮೆಂಟರಿ ಶಾಲೆಯನ್ನು ಹಾ. ಎ. ಶಾಲೆಯಾಗಿ ಮಾಡಬೇಕೆನ್ನುವ ಡಾ. ಯು. ಕೃಷ್ಣನವರ ಠರಾವುಗಳು ಸ್ವೀಕೃತವಾದುವು. ಶ್ರೀ ಲಕ್ಷ್ಮೀನಾರಾಯಣ ಆಳ್ವರು ಸರ್ಪಾಡಿಯ ಬೋರ್ಡು ಎಲಿಮೆಂಟರಿ ಶಾಲೆಯನ್ನು ಹಾ. ಎ. ಶಾಲೆಯನ್ನಾಗಿ ಮಾಡಬೇಕೆಂದು ಮುಂದೊತ್ತಿದ ನಿರ್ಣಯವಾಯಿತು.

ಉಡುಪಿ

ಪಂಚವಾರ್ಷಿಕ ಯೋಜನಾ ಕಾರ್ಯದ ಪ್ರಚಾರ— ಮೈಸೂರು, ಕೊಡಗು ಮತ್ತು ದಕ್ಷಿಣಕನ್ನಡಜಿಲ್ಲೆಯ ಪ್ರಚಾರಾಧಿಕಾರಿ ಶ್ರೀ ಎಚ್. ಎಸ್. ನಾಗರಾಜ ಶರ್ಮನವರು ತಾ. 13ರಲ್ಲಿ ಸಂಜೆ ರಥಬೀದಿಯಲ್ಲಿ ಶ್ರೀ ಅದಮಾರು ಮಠದ ಮುಂಭಾಗದಲ್ಲಿ 'ಪಂಚವಾರ್ಷಿಕಯೋಜನೆಯ' ಕನ್ನಡ ಚಲಚ್ಚಿತ್ರವನ್ನು ಪ್ರದರ್ಶಿಸಿದರು. ಪ್ರಥಮ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾದಂತೆಯೇ ದ್ವಿತೀಯ ಪಂಚವಾರ್ಷಿಕ ಯೋಜನಾ ಕಾರ್ಯಗಳು ಇನ್ನಷ್ಟು ಯಶಸ್ವಿಯಾಗುವಂತೆ ಜನತೆ ಸರಕಾರದೊಡನೆ ಸಹಕರಿಸಬೇಕಾಗಿ ಶ್ರೀ ಶರ್ಮರು ವಿನಂತಿಸಿದರು.

ಉಡುಪಿ ನಗರ ಸಭೆಯು— ತಾ. 14ರಲ್ಲಿ ಸಂಜೆ ಉಪಾಧ್ಯಕ್ಷ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಎರಡನೇ ಪಂಚವಾರ್ಷಿಕಯೋಜನೆಯಲ್ಲಿ ಉಡುಪಿಯ ಅಭಿವೃದ್ಧಿ ಕಾರ್ಯಗಳೇನನ್ನು ಮಾಡಬಹುದು ಎಂಬುದನ್ನು ವರದಿಮಾಡಲು ನೇಮಿಸಲಾದ ಕಮಿಟಿಯ ಸಲಹೆಗಳನ್ನು ಪರಿಶೀಲಿಸಿ ಅಂಗೀಕರಿಸಲಾಯಿತು. ಜಿಲ್ಲಾ ಯೋಜನೆಯಲ್ಲಿ ಸೇರಿಸಿ ಅವು ಫಲಕಾರಿಯಾಗುವಂತೆ ಪ್ರಯತ್ನಿಸಬೇಕೆಂದೂ ಈ ಭಾಗದಲ್ಲಿ ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಅವರ ಸಹಾಯಪಡೆಯಬೇಕೆಂದೂ ನಿರ್ಧಾರವಾಯಿತು. ಕಾರ್ಯಕ್ರಮಗಳು ಈ ತೆರನಾಗಿವೆ. ನಗರ ಸಭೆಗೆ ಕಟ್ಟಡ ನಿರ್ಮಾಣಕ್ಕೆ ರೂ. 40,000. ಅಜ್ಜರಕಾಡು ಒಳಕಾಡು ಮತ್ತು ದೊಡ್ಡಣಗುಡ್ಡೆಯಲ್ಲಿ ಬಾವಿ ಕೊರೆಯಲು ರೂ. 30,000. ತೇರುಬೀದಿ ಮತ್ತು ಆಸುಪಾಸಿನ ಸ್ಥಳಗಳಲ್ಲಿ ಕೆಲವಂಶ ಚರಂಡಿ ನಿರ್ಮಾಣಕ್ಕೆ ರೂ. 16,000 ಕಿನ್ನಿಮೂಲ್ಕಿ ಶಾಲಾ ಕಟ್ಟಡಕ್ಕೆ ರೂ. 28,000. ಅಂಬಲಪಾಡಿ ರಸ್ತೆಯಿಂದ ಕೃಷ್ಣಗಿರಿ ಕೇಂದ್ರದ ವರೆಗೆ, ಮಸೀದಿ ಮತ್ತು ಹಳೆ ಟಪ್ಪಾಲುಕಟ್ಟೆ—ಅಂಜುಮಾನ್ ರಸ್ತೆಗೆ, ಅಜ್ಜರಕಾಡು—ಕಿನ್ನಿಮೂಲ್ಕಿ ಒಳರಸ್ತೆಗೆ ಕಪ್ಪು ಬಳಿಯಲು, ಮುಖ್ಯ ರಸ್ತೆಗಳಿಗೆ ಕಾಲ್ದಾರಿಗಳನ್ನು ರಚಿಸಲು, ಬಡಗುಪೇಟೆಯಿಂದ ಬಡಗುಮಾಳಿಗೆ ಪರೆಗೆ ರಸ್ತೆ ಹಾಕಲು ಇತ್ಯಾದಿ ಕಾರಿಗಳಿಗೆ ರೂ. 97,000. ಮುನಿಸಿಪಲ್ ತೋಟಗಳಿಗೆ 50 ಮನೆಕಟ್ಟಲು 30,000. ಸೆಪ್ಟಿಕ್ ಅಥವಾ ಲೀಟ್ ಟ್ಯಾಂಕ್ ಪಾಯಿಖಾನೆಗಳ ನಿರ್ಮಾಣಕ್ಕೆ ರೂ. 8000 ದಿನವಹಿ ಕಾಯಿಪಲ್ಯ ಸಂತೆಮಾರ್ಕೆಟು ಮತ್ತು ಮೀನು ಮಾರ್ಕೆಟು ದುರಸ್ತಿಗಾಗಿ ರೂ. 55,000. ಪ್ರವಾಸಿ ಮತ್ತು ಯಾತ್ರಿಕರ ವಿಶ್ರಾಂತಿಗೃಹ ನಿರ್ಮಾಣಕ್ಕೆ ರೂ. 1,10,000. ಭಿಕ್ಷುಕರ ಗೃಹ ನಿರ್ಮಾಣಕ್ಕೆ ರೂ. 30,000 ಕುಂಜಿಬೆಟ್ಟು, ಕನಪಾಡಿ ಸ್ನಾನ ಸೌಕರ್ಯಕ್ಕಾಗಿ ರೂ. 6000. ನಾಯರ್‌ಕೆರೆ ದುರಸ್ತಿ ಮತ್ತು ಶೋಭಿಕಾನಾ ರಚನೆಗೆ ರೂ. 20,000 ಕಿನ್ನಿಮೂಲ್ಕಿ ಕೆರೆ ದುರಸ್ತಿ ಮತ್ತು ಪಕ್ಕದ ಕಾಲುವೆ ದುರಸ್ತಿಗೆ ರೂ 3500. ಬಸ್‌ಸ್ಟೇಂಡ್ ವಿಸ್ತರಣಕ್ಕೆ ರೂ. 50,000.

ತಹಶೀಲ್ದಾರರಿಗೆ ವರ್ಗ— ಇಲ್ಲಿಯ ಜನಪ್ರಿಯ ಹಾಗೂ ದಕ್ಷ ತಹಸೀಲ್ದಾರರಾಗಿದ್ದ ಶ್ರೀ ಕೆ. ಲಿಂಗಪ್ಪಯ್ಯನವರು ಮಂಗಳೂರಿಗೆ ಹಜೂರು ಶಿರಸ್ತೇದಾರರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಇವರ ಸ್ಥಾನದಲ್ಲಿ ಶ್ರೀ ಅಮೃತರಾಯರು ನೇಮಕಗೊಂಡಿದ್ದಾರೆ.

ಮಿಶ್ರ ಕಾಫಿ ಹುಡಿ ಮಾರಾಟದ ಬಗ್ಗೆ ದಂಡನೆ— ಉಡುಪಿ ಪೇಟೆಯ ಕುಂಜಿಬೆಟ್ಟಿನ ಶ್ರೀ ಎಸ್. ನಾಗಪ್ಪ ಪೈಗಳು ಮಿಶ್ರ ಕಾಫಿ ಹುಡಿ ಮಾರಾಟ ಮಾಡಿದ ತಪ್ಪಿಗಾಗಿ ತಾ. 15ರಲ್ಲಿ ಉಡುಪಿ ಸ್ಪೆಶಲ್ ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಕೆ. ಕೃಷ್ಣಯ್ಯನವರು ಅವರಿಗೆ ಒಂದು ನೂರು ರೂಪಾಯಿ ದಂಡನೆ ಇಲ್ಲವೆ ಮೂರು ತಿಂಗಳ ಸಾದಾ ಶಿಕ್ಷೆ ವಿಧಿಸಿದರು. ತಪ್ಪಿತರಿಗೆ ಕಾರಣವಾದ ಕಾಫಿ ಹುಡಿಯಲ್ಲಿ ಸೇಕಡಾ 75ರಷ್ಟು ಹುಣಸೆಬೀಜಗಳ ಅಂಶವಿತ್ತೆಂದು ರಾಜ್ಯ ಸರಕಾರದ ಅಧಿಕಾರಿಗಳ ಪರಿಶೋಧನೆಯಿಂದ ಸ್ಪಷ್ಟಪಡಿಸಲಾಗಿತ್ತು.

ಗುರುಗಳ ಆರಾಧನೆ— ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶ ತೀರ್ಥ ಸ್ವಾಮಿಗಳವರು ತಾ. 16ರಲ್ಲಿ ತಮ್ಮ ಗುರುಗಳ ಆರಾಧನೆಯನ್ನು ವಿಶೇಷ ರೀತಿಯಲ್ಲಿ ಸಾಂಗವಾಗಿ ನೆರವೇರಿಸಿದರು.

ಮಳೆ— ಮೃಗಶಿರಾ ನಕ್ಷತ್ರದಲ್ಲಿ ಧಾರಾಳವಾಗಿ ಮಳೆ ಬಿದ್ದುದರಿಂದ ಬೈಲು ಗದ್ದೆಗಳ ಬೇಸಾಯ ಮುಗಿಯುತ್ತಾ ಬಂದಿವೆ. ಬೆಟ್ಟು ಗದ್ದೆ ಬೇಸಾಯ ಪ್ರಾರಂಭವಾಗಿವೆ.

ಇದೀಗ ಪ್ರಕಟವಾಗಿದೆ—

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ ಅಣು ಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೀವ

ಬರೆದವರು:

ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.

ಮುನ್ನುಡಿಕಾರರು: **ಶ್ರೀ. ಶಿವರಾಮ ಕಾರಂತರು.**

ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.

ಉತ್ತಮ ಕಾಗದ. ಬೆಲೆ: ರೂ. ೧—೮—೦.

ನವಯುಗ ಪ್ರೆಸ್, ಉಡುಪಿ.

ಹೆಬ್ರಿ— ಸಮೂಹವಿಕಾಸಯೋಜನೆಯ ನೆರವಿನಲ್ಲಿ ಕಟ್ಟಿಸಲಾದ ಸ್ಥಳೀಯ ಸಮಾಜ ಮಂದಿರದ ಉದ್ಘಾಟನೆಯು ದಿನಾಂಕ ೧೨ ರಂದು ಜಿಲ್ಲಾ ಕಲೆಕ್ಟರರಾದ ಶ್ರೀ ಎಂ. ಜಿ. ರಾಜಾರಾಮರಿಂದ ಉದ್ಘಾಟಿಸಲ್ಪಟ್ಟಿತು. ಅಲ್ಲದೆ ಸ್ಥಳೀಯ ಶಿಶುವಿಹಾರವು ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರಿಂದಲೂ, ಪಶುವೈದ್ಯಾಲಯವು ಸಮೂಹವಿಕಾಸ ಯೋಜನಾಧಿಕಾರಿಗಳಾದ ಶ್ರೀ ಎಚ್. ನರಸಿಂಹನವರಿಂದಲೂ ಉದ್ಘಾಟಿಸಲ್ಪಟ್ಟಿತಲ್ಲದೆ, ಶ್ರೀಮತಿ ಟಿ ಶ್ರೀಮಾ ಎ. ಪೈಗಳವರಿಂದ ಕಸ್ತೂರಿಬಾರ, ಟಿ. ರಮೇಶ ಪೈಗಳಿಂದ ಮಹಾತ್ಮಾ ಗಾಂಧೀಜಿಯವರ, ಮತ್ತು ಡಾ. ಟಿ. ಮಾಧವ ಪೈಗಳಿಂದ ಪಂ. ನೆಹರು, ಡಾ. ರಾಜೇಂದ್ರಪ್ರಸಾದ್ ಹಾಗೂ ಶ್ರೀ ಎಚ್. ಭುಜಂಗ ಬಳ್ಳಾಲರವರ ಭಾವಚಿತ್ರಗಳು ಅನಾವರಣಗೈಯಲ್ಪಟ್ಟವು.

ಮೇಲಿನ ಕಾರ್ಯಕ್ರಮಗಳಿಗೆ ಡಾ. ಟಿ. ಮಾಧವ ಪೈಗಳು ಅಧ್ಯಕ್ಷರಾಗಿದ್ದರು. ಶ್ರೀ ಭುಜಂಗ ಬಳ್ಳಾಲರು ಸ್ವಾಗತಿಸಿದರು. ಶ್ರೀಗಳಾದ ಎ. ಬಿ. ಶೆಟ್ಟಿ, ಕೆ. ಪಿ. ಮುಕುಂದ ಪ್ರಭು, ಬಿ. ಮಂಜಯ್ಯ ಶೆಟ್ಟಿ, ಕೆ. ಕೆ. ಹೆಗ್ಡೆಯವರೇ ಮೊದಲಾದವರಿಂದ ಬಂದ ಶುಭ ಸಂದೇಶಗಳನ್ನು ಶ್ರೀ ಪಿ. ಸಂಜೀವ ನಾಯಕರು ಓದಿದರು. ಜಿಲ್ಲಾ ಕಲೆಕ್ಟರರು ಹಾಗೂ ಶ್ರೀ ಎಚ್. ನರಸಿಂಹರವರ ಭಾಷಣಗಳಾದ ಬಳಿಕ ಡಾ. ಪೈಗಳು ತಮ್ಮ ಅಧ್ಯಕ್ಷಭಾಷಣದಲ್ಲಿ, ಎಲ್ಲರೂ ದೇಶದ ಏಳಿಗೆಗಾಗಿ ಐಕ್ಯತೆಯಿಂದ ದುಡಿಯಬೇಕು, ಸರಕಾರಕ್ಕೆ ತಮ್ಮ ಹಾರ್ದಿಕ ಬೆಂಬಲವನ್ನು ನೀಡಬೇಕು ಎಂದು ಸೂಚಿಸಿದರಲ್ಲದೆ ಸಾರ್ವಜನಿಕ ಕಾರ್ಯದಲ್ಲೂ ಪ್ರತಿಯೊಬ್ಬರೂ ಸ್ವತಂತ್ರರಾಗಿ ದುಡಿಯಬೇಕೆಂದು ಸೂಚಿಸಿದರು.

ಶ್ರೀಮತಿ ರಾಜಲಕ್ಷ್ಮಿ ರಾಜಾರಾಮರು

(೫ನೇ ಪುಟದಿಂದ)

ಅಯ್ಯಂಗಾರರನ್ನು ನೇಮಿಸಬೇಕೆಂದು ಶ್ರೀ ನೆಹರು (೧೯೫೧ರಲ್ಲಿ) ಆಲೋಚಿಸಿದ್ದರು. ಆದರೆ ಶ್ರೀ ಅಯ್ಯಂಗಾರರು ತನಗಿಂತಲೂ ಈ ಕೆಲಸಕ್ಕೆ ಸಮರ್ಥರಾದವರು ಈಗ ಲಂಡನಿನಲ್ಲಿ ಇರುವರೆಂದು ಹೇಳಿ ಶ್ರೀ ದೇಶಮುಖರನ್ನು ಲಂಡನಿನಿಂದ ಬರಮಾಡಿಸಿದರು. ಹೀಗೆ ಅರ್ಥಸಚಿವರಾದ ಶ್ರೀ ದೇಶಮುಖರು ಮೊದಲನೇ ಯೋಜನೆಯನ್ನು ಸಮರ್ಪಕವಾಗಿ ಕೊನೆಗಾಣಿಸಿ, ಎರಡನೇ ಯೋಜನಾವಧಿಯ ಹೊಸ್ತಿಲಿಗೆ ದೇಶವನ್ನು ತಂದು ನಿಲ್ಲಿಸಿದ್ದಾರೆ. ಈ ದಾರಿಯಲ್ಲಿ ದೇಶವನ್ನು ಮುನ್ನಡೆಸುವಷ್ಟು ದಕ್ಷರಾದ ವ್ಯಕ್ತಿಯನ್ನು ಕಂಡುಕೊಳ್ಳುವುದು ನೆಹರುಗಳ ಪಾಲಿನ ದೊಡ್ಡ ಕೆಲಸ.

ತೆರಿಗೆ ನಿರಾಕರಣೆಗೆ ಕರೆ

ಪ್ರತಿಪಕ್ಷಗಳು ಸಹ ಮುಂಬಯಿ ನಗರದ ವಿಷಯದಲ್ಲಿ ಭಾವೋದ್ರೇಕದಿಂದ ಕೂಡಿದ ನೆಹರುಗಳ ಹೇಳಿಕೆಯನ್ನು ನಿಜಸಂಗತಿಗಳ ವಿಡಂಬನೆ ಎಂದವು. ಕರೆದಿವೆಯಲ್ಲದೆ, ಪ್ರದೇಶ ಕಾಂಗ್ರೆಸಿನ ಗೊತ್ತುವಳಿಯನ್ನು ಅಸಂಬದ್ಧ ಹಾಗು ದ್ರೋಹಕಾರಿ ನಿರ್ಣಯವೆಂದು ವರ್ಣಿಸಿವೆ. ಸರ್ವಪಕ್ಷೀಯ ಸಂಯುಕ್ತ ಮಹಾರಾಷ್ಟ್ರ ಸಮಿತಿಯ ಕಾರ್ಯದರ್ಶಿಯಾಗಿರುವ ಶ್ರೀ ಎಸ್. ಎಂ ಜೋಶಿಯವರು ಮರಾಠರೆಲ್ಲರೂ ತೆರಿಗೆ ನಿರಾಕರಣೆಯ ಚಳವಳವನ್ನು ಪ್ರಾರಂಭಿಸಬೇಕೆಂದೂ ಈ ಪ್ರಕಾರ ಸರಕಾರಕ್ಕೆ ತನ್ನ ಆಡಳಿತವನ್ನು ನಿರ್ವಹಿಸಲಾಗದಂತೆ ಮಾಡಬೇಕೆಂದೂ ಹೇಳುತ್ತಿದ್ದಾರೆ. ಅಂತೂ ಭಾರತ ಸರಕಾರವು ಮುಂಬಯಿ ಪ್ರಶ್ನೆಯ ಮಟ್ಟಿಗೆ ಮುತ್ಸದ್ದಿತನದ ದಿವಾಳಿತನವನ್ನೆ ಪ್ರದರ್ಶಿಸಿದಂತೆ ತೋರುತ್ತದೆ.

ಮೇಲಿನ ಎಲ್ಲಾ ಕಟ್ಟಡಗಳ ನಿರ್ಮಾಣಕ್ಕೆ ಪರಿಶ್ರಮಿಸಿದ ಕೆಲಸಗಾರರಿಗೆ ಭಂಗಾರದ ಪದಕಗಳನ್ನಿತ್ತು ಪುರಸ್ಕರಿಸಿದರು. ಕೊನೆಗೆ ಚಲಚಿತ್ರ ಪ್ರದರ್ಶನವಿತ್ತು.

ಕಾರ್ಕಳ— ಈ ತಾಲೂಕಿನ ನಾನ್ ಗಜೆಟೆಡ್ ಆಫೀಸರರ ಸಭೆಯೊಂದು ತಾ. 16 ರಲ್ಲಿ ಯೂನಿಯನ್ ಕ್ಲಬ್ಬಿನಲ್ಲಿ ತಹಶಿಲ್ದಾರ್ ಶ್ರೀ ಎಫ್. ಎಮ್. ಮಿನೇಜಸ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕು ಸಂಘಕ್ಕೆ ಶ್ರೀಗಳಾದ ರಘುನಾಥ ಸೆಟ್ಟಿ (ಅಧ್ಯಕ್ಷ), ಎಸ್. ಕೆ. ಬೈಗ್ (ಖಜಾಂಚಿ), ಕೆ ವೆಂಕಟೇಶ ಮತ್ತು ಶಾಂತಾನಂದ (ಜತೆಕಾರ್ಯದರ್ಶಿಯರು), ನಮರು ಆರಿಸಲ್ಪಟ್ಟರು. ಬೃಹತ್ ಮೈಸೂರು ರಾಜ್ಯದಲ್ಲಿ ಈ ಜಿಲ್ಲೆಯು ಸೇರ್ಪಡೆಹೊಂದುವಾಗ ಒದಗಬಹುದಾದ ಸಂಬಳವೇ ಮೊದಲಾದ ಸಮಸ್ಯೆಗಳ ಕುರಿತು ಚರ್ಚೆ ನಡೆಯಿತು.

ಕುಂಬಳೆ— ಈ ಭಾಗದ ಮಕ್ಕಳಿಗೆ ಸೆಕೆಂಡರಿ ವಿದ್ಯಾಭ್ಯಾಸವು ಊರಲ್ಲೇ ದೊರೆಯಲು ಅನುಕೂಲವಾಗುವಂತೆ ಹ್ಯಾಸ್ಕೂಲನ್ನು ಸ್ಥಾಪಿಸುವ ಯೋಜನೆಯ ಕುರಿತು ಶ್ರೀ ಕೆ. ಪಿ. ಕುಂಞಕಣ್ಣನವರ ಅಧ್ಯಕ್ಷತೆಯಲ್ಲಿ ಸೇರಿದಿದ ಸಾರ್ವಜನಿಕ ಸಭೆಯಲ್ಲಿ ವಿಚಾರವಿನಿಮಯ ನಡೆಯಿತು. ಬಳಿಕ ಹ್ಯಾಸ್ಕೂಲು ರಚನಾ ಸಮಿತಿಯೊಂದು ರಚಿಸಲ್ಪಟ್ಟಿತಲ್ಲದೆ ಅದನ್ನು ರಿಜಿಸ್ಟ್ರಿ ಮಾಡಬೇಕೆಂದೂ ನಿಶ್ಚಯಿಸಲಾಯಿತು.

ಸ್ಥಳೀಯ ಆಸ್ಪತ್ರೆ ಸಮಿತಿಸಭೆಯು ತಾ. 9ರಲ್ಲಿ ಶ್ರೀ ಐ. ಸಿ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ಜರಗಿ ಆರೋಗ್ಯ ಕೇಂದ್ರವನ್ನು ಆದಷ್ಟು ಬೇಗನೆ ತೆರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ವೇಣೂರು.... ಮಹಾಜನರು ಹಾಗೂ ಎಡ್ವೋಕೇಟ್ ಶ್ರೀ ಕೆ. ವಿಠಲ ರಾಯರು ಪರಸ್ಪರ ಕೊಡುಗೈಯಿಂದ ಧನಸಂಗ್ರಹಿಸಿ ಕಟ್ಟಿಸಲಾದ ಜಾನುವಾರು ಚಿಕಿತ್ಸಾಲಯವನ್ನು ತಾ. 11ರಲ್ಲಿ ಜಿಲ್ಲಾ ಕಮ್ಯೂನಿಟಿ ಪ್ರೊಜೆಕ್ಟ್ ಆಫೀಸರ್ ಶ್ರೀ ಎಚ್. ನರಸಿಂಹನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಶುವೈದ್ಯ ಡಾ. ಐ. ಕುಮಾರನ್ ನಾಯರರು ಉದ್ಘಾಟಿಸಿದರು.

ಪೆರ್ಲ - ಮದ್ರಾಸು ಯುನಿವರ್ಸಿಟಿಯ ಕನ್ನಡ ರೀಡರ್ ಶ್ರೀ ಎಮ್. ಮರಿಯಪ್ಪ ಭಟ್ಟರು ತಾ. 3ರಲ್ಲಿ ಸ್ಥಳೀಯ ಸತ್ಯನಾರಾಯಣ ಮಂದಿರದಲ್ಲಿ ತಮ್ಮ ಇಂಗ್ಲಾಂಡು ವಿದೇಶ ಪ್ರವಾಸಾನುಭವವನ್ನು, ವ್ಯಾಸಂಗದ ಅನುಭವಗಳನ್ನು ವಿವರಿಸಿದರು. ಶ್ರೀ ಬಿ. ಎಮ್. ಸುಬ್ರಹ್ಮಣ್ಯ ಭಟ್ಟರು ವಂದನೆಗಳನ್ನಿತ್ತರು.

ಅಜ್ಜಾವರ— ಇಲ್ಲಿಯ ಬೋರ್ಡು ಹಾ. ಎ. ಶಾಲೆಯ ಮಾಸಿಕ ಉತ್ಸವವು ತಾ. 14 ರಲ್ಲಿ ಶ್ರೀ ಬಿ. ಸಿ. ರೈಗಳ ಅಧ್ಯಕ್ಷತೆಯಲ್ಲಿ ಜರಗಿ ಬಾಲಬಾಲಕಿಯರಿಂದ 'ಭಟ್ಟ' ಮತ್ತು 'ಸಂಕಸಖ' ನಾಟಕಾಭಿನಯ ಇತ್ಯಾದಿ ಕಾರ್ಯಕ್ರಮಗಳು ಸಾಂಗವಾದುವು.

ಹೊಸದುರ್ಗ — ಸ್ಥಳೀಯ ಹೈಸ್ಕೂಲಿನ ಹೆಡ್ಮಾಸ್ಟರ್ ಹಾಗೂ ಇತರ ಉಪಾಧ್ಯಾಯರು, ಸದ್ಯವೇ ನಿವೃತ್ತರಾಗಲಿರುವ ಜಿಲ್ಲಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರಿಗೆ ತಾ. 14 ರಂದು ಸತ್ಕಾರವಿತ್ತು ಗೌರವಿಸಿದರು.

ಮಣಿಪಾಲ— ಸ್ಥಳೀಯ 'ಗೀತಾ ಮಂದಿರ'ದಲ್ಲಿ ತಾ. 14ರಲ್ಲಿ ಶ್ರೀ ಪುತ್ತಿಗೆ ಮಠದ ಹಿರಿಯ ಮತ್ತು ಕಿರಿಯ ಸ್ವಾಮಿಗಳವರಿಗೆ ಶ್ರೀ ಉಪೇಂದ್ರ ಅನಂತ ಪೈಗಳು ಪಾದಪೂಜೆ, ಮಾಲಿಕಾಮಂಗಳಾರತಿಗಳನ್ನು ಮಾಡಿ ಗುರು ಅನುಗ್ರಹಕ್ಕೆ ಪಾತ್ರರಾದರು. ಗೀತಾ ಮಂದಿರದ ಚಟುವಟಿಕೆಗಳನ್ನು ಕೇಳಿ ಉಭಯ ಶ್ರೀಗಳವರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಶ್ರೀ ಪೈಗಳಿಗೆ ಶುಭಾಶೀರ್ವಾದಗಳನ್ನಿತ್ತರು. ಶ್ರೀ ಶ್ರೀಗಳವರನ್ನು ಡಾ. ಟಿ. ಎಮ್. ಎ. ಪೈಗಳು ಸ್ವಾಗತಿಸುತ್ತ, ಮಣಿಪಾಲದಲ್ಲಿರುವ ಅಖಿಲಭಾರತ ಜನತೆಗೆ ಸ್ವಾಮಿಗಳವರದರ್ಶನಹಾಗೂ ಫಲಮಂತ್ರಾಕ್ಷತೆ ದೊರೆಯುವಂತಾದುದು ಮಹೋದಯ ಸುಯೋಗಕಾಲವೆಂದು ಹೇಳಿದರು. ಮಣಿಪಾಲ ಹೈಸ್ಕೂಲ್ ಮುಖ್ಯೋಪಾಧ್ಯಾಯ ಶ್ರೀ ಬಿ. ಶ್ಯಾಮರಾಯ ಸೆಟ್ಟರು ಕಾಲೋಚಿತವಾತುಗಳನ್ನಾಡಿದರು. ನಂತರ ಶ್ರೀ ಅಡ್ಡೆ ಸುಬ್ಬಣ್ಣಾಚಾರ್ಯರು ಮಣಿಪಾಲದ ಪ್ರಗತಿಯನ್ನು ಕೊಂಡಾಡಿ ಸರ್ವತೋಮುಖ ಶ್ರೇಯಸ್ಸನ್ನು ಹಾರೈಸಿದರು.

ಕಾರ್ಕಳ— ತಾ. 17ರಂದು ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನಲ್ಲಿ ವನಿತಾ ಸಮಾಜದ ಸಭೆಯೊಂದು ಶ್ರೀ ಎಫ್. ಎಂ. ಮಿನೇಜಸರ ಅಧ್ಯಕ್ಷತೆಯಲ್ಲಿ ಸೇರಿ ಸ್ತ್ರೀಯರು ಗುಡಿಕೈಗಾರಿಕೆಗಳಲ್ಲಿ ಆಸಕ್ತಿವಹಿಸಬೇಕೆಂಬ ಕುರಿತು ಭಾಷಣಗಳಾದುವು. ಸಮಾಜ ವಿಕಾಸ ಯೋಜನೆಯ ವತಿಯಿಂದ ಚಲಚ್ಚಿತ್ರ ಪ್រದರ್ಶನವೂ ನಡೆಯಿತು.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಬಿದ್ದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

"ಕರುಣೆದೋರೆಯ ಕನ್ನಡಾಂಬೆ"?

[ಕಾಸರಗೋಡಿನ ಕನ್ನಡಿಗರಿಗಾಗಿ ಸಂತಾಪಸೂಚಕ, ದುಃಖಾದ್ರ ಪೂರ್ವಕನೆನಕೆ—ಇದೇ ಎನ್ನ ಕಿಂಚಿತ್ ಕಾಣಿಕೆ.]

೧

"ಓ, ಮಾತೆ! ವಿಖ್ಯಾತೆ! ನಿನಗಿನಿತು ಮುನಿಸೇಕೆ?
ಕಂಸಾತಿ ಕಂದರನ್ನಿಂತು ಗೋಳ್ಗರೆವೆಯಾ?
ನಿನ್ನ ಬಿಡುಗಡೆಯ ಚಿರಚಿಂತೆಯಿಂನವೆದಿರಲು
ತೊರೆವೆಯಾ! ಮರೆವೆಯಾ! ಬೇರ್ಪಡಿಸಿ ಕೊಲುವೆಯಾ?

೨

ಕೆಲಕಾಲದಿಂನಿನ್ನ ತೋಳಸೆರೆಗಾಶಿಸುತ
ಕಾಡಿಬೇಡುತ ಕವನ ಕಟ್ಟಿದರು ಸೋದರರು!
ಆದರೂ ನಿನ್ನೊಡಲು-ಹೆತ್ತೊಡಲು ಕರಗದೆ?
"ಕರುಣೆ ದೋರೆಯ ಕನ್ನಡಾಂಬೆ" ಎನುತಿರ್ಪರು.

೩

ನಿನ್ನು ಪರದಿಂಜನಿಸಿ ನಿನ್ನ ಘನ ಮಹಿಮೆಯನು
ಯತ್ನದಿಂದಲೆ ನಿತ್ಯ ಹಾಡುವರು ಮೈಮರೆತು!
ನಿನ್ನಭಾಗ್ಯೋದಯದ ಕಾಲವನ್ನೀಕ್ಷಿಸುತ
ಶುಭದೊಸಗೆಯಿಂನಲಿದು ಕಾದಿಹರು ಆಗೋ ನಂತು!

೪

ನೀ ಜನ್ಮವಿತ್ತ ಕಂದರಿಗಾಗಿ ಕೊಡಿಟ್ಟ—
ಕಂಸುಡಿಸು ಭಂಡಾರ ಬೀಗ ಮುದ್ರೆಯ ನೊಡೆದು!—
ಹಂಚಿದರು ನುಡಿಗಟ್ಟಿನಾ ಮಾತೆಯನು ಕಟ್ಟಿ!
ಸನಿರಸವನುಣಿಸಿದರು ಧೀವರೇಣಿಕೆಯ ತೊರೆದು.

೫

ಕನ್ನಡದ ಅಭಿಮಾನ ಹೆಚ್ಚುವಂತೆ ಹಗಿದರು!
ಹಿರಿಯಕಬ್ಬಿಗರು ಕೃತಿ-ನನ್ಯತೆಯ ಬರೆದು!
ಎಂತು! ಮರೆಯುವದೆಂತು! ಅಗಲಿರಲೆಂತು ಹೇಳ್ಳೆ!
ನೀವಾರಿದೋರು ಸಾಪ್ಪೈಕ್ಯದಿಂದಿರಲೊಂದು!

೬

"ಕುಲವೊಂದೆ-ನೆಲವೊಂದೆ-ಕುಡಿವ ಜಲವೊಂವೆಂದು"
ಪೇಳ್ವರು ಸಮಾಧಾನ—ಅಹುದು, ನಿಜ; ತಿಳಿದಿಹುದು!
"ಬಂಜೆ ಬೇನೆಯನರಿವಳೇ?
ನೊಂದನೋವ ನೋ—
ಯದವರೆತ್ತ ಬಲ್ಲರು?" ಮಿಗೆಪೇಳಲದು ಬರದು.

೭

ಎಂದಿನಿಂದಲೊ ಒಂದೆ ಸುದಿನವೆಯ ಪಡೆದಿರುವ
ನಾಡನೊಡೆಯುವ ಗಡಿಯ ತೋರಿದರು 'ನವಿಯೆಂದು'!
ಪೇಳಲತಿಸುಲಭ-ನೀತಿಯುಪಸರ್ವಜನ ಹೆಚ್ಚು!
ಹಸಿದವನೆಬಲ್ಲಜಠರಾಗ್ನಿಜ್ವಾಲೆಯುತಿಂದು!

೮

ಬರೆವೆನಾನಗಲಿಕೆಯ ನೋವ ತಡೆಯದೆ ಮರುಗಿ!
"ಕಣ್ಣೀರ ಕಾಣಿಕೆಯಿದಣ್ಣಗಳಿರಾ ನಿಮಗೆ!"
ಹೆಚ್ಚೇನು ಹೇಳಲಿ? ಕೊರಳ್ ಬಿಗಿದು ಬಾಯ್ಬರದ್ಯ!
ಕಾಸರಗೋಡಿನಣ್ಣಂದಿರೆಷ್ಟು ಮರೆಯದಿರಿ!

೯

ಓ, ಜಯದಸಿರಿಯೆ.! ಓ, ಜಗದ ದೊರೆಯೆ!!
ದೊರೆಯ್ಯೆ!!!
ಬಾಯ್ದೊಟ್ಟು ಕರೆವೆ! ಕಣ್ಣೀರಮಿಡಿವೆ! ಕೈ ಮುಗಿವೆ!—
ಕನ್ನಡವರನ್ನಗನ್ನಡಿಯೊಡೆಯದಿರಲೆಂದು,
ಅಗಲುವಣ್ಣಂದಿರಾ ಯೋಗ್ಯಕ್ಕೆ ಬೇಡುವೆ!!

ಜಯ ಕರ್ನಾಟಕಂಗೆಲ್ಗೆ!

— ಕಡಂದಲೆ ಜಯರಾಮ ಶೆಟ್ಟಿ.

ಭಾರತದ ಗುರುಕುಲ

ಮದರಾಸು ಸರಕಾರದಿಂದ ಸಂಭಾವನೆ ಪಡೆದಗ್ರಂಥ.

ಬೆಲೆ: ೧ ೮ ೦

ಅಂತರಂಗ ಕಾರ್ಯಾಲಯ ಉಡುಪಿ

ಮಂಗಳೂರು

ಸತ್ಕಾರ ಕೂಟ — ದಿನಾಂಕ ೧೨ರಂದು ಸ್ಥಳೀಯ ರೋಟರಿ ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಪಿ. ಯಸ್. ಕುಡ್ವರ ಅಧ್ಯಕ್ಷತೆಯಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳ ವಿಹಾರ ಪ್ರವಾಸಾರ್ಥವಾಗಿ ಹೊರಡಲಿರುವ ರೋಟರಿ ಕ್ಲಬ್ಬಿನ ಉಪಾಧ್ಯಕ್ಷರಾದ ಶ್ರೀ ಪಿ. ಆರ್. ರಂಗನಾಥ ಪೂಂಜಾ ಹಾಗೂ ಅವರ ಧರ್ಮಪತ್ನಿಯವರಾದ ಶ್ರೀಮತಿ ಶಾಂಭವಿ ಆರ್. ಪೂಂಜಾ ಹಾಗೂ ಈ ವರ್ಷದ ತಾತಾ ವ್ಯಾಸಂಗವೇತನ ಪಡೆದ ವಿದ್ಯಾರ್ಥಿಗಳಲ್ಲೊಬ್ಬರೂ, ಮೊನ್ನಿನ ತನಕ ಸ್ಥಳೀಯ ಕರ್ನಾಟಕ ಪೊಲಿಟೆಕ್ನಿಕ್‌ನಲ್ಲಿ ಅಸಿಸ್ಟೆಂಟ್ ಲೆಕ್ಚರರೂ ಆಗಿದ್ದ ಪೂಂಜಾ ದಂಪತಿಗಳ ಪುತ್ರರಾದ ಶ್ರೀ ಕೃಷ್ಣಕುಮಾರ ಪೂಂಜಾರವರಿಗೆ ಸುಖಪ್ರವಾಸವನ್ನು ಬಯಸಲು ಸತ್ಕಾರಕೂಟವೊಂದು ಏರ್ಪಟ್ಟಿತು.

ಶ್ರೀ ಕೃಷ್ಣಕುಮಾರ ಪೂಂಜಾರವರು ಇಂಜೀನಿಯರಿಂಗಿನಲ್ಲಿ ಹೆಚ್ಚಿನ ತರಬೇತಿ ಪಡೆಯಲೋಸುಗ ದಿನಾಂಕ ೧೨ರಂದು ತಮ್ಮ ಮಾತಾಪಿತೃಗಳೊಡನೆ ವಿಮಾನಮೂಲಕ ಮುಂಬಯಿಗೆ ತೆರಳಿ, ಅಲ್ಲಿಂದ ದಿನಾಂಕ ೧೫ರಂದು ಹಡಗು ಮಾರ್ಗವಾಗಿ ಲಂಡನಿಗೆ ತೆರಳಿರುವರು. ಇವರು ಉತ್ತಮ ಆಟಗಾರರಾಗಿದ್ದರಲ್ಲದೆ, ಮದ್ರಾಸಿನ ಬಿ. ಇ. ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆ ಹೊಂದಿರುವರು.

ಸತ್ಕಾರ ಸಮಾರಂಭದ ಆದಿಯಲ್ಲಿ ಶ್ರೀ ಎಚ್. ಆರ್. ಕಾಮತರಿಂದ ಪ್ರಾರ್ಥನೆಯಾದ ಬಳಿಕ, ಕ್ಲಬ್ಬಿನ ಕಾರ್ಯದರ್ಶಿಗಳಾದ ಶ್ರೀ ಕೆ. ವಿಶ್ವನಾಥ ಕಾಮತರು ಕಳೆದ ಸಭೆಯ ವರದಿಯನ್ನೋದಿದರು. ಆಗಮಿಸಿದ್ದ ಅತಿಥಿಗಳಲ್ಲಿ ಶ್ರೀಗಳಾದ ಕೆ. ವಿಶ್ವನಾಥ ಕಾಮತ್, ಎಂ. ಎಸ್. ಕಾಮತ್, ಡಾ. ಕೆ. ಬಾಳಪ್ಪ ಸೆಟ್ಟಿ ಮೊದಲಾದವರೂ, ಅಧ್ಯಕ್ಷರೂ ಶ್ರೀ ಪೂಂಜಾ ದಂಪತಿಗಳಿಗೂ ಹಾಗೂ ಅವರ ಪುತ್ರರಿಗೂ ಸುಖಪ್ರವಾಸವನ್ನು ಬಯಸಿದರು. ಶ್ರೀ ರಂಗನಾಥ ಪೂಂಜಾರವರು ತಮಗಿತ್ತ ಸತ್ಕಾರಕ್ಕೆ ಆಭಾರವನ್ನು ಸೂಚಿಸಿದರಲ್ಲದೆ, ತನ್ನ ಜೀವನದ ಕೆಲವು ಅನುಭವಗಳನ್ನೂ ವಿವರಿಸಿದರು. ಬಳಿಕ ಶ್ರೀ ಕೆ. ವಿಶ್ವನಾಥ ಕಾಮತರ ಧನ್ಯವಾದಗಳೊಡನೆ ಸಭೆಯು ಕೊನೆಗೊಂಡಿತು.

ದ. ಕ. ಜಿಲ್ಲಾ ಮಾಸ್ಟರ್ ಪ್ರಿಂಟರ್ಸ್ ಎಸೋಸಿಯೇಶನಿನ— ತೃತೀಯ ವಾರ್ಷಿಕೋತ್ಸವವು ತಾ. 17ರಲ್ಲಿ ಸಿ. ಪಿ. ಸಿ. ಕಂಪೆನಿಯವರಾವರಣದಲ್ಲಿ ಶ್ರೀ ಎಮ್. ಜಿ. ರಾಜಾರಾಮ್, ಜಿಲ್ಲಾ ಕಲೆಕ್ಟರ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಸೋಸಿಯೇಶನ್ ಅಧ್ಯಕ್ಷ ಶ್ರೀ ಎಮ್. ಬಾಬುರಾಯ ಪ್ರಭುಗಳು ಸ್ವಾಗತಮಾತುಗಳನ್ನಾಡಿದರು. ಕಾರ್ಯದರ್ಶಿ ಶ್ರೀ ವಿ. ಡಿ. ಕಾಮತರು ವರದಿವಾಚನಮಾಡಿದರು. ಶ್ರೀ ಎಸ್. ನಾರಾಯಣ ರಾಯರು ಸಂದೇಶಗಳನ್ನೋದಿದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಮಾತನಾಡುತ್ತಾ ಮುದ್ರಣವ್ಯವಸಾಯವು ಪ್ರಗತಿಪಥದಲ್ಲಿರುವುದಾದರೂ ಅದನ್ನು ಇನ್ನೂ ವೃದ್ಧಿಸಲು ತುಂಬಾ ಅವಕಾಶವಿದೆ ಎಂದರು. ನಗರಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಮಾತನಾಡುತ್ತಾ, ಮುದ್ರಣಗಾರರಲ್ಲಿ ಇರುವ ದರಗಳ ಸ್ಪರ್ಧೆಯಿಂದಾಗಿ ಮುದ್ರಣ ತರಗತಿಯು ಇಳಿಮುಖವಾಗಲು ಕಾರಣವೆಂದರು. ಸಭಾಧ್ಯಕ್ಷರು ತಮ್ಮ ಭಾಷಣದಲ್ಲಿ, ಮುದ್ರಣದ ಮಟ್ಟವನ್ನು ಉಳಿಸಿಕೊಳ್ಳಲು, ಮುದ್ರಣ ವ್ಯವಸಾಯಗಾರರು, ಒಂದು ಸರ್ವ ಸಮ್ಮತವಾದ ದರವನ್ನು ನಿಶ್ಚಯಿಸಿಕೊಂಡು, ತಂತಮ್ಮೊಳಗಿನ ಅನಪೇಕ್ಷಿತ ಸ್ಪರ್ಧೆಯನ್ನು ನಿವಾರಿಸಿಕೊಳ್ಳಲು ಸಾಧ್ಯವಿದೆ ಎಂದು ಸೂಚಿಸಿದರು. ಸಭಾರಂಗದಲ್ಲಿ ಲಘು ಉಪಹಾರವಿತ್ತು.

ವಿದ್ಯಾರ್ಥಿನಾಯಕರ ಚುನಾವಣೆ —ಸೈಂಟ್ ಎಲೋಸಿಯಸ್ ಕಾಲೇಜು ಹೈಸ್ಕೂಲಿನ ಶಾಲಾ ಮುಖಂಡರ ಚುನಾವಣೆಯು ತಾ. 16ರಲ್ಲಿ ಜರಗಿ ಶ್ರೀ ಪೆಟ್ರಿಕ್ ಅರಾಂಹಾರು ಶಾಲಾ ಮುಖಂಡರಾಗಿ ಚುನಾಯಿಸಲ್ಪಟ್ಟರು.

ಮಂಗಳೂರು ಇಲೆಕ್ಟ್ರಿಕ್ ಕಂಪೆನಿಯ ರಾಷ್ಟ್ರೀಕರಣವು- ಮುಂಬರುವ ಆಕ್ಟೋಬರ ತಿಂಗಳ ತಾ. 15ರಲ್ಲಿ ನಡೆಯಲಿರುವುದೆಂದೂ ಆ ಕುರಿತು ಸರಕಾರವು ಕಂಪೆನಿಗೆ ನೋಟೀಸು ಕೊಟ್ಟಿರುವುದೆಂದೂ ಹೇಳಲಾಗಿದೆ.

ಜೋಗಿನ ವಿದ್ಯುತ್ ಪೂರೈಕೆಯ ಕೆಲಸಗಳು ಇದೀಗ ಪೂರ್ಣವಾಗುತ್ತ ಬಂದಿವೆಯಾದುದರಿಂದ ಇದೇ ಜುಲೈ ತಾ. 7 ಯಾ 9ರಲ್ಲಿ ಈ ಜಿಲ್ಲೆಯಲ್ಲಿ ಅದರ ಉದ್ಘಾಟನವು ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಂದ ನೆರವೇರಿಸಲ್ಪಡಬಹುದೆಂದೂ ನಂಬಲಾಗಿದೆ. ದ. ಕ. ಜಿಲ್ಲೆಯ ಉತ್ತರ ಕ್ಷೇತ್ರ ವಿದ್ಯುತ್ ಪೂರೈಕೆಯನ್ನು ಹಿರಿಯಡ್ಕ ಕೇಂದ್ರದಲ್ಲೂ ದಕ್ಷಿಣ ಕ್ಷೇತ್ರದ ಪೂರೈಕೆಯನ್ನು ಮಂಗಳೂರು ಕೇಂದ್ರದಲ್ಲೂ ಉದ್ಘಾಟಿಸಲಾಗುವುದು ಎಂದು ತಿಳಿದುಬರುತ್ತದೆ.

ದೈವಜ್ಞಬ್ರಾಹ್ಮಣರಸಂಘದ ವಾರ್ಷಿಕ ಮಹಾಸಭೆಯು— ತಾ. 17ರಲ್ಲಿ ಶ್ರೀ ಲಕ್ಷ್ಮೀನಾರಾಯಣ ದೇವಸ್ಥಾನದ ವಠಾರದಲ್ಲಿ ಶ್ರೀ ಯು. ಪದ್ಮನಾಭ ಶೇಟ್ ರಾಯಕರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಅಧ್ಯಕ್ಷ ಶ್ರೀ ಎಮ್. ಎನ್. ಶೇಟರಿಂದ ಸ್ವಾಗತ, ಕಾರ್ಯದರ್ಶಿ ಶ್ರೀ ಎಸ್. ಎಲ್. ಶೇಟರಿಂದ ಗತವರುಷದ ವರದಿವಾಚನಗಳಾದುವು. ಹೊಸವರ್ಷಕ್ಕೆ ಶ್ರೀ ಎಂ. ಎನ್. ಶೇಟರನ್ನು ಅಧ್ಯಕ್ಷರಾಗಿಯೂ ಶ್ರೀ ಯು. ಸುಬ್ರಾಯರನ್ನು ಉಪಾಧ್ಯಕ್ಷರಾಗಿಯೂ, ಎಸ್. ಎಲ್. ಶೇಟರನ್ನು ಕಾರ್ಯದರ್ಶಿಗಳಾಗಿಯೂ, ಎನ್. ಸಂಜೀವ ಶೇಟರನ್ನು ಜತೆಕಾರ್ಯದರ್ಶಿಗಳಾಗಿಯೂ, ಶ್ರೀ ಕೆ. ಕೆ. ಆರ್. ಶೇಟರು ಖಜಾನ್ಜಿಯವರಾಗಿಯೂ ಆರಿಸಲಾಯಿತು.

ಅಶಕ್ತರ ವೈದ್ಯನಾಥ ಕಲಾವೃಂದದ— ಸಾಮಾಜಿಕ ಕೂಟವು ತಾ. 17ರಲ್ಲಿ ಡಾ. ಕೆ. ನಾಗಪ್ಪಾಳ್ವರ ಅಧ್ಯಕ್ಷತೆಯಲ್ಲಿ ಜರಗಿತು. ವೃಂದದವರು ಅಭಿನಯಿಸಿದ 'ಸಾಮ್ರಾಟ್ ಅಶೋಕ' ನಾಟಕವು ಉತ್ತಮವಾಗಿತ್ತೆಂದು ಸಭಾಧ್ಯಕ್ಷರು ಹೇಳಿ, ರಾಷ್ಟ್ರದ ಸಾಂಸ್ಕೃತಿಕ ಜೀವನದಲ್ಲಿ ಕಲಾವಿದರ ಪಾತ್ರವು ಅತಿ ಮಹತ್ವದ್ದೆಂದು ಸೂಚಿಸಿದರು. ಶ್ರೀಗಳಾದ ಬೇಲಗದ್ದೆ ಅಪ್ಪಯ್ಯ, ರಮಾನಾಥ ಮತ್ತು ಜಿ. ಪರಮೇಶ್ವರ ಭಟ್ಟರು ನಾಟ್ಯಕಲೆ ಮತ್ತು ಕಲಾವಿದನಕರ್ತವ್ಯದ ಕುರಿತು ಮಾತನಾಡಿದರು. ವೃಂದದ ಕಾರ್ಯದರ್ಶಿ ಶ್ರೀ ಎಮ್. ಉಮೇಶರಾಯರು ಕಳೆದ ಒಂದು ವರ್ಷದಿಂದ ತಮ್ಮ ಮಿತ್ರರು ನಾಟಕಾಭಿನಯದಲ್ಲಿ ಅನುಭವಿಸಿದ ಕಷ್ಟ—ನಿಷ್ಟುರಗಳನ್ನು ವಿವರಿಸಿದರು.

ಶ್ರೀ ಎಸ್. ಕರುಣಾಕರ ಅಡ್ಯಂತಾಯರು—ಅಂತಾರಾಷ್ಟ್ರೀಯ ಮಜೂರ ಸಂಘದಿಂದ ಇಂಡೋನೇಶ್ಯಕ್ಕೆ (ತಾತ್ಕಾಲಿಕ) ಸಲಹೆಗಾರರಾಗಿ ನೇಮಿಸಲ್ಪಟ್ಟಿರುವರು. ಇವರು ನಮ್ಮ ಜಿಲ್ಲೆಯವರಿದ್ದು, ಹಿಂದೆ ಭಾರತ ಸರಕಾರದ ಮಜೂರ ಸಂಸ್ಥೆಯ ಡೈರೆಕ್ಟರರಾಗಿದ್ದರು. ಇಂಡೋನೇಶ್ಯಕ್ಕೆ ಕಳುಹಿಸಲ್ಪಡುವ ಅಡ್ಯಂತಾಯರ ಕಮಿಶನು, ಯುಕ್ತರಾಷ್ಟ್ರಸಂಘದ ತಾಂತ್ರಿಕ ಸಹಾಯವನ್ನು ವಿಸ್ತರಿಸುವ ಯೋಜನೆಯ ಒಂದು ಅಂಗವಾಗಿದೆ ಎಂದು ಹೇಳಲಾಗಿದೆ.

ಶ್ರೀ ಮಂಜುನಾಥ ಕೃಪಾಪೋಷಿತ ನಾಟಕ ಸಭೆ— ಇದರ ವರ್ಧಂತಿಯು ತಾ. 17ರಲ್ಲಿ ಭುವನೇಂದ್ರಸಭಾಮಂದಿರದಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ವಿ. ಬಾಳಿಗರು ಸ್ವಾಗತಿಸಿದ ಬಳಿಕ ಶ್ರೀ ವೆಂಕಟ್ರಾಮ್ ಕೆರೋಡಿಯವರು ಸಂದೇಶಗಳನ್ನೂ ವರದಿಯನ್ನೂ ಓದಿದರು. ಡಾ. ಪಿ. ನಾರಾಯಣ ರಾವ್, ಶ್ರೀ ಎಚ್. ಮನಮೋಹನ ಕಾಮತ್ ಇವರು ನಾಟಕ ಕಲೆಯ ಕುರಿತು ಮಾತನಾಡಿದರು. ಅಧ್ಯಕ್ಷರು ಇಲ್ಲಿಯ ಎಮೆಚ್ಯೂರ್ ನಾಟಕ ಕೂಟಗಳು ಒಂದಾಗುವುದು ಉತ್ತಮವೆಂದೂ ಇದರಿಂದ ನಾಟಕ ಕಲೆಯ ಅಭಿವೃದ್ಧಿಗೆ ಅನುಕೂಲವಾಗುವುದೆಂದೂ ಹೇಳಿದರು. ಬಳಿಕ ನೃತ್ಯ, ನಾಟಕ ಪ್ರದರ್ಶನ, ಬಹುಮಾನ ವಿತರಣೆಗಳಾದುವು.

ಬೆಸೆಂಟ್ ಬಾಲಿಕಾ ಪಾಠಶಾಲೆಯ —ಹಳೆ ವಿದ್ಯಾರ್ಥಿ ಸಂಘವಾದ ವಸಂತ ಪ್ರೇಮಿ ಮಂಡಲಿಯ ಆಶ್ರಯದಲ್ಲಿ ರಾಮಕೃಷ್ಣ ಆಶ್ರಮದ ಸ್ವಾಮಿ ಆದಿದೇವಾನಂದರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಶಾಖೆಯೊಂದು ಉದ್ಘಾಟಿಸಲ್ಪಟ್ಟಿತು. ಶ್ರೀಮತಿ ರಾಧಾ ಎಲ್. ರಾಯರು ಸ್ವಾಗತ ಭಾಷಣ ಮಾಡಿ ಈ ಶಾಖೆಯು ಹಳೆ ವಿದ್ಯಾರ್ಥಿನಿಗಳಿಗೂ ಇತರ ಸ್ತ್ರೀಯರಿಗೂ ವಾರಕ್ಕೊಮ್ಮೆ ಹಿಂದೂಧರ್ಮಶಾಸ್ತ್ರದ ಶಿಕ್ಷಣವೀಯುವ ವ್ಯವಸ್ಥೆಯನ್ನು ಈ ಶಾಖೆಯ ಮೂಲಕ ಮಾಡಲಾಗುವುದೆಂದರು. ಸಭಿಕರ ಭಾಷಣಗಳಾದ ಮೇಲೆ ಅಧ್ಯಕ್ಷರು ಸಂಸ್ಕೃತಿಯ ಪುನರುತ್ಥಾನ ಕಾರ್ಯದಲ್ಲಿ ಸ್ತ್ರೀಯರು ಹೆಚ್ಚಿನ ಆಸಕ್ತರಾಗಬೇಕೆಂದು ಹೇಳಿದರಲ್ಲದೆ ಉಪನಿಷತ್ತುಗಳ ಕುರಿತಾಗಿ ಮಾತನಾಡಿದರು.

ನಾನಾ ಬಗೆಯ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	0
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	3	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತಿತರ ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧಗಳು ಅರ್ಥಾತ್ ದಶಾವತಾರಗಳು	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಿನ್ದಾರ	1	8
33	ಬಾಳಿನ ಬೆಡಗು	1	0
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10
38	ಧರ್ಮ ಸಂಕಟ	0	6

ವಿವರವಾದ ಕೆಟಲಾಗಿಗೆ ಬರೆಯಿರಿ
ನವಭಾರತ ಬುಕ್ ಡಿಪೊ, ಉಡುಪಿ.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, UDIPI, S. KANARA.

Approved by the Text Book Committee of Madras, for non-detailed study in higher Forms (vide Page 7, Fort St George Gazette, Part I—B dated 4—5—1955).

ಬಂಗಾರದಂತಹ ಪುಸ್ತಕವೆಂದು ಸಮಗ್ರ ಕರ್ನಾಟಕದ ಪತ್ರಿಕಾ ಪ್ರಪಂಚದಿಂದ ಪ್ರಶಂಸಿಸಲ್ಪಟ್ಟ ಹೊಸ ಬಗೆಯ ಗ್ರಂಥ

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಹೈಸ್ಕೂಲುಗಳ IV ಯಾ Vನೇ ಫಾರ್ಮುಗಳಿಗೆ ಕನ್ನಡ ಉಪಪಠ್ಯ ಪುಸ್ತಕವಾಗಿ ಮದ್ರಾಸು ಟೆಕ್ಸ್ಟ್ ಬುಕ್ ಕಮಿಟಿಯವರ ಮಂಜೂರಾತಿ ಪಡೆದಿದೆ.

ಕಳೆದ ವರ್ಷ ಕೆಲವು ಖಾಸಗಿ ಹೈಸ್ಕೂಲುಗಳಲ್ಲಿ ಉಪಪಠ್ಯ ಪುಸ್ತಕವಾಗಿ ಉಪಯೋಗಿಸಲ್ಪಟ್ಟಿದೆ.

ಈ ವರ್ಷ ಹಲವು ಖಾಸಗಿ ಮತ್ತು ಜಿಲ್ಲಾ ಬೋರ್ಡಿನ ಎಲ್ಲಾ ಹೈಸ್ಕೂಲುಗಳಲ್ಲಿಯೂ ಉಪಪಠ್ಯ ಪುಸ್ತಕವಾಗಿ ಆರಿಸಲ್ಪಟ್ಟಿದೆ.

ಪುಟಗಳು: ೧೮೭ ಬೆಲೆ: ರೂ. ೧—೪—೦.

ಪ್ರತಿಗಳಿಗೆ ಬರೆಯಿರಿ:
ನವಯುಗ ಪ್ರೆಸ್, ಉಡುಪಿ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗದ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.
ನವಯುಗ, ಉಡುಪಿ.

ಕ್ಷ–ಕಿರಣ ಪರೀಕ್ಷೆಯು ಅಪಾಯರಹಿತವಲ್ಲ!

(೩ನೇ ಪುಟದಿಂದ)

ವಾರ್ಯವೆನಿಸದಿದ್ದರೆ ಕ್ಷ–ಕಿರಣ ಪರೀಕ್ಷೆಗಳನ್ನು ವೈದ್ಯರಾದವರು ನಡೆಸಬಾರದು; ವೈದ್ಯರು ಕ್ಷ–ಕಿರಣ ಪರೀಕ್ಷೆಗೆಯೇ ತಮ್ಮನ್ನು ಗುರಿಪಡಿಸುವಂತೆ ನಾಗರಿಕರಾದರೂ ಒತ್ತಾಯವನ್ನು ಮಾಡಲಾಗದು.

ಕ್ಷ–ಕಿರಣ ಪರೀಕ್ಷೆಯ ಪರಿಣಾಮವಾಗಿ ಉಂಟಾಗುವ ಅಣುವಿಕಿರಣ ಶೀಲತೆಯು ಅಣುವಿಕ ಶಸ್ತ್ರಾಸ್ತ್ರಗಳ ಸ್ಫೋಟನ ಜನ್ಯ ಧೂಳಿನಿಂದ ಉಂಟಾದ ವಿಕಿರಣಶೀಲತೆಗಿಂತ ೨೨ ಪಾಲಿನಷ್ಟು ಹೆಚ್ಚು ಶಕ್ತಿಯುತವಾಗಿದೆ ಎಂದು ವಿಜ್ಞಾನಿಗಳು ಅಭಿಪ್ರಾಯಪಡುತ್ತಿದ್ದಾರೆ! ಹಲ್ಲಿನ ಪರೀಕ್ಷೆಗಾಗಿ ಒಮ್ಮೆ ಕ್ಷ–ಕಿರಣಗಳನ್ನು ಪ್ರಯೋಗಿಸಿದರೆ, ಆಗ ೫ ಘಟಕಗಳಷ್ಟು ಅಣು ವಿಕಿರಣಶೀಲತೆಯುಂಟಾಗುತ್ತದೆ–ಆದರೆ ಇಷ್ಟು ಹೆಚ್ಚಿನ ಪ್ರಭಾವಕ್ಕೆ ಮನುಷ್ಯನು ಗುರಿಯಾಗುವನೆಂದು ಹೆದರುವುದೇನು ಬೇಡ. ಏಕೆಂದರೆ ಐದು ಸಾವಿರದಲ್ಲಿ ಒಂದಂಶದಷ್ಟು ಕಿರಣ ಮಾತ್ರ ದೇಹವನ್ನು ನುಗ್ಗಿ ಒಳಹೊಕ್ಕು ಮೂಳೆಯ ಮೇಲೆ ದುಷ್ಪರಿಣಾಮ ಮಾಡಬಲ್ಲುದು. ಆದಾಗ್ಯೂ ಜನನೇಂದ್ರಿಯಗಳಿಗೆ ಸಮೀಪದ ಭಾಗಗಳ ಮೇಲೆ, ಮುಖ್ಯವಾಗಿ ಹೊಟ್ಟೆ ಮತ್ತು ಕಿಬ್ಬೊಟ್ಟೆಗಳ ಮೇಲೆ, ಕ್ಷ–ಕಿರಣ ಪ್ರಯೋಗಮಾಡಿದಾಗ ಅಪಾಯವು ಇಷ್ಟು ವಿರಳವಾಗಿರುವುದಿಲ್ಲ; ಅತ್ಯಲ್ಪವೂ ಆಗಿರುವುದಿಲ್ಲ. ಅದು ಬಹಳ ಹೆಚ್ಚಿರುತ್ತದೆ. ಮುಖ್ಯವಾಗಿ ಗರ್ಭಸ್ಥ ಶಿಶುವಿನ ಬೆಳವಣಿಗೆಯ ಬಗೆಯನ್ನು ಪರೀಕ್ಷಿಸಲು ಗರ್ಭಿಣಿ ಸ್ತ್ರೀಯರ ಮೇಲೆ ನಡೆಸುವ ಕ್ಷ–ಕಿರಣ ಪರೀಕ್ಷೆಗಳೂ ಬೆಂಗೋಲಿನ ಕೆಳಭಾಗದ ಅವಸ್ಥೆಯನ್ನು ತಿಳಿದುಕೊಳ್ಳಲು ಮಾಡುವ ಕ್ಷ-ಕಿರಣ ಪರೀಕ್ಷೆಗಳೂ ಅಪಾಯಕಾರಿ ಫಲಿತಾಂಶವನ್ನುಂಟುಮಾಡುತ್ತವೆ. ಏಕೆಂದರೆ ಇವುಗಳಿಂದ ಕನಿಷ್ಠ ಮೂರು ಘಟಕಗಳಷ್ಟಾದರೂ ಪ್ರಭಾ ಕಿರಣಗಳ ಪ್ರಭಾವವು ದೇಹದಲ್ಲಿ ಉಳಿಯುತ್ತದೆ.

ಅಪಾಯವುಂಟಾಗುವುದು ಖಚಿತವೆಂಬ ಸಂಗತಿ ಈಗ ಸ್ಪಷ್ಟವಾಗಿರುವುದರಿಂದ ಕ್ಷ–ಕಿರಣ ಪರೀಕ್ಷೆಗಳ ಬಗ್ಗೆ ವಿಶೇಷ ಮುಂಜಾಗರೂಕತೆ ವಹಿಸಬೇಕಾಗಿದೆ ಎಂದು ಸಮಿತಿ ಹೇಳುತ್ತದೆ. ಕ್ಷ–ಕಿರಣ ಪರೀಕ್ಷೆಯನ್ನು ನಡೆಸುವುದಕ್ಕೆ ಮುಂಚೆ ಪರೀಕ್ಷಾರ್ಥಿಯು ಎಷ್ಟು ಘಟಕಗಳಷ್ಟು ಪ್ರಭಾ ಕಿರಣಗಳ ಪ್ರಭಾವಕ್ಕೆ ಈಗಾಗಲೇ ಒಳಪಟ್ಟಿರುವನೆಂಬುದನ್ನು ಗೊತ್ತು ಹಚ್ಚಬೇಕು; ಇದಕ್ಕಾಗಿ ತಕ್ಕ ದಾಖಲೆ ಪುಸ್ತಕಗಳನ್ನಿಡಬೇಕು ಎಂದು ಸಮಿತಿ ಒತ್ತಾಯಿಸಿದೆ. ಬ್ರಿಟನಿನ ಸಮಿತಿಯು ಸಾಮಾನ್ಯ ಕ್ಷ-ಕಿರಣ ಪರೀಕ್ಷೆಗಳಿಂದ ಅಪಾಯವಿಲ್ಲ ಎಂದು ಹೇಳುತ್ತಿದ್ದಂತೆಯೇ ಕ್ಷ-ಕಿರಣ ಪರೀಕ್ಷೆಗಳನ್ನು ನಡೆಸುವ, ಆವಶ್ಯಕತೆಗಳ ಮತ್ತು ಕ್ಷ-ಕಿರಣ ಚಿಕಿತ್ಸಾಕ್ರಮದ ಪುನರ್ವಿಮರ್ಶೆ ನಡೆಯಬೇಕಾಗಿದೆ ಎಂದಿದೆ. ಪ್ರಭಾ ಕಿರಣಗಳ ಪ್ರಯೋಗನಿರತನಾದ ತಜ್ಞನ ಆಯುಷ್ಯವು ಇವುಗಳ ಗೊಡವೆ ಇಲ್ಲದೆ ಸಾಮಾನ್ಯ ಚಿಕಿತ್ಸಾಕ್ರಮಗಳನ್ನೇ ಅನುಸರಿಸುವ ವೈದ್ಯನ ಆಯುಷ್ಯಕ್ಕಿಂತ ಸುಮಾರು ಐದು ವರ್ಷಗಳಷ್ಟು ಕಡಿಮೆ ಇರುವುದೆಂದೂ ವಿಜ್ಞಾನಿಗಳು ಸಂಶೋಧನೆಯ ಮೂಲಕ ಕಂಡುಕೊಂಡಿದ್ದಾರೆ. ಕ್ಷ–ಕಿರಣವೇ ಮುಂತಾದ ಪ್ರಭಾ ಕಿರಣಗಳಿಂದ ಆಯುಷ್ಯವು ನಾಶವಾಗುತ್ತದೆಂಬುದಕ್ಕೆ ಇದು ಬಲವಾದ ನಿದರ್ಶನ. ಪ್ರಕಾಶಮಾನವಾದ ಅಂಕೆಗಳನ್ನು ಬರೆದಿರುವ ಗಡಿಯಾರ ಮತ್ತು ವಾಚುಗಳ ಉಪಯೋಗ, ಟೆಲಿವಿಜನುಗಳ ಬಳಕೆ ಇವುಗಳಿಂದಲೂ ಅಣುವಿಕಿರಣ ಶೀಲತೆಯು ತೀವ್ರವಾಗುತ್ತದೆ. ಆದುದರಿಂದ ಇವುಗಳ ಉಪಯೋಗವನ್ನು ಆದಷ್ಟು ತಗ್ಗಿಸುವುದು ಇಷ್ಟವೆಂದೂ ವಿಜ್ಞಾನಿಗಳು ಸಲಹೆಯನ್ನು ಕೊಟ್ಟಿದ್ದಾರೆ.

ಅಣುವಿಕಿರಣ ಶೀಲತೆಯ ಪ್ರಭಾವವು ತಾತ್ಕಾಲಿಕ ರೂಪದ್ದಾಗಿರುವುದಿಲ್ಲ–ಎಷ್ಟೇ ಅಲ್ಪ ಪ್ರಮಾಣದಲ್ಲಿ ಈ ಪ್ರಭಾವವುಂಟಾದರೂ ಅದು ನಾಶವಾಗದೆ ಸ್ಥಿರವಾಗಿ ಉಳಿಯುತ್ತದೆ; ಮತ್ತು ಈ ಪ್ರಭಾವಕ್ಕೆ ಬಲಿ ಬೀಳುವುದು ಹೆಚ್ಚಾದಂತೆ, ಅಣುವಿಕಿರಣ ಶೀಲತೆಯ ದುಷ್ಪರಿಣಾಮಗಳೂ ಅಧಿಕಗೊಳ್ಳುತ್ತವೆ. ಪೈಗೆ ಪೈ ಕೂಡಿಸಿ ರೂಪಾಯಿಯಾಗುವಂತೆ, ಹನಿ ಕೂಡಿ ಹಳ್ಳವಾಗುವಂತೆ, ಪ್ರತಿದಿನ ಉಂಟಾದ ಅಣುವಿಕಿರಣ ಶೀಲತೆಯ ಅಲ್ಪಸ್ವಲ್ಪ ಪ್ರಭಾವವೇ ಕೆಲವು ವರ್ಷಗಳ ಅವಧಿಯಲ್ಲಿ ಅಪಾಯರಹಿತ ಮಟ್ಟವನ್ನು ಮೀರಿ ಹೋಗಬಲ್ಲುದು. ಅಣುಬಾಂಬುಗಳ ಸ್ಫೋಟನ ಹೆಚ್ಚಿಕೊಂಡಂತೆ ಅಪಾಯವೂ ಹೆಚ್ಚುವುದು. ಶಾಂತಿ ಕಾರ್ಯಗಳಿಗಾಗಿ, ಅಣುಶಕ್ತಿಯನ್ನು ಉತ್ಪಾದಿಸುವ ರಿಯಾಕ್ಟರುಗಳು ಈಗ ಕೆಲವು ಮಾತ್ರ ಇವೆ–ಈ ರಿಯಾಕ್ಟರುಗಳ (ಅಣುಶಕ್ತಿ ಜನಕ ಯಂತ್ರ) ಸಂಖ್ಯೆ ಹೆಚ್ಚಿದರೆ, ವಿಕಿರಣ ಶೀಲತೆಯು ಈ ಯಂತ್ರಗಳು ಕೆಲಸ ಮಾಡುತ್ತಿರುವ ಪರಿಣಾಮವಾಗಿಯೂ ತೀವ್ರತರವಾಗಬಲ್ಲುದು. ಅಣುವಿಕಿರಣ ಶೀಲತೆಯು ದೇಶಗಳ ಮೇರೆಯೊಳಗೆಯೇ ತನ್ನ ಚಟುವಟಿಕೆಯನ್ನು ತೋರಿಸಿ ಕುಳಿತಿರುವುದಿಲ್ಲ. ಅದಕ್ಕೆ ಜಗತ್ತೇ ಆಟದ ರಂಗವಾಗಿದೆ. ವಾತಾವರಣ, ಜಲರಾಶಿ, ಸಸ್ಯ ಹಾಗು ಪ್ರಾಣಿವರ್ಗ–ಎಲ್ಲವೂ ಅಣುವಿಕಿರಣ ಶೀಲತೆಯು ಭೂಗೋಲದ ಒಂದು ಮೂಲೆಯಿಂದ ಇನ್ನೊಂದಕ್ಕೆ ಹಬ್ಬಲು ನೆರವಾಗುತ್ತವೆ. ಆದುದರಿಂದ ಲೋಕದ ಯಾವ ಭಾಗದಲ್ಲಿ ಪ್ರಭಾಕಿರಣಗಳ ಚಟುವಟಿಕೆ ತೀವ್ರವಾದರೂ ಅದರ ದುಷ್ಪರಿಣಾಮಕ್ಕೆ ಇಡೀ ಜಗತ್ತೇ ಭಾಗಿಯಾಗುತ್ತದೆ.

ನಿದರ್ಶನಾರ್ಥವಾಗಿ, ಅಮೇರಿಕದ ನೇವಾಡಾ ಪ್ರದೇಶದಲ್ಲಿ ನಿರಂತರವಾಗಿ ನಡೆಸಿದ ಅಣುಬಾಂಬು ಸ್ಫೋಟನ ಪ್ರಯೋಗಗಳು ಅಟ್ಲಾಂಟಿಕ್ ಸಾಗರದ ಆಚೆಗಿನ ಇಂಗ್ಲೆಂಡಿನ ಹುಲ್ಲುಗಾವಲುಗಳ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ. ಈ ಹುಲ್ಲನ್ನು ಮೇದ ದನಗಳು ವಿಕಿರಣ ಶೀಲತೆಗೆ ಬಲಿಯಾಗಿವೆ. ಈ ದನಗಳ ಹಾಲು ಕುಡಿದವರು ಸಹ ದುಷ್ಪರಿಣಾಮಕ್ಕೆ ಗುರಿಯಾಗುತ್ತಾರೆ. ಉತ್ತರ ಸಮುದ್ರದ ವಿಂಡ್‌ಸ್ಕೇಲ್ ಪ್ರದೇಶದಲ್ಲಿ ಬ್ರಿಟನಿನ ಅಣುಶಕ್ತಿಜನಕ ಯಂತ್ರದಿಂದ ಉಂಟಾದ ವಿಕಿರಣಶೀಲತೆಯು ತನ್ನ ಪ್ರತಾಪವನ್ನು ತೋರಿವೆ. ಸ್ಟ್ರೋಂಟಿಯಂ ಎಂದು ವಿಜ್ಞಾನಿಗಳು ಕರೆಯುವ ಪದಾರ್ಥವು ಹೀಗೆ ಆಹಾರವಸ್ತುಗಳನ್ನು ದೂಷಿತಗೊಳಿಸುತ್ತದೆ; ಮತ್ತು ಅಣುವಿಕಿರಣಶೀಲ ಚಟುವಟಿಕೆಯನ್ನು ವ್ಯಾಪಕಗೊಳಿಸುತ್ತದೆ. ಕ್ಯಾನ್ಸರೆಂದು ಕರೆಯಲ್ಪಡುವ ನಾನಾ ಬಗೆಯ ಅರ್ಬುದ ವ್ರಣರೋಗಗಳು, ರಕ್ತಕ್ಷಯಾದಿ ಭೀಕರವ್ಯಾಧಿಗಳು, ದೃಷ್ಟಿಹೀನತೆಯಂಥ ಅಂಗ ವೈಕಲ್ಯ, ಪ್ರಜೋತ್ಪಾದನ ಶಕ್ತಿಯ ನಷ್ಟ–ಇತ್ಯಾದಿಗಳು ಸಾಮಾನ್ಯ ದುಷ್ಪರಿಣಾಮಗಳಾಗಿರುತ್ತವೆ. ಇವು ಒಂದೇ ತಲೆಮಾರಿನಲ್ಲಿ ವ್ಯಕ್ತವಾಗಬೇಕೆಂದಿಲ್ಲ–ಆ ಸಂತಾನದ ಮೇಲಿನ ಅಭಿಶಾಪದ ರೂಪದಲ್ಲಿ ಮೊದಲಿಗೆ ಸುಪ್ತವಿದ್ದುಕೊಂಡು, ಕಾಲಾಂತರದಲ್ಲಿ ಈ ದುಷ್ಪರಿಣಾಮಗಳು ಪ್ರಕಟವಾಗುತ್ತವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 227/55 R. E. P. 757/55.

ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡ್ಪಿ. —ವಾದಿ.

1. ಟಿ. ವಿಶ್ವನಾಥ ಪ್ರಭು, 2. ಟಿ. ವೆಂಕಟ್ರಮಣ ಪ್ರಭು—ಟಿ. ಸುಬ್ರಾಯ ಪ್ರಭುರ ಮಕ್ಕಳು ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮ. —ಪ್ರತಿವಾದಿಗಳು

ಇವರಿಗೆ—

ವಾದಿ ಬೇಂಕಿನವರು ಪ್ರತಿವಾದಿರ ಪಕ್ಕಿನ ಸ್ಥಿರಾಸ್ತಿಗಳನ್ನು ಜಪ್ತುಮಾಡಿ ಯೇಲಂ ಮಾಡುವ ಬಾರು ದಾಖ್ಲು ಮಾಡಿರುತ್ತಾರೆ. ಸದ್ರಿ ಯೇಲಂ ಇಸ್ತಿಹಾರಿನ ಶರ್ತ ನಿರ್ಣಯಿಸುವ ಬಗ್ಗೆ ಮೇಲ್ಕಂಡ ಕೋರ್ಟಿನವರು ತಾರೀಕು 29-6-1956ಕ್ಕೆ ಇಟ್ಟಿರುತ್ತಾರೆ. ಆ ಕುರಿತು ನಿಮ್ಮದೇನಾದ್ರು ಆಕ್ಷೇಪಣೆಯಿದ್ದಲ್ಲಿ ಸದ್ರಿ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ಶಿವಾಯಿ ಮುಂದಿನ ಹುಕುಂ ಕೊಡಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

K. Raghunatha Shenai.
Pleader for Plff.
Coondapoor 9—6—1956.

ವಿದ್ಯಾರ್ಥಿ ವೇತನ

ಕರ್ನಾಟಕ ಫ್ರೀ ಸ್ಟೈಟ್ ಹೈಸ್ಕೂಲಿನ ಸಂಚಾಲಕರಾದ ಮುಂಬಯಿಯ ಬಂಟರ ಯಾನೆ ನಾಡವರ ಸಂಘದವರು ಇಲ್ಲಿಯ ಕಾಲೇಜುಗಳಲ್ಲಿ ಕಲಿಯುವ ಯಾ ಕಲಿಯಲಿಚ್ಛಿಸುವ ಸ್ವಜಾತಿ ಬಡ ವಿದ್ಯಾರ್ಥಿಗಳಿಗೆ ಎಂದಿನಂತೆ, ವಿದ್ಯಾರ್ಥಿ ರೂಪದಿಂದ ಸಾಲ ಕೊಡುವುದರಿಂದ, ಧನಸಹಾಯ ಪಡೆಯಲಿಚ್ಛಿಸುವವರು, ಸಂಘದ ಎರಡು ಮೆಂಬರರ ಶಿಫಾರಸು ಮತ್ತು ಎಸ್. ಎಸ್. ಸಿ. ಅಥವಾ ಇನ್ನಿತರ ಪರೀಕ್ಷೆಯ ಮಾರ್ಕ್‌ಲಿಸ್ಟಿನೊಂದಿಗೆ ತಾ. 25—6—1956 ರೊಳಗೆ ಅರ್ಜಿ ಮಾಡಬೇಕಾಗಿ ಅಪೇಕ್ಷಿಸಲಾಗಿದೆ.

Hon. General Secretary
Bunt Alias Nadava Sangha
17, Kumta Street, Fort, Bombay.

ಗೀತೆಯ ಕೈಗನ್ನಡಿ

0-12-0

ನವಯುಗ ಪ್ರೆಸ್, ಉಡುಪಿ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.



(೨ನೇ ಪುಟದಿಂದ)

ಕ್ರಮಗಳನ್ನು ಇಲ್ಲಿ ಸರಕಾರವು ಕೈಗೊಳ್ಳುವುದಕ್ಕೆ ಮುಂಚೆ ಪ್ರತ್ಯಕ್ಷ ಸಾಗುವಳಿಯನ್ನೇನು ಮಾಡದೆ ಭೂಮಿಯೊಡೆತನವನ್ನು ಮಾತ್ರ ಅನುಭವಿಸುತ್ತಿದ್ದು ಜಿಗಳೆಯಂತೆ ರೈತರನ್ನು ಶೋಷಿಸುತ್ತಿದ್ದ ಭೂಮಾಲಿಕರೊಂದು ದೊಡ್ಡ ಸಮಸ್ಯೆಯಾಗಿದ್ದರು.

೧೯೪೮ರಲ್ಲಿ ಪೋಲೀಸು ಕಾರ್ಯಾಚರಣೆಯನ್ನು ನಡೆಸಿದ ತರುವಾಯ ನೇಮಕಗೊಂಡ ಭೂಸುಧಾರಣಾ ಸಮಿತಿಯು ಎಲ್ಲ ಹಳ್ಳಿಗಳಲ್ಲೂ ಹಳ್ಳಿಯ ಪಟೇಲ ಮತ್ತಿತರ ಸರಕಾರಿ ಅಧಿಕಾರಿಗಳು ವಿಶಾಲವಾದ ಭೂಭಾಗವನ್ನು ಅದರ ಪಟ್ಟದಾರರೆಂದು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವುದನ್ನು ಕಂಡುಕೊಂಡಿತು. ಇವರೇ ಹಳ್ಳಿಯಲ್ಲಿ ಹಣವನ್ನು ಕಡ ಅಥವಾ ಸಾಲವಾಗಿ ಕೊಡುವವರೂ ಆಗಿದ್ದರು. ಈ ಹಂಚಿಕೆಯಿಂದ ಇವರಿಗೆ ಸಾಲಗಾರ ಕೃಷಿಕರಿಂದ ಭೂಮಿಯನ್ನು ಪಡೆದುಕೊಳ್ಳುವುದಕ್ಕೆ ಎಡೆ ಸಿಗುತ್ತಿದ್ದಿತು. ತೆಲಂಗಾಣದಲ್ಲಿ ಗ್ರಾಮೀಣ ಅಧಿಕಾರಿಗಳು ಶ್ರೀಮಂತರಾಗಿರುವುದಕ್ಕೂ ಭೂರಹಿತ ವರ್ಗದವರಿಂದ ಇವರು ಆಕ್ರಮಣಕ್ಕೊಳಗಾಗುತ್ತಿರುವುದಕ್ಕೂ ಮೂಲ ಕಾರಣ ಇದೇ ಎಂದು ಸಮಿತಿಗೆ ವೇದ್ಯವಾಯಿತು.

ಭೂಮಿಯೊಡೆತನದೊಡನೆ ಹಣವನ್ನು ಸಾಲವಾಗಿ ಕೊಡುತ್ತಿರುವ ಭೂಮಾಲಕರ ವಿಷಯದಲ್ಲಿ ಸಮಿತಿ ಹೀಗೆಂದಿತು—"ಸಾಲ ಪಡೆದುಕೊಂಡ ಕೃಷಿಕನು ತನ್ನ ಭೂಮಿಯಲ್ಲಾದ ಉತ್ಪಾದನೆಯನ್ನು ಸಾಲ ಕೊಟ್ಟ ತನಗೆಯೇ ಮಾರಬೇಕೆಂದು ಈ ಭೂಮಾಲಿಕನು ಶರ್ತವನ್ನು ಹಾಕುತ್ತಾನೆ; ಮತ್ತು ಈ ಶರ್ತದಂತೆ ತನ್ನಲ್ಲಿಗೆ ಮಾರಾಟಕ್ಕಾಗಿ ಬಂದ ದವಸಧಾನ್ಯಗಳಿಗೆ ಕೆಳಮಟ್ಟದ ಬೆಲೆಯನ್ನೆ ತೆರುತ್ತಾನೆ. ಭೂಮಾಲಿಕನೂ ಹಣ ಸಾಲಕೊಡುವವನೂ ಆಗಿರುವ ಈ ಮಹಾಶಯನಿಗೆ ಸಾಲಪಡೆದ ರೈತನು ಮಾರಿದ ಉತ್ಪಾದನೆಯು ಪೇಟೆಯಲ್ಲಿ ೧೨ ರಿಂದ ೨೦% ಲಾಭವನ್ನು ಸಾಲಕೊಟ್ಟಾತನಿಗೆ ತಂದುಕೊಡುತ್ತದೆ. ಇದರಿಂದಾಗಿ ೧೮ ರಿಂದ ೨೪% ದರದಲ್ಲಿಯಾದರೂ ಬಡ್ಡಿಯು ವಸೂಲಾದಂತಾಗುತ್ತದೆ. ಒಟ್ಟಾರೆ, ಭೂಮಿಯ ಉತ್ಪನ್ನದಲ್ಲಿ ಸಾಗುವಳಿಯ ವೆಚ್ಚವನ್ನು ತೆಗೆದರೆ ಉಳಿದುದರ ಮೂರರಲ್ಲಿ ಒಂದಂಶವು ಸಾಗುವಳಿದಾರನಿಗೂ ಮೂರರಲ್ಲಿ ಎರಡಂಶದಷ್ಟು ಸಾಲವಿತ್ತ ಪಟ್ಟೇದಾರನಿಗೂ ಹೋಗುತ್ತವೆ."

ಇಲ್ಲಿ ಒಂದು ಪ್ರಸಂಗವನ್ನು ನಾವು ನೆನೆಯಬಹುದು. ಬ್ರಿಟಿಷರು ಭಾರತದಲ್ಲಿ ಹೂಡಿದ್ದ ತಂತ್ರಗಳಲ್ಲಿ ಭೂಮಾಲಕ ವರ್ಗದ ಕೆಲವೇ ಮಂದಿಯ ಸಹಾಯದಿಂದ ಶಾಸನಾಂಗವನ್ನು ಈ ಭೂಮಾಲಿಕರಲ್ಲಿಯೇ ಒಬ್ಬಿಬ್ಬರು ಪ್ರವೇಶಿಸುವಂತೆ ಮಾಡಿದ ತಂತ್ರವೂ ಒಂದಾಗಿದೆ. ಮೊಂಟ್-ಫೋರ್ಡ್ ಸುಧಾರಣೆಯಂತೆ ದ್ವಿದಳ ರಾಜ್ಯ ಪದ್ಧತಿಯನ್ನು ಸ್ಥಾಪಿಸಿದಾಗ, ಮದ್ರಾಸಿನ ಪ್ರಥಮ ಮುಖ್ಯಮಂತ್ರಿಸ್ಥಾನವನ್ನು ಅಲಂಕರಿಸಿದ ಪಾನಗಲ್ಲಿನ ರಾಜರು ಶ್ರೀ ಎಸ್. ಸತ್ಯಮೂರ್ತಿಯವರು ಮುಂದಿಟ್ಟಿದ್ದ ಸೂಚನೆಯೊಂದನ್ನು ತೀವ್ರವಾಗಿ ಪ್ರತಿಭಟಿಸಿದ್ದರು.

ಸುಧಾರಿತ ರೀತಿಯ ಬೇಸಾಯ

ಭಾರತದ ಕೃಷಿ ಭೂಮಿಯು ಕವಿಗಳಿಗೆ ಒಳ್ಳೆಯ ಸ್ಫೂರ್ತಿಯನ್ನು ಕೊಡಬಲ್ಲುದು: ಹಸುರು ತುಂಬಿದ ಭತ್ತದ ಗದ್ದೆಗಳು, ಎತ್ತರಕ್ಕೆ ತಲೆ ಎತ್ತಿ ನಿಂತಿರುವ ತೆಂಗು, ತಾಳೆಯ ಮರಗಳು, ಅವುಗಳಿಗೆ ಹಿನ್ನೆಲೆಯಾಗಿ ನಿಂತಿರುವ ನೀಲಿ ವರ್ಣದ ಆಕಾಶ, ಮತ್ತಲ್ಲಿ ಬಣ್ಣದ ಕಿರಣಗಳನ್ನು ಚೆಲ್ಲುತ್ತಿರುವ ಸೂರ್ಯ ದೇವ! ಯಾರ ಮನಸ್ಸು ಇದರಿಂದ ಆನಂದ ತುಂದಿಲವಾಗಲಿಕ್ಕಿಲ್ಲ?

"ಕೃಷಿತೋನಾಸ್ತಿ ದುರ್ಭಿಕ್ಷಂ" ಎಂದ ಆರ್ಯರ ಈ ಭೂಮಿಯಲ್ಲಿ ಭತ್ತವು ಮುಖ್ಯಾಹಾರವಾಗಿದೆ. ಈ ಮಳೆಗಾಲದಲ್ಲಿ ನಾವು ಚಿತ್ರದಲ್ಲಿ ಕಾಣುತ್ತಿರುವ ದೃಶ್ಯಗಳನ್ನು ಎಲ್ಲೆಲ್ಲೂ ಕಂಡಿದ್ದೇವೆ; ಕಾಣುತ್ತಿದ್ದೇವೆ. ನಮ್ಮ ಸಾಗುವಳಿದಾರರು ಪರಿಶ್ರಮಪೂರ್ವಕವಾಗಿಯೂ ತತ್ಪರತೆಯಿಂದಲೂ ಕೃಷಿಯನ್ನು ಮಾಡುತ್ತಿದ್ದಾರೆ. ಭಾರತದಲ್ಲಿಂದು ೭೫೫೪೫೦೦೦ ಎಕ್ರೆ ಭೂಮಿಯಲ್ಲಿ ಭತ್ತ ಬೆಳೆಯುತ್ತದೆ: ಉತ್ಪನ್ನ ಪ್ರಮಾಣವು ೨೪೫೩೧೦೦ ಟನ್ನು.

ಕಳೆದ ವರ್ಷಕ್ಕಿಂತ ಈ ವರ್ಷ ೨.೪% ಹೆಚ್ಚು ಭೂಮಿಯನ್ನು ಭತ್ತದ ಬೆಳೆಗಾಗಿ ಅಳವಡಿಸಿಕೊಳ್ಳಲಾಗಿದೆ; ಅಕ್ಕಿಯ ಉತ್ಪಾದನೆಯು ಕಳೆದ ವರ್ಷಕ್ಕಿಂತ ೩.೮% ಹೆಚ್ಚಿಕೊಂಡಿದೆ. ಸುಧಾರಿತ ರೀತಿಯ ಬೇಸಾಯವೇ ಈ ಪ್ರಗತಿಪರ ಫಲಿತಾಂಶದ ಮುಖ್ಯ ಕಾರಣ; ಭೂಸುಧಾರಣೆಯ ಶಾಸನದ ಪಾತ್ರವಿಲ್ಲಿ ನಿಜಕ್ಕೂ ಉಲ್ಲೇಖನೀಯ.

ಶ್ರೀ ಸತ್ಯಮೂರ್ತಿಯವರು ಮದ್ರಾಸಿನ ಮೇಲ್ಮನೆಯಲ್ಲಿ ಪದವೀಧರರ ಪ್ರತಿನಿಧಿಯಾಗಿದ್ದರು. ಪಾನಗಲ್ಲಿನ ರಾಜರು ಮದ್ರಾಸಿನ ಭೂಮಾಲಕರ ಸಂಘವನ್ನು ಪ್ರತಿನಿಧಿಸುತ್ತಿದ್ದರು. ಈ ಸಂಘದಲ್ಲಿ ೧೦೦ ಮಂದಿಗಿಂತ ಹೆಚ್ಚು ಸದಸ್ಯರಿರಲಿಲ್ಲ. ಆದುದರಿಂದ ತಾನು ಮುಂದಿಟ್ಟಿದ್ದ ಸೂಚನೆಗೆ ಮುಖ್ಯ ಮಂತ್ರಿಗಳು ವಿರೋಧವನ್ನು ವ್ಯಕ್ತಪಡಿಸಿದಾಗ ಶ್ರೀ ಸತ್ಯಮೂರ್ತಿಯವರೆದ್ದು ನಿಂತು "ಕೇವಲ ೩೫ ಮಂದಿಯನ್ನು ಮಾತ್ರ ಈ ಮಹೋನ್ನತ ಸಭೆಯಲ್ಲಿ ಪ್ರತಿನಿಧಿಸುವ" ಮುಖ್ಯ ಮಂತ್ರಿಗಳ ಅಭಿಪ್ರಾಯವನ್ನು ತಾನು ಒಪ್ಪುವ ಹಾಗಿಲ್ಲ ಎಂದರು. ಭೂಮಾಲಕರ ಸಂಘದ ೧೦೦ ಮಂದಿ ಸದಸ್ಯರಲ್ಲಿ ೩೫ ಮಂದಿ ಮಾತ್ರ ಪಾನಗಲ್ಲಿನ ರಾಜರಿಗೆ ಮತವಿತ್ತಿದ್ದರು—ಎಂಬುದಿದರ ಅರ್ಥ. ಮುಖ್ಯ ಮಂತ್ರಿಗಳು ಆಗ ಉಂಟಾದ ನಗೆಯಲ್ಲಿ ತಮ್ಮ ಸ್ವರವನ್ನೂ ಸೇರಿಸಿದರು. ಆದರೆ ಜಸ್ಟೀಸ್ ಪಾರ್ಟಿಯು ವಿದ್ವಾಂಸರೂ ವಾಗ್ಮಿಗಳೂ ಆದ ಸತ್ಯಮೂರ್ತಿಯವರನ್ನು ಬಹು ದಿನಗಳ ವರೆಗೆ ಕ್ಷಮಿಸಲಿಲ್ಲ.

ಬಂಗಾಳ ರಾಜ್ಯದ ಸಲುವಾಗಿ ೧೯೪೦ರಲ್ಲಿ ನೇಮಕನಾದ ಆಯೋಗವು ಜಮೀನುದಾರಿಕೆಯ ವಿಷಯವು ಆ ರಾಜ್ಯಕ್ಕೆ ಮಾತ್ರವಲ್ಲ, ಉಳಿದ ರಾಜ್ಯಗಳಿಗೂ ಮಾರ್ಗದರ್ಶನವಾಡಿತು "೧೭೯೩ರಲ್ಲಿ ಕಾಯಂ ಭೂಕಂದಾಯ ಪದ್ಧತಿಯನ್ನು ಪ್ರಾರಂಭಿಸಲು ಕಾರಣಗಳು ಎಷ್ಟೇ ನ್ಯಾಯವಿದ್ದಿರಲಿ, ಈಗಿನ ಕಾಲದ ಪರಿಸ್ಥಿತಿಗಳಿಗೆ ಈ ಪದ್ಧತಿ ಎಷ್ಟಕ್ಕೂ ಹೊಂದಿಕೆಯಾಗುವುದಿಲ್ಲ. ಜಮೀನುದಾರಿ ಪದ್ಧತಿಯು ಎಷ್ಟು ದೋಷಗಳಿಂದ ಕೂಡಿದೆಯೆಂದರೆ, ಅದು ರಾಷ್ಟ್ರೀಯ ಹಿತಾಸಕ್ತಿಯನ್ನು ಪೋಷಿಸುತ್ತಿಲ್ಲ." ಎಂದು ಈ ಆಯೋಗ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

ಈ ಆಯೋಗದ ಮುಂದೆ ಅನೇಕಾನೇಕ ಸಂಸ್ಥೆಗಳೂ ಮಹಾತ್ಮಾಗಾಂಧಿ, ಶ್ರೀ ಜವಾಹರಲಾಲ ನೆಹರು ಮತ್ತಿತರ ರಾಷ್ಟ್ರೀಯ ಧುರೀಣರೂ ಅಭಿಪ್ರಾಯವನ್ನು ನಿವೇದಿಸಿದ್ದರು. ಮಹಾತ್ಮಾ ಗಾಂಧೀಯವರು ೧೯೪೨ನೇ ಆಗೋಸ್ತಿನಲ್ಲಿ "ಚಲೇ ಜಾವ್" ಚಳವಳವನ್ನು ಘೋಷಿಸುವುದಕ್ಕೆ ಎರಡು ತಿಂಗಳು ಪೂರ್ವದಲ್ಲಿ ಭೂಸುಧಾರಣೆಯ ಕುರಿತು ವ್ಯಕ್ತಪಡಿಸಿದ ವಿಚಾರಗಳು ಇಂದಿಗೂ ಮಹತ್ವಪೂರ್ಣವಾದುದಾಗಿವೆ.

"ಗಾಂಧೀಯವರೊಡನೊಂದು ವಾರ" ಎಂಬುದರಲ್ಲಿ ಹೇಳಲಾದಂತೆ, ಅಮೇರಿಕದ ಪತ್ರಿಕೋದ್ಯಮಿ ಲೂಯಿ ಫಿಶರರು ಗಾಂಧೀಜಿಯನ್ನು ಭೇಟಿಮಾಡಿದಾಗ, ಮಹಾತ್ಮರು ವ್ಯಕ್ತಪಡಿಸಿದರೆನ್ನಲಾದ ವಿಷಯವಿಂತಿದೆ "ಭೂಮಾಲಿಕರನ್ನು ಅವರ ಭೂಮಿಯ ಸಂಬಂಧದಿಂದ ಬೇರ್ಪಡಿಸಿದ ಪಕ್ಷದಲ್ಲಿ ಅವರಿಗೆ ಯೋಗ್ಯವಾದ ಪರಿಹಾರವನ್ನು ಹಣದ ರೂಪದಲ್ಲಿ ಕೊಡುವುದು ಯಾರಿಗಾದರೂ ಸಾಧ್ಯವಾಗದು."

ಯರವಡಾದ ಆಗಾಖಾನರ ಬಂಗಲೆಯಲ್ಲಿ ಮೀರಾ ಬೇನರು ಸಂಭಾಷಣೆಯ ನಡುವೆ "ಸ್ವರಾಜ್ಯಾನಂತರ ಭೂಮಿಯು ಹೇಗೆ ವಿತರಿಸಲ್ಪಡುತ್ತದೆ?" ಎಂದು ಹಾಕಿದ ಪ್ರಶ್ನೆಯನ್ನುತ್ತರಿಸುತ್ತಾ ಗಾಂಧೀ ಹೀಗೆ ಘೋಷಿಸಿದರು: "ಭೂಮಿಯು ಸರಕಾರದ ಒಡೆತನಕ್ಕೆ ಸೇರುತ್ತದೆ. ಭೂಮಿಯು ಸರಕಾರಕ್ಕೆ ಸೇರಿದ್ದೆನ್ನುವ ಆದರ್ಶದಲ್ಲಿ ನಂಬಿಕೆಯುಳ್ಳವರ ಕೈಯಲ್ಲಿಯೇ ಸರಕಾರಿ ಆಡಳಿತ ಸೂತ್ರವಿರುವುದೆಂದು ನಾನು ಭಾವಿಸುತ್ತೇನೆ."

ಮುಂದರಿದು ಅವರು ಹೀಗೆಂದರು: "ಭೂಮಾಲಿಕರಲ್ಲಿ ಹೆಚ್ಚಿನವರು ತಮ್ಮ ಭೂಮಿಯಮೇಲಿನ ಒಡೆತನವನ್ನು ಸ್ವೇಚ್ಛೆಯಿಂದ ಬಿಟ್ಟುಗೊಡುವರು; ಯಾರು ಹೀಗೆ ಮಾಡುವುದಿಲ್ಲವೊ ಅಂಥವರು ಶಾಸನಕ್ಕೆ ತಲೆಬಾಗಿ ಹಾಗೆ ಮಾಡಲೇಬೇಕಾಗುತ್ತದೆ." ಇದು ಈಗಿನ ಭೂದಾನ ಚಳವಳಕ್ಕೂ ಇಗು ನಮ್ಮನ್ನೊಯ್ಯಬಹುದಾದ ಪ್ರಗತಿಪಥಕ್ಕೂ ಸಂಬಂಧಿಸಿದ ಭವಿಷ್ಯವಾಕ್ಯವೆಂದು ಕಾಣುತ್ತದೆಯಲ್ಲವೆ? ಹಾಗೆಯೇ ಇಂದಿನ ಭೂಸುಧಾರಣೆಯ ಘೋಷಣೆಗೂ ಇದರೊಡನಿರುವ ಸಂಬಂಧವು ಬಹಳ ಗಾಢವಾದುದಾಗಿದೆ; ಮಹಾತ್ಮರ ಅಭಿಪ್ರಾಯಕ್ಕೆ ಇದು ಅತಿ ನಿಕಟವಾದುದೂ ಹೌದು.

[ಸೌಜನ್ಯ: "Bharat Jyoti"]

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಯಕ್ಷಗಾನ ಸಾಹಿತ್ಯ—

ಬರೆದವರು: ಕೆ. ಎಂ. ಕೃಷ್ಣರಾವ್, ಎಂ. ಎ., ಪಿ ಎಚ್. ಡಿ. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಧಾರವಾಡ. ಬೆಲೆ: ರೂ. ೧—೦—೦.

ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಲ್ಲಿ ಮುಖ್ಯವಾಗಿ ಮೆರೆವಾಡುತ್ತಿರುವ ಯಕ್ಷಗಾನವು ಕನ್ನಡ ನಾಡಿನ ಜಾನಪದ ಕಲೆಗಳಲ್ಲಿ ಶ್ರೇಷ್ಠವಾದ ಸ್ಥಾನವನ್ನು ಪಡೆಯುತ್ತದೆಂದು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಈ ಕಲೆಗೆ ಸಂಬಂಧಿಸಿದಂತೆ ಪ್ರಕಟವಾದ ಗ್ರಂಥಗಳು ಎಲ್ಲೋ ಕೆಲವು ಮಾತ್ರ—ಲೇಖನಗಳ ರೂಪದಲ್ಲಿ; ಉಪನ್ಯಾಸಗಳ ರೂಪದಲ್ಲಿ ಯಕ್ಷಗಾನ ಕಲೆಯ ಬಗ್ಗೆ ಚರ್ಚೆ ನಡೆದಿದ್ದರೂ ಅದು ಸಾಲದು. ಏಕೆಂದರೆ ಯಕ್ಷಗಾನ ಕಲೆಯ ವಿಮರ್ಶಾತ್ಮಕ ಪರಿಚಯ ಮಾಡಿಸಿಕೊಡುವುದು ಸುಲಭದ ಕಾರ್ಯವಾಗಿಲ್ಲ. ಇಲ್ಲಿ ಸಂಶೋಧನೆಗೆ ಬಹಳ ಹೆಚ್ಚಿನ ಅವಕಾಶವಿದೆ; ಪರಿಚಯಕಾರರು ಪ್ರಸ್ತಾಪಿಸಬೇಕಾಗಿರುವ ವಿಷಯಗಳೂ ಹಲವು ಮುಖವಾಗಿವೆ. ಇಲ್ಲಿ ಸಂಗೀತವಿದೆ, ನರ್ತನವಿದೆ, ಸಾಹಿತ್ಯವಿದೆ, ಚರಿತ್ರೆಯಿದೆ, ಮಾತುಗಾರಿಕೆಯಿದೆ, ಅಭಿನಯವಿದೆ, ಕಲಾವಿನ್ಯಾಸವಿದೆ, ಜೊತೆಗೆ ನಾಟಕೀಯತೆಯಿದೆ—ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ಶಿಕ್ಷಣವೆಂಬ ಘನವಾದ ಉದ್ದೇಶವಿದೆ. ಇವುಗಳಲ್ಲಿ ಒಂದೊಂದನ್ನೆ ಪ್ರಸ್ತಾಪಿಸಿ ಬರೆಯ ಹೋದರೂ ಒಂದೊಂದು ಗ್ರಂಥವೇ ರೂಪುಗೊಳ್ಳಬಹುದಾದ ವಿಷಯ ಸಂಪತ್ತು ಯಕ್ಷಗಾನದ್ದಾಗಿದೆ. ಇಷ್ಟರ ವರೆಗೆ ಹೀಗೆ ಪರಿಚಯ ಮಾಡಿಸಿಕೊಡುವ ಸಾಹಸ ಸಾಕಷ್ಟು ನಡೆದಿಲ್ಲವೆಂಬುದರಿಂದ ಇದು ವಿಶೇಷ ಹೊಣೆಗಾರಿಕೆಯ ಕೆಲಸವೂ ಆಗಿದೆ ಎನ್ನಬಹುದು. ಯಕ್ಷಗಾನದ ಮೂಲಭೂತ ವೈಶಿಷ್ಟ್ಯವು ಮೇಲೆ ಹೇಳಿದ ನಾನಾ ವಿನ್ಯಾಸಗಳ ಒಟ್ಟು ಕಲ್ಪನೆಯಲ್ಲಿರುವುದರಿಂದ ಯಾವುದೇ ಅಂಗವನ್ನು ಸ್ವತಂತ್ರವಾಗಿ ವರ್ಣಿಸಲು ಹೋಗುವುದು ತೀರ ಪ್ರಯಾಸಕರ. ಪ್ರಸ್ತುತ ಪುಸ್ತಕವು „ಯಕ್ಷಗಾನ ಸಾಹಿತ್ಯ" ಎಂಬ ಹೆಸರನ್ನು ಹೊತ್ತಿದ್ದರೂ ಇದರಲ್ಲಿ ಸಾಹಿತ್ಯಕ್ಕಿಂತಲೂ ಕಲೆಯನ್ನು ಒಟ್ಟಿಗೆ ವೀಕ್ಷಿಸುವ ದೃಷ್ಟಿಗೆ ಪ್ರಾಧಾನ್ಯ ಬಂದಂತೆ ಭಾಸವಾಗಲು ಇದೇ ಮುಖ್ಯ ಕಾರಣವೆಂದು ಊಹಿಸಿದರೆ ತಪ್ಪಾಗಲಾರದು. ಲೇಖಕರ ಅನುಭವವಿಹೀನತೆಯೂ ಈ ದೋಷಕ್ಕೆ ಸ್ವಲ್ಪ ಮಟ್ಟಿಗೆ ಹೊಣೆಯಾಗಿದೆ. ಯಕ್ಷಗಾನ ಛಂದಸ್ಸಿನ ಕುರಿತು ಅವರು ಹೇಳಿರುವ ಮಾತುಗಳನ್ನು ಕೊನೆಯದೆಂದು ಸ್ವೀಕರಿಸುವುದಕ್ಕೆ ಸಾಧ್ಯವಿಲ್ಲ-ಅಶುದ್ಧ ಪ್ರಯೋಗಗಳೇ ಹೆಚ್ಚಿವೆ; ಸ್ಖಾಲಿತ್ಯಗಳೇ ಅಧಿಕವಾಗಿವೆ; ಯಕ್ಷಗಾನ ಸಾಹಿತ್ಯವು ಪಂಡಿತರ ಮನೋರಂಜನೆ ಮಾಡದೆಂಬುದರಿಂದ ಅದಕ್ಕೆ ಶ್ರೇಷ್ಠ ಸ್ಥಾನ ಕೊಡುವಂತಿಲ್ಲ-ಎಂಬ ಅವರ ನಿಲುವೆಯು ವಿವಾದಾಸ್ಪದಾಂಶಗಳಿಂದ ಕೂಡಿದೆ. ನಾಲ್ಕು ಯಕ್ಷಗಾನ ಪ್ರಸಂಗಗಳ ವಿಮರ್ಶೆಯನ್ನು ಅವರು ಮಾಡಿದ್ದಾರೆ-ಇಲ್ಲಿ ,ಕತೆಯಿದೆ; ಆದರೆ ಸಾಹಿತ್ಯ ವಿಮರ್ಶೆಯ ಭಾಗ ಅಷ್ಟು ಸ್ವಾರಸ್ಯವಾಗಿಲ್ಲ. ಯಕ್ಷಗಾನ ಲಕ್ಷಣ ಮತ್ತು ರಂಗಭೂಮಿಯ ಕುರಿತು ಅವರು ಹೇಳಿದ ಮಾತುಗಳು ಸ್ಪಷ್ಟವೂ ವಾಸ್ತವಿಕವೂ ಆದ ಚಿತ್ರಗಳನ್ನೆ ಎಲ್ಲೆಡೆಗಳಲ್ಲಿ ನೀಡುತ್ತದೆ ಎಂಬ ಭರವಸೆ ಇಲ್ಲ: ಲಕ್ಷಣ ಗ್ರಂಥಗಳನ್ನು ಓದಿ ಬರೆದಂತೆ ಈ ಭಾಗವಿದೆಯಲ್ಲದೆ, ಯಕ್ಷಗಾನ ಪ್ರದರ್ಶನವನ್ನು ನೋಡಿ ಬರೆದಂತೆಯಲ್ಲ. ಲೇಖಕರು ಕೊನೆಗೆ ಇನ್ನೂರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳ ಯಾದಿಯನ್ನಿತ್ತಿದ್ದಾರೆ ಈಗ ದಕ್ಷಿಣ ಕನ್ನಡದ ಬಡಗು ಮಟ್ಟಿನವರು ಆಡುತ್ತಿರುವ ಅನೇಕ ಪ್ರಸಿದ್ಧ ಪ್ರಸಂಗಗಳು ಇಲ್ಲಿ ಕಾಣುವುದಿಲ್ಲ; ಉಡುಪಿಯ ಪ್ರಸಿದ್ಧ ಪ್ರಸಂಗ ಪ್ರಕಾಶನ ಸಂಸ್ಥೆ ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯದ ಪ್ರಕಟಣೆಯಾದ „ಸಭಾಲಕ್ಷಣ''ದ ಉಲ್ಲೇಖವನ್ನು ಲೇಖಕರು ಮಾಡಿದ್ದಾರೆ (ಪುಟ ೩೧) ಆದರೆ ಈ ಪ್ರಕಾಶಕರು ಪ್ರಕಟಿಸಿರುವ ಅನೇಕ ಪ್ರಸಂಗ ಪುಸ್ತಕಗಳನ್ನು ಯಾದಿಯಲ್ಲಿ ತೋರಿಸಿಲ್ಲ. ಶೈಲಿಯು ಪ್ರಸಕ್ತ ವಸ್ತುವಿನ ಸಂಗತಿಯಲ್ಲಿರಬೇಕಾದಷ್ಟು ನಾಜೂಕಿನಿಂದಲೂ, ಆಕರ್ಷಣೆಯಿಂದಲೂ ಕೂಡಿಲ್ಲ. ಮೇಲಾಗಿ ಪುಸ್ತಕದ ತುಂಬ ಮುದ್ರಣದ ತಪ್ಪುಗಳು! ಹೀಗೆ ಪುಸ್ತಕದ ತುಂಬ ಹಲವಾರು ಲೋಪದೋಷಗಳಿವೆ. ಪುಸ್ತಕವು ಎಷ್ಟಕ್ಕೂ ಸಮಗ್ರವಾಗಿಲ್ಲ. ಆದಾಗ್ಯೂ ಈ ಪುಸ್ತಕದ ಉಪಯುಕ್ತತೆ ಕಡಿಮೆ ಎಂದೇನೂ ಭಾವಿಸಲಾಗದು—ಏಕೆಂದರೆ, ಇಂದಿನವರೆಗೆ ಯಾರೊಬ್ಬರೂ, ಪ್ರಾಯಶಃ ಮುಳಿಯ ಹಾಗು ಕಾರಂತರಂಥ ಕೆಲವರ ಹೊರತಾಗಿ, ಆಳವಾಗಿ ಕೈಯಾಡಿಸಿರದ ಈ ಕ್ಷೇತ್ರದಲ್ಲಿ ಪ್ರವೇಶಿಸಿದಾಗ ತಮಗೆ ತಿಳಿದ, ಹೊಳೆದ ಮಾತುಗಳನ್ನು ಲೇಖಕರು ಪ್ರಾಮಾಣಿಕವಾಗಿ ಹೇಳಿದ್ದಾರೆ. ನಾಳೆಯ ಲೇಖಕರಿಗೆ ಇದರಿಂದ ಪ್ರಯೋಜನವಾದೀತು. ಯಕ್ಷಗಾನದ ಕುರಿತು ಲೇಖಕರಲ್ಲಿ ವಿಶೇಷವಾದ ಆಸಕ್ತಿ ಇರುವುದರಿಂದ ಅವರೇ ಹೆಚ್ಚಿನ ಸಂಶೋಧನೆ, ವಿವೇಚನೆ ಮತ್ತು ಅನುಭವಗಳ ಬಲದಿಂದ ಶೈಲಿಯಲ್ಲಿ ಕಲಾತ್ಮಕತೆಯೂ ಮಾತಿನಲ್ಲಿ ಸತ್ಯವೂ ವಿಚಾರದಲ್ಲಿ ಉದಾತ್ತತೆಯೂ ದೃಷ್ಟಿಯಲ್ಲಿ ಸೂಕ್ಷ್ಮಾವಲೋಕನ ಶಕ್ತಿಯೂ ವ್ಯಕ್ತವಾದ ಇದಕ್ಕೂ ಒಳ್ಳೆಯ ಗ್ರಂಥವನ್ನು ಬರೆದರೂ ಬರೆವಾರು. ಹಾಗೆ ಬರೆಯಲಿ, ಎಂದೇ ನಾವು ಹಾರೈಸುತ್ತೇವೆ.

ಸುಮಸಂಚಯ—

ಬರೆದವರು: "ಕಮಲನಾಭ" ಪ್ರಕಾಶಕರು: ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ದ. ಕ. ಬೆಲೆ: ರೂ. ೧-೦-೦.

ತುಂಬ ಅಚ್ಚುಕಟ್ಟಾದ ಮತ್ತು ಆಕರ್ಷಕವಾದ ಮುದ್ರಣದೊಡನೆ ಪ್ರಕಟವಾಗಿರುವ ಈ ಕವನ ಸಂಕಲನವು ಒಳ್ಳೆಯ ಹಲವು ಸಣ್ಣ ಕವಿತೆಗಳನ್ನೂ "ಶೀರ್ಷಯಜ್ಞ"ವೆಂಬ ಹೃದಯಂಗಮವಾದ ಕಥನ-ಕವನವೊಂದನ್ನೂ ರಸಿಕರಿಗಿತ್ತು, ಆನಂದಾನುಭವವನ್ನುಂಟುಮಾಡುತ್ತದೆ. ಶ್ರೀ ಕಮಲನಾಭರ ಶೈಲಿಯು ರಸವತ್ತಾಗಿದೆ; ಅವರ ಸೌಂದರ್ಯ ದೃಷ್ಟಿಯು ಭಾವಪರಿಪುಷ್ಟಿಯಲ್ಲಿಯೂ ಪದಸಂಕಲನದಲ್ಲಿಯೂ ಏಕರೂಪತೆಯಿಂದ ವ್ಯಕ್ತವಾಗಿದೆ. ಹಲವು ಉತ್ತಮ ಪ್ರಯೋಗಗಳೂ ಅಲಂಕಾರೋಪೇತವಾದ ಮಾತುಗಳೂ ಮಿಂಚಿ, ಪದ್ಯಗಳಿಗೆ ವಿಶೇಷ ಮೆರುಗನ್ನಿತ್ತಿವೆ. ಸಾಮಾನ್ಯ ಸಾಹಿತ್ಯಾಭಿರುಚಿಯುಳ್ಳವನೂ ಸವಿಯಬಹುದಾದಷ್ಟು ಸರಳತೆ ಈ ಪದ್ಯಗಳಲ್ಲಿದೆ. ಈ ಸರಳತೆಯಲ್ಲಿಯೂ ಶ್ರೇಷ್ಠ ಮಟ್ಟದ ಕವಿತ್ವ ಕೌಶಲ್ಯವನ್ನು ವ್ಯಕ್ತಪಡಿಸಿರುವುದೇ ಕಮಲನಾಭರ ಹೆಚ್ಚುಗಾರಿಕೆ: ಆದುದರಿಂದಲೇ ಪಂಡಿತರೂ ಪಾಮರರೂ ಕೂಡಿಯೇ ಸವಿಯುವ ಸಂಕಲನವಾಗಿದೆ "ಸುಮಸಂಚಯ."

--ವಿಮರ್ಶಕ.

ಮಕ್ಕಳ ಮಗ್ಗಿಪುಸ್ತಕ

೦ ೧ ೨

0—1—0

ನವಯುಗ ಪ್ರೆಸ್, ಉಡುಪಿ.

(೧ನೇ ಪುಟದಿಂದ)

ಅವರೂ ಮಾನವ ಸಹಜವಾದ ದೌರ್ಬಲ್ಯಗಳಿಂದ ದೂರವಾಗಿಲ್ಲ. ಆದುದರಿಂದ ಅವರೇ ತಪ್ಪಾಗಿರಲೂ ಬಹುದು. ಇದಕ್ಕಾಗಿಯೇ ಅವರು ಜನಾಭಿಪ್ರಾಯವು-ಜನಜಂಗುಳಿಯ ನಿರ್ಣಯವಲ್ಲ—ಸ್ಪಷ್ಟವಾಗಿ ಪ್ರಕಟವಾದಾಗ ಅದಕ್ಕೆ ತಲೆಬಾಗಬೇಕು. ಆದರೆ ಇಷ್ಟರಿಂದಲೇ ತಮ್ಮ ಅಭಿಪ್ರಾಯವನ್ನು, ಅದು ತಪ್ಪೆಂದು ಸಿದ್ಧವಾಗದಿದ್ದಲ್ಲಿ, ಬದಲಾಯಿಸಿಕೊಳ್ಳಬೇಕಾಗಿಲ್ಲ.

ವ್ಯಕ್ತಿ ಪೂಜೆಯು ಮಾನವ ಜಾತಿಗೆ ಅಂಟಿಕೊಂಡ ರೋಗ — ಅದು ಜನರಿಗೆ ಧುರೀಣತ್ವವನ್ನು ಒದಗಿಸುವ ಮಟ್ಟಿಗೆ ಶುಭದಾಯಕವಾದುದಾಗಿದೆ. ಆದರೆ ವ್ಯಕ್ತಿಯು ತಾನಿಲ್ಲದೆ ಸಮಾಜವು ಬಾಳಲಾರದೆಂದು ಭಾವಿಸಿದರೆ ಅಥವಾ ಸಮಾಜವೇ ಕುರುಡರಂತೆ ವಿವೇಚನೆ ಇಲ್ಲದೆ ಧುರೀಣನನ್ನು ಅನುಸರಿಸುತ್ತಿದ್ದರೆ, ಅದು ಪ್ರಜಾಪ್ರಭುತ್ವಕ್ಕೆ ಯೋಗ್ಯವಾಗಲಾರದು. ಧುರೀಣನು ಮಾರ್ಗದರ್ಶಕನಾಗಬೇಕು—ಆದರೆ ದೇವರ ಪೀಠವೇರಿ ಪೂಜೆಗೊಂಬವನಾಗಬಾರದು. ಪ್ರಜಾಪ್ರಭುತ್ವದಲ್ಲಿ ಆಸಕ್ತಿಯುಳ್ಳ ಸಮಾಜ ಗಮನಿಸಬೇಕಾದ ವಿಷಯವಿದು.

ಶಾಸನಗಳಿಂದ ನೀತಿಯನ್ನು ಸಮಾಜದಲ್ಲಿ ನೆಲೆಗೊಳಿಸಬಹುದೇ ಎಂಬ ಇನ್ನೊಂದು ಪ್ರಶ್ನೆಗೆ "ನೀತಿಯ ನೆಲೆಗೊಳಿಸುವಿಕೆಗಾಗಿಯಲ್ಲ, ಅದರ ರಕ್ಷಣೆಗಾಗಿ ಶಾಸನಗಳಿವೆ" ಎಂದು ಮುರಾರ್ಜಿ ಸ್ಪಷ್ಟಗೊಳಿಸಿದರು:- ನೀತಿಶೀಲವಾಗುವ ಹೊಣೆಗಾರಿಕೆಯು ಸಮಾಜದ್ದಾಗಿದೆ; ಆದರೆ ಶಾಸನಗಳು ನೀತಿಯು ತೀರ ಕಲುಷಿತಗೊಳ್ಳದಂತೆ ರಕ್ಷಣೆಯನ್ನು ನೀಡುತ್ತವೆ ಎಂದರು.

ಸರಕಾರಕ್ಕೂ ನೀತಿ ರಕ್ಷಣೆಗೂ ಸಂಬಂಧವಿಲ್ಲ ಎನ್ನಲಾಗದು. ಸಮಾಜವು ಪ್ರಗತಿಗಾಗಿ ಶಾಸನವನ್ನು ಬಯಸುತ್ತದೆ; ಸ್ವನಿಯಂತ್ರಣ ಧನ್ಯ ಸಮಾಜವೇರ್ಪಡುವವರೆಗೆ ಶಾಸನಗಳು ಅನಿವಾರ್ಯವಾಗಿವೆ. ಸಮಾಜದ ನೈತಿಕ ಅಂತಸ್ತು ಏರಿದಂತೆ, ಶಾಸನಗಳ ಆವಶ್ಯಕತೆ ಕಡಿಮೆಯಾಗುತ್ತದೆ ಎಂದಿವರ. ಮತ-

ತಮ್ಮ ಇನ್ನೊಂದು ಭಾಷಣದಲ್ಲಿ ಶ್ರೀ ದೇಸಾಯಿಯವರು ಸಹ ಶಿಕ್ಷಣಕ್ಕೆ ತಾನು ವಿರೋಧವಿದ್ದೇನೆ ಎಂದರು. ಕೆಲವೊಂದು ಪ್ರಸಂಗಗಳಲ್ಲಿ ಕೆಲವು ವಿಷಯಗಳನ್ನು ಸಹಿಸಿಕೊಳ್ಳಬೇಕಾಗುತ್ತದೆ — ಆದುದರಿಂದ ಈಗ ನಾನು ಸಹಶಿಕ್ಷಣದ ಪುರಸ್ಕರ್ತರಿಗೆ ವಿರೋಧಿಯಾಗುವುದಿಲ್ಲ. ಆದರೆ ಮಹಿಳೆಯರಿಗಾಗಿ ಪ್ರತ್ಯೇಕ ಶಿಕ್ಷಣಾಲಯಗಳನ್ನು ಸ್ಥಾಪಿಸುವವರಿಗೆ ನಾನು ಪ್ರೋತ್ಸಾಹ ನೀಡುತ್ತೇನೆ ಎಂದರು.

ಸಮಾಜದಲ್ಲಿ ಸ್ತ್ರೀಯರೂ ಪುರುಷರೂ ವಹಿಸಬೇಕಾದ ಪಾತ್ರಗಳು ಭಿನ್ನವಾಗಿವೆ; ಅವರ ಆವಶ್ಯಕತೆಗಳೂ ಭಿನ್ನವಾಗಿವೆ. ಆದುದರಿಂದ ಮಹಿಳೆಯರಿಗೂ ಪುರುಷರಿಗೂ ಪ್ರತ್ಯೇಕ ಶಿಕ್ಷಣಾಲಯಗಳಿದ್ದರೆ ಅವರಿಗೆ ಉಪಯೋಗಿಯಾದುದನ್ನೆ ಕಲಿಸಿ ತಜ್ಞರಾಗಿ ಮಾಡಬಹುದು. ಇಂಥ ಶಿಕ್ಷಣವು ಮಿತವ್ಯಯವೂ ಆಗುವುದು. ಆರ್ಥಿಕ ಸ್ವಾತಂತ್ರ್ಯವನ್ನು ನೀಡಿದ ಮಾತ್ರಕ್ಕೆ ಸ್ತ್ರೀಯರ ಉದ್ಧಾರವಾಗದು. ಅವರು ಗೃಹಕೃತ್ಯಗಳನ್ನು ಚೆನ್ನಾಗಿ ನಡೆಸಿಕೊಂಡು ಹೋದರೆ ಅದೇ ದೊಡ್ಡ ಉಪಕಾರ. ಹಣಗಳಿಸಿದ ಮಾತ್ರಕ್ಕೆ ಅವರು ಪುರುಷರಿಗೆ ಸಮಾನರೆಂದು ಹೇಳಲಾಗದು. ಪರಸ್ಪರ ನ್ಯಾಯ ಮತ್ತು ಗೌರವದ ಬುದ್ಧಿ ಇದ್ದಲ್ಲಿ ಮಾತ್ರ ಸಮಾನತೆಯ ಸವಿಯನುಭವವಾದೀತು ಎಂದು ಮುರಾರ್ಜಿಯ ಖಚಿತ ಅಭಿಪ್ರಾಯ.

ಮೇಲಿನ ಒಂದೇ ಉದಾಹರಣೆಯಿಂದ ಜನರಿಗೂ ಅವರ ಧುರೀಣರೆನಿಸುವವರಿಗೂ ಇರುವ ಅಭಿಪ್ರಾಯ ವ್ಯತ್ಯಾಸವನ್ನು ಗುರುತಿಸಬಹುದು. ಇದರಲ್ಲಿ ಯಾರು ಸರಿ? ಯಾರು ತಪ್ಪು? ಪ್ರಜಾಪ್ರಭುತ್ವಕ್ಕೆ ಯಾವುದು ಸಮ್ಮತವಾದ ಅಭಿಪ್ರಾಯ? ಎಂಬುವನ್ನು ನಿರ್ಧರಿಸುವುದು ಸುಲಭವಲ್ಲ. ಭಾವಪರವಶತೆಯೊಂದೇ ನಿರ್ಣಯದ ತಳಹದಿಯಾಗಬಾರದು ಎಂಬುದು ಇದನ್ನು ನಿರ್ಧರಿಸುವಲ್ಲಿ ಅತ್ಯವಶ್ಯವಾಗಿ ಗಮನಿಸಬೇಕಾದ ಮುಖ್ಯ ವಿಷಯ.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No 466 N/50 dated 12-12-1950 of the Director of public Instructions Madras.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ಡಾ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ| ವಿರಚಿತವಾದ—

ಸುಲಭವಾಗಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 28—6—1956

ಸಂಚಿಕೆ ೪೩
NO. 43

ಅಕ್ಕಿಯ ಬೆಲೆ ತಗ್ಗಲಿ!

ಕೆಲವು ವಾರಗಳ ಹಿಂದೆ (ನವಯುಗ: ೨—೪—೧೯೫೬) ಆಹಾರ ದವಸಗಳ ದರವು ಗಣನೀಯವಾಗಿ ಏರುತ್ತಿರುವುದನ್ನು ಪ್ರಸ್ತಾಪಿಸಿ ಪರಿಸ್ಥಿತಿಯನ್ನು ನಿಯಂತ್ರಣದಲ್ಲಿಟ್ಟು, ಸುಧಾರಿಸಲು ಸೂಕ್ತ ಕ್ರಮಗಳನ್ನು ಸರಕಾರದವರು ಕೈಗೊಳ್ಳಬೇಕೆಂದು ನಾವು ಬಿನ್ನವಿಸಿದ್ದೆವು; ಆದರೆ ನಮ್ಮ ಜಿಲ್ಲೆಯ ಜನರ ಸಂಕಷ್ಟವನ್ನು ಸರಕಾರವು ಸಹಾನುಭೂತಿಪೂರ್ವಕ ವಿಚಾರಿಸಲು ಮುಂದಾಗಿರುವಂತೆ ಇನ್ನೂ ತೋರುತ್ತಿಲ್ಲ. ತಮಿಳು ನಾಡಿನ ಜಿಲ್ಲೆಗಳಿಗೂ ಮದ್ರಾಸು ನಗರಕ್ಕೂ ಕೊಟ್ಟಷ್ಟು ಗಮನವನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಸರಕಾರವು ನೀಡಿದ ಹಾಗಿಲ್ಲ. ಇದು ಬಹಳ ವಿಷಾದಕರ.

ಜಿಲ್ಲೆಯಲ್ಲಿ ಅಕ್ಕಿಯ ಬೆಲೆಯು ಪ್ರತಿನಿತ್ಯವೆಂಬಂತೆ ಏರುತ್ತಲಿದೆ; ಮುಡಿಯೊಂದಕ್ಕೆ ೧೭-೧೮ ರೂಪಾಯಿ ಇದ್ದ ದರವೀಗ ೨೧-೨೨ ರೂಪಾಯಿ ಯಾಗಿದೆ. ಮಳೆಗಾಲವು ಈಗ ತಾನೇ ಆರಂಭಿಸಿರುವುದರಿಂದ ಬೆಲೆಯು ಇನ್ನು ಮುಂದಿನ ಎರಡು ತಿಂಗಳುಗಳಲ್ಲಿ ಮತ್ತಷ್ಟು ಹೆಚ್ಚಿಕೊಳ್ಳುವುದರಲ್ಲಿ ಯಾವುದೇ ಸಂದೇಹವೀಗ ಕಾಣುತ್ತಿಲ್ಲ. ದರವು ಈಗಿನ ಮಟ್ಟದಲ್ಲಿ ಉಳಿದರೂ ಸೇರಿಗೆ ಎಂಟಾಣೆಯ ಕನಿಷ್ಠ ಬೆಲೆಯನ್ನಿತ್ತು ನಮ್ಮಲ್ಲಿಯ ಬಡವರೂ ಮಧ್ಯಮ ವರ್ಗದವರೂ ದಿನವನ್ನು ಸುಖವಾಗಿ ಕಳೆಯುವುದು ತುಂಬ ಕಷ್ಟ.

ಭೂಮಾಲಕರಿಗೆ ಒಕ್ಕಲುಗಳು ಗೇಣಿಯನ್ನು ಸಂದಾಯಿಸುವ ಸಮಯದಲ್ಲಿ ನಿರ್ಣಯಿಸಲ್ಪಟ್ಟ ಕೋರ್ಟುಧಾರಣೆಯು ಈಸು ಏರಿಕೆಯಲ್ಲಿ ಇತ್ತೆಂದು ಸಾರ್ವಜನಿಕರ ಸಾಮಾನ್ಯ ಅಭಿಪ್ರಾಯ. ಜಿಲ್ಲೆಯಲ್ಲಿ ಆಹಾರದವಸಗಳ ಬೆಲೆಯು ಹೆಚ್ಚುವುದಕ್ಕೆ ಇದು ಮೂಲಾಧಾರವಾಯಿತು. ಈ ಬಲಂತೂ ಪೇಟೆಯ ವರ್ತಕರಿಗೆ ರೈತರು ಅಕ್ಕಿಯನ್ನು ಮಾಗುವುದ. ನಿಂತಿದೆ – ಇದರಿಂದ ವರ್ತಕರು ಹೇರಳ ಸಂಗ್ರಹ ಇಟ್ಟುಕೊಂಡು ಬೆಲೆಯನ್ನು ಬೇಕೆಂದೇ ಏರಿಸಿ, ಗ್ರಾಹಕರನ್ನು ಪೀಡಿಸುತ್ತಿದ್ದಾರೆ. ಅಕ್ಕಿಯ ಅಭಾವವಿದ್ದುದರಿಂದ ಬೆಲೆ ಏರುತ್ತಿರುವುದೆಂತೂ ಅಲ್ಲ.

ವರ್ತಕ ವರ್ಗದವರು ಬೆಲೆಯ ಏರಿಕೆಗೆ ತಮ್ಮ ವರ್ತನೆ ಕಾರಣವೆಂಬ ಮಾತನ್ನು ಒಪ್ಪಲು ಸಿದ್ಧರಿಲ್ಲ. ಮದ್ರಾಸಿನಂಥ ನಗರಗಳ ವರ್ತಕರು ರೈಲ್ವೆಯಲ್ಲಿ ಅಕ್ಕಿಯನ್ನು ಸಾಗಿಸಲು ಸಾಕಷ್ಟು ಡಬ್ಬಿಗಳ ಅನುಕೂಲತೆ ಇಲ್ಲವೆಂದು ಮೊದಲು ಹೇಳಿದರು; ಆದರೆ ಇಂಥ ತಾಪತ್ರಯ ಎನ್ನುವುದು ಮಾತ್ರಕ್ಕೂ ಇಲ್ಲವೆಂದು ರೈಲ್ವೆಯ ಅಧಿಕಾರಿಗಳೇ ಸ್ಪಷ್ಟಪಡಿಸಿದ್ದಾರೆ. ತಮಗೆ ಇಂತಿಷ್ಟು ಡಬ್ಬಿಗಳನ್ನೊದಗಿಸಿಕೊಡಬೇಕೆಂದು ವಿನಂತಿಯನ್ನು ಮಾಡಿಕೊಂಡಿದ್ದ ವರ್ತಕರೇ ಈಗ ತಮಗೆ ಬಂಡಿಗಳೇನು ಬೇಡ ಎಂದಿದ್ದಾರೆಂದು ರೈಲ್ವೆ ಇಲಾಖೆ ತಿಳಿಸಿರುತ್ತದೆ.

ಭಾರತ ಸರಕಾರದವರು ತಮ್ಮ ಸೇನೆಯ ಉಪಯೋಗಕ್ಕೆಂದು ಅಕ್ಕಿಯನ್ನು ಸಂಗ್ರಹಿಸ ತೊಡಗಿದುದರಿಂದ ಅದರ ಬೆಲೆ ಏರ ತೊಡಗಿತೆಂದು ಮೇ ತಿಂಗಳಲ್ಲಿ ವರ್ತಕರು ಆರೋಪಿಸುತ್ತಿದ್ದರು. ಈಗ ಭಾರತ ಸರಕಾರವು ತನ್ನ ಖರೀದಿಯನ್ನು ನಿಲ್ಲಿಸಿದೆ. ಆದಾಗ್ಯೂ ಬೆಲೆಯಲ್ಲಿ ಇಳಿತಾಯವಾಗಿಲ್ಲ: ಆಂಧ್ರದ ಭತ್ತದ ಕಣಜಗಳಿಂದ ಮದ್ರಾಸಿಗೆ ಅಕ್ಕಿ ಬಾರದೆ ಇದ್ದುದರಿಂದ ಇಲ್ಲಿ ಬೆಲೆ ಹೆಚ್ಚಿಕೊಂಡಿತೋ ಏನೋ ಎಂದು ಭಾವಿಸುವುದಕ್ಕಂತೂ ರೈಲ್ವೆಯವರ ಹೇಳಿಕೆ ಅವಕಾಶವೀಯುವುದಿಲ್ಲ. ಆಂಧ್ರ ರಾಜ್ಯದಲ್ಲಿಯೇ ಅಕ್ಕಿಯ ಬೆಲೆ ಏರುತ್ತಿದೆ, ಎಂದ ಮೇಲೆ ವರ್ತಕರ ಕೈವಾಡವೇ ಈ ಕೃತ್ರಿಮದಲ್ಲಿದೆ ಎಂದು ತೀರ್ಮಾನಿಸಬೇಕಾಗುತ್ತದೆ.

ಹೊಸ ಅಕ್ಕಿಯನ್ನು—ಮುಖ್ಯವಾಗಿ ಸರಕಾರದ ದಾಸ್ತಾನುಗಳಲ್ಲಿರುವುದನ್ನು—ಪೇಟೆಗೆ ತಂದು ಮಾರ ತೊಡಗಿದರೆ, ಆಗ ವರ್ತಕರನ್ನು ಸ್ಪರ್ಧೆಗೆ ಆಹ್ವಾನಿಸಿದಂತಾಗುತ್ತದೆ; ಪರಿಣಾಮದಲ್ಲಿ ಬೆಲೆಯು ಸಹಜವಾಗಿ ಇಳಿಯುತ್ತದೆ ಎಂಬುದೇ ಜನರ ಸಲಹೆ. ಮದ್ರಾಸು ನಗರದಲ್ಲಿ ಈ ಬಗ್ಗೆ ಸರಕಾರ ಕ್ರಮವನ್ನೇನೋ ಕೈಗೊಂಡಿತು; ಆದರೆ ಅಲ್ಲಿ ಸರಕಾರದ ಪರವಾಗಿ ಮಾರಲಾದ ಅಕ್ಕಿಯು ಯೋಗ್ಯತೆಯು ಜಾನುವಾರುಗಳು ತಿನ್ನುವುದಕ್ಕೆ ಚೆನ್ನಾಗಿತ್ತೇ ಹೊರತು ಜನರು ಉಪಯೋಗಿಸುವಂತಿರಲಿಲ್ಲ. ಭಾರತ ಸರಕಾರವಿತ್ತ ಅಕ್ಕಿ ಇದು.

ಮಂತ್ರಿಗಳು ಅಕ್ಕಿಯ ಯೋಗ್ಯತೆ ಒಳ್ಳೆಯದಿದೆ; ಆದರೆ ಅದನ್ನು ಬೇಯಿಸಿ ತಿನ್ನುವ ವಿಧಾನ ಮಾತ್ರ ತುಸು ಕಠಿಣವಾದುದಾಗಿದೆ; ದಕ್ಷಿಣದ ಜನರಿಗಿದು ತಿಳಿಯದುದರಿಂದಲೇ ಈ ಆಕ್ಷೇಪಕ್ಕೆ ಎಡೆ ದೊರೆಯಿತು ಎಂದು ಸಮಾಧಾನ ಹೇಳಿದ್ದಾರೆ. ಅಲ್ಲದೆ ಸದ್ಯವೇ ದಕ್ಷಿಣದ ಜನರ ದೃಷ್ಟಿಯಲ್ಲಿ ತಿನ್ನಲು ಯೋಗ್ಯವಾದ ಅಕ್ಕಿಯನ್ನೆ ಪೂರೈಸುವುದಾಗಿ ತಿಳಿಸಿದ್ದಾರೆ. ಆದರೆ ಮಂತ್ರಿಗಳು ಹೇಳುವ ದಕ್ಷಿಣ ಭಾರತದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಅಡಕವಾಗಿದೆಯೇ, ಅಥವಾ ತಮಿಳು ನಾಡಿನ ಪ್ರದೇಶ ಮಾತ್ರವೇ ಎಂಬುದೀಗ ಸಂಶಯ.

ಸರಕಾರದ ಅಂದಾಜಿಗನುಸಾರ, ಮದ್ರಾಸು ರಾಜ್ಯದ ತಮಿಳು ಜಿಲ್ಲೆಗಳಲ್ಲಿ ಕಳೆದ ವರ್ಷ ಬಿರುಗಾಳಿ ಎದ್ದುದರಿಂದ ಸುಮಾರು ೬೪೦೦೦ ಟನ್ನುಗಳಷ್ಟು ಅಕ್ಕಿಯ ಉತ್ಪತ್ತಿ ಕಡಿಮೆಯಾಯಿತು. ಆದಾಗ್ಯೂ ಅಖಿಲ ಭಾರತದಲ್ಲಿ ಸುಮಾರು ಹತ್ತು ಲಕ್ಷ ಟನ್ನುಗಳಷ್ಟು ಅಕ್ಕಿಯು ಹೆಚ್ಚು ಉತ್ಪತ್ತಿಯಾಗಿದೆ ಎಂದು ತಿಳಿದು ಬರುತ್ತದೆ. ನಮ್ಮ ಜಿಲ್ಲೆಯಲ್ಲಿ ಕಳೆದ ವರ್ಷ ಅಕ್ಕಿಯ ಬೆಳೆಯು ಬಹಳ ಚೆನ್ನಾಗಿಯೇ ಇತ್ತಾದ ಕಾರಣ ಇಲ್ಲಿ ಅಕ್ಕಿಯ ಅಭಾವ ಎಂಬ ಮಾತಿಗೆ ಯಾವುದೇ ಅರ್ಥ ಕಾಣುವುದಿಲ್ಲ.

ದಕ್ಷಿಣದ ಕೆಲವು ಮುಖ್ಯ ನಗರಗಳಲ್ಲಿ ಸರಕಾರದ ಸಂಗ್ರಹಗಳು ಇವೆ: ಈ ಸಂಗ್ರಹಗಳಿಂದ ಆವಶ್ಯಕತಾನುಸಾರ ಅಕ್ಕಿಯನ್ನು ಹತ್ತಿರದ ಪ್ರದೇಶಗಳಿಗೆ ಪೂರೈಸಲು ಈಗ ಅಪ್ಪಣೆಯನ್ನು ದಯಪಾಲಿಸಲಾಗಿದೆ. ಕಲ್ಲಿಕೋಟೆಯ ಸಂಗ್ರಹದಿಂದ ೫೦೦೦ ಟನ್ನು ಅಕ್ಕಿಯನ್ನು ಜನಸಾಧಾರಣರ ಉಪಯೋಗಾರ್ಥವಾಗಿ ಬಿಡುಗಡೆ ಮಾಡಲಾಗುವುದಂತೆ: ಆದರೆ ನಮ್ಮ ಜಿಲ್ಲೆಗೆ ಈ ಪೂರೈಕೆಯಲ್ಲಿ ನಾವರೂ ಭಾಗಸಲ್ಲುವುದೋ ತಿಳಿದಿಲ್ಲ. ಮಂಗಳೂರಿನಲ್ಲಿ ಸರಕಾರದ ಸಂಗ್ರಹವಿದ್ದಂತಿಲ್ಲ. ಹೀಗಿರುತ್ತಾ ನಮ್ಮ ಜಿಲ್ಲೆಯ ಪೇಟೆಗಳಿಗೆ ಸರಕಾರದ ಅಕ್ಕಿಯು ಬರುವ ಸಂಭವ ಅತ್ಯಲ್ಪ.

ಬಡಜನರ ಪರವಾಗಿ ಜಿಲ್ಲಾಧಿಕಾರಿಗಳನ್ನು ಕಂಡು ಮನವಿಯೊಪ್ಪಿಸುವ ಕೆಲಸವೇನೋ ನಡೆದಿದೆ: ತಾನು ತಕ್ಕ ಕ್ರಮ ಕೈಗೊಳ್ಳುವ ಆಶ್ವಾಸನೆಯನ್ನು ಕಲೆಕ್ಟರರು ನೀಡಿರುವುದೂ ನಿಜ. ಆದರೆ ಈ ಭರವಸೆಗಳಿಂದ ಲಾಭವೇನೂ ಆಗದು.

(೨ನೇ ಪುಟ ನೋಡಿರಿ)

ಶೀಘ್ರ ಬೆಳವಣಿಗೆ

ಒಟ್ಟು ವ್ಯವಹಾರ ಧನ

1926 — ರೂ. 17,355/-
1936 — ರೂ. 35,45,544/-
1946 — ರೂ. 4,26,07,093/-
1955 — ರೂ. 8,70,31,700/-
1956 ಮಾರ್ಚಿ 31ಕ್ಕೆ 9 ಕೋಟಿ ರೂಪಾಯಿ

ಇಂತಹ ಬೆಳವಣಿಗೆಗೆ ನಮ್ಮ ಗ್ರಾಹಕರ ಒತ್ತೇಚ್ಛೆಯೇ ಕಾರಣ—ಗ್ರಾಹಕರಲ್ಲಿ ಹೆಚ್ಚೆಚ್ಚಿ ಬೆಳೆಯಲು ನಮ್ಮ ಸೇವೆಯಲ್ಲಿ ಅವರಿಗುಂಟಾದ ತೃಪ್ತಿಯೇ ಕಾರಣವೆಂದು ನಾವು ನಂಬಿರುವೆವು.

ಮಾನವೀಯ ದೃಷ್ಟಿ, ವ್ಯಯಕ್ತಿಕ ನಿಕಟ ಸಂಪರ್ಕವನ್ನು ನಮ್ಮ ಗ್ರಾಹಕರೊಂದಿಗೆ ಇಟ್ಟುಕೊಳ್ಳಬೇಕೆಂದೂ ನಾವು ಬಲ್ಲೆವು.

ನಮ್ಮ ಯಾವುದೇ ಶಾಖೆಗೆ ದಯಮಾಡಿಸಿ ನೀವೇಕೆ ಪರಿಚಯ ಪಡೆಯುವುದಿಲ್ಲ?
ನಾವು ನಿಮ್ಮ 'ಬೇಂಕು' ಆಗಬಯಸುತ್ತೇವೆ.

•

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವಾರ್ಷಿಕ ಚಂದಾ:
ರೂ ೫—೧೨—೦

NAVAYUGA WEEKLY. UDIPI.

ಬಿಡಿಸಂಚಿಕೆ
ಎರಡಾಣೆ

ಹಿಮಾಲಯದ ರೂಪಕುಂಡ ಸರೋವರ

ಸಾವಿರಗಟ್ಟಳೆಯಾಗಿ ಅಲ್ಲಿ ಬಿದ್ದಿರುವ ಅಸ್ಥಿ ಪಂಜರಗಳ ರಹಸ್ಯದ ಮೇಲೆ ಪ್ರಕಾಶ

ಮೊನ್ನೆ ೧೪ನೇ ದಿನಾಂಕದಂದು ಕಲ್ಕತ್ತದಲ್ಲಿ ಪತ್ರಿಕೋದ್ಯಮಿಗಳ ಮುಂದೆ ಮಾತನಾಡುತ್ತಾ ಭಾರತ ಸರಕಾರದ ಮನುಷ್ಯ ಶಾಸ್ತ್ರ ವಿಭಾಗದ ದಿಗ್ದರ್ಶಕರಾದ ಡಾ. ಎನ್. ದತ್ತ ಮಜುಮದಾರರು ಉತ್ತರ ಪ್ರದೇಶದ ಗಢವಾಲ ಜಿಲ್ಲೆಯಲ್ಲಿರುವ ರೂಪಕುಂಡ ಸರೋವರ ಪ್ರದೇಶವನ್ನು "ಸಂರಕ್ಷಿತ ಅವಶೇಷ" ಎಂಬುದಾಗಿ ಘೋಷಿಸಲು ತಾನು ಭಾರತ ಸರಕಾರಕ್ಕೆ ಸೂಚಿಸಿರುವುದಾಗಿ ವಿದಿತಗೊಳಿಸಿದರು.

ಕಳೆದ ವರ್ಷದ ಜೂನಿನಲ್ಲಿ ಉತ್ತರ ಪ್ರದೇಶದ ಉಪಮಂತ್ರಿಯೊಬ್ಬರು ಹಿಮಾಲಯದ ಈ ಸರೋವರದ ತಟದಲ್ಲಿ ಸಾವಿರಾರು ಅಸ್ಥಿ ಪಂಜರಗಳ ರಾಶಿಯು ಬಿದ್ದಿರುವುದನ್ನು ಬೆಳಕಿಗೆ ತಂದರು. ಇಲ್ಲಿರುವ ಅನೇಕ ಮಾನವ ದೇಹಗಳಲ್ಲಿ ಮಾಂಸ ಮತ್ತು ಕೂದಲುಗಳು ಸಹ ಉಳಿದಿವೆಯಾಗಿ ತಿಳಿದು ಬರುತ್ತವೆ. ಇವೆಲ್ಲವೂ ಹಿಮದ ರಾಶಿಯ ಅಡಿಯಲ್ಲಿ ಹುದುಗಿವೆ.

ಸರಕಾರಿ ದಾಖಲೆಗಳಿಗನುಸಾರವಾಗಿ ೧೯೪೨ರಲ್ಲಿ ಗಢವಾಲದ ಪಟವಾರಿಯೊಬ್ಬನು ಮೊದಲು ಈ ಘೋರ ದೃಶ್ಯವನ್ನು ಕಂಡು, ಜಿಲ್ಲಾಧಿಕಾರಿಗಳಿಗೆ ಒಡನೆಯೇ ವರದಿ ಮಾಡಿದನೆಂದು ತಿಳಿದು ಬರುತ್ತದೆ. ಹ್ಯಾಮಿಲ್ಟನರೆಂಬೊಬ್ಬರು ಅನಂತರ ರೂಪಕುಂಡ ಪ್ರದೇಶಕ್ಕೆ ತೆರಳಿ ಕೆಲವು ಅವಶೇಷಗಳನ್ನು ತಂದರೆಂದೂ (ಈ ಲೇಖನದಲ್ಲಿ ಕೊನೆಗೆ ಹೇಳಿದ) ಜೋರಾವರ ಸಿಂಗನ ಸೈನ್ಯದ ತುಣುಕು ಇದೆಂದು ಅವರು ನಿರ್ಣಯಿಸಿದ್ದಾಗಿಯೂ ಪ್ರಕಟವಾಗಿದೆ. ಆದರೆ, ಆಗ ಯುದ್ಧ ಕಾಲವಾದುದರಿಂದಲೋ ಏನೋ—ರೂಪಕುಂಡದ ದುರಂತದ ಕಡೆಗೆ ಜನರ ಗಮನ ಹರಿಯುವ ಮಾದರಿಯಲ್ಲಿ ಪ್ರಚಾರ ಕಾರ್ಯ ನಡೆಯಲಿಲ್ಲ.

ಡಾ. ದತ್ತರು ಏಳು ಮಂದಿಯ ಒಂದು ಅನ್ವೇಷಕ ತಂಡದ ನೇತೃತ್ವವನ್ನು ವಹಿಸಿ ಇದೇ ಮೇ ತಿಂಗಳಲ್ಲಿ ಈ ಪ್ರದೇಶವನ್ನು ವೀಕ್ಷಿಸಿ ಬಂದಿದ್ದಾರೆ. ರೂಪಕುಂಡ ಪ್ರದೇಶವನ್ನು ಸಂರಕ್ಷಿತ ಅವಶೇಷವೆಂದು ಸಾರದಿದ್ದರೆ, ಮೂರು—ನಾಲ್ಕು ದಿನಗಳ ನಡಿಗೆಯಲ್ಲಿಯೇ ಈ ಪ್ರದೇಶವನ್ನು ಮುಟ್ಟಬಹುದಾದಷ್ಟು ಹತ್ತಿರವಿರುವ ಹಳ್ಳಿಗಳ ಜನರು ಅಸ್ಥಿ ಪಂಜರಗಳನ್ನೂ ಮಾನವ ಶವಗಳನ್ನೂ ಹಿಮವಿಲ್ಲದ ಹೊತ್ತು ಸಾಗಿಸಿಕೊಂಡು ಹೋಗಿ ಆಸಕ್ತಿಯುಳ್ಳ — ಆದರೆ ತಜ್ಞರಲ್ಲದ—ಕುತೂಹಲಿಗಳಿಗೆ ಮಾರಿಯಾರೆಂದು ಡಾ. ದತ್ತರ ಭಯ.

ಸಾವಿರಾರು ಶವಗಳೂ ಅಸ್ಥಿಪಂಜರಗಳೂ ಹೀಗೆ ಈ ಪ್ರದೇಶದಲ್ಲಿ ಬಿದ್ದಿರಲು ಕಾರಣವೇನು? ಎಂಬುದೀಗ ತೀವ್ರ ಜಿಜ್ಞಾಸೆಯ ವಿಷಯವಾಗಿದೆ. ಒಬ್ಬೊಬ್ಬರು ಒಂದೊಂದು ಬಗೆಯಾಗಿ ತರ್ಕಮಾಡುತ್ತಿದ್ದಾರೆ. ತಜ್ಞರಲ್ಲಿಯೇ ವಿಶೇಷ ಅಭಿಪ್ರಾಯ ವ್ಯತ್ಯಾಸವು ವ್ಯಕ್ತವಾಗಿದೆ. ಈ ಪ್ರದೇಶದಲ್ಲಿ ಲಭ್ಯವಿರುವ ಅಸ್ಥಿಪಂಜರಗಳೂ ಮಾನವ ಶವಗಳೂ ಕಾಣೆಯಾಗುತ್ತಾ ಬಂದರೆ ಈ ತರ್ಕಗಳಿಗೂ ವಾಸ್ತವಿಕ ಚಿತ್ರಕ್ಕೂ ಸಂಬಂಧ ಜೋಡಿಸಿ, ಒಂದು ಸರ್ವ ಸಮ್ಮತ ತೀರ್ಮಾನಕ್ಕೆ ಬರಲು ಸಾಧ್ಯವಾಗಲಾರದು.

ಇಲ್ಲಿ ಹೆಣಗಳಾಗಿ ಅಥವಾ ಕೇವಲ ಅಸ್ಥಿಪಂಜರಗಳ ರೂಪದಲ್ಲಿ ಬಿದ್ದಿರುವ ಸಾವಿರಾರು ಸ್ತ್ರೀ ಪುರುಷರು ಯಾರು? ಎಂದಿನಿಂದ ಇಲ್ಲಿ ಈ ಅವಶೇಷಗಳುಳಿದಿವೆ?—ಇವೆರಡು ಪ್ರಶ್ನೆಗಳಿಗೆ ಉತ್ತರವನ್ನು ಕಂಡು ಹಿಡಿಯಲು ಪ್ರಯತ್ನಗಳು ಎಡೆಬಿಡದೆ ಈಗ ನಡೆಯುತ್ತಿವೆ. ಡಾ. ದತ್ತರಿಗನುಗುಣವಾಗಿ, ಈ ಶವಗಳ ಹಾಗು ಅಸ್ಥಿ ಪಂಜರಗಳ ಬೇರೆ ಬೇರೆ ಮಾದರಿಗಳನ್ನು ಪರೀಕ್ಷಿಸಿದರೆ ಒಂದು ಸಮಂಜಸ ನಿರ್ಣಯಕ್ಕೆ ಬರಲು ಸಾಧ್ಯವಾದೀತು. ಇದಕ್ಕಾಗಿ ನಾವಿನ್ನೂ ಕಾಯಬೇಕಾಗಿದೆ

ಅವರ ಸಾಮಾನ್ಯ ಊಹೆಯ ಮೇಲಿಂದ ಹೇಳುವುದಾದರೆ ನಂದಾದೇವಿ ಪರ್ವತಕ್ಕೆ ಹೊರಟಿದ್ದ ಯಾತ್ರಿಕರ ತಂಡವೊಂದು ಅನಿರೀಕ್ಷಿತವಾಗಿ ಹಿಮಪಾತವಾದ ದೆಸೆಯಿಂದ ಈ ದುರಂತಕ್ಕೆ ಬಲಿಯಾಯಿತು. ಈ ದುರಂತಕ್ಕೆ ಸಂಬಂಧಿಸಿ ಅನೇಕ ಜಾನಪದ ಕತೆಗಳೂ ಗೀತೆಗಳೂ ಇವೆಯೆಂದು ಡಾ. ದತ್ತರು ಹೇಳಿದ್ದಾರೆ; ಅವುಗಳ ವಿವರವನ್ನು ಅವರು ಕೊಟ್ಟಿಲ್ಲವಾದರೂ ನಾನಾ ಬಗೆಯ ಮಾತುಗಳು ಕತೆ ಮತ್ತು ಹಾಡುಗಳ ರೂಪದಲ್ಲಿ ಸುತ್ತಮುತ್ತಲಿನ ಜನರ ನಡುವೆ ಪ್ರಚಲಿತವಿರುವುದೇನೂ ತಪ್ಪಲ್ಲ.

ಡಾ. ದತ್ತರಂತೆ ಲಕ್ನೋ ವಿಶ್ವವಿದ್ಯಾನಿಲಯದ ಮನುಷ್ಯ ಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಡಿ. ಎನ್. ಮಜುಮದಾರರೆಂಬ ಇನ್ನೊಬ್ಬ ತಜ್ಞರೂ ಹನ್ನೆರಡು ಮಂದಿ ವಿಜ್ಞಾನಿಗಳ, ನಾಲ್ವರು ಮಾರ್ಗದರ್ಶಕರ ಮತ್ತು ೩೫ ಹೊರೆ ಹೊರುವ ಆಳುಗಳ ಸಹಿತ ಇದೇ ಮೇ ತಿಂಗಳ ಉತ್ತರಾರ್ಧದಲ್ಲಿ ರೂಪಕುಂಡ ಸರೋವರದ ದುರಂತದ ಬಗ್ಗೆ ಹೆಚ್ಚಿನ ಮಾಹಿತಿ ಸಂಪಾದಿಸಲು ಹೋಗಿದ್ದರೆಂದು ತಿಳಿದುಬರುತ್ತದೆ. ಶ್ರೀ ಮಹೇಂದ್ರ ಪ್ರಸಾದರೆಂಬವರು ಈ ತಂಡದ ಕಾರ್ಯದ ಮೇಲೆ ಬೆಳಕು ಚೆಲ್ಲುವ ಲೇಖನವನ್ನು ಸಹ ಈಗಾಗಲೇ ಬರೆದು ಪ್ರಕಟಿಸಿದ್ದಾರೆ.

ಲಕ್ನೋ ವಿಶ್ವವಿದ್ಯಾನಿಲಯದ ಈ ತಜ್ಞರಿಗನುಸಾರವಾಗಿ ಹೇಳುವುದಾದರೆ, ರೂಪಕುಂಡದ "ದುರಂತ" ದುರಂತವೇ ಅಲ್ಲ! ಇಷ್ಟರವರೆಗಿನ ಎಲ್ಲ ಊಹಾಪೋಹೆಗಳೂ ಸುಳ್ಳೆನಿಸುವಂತೆ ಅವರ ತೀರ್ಮಾನವಿದೆ—ಆದರೆ ಈ ತೀರ್ಮಾನವಿನ್ನೂ ಅಂಗಾರ ಪರೀಕ್ಷೆಯಿಂದ ಪುಷ್ಟೀಕರಿಸಲ್ಪಡಬೇಕಾಗಿದೆ. ಆದುದರಿಂದ ಈ ತಜ್ಞರು ತಮ್ಮ ಊಹೆಗೆ ದೃಢವಾಗಿ ಅಂಟಿಕುಳಿತಿಲ್ಲ. ತಮ್ಮ ಊಹೆಯನ್ನು ಕುರಿತು ಸ್ಪಷ್ಟವಾಗಿ ಮಾತನಾಡಲು ಅಥವಾ ವಿವರಿಸಲು ಸಹ ಈಗ ಒಡಂಬಡುತ್ತಿಲ್ಲ.

ಅದೇನೇ ಇರಲಿ, ಈ ಸಾಮಾನ್ಯ ತೀರ್ಮಾನವೇನು? ಸುತ್ತ ಮುತ್ತಲ ಹಳ್ಳಿಗಳ ಜನರು ಕಳೆದ ನೂರಾರು ವರ್ಷಗಳಿಂದ ತಮ್ಮಲ್ಲಿ ಮೃತರಾದ ಹಿರಿಯರ ಹೆಣಗಳನ್ನು ಈ ಪ್ರದೇಶಕ್ಕೆ ತಂದು ಹೂಳುತ್ತಿದ್ದರು ಎಂಬುದೇ ಈ ಸೋಜಿಗದ ನಿರ್ಣಯ! ಬೈದಿನಿ ಬುಗಿಯಾಲ, ಅಲಿ ಬುಗಿಯಾಲ ಎಂಬಿತ್ಯಾದಿ ರೂಪಕುಂಡಕ್ಕೆ ಕೆಲವೇ ಮೈಲುಗಳಷ್ಟು ಹತ್ತಿರವಿರುವ ಕುರುಬರು ಈಗಲೂ ಈ ರೂಢಿಯತ್ತ ಒಲವುಳ್ಳವರಾಗಿದ್ದಾರೆಂದು ವ್ಯಕ್ತವಾಗಿದೆ.

೦ ೦

ರೂಪಕುಂಡವು ಮೊದಲೇ ಹೇಳಿದಂತೆ ನಂದಾದೇವಿ ಪರ್ವತ ಶಿಖರದೆಡೆಗೆ ಹೋಗುವ ಪ್ರಾಚೀನ ಮಾರ್ಗದಲ್ಲಿದೆ. ಸುತ್ತಲೂ ಗಿರಿ-ಕಂದರಗಳಿಂದಾವೃತವಾಗಿದೆ. ರೂಪಗಂಗಾ ಎಂಬ ನದಿಯ ಉಗಮವೇ ಈ ರೂಪಕುಂಡವೆನಿಸಿದೆ. ಈ ಪವಿತ್ರ ಕ್ಷೇತ್ರದಲ್ಲಿ ಮಹಾಪ್ರಸ್ಥಾನಗೈದ ಪಿತೃಗಳ ಅಸ್ಥಿ ವಿಸರ್ಜನೆ ಮಾಡುವುದು ಬಹಳ ಪುಣ್ಯಪ್ರದವಾದ ಕಾರ್ಯವೆಂದು ಪ್ರತೀತಿಯಿದೆ. ಅಲ್ಲದೆ ಪಿತೃಗಳ ಪ್ರೀತ್ಯರ್ಥವಾಗಿ ಸಪಿಂಡ ತಿಲೋದಕ ತರ್ಪಣಾದಿ ಕ್ರಿಯೆಗಳನ್ನು ನಡೆಸುವುದಕ್ಕೆ ಸಹ ಇದು ಪ್ರಶಸ್ತವೆನಿಸಿದ ತೀರ್ಥ ಕ್ಷೇತ್ರವಾಗಿದೆ.

ಸುಮಾರು ೧೬೦೦೦ ಅಡಿ ಎತ್ತರದಲ್ಲಿ ಟಿಬೇಟಿಗೂ ಭಾರತಕ್ಕೂ ಇರುವ ಮೇರೆಗೆ ಅತಿ ಸಮೀಪದಲ್ಲಿ ಪರ್ವತ ಪ್ರಾಂತ್ಯವಾದ ಗಢವಾಲ ಜಿಲ್ಲೆಯ (ಭಾರತ) ಮೂಲೆಯೊಂದರಲ್ಲಿರುವ ರೂಪಕುಂಡವು ಒಂದು ಹಿಮ ಸರೋವರವಾಗಿದೆ. ಇದಿರುವಲ್ಲಿ ಒಂದು ಬಗೆಯ ಹಳ್ಳವೇರ್ಪಟ್ಟಿದೆ. ಈ ಹಳ್ಳವು ಅರ್ಧ ಮೈಲು ವ್ಯಾಸದಷ್ಟು ವಿಸ್ತೀರ್ಣವಿದೆ. ಆದರೆ ನಿಜವಾದ ಸರೋವರವು ಒಂದು ಟೆನ್ನಿಸ್ ಕೋರ್ಟಿನಷ್ಟು ಮಾತ್ರ ವಿಸ್ತಾರವಿದೆ. ಒಟ್ಟಾರೆ ಒಂದು ಏಕ್ರೆಯಷ್ಟಿದೆ ಈ ಜಾಗ.

ಈ ಸರೋವರದಲ್ಲಿರುವ "ಕುಂಡ"ವು ೫೦ ಅಡಿಗಳಷ್ಟಾದರೂ ಆಳವಿರಬಹುದೆಂದು ಅಂದಾಜು. ಹೆಣಗಳೂ ಅಸ್ಥಿಪಂಜರಗಳೂ ಈ ಕುಂಡದಲ್ಲಿಯೇ ಬಿದ್ದಿವೆ. ಇವುಗಳ ಲೆಕ್ಕವನ್ನು ನಿಜವಾಗಿ ಯಾರೂ ಮಾಡಿಲ್ಲ. ಆದರೂ ೩೦೦ರಿಂದ ೨೦೦೦ ಎಂದು ಊಹೆಗಳು ಈ ಸಂಖ್ಯೆಯನ್ನು ಕುರಿತು ಸಾರುತ್ತವೆ. ಲಕ್ನೋದ ತಂಡಕ್ಕೆ ಯಾವುದೇ ಹೆಣ ಅಥವಾ ಅಸ್ಥಿಪಂಜರವು ನೋಡಸಿಗಲಿಲ್ಲ. ನೇತ್ರಸಿಂಘನೆಂಬ ಮಾರ್ಗದರ್ಶಿಯು ೩೦ ಅಡಿಗಳಷ್ಟು ಹಿಮವನ್ನು ಅಗೆದು ತೆಗೆದರೆ, ಆಗ ಅಸ್ಥಿ ಪಂಜರಗಳನ್ನು ನೋಡಬಹುದು ಎಂದನಂತೆ. ಕಳೆದ ವರ್ಷ ಆತನು ಇಷ್ಟು ಪ್ರಯಾಸಪಟ್ಟು ಕೆಲವು ಕಳೇಬರಗಳನ್ನು ತೆಗೆದು ಮಾರಿದ್ದನು!

ಹಿಮ ಪ್ರವಾಹದಿಂದುಂಟಾದ ಇನ್ನೊಂದು ಸರೋವರವು ರೂಪಕುಂಡಕ್ಕೆ ತೀರ ಹತ್ತಿರದಲ್ಲಿ, ಕೇವಲ ೩೦೦ ಅಡಿಗಳಷ್ಟು ಮೇಲ್ಗಡೆ ಇದೆ. ಇದರ ಹೆಸರು ಶಿಲಾಸಮುದ್ರ. ರೂಪಕುಂಡದಿಂದ ಇಲ್ಲಿಗೆ ಎರಡು ಫರ್ಲಾಂಗುಗಳಷ್ಟು ದೂರವಿದೆ. ಇಲ್ಲಿ ಸದಾಕಾಲ ಶಿಲಾವೃಷ್ಟಿಯಾಗುತ್ತದೆ—ಅಂದರೆ, ಕಲ್ಲಿನಂತೆ ಹಿಮದ ಗಡ್ಡೆಗಳು ಬೀಳುತ್ತಿರುತ್ತವೆ. ಆದುದರಿಂದ ರೂಪಕುಂಡದಿಂದ ಶಿಲಾಸಮುದ್ರಕ್ಕೆ ರುವ ಅಂತರವು ಕ್ಷುಲ್ಲಕವಾಗಿದ್ದಾಗ್ಯೂ ಆ ದಾರಿಯಲ್ಲಿ ಸಾಗುವುದು ಸುಲಭವಲ್ಲ. ಜೋರ್ಗಾಲಿ ಅಥವಾ ಜೀವನದ ಗಲ್ಲಿ ಎಂದೇ ಈ ಕಿರಿದಾದ ಮಾರ್ಗವನ್ನು ಕರೆಯಲಾಗುತ್ತದೆ.

ಜೀವನದ ಈ ಗಲ್ಲಿಯಲ್ಲಿ ಕಲ್ಲು ಮಳೆಯ ಹೊಡೆತವನ್ನು ತಿಂದೂ ಜೀವ ಹಿಡಿ

(೧೧ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

ಒಂದೊಂದಾಗಿ "ಅಜೇಯ" ಶಿಖರಗಳ ಸೋಲು

ಎವರೆಸ್ಟಿನ ಮೇಲೆ ಮತ್ತೊಮ್ಮೆ ಮಾನವನ ವಿಜಯ ಧ್ವಜ

ತನಗಿಂತ ಎತ್ತರದಲ್ಲಿ ಆಕಾಶದ ಮೂಲಕ ಅತಿ ವೇಗದಲ್ಲಿ ಹಕ್ಕಿಯು ಹಾರಾಡಿ ಹೋಗುತ್ತಿರುವುದನ್ನು ಕಂಡ ಮನುಷ್ಯನ ಮನಸ್ಸು ಆ ಎತ್ತರವಾದ ಆಕಾಶವನ್ನು ಗೆದ್ದುಕೊಳ್ಳಬೇಕೆಂದು ಬಯಸಿ, ವಿಮಾನಗಳನ್ನು ರಚಿಸಿದ ವಿಷಯ ನಮಗೆಲ್ಲರಿಗೂ ಗೊತ್ತು. ಮಾನವ ಸಹಜವಾದ ಈ ಆಸೆಯೇ ಗಗನಚುಂಬಿ ಗಿರಿ-ಶಿಖರಗಳ ತಲೆ ಮೆಟ್ಟಬೇಕೆಂಬ ಸಾಹಸಕ್ಕೆ ಅತನನ್ನು ಅಣಿಗೊಳಿಸಿತೆನ್ನಬಹುದು

ಆಕಾಶದ ಎತ್ತರಕ್ಕೆ ಮೊಗವೆತ್ತಿ ನಿಂತಿರುವ ಪರ್ವತಗಳು ಈಚೆಗೆ ಕೆಲವು ವರ್ಷಗಳಿಂದ ಒಂದೊಂದೇ ಮಾನವನ ಪದಾಘಾತಕ್ಕೆ ಬಲಿಯಾಗಿವೆ. ಅಜೇಯವೆನಿಸಿದ್ದ ಗಿರಿಗಳು ಇಂದು ಮನುಷ್ಯಗಮ್ಯವಾಗಿವೆ; ಒಮ್ಮೆ ಮನುಷ್ಯನ ಸಾಹಸದೆದುರು ಸೋತ ಪರ್ವತ ರಾಜನು ಮರಳಿ ಮರಳಿ ಸೋತ ನಿದರ್ಶನಗಳೂ ಈಗ ಒಂದೆರಡು ವಾರಗಳಿಂದ ವಿವರವಾಗಿ ಬೆಳಕಿಗೆ ಬಂದಿವೆ; ನಾವು ಸಾಮಾನ್ಯವಾಗಿ "ಗೌರೀಶಂಕರ" ಎನ್ನುವ, ಆದರೆ ಎವರೆಸ್ಟ್ ಎಂಬ ಹೆಸರಿನಿಂದಲೇ ತಜ್ಞರಿಂದ ಕರೆಯಲ್ಪಡುವ ಹಿಮಾಲಯದ ಶಿಖರವು ಪುನಃ ಮಾನವನ ಸಾಹಸದೆದುರು ಮಣಿದುದು ಈಗಾಗಲೇ ಜನಜನಿತವಾಗಿರುವ ವಿಷಯ.

ನೇಪಾಳದ ರಾಜಧಾನಿಯಾದ ಕಾಠಮಂಡುವಿನಲ್ಲಿ ಇದೇ ೨೧ನೇ ದಿನಾಂಕ ಪತ್ರಿಕೋದ್ಯಮಿಗಳ ಮುಂದೆ ಎವರೆಸ್ಟನ್ನು ಪುನಃ ಜಯಿಸಿದ ವೀರರ ತಂಡದ ನಾಯಕರು ತಮ್ಮ ಅನುಭವಗಳನ್ನು ವಿವರಿಸಿದರು. ಅವರ ತಂಡವು ಲ್ಹೋತ್ಸೆ ಎಂಬ ಇನ್ನೊಂದು ಅಜೇಯ ಶಿಖರದ ಮೇಲೂ ಧ್ವಜವನ್ನೂರಿ ಅಪ್ರತಿಮ ವಿಕ್ರಮವನ್ನೆ ಸ್ಥಾಪಿಸಿತು. ಹೆಚ್ಚುಕಡಿಮೆ ಇದೇ ಹೊತ್ತಿಗೆ ಇನ್ನೊಂದು ತಂಡವು ಮಾನಸ್ಲು ಎಂಬ ಮತ್ತೊಂದು ಪರ್ವತದ ಶಿಖರವನ್ನು ಹತ್ತಿಬಂದು ಕೀರ್ತಿ ಸಂಪಾದಿಸಿತು. ಈ ತಂಡದ ಅನುಭವವೂ ಸ್ವಲ್ಪ ಮಟ್ಟಿಗೆ ಬೆಳಕಿಗೆ ಬಂದಿದ್ದು ಇವೆಲ್ಲವನ್ನೂ ನಾವು ಇಲ್ಲಿ ಸ್ವಲ್ಪ ಚುಟುಕಿನಲ್ಲಿಯೇ ಕೊಡಲಿಚ್ಛಿಸುತ್ತೇವೆ

ಜಗತ್ತಿನಲ್ಲಿ ಅತಿ ಎತ್ತರವಾದ ಶಿಖರಗಳನ್ನುಳ್ಳ ಪರ್ವತ ಶ್ರೇಣಿಯು ಹಿಮಾಲಯವಾಗಿದೆ. ಏಶ್ಯದ ಈ ಪರ್ವತಶ್ರೇಣಿಯ ಶಿಖರಗಳನ್ನು ಹೊರತುಪಡಿಸಿದರೆ, ದಕ್ಷಿಣ ಅಮೇರಿಕದ ಅಕೋಂಕಾಗುವಾ (ಎತ್ತರ: ೨೨೮೩೪ ಅಡಿ) ಎಂಬ ಪರ್ವತವೇ ಜಗತ್ತಿನಲ್ಲಿ ಅತ್ಯಂತ ಉನ್ನತವಾದ ಶಿಖರ ಆದರೆ ಹಿಮಾಲಯದಲ್ಲಿ ಈ ಶಿಖರದ ಎತ್ತರವನ್ನು ಮೀರಿ ನಿಂತ ಸುಮಾರು ೪೦ ಪ್ರಖ್ಯಾತ ಪರ್ವತಗಳಿವೆ! ಎಲ್ಲಕ್ಕಿಂತಲೂ ಎತ್ತರವಾದ ಎವರೆಸ್ಟಿನ ತುದಿಯು ಸಮುದ್ರ ಮಟ್ಟದಿಂದ ೨೯೦೦೨ ಅಡಿ ಆಳತೆಯಲ್ಲಿದೆ ಹನ್ನೆರಡು ಸಲ ಬೇರೆ ಬೇರೆ ತಂಡಗಳವರು ೧೯೨೧ರಿಂದ ಪ್ರಯತ್ನಿಸಿ ವಿಫಲರಾದ ಬಳಿಕ ೧೯೫೩ರಲ್ಲಿ ೧೩ನೇ ಸಲ ಈ ಪರ್ವತವನ್ನೇರಲು ಸಾಹಸಗೈದ ಬ್ರಿಟಿಷರ ತಂಡಕ್ಕೆ ಶಿಖರವನ್ನು ಮುಟ್ಟುವುದು ಸಾಧ್ಯವಾಯಿತು.

ಭಾರತದ ಶೇರ್ಪಾ ಸಾಹಸಿ ತೇನಸಿಂಗ ಹಾಗು ನ್ಯೂಜೀಲೆಂಡಿನ ಪರ್ವತ ವೀರ ಹಿಲಾರಿಯವರು ಎವರೆಸ್ಟನ್ನು ಜಯಿಸಿ ನಿರ್ಮಿಸಿದ ದಾಖಲೆಗೆ ಈಗ ಮತ್ತೆ ನಾಲ್ಕು ಮಂದಿಯ ಹೆಸರು ಸೇರ್ಪಡೆಯಾಗಿದೆ—ಈ ನಾಲ್ಕು ಮಂದಿಯು ಸ್ವಿಜರಲೇಂಡಿನವರಾಗಿದ್ದಾರೆ. ಡಾ. ಆಲ್ಬರ್ಟ್ ಎಗ್ಲರ್ ಎಂಬ, ೪೩ ವರ್ಷ ವಯಸ್ಸಿನ, ಬರ್ನ್ ನಗರದ ವಕೀಲರ ಮುಂದಾಳುತನದಲ್ಲಿ ಬಂದ ತಂಡದ ಈ ಸದಸ್ಯರ ಹೆಸರು ಅರ್ನೆಸ್ಟ್ ಶಿಮಿಡ್, — ಜುರ್ಗ್ ಮಾರ್ಮೆಟ್; ಮತ್ತು ಅಡೋಲ್ಫ್ ರೀಸ್ಟ್—ಹಾನ್ಸ್‌ರೊನ್ ಗುಂಟೆನ್ ಎಂದಾಗಿದೆ.

ಸ್ವಿಜರಲೇಂಡಿನ ಉತ್ಸಾಹಿಗಳು ೧೯೫೨ರಲ್ಲಿ ಎರಡು ಬಾರಿ, ಒಮ್ಮೆ ಮಳೆಗಾಲಕ್ಕೆ ಮುಂಚೆ, ಮತ್ತೊಮ್ಮೆ ಮಳೆಗಾಲ ಕಳೆದ ಬಳಿಕ, ಎವರೆಸ್ಟನ್ನು ಹತ್ತಲು ಪ್ರಯತ್ನಪಟ್ಟಿದ್ದರು. ಮಳೆಗಾಲಕ್ಕೆ ಮುಂಚೆ ಮಾಡಿದ ಪ್ರಯತ್ನದಲ್ಲಿ ತೇನಸಿಂಗರು ಲ್ಯಾಂಬರ್ಟ್ ಎಂಬವರೊಟ್ಟಿಗೆ ೨೮೨೫೦ ಅಡಿಯಷ್ಟು ಮೇಲೇರಿ ಅಲ್ಲಿಂದ ಮುಂದೊತ್ತಲಾರದೆ ಮರಳಿದ್ದರು; ಪ್ರತಿಕೂಲ ಹವಾಮಾನವು ಅವರಿಗೆ ಸೋಲನ್ನು ಆಗ ತಂದರೂ ಪರ್ವತವೇರುವ ಇತಿಹಾಸದಲ್ಲಿ ಅಷ್ಟು ಎತ್ತರಕ್ಕೆ ಹಿಂದೆ ಯಾರೂ ಏರಿರದಿದ್ದ ಹೊಸ ದಾಖಲೆ ಏರ್ಪಟ್ಟಿತು. ಮಳೆಗಾಲ ಕಳೆದ ನಂತರ ಹೋದ ತಂಡವು ೨೬೬೦೦ ಅಡಿ ಎತ್ತರದ ಮಾರ್ಗದಲ್ಲಿಯೇ ತನ್ನ ಪ್ರಯತ್ನವನ್ನು ಬಿಟ್ಟುಕೊಡಬೇಕಾಗಿ ಬಂತು.

ಈ ಸಲದ ತಂಡವು ಭಾರತ—ನೇಪಾಳ ಗಡಿಯಲ್ಲಿರುವ ಜಯನಗರದಿಂದ ಎವರೆಸ್ಟಿನ ಬುಡಕ್ಕೆ ಹತ್ತಿರದ ಹಳ್ಳಿಯಾದ ನಾಮ್ಚೆ ಬಜಾರಿಗೆ ಹೊಸದಾರಿಯಿಂದ ಹೊರಟು ಮಾರ್ಚಿ ೨೦ರಂದು ಆ ಊರನ್ನು ಮುಟ್ಟಿತು ಖುಂಬು ಹಿಮಾನಿಯ ಬಳಿ (೫೪೦೦ ಮೀಟರು) ತಂಡವು ಏಪ್ರೀಲಿನ ೭ರಂದು ಮೂಲ ಶಿಬಿರವನ್ನು ಏರ್ಪಡಿಸಿಕೊಂಡಿತು. ನಾಲ್ಕು ದಿನಗಳ ತರುವಾಯ ಇಲ್ಲಿಂದ ೫೦೦ ಮೀಟರು ಎತ್ತರದಲ್ಲಿ ಆರೋಹಣದ ಮೊದಲನೇ ಶಿಬಿರವನ್ನು ರಚಿಸಿಕೊಂಡಿತು. ಮುಂದೆ ಬೇರೆ ಬೇರೆ ಎತ್ತರಗಳಲ್ಲಿ ಒಂದೊಂದೇ ಶಿಬಿರವನ್ನು ಕಟ್ಟುತ್ತಾ ಹೋಗಲಾಯಿತು. ೨೬೦೦೦ ಅಡಿ ಎತ್ತರದ ದಕ್ಷಿಣ ಶಂಕು ಎಂಬ ಪ್ರದೇಶದಲ್ಲಿ ಏಳನೆಯ ಶಿಬಿರವನ್ನು ತಂಡವು ಮೇ ೨೨ರಂದು ನಿರ್ಮಿಸಿತು ಇದೇ ಕೊನೆಯ ಶಿಬಿರ.

ತೇನಸಿಂಗರು ಎವರೆಸ್ಟಿನ ತುದಿಗೆ ಹತ್ತಿದ್ದ ಬ್ರಿಟಿಷರ ತಂಡವು ೯ ಶಿಬಿರಗಳನ್ನು ರಚಿಸಿಕೊಂಡಿದ್ದಿತು—ಈ ಕೊನೆಯ ಶಿಬಿರವಿದ್ದ ಎತ್ತರ ೨೭೯೦೦ ಅಡಿ. ಈ ದೃಷ್ಟಿಯಿಂದ ನೋಡಿದರೆ ಕೊನೆಯ ಆರೋಹಣವು ಸ್ವಿಜರಲೇಂಡಿನ ತಂಡದ ಸದಸ್ಯರ ಪಾಲಿಗೆ ಕಠಿಣ ಪರೀಕ್ಷೆಯೇ ಆಗಿತ್ತೆನ್ನಬಹುದು. ಆದಾಗ್ಯೂ ಅವರು ಜಯಶೀಲರಾದುದು ಎತ್ತಿ ಹೇಳತಕ್ಕ ವಿಷಯ. ಇನ್ನೊಂದು ಉಲ್ಲೇಖಾರ್ಹವಾದ ಸಂಗತಿಯೆಂದರೆ ತಂಡದಲ್ಲಿದ್ದ ಹನ್ನೊಂದೂ ಮಂದಿ ಸದಸ್ಯರು ದಕ್ಷಿಣ ಶಂಕುವಿನಷ್ಟು ಎತ್ತರಕ್ಕೆ ಏರಿ ಹೋಗಿದ್ದರು!

ಮೇ ೨೩ರಂದು ಅರ್ನೆಸ್ಟ್ ಶಿಮಿಡ್ ಮತ್ತು ಜುರ್ಗ್ ಮಾರ್ಮೆಟ್ ಎಂಬಿಬ್ಬರು ಸದಸ್ಯರು ಮೊದಲು ಶಿಖರವನ್ನೇರಿದರು; ಅಲ್ಲಿಂದಲೇ ಅವರು ಕೂಗಿ ತಾವು ಸಂಪಾದಿಸಿದ ವಿಜಯದ ಸುದ್ದಿಯನ್ನು ದಕ್ಷಿಣ ಶಂಕುವಿನಲ್ಲಿದ್ದ ತಮ್ಮ ಧುರೀಣನಿಗೆ ತಿಳಿಸಿದರು. ಒಂದು ತಾಸಿನ ವರೆಗೆ ಶಿಖರದಲ್ಲಿದ್ದು ಅವರು ದಕ್ಷಿಣ ಶಂಕುವಿನಲ್ಲಿ ಸ್ಥಾಪಿಸಿದ್ದ ಶಿಬಿರಕ್ಕೆ ವಿಶ್ರಾಂತಿಗಾಗಿ ಇಳಿದು ಬಂದರು.

ಅದೇ ಹೊತ್ತಿಗೆ ಅಡೋಲ್ಫ್ ರೀಸ್ಟ್ ಮತ್ತು ಹಾನ್ಸ್‌ರೊನ್ ಗುಂಟೆನ್ ಎವರೆಸ್ಟಿನ ತುದಿಗೆ ಹತ್ತುವ ಕೊನೆಯ ಪ್ರಯತ್ನ ಮಾಡಲು ಈ ಶಿಬಿರಕ್ಕೆ ಆಗಮಿಸಿದರು. ಮರುದಿನ, ಅಂದರೆ ಮೇ ೨೪ರಂದು, ಇವರಿಬ್ಬರೂ—ತಂಡದ ಮತ್ತಿಬ್ಬರು ಮುಂಚಿನ ದಿನವೇ ಶಿಖರವನ್ನೇರಿದ್ದರೂ ಸಹ— ಮೇಲೆ ಹತ್ತಿ ಹೋದರು. ಇವರಿಗೂ ಯಶಸ್ಸು ಕೈಗೂಡಿತು. ಶಿಖರದ ಮೇಲೆ ಸುಮಾರು ಎರಡು ತಾಸುಗಳ ವರೆಗೆ ಇವರು ನಿಂತು ಹತ್ತೈವತ್ತು ಚಿತ್ರಗಳನ್ನು ತೆಗೆದು ದಕ್ಷಿಣ ಶಂಕುವಿನಲ್ಲಿದ್ದ ಶಿಬಿರಕ್ಕೆ ಮರಳಿದರು.

ಎವರೆಸ್ಟಿನ ಶಿಖರವನ್ನು ಪ್ರಾಣವಾಯುವಿನ ಸಂಗ್ರಹವಿಲ್ಲದೆಯೇ ಮುಟ್ಟಬಹುದೇ ಎಂಬ ಪ್ರಶ್ನೆಗೆ ಈ ತಂಡವು ಸಾಧ್ಯವಿಲ್ಲ ಎಂದೇ ಉತ್ತರ ಕೊಡುತ್ತದೆ. ದಕ್ಷಿಣ ಶಂಕುವಿನಲ್ಲಿ ಸಹ ಪ್ರಾಣವಾಯುವಿನ ಉಪಯೋಗ ಅತ್ಯಗತ್ಯವೆನಿಸುತ್ತದೆ ಎಂದು ಈ ತಂಡದ ಅಭಿಪ್ರಾಯ. ಅಷ್ಟು ಎತ್ತರದಲ್ಲಿ ಮಾನವ ಶರೀರದ ಅವಸ್ಥೆಯು ತುಂಬ ಚಿಂತಾಜನಕವಾಗುತ್ತದೆ; ಆದುದರಿಂದ ಪ್ರಾಣವಾಯುವಿನ ಪೂರೈಕೆ ಬೇಕೇ ಬೇಕು ಎನ್ನುತ್ತಾರೆ ಈ ತಂಡದ ಸದಸ್ಯರು.

ವಾಸ್ತವದಲ್ಲಿ ಈ ತಂಡವು ತನ್ನ ಕೊನೆಯ ಶಿಬಿರವನ್ನು ಮೇ ೧೨ರಂದು ನಿರ್ಮಿಸಿದ್ದಿತು. ಆದರೆ ಅನಿರೀಕ್ಷಿತವಾಗಿ ಹವಾಮಾನವು ಪ್ರತಿಕೂಲವಾದುದರಿಂದ ತಂಡವು ೬ನೇ ಶಿಬಿರಕ್ಕೆ ಇಳಿದು ಬರಬೇಕಾಯಿತು. ಐದಾರು ದಿನಗಳ ತರುವಾಯ ಹವಾಮಾನವು ಸ್ತಿಮಿತಕ್ಕೆ ಬಂತು. ಆದರೆ ಮೇ ೨೧ರಂದು ಈ ೬ನೇ ಶಿಬಿರವು ಸಹ ಎವರೆಸ್ಟಿಗೆ ಸಹಜವಾದ ಸುಳಿಗಾಳಿಯೊಂದಕ್ಕೆ ಸಿಕ್ಕಿ ಕಿತ್ತು ಹೋಯಿತು. ಅದನ್ನು ಮರುದಿನವೇ ಸರಿಪಡಿಸಲಾಯಿತು.

ಎವರೆಸ್ಟಿನ ತುದಿಯಲ್ಲಿ ಈ ತಂಡದ ಸದಸ್ಯರು ತಮ್ಮ ವಿಜಯದ ಸ್ಮಾರಕಾರ್ಥವಾಗಿ ೨೦ ಫ್ರಾಂಕುಗಳಷ್ಟು ಹಣವನ್ನು ನಿಕ್ಷೇಪಿಸಿ ಬಂದಿದ್ದಾರೆ ನಾವು ದೇವರ ಡಬ್ಬಿಗೆ ಕಾಣಿಕೆ ಹಾಕುವ ಸಂಪ್ರದಾಯವನ್ನೆ ಇದು ಹೋಲುತ್ತದೆ! ಸುಮಾರು ೨೬೦೦೦ ಅಡಿ ಎತ್ತರದಲ್ಲಿ ಈ ತಂಡಕ್ಕೆ ೧೯೫೩ರಲ್ಲಿ ಬ್ರಿಟಿಷರ ತಂಡವು ಬಿಟ್ಟು ಹೋಗಿದ್ದ ಪ್ರಾಣವಾಯುವಿನ ಸಂಗ್ರಹ ಮತ್ತಿತರ ಆವಶ್ಯಕ ವಸ್ತುಗಳು (ಸಕ್ಕರೆ, ಕಟ್ಟಿಗೆ, ಮೇಣ, ಕಾಫಿ ಇತ್ಯಾದಿ!) ಉತ್ತಮ ಸ್ಥಿತಿಯಲ್ಲಿಯೇ ಸಿಕ್ಕಿವೆಯೆಂದು ತಿಳಿದು ಬರುತ್ತದೆ.

ಮೊದಲೇ ಹೇಳಿದಂತೆ ಸ್ವಿಜರಲೇಂಡಿನ ಹನ್ನೊಂದು ಮಂದಿಯ ಈ ತಂಡಕ್ಕೆ ಲ್ಹೋತ್ಸೆ ಶಿಖರವನ್ನೇರಿದ ಕೀರ್ತಿಯೂ ಈ ಸಲ ದೊರೆತಿದೆ. ಅರ್ನೆಸ್ಟ್ ರೀಸ್ಟ್ ಮತ್ತು ಫ್ರಿಟ್ಜ್ ಲೂಷಿಂಗರ್ ಎಂಬಿಬ್ಬರ ಸಾಹಸವೇ ಇದಕ್ಕೆ ಕಾರಣ. ಇವರು ಮೇ ೧೮ರಂದು ಅಷ್ಟರ ವರೆಗೆ ಜಗತ್ತಿನಲ್ಲಿಯೇ ಅಜೇಯವೆನಿಸಿದ್ದ ಅತ್ಯುನ್ನತ ಶಿಖರ ಲ್ಹೋತ್ಸೆಯನ್ನು (ಎತ್ತರ: ೨೭೮೯೦ ಅಡಿ) ಏರಿ ಬಂದರು. ಲ್ಹೋತ್ಸೆಯನ್ನೇರುವ ಮೊದಲ ಪ್ರಯತ್ನವನ್ನು ಕಳೆದ ವರ್ಷ ಅಂತಾರಾಷ್ಟ್ರೀಯ ಸ್ವರೂಪದ ತಂಡವೊಂದು ಮಾಡಿತ್ತಾದರೂ ದಕ್ಷಿಣ ಶಂಕುವನ್ನು ಮೀರಿ ಏರಲು ಅದಕ್ಕಾಗಲಿಲ್ಲ.

(೧೦ನೇ ಪುಟ ನೋಡಿರಿ)

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 100/1956.

1. ಹೇಮಾವತಿ ಅಮ್ಮ 2. ವೃಷಭರಾಜ ಭಟ್ಟ —ವಾದಿರು.

ಮತ್ತು

ನೀಲಯ್ಯ ಶೆಟ್ಟಿ ಮುತ್ತಯ್ಯ ಸೆಟ್ಟಿ ಅಳಿಯ ನ. ಕೊರಪಳು ಹೆಂಗ್ಸಿನ ಮಗ, ಕಾರ್ಕಳ ತಾಲೂಕು ಅರಂಬೋಡಿ ಗ್ರಾಮದ ಪೂಂಜ ಎಂಬಲ್ಲಿರುವವ —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ.

ನಿಮ್ಮಿಂದ ಸದ್ರಿ ವಾದಿಗೆ ಇದೇ ಕಳೆದ 1950ನೇ ಇಸವಿಯಿಂದ್ಯಾತು 1956ನೇ ಇಸವಿ ವರೇಗೆ ಬರತಕ್ಕ ಮೂಲಗೇಣಿ ಬಾಕಿ ಬಗ್ಗೆ ರೂ. 842—2—8ಕ್ಕೆ ಸದ್ರಿಯವರು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ನಿಮ್ಮ ಉದಾಹರಣೆ ಬಗ್ಗೆ ತಾರೀಕು 30—6—56ಕ್ಕೆ ಇಟ್ಟಿರುತ್ತದೆ. ಆದ್ರಿಂದ ನೀವು ಸದ್ರಿ ದಿವ್ಸ ಹಗಲು 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ಉದಾಹರಣೆ ದಾಕ್ಲುಮಾಡದೆ ಹೋದರೆ ನಿಮ್ಮ ಮೇಲೆ ಸದ್ರಿ ದಾವೆಯಲ್ಲಿ ಡಿಕ್ರಿ ಆಗುವದು, ಎಂಬ ಸಂಗ್ತಿಯನ್ನು ಕೋರ್ಟು ಹುಕುಂಪ್ರಕಾರ ಈ ಮೂಲಕ ತಿಳಿಸಲಾಗುತ್ತದೆ.

K. V. Kamath.
Advocate for Plff.

ಕಾರ್ಕಳ ತಾ. 22-6-1956.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED
H. Office: UDIPI (S.India).

ಲಂಡನ್ ನಗರದಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನ

ಭಾರತದ ನಿಲುಮೆಗೆ ಈ ಸಂಬಂಧದಿಂದ ದೊರೆಯುವ ಸಹಾಯ

ಲಂಡನಿನಲ್ಲಿ ನಿನ್ನೆಯಿಂದ (೨೭ನೇ ದಿನಾಂಕ) ಪ್ರಾರಂಭವಾಗಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ನಮ್ಮ ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರೂರವರು ೨೨ನೇ ದಿನಾಂಕವೇ ಆ ನಗರಕ್ಕೆ ಆಗಮಿಸಿದ್ದಾರೆ. ಲಂಡನಿನ ಈ ಸಮ್ಮೇಳನದಲ್ಲಿ ಬೇರೆ ಎಂಟು ರಾಷ್ಟ್ರಗಳ ಪ್ರಧಾನಿಗಳೂ ಭಾಗವಹಿಸುತ್ತಾರೆ. ಬ್ರಿಟನ್, ಕೆನಡ, ಆಸ್ಟ್ರೇಲಿಯ, ನ್ಯೂಜೀಲೆಂಡ್, ದಕ್ಷಿಣ ಆಫ್ರಿಕ, ಪಾಕಿಸ್ತಾನ, ಮತ್ತು ಸಿಂಹಳ ಎಂಬ ಒಂಭತ್ತು ರಾಷ್ಟ್ರಗಳ ಪ್ರಧಾನಿಗಳು ನಡೆಸುವ ಸಮಾಲೋಚನೆಗಳು ಮುಖ್ಯವಾಗಿ ಅಂತಾರಾಷ್ಟ್ರೀಯ ಪರಿಸ್ಥಿತಿಯ ಸುತ್ತ ಕೇಂದ್ರಿತವಾಗುತ್ತವೆ; ಅಲ್ಲದೆ ಕಾಮನ್‌ವೆಲ್ತ್ ರಾಷ್ಟ್ರಗಳ ನಡುವೆ ವ್ಯವಹಾರಗಳನ್ನು ನಡೆಸುವಾಗ ಬರುವ ಅಡೆ ತಡೆಗಳ ನಿವಾರಣೋಪಾಯಗಳೂ ಇಲ್ಲಿ ಚರ್ಚೆಯಾಗಲಿವೆ. ವ್ಯಾಪಾರಾಭಿವೃದ್ಧಿ ಮತ್ತು ಸ್ಟರ್ಲಿಂಗ್ ನಾಣ್ಯದ ಬಿಡುಗಡೆಯೇ ಕಾಮನ್‌ವೆಲ್ತ್ ರಾಷ್ಟ್ರಗಳನ್ನು ಸಾಮಾನ್ಯ ಚೌಕಟ್ಟಿಗೆ ಬಂಧಿಸುವ ಸೂತ್ರ; ಏಶ್ಯದ ರಾಷ್ಟ್ರಗಳ ಅಭಿವೃದ್ಧಿಯ ಉದ್ದೇಶವುಳ್ಳ ಕೊಲೊಂಬೋ ಯೋಜನೆಯು ಆಸಕ್ತಿಯುಳ್ಳ ಇನ್ನೊಂದು ಮುಖ್ಯ ವಿಷಯ.

ಸಂಬಂಧದ ಇತಿಹಾಸ

ಕಾಮನ್‌ವೆಲ್ತ್ ರಾಷ್ಟ್ರಗಳ ಇತಿಹಾಸ ಮತ್ತು ಈ ರಾಷ್ಟ್ರ ಕೂಟದ ರಚನೆಯು ಬಹಳ ವಿಲಕ್ಷಣ ವೈಶಿಷ್ಟ್ಯಗಳಿಂದ ಕೂಡಿದೆ. ೧೯೩೯ನೇ ಇಸವಿಗೆ ಮುಂಚೆ ಸ್ವಯಂಪ್ರಭುತ್ವಾಧಿಕಾರ ಪಡೆದ ಕೆಲವು ಸರಕಾರಗಳ ಗುಂಪಿನಂತೆ ಕಾಮನ್‌ವೆಲ್ತ್ ಆಫ್ ನೇಶನ್ಸ್ ಇದ್ದಿತು. ಈ ಸರಕಾರಗಳಲ್ಲಿ ಆಂಗ್ಲ ಜನಾಂಗದ ಪ್ರಾಬಲ್ಯವೇ ಇದ್ದಿತು. ಯುದ್ಧಾನಂತರ ಐರ್ಲೆಂಡಿನ ಗಣ ರಾಜ್ಯವು ಕಾಮನ್‌ವೆಲ್ತಿನಿಂದ ಹೊರ ನಡೆಯಿತು; ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳೆಂಬ ಮೂರು ಏಶ್ಯದ ರಾಷ್ಟ್ರಗಳು ಕಾಮನ್‌ವೆಲ್ತಿನಲ್ಲಿ ಸೇರ್ಪಡೆ ಹೊಂದಿದವು.

ಎರಡನೇ ಮಹಾ ಯುದ್ಧಕ್ಕೆ ಮುಂಚೆ ಬ್ರಿಟಿಷ್ ಕಾಮನ್‌ವೆಲ್ತ್ ಎಂದು ಪ್ರಸಿದ್ಧವಾಗಿದ್ದ ರಾಷ್ಟ್ರ ಕೂಟದ ರಚನೆಯು ಬಹು ಜನಾಂಗಗಳ ಕಾಮನ್‌ವೆಲ್ತ್ ಎಂದು ಕರೆಯಲ್ಪಡುವಂತೆ ರಚನೆಯಲ್ಲಿ ವೈವಿಧ್ಯವನ್ನು ಹೊಂದಿರುವುದು ಮಹತ್ವದ ಚಾರಿತ್ರಿಕ ಬೆಳವಣಿಗೆಯಾಗಿದೆ. ೧೯೩೧ರಲ್ಲಿ ವೆಸ್ಟ್‌ಮಿನಿಸ್ಟರ್ ಕಾಮನ್‌ವೆಲ್ತ್ ಶಾಸನದಲ್ಲಿ ಸದಸ್ಯ ರಾಷ್ಟ್ರಗಳ ವೈಶಿಷ್ಟ್ಯವಾಗಿ "ಅಂತಸ್ತಿನಲ್ಲಿ ಸಮಾನತ್ವ, ಸ್ವತಂತ್ರ ರೀತಿಯ ಮಧುರ ಮಿಲನ ಮತ್ತು ಆಂಗ್ಲ ಸಿಂಹಾಸನಕ್ಕೆ ನಿಷ್ಠೆ" ಎಂಬ ಮೂರು ಮುಖ್ಯಾಂಶಗಳಿದ್ದವು. ಆದರೆ ೧೯೪೯ರಲ್ಲಿ ಭಾರತದ ಗಣ ರಾಜ್ಯವನ್ನು ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರವಾಗಿಯೇ ಉಳಿಯಗೊಡಿಸುವುದಕ್ಕಾಗಿ "ಆಂಗ್ಲ ಸಿಂಹಾಸನಕ್ಕೆ ನಿಷ್ಠೆ" ಎಂಬ ಅಂಶವನ್ನು ಕಿತ್ತುಹಾಕಲಾಯಿತು. ಹೀಗಾಗಿ ವೆಸ್ಟ್‌ಮಿನಿಸ್ಟರ್ ಶಾಸನದ ಆಧಾರವು ಕಾಮನ್‌ವೆಲ್ತಿಗೆ ತಪ್ಪಿಹೋಯಿತು.

ಎರಡನೇ ಮಹಾಯುದ್ಧಕ್ಕೆ ಮೊದಲಾದರೆ, ಬ್ರಿಟನಿನೊಡನೆ ಕೆನಡ, ಭಾರತ ಇತ್ಯಾದಿ ದೇಶಗಳಿಗೆ ಸಮಾನ ಸ್ಥಾನಮಾನವನ್ನು ನೀಡುವ ಕಾಮನ್‌ವೆಲ್ತ್ ಸೂತ್ರಕ್ಕೆ ರಾಜಕೀಯ ಆಕರ್ಷಣೆ ವಿಶೇಷವಾಗಿದ್ದಿತು. ಆದರೆ ಈ ಮಹಾ ಯುದ್ಧವು ಕೆನಡ ಮತ್ತು ಭಾರತಗಳು ಮಹಾರಾಷ್ಟ್ರಗಳ ಅಂತಸ್ತಿಗೆ ಸಹಜವಾಗಿಯೇ ಏರಿವೆ ಎಂಬುದನ್ನು ಲೋಕವೇ ಒಪ್ಪಿಕೊಳ್ಳುವಂತೆ ಮಾಡಿತು ಆದುದರಿಂದ ಬ್ರಿಟನು ಇದನ್ನು ಒಪ್ಪಿಕೊಳ್ಳಲು ಸಿದ್ಧವಾಯಿತೆಂದ ಮಾತ್ರಕ್ಕೆ ತಾನು ಉದಾರ ರೀತಿಯಲ್ಲಿ ವರ್ತಿಸುತ್ತಿದ್ದೇನೆಂಬ ಭಾವನೆಯನ್ನು ಈ ರಾಷ್ಟ್ರಗಳಲ್ಲಿ ಮೂಡಿಸುವ ರಾಜಕೀಯ ತಂತ್ರಕ್ಕೆ ಅವಕಾಶ ದೊರೆಯದೆ ಹೋಯಿತು. ಅಂದರೆ, ಕೆನಡ ಮತ್ತು ಭಾರತಗಳು ತಮ್ಮ ಸ್ವಂತ ಹಕ್ಕು ಮತ್ತು ಯೋಗ್ಯತೆಯ ಬಲದಿಂದಲೇ ಬ್ರಿಟನಿನೊಡನೆ ಸಮಾನತೆಯ ಸಂಬಂಧ ಬೆಳೆಸಿಕೊಂಡಿರುವವೆನ್ನುವಂತಾಯಿತಲ್ಲದೆ, ಬ್ರಿಟಿಷರ ಉದಾರ ಬುದ್ಧಿಯನ್ನು ಕೊಂಡಾಡುತ್ತಿರುವ ಹಿಂದಿನ ಪರಿಸ್ಥಿತಿಯೇನೂ ಉಳಿಯಲಿಲ್ಲ.

ವಿಸ್ತರಣೆಯ ಸಮಸ್ಯೆ

ಕಾಮನ್‌ವೆಲ್ತಿನ ವಿಸ್ತರಣೆಯು ಯುದ್ಧೋತ್ತರದಲ್ಲಿ ನಡೆಯಿತು—ಆದರೆ ಇದು ಬೇರೆ ಸಮಸ್ಯೆಗಳನ್ನೂ ತಂದೊಡ್ಡಿತು. ಆಂಗ್ಲ ಸಿಂಹಾಸನಕ್ಕೆ ನಿಷ್ಠೆ ಎಂಬ ಪದವು ಹಿಂದೆ ಐಕ್ಯಸೂತ್ರಕ್ಕೆ ಸಂಬಂಧಿಸಿದೆಲ್ಲ ರಾಷ್ಟ್ರಗಳನ್ನೂ ಪೋಣಿಸುವಷ್ಟು ಶಕ್ತಿಯುತವಿದ್ದಿತು; ಈ ಪದಪ್ರಯೋಗಕ್ಕೆ ಅವಕಾಶವೇ ಇಲ್ಲದೆ, ಪ್ರತಿಯೊಂದು ಸದಸ್ಯ ರಾಷ್ಟ್ರವೂ ತನ್ನ ಮನಬಂದಂತೆ ವ್ಯವಹಾರವನ್ನಿಟ್ಟುಕೊಳ್ಳಬಲ್ಲುದೆಂಬ ಸ್ವಾತಂತ್ರ್ಯವು ಕಾಮನ್‌ವೆಲ್ತಿನ ಒಗ್ಗಟ್ಟಿನ ಭಾವನೆಗೆ ಅಪಾಯವನ್ನೆ ತಂದಿದೆ. ಆಂಗ್ಲ ಸಿಂಹಾಸನಾಧೀಶ್ವರರನ್ನು ಕಾಮನ್‌ವೆಲ್ತಿನ ಸಂಕೇತವೆಂದು ಈಗ ಭಾವಿಸಲ್ಪಡುತ್ತಿರುವುದೇನೋ ನಿಜ—ಆದರೆ, ವ್ಯವಹಾರ ಸ್ವಾತಂತ್ರ್ಯದ ಕಡೆಗಿನ ಒಲವು ಈ ಸಾಂಕೇತಿಕ ಗೌರವ ಭಾವನೆಗಿಂತಲೂ ಅಧಿಕ ಶಕ್ತಿ ಸಂಪನ್ನವಾಗಿರುವಂತೆ ಕಂಡು ಬರುತ್ತದೆ.

೧೯೩೧ರಿಂದ ಕಾಮನ್‌ವೆಲ್ತಿನ ಸದಸ್ಯತ್ವವನ್ನು ಪಡೆದಿರುವ ಹಳೆಯ ರಾಷ್ಟ್ರಗಳು ಸಹಜವಾಗಿಯೇ "ಹಳೆಯ" ವಿಚಾರಧಾರೆಯನ್ನೆ ಇಂದೂ ಹೊಂದಿವೆ. ಹೀಗಾಗಿ ಬ್ರಿಟನ್, ಕೆನಡ, ಆಸ್ಟ್ರೇಲಿಯ, ನ್ಯೂಜೀಲೆಂಡ ಮತ್ತು ದಕ್ಷಿಣ ಆಫ್ರಿಕಗಳು ಸಾಮಾನ್ಯವಾಗಿ ಒಂದು ಬಗೆಯಿಂದ ವಿಚಾರ ಮಾಡುತ್ತವೆ. ಕಮ್ಯೂನಿಸಮ್ಮಿನ ಹೆದರಿಕೆ ಈ ರಾಷ್ಟ್ರಗಳಿಗಿದೆ; ಈ ರಾಜಕೀಯ ಶಕ್ತಿಯ ದಮನಕ್ಕಾಗಿ ದ್ರವ್ಯ ಸಹಾಯವನ್ನು ಸಲ್ಲಿಸಬೇಕು; ಕಾಮನ್‌ವೆಲ್ತಿನ ಸದಸ್ಯತ್ವವನ್ನು ಪಡೆದಿರದಿದ್ದರೂ ಕಮ್ಯೂನಿಸಮನ್ನು ಇದಿರಿಸುವ ಇಚ್ಛೆಯುಳ್ಳ ರಾಷ್ಟ್ರಗಳಿಗೆ ಕೊಲೊಂಬೋ ಯೋಜನೆಯನ್ವಯ ಸಹಾಯ ಸಲ್ಲಿಸಬೇಕು ಎನ್ನುತ್ತವೆ ಇವು. ಸೈನಿಕ ಒಪ್ಪಂದಗಳಲ್ಲಿ ಇವುಗಳು ವಿಶೇಷ ಆಸಕ್ತಿಯನ್ನು ವ್ಯಕ್ತಪಡಿಸುತ್ತವೆ. ದಕ್ಷಿಣ ಆಫ್ರಿಕದಂಥ ಜಡ ಹಾಗು ಅಮಾನುಷ ವ್ಯವಹಾರಗಳಿಗೆ ಹೆಸರಾದ ಸರಕಾರವೂ ಸಹ ಮಧ್ಯ ಪೂರ್ವದಲ್ಲಿ ಯುದ್ಧವಾದರೆ ತಾನು ಸಹಾಯಕ್ಕೆ ಬರುವೆನೆಂದು ಬ್ರಿಟನಿಗೆ ಹೇಳುತ್ತದೆ!

ತೀವ್ರ ಭಿನ್ನಾಭಿಪ್ರಾಯ

ಪಾಕಿಸ್ತಾನ ಮತ್ತು ಸಿಂಹಳಗಳು ಕೆಲಮಟ್ಟಿಗೆ ಕಾಮನ್‌ವೆಲ್ತಿನ ಉಪರೋಕ್ತ ಸದಸ್ಯ ರಾಷ್ಟ್ರಗಳ ನಿಲುವನ್ನು ಒಪ್ಪಿಕೊಳ್ಳುತ್ತವೆ. ಉದಾಹರಣೆಗೆ, ಪಾಕಿಸ್ತಾನವು ಬ್ರಿಟನಿನೊಡನೆ ಸಿಯಾಟೊ ಮತ್ತು ಬಗ್ದಾದಿನ ಸೈನಿಕ ಒಪ್ಪಂದಗಳಲ್ಲಿ ಭಾಗಿಯಾಗಿದೆ; ಸಿಂಹಳವು ಬ್ರಿಟನಿಗೆ ಸೈನಿಕ ಠಾಣ್ಯಗಳನ್ನು ಸಂತೋಷದಿಂದ ಕೊಟ್ಟಿರುತ್ತದೆ. ಕಮ್ಯೂನಿಸಮನ್ನು ಸಿಂಹಳ, ಪಾಕಿಸ್ತಾನಗಳಂತೆ ಭಾರತವೂ ಸ್ವಾಗತಿಸಲು ಸಿದ್ಧವಿಲ್ಲ. ಆದಾಗ್ಯೂ ಕಾಮನ್‌ವೆಲ್ತಿನ ಹಳೆಯ ಸದಸ್ಯರಿಗೂ ಏಶ್ಯದ ಈ ಹೊಸ ಸದಸ್ಯ ರಾಷ್ಟ್ರಗಳ ಧುರೀಣರಿಗೂ ಬೇರೆ ಕೆಲವು ವಿಚಾರಗಳಲ್ಲಿ ತೀವ್ರ ಭಿನ್ನಾಭಿಪ್ರಾಯವಿದೆ. ಸ್ವಾತಂತ್ರ್ಯದ ಹೋರಾಟವನ್ನು ಹೂಡಿ, ಸಾಮ್ರಾಜ್ಯಶಾಹಿತ್ವದ ವಿರುದ್ಧ ಸ್ವರವೆತ್ತಿದ ಈ ರಾಷ್ಟ್ರಗಳ ಧುರೀಣರಿಗೆ ಕಮ್ಯೂನಿಸಮ್ಮಿನ ವ್ಯಾಪನೆಗಿಂತಲೂ ವಸಾಹತುವಾದವು ಕೆಟ್ಟುದೆಂದು ತೋರುತ್ತದೆ. ಸೈನ್ಯಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ವೆಚ್ಚ ಮಾಡುವುದಕ್ಕಿಂತ ದಾರಿದ್ರ್ಯಪೀಡಿತ ಜನರ ಜೀವನವನ್ನು ಸುಖಮಯಗೊಳಿಸುವ ಅಭಿವೃದ್ಧಿ ಪ್ರಯತ್ನಗಳಿಗೆ ಈ ಹಣ ವಿನಿಯೋಗವಾಗಬೇಕೆಂದು ಭಾರತವು ಹೇಳುತ್ತದೆ. ಹೀಗೆ ಹಳೆಯ ಮತ್ತು ಹೊಸ ಸದಸ್ಯ ರಾಷ್ಟ್ರಗಳ ನಡುವೆ ಅವರವರ ಅನುಭವಕ್ಕನುಗುಣವಾಗಿ ಮೂಲಭೂತ ಧೋರಣೆಯಲ್ಲಿಯೇ ಪ್ರಬಲ ವ್ಯತ್ಯಾಸಗಳು ಎದ್ದು ತೋರುತ್ತವೆ.

ಏಶ್ಯದ ರಾಷ್ಟ್ರಗಳಿಗೆ ಕಾಮನ್‌ವೆಲ್ತಿನಲ್ಲಿ ಪ್ರವೇಶವನ್ನು ದೊರಕಿಸಿಕೊಡುವ ಭಾಷಣವನ್ನು ನ್ಯೂಜಿಲೆಂಡಿನ ಪೀಟರ್ ಫ್ರೇಸರ್ ೧೯೪೭ರಲ್ಲಿ ಮಾಡಿದಾಗ, ಈ ಪರಿಣಾಮಗಳನ್ನು ನಿರೀಕ್ಷಿಸಿದ್ದರೊ ಇಲ್ಲವೊ—ತಿಳಿಯದು. ಆದರೆ ೧೯೪೭ರಲ್ಲಿಯೇ ಏಶ್ಯದ ರಾಷ್ಟ್ರಗಳು ಎಚ್ಚೆತ್ತಿವೆ ಎಂಬುದರ ಸೂಚನೆಯು ವ್ಯಕ್ತವಾಗಿದ್ದಿತು. ಹೊಸ ದೆಹಲಿಯಲ್ಲಿ ಮಹಾತ್ಮ ಗಾಂಧೀಜಿಯವರ ಆಶೀರ್ವಾದದ ನೆರಳಿನಲ್ಲಿ ನಡೆದ ಏಶ್ಯದ ರಾಷ್ಟ್ರಗಳ ಪರಿಷತ್ತಿನಲ್ಲಿ ಮಾತನಾಡುತ್ತಾ ನೆಹರೂರವರು ಐರೋಪ್ಯರ ಆಳ್ವಿಕೆಯನ್ನು ಅಂತ್ಯಗೊಳಿಸುವಷ್ಟು ಸಶಕ್ತವಾದ ರಾಷ್ಟ್ರೀಯ ಗಾಳಿಯು ಏಶ್ಯದಲ್ಲಿ ಬೀಸುತ್ತಿರುವುದನ್ನು ಸ್ಪಷ್ಟ ಶಬ್ದಗಳಲ್ಲಿ ವಿವರಿಸಿದರು. ಜಾಗತಿಕ ವ್ಯವಹಾರಗಳಲ್ಲಿಯೂ ಏಶ್ಯದ ವ್ಯವಹಾರಗಳಲ್ಲಿಯೂ ಏಶ್ಯದ ರಾಷ್ಟ್ರಗಳೊಡನೆ ವಿಶೇಷ ಪರ್ಯಾಲೋಚನೆ ನಡೆಸಿ ಸರ್ವ ಸಮ್ಮತ ತೀರ್ಮಾನಕ್ಕೆ ಬರುವ ದಿನವೀಗ ಬಂದಿದೆ ಎಂದವರು ಇಲ್ಲಿ ಘೋಷಿಸಿದರು.

ಹಿನ್ನೆಲೆಯು ಇಂತಿದ್ದಾಗ, ಈಗ ತಾನೆ ಸ್ವಾತಂತ್ರ್ಯವನ್ನು ಪಡೆದ ಭಾರತ ಮತ್ತಿತರ ಎರಡು ಏಶ್ಯದ ರಾಷ್ಟ್ರಗಳು ತಮ್ಮ ಹಿಂದಿನ ಆಳರಸರೊಡನೆ ಯಾವುದೇ ರೀತಿಯ ಸಂಬಂಧವಿರಿಸಿಕೊಳ್ಳುವವೆಂಬ ನಂಬಿಕೆ ಯಾರಿಗೂ ಇದ್ದಿರಲಿಲ್ಲ. ಬರ್ಮವು ಕಾಮನ್‌ವೆಲ್ತಿನ ಸಂಬಂಧವನ್ನು ಕಿತ್ತೊಗೆಯಿತು; ಭಾರತದಲ್ಲಿ ಸಹ ಕಾಮನ್‌ವೆಲ್ತಿನ ಸದಸ್ಯತ್ವವು ಬೇಡವೆಂದು ಹೇಳುವ ಧುರೀಣರು ಅನೇಕರಿದ್ದರು. ಸ್ವತಃ ಗಾಂಧೀಜಿಯವರೇ ೧೯೪೨ರಲ್ಲಿ ಕ್ರಿಪ್ಸ್ ನಿಯೋಗದ ಮುಂದೆ ಭಾರತಕ್ಕೆ ಡೊಮಿನಿಯನಿನ ಅಂತಸ್ತನ್ನು ನೀಡುವೆವೆಂಬ ಬ್ರಿಟಿಷರ ಆಶ್ವಾಸನೆಯು ಮೂರು ತಿಂಗಳ ಬಳಿಕದ ತಾರೀಕು ಹಾಕಿ ಇವತ್ತು ಕೊಟ್ಟ ಚೆಕ್ಕಾಗಿದೆ ಎಂದು ಟೀಕಿಸಿದ್ದರು. ಭಾರತದ ರಾಷ್ಟ್ರೀಯ ಕಾಂಗ್ರೆಸು ಪೂರ್ಣ ಸ್ವರಾಜ್ಯವನ್ನೆ ತನ್ನ ಧ್ಯೇಯವೆಂದು ಹೇಳಿದ್ದಿತು. ಆದಾಗ್ಯೂ ಭಾರತವು ಕಾಮನ್‌ವೆಲ್ತಿನಲ್ಲಿ ಉಳಿದುದು ಎಲ್ಲರಿಗೂ ಆಶ್ಚರ್ಯವನ್ನುಂಟು ಮಾಡಿತು.

ಮಹಾತ್ಮರ ಪ್ರಭಾವ

ಇಂಥ ನಿರ್ಣಯಕ್ಕೆ ಮಹಾತ್ಮರ ಪ್ರಭಾವವೇ ಎಡೆಕೊಟ್ಟಿತೆಂದು ಹೇಳ

ರೂ. 1000ದ ವರೆಗೆ ಸಾಲವು

ಯಾವ ಜಾಮೀನು, ಆಸ್ತಿ, ಅಡವು ಇಲ್ಲದೆಯೇ ಬರೀ ನಿಮ್ಮ ದಸ್ಕತಿನ ಮೇಲೆ ಕೊಡಲಾಗುವುದು. ನೂರಕ್ಕೆ ಮೇಲ್ಪಟ್ಟ ಅರ್ಜಿದಾರರು ಈಗಾಗಲೇ ಸಾಲಗಳನ್ನು ಪಡೆದಿರುತ್ತಾರೆ. ಹೆಚ್ಚಿನ ವಿವರಗಳಿಗೆ ಇಂಗ್ಲಿಷಿನಲ್ಲಿ ಬರೆಯಿರಿ.

Bombay Mercantile Co.,
Bombay-23.

PT. AMBLAY RAMASWAMIER'S 98 Yrs. Renowned, Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16—18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಬಹುದು: ತಾನು ಬ್ರಿಟಿಷರ ದ್ವೇಷಿಯಲ್ಲ; ಆಂಗ್ಲ ಸಾಮ್ರಾಜ್ಯದ ಶತ್ರು ಎನ್ನುತ್ತಿದ್ದರು ಗಾಂಧೀಜಿ. ಭಾರತಕ್ಕೆ ಸ್ವಾತಂತ್ರ್ಯ ದೊರೆತು, ಸಾಮ್ರಾಜ್ಯಶಾಹಿ ಶೋಷಣೆ ನಿಂತುದರಿಂದ ಸಂತೃಪ್ತರಾದ ಗಾಂಧೀಜಿ ಬ್ರಿಟಿಷರೊಡನೆ ಸ್ನೇಹ ಸಂಬಂಧವನ್ನಿಟ್ಟುಕೊಳ್ಳಲು ಸಂತೋಷದಿಂದ ಶಿಫಾರಸು ಮಾಡಿದರು. ಈ ಉದಾತ್ತವಾದ ವರ್ತನೆಯ ಅಂತರ್ಯವನ್ನು ಈಗ—ಎಂಟು ವರ್ಷಗಳ ಬಳಿಕ—ಸಹ ತಿಳಿಯದವರು ನಮ್ಮ ದೇಶದಲ್ಲಿದ್ದಾರೆ; ಹೊರದೇಶಗಳಲ್ಲಿ ಸಹ ಈ ಸದಸ್ಯತ್ವದ ಸ್ವರೂಪ ಮತ್ತು ಗೂಢಗಳನ್ನರಿಯದ ರಾಜಕಾರಣಿಗಳು ಅನೇಕ ವಿದ್ದಾರೆ. ಭಾರತದ ಧುರೀಣರನ್ನು ರಶ್ಯ ಮತ್ತು ಚೀನದ ಧುರೀಣರು ಕಾಮನ್‌ವೆಲ್ತ್ ಸದಸ್ಯತ್ವದ ಅರ್ಥವೇನೆಂದು ಪ್ರಶ್ನಿಸಿರುವುದನ್ನು ನಾವು ಕೇಳಿದ್ದೇವೆ; ಕರಾಚಿಯಲ್ಲೊಮ್ಮೆ "ಕಾಮನ್‌ವೆಲ್ತ್ ಸಂಬಂಧ" ಎಂಬ ಕುರಿತು ತಜ್ಞರೊಬ್ಬರು ಭಾಷಣ ಮಾಡಿದಾಗ, ಸಭಾಂಗಣದಲ್ಲಿ ರಶ್ಯ ಮತ್ತು ಚೀನದ ರಾಯಭಾರಿ ಕಚೇರಿಯ ಇಡೀ ಸಿಬಂಧಿಯೇ ಕುಳಿತಿದ್ದಿತು!

ನೆಹರುಗಳು "ಕಾಮನ್‌ವೆಲ್ತಿನ ಸದಸ್ಯತ್ವದಿಂದ ನಮಗೆ ಲಾಭವಿದೆ; ನಾವು ಜಗತ್ತಿನಲ್ಲಿ ಮುಂದೊತ್ತಬೇಕೆನ್ನುವ ಕೆಲವು ಉದ್ದೇಶಗಳ ಸಾಧನೆಗಿದು ಸಹಾಯಕವಾಗಿದೆ" ಎಂದು ಹೇಳುತ್ತಾ ಕುತೂಹಲಿಗಳನ್ನೂ ಟೀಕಾಕಾರರನ್ನೂ ಸಮಾಧಾನಪಡಿಸಲು ನೋಡುತ್ತಾರೆ. ಆದರೆ ನಮಗೆ ಲಾಭವೇನು? ನಮ್ಮ ಉದ್ದೇಶಕ್ಕೆ ಸದಸ್ಯತ್ವದಿಂದ ದೊರಕುವ ಪೋಷಣೆಯೇನು?—ಎಂಬ ಪ್ರಶ್ನೆಗೆ ವಿವರವಾದ ಉತ್ತರವನ್ನು ಅವರು ಕೊಡದ ದೆಸೆಯಿಂದ ಜನರಲ್ಲಿದ್ದ ಗೊಂದಲದ ಭಾವನೆಯು ಪರಿಹಾರವಾಗದೆ ಇದ್ದಂತೆಯೇ ಉಳಿದಿರುತ್ತದೆ. ಸಾಮಾನ್ಯ ಮಾತುಗಳಲ್ಲಿ ನಾವು ಸಂದೇಹಗಳಿಗೆ ಸಮಾಧಾನವನ್ನು ಕೊಡುವುದಾದರೆ ಹೀಗೆ ಹೇಳಬಹುದು. ವಸಾಹತುವಾದದ ಅಂತ್ಯ, ವರ್ಣಭೇದ ಧೋರಣೆಯ ವಿಸರ್ಜನೆ; ಹಿಂದುಳಿದ ಪ್ರದೇಶಗಳ ಅಭಿವೃದ್ಧಿ, ಜಗತ್ತಿನಲ್ಲಿ ಏಶ್ಯಕ್ಕೆ ಅದಕ್ಕೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನವನ್ನು ಕೊಡುವ ವ್ಯವಸ್ಥೆ—ಇತ್ಯಾದಿಗಳು ಏಶ್ಯದ ರಾಷ್ಟ್ರಗಳ (ಅಂದರೆ ಭಾರತ, ಪಾಕಿಸ್ತಾನ ಮತ್ತು ಸಿಂಹಳಗಳ) ಸಾಮಾನ್ಯ ಧ್ಯೇಯಗಳಾಗಿವೆ. ಇದರ ಸಾಧನೆಗೆ ಕಾಮನ್‌ವೆಲ್ತಿನ ಸದಸ್ಯತ್ವದಿಂದ ತುಂಬ ನೆರವಾಗುತ್ತದೆ ಎಂದು ನೆಹರುಗಳ ವಿಶ್ವಾಸ. ಸಿಂಹಳ ಮತ್ತು ಪಾಕಿಸ್ತಾನಗಳು ಸಹ ಈ ಮಟ್ಟಿಗೆ ನೆಹರುಗಳ ನಿಲುಮೆಯನ್ನು ಅನುಮೋದಿಸುತ್ತವೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 165/1956.

H. ಶ್ರೀನಿವಾಸ ರಾವ್. —ವಾದಿ

1. ಗಾಣದ ಶೇಷ, 2. ಮಂಜುನಾಥ, 3. ನಾರಾಯಣ, 4. ಗೋವಿಂದ —ಪ್ರತಿವಾದಿ

ಕುಂದಾಪುರ ತಾಲೂಕು ಕೋಟೇಶ್ವರ ಗ್ರಾಮದಲ್ಲಿರುವ ಗಾಣದ ಸಾಗನ ಮಕ್ಕಳು ನಾರಾಯಣ। ಗೋವಿಂದ। ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿರಿಂದ ವಾದಿಗೆ ಕಳೆದ ವಿಜಯ ಜಯ ಮನ್ಮಥ ಸಂ॥ರಗಳ ಬಾಬ್ತು ಬರತಕ್ಕ ಗೇಣಿ ಬಾಕಿ ಬರಮಾಡಿಕೊಳ್ಳುವರೆ ವಾದಿಯು ಪ್ರತಿವಾದಿರ ಮೇಲೆ ದಾಖಲು ಮಾಡಿದ ಮೇಲಿನ ದಾವೆಯು ತಾ 7—7—1956ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು, ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwaraiah·

Advocate for Plff.

Date 23—6—56. Coondapoor,

ನಮ್ಮ ನವೀನ ನಾಣ್ಯಗಳು



ಕಳೆದ ಸಂಚಿಕೆಯಲ್ಲಿ ನಾವು ವಿವರಿಸಿದ್ದಂತೆ, ಬರುವ ಎಪ್ರೀಲಿನ (೧೯೫೭) ೧ನೇ ತಾರೀಕಿನಿಂದ ಹೊಸ ನಾಣ್ಯಗಳು ಚಲಾವಣೆಗೆ ಬರುತ್ತವೆ. ಭಾರತವು ಅಂದಿನಿಂದ ದಶಮಾಂಶ ಪದ್ಧತಿಯಲ್ಲಿ ನಾಣ್ಯಗಳ ಚಲಾವಣೆಯನ್ನು ಪ್ರಾರಂಭಿಸುತ್ತದೆ. ಚಿತ್ರದಲ್ಲಿ ಮೇಲಿನ ಸಾಲಿನ ಎಡಬದಿಯಿಂದ ಕ್ರಮವಾಗಿ ೨೫,೧೦ ಮತ್ತು ೫೦ ನಯೇ ಪೈಸೆ ನಾಣ್ಯಗಳ ಹಿಮ್ಮುಖವನ್ನು ಕಾಣಬಹುದು; ನಡುವಿನ ಸಾಲಿನಲ್ಲಿ ನೂರು ನಯೇ ಪೈಸೆ ಬೆಲೆ ಬಾಳುವ ಹೊಸ ಒಂದು ರೂಪಾಯಿ ನಾಣ್ಯದ ಮೇಲ್ಮುಖ ಮತ್ತು ಹಿಮ್ಮುಖಗಳನ್ನು ನೋಡಬಹುದು; ಮತ್ತು ಕೊನೆಯ ಸಾಲಿನಲ್ಲಿ ೨, ೧ ಮತ್ತು ೫ ನಯೇ ಪೈಸೆಗಳ ನಾಣ್ಯದ ಹಿಮ್ಮುಖವನ್ನು ವೀಕ್ಷಿಸಬಹುದು. ಪ್ರತಿಯೊಂದು ನಾಣ್ಯದ ಮೇಲ್ಮುಖದಲ್ಲಿಯೂ ರೂಪಾಯಿ ನಾಣ್ಯದ ಮೇಲ್ಮುಖದಲ್ಲಿ ಕೆತ್ತಲಾದಂತೆ ಅಶೋಕನ ಸಿಂಹ ಸ್ತಂಭವೂ ಭಾರತ ಎಂಬ ಹೆಸರು ಹಿಂದಿ ಮತ್ತು ಆಂಗ್ಲ ಭಾಷೆಯಲ್ಲಿಯೂ ಇರುತ್ತವೆ. ರೂಪಾಯಿಗಿಂತ ಕಡಿಮೆ ಬೆಲೆಯ ನಾಣ್ಯಗಳಲ್ಲಿ ರೂಪಾಯಿಯ ಎಷ್ಟನೇ ಅಂಶ ಈ ನಾಣ್ಯವಾಗಿದೆ ಎಂಬುದನ್ನು ಹಿಂದಿಯಲ್ಲಿ ಬರೆಯಲಾಗಿದೆ.

ಜವಾಹರರ ವಿಧಾನ

ಮನವೊಲಿಸುವಿಕೆ ಮತ್ತು ತಿಳಿಸಿ ಹೇಳುವಿಕೆಗಳಿಂದ ಏಶ್ಯದ ರಾಷ್ಟ್ರಗಳು ಕಾಮನ್‌ವೆಲ್ತಿನ ಉಳಿದ ರಾಷ್ಟ್ರಗಳ ಈ ಮನೋಭಾವನೆಯಲ್ಲಿ ಪರಿವರ್ತನೆಯನ್ನು ಸಾಧಿಸಲು ನೋಡುತ್ತವೆ. ವಸಾಹತುವಾದ ಅಳಿಯಬೇಕು ಎಂದು ಬ್ರಿಟನಿಗೆ ಇವು ಉಪದೇಶಕೊಡುತ್ತವೆ; ಬ್ರಿಟನು ಮಾದರಿ ಪಾಠವನ್ನು ಹೇಳಿಕೊಟ್ಟು, ಪೋರ್ಚುಗಾಲದಂಥ ಇತರ ರಾಷ್ಟ್ರಗಳ ಮೇಲೆ ತನ್ನ ನೈತಿಕ ಶಕ್ತಿಯನ್ನು ಬೀರಿ ಗೋವೆಯಲ್ಲಿರುವಂಥ ವಸಾಹತುವಾದದ ನಿರ್ಮೂಲನಕ್ಕೆ ನೆರವಾಗಬೇಕೆಂದು ಇವು ಒತ್ತಾಯವನ್ನು ತರುತ್ತವೆ. ವರ್ಣಭೇದ ಜನಾಂಗಭೇದಗಳು ಹಿತವಲ್ಲವೆಂದು ದಕ್ಷಿಣ ಆಫ್ರಿಕ ಮತ್ತು ಆಸ್ಟ್ರೇಲಿಯಾಗಳಿಗಿವು ತಿಳಿಸಿ ಹೇಳುತ್ತವೆ. ಪ್ರತ್ಯಕ್ಷವಾಗಿ ಚರ್ಚೆಯು ಪ್ರಧಾನಿಗಳ ಸಮ್ಮೇಳನದಲ್ಲಿ ನಡೆಯಲಿಕ್ಕಿಲ್ಲ—ಆದರೆ ಕಾಮನ್‌ವೆಲ್ತಿನ ಬಾಂಧವ್ಯದ ನಿಕಟ ಸಂಬಂಧವಿರುವ ದೆಸೆಯಿಂದ ಯಾವ ಕಾಲದಲ್ಲಿಯೇ ಆಗಲಿ, ಈ ವಿಷಯಗಳ ಪ್ರಸ್ತಾಪವೆತ್ತಿದಾಗ ದಾಕ್ಷಿಣ್ಯಕ್ಕೆ ಕಟ್ಟುಬೀಳಲೇ ಬೇಕಾಗುತ್ತದೆ. ಅನೌಪಚಾರಿಕ ಮಾತುಕತೆಗಳಲ್ಲಿ ಮತ್ತು ಆಯಾ ರಾಷ್ಟ್ರಗಳು ನೇರಾಗಿ ನಡೆಸುವ ಪತ್ರವ್ಯವಹಾರಗಳಲ್ಲಿ ಕಾಮನ್‌ವೆಲ್ತಿನ ಕೌಟುಂಬಿಕ ಭಾವನೆಯ ಪ್ರಭಾವ ಇದ್ದೇ ಇರುತ್ತದೆ; ಬಿದ್ದೇಬೀಳುತ್ತದೆ.

ಜಾಗತಿಕ ವ್ಯವಹಾರಗಳಲ್ಲಾದರೂ ಹೀಗೆಯೇ ಸತ್ಪ್ರಭಾವವಾಗುತ್ತದೆ—ಏಶ್ಯದ ಸ್ವರಕ್ಕೆ ಬೆಲೆಬರಬೇಕೆಂದು ಅತ್ಯಾಗ್ರಹ ರೀತಿಯಲ್ಲಿ ಪ್ರತಿಪಾದಿಸುವವರು ನೆಹರೂರಾಗಿದ್ದಾರೆ. ಸಂಯುಕ್ತ ರಾಷ್ಟ್ರಸಂಘದಲ್ಲಿ, ಅದರ ಅಂಗಸಂಸ್ಥೆಯಾದ ಭದ್ರತಾ ಮಂಡಳದಲ್ಲಿ ಏಶ್ಯಕ್ಕೆ ದೊರೆತಿರುವ ಸ್ಥಾನಮಾನಗಳು ಸಾಲದೆಂಬ ಇವರ ಅಭಿಪ್ರಾಯ ಕೋರಿಯದ ಮಾತುಕತೆಗಳ ಒಂದು ಸನ್ನಿವೇಶವನ್ನು ಪ್ರಸ್ತಾಪಿಸುತ್ತಾ ನೆಹರುಗಳು "ಏಶ್ಯದ ಪರವಾಗಿ ಭದ್ರತಾಮಂಡಳದಲ್ಲಿರುವವರು ಯಾರು? ತೀರ ಚಿಕ್ಕದಾದ ಲೆಬನಾನ್; ಮತ್ತು ತನ್ನ ಸರಕಾರವನ್ನಲ್ಲದೆ ಏಶ್ಯದಲ್ಲಿ ಬೇರೆ ಯಾರನ್ನೂ ಪ್ರತಿನಿಧಿಸದ ಫೊರ್ಮೋಸಾ!" ಎಂದು ಟೀಕಿಸಿದರು. ಇಂಥ ಟೀಕೆಯ ಪರಿಣಾಮವಾಗಿಯೇ ಜನೇವ ಸಮ್ಮೇಳನ ನಡೆದಾಗ ಬ್ರಿಟನಿನ ವಿದೇಶ ಮಂತ್ರಿಗಳು ಕೊಲೊಂಬೊ ಪ್ರಧಾನಿಗಳೊಡನೆ ನಿಕಟ ಸಂಪರ್ಕವಿಟ್ಟುಕೊಳ್ಳುವಂತಾಯಿತು. ಭಾರತವು ಕೆಂಪುಚೀನದ ಧೋರಣೆಗಳನ್ನು ಅವಗತಗೊಳಿಸಿದುದರಿಂದಲೇ ಬ್ರಿಟನು ಆ ದೇಶದ ಕಮ್ಯುನಿಸ್ಟ ಸರಕಾರಕ್ಕೆ ಮಾನ್ಯತೆ ನೀಡಿತು. ಇದು ಕಾಮನ್‌ವೆಲ್ತ್ ಸಂಬಂಧದ ಪರೋಕ್ಷ ಪ್ರಭಾವ. ಲಂಡನಿನಲ್ಲಿ ಸೇರುವ ಕಾಮನ್‌ವೆಲ್ತ್ ಪರಿಷತ್ತನ್ನು ಈ ಅಪ್ರತ್ಯಕ್ಷ ಸತ್ಫಲಗಳ ದೃಷ್ಟಿಯಲ್ಲಿ ನೋಡಬೇಕಾಗಿದೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 525/1955.

S. E. P. 236/1956.

ಶ್ರೀ ವಿದ್ಯಾಮಾನ್ಯತೀರ್ಥ ಶ್ರೀ ಪಾದಂಗಳವರು. —ಅರ್ಜಿದಾರ

ಕೃಷ್ಣಮೂರ್ತಿ ಆಚಾರ್ಯ —ಎದ್ರಿ

ಉಡುಪಿ ತಾಲೂಕು ಮುಚಿಪಾಡಿ ಗ್ರಾಮದಲ್ಲಿರುವ ರಂಗ ಆಚಾರ್ಯರ ಮಗ ಕೃಷ್ಣಮೂರ್ತಿ ಆಚಾರ್ಯರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಸದ್ರಿ ವ್ಯವಹರಣೆಯಲ್ಲಿ ಎದ್ರಿಯ ಹಕ್ಕಿನ ಚರಸೊತ್ತುಗಳನ್ನು ಏಲಂ ಮಾಡುವ ಬಗ್ಗೆ ಅರ್ಜಿದಾರರು ದಾಖ್ಲು ಮಾಡಿದ ಏಲಂ ಇಸ್ತಿಹಾರಿನ ಷರತ್ತುಗಳನ್ನು ನಿರ್ಣಯಿಸುವ ಬಗ್ಗೆ ತಾರೀಕು 11—7—56ಕ್ಕೆ ಮೇಲಿನ ಕೋರ್ಟಿನಲ್ಲಿ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ದಿವ್ಸ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N S. Parameshwaraiah,

Advorate fo Ptr.

Date 23—6—56 Coondapoor.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೮-೬-'೫೬	೪೩

ಆಚಾರ್ಯರ ಹಿತವಚನ

ತಮಿಳು ನಾಡಿನಲ್ಲೀಗ ಸಂಚಾರ ಕೈಗೊಂಡು ಭೂದಾನ ಚಳವಳವನ್ನು ಜನಪ್ರಿಯಗೊಳಿಸುತ್ತಿರುವ ಆಚಾರ್ಯ ವಿನೋಬಾ ಭಾವೆಯವರು ಕಳೆದ ವಾರ, ತಮ್ಮ ವೈಶಿಷ್ಟ್ಯಕ್ಕನುಗುಣವಾದ ರೀತಿಯಲ್ಲಿ, ಅತ್ಯಮೂಲ್ಯವಾದ ಉಪದೇಶವನ್ನು ಭೂಮಾಲಕ ವರ್ಗದವರಿಗೆ ನೀಡಿದ್ದಾರೆ; ಅಲ್ಲದೆ, ಭೂಸುಧಾರಣೆಯ ಶಾಸನವನ್ನು ತರಲು ಸರಕಾರವು ವಿಳಂಬಿಸುತ್ತಿರುವ ಬಗ್ಗೆ ಸಹ ಪರೋಕ್ಷವಾಗಿ ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದಾರೆ. ಆಚಾರ್ಯ ಭಾವೆಯವರಿಗನುಸಾರ, ಬಡವರಿಗಾಗಿ ಶ್ರೀಮಂತರು ತಮ್ಮ ಆಸ್ತಿಪಾಸ್ತಿಗಳಲ್ಲಿ ಈಗಲೇ ಒಂದು ಭಾಗವನ್ನು ಸ್ವಪ್ರೇರಣೆಯಿಂದ ಬಿಟ್ಟುಕೊಡದಿದ್ದರೆ, ಮುಂದೆ ಹೆಚ್ಚಿನ ಕಷ್ಟಕ್ಕೆ ಅವರು ಬಲಿಯಾಗಬೇಕಾಗುತ್ತದೆ. ತಮ್ಮನ್ನು ಕಾದಿರುವ ಅಪಾಯವು ತೀರ ಸ್ಪಷ್ಟವಾಗಿ ಗೋಚರಿಸುತ್ತಿದ್ದರೂ ಅದನ್ನು ಗುರುತಿಸದಷ್ಟು ಉದಾಸೀನತೆಯನ್ನು ಭೂಮಾಲಿಕರು ತೋರಿಸುವರಾದರೆ ಅವರು ಕಣ್ಣಿದ್ದೂ ಕುರುಡರೇ ನಿಜ. ಹೀಗೆ ಹೇಳಿ ಆಚಾರ್ಯ ಭಾವೆಯವರು ಜನಸಾಧಾರಣರ ನಾಡಿ ಬಡಿತವನ್ನು ಚೆನ್ನಾಗಿ ಪರೀಕ್ಷಿಸಿದವರು ತಾವಾಗಿದ್ದೇವೆಂಬುದನ್ನು ತೋರ್ಪಡಿಸುತ್ತಾರೆ. ಹೆಚ್ಚುತ್ತಾ ಹೋಗುತ್ತಿರುವ ಕಡು ದಾರಿದ್ರ್ಯದಲ್ಲಿಯೂ ಬಡವರು ಸುಮ್ಮನೆ ಕುಳಿತಿರುತ್ತಾರೆಂದು ನಿರೀಕ್ಷಿಸುವುದು ತಪ್ಪು— ಎಂಬ ಭಾವೆಯವರ ಮಾತು ಭೂಮಾಲಿಕರು ಅವಶ್ಯವಾಗಿ ಗುರುತಿಸಿಕೊಳ್ಳಬೇಕಾದ ಅಪಾಯದ ಕಡೆಗೆ ಸಂಕೇತವನ್ನು ಮಾಡುತ್ತದೆ. ಭಾರತದಲ್ಲಿ ರಕ್ತರಹಿತ ಕ್ರಾಂತಿಯಾಗಬೇಕೆಂದು ನಮ್ಮೆಲ್ಲರ ಮುಖ್ಯವಾಗಿ ಬುದ್ಧಿಜೀವಿಗಳ—ಮಹದಾಸೆ; ಆದರೆ ಬುದ್ಧಿಜೀವಿಗಳ ಸ್ಥಾನದಲ್ಲಿ ದೇಹಜೀವಿಗಳು —ಅಂದರೆ ದೈಹಿಕ ಪರಿಶ್ರಮದಿಂದ ಹೊಟ್ಟೆಗೆ ಹಿಟ್ಟನ್ನು ಕಾಣಿಸುವ ರೈತರು, ಮಜೂರರು—ಕ್ರಾಂತಿಯ ಕಾರ್ಯಕ್ರಮವೊಂದನ್ನು ಹಾಕಿಕೊಳ್ಳುವರಾದರೆ ಅದು ಫ್ರಾನ್ಸಿನ ಅಥವಾ ರಶ್ಯದ ಚಾರಿತ್ರಿಕ ರಕ್ತಕ್ರಾಂತಿಗಿಂತ ಹೆಚ್ಚು ಭಿನ್ನತೆಯನ್ನು ಸ್ವರೂಪದಲ್ಲಿ ವ್ಯಕ್ತಪಡಿಸಲಾರದು. ಫ್ರಾನ್ಸಿನಲ್ಲಿಯೂ ರಶ್ಯದಲ್ಲಿಯೂ ಶ್ರೀಮಂತ ವರ್ಗದ ನಿರ್ಮೂಲಕ್ಕಾಗಿ ನರಬೇಟೆಯಾಡಲಾಯಿತು! ಗುಟ್ಟಾಗಿ, ವೇಷಬದಲಿಸಿ, ದೇಶತ್ಯಾಗ ಮಾಡಿ ಓಡಿ ಹೋಗ ಬಯಸಿದ ಶ್ರೀಮಂತ ವರ್ಗದ ಸದಸ್ಯರನ್ನು ಬೆನ್ನಟ್ಟಿಕೊಂಡು ಹೋಗಿ ಗಿಲೊಟಿನೆಂಬ ಕೊರಳು ಕತ್ತರಿಸುವ ಯಂತ್ರಕ್ಕೆ ಫ್ರಾನ್ಸಿ

ಸಾಮಾನ್ಯರು!) ಬಲಿ ಕೊಟ್ಟರು. ಇಂಥ ದುರಂತ ಸನ್ನಿವೇಶಗಳನ್ನು ನೆನೆದಾಗಲೇ ಮೈ ಜುಮ್ಮೆನ್ನುತ್ತದೆ. ಚರಿತ್ರೆಯ ಈ ಪಾಠಗಳು ಪ್ರತಿಯೊಬ್ಬರೂ ನೆಮ್ಮದಿಯ ಜೀವನವನ್ನು ಶಾಂತ ರೀತಿಯಲ್ಲಿ ನಡೆಯುವಂತೆ ಉಪಾಯ ಕೈಗೊಳ್ಳಬೇಕೆಂಬ ಇಚ್ಛೆಯನ್ನು ತೀವ್ರವಾಗಿಸುತ್ತವೆ. ಫ್ರಾನ್ಸು ಮತ್ತು ರಶ್ಯಗಳಲ್ಲಿ ಶ್ರೀಮಂತ ವರ್ಗವು ಎಷ್ಟು ನಿಂದೆಗೆ ಗುರಿಯಾಯಿತೆಂದರೆ, ಸಮಾಜ ಆ ವರ್ಗಕ್ಕೆ ಇಂದಿಗೂ ಮನ್ನಣೆಯನ್ನು ಕೊಡುತ್ತಿಲ್ಲ. ಇಷ್ಟು ಹೆಚ್ಚಿನ ಕ್ಲೇಶದಾಯಕ ಹಾಗು ದ್ವೇಷಪೂರಿತ ಮನೋಭಾವವನ್ನು ಉಳ್ಳವರ ನಿರಂತರ ಶೋಷಣೆ ಮತ್ತು ದಬ್ಬಾಳಿಕೆಗಳು ಬಡವರಾದ ಜನಸಾಧಾರಣರಲ್ಲಿ ಹುಟ್ಟಿಸಿದವು. ನಮ್ಮ ದೇಶದಲ್ಲಿಯೇ ತೆಲಂಗಾಣದಲ್ಲಿ ೧೯೪೭—೪೮ನೇ ವರ್ಷಗಳ ನಡುವೆ ಏನು ನಡೆಯಿತೆಂಬುದನ್ನು ನಾವು ಯೋಚಿಸಿದರೆ, ಭಾರತದ ಬಡವರು ಶಾಂತ ಪ್ರಕೃತಿಯವರು, ಸಹನಾ ಶೀಲರು ಎಂಬಿತ್ಯಾದಿ ಸಮಾಧಾನದ ಮಾತುಗಳಿಗೇನೂ ಅವಕಾಶ ಸಿಗುವುದಿಲ್ಲ. ಆಚಾರ್ಯ ವಿನೋಬಾಭಾವೆಯವರು ತೆಲಂಗಾಣದಲ್ಲಿನ ಪರಿಸ್ಥಿತಿಯನ್ನು ಪ್ರಸ್ತಾಪಿಸುತ್ತಾ "ನೂರಾರು ಭೂಮಾಲಿಕರು ಆಗ ಕೊಲ್ಲಲ್ಪಟ್ಟರು; ಮನೆಗಳನ್ನು ಬೆಂಕಿಗಾಹುತಿನೀಡಲಾಯಿತು; ಹಸಿವೆ ಮತ್ತು ಬಡತನದಿಂದ ಕಂಗೆಟ್ಟ ಜನರು ಲೂಟಿಮಾಡಿದರು. ಸರಕಾರವು ಸೇನೆಯನ್ನು ಕಳಿಸಿತು; ಐದು ಕೋಟಿ ರೂಪಾಯಿಗಳಷ್ಟು ವೆಚ್ಚದ ಕಾರ್ಯಕ್ರಮಗಳನ್ನೂ ನಿರ್ವಹಿಸಿತು; ಆದರೆ ಇದರಿಂದ ಪ್ರಯೋಜನವಾಗಲಿಲ್ಲ. 'ನಮಗೆ ಭೂಮಿ ಕೊಡಿರಿ' ಎಂದು ಬೇಡುತ್ತಿರುವ ಜನರಿಗಾಗಿ ಅಲ್ಲಿ ನಾನು ಭೂದಾನ ಚಳವಳವನ್ನು ಮೊದಲಾಗಿ ತೊಡಗಿದಂದಿನಿಂದ ಪರಿಸ್ಥಿತಿಯು ಬಹಳ ಉತ್ತಮಗೊಂಡಿದೆ" ಎಂದು ನೆನಪಿಗೆ ತಂದುಕೊಟ್ಟಿದ್ದಾರೆ. ಆದುದರಿಂದ ಭೂಮಾಲಿಕರು ಇನ್ನೂ ನಿದ್ರಾವಸ್ಥೆಯಲ್ಲಿರುವುದು ಸಲ್ಲದು ಎಂದಿದ್ದಾರೆ ಆಚಾರ್ಯ ಭಾವೆ. ಭೂದಾನ ಚಳವಳವು ಪ್ರೇಮಮಯ ವಾತಾವರಣದಲ್ಲಿ ಮನವೊಲಿಸುವಿಕೆಯ ಮೂಲಕ ನಡೆಯುತ್ತದೆ. ತಾನು ಆಸ್ತಿಯನ್ನಷ್ಟೆ ದಾನವಾಗಿ ಪಡೆಯುತ್ತಿಲ್ಲ: ಕೃಷಿಗೆ ಆವಶ್ಯಕವಾದ ಎತ್ತು, ಕೋಣ, ನೇಗಿಲು, ಬೀಜ, ಬಾವಿ ಇತ್ಯಾದಿ ಸಾಧನ ಸಲಕರಣೆಗಳನ್ನೂ ಸಂಪತ್ತಿನಲ್ಲಿ ಒಂದು ಭಾಗವನ್ನೂ ದಾನವಾಗಿ ಪಡೆಯಲು ಮುಂದಾಗಿದ್ದೇನೆ ಎಂದು ಸಹ ಭಾವೆಯವರು ಪ್ರಕಟಪಡಿಸಿ, ಈಗಿನ ಭೂಮಾಲಿಕರು ತನ್ನ ಚಳವಳದಲ್ಲಿ ಸಹಕರಿಸಬೇಕೆಂದು ವಿನಂತಿಸಿದ್ದಾರೆ. ಭೂದಾನ ಚಳವಳದಲ್ಲಿ ಸಹಕರಿಸುವುದರಿಂದ ರಾಷ್ಟ್ರದಲ್ಲಿ ಪ್ರೀತಿಯ ಸಂದೇಶವನ್ನು ಬಲಗೊಳಿಸಿದಂತಾಗುತ್ತದೆ; ಅಹಿಂಸಾತ್ಮಕ ವಾತಾವರಣದಲ್ಲಿ ಕ್ರಾಂತಿಯು ನಡೆಯಲು ಅವಕಾಶವಿತ್ತಂತಾಗುತ್ತದೆ. ಪರಿಸ್ಥಿತಿಯು ತೀರ ಕೈ ಮೀರಿ ಹೋಗುವುದಕ್ಕೆ ಮೊದಲೇ ಜಾಗರೂಕತೆ ವಹಿಸಿದಂತಾಗುತ್ತದೆ ಎಂದು ಮುಂತಾಗಿ ಭಾವೆಯವರು ಮನದಟ್ಟು ಪಡಿಸಿದ್ದಾರೆ. ಭೂಮಿಯ ಸಮಸ್ಯೆಯನ್ನು ರಾಷ್ಟ್ರದ ರೈತರಲ್ಲಿರುವ ಅಸಂತುಷ್ಟಿಯ ನಿವಾರಣೆಗಾಗಿ

ಷ್ಟ್ರದ ಉತ್ಪತ್ತಿಯನ್ನು ಹೆಚ್ಚಿಸಿ, ತನ್ಮೂಲಕ ಜನರ ಬಡತನವನ್ನು ನಿವಾರಿಸುವ ಸಾಮೂಹಿಕ ಕಾರ್ಯಕ್ರಮದ ಅಂಗವಾಗಿಯೂ ಈ ಸಮಸ್ಯೆಯ ಪರಿಹಾರಕ್ಕೆ ನಾವು ಪ್ರಯತ್ನಶೀಲರಾಗಬೇಕು ಎಂದು ವಿನೋಬಾರವರು ನೆನಪಿಗೆ ತಂದುಕೊಟ್ಟಿದ್ದಾರೆ. ಈಗ ಭೂಮಾಲಕರೂ ಅವರ ಭೂಮಿಯನ್ನು ಸಾಗುಮಾಡುತ್ತಿರುವವರೂ ಪರಸ್ಪರ ವಂಚನೆಯಲ್ಲಿಯೇ ನಿರತರಾಗಿದ್ದಾರೆಂಬ ಕಟು ಸತ್ಯದ ಮಾತೂ ಆಚಾರ್ಯರ ಬಾಯಿಯಿಂದ ಹೊರಬಿದ್ದಿದೆ. ತಮ್ಮ ಭೂಮಿಯನ್ನು ಬೇಸಾಯಮಾಡುತ್ತಿರುವವರಿಗೆ ಆದಷ್ಟು ಕಡಿಮೆ ಪ್ರತಿಫಲವನ್ನು ಭೂಮಾಲಕರು ನೀಡುತ್ತಾರೆ. ಇದಕ್ಕೆ ಪ್ರತಿಯಾಗಿ ಸಾಗುವಳಿಮಾಡುವವರು ಆದಷ್ಟು ಮೈಗಳ್ಳತನವನ್ನು ತೋರಿಸುತ್ತಾರೆ ಎಂಬುದೇ ಭಾವೆಯವರ ಅಭಿಪ್ರಾಯ. ಇದರಲ್ಲಿ ಸುಳ್ಳಿನ ಅಂಶವೇ ಇಲ್ಲ - ಭೂಮಾಲಿಕರು ಹೊರಲಾರದ ಹೊರೆ ಎನಿಸುವ ಗೇಣಿಯನ್ನು ಒಕ್ಕಲುಗಳಿಂದ ಪಡೆಯಲು ಪೀಡೆ ಕೊಡುತ್ತಿರುವಕಾರಣ ಒಕ್ಕಲುಗಳಿಗೆ ತಾವು ವರ್ಷವಿಡೀ ಗದ್ದೆಗಳಲ್ಲಿ ದುಡಿದುದಕ್ಕೆ ಮಜೂರಿಯ ಅಂಶವೂ ಸಿಗದೆ ಹೋಗುತ್ತಿರುವುದು ಅನುಭವಸಿದ್ಧವಾದ ವಿಷಯ. ಒಕ್ಕಲುಗಳಿಗೆ ವಹಿಸಿಕೊಡದೆ, ಕೆಲಸದಾಳುಗಳಿಂದ ಬೇಸಾಯಮಾಡಿಸಿದ ಭೂಮಾಲಿಕನ ಆಸ್ತಿ ಅರೆವಾಸಿಯಷ್ಟು ಉತ್ಪತ್ತಿಯನ್ನೂ ಕೊಡುವುದಿಲ್ಲ! ದೇಶದಲ್ಲಿ ಎಲ್ಲಿ ಬೇಸಾಯವು ಸರಿಯಾಗಿ ನಡೆದಿಲ್ಲವೊ, ಎಲ್ಲಿ ಭೂಮಿಯು ಬಂಜರುಬಿದ್ದಿದೆಯೋ —ಅದೆಲ್ಲ ಪ್ರದೇಶ ಭೂಮಾಲಕ ವರ್ಗಕ್ಕೆ ಸೇರಿದುದಾಗಿದೆ ಎಂಬ ಭಾವೆಯವರ ಮಾತನ್ನು ಅಲ್ಲಗಳೆಯಲಾಗುವುದಿಲ್ಲ. ಸ್ವಂತ ಕುಮರಿ ಪ್ರದೇಶಗಳನ್ನು ಪಡೆದುಕೊಂಡ ನಮ್ಮ ಜಿಲ್ಲೆಯ ಕ್ರೈಸ್ತ ಬಾಂಧವರು ಸಂಪನ್ನ ಜೀವನವನ್ನು ನಡೆಸಲು ಸಾಧ್ಯವಾಗುವಷ್ಟು ತತ್ಪರತೆಯನ್ನು ಆ ಕುಮರಿ ಪ್ರದೇಶದ ಕೃಷಿಯಲ್ಲಿ ತೋರಿಸುತ್ತಿರುವುದನ್ನು ನಾವು ನಿತ್ಯವೂ ನೋಡುತ್ತಿದ್ದೇವೆ. ಆದರೆ ಫಲವತ್ತಾದ ಗದ್ದೆಯಲ್ಲಿ ದುಡಿಯುವ ಒಕ್ಕಲು ಮಾತ್ರ ನಿತ್ಯವೂ ಗೋಳಿಡುತ್ತಿದ್ದಾನೆ. ಆತನ ಪರಿಶ್ರಮಕ್ಕೆ ಬೆಲೆ ಇಲ್ಲ; ಆತನು ಪರಿಶ್ರಮಪಟ್ಟರೂ ಅದರ ಪ್ರತಿಫಲ ಆತನಿಗೆ ಸಿಗುವುದಿಲ್ಲವಾದುದರಿಂದ ಪರಿಶ್ರಮಕ್ಕೆ ಪ್ರೋತ್ಸಾಹದಾಯಕವಾದ ವಾತಾವರಣ ಇಲ್ಲಿಲ್ಲ. ಉತ್ಪಾದನೆಯನ್ನು ಹೆಚ್ಚಿಸುವುದು ಮತ್ತು ತನ್ಮೂಲಕ ಸಂಪತ್ತಿನ ಪ್ರಮಾಣವನ್ನು ಅಧಿಕಗೊಳಿಸುವುದು ನಮ್ಮ ಧ್ಯೇಯವಾದುದರಿಂದ ಸರಕಾರವು ಇಲ್ಲಿ ಮಾಡಬೇಕಾದ ಕೆಲಸ ಅಪಾರವಾಗಿದೆ. ಮುಖ್ಯವಾಗಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕೆ ಅವಶ್ಯವಾದ ಪ್ರೋತ್ಸಾಹವನ್ನು ಅದು ನೀಡಬೇಕು: ತಾನು ದುಡಿಯುವ ಭೂಮಿಯು ತನ್ನದು, ಪರರದಲ್ಲ; ತಾನು ಪರಿಶ್ರಮಪಟ್ಟುದಕ್ಕೆ ಸಿಗುವ ಪ್ರತಿಫಲವು ಪರರಿಗೆ ಹೋಗದೆ ತನಗೆಯೇ ಸಿಗುತ್ತದೆ ಎಂಬ ಭಾವನೆಯೂ ನಂಬಿಕೆಯೂ ಕೃಷಿಕರಲ್ಲಿ ಹುಟ್ಟುವಂತೆ ಅದು ಭೂಸುಧಾರಣೆಯ ಶಾಸನವನ್ನು ವಿಳಂಬವಿಲ್ಲದೆ ಜಾರಿಗೆ ತರಬೇಕು. ಆಚಾರ್ಯ ಭಾವೆಯವರು ಭೂದಾನ ಚಳವಳವು ಭೂಸುಧಾರಣೆಯ ಶಾಸನಗಳನ್ನು ವಿ

ಶಾಸನಗಳ ಅವಶ್ಯಕತೆಯನ್ನೆ ಪ್ರತಿಪಾದಿಸುತ್ತಿದೆಯೆಂದೂ ಹೇಳಿದ್ದಾರೆ. ಭೂಸುಧಾರಣೆಯ ಶಾಸನವನ್ನು ರೂಢಿಗೆ ತರುವ ವಿಷಯದಲ್ಲಿ ಇನ್ನು ಸಹ ಹಿಂದೆ ಮುಂದೆ ನೋಡುತ್ತಿರುವ ಸರಕಾರದ ನಿಲುಮೆಯನ್ನು ಅವರು ಖಂಡಿಸಿ ಮಾತನಾಡಿದ್ದಾರೆ: ಈಗಿನ ಸರಕಾರಗಳಲ್ಲಿರುವವರು ಹೆಚ್ಚಾಗಿ ಭೂಮಾಲಿಕರಾಗಿದ್ದಾರೆ; ಅವರು ಭೂಸುಧಾರಣೆಯ ಶಾಸನವನ್ನು ತರುವರೆಂಬ ಮಾತಿನಲ್ಲಿ ವಿಶ್ವಾಸವಿಡುವುದೇ ಕಷ್ಟ ಎಂದೀಗ ಭಾವೆಯವರು ಪ್ರಕಟವಾಗಿ ಹೇಳಿರುವ ಸಂಗತಿಯನ್ನು ಭೂಮಾಲಿಕರಲ್ಲದ ಕೃಷಿಕರು ಎಂದೋ ಮನಸ್ಸಿನಲ್ಲಿಯೇ ತರ್ಕಿಸಿದ್ದರು. ಸರಕಾರವು ತನ್ನವರಿಗೆ "ಹಾನಿ"ಯನ್ನು ಮಾಡುವ ಭೂಸುಧಾರಣೆಯ ಶಾಸನವನ್ನೆ ಮಾಡಲಿಕ್ಕಿಲ್ಲ; ಒಂದು ವೇಳೆ ಮಾಡಿದರೂ ತಮ್ಮ ಆಸ್ತಿಯನ್ನು ತಂತಮ್ಮಲ್ಲಿಯೇ ಹಂಚಿಕೊಳ್ಳಲು ಅಥವಾ ಮಾರಾಟ ಮಾಡಿ ಹಣ ರೂಪದಲ್ಲಿ ಆಸ್ತಿಯ ಪ್ರಯೋಜನವನ್ನು ಸಂಗ್ರಹಿಸಿಡಲು ಧಾರಾಳವಾಗಿ ಸಮಯಾವಕಾಶವಿರುವಂತೆ ವಿಳಂಬವನ್ನು ಸರಕಾರ ಮಾಡುವುದು ನಿಶ್ಚಯ ಎಂಬ ಭಾವೆಯವರ ಮಾತು ಸಹ ಜನ ಸಾಧಾರಣರ ಅನುಮೋದನೆ ಪಡೆಯುತ್ತದೆ. ಭೂಸುಧಾರಣೆಯ ಉದ್ದೇಶವನ್ನು ಹೀಗೆ ವಿಫಲಗೊಳಿಸಿದ ತರುವಾಯ ಜಾರಿಗೆ ಬರಬಹುದಾದ ಶಾಸನವು ಕೇವಲ ಅಣಕವಾಗುತ್ತದೆ— ಭೂಮಾಲಿಕರಿಗೆ "ಪರಿಹಾರ" ಕೊಡುವ ದೊಡ್ಡ ಸಮಸ್ಯೆಯನ್ನೂ ಈ ಶಾಸನ ತಂದೊಡ್ಡುತ್ತದೆ. ಇದು ಪ್ರತಿ ಹಳ್ಳಿಯಲ್ಲೂ ಕಲಹ—ಕೋಲಾಹಲಗಳಿಗೆ ದಾರಿ ಮಾಡಿ ಕೊಡದಿರದು ಎಂದಿದ್ದಾರೆ ಭಾವೆ. ಇವೆಲ್ಲ ಸೂಕ್ಷ್ಮಾವಲೋಕನ ಶಕ್ತಿಯುಳ್ಳ ಪ್ರಾಜ್ಞರಿಗಷ್ಟೇ ಹೊಳೆಯುವ ವಿಷಯಗಳಲ್ಲ; ಸಾಮಾನ್ಯ ಜನರು ಸಹ ಸ್ವಾನುಭವ ಬಲದಿಂದ ಕಂಡುಕೊಳ್ಳಬಹುದಾದ ಸಂಗತಿಗಳಾಗಿವೆ. ನಮ್ಮ ಸರಕಾರಿ ವರ್ತುಲಗಳ ನಿಷ್ಕ್ರಿಯತೆ, ಅವರು ಪ್ರತಿಪಾದಿಸುವ ತತ್ವಗಳಿಗೂ ವ್ಯವಹಾರದಲ್ಲಿ ಅನುಸರಿಸುವ ಕಾರ್ಯಕ್ರಮಗಳಿಗೂ ಇರುವ ತಿಕ್ಕಾಟ ಇತ್ಯಾದಿಗಳು ಸಂದೇಹಾತೀತ ರೀತಿಯಲ್ಲಿ ಸಿದ್ಧವಾಗಿವೆ. ಇದು ಜನತೆಯ ಸಹನೆಯನ್ನು ಕೆಡಿಸಲು ಹೆಚ್ಚು ಸಮಯ ಕಾಯಬೇಕಾಗಿ ಬಾರದು. ಬುದ್ಧಿಶಾಲಿಗಳ ಭರವಸೆಯ ಮಾತುಗಳೆಲ್ಲವೂ ಕೇವಲ ವಂಚನೆ ಎಂದು ದೈಹಿಕ ಪರಿಶ್ರಮಿಗಳ ವರ್ಗವು ಒಮ್ಮೆ ಖಚಿತಪಟ್ಟರೆ ಮತ್ತೆ ಆ ಭಾವನೆಯನ್ನು ಹೋಗಲಾಡಿಸುವ ಯಾವ ಪ್ರಯತ್ನಕ್ಕೂ ಫಲ ದೊರೆಯದು. ಆದುದರಿಂದ ಕೈಮೀರುವ ಮೊದಲೇ ಜನತಾ ಜನಾರ್ಧನನನ್ನು ಸಂತುಷ್ಟಿಗೊಳಿಸಬೇಕು; ಜನರು ರುದ್ರ ಭಯಂಕರರಾಗದಂತೆ ಇನ್ನಾದರೂ ಸೂಕ್ತ ಕ್ರಮ ಕೈಗೊಳ್ಳಲ್ಪಡಬೇಕು. ಭೂಸುಧಾರಣೆಯ ಶಾಸನದ ಕುರಿತು ವಿಶೇಷ ಮುತುವರ್ಜಿಯನ್ನು ವಹಿಸುವುದು ಇಂಥ ಕ್ರಮಗಳಲ್ಲೆಲ್ಲ ಉಲ್ಲೇಖನೀಯವಾದುದಾಗಿದೆ. ಆದರೆ ಚುನಾವಣೆಯ ಬಳಿಕದ ಐದು ವರ್ಷಗಳನ್ನು ಭೂಸುಧಾರಣೆಯ ಶಾಸನ ತರುತ್ತೇವೆಂಬ ಬಾಯಿ ಭರವಸೆಯಿಂದ ಸುಖವಾಗಿ ಕಳೆದಿರುವ ಸರಕಾರ ರಾಜ್ಯ ಪುನಾರಚನೆಯ ಹಾಗು ಭಾವಿ ಚುನಾವಣೆಯ ಹೊಸ್ತಿಲಿನಲ್ಲಿ ಏನನ್ನಾದರೂ ಮಾಡಲು ಹೋಗೀತೇ? ನಮಗೀಗ ವಿಶ್ವಾಸವುಳಿದಿಲ್ಲ; ಜನಸಾಧಾರಣರಿಗಂತೂ ಮೊದಲೇ ನಂಬಿಕೆ ಇರಲಿಲ್ಲ!

ಭೂಮಾಲೀಕರಲ್ಲಿ ವಿಜ್ಞಾಪನೆ

ವಿಶ್ವಶಾಂತಿಯನ್ನು ಘೋಷಿಸುತ್ತಿರುವ ಭಾರತದ ಸರ್ವಾಂಗೀಣ ಉನ್ನತಿ ಅಭಿವೃದ್ಧಿಗೆ ಆಂತರಿಕ ಶಾಂತಿಯೂ ಮುಖ್ಯವಾಗಿರುವುದು. ವ್ಯಕ್ತಿವ್ಯಕ್ತಿಗಳೊಳಗೆ, ವರ್ಗವರ್ಗಗಳೊಳಗೆ ಪರಸ್ಪರ ಅಪನಂಬಿಕೆ, ಅವಿಶ್ವಾಸದಿಂದ ನಿರ್ಮಿತವಾದ ವಾತಾವರಣದಲ್ಲಿ ಶಾಂತಿ ಭಂಗಕರ ದುರ್ಘಟನೆಗಳು ಸಂಭವಿಸುತ್ತಿರುವುದನ್ನು ನಾವು ಲಕ್ಷಿಸಬಹುದು.

ಉದಾಹರಣೆಗಾಗಿ ಭೂಮಾಲೀಕ-ವಕ್ಕಲುಗಳ ಪರಿಸ್ಥಿತಿಯನ್ನು ಪರಿಶೀಲಿಸೋಣ. ಅನೇಕ ಭೂಮಾಲೀಕರು ತಮ್ಮ ಒಕ್ಕಲುಗಳ ಸುಖ ದುಃಖಗಳಲ್ಲಿ ಸಹಭಾಗಿಗಳಾಗಿದ್ದು ನ್ಯಾಯ ಧರ್ಮದಲ್ಲಿ ನಡೆಯುತ್ತಿದ್ದಾರೆ. ಅಂತೆಯೇ ಪಲವಾರು ವಕ್ಕಲುಗಳೂ ಪ್ರಾಮಾಣಿಕತೆಯಿಂದ ತಮ್ಮ ಪಾಲಿನ ಕರ್ತವ್ಯ ನೆರವೇರಿಸುತ ಧನಿಯನ್ನು ಗೌರವಪೂರ್ವಕವಾಗಿ ನೋಡಿಕೊಳ್ಳುತ್ತಿದ್ದಾರೆ. ಆದರೆ ಕೆಲವೇ ಜನ ಭೂಮಾಲೀಕ ವಕ್ಕಲುಗಳ ಬೇಜವಾಬ್ದಾರಿತನದ ದುರ್ನಡತೆಗಳಿಂದ ಘರ್ಷಣೆಯುಂಟಾಗಿ ಇತರ ಧನಿ-ವಕ್ಕಲುಗಳ ಪರಸ್ಪರ ಸೌಜನ್ಯ, ಸ್ನೇಹಾರ್ದತೆಗೂ ಭಂಗವುಂಟಾಗುವ ಪರಿಸ್ಥಿತಿಯನ್ನು ಕಾಣಬಹುದು.

ಇದನ್ನು ತಿದ್ದಲು ಕಾನೂನು ಅಗತ್ಯವೆಂದು ಹೇಳಬಹುದು ಇಂತಹ ಕಾನೂನುಗಳು ನಮ್ಮ ಜಿಲ್ಲೆಗೆ ಬರುವುದೆಂದೂ ಎಲ್ಲರೂ ಬಲ್ಲರು. ಆದರೆ ಯಾವುದೇ ಕಾನೂನಿಗೂ ಒಂದು ಇತಿಮಿತಿ ಇದೆ. ಇರುವ ಕಾನೂನಿನ ಹೇಗೆ ತಪ್ಪಿಸಿಕೊಳ್ಳುವುದೆಂಬುವನ್ನು ಕಂಡುಕೊಳ್ಳಬಲ್ಲ ಜಾಣಕ್ಕರು ನಮ್ಮಲ್ಲಿ ಇದ್ದೇ ಇರುವರು. ಆದುದರಿಂದ ಧನಿವಕ್ಕಲುಗಳ ಸಂಬಂಧದಲ್ಲಿ ಅಭಿವೃದ್ಧಿಯುಂಟಾಗಬೇಕಾದರೆ ಮೊದಲು ಅವರೊಳಗಿನ ಅಪನಂಬಿಕೆ ಹೋಗಬೇಕು. ಇಂತಹ ಒಂದು ವಾತಾವರಣವನ್ನುಂಟುಮಾಡಲು ಭಾರತ ಸೇವಕಸಮಾಜದ ಪರವಾಗಿ ಭೂಮಾಲಕರಿಂದ ಬರಹಮೂಲಕದ ಆಶ್ವಾಸನೆಯನ್ನು ಬಯಸುತ್ತೇವೆ. ನಾವು ಆಶ್ವಾಸನೆಯನ್ನು ಕೇಳುತ್ತಿರುವ ಭೂಮಾಲಕರು ಇಷ್ಟರತನಕ ಪ್ರಾಮಾಣಿಕ ರೀತಿಯಲ್ಲಿ ವರ್ತಿಸುತ್ತಿರಲಿಲ್ಲವೆಂಬ ಅಪನಂಬಿಕೆ ನಮ್ಮಲ್ಲಿದೆ ಎಂದು ಯಾರೂ ...ಸಬಾರದಾಗಿ ವಿನಂತಿ. ಅವರಲ್ಲಿರುವ ಉ...ಶವು ಕಲ್ಮಷರಹಿತವಾಗಿದೆ ಎಂಬುದನ್ನು ...ಸಮಸ್ತರೂ, ವಕ್ಕಲುಗಳೂ ತಿಳಿಯ...; ತನ್ಮೂಲಕ ಪರೋಕ್ಷ ಅಥವಾ ಅಪ...ಕ್ಷವಾಗಿರಬಹುದಾದ ಎಂತಹದೇ ಅನಿ...ಸಕ್ಕೆ ಎಡೆ ಇಲ್ಲದಂತಾಗಬೇಕೆಂಬುದೇ ...ಗುರಿಯಾಗಿರುತ್ತದೆ.

...ನಾವು ಅಪೇಕ್ಷಿಸುವ ಆಶ್ವಾಸನೆಗಳು ಮೂ... ಒಂದನೆಯದಾಗಿ ಗೇಣಿಕೊಡುತ್ತಿರುವ ...ಲುಗಳನ್ನು ವಕ್ಕಲುತನದಿಂದ ಎಬ್ಬಿಸು...ಲ್ಲ; ಎರಡನೆಯದಾಗಿ ಕೊಟ್ಟ ಗೇಣಿಗೆ ...ವಾರ್ಥ ರಶೀದಿ ಕೊಡುವೆವು; ಮೂರನೆಯ...ಗಿ ಒಮ್ಮೆ ನಿರ್ಣಯಿಸಿದ ಗೇಣಿಯನ್ನು ಏರಿ...ವುದಿಲ್ಲ ಎಂದು ಇದೇನೂ ಹೊಸವಿಷಯ...ಕಾರ್ಯಾಚರಣೆಗೆ ವಿರುದ್ಧವಾದುದೂ ...ಭೂಮಾಲಕರ ಈ ರೀತಿಯ ವೈಯುಕ್ತಿ... ಆಶ್ವಾಸನೆ ನಮ್ಮಲ್ಲಿದ್ದರೆ, ಅವರ ವಕ್ಕ...ಗಳ ಸಂರಕ್ಷಣೆಯಾಯಿತೆಂಬ ಸಮಾಧಾನ...ಟಾಗಿ ವಾತಾವರಣವು ಉತ್ತಮಗೊಳ್ಳು...ದು.

ಭೂಮಾಲಿಕರು ನಮ್ಮೊಂದಿಗೆ ಸಹಕರಿಸ...ಕಾಗಿ ವಿನಂತಿ.

ಟಿ. ಎ. ಪೈ. ಎಂ. ಎಲ್. ಎ.

ಅಧ್ಯಕ್ಷ, ಭಾರತ ಸೇವಕಸಮಾಜ.

ಉಡುಪಿ ತಾ. 10-6-56.

[ನಮ್ಮ ಪ್ರತಿನಿಧಿಗಳಾದ ಶ್ರೀ ಪೈಗಳು ...ಳಿನಂತೆ ಮಾಡಿರುವ ವಿನಂತಿಯನ್ನೂ ಅದ...ಲ್ಲಿರುವ ಸದುದ್ದೇಶವನ್ನೂ ಸ್ವಾಗತಿಸಿ ಇಷ್ಟ...ವರೆಗೆ ಈ ಕೆಳಗೆ ಹೆಸರಿಸಿದ ಭೂಮಾಲಿಕ...ಮಹನೀಯರು ತಮ್ಮ ವಕ್ಕಲುಗಳ ಸಂಗತಿ...ಯಲ್ಲಿ ಶ್ರೀ ಪೈಗಳು ಅಪೇಕ್ಷಿಸಿದ ಆಶ್ವಾಸನೆ...ಯನ್ನು ನೀಡಿರುತ್ತಾರೆಂದು ತಿಳಿಸಲು ನಮಗೆ ...ಂತೋಷವಾಗುತ್ತದೆ. ಉಳಿದ ಭೂಮಾಲಕ ...ಮಹಾಜನರು ಸಹ ತಮ್ಮ ಒಪ್ಪಿಗೆಯನ್ನು ...ಸಂತೋಷದಿಂದ ಕೊಡುವರೆಂದು ನಾವು ...ನಿರೀಕ್ಷಿಸುತ್ತೇವೆ.— **ಸಂ. ನ.**]

1, ಪರ್ಯಾಯ ಶ್ರೀ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀ ಪಾದಂಗಳವರು.

2, ಶ್ರೀ ಸೋದೆ ವಾದಿರಾಜ ಮಠದ ಶ್ರೀ ವಿಶ್ವೋತ್ತಮತೀರ್ಥ ಶ್ರೀ ಪಾದಂಗಳವರು.

3, ಶ್ರೀ ಪುತ್ತಿಗೆ ಶ್ರೀ ಜ್ಞಾನೇಂದ್ರತೀರ್ಥ ಶ್ರೀ ಪಾದಂಗಳವರು.

4, ಶ್ರೀ ವಿ. ಜಗಜ್ಜೀವನ ಸೆಟ್ಟಿ, ಲೇಂಡ್ ಲೋರ್ಡ್, ಕುಮ್ರಗೋಡು, ಬ್ರಹ್ಮಾವರ.

5, ಶ್ರೀ ಬಿ. ಪದ್ಮನಾಭ ಪೈ, ಮರ್ಚೆಂಟ್ ಲೇಂಡ್ ಲೋರ್ಡ್, ಬ್ರಹ್ಮಾವರ.

6, ಡಾ. ಬಿ. ಬಿ. ಸೆಟ್ಟಿ, ಎಂ. ಬಿ ಬಿ. ಎಸ್. ಲೇಂಡ್ ಲೋರ್ಡ್, ಉಡುಪಿ.

7, ಶ್ರೀ ಆರೂರು ಲಕ್ಷ್ಮೀನಾರಾಯಣ ರಾವ್, ಎಡ್ವೊಕೇಟ್ ಲೇಂಡ್ ಲೋರ್ಡ್, ಉಡುಪಿ.

8, ಶ್ರೀ ಎಚ್. ವಾಮನ ಎನ್. ಕಾಮತ್, ಲೇಂಡ್ ಲೋರ್ಡ್, ಕರ್ಜೆ ಹೊಸೂರು.

ಮರಾಠ ಕಾಂಗ್ರೆಸಿಗರಿಗೆ ವರಿಷ್ಠರ ಉಪದೇಶ

ಶಿಸ್ತು, ಸಂಯಮದಿಂದ ವರ್ತಿಸಲು ಬಿನ್ನಹ

ಶ್ರೀ ಹಿರೆ ಮತ್ತು ಶ್ರೀಕುಂಠಿಯವರು ತಮ್ಮ ಸರಕಾರಿ ಸ್ಥಾನಗಳಿಗೆ ರಾಜೀನಾಮೆಯನ್ನಿತ್ತು ಜನರಿಗೆ ಕಾಂಗ್ರೆಸಿನ ನಿಲುವೆಯನ್ನು ತಿಳಿಸಿ ಹೇಳಲು ಅನುಮತಿಯನ್ನು ಅಪೇಕ್ಷಿಸಿ, ಕಾಂಗ್ರೆಸಿನ ವರಿಷ್ಠರನ್ನು ಹೊಸದೆಹಲಿಯಲ್ಲಿ ಕಂಡು ಮಾತನಾಡಿದರು. ಆದರೆ ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರೂ ಗೃಹಮಂತ್ರಿ ಪಂಡಿತ ಪಂತರೂ ದೇಶದ ವಿಶಾಲ ಹಿತದೃಷ್ಟಿಯಿಂದ ರಾಜೀನಾಮೆಯನ್ನು ಸ್ವೀಕರಿಸುವುದು ಸಾಧ್ಯವಿಲ್ಲ ಎಂದು ಖಂಡ ತುಂಡವಾಗಿ ಹೇಳಿದ್ದಾರೆ.

"ಸಂಯಮವಿರಲಿ"

ಆದುದರಿಂದ ಇವರಿಬ್ಬರೂ ಕಾಂಗ್ರೆಸಿನ ಶಿಸ್ತಿಗೆ ಬದ್ಧರಾಗಿ ಸಂಯಮದಿಂದ ವರ್ತಿಸಬೇಕಾಗಿ ಬಂದಿದೆ. ಕಾಂಗ್ರೆಸಿನ ವರಿಷ್ಠರು ಶಿಸ್ತು ಮತ್ತು ಸಂಯಮದ ಪಾಠಗಳನ್ನು ವಿದರ್ಭದ ಕಾಂಗ್ರೆಸಿಗರಿಂದ ಕಲಿತುಕೊಳ್ಳಿರೆಂದು ಮರಾಠ ಕಾಂಗ್ರೆಸಿಗರಿಗೆ ಹೇಳಿದ್ದಾರೆ. ವಿಧೇಯ ಸೈನಿಕರಂತೆ ಕಾಂಗ್ರೆಸಿಗರು ವರ್ತಿಸಬೇಕು; ವಿದರ್ಭದ ಕಾಂಗ್ರೆಸಿಗರು ಮೊದಲು ಮಹಾರಾಷ್ಟ್ರದೊಡನೆ ಸೇರಲು ಮನಸ್ಸಿಲ್ಲದವರಾಗಿದ್ದರೂ ಕಾಂಗ್ರೆಸಿನ ಶಿಸ್ತಿಗೆ ತಲೆಬಾಗಿ, ವರಿಷ್ಠರ ಹಿತೋಪದೇಶವನ್ನು ಮನ್ನಿಸಿ ತಮ್ಮ ಸಮ್ಮತಿಯನ್ನು ನೀಡಿರುವಂತೆ, ಮುಂಬಯಿ ವಿಷಯದಲ್ಲಿ ಮಹಾರಾಷ್ಟ್ರದ ಕಾಂಗ್ರೆಸಿಗರೂ ಸದ್ಯಕ್ಕೆ ಸಂಯಮದಿಂದಿರಬೇಕು ಎಂದು ವರಿಷ್ಠರ ಅಭಿಪ್ರಾಯ.

ದೇಶಮುಖರ ರಾಜೀನಾಮೆ

ಅರ್ಥ ಸಚಿವ ಸ್ಥಾನಕ್ಕೆ ರಾಜೀನಾಮೆಯನ್ನು ಕೊಡಬಯಸಿದ ಶ್ರೀ ದೇಶಮುಖರ ವಿಷಯದಲ್ಲಿ ಮಾತ್ರ ರಿಯಾಯತಿಯನ್ನೇಕೆ ಕೊಡಲಾಯಿತು?—ಈ ಪ್ರಶ್ನೆಗೆ ವರಿಷ್ಠರೇನೂ ಸಮಾಧಾನ ಹೇಳಲು ಹೋಗಿಲ್ಲ. ಆದರೆ ನಾವು ಈ ಪ್ರಕಾರ ಊಹಿಸಬಹುದು: ದೇಶಮುಖರು ಹಿಂದೆಯೂ ಎರಡು ಸಲ ರಾಜೀನಾಮೆಯ ಬೆದರಿಕೆಯನ್ನು ಬೇರೆ ಕಾರಣಗಳಿಗಾಗಿ ಹಾಕಿದ್ದರು. ಪದೇ ಪದೇ ರಾಜೀನಾಮೆ ಕೊಡುವ ಉತ್ಸಾಹಾತಿರೇಕ ಪ್ರದರ್ಶಿಸುವವರ ಮುಂದೆ ನೆಹರುಗಳ ಉಪದೇಶ ಪರಿಣಾಮಕಾರಿಯಾಗಲಿಲ್ಲ. ಅಲ್ಲದೆ, ಮುಂದಿನ ಮಹಾರಾಷ್ಟ್ರಕ್ಕೆ ದೇಶಮುಖರಂಥ ದಕ್ಷರ ಆವಶ್ಯಕತೆ ಇದ್ದಿರಲೂ ಸಾಕು.

ಮನಸ್ಸಾಕ್ಷಿಯ ಬಂಧನ

ತಾವು ಮನಸ್ಸಾಕ್ಷಿಯ ವಾಣಿಯನ್ನು ಮೀರಲಾರದೆ ರಾಜೀನಾಮೆ ಕೊಟ್ಟಿರುವೆವೆಂದೂ ಆದರೆ ಈ ಮಾದರಿಯನ್ನು ಇತರರು ಅನುಕರಿಸಲು ಹೋಗಲಾಗದೆಂದೂ ಶ್ರೀ ದೇಶಮುಖರು ಹೇಳಿದ್ದಾರೆ. ಸರಕಾರದೊಡನೆ ಅಸಹಕಾರ ಹೂಡುವುದು ತನ್ನ ಇಚ್ಛೆಯಲ್ಲ; ಆದರೆ ಮಂತ್ರಿಮಂಡಳವು ಕೈಗೊಳ್ಳಬಹುದಾದ ನಿರ್ಣಯವು ತನ್ನ ಆತ್ಮವಿಶ್ವಾಸಕ್ಕೆ ಘಾತಕವಾಗಿದ್ದಾಗಲೂ ಅದಕ್ಕೆ ಪ್ರಕಟ ಒಪ್ಪಿಗೆಯನ್ನು ಕೊಡುವಂಥ ಪರಿಸ್ಥಿತಿಯಲ್ಲಿ ತಾನಿರಬಾರದು. ಇದೇ ತನ್ನ ರಾಜೀನಾಮೆಯ ಮೂಲಕಾರಣ ಎಂದು ಶ್ರೀ ದೇಶಮುಖರು ವಿವರಿಸಿದ್ದಾರೆ.

ಪುಂಡಾಟಿಕೆ ಬೇಡ

ಮುಂಬಯಿಯ ಕುರಿತು ಕಾಂಗ್ರೆಸಿನ ವರಿಷ್ಠರೂ ಪ್ರಧಾನಿ ನೆಹರುಗಳೂ ವಹಿಸಿರುವ ನಿಲುವು ಸುಸಂಗತವಾದುದೆಂದು ನಾಗಪುರ ಹಾಗು ವಿದರ್ಭ ಕಾಂಗ್ರೆಸುಗಳು ಹೇಳಿವೆ; ಮತ್ತು ಮರಾಠರು ಚಳವಳದ ಮನೋಭಾವವನ್ನು ಸದ್ಯಕ್ಕೆ ತ್ಯಜಿಸಬೇಕೆಂದಿವೆ. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರೂ ಶ್ರೀ ಶಂಕರರಾವ ದೇವರಂಥ ಧುರೀಣರೂ ಮರಾಠರು ಉದ್ರೇಕಕ್ಕೊಳಗಾಗಬಾರದೆಂದು ಹೇಳಿದ್ದಾರೆ. ಘಟನಾತ್ಮಕ ಹಾಗು ಪ್ರಜಾಸತ್ತಾತ್ಮಕ ರೀತಿಯಲ್ಲಿ ವರ್ತಿಸಬೇಕೆಂಬುದೇ ಅವರ ಬಿನ್ನಹ.

ಪ್ರಧಾನಿಗಳ ಬಿನ್ನಹ

ಪ್ರಧಾನಿ ನೆಹರುಗಳಾದರೂ ವಿದೇಶ ಪ್ರವಾಸಕ್ಕೆ ಹೊರಡುವ ಮುನ್ನ ಮುಂಬಯಿಯ ಕುರಿತು ಪುಂಡುವಾದಕ್ಕೆ ಹೋಗಬಾರದೆಂದು ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡುತ್ತ ಕೇಳಿ ಕೊಂಡಿದ್ದಾರೆ. ಶ್ರೀ ಗಾಡ್ಗೀಳರು ಮಾತ್ರ ತೀವ್ರ ಅಸಂತುಷ್ಟರಾದಂತಿದೆ. ಮುಂಬಯಿಯಲ್ಲಿ ಗಲಭೆಗಳಾದ ದೆಸೆಯಿಂದಲೇ ಐದು ವರ್ಷಗಳವರೆಗೆ ಈ ಪ್ರಶ್ನೆಯನ್ನು ಮುಂದೂಡಲು ನಿರ್ಧರಿಸಬೇಕಾಯಿತು ಎಂಬ ನೆಹರುಗಳ ಮಾತಿನತ್ತ ಸಂಕೇತಿಸುತ್ತಾ ಗಾಡ್ಗೀಳರು ಇಂಥ ಗಲಭೆಗಳನ್ನು ಮಹಾರಾಷ್ಟ್ರೇತರರೇ ಪ್ರಚೋದಿಸಿದರು, ಮತ್ತು ಸಂಘಟಿಸಿದರು ಎಂದು ಹೇಳಿಕೆ ನೀಡಿದ್ದಾರೆ.

ಅಣು ಬಾಂಬುಗಳು

ಪ್ರಧಾನಿಗಳ, ಅಣು ಬಾಂಬುಗಳ ಸ್ಫೋಟನ ಪ್ರಯೋಗಗಳನ್ನು ಇನ್ನಾದರೂ ನಿಲ್ಲಿಸಬೇಕೆಂದು ಮಹಾರಾಷ್ಟ್ರಗಳನ್ನು ವಿನಂತಿಸಿಕೊಂಡಿದ್ದಾರೆ. ಪ್ರಖ್ಯಾತ ತಜ್ಞರೊಬ್ಬರು ೧೯೭೦ನೇ ಇಸವಿಯ ಹೊತ್ತಿಗೆ ಈಗಿನವರ ಇಮ್ಮಡಿ ಪ್ರಮಾಣದಲ್ಲಿ ಅಣು ಶಸ್ತ್ರಗಳ ಸ್ಫೋಟನ ನಡೆಯಬಹುದೆಂದೂ ಇದರಿಂದ ಮಾನವನವಿನಾಶವು ತೀರ ಹತ್ತಿರವಾಗುವುದೆಂದೂ ಹೇಳಿದ್ದಾರೆ. ಶ್ರೀ. ರಾಜಾಜಿಯವರು ಸಹ ಭಾರತವು ತಟಸ್ಥರಾಷ್ಟ್ರಗಳ ಅಭಿಷಿಕ್ತ ಧುರೀಣನೆಂಬ ನೆಲೆಯಿಂದ ಅಣುಶಸ್ತ್ರಗಳ ಪ್ರಯೋಗ ನಿರ್ಬಂಧಕ್ಕೆ ಪ್ರಯತ್ನ ಮಾಡಬೇಕೆಂದು ಪುನರುಚ್ಚರಿಸಿದ್ದಾರೆ.

ವಿಷಪೂರಿತ ಮಳೆ

ಮೊಂಟಿಬೆಲ್ಲೊ ಪ್ರದೇಶದಲ್ಲಿ ಬ್ರಿಟನು ಈಚೆಗೆ ನಡೆಸಿದ ಅಣುಬಾಂಬಿನ ಸ್ಫೋಟನದ ದೆಸೆಯಿಂದ ವಿಕಿರಣಶೀಲ ದುಷ್ಪರಿಣಾಮವುಳ್ಳ ಮಳೆಯು ಆಸ್ಟ್ರೇಲಿಯದ ಕ್ವೀನ್ಸ್‌ಲೇಂಡ್ ಪ್ರದೇಶದಲ್ಲಿ ಬಿದ್ದ ಸುದ್ದಿ ಇದೆ. ಈ ಮಳೆಯು ಜಮೀನವನ್ನು ವಿಶೇಷ ಹಾನಿಗೊಳಪಡಿಸದಾದರೂ ಈ ಮಳೆ ನೀರನ್ನು ಹೊಟ್ಟೆಗೆ ಸೇವಿಸುವುದರಿಂದ ಅಪಾಯವಾಗುವುದೆಂದು ತಜ್ಞರು ಎಚ್ಚರಿಕೆಯನ್ನಿತ್ತಿದ್ದಾರೆ. ಆಸ್ಟ್ರೇಲಿಯದ ಜನಾಭಿಪ್ರಾಯವು ಈಗ ಅಣುಶಸ್ತ್ರಗಳ ಸ್ಫೋಟನಕ್ಕೆ ವಿರುದ್ಧವಾಗಿ ಸಂಘಟಿತವಾಗುತ್ತಿದೆ. ಆದರೆ ರಾಜಕೀಯ ಮುಖ್ಯರು ಇನ್ನೂ ಪರಿಸ್ಥಿತಿಯ ಗಾಂಭೀರ್ಯವನ್ನು ಮನವರಿಕೆಮಾಡಿಕೊಂಡಿಲ್ಲ.

ಕಾಶ್ಮೀರ ಸಮಸ್ಯೆ

ಪಾಕಿಸ್ತಾನವು ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಕಾಶ್ಮೀರ ಪ್ರಶ್ನೆಯನ್ನೆತ್ತಲು ಅತ್ಯುತ್ಸಾಹದಿಂದಿದೆ. ಆದರೆ ಪ್ರಧಾನಿ ನೆಹರುಗಳು ಈ ಪ್ರಶ್ನೆಯನ್ನು ಸಮ್ಮೇಳನವು ವಿಚಾರಿಸಬಾರದೆಂದು ಹೇಳಿದ್ದಾರೆ. ಕಾಶ್ಮೀರದ ಪ್ರಧಾನಿ ಬಕ್ಷಿಯವರು ಪಾಕಿಸ್ತಾನದ ವಶವಿರುವ ಕಾಶ್ಮೀರ ಪ್ರದೇಶದಲ್ಲಿ ಜನಾಭಿಪ್ರಾಯವನ್ನು ಕೇಳಿದರೆ, ಆ ಪ್ರದೇಶವೂ ಭಾರತದೊಡನೆ ಸೇರ್ಪಡೆ ಹೊಂದುವುದು ನಿಶ್ಚಯ ಎಂಬ ವಿಶ್ವಾಸವನ್ನು ಪ್ರಕಟಿಸಿದ್ದಾರೆ.

ಹೊಸ ನಾಣ್ಯಗಳು

ದಶಮಾಂಶ ನಾಣ್ಯಗಳನ್ನು ಜನಪ್ರಿಯಗೊಳಿಸುವ ಮತ್ತು ಅವುಗಳ ಬಳಕೆಯಲ್ಲಿ ಜನರನ್ನು ಪರಿಣತರಾಗಿ ಮಾಡುವ ಕುರಿತು ಕೇಂದ್ರ ಸರಕಾರವು ಕಳೆದ ವಾರ ವಿಶೇಷ ಪರ್ಯಾಲೋಚನೆ ನಡೆಸಿತು. ಗ್ರಾಮೀಣ ಪ್ರದೇಶಗಳಲ್ಲಿಯೂ ಪ್ರಾಥಮಿಕ ಶಾಲೆಗಳಲ್ಲಿಯೂ ಹೊಸ ನಾಣ್ಯಗಳ ಪ್ರದರ್ಶನವನ್ನೇರ್ಪಡಿಸಿ ಅವುಗಳ ಉಪಯೋಗದ ತಿಳಿವಳಿಕೆಯನ್ನು ಕೊಡುವ ವ್ಯವಸ್ಥೆಯಾಗಬೇಕೆಂದು ತೀರ್ಮಾನಿಸಲಾಗಿದೆ. ಈಗಿನ ನಾಣ್ಯಗಳಿಗೂ ಹೊಸ ನಾಣ್ಯಗಳಿಗೂ ಇರುವ ವಿನಿಮಯ ಸಂಬಂಧವನ್ನು ವಿವರಿಸುವ ಕೋಷ್ಟಕಗಳನ್ನು ತಯಾರಿಸಿ ಧಾರಾಳವಾಗಿ ಹಂಚಲು ನಿರ್ಧರಿಸಲಾಗಿದೆ. ಈ ಕೋಷ್ಟಕಗಳನ್ನು ಖಾಸಗಿ ಪ್ರಕಾಶಕರು ಸಹ ಪ್ರಕಟಿಸಬಹುದು.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: **ಉಡುಪಿ**, (ದ. ಭಾರತ)

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್, ಲಿಮಿಟೆಡ್

ಪ್ರಕಟಣೆ

ದಿನಾಂಕ 17—5—1956ರಂದು ಬೇಂಕಿನ ಶಾಖೆಯೊಂದು ಅದೋನಿಯಲ್ಲಿಯೂ, ದಿನಾಂಕ 21—5—1956ರಂದು ಇತರ 2 ಶಾಖೆಗಳು ಹೈದರಾಬಾದು ಮತ್ತು ಸಿಕಂದರಾಬಾದು ನಗರಗಳಲ್ಲಿಯೂ ತೆರೆಯಲ್ಪಟ್ಟು, ಎಲ್ಲಾ ವಿಧದ ಆಧುನಿಕ ಬೇಂಕಿಂಗ್ ವಹಿವಾಟುಗಳನ್ನು ನಡೆಸಲಾರಂಭಿಸಿವೆ.

ವಿ. ಆರ್. ಕಾಮತ್, ಬಿ. ಎ., ಎಲ್‌ಎಲ್. ಬಿ.,

ಜನರಲ್ ಮೆನೇಜರ್.

THE CANARA BANKING CORPORATION, LIMITED.

ಮದ್ರಾಸು

ಹೊಟೆಲ್ ದಾಸ ಪ್ರಕಾಶ ದಾಸ ಮಂದಿರದಲ್ಲಿ—ಮದ್ರಾಸ್ ಮಾಧ್ವ ಸಂಘದ ಕಡೆಯಿಂದ ತಾ. 18ರಲ್ಲು ಸಂಜೆ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಶ್ರೀಪಾದಂಗಳವರಿಗೆ ಅನ್ಯರನೇಕರು ನೆರೆದ ಸಭೆಯಲ್ಲಿ ಮಾನಪತ್ರ ಸಮರ್ಪಿಸಲಾಯಿತು. ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ವ್ಯಾಸರಾಯ ಶಾಸ್ತ್ರಿಗಳು ಉಭಯ ಶ್ರೀಗಳವರನ್ನು ಸ್ವಾಗತಿಸಿದರು. ಮಾಧ್ವ ಸಂಘದ ಅಧ್ಯಕ್ಷ ಶ್ರೀ ಕೆ. ಸೀತಾರಾಮರಾಯರು ಶ್ರೀ ಶ್ರೀಗಳವರಿಗೆ ಫಲ ವಸ್ತು ಸಹಿತ ಪಾದಕಾಣಿಕೆ ಸಮರ್ಪಿಸಿದರು. ಮಾಧ್ವ ಸಂಘದ ಕಾರ್ಯದರ್ಶಿ ಶ್ರೀ ಪಿ. ರಾಘವೇಂದ್ರರಾಯರು ಮಾನಪತ್ರವನ್ನೋದಿ ಶ್ರೀ ದ್ವಾರಕಾನಾಥ ಶ್ರೀಗಳವರಿಗೆ ಸಮರ್ಪಿಸಿದರು. ಶ್ರೀಗಳವರು ಮಾನಪತ್ರಕ್ಕೆ ಉತ್ತರವೀಯುತ್ತಾ, ಶ್ರೀ ಸೀತಾರಾಮರಾಯರು ತಮ್ಮ ದಾಸಪ್ರಕಾಶದಲ್ಲಿ ಶಾರೀರಿಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಲ್ಲದೆ 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' ಎಂಬ ವಚನವನ್ನು ಕುರಿತು ಧಾರ್ಮಿಕ ವಾತಾವರಣವನ್ನು ಕಲ್ಪಿಸಿ ಜನರ ಪ್ರಜಾತಂತ್ರದ ಏಳಿಗೆಗಾಗಿ ಸಹಕಾರ ಮಾಡುತ್ತಿರುವುದು ಶ್ಲಾಘನೀಯವೆಂದರು.

ಲೋಕ ಸಭಾ ಸ್ಪೀಕರರಿಗೆ ಸತ್ಕಾರ—ಇನೇ ತಾ. 16ರಲ್ಲು ಲೋಕ ಸಭೆಯ ಸ್ಪೀಕರರಾದ ಶ್ರೀ ಅನಂತಶಯನಂ ಅಯ್ಯಂಗಾರ್, ಅವರಿಗೆ ದಾಸ ಪ್ರಕಾಶದಲ್ಲಿ ಅದರ ಒಡೆಯರಾದ ಶ್ರೀ ಕೆ. ಸೀತಾರಾಮರಾಯರು ಸತ್ಕಾರ ಕೂಟವನ್ನೇರ್ಪಡಿಸಿ ಗೌರವಿಸಿದರು.

ಭೋಜನಾನಂತರ ಶ್ರೀ ಸೀತಾರಾಮರಾಯರು ಮುಖ್ಯ ಅತಿಥಿಯನ್ನೂ ಇತರರನ್ನೂ ಸ್ವಾಗತಿಸಿದರು.

ಶ್ರೀ ಅಯ್ಯಂಗಾರರು ಉತ್ತರವೀಯುತ್ತಾ, ಊಟ, ಉಪಾಹಾರ, ವಸತಿಗಳನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸಿದ ಶ್ರೀ ಸೀತಾರಾಮರಾಯರಉದ್ಯಮವನ್ನು ಶ್ಲಾಘಿಸಿ, ದೆಹಲಿಯಲ್ಲಿಯೂ ಇಂತಹ ಅವಶ್ಯಕತೆಯನ್ನು ಪೂರೈಸುವುದಾದರೆ ತಾನು ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು. ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 128/1956.

ಕಮಲ ಕೂಡಾ —ವಾದಿರು

ಮತ್ತು

ಅತುಮು ಪೂಜಾರ್ತಿ ಕೂಡಾ –ಪ್ರತಿವಾದಿರು

ಇವರೊಳಗೆ

1. ಅತುಮು ಪೂಜಾರ್ತಿ, 2. ಜಲಜ ಪೂಜಾರ್ತಿ, ರುಕ್ಮ ಪೂಜಾರ್ತಿ ಮಕ್ಕಳು.

4. ಭವಾನಿ, 5 ಜಗನ್ನಾಥ. 1ನೇ ಪ್ರತಿವಾದಿಳ ಮಕ್ಕಳು.

7. ಜಯಶೀಲ, 8. ರಘುವೀರ, 9. ಜಯಂತಿ. 2ನೇ ಪ್ರತಿವಾದಿ ಮಕ್ಕಳು. ಉಡುಪಿ ತಾಲೂಕು ಕಿದಿಯೂರು ಗ್ರಾಮದಲ್ಲಿರುವವರು. —ಇವರಿಗೆ,

ದಾವಾ ಆಸ್ತಿಗಳ ಸ್ವಾಧೀನತೆ, ಹುಟ್ಟುವಳಿ ವಗೈರೆ ಪ್ಲೇಂಟು ನಿವೃತ್ತಿಗೋಸ್ಕರ ವಾದಿರು ಮಾಡಿರುವ ಈ ದಾವೆಯು ತಾ. 9-7-1956 ಕ್ಕೆ ಪೋಲೆ ನೆಸರುಕಾಣಿಸಿರುವ ಪ್ರತಿವಾದಿರಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ತಾರೀಕು 9-7-1956ನೇ ದಿವ್ಸ ಬೆಳಿಗ್ಗೆ ಹತ್ತು ಗಂಟೆಗೆ ಸದ್ರಿ ಪ್ರತಿವಾದಿರು ಸ್ವತಹಾ ವ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉಜರಿಸಲಿಕ್ಕೆ ತಪ್ಪಿದ್ರೆ ಈ ದಾವೆಯನ್ನು ಸದ್ರಿಯವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವದು.

V. R. Kidyur.
Advocate for Plffs.

ಉಡುಪಿ ತಾರೀಕು 22 ಜೂನು 1956.



೨೫೦೦ನೆಯ ವರ್ಷದ ಬುದ್ಧನ ಪರಿನಿರ್ವಾಣ ಸಮಾರಂಭದಲ್ಲಿ, ಹೈದರಾಬಾದ್ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಬಿ ರಾಮಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ಹೈದರಾಬಾದ್‌ನಲ್ಲಿ, ಹಳೆಯ ರೆಸಿಡೆನ್ಸಿ ಮೈದಾನದಲ್ಲಿ, ಇತ್ತೀಚೆಗೆ ಸಾರ್ವಜನಿಕ ಸಭೆಯೊಂದನ್ನ ನಡೆಸಲಾಯಿತು. ಮುಖ್ಯ ಮಂತ್ರಿಗಳ ಎಡಗಡೆಯಲ್ಲಿ ನಿಂತಿರುವ ತೆಲುಗು ಕವಿಗಳಾದ ಶ್ರೀ ದಾಶರಥಿಯವರು ಈ ಸಮಾರಂಭಕ್ಕಾಗಿ ರಚಿಸಲಾದ ಸಂಸ್ಕೃತ ಹಾಗೂ ತೆಲುಗು ಪದ್ಯಗಳನ್ನು ಪಠಿಸುತ್ತಿರುವರು. ಅಜಂತ ಗುಹೆಗಳ ಬೋಧಿಸತ್ವ ಪದ್ಮಪಾಣಿಯ ಪೂರ್ಣಾಕೃತಿಯ ಪ್ರತಿಕೃತಿಯನ್ನು ಹಿಂಭಾಗದಲ್ಲಿ ಕಾಣಬಹುದು.

ಶಿರ್ವ— ಸ್ಥಳೀಯ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕರೂ ಇವರ ಅಂಕಿತದಲ್ಲಿರುವ ಶಾಲೆಗಳ ಅಧ್ಯಾಪಕರೂ ತಾ 7ರಂದು ಸಭೆಗೂಡಿ ನಿವೃತ್ತರಾಗಲಿರುವ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರಿಗೆ ವಿದಾಯ ಸತ್ಕಾರವನ್ನಿತ್ತರು. ಶ್ರೀ ಯು. ಎಸ್. ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಜಯರಾಮ ಸೆಟ್ಟರು ಸ್ವಾಗತ ಭಾಷಣಮಾಡಿದರು. ಶ್ರೀ ಅಣ್ಣಯ್ಯ ಹೆಗ್ಡೆಯವರು ಮಾನಪತ್ರವನ್ನಿತ್ತರು. ಶ್ರೀ ಕೆ. ಜೆ. ಬಲ್ಲಾಳರು ಬೆಳ್ಳಿಯ ಸರಸ್ವತಿ ವಿಗ್ರಹವನ್ನು ಪಾರಿತೋಷವಿತ್ತರು. ಸಭಿಕರು ಮುಖ್ಯ ಅತಿಥಿಯ ಕುರಿತು ಕಾಲೋಚಿತ ಮಾತುಗಳನ್ನಾಡಿದರು.

ಮೂಲ್ಕಿ— ಸ್ಥಳೀಯ ಉಪಾಧ್ಯಾಯ ಕೇಂದ್ರದ ಪತಿಯಿಂದ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ ಮತ್ತು ಅಪರ ಪರ್ಸನಲ್ ಅಸಿಸ್ಟಂಟ್ ಶ್ರೀ ಟಿ. ಎಲ್. ರಾಯರಿಗೆ ಶ್ರೀ ವೈ. ಗೋಪಾಲನವರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರವೀಯಲಾಯಿತು. ಸಂಘದ ಕಾರ್ಯದರ್ಶಿಗಳು ಸ್ವಾಗತ ಮಾತುಗಳನ್ನಾಡಿದರು. ಮೂಲ್ಕಿ ಕೇಂದ್ರಕ್ಕೆ ಸಂಬಂಧಿಸಿದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಅತಿಥಿಗಳಿಗೆ ಪುಷ್ಪಾಹಾರವಿತ್ತರು. ಶ್ರೀಗಳಾದ ಕೆ. ಎಲ್ಲಪ್ಪ ಗೋಪಾಲಕೃಷ್ಣ, ಶ್ಯಾಮರಾಯ ಸೆಟ್ಟಿ ಮತ್ತು ಭೋಜರಾಯರು ಸಂದರ್ಭೋಚಿತ ಭಾಷಣವಿತ್ತರು ಅತಿಥಿಗಳು ಬುದ್ಧಿವಾದ ರೂಪದಲ್ಲಿ ಮಾತನಾಡಿದರು. ಉಪಾಹಾರಾದಿ ಕಾರ್ಯಕ್ರಮಗಳಿಂದ ಸಮಾರಂಭ ಸಂಗವಾಯಿತು.

ಸ್ಥಳೀಯ ಯೂನಿಯನ್ ಕ್ಲಬ್ಬಿನ 41ನೇ ವರ್ಷದ ವರ್ಧಂತ್ಯುತ್ಸವ ಹಾಗೂ ದಿವಂಗತ ಡಾ. ಬೋಳ ಶ್ಯಾಮರಾಯರ ಜನ್ಮದಿನಾಚರಣೆಯೂ ತಾ 16ರಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ, ಭಾಷಣಗಳಾದಬಳಿಕ ಕ್ಲಬ್ಬಿನ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಎಮ್. ಆರ್. ಎಚ್. ಪೂಂಜ (ಅಧ್ಯಕ್ಷ), ಡಾ. ಎಮ್ ಆರ್ ಸೆಟ್ಟಿ (ಉಪಾಧ್ಯಕ್ಷ), ಯು. ಉಮೇಶರಾವ್ (ಕೋಶಾಧಿಕಾರಿ), ಜಿ. ಎಸ್. ಮೂಲ್ಕಿ (ಕಾರ್ಯದರ್ಶಿ), ಎಮ್ ಎಚ್. ರಾಮ (ಜತೆಕಾರ್ಯದರ್ಶಿ), ಬಿ. ಪುಂಡಲೀಕ ಕಾಮತ್ (ಪುಸ್ತಕಾಲಯದ ಅಧಿಕಾರಿ) ಆರಿಸಲ್ಪಟ್ಟರು.

ಕಡಿಯಾಳಿ— ಕುಂಜಿಬೆಟ್ಟು ಕಡಿಯಾಳಿ ಹಾ. ಎ. ಶಾಲೆಯಲ್ಲಿ, ರಾತ್ರಿ ವಿದ್ಯಾಭ್ಯಾಸದ ಏರ್ಪಾಡು ಜುಲಾಯಿ 1ರಂದ ಆರಂಭ

...ಕ್ಷೆಗೆ ವಿದ್ಯಾರ್ಥಿಗಳನ್ನು ತಯಾರಿಸುವುದಲ್ಲದೆ. ಕೆಳತರಗತಿಗಳನ್ನು ತೆರೆಯಲಾಗುವುದು. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಶಾಲಾ ಮುಖ್ಯೋಪಾಧ್ಯಾಯರನ್ನು ವಿಚಾರಿಸಬಹುದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪುತ್ತೂರು— ಸ್ಥಳೀಯ ಬೋರ್ಡ್ ಹೈಸ್ಕೂಲಿನ ನಿವೃತ್ತ ಕನ್ನಡ ಪಂಡಿತರೂ, ಪ್ರಸಿದ್ಧ ಸಾಹಿತಿಗಳೂ ಆದ ಶ್ರೀ ಕೆ. ಶಂಭು ಶರ್ಮರಿಗೆ ಕೇಂದ್ರ ಸರಕಾರದ ವಿದ್ಯಾಖಾತೆಯವರು ತಿಂಗಳೊಂದರ ರೂಪಾಯಿ 75ರಂತೆ ಕಳದ ಮೇ ತಿಂಗಳಿಂದ ಒಂದು ವರ್ಷದ ತನಕ ಧನಸಹಾಯವಿತ್ತು, ಅವರ ಅಪಾರ ಸಾಹಿತ್ಯ ವ್ಯವಸಾಯ ಹೆಚ್ಚಿಸಲು ನೆರವಾಗಿದ್ದಾರೆ. ಶ್ರೀ ಶರ್ಮರು ಕೆಲವು ವರ್ಷಗಳ ಹಿಂದೆ ಲೋರಿ ಅಪಘಡಕ್ಕೆ ಸಿಲುಕಿ ಕಾಲೊಂದನ್ನು ಕಳಕೊಂಡು ತುಂಬಾ ಕಷ್ಟಕೀಡಾಗಿರುವರು.

ಕಾಸರಗೋಡು— ಈ ಸರ್ಕಲಿನ ಸಹಕಾರಿ ಸಂಘಗಳ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಕೆ. ಪಿ. ನರಸಿಂಗರಾಯರು ತಾ. 16 ರಲ್ಲು ಪಾಣೆಮಂಗಳೂರು ಗ್ರಾಮಾಂತರ ವಸತಿಗೃಹ ನಿರ್ಮಾಣ ಸಹಕಾರಿ ಸಂಘವನ್ನು ಉದ್ಘಾಟಿಸುತ್ತಾ ಸಂಘದ ಸದಸ್ಯರಿಗೆ ಮನೆ ಕಟ್ಟಲು ರೂ. 5000 ವರೆಗಿನ ಸಾಲ ದೊರೆಯುವುದೆಂದು ಹೇಳಿದರು. ಆಡಳಿತ ಮಂಡಳಿಯ ಸದಸ್ಯರಾಗಿ ಶ್ರೀಗಳಾದ ಎಸ್. ಉಪೇಂದ್ರ ನಾಯ್ಕ (ಅಧ್ಯಕ್ಷ), ಪಿ. ರಾಮಚಂದ್ರ ಶೆಣೈ (ಉಪಾಧ್ಯಕ್ಷ) ಎಸ್. ಕೇಶವ ಕುಡ್ವ (ಕಾರ್ಯದರ್ಶಿ), ಮತ್ತು ಪಿ. ಕೇಶವ ಪೈ ಹಾಗೂ ಡಾ. ಎಸ್. ಜಿ. ಶರ್ಮರು ಆರಿಸಲ್ಪಟ್ಟರು.

ಕಾಸರಗೋಡಿನ ಭವಿಷ್ಯದ ಕುರಿತು ಕೊನೆಯ ತೀರ್ಮಾನದ ಬ. ಮುಂದಿನ ತಿಂಗಳ ತಾ. 2ರಲ್ಲು ಜತೆ ಪರಿಶೀಲನಾ ಸಮಿತಿಯು ದಿಲ್ಲಿಯಲ್ಲಿ ಸೇರಲಿದ್ದು ಆ ಕಾಲಕ್ಕೆ ಶ್ರೀ ಕೆ. ಆರ್. ಕಾರಂತರ ನೇತೃತ್ವದಲ್ಲಿ ಶ್ರೀ ಎಮ್. ಉಮೇಶರಾಯರೇ ಮೊದಲಾದವರ ಶಿಷ್ಟ ಮಂಡಳವು ಸಮಿತಿಯನ್ನು ಭೇಟಿಯಾಗಲಿರುವರು.

ಕಾರ್ಕಳ— ಹೈದರಾಬಾದಿನಲ್ಲಿ ಔಷಧಿ ತಯಾರಿಕಾ ಕಾರ್ಖಾನೆಯಲ್ಲಿ ಮೇಲ್ತರಗತಿಯ ಹುದ್ದೆಯಲ್ಲಿದ್ದು ಕೆಲವರುಷಗಳಿಂದ ಅಸೌಖ್ಯದಿಂದಿದ್ದ ಶ್ರೀ ಬಿ. ವಿಠಲದಾಸ ಹೆಗ್ಡೆ ಬಿ. ಎಸ್. ಸಿ. ಫಾರ್ಮಸಿ (ಶ್ರೀ ಬಡಗಬೆಟ್ಟು ಕೃಷ್ಣಯ್ಯ ಹೆಗ್ಡೆರ ಪುತ್ರ) ಇವರುಇದೇ ತಾ. 16ರಲ್ಲು ಆಕಸ್ಮಿಕವಾಗಿ ನಿಧನಹೊಂದಿದರೆಂ

...ರು ಸುಮಾರು 35 ವರ್ಷ ಪ್ರಾಯದ ತರುಣರು. ಉತ್ತಮ ಗುಣನಡತೆಯಿದ್ದು ಜನಾನುರಾಗ ಗಳಿಸಿದ್ದರು. ಇವರ ದುಃಖೀಕುಟುಂಬದೊಡನೆ ನಾವು ಸಹ ಸಂತಾಪಪಡುತ್ತೇವೆ.

ಶ್ರೀ ಕುಕ್ಕಾಲು ಗಣಪಯ್ಯ ಶೆಟ್ಟರು ನಿರ್ದೋಷಿಗಳು— ಶ್ರೀ ಕುಕ್ಕಾಲ ಗಣಪಯ್ಯ ಸೆಟ್ಟಿ ಮತ್ತಿತರರ ಮೇಲೆ ಶ್ರೀ ಕುಕ್ಕಾಲು ನರಸಿಂಹಾಚಾರ್ಯರು ಕೆಲಸಮಯದ ಹಿಂದೆ ದಾಖಲುಮಾಡಿದ ಫಿರ್ಯಾದಿ ಉಡುಪಿ ಒಂದನೆ ದರ್ಜೆಯ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ತನಿಖೆಯಾಗಿ ಅದು ನಿರಾಧಾರವೆಂದು ತಳ್ಳಿಹಾಕಲಾಗಿತ್ತು. ಶ್ರೀ ಆಚಾರ್ಯರು ಪುನಹ ರಿವಿಜನ್ ಅರ್ಜಿ ಮಾಡಿದುದೂ ತನಿಖೆಯಾದ ತಾ 18ರಲ್ಲು ಮಂಗಳೂರಿನ ಸೆಶ್ಶನ್ಸ್ ಕೋರ್ಟಿನಲ್ಲಿ ಕೂಡಾ ಶ್ರೀ ಸೆಟ್ಟರು ಹಾಗೂ ಇತರರು ನಿರ್ದೋಷಿಗಳೆಂದು ತೀರ್ಮಾನಿಸಲ್ಪಟ್ಟು ರಿವಿಜನ್ ಅರ್ಜಿ ಅಲ್ಲಿಯೂ ತಳ್ಳಿಹಾಕಲಾಯಿತು.

ಮೂಡಬಿದ್ರೆ— ಸ್ಥಳೀಯ ಜೈನ್ ಹೈಸ್ಕೂಲಿನ ಶಾಲಾ ಮುಂದಾಳು ಸ್ಥಾನಕ್ಕೆ ಶ್ರೀ ಪರೇರಾಮ ಪ್ರಭುಗಳೂ, ಶಾಲಾ ಪಾರ್ಲಿಮೆಂಟ್ ಸಭಾಪತಿಯಾಗಿ ಶ್ರೀ ಶಾಂತಾರಾಮ ಪ್ರಭುಗಳೂ ಅವಿರೋಧವಾಗಿ ಆರಿಸಲ್ಪಟ್ಟರು.

ಕೋಟೆಕಾರ್:— ಉಳ್ಳಾಲ ಪಂಚಾಯತಬೋರ್ಡಿನ ನೇತೃತ್ವದಲ್ಲಿ ಕೋಟೆಕಾರಿನಲ್ಲಿ ಸಮಾಜವಿಕಾಸಯೋಜನೆಯನ್ವಯ ನಿರ್ಮಿಸಲಾದ ವನಿತಾ ಸಮಾಜಮಂದಿರದ ಶಂಕುಸ್ಥಾಪನಾ ಕಾರ್ಯವನ್ನು ತಾ. 15ರಲ್ಲಿ ಸಮಾಜವಿಕಾಸಯೋಜನಾಧಿಕಾರಿ ಎಚ್. ನರಸಿಂಹನವರು ನೆರವೇರಿಸಿದರು. ಶ್ರೀ ಎ. ಕೃಷ್ಣ ಸೆಟ್ಟರು ಸ್ವಾಗತಮಾತುಗಳನ್ನಾಡಿದರು. ಸಭಿಕರ ಭಾಷಣವಾದ ಮೇಲೆ ಕಾರ್ಯದರ್ಶಿನಿ ಶ್ರೀಮತಿ ಗಿರಿಜಮ್ಮನವರು ವಂದನೆಗಳನ್ನರ್ಪಿಸಿದರು.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ನವಯುಗ ಪ್ರೆಸ್ ಉಡುಪಿ

ಮಂಗಳೂರು

ಡಾ. ಗೋಪಾಲಕೃಷ್ಣ ರಾಯರಿಗೆ ಬೀಳ್ಕೊಡುಗೆ ಸತ್ಕಾರ— 'ಕಲಿಯುಗ' ವಾರಪತ್ರಿಕೆಯ ಸಂಪಾದಕ ಹಾಗೂ ಕರ್ನಾಟಕ ಆಯುರ್ವೇದ ಮಹಾ ಮಂಡಲದ ಅಧ್ಯಕ್ಷ ಡಾ. ಗೋಪಾಲಕೃಷ್ಣ ರಾಯರು ಮಂಗಳೂರಿನಿಂದ ಸಧ್ಯವೇ ಬೆಂಗಳೂರಿಗೆ ಹೋಗಲಿರುವುದರಿಂದ ಅವರಿಗೆ ಮಂಗಳೂರು ಪತ್ರಿಕೋದ್ಯೋಗಿ ಸಂಘದವರು ಶ್ರೀ ಕೃಷ್ಣಭವನದಲ್ಲಿ ವಿದಾಯಸತ್ಕಾರವನ್ನಿತ್ತು ಗೌರವಿಸಿದರು. ವೈದ್ಯ ಗುರು ಎಮ್. ಆರ್. ಭಟ್ಟರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಆಚಾರ್ಯರು ಸ್ವಾಗತಭಾಷಣ ಮಾಡಿದರು. ಶ್ರೀಗಳಾದ ಎಚ್. ಭೀಮರಾವ್, ಎಮ್. ಜನಾರ್ಧನ, ಬಿ. ಎಮ್. ಇದಿನಬ್ಬ, ಮನಮೋಹನ ಕಾಮತ್, ತಿರುಮಲೇಶ್ವರ ಭಟ್ ಟಿ. ಸದಾಶಿವ ರಾವ್ ಮೊದಲಾದವರು ಡಾ. ರಾಯರ ಸಾಹಿತ್ಯಸೇವೆಯನ್ನು ಪ್ರಶಂಸಿಸಿ ಮಾತನಾಡಿದರು. ಮುಖ್ಯ ಅತಿಥಿಯು ತಕ್ಕ ಉತ್ತರವಿತ್ತ ಬಳಿಕ ಅಧ್ಯಕ್ಷ ಭಾಷಣವಾಯಿತು. ಶ್ರೀ ಕೆ. ಎಸ್. ಉಪಾಧ್ಯಾಯರು ಧನ್ಯವಾದಗಳನ್ನಿತ್ತರು.

ಶ್ರೀ ಕೆ. ಸಂಜೀವ ಭಟ್ಟರಿಗೆ ಸತ್ಕಾರ— ದ. ಕ. ಜಿಲ್ಲಾ ಲೋಕಲ್ ಲ್ಯಾಬ್ರೆಟರಿ ಅಫೀಸಿಯ ಅಧ್ಯಕ್ಷ ಶ್ರೀ ಎಮ್. ಎಸ್. ನಿಕಾಂಬರರಾಯರ ಅಧ್ಯಕ್ಷತೆಯಲ್ಲಿ ಅವರ ಕಾರ್ಯದರ್ಶಿಪದದಿಂದ ನಿವೃತ್ತರಾಗುವ ಶ್ರೀ ಕೆ. ಸಂಜೀವ ಭಟ್ಟರಿಗೆ ಪುಸ್ತಕಾಲಯದ ಲೈಬ್ರೆರಿಯನ್‌ಗಳವರು ಸತ್ಕಾರವನ್ನಿತ್ತು ಗೌರವಿಸಿದರು. ಶ್ರೀಗಳಾದ ಕೆ. ಗೋಪಾಲಕೃಷ್ಣ ಶೆಣೈ, ಸಿ. ಕಮಲಾಕ್ಷ ಕಾಮತ್ ಮೊದಲಾದವರು ಶ್ರೀ ಭಟ್ಟರ ಕುರಿತು ಸಂದರ್ಭೋಚಿತ ಮಾತುಗಳನ್ನಾಡಿದರು.

ಭಾರತ–ರಶ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ— ತಾ. 22ರಲ್ಲಿ ಎಸ್. ಸಿ. ಸಿ. ಸಿ. ಬೇಂಕಿನ ಸಭಾಂಗಣದಲ್ಲಿ ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯೊಂದು ಜರಗಿತು. ಡಾ. ಎಮ್. ಉಮೇಶ ರಾಯರು ಸ್ವಾಗತಭಾಷಣ ಮಾಡಿದರು. ಡಾ. ಎಮ್. ಎಸ್. ಶಾಸ್ತ್ರಿಗಳು, ಭಾರತ–ರಶ್ಯಾ ಸಾಂಸ್ಕೃತಿಕ ಸಂಘವು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟ ನಂತರ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ಸಂಘಕ್ಕೆ ಸಾರ್ವಜನಿಕರ ಸಹಕಾರವನ್ನು ಅಪೇಕ್ಷಿಸಿದರು. ಸಭಾಧ್ಯಕ್ಷ ಬಾಳಿಗರು ಮಾತನಾಡುತ್ತಾ ಸಾಂಸ್ಕೃತಿಕ ಸಂಬಂಧ ಸಂಘಗಳು ಶಾಂತಿ ಸ್ಥಾಪನೆಗೆ ತುಂಬಾ ಉಪಯುಕ್ತ ಸೇವೆಯನ್ನು ನೀಡಬಲ್ಲವು ಎಂದರು.

ಮದ್ರಾಸು ವಿಶ್ವವಿದ್ಯಾಲಯದವರು— ಮೂರು ವರುಷಗಳ ಡಿಗ್ರಿ ಪರೀಕ್ಷೆ ಮತ್ತು ಆ ಮೊದಲಿನ ಒಂದು ವರ್ಷದ ಶಿಕ್ಷಣವೆಂದು ಮಾಡಿದ ಬದಲಾವಣೆಯನ್ನು ದ. ಕ. ಜಿಲ್ಲೆಯ ಕಾಲೇಜುಗಳಲ್ಲಿ ಜ್ಯಾರಿಗೆ ತರಬಾರದೆನ್ನುವ ನಿರ್ಣಯವು ತಾ. 18ರಲ್ಲಿ ಎಸ್. ಸಿ. ಸಿ. ಬೇಂಕ್ ವಠಾರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸ್ವೀಕೃತವಾಯಿತು. ಶ್ರೀ ಎಮ್. ಎಸ್. ನಿಕಾಂಬರರಾಯರು ಅಧ್ಯಕ್ಷತೆವಹಿಸಿದ ಈ ಸಭೆಯಲ್ಲಿ ಶ್ರೀಗಳಾದ ಬಿ. ವಿ. ಬಾಳಿಗ, ಕೆ. ಆರ್. ಆಚಾರ್, ಬಿ. ಮಂಡ್ಯ ಹೆಗ್ಡೆ, ಎಸ್. ನರಸಪ್ಪಯ್ಯ, ಯು. ಭವಾನಿರಾವ್, ಬಿ. ಭುಜಂಗ ರಾವ್, ಕೆ. ಪಿ. ಮುಕುಂದ ಪ್ರಭು ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ನಂತರ ಆರಂಭವಾಗಿ ಶ್ರೀಗಳಾದ ಬಿ. ವಿ. ಬಾಳಿಗ, ಎಸ್. ನರಸಪ್ಪಯ್ಯ, ಕೆ. ಆರ್. ಆಚಾರ್, ಹರಿ ಶೆಣೈ, ಎಚ್. ಜಿ. ಹಂದೆ ಮತ್ತು ನಿಕಾಂಬರರಾಯರಿರುವ ಕಮಿಟಿಯೊಂದು ರಚಿಸಲ್ಪಟ್ಟಿತು.

ಮದ್ರಾಸು ಸುಂಟರಗಾಳಿ ಸಹಾಯಕ ನಿಧಿಯು— ಬಗ್ಗೆ 1955ರಲ್ಲಿ ಸ್ಥಾಪಿಸಲಾದ ಜಿಲ್ಲಾ ಮತ್ತು ತಾಲೂಕು ಕಮಿಟಿಗಳನ್ನು ಕೊನೆಗೊಳಿಸಬೇಕಾಗಿ ಮದ್ರಾಸು ಸರಕಾರದ ಹುಕುಮು ಬಂದಿರುವುದು. ಈ ಜಿಲ್ಲೆಯಲ್ಲಿ ರೂ. 10673—12—9 ನಗದಿ ನಿಂದಲೂ ಹಂಚ್ಚು ಬಟ್ಟೆ ಮೊದಲಾದುವುಗಳ ಕೂಡಾ ಸಂಗ್ರಹವಾಗಿತ್ತು ಎಂದು ಜಿಲ್ಲಾ ಕಲೆಕ್ಟರರು ಪ್ರಕಟಣೆ ಹೊರಡಿಸಿದ್ದಾರೆ.

ವನಮಹೋತ್ಸವ ಪೂರ್ವ ಸಿದ್ಧತೆ— ಜುಲ್ಯಾ ತಿಂಗಳ ಆರಂಭದಿಂದ ಆಚರಿಸಲಾಗುವ ವನಮಹೋತ್ಸವವನ್ನು ಈ ಜಿಲ್ಲೆಯಲ್ಲಿ ಎಂದಿಗಿಂತಲೂ ಹೆಚ್ಚು ಗುಣತಃ ಉತ್ಸಾಹದಿಂದ ಆಚರಿಸಿ ಅಧಿಕಾಧಿಕ ಸಂಖ್ಯೆಯಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮ ಕೈಕೊಂಡು ಹಿಂದಿನ ದಾಖಲೆಯನ್ನು ಕಾಪಾಡಿಕೊಂಡುಬರುವಂತೆ ಸರ್ವರೂ ಕಾರ್ಯಸಕ್ತರಾಗಬೇಕೆಂದು ಜಿಲ್ಲಾ ಕಲೆಕ್ಟರರ ಜಾಹೀರು ವಿನಂತಿಯೊಂದು ಹೊರಟಿದೆ.

ಜಿಲ್ಲಾ ರಾಜಕೀಯ ಪರಿಷತ್ತು— ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಾ. 17ರಲ್ಲಿ ಡಾ. ಯು. ಪಿ. ಮಲ್ಯ ತದನಂತರ ಶ್ರೀ ಕೆ. ಆರ್. ಆಚಾರ್ಯರ ಆ ಮೇಲೆ ಶ್ರೀ ಎಫ್. ಎಕ್ಸ್. ಡಿ. ಪಿಂಟೋರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬರುವ ಅಕ್ಟೋಬರ ಅಂತ್ಯದೊಳಗೆ ದ. ಕ. ಜಿಲ್ಲಾ ರಾಜಕೀಯ ಪರಿಷತ್ತನ್ನು ಜರಗಿಸಬೇಕೆಂದೂ ಅದರ ಅಂಗವಾಗಿ ದ್ವಿತೀಯ ಪ್ರಧಾನ ಪಂಚವಾರ್ಷಿಕ ಯೋಜನಾ ಸಂಬಂಧದ ವಿಚಾರಗೋಷ್ಠಿ ಮೊದಲಾದುವುಗಳ ವ್ಯವಸ್ಥೆ ಮಾಡಬೇಕೆಂದೂ ತೀರ್ಮಾನವಾಯಿತು. ಜಿಲ್ಲೆಯ ರಾಜಕೀಯ ಸಂಕ್ಷಿಪ್ತವರದಿ ಪಟ್ಟಿಯೊಂದನ್ನು ತಯಾರಿಸಿ ಕೂಡಲೇ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ಕಳುಹಿಸಲು ಶ್ರೀಗಳಾದ ಜೆ. ಕೆ. ಶೆಟ್ಟಿ, ಭೋಜರಾವ್ ಜೋಗಿರಾವ್, ಎಸ್. ಉಪೇಂದ್ರ ರಾಯಕ್, ಎಚ್. ಕೆ. ತಿಂಗಳಾಯ ಮತ್ತು ಡಾ. ಯು. ಪಿ. ಮಲ್ಯರಿಗೆ ಅಧಿಕಾರನೀಯಲಾಯಿತು. ಮಂಗಳೂರಲ್ಲಿ ರಾಷ್ಟ್ರೀಯ ಮಜೂರ ಸಂಘದ ಶಾಖೆಯನ್ನು ತೆರೆಯುವುದು ಅಗತ್ಯವೆಂದು ಸಭೆಯ ಅಭಿಪ್ರಾಯವಾಯಿತು. ಈ ಜಿಲ್ಲೆಯಲ್ಲಿ ಈಗ ಮಳೆಗಾಲವಾದುದರಿಂದ ಹೊಸ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಅವಧಿಯನ್ನು ಸಪ್ಟೆಂಬರ ಕೊನೆಯ ವರೆಗೆ ವೃದ್ಧಿಪಡಿಸಬೇಕೆಂದು ಸಭೆಯ ತೀರ್ಮಾನವಾಯಿತು. ಪ್ರತಿ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರದೇಶದಲ್ಲಿ ರೂ. 20,000 ಜನ ಸಂಖ್ಯೆಗೆ ಒಂದೊಂದು ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸುವ ಕುರಿತು ಸರ್ಕಲ್ ಕಾಂಗ್ರೆಸ್ ಸಮಿತಿಗಳಿಂದ ಸೂಚನೆ ಪಡೆಯಬೇಕೆಂಬ ನಿರ್ಣಯವಾಯಿತು.

ಕುಮಾರ ಜಯಪ್ರಕಾಶ

(ವಿಜಯಲಕ್ಷ್ಮಿ ಗಾರ್ಡನಿನ ಮ್ಯಾನೇಜರ್ ಶ್ರೀ ಎಮ್. ಅಕ್ಕಣ್ಣ, ಅವರ ಅಳಿಯ)

ಈತನ ಎಂಟನೆ ವರ್ಷದ ಹುಟ್ಟುಹಬ್ಬವು ತಾ. 22—6—56ರಂದು ವಿಜಯಲಕ್ಷ್ಮಿ ಗಾರ್ಡನಿನ ಕುಟೀರದಲ್ಲಿ ಗೆಳೆಯ ಸಭಾಭಾಗಿಗಳ ನೇತರ ಕೂಡುವಿಕೆಯಿಂದ ಆಚರಿಸಲ್ಪಟ್ಟಿತು. ಈತನು ಮಂಗಳೂರು ಗಣಪತಿ ಬುನಾದಿ ಶಾಲೆಯಲ್ಲಿ ಎರಡನೆ ತರಗತಿಯಲ್ಲಿ ಓದುತ್ತಿರುವನು.

ಪೋಲೀಸು ಕುಟುಂಬದವರ ಶ್ರೇಯೋಭಿವೃದ್ಧಿ ಕೇಂದ್ರ ಕಟ್ಟಡದ ಉದ್ಘಾಟನೆ— ಮಂಗಳೂರಲ್ಲಿ ಪೋಲೀಸು ಕುಟುಂಬದವರ ಶ್ರೇಯೋಭಿವೃದ್ಧಿ ಕೇಂದ್ರಕ್ಕಾಗಿ ಕಟ್ಟಿಸಿದ ಹೊಸ ಕಟ್ಟಡದ ಉದ್ಘಾಟನೆಯನ್ನು ತಾ. 19ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್ ಅವರು ನೆರವೇರಿಸುತ್ತಾ, ಸ್ವತಂತ್ರ ಭಾರತದಲ್ಲಿ ಪೋಲೀಸು ಮತ್ತು ಜನತೆಯೊಳಗಿನ ಪರಸ್ಪರ ಸೌಹಾರ್ದ ಸಹಕಾರ ಬೆಳೆಯುತ್ತಿರುವ ಈ ಶುಭ ಮುಹೂರ್ತದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಯನ್ನಾಯ ಈ ನೂತನ ಭವನವು ಅಸ್ತಿತ್ವಕ್ಕೆ ಬಂದುದು ಸಂತೋಷಕರವೆಂದರು. ಆರಂಭದಲ್ಲಿ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ ಶ್ರೀ ಎಸ್. ಕೃಷ್ಣ ಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು.

ರೈಲ್ವೆಯಲ್ಲಿ ಪ್ರವಾಸ ರಿಯಾಯತಿ ಟಿಕೇಟುಗಳು

ಭಾರತ ಸರಕಾರದ ರೈಲ್ವೆ ಖಾತೆಯ ಮಂತ್ರಿಗಳು 1956–57ರ ಆಯವ್ಯಯ ಅಂದಾಜನ್ನು ಮಂಡಿಸುವಾಗ ತಿಳಿಸಿದಂತೆ, ಒಂದು, ಎರಡು ಮತ್ತು ಮೂರನೆಯ ತರಗತಿ ಪ್ರಯಾಣಿಕರಿಗೆ 1956ರ ಜುಲ್ಯಾ 15ರಿಂದ ಸಪ್ಟೆಂಬರ್ 15ರ ವರೆಗೆ ಎಲ್ಲಾ ರೈಲ್ವೆಗಳಲ್ಲಿ ಯೂ ಒಂದೂವರೆ ಟಿಕೆಟ್ ದರದಲ್ಲಿ ರಿಯಾಯತಿ ರಿಟರ್ನ ಟಿಕೆಟ್‌ಗಳನ್ನು ಕೊಡಲು ನಿರ್ಧರಿಸಲಾಗಿದೆ.

ರಿಟರ್ನ ಟಿಕೆಟ್‌ಗಳನ್ನು 300 ಮೈಲುಗಳಿಗೂ ಹೆಚ್ಚು ದೂರವಿರುವ ರೈಲು ನಿಲ್ದಾಣಗಳಿಗೆ ಮಾತ್ರ ಕೊಡಲಾಗುವುದು. ಹಿಂತಿರುಗಿ ಬರುವ ಪ್ರಯಾಣದಲ್ಲಿ ಮಧ್ಯೆ ಮಧ್ಯೆ ಇಳಿಯಲು ಅವಕಾಶವಿರುವುದಿಲ್ಲ. ಆದರೆ ಹೋಗುವ ಪ್ರಯಾಣದಲ್ಲಿ ಒಂದೇ ಪ್ರಯಾಣದ ಟಿಕೆಟ್‌ಗಳಿಗೆ ಅನ್ವಯಿಸುವ ಸಾಮಾನ್ಯ ನಿಯಮಗಳಿಗನುಸಾರವಾಗಿ ಇಳಿಯುವುದಕ್ಕೆ ಅವಕಾಶವಿರುತ್ತದೆ.

ಪ್ರಯಾಣಿಕರು ತಮ್ಮ ರಿಟರ್ನ ಅರ್ಧ ಟಿಕೆಟ್‌ಗಳನ್ನು, ತಾವು ಹಿಂತಿರುಗಿ ಬರುವ ಪ್ರಯಾಣವನ್ನು ಆರಂಭಿಸುವ ರೈಲು ನಿಲ್ದಾಣಗಳಲ್ಲಿ ಕೊಟ್ಟು ಅವುಗಳ ಮೇಲೆ ತಾವು ಹಿಂತಿರುಗಿ ಬರುವ ಪ್ರಯಾಣವನ್ನು ಆರಂಭಿಸಿದ ತಾರೀಕನ್ನು ನಮೂದಿಸಿಕೊಳ್ಳಬೇಕು. ಇದು ಬಹಳ ಮುಖ್ಯವಾದ ಕೆಲಸವಾಗಿದೆ. ಏಕೆಂದರೆ, ತಾರೀಕನ್ನು ನಮೂದಿಸದ ರಿಟರ್ನ ಅರ್ಧ ಟಿಕೆಟ್‌ಗಳನ್ನು ಪಡೆದ ಪ್ರಯಾಣಿಕರನ್ನು ಟಿಕೆಟ್ ಇಲ್ಲದ ಪ್ರಯಾಣಿಕರೆಂದೇ ಭಾವಿಸಲಾಗುತ್ತದೆ. ಟಿಕೇಟುಗಳ ದುರುಪಯೋಗವನ್ನು ತಡೆಗಟ್ಟುವುದೇ ಈ ನಿರ್ಬಂಧದ ಉದ್ದೇಶ.

301ರಿಂದ 500 ಮೈಲುಗಳವರೆಗಿನ ದೂರಕ್ಕೆ ಪ್ರಯಾಣಮಾಡುವವರಿಗೆ ರಿಟರ್ನ ಟಿಕೆಟ್‌ಗಳನ್ನು ಉಪಯೋಗಿಸುವುದಕ್ಕೆ 20 ದಿನಗಳ ಅವಧಿಯನ್ನು ಕೊಡಲಾಗುತ್ತದೆ. 501ರಿಂದ 750 ಮೈಲುಗಳವರೆಗಿನ ದೂರಕ್ಕೆ ಪ್ರಯಾಣ ಮಾಡುವವರಿಗೆ 25 ದಿನಗಳ. 751 ಮೈಲುಗಳಿಗೆ ಮೇಲ್ಪಟ್ಟ ದೂರಕ್ಕೆ ಪ್ರಯಾಣಮಾಡುವವರಿಗೆ 30 ದಿನಗಳ ಅವಕಾಶವು ನೀಡಲ್ಪಡುತ್ತದೆ.

ಆದರೆ, 1956ರ ಸಪ್ಟೆಂಬರ್ 30ನೇ ದಿನದ ಮಧ್ಯರಾತ್ರಿಯ ನಂತರ ಈ ರಿಟರ್ನ ಟಿಕೆಟ್‌ಗಳು ಉಪಯೋಗವಾಗುವುದಿಲ್ಲ. ಯಾವ ವರ್ಗದ ಪ್ರಯಾಣಿಕರಿಗೇ ಆಗಲಿ, 1956ನೇ ಸಪ್ಟೆಂಬರದ 10ನೇ ತಾರೀಕಿನಿಂದ 15ನೇ ತಾರೀಕಿನ ಮಧ್ಯಾವಧಿಯಲ್ಲಿ ಕೊಡಲಾದ ರಿಟರ್ನ ಟಿಕೆಟ್‌ಗಳು 1956 ಸಪ್ಟೆಂಬರ 30ರ ಒಳಗೆ ಹೊರಟ ಸ್ಥಳಕ್ಕೆ ಹಿಂತಿರುಗಿ ಬರುವ ಪ್ರಯಾಣಕ್ಕೆ ಮಾತ್ರ ಉಪಯುಕ್ತವಾಗಿರುವವೆಂಬುದೇ ಇದರ ಅರ್ಥ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 640/1955.

ಟುಲಸಿ ಬ್ಯಾ — ವಾದಿಳು
ಕಡೆಯಿಂದ ಜನರಲ್ ಏಜಂಟ್ ಬಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.

ಮತ್ತು

ರಘುನಾಥ ಮಧ್ಯಸ್ಥ ಕೂಡಾ — ಪ್ರತಿವಾದಿ

ಇವರೊಳಗೆ

ಪ್ರತಿ 1. ರಘುನಾಥ ಮಧ್ಯಸ್ಥ-ಸ್ವರ್ಗವಾಸಿ ಮಧ್ಯಸ್ಥರ ಮಗ. 2. ಭಾಗೀರಥಿ ಮಧ್ಯಸ್ಥ-1ನೇ ಪ್ರತಿವಾದಿ ಮಗ, ಉಡುಪಿ ತಾಲೂಕು ಸೀಲಾವರ ಗ್ರಾಮ.

ವಾದಿಳ ಗಂಡ ವಾಗೆಸ್ಪ ನ್ಯಾಕರು ಮತ್ತು 1-3ನೇ ಪ್ರತಿವಾದಿ ತಂದೆ 1ನೇ ಪ್ರತಿವಾದಿ ಕೂಡಾ ರ. ನಿ. ತಾ. 12—5—48ರಲ್ಲಿ ಮಾಡಿಕೊಂಡ ಮೂಲಗೇಣಿ ಚೀಟಿಗೆ ಕಾರಣವಾದ ದಾವಾ ಆಸ್ತಿಯ ಬಾಬ್ತು ವಾದಿಳಿಗೆ ಬರಾ ಕಳದ ವಿಕ್ರಯ ಸಂಸ್ಥೆರದ ಆಗಾಯಿತು ಮಯಸಂಗಿರದ ವರೆಗಿನವರೂ ಪಗಳಲ್ಲಿ–ಹೀಂಟಿ ರಲ್ಲಿ ಕಾಣ್ಸಿದ ಮೇರೆಗಿನ ಗೇಣಿ ಬಾಕಿಮಾಡಿಕೊಂಡ ದೆಸೆಯಿಂದ ಮೂಲಗೇಣಿ ರದ್ದಾದ ನವರಿ ಆಸ್ತಿ ಸ್ವಾಧೀನತೆಗೂ ಸದರಿ ವರುಷಗಳಲ್ಲಿ ಬಾಕಿಮಾಡಿಕೊಂಡ ಗೇಣಿ ವ, ಬಡ್ಡಿಗೂ ಮುಸ್ಥತ ಸಂಗಿರದ ವಾಮಾಸ್ಯಾ ಗೇಣಿನ ನಷ್ಟಕ್ಕ ಮಟ್ಟುವಳ್ಳಿಗೂ 1, 4ನೇ ಪ್ರತಿವಾದಿರ ಆಕ್ಷೇಪದ ಉಜುರು ಶಿಪ್ಸಾ. 3, 4ನೇ ಪ್ರತಿವಾದಿರಿಂದ ಸದರಿ ಆಸ್ತಿ ಸ್ವಾಧೀನ ಕೇಳಿ ಸಹಾ ರುಪ್ಯಾ 1397–15–10ರ ಮೊಬಲಗಿಗೆ ವಾದಿಳು ಪ್ರತಿವಾದಿರ ಮೇಲೆ ದಾವು ಹೂಡಿದ್ದು, ಸದರಿ ವ್ಯಾಜ್ಯವು ತಾರೀಕು —7—1956ಕ್ಕೆ ತನಿಖೆ ಬಗ್ಗೆ ಮುಡೆಯಾಗಿಯದೆ. ಆದಿನ್ನ ಸದರಿ 1, 2ನೇ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಸದರಿಕೋರ್ಟಿನ ಮುಂದೆ ಹಾಜರಾಗಿ ಉದ ಕೆಂಡಸಿಯನ್ನ ಅವರ ಗೈರ್ ಹಾಜರಿಯಿಂದ ನ್ಯಾಯವು ತೀರ್ಮಾನಿಸಲ್ಪಡುವುದೆಂದು 1, 2ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸಲಾಗಿಯದೆ.

M. Damoder Kamath.
Advocate for Pltf.

Udipi 20-6-56.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 48/56

ತಿಮ್ಮಯ್ಯ ಮೂಲ್ಯ — ವಾದಿ.
ವೇಚಪ್ಪ ಮಡಿವಾಳ ಕೂಡಾ 7 ಜನರು. — ಪ್ರತಿವಾದಿರು.

3ನೇ ಪ್ರತಿವಾದಿ ಅಪ್ಪಿ. ಕೊರಪೊಳು ಹೆಂಗಸಿನ ಮಗಳು ಬೆಳ್ತಂಗಡಿ ತಾಲೂಕು ಬರಿನಾರು ಗ್ರಾಮದಲ್ಲಿ ಇರುವವಳು.

ಇವಳಿಗೆ ತಿಳಿಸುವುದೇನೆಂದರೆ, ವಾದಿಯು ಆಧಾರ ಹಣ ವಸೂಲಿಯ ಬಗ್ಗೆ ದಾಖಲು ಮಾಡಿದ ಈ ದಾವೆಯು ತಾ. 4-7-56ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಉಪವಾದಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Plaintiff.

ಪುತ್ತೂರು ತಾ. 22–6–56.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮದ್ರಾಸು

ಹೊಟೆಲ್ ದಾಸ ಪ್ರಕಾಶ ದಾಸೆ ಮಂದಿರದಲ್ಲಿ—ಮದ್ರಾಸ್ ಮಾಧ್ವ ಸಂಘದ ಕಡೆಯಿಂದ ತಾ. 18ರಲ್ಲಿ ಸಂಜೆ ಶ್ರೀ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶ ಶ್ರೀ ದ್ವಾರಕಾನಾಥ ತೀರ್ಥ ಶ್ರೀಪಾದಂಗಳವರಿಗೆ ಅಭ್ಯರನೇಕರು ನೆರೆದ ಸಭೆಯಲ್ಲಿ ಮಾನಪತ್ರ ಸಮರ್ಪಿಸಲಾಯಿತು. ಶ್ರೀ ಭಂಡಾರಕೆರೆ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ವ್ಯಾಸರಾಯ ಶಾಸ್ತ್ರಿಗಳು ಉಭಯ ಶ್ರೀಗಳವರನ್ನು ಸ್ವಾಗತಿಸಿದರು. ಮಾಧ್ವ ಸಂಘದ ಅಧ್ಯಕ್ಷ ಶ್ರೀ ಕೆ. ಸೀತಾರಾಮರಾಯರು ಶ್ರೀ ಶ್ರೀಗಳವರಿಗೆ ಫಲ ವಸ್ತ್ರ ಸಹಿತ ಪಾದಕಾಣಿಕೆ ಸಮರ್ಪಿಸಿದರು. ಮಾಧ್ವ ಸಂಘದ ಕಾರ್ಯದರ್ಶಿ ಶ್ರೀ ಪಿ. ರಾಘವೇಂದ್ರರಾಯರು ಮಾನಪತ್ರವನ್ನೋದಿ ಶ್ರೀ ದ್ವಾರಕಾನಾಥ ಶ್ರೀಗಳವರಿಗೆ ಸಮರ್ಪಿಸಿದರು. ಶ್ರೀಗಳವರು ಮಾನಪತ್ರಕ್ಕೆ ಉತ್ತರವೀಯುತ್ತಾ, ಶ್ರೀ ಸೀತಾರಾಮರಾಯರು ತಮ್ಮ ದಾಸಪ್ರಕಾಶದಲ್ಲಿ ಶಾರೀರಿಕ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದಲ್ಲದೆ 'ಧರ್ಮೋ ವಿಶ್ವಸ್ಯ ಜಗತಃ ಪ್ರತಿಷ್ಠಾ' ಎಂಬ ವಚನವನ್ನು ಕುರಿತು ಧಾರ್ಮಿಕ ವಾತಾವರಣವನ್ನು ಕಲ್ಪಿಸಿ ಜನರ ಪಾರತಂತ್ರ್ಯದ ಏಳಿಗೆಗಾಗಿ ಸಹಕಾರ ಮಾಡುತ್ತಿರುವುದು ಶ್ಲಾಘನೀಯವೆಂದರು.

ಲೋಕ ಸಭಾ ಸ್ಪೀಕರರಿಗೆ ಸತ್ಕಾರ—ಇದೇ ತಾ. 16ರಲ್ಲಿ ಲೋಕ ಸಭೆಯ ಸ್ಪೀಕರರಾದ ಶ್ರೀ ಅನಂತಶಯನಂ ಅಯ್ಯಂಗಾರ್, ಅವರಿಗೆ ದಾಸ ಪ್ರಕಾಶದಲ್ಲಿ ಅದರ ಒಡೆಯರಾದ ಶ್ರೀ ಕೆ. ಸೀತಾರಾಮರಾಯರು ಸತ್ಕಾರ ಕೂಟವನ್ನೇರ್ಪಡಿಸಿ ಗೌರವಿಸಿದರು.

ಭೋಜನಾನಂತರ ಶ್ರೀ ಸೀತಾರಾಮರಾಯರು ಮುಖ್ಯ ಅತಿಥಿಯನ್ನೂ ಇತರರನ್ನೂ ಸ್ವಾಗತಿಸಿದರು.

ಶ್ರೀ ಅಯ್ಯಂಗಾರರು ಉತ್ತರವೀಯುತ್ತಾ, ಊಟ, ಉಪಾಹಾರ, ವಸತಿಗಳನ್ನು ಆಧುನಿಕ ರೀತಿಯಲ್ಲಿ ವ್ಯವಸ್ಥೆಗೊಳಿಸಿದ ಶ್ರೀ ಸೀತಾರಾಮರಾಯರ ಉದ್ಯಮವನ್ನು ಶ್ಲಾಘಿಸಿ, ದೆಹಲಿಯಲ್ಲಿಯೂ ಇಂತಹ ಅವಶ್ಯಕತೆಯನ್ನು ಪೂರೈಸುವುದಾದರೆ ತಾನು ಸಂಪೂರ್ಣ ಸಹಕಾರ ನೀಡುವುದಾಗಿ ಹೇಳಿದರು. ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 128/1956.

ಕಮಲ ಕೂಡಾ —ವಾದಿರು

ಮತ್ತು

ಅತುಮು ಪೂಜಾರ್ತಿ ಕೂಡಾ —ಪ್ರತಿವಾದಿರು

ಇವರೊಳಗೆ

1. ಅತುಮು ಪೂಜಾರ್ತಿ, 2. ಜಲಜ ಪೂಜಾತಿ, ರುಕ್ಮ ಪೂಜಾರ್ತಿ ಮಕ್ಕಳು.

4. ಭವಾನಿ, 5 ಜಗನ್ನಾಥ, 1ನೇ ಪ್ರತಿವಾದಿಳ ಮಕ್ಕಳು.

7. ಜಯಶೀಲ, 8. ರಘುವೀರ, 9. ಜಯಂತಿ, 2ನೇ ಪ್ರತಿವಾದಿ ಮಕ್ಕಳು, ಉಡುಪಿ ತಾಲೂಕು ಕಿದಿಯೂರು ಗ್ರಾಮದಲ್ಲಿರುವವರು. —ಇವರಿಗೆ,

ದಾವಾ ಆಸ್ತಿಗಳ ಸ್ವಾಧೀನತೆ, ಹುಟ್ಟುವಳಿ ವಗೈರೆ ಪ್ಲೀಂಟು ನಿವೃತ್ತಿಗೋಸ್ಕರ ವಾದಿರು ಮೂಡಿರುವ ಈ ದಾವೆಯು ತಾ. 9-7-1956 ಕ್ಕೆ ಮೇಲೆ ಹೆಸರುಕಾಣಿಸಿರುವ ಪ್ರತಿವಾದಿರಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ತಾರೀಕು 9-7-1956ನೇ ದಿವ್ಸ ಬೆಳಿಗ್ಗೆ ಹತ್ತು ಗಂಟೆಗೆ ಸದ್ರಿ ಪ್ರತಿವಾದಿರು ಸ್ವತಹಾ ವ ವಕೀಲರ ಮುಖಾಂತ್ರ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉದಹರಿಸಲಿಕ್ಕೆ ತಪ್ಪಿದ್ರೆ ಈ ದಾವೆಯನ್ನು ಸದ್ರಿಯವರ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವದು.

V. R. Kidyur.

Advocate for Plffs.

ಉಡುಪಿ ತಾರೀಕು 22 ಜೂನು 1956.



೨೫೦೦ನೆಯ ವರ್ಷದ ಬುದ್ಧನ ಪರಿನಿರ್ವಾಣ ಸಮಾರಂಭದಲ್ಲಿ, ಹೈದರಾಬಾದ್ ರಾಜ್ಯದ ಮುಖ್ಯ ಮಂತ್ರಿಗಳಾದ ಶ್ರೀ ಬಿ. ರಾಮಕೃಷ್ಣ ರಾವ್‌ರವರ ಅಧ್ಯಕ್ಷತೆಯಲ್ಲಿ ಹೈದರಾಬಾದ್‌ನಲ್ಲಿ, ಹಳೆಯ ರೆಸಿಡೆನ್ಸಿ ಮೈದಾನದಲ್ಲಿ, ಇತ್ತೀಚೆಗೆ ಸಾರ್ವಜನಿಕ ಸಭೆಯೊಂದನ್ನು ನಡೆಸಲಾಯಿತು. ಮುಖ್ಯ ಮಂತ್ರಿಗಳ ಎಡಗಡೆಯಲ್ಲಿ ನಿಂತಿರುವ ತೆಲುಗು ಕವಿಗಳಾದ ಶ್ರೀ ದಾಶರಥಿಯವರು ಈ ಸಮಾರಂಭಕ್ಕಾಗಿ ರಚಿಸಲಾದ ಸಂಸ್ಕೃತ ಹಾಗೂ ತೆಲುಗು ಪದ್ಯಗಳನ್ನು ಪಠಿಸುತ್ತಿರುವರು. ಅಜಂತ ಗುಹೆಗಳ ಬೋಧಿಸತ್ವ ಪದ್ಮಪಾಣಿಯ ಪೂರ್ಣಾಕೃತಿಯ ಪ್ರತಿಕೃತಿಯನ್ನು ಹಿಂಭಾಗದಲ್ಲಿ ಕಾಣಬಹುದು.

ಶಿರ್ವ— ಸ್ಥಳೀಯ ವಿದ್ಯಾವರ್ಧಕ ಸಂಘದ ಕಾರ್ಯನಿರ್ವಾಹಕರೂ ಇದರ ಅಂಕಿತದಲ್ಲಿರುವ ಶಾಲೆಗಳ ಅಧ್ಯಾಪಕರೂ ತಾ 7ರಂದು ಸಭೆಗೂಡಿ ನಿವೃತ್ತರಾಗಲಿರುವ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರಿಗೆ ವಿದಾಯ ಸತ್ಕಾರವನ್ನಿತ್ತರು. ಶ್ರೀ ಯು. ಎಸ್. ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ. ಜಯರಾಮ ಸೆಟ್ಟರು ಸ್ವಾಗತ ಭಾಷಣಮಾಡಿದರು. ಶ್ರೀ ಅಣ್ಣಯ್ಯ ಹೆಗ್ಡೆಯವರು ಮಾನಪತ್ರವನ್ನಿತ್ತರು. ಶ್ರೀ ಕೆ. ಜೆ. ಬಲ್ಲಾಳರು ಬೆಳ್ಳಿಯ ಸರಸ್ವತಿ ವಿಗ್ರಹವನ್ನು ಪಾರಿತೋಷಕವಿತ್ತರು. ಸಭಿಕರು ಮುಖ್ಯ ಅತಿಥಿಯ ಕುರಿತು ಕಾಲೋಚಿತ ಮಾತುಗಳನ್ನಾಡಿದರು.

ಮೂಲ್ಕಿ— ಸ್ಥಳೀಯ ಉಪಾಧ್ಯಾಯ ಕೇಂದ್ರದ ಪತಿಯಿಂದ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ ಮತ್ತು ಅವರ ಪರ್ಸನಲ್ ಅಸಿಸ್ಟಾಂಟ್ ಶ್ರೀ ಟಿ. ಎಲ್. ರಾಯರಿಗೆ ಶ್ರೀ ವೈ. ಗೋಪಾಲನವರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರವೀಯಲಾಯಿತು. ಸಂಘದ ಕಾರ್ಯದರ್ಶಿಗಳು ಸ್ವಾಗತ ಮಾತುಗಳನ್ನಾಡಿದರು. ಮೂಲ್ಕಿ ಕೇಂದ್ರಕ್ಕೆ ಸಂಬಂಧಿಸಿದ ಎಲ್ಲಾ ಶಾಲೆಗಳ ಮುಖ್ಯೋಪಾಧ್ಯಾಯರು ಅತಿಥಿಗಳಿಗೆ ಪುಷ್ಪಾಹಾರವಿತ್ತರು. ಶ್ರೀಗಳಾದ ಕೆ. ಎಲ್ಲಪ್ಪ ಗೋಪಾಲಕೃಷ್ಣ, ಶ್ಯಾಮರಾಯ ಸೆಟ್ಟಿ ಮತ್ತು ಭೋಜರಾಯರು ಸಂದರ್ಭೋಚಿತ ಭಾಷಣವಿತ್ತರು ಅತಿಥಿಗಳು ಬುದ್ಧಿವಾದ ರೂಪದಲ್ಲಿ ಮಾತನಾಡಿದರು. ಉಪಾಹಾರಾದಿ ಕಾರ್ಯಕ್ರಮಗಳಿಂದ ಸಮಾರಂಭ ಸಾಂಗವಾಯಿತು.

ಸ್ಥಳೀಯ ಯೂನಿಯನ್ ಕ್ಲಬ್ಬಿನ 41ನೇ ವರ್ಷದ ವರ್ಧಂತ್ಯುತ್ಸವ ಹಾಗೂ ದಿವಂಗತ ಡಾ. ಬೋಳ ಶ್ಯಾಮರಾಯರ ಜನ್ಮದಿನಾಚರಣೆಯೂ ತಾ 10ರಲ್ಲಿ ಜರಗಿತು. ಪ್ರಾರ್ಥನೆ, ವರದಿವಾಚನ, ಭಾಷಣಗಳಾದ ಬಳಿಕ ಕ್ಲಬ್ಬಿನ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಎಮ್. ಆರ್. ಎಚ್. ಪೂಂಜ (ಅಧ್ಯಕ್ಷ), ಡಾ. ಎಮ್ ಆರ್ ಸೆಟ್ಟಿ (ಉಪಾಧ್ಯಕ್ಷ), ಯು. ಉಪೇಂದ್ರರಾವ್ (ಕೋಶಾಧಿಕಾರಿ), ಜಿ. ಎಸ್. ಮೂಲ್ಕಿ (ಕಾರ್ಯದರ್ಶಿ), ಎಮ್ ಎಚ್. ರಾಮ (ಜತೆಕಾರ್ಯದರ್ಶಿ), ಬಿ. ಪುಂಡಲೀಕ ಕಾಮತ್ (ಪುಸ್ತಕಾಲಯದ ಅಧಿಕಾರಿ) ಆರಿಸಲ್ಪಟ್ಟರು.

ಕಡಿಯಾಳಿ— ಕುಂಜಿಬೆಟ್ಟು ಕಡಿಯಾಳಿ ಹಾ. ಪ. ಶಾಲೆಯಲ್ಲಿ ರಾತ್ರಿ ವಿದ್ಯಾಭ್ಯಾಸದ ಏರ್ಪಾಡು ಜುಲಾಯಿ 1ರಿಂದ ಆರಂಭವಾಗುವುದು. ಇ. ಎಸ್. ಎಲ್. ಸಿ. ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತಯಾರಿಸುವುದಲ್ಲದೆ. ಕೆಳತರಗತಿಗಳನ್ನು ತೆರೆಯಲಾಗುವುದು. ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗೆ ಶಾಲಾ ಮುಖ್ಯೋಪಾಧ್ಯಾಯರನ್ನು ವಿಚಾರಿಸಬಹುದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಪುತ್ತೂರು— ಸ್ಥಳೀಯ ಬೋರ್ಡು ಹೈಸ್ಕೂಲಿನ ನಿವೃತ್ತ ಕನ್ನಡ ಪಂಡಿತರೂ, ಪ್ರಸಿದ್ಧ ಸಾಹಿತಿಗಳೂ ಆದ ಶ್ರೀ ಕೆ. ಶಂಭು ಶರ್ಮರಿಗೆ ಕೇಂದ್ರ ಸರಕಾರದ ವಿದ್ಯಾಖಾತೆಯವರು ತಿಂಗಳೊಂದರ ರೂಪಾಯಿ 75ರಂತೆ ಕಳೆದ ಮೇ ತಿಂಗಳಿಂದ ಒಂದು ವರ್ಷದ ತನಕ ಧನಸಹಾಯವಿತ್ತು, ಅವರ ಅಪಾರ ಸಾಹಿತ್ಯ ವ್ಯವಸಾಯ ಹೆಚ್ಚಿಸಲು ನೆರವಾಗಿದ್ದಾರೆ. ಶ್ರೀ ಶರ್ಮರು ಕೆಲವು ವರ್ಷಗಳ ಹಿಂದೆ ಲೋರಿ ಅಪಘಾತಕ್ಕೆ ಸಿಲುಕಿ ಕಾಲೊಂದನ್ನು ಕಳಕೊಂಡು ತುಂಬಾ ಕಷ್ಟ ಕೀಡಾಗಿರುವರು.

ಕಾಸರಗೋಡು—ಈ ಸರ್ಕಲಿನ ಸಹಕಾರಿ ಸಂಘಗಳ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಕೆ. ಪಿ. ನರಸಿಂಗರಾಯರು ತಾ. 16ರಲ್ಲಿ ಪಾಣೆಮಂಗಳೂರು ಗ್ರಾಮಾಂತರ ವಸತಿಗೃಹ ನಿರ್ಮಾಣ ಸಹಕಾರಿ ಸಂಘವನ್ನು ಉದ್ಘಾಟಿಸುತ್ತಾ ಸಂಘದ ಸದಸ್ಯರಿಗೆ ಮನೆ ಕಟ್ಟಲು ರೂ. 5000 ವರೆಗಿನ ಸಾಲ ದೊರೆಯುವುದೆಂದು ಹೇಳಿದರು. ಆಡಳಿತ ಮಂಡಳಿಯ ಸದಸ್ಯರಾಗಿ ಶ್ರೀಗಳಾದ ಎಸ್. ಉಪೇಂದ್ರ ನಾಯ್ಕ (ಅಧ್ಯಕ್ಷ), ಪಿ. ರಾಮರಾಯ ಶೆಣೈ (ಉಪಾಧ್ಯಕ್ಷ) ಎಸ್. ಕೇಶವ ಕುಡ್ವ (ಕಾರ್ಯದರ್ಶಿ), ಮತ್ತು ಪಿ. ಕೇಶವ ಪೈ ಹಾಗೂ ಡಾ. ಎಸ್. ಜಿ. ಶರ್ಮರು ಆರಿಸಲ್ಪಟ್ಟರು.

ಕಾಸರಗೋಡಿನ ಭವಿಷ್ಯದ ಕುರಿತು ಕೊನೆಯ ತೀರ್ಮಾನದ ಬಗ್ಗೆ ಮುಂದಿನ ತಿಂಗಳ ತಾ. 2ರಲ್ಲಿ ಜತೆ ಪರಿಶೀಲನಾ ಸಮಿತಿಯು ದಿಲ್ಲಿಯಲ್ಲಿ ಸೇರಲಿದ್ದು ಆ ಕಾಲಕ್ಕೆ ಶ್ರೀ ಕೆ. ಆರ್. ಕಾರಂತರ ನೇತೃತ್ವದಲ್ಲಿ ಶ್ರೀ ಎಮ್. ಉಮೇಶರಾಯರೇ ಮೊದಲಾದವರ ಶಿಷ್ಟ ಮಂಡಳವು ಸಮಿತಿಯನ್ನು ಭೇಟಿಯಾಗಲಿರುವರು.

ಪರ್ಕಳ— ಹೈದರಾಬಾದಿನಲ್ಲಿ ಔಷಧಿ ತಯಾರಿಕಾ ಕಾರ್ಖಾನೆಯಲ್ಲಿ ಮೇಲ್ದರಗತಿಯ ಹುದ್ದೆಯಲ್ಲಿದ್ದು ಕೆಲವರುಷಗಳಿಂದ ಅಸೌಖ್ಯದಿಂದಿದ್ದ ಶ್ರೀ ಬಿ. ವಿಠಲದಾಸ ಹೆಗ್ಡೆ ಬಿ. ಎಸ್. ಸಿ. ಫಾರ್ಮಸಿ (ಶ್ರೀ ಬಡಗಬೆಟ್ಟು ಕೃಷ್ಣಯ್ಯ ಹೆಗ್ಡೆರ ಪುತ್ರ) ಇವರು ಇದೇ ತಾ. 26ರಲ್ಲಿ ಆಕಸ್ಮಿಕವಾಗಿ ನಿಧನಹೊಂದಿದರೆಂಬುದು ಅತ್ಯಂತ ವಿಷಾದಕರವಿದೆ. ದಿವಂಗತರು ಸುಮಾರು 35 ವರ್ಷ ಪ್ರಾಯದ ತರುಣರು, ಉತ್ತಮ ಗುಣನಡತೆಯಿದ್ದು ಜನಾನುರಾಗ ಗಳಿಸಿದ್ದರು. ಇವರ ದುಃಖೀಕುಟುಂಬದೊಡನೆ ನಾವು ಸಹ ಸಂತಾಪಪಡುತ್ತೇವೆ.

ಶ್ರೀ ಕುಕ್ಕಾಲು ಗಣಪಯ್ಯ ಶೆಟ್ಟರು ನಿರ್ದೋಷಿಗಳು— ಶ್ರೀ ಕುಕ್ಕಾಲು ಗಣಪಯ್ಯ ಸೆಟ್ಟಿ ಮತ್ತಿತರರ ಮೇಲೆ ಶ್ರೀ ಕುಕ್ಕಾಲು ನರಸಿಂಹಾಚಾರ್ಯರು ಕೆಲಸಮಯದ ಹಿಂದೆ ದಾಖಲುಮಾಡಿದ ಫಿರ್ಯಾದಿ ಉಡುಪಿ ಒಂದನೆ ದರ್ಜೆಯ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ತನಿಖೆಯಾಗಿ ಅದು ನಿರಾಧಾರವೆಂದು ತಳ್ಳಿಹಾಕಲಾಗಿತ್ತು. ಶ್ರೀ ಆಚಾರ್ಯರು ಪುನಹ ರಿವಿಜನ್ ಅರ್ಜಿ ಮಾಡಿದುದೂ ತನ್ನಿಮಿತ್ತ ತಾ 16ರಲ್ಲಿ ಮಂಗಳೂರಿನ ಸೆಶ್ಯನ್ಸ್ ಕೋರ್ಟಿನಲ್ಲಿ ಕೂಡಾ ಶ್ರೀ ಸೆಟ್ಟರು ಹಾಗೂ ಇತರರು ನಿರ್ದೋಷಿಗಳೆಂದು ತೀರ್ಮಾನಿಸಲ್ಪಟ್ಟು ರಿವಿಜನ್ ಅರ್ಜಿ ಅಲ್ಲಿಯೂ ತಳ್ಳಿಹಾಕಲಾಯಿತು.

ಮೂಡಬಿದ್ರೆ— ಸ್ಥಳೀಯ ಜೈನ್ ಹೈಸ್ಕೂಲಿನ ಶಾಲಾ ಮುಂದಾಳು ಸ್ಥಾನಕ್ಕೆ ಶ್ರೀ ಹರೀಶರಾಮ ಪ್ರಭುಗಳೂ, ಶಾಲಾ ಪಾರ್ಲಿಮೆಂಟ್ ಸಭಾಪತಿಯಾಗಿ ಶ್ರೀ ಶಾಂತಾರಾಮ ಪ್ರಭುಗಳೂ ಅವಿರೋಧವಾಗಿ ಆರಿಸಲ್ಪಟ್ಟರು.

ಕೋಟೆಕಾರ್:— ಉಳ್ಳಾಲ ಪಂಚಾಯತ್ ಬೋರ್ಡಿನ ನೇತೃತ್ವದಲ್ಲಿ ಕೋಟೆಕಾರಿನಲ್ಲಿ ಸಮೂಹವಿಕಾಸಯೋಜನೆಯನ್ವಯ ನಿರ್ಮಿತವಾದ ವನಿತಾ ಸಮಾಜಮಂದಿರದ ಶಂಕುಸ್ಥಾಪನಾ ಕಾರ್ಯವನ್ನು ತಾ. 15ರಲ್ಲಿ ಸಮೂಹವಿಕಾಸಯೋಜನಾಧಿಕಾರಿ ಎಚ್. ನ... ಸಿಂಹನವರು ನೆರವೇರಿಸಿದರು. ಶ್ರೀ ಎ. ಕೃಷ್ಣ ಸೆಟ್ಟರು ಸ್ವಾಗತಮಾತುಗಳನ್ನಾಡಿದರು. ಸಭಿಕರ ಭಾಷಣವಾದ ಮೇಲೆ ಕಾರ್ಯದರ್ಶಿನಿ ಶ್ರೀಮತಿ ಗಿರಿಜಮ್ಮ ನವರು ವಂದನೆಗಳನರ್ಪಿಸಿದರು.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—

ನವಯುಗ ಪ್ರೆಸ್, ಉಡುಪಿ.

ಮಂಗಳೂರು

ಡಾ. ಗೋಪಾಲಕೃಷ್ಣ ರಾಯರಿಗೆ ವಿದಾಯ ಸತ್ಕಾರ— 'ಕಲಿಯುಗ' ಪತ್ರಿಕೆಯ ಸಂಪಾದಕ ಹಾಗೂ ಕರ್ನಾಟಕ ಯುವಜನ ಮಹಾ ಮಂಡಲದ ಅಧ್ಯಕ್ಷ ಡಾ. ಗೋಪಾಲಕೃಷ್ಣ ರಾಯರು ಮಂಗಳೂರಿನಿಂದ ಸದ್ಯವೇ ಬೆಂಗಳೂರಿಗೆ ಹೋಗಲಿರುವ ಕಾರಣ ಅವರಿಗೆ ಮಂಗಳೂರು ಪತ್ರಿಕೋದ್ಯೋಗಿ ಸಂಘದವರು ಶ್ರೀ ಕೃಷ್ಣಭವನದಲ್ಲಿ ವಿದಾಯ ಸತ್ಕಾರವನ್ನಿತ್ತು ಗೌರವಿಸಿದರು. ವೈದ್ಯರು ಎಮ್. ಆರ್. ಭಟ್ಟರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷ ಶ್ರೀ ಕೆ. ಆರ್. ಆಚಾರ್ಯರು ಸ್ವಾಗತಭಾಷಣಮಾಡಿದರು. ಶ್ರೀಗಳಾದ ಎಸ್. ಭೀಮರಾವ್, ಎಮ್. ಜನಾರ್ಧನ, ಎಮ್. ಇದಿನಬ್ಬ, ಮನಸೋಹನ ಕಾಮತ್, ತಿರುಮಲೇಶ್ವರ ಭಟ್ ಟಿ. ಸದಾನಂದ ರಾವ್ ಮೊದಲಾದವರು ಡಾ. ರಾಯರ ಹಿತ್ಯಸೇವೆಯನ್ನು ಪ್ರಶಂಸಿಸಿ ಮಾತನಾಡಿದರು. ಮುಖ್ಯ ಅತಿಥಿಯು ತಕ್ಕ ಉತ್ತರವಿತ್ತ ಬಳಿಕ ಅಧ್ಯಕ್ಷ ಭಾಷಣವಾಯಿತು. ಶ್ರೀ ಕೆ. ಎಸ್. ಉಪಾಧ್ಯಾಯರು ಧನ್ಯವಾದಗಳನ್ನಿತ್ತರು.

ಶ್ರೀ ಕೆ. ಸಂಜೀವ ಭಟ್ಟರಿಗೆ ಸತ್ಕಾರ— ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿಯ ಅಧ್ಯಕ್ಷ ಶ್ರೀ ಎಮ್. ಎಸ್. ಕಾಂಬರರಾಯರ ಅಧ್ಯಕ್ಷತೆಯಲ್ಲಿ ಅದರ ಕಾರ್ಯದರ್ಶಿಪದದಿಂದ ನಿವೃತ್ತರಾಗುವ ಶ್ರೀ ಕೆ. ಸಂಜೀವ ಭಟ್ಟರಿಗೆ ಪುಸ್ತಕಾಲಯದ ಲೈಬ್ರೇರಿಯನ್‌ಗಳವರು ಸತ್ಕಾರವನ್ನಿತ್ತು ಗೌರವಿಸಿದರು. ಶ್ರೀಗಳಾದ ಕೆ. ಗೋಪಾಲಕೃಷ್ಣಯ್ಯ, ಸಿ. ಕಮಲಾಕ್ಷ ಕಾಮತ್ ಮೊದಲಾದವರು ಶ್ರೀ ಭಟ್ಟರ ಕುರಿತು ಸಂದರ್ಭೋಚಿತ ಮಾತುಗಳನ್ನಾಡಿದರು.

ಭಾರತ–ರಶ್ಯಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ— ತಾ. 22ರಲ್ಲಿ ಎಸ್. ಸಿ. ಸಿ. ಸಿ. ಬೆಂಕಿನ ಅವಾರದಲ್ಲಿ ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆಯೊಂದು ಜರಗಿತು. ಡಾ. ಎಮ್. ಉಮೇಶ ರಾಯರು ಸ್ವಾಗತಭಾಷಣಮಾಡಿದರು. ಡಾ. ಎಮ್. ಎಸ್. ಶಾಸ್ತ್ರಿಗಳು, ಭಾರತ–ರಶ್ಯಾ ಸಾಂಸ್ಕೃತಿಕ ಸಂಘವು ಮಂಗಳೂರಲ್ಲಿ ಸ್ಥಾಪಿಸಲ್ಪಟ್ಟ ನಂತರ ಮಾಡಿದ ಕಾರ್ಯಕಲಾಪಗಳನ್ನು ವಿವರಿಸಿ ಸಂಘಕ್ಕೆ ಸಾರ್ವಜನಿಕರ ಸಹಕಾರವನ್ನು ಅಪೇಕ್ಷಿಸಿದರು. ಸಭಾಧ್ಯಕ್ಷ ಬಾಳಿಗರು ಮಾತನಾಡುತ್ತಾ ಸಾಂಸ್ಕೃತಿಕ ಸಂಬಂಧ ಸಂಘಗಳು ಶಾಂತಿ ಸ್ಥಾಪನೆಗೆ ತುಂಬಾ ಉಪಯುಕ್ತ ಸೇವೆಯನ್ನು ನೀಡಬಲ್ಲುವು ಎಂದರು.

ಮದ್ರಾಸು ವಿಶ್ವವಿದ್ಯಾಲಯದವರು— ಮೂರು ವರುಷಗಳ ಡಿಗ್ರಿ ಪರೀಕ್ಷೆ ಮತ್ತು ಆ ಮೊದಲಿನ ಒಂದು ವರ್ಷದ ಶಿಕ್ಷಣವೆಂದು ಮಾಡಿದ ಬದಲಾವಣೆಯನ್ನು ದ. ಕ. ಜಿಲ್ಲೆಯ ಕಾಲೇಜುಗಳಲ್ಲಿ ಜ್ಯಾರಿಗೆ ತರಬಾರದೆನ್ನುವ ನಿರ್ಣಯವು ತಾ. 18ರಲ್ಲಿ ಎಸ್. ಸಿ. ಸಿ. ಬೆಂಕ್ ವಠಾರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಸ್ವೀಕೃತವಾಯಿತು. ಶ್ರೀ ಎಮ್. ಎಸ್. ಏಕಾಂಬರರಾಯರು ಅಧ್ಯಕ್ಷತೆವಹಿಸಿದ ಈ ಸಭೆಯಲ್ಲಿ ಶ್ರೀಗಳಾದ ಬಿ.ವಿ. ಬಾಳಿಗ, ಕೆ. ಆರ್. ಆಚಾರ್, ಬಿ. ಮಂಜಯ್ಯ ಹೆಗ್ಡೆ, ಎಸ್. ನರಸಪ್ಪಯ್ಯ, ಯು. ಭವಾನಿರಾವ್, ಬಿ. ಭುಜಂಗ ರಾವ್, ಕೆ.ಪಿ. ಮುಕುಂದ ಪ್ರಭು ಮೊದಲಾದವರ ಸಂದರ್ಭೋಚಿತ ಭಾಷಣಗಳಾದುವು. ನಂತರ ಆರಂಭವಾಗಿ ಶ್ರೀಗಳಾದ ಬಿ. ವಿ. ಬಾಳಿಗ, ಎಸ್. ನರಸಪ್ಪಯ್ಯ, ಕೆ. ಆರ್. ಆಚಾರ್, ಹರಿ ಶೆಣ್ವಿ, ಎಸ್. ಜಿ. ಹಂದೆ ಮತ್ತು ಏಕಾಂಬರರಾಯರಿರುವ ಕಮಿಟಿಯೊಂದು ರಚಿಸಲ್ಪಟ್ಟಿತು.

ಮದ್ರಾಸು ಮುಂಟೆರಗಾಳಿ ಸಹಾಯಕ ನಿಧಿಯು— ಬಗ್ಗೆ 1955ರಲ್ಲಿ ಸ್ಥಾಪಿಸಲಾದ ಜಿಲ್ಲಾ ಮತ್ತು ತಾಲೂಕು ಕಮಿಟಿಗಳನ್ನು ಕೊನೆಗೊಳಿಸಬೇಕಾಗಿ ಮದ್ರಾಸು ಸರಕಾರದ ಹುಕುಮು ಬಂದಿರುವುದು. ಈ ಜಿಲ್ಲೆಯಲ್ಲಿ ರೂ. 10673—12—9 ನಗದಿನಿಂದಲೂ ಹಂಚು, ಬಟ್ಟೆ ಮೊದಲಾದುವುಗಳ ಕೊಡಾ ಸಂಗ್ರಹವಾಗಿತ್ತು ಎಂದು ಜಿಲ್ಲಾ ಕಲೆಕ್ಟರರು ಪ್ರಕಟಣೆ ಹೊರಡಿಸಿದ್ದಾರೆ.

ವನಮಹೋತ್ಸವ ಪೂರ್ವ ಸಿದ್ಧತೆ— ಜುಲೈ ತಿಂಗಳ ಆರಂಭದಿಂದ ಆಚರಿಸಲಾಗುವ ವನಮಹೋತ್ಸವವನ್ನು ಈ ಜಿಲ್ಲೆಯಲ್ಲಿ ಎಂದಿಗಿಂತಲೂ ದ್ವಿಗುಣಿತ ಉತ್ಸಾಹದಿಂದ ಆಚರಿಸಿ ಅಧಿಕಾಧಿಕ ಸಂಖ್ಯೆಯಲ್ಲಿ ಸಸಿಗಳನ್ನು ನೆಡುವ ಕಾರ್ಯಕ್ರಮಕೈಕೊಂಡು ಹಿಂದಿನ ದಾಖಲೆಯನ್ನು ಕಾಪಾಡಿಕೊಂಡುಬರುವಂತೆ ಸರ್ವರೂ ಕಾರ್ಯಸಕ್ತರಾಗಬೇಕೆಂದು ಜಿಲ್ಲಾ ಕಲೆಕ್ಟರರ ಜಾಹೀರು ವಿನಂತಿಯೊಂದು ಹೊರಟಿದೆ.

ಜಿಲ್ಲಾ ರಾಜಕೀಯ ಪರಿಷತ್ತು— ದ. ಕ. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ತಾ. 17ರಲ್ಲು ಡಾ. ಯು. ಪಿ. ಮಲ್ಯ, ತದನಂತರ ಶ್ರೀ ಕೆ. ಆರ್. ಆಚಾರ್ಯರ ಆ ಮೇಲೆ ಶ್ರೀ ಎಫ್. ಎಕ್ಸ್. ಡಿ. ಪಿಂಟೋರ ಅಧ್ಯಕ್ಷತೆಯಲ್ಲಿ ಜರಗಿತು. ಮುಂಬರುವ ಅಕ್ಟೋಬರ ಅಂತ್ಯದೊಳಗೆ ದ. ಕ. ಜಿಲ್ಲಾ ರಾಜಕೀಯ ಪರಿಷತ್ತನ್ನು ಜರಗಿಸಬೇಕೆಂದೂ ಅದರ ಅಂಗವಾಗಿ ಕೈಗಾರಿಕಾ ಪ್ರದರ್ಶನ ಪಂಚವಾರ್ಷಿಕ ಯೋಜನಾ ಸಂಬಂಧದ ವಿಚಾರಗೋಷ್ಠಿ ಮೊದಲಾದುವುಗಳ ವ್ಯವಸ್ಥೆ ಮಾಡಬೇಕೆಂದೂ ತೀರ್ಮಾನವಾಯಿತು. ಜಿಲ್ಲೆಯ ರಾಜಕೀಯ ಸಂತ್ರಸ್ತರ ಪಟ್ಟಿಯೊಂದನ್ನು ತಯಾರಿಸಿ ಕೂಡಲೇ ಪ್ರಾಂತಿಕ ಕಾಂಗ್ರೆಸ್ ಸಮಿತಿಗೆ ಕಳುಹಿಸಲು ಶ್ರೀಗಳಾದ ಕೆ. ಕೆ. ಶೆಟ್ಟಿ, ಭೋಜರಾವ್ ಬೋಳಾರ್, ಎನ್. ಉಪೇಂದ್ರ ನಾಯಕ್, ಎಚ್. ಕೆ. ತಿಂಗಳಾಯ ಮತ್ತು ಡಾ। ಯು ಪಿ. ಮಲ್ಯರಿಗೆ ಅಧಿಕಾರವೀಯಲಾಯಿತು. ಮಂಗಳೂರಲ್ಲಿ ರಾಷ್ಟ್ರೀಯ ಮಜೂರ ಸಂಘದ ಶಾಖೆಯನ್ನು ತೆರೆಯುವುದು ಆಗತ್ಯವೆಂದು ಸಭೆಯ ಅಭಿಪ್ರಾಯವಾಯಿತು. ಈ ಜಿಲ್ಲೆಯಲ್ಲಿ ಈಗ ಮಳೆಗಾಲವಾದುದರಿಂದ ಹೊಸ ಕಾಂಗ್ರೆಸ್ ಸದಸ್ಯರನ್ನು ಸೇರಿಸುವ ಅವಧಿಯನ್ನು ಸಪ್ಟಂಬರ ಕೊನೆಯ ವರೆಗೆ ವೃದ್ಧಿಸಬೇಕೆಂದು ಸಭೆಯ ತೀರ್ಮಾನವಾಯಿತು. ಪ್ರತಿ ಸರ್ಕಲ್ ಕಾಂಗ್ರೆಸ್ ಕಮಿಟಿ ಪ್ರದೇಶದಲ್ಲಿ ಪ್ರತಿ 20,000 ಜನ ಸಂಖ್ಯೆಗೆ ಒಂದೊಂದು ಕಾಂಗ್ರೆಸ್ ಕಮಿಟಿಯನ್ನು ಸ್ಥಾಪಿಸುವ ಕುರಿತು ಸರ್ಕಲ್ ಕಾಂಗ್ರೆಸ್ ಸಮಿತಿಗಳಿಂದ ಸೂಚನೆ ಪಡೆಯಬೇಕೆಂಬ ನಿರ್ಣಯವಾಯಿತು.

ಕುಮಾರ ಜಯಪ್ರಕಾಶ
(ವಿಜಯಲಕ್ಷ್ಮಿ ಗಾರ್ಡನಿನ ಮ್ಹಾಲಕ ಶ್ರೀ ಎಮ್. ಲಕ್ಷ್ಮಣ, ಅವರ ಅಳಿಯ)

ಈತನ ಎಂಟನೆ ವರ್ಷದ ಹುಟ್ಟುಹಬ್ಬವು ತಾ. 22—6—56ರಂದು ವಿಜಯಲಕ್ಷ್ಮಿ ಗಾರ್ಡನಿನ ಕುಟೀರದಲ್ಲಿ ಗೆಳೆಯ ಸಹಭಾಗಿಗಳ ನೇತರ ಕೂಡುವಿಕೆಯಿಂದ ಆಚರಿಸಲ್ಪಟ್ಟಿತು ಈತನು ಮಂಗಳೂರು ಗಣಪತಿ ಬುನಾದಿ ಶಾಲೆಯಲ್ಲಿ ಎರಡನೆ ತರಗತಿಯಲ್ಲಿ ಓದುತ್ತಿರುವನು.

ಪೋಲೀಸು ಕುಟುಂಬದವರ ಶ್ರೇಯೋಭಿವೃದ್ಧಿ ಕೇಂದ್ರ ಕಟ್ಟಡದ ಉದ್ಘಾಟನೆ— ಮಂಗಳೂರಲ್ಲಿ ಪೋಲೀಸು ಕುಟುಂಬದವರ ಶ್ರೇಯೋಭಿವೃದ್ಧಿ ಕೇಂದ್ರಕ್ಕಾಗಿ ಕಟ್ಟಿಸಿದ ಹೊಸ ಕಟ್ಟಡದ ಉದ್ಘಾಟನೆಯನ್ನು ತಾ 19ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮ್ ಅವರು ನೆರವೇರಿಸುತ್ತಾ, ಸ್ವತಂತ್ರ ಭಾರತದಲ್ಲಿ ಪೋಲೀಸು ಮತ್ತು ಜನತೆಯೊಳಗಿನ ಪರಸ್ಪರ ಸೌಹಾರ್ದ ಸಹಕಾರ ಬೆಳೆದುಬರುತ್ತಿರುವ ಈ ಶುಭ ಮುಹೂರ್ತದಲ್ಲಿ ಸ್ಥಳೀಯ ಅಭಿವೃದ್ಧಿ ಯೋಜನೆಯನ್ವಯ ಈ ನೂತನ ಭವನವು ಅಸ್ತಿತ್ವಕ್ಕೆ ಬಂದುದು ಸಂತೋಷಕರವೆಂದರು. ಆರಂಭದಲ್ಲಿ ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ ಶ್ರೀ ಎಸ್. ಕೃಷ್ಣ ಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು.

ರೈಲ್ವೆಯಲ್ಲಿ ಪ್ರವಾಸ ರಿಯಾಯತಿ ಟಿಕೇಟುಗಳು

ಭಾರತ ಸರಕಾರದ ರೈಲ್ವೆ ಖಾತೆಯ ಮಂತ್ರಿಗಳು 1956–57ರ ಆಯವ್ಯಯ ಅಂದಾಜನ್ನು ಮಂಡಿಸುವಾಗ ತಿಳಿಸಿದಂತೆ, ಒಂದು, ಎರಡು ಮತ್ತು ಮೂರನೆಯ ತರಗತಿ ಪ್ರಯಾಣಿಕರಿಗೆ 1956ರ ಜುಲೈ 15ರಿಂದ ಸಪ್ಟೆಂಬರ್ 15ರ ವರೆಗೆ ಎಲ್ಲಾ ರೈಲ್ವೆಗಳಲ್ಲಿ ಯೂ ಒಂದೂವರೆ ಟಿಕೆಟ್ ದರದಲ್ಲಿ ರಿಯಾಯತಿ ರಿಟರ್ನ್ ಟಿಕೆಟ್‌ಗಳನ್ನು ಕೊಡಲು ನಿರ್ಧರಿಸಲಾಗಿದೆ.

ರಿಟರ್ನ್ ಟಿಕೆಟ್‌ಗಳನ್ನು 300 ಮೈಲುಗಳಿಗೂ ಹೆಚ್ಚು ದೂರವಿರುವ ರೈಲು ನಿಲ್ದಾಣಗಳಿಗೆ ಮಾತ್ರ ಕೊಡಲಾಗುವುದು. ಹಿಂತಿರುಗಿ ಬರುವ ಪ್ರಯಾಣದಲ್ಲಿ ಮಧ್ಯೆ ಮಧ್ಯೆ ಇಳಿಯಲು ಅವಕಾಶವಿರುವುದಿಲ್ಲ. ಆದರೆ ಹೋಗುವ ಪ್ರಯಾಣದಲ್ಲಿ ಒಂದೇ ಪ್ರಯಾಣದ ಟಿಕೆಟ್‌ಗಳಿಗೆ ಅನ್ವಯಿಸುವ ಸಾಮಾನ್ಯ ನಿಯಮಗಳನುಸಾರವಾಗಿ ಇಳಿಯುವುದಕ್ಕೆ ಅವಕಾಶವಿರುತ್ತದೆ.

ಪ್ರಯಾಣಿಕರು ತಮ್ಮ ರಿಟರ್ನ್ ಅರ್ಧ ಟಿಕೆಟ್‌ಗಳನ್ನು, ತಾವು ಹಿಂತಿರುಗಿ ಬರುವ ಪ್ರಯಾಣವನ್ನು ಆರಂಭಿಸುವ ರೈಲು ನಿಲ್ದಾಣಗಳಲ್ಲಿ ಕೊಟ್ಟು ಅವುಗಳ ಮೇಲೆ ತಾವು ಹಿಂತಿರುಗಿ ಬರುವ ಪ್ರಯಾಣವನ್ನು ಆರಂಭಿಸಿದ ತಾರೀಕನ್ನು ನಮೂದಿಸಿಕೊಳ್ಳಬೇಕು. ಇದು ಬಹಳ ಮುಖ್ಯವಾದ ಕೆಲಸವಾಗಿದೆ. ಏಕೆಂದರೆ, ತಾರೀಕನ್ನು ನಮೂದಿಸದ ರಿಟರ್ನ್ ಅರ್ಧ ಟಿಕೆಟ್‌ಗಳನ್ನು ಪಡೆದ ಪ್ರಯಾಣಿಕರನ್ನು ಟಿಕೆಟ್ ಇಲ್ಲದ ಪ್ರಯಾಣಿಕರೆಂದೇ ಭಾವಿಸಲಾಗುತ್ತದೆ. ಟಿಕೇಟುಗಳ ದುರುಪಯೋಗವನ್ನು ತಡೆಗಟ್ಟುವುದೇ ಈ ನಿರ್ಬಂಧದ ಉದ್ದೇಶ.

301ರಿಂದ500 ಮೈಲುಗಳವರೆಗಿನದೂರಕ್ಕೆ ಪ್ರಯಾಣಮಾಡುವವರಿಗೆ ರಿಟರ್ನ್‌ಟಿಕೆಟ್‌ಗಳನ್ನು ಉಪಯೋಗಿಸುವುದಕ್ಕೆ 20 ದಿನಗಳ ಅವಧಿಯನ್ನು ಕೊಡಲಾಗುತ್ತದೆ. 501ರಿಂದ 750 ಮೈಲುಗಳವರೆಗಿನ ದೂರಕ್ಕೆ ಪ್ರಯಾಣ ಮಾಡುವವರಿಗೆ 25 ದಿನಗಳ 751 ಮೈಲುಗಳಿಗೆ ಮೇಲ್ಪಟ್ಟ ದೂರಕ್ಕೆ ಪ್ರಯಾಣಮಾಡುವವರಿಗೆ 30 ದಿನಗಳ ಅವಕಾಶವು ನೀಡಲ್ಪಡುತ್ತದೆ.

ಆದರೆ, 1956ರ ಸಪ್ಟೆಂಬರ್ 30ನೇ ದಿನದ ಮಧ್ಯರಾತ್ರಿಯ ನಂತರ ಈ ರಿಟರ್ನ್ ಟಿಕೆಟ್‌ಗಳು ಉಪಯೋಗವಾಗುವುದಿಲ್ಲ. ಯಾವ ವರ್ಗದ ಪ್ರಯಾಣಿಕರಿಗೆಯೇ ಆಗಲಿ, 1956ನೇ ಸಪ್ಟಂಬರದ 10ನೇ ತಾರೀಕಿನಿಂದ 15ನೇ ತಾರೀಕಿನ ಮಧ್ಯಾವಧಿಯಲ್ಲಿ ಕೊಡಲಾದ ರಿಟರ್ನ್ ಟಿಕೆಟ್‌ಗಳು 1956 ಸಪ್ಟೆಂಬರ್ 30ರ ಒಳಗೆ ಹೊರಟ ಸ್ಥಳಕ್ಕೆ ಹಿಂತಿರುಗಿ ಬರುವ ಪ್ರಯಾಣಕ್ಕೆ ಮಾತ್ರ ಉಪಯುಕ್ತವಾಗಿರುವುವೆಂಬುದೇ ಇದರ ಅರ್ಥ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 640/1955.

...ಳಸಿ ಬ್ಯಾ... — ವಾದಿಳು

...ಡೆಯಿಂದ ಜನರಲ್ ಏಜಂಟ್ ಬಿ. ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ.

ಮತ್ತು

ರಘುನಾಥ ಮಧ್ಯಸ್ತ ಕೂಡಾ —ಪ್ರತಿವಾದಿ

ಇವರೊಳಗೆ

ಪ್ರತಿ 1. ರಘುನಾಥ ಮಧ್ಯಸ್ತ-ಸಬ್ಬಾರಾಯ ಮಧ್ಯಸ್ತರ ಮಗ. 2. ಭಾಗೀರಥಾಮಧ್ಯಸ್ತ-1ನೇ ಪ್ರತಿವಾದಿ ಮಗ. ಉಡುಪಿ ತಾಲೂಕು ಸಾಲಿಗ್ರಾಮದ ಗ್ರಾಮ.

ವಾದಿಳ ಗಂಡ ನಾಗಪ್ಪ ನ್ಯಾಕರು ಮತ್ತು 3ನೇ ಪ್ರತಿವಾದಿರ ತಂದೆ 1ನೇ ಪ್ರತಿವಾದಿ ಹಾ ರಿ. ನಿರಿ ತಾ. 12—5—48ರಲ್ಲಿ ಮಾಡಿಕೊಂಡ ಮೂಲಗೇಣಿ ಚೀಟಿನ ಕಾರಣದ ದಾವಾ ಆಸ್ತಿಯ ಬಾಬ್ತು ವಾದಿಳಿಗೆ ಆ ಕಳದ ವಿಕೃತಿ ಸಂ॥ದ ಆಗಾಯಿತು ... ಸಂ॥ರದ ವರೆಗಿನವರುಷಗಳಲ್ಲಿ ... ಕಾಣ್ಸದ ಮೇರೆಗಿನ ಗೇಣಿ ಬಾಕಿಮಾಡಿಕೊಂಡ ದೆಸೆಯಿಂದ ಮೂಲಗೇಣಿ ರದ್ದಾದ ದಾವಾ ಆಸ್ತಿ ಸ್ವಾಧೀನತೆಗೂ ಸದರಿ ವರುಷಗಳಲ್ಲಿ ಬಾಕಿಮಾಡಿಕೊಂಡ ಗೇಣಿ ವ, ಬಡ್ಡಿ ... ಮನ್ಮಥ ಸಂ॥ರದ ವಾಮಾಶ್ಯಾ ಗೇಣಿ ... ಸಂಪ್ರದ ಹುಟ್ಟುವಳ್ಳಿಗೂ 1, 4ನೇ ಪ್ರತಿವಾದಿರ ಆಕ್ಷೇಪದ ಉಳುರು ಶಿವ್ಯಾ 3, 4ನೇ ಪ್ರತಿವಾದಿರಿಂದ ಸದರಿ ಆಸ್ತಿ ಸ್ವಾಧೀನ ... ಸಹಾ ರುಪ್ಯಾ 1397-15-10ರ ಮೊಬಲಗಿಗೆ ವಾದಿಳು ಪ್ರತಿವಾದಿರ ಮೇಲೆ ವಾಖಲುಮಾಡಿದ ಸದರಿ ವ್ಯಾಜ್ಯವು ತಾರೀಕು —7—1956ಕ್ಕೆ ತನಿಖೆ ಬಗ್ಗೆ ಮುಂದೋಗಿಯದೆ. ಆದಿನ್ನ ಸದರಿ 1, 2ನೇ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ ಸದರಿಕೋರ್ಟಿಮುಂದೆ ಹಾಜರಾಗಿ ಉದರಿಸದೆಯಿದ್ದರೆ ಅವರ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಸದರಿ 1, 2ನೇ ಪ್ರತಿವಾದಿರಿಗೆ ಈ ಮೂಲಕ ತಿಳಿಯಪಡಿಸಲಾಗಿಯದೆ.

M. Damoder Kamath.
Advocate for Plff.

Udipi 20-6-56.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 48/56

ತಿಮ್ಮಯ್ಯ ಪೂಲ್ಯ — ವಾದಿ.
ದೇಜಪ್ಪ ಮಡಿವಾಳ ಕೂಡಾ 7 ಜನರು.
—ಪ್ರತಿವಾದಿರು.

3ನೇ ಪ್ರತಿವಾದಿ ಅಪ್ಪಿ. ಕೊರಪೊಳು ಹೆಂಗಸಿನ ಮಗಳು ಬೆಳ್ತಂಗಡಿ ತಾಲೂಕು ಬರಿಮಾರು ಗ್ರಾಮದಲ್ಲಿ ಇರುವವಳು.

ಇವಳಿಗೆ ತಿಳಿಸುವುದೇನೆಂದರೆ, ವಾದಿಯು ಅಡವಿನ ಹಣ ವಸೂಲಿಯ ಬಗ್ಗೆ ದಾಖಲುಮಾಡಿದ ಈ ದಾವೆಯು ತಾ. 4-7-56ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಹಾಜರಾಗಿ ಉಪಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for Plaintiff.

ಪುತ್ತೂರು ತಾ. 23-6-56.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತವಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA-40.

ಸ್ಟಾಕಿಸ್ಟರು: ಶಾ ಕಂಪೆನಿ, ಮಂಗಳೂರು—1.

ಒಂದೊಂದಾಗಿ "ಅಜೇಯ" ಶಿಖರಗಳ ಸೋಲು

(೩ನೇ ಪುಟದಿಂದ)

ದಕ್ಷಿಣ ಪಕ್ಕುವಿನಲ್ಲಿ ನಿರ್ಮಿಸಿದ ಶಿಬಿರದಿಂದ ನೇರಾಗಿ ಆರೋಹಣಗೈದು ಲ್ಹೋತ್ಸೆ ಶಿಖರವನ್ನು ಜಯಿಸಲಾಯಿತು. ಈ ಶಿಬಿರದಿಂದ ೧೯೦೦ ಅಡಿ ಎತ್ತರದ ಪರ್ವತ ಶಿಖರವನ್ನು ಮುಟ್ಟಲು ೫ ತಾಸುಗಳ ಅವಧಿ ಸಾಕಾಯಿತು. ಅಲ್ಲಿ ಅವರು ನೇಪಾಳ ಮತ್ತು ಸ್ವಿಜರಲೇಂಡಿನ ಧ್ವಜಗಳನ್ನೂರಿದರು. ಮೂರನೇ ಶಿಬಿರದಲ್ಲಿ ನಿಂತಿದ್ದವರಿಗೆ ಇವರು ಚೆನ್ನಾಗಿ ಕಾಣಿಸುತ್ತಿದ್ದರು. ಸುಮಾರು ಅರ್ಧತಾಸಿನಷ್ಟು ಸಮಯ ಶಿಖರದಲ್ಲಿ ಕಳೆದು ಶಿಬಿರಕ್ಕೆ ಹಿಂದೆಬಂದರು. ಬರುವಾಗ ಈ ಧ್ವಜಗಳನ್ನೂ ವಾಪಸು ತಂದಿರುವರೆಂದು ತಿಳಿಯುತ್ತದೆ.

ಲ್ಹೋತ್ಸೆ ವಿಜಯಿ ಲೂಷಿಂಗರರು ತಂಡದ ಉದ್ದೇಶದಲ್ಲಿ ಯಶಸ್ಸನ್ನು ಸಾಧಿಸಿಕೊಡುವರೆಂಬ ನಂಬಿಕೆ ಯಾರಿಗೂ ಇರಲಿಲ್ಲ. ಏಕೆಂದರೆ ಅವರಿಗೆ ನಾಮ್ಚೆ ಬಜಾರಿನಲ್ಲಿರುವಾಗಲೇ ಅಪೆಂಡಿಸಿಸೆಂಬ ರೋಗಬಾಧೆ ಉಂಟಾಯಿತು. ಶೀಘ್ರವಾಗಿ ಶಸ್ತ್ರಕ್ರಿಯೆಯ ಸಲಕರಣೆಗಳನ್ನು ಕಳಿಸಿಕೊಡಬೇಕೆಂದು ಸುದ್ದಿಯನ್ನು ಕಳಿಸಲಾದರೂ ತಂಡದ ಧುರೀಣರಿಗೆ ಹೆಚ್ಚಿನ ಆಶೆ ಇರಲಿಲ್ಲ. ಆದರೆ ತಂಡದ ತಜ್ಞ ವೈದ್ಯರಾದ ಡಾ. ಎಡ್ವರ್ಡ್ ಲ್ಯುಥೋಲ್ಡರು ಸೂಜಿಮದ್ದು ಹಾಗು ಆ್ಯಂಟಿ-ಬಯೋಟಿಕುಗಳನ್ನು ಪ್ರಯೋಗಿಸಿದುದರಿಂದ ರೋಗಬಾಧೆ ತುಸು ಉಪಶಮನವಾಯಿತು. ಆದರೆ ಪೂರ್ಣ ಗುಣವಾಗಲು ಇನ್ನೂ ಚಿಕಿತ್ಸೆ ನಡೆಸುವುದು ಅತ್ಯಾವಶ್ಯಕ.

ಲೂಷಿಂಗರರಿಗನುಸಾರ ಲ್ಹೋತ್ಸೆಯ ಕೊನೆಯ ಕೆಲವು ನೂರು ಅಡಿಗಳ ದೂರ ಎವರೆಸ್ಟಿಗಿಂತಲೂ ಬಹಳ ಇಳುಕಲಾಗಿದೆ ಆದರೆ ಲ್ಹೋತ್ಸೆಗಿಂತಲೂ ಎವರೆಸ್ಟಿನ ತುದಿಯು ೧೨೦೦ ಅಡಿಯಷ್ಟು ಹೆಚ್ಚಿಗಿರುವುದರಿಂದ ಎರಡೂ ಶಿಖರಗಳನ್ನು ಹತ್ತುವ ಶ್ರಮ ಸರಿಸಮವಾದೀತು. ಈ ಮಹನೀಯರ ಅಸ್ವಾಸ್ಥ್ಯವಿಲ್ಲದಿದ್ದರೆ ತಂಡವು ಪರ್ವತ ಪ್ರದೇಶದಲ್ಲಿ ಸ್ವಲ್ಪ ಹೆಚ್ಚು ದಿನಗಳನ್ನು ಕಳೆಯುವ ಇಚ್ಛೆಹೊಂದಿತ್ತೆಂದು ಹೇಳಲಾಗುತ್ತದೆ.

ಸ್ವಿಜರಲೇಂಡಿನ ಈ ತಂಡದಲ್ಲಿ ಶೇರ್ಪಾಗಳು ಇದ್ದರೂ ಕೊನೆಯ ಹೋರಾಟಕ್ಕೆ ಅವರು ಯಾರೂ ಅಣಿಯಾಗಲಿಲ್ಲ. ಪಾಸಂಗ್ ದಾವನ್ ಲಾಮಾ ಎಂಬೊಬ್ಬನು ಮಾತ್ರ ಅಂಥ ಪ್ರಯತ್ನ ಮಾಡಬಲ್ಲವನಾಗಿದ್ದನಂತೆ; ಆದರೆ ಈತನು ಆರೋಹಣ ಕಾಲದಲ್ಲಿ ಅಸ್ವಸ್ಥಗೊಂಡುದರಿಂದ ನಾಮ್ಚೆ ಬಜಾರಿನ ಮೂಲಕೇಂದ್ರಕ್ಕೆ ಆತನನ್ನು ಕಳಿಸಿಕೊಡಬೇಕಾಯಿತು.

ಇಷ್ಟೆಂದಮಾತ್ರಕ್ಕೆ ಈ ಸಲ ಶೇರ್ಪಾ ಜನರಿಗೆ ಕೀರ್ತಿತಂದ ಘಟನೆ ನಡೆಯಲಿಲ್ಲವೆಂದು ನಿರಾಶರಾಗುವುದೇನು ಬೇಡ—ಮೂನಸ್ಲು ಶಿಖರವನ್ನೇರಿದ ಜಪಾನಿ ತಂಡದ ನಾಲ್ವರು ಸದಸ್ಯರಲ್ಲಿ ಗ್ಯಾಲ್ಜೇನ್ ಎಂಬ ಶೇರ್ಪಾ ಸಾಹಸಿ ಇದ್ದರು. ಇವರೂ ಇಮಾನಿಷಿ ಎಂಬವರೂ ಮೇ ೯ರಂದು ಅಂದಿನ ವರೆಗೆ ಜಗತ್ತಿನ ಅಜೇಯವೆನಿಸಿದ್ದ ಅತ್ಯುನ್ನತ ಶಿಖರಗಳಲ್ಲಿ ಎಂಟನೆಯದಾದ ಮೂನಸ್ಲು (ಎತ್ತರ: ೨೬೭೬೦ ಅಡಿ) ವನ್ನು ಏರಿದರು. ಮೇ ೧೧ರಂದು ಕಾಟೊ ಮತ್ತು ಹಿಗೆತ ಎಂಬ ಮತ್ತಿಬ್ಬರು ಸಹ ಶಿಖರವನ್ನೇರಿದರು.

ಜಪಾನೀಯರು ಮೂನಸ್ಲು ಶಿಖರವನ್ನೇರಲು ಹೋಗಲು ಮಾಡಿದ ನಾಲ್ಕನೇ ಪ್ರಯತ್ನ ಈ ಸಲದ್ದಾಗಿದೆ. ೧೯೫೨ರಲ್ಲಿ ಒಂದು ತಂಡವು ಬಂದು ಹತ್ತುವ ಅಂದಾಜನ್ನು ಮಾಡಿಕೊಳ್ಳಲು ಸಾಕಷ್ಟು ಮಾಹಿತಿ ಸಂಗ್ರಹಿಸಿ, ಮರಳಿತು. ಮರುವರ್ಷ ಬಂದ ತಂಡವು ಪ್ರತಿಕೂಲ ಹವಮಾನದ ದೆಸೆಯಿಂದ ನಿರಾಶೆಗೊಂಡು ಹಿಂತಿರುಗಿತು. ೧೯೫೪ರಲ್ಲಿ ಮಾಡಿದ ಎರಡನೇ ಪ್ರಯತ್ನವು ಮೂನಸ್ಲು ಶಿಖರದ ಬುಡದಲ್ಲಿರುವ ಸಾಮ ಎಂಬ ಹಳ್ಳಿಯ ಜನರು ಪರ್ವತವನ್ನೇರಿ ಅಪವಿತ್ರಗೊಳಿಸಬಾರದೆಂದು ಗೊಂದಲಹಾಕಿದ್ದರಿಂದ ವಿಫಲವಾಯಿತು. ಕಳೆದ ವರ್ಷ ಪುನಃ ಸಾಮಾನ್ಯಪ್ರಯತ್ನವೊಂದು ನಡೆದು ಮುಂಜಾಗರೂಕತೆಯ ಬಗ್ಗೆ ಮಾಹಿತಿಪಡೆಯಲಾಯಿತು. ಈ ಸಲ ಸಾಮಗ್ರಾಮೀಣರಿಂದ ಆತಂಕವುಂಟಾದಾಗ, ಸರಕಾರಿ ಶಕ್ತಿಯನ್ನುಪಯೋಗಿಸಿ ಅದನ್ನು ಅಣಗಿಸಲಾಯಿತು.

ಹನ್ನೆರಡು ಮಂದಿಯ ಜಪಾನಿ ತಂಡವು ಮಾರ್ಚ ೧೧ರಂದು ಕಾಠಮಾಂಡುವಿನಿಂದ ಹೊರಟಿದ್ದಿತು. ಸಾಮ ಹಳ್ಳಿಯನ್ನು ಆ ತಿಂಗಳ ೨೮ರಂದು ಮುಟ್ಟಿ, ಜನರ ಗೊಂದಲದ ದೆಸೆಯಿಂದ ಎರಡು ದಿನ ಅಲ್ಲೇ ಉಳಿದರು. ಮೂಲ ಶಿಬಿರವನ್ನು ತಂಡವು ಎಪ್ರೀಲಿನ ೧ನೇ ತಾರೀಕು ಏರ್ಪಡಿಸಿಕೊಂಡಿತು. ಒಟ್ಟು ಆರು ಶಿಬಿರಗಳನ್ನು ರಚಿಸಲಾಯಿತು.

ಆರೋಹಣ ಕಾಲದ ತಮ್ಮ ಚಿರಸ್ಮರಣೀಯ ಅನುಭವವನ್ನು ವರ್ಣಿಸುತ್ತಾ ಇಮಾನಿಷಿಯವರು ಹೀಗೆಂದಿದ್ದಾರೆ: "೨೩೬೦೦ ಅಡಿ ಎತ್ತರದಲ್ಲಿ ಏರ್ಪಡಿಸಿದ್ದ ನಮ್ಮ ಐದನೇ ಶಿಬಿರಕ್ಕೂ ೨೧೫೦೦ ಅಡಿ ಎತ್ತರದಲ್ಲಿ ರಚಿಸಿದ್ದ ನಾಲ್ಕನೇ ಶಿಬಿರಕ್ಕೂ ನಡುವೆ ಘಟಿಸಿದ ಹಿಮಪಾತವನ್ನು ನಾನು ಮರೆಯಲಾರೆ—ನಾಲ್ಕನೇ ಶಿಬಿರದಿಂದ ಕೇವಲ ೧೧೦ ಗಜ ದೂರದಲ್ಲಿ ಅದು ಉರುಳಿತು; ಮೂಲ ಶಿಬಿರದಿಂದ ನೋಡಿದಾಗ ನಾಲ್ಕನೇ ಶಿಬಿರವೇ ಉಧ್ವಸ್ತವಾಯಿತೆಂಬ ಭಾವನೆಯನ್ನುಂಟುಮಾಡಿತು. ಆಗ ನಾನು ೨೫೬೦೦ ಅಡಿ ಎತ್ತರದಲ್ಲಿ ರಚಿಸಿದ್ದ ಆರನೇ ಶಿಬಿರದಲ್ಲಿದ್ದೆ; ಎರಡು ನಿಮಿಷಗಳ ಕಾಲವನ್ನು ಉರುಳಲು ತೆಗೆದುಕೊಂಡ ಈ ಹಿಮಪಾತವು ಭೀಕರ ಶಬ್ದ ಮಾಡಿತು."

ಶಿಖರದ ಮೇಲಿನ ತನ್ನ ಅನುಭವವನ್ನು ಅವರು ವಿವರಿಸುತ್ತಾ ಪೌರಸ್ತ್ಯ ಸಂಸ್ಕೃತಿಗನುಸಾರವಾಗಿ ತನಗೆ ಈ ಯಶಸ್ಸನ್ನು ದಯಪಾಲಿಸಿದ ದೇವರನ್ನು ಕೃತಜ್ಞತೆಯಿಂದ ನೆನೆದೆನೆಂದು ಅವರು ಹೇಳಿದ್ದಾರೆ. ಉದ್ವೇಗ ಅಥವಾ ವಿಕಾರಕ್ಕೆ ಬಲಿಯಾಗಲಿಲ್ಲ. ಒಂದೂವರೆ ತಾಸು ಸಮಯ ಅಲ್ಲಿದ್ದು ಸುತ್ತಣ ಸುಂದರ ನೋಟವನ್ನು ನೋಡಿ ಆರನೇ ಶಿಬಿರಕ್ಕೆ ಮರಳಿ ಬಂದೆವು; ಅಲ್ಲಿಂದ ವಿಜಯ ಸಂಪಾದನೆಯಾಯಿತೆಂಬ ಸುದ್ದಿಯನ್ನು ೧೮೫೦೦ ಅಡಿ ಎತ್ತರದಲ್ಲಿ ರಚಿಸಲಾದ ಎರಡನೇ ಶಿಬಿರದಲ್ಲಿದ್ದ ತಂಡದ ನಾಯಕ ಮೈ. ಮಾಕಿಯವರಿಗೆ ಕೂಗಿ ಹೇಳಲಾಯಿತು."

ಸುಮಾರು ೧೮೦೦೦ ಅಡಿ ಎತ್ತರದಲ್ಲಿಯೂ ಕಾಗೆಗಳು ಮತ್ತು ಕೆಲವು ಬಗೆಯ ಕೀಟಗಳು ಹಾರಾಡುತ್ತಿದ್ದವಂತೆ; ಆದರೆ ಬಲವಾದ ಗಾಳಿಯ ದೆಸೆಯಿಂದ ಅವು ಮೇಲೆತ್ತಲ್ಪಟ್ಟಿರಬೇಕೆಂಬುದೇ ಇಮಾನಿಷಿಯವರ ಅಭಿಪ್ರಾಯ. ಈ ತಂಡವು ಶಿಖರದಲ್ಲಿ ಚಿತ್ರಗ್ರಾಹಕ ಯಂತ್ರವೊಂದನ್ನು ಬಿಟ್ಟುಬಂದಿದೆ ಎಂಬ ಸುದ್ದಿ ಇದ್ದಿತು—ಇದು ನಿರಾಧಾರವಾದುದೆಂದೂ ಆದರೆ ಸುಮಾರು ೨೦೦ ಅಡಿಯಷ್ಟು ಚಿತ್ರಗಳನ್ನಿಳಿಸಿದ್ದ ಚಲಚ್ಚಿತ್ರ ಗ್ರಾಹಕ ಯಂತ್ರವೊಂದು ಪರ್ವತದ ಕಿಬ್ಬದಿಯಲ್ಲಿ ಕೆಲವು ನೂರು ಅಡಿಗಳಷ್ಟು ಉರುಳಿ ಕೈತಪ್ಪಿಹೋಯಿತೆಂದೂ ಚಿತ್ರ ತೆಗೆಯುವ ಬೇರೆ ಯಂತ್ರಗಳಿದ್ದುದರಿಂದ ಈ ಮಟ್ಟಿಗೆ ವಿಶೇಷ ತೊಂದರೆಯಾಗಲಿಲ್ಲವೆಂದೂ ಧುರೀಣರು ಸ್ಪಷ್ಟಪಡಿಸಿದ್ದಾರೆ. ಜಪಾನಿನಿಂದ ೧೯೫೮ ಮುಂದಿನ ಇನ್ನೊಂದು ತಂಡವು ಈಗ ಅನ್ನಪೂರ್ಣ ಶಿಖರವನ್ನೇರುವ ಎತ್ತುಗಡೆಯಲ್ಲಿದೆಯೆಂದೂ ಇವರ ಹೇಳಿಕೆಯಿಂದ ಗೊತ್ತಾಗುತ್ತದೆ. ಈ ಶಿಖರದ ಎತ್ತರ ೨೬೦೪೯ ಅಡಿ!

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸ್ಲು-ಪ-ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೇ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಈಡಿಟ್ಟ ಚಿನ್ನಾಭರಣಗಳನ್ನು ಇದೇ ಜುಲಾಯಿ ತಿಂಗಳ ತಾರೀಕು 9ನೇ ಸೋಮವಾರ ಅಪರಾಹ್ನ ಗಂಟೆ 3-0ಕ್ಕೆ—ಯಾ—ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಮಠಾರದಲ್ಲಿ ಬಹಿರಂಗವಾಗಿ ಹರಾಜು ಮಾಡಲಾದೀತು. ತಿಳಿದಿರಲಿ.

ಸಾಲದ ಜಂಜ್ರಾ		ಹೆಸರು ಮತ್ತು ವಿಳಾಸ	ಮೊಬಲಗು ರೂ.	ಆ.
123/54	ಶ್ರೀ.	ಯು. ಸುಬ್ರಹ್ಮಣ್ಯ ಬ್ಯಾರಿ, ಮಂಜುನಾಥ ಬ್ಯಾರಿಯವರ ಮಗ, ಉಳ್ಳೂರು, ಕಿರಿಮಂಜೇಶ್ವರ P.O	41	8
852/54	,,	— ಡಿ. —	695	8
316/54	,,	ಕಂಬ್ಳು ಶಿವರಾಮ ಸೇರುಗಾರ, ಮಲ್ಲಯ್ಯ ಸೇರುಗಾರರ ಮಗ, ಬೀಯಾರ, ಬೈಂದೂರು.	39	2
453/54	,,	ಜಿ. ರಾಮ, ಫೋರೆಸ್ಟ್ ಗಾರ್ಡ್, ಬೇಲಹಿತ್ಲು, ಉಪ್ಪುಂದ.	21	4
545/54	,	ಎಮ್. ವೆಂಕಟ್ರಮಣ ಸೇರುಗಾರ, ಮಡ್ಡೋಡಿ ಶೇಷಯ್ಯ ಸೇರುಗಾರರ ಮಗ, ಮಯ್ಯಾಡಿ.	35	7
601/54	,,	— ಡಿ —	45	6
609/54	,'	ಉಗ್ರಾಣಿ ನಾರಾಯಣ ಗಾಣಿಗ, ತಳಿಯಾರಿ, ಶಿರೂರು.	63	9
639/54	,,	ಕ್ಷೌರಿಕ ನಾರಾಯಣ, ನಾಪಿತ, ಬೈಂದೂರು.	12	6
1222/54	,,	ಹೊಸ್ನಯ್ಯನ ಮಂಜುನಾಥ ಸೇರುಗಾರ, ಅಣ್ಣಪ್ಪ ಸೇರುಗಾರರ ಮಗ, ಕೋಟೆಬಾಗಿಲು, ಪಡುವರಿ.	11	15
153/55	,,	ಬಿ. ಎಸ್. ರಾಮಕೃಷ್ಣ ಪೈ, ಮಂಜುನಾಥ ಪೈಯವರ ಮಗ, ವ್ಯಾಪಾರಿ, ಬಿಜೂರು	199	10
218/55	,,	ನಾಕಟ್ಟೆ ಶೇಷ ಶೆಟ್ಟಿ, ದಾರ ಸೆಟ್ಟರ ಅಳಿಯ, ಯಡ್ತರೆ ಗ್ರಾಮ, ಬೈಂದೂರು.	231	2
274/55	,,	ಸುಬ್ರಾಯ ಅಡಿಗ, ರಾಮಕೃಷ್ಣ ಅಡಿಗರ ಮಗ, ಹೊಡಿಲ್, ಗೋಳಿಹೊಳೆ ಗ್ರಾಮ, ಯೇಳಜಿತ.	44	8
321/55	,,	ಮಡ್ದೋಡಿ ರಾಮಕೃಷ್ಣ ಸೇರುಗಾರ, ಹನುಮಂತ ಸೇರುಗಾರರ ಮಗ, ಮಯ್ಯಾಡಿ.	103	15
175/55	,,	ಅಲ್ಪಾಡಿ ಶೇಷ ಶೆಟ್ಟಿ, ಬುದ್ಧಿವಂತ ಸೆಟ್ಟರ ಅಳಿಯ, ಕಾಲ್ತೋಡು ಗ್ರಾಮ, ಕಾಲ್ತೋಡು.	116	10
1202/55	,,	— ಡಿ. —	798	3
604/55	,,	ಶ್ರೀ. ಎಸ್. ಟಿ. ಸುಬ್ಬಯ್ಯ ಶೆಟ್ಟಿ, ಕುಪ್ಪಯ್ಯ ಸೆಟ್ಟರ ಅಳಿಯ, ತಿರ್ಕ ಸೆಟ್ಟರ ಮನೆ, ಶಿರೂರು.	54	15
946/55	,,	ಬಿ. ಶಂಕರ ಸೇರುಗಾರ, ವೆಂಕಟ್ರಮಣ ಸೇರುಗಾರರ ಮಗ, ವ್ಯಾಪಾರಿ, ಬಿಜೂರು.	382	15
1202/55	,,	ನಾಗೂರು ಹಿರಿಯಣ್ಣ ಸೆಟ್ಟಿ, ರಂಗಯ್ಯ ಸೆಟ್ಟರ ಅಳಿಯ, ಕಿರಿಮಂಜೇಶ್ವರ ಗ್ರಾಮ, ಕಿರಿಮಂಜೇಶ್ವರ.	616	4

ಬೈಂದೂರು, 22—6—56.

ಎಚ್ ರಾಜೀವ ಶೆಟ್ಟಿ, ಏಜಂಟ್.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 769/55.

ಶ್ರೀನಿವಾಸ ಐತಾಳ. —ವಾದಿ

ಮತ್ತು

ಚಂದಮ್ಮ ಸೆಡ್ತಿ ವಗೈರೆರು. —ಪ್ರತಿವಾದಿರು

ಇವರೊಳಗೆ

ಉಡುಪಿ ತಾಲೂಕು ಪಾರಂಪಳ್ಳಿ ಕಣ್ಣಯ್ಯನ ಮನೆ ನಾರಾಯಣ ಐತಾಳರ ಮಗ ಮೇಲ್ಕಂಡ ದಾವೆಯ ನಮ್ಮಮೆಂಟು 9ನೇ ಪ್ರತಿವಾದಿ ಚಂದ್ರಶೇಖರ ಐತಾಳರಿಗೆ ತಿಳಿಯಪಡಿಸಿದ್ದು.

ಮೇಲ್ಕಂಡ ದಾವೆಯು 1ರಿಂದ 7ನೇ ವರೆಗಿನ ಪ್ರತಿವಾದಿರಿಂದ ತಾ 19-9-1906ರ ರಿಜಿಸ್ಟ್ರಿ ಖಾಯಂ ಗೇಣಿಚೀಟಿನ ಮೇರೆಗೆ ತನ್ನ $\frac{13}{24}$ನೇ ಅಂಶಕ್ಕೆ ಅಕ್ಕಿ ಮೂಡೆಗೆ 10ಸೇರು 35ರಂತೆ ಬರತಕ್ಕ ಸಂದಸ ಸಂಕ್ರದ ಅವ್ಯಾತಿನ ಗೇಣಿಬಾಕಿ ಬಗ್ಗೆ ವಾದಿಯು ಮಾಡಿದ ಮೇಲ್ಕಂಡ ದಾವೆಯನ್ನು ತಾ. 3-7-56ಕ್ಕೆ ಅಖೈರತನಿಖೆಗೆ ಇಡಲಾಗಿಯದೆ. ಆ ಕುರಿತು ವ್ಯವಹರಿಸುವದಿದ್ದರೆ ಸದರಿ ದಿವಸ 11 ಗಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಜ್ಯಾಹಿರುಮಾಡಿಕೊಳ್ಳಬಹುದು.

A. V. N. Hebbar.
Pleador for Plff.

ಕುಂದಾಪುರ ತಾ. 19—6—56.

ಮಕ್ಕಳ ಮಗಿಪುಸ್ತಕ
0—1—.
ನವಯುಗ ಪ್ರೆಸ್, ಉಡುಪಿ.

ಹಿಮಾಲಯದ ರೂಪಕುಂಡ ಸರೋವರ

(೨ನೇ ಪುಟದಿಂದ)

ದುಕೊಂಡು ಹೋಗುವವನಿಗೆ ಸಿಗುವ ಪುಣ್ಯಕ್ಕೆ ಎಣೆಯೇ ಇಲ್ಲ. ಶಿಲಾ ಸಮುದ್ರವು ಪವಿತ್ರವಾದ ಮಂದಾಕಿನಿ ನದಿಯ ತಟದಲ್ಲಿದೆ. ಈ ಮಂದಾಕಿನಿ ನದಿಯೂ ರೂಪಕುಂಡದಿಂದ ಉದ್ಭವಿಸಿ ಹರಿಯುವ ರೂಪ ಗಂಗಾ ನದಿಯೂ ೭೮೦೦ ಅಡಿ ಎತ್ತರ ಪ್ರದೇಶದಲ್ಲಿರುವ ಸುತೋಲದಲ್ಲಿ ಸಂಗಮವಾಗುತ್ತವೆ.

ಅಲ್ಲಿಂದ ಮುಂದೆ ಮಂದಾಕಿನಿ ಎಂಬ ಹೆಸರಿನಿಂದಲೇ ನದಿಯು ಹರಿದು ಕೈಲಗಂಗಾ, ಪಿಂಡಾರಿ ನದಿ ಮತ್ತು ಅಲಕನಂದಾಗಳನ್ನು ಸೇರುತ್ತದೆ. ಮುಂದೆ ಈ ಅಲಕನಂದಾ ಎಂಬ ಹೆಸರೇ ಉಳಿದು ಅದು ದಾರಿಯಲ್ಲಿ ಭಾಗೀರಥಿಯೊಡನೆ ಸಂಗಮಗೊಂಡು, ಇವೆರಡೂ ಒಟ್ಟಿಗೆ ಗಂಗಾ ನದಿಯಾಗಿ ಹರಿಯುತ್ತವೆ. ಇದೇ ಗಂಗೆಗೆ ಪ್ರಯಾಗದಲ್ಲಿ ಯಮುನೆಯು ಮಿಲನವಾಗುತ್ತದೆ!

ಆದುದರಿಂದ ಮಂದಾಕಿನಿಯ ತಟದಲ್ಲಿ ಪಿತೃಗಳ ಪ್ರೀತ್ಯರ್ಥ ಪಿಂಡ ಪ್ರದಾನಾದಿ ಕಾರ್ಯಗಳನ್ನು ಮಾಡುವುದು ಅತ್ಯಂತ ಪ್ರಶಸ್ತವೆಂದು ಹೆಸರಾಗಿದೆ. "ಮಹಾ ಭಾರತ"ದಲ್ಲಿ ಶಿಲಾ ಸಮುದ್ರದ ಮಹಿಮಾವರ್ಣನೆ ಮಾಡುತ್ತಾ ಪಿತೃಪೂಜೆಗೂ ಈ ಸ್ಥಳಕ್ಕೂ ಇರುವ ಸಂಬಂಧವನ್ನು ಚಿತ್ರಿಸಲಾಗಿದೆ. ಈ ಜಗತ್ತಿನ ವ್ಯವಹಾರಗಳಿಂದ ವಿರಕ್ತರಾದ ಮಹರ್ಷಿಯರು ಶಿಲಾಸಮುದ್ರಕ್ಕೆ ಹೋಗಿ ಅಲ್ಲಿಂದ ರೂಪಕುಂಡಕ್ಕೆ ಇಳಿಯುವ ಕೊರಕಲಿಗೆ ಹಾರಿಬಿದ್ದು ಪ್ರಾಣ ತ್ಯಜಿಸುತ್ತಿದ್ದರು!

ಅನಾದಿಕಾಲದ ಈ ಸಂಪ್ರದಾಯವು ಕಾಲಕ್ರಮೇಣ ವಿರಳವಾಯಿತೆನ್ನಬಹುದು. ಈಗ ರೂಪಕುಂಡಕ್ಕೂ ರೂಪ ಗಂಗಾನದಿಗೂ ನಡುವೆ ಅಡ್ಡ ಗೋಡೆಯಂತೆ ಭೂಮಿಯು ಪದರಿಗೆ ಉಬ್ಬಿ ಬಂದಿದೆ. ನಂದಿಗೆ ಪರ್ವತವೆಂದು ಹೆಸರಾಗಿರುವ ಹಿಮಾಲಯದ ವಿನ್ಯಾಸಕ್ಕಿದು ನಿದರ್ಶನ ಈ ಗೋಡೆಯ ದೆಸೆಯಿಂದಲೇ ಇಂದು ರೂಪಕುಂಡದ ವಿಷಯದಲ್ಲಿ ಎಲ್ಲಿಲ್ಲದ ಕುತೂಹಲ! ಇದಲ್ಲದಿದ್ದರೆ ರೂಪಕುಂಡದಲ್ಲಿರುವ ಎಲ್ಲ ಅಸ್ಥಿಪಂಜರಾದಿಗಳನ್ನೂ ರೂಪಗಂಗೆಯ ಪವಿತ್ರ ಜಲವು ತನ್ನೊಂದಿಗೊಯ್ದು ತೊಳೆದು ಬಿಡುತ್ತಿದ್ದಿತೆಂಬುದು ಸ್ಪಷ್ಟ!

ವಿಜ್ಞಾನಿಗಳು ರೂಪಕುಂಡ ಪ್ರದೇಶದಲ್ಲಿ ಕಬ್ಬಿಣ, ಅಭ್ರಕ, ಗಂಧಕ, ಸಾಬೂನಿನ ಕಲ್ಲು ಇತ್ಯಾದಿ ಖನಿಜಪದಾರ್ಥಗಳ ಭಂಡಾರವಿರುವುದನ್ನು ಕಂಡುಕೊಂಡಿದ್ದಾರೆ. ಆದರೆ ಇವುಗಳ ಬಗ್ಗೆ ಸಂಶೋಧನೆ ನಡೆಸುವುದರಿಂದ ವಿಶೇಷ ಲಾಭವಾಗದೆಂದು ಅವರ ಅಭಿಪ್ರಾಯ. ಏಕೆಂದರೆ, ಈ ಪರ್ವತದ ಕಿಬ್ಬದಿಯಲ್ಲಿ ಸಾರಿಗೆ–ಸಂಪರ್ಕದ ಅನುಕೂಲತೆಯನ್ನೇರ್ಪಡಿಸುವುದು ತ್ರಾಸದಾಯಕವಾದ ಕಾರ್ಯ; ಅಲ್ಲದೆ ಹಿಮಾವೃತ ಪ್ರದೇಶದಲ್ಲಿ ಚಟುವಟಿಕೆ ನಡೆಸಿದರೂ ಎಷ್ಟು ನಡೆಸಬಹುದು?

ಆದುದರಿಂದ ಲಕ್ನೊ ವಿಶ್ವವಿದ್ಯಾನಿಲಯದ ವಿಜ್ಞಾನಿಗಳ ತಂಡವು ರೂಪಕುಂಡ ಪ್ರದೇಶವನ್ನೊಮ್ಮೆ ನೋಡಿ ಬಂದುದಕ್ಕಿಂತ ಹೆಚ್ಚು ಮಹತ್ವದ ಕೆಲಸವನ್ನು ಸದ್ಯಕ್ಕಂತೂ ಮಾಡಲಿಲ್ಲ. ಆದರೆ ಈ ಪ್ರವಾಸದ ಅನುಭವವು ಮಾತ್ರ ಬಹಳ ಆನಂದದಾಯಕವಾಗಿದೆ; ರೋಮಾಂಚಕವಾಗಿದೆ. ರೂಪಕುಂಡ ಪ್ರದೇಶಕ್ಕೆ ಈ ತಂಡದ ಪ್ರವಾಸದಿಂದ ಒಳ್ಳೆಯ ಹೆಸರು ಬಂದಿದೆಯೆಂದರೂ ಅದು ತಪ್ಪಾಗದು.

* *

ಲಕ್ನೋದಿಂದ ಹೊರಟ ಈ ತಂಡವು ರಾಣೀಖೇಟವನ್ನು ಮರುದಿನ ಸೇರಿತು. ಅಲ್ಲಿಂದ ಕೌಸಾನಿಯನ್ನು ಮುಟ್ಟಿ ಆ ರಾತ್ರಿಯನ್ನು ಅದೇ ಊರಿನಲ್ಲಿ ಕಳೆಯಿತು. ಮುಂದೆ ದಾಂಗೋಲಿ ಎಂಬ ಊರನ್ನು ಮುಟ್ಟಿತು. ಅಲ್ಲಿಂದಾಚೆಗೆ ಮೋಟಾರು ಓಡಾಡುವುದಿಲ್ಲ. ನಡೆದುಕೊಂಡೇ ಈ ತಂಡವು ೫೬೦೦ ಅಡಿ ಎತ್ತರ ಪ್ರದೇಶದ ಗ್ವಾಲ್ಡಂ ಎಂಬೂರನ್ನು ಸೇರಿತು; ಇದೊಂದು ಸುಂದರವಾದ ಬೆಟ್ಟದೂರು!

ಗ್ವಾಲ್ಡಂನಿಂದ ಹೊರಟು ವಿನಾಯಕ ಕಣಿವೆಯ ಮೂಲಕ ೬೧೯೦ ಅಡಿ ಎತ್ತರದಲ್ಲಿನ ಬಗ್ರಿಗಢ ಎಂಬುದನ್ನು ತಂಡತಲುಪಿತು. ಇಲ್ಲಿಗೆ ಹತ್ತಿರದಲ್ಲಿ ಲೋಹಾಜಂಗ್ ಎಂದು ಹೆಸರಾದ ಸ್ಥಳವಿದೆ ಇಲ್ಲಿ ಬಾಣಗಳೇ ಮುಖ್ಯಾಯುಧವಾಗಿದ್ದ ಯುದ್ಧವೊಂದು ನಡೆದಿತ್ತಾಗಿ ಪ್ರತೀತಿ. ಈ ಪ್ರದೇಶದ ದೇವಾಲಯಗಳಲ್ಲಿ ಈ ಬಾಣದ ಮೊನೆಗಳು ಈಗಲೂ ನೋಡಸಿಗುತ್ತವೆ. ಯುದ್ಧದ ಕಾಲ ಮಾತ್ರಗೊತ್ತಿಲ್ಲ. ಲೋಹಾಜಂಗಿನ ಕಣಿವೆಯನ್ನು ದಾಟಿ, ರೂಪಕುಂಡಕ್ಕೆ ಹೋಗುವ ಹಾದಿಯ ಕೊನೆಯ ಹಳ್ಳಿಯಾದ, ೮೫೦೦ ಅಡಿ ಎತ್ತರದಲ್ಲಿರುವ, ವಾನ್ ಎಂಬಲ್ಲಿಗೆ ತಂಡ ಮುಟ್ಟಿತು. ಈ ಹಳ್ಳಿಯ ದೃಶ್ಯ ಬಹಳ ಮನೋಹರ!

ತಂಡವು ಮುಂದೆ ಕುಕಿಂಖಾಲೋ ಕಣಿವೆಯನ್ನು ದಾಟಿ ಕಪ್ಪು ಪರ್ವತಗಳಿರುವ ಪಾಲ್ಪಲ್ಲ (೧೧೫೫೫ ಅಡಿ) ಎಂಬುದನ್ನು ಸೇರಿತು. ಮುಂದೆ ಬಾಗ್ವೊಚ (೧೩೪೫೦ ಅಡಿ), ಪಾತರ್ನಾಚೌನಿ (೧೪೦೦೦ ಅಡಿ), ಹಾಗು ಕೈಲ್ವ ವಿನಾಯಕ (೧೪೫೦೦ ಅಡಿ) ಎಂಬ ಪ್ರದೇಶವನ್ನು ಹಾದುಹೋಯಿತು. ಕೈಲ್ವ ವಿನಾಯಕದಲ್ಲಿ ಮೂರಡಿ ಎತ್ತರವೂ ಸುಮಾರು ೨೦೦ ರಾತಲು ಭಾರವೂ ಆದ ವಿನಾಯಕನ ಕಪ್ಪು ಕಲ್ಲಿನ ವಿಗ್ರಹವಿದೆ. ತಂದೆಯಾದ ಶಿವನಂತೆ ಈ ಗಣಪನೂ ಉರಗ ಭೂಷಣನಾಗಿರುವುದೊಂದು ವಿಶೇಷ.

ತಂಡದಲ್ಲಿಯ ಹೊರೆ ಹೊರುವ ಆಳುಗಳು ಚತುರ್ಭುಜಧಾರಿಯಾದ ಈ ವಿನಾಯಕನನ್ನು ಕಂಡವರೇ ಮೊಣಕಾಲೂರಿ ಭಕ್ತಿಯಿಂದ ನಮಿಸಿದರು. ರೂಪಕುಂಡದ ದ್ವಾರಪಾಲಕನೇ ಈ ಗಣಪನೆಂದು ಅವರ ವಿಶ್ವಾಸ. ಆದುದರಿಂದ ರೂಪಕುಂಡಕ್ಕೆ ಹೋಗಲು ಆತನ ಅಪ್ಪಣೆಯನ್ನು ಹೀಗೆ ಅವರು ಬೇಡಿ ಪಡೆದುಕೊಂಡರು. ತಂಡವು ಬಗ್ಗುಬಾಸ (೧೬೫೦೦ ಅಡಿ) ಎಂಬಲ್ಲಿ ಕೊನೆಯದಾಗಿ ತಳವೂರಿತು. ಇಲ್ಲಿಂದ ರೂಪಕುಂಡಕ್ಕೆ ಇರುವ ದೂರ ಸುಮಾರು ಒಂದು ಮೈಲು. ಬಗ್ಗುಬಾಸಕ್ಕೂ ರೂಪಕುಂಡಕ್ಕೂ ನಡುವೆ ಬಾಲ್ಪರಾಣಿಕಾ ಖುಲೇರ ಎಂಬುದೊಂದು ಜಾಗವಿದೆ. ಜಾನಪದ ಗೀತೆಯಲ್ಲಿ ಇದರ ಹಾಗು ಪಾತರ್ನಾಚೌನಿಯ ಖ್ಯಾತಿ ಬಹಳ.

ಲಕ್ನೊದಿಂದ ಹೊರಟ ಎಂಟು ದಿನಗಳ ತರುವಾಯ ತಂಡವು ಬಗ್ಗುಬಾಸದಿಂದ ರೂಪಕುಂಡಕ್ಕೆ ಹೊರಟಿತು. ಗಿರಿಕಂದರಗಳ ಈ ಮಾರ್ಗವು ಮಳೆಯಿಂದ ತೀರ ನಿಕೃಷ್ಟಾವಸ್ಥೆಗಿಳಿದಿದ್ದಿತು. ರೂಪಕುಂಡದ ಅಂಚನ್ನು ಸೇರಬೇಕಾದರೆ ತಂಡದ ಸದಸ್ಯರು ಸೊಂಟದ ವರೆಗೆ ಆಳವಾದ ಹಿಮದಲ್ಲಿ ದಾಟಿ ಹೋಗಬೇಕಾಯಿತು. ಸ್ವಲ್ಪ ಪ್ರಾಯ ಸಂದವರು ಮುಂದೆ ಕಾಲೆತ್ತಿ ಇಡಲಾರದೆ ಹಿಂದೆಯೇ ಉಳಿದರು. ವೇಗವಾಗಿ ಹಿಮಗಾಳಿ ಬೀಸುತ್ತಿದ್ದುದರಿಂದ ಕಣ್ಣಿಗೆ ಎದುರಿದ್ದುದ್ದೇನೂ ಸುಲಭದಲ್ಲಿ ಕಾಣಿಸುತ್ತಿರಲಿಲ್ಲ!

ತಂಡದಲ್ಲಿದ್ದ ಚಿತ್ರಗ್ರಾಹಕನು ರೂಪಕುಂಡದ ಸೊಬಗನ್ನು ಚೆನ್ನಾಗಿ ವೀಕ್ಷಿಸಲೆಂದು ಬೇರೆ ದಾರಿಯೊಂದನ್ನು ಕೆಲವು ಸಂಗಡಿಗರೊಂದಿಗೆ ತುಳಿದನಂತೆ—ಆಗ ಹತ್ತಿರದ ಬೆಟ್ಟದ ಕಿಬ್ಬದಿಯಿಂದ ಹಿಮಗಡ್ಡೆಯ ದೊಡ್ಡ ತುಣುಕೊಂದು ಕೆಳಗೆ ಬೀಳತೊಡಗಿದುದನ್ನು ಕಂಡನಂತೆ! ಒಡನೆಯೇ ದಾರಿ ತಪ್ಪಿಸಿ, ಆ ಹಿಮಪಾತದ ಆಘಾತದಿಂದ ಪಾರಾಗಲು ವಿಶೇಷವಾದ ಚಾಣಾಕ್ಷತೆಯೇ ಅವಶ್ಯವಾಯಿತು.

ತಂಡವನ್ನು ಅಗೆದು ಅಸ್ಥಿಪಂಜರಗಳನ್ನು ಹೊರತೆಗೆಯಲು ಹವಾಮಾನವು ಅನುಕೂಲವಿರಲಿಲ್ಲ ಚಿತ್ರಗಳನ್ನು ತೆಗೆಯಲಿಕ್ಕಾದರೂ ಬಹಳ ಯುಕ್ತಿಯನ್ನೆ ಅವಲಂಬಿಸಬೇಕಾಯಿತು. ಪರಿಸ್ಥಿತಿ ಇಷ್ಟು ಪ್ರಕೋಪವಾಗಿದ್ದರೂ ತಂಡದ ಕೆಲವು ಸಾಹಸಿಗರು ಶಿಲಾವರ್ಷವನ್ನು ಲೆಕ್ಕಿಸದೆ ಸಹಿಸಿಕೊಂಡು ರೂಪಕುಂಡದ ಒತ್ತಿಗೆ ಮೇಲ್ಗಡೆಯಲ್ಲಿರುವ ಶಿಲಾಸಮುದ್ರವನ್ನು ನೋಡಿ ಬಂದರು. ರೂಪಕುಂಡದಲ್ಲಿ ಅವರು ಕೈಗೋಲಿಗೊಂದು ಕರವಸ್ತ್ರವನ್ನು ಪತಾಕೆಯಂತೆ ಸುತ್ತಿ, ಮರಳಿದರು. ನೂರಾರು ಮಾದರಿ ವಸ್ತುಗಳೊಡನೆ (ಅಸ್ಥಿ ಪಂಜರವಿಲ್ಲದಿದ್ದರೂ) ಈ ತಂಡ ಲಕ್ನೋವನ್ನು ಸುರಕ್ಷಿತವಾಗಿ ಬಂದು ಸೇರಿತು.

೦ ೦

ಅನೇಕ ಕತೆಗಳು ರೂಪಕುಂಡದ ದುರಂತವನ್ನು ನಾನಾ ಬಗೆಯಾಗಿ ವರ್ಣಿಸುತ್ತವೆ ಎಂದು ಮೊದಲೇ ಹೇಳಿದ್ದೇವೆ. ಅಮೃತ ಬಜಾರ ಪತ್ರಿಕೆಯು ಕಳೆದ ವರ್ಷ ಪ್ರಕಟಿಸಿದ್ದ ಲೇಖನವೊಂದು ಈ ಕೆಲವು ಕತೆಗಳ ಚರ್ಚೆಯನ್ನು ನಡೆಸಿದ್ದಿತು. ಅವುಗಳಲ್ಲಿ ಒಂದು ಅಧರ್ಮ ಜೀವನವನ್ನು ನಡೆಸಿದ ಕೆಲವು ರೋಹಿತರನ್ನು ದೇವತೆಗಳು ಕುಟುಂಬ ಸಹಿತವಾಗಿ ನಾಶಮಾಡಿದರೆಂದು ಹೇಳುತ್ತದೆ. ಆದರೆ, ಇದು ವಿಜ್ಞಾನದ ಒರೆಗಲ್ಲಿನ ಪರೀಕ್ಷೆಗೆ ಎಷ್ಟಕ್ಕೂ ನಿಲುಕದು.

ಟಿಬೇಟಿನ ಜನರು ಗಢವಾಲದ ಮೇಲೆ ಧಾಳಿ ಮಾಡಿದಾಗ ಗಢವಾಲಿಗಳು ಒಂದು ಕಂದ ವನ್ನು ತೋಡಿ ಅದರಲ್ಲಿ ಟಿಬೇಟಿನ ಈ ಧಾಳಿಗಾರರು ಬೀಳುವಂತೆ ಮಾಡಿದರು; ಇದರ ಸೇಡು ತೀರಿಸಲು ಗಢವಾಲಿಗಳನ್ನು ಟಿಬೇಟಿನ ಜನರು ಒಂದು ಭೋಜನ ಕೂಟಕ್ಕೆ ಕರೆದು, ಅಲ್ಲಿ ವಿಷತಿನ್ನಿಸಿ ಕೊಂದು ಅವರೆಲ್ಲರನ್ನೂ ರೂಪಕುಂಡಕ್ಕೆ ಒಗೆದರು—ಎಂದು ಇನ್ನೊಂದು ಕತೆ. ಆದರೆ ಸತ್ತವರ ಅಸ್ಥಿಪಂಜರಗಳು ದೀರ್ಘವಾಗಿವೆ; ಆದುದರಿಂದ ಕುಳ್ಳರಾದ ಗಢವಾಲಿಗಳಿಗೂ ಈ ಎಲುಬುಗೂಡುಗಳಿಗೂ ಸಂಬಂಧವಿಲ್ಲವೆಂದು ವಿಜ್ಞರ ಮತ.

ಗಢವಾಲಿನ ರೂಪರಾವುತನೆಂಬ ಪಾಳೆಯಗಾರನು ಟಿಬೇಟಿನ ರಾಜಕುಮಾರನೊಡನೆ ಮಾಡಿದೊಂದು ಯುದ್ಧದಲ್ಲಿ ಸೋತು, ಸತ್ತ ಸ್ಥಳವೇ ರೂಪಕುಂಡವೆಂದು ಮತ್ತೊಂದು ಕಥೆಹೇಳುತ್ತದೆ. ಆದರೆ

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,

ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮೆಡಲುಗಳು ವಾಜಬ್ ದರದಲ್ಲಿ ಸಿಗುತ್ತವೆ.

ತಾ. ೨೯–೩–೫೬ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

Head Office: Tenkapet, **Udipi**, S. K. *Phone:* 66

ರೂಪಕುಂಡ ಪ್ರದೇಶವು ಯುದ್ಧಕ್ಕೆ ಏನೇನೂ ಹೇಳಿಸಿಲ್ಲ -- ಅಲ್ಲದೆ ಎಲುಬು ಗೂಡುಗಳು ಗಢವಾಲಿಗಳದೆಂಬ ಊಹೆಯೇ ವಿದ್ವಾಂಸರಿಗೆ ಸಮ್ಮತವಿಲ್ಲ. ಇತಿಹಾಸಕಾರರಾದರೂ ಟಿಬೇಟಿನ ಜನರಿಗೂ ಗಢವಾಲಿಗಳಿಗೂ ಯುದ್ಧ ನಡೆದದ್ದೇ ಇಲ್ಲವೆಂದು ಅಭಿಪ್ರಾಯ ಪಡುತ್ತಾರೆ.

ಬೇರೊಂದು ಗಢವಾಲಿ ಜಾನಪದ ಗೀತೆಯು ಹೀಗೆನ್ನುತ್ತದೆ: ಹಿಮವಂತನಿಗೆ ಪಾರ್ವತಿಯಂತೆ ಬೇರೆ ಆರು ಹೆಣ್ಣು ಮಕ್ಕಳೂ ಇದ್ದರು. ಇವಳಲ್ಲಿ ಕಿರಿಯವಳಾದ ಬಾಪಲೆಯನ್ನು ಪಾರ್ವತಿಗೆ ನೋಡಬೇಕೆಂಬ ಆಸೆಯಾಯಿತು ಶಿವನೊಡನೆ ತನ್ನೀ ಇಚ್ಛೆಯನ್ನು ಪಾರ್ವತಿಯು ನಿವೇದಿಸಿಕೊಳ್ಳಲು ಆತನು ಬಾಪಲೆಯ ಗಂಡನಾದ ಕನೋಜದ ಅರಸು ಯಶೋಧರನಿಗೆ ತನ್ನಲ್ಲಿಗೆ ಬರಲು ಆಮಂತ್ರಣವಿತ್ತನು.

ಯಶೋಧರನು ಸಹಸ್ರಾರು ಮಂದಿಯ ಪರಿವಾರದೊಡನೆ ಶಿವನ ಅರಮನೆಗೆಂದು ಹೊರಟನು. ಈ ಪರಿವಾರದಲ್ಲಿ ವೇಶ್ಯಾಕುಲದ ನರ್ತಕಿಯರೂ ಇದ್ದರು. ಪಾತರ್ನಾಚೌನಿ ಎಂಬ ಪ್ರದೇಶದಲ್ಲಿ ಈ ನರ್ತಕಿಯರು ನರ್ತನಗೈದರು. ಇಲ್ಲಿರುವಾಗ ಬಾಪಲೆಯು ಗರ್ಭಿಣಿ ಎಂದು ಗೊತ್ತಾಯಿತು.

ತಾನು ಗರ್ಭಿಣಿಯಾಗಿರುವಾಗ ಅರಸನು ವೇಶ್ಯೆಯರ ಸಂಗದಲ್ಲಿದ್ದು ಮನೋರಂಜನೆಮಾಡಿಕೊಳ್ಳುವುದನ್ನು ಕಂಡು ಬಾಪಲೆಯ ಮನನೊಂದಿತು; ಅಲ್ಲದೆ ಆವಳು ಕುಪಿತಳೂ ಆದಳು. ಬಾಪಲೆಯು ಶಾಪವಿತ್ತು ಆ ಸೂಳೆಯರು ಅಲ್ಲಿಯೇ ಮೃತ್ಯುವನ್ನಪ್ಪುವಂತೆ ಮಾಡಿದಳು. ಇದರ ಕುರುಹು ಈಗಲೂ ಇದೆ; ಉರಿದು ಭಸ್ಮವಾದರೆಂಬ ಈ ಸ್ಥಳವು ಭಸ್ಮಕ್ರಿಯೆಯ ತೀರ ಸ್ವಾಭಾವಿಕಾವಸ್ಥೆಯನ್ನು ತೋರಿಸುತ್ತದೆ—ಎನ್ನುವುದುಂಟು.

ಇದೇ ಕತೆಯು ತುಸು ಬದಲಾವಣೆಗೊಂಡು ಹೀಗೆ ಹೇಳಲ್ಪಡುತ್ತದೆ – ಬಾಲ್ಪಂರಾಣಿಕಾಸುಲೀರಾ ಎಂದೀಗ ಕರೆಯಲ್ಪಡುವ ಸ್ಥಳವನ್ನು ಮುಟ್ಟಿದಾಗ ಬಾಪಲೆಯು ಶಿಶುವನ್ನು ಪ್ರಸವಿಸಿದಳು. ಸೂಳೆಯರು ತನ್ನ ಪ್ರದೇಶದಲ್ಲಿ ಕಾಲಿಕ್ಕಿದುದರಿಂದ ಮೊದಲೇ ಕ್ರೋಧೋನ್ಮತ್ತನಾಗಿದ್ದ ಶಿವನು ಈಗ ಮತ್ತಷ್ಟು ಸಿಟ್ಟುಗೊಂಡು ಎಲ್ಲರನ್ನೂ ತಕ್ಷಣ ಮೃತ್ಯುಮುಖರಾಗಿ ಮಾಡಿದನು. ರಾಣಿಯು ಹೆತ್ತಾಗ ಇದ್ದಳೆಂಬ ಕೋಣೆಯ ಅವಶೇಷವೀಗಲೂ ಇದೆಯಂತೆ—ಆದರೆ ತಜ್ಞರು ಇದು ಹಿಮಪ್ರವಾಹವು ಕೊಚ್ಚಿಬರುವ, ಹಿಂದೆ ಸರಿವಾಗ ಅಡ್ಡಾದಿಡ್ಡವಾಗಿ ಬಿಟ್ಟುಹೋದ ಕೊಳೆ-ಕಸದ ಕುರುಹು ಎನ್ನುತ್ತಾರೆ.

ಯಾತ್ರಿಕರು ಅನಿರೀಕ್ಷಿತ ಹಿಮ ವರ್ಷ ಅಥವಾ ಹಿಮಪಾತಕ್ಕೆ ಬಲಿಯಾಗಿ ಹೀಗೆ ಬಿದ್ದಿರಬಹುದೆಂಬ ತರ್ಕವನ್ನೂ ಹೆಚ್ಚಿನವರು ಪುರಸ್ಕರಿಸುವುದಿಲ್ಲ. ಏಕೆಂದರೆ ಇಲ್ಲಿ ದೊರೆತ ಅಸ್ಥಿಪಂಜರಗಳ ಕೈಯಲ್ಲಿ ಬಿದಿರಿನ ಕೋಲುಗಳಿವೆ. ಬಿದಿರನ್ನು ಯಾತ್ರೆಕಾಲದಲ್ಲಿ ಯಾರೂ ಹಿಡಿದುಕೊಳ್ಳುವುದಿಲ್ಲ - ಏಕೆಂದರೆ ಅದು ಅಮಂಗಳ ಪದಾರ್ಥ. ಇವು ಯಥಾರ್ಥದಲ್ಲಿ ಬಿದಿರಲ್ಲ —ಸ.ಮಾರು ೧೧೦೦೦ ಅಡಿ ಎತ್ತರದವರೆಗೂ ಬೆಳೆಯುವ ಬೇರೊಂದು ಜಾತಿಯ ಮರವೆಂದೂ ಹೇಳಲಾಗುತ್ತದೆ.

ರೂಪಕುಂಡದ ಅಸ್ಥಿಪಂಜರಗಳ ಕಾಲಮಾನವನ್ನು ನಿರ್ಧರಿಸುವ ಪ್ರಯತ್ನಗಳ ಫಲವಾಗಿ, ಇವು ಒಂದೇ ಕಾಲಕ್ಕೆ ಸೇರಿದವುಗಳಲ್ಲವೆಂದು ಸಾಮಾನ್ಯವಾಗಿ ಸಿದ್ಧವಾಗಿದೆ. ಇದನ್ನು ಆಧರಿಸಿ ಹೇಳುವುದಾದಲ್ಲಿ, ಒಮ್ಮೆಲೇ ಯಾತ್ರಿಕರ ತಂಡವೊಂದು ದುರಂತಕ್ಕೀಡಾಯಿತೆಂಬ ವಾದವು ಕುಸಿದು ಬೀಳುತ್ತದೆ. ಇಷ್ಟರವರೆಗೆ ನಡೆಸಿದ ಪರಿಶೀಲನೆ ಸಾಲದೆಂಬ ಸಮಾಧಾನವೊಂದೇ ಈ ನಿರ್ಣಯಕ್ಕೆ ವಿರುದ್ಧವಾದ ವಿಷಯ.

* *

ಕಳೆದ ವರ್ಷ ಎಲ್ಲರೂ "ಹೌದು, ಹೌದು" ಎಂದು ಹೇಳುತ್ತಿದ್ದ ಘಟನೆಯೊಂದನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು: ಅದು ಜಮ್ಮು-ಕಾಶ್ಮೀರ ರಾಜ್ಯದ ಅರಸನಾಗಿದ್ದ ಗುಲಾಬ ಸಿಂಗನ ಸೇನಾಪತಿ ಜೋರಾವರ ಸಿಂಗನ ಸಂಬಂಧವನ್ನು ಈ ದುರಂತಕ್ಕೆ ಜೋಡಿಸುತ್ತದೆ. ಜೋರಾವರ ಸಿಂಗನು ಐತಿಹಾಸಿಕ ವ್ಯಕ್ತಿಯಾದುದರಿಂದ ಎಲ್ಲರೂ ಈ ಕತೆಯೇ ಸತ್ಯವೆನ್ನುವಷ್ಟು ಉತ್ಸಾಹಾತಿರೇಕವನ್ನು ಕಳೆದ ವರ್ಷ ಪ್ರದರ್ಶಿಸಿದ್ದರು.

ಜೋರಾವರ ಸಿಂಗನು ೧೮೪೧ರಲ್ಲಿ ಟಿಬೇಟಿನ ಗಾರ್ಟೋಕದ ಕಡೆಗೆ ದಂಡೆತ್ತಿ ತೆರಳಿದ್ದನು. ಅಲ್ಮೋರಾದಲ್ಲಿ ಆತನು ತನ್ನ ಸೇನೆಯ ಇನ್ನೊಂದು ತಂಡವನ್ನು ನೆಲೆಗೊಳಿಸಿದ್ದನು. ಆ ವರ್ಷ ವಿಪರೀತ ಚಳಿ ಇದ್ದಿತು— ಚಳಿ ಸಹಿಸಲಾರದೆ ಜೋರಾವರನ ಸೇನೆಯು ತೀರ ನಿಸ್ಸಹಾಯ ಪರಿಸ್ಥಿತಿಯಲ್ಲಿರುವುದನ್ನು ಕಂಡ ಟಿಬೇಟಿನ ಸೈನ್ಯವು ಒಮ್ಮೆಲೆ ಮೇಲೆ ಬಿದ್ದು ಹತ್ಯಾಕಾಂಡವನ್ನು ಪ್ರಾರಂಭಿಸಿತು. ಜೋರಾವರನ ಮರಣವಿಲ್ಲಿ ಘಟಿಸಿತು. ತಮ್ಮ ಸೇನಾಪತಿಯು ಕೊಲೆಯಾದುದನ್ನು ಕೇಳಿದ ಅಲ್ಮೋರದ ಸೈನಿಕರು ಬದುಕಿದರೆ ಸಾಕೆಂದು ಓಡಿದರು—ಆದರೆ ಸಹಿಸಲಾರದ ಚಳಿಯಿಂದ ಅವರು ದಾರಿಯಲ್ಲೇ ಸತ್ತುಬಿದ್ದರು. ಈ ಸ್ಥಳವೇ ರೂಪಕುಂಡ ಎನ್ನಲಾಗುತ್ತದೆ.

ಇದೇ ಕತೆ ತುಸು ವ್ಯತ್ಯಾಸಗೊಂಡು ಹೀಗೂ ಹೇಳಲ್ಪಡುತ್ತದೆ— ಗಾರ್ಟೋಕವನ್ನು ಜೋರಾವರನು ಸಮೀಪಿಸಿದಾಗ ಗುಲಾಬಸಿಂಗನು ಆತನನ್ನು ಹಿಂದಕ್ಕೆ ಕರೆಸಿಕೊಂಡನು. ಈ ಸೇನಾಪತಿಯು ಮರಳುವುದನ್ನು ಕಂಡು, ಟಿಬೇಟಿನ ಕೆಲವು ಗೂಢಚಾರರು ಆತನ ಹತ್ಯೆಮಾಡಿದರು. ಆದರೆ ಅಷ್ಟು ಹೊತ್ತಿಗೆ ಗಾರ್ಟೋಕದಿಂದ ಜೋರಾವರನ ಬೆಂಗಾವಲಿಗೆ ಹೊರಟಿದ್ದ ಸೈನ್ಯವು ಅಲ್ಲಿ ಬಂದು, ಈ ಹತ್ಯಾಕಾರಿಗಳನ್ನು ಓಡಿಸಿಕೊಂಡು ಹೋಯಿತು. ರೂಪಕುಂಡಕ್ಕೆ ಹತ್ತಿರದ ಬೌದ್ಧ ಮಠದಲ್ಲಿ ಆಶ್ರಯವನ್ನು ಈ ಗೂಢಚಾರರು ಪಡೆಯಬಯಸಿದರು; ಅಷ್ಟರಲ್ಲಿ ಜೋರಾವರನ ಸೈನಿಕರೂ ಅಲ್ಲಿ ಬಂದರು. ಇಷ್ಟು ಮುಂದಿಗೆ ಆ ಮಠದಲ್ಲಿ ಎಲ್ಲಿದೆ ಸ್ಥಳ? ಚಳಿಗಾಲ ಆಗ ತೀವ್ರ ಪ್ರಕೋಪವನ್ನು ತೋರಿಸಿದ್ದುದರಿಂದ ಬೇರೆಲ್ಲೂ ಹೋಗುವ ಮಾರ್ಗವಿಲ್ಲದೆ ಚಳಿಗೆ ಮೈಯೊಡ್ಡಿಯೇ ಸೈನಿಕರು ಉಳಿದರು; ಅಲ್ಲಿಯೇ ಅವರ ಅವಸಾನವಾಯಿತು. ಇದೇ ರೂಪಕುಂಡದ ದುರಂತ.

ಇದು ಸತ್ಯವಾಗಿದ್ದರೆ, ಈ ಸೈನಿಕರ ಆಯುಧಗಳೇನಾದವು ಎಂಬ ಪ್ರಶ್ನೆ ಬರುತ್ತದೆ. ಹತ್ತಿರದ ಊರುಗಳ ಜನರು ಇವನ್ನು ಒಯ್ದಿರಬಹುದೆ? ಅಥವಾ ಚಳಿಯಿಂದ ಉಳಿಯಲು ಬಂದೂಕನ್ನೆ ಸುಟ್ಟು ಕಟ್ಟಿಗೆಯಾಗಿ ಮಾಡಿಕೊಂಡರೆ? ರೂಪಕುಂಡ ದುರಂತ ಸ್ಥಳದಲ್ಲಿ ಪಂಜಾಬಿ ಪಾದರಕ್ಷೆಗಳೂ ಬಳೆಗಳೂ ದೊರೆತಿವೆಯಂತೆ! ಅಲ್ಲಿಯ ಅಸ್ಥಿಪಂಜರಗಳ ಗಾತ್ರವು ಪಂಜಾಬಿ ಅಥವಾ ಸಿಕ್ಖರ ದೇಹದ ಗಾತ್ರವನ್ನು ಹೊಂದಿವೆಯಂತೆ. ಸೇನೆಯ ಒಟ್ಟಿಗೆ ನೂರಾರು ಸಂಖ್ಯೆಯಲ್ಲಿ ಸ್ತ್ರೀಯರು —ಮುಖ್ಯವಾಗಿ ವೇಶ್ಯೆಯರು ಹಾಗು ನರ್ತಕಿಯರು—ಸೈನಿಕರ ಮನೋಲ್ಲಾಸಕ್ಕಾಗಿ, ಹೊರಡುವ ಸಂಪ್ರದಾಯ ಇತ್ತೀಚೆಯವರೆಗೆ ಇದ್ದಿತು. ಆದುದರಿಂದ ಅಸ್ಥಿಪಂಜರಗಳಲ್ಲಿ ಕೆಲವು ಹೆಂಗಸರವೂ ಆಗಿರುವುದಕ್ಕಾಗಿ ಯಾತ್ರಿಕರ ದುರಂತ ಕತೆಯನ್ನೆ ನಂಬಬೇಕಾಗಿಲ್ಲ. ಆದರೆ, ಅಸ್ಥಿಪಂಜರಗಳು ಏಕ ಕಾಲಕ್ಕೆ ಸಂಬಂಧಿಸಿದವುಗಳಲ್ಲವೆಂಬ ಅನುಮಾನಕ್ಕೆ ಪರಿಹಾರವೇನು?

ಮೇಲಿನೆಲ್ಲ ಸಂಗತಿಗಳ ವಿಮರ್ಶೆಯನ್ನು ಮಾಡಿದರೆ, ಪ್ರಾಚೀನ ಕಾಲದಿಂದಲೂ ಪ್ರತೀತಿ ಇದ್ದಂತೆ, ದೂರದ ಊರುಗಳವರು ಮೃತರ ಕೆಲವೇ ಅಸ್ಥಿಗಳನ್ನು ಮಾತ್ರ ವಿಸರ್ಜಿಸಲು ಇಲ್ಲಿ ಬರುತ್ತಿದ್ದರೆ, ಹತ್ತಿರದ ಊರವರು ಹೆಣವನ್ನೆ ಇಲ್ಲಿ ಹುಗಿಯುತ್ತಿದ್ದರು; ಅಲ್ಲದೆ ಶಿಲಾ ಸಮುದ್ರದಿಂದ ರೂಪಕುಂಡಕ್ಕೆ ಹಾರಿ ಅಖಿಲ ಭಾರತದಿಂದ ಬಂದ ಅನೇಕ ವಿರಕ್ತರೂ ಪ್ರಾಣ ತ್ಯಜಿಸುತ್ತಿದ್ದರು. ಮಕ್ಕಳ ಮರಣದ ವಿಷಯದಲ್ಲಿ ಯಾರಿಗೂ ವಿಶೇಷ ಪೂಜ್ಯ ಭಾವವಿರುವುದಿಲ್ಲ. ಆದುದರಿಂದ ಹಿರಿಯರ ಹೆಣಗಳೇ ಇಲ್ಲಿ ಬಂದು ಬೀಳುತಿದ್ದವು. ಶತಮಾನಗಳಿಂದ ಬಂದು ಬಿದ್ದಿರುವ ಈ ಹೆಣಗಳ ರಾಶಿ ಕಂಡೇ ಈಚೆಗೆ ಜನರು ದಿಗಿಲಾಗಿ ಆ ದಾರಿಯಾಗಿ ಯಾತ್ರೆಮಾಡುವುದನ್ನೇ ತ್ಯಜಿಸಿದರು. ಆದುದರಿಂದಲೇ ರೂಪಕುಂಡದ ವಾತಾವರಣವು ಸೋಜಿಗದ ಸುದ್ದಿಗೆ ಎಡೆ ಕೊಟ್ಟಿತು— ಎನ್ನಬಹುದೇ, ಹೇಗೆ?

(೧ನೇ ಪುಟದಿಂದ)

ಬರ್ಮದ ನಾಲ್ಕುಲಕ್ಷ ಟನ್ನುಗಳಷ್ಟು ಅಕ್ಕಿಯು ಜುಲಾಯಿ ಮತ್ತು ನವಂಬರಗಳ ಅವಧಿಯಲ್ಲಿ ಭಾರತದ ಅಕ್ಕಿಯುಣ್ಣುವ ಪ್ರದೇಶಗಳಿಗಾಗಿ ಆಮದಾಗುವುದೆಂಬ, ಮತ್ತು ಇದೇ ಅವಧಿಯಲ್ಲಿ ಭಾರತ ಸರಕಾರವು ತನ್ನ ಸಂಗ್ರಹದಿಂದ ೭-೯ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಪೇಟೆಗೆ ಕೊಡುವುದೆಂಬ ಆಶ್ವಾಸನೆಯೂ ಸದ್ಯದ ಪರಿಸ್ಥಿತಿಗೆ ತಕ್ಕ ಔಷಧವಾಗದು; ಅಂದರೆ ಜನರು ಅಲ್ಲಿಯವರೆಗೆ ಕಷ್ಟ ಅನುಭವಿಸುವುದು ತಪ್ಪದು.

ನಿಯಂತ್ರಣಗಳು, ಕಳ್ಳಸಂತೆಯ ವ್ಯಾಪಾರ ಮತ್ತು ಎಲ್ಲ ವಸ್ತುಗಳ ಬೆಲೆಯೂ ನಾಲ್ಕೈದು ಪಾಲಷ್ಟು ಹೆಚ್ಚಿದ್ದ ೧೯೪೭—೫೧ನೇ ವರ್ಷಗಳ ಅವಧಿಯಲ್ಲಿಯೂ ಅಕ್ಕಿಯ ಬೆಲೆಯು ಮುಡಿಗೆ ೨೧ ರೂಪಾಯಿಯನ್ನು ಮೀರಿರಲಿಲ್ಲ. ಆಹಾರ ಧಾನ್ಯಗಳ ಉತ್ಪತ್ತಿಯು ಪುಷ್ಕಳವಾಗಿರುವಾಗ, ಕಳ್ಳಸಂತೆಯ ವ್ಯಾಪಾರಕ್ಕೆ ಆಸ್ಪದ ತಪ್ಪಿರುವಾಗ, ನಿತ್ಯೋಪಯೋಗದ ಇತರ ವಸ್ತುಗಳ ಬೆಲೆಯು ಇಳಿಯುತ್ತಾ ಬರುತ್ತಿರುವಾಗ— ಮುಡಿಗೆ ೨೧-೨೩ ರೂಪಾಯಿಗಳವರೆಗೂ ಬೆಲೆಕೊಟ್ಟು ಅಕ್ಕಿಯನ್ನು ಪಡೆಯುಕೊಳ್ಳಬೇಕಾಗಿಬಂದಿರುವುದು ಶೋಚನೀಯ. ಸರಕಾರವು ಇನ್ನಾದರೂ ನಮ್ಮ ಜಿಲ್ಲೆಯತ್ತ ಹೆಚ್ಚಿನ ಗಮನ ಕೊಡಲಿ!

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 5—7—1956

ಸಂಚಿಕೆ ೪೪
NO. 44

ದಕ್ಷಿಣ ಪ್ರದೇಶದ ಗುಲ್ಲು

ರಾಜಾಜಿಯಂಥ ಮಾನ್ಯರು ದಕ್ಷಿಣ ಪ್ರದೇಶದ ಕುರಿತು ಕಾಂಗ್ರೆಸಿಗರು ತೀವ್ರ ಆಸಕ್ತಿಯನ್ನು ಹೊಂದಿ ಜನರ ಸಹಾನುಭೂತಿಯನ್ನಿದಕ್ಕೆ ಪಡೆಯಲು ತಪ್ಪಬಾರದೆಂದು ಈ ವಾರ ಪುನರುಚ್ಚರಿಸಿದ್ದಾರೆ. ಅಮೃತಸರದ ಕಾಂಗ್ರೆಸು ಅಧಿವೇಶನದಲ್ಲಿ ಸ್ವೀಕರಿಸಲಾದ ಗೊತ್ತುವಳಿಯನ್ನವರು ದಕ್ಷಿಣ ಪ್ರದೇಶ ರಚನೆಗೆ ಆಧಾರವಾದ ದಾಖಲೆಯಾಗಿ ತೋರಿಸುತ್ತಿದ್ದಾರೆ.

ಆದರೆ ಅಮೃತಸರದ ಗೊತ್ತುವಳಿಗೆ ಯಾವದೊಂದು ಘಟನೆಯು ಪ್ರೇರಣೆಯನ್ನೊದಗಿಸಿತೋ ಆ ಪ್ರೇರಣೆಗೆ ಅಮರತ್ವ ಪ್ರಾಪ್ತವಾಗಲಿಲ್ಲ; ಪಶ್ಚಿಮ ಬಂಗಾಳ ಮತ್ತು ಬಿಹಾರಗಳ ವಿಲೀನೀಕರಣದ ಸೂಚನೆಯು ಈಗ ಮೃತಪ್ರಾಯವಾಗಿದೆ! ಕ್ಷಣಿಕ ಉತ್ಸಾಹಕ್ಕೆ ಕೈಗೊಟ್ಟು ಹಿಂದು ಮುಂದಿನ ಆಲೋಚನೆಯನ್ನೇನೂ ಮಾಡದೆ ಹೋದರೆ, ಪರಿಣಾಮ ಏನಾಗುವುದೆಂಬುದಕ್ಕೆ ನಿದರ್ಶನವಾಗಿಯಷ್ಟೇ ಉಳಿದಿದೆ ಈ ಸೂಚನೆ!

ಸಂಪೂರ್ಣ ವಿವೇಚನೆ ಮತ್ತು ಹೊಣೆಗಾರಿಕೆಗಳ ಅರಿವಿಲ್ಲದೆ ದುಡುಕಿ ಕೈಗೊಂಡ ನಿರ್ಣಯಗಳಲ್ಲಿ ದ್ವಿಭಾಷಾ (ಅಥವಾ ಬಹು ಭಾಷಾ) ರಾಜ್ಯಗಳ ರಚನೆಗೆ ಅನುಮೋದನೆಯನ್ನು ಕಾಂಗ್ರೆಸು ನೀಡಿದ ಅಮೃತಸರದ ಗೊತ್ತುವಳಿಗಿಂತ ಉತ್ತಮವಾದ ಬೇರೆ ನಿದರ್ಶನ ದೊರೆಯಲಾರದು. ಏಕ ಭಾಷೆಯ ಘಟಕಗಳಿಗಾಗಿ ಕಳೆದ ೩೦—೪೦ ವರ್ಷಗಳಿಂದ ಬೇಡಿಕೆಯನ್ನು ಮುಂದಿಡುತ್ತಾ ಬಂದಿದ್ದ ಜನತೆಗೆ, ಫಜಲಾಲಿ ಆಯೋಗದ ವರದಿಯ ಮೂಲಕ ಸಾಮಾನ್ಯತಃ ಇಂಥ ರಾಜ್ಯಗಳ ಕೊಡುಗೆ ದೊರೆತ ಗಳಿಗೆಯಲ್ಲಿ—ದ್ವಿಭಾಷಾ ರಾಜ್ಯಗಳ ಕಲ್ಪನೆಯು ತೀರ ಅನಿರೀಕ್ಷಿತವೆನಿಸಿತು.

ಯಾರಿಗೂ ಏನು, ಎಂಥದು ಎಂದು ಮುಂತಾಗಿ ಚೆನ್ನಾಗಿ ವಿಚಾರಿಸಲು ಅವಕಾಶವನ್ನು ಕೊಡದೆಯೇ ಧುರೀಣರೆನಿಸಿದವರು ದ್ವಿಭಾಷಾ ರಾಜ್ಯಗಳಿಂದ ಧಾರಾಳವಾದ ಪ್ರಯೋಜನವಿದೆ ಎಂದು ಸಾರಿದರಷ್ಟೇ ಅಲ್ಲ; ರಾಜಾಜಿಯಂಥವರೀಗ ಸಂಕೇತಿಸಿ ತೋರಿಸಲು ಅನುಕೂಲವಾಗುವಂತೆ ಗೊತ್ತುವಳಿಯ ಬಂಧನವನ್ನು ಸಹ ಕಾಂಗ್ರೆಸಿಗರ ಮೇಲೆ ಹೇರಿದರು. ಕಾಂಗ್ರೆಸಿನ ಸಾಮಾನ್ಯ ಸದಸ್ಯರಂತಿರಲಿ, ಮುಖ್ಯಮಂತ್ರಿ ಸ್ಥಾನವನ್ನು ಅಲಂಕರಿಸುವಷ್ಟು ಬುದ್ಧಿವಂತರಾದ ಜನರಿಗೆ ಸಹ ದ್ವಿಭಾಷಾ ರಾಜ್ಯಗಳ ರಚನೆಯ ಉಪಯುಕ್ತತೆ ಮನವರಿಕೆಯಾದಂತಿಲ್ಲ.

ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕಾಮರಾಜನಾಡರರು ದಕ್ಷಿಣ ಪ್ರದೇಶದ ರಚನೆಗೆ ಅನುಮೋದನೆಯನ್ನು ಕೊಡಲು ಹಿಂಜರಿಯುತ್ತಿದ್ದಾರೆ. ಅವರ ಮಂತ್ರಿಮಂಡಳದಲ್ಲಿ ಕೆಲವು ಸದಸ್ಯರು ದಕ್ಷಿಣ ಪ್ರದೇಶದ ರಚನೆಯ ಪರವಾಗಿ ಭಾಷಣ ಬಿಗಿಯುತ್ತಾರೆ; ಪ್ರತಿಪಾದನೆಯನ್ನೂ ಮಾಡುತ್ತಾರೆ, ನಿಜ. ಆದರೆ, ಕಾಂಗ್ರೆಸಿನ ಗೊತ್ತುವಳಿಯ ವಿಷಯದಲ್ಲಿ ಮಂತ್ರಿಗಳಲ್ಲೆಲ್ಲ ಏಕಾಭಿಪ್ರಾಯವಿದೆ ಎಂದು ಭಾವಿಸುವುದಕ್ಕೆ ಕಾಮರಾಜರ ವರ್ತನೆಯು ಅವಕಾಶವನ್ನು ನೀಡುವುದಿಲ್ಲ.

ಕಾಮರಾಜರು "ಜನರಿಗೆ ದಕ್ಷಿಣ ಪ್ರದೇಶದ ರಚನೆ ಬೇಡವಾಗಿದೆ" ಎಂಬ ಚುಟುಕು ಮಾತಿನಿಂದ ದಕ್ಷಿಣ ಪ್ರದೇಶದ ಕಲ್ಪನೆಗೆ ತಮ್ಮ ವಿರೋಧವನ್ನು ಧ್ವನಿಸುತ್ತಿದ್ದಾರೆ. "ಜನರಿಗೆ ಬೇಡವಾಗಿದೆ" ಎಂದು ತೀರ್ಮಾನಿಸುವಷ್ಟು ಮಟ್ಟಿಗೆ ಜನರ ಅಭಿಮತವನ್ನು ಕೇಳಲಾಗಿದೆಯೆ? ಇಷ್ಟರವರೆಗಂತೂ ಇಲ್ಲ—ದಕ್ಷಿಣ ಪ್ರದೇಶ ಅಥವಾ ದ್ವಿಭಾಷಾ ಅಥವಾ ಬಹುಭಾಷಾ ರಾಜ್ಯಗಳ ರಚನೆಯ ಕುರಿತು ಆಲೋಚಿಸಲಿಕ್ಕೆಯೇ ಜನರು ಹೋಗಿಲ್ಲ ಎಂಬುದೇ ಕಾಮರಾಜರ ಮಾತಿನ ಅಂತರ್ಯ.

ಜನರು ಸದ್ಯಕ್ಕಂತೂ ಈ ನೂತನ ಸಲಹೆಗೆ ಕಿವಿಗೊಡುವ ಸ್ಥಿತಿಯಲ್ಲಿಲ್ಲ. ಏಕೆಂದರೆ, ಇದು ನಾಲ್ಕಾರು ತಿಂಗಳುಗಳಲ್ಲಿ ವಿಚಾರಿಸಿ, ನಿರ್ಣಯಿಸುವಷ್ಟು ಲಘುವಾದ ವಿಷಯವಲ್ಲ. ಅಷ್ಟು ಲಘುವಾದುದೆಂದು ಕಾಂಗ್ರೆಸಿನ ವರಿಷ್ಠರು ಭಾವಿಸಿರುವುದೇ ದೊಡ್ಡ ಪ್ರಮಾದ. ಫಜಲಾಲಿ ಆಯೋಗದ ವರದಿಯನ್ನು ಪರಿಶೀಲಿಸಿ, ಭಾರತ ಸರಕಾರವು (ಅದು ಕಾಂಗ್ರೆಸು ಸರಕಾರವೆಂಬುದು ನೆನಪಿರಲಿ!) ತನ್ನ ತಿದ್ದುಪಡಿಗಳನ್ನು ಪ್ರಕಟಿಸಿದ ಬಳಿಕ, ಮತ್ತು ನಾಲ್ಕು ತಿಂಗಳುಗಳೊಳಗೆ ರಾಜ್ಯ ಪುನಾರಚನೆಯ ವಿಧೇಯಕಕ್ಕೆ ಸಂಸತ್ತಿನ ಒಪ್ಪಿಗೆ ಪಡೆದೇ ತೀರುವ ಸಂಕಲ್ಪವನ್ನು ಕೈಗೊಂಡಿದ್ದಾಗ—ಅಷ್ಟರೊಳಗೆಯೇ ಜನರು ಪ್ರದೇಶ ರಚನೆಯ ಮಾಯಾ ಮೋಡಿಗೆ ಬಲಿಯಾಗುವರೆಂದು ನಂಬಲು ಕಾಂಗ್ರೆಸಿನ ವರಿಷ್ಠರಿಗೆ ಅಮೃತಸರದ ಅಧಿವೇಶನ ಕಾಲದಲ್ಲಿ ಏನು ಆಧಾರ ದೊರೆಯಿತೋ, ತಿಳಿಯದು.

ವ್ಯಾವಹಾರಿಕ ಕ್ಷೇತ್ರದ ಸಮಸ್ಯೆಗಳನ್ನು ಭಾವನಾಪರವಶತೆಗೆ ಬಲಿಯಾಗಿ ಬಿಡಿಸಲು ಹೋದರೆ ಇಂಥ ತೊಂದರೆಗಳೂ ಪ್ರಮಾದಗಳೂ ತಪ್ಪುವಂತಿಲ್ಲವೆಂಬುದೇ ನಾವು ಇಲ್ಲಿ ಕಲಿಯಬೇಕಾದ ಪಾಠ. ಏಕ ಭಾಷೆಯ ಘಟಕಗಳ ಉಪಯುಕ್ತತೆಯನ್ನು ೧೯೨೦ರಿಂದ ಪ್ರತಿಪಾದಿಸುತ್ತಾ ಜನರೂ ಧುರೀಣರೂ ಬಂದಿರುವಾಗ, ಕೆಲವೇ ಮಂದಿ ಧುರೀಣರು ನಾವು ತಪ್ಪು ದಾರಿಯಲ್ಲಿ ಸಾಗಿದ್ದೇವೆ ಎಂದ ಮಾತ್ರಕ್ಕೆ ಎಲ್ಲರನ್ನೂ ಸಮಜಾಯಿಸುವುದು ಕಷ್ಟ. ಎಲ್ಲರಿಗೂ ಆಲೋಚನೆಮಾಡಿ ನೋಡಲು ಸಮಯಾವಕಾಶವನ್ನೀಯಬೇಕು—ನಾಲ್ಕಾರು ತಿಂಗಳುಗಳ ಅವಧಿ ಎಷ್ಟಕ್ಕೂ ಇಲ್ಲಿ ಸಾಲದು.

ಆದುದರಿಂದ ದಕ್ಷಿಣ ಪ್ರದೇಶ ಮತ್ತಿತರ ದ್ವಿಭಾಷಾ (ಹಾಗು ಬಹುಭಾಷಾ) ರಾಜ್ಯಗಳ ರಚನೆಯ ಕುರಿತು ಈಗ ನಾವು ಪುನಃ ಪುಂಗಿಯೂದುತ್ತಾ ಕುಳಿತಿರುವುದು ಅರ್ಥಶೂನ್ಯವಾದುದಾಗಿದೆ. ರಾಜ್ಯಗಳ ಹೊಸ ನಕಾಶೆಯನ್ನು ಬರೆಯಲು ನಾವೀಗ ಎಲ್ಲ ಸಿದ್ಧತೆಗಳನ್ನೂ ಮುಗಿಸಿದ್ದೇವೆ. ಇನ್ನು ಎರಡು ವಾರಗಳೊಳಗೆ ಆರಂಭವಾಗಲಿರುವ ಸಂಸತ್ತಿನ ಅಧಿವೇಶನದಲ್ಲಿ ಈ ಬಗ್ಗೆ ಘನವಾದ ನಿರ್ಣಯಗಳಾಗಲಿವೆ. ಜನರೆಲ್ಲರೂ ಬಹುದಿನಗಳಿಂದ ಬಯಸುತ್ತಿದ್ದ ಏಕ ಭಾಷೆಯ ರಾಜ್ಯಗಳು ದಕ್ಷಿಣದವರ ಪಾಲಿಗಂತೂ ದೊರೆಯಲಿವೆ, ಜನರೆಲ್ಲರೂ ಈ ಕಾರಣದಿಂದ ಸಂತೋಷ ಭರಿತರಾಗಿದ್ದಾರೆ.

ಈ ಸಂತೋಷವನ್ನು ದಕ್ಷಿಣ ಪ್ರದೇಶದ ರಚನೆಯ ಬಗ್ಗೆ ಗಾಢವಾಗಿ ವಿಚಾರಿಸಿರಿ ಎಂಬ ಉಪದೇಶದಿಂದ ಕೆಡಿಸಿಬಿಡಲು ದಯವಿಟ್ಟು ಯಾರೂ ಹೋಗಬಾರದು; ಮದುವೆಯ ಮನೆಯಲ್ಲಿನ ಸಜ್ಜನರ ಕೆಡಿಸಲು ಆನೆಯನ್ನೋಡಿಸುವ ದುಷ್ಟ ಹವ್ಯಾಸಕ್ಕೆ ಯಾರೂ ಹೋಗಬಾರದು. ಮದುವೆ ಮನೆಯವರು ತಾವಾಗಿ ಕರೆತರಿಸದೆ ಬಂದಿರುವ ಈ ಆನೆಯು ಮೆರವಣಿಗೆಗೆ ಶೋಭೆ ನೀಡುವುದೋ ಎಲ್ಲವನ್ನೂ ಹಾಳುಗೆಡಹುವುದೋ ಎಂದು ವಿಚಾರಿಸುವಷ್ಟು ವ್ಯವಧಾನವಿಲ್ಲಿಲ್ಲ. ಧುರೀಣರು ತಪ್ಪುವುದಿಲ್ಲ ಎಂಬ ನಂಬಿಕೆ

(೧೨ನೇ ಪುಟ ನೋಡಿರಿ)

Words of Worldly Wisdom

Save money regularly in
Your bank account and you will
Never find yourself incurring
Debts which destroy your peace of mind.
In addition you can make all payments by
Cheque which is both safe and convenient.
All the while your money is earning interest.
Thrift will safe-guard your future and
Ensure your Prosperity.

Resources of Rs. 9.5 Crores

The Canara Industrial & Banking Syndicate, Limited

Estd: 1925. H. O. UDIPI.

ಪ್ರತಿಯೊಂದು ಎಕ್ರೆ ನೆಲದಲ್ಲಿರುವ ೧೭,೫೦,೦೦೦ ಕೃಷಿಕರು!

ಬೇಸಾಯಗಾರನ ಬಂಧುವಾದ ಎರೆಹುಳದ ಜೀವನದ ಮೇಲೆ ಬೆಳಕು

ಮಳೆಗಾಲದ ಈ ದಿನಗಳಲ್ಲಿ ನಮಗೆ ನಿತ್ಯ ಸಂದರ್ಶನ ಕೊಡುವ ಎರಡು ಜೀವಿಗಳಿವೆ: ಸದಾಕಾಲ ಟ್ರ್ಯೊಂ, ಟ್ರ್ಯೊಂ, ಎಂಬ ಲಯಬದ್ಧ ಧ್ವನಿ ಮಾಧುರ್ಯದಿಂದ ತನ್ನಿರವನ್ನು ಸೂಚಿಸುತ್ತಿರುವ ಕಪ್ಪೆ ಇವುಗಳಲ್ಲೊಂದು; ಎರಡನೆಯದೇ ಎರೆಹುಳ!

ಒದ್ದೆ ಮಣ್ಣಿನ ಮೇಲ್ಪದರಿನಲ್ಲಿ ಹಿಂಡು ಹಿಂಡಾಗಿ ಬಿದ್ದಿರುವ, ಮುದುರಿಕೊಂಡು ಹೊಟ್ಟೆ ಎಳೆಯುತ್ತಾ ಸಾಗುವ ಎರೆಹುಳವು ನೋಡಲಿಕ್ಕೆ ಕ್ಷುಲ್ಲಕ ಪ್ರಾಣಿಯಾಗಿದೆ. ಪ್ರತಿಸ್ಪರ್ಧಿ ಮನುಷ್ಯನನ್ನು "ನರಹುಳ" ಎಂಬ ನೀಚ ಸಂಬೋಧನೆಯ ಮೂಲಕ ಅವಹೇಳನ ಮಾಡಲು ಹೇಸದ ವೀರರು ನಮ್ಮಲ್ಲಿರುವಾಗ ಎರೆಹುಳಕ್ಕೆ ಏನು ಗೌರವ ಸಂದೀತು?

ಆದರೆ, ತಜ್ಞರ ಅಭಿಪ್ರಾಯವನ್ನು ಮನ್ನಿಸಿದ ಪಕ್ಷದಲ್ಲಿ, ಮಾನವ ನಾಗರಿಕತೆಯ ಬೆಂಗೋಲೇ ಎರೆಹುಳ ಎಂದೆನ್ನಬೇಕಾಗುತ್ತದೆ. "ಏನೋ, ಅದೊಂದು ಹುಳ; ಅಲ್ಲಿ ಬಿದ್ದಿರುತ್ತದೆ" ಎಂದು ಮನುಷ್ಯನು ಇದನ್ನು ಉಪೇಕ್ಷೆಯಿಂದ ನೋಡಲಾಗದು. "ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು" ಎಂಬ ಗಾದೆಯಂತೆ ಎರೆಹುಳದ ಗಾತ್ರ ಮತ್ತು ಸ್ವರೂಪವು ಮಹತ್ವದ್ದಲ್ಲವೆನಿಸಿದ ಮಾತ್ರಕ್ಕೆ ಅದು ಮಾಡುವ ಕೆಲಸ ಸಣ್ಣದೆಂದು ಅರ್ಥವಲ್ಲ. ಈ ಕೆಲಸ ಬಹಳ ಗಣನೀಯವಾದುದಾಗಿದೆ.

ನಿಸರ್ಗವು ತನಗಾಗಿ ಸೃಷ್ಟಿಸಿಕೊಂಡ ಕೃಷಿಕರ ಜಾತಿಯೇ ಎರೆಹುಳ! ಕಲ್ಲು ಬಂಡೆಯ ಮೇಲೆ, ಸುಣ್ಣದ ಹಲಗೆಯ ಮೇಲೆ ಅಥವಾ ಆವೆಮಣ್ಣಿನ ಮೇಲೆ ಯಾವ ಸಸ್ಯವೂ ಬೆಳೆಯಲಾರದಷ್ಟೆ! ಫಲವತ್ತಾದ ಮಣ್ಣಿನ ಮೇಲ್ಪದರಿರುವ ಭೂಮಿಯಲ್ಲಿ ಮಾತ್ರ ಸಸ್ಯವು ಸಮೃದ್ಧ ರೀತಿಯಲ್ಲಿ ಕೃಷಿಯಾಗಬಲ್ಲುದು. ಫಲವತ್ತಾದ ಮಣ್ಣಿನ ಮೇಲ್ಪದರನ್ನು ರಚಿಸುವ ಅದ್ಭುತ ಕಾರ್ಯವನ್ನು ಎರೆಹುಳಗಳ ಹಿಂಡುಗಳು ಸಮರ್ಥವಾಗಿ ನಿರ್ವಹಿಸುತ್ತವೆ.

ದಿನ ದಿನಕ್ಕೂ ಕಡಿಮೆಯಾಗುತ್ತಾ ಹೋಗುತ್ತಿರುವ ಭೂಮಿಯ ಫಲವತ್ತತೆಯು ಒಂದು ದೊಡ್ಡ ಸಮಸ್ಯೆಯಾಗಿ ಇಂದು ಪರಿಣಮಿಸಿದೆ. ಫಲವತ್ತತೆಯ ಈ ನಾಶವನ್ನು ತಡೆಗಟ್ಟುವುದು ಹೇಗೆ ಎಂಬ ಪ್ರಶ್ನೆಗೆ ಸುಲಭ ಉತ್ತರವಿನ್ನೂ ಸಿಕ್ಕಿರುವುದಿಲ್ಲ. ಆದರೆ ನೈಸರ್ಗಿಕ ಕೃಷಿಕರಾದ ಎರೆಹುಳಗಳತ್ತ ಕಣ್ಣೋಟ ಹಾಯಿಸಿದಾಗ ಈ ಸಮಸ್ಯೆಗೊಂದು ಪರಿಹಾರ ಮಾರ್ಗ ಗೋಚರಿಸುತ್ತದೆ.

ಅವಿಶ್ರಾಂತವಾಗಿ ನೆಲದಲ್ಲಿ ಸುರಂಗಗಳನ್ನು ಕೊರೆದು ಹಾಗು ಮಣ್ಣನ್ನು ಅಡಿಮೇಲು ಮಾಡಿ ಎರೆ ಹುಳಗಳು ಭೂಮಿಯ ಮೇಲ್ಪದರಿನ ಮಣ್ಣನ್ನು ನಯಗೊಳಿಸುತ್ತವೆ; ಭೂಮಿಯು ಈ ಹೊದಿಕೆಯು ಫಲವತ್ತಾಗಿರುವಂತೆಯೂ ಮಾಡುತ್ತವೆ.

ಇಲ್ಲದೆ, ನೆಲದ ಮೇಲೆ ಬಿದ್ದಿರಬಹುದಾದ ಒಣ ಎಲೆಗಳನ್ನು ಕಸಕಡ್ಡಿಗಳನ್ನೂ ಸಸ್ಯಗಳ ಬೆಳವಣಿಗೆಗೆ ಅತ್ಯಾವಶ್ಯಕವಾಗಿ ಬೇಕಾದ ಜೈವಿಕ ಪದಾರ್ಥಗಳಾಗಿ ಎರೆಹುಳಗಳು ಮಾರ್ಪಡಿಸುತ್ತವೆ. ಮಣ್ಣಿನಲ್ಲಿ ಸಹಜರೂಪದಲ್ಲಿರುವ ಖನಿಜ ಪದಾರ್ಥಗಳನ್ನು ಸಸ್ಯಗಳು ಸುಲಭದಲ್ಲಿಯೇ ಹೀರಿಕೊಳ್ಳಬಲ್ಲಂತೆ ಪರಿವರ್ತಿಸುತ್ತವೆ. ನೆಲವನ್ನು ನಾನಾವಿನ್ಯಾಸಗಳ ಮೂಲಕ ಎರೆಹುಳಗಳು ಒಡೆದಿಟ್ಟು ಮಳೆನೀರು ಇಂಗಿಹೋಗಿ ನೆಲವು ತಂಪಾಗಿರುವುದಕ್ಕೆ ಸಹಾಯ ಸಲ್ಲಿಸುತ್ತವೆ ಕೊಳೆಕಸಗಳನ್ನು ನೆಲದಡಿಯಲ್ಲಿ ಹುಗಿದಿಟ್ಟು ಭೂಮಿಯ ಮೇಲ್ಪದರನ್ನು ಶುಚಿಯಾಗಿಡುತ್ತವೆ ಸಣ್ಣಸಣ್ಣ ಕಲ್ಲುಗಳನ್ನೂ ಮಣ್ಣಾಗುವಂತೆ ಅವು ಪುಡಿಗೈಯುತ್ತವೆ.

ಒಟ್ಟಿನಲ್ಲಿ ಎರೆಹುಳಗಳ ಪರಿಶ್ರಮಕ್ಕೆ ಮತ್ತು ಕಾರ್ಯಕುಶಲತೆಗೆ ಎಣೆಯಿಲ್ಲ ಅವುಗಳು ಮಾಡುವ ಕೆಲಸದ ಮಹತ್ವವೂ ಅನ್ಯಾದೃಶ್ಯ. ಕಾರ್ಯ ಪಟುತ್ವದಲ್ಲಿ ಅವನ್ನು ಮೀರಿಸಿದ ಬೇರೊಂದು ಪ್ರಾಣಿ ಸಿಗಲಾರದು. ಅದರ ಜೀವವು ತೀರ ಕ್ಷುಲ್ಲಕವೆನಿಸಿದರೂ ಹಿಂಸೆಗೊಳಗಾಗದಿದ್ದರೆ ಒಂದು ಎರೆಹುಳವು ೧೫ ವರ್ಷಗಳಷ್ಟು ದೀರ್ಘ ಕಾಲ ಉಪಯುಕ್ತ ಜೀವನವನ್ನು ಬಾಳುತ್ತದೆ. ಇಷ್ಟು ದೀರ್ಘವಾದ ತನ್ನ ಜೀವನದ ಪ್ರತಿಹಗಲು ಮತ್ತು ರಾತ್ರಿಯನ್ನು ಕೆಲಸದಲ್ಲಿಯೇ ಕಳೆಯುವ ಎರೆಹುಳವು ವಿಲಾಸಿಮಾನವನ ಮುಂದೆ ಆದರ್ಶದ ದಿವ್ಯಜ್ಯೋತಿಯನ್ನಿಡುತ್ತದೆ ಎನ್ನಬಹುದು.

ಎಡೆಬಿಡದೆ, ಭೂಮಿಗೆ ಸಾಕಷ್ಟು ಗೊಬ್ಬರವನ್ನು ಚೆಲ್ಲದೆ, ಪೈರು ಬೆಳೆಸಿದುದರಿಂದಲೂ ಮಳೆ ಮತ್ತು ಗಾಳಿಯ ಹೊಡೆತದಿಂದಾಗಿ ಮಣ್ಣಿನ ಮೇಲ್ಪದರು ಹಾರಿಹೋಗಿಯೂ ನೆಲದ ಫಲವತ್ತತೆಯು ತೀರ ಕಡಿಮೆಯಾಗಿರುವ ಈ ಕಾಲದಲ್ಲಿ ನಾವು ಎರೆಹುಳಗಳ ನಿಜವಾದ ಮೌಲ್ಯವನ್ನು ಗುರುತಿಸಿಕೊಳ್ಳುವುದು ಸೂಕ್ತವಾಗಿದೆ. ಕಳೆದ ಹಲವು ಶತಕಗಳಿಂದ ನಾವು ಎರೆಹುಳವನ್ನು ಅವಜ್ಞೆಯಿಂದ ಕಂಡಿದ್ದೇವೆ; ಅದರ ಕುರಿತು ನಮಗೆ ಆಸಕ್ತಿ ಇರಲಿಲ್ಲ; ಅವರ ಅನುಪಮ ಜೀವನದ ಪರಿಚಯ ಮಾಡಿಕೊಳ್ಳುವ ಕುತೂಹಲವೂ ಇರಲಿಲ್ಲ. ಆದರೆ ಈಗ ಪರಿಸ್ಥಿತಿಯು ಬದಲಾಗಿದೆ; ತಜ್ಞರ ದೃಷ್ಟಿಯು ಎರೆಹುಳಗಳ ಮೇಲೆ ಬೀಳತೊಡಗಿದೆ.

ಗ್ರೀಕರ ಮಹಾಗುರು ಅರಿಸ್ಟಾಟಲನ ಕಾಲದಿಂದಲೂ ಎರೆಹುಳಗಳ ವಿಷಯದಲ್ಲಿ ಬೇಕಾದಷ್ಟು ಕತೆಗಳಿದ್ದವು, ಆದರೆ ಅವುಗಳ ಉಪಯುಕ್ತ ಜೀವನದ ಮೇಲೆ ಪ್ರಕಾಶವನ್ನು ಚೆಲ್ಲುವ ಸಂಗತಿಗಳು ಮಾತ್ರ ಲಭ್ಯವಿದ್ದಿಲ್ಲ! ಎಲ್ಲ ಕಾಲದ ನಿಸರ್ಗ ಪ್ರಿಯರೂ ಎರೆಹುಳಗಳನ್ನು ಕಂಡು ಆಶ್ಚರ್ಯಚಕಿತರೂ ಕುತೂಹಲಿಗಳೂ ಆಗುತ್ತಿದ್ದರು; ಆದರೆ ಅವುಗಳಿಗೆ ಈ ಸೃಷ್ಟಿಯಲ್ಲಿ ಸಲ್ಲುವ ಸ್ಥಾನಮಾನವೇನೆಂಬುದನ್ನು ಗೊತ್ತುಹಚ್ಚಲು ಯಾರೂ ಕೈಹಾಕಲಿಲ್ಲ.

ಆಂಗ್ಲ ಪ್ರಕೃತಿ ಶಾಸ್ತ್ರಜ್ಞರೊಬ್ಬರು ಮಾತ್ರ—ಅವರ ಹೆಸರು ಗಿಲ್ಬರ್ಟ್ ವೈಟ್—ತಮ್ಮ ಹ್ಯಾಂಪ್ ಶಾಯರ್ ತೋಟದಲ್ಲಿ ಕಣ್ಣಿಗೆ ಬಿದ್ದ ಈ ಎರೆ ಹುಳಗಳ ಬಗ್ಗೆ ವಿಶೇಷ ಆಸಕ್ತಿಯಿಂದ ಅಧ್ಯಯನವನ್ನು ಮಾಡಿದರು. ಹದಿನೆಂಟನೇ ಶತಮಾನದ ಈ ಜಿಜ್ಞಾಸುಗಳಿಗೆ ಎರೆ ಹುಳದ ಪೂರ್ಣ ಜೀವನ ವೃತ್ತಾಂತವನ್ನು ಶಾಸ್ತ್ರೀಯವಾಗಿ ಸಂಗ್ರಹಿಸುವ ಲವಲವಿಕೆಯು ಇದ್ದರೂ ಸಹ ಅದು ನೆರವೇರದೆ ಹೋಯಿತು.

ಸುಮಾರು ಒಂದು ಶತಮಾನದ ಬಳಿಕ, ಅಂದರೆ ೧೮೮೧ರಲ್ಲಿ ಉತ್ಕ್ರಾಂತಿ ಸೂತ್ರದ ಜನಕನೆಂದು ಹೆಸರಾದ ಚಾರ್ಲ್ಸ್ ಡಾರ್ವಿನ್ ಎಂಬ ಮಹನೀಯರು ಒಂದು ಪುಸ್ತಕವನ್ನು ಎರೆಹುಳಗಳ ಮೇಲೆ ಬರೆದು ಪ್ರಕಟಿಸಿ, ಗಿಲ್ಬರ್ಟ್ ವೈಟ್ ಪ್ರಾರಂಭಿಸಿದ ಅಧ್ಯಯನಕ್ಕೊಂದು ರೂಪವನ್ನು ಕೊಟ್ಟರು. ಈ ಪುಸ್ತಕ ಪ್ರಕಟಣೆಗೆ ಹಿಂದಿನ ೪೫ ವರ್ಷಗಳಲ್ಲಿ, ಅಂದರೆ ತಮ್ಮ ಕಾಲೇಜು ಶಿಕ್ಷಣದ ಅವಧಿಯಲ್ಲಿಯೇ, ಡಾರ್ವಿನ್ನರು ಎರೆಹುಳಗಳ ಜೀವನವನ್ನು ಬಹಳ ಹತ್ತಿರದಿಂದ ನಿರೀಕ್ಷಿಸಲು ಪ್ರಾರಂಭಿಸಿದ್ದರು ತಮ್ಮ ಈ ಪುಸ್ತಕದ ಮೂಲಕ ಅವರು ಎರೆಹುಳಗಳು ಮಾಡುತ್ತಿರುವ ಲೋಕೋಪಕಾರದ ಅಗಾಧತೆಯು ಮಹಾಜನರಿಗೆ ಮನವರಿಕೆಯಾಗುವಂತೆ ವಿಷಯ ಪ್ರತಿಪಾದನೆಗೈದರು.

"ಅನೇಕರು ಎಣಿಸಿರುವುದಕ್ಕಿಂತಲೂ ಹೆಚ್ಚು ಮಹತ್ವದ ಮತ್ತು ಪ್ರಾಮುಖ್ಯವಾದ ಪಾತ್ರವನ್ನು ಈ ಜಗತ್ತಿನ ಚರಿತ್ರೆಯಲ್ಲಿ ಎರೆಹುಳಗಳು ನಿರ್ವಹಿಸಿವೆ. ಸಸ್ಯಗಳಿಗೆ ಅತ್ಯುಪಯುಕ್ತವಾದ ಜೈವಿಕ ಪದಾರ್ಥಗಳಿಂದ ಕೂಡಿದ ಮಣ್ಣುಗುಪ್ಪೆಯು ಹಿಂದೆ ಎಷ್ಟೋ ಸಾವಿರಸಲ ಎರೆಹುಳಗಳ ಕರುಳಿನ ಮೂಲಕ ಹೋಗಿ ಬಂದಿದೆ; ಇನ್ನೆಷ್ಟೋ ಸಾವಿರ ಸಲ ಹೋಗಿಬರಲಿಕ್ಕಿದೆ" ಎಂದು ಡಾರ್ವಿನ್ನರು ಖಚಿತಗೊಳಿಸಿದರು. ಅರಿಸ್ಟಾಟಲರು "ಎರೆಹುಳಗಳೆಂದರೆ ಭೂಮಿಯ ಕರುಳು" ಎಂದೇನು ಮಾತನ್ನು ಹೇಳಿದ್ದರೋ ಅದು ಸತ್ಯಕ್ಕೆ ದೂರವಾದುದ್ದಲ್ಲ ಎಂಬುದನ್ನು ಹೀಗೆ ಡಾರ್ವಿನ್ನರು ಸಿದ್ಧಪಡಿಸಿದರು.

ಡಾರ್ವಿನ್ನರು ಎರೆಹುಳಗಳ ಬಗ್ಗೆ ಬರೆದ ಅನೇಕ ವಿಷಯಗಳು ಸತ್ಯವೆಂದು ಈಗ ಸಂಶೋಧನೆಗಳು ಅತ್ಯಂತ ತೃಪ್ತಿಕರವಾಗಿ ನಡೆದ ಬಳಿಕ ಸಂಶಯಾತೀತವಾಗಿ ತಿಳಿದುಬಂದಿವೆ. ಆದರೆ ಡಾರ್ವಿನ್ನರ ಎಣಿಕೆಯು ತಪ್ಪಿದ್ದ ನಿದರ್ಶನಗಳೂ ಇಲ್ಲದಿಲ್ಲ. ಉದಾಹರಣೆಗೆ, ಒಂದು ಎಕ್ರೆ ಕೃಷಿ ಭೂಮಿಯಲ್ಲಿ ಸುಮಾರು ೫೩೦೦೦ ಎರೆಹುಳಗಳಿವೆ ಎಂದು ಡಾರ್ವಿನ್ನರು ಹಾಕಿದ ಅಂದಾಜು ಸರಿಯಾಗಿಲ್ಲ. ಇಂಗ್ಲೆಂಡಿನ ರೊಥಾಮ್ ಸ್ಟೆಡ್ ಪ್ರಯೋಗ ಕೇಂದ್ರದಲ್ಲಿನ ತಜ್ಞರಿಗನುಸಾರ, ತೀರ ಬಡವಾದ ಭೂಮಿಯಲ್ಲಿಯೂ ಎಕ್ರೆಯೊಂದಕ್ಕೆ ೩೫೦೦೦೦ ಎರೆಹುಳಗಳಿವೆ; ಫಲವತ್ತಾದ ಕೃಷಿಭೂಮಿಯಲ್ಲಂತೂ ಪ್ರತಿ ಎಕರೆಗೆ ೧೭೫೦೦೦೦ ಎರೆಹುಳಗಳಿವೆ! ನಾವು ಬೇಸಾಯ ಮಾಡುವ ಒಂದೆಕ್ರೆ ಭೂಮಿಯಲ್ಲಿ ನಿಸರ್ಗವು ಸೃಷ್ಟಿಸಿದ ಹದಿನೇಳೂವರೆ ಲಕ್ಷ ಕೃಷಿಕರು ನಿತ್ಯ ವ್ಯವಸಾಯ ಮಾಡಿಕೊಂಡಿದ್ದಾರೆಂದೆ ಇದರ ಅರ್ಥ.

ಈಚೆಗೆ ನಡೆಸಿದ ಸಂಶೋಧನೆಗಳು ಕಳೆದುಹೋದ ಫಲವತ್ತತೆಯನ್ನು ಪುನಃ ನೆಲೆಗೊಳಿಸಲು ಎರೆಹುಳಗಳನ್ನು ವ್ಯಾಪಕ ಪ್ರಮಾಣದಲ್ಲಿ ಉಪಯೋಗಿಸುವುದೇ ಸರಿಯಾದ ವಿಧಾನವೆಂದು ಸ್ಪಷ್ಟಪಡಿಸಿವೆ. ಎರೆಹುಳಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿದರೆ, ಮಾನವ ಜನಾಂಗವು ಅಮೂಲ್ಯವಾದ ಆಹಾರವು ವಿಪುಲ ಪ್ರಮಾಣದಲ್ಲಿ ಇನ್ನೂ ಅನೇಕ ದಶಕಗಳವರೆಗೆ—ಹೆಚ್ಚುತ್ತಿರುವ ಜನಸಂಖ್ಯೆಯ ಪ್ರಮಾಣಕ್ಕೆ ಜಗ್ಗದೆ—ಪೂರೈಕೆಯಾಗುತ್ತಿರುವಂತೆ ನೋಡಿಕೊಳ್ಳಬಲ್ಲದು.

ನಾವು ಎಷ್ಟೇ ಪ್ರಯತ್ನಪಟ್ಟರೂ, ಭೂಮಿಗೆ ಕಳೆದುಕೊಂಡ ಫಲವತ್ತತೆಯನ್ನು ಪುನಃಸಾಕಷ್ಟು ಸೇರಿಸಿಕೊಡುವುದು

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'
(KESARI JEEVANA)
ಇದನ್ನೇ ಉಪಯೋಗಿಸಿರಿ.
ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.
ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ. 6/8; $\frac{1}{4}$ ರಾತಲಿಗೆ ರೂ. 1/13
ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.
1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,
ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.
ZANDU ದಾಮೋದರ & ಕೊ,
ಮದ್ರಾಸ್—3.

ನಾಗಾ ಜನರ ಬಂಡಾಯದ ಕಾರಣ

ತಪ್ಪು ತಿಳಿವಳಿಕೆಗಳಿಂದಾಗಿಯೇ ತಿಕ್ಕಾಟ

ಕಳೆದ ಫೆಬ್ರುವರಿ ತಿಂಗಳಲ್ಲೊಮ್ಮೆ ಭಾರತೀಯರನ್ನೆಲ್ಲ ತನ್ನೆಡೆಗೆ ಆಕರ್ಷಿಸಿಕೊಂಡಿದ್ದ ನಾಗಾ ಗುಡ್ಡ ಪ್ರದೇಶವು ಈ ವಾರ ಪುನಃ ನಮ್ಮೆಲ್ಲರ ಗಮನ ಸೆಳೆದಿರುತ್ತವೆ. ಭಾರತ ಸರಕಾರದ ಗೃಹ

ಮಂತ್ರಿಗಳಾದ ಪಂಡಿತ ಪಂತರು ಕಳೆದ ವಾರ ಅಸ್ಸಾಮಿನಲ್ಲಿ ಸುತ್ತಾಡಿ ಬಂದರು. ನೆರೆ ಪೀಡಿತ ಪ್ರದೇಶಗಳ ಪರಿಸ್ಥಿತಿಯನ್ನು ತಿಳಿದುಕೊಳ್ಳುವುದೂ ನಾಗಾ ಗುಡ್ಡ ಪ್ರದೇಶದ ಚಟುವಟಿಕೆಗಳ ಕುರಿತು ಸಮಾಲೋಚನೆ ನಡೆಸುವುದೂ ತಮ್ಮ ಸಂಚಾರದ ಉದ್ದೇಶವಾಗಿತ್ತೆಂದು ಅವರು ಪತ್ರಿಕೋದ್ಯಮಿಗಳಿಗೆ ತಿಳಿಸಿದರು.

ಭಾವನಾಪರವಶತೆಯಿಂದ ತುಂಬಿ ತುಳುಕುತ್ತಾ ಪಂಡಿತ ಪಂತರು ಸಾರ್ವಜನಿಕ ಸಭೆಯಲ್ಲಿಯೂ ಪತ್ರಿಕೋದ್ಯಮಿಗಳ ಮುಂದೆ ಮಾತಾಡುವಾಗಲೂ "ನಾಗಾ ಕುಲದವರು ಭಾರತೀಯರ ಬಾಂಧವರಾಗಿದ್ದಾರೆ; ಅವರು ಭಾರತೀಯರೇ ಆಗಿದ್ದಾರೆ. ಜಾತ್ಯತೀತ ಧೋರಣೆಯನ್ನಿಟ್ಟುಕೊಂಡಿರುವ ಭಾರತ ಸರಕಾರವು ಭಾರತದಲ್ಲಿರುವ ಇತರ ಮತಾವಲಂಬಿಗಳಂತೆಯೇ ನಾಗಾ ಕುಲದವರ ಮತ ಮತ್ತು ಸಾಮಾಜಿಕ ವ್ಯವಹಾರಗಳಲ್ಲಿ ವ್ಯರ್ಥ ಕೈಹಾಕಲು ಬಯಸುತ್ತಿಲ್ಲ. ಹಿಂದುಳಿದ ಪ್ರದೇಶಗಳನ್ನೆಲ್ಲ ಅಭಿವೃದ್ಧಿಗೊಳಿಸುವ ಘನೋದ್ದೇಶವನ್ನು ಸರಕಾರವು ಇಟ್ಟುಕೊಂಡಿದ್ದು, ಇದರ ಪ್ರಕಾರ ನಾಗಾ ಪ್ರದೇಶದ ಅಭಿವೃದ್ಧಿಗಾಗಿಯೂ ಧಾರಾಳ ಪ್ರಯತ್ನಗಳನ್ನು ಕೈಗೊಳ್ಳಲಾಗುತ್ತದೆ" ಎಂದು ವಿದಿತಪಡಿಸಿದರು.

ನಾಗಾ ಗುಡ್ಡ ಪ್ರದೇಶದಲ್ಲೀಗ ಸೈನಿಕ ಕಾರ್ಯಾಚರಣೆಯು ಕೆಲಸಮಯದಿಂದ ನಡೆದಿದೆ. ಇದನ್ನು ಪ್ರಸ್ತಾಪಿಸುತ್ತಾ "ನಾವು ನಮ್ಮ ವೈರಿಗಳೊಡನೆಯಲ್ಲ — ಸರಿಯಾದ ದಾರಿಯಲ್ಲಿ ನಡೆಯದೆ ತಪ್ಪು ಹೆಜ್ಜೆಗಳನ್ನಿಡುತ್ತಿರುವ ಸ್ವಂತ ಬಾಂಧವರನ್ನು ಹಾದಿಗೆ ತರಲಿಕ್ಕಾಗಿಯೇ ಈ ಕಾರ್ಯಾಚರಣೆಗಳನ್ನು ನಡೆಸಿದ್ದೇವೆ. ಎಲ್ಲ ಭಾರತೀಯರಂತೆ ನಾಗಾ ಕುಲದವರೂ ಈಗ ಸ್ವತಂತ್ರರಾಗಿದ್ದಾರೆ; ಆದುದರಿಂದ ಅವರು ಪ್ರತ್ಯೇಕವಾದ ಸ್ವತಂತ್ರ ನಾಗಾಸ್ಥಾನ ಬೇಕೆನ್ನುವ ಮಾತಿಗೆ ಅರ್ಥವಿಲ್ಲ. ಪೈಶಾಚಿಕ ಕೃತ್ಯಗಳಲ್ಲಿಯೂ ಹಿಂಸಾಚಾರದಲ್ಲಿಯೂ ತೊಡಗಿರುವವರೊಡನೆ ಸಂಧಾನವೆಂಬುದಿಲ್ಲ. ಆದುದರಿಂದ ಈ ಹೀನ ಕಾರ್ಯಗಳಲ್ಲಿ ಪ್ರವೃತ್ತರಾದ ನಾಗಾ ಕುಲದ ಒಂದು ವರ್ಗವು ತನ್ನ ಕಾರ್ಯದಿಂದ ಪರಾವೃತ್ತವಾಗಬೇಕು" ಎಂದು ಪಂತರು ಎಚ್ಚರಿಕೆಯನ್ನಿತ್ತರು.

ಎಲ್ಲ ಸಮಸ್ಯೆಗಳನ್ನೂ ಶಾಂತರೀತಿಯಲ್ಲಿ, ಸಮಾಲೋಚನೆಯ ವಿಧಾನದ ಮೂಲಕ ಬಗೆಹರಿಸಿಕೊಳ್ಳಬಹುದು. ಈ ಮಾರ್ಗವು ನಾಗಾಕುಲದವರಿಗೂ ತೆರೆದಿದೆ. ಭಾರತದ ರಾಜ್ಯಘಟನೆಯಂತೆ ಉಳಿದ ಭಾರತೀಯರಿಗಿರುವಷ್ಟೇ ಅಧಿಕಾರವು ನಾಗಾ ಕುಲದವರಿಗೂ ಇದೆ; ಅವರು ಸಹ ಪ್ರಜಾಸತ್ತಾತ್ಮಕ ಕ್ರಮಗಳಿಂದ ತಮ್ಮ ಬೇಡಿಕೆಗಳನ್ನು ಮುಂದಿಡಬಲ್ಲರು, ತಮ್ಮ ತೊಂದರೆಗಳ ನಿವಾರಣೆಗಾಗಿ ಸರಕಾರವನ್ನು ಯಾಚಿಸಬಲ್ಲರು. ಸರಕಾರಕ್ಕೆ ನಿಷ್ಠರಾಗಿ, ಶಾಂತ ಜೀವನ ನಡೆಸುವ ನಾಗಾಕುಲದ ಯಾವ ಧುರೀಣನೂ ತಮ್ಮವರ ಸುಖದುಃಖಗಳನ್ನು ಹೇಳಿಕೊಳ್ಳಲು ಬಂದರೆ ಸರಕಾರವು ಸಹಾನುಭೂತಿಪೂರ್ವಕವಾಗಿ ಆತನನ್ನು ಸ್ವಾಗತಿಸುತ್ತದೆ. ಹಾಗಲ್ಲದೆ, ಹಿಂಸಾಚಾರ ಮತ್ತು ಭಯಪ್ರದರ್ಶನಗಳನ್ನೇ ಅವಲಂಬಿಸುವ ಅತಿರೇಕವಾದಿಗಳೊಡನೆ ಕ್ರೂರ ಶಿಕ್ಷೆಯ ಕ್ರಮವಲ್ಲದೆ ಬೇರೆ ವ್ಯವಹಾರ ಅಸಾಧ್ಯ—ಎಂದು ಪಂತರು ಘೋಷಿಸಿದರು.

ಗೃಹ ಮಂತ್ರಿಗಳ ಭಾಷಣದ ಮೇಲಿನಂಶಗಳನ್ನು ನೋಡಿದರೆ, ನಾಗಾ ಕುಲದವರು ತಪ್ಪು ಮಾರ್ಗಾವಲಂಬಿಗಳಾಗಿದ್ದಾರೆಂಬ ಭಾವನೆ ಸ್ಪಷ್ಟವಾಗುತ್ತದೆ. ಇದು ಸಾಮಾನ್ಯವಾಗಿ ಭಾರತೀಯ ರೆಲ್ಲರ ಅಭಿಪ್ರಾಯವಾಗಿದೆ. ನಾಗಾ ಕುಲದವರನ್ನು ಭಾರತೀಯರು ಇನ್ನೂ ಗೌರವದಿಂದ ನೋಡಲು ಕಲಿತಿಲ್ಲ—ಎಂಬುದಕ್ಕೆ ಇದು ಒಂದು ನಿದರ್ಶನದಂತಿದೆ. ನಾಗಾ ಜನರ ಸಮಸ್ಯೆಯೊಂದು ಉದ್ಭೂತವಾಗುವುದಕ್ಕೆ ಕಾರಣವಾದ ಹಿನ್ನೆಲೆಯ ಪರಿಚಯವು ಸರಿಯಾಗಿಲ್ಲದಿರುವುದೂ ಈಗ, ಪೇಚಿನ ಪ್ರಸಂಗ ಬಂದಾಗ, ಸರಕಾರದ ಹೇಳಿಕೆಗಳೇ ಸತ್ಯವೆಂದು ನಂಬಿ ಕುಳಿತಿರ ಬೇಕಾದ ಪರಿಸ್ಥಿತಿಗೆ ಇನ್ನೊಂದು ಕಾರಣ. ನಾಗಾ ಜನರು ನರಬೇಟೆಯಾಡುವ ಕ್ರೂರಿಗಳೆಂದು ಹತ್ತು ವರ್ಷಗಳ ಹಿಂದಿನಿಂದ ಹೇಳುತ್ತಾ ಬಂದಿರುವ ಮಾತನ್ನೇ ಈಗಲೂ ಪುನರುಚ್ಚರಿಸಲಾಗುತ್ತದೆ; ಹೊರತು, ಅವರ ಸಮಸ್ಯೆಯು ಉಗಮವೆಲ್ಲಿದೆ ಎಂದು ಶೋಧಿಸಲು ಯಾರೊಬ್ಬರೂ ಹೋಗದಿರುವುದು ಆಶ್ಚರ್ಯಕರವಾಗಿದೆ.

ಬ್ರಿಟಿಷರ ಕಾಲದಲ್ಲಿ ನಾಗಾ ಕುಲದವರ ಕಡೆಗೆ ಯಾರ ಗಮನವೂ ಹರಿದಿರಲಿಲ್ಲ. ಆಂಗ್ಲ ಸರಕಾರವು ತನ್ನ ಪ್ರಭುತ್ವ ವಿಸ್ತರಣೆಯ ಆಶೆಯಿಂದ ಭಾರತದ ಈಶಾನ್ಯ ಮೂಲೆಯಲ್ಲಿ ಟಿಬೆಟ್, ಚೀನ ಮತ್ತು ಬರ್ಮಾಗಳ ಸಂದುಗೊಂದಿನಲ್ಲಿ ನೆಲೆಸಿರುವ ನಾಗಾ ಕುಲದವರ ನೆಲೆವೀಡುಗಳ ಮೇಲೆ ಸೈನಿಕ ಕಾರ್ಯಾಚರಣೆಯನ್ನು ಆಗಾಗ್ಗೆ ನಡೆಸುತ್ತಿದ್ದಿತು. ಸುಮಾರು ೩೦೦೦೦ ಚದರ ಮೈಲು ವಿಸ್ತೀರ್ಣದ ಪ್ರದೇಶವನ್ನು ವ್ಯಾಪಿಸಿದೆ ಎಂದಿದ್ದ ನಾಗಾ ಕುಲದ ನೆಲೆವೀಡುಗಳಲ್ಲಿ ಕೇವಲ ೫೦೦೦ ಚದರ ಮೈಲು ಪ್ರದೇಶದಲ್ಲಿ ಮಾತ್ರ ಶಾಂತಿ-ಸುವ್ಯವಸ್ಥೆಗಳನ್ನವರು ನೆಲೆಗೊಳಿಸಲು ಸಮರ್ಥರಾಗಿದ್ದರು. ಅದು ಸಹ, ಒಂದು ಬಗೆಯ ಸಂಧಾನ ಕೌಶಲದಿಂದ—ಪ್ರತಿ ವರ್ಷ ಒಂದು ನೂರು ಹಾರೆ, ೩೦ ಮಣ ಉಪ್ಪು, ಎರಡು ಮಣ ಹೊಗೆಸೊಪ್ಪು, ಎರಡು ಸೇರು ಅಫೀಮು ಮತ್ತು ೩೦! ಬಾಟ್ಲಿ ಮದ್ಯವನ್ನಿತ್ತು ಈ ಜನರನ್ನು ಬ್ರಿಟಿಷರು ಸಮಾಧಾನಗೊಳಿಸುತ್ತಿದ್ದರು. ತಾವು ನಾಗಾ ಕುಲದವರ ಪ್ರಭುಗಳೆಂದು ತಮ್ಮಷ್ಟಕ್ಕೆ ಬ್ರಿಟಿಷರು ಅಭಿಮಾನ ಪಡುತ್ತಿದ್ದರು.

ವಾಸ್ತವದಲ್ಲಿ ಬ್ರಿಟಿಷರ ಆಳ್ವಿಕೆಯು ನಾಗ ಕುಲದವರ ಮೇಲೆ ಯಾವ ಪರಿಣಾಮವನ್ನೂ ಮಾಡುವಷ್ಟು ಪ್ರಭಾವಶಾಲಿಯಾಗಿರಲಿಲ್ಲ. ನಾಗಾ ಕುಲದವರು ಎಂಬ ಪದ ಪ್ರಯೋಗದಿಂದ ಈ ಕುಲವು ಒಂದೇ ಎಂಬ ಅಭಿಪ್ರಾಯ ನಮ್ಮೆಲ್ಲಾಗುತ್ತದೆ; ಆದರೆ ಸತ್ಯ ಹೀಗಿಲ್ಲ. ಹಲವಾರು ಕುಲಗಳಾಗಿ ನಾಗರು ಒಡೆದಿದ್ದಾರೆ; ಒಂದೊಂದು ಕುಲವೂ ಒಂದೊಂದು ಭಾಷೆಯನ್ನಾಡುತ್ತದೆ; ಒಂದು ಕುಲಕ್ಕೆ ಇನ್ನೊಂದರ ಭಾಷೆಯು ಅರ್ಥವಾಗುವುದಿಲ್ಲ; ಈ ಕುಲಗಳಲ್ಲಿ ಸೌಹಾರ್ದತೆ ಮತ್ತು ಬಾಂಧವ್ಯವೂ ಇಲ್ಲ. ಪ್ರತಿಯೊಂದು ಕುಲದ ನಡವಳಿಕೆಯೂ ಬೇರೆಯಾಗಿವೆ; ಸಾಮಾಜಿಕ ಸಂಪ್ರದಾಯಗಳು ಬೇರೆಯಾಗಿವೆ. ಕೇವಲ ಅನುಕೂಲತೆಗಾಗಿಯಷ್ಟೇ ಈಶಾನ್ಯ ಭಾರತದ ಈ ಗುಡ್ಡವಾಸಿಗಳನ್ನು ನಾಗಾರೆಂದು ಕರೆಯಲಾಗುತ್ತದೆ. ಇವರಲ್ಲಿ ಕಣಿವೆ ಪ್ರದೇಶಗಳಿಗೆ ಹೊಂದಿಕೊಂಡಿರುವ ಸ್ಥಳಗಳ ಕೆಲವು ಕುಲಗಳು ಮಾನವ ನಾಗರಿಕತೆಯ ಸಂಪರ್ಕಕ್ಕೆ ಹೆಚ್ಚಾಗಿ ಬಂದಿವೆ; ಆದರೆ, ಹೆಚ್ಚಿನ ಕುಲಗಳಲ್ಲಿ ಆಧುನಿಕ ವಾತಾವರಣವು ಯಾವ ಪರ್ಣಸ್ಪರ್ಶನ್ನೂ ಬೀರಿಲ್ಲ.

ಅನೇಕ ಕುಲಗಳಾಗಿ ಒಡೆದಿರುವ ನಾಗಾ ಜನರಲ್ಲಿ ಪ್ರಜಾಪ್ರಭುತ್ವದಿಂದ ಹಿಡಿದು ಸರ್ವಾಧಿಕಾರದ ವರೆಗಿನ ಪದ್ಧತಿಗಳು ಬಳಕೆಯಲ್ಲಿವೆ. ಒಂದು ಕುಲದಲ್ಲಿ ಜನರೆಲ್ಲರೂ ಹಳ್ಳಿಯ ಕೇಂದ್ರದಲ್ಲಿ ಒಟ್ಟುಸೇರಿ ತಮ್ಮ ಹಳ್ಳಿಯ ವ್ಯವಹಾರವನ್ನು ನೋಡಿಕೊಳ್ಳಲು ಹಿರಿಯರನ್ನು ಆರಿಸುತ್ತಾರೆ. ಈ ಹಿರಿಯರು ಕಳವಿನಂಥ ಅಪರಾಧಗಳಿಗೆ ಕುಲದ ಸಮಸ್ಕರ ಮೇಲೆ ದಂಡವನ್ನೂ ಘಡಿಯೇಟಿನ ಶಿಕ್ಷೆಯನ್ನೂ ವಿಧಿಸಬಲ್ಲರು; ಅತಿರೇಕವರ್ತನೆಯ ಸಂಗತಿಯಲ್ಲಿ ಮರಣ

(೧೦ನೇ ಪುಟ ನೋಡಿರಿ)



ಆಫ್ರಿಕದಲ್ಲಿ ಹೊಸ ಗಣರಾಜ್ಯದ ಉದಯ-ಐಗುಪ್ತ

ಸೈನ್ಯ ಕ್ರಾಂತಿಯಿಂದ ಪ್ರಜಾಸತ್ತೆಯ ಕಡೆಗಿಟ್ಟ ಪ್ರಗತಿಪರ ಹೆಜ್ಜೆ

ಏಶ್ಯ ಮತ್ತು ಆಫ್ರಿಕದ ರಾಷ್ಟ್ರಗಳಲ್ಲಿ ಜಾಗೃತಿಯುಂಟಾಗಿದೆ ಎಂಬ ಮಾತನ್ನು ನಂಬಲು ಸಾಮ್ರಾಜ್ಯಶಾಹಿ ಪಾಶ್ಚಾತ್ಯ ರಾಷ್ಟ್ರಗಳಿಗೆ ಬಹಳ ಕಷ್ಟವಾಗುತ್ತಿದ್ದರೂ ಸತ್ಯ ಚಿತ್ರವನ್ನು ನೋಡದೆ ಕುಳಿತಿರುವೆವೆಂಬ ಛಲದಿಂದ ಅಷ್ಟು ಹೆಚ್ಚು ಸಮಯವನ್ನಿನ್ನು ದೂಡುವಂತಿಲ್ಲ. ಎಚ್ಚೆತ್ತ ಏಶ್ಯ ಮತ್ತು ಆಫ್ರಿಕದ ರಾಷ್ಟ್ರಗಳ ಸಾಲಿನಲ್ಲಿ ಇದೀಗ ಉಜ್ವಲವಾಗಿ ಹೊಳೆಯತೊಡಗಿರುವ ನೂತನ ರತ್ನವಾಗಿ ಐಗುಪ್ತ ಅಥವಾ ಇಜಿಪ್ಟ್ ದೇಶವನ್ನು ಪರಿಗಣಿಸಬಹುದು.

ನಾಸೇರರ ವಿಜಯ

ನಾಲ್ಕು ವರ್ಷಗಳ ಹಿಂದೆ ಅಲ್ಲಿ ಅರಸು ಫರೂಕರ ಮತ್ತು ಪಾಳೆಯಗಾರರನ್ನು ನೆನಪಿಗೆ ತರಿಸುವ ಪಾಶಾಗಳ ದುರಾಡಳಿತೆಯು ನಡೆಯುತ್ತಿದ್ದಿತು. ಸೇನೆಯು ದಂಗೆ ನಡೆದು, ಅರಸು ಫರೂಕರು ಸಿಂಹಾಸನ ತ್ಯಜಿಸಿ, ದೇಶವನ್ನು ಬಿಟ್ಟೋಡಿ ಹೋಗಬೇಕಾಯಿತು. ಜನರಲ್ ನಗೀಬರು ಆಡಳಿತಾಧಿಕಾರವನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಆದರೆ ಹಿಂದಿನಿಂದ ಇವರು ಸಹ ಆಕ್ಷೇಪಾರ್ಹ ಚಟುವಟಿಕೆಗಳಲ್ಲಿ ತೊಡಗಿದ ಸುಳಿವು ದೊರೆತುದರಿಂದ ಸೈನ್ಯವು ಲೆಫ್ಟಿನೆಂಟ್ ಕರ್ನಲ್ ಗಾಮೆಲ್ ಅಬ್ದೆಲ್ ನಾಸೇರ್ ಎಂಬ ಸೇನಾಧಿಕಾರಿಗೆ ರಾಷ್ಟ್ರದ ಅಧಿಪತ್ಯವನ್ನು ಒಪ್ಪಿಸಿಕೊಟ್ಟಿತು.

ಕಳೆದವಾರ ಐಗುಪ್ತದಿಂದ ಬಂದ ಸುದ್ದಿಗಳು ನಾಸೇರರು ಆದೇಶದಲ್ಲಿ ಬಹಳ ಜನಪ್ರಿಯರಾಗಿರುವರೆಂಬುದನ್ನು ಎತ್ತಿ ಹೇಳುತ್ತವೆ. ಅವರೀಗ ಐಗುಪ್ತದ ಅಧ್ಯಕ್ಷರಾಗಿ ಪ್ರಚಂಡ ಬಹುಮತದಿಂದ ಚುನಾವಣೆ ಹೊಂದಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಅವರೊಬ್ಬರೇ ಉಮೇದುವಾರರಾಗಿದ್ದರು — ಅವರಿಗೆ ಒಟ್ಟು ೪೪,೫೫,೨೧೧ ಮತಗಳು ಬಿದ್ದಿವೆ. ಇದೇ ಹೊತ್ತಿಗೆ ಐಗುಪ್ತಕ್ಕಾಗಿ ರಾಜ್ಯಘಟನೆಯೊಂದನ್ನು ತಯಾರಿಸಿ ಜನರಿಂದ ಈ ಘಟನೆಗೆ ಅನುಮೋದನೆ ದೊರಕಿಸಲು ಮತದಾನ ಕಾರ್ಯಕ್ರಮವನ್ನೂ ಜರಗಿಸಿದ್ದರು. ಈ ಘಟನೆಗೆ ಅನುಕೂಲವಾಗಿ ೪೪,೫೫,೨೧೧ ಜನರು ಮತವನ್ನಿತ್ತರು.

ಸರಳ ಜೀವಿ

ದೇಶದ ರಾಜ್ಯಘಟನೆಗೆ ದೊರೆತುದಕ್ಕಿಂತಲೂ ಹೆಚ್ಚು ಮತಗಳನ್ನು ಸಂಪಾದಿಸಿದ ನಾಸೇರರು ಇದೇ ಜುಲಾಯಿ ೨೩ನೇ ತಾರೀಕಿನಂದು ಅಧ್ಯಕ್ಷ ಪಟ್ಟವನ್ನು ಏರಲಿದ್ದಾರೆ: ಫರೂಕ ಅರಸರನ್ನು ಓಡಿಸಿದ ದಿನವಿದಾಗಿದೆ. ಮುಂದಿನ ಆರು ವರ್ಷಗಳಷ್ಟು ನಾಸೇರರ ಅಧ್ಯಕ್ಷ ಕಾಲಾವಧಿಯಿದೆ. ಹೊಸ ರಾಜ್ಯ ಘಟನೆಯಂತೆ ಇದೇ ನವಂಬರ ತಿಂಗಳಲ್ಲಿ ನಾಸೇರರು ರಾಷ್ಟ್ರೀಯ ಪ್ರತಿನಿಧಿ ಸಭೆಗೆ ಚುನಾವಣೆಗಳನ್ನು ನಡೆಸಲಿದ್ದಾರೆ. ಅಲ್ಲಿಯ ವರೆಗೆ ಶಾಸನಗಳನ್ನು ಘೋಷಿಸಿ, ರೂಢಿಗೆ ತರುವ ಅಧಿಕಾರವನ್ನು ೨೦ನೇ ಜೂನಿನಂದು ವಿಸರ್ಜಿಸಲ್ಪಟ್ಟಿರುವ ರಾಷ್ಟ್ರೀಯ ಕ್ರಾಂತಿಕಾರಿ ಮಂಡಳವು ನಾಸೇರರಿಗೆ ನೀಡಿದೆ.

ನಾಸೇರರು ೩೮ ವರ್ಷ ವಯಸ್ಸಿನವರಾಗಿದ್ದಾರೆ. ಅವರು ಬಹಳ ಸರಳ ಜೀವಿಗಳು; ಜನಸಾಧಾರಣರ ಮೇಲೆ ವಿಶೇಷವಾದ ಸಹಾನುಭೂತಿ ಮತ್ತು ಅನುಕಂಪವುಳ್ಳವರೂ ಹೌದು. ಬಡ ತಂದೆ ತಾಯಿಯರ ಈ ಮಗನು ಸ್ವಂತ ಪ್ರತಿಭೆ ಮತ್ತು ಯೋಗ್ಯತೆಗಳಿಂದಾಗಿಯೇ ರಾಷ್ಟ್ರದ ಮಹೋನ್ನತ ಸ್ಥಾನಾಪನ್ನರಾಗಿದ್ದಾರೆ; ಮತ್ತು ಎರಡು ಕೋಟಿ ಇಪ್ಪತ್ತು ಲಕ್ಷ ಜನರ ಭವಿಷ್ಯ ರೂಪಿಸುವ ಹೊಣೆಯನ್ನು ಹೊತ್ತಿದ್ದಾರೆ. ರಾಷ್ಟ್ರಾಧ್ಯಕ್ಷ ಸ್ಥಾನವನ್ನೇರಿದ ಬಳಿಕವೂ ತಾನು ತನ್ನ ಈಗಿನ ಸಾಮಾನ್ಯ ಮನೆಯಲ್ಲಿಯೇ ಉಳಿಯುವುದಾಗಿ ಅವರು ಸಾರಿದ್ದಾರೆ. ಕೈರೋ ನಗರದ ಸಣ್ಣ ಗೃಹವೊಂದರಲ್ಲಿ ಅವರು ತನ್ನ ಹೆಂಡತಿ ಮತ್ತು ಐವರು ಮಕ್ಕಳೊಂದಿಗೆ ಈಗ ವಾಸಿಸುತ್ತಿದ್ದಾರೆ.

ಜನರ ಬಡತನ

ಐಗುಪ್ತವು ಪ್ರಾಚೀನೇತಿಹಾಸವುಳ್ಳ ದೇಶ. ಪಿರಾಮಿಡುಗಳ ರೋಮಾಂಚಕ ರಚನೆಯು ಅದರ ಭವ್ಯ ಸಂಸ್ಕೃತಿಯ ದ್ಯೋತಕವಾಗಿ ಇಂದಿಗೂ ಸಂದರ್ಶಕರನ್ನು ಬೆರಗುಗೊಳಿಸುತ್ತದೆ. ಆದರೆ, ಎಲ್ಲ ರಾಷ್ಟ್ರಗಳ ಅದೃಷ್ಟ ಚಕ್ರವೂ ತಿರುಗಿದಂತೆ, ಐಗುಪ್ತವು ಸಹ ಪತನಕ್ಕೆ ಗುರಿಯಾಯಿತು. ಶೋಷಕ ಪಾಶಾರಿಂದ ಜನರು ಪೀಡಿತರಾದರು. ಪರಕೀಯರ ಕೈವಾಡವು ರಾಜಕೀಯ ರಂಗದಲ್ಲಿ ಪ್ರಬಲಿಸಿತು.

ನೈಲ್ ನದಿಯೊಂದೇ ಐಗುಪ್ತಕ್ಕೆ ಸಮೃದ್ಧಿಯನ್ನೊದಗಿಸುವ ಜಲಧಾರೆಯಾಗಿದೆ. ನಾಸೇರರ ರಾಜಕೀಯ ಚಾತುರ್ಯದಿಂದಾಗಿ ಇದಕ್ಕೆ ಕಟ್ಟಲಾಗುತ್ತಿರುವ ಆಸ್ವಾನ್ ಅಣೆಕಟ್ಟಿಗೆ ಅಮೇರಿಕದ ಸಹಾಯ ಪ್ರಾಪ್ತವಾಗಿದೆ! ಸುಮಾರು ೬೦ ಲಕ್ಷ ಎಕ್ರೆ ಭೂಮಿಯನ್ನು ನೈಲಿನ ನೀರು ತಣಿಸುತ್ತದೆ. ಐಗುಪ್ತ ದೇಶದ ೯೬% ಭೂಮಿಯು ಮರಳುಕಾಡು; ಜನರಲ್ಲಿ ೮೫% ಭೂಮಿ ರಹಿತರಾಗಿದ್ದಾರೆ. ಇಂಥ ವಿಷಮ ಪರಿಸ್ಥಿತಿಯನ್ನು ನಿವಾರಿಸಿ, ಸುಧಾರಣೆಗಳನ್ನು ಕೈಗೊಂಡು ಪ್ರಜಾಸತ್ತಾತ್ಮಕ ಕಲ್ಯಾಣ ರಾಜ್ಯವನ್ನು ಕಟ್ಟುವೆನೆಂಬ ಭರವಸೆ ಹೊಂದಿರುವ ನಾಸೇರರು ಎಲ್ಲರ ಕೌತುಕಕ್ಕೆ ಕಾರಣರಾಗಿದ್ದಾರೆ ಎನ್ನಬಹುದು.

ಪ್ರಜೆಗಳ ಸಂಕಲ್ಪ

ಜನಪ್ರತಿನಿಧಿಗಳು ಪರ್ಯಾಲೋಚಿಸಿ ರಚಿಸಿದ ಘಟನೆಯು ಐಗುಪ್ತದ್ದಲ್ಲವೆಂಬುದು, ನಿಜ. ಆದರೆ ಭಾರಿ ಮತದಾನದ ಮೂಲಕ ಈ ಘಟನೆಗೆ ಜನರ ಪ್ರಚಂಡ ಅನುಮೋದನೆಯನ್ನೀಗ ಸಂಪಾದಿಸಲಾಗಿದೆ. ರಾಜ್ಯ ಘಟನೆಯನ್ನು ರೂಪಿಸಿದವರು ರಾಷ್ಟ್ರೀಯ ಕ್ರಾಂತಿಕಾರಿ ಮಂಡಳದ ಸದಸ್ಯರು — ಇವರೆಲ್ಲರೂ ಸೈನಿಕರು, ಹೊರತು ರಾಜಕೀಯಜ್ಞರಲ್ಲ! ಆದಾಗ್ಯೂ ಅವರಿಂದ ರಚಿಸಲ್ಪಟ್ಟ ಘಟನೆಯು ಉತ್ತಮ ಧ್ಯೇಯಾದರ್ಶಗಳನ್ನು ನಿರೂಪಿಸುತ್ತದೆ. ಐಗುಪ್ತದ ಜನರೆಲ್ಲರ ಕ್ಷೇಮ ಚಿಂತನೆಯ ಉದ್ದೇಶವನ್ನದು ನಿಸ್ಸಂಶಯವಾಗಿ ವ್ಯಕ್ತಪಡಿಸುತ್ತದೆ.

ರಾಷ್ಟ್ರದ ಸಮಸ್ತ ಪ್ರಜೆಗಳ ಮನೋಭಾವನೆಯನ್ನು ಪ್ರತಿನಿಧಿಸುವಂಥದೆ ಘಟನೆಯ ಪೀಠಿಕಾಪ್ರಕರಣ: ಅದು ಹೀಗೆನ್ನುತ್ತದೆ — "ನಮ್ಮ ರಾಜ್ಯ ಘಟನೆಯಲ್ಲಿ ಅಡಕವಾದ ತತ್ತ್ವಗಳು ನಮ್ಮ ಹೋರಾಟದ ತಿರುಳಿನಿಂದ, ಅನುಭವವು ಕಲಿಸಿದ ಅಮೂಲ್ಯ ಪಾಠಗಳಿಂದ, ನಮ್ಮ ಜನಸಾಧಾರಣರು ಘೋಷಿಸಿದ ಉನ್ನತಾದರ್ಶಗಳಿಂದ ನಮ್ಮ ಶೂರ ಯೋಧರು ಯಾವ ಅಮರ ಮೌಲ್ಯಗಳ ರಕ್ಷಣೆಗಾಗಿ ಪ್ರಾಣವನ್ನು ಬಲಿದಾನವಿತ್ತು ಹುತಾತ್ಮರಾದರೋ ಅವುಗಳಿಂದ, ನಮ್ಮ ಹಿರಿಯರೂ ಅವರ ಹಿರಿಯರೂ ಪರಂಪರಾನುಗತವಾಗಿ ಯಾವ ಕನಸಿನ ಸಾಧನೆಗಾಗಿ ದುಡಿದರೋ ಅದರಿಂದ, ಹಾಗೆಯೇ ವಿಜಯದ ಬಳಿಕ ಬರುವ ಮಧುರ ಭಾವನೆ ಹಾಗು ಸೋಲಿನ ಬಳಿಕ ಬರುವ ಕಹಿಯನುಭವಗಳಿಂದ ಪ್ರೇರಿತವಾಗಿವೆ ಎಂದು ನಾವಿಂದು ಸಾರುತ್ತೇವೆ."

ಪ್ರಜಾಸತ್ತಾತ್ಮಕ ಗಣರಾಜ್ಯ

ಹೊಸ ಘಟನೆಯು ಆರು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ. ಘಟನೆಯು ಆಫ್ರೋ-ಏಶ್ಯ ರಾಷ್ಟ್ರಗಳ ಬಾಂಡುಂಗ್ ಸಮ್ಮೇಳನದಲ್ಲಿ ಮನ್ನಣೆ ನೀಡಲಾದ ತತ್ವಗಳನ್ನು ಸಾಮಾನ್ಯವಾಗಿ ಪುರಸ್ಕರಿಸುತ್ತದೆ. ಸಾಮ್ರಾಜ್ಯಶಾಹಿತ್ವ ಮತ್ತು ಅದರ ಪೋಷಕರ ಉಚ್ಚಾಟನೆ, ಪಾಳೆಯಗಾರಿಕೆ ಮತ್ತು ಶೋಷಕ ಸ್ಥಾನಗಳ ನಿರ್ಮೂಲನೆ, ಸರಕಾರದ ಆಡಳಿತದ ಮೇಲೆ ಭಂಡವಾಳಶಾಹಿತ್ವದ ಪ್ರಭಾವವನ್ನು ಕಿತ್ತುಹಾಕುವುದು ಐಗುಪ್ತದ ಘಟನೆಯ ಧ್ಯೇಯವೆನ್ನಲಾಗಿದೆ. ಬಲಶಾಲಿಯಾದ ರಾಷ್ಟ್ರೀಯ ಸೈನ್ಯವನ್ನು ಕಟ್ಟಿಕೊಳ್ಳುವುದೂ ಸಾಮಾಜಿಕ ನ್ಯಾಯವನ್ನು ಪ್ರಜೆಗಳ ಅನುಭವಕ್ಕೆ ಬರಗೊಡುವುದೂ ಸುಸಂಬದ್ಧ ಪ್ರಜಾಸತ್ತಾತ್ಮಕ ಪದ್ಧತಿಯನ್ನು ನೆಲೆಗೊಳಿಸುವುದೂ ಘಟನೆಯಲ್ಲಿ ಉಲ್ಲೇಖಗೊಂಡಿರುವ ಬೇರೆ ಕೆಲವು ಉದ್ದೇಶಗಳಾಗಿವೆ.

"ಸಾರ್ವಭೌಮ ಪ್ರಭುತ್ವ ಸಂಪನ್ನ ಸ್ವತಂತ್ರ ಅರಬ ರಾಜ್ಯ"ವಾಗಿ ಐಗುಪ್ತದ ಘಟನೆಯು ಆ ದೇಶವನ್ನು ಕರೆದಿದೆ; ಅದು ಪ್ರಜಾಸತ್ತಾತ್ಮಕ ಗಣರಾಜ್ಯವಾಗಿದೆ; ಐಗುಪ್ತದ ಜನತೆಯನ್ನು ಅರಬ ಗುಂಪಿನಲ್ಲೊಂದೆಂದು ಪರಿಗಣಿಸಲಾಗಿದೆ; ಸರಕಾರದ ಧರ್ಮವು ಇಸ್ಲಾಂ; ಅರಬಿಯೇ ಸರಕಾರಿ ಭಾಷೆ. ಆದರೆ ಪಾಕಿಸ್ತಾನದಲ್ಲಿರುವಂತೆ ತಾರತಮ್ಯಗಳನ್ನು ಇಸ್ಲಾಂ ಮತ್ತು ಇಸ್ಲಾಮೇತರರಲ್ಲಿ ಐಗುಪ್ತದ ಘಟನೆಯು ಮಾಡುತ್ತಿಲ್ಲ.

ನಾಗರಿಕರ ಅಧಿಕಾರ

ಉದಾಹರಣೆಗೆ, ನಾಗರಿಕರ ಹಕ್ಕು ಬಾಧ್ಯತೆ ಮತ್ತು ಕರ್ತವ್ಯಗಳ ಕುರಿತು ಘಟನೆಯಲ್ಲಿ ನಿರೂಪಿತವಾದ ಸಂಗತಿಗಳನ್ನು ತೆಗೆದುಕೊಳ್ಳಬಹುದು. ಐಗುಪ್ತದ ಪ್ರಜೆಯ ನಾಗರಿಕಾಧಿಕಾರವನ್ನು ಯಾರೂ ಕಸಿದುಕೊಳ್ಳಲಾರರು; ಅದನ್ನಾತನು ಬದಲಿಸುವುದೂ ಸಾಧ್ಯವಿಲ್ಲ. ನಾಗರಿಕಾಧಿಕಾರವನ್ನು ಒಬ್ಬನಿಗೆ ಕೊಟ್ಟ

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ; ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,

ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕ್‌ಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ವಸ್ತುಗಳು ವಾಜಬಿ ದರದಲ್ಲಿ ಸಿಗುತ್ತವೆ.

ತಾ. 20—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART

Head Office: Tenkapet, **Udipi**, S. K. *Phone:* 66

ಬಳಿಕ ಹಿಂತೆಗೆದುಕೊಳ್ಳುವುದೂ ಅಸಾಧ್ಯ. ಮೂಲ ಜನಾಂಗ, ವರ್ಣ, ಭಾಷೆ ಅಥವಾ ಮತಗಳು ಯಾವುವೇ ಆಗಿರಲಿ, ಎಲ್ಲ ಪ್ರಜೆಗಳನ್ನೂ ಶಾಸನದ ಮುಂದೆ ಸಮಾನವಾಗಿ ನಡೆಸಿಕೊಳ್ಳುವ ಭರವಸೆಯನ್ನು ಘಟನೆಯು ನೀಡುತ್ತದೆ.

ವ್ಯಕ್ತಿಯ ಜೀವ, ವಾಸಸ್ಥಾನ ಮತ ಮತ್ತು ಧಾರ್ಮಿಕ ವ್ಯವಹಾರಗಳ ಸಂಗತಿಯಲ್ಲಿ ಘಟನೆಯು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡುತ್ತದೆ. ಶಾಸನೋಕ್ತವಾದ ರೀತಿಯಲ್ಲಲ್ಲದೆ ಯಾರಿಗೂ ಶಿಕ್ಷೆಯನ್ನು ವಿಧಿಸುವುದಿಲ್ಲ ಎಂದು ಘಟನೆ ಹೇಳುತ್ತದೆ. ಹಾಗೆಯೇ ಶಾಸನೋಕ್ತವಾದ ರೀತಿಯಲ್ಲಲ್ಲದೆ ಯಾವುದೇ ವ್ಯಕ್ತಿಯನ್ನು ದಸ್ತಗಿರಿಮಾಡಿ ಬಂಧನದಲ್ಲಿಡುವುದಿಲ್ಲ ಎನ್ನುತ್ತದೆ ಘಟನೆ. ವರ್ತಮಾನ ಪತ್ರಿಕೆಗಳು, ಪ್ರಕಾಶನ ಕಾರ್ಯ ಮತ್ತು ಇತರ ಸ್ವಾತಂತ್ರ್ಯದ ಅಧಿಕಾರವನ್ನು "ಸಾರ್ವಜನಿಕ ಯೋಗಕ್ಷೇಮ ರಕ್ಷಣೆಗೆ ಒಳಪಟ್ಟು" ಮತ್ತು ಶಾಸನಬದ್ಧ ಮಿತಿಗೆ ಒಳಪಡುವಂತೆ ನೀಡಲಾಗಿದೆ.

ಆರ್ಥಿಕ ಪುನಾರಚನೆ

ಸಾಂಘಿಕ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ, ವೈಜ್ಞಾನಿಕ ಸಂಶೋಧನೆಯ ಸ್ವಾತಂತ್ರ್ಯ, ಶಿಕ್ಷಣ ಹೊಂದುವ ಸ್ವಾತಂತ್ರ್ಯ, ಕೆಲಸಮಾಡುವ ಸ್ವಾತಂತ್ರ್ಯ—ಇವನ್ನು ಘಟನೆಯಲ್ಲಿ ಮನ್ನಿಸಲಾಗಿದೆ. ನ್ಯಾಯಸ್ಥಾನದ ಅನುಮತಿಯಿಲ್ಲದೆ ಆಸ್ತಿಯನ್ನು ಅಪಹರಿಸಿಕೊಳ್ಳುವಂತಿಲ್ಲವೆಂದು ಸಹ ಘಟನೆಯು ವಿಧಿಸುತ್ತದೆ. ನಾಗರಿಕರಿಗೆ ಮತದಾನದ ಅಧಿಕಾರವನ್ನು ನೀಡಲಾಗಿದೆ. ಎಲ್ಲ ಪ್ರಜೆಗಳಿಗೂ ಸ್ವಾತಂತ್ರ್ಯ, ಭದ್ರತೆ, ಶಾಂತ ಜೀವನ ಮತ್ತು ಸಮಾನ ಅವಕಾಶಗಳ ಭರವಸೆಯನ್ನು ಘಟನಾತ್ಮಕವಾಗಿ ಕೊಡಲಾಗಿದೆ.

ದೇಶದ ಆರ್ಥಿಕ ಪುನಾರಚನೆಯ ವಿಧಾನವನ್ನು ಪ್ರಸ್ತಾಪಿಸುತ್ತಾ ಘಟನೆಯು ಜನರ ಜೀವನಮಟ್ಟವನ್ನು ಎತ್ತರಿಸುವುದಕ್ಕೂ ಸಾಮಾಜಿಕ ನ್ಯಾಯವನ್ನು ಸನ್ನಿಸುವುದಕ್ಕೂ ಅನುಕೂಲವಾದ ಯೋಜನೆಯನ್ನು ಅನುಸರಿಸಲಾಗುವುದೆಂದು ಹೇಳುತ್ತದೆ. ಭೂಹಿಡುವಳಿಗೊಂದು ಮಿತಿಹಾಕಲು ಘಟನೆ ಸಮ್ಮತಿಸಿದೆ. ಆದರೆ ಖಾಸಗಿಸೊತ್ತುಗಳನ್ನು ಪವಿತ್ರವಾಗಿ ನೋಡಲಾಗುವುದೆಂಬ ಭರವಸೆಯನ್ನಿತ್ತಿದೆ. ಸಾರ್ವಜನಿಕ ಉದ್ದೇಶಗಳಿಗಾಗಿಯಲ್ಲದೆ ಆಸ್ತಿ ಪಾಸ್ತಿಯನ್ನು ಸರಕಾರವು ವಶಪಡಿಸಿ ಕೊಳ್ಳಲಾರದು; ವಶಪಡಿಸಿಕೊಂಡ ಆಸ್ತಿ ಪಾಸ್ತಿಗೆ ಶಾಸನಸಮ್ಮತವಾದ ಪರಿಹಾರವನ್ನು ಕೊಡಲು ಸರಕಾರ ಬದ್ಧವಿದೆ.

ಪ್ರತಿನಿಧಿ ಸಭೆ

ಸಣ್ಣ ಮಕ್ಕಳನ್ನು ಶೋಷಣೆಗೆ ಗುರಿಪಡಿಸದಂತೆ ಮತ್ತು ಅವರನ್ನು ತಿರಸ್ಕಾರದಿಂದ ನೋಡದಂತೆ ರಕ್ಷಣೋಪಾಯಗಳನ್ನು ಕೈಗೊಳ್ಳಬೇಕೆಂದೂ ರೋಗಿಗಳು, ಅಶಕ್ತರು ಮತ್ತು ವೃದ್ಧರ ಪಾಲನೆಗೆ ಉಪಾಯಗಳನ್ನು ಯೋಜಿಸಬೇಕೆಂದೂ ಘಟನೆಯು ಸರಕಾರಕ್ಕೆ ನಿರ್ದೇಶವೀಯುತ್ತದೆ. ಮಹಿಳೆಯರ ಪಾತ್ರದ ಕುರಿತು ಸರಕಾರವು ವಿಶೇಷ ಆಸಕ್ತಿಯನ್ನು ವಹಿಸಬೇಕೆಂದು ಸಹ ಘಟನೆಯು ವಿಧಿಸುತ್ತದೆ. ನಾಗರಿಕ ಬಿರುದು ಬಾವಲಿಗಳನ್ನು ನಿಷೇಧಿಸಲಾಗಿದೆ. ಸಾರ್ವಜನಿಕ ಸೇವೆಯನ್ನು ಸರಕಾರವು ಬೇಕಾದಾಗ ನಾಗರಿಕರಿಂದ ಅಪೇಕ್ಷಿಸಬಹುದು.

ನಾಸೇರರಿಗೆ ಭಾರತೀಯರ ಶುಭಾಶಯ!

ವ್ಯಾಪಕ ಅಧಿಕಾರ ಸಂಪನ್ನ ರಾಷ್ಟ್ರಾಧ್ಯಕ್ಷ

ರಾಷ್ಟ್ರೀಯ ಪ್ರತಿನಿಧಿ ಸಭೆಯು ಐದು ವರ್ಷಗಳ ಅವಧಿಯ ವರೆಗೆ ಅಧಿಕಾರದಲ್ಲಿ ಉಳಿಯುತ್ತದೆ. ಈ ಸಭೆಯ ಸದಸ್ಯರಲ್ಲಿ ಯಾರೊಬ್ಬರಿಗೂ ನ್ಯಾಯಾಂಗ ಮತ್ತು ಕಾರ್ಯಾಂಗದ ಕಕ್ಷೆಯಲ್ಲಿ ಬರುವ ವಿಷಯಗಳಲ್ಲಿ ಕೈಹಾಕುವ ಅಧಿಕಾರವಿರುವುದಿಲ್ಲ. ಮಂತ್ರಿಗಳಿಗೆ ಪ್ರಶ್ನೆ ಹಾಕಿ ಅಧಿವೇಶನ ಕಾಲದಲ್ಲಿ। ಈ ಸದಸ್ಯರು ಉತ್ತರಗಳನ್ನು ಪಡೆಯಬಲ್ಲರು. ತಮ್ಮ ಅಧಿಕಾರಾವಧಿಯಲ್ಲಿ ಪ್ರತಿನಿಧಿ ಸಭೆಯ ಸದಸ್ಯರು ಲಾಭದಾಯಕವಾದ ಖಾಸಗಿ ಅಥವಾ ಸಾರ್ವಜನಿಕ ಹುದ್ದೆಗಳಲ್ಲಿರುವಂತಿಲ್ಲ.

ರಾಷ್ಟ್ರಾಧ್ಯಕ್ಷನ ಆಯ್ಕೆ

ಮಂತ್ರಿಮಂಡಳಗಳ ಸಭೆಯಲ್ಲಿ ರಾಷ್ಟ್ರಾಧ್ಯಕ್ಷನು ಭಾಗವಹಿಸಿ ವಿಚಾರ ವಿನಿಮಯಗಳನ್ನು ನಡೆಸಬಲ್ಲನು. ರಾಷ್ಟ್ರಾಧ್ಯಕ್ಷ ಸ್ಥಾನಕ್ಕೇರಬಲ್ಲವನಿಗೆ ಕೆಲವು ಅರ್ಹತೆಗಳನ್ನು ನಿಗದಿಗೊಳಿಸಲಾಗಿದೆ. ಆತನು ೩೫ ವರ್ಷ ಪ್ರಾಯಕ್ಕೆ ಮೀರಿದವನಾಗಿರಬೇಕು. ಆತನ ತಂದೆ ತಾಯಿ ಮತ್ತು ಅಜ್ಜ—ಅಜ್ಜಿಯರು ಐಗುಪ್ತದವರಾಗಿರಬೇಕು; ಆತನೂ ಐಗುಪ್ತದ ನಾಗರಿಕನಾಗಿದ್ದು ಸಂಪೂರ್ಣ ರಾಜಕೀಯ ಹಾಗು ವ್ಯವಹಾರಾಧಿಕಾರಗಳನ್ನು ಅನುಭವಿಸುತ್ತಿರಬೇಕು. ಆತನು ಹಿಂದಿನ ಆಳರಸರ ಸಂತಾನಿಗನಾಗಿರ ಕೂಡದು.

ರಾಷ್ಟ್ರಾಧ್ಯಕ್ಷನನ್ನು ಆರಿಸುವ ವಿಧಾನವು ಸರಳವಾಗಿದೆ: ರಾಷ್ಟ್ರೀಯ ಪ್ರತಿನಿಧಿ ಸಭೆಯು ಅಧ್ಯಕ್ಷ ಸ್ಥಾನಕ್ಕೆ ಒಬ್ಬನ ಹೆಸರನ್ನು ಖಚಿತ ಬಹುಮತದ (ಅಂದರೆ ಮೂರರಲ್ಲಿ ಎರಡಂಶ ಬಹುಮತ) ಮೂಲಕ ಸೂಚಿಸುತ್ತದೆ. ಈ ಉಮೇದುವಾರನಿಗೆ ಜನಮತ ಗಣನೆಯಲ್ಲಿಯೂ ಖಚಿತ ಬಹುಮತ ದೊರೆತರೆ ಆತನು ಚುನಾವಣೆ ಹೊಂದಿದನೆಂದು ಸಾರಲಾಗುತ್ತದೆ. ಹಾಗಲ್ಲದಿದ್ದರೆ ರಾಷ್ಟ್ರೀಯ ಪ್ರತಿನಿಧಿ ಸಭೆಯು ಇನ್ನೊಂದು ಹೆಸರನ್ನು ಸೂಚಿಸುವ ಆಗತ್ಯ ಬೀಳುತ್ತದೆ. ರಾಷ್ಟ್ರಾಧ್ಯಕ್ಷ ಸ್ಥಾನದಲ್ಲಿರುವಾತನು ತನ್ನ ಅಧಿಕಾರಾವಧಿಯಲ್ಲಿ ಯಾವುದೇ ಇತರ ಉದ್ಯೋಗ ಅಥವಾ ವಾಣಿಜ್ಯ ಚಟುವಟಿಕೆಗಳಲ್ಲಿ ನಿರತನಾಗಿರಬಾರದು. ಆತನು ಸರಕಾರದಿಂದ ಯಾವುದೇ ವಸ್ತು ಅಥವಾ ಆಸ್ತಿಯನ್ನು ಬಾಡಿಗೆಗಾಗಲೀ ಕ್ರಯಕ್ಕಾಗಲೀ ಪಡೆಯಲಾರನು; ತನ್ನ ಆಸ್ತಿ ಪಾಸ್ತಿಗಳನ್ನು ಸರಕಾರಕ್ಕೆ ಮಾರಲೂ ಕೂಡದು—ಎಂದು ಘಟನೆಯು ನಿರ್ಬಂಧಿಸುತ್ತದೆ.

ವ್ಯಾಪಕ ಅಧಿಕಾರ ಕ್ಷೇತ್ರ

ತನ್ನ ಆರು ವರ್ಷಗಳ ಆಡಳಿತಾವಧಿಯಲ್ಲಿ ರಾಷ್ಟ್ರಾಧ್ಯಕ್ಷನು ವ್ಯಾಪಕವಾದ ಅಧಿಕಾರಗಳನ್ನು ಹೊಂದಿರುತ್ತಾನೆ. ಆತನು ಯಾವುದೇ ಶಾಸನವಾಗಬೇಕೆಂದು ಸೂಚನೆ ಮಾಡಬಲ್ಲನು; ಪ್ರತಿನಿಧಿ ಸಭೆಯು ಮಾಡಿದ ಶಾಸನಕ್ಕೆ ತಡೆಹಾಕಬಲ್ಲನು; ತಾನಾಗಿಯೇ ಸುಗ್ರೀವಾಜ್ಞೆಗಳನ್ನು ಹೊರಡಿಸಿ, ಶಾಸನ ನಿರ್ವಹಿಸಬಲ್ಲನು. ಯಾವುದೇ ಶಾಸನವು ರಾಷ್ಟ್ರೀಯ ಪ್ರತಿನಿಧಿಯಿಂದ ಮಂಜೂರಾದ ೩೦ ದಿನಗಳೊಳಗೆ ರಾಷ್ಟ್ರಾಧ್ಯಕ್ಷನಿಂದ ಮರಳಿಸಲ್ಪಡದಿದ್ದರೆ, ಅದು ಜ್ಯಾರಿಗೆ ಬಂದಿತೆಂದೇ ಲೆಕ್ಕ. ರಾಷ್ಟ್ರಾಧ್ಯಕ್ಷನು ತಡೆಯನ್ನು ಹಾಕಿ, ವಾಪಸು ಮಾಡಿದ ಶಾಸನವನ್ನು ರಾಷ್ಟ್ರೀಯ ಪ್ರತಿನಿಧಿ ಸಭೆಯು ಮೂರರಲ್ಲಿ ಎರಡಂಶ ಬಹುಮತದಿಂದ ಮನ್ನಿಸಿದರೆ, ಅಂಥ ಶಾಸನವು ಜ್ಯಾರಿಗೆ ಬಂದೇ ತೀರುತ್ತದೆ.

ಕೇವಲ ಜರೂರು ಪರಿಸ್ಥಿತಿಯಲ್ಲಿಯಷ್ಟೇ ಯಲ್ಲ, ಇತರ ವೇಳೆಯಲ್ಲಿಯೂ ರಾಷ್ಟ್ರಾಧ್ಯಕ್ಷನು ಶಾಸನಗಳನ್ನು ಸುಗ್ರೀವಾಜ್ಞೆಯ ಮೂಲಕ ಜ್ಯಾರಿಗೆ ತರಬಲ್ಲನು. ಅಂಥ ಶಾಸನವನ್ನು, ಪ್ರತಿನಿಧಿ ಸಭೆಯು ಅಧಿವೇಶನವನ್ನು ನಡೆಸುತ್ತಿದ್ದರೆ, ಜ್ಯಾರಿಗೆತಂದ ೧೫ದಿನಗಳೊಳಗೆ ಪ್ರತಿನಿಧಿ ಸಭೆಯ ಮುಂದೆ ಮಂಡಿಸಬೇಕು; ಅಧಿವೇಶನ ಜರಗುತ್ತಿಲ್ಲವಾದರೆ, ಮುಂದಿನ ಅಧಿವೇಶನ ಪ್ರಾರಂಭವಾದಾಗ ಆ ಶಾಸನವನ್ನು ಮಂಡಿಸಬೇಕು. ಹೀಗೆ ಮಾಡದಿದ್ದರೆ, ಅಥವಾ ರಾಷ್ಟ್ರೀಯ ಪ್ರತಿನಿಧಿ ಸಭೆಯು ಶಾಸನಕ್ಕೆ ಅನುಮೋದನೆ ಕೊಡದಿದ್ದರೆ ಅಂಥ ಶಾಸನವು ಸಿಂಧುವಾಗಲಾರದು.

ಯುದ್ಧ ಮತ್ತು ಶಾಂತಿ ಒಪ್ಪಂದ

ರಾಷ್ಟ್ರೀಯ ಪ್ರತಿನಿಧಿ ಸಭೆಯು ನಿಯುಕ್ತಗೊಳಿಸಿದ ಸಂಗತಿಗಳಲ್ಲಿ ರಾಷ್ಟ್ರಾಧ್ಯಕ್ಷನು ನಿಯಮಿತ ಅವಧಿಯ ವರೆಗೆ ಮಾತ್ರ ಜ್ಯಾರಿಯಲ್ಲಿರತಕ್ಕ ಘೋಷಣೆಗಳನ್ನು ಮಾಡಬಲ್ಲನು. ಆದರೆ ಇಂಥ ಘೋಷಣೆಗಳನ್ನು ಸುಗ್ರೀವಾಜ್ಞೆಗಳಂತೆಯೇ ಕ್ಲಪ್ತ ಸಮಯದಲ್ಲಿ ಪ್ರತಿನಿಧಿ ಸಭೆಯ ಗಮನಕ್ಕೆ ತರಲು ತಪ್ಪಬಾರದು. ಶಾಸನಸಮ್ಮತವಾದ ರೀತಿಯಲ್ಲಿ ರಾಷ್ಟ್ರಾಧ್ಯಕ್ಷನು ಜರೂರು ಪರಿಸ್ಥಿತಿಯನ್ನು ಘೋಷಿಸಬಲ್ಲನು. ರಾಷ್ಟ್ರೀಯ ಪ್ರತಿನಿಧಿ ಸಭೆಯ ಒಪ್ಪಿಗೆಯನ್ನು ಪಡೆದ ಬಳಿಕ, ಆತನೊಬ್ಬನೇ ಯುದ್ಧದ ಘೋಷಣೆ ಮಾಡಬಲ್ಲನು. ಸಂಧಿಯನ್ನು ಮಾಡಲಿಕ್ಕಾದರೂ ಆತನೊಬ್ಬನಿಗೆಯೇ ಅಧಿಕಾರವಿದೆ—ಈ ಸಂಧಿ ಪತ್ರವನ್ನು ತಕ್ಕ ವಿವರಣೆಗಳೊಡನೆ ಪ್ರತಿನಿಧಿ ಸಭೆಯ ಅವಗಾಹನೆಗೆ ಆತನು ನೀಡಬೇಕಾಗಿದೆ.

ಶಾಂತಿ ಕರಾರುಗಳು, ಗೆಳೆತನದ ಒಡಂಬಡಿಕೆಗಳು, ವ್ಯಾಪಾರ ಮತ್ತು ನೌಕಾಯಾನ ಸಂಬಂಧಿ ಒಪ್ಪಂದಗಳು, ರಾಜ್ಯದ ಸಾರ್ವಭೌಮಾಧಿಕಾರ ಪ್ರದೇಶದಲ್ಲಿ ವ್ಯತ್ಯಾಸವನ್ನುಂಟುಮಾಡುವ ಅಥವಾ ಮುಂಗಡಪತ್ರದಲ್ಲಿ ಹೇಳಿಲ್ಲದ ಉದ್ದೇಶಗಳಿಗಾಗಿ ರಾಜ್ಯಕೋಶದಿಂದ ಹಣವನ್ನು ವೆಚ್ಚಮಾಡಬೇಕಾಗಿ ಬರುವ ಸಂಧಿಗಳಲ್ಲಿ ಪ್ರತಿನಿಧಿ ಸಭೆಯ ಅನುಮೋದನೆಯ ಹೊರತು ರಾಷ್ಟ್ರಾಧ್ಯಕ್ಷನ ಕ್ರಮವು ಮಾನ್ಯವಾಗಲಾರದು.

ಶಿಕ್ಷೆ—ರಕ್ಷೆಯ ಕರ್ತೃ

ಮಹಾ ದಂಡನಾಯಕನ ಅಧಿಕಾರವು ರಾಷ್ಟ್ರಾಧ್ಯಕ್ಷನಿಗೆ ಸೇರಿರುತ್ತದೆ; ಸೇನೆಯ ಹಾಗು ಸರಕಾರದ ಇತರ ಅಂಗಗಳ ಅಧಿಕಾರಿಗಳನ್ನು ನೇಮಿಸುವ ಅಧಿಕಾರವೂ ಈತನದು; ರಾಯಭಾರಿ ಮತ್ತಿತರ ಸರಕಾರಿ ನಿಯುಕ್ತಸ್ಥಾನಕ್ಕೆ ಯೋಗ್ಯರನ್ನು ಆರಿಸುವ ಅಧಿಕಾರವೂ ಈತನದು. ರಾಷ್ಟ್ರಾಧ್ಯಕ್ಷನು ಯಾವುದೇ ಮಹತ್ವದ ವಿಷಯದಲ್ಲಿ ಭೂರಿ ಜನಮತ ಗಣನೆಯನ್ನು ನಡೆಸಬಲ್ಲನು. ಶಿಕ್ಷೆಗಳನ್ನು ತಗ್ಗಿಸುವ ಅಥವಾ ಅಪರಾಧಗಳನ್ನು ಮನ್ನಿಸಿಬಿಡುವ ಅರ್ಹತೆಯೂ ರಾಷ್ಟ್ರಾಧ್ಯಕ್ಷನದು.

ಈ ಅಧಿಕಾರ ಬಲದಿಂದ ನಾಸೇರರು ಮಾಜಿ ಅಧ್ಯಕ್ಷ ನಗೀಬರನ್ನೂ ಇತರ ಕೆಲವು ಧುರೀಣರನ್ನೂ ಕ್ಷಮಿಸಿ ಬಿಡಬಹುದೆಂದು ಹೇಳಲಾಗುತ್ತದೆ. ಅಧ್ಯಕ್ಷಸ್ಥಾನದಲ್ಲಿರುವಾತನು ರಾಜ್ಯಕ್ಕೆ ವಿಶ್ವಾಸಘಾತಕ ರೀತಿಯಲ್ಲಿ ವರ್ತಿಸಿದರೆ, ಅಥವಾ ಒಳಸಂಚು ನಡೆಸಿದರೆ ಆತನನ್ನು ಪದಚ್ಯುತಗೊಳಿಸಬಹುದು. ಈ ಪರಿಸ್ಥಿತಿಯಲ್ಲಿಯೂ ರೋಗ, ಮರಣ ಅಥವಾ ಬೇರಾವುದೇ ಕಾರಣದಿಂದ ರಾಷ್ಟ್ರಾಧ್ಯಕ್ಷ ಸ್ಥಾನದಲ್ಲಿದ್ದವನು ಕರ್ತವ್ಯವನ್ನು ನಿರ್ವಹಿಸುವಂತಿಲ್ಲದಾಗಲೂ ರಾಷ್ಟ್ರೀಯ ಪ್ರತಿನಿಧಿ ಸಭೆಯ ಅಧ್ಯಕ್ಷನೇ ತಾತ್ಕಾಲಿಕವಾಗಿ ರಾಷ್ಟ್ರಾಧ್ಯಕ್ಷನಾಗುತ್ತಾನೆ.

ಹೀಗಿರುವ ಐಗುಪ್ತದ ಘಟನೆಯು ಭಾರತಕ್ಕೆ ಪ್ರಿಯವಾದ ರೀತಿಯಲ್ಲಿದೆ; ಸದ್ಯ ನಾಸೇರರನ್ನು ಕಾಣಲಿರುವ ಸಹೋದರರ ಸ್ನೇಹವನ್ನು ಈ ಮಹಾನುಭವನ ವಿಜಯಕ್ಕಾಗಿಯೂ ಷ್ಟೇಯಲ್ಲ, ಐಗುಪ್ತವಿತ್ತ ಪ್ರಗತಿಪರ ಹೆಜ್ಜೆಗಾಗಿಯೂ ಭಾರತೀಯರ ಸಂತೋಷವನ್ನು ವ್ಯಕ್ತಪಡಿಸುವುದು ನಿಶ್ಚಯ.

—ಆಧಾರ: Bharat Jyoti

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು-2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೧	೫-೭-'೫೧	೪೪

ಮುಂದಿನ ಚುನಾವಣೆ

ಮುಂದಿನ ಫೆಬ್ರವರಿ—ಮಾರ್ಚಿಯಲ್ಲಿ ನಡೆಯಲಿರುವ ಮಹಾಚುನಾವಣೆಯಲ್ಲಿ ಸ್ಪರ್ಧಿಸಲು ಯೋಗ್ಯತಾ ಸಂಪನ್ನ ಉಮೇದುವಾರರನ್ನು ಆರಿಸುವ ಕೆಲಸವನ್ನು ರಾಷ್ಟ್ರದ ಹಿರಿಯ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಇದೀಗ ಪ್ರಾರಂಭಿಸಿದೆ. ವಿಕೇಂದ್ರಿತ ಪದ್ಧತಿಯನ್ನು ಈ ಸಲ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ಉದ್ದೇಶದಿಂದ ಅನುಸರಿಸಲಾಗುತ್ತದೆ; ಹಾಗೆಯೇ ಉತ್ತಮ ವ್ಯಕ್ತಿತ್ವವುಳ್ಳವರು ಬೆಳಕಿಗೆ ಬರಬೇಕೆಂಬುದಕ್ಕಾಗಿ ಜಿಲ್ಲಾ ಕಾಂಗ್ರೆಸಿನ ಸದಸ್ಯರಿಂದ ಸೂಚನೆಗಳನ್ನು ಪಡೆಯಲಾಗುತ್ತದೆ. ಪ್ರದೇಶ ಕಾಂಗ್ರೆಸು ಸಮಿತಿಯೇ ತನ್ನ ಆಯ್ಕೆಯ ಪಟ್ಟಿಯನ್ನು ಕಳುಹಿಸುವುದಾದರೂ ಭಿನ್ನಾಭಿಪ್ರಾಯಗಳನ್ನೂ ಅದು ಕೇಂದ್ರಸಮಿತಿಯ ಅವಗಾಹನೆಗಾಗಿ ಕಳಿಸುತ್ತದೆ. ಆದುದರಿಂದ ವ್ಯಕ್ತಿಗತ ಅಸೂಯೆ, ವಂಚನೆಗಳ, ಕೈವಾಡಕ್ಕೆ ಅವಕಾಶವಿಲ್ಲ ಎನ್ನಬಹುದು. ಇದೇ ಕೇಂದ್ರ ಸಮಿತಿಯು ತಾನೇ ಒಂದು ಹೆಸರನ್ನು ಸೂಚಿಸಲೂ ಸಮರ್ಥವಾಗಿದೆ ಎಂಬ ಮಾತಿನ ತಿರುಳು ಉಮೇದುವಾರರ ಹೆಸರನ್ನು ಸೂಚಿಸುವಾಗ ಯಾವ್ಯಾವ ವಿಷಯಗಳನ್ನು ಜಿಲ್ಲಾ ಕಾಂಗ್ರೆಸಿನ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕು? ಕಾಂಗ್ರೆಸು ಈ ಬಗ್ಗೆ ಸ್ಪಷ್ಟ ನಿರ್ದೇಶಗಳನ್ನು ಕಾಲಕಾಲಕ್ಕೆ ಕೊಡುತ್ತಾ ಬಂದಿದೆ. ಬರುವ ಚುನಾವಣೆಯಲ್ಲಿ ತನ್ನ ಪರವಾಗಿ ಸ್ಪರ್ಧಿಸುವ ಹುರಿಯಾಳುಗಳಲ್ಲಿ ಎಂಟು ಬಗೆಯ ಪ್ರಮುಖ ಯೋಗ್ಯತೆಗಳಿರಬೇಕೆಂದು ಕಾಂಗ್ರೆಸು ಬಹಳ ಹಿಂದೆಯೇ ಪ್ರಕಟಿಸಿದ್ದಿತು. ಕಾಂಗ್ರೆಸಿನ ಧ್ಯೇಯಾದರ್ಶಗಳಲ್ಲಿ ಸಂಪೂರ್ಣ ನಂಬಿಕೆಯೂ ಆ ನಂಬಿಕೆಯನ್ನು ಕಾರ್ಯರೂಪದಲ್ಲಿ ಪ್ರತಿಫಲಿಸಗೊಡುವ ಕ್ರಿಯಾಪಟುತ್ವವೂ ಉಳ್ಳವರನ್ನು ಉಮೇದುವಾರರಾಗಿ ಆರಿಸಬೇಕೆಂದು ಕಾಂಗ್ರೆಸಿನ ವರಿಷ್ಠರ ಅಭಿಮತ. ಸತತ ಖಾದಿಧಾರಣೆಯಂಥ ನಿತ್ಯ ವರ್ತನೆಯಲ್ಲಿನ ಪಾವಿತ್ರ್ಯದಿಂದ ಹಿಡಿದು ಭೂಸುಧಾರಣೆಯಂಥ ಅತಿ ಮಹತ್ವದ ವಿಷಯಗಳಲ್ಲಿ ಕಾಂಗ್ರೆಸಿನ ಧೋರಣೆಯೊಡನೆ ಸಂಪೂರ್ಣ ಸಹಮತವಿರುವ ಹಾಗು ಈ ಧೋರಣೆಯನ್ನು ತನ್ನ ಕಾರ್ಯಕ್ಷೇತ್ರದಲ್ಲಿ ಸ್ವಯಂ ಪ್ರೇರಣೆಯಿಂದ ರೂಢಿಸಲು ಸಿದ್ಧನಾದ ವ್ಯಕ್ತಿತ್ವವು ಹುರಿಯಾಳುಗಳದಾಗಬೇಕು. ಈ ಒರೆಗಲ್ಲಿಗೆ ಹಚ್ಚಿದರೆ, ಜಿಲ್ಲಾ ಕಾಂಗ್ರೆಸಿನ ಸದಸ್ಯರ ಪಾಲಿಗೆ ಎಷ್ಟು ಮಂದಿ ಯೋಗ್ಯತಾಸಂಪನ್ನರು ದೊರಕುವರೋ ಹೇಳಲು ಬಾರದು. ಕಾಂಗ್ರೆಸಿನ ಇಂದಿನ ಮುಖಂಡತ್ವದಲ್ಲಿ ಆದರ್ಶಕ್ಕೂ ವ್ಯವಹಾರಕ್ಕೂ ಪ್ರಬಲ ತಿಕ್ಕಾಟವಿರುವುದು ಬಹಳ ಸ್ಪಷ್ಟವಾಗಿ ವ್ಯಕ್ತವಾಗಿದೆ. ಭೂಸುಧಾರಣೆಯನ್ನು ಮಾಡಬೇಕೆಂದು ಕಾಂಗ್ರೆಸು ಹೇಳುತ್ತದೆ; ಅದಕ್ಕಾಗಿ ಶಾಸನ ತರುವ ಆತುರವೂ (ಅದು ಕೇವಲ ಆತುರ!) ಕಾಂಗ್ರೆಸಿಗಿದೆ. ಆದರೆ ನಿಜವಾಗಿ, ನಮ್ಮ ಕಾಂಗ್ರೆಸು ಪ್ರತಿನಿಧಿಗಳಿಗೂ ಮುಖಂಡರಿಗಳಿಗೂ ಈ ಧ್ಯೇಯದಲ್ಲಿ ವಿಶ್ವಾಸವಿರುವುದು ಹೌದಾದರೆ, ಸರಕಾರಿ ಶಾಸನ ಬರುವ ದಿನವನ್ನೇ ಅವರು ಕಾಯುತ್ತಾ ಕುಳಿತಿರಬೇಕಾಗಿಲ್ಲ; ಸ್ವಯಂ ಪ್ರೇರಣೆಯಿಂದ ಅವರು ತಂತಮ್ಮ ಅಧಿಕಾರವೀಗ ನಡೆಯುವ ಭೂಹಿಡುವಳಿಗಳಲ್ಲಿ ಅಪೇಕ್ಷಿತ ಸುಧಾರಣೆಗಳನ್ನು ರೂಢಿಸಲು ಸ್ವತಂತ್ರರೂ ಸಮರ್ಥರೂ ಆಗಿದ್ದಾರೆ. ಆದರೆ ಹೀಗೆ ಮಾಡಿದವರೆಷ್ಟು ಮಂದಿ ಸಿಗಬಹುದು? (ಕಾಂಗ್ರೆಸಿನಿಂದ ಕಮ್ಯುನಿಸ್ಟರ ವರೆಗಿನ ಎಲ್ಲ ರಾಜಕೀಯ ಮುಖಂಡರ ಹಣೆಬರಹವೂ ಇಷ್ಟೇ!) ಇದೇ ಪ್ರಕಾರವಾಗಿ ಅಸ್ಪೃಶ್ಯತೆಯ ನಿವಾರಣೆ, ಹರಿಜನೋದ್ಧಾರ, ರಾಷ್ಟ್ರೀಕರಣದ ಧೋರಣೆ ಇತ್ಯಾದಿ ಮಹತ್ವದ ಪ್ರತಿಯೊಂದೂ ವಿಷಯದಲ್ಲಿ ಕಾಂಗ್ರೆಸಿನ ಸಾಮಾನ್ಯ ಸದಸ್ಯರ ಮತ್ತು ಸ್ಥಾನಿಕ ಧುರೀಣರ ಮನೋಭಾವನೆಯು ವರಿಷ್ಠಸ್ಥಾನಾಪನ್ನರದಕ್ಕಿಂತ ಮೂಲಭೂತ ಭಿನ್ನತೆಯನ್ನು ತೋರಿಸುತ್ತಿದೆ. ಈ ದೃಷ್ಟಿಯಿಂದ ನೋಡಿದರೆ ಕಾಂಗ್ರೆಸಿನ ಅಗ್ರಗಣ್ಯ ನಾಯಕರು ನೀಡಿರುವ ನಿರ್ದೇಶವು ವ್ಯವಹಾರದಲ್ಲಿ ಅರ್ಥಶೂನ್ಯ ರೂಪದಲ್ಲಿಯೇ ಪ್ರತಿಫಲನಗೊಂಡೀತಲ್ಲದೆ, ವಿಶೇಷ ಸತ್ಪರಿಣಾಮವಾಗಲಾರದು. ಕಾಂಗ್ರೆಸಿನ ರಚನಾತ್ಮಕ ಅಂಗವು ಈಗ ಎಷ್ಟು ನಿಷ್ಕ್ರಿಯವಾಗಿದೆಯೆಂದರೆ, ಕಾಂಗ್ರೆಸಿನ ತತ್ತ್ವಗಳಲ್ಲಿ ಶ್ರದ್ಧೆಯನ್ನೂ ಆಸಕ್ತಿಯನ್ನೂ ಪೋಷಿಸುವ ಯಾವದೇ ರೀತಿಯ ತರಬೇತಿಯನ್ನು ನೀಡುವ ವ್ಯವಸ್ಥೆ ಇಲ್ಲ. ತುಸುವಾದರೂ ಆಸಕ್ತಿ ಇದ್ದವರನ್ನು ಭಾರತ ಸೇವಕ ಸಮಾಜ, ರಾಷ್ಟ್ರೀಯ ವಿಸ್ತರಣಾ ಸೇವೆ, ಸಮಾಜ ವಿಕಾಸ ಯೋಜನೆ ಇತ್ಯಾದಿ ಚಟುವಟಿಕೆಗಳ ಕಡೆಗೆ ಮುಖ ತಿರುಗಿಸಿರೆಂದು ಹೇಳಲಾಗುತ್ತದೆ. ಆದರೆ ಪಕ್ಷದ ಆಶ್ರಯದಲ್ಲಿ ದೊರೆಯಬಹುದಾದ ತರಬೇತಿಗೂ ಅದರ ಹೊರಗೆ ಪಡೆಯಬಹುದಾದ ಅನುಭವಕ್ಕೂ ವ್ಯತ್ಯಾಸ ವಿಶೇಷವಾಗಿದೆ. ಶಿಸ್ತಿನ ಹಾಗು ವಿಧೇಯತೆಯಿಂದ ತುಂಬಿದ ಸೈನಿಕರನ್ನಾಗಿ ಕಾಂಗ್ರೆಸಿನ ವಿಶ್ವಾಸಿಗಳನ್ನು ಸಕ್ಷಮವು ಕೊಡುವ ತಂಪೇತಿಯು ರೂಪಿಸುತ್ತದೆ; ಭಾರತ ಸೇವಕ ಸಮಾಜದ ಸದಸ್ಯನಾಗಿ ಗ್ರಾಮಗಳ ಪುನರುಜ್ಜೀವನದಲ್ಲಿ ಆಸಕ್ತಿ ವಹಿಸಿದಾತನು ಲೋಕ ಸೇವಕನೆನಿಸಿಯಾನು; ಹೊರತು ಪಕ್ಷನಿಷ್ಠೆಯನ್ನು ಹೊಂದಲಿಕ್ಕಿಲ್ಲ. ಉಳಿದ ರಾಜಕೀಯ ಪಕ್ಷಗಳು ತಮ್ಮ ಪ್ರತಿಷ್ಠೆ ಮತ್ತು ವರ್ಚಸ್ಸನ್ನು ಬೆಳೆಸಿಕೊಳ್ಳಲು ಪ್ರತಿಯೊಂದೂ ಅವಕಾಶವನ್ನು (ಅವು ಕಾಂಗ್ರೆಸಿನ ಮಿತ್ರೇತರರ ಪಾಲಿಗೆ ಎಷ್ಟೆ ಕ್ಷುಲ್ಲಕವಾದುದೆಂದು ತೋರಲಿ) ಉಪಯೋಗಿಸುತ್ತಿರುವಾಗ ಕಾಂಗ್ರೆಸು ಸಂಸ್ಥೆಯು ಮಾತ್ರ ಸರಕಾರದ ಸಾಧನೆಗಳೇ ತನ್ನದೆಂಬ ಅಹಂಕಾರವನ್ನು ತೋರಿಸುತ್ತಾ ಕುಳಿತಿದೆ! ಕಾಂಗ್ರೆಸು ಸರಕಾರದ ಕಾರ್ಯಕ್ರಮಗಳ ವಿಷಯದಲ್ಲಿ ಜನರ ಸಹಾನುಭೂತಿಯನ್ನು ಪಡೆಯಲು ಉಪಯುಕ್ತವಾದ ರೀತಿಯ ಪ್ರಚಾರ ಕಾರ್ಯವನ್ನು ಸಹ ಕಾಂಗ್ರೆಸು ಒಂದು ರಾಜಕೀಯ ಸಂಸ್ಥೆಯ ನೆಲೆಯಿಂದ ಪರಿಣಾಮಕಾರಿಯಾಗಿ ಮಾಡಿಲ್ಲ! ಒಂದೇ ಉದಾಹರಣೆಯನ್ನು ಕೊಡುವುದಾದರೆ, ಕ್ರಮಪ್ರಕಾರ ಗೇಣಿಯನ್ನು ಸಂದಾಯಿಸುತ್ತಾ ಬಂದ ಒಕ್ಕಲನ್ನು ಎಬ್ಬಿಸಬಾರದೆಂದು ಸರಕಾರವು ಮಾಡಿರುವ ಶಾಸನಕ್ಕೆ ಕಾಂಗ್ರೆಸಿನಿಂದ ದೊರೆತ ಪ್ರಚಾರವೆಷ್ಟು? ರಭಸದ ಪ್ರಚಾರವಿಲ್ಲದೆ, ಜನರ ಅವಗಾಹನೆಗೆ ಈ ಶಾಸನವನ್ನು ತರಲು ಹೋಗದೆ, ಕಾಂಗ್ರೆಸಿಗರು ಶಾಸನಪುಸ್ತಕದಲ್ಲಿ ಮಾತ್ರ ಈ ಸುಧಾರಣೆಗೆ ಸ್ಥಾನವನ್ನು ಕಲ್ಪಿಸಿಕೊಟ್ಟರೆ, ಅದರಿಂದ ಜನಸಾಧಾರಣರಿಗಾಗುವ ಲಾಭವೇನು? ಅಲ್ಲದೆ, ಶಾಸನದ ಉದ್ದೇಶವು ನೆರವೇರುವ ಬಗೆಯಾದರೂ ಹೇಗೆ? ಕಾಂಗ್ರೆಸಿಗರು ಇದನ್ನು ಮನವರಿಕೆ ಮಾಡಿಕೊಳ್ಳುವಷ್ಟು ಸಹೃದಯತೆಯನ್ನೂ ದೂರದರ್ಶಿತ್ವವನ್ನೂ ತೋರಿಸಿಲ್ಲ. ವಾಸ್ತವದಲ್ಲಿ ಇಂಥದೊಂದು ಶಾಸನವಿದೆ ಎಂಬ ತಿಳುವಳಿಕೆಯನ್ನು ಯಾರಾದರೂ ಒಕ್ಕಲುಗಳ ಗಮನಕ್ಕೆ ತಂದಿದ್ದರೆ ಅದು ಪ್ರತಿ ಪಕ್ಷದ ಮಹನೀಯರೇ ನಿಜ! ಅವರು ತಾವು ಹೇಳಿಸಿ ಮಾಡಿಸಿದ ಶಾಸನವಿದು ಎನ್ನುತ್ತಾರೆ ಎಂಬುದೇ ಇಲ್ಲಿನ ವೈಶಿಷ್ಟ್ಯ! ಹೀಗೆ ಜಡಭರಿತವಾದ ಕಾಂಗ್ರೆಸು ಜನಪ್ರಿಯತೆಯನ್ನು ಸಂಪಾದಿಸುವ ಅತ್ಯುತ್ತಮ ಅವಕಾಶಗಳನ್ನು ಸಹವ್ಯರ್ಥವಾಗಿ ಹೋಗಗೊಟ್ಟಿದೆ. ಚುನಾವಣೆಗೆ ಆರೇಳು ತಿಂಗಳುಗಳ ಸಮಯಾವಕಾಶವಿರುವಾಗಲಾದರೂ ಕಾಂಗ್ರೆಸು ಸಂಸ್ಥೆಯಲ್ಲಿ ಸ್ವಲ್ಪ ರಕ್ತಮಾಂಸ ತುಂಬಿ ಅದು ಚೈತನ್ಯಶೀಲವಾದೀತೆ? ಜಿಲ್ಲಾ ಕಾಂಗ್ರೆಸು ಮತ್ತು ಪ್ರತಿಯೊಂದು ಸರ್ಕಲಿನಲ್ಲಿರುವ ಕಾಂಗ್ರೆಸು ಸಮಿತಿಗಳು ಇನ್ನಾದರೂ ಕ್ರಿಯಾಶೀಲವಾಗಲಾರವೆ? ಕಾಂಗ್ರೆಸ್ಸಿಗರು ಚುನಾವಣೆಗಳಲ್ಲಿ ಸ್ಪರ್ಧಿಸುವವರು ಕ್ರಿಯಾಶೀಲರಾಗಿರಬೇಕೆಂದು ಸಹ ಅರ್ಹತೆಯನ್ನು ವಿಧಿಸಿದೆ. ಇಂಥ ಕ್ರಿಯಾಶೀಲರು ಎಷ್ಟುಮಂದಿ ದೊರಕಿಯಾರೋ, ತುಂಬ ಸಂಶಯ. ಸ್ವತಃ ನಿಷ್ಕ್ರಿಯರೂ ಜಡರೂ ಆದ ಜಿಲ್ಲಾ ಕಾಂಗ್ರೆಸಿನ ಸದಸ್ಯರು ಕ್ರಿಯಾಶೀಲತೆಯ ಮಹತ್ವವನ್ನು ತಿಳಿದವರಾಗಿರುವರೆಂದು ನಂಬುವುದೂ ಕಷ್ಟ. ಆದಾಗ್ಯೂ ಜನರ ವಿಶ್ವಾಸವು ಕಾಂಗ್ರೆಸಿನಲ್ಲಿ ಈಗಲೂ ಉಳಿದಿದೆ — ಸರಕಾರದ ನೆಲೆಯಿಂದ ಸಾಧಿಸಲಾಗಿರುವ ಪ್ರಗತಿಯು ಅದನ್ನು ತಿಳಿದಿರುವವರಿಗಾದರೂ ತೃಪ್ತಿಯನ್ನು ತಂದುಕೊಟ್ಟಿದೆ. ಆದುದರಿಂದ ಆಡಳಿತೆಯ ಅನುಭವವನ್ನು ಸಾಕಷ್ಟು ಸಂಪಾದಿಸಿರುವ ಮತ್ತು ಪ್ರಜಾಸತ್ತಾತ್ಮಕ ವಿಧಾನದಲ್ಲಿ ಶ್ರದ್ಧೆಯಿದ್ದು ಕಲ್ಯಾಣಪ್ರದ ಕಾರ್ಯಕ್ರಮಗಳನ್ನು ಕೆಲಮಟ್ಟಿಗೆ ಪ್ರಾರಂಭಿಸಿರುವ ಕಾಂಗ್ರೆಸೇ ಮುಂದೆಯೂ ಅಧಿಕಾರದಲ್ಲಿ ಉಳಿದರಾಗಬಹುದೆಂದು ಜನರಲ್ಲಿ ಅಧಿಕ ಸಂಖ್ಯಾಕರು ಭಾವಿಸುತ್ತಿದ್ದಾರೆ. ಮುಂದಿನ ಚುನಾವಣೆಗಿರುವ ಸಮಯಾವಕಾಶವನ್ನು ಕಾಂಗ್ರೆಸಿನ ಸದಸ್ಯರು ಈ ಭಾವನೆಯ ಪೋಷಣೆಗೆ ಉಪಯೋಗಿಸಿದರೆ, ಕಾಂಗ್ರೆಸನ್ನು ಸ್ವಲ್ಪ ಮಟ್ಟಿಗಾದರೂ ಬಲಗೊಳಿಸಿದಂತಾಗುತ್ತದೆ. ಈ ಅಳಿಲ ಸೇವೆಯನ್ನು ಈಗಲಾದರೂ ಕಾಂಗ್ರೆಸಿನ ಕಿಂಕರರು ಕೈಗೊಳ್ಳಲಿ!

—

ನಿಮ್ಮ ಚಂದಾ ಹಣ ಬಾಕಿ ಇದೆಯೆ?
ನಮ್ಮ ವಿನಂತಿಯಂತೆ ಅದನ್ನು ಬೇಗನೆ ಕಳುಹಿಸಿ ಸಹಕರಿಸುವಿರಾ?

ಮದರಾಸಿನ ಕೊಯಮುತ್ತೂರು ಜಿಲ್ಲೆಯ ರಾಜನಗರದಲ್ಲಿ, ಎರಡು ಎನ್. ಸಿ. ಸಿ. ದಳಗಳು 15 ದಿನಗಳ ಕಾಲ, ಶಿಬಿರವನ್ನು ನಡೆಸಿದವು. ವಿದ್ಯಾರ್ಥಿಗಳಲ್ಲಿ ಪ್ರತಿಭಾವಂತ ಅಧಿಕಾರಿಗಳ ತರಬೇತಿ, ದೇಶದ ಪ್ರತಿರಕ್ಷಣೆ ಕೆಲಸಗಳಲ್ಲಿ ಆಸಕ್ತಿಯನ್ನು ಹುಟ್ಟಿಸುವುದು, ಸ್ನೇಹ ಸೌಹಾರ್ದವನ್ನು ಬೆಳೆಸುವುದು ಇವೇ ಎನ್. ಸಿ. ಸಿ.ಯ ಮುಖ್ಯ ಉದ್ದೇಶಗಳಾಗಿರುವುವು.

ನೆಹರುಗಳಿಗೆ ಲಂಡನಿನ ಗೌರವ

"ಪೂರ್ವ–ಪಶ್ಚಿಮಗಳ ಗೊಣಸು"

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕೆ ತೆರಳಿದ್ದ ಪ್ರಧಾನಿ ನೆಹರುಗಳನ್ನು ಲಂಡನ್ ನಗರಾಧಿಕಾರಿಗಳು ಗೌರವಿಸಿದ್ದಾರೆ. ಪೂರ್ವ ಮತ್ತು ಪಶ್ಚಿಮ ವಿಭಾಗಗಳಾಗಿ ವಿಂಗಡಣೆ ಹೊಂದಿರುವ ಜಗತ್ತಿನಲ್ಲಿ ನೆಹರುಗಳೊಬ್ಬರೇ ಎರಡೂ ಗುಂಪುಗಳನ್ನು ಜೋಡಿಸಿಕೊಡುವ ಗೊಣಸಿನಂತಿದ್ದಾರೆಂದು ಈ ಬಗ್ಗೆ ಏರ್ಪಡಿಸಿದ್ದ ಸಮಾರಂಭದಲ್ಲಿ ಲಂಡನಿನ ನಗರ ಪಿತಾಮಹರು ಹೇಳಿದರು.

ಅದ್ಭುತ ಪ್ರಗತಿ

ನೆಹರುಗಳು ಭಾರತದಲ್ಲಿ ನಡೆದಿರುವ ಅತ್ಯದ್ಭುತ ಪ್ರಗತಿಯನ್ನು ಲಂಡನಿನ ಭಾರತೀಯರ ಮುಂದೆ ಕಣ್ಣಿಗೆ ಕಟ್ಟುವಂತೆ ವಿವರಿಸಿದರು. ಜಗತ್ತಿನ ಬೇರಾವುದೇ ದೇಶದಲ್ಲಿ ಭಾರತದಲ್ಲಿನಷ್ಟು ಮಹತ್ತಾದ ಪ್ರಗತಿಪರ ಕಾರ್ಯಕ್ರಮಗಳು ರೂಪುಗೊಳ್ಳುತ್ತಿಲ್ಲವೆಂಬುದನ್ನು ಅವರು ಸ್ಮರಣೆಗೆ ತಂದುಕೊಟ್ಟರು. ಭಾರತವು ಪ್ರಜಾಸತ್ತಾತ್ಮಕ ವಿಧಾನವನ್ನನುಸರಿಸಿಯೂ ಅದಷ್ಟು ಕ್ಷಿಪ್ರದಲ್ಲಿ—ಸುಮಾರು ೨೫ ವರ್ಷಗಳ ಅವಧಿಯೊಳಗೆ-ಜನರ ಜೀವನಮಟ್ಟವನ್ನು ಈಗಿನದರ ಇಮ್ಮಡಿಯಷ್ಟು ಎತ್ತರಕ್ಕೇರಿಸುವ ಸಂಕಲ್ಪವಿಟ್ಟುಕೊಂಡಿದೆ; ಮೊದಲನೇ ಯೋಜನೆಯ ಸಾಧನೆಯು ಈ ಸಂಕಲ್ಪಕ್ಕೆ ಪೋಷಣೆಯನ್ನೀಯುತ್ತದೆ ಎಂದರು.

ರಶಿಯದ ಕಡೆಗೆ ನೋಟ

ಒಟ್ಟು ಒಂಭತ್ತು ರಾಷ್ಟ್ರಗಳಿಂದ ಬಂದಿರುವ ಕಾಮನ್‌ವೆಲ್ತ್ ಪ್ರಧಾನಿಗಳು ರಶ್ಯ ಮತ್ತು ಚೀನಗಳ ಕುರಿತು ತಮ್ಮ ನಿಲುವು ಹೇಗಿರಬೇಕೆಂಬುದನ್ನು ಚರ್ಚಿಸಿದ್ದಾರೆ. ಶ್ರೀ ನೆಹರುಗಳು ಇಲ್ಲಿ ವಿದಿತಪಡಿಸಿದ ಸಂಗತಿಗಳಿಗೆ ಹೆಚ್ಚಿನ ಮಹತ್ವ ಬಂದಿದೆ ಎನ್ನಲಾಗಿದೆ. ರಶ್ಯವು ಸ್ಟಾಲಿನ್ನರ ಮರಣಾನಂತರ ಅನುಸರಿಸುತ್ತ ಬಂದಿರುವ ಕ್ರಮಗಳಿಂದ ಅದರ ನೀತಿಯಲ್ಲಿ ಆಮೂಲಾಗ್ರ ಪರಿವರ್ತನೆಯಾಗಿರುವುದನ್ನು ಸ್ಪಷ್ಟವಾಗಿ ಕಂಡುಕೊಳ್ಳಬಹುದೆಂದು ಹೇಳಲಾಗಿದೆ. ಆದರೆ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ರಶ್ಯಾದ ಕ್ರಮವು ವ್ಯತ್ಯಾಸವಾಗಿದ್ದರೂ ಉದ್ದೇಶದಲ್ಲಿ ಮಾರ್ಪಾಟು ನಡೆದಿಲ್ಲವೆಂಬ ದೃಢವಾದ ನಂಬಿಕೆ ಮಾಯವಾಗಿಲ್ಲ. ಆದರೂ ತಿಳಿವಳಿಕೆಯನ್ನು ಹೆಚ್ಚಿಸುವ ಮಟ್ಟಿಗೆ ನೆಹರುಗಳ ವ್ಯಕ್ತಿತ್ವ ವರ್ಚಸ್ಸನ್ನು ಬೀರಿದೆ.

ಕೆಂಪು ಚೀನದ ಗೆಳೆತನ

ಕೆಂಪು ಚೀನದೊಡನೆ ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ನಾಲ್ಕಕ್ಕೆ ಈಗಾಗಲೇ ರಾಯಭಾರಿ ಸಂಬಂಧವಿದೆ. ಕೆನಡಾ ಆಸ್ಟ್ರೇಲಿಯಗಳು ಕೆಂಪು ಚೀನಕ್ಕೆ ಮಾನ್ಯತೆ ಕೊಡಬೇಕೆಂದು ಅಲ್ಲಿನ ಜನಾಭಿಪ್ರಾಯವಿದೆ. ಕೆಂಪು ಚೀನವು ಸಶಕ್ತವಾದ ಶಾಸನಬದ್ಧ ಸರಕಾರವಾಗಿದೆಯೆಂದೂ ಅದು ಫೊರ್ಮೋಸದ ಕುರಿತು ಸಂಧಾನದ ಮಾತುಕತೆಯಾಡಲು ಮುಂಬಂದಿರುವುದು ಒಳ್ಳೆತನದ ದ್ಯೋತಕವೆಂದೂ ಹೇಳಲಾಗಿದೆ. ಹೆಚ್ಚಿನ ಕಾಮನ್‌ವೆಲ್ತ್ ರಾಷ್ಟ್ರಗಳು ಅಮೇರಿಕದ ಮನಸ್ಸಿಗೆ ನೋಯುವುದೋ ಎಂಬ ಭಯದಿಂದ ಪೀಡಿತವಾಗಿ ಕೆಂಪು ಚೀನದ ವಿಷಯದಲ್ಲಿ ಹೆಚ್ಚಿನ ಉತ್ಸಾಹವನ್ನು ತೋರಿಸಲು ಹೋಗುತ್ತಿಲ್ಲ. ಆದರೂ ವ್ಯಾಪಾರ ಸಂಬಂಧವನ್ನು ತುಂಬ ಬೆಳೆಸಿಕೊಳ್ಳಲು ಬ್ರಿಟನು ಆತುರವನ್ನು ವ್ಯಕ್ತಪಡಿಸುತ್ತಿದೆ.

ಚುನಾವಣೆಯ ಗಾಳಿ

ಭಾರತದಲ್ಲೀಗ ಚುನಾವಣೆಯ ಗಾಳಿಯು ಬೀಸತೊಡಗಿದೆ. ಕಾಂಗ್ರೆಸು ಪಕ್ಷವು ಇದೇ ಒಂದನೇ ದಿನಾಂಕದಿಂದ ಹುರಿಯಾಳುಗಳ ಶೋಧನೆ ನಡೆಸುವ ಕಾರ್ಯವನ್ನು ಪ್ರಾರಂಭಿಸಿದೆ. ಕೇಂದ್ರ ಚುನಾವಣಾ ಸಮಿತಿಯ ಕೆಲವು ಸದಸ್ಯರು ಪ್ರದೇಶ ಕಾಂಗ್ರೆಸುಗಳಿಗೆ ಮಾರ್ಗದರ್ಶನ ಮಾಡಲು ನಿಯುಕ್ತರಾಗಿದ್ದಾರೆ. ಕರ್ನಾಟಕ ಮತ್ತು ಮೈಸೂರು ಪ್ರದೇಶ ಕಾಂಗ್ರೆಸುಗಳಿಗೆ ಶ್ರೀಮನ್ನಾರಾಯಣ, ಭೀಮಸೇನ ಸಾಚಾರ್ ಮತ್ತು ಜಯನಾರಾಯಣ ವ್ಯಾಸರು ಸಲಹೆ ಮತ್ತು ಮಾರ್ಗದರ್ಶನ ನೀಡಲು ನೇಮಕವಾಗಿದ್ದಾರೆ. ನಮ್ಮ ಜಿಲ್ಲೆಯ ಶ್ರೀ ಶ್ರೀನಿವಾಸ ಮಲ್ಯರು ಮಧ್ಯಭಾರತದಲ್ಲಿ ಕಾಂಗ್ರೆಸಿನ ಉಮೇದುವಾರರ ಆಯ್ಕೆಗೆ ನೆರವಾಗುತ್ತಾರೆ. ವಶೀಲಿ ಮತ್ತು ಇತರ ವಾಮಮಾರ್ಗಾವಲಂಬನೆಗೆ ಅವಕಾಶವಿಲ್ಲದಂತೆ ನೋಡಿಕೊಳ್ಳುವುದೇ ಇವರ ಉದ್ದೇಶ.

ಎಲ್ಲರಿಗೂ ಪ್ರಾತಿನಿಧ್ಯ

ಕಾಂಗ್ರೆಸಿನ ಕಾರ್ಯದರ್ಶಿಗಳು ಎಲ್ಲ ಮತದವರಿಗೂ ಹಿಂದುಳಿದೆಲ್ಲ ವರ್ಗಗಳಿಗೂ ಮಹಿಳೆಯರಿಗೂ ಕಾಂಗ್ರೆಸಿನಲ್ಲಿ ಸಾಕಷ್ಟು ಪ್ರಾತಿನಿಧ್ಯ ಸಿಗಬೇಕೆಂದು ವ್ಯಕ್ತಪಡಿಸಿದ್ದಾರೆ. ಇದಕ್ಕಾಗಿ ಕೇಂದ್ರ ಚುನಾವಣಾ ಸಮಿತಿಯು ಅರ್ಹತೆಗಳನ್ನು ಸಡಿಲುಗೊಳಿಸಬಹುದೆಂದೂ ಅವರು ತಿಳಿಸಿದ್ದಾರೆ. ಕಾಂಗ್ರೆಸಿನ ರಾಷ್ಟ್ರೀಯ ಸ್ವರೂಪವನ್ನು ಕಾಯ್ದುಕೊಳ್ಳುವುದಕ್ಕೆ ಮುಖಂಡರು ವಹಿಸಿರುವ ಮುಂಜಾಗರೂಕತೆಯು ಇದರಿಂದ ಸ್ಪಷ್ಟವಾಗುತ್ತದೆ. ಕಾಂಗ್ರೆಸಿನ ಹುರಿಯಾಳುಗಳನ್ನು ಹಿಂದೆ ಯಾವುದೇ ಚುನಾವಣೆಯಲ್ಲಿ ಸ್ಪರ್ಧಿಸಿದವರಿಗೆ ಈ ಸಲ ಕಾಂಗ್ರೆಸಿನ ಟಿಕೇಟನ್ನು ಕೊಡಲಾಗುವುದಿಲ್ಲವೆಂದು ಕಾಂಗ್ರೆಸಾಧ್ಯಕ್ಷರು ಹೇಳಿ, ಕಾಂಗ್ರೆಸಿನ ಪಾವಿತ್ರ್ಯವನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

ಉಡುಪಿ

ಬಾಲಿಕೆಯರಿಬ್ಬರ ಶೋಚನೀಯ ಮರಣ— ಉಡುಪಿ ಕುಂಜಿಬೆಟ್ಟಿನ ಮುನಿಸಿಪಲ್ ಮೀನು ಮಾರ್ಕೆಟಿನ ಕಟ್ಟಡವು ತಾ. 1ರಲ್ಲಿ ಪೂರ್ವಾಹ್ನ ಬಿರುಗಾಳಿಯ ಬಡಿತಕ್ಕೆ ಸಿಲುಕಿ ಕುಸಿದು ಬೀಳಲು ಅದರಲ್ಲಿ ನಿಂತಿದ್ದ ಹದಿನಾಲ್ಕು ವರ್ಷ ಪ್ರಾಯದ ಸುಮತಿ ಆಚಾರ್ಿ ಮತ್ತು ಹನ್ನೆರಡು ವರ್ಷ ಪ್ರಾಯದ ಕಮಲ ಪೂಜಾರ್ತಿ ಎಂಬೀರ್ವ ಬಾಲಿಕೆಯರು ಜಡನೆಯ ದುರ್ಮರಣಕ್ಕೀಡಾದುದು ವಿಷಾದಕರವಿದೆ. ಗಾಯಗೊಂಡ ಮೂವರನ್ನು ಸರಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ. ಒಬ್ಬನ ಸ್ಥಿತಿಮಾತ್ರ ವಿಶೇಷರೀತಿಯಲ್ಲಿದೆ. ಪೋಲೀಸ್ ಅಧಿಕಾರಿಗಳು ವರ್ತಮಾನ ಕೇಳಿ ಕೂಡಲೆಯೇ ಬಂದಿದ್ದರೂ ಗ್ರಾಮ ಪಟೇಲರು ಸಂಜೆ ಬಂದುದರಿಂದ ಶವಗಳನ್ನು ವಾರೀಸುದಾರರಿಗೆ ಬಿಟ್ಟು ಕೊಡಲು ವಿಳಂಬವಾಯಿತು.

ನಗರ ಸಭೆಯು— ಸಭಾಧಿಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಕಳೆದ ತಾ. 30 ರಲ್ಲಿ ಸಂಜೆ ಜರಗಿತು. ಆರಂಭದಲ್ಲಿ ಡಾ. ಪಿ. ಜಿ. ಆಚಾರ್ಯರ ಪ್ರಶ್ನೆಗಳಿಗೆ ಸಭಾಧಿಪತಿಗಳು ಉತ್ತರವಿತ್ತರು. ಟೌನ್ ಪ್ಲಾನಿಂಗ್ ಬಗ್ಗೆ ಸರಕಾರದಿಂದ ರೂಪಾಯಿ 18,000 ಸಾಲ ಪಡೆಯಲು ಅರ್ಜಿ ಮಾಡುವುದೆಂದಾಯಿತು. ಮುನಿಸಿಪಲ್ ನೌಕರರ ಪ್ರೊವಿಡೆಂಟ್ ಫಂಡಿಗೆ ನೇಕಡಾ 2½ ದರದಲ್ಲಿ ಬಡ್ಡಿ ಕೊಡುವ ನಿರ್ಧಾರವಾಯಿತು. ಆಹಾರ ಮಿಶ್ರಣ ಕಾನೂನಿನ ಕುರಿತು ಜಿಲ್ಲಾ ಮಂಡಲ ನಗರಸಭೆಯು ಮಾಡಿದ ನಿರ್ಣಯಕ್ಕೆ ಬೆಂಬಲವೀಯಲಾಯಿತು. ನಗರಸಭೆಯ ಅವಧಿಯನ್ನು ಐದು ವರ್ಷಗಳತನಕ ಹೆಚ್ಚಿಸಬೇಕೆನ್ನುವ ಪಾಲ್ಘಾಟ್ ನಗರಸಭೆಯ ನಿರ್ಣಯವನ್ನು ಪುಷ್ಟೀಕರಿಸಲಾಯಿತು. ಜೋಗ್ ವಿದ್ಯುತ್ ಸರಬರಾಯಿ ಆರಂಭವಾದ ದಿನದಿಂದ ವಿದ್ಯುತ್ ದರವನ್ನು ನೇಕಡಾ 50ರಷ್ಟು ಇಳಿಸಬೇಕೆಂದು ಮುದ್ರಾಸು ಸರಕಾರವನ್ನು ಕೇಳಿಕೊಳ್ಳುವ, ಮತ್ತು ಸಿಟಿಬಸ್ ದಾರಿಗಳಲ್ಲಿ 'ಬಸ್ಸು ನಿಲ್ಲುತ್ತದೆ' ಎಂಬ ಬೋರ್ಡುಗಳನ್ನು ಬೇಗನೆ ಹಾಕುವಂತೆ ಮಂಗಳೂರಿನ ರೀಜನಲ್ ಟ್ರಾನ್ಸ್‌ಪೋರ್ಟ್ ಅಧಿಕಾರಿಗಳನ್ನು ವಿನಂತಿಸಬೇಕೆನ್ನುವ ಶ್ರೀ ಪಿ. ಆರ್. ನಾಯ್ಕರ ನಿರ್ಣಯಗಳು ಸರ್ವಾನುಮತದಿಂದ ಮಂಜೂರಾದುವು.

ಎಕೆಡಮಿ ಓಫ್ ಜನರಲ್ ಎಡ್ಯುಕೇಶನ್— ಇದರ ಸರ್ವ ಸದಸ್ಯರ ಸಭೆಯು ಇದೇ ತಾ. 1ರಲ್ಲು ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಎಕೆಡಮಿ ಸದಸ್ಯೆ ಶ್ರೀಮತಿ ಶಾಂತಾಬಾಯಿಯವರ ನಿಧನದ ಬಗ್ಗೆ ಸಂತಾಪಸೂಚಿಸುವ ನಿರ್ಣಯವನ್ನು ಶ್ರೀ ಆರ್. ಫಣಿಕಾರ್ ಧೀಕರು ಸಭೆಯ ಮುಂದಿಡಲು ಅದು ಸ್ವೀಕೃತವಾಯಿತು. ಡಾ. ಪೈಗಳು ಎಮ್. ಜಿ. ಎಮ್. ಕಾಲೇಜು, ಮೆಡಿಕಲ್ ಕಾಲೇಜುಗಳ ಕುರಿತು ಮಾತನಾಡಿದಬಳಿಕ ಮಣಿಪಾಲದ ಪ್ರಿಕ್ಲಿನಿಕಲ್ ಕೋರ್ಸನ್ನು ಮಂಗಳೂರಿನ ಸರಕಾರೀ ಆರ್ಟ್ಸ್ ಕಾಲೇಜಿನ ಕಟ್ಟಡಕ್ಕೆ ವರ್ಗಾಯಿಸುವ, ಮಂಗಳೂರಿನ ಸರಕಾರಿ ಆರ್ಟ್ ಕಾಲೇಜನ್ನು ಮಂಗಳೂರಲ್ಲಿರುವ ಪೊಲಿಟೆಕ್ನಿಕ್ ಕಟ್ಟಡಕ್ಕೆ ವರ್ಗಾಯಿಸುವ ಮತ್ತು ಪೊಲಿಟೆಕ್ನಿಕ್ ಸಂಸ್ಥೆಯನ್ನು ಮಣಿಪಾಲದಲ್ಲಿ ಸ್ಥಾಪಿಸುವ ಕುರಿತಾಗಿ ಇರುವ ಮಾತುಕತೆಗಳನ್ನು ಬಹಿರಂಗಪಡಿಸಿದರು. ಪ್ರಿಕ್ಲಿನಿಕಲ್ ಮತ್ತು ಕ್ಲಿನಿಕ್ ವಿಭಾಗಗಳು ಒಂದೆಡೆಯೇ ಇರಬೇಕೆಂಬುವರ ಭಿಪ್ರಾಯ ಮೇರೆಯೇ ಈ ಸ್ಥಳಾಂತರಿಸುವ ಮಾತುಕತೆಯನ್ನು ಮುಂದುವರಿಸಲಾಗಿದೆ ಎಂದು ಅವರು ಹೇಳಿದರು. ಸರಕಾರವು ಕಾಲೇಜನ್ನು ನಡೆಸುವ ಹೊಣೆಯನ್ನು ಹೊತ್ತರೆ ಎಕೆಡಮಿಯು ವಹಿಸಿಕೊಂಡು, ಎಗ್ರಿಕಲ್ಚರ್ ಕಾಲೇಜುಗಳನ್ನು ಸ್ಥಾಪಿಸಲು ಮನಸ್ಸುಮಾಡಲು ಸಾಧ್ಯವಾಗುವುದೆಂದು ಡಾ. ಪೈಗಳು ಹೇಳಿದರು. ಶ್ರೀ ಪಿ. ಶ್ರೀಪತಿ ಆಚಾರ್ಯರು ಡಾ. ಪೈಗಳು ಎಕೆಡಮಿ ಮೂಲಕ ಮಾಡಿದ ಯೋಗ್ಯ ಕೆಲಸಗಳನ್ನು ಕೊಂಡಾಡಿ ಬೆಂಬಲಸೂಚಿಸಿದರು.

ಮೆಟ್ರಿಕ್ಯುಲೇಶನ್ ಅಭ್ಯರ್ಥಿಗಳಿಗೆ ರಾತ್ರಿ ಶಿಕ್ಷಣವ್ಯವಸ್ಥೆ— ಸ್ಥಳೀಯ ಕಲಾವೃಂದದ ಹಾಗೂ ಯುವಕ ಕಾಂಗ್ರೆಸಿನವರು ಪ್ರತ್ಯೇಕವಾಗಿ ಮೆಟ್ರಿಕ್ಯುಲೇಶನ್ ಪರೀಕ್ಷೆಗೆ ಕುಳಿತುಕೊಳ್ಳುವ ವಿದ್ಯಾರ್ಥಿಗಳಿಗೆ ರಾತ್ರಿ ಶಿಕ್ಷಣದ ವ್ಯವಸ್ಥೆ ಮಾಡಿದ್ದುದರ ಫಲವಾಗಿ ಈಗ ಆ ಎರಡೂ ಸಂಸ್ಥೆಗಳು ಕೂಡಿಕೊಂಡು ಭಾರತ ಸೇವಕಸಮಾಜದ ಆಶ್ರಯದಲ್ಲಿ ರಾತ್ರಿ ಕ್ಲಾಸ್ಸುಗಳ ಶಿಕ್ಷಣ ವ್ಯವಸ್ಥೆ ಮಾಡಲು ನಿರ್ಧರಿಸಿದ ಸಭೆಯೊಂದು ಕಳೆದ ತಾ. 30ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮಣಿಪಾಲ ಹ್ಯಾಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯ ಶ್ರೀ ಯು. ಪುಂಡಲೀಕ ಶೆಣೈಯವರು ಹೆಡ್‌ಮಾಸ್ಟರ್, ಬೋರ್ಡ್ ಹ್ಯಾಸ್ಕೂಲಿನ ನಿವೃತ್ತ ಸಹಾಯಕ ಅಧ್ಯಾಪಕ ಶ್ರೀ ಮಂಜುನಾಥ ಮಧ್ಯಸ್ಥ ಮೊದಲಾದವರು ಅಧ್ಯಾಪಕ ಸಾಲಿನಲ್ಲಿರುವರು. ಪ್ರಸ್ತುತ IV ಮತ್ತು V ಫಾರ್ಮುಗಳು ತೆರೆಯಲ್ಪಡುವವು ಎಂದು ತಿಳಿದುಬರುತ್ತದೆ.

ಭಾಷಣ—ಶ್ರೀಗಳಾದ ಯು. ರಾಮರಾವ್ ಮತ್ತು ಎ. ಜೆ. ಅಲ್ಸೆಯವರು ಸ್ಥಳೀಯ ಸರಕಾರಿ ಬುನಾದಿ ತರಬೇತಿ ಶಾಲೆಯ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಕೈಮಗ್ಗದ ಉದ್ದಿಮೆಗೆ ಬೆಂಬಲವನ್ನೀಯಬೇಕೆಂದು ವಿನಂತಿಸಿದರು.

ಹೊಸ ಪ್ರಾಥಮಿಕ ವರ್ಗವು—ಉಡುಪಿ ತಾಲೂಕು ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ಇದೇ ೧ನೇ ಜುಲಾಯಿಯಿಂದ ಪ್ರಾರಂಭವಾಗಿದೆ.

ಕಟಪಾಡಿ— ಸ್ಥಳೀಯ ಎಸ್. ವಿ. ಎಸ್. ಹ್ಯಾಸ್ಕೂಲಿನ ವಿದ್ಯಾರ್ಥಿ ಮುಖಂಡರ ಚುನಾವಣೆ ಕಳೆದ ತಾ. 27ರಲ್ಲಿ ಜರಗಿ ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರು ಆರಿಸಿ ಬಂದಿರುವರು.

ಶಾಲೆಗಳಿಗೆ

ಬೇಕಾಗುವ ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಿ, ಸಂಬಳ ಬಟವಾಡೆ ರಿಜಿಸ್ಟ್ರಿ, ಇನ್‌ಕಮ್ ಸರ್ಟಿಫಿಕೇಟು ಫಾರ್ಮು, ಮಂತ್ಲಿ ರಿಟರ್ನ್, ರಿಕಾರ್ಡ್ ಶೀಟು, ಎಡ್ಮಿಶನ್ ಫಾರ್ಮು, ಇತ್ಯಾದಿಗಳೂ ಪ್ರೊವಿಡೆಂಟ್ ಫಂಡಿಗೆ ಸಂಬಂಧಿಸಿದ ಎಲ್ಲಾ ಫಾರ್ಮುಗಳೂ ದೊರೆಯುತ್ತವೆ.

ಉತ್ತಮ ಕಾಗದ, ದರ ಸುಲಭ.
ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.



ಕೊಯಮುತ್ತೂರು ಜಿಲ್ಲೆಯ ರಾಜನಗರದಲ್ಲಿ ಮಣ್ಣಿನ ಸವೆತವನ್ನು ತಡೆಯುವ ದಡಗಳನ್ನು ನಿರ್ಮಿಸುವ ಕೆಲಸದಲ್ಲಿ ಮಕ್ಕಳು ಎನ್. ಸಿ. ಸಿ. ದಳದೊಂದಿಗೆ ಕೆಲಸ ಮಾಡುತ್ತಿರುವರು. ಈ ವರ್ಷ ಏಪ್ರಿಲ್–ಮೇ ತಿಂಗಳಲ್ಲಿ ಎನ್. ಎಸ್. ಸಿ. ಸಮಾಜ ಸೇವಾ ಶಿಬಿರವನ್ನು ನಡೆಸಲಾಯಿತು.

<u>ಪತ್ರವ್ಯವಹಾರ</u>

ಮೂಲ್ಕಿ ಸತ್ಯಾಗ್ರಹದ ಸತ್ಯ ಸಾರ

ತಾ. 19—5—56ರಿಂದ ನಡೆಯುತ್ತಿರುವ ಮೂಲ್ಕಿ ರೈತ ಸತ್ಯಾಗ್ರಹದ ಸಂಕ್ಷಿಪ್ತ ವಿವರವನ್ನು ಸಾರ್ವಜನಿಕರ ಮುಂದಿಡುವುದು ಯೋಗ್ಯವಿದೆ. ಶ್ರೀ ರುಕ್ಕಯ ಪೂಜಾರಿಯವರು ಕಾರ್ನಾಡು ಸಣ್ಣ ಪಡುಮನೆಯ ಆಸ್ತಿಯನ್ನು ಮಂಗಳೂರಿನ ಶ್ರೀ ಮಂಜುನಾಥ ಯಾನೆ ಮನಮೋಹನ ಎಂಬವರಿಂದ 1946ರಲ್ಲಿ 10 ವರ್ಷಗಳ ವಾಯಿದೆ ಗೇಣಿಗೆ ವಹಿಸಿಕೊಂಡಿದ್ದರು. 1947ರಲ್ಲಿ ಶ್ರೀ ಕಾರ್ನಾಡು ದಾಸ ಶೆಟ್ರು ಅವರ ಹೆಂಡತಿ ಶೀನಿ ಶೆಡ್ತಿಯವರ ಹೆಸರಲ್ಲಿ ಆ ಆಸ್ತಿಯನ್ನು ಕ್ರಯಕ್ಕೆ ಪಡಕೊಂಡರು. 1950ರಿಂದ ಶ್ರೀ ಚೆನ್ನನವರು ರುಕ್ಕಯ ಪೂಜಾರಿಯವರ ಒಳ ಒಕ್ಕಲಾಗಿ 1¼ ಮುಡಿ ಗದ್ದೆಯನ್ನು ಅನುಭವಿಸಿಕೊಂಡು ಬರುತ್ತಿದ್ದರು. 1955ರಲ್ಲಿ ಗೇಣಿ ಬಾಕಿಗೆ ರುಕ್ಕಯ ಪೂಜಾರಿಯವರ ಮೇಲೆ ಕಾರ್ಕಳ ಡಿ. ಮು. ಕೋರ್ಟಿನಲ್ಲಿ ದಾವೆ ದಾಖಲು ಮಾಡಲಾಯಿತು. ಈ ಸಂದರ್ಭದಲ್ಲಿ ಚೆನ್ನನವರಿಗೂ ನೋಟೀಸು ಕೊಟ್ಟಿತ್ತು. ರುಕ್ಕಯ ಪೂಜಾರಿಯವರ ಗೇಣಿ ಬಾಕಿ 100 ಮುಡಿ ಅಕ್ಕಿಗೂ ಮಿಕ್ಕಿದ್ದು, ನಗದಿ ಹಣ, ಕೋರ್ಟು ಖರ್ಚು ಸಮೇತ ರೂ. 2,500ಕ್ಕಿಂತಲೂ ಹೆಚ್ಚಾಯಿತು. ಕಳೆದ ಮಾರ್ಚ ತಿಂಗಳಲ್ಲಿ ಊರ ಗೃಹಸ್ಥರ ಅಭಿಪ್ರಾಯದಂತೆ ರುಕ್ಕಯ ಪೂಜಾರಿಯವರ ಬಾಕಿಯನ್ನು ಸಂಪೂರ್ಣ ಬಿಡಬೇಕಾಗಿಯೂ ಅವರು ಗದ್ದೆ ಮತ್ತು ಮನೆ ತೋಟ ಇತ್ಯಾದಿ ಕೂಡಲೇ ಬಿಟ್ಟುಕೊಡಬೇಕಾಗಿಯೂ ನಿರ್ಣಯಿಸಿದ ಪ್ರಕಾರ ಕೋರ್ಟಿನಲ್ಲಿ ರಾಜಿ ಅರ್ಜಿ ಹಾಜರುಪಡಿಸಲಾಯಿತು. ಚೆನ್ನನವರು ತನ್ನ ವಶವಿದ್ದ ಭೂಮಿಯನ್ನು ಬಿಡುವುದರಲ್ಲಿದ್ದಾಗ ಕೆಲವರ ಪ್ರೇರಣೆ ಮೇರೆಗೆ ತನ್ನ ಅಭಿಪ್ರಾಯವನ್ನು ಬದಲಾಯಿಸಿದರು. ಊರ ಗೃಹಸ್ಥರು ಪಂಚಾಯತಿಕೆಗೆ ಕರೆದರೂ ಬರಲಿಲ್ಲ. ಸತ್ಯಾಗ್ರಹದ ಬೆದರಿಕೆಯನ್ನೇ ತೋರಿಸಿದರಲ್ಲದೆ ಗೃಹಸ್ಥರ ಅಭಿಪ್ರಾಯಕ್ಕೆ ಮನ್ನಣೆ ಕೊಡಲಿಲ್ಲ. ಚೆನ್ನನವರು ರುಕ್ಕಯ ಪೂಜಾರಿಯವರಿಗೆ ಯಾವ ವರ್ಷವೂ ಸರಿಯಾಗಿ ಗೇಣಿ ಕೊಟ್ಟಿಲ್ಲ. ಅವರು ಕೋರ್ಟಿನ ಉದಾಹರಣೆಯಲ್ಲಿ ತನ್ನ ಸ್ವಾಧೀನ 3½ ಮುಡಿ ಗದ್ದೆ ಉಂಟೆಂತಲೂ, ಗೇಣಿ ಬಾಕಿ ಇಲ್ಲವೆಂತಲೂ, ರೂ. 900/-ದ ಕೃಷಿ ಉಂಟೆಂತಲೂ ವಾದಿಸಿದ್ದನು.

ಇಲ್ಲಿ ಸತ್ಯಾಗ್ರಹದ ಅರ್ಥವೇನೆಂದು ವಿವೇಚಿಸಬೇಕು. ಇದಕ್ಕೆ ರೈತ ಸತ್ಯಾಗ್ರಹವೆಂದು ಹೆಸರು. ಅದರೆ ಇದು ರೈತರಲ್ಲಿಯೇ ಮಾಡುವ ಸತ್ಯಾಗ್ರಹ. ಏಕೆಂದರೆ ಶ್ರೀ ದಾಸ ಶೆಟ್ರು ಚಾಲಗೇಣಿ ಒಕ್ಕಲಾಗಿದ್ದು ಬೇಸಾಯ ಮಾಡುತಿದ್ದವರು; ಈಗಲೂ ಇರುವವರು. ದಿ। ಕರಿಯಂಗಳ ಮುತ್ತಯ ಶೆಟ್ರ ಒಕ್ಕಲು ಅವರು. ಅವರು ತಮ್ಮ ಮಕ್ಕಳೊಂದಿಗೆ ಪರಿಶ್ರಮದ ಜೀವನ ನಡೆಸಿ ಈ ಸಣ್ಣ ಆಸ್ತಿಯನ್ನು ಕ್ರಯಕ್ಕೆ ಪಡೆದರು. ಆದುದರಿಂದ ಈ ಸತ್ಯಾಗ್ರಹವು ಈಗ ರೈತರೇ ರೈತರನ್ನು ಶೋಷಿಸಲು ಹೂಡುವ ದುರಾಗ್ರಹವಾಗಿ ಪರಿಣಮಿಸಿದೆ. ಇದು ಬರೇ ರಾಜಕೀಯ ಪಕ್ಷಗಳ ಪ್ರಚಾರ ಸಾಧನವಾಗಿರುತ್ತದೆ.

ಸತ್ಯಾಗ್ರಹವೆಂದು ಪರರ ವಶವಿರುವ ಆಸ್ತಿಯನ್ನು ಆಕ್ರಮಿಸಬಹುದೇ? ಮನೆಯನ್ನು ಪ್ರವೇಶಿಸಬಹುದೇ? ಸತ್ಯಾಗ್ರಹದ ಇತಿಹಾಸದಲ್ಲೇ ಇದು ಹೊಸದು. ಇದೇ ಕಳೆದ ತಾ. 20—5—56ರಿಂದ ಈ ಸತ್ಯಾಗ್ರಹಿಗಳೆಂಬವರು ಶೀನಿ ಶೆಡ್ತಿಯವರು ವಾಸ್ತವ್ಯ ಮಾಡಿಕೊಂಡಿದ್ದ ಸಣ್ಣ ಮನೆಯಲ್ಲಿ ಅಕ್ರಮ ಪ್ರವೇಶ ಮಾಡಿಕೊಂಡು ದಾಸ ಶೆಟ್ರನ್ನು, ಶೀನಿ ಶೆಡ್ತಿಯವರನ್ನು ಬಯ್ಯುತ್ತಿರುವುದು ದುರಾಗ್ರಹವಲ್ಲದೆ ಮತ್ತೇನು? ಮೆರವಣಿಗೆಯಲ್ಲಿ ಕನ್ನಡ ಹಾಡುಗಳನ್ನೂ ಅಶ್ಲೀಲ ಘೋಷಣೆಗಳನ್ನು ಮಾಡುತ್ತಿರುವುದೂ ಸತ್ಯಾಗ್ರಹವೇ? ಈ ಸತ್ಯಾಗ್ರಹದ ಪ್ರೇರಕರು ಮೇಲೆ ಹೇಳಿದ ಆ ಮನೆಯ ಮುಂದೆ ಬಂದು ಗೂಂಡಾಗಿರಿಯ ಮಾತುಗಳನ್ನಾಡಿದುದೂ ಸತ್ಯಾಗ್ರಹವೇ? "ಬಂಟರ ಜಾತಿಗೆ ಧಿಕ್ಕಾರ" ಎಂಬುದೂ ಒಂದು ಘೋಷಣೆಯೇ? ಇದು ಜಾತೀಯ ಹೋರಾಟವೇ?

ಕರಪತ್ರ ಮತ್ತು ಪತ್ರಿಕೆಗಳಲ್ಲಿ ಒಂದಿಷ್ಟು ಅಳುಕಿಲ್ಲದೆ ಅಪಪ್ರಚಾರ ಮಾಡಿ, ಹಣ ಕಾಸು, ಅಕ್ಕಿ ತೆಂಗಿನಕಾಯಿ ವಸೂಲು ಮಾಡಲು ಹಳ್ಳಿ ಹಳ್ಳಿಗೆ ಹೋಗುತ್ತಾ ಇದ್ದಾರೆ. ದಾಸ ಶೆಟ್ರು ಆಸ್ತಿ ತೆಗೆದುಕೊಂಡು 4 ವರ್ಷವಾಯಿತೆಂದೂ, ಚೆನ್ನನವರು 9 ವರ್ಷದ ಒಕ್ಕಲೆಂದೂ, ಗೇಣಿ ಬಾಕಿ ಇಲ್ಲದೆ ಅನ್ಯಾಯವಾಗಿ ಒಕ್ಕಲೆಬ್ಬಿಸುತ್ತಾರೆಂದೂ, ದಾಸ ಶೆಟ್ರ ಮನೆಯಲ್ಲಿ ಬರೇ 4 ಮಂದಿ ಪ್ರಾಯಸ್ಥರಿರುವರೆಂದೂ ಡಂಗುರ ಸಾರುತ್ತಿರುವರು. ದಾಸ ಶೆಟ್ರಲ್ಲಿ 18 ಮಂದಿ ಜನರು ಇರುತ್ತಾರೆ. ಅವಿಭಕ್ತರು ಬಂದು ಆಸ್ತಿಯ ಡೆಲಿವರಿ ಆದಾಗ ಯಾವ ರೀತಿಯ ಅನ್ಯಾಯವೂ ಆಗಿಲ್ಲ. ಎಲ್ಲವೂ ನ್ಯಾಯವಾದ ರೀತಿಯಲ್ಲಿಯೇ ನಡೆದಿದೆ. ಅಲ್ಲದೆ ಊರ ಮಹನೀಯರುಗಳನ್ನು ಕರಪತ್ರ, ಪತ್ರಿಕೆ ಮತ್ತು ಸಾರ್ವಜನಿಕ ಸಭೆಗಳಲ್ಲಿ ಹೆಸರೆತ್ತಿ ಟೀಕಿಸುವುದು, ಅವಹೇಳನ ಮಾಡುವುದು ಯೋಗ್ಯ ಮುಂದಾಳುಗಳ ಲಕ್ಷಣವಲ್ಲ. ಈ ಅಪಪ್ರಚಾರಗಳಿಗೆ ಮರುಳಾಗಿ ಕೆಲವರು ಈ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸುತ್ತಾರೆ ಎಂಬುದು ಆಶ್ಚರ್ಯದ ಸಂಗತಿ. ಅವರು ಈ ವಿಷಯ ಸರಿಯಾಗಿ ವಿಚಾರಿಸಿ, ವಿಮರ್ಶಿಸಿ, ತಿಳಿಯಬೇಕೆಂದು ಸೂಚಿಸಬೇಕಾಗಿದೆ.

ಶ್ರೀ ಬಿ. ಆರ್. ಕರ್ಕೇರರು ಮೂಲ್ಕಿಯ ಬಿಲ್ಲವ ಸಮಾಜದ ಮಹಾ ಸಭೆಯ ಅಧ್ಯಕ್ಷ ಸ್ಥಾನದಿಂದ ಈ ಸತ್ಯಾಗ್ರಹಕ್ಕೆ ವಿರೋಧಾಭಿಪ್ರಾಯ ಪ್ರಕಟಿಸಿದುದು ಗಮನಿಸತಕ್ಕ ವಿಚಾರ.

ಈ ಸತ್ಯಾಗ್ರಹಕ್ಕೆ ಮೂಲ್ಕಿಯ ಆಸುಪಾಸಿನಲ್ಲಿಯೂ ನೈತಿಕ ಬೆಂಬಲ ದೊರೆತಿಲ್ಲ ಎಂಬುದು ಸ್ಪಷ್ಟ ವಿಚಾರ. ಇದು ಕೇವಲ ಅನ್ಯಾಯ ಕೃತ್ಯವೆಂದು ಘಂಟಾ ಘೋಷವಾಗಿ ಸಾರಬಹುದು. ಪರವೂರುಗಳಿಂದ ಈ ಸತ್ಯಾಗ್ರಹಕ್ಕೆ ಜನರು ಬರಬೇಕಾದುದು ಇದಕ್ಕೆ ಒಂದು ನಿದರ್ಶನ.

ತಾ 9—6—56ರಲ್ಲಿ ಕೋರ್ಟು ಮೂಲಕ ಆಸ್ತಿ ಡೆಲಿವರಿ ಆಗಿ, ಸಾಗುವಳಿಯೂ ಆಯಿತು. ಸತ್ಯಾಗ್ರಹ ಇನ್ನೂ ಮುಗಿದಿಲ್ಲ. ಕೋರ್ಟು ಕಾನೂನಿಗೂ ಬೆಲೆ ಇಲ್ಲವೆಂದಾಯಿತು!

ಈ ಸತ್ಯಾಗ್ರಹವು ಕ್ರಮೇಣ ಹೊಸ ರೂಪತಾಳಿತು. ಮನೆಯೊಳಗೆ ಕುಳಿತುಕೊಳ್ಳುತ್ತಿದ್ದ 4 ಮಂದಿಯ ಬದಲಿಗೆ 2 ಮಂದಿ ಕುಳಿತುಕೊಳ್ಳುವವರಾಯಿತು. ಇವರೆಲ್ಲಾ ಆಗಾಗ ಬದಲಾವಣೆ. ಇಷ್ಟರಲ್ಲಿಯೇ ನಿಲ್ಲದೆ, ಕೆಲವು ಮಂದಿ ಕೂಡಿಕೊಂಡು ಬಂದು, ಘೋಷಣೆ ಮಾಡುತ್ತಾ ನಿಂತು, ಇವರಲ್ಲಿ ಇಬ್ಬರು ಗದ್ದೆಗೆ ಇಳಿದು ದಾಸ ಶೆಟ್ರು ಹಾಕಿದ ನೇಜಿ ಕೀಳಲಾರಂಭಿಸಿದರು. ಇದೂ ಸತ್ಯಾಗ್ರಹವೆಂಬಂತಾಯಿತು! ಇದೇ ರೀತಿಯ ಅತ್ಯಾಚಾರ ಮಾಡುತಿದ್ದವರನ್ನು ಮೂರು ಸಲ ಪೋಲೀಸರು ಬಂಧಿಸಿದರು.

ತಾ 24—6—56ರಲ್ಲಿ ಗದ್ದೆ ಸಾಗುವಳಿ ಆದನಂತರ ದಾಸ ಶೆಟ್ರು ನೆಟ್ಟ ನೇಜಿಯನ್ನು ಕೀಳುವುದು ಆರಂಭವಾಯಿತು. ಕಿತ್ತುದ್ದನ್ನೇ ನೆಡುವುದು, ನೆಡುವಾಗ ಕೀಳುವಾಗ ತಾಂಡವ ನೃತ್ಯ, ಭೈರವ ನೃತ್ಯ, ಭೇತಾಳ ನೃತ್ಯಗಳು ಅಂತೂ, ಇದೊಂದು ಸತ್ಯಾಗ್ರಹವಾಗಿರದೆ ಗೂಂಡಾಗಿರಿಯಾಗಿದೆ ಎಂಬುದೇ ಸ್ಪಷ್ಟ.

ಮೊದಲನೆಯ ದಿನ ಈ ನೃತ್ಯಗಳು ಪೋಲಿಸ್ ಸಬ್‌ಇನ್ಸ್‌ಪೆಕ್ಟರರು ಬರುವಷ್ಟರಲ್ಲಿಯೇ ಕೊನೆಗೊಂಡಿತ್ತು. ತಾ 25, 27, 28, 29 ಮತ್ತು 30 ರಲ್ಲಿಯೂ ಇದರ ಪುನರಾವರ್ತನೆಯಾಯಿತು. ಹೀಗೆ 10 ಮಂದಿ ಅಪರಾಧಿಗಳು ಬಂಧಿಸಲ್ಪಟ್ಟರು.

ಶ್ರೀ ಚೆನ್ನನವರಿಗೆ ಅದರಿಂದ ಸ್ವಾಧೀನವಾದ ಮನೆಗೆ ಒಂದೆರಡು ಫರ್ಲಾಂಗು ದೂರದಲ್ಲೇ ಸ್ವಂತ ಮನೆ ಇದೆ. ಕಸಬು ಬೇಂದು ಬಾರಿಸುವುದು. ಮುಂಚೆ ಸಾಗುವಳಿ ಮಾಡಿದವರೂ ಅಲ್ಲ, ಸಾಗುವಳಿಗೆ ಬೇಕಾದ ಸಿದ್ಧತೆ, ಸಲಕರಣೆಗಳೂ ಇವರಲ್ಲಿ ಇಲ್ಲ. ಸಾಗುವಳಿ ಮಾಡಬೇಕೆಂದಿದ್ದರೆ ಕಾರ್ನಾಡಿನಲ್ಲಿಯೇ ಬೇರೆಯವರು ಬಿಡುವ ಆಸ್ತಿ ಇತ್ತು. ಅದನ್ನು ವಹಿಸಿಕೊಳ್ಳಬಹುದಿತ್ತು.

ಈ ಸತ್ಯಾಗ್ರಹದ ಮುಂದಾಳುಗಳಲ್ಲಿ ಒಬ್ಬರು ಬಾಡಿಗೆಗೆ ಕೊಟ್ಟಿರುವ ತನ್ನ ಮನೆಗೆ ರೂ. 3/- ಹೆಚ್ಚು ಬಾಡಿಗೆ ಸಿಗಬೇಕೆಂದು ಒಕ್ಕಲು ಹೊರ ಹಾಕಲು ಹೊರಟು ಅವನು ಜಾಸ್ತಿ ಕೊಡಲು ಒಪ್ಪಿದ ಬಳಿಕ ಶಾಂತರಾದ ವರಾದರೆ, ಮತ್ತೊಬ್ಬರು ಇದೇ ನೆವದಿಂದ ತನ್ನ ಆಸ್ತಿಗೆ 3 ಮುಡಿ ಅಕ್ಕಿ ಗೇಣಿ ಏರಿಸಿದವರು. ಇನ್ನೊಬ್ಬರು ತನ್ನ ಒಳ ಒಕ್ಕಲಾದ ತನ್ನ ಅಳಿಯನ 3 ಮುಡಿ ಗದ್ದೆಯನ್ನು, ತನ್ನ ಸಾಗುವಳಿಗೆ ಸಾಕಷ್ಟು ಗದ್ದೆ ಇದ್ದೂ, ಸ್ವಾಧೀನಪಡಿಸಿಕೊಂಡು ಅಳಿಯನಿಗೆ ಸಾಗುವಳಿ ಇಲ್ಲದಂತೆ ಮಾಡಿದವರು. ಬೇರೊಬ್ಬರು ಗೇಣಿ ಬಾಕಿ ಇರುವ ತನ್ನ ಒಕ್ಕಲಿನ ಮೇಲೆ ಸ್ವಾಧೀನಕ್ಕೆ ದಾವೆ ದಾಖಲು ಮಾಡಲು ಹೊರಟವರು. ಹೇಗಿದೆ ಈ ಸತ್ಯಾಗ್ರಹದ ಧುರೀಣರ ಒಳಗುಟ್ಟು?

ತಾ. 19—5—56ರಲ್ಲಿ ಬಂಧಿತರಾದ 4 ಮಂದಿ ಸತ್ಯಾಗ್ರಹಿಗಳಲ್ಲಿ 3 ಮಂದಿ ಮುಚ್ಚಳಿಕೆ ಕೊಟ್ಟು ಬಂದರು; ಒಬ್ಬನಿಗೆ ಶಿಕ್ಷೆಯಾಯಿತು. ಅದೇ ತಿಂಗಳ ತಾ. 14, 15 ಮತ್ತು 17ರಲ್ಲಿ ನೇಜಿ ತೆಗೆದುದಕ್ಕಾಗಿ ಬಂಧಿತರಾದ 6 ಮಂದಿಯಲ್ಲಿ 2 ಮಂದಿ ಮುಚ್ಚಳಿಕೆ ಕೊಟ್ಟು ಬಂದರು; 4 ಮಂದಿಗೆ ಶಿಕ್ಷೆಯಾಯಿತು. ಇನ್ನುಳಿದ ಮೊನ್ನೆಯ 10 ಮಂದಿಯಲ್ಲಿ ಎಷ್ಟು ಮಂದಿ ಇದೇ ರೀತಿ ಬೋಂಡ್ ಕೊಟ್ಟು ಬರುತ್ತಾರೋ ತಿಳಿಯಬಹುದು. ಈ ಸತ್ಯಾಗ್ರಹಿಗಳು, ಮುಂದಾಳುಗಳ ದುಷ್ಪ್ರೇರಣೆಗೆ ಒಳಗಾದ ಬಾಡಿಗೆಯ ಜನರಾಗಿದ್ದು, ಕೊನೆಗೆ ತಮ್ಮ ತಪ್ಪನ್ನು ಒಪ್ಪಿ, ಇನ್ನು ಮುಂದಕ್ಕೆ ಈ ಸತ್ಯಾಗ್ರಹದಲ್ಲಿ ಭಾಗವಹಿಸುವದಿಲ್ಲವೆಂದು ಮುಚ್ಚಳಿಕೆ ಕೊಟ್ಟು ಬರುತ್ತಿರುವುದರಲ್ಲಿಯೇ ಈ ಸತ್ಯಾಗ್ರಹದಲ್ಲಿ ಮತ್ತು ಈ ಸತ್ಯಾಗ್ರಹಿಗಳಲ್ಲಿ ಎಷ್ಟು ತಿರುಳಿದೆ, ಹುರುಳಿದೆ, ಸತ್ಯವಿದೆ ಎಂದು ತಿಳಿಯಬಹುದು. ಹೀಗಿರುವಾಗ ಈ ಸತ್ಯಾಗ್ರಹಿಗಳೆಲ್ಲರೂ 'ಸತ್ಯಕ್ಕಾಗಿ ಆಗ್ರಹ ಮಾಡುವವರಲ್ಲ' ಎಂಬುದು ವಿದಿತವಾಗುತ್ತದೆ. ಈ ಆಗ್ರಹದಲ್ಲಿ ಸತ್ಯವಿದ್ದರೆ ತಾನೇ?

ಧನಿಗಳಾಗಲೀ, ಸರಕಾರದವರಾಗಲೀ ಈ ಅನ್ಯಾಯವನ್ನು ಕೂಡಲೇ ನಿಲ್ಲಿಸಲು ಸಾಧ್ಯವಾಗದ ಬಿಟ್ಟಿದ್ದಲ್ಲವೆಂದು ತಿಳಿದು ಬರುತ್ತದೆ. ಶಾಂತಿಯಿಂದ ನಿವಾರಣೆ ಹೊಂದಬೇಕೆಂದು ಅಪೇಕ್ಷಿಸುವವರು ಸರಕಾರದ ಈ ಮುಖ ನೋಡುವಾಗ ಸರಕಾರವು ತಾಳ್ಮೆಯ ಪರಮಾವಧಿಯನ್ನೇ ಕಾಯದೆ ಸತ್ಯಾಗ್ರಹದ ಹೆಸರಿನ ಈ ದುರಾಗ್ರಹವನ್ನು ಕೂಡಲೇ ನಿಲ್ಲಿಸಲು ತಕ್ಕ ಕ್ರಮವನ್ನು ಕೈಕೊಳ್ಳುವದು ಸೂಕ್ತವಾಗಿದೆ.

"ನಿರೀಕ್ಷಕ"

ಪಕ್ಷಿಕೆರೆ.— ಕಳೆದ ತಾ. 30ರಲ್ಲಿ ಇಲ್ಲಿಯ ಸಬ್ ಪೋಸ್ಟಾಫೀಸಿನಲ್ಲಿ ಶ್ರೀ ಬಾಳ್ತಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳವರು ಟೆಲಿಫೋನ್ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ರಾಜೀವ ಕೋಟ್ಯಾನ್ನರು ಸ್ವಾಗತಮಾತುಗಳನ್ನಾಡಿದರು. ಸಬ್ ಪೋಸ್ಟ್‌ಮಾಸ್ಟರ್ ಶ್ರೀ ಕೆ. ಆನಂದ ಶೆಟ್ರು ಧನ್ಯವಾದವಿತ್ತರು.

ಸ್ಥಳೀಯ ಬಿ. ಎಮ್. ಹಾ. ಎ. ಶಾಲಾ ಹಳೆವಿದ್ಯಾರ್ಥಿ ಸಂಘದ ಪತಿಯಿಂದ ಡಾ. ಗಿರಿಧರರಾಯರ ಅಧ್ಯಕ್ಷತೆಯಲ್ಲಿ ಶ್ರೀ ಬಾಳ್ತಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಪುತ್ರ ಶ್ರೀ ಬಿ. ಜಗನ್ನಾಥ ಹೆಗ್ಡೆಯವರು ವಕೀಲ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದುದರ ಸಂತೋಷಾರ್ಥವಾಗಿ ಸತ್ಕಾರಕೂಟವೊಂದು ಜರಗಿತು.

ಅಂಬಲಪಾಡಿ— ಸ್ಥಳೀಯ ಕಲಾವೃಂದದ ಕಾರ್ಯದರ್ಶಿ ಹಾಗೂ ಗೀತಾಭವನದ ಸ್ಥಾಪಕ—ಸಂಚಾಲಕರಾದ ಶ್ರೀ ಎ. ವಾಸುದೇವ ಬಲ್ಲಾಳರು ಕೊಯಮುತ್ತೂರಿಗೆ ತೆರಳಿರುವ ಸಂದರ್ಭದಲ್ಲಿ ಆ ಎರಡು ಸಂಸ್ಥೆಗಳವರು ಕಳೆದ ತಾ. 26ರಲ್ಲಿ ಅವರಿಗೊಂದು ಸತ್ಕಾರಕೂಟವನ್ನೇರ್ಪಡಿಸಿ ಗೌರವಿಸಿದರು. ಶ್ರೀ ಎಮ್. ಮಹಾಬಲೇಶ್ವರ ಸೋಮಯಾಜಿಯವರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು.

PT. AMBLAY RAMASWAMIER'S 98 Yrs. Renowned Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHER-HOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16-18 yrs. after WEDLOCK have become SMILING MOTHERS leading HAPPY LIFE, Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೇಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸು ವವರು ಎರಡೆರಡು ಪ್ರತಿಗಳನ್ನು ಕಳುಹಿಸ ಬೇಕಾಗಿದೆ. ಸಂ. ನ.)

ಹಿರೋಶಿಮಾದಿಂದ ಜಿನೇವ—

ಬರೆದವರು: ಯು. ರಾಘವೇಂದ್ರ ಆಚಾರ್ಯ, ಎಂ ಎ. ಪ್ರಕಾಶಕರು: ನವಯುಗ ಎಂಟರ್ ಪ್ರೈಸ್ ಲಿಮಿಟೆಡ್, ಉಡುಪಿ. ಬೆಲೆ: ರೂ. ೧—೮—೦.

ಅಣುಶಕ್ತಿಯು ರಾಜಕೀಯ ರಂಗದಲ್ಲಿಂದು ಎಲ್ಲಕ್ಕಿಂತಹೆಚ್ಚು ಚರ್ಚೆಯ ವಿಷಯವಾಗಿ ಪರಿಣಮಿಸಿದೆ. ವಿಜ್ಞಾನಿಗಳು ವಹಿಸಿರುವುದಕ್ಕಿಂತಲೂ ಒಂದು ತೂಕ ಹೆಚ್ಚು ಉತ್ಸಾಹವನ್ನು ರಾಜಕೀಯ ಧುರೀಣರು ಈ ಶಕ್ತಿಯ ಉಪಯೋಗದ ಕುರಿತು ವ್ಯಕ್ತಪಡಿಸುತ್ತಿದ್ದಾರೆ. ಪತ್ರಿಕೆಗಳಲ್ಲಿ ಅಣುಶಕ್ತಿಯ ಅತ್ಯದ್ಭುತ ವಿನ್ಯಾಸಗಳ ಬಗ್ಗೆ ನಾವು ಪ್ರತಿನಿತ್ಯವೆಂಬಂತೆ ಒಂದಲ್ಲದಿದ್ದರೊಂದು ಸುದ್ದಿಯನ್ನು ಓದುತ್ತಿದ್ದೇವೆ. ಇಷ್ಟಾಗಿಯೂ ನಮಗೆ ಅಣುಶಕ್ತಿಗೆ ಸಂಬಂಧಪಟ್ಟ ಮಹತ್ವಪೂರ್ಣ ವೈಜ್ಞಾನಿಕ ಭಾಗದ ಪರಿಚಯವೇನಾದರೂ ಇದೆಯೇ ಎಂಬ ಪ್ರಶ್ನೆಯನ್ನು ನಮಗೆ ನಾವೇ ಹಾಕಿಕೊಂಡರೆ ನಮ್ಮಲ್ಲಿ ಹೆಚ್ಚಿನವರು ನಿರುತ್ತರರಾಗಬೇಕಾಗುವ ಪ್ರಸಂಗ ತಪ್ಪದು! ಅಣುಶಕ್ತಿಯ ವೈಜ್ಞಾನಿಕ ಮುಖದ ಪರಿಚಯ ನಮಗೇನೂ ಇಲ್ಲ—ಕನ್ನಡಿಗರಿಗೆ ಇಂಥ ಪರಿಚಯವನ್ನು ಸಮಗ್ರವಾಗಿ ಮೂಡಿಸಿಕೊಡುವ ಪ್ರಯತ್ನ ನಡೆದಿಲ್ಲವಾದುದರಿಂದಲೇ ನಮ್ಮಲ್ಲಿ ಹೆಚ್ಚಿನವರು—ಮುಖ್ಯವಾಗಿ ಆಂಗ್ಲ ಭಾಷೆಯಲ್ಲಿ ಪಾಂಡಿತ್ಯವಿಲ್ಲದ ಬಂಧುಗಳು—ಈ ಮಟ್ಟಿಗೆ ಅಜ್ಞಾನದಲ್ಲಿ ಉಳಿಯಬೇಕಾಗಿ ಬಂದಿದೆ. ಈಗ ಶ್ರೀ ಆಚಾರ್ಯರು ಪ್ರಸ್ತುತ ಪುಸ್ತಕವನ್ನು ಬರೆದು, ಹಾಗು ನವಯುಗ ಎಂಟರ್ ಪ್ರೈಸ್‌ನವರು ತಮ್ಮ ಹೆಸರಿಗೆ ತಕ್ಕಂತೆ ಹೊಸ ಕಾಲಕ್ಕೆ ಒಪ್ಪಿದ ಹೊಸ ಸಾಹಸವನ್ನೆ ಈ ಪುಸ್ತಕದ ಪ್ರಕಾಶನ ಕಾರ್ಯದಮೂಲಕ ಕೈಗೊಂಡು ಕನ್ನಡಿಗರು ಜ್ಞಾನಪ್ರಕಾಶದ ಸಂಪರ್ಕಕ್ಕೆ ಬರುವುದಕ್ಕೆ ಬಹಳವಾಗಿ ನೆರವಾಗಿದ್ದಾರೆ. ನೂರಕ್ಕೂ ಹೆಚ್ಚು ಪುಟಗಳಿದ್ದು, ನಾಲ್ಕಾರು ನಕ್ಷೆಗಳಿಂದಲೂ ಚಿತ್ರಗಳಿಂದಲೂ ಅಲಂಕೃತಗೊಂಡು ಸುಂದರ ಮುದ್ರಣದೊಡನೆ ಬೆಳಕಿಗೆಬಂದಿರುವ ಈ ವೈಜ್ಞಾನಿಕ ಗ್ರಂಥವು ಅಣುಶಕ್ತಿಯು ಜಗತ್ತಿನ ರೂಪವನ್ನೆ ಬದಲಿಸುವುದರಲ್ಲಿ ಎಷ್ಟು ಮಹತ್ವದ ಪಾತ್ರವಹಿಸುವುದೆಂಬುದನ್ನು ಚೆನ್ನಾಗಿ ವಿವರಿಸುತ್ತದೆ. ಬಾಂಬಿನ ರೂಪದಲ್ಲಿ ಉಪಯೋಗಿಸಿದರೆ ಮಾನವತೆಯ ನಾಶವನ್ನು ತರಬಲ್ಲ ಈ ಶಕ್ತಿಯನ್ನು ವಿಧಾಯಕ ಕಾರ್ಯಗಳಿಗಾಗಿ ಬಳಸಿದರೆ ಸಮೃದ್ಧ ಜೀವನವನ್ನು ನಡೆಸಬಹುದಾಗುತ್ತದೆ.

ಇದರ ಒಳಗುಟ್ಟನ್ನು ಸಚರು ಸಚಿತ್ರಗಳಾಗಿ, ಬಿಡಿ ಬಿಡಿಯಾಗಿ ಹಾಗು ಮಾರ್ಮಿಕವಾಗಿ ಲೇಖಕರು ವಿವರಿಸಿ ಹೇಳಿದ್ದಾರೆ. ಪರಮಾಣುವಿನ ಸ್ವರೂಪ ಅದರ ವಿಭಜನೆಯ ರಹಸ್ಯ, ಅಣು ಹಾಗು ಜಲಜನಕ ಬಾಂಬುಗಳ ರಚನೆಯ ಚಮತ್ಕಾರ ಅಣುಶಕ್ತಿ ಜನಕ ಯಂತ್ರದ ದಿಗ್ದರ್ಶನ, ಪ್ರಭಾನಿಸರಣ ಮತ್ತು ಐಸೋಟೋಪುಗಳು ಮಾನವನ ನಿತ್ಯ ಜೀವನದಲ್ಲಿ ವಹಿಸುವ ಪಾತ್ರ—ಇತ್ಯಾದಿಗಳ ವಾಸ್ತವದಲ್ಲಿ ಬಹಳ ಕಠಿಣ ವಿಷಯಗಳಾಗಿದ್ದರೂ ಸುಲಭ ಹಾಗು ಸರಳವಾಕ್ಯಗಳಲ್ಲಿಯೇ ಈ ಎಲ್ಲ ಕ್ಲಿಷ್ಟ ಅಂಶಗಳನ್ನೂ ಲೇಖಕರು ಬಹಳ ಸಮರ್ಥ ರೀತಿಯಲ್ಲಿ ವಿವರಿಸಿದ್ದಾರೆ. ಭಾರತ ಸರಕಾರವು ಅಣುಶಕ್ತಿಯನ್ನು ಶಾಂತಿಕಾಲದ ಬಳಕೆಗೆ ಅಳವಡಿಸಿಕೊಳ್ಳಲು ನಡೆಸುತ್ತಿರುವ ಪ್ರಯತ್ನಗಳಿಗೆ ಪ್ರತ್ಯೇಕ ಅಧ್ಯಾಯವೊಂದನ್ನು ಮೀಸಲಿರಿಸಿದ್ದಾರೆ. ಆನುಷಂಗಿಕವಾಗಿ ಜಿನೇವಾದಲ್ಲಿ ಕಳೆದವರ್ಷ ನಡೆದ ಅಂತಾರಾಷ್ಟ್ರೀಯ ಅಣು ವಿಜ್ಞಾನಿಗಳ ಪರಿಷತ್ತಿನ ಕಾರ್ಯಕಲಾಪಗಳನ್ನೂ ಪ್ರಸ್ತಾಪಿಸಿ, ಹಿರೋಶಿಮಾದಲ್ಲಿ ಬಾಂಬಿನ ರೂಪದಲ್ಲಿ ಉಪಯೋಗಿಸಲಾದ ಅಣುಶಕ್ತಿಯು ಮಾನವತೆಯ ನಾಶಕ್ಕಲ್ಲ, ಕಲ್ಯಾಣಕ್ಕಾಗಿ ಇನ್ನು ಮುಂದೆ ಬಳಸಲ್ಪಡಬೇಕೆಂಬ ನಿರ್ಧಾರವಲ್ಲಿ ಆಯಿತೆಂದು ಹೇಳಿದ್ದಾರೆ. ಹಿರೋಶಿಮಾದಿಂದ ಜಿನೇವದೆಡೆಗೆ ಅಣುಶಕ್ತಿಗೆ ಸಂಬಂಧಿಸಿದ ಎಲ್ಲರೂ ಸಾಗಬೇಕೆಂಬುದೇ ಲೇಖಕರ ಮನದಾಶಯ. ಒಟ್ಟಿನಲ್ಲಿ ಇದು ಶ್ರೀ ಆಚಾರ್ಯರಿಂದ ಕನ್ನಡ ಸಾಹಿತ್ಯಕ್ಕೆ ಸಂದ ಅತ್ಯಪೂರ್ವವೂ ಅತ್ಯಮೂಲ್ಯವೂ ಅತ್ಯುಪಯುಕ್ತವೂ ಅತ್ಯಂತ ಸಕಾಲಿಕವೂ ಆದ ಶ್ರೇಷ್ಠವರ್ಗದ ಇನ್ನೊಂದು ಕಾಣಿಕೆ: ಸರಕಾರಿ ನೆರವಿಲ್ಲದೆ, ಉದಾರಿ ಸಂಸ್ಥೆಯೊಂದರ ಬೆಂಗೋಲಿನ ಬಲವಿಲ್ಲದೆ, ಅಂತ: ಸ್ಫೂರ್ತಿಯಿಂದೆಂಬಂತೆ ಪುಸ್ತಕವನ್ನು ಪ್ರಕಟಿಸಿದ ಪ್ರಕಾಶಕರನ್ನು ಕೊಂಡಾಡಿದಷ್ಟು ಸಾಲದು.

—ಕೆ.

ಕಾಸರಗೋಡು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. No. 39/1956.

ಲೀಲಾವತಿ ಕೂಡಾ 9 ಜನರು—ವಾದಿರು,

ಮತ್ತು

ನ್ಯೆಂಯ್ಯಕ್ಕ ಕೂಡಾ 31 ಜನರು—

ಪ್ರತಿವಾದಿರು,

ಇವರೊಳಗೆ

ಸದ್ರಿ ನ್ಯಾಜ್ಯದ ವಾದಿರ ಕಡೆಯಿಂದ 8ನೇ ಪ್ರತಿವಾದಿಗೆ ಬರಕೊಂಡ ನೋಟೀಸು. ತಾ 20-6-1956. 8ನೇ ಪ್ರತಿವಾದಿ ಕಾವೇರಿ ಹೆಂಗ್ಸು. ಕಂಪಕ್ಕ ಹೆಂಗ್ಸಿನ ಮಗಳು, ಈಗ ಕಾಸರಗೋಡು ತಾಲ್ಲೂ ಅಜ್ಜಂಗೋಡು ಗ್ರಾಮದ ತಳಿಕ್ಕಾನ ಎಂಬಲ್ಲಿರುವವಳು.

ವಾದಿರು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲ್ಕಂಡ ಪಾಲಿನ ವ್ಯಾಜ್ಯವು ತಾ. 10-7-1956ಕ್ಕೆ 8ನೇ ಪ್ರತಿವಾದಿಯ ನೋಟಿಸಿನ ಬಗ್ಗೆ ಇಟ್ಟಿರುತ್ತದೆ. ಆ ದಿನ್ನ ನೇಲ್ಕಂಡ ಕೋರ್ಟಿನಲ್ಲಿ 8ನೇ ಪ್ರತಿವಾದಿಯು ಹಾಜರಾಗತಕ್ಕದ್ದು. ತಪ್ಪಿದ್ರೆ ಸದ್ರಿ 8ನೇ ಪ್ರತಿವಾದಿಯನ್ನು ಎಕ್ಸ್‌ಪಾರ್ಟಿಮಾಡಿ ಸದ್ರಿ ವ್ಯಾಜ್ಯದ ತನ್ನಿಯು ಮುಂದುವರಿಸುವುದು.

(Sd.) K. Ganesh Rao.

B. A. L. L. B.

Vakil for Plaintiff.

Kasaragod, 20-6-1956.

ಮಂಗಳೂರು

ದ. ಕ. ಜಿಲ್ಲೆಯಲ್ಲಿ ಭಾರೀ ಗಾಳಿ ಮಳೆ— ಕಳೆದ ಒಂದು ವಾರದಿಂದ ಜಿಲ್ಲೆಯಲ್ಲಿ ಭಾರೀ ಗಾಳಿಮಳೆಯ ಪರಿಣಾಮವಾಗಿ ಹಲವು ನದಿಗಳಲ್ಲಿ ನೆರೆಯುಂಟಾಗಿತ್ತು. ತಾ. 30ರಲ್ಲಿ ಮಧ್ಯಾಹ್ನದಿಂದ ಮಂಗಳೂರು—ಬಂಟವಾಳ—ಪುತ್ತೂರು—ಮಡಿಕೇರಿ ಹಾಗು ಮಂಗಳೂರು—ಚಾರ್ಮಾಡಿ—ಕಡೂರು ಲೈನುಗಳ ಕರಾವಳಿ ರಸ್ತೆಯ ಮೋಟರ್ ಓಡಾಟಕ್ಕೆ ತಡೆಯಾಗಿತ್ತು. ನೆರೆಯುಂಟಾದ ನದಿಗಳ ಅಕ್ಕಪಕ್ಕದ ನಿವಾಸಿಕರು ಕೆಲವೆಡೆ ದೋಣಿಗಳ ಮೂಲಕ ಒಂದು ಮನೆಯಿಂದ ಇನ್ನೊಂದು ಮನೆಗೆ ಹೋಗುತ್ತಿದ್ದರು. ಈ ಪ್ರದೇಶಗಳ ಗದ್ದೆಗಳಲ್ಲಿ ನೆಟ್ಟ ನೇಜಿಯು ನೀರಿನಲ್ಲಿ ಮುಳುಗಿತ್ತು. ಗಾಳಿಯ ಅನಾಹುತದಿಂದಾಗಿ ಹಲವೆಡೆ ಮರಗಿಡಗಳು ಬಿದ್ದುದಲ್ಲದೆ ಮನೆಯ ಮಾಡುಗಳು ಹಾರಿಹೋದ ವಾರ್ತೆಯಿದೆ. ಇದೇ ತಾ. 2ರಲ್ಲಿ ಆಕಾಶವು ಶುಭ್ರವಾಗಿತ್ತು. ಗಾಳಿಮಳೆ ಕಮ್ಮಿಯಾಗುವ ಲಕ್ಷಣ ತೋರಿದೆ.

ನಗರ ಸಭೆಯು— ತಾ. 30ರಲ್ಲಿ ನಗರ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಆಹಾರ ಧಾನ್ಯಗಳು ಮತ್ತಿತರ ಜೀವನಾವಶ್ಯಕ ವಸ್ತುಗಳ ಬೆಲೆ ಇತ್ತೀಚೆಗೆ ಏಕಪ್ರಕಾರ ಏರುತ್ತಲಿಂದಿರುವುದರಿಂದ ಜನಸಾಮಾನ್ಯರಿಗೆ ಆಗುವ ಸಂಕಷ್ಟ ನಿವಾರಣೆಗಾಗಿ ಸರಕಾರವು ಆಹಾರ ಧಾನ್ಯಗಳ ಅಗ್ಗಬೆಲೆಯ ಅಂಗಡಿಗಳನ್ನು ತೆರೆಯಬೇಕೆಂದು ಸರಕಾರಕ್ಕೆ ವಿನಂತಿಸುವ ಶ್ರೀ ಶಾಂತಾರಾಮ ಪೈಗಳ ನಿರ್ಣಯವು ಮಂಜೂರಾಯಿತು.

ನಗರಸಭೆಯ ಲೋರಿಗೆ ಹೊಸ ಯಂತ್ರವನ್ನು ಕೊಂಡುಕೊಳ್ಳುವರೆ ರೂಪಾಯಿ 1000/- ಮಂಜೂರು ಮಾಡಬೇಕೆನ್ನುವ ಕಮಿಷನರರ ವಿನಂತಿಯು ಚರ್ಚೆಗೊಳಪಟ್ಟು ಕೊನೆಗೆ ಮಾನ್ಯವಾಯಿತು. ನಗರಸಭಾಡಳಿತಕ್ಕೊಳಪಟ್ಟ ಶಾಲೆಗಳಲ್ಲಿ 6ನೇ ತರಗತಿಗೆ ಮೇಲ್ಪಟ್ಟ ಕ್ಲಾಸುಗಳಲ್ಲಿ ಹಿಂದಿಯನ್ನು ಕಡ್ಡಾಯವಾಗಿ ಕಲಿಸಬೇಕೆನ್ನುವ ಶ್ರೀ ಪಿ. ಅಚ್ಯುತ ಪ್ರಭುಗಳ ಗೊತ್ತುವಳಿ ತಥಾಸ್ತುಪಡೆಯಲು ಸರಕಾರಕ್ಕೆ ತಿಳಿಸಬೇಕೆಂದಾಯಿತು.

ದೆಹಲಿಗೆ ಶಿಷ್ಟ ಮಂಡಲ— ಉತ್ತರ ಕಾಸರಗೋಡನ್ನು ಕೇರಳಕ್ಕೆ ವರ್ಗಾಯಿಸದೆ ದಕ್ಷಿಣ ಕನ್ನಡದಲ್ಲಿಯೇ ಇರಗೊಡಿಸಿ, ಸಾಚತ ಮಹಾ ಮೈಸೂರು ರಾಜ್ಯದಲ್ಲಿಯೇ ಸೇರಿಸುವಂತೆ, ಪ್ರಾಂತ ಪುನರ್ರಚನಾ ಮಸೂದೆಯನ್ನು ಪರಿಶೀಲಿಸಲಿರುವ ಲೋಕ ಸಭಾ ಮತ್ತು ರಾಜ್ಯ ಸಭೆಯ ಸಂಯುಕ್ತ ಪರಿಶೀಲನಾ ಸಮಿತಿಯ ಸಭೆ ಜರುಗುವ ಕಾಲದಲ್ಲಿ ದೆಹಲಿಯಲ್ಲಿದ್ದು ಪ್ರಯತ್ನಿಸುವ ಬಗ್ಗೆ ಶ್ರೀಗಳಾದ ಕೆ. ಆರ್. ಕಾರಾಂತರೂ, ಎಮ್. ಉಮೇಶರಾಯರೂ ಕಳೆದ ತಾ. 29ರಲ್ಲಿ ವಿಮಾನ ಮೂಲಕ ದಿಲ್ಲಿಗೆ ತೆರಳಿದರು.

ಜಿಲ್ಲಾ ಜಡ್ಜರಿಗೆ ವರ್ಗ— ದ. ಕ. ಜಿಲ್ಲಾ ಮತ್ತು ಸೆಶನ್ಸ್ ಜಡ್ಜರಾದ ಶ್ರೀ. ಆರ್. ಶಂಕರ ಮೆನೋನರಿಗೆ ದಕ್ಷಿಣ ಆರ್ಕಾಟಿಗೆ ವರ್ಗವಾಗಿದ್ದು, ಅವರ ಸ್ಥಳದಲ್ಲಿ ಶ್ರೀ. ಎಮ್. ರಾಧಾಕೃಷ್ಣ ಶೆಣೈಯವರು ನೇಮಕ ಹೊಂದಿರುವರು.

ಆಫೀಸು ಸ್ಥಳಾಂತರ— ಮಂಗಳೂರಿನಲ್ಲಿರುವ ಫೆಕ್ಟರಿ ಇನ್ಸ್‌ಪೆಕ್ಟರರ ಮತ್ತು ಲೇಬರ್ ಆಫೀಸರರ ಕಚೇರಿಗಳನ್ನು ಇದೇ ಜುಲಾಯಿ ತಿಂಗಳಲ್ಲಿ ಕಣ್ಣಾನೂರಿಗೆ ವರ್ಗಾಯಿಸಲು ಸರಕಾರವು ತೀರ್ಮಾನಿಸಿಯದೆ ಎಂದು ಹೇಳಲಾಗುತ್ತಿದೆ.

ಪ್ರಥಮ ಸ್ಥಾನ— ಕಳೆದ ಮಾರ್ಚ ತಿಂಗಳಲ್ಲಿ ಜರಗಿದ ಬಿ. ಟಿ. ಪರೀಕ್ಷೆಯಲ್ಲಿ ಮದ್ರಾಸು ವಿಶ್ವವಿದ್ಯಾಲಯ ಕ್ಷೇತ್ರದಲ್ಲಿ ಮಂಗಳೂರಿನ ರುಜಾರಿಯೋ ಹ್ಯಾಸ್ಕೂಲಿನ ಉಪಾಧ್ಯಾಯರಾದ ರೆ| ಫಾ| ಎಫ್. ಪಿ. ಸಿಂವಾವೊ ಅವರು ಪ್ರಥಮಸ್ಥಾನದಲ್ಲಿ ತೇರ್ಗಡೆಹೊಂದಿದ್ದು ಸುವರ್ಣಪದಕ ಪಡೆದಿರುವರು.

ಶೋಚನೀಯ ನಿಧನಗಳು— ಕರ್ನಾಟಕ ಬೇಂಕಿನ ಸ್ಥಾಪನೆಗಾಗಿ ದುಡಿದವರಲ್ಲೊಬ್ಬರೂ, ಸಾರ್ವಜನಿಕ ಸೇವಾಸಕ್ತರೂ ಆಗಿದ್ದ ಎಡ್ವೋಕೇಟ್ ಶ್ರೀ ಶೇಷ ಭಟ್ ಭಿಡೆಯವರು ಕಳೆದ ತಾ. 27ರಂದು ತನ್ನ 74ನೇ ಪ್ರಾಯದಲ್ಲಿ ನಿಧನಹೊಂದಿದರೆನ್ನಲು ವಿಷಾದವಾಗುತ್ತದೆ.

ದ. ಕ. ಜಿಲ್ಲೆಯ ಪ್ರಸಿದ್ಧ ಬಂಟ ಮನೆತನದಲ್ಲಿ ಜನ್ಮತಾಳಿ ಬಂಟ ಸಮಾಜದ ಮುಂದಾಳುವಾಗಿದ್ದ ಶ್ರೀ ಕರಿಯಂಗಳಗುತ್ತು ಮುತ್ತಯ್ಯ ಸೆಟ್ಟರು ಕಳೆದ ತಾ. 28ರಲ್ಲಿ ತನ್ನ 77ನೆ ವಯಸ್ಸಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ.

ಶ್ರೀ ಸೆಟ್ಟರು ದಿವಂಗತ ಸೀತಾರಾಮ ಸೆಟ್ಟಿ ಮತ್ತು ಮದ್ರಾಸ್ ಸರಕಾರದ ಆರೋಗ್ಯಮಂತ್ರಿ ಶ್ರೀ ಎ. ಬಿ. ಸೆಟ್ಟರ ಜತೆಯಲ್ಲಿ ಬಂಟರಯಾನೆ ನಾಡವರ ಸಂಘ, ವಿದ್ಯಾರ್ಥಿ ಭವನ, ವಿಜಯಾಬೇಂಕ್, ಕೆನರಾ ಛಾಪಖಾನೆ ಮೊದಲಾದ ಸಂಸ್ಥೆಗಳನ್ನು ಸ್ಥಾಪಿಸಲು ನೆರವಾಗಿ ಸಮಾಜಸೇವೆ ಮಾಡಿದ್ದರು. ವಿದ್ಯಾ ಕ್ಷೇತ್ರದಲ್ಲೂ ತನ್ನ ಸೇವೆ ಸಲ್ಲಿಸಿದ್ದರು. ಪೊಳಲಿ ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಅಭಿವೃದ್ಧಿಗೂ ಅವರು ಕಾರಣರಿದ್ದರು. ನಿಷ್ಠಾವಂತ ಕಾಂಗ್ರೆಸ್ ಭಕ್ತರಿದ್ದು ಪಂಚಾಯತ ಬೋರ್ಡ್, ಜಿಲ್ಲಾ ಬೋರ್ಡ್ ಸದಸ್ಯರಿದ್ದು ಅಲ್ಲಿಯೂ ಸಾರ್ವಜನಿಕ ಸೇವೆ ಸಲ್ಲಿಸಿದ್ದರು.

ಮಂಗಳೂರು ಕಟ್ಟಡ ಸಹಕಾರಿ ಸಂಘದ— ಮಹಾಸಭೆಯು ಕಳೆದ ತಾ 24ರಂದು ಸಂಘದ ಅಧ್ಯಕ್ಷ ಶ್ರೀ ಬಿ. ಮಂಜಯ್ಯ ಹೆಗ್ಡೆಯರ ಅಧ್ಯಕ್ಷತೆಯಲ್ಲಿ ಸೆಂಟ್ರಲ್ ಬ್ಯಾಂಕಿನ ಕಟ್ಟಡದಲ್ಲಿ ನೆರವೇರಿ ವರದಿ, ಬಜೆಟ್ ಮಂಜೂರಾಯಿತಲ್ಲದೆ ಸಂಘದ ಕಾರ್ಯಕ್ಷೇತ್ರವನ್ನು ವಿಸ್ತರಿಸಬೇಕೆಂದೂ ನಿರ್ಣಯವಾಯಿತು.

ಶ್ರೀ ಎನ್. ಕೃಷ್ಣಪ್ಪನವರ ನಿಧನ

ಬಿಲ್ಲವ ಸಮಾಜದ ಮುಂದಾಳುಗಳಲ್ಲೊಬ್ಬರೂ ರಿಟಯರ್ಡ್ ತಹಸೀಲ್ದಾರರೂ ಜನಪ್ರಿಯರೂ ಆಗಿದ್ದ ಶ್ರೀ ಎನ್. ಕೃಷ್ಣಪ್ಪನವರು ತಾ 3ರಲ್ಲಿ 79ನೇ ಪ್ರಾಯದಲ್ಲಿ ನಿಧನರಾದರೆಂಬುದು ವಿಷಾದಕರವಿದೆ.

ಕರ್ನಾಟಕ ಸಂಘ, ಮದ್ರಾಸು— ಇದರ ಸಭೆಯು ಕಳೆದ ತಾ. 30ರಲ್ಲಿ ಸರ್. ಎಮ್. ಸಿ. ಟಿ. ಮುತ್ತಯ್ಯ ಚೆಟ್ಟಿಯಾರ್ ಹ್ಯಾಸ್ಕೂಲಿನಲ್ಲಿ ಸದಸ್ಯರ ಬಹಿರಂಗ ಸಭೆಯು ಜರಗಿತು. ವರದಿ ವಾಚನ ಮೊದಲಾದ ಕಾರ್ಯಕ್ರಮಗಳಾದ ಬಳಿಕ ಹೊಸ ಕಾರ್ಯಕಾರೀ ಸಮಿತಿ ಸದಸ್ಯರ ಚುನಾವಣೆ ನಡೆಯಿತು.

ತತ್ಪೂರ್ವದಲ್ಲಿ ಶ್ರೀ. ಎಮ್. ಮರಿಯಪ್ಪ ಭಟ್ಟರು ತನ್ನ ವಿದೇಶ ಪ್ರವಾಸದ ಅನುಭವಗಳ ಕುರಿತು ಚಿಕ್ಕ ಭಾಷಣವಿತ್ತರು.

ಕರ್ನಾಟಕ ಸಂಘ, ಕೊಯಮುತ್ತೂರು— ಇದರ ಮಹಾ ಸಭೆಯು ಕಳೆದ ತಾ 11ರಲ್ಲು ಊಟ್ಲೆಂಡ್ಸ್‌ನಲ್ಲಿ ಜರಗಿ ಶ್ರೀಗಳಾದ ಎಚ್. ಸಿ. ಕೊಲಾಸೊ (ಅಧ್ಯಕ್ಷ) ಡಾ. ಸಿ. ವಿ. ರಾಮರಾಜ್ ಮತ್ತು ಎನ್. ಆರ್. ಬಾಕೂರರು (ಕಾರ್ಯದರ್ಶಿ), ಮತ್ತಿತರರು ಹೊಸ ಕಾರ್ಯನಿರ್ವಾಹಕ ಸಮಿತಿಗೆ ಆರಿಸಲ್ಪಟ್ಟರು.

ಕರ್ನಾಟಕ ಸಂಘದ ಕಾರ್ಯದರ್ಶಿ ಶ್ರೀ ಎನ್. ಆರ್. ಬಾಕೂರರು, ಅವರು ಕಳೆದ ತಾ. 13ರಲ್ಲಿ ನಡೆದ ತನ್ನ ವಿವಾಹದ ಸಂತೋಷಸಮಾಚಾರಾರ್ಥವಾಗಿ ತಾ. 24ರಲ್ಲಿ ಸಂಜೆ ಸತ್ಕಾರಕೂಟವನ್ನು ಡಾ. ಸಿ. ವಿ. ರಾಮರಾಜರ ಗೃಹದಲ್ಲಿ ಏರ್ಪಡಿಸಿದ್ದರು.

ಮದ್ರಾಸಿನ ಇಂಟೆಗ್ರೇಟ್ ಕಾಲೇಜಿಗೆ ಡೀನ್ ಆಗಿ ಹೋಗುವ ಕೊಯಮುತ್ತೂರಿನ ಜಿಲ್ಲಾ ಮೆಡಿಕಲ್ ಆಫೀಸರ್ ಡಾ. ವಿ. ಜಿ. ಶೆಣೈಯವರಿಗೆ ಕರ್ನಾಟಕ ಸಂಘದ ಕಡೆಯಿಂದ ಕಳೆದ ತಾ. 27ರಲ್ಲಿ ಊಟ್ಲೆಂಡ್ಸಿನಲ್ಲಿ ವಿದಾಯ ಸತ್ಕಾರವೀಯಲಾಯಿತು.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

ಕುಮಾರಿ ಜಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/-
(ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನಾಗಾ ಜನರ ಬಂಡಾಯದ ಕಾರಣ

(೩ನೇ ಪುಟದಿಂದ)

ದಂಡನೆಯೂ ಕೊಡಲ್ಪಡುತ್ತದೆ. ಅಷ್ಟು ಕಟ್ಟುನಿಟ್ಟಾದ ಕ್ರಮಗಳನ್ನು ಈ ಕುಲವು ಅನುಸರಿಸುತ್ತದೆ. ಸರ್ವಾಧಿಕಾರಿ ಕುಲಗಳಲ್ಲಿ ಸಹ ಹೀಗೆಯೇ—ಅನುಯಾಯಿ ಜನರ ಮೇಲೆ ಎಲ್ಲ ತರದ ಶಾಸನಗಳನ್ನೂ ಈತನು ನಡೆಸಬಲ್ಲನು. ಹಳ್ಳಿಯಲ್ಲಿ ಬೇಸಾಯ ಮಾಡಿಸುವ, ಜನರ ಸುಖದುಃಖಗಳಲ್ಲಿ ಸಹಭಾಗಿಯಾಗಿ ಯೋಗ್ಯ ವ್ಯವಸ್ಥೆಗಳನ್ನು ಮಾಡುವ ವರಿಷ್ಠ ಸ್ಥಾನದಲ್ಲಿ ಈ ಸರ್ವಾಧಿಕಾರಿ ಅಥವಾ ಚುನಾಯಿತ ಹಿರಿಯರು ಇರುತ್ತಾರೆ.

ತಮ್ಮ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯಂತೆ ನಡೆಯುವ ಜನರ ಮೇಲೆ ಹೊರಗಿನ ವಿಚಾರಗಳನ್ನೂ ಪದ್ಧತಿಗಳನ್ನೂ ಹೇರಲು ಹೋದರೆ, ಆಗ ಗಂಡಾಂತರವನ್ನು ಆಹ್ವಾನಿಸಿಕೊಂಡಂತಾಗುವುದು ಆಶ್ಚರ್ಯಕರವಲ್ಲ— ಭಾರತ ಸರಕಾರವು ನಾಗಾ ಕುಲದವರ ಮೇಲೆ ಸೈನಿಕ ಕಾರ್ಯಾಚರಣೆಯನ್ನು ಮಾಡುವಷ್ಟು ಪರಿಸ್ಥಿತಿಯು ವಿಷಮಾವಸ್ಥೆಯನ್ನು ಮುಟ್ಟಿರುವುದಕ್ಕೆ ನಾಗಾ ಕುಲದವರ ಜೀವನದ ಸಾಕಷ್ಟು ಪರಿಚಯವಿಲ್ಲದಿರುವುದು ಮುಖ್ಯ ಕಾರಣ. ನಾಗಾ ಜನರಿಗೆ ಹೊರಗಿನವರ ಪರಿಚಯ ಬೇಕೆನಿಸುತ್ತಿಲ್ಲ—ಪರಿಚಯವಾದಾಗ ಅವರು ಹೊಂದಿದ ಅನುಭವವು ಏನೇನೂ ಮಧುರವಾಗಿಲ್ಲ. ಉದಾಹರಣೆಗೆ, ಕಣಿವೆ ಪ್ರದೇಶಕ್ಕೆ ಹತ್ತಿರದ ಗುಡ್ಡಗಳಲ್ಲಿ ವಾಸಿಸುವ ನಾಗಾಜನರು ತಮ್ಮ ಉತ್ಪಾದನೆಯನ್ನು ಕಣಿವೆಪ್ರದೇಶದ ಸಭ್ಯ ಭಾರತೀಯ ಗೃಹಸ್ಥರಲ್ಲಿ ಮಾರಲಿಕ್ಕೆಂದು ತಂದರೆ ರೂಪಾಯಿ ತೆಗೆಬೇಕಾದಲ್ಲಿ ಆಣೆಯನ್ನೂ ತೆರದೆ ಈ ಭಾರತೀಯ ಬಾಂಧವರು ನಾಗಾ ಕುಲದವರನ್ನು ಮೋಸಕ್ಕೆ ಗುರಿಮಾಡುತ್ತಾರೆ. ಎಷ್ಟೋ ನಾಗಾ ಕುಲಜರು ಕೃಷಿಯನ್ನು ಮಾಡುತ್ತಾರೆ; ಅವರಿಗೆ ಹಣ ಸಾಲಕೊಡುವವರು ಸಭ್ಯ ಭಾರತೀಯ ಗೃಹಸ್ಥರು! ಕೊಟ್ಟ ಸಾಲಕ್ಕೆ ಎಷ್ಟು ಪ್ರತಿಫಲವನ್ನುದೋಚಿಕೊಂಡರೂ ಈ ಭಾರತೀಯ ಬಾಂಧವರಿಗೆ ತೃಪ್ತಿ ಎಂಬುದಿಲ್ಲ.

ಸಾಲದುದಕ್ಕೆ ನಾಗಾಜನರು ವಾಸಿಸುವ ಅರಣ್ಯಪ್ರದೇಶಗಳನ್ನು ಸಭ್ಯ ಭಾರತೀಯ ಗೃಹಸ್ಥರು ಆಡವಿಟ್ಟುಕೊಳ್ಳುತ್ತಾರೆ; ಅಲ್ಲಿಯ ನಾಗಾ ಜನರಾಗ ಪರಾವಲಂಬಿಗಳಾಗಬೇಕಾಗುತ್ತದೆ. ಜನ್ಮತಃ ಅಭಿಮಾನಧನರೂ ಶೂರರೂ ಆದ ನಾಗಾ ಕುಲಜರ ತೇಜೋವಧೆಯನ್ನು ಸಭ್ಯ ಭಾರತೀಯ ಗೃಹಸ್ಥರು ಹೀಗೆ ಮಾಡುತ್ತಾರೆ—ಎಂತಲೇ ಭಾರತೀಯರ ಸಭ್ಯತೆಯ ಬಗ್ಗೆ ನಾಗಾ ಕುಲದವರಿಗೆ ಏನೇನೂ ನಂಬಿಕೆಯುಂಟಾಗಿಲ್ಲ. ಸುಧಾರಣೆಯ ನೋಗಿನಲ್ಲಿ ತಮಗೆ ಮೋಸ ಮಾಡಲು ಬಂದ ಮಹಾನುಭಾವರೆಂದೇ ನಾಗಾಕುಲದವರು ತಿಳಿದುಕೊಳ್ಳುವಂತೆ ಅವರ ಅನುಭವಗಳು ಇರುತ್ತವೆ. ನಾಗಾರು ನಾಪಣೆಸಿರಬಹುದಾದಷ್ಟು ಕ್ರೂರಿಗಳೂ ಅತ್ಯಾಚಾರಿಗಳೂ ಆಗಿಲ್ಲ—ಇದರೆ ದೃಢಕಾಯರೂ ಶೂರರೂ ಸ್ವಾಭಿಮಾನಿಗಳೂ ಆದ ನಾಗಾ ಜನರನ್ನು ಅವಮಾನಿಸಿದ ಯಾರೂ ಅಪಾಯದಿಂದ ಪಾರಾಗಿಲ್ಲ.

ಭಾರತ ಸರಕಾರದ ಕೈಯಿಂದ ನಾಗಾ ಕುಲಜರು ಕೆರಳುವಂತೆ ಮಾಡಿದ ಅಪಮಾನಜನಕ ಪ್ರಸಂಗಗಳು ಅನೇಕ ನಡೆದಿವೆ. ಅಧಿಕಾರಿಗಳ ತಪ್ಪು ನಡವಳಿಕೆಯಿಂದುಂಟಾದ ಪ್ರಮಾದವಿದು. ನಾಗಾರನ್ನು ಸಮಾನತೆಯಿಂದಲೂ ಸೋದರತೆಯಿಂದಲೂ ಕಾಣಬೇಕೆಂದು ನೆಹರು, ಪಂತರಾದಿ ವರಿಷ್ಠರು ಹೇಳುತ್ತಾರೆ ಆದರೆ, ಅಧಿಕಾರಿ ವರ್ಗದವರು ಇಷ್ಟು ಔದಾರ್ಯವನ್ನು ತೋರಿಸುವುದಿಲ್ಲ. ೧೯೫೩ನೇ ಮಾರ್ಚಿಯಲ್ಲೊಮ್ಮೆ ನಾಗಾ ಕುಲದ ಕೆಲವು ನಾಯಕರು ಪ್ರಧಾನ ಮಂತ್ರಿ ನೆಹರೂರವರು ಕೊಹಿಮಾ ನಗರಕ್ಕೆ ಬರುವ ಸುದ್ದಿಯನ್ನು ಕೇಳಿ, ಅವರ ಭೇಟಿ ಮಾಡಿ ತಮ್ಮ ತೊಂದರೆಗಳನ್ನು ನಿವೇದಿಸಲು ಬಂದರು. ೧೫ ಸಾವಿರ ನಾಗಾ ಬಾಂಧವರೂ ಈ ಧುರೀಣರನ್ನು ಅನುಸರಿಸಿದರು. ತಮ್ಮ ಸಾಂಪ್ರದಾಯಿಕ ವೇಷಭೂಷಣಗಳಿಂದ ಅಲಂಕೃತರಾಗಿ ಸಂತೋಷಚಿತ್ತರಾಗಿ ನೆಹರುರನ್ನು ಕಾಣುವ ಉತ್ಕಟಾಪೇಕ್ಷೆಯುಳ್ಳವರಾಗಿ ಕೋಹಿಮಕ್ಕೆ ಬಂದ ಈ ಜನರನ್ನು ಸರಕಾರಿ ಅಧಿಕಾರಿಗಳು ತಿರಸ್ಕಾರದಿಂದ ಕಂಡರು. ನೆಹರೂರವರು ನಾಗಾ ಜನರಿಂದ ಯಾವ ಮನವಿಯನ್ನೂ ಸ್ವೀಕರಿಸಲು ಸಿದ್ಧರಿಲ್ಲವೆಂದು ಈ ಅಧಿಕಾರಿಗಳು ಹೇಳಿದರು!

ಆಸೆಯಿಂದಲೂ ಸ್ನೇಹ ಭಾವನೆಯಿಂದಲೂ ಬಂದಿದ್ದ ೧೫ ಸಾವಿರ ನಾಗಾ ಕುಲಜರಿಗೆ ಇದಕ್ಕಿಂತ ಹೆಚ್ಚಿನ ಅವಮಾನ ಬೇರೇನಿದ್ದೀತು? ಅವರು ನೆಹರುಗಳ ಸಂದರ್ಶನ ಪಡೆಯಲಾರದೆ ನೋವನ್ನು ಮನಸ್ಸಿನಲ್ಲಿಯೇ ಅನುಭವಿಸಿದರು. ನಾಗಾ ಜನರು ನೆಹರುಗಳ ಭಾಷಣ ಕೇಳಲು ಸಹ ನಿಲ್ಲಲಿಲ್ಲ—ನಿಲ್ಲುವಷ್ಟು ಅವರ ಮಾನಸಿಕ ಸ್ಥಿತಿಯು ಸ್ವಸ್ಥವಿರಲಿಲ್ಲ. ಅಧಿಕಾರಿಗಳು ನಾಗಾ ಜನರು ಹೊರಟು ಹೋದುದನ್ನು "ಪ್ರಧಾನಿಗಳಿಗೆ ಹಾಕಿದ ಬಹಿಷ್ಕಾರ" ಎಂದು ತಪ್ಪಾಗಿ ತಿಳಿದುಕೊಂಡರು. ಅಂದಿನಿಂದ ಇಂದಿನವರೆಗೂ ಸರಕಾರಿ ಅಧಿಕಾರಿಗಳು ಸೇಡು ತೀರಿಸಿಕೊಳ್ಳುವ ರೀತಿಯಲ್ಲಿಯೇ ನಾಗಾ ಕುಲದವರೊಡನೆ ವ್ಯವಹರಿಸುತ್ತಿದ್ದಾರೆ. ಹೊಸ ಆಡಳಿತ ಪದ್ಧತಿಯನ್ನು ನಾಗಾ ಕುಲದವರ ಮೇಲೆ ಹೇರಲು ಸರಕಾರ ಹೋಯಿತು—ಆದರೆ ನಾಗಾ ಕುಲದವರ ಸಾಮಾಜಿಕ ಸಂಪ್ರದಾಯಗಳಿಗೆ ಈ ಹೊಸ ಆಡಳಿತ ವಿಧಾನವು ಎಷ್ಟರ ಮಟ್ಟಿಗೆ ಹೊಂದಿಕೊಳ್ಳುವುದೆಂಬುದನ್ನು ಸರಕಾರ ಆಲೋಚಿಸಲಿಲ್ಲ. ಕುಲ–ಕುಲಗಳ ನಡುವೆ ವೈರ, ಹಳ್ಳಿ—ಹಳ್ಳಿಯ ನಡುವೆ ದ್ವೇಷವಿದ್ದ ನಾಗಾ ಜನರಲ್ಲಿ ಜಿಲ್ಲೆಗೊಂದು ಸಮಷ್ಟಿ ಆಡಳಿತ ಮಂಡಳವಿರಬೇಕೆಂಬ ಹೊಸ ದೆಹಲಿಯ ಸೂಚನೆ ಮಾನ್ಯತೆಪಡೆಯಲಾರದಾಯಿತು.

ಸರಕಾರಕ್ಕೆ ವರದಿಗಳನ್ನು ಕಳಿಸುವ ಅಧಿಕಾರಿಗಳು ನಾಗಾ ಜನರು ಪುಂಡಾಟದ ಹಾಗು ಶಕ್ತಿಪ್ರಯೋಗದವಿಚಾರದಲ್ಲಿಯೇ ನಿರತರಾಗಿರುವರೆಂಬ ಅಭಿಪ್ರಾಯವನ್ನು ಹುಟ್ಟಿಸುತ್ತಾರೆ. ಇದಕ್ಕೆ ಫಿಜೋ ಎಂಬ ನಾಗಾ ಅತಿರೇಕವಾದಿ ನಾಯಕನ ಚಟುವಟಿಕೆಗಳು ಅವರಿಗೆ ಆಧಾರವಾಗಿ ಸಿಗುತ್ತವೆ. ಬ್ರಿಟಿಷರ ಕಾಲದಲ್ಲಿ ಮಿಶನರಿಗಳು ನಾಗಾಕುಲದವರಲ್ಲಿ ಆಧುನಿಕ ಸಂಸ್ಕೃತಿಯ ಪ್ರಸಾರವನ್ನು ಮಾಡಲು ಪ್ರಯತ್ನಿಸಿದರು. ನಾಗಾ ಜನರ ಮಾತುಗಳನ್ನು ರೋಮನ್ ಲಿಪಿಗೆ ಹೊಂದಿಸಿಕೊಂಡು ಅವರು ಶಿಕ್ಷಣ ಪ್ರಸಾರವನ್ನೂ ಸಾಕಷ್ಟು ಮಾಡಿದರು. ನೂರರಲ್ಲಿ ಹತ್ತರಷ್ಟು ನಾಗಾರೀಗ ಓದುಬರಹ ಬಲ್ಲವರಾಗಿದ್ದಾರೆ. ವಿದ್ಯೆಯ ಈ ಹೊಸ ಬೆಳಕು ಅವರಲ್ಲಿ ತಮ್ಮ ಸಂಪ್ರದಾಯ ಮತ್ತು ಸಂಸ್ಕೃತಿಗಳಿಗೆ ಶಾಶ್ವತ ರಕ್ಷಣೆಯನ್ನು ಕೊಡಬಲ್ಲ "ಸ್ವತಂತ್ರ" ರಾಜ್ಯವಿದ್ದರೆ ಚೆನ್ನೆಂಬ ಭಾವನೆಯನ್ನು ಹುಟ್ಟಿಸಿದೆ. ಫಿಜೋ ಹೇಳುವ ಸ್ವತಂತ್ರ ನಾಗ ಸ್ಥಾನದ ಹಿನ್ನೆಲೆ ಇದು.

ಭಾರತ ಸರಕಾರವು ನಾಗಾ ಜನರ ಭಾಷೆಗಳನ್ನು ದೇವನಾಗರಿಲಿಪಿಗೆ ಹೊಂದಿಸಲು ಪ್ರಯತ್ನ ನಡೆಸಿದೆ. ಈಗಾಗಲೇ ರೋಮನ್ ಲಿಪಿಯನ್ನು ಬಳಸುತ್ತಿದ್ದ ನಾಗಾ ಜನರಿಗೆ ಇದೊಂದು ಅನಪೇಕ್ಷಿತ ಹಸ್ತಕ್ಷೇಪವೆಂದು ಕಂಡರೆ ಆಶ್ಚರ್ಯವೇನು? ಭಾರತ ಸರಕಾರದ ನಾಗರಿಕರಾಗಿ ಬಾಳುವಷ್ಟು ದಿನ ಈ ಬಗೆಯ ಹಸ್ತಕ್ಷೇಪಗಳು ಅನಿವಾರ್ಯವೆಂಬ ಭಾವನೆಯನ್ನು ವಿದೇಶಿ ಮಿಶನರಿಗಳು ನಾಗಾರಲ್ಲಿ ಹುಟ್ಟಿಸಿದ್ದಾರೆ. ನಾಗರಲ್ಲಿ ಹಲವರಿಗೆ ಕ್ರೈಸ್ತ ಧರ್ಮದ ದೀಕ್ಷೆಯನ್ನು ಕೊಟ್ಟಿರುವ ಈ ಮಿಶನರಿಗಳು, ನಾಗರನ್ನು ಹಿಂದೂ ಮತಕ್ಕೆ ಧರ್ಮಾಂತರ ಮಾಡುವ ಹೊಂಚು ಭಾರತ ಸರಕಾರದ್ದೆಂದು ಸಹ ಬೋಧಿಸುತ್ತಿದ್ದಾರೆ. ಹೀಗೆ ಒಂದೆಡೆ ಭಾರತ ಸರಕಾರದ ಅಧಿಕಾರಿಗಳ ಅವಿನಯ ಮತ್ತು ದರ್ಪವೂ ಇನ್ನೊಂದೆಡೆ ವಿದೇಶಿ ಮಿಶನರಿಗಳ ದುರ್ಬೋಧನೆಯೂ ನಾಗಾ ಜನರನ್ನು ವಿಹ್ವಲರಾಗಿ ಮಾಡಿವೆ. ಹೊಸ ಭಾವನೆಗಳ ಸುಳಿಗೆ ಸಿಕ್ಕಿದ ನಾಗರು ಫಿಜೋನ ಅನುಯಾಯಿಗಳಾಗಿ ಕೋವಿ ಮತ್ತು ಬಂದೂಕುಗಳಿಂದ ನಾಗಸ್ಥಾನವನ್ನು ಕಟ್ಟಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ. ತಮಗೆ ವಿರುದ್ಧ ವರ್ತಿಸುವವರನ್ನು ಹಿಂಸಾಚಾರದಿಂದ ಮರ್ದಿಸಲೂ ದಮನಿಸಲೂ ಈ ಅತಿರೇಕವಾದಿಗಳು ಹಿಂಜರಿಯುತ್ತಿಲ್ಲ.

ಅತಿರೇಕವಾದಿಗಳು ಪ್ರತಿ ಸರಕಾರವನ್ನು ಸ್ಥಾಪಿಸುವಷ್ಟು ಮುಂದಕ್ಕೆ ಹೋಗಿದ್ದಾರೆ—ಇದೇ ಮೇ ತಿಂಗಳಲ್ಲಿ ಅವರು ತಮ್ಮದೇ ಸರಕಾರವನ್ನೂ ಸಂಸತ್ತನ್ನೂ ಮುಖ್ಯಮಂತ್ರಿಯನ್ನೂ ರಚಿಸಿಕೊಂಡಿದ್ದಾರೆ. ಈ ಚಟುವಟಿಕೆಗಳನ್ನು ಹತ್ತಿಕ್ಕಲು ಭಾರತ ಸರಕಾರವು ಕ್ರಮಗಳನ್ನೇನೊ ಕೈಗೊಂಡಿದೆ—ಆದರೆ ನಾಗಾ ಅತಿರೇಕವಾದಿಗಳ ಕೈವಶವಿರುವ ನಾಗಾ ಗುಡ್ಡ ಪ್ರದೇಶವು ಅಸ್ಸಾಂ ಸರಕಾರದ ಅಧೀನದಲ್ಲಿದೆ. ಈಶಾನ್ಯ ಭಾರತದಲ್ಲಿರುವ ಇತರ ಗುಡ್ಡಗಾಡು ಪ್ರದೇಶಗಳಂತೆ ಈ ನಾಗಾ ಗುಡ್ಡ ಪ್ರದೇಶವನ್ನು ಭಾರತ ಸರಕಾರದ ನೇರವಾದ ಆಡಳಿತಕ್ಕೆ ಸೇರಿಸಿಬಿಡಬೇಕೆಂಬ ಸೂಚನೆಯನ್ನು ಅಸ್ಸಾಮಿನ ಧುರೀಣರು ಮೆಚ್ಚುವುದಿಲ್ಲ. ನಾಗಾ ಗುಡ್ಡ ಪ್ರದೇಶವು ಕೇಂದ್ರದ ಹಸ್ತಗತವಾದರೆ, ಸಹಜವಾಗಿ ಗುಡ್ಡಗಾಡು ಪ್ರದೇಶವಾಗಿರುವ ಅಸ್ಸಾಮಿನ ಜಿಲ್ಲೆಗಳೆಲ್ಲ ಒಂದೊಂದೇ ಯಾಗಿ ಕೈ ಬಿಡಬಹುದೆಂದೂ ಕೊನೆಗೆ ಅಸ್ಸಾಮಿನ ಹೆಸರು ಸಹ ಉಳಿಯಲಾರದೆಂದೂ ಈ ಧುರೀಣರ ಅಭಿಪ್ರಾಯ. ಹೀಗಾಗಿ ಅಲ್ಲಿ ಭಾರತ ಸರಕಾರದ ಪರವಾಗಿ ಸೈನಿಕ ಕಾರ್ಯಾಚರಣೆ ನಡೆಸುವವರಿಗೂ ಇಬ್ಬರು ಒಡೆಯರನ್ನು ಮೆಚ್ಚಿಸುತ್ತಾ ಇರಬೇಕಾಗಿದೆ. ಇದು ನಾಗಾ ಗಲಭೆ ಅಧಿಕವಾಗುವುದಕ್ಕೆ ಅನುಕೂಲತೆಯನ್ನಿತ್ತಿದೆ.

ಒಟ್ಟಾರೆ ಗುಂಡಿಗೆ ಪ್ರತಿಗುಂಡು ಹಾರಿಸುವ ಭಾರತ ಸರಕಾರದ ವಿಧಾನವು ನಾಗಾ ಸಮಸ್ಯೆಯನ್ನು ನಿವಾರಿಸಲು ಯೋಗ್ಯವಲ್ಲವೆಂಬುದು—ಪಂತರು ಏನೇ ಹೇಳಲಿ—ಈಗಾಗಲೇ ಸಂಶಯಾತೀತವಾಗಿ ಸಿದ್ಧವಾಗಿದೆ. ಮನವೊಲಿಸುವಿಕೆ ಮತ್ತು ಸದಾಚಾರಗಳೇ ನಾಗಾ ಜನರನ್ನು ಗೆಲ್ಲುವ ಉತ್ತಮ ಉಪಾಯ ಎಂದು ರಾಜಕೀಯ ತಜ್ಞರು ಹೇಳುತ್ತಿದ್ದಾರೆ. ಅಂತೂ ಈ ಗೊಂದಲ ಎಷ್ಟು ಬೇಗ ನಿವಾರಣೆಯಾಯಿತೋ ಅಷ್ಟು ಭಾರತಕ್ಕೆ ಒಳ್ಳೆಯದು.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಉಪಾಧ್ಯಾಯಿನಿ ಬೇಕಾಗಿದ್ದಾರೆ

ಉಡುಪಿ ತಾಲೂಕು ಕುಕ್ಕಾಲು ಗ್ರಾಮದ ಶ್ರೀ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟರಿ ಶಾಲೆಗೆ ಸೆಕೆಂಡರಿ ಗ್ರೇಡ್ ಟ್ರೈನಿಂಗ್ ಆದ ಉಪಾಧ್ಯಾಯಿನಿಯರೊಬ್ಬರು ಬೇಕು. ಹಾನೋರ್‌ನಿಯರ್ ಯಾ ಹಿಂದಿ ಬಲ್ಲವರಿಗೆ ಪ್ರಥಮ ಪ್ರಾಶಸ್ತ್ಯ ಕೊಡಲಾಗುವುದು. ಸರಕಾರಿ ಗ್ರಾಂಟಿನ ಸ್ಕೇಲಿನಂತೆ ವೇತನ ಕೊಡಲಾಗುವುದು. ಉಮೇದ್ವಾರರು ಇದೇ ಜುಲೈ 20ರೊಳಗೆ ಯೋಗ್ಯತಾ ಸರ್ಟಿಫಿಕೇಟನೊಂದಿಗೆ ಸ್ವತಃ ಕಂಡು ಅರ್ಜಿ ಸಲ್ಲಿಸುವುದು.

ಕುಕ್ಕಾಲು ಗಣಪಯ್ಯ ಶೆಟ್ಟಿ,
ಮೆನೇಜರ್,
ಶ್ರೀ ಕುಂಜಾರು ಗಿರಿಜಾ ಹಾ| ಎ| ಶಾಲೆ,
ಕುಂಜಾರುಗಿರಿ ಪೋಸ್ಟ್ (ದ. ಕ.)

ಪ್ರತಿಯೊಂದು ಎಕ್ರೆ ನೆಲದಲ್ಲಿರುವ ೧೭,೫೦,೦೦೦ ಕೃಷಿಕರು!

(೨ನೇ ಪುಟದಿಂದ)

ಕಷ್ಟ. ಸಾಮಾನ್ಯವಾಗಿ ಎರೆಹುಳಗಳು ಫಲವತ್ತತೆಯು ಕುಗ್ಗದಂತೆ ನೋಡಿಕೊಳ್ಳುತ್ತವೆ. ಆದರೆ ಸೋಮಾರಿತನದ ಬೇಸಾಯವು ಕೆಲವೆಡೆ ಭೂಮಿಯನ್ನು ತೀರ ಬಂಜರಾಗಿ ಮಾಡುತ್ತಿದ್ದರೆ, ಇನ್ನು ಕೆಲವೆಡೆ ಅಧಿಕ ಬೆಳೆ ತೆಗೆಯುವ ಹವ್ಯಾಸದಿಂದಾಗಿ ಭೂಮಿಯ ಸಕಲ ಸಾರವನ್ನೂ ಅತ್ಯಲ್ಪಾವಧಿಯಲ್ಲಿ ಉಪಯೋಗಿಸಿಬಿಡುವ ಅತ್ಯುತ್ಸಾಹ ವ್ಯಕ್ತವಾಗಿದೆ. ಇಂಥ ಪರಿಸ್ಥಿತಿಯಲ್ಲಿ ೫೦೦—೧೦೦೦ ವರ್ಷಗಳಷ್ಟು ಸಮಯ ಕಳೆದ ಬಳಿಕವಷ್ಟೇ ಎರೆಹುಳಗಳು ಭೂಮಿಯ ಫಲವತ್ತತೆಯನ್ನು ಪೂರ್ವಸ್ಥಿತಿಗೆ ತರಬಲ್ಲವು—ಏಕೆಂದರೆ, ಅವುಗಳ ಕೆಲಸದ ವೇಗವು ಮಾನವನ ಸೋಮಾರಿತನದ ಅಥವಾ ಆತುರದ ವೇಮೊಡನೆ ಸ್ಪರ್ಧಿಸಲಾರದು.

ಹಾಗಾದರೆ ಎರೆಹುಳಗಳ ಕುರಿತು ದೊಡ್ಡ ದೊಡ್ಡ ಮಾತನ್ನಾಡಿ ಫಲವೇನು? ಅದರ ಔಚಿತ್ಯವೇನು? ಎಂಬ ಪ್ರಶ್ನೆಗಳು ಬರಬಹುದು. ಸಾಮಾನ್ಯ ಎರೆಹುಳಗಳಿಗೆ ಮಾತ್ರ ಇಷ್ಟು ಸಮಯ ಬೇಕಾದರೂ ಕೃತಕ ರೀತಿಯಲ್ಲಿ ಎರೆಹುಳಗಳ ಸಂಗೋಪನೆ ಮಾಡಿ ಈ ನೆಲಯೋಧರನ್ನು ತಮ್ಮ ಕೆಲಸಕ್ಕೆ ಹಚ್ಚಿದರೆ ೫ರಿಂದ ೧೦ ವರ್ಷಗಳ ಅವಧಿಯಲ್ಲಿಯೇ ಭೂಮಿಯ ಫಲವತ್ತತೆಯನ್ನು ಮರಳಿ ಸಂಪಾದಿಸಬಹುದು ಎಂದು ತಜ್ಞರು ಕಂಡುಕೊಂಡಿದ್ದಾರೆ. ಇದೇ ನಮ್ಮ ಪ್ರಶ್ನೆಗಳಿಗೆ ಸಮಾಧಾನ ಕೊಡುವ ಉತ್ತರ.

ಎರೆಹುಳಗಳ ಸಂಕರ ಸಂತಾನವನ್ನು ಉತ್ಪಾದಿಸುವ ವಿಧಾನಗಳು ಈಗ ಯಶಸ್ವಿಯಾಗಿವೆ. ವ್ಯವಸಾಯಕ್ಕೆ ಅತ್ಯುಪಯುಕ್ತವೆನಿಸಿದ ಆರೋಗ್ಯಶಾಲಿ ಹಾಗು ಕ್ರಿಯಾಪಟುತ್ವವುಳ್ಳ ಎರೆಹುಳಗಳು ಅನೇಕ ಪ್ರಯೋಗ ಕೇಂದ್ರಗಳಲ್ಲಿ ಸೃಷ್ಟಿಸಲ್ಪಟ್ಟಿವೆ. ಜೈವಿಕ ಪದಾರ್ಥಗಳುಳ್ಳ ಮಣ್ಣು ಗುಪ್ಪೆಯಲ್ಲಿ ಈ ಎರೆಹುಳಗಳನ್ನು ಇಟ್ಟು ಪೋಷಿಸಲಾಗುತ್ತದೆ. ಈಗಾಗಲೇ ಅಮೇರಿಕ ಮತ್ತು ಕೆನಡಗಳಲ್ಲಿ ಎರೆಹುಳಗಳ ಗದ್ದೆಗಳಿವೆ! ಮಾರಾಟಕ್ಕೆ ಸಹ ಇವು ಸಿದ್ಧವಾಗಿವೆ. ಬ್ರಿಟನಿನಲ್ಲಿ ಎರೆಹುಳಗಳ ಸಾಕಣೆಗೆಂದೇ ಆರಿಸಲಾದ ತೋಟಗಳಲ್ಲಿಯೂ ಗದ್ದೆಗಳಲ್ಲಿಯೂ ಅದ್ಭುತ ಶಕ್ತಿ ಸಂಪನ್ನ ಎರೆಹುಳಗಳ ಸೃಷ್ಟಿಯ ಪ್ರಯೋಗವನ್ನು ನಡೆಸಲಾಗುತ್ತದೆ.

ಎರೆಹುಳಗಳ ಪೋಷಣೆಯು ತೃಪ್ತಿಕರವಾಗಿ ನಡೆಯುವುದಕ್ಕೆ ಜೈವಿಕ ಪದಾರ್ಥಗಳುಳ್ಳ ಎರೆಮಣ್ಣೇ ಬೇಕು. ಎರೆಹುಳದ ಹೊಟ್ಟೆಯೊಳಗೆ ಹೋಗಿ ಹೊರಬಂದಿರುವ ಈ ಎರೆಮಣ್ಣನ್ನು ವೈಜ್ಞಾನಿಕ ಪರೀಕ್ಷೆಗೆ ಗುರಿಪಡಿಸಿದಾಗ ಸಸ್ಯಗಳ ಬೆಳವಣಿಗೆಗೆ ಬಹಳ ಹೆಚ್ಚು ಪೋಷಕಾಂಶಗಳನ್ನು ಈ ಮಣ್ಣು ಒದಗಿಸಿಕೊಡುವುದೆಂಬ ವಿಷಯವು ಪ್ರಕಟವಾಯಿತು. ಎರೆಮಣ್ಣಿನಲ್ಲಿ ಭೂಮಿಯ ಮೇಲ್ಪದರಿನ ಮೊದಲ ಆರು ಅಂಗುಲದ ಸಾಮಾನ್ಯ ಮಣ್ಣಿನಲ್ಲಿರುವುದಕ್ಕಿಂತ ಐದು ಪಾಲಷ್ಟು ನೈಟ್ರೇಟ್ ನೈಟ್ರೋಜನ್, ಹನ್ನೊಂದು ಪಾಲಷ್ಟು ಪೊಟಾಶ್, ಏಳು ಪಾಲಷ್ಟು ಫೋಸ್ಫರಸ್, ಮೂರು ಪಾಲಷ್ಟು ಮೆಗ್ನೇಶಿಯಂ ಮತ್ತು ಶೇಕಡಾ ನಲ್ವತ್ತರಷ್ಟು ಜೈವಿಕ ಪದಾರ್ಥವು ಅಧಿಕವಿರುತ್ತದೆ! ಇಷ್ಟೇಯಲ್ಲ, ಸಸ್ಯಗಳು ಆಹಾರ ರೂಪದಲ್ಲಿ ಬಹಳ ಸುಲಭದಲ್ಲಿಯೇ ಗ್ರಹಿಸಲು ಸಾಧ್ಯವಾಗುವಂತೆ ಇಷ್ಟೂ ಪದಾರ್ಥಗಳು ಅಡಕವಾಗಿರುವುದು ಎರೆಮಣ್ಣಿನ ಇನ್ನೊಂದು ಮುಖ್ಯ ವೈಶಿಷ್ಟ್ಯ.

ಎರೆಹುಳವು ಎಂಥ ಜೀವಿ? ತೋಟದಲ್ಲಿರುವ ಮಣ್ಣಿನಿಂದ ಒಂದು ಎರೆಹುಳವನ್ನು ತೆಗೆದು ಹತ್ತಿರದಿಂದ ಪರೀಕ್ಷಿಸಿದರೆ, ಅದರ ದೇಹವು ತೀರ ಸಮೀಪಗತವಾದ ಉಂಗುರಗಳ ಸರಮಾಲೆಯಿಂದ ರಚಿತವಾಗಿರುವುದು ಗೋಚರಿಸುತ್ತದೆ. ಆಯಾ ಎರೆಹುಳದ ಗಾತ್ರಕ್ಕನುಗುಣವಾಗಿ ಈ ಉಂಗುರಗಳು ೧೦೦ ರಿಂದ ೪೦೦ ಸಹ ಇರಬಹುದು. ಎರೆಹುಳದ ನರವ್ಯೂಹವಾಗಿ ಈ ಉಂಗುರಗಳನೆ ಎನ್ನಬಹುದು.

ತನ್ನ ಗಾತ್ರದ ದೃಷ್ಟಿಯಿಂದ ನೋಡಿದರೆ ಎರೆಹುಳವು ಜಗತ್ತಿನಲ್ಲಿಯೇ ಅತ್ಯಂತ ಬಲಶಾಲಿಯಾದ, ಕಾಠಿಣ್ಯಕ್ಕೆ ಬಗ್ಗದ, ನೆಲದಡಿಯಲ್ಲಿ ತೂತು ಕೊರೆಯುವುದಕ್ಕೆ ಸಹಾಯಕವಾದ ದೇಹರಚನೆಯಿಂದ ಕೂಡಿದ ಜೀವವೆಂಬುದು ವ್ಯಕ್ತವಾಗುತ್ತದೆ. ಒಂದು ಎರೆಹುಳವು ಒಂದು ಔನ್ಸಿನ (ಎರಡೂವರೆ ತೊಲೆ) ಮೂವತ್ತನೇ ಒಂದಂಶದಷ್ಟು ಸಹ ಭಾರವಿರುವುದಿಲ್ಲ; ಆದರೆ, ಎರಡು ಔನ್ಸು (ಐದು ತೊಲೆ) ಭಾರದ ಕಲ್ಲನ್ನು ಸಹ ಈ ಎರೆಹುಳವು ಆಚೆದೂಡಿ ತಾನು ಮುಂದರಿಯಬಲ್ಲದು. ಎಂದರೆ ತನ್ನ ಭಾರದ ಅರುವತ್ತು ಪಾಲಷ್ಟು ಭಾರವನ್ನು ದೂಡಿಬಿಡುವ ಭೀಮಶಕ್ತಿ ಅದರದು!

ಎರೆಹುಳದ ಹೊಟ್ಟೆಗೆ ವಿರಾಮವೆಂಬುದಿಲ್ಲ. ಎರೆಹುಳವೆಂದರೆಯೇ ಹೊಟ್ಟೆ! ಆಹಾರ ಪಚನಾಂಗಗಳೇ ತಲೆಯಿಂದ ಬಾಲದವರೆಗೂ ಇವೆ ಎನ್ನಬಹುದು. ಎರೆಹುಳಕ್ಕೆ ತಲೆಯೂ ಬಾಲವೂ ಇವೆ. ತಲೆಯಲ್ಲಿ ಬಾಯಿಮಾತ್ರ ಇದೆ; ಕಣ್ಣು, ಕಿವಿ ಮತ್ತು ಮೂಗುಗಳಿಲ್ಲ! ಕಣ್ಣಿಲ್ಲದಿದ್ದರೂ ಸಹಜ ಪ್ರವೃತ್ತಿಯ ಬಲದಿಂದ ವಿರಾಮವಿಲ್ಲದೆ ಎರೆಹುಳವು ಆಹಾರವನ್ನು ಗುರುತಿಸಿ, ಸೇವಿಸುತ್ತಲೇ ಇರುತ್ತದೆ. ಸಹಜ ಪ್ರವೃತ್ತಿಯ ಬಲದಿಂದಾಗಿಯೇ ಅದು ತನಗೆ ಅನುಕೂಲವಾದ ವಾತಾವರಣವೆಲ್ಲಿದೆ ಎಂದು ಕಂಡುಕೊಂಡು ಅಲ್ಲಿಯೇ ಬಾಳುತ್ತದೆ; ಗಂಡಾಂತರಗಳನ್ನು ಕಂಡು ಕೊಂಡು ಪಾರಾಗಲು ಹವಣಿಸುತ್ತದೆ.

ನಮ್ಮ ಬೆರಳನ್ನು ಎರೆಹುಳದ ದೇಹದ ಮೇಲೆ ಬಾಲದಿಂದ ತಲೆಯ ವರೆಗೆ ಆಡಿಸಿದರೆ, ತುಸು ದೊರಗಾಗಿ ದೇಹವಿರುವಂತೆ ಅನುಭವವಾಗುತ್ತದೆ. ಇದು ನಮಗೆ ಆಶ್ಚರ್ಯವನ್ನುಂಟು ಮಾಡಬಹುದು. ಮಾಂಸದ ಮುದ್ದೆಯಂತಿರುವ, ಹೊಳಪಿನ ಮೈಯ ಎರೆಹುಳವು ನಾವೆಣಿಸಿದಂತೆ ಮೃದುವಾಗಿಲ್ಲದಿರುವುದರಿಂದಲೇ ಹೀಗೆ ನಾವು ಅಚ್ಚರಿಗೊಳ್ಳುತ್ತೇವೆ. ಎರೆಹುಳದ ದೇಹದಲ್ಲಿ ದೊರಗು ಕಾಣಿಸಿಕೊಂಡಿರುವುದಕ್ಕೆ ಅಲ್ಲಲ್ಲಿ ಕೆಲವು ಕೊಂಡಿಯ ರಚನೆಗಳು ಇರುವುದೇ ಕಾರಣ. ಈ ಕೊಂಡಿಗಳ ಬಲದಿಂದ ಅದು ದೇಹವನ್ನು ಬೇಕು ಬೇಕಾದಂತೆ ಬಗ್ಗಿಸಿಕೊಂಡು ಸಾಗಬಲ್ಲುದು; ತನ್ನ ಮೈಯ ಮೇಲೊಂದು ವಿಶಿಷ್ಟ ದ್ರವವನ್ನು ಒಸರಿಸುತ್ತಾ, ನೆಲ ಅಗೆಯುವಾಗಿನ ಘರ್ಷಣೆಯನ್ನು ಅದು ನಿವಾರಿಸಿಕೊಳ್ಳಬಲ್ಲುದು. ಮಣ್ಣು ಯಾವ ಬಗೆಯದೇ ಆಗಿರಲಿ—ಅದು ರಂಧ್ರವನ್ನು ಕೊರೆದು ರಕ್ಷಣೆ ಪಡೆಯಬಲ್ಲುದು.

ಹಾರೆ ಅಥವಾ ಬೇರಾವುದೇ ಹತ್ಯಾರಿನ ಹೊಡೆತದಿಂದ ಎರೆಹುಳವೊಂದು ಇಭ್ಭಾಗವಾಯಿತೆನ್ನೋಣ. ಎರೆಹುಳವು ಸತ್ತಿತೆಂದು ನಾವಾಗ ಭಾವಿಸಿದರೆ, ಅದು ತಪ್ಪು. ಎರೆಹುಳದ ತಲೆಗೆ ಹೊಂದಿಕೊಂಡ ಭಾಗವು ತನ್ನಷ್ಟಕ್ಕೆ ಬೆಳೆದು ಕಡಿದು ಹೋದ ಬಾಲದ ಸ್ಥಾನದಲ್ಲಿ ಇನ್ನೊಂದು ಬಾಲವನ್ನು ಸೃಷ್ಟಿಸಿಕೊಳ್ಳುತ್ತದೆ; ಮತ್ತು ಮೊದಲಿನಂತೆಯೆ ಪೂರ್ಣರೂಪದ ಎರೆಹುಳವಾಗುತ್ತದೆ. ಆದರೆ ಬಾಲಕ್ಕೆ ಹೊಂದಿಕೊಂಡ ಭಾಗವು ತಲೆಯೊಂದನ್ನು ಬೆಳೆಸಿಕೊಳ್ಳಲಾರದು; ಅದು ಕೊಳೆತು ಬೀಳುತ್ತದೆ.

ಎರೆಹುಳದ ಬಾಯಿಗೆ ತುಟಿಯಿದೆ. ಈ ತುಟಿಯು ತನ್ನ ದೇಹವನ್ನು ಮುನ್ನುಗ್ಗಿಸುತ್ತಾ ಎರೆಹುಳವು ಸಾಗುವಾಗ ಎದುರಾದ ಮಣ್ಣಿನಲ್ಲಿ ಹೆಚ್ಚಿನಂಶವನ್ನು ಪಕ್ಕಕ್ಕೆ ಸರಿಸಲು ನೆರವಾಗುತ್ತದೆ. ಬಾಕಿಯುಳಿದ ಮಣ್ಣನ್ನು ಎರೆಹುಳವು ತನ್ನ ಚಿಕ್ಕ ಬಾಯಿಯ ಮೂಲಕ ನುಂಗುತ್ತದೆ. ನುಂಗಲಾದ ಈ ಮಣ್ಣು ಎರೆಹುಳುವಿನ ಕುತ್ತಿಗೆಯ ಬಳಿಯ ಬೀಸುಗಲ್ಲಿನಂಥ ಅವಯವದೊಳಗೆ ತಳ್ಳಲ್ಪಡುತ್ತದೆ. ಈ ಬೀಸುಗಲ್ಲಿಗೆ ಸಿಕ್ಕಿದ ಎಲೆಗಳು, ಕಸಕಡ್ಡಿಗಳು, ಹುಲ್ಲಿನ ಚೂರುಗಳು, ಬೇರುಗಳು, ಕೊಳೆತ ಪದಾರ್ಥಗಳು—ಎಲ್ಲವೂ ನಯವಾದ, ಅಂಟು ಅಂಟಾದ ಮುದ್ದೆಯಾಗುತ್ತವೆ.

ಈ ಮುದ್ದೆಯು ಎರೆಹುಳುವಿನ ಕರುಳನ್ನು ಪ್ರವೇಶಿಸುತ್ತದೆ. ದೇಹದ ಉದ್ದಕ್ಕೆ ಚಾಚಿರುವ ಈ ಕರುಳಿನಲ್ಲಿ ಈ ಮಣ್ಣಿನ ಮುದ್ದೆಯು ಸಾಗುವಾಗ ಎರೆಹುಳವು ಮಣ್ಣಿನಲ್ಲಿರುವ ಅಣುಜೀವಿಗಳನ್ನು ತನ್ನ ಆಹಾರವಾಗಿ ಉಪಯೋಗಿಸಿಕೊಂಡು, ಉಳಿದುದನ್ನು ಹೊರಗೆಡವುತ್ತದೆ. ಎರೆಹುಳವು ಒಂದು ಅಂಗುಲದ ಇಪ್ಪತ್ತನೇ ಒಂದಂಶದಷ್ಟು ದೊಡ್ಡದಾದ ಕಲ್ಲುಗಳನ್ನು ನುಂಗಿಬಿಡಬಲ್ಲದು. ಇದಕ್ಕಿಂತ ದೊಡ್ಡದಾದ ಕಲ್ಲುಗಳನ್ನು ಸುತ್ತಲಿಂದ ಸ್ವಲ್ಪಸ್ವಲ್ಪವೇ ಕೊರೆದು ತಿನ್ನಬಲ್ಲುದು.

ನೆಲದಲ್ಲಿ ಕೊರೆದ ರಂಧ್ರದೊಳಗೆ ತನ್ನ ಬಾಲವನ್ನು ಲಂಗರಿನಂತೆ ಭದ್ರವಾಗಿ ಹುಗಿದುಕೊಂಡು, ಶಿರೋಭಾಗದ ಪಾರ್ಶ್ವವನ್ನು ನೆಲದ ಮೇಲ್ಗಡೆ ಚಾಚಿ, ಎರೆಹುಳವು ಭೂಮಿಯ ಮೇಲೆ ಬಿದ್ದಿರುವ ಎಲ್ಲ ಸಸ್ಯ ಹಾಗು ಪ್ರಾಣಿಜನ್ಯ ಕೊಳೆ ಪದಾರ್ಥಗಳನ್ನು ಬಾಚಿ ತಬ್ಬಿಕೊಂಡು, ನೆಲದೊಳಕ್ಕೆ ಎಳೆದೊಯ್ಯಬಲ್ಲುದು. ಕಠಿಣ ಪದಾರ್ಥಗಳೇನಾದರೂ ಇದ್ದರೆ ಅದನ್ನು ಜೊಲ್ಲುರಸದಿಂದ ಚಿಮುಕಿಸಿ, ಮೃದುವಾಗಿ ಮಾಡಿ, ಪಚನ ಕಾರ್ಯಕ್ಕೆ ಶೀಘ್ರದಲ್ಲಿ ಅದು ಒಳಪಡುವಂತೆ ಎರೆಹುಳವು ಜಾಗ್ರತೆವಹಿಸುತ್ತದೆ.

ಬ್ರಿಟನಿನಲ್ಲಿ ತಜ್ಞರು ಪಟ್ಟ ಅಭಿಪ್ರಾಯದಂತೆ, ಪ್ರತಿ ಹದಿನೈದು ವರ್ಷಕ್ಕೆ ಸುಮಾರು ಮೂರು ಅಂಗುಲದಷ್ಟು ದಪ್ಪನಾಗಿ ಹೊಸ ಎರೆಮಣ್ಣನ್ನು ಎರೆಹುಳಗಳು ಭೂಮಿಯ ಮೇಲ್ಪದರಿನಲ್ಲಿ ಸೃಷ್ಟಿಸುತ್ತವೆ. ಈ ಅಂದಾಜನ್ನು ಸಾಧಾರಣವಾಗಿ ಜಗತ್ತಿನ ಎಲ್ಲ ಹೊಲ ಗದ್ದೆಗಳಿಗೂ ಅನ್ವಯಿಸಬಹುದು. ಎರೆಹುಳಗಳನ್ನು ಕೃತ್ರಿಮ ರೀತಿಯಿಂದ ಹೆಚ್ಚಿಸಿ ಅವುಗಳಿಂದ ನಮಗೆ ಲಾಭಕರವಾದ ಕೆಲಸಗಳನ್ನು ಮಾಡಿಸಿದ ಪಕ್ಷದಲ್ಲಿ ಹೊಸತಾಗಿ ಎರೆಮಣ್ಣನ್ನು ಸೃಷ್ಟಿಸುವ ವೇಗವು ತುಂಬ ಹೆಚ್ಚಿಕೊಳ್ಳುವುದರಲ್ಲಿ ಸಂಶಯವಿಲ್ಲ.

ಕಣ್ಣಿಲ್ಲದೆ ಕುರುಡುತನವನ್ನು ಅನುಭವಿಸುತ್ತಿದ್ದರೂ ಸಹ ಎರೆಹುಳಗಳು ಬೆಳಕಿನ ಅನುಭವವನ್ನು ಮಾಡಿಕೊಳ್ಳುತ್ತವೆ. ಬೆಳಕಿನಲ್ಲಿ ಅವು ಕೆಲಸವನ್ನು ಮಾಡಲು ಸಹ ಹಿಂಜರಿಯುತ್ತವೆ. ತಮ್ಮ ಆಹಾರವನ್ನವು ಹೆಚ್ಚಾಗಿ ರಾತ್ರಿ ಕಾಲದಲ್ಲಿ ತೆಗೆದುಕೊಳ್ಳುತ್ತವೆ. ಸೂರ್ಯನು ಕಂತಿದ ಬಳಿಕ ಭೂಮಿಯ ರಂಧ್ರಗಳಿಂದ ಮೇಲೆ ಬಂದು, ನಸುಕು ಹರಿಯುವಷ್ಟರಲ್ಲಿ ಪುನಃ ಈ ರಂಧ್ರಗಳಲ್ಲಿ ಆಶ್ರಯ ಪಡೆಯುವುದು ಎರೆಹುಳಗಳ ಸ್ವಭಾವ.

ಎರೆಹುಳಗಳ ಜಾತಿಗೆಸೇರಿದ ಗೊಬ್ಬರದ ಹುಳಗಳನ್ನು ನಾವು ಗೊಬ್ಬರದ ರಾಶಿಯಲ್ಲಿ ನೋಡಬಹುದು. ಆಸ್ಟ್ರೇಲಿಯದ ಅರಣ್ಯ ಪ್ರದೇಶಗಳಲ್ಲಿರುವ ಕೆಸರುಗಳಲ್ಲಿ ನಾಲ್ಕು ಅಡಿಯಷ್ಟು ಉದ್ದವಾದ, ಎರೆಹುಳದ ಸಂತಾನಕ್ಕೆ ಸೇರಿದ, ರಾಕ್ಷಸ

ಪ್ರಾಣಿಯೊಂದಿದೆ. ಸಾಮಾನ್ಯವಾಗಿ ಎರೆಹುಳವು ಅತ್ಯುಷ್ಣವೂ ತೀರಬಣಕಲೂ ಆಗಿರದ ಜಗತ್ತಿನ ಎಲ್ಲ ಪ್ರದೇಶಗಳಲ್ಲಿಯೂ ಕಂಡು ಬರುತ್ತದೆ.

ಸೆಕೆ ಅಧಿಕ ವಿರುವ ಪ್ರದೇಶಗಳಲ್ಲಿ ಸಹ ಅವು ಕೆರೆಕುಂಟೆಗಳೇ ಮುಂತಾದ ನೀರಿನಾಶ್ರಯವಿರುವ ಪ್ರದೇಶದ ಹತ್ತಿರದಲ್ಲಿ ಬೀಡುಬಿಡುತ್ತವೆ. ತಾವು ಜಗತ್ತಿನ ಯಾವ ಮೂಲೆಯಲ್ಲೇ ಇರಲಿ, ಈ ಎರೆಹುಳಗಳು ಎಡೆಬಿಡದೆ ತಮ್ಮ ಚಟುವಟಿಕೆಯನ್ನು ನಡೆಸಿ, ಭೂಮಿಯ ಮೇಲ್ಪದರನ್ನು ಕೃಷಿಗೆ ಅತ್ಯುಪಯುಕ್ತವಾದ ಜೈವಿಕಪದಾರ್ಥಗಳಿಂದ ಸಮೃದ್ಧವಾಗಿಯೂ ನೆಲವನ್ನು ಹಸನಾಗಿಯೂ ಇಡಲು ತಪ್ಪುವುದಿಲ್ಲ.

ಆದುದರಿಂದ ನಾವು ಎರೆಹುಳಗಳ ಆಶ್ರಯವನ್ನು ಪಡೆದರೆ, ಹೆಚ್ಚುತ್ತಿರುವ ಜನಸಂಖ್ಯೆಗೆ ಫಲವತ್ತತೆಯನ್ನು ಕಳೆದುಕೊಳ್ಳುತ್ತಿರುವ ಭೂಮಿಯು ಸಾಕಷ್ಟು ಆಹಾರವನ್ನೊದಗಿಸಲಾರದೆಂಬ ಹೆದರಿಕೆಯನ್ನು ದೂರಮಾಡಿಕೊಳ್ಳಬಹುದು. "ಎರೆಹುಳದ ಮೇಲೆ ಈ ಭಾರ ಹಾಕಲಾದೀತೇ?" ಎಂದು ಸಂದೇಹಪೂರ್ಣದೃಷ್ಟಿಯಿಂದ ನಾವು ಯಾರೂ ಪ್ರಶ್ನೆಯನ್ನು ಹಾಕಬೇಕಾದ ಕಾರಣವಿಲ್ಲ. ಏಕೆಂದರೆ, ಎರೆಹುಳಗಳನ್ನು ಕೃತಕ ವಿಧಾನದಿಂದ ಪೋಷಿಸುವ ಪ್ರಯೋಗಗಳು ಯಶಸ್ವಿಯಾಗುವಂತೆ ನಿಸರ್ಗವೇ ಸಹಕರಿಸಿದೆ.

ಎರಡು ಎರೆಹುಳಗಳು ಸಂಧಿಸಿದಾಗ ಅವು ತೀರ ವಿಚಿತ್ರವಾದರೀತಿಯಲ್ಲಿ ಒಂದನ್ನೊಂದು ಅಪ್ಪಿಕೊಳ್ಳುತ್ತವೆ; ತಲೆಗಳು ಆಗ ವಿರುದ್ಧ ದಿಕ್ಕಿನಲ್ಲಿರುತ್ತವೆ; ತಮ್ಮ ಉದ್ದದ ಮೂರನೇ ಒಂದಂಶದಷ್ಟನ್ನು ಮೀರಿ ಇನ್ನೊಂದಕ್ಕವು ಸುತ್ತುಹಾಕುತ್ತವೆ. ಹೀಗೆ ಪ್ರತಿಯೊಂದೂ ಎರೆಹುಳವು ಇನ್ನೊಂದರಲ್ಲಿರುವ ಮೊಟ್ಟೆಯ ಫಲೀಕರಣಕಾರ್ಯವನ್ನು ನೆರವೇರಿಸುತ್ತದೆ. ಫಲೀಕೃತವಾದ ಈ ಮೊಟ್ಟೆಗಳು ಆಯಾ ಎರೆಹುಳದ ದೇಹದಲ್ಲಿರುವ ಒಂದು ನಳಿಕೆಯ ರಚನೆಯ ಮೂಲಕ ಹಾದು ಕೊನೆಗೆ •ಹಳದಿಬಣ್ಣದ ಲಿಂಬೆಯಾಕಾರದ ಕೋಶದ ರೂಪದಲ್ಲಿ ಹೊರಬೀಳುತ್ತವೆ.

ಈ ಪ್ರತಿಯೊಂದೂ ಕೋಶವು ಸುಮಾರು ೨೦ ಚಿಕ್ಕ ಮೊಟ್ಟೆಗಳಿಂದ ಕೂಡಿರುತ್ತದೆ; ಹತ್ತು ದಿನಗಳಲ್ಲಿ ಈ ಮೊಟ್ಟೆಗಳೊಡೆದು ನೂಲಿನಂತೆ ಬಿಳಿಯೂ ಸಪೂರವೂ ಆದ ಹುಳಗಳು ಹೊರಬರುತ್ತವೆ. ಆದರೆ ಈ ಕೋಶಗಳನ್ನು ಒಣಗಿಸಿಟ್ಟರೆ, ಅಥವಾ ಶೀತಕಾರಿ ಯಂತ್ರಗಳಲ್ಲಿಟ್ಟರೆ ಸುಮಾರು ಒಂದೂವರೆ ವರ್ಷದಷ್ಟು ಸಮಯದವರೆಗೆ ಕಡದೆ ಸುರಕ್ಷಿತವಾಗಿಡುವುದು ಸಾಧ್ಯವೆಂದು ಕಂಡುಹಿಡಿಯಲಾಗಿದೆ.

ಈ ರೀತಿ ಸುರಕ್ಷಿತ ಕ್ರಮಗಳನ್ನು ಕೈಗೊಂಡರೆ ಜಗತ್ತಿನ ಯಾವ ಊರಿಗೆ ಬೇಕಾದರೂ ಎರೆಹುಳದ ಮೊಟ್ಟೆಗಳಿರುವ ಕೋಶವನ್ನು ರವಾನಿಸಬಹುದು. ಈ ಕೋಶಗಳನ್ನು ಪುನಃ ಮೊಟ್ಟೆಯೊಡೆಯಲು ಹದನಾದ ವಾತಾವರಣದಲ್ಲಿ ಹತ್ತು ದಿನಗಳವರೆಗಿಟ್ಟರೆ ಮೊಟ್ಟೆಗಳಿಂದ ಆರೋಗ್ಯಕರವಾದ ಹುಳಗಳು ಹೊರಬರುತ್ತವೆ. ಎರೆಹುಳದ ದೇಹದಲ್ಲಿ ಪುರುಷ ಹಾಗು ಸ್ತ್ರೀ ಶರೀರದ ಅವಯವ ವಿಶೇಷಗಳು ಸಮ್ಮಿಲಿತವಾಗಿರುವುದರಿಂದ ಒಂದು ಕೋಶದಿಂದ ಹೊರಬಂದ ಹುಳಗಳಿಂದಲೇ ಎರೆಹುಳದ ಸಂತಾನವೃದ್ಧಿಯನ್ನು ಎಷ್ಟು ಬೇಕಾದರೂ ಮಾಡಿಕೊಳ್ಳಬಹುದು.

ಡಾ. ಥೋಮಸ್ ಜೆ. ಬ್ಯಾರೆಟ್ ಎಂಬವರು ಫ್ರಾನ್ಸಿನಲ್ಲಿದ್ದಾಗ (೧೯೧೮) ಎರೆಹುಳಗಳ ಸಾಕಣೆಯ ಕುರಿತು ವಿಶೇಷ ಆಸಕ್ತಿಯನ್ನು ವಹಿಸಿದರು. ಹತ್ತಿರದಲ್ಲಿಯೇ ಬಂದೂಕಿನ ಸಪ್ಪಳಗಳು ಕೇಳಿಸುತ್ತಿದ್ದರೂ ಆರ್ಗೋನ್ ಅರಣ್ಯಗಳ ನಡುವೆ ಹಾಳು ಬಿದ್ದ ಬಾವಿಯ ಬಳಿ ರೈತನೊಬ್ಬ ಮಣ್ಣನ್ನು ಜಾಗರೂಕತೆಯಿಂದ ಒಟ್ಟುಗೂಡಿಸುತ್ತಿರುವುದರ ಕಾರಣವನ್ನು ಈ ಮಹಾಶಯರು ವಿಚಾರಿಸಿದರು. ಆಗ "ಮಣ್ಣನ್ನು ಫಲವತ್ತಾಗಿ ಮಾಡುವುದು ಹೇಗೆಂದು ದೇವರು ನಮಗೆ ಕಲಿಸಿ ಕೊಟ್ಟಿದ್ದಾನೆ; ಎರೆಹುಳಗಳ ಜೀವನದ ಗುಟ್ಟು ಬಲ್ಲವರಿಗೆ ದೇವರ ಉಪಕಾರ ಗೊತ್ತಾಗುತ್ತದೆ" ಎಂಬ ಉತ್ತರ ಅವನಿಂದ ಬಂತು.

ಇದರಿಂದ ಉತ್ಸಾಹಗೊಂಡ ಡಾ. ಬ್ಯಾರೆಟ್ ತಮ್ಮ ಪ್ರಯೋಗಗಳ ಫಲಿತಾಂಶವು ಉಪರೋಕ್ತ ರೈತನ ನಂಬಿಕೆಗಿಂತ ಭಿನ್ನವಾಗಿಲ್ಲವೆಂದು ಅಲ್ಪಾವಧಿಯಲ್ಲಿಯೇ ಕಂಡುಕೊಂಡರು. ಕ್ಯಾಲಿಫೋರ್ನಿಯದ ಬಂಜರು ಗುಡ್ಡವೊಂದನ್ನು ಈ ಡಾಕ್ಟರರು ಗಾತ್ರದಲ್ಲಿ ಅಸಾಮಾನ್ಯವಾದ ತರಕಾರಿಗಳಿಂದಲೂ ಹಣ್ಣುಗಳಿಂದಲೂ ಪುಷ್ಪಗಳಿಂದಲೂ ಇತರ ಸಸ್ಯಜಾತಿಯಿಂದಲೂ ಕಂಗೊಳಿಸುವಂತೆ ಮಾಡಿದರು.

ಒಂದು ಕುದುರೆಯು ಮಿತವಾದ ಪ್ರಮಾಣದಲ್ಲಿಯಷ್ಟೆ ಉಳುಮೆಯ ಕೆಲಸವನ್ನು ಮಾಡಬಲ್ಲುದು; ಅದು ಸಹ ಒಳ್ಳೆಯ ಗದ್ದೆ ಅಥವಾ ಕುಮರಿ ಪ್ರದೇಶಗಳಲ್ಲಿ ಮಾತ್ರ. ಆದರೆ ತೂಕದಲ್ಲಿ ಒಂದು ಕುದುರೆಯ ಭಾರವನ್ನು ಮೀರದ ಹತ್ತು ಲಕ್ಷ ಎರೆಹುಳಗಳು ನಾವು ನಿರುಪಯುಕ್ತವೆಂದು ಬಿಸಾಡಿದ ತರಗೆಲೆ ಮತ್ತು ಕಸಕಡ್ಡಿಗಳನ್ನೆ ಆಹಾರವಾಗಿ ಉಪಯೋಗಿಸಿಕೊಂಡು ಪ್ರತಿಯೊಂದು ಎಕ್ರೆ ಪ್ರದೇಶದಲ್ಲಿ ೧೦೦೦ ಟನ್ನುಗಳಷ್ಟು ಜೈವಿಕಪದಾರ್ಥ ಸಂಪನ್ನ ಎರೆಮಣ್ಣನ್ನು ಉತ್ಪಾದಿಸಿಕೊಡುತ್ತವೆ—ಎಂಬ ವಿಷಯವನ್ನು ಈ ತಜ್ಞರು ಗೊತ್ತುಹಚ್ಚಿದರು.

ಅಂದಿನಿಂದ ಅವರು ಎರೆಹುಳಗಳ ಸಾಕಣೆ ಕೆಲಸವನ್ನು ತೀವ್ರಾಸಕ್ತಿಯಿಂದ ಪ್ರಾರಂಭಿಸಿದ್ದಾರೆ. ಸುಮಾರು ಹನ್ನೆರಡು ದೇಶಗಳಿಗೆ ಅವರು ಎರೆಹುಳಗಳನ್ನು ಪೂರೈಸುತ್ತಿದ್ದಾರೆ! ಹೊಸತಾಗಿ ಬಂಜರು ಭೂಮಿಯನ್ನು ಸಾಗುವಳಿಗೆ ಹಸನುಗೊಳಿಸಲು ಪ್ರಯತ್ನಿಸುವುದಕ್ಕಿಂತಲೂ ಇದ್ದ ಭೂಮಿಯಲ್ಲಿಯೇ ಎರೆಹುಳಗಳನ್ನು ಚೆನ್ನಾಗಿ ಸಾಕಿ, ಅವುಗಳು ಉತ್ಪಾದಿಸುವ ಎರೆಮಣ್ಣಿನಿಂದ ಆ ಭೂಮಿಯ ಫಲವತ್ತತೆಯನ್ನು ಹೆಚ್ಚಿಸುವುದು, ಯೋಗ್ಯವೆಂದು ಅವರ ಖಚಿತ ಅಭಿಪ್ರಾಯ.

"ಜಗತ್ತಿನಲ್ಲಿ ಇನ್ನೂರು ಕೋಟಿಗಿಂತಲೂ ಹೆಚ್ಚು ಜನರಿದ್ದಾರೆ; ಇಷ್ಟುಮಂದಿಯೂ ಆಹಾರಕ್ಕಾಗಿ ಭೂಮಿಯ ಮೇಲ್ಪದರನ್ನು ಅವಲಂಬಿಸಿದ್ದಾರೆ. ಜಗತ್ತಿನಲ್ಲಿ ಸುಮಾರು ನಾಲ್ನೂರು ಕೋಟಿ ಎಕ್ರೆ ಭೂಮಿಯು ಸಾಗುವಳಿಗೆ ಯೋಗ್ಯವಾಗಿದೆ. ಅಂದರೆ ಒಬ್ಬನಿಗೆ ಎರಡು ಎಕ್ರೆ ಭೂಮಿ ಇದೆ ಎಂದಾಯಿತು. ಆದರೆ ನಾವು ಹೊಟ್ಟೆಗೆ ಬೇಕಾದಷ್ಟು ಉಣ್ಣುತ್ತಿಲ್ಲ; ಭೂಮಿಯ ಮೇಲ್ಪದರು ಫಲವತ್ತಾಗಿಲ್ಲವೆಂದೇ ದೂರುತ್ತೇವೆ. ಈಗಲಾದರೂ ಭೂಮಿಯ ಮೇಲ್ಪದರಿನ ಫಲವತ್ತತೆಯನ್ನು ಹೆಚ್ಚಿಸಲು ನಾವು ಎರೆಹುಳಗಳ ಕಡೆಗೆ ತಿರುಗುವುದುತ್ತಮ" ಎನ್ನುತ್ತಾರೆ ಡಾ. ಬ್ಯಾರೆಟ್. ಈ ಮಾತಿನ ಅಂತರ್ಯವನ್ನು ತಿಳಿದು ಹುಳವೆಂಬ ತಾತ್ಸಾರವಿಲ್ಲದೆ ಎರೆಹುಳಗಳ ಸಾಕಣೆಗೆ ನಮ್ಮ ಕೃಷಿಕರು ಗಮನ ಪೂರೈಸಿ (ವ್ಯವಸಾಯವನ್ನು ಸಮೃದ್ಧಗೊಳಿಸುವುದು ಅತ್ಯಂತ ಅಪೇಕ್ಷಣೀಯ.

—The UNESCO Courier.

(೧ನೇ ಪುಟದಿಂದ)

ಜನರಿಗೆ ಈಗ ಉಳಿದಿಲ್ಲ—ಪ್ರಜಾಪ್ರಭುತ್ವ ಪದ್ಧತಿಯಿಂದಾದ ಪ್ರಯೋಜನಗಳಲ್ಲಿ ಇದೊಂದು.

ರಾಜಾಜಿಯವರಾಗಲೀ ಬೇರೆ ಯಾರೇ ಆಗಲೀ ದ್ವಿಭಾಷಾ ರಾಜ್ಯಗಳ ರಚನೆಯನ್ನು ಇನ್ನು ಮುಂದೆ ಸಹ ಪ್ರತಿಪಾದಿಸುತ್ತಿರಬಹುದು. ಪ್ರಜಾಪ್ರಭುತ್ವವು ಇದಕ್ಕೆ ಆತಂಕವಾಗಗೊಡದು. ಆದರೆ ಧುರೀಣರು ಕ್ಷಣಿಕ ಉದ್ವೇಗವಶರಾಗಿ ಕೈಗೊಂಡ ಗೊತ್ತುವಳಿಗೆ ಬದ್ಧರಿರುವಂತೆ ಜನಸಾಧಾರಣರನ್ನು ನಿರ್ಬಂಧಿಸುವುದು ಮಾತ್ರ ಸಲ್ಲದು. ಸಾಕಷ್ಟು ದಿನಗಳ ಕಾವು ದೊರೆಯದೆ ಹೇಗೆ ಮೊಟ್ಟೆಯೊಡೆದು ಮರಿ ಬರಲಾರದೋ ಹಾಗೆಯೇ ಹೊಸ ಸೂಚನೆಗಳಿಗಾದರೂ ವಿವೇಕಶೀಲ ಪರ್ಯಾಲೋಚನೆಯೆಂಬ ಕಾವು ಕೆಲಸಮಯದ ವರೆಗೆ ದೊರೆಯಲಿ; ಎಂದರೆ, ಮತ್ತೆ ಅದರ ಫಲವು ಅನುಭವಕ್ಕೆ ಬಂದೀತು. ಇವತ್ತೇ ಬೀಜ ಹಾಕಿ, ನಾಳೆಯೊಳಗೆ ಹಣ್ಣು ಕೊಯ್ಯುವೆನೆಂಬ ಆತುರವನ್ನು ಧುರೀಣರು ವ್ಯಕ್ತಪಡಿಸಿದರೆ, ಅದು ಜಂಭವೆನಿಸೀತು; ಮೂರ್ಖತನವಾದೀತು; ಜನರಿಗೆ ನಗು ಬರಿಸೀತು—ಆದರೆ ಎಷ್ಟಕ್ಕೂ ಜನಾದರಣೆಯನ್ನು ಈ ಆತುರ ಗಳಿಸಲಾರದು.

(ಬರೆದು ಬಂದುದು)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S.C. 320/46 R.E.P. 764/55.

ವೈ. ಕೃಷ್ಣಪ್ಪ ಶೆಟ್ಟಿ (ಪೋತಿ) ಕೂಡಾ

—ಅರ್ಜಿದಾರರು

1. ಜಾತಿಮಾ (ಪೋತಿ) ಕೂಡಾ .2. ಸಾರಂಗಆಮೊದ ಸಾಹೇಬ. 1ನೇ ಎದ್ರಿಳಮಗ. ಕುಂದಾಪುರ ತಾಲೂಕು ಶಿರೂರು ಗ್ರಾಮದ ಕೆಸ್ರುಕೋಡಿಯಲ್ಲಿರುವವ.

ಈ ಮೂಲಕ ತಿಳಿಯಪಡಿಸುವುದೇನೆಂದ್ರೆ—

ಅರ್ಜಿದಾರರಿಗೆ ಎದ್ರಿರಿಂದ ಬರತಕ್ಕ ಡಿಕ್ರಿ ಹಣದ ಬಾಕಿ ಬಗ್ಗೆ ದಾಖ್ಲು ಮಾಡಿದ ಮೇಲ್ಕಂಡ ಅಮಲ್‌ಜ್ಯಾರಿಯು ತಾ. 15—7—56ಕ್ಕೆ ತಪ್ತಿಗೆ ಇಟ್ಟಿದೆ. ಆಕ್ಷೇಪವಿದ್ದಲ್ಲಿ ಕೋರ್ಟಿನಮುಂದೆ ಹಾಜರಾಗಿ ವ್ಯವಹರಿಸತಕ್ಕದ್ದು. ತಪ್ಪಿದಲ್ಲಿ ಸದ್ರಿ ಅರ್ಜಿ ನಿಮ್ಮ ಗೈರುಹಾಜ್ರಿಯಲ್ಲಿ ತೀರ್ಮಾನಿಸಲಾದೀತೆಂತ ಈ ಮೂಲಕ ಕೋರ್ಟು ಹುಕುಂಪ್ರಕಾರ ತಿಳಿಸಿಯದೆ.

ವೈ. ಎಂ. ಶೆಟ್ಟಿ.
Advocate for Petitioner.
ಕುಂದಾಪುರ ತಾ. 29—6—1956.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬ್ಯಾಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ನಿಮ್ಮಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 12—7—1956

ಸಂಚಿಕೆ ೪೫
NO. 45

ಭಾರತ ಸರಕಾರದ ಸಾಲ

ಅಭಿವೃದ್ಧಿ ಪ್ರಯತ್ನಗಳನ್ನು ಸಾಂಗವಾಗಿ ಪೂರೈಸಲು ನಮ್ಮ ಸರಕಾರಕ್ಕೆ ಅಪಾರ ಭಂಡವಾಳವು ಬೇಕಾಗುತ್ತದೆ. ಕಲ್ಯಾಣ ರಾಜ್ಯದ ಶ್ರೇಷ್ಠ ಆದರ್ಶವನ್ನು ಸರಕಾರವು ಇಟ್ಟುಕೊಂಡಿರುವುದರಿಂದ ಪ್ರಜೆಗಳ ಯೋಗಕ್ಷೇಮಾಭ್ಯುದಯಗಳಿಗಾಗಿ ಅದು ಕೋಟ್ಯಾಂತರ ರೂಪಾಯಿಗಳ ವೆಚ್ಚ ಬರುವ ಯೋಜನೆಗಳನ್ನು ಹಾಕಿಕೊಂಡಿರುತ್ತದೆ. ಈ ಯೋಜನೆಗಳು ಯಶಸ್ವಿಯಾಗಿ ಪೂರೈಸಲ್ಪಟ್ಟ ಬಳಿಕ ಅವುಗಳ ಪ್ರಯೋಜನವನ್ನು ಜನರು ಧಾರಾಳವಾಗಿ ಪಡೆಯುತ್ತಾರೆ. ಹೀಗೆ ಪಡೆದ ಪ್ರಯೋಜನಗಳಿಗಾಗಿ ಸ್ವಲ್ಪ ಹೆಚ್ಚು ತೆರಿಗೆಯನ್ನು ಯೋಜನೆಗೆ ಉಪಯೋಗಿಸಲಾದ ಹಣಕ್ಕೆ ಬಡ್ಡಿಯ ರೂಪದಲ್ಲೆಂಬಂತೆ ಜನರು ಕೊಡಬಲ್ಲರು. ಆದರೆ, ಸರಕಾರಕ್ಕೆ ಮೊದಲೊಮ್ಮೆ ಕೋಟ್ಯಾಂತರ ಹಣದ ಆವಶ್ಯಕತೆ ಬೀಳುತ್ತದೆ.

ಸರಕಾರದವರು ತಮ್ಮ ಆದಾಯವು ಈ ವೆಚ್ಚದ ಕಾರ್ಯಕ್ರಮಗಳನ್ನು ಬಾಯಿಗೂಡಿಸಲು ಸಾಕಷ್ಟಿಲ್ಲವೆಂದು ತೋರಿದ ಗಳಿಗೆಯಲ್ಲೆಲ್ಲ ಯೋಗ್ಯ ಕಾರಣಗಳನ್ನು ತೋರಿಸಿ ಸಾರ್ವಜನಿಕರಿಂದ ಸಾಲವೆತ್ತುತ್ತಾರೆ. ಪ್ರಗತಿಪಥದಲ್ಲಿ ಮುಂನಡೆಯನ್ನಿಡುತ್ತಾ ನಾಗರಿಕರ ಸುಖಾನುಕೂಲತೆಗಳನ್ನು ಹೆಚ್ಚಿಸುವ ಉದ್ದೇಶವಿರುವ ಒಂದು ಸರಕಾರಕ್ಕೆ ಅದರ ಆದಾಯಕ್ಕಿಂತ ವೆಚ್ಚವೇ ಯಾವಾಗಲೂ ಹೆಚ್ಚಾಗಿರುತ್ತದೆ. ಭಾರತ ಸರಕಾರವಾಗಲೀ ರಾಜ್ಯ ಸರಕಾರಗಳಾಗಲೀ ಇದಕ್ಕೆ ಅಪವಾದವಲ್ಲ. ಹೀಗಾಗಿ, ಕಳೆದ ಕೆಲವು ವರ್ಷಗಳಿಂದ ಭಾರತ ಸರಕಾರವೂ ರಾಜ್ಯ ಸರಕಾರಗಳೂ ಬಿಡದೆ ದೊಡ್ಡ ಮೊತ್ತದ ಸಾಲವನ್ನು ಎತ್ತುತ್ತಾ ಬಂದಿವೆ.

ಜನರು ಈ ಸಾಲಗಳಿಗೆ ಸಂಪೂರ್ಣ ಸಹಕಾರವನ್ನು ನೀಡಿದ್ದಾರೆ. ಸಾಮಾನ್ಯವಾಗಿ ಸಾಲವೆತ್ತುವ ಸರಕಾರಗಳ ಭದ್ರತೆಯ ಮೇಲೊಂದು ಕಣ್ಣಿಡುವುದುಂಟಾದರೂ ಹೆಚ್ಚಿನ ಮಟ್ಟಿಗೆ ಸರಕಾರಕ್ಕೆ ಸಾಲವಿತ್ತ ಹಣವು ಮುಳುಗಿ ಹೋಗಲಾರದೆಂಬ ಭರವಸೆಯು ಜನರಿಗಿದ್ದೇ ಇದೆ. ಸರಕಾರದ ಸದುದ್ದೇಶಗಳನ್ನು ಮನಗಂಡು, ಅದು ಕೈಗೊಳ್ಳಲಿರುವ ಕಾರ್ಯಕ್ರಮಗಳ ಉಪಯುಕ್ತತೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಪ್ರತಿಯೊಂದು ಹಣಕಾಸಿನ ಸಂಸ್ಥೆಯೂ ಧನಾಢ್ಯ ಮಹನೀಯರೂ ಈ ಸಾರ್ವಜನಿಕ ಸಾಲಗಳು ಮಿತಿಗೆ ಮೀರಿಯೇ ಶೀಘ್ರದಲ್ಲಿ ತುಂಬಿ ಬರುವಂತೆ ಮಾಡಿದ್ದಾರೆ. ಸರಕಾರದ ಸಾಲಗಳ ಶರ್ತಗಳೂ ಬಡ್ಡಿಯ ದರವೂ ಆಕರ್ಷಕವಾಗಿರುವುದೇ ಈ ಸಹಕಾರದ ಮೂಲ ಕಾರಣವೆಂದು ಹೇಳುವ ವ್ಯವಹಾರ ತಜ್ಞರಿರಬಹುದು; ಆದರೆ, ಸರಕಾರದೊಡನೆ ಸಹಕರಿಸುವ ಮನೋಭಾವವೂ ಇಲ್ಲಿ ವ್ಯಕ್ತವಾಗಿದೆ ಎಂಬುದನ್ನು ಮರೆಯಲಾಗದು.

ಸಾಮಾನ್ಯ ಜನರು ಸರಕಾರದ ದೊಡ್ಡ ಮೊತ್ತದ ಸಾಲಗಳಲ್ಲಿ ಹೇಗೆ ಸಹಕರಿಸಬಹುದು? ೧೯೫೪ನೇ ವರ್ಷದಲ್ಲಿ ಸುಮಾರು ೫ ತಿಂಗಳುಗಳ ವರೆಗೆ ಭಾರತ ಸರಕಾರವು ಜನರಿಂದ ವಂತಿಗೆಯನ್ನು ತೆಗೆದುಕೊಳ್ಳುತ್ತಾ ಕುಳಿತಿದ್ದಿತು! ಒಂದು ನೂರು ರೂಪಾಯಿಗಳ ಕನಿಷ್ಠ ಮಿತಿಗೊಳಪಟ್ಟು ಅದು ಚಿನ್ನಾಭರಣಗಳ ರೂಪದಲ್ಲಿ ಸಹ ಹಣವನ್ನು ಸಾಲವಾಗಿ ಸ್ವೀಕರಿಸುವ ಸಿದ್ಧತೆಯನ್ನಾಗ ವ್ಯಕ್ತಪಡಿಸಿದ್ದಿತು. ಜನರಿಗೆ ಸರಕಾರವು ಕೈಗೊಂಡಿರುವ ಅದ್ಭುತ ಯೋಜನೆಗಳ ಮಹತ್ವವು ಮಂದಟ್ಟಾಗಬೇಕು; ಈ ಯೋಜನೆಗಳ ಸಂದೇಶವು ದೇಶದ ಪ್ರತಿಯೊಂದೂ ಹಳ್ಳಿಯಲ್ಲಿ ಪ್ರತಿಧ್ವನಿಸಬೇಕು ಎಂಬುದೇ ಈ ರೀತಿ ಸಾಲವೆತ್ತುವ ಕಾರ್ಯಕ್ರಮವನ್ನು ದೀರ್ಘ ಕಾಲದ ವರೆಗೆ ತೆರೆದಿಟ್ಟುದರ ಕಾರಣವಾಗಿತ್ತೆನ್ನಬಹುದು.

ಭಾರತ ಸರಕಾರದವರು ಇದೀಗ ೧೫೦ ಕೋಟಿ ರೂಪಾಯಿಗಳ ಸಾಲವನ್ನು ಪಡೆಯಬೇಕೆಂಬ ತಮ್ಮ ನಿರ್ಧಾರವನ್ನು ರಿಜರ್ವ್ ಬ್ಯಾಂಕಿನ ಮೂಲಕ ಪ್ರಕಟಿಸಿದ್ದಾರೆ. ಈ ಸಾಲವನ್ನು ಕೆಳಗಿನ ಮೂರು ಬಗೆಯಲ್ಲಿ ಎತ್ತಲಾಗುತ್ತದೆ:— (೧) ನೂರು ರೂಪಾಯಿ ಮುಖಬೆಲೆಯ ಸಾಲ ಪತ್ರಕ್ಕೆ ೯೮ ರೂಪಾಯಿಯನ್ನು ಕೊಟ್ಟರೆ ಸಾಕಾಗುವ, ೩೧/೪% ಬಡ್ಡಿದರ ನಡೆಯುವ ಆರು ವರುಷಗಳ ಬಳಿಕ (೧೬—೭—೧೯೬೨ರಂದು) ಪಾವತಿಮಾಡುವ ಸಾಲ; (೨) ನೂರು ರೂಪಾಯಿ ಮುಖಬೆಲೆಯ ಸಾಲ ಪತ್ರಕ್ಕೆ ರೂ. ೯೮—೮—೦ ಕೊಟ್ಟರೆ ಸಾಕಾಗುವ, ೩೧/೨% ಬಡ್ಡಿದರ ನಡೆಯುವ, ಹನ್ನೊಂದು ವರ್ಷಗಳ ಬಳಿಕ (೧೬—೭—೧೯೬೭ರಂದು) ಪಾವತಿಮಾಡುವ ರಾಷ್ಟ್ರೀಯ ಯೋಜನಾ ಸಾಲ; (೩) ನೂರು ರೂಪಾಯಿ ಮುಖಬೆಲೆಯ ಸಾಲ ಪತ್ರಕ್ಕೆ ರೂ. ೯೮—೮—೦ ಕೊಟ್ಟರೆ ಸಾಕಾಗುವ, ೩೩/೪% ಬಡ್ಡಿದರ ನಡೆಯುವ, ೧೫ ವರ್ಷಗಳ ಬಳಿಕ (೧೬—೭—೧೯೭೧ರಂದು) ಪಾವತಿ ಮಾಡುವ ಸಾಲ.

ಮೇಲಿನೆಲ್ಲ ಬಗೆಯ ಹೊಸ ಸಾಲಗಳಿಗೆ ಅರ್ಧವರ್ಷಕ್ಕೊಮ್ಮೆ ಪ್ರತಿ ೧೫ನೇ ಜನವರಿ ಮತ್ತು ೧೫ನೇ ಜುಲಾಯಿಯಂದು ಬಡ್ಡಿಯನ್ನು ಪಾವತಿಮಾಡಲಾಗುತ್ತದೆ; ಈ ಬಡ್ಡಿಯು ಆದಾಯ ತೆರಿಗೆಗೆ ಒಳಪಡುತ್ತದೆ. ಇದೇ ೧೬ನೇ ಜುಲಾಯಿಯಿಂದ ೧೮ನೇ ಜುಲಾಯಿ ವರೆಗೆ ಸಾಲಕ್ಕೆ ಹಣವನ್ನು ತುಂಬಿಸಬಹುದು; ಆದರೆ ಅಪೇಕ್ಷಿಸಲಾದ ೧೫೦ ಕೋಟಿ ರೂಪಾಯಿಗಳ ಸಾಲವು ತುಂಬಿ ಬಂತೆಂದು ಕಂಡ ಕೂಡಲೇ ಸಾಲ ತೆಗೆದುಕೊಳ್ಳುವುದನ್ನು ನಿಲ್ಲಿಸಿ ಬಿಡುವ ಅಧಿಕಾರವನ್ನು ರಿಜರ್ವ್ ಬ್ಯಾಂಕ್ ಪಡೆದಿದೆ. ಆದಾಗ್ಯೂ ೧೫ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣವನ್ನು ಸರಕಾರವು ಸಾಲವಾಗಿ ಇಟ್ಟುಕೊಳ್ಳಬಲ್ಲುದು. ಸಾಲಕ್ಕೆ ಹಣವನ್ನು ತುಂಬಿಸಲು ಬಯಸುವವರು ಚೆಕ್ಕಿನ ರೂಪದಲ್ಲಿ ಅಥವಾ ನಗದಿಯಾಗಿ ಹಣ ಸಂದಾಯಿಸಬಲ್ಲರು.

ಅಲ್ಲದೆ ೧೯೫೭ನೇ ಇಸವಿಗೆ ಪಾವತಿಯಾಗಲಿರುವ "ವಿಕ್ಟರಿ ಲೋನ್" ಎಂಬ ಸಾಲ ಪತ್ರವನ್ನು ಈಗಲೇ ಮುರಿದು ಈ ಸಲದ ಹೊಸ ಸಾಲ ಪತ್ರಗಳಿಗೆ ಹಣವನ್ನು ಸಂದಾಯ ಮಾಡಲೂ ಸಾಧ್ಯ. ಹೀಗೆ "ವಿಕ್ಟರಿ ಲೋನ್" ಸಾಲ ಪತ್ರವನ್ನು ಈಗಲೇ ಮುರಿದರೆ ನೂರು ರೂಪಾಯಿ ಮುಖ ಬೆಲೆಯ ಪತ್ರಕ್ಕೆ ರೂ. ೯೯-೧೩-೦ ಬೆಲೆ ಸಿಗುತ್ತದೆ. ಯಾವುದೇ ಸಾಲವನ್ನು ಮುಂಬಯಿ, ಮದ್ರಾಸು, ಕಲ್ಕತ್ತ, ದೆಹಲಿ ಮತ್ತು ಬೆಂಗಳೂರಿನ ರಿಜರ್ವ್ ಬ್ಯಾಂಕ್ ಕಾರ್ಯಾಲಯಗಳಲ್ಲಿಯೂ ಮೈಸೂರು ಮತ್ತು ಹೈದರಾಬಾದು ರಾಜ್ಯಗಳನ್ನು ಬಿಟ್ಟು ಬೇರೆಲ್ಲ ಕಡೆಯ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯದ ಶಾಖೆಗಳಲ್ಲಿಯೂ ಹೈದರಾಬಾದ್ ಸ್ಟೇಟ್ ಬ್ಯಾಂಕ್ (ಹೈದರಾಬಾದು ರಾಜ್ಯದಲ್ಲಿ) ಮತ್ತು ಬ್ಯಾಂಕ್ ಆಫ್ ಮೈಸೂರ್ (ಮೈಸೂರು ರಾಜ್ಯದಲ್ಲಿ) ಇವುಗಳ ಶಾಖೆಗಳಲ್ಲಿಯೂ ಸಾರ್ವಜನಿಕರು ತುಂಬಿಸಬಹುದು.

ಸರಕಾರವು ಈ ಸಲ ವಿಶೇಷ ಚತುರತೆಯನ್ನು ತನ್ನ ಸಾಲವೆತ್ತುವ ನೀತಿಯಲ್ಲಿ ತೋರಿಸಿದೆ. ಹಣವನ್ನು ಸಾಲ ಪತ್ರಗಳಲ್ಲಿ ತೊಡಗಿಸುವವರ ಮನೋಭಾವ ಹೇಗ

(೧೩ ನೇ ಪುಟ ನೋಡಿರಿ)

Words of Worldly Wisdom

Save money regularly in
Your bank account and you will
Never find yourself incurring
Debts which destroy your peace of mind.
In addition you can make all payments by
Cheque which is both safe and convenient.
All the while your money is earning interest.
Thrift will safe-guard your future and
Ensure your Prosperity.

Resources of Rs. 9.5 Crores

The Canara Industrial & Banking Syndicate, Limited

Estd: 1925. H. O. UDIPI.

ಹಿಂದು ಸ್ತ್ರೀಯರಿಗೆ ಪುರುಷರಂತೆಯೇ ಉತ್ತರಾಧಿಕಾರ

ಹೊಸ ಕಾಯಿದೆಯಿಂದ ಮಹಿಳೆಯರಿಗೆ ದೊರಕುವ ಅನುಕೂಲತೆ

ಸಾಮಾಜಿಕ ಜೀವನವು ಪರಿವರ್ತನಶೀಲವಾಗಿದೆ. ದೇಶ, ಕಾಲ ಮತ್ತು ಪರಿಸ್ಥಿತಿಗಳಿಗನುಗುಣವಾಗಿ ನಮ್ಮ ವ್ಯವಹಾರ ಕ್ರಮಗಳು ಬದಲಾವಣೆಗೆ ಒಳಪಡುವ ಆವಶ್ಯಕತೆ ಬೀಳುತ್ತದೆ; ಅನ್ಯಥಾ, ನಾವು ಹೆಜ್ಜೆಯನ್ನು ಮುಂದಿಡುವುದು ಸಾಧ್ಯವಾಗದು.

ಹಿಂದೂ ಸಮಾಜವೂ ಈ ಅನುಭವಕ್ಕೆ ಅಪವಾದವಾಗಿಲ್ಲ. ಅನೇಕ ಸ್ಮೃತಿ ಮತ್ತು ಶಾಸ್ತ್ರಗಳ ಹಿನ್ನೆಲೆಯನ್ನು ಪಡೆದಿರುವ ಹಿಂದೂ ಸಂಪ್ರದಾಯಗಳು ಆಧುನಿಕ ವಾತಾವರಣದೊಡನೆ ಸಮರಸತೆಯನ್ನು ಸಾಧಿಸುವುದಕ್ಕೆ ಕೆಲವೊಂದು ಸುಧಾರಣೆಗಳನ್ನು ಸ್ವಾಗತಿಸಬೇಕಾಗಿ ಬಂದಿರುತ್ತದೆ.

ಸ್ತ್ರೀಯರ ಸ್ಥಾನಮಾನ

ಹೊಸ ವಿಚಾರಧಾರೆಯು ಹೆಣ್ಣುಮಕ್ಕಳು ಹಿಂದೂ ಸಮಾಜದಲ್ಲಿ ಪಡೆದಿರಬೇಕಾದ ಸ್ಥಾನಮಾನಗಳ ವಿಷಯದ ಬಗ್ಗೆ ತ್ತಲೂ ವಿಶೇಷವಾಗಿ ಪ್ರಭಾವವನ್ನು ಬೀರಿದೆ. ಪರಿಣಾಮವಾಗಿ ಕಳೆದ ಎರಡು ದಶಕಗಳಿಂದ ಭಾರತದಲ್ಲಿ ವಿಚಾರಶೀಲರು ಹೆಣ್ಣುಮಕ್ಕಳ ಸಂಗತಿಯಲ್ಲಿ ಸಹಾನುಭೂತಿಪರವೂ ಉದಾರವೂ ಆದ ವರ್ತನೆಯನ್ನಿಟ್ಟುಕೊಂಡು ಬಂದಿದ್ದಾರೆ.

೧೯೩೭ನೇ ಇಸವಿಯಲ್ಲಿ ಭಾರತದಲ್ಲೊಂದು ನೂತನ ಶಾಸನವು ರಚಿಸಲ್ಪಟ್ಟಿತು. ಇದು ವಿಧವೆಗೆ ತನ್ನ ಮಕ್ಕಳ ಜೊತೆಯಲ್ಲಿ ಗಂಡನ ಆಸ್ತಿಯಲ್ಲಿ ಸಮಾನ ಪಾಲು ದೊರೆಯುವಂತೆ ಮಾಡಿತು. ಅವಳಿಗೆ ಮಕ್ಕಳಿಲ್ಲದಿದ್ದ ಪಕ್ಷದಲ್ಲಿ ಆಸ್ತಿಯೆಲ್ಲದಕ್ಕೂ ಅವಳೇ ಒಡೆಯಳಾಗುವಳೆಂದು ಈ ಶಾಸನವು ಸಾರಿತು. ಗಂಡನ ಇತರ ಆಪ್ತೇಷ್ಟರಾರೂ ಉತ್ತರಾಧಿಕಾರಿಗಳಾಗಲು ಅದು ಅವಕಾಶವೀಯಲಿಲ್ಲ. ಆದರೆ ವಿಧವೆಯ ಹಕ್ಕು ಮರ್ಯಾದಿತವಾಗಿತ್ತು; ಅವಳು ಆಸ್ತಿಯನ್ನು ಮಾರಿಬಿಡುವಂತಿರಲಿಲ್ಲ.

ಹಿಂದೆ ೧೯೪೧ರಿಂದ ಸರಕಾರವು ಹಿಂದೂ ಉತ್ತರಾಧಿಕಾರ ಶಾಸನವನ್ನು ಕ್ರೋಢೀಕರಿಸುವ ಪ್ರಶ್ನೆಯತ್ತ ತಿರುಗಿತು. ಮಗಳಿಗೆ ಮಾಡಿರಬಹುದಾದ ಯಾವುದೇ ಅನ್ಯಾಯವನ್ನು ನಿವಾರಿಸುವಂತೆ ಆಗ ಜ್ಯಾರಿಯಲ್ಲಿದ್ದ ಎಲ್ಲ ಶಾಸನಗಳನ್ನೂ ಪರಿಶೀಲಿಸಲು ಒಂದು ಸಮಿತಿಯು ನೇಮಕಗೊಂಡಿತು. ಈ ಸಮಿತಿಯು ಹಿಂದೂ ಶಾಸನಗಳೆಲ್ಲವನ್ನೂ ಕ್ರೋಢೀಕರಿಸಬೇಕೆಂಬ ಕ್ರಾಂತಿಕಾರಿ ಸೂಚನೆಯನ್ನು ಮಾಡಿತು. ೧೯೪೭ರಲ್ಲಿ ರಾವ್ ಸಮಿತಿಯ ನ್ಯಾಯ ಸೂತ್ರಗಳು ಪ್ರಕಟವಾದುದೇ ಇದರ ಪರಿಣಾಮ.

ನಡುಗಾಲದ ಸಂಸತ್ತಿನಲ್ಲಿ ಪರಿಶೀಲನೆಯ ಕೆಲಸ ನಡೆದಾಗ ರಾವ್ ಸಮಿತಿಯ ಸಾಮಾನ್ಯ ಸೂಚನೆಗಳಲ್ಲಿ ಅನೇಕವನ್ನು ತಿದ್ದುಪಡಿಗೊಳಪಡಿಸಲಾಯಿತು. ಈಗ ಸರಕಾರದವರು ಕ್ರೋಢೀಕರಿಸಿದ ನ್ಯಾಯ ಸೂತ್ರಗಳು ಸಂಸತ್ತಿನಲ್ಲಿ ಸುಲಭವಾಗಿ ಅನುಮೋದನೆಯನ್ನು ಪಡೆಯುವಂತೆ ನೋಡಿಕೊಳ್ಳುವ ಉದ್ದೇಶದಿಂದ ಕೆಲವು ಭಾಗಗಳಲ್ಲಿ ಇವನ್ನು ಮುಂದೆ ತರುತ್ತಿದ್ದಾರೆ.

ನೂತನ ಶಾಸನ

ಹಿಂದೂಗಳ ವಿವಾಹ ಮತ್ತು ದಾಂಪತ್ಯ ವಿಚ್ಛೇದನಕ್ಕೆ ಸಂಬಂಧಿಸಿದ ಹಿಂದೂ ವಿವಾಹ ಶಾಸನವು ಕ್ರೋಢೀಕೃತ ನ್ಯಾಯಸೂತ್ರಗಳ ಪ್ರಥಮ ಭಾಗವಾಗಿದೆ, ಇದು ೧೯೫೫ನೇ ಮೇ ೧೮ನೇ ದಿನಾಂಕ ಶಾಸನವಾಯಿತು. ಮೊನ್ನೆ ಜೂನಿನ ೧೭ನೇ ದಿನಾಂಕ ಹಿಂದೂ ಉತ್ತರಾಧಿಕಾರ ಶಾಸನವು ಜ್ಯಾರಿಗೆ ಬಂತು. ಕ್ರೋಢೀಕೃತ ನ್ಯಾಯಸೂತ್ರಗಳ ಎರಡು ಭಾಗಗಳು ಹೀಗೆ ಹಿಂದುಗಳ ವ್ಯವಹಾರ ಕ್ರಮವನ್ನು ಹೊಸ ಬಗೆಯ ನಿಯಂತ್ರಣಕ್ಕೆ ಗುರಿಪಡಿಸಿವೆ. ಇನ್ನುಳಿದ ಭಾಗಗಳು ಪ್ರಗತಿಯ ವಿವಿಧ ಘಟ್ಟಗಳಲ್ಲಿವೆ.

ಉತ್ತರಾಧಿಕಾರವು ಹಿಂದೂ ನ್ಯಾಯಶಾಸ್ತ್ರದಲ್ಲಿ ಅತಿ ಮುಖ್ಯವಾದ, ಆದರೆ ಅತ್ಯಂತ ಕ್ಲಿಷ್ಟವಾದ, ಶಾಖೆಯಾಗಿದೆ. ಈಗ ಹಿಂದೂ ನ್ಯಾಯಶಾಸ್ತ್ರದಲ್ಲಿ ಉತ್ತರಾಧಿಕಾರಕ್ಕೆ ಸಂಬಂಧಿಸಿದಂತೆ ಮಿತಾಕ್ಷರ ಮತ್ತು ದಾಯಭಾಗವೆಂಬ ಎರಡು ಸಾಮಾನ್ಯ ಪದ್ಧತಿಗಳಿವೆ—ದಾಯಭಾಗ ಪದ್ಧತಿಯು ಬಂಗಾಲ ಮತ್ತು ಪಂಜಾಬದ ಕೆಲ ಭಾಗಗಳಲ್ಲಿದೆ. ಭಾರತದ ಉಳಿದೆಡೆ ಮಿತಾಕ್ಷರ ಪದ್ಧತಿಯು ಬಳಕೆಯಲ್ಲಿದೆ. ಇದರ ಜೊತೆಗೆ ಕೇರಳದಲ್ಲಿನ ಮರುಮಕ್ಕತ್ತಾಯಂ ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ತುಳುನಾಡಿನಲ್ಲಿ ಅಳಿಯ ಸಂತಾನ ಎಂಬೆರಡು ಮಾತೃಯಾಜಮಾನ್ಯ ಪದ್ಧತಿಗಳು ಸಹ ಆಚರಣೆಯಲ್ಲಿವೆ.

ಆಸ್ತಿಪ್ರಾಪ್ತಿಯ ಎರಡು ಸಂಪ್ರದಾಯಗಳನ್ನು ಮಿತಾಕ್ಷರ ಪದ್ಧತಿಯು ಮನ್ನಿಸುತ್ತದೆ. ಅವಿಭಕ್ತ ಕುಟುಂಬದ ಆಸ್ತಿಪಾಸ್ತಿಯಲ್ಲಿ ಬದುಕಿ ಉಳಿದವರಿಗೆಲ್ಲ ಸಂಯುಕ್ತಾಧಿಕಾರವು ಉಳಿಯುತ್ತದೆ; ಇದೊಂದು ಕ್ರಮ. ಮೃತನ ಸ್ವಾರ್ಜಿತ ಆಸ್ತಿಪಾಸ್ತಿಗಳ ಮೇಲೆ ಹಕ್ಕನ್ನು ದೊರಕಿಸಿಕೊಡುವ ಉತ್ತರಾಧಿಕಾರವು ಇನ್ನೊಂದು ಕ್ರಮ.

ದಾಯಭಾಗ ಪದ್ಧತಿಯು ಉತ್ತರಾಧಿಕಾರ ಕ್ರಮವನ್ನು ಮಾತ್ರ ಆಸ್ತಿಪ್ರಾಪ್ತಿಯ ವಿಧಾನವಾಗಿ ಮನ್ನಿಸುತ್ತದೆ. ಸಂಯುಕ್ತವಾಗಿ ಅಥವಾ ಹಲವು ಮಂದಿ ಆಸ್ತಿಯೊಂದನ್ನು ಅನುಭವಿಸುತ್ತಿದ್ದ ಪ್ರಸಂಗದಲ್ಲಿ ಸಹ ಅದು ಬದುಕಿ ಉಳಿದೆಲ್ಲರಿಗೆ ಆಸ್ತಿಪ್ರಾಪ್ತಿಯ ಅಧಿಕಾರವನ್ನು ಕೊಡಲು ಹೋಗುವುದಿಲ್ಲ.

ಮಿತಾಕ್ಷರ ನ್ಯಾಯ ಶಾಸ್ತ್ರದಲ್ಲಿ ಮಿಥಿಲಾ, ಮುಂಬಯಿ, ವಾರಣಾಸಿ, ಮದ್ರಾಸಿ ಮುಂತಾದ ಪ್ರಮುಖ ಸಂಪ್ರದಾಯಗಳಿವೆ. ಈ ವಿಭಾಗಗಳಲ್ಲಿ ಪ್ರತಿಯೊಂದೂ ಇಷ್ಟಪತ್ರ ಮಾಡಿಟ್ಟಿರದ ಹಿಂದೂ ಪುರುಷನ ಪ್ರತ್ಯೇಕ ಅಥವಾ ಸ್ವಾರ್ಜಿತ ಆಸ್ತಿಯ ಬಗ್ಗೆ ಉತ್ತರಾಧಿಕಾರದ ಬೇರೆ ಬೇರೆ ವರ್ಗಾನುಕ್ರಮವನ್ನು ಅನುಸರಿಸುತ್ತವೆ. ಕೆಲವು ವಿಶೇಷ ಸಂದರ್ಭಗಳಲ್ಲಿ ಹೊರತು, ಹೆಮ್ಮಕ್ಕಳಿಗೆ ಆಸ್ತಿಯ ಉತ್ತರಾಧಿಕಾರವು ಇಲ್ಲಿ ಹೋಗುವುದೇ ಇಲ್ಲ.

ಅವಿಭಕ್ತ ಮಿತಾಕ್ಷರ ಕುಟುಂಬದಲ್ಲಿ ಹೆಮ್ಮಕ್ಕಳಾರೂ ಸಹಭಾಗಿಗಳಾಗುವಂತಿಲ್ಲ. ಪುರುಷ ಸಹಭಾಗಿಯ ಮರಣವಾದಲ್ಲಿ ಆಸ್ತಿಯು ಉತ್ತರಾಧಿಕಾರ ಕ್ರಮದಂತಲ್ಲ, ಬದುಕಿ ಉಳಿದವರಲ್ಲಿ ಹಂಚಿಹೋಗುವ ಸಂಪ್ರದಾಯಾನುಸಾರವಾಗಿ ಪುರುಷರೆಲ್ಲರ ವಶಕ್ಕೆ ಹೋಗುತ್ತದೆ.

ಮಹಿಳೆಯ ಪರಿಮಿತಾಧಿಕಾರ

ಮಿತಸಂಖ್ಯೆಯ ಪ್ರಸಂಗಗಳಲ್ಲಿ ಮಹಿಳೆಯರಿಗೆ, ಅವರು ವಿಧವೆಯರಾದರೆ, (ಮತ್ತಿತರ ಈ ಬಗೆಯ ಕೆಲವು ಅಸಾಮಾನ್ಯ ಸನ್ನಿವೇಶಗಳಲ್ಲಿ ಮಾತ್ರ) ಆಸ್ತಿಯ ಮೇಲೆ ಒಡೆತನವು ಪ್ರಾಪ್ತವಾಗುವುದುಂಟು. ಆದರೆ ಇಲ್ಲಿ ತನ್ನ ಜೀವನ ಪರ್ಯಂತ ಆಸ್ತಿಯನ್ನು ಅನುಭವಿಸುವ ಅಧಿಕಾರವಷ್ಟೇ ಮಹಿಳೆಗಿರುತ್ತದೆ. ಮಹಿಳೆಯ ಮರಣಾನಂತರ ಆಸ್ತಿಯು ಪುನಃ ಮೂಲಬಾಧ್ಯಸ್ಥರ ಒಡೆತನಕ್ಕೆ ಮರಳುತ್ತದೆ.

ಮಹಿಳೆಯರಿಗೆ ಕೊಡಲಾದ ಈ ಮಿತವಾದ ಅಧಿಕಾರಗಳು ನ್ಯಾಯ ಸ್ಥಾನದಲ್ಲಿ ವ್ಯಾಜ್ಯಗಳನ್ನು ಹೂಡುವುದಕ್ಕೊಂದು ನೆಪವಾಗಿ ಪರಿಣಮಿಸಿವೆ. ಮಹಿಳೆಯ ಮರಣಾನಂತರ ಆಸ್ತಿಗೆ ಬಾಧ್ಯಸ್ಥರಾಗುವವರು ಈ ಮಹಿಳೆಯು ನಡೆಸಿರಬಹುದಾದ ಚಟುವಟಿಕೆಗಳು ಆಕೆಯ ಅಧಿಕಾರ ಮಿತಿಗೆ ಮೀರಿವೆ ಎಂದು ಆಕ್ಷೇಪವೆತ್ತಿ ನ್ಯಾಯ ಸ್ಥಾನಗಳಲ್ಲಿ ಆಹ್ವಾನವನ್ನೀಯುತ್ತಾರೆ.

ಸ್ತ್ರೀಧನ ಎಂದೇನನ್ನು ಕರೆಯಲಾಗುತ್ತದೋ ಅದರ ಮಟ್ಟಿಗೆ ಮಾತ್ರ ಹೆಂಗಸಿಗೆ ಪೂರ್ಣಾಧಿಕಾರವಿದ್ದಿತು. ಆದರೆ ಹೀಗೆ ಆಸ್ತಿಪಾಸ್ತಿಯನ್ನು ಸಂಗ್ರಹಿಸುವುದು ಮಿತವಾದ ಪ್ರಮಾಣದಲ್ಲಿಯಷ್ಟೆ ಸಾಧ್ಯ. ಮುಂಬಯಿ ಶಾಖೆಯೊಂದನ್ನು ಬಿಟ್ಟರೆ, ಬೇರೆಲ್ಲೂ ಮಹಿಳೆಯು ಅನುಭವಿಸುವ ಆಸ್ತಿಯನ್ನು ಸ್ತ್ರೀಧನವೆಂದು ಯಾರೂ ಮನ್ನಿಸುತ್ತಿಲ್ಲ.

ಸ್ತ್ರೀಧನದ ವಿಷಯದಲ್ಲಿ ಉತ್ತರಾಧಿಕಾರದ ಕ್ರಮವೂ ಏಕರೂಪವಾಗಿಲ್ಲ. ಇಷ್ಟಪತ್ರ ಮಾಡಿಟ್ಟಿರದೆ ಮರಣ ಹೊಂದಿ ಸ್ತ್ರೀಧನವನ್ನು ಬಿಟ್ಟಿರುವ ಮಹಿಳೆಯು ವಿವಾಹಿತಳೋ ಅವಿವಾಹಿತಳೋ ಮದುವೆಯಾಗಿದ್ದರೂ ಅದು ಕ್ರಮಬದ್ಧ ಮಂಜೂರಾತಿ ಪಡೆದ ರೀತಿಯಲ್ಲಿಯೋ ಅಥವಾ ಬೇರೆ ಪ್ರಕಾರವೋ, ಆ ಸ್ತ್ರೀಧನ ಪ್ರಾಪ್ತವಾದುದಾದರೂ ಹೇಗೆ—ಎಂಬಿತ್ಯಾದಿ ಅನೇಕ ಸಂಗತಿಗಳ ಮೇಲಿಂದ ಉತ್ತರಾಧಿಕಾರ ಕ್ರಮವು ನಿರ್ಧರಿಸಲ್ಪಡುತ್ತದೆ. ಯಾವ ಶಾಖೆಯಲ್ಲೂ ಈ ಮಟ್ಟಿಗೆ ಒಮ್ಮತವಿಲ್ಲ.

ಕೇರಳ ಮತ್ತು ತುಳುನಾಡುಗಳಲ್ಲಿನ ಮಾತೃಯಾಜಮಾನ್ಯ ಪದ್ಧತಿಗಳಲ್ಲಿ ಆಸ್ತಿಪ್ರಾಪ್ತಿಯ ಸಂಪ್ರದಾಯಗಳನ್ನು ಮದ್ರಾಸು ಮತ್ತು ತಿರು-ಕೊಚ್ಚಿಯ ರಾಜ್ಯಶಾಸನಾಂಗಗಳು ಬಹುಮಟ್ಟಿಗೆ ಕ್ರೋಢೀಕರಿಸಿವೆ. ಇಲ್ಲಿ ಉತ್ತರಾಧಿಕಾರವನ್ನು ಮಹಿಳಾಮೂಲದಿಂದ ನಿರ್ಧರಿಸಲಾಗುತ್ತದೆ. ಇನ್ನೊಂದು ರೀತಿಯಲ್ಲಿಯೂ ಈ ಪದ್ಧತಿಯು ಭಾರತದ ಉಳಿದೆಡೆಯ ಸಂಪ್ರದಾಯಗಳಿಗಿಂತ ಭಿನ್ನವಾಗಿದೆ—ಸ್ತ್ರೀ ಪುರುಷರಿಬ್ಬರಿಗೂ ಇಲ್ಲಿ ಆಸ್ತಿಪಾಸ್ತಿಯಲ್ಲಿ ಸಮಾನಪಾಲು ಸಿಗುತ್ತದೆ.

ಉದ್ದೇಶ ಮತ್ತು ವ್ಯಾಪ್ತಿ

ಹಿಂದೂ ಉತ್ತರಾಧಿಕಾರ ಶಾಸನವು ಅಂತಿಮ ಇಷ್ಟಪತ್ರವನ್ನು ಬರೆಯದೆ ಮರಣಹೊಂದಿದ ಹಿಂದುಗಳ ಆಸ್ತಿಪಾಸ್ತಿಯ ವಿಷಯದಲ್ಲಿ ಬಹುಮಟ್ಟಿಗೆ ಏಕರೂಪವಾದ ಕಾನೂನನ್ನು ಇಡಿ ದೇಶಕ್ಕಾಗಿ ರೂಪಿಸುವ ಉದ್ದೇಶದಿಂದ ಕೂಡಿದೆ. ಉತ್ತರಾಧಿಕಾರಿಗಳ ಪಟ್ಟಿಯನ್ನು ಸಮನ್ವಯಗೊಳಿಸಿದ್ದು ಪ್ರೀತಿ ಮತ್ತು ವಾತ್ಸಲ್ಯದ ಸಿದ್ಧಾಂತಗಳೇ ಈ ಸಮನ್ವಯತೆಯ ಅಡಿಗಲ್ಲು.

ಈ ಉತ್ತರಾಧಿಕಾರ ಶಾಸನವು (೧) ಹಿಂದು, ಬೌದ್ಧ, ಜೈನ ಅಥವಾ ಸಿಕ್ಖ ಮತಾವಲಂಬಿಗಳಿಗೂ (೨) ಮುಸ್ಲಿಂ, ಕ್ರೈಸ್ತ, ಪಾರ್ಸಿ ಅಥವಾ ಯೆಹೂದಿ ಮತಾ

(೧೧ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ವರ್ಣಾಧರಿತವಾದ ಭಾರತೀಯ ಆಚಾರ ಧರ್ಮ

ಆಧ್ಯಾತ್ಮಿಕ ಗ್ಲಾನಿ ಮತ್ತು ಸಾಮಾಜಿಕ ವೈಷಮ್ಯಗಳ ನಿವಾರಣೆಗೆ ಸಿದ್ಧೌಷಧ

ಮಾನ್ಯ ಶ್ರೀ ಜವಾಹರಲಾಲ ನೆಹರುಗಳು ಭಾರತೀಯ ಸಂಸ್ಕೃತಿಯ ಸಕೃದ್ದರ್ಶನವನ್ನು ಮಾಡಿಸುತ್ತಾ ಹೇಳಿದ ಕೆಲವು ಮಾತುಗಳನ್ನು ನಾವು "ನವಯುಗ"ದ ೧—೩–೧೯೫೬ನೇ ಸಂಚಿಕೆಯಲ್ಲಿ ಎತ್ತಿಕೊಟ್ಟಿದ್ದೆವು. ಈ ಲೇಖನದಲ್ಲಿ ಜಾತೀಯತೆಯ ಬಂಧನವನ್ನು ಕಳಚುವ ಆವಶ್ಯಕತೆಯನ್ನು ನೆಹರು ನಿರೂಪಿಸಿದ್ದರು. ಅಲ್ಲದೆ ಭಾರತದ ವಾತಾವರಣದಲ್ಲಿ ಇಂದು ಕಾಣಿಸಿರುವ "ಆಧ್ಯಾತ್ಮಿಕ ವಿಪ್ಲವ"ದ ಕುರಿತಾಗಿ ವ್ಯಸನವನ್ನೂ ಅವರು ಪ್ರಕಟಿಸಿದ್ದರು.

"ಕಿರಿಯ ಜನಾಂಗಕ್ಕೆ ಯಾವ ಮುಟ್ಟಿವನ್ನೂ ಹಿರಿಯರು ಬಿಟ್ಟು ಹೋಗಿಲ್ಲ; ಅವರ ವಿಚಾರಕ್ಕೆ ಯೋಗ್ಯ ಮಾರ್ಗದರ್ಶನ ಸಿಗುತ್ತಿಲ್ಲ. ಅವರ ಕಾರ್ಯಗಳನ್ನು ನಿಯಂತ್ರಿಸುವ ಶಕ್ತಿಯೂ ಅದೃಶ್ಯವಾಗಿದೆ." ಎಂಬ ಭಾವವನ್ನು ನೆಹರು ತಮ್ಮ ಲೇಖನದಲ್ಲಿ ವ್ಯಕ್ತಪಡಿಸಿದ್ದರು. ಇದಕ್ಕೆ ಒಂದು ಬಗೆಯ ಉತ್ತರವನ್ನು ದಕ್ಷಿಣಾಪಥದ ಪ್ರಸಿದ್ಧ ತತ್ವಜ್ಞಾನಿಗಳಾದ ಕಾಂಚಿಯ ಶಂಕರಾಚಾರ್ಯ ಪೀಠಾಧಿಪತಿಗಳು ಭಾರತೀಯ ವಿದ್ಯಾಭವನದ ಪತ್ರಿಕೆಯಲ್ಲಿ ಕೊಟ್ಟಿರುತ್ತಾರೆ.

ಅವರು ಎತ್ತಿರುವ ಅಂಶಗಳಲ್ಲಿ ವರ್ಣಾಶ್ರಮ ಧರ್ಮದ ಉಪಯುಕ್ತತೆಯು ಒಂದಾಗಿದೆ: ನಾವೀ ಲೇಖನದಲ್ಲಿ ಅವರ ತರ್ಕಕ್ಕೆ ತುಸು ವ್ಯಾಪಕ ರೂಪವನ್ನು ಕೊಟ್ಟು ಸರ್ವಜನ ಸಮ್ಮತವಾದ ರೀತಿಯಲ್ಲಿ ವರ್ಣಾಶ್ರಮ ಧರ್ಮಗಳು ಇಂದಿನ ವಾತಾವರಣದಲ್ಲಿ ಪಡೆಯಬಹುದಾದ ಸ್ಥಾನಮಾನವನ್ನು ವಿವೇಚಿಸಲು ಪ್ರಯತ್ನಿಸುತ್ತೇವೆ. ಇದಕ್ಕೆ ಆಧಾರವಾಗಿ ಶ್ರೀ ಪಂಚಾಪಕೇಶ ಅಯ್ಯರರ ಗೀತಾ ಭಾಷ್ಯವನ್ನು ನಾವು ಉಪಯೋಗಿಸಿದ್ದೇವೆ.

೦೦

ಆಧ್ಯಾತ್ಮಿಕ ವಿಪ್ಲವದ ಸಮಸ್ಯೆಯು ನಾವಿಂದು ಅಣುಯುಗದ ಹೊಸ್ತಿಲಿನಲ್ಲಿ ಕಾಲಿರಿಸಿದುದರಿಂದಲೇ ಉಂಟಾದುದಾಗಿಲ್ಲವೆಂದು ಕಾಂಚಿಯ ಶ್ರೀ ಮಚ್ಛಂಕರಾಚಾರ್ಯರು ಹೇಳುತ್ತಾರೆ. ಈ ಶತಮಾನದಲ್ಲಿ ನಾವು ರಾಜಕೀಯ ಹೋರಾಟದಲ್ಲಿಯೇ ಮಗ್ನರಾದೆವು; ಹೀಗಾಗಿ ಭಾರತದ ಸಾಮಾಜಿಕ ಹಾಗು ಧಾರ್ಮಿಕ ಜೀವನದ ಅಡಿಗಲ್ಲಿನಂತಿರುವ ವಂಶಪಾರಂಪರ್ಯವಾದ ಒಲವಿನ ಮೇಲೆ ಸಾಮೂಹಿಕ ಕಲ್ಯಾಣವನ್ನು ಮಾಡುವ ನಾನಾ ವಿಧದ ಕಾರ್ಯಗಳ ಆಧ್ಯಾತ್ಮಿಕ ಸ್ವರೂಪವನ್ನು ಮರೆತೆವು. ವ್ಯಕ್ತಿಯು ಜನ್ಮ ಮೂಲಕ್ಕನುಸಾರವಾಗಿ ಆತನು ನಿರ್ವಹಿಸಿಕೊಂಡು ಹೋಗಬೇಕಾದ ಆಚಾರಗಳನ್ನು ಪ್ರತ್ಯೇಕತೆಯ ಮನೋಭಾವನೆಯಾಗಿ ನಾವು ತಿಳಿದುಕೊಂಡುದೇ ದೊಡ್ಡ ತಪ್ಪು. ಇಲ್ಲಿ ಹಕ್ಕು ಬಾಧ್ಯತೆಗಳಿಂದ ವಂಚಿತರಾಗುವ ಪ್ರಶ್ನೆ ಇರುದಿಲ್ಲ—ಸಮಾಜದ ಸುಗಮ ವ್ಯವಹಾರಕ್ಕೆ ನೆರವಾಗುವ ದೃಷ್ಟಿಕೋಣಕ್ಕೆಯೇ ಪ್ರಾಮುಖ್ಯತೆ ಸಲ್ಲಬೇಕಾಗಿದೆ.

ನಮ್ಮಲ್ಲಿಯ ಮಹಾವಿಚಾರಕರು ಜನ್ಮಮೂಲವಾದ ವರ್ಣಾಶ್ರಮ ಧರ್ಮಾನುಷ್ಠಾನವು ಅತ್ಯಂತ ಆವಶ್ಯಕವಾದುದೆಂದು ಭಾವಿಸಿದ್ದರು. ಶ್ರೀ ಮಚ್ಛಂಕರ ಭಗವತ್ಪಾದರು ತಮ್ಮ "ಅಪರೋಕ್ಷಾನುಭೂತಿ" ಎಂಬ ಗ್ರಂಥದಲ್ಲಿ "ನಮ್ಮ ವರ್ಣಾಶ್ರಮ ಧರ್ಮಗಳ ಪಾಲನೆಯನ್ನು ಮಾಡಿಕೊಂಡು ಹೋಗುವುದರಿಂದಲೇ ನಾವು ಹರಿಯನ್ನು ಮೆಚ್ಚಿಸುವುದು ಸಾಧ್ಯ. ಈ ಮೂಲಕವೇ ಸತ್ಯದರ್ಶನಕ್ಕೆ ಅತ್ಯಾವಶ್ಯಕವಾದ ವಿವೇಕ, ವೈರಾಗ್ಯಾದಿ ನಾಲ್ಕು ಬಗೆಯ ಸಾಧನೆಗಳ ಪ್ರಾಪ್ತಿಯಾದೀತು." ಎಂದಿದಾರೆ.

ಶ್ರೀ ಮದ್ಭಗವದ್ಗೀತೆಯು ಹೀಗೆನ್ನುತ್ತದೆ.

"ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್। ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ||" ಇದರ ಅರ್ಥವೇನೆಂದರೆ, ತನ್ನ ಕರ್ತವ್ಯ ಧರ್ಮವನ್ನು ಎಷ್ಟೇ ಕೆಟ್ಟ ರೀತಿಯಲ್ಲಿಯೇ ಆಗಲಿ, ಮಾಡುವುದು ಇನ್ನೊಬ್ಬನ ಕರ್ತವ್ಯ ಧರ್ಮವನ್ನು ಎಷ್ಟೇ ಒಳ್ಳೆಯಬಾಗಿಯೇ ಆಗಲಿ, ತಾನು ಮಾಡಹೋಗುವುದಕ್ಕಿಂತ ಉತ್ತಮ. ತನ್ನ ಕರ್ತವ್ಯ ಧರ್ಮದ ಪಾಲನೆಯಲ್ಲಿ ಮರಣಬಂದರೂ ಚಿಂತಿಲ್ಲ; ಇನ್ನೊಬ್ಬನ ಕರ್ತವ್ಯ ಧರ್ಮದ ಪಾಲನೆಯನ್ನು ತಾನು ಮಾಡಹೋದರೆ ಮಾತ್ರ ಭಯ ತಪ್ಪದು.

ಮಹಾತ್ಮಾ ಗಾಂಧೀಯವರು ಈ ವಿಷಯವನ್ನು ಕುರಿತು ಮಾತನಾಡುತ್ತಾ ಹೇಳಿದ್ದರು. "ಹಿಂದೂ ಧರ್ಮವು ಬೇರೆ ಬೇರೆ ಮತಗಳಲ್ಲಿ ಅನೇಕ ಸಂದರ್ಭಗಳಲ್ಲಿ ವಿದಿತಪಡಿಸಿದ್ದ ವಿಶ್ವನಿಯಮಗಳಲ್ಲಿ ಇದೊಂದು ಆಧ್ಯಾತ್ಮಿಕ ಅರ್ಥಶಾಸ್ತ್ರದ ಸಿದ್ಧಾಂತವೆಂದಿದನ್ನು ಪರಿಗಣಿಸಬಹುದು. ಇದಕ್ಕೂ ಶ್ರೇಷ್ಠ—ಕನಿಷ್ಠ ಭಾವನೆಗೂ ಯಾವುದೇ ಸಂಬಂಧವಿಲ್ಲ. ಜೀವನದಲ್ಲಿ ದೈವ ಸಾಕ್ಷಾತ್ಕಾರಕ್ಕಾಗಿ ಪರಿಶ್ರಮಿಸುವುದೇ ವ್ಯಕ್ತಿಯ ಧ್ಯೇಯವಾಗಿದ್ದರೆ, ಯಾವ ವೃತ್ತಿಯು ತನ್ನ ಹೊಟ್ಟೆಗೆ ಹಿಟ್ಟು ದೊರಕಿಸಿಕೊಡಬಹುದೆಂದು ಒಂದೊಂದೇ ವೃತ್ತಿಯನ್ನವಲಂಬಿಸಿ ಪ್ರಯೋಗ ನಿರತರಾಗುವ ಹವ್ಯಾಸಕ್ಕೆ ಅರ್ಥವಿಲ್ಲ."

ಶ್ರೀ ಪಂಚಾಪಕೇಶ ಅಯ್ಯರರು ತಮಗೆ ಸಹಜವಾದ ವಿನೋದ ಶೈಲಿಯಲ್ಲಿ ಹೆಂಸದ ರೆಕ್ಕೆಯನ್ನು ಕಟ್ಟಿಕೊಂಡು ಅವಮಾನಕ್ಕೀಡಾದ ಕಾಗೆಯ ಕತೆಯನ್ನು ಇಲ್ಲಿ ಸ್ಮರಿಸಬೇಕೆಂದು ಹೇಳಿದ್ದಾರೆ. ಅಲ್ಲದೆ, ಕಳ್ಳರು ಅಗಸನ ಮನೆಗೆ ಕನ್ನ ಹಾಕಿದಾಗ, ನಾಯಿಯು ಬೊಗಳಿ ಯಜಮಾನನನ್ನು ಎಬ್ಬಿಸಲಿಲ್ಲವೆಂಬ ಸಂತಾಪದಿಂದ ತಾನು ಕಿರುಚಿಕೊಂಡು, ಅಗಸನಿಂದ ಪೆಟ್ಟು ತಿಂದ ಕತ್ತೆಯ ಕತೆಯನ್ನೂ ಅವರು ನೆನಪಿಗೆ ತಂದುಕೊಟ್ಟಿದ್ದಾರೆ. ಆದುದರಿಂದ ಸ್ವಧರ್ಮಪಾಲನೆ ಅತ್ಯಾವಶ್ಯಕವಾದುದೆಂದು ನಾವು ಒಪ್ಪಿಕೊಳ್ಳಲು ಹಿಂಜರಿಯಲಾಗದು.

೦೦

ಸ್ವಧರ್ಮಪಾಲನೆಗೂ ವರ್ಣಾಶ್ರಮ ಧರ್ಮಕ್ಕೂ ಏನು ಸಂಬಂಧವಿದೆ? ನಾವು ಗಾಂಧೀಜಿಯ ವಿಚಾರವನ್ನು ಪುನಃ ಆಶ್ರಯಿಸುವುದಾದರೆ, ನಮಗೆ ಈ ಕೆಳಗಿನ ಸಂದೇಶವು ಸಿಗುತ್ತದೆ—

"ವ್ಯಕ್ತಿಯ ವೃತ್ತಿಯನ್ನು ಮೊದಲೇ ನಿಶ್ಚಯಿಸಿಡುವುದು ವರ್ಣ. ತನ್ನ ಹೊಟ್ಟೆಗೆ ಹಿಟ್ಟು ಕಾಣಿಸಲು ವ್ಯಕ್ತಿಯು ತನ್ನ ಹಿರಿಯರು ಅನುಸರಿಸಿಕೊಂಡು ಬಂದ ವೃತ್ತಿಯನ್ನೆ ಅನುಸರಿಸಬೇಕೆಂಬುದು ವರ್ಣಾಧರಿತ ಶಾಸನದ ಸಾರ. ನಾವು ಯಾವುದೇ ಮಗುವನ್ನು ತೆಗೆದುಕೊಳ್ಳಲಿ, ತನ್ನ ತಂದೆಯ ವರ್ಣವನ್ನದು ತೋರ್ಪಡಿಸುತ್ತದೆ; ಅದಕ್ಕೆ ತನ್ನ ತಂದೆಯ ವೃತ್ತಿಯನ್ನು ಮಾಡುವುದು ಬಹಳ ಸುಲಭವೂ ನಿಸರ್ಗಸಹಜವೂ ಆಗಿ ತೋರುತ್ತದೆ. ಆದುದರಿಂದ ವರ್ಣವನ್ನು ವಂಶಪಾರಂಪರ್ಯವಾಗಿ ಬಂದ ಶಾಸನವೆಂದೇ ಪರಿಗಣಿಸಬಹುದು."

ಗಾಂಧೀಜಿಯ ಮೇಲಿನ ಮಾತುಗಳು ನಮ್ಮ ನಿತ್ಯಾನುಭವಕ್ಕೆ ಬರುತ್ತವೆ—ಅಪವಾದಗಳನ್ನು ಹೊರತುಪಡಿಸಿದರೆ. ನಾವು ಯಾವ ಮಗುವನ್ನೇ ತೆಗೆದುಕೊಳ್ಳಲಿ, ಅದು ತನ್ನನ್ನು ಹೆತ್ತವರ ಮಾರ್ಗಕ್ಕಿಂತ ಭಿನ್ನವಾಗಿ ಬಹುದೂರ ಸ್ವಂತ ಶಕ್ತಿಯ ಬಲದಿಂದ ಮುನ್ನಡೆಯದು. ಉದಾಹರಣೆಗೆ, ಅವಿದ್ಯಾವಂತರ ಮಗುವಿಗೆ ಶಾಲೆಯಲ್ಲಿ ಪಾಠ ಕಲಿಯುವುದು ಸುಲಭಸಾಧ್ಯವೆನಿಸುತ್ತಿಲ್ಲ. ಏಕೆಂದರೆ ಕಲಿಯುವಿಕೆಗೆ ಪೋಷಕವಾದ ವಾತಾವರಣ ಆತನ ಮನೆಯಲ್ಲಿಲ್ಲ. ಆದರೆ ತನ್ನ ತಂದೆ ತಾಯಿಯರೂ ಮನೆಯವರೂ ಅನುಸರಿಸುತ್ತಾ ಬಂದ ವೃತ್ತಿಯಲ್ಲಿ ಆತನು ಯಾರಿಂದಲೂ ಹೇಳಿಸಿಕೊಳ್ಳಪಡದೆನೇ ತಾನಾಗಿ ಧುಮುಕಬಲ್ಲನು; ಮತ್ತಲ್ಲಿ ಚಾಣಾಕ್ಷತೆಯನ್ನು ತೋರ್ಪಡಿಸಬಲ್ಲನು.

ಆದುದರಿಂದಲೇ ಗಾಂಧೀಜಿಯವರು ವರ್ಣವನ್ನು ಹಿಂದುಗಳ ಮೇಲೆ ಹೊರಗಿನವರು ಹೊರಿಸಿದರು ಎನ್ನುವುದಿಲ್ಲ. ತಮ್ಮ ಕಲ್ಯಾಣ ಸಾಧನವಾದ ಮಾರ್ಗವಾಗಿ ವರ್ಣಾಧರಿತ ಶಾಸನವನ್ನು ಹಿಂದುಗಳು ಬಳಸಿಕೊಂಡರೆಂದು ಗಾಂಧೀಜಿಯ ಅಭಿಪ್ರಾಯ. ನ್ಯೂಟನ್ನನು ಎಂದಿನಿಂದಲೂ ಇದ್ದ ಗುರುತ್ವಾಕರ್ಷಣೆಯನ್ನು ತನ್ನ ಬುದ್ಧಿ ಶಕ್ತಿಯ ಬಲದಿಂದ ಕಂಡುಕೊಂಡಂತೆ ನಿಸರ್ಗ ಸಹಜವಾಗಿದ್ದ ಶಾಸನವೊಂದನ್ನು ಹಿಂದೂ ಋಷಿಮುನಿಗಳು ತಮ್ಮ ಮೇಧಾವಿತನದಿಂದ ಬೆಳಕಿಗೆ ತಂದರೆಂದು ಗಾಂಧೀಜಿ ಹೇಳುತ್ತಾರೆ. ಆದುದರಿಂದಲೇ ಜಗತ್ತಿನ ಬೇರೆ ಯಾವುದೇ ಜನಾಂಗಕ್ಕೆ ಆಧ್ಯಾತ್ಮಿಕ ಕ್ಷೇತ್ರದಲ್ಲಿ ಯಾವ ಎತ್ತರಕ್ಕೆ ನೆಗೆಯಲು, ಅದ್ಭುತ ಸಾಧನೆಯನ್ನು ಹೊಂದಲು, ಸಾಧ್ಯವಾಗಲಿಲ್ಲವೋ ಅಲ್ಲಿಯ ವರೆಗೆ ಹಿಂದುಗಳು ಮುಂದರಿದರು.

ತನಗೆ ಶ್ರೀ ಮದ್ಭಗವದ್ಗೀತೆಯು ಪವಿತ್ರ ಗ್ರಂಥವೆಂದು ಮಹಾತ್ಮಾ ಗಾಂಧೀಜಿಯವರು ಹಲವು ಸಲ ಹೇಳಿದ್ದರು. ಅದೊಂದೇ ಪುಸ್ತಕವು ದೋಷರಹಿತವಾದ ತರ್ಕದಿಂದ ಕೂಡಿದೆ ಎಂದವರ ಅಭಿಮತ. ಗೀತೆಯಲ್ಲಿ ಹೀಗೆಂದಿದೆ—"ಚಾತುರ್ವರ್ಣಂ ಮಯಾಸೃಷ್ಟಂ ಗುಣಕರ್ಮವಿಭಾಗಶಃ॥" ಗುಣ ಮತ್ತು ಕರ್ಮಾನುಸಾರವಾಗಿ ನಾಲ್ಕು ವರ್ಣಗಳನ್ನು ಭಗವಂತನು ಸೃಷ್ಟಿಸಿರುವನೆಂದು ಇದರ ಅರ್ಥ. ಗಾಂಧೀಜಿಯವರು ಇದರ ಕುರಿತು ಹೇಳುತ್ತಾ "ನಾನು ಸೃಷ್ಟಿಸಿದ್ದೇನೆ' ಎಂದು ಭಗವಂತನು ಹೇಳಿರುವ ಪ್ರಯುಕ್ತ ವರ್ಣವು ಜನ್ಮ ಮೂಲವಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ಮುಂದರಿದು "ಇಂದು ವರ್ಣಾಶ್ರಮ ಧರ್ಮವೂ ಹಿಂದೂ ಮತವೂ ತಪ್ಪುತಪ್ಪಾಗಿ ತಿಳಿಯಲ್ಪಡುತ್ತವೆ. ಇದಕ್ಕಾಗಿ ನಾವು ಹಿಂದೂ ಮತ ಮತ್ತು ವರ್ಣಾಶ್ರಮ ಧರ್ಮದ ನಾಶಮಾಡಿದರೆ ಕೆಲಸವಾಗದು. ಯೋಗ್ಯ ತಿದ್ದುಪಡಿಯನ್ನು ಮಾಡಬೇಕು. ನಮ್ಮಲ್ಲಿಯೇ ಹಿಂದೂ ತೇಜಸ್ಸನ್ನು ಹುಟ್ಟಿಸಿಕೊಳ್ಳಬೇಕು—ಆಗ ಅದು ನಮ್ಮ ಆತ್ಮಕ್ಕೆ ತೃಪ್ತಿ ನೀಡುತ್ತದೋ ಇಲ್ಲವೋ ಎಂಬುದನ್ನು ತೀರ್ಮಾನಿಸಬೇಕು" ಎಂದಿದ್ದಾರೆ ಗಾಂಧೀಜಿ.

೦೦

ಕಾಂಚಿಯ ಶ್ರೀ ಮಚ್ಛಂಕರಾಚಾರ್ಯರು ಸಹ ನೆಹರುಗಳು ಕಿರಿಯ ಜನಾಂಗದ ಕುರಿತು ಹೇಳಿದ ಮಾತುಗಳನ್ನು ಪ್ರಸ್ತಾಪಿಸಿ ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ. ನಾವು ಕಿರಿಯರಿಗೆ ಹೇಗೆ ಸಹಾಯಮಾಡಬಹುದು? ಈಗಿನ ಸೌಧವನ್ನು ಜಗ್ಗಿ ಎಳೆದು ಕಿರಿಯ ಜನಾಂಗಕ್ಕೆ ಆಧಾರಭೂತವಾದ ಬೇರೇ ಇಲ್ಲದಂತೆ ಮಾಡಿದೆವಾದರೆ ಅವರಿಗೆ ಬೇಕಾದ ಮುಟ್ಟಿವನ್ನು ಹಾಕಿಕೊಟ್ಟಂತಾಗುವುದೆಂದೂ ಯೋಗ್ಯ ಮಾರ್ಗದರ್ಶನ ಮಾಡಿದಂತಾಗುವುದೆಂದೂ ನಂಬಬಹುದೆ? ಎಂದಿಗೂ ಇದಾಗದು. ಈಗಿನ ಸಂಸ್ಥೆ ಮತ್ತು ಪದ್ಧತಿಗಳನ್ನು ಜರೆದು ಜಗ್ಗುವುದು ಸುಲಭ; ಆದರೆ ನಾವೇನನ್ನು ನಾಶಪಡಿಸಿರುವೆವೋ ಅಷ್ಟಾದರೂ ಒಪ್ಪುವ ಹೊಸ ಸಂಸ್ಥೆ ಅಥವಾ ಪದ್ಧತಿಯನ್ನು ನೆಲೆಗೊಳಿಸುವುದು ಅತ್ಯಂತ ಕಷ್ಟ.

(೧೦ನೇ ಪುಟ ನೋಡಿರಿ)

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಕೆಟ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. ೨೨—೩—೫೬ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, Udipi, S. K. *Phone:* 66

ಗೆರಸೊಪ್ಪೆಯಿಂದ ನಮ್ಮ ಜಿಲ್ಲೆಗೆ ವಿದ್ಯುಚ್ಛಕ್ತಿಯ ಪೂರೈಕೆ

ಹದಿನೈದು ವರ್ಷಗಳ ಅವಿಶ್ರಾಂತ ಪ್ರಯತ್ನದ ಸತ್ಫಲ

ಅಂತೂ ಇಂತೂ ಜೋಗಿನ ವಿದ್ಯುಚ್ಛಕ್ತಿಯು ನಮ್ಮ ಜಿಲ್ಲೆಯಲ್ಲೀಗ 'ಪ್ರವಹಿಸ ತೊಡಗಿತು!

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಮದ್ರಾಸಿನ ಆರೋಗ್ಯ ಮಂತ್ರಿ ಹಾಗು ದಕ್ಷಿಣ ಕನ್ನಡ ಜಿಲ್ಲೆಯ ಮುಂದಾಳುಗಳಲ್ಲೊಬ್ಬರಾದ ಶ್ರೀ ಎ. ಬಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನೆರೆದಿದ್ದ ಮಂಗಳೂರಿನ ಸಭೆಯಲ್ಲಿ ಗುಂಡಿಯೊಂದನ್ನೊತ್ತಿ ಜೋಗಿನ ವಿದ್ಯುಚ್ಛಕ್ತಿಯನ್ನು ಬರಮಾಡಿಕೊಂಡು, ಸಭಾ ಭವನವನ್ನು ಇದೇ ೭ನೇ ದಿನಾಂಕ ಬೆಳಗಿಸಿದರು.

ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ "ಮೈಸೂರಿನ ಜೋಗಿನಿಂದ ನಿಮ್ಮ ಜಿಲ್ಲೆಗೆ ವಿದ್ಯುಚ್ಛಕ್ತಿಯನ್ನು ನಾನು ಹರಿಸುತ್ತಿದ್ದೇನೆ; ಹಾಗೆಯೇ ಶ್ರೀ ಎ ಬಿ. ಶೆಟ್ಟಿಯವರು ದಕ್ಷಿಣ ಕನ್ನಡ ಜಿಲ್ಲೆಯ ಜನರ ಬುದ್ಧಿಶಕ್ತಿಯನ್ನು ಮೈಸೂರಿಗೆ ಸದ್ಯವೇ ನಾವೆಲ್ಲರೂ ಒಂದೇ ರಾಜ್ಯದಲ್ಲಿ ಸೇರುವ ಹೊತ್ತಿನಂದು ಹರಿಸುವಂತಾಗಲಿ! ಹೀಗೆ ವಿದ್ಯುಚ್ಛಕ್ತಿ, ಜನಶಕ್ತಿ ಮತ್ತು ಬುದ್ಧಿಶಕ್ತಿಗಳು ಸಮ್ಮಿಳನಗೊಂಡು ಉದಯವಾಗಲಿರುವ ಕನ್ನಡ ರಾಜ್ಯವು ಸರ್ವ ಸಮೃದ್ಧ ನಾಡಾಗಿ ಬೆಳಗಲಿ!" ಎಂದು ದೇವರಲ್ಲಿ ಪ್ರಾರ್ಥನೆಯನ್ನು ಸಲ್ಲಿಸಿದರು.

ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುತ್ತನ್ನೊದಗಿಸಿದ್ದೇವೆಂಬ ಹೆಮ್ಮೆ ಮೈಸೂರಿಗಿರಬಾರದು; ಹಾಗೆಯೇ ಮೈಸೂರಿನವರು ತಮಗೆ ವಿದ್ಯುತ್ತನ್ನು ನೀಡಿದ್ದಾರೆಂಬ ದೈನ್ಯವೂ ದಕ್ಷಿಣ ಕನ್ನಡಕ್ಕೆ ಇರಲಾಗದು; ನಾವೆಲ್ಲರೂ ಸದ್ಯವೇ ಹೊಸತಾಗಿ ರೂಪುಗೊಳ್ಳಲಿರುವ ಕನ್ನಡ ರಾಜ್ಯದಲ್ಲಿ ಸೇರಲಿರುವುದರಿಂದ ವಿದ್ಯುಚ್ಛಕ್ತಿಯನ್ನು ಹೊರಗಿನವರು (ಅಥವಾ ಹೊರಗಿನವರಿಗೆ) ಪೂರೈಸಿದ ಭಾವನೆಗೆ ಇಲ್ಲಿ ಅವಕಾಶವಿಲ್ಲ ಎಂದು ಸಹ ಶ್ರೀ ಹನುಮಂತಯ್ಯನವರು ಹೇಳಿದರು.

ಮುಂದಾಳುಗಳ ಸಾಹಸ

ತಮ್ಮ ಸ್ವಭಾವ ಸಹಜ ಔದಾರ್ಯದಿಂದ ಶ್ರೀ ಹನುಮಂತಯ್ಯನವರು, ದಕ್ಷಿಣ ಕನ್ನಡದ ಜನರು ದೀನರಾಗಬೇಕಾಗಿಲ್ಲ, ಮೈಸೂರಿನ ಪ್ರಜೆಗಳಷ್ಟೇ ಸಮಾನ ಹಕ್ಕಿನಿಂದಲೇ ಅವರು ಜೋಗಿನ ವಿದ್ಯುಚ್ಛಕ್ತಿಯನ್ನು ಅನುಭವಿಸಬೇಕೆಂದು ಧ್ವನಿಸುವ ಮಾತನ್ನಾಡಿದರೂ ನಮ್ಮ ಜಿಲ್ಲೆಯವರು ಇಷ್ಟರಿಂದಲೇ ಕೃತಜ್ಞತೆಯ ಭಾವವನ್ನು ತೋರಿದು ಹಕ್ಕಿನಿಂದ ಪಡೆದಿದ್ದೇವೆ ಎಂಬಂಥ ದರ್ಪಕ್ಕೆ ಎಡೆ ಕೊಡಕೂಡದು ಏಕೆಂದರೆ, ನಾವು ಜೋಗಿನಿಂದ ವಿದ್ಯುಚ್ಛಕ್ತಿಯನ್ನು ಬರಮಾಡಿಕೊಳ್ಳಬೇಕೆಂದು ಮೊದಲು ಆಲೋಚಿಸಿದ್ದಾಗ, ಮತ್ತು ಈ ಬಗ್ಗೆ ಕೊನೆಯ ಒಡಂಬಡಿಕೆಯನ್ನು ಮಾಡಿಕೊಂಡಾಗ, ದಕ್ಷಿಣ ಕನ್ನಡ ಜಿಲ್ಲೆಯು ಮೈಸೂರಿನ ಸಂಪರ್ಕಕ್ಕೆ ಒಂದೇ ರಾಜ್ಯದ ಅಂಗವೆಂಬ ನೆಲೆಯಿಂದ ಬರುವುದೆಂಬ ವಿಚಾರ–ಏನೇನೂ ಸ್ಫುಟವಾಗಿ ವ್ಯಕ್ತವಾಗಿರಲಿಲ್ಲ. ಅದು ಇತ್ತೀಚೆಯ ಬೆಳವಣಿಗೆ ಮಾತ್ರ!

ದಕ್ಷಿಣ ಕನ್ನಡ ಜಿಲ್ಲೆಯ ಜನರು ಜೋಗಿನ ವಿದ್ಯುಚ್ಛಕ್ತಿಯನ್ನು ತಮ್ಮ ಉಪಯೋಗಕ್ಕಾಗಿಯೂ ಹರಿಯಗೊಡಬೇಕೆಂದು ೧೯೪೧ರಲ್ಲಿ ಮೊದಲಾಗಿ ಮನವಿ ಮಾಡಿಕೊಂಡರು. ಮೈಸೂರು ಸರಕಾರವು ಆಗಷ್ಟೇ ಜೋಗಿನಲ್ಲಿ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಯೋಜನೆಯೊಂದನ್ನು ಕೈಗೊಂಡಿದ್ದಿತು. ಆದರೆ ಈ ಯೋಜನೆಯು ಮುಂಬಯಿ ಮತ್ತು ಮದ್ರಾಸು ರಾಜ್ಯದ ಕೆಲವು ಹಳ್ಳಿಗಳನ್ನು ಮುಳುಗಿಸಿ ಬಿಡುತ್ತಿದ್ದುದರಿಂದ ಮೈಸೂರು ಸರಕಾರವು ಇವೆರಡು ರಾಜ್ಯಗಳ ಸಹಕಾರವನ್ನು ಈ ವಿಷಯದಲ್ಲಿ ಕೇಳಿತು.

ಮದ್ರಾಸು ಸರಕಾರವು ಕೂಡಲೇ ತನ್ನ ಒಪ್ಪಿಗೆಯನ್ನು ಯಾವುದೇ ಪ್ರತಿಫಲವಿಲ್ಲದೆಯೇ ಎಂಬಂತೆ ನೀಡಿತು. 'ಹೀಗಾಗಿ ದಕ್ಷಿಣ ಕನ್ನಡ ಜಿಲ್ಲೆಗೆ ಸೇರಿದ್ದ ಹನ್ನಾರು ಮಾಗಣೆಯ ಗ್ರಾಮಗಳು ಜೋಗಿನ ಯೋಜನೆಯ ನೆಪದಿಂದ ಪುಕ್ಕಟೆಯಾಗಿ ಕೈಬಿಡುವಂತಾಯಿತು. ಆದರೆ ಮುಂಬಯಿ ಸರಕಾರವು ತನ್ನ ಪ್ರದೇಶದಲ್ಲಿದ್ದ ಗ್ರಾಮಗಳನ್ನು ಮೈಸೂರಿನ ಯೋಜನೆಗಾಗಿ ದಾನ ಬಿಡುವುದಕ್ಕೆ ಒಪ್ಪಿಗೆ ನೀಡುವಾಗ ಉತ್ತರ ಕರ್ನಾಟಕಕ್ಕೆ ಜೋಗಿನ ವಿದ್ಯುಚ್ಛಕ್ತಿಯಲ್ಲಿ ಒಂದಂಶವನ್ನು ಪೂರೈಸಬೇಕೆಂಬ ಆಶ್ವಾಸನೆಯನ್ನು ಮೈಸೂರು ಸರಕಾರದಿಂದ ಅಪೇಕ್ಷಿಸಿ, ಪಡೆಯಿತು.

ನಮ್ಮ ಜಿಲ್ಲೆಯ ಜನರು ಈಗ ಎಚ್ಚತ್ತುಕೊಂಡರು. ಮದ್ರಾಸಿನಲ್ಲಿ ಆಗ ಸರ್ ಆರ್ಥರ್ ಹೋಪ್ ಗವರ್ನರಾಗಿದ್ದರು. ಅವರಿಗೆ ಒಂದು ಮನವಿಯನ್ನರ್ಪಿಸಲಾಯಿತು (೧೯೪೧). ಮುಂದ ಗವರ್ನರರು ೧೯೪೩ರಲ್ಲಿ ಮಂಗಳೂರಿಗೆ ಬಂದಿದ್ದಾಗ ಜಿಲ್ಲೆಯ ಮುಂದಾಳುಗಳೂ ಉದ್ದಿಮೆದಾರರೂ ಅವರನ್ನು ಕಂಡು, ಮನವಿಯೊಪ್ಪಿಸಿ ಈ ಜಿಲ್ಲೆಗೆ ಗೆರಸೊಪ್ಪೆಯ ಜಲಪಾತಜನ್ಯ ವಿದ್ಯುಚ್ಛಕ್ತಿಯನ್ನು ಪೂರೈಸುವ ವ್ಯವಸ್ಥೆ ಮಾಡಬೇಕೆಂದರು. ಗವರ್ನರರ ಸಲಹೆಗಾರರನ್ನು ಸಹ ೧೯೪೪ ಮತ್ತು ೧೯೪೬ನೇ ಇಸವಿಗಳಲ್ಲಿ ನಮ್ಮ ಜಿಲ್ಲೆಯ ಧುರೀಣರು ಭೇಟಿಯಾಗಿ ಈ ವಿಷಯದಲ್ಲಿ ಹೆಚ್ಚಿನ ಪ್ರಯತ್ನ ಕೈಗೊಂಡರು.

ಮತಭೇದದಿಂದ ವಿಳಂಬ

ಮದ್ರಾಸಿನ ಸರಕಾರವು ಜನರ ಬೇಡಿಕೆಯನ್ನು ಸುಲಭದಲ್ಲಿ ಒಪ್ಪುವಂತೆ ತೋರಲಿಲ್ಲ. ಪಯ್ಕಾರಾ ಜಲವಿದ್ಯುಚ್ಛಕ್ತಿ ಯೋಜನೆಯ ಪ್ರಯೋಜನವನ್ನು ಯುದ್ಧಾಂತ್ಯದ ಹೊತ್ತಿಗೆ ಮಂಗಳೂರಿನ ವರೆಗೆ ವಿಸ್ತರಿಸಬಹುದೆಂಬ ಅಭಿಪ್ರಾಯವನ್ನು ಮದ್ರಾಸು ಸರಕಾರ ಹೊಂದಿರುವಂತೆ ಕಂಡಿತು. ಆದರೆ ೧೯೪೭ನೇ ವರ್ಷದ ಕೊನೆಗೆ ಈ ಅಭಿಪ್ರಾಯದಲ್ಲಿ ಸ್ವಾರಸ್ಯವಿಲ್ಲವೆಂದೂ ಕೊಯಮುತ್ತೂರಿನ ಹೆಚ್ಚುತ್ತಿರುವ ಬೇಡಿಕೆಯನ್ನು ಪೂರೈಸುವುದೇ ಈ ಯೋಜನೆಗೆ ಸಾಧ್ಯವಾಗಲಾರದೆಂದೂ ಖಚಿತವಾಯಿತು.

ಆದುದರಿಂದ ನಮ್ಮ ಜಿಲ್ಲೆಯ ಧುರೀಣರು ಪುನಃ ಮದ್ರಾಸು ಸರಕಾರವನ್ನು ಜೋಗಿನ ವಿದ್ಯುಚ್ಛಕ್ತಿಗಾಗಿ ಒತ್ತಾಯಿಸಿದರು. ೧೯೪೮ನೇ ವರ್ಷದ ಪ್ರಾರಂಭದಲ್ಲಿ ಮದ್ರಾಸು ಸರಕಾರವು ಸಂಕದಗುಂಡಿ ಮತ್ತು ನಾರಾವಿ ಎಂಬೆರಡು ನದಿಗಳು ಜಿಲ್ಲೆಯ ಉತ್ತರ ಭಾಗದಲ್ಲಿ ಮಾಡಿರುವ ಜಲಪಾತಗಳಿಂದ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ವಿಚಾರ ಮಾಡಲಾಗುವುದೆಂದು ಹೇಳಿತು. ಆದರೆ ಈ ನದಿಗಳ ಮೇಲ್ಭಾಗವು ಮೈಸೂರಿನಲ್ಲಿದ್ದುದರಿಂದ ಅಲ್ಲಿ ತಕ್ಕ ಸಂಶೋಧನೆಯ ಕೆಲಸವನ್ನು ಮಾಡಲಿಕ್ಕೆ ಆ ಸರಕಾರದ ಅನುಮತಿ ಆವಶ್ಯಕವಾಯಿತು. ಇದು ದೊರೆತರೂ ಸಹ, ಮದ್ರಾಸು ಸರಕಾರವು ಈ ವಿಷಯದಲ್ಲಿ ಕಾರ್ಯಪ್ರವೃತ್ತವಾಗಲಿಲ್ಲ.

ಸರಕಾರದೊಡನೆ ಜಿಲ್ಲೆಯ ಜನರು ಆ ಬಳಿಕ ತುಂಬ ಒತ್ತಾಯವನ್ನು ಹಾಕತೊಡಗಿದರು. ೧೯೫೦ರಲ್ಲಿ ಮಂತ್ರಿ ಶ್ರೀ ಭಕ್ತವತ್ಸಲಮರನ್ನು ಕಂಡು ಮಾತನಾಡಿದ ಫಲವಾಗಿ ಮೈಸೂರು ಸರಕಾರವು ಪ್ರಾರಂಭದಲ್ಲಿ ೩೦೦೦ ಕಿಲೋವಾಟಿನಷ್ಟು, ಮತ್ತು ಕಾಲಾಂತರದಲ್ಲಿ ೬೦೦೦ ಕಿಲೋವಾಟಿನಷ್ಟು ವಿದ್ಯುತ್ತನ್ನೊದಗಿಸಲು ಒಪ್ಪಿರುವರೆಂಬ ಸಂತೋಷದ ವಾರ್ತೆಯು ಬಂತು. ಆದರೆ ಬಹುಕಾಲ ಈ ಸಂತೋಷ ಬಾಳಲಿಲ್ಲ. ಏಕೆಂದರೆ ವಿದ್ಯುಚ್ಛಕ್ತಿಗೆ ಕೊಡಬೇಕಾದ ಹಣರೂಪದ ಪ್ರತಿಫಲದ ಕುರಿತು ಉಭಯ ಸರಕಾರಗಳಲ್ಲಿ ಮತಭೇದವುಂಟಾಯಿತು.

ಮುಖ್ಯ ಮಂತ್ರಿಗಳಿಬ್ಬರ ಆಸಕ್ತಿ

ಇತ್ತ ಮದ್ರಾಸಿನಲ್ಲಿ ರಾಜಾಜಿಯು ಮಂತ್ರಿಮಂಡಳ ಅಧಿಕಾರವನ್ನು ಸ್ವೀಕರಿಸಿತು. ಮೈಸೂರಿನಲ್ಲಿ ಶ್ರೀ ಕೆ. ಹನುಮಂತಯ್ಯನವರು ಮುಖ್ಯ ಮಂತ್ರಿಗಳಾದರು. ಇವರಿಬ್ಬರೂ ಮಹನೀಯರು ೧೯೫೨ರಲ್ಲಿ ನಮ್ಮ ಜಿಲ್ಲೆಗೆ ಆಗಮಿಸಿದಾಗ, ಈ ಜಿಲ್ಲೆಯ ಜನರಿಗೆ ಜೋಗಿನ ವಿದ್ಯುಚ್ಛಕ್ತಿಯು ಇನ್ನೂ ಪೂರೈಕೆಯಾಗದಿರುವುದರಿಂದಾಗಿರುವ ಅಸಂತೃಪ್ತಿಯು ಮನವರಿಕೆಯಾಯಿತು. ೧೯೫೩ನೇ ವರ್ಷದ ಮಧ್ಯದಲ್ಲಿಯೇ ನಮ್ಮ ಜಿಲ್ಲೆಯ ಮುಂದಾಳುಗಳು ಮೈಸೂರಿನ ಮಂತ್ರಿಗಳನ್ನು ಕಂಡು ಕ್ರಯದ ವಿಷಯದಲ್ಲಿಯೂ ಇತರ ರೂಪದಲ್ಲಿಯೂ ಎದ್ದಿದ್ದ ಮತಭೇದಗಳ ನಿವಾರಣೆಗೆ ಅಡಿಪಾಯವನ್ನು ಹಾಕಿದ್ದರು. ಈ ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳು ಸ್ವತಃ ಆಸಕ್ತಿ ತೆಗೆದುಕೊಂಡುದರಿಂದ, ಹಲವು ಸಮಯದಿಂದ ಮೂಲೆಗೆ ಬಿದ್ದಿದ್ದ ಒಡಂಬಡಿಕೆಯು ತ್ವರ್ಯದಲ್ಲಿಯೇ ನೆರವೇರಿತು.

೧೯೫೪ನೇ ಜೂನಿನಲ್ಲಾದ ಪರಿಷ್ಕೃತ ಒಪ್ಪಂದದಂತೆ ಮೊದಲಿಗೆ ೨೫೦೦ ಕಿಲೋವಾಟಿನಷ್ಟು, ಎರಡು ವರ್ಷಗಳಲ್ಲಿ ೩,೫೦೦ ಕಿಲೋವಾಟಿನಷ್ಟು, ಮತ್ತು ಆರು ವರ್ಷಗಳಲ್ಲಿ ೬೦೦೦ ಕಿಲೋವಾಟಿನಷ್ಟು ವಿದ್ಯುಚ್ಛಕ್ತಿಯನ್ನೊದಗಿಸುವ ಭರವಸೆ ದೊರೆಯಿತು. ಅನಂತರದ ಕೆಲಸ ಉಭಯ ಸರಕಾರಗಳ ವಿದ್ಯುಚ್ಛಕ್ತಿ ಇಲಾಖೆಯದು. ಮದ್ರಾಸಿನ ಸರಕಾರವು ವಿಶೇಷ ಮುತುವರ್ಜಿಯನ್ನು ವಹಿಸಿ ಸುಮಾರು ೭೦ ಲಕ್ಷ ರೂಪಾಯಿಗಳ ವೆಚ್ಚದಿಂದ ಜಿಲ್ಲೆಯ ಈಶಾನ್ಯ ಗಡಿಯಲ್ಲಿರುವ ಬಾಳೆಬರೆಯಿಂದ ಹಿರಿಯಡ್ಕ, ಮತ್ತು ಮಂಗಳೂರುಗಳ ವರೆಗೆ, ಹಿರಿಯಡ್ಕದಿಂದ ಕಾರ್ಕಳ, ಉಡುಪಿ, ಕುಂದಾಪುರಗಳಿಗೆ, ಉಡುಪಿಯಿಂದ ಪಡುಬಿದ್ರಿಯ ವರೆಗಿನ ಹಳ್ಳಿಗಳಿಗೆ, ಮಂಗಳೂರಿನಿಂದ ಮೂಲ್ಕಿ, ಬಂಟವಾಳಗಳಿಗೆ, ವಿದ್ಯುಚ್ಛಕ್ತಿಯ ಪೂರೈಕೆ ಮಾಡಲು ಶ್ರಮ ವಹಿಸಿ ದುಡಿದಿದೆ; ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿ ವಿಸ್ತರಣೆಯ ಕೆಲಸ ಇನ್ನೂ ಮುಗಿದಿಲ್ಲ.

(೮ನೇ ಪುಟ ನೋಡಿರಿ)

PT. AMBLAY RAMASWAMIER'S 98 Yrs. Renowned, Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16-18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.

628, "SANTHANA SINDHURA SADANA"

Hundred Ft. Road, Rice Mill Cross, MYSORE (South India).

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)]

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED

H. Office: UDIPI (S.India).

ರಶಿಯದೆಡೆಗೆ ಲಂಡನಿನ ನೋಟ

ಪ್ರಧಾನಿ ನೆಹರು ನವರಾಷ್ಟ್ರಗಳ ಪರಿಷತ್ತಿನಲ್ಲಿ ವಹಿಸಿದ ಪಾತ್ರ

ಹತ್ತು ದಿನಗಳ ವರೆಗೆ ಲಂಡನ್ ನಗರದಲ್ಲಿ ನಡೆದ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವು ಕಳೆದ ೬ನೇ ದಿನಾಂಕ ಮುಕ್ತಾಯಗೊಂಡಿತು. ಭಾರತ, ಬ್ರಿಟನ್, ಕೆನಡ ಆಸ್ಟ್ರೇಲಿಯ, ನ್ಯೂಜೀಲೆಂಡ್, ದಕ್ಷಿಣ ಆಫ್ರಿಕ, ಪಾಕಿಸ್ತಾನ, ಸಿಂಹಳ ಮತ್ತು ಫೆಡರೇಶನ್ ಆಫ್ ರೊಡೇಶಿಯ ಎಂಡ್ ನ್ಯಾಸಾಲೇಂಡ್ ಎಂಬ ನವರಾಷ್ಟ್ರಗಳ ಪ್ರಧಾನಿಗಳು ಈ ಸಮಾಲೋಚನೆಗಳಲ್ಲಿ ತಮ್ಮ ಪರಿವಾರದವರೊಡಗೂಡಿ ಭಾಗವಹಿಸಿದ್ದರು.

ಸಮಾಲೋಚನೆಗಳ ಕೊನೆಗೆ ಹೊರಬಿದ್ದ ಪತ್ರಿಕಾ ಪ್ರಕಟಣೆಯನ್ನು ನೋಡಿದರೆ, ಈ ಸಮಾಲೋಚನೆಗಳಲ್ಲಿ ಭಾರತದ ಪ್ರಧಾನಿ ನೆಹರುಗಳ ಪ್ರಭಾವವು ಗಣನೀಯವಾಗಿ ಬಿದ್ದಿರುವುದನ್ನು ಮನಗಾಣಬಹುದು. ಒಂದು ಅಥವಾ ಎರಡೂ ವರ್ಷಗಳ ಹಿಂದಾದರೆ, ಕಾಮನ್‌ವೆಲ್ತ್ ಪ್ರಧಾನಿಗಳು ಯಾವ ಮಾತನ್ನು ಒಪ್ಪಲು ಸಿದ್ಧರಿರಲಿಲ್ಲವೋ, ಇಂದು ಅದಕ್ಕೆ ಸಮ್ಮತಿ ಸೈಗುಟ್ಟಿದ್ದಾರೆ.

ರಶಿಯದ ಸಂಬಂಧ

ರಶ್ಯದ ಕುರಿತಾದ ನೀತಿ ಬದಲಾವಣೆಯು ಈ ಬಾರಿಯ ಸಮ್ಮೇಲನದ ಮುಖ್ಯ ವೈಶಿಷ್ಟ್ಯ. ಪತ್ರಿಕಾ ಪ್ರಕಟಣೆಯಲ್ಲಿ ಹೀಗೆ ಹೇಳಲಾಗಿದೆ— ರಶ್ಯದಲ್ಲಿನ ಅರ್ಥಗರ್ಭಿತ ಬೆಳವಣಿಗೆಗಳನ್ನೂ ತನ್ನ ಸೇನೆಯ ಪ್ರಮಾಣದಲ್ಲಿ ಕಡಿತ ಮಾಡಿಕೊಳ್ಳಲು ರಶ್ಯವು ಮಾಡಿದ ನಿಶ್ಚಯವನ್ನೂ ಇತರ ದೇಶಗಳೊಡನೆ ಅದು ಸಂಪರ್ಕ ವೃದ್ಧಿಗಾಗಿ ಅನುಕೂಲತೆ ಕೊಟ್ಟಿರುತ್ತಿರುವುದನ್ನೂ ಬೇರೆ ಸರಕಾರಗಳೊಡನೆ ತನ್ನ ಸಂಬಂಧವನ್ನು ಉತ್ತಮಪಡಿಸಲು ರಶ್ಯವು ಪ್ರಕಟವಾಗಿ ಇಚ್ಛಿಸುತ್ತಿರುವುದನ್ನೂ ಪ್ರಧಾನಿಗಳು ಪರ್ಯಾಲೋಚಿಸಿದರು. ಇವೆಲ್ಲ ಬೆಳವಣಿಗೆಗಳನ್ನು ಸ್ವಾಗತಿಸಲಾಯಿತು. ರಶ್ಯ ಮತ್ತಿತರ ಮಹಾರಾಷ್ಟ್ರಗಳೊಡನೆ ಸಂಬಂಧವು ಪ್ರಗತಿಪರವಾಗಿ ಸುಧಾರಿಸುವುದರಿಂದ ಯುದ್ಧ ಭಯವನ್ನು ತಪ್ಪಿಸಲು ಸಾಧ್ಯ; ಲೋಕ ಶಾಂತಿಗದು ಪೋಷಕ ಎಂದವರು ಅಭಿಪ್ರಾಯಪಟ್ಟರು."

ನೆಹರು ನಿಲುವು

ರಶ್ಯದ ಕುರಿತು ಇಷ್ಟು ಒಳ್ಳೆಯ ವಾಕ್ಯಗಳನ್ನು ಪ್ರಕಟಣೆ ಹೊಂದಿರಬಹುದೆಂದು ಯಾರೂ ನಂಬಿರಲಿಲ್ಲ. ಸಮ್ಮೇಳನದ ಪ್ರಾರಂಭದಲ್ಲಿ ರಶ್ಯದ ಕುರಿತು ಬಂದಿದ್ದ ವರದಿಗಳು ಕಾಮನ್‌ವೆಲ್ತ್ ರಾಷ್ಟ್ರಗಳ ಸದಸ್ಯರಲ್ಲಿ ರಶ್ಯದ ಕುರಿತು ಒಮ್ಮತವಾಗುವ ನಿರೀಕ್ಷೆಯೇ ಇಲ್ಲವೆನ್ನುವ ಹಾಗಿದ್ದಿತು. ಭಾರತ ಮತ್ತು ಸಿಂಹಳ ಒಂದೆಡೆ, ಆಸ್ಟ್ರೇಲಿಯ ಮತ್ತು ನ್ಯೂಜೀಲೆಂಡ್ ಇನ್ನೊಂದೆಡೆ ತೀರ ವಿರುದ್ಧವಾದ ದಿಸೆಯಲ್ಲಿ ಹೆಜ್ಜೆ ಮುಂದಿಡುತ್ತಿದ್ದವೆಂದು ಊಹಿಸಲಾಗಿದ್ದಿತು. ಕೆನಡ ಮತ್ತು ಬ್ರಿಟನುಗಳಾದರೂ ರಶ್ಯದ ತಂತ್ರವಷ್ಟೇ ಬದಲಾಗಿದೆ; ಉದ್ದೇಶವಲ್ಲ ಎಂಬಂತಿದ್ದವು. ಇಷ್ಟು ಭಿನ್ನಾಭಿಪ್ರಾಯವಿದ್ದ ರಾಷ್ಟ್ರಗಳು ರಶ್ಯದ ಪಾತ್ರವನ್ನು ಮನಗಾಣುವಂತೆ ಮಾಡಿರುವುದು ನೆಹರು ಧೋರಣೆಗೆ ಲಭಿಸಿದ ಜಯವೆನ್ನಬಹುದು.

ಚೀನದ ಸ್ಥಾನಮಾನ

ಪ್ರಕಟಣೆಯಲ್ಲಿ ರಶ್ಯದಂತೆ 'ಮತ್ತಿತರ ಮಹಾರಾಷ್ಟ್ರಗಳೊಡನೆ ಸಹ ಸಂಬಂಧವು ಪ್ರಗತಿದಾಯಕವಾಗಬೇಕೆಂದು ಆಶಿಸಲಾಗಿದೆ. ಇದು ಕೆಂಪು ಚೀನವನ್ನು ಕುರಿತಾಡಿದ ಮಾತೆಂದು ಹೇಳಬಹುದು. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ಕೆನಡವು ಅಮೇರಿಕದ ಮನಸ್ಸನ್ನು ತುಸವಾದರೂ ನೋಯಿಸಲು ಇಚ್ಛಿಸುತ್ತಿಲ್ಲ. ಆದುದರಿಂದ ಕೆಂಪು ಚೀನದ ಹೆಸರನ್ನು ಎತ್ತಿ ಹೇಳುವಷ್ಟು ಮುಂದಕ್ಕೆ ಪ್ರಕಟಣೆಯು ಹೋಗಿಲ್ಲ. ಆದಾಗ್ಯೂ ವಿಶ್ವದ ಮೂರು ಪ್ರಬಲ ರಾಷ್ಟ್ರಗಳಲ್ಲಿ ಒಂದಾದ ಭಾರತವು ಉಳಿದೆರಡು ಪ್ರಬಲ ರಾಷ್ಟ್ರಗಳಾದ ಕೆಂಪು ಚೀನ ಮತ್ತು ಜಪಾನುಗಳು ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸ್ಥಾನ ಪಡೆಯಬೇಕೆಂದು ಎಂದಿನಿಂದಲೂ ಪ್ರತಿಪಾದಿಸುತ್ತಾ ಬಂದಿರುವುದನ್ನು ಮೂಲೆಗುಂಪು ಮಾಡಲಾಗಿಲ್ಲ.

ಶಾಂತ ಪರಿಹಾರ

ಫೋರ್ಮೋಸಾ ಪ್ರದೇಶದಲ್ಲಿ ದ್ವೇಷ ಶಮನ ಕಾರ್ಯವು "ಇನ್ನೂ ಮುಂದರಿಯುವುದನ್ನು" ಪ್ರಧಾನಿಗಳು ನಿರೀಕ್ಷಿಸುತ್ತಾರೆ ಎಂದು ಪ್ರಕಟಣೆಯು ಹೇಳುತ್ತದೆ. ಕೆಂಪು ಚೀನವು ರಾಷ್ಟ್ರೀಯ ಚೀನದೊಡನೆ ಫೋರ್ಮೋಸಾ ಪ್ರಶ್ನೆಯನ್ನು ಶಾಂತ ವಿಧಾನದ ಮೂಲಕ ಇತ್ಯರ್ಥಿಸಲು ಸಂಧಾನದ ಮಾತುಕತೆಗೆ ತಯಾರಿರುವುದು ದ್ವೇಷವನ್ನು ಶಮನಗೊಳಿಸಬಲ್ಲಂಥ ಒಂದು ಕ್ರಮವಾಗಿದೆ. ಇಂಥ ಬೇರೆ ಕ್ರಮಗಳೂ ನಡೆಯುವುವೆಂಬ ಹಾರೈಕೆ ಪ್ರಧಾನಿಗಳದು. ಈ ವಲಯದ ಸಮಸ್ಯೆಗಳೆಲ್ಲವೂ ಶಾಂತ ರೀತಿಯಿಂದ ಪರಿಹಾರಗೊಳ್ಳಬೇಕೆಂದೂ ಪ್ರಧಾನಿಗಳ ಅಭಿಪ್ರಾಯ.

ಕೆನಡದ ವಿರೋಧ

ಇದಕ್ಕಾಗಿ ಕೆಂಪು ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಸೇರಗೊಡುವುದು ತೀರ ಅಪೇಕ್ಷಣೀಯವೆಂದು ಭಾರತವು ಹೇಳುತ್ತಾ ಬಂದಿದೆ. ನ್ಯೂಜೀಲೆಂಡ್ ದೇಶವು ಪ್ರಧಾನಿಗಳ ಸಮ್ಮೇಳನದಲ್ಲಿ ಜಪಾನಿಗೆ ರಾಷ್ಟ್ರ ಸಂಘದ ಸದಸ್ಯತ್ವವನ್ನು ದೊರಕಿಸಿ ಕೊಡುವ ಪ್ರಶ್ನೆಯನ್ನೆತ್ತಿದಾಗ ಭಾರತವು ಕೆಂಪು ಚೀನದ ಸದಸ್ಯತ್ವದ ಪರವಾಗಿ ಮಾತನಾಡಿತೆಂದು ತಿಳಿದಿದೆ. ದಕ್ಷಿಣ ಆಫ್ರಿಕದ ಪ್ರಧಾನಿಗಳಂಥವರು ಸಹ ಕೆಂಪು ಚೀನದ ಸದಸ್ಯತ್ವವನ್ನು ಅನುಮೋದಿಸಿದರಂತೆ! ಕೆನಡ, ಆಸ್ಟ್ರೇಲಿಯಾದಿ ರಾಷ್ಟ್ರಗಳ ವಿರೋಧದಿಂದಾಗಿಯಷ್ಟೇ ಕೆಂಪು ಚೀನದ ಹೆಸರನ್ನು ಪ್ರಕಟಣೆ ಉಲ್ಲೇಖಿಸದೆ, ಸಂಕೇತವನ್ನಷ್ಟೆ ಮಾಡಿದೆ ಎನ್ನಬಹುದು.

ಶಸ್ತ್ರಗಳಿಂದ ಪ್ರಳಯ

ಭಾರತದ ನಿಲುಮೆಗೊಪ್ಪುವ ಬೇರೆ ಅಂಶಗಳಲ್ಲಿ ಅಣುಬಾಂಬುಗಳಂಥ ಪ್ರಳಯಕಾರಿ ಶಸ್ತ್ರಾಸ್ತ್ರಗಳು ನಾಶವನ್ನು ತಂದೇ ತೀರುತ್ತವೆ ಎಂಬ ಖಚಿತ ನಿರ್ಧಾರವನ್ನು ಪ್ರಧಾನಿಗಳು ಹೊಂದಿರುವುದು ಉಲ್ಲೇಖನೀಯ. ಈ ನಾಶದಿಂದ ಪಾರಾಗಲು ನಿಶ್ಶಸ್ತ್ರೀಕರಣದ ಪರಿಣಾಮಕಾರಿ ಕ್ರಮಗಳ ಸೂಚನೆಯನ್ನು ಈ ಪ್ರಕಟಣೆ ಒಳಗೊಂಡಿಲ್ಲ; ಆದಾಗ್ಯೂ ಅಣುಬಾಂಬುಗಳು ಸಮಸ್ಯೆಗೆ ಪರಿಹಾರವನ್ನೊದಗಿಸಲಾರವೆಂಬ ತಿಳಿವಳಿಕೆಯು ಉಪೇಕ್ಷಿಸುವಷ್ಟು ಲಘುವಾದ ಸಾಧನೆಯಲ್ಲ.

ದುರ್ಬಲ ಮಾನವ

ಅಂತರಾಷ್ಟ್ರೀಯ ದ್ವೇಷದಿಂದಾಗಿ ಸೈನ್ಯ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹದ ಮೇಲೆ ವಿಪರೀತ ವೆಚ್ಚವನ್ನು ಮಾಡುವ ಪ್ರವೃತ್ತಿ ಬೆಳೆದಿದೆಯೆಂದೂ ಪ್ರಕಟಣೆ ಹೇಳುತ್ತದೆ ಮುಂದರಿದು ಅದು, ಜಗತ್ತಿನ ಸಹಜ ಸಂಪತ್ತನ್ನು ಆರ್ಥಿಕಾಭಿವೃದ್ಧಿಗಾಗಿ ಉಪಯೋಗಿಸುವ ಕೆಲಸವನ್ನು ಈ ಪ್ರವೃತ್ತಿ ತಡೆಗಟ್ಟಿದೆಯೆಂದೂ ತಿಳಿಸುತ್ತದೆ. ಎಲ್ಲ ಸಮಸ್ಯೆಗಳೂ ಶಾಂತ ರೀತಿಯಲ್ಲಿ ಪರಿಹಾರಗೊಳ್ಳಬೇಕು. ಅನ್ಯಥಾ ಜನರ ಕಲ್ಯಾಣಕ್ಕೆ ಮತ್ತು ಅವರ ಜೀವನ ಮಟ್ಟವನ್ನು ಎತ್ತರಿಸುವ ಕಾರ್ಯಕ್ರಮಗಳಿಗೆ ವಿನಿಯೋಗವಾಗಬಲ್ಲ ಹಣವೂ ನೈಸರ್ಗಿಕ ಸಂಪತ್ತೂ ಶಸ್ತ್ರ ಮತ್ತು ಸೈನ್ಯ ಸಂಗ್ರಹದ ಮೇಲೆ ವೆಚ್ಚವಾಗುತ್ತವೆ; ಇದು ಮಾನವ ಜಾತಿಯನ್ನು ದುರ್ಬಲಗೊಳಿಸುವುದು ಖಂಡಿತ ಎಂದು ಪ್ರಕಟಣೆಯು ಸಾರುತ್ತದೆ.

ವಸಾಹತುವಾದದ ನಾಶ

"ಕಾಮನ್‌ವೆಲ್ತ್ ರಾಷ್ಟ್ರಗಳು ಸ್ವಾತಂತ್ರ್ಯ ಮತ್ತು ಸ್ವಾಯತ್ತಾಧಿಕಾರದ ಅಭಿಲಾಷೆಯನ್ನು ಮನ್ನಿಸುತ್ತವೆ; ಮತ್ತು ಈ ಉದ್ದೇಶ ಸಾಧನೆಗಾಗಿ ತಾವು ಮಾಡಿದ ಕೆಲಸಕ್ಕಾಗಿ ಅಭಿಮಾನ ಪಡುತ್ತವೆ" ಎಂದು ಪ್ರಕಟಣೆಯಲ್ಲಿ ಹೇಳಿರುವ ವಾಕ್ಯವು ಭಾರತ ಸರಕಾರದ ವಸಾಹತು ವಿರೋಧಿ ಧೋರಣೆಗೆ ಅನುಗುಣವಾಗಿದೆ. ಸಾಮ್ರಾಜ್ಯ ಶಾಹಿತ್ವ ಮತ್ತು ಸಹರಾಷ್ಟ್ರದ ಭಾವನೆಗಳು ಪರಸ್ಪರ ಮಿಲನಗೊಳ್ಳುವಂತಿಲ್ಲ; ಅರ್ಧ ಸ್ವಾತಂತ್ರ್ಯ ಹಾಗು ಅರ್ಧ ದಾಸ್ಯದ ರಾಷ್ಟ್ರವಾಗಿ ಜನರು ಬಾಳುವಂತಿಲ್ಲ ಎಂಬ ಭಾರತದ ನಿಲುಮೆಗೆ ಈ ವಾಕ್ಯವು ಮನ್ನಣೆಯನ್ನು ಕೊಡುತ್ತದೆ.

ಕಾಶ್ಮೀರದ ಪ್ರಸ್ತಾಪವಿಲ್ಲ

ಕಾಶ್ಮೀರದ ಪ್ರಶ್ನೆಯು ಇಲ್ಲಿ ಚರ್ಚೆಗೆ ಬರಲೇ ಇಲ್ಲ! ನೆಹರುಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ, ಮತ್ತು ಸಂಪ್ರದಾಯದ ಇತಿಮಿತಿಯನ್ನು ಮೀರಿ, ಕಾಶ್ಮೀರ ಪ್ರಶ್ನೆಯನ್ನು ಸಮ್ಮೇಳನ ಕಾಲದಲ್ಲಿ ಎತ್ತುವ ಸಾಹಸ ಪಾಕಿಸ್ತಾನಕ್ಕೆ ಇದ್ದರೂ ಸಹ ಬ್ರಿಟನು ಮತ್ತಿತರ ರಾಷ್ಟ್ರಗಳು ಅದಕ್ಕೆ ಅವಕಾಶ ಕೊಡಲಿಲ್ಲ. ಕರಾಚಿ ಮತ್ತು ಬಗ್ದಾದುಗಳಲ್ಲಿ ಭಾರತ ಸರಕಾರದ ಪ್ರಕಟ ವಿರೋಧ ಮತ್ತು ಬ್ರಿಟನಿನ ಪ್ರತಿನಿಧಿಗಳ ಪ್ರಕಟ ಅಸಮ್ಮತಿ ಇದ್ದರೂ ಸಹ ಕಾಶ್ಮೀರ ಪ್ರಶ್ನೆಯನ್ನು ಪಾಕಿಸ್ತಾನ ತಂದು ತುರುಕಿತು. ಬದಲಿ ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಕಾಶ್ಮೀರ ಪ್ರಶ್ನೆಯನ್ನು ಪಾಕಿಸ್ತಾನದ ಪ್ರಧಾನಿಗಳು ಎತ್ತಲಾರದೆ ಹೋದರು.

ರಾಷ್ಟ್ರ ಸಂಘವು ಕಾಶ್ಮೀರ ಪ್ರಶ್ನೆಯನ್ನು ಚರ್ಚಿಸಬಹುದಾದರೆ, ಸಹರಾಷ್ಟ್ರಗಳ ಕೂಟದಲ್ಲಿ, ಆತ್ಮೀಯತೆಯು ತುಂಬಿತುಳುಕುವ ವಾತಾವರಣದಲ್ಲಿ, ಕಾಶ್ಮೀರದ ಚರ್ಚೆ ನಡೆಯಬಾರದೇಕೋ ಅರ್ಥವಾಗದು ಎಂದು ಪಾಕಿಸ್ತಾನಿ ಪ್ರಧಾನಿಗಳು ಲಂಡನ್ ಆಕಾಶವಾಣಿಯಲ್ಲಿ ಬೇಸರದಿಂದ ಹೇಳಿದರು. ಆದರೆ ಭಾರತದ ಪಾಲಿಗಂತೂ ಇದೊಂದು ನೈತಿಕ ವಿಜಯ.

---

50 ವರ್ಷಗಳ ಅಪೂರ್ವ ಪ್ರಗತಿ

50 ವರ್ಷಗಳ ಹಿಂದೆ 1—7—1906ರಲ್ಲಿ ಸಣ್ಣ ಸಂಸ್ಥೆಯಾಗಿ ಆರಂಭವಾದ **ಕೆನರಾ ಬ್ಯಾಂಕ್** ರಾಷ್ಟ್ರದ ಪ್ರಗತಿಯಲ್ಲಿ ವ್ಯಾಪಾರ, ಉದ್ದಿಮೆ ಕೈಗಾರಿಕೆಗಳ ಅಭಿವೃದ್ಧಿಗೆ ತನ್ನ ಸಹಾಯವನ್ನು ಸಲ್ಲಿಸುತ್ತದೆ.

ಭಾರತದ ಪ್ರಗತಿಪರ ಬ್ಯಾಂಕುಗಳಲ್ಲೊಂದಾಗಿರುವ **ಕೆನರಾ ಬ್ಯಾಂಕು**, ತನ್ನ ಸೇವೆ, ಸ್ನೇಹ ಸೌಹಾರ್ದತೆ, ಆರ್ಥಿಕ ಭದ್ರತೆ, ಉತ್ತಮ ವ್ಯಾಪಾರ ಧೋರಣೆಗಳ ಮೂಲಕ, 50 ವರ್ಷಗಳಿಂದ ಅಸಂಖ್ಯಾತ ಜನರ ಪ್ರೀತಿ ಮನ್ನಣೆಗಳಿಗೆ ಪಾತ್ರವಾಗಿದೆ.

51ನೇ ವರ್ಷದಲ್ಲಿ ಕಾಲಿಟ್ಟಿರುವ **ಕೆನರಾ ಬ್ಯಾಂಕು** ತನ್ನ ಅಭಿವೃದ್ಧಿಗೆ ಕಾರಣರಾದ ಪೋಷಕರಿಗೆಲ್ಲಾ ತನ್ನ ಹಾರ್ದಿಕ ವಂದನೆಗಳನ್ನೀಯುತ್ತದೆ.

ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುವ ನಾವೆಲ್ಲರೂ ಇನ್ನೂ ಉತ್ತಮ ತರದ ಸೇವೆ ಸೌಕರ್ಯಗಳನ್ನು ಸಲ್ಲಿಸುವ ಭರವಸೆ ಕೊಡುತ್ತೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

1906 ಸಮಸ್ತ ಜನತೆಯ ನೆಚ್ಚಿನ ಬ್ಯಾಂಕ್ 1956

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health,

Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೨-೭-'೫೭	೪೫

ವಿದ್ಯುಚ್ಛಕ್ತಿಯ ಪ್ರಯೋಜನ

ನಮ್ಮ ಜಿಲ್ಲೆಗೆ ಈಗ ಜೋಗದಲ್ಲಿ ಉತ್ಪಾದಿತವಾದ ವಿದ್ಯುಚ್ಛಕ್ತಿಯ ಪೂರೈಕೆಯಾಗತೊಡಗಿದೆ. ವಿದ್ಯುಚ್ಛಕ್ತಿಯು ಆಧುನಿಕ ಜನಜೀವನವನ್ನು ಸಮೃದ್ಧಗೊಳಿಸುವ ಚೈತನ್ಯವಾಗಿದೆ. ವಿದ್ಯುಚ್ಛಕ್ತಿಯನ್ನು ಒಂದು ದೇಶದ ಜನರು ಎಷ್ಟರ ಮಟ್ಟಿಗೆ ಬಳಸುತ್ತಿರುವರೆಂಬುದರ ಮೇಲಿಂದಲೇ ಆ ದೇಶದ ಪ್ರಗತಿಯನ್ನು ಅಳೆಯುವ ದಿನಗಳಿವು: ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಪ್ರವಾಸ ಮಾಡಿ ಬಂದ ಭಾರತೀಯರನ್ನು ಮುಖ್ಯವಾಗಿ ಆಕರ್ಷಿಸುವ ವಿಷಯವೆಂದರೆ ಸ್ವಿಜರ್‌ಲೆಂಡ್, ನೋರ್ವೆ, ಸ್ವೀಡನ್ ಮುಂತಾದ ಚಿಕ್ಕ ರಾಷ್ಟ್ರಗಳಲ್ಲಿ ಸಹ ವಿಪುಲ ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯನ್ನು ಬಳಸುವ ಹವ್ಯಾಸ ಎನ್ನಬಹುದು. ಸಣ್ಣ ಸಣ್ಣ ಜಲಪಾತಗಳನ್ನು ಸಹ ಸುಮ್ಮನೆ ಹೋಗಗೊಟ್ಟವರು ಐರೋಪ್ಯರಲ್ಲ— ಅವುಗಳನ್ನು ವಿದ್ಯುಚ್ಛಕ್ತಿಯ ಬಳಕೆಗಾಗಿ ಉಪಯೋಗಿಸುವ ಸಾಹಸಿಗಳವರು ಎಂದು ಶ್ರೀ ಕೋಟ ಶಿವರಾಮ ಕಾರಂತರು ತಮ್ಮ "ಅಪೂರ್ವ ಪಶ್ಚಿಮ" ಗ್ರಂಥದಲ್ಲಿ ತಮ್ಮ ಅನುಭವವನ್ನು ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ. ಅದೇ ಸಮಯದಲ್ಲಿ ನಮ್ಮ ಪಶ್ಚಿಮ ಘಟ್ಟಗಳಲ್ಲಿಯ ಅಸಂಖ್ಯಾತ ಜಲಪಾತಗಳ ಉಪಯೋಗ ಮಾಡಿಕೊಳ್ಳುವ ಸಾಹಸ ನಮ್ಮದಾದೀತೇ ಎಂದು ಅವರು ಹಂಬಲಿಸಿದ್ದಾರೆ. ಪುರೋಗತಿಯನ್ನು ಬಯಸುವ ಎಲ್ಲರೂ ಇಂಥ ಹಂಬಲವನ್ನು ವ್ಯಕ್ತಪಡಿಸುವುದು ತೀರ ಸ್ವಾಭಾವಿಕ. ಪಾಶ್ಚಾತ್ಯ ರಾಷ್ಟ್ರಗಳು ಹೊಂದಿರುವ ಅಭಿವೃದ್ಧಿಯನ್ನು ಕಂಡು ನಮ್ಮಲ್ಲೂ ಅಷ್ಟೇ ಉನ್ನತವಾದ, ಸುಖಾನುಕೂಲತೆಗಳಿಂದ ಕೂಡಿದ ಜೀವನವನ್ನು ನಿರ್ವಹಿಸುವ ಆಸೆಯುಂಟಾಗುವುದೂ ಸಹಜ. ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ತಮ್ಮ ಮಂಗಳೂರಿನ ಭಾಷಣದಲ್ಲಿ ವಿದಿತಪಡಿಸಿದಂತೆ ಪ್ರಗತಿಯ ಮೆಟ್ಟಲನ್ನೇರಿ ನಿಂತಿರುವ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತಲೆಯೊಂದರ ೨೫೦೦ದಿಂದ ೪೦೦೦ ಯುನಿಟುಗಳಷ್ಟು ವಿದ್ಯುಚ್ಛಕ್ತಿಯು ಪ್ರತಿವರ್ಷ ವಿನಿಯೋಗವಾಗುತ್ತದೆ; ಆದರೆ ಭಾರತದಲ್ಲಿ ಮೊದಲನೇ ಪಂಚ ವಾರ್ಷಿಕ ಯೋಜನೆಯು ಪ್ರಾರಂಭವಾದಾಗ ತಲೆಯೊಂದರ ೧೪ ಯುನಿಟುಗಳಷ್ಟು ಮಾತ್ರ ವರ್ಷಕ್ಕೆ ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಿದ್ದರು; ಈ ಪ್ರಮಾಣವು ಮೊದಲನೇ ಯೋಜನೆಯ ಅಂತ್ಯದಲ್ಲಿ ೨೫ ಯುನಿಟುಗಳಿಗೇರಿದೆ. ಆದರೆ ಮದ್ರಾಸು ರಾಜ್ಯದಲ್ಲಿ ಈ ಪ್ರಮಾಣವು ಇನ್ನೂ ೨೧ ಯುನಿಟುಗಳಷ್ಟು ಕೆಳಮಟ್ಟದಲ್ಲಿದೆ! ಮದ್ರಾಸು ರಾಜ್ಯದಲ್ಲಿಯೂ—ಅಖಿಲ ಭಾರತದಲ್ಲಿಯೂ—ವಿದ್ಯುಚ್ಛಕ್ತಿಯ ಸರಾಸರಿ ಉಪಯೋಗವನ್ನು ತಲೆಯೊಂದರ ೫೦ ಯುನಿಟುಗಳಿಗೆ ಹೆಚ್ಚಿಸಲು ಅನುಕೂಲವಾಗುವಂತೆ ಎರಡನೇ ಯೋಜನೆಯ ಕಾರ್ಯಕ್ರಮಗಳನ್ನು ಅನುಗೊಳಿಸಲಾಗಿದೆ. ಅಂದರೆ, ನಾವಿಲ್ಲಿಯೊಂದು ವಿಷಯವನ್ನು ಸ್ಪಷ್ಟವಾಗಿ ತಿಳಿದಿರಬೇಕು; ಅದೇನೆಂದರೆ ಬಳಸಲ್ಪಡುತ್ತಿರುವ ವಿದ್ಯುಚ್ಛಕ್ತಿಯು ದೇಶದಲ್ಲೆಲ್ಲ ಏಕರೀತಿಯಾಗಿ ವಿತರಣೆಯಾಗುತ್ತಿಲ್ಲ. ಸರಾಸರಿ ಬಳಕೆಯು ತಲೆಯೊಂದರ ೨೫ ಯುನಿಟಾಗಿದೆ ಎಂದ ಮಾತ್ರಕ್ಕೆ ಭಾರತೀಯರಲ್ಲಿ ಹೆಚ್ಚಿನವರು ವಿದ್ಯುಚ್ಛಕ್ತಿಯ ಬಳಕೆಯನ್ನು ಮಾಡುತಿದ್ದಾರೆಂದು ಅರ್ಥವಲ್ಲ. ಶ್ರೀ ಶೆಟ್ಟರೇ ಸ್ಪಷ್ಟಪಡಿಸಿದ ಪ್ರಕಾರ, ಭಾರತದ ವಿದ್ಯುದುತ್ಪಾದನೆಯ ಐದರಲ್ಲಿ ನಾಲ್ಕಂಶದಷ್ಟನ್ನು ಮುಂಬಯಿ, ಕಲ್ಕತ್ತ, ಕಾನ್ಪುರ, ಮದರಾಸು, ಅಹಮ್ಮದಾಬಾದು ಮತ್ತು ದೆಹಲಿಗಳೆಂಬ ಆರು ಮಹಾನಗರಗಳೇ ಉಪಯೋಗಿಸುತ್ತವೆ. ಭಾರತದ ಉಳಿದೆಡೆಗೆ ಸಿಗುವ ವಿದ್ಯುಚ್ಛಕ್ತಿ ಎಷ್ಟೆಂದು ಇದರಿಂದಲೇ ಊಹಿಸಬಹುದು; ಅದು ತೀರ ಅತ್ಯಲ್ಪ. ಹೀಗಿರುವಾಗ ಐದರಲ್ಲಿ ನಾಲ್ಕಂಶದಷ್ಟು ಜನರು ಗ್ರಾಮಾಂತರದ ಪ್ರದೇಶಗಳಲ್ಲಿಯೇ ವಾಸಿಸುತ್ತಿರುವ ಭಾರತದಲ್ಲಿ ವಿದ್ಯುಚ್ಛಕ್ತಿಯ ಬಳಕೆಯು ಹೆಚ್ಚಿದೆ ಎಂಬ ಭ್ರಮೆಯನ್ನು ಹುಟ್ಟಿಸುವ ಅಂಕೆಸಂಖ್ಯೆಗಳ ಮಾಯೆಯೋ ಮೋಡಿಯೋ ಸಾಮಾನ್ಯ ಭಾರತೀಯರ ಜೀವನಕ್ಕೇನೂ ಶೋಭೆ ತರಲಾರದು. ನಾವು ಗ್ರಾಮಾಂತರ ಪ್ರದೇಶಗಳಲ್ಲಿರುವ ಜನಕ್ಕೆ ವಿದ್ಯುಚ್ಛಕ್ತಿಯನ್ನೊದಗಿಸಬೇಕೆಂಬುದು ಸ್ಪಷ್ಟ: ಈ ದಿಸೆಯಲ್ಲಿ ಮದ್ರಾಸ ಸರಕಾರವು ಸ್ಪೃಹಣೀಯ ಕೆಲಸ ಮಾಡಿದೆ. ಇಷ್ಟರ ವರೆಗೆ ೩೫೦೦ ಗ್ರಾಮಗಳಿಗೆ ಅದು ವಿದ್ಯುಚ್ಛಕ್ತಿಯನ್ನು ಒದಗಿಸಿದೆ; ಎರಡನೇ ಯೋಜನೆಯಲ್ಲಿ ಪ್ರತಿ ವರ್ಷ ೫೦೦ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ವಿಸ್ತರಿಸುವ ಅಭಿಲಾಷೆಯನ್ನದು ಹೊಂದಿದೆ. ಗ್ರಾಮಾಂತರ ಪ್ರದೇಶದಲ್ಲಿ ನೀರೆತ್ತುವ ಪಂಪುಗಳಿಗಾಗಿ ವಿದ್ಯುಚ್ಛಕ್ತಿಯನ್ನು ಬಳಸುವ ಕ್ರಮವು ಬಹಳ ಜನಪ್ರಿಯವಾಗಿದೆ. ಮದ್ರಾಸು ರಾಜ್ಯದಲ್ಲಿ ಈಗಾಗಲೇ ೩೩೦೦೦ ಪಂಪುಗಳು ವಿದ್ಯುಚ್ಛಕ್ತಿಯನ್ನು ಬಳಸುತ್ತಿವೆಯೆಂದೂ ಎರಡನೇ ಯೋಜನೆಯಲ್ಲಿ ಇನ್ನೂ ೩೦೦೦೦ ಪಂಪುಗಳು ವಿದ್ಯುಚ್ಛಕ್ತಿಯನ್ನು ಉಪಯೋಗಿಸಲು ತೊಡಗಬಹುದೆಂದೂ ಶ್ರೀ ಶೆಟ್ಟಿಯವರು ತಿಳಿಸಿದ್ದಾರೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯ ಪಾತ್ರವೇನು? ಅದು ಅಷ್ಟು ಆಶಾಜನಕವಾಗಿಲ್ಲ—ಇಷ್ಟರ ವರೆಗೆ ೩೩ ಗ್ರಾಮಗಳಿಗೆ ಮಾತ್ರ ವಿದ್ಯುಚ್ಛಕ್ತಿಯ ಪೂರೈಕೆಯಾಗಿದೆ; ಎರಡನೇ ಯೋಜನೆಯ ಅವಧಿಯಲ್ಲಿ ಜಿಲ್ಲೆಯ ಬೇರೆ ಬೇರೆ ತಾಲೂಕುಗಳಲ್ಲಿ ಒಟ್ಟು ೧೫೦ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯ ಪೂರೈಕೆಯಾಗುವಂತೆ ನೋಡಿಕೊಳ್ಳಲಾಗುವುದೆಂದೂ ಮಂತ್ರಿಗಳ ಹೇಳಿಕೆಯಿಂದ ತಿಳಿದು ಬರುತ್ತದೆ. ಇದರಿಂದ ಸುಮಾರು ೧೬೮೫ ನೀರೆತ್ತುವ ಪಂಪುಗಳಲ್ಲಿ ವಿದ್ಯುಚ್ಛಕ್ತಿಯ ಬಳಕೆಯಾದೀತೆಂದು ಸರಕಾರದ ಅಂದಾಜು. ಆದರೆ ನಾವು ಸದ್ಯವೇ ಹೊಸ ಮೈಸೂರು ರಾಜ್ಯವನ್ನು ಸೇರುವವರಾಗಿದ್ದೇವೆ; ಹೀಗಿರುವಾಗ, ಮದ್ರಾಸು ಸರಕಾರವು ಹಾಕಿಕೊಂಡ ಕಾರ್ಯಕ್ರಮಗಳು ಚಾಚೂ ತಪ್ಪದಂತೆ ನೆರವೇರುವ, ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುಚ್ಛಕ್ತಿ ವಿಸ್ತರಣೆಯ ಕಾರ್ಯಕ್ಕೆ ಪ್ರಾಶಸ್ತ್ಯ ಸಿಗುವ ಭರವಸೆ ಸಂಪೂರ್ಣವಾಗಿ ಉಂಟೆಂದು ಹೇಳಬಹುದೆ? ಶಾಸನಾಂಗದಲ್ಲಿರುವ ನಮ್ಮ ಜನಪ್ರಿಯ ಪ್ರತಿನಿಧಿಗಳೂ ಜಿಲ್ಲೆಯ ಮುಂದಾಳುಗಳೂ ಈ ವಿಷಯದಲ್ಲಿ ಮುತುವರ್ಜಿ ವಹಿಸಿ ಯೋಗ್ಯ ಆಶ್ವಾಸನೆಯನ್ನು ಪಡೆದು, ಮುಂದೆ ಈ ಭರವಸೆಯು ಕಾರ್ಯರೂಪದಲ್ಲಿ ಪರಿಣತಗೊಳ್ಳುವಂತೆ ಮಾಡಬೇಕಾಗಿದೆ. ಇಲ್ಲಿ ಇನ್ನೊಂದು ವಿಷಯದ ಕಡೆಗೂ ಜಿಲ್ಲೆಯ ಮಹಾ ಜನರ ಗಮನ ಹರಿಯುವುದು ಅತ್ಯಾವಶ್ಯಕ—ಹಳ್ಳಿಗಳಿಗಾಗಲೀ ಪಟ್ಟಣಗಳಿಗಾಗಲೀ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಮಾಡುವ ವ್ಯವಸ್ಥೆಯನ್ನು ಮಾಡಿದಷ್ಟಕ್ಕೆ ಕೆಲಸವಾಗದು ಈ ವ್ಯವಸ್ಥೆಯನ್ನೇರ್ಪಡಿಸಲು ಹಾಕಿದ ಬಂಡವಾಳಕ್ಕೆ ಬಡ್ಡಿಯನ್ನು ಒದಗಿಸಿಕೊಡುವಷ್ಟಾದರೂ ಪ್ರತಿಫಲವು ಸಿಗಬೇಕು; ಅಲ್ಲದೆ ನಮ್ಮ ಜನರ ಜೀವನವನ್ನು ವಿದ್ಯುಚ್ಛಕ್ತಿಯು ಸಮೃದ್ಧವಾಗಿ ಮಾಡಬಲ್ಲುದೆಂಬ ನಂಬಿಕೆಯೂ ಪುಷ್ಟಿಯಾಗಬೇಕು. ಹಳ್ಳಿಗರು ನೀರೆತ್ತುವ ಪಂಪುಗಳಿಗೆ ವಿದ್ಯುಚ್ಛಕ್ತಿಯನ್ನು ಬಳಸಲು ಪ್ರಾರಂಭಿಸುವುದು ನಿಶ್ಚಯವಾಗಿಯೂ ಒಳ್ಳೆಯ ಕೆಲಸ—ಏಕೆಂದರೆ ಭೂಮಿಯ ಉತ್ಪಾದನೆಯನ್ನು ಹೆಚ್ಚಿಸಲು ಇದರಿಂದ ಸಾಧ್ಯವಾಗುತ್ತದೆ. ಸಂಪದಭಿವೃದ್ಧಿಯ ಇಂಥ ಕೆಲಸಕ್ಕೆ ಸರಕಾರದಿಂದಲೂ ಮಹಾಜನರಿಂದಲೂ ನಿರಂತರ ಪ್ರೋತ್ಸಾಹ ಸಿಗಬೇಕು ಉದಾಹರಣೆಗೆ, ನೀರೆತ್ತುವ ಪಂಪುಗಳಿಗೆ ದುಡ್ಡು ಸುರಿಯುವಷ್ಟು ಚೈತನ್ಯವು ಬಡ ಬೇಸಾಯಗಾರನಿಗೆ ಮೊದಲೇ ಬರಲಾರದು. ಸಾಲರೂಪದ ಧನ ಸಹಾಯ ಅತ್ಯಾವಶ್ಯಕ; ಸುಲಭ ಬಾಡಿಗೆಗೆ ನೀರೆತ್ತುವ ಪಂಪುಗಳನ್ನೊದಗಿಸಿದರೂ ಆದೀತು. ಇದೇ ಪ್ರಕಾರ ಪೇಟೆಗಳಲ್ಲಿ ದೀಪ ಬೆಳಗಿಸಲು ಮಾತ್ರ ವಿದ್ಯುಚ್ಛಕ್ತಿ ಉಪಯೋಗಿಸಲ್ಪಟ್ಟರೆ ಉದ್ದೇಶ ನೆರವೇರದು—ಕೈಗಾರಿಕೆಗಳು ಹೆಚ್ಚಿಕೊಳ್ಳಬೇಕು. ನಮ್ಮ ಜಿಲ್ಲೆಯ ನೈಸರ್ಗಿಕ ಸಂಪತ್ತಿನ ಸದುಪಯೋಗ ವಾಗುವಂಥ ಮಧ್ಯಮ ವರ್ಗದ ಕೈಗಾರಿಕೆಗಳು ಇಲ್ಲಿ ನೆಲೆಗೊಳ್ಳಬೇಕು. ವಿದ್ಯುಚ್ಛಕ್ತಿಯ ವಿಜ್ಞಾನದಲ್ಲಿ ಪರಿಣತರಾದ ಮೇಧಾವಿ ಶ್ರೀ ಕೋಟ ವಾಸುದೇವ ಕಾರಂತರು ಸ್ಪಷ್ಟಪಡಿಸಿರುವಂತೆ ಕೆಲವು ಸಾವಿರ ರೂಪಾಯಿಗಳ ವಿದ್ಯುಚ್ಛಕ್ತಿಯ ಬಳಕೆಯಿಂದ ಹಲವು ಲಕ್ಷ ರೂಪಾಯಿಗಳ ಸರಕಿನ ಉತ್ಪಾದನೆಯನ್ನು ಮಾಡಲು ನಮಗೆ ಸಾಧ್ಯವಾಗಬೇಕು. ಹಾಗಲ್ಲದೆ ಹೋದರೆ, ವಿದ್ಯುಚ್ಛಕ್ತಿಯ ಪೂರೈಕೆಗಾಗಿ ನಾವು ಮಾಡಿದ ಪ್ರಯತ್ನಗಳಾಗಲೀ ಅದಕ್ಕಾಗಿ ವಿನಿಯೋಗಿಸಿದ ಲಕ್ಷಾಂತರ ಹಣವಾಗಲೀ ಯಾವುದೇ ಸತ್ಫಲವನ್ನು ನೀಡಿದ ಹಾಗಾಗದು. ವಿದ್ಯುಚ್ಛಕ್ತಿಯ ಪೂರೈಕೆಯು ಸಂಪದಭಿವೃದ್ಧಿ ಕಾರ್ಯಕ್ರಮದ ಪ್ರಥಮ ಘಟ್ಟ ಮಾತ್ರ—ನಿಜವಾದ ಕೆಲಸ ಮತ್ತು ಚಟುವಟಿಕೆ ಇನ್ನು ಆರಂಭವಾಗಬೇಕಾಗಿದೆ. ಸರಕಾರವೂ ಮಹಾಜನರೂ ಇತ್ತ ಗಮನ ಪೂರೈಸುವರೆಂದು ನಂಬುತ್ತೇವೆ. ಅಲ್ಲದೆ, ಸರಕಾರದ ವಿದ್ಯುಚ್ಛಕ್ತಿ ಇಲಾಖೆಯವರಾದರೂ ವಿದ್ಯುಚ್ಛಕ್ತಿಯ ಉಪಯೋಗವನ್ನು ಜನಪ್ರಿಯಗೊಳಿಸಲು ಯೋಗ್ಯ ಪ್ರಚಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದೂ ಸೂಚಿಸುತ್ತೇವೆ. ನಮ್ಮ ವಿದ್ಯುಚ್ಛಕ್ತಿ ಇಲಾಖೆಯವರು ಕಾರ್ಯಕ್ಷಮತೆಯನ್ನೂ ದಕ್ಷತೆಯನ್ನೂ ಜೋಗಿನ ವಿದ್ಯುಚ್ಛಕ್ತಿಗಾಗಿ ಸರಿಗೆ ಎಳೆಯುವುದರಲ್ಲಿ ಈಗಾಗಲೇ ತೋರಿಸಿದ್ದಾರೆ—ಆದರೆ ಎಲ್ಲ ಸರಕಾರಿ ಇಲಾಖೆಗಳಂತೆ ಇಲ್ಲಿಯೂ ಸಣ್ಣ ಪುಟ್ಟ ಅನೇಕ ಲೋಪದೋಷಗಳಿವೆ; ಸರಕುಗಳ ಪೂರೈಕೆ ಸಕಾಲದಲ್ಲಿ ಆಗದಿರುವುದೆಂದಲೋ ಏನೋ, ಸಾರ್ವಜನಿಕರ ಬೇಡಿಕೆಯಲ್ಲಿದ್ದಷ್ಟು ಅವಸರವು ಇಲಾಖೆಯ ಕಾರ್ಯದಲ್ಲಿಲ್ಲವೆಂದು ಜನರಿಗೆ ವಿಳಂಬದ ಅನುಭವವಾಗುತ್ತದೆ. ಇದು ತಪ್ಪಬೇಕು; ಮದ್ರಾಸು ಸರಕಾರವು ಸರಕುಗಳ ಪೂರೈಕೆಯಲ್ಲಿ— ಬೀಳ್ಕೊಡುವ ಗಳಿಗೆ ಹತ್ತಿರಬಂತೆಂದು— ಪಾಲತಾಯಿ ಧೋರಣೆ ವಹಿಸಬಾರದು ಎಂದು ವಿನಂತಿಸುತ್ತೇವೆ.

ಮೈಸೂರಿನ ಕಾಂಗ್ರೆಸು ಪಕ್ಷದಲ್ಲಿ ಅನೈಕ್ಯ

ಹನುಮಂತಯ್ಯನವರ ವಿರುದ್ಧ ಅವಿಶ್ವಾಸ ವ್ಯಕ್ತಪಡಿಸುವ ತವಕ

ಮಂಗಳೂರಿನ ಕಾಂಗ್ರೆಸು ಕಾರ್ಯಕರ್ತರ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಮೈಸೂರಿನ ಮುಖ್ಯ ಮಂತ್ರಿಗಳು ತಮ್ಮ ನಾಯಕತ್ವದಲ್ಲಿ ಅವಿಶ್ವಾಸವನ್ನು ಸೂಚಿಸುವ ಪ್ರಯತ್ನವು ಮೈಸೂರಿನ ಕಾಂಗ್ರೆಸು ಪಕ್ಷದಲ್ಲಿ ನಡೆದಿದೆ ಎಂದು ವಿದಿತಪಡಿಸಿದರು. ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರು ಬರುವ ಚುನಾವಣೆಯಲ್ಲಿ ಕಾಂಗ್ರೆಸಿನ ಉಮೇದುವಾರಿಕೆಯನ್ನು ಕೊಡಿಸುವ ಭರವಸೆಯನ್ನಿತ್ತು ತನ್ನ ವಿರುದ್ಧ ಅವಿಶ್ವಾಸವನ್ನು ಸೂಚಿಸುವ ಮನವಿಗೆ ಅನೇಕ ಸದಸ್ಯರ ಸಹಿಯನ್ನು ಪಡೆದಿರುವರೆಂದೂ ಅವರು ಆರೋಪಿಸಿದರು.

ಪ್ರತಿನಿಧಿಗಳೇ ನಿರ್ಣಯಿಸಲಿ

ಅವರು ಮುಂದರಿದು, ಮೈಸೂರಿನ ರಾಜಕೀಯದಲ್ಲೆದ್ದಿರುವ ಬಿರುಗಾಳಿಯು ತನ್ನನ್ನು ಮಾತ್ರ ಕೊಚ್ಚಿಕೊಂಡು ಹೋದರೆ ಹೋದೀತೆಂದೂ ಆದುದರಿಂದ ಇತರರು ಯಾರೂ ಇದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಕಾದ ಆವಶ್ಯಕತೆ ಇಲ್ಲವೆಂದೂ ಅವರು ಹೇಳಿದರು. ಆದಾಗ್ಯೂ ಮುಂದಿನ ಕನ್ನಡ ರಾಜ್ಯದ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಈ ರಾಜ್ಯದಲ್ಲಿ ಸಮಾವೇಶವಾಗುವ ಹತ್ತೊಂಬತ್ತೂ ಜಿಲ್ಲೆಗಳ ಕಾಂಗ್ರೆಸು ಪ್ರತಿನಿಧಿಗಳು ಸೇರಿ ವಿಚಾರವಿನಿಮಯ ನಡೆಸಿ ಒಂದು ತೀರ್ಮಾನ ಮಾಡುವುದನ್ನು ತಾನು ಸ್ವಾಗತಿಸುತ್ತೇನೆಂದೂ ಈ

ತೀರ್ಮಾನಕ್ಕೆ ತಾನು ತಲೆ ಬಾಗಲು ಸಿದ್ಧನಿದ್ದೇನೆಂದೂ ಸಾರಿದರು.

ಏಕೀಕರಣದಿಂದ ನೊಂದವರು

ಮೈಸೂರಿನ ಶಾಸನಾಂಗದ ಕಾಂಗ್ರೆಸು ಪಕ್ಷದಲ್ಲಿ ೮೫ ಸದಸ್ಯರಿದ್ದಾರೆ; ಇವರಲ್ಲಿ ಮೂರನೇ ಎರಡಂಶ ಜನರು ಮುಖ್ಯ ಮಂತ್ರಿಗಳ ವಿರುದ್ಧ ಅವಿಶ್ವಾಸವನ್ನು ಸೂಚಿಸುವ ಮನವಿಗೆ ಸಹಿ ಹಾಕಿರುವರೆಂದು ತಿಳದಿದೆ. ಇವರಲ್ಲಿ ಇಪ್ಪತ್ತಕ್ಕಿಂತಲೂ ಹೆಚ್ಚು ಮಂದಿ ಹಿಂದೆ ಶ್ರೀ ಹನುಮಂತಯ್ಯನವರ ಬೆಂಬಲಿಗರಾಗಿದ್ದರು. ತಾನು ಕನ್ನಡ ಪ್ರದೇಶಗಳೆಲ್ಲ ಒಂದೇ ರಾಜ್ಯದಲ್ಲಿ ಸಮಾವೇಶಗೊಳ್ಳಬೇಕೆಂದು ಪ್ರತಿಪಾದಿಸಿದ ಪ್ರಯುಕ್ತ ತನ್ನ ಬೆಂಬಲಿಗರಲ್ಲಿಯೇ ಹಲವರು ತನಗೆ ವಿರುದ್ಧ ನಿಂತರೆಂದು ಹನುಮಂತಯ್ಯನವರು ಹೇಳುತ್ತಾರೆ.

ಕಾಂಗ್ರೆಸಾಧ್ಯಕ್ಷರ ಆಮಂತ್ರಣ

ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಚೆನ್ನಯ್ಯನವರು ತಮ್ಮಲ್ಲಿಗೆ ಬಂದ ಮನವಿಯನ್ನು ಕಾರ್ಯಕಾರಿ ಸಮಿತಿಯೆದುರು ಮಂಡಿಸಿ, ಚರ್ಚಿಸಿ, ಪದ್ಧತಿ ಪ್ರಕಾರ ಕಾಂಗ್ರೆಸಿನ ಪಾರ್ಲಿಮೆಂಟರಿ ಬೋರ್ಡಿಗೆ ಅದನ್ನು ಕಳುಹಿಸಿ, ಅವಿಶ್ವಾಸ ಮಂಡನೆಗೆ ಅವಕಾಶ ನೀಡಬೇಕೆಂಬ ಬಗ್ಗೆ ಅನುಮತಿ ಕೇಳಿದ್ದಾರೆಂದು ಹೇಳಲಾಗಿದೆ. ಕಾಂಗ್ರೆಸಿನ ಅಧ್ಯಕ್ಷ ಶ್ರೀ ಢೇಬರರು ಈ ಮನವಿಯ ಕುರಿತು ಪರ್ಯಾಲೋಚನೆ ನಡೆಸಲು ಶ್ರೀ ಚೆನ್ನಯ್ಯನವರನ್ನೂ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನೂ ಈಗ ಹೊಸ ದಿಹಲಿಗೆ ಕರೆಸಿಕೊಂಡಿದ್ದಾರೆ.

ಇಬ್ಬಗೆಯ ಅಭಿಪ್ರಾಯ

ಹೊಸ ಕರ್ನಾಟಕ ರಾಜ್ಯದಲ್ಲಿ ಐದು ಬೇರೆ ಬೇರೆ ರಾಜ್ಯಗಳ ಜಿಲ್ಲೆಗಳು ಸಮಾವೇಶಗೊಳ್ಳಲಿರುವುದರಿಂದ ಎಲ್ಲ ಜಿಲ್ಲೆಗಳ ಪ್ರತಿನಿಧಿಗಳೂ ಒಟ್ಟಿಗೆ ಸೇರಿ ಕಾಂಗ್ರೆಸು ಪಕ್ಷದ ನಾಯಕನನ್ನು ಹೊಸತಾಗಿ ಆರಿಸಲಿ ಎಂಬುದು ಶ್ರೀ ಹನುಮಂತಯ್ಯನವರ ನಿಲುಮೆಯಾಗಿದೆ. ರಾಜ್ಯಗಳ ಪುನಾರಚನೆ ನಡೆಯುವ ಮುನ್ನಾದಿನ ಈ ಕೆಲಸ ನೆರವೇರಬಹುದೆಂದು ಅವರ ಸೂಚನೆಯಾಗಿದೆ. ಆದರೆ, ಏಕೀಕರಣಕ್ಕಾಗಿ ಕೆಲಸ ಮಾಡಿದ ಶ್ರೀ ಹನುಮಂತಯ್ಯನವರನ್ನು ಮೈಸೂರೇತರ ಕನ್ನಡ ಪ್ರದೇಶಗಳವರು ಬಿಟ್ಟು ಹಾಕಲಾರರೆಂದೂ ಆದುದರಿಂದ ಹೊಸ ರಾಜ್ಯ ರಚನೆಯ ವರೆಗೆ ಕಾಯದೆ ಈಗಲೇ ಶ್ರೀ ಹನುಮಂತ್ಯನವರನ್ನು ಗದ್ದುಗೆಯಿಂದ ಉರುಳಿಸಬೇಕೆಂದೂ ಶ್ರೀ ಚೆನ್ನಯ್ಯ ಮತ್ತು ಗುಂಪಿನ ತವಕ.

ನಿರೀಕ್ಷಕರ ಸಲಹೆ

ಕಾಂಗ್ರೆಸಿನ ಪಾರ್ಲಿಮೆಂಟರಿ ಬೋರ್ಡು ಏನು ತೀರ್ಮಾನ ಕೊಡುವುದೋ, ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರು ಏನು ಸಲಹೆ ನೀಡುವರೋ, ಕಾದು ನೋಡಬೇಕಾಗಿದೆ ಆದರೆ, ಸಾಮಾನ್ಯ ನಿರೀಕ್ಷಕರ ಮಟ್ಟದಿಂದ ಇಷ್ಟು ಹೇಳಬಹುದು-ರಾಜ್ಯ ಪುನಾರಚನೆಯು ಇನ್ನು ಕೇವಲ ಮೂರು ತಿಂಗಳೊಳಗಿನ ಕಾರ್ಯಕ್ರಮವಾಗಿರುವಾಗ ಇಷ್ಟು ಅಲ್ಪಾವಧಿಗಾಗಿ ಹೊಸ ಮಂತ್ರಿ ಮಂಡಳಿ ಏರ್ಪಡಗೊಡುವುದು ತೀರ ಅವಶ್ಯಕವೆ? ನಮಗಂತೂ ಹಾಗೆ ತೋರುವುದಿಲ್ಲ. ಈಗಿನ ಭಿನ್ನಾಭಿಪ್ರಾಯಗಳಿಗೆ ದೀರ್ಘ ಪರಂಪರೆಯಿದೆ— ಆದುದರಿಂದ ಇಷ್ಟುಕಾಲ ಸಹಿಸಿದವರಿಗೆ ಇನ್ನೂ ಸ್ವಲ್ಪ ಕಾಲಸಹಿಸಿರೆಂದು ಹೇಳುವುದೇ ಸೂಕ್ತ.

ದಕ್ಷಿಣ ಪ್ರದೇಶದ ಗುಲ್ಲು

ಬಿರುಗಾಳಿಯು ತಮಿಳು ನಾಡಿನ ಪ್ರದೇಶ ಕಾಂಗ್ರೆಸ್ಸಿನಲ್ಲೂ ಎದ್ದಂತಿದೆ. ದಕ್ಷಿಣ ಪ್ರದೇಶದ ಗುಲ್ಲು ಇಲ್ಲಿನ ಕಾಂಗ್ರೆಸನ್ನು ದುರ್ಬಲಗೊಳಿಸಿದೆ. ಹೀಗಾಗಿ ಅಲ್ಲಿಯ ಪ್ರದೇಶ ಕಾಂಗ್ರೆಸು ಒಂದುಗೊತ್ತುವಳಿಯನ್ನು ಸ್ವೀಕರಿಸಿ, "ದ್ವಿಭಾಷಾ ಅಥವಾ ಬಹು ಭಾಷಾ ರಾಜ್ಯಗಳ ರಚನೆಯ ನಿಜವಾದ ಉದ್ದೇಶವು ದೇಶದಲ್ಲಿ ಐಕ್ಯವನ್ನು ಸಂವರ್ಧಿಸುವುದಾಗಿದೆ; ಆದರೆ ದಕ್ಷಿಣ ಪ್ರದೇಶದ ಕುರಿತೆದ್ದಿರುವ ವಾದವಿವಾದವು ಕಾಂಗ್ರೆಸು ಪಕ್ಷವನ್ನೆ ಬಲಹೀನಗೊಳಿಸಿದೆ. ಕಾರಣ, ಈ ವಾದವಿವಾದದಲ್ಲಿ ಕಾಂಗ್ರೆಸಿಗರು ಯೂರೂಸಹಭಾಗಿಗಳಾಗ ಬಾರದು. ಸಂಸ್ಥೆಯನ್ನು ದುರ್ಬಲಗೊಳಿಸಲಾಗದು; ಪಂಚವಾರ್ಷಿಕ ಯೋಜನೆ ಮತ್ತಿತರ ಅಭಿವೃದ್ಧಿ ಪ್ರಯತ್ನಗಳಲ್ಲಿಯೇ ಮನಸ್ಸನ್ನು ಹಾಕಬೇಕು" ಎಂದು ಆದೇಶವಿತ್ತಿದೆ.

ಉಡುಪಿ

ಉಡುಪಿಯಲ್ಲಿ ಶ್ರೀ ಹನುಮಂತಯ್ಯನವರು— ಕಸ್ತೂರ್ಬಾ ಮೆಡಿಕಲ್ ಕಾಲೇಜ್ ಯೂನಿಯನ್ ಮತ್ತು ಹಿರಿಯಡ್ಕ ವಿದ್ಯುತ್ ಉಪಸ್ಟೇಶನಿನ ಉದ್ಘಾಟನೆಗಳು ಮೈಸೂರಿನ ಮುಖ್ಯಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ತಾ. ೩ನೇ ಬೆಳಿಗ್ಗೆ ಮಂಗಳೂರಿನಿಂದ ಹೊರಟು ಕಾರ್ಕಳದ ಮಾರ್ಗವಾಗಿ ಮಣಿಪಾಲಕ್ಕೆ ಆಗಮಿಸಿದಾಗ ಅವರಿಗೆ ಸಂಭ್ರಮದ ಸ್ವಾಗತ ನೀಡಲಾಯಿತು. ಬಳಿಕ ಕಸ್ತೂರ್ಬಾ ಮೆಡಿಕಲ್ ಕಾಲೇಜು ಯೂನಿಯನ್ ಉದ್ಘಾಟನೆಯನ್ನು ಅವರು ನೆರವೇರಿಸುತ್ತಾ, ಹೊಸ ರಾಜ್ಯದಲ್ಲಿ ಬೆಂಗಳೂರು, ಮೈಸೂರು ಮತ್ತು ಮಣಿಪಾಲ ಮೆಡಿಕಲ್ ಕಾಲೇಜುಗಳನ್ನು ಒಂದನೇ ದರ್ಜೆಯ ಸಂಸ್ಥೆಗಳನ್ನಾಗಿ ಮಾಡಬೇಕೆನ್ನುವ ಆಸೆ ತನಗಿದೆ ಎಂದರು. ಈ ಕಾಲೇಜಿನ ಬಗ್ಗೆ ತನ್ನ ಕೈಲಾದ ಸೇವೆ ಮಾಡುವುದಾಗಿ ಆಶ್ವಾಸನೆಯಿತ್ತರು. ದೇಶದಲ್ಲಿ ಡಾಕ್ಟರರ ಸಂಖ್ಯೆ ಬೆಳೆಯಬೇಕಾಗಿದೆ ಎಂಬುದನ್ನು ಒಪ್ಪಿದರು. ರಾಜಕೀಯ ವಿದ್ಯಮಾನಗಳ ಕುರಿತು ಮಾತನಾಡುತ್ತಾ, ಬಿಕ್ಕಟ್ಟಿನ ಪ್ರಸಂಗದಲ್ಲಿ ತನ್ನ ಧೈರ್ಯ ಗುಂದಲಿಲ್ಲವೆಂದೂ ಜನತೆ ನಾಳೆಯೂ ಸಹಕರಿಸುವುದೆಂದೂ ಆತ್ಮ ವಿಶ್ವಾಸವಿದೆಯೆಂದರು.

ಆರಂಭದಲ್ಲಿ ಶ್ರೀ ಹನುಮಂತಯ್ಯನವರಿಗೆ ಪುಷ್ಪಮಾಲಿಕೆಗಳನ್ನರ್ಪಿಸಲಾಯಿತು. ಯೂನಿಯನ್ ಅಧ್ಯಕ್ಷ ಶ್ರೀ ಕೆ. ಸಿ. ಚೆರಿಯಾನರು ಸ್ವಾಗತಿಸಿದರು. ಬಳಿಕ ಎಕೆಡಮಿ ರಿಜಿಸ್ಟ್ರಾರ್ ಡಾ. ಟಿ. ಎಮ್. ಎ. ಪೈಗಳು ಕಾಲೇಜು ಸ್ಥಾಪನೆ, ಬೆಳವಣಿಗೆ ಕುರಿತು ವಿವರಿಸಿ ಈ ಕಾಲೇಜು ಅಖಿಲಭಾರತ ಸ್ವರೂಪದ್ದಿರುವುದಾಗಿ ಹೇಳಿದರು. ಅಲ್ಲದೆ ನೂತನ ರಾಜ್ಯಕ್ಕಾಗಲೀ ಪಾರಿತೋಷಕವಾಗಿ ಈ ಕಾಲೇಜನ್ನು ಬಿಟ್ಟುಕೊಡಲು ಸಹ ಆಡಳಿತ ಮಂಡಳಿಯು ಸಿದ್ಧವಿದೆ ಎಂದು ಸೂಚಿಸಿದರು. ಕೊನೆಯದಾಗಿ ಕಾಲೇಜಿನ ವಕ್ಷ ಅಧ್ಯಾಪಕರ ನೆರವಿನಿಂದ ಪರೀಕ್ಷಾ ಫಲಿತಾಂಶವೂ ಉತ್ತಮ ಮಟ್ಟದಲ್ಲಿರುವುದೆಂದು ಸಂತೋಷ ವ್ಯಕ್ತಪಡಿಸಿದರು. ಕೇಪ್ಟನ್ ಮಂಗೇಶರಾಯರು ಕೊಟ್ಟ ಗುರಾಣಿಯನ್ನು ಮಂತ್ರಿಗಳು ಕಾಲೇಜು ಎಂಬುಲೆನ್ಸ್ ದಳಕ್ಕೆ ಪಾರಿತೋಷಕವಿತ್ತರು. ಡಾ. ರಾಮಚಂದ್ರ ರಾಯರು ವಂದನೆಗಳನ್ನಿತ್ತರು. ಮಧ್ಯಾಹ್ನ ಮಂತ್ರಿಗಳು ಕಾಲೇಜ್ ಕೇಂಟೀನಿನಲ್ಲಿ ಊಟ ತೀರಿಸಿದರು.

ಶ್ರೀ ಪುತ್ತಿಗೆ ಮಠಕ್ಕೆ ಸಂದರ್ಶನ —ಮುಖ್ಯ ಮಂತ್ರಿಗಳು ಅಪರಾಹ್ನ ಮಣಿಪಾಲದಿಂದ ಉಡುಪಿಗೆ ಬಂದು ಶ್ರೀ ಪುತ್ತಿಗೆ ಮಠಕ್ಕೆ ಸಂದರ್ಶನವಿತ್ತು ಅಲ್ಲಿಯ ಹಿರಿಯ ಶ್ರೀ ಸುಧೀಂದ್ರತೀರ್ಥ ಸ್ವಾಮಿಗಳವರ ಮತ್ತು ಕಿರಿಯ ಶ್ರೀ ಸುಜ್ಞಾನೇಂದ್ರತೀರ್ಥ ಸ್ವಾಮಿಗಳವರಿಂದ ಫಲಮಂತ್ರಾಕ್ಷತೆ, ಉಡುಗೊರೆ, ಉಪಾಹಾರ ಸತ್ಕಾರವನ್ನು ಸ್ವೀಕರಿಸಿದರು. ಈಗಿನ ವಾತಾವರಣಕ್ಕನುಗುಣವಾಗಿ ಧರ್ಮಪೀಠಾಧಿಕಾರಿಗಳು ನಿಮ್ನ ವರ್ಗದವರಿಗೂ ದೇವಸ್ಥಾನ ಪ್ರವೇಶಾದಿ ಸೌಲಭ್ಯಗಳು ದೊರೆಕುವಂತೆ ದೊಡ್ಡ ಮನಸ್ಸುಮಾಡಬೇಕೆಂದು ಪ್ರಾರ್ಥಿಸಿಕೊಂಡರು.

ಶ್ರೀಕೃಷ್ಣ ಮಠದಲ್ಲಿ— ಮಂತ್ರಿಗಳು ಶ್ರೀಕೃಷ್ಣ ಮಠಕ್ಕೆ ಬಂದು ಶ್ರೀಕೃಷ್ಣನ ದರ್ಶನ ಹಾಗೂ ಸ್ವಾಮಿಗಳವರ ದರ್ಶನ ಪಡೆದರು. ಅಷ್ಟಮಠಗಳ ಪರವಾಗಿ ವಸಂತ ಮಹಲಿನಲ್ಲಿ ಮುಖ್ಯಮಂತ್ರಿಗಳಿಗೆ ಆಶೀರ್ವಚನ ಪತ್ರವೊಂದನ್ನು ಶ್ರೀ ಸುಬ್ರಾಯ ಪುರಾಣಿಕರು ಒಪ್ಪಿಸಿದರು. ಪರ್ಯಾಯ ಶ್ರೀ ಅದಮಾರು, ಶ್ರೀ ಕಾಣಿಯೂರು, ಶ್ರೀ ಕೃಷ್ಣಾಪುರ ಶ್ರೀ ಸೋದೆ ಮತ್ತು ಶ್ರೀ ಫಲಿಮಾರು ಸ್ವಾಮಿಗಳವರು ಉಪಸ್ಥಿತರಿದ್ದರು. ಮಂತ್ರಿಗಳು ತಮಗಾದ ಆನಂದವನ್ನು ವ್ಯಕ್ತಪಡಿಸಿ ಶ್ರೀ ಅದಮಾರು ಮಠದ ಶ್ರೀ ವಿಭುದೇಶತೀರ್ಥ ಸ್ವಾಮಿಗಳವರು ತಮ್ಮ ಭಾಷಣದಲ್ಲಿ ಸೂಚಿಸಿದ ಸತ್ಯ ಮತ್ತು ಧರ್ಮದ ಕುರಿತು ತನಗೆ ಅತೀವ ಆನಂದವಾಗಿದೆ ಎಂದರು. ಧರ್ಮದಲ್ಲಿ ಆಸಕ್ತಿ, ಗುರುಹಿರಿಯರಲ್ಲಿ ಭಕ್ತಿಯುಳ್ಳ ತಾನು ಶ್ರೀ ಶ್ರೀಗಳವರ ಆಶೀರ್ವಾದದ ಬಲದಿಂದ ಧರ್ಮಕ್ಕಾಗಿ ಸತ್ಯಕ್ಕಾಗಿ ದುಡಿಯುವುದಾಗಿ ಹೇಳಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಗಳು ಶೃಂಗೇರಿ ಮೊದಲಾದ ಧರ್ಮ ಕ್ಷೇತ್ರಗಳಿಗೆ ಸಾರಿಗೆ ಸೌಕರ್ಯಗಳ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತಂದರು. ನಂತರ ಮಂತ್ರಿಗಳು ಮಲ್ಪೆಗೆ ತೆರಳಿ ಹಿಂತಿರುಗುವಾಗ ದಾರಿಯಲ್ಲಿ ಕೋಳಿಯಂಕವನ್ನು ಕಂಡು ಹಿರಿಯಡಕಕ್ಕೆ ಪ್ರಯಾಣ ಬೆಳೆಸಿದರು.

ಹಿರಿಯಡಕದಲ್ಲಿ ವಿದ್ಯುತ್ ಉಪಸ್ಟೇಶನ್ ಉದ್ಘಾಟನೆ— ಹಿರಿಯಡಕ ಶ್ರೀ ವೀರಭದ್ರ ದೇವಸ್ಥಾನಕ್ಕೆ ಬಂದಾಗ ಶ್ರೀ ಹನುಮಂತಯ್ಯನವರಿಗೆ ಸಂಭ್ರಮದ ಸ್ವಾಗತನೀಡಲಾಯಿತು. ಹಿರಿಯಡಕ ದೇವಸ್ಥಾನ ಮತ್ತು ಹಿರಿಯಡಕ ಪಂಚಾಯತ ಬೋರ್ಡುಗಳ ಕಡೆಯಿಂದ ಕ್ರಮವಾಗಿ ಶ್ರೀಗಳಾದ ಜಗಂಜೀವ ಆಳ್ವ ಮತ್ತು ಜಗಜೀವನ ಹೆಗ್ಡೆಯವರು ಮಾನಪತ್ರಗಳನ್ನಿತ್ತರು. ಮಂತ್ರಿಗಳು ವಿದ್ಯುತ್ ಪ್ರಸರಣ ಮಾಡಿ ಬೆಳಕಿನ ಆವಶ್ಯಕತೆಗಳೇನೆಂಬುವನ್ನು ವಿವರಿಸಿ ವಿದ್ಯುಚ್ಛಕ್ತಿಯು ಕೂಡಾ ದೇವಶಕ್ತಿಯುತವಾದುದೆಂದರು. ಉದಯವಾಗಲಿರುವ ಹೊಸ ರಾಜ್ಯವನ್ನು ಆದರ್ಶವಾಗಿ ಮಾಡಲು ಎರಡುಕೋಟಿ ಕನ್ನಡಿಗರು ಮುಂದಾಗಬೇಕೆಂದೂ ಹಾಗೆಯೇ ಆಗುವಂತಾಗಲೆಂದು ದೇವರನ್ನು ಪ್ರಾರ್ಥಿಸಿದರು. ಸಭಾಧ್ಯಕ್ಷತೆ ವಹಿಸಿದ ಶ್ರೀ ಟಿ ಎ. ಪೈ, ಎಮ್. ಎಲ್. ಎ. ಗಳವರು ಮಾತನಾಡುತ್ತಾ, ಮೈಸೂರಿನ ವಿದ್ಯುತ್ ಕರ್ನಾಟಕಕ್ಕೆ ಮಾತ್ರವಲ್ಲದೆ ಇಡೀ ಭಾರತಕ್ಕೇ ಪಸರಿಸುವಂತಾಗಲೆಂದು ಆಶಿಸಿದರು. ಮೈಸೂರು ಈ ಜಿಲ್ಲೆಗೆ ವಿದ್ಯುತ್ ಕೊಟ್ಟಂತೆ ನಮ್ಮ ಜಿಲ್ಲೆಯ ಪ್ರಾಕೃತಿಕ ಸಂಪತ್ತು ಮೈಸೂರಿಗೂ ಹೋಗುವಂತಾಗಲೆಂದು ಬಯಸಿದರು. ಡಾ. ಚಂದಯ್ಯ ಹೆಗ್ಡೆಯವರಿಂದ ಧನ್ಯವಾದ ಸಮರ್ಪಣೆಯಾಗಿ ರಾಷ್ಟ್ರ ಗೀತೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಭೋಜನಸತ್ಕಾರ— ಮಾನ್ಯ ಶ್ರೀ ಹನುಮಂತಯ್ಯನವರಿಗೆ ದಿ. ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಮತ್ತು ಕೆನರಾ ಬೇಂಕಿಂಗ್ ಕೋರ್ಪರೇಶನಿನವರು ರಾತ್ರಿ ಭೋಜನವೇರ್ಪಡಿಸಿದ್ದರು. ಭೋಜನಾನಂತರ ಡಾ. ಟಿ. ಎಮ್. ಎ. ಪೈ, ಮತ್ತು ಡಾ. ಎಸ್. ಆರ್. ಪೈಗಳು ತಂತಮ್ಮ ಬೇಂಕುಗಳ ಮತ್ತು ಜನತೆಯ ಪರವಾಗಿ ವಂದನೆಗಳನ್ನರ್ಪಿಸಿದರು. ಶ್ರೀ ಟಿ. ಎ. ಪೈ ಎಮ್. ಎಲ್. ಎ. ಗಳು ಮಾತನಾಡುತ್ತಾ, ಯಾವುದೇ ಜನಹಿತ ಕಾರ್ಯಗಳಲ್ಲಿ ದಕ್ಷಿಣಕನ್ನಡಿಗರ ಸಹಕಾರ ಇದ್ದೇ ಇದೆ ಎಂದು ನಮ್ಮ ಭಿನ್ನಾಭಿಪ್ರಾಯಗಳನ್ನೆಲ್ಲಾ ಬದಿಗಿಟ್ಟು ರಾಷ್ಟ್ರ ಕಲ್ಯಾಣಕ್ಕಾಗಿ ಎಲ್ಲರೂ ದುಡಿಯಬೇಕೆಂದೂ ಹೇಳಿದರು. ಮಂತ್ರಿಗಳು ದ. ಕನ್ನಡಿಗರ ಕಾರ್ಯಶಕ್ತಿ, ಶ್ರೀ ಪೈಗಳ ಜಾಣ್ಮೆಯನ್ನು ಶ್ಲಾಘಿಸಿ ಉತ್ತರವಿತ್ತ ಮೇಲೆ ಶ್ರೀ ವಿ. ಆರ್. ಕಾಮತರು ಧನ್ಯವಾದಗಳನ್ನರ್ಪಿಸಿದರು. ಮರುದಿನ ಮಂತ್ರಿಗಳು ಧರ್ಮಸ್ಥಳಕ್ಕಾಗಿ ಹಿಂತೆರಳಿದರು.

ವನಮಹೋತ್ಸವವು— ತಾ. ೫ರಲ್ಲಿ ತಾಲೂಕು ಕಚೇರಿಯಲ್ಲಿ ಸಬ್ ಕಲೆಕ್ಟರ್ ಶ್ರೀ ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ, ಬಿ. ವಾಸುದೇವ ರಾವ್, ಎಗ್ರಿಕಲ್ಚರಲ್ ಡೆಮೋನ್ ಸ್ಟ್ರೇಟರ್, ಟಿ. ವೆಂಕಟಪ್ಪಯ್ಯ ಪೈ ಮೊದಲಾದವರು ಮಾತನಾಡಿದರು. ತಹಶೀಲ್ದಾರ್ ಶ್ರೀ ಅಮೃತ ರಾಯರು ಧನ್ಯವಾದನಗಳನ್ನಿತ್ತರು.

ಮುನಿಸಿಪಲ್ ಆಫೀಸಿನಲ್ಲಿ— ಡಾ. ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಚೆರ್ಮನ್ ಶ್ರೀ ಕೆ. ಕೆ. ಪೈ, ಶ್ರೀಮತಿ ದೇವಕಿ ಮೊದಲಾದವರ ಮಾತುಗಳಾದುವು. ವಕೀಲ್ ಶ್ರೀ ಪಿ. ವಿ. ಆಚಾರ್ಯರು ವಂದನೆಗಳನ್ನಿತ್ತರು.

ಸರಕಾರಿ ಬುನಾದಿ ತರಬೇತಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯ ಶ್ರೀ ಬಿ. ಎಸ್. ಆಚಾರ್ಯರ ಅಧ್ಯಕ್ಷತೆಯಲ್ಲಿಯೂ, ಮುನಿಸಿಪಲ್ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಡೆಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಬಿ. ಪಿಂಟೋರವರ ಅಧ್ಯಕ್ಷತೆಯಲ್ಲೂ, ಮಣಿಪಾಲದಲ್ಲಿ ಅಲ್ಲಿಯ ಎಲ್ಲಾ ಶಾಲೆಗಳ ಸಂಯುಕ್ತ ಕೊಡುವಿಕೆಯಲ್ಲಿ ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲೂ ವನಮಹೋತ್ಸವ ಸಾಂಗವಾಯಿತು.

ಪ್ರೊಹಿಬಿಶನ್ ಮೊಕದ್ದಮೆ— ಯಲ್ಲಿ ಸಿಕ್ಕಿಬಿದ್ದ ಕೆಮ್ಮಣ್ಣು ಪದ್ದು ಪೂಜಾರಿಗೆ ಉಡುಪಿಯ ಜುಡೀಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ರಾಮಚಂದ್ರ ರಾಯರು ಇದೇ ತಾ. ೬ರಲ್ಲಿ ರೂಪಾಯಿ 500 ದಂಡನೆ ಮತ್ತು 6 ತಿಂಗಳು ಶಿಕ್ಷೆ ವಿಧಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 139/1956.

ರುಕ್ಮಿಣಿ ಶೆಡ್ತಿ —ವಾದಿಳು

1. ಸುಬ್ಬಣ್ಣ ಶೆಟ್ಟಿ 2. ರುಕ್ಮಿಣಿ ಶೆಡ್ತಿ —ಪ್ರತಿವಾದಿರು

ಮೇಲ್ಕಂಡ ವ್ಯಾಜ್ಯದಲ್ಲಿ 1ನೆ ಪ್ರತಿವಾದಿಗೆ ಆಗತಕ್ಕ ವ್ಯಾಜ್ಯದ ನೋಟೀಸು ತಾರೀಕು 30—7—56ಕ್ಕೆ ಇಟ್ಟಿರುವುದರಿಂದ ಆ ದಿವ್ಸ ಸದ್ರಿ ಪ್ರತಿವಾದಿಯು ಆಕ್ಷೇಪ ಹೇಳುವುದನ್ನು ಸದ್ರಿ ಕೋರ್ಟು ಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

P. Padmanabha Rao.
Vakil for Plaintiff.
Dated 11—7—56. Udipi.

ರಾಷ್ಟ್ರೀಯ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸಿ ರಾಷ್ಟ್ರಾಭಿವೃದ್ಧಿಗೆ ನೆರವಾಗಿರಿ.

ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—3—0

ನವಯುಗ ಪ್ರೆಸ್, ಉಡುಪಿ.

(೪ನೇ ಪುಟದಿಂದ)

ಮೈಸೂರು ಸರಕಾರವು ಹೊಸ ನಗರದಿಂದ ಬಾಳೆಬರೆ ವರೆಗೆ ಸರಿಗೆ ಹಾಕಿ ಕೊಡುವ ಕೆಲಸವನ್ನು ಮೊದಲು ಮುತುವರ್ಜಿ ವಹಿಸಿ ಮಾಡದಿದ್ದರೂ ಮದ್ರಾಸು ಸರಕಾರದ ವಿದ್ಯುಚ್ಛಕ್ತಿ ಇಲಾಖೆಯು ನಮ್ಮ ಜಿಲ್ಲೆಯ ಪ್ರದೇಶದಲ್ಲಿ ರಭಸದಿಂದ ಕೆಲಸ ಮುಂದರಿಸುತ್ತಾ ಹೋದುದರಿಂದ ಮೈಸೂರು ಸರಕಾರದ ಮೇಲೆ ಜಿಲ್ಲೆಯ ಮುಂದಾಳುಗಳ ಒತ್ತಾಯ ಹೆಚ್ಚಿತು. ಪರಿಣಾಮವಾಗಿ ಮೈಸೂರಿನ ಭಾಗದಲ್ಲಿ ಕೆಲಸ ಚೆನ್ನಾಗಿ ಮುಂದರಿಯಿತು. ಒಡಂಬಡಿಕೆಯಂತೆ ೧೯೫೭ನೇ ವರ್ಷದ ಮಧ್ಯದಲ್ಲಿ ಪೂರೈಕೆಯಾಗ ಬೇಕಾಗಿದ್ದ ವಿದ್ಯುಚ್ಛಕ್ತಿಯು, ಒಂದು ವರ್ಷ ಬೇಗನೇ ಅಂದರೆ ಈಗಲೇ ನಮಗೆ ಸಿಗುವಂತಾಯಿತು, ಈ ಸಾಧನೆಯು ನಿಜಕ್ಕೂ ತೃಪ್ತಿಯನ್ನೀಯುತ್ತದೆ.

ವಿದ್ಯುದುತ್ಪಾದನೆಯ ಕೇಂದ್ರ

ಮೈಸೂರಿನ ತೀರ್ಥಹಳ್ಳಿಗೆ ಸಮೀಪ ಅಂಬುತೀರ್ಥ ವೆಂಬಲ್ಲಿ ಒಂದು ಕಿರಿಹೊಳೆಯು ಹುಟ್ಟಿದೆ; ಅದು ಮುಂದೆ ೪೮ ಮೈಲು ಉತ್ತರಕ್ಕೆ ಹರಿದು, ಮೆಲ್ಲನೆ ಪಶ್ಚಿಮಕ್ಕೆ ಹತ್ತು ಮೈಲು ಹರಿದು ಗೆರೆಸೊಪ್ಪೆ ಎಂಬಲ್ಲಿ ೮೩೦ ಅಡಿಯಷ್ಟು ಕೆಳಗೆ ಘಟ್ಟದ ಕಿಬ್ಬದಿಯಿಂದ ನಾಲ್ಕು ಹೋಳುಗಳಾಗಿ ಧುಮುಕುತ್ತದೆ. ಇಲ್ಲಿಂದ ಮತ್ತೆ ೩೪ ಮೈಲು ದೂರ ಹರಿದು ಹೊನ್ನಾವರದಲ್ಲಿ ಅರಬಿ ಸಮುದ್ರವನ್ನು ಈ ನದಿ ಸೇರುತ್ತದೆ. ಇದೇ ಶರಾವತಿ!

ಶರಾವತಿಯು ಸಮುದ್ರಮಟ್ಟದಿಂದ ೨೩೩೦ ಅಡಿ ಎತ್ತರದಲ್ಲಿ ಉಗಮಿಸಿ ೧೫೦೦ ಅಡಿಯಷ್ಟು ಎತ್ತರದಲ್ಲಿ ಧುಮುಕಾಟವನ್ನು ಪ್ರಾರಂಭಿಸಿ ಜಲಪಾತವನ್ನುಂಟುಮಾಡಿದೆ. ಇದು ಜಗತ್ತಿನ ಅತ್ಯಂತ ಎತ್ತರವೂ ಶೋಭಾಯಮಾನವೂ ಆದ ಜಲಪಾತಗಳಲ್ಲೊಂದು. ಮೈಸೂರು ರಾಜ್ಯದ ಸಾಗರದಿಂದ ೨೦ ಮೈಲು, ದಕ್ಷಿಣ ರೈಲ್ವೆಗೆ ಆ ಪ್ರದೇಶದಲ್ಲಿರುವ ಕೊನೆಯ ನಿಲ್ದಾಣವಾದ ತಾಳಗುಪ್ಪದಿಂದ ಹನ್ನೆರಡು ಮೈಲು ದೂರದಲ್ಲಿದೆ. ಜಲಪಾತದ ಒಂದು ಮೈಲು ಪಶ್ಚಿಮಕ್ಕೆ ಕಂದರದಲ್ಲಿ ಮಹಾತ್ಮಾ ಗಾಂಧಿ ಜಲವಿದ್ಯುದಾಗರವಿದೆ. ಇಲ್ಲಿಂದಲೇ ನಮಗೆ ವಿದ್ಯುಚ್ಛಕ್ತಿ ಉತ್ಪಾದಿತವಾಗಿ ಹರಿದು ಬರುತ್ತದೆ.

ಈ ವಿದ್ಯುದಾಗರದ ಕೆಲಸವು ೧೯೩೯ರಲ್ಲಿ ಪ್ರಾರಂಭವಾಯಿತು; ಉತ್ಪಾದನೆಯು ೧೯೪೮ರಲ್ಲಿ ತೊಡಗಿತು. ಈ ವಿದ್ಯುದಾಗರದಲ್ಲಿರುವ ಎಂಟು ವಿದ್ಯುಜ್ಜನಕ ಯಂತ್ರಗಳಿಗೆ ತೂಬು ಬಾಗಿಲುಗಳಿಂದ ನದಿಯ ನೀರು ರಭಸದಿಂದ ಬೀಳುವಂತೆ ಮಾಡಿದ್ದಾರೆ. ಜೋಗಿಗೆ ೧೩ ಮೈಲು ಮೇಲ್ಗಡೆ ಹಿರೇ ಭಾಸ್ಕರವೆಂಬಲ್ಲಿ ೩೪೦೦ ಕೋಟಿ ಘನ ಅಡಿ ನೀರನ್ನು ಹಿಡಿದಿಟ್ಟುಕೊಳ್ಳಬಲ್ಲ ದೊಡ್ಡ ಜಲಾಶಯವನ್ನು ನಿರ್ಮಿಸಿದ್ದಾರೆ; ಅಲ್ಲದೆ ಜಲಪಾತದಿಂದ ಮೂರು ಮೈಲು ದೂರದ ಕರ್ಗಲ್ಲೆಂಬ ಮತ್ತೊಂದು ಜಲಾಶಯವನ್ನು ನಿರ್ಮಿಸಿ, ಅಲ್ಲಿಂದ ಜೋಗದ ವರೆಗೆ ಕಾಲುವೆಗಳನ್ನು ರಚಿಸಲಾಗಿದೆ.

ಈ ಕಾಲುವೆಯ ತುದಿಯಲ್ಲಿ ಪ್ರತಿಯೊಂದೂ ೩೪೦ ಅಡಿಯಷ್ಟು ದೂರದಲ್ಲಿರುವ ಆರಡಿ ವ್ಯಾಸದ ನಾಲ್ಕು ತೂಬು ಬಾಗಿಲುಗಳಿದ್ದು, ಇವುಗಳ ಮೂಲಕ ನೀರು ರಭಸದಿಂದ ಹರಿದು ಬಂದು ಕೊನೆಗೆ ಎಂಟು ಕವಲಾಗಿ ಎಂಟೂ ವಿದ್ಯುಜ್ಜನಕ ಯಂತ್ರಗಳನ್ನು ತಿರುಗಿಸಿ, ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತದೆ. ಈ ಕಾಲುವೆಗೆ ಏಕಪ್ರಕಾರವಾಗಿ ನೀರಿನ ಪೂರೈಕೆಯಾಗುತ್ತಿರುತ್ತದೆ. ಮಿಕ್ಕಿದ ನೀರು ಮಾತ್ರ ನದಿಯ ಪಾತ್ರದಲ್ಲೇ ಮುಂದರಿದು ಜೋಗಿನ ಜಲಪಾತವನ್ನುಂಟುಮಾಡುತ್ತದೆ. ವಿದ್ಯುದುತ್ಪಾದನೆಗೆ ನೀರನ್ನು ಕಮ್ಮಿಯಾಗಗೊಡುವುದಿಲ್ಲ; ಆದುದರಿಂದಲೇ ಗೆರಸೊಪ್ಪೆಯ ಜಲಪಾತವು ಕೆಲವೊಮ್ಮೆ (ಮುಖ್ಯವಾಗಿ ಕಡುಬೇಸಿಗೆಯಲ್ಲಿ) ತೀರ ಕ್ಷೀಣವಾಗಿ ತೋರುತ್ತದೆ.

ಕಟಪಾಡಿ— 1—6—45ರಂದು ಸ್ಥಾಪಿತವಾದ ಸ್ಥಳೀಯ ಎಸ್. ವಿ. ಎಸ್. ಹೈಸ್ಕೂಲಿನಲ್ಲಿ ವಿದ್ಯಾರ್ಥಿಗಳ ಸಂಖ್ಯೆಯು ಇದೇ ದಿನಾಂಕ 6ರಂದು 509ಕ್ಕೆ ಮುಟ್ಟಿದ ಸಂತೋಷಸೂಚನಾರ್ಥವಾಗಿ ಶಾಲಾಮುಖ್ಯ ಅಧ್ಯಾಪಕರ ಅಧ್ಯಕ್ಷತೆಯಲ್ಲಿ ಜರಗಿದ ವಿದ್ಯಾರ್ಥಿಗಳ ಸಭೆಯಲ್ಲಿ ಶಾಲೆಯ ಏಳಿಗೆಗಾಗಿ ದೇವತಾ ಪ್ರಾರ್ಥನೆಯಾಗಿ ಇದೇ ದಿನಾಂಕ 9ರಂದು ಶಾಲೆಗೆ ಈ ಬಗ್ಗೆ ರಜೆಕೊಡುವುದಾಗಿ ನಿಶ್ಚಯಿಸಲಾಯಿತು.

(ಗ್ರಾಮಾಂತರದಲ್ಲಿ ಸ್ಥಾಪಿತವಾದ ಹೈಸ್ಕೂಲುಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೀಗೆ ಅಧಿಕವಿರುವುದು ಅಪೂರ್ವವೆನ್ನಬೇಕು. ಅದರಲ್ಲೂ ಉಡುಪಿ ತಾಲೂಕಿನಲ್ಲಿ ಇತ್ತೀಚೆಗೆ ಸ್ಥಾಪಿತವಾದ ಹೈಸ್ಕೂಲುಗಳಲ್ಲಿ ಇದೇ ಪ್ರಥಮವೆಂದು ತಿಳಿದುಬರುತ್ತದೆ. ಈ ಬಗ್ಗೆ ಶಾಲಾ ಆಡಳಿತ ಮಂಡಳಿಯನ್ನು ಅಧ್ಯಾಪಕ ವೃಂದವನ್ನು ಅಭಿನಂದಿಸಬೇಕಾಗಿದೆ. ನಮ್ಮ ಜಿಲ್ಲೆಯಲ್ಲಿ ಇನ್ನು ಒಂದೆರಡು ಕಾಲೇಜಿನ ಆವಶ್ಯಕತೆ ತೋರಿಬರುತ್ತಿರುವುದರಿಂದ ಆಡಳಿತ ಮಂಡಳಿಯವರು ಇಲ್ಲೊಂದು ಕಾಲೇಜನ್ನು ತೆರೆಯುವ ಕುರಿತು ಪರ್ಯಾಲೋಚಿಸುವುದು ಸೂಕ್ತವಿದೆ. ಆಡಳಿತಮಂಡಳಿಯವರೂ ಈ ಘನಕಾರ್ಯವನ್ನು ಜಯಶೀಲಗೊಳಿಸುವಷ್ಟು ಸಮರ್ಥವಿದೆ ಎಂದು ಊರವರೊಬ್ಬರು ಬರೆಯುತ್ತಾರೆ.)

ಕಾರ್ಕಳ— ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಾ. 8ರಂದು ಬೆಳಿಗ್ಗೆ ಉಡುಪಿಗೆ ತೆರಳುವ ಸಂದರ್ಭದಲ್ಲಿ ಅವರಿಗೆ ಟೌನ್ ಮತ್ತು ಸರ್ಕಲ್ ಕಾಂಗ್ರೆಸ್ ಕಮಿಟಿಗಳ ವತಿಯಿಂದ ಶ್ರೀ ವೈಕುಂಠ ಬಾಳಿಗ ಎಂ. ಎಲ್. ಎ. ಯವರ ಅಧ್ಯಕ್ಷತೆಯಲ್ಲಿ ಜೈಹಿಂದ್ ಟಾಕೀಸಿನಲ್ಲಿ ಸಾರ್ವಜನಿಕ ಸ್ವಾಗತವೀಯಲಾಯಿತು. ಅಧ್ಯಕ್ಷರು ಶ್ರೀ ಹನುಮಂತಯ್ಯನವರ ಮುಖಂಡತ್ವದಲ್ಲಿ ನವಕರ್ನಾಟಕದ ಶುಭೋದಯವಾಗಲೆಂದು ಕೋರಿದರು. ಅತಿಥಿಗಳು ಕೃತಜ್ಞತೆಯನ್ನು ವ್ಯಕ್ತಪಡಿಸಿ ಭಾಷಣಮಾಡಿದರು.

ಸ್ಥಳೀಯ ಎಸ್. ವಿ. ಟಿ. ಹುಡುಗಿಯರ ಶಾಲೆಯಲ್ಲಿ ತಾ. 1ರಲ್ಲಿ ಜರಗಿದ ವನಮಹೋತ್ಸವ ಸಭೆಯಲ್ಲಿ ಜಿಲ್ಲಾ ಎಗ್ರಿಕಲ್ಚರಲ್ ಡೆಮೋನ್ಸ್ಟ್ರೇಟರ್ ಶ್ರೀ ಕೆ. ಸಂಜೀವ ಸೆಟ್ಟರು ಮಾತನಾಡುತ್ತಾ ದೇಶದ ಭವ್ಯ ಭವಿಷ್ಯವನ್ನು ಉತ್ತಮಗೊಳಿಸುವುದರಲ್ಲಿ ಸ್ತ್ರೀಯರ ಹೊಣೆಗಾರಿಕೆ ಏನಿದೆ ಎಂಬುದನ್ನು ವಿವರಿಸಿದರು.

ಶಂಕರ ನಾರಾಯಣ— ಕುಂದಾಪುರ ತಾಲೂಕಿನ ಶಂಕರನಾರಾಯಣ ಕೇಂದ್ರದಲ್ಲಿ ಇದೇ ತಾ. 1ರಲ್ಲಿ ಜಿಲ್ಲಾಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ನೂತನ ಹೈಸ್ಕೂಲನ್ನು ಉದ್ಘಾಟಿಸಿದರು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಸೂರ್ಯನಾರಾಯಣ ರಾಯರು ಸಮಾರಂಭದ ಅಧ್ಯಕ್ಷತೆವಹಿಸಿದ್ದರು. ಶ್ರೀ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ. ಅವರು ಸ್ವಾಗತಭಾಷಣ ಮಾಡಿದರು. ಶ್ರೀಗಳಾದ ಎಚ್. ಎಮ್. ಹೆಗ್ಡೆ, ಎನ್. ಎಸ್. ಪರಮೇಶ್ವರಯ್ಯ, ವೈ. ತೇಜಪ್ಪ ಸೆಟ್ಟರು ಕಾಲೋಚಿತಮಾತುಗಳನ್ನಾಡಿದರು.

ನೇರಂಬಳ್ಳಿ— ಕುಂದಾಪುರ ತಾಲೂಕು ನೇರಂಬಳ್ಳಿ ಶ್ರೀ ಗೋಪಿನಾಥ ಮತ್ತು ಶ್ರೀ ಮುಖ್ಯಪ್ರಾಣ ದೇವರಿಗೆ ಕಾಲಂಪ್ರತಿ ಜರಗುವ ಮಹಾಭಿಷೇಕ, ಹೂವಿನ ಪೂಜೆ ರಂಗಪೂಜಾದಿಗಳು ಇದೇ ತಾ. ೭ರಲ್ಲಿ ಶ್ರೀಗಳಾದ ನೇರಂಬಳ್ಳಿ ಹನುಮಂತಾಚಾರ್ಯ, ಸೀತಾರಾಮಾಚಾರ್ಯರ ನೇತೃತ್ವದಲ್ಲಿ ಗ್ರಾಮ ಭಕ್ತಾದಿಗಳ ಕೂಡುವಿಕೆಯಿಂದ ವಿಜೃಂಭಣೆಯಿಂದ ಸಾಂಗವಾದುವು.

ದ. ಕ. ಜಿಲ್ಲೆಯಲ್ಲಿ ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು

ಮಂಗಳೂರಲ್ಲಿ ಜೋಗ್ ವಿದ್ಯುತ್ ಪ್ರಸರಣೆಯ ಉದ್ಘಾಟನೆ

ಶ್ರೀ. ಹನುಮಂತಯ್ಯ

ಮೈಸೂರಿನ ಮುಖ್ಯ ಮಂತ್ರಿಗಳಾದ ಶ್ರೀ ಕೆ. ಹನುಮಂತಯ್ಯನವರು ಕೊಡಗು ರಾಜ್ಯದ ಸಂಚಾರ ಕಾರ್ಯಕ್ರಮ ಮುಗಿಸಿ ತಾ. 7ರಂದು ಬೆಳಿಗ್ಗೆ ಮಂಗಳೂರಿಗೆ ಆಗಮಿಸಿ ಅಪರಾಹ್ನ ದ. ಕ. ಜಿಲ್ಲಾ ಅಭಿವೃದ್ಧಿ ಮತ್ತು ಜನಹಿತಮಂಡಳಿಯ ಕಡೆಯಿಂದ ಸ್ವಾಗತ ಪಡೆದು ಕಾಂಗ್ರೆಸ್ ಕಚೇರಿಗೆ ಹೋಗಿ ಅಲ್ಲಿ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಭಾಷಣವಿತ್ತು ಸಂಜೆ ಮರೋಳಿಯಲ್ಲಿ ಕೆನರಾ ವರ್ಕ್‌ಶೋಪಿನ ಕಟ್ಟಡದಲ್ಲಿ ಜೋಗ್ ವಿದ್ಯುಚ್ಛಕ್ತಿ ಪ್ರಸರಣಾ ಕಾರ್ಯವನ್ನು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮದ್ರಾಸಿನ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಸೆಟ್ಟರು ವಹಿಸಿದ್ದರು. ಡಿವಿಜನಲ್ ಎಂಜಿನಿಯರ್ ಶ್ರೀ ಯು. ಪಿ. ನಾಯ್ಕರು ಸಮಾರಂಭಕ್ಕೆ ಶುಭವನ್ನು ಕೋರಿ ಬಂದ ಸಂದೇಶಗಳನ್ನು ಓದಿದರು. ಚೀಫ್ ಒಪರೇಶನ್ ಎಂಜಿನಿಯರ್ ಶ್ರೀ ಕಂದಸ್ವಾಮಿಯವರು ಸ್ವಾಗತಭಾಷಣಮಾಡುತ್ತಾ, ಸರಕಾರವು ಜೋಗ ವಿದ್ಯುತ್ತನ್ನು ಮಂಗಳೂರು ನಗರಕ್ಕೆ ಒಂದು ತಿಂಗಳೊಳಗೆ ಮಂಗಳೂರು ವಿದ್ಯುತ್ ಕಂಪೆನಿಯು ಒದಗಿಸಿಕೊಡುವಂತೆ ಅಗತ್ಯವುಳ್ಳ ಕ್ರಮ ಕೈಕೊಳ್ಳುವೆನೆಂದು ಆಶ್ವಾಸನೆಯಿತ್ತರು. ಶ್ರೀ ಹನುಮಂತಯ್ಯನವರು ತಮ್ಮ ಉದ್ಘಾಟನಾ ಭಾಷಣದಲ್ಲಿ, ಈಗ ಮೈಸೂರಲ್ಲಿ 120,000 ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉಪಯೋಗಿಸಲಾಗುತ್ತಿದೆಯಾದರೂ ಜನತೆಯ ಆವಶ್ಯಕತೆಗಳು ಹೆಚ್ಚಿದಂತೆ ಹೆಚ್ಚಿನ ವಿದ್ಯುಚ್ಛಕ್ತಿ ಉತ್ಪಾದನಾ ಆವಶ್ಯಕತೆಯಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಶರಾವತಿ ನದಿಯಲ್ಲಿ ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳ ವೆಚ್ಚದಿಂದ ಒಂದು ಜಲವಿದ್ಯುದಾಗರವನ್ನು ರಚಿಸುವ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ. ಈ ಯೋಜನೆ ಪೂರ್ಣವಾದ ಬಳಿಕ ಸುಮಾರು ಎಂಟು ಲಕ್ಷ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪಾದಿಸಲು ಸಾಧ್ಯವಾಗುವುದು. ಎಷ್ಟು ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯಾಗುತ್ತದೋ ಅಷ್ಟೇ ಪ್ರಮಾಣದಲ್ಲಿ ಸಮಾಜ ಮುಂದುವರಿಯುತ್ತದೆ ಎಂದರು. ವಿದ್ಯುಚ್ಛಕ್ತಿ ಬೆಲೆಯ ಕುರಿತು ಮಾತನಾಡುತ್ತಾ, ಕೇಂದ್ರ ಸರಕಾರದ ನಿರ್ದೇಶದಂತೆ ವಿದ್ಯುಚ್ಛಕ್ತಿ ಆಡಳಿತೆಯನ್ನು ಒಂದು ವಿದ್ಯುಚ್ಛಕ್ತಿ ಕಾರ್ಪೋರೇಶನಿಗೆ ಒಪ್ಪಿಸುವುದು ಉಚಿತವೆಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ ಶ್ರೀ ಎ. ಬಿ. ಸೆಟ್ಟರು ತಮ್ಮ ಭಾಷಣದಲ್ಲಿ ದ. ಕ. ಜಿಲ್ಲೆಗೆ ಜೋಗ್ ವಿದ್ಯುಚ್ಛಕ್ತಿಯನ್ನು ನಿಶ್ಚಿತ ಸಮಯಕ್ಕಿಂತ ಮುಂಚಿತವಾಗಿಯೇ ಒದಗಿಸಿಕೊಡುವಂತೆ ಮಾಡಿದ ಮೈಸೂರು ಸರಕಾರ ಮತ್ತು ವಿದ್ಯುತ್‌ಇಲಾಖೆಯವರಿಗೆ ವಂದನೆಗಳನ್ನಿತ್ತರು. ಮದ್ರಾಸು ಸರಕಾರವು ರಾಜ್ಯದ ಗ್ರಾಮಾಂತರಗಳಲ್ಲಿ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕಾಗಿ ಕೈಕೊಂಡ ವಿವಿಧ ಯೋಜನೆಗಳನ್ನು ತಿಳಿಸಿ ಪ್ರಕೃತ ಈ ಜಿಲ್ಲೆಯ 35 ಗ್ರಾಮಗಳಿಗೆ ವಿದ್ಯುತ್ ಸೌಕರ್ಯ ಒದಗಿಸಲಾಗಿದೆ. ದ್ವಿತೀಯ ಯೋಜನೆಯಲ್ಲಿ ಒಟ್ಟು 150 ಗ್ರಾಮಗಳಿಗೆ ವಿದ್ಯುಚ್ಛಕ್ತಿ ಪೂರೈಸಬೇಕೆಂಬ ಕಾರ್ಯಕ್ರಮವನ್ನಿಟ್ಟುಕೊಳ್ಳಲಾಗಿದೆ ಎಂದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಮಾತನಾಡುತ್ತಾ, ಮೈಸೂರು ಸರಕಾರದವರು ವಿದ್ಯುಚ್ಛಕ್ತಿ ದರವನ್ನು ತ್ವರ್ಯದಲ್ಲೇ ಕಡಿಮೆ ಮಾಡಬೇಕೆಂದೂ ಜಿಲ್ಲೆಗೆ ಕೊಡಲೊಪ್ಪಿದ ವಿದ್ಯುಚ್ಛಕ್ತಿಯನ್ನು ಬೇಗನೆ ಪೂರೈಸುವಂತಾಗಬೇಕೆಂದೂ ಹೇಳಿ ಜೋಗ್ ವಿದ್ಯುಚ್ಛಕ್ತಿಯು ನಮಗೆ ಬೇಗನೆ ದೊರಕುವಂತೆ ನೆರವಾದ ಸರ್ವರನ್ನೂ ಅಭಿನಂದಿಸಿದರು. ಸುಪರಿಂಟೆಂಡೆಂಟ್ ಎಂಜಿನಿಯರ್ ಶ್ರೀ ರಾಮಚಂದ್ರ ರಾಯರು ಧನ್ಯವಾದವಿತ್ತರು. ರಾತ್ರಿ ಜಿಲ್ಲಾ ಬೋರ್ಡಿನವರು ಮಂತ್ರಿಗಳಿಗೆ ಭೋಜನ ಸತ್ಕಾರವಿತ್ತರು.

ಶ್ರೀ ಎಚ್. ವಿಠಲ ಸೆಟ್ಟರು ಜರ್ಮನಿಗೆ— ಪೂನೆಯ ನೇಶನಲ್ ಕೆಮಿಕಲ್ ಲೆಬೊರೆಟರಿಯ ರಿಫ್ರಿಜರೇಶನ್ ಎಂಜಿನಿಯರ್ ಶ್ರೀ ಎಚ್. ವಿಠಲ ಸೆಟ್ಟರಿಗೆ, ಇಂಡೊ ಜರ್ಮನ ಸ್ಟಡಿ ಸೊಸೈಟಿಯಿಂದ ರಿಫ್ರಿಜರೇಶನ್ ಎಂಜನಿಯರಿಂಗಿನಲ್ಲಿ ಜರ್ಮನಿಯಲ್ಲಿ ಹೆಚ್ಚಿನ ತರಬೇತಿ ಹೊಂದಲು ಶಿಷ್ಯವೃತ್ತಿ ದೊರೆತಿದ್ದು ಇದೀಗ ಅವರು ತಾ. 8ರಲ್ಲಿ ಬೊಂಬಾಯಿಯಿಂದ ಪ್ರಯಾಣಬೆಳೆಸಿದರು. ಬಜ್ಪೆಯಿಂದ ಅವರು ಬೊಂಬಾಯಿಗೆ ವಿಮಾನಮೂಲಕ ಹೊರಟಾಗ ಅವರನ್ನು ಅವರ ಮಾವ ಮಾಜಿ ಜಿಲ್ಲಾಬೋರ್ಡು ಅಧ್ಯಕ್ಷ ಶ್ರೀ ಬಿ. ಎಮ್. ಹೆಗ್ಡೆ ಮೊದಲಾದವರು ಬೀಳ್ಕೊಟ್ಟರು.

ಸೂಡ— ತಾ. 6ರಲ್ಲಿ ಸ್ಥಳೀಯ ಬೋರ್ಡು ಮತ್ತು ಸುಬ್ರಹ್ಮಣ್ಯ ಹಾಯರ್ ಎಲಿಮೆಂಟರೀ ಶಾಲಾ ವಠಾರದಲ್ಲಿ ವನಮಹೋತ್ಸವವು ಶ್ರೀ ಎಮ್. ಅನಂತಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ, ಕಾರ್ಕಳ ತಹಶೀಲ್ದಾರ್ ಮೊದಲಾದವರ ಭಾಷಣಗಳಾದುವು.

ಕೆಳಂಜ ಬಾಳಿಲ— ಸ್ಥಳೀಯ ಯುವಕ ಸಂಘದ ವಾರ್ಷಿಕೋತ್ಸವವು ತಾ. 7ರಂದು ಶ್ರೀ ಮೇರಜೆ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು. ಸೋಶಿಯಲ್ ಎಜ್ಯುಕೇಶನ್ ಓರ್ಗನೈಜರ್ ಶ್ರೀ ದೇಸಾಯಿ ಕೃಷಿ ಪ್ರವರ್ತನವನ್ನು ಶ್ರೀ ಕನ್ಯಾನ ಭೀಮ ಭಟ್ಟರು "ಗ್ರಾಮಬಂಧು" ಪತ್ರಿಕೆಯ ವಿಶೇಷಾಂಕವನ್ನು ಉದ್ಘಾಟಿಸಿದರು. ಶ್ರೀ ಬೆಳ್ಳಾರೆ ಕಿಟ್ಟಣ್ಣ ರೈಗಳೇ ಮೊದಲಾದವರ ಭಾಷಣಗಳಾದ ಮೇಲೆ ಕಾರ್ಯದರ್ಶಿ ಶ್ರೀ ರಾಧಾಕೃಷ್ಣನವರು ಧನ್ಯವಾದಗಳನ್ನರ್ಪಿಸಿದರು.

ಫಜೀರು— ತಾ. 6ರಲ್ಲಿ ವನಿತಾ ಸಮಾಜದಲ್ಲಿ ವನಮಹೋತ್ಸವವು ಶ್ರೀ ಕೆ. ಎ. ಎನ್. ನಾಯರರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು. ವನಿತಾ ಸಮಾಜದ ಅಧ್ಯಕ್ಷೆ ಶ್ರೀಮತಿ ಸರಸ್ವತಿ ಅತಿಕಾರಿ ಮೊದಲಾದವರು ಸಸಿಗಳನ್ನು ನೆಟ್ಟರು.

ಯೆಕ್ಕಾರು— ತಾ. 7ರಂದು ಪಂಚಾಯತ ಬೋರ್ಡಿನ ವಠಾರದಲ್ಲಿ ಜಿಲ್ಲಾ ಪಂಚಾಯತು ಆಫೀಸರು ಶ್ರೀ ಕೆ. ಸೀನ ಶೆಟ್ಟರ ಅಧ್ಯಕ್ಷತೆಯಲ್ಲಿ ವನಮಹೋತ್ಸವವು ಊರವರ ಕೂಡುವಿಕೆಯಿಂದ ಯಥಾಯೋಗ್ಯವಾಗಿ ನೆರವೇರಿತು.

ಮಂಗಳೂರು

ಕಲಾಶಾಲಾ ವಿದ್ಯಾರ್ಥಿ ಯೂನಿಯನ್ ಚುನಾವಣೆ— ಮಂಗಳೂರ್ ಸ್ಯಾಂಟ್ ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿ ಯೂನಿಯನ್ನಿನ ಅಧಿಕಾರಿಗಳ ಚುನಾವಣೆಯು ತಾ. ೪ರಲ್ಲಿ ನಡೆದು ಶ್ರೀಗಳಾದ ಎಸ್. ರಮಾನಂದ ಹೆಗ್ಡೆ (ಅಧ್ಯಕ್ಷ), ಪಿ. ಬಿ. ರಾಮಕೃಷ್ಣ (ಪ್ರಧಾನ ಕಾರ್ಯದರ್ಶಿ), ಫ್ಲೇವಿಯನ್ ಪಿಂಟೊ (ಜತೆಕಾರ್ಯದರ್ಶಿ), ಎ. ಡಿ. ಕೊಸ್ತ (ಉಪಕಾರ್ಯದರ್ಶಿ), ಪಿ. ಪಿ. ಮೋಹನ್‌ಕುಮಾರ್‌ರವರು (ಸಹಾಯಕ ಕಾರ್ಯದರ್ಶಿ) ಆರಿಸಲ್ಪಟ್ಟಿರುವರು.

ಶ್ರೀ ಎಸ್. ರಮಾನಂದ ಹೆಗ್ಡೆಯವರು ತಾವು ಕಾಲೇಜು ಯೂನಿಯನ್ನಿನ ಅಧ್ಯಕ್ಷ ಚುನಾವಣೆಯಲ್ಲಿ ಜಯಶೀಲರಾದ ಬಗ್ಗೆ ಶ್ರೀ ಬಿ. ಎಮ್. ಜೋಸೆಫ್‌ರವರ ಅಧ್ಯಕ್ಷತೆಯಲ್ಲಿ ತಾ. ೮ರಂದು ಶ್ರೀಕೃಷ್ಣ ಭವನದಲ್ಲಿ ವಿದ್ಯಾರ್ಥಿ ಮಿತ್ರರಿಗೆ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀ ಹೆಗ್ಡೆಯವರು ಸ್ವಾಗತ ಭಾಷಣಮಾಡಿ ಚುನಾವಣೆಯಲ್ಲಿ ಜಯಶೀಲರಾದ ಬಗ್ಗೆ ಧನ್ಯವಾದಗಳನ್ನರ್ಪಿಸಿದರು. ಹಲವರ ಭಾಷಣಗಳಾದ ಮೇಲೆ ಅಧ್ಯಕ್ಷರು ಮಾತನಾಡುತ್ತ ಶ್ರೀ ಹೆಗ್ಡೆಯವರು ತಮ್ಮ ಕಾಲೇಜು ಯೂನಿಯನ್ನಿನ ಚರಿತ್ರೆಯಲ್ಲಿಯೇ ಬಿಡದೆ ಮೂರು ಸಲವೂ ಅಧ್ಯಕ್ಷರಾಗಿ ಹೊಸ ದಾಖಲೆಯನ್ನು ಉಂಟುಮಾಡಿದರೆಂಬ ಮೆಚ್ಚಿಗೆಯನ್ನು ಸೂಚಿಸಿದರು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಮಹಾಸಭೆಯು— ಕಳೆದ ತಾ. ೩೦ ಮತ್ತು ಇದೇ ತಾ. ೧ರಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರತಿಸರ್ಕಲ್ ಕಾಂಗ್ರೆಸ್ ಕಮಿಟಿಯ ಕ್ಷೇತ್ರದಲ್ಲಿ 20,000 ಜನಸಂಖ್ಯೆಗೆ ಒಂದರಂತೆ ಅಧೀನ ಸಮಿತಿಗಳನ್ನು ರಚಿಸುವ ಸಂಬಂಧ ಸರ್ಕಲ್ ಕಾಂಗ್ರೆಸ್ ಸಮಿತಿಗಳ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳ ಸಭೆ ಕರೆಯಬೇಕೆಂದು ನಿರ್ಧರಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯವರು ಕಾಂಗ್ರೆಸ್ ಶಾಸನ ಸಭಾ ಸದಸ್ಯರ, ಜಿಲ್ಲಾ ಬೋರ್ಡು ಮತ್ತು ನಗರ ಸಭೆಗಳ ಕಾಂಗ್ರೆಸ್ ಪಕ್ಷಗಳ ಕಾರ್ಯಕಲಾಪಗಳ ವರದಿಗಳನ್ನು ಆಗಾಗ ತರಿಸಿ, ಪರಿಶೀಲನೆ ನಡೆಸಬೇಕೆಂದು ತೀರ್ಮಾನಿಸಲಾಯಿತು. ಅಲ್ಲದೆ ಕಾಂಗ್ರೆಸ್ ಶಾಸನ ಸಭಾಸದಸ್ಯರ, ಜಿಲ್ಲಾ ಬೋರ್ಡು ಮತ್ತು ನಗರ ಸಭೆಗಳ ಕಾಂಗ್ರೆಸ್ ಪಕ್ಷಗಳ ನಾಯಕರು ಮತ್ತು ಕಾರ್ಯದರ್ಶಿಗಳ ಜಿಲ್ಲಾ ಬೋರ್ಡು ಅಧ್ಯಕ್ಷರ ಮತ್ತು ಉಪಾಧ್ಯಕ್ಷರ, ನಗರ ಸಭೆಗಳ ಚೇರ್‌ಮನ್ ಮತ್ತು ವೈಸ್ ಚೇರ್‌ಮನರ ಸಂಯುಕ್ತ ಸಭೆಯನ್ನು ಮೂರು ತಿಂಗಳಿಗೊಮ್ಮೆಯಾದರೂ ಕರೆದು ಸಮಾಲೋಚನೆ ನಡೆಸಬೇಕಾಗಿ ನಿಶ್ಚಯಿಸಲಾಯಿತು. ರಾಷ್ಟ್ರೀಯ ಸ್ವಾತಂತ್ರ್ಯಕ್ಕಾಗಿ ಸೇವೆಸಲ್ಲಿಸಿರುವ ಶ್ರೀಗಳಾದ ಶೇಷ ಭಟ್, ಭಿಡೆ ಮತ್ತು ಕರಿಯಂಗಳ ಮುತ್ತಯ್ಯ ಸೆಟ್ಟರ ನಿಧನಕ್ಕಾಗಿ ದುಃಖಸೂಚಕ ನಿರ್ಣಯವಾಯಿತು. ಬಳಿಕ ಜಿಲ್ಲೆಯಲ್ಲಿ ಕಾಂಗ್ರೆಸಿನ ಸ್ತ್ರೀ ವಿಭಾಗವನ್ನು ಬಲಪಡಿಸುವ ಕುರಿತು ನಡೆದ ಅಭಿಪ್ರಾಯ ವಿನಿಮಯದಲ್ಲಿ ಶ್ರೀಮತಿ ಕಲ್ಯಾಣಿ ಡಿ. ಸೆಟ್ಟಿ, ಶ್ರೀಮತಿ ಮೇರಿ ಬ್ರಿಟೋ ಮತ್ತು ಶ್ರೀಮತಿ ಕಾದಂಬರಿ ಹೊಳ್ಳ ಮೊದಲಾದವರು ಭಾಗವಹಿಸಿದ್ದರು. ಕಾಂಗ್ರೆಸಿನ ಸ್ತ್ರೀ ವಿಭಾಗದ ಕಾರ್ಯದರ್ಶಿಣಿಯರನ್ನು ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಮಂಡಳಿಯ ಎಸೋಸಿಯೇಟ್ ಮೆಂಬರರಾಗಿ ತೆಗೆದುಕೊಳ್ಳಬೇಕೆಂದು ನಿಶ್ಚಯಿಸಲಾಯಿತು.

ಯೂತ್ ಕಾಂಗ್ರೆಸಿನಲ್ಲಿ— ಶ್ರೀ ಎಸ್. ನರಸಪ್ಪಯ್ಯ, ಯಂ. ಯಲ್. ಸಿ. ಇವರ ಅಧ್ಯಕ್ಷತೆಯಲ್ಲಿ ತಾ. ೧ರಂದು ಚಹಾಕೂಟವೊಂದು ಜರಗಿ, ಶ್ರೀ ಎಫ್. ಎಚ್. ಒಡೆಯರ್‌ರವರು ಕರ್ನಾಟಕದ ಕುರಿತು ಮಾತನಾಡಿದರು.

ಜಿಲ್ಲಾ ರಾಜಕೀಯ ಪರಿಷತ್ತಿನ ಪೂರ್ವ ಸಿದ್ಧತೆಗಾಗಿ— ಜಿಲ್ಲೆಯ ಕಾಂಗ್ರೆಸ್ ನಾಯಕರ ಸಭೆಯೊಂದು ಇದೇ ತಾ. ೬ರಲ್ಲಿ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಅಕ್ಟೋಬರ ತಿಂಗಳಲ್ಲಿ ಜರಗಲಿಕ್ಕಿರುವ ಜಿಲ್ಲಾ ಪರಿಷತ್ತು ಮತ್ತು ಅದರ ಅಂಗವಾಗಿ ಏರ್ಪಡಿಸಬೇಕೆನ್ನುವ ಔದ್ಯೋಗಿಕ ಪ್ರದರ್ಶನಾದಿಗಳ ಪೂರ್ವ ಸಿದ್ಧತೆಗಾಗಿ ಸ್ವಾಗತ ಸಮಿತಿಯನ್ನು ರಚಿಸಲು ಈ ಕೆಳಗಿನವರು ತಾತ್ಕಾಲಿಕ ಕಾರ್ಯಕಾರೀ ಸಮಿತಿಗೆ ಆರಿಸಲ್ಪಟ್ಟರು: ಡಾ. ಯು. ಪಿ. ಮಲ್ಯ, ಅಧ್ಯಕ್ಷ, ಶ್ರೀಗಳಾದ ಕೆ. ಆರ್. ಆಚಾರ್ ಮತ್ತು ಎಫ್. ಎಕ್ಸ್. ಡಿ. ಪಿಂಟೋ, ಉಪಾಧ್ಯಕ್ಷರು, ಬಿ. ವಿ. ಬಾಳಿಗ ಕೋಶಾಧಿಕಾರಿ, ಕೆ. ಕೆ. ಸೆಟ್ಟಿ ಮತ್ತು ಬೋಜರಾವ್ ಜೋಯಿಸರ್, ಕನ್ವೀನರ್ಸ್, ಎಸ್. ನರಸಪ್ಪಯ್ಯ, ಬಿ. ಆರ್. ಕರ್ಕೇರ, ಎಮ್. ಶ್ರೀನಿವಾಸ ನಾಯಕ್, ಡಾ. ಕೆ. ಎನ್. ಆಳ್ವ, ಎ. ಶಂಕರ ಆಳ್ವ, ಜಿ. ಗೋಪಾಲ ಸಾಲಿನ್ಸ್, ಬಿ. ಬಿ. ಸೆಟ್ಟಿ, ಬಿ. ಮಂಜಯ್ಯ ಸೆಟ್ಟಿ, ಜೆ. ಎ. ಡಿ. ಬ್ರಿಟೋ, ಬಿ. ದಾಮೋದರ ಬಾಳಿಗ, ಕೆ. ಈಶ್ವರ, ಕೆ. ಎಸ್. ಎನ್. ಅಡಿಗ, ಕೇಶವ ಕುಡ್ವ, ಟಿ. ಅಣ್ಣಪ್ಪ ನ್ಯಾಯ್ಯ, ಟಿ. ಎ. ಪೈ, ವೈ. ಮಂಜಯ್ಯ ಸೆಟ್ಟಿ, ಕೆ. ವೆಂಕಟ್ರಮಣ ಗೌಡ, ಎಮ್. ಎಸ್. ಹೆಗ್ಡೆ ಮೊದಲಾದವರು.

ಜಿಲ್ಲಾ ದ್ವಿತೀಯ ಪಂಚವಾರ್ಷಿಕ ಯೋಜನಾ ಅಭಿವೃದ್ಧಿ ಕಾರ್ಯಗಳ ಪರಿಶೀಲನೆಗಾಗಿ— ಜಿಲ್ಲಾ ಪ್ಲಾನಿಂಗ್ ಬೋರ್ಡಿನ ಸಭೆಯು ಕಲೆಕ್ಟರ್ ಆಫೀಸಿನಲ್ಲಿ ಇದೇ ತಾ. 13, 14, 16, 18 ನೆ ದಿನಗಳಲ್ಲಿ ಪೂರ್ವಾಹ್ನ 10ರಿಂದ 1 ಗಂಟೆ ತನಕವೂ ಸಂಜೆ 3ರಿಂದ 6ರ ತನಕವೂ ದಿನಾಲೂ ಜರಗಲಿರುವುವು.

ವಿದಾಯ ಸತ್ಕಾರ— ಇದೇ ತಾ. 8ರಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾಗಿದ್ದ ಶ್ರೀ ಸಂಜೀವ ಭಟ್ಟರಿಗೆ ಜಿಲ್ಲಾ ಶಿಕ್ಷಣ ಸಂಘದವರು ರೆ. ಫಾ. ಜೇಮ್ಸ್ ಫ್ಯೂಲೊ ಇವರ ಅಧ್ಯಕ್ಷತೆಯಲ್ಲಿ ಬಿ. ಎಮ್. ಹೈಸ್ಕೂಲಿನಲ್ಲಿ ವಿದಾಯ ಸತ್ಕಾರ ಕೂಟವೊಂದನ್ನು ಕೊಟ್ಟು ಗೌರವಿಸಿದರು.

ಉದ್ಘಾಟನೆ— ಸ್ಯಾಂಟ್ ಎಲೋಸಿಯಸ್ ಕಾಲೇಜು ಯೂನಿಯನಿನ ಉದ್ಘಾಟನೆಯು ತಾ. 7ರಲ್ಲಿ ಮೈಸೂರಿನ ಪ್ರಧಾನಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಂದ ನೆರವೇರಿಸಲ್ಪಟ್ಟಿತು. ಅವರು ಭಾಷಣಮಾಡುತ್ತಾ, ಯಾವುದೇ ಸಮಾರಂಭವನ್ನು ಪ್ರಾರ್ಥನೆಯೊಂದಿಗೆ ಪ್ರಾರಂಭಿಸುವ ಯುಕ್ತತೆಯನ್ನು ವಿವರಿಸಿದರು. ಆರಂಭದಲ್ಲಿ ಪ್ರಿನ್ಸಿಪಾಲ್ ರೆ. ಫಾ. ಸಲ್ಡಾನರು ಸ್ವಾಗತಿಸಿದರು. ಕೊನೆಯಲ್ಲಿ ಕಾಲೇಜುಯೂನಿಯನಿನ ಅಧ್ಯಕ್ಷ ಶ್ರೀ ಯಸ್ ರಮಾನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು

ಮೂಲ್ಕಿ— ಸ್ಥಳೀಯ ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು ಇದೇ ತಾ. ೧ರಲ್ಲಿ ಜರಗಿ ಕಳೆದ ತಾ. 19—5—56ರಿಂದ ನಡೆಯುತ್ತಿರುವ ಸತ್ಯಾಗ್ರಹದ ಕುರಿತು ವಿಚಾರವಿನಿಮಯ ಮಾಡಿ ಈ ಕೆಳಗಿನ ನಿರ್ಣಯವನ್ನು ಮಾಡಿತು. ಕಾರ್ನಾಡಿನ ಶ್ರೀಮತಿ ಶೀಲಿ ಶೆಡ್ತಿಯವರ ಆಸ್ತಿಯಲ್ಲಿ ಮೂಲ್ಕಿ ರೈತಸಂಘವು ಪ್ರಾರಂಭಿಸಿರುವ ಸತ್ಯಾಗ್ರಹಕ್ಕೆ ನ್ಯಾಯವಾದ ಕಾನೂನುಬದ್ಧವಾದ ಅಥವಾ ಮಾನವಿಯತೋತ್ಪಾದಿ ಕಾರಣಗಳಾವುವೂ ಇರುವುದಿಲ್ಲ. ಈ ಸತ್ಯಾಗ್ರಹವು ಮೂಲ್ಕಿಯ ಬೇಜವಾಬ್ದಾರಿ ಮತ್ತು ಸಮಾಜ ಕಂಟಕ ವ್ಯಕ್ತಿಗಳಿಂದ ಕೇವಲ ಪ್ರಚಾರದ ಉದ್ದೇಶಕ್ಕಾಗಿ ಮೂಲ್ಕಿಯ ಹೊರಗಿನ ಪ್ರದೇಶಗಳಿಂದ ಆಮದು ಮಾಡಿಕೊಂಡ ಜನರಿಂದ ಆರಂಭಿಸಲ್ಪಟ್ಟಿದೆ. ಈ ಸತ್ಯಾಗ್ರಹವನ್ನು ಮಾಡಿಕೊಂಡು ಹೋಗುವಾಗ ಅನುಸರಿಸಲಾಗುತ್ತಿರುವ ವಿಧಾನಗಳು, ಸುಸಂಸ್ಕೃತ ನಡತೆಗೆ ವಿರೋಧಾಭಾಸವಾಗಿವೆಯಲ್ಲದೆ ರಾಜ್ಯಾಂಗ ಘಟನೆಯಲ್ಲಿ ಭದ್ರಪಡಿಸಿರುವ ಮೂಲಭೂತ ಹಕ್ಕುಗಳಿಗೆ ಬೆದರಿಕೆಯಾಗಿವೆ. ಈ ಸತ್ಯಾಗ್ರಹ ಮತ್ತದಕ್ಕೆ ಸಂಬಂಧಿಸಿದ ಇತರ ಚಟುವಟಿಕೆಗಳನ್ನು ನಿಲ್ಲಿಸುವರೆ ಶೀಘ್ರ ಕ್ರಮ ಕೈಕೊಳ್ಳುವಂತೆ ಸರಕಾರವನ್ನು ವಿನಂತಿಸಿಕೊಳ್ಳಬಹುದು.

(೧೦ನೇ ಪುಟದಿಂದ)

ಆಚಾರ್ಯರ ಸಿದ್ಧಾಂತಗಳನ್ನು ಸನಾತನ ಸತ್ಯಗಳೆಂದು ಕರೆಯಲು ಯಾವುದೇ ಆಕ್ಷೇಪವಿಲ್ಲ. ಆದುದರಿಂದ ಆಹಾರ, ಆಚಾರ ಮತ್ತು ಸಂಸ್ಕಾರಗಳ ವಿಷಯದಲ್ಲಿ ನಾವು ಕಲಬೆರಕೆಯ ಹವ್ಯಾಸಕ್ಕೆ ಹೋಗಬಾರದೆಂದು ಸ್ವಾಮೀಜಿ ಹಿತ ನುಡಿಯುತ್ತಾರೆ. ಸಮಾಜದ ಬೇರೆ ಬೇರೆ ಕಾರ್ಯಕ್ಷೇತ್ರಗಳಲ್ಲಿ ದುಡಿಯಲು ಅತ್ಯಂತ ಯೋಗ್ಯರಾದವರನ್ನು ಸಿದ್ಧಪಡಿಸುವುದೇ ಈ ಆಚಾರ ಮತ್ತಿತರ ನಿಯಮಗಳ ಗೂಢ ರಹಸ್ಯವೆಂದವರ ಖಚಿತ ಅಭಿಪ್ರಾಯ.

ಇಲ್ಲಿಯೊಂದು ಪ್ರಸಂಗವನ್ನು ನೆನೆಯಬಹುದು: ಬರ್ನಾರ್ಡ್ ಶಾರನ್ನೊಮ್ಮೆ ನಟಿಯೊಬ್ಬಳು ಸಂಧಿಸಿ "ನಮ್ಮ ಮದುವೆಯಾದರೇನು? ಹುಟ್ಟುವ ಮಗುವಿಗೆ ನಿಮ್ಮ ಬುದ್ಧಿ ಮತ್ತು ನನ್ನ ಸೌಂದರ್ಯ ಬಂದೀತು" ಎಂದಳಂತೆ. ಅದಕ್ಕೆ ಶಾ "ಇದಕ್ಕೆ ವಿರುದ್ಧವಾದರೆ?" ಎಂಬ ಮರು ಪ್ರಶ್ನೆ ಹಾಕಿ ಬಾಯಿ ಮುಚ್ಚಿಸಿದರಂತೆ. ಆದುದರಿಂದ ಕಸಿಕಟ್ಟುವ ಹವ್ಯಾಸ ಸತ್ಪರಿಣಾಮವನ್ನೇ ಮಾಡುವುದೆಂಬ ನಂಬಿಕೆಯಿಲ್ಲ. ಅದು ಒಂದು "ಛಾನ್ಸ್" ನೋಡಿದಂತೆ—ಹೋದರೆ ಕಲ್ಲು, ಬಂದರೆ ಹಣ್ಣು ಎಂಬಂಥ ಛಾನ್ಸ್ ಪರೀಕ್ಷೆ ಮಾತ್ರ ಅಲ್ಲ.

ಕಲಬೆರಕೆಯು ಮೂಲಗುಣವನ್ನು ಗಣನೀಯವಾಗಿ ಕೆಡಿಸುತ್ತದೆ. ಪೋಷಕ ಗುಣಗಳ ಅಭಾವವುಂಟಾದಾಗ ಸಾಮಾಜಿಕ ಸ್ವಾಸ್ಥ್ಯವೂ ಕೆಡುತ್ತದೆ. ನಾವು ಸಾಮಾಜಿಕ ಪುರೋಗತಿಯನ್ನೇ ಪೇಕ್ಷಿಸುವವರಾಗಿದ್ದೇವೆ. ಆದುದರಿಂದ ಸಾಮಾಜಿಕ ಸ್ವಾಸ್ಥ್ಯವನು ಎಲ್ಲ ರೀತಿಯಿಂದಲೂ ರಕ್ಷಿಸಲು ಬದ್ಧಕಂಕಣರಾಗಬೇಕು. ರಾಜನು ಈ ಕರ್ತವ್ಯಪಾಲನೆಗೆ ಬದ್ಧನಾಗಿದ್ದಾನೆ. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೆಲ್ಲರೂ ಅವರ ಸಹಕಾರದಿಂದ ಈ ಹೊಣೆಗಾರಿಕೆಯನ್ನು ನೆರವೇರಿಸಬೇಕು. ಗೀತೆಯ ಸಾರವನ್ನು ಇಲ್ಲೆಲ್ಲ ತಿಳಿದು ವರ್ತಿಸಿದೆವಾದರೆ ಇಂದಿನ ಎಲ್ಲ ದ್ವಂದ್ವಮಯ ಸನ್ನಿವೇಶಗಳಿಂದಲೂ ಪಾರಾಗುವ ಸೌಭಾಗ್ಯ ನಮ್ಮದಾಗುವುದು ನಿಶ್ಚಯ.

[ಬರೆದು ಬಂದುದು]

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ|| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭವಾದ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ
ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೆಗಳಿಗೆ

ಬೇಕಾಗುವ ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಿ, ಸಂಬಳ ಬಟವಾಡೆ ರಿಜಿಸ್ಟ್ರಿ, ಇನ್‌ಕಮ್ ಸರ್ಟಿಫಿಕೇಟು ಫಾರ್ಮು, ಮಂತ್ಲಿ ರಿಟರ್ನ್, ರಿಕಾರ್ಡು ಶೀಟು, ಎಡ್ಮಿಶನ್ ಫಾರ್ಮು, ಇತ್ಯಾದಿಗಳೂ ಪ್ರೊವಿಡೆಂಟ್ ಫಂಡಿಗೆ ಸಂಬಂಧಿಸಿದ ಎಲ್ಲಾ ಫಾರ್ಮುಗಳೂ ದೊರೆಯುತ್ತವೆ.

ಉತ್ತಮ ಕಾಗದ, ದರ ಸುಲಭ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ವರ್ಣಾಧರಿತವಾದ ಭಾರತೀಯ ಆಚಾರ ಧರ್ಮ

(೩ನೇ ಪುಟದಿಂದ)

ಆದುದರಿಂದ ನಾವು ಈಗಿನವುಗಳ ನಿಂದೆಮಾಡುವುದನ್ನೇ ಧ್ಯೇಯವಾಗಿಟ್ಟುಕೊಂಡರೆ, ಕಿರಿಯ ಜನಾಂಗಕ್ಕೆ ಇದ್ದದ್ದೂ ಹೋಯಿತೆಂಬ ಇಮ್ಮಡಿ ನಷ್ಟದ ಪರಿಸ್ಥಿತಿಯೇ ಎದುರಾಗುತ್ತದೆ.

ಸುಧಾರಣೆಗಳನ್ನು ನಾವು ನಿರಾಕರಿಸಬೇಕೆಂದೇನು ಇದರ ಅರ್ಥವಲ್ಲ. ಇತಿಹಾಸದ ಪುಟಗಳನ್ನವಲೋಕಿಸಿದರೆ ಸುಧಾರಣೆಯ ಚಳವಳಿಗಳು ತಮ್ಮ ಉದ್ದೇಶ ಸಿದ್ಧಿಯಾದ ಬೆನ್ನಿಗೆ ಅವಸಾನಗೊಂಡಿರುವುದನ್ನು ಕಾಣಬಹುದು. ಸುಧಾರಣೆಯ ಚಳವಳವೆಂದರೆ ರೋಗಕ್ಕೆ ನಡೆಸುವ ಚಿಕಿತ್ಸೆಯಂತಿದೆ. ದೇಹಾರೋಗ್ಯವು ಕೆಡಲು ಏನು ಕಾರಣವಾಯಿತೋ ಅದನ್ನು ನಿವಾರಿಸುವುದಷ್ಟೆ ಔಷಧದ ಉದ್ದೇಶ. ರೋಗ ನಿವಾರಣೆಯಾಗುವ ವರೆಗಷ್ಟೇ ಔಷಧದ ಸೇವನೆ ಅತ್ಯಾವಶ್ಯಕ ಪಥ್ಯವೂ ಅನಿವಾರ್ಯ. ಆದರೆ ರೋಗ ಗುಣವಾದ ಬಳಿಕವೂ ಮದ್ದನ್ನು ತೆಗೆದುಕೊಳ್ಳುವಂತಿಲ್ಲ; ಆ ನಂತರ ಮದ್ದಿನ ಉಪಯುಕ್ತತೆ ಇರುವುದಿಲ್ಲ.

ರೋಗಕ್ಕೆ ಯೋಗ್ಯ ಔಷಧವನ್ನು ನೀಡಬಲ್ಲ ವೈದ್ಯರನ್ನು ನಾವು ಹೇಗೆ ಹುಡುಕುತ್ತೇವೊ ಹಾಗೆಯೇ ಸಿದ್ಧಾಂತಗಳಿಗೆ ಸಮರ್ಪಕ ಅರ್ಥ ಹೇಳುವವರನ್ನೂ ನಾವು ಹುಡುಕಿಕೊಂಡು ಹೋಗಬೇಕಾಗುತ್ತದೆ. ಗೀತೆಯ ವಿಷಯದಲ್ಲಿಯೇ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥ ವಿವರಿಸುತ್ತಾರೆ. ಯಾವುದು ನಮ್ಮ ರೋಗಕ್ಕೆ ತಕ್ಕ ಮದ್ದನ್ನು ವಿಧಿಸುತ್ತದೆ ಎಂಬುದನ್ನು ಕಂಡುಕೊಳ್ಳುವುದೇ ನಮ್ಮ ಹುಡುಕಾಟದ ವೈಶಿಷ್ಟ್ಯ.

ಈ ದೃಷ್ಟಿಯಿಂದ ಶ್ರೀ ಅಯ್ಯರರ ಗೀತಾ ಭಾಷ್ಯವನ್ನೋದೋಣ. ಅಲ್ಲಿ ಸ್ವಧರ್ಮ ಎಂದರೇನು ಎಂಬುದನ್ನು ವಿವರಿಸುತ್ತಾ ಅಯ್ಯರರು ಅದು ಸ್ವಭಾವದೊಡನೆ ನಿಕಟ ಸಂಬಂಧವನ್ನು ಪಡೆದಿದೆ ಎಂದಿದ್ದಾರೆ. ಸ್ವಭಾವವು ಉಪ್ಪಿನಲ್ಲಿರುವ ಉಪ್ಪಿನ ರುಚಿಯಂತಿದೆ. "ಉಪ್ಪು ತನ್ನ ಉಪ್ಪಿನ ರುಚಿಯನ್ನು ಕಳೆದುಕೊಂಡರೆ ಬೇರೇತರಿಂದ ಅದಕ್ಕೆ ಉಪ್ಪಿನ ರುಚಿ ಬಂದೀತು? ಬರಲಾರದು." ಎಂದು ಯೇಸು ಕ್ರಿಸ್ತನು ಬೈಬಲಿನಲ್ಲಿ ವಿವರಿಸಿದ್ದಾನೆ.

ಸ್ವಭಾವವು ಸತ್ವ, ರಜಸ್, ಮತ್ತು ತಮಸ್ ಎಂಬ ತ್ರಿಗುಣಗಳಿಂದ ಪೋಷಿತವಾಗಿದೆ ಎಂದು ಸಹ ಗೀತೆಯು ಹೇಳುತ್ತದೆ. ಇದಕ್ಕನುಸಾರವಾಗಿ, ಸತ್ವಗುಣಾತಿಶಯವಿದ್ದವನ, ಬ್ರಾಹ್ಮಣ ನೆನಿಸುತ್ತಾನೆ; ರಜೋಗುಣಾತಿಶಯವಿದ್ದವನು ಕ್ಷತ್ರಿಯ ನೆನಿಸುತ್ತಾನೆ; ರಜೋಗುಣವು ಸಾಧಾರಣವಿದ್ದಾತನು ವೈಶ್ಯ ನೆನಿಸುತ್ತಾನೆ; ತಮೋಗುಣದಾತನೇ ಶೂದ್ರನಾಗಿದ್ದಾನೆ. ಸ್ವಭಾವವಾಗಲೀ ಸ್ವಧರ್ಮವಾಗಲೀ ಈ ಗುಣಗಳಿಂದ ಬೇರೆಯಾಗಿರಲಾರದು. ಈ ಗುಣಗಳಿಗೆ ಪೂರಕವಾದುದೇ ಕರ್ಮ. ಗುಣ ಪೋಷಿತವಲ್ಲದ ಕರ್ಮಗಳಲ್ಲಿ ನಿರತರಾಗಬೇಕೆಂದು ಬಯಸುವವನು ಪರಧರ್ಮಾನುಕರಣ ಮಾಡಿದಂತಾಗುತ್ತದೆ.

೦೦

ಅಯ್ಯರರ ಈ ದೃಷ್ಟಿಕೋಣವು ಗುಣ ಮತ್ತು ಕರ್ಮಾಧರಿತವೂ ಭಗವಂತನಿಂದ ಸೃಷ್ಟಿಸಲ್ಪಟ್ಟುದೂ ಆದ ಚಾತುರ್ವರ್ಣಗಳು ಜನ್ಮ ಮೂಲವಾಗಿರಲೇಬೇಕೆಂಬ ಮಹಾತ್ಮ ಗಾಂಧೀಜಿಯ (ಮತ್ತು ಅನೇಕ ಸನಾತನಿಗಳ) ಅಭಿಪ್ರಾಯವನ್ನು ಸಂಪೂರ್ಣ ಸರಿ ಎಂದು ಹೇಳುವುದಿಲ್ಲ. ಮನುಷ್ಯನ ಗುಣ ಮತ್ತು ಕರ್ಮಗಳು ಸಂಸ್ಕಾರ ಬಲದಿಂದ ಪರಿವರ್ತನೆಗೊಳಪಡಬಹುದು. ಹೀಗೆ ಪರಿವರ್ತಿತವಾದ ಪ್ರಸಂಗಗಳಲ್ಲಿ ಗೀತೆಯಲ್ಲಿ ಹೇಳಿದ ಭಯವು ತುಸುಮಟ್ಟಿಗೆ ಉಂಟಾದರೂ ಅದರಿಂದ ಕಂಗೆಡದಿರುವಷ್ಟು ಆತನು ಧೀಶಕ್ತಿ ಸಂಪನ್ನನಾಗಿರಬಹುದು.

ಉದಾಹರಣೆಗೆ, ಕನಕದಾಸರು ಜನ್ಮದಲ್ಲಿ ಕುರುಬರಾದರೂ ಅವರು ವಾದಿರಾಜರಷ್ಟೇ ಆಧ್ಯಾತ್ಮಿಕ ಸಂಪತ್ತಿನಿಂದ ತುಂಬಿತುಳುಕಿದ್ದರು. ಜಾತ್ಯಭಿಮಾನಿಗಳು ಅವರನ್ನು ಶ್ರೀಕೃಷ್ಣ ದೇವಸ್ಥಾನದೊಳಕ್ಕೆ ಬಿಡಲಿಲ್ಲವೆಂಬುದೇ 'ಕನಕ' ದಾಸರನ್ನು ಕಾಡಿದ ಭಯದ ಒಂದು ರೂಪ. ಜನ್ಮದತ್ತ ಮಾತ್ರ ದೃಷ್ಟಿಯುಳ್ಳ ಅವಿವೇಕಿಗಳು ಇರುವ ವರೆಗೆ ಹೀಗೆ ನಡೆದೇ ತೀರುತ್ತದೆ. ಆದರೆ ವಿವೇಕಿಗಳು ಜನ್ಮ ಮೂಲವನ್ನು ಪರಿಗಣಿಸುವುದಿಲ್ಲ. ಶ್ರೀ ಶಂಕರ ಭಗವತ್ಪಾದರಿಗೆ ದೇವರು ಹೊಲೆಯನ ರೂಪದಲ್ಲಿ ಕಾಶಿಯಲ್ಲೊಮ್ಮೆ ಕಾಣಿಸಿಕೊಂಡನು. ಆಗ ಅವರು ಈ ಆಧ್ಯಾತ್ಮಿಕ ತೇಜಸ್ಸಿನಿಂದ ತುಂಬಿತುಳುಕುವ ವ್ಯಕ್ತಿಯು ಜನ್ಮದಿಂದ ಚಂಡಾಲನಾಗಿರಲಿ, ಬ್ರಾಹ್ಮಣನಾಗಿರಲಿ, ತನ್ನ ಗುರು ಎಂದು ಉದ್ಗರಿಸಿದರು.

ಮಹಾಭಾರತದಲ್ಲಿ ಯುಧಿಷ್ಠಿರನು ಹೀಗೆನ್ನುತ್ತಾನೆ—"ಯಾರಲ್ಲಿ ಸತ್ಯ, ಔದಾರ್ಯ, ಕ್ಷಮಾಶೀಲತೆ, ಒಳ್ಳೆಯ ನಡತೆ, ನಿಷ್ಪಾಪಬುದ್ಧಿ, ಭಕ್ತಿ ಮತ್ತು ಕರುಣೆಗಳಿರುವುವೋ ಆತನು ಸ್ಮೃತಿಗಳಿಗನುಸಾರವಾಗಿ ಬ್ರಾಹ್ಮಣನೆನಿಸುತ್ತಾನೆ. ಈ ಗುಣಗಳಿಲ್ಲದಾತನು ಶೂದ್ರ." ಶ್ರೀಕೃಷ್ಣನ ಮುಖದಿಂದ ಬಂತೆಂದು ಮಹಾಭಾರತವು ಹೇಳುವ ಇನ್ನೊಂದು ವಾಕ್ಯವು ಜನ್ಮ ಮೂಲವಾದ ಯಾವ ವರ್ಣಕ್ಕೆಯೇ ಒಬ್ಬನು ಹೊಂದಿರಲಿ, ಆತನಲ್ಲಿ ಭಕ್ತಿ ಇದ್ದುದಾದರೆ ಆತನೆಂದೂ ಶೂದ್ರನೆನಿಸಲಾರನು; ಆತನು ಬ್ರಾಹ್ಮಣನಾಗಿದ್ದಾನೆ ಎನ್ನುತ್ತದೆ. ದೇವರಲ್ಲಿ ಭಕ್ತಿ ಇಲ್ಲದಾತನೇ ಶೂದ್ರನೆಂದು ಶ್ರೀ ಕೃಷ್ಣನ ಮತ. ಧರ್ಮವ್ಯಾಧ, ವಿದುರ ಎಲ್ಲರ ಕತೆಯೂ ಇದನ್ನೆ ಹೇಳುತ್ತದೆ.

ವೇದಗಳಲ್ಲಾಗಲೀ ಹಿಂದೂಗಳ ಇತರ ಪವಿತ್ರ ಗ್ರಂಥಗಳಲ್ಲಾಗಲೀ (ಉದಾ: ಗೀತೆ) ಉಚ್ಚನೀಚತ್ವವು ಮನ್ನಿಸಲ್ಪಟ್ಟಿಲ್ಲ. ಪುರುಷಸೂಕ್ತವು ಪರಮಾತ್ಮನ ಬಾಯಿ, ತೋಳು, ತೊಡೆ ಮತ್ತು ಪಾದಗಳಿಂದ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರರ ಸೃಷ್ಟಿಯು (ಕ್ರಮವಾಗಿ) ಆಯಿತೆನ್ನುತ್ತದೆ. ಇವರಲ್ಲಿ ಒಬ್ಬರ ಶ್ರೇಷ್ಠರು ಮತ್ತೊಬ್ಬರು ಕನಿಷ್ಠರು ಎಂಬ ಪ್ರಶ್ನೆಯೇ ಏಳುವುದಿಲ್ಲ. ನಮ್ಮ ಜನಾಂಗಕ್ಕೆ ಜಾತೀಯತೆಯು ಒಂದು ಶಾಪ ಎಂಬ ಭಾವನೆ ಬಂದುದರ ಕಾರಣವು ನಾಲ್ಕು ಬಗೆಯಾಗಿ ವಿಂಗಡಿಸಲ್ಪಟ್ಟಿರುವ ವರ್ಣದಲ್ಲಿಲ್ಲ— ಒಂದು ವರ್ಣವು ಇನ್ನೊಂದಕ್ಕಿಂತ ಉಚ್ಚ ತರವಾದುದು, ಅಥವಾ ನೀಚತರವಾದುದೆಂಬ ವಾದವೇ ಇದರ ಮೂಲ!

೦೦

ಅರ್ಥಶೂನ್ಯವಾದ ಈ ವಾದ ವಿವಾದವನ್ನು ಬಗೆಹರಿಸುವ ಉಪಾಯವೇನೆಂದು ಕಾಂಚಿಯ ಶ್ರೀ ಮಚ್ಛಂಕರಾಚಾರ್ಯರು ಕೆಲ ಮಟ್ಟಿಗೆ ವಿವರಿಸಿದ್ದಾರೆ—ಅವರಿಗನುಸಾರವಾಗಿ, ಅಪರಿಗ್ರಹ ಮತ್ತು ನಿರಹಂಭಾವವೆಂಬ ಎರಡು ಹಿಂದೂ ನಿಯಮಗಳ ಪಾಲನೆ ಮಾಡಿದರೆ ಈಗ ಎದ್ದಿರುವ ತಿಕ್ಕಾಟವು ಸಂಪೂರ್ಣವಾಗಿ ಶಮನವಾಗಬಲ್ಲುದು. ವರ್ಣಾಶ್ರಮ ಧರ್ಮವನ್ನು ಎತ್ತಿ ಹಿಡಿಯಲು ಹೋಗುವಾಗ ಇವೆರಡು ಮುಖ್ಯಾಂಶಗಳನ್ನೆಂದೂ ಉಪೇಕ್ಷಿಸಲಾಗದೆಂಬುದೇ ಅವರ ಎಚ್ಚರಿಕೆ ಇದಕ್ಕೆ ಕಿವಿಗೊಟ್ಟು ನಡೆದರೆ ಸಾಮಾಜಿಕ ಜೀವನವು ಬಹಳ ಸುಗಮವಾಗಿ ಸಾಗಬಲ್ಲುದೆಂದು ಅವರ ವಿಶ್ವಾಸ.

ಅಪರಿಗ್ರಹವು ಪ್ರತಿಯೊಬ್ಬನೂ ಎಷ್ಟು ಅತ್ಯಾವಶ್ಯಕವಾದುದೋ ಅಷ್ಟನ್ನು ಮಾತ್ರ ತೆಗೆದುಕೊಳ್ಳಬೇಕೆಂದು ವಿಧಿಸುತ್ತದೆ. ಆಹಾರದಲ್ಲಾಗಲೀ ಬಟ್ಟೆಬರೆಯಲ್ಲಾಗಲೀ ವಸತಿಯಲ್ಲಾಗಲೀ ವಿಲಾಸದ ನೆರಳೂ ಬೀಳಬಾರದು. ಇದಕ್ಕೆ ಅಪವಾದ ಬೇಕೆಂದಿದ್ದರೆ, ಪ್ರತಿಯೊಬ್ಬನೂ ಇನ್ನೊಬ್ಬ ಮನುಷ್ಯನ ಮತ್ತು ಒಂದು ದನದ ಹೊಟ್ಟೆ ಬಟ್ಟೆಗೆ ಹಾಕುವಷ್ಟು ಶಕ್ತಿಯನ್ನು ಹೊಂದಿರಬಹುದು ಎಂಬ ಮಟ್ಟಿಗೆ ಮಾತ್ರ ವಿಸ್ತೃತವಾಗಿರಬೇಕು.

ಆಗ ಎಲ್ಲ ವೈಷಮ್ಯ ಭಾವನೆಗಳೂ ಅಳಿಯುತ್ತವೆ. ಏಕೆಂದರೆ ಇನ್ನೊಬ್ಬರ ಕಣ್ಣನ್ನು ಕುಕ್ಕಿ ಈರ್ಷ್ಯಾಸೂಯೆಗಳನ್ನು ಬೆಳೆಸುವುದಕ್ಕೆ ಕಾರಣವಾದ ವಿಲಾಸ ವೈಭವಗಳು ಯಾರಲ್ಲೂ ಉಳಿಯುವುದಿಲ್ಲ; ಜೊತೆಗೆ, ಅಂಗಹೀನರ, ವೃದ್ಧರ ಮತ್ತು ಜಾನುವಾರುಗಳ ಪೋಷಣೆಯ ಮಹಾಕಾರ್ಯವೂ ನೆರವೇರುತ್ತದೆ. ಸಮಾನತೆಯ ಸಿದ್ಧಾಂತವನ್ನು ಜನರೇ ಸ್ವೇಚ್ಛೆಯಿಂದ ಅನುಸರಿಸುವಂತಾಗುತ್ತದೆ. ಧರ್ಮಾನುಶಾಸನವೇ ರಾಜ್ಯ ಶಾಸನಕ್ಕಿಂತ ದೊಡ್ಡದೆಂದು ಭಾವಿಸುವುದಕ್ಕೆ ಆಗ ಯಾವ ಅಡ್ಡಿಯೂ ಇರದು.

ನಮ್ಮ ಸರಕಾರದವರು ಜೀವನ ಮಟ್ಟವನ್ನು ಎತ್ತರಿಸುವ ಸಂಕಲ್ಪವನ್ನು ಕೈಗೊಂಡಿರುವುದು ಅಪರಿಗ್ರಹದ ಸಿದ್ಧಾಂತಕ್ಕೆ ಅನುಗುಣವಾಗಿಲ್ಲವೆಂದು ಕಾಂಚಿಯ ಶ್ರೀ ಮಚ್ಛಂಕರಾಚಾರ್ಯರ ಮತ. ಭಾರತೀಯರು ಸರಳ ಜೀವನಕ್ಕೆ ಒಗ್ಗಿ ಹೋಗಿದ್ದಾರೆ; ಅವರ ಮುಂದೆ ಅನಾವಶ್ಯಕವಾಗಿ ಜೀವನ ಮಟ್ಟವನ್ನು ಎತ್ತರಿಸುವ ಧ್ಯೇಯವನ್ನಿಡಲಾಗದೆ ಅಪರಿಗ್ರಹದ ಉದ್ದೇಶ ಸಾಧನೆಗಾಗಿ ತೆಗೆದುಕೊಳ್ಳುವ ಕ್ರಮಗಳಿಗೂ ಜೀವನ ಮಟ್ಟವನ್ನು ಎತ್ತರಿಸಲು ತೆಗೆದುಕೊಳ್ಳುವ ಕ್ರಮಗಳಿಗೂ ಎಂದಿಗೂ ಹೊಂದಿಕೆಯಾಗದು. ಉತ್ಪಾದನೆಯನ್ನು ಹೆಚ್ಚಿಸಬಾರದೆಂದು ಇದರ ಅರ್ಥವಲ್ಲ. ಆದರೆ ಜೀವನದ ಆವಶ್ಯಕತೆಗಳನ್ನು ಹೆಚ್ಚಿಸಿಕೊಳ್ಳಬೇಕೆಂಬ ತೃಷೆಯನ್ನು ಹುಟ್ಟಿಸುವುದೇ ಮೇಲ್ಪಟ್ಟದ ಜೀವನವಲ್ಲ. ಆದುದರಿಂದ ವಿಲಾಸೋಪಭೋಗದ ಅವಕಾಶವನ್ನು ಕಡಿಮೆಮಾಡಬೇಕು. ಉದಾಹರಣೆಗೆ, ಜರತಾರಿ ಮತ್ತಿತರ ಬಹಳ ಬೆಲೆಬಾಳುವ ವಸ್ತ್ರಗಳ ಉತ್ಪಾದನೆಯನ್ನೆ ನಿಲ್ಲಿಸಬೇಕು ಎನ್ನುತ್ತಾರೆ ಸ್ವಾಮೀಜಿ.

ನಿರಹಂಭಾವವು ಎಲ್ಲರಲ್ಲಿಯೂ ಪರಮಾತ್ಮ ಚೈತನ್ಯವಿದೆ ಎಂಬ ಬುದ್ಧಿಯನ್ನು ಹುಟ್ಟಿಸುತ್ತದೆ ಎಂದು ಸ್ವಾಮೀಜಿ ತಿಳಿಸುತ್ತಾರೆ. ಬ್ರಾಹ್ಮಣನು ಶೂದ್ರನನ್ನು ನೀಚನಂತೆ ಭಾವಿಸಿ ಸಂಬೋಧಿಸಬೇಕಾಗಿಲ್ಲ. ಶೂದ್ರನು ಬ್ರಾಹ್ಮಣನ ಮುಂದೆ ದೀನನಾಗುವುದೂ ಅನಾವಶ್ಯಕ. "ಆತ್ಮವತ್ ಸರ್ವ ಭೂತಾನಿಯ: ಪಶ್ಯತಿ ಸ ಪಶ್ಯತಿ" ಎಂದ ಉಪನಿಷತ್ತುಗಳು ಸಾರುವ ಸಂದೇಶವನ್ನು ನಾವು ಮರೆಯದಿದ್ದರೆ ವರ್ಣಾಶ್ರಮ ಧರ್ಮಪಾಲನೆಯಿಂದ ಕೇಡಾಗದು

೦೦

ಸ್ವಾಮೀಜಿ ಮುಂದರಿದು ನಾವು ಆಚಾರ ಭ್ರಷ್ಟರಾಗಬಾರದೆಂದೂ ಹೇಳುತ್ತಾರೆ. ಶಾಸ್ತ್ರದಲ್ಲಿ ಹೇಳಲಾದ ಆಚಾರಗಳು ಸಮಾಜದ ಸಾಮಾನ್ಯ ನಡವಳಿಕೆಯನ್ನು ಸುಗಮಗೊಳಿಸುತ್ತವೆ. ಅಪವಾದ ರೂಪದ ನಿದರ್ಶನಗಳು ಬಹಳ ವಿರಳವಾಗಿಯೇ ದೃಗ್ಗೋಚರವಾಗುವುದರಿಂದ ಬಹುಜನ ಹಿತಾಯಚ: ಎಂಬ ಸಿದ್ಧಾಂತವೇ ಈಗಿನ ಪ್ರಜಾಪ್ರಭುತ್ವದ ತಿರುಳೂ ಆಗಿರುವುದರಿಂದ ಎಲ್ಲೋ ಕೆಲವರ "ಪ್ರಗತಿ"ಗೆ ಅಡ್ಡಿಯಾಗುತ್ತದೆಂಬುದಕ್ಕಾಗಿ ವರ್ಣಾಶ್ರಮ ಧರ್ಮವನ್ನು ನಿಂದಿಸುವುದು ಯೋಗ್ಯವಲ್ಲ ಎಂಬ ವಾದ ಸರಣಿ ಸ್ವಾಮೀಜಿಯವರದು.

ಗುಣ ನಿರ್ಧಾರದಲ್ಲಿ ಆಹಾರ ಮತ್ತು ಆಚಾರಗಳು ಪ್ರಧಾನ ಪಾತ್ರವನ್ನು ವಹಿಸುತ್ತವೆ. ರಕ್ತ ಸಂಬಂಧವನ್ನು ಜೋಡಿಸಿ ಕೊಡುವ ವಿವಾಹಾದಿ ಸಂಸ್ಕಾರವೂ ಗುಣ ಮತ್ತು ಕರ್ಮದ ಮೇಲೆ ಗಾಢವಾದ ಪರಿಣಾಮವನ್ನು ಮಾಡುತ್ತದೆ. ಇದನ್ನು ಆಧುನಿಕ ವಿಜ್ಞಾನವೂ ಒಪ್ಪುವುದರಿಂದ ಹಿಂದೂ ಮತದ ಪ್ರವರ್ತಕರೂ ಪ್ರತಿಪಾದಕರೂ ಆಗಿದ್ದ ಶ್ರೇಷ್ಠ ಋಷಿಮುನಿಗಳ ದಾಗು

(೯ನೇ ಪುಟ ನೋಡಿರಿ)

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ. ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

ಹಿಂದು ಸ್ತ್ರೀಯರಿಗೆ ಪುರುಷರಂತೆಯೇ ಉತ್ತರಾಧಿಕಾರ

(೨ನೇ ಪುಟದಿಂದ)

ವಲಂಬಿಗಳಲ್ಲದ ಇತರರೆಲ್ಲರಿಗೂ ಅನ್ವಯಿಸುತ್ತದೆ. ಶಾಸನವು ಜ್ಯಾರಿಗೆ ಬಂದ ದಿನಕ್ಕೆ ಪೂರ್ವದಲ್ಲಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಹಿಂದು ನ್ಯಾಯ ಸೂತ್ರಗಳಿಂದ ಬಂಧಿತನಾಗಿರಲಿಲ್ಲವೆಂದು ರುಜು ಪಡಿಸಲು ಯಾರಾದರೂ ಸಮರ್ಥರಾದರೆ ಅವರಿಗೆ ಈ ಶಾಸನ ಬಾಧಕವಾಗುವುದಿಲ್ಲ.

ಇಷ್ಟಪತ್ರವನ್ನು ಬರೆಯದೆ ಮರಣ ಹೊಂದಿದ ಹಿಂದೂ ಪುರುಷ ಅಥವಾ ಹಿಂದೂ ಮಹಿಳೆಯ ಎಲ್ಲ ಆಸ್ತಿಪಾಸ್ತಿಗಳ ಉತ್ತರಾಧಿಕಾರವನ್ನು ಈ ಶಾಸನವು ಕ್ರಮಬದ್ಧಗೊಳಿಸುತ್ತದೆ. ಆದರೆ ಈ ಶಾಸನವು ಅನ್ವಯವಾಗುವುದಿಲ್ಲವೆಂದು ಹೇಳಲಾದ ಕೆಲವು ಸಾಮಾನ್ಯ ಶ್ರೇಣಿಯ ಅಪವಾದಗಳಿವೆ. ಇವುಗಳಲ್ಲಿ ಉಲ್ಲೇಖನೀಯವಾದುದು ಕೆಳಗಿನಂತಿದೆ—

ಭಾರತೀಯ ಉತ್ತರಾಧಿಕಾರ ಶಾಸನದ ಮೂಲಕ ಕ್ರಮಬದ್ಧಗೊಳಿಸಲಾಗುವುದೆಂದು ವಿಶೇಷ ವಿವಾಹ ಶಾಸನದ ೨೧ನೇ ಸೂತ್ರದಲ್ಲಿ ಹೇಳಲಾದ ಆಸ್ತಿ. (ಇದರ ಅರ್ಥವೇನೆಂದರೆ, ಯಾರೇ ಇಬ್ಬರು ಹಿಂದುಗಳು ವಿಶೇಷ ವಿವಾಹ ಶಾಸನದಂತೆ ಮದುವೆಯಾದರೆ ಅವರ ಹಾಗು ಆ ವಿವಾಹದ ಪರಿಣಾಮವಾಗಿ ಹುಟ್ಟಿದ ಮಕ್ಕಳ ಆಸ್ತಿಪಾಸ್ತಿಯ ಉತ್ತರಾಧಿಕಾರವು ಭಾರತೀಯ ಉತ್ತರಾಧಿಕಾರ ಶಾಸನದಂತೆ ಕ್ರಮಬದ್ಧಗೊಳಿಸಲ್ಪಡುತ್ತದೆ; ಹೊರತು ಹಿಂದು ಉತ್ತರಾಧಿಕಾರ ಶಾಸನದಂತಲ್ಲ.)

ಇಲ್ಲಿ ಇನ್ನೊಂದು ವಿಷಯವನ್ನೂ ಹೇಳುವುದು ಉತ್ತಮ-ಹಿಂದು ಉತ್ತರಾಧಿಕಾರ ಶಾಸನದಲ್ಲಿ ಏನೇ ಹೇಳಿರಲಿ, ಕೃಷಿ ಭೂಮಿಯ ತುಂಡರಿಸುವಿಕೆಯನ್ನು ತಡೆಗಟ್ಟಲಿಕ್ಕಾಗಲೀ ಭೂಹಿಡುವಳಿಗೊಂದು ಮಿತಿಯನ್ನು ಹಾಕಲಿಕ್ಕಾಗಲೀ ಒಕ್ಕಲುತನದ ಅಧಿಕಾರದ ವಿಷಯದಲ್ಲಿ ರೂಪಿಸಬಹುದಾದ ಆಸ್ತಿ ಪ್ರಾಪ್ತಿಯ ವಿಶೇಷ ಕ್ರಮಗಳಿಗಾಗಲೀ ಸಂಬಂಧಿಸಿ ರಾಜ್ಯ ಶಾಸನಾಂಗಗಳು ಮಾಡಬಹುದಾದ ಶಾಸನಗಳಿಗೆ ಯಾವ ಬಾಧಕವೂ ಬರಲಾರದು.

ಎಲ್ಲ ಆಸ್ತಿಗೂ ಅನ್ವಯ

ಪ್ರಸ್ತುತ ಶಾಸನವು ಕ್ರಮಬದ್ಧಗೊಳಿಸುವ ಆಸ್ತಿಯು ಹಿಂದೂ ಪುರುಷನ ಸ್ವಾರ್ಜಿತ ಆಸ್ತಿಯಾಗಿರಲೂ ಬಹುದು; ಅಥವಾ ಮಿತಾಕ್ಷರ ಅವಿಭಕ್ತ ಕುಟುಂಬ ಪದ್ಧತಿಯ ಪಾಲೂ ಆಗಿರಬಹುದು. ಈ ಎರಡನೆಯ ಬಗೆಯ ಪಾಲಿನ ಪ್ರಮಾಣವನ್ನು ಗೊತ್ತುಪಡಿಸಲು ಶಾಸನವು ಒಂದು ವಿಧಾನವನ್ನು ಹೇಳಿದೆ—ಅದರಂತೆ, ಆ ಹಿಂದೂ ಪುರುಷನು ಮರಣವಶನಾಗುವ ಮುನ್ನಾದಿನ ಅವಿಭಕ್ತ ಕುಟುಂಬದ ಆಸ್ತಿಯ ಪಾಲು ಮಾಡಿದ್ದ ಪಕ್ಷದಲ್ಲಿ ಆತನ ಪಾಲಿಗೇನು ಬಲ್ಲುತ್ತಿತ್ತೋ ಅದೇ ಆತನ ಉತ್ತರಾಧಿಕಾರಿಗಳ ಪಾಲಿಗೆ ಹೋಗುವ ಆಸ್ತಿಯ ಪ್ರಮಾಣ.

ಶಾಸನದಲ್ಲಿರುವ ಇನ್ನೊಂದು ಸೂತ್ರವು, ಅವಿಭಕ್ತ ಕುಟುಂಬದ ಸದಸ್ಯನೊಬ್ಬನು ಆ ಕುಟುಂಬದಿಂದ ಮೊದಲೇ ಪಾಲು ಪಡೆದು ಬೇರೆಯಾಗಿದ್ದರೆ ಆತನು ಪುನಃ ಅದೇ ಅವಿಭಕ್ತ ಕುಟುಂಬದ ಆಸ್ತಿಪಾಸ್ತಿಯಲ್ಲಿ ಪಾಲಿನ ಅಧಿಕಾರವನ್ನು ಕೇಳಲಾರನೆಂದು ವಿಧಿಸುತ್ತದೆ. ಈ ಶಾಸನದ ಪ್ರಕಾರ, ಮೃತ ಪುರುಷನ ಸ್ವಾರ್ಜಿತ ಆಸ್ತಿಯು ಯಾವ ರೀತಿಯಲ್ಲಿ ವಿಭಾಜಿಸಲ್ಪಡುವುದೋ ಅದೇ ರೀತಿಯಲ್ಲಿ ಅವಿಭಕ್ತ ಕುಟುಂಬದಲ್ಲಿನ ಆತನ ಆಸ್ತಿ ಪಾಲಾಗುತ್ತದೆ.

ಪ್ರಥಮ ಶ್ರೇಣಿಯಲ್ಲಿ

ಎರಡು ಶ್ರೇಣಿಗಳಾಗಿ ಪುರುಷ ಹಿಂದೂವಿನ ಉತ್ತರಾಧಿಕಾರಿಗಳನ್ನು ಶಾಸನವು ನಿಯುಕ್ತಗೊಳಿಸಿದೆ ಹಿಂದೂ ಪುರುಷನ ಮರಣಾನಂತರ ಆತನ ಆಸ್ತಿಗೆ ಉತ್ತರಾಧಿಕಾರಿಗಳಾಗಿ ಮೊದಲು ಪರಿಣಮಿಸುವವರು ನಾಲ್ಕು ಮಂದಿ— (೧) ಮಗ, (೨) ಮಗಳು, (೩) ಮೃತನ ವಿಧವೆ, ಮತ್ತು (೪) ಮೃತನ ತಾಯಿ. ಇವರೆಲ್ಲರೂ ಸಮಾನವಾಗಿ ಪಾಲು ಪಡೆಯುತ್ತಾರೆ.

ಒಬ್ಬ ಮಗನು ತಂದೆಗೆ ಮೊದಲೇ ಮರಣವಶನಾಗಿದ್ದರೆ, ಆ ಮೃತ ಮಗನ ವಿಧವೆ ಮತ್ತು ಗಂಡು ಹಾಗು ಹೆಣ್ಣು ಮಕ್ಕಳು ತಂತಮ್ಮಲ್ಲಿ ಸಮಾನವಾಗಿ ಮೃತ ಮಗನು ಜೀವಿಸಿದ್ದರೆ ಆತನಿಗೆ ಹೋಗಬಹುದಾಗಿದ್ದ ಪಾಲನ್ನು ಹಂಚಿಕೊಳ್ಳುತ್ತಾರೆ. ಮಗಳೊಬ್ಬಳು ತಂದೆಗೆ ಮೊದಲೇ ಮರಣಗೊಂಡಿದ್ದರೆ, ಆಗಲೂ ಇದೇ ಸೂತ್ರ ಅನ್ವಯವಾಗುತ್ತದೆ; ಆದರೆ ಅವಳ ಗಂಡನಿಗೇನೂ ಪಾಲು ಸಿಗಲಾರದು.

ತಂದೆಯ ಮರಣಕ್ಕೆ ಮೊದಲೇ ಆತನ ಮಗನೂ ಈ ಮಗನ ಮಗನೂ ಮರಣಗೊಂಡಿದ್ದರೆ,ಈ ಮಗನ ಮಗನ (ಅಂದರೆ ಮೊಮ್ಮಗನ) ವಿಧವೆ,ಮಗ ಮತ್ತು ಮಗಳು ತಮ್ಮಲ್ಲಿ ಆ ತನಗೆ (ಮೊದಲು ಹೇಳಿದ ಕ್ರಮದಂತೆ) ಹೋಗಬಹುದಾಗಿದ್ದ ಪಾಲನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ.

ಮೇಲೆ ಹೇಳಲಾದ ಎಲ್ಲ ಉತ್ತರಾಧಿಕಾರಿಗಳೂ ಪ್ರಥಮ ಶ್ರೇಣಿಯಲ್ಲಿ ಬರುತ್ತಾರೆ; ಇವರಿಗೆಯೇ ಆಸ್ತಿಯಲ್ಲಿ ಉತ್ತರಾಧಿಕಾರವು ಮೊದಲು ಸೇರುತ್ತದೆ. ಇವರ ಒಟ್ಟು ಸಂಖ್ಯೆಯು ೧೨; ಆದರೆ ಮೊಮ್ಮಕ್ಕಳೂ ಮರಿಮಕ್ಕಳೂ ತಮ್ಮನ್ನು ಹೆತ್ತವರ ಅನುಪಸ್ಥಿತಿಯಲ್ಲಿ ಮಾತ್ರ ಅಧಿಕಾರಿಗಳಾಗಿರುವುದರಿಂದ ಒಬ್ಬ ತಂದೆಯು ಮರಣವಾದೊಡನೆಯೇ ಹನ್ನೆರಡೂ ಬಗೆಯ ಪಾಲುಗಾರರು ಒಮ್ಮೆಲೆ ಮುಂಬರುವ ಸಂಭವ ತೀರ ವಿರಳ.

ದ್ವಿತೀಯ ಶ್ರೇಣಿಯಲ್ಲಿ

ಪ್ರಥಮ ಶ್ರೇಣಿಯಲ್ಲಿ ಹೇಳಲಾದ ಬಗೆಯ ಉತ್ತರಾಧಿಕಾರಿಗಳೇ ಇಲ್ಲದಿದ್ದರೆ, ದ್ವಿತೀಯ ಶ್ರೇಣಿಯಲ್ಲಿ ನಮೂದಿಸಿದ ಉತ್ತರಾಧಿಕಾರಿಗಳು ಅವರವರ ವರ್ಗಾನುಗತವಾಗಿ ಆಸ್ತಿಪಾಸ್ತಿಯ ಒಡೆತನಕ್ಕೆ ಅರ್ಹತೆಯನ್ನು ಹೊಂದುತ್ತಾರೆ. ಪ್ರತಿಯೊಂದು ವರ್ಗದಲ್ಲಿರುವ ಬೇರೆ ಬೇರೆ ಬಗೆಯ ಉತ್ತರಾಧಿಕಾರಿಗಳು ಸಮಾನವಾಗಿ ಪಾಲನ್ನು ಪಡೆಯುತ್ತಾರೆ. ಈ ವರ್ಗ ಮತ್ತು ಉತ್ತರಾಧಿಕಾರಿಗಳ ಪಟ್ಟಿ ಹೀಗಿದೆ—

ವರ್ಗ. ಉತ್ತರಾಧಿಕಾರಿಗಳು.

೧ ಮೃತನ ತಂದೆ ಮಾತ್ರ.

೨ ಮಗನ ಮಗಳ ಮಗ, ಮಗನ ಮಗಳ ಮಗಳು, ಸಹೋದರ, ಸಹೋದರಿ.

೩. ಮಗಳ ಮಗನ ಮಗ, ಮಗಳ ಮಗಳ ಮಗ, ಮಗಳ ಮಗನ ಮಗಳು, ಮಗಳ ಮಗಳ ಮಗಳು.

೪. ಸಹೋದರನ ಮಗ, ಸಹೋದರಿಯ ಮಗ, ಸಹೋದರನ ಮಗಳು, ಸಹೋದರಿಯ ಮಗಳು.

೫. ತಂದೆಯ ತಂದೆ, ತಂದೆಯ ತಾಯಿ.

೬. ತಂದೆಯ ವಿಧವೆ (ಅದರೆ ಮೃತನ ತಾಯಿಯಲ್ಲ), ಸಹೋದರನ ವಿಧವೆ ಹೆಂಡತಿ(ಅಂದರೆ ವಿಧವೆಯಾದ ಅತ್ತಿಗೆ—ನಾದಿನಿ).

೭. ತಂದೆಯ ಸಹೋದರ, ತಂದೆಯ ಸಹೋದರಿ.

೮. ತಾಯಿಯ ತಂದೆ, ತಾಯಿಯ ತಾಯಿ.

೯. ತಾಯಿಯ ಸಹೋದರ, ತಾಯಿಯ ಸಹೋದರಿ.

ಪ್ರಥಮ ಶ್ರೇಣಿಯಲ್ಲಾಗಲೀ ದ್ವಿತೀಯ ಶ್ರೇಣಿಯಲ್ಲಾಗಲೀ ನಮೂದಿಸಿದ ಉತ್ತರಾಧಿಕಾರಿಗಳಲ್ಲಿ ಯಾರೊಬ್ಬರೂ ಇಲ್ಲವಾದರೆ, ಮೃತಪಟ್ಟಾತನ ವಂಶಸ್ಥನಾಗಿದ್ದು ರಕ್ತಸಂಬಂಧ ಅಥವಾ ದತ್ತುಸ್ವೀಕಾರದ ಮೂಲಕ ಕೇವಲ ಗಂಡಸಿನ ಕಡೆಯಿಂದ ಬಾಂಧವ್ಯವನ್ನು ಪಡೆದಿರುವ ವ್ಯಕ್ತಿಗಳಿಗೆ ಉತ್ತರಾಧಿಕಾರವು ಸಲ್ಲುತ್ತದೆ. ಹೀಗೆ ಗಂಡಸಿನ ಕಡೆಯಿಂದ ಬಾಂಧವ್ಯ ಪಡೆದಿರುವ ವ್ಯಕ್ತಿಗಳೂ ಇಲ್ಲದಿದ್ದರೆ, ಸಗೋತ್ರದವರೆಂಬ ನೆಲೆಯಿಂದ ಮೃತನಿಗೆ ರಕ್ತಸಂಬಂಧ ಅಥವಾ ದತ್ತುಸ್ವೀಕಾರದ ಮೂಲಕ ಬಂಧುಗಳೆನಿಸಿದ ವ್ಯಕ್ತಿಗಳಿಗೆ ಉತ್ತರಾಧಿಕಾರವು ಹೋಗುತ್ತದೆ. ಇಂಥವರೂ ಇಲ್ಲದೆ ಹೋದರೆ, ಆಸ್ತಿಯು ಸರಕಾರದ ಅಧೀನವಾಗುತ್ತದೆ.

ಹೆಂಗಸಿಗೆ ಪೂರ್ಣಾಧಿಕಾರ

ಇನ್ನು ಮುಂದೆ ಮರ್ಯಾದಿತವಾದ (ಪರಿಮಿತ) ಅಧಿಕಾರವನ್ನಷ್ಟೆ ಮಹಿಳೆಯರಿಗೆ ಆಸ್ತಿಯಲ್ಲಿ ನೀಡಿದ ಶಾಸನವು ಜ್ಯಾರಿಯಲ್ಲಿರುವುದಿಲ್ಲ. ಈ ಶಾಸನದಂತೆ ಮಹಿಳೆಯ ವಶದಲ್ಲಿ ಏನೇ ಆಸ್ತಿಯು ಇರಲಿ, ಅದು ಎಂದೇ ಸಂಪಾದಿಸಿದುದಾಗಿರಲಿ (ಇದಕ್ಕೆ ಕೆಲವು ಅಪವಾದಗಳಿವೆ) ಅದು ಆಕೆಯ ಸಂಪೂರ್ಣಾಧಿಕಾರಕ್ಕೆ ಸೇರುತ್ತದೆ. ಹೀಗೆ ಮಹಿಳೆಯರಿಗೆ ಆಸ್ತಿಯಲ್ಲಿ ಸಂಪೂರ್ಣಾಧಿಕಾರವನ್ನು ನೀಡಿದ ಪ್ರಯುಕ್ತ ಮಹಿಳೆಯರು ಇಷ್ಟಪತ್ರವನ್ನು ಬರೆದಿಡದೆ ಸತ್ತರೆ ಅವರ ಆಸ್ತಿಪಾಸ್ತಿಯ ಉತ್ತರಾಧಿಕಾರ ಯಾರಿಗೆ ಸಲ್ಲಬೇಕೆಂಬುದನ್ನು ಕ್ರಮಬದ್ಧಗೊಳಿಸುವ ಆಗತ್ಯ ಬಿದ್ದಿತು.

ಶಾಸನವು ಈ ಕ್ರಮವನ್ನು ಹೀಗೆ ವಿಧಿಸಿದೆ—

(೧) ಮಗ, ಮಗಳು ಮತ್ತು ಗಂಡ. ಇವರು ಸರಿಸಮಾನವಾಗಿ ಪಾಲು ಪಡೆಯುತ್ತಾರೆ. ಮಗ ಅಥವಾ ಮಗಳಂದಿರಲ್ಲಿ ಯಾರಾದರೂ ಹೆತ್ತವರಿಗಿಂತ ಮೊದಲೇ ಸತ್ತಿದ್ದರೆ, ಬದುಕಿದ್ದಲ್ಲಿ ಅವರ ಪಾಲಿಗೆ ಸಲ್ಲಬಹುದಾಗಿದ್ದ ಆಸ್ತಿಪಾಸ್ತಿಯನ್ನು ಸಂಬಂಧಿಸಿದ ಮೊಮ್ಮಕ್ಕಳು ತಮ್ಮಲ್ಲಿ ಸಮಾನವಾಗಿ ಹಂಚಿಕೊಳ್ಳುತ್ತಾರೆ. (೨) ಗಂಡನ ಉತ್ತರಾಧಿಕಾರಿಗಳು. (೩) ತಂದೆ ಮತ್ತು ತಾಯಿ. (೪) ತಂದೆಯ ಉತ್ತರಾಧಿಕಾರಿಗಳು. (೫) ತಾಯಿಯ ಉತ್ತರಾಧಿಕಾರಿಗಳು.

ಇಲ್ಲೆಲ್ಲ ವರ್ಗ ಪ್ರಾಶಸ್ತ್ಯಾನುಕ್ರಮ ರೀತಿಯಲ್ಲಿ ಉತ್ತರಾಧಿಕಾರವು ಹೋಗುತ್ತದೆ; ಒಂದೇ ವರ್ಗದಲ್ಲಿರುವ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 258/49, R. E. P. 257/1956.

ರಾಮಯ್ಯ ಹೆಬ್ಬಾರ ... —ಅರ್ಜಿದಾರ.

ಶ್ರೀನಿವಾಸ ಹೆಬ್ಬಾರ ... —ಎದ್ರಿ.

ಗಾರ್ನಿಶಿ, ಗಿರಿಜಮ್ಮ, ವಾಸುದೇವ ಹೆಬ್ಬಾರನ ಹೆಂಡತಿ, ಬೆಂಗಳೂರು ಸಿಟಿ ಕಾಶಿವಿಶ್ವೇಶ್ವರ ದೇವಸ್ಥಾನದ ಸಮೀಪದಲ್ಲಿರುತ್ತಾಳೆ.

ಸದ್ರಿ ಗಾರ್ನಿಶಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ಮೇಲಿನ ಅಮುಲ್ಜಾರಿ ಪ್ರಕಾರ ಎದ್ರಿಯಿಂದ ಅರ್ಜಿದಾರನಿಗೆ ಬರತಕ್ಕ ಹಣದ ಬಗ್ಗೆ ಸದ್ರಿ ಎದ್ರಿಗೆ ನಿಮ್ಮಿಂದ ಮೇಲಿನ ಡಿಕ್ರಿ ಪ್ರಕಾರ ಸಲ್ಲತಕ್ಕ ಹಣವನ್ನು ಜಪ್ತಿ ಮಾಡಿಸಿ ಅದರ ವಸೂಲಿ ಕುರಿತು ನಿಮ್ಮ ಮೇಲೆ ಅಮುಲ್ಜಾರಿ ನಡೆಸುವರೆ ಅರ್ಜಿದಾರನಿಗೆ ಪರ್ಮಿಶನ್ ಕೊಡಿಸಬೇಕೆಂತ ಪ್ರಾರ್ಥನೆ ಕೇಳಿ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅಮುಲ್ಜಾರಿಯನ್ನು ತಾ. 18—7—1956ಕ್ಕೆ ತಸ್ತಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಇದ್ದರೆ ಆ ದಿನ ಹಗಲು 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸಿಯದೆ.

(By order of the Court).

Y. Tejappa Shetty,

Advocate for Petitioner.

Coondapoor, 6-7-1956.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಹಿಂದು ಸ್ತ್ರೀಯರಿಗೆ ಪುರುಷರಂತೆಯೇ ಉತ್ತರಾಧಿಕಾರ

(೨ನೇ ಪುಟದಿಂದ)

ವಲಂಬಿಗಳಲ್ಲದ ಇತರರೆಲ್ಲರಿಗೂ ಅನ್ವಯಿಸುತ್ತದೆ. ಶಾಸನವು ಜ್ಯಾರಿಗೆ ಬಂದ ದಿನಕ್ಕೆ ಪೂರ್ವದಲ್ಲಿ ಉತ್ತರಾಧಿಕಾರಕ್ಕೆ ಸಂಬಂಧಿಸಿದ ಹಿಂದು ನ್ಯಾಯ ಸೂತ್ರಗಳಿಂದ ಬಂಧಿತನಾಗಿರಲಿಲ್ಲವೆಂದು ರುಜು ಪಡಿಸಲು ಯಾರಾದರೂ ಸಮರ್ಥರಾದರೆ ಅವರಿಗೆ ಈ ಶಾಸನ ಬಾಧಕನಾಗುವುದಿಲ್ಲ.

ಇಷ್ಟಪತ್ರವನ್ನು ಬರೆಯದೆ ಮರಣ ಹೊಂದಿದ ಹಿಂದೂ ಪುರುಷ ಅಥವಾ ಹಿಂದೂ ಮಹಿಳೆಯ ಎಲ್ಲ ಆಸ್ತಿಪಾಸ್ತಿಗಳ ಉತ್ತರಾಧಿಕಾರವನ್ನು ಈ ಶಾಸನವು ಕ್ರಮಬದ್ಧಗೊಳಿಸುತ್ತದೆ. ಆದರೆ ಈ ಶಾಸನವು ಅನ್ವಯವಾಗುವುದಿಲ್ಲವೆಂದು ಹೇಳಲಾದ ಕೆಲವು ಸಾಮಾನ್ಯ ಶ್ರೇಣಿಯ ಅಪವಾದಗಳಿವೆ. ಇವುಗಳಲ್ಲಿ ಉಲ್ಲೇಖನೀಯವಾದುದು ಕೆಳಗಿನಂತಿದೆ—

ಭಾರತೀಯ ಉತ್ತರಾಧಿಕಾರ ಶಾಸನದ ಮೂಲಕ ಕ್ರಮಬದ್ಧಗೊಳಿಸಲಾಗುವುದೆಂದು ವಿಶೇಷ ವಿವಾಹ ಶಾಸನದ ೨೧ನೇ ಸೂತ್ರದಲ್ಲಿ ಹೇಳಲಾದ ಆಸ್ತಿ. (ಇದರ ಅರ್ಥವೇನೆಂದರೆ, ಯಾರೇ ಇಬ್ಬರು ಹಿಂದುಗಳು ವಿಶೇಷ ವಿವಾಹ ಶಾಸನದಂತೆ ಮದುವೆ ಯಾದರೆ ಅವರ ಹಾಗು ಆ ವಿವಾಹದ ಪರಿಣಾಮವಾಗಿ ಹುಟ್ಟಿದ ಮಕ್ಕಳ ಆಸ್ತಿಪಾಸ್ತಿಯ ಉತ್ತರಾಧಿಕಾರವು ಭಾರತೀಯ ಉತ್ತರಾಧಿಕಾರ ಶಾಸನದಂತೆ ಕ್ರಮಬದ್ಧಗೊಳಿಸಲ್ಪಡುತ್ತದೆ; ಹೊರತು ಹಿಂದು ಉತ್ತರಾಧಿಕಾರ ಶಾಸನದಂತಲ್ಲ.)

ಇಲ್ಲಿ ಇನ್ನೊಂದು ವಿಷಯವನ್ನೂ ಹೇಳುವುದು ಉತ್ತಮ-ಹಿಂದು ಉತ್ತರಾಧಿಕಾರ ಶಾಸನದಲ್ಲಿ ಏನೇ ಹೇಳಿರಲಿ, ಕೃಷಿ ಭೂಮಿಯ ತುಂಡರಿಸುವಿಕೆಯನ್ನು ತಡೆಗಟ್ಟಲಿಕ್ಕಾಗಲೀ ಭೂಹಿಡುವಳಿಗೊಂದು ಮಿತಿಯನ್ನು ಹಾಕಲಿಕ್ಕಾಗಲೀ ಒಕ್ಕಲುತನದ ಅಧಿಕಾರದ ವಿಷಯದಲ್ಲಿ ರೂಪಿಸಬಹುದಾದ ಆಸ್ತಿ ಪ್ರಾಪ್ತಿಯ ವಿಶೇಷ ಕ್ರಮಗಳಿಗಾಗಲೀ ಸಂಬಂಧಿಸಿ ರಾಜ್ಯ ಶಾಸನಾಂಗಗಳು ಮಾಡಬಹುದಾದ ಶಾಸನಗಳಿಗೆ ಯಾವ ಬಾಧಕವೂ ಬರಲಾರದು.

ಎಲ್ಲ ಆಸ್ತಿಗೂ ಅನ್ವಯ

ಪ್ರಸ್ತುತ ಶಾಸನವು ಕ್ರಮಬದ್ಧಗೊಳಿಸುವ ಆಸ್ತಿಯು ಹಿಂದೂ ಪುರುಷನ ಸ್ವಾರ್ಜಿತ ಆಸ್ತಿಯಾಗಿರಲೂ ಬಹುದು; ಅಥವಾ ಮಿತಾಕ್ಷರ ಅವಿಭಕ್ತ ಕುಟುಂಬ ಪದ್ಧತಿಯ ಪಾಲೂ ಆಗಿರಬಹುದು. ಈ ಎರಡನೆಯ ಬಗೆಯ ಪಾಲಿನ ಪ್ರಮಾಣವನ್ನು ಗೊತ್ತುಪಡಿಸಲು ಶಾಸನವು ಒಂದು ವಿಧಾನವನ್ನು ಹೇಳಿದೆ—ಅದರಂತೆ, ಆ ಹಿಂದೂ ಪುರುಷನು ಮರಣವಶನಾಗುವ ಮುನ್ನಾದಿನ ಅವಿಭಕ್ತ ಕುಟುಂಬದ ಆಸ್ತಿಯ ಪಾಲು ಮಾಡಿದ್ದ ಪಕ್ಷದಲ್ಲಿ ಆತನ ಪಾಲಿಗೇನು ಸಲ್ಲುತ್ತಿತ್ತೋ ಅದೇ ಆತನ ಉತ್ತರಾಧಿಕಾರಿಗಳ ಪಾಲಿಗೆ ಹೋಗುವ ಆಸ್ತಿಯ ಪ್ರಮಾಣ.

ಶಾಸನದಲ್ಲಿರುವ ಇನ್ನೊಂದು ಸೂತ್ರವು, ಅವಿಭಕ್ತ ಕುಟುಂಬದ ಸದಸ್ಯನೊಬ್ಬನು ಆ ಕುಟುಂಬದಿಂದ ಮೊದಲೇ ಪಾಲು ಪಡೆದು ಬೇರೆಯಾಗಿದ್ದರೆ ಆತನು ಪುನಃ ಅದೇ ಅವಿಭಕ್ತ ಕುಟುಂಬದ ಆಸ್ತಿಪಾಸ್ತಿಯಲ್ಲಿ ಪಾಲಿನ ಅಧಿಕಾರವನ್ನು ಕೇಳಲಾರನೆಂದು ವಿಧಿಸುತ್ತದೆ. ಈ ಶಾಸನದ ಪ್ರಕಾರ, ಮೃತ ಪುರುಷನ ಸ್ವಾರ್ಜಿತ ಆಸ್ತಿಯು ಯಾವ ರೀತಿಯಲ್ಲಿ ವಿಭಾಜಿಸಲ್ಪಡುವುದೋ ಅದೇ ರೀತಿಯಲ್ಲಿ ಅವಿಭಕ್ತ ಕುಟುಂಬದಲ್ಲಿನ ಆತನ ಆಸ್ತಿ ಪಾಲಾಗುತ್ತದೆ.

ಪ್ರಥಮ ಶ್ರೇಣಿಯಲ್ಲಿ

ಎರಡು ಶ್ರೇಣಿಗಳಾಗಿ ಪುರುಷ ಹಿಂದೂವಿನ ಉತ್ತರಾಧಿಕಾರಿಗಳನ್ನು ಶಾಸನವು ನಿಯುಕ್ತಗೊಳಿಸಿದೆ. ಹಿಂದೂ ಪುರುಷನ ಮರಣಾ ನಂತರ ಆತನ ಆಸ್ತಿಗೆ ಉತ್ತರಾಧಿಕಾರಿಗಳಾಗಿ ಮೊದಲು ಪರಿಣಮಿಸುವವರು ನಾಲ್ಕು ಮಂದಿ— (೧) ಮಗ, (೨) ಮಗಳು, (೩) ಮೃತನ ವಿಧವೆ, ಮತ್ತು (೪) ಮೃತನ ತಾಯಿ. ಇವರೆಲ್ಲರೂ ಸಮಾನವಾಗಿ ಪಾಲು ಪಡೆಯುತ್ತಾರೆ.

ಒಬ್ಬ ಮಗನು ತಂದೆಗೆ ಮೊದಲೇ ಮರಣ ವಶನಾಗಿದ್ದರೆ, ಈ ಮೃತ ಮಗನ ವಿಧವೆ ಮತ್ತು ಗಂಡು ಹಾಗು ಹೆಣ್ಣು ಮಕ್ಕಳು ತಂತಮ್ಮಲ್ಲಿ ಸಮಾನವಾಗಿ ಮೃತ ಮಗನು ಜೀವಿಸಿದ್ದರೆ ಆತನಿಗೆ ಹೋಗಬಹುದಾಗಿದ್ದ ಪಾಲನ್ನು ಹಂಚಿಕೊಳ್ಳುತ್ತಾರೆ. ಮಗಳೊಬ್ಬಳು ತಂದೆಗೆ ಮೊದಲೇ ಮರಣಗೊಂಡಿದ್ದರೆ, ಆಗಲೂ ಇದೇ ಸೂತ್ರ ಅನ್ವಯವಾಗುತ್ತದೆ; ಆದರೆ ಅವಳ ಗಂಡನಿಗೇನೂ ಪಾಲು ಸಿಗಲಾರದು.

ತಂದೆಯ ಮರಣಕ್ಕೆ ಮೊದಲೇ ಆತನ ಮಗನೂ ಈ ಮಗನ ಮಗನೂ ಮರಣಗೊಂಡಿದ್ದರೆ, ಈ ಮಗನ ಮಗನ (ಅಂದರೆ ಮೊಮ್ಮಗನ) ವಿಧವೆ, ಮಗ ಮತ್ತು ಮಗಳು ತಮ್ಮಲ್ಲಿ ಆ ಕವರಿಗೆ (ಮೊದಲು ಹೇಳಿದ ಕ್ರಮದಂತೆ) ಹೋಗಬಹುದಾಗಿದ್ದ ಪಾಲನ್ನು ಸಮಾನವಾಗಿ ಹಂಚಿಕೊಳ್ಳುತ್ತಾರೆ.

ಮೇಲೆ ಹೇಳಲಾದ ಎಲ್ಲ ಉತ್ತರಾಧಿಕಾರಿಗಳೂ ಪ್ರಥಮ ಶ್ರೇಣಿಯಲ್ಲಿ ಬರುತ್ತಾರೆ; ಇವರಿಗೆಯೇ ಆಸ್ತಿಯಲ್ಲಿ ಉತ್ತರಾಧಿಕಾರವು ಮೊದಲು ಸೇರುತ್ತದೆ. ಇವರ ಒಟ್ಟು ಸಂಖ್ಯೆಯು ೧೨; ಆದರೆ ಮೊಮ್ಮಕ್ಕಳೂ ಮರಿಮಕ್ಕಳೂ ತಮ್ಮನ್ನು ಹೆತ್ತವರ ಅನುಪಸ್ಥಿತಿಯಲ್ಲಿ ಮಾತ್ರ ಅಧಿಕಾರಿಗಳಾಗಿರುವುದರಿಂದ ಒಬ್ಬ ತಂದೆಯು ಮರಣವಾದೊಡನೆಯೇ ಹನ್ನೆರಡೂ ಬಗೆಯ ಪಾಲುಗಾರರು ಒಮ್ಮೆಲೆ ಮುಂಬರುವ ಸಂಭವ ತೀರ ವಿರಳ.

ದ್ವಿತೀಯ ಶ್ರೇಣಿಯಲ್ಲಿ

ಪ್ರಥಮ ಶ್ರೇಣಿಯಲ್ಲಿ ಹೇಳಲಾದ ಬಗೆಯ ಉತ್ತರಾಧಿಕಾರಿಗಳೇ ಇಲ್ಲದಿದ್ದರೆ, ದ್ವಿತೀಯ ಶ್ರೇಣಿಯಲ್ಲಿ ನಮೂದಿಸಿದ ಉತ್ತರಾಧಿಕಾರಿಗಳು ಅವರವರ ವರ್ಗಾನುಗತವಾಗಿ ಆಸ್ತಿಪಾಸ್ತಿಯ ಒಡೆತನಕ್ಕೆ ಅರ್ಹತೆಯನ್ನು ಹೊಂದುತ್ತಾರೆ. ಪ್ರತಿಯೊಂದು ವರ್ಗದಲ್ಲಿರುವ ಬೇರೆ ಬೇರೆ ಬಗೆಯ ಉತ್ತರಾಧಿಕಾರಿಗಳು ಸಮಾನವಾಗಿ ಪಾಲನ್ನು ಪಡೆಯುತ್ತಾರೆ. ಈ ವರ್ಗ ಮತ್ತು ಉತ್ತರಾಧಿಕಾರಿಗಳ ಪಟ್ಟಿ ಹೀಗಿದೆ—

ವರ್ಗ. ಉತ್ತರಾಧಿಕಾರಿಗಳು.

೧ ಮೃತನ ತಂದೆ ಮಾತ್ರ.

೨ ಮಗನ ಮಗಳ ಮಗ, ಮಗನ ಮಗಳ ಮಗಳು, ಸಹೋದರ, ಸಹೋದರಿ.

೩. ಮಗಳ ಮಗನ ಮಗ, ಮಗಳ ಮಗಳ ಮಗ, ಮಗಳ ಮಗನ ಮಗಳು, ಮಗಳ ಮಗಳ ಮಗಳು.

೪. ಸಹೋದರನ ಮಗ, ಸಹೋದರಿಯ ಮಗ, ಸಹೋದರನ ಮಗಳು, ಸಹೋದರಿಯ ಮಗಳು.

೫. ತಂದೆಯ ತಂದೆ, ತಂದೆಯ ತಾಯಿ.

೬. ತಂದೆಯ ವಿಧವೆ (ಅದರೆ ಮೃತನ ತಾಯಿ ಯಲ್ಲ), ಸಹೋದರನ ವಿಧವೆ ಹೆಂಡತಿ (ಅಂದರೆ ವಿಧವೆಯಾದ ಅತ್ತಿಗೆ—ನಾದಿನಿ).

೭. ತಂದೆಯ ಸಹೋದರ, ತಂದೆಯ ಸಹೋದರಿ.

೮. ತಾಯಿಯ ತಂದೆ, ತಾಯಿಯ ತಾಯಿ.

೯. ತಾಯಿಯ ಸಹೋದರ, ತಾಯಿಯ ಸಹೋದರಿ.

ಪ್ರಥಮ ಶ್ರೇಣಿಯಲ್ಲಾಗಲೀ ದ್ವಿತೀಯ ಶ್ರೇಣಿಯಲ್ಲಾಗಲೀ ನಮೂದಿಸಿದ ಉತ್ತರಾಧಿಕಾರಿಗಳಲ್ಲಿ ಯಾರೊಬ್ಬರೂ ಇಲ್ಲವಾದರೆ, ಮೃತಪಟ್ಟಾತನ ವಂಶಸ್ಥನಾಗಿದ್ದು ರಕ್ತಸಂಬಂಧ ಅಥವಾ ದತ್ತುಸ್ವೀಕಾರದ ಮೂಲಕ ಕೇವಲ ಗಂಡಸಿನ ಕಡೆಯಿಂದ ಬಾಂಧವ್ಯವನ್ನು ಪಡೆದಿರುವ ವ್ಯಕ್ತಿಗಳಿಗೆ ಉತ್ತರಾಧಿಕಾರವು ಸಲ್ಲುತ್ತದೆ. ಹೀಗೆ ಗಂಡಸಿನ ಕಡೆಯಿಂದ ಬಾಂಧವ್ಯ ಪಡೆದಿರುವ ವ್ಯಕ್ತಿಗಳೂ ಇಲ್ಲದಿದ್ದರೆ, ಸಗೋತ್ರದವರೆಂಬ ನೆಲೆಯಿಂದ ಮೃತನಿಗೆ ರಕ್ತಸಂಬಂಧ ಅಥವಾ ದತ್ತುಸ್ವೀಕಾರದ ಮೂಲಕ ಬಂಧುಗಳೆನಿಸಿದ ವ್ಯಕ್ತಿಗಳಿಗೆ ಉತ್ತರಾಧಿಕಾರವು ಹೋಗುತ್ತದೆ. ಇಂಥವರೂ ಇಲ್ಲದೆ ಹೋದರೆ, ಆಸ್ತಿಯು ಸರಕಾರದ ಅಧೀನವಾಗುತ್ತದೆ.

ಹೆಂಗಸಿಗೆ ಪೂರ್ಣಾಧಿಕಾರ

ಇನ್ನು ಮುಂದೆ ಮರ್ಯಾದಿತವಾದ (ಪರಿಮಿತ) ಅಧಿಕಾರವನ್ನಷ್ಟೆ ಮಹಿಳೆಯರಿಗೆ ಆಸ್ತಿಯಲ್ಲಿ ನೀಡಿದ ಶಾಸನವು ಜ್ಯಾರಿಯಲ್ಲಿರುವುದಿಲ್ಲ. ಈ ಶಾಸನದಂತೆ ಮಹಿಳೆಯ ವಶದಲ್ಲಿ ಏನೇ ಆಸ್ತಿಯು ಇರಲಿ, ಅದು ಎಂದೇ ಸಂಪಾದಿಸಿದುದಾಗಿರಲಿ (ಇದಕ್ಕೆ ಕೆಲವು ಅಪವಾದಗಳಿವೆ) ಅದು ಆಕೆಯ ಸಂಪೂರ್ಣಾಧಿಕಾರಕ್ಕೆ ಸೇರುತ್ತದೆ. ಹೀಗೆ ಮಹಿಳೆಯರಿಗೆ ಆಸ್ತಿಯಲ್ಲಿ ಸಂಪೂರ್ಣಾಧಿಕಾರವನ್ನು ನೀಡಿದ ಪ್ರಯುಕ್ತ ಮಹಿಳೆಯರು ಇಷ್ಟಪತ್ರವನ್ನು ಬರೆದಿಡದೆ ಸತ್ತರೆ ಅವರ ಆಸ್ತಿಪಾಸ್ತಿಯ ಉತ್ತರಾಧಿಕಾರ ಯಾರಿಗೆ ಸಲ್ಲಬೇಕೆಂಬುದನ್ನು ಕ್ರಮಬದ್ಧಗೊಳಿಸುವ ಅಗತ್ಯ ಬಿದ್ದಿತು.

ಶಾಸನವು ಈ ಕ್ರಮವನ್ನು ಹೀಗೆ ವಿಧಿಸಿದೆ—

(೧) ಮಗ, ಮಗಳು ಮತ್ತು ಗಂಡ. ಇವರು ಸರಿಸಮಾನವಾಗಿ ಪಾಲು ಪಡೆಯುತ್ತಾರೆ. ಮಗ ಅಥವಾ ಮಗಳಂದಿರಲ್ಲಿ ಯಾರಾದರೂ ಹೆತ್ತವರಿಗಿಂತ ಮೊದಲೇ ಸತ್ತಿದ್ದರೆ, ಬದಲಿದ್ದವರಲ್ಲಿ ಅವರ ಪಾಲಿಗೆ ಸಲ್ಲಬಹುದಾಗಿದ್ದ ಆಸ್ತಿಪಾಸ್ತಿಯನ್ನು ಸಂಬಂಧಿಸಿದ ಮೊಮ್ಮಕ್ಕಳು ತಮ್ಮಲ್ಲಿ ಸಮಾನವಾಗಿ ಹಂಚಿಕೊಳ್ಳುತ್ತಾರೆ. (೨) ಗಂಡನ ಉತ್ತರಾಧಿಕಾರಿಗಳು. (೩) ತಂದೆ ಮತ್ತು ತಾಯಿ. (೪) ತಂದೆಯ ಉತ್ತರಾಧಿಕಾರಿಗಳು. (೫) ತಾಯಿಯ ಉತ್ತರಾಧಿಕಾರಿಗಳು.

ಇಲ್ಲೆಲ್ಲ ವರ್ಗ ಪ್ರಾಶಸ್ತ್ಯಾನುಕ್ರಮ ರೀತಿಯಲ್ಲಿ ಉತ್ತರಾಧಿಕಾರವು ಹೋಗುತ್ತದೆ; ಒಂದೇ ವರ್ಗದಲ್ಲಿರುವ

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 258/49, R. E. P. 257/1956.

ರಾಮಯ್ಯ ಹೆಬ್ಬಾರ ... —ಅರ್ಜಿದಾರ.

ಶ್ರೀನಿವಾಸ ಹೆಬ್ಬಾರ ... —ಎದ್ರಿ.

ಗಾರ್ನಿಶಿ, ಗಿರಿಜಮ್ಮ, ವಾಸುದೇವ ಹೆಬ್ಬಾರನ ಹೆಂಡ್ತಿ, ಬೆಂಗಳೂರು ಸಿಟಿ ಕಾಶಿವಿಶ್ವೇಶ್ವರ ದೇವಸ್ಥಾನದ ಸಮೀಪದಲ್ಲಿರುತ್ತಾಳೆ.

ಸದ್ರಿ ಗಾರ್ನಿಶಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ.

ಮೇಲಿನ ಅಮಲ್ಜಾರಿ ಪ್ರಕಾರ ಎದ್ರಿಯಿಂದ ಅರ್ಜಿದಾರನಿಗೆ ಬರತಕ್ಕ ಹಣದ ಬಗ್ಗೆ ಸದ್ರಿ ಎದ್ರಿಗೆ ನಿಮ್ಮಿಂದ ಮೇಲಿನ ಡಿಕ್ರಿ ಪ್ರಕಾರ ಸಲ್ಲತಕ್ಕ ಹಣವನ್ನು ಜಪ್ತಿ ಮಾಡಿಸಿ ಅದರ ವಸೂಲಿ ಕುರಿತು ನಿಮ್ಮ ಮೇಲೆ ಅಮಲ್ಜಾರಿ ನಡೆಸುವರೆ ಅರ್ಜಿದಾರನಿಗೆ ಪರ್ಮಿಶನ್ ಕೊಡಿಸಬೇಕೆಂತ ಪ್ರಾರ್ಥನೆ ಕೇಳಿ ಅರ್ಜಿದಾರನು ದಾಖಲು ಮಾಡಿದ ಮೇಲಿನ ಅಮಲ್ಜಾರಿಯನ್ನು ತಾ. 18—7—1956ಕ್ಕೆ ತನಿಗೆ ಇಟ್ಟಿರುತ್ತದೆ. ಈ ಕುರಿತು ನಿಮ್ಮದ್ದೇನಾದರೂ ಆಕ್ಷೇಪ ಇದ್ದರೆ ಆ ದಿನ ಹಗಲು 11 ಗಂಟೆಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲಕ ನಿಮಗೆ ತಿಳಿಸಿಯದೆ.

(By order of the Court).

Y. Tejappa Shetty,
Advocate for Petitioner.

Coondapoor, 6-7-1956.



ಕುಮಾರಿ ಚಿತ್ರಿಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಬಂಧುಗಳಿಗೆ ಆಸ್ತಿಯಲ್ಲಿ ಸಮಪಾಲು ಸಿಗುತ್ತದೆ. ಗಂಡ, ತಂದೆ ಮತ್ತು ತಾಯಿಯ ಉತ್ತರಾಧಿಕಾರಿಗಳು ಯಾರೆಂಬುದನ್ನು ಈ ಶಾಸನಾಂತರ್ಗತ ನಿಯಮಾನುಸಾರ ನಿರ್ಧರಿಸಬೇಕಾಗಿದೆ. ಅಂದರೆ ಗಂಡ, ತಂದೆ, ತಾಯಿಯರಲ್ಲಿ ಯಾರೇ ಆಗಲಿ, ಸಂಬಂಧಿಸಿದ ಹಿಂದೂ ಸ್ತ್ರೀಯರ ಮರಣದ ಬೆನ್ನಿಗೆಯೇ ಇಷ್ಟ ಪತ್ರವನ್ನು ಮಾಡಿಟ್ಟಿರದೆ ಮೃತ್ಯುವಶರಾದರೆ ಆಗ ಅವರ ಆಸ್ತಿಗೆ ಯಾರು ಉತ್ತರಾಧಿಕಾರಿಗಳಾಗುವರೋ ಆ ವ್ಯಕ್ತಿಗಳೇ ಇಲ್ಲಿ ಹಕ್ಕು ಪಡೆಯುತ್ತಾರೆ.

ಹಿಂದೂ ಮಹಿಳೆಗೆ ದೊರೆತಿರುವ ಆಸ್ತಿಯು ಆ ಆಸ್ತಿಯಲ್ಲಿ ನ್ಯಾಯಪೂರ್ಣವಾದ ಆಸಕ್ತಿ ಇಲ್ಲದಿರುವ ಕುಟುಂಬಗಳ ಕೈಗೆ ಹೋಗದಂತೆ ಶಾಸನದಲ್ಲಿ ತಡೆಯಿದೆ. ಹಿಂದೂ ಮಹಿಳೆಯೊಬ್ಬಳು ತನ್ನ ತಂದೆ ಅಥವಾ ತಾಯಿಯಿಂದ ಆಸ್ತಿ ಪ್ರಾಪ್ತಿಯನ್ನು ಹೊಂದಿದ್ದರೆ ಮತ್ತು ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದೆಯೇ ಮರಣಪಟ್ಟರೆ ಗಂಡನು ಬದುಕಿದ್ದರೂ ಸಹ ಆತನಿಗೆ ಈ ಆಸ್ತಿಯ ಉತ್ತರಾಧಿಕಾರವು ಸಿಗಲಾರದು. ಅದು ತಂದೆಗೆಯೇ ಮರಳಿ ಸೇರುತ್ತದೆ. ಇದೇ ಸೂತ್ರವು ಮಾವನಿಂದ (ಗಂಡನ ತಂದೆ) ಪಡೆಯಲಾದ ಆಸ್ತಿಗೂ ಅನ್ವಯಿಸುತ್ತದೆ. ಈ ಅಪವಾದಕ್ಕೊಳಪಟ್ಟು ಹಿಂದೂ ಮಹಿಳೆಯ ಆಸ್ತಿಯ ಉತ್ತರಾಧಿಕಾರ ಕ್ರಮದ ಪಟ್ಟಿ ಮೊದಲು ಕೊಟ್ಟಂತಿದೆ.

ಹೆಣ್ಣು ಮಕ್ಕಳ ಸ್ತ್ರೀ ಧನದ ಅಧಿಕಾರವನ್ನು ಈ ಶಾಸನವು ಮನ್ನಿಸುವುದಿಲ್ಲ ಈ ಸ್ತ್ರೀ ಧನಕ್ಕೆ ಮಕ್ಕಳೊಡನೆ ಗಂಡನು ಸಹ ಉತ್ತರಾಧಿಕಾರಿಯೆಂದು ಶಾಸನವು ವಿಧಿಸುತ್ತದೆ. ವಿಧವೆಗೆ ಗಂಡನ ಆಸ್ತಿಯಲ್ಲಿ ಮಕ್ಕಳ ಜೊತೆಗೆ ಪಾಲು ದೊರೆಯುವಂತೆ ವಿಧುರನಿಗೆ ಕೂಡ ಸ್ತ್ರೀಧನದಲ್ಲಿ ಸಮಪಾಲು ಸಿಗಬೇಕೆಂದು ಶಾಸನದಲ್ಲಿ ಹೇಳಲಾಗಿದೆ. ಮಲಮಕ್ಕಳಿಗೆ ಮಾತ್ರ ಸ್ತ್ರೀಧನದಲ್ಲಿ ಪಾಲು ಸಿಗಲಾರದು.

ಕುಟುಂಬವೊಡೆಯದಂತೆ ತಡೆ

ವಿಧವೆಯೊಬ್ಬಳು ಉತ್ತರಾಧಿಕಾರದ ಪ್ರಶ್ನೆ ಎದ್ದಾಗ ಪುನರ್ವಿವಾಹವಾಗಿದ್ದರೆ ಆಕೆಯು ತನ್ನ ಗಂಡನ ಕಡೆಯ (ಮಾವನ) ಆಸ್ತಿಯಲ್ಲಿ ಪಾಲನ್ನು ಬೇಡಲಾರಳು. ಮತಾಂತರ ಹೊಂದಿದವರ ಸಂತಾನಕ್ಕೂ ಪಾಲು ಸಿಗಲಾರದೆಂದು ಶಾಸನವು ಹೇಳುತ್ತದೆ. ಕೊಲೆಪಾತಕಿಗಳಿಗೆ ಕೊಲೆಗೊಳಗಾತನ ಆಸ್ತಿಯಲ್ಲಿ ಪಾಲು ದೊರೆಯ ಕೂಡದೆಂದು ಶಾಸನವು ವಿಧಿಸುತ್ತದೆ.

ಮಿತಾಕ್ಷರ ಕುಟುಂಬ ಪದ್ಧತಿಯ ಆಸ್ತಿಪಾಸ್ತಿಯಲ್ಲಿಯೂ ಹೆಂಗಸಿಗೆ ಪಾಲಿನ ಅಧಿಕಾರವನ್ನು ಶಾಸನ ಕೊಟ್ಟಿದೆಯಷ್ಟೆ! ಈ ಅವಿಭಕ್ತ ಕುಟುಂಬದ ಯಾರಾದರೊಬ್ಬ ಗಂಡಸು ಮರಣವಶನಾದರೆ ಆತನ ಭಾಗದ ಆಸ್ತಿಪಾಸ್ತಿಯ ಮೇಲೆ ಗಂಡಸು ಅಥವಾ ಹೆಂಗಸು ಎಂಬ ಭೇದವಿಲ್ಲದೆ ಎಲ್ಲ ಉತ್ತರಾಧಿಕಾರಿಗಳಿಗೂ ಸಮಾನ ಹಕ್ಕು ಸಿಗುತ್ತದೆ. ಆದರೆ ಅವಿಭಕ್ತ ಕುಟುಂಬಗಳು ಹೆಂಗಸರ ಕಾರಣದಿಂದ ಅನಾವಶ್ಯಕವಾಗಿ ಒಡೆದು ಹೋಗಬಾರದೆಂದು ಕೆಲವು ವಿಶೇಷ ಜಾಗರೂಕತೆ ವಹಿಸಲಾಗಿದೆ.

ಉದಾಹರಣೆಗೆ, ಅವಿಭಕ್ತ ಕುಟುಂಬದ ಮನೆಯಲ್ಲಿ ಹೆಂಗಸಿಗೂ ಗಂಡಸಿಗೂ (ಅಂದರೆ ಮಗಳಿಗೂ ಮಗನಿಗೂ) ಕೂಡಿಯೇ ಅಧಿಕಾರವಿದ್ದರೂ ಸಂಸಾರದ ಪುರುಷ ಸದಸ್ಯರು ತಂತಮ್ಮ ಪಾಲನ್ನು ತೆಗೆದು ಕೊಳ್ಳಲು ತಾವಾಗಿ ಇಷ್ಟ ಪಡದ ಹೊರತು ಮಹಿಳಾ ಸದಸ್ಯೆಯು ತನ್ನ ಪಾಲನ್ನು ಪ್ರತ್ಯೇಕಿಸುವಂತೆ ಕೇಳಲಾರಳು. ಈ ಹಕ್ಕಿನ ಮನೆಯಲ್ಲಿ ವಾಸಿಸುವುದಕ್ಕೆ ಹೆಂಗಸು ಕೆಲವು ಅರ್ಹತೆಗಳನ್ನು ಪಡೆದಿರಬೇಕು—ಅಂದರೆ ಅವಳು, ಒಂದೋ ಅವಿವಾಹಿತಳಾಗಿರಬೇಕು, ಅಥವಾ ವಿಧವೆಯಾಗಿರಬೇಕು, ಅಥವಾ ದಾಂಪತ್ಯ ವಿಚ್ಛೇದನೆ ಪಡೆದವಳಿರಬೇಕು; ಮತ್ತು ಅವಳಿಗೆ ವಾಸಿಸಲು ಬೇರೆ ಮನೆಯೇ ಹಕ್ಕಿನಿಂದ ಇಲ್ಲದಿರಬೇಕು!

ಮಿತಾಕ್ಷರ ಅವಿಭಕ್ತ ಕುಟುಂಬದ ಸ್ಥಿರಾಸ್ತಿಯು ಅಥವಾ ಬೇರಾವುದೇ ವ್ಯವಹಾರದಲ್ಲಿ ಪ್ರಥಮ ಶ್ರೇಣಿಯಲ್ಲಿ ಹೇಳಿದ ಒಬ್ಬನಿಗಿಂತ ಹೆಚ್ಚು ಪುರುಷ ಅಥವಾ ಮತ್ತು ಸ್ತ್ರೀ ಉತ್ತರಾಧಿಕಾರಿಗಳಿಗೆ ಪಾಲು ಸಲ್ಲುವಂತಿದ್ದು ಹಾಗೆ ಪಾಲು ಪಡೆದವರಲ್ಲಿ ಯಾರೇ ಆಗಲಿ ತಮ್ಮ ಪಾಲಿಗೆ ಬಂದ ಆಸ್ತಿ ಅಥವಾ ವ್ಯವಹಾರದ ವರ್ಗಾವಣೆ ಮಾಡುವರಾದರೆ ಅದನ್ನು ಪಡೆದುಕೊಳ್ಳುವ ಪ್ರಥಮ ಪ್ರಾಶಸ್ತ್ಯವು ಪ್ರಥಮ ಶ್ರೇಣಿಯ ಇತರ ಉತ್ತರಾಧಿಕಾರಿಗಳಿಗೆ ಸಲ್ಲುತ್ತದೆ. ಇದರಿಂದ ಕೌಟುಂಬಿಕ ವ್ಯವಸಾಯ ಅಥವಾ ಆಸ್ತಿಯನ್ನು ಇಡಿಯಾಗಿ ಉಳಿಸುವುದು ಸಾಧ್ಯವೆನಿಸುತ್ತದೆ.

ತನ್ನ ಸ್ವಾರ್ಜಿತ ಆಸ್ತಿಪಾಸ್ತಿಯ ಸಂಬಂಧದಲ್ಲಿ ಮಾಡುವಂತೆಯೇ ಮಿತಾಕ್ಷರ ಕುಟುಂಬ ಪದ್ಧತಿಯಲ್ಲಿ ಸಹ ಹಿಂದೂ ಪುರುಷನಿಗೆ ಇಷ್ಟಪತ್ರವನ್ನು ಬರೆದಿಡುವ ಅಧಿಕಾರವನ್ನು ಆತನ ಪಾಲಿನ ಮಟ್ಟಿಗೆ ಈ ಶಾಸನವು ನೀಡುತ್ತದೆ. ಅವಿಭಕ್ತ ಕುಟುಂಬದ ಆಸ್ತಿಯು ತನ್ನ ಇಚ್ಛೆಗೆ ವಿರುದ್ಧವಾಗಿ ಪಾಲಾಗಿ ಹೋಗದಂತೆ ಗಂಡಸಿಗೆ ನೋಡಿಕೊಳ್ಳಲು ಅವಕಾಶವಿರಲೆಂಬುದೇ ಇದರ ಮುಖ್ಯೋದ್ದೇಶ.

ಅಳಿಯ ಸಂತಾನಿ ಹಿಂದು

ಸಾಮಾನ್ಯವಾಗಿ ಈ ಶಾಸನವು ಅಳಿಯಸಂತಾನ, ಮರುಮಕ್ಕತ್ತಾಯಂ ಮತ್ತು ನಂಬೂದ್ರಿ ಉತ್ತರಾಧಿಕಾರ ಶಾಸನ ಕ್ರಮಕ್ಕೂ ಅನ್ವಯಿಸುತ್ತದೆ. ಆದರೆ ಕೆಲವು ಸೂಕ್ತ ಬದಲಾವಣೆಗಳನ್ನು ಈ ವಿರಳ ಪದ್ಧತಿಗಳ ಅನುಯಾಯಿಗಳಿಗಾಗಿ ಮಾಡಲಾಗಿದೆ. ಇದರ ಪ್ರಕಾರ ಇಷ್ಟಪತ್ರ ಮಾಡಿಟ್ಟಿರದೆ ಮೃತನಾದ ಹಿಂದೂ ಗಂಡಸಿನ ಆಸ್ತಿಯು ಮೊದಲಾಗಿ ಮೇಲೆ ಹೇಳಿದ ಪ್ರಥಮ ಶ್ರೇಣಿಯ ಉತ್ತರಾಧಿಕಾರಿಗಳಿಗೆ ಹೋಗುತ್ತದೆ. ಅವರು ಯಾರೂ ಇಲ್ಲದಿದ್ದರೆ (ಮೊದಲು ಹೇಳಿದ) ದ್ವಿತೀಯ ಶ್ರೇಣಿಯ ಉತ್ತರಾಧಿಕಾರಿಗಳ ಪಾಲಿಗೆ ಬರುತ್ತದೆ. ಅಂಥವರೂ ಇಲ್ಲದಿದ್ದರೆ ಹತ್ತಿರದ ಸಂಬಂಧಿಕರು ಯಾರೇ ಆಗಿರಲಿ, ಅವರಿಗೆ ಅಧಿಕಾರವು ಪ್ರಾಪ್ತಿಯಾಗುತ್ತದೆ.

ಅಳಿಯ ಸಂತಾನ, ಮರುಮಕ್ಕತ್ತಾಯಂ ಮತ್ತು ನಂಬೂದ್ರಿ ಪದ್ಧತಿಗಳು ಬಳಕೆಯಲ್ಲಿರುವ ಹಿಂದೂ ಕುಟುಂಬಗಳ ಮಹಿಳೆಯರ ಪಾಲಿನ ಉತ್ತರಾಧಿಕಾರಿಗಳ ಪಟ್ಟಿಯು ಹೀಗಿದೆ— (೧) ಮಗ, ಮಗಳು ಮತ್ತು ತಾಯಿ. ಯಾರಾದರೊಬ್ಬ ಮಗ ಅಥವಾ ಮಗಳು ಮೊದಲೇ ಮರಣಪಟ್ಟಿದ್ದರೆ ಅಂಥವರ ಮಕ್ಕಳಿಗೆ ಪಾಲು ಹೋಗುತ್ತದೆ. (೨) ತಂದೆ ಮತ್ತು ಗಂಡ (೩) ತಾಯಿಯ ಉತ್ತರಾಧಿಕಾರಿಗಳು. (೪) ತಂದೆಯ ಉತ್ತರಾಧಿಕಾರಿಗಳು. (೫) ಗಂಡನ ಉತ್ತರಾಧಿಕಾರಿಗಳು.

ಉಪರೋಕ್ತ ಶಾಸನಗಳಲ್ಲೊಂದಕ್ಕೆ ಬದ್ಧಳಾದ ಹಿಂದೂ ಮಹಿಳೆಯು ತನ್ನ ಗಂಡ ಅಥವಾ ಮಾವ (ಗಂಡನ ತಂದೆ) ನಿಂದ ಆಸ್ತಿ ಪ್ರಾಪ್ತಿಯನ್ನು ಹೊಂದಿದ್ದರೆ ಮತ್ತು ಅವಳಿಗೆ ಮಕ್ಕಳು ಅಥವಾ ಮೊಮ್ಮಕ್ಕಳು ಇಲ್ಲದಿದ್ದರೆ ಅಂಥ ಆಸ್ತಿಪಾಸ್ತಿಯು ಗಂಡನ ಉತ್ತರಾಧಿಕಾರಿಗಳಿಗೆಯೇ ಮರಳುತ್ತದೆ. ಈ ಮೂರು ಬಗೆಯ ವಿಶೇಷ ಪದ್ಧತಿಗಳು ಬಳಕೆಯಲ್ಲಿರುವವರ ಮಟ್ಟಿಗೆ ವಾಸದ ಮನೆಯಲ್ಲಿ ಹೆಂಗಸು ಗಂಡಸು ಪಾಲುಗಾರರು ಮನಸ್ಸು ಪಡದ ಹೊರತು ಪಾಲು ಕೇಳಲಾರರೆಂಬ ನಿರ್ಬಂಧ ಅನ್ವಯಿಸುವುದಿಲ್ಲ. ಉಳಿದೆಲ್ಲ ವಿಷಯಗಳಲ್ಲಿ ಈ ಪದ್ಧತಿಗಳು ಬಳಕೆಯಲ್ಲಿರುವ ಸ್ತ್ರೀ ಪುರುಷ ಸದಸ್ಯರ ಆಸ್ತಿಯ ಉತ್ತರಾಧಿಕಾರವು ಮಿತಾಕ್ಷರ ಪದ್ಧತಿಯ ಹಿಂದೂವಿನ ಸಂಗತಿಯಂತೆಯೇ ವಿಲೇವಾರಿಗೊಳಪಡುತ್ತದೆ.

(೧ನೇ ಪುಟದಿಂದ)

ರುತ್ತದೆ; ಸಾಮಾನ್ಯವಾಗಿ ಬೇಂಕುಗಳು ಜನರಿಂದ ಠೇವಣಾತಿಯನ್ನು ಯಾವ ಪ್ರಕಾರವಾಗಿ ಸ್ವೀಕರಿಸುತ್ತವೆ ಎಂಬಿತ್ಯಾದಿ ವ್ಯವಹಾರ ಕೌಶಲಕ್ಕಷ್ಟೇ ಗೋಚರವಾಗುವ ವಿಷಯಗಳನ್ನು ಸರಕಾರ ಈಗ ಗ್ರಹಿಸಿದೆ. ಆದುದರಿಂದಲೇ ೭, ೧೧ ಮತ್ತು ೧೫ ವರ್ಷಗಳೆಂಬ ಬೇರೆ ಬೇರೆ ಅವಧಿಯ ಸಾಲಪತ್ರಗಳನ್ನದು ಹೊರಡಿಸಲು ನಿರ್ಧರಿಸಿದೆ. ಬೇಗನೆ ಹಣ ಬೇಕಾಗಬಹುದಾದವರಿಗಾಗಿ ೭ ವರ್ಷಗಳ ಸಾಲಪತ್ರ; ತಡವಾಗಿ ಸಿಕ್ಕಿದರೂ ಚಿಂತಿಲ್ಲವೆನ್ನುವವರಿಗಾಗಿ ೧೫ ವರ್ಷಗಳ ಸಾಲಪತ್ರ; ಹೆಚ್ಚು ತಡವೂ ಅಲ್ಲ, ಹೆಚ್ಚು ಬೇಗವೂ ಅಲ್ಲದ ಅವಧಿಯವರಿಗಾಗಿ ೧೧ ವರ್ಷಗಳ ಸಾಲಪತ್ರ—ಇವೆ ಎನ್ನಬಹುದು. ಸಾಮಾನ್ಯವಾಗಿ ಸಂಘ, ಸಂಸ್ಥೆಗಳಿಗೆ ದೀರ್ಘಾವಧಿಯ ಸಾಲಪತ್ರಗಳೂ ವ್ಯಕ್ತಿಗಳಿಗೆ ೭ ಅಥವಾ ೧೧ ವರ್ಷಗಳ ಸಾಲ ಪತ್ರಗಳೂ ಉಪಯುಕ್ತವೆನಿಸಬಹುದು.

ಬರುವ ವರ್ಷದಲ್ಲಿ ಪಾವತಿಯಾಗಲಿದ್ದ "ವಿಕ್ಟರಿ ಲೋನ್" ಸಾಲಪತ್ರಗಳನ್ನು ಈ ಸಲವೇ ನೂರು ರೂಪಾಯಿಗೆ ಮೂರಾಣೆಯಂತೆ ಕಡಿಮೆ ಬೆಲೆಗೆ ಮುರಿಸಿ, ಈ ಸಲದ ಸಾಲಪತ್ರಗಳಲ್ಲಿ ಪುನಃ ನಿಕ್ಷೇಪಿಸಬಹುದೆಂದು ಸರಕಾರ ಹೇಳಿದೆ. ಈಗಾಗಲೇ ೧೧೪ ಕೋಟಿ ರೂಪಾಯಿಗಳಷ್ಟು ಹಣವು ಈ ಸಾಲಪತ್ರಗಳಲ್ಲಿರುವುದರಿಂದ ಕನಿಷ್ಠ ೧೦೦ ರೂಪಾಯಿಗಳಾದರೂ ಪುನಃ ಸಾಲಪತ್ರಗಳಲ್ಲಿ ಬಂದು ಸೇರಬಹುದು. ಬಾಕಿ ಉಳಿದದ್ದು ೫೦ ಕೋಟಿ ರೂಪಾಯಿಗಳ ಸಾಲ ಮಾತ್ರ; ಇದು ತ್ವರ್ಯದಲ್ಲಿ ತುಂಬಿ ಬಂದೀತೆಂಬ ಬಗ್ಗೆ ಯಾವುದೇ ಸಂಶಯಕ್ಕೆ ಎಡೆ ಇಲ್ಲ. ಸರಕಾರಕ್ಕೆ ಇಷ್ಟು ವಿಶ್ವಾಸವಿರುವ ಕಾರಣದಿಂದಲೇ ಇರಬೇಕು—ಕೇವಲ ಮೂರು ದಿನಗಳವರೆಗೆ ಮಾತ್ರ ಸಾಲವನ್ನದು ತೆರೆದಿಟ್ಟಿದೆ. ಆದರೆ ಮೊದಲನೇ ದಿನದಲ್ಲೇ ಎಲ್ಲ ಸಾಲವು ತುಂಬಬರಬಹುದು. ಸಾರ್ವಜನಿಕರು ತಡಮಾಡಿದರೆ, ನಿರಾಶರಾಗಬೇಕಾದೀತು.

ಸರಕಾರ ಈಗ ಜೀವವಿಮಾ ವ್ಯವಹಾರವನ್ನು ರಾಷ್ಟ್ರೀಕರಿಸಿ ತನ್ನ ವಶಕ್ಕೆ ತೆಗೆದುಕೊಂಡಿದೆ. ಜೀವವಿಮಾ ಕಂಪೆನಿಗಳ ದೊಡ್ಡ ಮೊತ್ತದ ಹಣವು ಅದಕ್ಕೆ ಈಗ ಸಿಕ್ಕಿದೆ. ಆದುದರಿಂದ ಈ ವರ್ಷದ ಮಟ್ಟಿಗೆ ಬೇರೆ ಸಾಲವು ಬೇಕಾಗುತ್ತದೋ ಇಲ್ಲವೋ, ತಿಳಿದುಬಂದಿಲ್ಲ. ಅರ್ಥಸಚಿವರು ೧೦೦ ರೂಪಾಯಿಗಳ ಸಾಲವೆತ್ತುವ ಸೂಚನೆಯನ್ನು ಕಳೆದ ಮಾರ್ಚಿಯಲ್ಲಿ ಕೊಟ್ಟಿದ್ದರು. ವಿಕ್ಟರಿ ಲೋನನ್ನು ಈಗಲೇ ಮುರಿಸುವ ವ್ಯವಹಾರದಿಂದಾಗಿ, ಸುಮಾರು ೫೦ ಕೋಟಿ ರೂಪಾಯಿಗಳಷ್ಟು ಮಾತ್ರ ವಾಸ್ತವದಲ್ಲಿ ಸಾಲವೆತ್ತಲು (ಏಕೆಂದರೆ ವಿಕ್ಟರಿಲೋನಿನ ಮುರಿಸುವಿಕೆಯು ಸರಕಾರಕ್ಕೆ ಹೊಸ ಹಣವನ್ನೇನು ತಂದು ಕೊಡುವುದಿಲ್ಲ-ಕೊಡಬೇಕಾಗಿದ್ದ ಹಣಕ್ಕೆ ಹೊಸ ಅವಧಿ ಕೊಡುತ್ತದೆ, ಅಷ್ಟೇ(!) ಸರಕಾರ ನಿರ್ಧರಿಸಿದಂತಾಯಿತು. ಇದನ್ನು ನೋಡಿದರೆ ಇನ್ನು ಕೆಲವೇ ವಾರಗಳಲ್ಲಿ ಮತ್ತೆ ೫೦—೭೫ ಕೋಟಿ ರೂಪಾಯಿಗಳ ಸಾಲವನ್ನು ಭಾರತ ಸರಕಾರ ಎತ್ತಲು ಆಲೋಚಿಸಿರಬಹುದೆಂಬ ಊಹೆಗೆ ಅವಕಾಶ ಸಿಗುತ್ತದೆ. ರಾಜ್ಯ ಸರಕಾರಗಳಿಗೆ ಸಹ ದೇಶದಲ್ಲಿ ಸಾಲಕ್ಕೆ ಹಣ ತುಂಬಿಸುವ ಜನರ ಮನೋಭಾವ ಹೇಗಿದೆ ಎಂಬುದನ್ನು ತಿಳಿದುಕೊಳ್ಳಲು ಈ ಸಲದ ಸಾಲವೆತ್ತುವ ಕಾರ್ಯಕ್ರಮ ಸಹಾಯಕವಾದೀತು. ರಾಜ್ಯ ಸರಕಾರಗಳು ಇಷ್ಟರಲ್ಲೇ ಎತ್ತಲಿರುವ ಸಾಲಕ್ಕಾದರೂ ಹಣ ತುಂಬಿಸುವಷ್ಟು ಸಿದ್ಧತೆಯನ್ನು ಜನರು ಈಗಿಂದಲೇ ಮಾಡಿಕೊಳ್ಳಲಿ!

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: **ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್**, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ VOL. 35

ಉಡುಪಿ, 19—7—1956

ಸಂಚಿಕೆ ೪೬ NO. 46

ಗೇಣಿ ನಿರ್ಣಯ ಮಸೂದೆ

ಮದ್ರಾಸಿನಿಂದ ಬಂದಿರುವ ಸುದ್ದಿಯೊಂದು ನಮ್ಮ ಸಾಗುವಳಿದಾರರು ಹಲವು ದಶಕಗಳಿಂದ ನಿರೀಕ್ಷಿಸುತ್ತಿದ್ದ ಶಾಸನವೊಂದರ ವಿಷಯದ ಮೇಲೆ ಸ್ವಲ್ಪ ಪ್ರಕಾಶವನ್ನು ಬೀರುತ್ತಿದೆ. ನ್ಯಾಯವಾದ ಗೇಣಿಯನ್ನು ನಿರ್ಣಯಿಸುವ ಸಂಬಂಧದ ಮಸೂದೆಯು (ಇದರ ಕರಡಿನ ಮುಖ್ಯಾಂಶಗಳನ್ನು "ನವಯುಗ"ದ ತಾ ೫-೧-೫೬ನೇ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ) ಇದೇ ಆಗೋಸ್ಟಿನ ೮ನೇ ತಾರೀಕಿನಂದು ಪ್ರಾರಂಭವಾಗುವ ಮದ್ರಾಸು ಶಾಸನಾಂಗದ ಅಧಿವೇಶನದಲ್ಲಿ ಪರ್ಯಾಲೋಚನೆಗೆ ಬರುವುದೆಂಬುದೇ ಈ ಸಂತೋಷದ ಸುದ್ದಿಯ ಸಾರ.

ಮೇಲಿನ ಮಸೂದೆಯನ್ನು ಕೆಲವು ಸಮಯದ ಹಿಂದೆ ಪರಿಶೀಲಕ ಸಮಿತಿಗೆ ಒಪ್ಪಿಸಿಕೊಡಲಾಗಿದ್ದಿತು. ಈ ಸಮಿತಿಯು ಮಾಡಬಹುದಾದ ತಿದ್ದುಪಡಿಗಳೊಡನೆ ಮಸೂದೆಯು ಮುಂದಿನ ಅಧಿವೇಶನದ ಚರ್ಚೆಗೆ ಬರಲಿದೆ. ಸಮಿತಿಯು ಏನು ತಿದ್ದುಪಡಿಯನ್ನು ಮಾಡಿದೆ ಎಂಬುದು ಈಗ ತಿಳಿದುಬಂದಿಲ್ಲ; ಶಾಸನಾಂಗದ ಮುಂದೆ ಪರಿಶೀಲಕ ಸಮಿತಿಯ ವರದಿ ಮಂಡಿಸಲ್ಪಟ್ಟ ಬಳಿಕವೇ ಗೊತ್ತಾಗಬೇಕಾದ ವಿಷಯವಿದು.

ಮೂಲ ಮಸೂದೆಯು ಮಲಬಾರು ಒಕ್ಕಲುತನ ಶಾಸನದವ್ಯಾಪ್ತಿಗೊಳಪಡುವ ಪ್ರದೇಶಗಳನ್ನು ಹೊರತು ಪಡಿಸಿ, ಮದ್ರಾಸು ರಾಜ್ಯದ ಉಳಿದೆಲ್ಲ ಪ್ರದೇಶಗಳಿಗೆ ಅನ್ವಯಿಸುವಂತಿದ್ದಿತು, ಮತ್ತು ಸಾಗುವಳಿದಾರನಾದ ಒಕ್ಕಲು ತನ್ನ ಸಾಗುವಳಿ ಭೂಮಿಯ ಮುಖ್ಯ ಉತ್ಪನ್ನದಲ್ಲಿ ಸೇಕಡಾ ನಲ್ವತ್ತರಷ್ಟನ್ನು ಧನಿಗೆ ಗೇಣಿಯಾಗಿ ಪಾವತಿಮಾಡಬೇಕೆಂದು ಇದು ವಿಧಿಸಿದ್ದಿತು.

ಶಾಸನಾಂಗದಲ್ಲಿ ನಡೆದ ಮಸೂದೆಯ ಕರಡಿನ ಮೇಲಣ ಚರ್ಚೆಯ ಕಾಲದಲ್ಲಿಯೂ ಪರಿಶೀಲಕ ಸಮಿತಿಯು ಸಾಕ್ಷಿಗಳನ್ನು ಕೇಳಿಕೊಂಡ ಕಾಲದಲ್ಲಿಯೂ ಒಂದು ಮುಖ್ಯ ಪ್ರಶ್ನೆ ಬಂದಿದ್ದಿತು. ಮಸೂದೆಯಲ್ಲಿ ನಿಗದಿಗೊಳಿಸಲಾದ ಗೇಣಿಯನ್ನು ಇನ್ನೂ ತಗ್ಗಿಸಬೇಕೆನ್ನುವುದು ಒಕ್ಕಲುಗಳ ಪರವಾದ ಪ್ರತಿಪಾದನೆ. ಕಾಲಂಶ ಅದವಾ ಹೆಚ್ಚೆಂದರೆ ಮೂರರಲ್ಲಿ ಒಂದಂಶವನ್ನಷ್ಟೆ ಗೇಣಿಯಾಗಿ ಕೊಟ್ಟರೆ ಸಾಕೆಂಬ ಮಟ್ಟಿಗೆ ಗೇಣಿಯ ಅಂಶವನ್ನು ಇಳಿಸಬೇಕೆಂದು ಒಕ್ಕಲುಗಳು ಒತ್ತಾಯ ಮಾಡಿದ್ದರು.

ಇದಕ್ಕೆ ವಿರುದ್ಧವಾಗಿ ಧನಿಗಳ ಪಕ್ಷದಿಂದ ಮಸೂದೆಯಲ್ಲಿ ನಿರ್ಣಯಿಸಿದ ಗೇಣಿಯು ಮುಖ್ಯ ಉತ್ಪನ್ನದ ೬೦% ಮಾತ್ರ ಆಗಿರುವುದು ತೀರ ಅನ್ಯಾಯವೆಂದು ಹೇಳಲಾಗಿದ್ದಿತು. ಒಟ್ಟು ಉತ್ಪನ್ನದ ಅರೆವಾಸಿಯಷ್ಟನ್ನಾದರೂ ಗೇಣಿಯಾಗಿ ಕೊಡಬೇಕೆಂಬ ತಿದ್ದುಪಡಿಯನ್ನು ಮಾಡದಿದ್ದರೆ ಭೂಮಾಲಿಕರಾದ ಧನಿಗಳಿಗೆ ಸರಕಾರದ ತೀರ್ವೆ ತೆತ್ತು ದಿನಗಳೆಯಲು ಅವಕಾಶ ಸಿಗಲಾರದೆಂಬುದಾದ ಅವರದು ಆಕ್ಷೇಪವಲ್ಲ, ಕೆಲವು ವರ್ಗದ ಭೂಹಿಡುವಳಿಗಳಿಗೆ ಈ ಗೇಣಿ ನಿರ್ಣಯ ಶಾಸನವನ್ನು ಅನ್ವಯಿಸಲಾಗದೆಂದೂ ಅವರು ಹೇಳಿದ್ದರು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಇನ್ನೂ ಒಂದು ವಿಶೇಷವಾದ ಸಲಹೆಯನ್ನು ಕೊಟ್ಟವರುಂಟು: ರಾಜ್ಯಗಳ ಪುನಾರಚನೆಯು ಇಷ್ಟರಲ್ಲೇ ನಡೆಯಲಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಗೇಣಿ ನಿರ್ಣಯ ಮಸೂದೆಯನ್ನು ಅನ್ವಯಿಸಬಾರದೆಂದು ಪ್ರತಿಪಾದಿಸಿದ ನಿವರ್ಶನಗಳಿವೆ. ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ಮುಂಬಯಿ ಸರಕಾರವು ಈಚೆಗೆ ಉಳುವವನಿಗೆಯೇ ಹೊಲದೊಡೆತನ ಕೊಡುವ ಉದ್ದೇಶದಿಂದ ಮಾಡಿದ ಕ್ರಾಂತಿಕಾರಿ ಶಾಸನವನ್ನು ಅನ್ವಯಿಸಬಾರದೆಂದು ಚಳವಳ ನಡೆಸಿದವರಂತೆಯೇ ನಮ್ಮಲ್ಲಿಯ ಭೂಮಾಲಿಕ ವರ್ಗದ ಪ್ರಮುಖರೂ ನಡೆದುಕೊಂಡಿದ್ದಾರೆಂದು ಹೇಳಬಹುದು.

ಹೀಗಿರುವ ಪ್ರಯುಕ್ತ ಪರಿಶೀಲಕ ಸಮಿತಿಯು ದಕ್ಷಿಣ ಕನ್ನಡ ಜಿಲ್ಲೆಯನ್ನು ಗೇಣಿ ನಿರ್ಣಯ ಮಸೂದೆಯ ವ್ಯಾಪ್ತಿಯಿಂದ ಹೊರಗಿಡಬೇಕೆಂದು ಸೂಚಿಸುವ ಸಂಭವ ಇಲ್ಲವೆಂದು ಹೇಳಲಿಕ್ಕಾಗದು. ಇಂಥ ಸಂಭವವನ್ನು ನಿವಾರಿಸಲು ಇನ್ನಾದರೂ ಪ್ರಯತ್ನವನ್ನು ಒಕ್ಕಲುಗಳ ಪರವಾಗಿ ಮುಂದೊತ್ತಬೇಕಾಗಿದೆ. ಕನಿಷ್ಠ ಪಕ್ಷಕ್ಕೆ ನಮ್ಮ ಶಾಸನ ಸಭಾ ಸದಸ್ಯರಾದರೂ ಪರಿಶೀಲಕ ಸಮಿತಿಯಿಂದ ತಿದ್ದುಪಡಿಗೊಳಪಟ್ಟ ಮಸೂದೆಯ ಚರ್ಚೆಯ ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ಈ ಶಾಸನವನ್ನು ಅನ್ವಯಿಸುವುದಕ್ಕೆ ಒತ್ತಾಯಿಸುವಂತೆ ನಾವು ನೋಡಿಕೊಳ್ಳಬೇಕಾಗಿದೆ. ನಮ್ಮ ಪ್ರತಿನಿಧಿಗಳಾದರೂ ಜನಮತವ—ಅವರಲ್ಲೂ ಭೂಮಾಲಿಕರಿಗಿಂತ ಎಷ್ಟೋಪಟ್ಟು ಹೆಚ್ಚಿರುವ ಸಾಗುವಳಿದಾರರ ಅಭಿಪ್ರಾಯವು—ಹೇಗೆ ಸಾಗುತ್ತಿದೆ ಎಂಬುದನ್ನು ಈಗಲೇ ಖಚಿತವಾಗಿ ತಿಳಿದುಕೊಳ್ಳಲು ಮುಂದಾಗಬೇಕಾಗಿದೆ.

ಈಗ ನಮ್ಮ ಜಿಲ್ಲೆಗೆ ನ್ಯಾಯವಾದ ಗೇಣಿಯನ್ನು ನಿರ್ಣಯಿಸುವ ಶಾಸನವಾಗದಿದ್ದರೆ, ಮೈಸೂರಿನಲ್ಲಿ ನಾವು ಸೇರಿದ ಬಳಿಕ ಜಿಲ್ಲೆಯ ಒಕ್ಕಲುಗಳು ಎಷ್ಟು ವರ್ಷಗಳ ವರೆಗೆ ಈ ಬಗೆಯ ಶಾಸನಕ್ಕಾಗಿ ಕಾಯುತ್ತಿರಬೇಕಾದೀತೋ ಹೇಳಲು ಬರುವಂತಿಲ್ಲ. ನಮ್ಮ ಸರಕಾರಗಳು ಮೂಲಭೂತವಾದ ವಿಷಯಗಳ ಮಟ್ಟಿಗೆ ಆಮೆಯ ನಡಿಗೆಯನ್ನೆ ಇಟ್ಟು, ಬಹಳ ವಿಳಂಬವಾಗಿ ಶಾಸನ ಕ್ರಮಗಳನ್ನು ಕೈಗೊಳ್ಳುವ ಅಭ್ಯಾಸವನ್ನು ಇಟ್ಟುಕೊಂಡಿವೆ, ಇಲ್ಲವಾದರೆ ನ್ಯಾಯವಾದ ಗೇಣಿಯನ್ನು ನಿರ್ಣಯಿಸುವಂಥ ಅತ್ಯಾವಶ್ಯಕವಾದ ಶಾಸನವನ್ನು ಮಾಡಲು ಸಮರ್ಥವೂ ದಕ್ಷವೂ ಪ್ರಗತಿಪರವೂ ಆದ ರಾಜ್ಯವೆಂದು ಹೆಸರಾದ ಮದ್ರಾಸು ಇಷ್ಟು ಸಮಯವನ್ನು ತೆಗೆದುಕೊಳ್ಳುತ್ತಿರಲಿಲ್ಲ.

ಹಲವು ದಶಕಗಳಿಂದ ಈ ಜಿಲ್ಲೆಯ ನಿಕಟ ಸಂಬಂಧವನ್ನು ಹೊಂದಿದ್ದ ಮದ್ರಾಸು ಸರಕಾರಕ್ಕೆಯೇ ಈ ಜಿಲ್ಲೆಯ ಅಳಿಯ ಸಂತಾನಾದಿ ವಿಶಿಷ್ಟ ಪದ್ಧತಿಗಳನ್ನೂ ಇಲ್ಲಿ ರೂಢಿಯಲ್ಲಿರುವ ಸಾಗುವಳಿ ಪದ್ಧತಿಯನ್ನೂ ಅವಲೋಕಿಸಿ ಶಾಸನವೊಂದನ್ನು ಮಾಡಲು ಹತ್ತುವರ್ಷಗಳ ಅವಧಿಯೂ ಸಾಕಾಗಲಿಲ್ಲ, ಎಂದಮೇಲೆ ಮುಂದಿನ ಮೈಸೂರು ಸರಕಾರಕ್ಕೆಯೇ ಈ ಜಿಲ್ಲೆಯ ಸಾಗುವಳಿದಾರ ಒಕ್ಕಲುಗಳ ರಕ್ಷಣೆಯ ಭಾರವನ್ನು ಬಿಟ್ಟಪಕ್ಷದಲ್ಲಿ ಇನ್ನೆರಡು ದಶಕಗಳಾದರೂ ಕನಿಷ್ಠಪಕ್ಷ ಬೇಕಾಗಬಹುದೆಂಬ ಭಯವಿದೆ. ನಮ್ಮಲ್ಲಿಯ ಸಾಗುವಳಿದಾರ ಒಕ್ಕಲುಗಳು ಇದನ್ನೆಂದೂ ಅಪೇಕ್ಷಿಸುವುದಿಲ್ಲ, ಕಾಲಗತಿಯೂ ಇಷ್ಟು ದೀರ್ಘ ಅವಕಾಶವನ್ನು ಇನ್ನು ಮುಂದೆ ಕೊಡಲಾರದು. ಆದುದರಿಂದ ಎಲ್ಲರೂ ನಮ್ಮ ಜಿಲ್ಲೆಗೆ ಈ ಮಸೂದೆಯು ಅನ್ವಯಿಸಬೇಕೆಂದು ಒತ್ತಾಯಿಸುವುದೂ ಮುಂದಿನ ಮೈಸೂರು ರಾಜ್ಯದಲ್ಲಿ ಸಹ ಈ ಶಾಸನಕ್ಕೆ ಬೆಲೆಯು ಸಿಗುವಂತೆ ನೋಡಿಕೊಳ್ಳುವುದೂ ಅತ್ಯಾವಶ್ಯಕ.

ಅಷ್ಟೇಯಲ್ಲದೆ, ನ್ಯಾಯವಾದ ಗೇಣಿಯನ್ನು ನಿರ್ಣಯಿಸುವ ತತ್ತ್ವವು ಯೋಜನಾ ಆಯೋಗದ ಕಡೆಯಿಂದ ಸಾರ

(೧೨ನೇ ಪುಟ ನೋಡಿರಿ)

Words of Worldly Wisdom

Save money regularly in
Your bank account and you will
Never find yourself incurring
Debts which destroy your peace of mind
In addition you can make all payments by
Cheque which is both safe and convenient
All the while your money is earning interest.
Thrift will safe-guard your future and
Ensure your Prosperity

Resources of Rs. 9.5 Crores

The Canara Industrial & Banking Syndicate, Limited

Estd 1925. H O. UDIPI.

ಪರ್ವತಾರೋಹಿ ತೇನಸಿಂಗರ ರೋಮಾಂಚಕ ಅನುಭವ

ಎವರೆಸ್ಟನ್ನು ಹತ್ತಿನಿಲ್ಲಲು ಪ್ರಯತ್ನಪಟ್ಟ ಅತ್ಯದ್ಭುತ ಸಾಹಸ

ನಾನೊಬ್ಬ 'ಶರ್ಪ'; ಪರ್ವತಪ್ರದೇಶಗಳಲ್ಲೇ ವಾಸಮಾಡುವವನು; ಹೆಸರಾಂತ ಹಿಮಾಚಲ ಪರ್ವತಾಗ್ರಗಳೇ ನನ್ನ ವಾಸಸ್ಥಾನ. ಎವರೆಸ್ಟಿನ ಉತ್ತುಂಗ ಶಿಖರವನ್ನೇರಬೇಕೆಂಬುದು ನನ್ನ ಚಿಕ್ಕಂದಿನ ಕನಸಾಗಿತ್ತು. ಈ ಶಿಖರವನ್ನು ನಮ್ಮ ಜನ "ಚೋಮೊ ಲುಂಗ್ಮ" ಎಂದು ಕರೆಯುತ್ತಾರೆ. ಆ ಶಿಖರಾರೋಹಣದಲ್ಲಿ ನನ್ನ ಏಳನೆಯ ಪ್ರಯತ್ನ ಸಫಲವಾಯಿತು. ಆ ಮಹಾ ಶಿಖರಕ್ಕೆ ನಾನು ಚಿರಋಣಿಯಾಗಿದ್ದೇನೆ ಜೀವನದ ಎಲ್ಲ ಸುಖಗಳನ್ನೂ ಆ ಶಿಖರ ನನಗೆ ಕೊಟ್ಟಿದೆ.

ನಾನಿನ್ನೂ ಚಿಕ್ಕ ಹುಡುಗನಾಗಿದ್ದೆ; ಆಗ ಬ್ರಿಟಿಷ್ ಪರ್ವತಾರೋಹಿಗಳು ಹಿಮಾಚಲ ಪರ್ವತಗಳನ್ನು ಹತ್ತುವುದಕ್ಕಾಗಿ ಬಂದಿದ್ದರು. ಅನೇಕ ಶರ್ಪ ಜನ ಅವರಿಗೆ ಸಹಾಯಕರಾಗಿದ್ದರು. ಹತ್ತಾರು ವರುಷಗಳಲ್ಲಿ ಅವರು ಉತ್ತಮ ಪರ್ವತಾರೋಹಿಗಳೆಂದು ಹೆಸರು ಪಡೆದಿದ್ದರು.

ನಾನು ಹುಟ್ಟಿದ್ದು ನೇಪಾಳದಲ್ಲಿ; ಸೋಲೋ ಖುಂಬ ಎಂಬಲ್ಲಿ. ಬಹುಶಃ ೧೯೧೪ರಲ್ಲಿ ನಾನು ಹುಟ್ಟಿದ್ದಿರಬಹುದು. ನಾನು 'ಶರ್ಪ' ಜನಾಂಗದವನು. ನಮ್ಮ ಜನ ಅಕ್ಷರಸ್ಥರಲ್ಲ, ನಮ್ಮ ಭಾಷೆಗೆ ಲಿಪಿಯೇ ಇಲ್ಲ. ನಾನೂ ಮೊದಲು ಅಕ್ಷರಸ್ಥನಾಗಿರಲಿಲ್ಲ, ಈಗ ಮಾತ್ರ ಅನೇಕ ಭಾಷೆಗಳನ್ನು ಕಲಿತಿದ್ದೇನೆ.

'ಶರ್ಪ' ಎಂದರೆ ಕೂಲಿಯಾಳು ಎಂದು ಅನೇಕರು ತಿಳಿದಿದ್ದಾರೆ; ಇದು ತಪ್ಪು ತಿಳಿವಳಿಕೆ. 'ಶರ್ಪ' ಜನಾಂಗದವರು ಗುಡ್ಡವಾಸಿಗಳು; ಹಿಮಾಚಲ ಪ್ರದೇಶದಲ್ಲಿ ಅವರದೇ ಒಂದು ಜನಾಂಗ. ಪೂರ್ವ ಹಿಮಾಚಲ ಪ್ರದೇಶದಲ್ಲಿ ಕಡಿಮೆ ಎಂದರೂ ಒಂದು ಲಕ್ಷ 'ಶರ್ಪ' ಜನರಾದರೂ ವಾಸಮಾಡುತ್ತಿದ್ದಾರೆ.

೧೯೨೧, ೧೯೨೨, ೧೯೨೪ರಲ್ಲಿ ಹೆಸರಾಂತ ಮೂರು ಎವರೆಸ್ಟ್ ಆರೋಹಣಗಳು ನಡೆದುವು. ಈ ಆರೋಹಣದಲ್ಲಿ ಅನೇಕ ಶರ್ಪರು ಸೇರಿದ್ದರು. ಅವರೆಲ್ಲ ಹಿಂತಿರುಗಿದ ಮೇಲೆ ಆರೋಹಣಕ್ಕೆ ಸಂಬಂಧಿಸಿದ ನೂರಾರು ಕಥೆಗಳನ್ನೂ ಅನುಭವಗಳನ್ನೂ ಹೇಳುತ್ತಿದ್ದರು. ಅವರು ಹೇಳುತ್ತಿದ್ದ ಕಥೆಗಳು ಉತ್ಸುಕತೆಯನ್ನುಂಟುಮಾಡುತ್ತಿದ್ದವು. ಎಲ್ಲಿಂದಲೋ ಬರುತ್ತಿದ್ದ ಬಿಳಿಯ ಜನ, ಅವರು ಪರ್ವತಗಳನ್ನು ಹತ್ತುವಾಗ ಉಡುತ್ತಿದ್ದ ವಿಚಿತ್ರ ಉಡುಪುಗಳು, ಅವರು 'ಎವರೆಸ್ಟ್, ಎವರೆಸ್ಟ್' ಎನ್ನುತ್ತಿದ್ದುದು, ಈ ಕಥೆಗಳೆಲ್ಲ ಶರ್ಪ ಜನಾಂಗದವರಲ್ಲಿ ಹರಡಿಹೋಗಿತ್ತು. ಎವರೆಸ್ಟಿನ ವಿಚಾರ ನಾನು ಕೇಳಿದುದು ಅದೇ ಮೊದಲು; ತಿಳಿದವರನ್ನು ಅದರ ವಿಷಯವಾಗಿ ಕೇಳಿದೆ. ನಾವು 'ಚೋಮೋ ಲುಂಗ್ಮ' ಎಂದು ಕರೆಯುವ ಮಹಾ ಶಿಖರವೇ, ಎವರೆಸ್ಟ್; ಅದು ಪ್ರಪಂಚದಲ್ಲೇ ಉತ್ತುಂಗ ಶಿಖರ ಎಂಬ ವಿಚಾರ ತಿಳಿಯಿತು!

"ಚೋಮೋ ಲುಂಗ್ಮ" ಎಂದರೆ 'ಪ್ರಪಂಚದ ಮಹಾಮಾತೆ' ಎಂದರ್ಥ; ನಾನು ಚಿಕ್ಕವನಾಗಿದ್ದಾಗ ನಮ್ಮ ಊರಿಗೆ ಉತ್ತರ ದಿಕ್ಕಿನಲ್ಲಿದ್ದ ಆದರ ಹಿಮಶಿಖರವನ್ನು ಕಂಡು ಆಶ್ಚರ್ಯಪಡುತ್ತಿದ್ದೆ. ಪರ್ವತಗಳ ನಡುವೆ ೧೫,೦೦೦ ಅಡಿಗಳ ಎತ್ತರದ ವರೆಗೆ ನಾನು ದನಕರುಗಳನ್ನು ಅಟ್ಟಿಕೊಂಡು ಹೋಗುತ್ತಿದ್ದೆ. ಅವು ಆರಾಮವಾಗಿ ಹಿಮಪ್ರವಾಹದ ಪಕ್ಕದಲ್ಲಿ ಮೇಯುತ್ತ ನಿಲ್ಲುತ್ತಿದ್ದುವು. ನನ್ನ ಸುತ್ತ ಇದ್ದ ಗಿರಿಶಿಖರಗಳನ್ನು ಆನಂದದಿಂದಲೂ ಆಶ್ಚರ್ಯದಿಂದಲೂ ವೀಕ್ಷಿಸುತ್ತಿದ್ದೆ. 'ಚೋಮೋ ಲುಂಗ್ಮ' ಶಿಖರ ಇವುಗಳೆಲ್ಲದರಮೇಲೂ ಎದ್ದು ಮೇಲೇರಿತ್ತು. ಆ ಶಿಖರವನ್ನು ಹತ್ತಬೇಕು ಎಂದು ತವಕಪಡುತ್ತಿದ್ದೆ.

೧೯೩೫ನೆಯ ಇಸವಿಯ ಮಾತು; ನನಗೆ ಆಗ ೨೧ ವರುಷ, ಇಂಗ್ಲಿಷ್ ಪರ್ವತಾರೋಹಿ ಎರಿಕ್ ಷಿಪ್‌ಟನ್ ಎವರೆಸ್ಟ್ ಆರೋಹಣಕ್ಕೆ ಹೊರಟಿದ್ದಾಗ ನನ್ನನ್ನು ಆರಿಸಿಕೊಂಡರು. ನನ್ನ ಕೆಲಸ ಕಠಿಣವಾಗಿಯೇ ಇತ್ತು. ಎರಡು ಬಿಡಾರಗಳ ನಡುವೆ ೬೦–೯೦ ಪೌಂಡುಗಳ ಆಹಾರ ಸಾಮಗ್ರಿಗಳನ್ನೂ ಇತರ ಸಲಕರಣೆಗಳನ್ನೂ ಸಾಗಿಸಬೇಕಾಗಿತ್ತು. ಈ ರೀತಿಯ ಸಾಗಾಣಿಕೆ ಒಂದು ಸಲ ಅಲ್ಲ, ಅನೇಕ ಸಲ ನಡೆಯಬೇಕಾಗಿತ್ತು. ಪರ್ವತಗಳ ಪ್ರದೇಶದಲ್ಲಿ ಈ ಹೊರುವ ಕೆಲಸ ಬಹಳ ಕಷ್ಟಕರವಾಗಿರುತ್ತದೆ.

ನನ್ನ ಈ ಮೊದಲನೆಯ ಅನುಭವ ವಿಚಿತ್ರವಾಗಿತ್ತು. ತೊಡಲು ವಿಚಿತ್ರವಾದ ಉಡುಪು; ಚಳಿಗಾಳಿಗಳನ್ನು ಎದುರಿಸಲು ಅವು ಯೋಗ್ಯವಾಗಿದ್ದುವು. ಡಬ್ಬಗಳಲ್ಲಿ ಶೇಖರಿಸಿಟ್ಟಿದ್ದ ಆಹಾರಗಳನ್ನು (ಇದು ನನಗೆ ಹೊಸದು) ನಾವು ಸೇವಿಸಬೇಕಾಗಿತ್ತು. ಮಲಗುವುದಕ್ಕೆ ಚೀಲಗಳನ್ನು ಉಪಯೋಗಿಸಬೇಕಾಗಿತ್ತು. ಆ ಸಲ ಆರೋಹಣ ಮುಗಿಯುವ ವೇಳೆಗೆ ನನಗೆ ಅನೇಕ ಅನುಭವಗಳಾಗಿದ್ದುವು. ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ಒಬ್ಬರ ಹಿಂದೆ ಒಬ್ಬರು ಹೋಗುವುದು, ಹಗ್ಗದ ಏಣಿಗಳ ಮೇಲೆ ಹತ್ತುವುದು, ಹಿಮಗಡ್ಡೆಗಳಲ್ಲಿ ಮೆಟ್ಟಲುಗಳನ್ನು ಕೆತ್ತಿಕೊಳ್ಳುವುದು, ಸುಲಭವಾದ ದಾರಿಗಳನ್ನು ಆರಿಸಿಕೊಳ್ಳುವುದು ಇವುಗಳ ಹೊಸ ಅನುಭವವಾಯಿತು. ಆ ವರುಷದ ಆರೋಹಣ ಯಶಸ್ವಿಯಾಗಲಿಲ್ಲ.

೧೯೪೭ರಲ್ಲಿ ಸ್ವಿಸ್ ಪರ್ವತಾರೋಹಿಗಳು ಎವರೆಸ್ಟ್ ಶಿಖರ ಏರಲು ಸನ್ನಾಹ ಮಾಡಿಕೊಳ್ಳತೊಡಗಿದರು. ಅವರು ನನ್ನನ್ನು ಸರದಾರನನ್ನಾಗಿ ಮಾಡಿಕೊಂಡರು. ಆ ತಂಡದ ಶರ್ಪರಿಗೆಲ್ಲ ನಾನೇ ಮುಖಂಡ. ಈ ಕೂಲಿಯಾಳುಗಳು ಸಾಮಾನ್ಯರಲ್ಲ. ೬೦–೭೦ ಪೌಂಡು ತೂಕದ ಪದಾರ್ಥಗಳನ್ನು ಹೊತ್ತು ಎಂಥ ಕಡಿದಾದ ಪರ್ವತಪ್ರದೇಶದಲ್ಲಾದರೂ ತಿರುಗಾಡಬಲ್ಲರು.—ಆ ವರುಷ ವಸಂತ ಋತುವಿನಲ್ಲಿ ೧೩ ಮಂದಿ ಶರ್ಪ ಕೂಲಿಗಳನ್ನು ಆರಿಸಿಕೊಂಡೆ; ಮುಖಂಡರನ್ನು ಎದುರುಗೊಳ್ಳಲು ನಾವೆಲ್ಲ ಖಟ್ಮಂಡುವಿಗೆ ತೆರಳಿದೆವು. ಮಹಾಯುದ್ಧ ನಡೆಯುವುದಕ್ಕೆ ಮುಂಚೆ, ಎವರೆಸ್ಟ್ ಹತ್ತಬೇಕಾದರೆ, ಟಿಬೆಟ್ಟಿಗೆ ತೆರಳಿ ಉತ್ತರದಿಕ್ಕಿನಿಂದ ಶಿಖರವನ್ನೇರುವುದು ವಾಡಿಕೆಯಲ್ಲಿತ್ತು. ಆದರೆ ಯುದ್ಧಾನಂತರ ಕಮ್ಯುನಿಸ್ಟ್ ಚೀನಾ ಇದಕ್ಕೆ ಅವಕಾಶ ಕೊಡಲಿಲ್ಲ; ಆದುದರಿಂದ ನಾವೆಲ್ಲ ನೇಪಾಳಕ್ಕೆ ತೆರಳಿ, ದಕ್ಷಿಣ ದಿಕ್ಕಿನಿಂದ ಶಿಖರವನ್ನೇರಬೇಕಾಯಿತು. ಆ ವರುಷದ ನಮ್ಮ ಪ್ರಯತ್ನ ವಿಫಲವಾಯಿತು.

೧೯೫೨ನೆಯ ಇಸವಿಯ ಮಾತು. ಆ ವರುಷದ ಆರೋಹಣದಲ್ಲಿ ಸುಮಾರು ೨೮,೦೦೦ ಅಡಿಗಳ ಎತ್ತರ ಏರಿದೆವು. ಅಲ್ಲಿಂದ ಮೇಲೆ ಹೆಜ್ಜೆ ಇಡುವುದು ಸಾಧ್ಯವಾಗಲಿಲ್ಲ. ಪಂಚಭೂತಗಳೂ ನಮಗೆ ವ್ಯತಿರಿಕ್ತವಾಗಿದ್ದುವು. ಉಷ್ಣಮಾನ -೩೦ ಡಿಗ್ರಿಗಳಿಗಿಂತ ಕಡಮೆ ಇಳಿದುಹೋಗಿತ್ತು. ಆ ಸಲವೂ ನಾವು ಕಾರ್ಯವಿಮುಖರಾಗಿ ಹಿಂದಿರುಗಬೇಕಾಯಿತು. ಖಟ್ಮಂಡುವಿನಲ್ಲಿ ನಮ್ಮನ್ನು ಎದುರುಗೊಂಡು ಆದರಿಸಿದರು, ಸನ್ಮಾನಿಸಿದರು. ನೇಪಾಳದ ದೊರೆ, 'ನೇಪಾಳ ಪ್ರತಾಪ ಭರ್ದಕ' ಪ್ರಶಂಸೆ ಕೊಟ್ಟರು. ನನಗೆ ಇದು ಯಾವುದರಿಂದಲೂ ತೃಪ್ತಿಯಾಗಲಿಲ್ಲ. ಪ್ರಯತ್ನ ವಿಫಲವಾದುದೊಂದು ಕಡೆ, ಈ ಆರೋಹಣದಿಂದ ನನ್ನ ಆರೋಗ್ಯ ಕೆಟ್ಟಿದ್ದೊಂದು ಕಡೆ ಎರಡೂ ಸೇರಿ ನನಗೆ ತೀರ ಬೇಸರವಾಯಿತು.

ಅದೇ ವರುಷ ಬ್ರಿಟಿಷ್ ತಂಡದೊಡನೆ ಆರೋಹಣಕ್ಕೆ ಹೋಗಲು ಮತ್ತೆ ಕರೆ ಬಂತು. ಈ ತಂಡಕ್ಕೆ ಕರ್ನಲ್ ಜಾನ್ ಹಂಟ್ ಮುಖ್ಯಾಧಿಕಾರಿಗಳಾಗಿದ್ದರು. ಮೊದಲು ನಾನು ಒಪ್ಪಿಕೊಳ್ಳಲು ಹಿಂತೆಗೆದೆ. ನನ್ನ ಅನುಭವದಲ್ಲಿ ಬ್ರಿಟಿಷರು ಇತರರಂತಿರಲಿಲ್ಲ. ಸ್ವಿಸ್ ಜನರಂತೆ ಅವರು ಸ್ನೇಹಪ್ರಿಯರಲ್ಲ ಅವರ ಬಗ್ಗೆ ನನಗೆ ೧೯೩೫ರಲ್ಲೇ ಅನುಭವವಾಗಿತ್ತು. ಬಹಳ ಯೋಚಿಸಿ ಕೊನೆಗೆ ಅವರೊಡನೆ ಹೋಗಲು ಒಪ್ಪಿಕೊಂಡೆ.... ಮೊದಲು ನನ್ನ ದೇಹಸ್ಥಿತಿಯನ್ನು ಉತ್ತಮಗೊಳಿಸಿಕೊಳ್ಳುವ ಕೆಲಸಕ್ಕೆ ಕೈಹಾಕಿದೆ. ಮಾರ್ಚ್ ೧೧ನೆಯ ತಾರೀಕು ನಾವು ಡಾರ್ಜಿಲಿಂಗಿಗೆ ತೆರಳಬೇಕಾಗಿತ್ತು........ ಎವರೆಸ್ಟ್ ಶಿಖರದ ಮೇಲೆ ನೆಡಲು ನನ್ನ ಸ್ನೇಹಿತನೊಬ್ಬ ಭಾರತದ ಬಾವುಟವನ್ನು ಕೊಟ್ಟ.

ಆರೋಹಣಕ್ಕೆ ಹೋಗುವುದಕ್ಕೆ ಮುಂಚೆ ಆರೋಗ್ಯ ಪರೀಕ್ಷೆ ಮಾಡಲಾಯಿತು. ನನ್ನ ಆರೋಗ್ಯ ಬಹಳ ಚೆನ್ನಾಗಿತ್ತು ಆದುದರಿಂದ ಎವರೆಸ್ಟ್ ಶಿಖರವನ್ನು ಏರುವ ಪ್ರಯತ್ನದಲ್ಲಿ ನನಗೂ ಒಂದು ಅವಕಾಶ ಕೊಡಬೇಕೆಂದು ತೀರ್ಮಾನವಾಯಿತು. ಶಿಖರಾರೋಹಣಕ್ಕೆ ಡಾ॥ ಚಾರ್ಲ್ಸ್ ಇವಾನ್ಸ್, ಟಾಮ್ ಬೋರ್ಡಿಲಾನ್ ಮತ್ತು ಎಡ್ಮಂಡ್ ಹಿಲೇರಿ ಅವರನ್ನು ಆರಿಸಿಕೊಳ್ಳಲಾಯಿತು ಹಿಲೇರಿ ನನ್ನ ಸಹೋದ್ಯೋಗಿಯಾದರು. ಅವರು ಹೆಚ್ಚು ಮಾತನಾಡುವವರಲ್ಲ; ಒಳ್ಳೆಯ ಪರ್ವತಾರೋಹಿ. ನಮ್ಮ ಈ ತಂಡದಲ್ಲಿ ಹೊಂದಾಣಿಕೆ, ಒಮ್ಮತ ಬಹಳ ಚೆನ್ನಾಗಿತ್ತು.

ಒಂದು ಮಧ್ಯಾಹ್ನ ಬಹಳ ಹೊತ್ತಾದ ಮೇಲೆ ಹಿಲೇರಿ ಮತ್ತು ನಾನು ಖುಂಬು ಹಿಮಪ್ರವಾಹದ ಕಣಿವೆಯಲ್ಲಿ ಕೆಲಸ ಮುಗಿಸಿ ಹಿಂದಿರುಗುತ್ತಿದ್ದೆವು. ಹಿಲೇರಿ ದಾರಿ ತೋರುತ್ತ ಮುಂದೆ ನಡೆಯುತ್ತಿದ್ದರು. ಎರಡು ಹಿಮಗಡ್ಡೆಗಳ ಗೋಡೆಯನ್ನು ದಾಟುತ್ತಿದ್ದಾಗ ಆಕಸ್ಮಾತ್ ಹಿಲೇರಿಯವರ ಕಾಲು ಜಾರಿತು. ಅವರು ಪ್ರಪಾತದೊಳಗೆ ಉರುಳಿದರು. 'ತೇನ್‌ಸಿಂಗ್! ತೇನ್‌ಸಿಂಗ್!!' ಎಂದು ಅವರು ಕೂಗಿಕೊಂಡಾಗ ನನ್ನ ಎದೆ ಝಲ್ ಎಂದಿತು. ಇಂತಹ ಅನಾಹುತಕ್ಕೆ ನಾನು ಸಿದ್ಧನಾಗಿಯೇ ಇದ್ದೆ. ನಿಮಿಷಮಾತ್ರದಲ್ಲಿ ಗುದ್ದಲಿಯನ್ನು ಹಿಮದಲ್ಲಿ ಹುದುಗಿ, ಅದನ್ನು ಬಿಗಿಹಿಡಿದು ನೆಲದಮೇಲೆ ಉರುಳಿದೆ. ನಮ್ಮಿಬ್ಬರ ಸೊಂಟಕ್ಕೂ ಹಗ್ಗ ಕಟ್ಟಿಕೊಂಡಿದ್ದೆವು ೬೦ ಅಡಿಗಳ ವರೆಗೆ ಹಿಲೇರಿ ಉರುಳಿ ಹಗ್ಗದ ದೆಸೆಯಿಂದ ಅಲ್ಲಿಯೇ ಉಳಿದರು. ಹಗ್ಗದ ಸಹಾಯದಿಂದ ಅವರನ್ನು ನಿಧಾನವಾಗಿ ಮೇಲಕ್ಕೆಳೆದುದಾಯಿತು. ಆ ಪ್ರಪಾತದಿಂದ ಅವರನ್ನು ಮೇಲಕ್ಕೆತ್ತುವದರಲ್ಲಿ ನನ್ನ ಕೈಚೀಲವೆಲ್ಲ ಛಿದ್ರಛಿದ್ರವಾಗಿತ್ತು; ಹಿಲೇರಿ ಬಹುವಾಗಿ ನನ್ನ

(೧೧ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ½ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್‌ಟಿಟ್ಯೂಟ್, ಉಡುಪಿ,

ವಿವರವಾದ ಕಿಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಮೈಸೂರು ಸಹಿತವಾದ ನೂತನ ಕನ್ನಡ ರಾಜ್ಯ

ಕೃಷಿ ಮತ್ತು ಕೈಗಾರಿಕೆಗಳ ರಂಗದಲ್ಲಿ ಸುಂದರ ಸಮನ್ವಯ

ಕರ್ನಾಟಕ ಪ್ರಾಂತದಲ್ಲಿ ಸೇರಬೇಕಾದ ಪ್ರದೇಶಗಳಲ್ಲಿ ಮೈಸೂರು ಒಂದು ದೊಡ್ಡ ರಾಜಕೀಯ ಘಟಕವಾಗಿದೆ. ಅದು ಮಧ್ಯ ಭಾಗದಲ್ಲಿರುವುದಲ್ಲದೆ ಆರ್ಥಿಕ ಅಭಿವೃದ್ಧಿ ಕಾರ್ಯದಲ್ಲಿಯೂ ಮಧ್ಯಸ್ಥಾನದಲ್ಲಿರುವುದು. ಮೈಸೂರ ಜನಸಂಖ್ಯೆ ಒಂಬತ್ತು ದಶಲಕ್ಷ ಆಗಿದೆ. ಮತ್ತು ಕ್ಷೇತ್ರಫಲ ೩೩,೦೦೦ ಚೌರಸ ಮೈಲುಗಳಾಗಿದೆ. ಅದರ ವಾರ್ಷಿಕ ಆದಾಯ ಹದಿನೆಂಟು ಕೋಟಿ ರೂಪಾಯಿಗಳಷ್ಟಿದೆ. ಮೈಸೂರೊಡನೆ ಕೂಡುವ ಅನ್ಯ ಜಿಲ್ಲೆಗಳೆಂದರೆ ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ವಿಜಾಪುರ ಮತ್ತು ಬಳ್ಳಾರಿ ಉತ್ತರದಲ್ಲಿ, ದಕ್ಷಿಣ ಕನ್ನಡ ಮತ್ತು ಕೊಡಗುಗಳು ಪಶ್ಚಿಮದಲ್ಲಿ ಮತ್ತು ಹೈದರಾಬಾದ ಕನ್ನಡ ಜಿಲ್ಲೆಗಳು ಇವೆಲ್ಲ ಜಿಲ್ಲೆಗಳ ಕ್ಷೇತ್ರ ೩೮,೧೮೩ ಚೌರಸ ಮೈಲುಗಳಾಗುತ್ತದೆ ಮತ್ತು ಜನಸಂಖ್ಯೆಯು ೮.೬ ದಶಲಕ್ಷ ಆಗುತ್ತದೆ. ಈ ಎಲ್ಲ ವಿಭಾಗಗಳು ಸೇರಿ ಈಗಿನ ಮೈಸೂರಿನ ಕ್ಷೇತ್ರ ಮತ್ತು ಜನಸಂಖ್ಯೆಗಿಂತ ದೊಡ್ಡದಾಗುತ್ತದೆ. ಅಂತೆಯೇ ಕರ್ನಾಟಕ ಪ್ರಾಂತದ ಕ್ಷೇತ್ರವು ಸುಮಾರು ೭೪,೦೦೦ ಚೌರಸ ಮೈಲು ಆಗಿ, ಜನ ಸಂಖ್ಯೆಯು ೧೯ ದಶಲಕ್ಷದ ವರೆಗೆ ಹೋಗಬಹುದು.

ಇಡಿಯ ಪ್ರಪಂಚದಲ್ಲಿಯೇ ಅತ್ಯಂತ ಬೆಲೆಯುಳ್ಳ ಖನಿಜಗಳು ಮೈಸೂರಿನಲ್ಲಿರುತ್ತವೆ. ಅವುಗಳ ವೈವಿಧ್ಯ ಮತ್ತು ಮೌಲ್ಯ ಈ ದೃಷ್ಟಿಯಿಂದ ಖನಿಜಗಳು ಇಲ್ಲಿ ಅದ್ಭುತವಾಗಿವೆ. ಮೈಸೂರ ಲೋಹಗಳಲ್ಲಿ ಬಂಗಾರ, ಕಬ್ಬಿಣ, ಮ್ಯಾಂಗನೀಜ್, ಕ್ರೋಮಿಯಮ್ ಇವು ವಿಶಿಷ್ಟವಾಗಿವೆ. ಚಿನ್ನವು ಕೋಲಾರ ಜಿಲ್ಲೆಯಲ್ಲಿ ಕೇಂದ್ರೀಕೃತವಾಗಿದೆ. ಒಂದು ಇಂಗ್ಲಿಷ್ ಕಂಪನಿಯ ಆಡಳಿತದಲ್ಲಿ ಅಲ್ಲಿ ಐದು ಹೊನ್ನಿನ ಗಣಿಗಳಿರುತ್ತವೆ. ೧೯೪೭ರ ಕೊನೆಯ ವರೆಗೆ ಅವುಗಳಲ್ಲಿ ೨೧ ದಶಲಕ್ಷ ಔನ್ಸುಗಳಷ್ಟು ಸುವರ್ಣವು ಉತ್ಪನ್ನವಾಗಿದ್ದು ಅದರ ಬೆಲೆಯು ೧೧೪ ದಶಲಕ್ಷ ಪೌಂಡಿನಷ್ಟಾಗಿವೆ ಎಂದು ಅಂದಾಜು ಮಾಡಲಾಗಿದೆ.

ಮೈಸೂರಿನ ಕಡೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಕಬ್ಬಿಣವು ಸಾಕಷ್ಟು ದೊರೆಯುತ್ತದೆ ಅದು ಈಗ ಮೈಸೂರು ಕಬ್ಬಿಣ ಕಾರಖಾನೆಯಲ್ಲಿ ಶುದ್ಧ ಕಬ್ಬಿಣ ಮತ್ತು ಉಕ್ಕಾಗಿ ಸಿದ್ಧಗೊಳ್ಳುತ್ತಲಿದೆ. ಭಾರತದ ಐದು ಮ್ಯಾಂಗನೀಜ್ ಗಣಿಗಳ ಕೇಂದ್ರ ಪಂಚಕದಲ್ಲಿ ಮೈಸೂರು ಒಂದಾಗಿದೆ. ಅದು ನಿರ್ಯಾತದ ಒಂದು ಮೌಲ್ಯ ವಸ್ತುವಾಗಿದ್ದು ಡಾಲರಿನ ವಿನಿಮಯಕ್ಕೆ ಅನುಕೂಲವಾಗಿದೆ. ಹಾಗೆಯೇ ಕ್ರೋಮಿಯಮ್ ಕೂಡ ಮೈಸೂರಿನ ಒಂದು ಹಿರಿಯ ಖನಿಜವಾಗಿದೆ. ಇಲ್ಲಿಯ ಕ್ರೋಮಿಯಮ್‌ನಲ್ಲಿ ಕಬ್ಬಿಣದ ಅಂಶವು ಹೆಚ್ಚಾಗಿದ್ದು ಗುಣದಲ್ಲಿಯೂ ಉತ್ತಮವಾಗಿದೆ. ಪ್ರಪಂಚದ ಕ್ರೋಮಿಯಮ್ ಉತ್ಪಾದನೆಯಲ್ಲಿ ನೂರಕ್ಕೆ ೭.೫೮ ರಷ್ಟು ಮೈಸೂರಿನಲ್ಲಿ ಹುಟ್ಟುತ್ತಿರುವುದು ಸಂತೋಷದ ವಿಷಯ. ತಾಮ್ರ, ಬೆಳ್ಳಿ, ಸತು ಸೀಸ ಮತ್ತು ಅಂಟಿಮನಿಗಳೂ ಇಲ್ಲಿ ಸಿಕ್ಕುತ್ತವೆ. ಆದರೆ ಆರ್ಥಿಕ ದೃಷ್ಟಿಯಿಂದ ಅವು ಅಷ್ಟು ಗಣ್ಯವಾಗಿಲ್ಲ ಇತ್ತ ಉಷ್ಣರಕ್ಷಕ ವಸ್ತುಗಳು ಕೂಡ ಸಣ್ಣ ಪ್ರಮಾಣದಲ್ಲಿಯಾದರೂ ಮೈಸೂರಿನಲ್ಲಿ ದೊರೆಯುತ್ತವೆ.

ಮೈಸೂರಿನೊಡನೆ ಕೂಡಬಹುದಾದ ಜಿಲ್ಲೆಗಳಲ್ಲಿ ಖನಿಜಗಳ ದೃಷ್ಟಿಯಿಂದ ಶಾಲ್ಯವು ಮಹತ್ವದ್ದಾಗಿದೆ. ಮ್ಯಾಗ್ನೆಸೈಟ್ ಖನಿಜವು ಇಲ್ಲಿ ವಿಪುಲವಾಗಿ ದೊರೆಯುತ್ತದೆ. ಅದರಲ್ಲಿ ನೂರಕ್ಕೆ ೫೫ರಷ್ಟು ಕಬ್ಬಿಣದ ಅಂಶವಿರುತ್ತದೆ. ಈ ಗಣಿಗಳಲ್ಲಿ ೩೬೦ ದಶಲಕ್ಷ ಟನ್ ಕಚ್ಚಾ ಮ್ಯಾಗ್ನೆಸೈಟ್‌ದಷ್ಟು ಶಕ್ತಿಯಿರುತ್ತದೆ ಎಂದು ಊಹಿಸಲಾಗಿದೆ. ಭಾರತದ ಬಹುಶಃ ಎಲ್ಲ ಮ್ಯಾಗ್ನೆಸೈಟ್ ಶಾಲ್ಯದಲ್ಲಿಯೇ ಇರುತ್ತದೆ ಎಂದರೂ ಸಲ್ಲುವುದು. ಇಲ್ಲಿ ಕ್ರೋಮೈಟ್ ಕೂಡ ಇರುತ್ತದೆ. ಶಾಲ್ಯದಲ್ಲಿ ಬಾಕ್ಸೈಟ್ ಮತ್ತು ಕ್ರಿಸ್ಟಲೀನ್ ಕೂಡ ಸಿಕ್ಕುತ್ತದೆ ಎಂದು ಹೇಳುತ್ತಾರೆ.

ಬಳ್ಳಾರಿಯ ಸೊಂಡೂರು ಪ್ರದೇಶದಲ್ಲಿ ಉಚ್ಚ ವರ್ಗದ ಖನಿಜಗಳಿರುತ್ತವೆ. ಕಬ್ಬಿಣದ ಒಳ್ಳೆಯ ಅದುರುಗಳು ಇಲ್ಲಿ ಉಪಸ್ಥಿತವಾಗಿದ್ದು ಅವುಗಳ ಪ್ರಮಾಣ ೧೦೦ ದಶಲಕ್ಷ ಟನ್ ಆಗಬಹುದೆಂದು ತಿಳಿಯುತ್ತದೆ. ಈ ಭಾಗದಲ್ಲಿ ಮ್ಯಾಂಗನೀಜ್ ಕೂಡ ಹೇರಳವಾಗಿರುತ್ತದೆ; ಅದರ ಪ್ರಮಾಣವು ಒಟ್ಟಿನಲ್ಲಿ ೧೩ ದಶಲಕ್ಷ ಟನ್ ಆಗಬಹುದು. ಉತ್ತರ ಕನ್ನಡ, ಧಾರವಾಡ ಮತ್ತು ಬೆಳಗಾವಿ ಜಿಲ್ಲೆಗಳಲ್ಲಿಯೂ ಇದು ಕೆಲಮಟ್ಟಿಗೆ ಸಿಗುತ್ತದೆ. ಎಂದು ಹೇಳುತ್ತಾರೆ. ಸೊಂಡೂರು ವಿಭಾಗದಲ್ಲಿ ಬಣ್ಣದ ಖಡುಗಳನ್ನು [ಕಡ್ಡಿಗಳನ್ನು] ಮಾಡಬಹುದಾದ ಆಕ್ಸೈಡ್ ಹಂಚುಗಳಿಗಾಗಿ ಕೂಡ ಇಲ್ಲಿಯ ಜಪ್ಸಂಗಳನ್ನು ಅಣಿಮಾಡಿಕೊಳ್ಳಬಹುದು.

ಶಕ್ತಿಯುತ್ಪಾದನೆಯು ಸಲುವಾಗಿ ಮೈಸೂರಿನಲ್ಲಿ ಇದ್ದಲಿನ ಅಪೂರ್ಣತೆಯೊಂದು ದೊಡ್ಡ ಕೊರತೆಯಾಗಿದೆ. ಆದರೆ ಜಲವಿದ್ಯುತ್ತಿನ ನಿರ್ಮಾಣದಲ್ಲಿ ಮೈಸೂರ ಮೇಲುಗೈಯನ್ನು ಪಡೆದಿದೆ. ೧೮೯೯ನೆಯ ಇಸವಿಯಲ್ಲಿ ಕಾವೇರಿ ತಡಸಲುಗಳಿಂದ ಜಲವಿದ್ಯುತ್ತಿನ ನಿರ್ಮಾಣ ಎಷ್ಟಾಗಬಹುದು ಎಂಬುದು ತಿಳಿದಿತ್ತು. ಮತ್ತು ಚಿನ್ನದ ಗಣಿಗಳಿಂದ ಈ ವಿದ್ಯುಚ್ಛಕ್ತಿಯ ಬೇಡಿಕೆಯುಂಟಾಯಿತು. ಅಂತೆಯೇ ಶಿವಸಮುದ್ರದ ಜಲವಿದ್ಯುತ್ ಕೇಂದ್ರವು ಮೊದಲು ಆರಂಭವಾಗಿ ೧೯೦೭ರಷ್ಟರಲ್ಲಿ ೬೦,೦೦೦ ಅಶ್ವಶಕ್ತಿಯಷ್ಟು ಉತ್ಪಾದನವಾಗುತ್ತಿದೆ. ಕಾಲಕ್ರಮವಾಗಿ ಇದೂ ಸಾಕಾಗದಂತೆನಿಸಿ, ಶಿಂಶಾ ಯೋಜನೆಯು ೧೯೪೦ರಲ್ಲಿ ಅಸ್ತಿತ್ವದಲ್ಲಿ ಬಂದು ೨೩,೦೦೦ ಅಶ್ವಶಕ್ತಿಯನ್ನು ಸೇರಿಸುತ್ತಲಿದೆ. ೧೯೪೮ರಲ್ಲಿ ಜೋಗ ಜಲಪಾತದ ಯೋಜನೆಯು ರೂಪುಗೊಂಡಿತು. ೪೮.೦೦೦ ಕಿ.ವ್ಯಾ. ಶಕ್ತಿಯ ಸಾಮರ್ಥ್ಯವುಳ್ಳ ಈ ಕೇಂದ್ರದಿಂದ ಈಗ ಅರ್ಧದಷ್ಟು ಮಾತ್ರ ನಿರ್ಮಾಣವಾಗುತ್ತಲಿದೆ. ಮದ್ರಾಸ ಪ್ರಾಂತದ ಎಲ್ಲ ಜಲವಿದ್ಯುತ್ ಕೇಂದ್ರಗಳು ಕರ್ನಾಟಕದಲ್ಲಿ ಬರಬಹುದಾದ ಜಿಲ್ಲೆಗಳಲ್ಲಿರುವುದೊಂದು ವಿಶಿಷ್ಟ ವಿಷಯವಾಗಿದೆ. ೧೯೩೨ರಲ್ಲಿ ಪೂರ್ತಿಯಾದ ನೀಲಗಿರಿ ಜಿಲ್ಲೆಯ ಪೈಕಾರಾ ಯೋಜನೆಯು ೪೦೦೦೦ ಕಿ.ವಾ. ಶಕ್ತಿಯನ್ನು ನೀಡುತ್ತಿದೆ ೧೯೩೭ರಲ್ಲಿ ನಿರ್ಮಿತವಾದ ಮೆಟ್ಟೂರು ಯೋಜನೆ ೩೭,೦೦೦ ಕಿ.ವಾ. ಶಕ್ತಿಯುಳ್ಳದ್ದಾಗಿದೆ. ಇವೆರಡೂ ಹೆಚ್ಚು ಶಕ್ತಿಯನ್ನು ನೀಡುವಂತೆ ಬೆಳೆಯಿಸಬಹುದಾದ ಯೋಜನೆಗಳಾಗಿವೆ. ಅಂತೆಯೇ ಇದ್ದಲಿನ ಅಭಾವವನ್ನು ನಿವಾರಿಸುವಷ್ಟು ವಿಪುಲವಾಗಿ ವಿದ್ಯುಚ್ಛಕ್ತಿಯ ಸೌಕರ್ಯಗಳಿರುತ್ತವೆ—ಕರ್ನಾಟಕಕ್ಕೆ!

ಮೈಸೂರಿನಲ್ಲಿ ಎಷ್ಟೋ ಉದ್ಯಮಗಳಿಗೆ ಕಚ್ಚಾ ಮಾಲನ್ನು ಪೂರೈಸುವ ಅರಣ್ಯಸಂಪತ್ತು ಅತುಲವಾದುದಾಗಿದೆ. ೪೫೦೦ ಚೌರಸ ಮೈಲುಗಳಷ್ಟು ಅರಣ್ಯವಿದ್ದು ಮೈಸೂರಿನ ಕ್ಷೇತ್ರದಲ್ಲಿ ನೂರಕ್ಕೆ ೧೫.೪ರಷ್ಟಾಗುತ್ತದೆ. ಇಮಾರತಿಯ ಕಟ್ಟಿಗೆ ಮತ್ತು ಉರುವಲು ಕಟ್ಟಿಗೆ ಇವರಿಂದ ಎಷ್ಟೋ ದೊರೆಯುತ್ತದೆ. ಅಲ್ಲದೆ ಗಂಧ, ಸಾಗು, ಗುಲಾಬಿ ಮೊದಲಾದ ಮರಗಳು ದೊರೆಯುತ್ತಿದ್ದು ಗಂಧದ ಕಟ್ಟಿಗೆಯು ಆರ್ಥಿಕ ದೃಷ್ಟಿಯಿಂದ ಅತ್ಯಂತ ಉಪಯುಕ್ತವಾಗಿದೆ. ತಂಗಡಿ ಮತ್ತು ಅದರ ಇತರ ಉತ್ಪತ್ತಿಯು ಕೂಡ ತಕ್ಕ ಅರಣ್ಯದಿಂದ ಮಟ್ಟಿಗೆ ದೊರೆಯುತ್ತದೆ ತಂಗಡಿಯು ಮರದ ಒಂದು ತೊಗಟೆಯಾಗಿದ್ದು ಚರ್ಮಕ್ಕೆ ಬಣ್ಣ ಹಾಕುವಾಗ್ಗೆ ಬೇಕಾಗುತ್ತದೆ; ಅರಗು, ಶೆಲ್ಲ್ಯಾಕ್ ಮತ್ತು ಪಾಲಿಷ್‌ಗಳನ್ನು ಮಾಡಲಿಕ್ಕೆ ಅಗತ್ಯವಾಗುತ್ತದೆ. ಉರುವಲು ಕಟ್ಟಿಗೆಯೂ ಹೇರಳವಾಗಿರುತ್ತದೆ. ಮತ್ತು ಕಾಗದಗಳನ್ನು ಮಾಡುವುದಕ್ಕೋಸ್ಕರ ಬಾಂಬೂಗಳೂ ಬೇಕಾದಷ್ಟು ಉಪಲಬ್ಧವಾಗುತ್ತವೆ.

(೧೦ನೇ ಪುಟ ನೋಡಿರಿ)

IN THE COURT OF THE DISTRICT MUNSIF OF MANGALORE

S. C. No. 256 of 1956.

Between

P. Fernandes & others -Plaintiffs.

and

Katil Narasimha Prabhu -Defendant.

To:

Sri Katil Narasimha Prabhu, father's name is not known residing in Karangalpady, Mangalore Town, (Defendant).

Please take notice that the Plaintiffs abovenamed have instituted the above suit against you for recovery of arrears of rent, due by you and that the same is posted to 1—8—1956 for your appearance. On your failure to appear either in person or by Pleader on that date, you will be declared exparte.

(By Order of Court)

L. C. Pais, B. A; B. L;
C. I. J. Pais, B. A; B. L;
Advocates for Plaintiffs.

Mangalore, 12—7—1956.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ಸಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ಅಣುಶಸ್ತ್ರಗಳ ಸ್ಫೋಟನ ಪ್ರಯೋಗಕ್ಕೆ ಬಹಿಷ್ಕಾರ

ಜಗತ್ತಿನ ಜನಾಭಿಪ್ರಾಯವನ್ನು ಮನ್ನಿಸಲು ಶ್ರೀ ಕೃಷ್ಣ ಮೆನೊನ್ನರ ಬಿನ್ನಹ

ಭಾರತ ಸರಕಾರದಲ್ಲಿ ಖಾತೆ ರಹಿತ ಮಂತ್ರಿಗಳಾಗಿರುವ ಶ್ರೀ ಕೃಷ್ಣ ಮೆನೊನ್ನರನ್ನು ಸಂಚಾರಿ ರಾಯಭಾರಿ ಎನ್ನುವುದುಂಟು: ನೆಹರುಗಳ ದೌತ್ಯವನ್ನು ವಹಿಸಿ ತಿರುಗಾಡುವವರೆಂದೇ ಮೆನೊನ್ನರಿಗೆ ಈ ಹೆಸರು. ಆದರೆ ಕಳೆದ ವಾರ ಅವರು ನ್ಯೂಯೋರ್ಕ್ ನಗರದಲ್ಲಿ ನಿಶ್ಶಸ್ತ್ರೀಕರಣ



ಆಯೋಗದ ಮುಂದೆ ವ್ಯಕ್ತಪಡಿಸಿದ ಅಭಿಪ್ರಾಯಗಳು ನೆಹರುಗಳ, ಅಥವಾ ಭಾರತ ಸರಕಾರದ, ಮನೋಭಾವನೆಯನ್ನಷ್ಟೇ ವ್ಯಕ್ತಪಡಿಸಲಿಲ್ಲ — ಅಣುಶಕ್ತಿಯ ಸ್ಫೋಟನ ಪ್ರಯೋಗಗಳಿಂದಾಗುತ್ತಿರುವ ಅನಾಹುತಗಳಿಂದ ಕಂಗೆಟ್ಟ ಕೋಟ್ಯಾಂತರ ಜನರ ಮೂಕ ವೇದನೆಯ ನಿವೇದನೆಯೇ ಅವರ ಭಾಷಣವಾಗಿತ್ತೆನ್ನಬಹುದು.

ಜಗತ್ತಿನ ಜನಾಭಿಪ್ರಾಯ

ಸಂಯುಕ್ತ ರಾಷ್ಟ್ರ ಸಂಘದ ಪರವಾಗಿ ನಿಶ್ಶಸ್ತ್ರೀಕರಣ ಆಯೋಗವು ಕೆಲಸ ಮಾಡುತ್ತಿದೆ: ಹನ್ನೆರಡು ರಾಷ್ಟ್ರಗಳು ಈ ಆಯೋಗದ ಸದಸ್ಯತ್ವವನ್ನು ಹೊಂದಿವೆ. ಆದರೆ, ವಿಶ್ವದ ಮೇಲೆ ಗಾಢವಾದ ಪರಿಣಾಮವನ್ನು ಮಾಡುವ ಅಣುಶಸ್ತ್ರಗಳ ಸ್ಫೋಟನದಂಥ ಅತ್ಯಂತ ಮಹತ್ವದ ಪ್ರಶ್ನೆಯನ್ನು ವಿಚಾರಿಸುವುದು ಈ ಆಯೋಗಕ್ಕೆ ಅತ್ಯಾವಶ್ಯಕವಾದ ಪ್ರಯುಕ್ತ ಆಯೋಗದ ಸದಸ್ಯತ್ವವನ್ನು ಹೆಚ್ಚಿಸಿಕೊಳ್ಳಬೇಕೆಂದು ಶ್ರೀ ಮೆನೊನ್ನರು ಸಲಹೆ ಮಾಡಿದ್ದಾರೆ. (ಈಗ ಮಾತ್ರ ಎರಡು ಜಗತ್ತುಗಳ) ಅಂದರೆ ರಶಿಯ ಮತ್ತು ಅಮೇರಿಕಗಳ) ಅಭಿಪ್ರಾಯವಷ್ಟೇ ಪ್ರಕಟವಾಗುವ ರಂಗಭೂಮಿಯಾಗಿ ನಿಶ್ಶಸ್ತ್ರೀಕರಣ ಆಯೋಗವು ಪರಿಣಮಿಸುವ ಈಗಿನ ಪರಿಸ್ಥಿತಿ ಸುಧಾರಿಸೀತು ಎಂದವರ ಅಭಿಮತ.

ಶ್ರೀ ಮೆನೊನ್ನರು ನಿಶ್ಶಸ್ತ್ರೀಕರಣ ಸಮಿತಿಯ ಮುಂದೆ ತಮ್ಮ ಸಾಕ್ಷಿಯನ್ನೀಯಲು ಹಲವು ತಿಂಗಳುಗಳಿಂದ ಪ್ರಯತ್ನಿಸಿದ್ದರು. ಭಾರತ ಸರಕಾರವು ೧೯೫೪ನೇ ಎಪ್ರೀಲಿನಲ್ಲಿ ಮೊತ್ತಮೊದಲು ಅಣುಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ನಿಲ್ಲಿಸಬೇಕೆಂದು ಜಗತ್ತಿನ ಮಹಾರಾಷ್ಟ್ರಗಳಿಗೆ ಕರೆಯನ್ನಿತ್ತಿತು. ಅಂದಿನಿಂದ ಪ್ರಧಾನಿ ನೆಹರುಗಳೂ ವಿದೇಶಿ ವ್ಯವಹಾರಗಳಲ್ಲಿ ಅವರ ಬಲಗೈ ಬಂಟನಂತಿರುವ ಶ್ರೀ ಮೆನೊನ್ನರೂ ವಿಶ್ವದ ಜನತೆಯ — ಅಷ್ಟೇ ಏಕೆ, ಜಗತ್ತಿನ ನಯವಿದರೆಲ್ಲರ — ಮನೋಭಾವನೆಯಲ್ಲಿ ಉಂಟಾದ ಪ್ರತಿಕ್ರಿಯೆಗಳನ್ನು ವೀಕ್ಷಿಸಿ, ಭಾರತ ಸರಕಾರವಿತ್ತ ಕರೆಯು ಅತ್ಯಂತ ನ್ಯಾಯವಾದುದೆಂಬುದನ್ನು ಮಹಾರಾಷ್ಟ್ರಗಳು ಒಪ್ಪುವಂತೆ ಮಾಡಲು ಸಕಲ ಪ್ರಯತ್ನಗಳನ್ನೂ ಕೈಗೊಳ್ಳುತ್ತಾ ಬಂದಿದ್ದಾರೆ.

ಏಳು ಕಾರಣಗಳು

ನಿಶ್ಶಸ್ತ್ರೀಕರಣ ಆಯೋಗದ ಮುಂದೆ ಮಾತನಾಡುತ್ತಾ ಶ್ರೀ ಮೆನೊನ್ನರು ಅಣುಶಕ್ತಿಗೆ ಸಂಬಂಧಿಸಿದ ಸ್ಫೋಟನ ಪ್ರಯೋಗಗಳನ್ನು ಈ ಕೆಳಗಿನ ಏಳು ಪ್ರಾಮುಖ್ಯವಾದ ಕಾರಣಗಳಿಗಾಗಿ ಬಹಿಷ್ಕರಿಸಬೇಕೆಂದು ವಾದಿಸಿದ್ದಾರೆ— (೧) ಅಣುವಿಕಿರಣಶೀಲತೆಯು ಅಪಾಯಕಾರಿ ಪರಿಣಾಮಗಳನ್ನುಂಟು ಮಾಡುತ್ತದೆ; (೨) ಸ್ಫೋಟನ ಪ್ರಯೋಗಗಳನ್ನು ಮುಂದುವರಿಯಗೊಟ್ಟರೆ ಅಣುಶಕ್ತಿಯ ಕ್ಷೇತ್ರದಲ್ಲಿ ಸ್ಪರ್ಧೆಯು ಸಹಜವಾಗಿ ಹೆಚ್ಚಿಕೊಳ್ಳುತ್ತದೆ; (೩) ರಶಿಯ, ಅಮೇರಿಕ ಮತ್ತು ಬ್ರಿಟನುಗಳ ಆಶ್ರಯದಲ್ಲಿ ಸಣ್ಣ ರಾಷ್ಟ್ರಗಳೂ ಒಂದು ದಿನ ಅಣುಶಸ್ತ್ರಗಳನ್ನು ಉತ್ಪಾದಿಸಬಹುದು; ಇವು ಸಣ್ಣ ಪ್ರಮಾಣದಲ್ಲಿದ್ದರೂ ಅದರ ಭಯಕಾರತೆಯು ಕಡಿಮೆಯಾಗಲಿಕ್ಕಿಲ್ಲ; (೪) ಅಣುಶಕ್ತಿಗೆ ಸಂಬಂಧಿಸಿದ ಸ್ಫೋಟನ ಪ್ರಯೋಗಗಳ ಬಹಿಷ್ಕಾರದಿಂದ ಜಗತ್ತಿನಾದ್ಯಂತ ಹೊಸ ಬಗೆಯ ವಿಶ್ವಾಸ ಮತ್ತು ಆಶೆಯ ನವೋದಯ ಉಂಟಾಗುತ್ತದೆ; (೫) ಅಣು ಶಸ್ತ್ರಗಳ ಸಂಗ್ರಹವನ್ನು ತಗ್ಗಿಸುವುದಕ್ಕೆ ಇದು ಮೊದಲ ಹೆಜ್ಜೆಯಾಗುತ್ತದೆ; ಮತ್ತು ಒಂದು ಹೆಜ್ಜೆಯನ್ನು ಮುಂದಿಡುವುದರಿಂದ ಮತ್ತಿನ ಹೆಜ್ಜೆಗಳು ಸಹಜವಾಗಿಯೇ ಪ್ರಗತಿಪರವಾಗುತ್ತವೆ; (೬) ಜಗತ್ತಿನ ಜನಾಭಿಪ್ರಾಯವನ್ನು ಮನ್ನಿಸಿದಂತಾಗುತ್ತದೆ; ಮತ್ತು (೭) ಸಾಮಾನ್ಯ ತಿಳಿಸಿಡಿತಕ್ಕೂ ಅಣುಶಸ್ತ್ರಗಳ ಸ್ಫೋಟನೆಯೇ ಕಾರಣವೆನ್ನುವಷ್ಟು ಮಟ್ಟಿಗೆ ಭಯೋದ್ರೇಕಗಳನ್ನು ಹುಟ್ಟಿಸಿರುವ ವಾತಾವರಣವು ತಿಳಿಯಾಗುತ್ತದೆ. ಈ ಕಾರಣಗಳ ನೆಲೆಯಿಂದ ನೋಡಿದರೆ, ಅಣುಶಸ್ತ್ರಗಳ ಸ್ಫೋಟನ ಪ್ರಯೋಗದ ನಿರ್ಬಂಧವು ಅತ್ಯಾವಶ್ಯಕವಾದುದೆಂದು ಮನವರಿಕೆಯಾಗುವುದು ಖಂಡಿತವೆಂದೂ ಮೆನೊನ್ನರು ಸಾರಿದರು.

ವಿಜ್ಞಾನಿಗಳ ಭಯ

ಜಗತ್ತಿನ ಜನಾಭಿಪ್ರಾಯವನ್ನು ವಿವರಿಸುತ್ತಾ ಶ್ರೀ ಮೆನೊನ್ನರು ಹೀಗೆಂದರು — ಈಗಾಗಲೇ ತಯಾರಿಸಿರುವ ಅಣುಶಸ್ತ್ರಗಳ ಸಂಬಂಧದಲ್ಲಿ ನಡೆಸಲಾದ ಸ್ಫೋಟನ ಪ್ರಯೋಗಗಳೇ ಈ ಗ್ರಹವನ್ನು ನುಚ್ಚುನೂರು ಮಾಡಿಬಿಡಲು ಸಾಕು. ಆದುದರಿಂದ ಇನ್ನು ಮುಂದೆಯೂ ಪ್ರಯೋಗಗಳನ್ನು ನಡೆಸುವ ಯಾವ ಆಗತ್ಯವೂ ಇಲ್ಲ. ನಾಗರಿಕ ರಾಷ್ಟ್ರಗಳು ಯಾವುದಾದರೊಂದು ಉದ್ದೇಶಕ್ಕಾಗಿ ಕೆಲಸ ಮಾಡುತ್ತವೆ; ತಮ್ಮ ವ್ಯವಹಾರದಿಂದ ಯಾವ ಉದ್ದೇಶವೂ ಸಾಧಿಸಲ್ಪಡುವುದಿಲ್ಲವೆಂದು ಸ್ಪಷ್ಟವಾಗಿರುವಾಗ ಅಣುಶಸ್ತ್ರಗಳ ಸ್ಫೋಟನ ಪ್ರಯೋಗ ನಡೆಸುವುದು ತಿಳಿಗೇಡಿತನ. ಇಂಥ ತಿಳಿಗೇಡಿ ಕೆಲಸವೇಕೆಂದು ಮೆನೊನ್ನರು ಪ್ರಶ್ನೆಯನ್ನು ಹಾಕಿದರು.

ಅವರು ಈಚೆಗೆ ಅಮೇರಿಕ ಮತ್ತು ಬ್ರಿಟನುಗಳ ವಿಜ್ಞಾನಿಗಳು ನಡೆಸಿದ ಸಂಶೋಧನೆಯ ಫಲಿತಾಂಶಗಳನ್ನು (ಇವರ ವಿವರವನ್ನು "ನವಯುಗ"ದ ತಾ. ೨೧—೬—೫೬ನೇ ಸಂಚಿಕೆಯಲ್ಲಿ ಪ್ರಕಟಿಸಲಾಗಿದೆ) ಪ್ರಸ್ತಾಪಿಸುತ್ತಾ, ಮುಂದಿನ ತಲೆಮಾರುಗಳ ಮೇಲೆ ಅಣುವಿಕಿರಣಶೀಲತೆಯಿಂದಾಗಬಹುದಾದ ಅಪಾಯವು ಎಷ್ಟಾದೀತೆಂದು ಲೆಕ್ಕಹಾಕುವುದು ಸಾಧ್ಯವಿಲ್ಲ ಎಂದರು. ಸ್ಫೋಟನ ಪ್ರಯೋಗಗಳನ್ನು ಈಗಿನ ಪ್ರಮಾಣದಲ್ಲಿಯೇ ಹೆಚ್ಚಿಸುತ್ತಾ ಹೋದರೆ ೧೯೬೫ನೇ ವರ್ಷದ ಹೊತ್ತಿಗೆ ಜಗತ್ತಿನ ಎಲ್ಲರೂ ತಾವು ಸಹಿಸಬಹುದಾದ ಅಣುವಿಕಿರಣಶೀಲತೆಯ ಪರಮ ಮಿತಿಯನ್ನು ಮುಟ್ಟುವರೆಂಬ ವಿಜ್ಞಾನಿಗಳ ಅಭಿಪ್ರಾಯವನ್ನು ಅವರು ಆಯೋಗದ ಗಮನಕ್ಕೆ ತಂದರು. ಅಣು ಸ್ಫೋಟನದಿಂದ ಬಿದ್ದ ಧೂಳಿನ ಪ್ರಭಾವವು ತಾತ್ಕಾಲಿಕವಾದುದಲ್ಲ; ಶಾಶ್ವತವಾದುದೆಂದೂ ಅಣುವಿಕಿರಣಶೀಲತೆಯು ಬೆಂಕಿಯಂತೆ ಆರಿ ಹೋಗದೆ, ಗುಣಾಕಾರದ ಕ್ರಮದಂತೆ ದಿನಗಳುರುಳಿದಂತೆ ಹೆಚ್ಚುತ್ತಾ ಹೋಗುವುದೆಂದೂ ಮೆನೊನ್ನರು ಎತ್ತಿ ಹೇಳಿದರು.

ಬಲಿಬಿದ್ದ ರಾಷ್ಟ್ರಗಳು

ಶಾಂತ ಸಾಗರದ ಬಿಕಿನಿ ದ್ವೀಪ ಪ್ರದೇಶದಲ್ಲಿ ಮೊದಲನೇ ಸಲ (೧೯೫೪) ಅಣುಶಸ್ತ್ರದ ಸ್ಫೋಟನವನ್ನು ಅಮೇರಿಕ ನಡೆಸಿದ ಹದಿಮೂರೇ ತಿಂಗಳುಗಳಲ್ಲಿ ಹತ್ತು ಲಕ್ಷ ಚದರ ಮೈಲುಗಳಷ್ಟು ಪ್ರದೇಶದ ನೀರು ವಿಷಾಕ್ತ ಅಣುವಿಕಿರಣಶೀಲತೆಗೆ ಗುರಿಯಾಗಿರುವುದನ್ನು ಅವರು ತಿಳಿಸಿದರು. ರಶಿಯ, ಅಮೇರಿಕ ಮತ್ತು ಬ್ರಿಟನುಗಳು ನಡೆಸುವ ಸ್ಫೋಟನ ಪ್ರಯೋಗಗಳಿಂದಾಗಿ ಬಾಧೆಪಡುವ ರಾಷ್ಟ್ರಗಳಲ್ಲಿ ಜಪಾನು ಮತ್ತು ಭಾರತಗಳು ಅಗ್ರಸ್ಥಾನವನ್ನು ಪಡೆಯುತ್ತವೆ ಎಂದು ಅವರು ವಿದಿತಪಡಿಸಿದರು.

ಜಪಾನಿನ ಮಂತ್ರಿ ಮಂಡಳದ ವರದಿಗನುಸಾರ, ಆ ದೇಶದ ಎಲ್ಲ ಹಣ್ಣುಹಂಪಲುಗಳೂ ತರಕಾರಿಗಳೂ ವಿಷಾಕ್ತ ಅಣುವಿಕಿರಣ ಶೀಲತೆಯಿಂದ ಕೂಡಿವೆ! ಭಾರತದ ಕಲ್ಕತ್ತದಲ್ಲಿ ನಡೆಸಿದ ಸಂಶೋಧನೆಗಳು ಜನರ ಸಾಮಾನ್ಯ ಆಹಾರವನ್ನೂ ಅವರು ಬಳಸುವ ತರಕಾರಿಗಳನ್ನೂ ಅಣುವಿಕಿರಣಶೀಲತೆಯು ಗಣನೀಯವಾಗಿ ವಿಷಾಕ್ತಗೊಳಿಸಿರುವುದು ವ್ಯಕ್ತವಾಗಿದೆ. ಜಗತ್ತಿನ ಮಕ್ಕಳಲ್ಲಿ ೨% ಈಗಾಗಲೇ ಅಣುವಿಕಿರಣಶೀಲತೆಯ ದುಷ್ಪ್ರಭಾವಗಳಿಗೆ ಬಲಿಯಾಗಿದ್ದಾರೆ; ಇದು ಇನ್ನೂ

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವ್ರಮ, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೩೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

In the Court of the Dt. Munsif of Coondapur

O. P. 55/1956

1. Anand Bhandarkar, 2. M. Rangappa Nayak — Petrs.

No Respts.

NOTICE

Whereas the petitioners have instituted the above petition in this court praying that they be given a Succession Certificate empowering them to collect and receive the moneys due on the foot of the undermentioned Insurance policies, to the estate of the late Kalyani Bai widow of Basroor Keshava Bhandary and the elder sister of the 2nd petitioner:-

Whoever interested in opposing the above petition may do so on the 4th day of August, 1956, before this Court at 11 A. M.

Policies to which the petition relates and the moneys due on the same.

1. Policy 10307—Kalyani Bai—New Guardian of India Life Insurance Co Ltd.
2. Policy 53018—do—Bombay Life Assurance Co Ltd.
3. Policy 53599—do—do—

(By Order of the Court)

S. N. Acharya,
Advocate.

Coondapoor, 14-7-1956.

ಹೆಚ್ಚಿದರೆ ಏನಾದೀತೆಂದು ಊಹಿಸುವಂತೆ ಮಹಾರಾಷ್ಟ್ರಗಳನ್ನು ಮೆನೊನ್ನರು ಕೇಳಿದರು. ಅಲ್ಲದೆ, ಗಾಳಿಯ ಮೇಲೆ ನಿಯಂತ್ರಣಗಳನ್ನು ಹೇರುವುದು—ಈ ಮಟ್ಟಿಗೆ ಮಹಾರಾಷ್ಟ್ರಗಳು "ಬಹುಮತ"ದ ನಿರ್ಣಯವನ್ನು ಮಾಡಿದರೂ—ಸಾಧ್ಯವಾಗದೆಂದು ಮೆನೊನ್ನರು ನಗೆಯ ನಡುವೆ ತಿಳಿಸಿದರು.

ಶತ್ರು—ಮಿತ್ರ ಭೇದವಿಲ್ಲ!

ಅಣುಶಸ್ತ್ರಗಳ ಉಪಯೋಗವು ಕೇವಲ ಯುದ್ಧಾಸಕ್ತ ರಾಷ್ಟ್ರಗಳನ್ನಷ್ಟೇ ದುಷ್ಪ್ರಭಾವಕ್ಕೊಳಪಡಿಸುವುದಿಲ್ಲ; ಯುದ್ಧದ ಗೊಂದಲದಲ್ಲಿ ಕೈಹಾಕದ ದೇಶಗಳನ್ನೂ ಪೇಚಿಗೊಳಪಡಿಸುತ್ತದೆ. ಅಷ್ಟೇ ಏಕೆ, ಅಣುಶಸ್ತ್ರಗಳನ್ನು ಪ್ರಯೋಗಿಸಿದ ಪರಿಣಾಮವಾಗಿ ವೈರಿಯೇ ನಾಶವಾಗುವನೆಂದು ಸಹ ಹೇಳಲಿಕ್ಕಾಗದು; ಮಿತ್ರನೂ ನಾಶವಾಗಬಹುದು ಎಂಬ ಸತ್ಯವನ್ನು ಮೆನೊನ್ನರು ಮುಂದಟ್ಟುಪಡಿಸಲು ಪ್ರಯತ್ನಿಸಿದರು.

ಇದಕ್ಕೆ ನಿದರ್ಶನವನ್ನು ನಾವು ಬೇರೆಲ್ಲಿಯೂ ಹುಡುಕುತ್ತಾ ಹೋಗಬೇಕಾಗಿಲ್ಲ. ಅಮೇರಿಕದ ಸೈನ್ಯ ಶಾಖೆಯ ಸಂಶೋಧನ ವಿಭಾಗದ ಮುಖ್ಯಸ್ಥರಾದ ಜನರಲ್ ಗಾವಿನ್ ಎಂಬ ಮಹನೀಯರು ರಶ್ಯದ ಮೇಲೆ ಅಣುಯುದ್ಧವನ್ನು ಅಮೇರಿಕವು ಸಾರಿದರೆ ಏನಾದೀತೆಂದು ವಿವರಿಸುತ್ತಾ ಹೇಳಿದ ಮಾತುಗಳೇ ಅಣುಯುದ್ಧದಿಂದ ಯಾರೂ ಪ್ರಯೋಜನ ಹೊಂದುವಂತಿಲ್ಲವೆಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಅಧಿಕಾರಿಗಳಿಗನುಸಾರ ಗಾಳಿಯು ಪೂರ್ವಕ್ಕೆ ಬೀಸುತ್ತಿದ್ದರೆ, ಜಪಾನು ಮತ್ತು ಪ್ರಾಯಶಃ ಫಿಲಿಪೀನಗಳಷ್ಟು ದೂರ ಪೂರ್ವದಲ್ಲಿರುವ ರಾಷ್ಟ್ರಗಳೂ ಅಣುವಿಕಿರಣಶೀಲತೆಯ ಅಪಾಯಕ್ಕೆ ಒಳಗಾಗಬಹುದು; ಬದಲಿಗೆ, ಗಾಳಿಯು ರಶಿಯದಿಂದ ಪಶ್ಚಿಮಕ್ಕೆ ಬೀಸುತ್ತಿದ್ದರೆ ಬ್ರಿಟನು, ಫ್ರಾನ್ಸು, ಜರ್ಮನಿ ಇತ್ಯಾದಿ ಪಶ್ಚಿಮ ಯುರೋಪಿನ ರಾಷ್ಟ್ರಗಳಿಗೆ ಕೇಡು ತಪ್ಪದು. ಅಣುಶಸ್ತ್ರಗಳ ಉಪಯೋಗವೇ ಪ್ರಾಮುಖ್ಯವಾದ ಮಹಾಯುದ್ಧವೊಂದು ನಡೆದರೆ ಕೆಲವು ಕೋಟಿ ಜನರು ಮೃತ್ಯುವಶರಾಗಬಹುದೆಂದೂ ಅವರ ಅಭಿಪ್ರಾಯ.

ಹವಾಮಾನದಲ್ಲಿ ಮಾರ್ಪಾಟು

ಗಾಳಿಯ ಸಂಚಾರಕ್ಕೆ ಬೇಲಿ ಹಾಕಿ ತಡೆಯುವಂತಿಲ್ಲ; ಅದುದರಿಂದ ಅಣುವಿಕಿರಣಶೀಲತೆಯು ಒಂದು ದೇಶದಿಂದ ಇನ್ನೊಂದಕ್ಕೆ ವ್ಯಾಪಿಸುವುದರಲ್ಲಿ ಯಾವುದೇ ಅನುಮಾನವಿಲ್ಲ. ಈಗಾಗಲೇ ನಡೆದಿರುವ ಸ್ಫೋಟನ ಪ್ರಯೋಗಗಳ ದೆಸೆಯಿಂದ ಜಗತ್ತಿನ ಹವಾಮಾನದಲ್ಲಿ ಬಹಳಷ್ಟು ಮಾರ್ಪಾಟು ಉಂಟಾಗಿವೆ ಎಂಬುದನ್ನು ಅಮೇರಿಕದ ಪ್ರಸಿದ್ಧ ವಿಜ್ಞಾನಿ ಡಾ. ಇರ್ವಿಂಗ್ ಬೆಂಗೆಲ್ಸ್ ಡೊರ್ಫ್ ಸಹ ಇದೀಗ ಪ್ರಕಟಪಡಿಸಿದ್ದಾರೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಕಳೆದ ಕೆಲವು ವರ್ಷಗಳಿಂದ ನಡೆದ ಚಂಡಮಾರುತ, ಅಕಾಲ ಹಿಮಪಾತ, ಅತಿವೃಷ್ಟಿ, ಅನಾವೃಷ್ಟಿ, ತಡೆಯಲಾರದ ಶೀತಗಾಳಿಯ ಕಾಟ ಎಲ್ಲವೂ ಹೆಚ್ಚುತ್ತಿರುವ ಅಣುಶಸ್ತ್ರಗಳ ಸ್ಫೋಟನೆಯ ಪರಿಣಾಮವಾಗಿವೆ ಎಂದವರು ಕಂಠೋಕ್ತವಾಗಿ ಸಾರುತ್ತಾರೆ.

ವಿಪಾತ್ತವಾದ ಅಣುಧೂಳಿನ ಕಣಗಳಾದ ಸ್ಟ್ರಾಂಟಿಯಂ ೯೦ ಎಂಬುದು ಎಲುಬನ್ನು ಕೆಡಿಸಿ ಅಲ್ಲಿ ವ್ರಣಗಳನ್ನುಂಟುಮಾಡುವುದೆಂದೂ ಜಗತ್ತಿನ ಜನರು ಸಹಿಸಿಕೊಳ್ಳಬಹುದಾದ ಅಣುವಿಕಿರಣ ಶೀಲತೆಯ ಪೂರ್ಣ ಪ್ರಮಾಣವನ್ನು ಒಂದೇ ಒಂದು ಔನ್ಸು ಸ್ಟ್ರಾಂಟಿಯಮಿನ ಸಂಪರ್ಕವು ಒದಗಿಸುವುದೆಂದೂ ಹೇಳಲಾಗಿದೆ. ಶ್ರೀ ಮೆನೊನ್ನರು ಇದನ್ನೆಲ್ಲ ಪ್ರಸ್ತಾಪಿಸಿ ಮುಂಜಾಗರೂಕತೆಯ ಯಾವ ಕ್ರಮಗಳನ್ನು ಕೈಗೊಂಡರೂ ಅಣು ವಿಕಿರಣಶೀಲತೆಯ ದುಷ್ಪ್ರಭಾವಗಳಿಂದ ರಕ್ಷಣೆಯನ್ನು ಪಡೆಯುವ ಆಶೆಯೇ ಇಲ್ಲವೆಂದು ಸ್ಪಷ್ಟಪಡಿಸಿದರು.

ಪೀಡಿತರ ಮನವಿ

ಅಣುಶಸ್ತ್ರಗಳ ಸ್ಫೋಟನೆಯ ಪ್ರಯೋಗಗಳನ್ನು ಮಿತಗೊಳಿಸಿದರೆ ಯಾವ ಭಯವೂ ಇಲ್ಲವೆಂಬ ಪಾಶ್ಚಾತ್ಯ ರಾಷ್ಟ್ರಗಳ ನಿಲುವೆಯನ್ನು ಮೆನೊನ್ನರು ಟೀಕಿಸಿದರು. ಅಣುಶಸ್ತ್ರಗಳ ಸ್ಫೋಟನೆಯೇ ಅಪಾಯಕಾರಿಯಾಗಿರುವುದರಿಂದ ಅದನ್ನು ಎಷ್ಟೇ ಮಿತವಾದ ಪ್ರಮಾಣದಲ್ಲಿಯೇ ಆಗಲಿ, ಮಾಡಗೊಡುವುದು ಅನ್ಯಾಯವೆಂದವರು ಸಾರಿದರು.

ಬಾಂಡುಂಗಿನ ಸಮ್ಮೇಳನದಲ್ಲಿ ನೆರೆದಿದ್ದ ಜಗತ್ತಿನ ಅರೆವಾಸಿ ಜನಸಂಖ್ಯೆಯನ್ನೊಳಗೊಂಡ ರಾಷ್ಟ್ರಗಳ ಪ್ರತಿನಿಧಿಗಳು ಅಣುಶಸ್ತ್ರಗಳ ಸ್ಫೋಟನ ಪ್ರಯೋಗವನ್ನು ನಿಷೇಧಿಸಿದ್ದಾರೆ. ಅದಲ್ಲದೆ ಬಿಕಿನಿ ದ್ವೀಪ ವಾಸಿಗಳೂ ನ್ಯೂಜಿಲೆಂಡಿನ ರಕ್ಷಣಾತ್ಮಕ ಆಡಳಿತೆಯಲ್ಲಿರುವ ಕ್ರಿಸ್ಮಿಯನ್ ದ್ವೀಪ ಸಮುದಾಯದ ಜನರೂ ತಮ್ಮನ್ನು ಅಣು ಶಸ್ತ್ರಗಳ ದುಷ್ಪರಿಣಾಮಗಳಿಗೆ ಬಲಿಗೊಡಲಾಗದೆಂದು ವಿನಂತಿ ಮಾಡಿಕೊಂಡಿದ್ದಾರೆ. ಇದನ್ನು ಉಪೇಕ್ಷೆಯಿಂದ ನೋಡುವುದು ಸರಿಯಲ್ಲ ಎಂದು ಮೆನೊನ್ನರು ಅಪೇಕ್ಷಿಸಿದರು. ಎಂಟು ಲಕ್ಷಕ್ಕಿಂತಲೂ ಹೆಚ್ಚು ಜಪಾನೀಯರು ಸಂಯುಕ್ತ ರಾಷ್ಟ್ರ ಸಂಘಕ್ಕೆ ತಮ್ಮ ಸಹಿಯುಳ್ಳ ಮನವಿಯೊಂದನ್ನು ಕಳುಹಿಸಿ ಅಣುಶಸ್ತ್ರಗಳ ಪ್ರಯೋಗಗಳನ್ನು ಬಹಿಷ್ಕರಿಸುವ ದಿಶೆಯಲ್ಲಿ ಪ್ರಗತಿಪರ ಹೆಜ್ಜೆಗಳನ್ನು ಕೈಗೊಳ್ಳಬೇಕೆಂಬುದಾಗಿ ಪ್ರಾರ್ಥನೆ ಮಾಡಿದ್ದಾರೆ. ಯುದ್ಧ ಕಾಲದಲ್ಲಾಗಲೀ ಶಾಂತಿ ಕಾಲದಲ್ಲಾಗಲೀ ಜಗತ್ತಿನ ಜಲ, ನೆಲ, ವಾಯು ಪ್ರದೇಶಗಳನ್ನೆಲ್ಲ ಕೆಡಿಸುವಂತೆ ಯಾವುದೇ ರಾಷ್ಟ್ರವು ಚಟುವಟಿಕೆ ನಡೆಸಿದರೆ ಅದನ್ನು ಪ್ರತಿಭಟಿಸುವುದು ಸಂಯುಕ್ತ ರಾಷ್ಟ್ರ ಸಂಘದಂಥ ವಿಶ್ವ ಸಂಸ್ಥೆಯ ಆದ್ಯ ಕರ್ತವ್ಯ ಎಂದು ಮುಂತಾಗಿ ಮೆನೊನ್ನರು ಪ್ರತಿಪಾದಿಸಿದರು.

ಸಾಮಾನ್ಯ ಸ್ವಾಗತ

ಮೆನೊನ್ನರ ಭಾಷಣಕ್ಕೆ ನಿಶ್ಶಸ್ತ್ರೀಕರಣ ಸಮಿತಿಯ ಸದಸ್ಯರು ಹಾರ್ದಿಕವಾದ "ಸ್ವಾಗತವನ್ನು ನೀಡಿದರು; ಅವರು ಮುಂದಿಟ್ಟ ಅಭಿಪ್ರಾಯಗಳಿಗೆ ಸಂಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಆದರೆ, ಪಾಶ್ಚಾತ್ಯ ರಾಷ್ಟ್ರಗಳು ಮೆನೊನ್ನರ ವಾದವನ್ನು ಒಪ್ಪಿರುವವೆಂದೇನು ಇದರ ಅರ್ಥವಲ್ಲ. ಬಹಳ ಪರಿಣಾಮಕಾರಿಯಾದುದೆಂದು ಪಾಶ್ಚಾತ್ಯ ರಾಷ್ಟ್ರಗಳಿಂದ ಮೆನೊನ್ನರ ಭಾಷಣವು ವರ್ಣಿಸಲ್ಪಟ್ಟಿದ್ದರೂ ಅದು ನಿಜವಾಗಿ ಪರಿಣಾಮವೇನನ್ನಾದರೂ ಮಾಡುವುದೇ ಎಂಬುದು ಸಂಶಯ.

ಏಕೆಂದರೆ ಪಾಶ್ಚಾತ್ಯ ರಾಷ್ಟ್ರಗಳ ಎಲ್ಲ ಪ್ರತಿನಿಧಿಗಳೂ ಅಣುಶಸ್ತ್ರಗಳನ್ನು ಸಂಪೂರ್ಣ ನಿಶ್ಶಸ್ತ್ರೀಕರಣದ ಪ್ರಾಮುಖ್ಯವಾದ ಪ್ರಶ್ನೆಗೆ ಹೊಂದಿಕೊಂಡು ಬಿಡಿಸಲ್ಪಡಬೇಕಾದ ವಿಷಯಗಳಲ್ಲಿ ಸೇರಿಸಲು ಉತ್ಸುಕರಾಗಿವೆ; ಮೆನೊನ್ನರ ಪ್ರಾಮಾಣಿಕತೆಯನ್ನು ಅವರ ಉದ್ದೇಶದ ಯೋಗ್ಯತೆಯನ್ನು ಈ ರಾಷ್ಟ್ರಗಳು ಸಂದೇಹ ದೃಷ್ಟಿಯಿಂದ ನೋಡುವುದಿಲ್ಲ. ಆದರೆ, ಅಣುಶಕ್ತಿಗೆ ಸಂಬಂಧಿಸಿದ ಸ್ಫೋಟನ ಪ್ರಯೋಗಗಳನ್ನೆ ಬಹಿಷ್ಕರಿಸಿದರೆ ಶಾಂತಿ ಕಾಲದ ಉಪಯೋಗಕ್ಕಾಗಿ ಅಣುಶಕ್ತಿಯನ್ನು ಬಳಸುವ ಕೆಲಸಕ್ಕೆ ಸಹ ಆತಂಕ ಬಂದೀತೆಂದು ಹೇಳುವವರೆಗೆ ಅವರು ನಿರುತ್ಸಾಹಿಗಳಾಗಿದ್ದಾರೆ. ಜಗತ್ತಿನ ಜನಾಭಿಪ್ರಾಯಕ್ಕೆ ಕಿವಿಗೊಡಲಿಲ್ಲವೆಂಬ ಅಪವಾದಕ್ಕೆ ತಾವು ಗುರಿಯಾಗಬಾರದೆಂಬ ಸ್ವಾರ್ಥಮೂಲವಾದ ಉದ್ದೇಶದಿಂದ ಮಾತ್ರ ಪಾಶ್ಚಾತ್ಯ ರಾಷ್ಟ್ರಗಳು ಭಾರತ ಸರಕಾರದ ಪ್ರತಿನಿಧಿಯ ಮಾತನ್ನು ಕೇಳಿಕೊಳ್ಳಲು ಮುಂದಾದವಲ್ಲದೆ ನಿಜವಾಗಿ ಈ ಅಭಿಪ್ರಾಯಗಳಿಗೆ ಮನ್ನಣೆ ಕೊಡುವ ಸಿದ್ಧತೆಯಲ್ಲಿ ಅವು ಇದ್ದಂತಿಲ್ಲ.

ಪಾಶ್ಚಾತ್ಯರ ಉದ್ದೇಶ

ಫ್ರಾನ್ಸಿನ ಪ್ರತಿನಿಧಿಗಳು ಅಣುಶಸ್ತ್ರಗಳ ಉತ್ಪಾದನೆಯನ್ನೆ ಪ್ರತಿಬಂಧಿಸುವಂತಿದ್ದರೆ ಮಾತ್ರ ಅಣುಶಸ್ತ್ರಗಳ ಸ್ಫೋಟನಕ್ಕೆ ಬಹಿಷ್ಕಾರ ಹಾಕಬಹುದು ಎಂದರು. ಜನರು ಭಯ ಗ್ರಸ್ತರಾಗಬೇಕಾಗಿಲ್ಲ; ಸ್ಫೋಟನಗಳನ್ನು ಯೋಗ್ಯ ನಿಯಂತ್ರಣದಲ್ಲಿಡಲು ವ್ಯವಸ್ಥೆ ಮಾಡಿದರೆ ಸಾಕು ಎಂದರವರು. ಅಮೇರಿಕದ ಪ್ರತಿನಿಧಿಗಳು ತಮ್ಮ ಸರಕಾರವು ಅಣುಶಸ್ತ್ರಗಳ ಸ್ಫೋಟನಗಳ ವಿಷಯದಲ್ಲಿ ಮೊದಲ ಸೂಚನೆಗಳನ್ನು ಕೊಟ್ಟು ಜನರಿಗಾಗಬಹುದಾದ ಅನಾಹುತಗಳನ್ನು ತಪ್ಪಿಸುತ್ತಿದೆ; ಅವರ ರಕ್ಷಣೆಗಾಗಿ ಹಾಗೇನೂ ಮಾಡುವುದಿಲ್ಲ ಎಂಬುದಾಗಿ ಮೆನೊನ್ನರ ಭಾಷಣದ ಮೇಲೆ ಅಭಿಪ್ರಾಯ ವ್ಯಕ್ತಮಾಡುವ ಸಂದರ್ಭವನ್ನು ರಕ್ಷಣೆ ನಿಂದೆಗೆ ಉಪಯೋಗಿಸಿಕೊಂಡರು. ಅಣುಶಸ್ತ್ರಗಳ ಸ್ಫೋಟನೆಯಿಂದ ಅಪಾಯವಿಲ್ಲವೆಂದು ಹೇಳದಿದ್ದರೂ ಅವನ್ನು ನಿಯಂತ್ರಣದಲ್ಲಿಡಲು ಸಾಧ್ಯವೆಂದು ಈ ಪ್ರತಿನಿಧಿಗಳು ಅಮೇರಿಕದ ಪರವಾಗಿ ಹೇಳಿದರು.

ಬ್ರಿಟನಿನ ಪ್ರತಿನಿಧಿಗಳು ಜನರು ಭಾವಿಸುವಷ್ಟು ಅಪಾಯವು ಅಣುಶಸ್ತ್ರಗಳ ಸ್ಫೋಟನದಿಂದಾಗಿಲ್ಲ ಎಂಬ ಅಭಿಪ್ರಾಯವನ್ನು ಮುಂದಿಟ್ಟರು. ರಶ್ಯದ ಪ್ರತಿನಿಧಿಗಳು ಭಾರತದ ನಿಲುವೆಯನ್ನು ಮೆಚ್ಚಿಕೊಂಡರೂ ಏಕಪಕ್ಷೀಯವಾಗಿ ಸ್ಫೋಟನ ಪ್ರಯೋಗಗಳನ್ನು ನಿಲ್ಲಿಸುವಷ್ಟು ಮುಂದೆ ಹೋಗುವ ಸಿದ್ಧತೆಯನ್ನೇನು ತೋರಿಸಲಿಲ್ಲ. ಜನಾಭಿಪ್ರಾಯವನ್ನು ತಮ್ಮ ದೇಶದ ಸ್ವಾರ್ಥ ಸಮರ್ಥನೆಗಾಗಿಯಷ್ಟೇ ಅವರು ಉಪಯೋಗಿಸಿಕೊಂಡರು. ಕೆನಡದ ಪ್ರತಿನಿಧಿಗಳು ವಿಜ್ಞಾನಿಗಳ ಅಭಿಪ್ರಾಯದಲ್ಲಿ ಸಾಮ್ಯವನ್ನು ಕಾಣಲಿಲ್ಲ—ಹೀಗಾಗಿ ಈಗಲೇ ದುಷ್ಪರಿಣಾಮಗಳ ಗಾಂಭೀರ್ಯವನ್ನು ಅರಿತು ಮಾತನಾಡುವುದನ್ನು ಅವರು ಸಮ್ಮತಿಸಲಿಲ್ಲ. ಶಕ್ತಿಯನ್ನು ಗುಡ್ಡದಷ್ಟು ದೊಡ್ಡದಾಗಿ ತೋರಿಸಹೋಗುವ ಹವ್ಯಾಸವನ್ನವರು ಅನುಮೋದಿಸುವುದಿಲ್ಲವೆಂದರು. ಅಂತೂ, ಉಳಿದ ಸಂಶಯವನ್ನು ಬಿಡಿಸಲಾಯಿತು; ಅದಕ್ಕಿಂತ ಹೆಚ್ಚಿನ ಸತ್ಪರಿಣಾಮವಾದಂತಿಲ್ಲ.

———

50 ವರ್ಷಗಳ ಅಪೂರ್ವ ಪ್ರಗತಿ

50 ವರ್ಷಗಳ ಹಿಂದೆ 1—7—1906ರಲ್ಲಿ ಸಣ್ಣ ಸಂಸ್ಥೆಯಾಗಿ ಆರಂಭವಾದ **ಕೆನರಾ ಬ್ಯಾಂಕ್** ರಾಷ್ಟ್ರದ ಪ್ರಗತಿಯಲ್ಲಿ ವ್ಯಾಪಾರ, ಉದ್ದಿಮೆ ಕೈಗಾರಿಕೆಗಳ ಅಭಿವೃದ್ಧಿಗೆ ತನ್ನ ಸಹಾಯವನ್ನು ಸಲ್ಲಿಸುತ್ತದೆ.

ಭಾರತದ ಪ್ರಗತಿಪರ ಬ್ಯಾಂಕುಗಳಲ್ಲೊಂದಾಗಿರುವ **ಕೆನರಾ ಬ್ಯಾಂಕು**, ತನ್ನ ಸೇವೆ, ಸ್ನೇಹ ಸೌಹಾರ್ದತೆ, ಆರ್ಥಿಕ ಭದ್ರತೆ, ಉತ್ತಮ ವ್ಯಾಪಾರ ಧೋರಣೆಗಳ ಮೂಲಕ, 50 ವರ್ಷಗಳಿಂದ ಅಸಂಖ್ಯಾತ ಜನರ ಪ್ರೀತಿ ಮನ್ನಣೆಗಳಿಗೆ ಪಾತ್ರವಾಗಿದೆ.

51ನೇ ವರ್ಷದಲ್ಲಿ ಕಾಲಿಟ್ಟಿರುವ **ಕೆನರಾ ಬ್ಯಾಂಕು** ತನ್ನ ಅಭಿವೃದ್ಧಿಗೆ ಕಾರಣರಾದ ಪೋಷಕರಿಗೆಲ್ಲಾ ತನ್ನ ಹಾರ್ದಿಕ ವಂದನೆಗಳನ್ನೀಯುತ್ತದೆ.

ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುವ ನಾವೆಲ್ಲರೂ ಇನ್ನೂ ಉತ್ತಮ ತರದ ಸೇವೆ ಸೌಕರ್ಯಗಳನ್ನು ಸಲ್ಲಿಸುವ ಭರವಸೆ ಕೊಡುತ್ತೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

1906 ಸಮಸ್ತ ಜನತೆಯ ನೆಚ್ಚಿನ ಬ್ಯಾಂಕ್ **1956**

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೯-೭-'೫೬	೪೬

ಮಂಗಳೂರಿನ ಬಂಧುಗಳಿಗೆ—

ನಡೆದ ವಿಷಯಗಳ ಸ್ಪಷ್ಟವಾದ ತಿಳುವಳಿಕೆಯಿಲ್ಲದೆ, ಅವುಗಳಿಂದ ವಿಶಾಲವಾದ ಜನಸಮುದಾಯಕ್ಕೆ ಆಗಬಹುದಾದ ಪ್ರಯೋಜನಗಳನ್ನು ಗ್ರಹಿಸುವಷ್ಟು ಮುನ್ನೋಟವಿಲ್ಲದೆ, ಬದಲಾವಣೆಗಳನ್ನೆಲ್ಲ ಟೀಕಿಸುವುದೂ ಅವುಗಳಿಗೆ ಹೊಣೆಗಾರರೆಂದು ಕೆಲವು ವ್ಯಕ್ತಿಗಳನ್ನು ಎತ್ತಿ ತೋರಿಸಿ, ಅವರ ತೇಜೋವಧೆ ಮಾಡಲು ಹೋಗುವುದೂ ಬೇಕೆಂದೇ ಜನರನ್ನು ಉದ್ರೇಕಿಸಲು (ಅಪ)ಪ್ರಚಾರಗಳನ್ನು ಕೈಗೊಳ್ಳುವುದೂ ಇಂದು ತೀರ ಸಾಮಾನ್ಯವಾಗಿದೆ. ಸಾರ್ವಜನಿಕ ಜೀವನದಲ್ಲಿ ವಿಶೇಷವಾದ ಚಟುವಟಿಕೆಯನ್ನು ತೋರಿಸುವ ಮಹನೀಯರಿಗೆ ಸಿಗುವ ಪ್ರೋತ್ಸಾಹಕ್ಕಿಂತಲೂ ಅವರು ಎದುರಿಸಬೇಕಾಗಿ ಬರುವ ಟೀಕೆಯ ರೂಪದ ಅಸ್ತ್ರಗಳ ಭಯಕಾರಕತೆಯು ಕಂಗೆಡಿಸುವಂತಿದೆ. ಇದಕ್ಕೆ ನಿದರ್ಶನವಾಗಿ, ಮಣಿಪಾಳದಲ್ಲಿ ವೈದ್ಯಕೀಯ ಶಿಕ್ಷಣವನ್ನು ಕೊಡುವ ಕಾಲೇಜಿನ ಸ್ಥಾಪನೆಯನ್ನು ಎತ್ತಿಕೊಳ್ಳಬಹುದು. ದೇಶದಲ್ಲಿ ವೈದ್ಯರ ಸಂಖ್ಯೆ ತೀರ ಕಡಿಮೆ ಪ್ರಮಾಣದಲ್ಲಿದೆ; ನಮ್ಮ ರೋಗಿಗಳಿಗೆ ಯೋಗ್ಯ ಶುಶ್ರೂಷೆ ನಡೆಸುವವರು ಅತ್ಯಾವಶ್ಯಕವಾಗಿ ಬೇಕಾಗಿದ್ದಾರೆ—ಎಂದು ಜನರೂ ಸರಕಾರದವರೂ ಇಂದು ಸಹ ಹೇಳುತ್ತಿದ್ದಾರೆ. ಆದರೆ ವೈದ್ಯರನ್ನು ಸಿದ್ಧಗೊಳಿಸುವ ತರಬೇತಿ ಕೇಂದ್ರವನ್ನು ತೆರೆಯುವುದು ಸರಕಾರದ ಕೆಲಸವೆಂದು ಜನರು ಭಾವಿಸುತ್ತಾರೆ; ಸರಕಾರದವರಾದರೋ ಜನರೇ ತಮ್ಮ ಆವಶ್ಯಕತೆಗಳ ಪೂರೈಕೆಗಾಗಿ ತಾವೇ ಸಾಹಸಪರರಾಗಬೇಕು ಎನ್ನುವ ಸಿದ್ಧಾಂತವನ್ನು ಎತ್ತಿಹಿಡಿಯುತ್ತಾರೆ. ಜನರ ಪ್ರತಿಯೊಂದೂ ತೊಂದರೆಯ ನಿವಾರಣೆಗೆ ಸರಕಾರವೇ ಪ್ರಯತ್ನಶೀಲವಾಗುವುದು ಕಷ್ಟವೆಂದೂ ಜನರೇ ಉಪಾಯಗಳನ್ನು ಯೋಜಿಸಬೇಕೆಂದೂ ಸರಕಾರವು ಭಾವಿಸುತ್ತದೆ. ಇಂಥ ಪರಿಸ್ಥಿತಿಯಲ್ಲಿ ಉಡುಪಿಯ ಗಣ್ಯ ವ್ಯಕ್ತಿಗಳಾದ ಡಾ. ಟಿ. ಮಾಧವ ಪೈಗಳು ಮಣಿಪಾಳದಲ್ಲಿ ವೈದ್ಯಕೀಯ ಶಿಕ್ಷಣಾಪೇಕ್ಷಿಗಳಾದವರ ಸಹಾಯದಿಂದಲೇ ಪುಷ್ಟಿಗೊಳ್ಳುವ ಕಾಲೇಜೊಂದನ್ನು ತೆರೆಯಲು ನಿರ್ಧರಿಸಿದರು. ಇಂಥ ಸಾಹಸ ಹಿಂದೆ ನಡೆದಿರಲಿಲ್ಲ—ಆದರೆ ಇದು ಸರಕಾರವು ಪ್ರಚಾರಮಾಡುತ್ತಿದ್ದ ಸ್ವಸಹಾಯದ ಸಿದ್ಧಾಂತಕ್ಕಾಗಲೀ ದೇಶದ ಆವಶ್ಯಕತೆಗಳನ್ನು ಪೂರೈಸುವ ದೃಷ್ಟಿಯಿಂದಾಗಲೀ ಎಷ್ಟು ಮಾತ್ರಕ್ಕೂ ಅಸಂಗತವಾಗಿರಲಿಲ್ಲ. ಹೀಗಿದ್ದರೂ ಟೀಕೆಗಳ ಸುರಿಮಳೆಯಾಯಿತು; ಈ ಕಾಲೇಜಿನ ಭವಿಷ್ಯವನ್ನು ತೀರ ನಿರಾಶಾದಾಯಕವಾದ ಮಾತುಗಳಲ್ಲಿ ವರ್ಣಿಸಲಾಯಿತು; ಅಧಿಕೃತಮನ್ನಣೆಯು ಸಿಗದೆಂಬ, ವಿದ್ಯಾರ್ಥಿಗಳೇ ದುರ್ಲಭರಾಗಬಹುದೆಂಬ ವಾಸ್ತವ ಸ್ವರೂಪದ ಭಯವನ್ನೂ ಟೀಕಾಕಾರರು ಹುಟ್ಟಿಸಿದರು; ಅಷ್ಟೇಯಲ್ಲ, ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಈ ಭವ್ಯ ಕಾಲೇಜಿನ ಸಂಸ್ಥಾಪಕ ಸ್ಥಾನದಲ್ಲಿರುವ ಡಾ. ಪೈಗಳನ್ನು ಸ್ವಾರ್ಥಿಗಳೆಂದು ನಿಂದಿಸಲೂ ಕೆಲವು ಗುಂಪುಗಳವರು ಹೇಸಲಿಲ್ಲ! ಇಂದು ಮಣಿಪಾಳದಲ್ಲಿ ಭವ್ಯವಾದ ಕಟ್ಟಡದಲ್ಲಿ ವೈದ್ಯಕೀಯ ಕಾಲೇಜು ನೆಲೆಗೊಂಡು ವಿದ್ಯಾದಾನವನ್ನು ಮಾಡುತ್ತಿದೆ. ಮಂಗಳೂರಿನಲ್ಲಿ ಪ್ರತ್ಯಕ್ಷ ಚಿಕಿತ್ಸಾ ವಿಧಾನವನ್ನು ಕಲಿಸಲಾಗುತ್ತದೆ — ಸುಮಾರು ೪೭೫ ಮಂದಿ ವಿದ್ಯಾರ್ಥಿಗಳು ಕಾಲೇಜಿನಲ್ಲಿ ವ್ಯಾಸಂಗವನ್ನು ಮಾಡುತ್ತಿದ್ದಾರೆ. ಡಾ. ಪೈಗಳ ಕರ್ತೃತ್ವಶಕ್ತಿ ಮತ್ತು ಸಾಹಸಪರತೆಯಿಲ್ಲದಿದ್ದರೆ ಇಷ್ಟು ವಿದ್ಯಾರ್ಥಿಗಳು ತಮ್ಮ ಅಪೇಕ್ಷೆ ಪೂರೈಸಲ್ಪಡದೆ ನಿರುತ್ಸಾಹಿಗಳಾಗುತ್ತಿದ್ದರು; ದೇಶಕ್ಕೆ ಇಷ್ಟು ವೈದ್ಯರು ತಪ್ಪುತ್ತಿದ್ದರು—ಇಷ್ಟು ಮಟ್ಟಿಗೆ ರಾಷ್ಟ್ರವು ಸಮೃದ್ಧವಾಗಿದೆ; ಪ್ರಗತಿಯನ್ನು ಹೊಂದಿದೆ; ಜನರು ಉಪಕೃತರಾಗಿದ್ದಾರೆ. ನಾವು ಈ ಶಿಕ್ಷಣ ಸಂಸ್ಥೆಯನ್ನು ಬಲಪಡಿಸಲು ಇನ್ನಾದರೂ ಸಹಾಯವನ್ನು ಸಲ್ಲಿಸದಿದ್ದರೆ ಕೃತಘ್ನರಾಗಲಾರೆವೆ? ನಮ್ಮ ಜಿಲ್ಲೆಯ ಜನರಾದರೂ ಈ ಶಿಕ್ಷಣ ಸಂಸ್ಥೆಯ ಮೇಲೆ ಸ್ವಕೀಯಾಭಿಮಾನವನ್ನು ಇಡಬಾರದೆ? ಈ ವಿಶಾಲವಾದ ಮನೋಭಾವನೆಯು ದಕ್ಷಿಣಕನ್ನಡದ ಧುರೀಣರ ಜಾಯಮಾನಕ್ಕೆಯೇ ಒಪ್ಪದ ವಿಷಯವಾಗಿ ಕಾಣುತ್ತದೆ. ಏಕೆಂದರೆ, ಈಚೆಗೆ, ಅಂದರೆ ಕಳೆದ ತಿಂಗಳಲ್ಲಿ, ಮಣಿಪಾಳದಲ್ಲಿ ಉಳಿದಿರುವ ವೈದ್ಯಕೀಯ ಕಾಲೇಜಿನ ಪೂರ್ವ ಚಿಕಿತ್ಸಾ ವಿಭಾಗವನ್ನು ಸಹ ಮಂಗಳೂರಿಗೆ ಅಲ್ಲಿಯ ಸರಕಾರಿ ಕಾಲೇಜಿನ ಕಟ್ಟಡಕ್ಕೆ ವರ್ಗಾಯಿಸುವ, ಸೂಚನೆ ಪ್ರಕಟವಾದಂದಿನಿಂದ ಇದಕ್ಕೆ ವಿರೋಧವು ಮಂಗಳೂರಿನ ಜನರಿಂದ ಬರತೊಡಗಿದೆ. ಸರಕಾರಿ ಕಾಲೇಜನ್ನು ಕದ್ರಿಯಲ್ಲಿರುವ ಪೊಲಿಟೆಕ್ನಿಕಿನ ಕಟ್ಟಡಕ್ಕೂ ಪೊಲಿಟೆಕ್ನಿಕಿನಲ್ಲಿ ಶಿಕ್ಷಣ ಕೊಡುವ ಸಂಸ್ಥೆಯನ್ನು ಮಣಿಪಾಳದಲ್ಲಿ ವೈದ್ಯಕೀಯ ಕಾಲೇಜು ಈಗ ನೆಲೆಗೊಂಡಿರುವ ಕಟ್ಟಡಕ್ಕೂ ವರ್ಗಾಯಿಸುವುದರಿಂದ ಹೊಸ ತೊಂದರೆಗಳ ಪರಂಪರೆಯೇ ಉಂಟಾಗಿದೆ ಎಂಬಂತಿದೆ ಮಂಗಳೂರವರ ನಿಲುಮೆ. ಮಂಗಳೂರಿನ ಜನರ ಮನೋಭಾವನೆಯನ್ನು ಗೊಂದಲ ಮತ್ತು ಗಲಿಬಿಲಿಯಲ್ಲಿ ಕೆಡವಿಸಲಾಗುತ್ತಿದೆ; ಡಾ. ಪೈಗಳದೇ (ಕು)ತಂತ್ರವಿದೆಂದು ಸಹ ಹೇಳಲಾಗುತ್ತಿದೆ; ಹೊಣೆಗಾರ ಸ್ಥಾನದಲ್ಲಿರುವ ಮತ್ತು ಸದ್ಗೃಹಸ್ಥರೆನಿಸಿರುವ ಜನರೇ ಈ ಬಗೆಯ ಆರೋಪಗಳನ್ನೂ ಅಪಪ್ರಚಾರಗಳನ್ನೂ ಮಾಡುತ್ತಿರುವುದರಿಂದ ಜನಸಾಮಾನ್ಯರು ಅದನ್ನೇ ಸತ್ಯವೆಂದು ನಂಬುತ್ತಿದ್ದಾರೆ. ಆದರೆ ಸತ್ಯವು ಮಂಗಳೂರಿನ ಹಲವರು ಭಾವಿಸಿದಂತಿಲ್ಲ—ಮೊದಲನೆಯದಾಗಿ, ವೈದ್ಯಕೀಯ ಶಿಕ್ಷಣ ಕಾಲೇಜಿನ ಪೂರ್ವಚಿಕಿತ್ಸಾ ವಿಭಾಗವನ್ನೇ ಮಂಗಳೂರಿಗೆ ವರ್ಗಾಯಿಸುವ ಸೂಚನೆಯನ್ನು ಮಾಡಿದವರು ಡಾ. ಪೈಗಳಲ್ಲ; ಅದು ಮದ್ರಾಸು ಸರಕಾರದಿಂದ ಬಂದ ಸೂಚನೆ; ವಿದ್ಯಾಮಂತ್ರಿಗಳಾದ ಶ್ರೀ ಸಿ. ಸುಬ್ರಹ್ಮಣ್ಯಮರು ಡಾ. ಪೈಗಳೊಡನೆ ಉದಕಮಂಡಲದಲ್ಲಿ ಮಾತನಾಡುವಾಗ ಈ ಶಿಕ್ಷಣ ಸಂಸ್ಥೆಯನ್ನು ಇನ್ನೂ ದೃಢವಾದ ತಳಹದಿಯ ಮೇಲೆ ನಿಲ್ಲಿಸಲು ಮುಂದಿಟ್ಟ ಸೂಚನೆ ಇದಾಗಿದೆ. ಡಾ. ಪೈಗಳಿಗೆ ಪೊಲಿಟೆಕ್ನಿಕಿನ ಶಾಲೆ ಬೇಕಾಗಿಲ್ಲ. ಸರಕಾರವು ಸಹ ಸಂಕೋಚಪಡುವ, ಅಥವಾ ಹಿಂದೆ ಮುಂದೆ ನೋಡುವ, ಸಾಹಸದ ಕೆಲಸವೊಂದಕ್ಕೆ ವ್ಯಕ್ತಿಯೊಬ್ಬನು ಧುಮುಕಿ, ಯಶಸ್ವಿಯಾಗಿರುವುದನ್ನು ಕಂಡು, ಮೆಚ್ಚಿ ಮಾಡಿದ ಸೂಚನೆಯಿದು ಎನ್ನಬಹುದು. ಡಾ. ಪೈಗಳು ಈ ಸೂಚನೆಗೆ ಒಪ್ಪಿದುದೇ ಆಶ್ಚರ್ಯ! ಅವರು ಈ ಸಂಸ್ಥೆಯ ಜನ್ಮದಾತರಾಗಿ, ಎಷ್ಟು ಶ್ರಮಗಳನ್ನು ನಿರ್ವಹಿಸಬೇಕಾಯಿತು, ಅದೆಷ್ಟು ನಿಂದೆಗೊಳಗಾಗಬೇಕಾಯಿತು, ಕೆಲವು ಗುಂಪಿನ ವಿರೋಧವನ್ನು ಎದುರಿಸಿ ಸಂಸ್ಥೆಯನ್ನು ಮುಂದಕ್ಕೆ ತರಲು ಎಷ್ಟು ಹಣಗಾಡಬೇಕಾಯಿತು ಎಂಬುದನ್ನೆಲ್ಲ ತಿಳಿದವರ ದೃಷ್ಟಿಯಲ್ಲಿ ಸರಕಾರಕ್ಕೆ ವೈದ್ಯಕೀಯ ಶಿಕ್ಷಣಕಾಲೇಜನ್ನು ಒಪ್ಪಿಸಿಕೊಡಲು ಅವರು ನೀಡಿದ ಸಮ್ಮತಿಯು ತ್ಯಾಗ ಬುದ್ಧಿಯ ಅಪೂರ್ವ ನಿದರ್ಶನವಾಗಿಯೇ ತೋರುತ್ತದೆ. ಸರಕಾರವು ವೈದ್ಯಕೀಯಕಾಲೇಜನ್ನು ವಹಿಸಿಕೊಳ್ಳುವ ಸೂಚನೆಯನ್ನಷ್ಟೇ ಸ್ವಾಗತಿಸಿ, ಅದು ಮಣಿಪಾಳದಲ್ಲಿಯೇ ಇರಬೇಕೆಂದೂ ಇದಕ್ಕೆ ತಕ್ಕ ಆಸ್ಪತ್ರೆಯೇ ಮುಂತಾದ ಸಲಕರಣೆಗಳನ್ನು ಸರಕಾರ ಕಟ್ಟಿಸಿಕೊಡಲೆಂದೂ ಅವರು ಶರ್ತವನ್ನು ಹಾಕುತ್ತಿದ್ದರೆ ಅದು ಅಸಹಜವೆನಿಸುತ್ತಿರಲಿಲ್ಲ—ಡಾ. ಪೈಗಳು ಹಾಗೆ ಯಾವುದೇ ಶರ್ತವನ್ನು ಹಾಕಿಲ್ಲ. ಇದರಿಂದಲೇ ಅವರು ಸ್ವಾರ್ಥಿಗಳಲ್ಲ, ಸಂಸ್ಥೆಯ ಕ್ಷೇಮಾಭ್ಯುದಯಾಕಾಂಕ್ಷಿಗಳು ಮತ್ತು ದೇಶದ ಹಿತದ ಮೇಲೆ ಕಣ್ಣಿಟ್ಟವರು ಎಂಬ ವಿಷಯ ಮುಂದಟ್ಟಾಗುತ್ತದೆ. ವ್ಯಕ್ತಿ ನಿಂದೆಗೆ ಇಲ್ಲಿ ಎಳ್ಳಷ್ಟೂ ಅವಕಾಶವಿರುವುದಿಲ್ಲ. ಅವರು ಸಂಕುಚಿತ ಮನೋಭಾವದಿಂದ ಯಾವುದೇ ಸಂಸ್ಥೆಯನ್ನು ಕಟ್ಟಲು ಹೋಗಿಲ್ಲ—ಕೆಲವು ಜಾತಿಯ ಗುಂಪುಗಳಿಗಷ್ಟೇ ಮೀಸಲಾದ ಚಟುವಟಿಕೆಯೂ ಅವರದಲ್ಲ. ಬ್ಯಾಂಕಿಂಗಿನ ಕ್ಷೇತ್ರದಲ್ಲಾಗಲೀ ವಾಣಿಜ್ಯವಲಯದಲ್ಲಾಗಲೀ ಶೈಕ್ಷಣಿಕ ರಂಗದಲ್ಲಾಗಲೀ ಡಾ. ಪೈಗಳು ತಮ್ಮ ಸಂಸ್ಥೆಗಳು ಸಾರ್ವಜನಿಕರದಾಗುವಂತೆ ಎಲ್ಲ ರೀತಿಯಿಂದಲೂ ಪ್ರಯತ್ನಿಸಿ ಕೃತಾರ್ಥರಾಗಿದ್ದಾರೆ. ಸಹಾಯವು ಯಾವ ರೂಪದಲ್ಲಿದ್ದರೂ ಅದು ಎಷ್ಟೇ ಅಗಣ್ಯವಾಗಿದ್ದರೂ ಅದನ್ನವರು ನಿರಾಕರಿಸುವುದಿಲ್ಲ. ಹಾಗೆಯೇ ಟೀಕೆಯು ಎಷ್ಟೇ ಗಂಭೀರವಾಗಿದ್ದರೂ ಅದು ಎಷ್ಟೇ ಹೊಣೆಗಾರ ವ್ಯಕ್ತಿಯಿಂದ ಬಂದರೂ ಅಷ್ಟರಿಂದಲೇ ಧೈರ್ಯಹೀನರಾಗುವುದೂ ಅವರ ಸ್ವಭಾವವಲ್ಲ. ಸರಕಾರದಿಂದ ಸೂಚಿತವಾದ ಪ್ರಸ್ತುತ ವರ್ಗಾವಣೆಯ ಸಂಬಂಧದಲ್ಲೂ ಟೀಕೆಯು ತುದಿಮೊದಲಿಲ್ಲವೆಂಬಂತೆ ಮಂಗಳೂರಿನಿಂದ ಬರುತ್ತಿದೆ—ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ಕದ್ರಿಯು ಬಹಳ ದೂರದ ಕೇಂದ್ರವಾಗುವುದೆಂದು ಹೇಳಲಾಗುತ್ತದೆ; ಈಗ ಅಲ್ಲಿರುವ ಪೊಲಿಟೆಕ್ನಿಕು ಮಂಗಳೂರವರಿಗೆ ದೂರವಾಗಿಲ್ಲವೆ? ಇಲ್ಲವೆಂದಾದರೆ ಸರಕಾರಿ ಕಾಲೇಜು ದೂರ ಹೋಗುವುದೆಂಬ ಟೀಕೆಯಲ್ಲಿಯೂ ಬೆಲೆಯಿಲ್ಲ! ರೈಲಿನಿಂದ ಬರುವ ವಿದ್ಯಾರ್ಥಿಗಳಿಗೆ ಎಷ್ಟು ಅಡಚಣೆಯಾದರೂ ಸಕಾಲಕ್ಕೆ ಬಸ್ಸೊಂದನ್ನು ಓಡಿಸುವಷ್ಟು ವ್ಯವಸ್ಥೆಯಾದರೆ ಎಲ್ಲ ಕಷ್ಟವೂ ಪರಿಹಾರ ಹೊಂದುತ್ತದೆ; ಉಡುಪಿಯ ಮಹಾತ್ಮಾ ಗಾಂಧಿಸ್ಮಾರಕ ಕಾಲೇಜಿನ ಸಂಗತಿಯಲ್ಲಿ ಹೀಗೆ ಮಾಡಿದ್ದುಂಟು. ಇದೂ ಕಷ್ಟವಲ್ಲವೆ ಎಂದು ಡಾ. ಪೈಗಳನ್ನು ಪ್ರಶ್ನಿಸಿದರೆ, ಸರಕಾರವು ಈಗಿನ ಸರಕಾರಿ ಕಾಲೇಜಿಗೆ ಹತ್ತಿರದಲ್ಲಿರುವ ಭೂಮಿಯನ್ನು ವಶಪಡಿಸಿಕೊಂಡು ಕೆಲವು ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಭವ್ಯ ಸುಂದರವಾದ ಹೊಸ ಕಟ್ಟಡವನ್ನು ಕಟ್ಟಿಸಬಹುದು; ಸರಕಾರಕ್ಕೆ ಯಾವುದು ಅಸಾಧ್ಯ ಎಂಬ ಉತ್ತರವನ್ನವರು ಕೊಡುತ್ತಾರೆ. ಸರಕಾರಕ್ಕೆ ಈ ವ್ಯಯವು ದೊಡ್ಡ ಹೊರೆಯಾಗಲಾರದು; ಏಕೆಂದರೆ ಪೊಲಿಟೆಕ್ನಿಕನ್ನು ಮಂಗಳೂರಿನಿಂದ ಉಡುಪಿಯ ಮಣಿಪಾಳಕ್ಕೆ, ಇತ್ತಂದ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಪೂರ್ವ ಚಿಕಿತ್ಸಾ ವಿಭಾಗವನ್ನು ಮಂಗಳೂರಿಗೆ . ವರ್ಗಾಯಿಸುವುದಕ್ಕಾದರೂ ವೆಚ್ಚವನ್ನು ನಿರ್ವಹಿಸುವುದು ಅನಿವಾರ್ಯ. ಸರಕಾರವು ಮಣಿಪಾಳದಲ್ಲಿಯೇ ತನ್ನ ಮೇಲ್ವಿಚಾರಣೆಯಲ್ಲಿ ಹೊಸ ಆಸ್ಪತ್ರೆ ಇತ್ಯಾದಿಗಳನ್ನು ಕಟ್ಟಿಸಿ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ನಿರ್ವಹಿಸುವುದು ಪೊಲಿಟೆಕ್ನಿಕನ್ನು ಮಣಿಪಾಳಕ್ಕೆ ವರ್ಗಾಯಿಸುವುದಕ್ಕಿರುವ ವೆಚ್ಚಕ್ಕಿಂತ ಎಷ್ಟೋಪಟ್ಟು ವ್ಯಯದ ಕೆಲಸವೆಂದು ಭಾವಿಸಬಹುದು. ಇದಕ್ಕನುಗುಣವಾಗಿ ತಯಾರಿಸಿದ ಯೋಜನೆಯು ಆತಂಕಗಳನ್ನು ಅತ್ಯಲ್ಪ ಮಿತಿಯಲ್ಲಿಟ್ಟು ಪ್ರಯೋಜನಾಂಶಗಳನ್ನೆ ಹೆಚ್ಚಿಸುವಂತಿದೆಯಾದ ಪ್ರಯುಕ್ತ ನಾವೆಲ್ಲರೂ ಈ ಯೋಜನೆಗೆ ಸ್ವಾಗತ ನೀಡಬೇಕಾಗಿದೆ. ಪೊಲಿಟೆಕ್ನಿಕನ್ನು ಮಣಿಪಾಳಕ್ಕೆ ವರ್ಗಾಯಿಸುವುದರಿಂದ (ಮಂಗಳೂರಿನವರದೇ ಪ್ರಾಬಲ್ಯವಿರುವ ವಿದ್ಯಾರ್ಥಿಗಳಿಗೆ ತೊಂದರೆಯಾಗುವುದೆಂಬುದನ್ನು ನಿರಾಕರಿಸಲಾಗುವುದಿಲ್ಲ. ಆದರೆ ಜಿಲ್ಲೆಗೊಂದರಂತಿರುವ ಈ ಮಾದರಿಯ ಶಿಕ್ಷಣ ಸಂಸ್ಥೆಗಳು ಯಾವ ಕಾಲಕ್ಕಾದರೂ ಹೇಗೆಯೋ ಸ್ವಲ್ಪ ತೊಂದರೆಯನ್ನು ಅದರ ಪ್ರಯೋಜನ ಪಡೆಯಬಯಸುವವರಲ್ಲಿ ಕೆಲವರಿಗೆ ಕೊಟ್ಟೇ ಕೊಡುತ್ತವೆ. ಉಡುಪಿಯಲ್ಲಿ ಕಾಲೇಜು ಇಲ್ಲದಿದ್ದಾಗ, ಜಿಲ್ಲೆಯ ಉತ್ತರ ಭಾಗದ ಉಚ್ಚ ವ್ಯಾಸಂಗೇಚ್ಛುಗಳು ಮಂಗಳೂರಿನಲ್ಲಿ ನಾಲ್ಕಾರು ವರ್ಷ ನವೆಯುತ್ತಿದ್ದರು—ಈಗಲೂ ಬಡ ಉಪಾಧ್ಯಾಯರ ಮರುತರಬೇತಿಯು ಮಂಗಳೂರಿನಲ್ಲಾಗುತ್ತಿದೆ! (ಉಡುಪಿಯಲ್ಲಿ ತರಬೇತಿ ಕೇಂದ್ರವೊಂದಿದ್ದೂ ಹೀಗೆ!) ದೇಶದ ವಿಶಾಲ ಹಿತದ ಮುಂದೆ ಇವೆಲ್ಲ ಅಡಚಣೆಗಳನ್ನು ಉಪೇಕ್ಷಿಸುವುದೇ ಮೇಲಲ್ಲದೆ ಅವುಗಳನ್ನೆ ದೊಡ್ಡದಾಗಿ ಭಾವಿಸುವುದು ಯೋಗ್ಯವಾದ ಮನೋಭಾವನೆಯಾಗಲೀ ದೃಷ್ಟಿಕೋಣವಾಗಲೀ ಆಗಲಾರದು. ವೈದ್ಯಕೀಯ ಶಿಕ್ಷಣ ಸಂಸ್ಥೆಯು ಮಂಗಳೂರಿಗೆ ಇಡಿಯಾಗಿ ವರ್ಗಾವಣೆ ಹೊಂದುವುದನ್ನು ಎಷ್ಟು ಮಾತ್ರಕ್ಕೂ ಆಕ್ಷೇಪಿಸದೆ, ಅದರಿಂದ ಸಂತೋಷಭರಿತರಾಗಿರುವ ಮಂಗಳೂರಿನ ಮಹನೀಯರೆಲ್ಲರೂ ಡಾ. ಪೈಗಳ ನಿಸ್ಪೃಹತೆಯನ್ನು ಮೆಚ್ಚಿ, ಅವರನ್ನು ಅಭಿನಂದಿಸಬೇಕಾಗಿದೆ. ನಾವು ಒಂದೇ ಜಿಲ್ಲೆಯವರಾಗಿದ್ದೂ ಸಹೋದರರಾಗಿದ್ದೂ, ಜಿಲ್ಲೆಯ ಸಮಷ್ಟಿ ಶ್ರೇಯಸ್ಸನ್ನು ಬಯಸದೆ, ವಿಷಯದ ಯೋಗ್ಯತೆ ಮತ್ತು ಸಾಧಕ-ಬಾಧಕಾಂಶಗಳ ತುಲನೆ ಮಾಡದೆ ಒಣಹಠ ಮತ್ತು ಟೀಕೆಗಳಲ್ಲಿ ಇನ್ನು ಮುಂದೆಯೂ ನಿರತರಾದರೆ ಈ ಜಿಲ್ಲೆ ಇಷ್ಟು ಮುಂದರಿದದ್ದೆಂದು ಗಳಿಸಿರುವ ಖ್ಯಾತಿಗೆ ಭಾವಿ ಕರ್ನಾಟಕದಲ್ಲಿ ಏನು ಬೆಲೆ ಬಂದೀತು? ಮನಸ್ಸು ದೊಡ್ಡದಾಗದೆ ನಮ್ಮ ಯಾವ ಸಾಧನೆಯೂ ದೊಡ್ಡದಾಗದು.

ರಾಜ್ಯಗಳ ಪುನಾರಚನೆಯ ಪ್ರಶ್ನೆ

ಪರಿಶೀಲಕ ಸಮಿತಿಯ ವರದಿ

ರಾಜ್ಯಗಳ ಪುನಾರಚನೆಯ ಪ್ರಶ್ನೆಯ ಸಂಬಂಧದ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಿ ಕೊಡಲಾಗಿತ್ತಷ್ಟೆ! ಈ ವರದಿಯನ್ನು ಕಳೆದ ಸೋಮವಾರ ಸಂಸತ್ತಿನ ಮುಂದೆ ಗೃಹ ಮಂತ್ರಿ ಪಂಡಿತ ಪಂತರು ಮಂಡಿಸಿದರು. ಈ ವರದಿಯು ಪರೀಕ್ಷಿಸಿದ ಯಾವುದೇ ಪರಿಣಾಮವನ್ನು ಮಾಡದಷ್ಟು ಸೌಮ್ಯವಾಗಿತ್ತು; ಕಾಸರಗೋಡಿನ ಕುರಿತು ಚಕಾರ ಶಬ್ದವನ್ನೂ ಈ ವರದಿ ಎತ್ತಿಲ್ಲ.

ಮುಂಬಯಿ ನಗರ

ಮುಂಬಯಿ ವಿಷಯದಲ್ಲಿ ನೆಹರುಗಳು ಜೂನಿನ ಆದಿ ಭಾಗದಲ್ಲಿ ತಮ್ಮ ಸಾರ್ವಜನಿಕ ಭಾಷಣದಲ್ಲಿ ಏನನ್ನು ಹೇಳಿದ್ದರೋ ಅದೇ ಯೋಗ್ಯವಾದ ನಿರ್ಣಯವೆಂದು ಪರಿಶೀಲಕ ಸಮಿತಿ ಹೇಳಿದೆ. ಆದರೆ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ದೇವಗಿರಿಕರರೂ ಇನ್ನೊಬ್ಬರೂ ಇದಕ್ಕೆ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ಜೋಡಿಸಿದ್ದಾರೆ; ಮತ್ತು ಐದು ವರ್ಷಗಳಷ್ಟು ದೀರ್ಘಕಾಲ ಮುಂಬಯಿಯ ಪ್ರಶ್ನೆಯನ್ನು ಮುಂದೂಡದೆ ಆದಷ್ಟು ಬೇಗನೇ ಮುಂಬಯಿಯು ಮಹಾ ರಾಷ್ಟ್ರದ ಅಂಗವಾಗುವಂತಾಗಬೇಕೆಂದೂ ಏತನ್ಮಧ್ಯೆ ಮಹಾರಾಷ್ಟ್ರ ಸರಕಾರದ ಕಾರ್ಯಾಲಯಗಳನ್ನು ಮುಂಬಯಿಯಲ್ಲಿರಗೊಡಬೇಕೆಂದೂ ಹೇಳಿದ್ದಾರೆ.

ಕಾಸರಗೋಡು ಹೋಯಿತು!

ಈ ಟಿಪ್ಪಣಿಯು ಯಾವ ಮಹತ್ವವನ್ನೂ ಚರ್ಚೆಯ ಕಾಲದಲ್ಲಿ ಪಡೆಯಲಾರದು. ಸರಕಾರವಂತೂ ಇದನ್ನು ಎಷ್ಟು ಮಾತ್ರಕ್ಕೂ ಅನುಮೋದಿಸದು. ಕಾಸರಗೋಡಿನ ಉತ್ತರ ಭಾಗವನ್ನು ಕರ್ನಾಟದಲ್ಲಿ ಇರಗೊಳಿಸಬೇಕೆನ್ನುವ ಕನ್ನಡಿಗರ ಹಂಬಲವು ವಿಷಯದಲ್ಲಿ ಈ ಬಗೆಯ ಟಿಪ್ಪಣಿಗಳನ್ನು ನಮ್ಮ ಜಿಲ್ಲೆಯ ಇಬ್ಬರು ಸದಸ್ಯರು ಪರಿಶೀಲಕ ಸಮಿತಿಯಲ್ಲಿದ್ದರೂ ಸಹ ಬರೆಯದೆ ಹೋಗಿರಲು ಟಿಪ್ಪಣಿಗಳ ನಿರುಪಯುಕ್ತತೆಯೇ ಕಾರಣವಾಗಿರಬಹುದು. ಅಂತೂ ಕಾಸರಗೋಡಿನ ಉತ್ತರ ಭಾಗದ ವಿಷಯದಲ್ಲಿ ಈಗ ಯಾವುದೇ ಆಶೆಯನ್ನು ಕನ್ನಡಿಗರು ಕಟ್ಟಿಕೊಳ್ಳುವುದಕ್ಕೆ ಆಧಾರವಿಲ್ಲ.

ಅರ್ಥಶೂನ್ಯ ಪ್ರಜಾಪ್ರಭುತ್ವ

ಮಸೂದೆಯ ಚರ್ಚೆ ಮುಂದರಿದಾಗ ತಿದ್ದುಪಡಿಯನ್ನು ಮಂಡಿಸಬಹುದೆಂಬುದು ನಿಜ. ಆದರೆ ಕಾಂಗ್ರೆಸಿನ ವರಿಷ್ಠರಿಗೆ ಬೇಡವಾದ ತಿದ್ದುಪಡಿಯನ್ನು ತಂದವರು ಅವರ ಆಗ್ರಹಕ್ಕೆ ಪಾತ್ರರಾಗುವುದೂ ಆ ತಿದ್ದುಪಡಿಯು ಕಾಂಗ್ರೆಸಿನ ವರಿಷ್ಠರೇ ಮಹತ್ವದ ಪಾತ್ರ ವಹಿಸುವ ಸಂಸತ್ತಿನಲ್ಲಿ ಬಿದ್ದು ಹೋಗುವುದೂ ತೀರ ಸ್ಪಷ್ಟವಾದ ವಿಚಾರ. ಹೀಗೆ ಭಾರತ ಸರಕಾರವು ಪ್ರಜಾಪ್ರಭುತ್ವ ಸಿದ್ಧಾಂತವನ್ನು ವಿಕೇಂದ್ರೀಕೃತ ದೃಷ್ಟಿಕೋಣದಿಂದ ನೋಡದೆ ಕೇಂದ್ರದ ಸಂಸತ್ತಿನ ನೆಲೆಯಿಂದಲೇ ನೋಡಿ, ಕಾಸರಗೋಡಿನ ಎರಡು ಲಕ್ಷ ಕನ್ನಡಿಗರ ಆಶೋತ್ತರಗಳನ್ನು ಮಣ್ಣುಗೂಡಿಸಿದಂತಾಗಿದೆ ಎನ್ನಬಹುದು.

ವಿಫಲ ಸಂಧಾನ

ಕಾಸರಗೋಡಿನ ಕುರಿತು ಕೇರಳದ ಧುರೀಣರೊಡನೆ ಕನ್ನಡದ ಧುರೀಣರು ಮಾತುಕತೆ ನಡೆಸಿದರು. ಆದರೆ ಬೆಳಗಾಂವಿ ಮತ್ತಿತರ ಪ್ರದೇಶಗಳನ್ನು ಕನ್ನಡಿಗರಿಂದ ಮರಳಿ ಪಡೆಯಲು ಮಹಾರಾಷ್ಟ್ರೀಯರು ನಡೆಸಿದ ಮಾತುಕತೆಗಳು ಹೇಗೆ ವಿಫಲವಾದವೋ ತದ್ರೀತಿ ಕಾಸರಗೋಡಿನ ಉತ್ತರ ಭಾಗವನ್ನು ಕೇರಳೀಯರಿಂದ ಪಾಸವಾಗಿ ಪಡೆಯುವ ಸಂಧಾನವೂ ಅಯಶಸ್ವಿಯಾಗಿದೆ. ಪರಿಶೀಲಕ ಸಮಿತಿಯ ಅಧ್ಯಕ್ಷರಾಗಿದ್ದ ಗೃಹ ಮಂತ್ರಿಗಳು ಪರಸ್ಪರ ಸಮ್ಮತವಲ್ಲದ ಯಾವುದೇ ತಿದ್ದುಪಡಿಯನ್ನು ಮಾಡಲು ಸಿದ್ಧರಿಲ್ಲದಿದ್ದುದರಿಂದ ಕಾಸರಗೋಡಿನ ಕನ್ನಡಿಗರ ನ್ಯಾಯವಾದ ಬೇಡಿಕೆಯು ತಿರಸ್ಕೃತವಾಗುವಂತಾಯಿತು!

ಇತರ ವಿಷಯಗಳು

ಪರಿಶೀಲಕ ಸಮಿತಿಯು ಮಾಡಿದ ತಿದ್ದುಪಡಿಗಳಲ್ಲಿ ಮಹತ್ವದ್ದೆಂದು ಏನಾದರೂ ಹೇಳಬಹುದಾದರೆ, ಅದು ಹೈಕೋರ್ಟುಗಳ ನ್ಯಾಯಾಧೀಶರ ಸಂಬಳ ಮಟ್ಟದಲ್ಲಿ ವ್ಯತ್ಯಾಸವಿರಬಾರದು ಎಂಬ ವಿಷಯ ಮಾತ್ರ. ಮೈಸೂರು ಮತ್ತಿತರ ಕೆಲವು ರಾಜ್ಯಗಳ ಹೈಕೋರ್ಟು ನ್ಯಾಯಾಧೀಶರಿಗೆ ಕಡಿಮೆ ಸಂಬಳ ಸಿಗುವಂತೆ ಮೂಲ ಮಸೂದೆಯಲ್ಲಿ ಹೇಳಲಾಗಿದ್ದಿತು. ಈ ರೀತಿ ವ್ಯತ್ಯಾಸವಿರಬಾರದೆಂದು ಪರಿಶೀಲಕ ಸಮಿತಿ ತಿದ್ದುಪಡಿ ಮಾಡಿದೆ. ಬೀದರ ಜಿಲ್ಲೆಯ ಸಂಬಂಧದಲ್ಲಿ ಆಂಧ್ರ ಮತ್ತು ಮೈಸೂರುಗಳ ಗಡಿಯಲ್ಲಿ ಸ್ವಲ್ಪ ಹೆಚ್ಚುಕಡಿಮೆ ಮಾಡಿದೆ. ಆಂಧ್ರ—ತೆಲಂಗಾಣ ಎನ್ನುವ ಬದಲು ಆಂಧ್ರರಾಜ್ಯವೆಂದೇ ಕರೆಯಬೇಕೆಂದಿದೆ. ಮೈಸೂರೆಂಬ ಬದಲು ಕರ್ನಾಟಕವೆಂದೇ ಹೊಸ ಕನ್ನಡ ರಾಜ್ಯವನ್ನು ಕರೆಯುವ ಸಂಬಂಧದಲ್ಲಿ ಭಿನ್ನಾಭಿಪ್ರಾಯದ ಟಿಪ್ಪಣಿಯೊಂದು ಕನ್ನಡಿಗರಲ್ಲದ ಇಬ್ಬರಿಂದ ಜೋಡಿಸಲ್ಪಟ್ಟಿದೆ. ಆದರೆ ಈ ಟಿಪ್ಪಣಿಯೂ ಉಪೇಕ್ಷಿಸಲ್ಪಡುವುದು ನಿಶ್ಚಯ. ಇನ್ನುಮುಂದೆ ರಾಜ್ಯಗಳ ಪುನಾರಚನೆಯ ಪ್ರಶ್ನೆಯಲ್ಲಿ ಆಸಕ್ತಿಯುಳ್ಳವರು ೨೦ನೇ ದಿನಾಂಕದಂದು ತೊಡಗಲಿರುವ ಮಸೂದೆಯ ಮೇಲಿನ ಚರ್ಚೆಯನ್ನು ನಿರೀಕ್ಷಿಸುತ್ತಿರುವುದೊಳ್ಳೆಯದು. ಆಗ ನೆಹರು ಭಾರತಕ್ಕೆ ಮರಳಿ ಬಂದಿರುತ್ತಾರೆ. ಅವರ ವ್ಯಕ್ತಿತ್ವದ ಮಂತ್ರಶಕ್ತಿಯ ಮುಂದೆ ಯಾವ ಆಟವೂ ನಡೆಯದು.

— ——

ಉಡುಪಿ

ಮುನಿಸಿಪಲ್ ಕೌನ್ಸಿಲು ಸಭೆಯು— ತಾ. 14ರಲ್ಲಿ ವೈಸ್ ಚೇರ್‌ಮನ್ ಶ್ರೀ ಪಿ. ವಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಆರಂಭದಲ್ಲಿ, ಕುಂಜಿಬೆಟ್ಟಿನ ಮುನಿಸಿಪಲ್ ಮಾರ್ಕೆಟ್ ಕಟ್ಟಡದ ದುರಂತ ಕೊಳಗಾದ ಇಬ್ಬರು ಹುಡುಗಿಯರ ನಿಧನದ ಬಗ್ಗೆ ಸಂತಾಪಸೂಚಕ ನಿರ್ಣಯವಾಯಿತು. ಬಳಿಕ ಶ್ರೀ ಬಿ. ವಾಸುದೇವ ರಾಯರ ಪ್ರಶ್ನೆಗಳಿಗೆ ಉತ್ತರಕೊಡಲಾಯಿತು. ಸರಕಾರವು ಎಲ್ಲಾ ವೆಚ್ಚವನ್ನು ವಹಿಸಿಕೊಂಡು ಉಡುಪಿ ಕ್ಷೇತ್ರದಲ್ಲಿ ವೆಟರ್ನರಿ ಆಸ್ಪತ್ರೆಯನ್ನು ತೆರೆಯುವುದಾದರೆ, ನಗರ ಸಭೆಯು ಅದನ್ನು ಸ್ವಾಗತಿಸುತ್ತದೆ. ಆಫೀಸು ಕಟ್ಟಡದ ಮತ್ತು ಕಿನ್ನಿಮೂಲ್ಕಿ ಎಲಿಮೆಂಟರಿ ಶಾಲಾಕಟ್ಟಡದ ನಿರ್ಮಾಣಕ್ಕೆ ನಗರಸಭೆಯು ಕಿಂಚಿತ್ ಹಣ ಕೊಡುವುದು, ಅದನ್ನು ಸ್ವೀಕರಿಸಿ, ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಆ ಎರಡೂ ಕೆಲಸಗಳು ಪೂರ್ಣವಾಗಬೇಕು. ಉಡುಪಿಯಲ್ಲಿ ಪ್ರವಾಸಿಗಳು ತಂಗುವ ಕಟ್ಟಡವನ್ನು ಸರಕಾರವೇ ಕಟ್ಟಿಸಬೇಕು ಎಂದು ಜಿಲ್ಲಾ ಕಲೆಕ್ಟರರನ್ನು ವಿನಂತಿಸಲಾಯಿತು.

ವಸ್ತ್ರ ಹಾಗೂ ಪುಸ್ತಕ ವಿತರಣೆ— ಕಾಡಬೆಟ್ಟು ಮೋದರ್ನ್ ಹಾ. ಪ್ರಾ. ಶಾಲೆಯಲ್ಲಿ ತಾ. 15ರಲ್ಲು ಆ ಶಾಲೆಯ ಬಡ ವಿದ್ಯಾರ್ಥಿಗಳಿಗೆ ವಸ್ತ್ರ ಹಾಗೂ ಪುಸ್ತಕಗಳನ್ನು ಹಂಚುವ ಸಮಾರಂಭವು ಡಾ. ಕೊಚ್ಚಿಕಾರ್ ಮೋಹನ್ ದಾಸ್ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತಮಾತುಗಳನ್ನಾಡಿದರು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ. ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಬಂಟ್ವಾಳ ವೆಂಕಪ್ಪಯ್ಯ, ಹರಿಜನ ವೆಲ್‌ಫೇರ್ ಆಫೀಸರ್ ಎ. ಜೆ. ಆಳ್ವ, ಮೊದಲಾದವರು ಶುಭಾಶೀರ್ವಾದಮಾತುಗಳನ್ನಾಡಿ ಈ ಕಾರ್ಯ ಸ್ತುತ್ಯವೆಂದರು. ಶ್ರೀಮತಿ ಕೊಚ್ಚಿಕಾರ್ ಮೋಹನ್‌ದಾಸ್ ಪೈಗಳು ವಸ್ತ್ರ ಹಾಗೂ ಪುಸ್ತಕಗಳನ್ನು ವಿತರಣೆಮಾಡಿದರು. ಸಭಾಧ್ಯಕ್ಷರು ಈ ಶಾಲೆಯ ಮಾದರಿ ಇತರ ಶಾಲೆಗಳಲ್ಲೂ ಉಂಟಾದರೆ ಹೆಚ್ಚಿನ ಬಡ ಮಕ್ಕಳಿಗೆ ವಿದ್ಯಾರ್ಜನೆ ಮಾಡಲು ಅನುಕೂಲವಾದೀತೆಂದು ಹೇಳಿದರು. ಹೆಡ್ಮಾಸ್ಟರ್ ಶ್ರೀ ಲಕ್ಷ್ಮೀನಾರಾಯಣ ಭಟ್ಟರು ಧನ್ಯವಾದಗಳನ್ನಿತ್ತರು.

ಉಡುಪಿಗೊಂದು ಹೊಸ ಪುಸ್ತಕ ಭಂಡಾರ— ಎಕೆಡೆಮಿ ಓಫ್ ಜನರಲ್ ಎಜುಕೇಶನಿನ ನೇತೃತ್ವದಲ್ಲಿ ಡಾ. ಟಿ. ಎಮ್. ಎ. ಪೈಗಳು ಉಡುಪಿಯಲ್ಲಿ ಸಾರ್ವಜನೋಪಯೋಗೀ ಸ್ವರೂಪದ ದೊಡ್ಡ ಲೈಬ್ರೆರಿಯೊಂದನ್ನು ಬೇಗನೆ ತೆರೆಯಲಿರುವರು. ಅದರಲ್ಲಿ ಎಲ್ಲಾ ಭಾಷೆಯ ಅತ್ಯುಪಯೋಗೀ ಪುಸ್ತಕಗಳನ್ನು ಸಂಗ್ರಹಿಸುವ ಯೋಜನೆಯಿದೆ. ವಾಚನಾಭಿರುಚಿಯು ಹೆಚ್ಚಿರುವ ಈ ಕಾಲದಲ್ಲಿ ಈ ಯೋಜನೆಯು ಅತ್ಯಂತ ಸ್ವಾಗತೀಯವಿದೆ. ಎಷ್ಟೋ ಮನೆಯವರಲ್ಲಿ ತಮಗೆ ಉಪಯೋಗವಿಲ್ಲದ ಹಳೆಯ ಉದ್ಗ್ರಂಥಗಳು ಇರುತ್ತವೆ. ಅಂತಹ ಗ್ರಂಥಗಳನ್ನು ಈ ಲೈಬ್ರೆರಿಗೆ ಕೊಟ್ಟರೆ ಸ್ವೀಕರಿಸಲಾಗುವುದು. ಈಗಾಗಲೇ ನಿವೃತ್ತ ಜಿಲ್ಲಾ ಮತ್ತು ಸೆಸ್ಸನ್ಸ್ ಜಡ್ಜರಾದ ಶ್ರೀ ಬಿ. ಎಚ್. ಎನ್. ಪೈಗಳೇ ಮೊದಲಾದವರು ನೂರಾರು ಉತ್ತಮ ಪುಸ್ತಕಗಳನ್ನು ಕೊಟ್ಟಿರುತ್ತಾರಾಗಿ ತಿಳಿಯಬರುತ್ತದೆ.

ಕಲಾವೃಂದದ ಹುಟ್ಟು ಹಬ್ಬವು— ತಾ. 13 ಮತ್ತು 14ರಲ್ಲು ಪರ್ಯಾಯ ಅದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರ ಮತ್ತು ಫಲಿಮಾರು ಮಠದ ಶ್ರೀ ರಘುವಲ್ಲಭತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ನಗರಸಭಾಧ್ಯಕ್ಷ ಶ್ರೀ ಕೆ. ಕೆ. ಪೈಗಳು ಸಭಾಧಿವೇಶನವನ್ನು ಉದ್ಘಾಟಿಸಿದರು. ಶ್ರೀಗಳಾದ ನರಸಿಂಹಯ್ಯ, ಗುರುರಾಜ ಭಟ್ಟ, ಬನ್ನಂಜೆ ರಾಮಾಚಾರ್ ಮೊದಲಾದವರ ಭಾಷಣಗಳಾದುವು. ಆರಂಭದಲ್ಲಿ ಶ್ರೀ ಪರಿವಾಸ ಉಪಾಧ್ಯಾಯರಿಂದ ಸ್ವಾಗತಮಾತುಗಳಾದುವು.

ವಿವಾಹ ಸಮಾರಂಭ—ಶ್ರೀ ಅಲಂಗಾರು ಶಿವರಾಮ ಹೆಗ್ಡೆಯರ ಪುತ್ರಿ ಶ್ರೀಮತಿ ಲೀಲಾಳನ್ನು ದಿ. ಅಲ್ತಾರು ನರಸಿಂಹ ಶೆಟ್ಟಿ ಪುತ್ರ ಶ್ರೀ ನಾರಾಯಣ ಶೆಟ್ಟರು ತಾ. 13 ರಂದು ಶ್ರೀ ನರನೇಂದ್ರ ಕಲಾಮಂದಿರದಲ್ಲಿ ವಿಜೃಂಭಣೆಯಿಂದ ವಿವಾಹವಾದರು.

ಲಂಡನಿನಲ್ಲಿ ಸಹರಾಷ್ಟ್ರಗಳ ಸಮ್ಮೇಳನ

ಸಹರಾಷ್ಟ್ರಗಳ (ಕಾಮನ್ ವೆಲ್ತ್ ನೇಶನ್ಸ್) ಸಮ್ಮೇಳನವು ಲಂಡನಿನಲ್ಲಿ ಈಚೆಗೆ ಜರಗಿದಾಗ ಅದರಲ್ಲಿ ಭಾಗವಹಿಸಿದ ಒಂಭತ್ತು ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಚಿತ್ರದಲ್ಲಿ ನೋಡಬಹುದು.

(ಎಡದಿಂದ ಬಲಕ್ಕೆ ಅನುಕ್ರಮವಾಗಿ) ಬಂಡಾರನಾಯಕೆ (ಸಿಂಹಳ), ನೆಹರು (ಭಾರತ), ಹೊಲ್ಲೆಂಡ್ (ನ್ಯೂಜಿಲೆಂಡ್), ಸೈಂಟ್ ಲಾರೆನ್ಸ್ (ಕೆನಡ), ಸರ್ ಆಂಥನಿ ಈಡನ್ (ಬ್ರಿಟನ್), ಮೆಂಜಿಸ್ (ಆಸ್ಟ್ರೇಲಿಯ), ಸ್ಟ್ರೈಜೊಮ್ (ದಕ್ಷಿಣ ಆಫ್ರಿಕ), ಮಹಮ್ಮದಾಲಿ (ಪಾಕಿಸ್ತಾನ) ಮತ್ತು ಹಗ್ಗಿನ್ಸ್ (ಮಧ್ಯ ಆಫ್ರಿಕ).

ಪುತ್ತೂರು— ಮೈಸೂರಿನ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಾ. 7ರಂದು ಬೆಳಗ್ಗೆ ಪುತ್ತೂರಿಗೆ ಆಗಮಿಸಿದಾಗ ಅವರಿಗೆ ಸ್ಥಳೀಯ ಸ್ಯೆಂಟ್ ವಿಕ್ಟರ್ಸ್ ಹೆಮ್ಮಕ್ಕಳ ಹ್ಯಾಸ್ಕೂಲಲ್ಲಿ ಸ್ವಾಗತ ನೀಡಲಾಯಿತು. ಶ್ರೀಗಳಾದ ಕೆ. ವೆಂಕಟ್ರಮಣ ಗೌಡ, ಎಮ್. ಎಲ್. ಎ. ಸರ್ಕಲ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಬಿ. ವಿಠಲದಾಸ ಸೆಟ್ಟಿ, ಜಿಲ್ಲಾ ಬೋರ್ಡು ಸದಸ್ಯ ವೈ. ಸಂಜೀವ ಶೆಣೈ, ಪಂಚಾಯತ ಬೋರ್ಡು ಅಧ್ಯಕ್ಷ ಬಿ. ಚಿದಾನಂದ ರಾವ್, ರೆ. ಫಾ. ಪತ್ರಾವೋ ಕುಮಾರಿ ಫೆರ್ನಾಂಡೀಸ್ ಮೊದಲಾದವರನ್ನು ಮಂತ್ರಿಗಳಿಗೆ ಪರಿಚಯ ಮಾಡಿಕೊಡಲಾಯಿತು. ಬಳಿಕ ಜರಗಿದ ಸಭೆಯಲ್ಲಿ ಶ್ರೀ ಎ. ಭೀಮ ಭಟ್ಟರು ಸ್ವಾಗತಮಾತುಗಳನ್ನಾಡಿ ಮಾನಪತ್ರವನ್ನರ್ಪಿಸಿದರು. ಮಂತ್ರಿಗಳು ಉತ್ತರಿಸುತ್ತಾ, ಹೊಸ ರಾಜ್ಯದಲ್ಲಿ ಎಲ್ಲರೂ ಒಕ್ಕಟ್ಟಿನಿಂದ, ಸೌಹಾರ್ದದಿಂದ ಜನಜೀವನ ನಡೆಸುವಂತಾಗಬೇಕೆಂದು ಆಶಿಸಿದರು. ಶ್ರೀ ವಿಠಲದಾಸ ಸೆಟ್ಟಿರು ವಂದನೆಗಳನ್ನರ್ಪಿಸಿದರು.

ಪುತ್ತೂರು ಸರ್ಕಲ್ ಕಾಂಗ್ರೆಸ್ ಸಮಿತಿಯ ಕಾರ್ಯಕಾರೀ ಮಂಡಳಿಯ ಸಭೆಯು ತಾ. 15ರಂದು ಶ್ರೀ ವಿಠಲದಾಸ ಶೆಟ್ರ ಅಧ್ಯಕ್ಷತೆಯಲ್ಲಿ ನೆರವೇರಿ ಹಲವು ವಿಷಯಗಳನ್ನು ಚರ್ಚಿಸಿದ ಬಳಿಕ ಮುಂದಿನ ಸಭೆಯನ್ನು ಬೆಳ್ಳಾರೆಯಲ್ಲಿ 29ಕ್ಕೆ ಜರಗಿಸಬೇಕೆಂದಾಯಿತು.

ಹಿರಿಯಡಕ— ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ಶಾಲಾ ನಾಯಕರಾಗಿ ಶ್ರೀ ಕೆ. ಚಂದ್ರಶೇಖರ ಹೆಗ್ಡೆ ಮತ್ತು ಉಪನಾಯಕರಾಗಿ ಶ್ರೀ ಕೆ. ಎಮ್. ಶಶಿಧರ ಹೆಗ್ಡೆಯವರು ಆರಿಸಲ್ಪಟ್ಟಿರುವರು.

ಪೇತ್ರಿ— ತಾ. 7ರಲ್ಲಿ ಡಾ. ಎ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ವನಮಹೋತ್ಸವವು ಶಾಲಾ ಮಕ್ಕಳ ಮೆರವಣಿಗೆ, ಹೆಲ್ತ್ ಇನ್ಸ್‌ಪೆಕ್ಟರ್ ಶ್ರೀ ಕೆ. ನಾರಾಯಣರವರಿಂದ ತೆಂಗಿನ ಸಸಿ ನೆಡುವಿಕೆ ಶ್ರೀ ಬಿ. ರಾಮಣ್ಣ ಸೆಟ್ಟಿ ಮೊದಲಾದವರ ಭಾಷಣಗಳೊಡನೆ ಆಚರಿಸಲ್ಪಟ್ಟಿತು.

ಮುಂಡ್ಕೂರು— ಪೋಸ್ಟ್ರಲ್ ಎಯಿಡೆಡ್ ಹಾ. ಎ. ಶಾಲೆಯ ಆರನೆ ತರಗತಿಯನ್ನು ತಾ. 6ರಲ್ಲಿ ಮಂಗಳೂರು ಎಡ್ವೋಕೇಟ್ ಶ್ರೀ ಬಿ. ಬಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವೈ. ಗೋಪಾಲ್, ಅವರು ಉದ್ಘಾಟಿಸಿದರು. ಶ್ರೀಗಳಾದ ಎಮ್ ವೆಂಕಣ್ಣ ಸೆಟ್ಟಿ, ಕೆ. ನಾರಾಯಣ ಸೆಟ್ಟಿ ಮೊದಲಾದವರು ಶಾಲಾ ಶ್ರೇಯಸ್ಸನ್ನು ಬಯಸಿ ಮಾತನಾಡಿದರು. ಶಾಲಾ ಕಮಿಟಿ ಉಪಾಧ್ಯಕ್ಷ ಶ್ರೀ ಕೆ. ಪಿ. ಭೋಜ ಸೆಟ್ಟರು ಧನ್ಯವಾದಗಳನ್ನಿತ್ತರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 129/1956.

1. ಸುಂದರಿ ಯಾನೆ ಸೀತಾ ಬಾಯಿ, 2. ಕೆ. ನಾಗೇಶ ಶೆಣೈ } ಅರ್ಜಿದಾರರು

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ.

1ನೇ ಅರ್ಜಿದಾರಳ ಗಂಡನ 2ನೇ ಅರ್ಜಿದಾರನ ತಂದೆ ತಾ. 26—5—1941ರಲ್ಲು ಮೃತಪಟ್ಟ ಕಟಪಾಡಿ ರಾಮನಾಥ ಶ್ಯಾನುಭಾಗರು ದಿ. ಬೊಂಬಾಯಿ ಮ್ಯುಚುವಲ್ ಲೈಫ್ ಎಶ್ಯುರೆನ್ಸ್ ಸೊಸ್ಯಾಟಿ ಲಿಮಿಟೆಡ್ ಬೊಂಬಾಯಿ ಈ ಕಂಪೆನಿಯಲ್ಲಿ ಪಡೆದ ನಂಬ್ರ 91143 ನೇ ಪೋಲಿಸಿ ಬಾಬ್ತು ಅರ್ಜಿದಾರರಿಗೆ ಸದ್ರಿ ಕಂಪೆನಿಯಿಂದ ಬರಬೇಕಾದ ಹಣದ ವಸೂಲಿ ಬಗ್ಗೆ 2ನೇ ಅರ್ಜಿದಾರನಿಗೆ ವಾರೀಸು ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಖಲುಮಾಡಿದ ಮೇಲ್ಕಂಡ ಅರ್ಜಿಯು ತಾ 23—8 . 56 ರಲ್ಲು ಇಡೋಣಾಗಿಯದೆ, ಆ ಕುರಿತು ಆಕ್ಷೇಪಇದ್ದವರು ಸದ್ರಿ ತನಖಿ ದಿನ ಹಗಲು ಗಂಟೆ 11ಕ್ಕೆ ಮೇಲ್ಕಂಡ ಕೋರ್ಟುಮುಂದೆ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು.

(By order of the court)

K. Varadaraya Pai.

Advocate for Petitioners.

ಉಡುಪಿ ತಾ. 16—7—1956.

ಪಾದ ಯಾತ್ರಿಕ

ಶ್ರೀ ಸೊಹ್ರಾಬ್‌ಜೀ ಕವಾಸ್ಜಿ ಮೇಧೋರ್

ಶ್ರೀಯುತರು ಹೃದಂಬಾಬಾದಿನ ಮಾಜಿ ಸರ್ವೇಯರಾಗಿದ್ದು ತಾ. 26—1—56ರಿಂದ ದಕ್ಷಿಣ ಭಾರತದ ಪಾದಯಾತ್ರೆಯನ್ನು ಕೈಕೊಂಡು ಮೈಸೂರು, ಬೆಂಗಳೂರು, ಕೊಡಗು ಪುತ್ತೂರು, ಕಲ್ಲಿಕೋಟೆ, ಮಂಗಳೂರು ಮೊದಲಾದ ಹಲವು ಕಡೆಗಳಲ್ಲಿ ಸಂಚರಿಸಿ ತಾ. 12ರಂದು ಉಡುಪಿಗೆ ಬಂದಿರುತ್ತಾರೆ. ಇಷ್ಟರಲ್ಲೇ ಇವರು 8,000 ಮೈಲುಗಳಿಗೂ ಮಿಕ್ಕಿ ಸಂಚರಿಸಿರುವರೆಂದು ತಿಳಿದು ಬರುತ್ತದೆ. ಇವರು ಈ ಮೊದಲು ಸರ್ವೆ ಇಲಾಖೆಯವರ ಸಂಕಷ್ಟಗಳನ್ನು ನಿವೇದಿಸಲು ಪಾದಚಾರಿಯಾಗಿಯೇ ಡಿಲ್ಲಿಗೆ ಹೋಗಿದ್ದರೆಂದೂ, ಇವರಿಗೆ ಹಲವು ಭಾಷೆಗಳು ಬರುತ್ತವೆಂದೂ ತಿಳಿದು ಬರುತ್ತದೆ. ಪರಸ್ಪರ ತಿಳುವಳಿಕೆ ಮತ್ತು ಸೌಹಾರ್ದ ಬೆಳೆಸಿ, ಭೇದಭಾವವನ್ನು ನೀಗಿಸುವುದೇ ಪಾದಯಾತ್ರೆಯ ಉದ್ದೇಶವೆಂದೂ ಮುಂದಕ್ಕೆ ಒಂದು ಪ್ರವಾಸ ಗ್ರಂಥವನ್ನು ಬರೆಯಲಿರುವರೆಂದೂ ಹೇಳುತ್ತಾರೆ. ಶ್ರೀಯುತರು ಉಡುಪಿಯಲ್ಲಿ ಎರಡು ಮೂರು ದಿನವಿದ್ದು ಕುಂದಾಪುರಕ್ಕೆ ಹೋಗಿ, ಅಲ್ಲಿಂದ ಮಂಗಳೂರಿಗೂ, ಬೊರಿನೂರಿಗೂ ತೆರಳಲಿರುವರು. ಇವರ ಪ್ರಾಯ 42 ವರ್ಷ.

ಕೊಕ್ಕರ್ಣೆ— ಇಲ್ಲಿನ ಪಂಚಾಯತ ಬೋರ್ಡಿನ ಸಭೆಯು ಅಧ್ಯಕ್ಷ ಶ್ರೀ ಕೃಷ್ಣರಾಯ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ಕೆಂಜೂರು, ಕುದಿ ಮತ್ತು ಪೆಜಮಂಗೂರು ಗ್ರಾಮಗಳ ರಸ್ತೆ ದುರುಸ್ತಿ ಬಗ್ಗೆ ರೂಪಾಯಿ 1065/- ವೆಚ್ಚ ಮಂಜೂರುಮಾಡಲಾಯಿತು.

ಅಲೆವೂರು— ಇಲ್ಲಿಯ ನದಿಯ ಸಮೀಪದಲ್ಲಿ ಶ್ರೀ ಕಲ್ಮಂಜೆ ಶ್ರೀನಿವಾಸ ಆಚಾರ್ಯರು ನಿರ್ಮಿಸುತ್ತಿರುವ ಬಸ್ ನಿಲ್ದಾಣದ ಶಂಕುಸ್ಥಾಪನೆಯನ್ನು ಶ್ರೀ ಬಾಳ್ಕಟ್ಟಬೀಡು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಯವರು ತಾ. 15ರಂದು ನೆರವೇರಿಸಿದರು. ಶ್ರೀಗಳಾದ ಬನ್ನಂಜೆ ರಾಮಾಚಾರ್ಯ, ಎ. ಜೆ. ಅಳ್ವೆಯವರು ಭಾಷಣವಿತ್ತರು. ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಹಳ್ಳಿಗಳ ಅಭಿವೃದ್ಧಿಯು ಮುಖ್ಯವೆಂದೂ, ಕೃಷಿಕ ಬಂಧುಗಳು ಇದರ ಲಾಭವನ್ನು ಪಡೆದು ಕೃಷಿಯುತ್ಪಾದನೆಯನ್ನು ಹೆಚ್ಚಿಸಬೇಕೆಂದೂ, ಎಂದು ಮುಂತಾಗಿ ಶ್ರೀ ಪೈಗಳು ಹೇಳಿದರು. ಶ್ರೀ ಶಾಂತಿಯವರು ಆಭಾರ ಸೂಚಿಸಿದರು.

ಪುಲ್ಪೆ— ತಾ. 11ರಲ್ಲಿ ವನಮಹೋತ್ಸವ ಹಾಗೂ ಗೊಬ್ಬರ ದಿನಾಚರಣೆಯು ಫಿಶರೀಸ್ ಹ್ಯಾಸ್ಕೂಲಿನಲ್ಲಿ ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ ಯಸ್. ಅಮೀನ್ ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎ. ಸುಬ್ರಾಯ ಆಳ್ವೆಯವರು ಸಂದರ್ಭೋಚಿತ ಭಾಷಣಮಾಡಿದರು.

ಶ್ರೀ ತಾರಾನಾಥ ಶೆಣೈಯವರು ಸ್ಥಳೀಯ ಫಿಶರೀಸ್ ಹ್ಯಸ್ಕೂಲಿನ ಶಾಲಾ ಮುಖಂಡನಾಗಿ ಆರಿಸಲ್ಪಟ್ಟಿರುವರು.

ಮಂಜೇಶ್ವರ— ಸ್ಥಳೀಯ ಗೀತಾಮಂದಿರದ ಸದಸ್ಯರ ಸಭೆಯು ಈಚೆಗೆ ಜರಗಿ ಶ್ರೀ ಉಪೇಂದ್ರ ಅನಂತ ಪೈಗಳು ಅಧ್ಯಕ್ಷರಾಗಿಯೂ ಶ್ರೀಗಳಾದ ಆರ್. ಎಸ್. ಕಿಣಿ ಮತ್ತು ರಾಮದಾಸ ಕಿಣಿಯವರು ಜತೆ ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಟಿ. ವಿಠಲ ಪೈ, ಪಾಂಡುರಂಗ ಪೈ, ಡಿ. ಜೆ. ಗಾಡಿಯಾ, ಪಿ. ಸೀತಾರಾಮ ನಾಯಕ್, ಚಮನ್‌ಲಾಲ್ ಪಶಿನ್, ಸುದರ್ಶನ ಹೆಗ್ಡೆ, ಬಿ. ಕೃಷ್ಣಯ್ಯ, ಎಸ್. ಕೆ. ಕುಡ್ವ, ಶಂಕರನಾರಾಯಣನ್, ಶ್ರೀಮತಿಯರಾದ ಪ್ರೇಮಾ ಎ. ಪೈ ಮತ್ತು ಟಿ. ರಮಾ ಬಾಯಿಯವರು ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟರು. ಹಬ್ಬ ದಿನಗಳನ್ನು ಆಚರಿಸುವುದು, ಭಾಷಣಗಳನ್ನೇರ್ಪಡಿಸುವುದು ಇತ್ಯಾದಿ ಕಾರ್ಯಕ್ರಮಗಳನ್ನು ಗೊತ್ತುಮಾಡಲಾಯಿತು.

ತಾ 15ರಂದು ಗೀತಾ ಮಂದಿರದಲ್ಲಿ 'ಸುಖದ ದಾರಿ ಯಾವುದು' ಎಂಬ ಕುರಿತು ಶ್ರೀಗಳಾದ ಬಿ. ಅಚ್ಯುತ ಪೈ, ಜೆ. ಡಿ. ಗಾಡಿಯಾ, ಆರ್. ಎಸ್. ಕಿಣಿ, ಉ. ಲಕ್ಷ್ಮೀನಾರಾಯಣ ಕಿಣಿ ಮೊದಲಾದವರು ಭಾಷಣ ಮಾಡಿದರು ಪ್ರತಿ ಆದಿತ್ಯವಾರವೂ ಭಾಷಣವಿದ್ದು ಸರ್ವರಿಗೂ ಸ್ವಾಗತವಿದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಹರಿಜನ ವಿದ್ಯಾರ್ಥಿ ಭವನದ ಉದ್ಘಾಟನೆ.

ಮಣಿಪಾಲದ ವಿವೇಕಾನಂದ ವಿದ್ಯಾರ್ಥಿ ಭವನದ ಹೊಸ ಕಟ್ಟಡವನ್ನು ತಾ. 15ರಲ್ಲು ಜಿಲ್ಲಾ ಹರಿಜನ ಸೇವಕ ಸಂಘದ ಹಾಗೂ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ. ಯು ಪಿ. ಮಲ್ಯರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ವಕೀಲ್ ಶ್ರೀ ಕೆ. ಜೆ. ಬಲ್ಲಾಳರು ವಹಿಸಿದ್ದರು. ಪ್ರಾರ್ಥನಾನಂತರ ಭವನದ ಕರ್ತೃಗಳಾದ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಭವನದ ಇತಿಹಾಸವನ್ನು ವಿವರಿಸಿ ಭವನದ ವಿದ್ಯಾರ್ಥಿಗಳಲ್ಲಿರಬೇಕಾದ ಶಿಸ್ತು ಮೊದಲಾದ ವಿಷಯಗಳನ್ನೆತ್ತಿ ಮಾತನಾಡಿದರು. ಡಾ. ಯು. ಪಿ. ಮಲ್ಯರು ಹರಿಜನೋದ್ಧಾರದ ರೀತಿ ನೀತಿಗಳು ಹೇಗಿರಬೇಕೆಂಬುದನ್ನು ವಿವರಿಸಿ ಹರಿಜನ ವಿದ್ಯಾರ್ಥಿಗಳಲ್ಲಿ ಈಗ ಇರತಕ್ಕ ಮನೋಜಾಡ್ಯ ನೀಗಬೇಕಾದ ಸಮಯವೀಗ ಬಂದಿದೆ ಎಂದರು. ಡಾ. ಟಿ. ಮಾಧವ ಪೈಗಳು ಮಾತನಾಡುತ್ತಾ, ಸರಕಾರ ಮತ್ತು ಜನತೆಯು ಹರಿಜನರ ಏಳಿಗೆ ಕುರಿತು ಶ್ರಮಿಸುತ್ತಿರುವಾಗ, ಹರಿಜನರು ಮುಂದೆಮುಂದೆ ಬರಬೇಕೆಂದು ಅಪೇಕ್ಷಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಹರಿಜನೋದ್ಧಾರದ ಕುರಿತು ಮಾತನಾಡುತ್ತಾ, ಹಿಂದಿನ ಮತ್ತು ಈಗಿನ ಜನತೆಯ ಮನೋಮಾರ್ಪಾಟನ್ನು ವಿವರಿಸಿದರಲ್ಲದೆ 1921ರಲ್ಲಿ ತಾನು ವಿದ್ಯಾರ್ಥಿಯಾಗಿದ್ದಾಗ ಹರಿಜನರೇ ಮೊದಲಾದವರಿಗಿದ್ದ ಅಂತರ್ಜಾತೀಯ ಭೋಜನದ ಕುರಿತು ಪ್ರಸ್ತಾಪಿಸಿ ತಾನು ಹಿಂದಿನಿಂದಲೂ ಹರಿಜನೋದ್ಧಾರ ಕಾರ್ಯದಲ್ಲಿ ಕ್ರಾಂತಿಕಾರಕನಾಗಿದ್ದೆನೆಂದರು. ಶ್ರೀ ಬಿ. ಶ್ಯಾಮರಾಯ ಸೆಟ್ಟರು ಭವನದ ವಿದ್ಯಾರ್ಥಿಗಳ ಹೆತ್ತವರ ಆಸೆ, ಭವನದ ವಿದ್ಯಾರ್ಥಿಗಳಲ್ಲಿರಬೇಕಾದ ನಡಾವಳಿಯ ಕುರಿತು ಮಾತನಾಡಿದರು. ಜಿಲ್ಲಾ ಹರಿಜನ ವೆಲ್‌ಫೇರ್ ಆಫೀಸರರು ಭವನದ ಖರ್ಚಿನಿಂದಲೇ ಭವನದ ನಿವಾಸಿಕರಿಗೆ ಎರಡೆರಡು ಜತೆ ಇಜಾರ ಮತ್ತು ಅಂಗಿಯನ್ನು ವಿತರಣೆಮಾಡಿದರು. ಅಧ್ಯಕ್ಷ ಶ್ರೀ ಬಲ್ಲಾಳರು ಮಾತನಾಡುತ್ತಾ, ತಾನು ಅಧ್ಯಕ್ಷನಾಗಿದ್ದಾಗ ಉಡುಪಿಯಲ್ಲಿ ಹಿಂದೆ ಹರಿಜನ ವಿದ್ಯಾರ್ಥಿಭವನ ತೆರೆಯಲು ಕಟ್ಟಡ ಪಡೆಯಲು ಹೇಗೆ ಕಷ್ಟವಿತ್ತೆಂದೂ ಬಳಿಕ ಸ್ಥಾಪಿಸಲಾದ ಭವನದ ಆಡಳಿತೆಯನ್ನು ಶ್ರೀ ನರಹರಿ ಕಾಮತರಿಗೊಪ್ಪಿಸಿತವನಂತರ ಶ್ರೀ ಟಿ. ಎ. ಪೈಗಳ ಯೋಗ್ಯ ಆಡಳಿತಕ್ಕೆ ಆನುಬಂದು ಈಗ ಅಭಿವೃದ್ಧಿ ಹೊಂದುತ್ತಿರುವುದು ಸಂತೋಷಕರವೆಂದರು. ಹರಿಜನರೊಳಗೆ ಇರುವ ಬೇಧಭಾವವು ದೂರವಾಗದಿದ್ದರೆ ಅವರ ಉದ್ಧಾರವಾಗಲಾರದೆಂದೂ ಅಂತೆಯೇ ಹರಿಜನ ದೇವಾಲಯ ಪ್ರವೇಶ ಪ್ರಶ್ನೆಯೂ ಮನನ್ನೂಲಿಸಿ ಇತ್ಯರ್ಥವಾಗುವುದು ಒಳ್ಳೆದೆಂದೂ ಹೇಳಿದರು. ಶ್ರೀ ಟಿ. ಎ. ಪೈಗಳು ಧನ್ಯವಾದಗಳನ್ನಿತ್ತರು. ಬಳಿಕ ಸಭೆ ಜರಗಿದ ಹ್ಯಾಸ್ಕೂಲಿನಿಂದ ಎಲ್ಲರೂ ಭಜನೆ ಮೆರವಣಿಗೆಯಿಂದ ಹೊರಟು ನೂತನ ಕಟ್ಟಡಕ್ಕೆ ಬಂದರು. ಡಾ. ಯು. ಪಿ. ಮಲ್ಯರು ಉದ್ಘಾಟಿಸಿದರು. ಈ ಕಟ್ಟಡವು ಸ್ಥಾನಿಕ ಅಭಿವೃದ್ಧಿ ಯೋಜನಾ ನೆರವಿನಿಂದ ಕಟ್ಟಿಸಲ್ಪಟ್ಟು ಆಕರ್ಷವಾಗಿದೆ.

ಶಸ್ತ್ರಕ್ರಿಯೆ ಸೌಕರ್ಯ— ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿಗೆ ಹೊಸತಾಗಿ ಬಂದು ಸೇರಿರುವ ಪ್ರಸಿದ್ಧ ಸರ್ಜನ್ ಡಾ| ಗುಹಾರವರಿಗೆ ತಾ 13ರಲ್ಲು ಡಾ| ಮಾಧವ ಪೈಗಳು ಸತ್ಕಾರವಿತ್ತು ಗೌರವಿಸಿದರು. ಡಾ| ಪಿ. ಆರ್. ನಾಯಕ್ ಡಾ| ಮೋಹನದಾಸ ಪೈ, ಡಾ| ಎಸ್. ಆರ್. ಪೈ, ಕೆಪ್ಟನ್ ಮಂಗೇಶ ರಾವ್ ಮೊದಲಾದವರು ಡಾ| ಗುಹಾರವರ ಶಸ್ತ್ರಕ್ರಿಯಾ ಪಳಗಿದ ಕೈ ಕುರಿತು ಮಾತನಾಡಿದರು. ಸ್ಥಳೀಯ ಕುಟುಂಬ ಯೋಜನಾ ಕ್ಲಿನಿಕ್ ಕಟ್ಟಡದಲ್ಲಿ ಸ್ಪೆಶಲ್ ಸರ್ಜಿಕಲ್ ವಾರ್ಡನ್ನು ತೆರೆದು ತನ್ಮೂಲಕ ಡಾ| ಗುಹಾ ಮತ್ತು ಕೆಪ್ಟನ್ ಮಂಗೇಶರಾಯರ ಸೇವೆಯನ್ನು ಜನತೆಗೆ ಒದಗಿಸುವ ಏರ್ಪಾಡು ಮಾಡುವುದೆಂದು ನಿರ್ಧರಿಸಲಾಯಿತು.

ರಾಷ್ಟ್ರೀಕೃತ ವಿಮಾಸಂಸ್ಥೆಯಲ್ಲಿ ವಿಮೆಮಾಡಿ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನೆರವಾಗಿರಿ.

ಹಿಂದುಗಳ ಉತ್ತರಾಧಿಕಾರ ಶಾಸನ

ತಜ್ಞ ವಕೀಲರಿಂದ ರಚಿತವಾದ

ಕನ್ನಡ ಭಾಷಾಂತರ ಇಷ್ಟರಲ್ಲೇ ಸಿದ್ಧವಾಗಿದೆ.

ಹಿಂದು, ಬುದ್ಧ, ಸಿಕ್ಖ, ಜೈನ, ವೀರಶೈವ,—ಎಲ್ಲರ ಕೈಯಲ್ಲಿ ಇರಲೇ ಬೇಕು.

ಶಾಸನದ ಯಥಾಪ್ರತಿ ಭಾಷಾಂತರ,

ಕಠಿಣ ವಿಷಯಗಳ ಮೇಲೆ ಟಿಪ್ಪಣಿ, ಪಾರಿಭಾಷಿಕ ಪದಗಳ ಕನ್ನಡ ರೂಪಗಳು—

ಎಲ್ಲ ಇದ್ದು—ಸಾಮಾನ್ಯರಿಗೆ ಸಹ ಸುಲಭವಾಗಿ ತಿಳಿಯುವಂತಿದೆ.

ಬೇಕಾದಷ್ಟು ಪ್ರತಿಗಳಿಗೆ ಕೂಡಲೇ ಬರೆದುಕೊಳ್ಳಿ.

ತಡಮಾಡಿ ನಿರಾಶರಾಗಬೇಡಿರಿ!

ಬೆಲೆ ಆಣೆ ಹನ್ನೆರಡು. ಅಂಚೆ ವೆಚ್ಚ 0—2—0.

ವ್ಯಾಪಾರಿಗಳಿಗೆ ಉದಾರ ಕಮಿಶನ್.

ಇಂಡಿಯನ್ ಇಂಪಿಸ್ಟಿಯಲ್ಸ್ ಎಂಡ್ ಏಜನ್ಸಿಸ್

ಕಾರ್ನಾಡ್ ಸದಾಶಿವರಾವ್ ರಸ್ತೆ, **ಮಂಗಳೂರು-೧**— ಇವರಿಂದ ಪಡೆಯಿರಿ.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಮಂಗಳೂರು

ಕ್ಷಯರೋಗ ನಿವಾರಣಾ ಚಳವಳಿ— ಕಳೆದ ತಾ. 12ರಲ್ಲಿ ರೋಟರಿ ಕ್ಲಬ್ಬಿನಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲೊಂದು ಸಭೆ ಜರಗಿತು. ಡಾ. ಉಪೇಂದ್ರ ರಾಯರು 'ಜಿಲ್ಲೆಯಲ್ಲಿ ಕ್ಷಯರೋಗ ನಿವಾರಣಾ ಚಳವಳಿ' ಕುರಿತು ಭಾಷಣಮಾಡುತ್ತಾ, ಕ್ಷಯರೋಗಿಗಳಿಗೆ ಸಾಮಾಜಿಕ ಭದ್ರತೆಯನ್ನೊದಗಿಸಿ, ಅವರಿಂದ ರೋಗವು ಇತರರಿಗೆ ಹಬ್ಬದಂತೆ ಮಾಡಿ ರೋಗಿಗಳ ವಾಸಸ್ಥಾನದಲ್ಲಿಯೇ ಚಿಕಿತ್ಸೆಯನ್ನು ಕೊಡಿಸುವ ಒಂದು ಯೋಜನೆಯನ್ನು ತಯಾರಿಸುವರೆ, ರೋಟರಿ ಕ್ಲಬ್, ಮಹಿಳಾ ಸಮಾಜ, ಸೇವಾಸಮಾಜ ಮೊದಲಾದ ಸಾಮಾಜಿಕ ಸೇವಾ ಸಂಸ್ಥೆಗಳು ಒಂದೆಡೆ ಸೇರಿ ಪರ್ಯಾಲೋಚನೆ ನಡೆಸುವುದು ಅಗತ್ಯವಿದೆ ಎಂದರು. ಶ್ರೀ ಕುಡ್ವರು ಮಾತನಾಡುತ್ತಾ, ಕಾರ್ಖಾನೆ ಮಾಲಕರು ತಮ್ಮ ಕಾರ್ಖಾನೆಗಳಲ್ಲಿ ದುಡಿಯುವ ಕೆಲಸಗಾರರ ಪರೀಕ್ಷೆಯನ್ನು ನಡೆಸಿ, ಕ್ಷಯರೋಗ ಪೀಡಿತರಾದವರಿಗೆ ಯೋಗ್ಯ ಭದ್ರತೆಯನ್ನಿತ್ತು, ಅವರ ಚಿಕಿತ್ಸಾ ಭಾರವನ್ನು ಹೊತ್ತು ಕೊಂಡರೆ, ಕ್ಷಯರೋಗ ನಿವಾರಣಾ ಚಳವಳಿ ಸುಲಭಸಾಧ್ಯವಾಗುವುದೆಂದರು.

ಪೋರ್ಟ್ ಟ್ರಸ್ಟ್ ಸದಸ್ಯರ ಚುನಾವಣೆ — ಮಂಗಳೂರು ಪೋರ್ಟ್ ಟ್ರಸ್ಟಿನಲ್ಲಿ ಕೆನರಾ ಚೇಂಬರ್ ಆಫ್ ಕಾಮರ್ಸಿನ ಪ್ರತಿನಿಧಿಗಳಿಗಿರುವ ನಾಲ್ಕು ಸ್ಥಾನಗಳಿಗೆ ಶ್ರೀಗಳಾದ ವಿ. ಎಸ್. ಕುಡ್ವ, ಬಿ. ಆರ್. ಕರ್ಕೇರ, ಪಿ. ರಮಾನಾಥ ಶೆಣೈ, ಸುಜೀರ್ ದಾಮೋದರ ನಾಯಕ್ ಪಂಜಿಮುಹಾಲ್ ನರಸಿಂಹ ರಾವ್, ಎಂ. ಜಿ. ಕಾಮತ್ ಮತ್ತು ಎಮ್. ಮಾಧವ ನಾಯಕರು ನಾಮಪತ್ರ ಸಲ್ಲಿಸಿರುವರು. ಮತದಾನ, ಮತ್ತು ಫಲಿತಾಂಶ ಪ್ರಕಟಣೆ ಇದೇ ತಾ. 25ರಲ್ಲಿ ಎನ್ನಲಾಗಿದೆ.

ನಗರ ಸಭೆಯು— ತಾ. 11ರಲ್ಲಿ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಈ ನಗರ ಯೋಜನಾಧಿಕಾರಿ ಶ್ರೀ ನಾಗರಾಜನ್ ಅವರು ವರ್ಗವಾಗಿ ಬೇರೆ ಕಡೆಗೆ ಹೋಗಲಿರುವುದರಿಂದ ಅವರ ಕಾರ್ಯದಕ್ಷತೆಯನ್ನು ಪ್ರಸಂಶಿಸಿ ಅವರಿಗೆ ಹೆಚ್ಚಿನ ಯಶಸ್ಸನ್ನು ಕೋರಲಾಯಿತು.

ಶ್ರೀ ವಾಮನ ಕೊಡಿಯಾಲಬೈಲರು, ಒಂದು ವಿಧಿ ಬಿಂದುವನ್ನೆತ್ತಿ, ನಗರ ಸಭೆಯ ಸಭೆಯನ್ನು ರಜಾ ದಿನಗಳಲ್ಲಿ ಮತ್ತು ಕೆಲಸದ ಹೊತ್ತಲ್ಲದ ಸಮಯದಲ್ಲಿ ನಡೆಸುವುದರ ಕ್ರಮಬದ್ಧತೆಯನ್ನು ಪ್ರಶ್ನಿಸಿ, ಸ್ಥಳೀಯ ಸಂಸ್ಥೆಗಳ ಆಡಳಿತ ಕಾನೂನಿಗೆ ಈ ಕ್ರಮ ವಿರುದ್ಧವಾಗಿದೆ ಎಂದರು. ಚೇರ್ಮನರು, ಸ್ಥಳೀಯ ಸಂಸ್ಥೆಗಳ ಆಡಳಿತ ಕಾನೂನಿನಲ್ಲಿ, ಸಭಾಕಾರ್ಯವನ್ನು ರಜಾ ದಿನಗಳಲ್ಲಿ ನಡೆಸುವುದನ್ನು ಮಾತ್ರ ಆಕ್ಷೇಪಿಸಲಾಗಿದೆಯಲ್ಲದೆ ಕೆಲಸದ ಹೊತ್ತಲ್ಲದ ಸಮಯದಲ್ಲಿ ನಡೆಯಿಸಬಾರದೆಂದು ಇಲ್ಲ ಎಂಬುದಾಗಿ ಅಭಿಪ್ರಾಯ ಸೂಚಿಸಿದರು. ನಂತರ ಕೆಲವೊಂದು ನಿರ್ಣಯಗಳು ಪಾಸಾದುವು.

ವಿವಾಹ ಸಮಾರಂಭಗಳು ಮಂಗಳೂರಿನ ಚಾರ್ಟರ್ಡ್ ಎಕೌಂಟೆಂಟ್ ಶ್ರೀ ಪಿ. ಎಮ್. ಹೆಗ್ಡೆಯವರ ಪುತ್ರಿ ಚಿ. ಸೌ. ಪ್ರಫುಲ್ಲ ಮತ್ತು ದಿವಂಗತ ಅಜೆಲಾಡಿ ಬೀಡು ದಾಸಯ್ಯ ರೈಗಳ ಪುತ್ರ ಶ್ರೀ ಕರುಣಾಕರ ರೈ, ಇವರ ವಿವಾಹವು ತಾ. 11ರಲ್ಲಿ ಜ್ಯೋತಿ ಟಾಕೀಸಿನಲ್ಲಿ ವೈಭವದಿಂದ ಜರಗಿತು. ಜಿಲ್ಲೆಯ ಹಾಗೂ ನಗರದ ಆಢ್ಯ ಗೃಹಸ್ಥ ಗೃಹಿಣಿಯರು ಬಹು ಸಂಖ್ಯೆಯಲ್ಲಿ ಬಂದಿದ್ದು ವಧೂವರರನ್ನು ಆಶೀರ್ವದಿಸಿದರು.

ಇದೇ ಸಂದರ್ಭದಲ್ಲಿ ಶ್ರೀ ಪಟ್ಟಬೆಟ್ಟು ಹಿರಿಯಣ್ಣ ಹೆಗ್ಡೇರ ಸೊಸೆ ಕುಮಾರಿ ವಿಶಾಲಾಕ್ಷಿ ಮತ್ತು ಶ್ರೀ ಕುಪ್ಪಿಲಗುತ್ತು ತಿಮ್ಮಪ್ಪ ರೈಗಳ ಪುತ್ರ ಶ್ರೀ ಕೆ. ಸಂಜೀವ ರೈಗಳ ವಿವಾಹ ಸಮಾರಂಭವೂ ನೆರವೇರಿತು.

ಅಲ್ಲದೆ ಇದೇ ದಿನ ಡೋನ್ ಬೋಸ್ಕೊ ಹೋಲಿನಲ್ಲಿ ಡಾ. ಬಿ. ಚಂದಯ್ಯ ಹೆಗ್ಡೇರ ಸಹೋದರ ಶ್ರೀ ರಾಮಚಂದ್ರ ಹೆಗ್ಡೆ ಮತ್ತು ನಾರ್ಯ ನಡಿಗುತ್ತು ಮಾರಪ್ಪ ಆಳ್ವರ ಪುತ್ರಿ ಕುಮಾರಿ ಪುಷ್ಪಲತಾ ಇವರ ವಿವಾಹ ಸಮಾರಂಭವೂ ವೈಭವದಿಂದ ಜರಗಿತು.

ಜಿಲ್ಲಾ ಟೀಚರ್ಸ್ ಗಿಲ್ಡಿನ— ಕೌನ್ಸಿಲ್ ಸಭೆಯು ತಾ. 8ರಲ್ಲಿ ಬಿ. ಇ. ಎಮ್. ಹೈಸ್ಕೂಲಿನಲ್ಲಿ ಸಂಘದ ಅಧ್ಯಕ್ಷ ರೆ. ಫಾ. ಜೇಮ್ಸ್ ಕೊಯಿಲೋರವರ ಅಧ್ಯಕ್ಷತೆಯಲ್ಲಿ ಜರಗಿತು. ಶೈಕ್ಷಣಿಕ ಸಮ್ಮೇಲನವು ಈ ವರ್ಷ ಜರಗುವಾಗ ಕರ್ನಾಟಕದೊಳಗೆ ಸೇರುವ ಎಲ್ಲಾ ಪ್ರದೇಶಗಳ ಅಧ್ಯಾಪಕ ಸಂಘಗಳ ಪ್ರತಿನಿಧಿಗಳನ್ನು ಆಮಂತ್ರಿಸಬೇಕೆಂದೂ ಹೊಸ ರಾಜ್ಯದಲ್ಲಿ ಅಧ್ಯಾಪಕರ ಸಂಘಟನೆಗಾಗಿ ಈ ಸಮ್ಮೇಳನದಲ್ಲಿ ಪ್ರಯತ್ನಗಳಾಗಬೇಕೆಂಬ ಅಭಿಪ್ರಾಯದ ನಿರ್ಣಯವಾಯಿತು. ಜಿಲ್ಲೆಯ ವಿದ್ಯಾಧಿಕಾರಿ ಸ್ಥಾನದಿಂದ ನಿವೃತ್ತರಾಗಿ ಈಗ ಗಂಗೊಳ್ಳಿ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾಗಿರುವ ಶ್ರೀ ಸಂಜೀವ ಭಟ್ಟರನ್ನು ಸತ್ಕರಿಸುವ ಸಭೆಯು ಕೂಡಾ ಅಂದೇ ಜರಗಿತು.

ಬಿ. ಇ. ಎಮ್. ಹೈಸ್ಕೂಲಿನ ಶಾಲಾ ನಾಯಕಿಯಾಗಿ ಕುಮಾರಿ ಪ್ರೇಮಲತಾ ಹೆಗ್ಡೆಯವರೂ, ಶ್ರೀ ಎಚ್. ಎಮ್. ಡ್ಯಾಕ್, ಅವರು ಉಪನಾಯಕರಾಗಿಯೂ ಆರಿಸಲ್ಪಟ್ಟಿರುವರು. ಸಹ ಶಿಕ್ಷಣವಿದ್ದ ಈ ಶಾಲೆಯಲ್ಲಿ ವಿದ್ಯಾರ್ಥಿನಿಯು ಶಾಲಾ ನಾಯಕಿಯಾಗಿ ಆರಿಸಿ ಬಂದುದು ಇದೀಗ ಪ್ರಥಮ ಸಲ.

ಮೆನೇಜ್‌ಮೆಂಟ್ ಎಸೋಸಿಯೇಶನ್‌ನವರು ತಾ. 13ರಲ್ಲು ಹಿಂದೂಸ್ಥಾನ್ ಪರ್ಕ್ಯುಮ್ಸ್ ಕಂಪೆನಿಯ ಮೆನೇಜಿಂಗ್ ಡ್ಯರೆಕ್ಟರ್ ಶ್ರೀ ಜೆ. ಎಮ್. ನಾಗೇಶ್, ಅವರಿಗೆ ಭೋಜನ ಸಮಾರಂಭವನ್ನೇರ್ಪಡಿಸಿ ಗೌರವಿಸಿದರು. ಶ್ರೀ ಕೆ. ವಿಶ್ವನಾಥ ಕಾಮತರು ಮುಖ್ಯ ಅತಿಥಿಯ ಪರಿಚಯಮಾಡಿಕೊಟ್ಟರು. ಶ್ರೀ ಕೆ. ಟಿ. ಜನಾರ್ದನ ಪ್ರಭುಗಳು ಸ್ವಾಗತ ಭಾಷಣ ಮಾಡಿದರು. ಶ್ರೀ ನಾಗೇಶ್ ಅವರು ಮಾತನಾಡುತ್ತಾ, ಶಾಸ್ತ್ರೀಯವಾದ ಆಡಳಿತ ವಿಧಾನದ ಅನುಕರಣೆಯಿಂದ, ನಮ್ಮ ದೇಶದ ಉದ್ಯಮಗಳ ಉತ್ಪತ್ತಿಯನ್ನು ಈಗಿರುವ ಜನಶಕ್ತಿಯಿಂದಲೇ ಸೇಕಡಾ 20ರಷ್ಟು ಹೆಚ್ಚಿಸಲಿಕ್ಕೆ ಸಾಧ್ಯವಿದೆ ಎಂದೂ ಹಾಗಾಗಲು ತಜ್ಞ ಆಡಳಿತಗಾರರ ಆವಶ್ಯಕತೆಯಿದೆ ಎಂದೂ ಹೇಳಿದರು.

ಡಾ| ಮುಖರ್ಜಿಯವರ ಜಯಂತಿ— ಭಾರತೀಯ ಜನಸಂಘದ ಮಂಗಳೂರು ಮಂಡಲ ಸಮಿತಿಯ ಆಶ್ರಯದಲ್ಲಿ ತಾ. 8ರಲ್ಲು ಡಾ| ಶ್ಯಾಮಪ್ರಸಾದ ಮುಖರ್ಜಿಯವರ 56ನೇ ಜಯಂತಿಯು ಶ್ರೀ ಸೇವ ನಮಿರಾಜ ಮಲ್ಲರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಪದ್ಮನಾಭ ಭಂಡಾರ್‌ಕಾರರು ಸ್ವಾಗತ ಭಾಷಣ ಮಾಡಿದರು. ಮುಖರ್ಜಿಯವರ ಜನಜೀವನದ ಚಟುವಟಿಕೆಗಳನ್ನೆತ್ತಿ ಶ್ರೀಗಳಾದ ಎಚ್. ಭಾಸ್ಕರ ರಾವ್, ಬಿ. ಆರ್. ಕೋಟ್ಯಂಕರರು ಮಾತನಾಡಿದರು. ದೇಶಸೇವೆ ಗೈದು ಚಿರಸ್ಮರಣೀಯರಾದವರಲ್ಲಿ ಡಾ| ಶ್ಯಾಮಪ್ರಸಾದ ಮುಖರ್ಜಿಯು ಒಬ್ಬರಾಗಿರುವರೆಂದು ಅಧ್ಯಕ್ಷರು ಹೇಳಿದರು. ಶ್ರೀ ಕೆ. ನಾರಾಯಣ ಸೆಟ್ಟರು ಧನ್ಯವಾದಗಳನ್ನಿತ್ತರು.

ಡಾ. ಶ್ಯಾಮ ಪ್ರಸಾದ ಮುಖರ್ಜಿಯವರ ಸ್ಮಾರಕ— ಪಕ್ಷದ ಅಂಗವಾಗಿ ವಿವೇಕಾನಂದ ಮಂಡಳಿಯ ವತಿಯಿಂದ ಏರ್ಪಡಿಸಲಾದ ಲೇಖನ ಸ್ಪರ್ಧೆಯಲ್ಲಿ ಶ್ರೀ ಬೈಕಾಡಿ ವೆಂಕಟಕೃಷ್ಣ ರಾವ್, ಬ್ರಹ್ಮಾವರ, ಅವರ ಭಾಷಾವಾರು ಪ್ರಾಂತರಚನೆ ಮತ್ತು ಅದರ ಪರಿಣಾಮ ಲೇಖನಕ್ಕೆ ಪ್ರಥಮ ಬಹುಮಾನವೂ ಶ್ರೀ ಬಿ. ಕೆ. ಸುವರ್ಣ, ಉರ್ವ, ಮಂಗಳೂರು, ಇವರ ಭಾರತದ ವಿದೇಶಾಂಗ ನೀತಿ ಎಂಬ ಲೇಖನಕ್ಕೆ ದ್ವಿತೀಯ ಬಹುಮಾನವೂ ದೊರಕಿದೆ.

ಜಿಲ್ಲಾ ಟ್ರೇಡ್ ಯೂನಿಯನ್ ಸೆಂಟ್ರಲ್ ಕೌನ್ಸಿಲು ಸಭೆಯು— ತಾ. 8ರಲ್ಲು ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಆಗೋಸ್ತು ತಿಂಗಳು ತಾ. 7ರಲ್ಲು ಜಿಲ್ಲೆಯಾದ್ಯಂತ ಆಹಾರ ಪದಾರ್ಥಗಳ ಬೆಲೆಯೇರಿಕೆ ವಿರೋಧ ದಿನವನ್ನು ಆಚರಿಸಲು ಎಲ್ಲಾ ಟ್ರೇಡ್ ಯೂನಿಯನ್ನುಗಳ ಮಜೂರರನ್ನು ಮಹಾಜನರನ್ನೂ ವಿನಂತಿಸುವ ಗೊತ್ತುವಳಿಯಾಯಿತು.

ಅಮೇರಿಕನ್ ಇಂಜಿನಿಯರ್ ಮಿ. ಹೆಪ್ಪನ್ರ್— ಅಮೇರಿಕದ ಸಂಯುಕ್ತ ರಾಷ್ಟ್ರಗಳ ತಾಂತ್ರಿಕ ಸಹಕಾರ ಸಂಸ್ಥೆಯ ಇಂಜಿನಿಯರ್ ಮಿ. ಆಲ್ಫ ಎಚ್. ಹೆಪ್ಪನ್ರ್‌ರವರನ್ನು ಮರೋಳಿಯ ಕೆನರಾ ವರ್ಕ್ ಶೋಪ್ಸಿನಲ್ಲಿ ಮಂಗಳೂರು ಪತ್ರಿಕಾ ಪ್ರತಿನಿಧಿಗಳು ಭೇಟಿಯಾದರು. ಕಳೆದ ಒಂದು ವರ್ಷದಿಂದ ಭಾರತದಲ್ಲಿ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳು ತುಂಬಾ ಪ್ರಗತಿಯನ್ನು ಸಾಧಿಸಿವೆ. ಭಾರತವು ಸರಿಯಾದ ಮಾರ್ಗದಲ್ಲಿ ಮುನ್ನಡೆಯುತ್ತಿದೆ ಎಂಬುದಕ್ಕೆ ಇದು ನಿದರ್ಶನ. ಸಾಮಾನ್ಯ ಜನತೆಯ ಜೀವನ ಮಟ್ಟವು ಉತ್ತಮಗೊಳ್ಳಬೇಕಾದರೆ ಇನ್ನು ಹಲವು ವರ್ಷಗಳು ಬೇಕಾಗಬಹುದೆಂದು ಎಂಜಿನಿಯರರು ಹೇಳಿದರು. ಭಾರತದ ಉದ್ದಿಮೆಗಳಲ್ಲಿ ಕಾರ್ಮಿಕರ ಪ್ರಶ್ನೆ ಮುಂತಾದ ವಿಷಯಗಳಲ್ಲೂ ಅವರು ತಮ್ಮ ಅಭಿಪ್ರಾಯಗಳನ್ನಿತ್ತರು.

ಜಿಲ್ಲೆಯ ಸೊತ್ತುಗಳ ಸಾಗಾಟ— ಯೋಜನಾ ಕಾರ್ಯಗಳ ಸೊತ್ತುಗಳಲ್ಲಿ ಹೆಚ್ಚಿನವುಗಳೆಂದು ಕಂಡುಬಂದಲ್ಲಿ ಅವುಗಳನ್ನು ದ. ಕ. ಜಿಲ್ಲೆಯಿಂದ ಬೇರೆ ಕಡೆಗೆ ಸಾಗಿಸಬಹುದೆಂಬ ಸರಕಾರದ ಪ್ರಕಟಣೆಗನುಗುಣವಾಗಿ ಈ ಭಾಗದ ಕೆಲಸಗಳು ಮುಗಿಯುವ ಮೊದಲೇ ಸೊತ್ತುಗಳು ಹೆಚ್ಚಾಗಬಹುದೆಂಬ ಅನುಮಾನದಿಂದ ಅಧಿಕಾರಿಗಳು ಈಗಾಗಲೇ ಸಾಗಿಸತೊಡಗಿದುದನ್ನು ನಿಷೇಧಿಸಿ ಸರಕಾರಕ್ಕೆ ತಂತಿ ಮನವಿ ಕಳುಹಲಾಗಿದೆ. ಸರಕಾರಿ ಪ್ರಕಟಣೆಯು ಅನಾಯಕರವಿದೆ ಎಂದು ಶ್ರೀಗಳಾದ ಬಿ. ವಿ. ಬಾಳಿಗ, ಎಸ್. ನರಸಪ್ಪಯ್ಯ, ಕೆ. ಸೂರ್ಯನಾರಾಯಣ ಅಡಿಗ, ಡಾ. ಕೆ. ಕೆ. ಹೆಗ್ಡೆ, ಕೆ. ಆರ್. ಆಚಾರ್, ಬಿ. ಆರ್. ಕರ್ಕೇರ, ಎಚ್. ಕೆ. ತಿಂಗಳಾಯ, ಕೆ. ಶ್ರೀನಿವಾಸ ಶೆಣೈ, ವಿ. ಎಸ್. ಕುಡ್ವ ಮೊದಲಾದವರು ಸರಕಾರದ ಗಮನಕ್ಕೆ ತಂದಿರುತ್ತಾರೆ. ಸೊತ್ತುಗಳು ಇಲ್ಲಿಯೇ ಇರಗೊಡಿಸಬೇಕೆಂದು ವಿನಂತಿಸಲಾಗಿದೆ.

ಮದ್ರಾಸು ರಾಜ್ಯಪಾಲರು ಬರುವರು— ದ. ಕ. ಜಿಲ್ಲೆಯು ಮದ್ರಾಸಿನಿಂದ ಬೇರೆಯಾಗಿ ಮೈಸೂರಿಗೆ ಸೇರುವ ಪೂರ್ವದಲ್ಲಿ ಸುಮಾರು ಸಪ್ಟಂಬರ ತಿಂಗಳ ಕೊನೆಯೊಳಗೆ ಮದ್ರಾಸು ರಾಜ್ಯಪಾಲರಾದ ಶ್ರೀ ಶ್ರೀಪ್ರಕಾಶರು ದ. ಕ. ಜಿಲ್ಲೆಗೆ ಸಂದರ್ಶನ ಕೊಡಲಿರುವರೆಂದು ಗೊತ್ತಾಗಿದೆ.

ನ್ಯಾಯ ಬೆಲೆಯ ಅಕ್ಕಿಯಂಗಡಿಗಳನ್ನು ಅಗತ್ಯವಿದ್ದಲ್ಲೆಲ್ಲ ತೆರೆಯುವಂತೆ ಸರಕಾರವನ್ನು ಕೇಳಿ ಕೊಳ್ಳುವ ನಿರ್ಧಾರವೊಂದನ್ನು ಇತ್ತೀಚೆಗೆ ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಲಾ ಕಾಂಗ್ರೆಸು ಕಮಿಟಿಯ ಕಾರ್ಯನಿರ್ವಾಹಕ ಸಮಿತಿಯಲ್ಲಿ ಮಾಡಲಾಗಿದೆ. ಅಲ್ಲದೆ ಅಕ್ಕಿಯ ಬೆಲೆಯು ವಿಶೇಷವಾಗಿ ಏರುತ್ತಿರುವುದಕ್ಕೆ ವಿಷಾದ ಸೂಚಿಸಲಾಗಿದೆ.

ರಾಜಕೀಯ ಪರಿಷತ್ತು — ದ. ಕ. ಜಿಲ್ಲಾ ರಾಜಕೀಯ ಪರಿಷತ್ತಿನ ಸ್ವಾಗತ ಕಮಿಟಿಯ ಸಭೆಯು ಶ್ರೀ ಕೆ ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ, ಪರಿಷತ್ತನ್ನು ದಸರಾ ಸಮಯದಲ್ಲಿ ಕೆನರಾ ಹೈಸ್ಕೂಲು ಇಲ್ಲವೇ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ನೆರವೇರಿಸಬೇಕೆಂಬ ಅಭಿಪ್ರಾಯ ಪಡಲಾಯಿತಲ್ಲದೆ ಈ ಬಗ್ಗೆ ಬೇರೆ ಬೇರೆ ಉಪಸಮಿತಿಗಳನ್ನು ಕೂಡಾ ಮಾಡಲಾಯಿತು.

ಯುವಕ ಕಾಂಗ್ರೆಸು— ಇವರ ಆಶ್ರಯದಲ್ಲಿ ಶ್ರೀ ವೈ ಮಂಜಯ್ಯ ಸೆಟ್ಟಿ, ಯಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ತಾ. 15ನೇ ಬೆಳಿಗ್ಗೆ ಧ್ವಜಾರೋಹಣ ಸಮಾರಂಭ ಜರಗಿತು. ಅಧ್ಯಕ್ಷರು ಯುವಕ ಕಾಂಗ್ರೆಸಿನ ಶಾಖೆಗಳನ್ನು ಅಲ್ಲಲ್ಲಿ ತೆರೆಯಬೇಕೆಂದು ಸೂಚಿಸಿ, ಮದ್ಯಪಾನ ನಿಷೇಧ ಹಾಗೂ ಒಕ್ಕಲುಹಿತ ಮಸೂದೆಯ ಕುರಿತು ಮಾತನಾಡಿದರು. ಈ ಬಗ್ಗೆ ನಡೆದ ಚರ್ಚೆಯಲ್ಲಿ ಪಾ. ನಾಗಪ್ಪ ಆಳ್ವ, ಶ್ರೀಗಳಾದ ಕೆ. ಆರ್. ಆಚಾರ್ಯ, ಕೆ. ಕೆ. ಸೆಟ್ಟಿ, ಡಾ. ಯು. ಪಿ. ಮಲ್ಯ ಮೊದಲಾದವರು ಭಾಗವಹಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 155/1956.

ಯು. ಗೋಪಾಲ ಪ್ರಭು —ವಾದಿ

ಮತ್ತು

ಕುಡ್ಪು, ಚಿಬ್ಬಿ ಮಗಳು. ಉಡುಪಿ ತಾಲೂಕು ಕಡೆಕಾರು ಗ್ರಾಮದಲ್ಲಿರುವವಳು —ಪ್ರತಿವಾದಿಳು

ಸದ್ರಿ ಪ್ರತಿವಾದಿಳಿಗೆ.

ಪ್ರತಿವಾದಿಳು ಶಾಸ್ತ್ರಗೋಡು ಆೈಲನ್ಸ್ ಬ್ಯಾಂಕಿಗೆ ೦. ನಿ೨ ತಾ. 13—7—50ರಲ್ಲಿ ಬರಕೊಟ್ಟ ಈದಿನ ಹಳ್ಳ ವಾದಿಯ ತಂದೆ ಇತ್ಲಾಗೆ ಮೃತಪಟ್ಟ ಯು. ರಾಮ ಪ್ರಭುಗಳು ಟ್ರಾನ್ಸ್‌ಫರ್ ಪಡೆದ ಮೇರೆಗೆ ಈಗ ಸದರಿ ಈಡಿನ ಬಾಬ್ತು ಪ್ರತಿವಾದಿಳಿಂದ ವಾದಿಗೆ ಬರಾ ಅಸಲು ಬಡ್ಡಿ ಕೂಡಿ ರೂಪಾಯಿ 125—9—10ಕ್ಕೆ ವಾದಿಯು ಪ್ರತಿವಾದಿಳ ಮೇಲೆ ಮಾಡಿದ ಸದರಿ ದಾವೆಯು ತಾರೀಕು 30—7—1956ಕ್ಕೆ ಪ್ರಥಮ ತನಿಖೆಗೆ ಇಡೋಣಾಗಿಯದೆ. ಆ ದಿವಸ ಪ್ರತಿವಾದಿಳು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸದೆ ಇದ್ರೆ ಅವಳ ಗೈರ್ ಹಾಜರಿಯಿಂದ ಸದರಿ ದಾವೆಯು ತೀರ್ಮಾನಿಸಲ್ಪಡುವದೆಂದು ಈ ಮೂಲಕ ತಿಳಿಯಪಡಿಸೋಣಾಗಿಯದೆ.

M. Damoder Kamath.
Advocate for Plff.

16—7—1956 ಉಡುಪಿ ದ. ಕ.

Mahatma Gandhi Memorial College,

UDIPI

* * *

A few seats are available in all the four groups of the Pre-University class and in the Junior B. A. Class (gr. IV-b). Candidates seeking admission should apply immediately to the **Principal.**

Dr. AMBLAY RAMASWAMIER'S 98 Yrs. Renowned Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16-18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಮೈಸೂರು ಸಹಿತವಾದ ನೂತನ ಕನ್ನಡ ರಾಜ್ಯ

(೨ ನೇ ಪುಟದಿಂದ)

ಮೈಸೂರಿನ ಸುತ್ತಲಿನ ಕನ್ನಡ ಪ್ರದೇಶದಲ್ಲಿ ೫.೪ ದಶಲಕ್ಷ ಎಕರೆ ಅರಣ್ಯವಿರುತ್ತದೆ; ನೀಲಗಿರಿ, ಕನ್ನಡಜಿಲ್ಲೆಗಳು ಮತ್ತು ಶಾಲ್ಯಗಳಲ್ಲಿ ಇದು ಹಬ್ಬಿದೆ. ನೀಲಗಿರಿಯಲ್ಲಿ ಅರ್ಧದಷ್ಟು ಅರಣ್ಯವಿದ್ದರೆ ಕನ್ನಡ ಜಿಲ್ಲೆಗಳು ಪೂರ್ಣ ವನಪ್ರದೇಶವೇ ಆಗಿದೆ. ಇದು ಪ್ರಯೋಜನವಾಗಬಹುದಾದ ಅಪರಿಮಿತ ಸಂಪತ್ತಾಗಿದೆ.

ಮೈಸೂರಿನಲ್ಲಿ ಒಟ್ಟು ೧೮೯ ಲಕ್ಷ ಎಕರೆ ಭೂಮಿಯು ಉಳುವಂತಿದ್ದರೆ ಅದರ ೧/೩ ಭಾಗವು ಮಾತ್ರ ಬೇಸಾಯಕ್ಕೊಳಪಟ್ಟಿದೆ. ಸರಕಾರದ ವಶದಲ್ಲಿದ್ದ ೧೭ ಲಕ್ಷ ಎಕರೆ ಭೂಮಿಯು ಉಳುವುದಕ್ಕೆ ಯೋಗ್ಯವಾಗಿದೆ ಆಹಾರಧಾನ್ಯಕ್ಕಾಗಿ ೫೨ ಲಕ್ಷ ಎಕರೆ ಭೂಮಿಯು ಅಣಿಯಾಗಿದೆ ಇದರಲ್ಲಿ ಭತ್ತ ಮತ್ತು ಇತರ ಕಾಳುಗಳಿಗಾಗಿ ೩೭ ಲಕ್ಷ ಎಕರೆ ಮೀಸಲಾಗಿದ್ದರೆ ಒಟ್ಟು ಭೂಮಿಯ ೧/೬ ಭಾಗವು ಮಾತ್ರ ನೀರಾವರಿಯ ಸೌಲಭ್ಯವನ್ನು ಪಡೆದುದಾಗಿದೆ.

ಉಳಿದ ಒಂಭತ್ತು ಜಿಲ್ಲೆಗಳಲ್ಲಿ ೧೫೯ ಲಕ್ಷ ಎಕರೆ ಭೂಮಿಯಲ್ಲಿ ಕೃಷಿಯು ನಡೆದಿದ್ದು ೫ ಲಕ್ಷ ಎಕರೆ ಭೂಮಿಯು ನೀರಾವರಿಗೊಳಪಟ್ಟಿದೆ ಇದಲ್ಲದೆ ೨೦.೪ ಲಕ್ಷ ಎಕರೆ, ಬಂಜರನೆಲವಲ್ಲದ ಉಳಲು ಯೋಗ್ಯ ಭೂಮಿಯೂ ಇದೆ. ಬಳ್ಳಾರಿ, ಶಾಲ್ಯ, ಬೆಳಗಾವಿ, ವಿಜಾಪುರ ಮತ್ತು ಧಾರವಾಡಗಳಲ್ಲಿ ಕೃಷಿಯು ನಡೆದ ಭೂಮಿಯು ವ್ಯಾಪಕವಾಗಿದೆ; ಉಳಿದ ಕಡೆ ಅಷ್ಟು ಸೌಕರ್ಯಗಳಿಲ್ಲ. ಶಾಲ್ಯ ಜಿಲ್ಲೆಯಲ್ಲಿ ನೀರಾವರಿಯು ಪ್ರಮುಖವಾಗಿದೆ. ಹೀಗೆ ಮೈಸೂರಿನ ಎರಡು ಪಟ್ಟು ಕೃಷಿಗೆ ತಕ್ಕ ಭೂಮಿಯು ಉಳಿದ ಭಾಗಗಳಲ್ಲಿದೆ; ಆದರೆ ನೀರಾವರಿಯ ಪ್ರಮಾಣವು ಮಾತ್ರ ಅನ್ಯ ವಿಭಾಗಗಳಲ್ಲಿ ಅಷ್ಟು ಹೆಚ್ಚು ಇರುವುದಿಲ್ಲ.

ಮೈಸೂರಿನಲ್ಲಿ ಕುಟುಂಬವೊಂದರ ಹಿಡುವಳಿಯು ೫-೬ ಎಕರೆ ಆಗಿದೆ. ಅವು ಕೂಡ ವಿಭಕ್ತ ಮತ್ತು ಅರ್ಥಹೀನ ಆಗಿದ್ದು ಮಿಶ್ರ ಕೃಷಿಯು ಅಲ್ಪವಾಗಿದೆ. ಉಪ-ಉದ್ಯೋಗಗಳಿಲ್ಲದೆ ೧೦೦ಕ್ಕೆ ೫೮ರಷ್ಟು ಜನರು ಗ್ರಾಮಗಳಲ್ಲಿ ವಾಸಿಸುತ್ತಾರೆ. ಕೃಷಿ ಯೋಗ್ಯ ಭೂಮಿಯು ಪಡು ಬೀಳಲಿಕ್ಕೆ ನೇಗಿಲ ಹೊಡಲಿಕ್ಕೆ ಎತ್ತು ಕೋಣಗಳು ಸಿಕ್ಕದಿರುವುದೇ ಕಾರಣವಾಗಿದೆ. ಅಕ್ಕಿ, ರಾಗಿ, ಜೋಳಗಳು ಮೈಸೂರಿನ ಆಹಾರ ಧಾನ್ಯಗಳು. ಭತ್ತವು ೭.೩೫ ಲಕ್ಷ ಎಕರೆಗಳಲ್ಲಿ ಬಿತ್ತಲ್ಪಟ್ಟು ೨.೧೬ ಲಕ್ಷ ಟನ್ ಉತ್ಪಾದನೆಯನ್ನು ತೋರಿಸುತ್ತದೆ. ರಾಗಿಗೆ ೨೨.೦೭ ಲಕ್ಷ ಎಕರೆ ಭೂಮಿಯಿದ್ದು ಉತ್ಪತ್ತಿಯು ೫.೭೨ ಲಕ್ಷ ಟನ್ ಇರುತ್ತದೆ. ಕಡಿಮೆ ಮಹತ್ವವುಳ್ಳ ಜೋಳವು ೬.೭ ಲಕ್ಷ ಎಕರೆಗಳಲ್ಲಿ ೧.೧೭ ಲಕ್ಷ ಟನ್ ಹುಟ್ಟುತ್ತದೆ. ಇಂತು ಆಹಾರ ಧಾನ್ಯಗಳಿಗಾಗಿ ೩೭.೨೨ ಲಕ್ಷ ಎಕರೆ ಭೂಮಿಯು ಉಪಯುಕ್ತವಾಗಿದ್ದು ೯.೨೫ ಲಕ್ಷ ಟನ್ ಉತ್ಪತ್ತಿಯನ್ನು ಮೈಸೂರು ಪಡೆಯುತ್ತದೆ. ಇದು ತೀರ ಅಲ್ಪವಾದ ಆಹಾರವಾಗಿದೆ; ಏಕೆಂದರೆ ಪ್ರತಿದಿನ ಪ್ರತಿ ವ್ಯಕ್ತಿಗೆ ೧೬ ಔನ್ಸಿನಂತೆ ಒಟ್ಟು ಮೈಸೂರು ರಾಜ್ಯದ ಜನಸಂಖ್ಯೆಗೆ ೧೩.೪೫ ಲಕ್ಷ ಟನ್ ಆಹಾರ ಧಾನ್ಯಗಳು ಬೇಕಾಗುತ್ತವೆ. ಆದರೆ ಉತ್ಪಾದನೆ ೯.೨೫ ಲಕ್ಷ ಟನ್ ಆಗಿದ್ದು ಅಕ್ಕಿ ಜೋಳಗಳಲ್ಲಿ ಒಟ್ಟು ೩.೨ ಲಕ್ಷ ಟನ್ ಕೊರತೆಯುಂಟಾಗುತ್ತದೆ. ಅಂತೆಯೆ ನಾಡಿನಲ್ಲಿಯ ಹುಟ್ಟುವಳಿಯಷ್ಟೆ ಆಹಾರವನ್ನು ಆಯಾತದಿಂದ ಪಡೆಯಬೇಕಾಗುತ್ತದೆ. ಇದರ ವೆಚ್ಚ ಪ್ರತಿವರ್ಷ ೮.೫ ಕೋಟಿ ರೂಪಾಯಿಗಳಾಗಬಹುದೆಂದು ಎಣಿಸಲಾಗಿದೆ.

ಈ ಅಪೂರ್ಣತೆಯನ್ನು ಪರಿಹರಿಸಿಕೊಳ್ಳಲಿಕ್ಕೆ ಮೈಸೂರು ಸಕಲ ಪ್ರಯತ್ನವನ್ನು ಮಾಡುತ್ತಲಿದೆ. ಟ್ರ್ಯಾಕ್ಟರ್‌ಗಳ ಸಹಾಯದಿಂದ ೧೩ ಲಕ್ಷ ಎಕರೆ ಹೆಚ್ಚಿಗೆ ನೆಲವನ್ನು ಉಳುವಂತೆ ಮಾಡುವ ಕಾರ್ಯ ಕೈಕೊಳ್ಳಲಾಗಿದೆ; ಈ ಟ್ರ್ಯಾಕ್ಟರ್‌ಗಳ ವೆಚ್ಚ ಕಡಿಮೆಯಾಗುವಂತೆ ಏರ್ಪಡಿಸಲಾಗಿದೆ. ಈಗಿನಂತೆ ೧/೬ ಭಾಗವಷ್ಟೆ ನೀರಾವರಿ ಇದ್ದರೆ ೧/೪ರಷ್ಟಕ್ಕೆ ಹೆಚ್ಚಿಸಬೇಕೆಂದು ಹಂಬಲವಿದೆ. ಸುಧಾರಿಸಿದ ನೇಗಿಲು ಮತ್ತು ಇತರ ಉಪಕರಣಗಳು ಸಹಜವಾಗಿಯೂ ಸುಲಭವಾಗಿಯೂ ಲೋಕಪ್ರಿಯಗೊಳಿಸಲಾಗಿದೆ. ಒಳ್ಳೆಯ ಬೀಜಗಾಳುಗಳು ದೊರೆಯುವಂತೆ ಸಹಾಯ ದೊರೆಯುತ್ತಲಿದೆ. ಗೊಬ್ಬರದ ವಿಷಯದಲ್ಲಿ ಸಹಾಯಧನವು ಸರಕಾರ ಮತ್ತು ಖಾಸಗೀ ಸಂಸ್ಥೆಗಳಿಂದ ಕೊಡಲಾಗುತ್ತದೆ.

ಸುತ್ತಲಿನ ಕನ್ನಡ ಪ್ರದೇಶದಲ್ಲಿ ಒಟ್ಟು ಆಹಾರಧಾನ್ಯ ಬೆಳೆಯುವ ಭೂಮಿ ೮೯.೯೨ ಲಕ್ಷ ಎಕರೆಯಾಗಿದೆ; ಇದು ಮೈಸೂರು ಭೂಮಿಯ ಎರಡು ಪಟ್ಟಾಗಿದೆ. ಆಹಾರೋತ್ಪಾದನವು ಒಟ್ಟು ೩೬-೯೧ ಲಕ್ಷ ಟನ್ ಆಗಿದ್ದು ಮೈಸೂರ ಹುಟ್ಟುವಳಿಯ ಮೂರು ಪಟ್ಟಾಗಿದೆ. ಈ ಜಿಲ್ಲೆಗಳಲ್ಲಿ ಭತ್ತದ ಉತ್ಪತ್ತಿ ೬-೩೫ ಲಕ್ಷ ಟನ್ ಆಗಿದೆ; ಜೋಳ ೧೩.೯೩ ಲಕ್ಷ ಟನ್ ಹುಟ್ಟುತ್ತದೆ. ಇವು ಮೈಸೂರಿನಲ್ಲಿ ಕೊರತೆಯಲ್ಲಿದ್ದ ಎರಡು ಆಹಾರ ಧಾನ್ಯಗಳು. ಬೇರೆ ಕಾಳುಗಳ ಪ್ರಮಾಣ ೧೬.೬೨ ಲಕ್ಷ ಟನ್ ಇರುತ್ತದೆ. ವ್ಯಕ್ತಿಗೆ ದಿನಕ್ಕೆ ೧೬ ಔನ್ಸಿನಂತೆ ಇಲ್ಲಿಯ ಜನಸಂಖ್ಯೆಗೆ ೧೫.೭೫ ಲಕ್ಷ ಟನ್ ಆಹಾರ ಬೇಕು. ಅಂತೆಯೇ ಈ ಪ್ರದೇಶದಲ್ಲಿ ಆಹಾರ ಧಾನ್ಯಗಳು ಹೆಚ್ಚಿಗೆ ಆಗುತ್ತವೆ. ಇದೇನು ಆಶ್ಚರ್ಯದ ವಿಷಯವಲ್ಲ; ಏಕೆಂದರೆ ಮುಂಬಾಯಿ ಕರ್ನಾಟಕದ ಜಿಲ್ಲೆಗಳು ಯಾವಾಗಲೂ ಹೆಚ್ಚು ಗೋದಿ ಜೋಳಗಳನ್ನು ಪಡೆಯುತ್ತಲಿವೆ ಮತ್ತು ಮದ್ರಾಸ ಕರ್ನಾಟಕ ಪ್ರದೇಶದಲ್ಲಿ ಅಕ್ಕಿ ವಿಪುಲವಾಗಿ ಬೆಳೆಯುತ್ತಲಿದೆ. ಹೀಗಾಗಿ ಮೈಸೂರಿನ ಕೊರತೆಯು ಈ ಭಾಗಗಳ ವೈಪುಲ್ಯದಿಂದ ಪೂರ್ತಿಯಾಗುತ್ತದೆ. ಆಹಾರೇತರ ಉತ್ಪಾದನದಲ್ಲಿ ಹತ್ತಿ ಮತ್ತು ಇತರ ಬಳೆಗಳ ಬೆಳೆಗಳು ೧೪.೭೨ ಲಕ್ಷ ಎಕರೆಯನ್ನು ಪಡೆದಿರುತ್ತವೆ. ಮತ್ತು ಎಣ್ಣೆ ಕಾಳುಗಳು ೧೩.೧೯ ಲಕ್ಷ ಎಕರೆಗಳಲ್ಲಿ ಹುಟ್ಟುತ್ತಲಿವೆ. ಹತ್ತಿ ಮತ್ತು ನೆಲಗಡಲೆಗಳು ಅತ್ಯಂತ ಲಾಭದಾಯಕವಾಗಿವೆ.

[ಕನ್ನಡ ನುಡಿಯಲ್ಲಿ ಡಾ. ಬಾಲಕೃಷ್ಣರು ಬರೆದ ಲೇಖನದಿಂದ ಉದ್ಧೃತ]

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

R. E. P. 399/56 O. S. 618/51.

ನರಸಿಂಹ ಪ್ರಭು ಕೂಡಾ — ಅರ್ಜಿದಾರರು

ದೇವಡಿಗ ಪುಟ್ಟ ಕೂಡಾ — ಎದ್ರಿರು

3ನೇ ಎದ್ರಿ, ಮ್ಯಾನರ್ ನಾಗಪ್ಪ, ಪರಮೇಶ್ವರಿ ಹೆಂಗ್ಸಿನ ಮಗ, ಗಾರ್ಡಿಯನ್ ವೆಂಕಟ ಕುಪ್ಪನ ಅಳಿಯ.

4ನೇ ಎದ್ರಿ, ಗುರುವಮ್ಮ, ಗೋವಿಂದು ಹೆಂಗ್ಸಿನ ಮಗಳು.

5ನೇ ಎದ್ರಿ, ಗಣಪ, ಗುರುವಮ್ಮನ ಮಗ. ಕುಂದಾಪುರ ತಾಲ್ಲೂಕ ಕೆರ್ಗಾಲ್ ಗ್ರಾಮದಲ್ಲಿರುವವರು.

6ನೇ ಎದ್ರಿ, ಚಿಕ್ಕ, ನಾಗಿ ಹೆಂಗ್ಸಿನ ಮಗ, Room No 46. New Hanuman Buildings No 8/9 Kiln Lane Lamington Road Bombay 4.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಣ ಡಿಕ್ರಿಯ ಪ್ರಕಾರ ನೀವು ಕೂಡಾ ಎದ್ರಿರಿಂದ ವಾದಿರೀಗೆ ಬಪಾ ಹಣಗಳನ್ನು ಕೇಳಿ ಜರಗಿಸಿದ ಮೇಲಣ ಅಮಲ್ ಚ್ಯಾರಿಯನ್ನು ನಿಮ್ಮ ಹಾಜರಿ ಬಗ್ಗೆ ತಾರೀಕು 30—7—56ಕ್ಕೆ ಇಟ್ಟಿರುತ್ತಾರೆ. ಆದ್ರಿಂದ ನೀವು ಸದ್ರಿ ದಿವಸ 11 ಗಂಟೆಗೆ ಸರಿಯಾಗಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗದೆ ಇದ್ದಲ್ಲಿ ನಿಮ್ಮ ಗ್ಯೆರುಹಾಜರ್ರಿಯಲ್ಲಿ ಮುಂದಿನ ಹುಕ್ಕುಂ ಮಾಡಲಾದೀತು, ಎಂಬ ಸಂಗ್ತಿಯನ್ನು ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ತಿಳಿಸೋಣಾಗಿಯದೆ.

(Sd) A. N. Rao.
Advocate for Petitioners.
ತಾ. 9—7—56 ಕುಂದಾಪುರ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 76/56.

ತೋನ್‌ಸೆಪ್ಪು ಮಾರ್ಥ ಡಿ ಸೋಜ — ವಾದಿ

ಮತ್ತು

ರಫೇಲ ಲುವಿಸ್ ಕೂಡಾ — ಪ್ರತಿವಾದಿರು.

ಇವರೊಳಗೆ

3ನೇ ಪ್ರತಿವಾದಿ ಸಾವೇರ ಡಿಸೋಜ 5ನೇ ಪ್ರತಿವಾದಿ ಎಸ್ತು ಡಿಸೋಜ ಇವರೀಗೆ,

ವಾದಿಲು ಮೂಲಗೇಣಿ ಬಾಕಿಗೆ ದಾಖಲು ಮಾಡಿಸ ಮೇಲಿನ ದಾವೆಯು 3, 5ನೇ ಪ್ರತಿವಾದಿರ ನೋಟೀಸಿನ ಬಗ್ಗೆ ತಾ. 24-7-56ಕ್ಕೆ ಇಟ್ಟಿದೆ. ಸದರಿ ಪ್ರತಿವಾದಿರು ತಾ. 24-7-56ನೇ ಪೂರ್ವಾಹ್ನ ಘಂಟೆ 10ಕ್ಕೆ ಸದರಿ ವ್ಯಾಜ್ಯದಲ್ಲಿ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗುವರೇ ತಪ್ಪಿದ್ದಲ್ಲಿ ಸದರಿಯವರ ಗ್ಯೆರುಹಾಜರಿಯಿಂದ ಮೇಲಿನ ವಾಜ್ಯವು ತೀರ್ಮಾನಿಸಲ್ಪಡುವದು.

Grattan C. Rego.
Vakil for Plaintiff.
ತಾ. 10—7—56 ಉಡುಪಿ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, **UDIPI.** S. KANARA.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಪರ್ವತಾರೋಹಿ ತೇನಸಿಂಗರ ರೋಮಾಂಚಕ ಅನುಭವ

(೩ನೇ ಪುಟದಿಂದ)

...ಸವನ್ನು ಶ್ಲಾಘಿಸಿದರು. ತಮ್ಮ ಮಿ...ಗೆಲ್ಲ ಈ ವಿಷಯವನ್ನು ಹೇಳಿ...ಂಡು ಸ ತೋಷಪಟ್ಟರು........ಇಂ...ಕ ಅನುಭವಗಳಾದರೋ ನಮಗೆ ಸಾ...ರಣವಾಗಿ ಹೋಗಿದ್ದುವು.

ಎವರೆಸ್ಟ್‌ನಂಥ ಶಿಖರವನ್ನು ಏರ...ಕಾದರೆ ನೂರಾರು ಸಮಸ್ಯೆಗಳು ಅಡ್ಡಿ...ರುತ್ತವೆ. ಚಳಿಯ ವಿಪರೀತ ಕೊರೆತ ...ದು ಕಡೆ! ಆ ಎತ್ತರದಲ್ಲಿ ಆಮ್ಲ...ನಕದ ಅಭಾವ ಒಂದು ಕಡೆ; ಆ...ಳಿಯಲ್ಲೂ ಬಳಲಿಕೆಯಿಂದ ಬಾಯಾರು...ವುದು ಇನ್ನೊಂದು ಸಮಸ್ಯೆ; ನೀರು...ವು ಯಾವುದೂ ಆ ಬಾಯಾರಿಕೆ...ಯನ್ನು ಅಡಗಿಸುವಂತಿರಲಿಲ್ಲ. ಸಮು...ಮಟ್ಟದಿಂದ ಸಾವಿರಾರು ಅಡಿಗಳ ...ತ್ತರದಲ್ಲಿರುತ್ತಿದ್ದುದರಿಂದ, ಅಪ್ರಕೃತ ...ನ್ನಿವೇಶವೇರ್ಪಟ್ಟು, ತಲೆನೋವು, ...ಟಲು ಕೆರೆತ, ವಾಕರಿಗೆ ಉಂಟಾಗು...ದ್ದುವು. ಇವೆಲ್ಲಕ್ಕಿಂತ ಹೆಚ್ಚಾಗಿ ಆ ...ಪ್ರಕೃತ ಸನ್ನಿವೇಶದಲ್ಲಿ ನಿದ್ದೆ ಬರುತ್ತಿರ...ಲ್ಲ; ನನ್ನ ಬ್ರಿಟಿಷ್ ಸ್ನೇಹಿತರು ನಿದ್ದೆ ...ರುವುದಕ್ಕಾಗಿ ಮಾತ್ರೆಗಳನ್ನು ತೆಗೆದು...ಕೊಳ್ಳುತ್ತಿದ್ದರು.

ನನ್ನ ಹೃದಯದ ಬಡಿತ ಸ್ಥಿರವಾ...ದುದರಿಂದ ಪರ್ವತ ಹತ್ತುತ್ತಿದ್ದಾಗ ...ಶರೀರಿಗೆ ಆಗುತ್ತಿದ್ದ ಆಯಾಸ ನನಗಾ...ಗುತ್ತಿರಲಿಲ್ಲ. ಎವರೆಸ್ಟ್ ಶಿಖರವನ್ನು ...ರೋಹಣ ಮಾಡಲು ಎರಡು ತಂಡ...ಗಳನ್ನು ಕಳುಹಿಸಲಾಯಿತ; ಮೊದಲನೆ...ಯ ತಂಡದಲ್ಲಿ ಬೋರ್ಡಿಲಾನ್ ಮತ್ತು ...ಇವಾನ್ಸ್ ಇದ್ದರು. ಎರಡನೆಯ ತಂಡದಲ್ಲಿ ...ನಾನು, ಮತ್ತು ಹಿಲೇರಿ ಇದ್ದೆವು. ಬೊ...ರ್ಡಿಲ್ಲಾನ್ ಮತ್ತು ಇವಾನ್ಸ್‌ರ ಮೊದ...ಲನೆಯ ಆರೋಹಣ ಪ್ರಾರಂಭವಾಯಿ...ತು; ಆಗ ನಾವೆಲ್ಲ ೨೬೦೦೦ ಅಡಿಗಳ ...ಎತ್ತರದಲ್ಲಿ ೮ನೆಯ ಬಿಡಾರದಲ್ಲಿದ್ದೆವು. ...ನಾವಿದ್ದ ಪ್ರದೇಶವೇ ದಕ್ಷಿಣ ಶಿಖರ...ಶೃಂಗ (ಇದನ್ನು ಸೌತ್ ಕಾಲ್* ಎನ್ನು...ತ್ತಾರೆ.) ಈ ಶಿಖರಕ್ಕೂ ಎವರೆಸ್ಟಿಗೂ ...೩೦೦ ಅಡಿಗಳ ಅಂತರವಿದೆ. ಈ ಅಂತ...ರವನ್ನು ಹತ್ತುವಾಗ ನಡುವೆ ವಿಶ್ರಾಂತಿ...ಗಾಗಿ ಒಂದು ಬಿಡಾರವನ್ನು ಮಾಡಿಕೊ...ಳ್ಳಲು ಏರ್ಪಡಿಸಿಕೊಂಡೆವು. ಎವರೆಸ್ಟಿನ ...ಮೇಲೆ ಇದು ೯ನೆಯ ಬಿಡಾರ.

ಒಂದೇ ದಿನದಲ್ಲಿ ೩,೩೦೦ ಅಡಿಗಳನ್ನು ...ಏರುವುದು ಅಸಾಧ್ಯವಾಗಿತ್ತು. ಮೇ ೨೬ನೆ...ಯ ತಾರೀಕು (೧೯೫೩) ಬೋರ್ಡಿಲಾನ್ ...ಮತ್ತು ಇವಾನ್ಸ್ ಶಿಖರವನ್ನು ಏರಲು ...ಹೊರಟರು. ಮಾರನೆಯ ದಿನ ನಾವು ಅವ...ರನ್ನು ಹಿಂಬಾಲಿಸಿದೆವು. ನಾವು ದಕ್ಷಿಣ ...ಶಿಖರಶೃಂಗವನ್ನು ಸೇರಿದಾಗ ಕರ್ನಲ್ ...ಹಂಟ್ ಮತ್ತು ಒಬ್ಬ ಷರ್ಪ ಇಳಿದು ...ಬರುತ್ತಿರುವುದನ್ನು ನೋಡಿದೆವು. ಇಬ್ಬ...ರೂ ತೀರ ಬಳಲಿಹೋಗಿದ್ದರು. ಬಿಡಾ...ರಕ್ಕೆ ಬಂದಕೂಡಲೇ ಹಂಟ್ ಪ್ರಜ್ಞಾತಪ್ಪಿ...ದ್ದರು. ನಿಂಬೆಯ ಹಣ್ಣಿನ ಪಾನಕ ...ಕುಡಿಸಿದ ಮೇಲೆ ಅವರು ಚೇತರಿಸಿಕೊಂ...ಡರು; ತಾವಿಬ್ಬರೂ ೨೭,೩೫೦ ಅಡಿಗಳ ವರೆಗೆ ಏರಿದ್ದಾಗಿ ಅವರು ಹೇಳಿದರು. ಮುಂದೆಹೋಗಲು ಅವರಿಗೆ ಸಾಧ್ಯವಾಗ ಲಿಲ್ಲ. ನಮಗಾಗಿ ಆಮ್ಲಜನಕವನ್ನೂ ಆಹಾರವನ್ನೂ ಅಲ್ಲಿಯೇ ಇರಿಸಿ ಬಂದಿದ್ದರು. ಹಂಟ್‌ರವರು ಆಮ್ಲಜನಕವಿಲ್ಲದೆ ಹಿಂತಿರುಗಿದ್ದರಿಂದಲೇ ಪ್ರಜ್ಞಾತಪ್ಪಿದ್ದರು.

ಶಿಖರ ಮುಟ್ಟುವುದಕ್ಕೆ ತೆರಳಿದ್ದ ಬೋರ್ಡಿಲಾನ್ ಮತ್ತು ಇವಾನ್ಸ್ ಅವರ ಸುದ್ದಿಗಾಗಿ ಕಾದುಕುಳಿತೆವು....ಕಾಯುವುದು...ಶಿಖರದ ಕಡೆ ನೋಡುವುದು....ಮತ್ತೆ ಕಾಯುವುದು. ಹೀಗೆ ಅನೇಕ ಗಂಟೆಗಳು ಕಳೆದುವು.

ಹೀಗೆ ನಾಲ್ಕಾರು ಗಂಟೆಗಳು ಕಳೆದಿರಬಹುದು; ಬಹು ದೂರದಲ್ಲಿ ಲ್ಹೋಟ್ಸೆ ಶಿಖರಾಗ್ರದ ಬಳಿ ಅವರಿಬ್ಬರೂ ಇಳಿದು ಬರುತ್ತಿದ್ದುದು ಕಂಡಿತು. ಆ ದೂರದಲ್ಲಿ ಅವರು ಎರಡು ಸಣ್ಣ ಚುಕ್ಕಿಗಳಂತೆ ಕಾಣುತ್ತಿದ್ದರು.

ಅವರು ಹಿಂತಿರುಗಿದರು. ಎವರೆಸ್ಟ್ ಶಿಖರವನ್ನು ಅವರಿಗೆ ಹತ್ತಲಾಗಿರಲಿಲ್ಲ. ಆದರೆ ಆ ಶಿಖರಕ್ಕೆ ದಕ್ಷಿಣದಲ್ಲಿದ್ದ ಇನ್ನೊಂದು ಶಿಖರವನ್ನು (ಇದನ್ನು ಸೌತ್ ಸಮ್ಮಿಟ್ ಎಂದು ಕರೆಯುವ ವಾಡಿಕೆ) ಏರಿಬಂದಿದ್ದರು. ಅದು ವರೆಗೆ, ಅತ್ಯಂತ ಎತ್ತರವಾದ ಶಿಖರವನ್ನು ಅವರು ಹತ್ತಿದ್ದರು.

ಮೇ ೨೮ನೆಯ ತಾರೀಕು....ಆ ದಿನ ವಿಪರೀತ ಬಿರುಗಾಳಿ; ಶಿಖರವನ್ನು ಏರುವೆವೆ ಎಂಬ ಸಂಶಯ ನನಗೆ ಮೂಡಿತು. ಜಾರ್ಜ್ ಲೋ, ಆಲ್‌ಫ್ರೆಡ್ ಗ್ರೆಗರಿ, ಷರ್ಪ ಆಂಗ್ ನೀಮಾ ಒಬ್ಬೊಬ್ಬರೂ ೪೦ ಪೌಂಡುಗಳ ಆಮ್ಲಜನಕದ ಸಿಲಿಂಡರ್‌ಗಳನ್ನು ಹೊತ್ತು ಹೊರಟರು. ಹಿಲೇರಿ, ನಾನು ೫೦ ಪೌಂಡುಗಳ ಆಮ್ಲಜನಕ ಹೊತ್ತು ಅವರನ್ನು ಹಿಂಬಾಲಿಸಿದೆವು. ಹೆಪ್ಪುಗಟ್ಟಿದ ಹಿಮಗಡ್ಡೆಗಳನ್ನು ದಾಟಿದೆವು. ನಮ್ಮ ಮುಂದೆ ಹೋಗಿದ್ದವರು ಹಿಮಗಡ್ಡೆಗಳಲ್ಲಿ ಮೆಟ್ಟಿಲುಗಳನ್ನು ಕೆತ್ತಿದ್ದರು; ನಾವು ಶಿಖರದ ವರೆಗೂ ಹೋಗಬೇಕಾಗಿದ್ದುದರಿಂದ ಶ್ರಮದಾಯಕವಾದ ಕೆಲಸಗಳನ್ನೆಲ್ಲ ಅವರೇ ಮಾಡುತ್ತಿದ್ದರು.

ಎರಡು ದಿನಗಳ ಹಿಂದೆ ಹಂಟ್‌ರವರು ಏರಿದ್ದ ಶಿಖರವನ್ನೇ ನಾವು ಪುನಃ ಏರಿದೆವು. ಪರ್ವತಶ್ರೇಣಿಗಳ ನಡುವೆ ಮಾರ್ಗ ವಿಪರೀತ ಕಡಿದಾಗುತ್ತ ಬಂತು; ಹಿಮಗಡ್ಡೆಗಳು ಹೆಚ್ಚು ಹೆಚ್ಚು ದಪ್ಪನಾಗುತ್ತ ಬಂದುವು; ಅವು ಕಲ್ಲುಬಂಡೆಗಳನ್ನು ಬಹಳ ಆಳದ ವರೆಗೆ ಮುಚ್ಚಿದ್ದುವು. ಆದುದರಿಂದ ಹಿಮಗಡ್ಡೆಗಳಲ್ಲಿ ಮೆಟ್ಟಿಲುಗಳನ್ನು ಕೆತ್ತುವ ಕೆಲಸವನ್ನು ಮತ್ತೆ ಪ್ರಾರಂಭಿಸಬೇಕಾಯಿತು. ಮಧ್ಯಾಹ್ನ ೨ ಗಂಟೆಯ ವೇಳೆಗೆ ನಾವೆಲ್ಲ ತೀರ ಬಳಲಿದ್ದೆವು. ಒಂಭತ್ತನೆಯ ಬಿಡಾರದಲ್ಲಿ ನಮ್ಮ ಸ್ನೇಹಿತರೆಲ್ಲ, ಹಿಲೇರಿಗೆ ಮತ್ತು ನನಗೆ ಯಶಸ್ಸು ಕೋರಿ, ಹಿಂತಿರುಗಿ ಹೊರಟುಹೋದರು.

ಆಗ ೨೭,೯೦೦ ಅಡಿಗಳ ಎತ್ತರದಲ್ಲಿ, ಪ್ರಪಂಚದ ಅತ್ಯುನ್ನತ ಶಿಖರ ಶ್ರೇಣಿಯ ಮೇಲೆ ಹಿಲೇರಿ, ನಾನು ನಿಂತಿದ್ದೆವು! ಆ ಎತ್ತರದಲ್ಲಿ ಬಿಡಾರಕಟ್ಟಲು ನಮಗೆ ಬಹಳ ಪ್ರಯಾಸವಾಯಿತು. ಪದಾರ್ಥಗಳೆಲ್ಲ ಚಳಿಯ ಕೊರೆತಕ್ಕೆ ಸೆಟೆದುಹೋಗಿದ್ದುವು.

“ಮೇ ೨೯ನೆಯ ತಾರೀಕು... ಬೆಳಗಿನ ಝಾವ ೩-೩೦ಕ್ಕೆ ನಾವಿಬ್ಬರೂ ಎಚ್ಚರಗೊಂಡೆವು. ‘ಸ್ಟೋವ್’ (ಸ್ಪಿರಿಟ್ ದ್ರಾವಕದಿಂದ ಉರಿಯುವ ಯಾಂತ್ರಿಕ ಒಲೆ) ಹಚ್ಚಿ, ಹಿಮಗಡ್ಡೆಗಳನ್ನು ಕರಗಿಸಿ, ನಿಂಬೆಹಣ್ಣಿನ ಪಾನಕ, ಕಾಫಿ, ಮಾಡಿಕೊಂಡು ಕುಡಿದೆವು. ಬಹು ಎತ್ತರವಾದ ಎವರೆಸ್ಟ್ ಶಿಖರವನ್ನು ಹತ್ತಬೇಕಾಗಿದ್ದುದರಿಂದ ಹೆಚ್ಚು ಆಹಾರವನ್ನು ತೆಗೆದುಕೊಳ್ಳಲಿಲ್ಲ. ನಮ್ಮ ಅದೃಷ್ಟಕ್ಕೆ ಬಿರುಗಾಳಿ ಪೂರ ನಿಂತುಹೋಗಿತ್ತು. “ಈ ದಿನವೆಲ್ಲ ಗಾಳಿ ಇಲ್ಲದಿರಲಿ” ಎಂದು ಭಗವಂತನನ್ನು ನಾನು ಪ್ರಾರ್ಥಿಸಿಕೊಂಡೆ. ಹಿಲೇರಿ ತೊಟ್ಟಿದ್ದ ಬೂಟುಗಳು ಚಳಿಯ ಕೊರೆತಕ್ಕೆ ಸೆಟೆದುಹೋಗಿದ್ದುವು ಗಂಟೆಗಳ ಗಟ್ಟಲೆ ಅವುಗಳನ್ನು ಒಲೆಯ ಮುಂದೆ ಕಾಯಿಸಬೇಕಾಯಿತು. ಬೆಳಗ್ಗೆ ೬.೩೦ಕ್ಕೆ ಶಿಖರಾರೋಹಣಕ್ಕಾಗಿ ನಾವು ಹೊರಟೆವು. ಪಾದರಕ್ಷೆಗಳಿಗೆ, ಮೊಳೆಗಳುಳ್ಳ ಅಟ್ಟಣೆಗಳನ್ನು ಜೋಡಿಸಿಕೊಂಡೆವು. (ಇವುಗಳನ್ನು ‘ಕ್ರಾಂಪೋನ್ಸ್’ ಎನ್ನುತ್ತಾರೆ. ಕಡಿದಾದ ಪರ್ವತಪ್ರದೇಶಗಳಲ್ಲಿ ಕಾಲು ಜಾರದಿರಲು ಇವನ್ನ ಹಾಕಿಕೊಳ್ಳುವ ವಾಡಿಕೆ). ಬೆಚ್ಚನೆಯ ಬಟ್ಟೆ ತೊಟ್ಟು, ಆಮ್ಲಜನಕದ ಸಿಲಿಂಡರುಗಳನ್ನು ಹೊತ್ತೆವು. ನನ್ನ ಪಿಕಾಸಿಗೆ ಭಾರತ, ನೇಪಾಳ, ಸಂಯುಕ್ತ ರಾಷ್ಟ್ರಗಳ ಒಕ್ಕೂಟ ಮತ್ತು ಇಂಗ್ಲೆಂಡಿನ ಬಾವುಟಗಳನ್ನು ಸುತ್ತಿಕೊಂಡೆ.

ಈಶಾನ್ಯದ ಶ್ರೇಣಿಯಿಂದ ಎವರೆಸ್ಟಿನ ಶಿಖರವನ್ನು ಏರಲು ನಾವು ತೊಡಗಿದ್ದಾಗ, ೭,೦೦೦ ಅಡಿಗಳ ಶ್ರೇಣಿ ನಮ್ಮ ಮುಂದೆ ಬೃಹದ್ ಗೋಡೆಯಂತೆ ಎದ್ದುನಿಂತಿತ್ತು. ಇದನ್ನು ಹತ್ತುವುದರಲ್ಲಿ ನಮ್ಮ ಶಕ್ತಿ ತೀರ ಅಡಗಿಹೋಗಿತ್ತು. ೯ ಗಂಟೆಯ ವೇಳೆಗೆ ನಾವು ದಕ್ಷಿಣ ಶಿಖರದ ಮೇಲಿದ್ದೆವು; ಮೇಲುಸಿರು ಒಂದೇ ಸಮ ಬರುತ್ತಿತ್ತು. ವಿಶ್ರಾಂತಿ ತೆಗೆದುಕೊಳ್ಳುವುದು ಅನಿವಾರ್ಯವಾಯಿತು. ಒಂದು ಕಡೆ ಪಶ್ಚಿಮದ ಕ್ವಾಂ’ನ ಪ್ರಚಂಡ ಪ್ರಪಾತ, ಇನ್ನೊಂದು ಕಡೆ ಖುಂಬು ಹಿಮಪ್ರವಾಹದ ಮಹಾ ಕಣಿವೆ. ನಾವು ಮೇಲಕ್ಕೇರಿದಂತೆಲ್ಲ ನಮ್ಮ ಪಥ ಹೆಚ್ಚು ಶ್ರಮದಾಯಕವೂ, ಅಪಾಯಕಾರಿಯೂ ಆಗುತ್ತ ಬಂತು. ಒಂದು ಕಡೆಯಂತೂ ಮಹಾ ಬಂಡೆಯೊಂದು ನಮ್ಮ ಮಾರ್ಗಕ್ಕೆ ಪೂರ್ಣವಾಗಿ ಅಡ್ಡಬಂತು. ಅದನ್ನು ಬಹು ಪ್ರಯಾಸದಿಂದ, ಬಹಳ ನಾಜೋಕಾಗಿ ಏರಿದೆವು. ನಮಗಿದ್ದ ಅಲ್ಪಸ್ವಲ್ಪ ಶಕ್ತಿಯೂ ಅದನ್ನು ಏರುವುದರಲ್ಲಿ ಉಡುಗಿಹೋಗಿತ್ತು. ಅದನ್ನು ಏರಿದ ಮೇಲೆ ಸ್ವಲ್ಪಕಾಲ ವಿಶ್ರಮಿಸಿಕೊಂಡೆವು. ನಾನು ತಲೆಯೆತ್ತಿ ನೋಡಿದಾಗ ಎವರೆಸ್ಟ್ ಶಿಖರ ಸಮೀಪದಲ್ಲೇ ಗೋಚರಿಸುತ್ತಿತ್ತು. ನಾವು ಮತ್ತೆ ಆರೋಹಣ ಕಾರ್ಯದಲ್ಲಿ ತೊಡಗಿದೆವು. ಪುನಃ ಪುನಃ ಕಡಿದಾದ ಹಿಮಗೆಡ್ಡೆಗಳು ಗುಪ್ಪೆ ಗುಪ್ಪೆಯಾಗಿ ನಮಗೆ ಅಡ್ಡಿಬರುತ್ತಿದ್ದುವು. ಒಂದೊಂದು ಗುಪ್ಪೆಯನ್ನು ಪ್ರಯಾಸದಿಂದ ದಾಟಿದಾಗಲೂ ‘ಶಿಖರ ಹತ್ತಿರವಾಯಿತು’ ಎಂದುಕೊಳ್ಳುತ್ತಿದ್ದೆವು. ಆದರೆ ನಮ್ಮನ್ನು ಪರೀಕ್ಷಿಸುವುದಕ್ಕೆ ಇನ್ನೊಂದು ಗುಪ್ಪೆ ಸಿದ್ಧವಾಗಿರುತ್ತಿತ್ತು!

ಶಿಖರಕ್ಕೆ ತೀರ ಸಮೀಪವಾದಾಗ ಸ್ವಲ್ಪಕಾಲ ನಿಂತೆವು. ನಾವು ಮುಂದು ವರಿದು ಹೊರಟೆವು. ಪಿಕಾಸಿಯಲ್ಲಿ

*ಎವರೆಸ್ಟ್ ಮಹಾ ಶಿಖರಕ್ಕೆ ದಕ್ಷಿಣದಲ್ಲಿ ...ಲ್ಹೋಟ್ಸೆ ಎಂಬ ಮತ್ತೊಂದು ಶಿಖರವಿದೆ. ...ದರ ಎತ್ತರ ಸುಮಾರು ೨೮,೦೦೦ ಅಡಿಗಳು. ... ಶಿಖರಕ್ಕೂ ಎವರೆಸ್ಟ್ ಶಿಖರಕ್ಕೂ ...ನಡುವೆ ಕಡಿದಾದ ಪ್ರದೇಶವಿದೆ. ಇದೇ “ಸೌತ್ ಕಾಲ್” ಅಥವಾ ದಕ್ಷಿಣ ಶಿಖರಶೃಂಗ.



In the Court of the District Munsif of Mangalore.

R. E. P. No. 10/1956
In O. S. No. 347/1937

Between:

Maru Palai ... Petitioner

and

Manju Bhandary and Others... Respondents.

Notice to 5th Respondent Ramakke Hengsu, wife of N. Kinhanna Shetty (n/o Koraga Hegde) residing in Badagaulipadi village, Mangalore Tq.

Notice is hereby given to the 5th Respondent in this execution petition Ramakke Hengsu also as Ejamanthi of her kavaru that the application for delivery of properties detailed as Schedule D(3) in the Award Decree in the above suit is posted for her appearance to 23—7—56 at 11 A. M. in the above court. If she or anybody on her behalf fails to appear and represent her case the petition will be heard and ordered in her absence.

(By order of the court)

K. K. Rai, *B.A.,LL.B.*,
Advocate for Petitioner.

Mangalore, 10—7—56.

ನಾಲ್ಕಾರು ಮೆಟ್ಟಲುಗಳನ್ನು ಕೆತ್ತಿಕೊಂಡು ಮುಂದುವರಿದಾಗ, ಇದುವರೆಗೆ ನಮಗೆ ಪ್ರಯಾಸ ಉಂಟು ಮಾಡಿದ್ದ ಆ ಶಿಖರ ನಿರರ್ಗಳವಾಗಿ ಇನ್ನೊಂದು ಕಡೆ ಇಳಿದು ಹೋಗುತ್ತಿತ್ತು!!.... ಕೊನೆಗೂ ನಾವು ಎವರೆಸ್ಟ್ ಶಿಖರವನ್ನು ಏರಿದ್ದೆವು!!!

ನನ್ನ ಸಂತೋಷ ಎಲ್ಲೆ ಮೀರಿತು. ನಾನಂತೂ ಆ ಮಹಾ ಶಿಖರದ ಮುಂದೆ ಮಗುವಿನಂತಾಗಿದ್ದೆ. ಗಾಳಿಯಲ್ಲಿ ಕೈ ಆಡಿಸಿ, ಹಿಲೇರಿಯವರನ್ನು ಅಪ್ಪಿ ಅವರ ಬೆನ್ನು ತಟ್ಟಿದೆ; ಅವರೂ ಹಾಗೇ ಮಾಡಿದರು. ಆಗ ಮಧ್ಯಾಹ್ನ ೧೧-೩೦ ಗಂಟೆ. ಸೂರ್ಯದೇವ ಪ್ರಜ್ವಲಿಸುತ್ತಿದ್ದ. ಆಕಾಶ ಅಚ್ಚ ನೀಲಿಯ ಬಣ್ಣದ್ದಾಗಿತ್ತು. ಆಕಾಶ ಆ ಬಣ್ಣಕ್ಕಿದ್ದುದು ನಾನು ಹಿಂದೆ ನೋಡಿಯೇ ಇರಲಿಲ್ಲ. ಟಿಬೆಟ್ ಪೀಠಭೂಮಿಯ ಕಡೆಯಿಂದ ಮಂದಮಾರುತ ಬೀಸುತ್ತಿತ್ತು. ನಮ್ಮ ಸುತ್ತಲೂ, ನಾವಿದ್ದುದಕ್ಕಿಂತ ತಗ್ಗಿನಲ್ಲಿ, ಹಿಮಾಚಲದ ಉತ್ತುಂಗ ಗಿರಿಶಿಖರಗಳು, ಮೋಡಗಳಿಂದ ಮೇಲೆ ತಲೆಯೆತ್ತಿ ನಿಂತಿದ್ದುವು. ಒಂದು ಕಡೆ ಲ್ಹೋಟ್ಸೆ ಶಿಖರ, ಎವರೆಸ್ಟಿಗೆ ಪಶ್ಚಿಮದಲ್ಲಿ ನಸ್ಸೆ, ಬಹುದೂರದಲ್ಲಿ ಮಕಾಲು ಪರ್ವತಶ್ರೇಣಿ ಎದ್ದು ನಿಂತಿದ್ದುವು. ಪ್ರಕೃತಿಯ ಆ ದೃಶ್ಯ ಮನೋಹರವಾಗಿತ್ತು, ಭೀಕರವಾಗಿತ್ತು. ನಮ್ಮ ಆಮ್ಲಜನಕದ ಯಂತ್ರವನ್ನೂ ಮುಖವಾಡವನ್ನೂ ತೆಗೆದೆವು. ಹಿಲೇರಿ ಆ ಗಿರಿಶಿಖರಗಳ ಹತ್ತಾರು ಚಿತ್ರಗಳನ್ನು ತೆಗೆದರು. ನನ್ನ ಕಿಸೆಸಿಗೆ ಸುತ್ತಿ ತಂದಿದ್ದ ಬಾವುಟಗಳನ್ನು ಬಿಡಿಸಿ, ಅವುಗಳನ್ನು ಆ ಮಹಾಶಿಖರದ ಮೇಲೆ ಏರಿಸಿದೆ. ಆ ಚಿತ್ರವನ್ನು ಹಿಲೇರಿ ತೆಗೆದುಕೊಂಡರು. ನಾನೂ ಅವರ ಚಿತ್ರವನ್ನು ತೆಗೆಯುವೆನೆಂದಾಗ ಅವರು ಅದಕ್ಕೆ ಒಪ್ಪಲಿಲ್ಲ... ಈ ಯಶಸ್ಸಿಗಾಗಿ ದೇವರಿಗೆ ನನ್ನ ಅನಂತ ವಂದನೆಗಳನ್ನು ಅರ್ಪಿಸಿದೆ. ಎವರೆಸ್ಟ್ ಶಿಖರದ ಮೇಲೆ ನಾವು ೧೫ ನಿಮಿಷಗಳ ಕಾಲ ನಿಂತಿದ್ದೆವು. ಶಿಖರವನ್ನು ಹತ್ತುವುದು ಎಷ್ಟು ಕಷ್ಟವಾಗಿತ್ತೋ ಅದನ್ನು ಇಳಿಯುವುದು ಅದಕ್ಕೆ ಹತ್ತರಷ್ಟು ಕಷ್ಟವಾಗಿತ್ತು. ನಮ್ಮನ್ನು ಜೀವಸಹಿತ ಪರ್ವತದ ಬುಡ ಮುಟ್ಟಿಸುವಂತೆ ಭಗವಂತನನ್ನು ಕೋರಿ, ನಾವು ಹಿಂತಿರುಗಲು ಸಿದ್ಧರಾದೆವು."

["ಪುಸ್ತಕ ಪ್ರಪಂಚ"ದಲ್ಲಿ ಪ್ರಕಟವಾದ ಅ. ಶ್ರೀ. ಪ್ರಸಾದರ ಲೇಖನ. ಎವರೆಸ್ಟ್ ಶಿಖರವನ್ನು ಏರಿದಾಗ ತನಗಾದ ಅನುಭವವನ್ನು ತೇನಸಿಂಗರ ಮಾತಿನಲ್ಲಿಯೇ ಜೇಮ್ಸ್ ರ್‍ಯಾಮ್ಸೇ ಅಲ್ಮನ್ ಬರೆದಿರುವ ಲೇಖನ ಇದರ ಮೂಲ.]

ಮಕ್ಕಳ ಮಗ್ಗಿಪುಸ್ತಕ

0—1—0



ಪಹಲ್‌ಗಾಂನಲ್ಲಿ ವಿದೇಶಿ ವಿದ್ಯಾರ್ಥಿಗಳ ಬೇಸಿಗೆ ಶಿಬಿರ

ಶ್ರೀನಗರಕ್ಕೆ 59 ಮೈಲಿಗಳ ದೂರದಲ್ಲಿರುವ ಸುಂದರ ಲಿದ್ದಾರ್ ಕಣಿವೆಯಲ್ಲಿರುವ ಪ್ರಸಿದ್ಧ ಪರ್ವತಧಾಮವಾದ ಪಹಲ್‌ಗಾಂನಲ್ಲಿ ವ್ಯವಸ್ಥೆಗೊಳಿಸಿದ್ದ ವಿದೇಶಿ ವಿದ್ಯಾರ್ಥಿಗಳ ಬೇಸಿಗೆ ಶಿಬಿರದಲ್ಲಿ 37 ರಾಷ್ಟ್ರಗಳ ಸುಮಾರು 114 ಮಂದಿ ಭಾಗವಹಿಸಿದ್ದರು. ಅವರಲ್ಲಿ 18 ಮಂದಿ ಮಹಿಳೆಯರಿದ್ದರು.

ಪೂರ್ವ, ಮಧ್ಯ ಮತ್ತು ದಕ್ಷಿಣ ಆಫ್ರಿಕ, ಗೋಲ್ಡ್ ಕೋಸ್ಟ್, ನೈಜೀರಿಯ ಮತ್ತು ಸೂಡಾನ್‌ಗಳಿಂದ ಸುಮಾರು 53 ಮಂದಿ ಆಗಮಿಸಿದ್ದರು. ಬರ್ಮ, ಸಿಲೋನ್, ಚೀಣ, ಇಂಡೋನೇಷಿಯ, ಮಲಯ, ಫಿಜಿ, ಏಡನ್, ಇರಾನ್, ಜೋರ್ಡಾನ್ ಮತ್ತು ಇಸ್ರೇಲ್‌ಗಳಿಂದ 33 ಮಂದಿ ಆಗಮಿಸಿದ್ದರು. ಯೂರೋಪಿನಿಂದ ಮೂರು ಮಂದಿ, ದಕ್ಷಿಣ ಅಮೇರಿಕದಿಂದ ಒಬ್ಬರು, ಬ್ರಿಟಿಷ್ ಗಯಾನ, ಟ್ರಿನಿಡಾಡ್ ಮತ್ತು ವೆಸ್ಟ್ ಇಂಡೀಸ್‌ಗಳಿಂದ 8 ಮಂದಿಯನ್ನು ಆಹ್ವಾನಿಸಲಾಗಿತ್ತು. 16 ಮಂದಿ ಭಾರತೀಯ ವಿದ್ಯಾರ್ಥಿಗಳನ್ನು ಆರಿಸಲಾಗಿತ್ತು.

ಭಾರತದ ನಾನಾ ಭಾಗಗಳಲ್ಲಿರುವ 24 ಶಿಕ್ಷಣ ಸಂಸ್ಥೆಗಳಿಂದ ಹೊರಟ ಈ ವಿದ್ಯಾರ್ಥಿಗಳು ಒಂದೆಡೆ ಸೇರಿದ್ದರು. ಮೊದಲನೆಯ 15 ದಿನಗಳನ್ನು ಅವರು ಶ್ರೀನಗರದಲ್ಲಿ ಕಳೆದರು. ಅಲ್ಲಿಯ ಸರೋವರಗಳ, ಕೊಳಗಳ ನಿಸರ್ಗ ಸೌಂದರ್ಯವನ್ನು ಮನಸಾರೆ ಅನುಭವಿಸಿ ನಲಿದರು. ಶಾಲಿಮಾರ್, ನಿಷತ್ ಮತ್ತು ಚಾಷ್ಮಶಾಹಿ ತೋಟಗಳಲ್ಲಿ ವಿಶ್ರಾಂತಿ ಪಡೆದರು. ಶ್ರೀನಗರದಿಂದ ವಿದ್ಯಾರ್ಥಿಗಳು, ಸಮುದ್ರಮಟ್ಟಕ್ಕೆ 8,700 ಅಡಿಗಳ ಎತ್ತರದಲ್ಲಿರುವ 'ಪುಷ್ಪವನ'ವೆನಿಸಿದ ಗುಲ್ಮಾರ್ಗ್‌ಗೆ ತೆರಳಿದರು. ಇವರು ಖಿಲಾನ್ ಮಾರ್ಗ್, ಅಲಿಪತೂರ್, ಬಾಬಾರಿಷಿ ಮತ್ತು ಫಿರೋಜ್‌ಪುರ್ ನಾಲಾಗಳಲ್ಲಿ ಒಂದು ವಾರ ಕಾಲವಿದ್ದು ಇವುಗಳ ಸೌಂದರ್ಯವನ್ನು ಸವಿದರು.

ಪಹಲ್‌ಗಾಂನಲ್ಲಿ ವಿದ್ಯಾರ್ಥಿಗಳು ಮನರಂಜನಾ ಕಾರ್ಯಕ್ರಮದಲ್ಲಿ ಭಾಗವಹಿಸಿದರು. ಬೇಸಿಗೆ ಶಿಬಿರದಲ್ಲಿ ಈ ಕಾರ್ಯಕ್ರಮದ ಅಂಗವಾಗಿ ಒಂದು ಸಂಜೆ ಒಂದು ಚರ್ಚಾ ಕೂಟವನ್ನು ಏರ್ಪಡಿಸಲಾಗಿತ್ತು. ಈ ಚರ್ಚಾ ಕೂಟದ ವಿಷಯ: "ವಿಶ್ವದಲ್ಲಿ ಶಾಂತಿಯುತ ಸಹಬಾಳ್ವೆಗೆ ವಿಜ್ಞಾನಕ್ಕಿಂತಲೂ ಹೆಚ್ಚಾಗಿ ಕಲೆಯು ಸಹಾಯಕ."

ಪಹಲ್‌ಗಾಂ ಶಿಬಿರದಲ್ಲಿ ವಿದ್ಯಾರ್ಥಿಗಳು ಪ್ರಾತಃಕಾಲ ಫುಟ್‌ಬಾಲ್ ಆಟವನ್ನು ಆಡುತ್ತಿರುವುದನ್ನು ಚಿತ್ರದಲ್ಲಿ ಕಾಣಬಹುದು.

(೧ನೇ ಪುಟದಿಂದ)

ಲಾದ ನೀತಿಗೆ ಅನುಗುಣವಾಗಿರಬೇಕೆಂದು ಸಹಾ ಇಲ್ಲಿ ಹೇಳಬೇಕಾಗಿದೆ. ಯೋಜನಾ ಆಯೋಗವು ಎಂಥ ಪ್ರಸಂಗದಲ್ಲಿಯೇ ಆಗಲಿ, ಉತ್ಪನ್ನದ ವಿಧದಲ್ಲಿ ಒಂದಂಶಕ್ಕಿಂತ ಹೆಚ್ಚು ಗೇಣಿಯನ್ನು ಧನಿಯೇ ವಸೂಲು ಮಾಡಲು ಅವಕಾಶವಿರಲೇ ಕೂಡದೆಂದು ಹೇಳಿದೆ. ಇದನ್ನು ದ್ವಿತೀಯ ಯೋಜನೆಯ ಅವಧಿಯಲ್ಲಾದರೂ ಸಾಧಿಸಬೇಕೆಂದು ಅದು ಅಭಿಪ್ರಾಯಪಟ್ಟಿದೆ. ಈಗ ನಾವು ದ್ವಿತೀಯ ಯೋಜನೆಯಲ್ಲಿ ಕಾಲಿರಿಸಿದ್ದೇವೆ; ಆದುದರಿಂದ ಈ ನೀತಿಯನ್ನು ಎತ್ತಿಹಿಡಿಯುವ ಶಾಸನವನ್ನು ನಾವು ಮಾಡಬೇಕಲ್ಲದೆ, ಯೋಜನಾ ಆಯೋಗದ ಸಲಹೆಯನ್ನು ಉಪೇಕ್ಷಿಸಲಾಗಿದೆ ಎಂಬ ಭಾವನೆಗೆ ಅವಕಾಶ ಕೊಡಬಾರದು.

ಸರಕಾರದ ಮತ್ತು ಪ್ರತಿನಿಧಿಗಳ ಸದ್ಬುದ್ಧಿಗೆಯೇ ಬಿಟ್ಟರೆ, ಯಾವ ಮಹತ್ಕಾರ್ಯವೂ ಶೀಘ್ರದಲ್ಲಿ ನೆರವೇರಲಾರದೆಂದು ಈಗಾಗಲೇ ಜನಜನಿತವಾಗಿದೆ. ಅನ್ಯಾಯ ನಡೆದಿದೆ ಎಂಬುದನ್ನು ಸರಕಾರವೇ ಸೂಕ್ಷ್ಮ ಗ್ರಹಿಕೆಯಿಂದ ತಿಳಿದುಕೊಳ್ಳುವ ಕಾಲವೀಗ ಉಳಿದಿಲ್ಲ. ಜನರೇ ತಮಗೆ ಅನ್ಯಾಯವಾಗಿದೆ ಎಂದು ಬೊಬ್ಬಿರಿಯಬೇಕಾಗಿದೆ; ಮತ್ತು ಇದನ್ನು ಮನವರಿಕೆ ಮಾಡಿಕೊಡಬೇಕಾಗಿದೆ. ಆಗ ಮಾತ್ರ ಸರಕಾರವು ಇದರ ಯಥಾರ್ಥತೆಯನ್ನು ಗ್ರಹಿಸಲೆಂಬಂತೆ ಸಮಿತಿಗಳನ್ನು ನೇಮಿಸುವ ಮತ್ತಿತರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಒಲ್ಲದ ಮನಸ್ಸಿನಿಂದಲೇ ಮುಂದಾಗುತ್ತದೆ. ಈ ಸಮಿತಿಯ ವರದಿಯನ್ನದು ಸ್ವೀಕರಿಸುವುದೆಂದೇನಿಲ್ಲ—ಅದು ಸಮರ್ಪಕವಾಗಿಲ್ಲವೆಂದು ಇನ್ನೊಂದು, ಮತ್ತೊಂದು—ಹೀಗೆ ಆಯಾ ಮಂತ್ರಿಗಳ ಲಹರಿಗನುಸಾರ ಸಮಿತಿಗಳು ಏರ್ಪಡುತ್ತಲೇ ಹೋಗುತ್ತವೆ; ಅದೇ ವಿಷಯವನ್ನು ಪುನಃ ಪುನಃ ಪ್ರಸ್ತಾಪಿಸಿ ವರದಿಮಾಡುತ್ತವೆ; ಮತ್ತೀ ವರದಿಗಳನ್ನು ಮೂಲೆಗುಂಪು ಮಾಡಲಾಗುತ್ತದೆ. ಜನರೇ ಅಪಹಣೆಗೊಂಡು ಈ ವಿಳಂಬವನ್ನು ವಿರೋಧಿಸದಿದ್ದರೆ, ಸರಕಾರ ಹೆಚ್ಚಿನ ಗಮನವನ್ನು ಕೊಡಲಾರದು. ಈ ಮಾತು ಪ್ರಸ್ತುತ ಮಸೂದೆಗೂ ಅನ್ವಯಿಸುವುದರಿಂದ, ಸಾಗುವಳಿದಾರರು ಮೂಕರೂ ನಿಷ್ಕ್ರಿಯರೂ ಆಗಿ ಕುಳಿತರೆ ಅವರಿಗೆ ಹಿತಪಾಡುದನ್ನಬಾದ ಶಾಸನವು ನಿರೀಕ್ಷೆಯ ವಿಷಯವೇ ಆಗಿ ಕೊನೆಯ ವರೆಗೂ ಉಳಿದೀತು.

(ಬರೆದು ಬಂದುದು.)

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published by K. H. Shetty, at the Navayuga press, Udipi S. India

REGD. NO. M. 3818

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ VOL. 35

ಉಡುಪಿ, 26—7—1956

ಸಂಚಿಕೆ ೪೭ NO. 47

ದಕ್ಷಿಣ ಕನ್ನಡದ ಕಾರ್ಯಕ್ರಮ

ಎರಡನೇ ಯೋಜನೆಯು ಹಳ್ಳಿಗಳ ಮಟ್ಟದಲ್ಲಿ ಪ್ರತಿಫಲವನ್ನೊದಗಿಸುವಷ್ಟು ಪರಿಣಾಮಕಾರಿಯಾದ ಕಾರ್ಯಕ್ರಮಗಳಿಂದ ಕೂಡಿರಬೇಕೆಂದು ಯೋಜನಾ ಆಯೋಗವು ಉದ್ದೇಶಿಸಿರುವುದು ಸರ್ವರಿಗೂ ತಿಳಿದಿರುವ ವಿಷಯ. ನಮ್ಮ ಜಿಲ್ಲೆಯಲ್ಲಿ ಈ ಉದ್ದೇಶದಿಂದ ಮಾನ್ಯ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಒಂದು ಯೋಜನಾ ಸಮಿತಿಯನ್ನು ಏರ್ಪಡಿಸಲಾಗಿದೆ. ವಿವಿಧ ಆಡಳಿತ ವಿಭಾಗಗಳ ಅಧಿಕಾರಿಗಳು, ಶಾಸನಾಂಗದ ಪ್ರತಿನಿಧಿಗಳು ಮತ್ತು ಸಾರ್ವಜನಿಕ ಮುಂದಾಳುಗಳಿಂದ ಕೂಡಿದ ಈ ಸಮಿತಿಯಲ್ಲಿ ಸುಮಾರು ೪೦ ಮಂದಿ ಸದಸ್ಯರಿದ್ದಾರೆ. ಸರಕಾರದ ಕಡೆಯಿಂದ ಇಬ್ಬರು ಉಪ ತಹಶೀಲ್ದಾರರು ಮತ್ತು ಹನ್ನೆರಡು ಮಂದಿ ಮಣೆಗಾರರನ್ನೊಳಗೊಂಡು ಪ್ರತ್ಯೇಕ ಸಿಬಂಧಿಯ ಏರ್ಪಾಡು ಜಿಲ್ಲೆಗೊಂದು ಯೋಜನಾಬದ್ಧ ಅಭಿವೃದ್ಧಿ ಕಾರ್ಯಕ್ರಮದ ಪಟ್ಟಿಯನ್ನು ರಚಿಸಲು ನೇಮಕವಾಗಿದೆ ತನ್ಮೂಲಕ ಗ್ರಾಮ ಪಂಚಾಯತುಗಳಿಂದಲೂ ನಗರಸಭೆಗಳಿಂದಲೂ ಆಯಾಯ ಸ್ಥಳದ ಆವಶ್ಯಕತೆಗಳ ಪೂರೈಕೆಗಾಗಿ ಕೈಗೊಳ್ಳಬೇಕಾದ ಕಾರ್ಯಕ್ರಮಗಳ ವಿವರಗಳನ್ನು ಸಂಗ್ರಹಿಸಲಾಯಿತು. ಸುಮಾರು ಇಪ್ಪತ್ತು ಕ್ಷೇತ್ರ ಯೋಜನಾ ಸಮಿತಿಗಳಾಗಿ ಕೆಲಸವನ್ನು ನಿರ್ವಹಿಸಿದ ಬಳಿಕ, ಇದೀಗ ಒಂದು ಕರಡು ಯೋಜನೆಯನ್ನು ಸಿದ್ಧಗೊಳಿಸಲಾಗಿದೆ ಎಂದು ತಿಳಿದು ಬರುತ್ತದೆ.

ಈ ತಿಂಗಳ ೧೨, ೧೪ ೧೬ ಮತ್ತು ೧೮ನೇ ದಿನಾಂಕಗಳಲ್ಲಿ ಮಂಗಳೂರಿನಲ್ಲಿ ಯೋಜನಾ ಸಮಿತಿಯು ಸಭೆ ಸೇರಿ ಕರಡು ಯೋಜನೆಯ ಪರಿಶೀಲನೆಯನ್ನು ನಡಸಿತೆಂದೂ ವ್ಯಕ್ತವಾಗಿದೆ. ಇನ್ನು ಎಂಟು-ಹತ್ತು ದಿನಗಳಲ್ಲಿ ಪುನಃ ಯೋಜನಾ ಸಮಿತಿಯು ಸಭೆ ಸೇರಿ, ಯೋಜನೆಯ ಅಂತಿಮ ರೂಪವನ್ನು ನಿರ್ಧರಿಸಿ ರಾಜ್ಯ ಸರಕಾರಕ್ಕೆ ಕಳುಹಿಸಿಕೊಡಲಿದೆ. ಮದ್ರಾಸು ಸರಕಾರದ ದೃಷ್ಟಿಯಲ್ಲಿ ಈ ನಮ್ಮ ಜಿಲ್ಲೆಯ ಅಭಿವೃದ್ಧಿ ಕಾರ್ಯಕ್ರಮಗಳು ಮುಂದಿನ ಯೋಜನೆಯ ಅವಧಿಯಲ್ಲಿ ಸುಮಾರು ಹತ್ತು ಕೋಟಿ ರೂಪಾಯಿಗಳ ವೆಚ್ಚವನ್ನು ಮೀರಬಾರದೆಂದಿದೆ. ಆದರೆ ಇಪ್ಪತ್ತು ಕ್ಷೇತ್ರ ಯೋಜನಾ ಸಮಿತಿಗಳು ಒಪ್ಪಿಸಿದ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದಾದರೆ ಕನಿಷ್ಠ ಪಕ್ಷದಲ್ಲಿ ಮೂವತ್ತೈದು ಕೋಟಿ ರೂಪಾಯಿಗಳ ವೆಚ್ಚವಾದರೂ ತಗಲಬಹುದು! ನಮ್ಮ ಜಿಲ್ಲೆಯ ಜನರು ಅಭಿವೃದ್ಧಿ ಕಾರ್ಯಕ್ರಮಗಳ ವಿಷಯದಲ್ಲಿ ತೋರಿಸುತ್ತಿರುವ ಆಸಕ್ತಿಗೆ ಇದನ್ನೊಂದು ನಿದರ್ಶನವಾಗಿ ಪರಿಗಣಿಸಬಹುದು. ಸರಕಾರವು ಇವೆಲ್ಲವನ್ನೂ ಮನ್ನಿಸುವಂತಿಲ್ಲ; ಆದರೆ ಕಾಲಾನುಕಾಲದಲ್ಲಿ ನಮ್ಮ ಬೇಡಿಕೆಯನ್ನು ಮುಂದೊತ್ತಲು ಈ ದೊಡ್ಡ ಪ್ರಮಾಣದ ಕಾರ್ಯಕ್ರಮ ಪಟ್ಟಿಯಿಂದ ಸಹಾಯವಾಗುವುದೆಂದು ಭಾವಿಸಬಹುದು.

ಯೋಜನಾ ಸಮಿತಿಯು ಕೃಷಿಯ ವಿಚಾರದಲ್ಲಿ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾ, ನಮ್ಮ ಜಿಲ್ಲೆಯಲ್ಲಿ, ಮುಂದಿನ ಐದು ವರ್ಷಗಳಲ್ಲಿ, ಸೇಕಡಾ ೩೦ರಷ್ಟು ಆಹಾರ ಧಾನ್ಯಗಳ ಉತ್ಪತ್ತಿಯನ್ನು ಹೆಚ್ಚಿಸುವುದೇ ವಾಸ್ತವಿಕವಾದ ತೀರ್ಮಾನವಾದೀತೆಂದೂ ಯೋಜನಾ ಆಯೋಗವು ನಿರೂಪಿಸಿರುವ ೪೦% ಹೆಚ್ಚಳದ ಧ್ಯೇಯವು ಈ ಜಿಲ್ಲೆಯ ವಿಶಿಷ್ಟ ಪರಿಸ್ಥಿತಿಗೆ ಹೊಂದಿಕೊಳ್ಳುವುದಿಲ್ಲವೆಂದೂ ಹೇಳಿದೆ. ಉತ್ಪಾದನೆಯನ್ನು ಅಧಿಕಗೊಳಿಸುವ ಸಲುವಾಗಿ ನೀರಾವರಿಯ ಅನುಕೂಲತೆಗಳನ್ನು ಹೆಚ್ಚಿಸಬೇಕು; ಮತ್ತು ಪಡಭೂಮಿಯನ್ನು ಹೊಸತಾಗಿ ಸಾಗುವಳಿಗೆ ಗುರಿಪಡಿಸಬೇಕು ಎಂಬ ತತ್ವವನ್ನು ಸಮಿತಿಯು ಅಂಗೀಕರಿಸಿದೆ. ಇದಕ್ಕಾಗಿ ಸಮಿತಿಯು ಸುಮಾರು ೨೫ ದೊಡ್ಡ ನೀರಾವರಿ ಯೋಜನೆಗಳನ್ನು ಅನುಮೋದಿಸಿದೆ; ಬೇರೆ ಕೆಲವು ಸಣ್ಣ ಕಾರ್ಯಕ್ರಮಗಳನ್ನೂ ಸಿಫಾರಸು ಮಾಡಿದೆ; ಜಿಲ್ಲೆಯಲ್ಲಿ ಈಗ ಇರುವ ೭ ಬುಲ್ ಡೋಜರ್ (ಅಂದರೆ ಏರುತಗ್ಗು ನೆಲವನ್ನು ಸಮತಟ್ಟುಮಾಡುವ) ಯಂತ್ರಗಳಲ್ಲದೆ ಇನ್ನೂ ೭ ಯಂತ್ರಗಳು ಬೇಕೆಂದೂ ಫಲವರ್ಧಕ ಗೊಬ್ಬರವನ್ನು ಸೇಕಡಾ ೩೦ರಷ್ಟು ಸಹಾಯಧನದೊಡನೆ ಬೇಸಾಯಗಾರರಿಗೆ ನೀಡುವ ವ್ಯವಸ್ಥೆಯಾಗಬೇಕೆಂದೂ ಪಡಭೂಮಿಯ ಸಾಗುವಳಿದಾರರಿಗೆ ನಿಬಡ್ಡಿಯ ಸಾಲವನ್ನೊದಗಿಸಬೇಕೆಂದೂ ಸಮಿತಿಯು ಅಭಿಪ್ರಾಯಪಟ್ಟಿದೆ. ಪ್ರತಿ ೩೦ ಮೈಲುಗಳ ಅಂತರದಲ್ಲಿ ಸುಧಾರಿತ ಕೃಷಿ ಸಾಧನಗಳ ಮಾರಾಟ ಕೇಂದ್ರಗಳು ನೆಲೆಗೊಳ್ಳಬೇಕು, ಪ್ರತಿ ಫಿರ್ಕಾ ಕೇಂದ್ರದಲ್ಲೂ ಜಾನುವಾರು ಶುಶ್ರೂಷಾಲಯ, ತಾಲೂಕು ಕೇಂದ್ರದಲ್ಲಿ ಜಾನುವಾರು ರುಗ್ಣಾಲಯಗಳಿರಬೇಕೆಂದು ಅಭಿಪ್ರಾಯಪಡಲಾಯಿತು. ಜಿಲ್ಲೆಯ ಮೂರು ಕಡೆ ಕೃತಕ ಗರ್ಭಾದಾನವನ್ನು ಮಾಡುವ ಜಾನುವಾರು ಕೇಂದ್ರಗಳಿರಬೇಕೆಂದೂ ಬೇರೆ ಆರು ಕಡೆ ಉಪಕೇಂದ್ರಗಳಿರಬೇಕೆಂದೂ ಸಮಿತಿ ತೀರ್ಮಾನಿಸಿತು.

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯುಚ್ಛಕ್ತಿಯ ವಿಸ್ತರಣೆಯ ಬಗ್ಗೆ ಸಮಿತಿಯು ಅತ್ಯುತ್ಸಾಹದ ಕಾರ್ಯಕ್ರಮಗಳನ್ನು ಅಂಗೀಕರಿಸಿತು. ಜಿಲ್ಲೆಗೆ ಜೋಗಿನ ವಿದ್ಯುಚ್ಛಕ್ತಿಯನ್ನು ಪೂರೈಸುವ ಸಂಬಂಧದ ಒಡಂಬಡಿಕೆಯ ಪ್ರಕಾರ ದಕ್ಷಿಣ ಕನ್ನಡಿಗರ ವಿದ್ಯುಚ್ಛಕ್ತಿಯ ಬಳಕೆಯು ಮುಂದಿನ ಆರು ವರ್ಷಗಳಲ್ಲಿ ಆರು ಸಾವಿರ ಕಿಲೋವಾಟುಗಳಷ್ಟು ಹೆಚ್ಚಬೇಕಾಗಿರುವುದರಿಂದ ವಿದ್ಯುಚ್ಛಕ್ತಿಯ ಪೂರೈಕೆಯನ್ನು ಸರಕಾರವು ನಿರ್ಧರಿಸಿರುವಂತೆ ೧೫೦ ಗ್ರಾಮಗಳಿಗೆ ಮಾತ್ರ ಮುಂದಿನ ಯೋಜನಾವಧಿಯಲ್ಲಿ ವಿಸ್ತರಿಸಿದರೆ ಸಾಲದು; ಕನಿಷ್ಠ ಪಕ್ಷದಲ್ಲಿ ೩೦೦ ಗ್ರಾಮಗಳಿಗಾದರೂ ವಿದ್ಯುಚ್ಛಕ್ತಿ ಪೂರೈಕೆಯಾಗಬೇಕು ಎಂಬುದಾಗಿ ಸಮಿತಿ ಅಭಿಪ್ರಾಯಪಟ್ಟಿತು. ಅಲ್ಲದೆ, ಎರಡನೇ ಯೋಜನೆಯ ಅವಧಿಯಲ್ಲಿ ದಕ್ಷಿಣ ಕನ್ನಡಕ್ಕೆ ತಾಗಿಕೊಂಡಿರುವ ಪಶ್ಚಿಮ ಘಟ್ಟ ಪ್ರದೇಶದಲ್ಲಿರುವ ಐದು ಜಲಪಾತಗಳನ್ನು ಜಲವಿದ್ಯುಚ್ಛಕ್ತಿಗಾಗಿ ಬಳಸಿಕೊಳ್ಳುವ ಬಗ್ಗೆ ಪೂರ್ವ ಪರಿಶೀಲನೆ ನಡೆಸಲು ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ಸಹ ಸಮಿತಿಯು ನಿರ್ಣಯಿಸಿತು: ಈ ಜಲಪಾತಗಳಾವುವೆಂದರೆ, ಬೆಳ್ತಂಗಡಿ ತಾಲೂಕಿನ ಚಾರ್ಮಾಡಿ ಗ್ರಾಮದಲ್ಲಿರುವ ೫೦೦ ಅಡಿ ಎತ್ತರದ ಬಂಡಾಜೆ ಜಲಪಾತ, ಕುಂದಾಪುರ ತಾಲೂಕಿನ ಯಡ್ತೂರಿ ಮತ್ತು ಸಿರೂರು ಗ್ರಾಮಗಳಲ್ಲಿರುವ ಅನುಕ್ರಮವಾಗಿ ೫೦೦ ಮತ್ತು ೬೦೦ ಅಡಿ ಎತ್ತರದ ಗಂಗನಾದ ಜಲಪಾತಗಳು; ಕಾರ್ಕಳ ತಾಲೂಕಿನಲ್ಲಿರುವ ೬೦೦ ಅಡಿ ಎತ್ತರದ ಬರ್ಕಣ ಜಲಪಾತ; ಮತ್ತು ಇದೇ ತಾಲೂಕಿನ ಪಂ:ಹಿ ಹಾಗು ಸೀತಾ ನದಿ ಶಬರಿ ತೀರ್ಥ ಜಲಪಾತಗಳು.

ಔದ್ಯಮಿಕ ಕ್ಷೇತ್ರದ ಮುನ್ನಡೆಯ ಕಾರ್ಯಕ್ರಮಗಳನ್ನು ವಿವರವಾಗಿ ಪರಿಶೀಲಿಸಿ ಈ ಜಿಲ್ಲೆಯಲ್ಲಿ ಈ ಕೆಳಗಿನ ಕೈಗಾರಿಕೆಗಳನ್ನು ನೆಲೆಗೊಳಿಸಬೇಕೆಂದು ಸಮಿತಿ ಅಭಿಪ್ರಾಯಪಟ್ಟಿತು. ಮಲ್ಪೆಯಲ್ಲಿ ಸಣ್ಣ ರೀತಿಯ ಹಡಗುಗಳನ್ನೂ ಮೀನುಗಾರಿಕೆಯ ದೋಣಿಗಳನ್ನೂ ಕಟ್ಟುವ ಕೇಂದ್ರವಿರಬೇಕು; ಉಪ್ಪು ಶುದ್ಧೀಕರಣ ಕಾರ್ಖಾನೆಯೊಂದು ಈ ಜಿಲ್ಲೆಗೆ ಬೇಕು; ಅಲ್ಲದೆ ಅರಳೆ ನೂಲುವ ಗಿರಣಿ, ಬಿಳಿ ಸಿಮೆಂಟಿನ ಕಾರ್ಖಾನೆ, ಮರ ಸಿಗಿಯುವ ಎರಡು ಕಾರ್ಖಾನೆಗಳು, ಪ್ಲೈವುಡ್ಡನ್ನು ತಯಾರಿಸುವ ಕಾರ್ಖಾನೆ, ಬಾಳೆಕಾಯಿ ಮೋಸು ತಯಾರಿಯ ಕಾರ್ಖಾನೆ, ಬೆಂಕಿ ಪೆಟ್ಟಿಗೆ ತಯಾರಿಗಾಗಿ ಮರ ಸೀಳುವ ಏಳು ಕಾರ್ಖಾನೆಗಳು ಜಿಲ್ಲೆಗೆ ಅತ್ಯಾವಶ್ಯಕವೆಂದು ಭಾವಿಸಲಾಯಿತು. ಮೂಡಬಿದ್ರೆಯಲ್ಲಿರುವ ರಟ್ಟು ತಯಾರಿಯ ಕಾರ್ಖಾನೆಯನ್ನು ಸರಕಾರವು ವಹಿಸಿಕೊಂಡು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಳ್ಳಲಾಯಿತು. ಗೃಹೋದ್ಯಮಗಳ ಅಭಿವೃದ್ಧಿಗಾಗಿಯೂ ವಿಸ್ತೃತ ಕಾರ್ಯಕ್ರಮಗಳನ್ನು ರೂಪಿಸಲಾಯಿತು. ಈ ಉದ್ಯಮಗಳಲ್ಲಿ ಯೋಗ್ಯ ತರಬೇತಿಯು ಸಿಗುವಂತೆ ಜಿಲ್ಲೆಯಲ್ಲಿ ಕತ್ತದ

(೧೩ನೇ ಪುಟ ನೋಡಿ)

ಉತ್ತರ ಕನ್ನಡಕ್ಕೆ 25 ವರ್ಷಗಳ ಸೇವೆ

21—7—1931ರಂದು ನಾವು ನಮ್ಮ ಕಾರವಾರ ಶಾಖೆಯನ್ನು ತೆರೆದೆವು. ಆ ಬಳಿಕ ಉತ್ತರ ಕನ್ನಡದಲ್ಲಿ ಹಲವಾರು ಶಾಖೆಗಳನ್ನು ತೆರೆದುದಲ್ಲದೆ, ದಕ್ಷಿಣ ಭಾರತದಲ್ಲಿ ಇಂದು **93** ಶಾಖೆಗಳ ಮೂಲಕ ಸೇವೆ ಸಲ್ಲಿಸುತ್ತಿದ್ದೇವೆ. ಬ್ಯಾಂಕಿನ ಈ ಪ್ರಗತಿಗೆ ತಾವಿತ್ತಿರುವ ಹಿತೇಚ್ಛೆ, ವಿಶ್ವಾಸವೇ ಕಾರಣವಾಗಿರುವುದು.

ಈ ಶುಭ ಸನ್ನಿವೇಶದಲ್ಲಿ ತಾವು ಬೇಂಕಿಗಿತ್ತಿರುವ ಒಲವು, ನೆರವಿಗಾಗಿ ನಮ್ಮ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುವೆವು. ಇನ್ನು ಮುಂದೆಯೂ ತಮ್ಮ ಪ್ರೀತಿ-ವಿಶ್ವಾಸಗಳನ್ನುಳಿಸಿಕೊಳ್ಳಲು ನಿರಂತರ ಪ್ರಯತ್ನಿಸುವೆವೆಂಬ ಆಶ್ವಾಸನೆ ಕೊಡುವೆವು

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿ.,

ಸ್ಥಾಪನೆ 1925] [ಪ್ರಧಾನ ಕಚೇರಿ: **ಉಡುಪಿ**

ಲೋಕಮಾನ್ಯ ಬಾಲ ಗಂಗಾಧರ ತಿಲಕರ ಪುಣ್ಯ ಸ್ಮರಣೆ

ಸಫಲ ಪತ್ರಿಕೋದ್ಯಮಿ, ಪ್ರತಿಭಾವಂತ ಗ್ರಂಥಕರ್ತ ಮತ್ತು ಅದ್ವಿತೀಯ ಧುರೀಣ

"ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು!"

—ಯಾರದೀ ಧೀರೋದಾತ್ತ ವಾಣಿ? ಭಾರತವನ್ನು ಆಳುತ್ತಿದ್ದ ಬ್ರಿಟಿಷರ ಅಭಿಮಾನವನ್ನು ಕುಕ್ಕುವಂತೆ, ಜಡ ಭಾರತೀಯರಲ್ಲಿ ರಾಷ್ಟ್ರೀಯ ಜಾಗೃತಿಯು ಮೂಡಿ ಬರುವಂತೆ ಸ್ವರಾಜ್ಯದ ಘೋಷಣೆಯನ್ನು ಮಾಡುತ್ತಾ ಕ್ರಾಂತಿಗೆ ಆಹ್ವಾನವಿತ್ತವರು ಯಾರು?

ಲೋಕಮಾನ್ಯ ತಿಲಕರು!

ಪ್ರಧಾನಿ ನೆಹರು ಮೊನ್ನೆ ಲಂಡನಿಗೆ ತೆರಳಿದ್ದಾಗ, ಅಲ್ಲಿ ಲೋಕಮಾನ್ಯ ತಿಲಕರ ಚಿತ್ರವೊಂದನ್ನು ಇಂಡಿಯಾ ಹೌಸಿನಲ್ಲಿ ಅನಾವರಣಗೈದರು. ಈ ಸಂದರ್ಭದಲ್ಲಿ ಮಾತನಾಡುತ್ತಾ "ಭಾರತೀಯ ಚರಿತ್ರೆಯು ಲೋಕಮಾನ್ಯ ತಿಲಕರನ್ನು ಭಾರತೀಯ ಕ್ರಾಂತಿಯ ಜನಕನೆಂದು ಗೌರವಿಸುವುದರಲ್ಲಿ ನನಗೆ ತಿಲಾಂಶ ಸಂದೇಹವೂ ಇಲ್ಲ— ಏಕೆಂದರೆ, ಈ ರೀತಿಯಲ್ಲಿ ತಿಲಕರು ಕ್ರಾಂತಿಯ ಬುನಾದಿಯನ್ನು ಹಾಕಿದರು; ಜನರನ್ನು ಕ್ರಾಂತಿಗೆ ಸಿದ್ಧರಾಗಿರುವಂತೆ ತರಬೇತಿಗೊಳಿಸಿದರು; ಮತ್ತು ತಮ್ಮ ಶಕ್ತಿಯು ಕುಂದಿದಾಗ ಕೈದೀಪವನ್ನು ಅವರು ಮಹಾತ್ಮಾ ಗಾಂಧೀಯವರಿಗೆ ಒಪ್ಪಿಸಿ ಕೊಟ್ಟರು" ಎಂಬುದಾಗಿ ನೆಹರುಗಳು ತಿಲಕರ ದೇಶ ಸೇವೆಯನ್ನು ಮುಕ್ತಕಂಠದಿಂದ ಪ್ರಶಂಸಿಸಿದರು.

ಮೊನ್ನೆ ೨೩ನೇ ದಿನಾಂಕ ದೇಶದಲ್ಲೆಲ್ಲ ತಿಲಕರ ನೂರನೇ ಜಯಂತಿಯನ್ನು ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು; ಬರುವ ೧ನೇ ದಿನಾಂಕದಂದು ತಿಲಕರ ಪುಣ್ಯತಿಥಿಯು ಬೀಳುತ್ತದೆ. ಇವೆರಡು ಮಹತ್ವದ ದಿನಗಳ ನಡುವೆ ನಮ್ಮ ಓದುಗರು ತಿಲಕರ ಸೇವೆಯ ಬಗ್ಗೆ ಮನನ ಮಾಡಬೇಕಾದ ವಿಷಯಗಳನ್ನು ಕೆಳಗೆ ನಾವು ಕರ್ತವ್ಯ ಭಾವದಿಂದ ನೀಡಿದ್ದೇವೆ.

○○○

ಹತ್ತೊಂಭತ್ತನೇ ಶತಮಾನದ ಎರಡನೇ ದಶಕದ ವರೆಗೆ ದಕ್ಷಿಣದಲ್ಲಿ ಪೇಶ್ವೆಯರ ಕೈಯಿಂದ ಅಧಿಕಾರವು ಸಾಗಿಬಂದಿದ್ದ ಚಿತ್ಪಾವನ ಬ್ರಾಹ್ಮಣರು ಆಡಳಿತೆಯನ್ನು ನಿರ್ವಹಿಸುತ್ತಿದ್ದರು. ಆದರೆ ಬ್ರಿಟಿಷರು ಇಲ್ಲಿ ಅಧಿಕಾರವನ್ನು ಸ್ಥಾಪಿಸಿದ ಬಳಿಕ ಅತೃಪ್ತರಾದ ಇವರೆಲ್ಲರೂ ಮಹಾ ವೀರರೂ ದೇಶಾಭಿಮಾನಿಗಳೂ ಆಗಿ ಬ್ರಿಟಿಷರ ಆಳ್ವಿಕೆಯ ನೊಗವನ್ನು ಕಳಚಿ ಬಿಡಲು ಪದೇ ಪದೇ ಹೋರಾಟವನ್ನು ಕೊಡಹತ್ತಿದರು. ಆದರೆ, ಹಿಂಸಾತ್ಮಕವಾಗಿದ್ದ ಈ ಹೋರಾಟವು ಸತ್ಫಲವನ್ನು ಕೊಡಲಿಲ್ಲ. ಬ್ರಿಟಿಷರ ಆಳ್ವಿಕೆಯನ್ನು ಮುಕ್ತಾಯಗೊಳಿಸುವ ಹೋರಾಟಕ್ಕೆ ಅಹಿಂಸಾತ್ಮಕ ಸ್ವರೂಪವನ್ನು ಕೊಟ್ಟ ಶ್ರೇಯಸ್ಸು ಇದೇ ಚಿತ್ಪಾವನ ಬ್ರಾಹ್ಮಣ ವಂಶದಲ್ಲಿ ಹುಟ್ಟಿದ ತಿಲಕರಿಗೆ ಸಲ್ಲುತ್ತದೆ.

ತಿಲಕರು ೧೮೫೬ನೇ ಜುಲಾಯಿ ತಿಂಗಳ ೨೩ನೇ ದಿನಾಂಕದಂದು ಕೊಂಕಣದ ರತ್ನಗಿರಿಯಲ್ಲಿ ಜನಿಸಿದರು. ಇವರ ಅಜ್ಜಂದಿರಾದ ರಾಮಚಂದ್ರ ಪಂತರು ಪೇಶ್ವೆಯರ ಕಾಲದಲ್ಲಿ ಮಾಮಲತದಾರರಾಗಿದ್ದರು. ತಿಲಕರ ತಂದೆಯವರಾದ ಗಂಗಾಧರರು ಬ್ರಿಟಿಷರ ಆಡಳಿತ ಕಾಲದವರಾಗಿದ್ದರು; ಮೊದಲು ಒಬ್ಬ ಉಪಾಧ್ಯಾಯನಾಗಿ ಅವರು ಕೆಲಸಕ್ಕೆ ಸೇರಿಕೊಂಡು, ಶಾಲೆಗಳ ಸಹಾಯಕ ಪರೀಕ್ಷಾಧಿಕಾರಿಯ ಪದವಿಗೆ ಅವರು ಏರಿದರು. ಸಂಸ್ಕೃತದಲ್ಲಿ ಇವರಿಗೆ ಪ್ರಕಾಂಡ ಪಾಂಡಿತ್ಯವಿದ್ದಿತು; ವ್ಯಾಕರಣ ಶಾಸ್ತ್ರ, ಗಣಿತ ಶಾಸ್ತ್ರಗಳಲ್ಲಿ ಉತ್ತಮ ವಿದ್ವಾಂಸರಾಗಿದ್ದರಲ್ಲದೆ ಕವಿಗಳೂ ಆಗಿದ್ದರು. "ತ್ರಿಕೋಣಮಿತಿ" ಎಂಬ ಗ್ರಂಥವನ್ನು ಇವರು ಸಂಸ್ಕೃತದಲ್ಲಿ ಬರೆದಿದ್ದಾರೆ. ಅವರಲ್ಲಿಯ ವಿದ್ವತ್ತು, ಪರೋಪಕಾರ ಬುದ್ಧಿ, ಸದಾಚಾರ ಪ್ರಿಯತೆಗಳ ವರ್ಣನೆಯನ್ನು ಮಾಡುತ್ತಾ ಡಾ. ಭಾಂಡಾರಕರರು "ಹಿಂದಿನ ಕಾಲದಲ್ಲಿ ನಮ್ಮಲ್ಲಿಯ ಋಷಿ ಮುನಿಗಳು ಹೇಗಿದ್ದರೆಂಬುದನ್ನು ತಿಳಿದುಕೊಳ್ಳಬೇಕಾದರೆ ಗಂಗಾಧರ ಪಂತರನ್ನು ನೋಡಬೇಕು" ಎಂದು ಹೊಗಳಿದ್ದಾರೆ. ಸದ್ವಂಶ ಸಂಭೂತರಾದ ತಿಲಕರನ್ನು ಬಲವಂತ ರಾಯನೆಂಬ ಹೆಸರಿನಿಂದ ಕರೆಯಲಾಯಿತು; ಆದರೆ ಹಿಂದಿನಿಂದ ಮನೆಯವರೆಲ್ಲರೂ "ಬಾಳ"ನೆಂದೇ ಮುದ್ದಿನಿಂದ ಕರೆಯತೊಡಗಿದುದರಿಂದ ಬಾಲಗಂಗಾಧರ ತಿಲಕ ಎಂಬ ಹೆಸರೇ ರೂಢಿಯಾಯಿತು.

○ ○

ಇನ್ನೂ ಹತ್ತು ವರ್ಷದವರಾಗಿರುವಾಗಲೇ ತಿಲಕರು ಚಿಕ್ಕತಾಯಿಯ ಪೋಷಣೆಗೊಳಗಾಗಬೇಕಾಯಿತು. ಅವರು ಕುಶಾಗ್ರಬುದ್ಧಿಯವರಾಗಿದ್ದರು. ದೃಢವಾದ ಆತ್ಮವಿಶ್ವಾಸ ಭಾವವುಳ್ಳವರಾಗಿದ್ದರು. ಪುಣೆಯ ಡೆಕ್ಕನ್ ಕಾಲೇಜಿನಲ್ಲಿ ಅವರು ೧೮೭೬ನೇ ವರ್ಷದಲ್ಲಿ ಬಿ. ಎ. ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಪಡೆದರು; ಮುಂದೆ ವಕೀಲಿ ಪದವಿಯನ್ನೂ ಸನ್ಮಾನಪೂರ್ವಕ ಸಂಪಾದಿಸಿದರು. ನಿಮ್ಮ ನಿಮ್ಮ ವಿದ್ಯೆಯನ್ನು ಸಾರ್ಥಕಪಡಿಸಿಕೊಳ್ಳಿರಿ ಎಂದು ಕುಲಪತಿಗಳು ಪದವೀದಾನ ಭಾಷಣದಲ್ಲಿ ಹೇಳಿದಾಗ, ತಿಲಕರು ತಾನು ದೇಶ ಸೇವೆ ಮಾಡುವ ಸಂಕಲ್ಪವನ್ನು ಕೈಗೊಂಡರು.

ಪದವಿಯ ಬಲದಿಂದ ಕೈತುಂಬ ಸಂಬಳ ಬರಬಹುದಾಗಿದ್ದ ಸರಕಾರಿ ನೌಕರಿಯನ್ನು ಸುಲಭದಲ್ಲಿ ಪಡೆಯಲು ಆಗಿನ ಕಾಲವು ಬಹಳ ಅನುಕೂಲವಾಗಿದ್ದರೂ ತಿಲಕರು ಅದಕ್ಕೇನೂ ಮಹತ್ವವನ್ನು ಕೊಡಲಿಲ್ಲ. ಏಕೆಂದರೆ, ಅವರ ದೃಷ್ಟಿಯಲ್ಲಿ ಬ್ರಿಟಿಷರ ದಾಸ್ಯ ವೃತ್ತಿಯು ಕಲಂಕವಾಗಿದ್ದಿತು. ಆ ಕಾಲದಲ್ಲಿ ದಿವಂಗತ ಗೋವಿಂದ ರಾನಡೆ ಎಂಬ ಮಹನೀಯರು ಸರಕಾರಿ ನೌಕರಿಯಲ್ಲಿದ್ದುಕೊಂಡು ತಮ್ಮದೇ ಆದ ರೀತಿಯಲ್ಲಿ ದೇಶಸೇವೆಯನ್ನು ಮಾಡುತ್ತಿದ್ದರು; ಆದರೆ ಇವರ ಮೇಲೆ ಪಾಶ್ಚಾತ್ಯರ ಪ್ರಭಾವವು ಬಹಳವಾಗಿ ಬಿದ್ದಿದ್ದಿತು. ಇದಕ್ಕೆ ಪ್ರತಿಯಾಗಿ, ದಿವಂಗತ ವಿಷ್ಣು ಶಾಸ್ತ್ರಿ ಚಿಪಳೂಣಕರರೆಂಬವರು ಸರಕಾರಿ ನೌಕರಿಯನ್ನು ತ್ಯಜಿಸಿ "ನಿಬಂಧ ಮಾಲಾ" ಎಂಬ ಪುಸ್ತಕದಿಂದ ರಾಷ್ಟ್ರೀಯ ಜಾಗೃತಿಯನ್ನು ಮಾಡ ಹತ್ತಿದ್ದರು. ತಿಲಕರು ತಮ್ಮ ಮುಂದಿದ್ದ ಇವೆರಡು ವ್ಯಕ್ತಿಗಳ ಯೋಗ್ಯತೆಯನ್ನು ತಮ್ಮದೇ ವಿಶಿಷ್ಟವಾದ ದೃಷ್ಟಿಕೋಣದಿಂದ ತೂಗಿ ನೋಡಿ, ಚಿಪಳೂಣಕರರ ಮಾರ್ಗವನ್ನೇ ಶ್ರೇಯಸ್ಕರವೆಂದು ಭಾವಿಸಿದರು. ಆಗಿನ ಜನರಲ್ಲಿಯೂ ಮುಂದಿನ ಪೀಳಿಗೆಯವರಾದ ಮಕ್ಕಳಲ್ಲಿಯೂ ರಾಷ್ಟ್ರೀಯ ಭಾವನೆಯನ್ನು ಜಾಗೃತಗೊಳಿಸುವ ಹಿರಿಯಾಸೆಯಿಂದ ಅವರು ಪುಣೆಯಲ್ಲಿ ಪ್ರೌಢ ವಿದ್ಯಾಲಯವೊಂದನ್ನು ಕೆಲವು ಮಿತ್ರರ ಸಹಕಾರದಿಂದ ತೆರೆದರು; ಮುಂದೆ ಇದು ಕಾಲೇಜಾಗಿ ಅಭಿವೃದ್ಧಿಯನ್ನು ಹೊಂದಿತು. ತಿಲಕರು ಕ್ರೈಸ್ತ ಮಿಶನರಿಗಳ ಆದರ್ಶದಿಂದ ಸ್ಫೂರ್ತಿಪಡೆದು ತನ್ನನ್ನು ಪರಮಾತ್ಮನ ಕಿಂಕರನೆಂದು ಸಂಬೋಧಿಸಿಕೊಂಡರು; ಮತ್ತು ತದನುಸಾರ, ಈ ವಿದ್ಯಾಲಯದ ಸೇವೆಗೆ ಪ್ರತಿಫಲರೂಪದಲ್ಲಿ ಅತ್ಯಲ್ಪ ಹಣವನ್ನಷ್ಟೇ ಸ್ವೀಕರಿಸುತ್ತಿದ್ದರು. ೧೮೮೦ರಿಂದ ಒಂದು ದಶಕದ ವರೆಗೆ ಅವರು ಶೈಕ್ಷಣಿಕ ರಂಗದಲ್ಲಿ ಅವಿಶ್ರಾಂತ ಸೇವೆಯನ್ನು ಸಲ್ಲಿಸಿದರು.

○ ○

ಲೋಕಮಾನ್ಯರ ರಾಜಕೀಯ ಜೀವನವು ೧೮೯೦ನೇ ಇಸವಿಯಲ್ಲಿ ಪ್ರಾರಂಭವಾಯಿತು. ಈ ಮಹತ್ವಪೂರ್ಣ ಅವಧಿಯು ಭಾರತೀಯ ಇತಿಹಾಸದಲ್ಲಿ "ಲಾಲ—ಬಾಲ—ಪಾಲ" ಎಂಬ ಶಿರೋನಾಮೆಯಿಂದ ಪ್ರಸಿದ್ಧವಾಗಿದೆ. ಪಂಜಾಬಿನ ಲಾಲಾಲಜಪತರಾಯರೂ, ಬಂಗಾಳದ ಬಿಪಿನ ಚಂದ್ರಪಾಲರೂ ಮಹಾರಾಷ್ಟ್ರದ ಬಾಲಗಂಗಾಧರ ತಿಲಕರ ಎಡ—ಬಲ ಭುಜಗಳಂತೆ ದುಡಿದರು; ಅಷ್ಟರ ವರೆಗೆ ಸೌಮ್ಯ ಟೀಕೆ ಮತ್ತು "ಭಿಕ್ಷಾಂ ದೇಹಿ" ಪ್ರವೃತ್ತಿಯಲ್ಲಿದ್ದ ಕಾಂಗ್ರೆಸು, ಉಗ್ರವಾದ, ಆದರೂ ಅಹಿಂಸಾತ್ಮಕವಾದ, ಧೋರಣೆಯನ್ನು ಅನುಸರಿಸುವಂತೆ ತಿಲಕರು ಪ್ರಯತ್ನಪಟ್ಟಾಗ, ಅವರ ಸಹಾಯಕರಾಗಿ ಲಾಲರೂ ಪಾಲರೂ ನಿಂತರು.

ರಾಷ್ಟ್ರೀಯ ಕಾಂಗ್ರೆಸಿನೊಡನೆ ಸಂಪರ್ಕವನ್ನು ತಿಲಕರು ಸಾಧಿಸಿಕೊಂಡಾಗ ಈ ಸಂಸ್ಥೆಯು ಇನ್ನೂ ಎಳೆಗೂಸಿನಂತಿದ್ದಿತು. ೧೮೮೯ರಲ್ಲಿ ಮುಂಬಯಿಯಲ್ಲಿ ಜರಗಿದ ಈ ಸಂಸ್ಥೆಯ ಅಧಿವೇಶನಕ್ಕೆ ಸದಸ್ಯನಾಗಿ ಅವರು ತೆರಳಿದರು; ಪುಣೆಯ ಜನರಿಂದ ಈ ಅಧಿವೇಶನದ ವೆಚ್ಚಕ್ಕೆ ಹಣವನ್ನೂ ಅವರು ಸಂಗ್ರಹಿಸಿದರು. ಮುಂಬಯಿಯ ವೇದಿಕೆಯ ಮೇಲೆ ನಿಂತು ತಿಲಕರು ತಮ್ಮ ಮೊದಲನೇ ರಾಜಕೀಯ ಭಾಷಣವನ್ನು ಮಾಡಿದರು. ಭಾರತದಲ್ಲಿ ಆಗಷ್ಟೇ ಉಪ್ಪಿನ ತೆರಿಗೆಯನ್ನು ಸರಕಾರದವರು ಹೇರಿದ್ದರು. ಮುಂಬಯಿ ಪ್ರಾಂತೀಯ ಪರಿಷತ್ತಿನಲ್ಲಿ ಈ ತೆರಿಗೆಯನ್ನು ತಗ್ಗಿಸಬೇಕೆಂದು ಒತ್ತಾಯಿಸುವ ಗೊತ್ತುವಳಿಯೊಂದು ಸ್ವೀಕೃತವಾಯಿತು. ತಿಲಕರು ಎರಡು ಅತ್ಯುತ್ತಮ ಪತ್ರಿಕೆಗಳನ್ನೂ ನಡೆಸುತ್ತಿದ್ದರು. "ಕೇಸರಿ" ಎಂಬುದು ಮರಾಠಿ ಭಾಷೆಯದು; "ಮರಾಠಾ" ಎಂಬುದು ಇಂಗ್ಲಿಷಿನದು— ಇವೆರಡೂ ಸಾಪ್ತಾಹಿಕಗಳಲ್ಲಿ ತಿಲಕರು ಉಪ್ಪಿನ ತೆರಿಗೆಯನ್ನು ಕಟುವಾಗಿ ಟೀಕಿಸಿದರು. "ಮರಾಠಾ" ಪತ್ರಿಕೆಯಲ್ಲಿ ಪೆಂಜಿಸ್ಟೀನ ಮಹನೀಯರೊಬ್ಬರು ಭಾರತೀಯರು ಉಪ್ಪಿನ ಮೇಲೆ ಹೊರಿಸುವ ಕಾಯಿದೆಯನ್ನು ಮುರಿದು, ಪರಿಣಾಮವನ್ನು ಎದುರಿಸಬೇಕು ಎಂಬಾಶಯದ ಪತ್ರವನ್ನು ಬರೆದರು. ಇದನ್ನು ಪ್ರಕಟಿಸುವ ಧೈರ್ಯ ಆ ಕಾಲದಲ್ಲಿ ಯಾವ ಪತ್ರಿಕೋದ್ಯಮಿಗೂ ಇರಲಿಲ್ಲ— ತಿಲಕರು ಮಾತ್ರ ಅಂಥ ಅಪೂರ್ವ ಸಾಹಸವನ್ನು ಮಾಡಿ ತೋರಿಸಿದರು.

○ ○

ಸರಕಾರವು ತಿಲಕರ ಈ ಸಾಹಸದಿಂದ ಕ್ರುದ್ಧವಾಯಿತು; ತಿಲಕರ ಮೇಲೆ ಶಾಸನ ಪ್ರಕಾರ ಕ್ರಮವನ್ನು ಕೈಗೊಳ್ಳಲು ಬರುವುದಿಲ್ಲವೆ ಎಂದು ಕಾನೂನು ಸಲಹೆಗಾರರನ್ನದು ಕೇಳಿತು. ಅವರು ಅನುಕೂಲ ಉತ್ತರವನ್ನು ಕೊಟ್ಟರು. ಆದರೆ ತಿಲಕರು ಆ ವೇಳೆಗೇ ರಾಷ್ಟ್ರದ ಖ್ಯಾತಿಯನ್ನು ಕೆಡಿಸಿದಳಿಪಾದನೆಯ ಮೇಲೆ ಒಮ್ಮೆ ಸೆರೆಮನೆಯ ಶಿಕ್ಷೆಯನ್ನು ಅನು

(೧೧ನೇ ಪುಟ ನೋಡಿರಿ)

ಹಿಂದುಗಳ ಉತ್ತರಾಧಿಕಾರ ಶಾಸನ

ತಜ್ಞ ವಕೀಲರಿಂದ ರಚಿತವಾದ

ಕನ್ನಡ ಭಾಷಾಂತರ ಇಷ್ಟರಲ್ಲೇ ಸಿದ್ಧವಾಗಿದೆ.

ಹಿಂದು, ಬುದ್ಧ, ಸಿಕ್ಖ, ಜೈನ, ವೀರಶೈವ,—ಎಲ್ಲರ ಕೈಯಲ್ಲಿ ಇರಲೇ ಬೇಕು.

ಶಾಸನದ ಯಥಾಪ್ರತಿ ಭಾಷಾಂತರ,

ಕಠಿಣ ವಿಷಯಗಳ ಮೇಲೆ ಟಿಪ್ಪಣಿ, ಪಾರಿಭಾಷಿಕ ಪದಗಳ ಕನ್ನಡ ರೂಪಗಳು—

ಎಲ್ಲ ಇದ್ದು—ಸಾಮಾನ್ಯರಿಗೆ ಸಹ ಸುಲಭವಾಗಿ ತಿಳಿಯುವಂತಿದೆ.

ಬೇಕಾದಷ್ಟು ಪ್ರತಿಗಳಿಗೆ ಕೂಡಲೇ ಬರೆದುಕೊಳ್ಳಿ.

ತಡಮಾಡಿ ನಿರಾಶರಾಗಬೇಡಿರಿ!

ಕ್ರೌನ್ 1/8 ಪುಟ 52. **ಬೆಲೆ ಆಣೆ ಹನ್ನೆರಡು. ಅಂಚೆ ವೆಚ್ಚ 0—2—0.**

ವ್ಯಾಪಾರಿಗಳಿಗೆ ಉದಾರ ಕಮಿಶನ್.

ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸಿಸ್

ಕಾರ್ನಾಡ್ ಸದಾಶಿವರಾವ್ ರಸ್ತೆ, **ಮಂಗಳೂರು-೧**— ಇವರಿಂದ ಪಡೆಯಿರಿ.

ಕ್ರೈಸ್ತ ಮಿಶನರಿಗಳ "ಮತಾಂತರ" ಚಟುವಟಿಕೆಗೆ ಆಕ್ಷೇಪ

ನಿಯೋಗಿ ಸಮಿತಿಯು ವಿಚಾರಣಾನಂತರ ಸಾದರಪಡಿಸಿದ ವರದಿ

ಸ್ವಾತಂತ್ರ್ಯ ಪ್ರಾಪ್ತಿಯ ಪೂರ್ವದಲ್ಲಿ ಕ್ರೈಸ್ತ ಮಿಶನರಿಗಳು ಅತ್ಯಂತ ರಭಸದ ಪ್ರಚಾರ ಮತ್ತು ಮತಾಂತರ ಕಾರ್ಯಕ್ರಮಗಳಲ್ಲಿ ನಿರತರಾಗಿರುತ್ತಿದ್ದುದನ್ನು ತಮ್ಮ ಹಳ್ಳಿಗಳ ಕಡೆ ನೋಡಿದವರುಂಟು. ಬ್ರಿಟಿಷರ ಪ್ರಭುತ್ವವು ಅವರಿಗೆ ಒಂದು ಬಗೆಯ ರಕ್ಷಣೆಯನ್ನೂ ಪ್ರೋತ್ಸಾಹವನ್ನೂ ಕೊಡುವಂತಿತ್ತೆಂಬುದೇ ಇದರ ಕಾರಣ. ಭಾರತವು ಸ್ವತಂತ್ರವಾದ ಬಳಿಕ ಮಿಶನರಿಗಳ ಪ್ರಚಾರವೂ ಪ್ರಭಾವವೂ ಕೆಲಮಟ್ಟಿಗೆ ಇಳಿದಿರುತ್ತದೆ. ಜಾತ್ಯತೀತ ಧೋರಣೆಯನ್ನು ನಮ್ಮ ಸರಕಾರವು ಇಟ್ಟುಕೊಂಡಿರುವ ಪ್ರಯುಕ್ತ ಮಿಶನರಿಗಳಿಗೆ ಪ್ರೋತ್ಸಾಹವು ಸರಕಾರಿ ಮಟ್ಟದಲ್ಲಿ ಇಂದು ಸಿಗುತ್ತಿಲ್ಲ. ಆದಾಗ್ಯೂ ಮಿಶನರಿಗಳು ನಡೆಸುವ ಮತಾಂತರ ಮತ್ತಿತರ ಕಾರ್ಯಕ್ರಮಗಳು ಸಾರ್ವತ್ರಿಕವಾಗಿ ರಭಸವನ್ನೂ ಚೈತನ್ಯವನ್ನೂ ಕಳೆದುಕೊಂಡಿವೆ ಎಂದಿದರ ಅರ್ಥವಲ್ಲ. ದಾರಿದ್ರ್ಯ, ಅಸಂತುಷ್ಟಿ ಮತ್ತು ಅಜ್ಞಾನಗಳಿರುವಲ್ಲಿ ಕಮ್ಯುನಿಸಂ ಹೇಗೆ ಪ್ರಭಾವಶಾಲಿಯಾಗುತ್ತಿರುವುದೋ ಮಿಶನರಿಗಳು ಪ್ರತಿಪಾದಿಸುತ್ತಿರುವ "ಇವಾಂಜೆಲಿಸಂ" (ಅಂದರೆ, ಧರ್ಮ ಪ್ರಚಾರ) ಸಹ ಅದೇ ರೀತಿಯ ವಾತಾವರಣದಲ್ಲಿ ತನ್ನ ಅಧ್ಯತೆಯನ್ನು ಪ್ರದರ್ಶಿಸುತ್ತಿರುವುದು ಕಂಡುಬರುತ್ತದೆ.

ಆಪಾದನೆಗಳ ವಿಚಾರಣೆ

ಮಧ್ಯಪ್ರದೇಶದ ಸರಕಾರವು ಮಿಶನರಿಗಳ ಮೇಲಿನ ಆಪಾದನೆಗಳನ್ನು ಕೇಳಿ ಕೇಳಿ ಬೇಸತ್ತು ೧೯೫೪ನೇ ಎಪ್ರೀಲಿನಲ್ಲಿ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿದ್ದಿತು. ನಾಗಪುರ ಹೈಕೋರ್ಟಿನ ನಿವೃತ್ತ ಮುಖ್ಯ ನ್ಯಾಯಾಧೀಶರಾಗಿದ್ದ ಡಾ. ಎಂ. ಬಿ. ನಿಯೋಗಿಯವರು ಈ ಸಮಿತಿಯ ಅಧ್ಯಕ್ಷರಾಗಿದ್ದರು; ವರ್ಧಾದ ವಾಣಿಜ್ಯ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಎಸ್. ಕೆ. ಜಾರ್ಜ್ ಎಂಬವರನ್ನೊಳಗೊಂಡು ಒಟ್ಟು ಐದು ಮಂದಿ ಇತರ ಸದಸ್ಯರೂ ಈ ಸಮಿತಿಯಲ್ಲಿದ್ದರು. ಈ ಸಮಿತಿಯು ಕಳೆದ ಎರಡು ವರ್ಷಗಳಲ್ಲಿ ೭೭ ಕೇಂದ್ರಗಳನ್ನು ಸಂದರ್ಶಿಸಿ ೭೦೦ ಗ್ರಾಮಗಳ ೧೧,೩೬೦ ಜನರನ್ನು ಭೇಟಿ ಮಾಡಿತು; ೩೭೫ ಜನರ ಲಿಖಿತ ಹೇಳಿಕೆಗಳನ್ನು ಪಡೆಯಿತು. ಭಾರತದಲ್ಲಿ, ಅದರಲ್ಲೂ ಮುಖ್ಯವಾಗಿ ಮಧ್ಯಪ್ರದೇಶ ರಾಜ್ಯದಲ್ಲಿ, ಕ್ರೈಸ್ತ ಮಿಶನರಿಗಳು ನಡೆಸುತ್ತಿರುವ ಚಟುವಟಿಕೆಯನ್ನು ಸಂಪೂರ್ಣವಾಗಿ ಸಮಾಲೋಚಿಸಿ ಇದೀಗ ೧೫೦ ಪುಟದಷ್ಟು ದೀರ್ಘವಾದ ಸರ್ವಾನುಮೋದನೆಯ ವರದಿಯನ್ನು ಸರಕಾರಕ್ಕೆ ಸಮಿತಿಯು ಒಪ್ಪಿಸಿರುತ್ತದೆ. ತನ್ನ ವರದಿಯಲ್ಲಿ ಸಮಿತಿಯು ಆಧುನಿಕ ಭಾರತದ ಜೀವನವನ್ನು ರೂಪಿಸುವುದರಲ್ಲಿ ಕ್ರೈಸ್ತ ಮಿಶನರಿಗಳು ವಹಿಸಿದ ಪಾತ್ರವನ್ನು ಮುಕ್ತಕಂಠದಿಂದ ಪ್ರಶಂಸಿಸಿದೆ; ಆದರೆ ಮಿಶನರಿಗಳು ಕೈಗೊಂಡಿರುವ ಮತಾಂತರ ಕಾರ್ಯಕ್ರಮವನ್ನು ಮಾತ್ರ ಅದು ಬಹಳವಾಗಿ ಆಕ್ಷೇಪಿಸಿದೆ.

ಅಪಾಯಕಾರಿ ಇವಾಂಜೆಲಿಸಂ

ಸುವಾರ್ತೆಯ ಪ್ರಚಾರ ಅಥವಾ ಸಾಮಾನ್ಯ ಮಾತಿನಲ್ಲಿ ಧರ್ಮೋಪದೇಶವನ್ನು ಮಾಡುತ್ತಿರುವ ಮಿಶನರಿಗಳ ಕಾರ್ಯಕ್ರಮವು ಆಧ್ಯಾತ್ಮಿಕ ಉದ್ದೇಶಗಳಿಂದಲ್ಲ, ಪಾಶ್ಚಾತ್ಯರ ಶ್ರೇಷ್ಠತ್ವವನ್ನು ಪುನರುಜ್ಜೀವಿಸಿ ಕ್ರೈಸ್ತ ಜಗತ್ತನ್ನು ಸಂಸ್ಥಾಪಿಸುವ ಧ್ಯೇಯದಿಂದ ಪ್ರಚೋದಿತವಾಗಿದೆ ಎಂದು ಸಮಿತಿಯು ಅಭಿಪ್ರಾಯಪಟ್ಟಿದೆ. ಕ್ರೈಸ್ತೇತರ ಸಮಾಜಗಳ ಐಕ್ಯಕ್ಕೆ ಅಪಾಯವನ್ನುಂಟುಮಾಡಿ ಅಲ್ಲಲ್ಲಿ ಕ್ರೈಸ್ತ ಗುಂಪುಗಳನ್ನು ಸೃಷ್ಟಿಸುವುದೇ ಮಿಶನರಿಗಳ ಗುರಿಯಾಗಿದೆ ಎಂದು ಸಮಿತಿಯು ಆರೋಪಿಸಿದೆ. ಆದಿವಾಸಿಗಳ ಸಾಮೂಹಿಕ ಮತಾಂತರವು ನೀಚ ಉದ್ದೇಶದಿಂದ ನಡೆಯುತ್ತಿದ್ದು ರಾಜ್ಯದ ಭದ್ರತೆಗೆ ತೀರ ಅಪಾಯಕಾರಿಯಾದ ಚಟುವಟಿಕೆಯಾಗಿದೆ ಎಂದು ಸಮಿತಿಯು ಭಾವಿಸಿದೆ. ಜಾಗತಿಕ ಇತಿಹಾಸದ ವಿಶಾಲವಾದ ಹಿನ್ನೆಲೆಯಲ್ಲಿ ಕ್ರೈಸ್ತ ಮಿಶನರಿಗಳ ಚಟುವಟಿಕೆಯನ್ನು ಸಮೀಕ್ಷಿಸಬೇಕಾಗಿದೆ ಎನ್ನುತ್ತಾ ಸಮಿತಿಯು ಸದ್ಯದ ಪರಿಸ್ಥಿತಿಯನ್ನು "ಕೆಥೋಲಿಕ್ ಚರ್ಚನ್ನು ಪ್ರತಿನಿಧಿಸುವ ಪೋಪರ ಆಧಿಪತ್ಯ ಮತ್ತು ಅಮೇರಿಕದ ಪ್ರಜಾಪ್ರಭುತ್ವ ಇವೆರಡೂ ಕಮ್ಯುನಿಸಮ್ಮಿನ ಉಚ್ಚಾಟನೆಯ ಹೆಸರಿನಲ್ಲಿ ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸುವ ಕಾರ್ಯಕ್ರಮವನ್ನು ಮುಂದೊತ್ತುವುದರಲ್ಲಿ ಭುಜಕ್ಕೆ ಭುಜಕೊಟ್ಟು ನಡೆಯುವಂತಿದೆ; ಪೋಪರ ಅಧಿಸತ್ತೆಗೆ ಧಾರ್ಮಿಕ ಸಾಮ್ರಾಜ್ಯವನ್ನು ವಿಸ್ತರಿಸುವ ಆಸೆ; ಅಮೇರಿಕದ ಪ್ರಜಾಪ್ರಭುತ್ವಕ್ಕೆ ಜಗತ್ತಿನ ಧುರೀಣತ್ವದ ಮೇಲೆ ಕಣ್ಣು" ಎಂಬುದಾಗಿ ಸಮಿತಿಯು ಸ್ಪಷ್ಟ ಮಾತುಗಳಲ್ಲಿ ಬಣ್ಣಿಸಿದೆ.

ಹಿಂದುಳಿದವರೇ ಗುರಿ

ಕ್ರೈಸ್ತ ಮಿಶನರಿಗಳ ಚಟುವಟಿಕೆಯು ಅತ್ಯಂತ ವ್ಯಾಪಕ ಸ್ವರೂಪವನ್ನು ಇಂದು ಹೊಂದಿದೆಯೆಂದೂ "ರಾಜ್ಯದೊಳಗೊಂದು ರಾಜ್ಯ"ವೆಂಬ ರೀತಿಯಲ್ಲಿ ಅದು ಸಂಘಟನೆ ಹೊಂದಿದೆಯೆಂದೂ ಸಮಿತಿಯು ಎಚ್ಚರಿಸಿದೆ. ಸದ್ಯಕ್ಕೆ ಭಾರತದಲ್ಲಿ ವಿದೇಶಗಳಿಂದ ಬಂದ ೪೮೦೦ ಕ್ರೈಸ್ತ ಮಿಶನರಿಗಳಿದ್ದಾರೆ; ೧೯೫೦ರಿಂದೀಚೆಗೆ ಈ ದೇಶಕ್ಕೆ ಬಂದವರ ಸಂಖ್ಯೆಯೇ ಐನೂರಕ್ಕಿಂತ ಹೆಚ್ಚಾಗಿದೆ. ಇದರಲ್ಲಿ ಮಧ್ಯ ಪ್ರದೇಶ ರಾಜ್ಯವೊಂದರಲ್ಲಿಯೇ ಸುಮಾರು ೪೮೦ ಮಂದಿ ಇದ್ದಾರೆ; ಸುಮಾರು ೩೦ ಬೇರೆ ಬೇರೆ ಕ್ರೈಸ್ತ ಧರ್ಮ ಪ್ರಸಾರ ಸಂಘಗಳು ಇಲ್ಲಿ ಕೆಲಸ ಮಾಡುತ್ತಿವೆ. ರಾಜ್ಯದ ೨೧೦ ಲಕ್ಷ ಪ್ರಜೆಗಳಲ್ಲಿ ಸೇಕಡಾ ೫೦ರಷ್ಟಿರುವ "ಹಿಂದುಳಿದ" ವರ್ಗಗಳ ಜನರೇ ಈ "ಆಕ್ರಮಣಕಾರಿ" ಧರ್ಮ ಪ್ರಚಾರದ ಗುರಿಯಾಗಿದ್ದಾರೆ. ಮಿಶನರಿಗಳು ಹಿಂದೆ ನಡೆಸಿದ ಚಟುವಟಿಕೆಗಳು ಆರೋಗ್ಯಕರವಾಗಿರಲಿಲ್ಲ; ಉತ್ತಮಾಭಿರುಚಿಯುಕ್ತವೂ ಆಗಿರಲಿಲ್ಲ. ಎರಡು ಮೂರು ಪ್ರಸಂಗಗಳಲ್ಲಿ ದಂಗೆ ನಡೆದದ್ದುಂಟು; ಐರೋಪ್ಯ ಕ್ರೈಸ್ತರಿಂದಲೇ ತುಂಬಿದ ರಾಜಕೀಯ ವಿಭಾಗವು ಸಹ ಹಿಂದಿನ ಸಂಸ್ಥಾನಗಳಲ್ಲಿ ಕ್ರೈಸ್ತ ಮಿಶನರಿಗಳ ಪ್ರವೇಶ ಮತ್ತು ಚಟುವಟಿಕೆಯ ಕುರಿತು ಆಡೆತಡೆಗಳನ್ನು ಹೇರಬೇಕಾದ ಸಂದರ್ಭ ಬಂದಿತ್ತು ಎಂದಿದೆ ಈ ಸಮಿತಿ. ಇದರ ಸಮರ್ಥನೆಗಾಗಿ, ಛತ್ತೀಸಗಢದ ಕಮಿಶನರರಿಗೆ ಕೆಥೋಲಿಕ್ ಫಾದರ್ ಸುಪೀರಿಯರ್ ಇವರು ತನ್ನ ಸಂಘವು ರಾಜಕೀಯದಲ್ಲಿ ಪ್ರವೇಶಿಸುವುದಿಲ್ಲವೆಂದೂ ಧಾರ್ಮಿಕ ಕ್ಷೇತ್ರಕ್ಕಷ್ಟೇ ಚಟುವಟಿಕೆಯನ್ನು ಮಿತಗೊಳಿಸುವುದೆಂದೂ ಮುಚ್ಚಳಿಕೆಯನ್ನು ಬರೆದು ಕೊಟ್ಟಿದ್ದ ಪ್ರಸಂಗವನ್ನು ಸಮಿತಿಯು ಉಲ್ಲೇಖಿಸಿದೆ.

ಸಾಮೂಹಿಕ ಮತಾಂತರ

ಇಷ್ಟಾದರೂ ಸಾಮೂಹಿಕ ಮತಾಂತರವನ್ನು ಕ್ರೈಸ್ತ ಮಿಶನರಿಗಳು ಬಿಟ್ಟುಕೊಡಲಿಲ್ಲವೆಂದು ಸಮಿತಿಯು ವಿಷಾದಿಸಿದೆ. ಧರ್ಮ ಪ್ರಚಾರದ ರೀತಿಯನ್ನು ಬಹಳವಾಗಿ ಆಕ್ಷೇಪಿಸುತ್ತಾ ಸಮಿತಿಯು ಶಾಲೆಗಳ ರಚನೆ, ದವಾಖಾನೆಗಳ ಅನುಕೂಲತೆ ಅನಾಥಾಲಯಗಳ ನಿರ್ಮಾಣ, ಹಣ ಸಹಾಯ, ಸಾಗುವಳಿಯ ಸಲಕರಣೆಯೊದಗಿಸುವ ಭರವಸೆ, ವಿದೇಶಗಳಿಂದ ಆಮದು ಮಾಡಿಕೊಂಡ ಹಾಲಿನ ಪುಡಿ ಮತ್ತು ತುಪ್ಪದ ವಿತರಣೆ ಇತ್ಯಾದಿ ವಿವಿಧರೂಪಗಳನ್ನು ಈ "ಧರ್ಮ ಪ್ರಚಾರ" ಕಾರ್ಯವು ಪಡೆಯುತ್ತಿದೆ ಎಂದಿದೆ. ಇವೆಲ್ಲ ಆಮಿಷಗಳನ್ನು ಒಡ್ಡುವುದಕ್ಕಾಗಿ ಈ ಕ್ರೈಸ್ತ ಮಿಶನರಿಗಳು ವಿದೇಶಗಳಿಂದ ಬಹಳಷ್ಟು ಹಣವನ್ನು ಪಡೆದುಕೊಳ್ಳುತ್ತಿದ್ದಾರೆ ಎಂದು ಸಮಿತಿ ಪ್ರಕಟಿಸಿದೆ. ರಿಜರ್ವ್ ಬೇಂಕಿನ ಮೂಲಕ ಭಾರತ ಸರಕಾರವು ಸಂಗ್ರಹಿಸಿರುವ ಮಾಹಿತಿಯನ್ನೆ ಆಧಾರವಾಗಿ ತೋರಿಸುತ್ತಾ, ೧೯೫೦—೫೪ನೇ ವರ್ಷಗಳ ನಡುವೆ ಭಾರತದಲ್ಲಿರುವ ಕ್ರೈಸ್ತ ಮಿಶನರಿಗಳು ೨೯ ಕೋಟಿ ರೂಪಾಯಿಗಿಂತಲೂ ಹೆಚ್ಚು ಹಣವನ್ನು ವಿದೇಶಗಳಿಂದ ಪಡೆದುಕೊಂಡರೆಂದು ತಿಳಿಸಿದೆ. ಇವರಲ್ಲಿ ಅಮೇರಿಕದಿಂದ ಬಂದ ಹಣ ಸುಮಾರು ೨೦ ಕೋಟಿ; ಬ್ರಿಟನಿನಿಂದ ಬಂದುದು ೫ ಕೋಟಿ. ಹೀಗೆ ಹಣವನ್ನು ಪಡೆಯಬಹುದಾಗಿದ್ದ ದೆಸೆಯಿಂದಲೇ ಮಧ್ಯಪ್ರದೇಶದ ಸರ್ಗುಜ ವಲಯದಲ್ಲಿ ಮತಾಂತರ ನಿರತರಾದ ಲೂಥೆರನ್ ಮತ್ತಿತರ ಮಿಶನರಿಗಳು ಸುಮಾರು ೪೦೦೦ ಜನರನ್ನು ಮತಾಂತರಗೊಳಿಸಲು ಸಮರ್ಥರಾದರೆಂದು ಸಮಿತಿಯು ಸಾರಿದೆ.

ಆಕ್ರಮಣಕಾರಿ ಧರ್ಮ ಪ್ರಚಾರ

ಮತಾಂತರವೇ ಕ್ರೈಸ್ತ ಮಿಶನರಿಗಳ ಮುಖ್ಯೋದ್ದೇಶವೆಂದು ಹೇಳುತ್ತಾ ಸಮಿತಿಯು ಇದರಿಂದ ಹಲವಾರು ಬಗೆಯ ಗಂಡಾಂತರಗಳು ತಪ್ಪವೆಂದು ಭಾವಿಸಿದೆ. ಧಾರ್ಮಿಕ ಉದ್ದೇಶಗಳ ಮಿತಿಯನ್ನು ಮೀರಿ ಕ್ರೈಸ್ತ ಮಿಶನರಿಗಳು ಕೆಲಸವನ್ನು ಮಾಡುತ್ತಿರುವುದರ ಕಡೆಗೆ ಸಮಿತಿ ಗಮನವನ್ನು ಸೆಳೆದಿದೆ. ಮಿಶನರಿಗಳು ಪದೇ ಪದೇ ಸರಕಾರಕ್ಕೆ ಮತ್ತು ಸಾರ್ವಜನಿಕರಿಗೆ ಭರವಸೆಯನ್ನು ನೀಡಿದ್ದರೂ ಆ ಭರವಸೆಯನ್ನು ಮುರಿದು, ಪರೋಕ್ಷವಾಗಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗಿರುವುದನ್ನು ಸಮಿತಿ ಕಂಡುಹಿಡಿದಿದೆ. ಮತಾಂತರವು ಮತಾಂತರಗೊಂಡವನಿಗೆ ತನ್ನ ಸಮಾಜದಲ್ಲಿರುವ ಸ್ಥಾನಮಾನದ ಭದ್ರತೆ ಮತ್ತು ಸಾಮರಸ್ಯದ ವಿಷಯದಲ್ಲಿ ಸಂದೇಹವನ್ನು ಹುಟ್ಟಿಸುವುದರಿಂದ ಆತನು ಸರಕಾರಕ್ಕೂ ರಾಜ್ಯಕ್ಕೂ ನಿಷ್ಠನಾಗಿ ಉಳಿಯುವ ಸಂಭವವು ಇಷ್ಟು ಪಟ್ಟಿಗೆ ಕಡಿಮೆಯಾಗುತ್ತದೆಯೆಂಬುದನ್ನೇ ವೈಜ್ಞಾನಿಕ ಪರಿಣಾಮದ ಕಡೆಗೆ ಸಹ

(೧೧ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿಮಾಡಲು

ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

ಭಾರತದ ಸರಕಾರಿ ಭಾಷೆಯಾಗಿ ಹಿಂದಿಯ ಉಪಯೋಗ

ರಭಸದ ಪ್ರಚಾರ ಮತ್ತು ಶಿಕ್ಷಣ ಸೌಲಭ್ಯಗಳ ವಿಸ್ತರಣೆಯು ಅತ್ಯಾವಶ್ಯಕ

ದಕ್ಷಿಣ ಭಾರತದಲ್ಲಿ ಹಿಂದೀ ಭಾಷೆಯ ಕುರಿತು ಒಂದು ಬಗೆಯ ಸಂದೇಹ ಕಂಡು ಬರುತ್ತಿದೆ. ಹಿಂದಿಯು ದಕ್ಷಿಣ ಭಾರತದಲ್ಲಿರುವ ಪ್ರಮುಖ ದ್ರಾವಿಡ ಭಾಷೆಗಳಷ್ಟು ಸಮೃದ್ಧವಾದ ಭಾಷೆಯಾಗಿಲ್ಲವೆಂಬ ವ್ಯಾವಹಾರಿಕ ಆಕ್ಷೇಪದೊಡನೆ ಔತ್ತರೇಯರು ಭಾಷೆಯ ಮಾಧ್ಯಮದ ಮೂಲಕ ತಮ್ಮ ಮೇಲೆ ಪ್ರಭುತ್ವವನ್ನು ಪ್ರಸ್ತಾಪಿಸಿಕೊಳ್ಳಲು ಹವಣಿಸಿಲ್ಲವಷ್ಟೆ—ಎಂಬ ಭಾವನಾತ್ಮಕ ಆತಂಕವೂ ದಾಕ್ಷಿಣಾತ್ಯರಲ್ಲಿದೆ. ಇದರಿಂದಾಗಿಯೇ ನಮ್ಮ ರಾಜ್ಯ ಘಟನೆಯಲ್ಲಿ ೧೯೬೫ನೇ ವರ್ಷದ ಬಳಿಕ ಹಿಂದಿಯೇ ಸರಕಾರಿ ವ್ಯವಹಾರದ ಅಧಿಕೃತ ಭಾಷೆಯಾಗಬೇಕೆಂದು ಹೇಳಲಾಗಿದ್ದರೂ ಈ ಅವಧಿಯನ್ನು ಮತ್ತೆ ೧೫ ವರ್ಷ ಹಿಂದೆ ಹಾಕಬೇಕೆಂದು ದಕ್ಷಿಣದ ಧುರೀಣರಾದ ರಾಜಾಜಿ ಮತ್ತಿತರರು ವಾದಿಸುತ್ತಿದ್ದಾರೆ.

ಭಾಷಾ ಆಯೋಗದ ಕಾರ್ಯ

ಸರಕಾರಿ ವ್ಯವಹಾರದ ಅಧಿಕೃತ ಭಾಷಾ ಆಯೋಗವೊಂದು ರಚಿಸಲ್ಪಟ್ಟಿದ್ದು ಅದು ಇಷ್ಟರಲ್ಲಿಯೇ ತನ್ನ ವರದಿಯನ್ನು ರಾಷ್ಟ್ರಾಧ್ಯಕ್ಷರಿಗೆ ಒಪ್ಪಿಸಲಿದೆ. ಗೃಹ ಖಾತೆಯಲ್ಲಿರುವ ಮಂತ್ರಿ ಮಾನ್ಯ ಶ್ರೀ ದಾತಾರರಿಗನುಸಾರ, ಈ ತಿಂಗಳೊಳಗೆನೇ ಆಯೋಗ ತನ್ನ ವರದಿಯನ್ನು ಒಪ್ಪಿಸಬಹುದು. ಈ ಆಯೋಗವನ್ನು ನಮ್ಮ ರಾಜ್ಯ ಘಟನೆಯ ೩೪೪ನೇ ಸೂತ್ರದಂತೆ ನೇಮಿಸಲಾಗಿದೆ. ಹಿಂದೀ ಭಾಷೆಯ ಪ್ರಗತಿಪರ ಬಳಕೆ, ಇಂಗ್ಲೀಷನ್ನು ಮಾಧ್ಯಮವಾಗಿ ಉಪಯೋಗಿಸುವುದಕ್ಕೆ ಕೆಲವು ಬಗೆಯ ತಡೆಯನ್ನು ವಿಧಿಸುವಿಕೆ, ಹೈಕೋರ್ಟು ಮತ್ತು ವರಿಷ್ಠ ನ್ಯಾಯಾಲಯಗಳಲ್ಲಿಯೂ ಶಾಸನ ಮತ್ತು ಮಸೂದೆಗಳ ತಯಾರಿಕೆಯಲ್ಲಿಯೂ ಬಳಸಬೇಕಾದ ಭಾಷೆ, ಸರಕಾರವು ಬಳಸಬೇಕಾದ ಅಂಕೆಗಳ ಸ್ವರೂಪ ಇತ್ಯಾದಿ ವಿಷಯಗಳ ಮೇಲೆ ಈ ಆಯೋಗವು ಸಲಹೆಗಳನ್ನು ಕೊಡಬೇಕಾಗಿದೆ. ತನ್ನ ಸೂಚನೆಗಳನ್ನು "ಭಾರತದ ಔದ್ಯಮಿಕ, ಸಾಂಸ್ಕೃತಿಕ ಮತ್ತು ವೈಜ್ಞಾನಿಕ ಪ್ರಗತಿಗೂ ಹಿಂದೀ ಭಾಷೆಯಾಡದ ಪ್ರದೇಶಗಳವರಿಗೆ ಸರಕಾರಿ ನೌಕರಿಯ ವಿಷಯದಲ್ಲಿರುವ ನ್ಯಾಯಸಮ್ಮತವಾದ ಆಕಾಂಕ್ಷೆಗಳಿಗೂ ತೊಂದರೆಯಾಗದಂತೆ" ಆಯೋಗವು ಮಾಡಬೇಕಾಗಿದೆ.

ಸೂಚನೆಗಳ ಪರಿಶೀಲನೆ

ಮುಂಬಯಿ ರಾಜ್ಯದಲ್ಲಿ ಹಿಂದೆ ಮುಖ್ಯ ಮಂತ್ರಿಗಳಾಗಿದ್ದ ಮತ್ತು ಸ್ವಲ್ಪ ಸಮಯದ ವರೆಗೆ ಬ್ರಿಟನ್ನಿನಲ್ಲಿ ಭಾರತದ ರಾಯಭಾರಿಯಾಗಿದ್ದ ಪ್ರಸಿದ್ಧ ವಿದ್ವಾಂಸ, ರಾಜಕಾರಣ ಪಟು ಹಾಗು ನ್ಯಾಯಬುದ್ಧಿಯ ಶ್ರೀ ಬಿ. ಜಿ. ಖೇರರೇ ಭಾಷಾ ಆಯೋಗದ ಅಧ್ಯಕ್ಷರಾಗಿದ್ದಾರೆ. ಇವರು ಒಪ್ಪಿಸುವ ವರದಿಯನ್ನು ರಾಷ್ಟ್ರಾಧ್ಯಕ್ಷರು ಲೋಕಸಭೆಯ ೨೦ ಮತ್ತು ರಾಜ್ಯಸಭೆಯ ೧೦ ಮಂದಿ ಸದಸ್ಯರುಳ್ಳ ಸಂಸತ್ತಿನ ಸಂಯುಕ್ತ ಪರಿಶೀಲಕ ಸಮಿತಿಗೆ ಒಪ್ಪಿಸಿಕೊಡಲು ಬದ್ಧರಿದ್ದಾರೆ. ಈ ಸಮಿತಿಯು ಆಯೋಗದ ಸೂಚನೆಗಳನ್ನೆಲ್ಲ ಪರ್ಯಾಲೋಚಿಸಿ ರಾಷ್ಟ್ರಾಧ್ಯಕ್ಷರಿಗೆ ತನ್ನ ಅಭಿಪ್ರಾಯವನ್ನು ತಿಳಿಸಬೇಕಾಗಿದೆ. ತದನಂತರ ರಾಷ್ಟ್ರಾಧ್ಯಕ್ಷರು ವರದಿಯ ವಿಷಯದಲ್ಲಿ ತಕ್ಕ ಆಜ್ಞೆಗಳನ್ನು ಹೊರಡಿಸಲು ಅಧಿಕಾರವನ್ನು ಪಡೆಯುತ್ತಾರೆ. ರಾಜ್ಯ ಘಟನೆಯಲ್ಲಿ ಈ ಭಾಷಾ ಆಯೋಗವನ್ನು ಪ್ರತಿ ಐದು ವರ್ಷಗಳಿಗೊಮ್ಮೆ ನೇಮಿಸಬೇಕೆಂದು ಹೇಳಲಾಗಿದೆ. ಆದುದರಿಂದ ಕಾಲಕಾಲಕ್ಕೆ ಭಾಷೆಯ ಸಂಬಂಧದ ತೊಡಕುಗಳನ್ನೂ ಸರಕಾರಿ ಕ್ರಮಗಳ ಯಶಸ್ಸನ್ನೂ ಪರಿಶೀಲಿಸಲು ಅನುಕೂಲವಾಗುತ್ತದೆ

ವಿವಾದದ ವಿಷಯ

ಮಂತ್ರಿ ದಾತಾರರು ಸುದ್ದಿ ಸಂಸ್ಥೆಗಳು ಪ್ರಸಾರ ಮಾಡಿರುವುದೆಲ್ಲವೂ ಸತ್ಯವಾಗಬೇಕೆಂದಿಲ್ಲವಾದ ಕಾರಣ, ಭಾಷಾ ಆಯೋಗದ ಸೂಚನೆಗಳ ವಿಷಯದಲ್ಲಿ ಪತ್ರಿಕಾ ವರದಿಗಳನ್ನು ನಂಬಬಾರದೆಂದು ಹೇಳಿದ್ದಾರೆ. ಆದಾಗ್ಯೂ ಹೊಸ ದೆಹಲಿಯಿಂದ ಪ್ರಸಾರವಾದ ವಾರ್ತೆಗಳು ಸಾರ್ವಜನಿಕರ ಅವಗಾಹನೆಗೆ ಯೋಗ್ಯವಾಗಿವೆ ಎನ್ನಬಹುದು. ಈ ವಾರ್ತೆಯಂತೆ, ಭಾಷಾ ಆಯೋಗದ ಬಹುಸಂಖ್ಯಾಕ ಸದಸ್ಯರು ದಾಕ್ಷಿಣಾತ್ಯರು ಆಗ್ರಹಪಡಿಸಿದಂತೆ, ಇಂಗ್ಲಿಷನ್ನು ೧೯೬೫ನೇ ವರ್ಷದ ಬಳಿಕವೂ ಕೆಲವು ಸಮಯದವರೆಗೆ ಬಳಸಲಾಗುವಂತೆ ಘಟನೆಗೆ ತಿದ್ದುಪಡಿ ಮಾಡುವ ಸೂಚನೆಗೆ ಅನುಕೂಲಾಭಿಪ್ರಾಯವನ್ನು ಹೊಂದಿಲ್ಲ. ಇಂಗ್ಲಿಷನ್ನು ಮುಂದರಿಯಗೊಡುವ ಕುರಿತು ಯೋಗ್ಯ ತೀರ್ಮಾನಕ್ಕೆ ಬರಲು ಈಗ ಕಾಲವು ಪಕ್ವವಾಗಿಲ್ಲವೆಂದೇ ಇವರ ಮತ. ಮುಂದಿನ ಸಲ (೧೯೬೦) ನೇಮಕಗೊಳ್ಳುವ ಭಾಷಾ ಆಯೋಗವು ಈ ಪ್ರಶ್ನೆಯನ್ನು ಸಾಕಲ್ಯವಾಗಿ ವಿವೇಚಿಸಲು ಅರ್ಹತೆ ಪಡೆದಿದೆಯೆಂದೂ ಈಗಲೇ ಇಂಗ್ಲಿಷಿನ ಬಳಕೆಯನ್ನು ವಿಸ್ತರಿಸುವುದಕ್ಕೆ ಅಥವಾ ವಿಸ್ತರಿಸದಿರುವುದಕ್ಕೆ ಸೂಚಿಸುವುದು ಅಪ್ರಾಸ್ತವವಾದೀತೆಂದೂ ಇವರ ನಿಲುಮೆಯಾಗಿರುವಂತೆ ತೋರುತ್ತದೆ.

ಸಿಫಾರಸುಗಳ ವಿವರ

ಭಾರತವು ಗಣರಾಜ್ಯವಾಗಿ ಕೇವಲ ಆರು ವರ್ಷಗಳು ಮಾತ್ರವೇ ಸಂದಿರುವುದರಿಂದ ಹಿಂದೀ ಭಾಷೆಯ ಬಳಕೆ ಮತ್ತು ಪ್ರಚಾರದ ಸಲುವಾಗಿ ನೆಲವನ್ನು ಹದಗೊಳಿಸುವ ಕೆಲಸವಷ್ಟೇ ಇಷ್ಟರೊಳಗೆ ನಡೆದಿರುವುದು ಸಾಧ್ಯ; ಹಿಂದೀ ಭಾಷೆಯನ್ನು ಅದಷ್ಟು ವಿಶಾಲವಾದ ಕ್ಷೇತ್ರದಲ್ಲಿ ಸರಕಾರಿ ಉದ್ದೇಶಗಳಿಗೆ ಬಳಸುವ ಉದ್ದೇಶವು ಎಷ್ಟು ಮಟ್ಟಿಗೆ ಸಫಲವಾಗಿದೆ ಅಥವಾ ಸಫಲವಾದೀತು ಎಂಬುದರ ಮಾಹಿತಿಯನ್ನು ಸಾಧಾರಣ ಸ್ಪಷ್ಟರೂಪದಲ್ಲಿ ಯಾರಾದರೂ ಮಾಡಿಕೊಳ್ಳಬೇಕಾಗಿದ್ದರೆ ಇನ್ನೈದು ವರ್ಷಗಳವರೆಗೆ ಕಾಯಲೇ ಬೇಕು ಎಂದು ಆಯೋಗ ಭಾವಿಸಿದಂತಿದೆ. ಆದುದರಿಂದ ಮುಂದಿನ ಐದು ವರ್ಷಗಳಲ್ಲಿ ಹಿಂದೀ ಭಾಷೆಯ ಬಳಕೆಯನ್ನು ಮುಂದೊತ್ತಬೇಕು; ಇದಕ್ಕಾಗಿ ಎಲ್ಲ ಬಗೆಯಿಂದಲೂ ಪ್ರೋತ್ಸಾಹವನ್ನು ನೀಡಬೇಕು; ನ್ಯಾಯಾಲಯಗಳಲ್ಲಿ ಹಿಂದೀ ಭಾಷೆಯನ್ನು ಬಳಸಲು ಕ್ರಮಗಳನ್ನು ತೆಗೆದುಕೊಳ್ಳಬೇಕು; ಈಗಾಗಲೇ ಹಿಂದೀ ಭಾಷೆಯನ್ನು ಅನುಸರಿಸುತ್ತಿರುವ ಕೇಂದ್ರ ಮತ್ತು ರಾಜ್ಯ ಸರಕಾರಗಳ ವಿಭಾಗಗಳು ದೇವನಾಗರಿ ಅಂಕೆಗಳನ್ನು ಬಳಸುವುದೊಳ್ಳೆಯದು—ಎಂದು ಮುಂತಾಗಿ ಆಯೋಗ ಸೂಚಿಸಿದೆಯೆಂದು ತಿಳಿದು ಬರುತ್ತದೆ.

ದಾಕ್ಷಿಣಾತ್ಯರ ಅಭಿಪ್ರಾಯ

ಬಹು ಸಂಖ್ಯಾಕರ ಅಭಿಪ್ರಾಯವು, ಇಂಗ್ಲಿಷಿನ ಉಪಯೋಗವನ್ನು ೧೯೬೫ನೇ ಇಸವಿಯ ಬಳಿಕವೂ ಮಾಡುತ್ತಿರುವ ಆವಶ್ಯಕತೆ ಬಿದ್ದಲ್ಲಿ ಘಟನೆಗೆ ತಿದ್ದುಪಡಿಯಾಗಬೇಕೆಂಬ ತತ್ತ್ವವನ್ನು ಒಪ್ಪುವುದಿಲ್ಲವೆಂದೂ ಹೇಳಲಾಗಿದೆ. ಘಟನೆಯ ೩೪೩ನೇ ಸೂತ್ರಕ್ಕನುಸಾರವಾಗಿ, ಇಂಗ್ಲಿಷಿನ ಬಳಕೆಯನ್ನು ಈಗಿನಂತೆಯೇ ಹಿಂದೀ ಭಾಷೆಯ ಪಕ್ಕದಲ್ಲಿ ಮಾಡುತ್ತಿರಬಹುದು. ಭಾಷಾ ಆಯೋಗದ ಅಲ್ಪಸಂಖ್ಯಾಕರು ಘಟನೆಗೆ ತಿದ್ದುಪಡಿಯನ್ನು ಮಾಡುವುದು ಜನರಲ್ಲಿ ವಿಶ್ವಾಸವನ್ನು ಹುಟ್ಟಿಸುವ ದೃಷ್ಟಿಯಿಂದ ಅತ್ಯಾವಶ್ಯಕವಾದುದೆಂದು ಭಾವಿಸುತ್ತಿದ್ದಾರೆ. ಹಿಂದೀ ಭಾಷೆಯು ಸಮೃದ್ಧವಾಗಿಲ್ಲ; ವೈಜ್ಞಾನಿಕ, ಔದ್ಯಮಿಕ ಮತ್ತಿತರ ರಂಗಗಳಲ್ಲಿ ಇಂಗ್ಲಿಷಿಗೆ ಇರುವಷ್ಟು ವ್ಯಾಪ್ತಿಯು ಹಿಂದೀ ಭಾಷೆಗಿಲ್ಲ. ಆದುದರಿಂದ ೧೯೬೫ನೇ ವರ್ಷದಾಚೆಗೆ ಸಹ ಇಂಗ್ಲಿಷನ್ನು ಬಳಸಬೇಕಾಗಿ ಬರುವುದು ಅನಿವಾರ್ಯ—ಆಗ ಘಟನೆಗೆ ತಿದ್ದುಪಡಿ ಮಾಡಿ ಅವಧಿಯನ್ನು ಬೆಳೆಸಿದರೆ ಮಾತ್ರವೇ ಹಿಂದೀಯೇತರ ಭಾಷೆಯಾಡುವ ಪ್ರದೇಶಗಳವರಿಗೆ ಮಾನಸಿಕ ತೃಪ್ತಿಯಾದೀತು; ಅವರ ಸಂದೇಹ ನಿವಾರಣೆಯಾದೀತು ಎನ್ನಲಾಗಿದೆ.

ಪ್ರಗತಿಗೆ ಪ್ರತಿಬಂಧ

ಭಾರತದ ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ಔದ್ಯಮಿಕ ಪುರೋಗತಿಗೆ ಹಿಂದೀ ಭಾಷೆಯ ಬಳಕೆಯನ್ನು ಕುರಿತಾದ ಆಗ್ರಹವು ಆತಂಕವಾಗಬಾರದೆಂದು ಭಾಷಾ ಆಯೋಗದ ಅಲ್ಪ ಸಂಖ್ಯಾಕರು ಎಚ್ಚರಿಕೆಯನ್ನು ನೀಡಿರುವರೆಂದೂ ಹೇಳಲಾಗಿದೆ. ಆಯೋಗದ ಕರ್ತವ್ಯದ ಬಗ್ಗೆ ಭಾರತ ಸರಕಾರವು ವಿಧಿಸಿದ ವಿಶೇಷ ಮಿತಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳುವುದಾದರೆ, ಹಿಂದೀಯೇತರ ಭಾಷೆಯಾಡುವ ಪ್ರದೇಶಗಳವರಿಗೆ ಸರಕಾರದ ನೌಕರಿಯ ಸಂಬಂಧದಲ್ಲಿ ತಮಗೆ ನ್ಯಾಯದಾನವಾಗುತ್ತಿಲ್ಲವೆಂಬ ಅಭಿಪ್ರಾಯಕ್ಕೆ ಎಡೆ ಕೊಡುವುದು ಮೂರ್ಖತನವಾದೀತು; ಹಾಗೆಯೇ ಅಪ್ರಬುದ್ಧವಾದ ಭಾಷೆಯೊಂದನ್ನು ಆಶ್ರಯಿಸಿಯೇ ಔದ್ಯಮಿಕ ಹಾಗು ವೈಜ್ಞಾನಿಕ ಪ್ರಗತಿಯನ್ನು ಸಾಧಿಸಲು ಹೋಗುವುದರಿಂದ ನಮ್ಮ ನಡೆಯು ಕುಂಠಿತವಾದೀತು ಎಂದಿವರ ವಾದವಾಗಿದೆ. ಆದುದರಿಂದ ಹಿಂದೀ ಭಾಷೆಯ ಬಳಕೆಯ ಸಂಗತಿಯಲ್ಲಿ ಅವಸರದ ಯಾವುದೇ ತೀರ್ಮಾನವು ಯೋಗ್ಯವಾದುದಲ್ಲ ಎಂದಿವರ ಅಭಿಪ್ರಾಯ.

ಪ್ರಚಾರ ಮತ್ತು ಶಿಕ್ಷಣ ಆವಶ್ಯಕ

ಭಾಷಾ ಆಯೋಗವು ಏನೇ ಸಿಫಾರಸು ಮಾಡಲಿ, ಹಿಂದೀ ಭಾಷೆಯ ಪ್ರಚಾರ ಮತ್ತು ಶಿಕ್ಷಣಕ್ಕೆ ಅನುಕೂಲತೆಗಳನ್ನು ಒದಗಿಸಿ ಕೊಡುವ ಹೊಣೆಗಾರಿಕೆಯನ್ನು ಹೊರದೆ, ಹಿಂದೀ ಭಾಷೆಯ ಬಳಕೆಯ ಕುರಿತಷ್ಟೆ ಆತುರವನ್ನು ರಾಜ್ಯ ಸರಕಾರಗಳಾಗಲೀ ಕೇಂದ್ರ ಸರಕಾರವಾಗಲೀ ತೋರಿಸಿದರೆ ಅದು ಪರಮ ಅನ್ಯಾಯವಾಗುವುದೆಂದು ಹೇಳಿದರೆ ಎಷ್ಟಕ್ಕೂ ತಪ್ಪಾಗದು. ಹದಿನೈದು ವರ್ಷಗಳ ಅವಧಿಯಲ್ಲಿ ಶಾಲಾ ಪ್ರಾಯದ ಎಲ್ಲ ಮಕ್ಕಳಿಗೂ ಧರ್ಮಾರ್ಥ ವಿದ್ಯಾಭ್ಯಾಸವನ್ನೊದಗಿಸಲು ಕ್ರಮಗಳನ್ನು ಕೈಗೊಳ್ಳಬೇಕೆಂಬ ಘಟನೆಯ ಆದೇಶದಂತೆ ನಡೆಯುವುದು ಇಂದು

(೯ನೇ ಪುಟ ನೋಡಿರಿ)

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, ಉಡುಪಿ.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೇರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮ್ಹಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 30—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED
H. Office: UDIPI (S.India).

ಅಪ್ರಾಪ್ತವಯಸ್ಕ ಹಿಂದುವಿನ ಸಂರಕ್ಷಣೆಯ ಶಾಸನ

ಲೋಕಸಭೆಯಿಂದ ಪರ್ಯಾಲೋಚನೆ ಹಾಗು ಅನುಮೋದನೆ

ಲೋಕಸಭೆ ಮತ್ತು ರಾಜ್ಯಸಭೆ ಎರಡರಲ್ಲಿಯೂ ರಾಜ್ಯಗಳ ಪುನಾರಚನೆಯ ಮೇಲೆ ಇದೇ ೨೬ನೇ ದಿನಾಂಕದಿಂದ ಚರ್ಚೆ ಪ್ರಾರಂಭವಾಗಿದೆ. ಇದಕ್ಕೆ ಮುಂಚೆ ಲೋಕಸಭೆಯು ಪರ್ಯಾಲೋಚಿಸಿದ ವಿಷಯಗಳಲ್ಲಿ ಅಪ್ರಾಪ್ತವಯಸ್ಕರಾದ ಹಿಂದು ಸ್ತ್ರೀ ಪುರುಷರ ಮತ್ತು ಅವರ ಆಸ್ತಿಪಾಸ್ತಿಯ ಸಂರಕ್ಷಣೆಗೆ ಸಂಬಂಧಿಸಿದ ಮಸೂದೆಯನ್ನು ಉಲ್ಲೇಖನೀಯವಾಗಿ ಪರಿಗಣಿಸಬಹುದು.

ಈ ಮಸೂದೆಯು ರಾಜ್ಯಸಭೆಯಲ್ಲಿ ಈಗಾಗಲೇ ಅನುಮೋದಿತವಾಗಿದೆ; ಆದರೆ ಲೋಕಸಭೆಯು ಮಸೂದೆಯು ಒಕ್ಕಣೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಿರುವುದರಿಂದ ರಾಜ್ಯಸಭೆಯ ಮುಂದೆ ಪುನಃ ಈ ಮಸೂದೆಯು ಮಂಡಿಸಲ್ಪಡಬೇಕಾಗಿದೆ. ಸೂಚಿತ ಬದಲಾವಣೆಗಳು ಯಾವುದೇ ಮಹತ್ವದ ವಿಷಯಗಳಿಗೆ ಸಂಬಂಧಿಸಿಲ್ಲವಾದುದರಿಂದ ಮಸೂದೆಯ ಅನುಮೋದನೆಯಲ್ಲಿ ಇನ್ನೂ ಹೆಚ್ಚು ವಿಳಂಬವಾಗುವ ಸಂಭವವಿಲ್ಲ.

ತೃತೀಯ ಹೆಜ್ಜೆ

ಕಾನೂನು ವ್ಯವಹಾರಗಳ ಮಂತ್ರಿ ಶ್ರೀ ಪಾಟಸ್ಕರರು ಲೋಕಸಭೆಯ ಮುಂದೆ ಈ ಮಸೂದೆಯನ್ನು ಮಂಡಿಸುತ್ತಾ ಇದು ತೀರ ಸರಳವಾದ ಮತ್ತು ವಿವಾದಾಸ್ಪದ ವಿಷಯವೇನನ್ನೂ ಒಳಗೊಂಡಿರದ ಮಸೂದೆಯಾಗಿದೆ ಎಂದು ಹೇಳಿದರು. ಅಪ್ರಾಪ್ತವಯಸ್ಕರಾದ ಹಿಂದು ಸ್ತ್ರೀ ಪುರುಷರ ಹಿತಾಸಕ್ತಿಗಳನ್ನು ಸಂರಕ್ಷಿಸುವುದೂ ಅವರ ಸ್ವಾಭಾವಿಕ ಸಂರಕ್ಷಕರು ಯಾರಾಗಿರಬೇಕೆಂಬ ಬಗ್ಗೆ ಯೋಗ್ಯ ಮನ್ನಣೆಯನ್ನು ನೀಡುವುದೂ ಮಸೂದೆಯ ಉದ್ದೇಶವಾಗಿದೆ ಎಂದರು.

ಹಿಂದುಗಳಿಗೆ ಅನ್ವಯಿಸುವ ಶಾಸನಗಳನ್ನು ಕ್ರೋಡೀಕರಿಸುವ ಸರಕಾರದ ಪ್ರಯತ್ನದಲ್ಲಿ ಈ ಮಸೂದೆಯು ತೃತೀಯ ಹೆಜ್ಜೆಯಾಗಿದೆ; ಹಿಂದು ವಿವಾಹ ಶಾಸನ ಮತ್ತು ಹಿಂದು ಉತ್ತರಾಧಿಕಾರ ಶಾಸನಗಳನ್ನು ಸಂಸತ್ತು ಈ ಮೊದಲೇ ಅನುಮೋದಿಸಿದ್ದು, ಅದು ಜಾರಿಯಲ್ಲಿ ಎಂದೋ ಬಂದಿದೆ.

ಇವೆರಡು ವಿಧೇಯಕಗಳ ವಿಷಯದಲ್ಲಿ ಹೇಗೋ ಹಾಗೆಯೇ ಪ್ರಸ್ತುತ ಮಸೂದೆಯ ಮಟ್ಟಿಗೂ ಜನಸಂಘ, ಹಿಂದೂ ಮಹಾಸಭೆ ಇತ್ಯಾದಿ ಜಾತೀಯ ಪಕ್ಷಗಳ ಸದಸ್ಯರು ತೀವ್ರ ವಿರೋಧವನ್ನು ವ್ಯಕ್ತಪಡಿಸಿದರು. ಪಂಡಿತ ಠಾಕೂರದಾಸ ಭಾರ್ಗವರಂಥ ಕಾಂಗ್ರೆಸಿನ ಮೇಧಾವಿ ಸದಸ್ಯರು ಸಹ ಮಸೂದೆಯನ್ನು ಟೀಕಿಸಿ ಮಾತನಾಡಿದರು.

ಮಸೂದೆಯ ಟೀಕೆ

ಹಿಂದು ಮಹಾಸಭೆಯ ಶ್ರೀ ಚಟರ್ಜಿಯವರು ಮಾತನಾಡುತ್ತಾ ಈ ಮಸೂದೆಗಿಂತ ಈಗಿರುವ ಹಿಂದು ಶಾಸನವೇ ಸಂರಕ್ಷಣೆಯ ದೃಷ್ಟಿಯಲ್ಲಿ ಅತ್ಯುತ್ತಮವಾಗಿದೆ ಎಂದರು. ತಂದೆ ಮತ್ತು ತಾಯಿ ಇವರಿಬ್ಬರನ್ನು ಮಾತ್ರ ಸ್ವಾಭಾವಿಕ ಸಂರಕ್ಷಕರೆಂದು ಮಸೂದೆಯಲ್ಲಿ ಹೇಳಿರುವುದು ಸರಿಯಾಗದು ಎಂದವರು ಅಭಿಪ್ರಾಯಪಟ್ಟರು. ಸ್ವಾಭಾವಿಕ ಸಂರಕ್ಷಕರಿಗೆ ಈ ಮಸೂದೆಯಲ್ಲಿ ಕೊಡಲಾದ ಅಧಿಕಾರವು ಅನಾವಶ್ಯಕವಾದ ಅಡೆತಡೆಗಳಿಂದ ಕೂಡಿದ್ದು ಅಲ್ಪವಯಸ್ಕರ ಹಿತಾಸಕ್ತಿಯನ್ನು ರಕ್ಷಿಸುವುದಕ್ಕೋಸ್ಕರ ಶೀಘ್ರ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಇದು ಆತಂಕವಾದೀತು ಎಂದವರು ಎಚ್ಚರವನ್ನಿತ್ತರು.

ಸ್ವಾಭಾವಿಕ ಸಂರಕ್ಷಕರ ಪಟ್ಟಿಯಲ್ಲಿ ತಂದೆ ಮತ್ತು ತಾಯಿಯರಲ್ಲದೆ ಉಳಿದ ಕೆಲವು ಸಂಬಂಧಿಗಳನ್ನೂ ಹೆಸರಿಸಬೇಕೆಂದು ಚಟರ್ಜಿಯವರು ಆಗ್ರಹಪೂರ್ವಕ ವಿನಂತಿಸಿದರು. ಹೆತ್ತವರಿಗಷ್ಟೇ ಸ್ವಾಭಾವಿಕ ಸಂರಕ್ಷಕರೆಂಬ ಮನ್ನಣೆಯನ್ನು ಕೊಡುವುದಾದಲ್ಲಿ ಅಪ್ರಾಪ್ತವಯಸ್ಕ ಹಿಂದುವಿನ ಆಸ್ತಿಪಾಸ್ತಿಯ—ಮಾರಾಟವೇ ಮುಂತಾದ ವಿಷಯಗಳಲ್ಲಿ ನ್ಯಾಯಸ್ಥಾನದ ಪೂರ್ವಾನುಮತಿಯನ್ನು ಪ್ರತಿಯೊಂದೂ ಸಂದರ್ಭದಲ್ಲಿ ಪಡೆಯಬೇಕೆಂದು ನಿರ್ಬಂಧಿಸುವುದು ಯೋಗ್ಯವಲ್ಲ ಎಂದವರು ತಿಳಿಸಿದರು.

ಹಿಂದೆಗೆದುಕೊಳ್ಳಲು ಬಿನ್ನಹ

ರಾಮರಾಜ್ಯ ಪರಿಷತ್ತಿನ ಶ್ರೀ ನಂದಲಾಲ ಶರ್ಮರು ಹಿಂದುಗಳಿಗೆ ಮಸೂದೆಯು ಪರಮ ಅನ್ಯಾಯವನ್ನು ಮಾಡುತ್ತದೆ ಎಂದು ಸಾರಿದರು. ಜನಸಂಘದ ಶ್ರೀ ತ್ರಿವೇದಿಯವರು ತಮ್ಮ ಭಾಷಣದಲ್ಲಿ ಹಿಂದುಗಳನ್ನು ಮಾತ್ರ ಅಪ್ರಾಪ್ತವಯಸ್ಕರ ಸಂರಕ್ಷಣೆಯ ಮಟ್ಟಿಗೆ ನಂಬಬಾರದೆಂದು ಸಂಕೇತಿಸಿ ಈ ವರ್ಗದ ಮೇಲೆಯೇ ಕಳಂಕವನ್ನು ಹೇರುವ ಪ್ರಸ್ತುತ ಮಸೂದೆಯನ್ನು ಹಿಂದೆಗೆದುಕೊಳ್ಳಬೇಕೆಂದು ಅಪೇಕ್ಷಿಸಿದರು.

ಪಂಡಿತ ಠಾಕೂರದಾಸ ಭಾರ್ಗವರು ಮಸೂದೆಯನ್ನು ವಿರೋಧಿಸುತ್ತಾ ೧೮೯೦ನೇ ಇಸವಿಯ ಅಪ್ರಾಪ್ತವಯಸ್ಕರ ಸಂರಕ್ಷಣಾ ಶಾಸನವು ಎಲ್ಲರಿಗೂ ಅನ್ವಯಿಸುತ್ತಿದ್ದು, ಈ ಶಾಸನವು ಇಷ್ಟರವರೆಗೆ ಅತ್ಯುತ್ತಮ ರೀತಿಯಲ್ಲಿಯೇ ವ್ಯವಹೃತವಾಗಿರುವುದರಿಂದ ಹೊಸ ಮಸೂದೆಯ ಅಗತ್ಯವಿಲ್ಲ ಎಂದರು. ದೇಶದ ಎಲ್ಲ ನಾಗರಿಕರಿಗೂ ಏಕರೂಪದ ಕಾನೂನನ್ನು ಅನ್ವಯಿಸುವ ಧ್ಯೇಯಕ್ಕೆ ಈ ಮಸೂದೆಯು ವಿರುದ್ಧವಾಗಿದೆ ಎಂದವರು ಸ್ಪಷ್ಟಪಡಿಸಿದರು. ನಮ್ಮ ದೇಶದಲ್ಲಿ ಮೃತ್ಯುಪತ್ರವನ್ನು ಮಾಡಿಡುವ ಅಭ್ಯಾಸವು ರೂಢಿಯಲ್ಲಿನ್ನೂ ಬಂದಿಲ್ಲವಾದುದರಿಂದ ವ್ಯವಹಾರ ಸಂಬಂಧದ ಸಂರಕ್ಷಕರಿರುವುದು ಅತ್ಯಾವಶ್ಯಕವಾಗಿದೆಯೆಂದೂ ಮಸೂದೆಯಲ್ಲಿ ಈ ಅಂಶಕ್ಕೆ ಮಹತ್ವವನ್ನೆ ಕೊಡಲಾಗಿಲ್ಲವೆಂದೂ ಅವರು ಬಲವಾಗಿ ಆಕ್ಷೇಪಿಸಿದರು.

ಕೆಲವು ಸಲಹೆಗಳು

ಶ್ರೀಮತಿ ಜಯಶ್ರೀ ರಾಯಜೀಯವರು ಮಸೂದೆಯನ್ನು ಪ್ರಗತಿಪರವಾದ ಕ್ರಮವೆಂದು ಬಣ್ಣಿಸಿದರು. ಸ್ವಾಭಾವಿಕವಾದ ಸಂರಕ್ಷಕರು ಅವಶ್ಯವೆಂದು ಭಾವಿಸುವರಾದರೆ ಬೇರೆ ಸಂರಕ್ಷಕರನ್ನೂ ನೇಮಿಸುವುದಕ್ಕೆ ಮಸೂದೆಯು ಅಡ್ಡಿ ಮಾಡುವುದಿಲ್ಲ; ಆದುದರಿಂದ ವ್ಯವಹಾರ ಸಂಬಂಧದ ಸಂರಕ್ಷಕರಿರುವುದಕ್ಕೆ ಮಸೂದೆಯು ಗಮನನಿತ್ತಿಲ್ಲವೆಂಬ ಭಾರ್ಗವರ ಆಕ್ಷೇಪ ಹುರುಳಿಲ್ಲದ್ದೆಂದು ಅವರು ವಾದಿಸಿದರು.

ಕಮ್ಯುನಿಸ್ಟರ ಧುರೀಣೆಯಾದ ಶ್ರೀಮತಿ ರೇಣು ಚಕ್ರವರ್ತಿಯವರು ಮಾತನಾಡುತ್ತಾ ತಾಯಿಗೆ ಸ್ವಾಭಾವಿಕ ಸಂರಕ್ಷಕನ ಸ್ಥಾನಮಾನವನ್ನು ಅಪ್ರಾಪ್ತವಯಸ್ಕ ಹಿಂದುವಿನ ವಿಷಯದಲ್ಲಿ ರಾಜ್ಯಸಭೆಯು ಕೊಟ್ಟಿರುವುದನ್ನು ಸ್ವಾಗತಿಸಿದರು. ಅಪ್ರಾಪ್ತವಯಸ್ಕ ಹಿಂದುವು ೧೪ ವರ್ಷಗಳವರೆಗಾದರೂ ತಾಯಿಯ ರಕ್ಷಣೆಯಲ್ಲಿ ಅವಶ್ಯವಾಗಿ ಇರಬೇಕಾಗಿದೆ ಎಂದರು. ವಿವಾಹಿತ, ಆದರೆ ಅಪ್ರಾಪ್ತವಯಸ್ಕಳಾದ, ಹುಡುಗಿಯ ಆಸ್ತಿಪಾಸ್ತಿ ಇತ್ಯಾದಿಗಳ ಸಂರಕ್ಷಣೆಯನ್ನು ಗಂಡನೂ ತಂದೆಯೂ ಕೂಡಿಯೇ ಮಾಡಬೇಕೆಂದು ಅವರು ಹೇಳಿದರು.

ಪ್ರಜಾ ಸಮಾಜವಾದಿ ಪಕ್ಷದ ಶ್ರೀ ರಾಘವಾಚಾರಿಯವರು ವಿಧವೆಯಾಗಿರುವ ಅಪ್ರಾಪ್ತವಯಸ್ಕ ಹುಡುಗಿಯ ಮಟ್ಟಿಗೆ ಆವಳ ಹೆತ್ತವರೇ ಸ್ವಾಭಾವಿಕ ಸಂರಕ್ಷಕರಾಗಿರಬೇಕೆಂದು ಸೂಚಿಸಿದರು. ಕಾಂಗ್ರೆಸಿನ ಶ್ರೀ ಭಗವತರು ಮಾತನಾಡುತ್ತಾ ಸ್ವಾಭಾವಿಕವಲ್ಲದ ಸಂರಕ್ಷಕರ ಪಟ್ಟಿಯಲ್ಲಿ ಅಣ್ಣ, ತಂದೆಯ ತಂದೆ, ತಂದೆಯ ತಾಯಿ ಇವರನ್ನೂ ಸೇರಿಸಬೇಕು ಎಂದರು.

ಮಂತ್ರಿಗಳ ಉತ್ತರ

ಚರ್ಚೆಗೆ ಉತ್ತರವೀಯುತ್ತಾ ಮಂತ್ರಿಗಳು ಹಿಂದೂ ಧರ್ಮದ ಮೇಲೆ ಯಾವುದೇ ಅನಿಷ್ಟ ಪರಿಣಾಮ ಮಾಡುವ ಮಸೂದೆ ಇದಾಗಿಲ್ಲವೆಂದು ಹೇಳಿದರು; ಮತ್ತು ಕೆಲವರು ಮಾಡಿದ ಟೀಕೆಗೆ ವಿಷಾದಪಟ್ಟರು. ಈ ಮಸೂದೆಯು ೧೮೯೦ನೇ ಇಸವಿಯ ಅಪ್ರಾಪ್ತವಯಸ್ಕರ ಸಂರಕ್ಷಣಾ ಶಾಸನವನ್ನು ಪ್ರತ್ಯೇಕವಾಗಿ ಹೇಳಲಾದ ಸಂದರ್ಭಗಳನ್ನು ಬಿಟ್ಟು ಬೇರೆಲ್ಲೂ ಪ್ರತಿಕ್ಷೇಪಿಸುವುದಿಲ್ಲವೆಂದೂ ಅವಕ್ಕೆ ಅತಿರಿಕ್ತವಾಗಿಯಷ್ಟೇ ಉಳಿಯುವುದೆಂದೂ ಮಂತ್ರಿಗಳು ಸ್ಪಷ್ಟೀಕರಣವಿತ್ತರು.

ಹಿಂದುಗಳ ಮಟ್ಟಿಗೆ, ಸ್ವಾಭಾವಿಕ ಸಂರಕ್ಷಕರು ಯಾರು ಎಂಬ ವಿಷಯವು ನ್ಯಾಯಾಲಯಗಳ ತೀರ್ಮಾನದ ಮೇಲಿಂದಲೇ ಇಷ್ಟರವರೆಗೆ ನಿರ್ಣಯವಾಗುತ್ತಾ ಬಂದಿದೆ; ಸಾಮಾನ್ಯವಾಗಿ ತಂದೆ ಮತ್ತು ತಾಯಿಯವರೇ ಅಪ್ರಾಪ್ತ ಮಕ್ಕಳ ಸ್ವಾಭಾವಿಕವಾದ ಸಂರಕ್ಷಕರೆಂದು ನ್ಯಾಯಾಲಯಗಳು ಹೇಳಿವೆ. ಆದುದರಿಂದ ಈ ವಿಷಯವನ್ನು ಶಾಸನಬದ್ಧ ರೀತಿಯಲ್ಲಿ ಮನ್ನಿಸಲು ನೋಡುವ ಪ್ರಸ್ತುತ ಮಸೂದೆಯು ಸರಿಯಾದ ರೀತಿಯಲ್ಲಿದೆ ಎಂದವರು ತಮ್ಮ ನಿಲುವನ್ನು ಸಮರ್ಥಿಸಿಕೊಂಡರು.

ವ್ಯವಹಾರ ಸಂಬಂಧದ ಸಂರಕ್ಷಕರಿರುವುದಕ್ಕೆ ಈ ಮಸೂದೆಯಿಂದ ತಡೆಯಾಗುವುದಿಲ್ಲವೆಂದು ಮಂತ್ರಿಗಳು ಒತ್ತಿ ಹೇಳಿದರು. ಆದರೆ, ತನ್ನ ಆಸ್ತಿಪಾಸ್ತಿಯೇ ಮುಂತಾದವುಗಳ ರಕ್ಷಣೆ ಮಾಡಿಕೊಳ್ಳುವಷ್ಟು ಪ್ರಬುದ್ಧನಾಗಿರದ ಅಪ್ರಾಪ್ತವಯಸ್ಕ ಹಿಂದುವಿಗೆ ನಷ್ಟವಾಗುವ ರೀತಿಯಲ್ಲಿ ಯಾರೂ ವ್ಯವಹರಿಸಬಾರದೆಂದು ಕೆಲವು ನಿಯಮಗಳನ್ನು ಮಾಡಲಾಗಿದೆ ಎಂದವರು ಹೇಳಿದರು.

(೮ನೇ ಪುಟ ನೋಡಿರಿ)

50 ವರ್ಷಗಳ ಅಪೂರ್ವ ಪ್ರಗತಿ

50 ವರ್ಷಗಳ ಹಿಂದೆ 1—7—1906ರಲ್ಲಿ ಸಣ್ಣ ಸಂಸ್ಥೆಯಾಗಿ ಆರಂಭವಾದ **ಕೆನರಾ ಬ್ಯಾಂಕ್** ರಾಷ್ಟ್ರದ ಪ್ರಗತಿಯಲ್ಲಿ ವ್ಯಾಪಾರ, ಉದ್ದಿಮೆ ಕೈಗಾರಿಕೆಗಳ ಅಭಿವೃದ್ಧಿಗೆ ತನ್ನ ಸಹಾಯವನ್ನು ಸಲ್ಲಿಸುತ್ತದೆ.

ಭಾರತದ ಪ್ರಗತಿಪರ ಬ್ಯಾಂಕುಗಳಲ್ಲೊಂದಾಗಿರುವ **ಕೆನರಾ ಬ್ಯಾಂಕು**, ತನ್ನ ಸೇವೆ, ಸ್ನೇಹ ಸೌಹಾರ್ದತೆ, ಆರ್ಥಿಕ ಭದ್ರತೆ, ಉತ್ತಮ ವ್ಯಾಪಾರ ಧೋರಣೆಗಳ ಮೂಲಕ, 50 ವರ್ಷಗಳಿಂದ ಅಸಂಖ್ಯಾತ ಜನರ ಪ್ರೀತಿ ಮನ್ನಣೆಗಳಿಗೆ ಪಾತ್ರವಾಗಿದೆ.

51ನೇ ವರ್ಷದಲ್ಲಿ ಕಾಲಿಟ್ಟಿರುವ **ಕೆನರಾ ಬ್ಯಾಂಕು** ತನ್ನ ಅಭಿವೃದ್ಧಿಗೆ ಕಾರಣರಾದ ಪೋಷಕರಿಗೆಲ್ಲಾ ತನ್ನ ಹಾರ್ದಿಕ ವಂದನೆಗಳನ್ನೀಯುತ್ತದೆ.

ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುವ ನಾವೆಲ್ಲರೂ ಇನ್ನೂ ಉತ್ತಮ ತರದ ಸೇವೆ ಸೌಕರ್ಯಗಳನ್ನು ಸಲ್ಲಿಸುವ ಭರವಸೆ ಕೊಡುತ್ತೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

1906 ಸಮಸ್ತ ಜನತೆಯ ನೆಚ್ಚಿನ ಬ್ಯಾಂಕ್ 1956

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health,

Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೬-೭-'೫೬	೪೭

ವಿದ್ಯಾರ್ಥಿಗಳಲ್ಲಿ ಶಿಸ್ತು

ಮದ್ರಾಸು ಸರಕಾರಕ್ಕೆ ಭೂಸುಧಾರಣೆಯ ವಿಷಯದಲ್ಲಿ ಎಷ್ಟು ಸಮಿತಿಗಳನ್ನು ನೇಮಿಸಿದರೂ ಹೇಗೆ ತೃಪ್ತಿಯಾಗದೆ ಹೊಸ ಹೊಸ ಸಮಿತಿಗಳ ನೇಮಕದ ಕುರಿತು ಅದು ಅತ್ಯುತ್ಸಾಹವನ್ನು ತೋರಿಸುತ್ತಾ ಬಂದಿದೆಯೋ ತದ್ರೀತಿ ಉತ್ತರ ಭಾರತದ ಅಲ್ಲಹಾಬಾದು ವಿಶ್ವವಿದ್ಯಾನಿಲಯವು ವಿದ್ಯಾರ್ಥಿಗಳು ಶಿಸ್ತನ್ನು ತೊರೆದು ದೊಂಬಿ ನಡೆಸುವುದರ ಕಾರಣಗಳನ್ನು ಕಂಡು ಹಿಡಿಯುವುದಕ್ಕಾಗಿಯೂ ಸಮಿತಿಗಳ ಮೇಲೆ ಸಮಿತಿಗಳನ್ನು ನೇಮಿಸುವ ಚಟವನ್ನು ಹೊಂದಿದೆ. ಕಳೆದ ವಾರ ರಣಧೀರ ಸಿಂಘ ವಿಚಾರಣಾ ಸಮಿತಿಯು ವರದಿಯನ್ನು ಪ್ರಕಟಿಸಲಾಯಿತು—ಇದು ಮೂರನೇ ಸಮಿತಿ! ಈ ಸಮಿತಿಯು ಹೊಸತೇನನ್ನಾದರೂ ಹೇಳಿತೆ, ಎಂದರೆ ಉತ್ತರ ಅಷ್ಟೇನೂ ತೃಪ್ತಿಕರವಾಗಿಲ್ಲ. ಎಲ್ಲರಿಗೂ ತಿಳಿದಿರುವ ಮಾತುಗಳನ್ನೆ ಆಡಂಬರದ ಶಬ್ದಜಾಲದಲ್ಲಿ ಬಣ್ಣಿಸುವುದು, ವರದಿಯು ಆದಷ್ಟು ದೀರ್ಘವಾಗಿರುವಂತೆ ನೋಡುವುದು ಇಂಥ ಸಮಿತಿಗಳ ಹವ್ಯಾಸ. ರಾಜ್ಯಗಳ ಪುನಾರಚನೆಯ ಆವಶ್ಯಕತೆಯ ಕುರಿತಾಗಲೀ ಭೂಸುಧಾರಣೆಯ ಕ್ರಮಗಳನ್ನು ಕೈಗೊಳ್ಳಬೇಕಾದ ಅನಿವಾರ್ಯತೆಯ ಕುರಿತಾಗಲೀ ಜನಸಾಮಾನ್ಯರು ಒಮ್ಮತವನ್ನು ವ್ಯಕ್ತಪಡಿಸುತ್ತಿದ್ದರೂ ಈ ಒಮ್ಮತದ ಮೇಲೆ ಪ್ರಕಾಶವನ್ನು ಚೆಲ್ಲುವ ಉದ್ದೇಶದಿಂದ ದೀರ್ಘ ಅಧ್ಯಾಯಗಳನ್ನು ವರದಿಗಳಿಗೆ ಜೋಡಿಸಲಾಗಿದೆಯಷ್ಟೆ! ಎಲ್ಲ ಸಮಿತಿಗಳ ಹಣೆಬರಹವೂ ಹೀಗೆಯೇ—ನಿರುಪಯುಕ್ತ; ಹಣ ಮತ್ತು ಸಮಯ ಹಾಳು! ಇರಲಿ—ಅಲ್ಲಹಾಬಾದಿನ ವಿದ್ಯಾರ್ಥಿಗಳನ್ನು ಸನ್ಮಾರ್ಗಗಾಮಿಗಳನ್ನಾಗಿ ಮಾಡಲು ರಣಧೀರ ಸಿಂಘರು ಹೇಳುವ ಉಪಾಯಗಳೇನು? ವಿದ್ಯಾರ್ಥಿಗಳು ಶಿಸ್ತುಗೇಡಿಗಳಾಗಿ ವರ್ತಿಸಲು ಪ್ರಚೋದನೆ ಕೊಡುವ ವಿಷಯಗಳಾದರೂ ಯಾವುವು? "ರಾಜಕೀಯ" ಪಕ್ಷಗಳ ಪ್ರಭಾವವು ವಿದ್ಯಾರ್ಥಿಗಳು ದಾರಿ ತಪ್ಪಿ ನಡೆಯುವಂತೆ ಮಾಡುತ್ತವೆ ಎನ್ನಲಾಗಿದೆ; ವಿದ್ಯಾರ್ಥಿಗಳ ಬಳಿಗೆ ರಾಜಕೀಯ ಪಕ್ಷಗಳು ಸುಳಿಯಲಾಗದೆಂದು ವಿನಂತಿಸಿಕೊಳ್ಳಬೇಕೆಂದೂ ಹೇಳಲಾಗಿದೆ. ಈ ಬಗೆಯ ವಿನಂತಿಗೆಷ್ಟು ಮನ್ನಣೆ ಸಿಗಬಹುದೋ ಹೇಳುವಂತಿಲ್ಲ; ವಿದ್ಯಾರ್ಥಿಗಳು ರಾಜಕೀಯದಲ್ಲಿ ಭಾಗವಹಿಸುವುದು ಅಪೇಕ್ಷಣೀಯವಾದುದಲ್ಲ, ನಿಜ. ಆದರೆ ಸಾಮಾನ್ಯ ಹೈಸ್ಕೂಲುಗಳಲ್ಲಿ ಸಹ ವಿದ್ಯಾರ್ಥಿ ಮುಖಂಡನ ಆಯ್ಕೆಗೆ "ಚುನಾವಣೆ" ನಡೆಯುವ, ಪ್ರತಿ ಶಾಲೆಗೊಂದು "ಸರಕಾರ" ರಚಿಸಲ್ಪಟ್ಟು ಕೆಲಸ ಮಾಡುವ ಇಂದಿನ ಹುಮ್ಮಸ್ಸಿನ ಮುಂದೆ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳನ್ನು ರಾಜಕೀಯ ಪಕ್ಷಗಳ ಜಾಲದಿಂದ ಹೊರಗೆಳೆಯಬೇಕೆಂಬ ಆಕಾಂಕ್ಷೆ ಸಫಲವಾದೀತೆ? ಚಲಚ್ಚಿತ್ರಗಳು ವಿದ್ಯಾರ್ಥಿಗಳನ್ನು ದುರ್ಮಾರ್ಗಕ್ಕೆ ಎಳೆಯುತ್ತವೆ ಎಂಬುದು ಇನ್ನೊಂದು ಆರೋಪ; "ಒಳ್ಳೆಯ" ಚಲಚ್ಚಿತ್ರಗಳನ್ನು ಮಾತ್ರ ವಿದ್ಯಾರ್ಥಿಗಳು ನೋಡುವಂತೆ ತಕ್ಕ ನಿರ್ಬಂಧಗಳನ್ನು ನಿರ್ಧರಿಸಬೇಕೆಂದು ಪರಿಹಾರವನ್ನು ಸೂಚಿಸಲಾಗಿದೆ. ಕೆಲವು ಚಲಚ್ಚಿತ್ರಗಳು ವಿದ್ಯಾರ್ಥಿಗಳನ್ನೆ ಎಂದೇನು, ಯಾರನ್ನೂ ಕೆಡಿಸುವಷ್ಟು ಪ್ರಭಾವಿಯಾಗಿವೆ—ಹೀಗಿದ್ದರೂ ಅವುಗಳ ಪ್ರದರ್ಶನಕ್ಕೆ ಅನುಮತಿಯನ್ನು ಸರಕಾರ ಕೊಡುತ್ತದೆ! ಇದಕ್ಕಾಗಿಯೇ ನಾವು ಅಚ್ಚರಿಪಡಬೇಕಲ್ಲದೆ, ಚಲಚ್ಚಿತ್ರಗಳು ಜನರನ್ನು ಹಾಳು ಮಾಡುತ್ತವೆ ಎಂದು ದೂರಿದರೆ ಏನು ಪ್ರಯೋಜನ? ವಿದ್ಯಾರ್ಥಿಗಳಿಂದ ದೂರವಿರಿ ಎಂದು ರಾಜಕೀಯ ಪಕ್ಷಗಳನ್ನು ಪ್ರಾರ್ಥಿಸಿಕೊಂಡರೆ ಅದಕ್ಕೆ ತೃಪ್ತಿಕರವಾದ ಉತ್ತರವೆಂತು ಬರಲಾರದೋ ಹಾಗೆಯೇ ಉತ್ತಮಾಭಿರುಚಿಯ ಚಲಚ್ಚಿತ್ರಗಳನ್ನೆ ರಚಿಸುವ ಕೃಪೆ ಮಾಡಿರೆಂದು ಚಲಚ್ಚಿತ್ರಗಳ ನಿರ್ಮಾಪಕರನ್ನು ವಿನಂತಿಸಿಕೊಂಡರೂ ಪ್ರೋತ್ಸಾಹದಾಯಕವಾದ ಉತ್ತರವು ನಮಗೆ ಸಿಗಲಾರದು. "ಚಲಚ್ಚಿತ್ರವು ಒಳ್ಳೆಯದಿಲ್ಲವೆಂದು ದೂರುವುದೇಕೋ ನಮಗೆ ಅರ್ಥವಾಗುತ್ತಿಲ್ಲ; ಸರಕಾರವು ಪ್ರದರ್ಶನಕ್ಕೆ ಅನುಮತಿಸಿರುವ ಚಲಚ್ಚಿತ್ರಗಳು ನೈತಿಕ ದೃಷ್ಟಿಯಿಂದ ಕೆಟ್ಟದಾಗಿವೆ ಎನ್ನುವುದೇ ಮೂರ್ಖತನ" ಎಂಬ ಧೋರಣೆಯನ್ನು ಚಲಚ್ಚಿತ್ರಗಳ ನಿರ್ಮಾಪಕರು ಅನುಸರಿಸುತ್ತಿರುವುದನ್ನು ನಾವು ಕಂಡಿದ್ದೇವೆ. ವಿದ್ಯಾರ್ಥಿಗಳ ನಡತೆಗೆಡುವುದಕ್ಕೆ ಮೂರನೆಯ ಕಾರಣವನ್ನು ಹೆತ್ತವರ ಮೇಲೆ ಹೊರಿಸಲಾಗಿದೆ. ತಮ್ಮ ಮಕ್ಕಳ ಗುಣಶೀಲಗಳನ್ನು ಚಿಕ್ಕಂದಿನಿಂದಲೇ ಒಳ್ಳೆಯದಾಗಿ ಇಡಲು ಹೆತ್ತವರೂ ರಕ್ಷಕರೂ ಪ್ರಯತ್ನಿಸುತ್ತಿಲ್ಲ; ಧಾರ್ಮಿಕ ಅಥವಾ ನೈತಿಕ ಶಿಕ್ಷಣದ ಪ್ರಭಾವಕ್ಕೆ ವಿದ್ಯಾರ್ಥಿಗಳನ್ನು ಅವರು ಗುರಿಪಡಿಸುತ್ತಿಲ್ಲ; ಎಂದು ಮುಂತಾದ ದೂರುಗಳು ಇಡೀ ಜನಾಂಗಕ್ಕೆ ಅನ್ವಯಿಸುವವುಗಳಾಗಿವೆ. ಅವುಗಳನ್ನು ಸರಕಾರದ ಶಾಸನವಾಗಲೀ ಸಮಿತಿಯ ಸಿಫಾರಸುಗಳಾಗಲೀ ತಿದ್ದುವುದು ಕಷ್ಟ; ತೀವ್ರತರವಾದ ಜಾಗೃತಿಯು ಸಾರ್ವತ್ರಿಕವಾಗಿ ಉಂಟಾದರೆ ಮಾತ್ರ ಸ್ವಲ್ಪಮಟ್ಟಿನ ಸುಧಾರಣೆಯಾದೀತು. ಮನೆಯಲ್ಲಿ ತಂಟೆ ಮಾಡುವನೆಂಬುದಕ್ಕಾಗಿಯಷ್ಟೇ ಇಂದು ಚಿಕ್ಕ ಹುಡುಗನನ್ನು ಶಾಲೆಗೆ ಕಳುಹಿಸಲಾಗುತ್ತದೆ; ಹೊರತು ಆತನು ವಿದ್ಯಾಭ್ಯಾಸ ಸಂಪನ್ನನಾಗಬೇಕೆಂಬುದಕ್ಕಾಗಿಯಲ್ಲ! ಹೆತ್ತವರು ಈ ಬಗೆಯ ಮನೋಭಾವನೆಯನ್ನು ಹೊಂದಿರುವುದು ಜನಾಂಗಕ್ಕೆ ತಗಲಿದ ಶಾಪ. ಸಾರ್ವಜನಿಕ ಕಾರ್ಯಕರ್ತರು ರಭಸದ ಪ್ರಚಾರ ಕೈಗೊಳ್ಳದಿದ್ದರೆ ಮತ್ತು ಸ್ವತಃ ಹೆತ್ತವರೇ ತಮ್ಮ ತಪ್ಪನ್ನು ಮನಗಂಡು ಮಕ್ಕಳ ವಿಷಯದಲ್ಲಿ ಹೆಚ್ಚಿನ ಮುತುವರ್ಜಿಯನ್ನು ವಹಿಸದಿದ್ದರೆ ಏನೂ ಪ್ರಯೋಜನವಾಗದು. ಹೆತ್ತವರನ್ನು ದೂರಿದಂತೆಯೇ ಶಿಕ್ಷಕ ವೃಂದವನ್ನೂ ದೂರಲಾಗುತ್ತದೆ; ಅದೇ ಸರಣಿಯಲ್ಲಿ ಮುಂದರಿದು ಶಿಕ್ಷಕರನ್ನು ಗೌರವಿಸುವುದು ಕಡಿಮೆಯಾಗಿದೆ ಎಂದು ವಿದ್ಯಾರ್ಥಿಗಳನ್ನೂ ಆಕ್ಷೇಪಿಸಲಾಗುತ್ತದೆ. ಇದೊಂದು ವಿಷವರ್ತುಲ— ಎಲ್ಲಿ ಹೊಕ್ಕು, ಎಲ್ಲಿ ಹೊರ ಬರಬಹುದೆಂಬ ಬಗ್ಗೆ ಪೂರ್ಣ ಜ್ಞಾನವನ್ನು ಸಂಪಾದಿಸುವುದು ಬಹಳ ಕಷ್ಟ. ಅಧ್ಯಾಪಕರು ವಿದ್ಯಾರ್ಥಿಗಳ ಯೋಗಕ್ಷೇಮ ನೋಡಿಕೊಳ್ಳಬೇಕೆಂಬುದು ನಿಜ. ಆದರೆ ಅರ್ಧ ತಾಸು ಅಥವಾ ಒಂದು ತಾಸಿನ ಅವಧಿಯಲ್ಲಿ ಪಾಠಪಟ್ಟಿಗನುಸಾರವಾದ ಪಾಠವನ್ನೂ ಕಲಿಸಿ, ಅದರ ಜೊತೆಗೆ ಪ್ರಾಥಮಿಕ ಶಾಲೆಯ ಅಧ್ಯಾಪಕನಾದರೆ ಮಗುವಿನ ಸಿಂಬಳ ಒರಸುವುದು, ಕಾಲೇಜಿನ ಅಧ್ಯಾಪಕನಾದರೆ ಹುಡುಗನು ಸಿನೆಮಾದ ಪದ ಹಾಡದಂತೆ ಬುದ್ಧಿ ಹೇಳುವುದು ಮುಂತಾದ ಕೆಲಸವನ್ನೂ ಮಾಡಬೇಕೆಂದರೆ ಹೇಗೆ ಸಾಧ್ಯ? ಪ್ರತಿಯೊಬ್ಬ ಅಧ್ಯಾಪಕನ ವಶದಲ್ಲಿ ೨೫ರಿಂದ ೭೫ ಹುಡುಗರಿದ್ದರೆ ಅವರೆಲ್ಲರನ್ನು ಗುರುತಿಸಲಿಕ್ಕಾದರೂ ಇಲ್ಲಿ ಅವಕಾಶವಿದೆಯೆ? ಬೇರೆ ಬೇರೆ ಮನೋಭಾವದ ವಿದ್ಯಾರ್ಥಿಗಳ ಸಮೂಹದಲ್ಲಿ ಅಧ್ಯಾಪಕನಿಗೆ ಎಲ್ಲರಿಂದಲೂ ಗೌರವಾರ್ಪಣವಾಗಲೇ ಬೇಕೆಂದು ಬಯಸುವುದು ಮನೋವೈಜ್ಞಾನಿಕ ದೃಷ್ಟಿಯಿಂದ ಸಾಧ್ಯವೆನಿಸುವುದೇ? ಎಷ್ಟಕ್ಕೂ ಇಲ್ಲ. ಹೀಗೆ ದೂರುವವರನ್ನೆಲ್ಲ ದೂರಿ, ಆಕ್ಷೇಪಿಸುವವರನ್ನೆಲ್ಲ ಆಕ್ಷೇಪಿಸಿ, ಕೊನೆಯದಾಗಿ—ಎಲ್ಲ ದೇವರಿಗೆ ಸಲ್ಲಿಸಿದ ನಮಸ್ಕಾರವೂ ಕೇಶವನನ್ನೆ ಹೋಗಿ ಸೇರುವಂತೆ—ನಾವು ಸರಕಾರವನ್ನೆ ಎಲ್ಲದಕ್ಕೂ ಹೊಣೆಗಾರವಾಗಿ ಮಾಡುತ್ತೇವೆ. ರಣಧೀರ ಸಮಿತಿಯಾದರೂ ಇದನ್ನೆ ಮಾಡಿದೆ. ಎಲ್ಲರಿಗೂ ಒಂದೇ ಬಗೆಯ ಶಿಕ್ಷಣದಲ್ಲಿ ಆಸಕ್ತಿಯಿರುವುದಿಲ್ಲ—ಆದರೆ ಪ್ರತಿಯೊಬ್ಬ ವಿದ್ಯಾರ್ಥಿಗೂ ವಿಹಿತವಾದ ಶಿಕ್ಷಣವನ್ನು ಕೊಡುವುದು ಸಾಧ್ಯವಿದೆ. ಇದಕ್ಕಾಗಿ ವಿಶ್ವವಿದ್ಯಾನಿಲಯದ ಶಿಕ್ಷಣ ಪಡೆಯುವುದಕ್ಕೆ ಅರ್ಹವಾದ ಪ್ರಾಯದಲ್ಲಿ ವಿದ್ಯಾರ್ಥಿಗಳಿಗೆ ವ್ಯಾಪಕವಾದ ಶಿಕ್ಷಣ ವರ್ಗಗಳು ತೆರೆದಿರಬೇಕು; ಉದಾಹರಣೆಗೆ ಕೇವಲ ಶೇಕ್ಸ್‌ಪಿಯರನ ಗ್ರಂಥಗಳನ್ನಷ್ಟೇ ಓದಬೇಕಾಗಿ ಬರುವ, ಅಥವಾ ಟೆಸ್ಟ್‌ಟ್ಯೂಬುಗಳ ನಡುವೆಯಷ್ಟೇ ಕೆಲಸ ಮಾಡಬೇಕಾಗುವ ಶಿಕ್ಷಣ ವರ್ಗಗಳನ್ನು ತೆರೆಯದೆ, ಯಂತ್ರ ವಿಜ್ಞಾನದಲ್ಲಿ ತರಬೇತಿ, ಕುಶಲ ಕೈಗಾರಿಕೆಗಳ ಮಾಹಿತಿ, ವಿದ್ಯುದುಪಕರಣಗಳ ಬಳಕೆಯಲ್ಲಿ ಶಿಕ್ಷಣ ಇತ್ಯಾದಿಗಳಿಗೆ ಸೌಕರ್ಯಗಳನ್ನು ಒದಗಿಸಿಕೊಡಬೇಕು; ಆಗ ಪುಸ್ತಕೀಯ ಜ್ಞಾನವನ್ನಷ್ಟೆ ಹೊಂದಿ, ಆ ಜ್ಞಾನವೇನೂ ಕೆಲಸವನ್ನೊದಗಿಸಲಾಗದಾಗ ನಿರಾಶೆ ಹೊಂದುವ ವಿದ್ಯಾರ್ಥಿಗಳ ಪ್ರಮಾಣ ತಗ್ಗುತ್ತದೆ; ಶಿಕ್ಷಣವು ಉಪಯುಕ್ತವೆಂದು ವಿದ್ಯಾರ್ಥಿಗಳು ತಿಳಿಯತೊಡಗುತ್ತಾರೆ; ಆರ್ಟ್ಸ್ ಅಥವಾ ಸಾಯನ್ಸ್ ಕಾಲೇಜುಗಳಲ್ಲಿ ಈಗ ಕಂಡುಬರುವ ವಿದ್ಯಾರ್ಥಿಗಳ ದಟ್ಟಣೆಯೂ ಕಡಿಮೆಯಾಗುತ್ತದೆ ಎಂದು ತೃಪ್ತಿಯ ಮಾತನ್ನಾಡಲಾಗಿದೆ. ಆದರೆ, ಸರಕಾರಿ ದೃಷ್ಟಿಕೋನದಿಂದ ನೋಡಿದಾಗ, ಇದು ಒಂದು ವಿಶ್ವವಿದ್ಯಾನಿಲಯದ ಸಮಸ್ಯೆಯಾಗಿಲ್ಲ—ಭಾರತದ ಯಾವ ಮೂಲೆಗೆ ಕಣ್ಣೋಟ ಹಾಯಿಸಿದರೂ ಇದೇ ಹಾಡು. ಆದುದರಿಂದ ಇಷ್ಟೆಲ್ಲ ಅನುಕೂಲತೆಗಳನ್ನು ಒದಗಿಸಲು ಎಲ್ಲಿಂದ ಹಣವನ್ನು ಸಂಪಾದಿಸಬೇಕು? ಹಣ ಸಂಪಾದಿಸಿದರೂ ವೈವಿಧ್ಯಪೂರ್ಣವಾದ ಶಿಕ್ಷಣವನ್ನು ನೀಡಬಲ್ಲಷ್ಟು ವಿದ್ಯಾಸಂಪನ್ನರಾದ ಅಧ್ಯಾಪಕರನ್ನು ತರಬೇತಿಗೊಳಿಸುವುದೆಂತು? ಎಂಬಿತ್ಯಾದಿ ದೊಡ್ಡ ಪ್ರಶ್ನೆಗಳು ತಂಕಾರವನ್ನು ಕಾಡುತ್ತವೆ. ಇವತ್ತು, ಈಗಲೇ ಉತ್ತರವನ್ನು ನಾವು ಈ ಪ್ರಶ್ನೆಗಳಿಗೆ ಅಪೇಕ್ಷಿಸಿದರೆ, ಯಾವ ಸರಕಾರವೂ ಏನೂ ಮಾಡಲಾರದು. ಮುಖ್ಯವಾಗಿ, ನಮ್ಮ ಶಿಕ್ಷಣ ಕ್ರಮವೇ ಇಂದು ಸಡಿಲಾಗಿದೆ; ಗೊಣಸು ತಪ್ಪಿಹೋಗಿದೆ; ಪರಸ್ಪರ ಹೊಂದಿಕೆಯಿಲ್ಲ, ಸಾಮರಸ್ಯವಿಲ್ಲ. ಏಕಪಕ್ಷೀಯವಾಗಿ ನಾವು ಯಾರನ್ನೂ ದೂರುವಂತೆಯೂ ಇಲ್ಲ. ಏನಾದರೂ ನಮಗೆ ಒಳ್ಳೆಯದಾಗುವಂತಿದ್ದರೆ ಸಾಮಾಜಿಕ ಕಾರ್ಯಕರ್ತರು ನಡೆಸುವ ವಿಧಾಯಕ ಕ್ರಮಗಳಿಂದ ಮಾತ್ರ: ಇವರು ಊರೂರಲ್ಲಿಯೂ ತಿರುಗಿ ಜನರ ಮನೋಭಾವನೆಯು ನಿಧಾನವಾಗಿಯಾದರೂ ಸುಧಾರಿಸುವಂತೆ ಮಾಡಬಲ್ಲರು. ಸಮರ್ಥನೂ ಪ್ರಭಾವಶಾಲಿಯೂ ವರ್ಚಸ್ವ ವ್ಯಕ್ತಿತ್ವವುಳ್ಳವನೂ ಆದ ಧುರೀಣನೊಬ್ಬ ಇವರಿಗೆ ಮಾರ್ಗದರ್ಶಕನಾಗಬೇಕೆಂಬುದು ನಿಜ. ಆದರೆ ಗಾಂಧೀಜಿಯ ಬಳಿಕ, ಇಂಥ ಮಾರ್ಗದರ್ಶಕ ಹಾಗು ಆತನ ಅನುಯಾಯಿಗಳಿಗಾಗಿ ಜನರೇ ಹಂಬಲಿಸುತ್ತಿದ್ದಾರೆ ಎನ್ನುವ ಪರಿಸ್ಥಿತಿ ನಮ್ಮದು!

ಅಗೋಸ್ತು 15ರ

ಸ್ವಾತಂತ್ರ್ಯೋತ್ಸವ ವಿಶೇಷ ಸಂಚಿಕೆ

ನವಯುಗದ ಅಗೋಸ್ತು 16ರ ಸಂಚಿಕೆಯು ವಿಶೇಷ ಸಂಚಿಕೆಯಾಗಿ, ಎಂದಿನಂತೆ ವಿಶಿಷ್ಟ ರೀತಿಯಲ್ಲಿ ತಾ. 14ಕ್ಕನೇ ಪ್ರಕಟವಾಗುವುದು.

ಪ್ರಸಿದ್ಧರನೇಕರ ಸಂದರ್ಭೋಚಿತ ಲೇಖನ, ಕವಿತೆಗಳೊಂದಿಗೆ ಸಂಚಿಕೆಯು ಆದಷ್ಟು ಆಕರ್ಷಣೀಯವಾಗಿ ಹೊರಡಲಿದೆ.

ಜಾಹೀರಾತುದಾರರು ಎಂದಿನಂತೆ ತಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್, ನವಯುಗ, ಉಡುಪಿ.

ದೇಶಮುಖರ ರಾಜೀನಾಮೆ

ನೆಹರುಗಳ ಅಧೀನ ಅರ್ಥಶಾಖೆ

ಭಾರತ ಸರಕಾರದ ಅರ್ಥಸಚಿವ ಸ್ಥಾನಕ್ಕೆ ಶ್ರೀ ಚಿಂತಾಮಣಿ ದೇಶಮುಖರು ರಾಜೀನಾಮೆಯನ್ನು ಸಲ್ಲಿಸಿದ್ದಾರೆ; ಇದನ್ನು ರಾಷ್ಟ್ರಾಧ್ಯಕ್ಷರು "ವಿಷಾದ ಪೂರ್ವಕ" ಸ್ವೀಕರಿಸಿದ್ದಾರೆ ಎಂದು ಪ್ರಕಟಣೆಯು ಹೊರಟಿದೆ. ಸದ್ಯಕ್ಕೆ ಅರ್ಥಸಚಿವರ ಸ್ಥಾನಕ್ಕೆ ಹೊಸ ಮಂತ್ರಿಗಳ ನೇಮಕವಾಗಿಲ್ಲ. ಪ್ರಧಾನ ಮಂತ್ರಿಗಳೇ ಇಲಾಖೆಯ ಮೇಲ್ವಿಚಾರಣೆಯನ್ನು ಕೈಗೊಳ್ಳುತ್ತಾರೆ.

ಕೊನೆಯ ಸಾಹಸ

ರಾಜ್ಯಗಳ ಪುನಾರಚನೆಯ ಮೇಲೆ ಚರ್ಚೆಯು ಇಷ್ಟರಲ್ಲೇ ನಡೆಯಲಿದೆ. ಮಸೂದೆಯನ್ನು ವಿವರವಾಗಿ ಪರಿಶೀಲಿಸಿ ಚರ್ಚಿಸುವಾಗ ಸೂಕ್ತ ತಿದ್ದುಪಡಿಗಳನ್ನು ಮಾಡಲು ಅವಕಾಶ ಸಿಗಬಹುದುಎಂದು ಮೂಂದ ಆಕಾಕಿರಣವನ್ನು ಸಂಸತ್ತಿನ ಕೆಲವು ಸದಸ್ಯರು ವ್ಯಕ್ತಪಡಿಸುತ್ತಿದ್ದಾರೆ. ಕಾಸರಗೋಡು ತಾಲೂಕಿನ ಸಂಬಂಧದಲ್ಲಿ ಇಂಥ ಪ್ರಯತ್ನ ನಡೆಯುವುದೋ ತಿಳಿದು ಬಂದಿಲ್ಲ. ಪ್ರಧಾನಿಗಳು ಈಗ ಮರಳಿರುವುದರಿಂದ ನಮ್ಮ ಪ್ರತಿನಿಧಿಗಳು ಅಂತಿಮ ಸಾಹಸವನ್ನು ಮಾಡಲಿದ್ದಾರೆ— ಇದು ಫಲದಾಯಕವಾಗುವ ಆಶೆಗೆ ಮಾತ್ರ ಆಧಾರವಿಲ್ಲ!

ನೂತನ ರಾಜ್ಯಗಳು

ಹೊಸ ರಾಜ್ಯಗಳು ಅಕ್ಟೋಬರದ ೧ನೇ ದಿನಾಂಕ, ತಪ್ಪಿದರೆ ನವಂಬರದ ೧ನೇ ದಿನಾಂಕ, ಅಸ್ತಿತ್ವದಲ್ಲಿ ಬರುವುವೆಂದು ಹೇಳಲಾಗಿದೆ. ಗೃಹಖಾತೆಯು ಅಂತಾರಾಜ್ಯ ಮಂತ್ರಿಮಟ್ಟದ ಸಮಿತಿಗಳಿಗೆ ಸಂದೇಶವನ್ನು ಕಳುಹಿಸಿ ಹೊಸ ರಾಜ್ಯಗಳ ಎಲ್ಲ ಪ್ರಾಮುಖ್ಯ ಹುದ್ದೆಗಳಿಗೂ ಅಧಿಕಾರಿಗಳನ್ನು ಈಗಲೇ ನೇಮಿಸಬೇಕೆಂದೂ ಇದರಿಂದ ನೂತನ ರಾಜ್ಯಗಳ ಸ್ಥಾಪನಾನಂತರ ಆಡಳಿತೆಯನ್ನು ಸುಗಮವಾಗಿ ಸಾಗಿಸಲು ಸಹಾಯವಾಗುವುದೆಂದೂ ತಿಳಿಸಿಹೇಳಿದೆ. ಗೃಹಶಾಖೆಯ ಕಾರ್ಯದರ್ಶಿಯೊಬ್ಬರು ಬೇರೆ ಬೇರೆ ರಾಜ್ಯಗಳಿಗೆ ಪ್ರತ್ಯಕ್ಷ ಸಂದರ್ಶನವಿತ್ತು, ಈ ಕಾರ್ಯದಲ್ಲಿ ಆಗಿರುವ ಪ್ರಗತಿಯ ಮಾಹಿತಿಯನ್ನು ಮಾಡಿಕೊಳ್ಳುತ್ತಿದ್ದಾರೆ.

ಚುನಾವಣೆಯ ದಿನ

ಚುನಾವಣೆಗಳನ್ನು ಮುಂದಿನ ಫೆಬ್ರವರಿ ತಿಂಗಳಲ್ಲಿ ನಡೆಸುವುದು ಚುನಾವಣಾಧಿಕಾರಿಗಳ ಅಪೇಕ್ಷೆಯಾಗಿದೆ. ಚುನಾವಣೆಗಳ ಅವಧಿಯು ೧೫ ದಿನಗಳನ್ನು ಮೀರಲಾಗದೆಂದೂ ಅವರು ಹೇಳುತ್ತಿದ್ದಾರೆ. ಚುನಾವಣೆಯಲ್ಲಿ ಸ್ಪರ್ಧಿಸುವ ಉಮೇದುವಾರರ ಚಿತ್ರದಿಂದ ಕೂಡಿದ ಮತದಾನ ಪತ್ರಗಳನ್ನು ಉಪಯೋಗಿಸುವ ಕುರಿತು ಈ ಸಲ ಕ್ಷೇತ್ರದ ವಿಶಿಷ್ಟ ವಿಭಾಗವೊಂದರಲ್ಲಿ ಪ್ರಾಯೋಗಿಕ ಕ್ರಮಗಳನ್ನು ಕೈಗೊಳ್ಳಲಾಗುವುದೆಂದೂ ಅವರು ಹೇಳಿದ್ದಾರೆ. ಅಲ್ಲದೆ, ಮದ್ರಾಸು ರಾಜ್ಯದಲ್ಲಿ ಜಿಲ್ಲಾ ಬೋರ್ಡು ಚುನಾವಣೆಯ ಮಟ್ಟಿಗೆ ಅನುಸರಿಸಿದ, ಮತದಾನ ಪತ್ರಗಳಲ್ಲಿ ಗುರುತು ಮಾಡುವ ವಿಧಾನವನ್ನು ಮಹಾಚುನಾವಣೆಯಲ್ಲಿ ರಾಷ್ಟ್ರದಲ್ಲೆಲ್ಲ ಅನುಸರಿಸುವ ವಿಚಾರವೂ ತಮಗಿದೆ ಎಂದಿದ್ದಾರೆ. ಪ್ರಮುಖ ರಾಜಕೀಯ ಪಕ್ಷಗಳೊಡನೆ ವಿಚಾರ ವಿನಿಮಯಗೈದು ಕೊನೆಯ ತೀರ್ಮಾನವನ್ನು ಮಾಡಲಾಗುತ್ತದೆ.

ತಿಲಕ ಜಯಂತಿ

ಪ್ರಧಾನಿ ನೆಹರುಗಳು ಈಗ ರಾಜಧಾನಿಗೆ ಮರಳಿದ್ದಾರೆ. ಅವರು ತಿಲಕ ಜಯಂತಿಯ ಉತ್ಸವದಲ್ಲಿ ಸಹಭಾಗಿಗಳಾದರು. ತಿಲಕರು ದೇಶಕ್ಕೆ ಸಲ್ಲಿಸಿದ ಸೇವೆಯ ಬಗ್ಗೆ ಎಲ್ಲ ಧುರೀಣರೂ ಪ್ರಶಂಸೆ ಮಾಡಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಭಾರತ ಸರಕಾರವು ತಿಲಕ ಶತಾಬ್ದಿಯ ಸ್ಮಾರಕಾರ್ಥ ವಿಶೇಷ ಅಂಚೆ ಚೀಟು ಹೊರಡಿಸಿದ್ದರೆ, ಮುಂಬಯಿ ಸರಕಾರವು ಪುಸ್ತಕವೊಂದನ್ನು ಪ್ರಕಟಿಸಿದ್ದಿತು. ತಿಲಕರು ಜನಿಸಿದ ರತ್ನಗಿರಿಯ ಮನೆಯನ್ನು ಭಾರತ ಸರಕಾರವು ತನ್ನ ವಶಕ್ಕೆ ತೆಗೆದುಕೊಂಡು ಸ್ಮಾರಕಾರ್ಥ ರಕ್ಷಿಸುವುದೆಂದು ವದಂತಿ.

ಕಚ್ಛದಲ್ಲಿ ಭೂಕಂಪ

ವಾಯುವ್ಯ ಕರಾವಳಿಯಲ್ಲಿರುವ ಕಚ್ಛದಲ್ಲಿ ಕಳೆದವಾರ ಭೀಕರ ಭೂಕಂಪವು ಸಂಭವಿಸಿತು. ಸುಮಾರು ಮೂರು ಸಾವಿರ ಮನೆಗಳನಾಶವಾಗಿದೆ; ೧೫೦ ಮಂದಿ ಮಡಿದಿದ್ದಾರೆ; ಮುನ್ನೂರು ಮಂದಿಗೆ ತೀವ್ರ ಗಾಯವಾಗಿದೆ; ಹತ್ತು—ಹನ್ನೆರಡು ಸಾವಿರ ಜನರು ಎಲ್ಲವನ್ನೂ ಕಳೆದುಕೊಂಡು ನಿರ್ಗತಿಕರಾಗಿದ್ದಾರೆ. ಒಂದು ಕಾಲದಲ್ಲಿ ಕಚ್ಛದ ರಾಜಧಾನಿಯಾಗಿದ್ದ, ಈಗ ತಾಲೂಕಿನ ಮುಖ್ಯಪಟ್ಟಣವಾದ, ಅಂಜಾರಿನಲ್ಲಿ ಭೂಕಂಪ ವಿಶೇಷ ಪ್ರತಾಪವನ್ನು ತೋರಿಸಿತು.

ನೆರವಿನ ಯಾಚನೆ

ಸಹಾಯವನ್ನು ಎಲ್ಲೆಡೆಯಿಂದಲೂ ತ್ವರೆಗೊಳಿಸಲಾಗಿದೆ. ಪೀಡಿತರಿಗೆ ಆಹಾರದ ಪೂರೈಕೆಯಾಗುವಂತೆ ತಕ್ಕ ವ್ಯವಸ್ಥೆ ನಡೆಸಲು ಮುಂಬಯಿಯ ವ್ಯಾಪಾರಿಗಳೂ ಕೇಂದ್ರದ ಆಹಾರ ಮಂತ್ರಿಗಳೂ ಕಚ್ಛಿಗೆ ಧಾವಿಸಿದ್ದಾರೆ. ವೈದ್ಯರ ಶುಶ್ರೂಷಾಪಥಕವೊಂದು ಕಚ್ಛಿಗೆ ಹೋಗಿ ಗಾಯಾಳುಗಳಿಗೆ ಚಿಕಿತ್ಸೆಯನ್ನು ಮಾಡುತ್ತಿದೆ. ಅಸ್ಸಾಮಿನಲ್ಲಿ ೧೯೫೦ನೇ ಇಸವಿಯಲ್ಲಿ ನಡೆದ ಭೂಕಂಪದ ನೆನಪು ಇನ್ನೂ ಮರೆತುಹೋಗಿಲ್ಲದಿರುವಾಗ ಈ ಭೂಕಂಪ ನಡೆಯಿತು!

ಉಡುಪಿ

ಎಂ. ಜಿ. ಎಂ ಕಾಲೇಜಿನಲ್ಲಿ ತಿಲಕ ಜಯಂತಿಯು— ತಾ. ೨೩ರಂದು ಕಾಲೇಜಿನ ಯೂನಿಯನಿನ್ನ ಆಶ್ರಯದಲ್ಲಿ ಆಚರಿಸಲ್ಪಟ್ಟಿತು. ಪ್ರಾರ್ಥನೆಯಾದ ಬಳಿಕ ಪ್ರಿನ್ಸಿಪಾಲ್ ಸುಂದರ ರಾಯರು ಲೋಕಮಾನ್ಯ ಬಾಲಗಂಗಾಧರ ತಿಲಕರ ಜೀವನ ಮತ್ತು ಅವರು ಮಾಡಿದ ದೇಶಸೇವೆ. ಅವರ ದೇಶಭಕ್ತಿ, ಪ್ರತಿಕೋಟ್ಯನು, ಆದರ್ಶಗಳ ಕುರಿತು ಮಾತನಾಡಿದರಲ್ಲದೆ ಹಿಂದೂ ದೇಶವು ಬಲಿಷ್ಠವಾದ ಒಕ್ಕೂಟವಾಗಬೇಕೆಂಬುದೇ ತಿಲಕರ ಕನಸಾಗಿತ್ತು, ಅದನ್ನು ನೆನಸುಮಾಡುವುದು ಇಂದಿನ ವಿದ್ಯಾರ್ಥಿಗಳ ಮೇಲೆ ಹೊಂದಿಕೊಂಡಿದೆ' ಎಂದು ಸೂಚಿಸಿದರು.

ಬಳಿಕ ಶ್ರೀಯುತ ಕು. ಶಿ. ಹರಿದಾಸ ಭಟ್ಟರು ತಮ್ಮ ಭಾಷಣದಲ್ಲಿ—"ತಿಲಕರು"_ ಕ್ರಿಯೆಯ ಮೂಲಕ ಮುನ್ನುಗ್ಗಿರಿ, ನಿಮ್ಮ ಹಕ್ಕುಗಳಿಗಾಗಿ ಹೋರಾಡಿರಿ—ಎಂಬ ಸಂದೇಶವನ್ನು ಬಿಟ್ಟುಹೋಗಿರುತ್ತಾರೆ. ಅದನ್ನು ಹಿಡಿದುಕೊಂಡು ಇಂದಿನ ಮುಂಬಯಿಯ ಮರಾಟರು ದಂಗೆಯೆಬ್ಬಿಸುತ್ತಿರುವುದೂ, ಕ್ರಿಯಾತ್ಮಕರ ಹೋರಾಟದ ನಡುವೆ ಕರ್ತವ್ಯವನ್ನು ಮರೆತಿರುವುದು ತೀರಾ ವಿಷಾದಕರವಾಗಿದೆ' ಎಂದರು.

ಕಾಲೇಜು ವಿದ್ಯಾರ್ಥಿಗಳ ಪರವಾಗಿ ಯೂನಿಯನಿನ ಅಧ್ಯಕ್ಷರಾದ ಶ್ರೀ ವಿ. ಜಯರಾಮಶೆಟ್ಟರೂ, ಕಾರ್ಯದರ್ಶಿಗಳಾದ ಶ್ರೀ ಪ್ರೇಮಚಂದ್ರ ಹೆಗ್ಡೆಯವರೂ ಭಾಷಣವಿತ್ತರು.

ಸಂತಾಪಸೂಚಕ ಸಭೆ — ಸ್ಥಳೀಯ ಕಲಾವೃಂದದ ಭವನದಲ್ಲಿ ತಾ. ೧೮ರಂದು ಶ್ರೀ ರಾಮಣ್ಣ ಉಡುಪರ ಅಧ್ಯಕ್ಷತೆಯಲ್ಲಿ ವೃಂದದ ಸದಸ್ಯರ ಸಭೆಯು ಜರಗಿ ಉಡುಪಿ ಸಂಸ್ಕೃತ ಕಾಲೇಜಿನ ಮಾಜಿ ಪ್ರಿನ್ಸಿಪಾಲರಾಗಿದ್ದ ಶ್ರೀ ಎಮ್. ರಾಮಚಂದ್ರ ರಾಯರ ಅಕಾಲ ನಿಧನದ ಬಗ್ಗೆ ಸಂತಾಪಸೂಚಿಸಲಾಯಿತು. ವೃಂದಕ್ಕೆ ದಿವಂಗತರು ಸಲ್ಲಿಸಿದ ಸೇವೆ ಕುರಿತು ಹಲವರು ಮಾತನಾಡಿದರು. ದಿವಂಗತರ ಆತ್ಮಶಾಂತಿಗಾಗಿ ಎರಡು ನಿಮಿಷ ಮೌನ ಪ್ರಾರ್ಥನೆಯಾಗಿ ಸಭಾಂತ್ಯವಾಯಿತು.

ಎಮ್. ಜಿ. ಎಮ್, ಕಾಲೇಜು ಚುನಾವಣೆ— ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ವಿದ್ಯಾರ್ಥಿಗಳಲ್ಲಿ ಚುನಾವಣೆ ನಡೆದು ಶ್ರೀ ವಿ. ಜಯರಾಮ ಶೆಟ್ಟರು ಯೂನಿಯನ್ ಪ್ರೆಸಿಡೆಂಟರಾಗಿಯೂ ಶ್ರೀಯು ಮೋಹನರಾಯರು ಕಾರ್ಯದರ್ಶಿಗಳಾಗಿಯೂ ಶ್ರೀ ಪ್ರೇಮಚಂದ್ರ ಹೆಗ್ಡೆಯವರ ಉಪಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಭಾಷಾ ಸಂಘಕ್ಕೆ ಶ್ರೀಗಳಾದ ಕೃಷ್ಣಶರ್ಮ ಮತ್ತು ಎಮ್. ಲಕ್ಷ್ಮೀನಾರಾಯಣ ಭಟ್ಟರೂ, ಇತಿಹಾಸ ಮತ್ತು ಅರ್ಥಶಾಸ್ತ್ರ ಸಂಘಕ್ಕೆ ಶ್ರೀ ಕೆ. ನಾರಾಯಣ ಪುರಾಣಿಕರೂ, ಕಲಾಸಂಘಕ್ಕೆ ಶ್ರೀ ಎ. ಮೋಹನರಾಯರೂ ಕ್ರೀಡಾ ಸಂಘಕ್ಕೆ ಶ್ರೀ ನೇಮಿಕ್ ದಾಸ್ಳೇದರೂ, ಸಾಮಾಜಿಕ ಸೇವಾಸಂಘಕ್ಕೆ ಶ್ರೀಗಳಾದ ಅಬ್ದುಲ್ ರಹೂಫ್ ಮತ್ತು ಕೆ. ಎಲ್. ಆಚಾರ್ಯರೂ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಚುನಾವಣೆಯ ರೀತಿನೀತಿಗಳನ್ನು ಪ್ರಿನ್ಸಿಪಾಲ್ ಎಚ್. ಸುಂದರರಾಯರು ಚುನಾವಣಾರಂಭದ ಮೊದಲು ವಿವರಿಸಿದರು.

ತಿಲಕ ಜಯಂತಿ ಲೋಕಮಾನ್ಯ ತಿಲಕರ ಜಯಂತಿಯ ಒಂದು ನೂರು ವರ್ಷದ ಜನ್ಮದಿನವನ್ನು ತಾ. ೨೩ರಲ್ಲಿ ಬೆಳಿಗ್ಗೆ ಪ್ರಭಾತ ಫೇರಿ ಕಾರ್ಯಕ್ರಮದಿಂದ ಆಚರಿಸಲಾಯಿತು. ಕವಿರಾಜ ಎಮ್. ಜಿ. ಶೆಣ್ಯೆಯವರ ದವಾಖಾನೆಯಲ್ಲಿ ಶ್ರೀ ಎ ಜೆ. ಅಲ್ಸೆಯವರು ಲೋಕಮಾನ್ಯರ ಭಾವಚಿತ್ರವನ್ನು ಅನಾವರಣ ಮಾಡಿದರು. ಶ್ರೀ ಶೆಣ್ಯೆಯವರು ಪ್ರಭಾತಫೇರಿ ಮುಗಿದ ಬಳಿಕ ರಥಬೀದಿಯಲ್ಲಿ ಮಕ್ಕಳಿಗೆ ಸಿಹಿತಿಂಡಿ ಹಂಚಿದರು.

ಡಾ. ವಿ. ಬಾಲಕೃಷ್ಣ ಹೆಗ್ಡೇರು ನ್ಯೂಯೋರ್ಕಿಗೆ ತೆರಳಿರುವರು— ಉಡುಪಿಯ ಹನುಮಾನ್ ಟ್ರಾನ್ಸ್‌ಪೋರ್ಟು ಕಂಪೆನಿಯ ಡೈರೆಕ್ಟರ್ ಶ್ರೀ ಕೆ. ಅನಂತ ಹೆಗ್ಡೆಯವರ ಪುತ್ರ ಡಾ. ವಿ. ಬಾಲಕೃಷ್ಣ ಹೆಗ್ಡೆ, ಜಿ. ಸಿ. ಐ. ಎಮ್. ಅವರು ಇದೇ ತಾ. ೨೯ರಲ್ಲಿ ವಿಮಾನ ಮೂಲಕ ಬೊಂಬಾಯಿಗೆ ತೆರಳಿ ಅಲ್ಲಿಂದ ಆಗೋಸ್ತು ಎರಡನೇ ವಾರದಲ್ಲಿ ಹಡಗುಮೂಲಕ ನ್ಯೂಯಾರ್ಕಿಗೆ ಒಂದೂವರೆ ವರ್ಷಗಳ ಎಂ. ಎಸ್. ವ್ಯಾಸಂಗದ ಉಚ್ಚಶಿಕ್ಷಣಕ್ಕಾಗಿ ತೆರಳುವರು. ಶ್ರೀ ಹೆಗ್ಡೆಯವರು ಮದ್ರಾಸಿನಲ್ಲಿ ವೈದ್ಯಕೀಯ ಕಾಲೇಜು ಶಿಕ್ಷಣ ಪಡೆಯುತ್ತಿದ್ದ ವೇಳೆ ಕಾಲೇಜು ಯೂನಿಯನ್ನಿನ ಅಧ್ಯಕ್ಷರಲ್ಲದೆ— ಪರೀಕ್ಷೆಯಲ್ಲಿ ಗಣನೀಯ ಸ್ಥಾನದಲ್ಲಿ ತೇರ್ಗಡೆ ಹೊಂದಿದವರು. ಡಾ! ಹೆಗ್ಡೇರಿಗೆ ಸುಖ ಪ್ರಯಾಣವನ್ನೂ ಉತ್ತಮ ಭವಿಷ್ಯವನ್ನೂ ಕೋರುವೆವು.

ಸಾದರ ಸ್ವೀಕಾರ-ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜೆನ್ಸೀಸ್, ಕೆ. ಎಸ್. ರಾವ್ ರೋಡು ಮಂಗಳೂರು ೧ ಇವರು ಪ್ರಕಟಿಸಿದ 0—12—6 ಬೆಲೆಯ, ಮತ್ತು ಕೆ. ಭೋಜರಾವ್ ಮತ್ತು ಕಂಪೆನಿ, ಕೊಡಿಯಾಲಬೈಲು, ಮಂಗಳೂರು 3 ಇವರು ಪ್ರಕಾಶನಗೊಳಿಸಿದ 0—8—0 ಬೆಲೆಯ 'ಹಿಂದೂ ಉತ್ತರಾಧಿಕಾರ ಶಾಸನ ೧೯೫೬"ರ ಕನ್ನಡ ಪ್ರತಿಗಳು ನಮ್ಮ ಹಸ್ತಗತವಾಗಿವೆ.

ಬಾರಕೂರು—ನೇಶನಲ್ ಹೈಸ್ಕೂಲಿನ ವಿದ್ಯಾರ್ಥಿ ಮುಖಂಡರಾಗಿ ಶ್ರೀ ಟಿ. ಸೀನಪ್ಪ ಶೆಟ್ಟರೂ ಸಹಾಯಕ ಮುಖಂಡರಾಗಿ ಶ್ರೀ ಬಿ. ನಾಗೇಶ ಸೇರ್ವೆಗಾರರೂ ಆರಿಸಲ್ಪಟ್ಟಿರುವರು.

ನೀವು ನಿರೀಕ್ಷಿಸುತ್ತಿರುವ

ಹಿಂದೂ ಉತ್ತರಾಧಿಕಾರ ಶಾಸನ

ಇದರ ಕನ್ನಡ ಪ್ರತಿಗಳು ಸಿಗುತ್ತವೆ.

0—13—0 ಸ್ಟ್ಯಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳುಹಿಸಬಹುದು.

ನವಭಾರತ ಪುಸ್ತಕ ಭಂಡಾರ,
ಉಡುಪಿ.

ರಾಷ್ಟ್ರೀಕೃತ ವಿಮಾಸಂಸ್ಥೆಯಲ್ಲಿ ವಿಮೆಮಾಡಿ ರಾಷ್ಟ್ರ ನಿರ್ಮಾಣ ಕಾರ್ಯಕ್ಕೆ ನೆರವಾಗಿರಿ.

ಪ್ರಕಟಣೆ

ಕುಂದಾಪುರ ತಾಲೂಕು ಆನಗಳ್ಳಿ ಗ್ರಾಮದಲ್ಲಿರುವ, ತಾಲೋಕು ಮಜ್ಕೂರು ನಾಡಗ್ರಾಮದ ಕಡ್ಕೆ ದೊಡ್ಡಮನೆ ಸುಬ್ಬಕ್ಕ ಸೆಟ್ಟಿಯವರ ಮಗಳು ನಾಗಮ್ಮ ಸೆಟ್ಟಿಯ ಮೈನರ್ ಮಕ್ಕಳು ಮ, ಆನಗಳ್ಳಿ ಬಾರಂದಾಡಿ ಮನೆ ನರಸಿಂಹ ಸೆಟ್ಟಿಯ ಸದ್ರಿ ಮೈನರ್ ಮಕ್ಕಳು ನಾರಾಯಣ, ಮಹಾಬಲ ಕೂಡಾ 2 ಜನರಿಗೆ, ಇವರ ಗಾರ್ಡಿಯನ್ ಮ, ಸಂರಕ್ಷಕರಾದ ತಂದೆ ನರಸಿಂಹ ಸೆಟ್ಟಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ, ಸದ್ರಿ ಮೈನರ್ ಮಕ್ಕಳ ತಾಯಿ ನಾಗಮ್ಮ ಸೆಟ್ತಿಯೆಂಬವಳು ಸುಮಾರು 5 ವರ್ಷದ ಹಿಂದೆ ಮೃತಪಟ್ಟಿರುತ್ತಾಳೆ. ಆತಳು ಮೃತಪಟ್ಟ ಲಾಗಾಯ್ತಿನಿಂದ ಸದ್ರಿ ಮೈನರ್ ಮಕ್ಕಳು ತಾಯಿಯವರ ಕುಟುಂಬದ ಮನೆಯಲ್ಲಿ ಯಿಷ್ಟನ್ನಾದರೂ ಅಶನ, ವಶನ, ವಗ್ಯೆರೆಯೇನೊಂದೂ ಪಡೆಕೊಳ್ಳದೆಯೂ, ಆ ಲಾಗಾಯ್ತಿನಿಂದ ಈ ವರೆಗೆ ಕುಟುಂಬದ ಮನೆಗೆ ಹೋಗಿಬಾರದೆಯೂ, ಹಾಲಿ ನನ್ನ ಆನಗಳ್ಳಿಯ ಮನೆಯಲ್ಲಿ, ನನ್ನ ಒಟ್ಟಿಗೆ ಆನಗಳ್ಳಿಯಲ್ಲಿಯೇ ಜೀವಿಸಿಕೊಂಡು ಬರುತ್ತಾರೆ. ಸದ್ರಿ ಮೈನರರ ಕುಟುಂಬದ ಮನೆಯಲ್ಲಿ, ತುಂಬಾ ಮಟ್ಟುವಳಿಯಿದ್ದು, ಅಲ್ಲಿಯ ಮೆಂಬರರ ಜೀವನ ವಗೈರೆ ಖರ್ಚು ಹೋಗ್ಯಾ ವರ್ಷ 1ರ ಸುಮಾರು ರೂಪಾಯಿ 500—0—0ಕ್ಕೆ ಮಿಕ್ಕಿ ಉಳಿತಾಯ ಸಿಕ್ಕುವಂತಾದ್ದಾಗಿರುತ್ತದೆ. ಅದ್ರೆ ಇತ್ತಲಾಗಿ ತಿಳಿಯುವಾಗ, ಸದ್ರಿ ಮೈನರ್ ಹುಡುಗರ ಕುಟುಂಬದ ಮನೆಯಲ್ಲಿ ಕೆಲವು ಮೆಂಬರರಾದ ಪುಟ್ಟಯ್ಯ ಯಾನೆ ಸೂರಪ್ಪ ಸೆಟ್ಟಿ, ಸೀತಮ್ಮ ಸೆಟ್ತಿ, ಮೂಕಮ್ಮ ಸೆಟ್ತಿ ವಗೈರೇರು ಸದ್ರಿ ಮೈನರ್ ಹುಡುಗರಿಗೆ ಮೋಸಮಾಡುವ ಉದ್ದೇಶದಿಂದ ಕುಟುಂಬದ ಆಸ್ತಿಯ ಉತ್ಪತ್ತಿಯನ್ನು ಅಸಾಧ್ಯ ಮಾಡುತ್ತಾ, ಕುಟುಂಬಕ್ಕೆ ಸಾಲ ಹೊರಿಸುವ ದುರುದ್ದೇಶದಿಂದ ಕೆಲವು ನೋಟು ವಗ್ಯೆರೆ ಬೇರೆಯವರ ಹೆಸರಿಗೆ ಬೇನಾಮಿಯಾಗಿ ಮಾಡಿಟ್ಟಿರುತ್ತಾರಾಗಿಯೂ, ಕುಟುಂಬದ ಹಕ್ಕಿನ ಹಾಡಿಗಳನ್ನು ಮ, ಮೋರುಗಳನ್ನು ಕಡಿದು ಮಾರಾಟ ಮಾಡುವುದಾಗಿಯೂ ಮತ್ತು ಕೆಲವು ರಿಕಾರ್ಡು ಮಾಡುವ ಅಭಿಪ್ರಾಯ ಇದ್ದಾರಾಗಿಯೂ ತಿಳಿದುಬಂದಿರುತ್ತದೆ. ಆದ್ರೆ ಸದ್ರಿ ಮೈನರ್ ಹುಡುಗರ ಕುಟುಂಬಕ್ಕೆ ಸಾಲಮಾಡುವ ಅಗತ್ಯ ಇದ್ದದ್ದಾಗಲೀ, ಮ, ಈ ಹಿಂದೆ ಸಾಲಮಾಡಿದ್ದಾಗಲೀ ವಗೈರೆಯೇನೊಂದು ಇರುವುದಿಲ್ಲ. ಆದುದರಿಂದ ಸದ್ರಿ ಮೈನರ್ ಹುಡುಗರ ಕುಟುಂಬದ ಮೇಲೆ ಕಾಣ್ಸಿದವರು ವ, ಮಿಕ್ಕ ಮೆಂಬರರು ಅಂತಾ ನೋಟು ವಗೈರೆ ಯೇನಾದ್ರೂ ಮಾಡಿದ್ದು ಇದ್ದರೆ ವ, ಮಾಡಿದರೆ ಕೂಡಾ ಸದ್ರಿ ಕುಟುಂಬದ ಆಸ್ತಿಯ ಮೇಲೆ ವ, ಸದ್ರಿ ಮೈನರರ ಅಂಶದ ಮೇಲೆ ಬದ್ಧವಾಗತಕ್ಕದ್ದಲ್ಲ ಎಂಬ ಸಂಗ್ತಿ ಈ ಮೂಲಕ ಸರ್ವರಿಗೂ ತಿಳಿಯಪಡಿಸಿರುತ್ತೇನೆ.

ನರಸಿಂಹ ಸೆಟ್ಟಿ ರುಜು,
ಗಾರ್ಡಿಯನ್.

ಕುಂದಾಪುರ, 23—7—56.

ವಿಜ್ಞಾಪನೆ

"ಜಗತ್ತಿನ ಜ್ಞಾನವು ಪುಸ್ತಕದಲ್ಲಡಗಿದೆ"
—ಅಸ್ಸಸ್ ಫಿಲಿಪ್ಸ್.

"ಪುಸ್ತಕಗಳು ತುಂಬಿದ ಕಪಾಟುಗಳಿಂದ ಮನೆಯ ಸೌಂದರ್ಯವು ಇಮ್ಮಡಿಸುವುದು"
—ಲೋಕಮಾನ್ಯ ತಿಲಕ.

ಪುಸ್ತಕ ದಾನವಿತ್ತು ಜ್ಞಾನ ದಾನದ ಪುಣ್ಯ ಪಡೆಯಿರಿ!

ಕಾಲ ಮುಂದುವರಿದಂತೆ ಪ್ರಪಂಚದಲ್ಲಿ ನಾಗಾಲೋಟದಿಂದ ವಿಜ್ಞಾನ ಬೆಳೆಯುತ್ತಿದೆ, ಜ್ಞಾನ ಹೆಚ್ಚುತ್ತಿದೆ. ಈ ಓಟದಲ್ಲಿ ಮನುಷ್ಯನಾದವನು ಸರಿಸಾಟಿಯಾಗಬೇಕಾದರೆ ಅವನಿಗೆ ತಕ್ಕ ಮಾಹಿತಿಪಡೆಯುವ ಅವಕಾಶ, ಅನುಕೂಲತೆಗಳುಬೇಕು. ಬಗೆಬಗೆಯ ಪುಸ್ತಕಗಳನ್ನು ಓದುವುದರಿಂದ ಈ ಅವಕಾಶ ಒದಗುವುದು. ಆದರೆ ಬೇಕಾದ ಪುಸ್ತಕಗಳನ್ನು ಪಡೆಯುವ ಅನುಕೂಲತೆ ಎಲ್ಲಿದೆ?

ಇಂದು ಓದುಬಲ್ಲವರು ಹೆಚ್ಚುತ್ತಿದ್ದಾರೆ. ಆದರೆ ಪುಸ್ತಕಗಳನ್ನು ಕ್ರಯಕ್ಕೆ ಪಡೆಕೊಳ್ಳುವ ಶಕ್ತಿ ಹೆಚ್ಚಿನವರಲ್ಲಿ ಇಲ್ಲ. ಕೊಂಡುಕೊಂಡರೂ ಓದಿದ ಬಳಿಕ ಆ ಪುಸ್ತಕಗಳನ್ನು ಜಾಗರೂಕತೆಯಿಂದ ಇಟ್ಟುಕೊಳ್ಳುವ ವ್ಯವಸ್ಥೆ ಮನೆಯಲ್ಲಿರಲು ಶಕ್ಯವಿಲ್ಲ. ವ್ಯವಸ್ಥೆ ಇದ್ದರೂ ಆ ಪುಸ್ತಕಗಳ ಪ್ರಯೋಜನ ಹತ್ತುಮಂದಿಗೆ ಲಭಿಸಲು ಸಾಧ್ಯವಿಲ್ಲ.

ಉಡುಪಿಯಲ್ಲಿ ಸಾರ್ವಜನಿಕ ಪುಸ್ತಕ ಭಂಡಾರಗಳು ಜನತೆಯ ಜ್ಞಾನ ತೃಷೆಯನ್ನು ನೀಗಿಸಲು ಪ್ರಯತ್ನಿಸುತ್ತಿವೆ. ಆದರೆ ಹೆಚ್ಚಿನ ಜನರಿಗೆ ಪುಸ್ತಕಗಳನ್ನು ಓದುವ ಆತುರ ಹುಟ್ಟಿಸಲು, ಆತುರ ಇರುವವರಿಗೆ ಪುಸ್ತಕಗಳನ್ನು ಒದಗಿಸಲು ನಗರದ ವಿವಿಧ ಭಾಗಗಳಲ್ಲಿ, ತೀರ ಹತ್ತಿರದಲ್ಲಿ ಪುಸ್ತಕ ಭಂಡಾರದ ಅನುಕೂಲತೆ ಲಭಿಸುವಂತೆ ತಕ್ಕ ಏರ್ಪಾಡು ಮಾಡಬೇಕಾಗುವುದು ಈ ದೃಷ್ಟಿಯಲ್ಲಿ ಪ್ರಕೃತ ಕಲ್ಸಂಕ ಮತ್ತು ಬ್ರಹ್ಮಗಿರಿಯ ಎರಡು ಕೇಂದ್ರಗಳಲ್ಲಿ ಪುಸ್ತಕಭಂಡಾರಗಳನ್ನು ತೆರೆಯಬೇಕೆಂದಿರುವೆವು. ಮಹಿಳೆಯರಿಗೆ, ಮಕ್ಕಳಿಗೆ, ಪುರುಷರಿಗೆ, ವಯೋವೃದ್ಧರಿಗೆ-ಎಲ್ಲರಿಗೂ ಅವರವರ ಅಭಿರುಚಿಗೆ ತಕ್ಕಂಥ ಲಘು, ಬಿಗು ಬರಹಗಳ ತರತರದ ಪುಸ್ತಕಗಳನ್ನು ಓದುಗರಿಗೆ ಒದಗಿಸಬೇಕೆಂಬ ಧ್ಯೇಯ ಇದೆ.

ಈ ಯೋಜನೆಯನ್ನು ನನ್ನ ಸನ್ಮಿತ್ರರು ತಮ್ಮಲ್ಲಿರುವ ಪುಸ್ತಕಗಳನ್ನು ದಾನಮಾಡಿ ಬೆಂಬಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ಪಡೆದ ಪುಸ್ತಕಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕಿಡಲಾಗುವುದು.

ಬರುವ ಆಗೋಸ್ತು ೧೦ರ ೧ನೇ ತಾರೀಕಿನ ತನಕ ಈ ಬಗ್ಗೆ ಪುಸ್ತಕ ಸಂಗ್ರಹದ ಕಾರ್ಯಕ್ರಮವನಿಟ್ಟುಕೊಳ್ಳುವ ನಿಶ್ಚಯಮಾಡಲಾಗಿರುವುದು. ಪುಸ್ತಕ ಕೊಡುವುದರಲ್ಲಿ ಅಥವಾ ಸಂಗ್ರಹಿಸುವುದರಲ್ಲಿ ವಿದ್ಯಾಭಿಮಾನಿಗಳೂ, ಸಾರ್ವಜನಿಕ ಸೇವಾಸಕ್ತರೂ ಸಹಕರಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.

ಡಾ. ಟಿ. ಮಾಧವ ಪೈ,
ರಿಜಿಸ್ಟ್ರಾರ್,
ಎಕೆಡಮಿ ಆಫ್ ಜನರಲ್ ಎಜುಕೇಶನ್,
ಮಣಿಪಾಲ.

ಹಿಂದೂ ಉತ್ತರಾಧಿಕಾರ [ವಾರೀಸು] ಕಾನೂನು 1956.

ಸುಲಭ ಶೈಲಿಯಲ್ಲಿ ಯಥಾಪ್ರತಿ ಕನ್ನಡ ಭಾಷಾಂತರ ಮತ್ತು ಟಿಪ್ಪಣಿ ಸಹಿತ—
ಅನುಭವೀ ಕಾನೂನು ತಜ್ಞರಿಂದ
ಎಲ್ಲೆಲ್ಲಿಯೂ ದೊರೆಯುತ್ತದೆ;
ಬೆಲೆ 0—8—0.
1 ಪ್ರತಿ ಬೇಕಾದವರು ಸತ್ತಾಣೆ ಅಂಚೆ ಚೀಟು ಕಳುಹಿಸಬೇಕಾಗುವುದು.
ಕೆ. ಭೋಜರಾವ್ ಮತ್ತು ಕಂಪೆನಿ
ಗವರ್ನಮೆಂಟ್ ಪುಸ್ತಕಗಳ ಏಜಂಟರು
ಮತ್ತು ಲೋ ಬುಕ್ ವ್ಯಾಪಾರಿಗಳು,
ಕೊಡಿಯಾಲಬೈಲು, ಮಂಗಳೂರು
ಉಡುಪಿ ನವಭಾರತ ಪುಸ್ತಕ ಭಂಡಾರದಲ್ಲಿಯೂ ಮಾರಾಟಕ್ಕಿದೆ.

ಹೊಂಬಾಡಿ ಮಂಡಾಡಿ— ಕುಂದಾಪುರ ತಾಲೂಕಿನ ಹೊಂಬಾಡಿ ಮಂಡಾಡಿಯಲ್ಲಿ ತಾ. 16ರಲ್ಲಿ ವಿವೇಕೋದಯ ಎಲಿಮೆಂಟರಿ ಶಾಲಾ ಮೆನೇಜರ್ ಶ್ರೀ ಕಾಸು ಸಂಜೀವ ಸೆಟ್ಟರು ಹಾಯರ್ ಎಲಿಮೆಂಟರಿ ಶಾಲೆಗಾಗಿ ಕಟ್ಟಿಸಿದ ನೂತನ ಕಟ್ಟಡದಲ್ಲಿ ಆರನೆ ತರಗತಿಯನ್ನು ನಿವೃತ್ತ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕುಂದಾಪುರ ರೇಂಜಿನ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಶಂಕರ ವೈಕಾರರವರು ವಹಿಸಿದ್ದರು. ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾವ್, ಎಮ್. ಎಲ್. ಎ. ಗಳಾದ ಶ್ರೀ ಎಸ್. ಎಸ್. ಕೊಳ್ಕೆಬೈಲ್, ಶ್ರೀ ಪ್ಯ. ಮಂಜಯ್ಯ ಸೆಟ್ಟಿ, ಡಾ. ಟಿ. ಮಾಧವ ಪೈ, ಮೊದಲಾದವರಿಂದ ಬಂದ ಶುಭಸಂದೇಶಗಳನ್ನು ಓದಲಾಯಿತು. ಉದ್ಘಾಟಕರೂ, ಅಧ್ಯಕ್ಷರೂ ಮತ್ತು ಶ್ರೀ ಎಮ್. ಎಮ್. ಹೆಗ್ಡೆಯವರು ಮಾತನಾಡುತ್ತಾ, ಈ ಪ್ರಾಂತದ ಹಳ್ಳಿಗಳ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರೀ ಸಂಜೀವ ಸೆಟ್ಟರು ಅವಿಶ್ರಾಂತವಾಗಿ ಮಾಡುತ್ತಿರುವ ನಿಸ್ವಾರ್ಥ ಸೇವೆಯನ್ನು ಪ್ರಶಂಸಿಸಿ, ಶಾಲೆಯ ಉತ್ತರೋತ್ತರ ಅಭಿವೃದ್ಧಿಯನ್ನು ಹಾರೈಸಿದರು. ಶ್ರೀ ಕೆ. ಸಂಜೀವ ಸೆಟ್ಟರು ಸರ್ವರಿಗೂ ವಂದನೆಗಳನ್ನಿತ್ತರು. ಲಘುಉಪಹಾರದೊಂದಿಗೆ ಸಮಾರಂಭ ಕೊನೆಗೊಂಡಿತು.

ಕೊಳಂಬೆ— ಸ್ಥಳೀಯ ಕಿರಿಯ ಬುನಾದಿ ಶಾಲೆಯಲ್ಲಿ ತಾ. 16ರಂದು ಹಳೆವಿದ್ಯಾರ್ಥಿನಿ ಶ್ರೀಮತಿ ಕಮಲಾಕ್ಷಿಯವರ ಅಧ್ಯಕ್ಷತೆಯಲ್ಲಿ ವನಮಹೋತ್ಸವವೂ ತಾ. 19ರಲ್ಲಿ ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಬಕ್ರಿದ್ ಹಬ್ಬವೂ ಆಚರಿಸಲ್ಪಟ್ಟಿತು.

ಮಣಿಪಾಲ— ತಾ. 15ರಂದು ಸೇರಿದ ಗೀತಾ ಮಂದಿರದ ಕಾರ್ಯಕಾರಿ ಸಮಿತಿಯಲ್ಲಿ ಆಗೋಸ್ತು 15ನ್ನು ಆಚರಿಸುವುದೆಂದು ನಿಶ್ಚಯಿಸಲಾಯಿತು. ಆಪ್ರಯುಕ್ತ ಒಂದು ಸ್ಪರ್ಧೆಯನ್ನು ಏರ್ಪಡಿಸಿ ಅತ್ಯುತ್ತಮವಾಗಿ ರಾಷ್ಟ್ರಗೀತೆಗಳನ್ನು ಹಾಡಿದವರಿಗೆ ಕ್ರಮವಾಗಿ ರೂಪಾಯಿ ಹನ್ನೆರಡು, ಎಂಟು ಮತ್ತು ಐದರ ಮೂರು ಬಹುಮಾನಗಳನ್ನು ಕೊಡುವುದೆಂದೂ ಸ್ಪರ್ಧೆಯಲ್ಲಿ ಭಾಗವಹಿಸುವವರು ರೂಪಾಯಿ ಒಂದನ್ನು ಕೊಟ್ಟು ಗೀತಾಮಂದಿರದ ಸದಸ್ಯರಾಗತಕ್ಕದೆಂದೂ ನಿಶ್ಚೈಸಲಾಯಿತು. ರಾಷ್ಟ್ರ ಗೀತೆಗಳ ಅಚ್ಚುಮಾಡಿಸಿದ ಪ್ರತಿಗಳನ್ನು ಸ್ಪರ್ಧಿಸುವವರಿಗೆ ಉಚಿತವಾಗಿ ಕೊಡಲಾಗುವುದು. ತಿಲಕ ಜಯಂತಿಯು ಮಣಿಪಾಲ ಹೈಸ್ಕೂಲಿನಲ್ಲಿ ಶ್ರೀ ಉಪೇಂದ್ರ ಪೈಗಳ ಅಧ್ಯಕ್ಷತೆಯಲ್ಲಿ ತಾ. 23ರಂದು ಜರಗಿತು. ಅಧ್ಯಕ್ಷರಿಂದ ಧ್ವಜಾರೋಹಣವಾದ ಮೇಲೆ ಜರಗಿದ ಸಭೆಯಲ್ಲಿ ಶ್ರೀಗಳಾದ ಬಿ. ಶ್ಯಾಮರಾಯ ಶೆಟ್ಟಿ, ಯು. ವಾಸುದೇವಾಚಾರ್, ಕೆ. ಸರ್ವೋತ್ತಮ ಶೆಟ್ಟಿ ಮೊದಲಾದವರು ತಿಲಕರ ಜೀವನ ಚರಿತ್ರೆಯ ಕುರಿತು ಮಾತನಾಡಿದರು. ಅಧ್ಯಕ್ಷರು ತಿಲಕರ ಧೈರ್ಯಸ್ಥೈರ್ಯಗಳನ್ನೂ ಅವರು ಹಾಕಿಕೊಟ್ಟ ಆದರ್ಶವನ್ನೂ ವಿವರಿಸಿದರಲ್ಲದೆ ತಿಲಕರ ಪ್ರತಿಮೆಯೊಂದನ್ನು ಶಾಲೆಗೆ ಉಚಿತವಾಗಿ ಕೊಡುವುದಾಗಿ ಸಾರಿದರು.

ಕಾಸರಗೋಡು—ಲೋಕ ಸಹಾಯಕ ಸೇನಾ ತರಬೇತಿ— ಭಾರತ ಸರಕಾರವು, ಪ್ರಕೃತ ಜ್ಯಾರಿಯಲ್ಲಿರುವ 'ಆಕ್ಸಿಲಿಯರಿ ಟರಿಟೋರಿಯಲ್ ಫೋರ್ಸ'ನ್ನು ಬರ್ಖಾಸ್ತುಗೊಳಿಸಲು ನಿರ್ಧರಿಸಿ ಆದರ ಬದಲಿಗೆ 'ಲೋಕ ಸಹಾಯಕ ಸೇನಾ' ಎಂಬ ಹೊಸ ವಿಭಾಗವೊಂದನ್ನು ಸೃಷ್ಟಿಸಿ ಅದಕ್ಕೆ ಅಧಿಕ ಜನರಿಗೆ ಪ್ರಾಥಮಿಕ ಮಿಲಿಟರಿ ತರಬೇತಿಯನ್ನು ಕೊಡಿಸಲು ಆಲೋಚಿಸಿದೆ. ಹಿಂದೆ ಶಾಲಾ ಕಾಲೇಜುಗಳಲ್ಲಿ ಕೊಡಲಾಗುತ್ತಿದ್ದ ಆಕ್ಸಿಲಿಯರಿ ಸೇನಾ ತರಬೇತಿಯ ಕ್ರಮಗಳನ್ನು ಅನುಸರಿಸಿ ಈ ಸೇನಾ ವಿಭಾಗಕ್ಕೆ ಸಾಮಾನ್ಯವಾಗಿ ಗುಂಡುಹಾರಿಸುವಿಕೆ, ಫೀಲ್ಡ್ ಇಂಜಿನಿಯರಿಂಗ್ ವಿದ್ಯಾಭ್ಯಾಸ, ಪ್ರಥಮ ಚಿಕಿತ್ಸೆ ಆರೋಗ್ಯಶಾಸ್ತ್ರ, ಸಾಮಾನ್ಯ ಕವಾಯತು, ಶಾರೀರಿಕ ವ್ಯಾಯಾಮ, ಗುಡಾರ ನಿರ್ಮಾಣ ಇತ್ಯಾದಿ ವಿಷಯಗಳಲ್ಲಿ ತಾ. 14—8—56ರಿಂದ 14—9—56ರ ವರೆಗೆ ಕಾಸರಗೋಡಿನ ಶಿಬಿರದಲ್ಲಿ 18ರಿಂದ 40 ವರ್ಷಗಳೊಳಗಿನ ಪ್ರಾಯದ ಯುವಕರಿಗೆ ಈ ಶಿಕ್ಷಣವನ್ನು ಕೊಡಲಾಗುವುದು.

ಈ ತರಬೇತಿಯನ್ನು ಪಡೆಯಲಿಷ್ಟವುಳ್ಳ ಉಮೇದ್ವಾರರು ಕಾಸರಗೋಡು ತಹಶೀಲ್ದಾರರವರಿಗೆ ತಮ್ಮ ಹೆಸರು, ಹೆತ್ತವರ ವಿಳಾಸ, ಪ್ರಾಯ ಇತ್ಯಾದಿ ವಿವರಗಳನ್ನು ನಮೂದಿಸಿ ಅರ್ಜಿಗಳನ್ನು ಕಳುಹಿಸಿ ಕೊಡತಕ್ಕದ್ದು.

ಬೆಂಗಳೂರಿನ ಹೆಡ್ ಕ್ವಾರ್ಟರ್ಸ್ ರಿಕ್ರುಟಿಂಗ್ ಅಫೀಸರರು ಕಾಸರಗೋಡಿನಲ್ಲಿ ಆಗೋಸ್ತು ತಾ 10ರಿಂದ17ರ ತನಕ ಮೊಕ್ಕಾಂ ಮಾಡಿ ಲೋಕ ಸಹಾಯಕ ಸೇನೆಗೂ, ಸೈನ್ಯಕ್ಕೂ ಉಮೇದ್ವಾರರನ್ನು ಆರಿಸಾಯಿಸುವರು.

ನಿಡ್ಡೋಡಿ— ತಾ. 11ರಲ್ಲು ನಿಡ್ಡೋಡಿ ಶ್ರೀ ಬಾಪೂಜಿ ಶಾಲಾ ವಠಾರದಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾವ್, ಅವರು ವನಮಹೋತ್ಸವವನ್ನು ನೆರವೇರಿಸಿ ಅಲ್ಲಿಂದ ಅದೇ ಗ್ರಾಮದ ಚಂದ್ರ, ಟಿ. ಪಂಡಿತರ ದರ್ಕಾಸ್ತಿಗೆ ಬಂದು ಅಲ್ಲಿಯೂ ಹಲವು ಜನರ ಕೂಡುವಿಕೆಯಿಂದ ವನಮಹೋತ್ಸವ ಕಾರ್ಯಕ್ರಮವನ್ನು ಪೂರೈಸಿದರು.

ಓಮ ಪದವು— ಸ್ಥಳೀಯ ಹಾ. ಎ. ಶಾಲೆಯ ಹೊಸ ಕಟ್ಟಡವನ್ನು ತಾ. 15ರಲ್ಲಿ ಜಿಲ್ಲಾಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಉದ್ಘಾಟಿಸಿದರು. ಹಾ. ಎ. ತರಗತಿಯನ್ನು ಶ್ರೀ ಎಚ್. ನರಸಿಂಹನವರು ಉದ್ಘಾಟಿಸಿದರು. ಶ್ರೀಮತಿ ಶಾರದಾ ಬಾಯಿ ಕೊಂಬ್ರಬೈಲು, ಅವರು ದಾನವಿತ್ತ ಪುಸ್ತಕಗಳನ್ನು ಅಧ್ಯಕ್ಷರು ವಿತರಣೆಮಾಡಿದರು.

ತೋನ್ಸೆ— ಶ್ರೀ ಗಜಾನನ ಬಿಲ್ಲವರ ಸೇವಾಸಂಘದ ನೂತನ ಕಟ್ಟಡದ ಉದ್ಘಾಟನೆಯು ತಾ. 18ರಲ್ಲ ರಾ. ಬ. ಎನ್. ಎಸ್. ಸುವರ್ಣ, ಎಮ್. ಎಲ್. ಎ. ಅವರಿಂದ ಶಾಸ್ತ್ರೀಯರೀತ್ಯಾ ನಡೆಯಿತು. ರಿಟಾಯರ್ಡ್ ಸಬ್ ರಿಜಿಸ್ಟ್ರಾರ್ ಶ್ರೀ ಎನ್. ಕಾಳಪ್ಪ ಪತನ್ನರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಪಡುಬಿದ್ರಿ— ಇದೇ ತಾ. 15ರಂದು ಕಾಡಿಪಟ್ನ ಭಗಿನೀ ಸಮಾಜದ ಉದ್ಘಾಟನೆಯು ಶ್ರೀಮತಿ ಪ್ರೇಮಾ ಎ. ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಕು. ವಿಮಲಾ ಶ್ರೀಯಾನರು ಸ್ವಾಗತಿಸಿದ ಮೇಲೆ ಶ್ರೀ ಶಿವಣ್ಣ ಹೆಗ್ಡೆಯವರು ಸಭೆಯ ಉದ್ದೇಶವನ್ನು ನಿವೇದಿಸಿದರು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ., ಸಿ. ಹಯಗ್ರೀವ ಆಚಾರ್ಯ, ಶ್ರೀಮತಿ ಸೀತಾ ವಿ. ಕರ್ಕೇರ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು. ಅಧ್ಯಕ್ಷೆಯರು ಭಾಷಣಮಾಡಿ ಪುರುಷರು ಭಗಿನಿಯರ ಏಳ್ಗೆಗೆ ಸಹಕಾರನೀಯಬೇಕೆಂದೂ, ಆಯಾಯ ಜಾತೀಯ ಕಸುಬಿನಲ್ಲಿಯೇ ನವ ಸುಧಾರಣೆಯಾಗಬೇಕೆಂದೂ ಹೇಳಿದರು.

(೫ನೇ ಪುಟದಿಂದ)

ಮಸೂದೆಯ ಅಂಗೀಕಾರ

ಕೆಲವು ಶಾಬ್ದಿಕ ಮಾರ್ಪಾಡುಗಳನ್ನು ಮಸೂದೆಯ ದ್ವಿತೀಯ ವಾಚನ ಕಾಲದಲ್ಲಿ ಸ್ವೀಕರಿಸಲಾಯಿತು. ತೃತೀಯ ವಾಚನ ಕಾಲದಲ್ಲಿ ಮಾತನಾಡುತ್ತಾ ಶ್ರೀ ಅತ್ಲೇಕರರು ಅಣ್ಣ, ಅಜ್ಜ, ಮುಂತಾದವರು ವಾತ್ಸಲ್ಯದ ಕಾರಣದಿಂದ ಅಪ್ರಾಪ್ತ ಹಿಂದುವಿನ ಸಂರಕ್ಷಣೆಯನ್ನು ಮಾಡಬಲ್ಲರೆಂಬ ವಿಷಯಕ್ಕೆ ಮಸೂದೆ ಗಮನನೀಯದಿರುವುದನ್ನು ಶೋಚನೀಯವೆಂದು ಕರೆದರು. ಶ್ರೀ ಟೇಕಚಂದರು ಪ್ರತಿ ಸಂದರ್ಭದಲ್ಲಿ ನ್ಯಾಯಾಲಯದ ಪೂರ್ವಾನುಮತಿಯನ್ನು ಪಡೆವೇ ಅಪ್ರಾಯಸ್ಥ ಹಿಂದುವಿನ ಆಸ್ತಿಯ ಮಾರಾಟ ಮುಂತಾದ ಕೆಲಸಗಳನ್ನು ನಡೆಸುವುದೆಂದರೆ ಸಮಯ ಮತ್ತು ಹಣ ಎರಡೂ ಹಾಳು ಎಂದು ದೂರಿದರು.

ಮಂತ್ರಿಗಳು ಕೊನೆಯ ಉತ್ತರವನ್ನೀಯುತ್ತಾ ಮಸೂದೆಯು ಸದ್ಗೃಹಸ್ಥನಾದ ಅಣ್ಣ, ಮುಂತಾದವರಿಗೆ ವ್ಯವಹಾರ ಸಂಬಂಧದ ಸಂರಕ್ಷಕರೆಂಬ ಮನ್ನಣೆಯನ್ನು ಕೊಡುವುದಕ್ಕೆ ಎಳ್ಳಷ್ಟೂ ಆತಂಕವಿಲ್ಲವೆಂದೂ ಆದರೆ ವ್ಯವಹಾರ ಸಂಬಂಧದ ಸಂರಕ್ಷಕನೆಂಬ ನೆಲೆಯಿಂದ ಯಾರೋ ದೂರದ ಸಂಬಂಧಿ, ಸ್ನೇಹಿತ ಅಥವಾ ಮೂರನೇಯವನೊಬ್ಬನಿಗೆ ಅಪ್ರಾಯಸ್ಥನ ಆಸ್ತಿಪಾಸ್ತಿಗಳ ವ್ಯವಹಾರ ನಡೆಸಗೊಡುವುದು ಇಷ್ಟವಲ್ಲವೆಂದೂ ಮಸೂದೆ ಈ ತತ್ವವನ್ನೆತ್ತಿ ಹಿಡಿದಿದೆಯೆಂದೂ ಸಮಜಾಯಿಷಿಯಿತ್ತರು.

INDEPENDENCE DAY SPECIAL 1956

'NAVAYUGA' Popular Kannada Weekly, as usual, is going to have its **'Independence Day Special Supplement'** on Aug. 15 with all the possible special features and articles from reputed persons of All Karnataka importance.

A few pages are reserved for the benefit of the advertisers. The size of the Special is the same as that of the ordinary weekly issue.

Book your order for space immediately.

MANAGER,
NAVAYUGA,
Post Box No. 22, Udipi, S. K.

PT. AMBLAY RAMASWAMIER'S 98 Yrs. Renowned Specifics

— SANTHANA SINDHURA —

(Pkts. for Women) Roots out the deadly STOMACH-PAIN followed by HEAD-ACHE, VOMITING, BODILY PAIN etc. arising during PERIODS, Prevents ABORTIONS, Prepares the way for MOTHERHOOD by ending STERILITY. Price: 12 Pkts. Rs. 6—0—0.

— MADANA VILASA —

(Pills for Men) Reduces EXCESS HEAT, Prevents Wet-dreams, whitish and watery flow in the Urine, Restores VIGOUR, VITALITY and the qualities of a HE-MAN, 15 Pills for 1 month Rs. 7—8—0.

THOUSANDS without CHILDREN 16–18 yrs. after WEDLOCK have become SMILING MOTHERS leading HAPPY LIFE. Use 1 SET Today.

Please send 2½ As. Stamps for CATALOGUE, Price, Etc., mentioning the age of the Couple and History of the Disease.

A. RAMASWAMIER SON & CO.
628, "SANTHANA SINDHURA SADANA"
Hundred Ft. Road, Rice Mill Cross, MYSORE (South India).

ಮಂಗಳೂರು

ದ. ಕ. ಜಿಲ್ಲಾ ಬೋರ್ಡ್ ಸಭೆಯು— ಇದೇ ತಾ. 30ನೆ ಸೋಮವಾರ ಅಪರಾಹ್ನ 2 ಗಂಟೆಗೆ ಬೋರ್ಡಿನ ಕಾರ್ಯಾಲಯದಲ್ಲಿ ಜರಗಲಿರುವುದು. ಬೋರ್ಡಿನ 1955-56ನೆ ವರ್ಷದ ಆಡಳಿತ ವರದಿಯು ಆ ಸಭೆಯಲ್ಲಿ ಮಂಡಿಸಲಾಗುವುದು.

ಕೆನರಾ ಬೇಂಕ್ ಸುವರ್ಣ ಮಹೋತ್ಸವದ— ನೆನಪಿಗಾಗಿ ಬೇಂಕಿನ ಎಲ್ಲಾ ಪಾಲುದಾರರಿಗೂ ಪಾಲುವೊಂದಕ್ಕೆ ರೂಪಾಯಿ 2-8-0 ರಂತೆ ತೆರಿಗೆಯಿಲ್ಲದ ವಿಶೇಷ ಡಿವಿಡೆಂಟನ್ನೂ, ನೌಕರರಿಗೆ 20 ದಿನದ ಸಂಬಳದಷ್ಟು ಬೋನಸ್ಸನ್ನೂ ಕೊಡಲು ಡೈರೆಕ್ಟರರು ನಿರ್ಧರಿಸಿರುತ್ತಾರೆ.

ನಗರ ಸಭೆಯ 1955-56ನೇ ವರ್ಷದ ಆಡಳಿತ ವರದಿ— ತಾ. 20ರಲ್ಲಿ ಮಂಗಳೂರು ನಗರ ಸಭೆಯ ವಿಶೇಷ ಸಭೆ ಕೂಡಿ ಜರಗಿದಾಗ ಕಮಿಶನರ್ ಶ್ರೀ ವಿ. ಬಾಲಗಂಗಾಧರನ್ ಅವರು 1955-56ನೇ ವರ್ಷದ ಆಡಳಿತ ವರದಿಯನ್ನು ಮಂಡಿಸಿದರು ಅದು ಮಾನ್ಯವಾಯಿತು. ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸಭಾಧ್ಯಕ್ಷತೆ ವಹಿಸಿದ್ದು, ಹಲವು ಸದಸ್ಯರು ವರದಿ ವಿಮರ್ಶೆಯಲ್ಲಿ ಭಾಗವಹಿಸಿದ್ದರು.

ವರದಿಯ ಮುಖ್ಯಾಂಶಗಳು:— ವರದಿ ವರ್ಷದಲ್ಲಿ ನಗರಸಭೆಯ ವಿಸ್ತೀರ್ಣವು 1,152 ಚದರ ಮೈಲುಗಳಷ್ಟಿವೆ. ಜನಸಂಖ್ಯೆ 1,19,011 ಇದೆ. ವರದಿವರ್ಷದಲ್ಲಿ 29 ಮೈಲ ಕಚ್ಛ ಸೇರಿದೆ. ನಗರಾಡಳಿತಕ್ಕೆ ಸೇರಿದ ಎಲ್ಲಾ ಹೆದ್ದಾರಿಗಳು ಮತ್ತು ಪ್ರಾಮುಖ್ಯವಾದ ರಸ್ತೆಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಲಾಗಿದೆ. ವರ್ಷಾಂತ್ಯದಲ್ಲಿ ವಿದ್ಯುದ್ದೀಪಗಳ ಸಂಖ್ಯೆ 1624ರಿಂದ 1728ಕ್ಕೇರಿತು. ಸೀಮೆ ಎಣ್ಣೆಯ ಬೀದಿ ದೀಪಗಳ ಸಂಖ್ಯೆಯೂ 651ಇತ್ತು. ನಗರಸಭೆಯ ಕ್ಷೇತ್ರದಲ್ಲಿ ಶಾಲಾ ಪ್ರಾಯದ 9411ಹುಡುಗರೂ 10093 ಹುಡುಗಿಯರೂ ಇದ್ದಾರೆ. ಈ ಪೈಕಿ ಶಿಕ್ಷಣ ಸೌಲಭ್ಯ ದೊರಕದ ಶಾಲಾ ಪ್ರಾಯದ ಮಕ್ಕಳ ಸಂಖ್ಯೆ 2066 ಆಗಿದೆ. ವರದಿ ವರ್ಷದಲ್ಲಿ ಮಕ್ಕಳ ಕ್ರೀಡಾ ಕೇಂದ್ರಗಳನ್ನು ಹೊಂದಿರುವ 5 ರೇಡಿಯೋ ಪೆವಿಲಿಯನ್‌ಗಳನ್ನು ರಚಿಸಲಾಗಿದೆ. ನಗರದ ಬೇರೆ ಬೇರೆ ಸ್ಥಳಗಳಲ್ಲಿ 10 ವಾಚನಾಲಯಗಳನ್ನು ನಡೆಸಿಕೊಂಡು ಬರಲಾಗಿತ್ತು. ವರದಿವರ್ಷದಲ್ಲಿ 4670 ಜನನಗಳಾಗಿವೆ. 1576 ಮರಣಗಳಾಗಿವೆ.

ವರದಿವರ್ಷದಲ್ಲಿ ನಗರದ ವಿವಿಧ ಪ್ರಾಯದ 36606 ಜನರನ್ನು ಪರಿಶೀಲಿಸಲಾಗಿ, ಈ ಪೈಕಿ 102 ಜನರಲ್ಲಿ ಆನೆಕಾಲು ರೋಗದ ಬಾಹ್ಯ ಚಿಹ್ನೆಯಿತ್ತೆಂದೂ, 374 ಮಂದಿಯ ರಕ್ತದಲ್ಲಿ ಆನೆಕಾಲು ರೋಗಾಣುಗಳು ಇವೆಯೆಂದೂ ಕಂಡುಬಂದಿದೆ. ಸಾಧ್ಯವಿದ್ದ ಮಟ್ಟಿಗೆ ರೋಗದ ಬಾಧೆ ಇರುವವರಿಗೆಲ್ಲಾ ಹೆಟ್ರಝಾನ್ ಎಂಬ ಮಾತ್ರೆಯನ್ನು ಹಂಚಲಾಗಿದೆ. ಆನೆಕಾಲು ರೋಗ ನಿರೋಧಕ ಕಾರ್ಯಕ್ರಮಕ್ಕೆ ನಗರಸಭೆಗೆ ವರದಿವರ್ಷದಲ್ಲಿ ರೂಪಾಯಿ 40461 ವೆಚ್ಚ ತಗಲಿದೆ.

ಮಂಗಳೂರು ನಗರದ ನಳ್ಳಿನೀರು ಯೋಜನೆಯ ಕಾರ್ಯ ನಿರ್ವಹಣೆ ಬಗ್ಗೆ ರೂ. 48,04,293 ವೆಚ್ಚವಾಗಿದೆ. 1957ರ ಅಂತ್ಯದೊಳಗೆ ಈ ಯೋಜನೆ ಪೂರ್ಣಗೊಳ್ಳುವ ನಿರೀಕ್ಷೆಯಿದೆ. ಭೂಗತ ಚರಂಡಿ ಯೋಜನೆಯು ಸರಕಾರದ ಪರಿಶೀಲನೆಯಲ್ಲಿದೆ.

ನಗರಸಭೆಯ ಆದಾಯವು ಪೂರ್ಣ ತೃಪ್ತಿಕರವಿದೆ. ವರದಿವರ್ಷದಲ್ಲಿ ಒಟ್ಟು ಉತ್ಪತ್ತಿಯು ರೂಪಾಯಿ 11,16,386 ಆಗಿದೆ. ವರ್ಷಾರಂಭದ ಶಿಲ್ಕು ರೂಪಾಯಿ 19,27,875 ಇದ್ದುದು ವರ್ಷಾಂತ್ಯಕ್ಕೆ ರೂ. 12,90,740 ಆಗಿದೆ.

ದ. ಕ. ಪ್ರಕಾಶಕರ ಸಂಸ್ಥೆ—ದಕ್ಷಿಣ ಕನ್ನಡ ಪ್ರಕಾಶಕರ ಸಂಸ್ಥೆಯ ಮಹಾಸಭೆಯು ಅಧ್ಯಕ್ಷ ಶ್ರೀ ಯು ಗೋಪಾಲ ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ಜರಗಿತು. ಪಾಠ್ಯಪುಸ್ತಕ ಭಾಷೆಗಳ ಪುಸ್ತಕ ವಿಶ್ವಸ್ತ ನಿಧಿಯವರು ರಚಿಸಿದ ದಕ್ಷಿಣ ಭಾರತ ಪುಸ್ತಕ ಕೈಗಾರಿಕೆ ಸಮಿತಿಯವರು ತಮ್ಮ ಯೋಜನೆ ಹಾಗೂ ನಿಯಮ ರೂಢಿಗಳನ್ನು ಅವಸರದಿಂದಲೂ ಮುಂದಾಗಿ ಯೋಚಿಸದ ತಂತ್ರದಿಂದಲೂ ರಚಿಸಿದ್ದು ಅದರಲ್ಲಿನ ಹಲವಾರು ವಿಚಾರಗಳನ್ನು ಸರಿಪಡಿಸದಿದ್ದಲ್ಲಿ ದ. ಕ. ಪ್ರಕಾಶಕರ ಸಂಸ್ಥೆಯ ಸದಸ್ಯರು ದಕ್ಷಿಣಭಾರತ ಪುಸ್ತಕ ಕೈಗಾರಿಕೆ ಸಮಿತಿಗೆ (ಬುಕ್ ಇಂಡಸ್ಟ್ರಿ ಕೌನ್ಸಿಲ್ ಒಫ್ ಸೌತ್ ಇಂಡಿಯಾ) ಸೇರಲಾಗುವುದಿಲ್ಲವೆಂದು ನಿರ್ಣಯಮಾಡಲಾಯಿತು.

'ಲೋಕ್ ಹೀಡ್ಸ್' ಸಂಚೆವಾಷಿಕ ಔದ್ಯೋಗಿಕ ವಿಸ್ತರಣೆ— ರೋಟರಿ ಕ್ಲಬ್ಬಿನ ಸಭೆಯು ತಾ. 19ರಲ್ಲಿ ಸಿ. ಪಿ. ಸಿ. ಕಂಪೆನಿ ಸಭಾಭವನದಲ್ಲಿ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ವಿಶ್ವನಾಥ ಕಾಮತರು ವರದಿವಾಚನಮಾಡಿದರು. ಬಳಿಕ ಅಮೇರಿಕದ ತಾಂತ್ರಿಕ ಸಹಕಾರ ಮಂಡಳಿಯ ಇಂಜಿನಿಯರ್ ಮಿ. ಇ. ಎಚ್. ಹೆಫ್ ಬರ್ನರು 'ಲೋಕ್ ಹೀಡ್ಸಿನ ಪಂಚವಾರ್ಷಿಕ ಔದ್ಯೋಗಿಕ ವಿಸ್ತರಣೆಯ ಕುರಿತು ಮಾತನಾಡುತ್ತಾ, 'ಲೋಕ್ ಹೀಡ್ಸ್ ವಿಮಾನ ಕಾರ್ಖಾನೆಯು 1939ರಲ್ಲಿ ಸ್ಥಾಪಿಸಲ್ಪಟ್ಟಿದ್ದು 1944ರಲ್ಲಿ 88,000 ಕಾರ್ಮಿಕರು ಕೆಲಸಮಾಡುತ್ತಿದ್ದು ದಿನವೊಂದರ 40 ವಿಮಾನಗಳನ್ನು ತಯಾರಿಸಲು ಶಕ್ತವಾಯಿತು ಎಂದರು. ಬಳಿಕ ಸಭೆಯಲ್ಲಿ ಅತಿಥಿಯಾಗಿದ್ದ, ಅಮೇರಿಕದ ಇಂಟರ್ ನೇಶನಲ್ ಶಿಪ್ಪಿಂಗ್ ಕೋರ್ಪರೇಶನಿನ ಪ್ರಮುಖರಾದ ಮಿ. ಎರಿನ್ ಶಮನ್‌ರವರು ಮೀನುಗಾರಿಕೆ ಕುರಿತು ಮಾತನಾಡಿದರು.

ಪುಸ್ತಕ ಭಂಡಾರದ ಉದ್ಘಾಟನೆ— ಕೊಡಿಯಾಲಬೈಲ್ ಡೆಮೊಕ್ರೆಟಿಕ್ ಯೂತ್ ಲೀಗಿನ ನೇತೃತ್ವದಲ್ಲಿ ತಾ 15ರಲ್ಲು ಶ್ರೀ ಪಿ. ಕೆ ನಾರಾಯಣನವರ ಅಧ್ಯಕ್ಷತೆಯಲ್ಲಿ ಪುಸ್ತಕಭಂಡಾರವೊಂದು ಶ್ರೀ ಎಚ್. ಮನಮೋಹನ ಕಾಮತರಿಂದ ತೆರೆಯಲ್ಪಟ್ಟಿತು. ಶ್ರೀಗಳಾದ ಕೆ. ಟಿ. ಭಂಡಾರಿ, ಬಿ. ರಾಮಚಂದ್ರ ರಾವ್ ಮೊದಲಾದವರು ಸಾಂದರ್ಭಿಕ ಮಾತುಗಳನ್ನಾಡಿದರು.

ಪ್ರಿನ್ಸಿಪಾಲರ ನೇಮಕ—ಈಗ ರಜೆಯಲ್ಲಿರುವ ಮಂಗಳೂರು ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣನ್‌ರವರು ಪಾಲ್ಘಾಟಿನ ಗವರ್ನಮೆಂಟ್ ವಿಕ್ಟೋರಿಯಾ ಕಾಲೇಜಿನ ಹಂಗಾಮಿ ಪ್ರಿನ್ಸಿಪಾಲರಾಗಿ ನೇಮಕಹೊಂದಿದ್ದು ಅವರ ಸ್ಥಳದಲ್ಲಿ ಹಂಗಾಮಿ ಪ್ರಿನ್ಸಿಪಾಲರಾಗಿ ಶ್ರೀ ಸಿ. ಪಿ. ಲೋಬೋರವರು ನೇಮಿಸಲ್ಪಟ್ಟಿರುವರು.

ಆಂಧ್ರ ಜನಸಂಘದ ನಾಯಕ ಶ್ರೀ ಗೋಪಾಲರಾವ್ ಠಾಕೂರರು ತಾ. 22ರಲ್ಲಿ ಸ್ಥಳೀಯ ಸುದ್ದಿಗಾರರೊಡನೆ ಮಾತನಾಡುತ್ತಾ, ಭಾರತದಲ್ಲಿ ಭಾರತೀಯ ಜನಸಂಘವು ಮಾತ್ರವೇ ಒಂದು ಸಮರ್ಥವಾದ ಪ್ರತಿಪಕ್ಷವಾಗಬಲ್ಲುದು. ಏಕೆಂದರೆ, ಅದು ಇತರ ರಾಜಕೀಯ ಪಕ್ಷಗಳಂತೆ, ರಾಷ್ಟ್ರನಿರ್ಮಾಣ ಕಾರ್ಯಕ್ಕಾಗಿ, ಇತರ ರಾಷ್ಟ್ರಗಳ ಬುದ್ಧಿ ಶಕ್ತಿಯನ್ನೂ ತತ್ವವನ್ನೂ ಹಾಗೂ ಜೀವನಕ್ರಮವನ್ನೂ ಎರವಾಗಿ ಪಡೆಯುವ ಹಂಬಲವನ್ನಿಟ್ಟುಕೊಂಡಿಲ್ಲ. ನಮ್ಮ ದೇಶದ ಉದ್ಧಾರ ನಮ್ಮ ಉಚ್ಚ ಸಂಸ್ಕೃತಿಯ ಆಧಾರದಲ್ಲಿ, ನಮ್ಮ ಸ್ವಶಕ್ತಿಯಿಂದಲೇ ಆಗಬೇಕೆಂಬುದು ಭಾರತೀಯ ಜನಸಂಘದ ಧ್ಯೇಯ. ಭಾರತೀಯ ಜನಸಂಘವು ಮಾತ್ರವೇ ಪೂರ್ಣ ರಾಷ್ಟ್ರೀಯವಾದ ತತ್ವಗಳನ್ನು ಇಟ್ಟುಕೊಂಡಿರುವಂತಹದ್ದಾಗಿದೆ ಎಂದರು.

ಜಿಲ್ಲಾ ರಾಜಕೀಯ ಪರಿಷತ್ತು- ಈ ಸಂಬಂಧದ ಔದ್ಯೋಗಿಕ ವಿಚಾರ ಗೋಷ್ಠಿ ಕಮಿಟಿಯ ಸಭೆಯೊಂದು ಶ್ರೀ ವಿ. ಯಸ್. ಕುಡ್ವರ ಅಧ್ಯಕ್ಷತೆಯಲ್ಲಿ ತಾ. 22ರಲ್ಲಿ ಜರಗಿ ಗೇರು ಬೀಜ ಉದ್ಯಮ, ಹಂಚಿನ ಕೈಗಾರಿಕೆ, ಮೀನುಗಾರಿಕೆ, ಮಧ್ಯಮ ತರಗತಿಯ ಕೈಗಾರಿಕೆ, ಇಂಜಿನಿಯರಿಂಗ್ ಕೈಗಾರಿಕೆ ವಸ್ತ್ರಕೈಗಾರಿಕೆ ಮೊದಲಾದವಿಚಾರಗೋಷ್ಠಿಗಳನ್ನು ನೆರವೇರಿಸಲು ನಿರ್ಣಯಿಸಲಾಯಿತು.

ತಿಲಕ ಜಯಂತಿ—ಆಧುನಿಕ ಭಾರತದ ಯುಗ ಪುರುಷರಲ್ಲೊಬ್ಬರೂ ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು ಎಂದು ಜನಾಂಗದಲ್ಲಿ ಸ್ವಾತಂತ್ರ್ಯ ಸ್ಫೂರ್ತಿಯನ್ನು ಹುಟ್ಟಿಸಿದವರೂ ಆದ ಲೋಕಮಾನ್ಯ ಬಾಲ ಗಂಗಾಧರ ತಿಲಕರ ಜನ್ಮ ದಿನೋತ್ಸವವು ತಾ. 23ರಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಯಂ. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಕೆ. ಆರ್. ಆಚಾರ್ಯರ ಭಾಷಣವಾಯಿತು. ಬೆಸೆಂಟ್ ಬಾಲಿಕಾ ಪಾಠ ಶಾಲೆಯಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಗೀತಾ ಜಯಂತಿ ಜರಗಿ ಶ್ರೀ ಪಿ. ಕೆ. ನಾರಾಯಣರ ಭಾಷಣವಾಯಿತು. ಭಾರತ ರಕ್ಷಾ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಗಣಪತಿ ಹೈಸ್ಕೂಲಿನ ಸಭಾ ಭವನದಲ್ಲಿ ಡಾ. ಯಂ. ಉಮೇಶರಾಯರ ಅಧ್ಯಕ್ಷತೆಯಲ್ಲಿ ತಿಲಕ ಜನ್ಮದಿನೋತ್ಸವವು ಆಚರಿಸಲ್ಪಟ್ಟು ಡಾ. ಎಂ. ಸಿ. ಶಾಸ್ತ್ರಿ, ಶ್ರೀಗಳಾದ ಎ. ಕೃಷ್ಣ ಸೆಟ್ಟಿ, ಎಚ್. ಮನಮೋಹನ ಕಾಮತ್ ಮೊದಲಾದವರ ಭಾಷಣಗಳಾದುವು.

ತ್ರೈಮಾಸಿಕ ಸಭೆ— ದಕ್ಷಿಣ ರೈಲ್ವೆಯ ಸ್ಥಳೀಯ ಸಮಿತಿಯ ತ್ರೈಮಾಸಿಕ ಸಭೆಯು ತಾ. 18ರಲ್ಲಿ ಕೆನರಾ ಚೇಂಬರ್ ಆಫ್ ಕಾಮರ್ಸಿನ ಕಾರ್ಯಾಲಯದಲ್ಲಿ ಪೋದನೂರಿನ ಡಿಸ್ಟ್ರಿಕ್ಟ್ ಟ್ರಾಫಿಕ್ ಸುಪರಿಂಟೆಂಡೆಂಟ್ ಶ್ರೀ ಕೆ. ಸಿ. ಚಾಂಡಿಯವರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ. ಜಿಲ್ಲೆಯ ಮತ್ತು ಮಂಗಳೂರಿನಿಂದ ಬೊಂಬಾಯಿಗೆ ಬಸ್ಸು ಮೂಲಕ ಪ್ರಯಾಣಿಸುವ ಜನತೆಯ ಸೌಕರ್ಯಕ್ಕಾಗಿ, ಬೆಂಗಳೂರು, ಪೂನಾ ಎಕ್ಸ್‌ಪ್ರೆಸ್ಸಿಗೆ ಪ್ರತ್ಯೇಕ ಗಾಡಿಯನ್ನು ಕಡೂರಿನಲ್ಲಿ ಜೋಡಿಸಲಾಗುತ್ತಿದೆ. ಮಂಗಳೂರು-ಕೊಯಮುತ್ತೂರು ಎಕ್ಸ್‌ಪ್ರೆಸ್ ಟ್ರೈನನ್ನು ಪಳ್ಳಿಕೆರೆ, ಕೋಟಿಕುಲಂ ಸ್ಟೇಶನುಗಳಲ್ಲಿ ನಿಲ್ಲಿಸುವ ವ್ಯವಸ್ಥೆ ಮಾಡುವಂತೆ ಮೇಲಧಿಕಾರಿಗಳಿಗೆ ಶಿಫಾರಸು ಮಾಡಲಾಗಿದೆ; ಲೋಕಲ್ ಹಂಡ್ರೆಡ್ ಪ್ಯಾಸೆಂಜರರನ್ನು ಕಾಸರಗೋಡಿನವರೆಗೆ ಮುಂದುವರಿಸಲು ಮೇಲಧಿಕಾರಿಗಳನ್ನು ಪುನಹ ವಿನಂತಿಸಲಾಗಿದೆ; ಮಂಗಳೂರು ಮದ್ರಾಸ್ ಎಕ್ಸ್‌ಪ್ರೆಸ್ ರೈಲಿಗೆ ಮಂಗಳೂರಿನಿಂದ ಕಲ್ಲಿಕೋಟೆ ತನಕ ಮೂರನೆ ತರಗತಿಯ ಗಾಡಿಯೊಂದನ್ನು ಜೋಡಿಸುವ ಸೂಚನೆಯನ್ನು ಪರಿಶೀಲಿಸಲಾಗುವುದು; ಮಂಗಳೂರು ರೈಲ್ವೆ ಸ್ಟೇಶನಿನಲ್ಲಿ 25 ಸ್ಯೆಕಲುಗಳನ್ನಿಡುವ ಸೌಕರ್ಯಕ್ಕಾಗಿ ರೂಪಾಯಿ 3000 ವೆಚ್ಚದಲ್ಲಿ ಸ್ಯೆಕಲ್ ಸ್ಟೇಂಡನ್ನು ಕಟ್ಟಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಮಂಗಳೂರು ಮುನಿಸಿಪಲ್ ಕೆಲಸಗಾರರ ಮಹಾ ಸಭೆಯು—ತಾ 18ರಲ್ಲಿ ಶ್ರೀ ಎ. ಶಾಂತಾರಾಮ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಆಹಾರ ಪದಾರ್ಥಗಳ ಬೆಲೆ ಏರಿಕೆ ವಿರೋಧಿಸಿ ಕೂಡಲೇ ನ್ಯಾಯಬೆಲೆಯ ಅಕ್ಕಿ ಅಂಗಡಿಗಳನ್ನು ತೆರೆಯುವಂತೆ ಸರಕಾರವನ್ನು ಒತ್ತಾಯಿಸುವ ನಿರ್ಣಯವಾಯಿತು. ಡ್ರೆಸ್, ಸಾಬೂನು ಮತ್ತು ಪಿನೋಲಿ ಕೂಡಲೇ ನೀಡಬೇಕೆಂದು ನಗರ ಸಭೆಯನ್ನು ಒತ್ತಾಯಿಸುವ ಇನ್ನೊಂದು ನಿರ್ಣಯವಾಯಿತು. ಶ್ರೀ ಎ. ಕೃಷ್ಣ ಶೆಟ್ಟರು ಮಜೂರರ ಸಂಘಟನೆಯ ಕುರಿತು ಭಾಷಣವಿತ್ತರು.

(೫ನೇ ಪುಟದಿಂದ)

ಹೇಗೆ ಬಹಳ ಕಷ್ಟಕರವಾದ ಮತ್ತು ದೊಡ್ಡ ಮೊತ್ತದ ವೆಚ್ಚವು ಅಗತ್ಯವಾದ ಕಾರ್ಯಕ್ರಮವಾಗಿ ಪರಿಣಮಿಸಿದೆಯೋ ಹಾಗೆಯೇ ೧೯೬೫ನೇ ಇಸವಿಯೊಳಗೆ ಹಿಂದೀ ಭಾಷೆಯನ್ನು ಇಂಗ್ಲಿಷಿನ ಸ್ಥಾನದಲ್ಲಿ ಪ್ರತಿಷ್ಠೆಪಿಸಬೇಕೆಂಬ ಛಲವೂ ಊಹಿಸಿದಷ್ಟು ಸುಲಭದಲ್ಲಿ ಈಡೇರಲಾರದು. ಕಾರಣಗಳು ಏನೇ ಇರಲಿ— ಐದು ವರ್ಷಗಳ ಪ್ರಾಥಮಿಕ ಶಿಕ್ಷಣ ಕಾಲದಲ್ಲಿಯೂ ನಮ್ಮ ಮಕ್ಕಳಿಗೆ ಹಿಂದೀ ಭಾಷೆಯ ಲಿಪಿಪರಿಚಯವನ್ನಾದರೂ ಮಾಡಿ ಕೊಡುವ ಏರ್ಪಾಡಿಲ್ಲ! ಇದೊಂದೇ ವಿಷಯದ ಆಧಾರದಿಂದ ಕಾರ್ಯರೂಪದಲ್ಲಿ ಪರಿಣತವಾಗದ ಅತ್ಯುತ್ಸಾಹವು ಯಾರಿಗೂ ಯಾವ ಲಾಭವನ್ನೂ ತರಲಾರದೆಂದು ಮನಗಾಣಬಹುದು.

ಉಪಾಧ್ಯಾಯರು ಬೇಕಾಗಿದ್ದಾರೆ

ಉಡುಪಿ ತಾಲೂಕು ಪೆರ್ಡೂರು ಪಟ್ಟಣದ ಹತ್ತಿರ ಶ್ರೀ ಅನಂತಪದ್ಮನಾಭ ದೇವಸ್ಥಾನದ ಎಲಿಮೆಂಟರಿ ಶಾಲೆಗೆ ಹೆಯರ್ ಎಲಿಮೆಂಟರಿ ಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿದ್ದು ಅನುಭವವುಳ್ಳ ಸೆಕೆಂಡರಿ ಗ್ರೇಡ್ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಇಷ್ಟವುಳ್ಳವರು ತಾ. 31—8—1956ರೊಳಗೆ ಈ ಕೆಳಗೆ ಸಹಿಮಾಡಿದ ಶಾಲಾ ಮೆನೇಜರಿಗೆ ಅರ್ಜಿಯನ್ನು ಕಳುಹಿಸಬಹುದು.

K. B. Shetty.
Manager.
Sri Ananthapadmanabha
Temple Ele School Perdur
ಪೆರ್ಡೂರು, ತಾ. 21-7-1956.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿ:

ದಿ ವಿಜಯ ಬೇಂಕ್ ಲಿಮಿಟೆಡ್
ಸೇಫ್ ಡೆಪೊಸಿಟ್ ವಾಲ್ಟ್
ಮಂಗಳೂರು—3.



ಕ್ರೈಸ್ತ ಮಿಶನರಿಗಳ "ಮತಾಂತರ" ಚಟುವಟಿಕೆಗೆ ಆಕ್ಷೇಪ

(೩ನೇ ಪುಟದಿಂದ)

ಸಮಿತಿಯು ಲಕ್ಷ್ಯವನ್ನು ಆಕರ್ಷಿಸಿದೆ. ಮಿಶನರಿಗಳು ಬಹುಸಂಖ್ಯಾಕರ ಮತಧರ್ಮಗಳ ವಿರುದ್ಧ ಅಪಪ್ರಚಾರವನ್ನು ಹೇಯವಾದ ರೀತಿಯಲ್ಲಿ ನಡೆಸುತ್ತಿದ್ದಾರೆಂದೂ ಸಾರ್ವಜನಿಕ ಶಾಂತಿಯನ್ನೂ ಜನರಲ್ಲಿರುವ ವಿಶ್ವಾಸ ಬುದ್ಧಿಯನ್ನೂ ಕೆಡಿಸುವ ದುರುದ್ದೇಶದಿಂದಲೇ ಇದು ನಡೆದಿದೆಯೆಂದೂ ಸಮಿತಿ ಹೇಳುತ್ತದೆ.

ಮತ ಸ್ವಾತಂತ್ರ್ಯದ ಅರ್ಥ

ನಮ್ಮ ಘಟನೆಯಲ್ಲಿ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಗಿದೆ ಎಂಬುದರಿಂದ ಕ್ರೈಸ್ತ ಮಿಶನರಿಗಳು ಉತ್ತೇಜಿತರಾಗಿರುವಂತೆಯೂ ಕಂಡು ಬಂದಿದೆ ಎಂದು ಸಹ ಸಮಿತಿಯು ತಿಳಿಸುತ್ತದೆ. ಇದಕ್ಕೆ ಉದಾಹರಣೆಯಾಗಿ, ಭಾರತಕ್ಕೆ ಅಮೇರಿಕದ ಮಿಶನರಿಗಳು ಸ್ವಾತಂತ್ರ್ಯೋತ್ತರದಲ್ಲಿ ಹೆಚ್ಚು ಹೆಚ್ಚಾಗಿ ಬರುತ್ತಿರುವುದನ್ನು ಸಮಿತಿಯು ಪ್ರಸ್ತಾಪಿಸಿದೆ. ಹೊಸತಾಗಿ ಸ್ವಾತಂತ್ರ್ಯವನ್ನು ಸಂಪಾದಿಸಿ ತನ್ನ ಪ್ರಜೆಗಳಿಗೆ ಧಾರ್ಮಿಕ ಆಚಾರ ಸ್ವಾತಂತ್ರ್ಯವನ್ನು ನೀಡಿದ ರಾಷ್ಟ್ರಗಳಿಗೆಲ್ಲ ಅಂತಾರಾಷ್ಟ್ರೀಯ ಮಿಶನರಿ ಮಂಡಳವು ತನ್ನ ಪ್ರತಿನಿಧಿಗಳನ್ನು ಅಧಿಕ ಸಂಖ್ಯೆಯಲ್ಲಿ ಕಳುಹಿಸುತ್ತಿದೆ; ಪತ್ರಿಕೆ, ಆಕಾಶವಾಣಿ, ಚಲಚಿತ್ರ ಮತ್ತು ಟೆಲಿವಿಜನುಗಳ ಮಾಧ್ಯಮವನ್ನು ಉಪಯೋಗಿಸಿ ಧರ್ಮಪ್ರಚಾರದ ಹೆಸರಿನಲ್ಲಿ ಇವರು ತಮ್ಮ ದುರುದ್ದೇಶಗಳನ್ನು ಸಾಧಿಸಿಕೊಳ್ಳುತ್ತಿದ್ದಾರೆ ಎಂದು ಸಮಿತಿಯು ತೀರ್ಮಾನಿಸಿದೆ. ನಮ್ಮ ರಾಜ್ಯಘಟನೆಯಲ್ಲಿ ಉಕ್ತವಾದ ಧಾರ್ಮಿಕ ಸ್ವಾತಂತ್ರ್ಯವು ಭಾರತದ ನಾಗರಿಕರಿಗೆ ಮಾತ್ರ ದಯಪಾಲಿಸಲಾದ ಅಧಿಕಾರವಾಗಿದೆಯೆಂದೂ ಬಲಾತ್ಕಾರ, ತಪ್ಪು ವಿಧಾನ ಮತ್ತು ಅನೈತಿಕ ಕ್ರಮಗಳಿಂದ ಮತಾಂತರ ನಡೆಸುವ ವಿಷಯವು ಈ ಸ್ವಾತಂತ್ರ್ಯದಲ್ಲಿ ಅಡಕವಾಗುವುದಿಲ್ಲವೆಂದೂ ಸ್ಪಷ್ಟಪಡಿಸಬೇಕಾಗಿ ಸಮಿತಿಯು ಸೂಚಿಸಿದೆ.

ಪಂಚಶೀಲಗಳ ಭಂಗ

ಧಾರ್ಮಿಕ ಪ್ರಚಾರದ ಮುಸುಕಿನಲ್ಲಿ ನಡೆಯುವ ರಾಜಕೀಯ ಚಟುವಟಿಕೆಯು ರಾಷ್ಟ್ರದ ಭದ್ರತೆಯನ್ನು ವಿಷಮಾವಸ್ಥೆಗೆ ತಳ್ಳುತ್ತದೆ; ವಿದೇಶವೊಂದು ತನ್ನ ದೃಷ್ಟಿಯಲ್ಲಿ ಸರಿಯೆಂದು ತೀರ್ಮಾನಿಸಿದ ಜಾಗತಿಕ ಶಾಂತಿ ಮತ್ತು ನ್ಯಾಯಪಾಲನೆಯ ಉದ್ದೇಶಗಳಿಗನುಗುಣವಾದ ಕಾರ್ಯಕ್ರಮಗಳನ್ನು ನಮ್ಮ ದೇಶದಲ್ಲಿ ನಡೆಯಗೊಡುವುದೆಂದರೆ ಭಾರತದ ಆಂತರಿಕ ವ್ಯವಹಾರದಲ್ಲಿ ಪರಕೀಯರ ಹಸ್ತಕ್ಷೇಪಕ್ಕೆ ಅವಕಾಶವಿತ್ತಂತೆಯೇ ಆಗುತ್ತದೆ; ಪಂಚಶೀಲದ ಉದಾತ್ತ ತತ್ವಗಳಿಗೆ ಇದು ತೀರ ಅಸಂಗತವಾಗಿದೆ ಎಂದು ಸಮಿತಿ ದೃಢವಾಗಿ ಅಭಿಪ್ರಾಯಪಟ್ಟಿದೆ. ಮಿಶನರಿಗಳ ನಿಯಂತ್ರಣದಲ್ಲಿರುವ ಕ್ರೈಸ್ತರ ಮೇಲೆ, ಮುಖ್ಯವಾಗಿ ಗುಡ್ಡಗಾಡು ಪ್ರದೇಶಗಳಲ್ಲಿರುವ ಜನರ ಮೇಲೆ, ಸರಕಾರವು ಸದಾಕಾಲ ಕಣ್ಣಿಟ್ಟಿರುವುದು ಶುಭಕರವೆನ್ನುತ್ತಾ ಸಮಿತಿಯು ವಿಪತ್ಕಾಲದಲ್ಲಿ ಕ್ರೈಸ್ತ ಮಿಶನರಿಗಳ ಪ್ರಭಾವಕ್ಕೊಳಗಾದ ಜನರು ವಿದೇಶಿ ಸರಕಾರದ ಉದ್ದೇಶಗಳನ್ನು ನಿರ್ವಹಿಸುವವರಾಗಿ ಪರಿಣಮಿಸಬಹುದು ಎಂದು ಎಚ್ಚರಿಕೆಯನ್ನಿತ್ತಿದೆ. ಈಚೆಗೆ ನಾಗಾ ಜನರು ನಡೆಸುತ್ತಿರುವ ಆಂದೋಲನ, ಕರೇನರೂ ಅಂಬೋನೀಸರೂ ನಡೆಸುತ್ತಿರುವ ಚಟುವಟಿಕೆ, ಪ್ರತ್ಯೇಕ ಜಾರ್ಖಂಡದ ಬೇಡಿಕೆ ಇತ್ಯಾದಿಯಾಗಿ ಜಗತ್ತಿನ ಬೇರೆ ಬೇರೆ ಪ್ರದೇಶಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಮೂಲವು ಮಿಶನರಿಗಳ ಪ್ರಭಾವದಲ್ಲಿದೆ ಎಂಬುದಾಗಿ ಸಮಿತಿ ವರದಿ ಮಾಡಿದೆ.

ತೆರೆಯ ಮರೆಬೇಡ

ಮಿಶನರಿಗಳ ಚಟುವಟಿಕೆಗಳ ಸಂಬಂಧದಲ್ಲಿ ಸಮಿತಿಯು ಹಲವು ಸೂಚನೆಗಳನ್ನು ಮಾಡಿದೆ. ವಿದೇಶಗಳಿಂದ ಬಹಳ ಸಂಖ್ಯೆಯಲ್ಲಿ ಮಿಶನರಿಗಳನ್ನು ಭಾರತಕ್ಕೆ ಬರಗೊಡುವುದು ಅಪೇಕ್ಷಣೀಯವಲ್ಲವೆಂದೂ ಅದನ್ನು ನಿಯಂತ್ರಣದಲ್ಲಿಡಬೇಕೆಂದೂ ಸಮಿತಿ ಸೂಚಿಸಿದೆ ವಿದೇಶಿ ಮಿಶನರಿಗಳ ಸ್ವಾಧೀನವಿರುವ ಆಸ್ತಿಪಾಸ್ತಿಗಳನ್ನು ರಾಷ್ಟ್ರೀಯ ಇಗರ್ಜಿಗಳಿಗೆ ಒಪ್ಪಿಸಿಕೊಡಬೇಕೆಂದೂ ಅದು ಸಲಹೆ ಮಾಡಿದೆ. ಅಕ್ರಮವಾದ ರೀತಿಯಲ್ಲಿ ಮತಾಂತರ ನಡೆಸುವುದನ್ನು ನಿಲ್ಲಿಸಲಿಕ್ಕಾಗಿ ಶಾಸನಿಕ ಹೆಜ್ಜೆಗಳನ್ನು ಕೈಗೊಳ್ಳಲು ಹಿಂಜರಿಯಬಾರದೆಂದೂ ಸಮಿತಿ ತಿಳಿಸಿದೆ. ಮತಾಂತರದ ಉದ್ದೇಶಕ್ಕಾಗಿ ವೈದ್ಯಕೀಯ ಮತ್ತಿತರ ಯಾವುದೇ ಸಹಾಯವನ್ನು ಉಪಯೋಗಿಸದಂತೆ ಶಾಸನಿಕ ಪ್ರತಿಬಂಧವನ್ನು ಹೇರಬೇಕು; ರುಗ್ಣಾಲಯದಲ್ಲಿರುವ ವೈದ್ಯರೂ ದಾಯಿಗಳೂ ಮತ್ತಿತರ ಸಿಬಂಧಿಯವರೂ ತಮ್ಮ ಉದ್ಯೋಗಬಲದಿಂದ ಧಾರ್ಮಿಕ ಪ್ರಚಾರದ ಮೇಲೆ ಪ್ರಭಾವ ಬೀರದಂತೆ ನಿಯಮಗಳನ್ನು ಮಾಡಬೇಕು; ಶಾಲೆಗಳಲ್ಲಿ ಹೆತ್ತವರ ಸ್ಪಷ್ಟ ಅನುಮತಿಯಿಲ್ಲದೆ ಧಾರ್ಮಿಕ ಶಿಕ್ಷಣವನ್ನು ಮಕ್ಕಳಿಗೆ ಕೊಡಲಾಗದು; ಇದಕ್ಕಾಗಿ ವಿದ್ಯಾ ಇಲಾಖೆಯವರು ಅನುಮತಿ ಪತ್ರಗಳ ನಮೂನೆಗಳನ್ನು ಸ್ಪಷ್ಟಪಡಿಸಿ ಅವಶ್ಯಕವಾದಲ್ಲೆಲ್ಲ ಹಂಚಬೇಕು; ಧಾರ್ಮಿಕಸಂಸ್ಥೆಗಳು ಚಾ-ಕಾಫಿತೋಟಗಳಿಗೆ ಕೂಲಿಗಳನ್ನು ಒಟ್ಟುಮಾಡಿ ಕಳುಹಿಸುವುದೇ ಮುಂತಾದ ಕೆಲಸಗಳಲ್ಲಿ ನಿರತರಾಗದಂತೆ ನೋಡಬೇಕು; ಸರಕಾರದ ಪೂರ್ವಾನುಮತಿಯಿಲ್ಲದೆ ಧರ್ಮಪ್ರಚಾರದ ಉದ್ದೇಶವುಳ್ಳ ಸಾಹಿತ್ಯದ ವಿತರಣೆಮಾಡಗೊಡಲಾಗದು ಎಂದು ಮುಂತಾಗಿ ಸಮಿತಿ ಸೂಚನೆಗಳನ್ನಿತ್ತಿದೆ.

ಸರಕಾರದ ಭಾರ

ಸರಕಾರವು ಹೆತ್ತವರಿಲ್ಲದ ಅಥವಾ ಸಹಜ ಸಂರಕ್ಷಕರಿಲ್ಲದ ಅಪ್ರಬುದ್ಧ ಬಾಲಕ—ಬಾಲಕಿಯರ ರಕ್ಷಕನೆಂಬ ಹೊಣೆಯನ್ನು ತಾನೇ ಹೊತ್ತುಕೊಂಡು ಅನಾಥಾಲಯಗಳನ್ನು ತೆರೆಯಬೇಕು; ಶಿಕ್ಷಣ ಪ್ರಸಾರ, ಆರೋಗ್ಯ ರಕ್ಷಣೆ, ವೈದ್ಯಕೀಯ ಅನುಕೂಲತೆ ಮತ್ತಿತರ ಸೌಲಭ್ಯಗಳನ್ನು ಸರಕಾರವೇ "ಹಿಂದುಳಿದ" ವರ್ಗಗಳಿಗೆ ಒದಗಿಸಿಕೊಡಬೇಕು; ಸರಕಾರೇತರ ಸಂಸ್ಥೆಗಳು ತಂತಮ್ಮ ವಿಶಿಷ್ಟ ಜಾತಿ ಅಥವಾ ಸಮಾಜಕ್ಕೆ ಸೇರಿರುವವರಿಗಾಗಿಯಷ್ಟೆ ಸಂಸ್ಥೆಗಳನ್ನು ಕಟ್ಟಿಕೊಳ್ಳಬೇಕಲ್ಲದೆ ಮತಾಂತರಗೊಳಿಸುವ ಸಾಧನಗಳಾಗಿ ಈ ಸಂಸ್ಥೆಗಳಿರಲಾಗದು; ಸರಕಾರದ ಮೂಲಕವಲ್ಲದೆ ವಿದೇಶಗಳಿಂದ ಯಾವುದೇ ಸರಕಾರೇತರ ಸಂಸ್ಥೆಯು ಹಣವನ್ನು ಪಡೆಯುವುದಕ್ಕೆ ಅವಕಾಶವಿರಬಾರದು; ರಾಜಕೀಯದಲ್ಲಿ ಭಾಗವಹಿಸುವುದಿಲ್ಲವೆಂಬ ಸ್ಪಷ್ಟ ಮುಚ್ಚಳಿಕೆಯನ್ನು ಕೊಡದೆ, ಯಾವನೇ ವಿದೇಶೀಯನಿಗೆ ಸ್ವತಂತ್ರ ರೀತಿಯಲ್ಲಾಗಲೀ ಯಾವುದೇ ಧಾರ್ಮಿಕ ಸಂಘದ ಸದಸ್ಯನೆಂದಾಗಲೀ ತನ್ನ ಚಟುವಟಿಕೆಗಳನ್ನು ನಡೆಸಲು ಬಿಡಬಾರದು; ಸರಕಾರೇತರ ಸಂಘ ಸಂಸ್ಥೆಗಳು ಕೈಗೊಳ್ಳುವ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಯ ಕಾರ್ಯಕ್ರಮಗಳಿಗೆ ಸರಕಾರದ ಪೂರ್ವಾನುಮತಿಯು ಸಿಕ್ಕಿರಬೇಕೆಂದು ನಿಯಮಿಸಬೇಕು. ಸರಕಾರದ ಸಹಾಯ ಪಡೆಯುತ್ತಿರುವ ಅಥವಾ ಮನ್ನಣೆಯನ್ನು ಪಡೆದಿರುವ ಸಂಸ್ಥೆಗಳ ಪರೀಕ್ಷೆಯು ಪ್ರತಿ ಮೂರು ತಿಂಗಳಿಗೊಮ್ಮೆಯಾದರೂ ಸರಕಾರದ ಕಡೆಯಿಂದ ನಡೆಯಬೇಕು ಎಂದು ಮುಂತಾಗಿ ಸಮಿತಿ ತಿಳಿಸಿರುತ್ತದೆ.

ರಾಷ್ಟ್ರಕರಾಗಿ ಕ್ರೈಸ್ತರು

ಇದನ್ನೋದಿ, ಸಮಿತಿಗೆ ಕ್ರೈಸ್ತ ಸಮಾಜದ ಮೇಲೆ ದುರಭಿಪ್ರಾಯವಿದೆ ಎಂದು ಭಾವಿಸಲಾಗದು. ಏಕೆಂದರೆ, ಮೊದಲೇ ಹೇಳಿದಂತೆ, ಮತಾಂತರ ಮತ್ತು ರಾಜಕೀಯ ದುರುದ್ದೇಶಗಳನ್ನು ಬಿಟ್ಟು ಉಳಿದ ಬಗೆಯಲ್ಲಿ ಮಿಶನರಿಗಳು ನಡೆಸಿದ ಚಟುವಟಿಕೆಯಿಂದ ಭಾರತಕ್ಕೆ ಪ್ರಯೋಜನವಾಗಿದೆ ಎಂಬುದನ್ನು ತಾತ್ವಿಕವಾಗಿ ಒಪ್ಪಿಕೊಂಡಿದೆ. ಆದರೆ, ಭಾರತದ ಇಗರ್ಜಿಗಳು ವಿದೇಶಗಳ ಸಹಾಯದ ಮೇಲೆ ಅವಲಂಬನೆಯನ್ನು ಮಾಡದೆ ಭಾರತದಲ್ಲಿಯೇ ಸ್ವತಂತ್ರವಾದ ಕ್ರೈಸ್ತ ಇಗರ್ಜಿಗಳನ್ನು ನೆಲೆಗೊಳಿಸಬೇಕೆಂದು ಸಮಿತಿ ಒತ್ತಾಯಿಸಿದೆ. ಸರಕಾರವು ಕ್ರೈಸ್ತ ಮಿಶನರಿಗಳಿಗೂ, ಸಾಮಾನ್ಯವಾಗಿ ಕ್ರೈಸ್ತರೆಲ್ಲರಿಗೂ, ಒಂದು ಮನವಿಯನ್ನು ಕಳುಹಿಸಿ ಇವರೆಲ್ಲರೂ ಧಾರ್ಮಿಕ ಪ್ರಚಾರ, ಮತಾಂತರ ಇತ್ಯಾದಿಗಳ ಕುರಿತು ಅನುಸರಿಸುವ ವಿಧಾನವು ಸಾರ್ವಜನಿಕ ನೀತಿ, ಶಾಂತಿ ಮತ್ತು ಆರೋಗ್ಯಕ್ಕೆ ಕೇಡಾಗದಂತೆ ನೋಡಿಕೊಳ್ಳಬೇಕು ಎಂದು ಸಮಿತಿ ಹೇಳಿದೆ. ಕೆಲವರು ಭಾವಿಸಿರುವಂತೆ, ಕ್ರೈಸ್ತ ಮಿಶನರಿಗಳ ಚಟುವಟಿಕೆಯ ವಿಚಾರಣೆಯು ಕ್ರೈಸ್ತ ಸಮಾಜದ ಮೇಲೆ ದೋಷಾರೋಪಣೆ ಮಾಡುವ ಉದ್ದೇಶದಿಂದ ಕೂಡಿಲ್ಲವೆಂದೂ ಸಮಿತಿಯು ಸ್ಪಷ್ಟಪಡಿಸಿದೆ. ಭಾರತದಲ್ಲಿ ಹಿಂದು ಮತ್ತಿತರ ಯಾವುದೇ ಮತೀಯರಷ್ಟೇ ಅಧಿಕಾರ ಸಂಪನ್ನ ನಾಗರಿಕರು ಕ್ರೈಸ್ತರಾಗಿದ್ದಾರೆ. ಆದರೆ, ಕ್ರೈಸ್ತರಲ್ಲಿ ಪ್ರಮುಖರಾದವರಲ್ಲಿಯೇ ಹಲವರು ಭಾವಿಸಿರುವಂತೆ ಕ್ರೈಸ್ತ ಸಮಾಜವು ಪರಕೀಯ ವರ್ಚಸ್ಸಿನಿಂದ ಸ್ವತಂತ್ರವಿರಬೇಕೆಂಬುದೇ ನಮ್ಮ ಆಶಯ. ಯಾವ ದೇಶದಲ್ಲಿಯೇ ಆಗಲಿ, ಬಹುಸಂಖ್ಯಾಕ ವರ್ಗದ ಸದಾಶಯವನ್ನು ಸಂಪಾದಿಸಿ ಬಾಳುವುದೇ ನ್ಯಾಯಾಲಯಗಳೂ ಅಧಿಕಾರಿಗಳೂ ದಯಪಾಲಿಸಬಹುದಾದ ಘಟನಾತ್ಮಕ ರಕ್ಷಣೆಗಿಂತಲೂ ಹೆಚ್ಚು ಪರಿಣಾಮಕಾರಿಯಾದ ಭದ್ರತೆಯಾಗಿದೆ. ಎಂದು ಅನೇಕ ಕ್ರೈಸ್ತರು ಭಾವಿಸುವುದು ತೃಪ್ತಿಕರ ಎಂದು ಸಮಿತಿ ನುಡಿದಿದೆ.

ಭಾರತೀಯರಾಗಿ ಬಾಳಲಿ

ಮುಂಬಯಿಯಲ್ಲೀಚೆಗೆ ನಡೆದೊಂದು ಸಭೆಯಲ್ಲಿ ಪ್ರಗತಿಪರ ವಿಚಾರಗಳುಳ್ಳ ಕ್ರೈಸ್ತ ಮುಖಂಡರು ಸಮಿತಿಯ ಈ ಅಭಿಪ್ರಾಯಕ್ಕೆ ಪರೋಕ್ಷ ಬೆಂಬಲವನ್ನು ನೀಡಿರುವಂತೆ ಕಂಡಿದೆ. ಮುಂಬಯಿ ಸರಕಾರದ ವಿದ್ಯುಚ್ಛಕ್ತಿ ಇಲಾಖೆಯ ಪ್ರಮುಖರಾದ ಮಿ. ಡಬ್ಲ್ಯು. ಎಕ್ಸ್. ಮಸ್ಕರೇನ್ಹಸರು ತಮ್ಮ ಭಾಷಣದಲ್ಲಿ ಭಾರತೀಯ ಕಥೋಲಿಕರೂ ಕ್ರೈಸ್ತರೂ ವಿದೇಶದ ಸಂಸ್ಕೃತಿಯ ಅನುಯಾಯಿಗಳಾಗಿರುವುದನ್ನು ಮೂದಲಿಸಿದರು. "ನಾವು ಭಾರತೀಯರಾಗಿದ್ದೇವೆ ಎಂದು ಭಾವಿಸಿದರೆ ಸಾಲದು; ಕ್ರೈಸ್ತ ನಾಗರಿಕರು ನೋಡುವವರಿಗೆ ಭಾರತೀಯರಂತೆ ತೋರಲೂ ಬೇಕು" ಎಂದವರು ತಮ್ಮವರಿಗೆ ಉಪದೇಶಿಸಿದರು. ಈಗಿನ ಕ್ರೈಸ್ತರಲ್ಲಿ ಹೆಚ್ಚಿನವರು ಭಾರತೀಯ ಕಲೆ, ಸಂಗೀತ, ಶಿಲ್ಪ ಸಂಸ್ಕೃತಿ ಮತ್ತು ಭಾಷೆಗಳನ್ನು ಪರಕೀಯ ಭಾವನೆಯಿಂದಲೇ ನೋಡುತ್ತಿದ್ದಾರೆ ಈ ಮನೋಭಾವನೆಯು ಮಾರ್ಪಾಟಾಗಬೇಕು ಎಂದವರು ಬಿನ್ನವಿಸಿದರು. ಆದರೆ ಇದೇ ಸಭೆಯಲ್ಲಿ ಮಾತನಾಡಿದ ಕಾರ್ಡಿನಲ್ ಗ್ರೇಶಿಯಸ್ ಗುರುಗಳು ಮಹಾತ್ಮಾ ಗಾಂಧೀಜಿಗೂ ಕ್ರೈಸ್ತ ಧರ್ಮಕ್ಕೂ ಒಪ್ಪಿಗೆಯಾಗದ ನಾಚಿಕೆಗೇಡು ಆಂದೋಲನವೆಂದು ಕುಟುಂಬ ಯೋಜನೆಯನ್ನು ಬಣ್ಣಿಸಿದ ಬಾಯಿಯಲ್ಲಿಯೇ ನಿಯೋಗಿ ಸಮಿತಿಯ ಅಭಿಪ್ರಾಯಗಳನ್ನೂ ಖಂಡಿಸಿ ಮಾತನಾಡಿದರು. ಬೇರೆ ದೇಶಗಳಲ್ಲಿರುವ ಬಡ ಜನರು ಭಾರತದ ಬಡಜನರಿಗೆ ಸ್ನೇಹದಿಂದ ನೀಡಿದ ವಂತಿಗೆಯೇ ವಿದೇಶದ ಹಣ ಎಂದವರು ವರ್ಣಿಸಿದರು. ಭಾರತದ ಮತ್ತು ಇಗರ್ಜಿಯ ಸೇವೆಯಲ್ಲಿ ಜೀವನವನ್ನು ಕಳೆಯಲೆಂದೇ ವಿದೇಶಗಳ ಮಿಶನರಿಗಳು ಇಲ್ಲಿದ್ದಾರೆಂದು ಅವರು ತಿಳಿಸಿದರು. ಕ್ರೈಸ್ತ ಮಿಶನರಿಗಳ ಕುರಿತು ಉಂಟಾಗಿರುವ ದುಭಿಪ್ರಾಯ ನಿವಾರಣೆಗೆ ಕ್ರೈಸ್ತರೆಲ್ಲರೂ ಪ್ರಯತ್ನಶೀಲರಾಗಬೇಕೆಂದು ಅವರು ಕೇಳಿಕೊಂಡರು. ಈ ದೇಶದ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಯಲ್ಲಿ ಅತ್ಯುತ್ಸಾಹದಿಂದ ಭಾಗವಹಿಸುವುದು ಇಂಥದೊಂದು ವಿಧಾನವೆಂದೂ ಅವರು ವಿದಿತಪಡಿಸಿದರು.



ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಲೋಕಮಾನ್ಯ ಬಾಲ ಗಂಗಾಧರ ತಿಲಕರ ಪುಣ್ಯ ಸ್ಮರಣೆ

(೨ನೇ ಪುಟದಿಂದ)

...ವಿಸಿ ಬಂದಿದ್ದರು. ಇದಕ್ಕೆ ಮುಂಚೆ ...ರಾರೊಬ್ಬರೂ ಅಹಿಂಸಾತ್ಮಕ ಚಳವಳಿಯ ದೆಸೆಯಿಂದ ಕಾರಾಗಾರವನ್ನು ಸೇರಿರಲಿಲ್ಲ! ತಿಲಕರ ಈ ಕಾರಾ...ವಾಸವು ಅವರ ಮೇಲೆ ಅತ್ಯಂತ ...ಜ್ಯ ಭಾವವನ್ನು ಜನರಲ್ಲಿ ಹುಟ್ಟಿಸಿ... ತಿಲಕರು ತುಂಬ ಜನಪ್ರಿಯ ವ್ಯಕ್ತಿ...ಯಾಗಿ ಪರಿಣಮಿಸಿದರು. ಆದುದರಿಂದ ...ಪ್ಪಿನ ತೆರಿಗೆಯ ಕುರಿತು ಪುನಃ ಅವರ...ನ್ನು ವಿಚಾರಣೆಗೆ ಗುರಿಪಡಿಸಿ, ಸೆರೆಮನೆಗೆ ...ಟ್ಟಿಸಿದರೆ, ಜನರ ದೃಷ್ಟಿಯಲ್ಲಿ ತಿಲಕರ ...ರವವು ಮತ್ತಷ್ಟು ಹೆಚ್ಚಬಹುದು ಮ...ತ್ತ ಜನರು ಉಪ್ಪಿನ ತೆರಿಗೆಯ ವಿರುದ್ಧ ...ಂದೋಲನವನ್ನು ನಡೆಸಲು ಇದೇ ಪ್ರೇ...ಕವಾಗಬಹುದು ಎಂದು ಸರಕಾರವು ...ವಿಸಿ, ಸುಮ್ಮನೆ ಉಳಿಯಿತು.

ಕ್ರಾಂತಿಕಾರಿ ವಿಚಾರಗಳಲ್ಲಿ ತಿಲಕರು ...ಲ್ಲರಿಗಿಂತ ಮುಂದಾಗಿದ್ದರು. ೧೮೯೦...ಲ್ಲಿ ಅವರು ರಾಜಕೀಯ ಪರಿಸತ್ತಿನ ...ವ್ಯ ಟೀಕೆಯ ಸ್ಥಾನದಲ್ಲಿ ಉಗ್ರಪ್ರತಿ...ಭಟನೆಯನ್ನು ನೆಲೆಗೊಳಿಸಿದರು. ಸರಕಾ...ರ ಅಬಕಾರಿನೀತಿಯನ್ನು ಅವರು ಟೀ...ಕಿಸುತ್ತಾ ಭಾರತೀಯರ ಗಂಟಲಿನೊಳಗೆ ...ದ್ಯವನ್ನು ಹೆಚ್ಚು ಹೆಚ್ಚಾಗಿ ಸುರಿಸುವ ...ತಿಯಿಂದ ಭಾರತವನ್ನು ನೈತಿಕವಾಗಿ ಅ...ನತಿಗೆ ಸರಕಾರವು ಇಳಿಸುತ್ತಿದೆ ಎಂದು ...ರೋಪಿಸಿದರು. ರಾಷ್ಟ್ರೀಯ ಕಾಂಗ್ರೆಸ...ನ್ನು ಅವರು ಇಷ್ಟೇ ಕಟುವಾಗಿ ಟೀಕಿಸು...ತ್ತಿದ್ದರು—"ಬರುವ ದಶಂಬರದಿಂದ ಕಾಂ...ಗ್ರೆಸು ಆರನೇ ವರ್ಷದಲ್ಲಿ ಕಾಲಿಡುತ್ತದೆ; ...ಕಾಂಗ್ರೆಸು ಮತ್ತು ಕಾನ್ಫರೆನ್ಸು (ಪರಿಷ...ತ್ತು)ಗಳಲ್ಲಿ ದೀರ್ಘ ಭಾಷಣಗಳಾಗುತ್ತವೆ ...ಳುವವರಿಂದ ಸವಿಮಾತ ಭರವಸೆಗಳೂ ...ಗುತ್ತವೆ; ಆದರೆ ವಾಸ್ತವವಾಗಿ ಕಳೆದ ...ಐದು ವರ್ಷಗಳಲ್ಲಿ ಜನರಿಗೇನು ದೊರೆತ...? ಉತ್ತರವು ಕೇವಲ ನಿರಾಶಾದಾಯಕ...ವಾಗಿದೆ" ಎಂದು ತಮ್ಮ ಪತ್ರಿಕೆಯಲ್ಲಿ ...ತಿಲಕರು ಬರೆದರು.

೦ ೦

ಕಾಂಗ್ರೆಸಿನಲ್ಲಿ ನವಚೈತನ್ಯವನ್ನು ತುಂ...ಬಲು ತಿಲಕರು ಸಾಹಸಶೀಲರಾದರು. ...೧೮೯...ನೇ ವರ್ಷದಲ್ಲಿ ಕಾಂಗ್ರೆಸಿನಲ್ಲಿ ಅವ...ರು ಆಯುಧಗಳ ಸಂಬಂಧದಲ್ಲಿ ಸರಕಾರ...ವು ಮಾಡಿದ ಶಾಸನವನ್ನು ನಿಂದಿಸಿ ...ರುತ್ತುವಳಿಯೊಂದನ್ನು ತಂದರು. "ನ...ಮ್ಮ ಜನರಲ್ಲಿ ಇನ್ನೂ ಜೀವಂತವಾಗಿರು...ವ ಸ್ಫೂರ್ತಿಯನ್ನು ಪೋಷಿಸಬೇಕೆಂದು ...ಸರಕಾರವನ್ನು ನಾವು ಒತ್ತಾಯಿಸುತ್ತೇ...ವೆ. ಸಾಹಸಿಗನಾದ ಭಾರತೀಯನಿಗೂ ...ಒಂದು ಪಾಠ ಶಾಲೆಗೆ ಹೋಗಿ, ಅಕ್ಷ...ರಾಭ್ಯಾಸವನ್ನು ಮಾಡಲು ಹೇಳಲಾಗು...ತ್ತದೆ. ಇದರ ಪರಿಣಾಮವಾಗಿ ಇಡೀ ...ಸಂಗವೇ ಅಶಕ್ತವಾಗಿ ವಿಪತ್ಪ್ರಸಂಗ...ಗಳಲ್ಲಿ ರಾಷ್ಟ್ರದ ರಕ್ಷಣೆಯನ್ನು ಮಾಡ...ಬಲ್ಲವರು ಇಲ್ಲದಂತಾಗುತ್ತದೆ" ಎಂದವ...ರು ಸಾರಿದರು.

ಅಲ್ಲಿಯ ವರೆಗೆ ಸುಶಿಕ್ಷಿತ ವರ್ಗದವ...ರ ವಿಚಾರವೇದಿಕೆಯಾಗಿದ್ದ ಕಾಂಗ್ರೆ...ಸನ್ನು ಮಧ್ಯಮ ವರ್ಗದವರ ತೊಂದರೆ...ಗಳ ವಿಮರ್ಶೆಯ ಕಡೆಗೆ ಗಮನ ...ಕೊಡುವ ಸಂಸ್ಥೆಯಾಗಿ ಮಾ...ಡಿದ ಕೀರ್ತಿಯು ತಿಲಕರದು—

ನೆಹರುಗಳು ಹೇಳಿದಂತೆ, ಮಹಾತ್ಮಾ ಗಾಂಧೀಯವರು ಇದೇ ಆದರ್ಶವನ್ನು ಮುಂದೆ ಅನುಸರಿಸಿ, ಬಡವರೂ ಕಾಂಗ್ರೆಸಿನಲ್ಲಿ ಸೇರುವಂತೆ, ಕಾಂಗ್ರೆಸಿನ ಚಟುವಟಿಕೆಯನ್ನು ವಿಸ್ತರಿಸಿದರು ೧೮೯೫ನೇ ಕಾಂಗ್ರೆಸಿನಲ್ಲಿ ತಿಲಕರು ಹೀಗೆಂದರು—"ನೂರಾರು ಪ್ರಸಂಗಗಳಲ್ಲಿ ಭೂಕಂದಾಯವನ್ನು ಇಮ್ಮಡಿಗೊಳಿಸಲಾಗಿದೆ; ಕೆಲವು ಸಂದರ್ಭಗಳಲ್ಲಿಯಂತೂ ಇದು ನಾಲ್ಮಡಿಯಾಗಿದೆ. ಹಳ್ಳಿಯಲ್ಲಿ ಇಷ್ಟು ಬಡತನವಿರುವುದಕ್ಕೆ ಬ್ರಿಟಿಷರ ಈ ಬಗೆಯ ಧೋರಣೆಯೇ ಕಾರಣ." ತಿಲಕರ ಇಂಥ ಮಾತುಗಳು ಬಿಳಿಯರನ್ನು ಚುಚ್ಚುತ್ತಿದ್ದವು; ಕಾಂಗ್ರೆಸಿನ ಸದಸ್ಯರಿಗೂ ಇದು ಅಷ್ಟು ಪ್ರಿಯವಾಗಿರಲಿಲ್ಲ. ಏಕೆಂದರೆ ಅವರೆಲ್ಲರೂ ಸೌಮ್ಯವಾದಿಗಳಾಗಿದ್ದರು; ತಿಲಕರ ಉಗ್ರ ವರ್ತನೆಯು ಅವರಿಗೆ ಸರಿ ಬೀಳುತ್ತಿರಲಿಲ್ಲ. ಕಾಂಗ್ರೆಸಿನಲ್ಲಿ ಆಗ ದಿವಂಗತ ಗೋಪಾಲಕೃಷ್ಣ ಗೋಖಲೆಯವರು ಸರ್ವಮಾನ್ಯರಾಗಿದ್ದರು; ಆದರೆ ಅವರು ಸೌಮ್ಯವಾದಿಗಳಾಗಿದ್ದು ಬ್ರಿಟಿಷರನ್ನು ಬೇಡಿ, ಭಾರತೀಯರು ತಮ್ಮ ಮನೋವಾಂಛೆಯನ್ನು ಸಂಪಾದಿಸಬಹುದು ಎನ್ನುತ್ತಿದ್ದರು. ಹೀಗಾಗಿ ಕಾಂಗ್ರೆಸು ಇಬ್ಬಣವಾಗಿ ಒಡೆಯುವ ಲಕ್ಷಣವನ್ನು ತೋರಿಸ ತೊಡಗಿತು.

೦ ೦

ಪರಿಸ್ಥಿತಿಯು ಹೀಗಿದ್ದುದರಿಂದ ತಿಲಕರು ತಮ್ಮದೇ ಆದ ಗುಂಪೊಂದನ್ನು ಕಟ್ಟಿಕೊಂಡು ಉಗ್ರವಾದಿಗಳೆನಿಸಿದರು. ೧೯೦೫ರಲ್ಲಿ ವಂಗ ಭಂಗ ಚಳವಳವು ಪ್ರಾರಂಭವಾದಾಗ, ಈ ಗುಂಪಿಗೆ ವಿಶೇಷವಾದ ಜನ ಮನ್ನಣೆಯು ದೊರಕಿತು. ಜನರಿಂದ ದೂರ ಉಳಿಯಲಾರದ ಪರಿಸ್ಥಿತಿಯು ಕಾಂಗ್ರೆಸಿಗೆ ಬಂದುದರಿಂದಲೋ ಏನೋ, ಸ್ವದೇಶಿ ಮತ್ತು ಸರಕಾರದೊಡನೆ ಅಸಹಕಾರ ಚಳವಳಕ್ಕೆ ಕಾಂಗ್ರೆಸು ಸಹ ಮಾನ್ಯತೆಯನ್ನು ನೀಡಬೇಕಾಯಿತು. ತಿಲಕರು ಜನರ ನಡುವೆ ತಿರುಗಾಡಿದರು; ಬಿಪಿನ ಚಂದ್ರಪಾಲರೂ ಅವರನ್ನು ಅನುಸರಿಸಿದರು. ಪ್ರತಿಯೊಂದೂ ಸಾರ್ವಜನಿಕ ಸಭೆಯಲ್ಲಿ ತಿಲಕರು ಹೇಳುತ್ತಿದ್ದರು—"ನಿಮಗೆ ಶಸ್ತ್ರಗಳು ಬೇಕಾಗಿಲ್ಲ— ಇರಲಿ, ಸಕ್ರಿಯ ಅಸಹಕಾರವನ್ನು ಪ್ರಕಟಿಸುವ ಶಕ್ತಿಯಾದರೂ ನಿಮ್ಮಲ್ಲಿಲ್ಲವೆ? ನಿಮ್ಮ ಮೇಲೆ ವಿದೇಶಿ ಸರಕಾರವೊಂದು ಆಡಳಿತೆ ನಡೆಸುವುದಕ್ಕೆ ನೀವು ಸಹಾಯ ಮಾಡಬೇಕೆ? ಮಾಡಬಾರದು; ಆದುದರಿಂದಲೇ ತೆರಿಗೆ ಕೊಡಬಾರದು; ಅವರ ನ್ಯಾಯಸ್ಥಾನಗಳ ಆಜ್ಞೆಯನ್ನು ಮನ್ನಿಸಬಾರದು"

ರಾಷ್ಟ್ರೀಯ ವಿದ್ಯಾಭ್ಯಾಸ, ಸ್ವದೇಶಿ ವ್ರತ ಮತ್ತು ಸರಕಾರದೊಡನೆ ಅಸಹಯೋಗ ಇತ್ಯಾದಿ ಕಾರ್ಯಕ್ರಮಗಳನ್ನು ೧೯೦೬ನೇ ಇಸವಿಯ ಕಾಂಗ್ರೆಸು ಮನಸ್ಸಿಲ್ಲದ ಮನಸ್ಸಿನಿಂದಲೇ ಸ್ವೀಕರಿಸಿತು. ಉಗ್ರವಾದಿಗಳೊಡನೆ ಹೊಂದಿಕೊಳ್ಳುವುದು ಸೌಮ್ಯವಾದಿಗಳಿಗೆ ಬಹಳ ಕಷ್ಟಕರವೆನಿಸಿದರೂ ದಿವಂಗತ ದಾದಾಭಾಯಿ ನವರೋಜಿಯವರ ಧುರೀಣತ್ವವು ಉಭಯ ಗುಂಪುಗಳ ನಡುವೆ ಮಧ್ಯಸ್ಥಿಕೆಯನ್ನು ನಡೆಸಿತು. ಆದರೆ ಮರು ವರ್ಷ ಸೂರತಿನಲ್ಲಿ ಕಾಂಗ್ರೆಸು ಅಧಿವೇಶನದಲ್ಲಿ ಸೇರಿದಾಗ, ಉಭಯ ಗುಂಪುಗಳ ತಿಕ್ಕಾಟವು ಅತ್ಯಂತ ತೀಕ್ಷ್ಣವಾಯಿತು. ಸೌಮ್ಯವಾದಿಗಳು ರಾಸಬಿಹಾರಿ ಘೋಷರು ಅಧ್ಯಕ್ಷರಾಗಬೇಕೆನ್ನುತ್ತಿದ್ದರು; ಉಗ್ರವಾದಿ ಗುಂಪು ಲಾಲಾ ಲಜಪತರಾಯರ ಹೆಸರನ್ನು ಸೂಚಿಸಿದ್ದಿತು. ಅಧ್ಯಕ್ಷರ ಆಯ್ಕೆಯ ಹೊತ್ತಿನಲ್ಲಿ ತಿಲಕರ ಸೂಚನೆಯೊಂದು ಉಪೇಕ್ಷಿಸಲ್ಪಟ್ಟಾಗ ತಿಲಕರು ಗುಡುಗಿನಂತೆ ಮಾತನಾಡಿದರು ಸಭೆಯಲ್ಲಿ ಗೊಂದಲವೆದ್ದು ಅಧಿವೇಶನವೇ ಮುಂದರಿಯಿತು. ಕಾಂಗ್ರೆಸಿನೊಡನೆ ಹೊಂದಿಕೊಂಡು ಹೋಗುವುದು ತೀರ ಕಷ್ಟವೆಂದೇ ತಿಲಕರಿಗಾಗ ತೋರಿತು. ಅವರು "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂಬ ಘೋಷಣೆಯೊಡನೆ ಏಕಾಂಗಿಯಾಗಿಯೇ ಜನರಲ್ಲಿ ಜಾಗೃತಿಯನ್ನುಂಟು ಮಾಡಹತ್ತಿದರು.

೦ ೦

ಸರಕಾರಕ್ಕೆ ತಿಲಕರ ಕಾರ್ಯಕ್ರಮಗಳು ಎಳ್ಳಷ್ಟೂ ಸರಿಕಾಣುತ್ತಿರಲಿಲ್ಲ. ಜನರಲ್ಲಿ ತಿಳುವಳಿಕೆಯನ್ನುಂಟುಮಾಡಿ ಅವರನ್ನು ಎಚ್ಚರಿಸಲು ತಿಲಕರು ಬಗೆಬಗೆಯ ಉಪಾಯಗಳನ್ನು ಅನುಸರಿಸುತ್ತಿದ್ದರು. ಪೇಶ್ವೆಯರ ಕಾಲದಲ್ಲಿ ವಿನಾಯಕ ಚತುರ್ಥಿಯ ಗಣಪತಿಪೂಜೆಯನ್ನು ರಾಷ್ಟ್ರೀಯ ಉತ್ಸವದರೂಪದಲ್ಲಿ ಮಹಾರಾಷ್ಟ್ರೀಯರು ಆಚರಿಸುತ್ತಿದ್ದರು. ಜನಸಾಮಾನ್ಯರನ್ನೂ ಸ್ವರಾಜ್ಯದ ಆಂದೋಲನದಲ್ಲಿ ಭಾಗವಹಿಸುವಂತೆ ಮಾಡಲಿಕ್ಕಾಗಿ ತಿಲಕರು ೧೮೯೩ರಲ್ಲಿ ಗಣಪತಿ ಪೂಜೆಯನ್ನು ಮಹತ್ವದ ಸಾರ್ವಜನಿಕ ಉತ್ಸವವಾಗಿ ರೂಪಿಸಿದರು. ಬ್ರಿಟಿಷರ ಆಡಳಿತದ ವಿರುದ್ಧ ಜನರಲ್ಲಿ ಜುಗುಪ್ಸೆಯನ್ನು ಹುಟ್ಟಿಸುವುದೇ ತಿಲಕರ ಉದ್ದೇಶವಾಗಿದ್ದಿತು. ಈ ಉತ್ಸವದಲ್ಲಿ ಹಿಂದೂ-ಮುಸ್ಲಿಮರೆಲ್ಲರೂ ಒಟ್ಟಿಗೆ ಭಾಗವಹಿಸುತ್ತಿದ್ದರು; ಆಗಿನ ಹಾಡು ಮತ್ತು ಕೋಲಾಹಲದಲ್ಲಿ ಬ್ರಿಟಿಷರ ವಿರುದ್ಧ ಆಂದೋಲನದ ಭಾವನೆಯು ಅಡಕವಾಗಿದ್ದಿತು.

ತಿಲಕರು ಶಿವಾಜಿಯ ನೆನಪನ್ನು ಮಹಾರಾಷ್ಟ್ರೀಯರಿಗೆ ತಂದುಕೊಟ್ಟರು. ಶಿವಾಜಿದಿನವನ್ನು ಆಚರಿಸುವ ಸಂಪ್ರದಾಯವನ್ನು ಅವರು ಪ್ರಾರಂಭಿಸಿದರು ೧೮೯೭ರಲ್ಲಿ ಸರಕಾರವು ತಿಲಕರನ್ನು ಶಿವಾಜಿದಿನದ ಭಯದಿಂದಲೇ ಸೆರೆಮನೆಗೆ ಅಟ್ಟಿತು. "ಶಿವಾಜಿಯ ಉದ್ಗಾರ" ಎಂಬ ಹೆಸರಿನಿಂದ ಪ್ರಕಟವಾದ ಪದ್ಯವೊಂದು ವಿದ್ರೋಹಾತ್ಮಕವಾಗಿದೆ ಎಂದು ಸರಕಾರ ಆರೋಪಿಸಿತು. ಆದರೆ ತಿಲಕರು ತಮ್ಮ ಟೀಕೆಯಮೂಲಕ ಮತ್ತೂ ಜನರನ್ನು ಹುರಿದುಂಬಿಸುತ್ತಿದ್ದರು; ತಿಲಕರ ಮೇಲೆಯೇ ಅಭಿಮಾನವಿದ್ದ ಹಲವರು ಅವರು ಆರು ತಿಂಗಳು ಬೇಗನೆ ಬಿಡುಗಡೆ ಹೊಂದುವಂತೆ ಸಫಲ ಪ್ರಯತ್ನವನ್ನು ಕೈಗೊಂಡರು. ಸರಕಾರಕ್ಕೆ ತಿಲಕರ ಮೇಲೆ ಮಮತೆ ಉಂಟಾದೀತೆ? ಅದು ಸಮಯಕ್ಕಾಗಿ ಕಾಯುತ್ತಿತ್ತೆನ್ನಬಹುದು. ತಿಲಕರು ೧೯೦೮ರಲ್ಲಿ ಮದ್ಯಪಾನದ ವಿರುದ್ಧ ಆಂದೋಲನವನ್ನು ಸಂಘಟಿಸಿ, ಸುಮಾರು ೩೦೦ ಹೆಂಡದಂಗಡಿಗಳ ಮುಂದೆ ಸ್ವಯಂಸೇವಕರನ್ನು ನಿಲ್ಲಿಸಿ, ಗಿರಾಕಿಗಳು ಹಿಂದೆರಳುವಂತೆ ಮಾಡಿದರು. ಇದೇ ಹೊತ್ತಿಗೆ ಬಂಗಾಳದ ಮುಜಫರಪುರದಲ್ಲಿ ಕೈಬಾಂಬನ್ನು ಯಾರೋ ಸಿಡಿಸಿದರು. ತಿಲಕರು "ಕೇಸರಿ"ಯಲ್ಲಿ ಈ ವಿಷಯವನ್ನು ಪ್ರಸ್ತಾಪಿಸುತ್ತಾ, ಬಾಂಬಿನ ಸಿಡಿತವನ್ನು ಖಂಡಿಸಿದರು; ಆದರೆ ಇನ್ನು ಮುಂದೆ ಬಾಂಬಿನ ಸಿಡಿತವಾಗದಂತೆ ನೋಡಿಕೊಳ್ಳಬೇಕಾದರೆ, ಸರಕಾರವು ರಾಜಕೀಯ ಸುಧಾರಣೆಗಳನ್ನು ಅತ್ಯವಶ್ಯವಾಗಿ ತರಬೇಕೆಂದೂ ಪ್ರತಿಪಾದಿಸಿದರು.

೦ ೦

ಇದು ಸರಕಾರಕ್ಕೂ— ಪ್ರಾಯಶಃ ಕಾಂಗ್ರೆಸಿಗೂ— ಬೇಕಾಗಿದ್ದ ಅವಕಾಶವನ್ನು ಪುನಃ ಒದಗಿಸಿಕೊಟ್ಟಿತು. ಸರಕಾರವು ಬಾಂಬಿನ ಪ್ರಯೋಗಕ್ಕೆ ಪ್ರೋತ್ಸಾಹವನ್ನೆ ಕೊಡುತ್ತಿರುವರೆಂಬ ಆರೋಪದ ಮೇಲೆ ತಿಲಕರನ್ನು ವಿಚಾರಣೆಗೆ ಗುರಿಪಡಿಸಿತು. ಅತ್ಯಧಿಕ ಅಪಾಯಕಾರಿಯಾದ ದಂಗೆಖೋರನೆಂದು ಸರಕಾರವು ತಿಲಕರನ್ನು ವರ್ಣಿಸಿತು. ತಿಲಕರು ೨೧ ತಾಸುಗಳ ವರೆಗೆ ತನ್ನ ನಿಲುಮೆಯನ್ನು ವಿವರಿಸಿದರು; ಬಾಂಬಿನ ಸಿಡಿತವನ್ನು ಸಮರ್ಥಿಸುವುದು ತನ್ನ ಉದ್ದೇಶವಾಗಿರಲಿಲ್ಲವೆಂದೂ ಅವರು ಸ್ಪಷ್ಟಪಡಿಸಿದರು. ಆದರೆ ನ್ಯಾಯಾಧೀಶರು "ರಾಜಕೀಯ ಚಳವಳದ ಒಂದು ಸಾಧನವಾಗಿ ಬಾಂಬು

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ, ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ
ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,
TENKAPET, **UDIPI,** S. KANARA.

ಮೂಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4¼% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%
ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಗಳಿವೆ ಎಂಬಂತೆ ನೀವು ಬರೆದಿರಿ" ಎನ್ನುತ್ತಾ ಆರು ವರ್ಷಗಳ ವರೆಗೆ ದೇಶತ್ಯಾಗದ ಶಿಕ್ಷೆಯನ್ನು ವಿಧಿಸಿದರು. "ನಾನು ಇಟ್ಟುಕೊಂಡಿರುವ ಗುರಿಯನ್ನು ಮುಟ್ಟಲು ಸ್ವತಂತ್ರನಾಗಿರುವುದಕ್ಕಿಂತಲೂ ತೊಂದರೆಗಳನ್ನನುಭವಿಸುವುದೇ ಹಿತಕರವೆಂಬುದು ದೈವೇಚ್ಛೆಯಾಗಿರಬಹುದು" ಎಂದು ತಿಲಕರು ಈ ಸಂದರ್ಭದಲ್ಲಿ ಉದ್ಗಾರವೆತ್ತಿದರು.

ಬರ್ಮದ ಮಾಂಡಲೆಯಲ್ಲಿ ತಿಲಕರು ದೇಶ ತ್ಯಾಗದ ಶಿಕ್ಷೆಯನ್ನು ಭೋಗಿಸಿದರು. ಈ ಅವಧಿಯಲ್ಲಿ ಅವರು ಅತ್ಯುಪಯುಕ್ತವಾದ ಕೆಲವು ಗ್ರಂಥಗಳನ್ನು ಬರೆದರು. ತಮ್ಮ ಪತ್ರಿಕಾ ಲೇಖನಗಳಿಂದಲೂ ೧೮೯೩ರಲ್ಲಿಯೇ ಪೌರಸ್ತ್ಯ ಸಂಸ್ಕೃತಿಯ ಸಾರವನ್ನು ಕುರಿತು ತಾವು ಬರೆದಿದ್ದ "ದಿ ಓರಿಯನ್" ಎಂಬ ಗ್ರಂಥದಿಂದಲೂ ತಿಲಕರು ಪ್ರತಿಭಾವಂತ ಲೇಖಕರೆಂದು ಹೆಸರು ಗಳಿಸಿದ್ದರು. ಮಾಂಡಲೆಯ ಸೆರೆಮನೆಯಲ್ಲಿ ಅವರು ಗೀತೆಗೆ ಭಾಷ್ಯವನ್ನು ಬರೆದರು; ಕೇವಲ ಮೂರು ತಿಂಗಳ ಅವಧಿಯೊಳಗೆಯೇ ಈ ಮಹತ್ವಪೂರ್ಣ ಗ್ರಂಥವನ್ನವರು ಬರೆದರೆಂದು ಹೇಳಿದರೆ, ಅವರ ಮೇಧಾವಿತನದ ಕಲ್ಪನೆಯಾದೀತು. ಸೆರೆಮನೆಯಲ್ಲಿ ಅವರು "ದಿ ಆರ್ಕ್‌ಟಿಕ್ ಹೋಮ್ ಇನ್ ದಿ ವೇದಾಸ್" ಎಂಬವೇದಗಳನ್ನು ಕುರಿತಾದ ಗ್ರಂಥವನ್ನು ಬರೆದರು. ವಿಮರ್ಶಕರ ಅಭಿಪ್ರಾಯದಂತೆ ಈ ಮೂರು ಗ್ರಂಥಗಳೇ ತಿಲಕರ ವಿದ್ವತ್ಪ್ರತಿಭೆಯನ್ನು ಪ್ರದರ್ಶಿಸಲು ಮತ್ತು ಅವರನ್ನು ಲೋಕಮಾನ್ಯರನ್ನಾಗಿ ಮಾಡಲು ಸಾಕು! ಆದರೆ ತಿಲಕರು ಗ್ರಂಥಕಾರರಾಗಿಯಷ್ಟೇ ಉಳಿಯದೆ ಶಿಕ್ಷಕರಾಗಿ, ರಾಜಕೀಯ ಪಟುಗಳಾಗಿ ಮತ್ತು ಯಶಸ್ವಿ ಪತ್ರಿಕೋದ್ಯಮಿಯಾಗಿ ಮಾಡಿದ ಸೇವೆಗೆ ಲೋಕಮಾನ್ಯರೆಂದು ಜನರಿತ್ತ ಬಿರುದು ಎಷ್ಟಕ್ಕೂ ಸಾಲದು.

೦೦೦

ಮಾಂಡಲೆಯ ಸೆರೆಮನೆಯಲ್ಲಿ ತಿಲಕರು ಇದ್ದಾಗ, ಕಾಂಗ್ರೆಸಿನ ಸೌಮ್ಯವಾದಿ ಗುಂಪಿನ ಧುರೀಣರಾದಗೆ ೧೯೧೫ ಮಡಿದಿದ್ದರು. ಕಾಂಗ್ರೆಸಿನಲ್ಲಿ ಡಾ. ಆನಿ ಬೆಸೆಂಟರು ಪ್ರವೇಶವನ್ನು ಪಡೆದಿದ್ದರು. ಅಷ್ಟೆಯಲ್ಲ ಒಬ್ಬ ಗಣ್ಯ ಧುರೀಣೆಯೂ ಆಗಿದ್ದರು. ತಿಲಕರು ಸೆರೆಮನೆವಾಸವನ್ನು ಮುಗಿಸಿಬಂದ ಬಳಿಕ, ಕಾಂಗ್ರೆಸಿನ ಸೌಮ್ಯವಾದಿಗಳು ಮಡಿತವ ತಿಕೆಯನ್ನು ಬಿಟ್ಟುಕೊಡಲು ಸಿದ್ಧರಿರಲಿಲ್ಲ. ಆದರೆ, ಉಗ್ರವಾದಿತ್ವವು ಇಷ್ಟರೊಳಗೆ ಹೆಚ್ಚಿನವರಿಗೆ ಪ್ರಿಯವೆನಿಸಿದ್ದಿತು. ಬೆಸೆಂಟರ ಮಧ್ಯಸ್ಥಿಕೆಯಿಂದೆಂಬಂತೆ ಕಾಂಗ್ರೆಸಿನ ಸಂಪರ್ಕವು ತಿಲಕರಿಗೆ ಪುನಃ ಸಿಕ್ಕಿತು. ಆದರೆ ಅವರು ಬೆಸೆಂಟರ ಸಹಯೋಗದಿಂದ "ಹೋಮ್‌ರೂಲ್" ಚಳವಳವನ್ನೆ ಅನಂತರ ಪ್ರತಿಪಾದಿಸಿದರು. ಗಾಂಧೀಜಿಗೆ ಮುಂಚೆ ಇದೇ ಚಳವಳಿ ಜನಪ್ರಿಯವಾಯಿತು.

"ಜನರು ಯಾರಾದರೊಬ್ಬ ಆಂಗ್ಲ ಗವರ್ನರ ಅಥವಾ ಇತರ ಪದಾಧಿಕಾರಿಯನ್ನು ಮೆಚ್ಚದಿದ್ದರೆ ಅವರನ್ನು ಬದಲಾಯಿಸುವ ಅಧಿಕಾರವನ್ನು ಪಡೆದಿರಬೇಕು. ಈ ದೇಶವನ್ನು ಹಿಂದೆ ಹಿಂದು ಮತ್ತು ಮುಸ್ಲಿಂ ಅರಸರು ಆಳಿದ್ದಾರೆ; ಆದುದರಿಂದ ಭಾರತೀಯರು ಅಧಿಕಾರವನ್ನು ಸಮರ್ಥವಾಗಿ ನಿರ್ವಹಿಸಲಾರರೆಂಬ ಮಾತು ಸುಳ್ಳು. ಭಾರತೀಯರಿಗೇ ಅಧಿಕಾರ ಸ್ಥಾನದಲ್ಲಿರಬೇಕೆಂಬುದೇ ಸ್ವರಾಜ್ಯದ ತಿರುಳು" ಎಂದು ತಿಲಕರು ಹೇಳುತ್ತಿದ್ದರು. "ಹೋಮ್ ರೂಲ್" ಚಳವಳದ ವಿಷಯದಲ್ಲಿ ತದಭಿಪ್ರಾಯವನ್ನು ಬ್ರಿಟಿಷರಲ್ಲಿಯೇ ಮೊದಲು ಮೂಡಿಸಬೇಕೆಂದು ತಿಲಕರು ಬಯಸಿ, ಇಂಗ್ಲೆಂಡಿಗೆ ಹೋಗಲು ಬಯಸಿದರು. ಭಾರತ ಸರಕಾರವು ಇಂಗ್ಲೆಂಡಿನ ಪರವಾನಿಗೆಯನ್ನು ಕಾಯದೆ ತಾನಾಗಿಯೇ ಅವರನ್ನು ಕಳಿಸಿಕೊಟ್ಟಿತು. ಆದರೆ ಆಗ ಯುದ್ಧಕಾಲವಾದುದರಿಂದ (೧೯೧೬) ಇಂಗ್ಲೆಂಡಿನ ಸರಕಾರ ಈ ದಂಗೆಖೋರನನ್ನು ಸ್ವಾಗತಿಸಲು ಸಿದ್ಧವಿರಲಿಲ್ಲ. ಹೀಗಾಗಿ ಪ್ರಯಾಣವು ಅರ್ಧದಲ್ಲೆ ನಿಂತಿತು. ಮುಂದೆ ೧೯೧೮ರಲ್ಲಿ ತಿಲಕರು "ಇಂಡಿಯನ್ ಅನ್‌ರೆಸ್ಟ್" ಎಂಬುದರ ಗ್ರಂಥಕರ್ತನ ಮೇಲೆ ಮಾನಹಾನಿ ಖಟ್ಲೆಯನ್ನು ಹಾಕಿ, ಈ ಸಂಬಂಧದಲ್ಲಿ ಇಂಗ್ಲೆಂಡಿಗೆ ಹೋಗಲು ಬಯಸಿದರು. ಆಗ ಉಭಯ ಸರಕಾರಗಳಿಂದಲೂ ಅನುಮತಿ ದೊರೆಯಿತು. ಆಗ ತಿಲಕರನ್ನು ಸ್ವಾಗತಿಸಿದ ಬ್ರಿಟಿಷರಲ್ಲಿ ಒಬ್ಬ ಮಹಿಳೆಯೂ ಮಿ. ಫೆನ್ನರ್ ಬ್ರೋಕ್‌ವೇ ಎಂಬ ಇನ್ನೊಬ್ಬ ಮಹನೀಯರೂ ಈಗ ಬದುಕಿದ್ದಾರೆ. ಬ್ರೋಕ್‌ವೇಯವರು ಆಗ ತಿಲಕರು ಇಳಿದಿದ್ದ ಮನೆಯಲ್ಲೊಂದು ಸ್ಮಾರಕ ಫಲಕವನ್ನು ನೆಲೆಗೊಳಿಸಲು ಲಂಡನಿನ ನಗರ ಸಭೆಯೊಡನೆ ಏರ್ಪಾಡುಗಳನ್ನೀಗ ಮಾಡುತ್ತಿದ್ದಾರೆ.

೦ ೦

ತನ್ನ ಬ್ರಿಟನಿನ ವಾಸ್ತವ್ಯಕಾಲದಲ್ಲಿ ಲೋಕಮಾನ್ಯರು ಅವಿಶ್ರಾಂತವಾಗಿ ದುಡಿದರು. ಸ್ವರಾಜ್ಯದ ಕುರಿತು ಅವರು ದೀರ್ಘ ಭಾಷಣಗಳನ್ನಿತ್ತರು. ಅಮೇರಿಕದಲ್ಲಿ ಆಗ ಇದ್ದ ಲಾಲಾ ಲಜಪತರಾಯರೊಡನೆಯೂ ಅವರು ಸಂಪರ್ಕವನ್ನು ಸ್ಥಾಪಿಸಿಕೊಂಡು ಅಮೇರಿಕನ್ನರ ಹೃದಯವು ಭಾರತೀಯರ ಹೋರಾಟದೊಡನೆ ಸಹಾನುಭೂತಿ ವ್ಯಕ್ತಪಡಿಸುವಂತೆ ನೋಡಿದರು. ೧೯೧೯ನೇ ವರ್ಷದ ಕೊನೆಗೆ, ಅಮೃತಸರದಲ್ಲಿ ನೆರೆದ ಮಹತ್ವಪೂರ್ಣವಾದ ಕಾಂಗ್ರೆಸು ಅಧಿವೇಶನಕ್ಕೆ ಸರಿಯಾಗಿ ತಿಲಕರು ಭಾರತಕ್ಕೆ ಆಗಮಿಸಿದರು. ಅವರ ತೇಜಸ್ಸಿನ ಮುಂದೆ ಸಾಮಾನ್ಯ ಧುರೀಣರು ಮಂತ್ರಮುಗ್ಧರಾಗುತ್ತಿದ್ದರು. ಸ್ವತಃ ಜವಾಹರಲಾಲ ನೆಹರುಗಳು ಇಂಗ್ಲೆಂಡಿನಿಂದ ಭಾರತಕ್ಕೆ ಬಂದ ಬಳಿಕ, ಕಾಂಗ್ರೆಸಿನ ಅಧಿವೇಶನಗಳಲ್ಲಿ ತಿಲಕರ ಸಂಪರ್ಕ ಉಂಟಾದಾಗ, ಗೌರವ ಭಾವನೆಯಿಂದ ಆನ್ಯತರಾಗುತ್ತಿದ್ದರೇ ಹೊರತು, ಸಲಿಗೆಯಿಂದ ಮಾತುಕತೆ ನಡೆಸುವುದಕ್ಕೆ ಉದ್ಯುಕ್ತರಾಗುತ್ತಿರಲಿಲ್ಲ.

ಇಷ್ಟು ಗಾಂಭೀರ್ಯವುಳ್ಳವರಾದ ತಿಲಕರು ವಿರಾಮದ ಮುಖನೋಡದೆ ದೇಶಸೇವೆಯ ಫಲವಾಗಿ ೧೯೨೦ನೇ ಜುಲಾಯಿಯಲ್ಲಿ ಮಲೇರಿಯಕ್ಕೆ ತುತ್ತಾದರು. ಕೆಲದಿನಗಳಲ್ಲಿ ಮಲೇರಿಯದಿಂದ ಗುಣಮುಖರಾದರು, ಆದರೆ ತನ್ನ ವ್ಯವಹಾರವೊಂದರಲ್ಲಿ ಭಾಗವಹಿಸಲು ಅವರು ಮುಂಬಯಿಗೆ ಬಂದಾಗ ಜ್ವರವು ಮರುಕಳಿಸಿತು. ಮುಂದೆ ಈ ರೋಗವೇ ಬಲಿತು ೧ನೇ ಆಗೋಸ್ತು ೧೯೨೦ರಂದು ತಮ್ಮ ೬೪ನೇ ವಯಸ್ಸಿನಲ್ಲಿ ಲೋಕಮಾನ್ಯರು ದಿವಂಗತರಾದರು. ಮಹಾತ್ಮ ಗಾಂಧೀಜಿಯವರೂ ನೆಹರುಗಳೂ ಆಗ ಸಿಂಧಿನ ಸಂಚಾರದಲ್ಲಿದ್ದರು. ಅವರೂ ಇತರ ಧುರೀಣರೂ ಲೋಕಮಾನ್ಯರಿಗೆ ಅಂತಿಮ ಶ್ರದ್ಧಾಂಜಲಿಯನ್ನು ಅರ್ಪಿಸಲು ಮುಂಬಯಿಗೆ ಧಾವಿಸಿದರು. ಲಕ್ಷಗಟ್ಟಳೆಯಲ್ಲಿ ಭಾರತೀಯರು ಹಿಂದೂ ಮುಸ್ಲಿಮರೆಂಬ ಭೇದವನ್ನು ಮರೆತು ಈ ಮಹಾ ನಾಯಕನ ನಿಧನದುಃಖದಲ್ಲಿ ಸಹಭಾಗಿಗಳಾದರು. ಭಾರತದ ಪುಣ್ಯಪುರುಷನೊಬ್ಬನು ಕಣ್ಮರೆಯಾದುದಕ್ಕೆ ಅಂದು ಅಳದ ದೇಶಾಭಿಮಾನಿ ಇರಲಿಲ್ಲ—ಇಂದು ಅಷ್ಟೇ ಉಜ್ವಲವಾದ ರಾಷ್ಟ್ರಾಭಿಮಾನದೊಡನೆ ಭಾರತದ ನಾಗರಿಕರೆಲ್ಲರೂ ಲೋಕಮಾನ್ಯ ತಿಲಕರ ಆತ್ಮಕ್ಕೆ ಶಾಂತಿಯನ್ನು ಕೋರಿ, ಸ್ಫೂರ್ತಿ ಪೊಂದಬೇಕಾಗಿದೆ!

(೧ನೇ ಪುಟದಿಂದ)

ಪದಾರ್ಥಗಳು, ಚಾಪೆ ಮತ್ತು ಬುಟ್ಟಿ ಹೆಣೆಯುವುದು, ಅಂಗಿ ಗುಂಡಿಯ ತಯಾರಿಕೆ, ಗೇರು ಹಣ್ಣಿನ ಪಾನೀಯ, ಬೆತ್ತದ ಉಪಕರಣಗಳ ತಯಾರಿಕೆ, ಕಾಗದದ ತಯಾರಿಕೆ, ಅಂಬರ ಚರಖದ ತಯಾರಿಕೆ ಪಾದರಕ್ಷೆಗಳ ತಯಾರಿಕೆ, ಬಡಗಿ-ಕಮ್ಮಾರ-ಕುಂಬಾರ ಕೆಲಸಗಳಲ್ಲಿ ಶಿಕ್ಷಣ ಇತ್ಯಾದಿಗಳಿಗೆ ಸಂಬಂಧಿಸಿ ಅನೇಕ ಕೇಂದ್ರಗಳನ್ನು ತೆರೆಯುವಂತೆ ಕೇಳಿಕೊಳ್ಳಲಾಯಿತು.

ಜಿಲ್ಲೆಯಲ್ಲಿ ಸಾರಿಗೆ ಮತ್ತು ಸಂಪರ್ಕದ ಅನುಕೂಲತೆಗಳನ್ನು ಹೆಚ್ಚಿಸಲು ಸುಮಾರು ಎರಡೂವರೆ ಸಾವಿರ ಮೈಲುಗಳಷ್ಟು ಹೊಸ ಮಾರ್ಗದ ರಚನೆಯಾಗಬೇಕೆಂದು ಸಮಿತಿ ಹೇಳಿದೆ; ಅಲ್ಲದೆ ಈಗಿನ ೫೦೦ ಮೈಲು ಉದ್ದದ ರಸ್ತೆಯನ್ನು ಉತ್ತಮಪಡಿಸಬೇಕು; ೩೫೦ ಮೈಲು ಉದ್ದದ ರಸ್ತೆಗೆ ಡಾಮರು ಹಾಕಿಸಬೇಕು; ೧೪೦ ಮೋರಿಗಳನ್ನು ಹೊಸತಾಗಿ ಕಟ್ಟಿಸಬೇಕು; ಈಗಿನ ೧೨೦೦ ಮೋರಿ ಅಥವಾ ಸಂಕಗಳ ದುರಸ್ತಿಯನ್ನು ನಡೆಸಬೇಕು ಎನ್ನಲಾಯಿತು. ಅರಣ್ಯಗಳ ವಿಸ್ತರಣೆಯ ಬಗ್ಗೆಯೂ ಆಶಾಭರಿತ ಕಾರ್ಯಕ್ರಮವನ್ನು ಸಿದ್ಧಗೊಳಿಸಲಾಯಿತು. ಇದರಂತೆ ಕೈಕಾಳುವೆಣಸಿನ ಬೇಸಾಯಕ್ಕಾಗಿ ಸುಮಾರು ೧೫೦೦ ಎಕ್ರೆ ಸ್ಥಳವನ್ನು ಮೀಸಲಿಡಬೇಕು; ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು ೧೪೦೦೦ ಎಕ್ರೆಯಷ್ಟು ಕಾಡುಗಳನ್ನು ಹೊಸತಾಗಿ ನಿರ್ಮಿಸಬೇಕು. ಈ ಉದ್ದೇಶಕ್ಕಾಗಿ ಗ್ರಾಮಪಂಚಾಯತುಗಳಿಗೆ ಎಕ್ರೆಯೊಂದಕ್ಕೆ ತಗಲಬಹುದಾದ ೫೦ ರೂಪಾಯಿ ವೆಚ್ಚದಲ್ಲಿ ಅರೆವಾಸಿಯಷ್ಟನ್ನು ಹತ್ತು ವರ್ಷಗಳ ವರೆಗೆ ಬಡ್ಡಿಯಿಲ್ಲದ ಸಾಲವಾಗಿ ಕೊಡಬೇಕು. ಎನ್ನಲಾಯಿತು. ಜಿಲ್ಲೆಯ ವಿವಿಧ ಪ್ರಬುದ್ಧ ಗ್ರಾಮಪಂಚಾಯತುಗಳೂ ಎರಡು ನಗರ ಸಭೆಗಳೂ ತಯಾರಿಸಿದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಹಲವನ್ನು ಅಂಗೀಕರಿಸಲಾಯಿತು. ಮೀನುಗಾರಿಕೆಯ ಅಭಿವೃದ್ಧಿಗೆ ಸಂಬಂಧಿಸಿದ ವಿಶೇಷ ಕಾರ್ಯಕ್ರಮವನ್ನು ಸಹ ಸಮಿತಿಯು ಅನುಮೋದಿಸಿತು.

ಆರೋಗ್ಯ ಮತ್ತು ಶಿಕ್ಷಣ ರಂಗಗಳ ಅಭಿವೃದ್ಧಿಯನ್ನು ಪ್ರಸ್ತಾಪಿಸುತ್ತಾ ಸಮಿತಿಯು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯಕೀಯ ಶುಶ್ರೂಷೆಯ ಸೌಲಭ್ಯಗಳು ಹೆಚ್ಚಬೇಕೆಂದು ಹೇಳಿದೆ; ಹಾಗೆಯೇ ಶಿಕ್ಷಣದ ಅನುಕೂಲತೆಗಳು ಅಧಿಕವಾಗಬೇಕೆಂದೂ ಭಾವಿಸಿದೆ. ಮುಂದಿನ ಯೋಜನಾವಧಿಯಲ್ಲಿ ಮಂಗಳೂರಿನಲ್ಲಿರುವ ಸರಕಾರಿ ಆಸ್ಪತ್ರೆಯನ್ನು ವಿಸ್ತರಿಸಿ ೬೦೦ ಹಾಸಿಗೆಗಳಿರುವಂತೆ ಮಾಡುವ ನಿರ್ಧಾರವನ್ನು ಸರಕಾರವು ಈಗಾಗಲೇ ಕೈಗೊಂಡಿದೆ. ಇದರ ಜೊತೆಗೆ, ತಾಲೂಕು ಕೇಂದ್ರಗಳಲ್ಲಿರುವ ರುಗ್ಣಾಲಯಗಳನ್ನು ವಿಸ್ತರಿಸಬೇಕು; ಸುಮಾರು ೨೧ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನೂ ೮೧ ಗ್ರಾಮಾಂತರ ಶುಶ್ರೂಷಾಲಯಗಳನ್ನೂ ೧೩೨ ಹೆರಿಗೆ ಮಂದಿರಗಳನ್ನೂ ತೆರೆಯಬೇಕು. ಆನೆಕಾಲುರೋಗ ನಿರೋಧಕ್ಕಾಗಿ ಪ್ರತ್ಯೇಕ ವೈದ್ಯಕೀಯ ಪಥಕವನ್ನು ಏರ್ಪಡಿಸಬೇಕು; ಪ್ರಾಥಮಿಕ ಶಾಲೆಯ ಮಕ್ಕಳ ಆರೋಗ್ಯವನ್ನು ಸಹ ಪರೀಕ್ಷಿಸುವಷ್ಟುಮಟ್ಟಿಗೆ ಆರೋಗ್ಯರಕ್ಷಣೆಯ ಕಾರ್ಯಕ್ರಮವು ವಿಸ್ತೃತವಾಗಬೇಕು ಎನ್ನಲಾಯಿತು. ಜಿಲ್ಲೆಯಲ್ಲಿ ಇನ್ನೂ ಮೂರು ಕಾಲೇಜುಗಳನ್ನು ಪೂರ್ವೋತ್ತರ ದಕ್ಷಿಣ ತಾಲೂಕುಗಳಲ್ಲಿ ನೆಲೆಗೊಳಿಸಬೇಕು; ಎರಡು ಮೂಲಶಿಕ್ಷಣ ತರಬೇತಿ ಕೇಂದ್ರಗಳನ್ನು ಹೊಸತಾಗಿ ತೆರೆಯಬೇಕು; ಉಡುಪಿಯಲ್ಲಿ ಇಂಜಿನಿಯರಿಂಗಿನ ಶಿಕ್ಷಣವನ್ನು ನೀಡುವ ಕೇಂದ್ರದ ಸ್ಥಾಪನೆಯಾಗಬೇಕು; ಸ್ನಾತಕೋತ್ತರ ಶಿಕ್ಷಣ ವ್ಯವಸ್ಥೆಯನ್ನು ಉಡುಪಿ ಮತ್ತು ಮಂಗಳೂರಿನ ಕಾಲೇಜುಗಳಲ್ಲಿ ಏರ್ಪಡಿಸಬೇಕು; ಜಿಲ್ಲಾ ಬೋರ್ಡಿನ ವಶದಲ್ಲಿರುವ ಹೈಸ್ಕೂಲುಗಳ ಕಟ್ಟಡ ಸ್ಥಿತಿಗತಿ ಹಾಗೂ ಮೂಲ್ಕಿಯ ಸರಕಾರಿ ಹೈಸ್ಕೂಲಿಗೆ ಕಟ್ಟಡದ ರಚನೆ ಆಗಬೇಕು ಎಂಬಿತ್ಯಾದಿ ಸೂಚನೆಗಳನ್ನು ಸಮರ್ಥಿಸಲಾಯಿತು.

ಇದೀಗ ಪ್ರಕಟವಾಗಿದೆ—

ಕನ್ನಡದಲ್ಲಿ ಮೊದಲನೆಯದೆಂದೇ ಹೇಳಬಹುದಾದ
ಅಣುಶಕ್ತಿಯ ಸಚಿತ್ರ ವಿವೇಚನಾ ಗ್ರಂಥ

ಹಿರೋಶಿಮಾದಿಂದ ಜಿನೀವ

ಬರೆದವರು:
ಶ್ರೀ. ಯು. ರಾಘವೇಂದ್ರ ಆಚಾರ್ಯ, ಎಂ. ಎ., ನವದೆಹಲಿ.
ಮುನ್ನುಡಿಕಾರರು: ಶ್ರೀ. ಶಿವರಾಮ ಕಾರಂತರು.
ಪ್ರತಿಯೊಬ್ಬರೂ ಓದಲೇಬೇಕಾದ ನವೀನ ಪುಸ್ತಕ.
ಉತ್ತಮ ಕಾಗದ. ಬೆಲೆ: ರೂ. ೧—೮—೦.
ನವಯುಗ ಪ್ರೆಸ್, ಉಡುಪಿ.

Edited, Printed & Published by K. H. Shetty, at the Navayuga press, Udipi S. India

ECD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | ಉಡುಪಿ, 2—8—1956 | ಸಂಚಿಕೆ ೪೮

VOL. 35 | NO. 48

ಗೋವೆಯ ಒಳಗಡೆ . . .

ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಧುರೀಣರಾದ ಶ್ರೀ ಪೀಟರ್ ಆಳ್ವಾರೀಸ ಬೆಳಗಾಂವಿಯಲ್ಲಿ ಕಳೆದ ೨೭ನೇ ದಿನಾಂಕ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಪರಕೀಯ ಆಡಳಿತದ ವಿರುದ್ಧ ಗೋವೆಯಲ್ಲಿ ಸಂಘಟನಾತ್ಮಕ ಹೋರಾಟವು ಶಕ್ತಿಪೂರ್ಣವಾಗಿ ಮುಂದೊತ್ತುತ್ತಿದೆಯೆಂದು ಸ್ಪಷ್ಟಪಡಿಸಿದ್ದಾರೆ. ಪ್ರದರ್ಶನೀಯ ಮುಖದ ಕ್ರಿಯೆಗಳು ನಡೆದಿಲ್ಲವೆಂದ ಮಾತ್ರಕ್ಕೆ ಗೋವೆಯ ಜನರು ನಿಷ್ಕ್ರಿಯರಾಗಿದ್ದಾರೆಂದು ತಿಳಿಯಬಾರದು ಎಂದವರು ಸಾರಿದ್ದಾರೆ.

ಕಳೆದ ಎರಡು-ಮೂರು ತಿಂಗಳುಗಳ ಅತ್ಯಧಿಕ ಸಂಖ್ಯೆಯಲ್ಲಿ ದಸ್ತಗಿರಿ ನಡೆಯುತ್ತಿರುವುದೇ ಗೋವೆಯ ಜನರ ಗುಪ್ತ ಹೋರಾಟವು ಪ್ರಬಲವಾಗಿರುವುದರ ದ್ಯೋತಕವೆಂದವರು ತಿಳಿಸಿದರು. ಇಬ್ಬರಾದರೂ ಪೋರ್ಚುಗೀಸರ ಹೊಡೆತದಿಂದ ಮೃತಪಟ್ಟರು, ಕನಿಷ್ಠ ಪಕ್ಷ ೪೦೦ ಮಂದಿಯಾದರೂ ದಸ್ತಗಿರಿಗೊಳಗಾದರು ಎಂದವರು ಹೇಳಿದರು.

ದಸ್ತಗಿರಿಯಾದವರಲ್ಲಿ ಕೆಥೋಲಿಕರೂ ವ್ಯಾಪಾರಿಗಳೂ ಪಾದ್ರಿಗಳೂ ಅಲ್ಲದೆ, ಕೆಲವು ಪೋಲೀಸರೂ ಇದ್ದಾರೆ. ಗೋವೆಯ ಜನರು ತಮ್ಮ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ತ್ಯಾಗಕ್ಕೆ ಬೇರೆ ನಿದರ್ಶನವೇನು ಬೇಕು? ಭದ್ರತೆಯ ವ್ಯವಸ್ಥೆಗಳನ್ನು ನೋಡಿಕೊಳ್ಳಬೇಕಾದ ಪೋಲೀಸರು ಸಹ ಈಗ ಆಳಿಥರಿಗಳಾದ ಪೋರ್ಚುಗೀಜರಿಗೆ ಶತ್ರುಗಳಾಗಿ ಬಿದ್ದಿದ್ದಾರೆ, ಎಂದ ಮೇಲೆ, ಅಧಿಕಾರದ ಹಿಡಿತ ಏನೇನೂ ಬಿಗಿಯಾಗಿಲ್ಲ.

ಗೋವೆಯ ಜನರ ಆಂದೋಲನವು ಇಷ್ಟು ಪ್ರಬಲವಾಗಿದೆ ಎಂಬುದನ್ನು ಕೇಳಿ ಭಾರತೀಯರು ಆಶ್ಚರ್ಯಚಕಿತರಾಗಬಹುದು. ಆಳ್ವಾರೀಸರೇ ಹೇಳಿದಂತೆ, ಗೋವೆಯ ಜನರ ಆಂದೋಲನವು ಹೆಚ್ಚಿನ ಪ್ರಚಾರವಿಲ್ಲದೆ ಮೌನವಾಗಿ ಸಾಗಿರುವುದೇ ಇದರ ಕಾರಣ.

ನಮ್ಮ ಧುರೀಣರೂ ಜನರೂ ರಾಜ್ಯಗಳ ಪುನಾರಚನೆಯ ವಿಷಯದಲ್ಲಿಯೇ ಈಗ ಮಗ್ನರಾಗಿರುವರಲ್ಲದೆ, ಗೋವೆಯ ವಿಚಾರವಾಗಿ ಹೆಚ್ಚು ಮಾತನಾಡುತ್ತಿಲ್ಲ. ಅದಾಗ್ಯೂ ಸಂಸತ್ತಿನ ಅಧಿವೇಶನವು ಈಗಷ್ಟೇ ಪ್ರಾರಂಭವಾಗಿರುವುದರಿಂದ ಅಲ್ಲಿ ಕೆಲವು ಪ್ರಶ್ನೋತ್ತರಗಳು ನಡೆಯುತ್ತವೆ, ಮತ್ತೀ ಕಾರಣದಿಂದ ಗೋವೆಯ ನೆನಪು ನಮಗೆ ಪುನಃ ಆಗುತ್ತಿದೆ.

ಪ್ರಶ್ನೆಗಳನ್ನು ಉತ್ತರಿಸುತ್ತಾ ಪ್ರಧಾನಿಗಳು ಮೊನ್ನೆ ೨೭ನೇ ದಿನಾಂಕ ಹೀಗೆಂದರು: "ಗೋವೆಯೊಳಗೆ ಬಲವಾದ ರಾಷ್ಟ್ರೀಯ ಆಂದೋಲನವು ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವುದರ ಸುದ್ದಿಯು ಸರಕಾರಕ್ಕೆ ಬಂದಿದೆ. ಈ ಆಂದೋಲನವು ದಿನ ಕಳೆದಂತೆ ಶಕ್ತಿಶಾಲಿಯಾಗುತ್ತಾ ಹೋಗುತ್ತಿದೆಯೆಂದೂ ಹೇಳಲಾಗಿದೆ."

ಇದರ ಪರಿಣಾಮವನ್ನು ಪ್ರಧಾನಿಗಳು ಹೀಗೆ ವಿವರಿಸಿದರು—"ಪ್ರಬಲವಾಗುತ್ತಿರುವ ರಾಷ್ಟ್ರೀಯಭಾವನೆಯಿಂದಲೂ ಪೋರ್ಚುಗೀಸರ ವಿರುದ್ಧ ಸಂಘಟಿಸಲ್ಪಡುತ್ತಿರುವ ಜನಾಭಿಪ್ರಾಯದಿಂದಲೂ ಧೈರ್ಯಗೆಟ್ಟ ಅಧಿಕಾರಿಗಳು ಆಂದೋಲನದ ದಮನಕ್ಕಾಗಿ ದಯಾರಹಿತವಾದ ಭೀಕರ ಕ್ರಮಗಳನ್ನು ಕೈಗೊಳ್ಳುತ್ತಿದ್ದಾರೆ. ಜೂನಿನಿಂದೀಚೆಗೆ ೮೦—೧೦೦ ಮಂದಿಯ ದಸ್ತಗಿರಿ ನಡೆದಿರುವುದು ಸಂಶಯದಿಂದ ಅಥವಾ ವಿದ್ರೋಹ ಕಾರ್ಯದಲ್ಲಿ ನಿರತರಾದ ಕಾರಣಕ್ಕಾಗಿ ಈ ಬಂಧನ ನಡೆದಿದೆ. ಇವರಲ್ಲಿ ಗೋವೆಯ ಅನೇಕ ಪ್ರಮುಖರಿದ್ದಾರೆ."

ಮುಂದರಿದು ಅವರು ಕೆಳಗಿನ ಸಂಗತಿಗಳನ್ನು ನಿವೇದಿಸಿದರು— "ಗೋವೆಯೊಳಗಿನ ರಾಜಕೀಯ ಚಟುವಟಿಕೆಗಳ ಮಾಹಿತಿಯನ್ನು ಪಡೆಯುವುದಕ್ಕಾಗಿ ಗೋವೆಯ ಅಧಿಕಾರಿಗಳು ಬಂಧಿತರನ್ನು ಚಿತ್ರಹಿಂಸೆಗೆ ಗುರಿಪಡಿಸುತ್ತಿದ್ದಾರೆ. ಒಬ್ಬ ಬಂಧಿತನನ್ನಂತೂ ಅಮಾನುಷವಾದ ರೀತಿಯಲ್ಲಿ ನಡೆಸಿಕೊಳ್ಳಲಾಯಿತು, ಇದರಿಂದ ಆತನು ಮರಣಗೊಂಡನು. ಗೋವೆಯ ಅಧಿಕಾರಿಗಳು ಮಾತ್ರ ಸೆರೆಮನೆಯಿಂದ ಓಡಿ ಹೋಗುವ ಪ್ರಯತ್ನದಲ್ಲಿ ಆತನಿದ್ದಾಗ ಹಾರಿಸಲ್ಪಟ್ಟ ಗುಂಡಿನಿಂದ ಸತ್ತನೆಂದು ಹೇಳುತ್ತಾರೆ."

ಈಚೆಯ ಈ ಘಟನೆಗಳಲ್ಲಿ ಯಾವುದೇ ಭಾರತೀಯ ನಾಗರಿಕರು ಒಳಗಾಗಿಲ್ಲ. ಗೋವೆಯ ಜನರದೇ ಚಟುವಟಿಕೆ ನಡೆದಿದೆ. ಆದುದರಿಂದ ಭಾರತ ಸರಕಾರವು ಪ್ರತಿಭಟನೆಯನ್ನು ವ್ಯಕ್ತಪಡಿಸುವ ಸಂಭವ ಬಂದಿಲ್ಲ. ಅದಾಗ್ಯೂ, ಗೋವೆಯ ರಾಷ್ಟ್ರೀಯರನ್ನು ಅನ್ಯಾಯವಾಗಿ ನಡೆಸಿಕೊಳ್ಳುತ್ತಿರುವುದರಿಂದ ದೂರಗಾಮಿಯಾದ ಗಂಭೀರ ದುಷ್ಪರಿಣಾಮಗಳಾಗದಿರವೆಂದು ಭಾರತ ಸರಕಾರವು ಆಗಿಂದಾಗ್ಗೆ ಪೋರ್ಚುಗೀಸರಿಗೆ ಎಚ್ಚರಿಕೆಯನ್ನು ಕೊಡುತ್ತಾ ಬಂದಿದೆ— ಎಂದರು ನೆಹರು.

ಗೋವೆಯ ನ್ಯಾಯಾಲಯವು ಇಬ್ಬರು ಕನ್ಯೆಯರಿಗೆ ಸನ್ನೆರಡು ವರ್ಷಗಳ ಸಶ್ರಮ ಶಿಕ್ಷೆಯನ್ನು ವಿಧಿಸಿದ ವಾರ್ತೆಯು ಈಗ ತಾನೇ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅವರು ಕಳೆದ ವರ್ಷ ಎಪ್ರೀಲಿನಲ್ಲಿ ಗೋವೆಯಲ್ಲಿ ರಾಷ್ಟ್ರೀಯ ಕಾಂಗ್ರೆಸಿನ ಅಧಿವೇಶನವನ್ನು ಜರಗಿಸಲು ಸಿದ್ಧತೆಗಳನ್ನು ನಡೆಸಿದ್ದರು. ಇದು ರಾಜದ್ರೋಹವೆಂಬುದೇ ಅವರ ಮೇಲೆ ಹೇರಲಾದ ಆಪಾದನೆ. ಇವರಲ್ಲಿ ಒಬ್ಬರಂತೂ ಸೆರೆಮನೆ ವಾಸದ ಕಷ್ಟಗಳನ್ನು ಅನುಭವಿಸಿ, ರೋಗಪೀಡಿತರಾಗಿ ವಿಪನ್ನಾವಸ್ಥೆಯಲ್ಲಿರುವರೆಂದು ತಿಳಿದು ಬರುತ್ತದೆ.

ಲೋಕ ಸಭೆಯಲ್ಲಿ ವ್ಯಕ್ತವಾದ ಸಂಗತಿಗಳಿಂದ, ಭಾರತ ಸರಕಾರಕ್ಕೆ ಈಜಿಪ್ತಿನ ಪ್ರತಿನಿಧಿಗಳು ತಾವು ಮೂರು ತಿಂಗಳ ಹಿಂದೆ ಗೋವೆಯಲ್ಲಿರುವ ಪರಿಸ್ಥಿತಿಯನ್ನು ಅಭ್ಯಸಿಸಿದ ಬಗ್ಗೆ ವರದಿಯೊಂದನ್ನು ಒಪ್ಪಿಸಿರುವರೆಂದು ತಿಳಿದಿದೆ. ಆದರೆ ಇವರಿಗೆ ಬಂಧನದಲ್ಲಿರುವ ಎಲ್ಲ ಭಾರತೀಯರನ್ನು ನೋಡುವ ಅವಕಾಶವನ್ನು ಪೋರ್ಚುಗೀಸರು ಕೊಟ್ಟಿರಲಿಲ್ಲ.

ಭಾರತ ಸರಕಾರವು ಆರ್ಥಿಕ ನಿರ್ಬಂಧಗಳನ್ನು ಹೇರಿ, ಗೋವೆಯ ಸರಕಾರಕ್ಕೆ ಪ್ರೋತ್ಸಾಹವೇನೂ ದೊರೆಯದಂತೆ ಪ್ರಯತ್ನಶೀಲವಾಗಿದೆ. ಆದರೆ, ಮಂಗಳೂರು-ಮುಂಬಯಿ ಕರಾವಳಿಯಲ್ಲಿ ಅನೇಕರು ಕಳ್ಳ ವ್ಯಾಪಾರವನ್ನು ಮಾಡುತ್ತಿದ್ದಾರೆಂದೂ ಇದರಿಂದ ಗೋವೆಯ ಸರಕಾರಕ್ಕೆ ಆವಶ್ಯಕವಾದ ನಿತ್ಯೋಪಯೋಗದ ಸರಕುಗಳು ಸಿಗುವಂತಾಗಿವೆಯೆಂದೂ ಆಕ್ಷೇಪವೆದ್ದಿದೆ.

ಆರ್ಥಿಕ ನಿರ್ಬಂಧಗಳು ಸಂಪೂರ್ಣ ಜಯಪ್ರದವಾಗಿವೆಯೆಂದು ಸರಕಾರವೂ ಹೇಳುತ್ತಿಲ್ಲ. ಕಳ್ಳ ವ್ಯಾಪಾರಗಳು ನಡೆಯಬಾರದೆಂದು ಅದು ಬಯಸುತ್ತದೆ. ಇದಕ್ಕೆ ಸಹಾಯಕವಾದ ಧೋರಣೆಯನ್ನು ಭಾರತೀಯರು ವಹಿಸಿದರೆ, ಗೋವೆಯ ಜನರ ಹೋರಾಟಕ್ಕೆ ವಿಶೇಷವಾದ ಬೆಂಬಲವಾಗಿ ಇದು ಪರಿಣಮಿಸುವುದರಲ್ಲಿ ಸಂದೇಹವಿಲ್ಲ.

ಪೋರ್ಚುಗಾಲದ ಸೈನಿಕರು ಗಡಿಮೀರಿ ಭಾರತದಲ್ಲಿ ನುಗ್ಗುವ ನಿದರ್ಶನಗಳೂ ಆಗಾಗ್ಗೆ ಕೇಳಿಬಂದಿವೆ. ಇತ್ತೀಚೆಗೆ, ಜುಲಾಯಿ ೧೭ನೇ ದಿನಾಂಕ, ಸಾವಂತವಾಡಿಗೆ ಹತ್ತಿರದ ಹಳ್ಳಿಯೊಂದಕ್ಕೆ ಪೋರ್ಚುಗಾಲದ ಕೆಲವು ಸೈನಿಕರು ನುಗ್ಗಿ ಬಂದು ಶ್ರೀ ಅರ್ಜುನ ಸೀತಾರಾಮ ಎಂಬವ

(೧೨ನೇ ಪುಟ ನೋಡಿರಿ)

ವಿಜ್ಞಾಪನೆ

"ಜಗತ್ತಿನ ಜ್ಞಾನವು ಪುಸ್ತಕದಲ್ಲಡಗಿದೆ"
—ಅಶ್ಸನ್ ಫಿಲಿಪ್ಸ್.

"ಪುಸ್ತಕಗಳು ತುಂಬಿದ ಕಪಾಟುಗಳಿಂದ ಕೋಣೆಯ ಸೌಂದರ್ಯವು ಇಮ್ಮಡಿಸುವುದು"
—ಲೋಕಮಾನ್ಯ ತಿಲಕ.

ಪುಸ್ತಕ ದಾನವಿತ್ತು ಜ್ಞಾನ ದಾನದ ಪುಣ್ಯ ಪಡೆಯಿರಿ!

ಕಾಲ ಮುಂದುವರಿದಂತೆ ಪ್ರಪಂಚದಲ್ಲಿ ನಾನಾಲೋಟದಿಂದ ವಿಜ್ಞಾನ ಬೆಳೆಯುತ್ತಿದೆ, ಜ್ಞಾನ ಹೆಚ್ಚುತ್ತಿದೆ. ಈ ಓಟದಲ್ಲಿ ಮನುಷ್ಯನಾದವನು ಸರಿಸಾಟಿಯಾಗಬೇಕಾದರೆ ಅವನಿಗೆ ತಕ್ಕ ಮಾಹಿತಿಪಡೆಯುವ ಅವಕಾಶ, ಅನುಕೂಲತೆಗಳುಬೇಕು. ಬಗೆಬಗೆಯ ಪುಸ್ತಕಗಳನ್ನು ಓದುವುದರಿಂದ ಈ ಅವಕಾಶ ಒದಗುವುದು. ಆದರೆ ಬೇಕಾದ ಪುಸ್ತಕಗಳನ್ನು ಪಡೆಯುವ ಅನುಕೂಲತೆ ಎಲ್ಲಿದೆ?

ಇಂದು ಓದುಬಲ್ಲವರು ಹೆಚ್ಚುತ್ತಿದ್ದಾರೆ. ಆದರೆ ಪುಸ್ತಕಗಳನ್ನು ಕ್ರಯಕ್ಕೆ ಪಡೆಕೊಳ್ಳುವ ಶಕ್ತಿ ಹೆಚ್ಚಿನವರಲ್ಲಿ ಇಲ್ಲ. ಕೊಂಡುಕೊಂಡರೂ ಓದಿದ ಬಳಿಕ ಆ ಪುಸ್ತಕಗಳನ್ನು ಜಾಗರೂಕತೆಯಿಂದ ಇಟ್ಟುಕೊಳ್ಳುವ ವ್ಯವಸ್ಥೆ ಮನೆಯಲ್ಲಿರಲು ಶಕ್ಯವಿಲ್ಲ. ವ್ಯವಸ್ಥೆ ಇದ್ದರೂ ಆ ಪುಸ್ತಕಗಳ ಪ್ರಯೋಜನ ಹತ್ತು ಮಂದಿಗೆ ಲಭಿಸಲು ಸಾಧ್ಯವಿಲ್ಲ.

ಉಡುಪಿಯಲ್ಲಿ ಸಾರ್ವಜನಿಕ ಪುಸ್ತಕ ಭಂಡಾರಗಳು ಜನತೆಯ ಜ್ಞಾನ ತೃಷೆಯನ್ನು ನೀಗಿಸಲು ಪ್ರಯತ್ನಿಸುತ್ತಿವೆ. ಆದರೆ ಹೆಚ್ಚಿನ ಜನರಿಗೆ ಪುಸ್ತಕಗಳನ್ನು ಓದುವ ಆತುರ ಹುಟ್ಟಿಸಲು, ಆತುರ ಇರುವವರಿಗೆ ಪುಸ್ತಕಗಳನ್ನು ಒದಗಿಸಲು ನಗರದ ವಿವಿಧ ಭಾಗಗಳಲ್ಲಿ, ತೀರ ಹತ್ತಿರದಲ್ಲಿ ಪುಸ್ತಕ ಭಂಡಾರದ ಅನುಕೂಲತೆ ಲಭಿಸುವಂತೆ ತಕ್ಕ ಏರ್ಪಾಡು ಮಾಡಬೇಕಾಗುವುದು. ಈ ದೃಷ್ಟಿಯಲ್ಲಿ ಪ್ರಕೃತ ಕಲ್ಸಂಕ ಮತ್ತು ಪ್ರಗತಿಯ ಎರಡು ಕೇಂದ್ರಗಳಲ್ಲಿ ಪುಸ್ತಕಭಂಡಾರಗಳನ್ನು ತೆರೆಯಬೇಕೆಂದಿರುವೆವು. ಮಹಿಳೆಯರಿಗೆ, ಮಕ್ಕಳಿಗೆ, ಪುರುಷರಿಗೆ, ವಯೋವೃದ್ಧರಿಗೆ-ಎಲ್ಲರಿಗೂ ಅವರವರ ಅಭಿರುಚಿಗೆ ತಕ್ಕಂತ ಲಘು, ಬಿಗು ಬರಹಗಳ ತರತರದ ಪುಸ್ತಕಗಳನ್ನು ಓದುಗರಿಗೆ ಒದಗಿಸಬೇಕೆಂಬ ಧ್ಯೇಯ ಇದೆ.

ಈ ಯೋಜನೆಯನ್ನು ನನ್ನ ಸನ್ಮಿತ್ರರು ತಮ್ಮಲ್ಲಿರುವ ಪುಸ್ತಕಗಳನ್ನು ದಾನಮಾಡಿ ಬೆಂಬಲಿಸಬೇಕಾಗಿ ಪ್ರಾರ್ಥಿಸುತ್ತೇನೆ. ಪಡೆದ ಪುಸ್ತಕಗಳನ್ನು ವ್ಯವಸ್ಥಿತ ರೀತಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಕಲಾಗುವುದು.

ಬರುವ ಆಗೋಸ್ತು 1೦ರ 7ನೇ ತಾರೀಕಿನ ತನಕ ಈ ಬಗ್ಗೆ ಪುಸ್ತಕ ಸಂಗ್ರಹದ ಕಾರ್ಯಕ್ರಮವಿಟ್ಟುಕೊಳ್ಳುವ ನಿಶ್ಚಯಮಾಡಲಾಗಿರುತ್ತದೆ. ಪುಸ್ತಕ ಕೊಡುವುದರಲ್ಲಿ ಅಥವಾ ಸಂಗ್ರಹಿಸುವುದರಲ್ಲಿ ವಿದ್ಯಾಭಿಮಾನಿಗಳೂ, ಸಾರ್ವಜನಿಕ ಸೇವಾಸಕ್ತರೂ ಸಹಕರಿಸಬೇಕಾಗಿ ವಿಜ್ಞಾಪಿಸಿಕೊಳ್ಳುತ್ತೇನೆ.

ಡಾ ಟಿ ಮಾಧವ ಪೈ,
ರಿಜಿಸ್ಟ್ರಾರ್,
ಎಕೆಡಮಿ ಆಫ್ ಜನರಲ್ ಎಜುಕೇಶನ್,
ಮಣಿಪಾಲ.

ಮರಣ ದಂಡನೆಯು ಉಳಿಯಬೇಕೆ, ಬೇಡವೆ?

ಇಪ್ಪತ್ತನೇ ಶತಮಾನದ ಜನಮತ ಈ ಶಿಕ್ಷೆಯನ್ನು ಒಪ್ಪುವುದಿಲ್ಲ

ಜುಲಾಯಿ ತಿಂಗಳ ೩೦ನೇ ದಿನಾಂಕ ಅಧಿವೇಶನವನ್ನು ಪ್ರಾರಂಭಿಸಿರುವ ರಾಜ್ಯ ಸಭೆಯು ಇದೇ ೩ನೇ ಆಗೋಸ್ಟಿನಂದು (ಶುಕ್ರವಾರ) ಬಾಬು ಗೋಪೀನಾಥ ಸಿಂಘರಿಂದ ಮಂಡಿಸಲಾದ ಖಾಸಗಿ ಗೊತ್ತುವಳಿಯೊಂದರ ಮೇಲೆ ಚರ್ಚೆಯನ್ನು ನಡೆಸಲಿದೆ.

ಸಿಂಘರ ಗೊತ್ತುವಳಿಯು "ಮರಣ ದಂಡನೆಯನ್ನು ರದ್ದುಪಡಿಸಬೇಕೆಂಬುದು ಈ ಸಭೆಯ ಅಭಿಪ್ರಾಯ" ಎಂದು ಹೇಳುತ್ತದೆ.

ಸುಮಾರು ಒಂದು ವರ್ಷದ ಹಿಂದೆ ("ನವಯುಗ"ದ ತಾ. ೧-೯-೧೯೫೧ನೇ ಸಂಚಿಕೆಯನ್ನು ನೋಡಿರಿ) ಭಾರತ ಸರಕಾರದ ಗೃಹ ಮಂತ್ರಿಗಳಾದ ಪಂಡಿತ ಪಂತರು ಜಾಟಿಯೇಟಿನ ದಂಡನೆಯನ್ನು ರದ್ದುಪಡಿಸುವುದಾಗಿ ಸಾರಿದಾಗ ಸಂಸತ್ತು ಅದಕ್ಕೆ ಮೆಚ್ಚಿಗೆಯನ್ನು ವ್ಯಕ್ತಪಡಿಸಿತು. "ನಮ್ಮ ಅಹಿಂಸೆಯ ತತ್ತ್ವಕ್ಕೆ ಚಾಟಿಯೇಟಿನ ಶಿಕ್ಷೆಯು ಸಮಂಜಸವಾಗಿಲ್ಲ" ಎಂಬುದಾಗಿ ಗೃಹ ಮಂತ್ರಿಗಳು ಆಗ ಕಾರಣವನ್ನಿತ್ತಿದ್ದರು.

ಅಹಿಂಸೆಯಲ್ಲಿ ಶ್ರದ್ಧೆಯಿರುವ ಭಾರತ ಸರಕಾರವು ಮರಣ ದಂಡನೆಯನ್ನೂ ಅಂತ್ಯಗೊಳಿಸಬೇಕೆಂದು ಅನೇಕರು ಪ್ರತಿಪಾದಿಸುವುದಕ್ಕೆ ಇದೊಂದು ಪ್ರೇರಣೆಯನ್ನು ಹೊಸತಾಗಿ ನೀಡಿತು. ಹೆಚ್ಚು ಕಡಿಮೆ ಇದೇ ಸಮಯದಲ್ಲಿ ಇಂಗ್ಲೆಂಡಿನ ಕಾಮನ್ಸಿನಲ್ಲಿ ಮರಣ ದಂಡನೆಯನ್ನು ಐದು ವರ್ಷಗಳವರೆಗಾದರೂ ಪ್ರಾಯೋಗಿಕ ರೂಪದಲ್ಲಿ ರದ್ದುಗೊಳಿಸಬೇಕೆಂಬ ಬಗ್ಗೆ ವಿಶೇಷವಾದ ಚರ್ಚೆ ನಡೆದುದರಿಂದ ಎಲ್ಲ ಜನರ ಗಮನವೂ ಈ ವಿಷಯದಲ್ಲಿ ಕೇಂದ್ರಿತವಾಯಿತು.

ಬ್ರಿಟನಿನ ಸರಕಾರಕ್ಕೆ ಮರಣ ದಂಡನೆಯನ್ನು ರದ್ದುಪಡಿಸುವುದು ಇಷ್ಟವಿಲ್ಲ: ಆದರೇನು? ಜನಪ್ರತಿನಿಧಿಗಳನ್ನು ಪಕ್ಷದ ಶಿಸ್ತಿನ ಚೌಕಟ್ಟಿಗೆ ಬಂಧಿಸಿಟ್ಟು, ಈ ಗೊತ್ತುವಳಿಯನ್ನು ಸೋಲಿಸಲು ನೋಡುವುದು ಅವಿವೇಕವೆಂದು ಸರಕಾರಿ ಪಕ್ಷ ಭಾವಿಸಿ, ಮತ ಸ್ವಾತಂತ್ರ್ಯವನ್ನು ತನ್ನ ಪಕ್ಷದ ಸದಸ್ಯರಿಗೆ ನೀಡಬೇಕಾಗಿ ಬರುವಷ್ಟು ಈ ವಿಷಯವು ಕುತೂಹಲವನ್ನು ಕೆರಳಿಸಿ ಬಿಟ್ಟಿತು.

ಕಾಮನ್ಸಿನಲ್ಲೇನೋ ಗೊತ್ತುವಳಿಗೆ ಬೆಂಬಲ ವ್ಯಕ್ತವಾಯಿತು; ಆದರೆ, ಲಾರ್ಡ್ಸರ ಸಭೆಯಲ್ಲಿ ಅದೀಗ ಸೋಲನ್ನು ಅನುಭವಿಸಿದೆ. ಮೊನ್ನೆ ಜುಲಾಯಿಯ ೧೦ನೇ ದಿನಾಂಕ ಲಾರ್ಡ್ಸರ ಸಭೆಯು ಕಾಮನ್ಸಿನಿಂದ ಮನ್ನಣೆ ಪಡೆದು ತನ್ನಲ್ಲಿ ಪರ್ಯಾಲೋಚನೆಗೆ ಬಂದ ಮರಣ ದಂಡನೆ ರದ್ದತಿಯ ಮಸೂದೆಯನ್ನು ೨೦೮—೯೫ ಮತಗಳಿಂದ ತಿರಸ್ಕರಿಸಿತು.

"ನೇತಾಡಿಸುವುದು ಬೇಡ" ಎಂದು ಪ್ರಚಂಡ ಆಂದೋಲನ ನಡೆಸಿದವರ ಪಾಲಿಗೆ ಇದೊಂದು ಆಘಾತವಾಗಿ ಪರಿಣಮಿಸಿದೆ. ಆದರೆ, ಅವರು ಸಂಪೂರ್ಣ ನಿರಾಶರಾಗಿಲ್ಲ. ಏಕೆಂದರೆ, ಬ್ರಿಟನಿನ ಸಾಂಸತ್ತಿಕ ಸಂಪ್ರದಾಯಾನುಸಾರ, ಲಾರ್ಡ್ಸರ ಸಭೆಯು ತನ್ನ ಪ್ರತಿಕೂಲಾಭಿಪ್ರಾಯದಿಂದ ಮಸೂದೆಯೊಂದು ಕೂಡಲೇ ಶಾಸನವಾಗಿ ಪರಿಣಮಿಸುವುದನ್ನು ಮಾತ್ರ ತಡೆದು ಹಿಡಿಯಬಲ್ಲುದು; ಹೊರತು ಶಾಶ್ವತವಾಗಿ ಆ ಪ್ರಶ್ನೆಯನ್ನು ಮೂಲೆಗುಂಪು ಮಾಡಲಾರದು.

ಪರಿಣಾಮವಾಗಿ, ಕಾಮನ್ಸಿನ ಸದಸ್ಯರು ಮುಂದಿನ ಎಪ್ರಿಲಿನ ಹೊತ್ತಿಗೆ ಪುನಃ ಇದೇ ಮಸೂದೆಯನ್ನು ಚರ್ಚೆಗೆ ತೆಗೆದುಕೊಂಡು, ಮರಣದಂಡನೆಯನ್ನು ರದ್ದುಪಡಿಸುವುದಕ್ಕೆ ಅನುಕೂಲಾಭಿಪ್ರಾಯವನ್ನು ಬಹುಮತದಿಂದ ಪ್ರಕಟಿಸಿದರೆ ಲಾರ್ಡ್ಸರ ಆಕ್ಷೇಪವನ್ನು ಲೆಕ್ಕಿಸದೆ ಮಸೂದೆಯು ಶಾಸನವಾಗುತ್ತದೆ. ಕಾಮನ್ಸಿನ ಸದಸ್ಯರು ಮುಂದಿನ ಕೆಲವು ತಿಂಗಳುಗಳಲ್ಲಿ ಮರಣದಂಡನೆಯನ್ನು ಇರಗೊಳಿಸಬೇಕೆಂದು ಹೇಳುವಂತಹ ಬಗೆಯ ಮಾನಸಿಕ ಪರಿವರ್ತನೆಗೆ ಒಳಗಾಗಲಾರರೆಂದು ಮಸೂದೆಯ ಸಮರ್ಥಕರ ಆತ್ಮವಿಶ್ವಾಸ.

ಅನೇಕ ಪ್ರಕಾರದ ದಂಡನೆಗಳನ್ನು ಶಾಸನಬದ್ಧವಾಗಿ ಸಾಮಾಜಿಕರು ಮಾಡಿದ್ದಾರೆ. ಭಾರತೀಯರ ಸೂಕ್ತಿ ಸಂಗ್ರಹವು ದಂಡನೆಯ ಭಯದಿಂದಾಗಿಯೇ ಒಬ್ಬನು ಇನ್ನೊಬ್ಬನನ್ನು ನುಂಗದೆ ಉಳಿದಿದ್ದಾನೆ ಎನ್ನುತ್ತದೆ! "ದಂಡಾಧಿಕಾರವೇ ಜನರನ್ನು ಆಳುತ್ತದೆ; ಮತ್ತು ರಕ್ಷಿಸುತ್ತದೆ. ಅದು ಉಳಿದ ಎಲ್ಲರೂ ನಿದ್ರೆಯಲ್ಲಿರುವಾಗ ಸಹ ಎಚ್ಚತ್ತಿರುತ್ತದೆ; ಆದುದರಿಂದ ಪ್ರಾಜ್ಞರಪಾಲಿಗೆ ದಂಡಾಧಿಕಾರವೇ ಧರ್ಮದ ಪ್ರತೀಕ."

ಆಧುನಿಕ ವಿಚಾರವು ಮಾತ್ರ ಇವಕ್ಕಿಂತ ಭಿನ್ನವಾಗಿದೆ ಎನ್ನಬಹುದು. ಸಂಯುಕ್ತ ರಾಷ್ಟ್ರಸಂಘದ ಮನ್ನಣೆ ಪಡೆದಿರುವ "ಮಾನವನ ಅಧಿಕಾರಗಳ ಸಂಹಿತೆ"ಯ ತೃತೀಯ ಸೂತ್ರವು "ಪ್ರತಿಯೊಬ್ಬನಿಗೂ ಬದುಕುವ ಅಧಿಕಾರವಿದೆ........" ಎನ್ನುತ್ತದೆ. ಈ ಸೂತ್ರಕ್ಕೂ ದಂಡನೆಯ ಕೊನೆಯ ಹಂತವಾದ ಗಲ್ಲಿನ ಶಿಕ್ಷೆಗೂ ಎಲ್ಲಿದೆ ಸಂಬಂಧ?

ಬದುಕುವ ಅಧಿಕಾರವು ನ್ಯಾಯದಾನದಿಂದ ಬಾಹಿರಗೊಳಿಸಿರಬಾರದು— ಎಂಬ ಒಂದು ಶರ್ತವನ್ನು ಸಮಾಜವು ಹಾಕಿದಂತಿದೆ, ಅಲ್ಲವೆ? ಕೊಲೆಪಾತಕಿಗೆ, "ನಿನ್ನ ಮಹಾಪರಾಧವು ಸಂದೇಹಾತೀತವಾಗಿ ಸಿದ್ಧವಾಗಿದೆ: ಆದುದರಿಂದ ನಿನಗೆ ಮರಣದಂಡನೆಯು ಅರ್ಹವಾಗಿದೆ" ಎಂದು ವಿಧಿಸುತ್ತದೆ ಸಮಾಜ. ಹೀಗೆನ್ನುತ್ತಾ ಕೊಲೆಪಾತಕಿಯ ಬದುಕುವ ಅಧಿಕಾರವನ್ನು ಅದು ಮಿತಿಬದ್ಧಗೊಳಿಸುತ್ತದೆ.

ಇದನ್ನು ತಪ್ಪೆಂದು ನಾವು ಹೇಳಬಹುದೆ? ನಿಮ್ಮ ಕಪಾಟಿನ ಪುಸ್ತಕಗಳನ್ನು ಉಪಯೋಗಿಸಲು ನೀವು ಮಕ್ಕಳಿಗೆ ಅಧಿಕಾರ ಕೊಟ್ಟಿರುವಿರೆನ್ನೋಣ! ಮಕ್ಕಳು ನಿಮ್ಮ ಪುಸ್ತಕವನ್ನು ಓದಿ, ಹಾಗೆಯೇ ಓರಣವಾಗಿ ಕಪಾಟಿನಲ್ಲಿಡುವ ಬದಲಿಗೆ, ಹರಿದು ಚೂರು ಮಾಡಲು ನೋಡಿದರೆ—ಆ ಬಳಿಕವೂ ನೀವು ಮಕ್ಕಳಿಗೆ ಕಪಾಟಿನಲ್ಲಿದ್ದ ಪುಸ್ತಕಗಳನ್ನು ಉಪಯೋಗಿಸುವ ಅಧಿಕಾರವನ್ನು ಕೊಡುತ್ತೀರಾ? ಎಂದಿಗೂ ಇಲ್ಲ; ಅದನ್ನು ಹಿಂದೆಗೆದು ಕೊಳ್ಳುತ್ತೀರಿ— ನಿಶ್ಚಯ.

ಅಧಿಕಾರವಿತ್ತವನಿಗೆ ಅದನ್ನು ಹಿಂದೆಗೆದುಕೊಳ್ಳುವ ಅಧಿಕಾರವೂ ಇದೆ: ಕೊಲೆಪಾತಕಿಗಳ ವಿಷಯದಲ್ಲಿ ಸಮಾಜವು ಇದನ್ನೆ ಮಾಡುತ್ತಿದೆ ಎಂದು ಸಾಮಾನ್ಯರ ಅಭಿಪ್ರಾಯ. ಕೊಲೆಪಾತಕಿಯು ಆದೊಂದು ದಿನ ಎಲ್ಲ ರೀತಿಯಿಂದಲೂ ಬದುಕಲು ಯೋಗ್ಯನಾಗಿದ್ದ ಮನುಷ್ಯನೊಬ್ಬನನ್ನು ಸಿಟ್ಟಿನಿಂದಲೋ ಬುದ್ಧಿಶೂನ್ಯತೆಯಿಂದಲೋ ಸೇಡಿನ ಮನೋಭಾವನೆಯಿಂದಲೋ ಈರ್ಷ್ಯಾಸೂಯೆಗಳಿಂದಲೋ ಅಥವಾ ಲೋಭದಿಂದಲೋ ಅಂತೂ ಯಮಪುರಿಗೆ ಕಳುಹಿಸಿದ! ಆತನ ಬದುಕುವ ಅಧಿಕಾರಕ್ಕೆ ಈ ಕೊಲೆಪಾತಕಿಯು ಕೊನೆಯನ್ನು ತಂದ ಎನ್ನಬಹುದು.

ತನ್ನ ಕೃತ್ಯದಿಂದ ಈ ಕೊಲೆಪಾತಕಿಯು ಶಾಸನಾತೀತ ಲೋಕದವನೇ ತಾನೆಂದು ತಿಳಿದು ವರ್ತಿಸಿದಂತಾಗಿದೆ! ಸಮಾಜದ ದೃಷ್ಟಿಯಲ್ಲಿ ಆತನು ಶಾಸನ ಭಂಜಕನಾಗಿದ್ದಾನೆ. ಹೀಗಿರುವಾಗ, ಆತನು ಸಮಾಜದಲ್ಲಿ ಬದುಕಿ ಉಳಿಯುವ ಅಧಿಕಾರವು ತನಗಿದೆ ಎಂದು ಹೇಳಬಲ್ಲನಾದರೂ ಹೇಗೆ? ಸಮಾಜದ ಸಾಮಾನ್ಯ ಕಟ್ಟುಪಾಡುಗಳಿಗೆ ಒಪ್ಪದೆ ನಡೆದಾತನು, ಸಮಾಜದಿಂದ ಒಳ್ಳೆಯ ನಡತೆಯನ್ನು ಎಷ್ಟಕ್ಕೂ ನಿರೀಕ್ಷಿಸ ಬಂತಿಲ್ಲ.

ಇಷ್ಟರವರೆಗೆ ಸಮಾಜವೂ ಸರಕಾರವೂ ಮೇಲಿನ ಸಿದ್ಧಾಂತದಲ್ಲಿಯೇ ಹೆಚ್ಚಿನ ನಂಬಿಕೆಯನ್ನು ತಾಳಿದೆ. ಒಬ್ಬನ ಜೀವನದ ಕುರಿತು ಮಾಡಿದ ಅಪರಾಧವು ಇಡೀ ಸಮಾಜದ ಕುರಿತು ಮಾಡಿದ ಅಪರಾಧವೆಂದೇ ಇಂದು ಭಾವಿಸಲಾಗುತ್ತದೆ. ಶಾಂತಿ ಮತ್ತು ಸುವ್ಯವಸ್ಥೆಗಳ ಭಂಜಕರನ್ನು ಶಿಕ್ಷಿಸುವುದೇ ಅಪರಾಧದ ವಿಚಾರಣೆಗಾಗಿ ರೂಪಿಸಿರುವ ಶಾಸನಗಳ ಮುಖ್ಯೋದ್ದೇಶ.

ನಮ್ಮ ದೇಹದಲ್ಲಿ ಕೊಳೆತು ನಾರುವ ವ್ರಣವೊಂದಾದರೆ ಅದನ್ನು ಶಸ್ತ್ರಚಿಕಿತ್ಸೆಯಿಂದ ಹೇಗೆ ಕಿತ್ತುತೆಗೆಯುತ್ತೇವೋ, ಅದೇ ರೀತಿಯಲ್ಲಿ ಸಾಮಾಜಿಕ ಸ್ವಾಸ್ಥ್ಯಕ್ಕೆ ವಿಘ್ನವನ್ನೊಡ್ಡುವ ಶಾಸನ ಭಂಜಕರನ್ನು ಮರಣದಂಡನೆಗೆ ಗುರಿಪಡಿಸುವುದೇ ಸೂಕ್ತವೆಂದು ಎಂದಿನಿಂದಲೂ ಮಾನವ ಸಮಾಜ ಭಾವಿಸುತ್ತಾ ಬಂದಿದೆ. ಹಿಂಸಾಕೃತ್ಯಗಳಿಂದ ಎಲ್ಲ ಸಾಮಾಜಿಕರೂ ನೋಯದಂತೆ ತಡೆಯಲಿಕ್ಕಾಗಿಯೇ ಅಪರಾಧಿಗಳನ್ನು ಸೆರೆಮನೆಗಳಲ್ಲಿ ಪ್ರತ್ಯೇಕವಾಗಿ ಇಡಲಾಗುತ್ತದೆ

ಅಪರಾಧಿಗಳು ಪ್ರತಿಯೊಂದೂ ಸಮಾಜದಲ್ಲಿ ಇದ್ದೇ ತೀರುವರೆಂಬ—ಅಥವಾ ಆಗಿಯೇ ಆಗುವರೆಂಬ—ನಂಬಿಕೆಯ ತಳಹದಿಯ ಮೇಲೆ ದಂಡಾಧಿಕಾರವು ನಿಂತಿದೆ. ತಿಳಿಸಿ ಹೇಳುವ ಎಲ್ಲ ಪ್ರಯತ್ನಗಳೂ ನಿರುಪಯುಕ್ತವೆನಿಸಿ, ಯಾವುದೇ ಸತ್ಪರಿಣಾಮವನ್ನು ಉಂಟುಮಾಡಲಾರದ ಅಪರಾಧಿಗಳ ವರ್ಗವೊಂದು ಪ್ರತಿ ಸಮಾಜದಲ್ಲೂ ಎಲ್ಲ ಕಾಲದಲ್ಲೂ ಇದೆ— ಇವರ ಹಾವಳಿಯನ್ನು ತುಸುವಾದರೂ ನಿಯಂತ್ರಣದಲ್ಲಿ ಇಡಲಿಕ್ಕೆ ದಂಡ ಭಯದಿಂದ ಮಾತ್ರವೇ ಸಾಧ್ಯ ಎನ್ನಲಾಗುತ್ತದೆ.

ದಂಡ ಭಯವಿಲ್ಲದಿದ್ದರೆ ಸಾಮಾಜಿಕ ನಡವಳಿಕೆಯನ್ನು ಅಂಕೆಯಲ್ಲಿಡುವುದು ಎಷ್ಟಕ್ಕೂ ಸಾಧ್ಯವಿಲ್ಲ ಎಂಬ ಅಭಿಪ್ರಾಯವನ್ನು ರಾಜಾಜಿಯಂಥ ವಿಚಾರಕರು ಈಗಲೂ ಎತ್ತಿಹಿಡಿಯುತ್ತಿದ್ದಾರೆ. ಇಂಗ್ಲೆಂಡಿನಲ್ಲಿ ಸಹ, ಸರಕಾರಿ ವೃತ್ತಗಳು ಇದೇ ಅಭಿಪ್ರಾಯವನ್ನು ಹೊಂದಿವೆ.

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ



ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪



ಕುಟುಂಬ ಯೋಜನೆಯ ಆಂದೋಲನ

ಪ್ರತಿ ಹಳ್ಳಿಯಲ್ಲೂ ಸುಶಿಕ್ಷಿತರು ಪ್ರಚಾರ ಕೈಗೊಳ್ಳುವುದು ಅಪೇಕ್ಷಣೀಯ

ಜನಸಂಖ್ಯಾ ವಿಜ್ಞಾನದ ಕ್ಷೇತ್ರದಲ್ಲಿ ಅಖಿಲ ಭಾರತದಲ್ಲಿಯೇ ಖ್ಯಾತಿವೆತ್ತ ಡಾ. ಚಂದ್ರಶೇಖರನ್ನರೆಂಬ ಮಹನೀಯರು ಮದ್ರಾಸು ನಗರದ ಬಳಿಯಲ್ಲಿಯೇ ಗ್ರಾಮಾಂತರ ಪ್ರದೇಶಗಳವರ ಪ್ರಯೋಜನಕ್ಕಾಗಿ ಕುಟುಂಬಯೋಜನಾ ಕೇಂದ್ರವನ್ನು ಸ್ಥಾಪಿಸಿದ್ದಾರೆ. ಇದರ ಉದ್ಘಾಟನೆಯನ್ನು ಮೊನ್ನೆ ೨೬ನೇ ದಿನಾಂಕ ಮದ್ರಾಸು ಸರಕಾರದ ಆರೋಗ್ಯಮಂತ್ರಿಗಳಾದ ಮಾನ್ಯ ಶ್ರೀ ಎ. ಬಿ. ಶೆಟ್ಟಿಯವರು ನೆರವೇರಿಸಿದರು.

ಮಂತ್ರಿ ಶೆಟ್ಟಿಯವರು ಈ ಸಂದರ್ಭದಲ್ಲಿ ಮಾತನಾಡುತ್ತಾ, ಮದ್ರಾಸು ಸರಕಾರವು ಕುಟುಂಬಯೋಜನೆಯ ವಿಷಯದಲ್ಲಿ ಪ್ರಗತಿಪರ ದೃಷ್ಟಿಕೋಣವನ್ನಿಟ್ಟುಕೊಂಡಿದೆ ಎಂದರು. ಸರಕಾರಿ ಆಸ್ಪತ್ರೆಗಳಲ್ಲಿ ಕುಟುಂಬಯೋಜನೆಯ ಕುರಿತು ಸಲಹೆ ನೀಡಬಲ್ಲ ವಿಭಾಗಗಳನ್ನು ತೆರೆಯಲು ಸರಕಾರ ನಡೆಸಿರುವ ಪ್ರಯತ್ನವನ್ನು ಅವರು ಪ್ರಸ್ತಾಪಿಸುತ್ತಾ ಕುಟುಂಬಯೋಜನೆಗಾಗಿ ಸಲಹೆಕೊಡಲು ಸಮರ್ಥರಾಗುವಂತೆ ವೈದ್ಯರಿಗೂ, ದಾಯಿಗಳಿಗೂ, ಸೂಲಗಿತ್ತಿಯರಿಗೂ ತರಬೇತಿ ನೀಡಲಾಗುತ್ತಿದೆ ಎಂದರು.

ಸರಕಾರವು ಕುಟುಂಬ ಯೋಜನೆಯ ನೀತಿಯನ್ನು ಸಾರ್ವತ್ರಿಕವಾಗಿ ಪ್ರಚಾರಗೊಳಿಸಲು ನಿರ್ಧರಿಸಿದೆ ಎಂದವರು ಸಾರಿದರು. ಇದಕ್ಕಾಗಿ ಸರಕಾರವು ಒಂದು ಮಂಡಳವನ್ನು ನೇಮಿಸಿದೆ ಎಂದೂ ಹೇಳಿದರು. ಏಳು ಮಂದಿ ಅಧಿಕಾರಿಗಳಲ್ಲದೆ ಡಾ. ಯು. ಕೃಷ್ಣರಾವ್, ಶ್ರೀಮತಿ ಮೇರಿ ಕ್ಲಬ್‌ವಾಲಾ ಜಾಧವ್, ಡಾ. ಎಸ್. ಚಂದ್ರಶೇಖರನ್ ಮತ್ತು ಡಾ. ವೈ. ಪಿ. ವಾಸುದೇವನ್ ಎಂಬ ನಾಲ್ವರು ಅಧಿಕಾರೇತರ ಸದಸ್ಯರಾಗಿ ಈ ಮಂಡಳದಲ್ಲಿದ್ದಾರೆ.

ಮಂಡಳವು ಮೊತ್ತಮೊದಲು ಕುಟುಂಬ ಯೋಜನೆಗಾಗಿ ಅನುಸರಿಸುವ ಬೇರೆ ಬೇರೆ ಪದ್ಧತಿಗಳು ಎಷ್ಟು ವ್ಯಾಪಕವಾಗಿವೆ ಎಂಬುದನ್ನು ತಿಳಿಸುವ ಮತ್ತು ಈ ಪದ್ಧತಿಗಳನ್ನು ಅನುಸರಿಸಲು ದಂಪತಿಗಳಿಗೆ ಯೋಗ್ಯ ಸಲಹೆಗಳನ್ನೂ ಸೂಚನೆಗಳನ್ನೂ ಕೊಡುವ ಪ್ರಮಾಣ ಗ್ರಂಥವೊಂದನ್ನು ಪ್ರಕಟಿಸುವುದೆಂದು ತಿಳಿದುಬಂದಿದೆ. ಕಡಿಮೆ ಆದಾಯವುಳ್ಳ ದಂಪತಿಗಳಿಗೆ ಉಪಯುಕ್ತವಾದ ವಿಷಯಗಳೂ ಸಲಹೆಗಳೂ ಈ ಗ್ರಂಥದಲ್ಲಿರುವಂತೆ ನೋಡಿಕೊಳ್ಳಲಾಗುವುದೆಂದು ಹೇಳಲಾಗಿದೆ.

ಕುಟುಂಬ ಯೋಜನೆಯು ಹೇಯವಾದ ವಿಚಾರವೆಂದು ಹೇಳುವವರು ನಮ್ಮ ಸಮಾಜದಲ್ಲಿ ಅನೇಕರಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಜಯಪ್ರದವಾಗಿದೆ ಎನ್ನಲಾದ ಕುಟುಂಬ ಯೋಜನೆಯ ವಿಚಾರವನ್ನು ರೋಮನ್ ಕೆಥೋಲಿಕ್ ಮತಾನುಯಾಯಿಗಳು ಇಂದಿಗೂ ಒಪ್ಪುತ್ತಲೇ ಇಲ್ಲ. ಕ್ರೈಸ್ತ ಜಗದ್ಗುರು ಪೋಪರು ಅಣುಬಾಂಬುಗಳ ಸ್ಫೋಟನ ಪ್ರಯೋಗಗಳನ್ನು ಖಂಡಿಸುತ್ತಿರುವಂತೆಯೇ ಕುಟುಂಬ ಯೋಜನೆಯ ಚಳವಳವನ್ನೂ ಆಕ್ಷೇಪಿಸುತ್ತಿದ್ದಾರೆ.

ಇದಕ್ಕಾಗಿ ನಾವು ಆಶ್ಚರ್ಯಪಡಬೇಕಾಗಿಲ್ಲ — ಏಕೆಂದರೆ, ಅಮೇರಿಕದಂತಹ ಪ್ರಗತಿಪರ ಪಾಶ್ಚಾತ್ಯ ರಾಷ್ಟ್ರದಲ್ಲಿಯೂ ಮೂರು ದಶಕಗಳ ಹಿಂದೆ ಕುಟುಂಬ ಯೋಜನೆಯ ಚಳವಳವು ಪ್ರಾರಂಭವಾದಾಗ ಸಮಾಜದಲ್ಲಿ ಬಿರುಗಾಳಿಯೇ ಉಂಟಾಯಿತು. ಕುಟುಂಬ ಯೋಜನೆಯ ಪ್ರಯೋಜನಗಳ ಪ್ರಚಾರಾರ್ಥ ಸಭೆಗಳು ನಡೆದಾಗ, ಅವುಗಳನ್ನು ಪೋಲೀಸರು ಮುತ್ತಿಗೆ ಹಾಕಿ, ಚದರಿಸುತ್ತಿದ್ದರು! ಕುಟುಂಬ ಯೋಜನೆಗೆ ಸಂಬಂಧಪಟ್ಟ ಸಾಹಿತ್ಯವನ್ನೂ ಪುಸ್ತಕಗಳನ್ನೂ ಜಪ್ತಿಮಾಡಿ, ಚಳವಳದ ಧುರೀಣರನ್ನು ಸೆರೆಯಲ್ಲಿಡುತ್ತಿದ್ದರು!

ಅಮೇರಿಕದ ವೈದ್ಯರ ಸಂಘವು ೧೯೩೭ರಲ್ಲಿ ತಾಯಿಯ ಹಾಗೂ ಮಗುವಿನ ಆರೋಗ್ಯ ರಕ್ಷಣೆಯ ಮೂಲಭೂತ ದೃಷ್ಟಿಯಿಂದ ಕುಟುಂಬ ಯೋಜನೆಯು ಅಪೇಕ್ಷಣೀಯವೆಂದು ಸಾರಿದ ತರುವಾಯವೇ ಕುಟುಂಬ ಯೋಜನೆಗೆ ಅಲ್ಲಿ ಹೆಚ್ಚು ಜನಪ್ರಿಯತೆ ದೊರೆಯಿತು ಎನ್ನಬಹುದು. ಈಗ ಅಮೇರಿಕ ಮತ್ತಿತರ ಎಲ್ಲ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕುಟುಂಬ ಯೋಜನೆಯು ವಿಶೇಷವಾಗಿ ಪ್ರಚಾರದಲ್ಲಿದೆ. ಯಾರೂ ಇದಕ್ಕಾಗಿ ನಾಚುವುದಿಲ್ಲ.

ಯುರೋಪಿನ ಕೆಲವು ರಾಷ್ಟ್ರಗಳು ಹುಟ್ಟುವ ಮಕ್ಕಳ ಸಂಖ್ಯೆಯು ಆದಷ್ಟು ಹೆಚ್ಚಬೇಕೆಂದು ಬಯಸುತ್ತಿವೆ, ನಿಜ. ಉದಾಹರಣೆಗೆ, ರಶ್ಯ ಮತ್ತು ಫ್ರಾನ್ಸುಗಳಲ್ಲಿ ಸರಕಾರವು ಹೆಚ್ಚು ಮಕ್ಕಳು ಹುಟ್ಟುವುದನ್ನೆ ಅಪೇಕ್ಷಿಸುತ್ತದೆ. ಯುದ್ಧಗ್ರಸ್ತವಾದ ಯುರೋಪಿನ ರಾಷ್ಟ್ರಗಳಲ್ಲಿ ಮಾನವ ಶಕ್ತಿಯ ಅಭಾವವುಂಟಾಗಿರುವುದೇ ಈ ಬಯಕೆಯ ಮುಖ್ಯ ಕಾರಣ. ಆದರೆ, ಜನಸಂಖ್ಯೆಯ ಒತ್ತಡವು ಸಹಿಸಲಾರದಷ್ಟಿರುವ ಭಾರತ, ಜಪಾನುಗಳಂತಹ ದೇಶಗಳು ಕುಟುಂಬಯೋಜನೆಯನ್ನು ರಾಷ್ಟ್ರೀಯ ಘೋಷಣೆಯಾಗಿ ಸ್ವೀಕರಿಸಿವೆ.

ಜನಸಂಖ್ಯೆಯ ಅಧ್ಯಯನವೊಂದು ವಿಜ್ಞಾನವಾಗಿ ಪರಿಣಮಿಸಿದೆ: ಜಾಗತಿಕ ಮಟ್ಟದಲ್ಲಿ ಅನೇಕ ತಜ್ಞರು ಈ ವಿಷಯವನ್ನು ಪರ್ಯಾಲೋಚಿಸುತ್ತಿದ್ದಾರೆ. ಆಹಾರದ ಪೂರೈಕೆಗೂ ಜನಸಂಖ್ಯೆಯ ವೃದ್ಧಿಗೂ ಇರುವ ಸಂಬಂಧ, ಹುಟ್ಟುವ ಮಕ್ಕಳ ಸಂಖ್ಯೆಯನ್ನು ನಿಯಂತ್ರಣದಲ್ಲಿಡುವ ಗರ್ಭನಿರೋಧಕ ಅಥವಾ ಕುಟುಂಬಯೋಜನೆಯ ಉಪಾಯಗಳ ವಿವೇಚನೆ, ಸಂತಾನೋತ್ಪಾದನೆಯ ಶಕ್ತಿಯನ್ನೆ ನಾಶಗೊಳಿಸುವ ಕ್ರಮದ ಉಪಯುಕ್ತತೆಯ ಮಥನ, ಗರ್ಭಪಾತ ಮತ್ತು ಶಿಶುಹತ್ಯೆ ಇತ್ಯಾದಿ ವಿಷಯಗಳ ಸುತ್ತಲೂ ಸಮಾಲೋಚನೆಗಳು ಕೇಂದ್ರಿತವಾಗುತ್ತವೆ.

ಆಧುನಿಕ ಸರಕಾರಗಳೆಲ್ಲವೂ ಪ್ರಜಾಭಿಪ್ರಾಯವನ್ನು ಗಮನಿಸಿ, ಜೀವನ ಮಟ್ಟವನ್ನು ಎತ್ತರಿಸುವ ಕಾರ್ಯಕ್ರಮಗಳನ್ನು ಕೈಗೊಂಡಿವೆ. ಇವುಗಳ ಪರಿಣಾಮವಾಗಿ ಆಹಾರ ಮತ್ತಿತರ ನಿತ್ಯೋಪಯೋಗದ ಜೀವನಾವಶ್ಯಕ ವಸ್ತುಗಳ ಉತ್ಪಾದನೆಯು ಹೆಚ್ಚುತ್ತದೆ. ಆದರೆ ಇದೇ ಹೊತ್ತಿಗೆ ಆಸ್ಪತ್ರೆಗಳೂ ಚಿಕಿತ್ಸಾ ಸೌಲಭ್ಯಗಳೂ ಹೆಚ್ಚಿರುವ ದೆಸೆಯಿಂದ ಸಾಯುವ ಜನರ ಪ್ರಮಾಣವು ತಗ್ಗುತ್ತದೆ. ಜನರು ಸಾಯುವುದು ಎಷ್ಟು ಕಡಿಮೆಯಾಯಿತೊ ಅಷ್ಟು ಮಟ್ಟಿಗೆ ಹುಟ್ಟುವ ಮಕ್ಕಳ ಸಂಖ್ಯೆಯು ಸ್ವಯಮೇವ ಹೆಚ್ಚುತ್ತದೆ.

ಈಗಿನ ಮಟ್ಟದಲ್ಲಿ ಜನರು ಸಾಯುತ್ತಾ ಹೋದರೂ ಪ್ರತಿ ವರ್ಷ ಭಾರತದ ಜನಸಂಖ್ಯೆಯು ಹುಟ್ಟುವ ಹೊಸ ಮಕ್ಕಳಿಂದಾಗಿ ೫೦ ಲಕ್ಷದಷ್ಟು ಹೆಚ್ಚುತ್ತದೆ; ಜನರು ತಡವಾಗಿ ಸಾಯುವರೆಂದಾದರೆ, ಈ ಸಂಖ್ಯೆ ಇನ್ನಷ್ಟು ಹೆಚ್ಚುಕೊಳ್ಳುವುದು ನಿಶ್ಚಯ. ಜೀವನ ಮಟ್ಟವು ಏರಬೇಕೆಂಬುದು ನಮ್ಮ ಇಚ್ಛೆಯಾದ ಪ್ರಯುಕ್ತ ಗಣನೀಯವಾಗಿ ಅಧಿಕವಾಗುತ್ತಿರುವ ನಮ್ಮ ಜನಸಂಖ್ಯೆಗೆ ಎಲ್ಲಿಂದ ತಿನಿಸುಣಿಸುಗಳನ್ನೂ ವಸ್ತ್ರ ವಸತಿಗಳನ್ನೂ ಇತರ ಅನುಕೂಲತೆಗಳನ್ನೂ ಒದಗಿಸಬೇಕು ಎಂಬ ಪ್ರಶ್ನೆ ಸಹಜವಾಗಿಯೇ ಇಲ್ಲಿ ಬರುತ್ತದೆ.

ಕುಟುಂಬ ಯೋಜನೆಯ ಉಪಾಯವನ್ನು ಅವಲಂಬಿಸುವುದೇ ಈ ದ್ವಂದ್ವದಿಂದ ಪಾರಾಗುವ ಬಗೆ ಎಂದು ಈಗ ಕಂಡುಕೊಳ್ಳಲಾಗಿದೆ. ತಾಯಿ ಮತ್ತು ಮಗುವಿನ ಆರೋಗ್ಯದ ದೃಷ್ಟಿಯಿಂದ ಮಾತ್ರವಷ್ಟೇ ಅಲ್ಲ, ಆರ್ಥಿಕ ಹಾಗು ಸಾಮಾಜಿಕ ಪರಿಸ್ಥಿತಿಗಳ ಒತ್ತಾಯಕ್ಕಾಗಿಯೂ ನಾವು ಕುಟುಂಬ ಯೋಜನೆಯ ಪುರಸ್ಕರ್ತರಾಗಬೇಕಾಗಿದೆ ಎನ್ನಬಹುದು.

ಜಪಾನು ದೇಶದಲ್ಲಿ ಗರ್ಭಪಾತವನ್ನು ಈಗ ಶಾಸನ ಸಮ್ಮತವಾಗಿ ಮಾಡಿದ್ದಾರೆ: ಜನ ಸಂಖ್ಯೆಯ ಒತ್ತಡವೇ ಇದಕ್ಕೆ ಪ್ರೇರಕವಾಯಿತು. ಭಾರತ ಮತ್ತು ಬೇರೆ ದೇಶಗಳು ಗರ್ಭಪಾತ ಮತ್ತು ಶಿಶುಹತ್ಯೆಗಳನ್ನು ಶಾಸನ ಸಮ್ಮತವೆಂದು ಪರಿಗಣಿಸುವುದಿಲ್ಲ; ಇವು ಶಿಕ್ಷಾರ್ಹವಾದ ಅಪರಾಧಗಳೆನಿಸುತ್ತವೆ. ಆದರೆ ಭಾರತ ಸರಕಾರವು ಜನರಿಗೆ ಕುಟುಂಬ ಯೋಜನೆಯು ಅತ್ಯಾವಶ್ಯಕವಾದುದೆಂದೂ ಅದನ್ನು ಬೇರೆ ಉಪಾಯಗಳಿಂದ ಸಾಧಿಸಬೇಕೆಂದೂ ಬೋಧಿಸುತ್ತವೆ.

ಡಾ. ಚಂದ್ರಶೇಖರನ್ನರು ಜಾಗತಿಕ ಸಮ್ಮೇಳನವೊಂದರಲ್ಲಿ ಹೇಳಿದಂತೆ, “ನಮ್ಮ ತಾಯಂದಿರು ಮೂರು ಮಕ್ಕಳನ್ನು ಹೆರುವಲ್ಲಿ ಒಂದನ್ನಷ್ಟೆ ಹೆರಲಿ; ತಂದೆಯರು ಒಂದು ತೆನೆಯನ್ನಷ್ಟೆ ಕೊಯ್ಯುವ ಕೃಷಿಯ ಬದಲಿಗೆ ಮೂರು ತೆನೆ ಬರುವಂತೆ ಬೇಸಾಯ ಮಾಡಲಿ!” ಎಂದು ಭಾರತ ಸರಕಾರವು ಬಯಸುತ್ತದೆ. ಈ ಅಭಿಪ್ರಾಯವನ್ನು ಜನರೂ ಒಪ್ಪುತ್ತಾರೆ.

ಡಾಕ್ಟರ್ ಚಂದ್ರಶೇಖರನ್ನರೇ ಮಾದರಿ ರೂಪದಲ್ಲಿ ಸಂಗ್ರಹಿಸಿರುವ ಆಧಾರಕ್ಕೆ ಅನುಸಾರವಾಗಿ, ನಮ್ಮ ಹಳ್ಳಿಯ ಹೆಂಗಸರಲ್ಲಿ ಸಹ ಹೆಚ್ಚಿನವರು ತಮ್ಮ ಪ್ರಜೋತ್ಪಾದಕ ಜೀವನದ ಒಂದಲ್ಲದಿದ್ದರೊಂದು ಅವಧಿಯಲ್ಲಿ “ಇನ್ನು ಮಕ್ಕಳು ಸಾಕಪ್ಪಾ ಸಾಕು” ಎಂದು ಪ್ರಾಮಾಣಿಕವಾಗಿ ಪ್ರಾರ್ಥಿಸುವುದು ಸಾಮಾನ್ಯವಾದ ಅನುಭವ.

ಆದುದರಿಂದ ಕುಟುಂಬ ಯೋಜನೆಯು ಬೇಕೆ? ಎಂಬ ಪ್ರಶ್ನೆಯೇ ಇಲ್ಲ—

(೧೦ನೇ ಪುಟ ನೋಡಿರಿ)

50 ವರ್ಷಗಳ ಅಪೂರ್ವ ಪ್ರಗತಿ

50 ವರ್ಷಗಳ ಹಿಂದೆ 1—7—1906ರಲ್ಲಿ ಸಣ್ಣ ಸಂಸ್ಥೆಯಾಗಿ ಆರಂಭವಾದ **ಕೆನರಾ ಬ್ಯಾಂಕ್** ರಾಷ್ಟ್ರದ ಪ್ರಗತಿಯಲ್ಲಿ ವ್ಯಾಪಾರ, ಉದ್ದಿಮೆ ಕೈಗಾರಿಕೆಗಳ ಅಭಿವೃದ್ಧಿಗೆ ತನ್ನ ಸಹಾಯವನ್ನು ಸಲ್ಲಿಸುತ್ತದೆ.

ಭಾರತದ ಪ್ರಗತಿಪರ ಬ್ಯಾಂಕುಗಳಲ್ಲೊಂದಾಗಿರುವ **ಕೆನರಾ ಬ್ಯಾಂಕು**, ತನ್ನ ಸೇವೆ, ಸ್ನೇಹ ಸೌಹಾರ್ದತೆ, ಆರ್ಥಿಕ ಭದ್ರತೆ, ಉತ್ತಮ ವ್ಯಾಪಾರ ಧೋರಣೆಗಳ ಮೂಲಕ, 50 ವರ್ಷಗಳಿಂದ ಅಸಂಖ್ಯಾತ ಜನರ ಪ್ರೀತಿ ಮನ್ನಣೆಗಳಿಗೆ ಪಾತ್ರವಾಗಿದೆ.

51ನೇ ವರ್ಷದಲ್ಲಿ ಕಾಲಿಟ್ಟಿರುವ **ಕೆನರಾ ಬ್ಯಾಂಕು** ತನ್ನ ಅಭಿವೃದ್ಧಿಗೆ ಕಾರಣರಾದ ಪೋಷಕರಿಗೆಲ್ಲಾ ತನ್ನ ಹಾರ್ದಿಕ ವಂದನೆಗಳನ್ನೀಯುತ್ತದೆ.

ಕೆನರಾ ಬ್ಯಾಂಕಿನಲ್ಲಿ ಕೆಲಸ ಮಾಡುವ ನಾವೆಲ್ಲರೂ ಇನ್ನೂ ಉತ್ತಮ ತರದ ಸೇವೆ ಸೌಕರ್ಯಗಳನ್ನು ಸಲ್ಲಿಸುವ ಭರವಸೆ ಕೊಡುತ್ತೇವೆ.

ಕೆನರಾ ಬ್ಯಾಂಕ್ ಲಿಮಿಟೆಡ್

1906 ಸಮಸ್ತ ಜನತೆಯ ನೆಚ್ಚಿನ ಬ್ಯಾಂಕ್ 1956

ಪ್ರಬಲ ಪಾಶ್ಚಾತ್ಯ ರಾಷ್ಟ್ರಗಳ ಮುಯ್ಯಿಗೆ ಐಗುಪ್ತದ ಪ್ರತೀಕಾರ

ಅಸ್ವಾನಿನ ಅಣೆಕಟ್ಟಿನ ಹಣಕ್ಕೋಸ್ಕರ ಸುಯೇಜಿನ ಕಾಲುವೆ ಕಂಪೆನಿಯ ರಾಷ್ಟ್ರೀಕರಣ

ನಾಲ್ಕು ವರ್ಷಗಳ ಹಿಂದೆ, ೧೯೫೨ನೇ ಇಸವಿಯ ಜುಲಾಯಿ ಮಾಸದ ೨೬ನೇ ದಿನಾಂಕ ಐಗುಪ್ತದ ಅರಸು ಫರೂಕರ ಕಿರೀಟ ಉರುಳಿತು!

ಸೈನ್ಯ ಮಂಡಳದ ಅಧಿಪತಿ ನಗೀಬರ ಒತ್ತಾಯಕ್ಕೆ ಒಳಪಟ್ಟು ಮಾಜಿ ಅರಸು ಫರೂಕರು ದೇಶತ್ಯಾಗ ಮಾಡಿದರು.

ನಗೀಬರು, ಸಣ್ಣ ನೌಕೆಯೊಂದನ್ನೇರಿ ಇಟಲಿಯತ್ತ ಆಶ್ರಯಕ್ಕಾಗಿ ಹೊರಟಿದ್ದ ಮಾಜಿ ಅರಸರನ್ನು ಉದ್ದೇಶಿಸಿ, "ನಾವೇನು ಮಾಡಿದ್ದೇವೋ ಅದನ್ನು ಮಾಡುವಂತೆ ಒತ್ತಾಯ ಬಂದುದು ನಿಮ್ಮಿಂದ" ಎಂದು ವ್ಯಂಗ್ಯೋಕ್ತಿಯಾಡಿದರು.

"ನನಗೆ ಗೊತ್ತಿದೆ: ನಾನು ಯಾವಾಗಲೂ ಏನನ್ನು ಮಾಡಬೇಕೆಂದಿದ್ದೆನೊ, ಅದನ್ನೆ ನೀವು ಮಾಡಿದ್ದೀರಿ" ಎಂಬ ಅನಿರೀಕ್ಷಿತವಾದ ಉತ್ತರವು ಇದಕ್ಕೆ ಅರಸು ಫರೂಕರಿಂದ ಬಂತು.

ಹೋಗುವಾಗ ಫರೂಕರು ಹೀಗೆಂದರು—"ನಿಮ್ಮದು ತ್ರಾಸದಾಯಕವಾದ ಕೆಲಸ: ನಿಮಗೆ ತಿಳಿದಿರುವಂತೆ, ಐಗುಪ್ತವನ್ನು ಆಳುವುದು ಸುಲಭವಲ್ಲ!"

೦೦

ಈಗ, ನಾಲ್ಕು ವರ್ಷಗಳ ಬಳಿಕ, ಐಗುಪ್ತವು ಸಾರ್ವಭೌಮಾಧಿಕಾರ ಸಂಪನ್ನ ಗಣರಾಜ್ಯವಾಗಿದೆ. ಅರಸು ಫರೂಕರನ್ನು ಅವರ ಅಪರಾಧಗಳಿಗಾಗಿ ಗಲ್ಲಿಗೇರಿಸಬೇಕೆಂದು ಹೇಳುತ್ತಿದ್ದ ಪಕ್ಷವನ್ನು ಸಂತೈಸಿದ್ದ ನಾಸೇರರು ಈಗ ಐಗುಪ್ತದ ಅಧ್ಯಕ್ಷ ಪೀಠವನ್ನೇರಿದ್ದಾರೆ.

"ನಾವು ಫರೂಕರ ಜೀವವನ್ನು ಉಳಿಸೋಣ— ಅವರನ್ನು ದೇಶಭ್ರಷ್ಟರಾಗಿ ಮಾಡಿದರೆ ಸಾಕು: ಇತಿಹಾಸವೇ ಅವರಿಗೆ ಮರಣದಂಡನೆ ಕೊಡಲಿ!" ಎಂದು ನಾಸೇರರು ಹೇಳಿದುದಕ್ಕೆ ನಾಲ್ಕು ವರ್ಷಗಳ ಹಿಂದೆ ನಗೀಬರು ಒಪ್ಪಿದ್ದರು.

ಫರೂಕರಿಗೆ ಇತಿಹಾಸ ಮರಣದಂಡನೆಯನ್ನು ಇನ್ನೂ ಕೊಟ್ಟಂತಿಲ್ಲ. ಆದರೆ, ದೇಶತ್ಯಾಗದ ಹೊತ್ತಿಗೆ ಫರೂಕರು ಹೇಳಿದ್ದ ಮಾತುಗಳ ಅಂತರ್ಯ ಒಂದೊಂದೆಯಾಗಿ ಬೆಳಕಿಗೆ ಬರಹತ್ತಿದೆ.

"ನೀವು ಮಾಡಬೇಕಾದುದನ್ನು ನಾನು ಯಾವಾಗಲೂ ಮಾಡಬೇಕೆಂದಿದ್ದೆ" ಎಂದು ಫರೂಕರು ಹೇಳಿದ್ದರು. ಐಗುಪ್ತವನ್ನು ಪಾಶ್ಚಾತ್ಯ ರಾಷ್ಟ್ರಗಳ ಪ್ರಭಾವದಿಂದ ಮುಕ್ತಗೊಳಿಸಬೇಕೆಂಬುದೇ ಇದರ ಆಶಯವೆಂದು ಭಾವಿಸಬಹುದಲ್ಲವೆ?

ಆದರೆ "ಐಗುಪ್ತವನ್ನ ಆಳುವುದು ಸುಲಭವಲ್ಲ—ನಿಮ್ಮದು ಬಹಳ ತ್ರಾಸದಾಯಕವಾದ ಕೆಲಸ" ಎಂಬ ಮಾತೂ ಇಷ್ಟೇ ಸತ್ಯ! ಪಾಶ್ಚಾತ್ಯರ ಕೈವಾಡಕ್ಕೆ ಅವಕಾಶವಿಲ್ಲದಂತೆ ಐಗುಪ್ತದ ವ್ಯವಹಾರ ನಡೆಯಬೇಕಾದರೆ ಏಕಾಕಿಯಾದ ಹೋರಾಟವನ್ನೇ ಆ ದೇಶದ ಧುರೀಣರು ನಡೆಸಬೇಕಾಗುತ್ತದೆ.

೦೦

ಫರೂಕ ಅರಸರನ್ನು ಓಡಿಸಿ, ಜನತೆಯ ಪ್ರಭುತ್ವವನ್ನು ನೆಲೆಗೊಳಿಸಿ, ನಾಲ್ಕು ವರ್ಷ ಸಂದುದರ ಸ್ಮಾರಕಾರ್ಥ ಅಲೆಕ್ಸಾಂಡ್ರಿಯದಲ್ಲಿ (ಜುಲಾಯಿ ೨೬) ಮೊನ್ನೆ ಸೇರಿದ್ದ ಸಭೆಯಲ್ಲಿ ಅಧ್ಯಕ್ಷ ನಾಸೇರರು ಸುಯೆಜ್ ಕಾಲುವೆ ಕಂಪೆನಿಯ ರಾಷ್ಟ್ರೀಕರಣದ ನಿರ್ಧಾರವನ್ನು ಸಾರಿದರು!

ಐಗುಪ್ತದ ಜನರೆಲ್ಲರೂ ಪರಸ್ಪರ ಶುಭಾಶಯಗಳನ್ನು ಅರ್ಪಿಸುತ್ತಾ ನಾಸೇರರನ್ನು ಶೂರನೆಂದು ಪ್ರಶಂಸಿಸುತ್ತಾ ನಲಿದಾಡಿದರು. ಆದರೆ, ಅದೇ ಹೊತ್ತಿಗೆ, ಪ್ರಮುಖ ಪಾಶ್ಚಾತ್ಯ ರಾಷ್ಟ್ರಗಳ ಧುರೀಣರು ಹಲ್ಲುಕಡಿಯಹತ್ತಿದ್ದರು!

"ನೈಲ್ ನದಿಗೆ ಕಟ್ಟಬೇಕೆಂದಿದ್ದ ಆಸ್ವಾನ್ ಅಣೆಕಟ್ಟಿಗೆ ಬ್ರಿಟನ್ ಮತ್ತು ಅಮೇರಿಕಗಳು ಸಹಾಯ ಮಾಡುವುದಿಲ್ಲವಾದರೇನಂತೆ? ಸುಯೆಜ್ ಕಾಲುವೆ ಕಂಪೆನಿಯ ಆದಾಯದಿಂದ ಈ ಅಣೆಕಟ್ಟನ್ನು ಕಟ್ಟಿಯೇ ತೀರುತ್ತೇವೆ" ಎಂದು ನಾಸೇರರು ಘೋಷಿಸಿದರು.

೦೦

ಐಗುಪ್ತದ ಲಕ್ಷಾಂತರ ಎಕ್ರೆ ಬಂಗಾಡನ್ನು ಸಮೃದ್ಧಗೊಳಿಸುವ ಮಹಾ ಯೋಜನೆಯೇ ಅಸ್ವಾನಿನ ಅಣೆಕಟ್ಟು. ಹತ್ತು ವರ್ಷಗಳ ಅವಧಿಯಲ್ಲಿ ಬೇರೆ ಬೇರೆ ಹಂತಗಳಲ್ಲಿ ಇದನ್ನು ಪೂರೈಸುವ ಮಾತುಕತೆ ಐಗುಪ್ತಕ್ಕೂ ಅಮೇರಿಕ-ಬ್ರಿಟನುಗಳಿಗೂ ನಡುವೆ ನಡೆದಿತ್ತು. ಜಾಗತಿಕ ಬೇಂಕು ಸಹ ಸಹಾಯದ ಭರವಸೆಯನ್ನಿತ್ತಿದ್ದಿತು.

ಸುಮಾರು ೩೦ ಕೋಟಿ ಡಾಲರುಗಳ ವೆಚ್ಚ ಬರುವ ಈ ಕಾರ್ಯಕ್ರಮದಲ್ಲಿ ಅಮೇರಿಕವು ತನ್ನ ಸಹಾಯದ ಮೊದಲ ಕಂತಾಗಿ ೫½ ಕೋಟಿ ಡಾಲರನ್ನೂ ಬ್ರಿಟನು ೧½ ಕೋಟಿ ಡಾಲರನ್ನೂ ಕೊಡಲು ಮಾತು ಕೊಟ್ಟಿದ್ದವು.

ಆದರೆ ಇದೇ ಜುಲಾಯಿಯ ೧೯ನೇ ದಿನಾಂಕ ಅಮೇರಿಕವು ಐಗುಪ್ತಕ್ಕೆ ತಾನು ಭರವಸೆ ನೀಡಿದ್ದ ಸಹಾಯವನ್ನು ಕೊಡುವುದು ಸಾಧ್ಯವಿಲ್ಲವೆಂದು ಹೇಳಿತು. ಮರುದಿನ ಬ್ರಿಟನು ಸಹ ತನ್ನ ಭರವಸೆಯ ಸಹಾಯವನ್ನು ಹಿಂದೆಗೆದು ಕೊಂಡಿತು.

ಇವೆರಡು ಮಹಾ ರಾಷ್ಟ್ರಗಳ ಮಂತಿಗೆಯ ಬೆಂಬಲದಿಂದ ಸಹಾಯ ನೀಡುವ ನಂಬಿಕೆಯನ್ನು ಹೊಂದಿದ್ದ ಜಾಗತಿಕ ಬೇಂಕು, ಈ ಮಂತಿಗೆ ಬರುವಂತಿಲ್ಲವೆಂಬುದನ್ನು ಮನಗಂಡೊಡನೆಯೇ ತನ್ನ ಸಹಾಯದ ಭರವಸೆ ಫಲಕಾರಿಯಾಗದೆಂದು ಸ್ಪಷ್ಟಪಡಿಸಿತು.

೦೦

ಹೀಗೆ ಐಗುಪ್ತದ ಜನರೆಲ್ಲರೂ ಆತ್ಮಾಸೆಯ ಕಣ್ಣುಗಳಿಂದ ಇದಿರು ನೋಡುತ್ತಿದ್ದ ಸಹಾಯ ಆಕಸ್ಮಿಕವಾಗಿ ನಿಂತು ಹೋಯಿತು! ಅಸ್ವಾನಿನ ಅಣೆಕಟ್ಟಿನಿಂದ ಸಂಪತ್ಸಮೃದ್ಧವಾದ ರಾಷ್ಟ್ರವನ್ನು ಕಟ್ಟಿಕೊಳ್ಳುವೆವೆಂದು ನಂಬಿದ್ದ ಐಗುಪ್ತದ ಜನತೆಯ ಪಾಲಿಗೆ ನೆಂಬಿನ ಭರವಸೆಯನ್ನು ಹಿಂದೆಗೆದು ಕೊಂಡ ಪಾಶ್ಚಾತ್ಯ ರಾಷ್ಟ್ರಗಳ ವರ್ತನೆಯು ದೊಡ್ಡ ಆಘಾತವಾಗಿ ಪರಿಣಮಿಸಿತು.

"ನಾವು ಅಣೆಕಟ್ಟನ್ನು ಕಟ್ಟಿಯೇ ತೀರುತ್ತೇವೆ" ಎಂದು ನಾಸೇರರ ಸರಕಾರ ಸಾರುತ್ತಾ ಜನರ ದುಗುಡ ನಿವಾರಣೆಗೆ ಪ್ರಯತ್ನಿಸಿತು. "ಕಾದಿರಿ, ಗುರುವಾರ, ಇದೇ ೨೬ನೇ ದಿನಾಂಕ, ನಾವು ಹೇಗೆ ಅಣೆಕಟ್ಟನ್ನು ಕಟ್ಟುವೆವೆಂಬುದನ್ನು ಹೇಳುತ್ತೇನೆ" ಎಂದು ನಾಸೇರರು ಜನತೆಯ ಸಮಾಧಾನಗೈದರು.

೦೦

ಅಮೇರಿಕದ ಡಲ್ಲೇಸರೂ ಬ್ರಿಟನಿನ ಈಡನ್ನರೂ ಐಗುಪ್ತವನ್ನು ಪೇಚಾಟಕ್ಕೆ ತಳ್ಳಿದ ಸಂತೋಷದಿಂದಿದ್ದರು. ಅವರೆಲ್ಲರ ದೃಷ್ಟಿಯು ರಷ್ಯವೇನು ಮಾಡುವುದು ಎಂಬ ಕಡೆಗೆಯೇ ಇತ್ತೆನ್ನಬಹುದು. ಪಾಶ್ಚಾತ್ಯ ರಾಷ್ಟ್ರಗಳು ಕೈಬಿಟ್ಟ ಸ್ಥಿತಿಯಲ್ಲಿ ಐಗುಪ್ತವು ರಷ್ಯದಿಂದ ಸಹಾಯದ ಭರವಸೆ ಪಡೆಯುವುದೆ?—ಎಂಬ ಕುತೂಹಲ ಅವರದು!

ನಡೆದುದು ಮಾತ್ರ ಬೇರೆಯೇ—ಪಾಶ್ಚಾತ್ಯ ರಾಷ್ಟ್ರಗಳ ಪ್ರಮುಖರ ಎದೆಯೊಡೆಯುವ ವಾರ್ತೆ ಗುರುವಾರ ರಾತ್ರಿ ಬಂತು! ಏಶ್ಯ ಮತ್ತು ಯುರೋಪುಗಳ ನಡುವೆ ವಾಣಿಜ್ಯ ವ್ಯವಹಾರದ ಹೆದ್ದಾರಿಯಂತಿರುವ—ಆರ್ಥಿಕ ಜೀವನಾಡಿಯಾದ—ಸುಯೇಜಿನ ಕಾಲುವೆಯ ಪ್ರಭುತ್ವವನ್ನು ಐಗುಪ್ತದ ಸರಕಾರ ಖಾಸಗಿ ಕಂಪೆನಿಯ ಕೈಯಿಂದ ತನ್ನ ವಶಕ್ಕೆ ತೆಗೆದುಕೊಂಡಿತು.

ಎಲ್ಲ ಲೆಕ್ಕಾಚಾರವೂ ಈಗ ತಲೆಕೆಳಗಾಗಿದೆ! ಪಾಶ್ಚಾತ್ಯ ರಾಷ್ಟ್ರಗಳ ಪ್ರಮುಖರು ಉದ್ವಿಗ್ನರಾಗಿದ್ದಾರೆ; ದಿಙ್ಮೂಢರಾಗಿದ್ದಾರೆ! ಓಡು ಕಚ್ಚಿಕೊಳ್ಳುತ್ತಿದ್ದಾರೆ! ಕೈ ಕೈ ಹಿಸುಕಿಕೊಳ್ಳುತ್ತಿದ್ದಾರೆ! ಅವರದು ಏನು ಮಾಡುವುದೆಂಬುದೇ ತಿಳಿಯದ ಒದ್ದಾಟ. ೦೦

ಅಸ್ವಾನಿನ ಅಣೆಕಟ್ಟಿಗೆ ಸಹಾಯವನ್ನು ಕಲ್ಪಿಸಬೇಕೆಂದು ನಿರ್ಧರಿಸಿದ್ದಾಗ, ಬ್ರಿಟನಾಗಲೀ ಅಮೇರಿಕವಾಗಲೀ ನಿಸ್ವಾರ್ಥ ದೃಷ್ಟಿಕೋಣವನ್ನು ಇಟ್ಟುಕೊಂಡಿರಲಿಲ್ಲ. ಕಳೆದ ವರ್ಷ ಐಗುಪ್ತವು ಜೆಕೊಸ್ಲೊವಾಕಿಯವೆಂಬ ಕಮ್ಯುನಿಸ್ಟ್ ಗುಂಪಿನ ರಾಷ್ಟ್ರದಿಂದ ಶಸ್ತ್ರಗಳನ್ನು ತರಿಸಿಕೊಳ್ಳಲು ಸಂಕಲ್ಪಿಸಿದುದರಿಂದ

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮ, ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ಎ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ಹಿಂದುಗಳ ಉತ್ತರಾಧಿಕಾರ ಶಾಸನ

ಸುಲಭ ಕನ್ನಡ ಭಾಷಾಂತರ, ಟಿಪ್ಪಣಿ, ವಿವರಣೆ ಸಮೇತ.

ಸಂಪಾದಕರು:

ಕಡೆಂಗೋಡ್ಲು ಈಶ್ವರ ಭಟ್, ಬಿ. ಎಸ್‌ಸಿ., ಬಿ. ಎಲ್., ಎಡ್ವೊಕೇಟ್

ಮತ್ತು

ಮುಳಿಯ ಮಹಾಬಲ ಭಟ್, ಬಿ. ಎಸ್‌ಸಿ., ಎಲ್‌ಎಲ್. ಬಿ.

ಪ್ರತಿಯೊಬ್ಬ ಹಿಂದುವಿನ ಕೈಯಲ್ಲಿರಬೇಕಾದ ಪುಸ್ತಕ ಇದು.

ಮೊದಲಿನ ಮುದ್ರಣದ ಪ್ರತಿಗಳು ನಾಲ್ಕೇ ದಿವಸಗಳಲ್ಲಿ ಮುಗಿದಿವೆ.

ದ್ವಿತೀಯ ಮುದ್ರಣ ಈಗ ತಾನೆ ಆಗಿದೆ: ಪ್ರತಿಗಳು ಬೇಕಾದವರು ಕೂಡಲೇ ಬರೆದುಕೊಳ್ಳಿರಿ.

ಬೆಲೆ: ರೂ. 0—12—0. ಅಂಚೆ ವೆಚ್ಚ 0—2—0.

ದಯಮಾಡಿ ರೂ. 0—14—0 ಮನಿಯಾರ್ಡರು ಮಾಡಿ ಪ್ರತಿಗಳನ್ನು ಪಡೆದುಕೊಳ್ಳಿರಿ.

ವಿ. ಪಿ. ಯಾದರೆ ಖರ್ಚು ಹೆಚ್ಚು ಬೀಳುವದು.

ವ್ಯಾಪಾರಿಗಳಿಗೆ ಧಾರಾಳವಾದ ಕಮೀಶನ್.

ಇಂಡಿಯನ್ ಇಂಡಸ್ಟ್ರಿಯಲ್ಸ್ ಎಂಡ್ ಏಜನ್ಸೀಸ್

ಕಾಸರಗೋಡು ಸದಾಶಿವರಾವ್ ರಸ್ತೆ, ಮಂಗಳೂರು, ದ. ಕ.

ಅಂತಾರಾಷ್ಟ್ರೀಯ ದ್ರೋಹವಿದೆಂದು ಬ್ರಿಟನಿನ ಪಕ್ಷಪಾತಿಗಳ ಆಕ್ರೋಶ

ತನ್ನ ಸಾರ್ವಭೌಮಾಧಿಕಾರದಲ್ಲಿ ಬರುವ ವಿಷಯವೆಂದು ಐಗುಪ್ತದ ಸ್ಪಷ್ಟೀಕರಣ

ಕಂಗೆಟ್ಟು ಪಾಶ್ಚಾತ್ಯರು ಈ ಭರವಸೆ ಕೊಡಲು ಮುಂದಾಗಿದ್ದರು.

ನಾಸೇರರು ಶಸ್ತ್ರಗಳ ಪೂರೈಕೆಗಾಗಿ ಬ್ರಿಟನನ್ನೂ ಅಮೇರಿಕವನ್ನೂ ಯಾಚಿಸಿದ್ದರು. ಆದರೆ ಇವೆರಡೂ ರಾಷ್ಟ್ರಗಳಿಗೆ ಸ್ವತಂತ್ರ ಮನೋವೃತ್ತಿಯ ಐಗುಪ್ತಕ್ಕೆ ಉಪಕಾರ ಮಾಡುವುದು ಬೇಕಾಗಿರಲಿಲ್ಲ, ತಮ್ಮ ದಾಸ್ಯವನ್ನು ಸ್ವೀಕರಿಸುವಂತಿದ್ದ ರಾಷ್ಟ್ರಗಳಿಗೆ ಮಾತ್ರ ಸ್ವತಂತ್ರ ಜಗತ್ತಿನ ಹೆಸರಿನಲ್ಲಿ ನೆರವಾಗುವ ಧೋರಣೆ ಅವುಗಳದು.

೦ ೦

ಫರೂಕರ ಪತನದ ಬಳಿಕ, ಐಗುಪ್ತದ ಸರಕಾರವು ಭಾರತದ ಮಾದರಿಯನ್ನೆ ಹೆಚ್ಚು ಕಡಿಮೆ ಅನುಸರಿಸಿತು; ಮುಖ್ಯವಾಗಿ ಅದು ಯಾವ ಗುಂಪಿನೊಡನೆಯೂ ಸೇರಿ ಹೋಗದೆ "ತಟಸ್ಥ"ವಾಗಿ ಉಳಿಯಿತು. ನಿಶ್ಶರ್ತ ಸಹಾಯ ಎಲ್ಲಿಂದ ಬಂದರೂ ಸ್ವೀಕರಿಸುವ ಉತ್ಸಾಹವನ್ನು ತೋರಿಸಿತು. ಸೈನಿಕ ಒಪ್ಪಂದಗಳನ್ನು ಖಂಡಿಸಿತು; ಕೆಂಪು ಚೀನಕ್ಕೆ ಮನ್ನಣೆ ಕೊಟ್ಟಿತು.

ಇದೆಲ್ಲ ಅಮೇರಿಕ ಮತ್ತು ಬ್ರಿಟನುಗಳಿಗೆ ಸರಿ ಬೀಳುತ್ತಿರಲಿಲ್ಲ. ಇಸ್ರಾಯೇಲಿನೊಡನೆ ಪಕ್ಷಪಾತದಿಂದಿರುವ ಈ ರಾಷ್ಟ್ರಗಳಿಗೆ ಐಗುಪ್ತದ ನಿಲುಮೆಯು ಪಥ್ಯವಾಗಲಿಲ್ಲ. ಅಲ್ಜೀರಿಯದ ಸ್ವಾತಂತ್ರ್ಯ ಹೋರಾಟಕ್ಕೆ ನಾಸೇರರು ಬೆಂಬಲವಿತ್ತುದರಿಂದ ಫ್ರಾನ್ಸಿಗೆ ಸಹ ಐಗುಪ್ತದ ಮೇಲೆ ಕೋಪ ಉಂಟಾಯಿತು.

ಅರಬ ರಾಷ್ಟ್ರಗಳ ಒಗ್ಗಟ್ಟಿನ ಹೆಸರಿನಲ್ಲಿ ಜೋರ್ಡಾನಿನ ಮೇಲೆ ಬ್ರಿಟನಿನ ಹಿಡಿತ ತಪ್ಪುವುದಕ್ಕೆ ನಾಸೇರರಿಂದ ಪ್ರೇರಣೆಯೊದಗಿತೆಂದು ಭಾವಿಸಲಾಯಿತು. ಸುಯೇಜಿನ ಕಾಲುವೆ ಪ್ರದೇಶದಲ್ಲಿ ಅದರ "ರಕ್ಷಣೆ"ಗಾಗಿ ನಿಂತಿದ್ದ ೮೦೦೦೦ ಆಂಗ್ಲ ಸೈನಿಕರ ದಂಡು ಸ್ವಲ್ಪ ಸ್ವಲ್ಪವೇ ತೊಲಗಿ ಹೋಗುವಂತೆ ನಾಸೇರರು 'ಸಂಧಾನ' ಮಾಡಿಕೊಂಡರು. ಬ್ರಿಟನಿನ ಜನಮತ ಇದಕ್ಕೆ ಅನುಕೂಲವಿರಲಿಲ್ಲ—ಆದರೆ ಸರಕಾರವು ನಿರುಪಾಯವಾಗಿತ್ತೆನ್ನಬಹುದು.

೦೦

ಇವೆಲ್ಲ ಕೃತ್ಯಗಳಿಂದ ತಮ್ಮ ಹಿತಕ್ಕೆ ವಿರುದ್ಧ ನಡೆಯುತ್ತಿರುವ ನಾಸೇರರಿಗೆ ಅಮೇರಿಕ ಮತ್ತು ಬ್ರಿಟನುಗಳು ಶಸ್ತ್ರವನ್ನು ಪೂರೈಸಿ ಅವರ ಶಕ್ತಿಯನ್ನು ಹೆಚ್ಚಿಸಲು ಸಿದ್ಧವಿರಲಿಲ್ಲ ಆದುದರಿಂದ ನಾಸೇರರು ಶಸ್ತ್ರ ಪೂರೈಕೆಗೆ ಮಾಡಿದ್ದ ಬಿನ್ನಹವನ್ನು ತಿರಸ್ಕರಿಸಲಾಯಿತು.

ಜೆಕೊಸ್ಲೊವಾಕಿಯದೊಡನೆ ಆ ಕೂಡಲೇ ಐಗುಪ್ತವು ಶಸ್ತ್ರ ಪೂರೈಕೆಯ ಒಪ್ಪಂದವನ್ನು ಮಾಡಿಕೊಂಡಿತು: ತನ್ನ ಹತ್ತಿಯ ಉತ್ಪತ್ತಿಯ ಭರವಸೆಯ ಮೇಲೆ ಅದು ೨ ಕೋಟಿ ಡಾಲರುಗಳ ಶಸ್ತ್ರ ವ್ಯವಹಾರವನ್ನು ಪ್ರಾರಂಭಿಸಿತು.

ಮಧ್ಯಪೂರ್ವದಲ್ಲಿ ಆಯಕಟ್ಟಿನ ಪ್ರದೇಶದ ರಾಷ್ಟ್ರವೊಂದು ಕಮ್ಯುನಿಸ್ಟರ ಬಳಿಗೆ ಬೀಳುವಂತಾಯಿತೇ ಎಂದೀಗ ಬ್ರಿಟನು — ಅಮೇರಿಕಗಳು ಸಂತಾಪಗೊಂಡವು: ಐಗುಪ್ತದ ದೃಷ್ಟಿಯಲ್ಲಿ ತಾವು ಕಳೆದುಕೊಂಡ ಗೌರವವನ್ನು ಪುನಃ ಸಂಪಾದಿಸುವ ಉದ್ದೇಶದಿಂದ ಅಸ್ವಾನಿನ ಅಣೆಕಟ್ಟಿನ ಯೋಜನೆಯ ನಿರ್ಮಾಣಕ್ಕೆ ನೆರವಾಗುವ ಮತ್ತು ಧನಸಹಾಯ ಮಾಡುವ ಭರವಸೆಯನ್ನವು ಕೊಟ್ಟವು

೦೦

ಇನ್ನಾದರೂ ನಾಸೇರರು ಉಪಕೃತಿಯ ಭಾವದಿಂದ, ಕೃತಜ್ಞತೆಯ ನಮಸ್ಕಾರಗಳಿಂದ, ಭಯಭಕ್ತಿಗಳನ್ನೂ ವಿಧೇಯತೆಯನ್ನೂ ತಮ್ಮ ಮಟ್ಟಿಗೆ ಪ್ರದರ್ಶಿಸಿಯಾರೆಂದು ಈ ಪಾಶ್ಚಾತ್ಯ ರಾಷ್ಟ್ರಗಳು ನಂಬಿದವೆಂದು ಕಾಣುತ್ತದೆ. ಆದರೆ, ನಾಸೇರರು ತಮ್ಮ ಚಟುವಟಿಕೆಯನ್ನು ಎಂದಿನಂತೆ ಸ್ವತಂತ್ರ ರೀತಿಯಲ್ಲಿ ಮುನ್ನಡೆಸಿದರು.

ಭಾರತದ ಪ್ರಧಾನಿ ನೆಹರುಗಳು ಈಚೆಗೆ ಯುರೋಪಿನ ಸಂಚಾರದಲ್ಲಿದ್ದಾಗ ಅವರೂ ಯುಗೊಸ್ಲಾವಿಯದ ಟಿಟೋ ಮತ್ತು ಐಗುಪ್ತದ ನಾಸೇರರೂ ಪರಸ್ಪರ ಸಮಾಲೋಚನೆಗಳನ್ನು ಬ್ರಿಯೋನಿ ದ್ವೀಪದಲ್ಲಿ ನಡೆಸಿದರು. ಇಲ್ಲಿ ಹೊರಟ ಪ್ರಕಟಣೆಯು ಪಾಶ್ಚಾತ್ಯ ರಾಷ್ಟ್ರಗಳ ತಪ್ಪು ಹೆಜ್ಜೆಗಳನ್ನು ಖಂಡಿಸುವಂತಿದ್ದಿತು.

ಆಗ ಎಸೆದ ಆಕಸ್ಮಿಕ ಬಾಂಬೇ ಭರವಸೆ ನೀಡಿದ ಸಹಾಯದ ನಿರಾಕರಣೆ! ವಿಧೇಯತೆಯ ಸ್ಥಾನದಲ್ಲಿ ಸ್ವಚ್ಛಂದತೆಯನ್ನೂ ಕೃತಜ್ಞತೆಗೆ ಬದಲು ಕೃತಘ್ನತೆಯನ್ನೂ ವ್ಯಕ್ತಪಡಿಸುವ ನಾಸೇರರ ತೇಜೋವಧೆಯನ್ನು ಮಾಡುವುದೇ ಸಹಾಯ ನಿರಾಕರಣೆಯ ಮುಖ್ಯ ಕಾರಣ.

೦ ೦

ಅಮೇರಿಕದ ರಾಜ್ಯಖಾತೆಯು ಪ್ರಕಟವಾಗಿ ಈ ಕಾರಣವನ್ನು ಕೊಡುತ್ತಿಲ್ಲ: ಅದರ ಹೇಳಿಕೆಗನುಸಾರ (೧) ನೈಲಿನ ನೀರನ್ನು ಹಂಚಿಕೊಳ್ಳುವ ಬಗ್ಗೆ ಸಂಬಂಧಪಟ್ಟ ರಾಷ್ಟ್ರಗಳಲ್ಲಿ ಒಮ್ಮತವಾಗದಿರುವುದೂ (೨) ಭರವಸೆಯನ್ನು ನೀಡಿದ್ದ ಕಾಲದಲ್ಲಿದ್ದುದಕ್ಕಿಂತಲೂ ಈಗ ಸಾಲದ ಮರುಪಾವತಿಯ ದೃಷ್ಟಿಯಿಂದ ಐಗುಪ್ತದ ಆರ್ಥಿಕ ಸ್ಥಿತಿಯು ವಿಷಮಿಸಿರುವುದೂ ಅಸ್ವಾನಿನ ಅಣೆಕಟ್ಟಿಗೆ ಸಹಾಯ ಕೊಡಬಾರದೆಂದು ತೀರ್ಮಾನಿಸಿದುದಕ್ಕೆ ಆಧಾರ.

ಇದು ಸಂಪೂರ್ಣ ಸುಳ್ಳು: ನೈಲಿನ ನೀರಿನಲ್ಲಿ ಸೂಡಾನ್, ಇಥಿಯೋಪಿಯ, ಐಗುಪ್ತ, ನ್ಯಾಸಾಲೆಂಡ್ ಇತ್ಯಾದಿ ರಾಷ್ಟ್ರಗಳಲ್ಲಿ ಒಮ್ಮತವಾಗದಿದ್ದರೆ ಅಣೆಕಟ್ಟಿನ ರಚನೆ ಅಸಾಧ್ಯವೆಂಬುದನ್ನು ಪಾಶ್ಚಾತ್ಯ ತಜ್ಞರು ಮೊದಲೇ ತಿಳಿದಿರಲಿಲ್ಲವೆ? ಆಗ ಎತ್ತದ ಆಕ್ಷೇಪವನ್ನು ಈಗ ಉಲ್ಲೇಖಿಸುವುದೆಂದರೆ ಕೇವಲ ಕುತಂತ್ರ!

ಐಗುಪ್ತದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಹೇಳಲಾದ ಮಾತು ಸಹ ನ್ಯಾಯವಾದುದಲ್ಲ: ಕಳೆದ ಎಂಟು-ಹತ್ತು ತಿಂಗಳೊಳಗೆ ಐಗುಪ್ತವು ದಿವಾಳಿ ತೆಗೆದಿದೆ ಎಂಬ ರೀತಿಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳು ಈಗ ಮಾತನಾಡುತ್ತವೆ. ಇದು ಆಧಾರರಹಿತವಾದ ಟೀಕೆ: ವಾಸ್ತವವಾಗಿ, ಐಗುಪ್ತದ ಆರ್ಥಿಕ ಸ್ಥಿತಿ ತುಂಬ ಸುಧಾರಿಸಿದೆ.

೦ ೦

ನಾಸೇರರು ಅಸ್ವಾನಿನ ಅಣೆಕಟ್ಟಿನಿಂದ ಜನರ ಕಷ್ಟಗಳು ದೂರವಾಗುವವೆಂಬ ಆಸೆಯನ್ನು ಹುಟ್ಟಿಸಿದ್ದರು. ಈ ಅಣೆಕಟ್ಟನ್ನು ಅವರು ಕಟ್ಟಿಸಿಕೊಡದಿದ್ದರೆ ಜನಪ್ರಿಯತೆಯನ್ನವರು ಕಳೆದುಕೊಳ್ಳುವರು. ಮೊದಲು ಆಶೆ ಹುಟ್ಟಿಸಿ, ಅನಂತರ ಆಸೆಗೆ ಆಧಾರವಿಲ್ಲದಂತೆ ಮಾಡಿದರೆ, ನಾಸೇರರ ಪತನವು ಸ್ವಯಂ ಸಾಧ್ಯವಾಗುವುದು— ಎಂಬ ಸರಣಿಯಲ್ಲಿ ಪಾಶ್ಚಾತ್ಯರು ಆಲೋಚಿಸಿದರೆಂದು ಹೇಳಲಾಗುತ್ತದೆ.

"ಜವಾಬ್ದಾರಿಯ ಬಗ್ಗೆ ಎಚ್ಚರದಿಂದ ಲೆಕ್ಕ ಹಾಕಿದ ತಂತ್ರ" ಎಂಬುದಾಗಿ ಪಾಶ್ಚಾತ್ಯರ ಈ ವರ್ತನೆಯನ್ನು ಕರೆಯಲಾಯಿತು. ಆದರೆ, ಈಗ ಡಲ್ಲೆಸರ ಲೆಕ್ಕ ಪೂರಾ ತಪ್ಪಿಗಿದೆ: ಪಾಶ್ಚಾತ್ಯರ ಪ್ರತಿಷ್ಠೆ ತಿಪ್ಪರಲಾಗ ಹೊಡೆದಿದೆ!

ರಶ್ಯದಿಂದ ಅಸ್ವಾನಿನ ಅಣೆಕಟ್ಟಿಗಾಗಿ ಶೀಘ್ರ ಸಹಾಯದ ಆಶ್ವಾಸನವೇನೂ ಬರಲಿಲ್ಲ: ಪಾಶ್ಚಾತ್ಯರು ಇದನ್ನು ಕಂಡು ಸಂತೋಷಪಟ್ಟರು. ತಾವೆಸೆದ ಗುಂಡು ಮರ್ಮಸ್ಥಾನಕ್ಕೆ ತಗಲಿತು ಎಂದು ಕೊಂಡರು. ಆದರೆ, ತಮ್ಮ ಮೇಲೆ ಪ್ರಯೋಗಿಸಲು ನಾಸೇರರ ಬತ್ತಳಿಕೆಯಲ್ಲಿ ಪ್ರಬಲಾಸ್ತ್ರವೊಂದನ್ನು ಬಿಟ್ಟಿದ್ದೇವೆಂಬ ತಿಳಿವಳಿಕೆಯು ದೇವರ ಮಾಯೆಯಿಂದೆಂಬಂತೆ ಇವರಿಗೆ ಆಗಲೇ ಇಲ್ಲ!

೦೦

ತನ್ನ ಎಣಿಕೆಯಂತೆಯೇ ಎಲ್ಲವೂ ಸಾಗುತ್ತಿರುವುದನ್ನು ಕಂಡ ಸಂತೋಷಾತಿರೇಕದಿಂದ ಪಿಂಡವನ್ನು ಮಡುವಿನಲ್ಲಿ ಹಾಕೆಂದು ಹೇಳಿದ ಚಂಡಿಯ ಗಂಡ ಉದ್ದಾಲಕನಂತೆ ಈಗ ಪಾಶ್ಚಾತ್ಯ ಪ್ರಮುಖರು ಸಿಟ್ಟಿನಿಂದ ತಲ್ಲಣಗೊಂಡಿದ್ದಾರೆ. ಕೆಸರೆರಚಲು ಹೋದ ತಾವೇ ಕೆಸರಿನಲ್ಲಿ ಹೂತು ಹೋದಂತೆ ಆಗಿದೆ ಅವರ ಅನುಭವ.

ಗುರುವಿಗೆ ತಿರು ಮಂತ್ರವನ್ನು ಹೇಳಿದ ನಾಸೇರರು ಶಠಂ ಪ್ರತಿಶಾಠ್ಯಂ ಎಂಬ ಮನೋಭಾವವನ್ನೆ ಪ್ರದರ್ಶಿಸಿದ್ದಾರೆ: ತಮ್ಮದು ಮುಯ್ಯಿಗೆ ಮುಯ್ಯಿ ಎಂಬುದನ್ನು ಅವರು ಎಳ್ಳಷ್ಟೂ ಬಚ್ಚಿಟ್ಟಿಲ್ಲ.

"ಅವರು ಕೊಡುವ ೭ ಕೋಟಿ ಡಾಲರುಗಳ ಸಹಾಯವಿಲ್ಲದಿದ್ದರೆ ಅಷ್ಟೇ ಹೋಯಿತು: ಪ್ರತಿ ವರ್ಷ ೧೦ ಕೋಟಿ ಡಾಲರು ನಿವ್ವಳ ಲಾಭವನ್ನು ತಂದು ಕೊಡುವ ಸುಯೇಜ್ ಕಾಲುವೆ ಕಂಪೆನಿಯ ಹೆಸರಿನಲ್ಲಿ ಅವರನ್ನು ಸುಲಿಗೆ

(೮ನೇ ಪುಟ ನೋಡಿರಿ)

ನೋಟೀಸು

ಉಡುಪಿ ತಾಲೂಕು ಬ್ರಹ್ಮಾವರ ಹಂದಾಡಿ ಗ್ರಾಮದಲ್ಲಿರುವ ಶಿವನಾಯ್ಕನು ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ, ನನ್ನ ಮಕ್ಕಳಾಗಲೀ, ಬೇರೆ ಯಾರೇ ಆಗಲಿ ನನ್ನ ಹೆಸರ ಮೇಲೆಯೂ ಅವರ ಹೆಸರ ಮೇಲಾಗಲೀ, ಸಾಲ, ಹುಂಡಿ, ನೋಟು ಇತ್ಯಾದಿ ಯಾವುದೇ ಮಾಡಿದ್ದಲ್ಲಿ ಅವರವರೇ ಜವಾಬ್ದಾರರಾಗತಕ್ಕದ್ದು. ಅವರು ಮಾಡಿದ ಸಾಲ ಇತ್ಯಾದಿ ಯಾವುದೇ ನನ್ನ ಮೇಲೆಯಾಗಲೀ, ನನ್ನ ಮನೆಯ ಮೇಲಾಗಲೀ ಸಂಬಂಧಪಡತಕ್ಕದ್ದಲ್ಲವೆಂದು ಎಲ್ಲವರಿಗೂ ತಿಳಿಸಿರುತ್ತೇನೆ.

ಶಿವನಾಯ್ಕನ ರುಜು.

ಬ್ರಹ್ಮಾವರ 28—7—56

ಕುಟುಂಬ ಯೋಜನೆ

ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯವು ಭದ್ರವಾದರೆನೇ ನಿಮ್ಮ ಕುಟುಂಬಯೋಜನೆ ಪರಿಪೂರ್ಣವಾಗುವುದು. ಕುಟುಂಬದ ಒಬ್ಬರ ಅಭ್ಯುದಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆ ಇದೆ. ನಿಮ್ಮ ಮಡದಿ, ಮಕ್ಕಳ ಪ್ರತಿಯೊಬ್ಬರ ಹೆಸರಲ್ಲಿ ಒಂದೊಂದು **'ಕ್ಯುಮುಲಟಿವ್ ಡಿಪೋಜಿಟ್'** ಲೆಕ್ಕ ತೆರೆದು ಅವರು ಕ್ರಮವಾಗಿ ಉಳಿಸುವಂತೆ ಮಾಡಿರಿ. ಇದಕ್ಕೆ ದೊಡ್ಡ ಮೊಬಲಗು ಬೇಕಾಗಿಲ್ಲ; ಕ್ರಮಬದ್ಧವಾಗಿ ನಿಶ್ಚಿತ ಹಣವನ್ನು ಉಳಿಸುವುದೇ ಮುಖ್ಯ.

ಆದುದರಿಂದ ಈ ಯೋಜನೆಯನ್ನು ಅಂಗೀಕರಿಸಿ ಕುಟುಂಬದೊಂದಿಗೆ ಕುಟುಂಬಯೋಜನೆಯನ್ನು ನೆರವೇರಿಸಿರಿ.

ಒಟ್ಟು ಆರ್ಥಿಕ ಆಸರೆ ರೂ: 9.5 ಕೋಟಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಚೇರಿ: **ಉಡುಪಿ**, ದ. ಭಾರತ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 40/1956-

S. C. 271/1947,

ಸಂಕು ಶೆಟ್ಟಿ —ಅರ್ಜಿದಾರ

ಸೋಮುಕ್ಕೆ ಹೆಂಗ್ಸು ಕೂಡಾ —ಎದ್ರಿರು.

ಎದ್ರಿರು 1 ಸೋಮುಕ್ಕೆ ಹೆಂಗ್ಸು, ಮಂಜಮ್ಮ ಹೆಂಗ್ಸಿನ ಮಗಳು 2 ಬಾಬು ಭಂಡಾರಿ, ಸೋಮುಕ್ಕೆ ಹೆಂಗ್ಸು ಮಗ, ಪುತ್ತೂರು ತಾಲೂಕು ಮುದ್ದಿಮುಕ್ಕಬಾಗ್ರಾಮದಲ್ಲಿರುವವರು, ಇವರಿಗೆ

ಮೇಲ್ಕಂಡ ಡಿಕ್ರಿ ಹೊಂದಿದವನಾದ ವಾದಿಯು ನಿಮ್ಮ ಹಕ್ಕಿನ ಸ್ಥಿರಾಸ್ತಿ ಏಲಂ ನಡೆಸಬೇಕೆಂತಲೂ, ಏಲಂಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕೆಂತಲೂ ವಗೈರೆಗೆ ಮಾಡಿದ ಅರ್ಜಿಯು, ಇಸ್ತಿಹಾರಿನ ಶರತ್ತ ವಗೈರೆ ನಿರ್ಣಯಿಸುವದೇ ತಾ. 8—8—1956ಕ್ಕೆ ವಾಯಿದೆ ಇಟ್ಟಿರುತ್ತದೆ. ನಿಮಗೇನಾದರೂ ಆಕ್ಷೇಪಣೆಯಿದ್ದರೆ ಆ ದಿವ್ಸ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ಊರ್ಜಿತಪಡಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದರೆ ನಿಮ್ಮನ್ನು ಶಿವ್ವಾವಾಡಿ ಮುಂದರಿಸಲಾಗುವುದೆಂತಲೂ ಕೋರ್ಟು ಹುಕುಂಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

(Sd) P. Krishna Bhat.
Vakil for Petr.

ಪುತ್ತೂರು 21—7—56.

NAVAYUGA
Popular Kannada Weekly
Founder:—
A. B. SHETTY, *M. L. A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨-೮-'೫೬	೪೭

ಅಂತಃಕಲಹ

ಕಾಂಗ್ರೆಸಿನ ಸಾಂಸತ್ತಿಕ ವ್ಯವಹಾರಗಳ ಕೇಂದ್ರ ಮಂಡಳದ ಆದೇಶಾನುಸಾರ, ಇಷ್ಟರಲ್ಲಿಯೇ ಮೈಸೂರಿನ ಶಾಸನಾಂಗದ ಕಾಂಗ್ರೆಸು ಪಕ್ಷೀಯ ಸದಸ್ಯರು ಸಭೆ ಸೇರಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಲ್ಲಿ ವಿಶ್ವಾಸವನ್ನು ಪ್ರಕಟಿಸುವ, ಅಥವಾ ಅವರಲ್ಲಿ ವಿಶ್ವಾಸವಿಲ್ಲವಾದರೆ ಅವರ ಬದಲಿಗೆ ಬೇರೊಬ್ಬ ನಾಯಕನನ್ನು ಆರಿಸುವ ಜೊಾಬಾಬ್ದಾರಿಕೆಯನ್ನು ನಿರ್ವಹಿಸಬೇಕಾಗಿದೆ. ರಾಜ್ಯಗಳ ಪುನಾರಚನೆಯು ನಡೆದು, ಕನ್ನಡ ಪ್ರದೇಶಗಳೆಲ್ಲ ಬೃಹನ್ಮೈಸೂರು ಎಂಬ ಹೆಸರಿನ ಹೊಸ ರಾಜ್ಯವಾಗಿ ರೂಪುಗೊಳ್ಳಲು ಇನ್ನುಳಿದಿರುವುದು ಹೆಚ್ಚೆಂದರೆ ಮೂರು ತಿಂಗಳು—ಬರುವ ಅಕ್ಟೋಬರದಲ್ಲಿಯೇ ಹೊಸ ರಾಜ್ಯಗಳ ರಚನೆಯಾದರೆ ಈ ಅವಧಿ ಕೇವಲ ಎರಡು ತಿಂಗಳಿಗೆ ಇಳಿಯುತ್ತದೆ! ಹೀಗಿರುವಾಗ, ಈಗಿನ ಮೈಸೂರಿಗೆ ಹೊಸ ಧುರೀಣತ್ವ ಬೇಕಾಗಿ ಬಂದಿದೆ ಎಂಬುದು ಕುತೂಹಲವನ್ನು ಕೆರಳಿಸುವ ವಿಷಯ. ಪರಿಸ್ಥಿತಿಯ ಸೂಕ್ಷ್ಮಾವಲೋಕನವನ್ನು ಮಾಡಿದ ಪಕ್ಷದಲ್ಲಿ ವ್ಯಕ್ತವಾಗುವ ಸಂಗತಿಗಳೆರಡು: ಒಂದನೆಯದಾಗಿ, "ಮೈಸೂರಿನ ಕಾಂಗ್ರೆಸಿನಲ್ಲಿ ಶ್ರೀ. ಹನುಮಂತಯ್ಯನವರು ತಮ್ಮ "ಸರ್ವಾಧಿಕಾರಿ" ಮನೋವೃತ್ತಿಯಿಂದ ಅಪ್ರಿಯರೆನಿಸಿದ್ದಾರೆ; ಕರ್ನಾಟಕ ಏಕೀಕರಣಕ್ಕೆ ತಾವು ಅನುಕೂಲರೆಂಬ ಅಭಿಪ್ರಾಯವನ್ನು ಹೊರಗಿನ ಕನ್ನಡಿಗರಲ್ಲಿ ಅವರು ಹುಟ್ಟಿಸಲು ಈಗಾಗಲೇ ಸಮರ್ಥರಾಗಿರುವುದರಿಂದ, ಬೃಹನ್ಮೈಸೂರಿನ ರಚನೆಯಾಗುವ ವರೆಗೆ ತಾಳಿದರೆ, ಹೊಸ ರಾಜ್ಯದ ಮುಖ್ಯ ಮಂತ್ರಿ ಸ್ಥಾನವೂ ಅಯೋಗ್ಯರಾದ ಇವರಿಗೆನೇ ದಕ್ಕಬಹುದು". ಇದಕ್ಕೆ ವಿರುದ್ಧವಾಗಿರುವ ಎರಡನೇ ಸಂಗತಿಯೇನೆಂದರೆ, ಮುಖ್ಯ ಮಂತ್ರಿ ಸ್ಥಾನದ ಮೇಲೆ ಕಣ್ಣಿಟ್ಟಿರುವ ಕಾಂಗ್ರೆಸಿನ ಅಧ್ಯಕ್ಷರು ಮೈಸೂರಿನಲ್ಲಿದ್ದಾರೆ; ಇವರು ಹೊರಗಿನ ಕನ್ನಡ ಪ್ರದೇಶಗಳಲ್ಲಿ ಜನಪ್ರಿಯರಾಗಿಲ್ಲವಾದುದರಿಂದ ಬೃಹನ್ಮೈಸೂರು ರೂಪುಗೊಳ್ಳುವುದಕ್ಕೆ ಮುಂಚೆಯೇ ಮುಖ್ಯ ಮಂತ್ರಿ ಸ್ಥಾನವನ್ನು ದಕ್ಕಿಸಿಕೊಳ್ಳಲು ಹಂಚಿಕೆ ನಡೆಸಿದ್ದಾರೆ. ಮುಂಬರುವ ಚುನಾವಣೆಗಳಲ್ಲಿ ಕಾಂಗ್ರೆಸಿನ ಟಿಕೇಟನ್ನು ತೆಗೆಸಿಕೊಡುವ ಭರವಸೆಯನ್ನಿತ್ತು ಶಾಸನಾಂಗದ ಸದಸ್ಯರ ಬೆಂಬಲ ಪಡೆಯುವಷ್ಟು ಹೆಚ್ಚಿನ ಕುಟಿಲ ವ್ಯವಹಾರಕ್ಕೂ ಇವರು ಹೇಸುವುದಿಲ್ಲ." ಮಹಾ ಭಾರತದಲ್ಲಿ ಬರುವ ಗೃಧ್ರ—ಜಂಬುಕ ಸಂವಾದದಂತಿದೆ, ಇದು! ಈಗಿನ ಮುಖ್ಯ ಮಂತ್ರಿಗಳು ಮೈಸೂರಿನಲ್ಲಿ ಅಪ್ರಿಯರಾಗಿರುವುದು ನಿಜಕ್ಕೂ ಶೋಚನೀಯವಾದ ವಿಚಾರ; ಆದರೆ, ಅವರು ಅಪ್ರಿಯರಾಗುವಂತೆ ಮಾಡಿದ ಕಾರಣಗಳು ಇಂದು, ನಿನ್ನೆಯಷ್ಟೇ ಉಂಟಾದವುಗಳಾಗಿರಲು ಸಾಧ್ಯವಿಲ್ಲ. ಸುಮಾರು ಐದು ವರ್ಷಗಳಿಂದ ರಾಜ್ಯಭಾರವನ್ನು ಶ್ರೀ ಹನುಮಂತಯ್ಯನವರು ಮಾಡುತ್ತಾ ಬಂದಿದ್ದಾರೆ; ಒಂದೆರಡು ವರ್ಷಗಳ ಹಿಂದೊಮ್ಮೆ ಅವರ ಧುರೀಣತ್ವವನ್ನು ತಪ್ಪಿಸಲು ನಡೆಸಿದ ಪ್ರಯತ್ನಗಳು ವಿಫಲವಾಗಿ, ಶಾಸನಾಂಗದ ಸದಸ್ಯರು ವಿಶ್ವಾಸವನ್ನು ವ್ಯಕ್ತಪಡಿಸಿದ್ದಾರೆ; ಅನಂತರದ ಅಲ್ಪಾವಧಿಯಲ್ಲಿ ಅವರು ಪೂರಾ ಅಪ್ರಿಯರಾಗಿ ಹೋದರೆ? ಇರಬಹುದು; ಏಕೆಂದರೆ, ಮುಖ್ಯಮಂತ್ರಿಗಳು ಗಾಳಿ ಬಂದಂತೆ ಕೊಡೆ ಹಿಡಿಯುವ ಬುದ್ಧಿಯನ್ನು ರಾಜಕೀಯ ರಂಗದಲ್ಲಿ ತೋರಿಸುವಂತೆ, ರಾಜ್ಯ ಭಾರ ಕ್ರಮದಲ್ಲಿ ಬಡವನಿಗೆ ಐಶ್ವರ್ಯ ಬಂದರೆ ಮಧ್ಯರಾತ್ರಿಯಲ್ಲೂ ಕೊಡೆಹಿಡಿಯುವವನು ಬೇಕೆಂಬಂತಹ ವಿರಾಟವನ್ನೇ ಪ್ರದರ್ಶಿಸಿದ್ದರು, ಎನ್ನಲಾಗುತ್ತದೆ. ಪಕ್ಷಪಾತ, ದುಂದುಗಾರಿಕೆ ಮತ್ತು ಸರ್ವಾಧಿಕಾರಿ ಮನೋಭಾವ ಎಂಬ ಮೂರು ಆರೋಪಗಳು ಮುಖ್ಯಮಂತ್ರಿಗಳ ಮೇಲಿವೆ—ಇವು ಮೂರೂ ಪ್ರಜಾಪ್ರಭುತ್ವದ ಮೂಲ ತತ್ತ್ವಗಳನ್ನು ಸ್ಪಷ್ಟವಾಗಿ ಭಂಗಿಸುವ ಆರೋಪಗಳೆಂಬುದು ನಿಜ. ಆದರೆ, ಈ ಆರೋಪಗಳನ್ನು ಈಗ, ಮೈಸೂರು ಪ್ರತ್ಯೇಕ ಸಂಸ್ಥಾನವೆಂಬ ನೆಲೆಯಿಂದ ತನ್ನ ಚರಿತ್ರೆಯ ಕೊನೆಯ ಅಧ್ಯಾಯವನ್ನು ಬರೆಯುತ್ತಿರುವಾಗ, ಹೊರಿಸ ಹೋಗಿರುವುದು ಪ್ರಜಾಪ್ರಭುತ್ವವನ್ನು ಪೋಷಿಸುವ ಅಥವಾ ಪ್ರಜಾಶಕ್ತಿಯ ಸತ್ಸಂಪ್ರದಾಯಗಳನ್ನು ರಕ್ಷಿಸುವ ಲವಲವಿಕೆ ಅಥವಾ ಆತುರದಿಂದ ಮಾತ್ರ ಅಲ್ಲ. ಅದು ದುರುದ್ದೇಶ ಪೂರಿತವಾದ ತಂತ್ರ. ಶ್ರೀ ಹನುಮಂತಯ್ಯನವರನ್ನು ಬೃಹನ್ಮೈಸೂರಿನ ರಚನೆಯಾಗುವವರೆಗೆ ಉಳಿಯಗೊಟ್ಟರೆ ಕರ್ನಾಟಕ ಏಕೀಕರಣದ ಪ್ರಬಲ ಪ್ರತಿಪಾದಕನೆಂಬ ಗೌರವ ಭಾವದಿಂದ, ಅವರಿಗೆ ಮುಖ್ಯಮಂತ್ರಿಸ್ಥಾನವು ಹೊಸ ರಾಜ್ಯದಲ್ಲಿ ಸ್ಥಿರವಾಗಬಹುದು ಎಂಬ ಭಯವೇ ಈ ಅವಸರದ ಒತ್ತಾಯದ ಮೂಲ. ಹೊರಗಿನ ಕನ್ನಡಿಗರಿಗೆ ಈ ಮುಖ್ಯಮಂತ್ರಿಗಳು ಕರ್ನಾಟಕ ಏಕೀಕರಣಕ್ಕೆ ಎಷ್ಟು ಅನುಕೂಲವಿದ್ದರು, ಇದ್ದಾರೆ ಎಂಬ ವಿಷಯ ಗೊತ್ತೇ ಇದೆ. ಮೈಸೂರಿನ ಹೊರಗಡೆಯೊಂದು ಬಗೆಯಾಗಿಯೂ ಒಳಗಡೆ ಬೇರೆಯೇ ರೀತಿಯಿಂದಲೂ ಮಾತನಾಡುವ ಅವರ ತೂಕ ಇಷ್ಟೇಯೆಂದು ಜನರು ನಿರ್ಧರಿಸಿಯಾಗಿದೆ. ಅನಿವಾರ್ಯವೆಂದು ತೋರಿದಾಗ ಕರ್ನಾಟಕ ಏಕೀಕರಣದ ಪ್ರಬಲ ಪ್ರತಿಪಾದಕನಂತೆ ಸ್ಫೂರ್ತಿಯಿಂದ ಮೈಸೂರಿನ ಶಾಸನ ಸಭೆಯಲ್ಲಿ ಮಾತನಾಡಿದ ಈ ಮಹನೀಯರೇ ದ್ವಿಭಾಷಾ ರಾಜ್ಯಗಳ ರಚನೆಯಂತಹ ಕಲಸು ಮೇಲೋಗರದ ಸೂಚನೆಯನ್ನೂ ಅನುಮೋದಿಸುವಂತೆ ಅನಿವಾರ್ಯವಾಗಿಯೇ ಬಿನ್ನವಿಸಿದರು! ಆದುದರಿಂದ ಮುಖ್ಯ ಮಂತ್ರಿಗಳ ಸ್ತೋತ್ರವನ್ನು ಹೊರಗಿನ ಕನ್ನಡಿಗರು ಮಾಡುತ್ತಿದ್ದಾರೆ ಎಂದು ನಂಬುವ ಹಾಗೇನೂ ಇಲ್ಲ. ಆದಾಗ್ಯೂ ಮೈಸೂರಿನ ಕಾಂಗ್ರೆಸಿನಲ್ಲಿ "ಹೊಸ ರಾಜ್ಯದ ನಾಯಕನನ್ನು ಆರಿಸುವ ನಾಟಕದಲ್ಲಿ ಹನುಮಂತಯ್ಯನವರದೇ ಮೇಲ್ಕೈಯಾಗಿ ಅವರು ಜಯಶೀಲರಾಗಬಹುದು" ಎಂಬ ಅಭಿಪ್ರಾಯ ಬಲವಾಗಿ ಮೂಡಿದೆ. ಆದುದರಿಂದ ಅವರು ಪೊದೆಯಲ್ಲಿರುವ ಎರಡು ಹಕ್ಕಿಗಳಿಗಿಂತ ಕೈಯಲ್ಲಿರುವ ಒಂದು ಹಕ್ಕಿಯೇ ಲೇಸೆಂಬಂತೆ, ಹನುಮಂತಯ್ಯನವರ ತೇಜೋವಧೆಯನ್ನು ಎಲ್ಲ ಕನ್ನಡ ಪ್ರದೇಶಗಳ ಪ್ರತಿನಿಧಿಗಳೂ ಹೊಸ ರಾಜ್ಯದ ಮುಖ್ಯ ಮಂತ್ರಿತ್ವವನ್ನು ಅವರಿಗೆ ಕೊಡಲು ನಿರಾಕರಿಸುವ ಮೂಲಕ ಮಾಡಲು ಸಂದರ್ಭವನ್ನು ಕಾಳಿಸಿಕೊಡುವ ಬದಲು, ಈಗಲೇ ಮೈಸೂರು ಕಾಂಗ್ರೆಸಿನ ವಾಳ್ಯದಲ್ಲಿಯೇ. ಈ ಕೆಲಸ ನೆರವೇರಲಿ ಎನ್ನುತ್ತಿದ್ದಾರೆ. ಇವರ ನಿಲುವು ಕೇಂದ್ರದಲ್ಲಿರುವ ಕಾಂಗ್ರೆಸಿನ ವರಿಷ್ಠರ ಸಮ್ಮತಿಯನ್ನು ಪಡೆದಿದೆ. ಶ್ರೀ ಹನುಮಂತಯ್ಯನವರ ದುರ್ದೈವದಿಂದ ಹೀಗಾಗಿದೆ—ಮಧ್ಯಸ್ಥಿಕೆಯನ್ನು ಕೇಂದ್ರದ ಪ್ರಭೃತಿಗಳು ಮಾಡಬಹುದಿತ್ತೆಂದು ಮುಖ್ಯಮಂತ್ರಿಗಳು ಹೇಳಿಕೊಂಡಿದ್ದಾರೆ; ಇನ್ನೆರಡು ಮೂರು ತಿಂಗಳು ಹೊಸತಾಗಿ ಗಲಾಟೆ ಮಾಡಬೇಡಿರೆಂದು ವರಿಷ್ಠರು ಮೈಸೂರಿನ ಕಾಂಗ್ರೆಸಿಗರಿಗೆ ಉಪದೇಶಿಸುತ್ತಿದ್ದರೆ, ಅದು ತುಂಬ ಸಮಂಜಸವಾಗುತ್ತಿತ್ತೆಂಬುದು ನಮ್ಮ ಅಭಿಪ್ರಾಯವೂ ಹೌದು. ಆದರೆ ಅರೆವಾಸಿಗಿಂತಲೂ ಹೆಚ್ಚು ಸದಸ್ಯರು ಮುಖ್ಯಮಂತ್ರಿಗಳಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿ ಮನವಿಯನ್ನು ಸಲ್ಲಿಸಿದುದರಿಂದ, ಪ್ರಜಾಪ್ರಭುತ್ವದ ಸಂಪ್ರದಾಯವನ್ನು ಭಂಗಿಸಲು ಹಿಂಜರಿದು, ಕೇಂದ್ರದ ವರಿಷ್ಠರು ನೀವು ನೀವೇ ವಿವಾದದ ಪರಿಹಾರ ಮಾಡಿರೆಂದು ಹೇಳಿದಂತಿದೆ. ಈ ಕೊನೆಯ ಗಳಿಗೆಯಲ್ಲಿ ತಾನು ಮತಯಾಚನೆ ಮಾಡುತ್ತಾ ಹೋಗುವುದಿಲ್ಲ—ಶಾಸನಾಂಗದ ಕಾಂಗ್ರೆಸು ಪಕ್ಷದ ನಿರ್ಣಯಕ್ಕೆ ತಲೆತಗ್ಗಿಸುತ್ತೇನೆ ಎಂದಿದ್ದಾರೆ ಮುಖ್ಯಮಂತ್ರಿ ಶ್ರೀ ಹನುಮಂತಯ್ಯ. ಇದು ನ್ಯಾಯವೇ—ಅಲ್ಲದೆ, ಮತಯಾಚನೆ ಮಾಡಿದರೂ ಫಲವಿಲ್ಲವೆಂಬ ತಿಳಿವಳಿಕೆ ಅವರಿಗಾಗಿರಲೂ ಸಾಕು. ಆದರೆ ನಮ್ಮ ನಮ್ರ ವಿನಂತಿ ಇಷ್ಟೇ: ಏನೆಂದರೆ, ಇಷ್ಟು ಸಮಯ ಹೇಗೂ ಹೋಯಿತು; ಇನ್ನೆರಡುಮೂರು ತಿಂಗಳ ಮಟ್ಟಿಗೆ ಹೊಸ ಮುಖ್ಯಮಂತ್ರಿಯೊಬ್ಬನು ಮೈಸೂರಿನಲ್ಲಿ ಅಧಿಕಾರಕ್ಕೆ ಬಾರದಿದ್ದರೆ, ಅಲ್ಲಿಯ ಇತಿಹಾಸಕ್ಕೇನೂ ನಷ್ಟವಾಗದು; ಬದಲಿಗೆ ಶೋಭೆಯೇ ಹೆಚ್ಚಿಕೊಳ್ಳಬಹುದು. ಹೊಸ ಮುಖ್ಯಮಂತ್ರಿಯು ಬಂದು ಮೈಸೂರಿನ ಆಡಳಿತವನ್ನು ಎರಡು ತಿಂಗಳಲ್ಲಿ ಸುಧಾರಿಸುವನೆಂಬುದಂತೂ ಕನಸಿನ ಮಾತು. ಕಾಂಗ್ರೆಸು ಪ್ರತಿನಿಧಿಗಳಲ್ಲಿ ಈ ವಿವೇಕವಿರಲಿ!

ಗಡಿ ವಿವಾದಗಳ ತೀರ್ಮಾನ

ಉಪ ಸಮಿತಿಯ ನೇಮಕದ ಸಂಭವ

ಸಂಸತ್ತಿನ ಕಾಂಗ್ರೆಸು ಪಕ್ಷದ ಸಭೆಯು ಇದೇ ೩೧ನೇ ದಿನಾಂಕ ಜರಗಿ, ರಾಜ್ಯಗಳ ಪುನಾರಚನೆಯ ದೆಸೆಯಿಂದ ಉದ್ಭೂತವಾಗಿರುವ ಗಡಿತಂಟೆಗಳನ್ನು ಮಧ್ಯಸ್ಥಿಕೆಯಿಂದ ಪರಿಹರಿಸಿಕೊಳ್ಳಲು ಪಂಚಾಯತುದಾರರ ಮಂಡಳವನ್ನು ನೇಮಿಸಬೇಕೆಂದೂ ಉಪರಾಷ್ಟ್ರಾಧ್ಯಕ್ಷ ಡಾ. ರಾಧಾಕೃಷ್ಣನ್ನರನ್ನೂ ಕೇಂದ್ರದ ಶಿಕ್ಷಣ ಸಚಿವ ಮೌಲಾನಾ ಆಝಾದರನ್ನೂ ಈ ಸಮಿತಿಯ ಸದಸ್ಯರಾಗುವಂತೆ ಬಿನ್ನವಿಸಿಕೊಳ್ಳಬೇಕೆಂದೂ ತೀರ್ಮಾನಿಸಿತು.

ವಿವಾದ ವಿಷಯಗಳು

ಕೇರಳ—ಕರ್ನಾಟಕ (ಕಾಸರಗೋಡು ತಾಲೂಕಿಗಾಗಿ), ಕರ್ನಾಟಕ—ಮಹಾರಾಷ್ಟ್ರ (ಬೆಳಗಾಂವಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಭಾಗಗಳಿಗಾಗಿ) ಮತ್ತಿತರ ಗಡಿತಂಟೆಗಳನ್ನು ಈ ಸಮಿತಿಯು ಪರ್ಯಾಲೋಚಿಸಬೇಕಾಗಿದೆ. ಕಾಂಗ್ರೆಸು ಸದಸ್ಯರಲ್ಲಿಯೇ ಉಂಟಾಗಿರುವ ಭಿನ್ನಾಭಿಪ್ರಾಯವು ಪಕ್ಷದ ಚೌಕಟ್ಟಿನಲ್ಲಿಯೇ ಇತ್ಯರ್ಥಹೊಂದಿ, ಬಹಿರಂಗ ಕಲಹದ ಸಂಭವ ನಿವಾರಣೆ ಮಾಡುವುದೇ ಈ ಪಂಚಾಯತಿಕೆಯ ಉದ್ದೇಶ.

ಪ್ರತಿಪಕ್ಷಗಳ ತಿದ್ದುಪಡಿ

ಕಾಸರಗೋಡು ತಾಲೂಕಿನ ಮುಖ್ಯ ಭಾಗವನ್ನು ಕರ್ನಾಟಕಕ್ಕೆ ವರ್ಗಾಯಿಸಬೇಕೆಂಬ ಆಶಯದ ತಿದ್ದುಪಡಿ ಸೂಚನೆಗಳನ್ನು ಪ್ರತಿಪಕ್ಷದ ಸದಸ್ಯರು ಮಾಡಿರುವರೆಂದು ತಿಳಿದುಬರುತ್ತದೆ. ಆದರೆ ಶಿಸ್ತು ಭಂಗಕ್ಕೆ ಕಾಂಗ್ರೆಸಿಗರು ಹೋಗಬಾರದೆಂಬ ಆದೇಶಬಂದರೆ, ಈ ತಿದ್ದುಪಡಿಗಳ ಗತಿ ಏನಾಗುವುದೆಂಬುದು ಗೊತ್ತೇ ಇದೆ: ಅವು ತಿರಸ್ಕೃತವಾಗುತ್ತವೆ.

ಸದಸ್ಯರ ಅಭಿಪ್ರಾಯ

ಲೋಕಸಭೆಯು ಈಗ ರಾಜ್ಯಗಳ ಪುನಾರಚನೆಯ ವಿಧೇಯಕದ ವಿವರ ಪರಿಶೀಲನೆಯಲ್ಲಿ ಮಗ್ನವಾಗಿದೆ. ಸಾಮಾನ್ಯ ಚರ್ಚೆಯಲ್ಲಿ ಮೈಸೂರಿಗೆ ಕರ್ನಾಟಕವೆಂದು ಹೆಸರಿಡಬೇಕೆಂಬ, ಹಾಗು ಕಾಸರಗೋಡನ್ನು ಕರ್ನಾಟಕದಲ್ಲಿ ಉಳಿಯಗೊಡಬೇಕೆಂಬ ಸೂಚನೆಗಳನ್ನು ಮಾಡಲಾಯಿತು. ಮಹಾರಾಷ್ಟ್ರೀಯರು ಕರ್ನಾಟಕದಲ್ಲಿ ಈಗ ಸೇರಿಸಲಾಗಿರುವ ಉತ್ತರ ಕನ್ನಡ ಮತ್ತು ಬೆಳಗಾವಿ ಜಿಲ್ಲೆಗಳ ಕೆಲವು ಭಾಗಗಳ ಮೇಲೆ ತಮ್ಮ ಹಕ್ಕು ಸ್ಥಾಪನೆಗೆ ಪ್ರಯತ್ನಿಸಿದರು.

ದೇಶಮುಖರ ಆರೋಪ

ಮುಂಬಯಿ ನಗರದ ಕುರಿತಾಗಿ ತೀಕ್ಷ್ಣ ವಾಗ್ವಾದ ನಡೆಯಿತು. ಮಾಜಿ ಅರ್ಥಸಚಿವ ಶ್ರೀ ಚಿಂತಾಮಣ ದೇಶಮುಖರು ಮಂತ್ರಿ ಮಂಡಳದ ತೀರ್ಮಾನಗಳು ಎಲ್ಲ ಮಂತ್ರಿಗಳ ಒಪ್ಪಿಗೆಯನ್ನು ಪಡೆದಿಲ್ಲವೆಂದೂ ಪ್ರಧಾನ ಮಂತ್ರಿಗಳು ಸರ್ವಾಧಿಕಾರಿಯಂತೆ ನಡೆದರೆಂದೂ ಆರೋಪಿಸಿದರು. ಮುಂಬಯಿಯನ್ನು ಮಹಾರಾಷ್ಟ್ರದಲ್ಲಿ ಉಳಿಯಗೊಡಬೇಕೆಂದು ಚರ್ಚೆಯಲ್ಲಿ ಭಾಗವಹಿಸಿದ ಹೆಚ್ಚಿನ ಸದಸ್ಯರು ಆಗ್ರಹದಿಂದ ವಿನಂತಿಸಿದರು.

ಪ್ರಧಾನಿಗಳ ಉತ್ತರ

ಪ್ರಧಾನಿ ನೆಹರುಗಳು ಶ್ರೀ ದೇಶಮುಖರ ಆರೋಪಗಳಿಗೆ ಖಂಡತುಂಡ

ವಾವ ಉತ್ತರವನ್ನಿತ್ತರು. ಮಂತ್ರಿ ಮಂಡಳಕ್ಕೆ ಮುಂಬಯಿ ನಗರದ ಕುರಿತು ಸರಕಾರ ಮಾಡಿದ ತೀರ್ಮಾನವನ್ನು ತಿಳಿಸಲಿಲ್ಲ; ಅದರ ಸಮ್ಮತಿಯನ್ನು ಪಡೆಯಲಿಲ್ಲ ಎಂಬ ಆರೋಪಕ್ಕೆ ಯಾವುದೇ ಆಧಾರವಿಲ್ಲವೆಂದವರು ಸ್ಪಷ್ಟಪಡಿಸಿದರು. ತಾನು ಎಲ್ಲ ಕಾಗದ ಪತ್ರಗಳನ್ನು ಪರಿಶೀಲಿಸಿ ಹೀಗೆ ಹೇಳುತ್ತಿದ್ದೇನೆ ಎಂದರು.

"ನನ್ನ ಕರ್ತವ್ಯ ಗೊತ್ತು"

ಮುಂಬಯಿಯಲ್ಲಿ ಜೂನು ತಿಂಗಳ ಪ್ರಾರಂಭದಲ್ಲಿ, ಐದು ವರ್ಷಗಳ ಬಳಿಕ ಮುಂಬಯಿ ನಗರದ ಭವಿಷ್ಯವನ್ನು ಕೊನೆಯದಾಗಿ ತೀರ್ಮಾನಿಸಲು ವ್ಯವಸ್ಥೆ ಮಾಡಲಾಗುವುದೆಂದು ತಾನು ಮಾಡಿದ ಭಾಷಣದಲ್ಲಿ ಹೊಸತೇನೂ ಇರಲಿಲ್ಲ. ಅದು ಕೇವಲ ಸ್ಪಷ್ಟೀಕರಣದ ಹಾಗಿತ್ತೆನ್ನಬಹುದು. ಮಂತ್ರಿ ಮಂಡಳದ ಒಪ್ಪಿಗೆ ಇಲ್ಲದೆ ಹೀಗೆ ಮಾಡಿರುವೆನೆಂಬುದು ಸರಿಯಲ್ಲ: ಅದೇನೇ ಇರಲಿ, ಪ್ರಧಾನ ಮಂತ್ರಿ ಸ್ಥಾನದಲ್ಲಿದ್ದವನು ಮಹತ್ವದ ಸರಕಾರಿ ಧೋರಣೆಗಳನ್ನು ರೂಪಿಸುವ ಶಕ್ತಿಯನ್ನೂ ಜವಾಬ್ದಾರಿಯನ್ನೂ ಅಧಿಕಾರವನ್ನೂ ಹೊಂದಿದ್ದಾನೆ. ಆದುದರಿಂದ ತಾನು ಅಧಿಕಾರವಿಮಿತಿಯನ್ನು ಮೀರಿದ್ದೇನೆ ಎನ್ನುವುದಕ್ಕೆ ಅವಕಾಶವಿಲ್ಲ ಎಂದು ನೆಹರು ಹೇಳಿದಾಗ ಅದನ್ನು ಸಭೆಯು ಪ್ರಚಂಡ ಹರ್ಷಧ್ವನಿಯೊಡನೆ ಸ್ವಾಗತಿಸಿತು.

ಮುಂಬಯಿ ನಗರ

ಮುಂಬಯಿಯು ಮಹಾರಾಷ್ಟ್ರದ ಅವಿಭಾಜ್ಯ ಅಂಗವೆಂಬುದು ತನ್ನ ವ್ಯಕ್ತಿಗತ ಅಭಿಪ್ರಾಯವೆಂದು ನೆಹರು ಪುನಃ ಹೇಳಿದರು. ಆದರೆ ಈಗ ಅದನ್ನು ಮಹಾರಾಷ್ಟ್ರಕ್ಕೆ ಸೇರಿಸುವುದರಿಂದ ತೊಂದರೆ ಏಳಬಹುದು. ಹಿಂದಿನಿಂದ ಈ ಪ್ರಯತ್ನ ನಡೆಯಲಿ—ಐದು ವರ್ಷಗಳ ಬಳಿಕವೇ ಆ ಪ್ರಯತ್ನ ಆಗಬೇಕೆಂದೇನಿಲ್ಲ: ಅದು ಒಂದು ಸಾಮಾನ್ಯ ಅವಧಿ; ಅದಕ್ಕೆ ಮೊದಲೂ ಸಮಯ—ಸಂದರ್ಭ ಅನುಕೂಲವಿದ್ದರೆ ಯೋಗ್ಯ ವ್ಯವಸ್ಥೆ ಮಾಡಬಹುದು, ಎಂದವರು ಇನ್ನೂ ಹೆಚ್ಚು ವಿವರಣೆಯನ್ನಿತ್ತರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 186/1956.

R. I. A. 782/1956.

ವೆಂಕಟರಾಜ ಮಿತ್ತಂತಾಯ —ವಾದಿ

ಮತ್ತು

I ಪುಟ್ಟು ನ್ಯಾಕ್. ದಾಮು ನಾಯ್ಕನ ಮಗ, ಉಡುಪಿ ತಾಲೂಕು ಯೆನ್ನಂಜೆ ಗ್ರಾಮ —1ನೇ ಪ್ರತಿವಾದಿ

ಇವರೊಳಗೆ

ವಾದಿಗೆ 1ನೇ ಪ್ರತಿವಾದಿಯು ತಾರೀಕು 11—12—1955ರಲ್ಲಿ ಬರೆಕೊಟ್ಟ ಚಾಲಗೇಣಿ ಎದುರುಮುದಿಯಲ್ಲಿ ಕಾಣ್ಸಿದ ಆಸ್ತಿಯ ಸ್ವಾಧೀನತೆಗೂ ಮನ್ನಾಥ ಸಂ|ರದ ಗೇಣಿಗೂ ಬಡ್ಡಿಗೂ ಹುಟ್ಟುವಳ್ಳಿಗೂ ಮಾಡಿದ ಮೋಕದ್ದಮೆ ವ್ಯಾಜ್ಯವು 1ನೇ ಪ್ರತಿವಾದಿಯ ಉದಾಹರಣೆಯ ಬಗ್ಗೆ ತಾರೀಕು 7—8—1956ಕ್ಕೆ ಇಟ್ಟಿದೆ. ಆತಗೆ ಆಕ್ಷೇಪ ಯಿರುವುದಾದರೆ ಸದ್ರಿ ದಿವ್ಸ ಬೆಳಿಗ್ಗೆ 10 ಗಂಟೆಗೆ ಸದರಿ ಕೋರ್ಟುಮುಂದೆ ಕರವಾಗ್ಯೆ ಹಾಜ್ರಾಗಿ ಜ್ವಾಹೀರುಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿಯದೆ.

K. Laxminarayana Aithal,
Vakil for Plff.

ಉಡುಪಿ, ತಾ.31—7—56.

ಪ್ರಧಾನಿ ನೆಹರು ಲಂಡನಿನಲ್ಲಿ ಈಚೆಗೆ ಜರಗಿದ ಕಾಮನ್‌ವೆಲ್ತ್ ಸಮ್ಮೇಳನದ ಬಗ್ಗೆ ಲೋಕಸಭೆಯಲ್ಲಿ ಹೇಳಿಕೆಯೊಂದನ್ನು ಇದೇ ಜುಲಾಯಿ ೩೧ನೇ ದಿನಾಂಕ ಕೊಟ್ಟರು. ಚಿತ್ರದಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳು ಈಡನ್ನರ ನಿವಾಸದಲ್ಲಿ ಕುಶಲ ಸಂಭಾಷಣೆ ನಡೆಸುವುದನ್ನು ಕಾಣಬಹುದು.

ಎಂ. ಎಸ್. ವೈದ್ಯಕೀಯ ವ್ಯಾಸಂಗಕ್ಕಾಗಿ ಇದೇ ತಿಂಗಳ ಎರಡನೇ ವಾರದಲ್ಲಿ ನ್ಯೂಯೋರ್ಕಿಗೆ ಪ್ರಯಾಣಿಸಲಿರುವ

ಡಾ. ಬಿ. ಬಾಲಕೃಷ್ಣ ಹೆಗ್ಡೆ,
ಜಿ. ಸಿ. ಐ. ಎಂ.

ಮಲ್ಪೆ— ಇಲ್ಲಿಯ ವೆಲ್‌ಫೇರ್ ಎಕ್ಸ್‌ಟೆನ್ಶನ್ ಕಟ್ಟಡದ ಶಂಕುಸ್ಥಾಪನೆಯನ್ನು ತಾ. 26ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ನೆರವೇರಿಸಿದರು. ಶ್ರೀಮತಿ ಕಣ್ಣನ್‌ರವರು ಸ್ವಾಗತಭಾಷಣ ಮಾಡಿದರು. ಸಭಿಕರ ಕಡೆಯಿಂದ ಶ್ರೀ ಆರ್. ಎ. ಬನ್ನಂಜೆಯವರು ಮಾತನ್ನಾಡಿದರು. ಡಾ. ವಿ. ಕೆ. ಬಲ್ಲಾಳರು ವಂದನೆಗಳನ್ನಿತ್ತರು.

ಮಣಿಪಾಲ— ಸ್ಥಳೀಯ ವೆಲ್‌ಫೇರ್ ಎಕ್ಸ್‌ಟೆನ್ಶನ್ ಪ್ರಾಜೆಕ್ಟ್ ಕಟ್ಟಡ ಹಾಗೂ ಶಿಶು ಸಂಗೋಪನಾ ಕೇಂದ್ರದ ಕಟ್ಟಡ ಉದ್ಘಾಟನಾ ಸಮಾರಂಭವನ್ನು ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಡಾ. ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಪ್ರಾಜೆಕ್ಟ್ ಕಮಿಟಿಯ ಕನ್ವೀನರ್ ಶ್ರೀಮತಿ ಪ್ರೇಮಾ ಎ. ಪೈಗಳು ಸ್ವಾಗತಭಾಷಣಮಾಡಿ ಕೇಂದ್ರದ ಚಟುವಟಿಕೆಗಳನ್ನು ತಿಳಿಸಿದರು. ಮಣಿಪಾಲ ಹ್ಯಾಸ್ಪಿಟಲ್ ಹೆಡ್ಮಾಸ್ತರ್ ಶ್ರೀ ಬಿ. ರಾಮರಾಯ ನೆಟ್ಟರು ಧನ್ಯವಾದಗಳನ್ನಿತ್ತರು. ಸ್ಥಳೀಯ ಗೀತಾಮಂದಿರದಲ್ಲಿ ತಾ. 23ರಲ್ಲಿ ತಿಲಕ ಜಯಂತಿಯು ಶ್ರೀ ಉಪೇಂದ್ರ ಅನಂತ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಡಿ. ಜಿ. ಗಾಡಿಯಾ, ಲಕ್ಷ್ಮೀನಾರಾಯಣ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಗರಡಿ ಮಜಲು— ಸ್ಥಳೀಯ ಬೋರ್ಡ್ ಹಾಯಿಸ್ಕೂಲಿನ ನೂತನ ಕಟ್ಟಡದ ಉದ್ಘಾಟನೆಯನ್ನು ತಾ. 26ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ನೆರವೇರಿಸಿದರು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಸಭಾಧ್ಯಕ್ಷತೆವಹಿಸಿದ್ದರು.

ಕಾಪು— ಸ್ಥಾನಿಕ ಅಭಿವೃದ್ಧಿಯೋಜನೆಯನ್ವಯ ಕಟ್ಟಲಾದ 'ರೇಡಿಯೋ ಪೆವಿಲಿಯನ್' ಉದ್ಘಾಟನೆಯನ್ನು ತಾ. 25ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಕಡಿಯಾಳಿ— ಹಾ. ಎ. ಶಾಲೆಯಲ್ಲಿ ತಿಲಕ ಜಯಂತಿಯು ಶ್ರೀ ಪಿ. ವಾಸುದೇವ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ತಿಲಕರ ಜೀವನ, ಗುಣ ಮಹತ್ವಗಳ ಕುರಿತು ಶ್ರೀಗಳಾದ ಎಸ್. ಸದಾಶಿವ ರಾವ್, ಎನ್. ರಾಮಚಂದ್ರ ಭಟ್ ಮೊದಲಾದವರ ಭಾಷಣಗಳಾದುವು.

ಪಳ್ಳಿ— ಬೋರ್ಡ್ ಹಾ. ಎ. ಶಾಲೆಯ ಹೊಸ ಕಟ್ಟಡದ ಉದ್ಘಾಟನೆಯು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮ್ ಅವರಿಂದ ಕಳೆದ ತಾ. 27ರಂದು ನೆರವೇರಿಸಲ್ಪಟ್ಟಿತು.

ಬ್ರಹ್ಮಾವರ— ಇಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಕರ್ನಾಟಕ ಸಂಘದ ಉದ್ಘಾಟನೆಯನ್ನು ಶ್ರೀ ಕೆ. ಶಿವರಾಮ ಕಾರಂತರು ಇದೇ ತಾ. 4ರಲ್ಲಿ ನೆರವೇರಿಸಲಿರುವರು. ಈ ಸಂದರ್ಭದಲ್ಲಿ ಯಕ್ಷಗಾನ ಪ್ರಸಿದ್ಧ ಭಾಗವತ ಶ್ರೀ ಶೇಷಗಿರಿ ಭಾಗವತರಿಗೆ ಮಾನಪತ್ರ ಅರ್ಪಿಸುವ ಕಾರ್ಯವು ನಡೆಯಲಿರುವುದು.

ಮೂಡುಬಿದ್ರೆ— ಸ್ಥಳೀಯ ಜೈನ ಹೈಸ್ಕೂಲಿನ ಸಾಹಿತ್ಯ ಸಂಘದ ಆಶ್ರಯದಲ್ಲಿ ತಿಲಕ ಮತ್ತು ಜಾಗತಿಕ ಆರೋಗ್ಯ ದಿನಾಚರಣೆಗಳು, ಶ್ರೀ ಹಿರಿಯಣ್ಣ ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದವು. ಮುಖ್ಯೋಪಾಧ್ಯಾಯ ಶ್ರೀ ಎ. ಸೋಮಪ್ಪ ರೈಗಳು ಸಮಾರಂಭದ ಮಹತ್ವವನ್ನು ವಿವರಿಸಿ ಭಾಷಣವಿತ್ತರು. ಶ್ರೀಗಳಾದ ವಾಮನ ನೆಟ್ಟಗಾರ, ಕೆ. ಕೆ. ರೈ. ಶ್ರೀಮತಿ ವಿಮಲಾ ಶಿವಯ್ಯನವರ ಭಾಷಣಗಳಾದುವು.

ಗೋವಿಜಯ

(ಗೋವಿನ ಕಥೆ)

ಶ್ರೀ. ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು : ಬೆಲೆ 0—8—0

— ನವಯುಗ ಪ್ರೆಸ್, ಉಡುಪಿ. —

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 35ನೇ ವರ್ಷವು ಅಂತ್ಯವಾಗಿ ಸೆಪ್ಟಂಬರದಿಂದ 36ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ ಚಂದಾ ಹಣ ಬಾಕಿ ಇರುವ ಮಹಾಶಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಉಡುಪಿ

ಹೊಸ ಮುನ್ಸೀಫರು— ಸ್ಥಳೀಯ ಮುನ್ಸೀಫರಾಗಿದ್ದ ಶ್ರೀ ರೇಗೋರವರು 3 ತಿಂಗಳ ರಜೆಯಲ್ಲಿ ಹೋದುದರಿಂದ ಪುತ್ತೂರಲ್ಲಿ ಜುಡೀಶಿಯಲ್ ಸಬ್ ಡಿವಿಜನಲ್ ಮೆಜಿಸ್ಟ್ರೇಟರಾಗಿದ್ದ ಶ್ರೀ ಪಿ. ರಾಮಚಂದ್ರ ರಾಯರು ತಾ. 28ರಲ್ಲಿ ಹೊಸ ಮುನ್ಸೀಫರಾಗಿ ಚಾರ್ಜು ವಹಿಸಿರುವರು. ಪುತ್ತೂರು ಜುಡೀಶಿಯಲ್ ಸಬ್ ಡಿವಿಜನಲ್ ಮೆಜಿಸ್ಟ್ರೇಟರಾಗಿ ಶ್ರೀ ವಿ. ಕೃಷ್ಣಪ್ಪ ಸೆಟ್ಟರು ಕಳೆದ ತಾ. 24ರಲ್ಲಿ ಚಾರ್ಜು ವಹಿಸಿರುವರು.

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್ ಲೈಬ್ರೆರಿ—ಉದ್ಘಾಟನೆಯು ಇದೇ ತಾ 1ನೇ ಬೆಳಿಗ್ಗೆ ಬ್ರಹ್ಮಗಿರಿಯ ಕಟ್ಟಡದಲ್ಲಿ ರಾವ್ ಸಹೇಬ್ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಅವರಿಂದ ನೆರವೇರಿಸಲ್ಪಟ್ಟಿತು. ಎಕೆಡೆಮಿಯ ರಿಜಿಸ್ಟ್ರಾರ್ ಡಾ. ಟಿ ಎಂ. ಎ. ಪೈಗಳು ಸಂದೇಶಗಳನ್ನು ಓದಿ ಸ್ವಾಗತ ಭಾಷಣ ಮಾಡುತ್ತಾ ಪುಸ್ತಕ ಭಂಡಾರದ ಆವಶ್ಯಕತೆಗಳನ್ನು ವಿವರಿಸಿ 3 ಲಕ್ಷ ಪುಸ್ತಕಗಳನ್ನು ಸಂಗ್ರಹಿಸುವ ಯೋಜನೆಯನ್ನು ನಿವೇದಿಸಿ ಸಾರ್ವಜನಿಕರ ಸಹಕಾರವನ್ನು ಕೋರಿದರು. ಶ್ರೀ ಟಿ. ಎ. ಪೈಗಳು ಪುಸ್ತಕ ಭಂಡಾರಗಳ ಮೂಲಕ ಜ್ಞಾನ ವರ್ಧನೆಯಾಗಿ ವಿದ್ವಾನ್ ಉಂಟಾಗಲು ಹೇಗೆ ಸಾಧ್ಯವೆಂಬುದನ್ನು ವಿವರಿಸಿ ದೇಶದ್ಯಾಂತ ನಡೆಯುತ್ತಿರುವ ಲೈಬ್ರರಿಗಳಿಗೆ ಸರಕಾರದ ಆಸಕ್ತಿ ಮೊದಲಾದುವನ್ನು ಪ್ರಸ್ತಾಪಿಸಿ ಕೆಲವು ಉಪಯುಕ್ತ ಸೂಚನೆಗಳನ್ನಿತ್ತು ನೂತನ ಪುಸ್ತಕ ಭಂಡಾರಕ್ಕೆ ಉಜ್ವಲ ಭವಿಷ್ಯವನ್ನು ಕೋರಿ ಉದ್ಘಾಟಿಸಿದರು. ಅನಂತರ ಶ್ರೀಗಳಾದ ಲೋಕ್ಕಿ ಫೆರ್ನಾಂಡಿಸ್, ಎ. ಜೆ. ಅಳ್ವೆಯವರು ಸಂದರ್ಭೋಚಿತ ಮಾತುಗಳನ್ನಾಡಿ ಜನತೆಯು ಇದರ ಸದುಪಯೋಗ ಪಡೆಯುವಂತೆ ಆಶಿಸಿದರು. ಅಧ್ಯಕ್ಷರು ಭಾಷಣ ಮಾಡುತ್ತ ಡಾ. ಪೈಗಳು ತೊಡಗಿದ ಪ್ರತಿಯೊಂದು ಅಸಾಮಾನ್ಯ ಯೋಜನೆಯ ಯಶಸ್ವಿನ ಮರ್ಮವನ್ನೂ ಪುಸ್ತಕ ಭಂಡಾರಗಳಿಂದಾಗುವ ಜನಹಿತವನ್ನೂ ಪ್ರಸ್ತಾಪಿಸಿ ಈ ಲೈಬ್ರರಿಗೆ ಹಾರ್ದಿಕ ಯಶಸ್ಸನ್ನು ಹಾರೈಸಿದರು. ಡಾ. ಪೈಗಳು ಈವರೆಗೆ ಪುಸ್ತಕ ದಾನವಿತ್ತವರ ಹೆಸರುಗಳನ್ನೋದಿ ಒಂದೆರಡು ವಾರಗಳಲ್ಲಿ 3 ಸಾವಿರ ಪುಸ್ತಕಗಳನ್ನು ಸಂಗ್ರಹಿಸಲಾಗುವುದೆಂದು ಹೇಳಿ ಎಲ್ಲರಿಗೂ ಧನ್ಯವಾದಗಳನ್ನಿತ್ತರು.

ನಗರಸಭೆಯು— ತಾ. 28ರಲ್ಲಿ ನಗರಸಭಾಪತಿ ಶ್ರೀ ಕೆ. ಕೆ. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರಮಾತೆಯ ಸತ್ಪುತ್ರರೂ ಸ್ವಾತಂತ್ರ್ಯ ಚಳವಳಿಯ ಗಣ್ಯರೂ ಆಗಿದ್ದ ಲೋಕಮಾನ್ಯ ತಿಲಕರಿಗೆ ಅವರ ಶತಮಾನೋತ್ಸವ ಜನ್ಮದಿನ ಜಯಂತಿಯ ಈ ಕಾಲದಲ್ಲಿ ನಗರಸಭೆಯು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ. ಎಂಬ ಠರಾವನ್ನು ಡಾ. ಪಿ. ಸಿ. ಆಚಾರ್ಯರು ಸಭೆಯ ಮುಂದಿಟ್ಟರು. ಅದು ಸರ್ವಾನುಮತದಿಂದ ಮಂಜೂರಾಯಿತು. ಅನಂತರ ಕೆಲವು ನೇಮಕ, ನಿರ್ಣಯಗಳಾದುವು.

ಅಗ್ಗ ಬೆಲೆಯಲ್ಲಿ ಅಕ್ಕಿ— ವಿತರಣೆ ಮಾಡುವ ಕಾರ್ಯವು ಭಾರತ ಸೇವಕ ಸಂಘದ ವತಿಯಿಂದ ಬೇಗನೆ ಪ್ರಾರಂಭಿಸಲಾಗುವುದೆಂದು ಶ್ರೀ ಟಿ. ಎ. ಪೈ. ಎಮ್. ಎಲ್. ಎ ಅವರ ಮೂಲಕ ತಿಳಿಯಬರುತ್ತದೆ.

ಅಗೋಸ್ತು 15ರ ಸ್ವಾತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯನ್ನು ನಿರೀಕ್ಷಿಸಿರಿ.

(೫ನೇ ಪುಟದಿಂದ)

ನಡೆಸದಿದ್ದರೆ ಆಯಿತಲ್ಲ!" ಎಂದು ನಾಸೇರರು ಹೇಳಿದ್ದಾರೆ.

"ಆಸ್ವಾನಿನ ಅಣೆಕಟ್ಟನ್ನು ಸುಯೇಜಿನ ಕಾಲುವೆಯನ್ನು ಕಟ್ಟುತ್ತಾ ಮೃತ್ಯುವಶರಾದ ನಮ್ಮ ೧೨೦೦೦೦ ಬಾಂಧವರ ತಲೆಬುರುಡೆಯ ಮೇಲೆ ಕಟ್ಟುವುದೇ ನಮ್ಮ ದೃಢ ಸಂಕಲ್ಪ" ಎಂಬಂತಹ ವೀರೋಚಿತ ವಚನಗಳೇ ನಾಸೇರರ ಈಗಿನ ಮನೋಭಾವದ ಮೇಲೆ ಬೆಳಕು ಚೆಲ್ಲುತ್ತವೆ.

೦೦

ಸುಯೇಜಿನ ಕಾಲುವೆಯನ್ನು ಫರ್ಡಿನೆಂಡ್ ಡಿಲೆಸೆಪ್ಸ್ ಎಂಬಾತನ ಮೇಲ್ವಿಚಾರಣೆಯಲ್ಲಿ ೧೫ ವರ್ಷಗಳ ದೀರ್ಘ ಪರಿಶ್ರಮದ ತರುವಾಯ ನಿರ್ಮಿಸಲಾಯಿತು. ೧೮೬೯ನೇ ನವಂಬರದ ೧೭ನೇ ತಾರೀಕಿನಂದು ಅದು ಹಡಗು ಚಲಾವಣೆಗಾಗಿ ತೆರೆಯಿತು.

ಆಗ ಮಾಡಿಕೊಂಡ ಒಂದು ಒಡಂಬಡಿಕೆಗೆ ಅನುಸಾರವಾಗಿ ಕಾಲುವೆ ಕಂಪೆನಿಯು ೯೯ ವರ್ಷ ಸ್ವತಂತ್ರವಾಗಿ ಬಾಳಬಲ್ಲುದು. ಫರೂಕರ ಪತನದ ಬಳಿಕ, ಐಗುಪ್ತದ ಸರಕಾರವು ಒಡಂಬಡಿಕೆಗೆ ಮತ್ತೆ ಜೀವದಾನ ಮಾಡುವುದಿಲ್ಲವೆಂದು ಹೇಳಿದರೂ ಕಂಪೆನಿಯ ರಾಷ್ಟ್ರೀಕರಣ ಮಾಡುವ ಇಚ್ಛೆಯನ್ನು ಅದು ಪ್ರಕಟಿಸಿರಲಿಲ್ಲ. ಕಳೆದ ಜೂನಿನಷ್ಟು ಈಚೆಗೆ ಕಂಪೆನಿಯ ವ್ಯವಹಾರದ ಬಗ್ಗೆ ಸಮಾಲೋಚನೆ ನಡೆದಾಗ ಸಹ ರಾಷ್ಟ್ರೀಕರಣದ ಭಯಕ್ಕೆ ಅವಕಾಶವಿಲ್ಲವೆಂದೇ ಐಗುಪ್ತ ಹೇಳಿತು.

ಪಾಶ್ಚಾತ್ಯರು ಕೊರಳುಕೊಯ್ಯುವಂತಹ ಹೇಯ ಕೃತ್ಯ ಮಾಡಿದುದರಿಂದ, ನಾಸೇರರು ಒಡಂಬಡಿಕೆಯು ಮುಗಿಯಲು ಇನ್ನೂ ೧೨ ವರ್ಷಗಳ ಅವಧಿಯಿದ್ದಂತೆಯೇ ಮತ್ತು ತಾವಿತ್ತ ಭರವಸೆಯ ಮಾತುಗಳಿದ್ದಂತೆಯೇ ಕಂಪೆನಿಯ ರಾಷ್ಟ್ರೀಕರಣದ ನಿರ್ಣಯವನ್ನು ಸಾರಿದರು.

೦೦

ಇದು ಅಂತಾರಾಷ್ಟ್ರೀಯ ದ್ರೋಹವೆಂದು ಪಾಶ್ಚಾತ್ಯ ರಾಷ್ಟ್ರಗಳ ಪ್ರಮುಖರು ಆಕ್ಷೇಪಿಸಿದ್ದಾರೆ. ಐಗುಪ್ತವು ಇವಕ್ಕೆ ಚುಟುಕಿನ ಉತ್ತರವನ್ನು ಕೊಡುತ್ತದೆ: ಕಾಲುವೆ ಕಂಪೆನಿಯು ಐಗುಪ್ತದಲ್ಲಿ ರಿಜಿಸ್ಟ್ರಿಯಾದ ಸಂಘ; ಅದನ್ನು ರಾಷ್ಟ್ರೀಕರಿಸಲು ಸಾರ್ವಭೌಮಾಧಿಕಾರ ಸಂಪನ್ನವಾದ ಐಗುಪ್ತದ ಸರಕಾರಕ್ಕೆ ಸರ್ವ ಸ್ವಾತಂತ್ರ್ಯವಿದೆ. ಈ ಅಧಿಕಾರವನ್ನು ಯಾರೊಬ್ಬರೂ ಪ್ರಶ್ನಿಸುವಂತಿಲ್ಲ.

ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ದೂರನ್ನೊಯ್ಯಬೇಕೆಂಬ ಮಾತು ಪಾಶ್ಚಾತ್ಯ ವರ್ತುಲಗಳಲ್ಲಿ ಎದ್ದಿದೆ: ಆದರೆ, ಇರಾನಿನಲ್ಲಿದ್ದ ಎಣ್ಣೆ ಕಂಪೆನಿಗಳನ್ನು ಮುಸಾದಿಕರು ರಾಷ್ಟ್ರೀಕರಿಸಿದಾಗ ಎದ್ದಿದ್ದ ತಂಟೆಯಲ್ಲಿ ತಾನು ಹಸ್ತಕ್ಷೇಪಮಾಡುವಂತಿಲ್ಲ ಎಂದು ಹೇಳಿದ್ದ ಅಂತಾರಾಷ್ಟ್ರೀಯ ನ್ಯಾಯಾಲಯವು ಈಗ ಬೇರೆ ತೀರ್ಮಾನವನ್ನು ಹೇಳಲಾರದು.

ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳದಲ್ಲಿ ಈ ಪ್ರಶ್ನೆಯನ್ನು ಎತ್ತಿದರಾಗದೆ ಎಂಬುದು ಇನ್ನೊಂದು ಸಲಹೆ: ಶಾಂತಿ ಭಂಜಕ ಘಟನೆಗಳನ್ನು ಮಾತ್ರವೇ ಅಲ್ಲಿ ಎತ್ತಬಹುದು; ಕಾಲುವೆ ಕಂಪೆನಿಯ ರಾಷ್ಟ್ರೀಕರಣದಿಂದ ಯಾವ ವ್ಯವಸ್ಥೆಗೂ ತೊಡಕಾಗಿಲ್ಲ. ಎಂದ ಮೇಲೆ, ಭದ್ರತಾ ಮಂಡಳ ಈ ವಿಷಯದಲ್ಲಿ ಕೈಹಾಕಲಾರದು. ಒಂದು ವೇಳೆ ಕೈಹಾಕಿದರೂ, ರಶ್ಯವು ತನ್ನ ಪ್ರತಿಷೇಧಾಧಿಕಾರದಿಂದ ಪಾಶ್ಚಾತ್ಯರ ಇಚ್ಛೆಯನ್ನು ನಿಷ್ಫಲಗೊಳಿಸಬಹುದು.

೦೦

ಸುಯೇಜಿನ ಪ್ರದೇಶದಿಂದ ಬ್ರಿಟನಿನ ಎಲ್ಲ ಸೈನ್ಯವೂ ಕಳೆದ ಜೂನಿನಲ್ಲಿ ಹಿಂದೆ ಹೋಗಿದೆ: ಪುನಃ ಇಲ್ಲಿ ಸೈನ್ಯವಾಗಲೀ ಯುದ್ಧ ಹಡಗಗಳಾಗಲೀ ಬೀಡು ಬಿಡಬೇಕಾದರೆ ತುರ್ಕಿ ಅಥವಾ ಅರಬ ರಾಷ್ಟ್ರಗಳಲ್ಲಿ ಯುದ್ಧದ ಕಿಡಿ ಹೊತ್ತಿಕೊಳ್ಳಬೇಕು: ಅಂಥ ಸಂಭವವೇನೂ ಈಗ ಇಲ್ಲ. ಆದುದರಿಂದ ಬಲಾತ್ಕಾರವಾಗಿ ಕಾಲುವೆ ಪ್ರದೇಶದಲ್ಲಿ ಕಾಲೂರುವ ಮಾತಿಲ್ಲ.. ಅಂತಹ ಪ್ರಯತ್ನವೇನಾದರೂ ನಡೆದರೆ ಅದು ಸ್ಥಳೀಯ ತಿಕ್ಕಾಟವಾಗಿ ಉಳಿಯದೆ, ತೃತೀಯ ಮಹಾಯುದ್ಧಕ್ಕೆ ನಾಂದಿಯಾದೀತು!

ಆದುದರಿಂದ ಬ್ರಿಟನು ದೀರ್ಘ ಆಲೋಚನೆಯ ಬಳಿಕ ಐಗುಪ್ತದ ಹೆಸರಿನಲ್ಲಿ ತಾನು ಇಟ್ಟುಕೊಂಡಿರುವ ಸುಮಾರು ೧೧ ಕೋಟಿ ಪೌಂಡುಗಳಷ್ಟು ಹಣವನ್ನು ತಡೆದು ಹಿಡಿಯುವ ನಿರ್ಧಾರವನ್ನೀಗ ಕೈಗೊಂಡಿದೆ. ಇದು ಅಕ್ರಮವಾದುದೆಂಬ ದೂರನ್ನು ಐಗುಪ್ತವು ಅಂತಾರಾಷ್ಟ್ರೀಯ ನ್ಯಾಯಾಲಯಕ್ಕೆ ಕೊಂಡೊಯ್ಯುವುದೆಂದು ತಿಳಿದು ಬರುತ್ತದೆ.

ಫ್ರಾನ್ಸ್ ಸಹ ಹೀಗೆಯೇ ಐಗುಪ್ತಕ್ಕೆ ಪಾವತಿಯಾಗುವ ಹಣವನ್ನು ತಡೆದು ಹಿಡಿಯುವ ನಿಶ್ಚಯ ಮಾಡಿದೆ: ಹೀಗೆ ಕಾಲುವೆ ಕಂಪೆನಿಯ ಹೆಸರಿನಲ್ಲಿರುವ ಹಣವು ಐಗುಪ್ತರ ಪಾಲಿಗೆ ಕನ್ನಡಿಯೊಳಗಿನ ಗಂಟಾಗಲೂಬಹುದು. ಆದಕ್ಕೆ ಐಗುಪ್ತದ ಸರಕಾರ ಹೇಳುವ ದಿಟ್ಟ: "ಚಿಂತಿಲ್ಲ— ಆಗ ನಾವು ಕಂಪೆನಿಯ ಪಾಲುದಾರರಿಗೆ ಪರಿಹಾರವನ್ನೇ ಕೊಡುವುದಿಲ್ಲ!"

೦೦

ಸುಯೇಜಿನ ಕಾಲುವೆ ಕಂಪೆನಿಯಲ್ಲಿಯೂ ಸ್ವತಃ ಕಾಲುವೆಯಲ್ಲಿಯೂ ಅಮೇರಿಕ ಅಥವಾ ಬೇರೆ ಯಾವುದೇ ದೇಶಕ್ಕಿಂತ ಬ್ರಿಟನಿಗಿರುವ ಆಸಕ್ತಿ ಅತ್ಯಧಿಕ. ಆದರೆ, ಮುಂಡಿಗೆ ನಮಸ್ಕರಿಸಿದಾಗ ಸನ್ನಂತೆಯೆ ಆಗು ಮಗು ಎಂಬ ಆಶೀರ್ವಾದ ದೊರೆತಂತೆ, ಡಲ್ಲೇಸರ ಕೈಹಿಡಿದು ಸಾಗುವ ಈಡನ್ನರ ದೌರ್ಬಲ್ಯವು ಬ್ರಿಟನಿನ ಪ್ರತಿಷ್ಠೆಗೆ ಪೆಟ್ಟು ತಂದಿದೆ.

೧೦೩ ಮೈಲು ಉದ್ದದ ಸುಯೇಜಿನ ಕಾಲುವೆಯನ್ನು ೧೯೫೪ರಲ್ಲಿ ೧೩೧೫ ಹಡಗುಗಳು ದಾಟಿದವು: ಇವುಗಳಲ್ಲಿ ಬ್ರಿಟನರ ಹಡಗಗಳೇ ೪೪೯೩. ಇವುಗಳಲ್ಲಿ ಬ್ರಿಟನಿನ ಕೈಗಾರಿಕೆಯ ಕೇಂದ್ರಗಳಿಗೆ ಎಣ್ಣೆಯನ್ನು ಹೊತ್ತು ಸಾಗುವ ಟ್ಯಾಂಕರುಗಳೇ ಅತ್ಯಧಿಕ, ಅಂದರೆ ಸುಮಾರು ೪೦೦೦.

ನೋರ್ವೆಯ ೧೭೩೪, ಫ್ರಾನ್ಸಿನ ೧೧೩೩, ಇಟಲಿಯ ೧೦೧೭, ನೆದರ್ಲೆಂಡಿನ ೭೩೦, ಸ್ವೀಡನಿನ ೪೫೦, ಅಮೇರಿಕದ ೩೯೩, ಡೆನ್ಮಾರ್ಕಿನ ೩೩೫, ಜರ್ಮನಿಯ ೩೦೨, ಹಡಗಗಳು ಈ ಅವಧಿಯಲ್ಲಿ ಕಾಲುವೆಯನ್ನು ದಾಟಿರುತ್ತವೆ. ೫೩೯೭೭ ಪ್ರವಾಸಿಗಳು ೧೯೫೪ರಲ್ಲಿ ಕಾಲುವೆಯನ್ನು ಹಡಗಗಳ ಮೂಲಕ ದಾಟಿದ್ದರು.

ಕಾಲುವೆ ಕಂಪೆನಿಯ ೮ ಲಕ್ಷ ಪಾಲುಗಳಲ್ಲಿ ಬ್ರಿಟನು ೩|| ಲಕ್ಷಕ್ಕಿಂತಲೂ ಹೆಚ್ಚಿನದನ್ನು ಪಡೆದಿದೆ! ಕಂಪೆನಿಯ ನಾಯಕ ಮಂಡಳದಲ್ಲಿ ೧೬ ಮಂದಿ ಫ್ರೆಂಚರೂ ೯ ಮಂದಿ ಬ್ರಿಟಿಷರೂ ೫ ಮಂದಿ ಐಗುಪ್ತರೂ ಒಬ್ಬ ಅಮೇರಿಕನ್ನನೂ ಮತ್ತೊಬ್ಬ ಡಚ್ಚರವನೂ ಇದ್ದರು. ಕಾಲುವೆಯ ರಚನೆಯ ವೆಚ್ಚದ ಅಂದಾಜು ೪೫ ಕೋಟಿ ಪೌಂಡು. ಅದರ ಉತ್ಪತ್ತಿ ಈಗ ಸಾಲಿಯಾನ ೩|| ಕೋಟಿ ಪೌಂಡು.

೦೦

ಐಗುಪ್ತದ ಸರಕಾರವು ಕಾಲುವೆ ಪ್ರದೇಶದಲ್ಲೀಗ ಸೈನಿಕ ನ್ಯಾಯವನ್ನು ಸಾರಿದೆ: ಕಾಲುವೆ ಕಂಪೆನಿಯ ಕೆಲಸಗಾರರು ಸರಕಾರದ ಪೂರ್ವಾನುಮತಿಯಿಲ್ಲದೆ ಕೆಲಸಕ್ಕೆ ಹಾಜರಿಯನ್ನು ತಪ್ಪಿಸಲಾಗದೆಂದು ಆದೇಶವಿತ್ತಿದೆ.

ಈಗ ಬಂದಿರುವ ವರದಿಗಳನುಸಾರ, ಹಡಗಗಳ ಚಲಾವಣೆಯು ಎಂದಿನಂತೆ ನಡೆದಿದೆ. ದಿವಸಕ್ಕೆ ಸರಾಸರಿ ೫೦ ಹಡಗುಗಳ ಚಲಾವಣೆ ನಡೆಯುವ ಕಾಲುವೆ ಪ್ರದೇಶದಲ್ಲಿ ರಾಷ್ಟ್ರೀಕರಣದ ಪ್ರಥಮ ದಿನ ೪೯ ಹಡಗುಗಳ ಚಲಾವಣೆಯಾಯಿತು: ಇವುಗಳಿಂದ ಆಕ್ಷಣ ೫೯೦೨೦ ಪೌಂಡುಗಳ ಆದಾಯವಾಯಿತು; ಇದಲ್ಲದೆ, ಅನೇಕ ಹಡಗುಗಳು ತಮ್ಮ ಕಾರ್ಯಾಲಯದಿಂದ ನೇರವಾಗಿಯೇ ಹಿಂದಿನಿಂದ ಸುಂಕವನ್ನು ಪಾವತಿ ಮಾಡಲಿವೆ.

ಪಾಶ್ಚಾತ್ಯ ರಾಷ್ಟ್ರಗಳ ಪ್ರತಿಭಟನೆಯನ್ನು ಐಗುಪ್ತವು ಲೆಕ್ಕಿಸುತ್ತಲೇ ಇಲ್ಲ. 'ನಮ್ಮ ಸ್ವಾತಂತ್ರ್ಯಹರಣ ಮಾಡಲು ಬಯಸಿದ ಆಶ್ವಾಸನವಿತ್ತು ವಿಶ್ವಾಸ ದ್ರೋಹ ಗೈದವರು ಖಡ್ಗ ಝಳಪಿಸಿದರೆ, ನಾವೂ ನಮ್ಮ ಕೈಚಳಕ ತೋರಿಸಿ ಬಿಡುತ್ತೇವೆ" ಎಂಬ ಹುಮ್ಮಸ್ಸಿನಲ್ಲಿ ನಾಸೇರರಿದ್ದಾರೆ.

೦೦

ಅಮೇರಿಕದ ಡಲ್ಲೇಸರು ನೆಹರೂರನ್ನು ದೂರಿದರೆ ಚಿಂತಿಲ್ಲ: ಸ್ವತಃ ನೆಹರುಗಳೇ ಸಂಸತ್ತಿನಲ್ಲಿ ಹೇಳಿದಂತೆ "ಈ ಪ್ರಧಾನಿಯ ಬಗ್ಗೆ ಅನೇಕ ಟೀಕೆಗಳನ್ನು ದೇಶದೊಳಗಡೆಯೂ ಹೊರಗೂ ಮಾಡಲಾಗುತ್ತದೆ: ಅವೆಲ್ಲವನ್ನು ನಿಮ್ಮ ಪ್ರಧಾನಿ ಸಹಿಸಿಕೊಳ್ಳುತ್ತಾರೆ." ಆದರೆ ನಾಸೇರರು ನೆಹರುಗಳಲ್ಲ!

ಫರೂಕ ಅರಸರನ್ನು ಸೈನ್ಯ ಕ್ರಾಂತಿಯಿಂದ ಓಡಿಸಿದ ದೇಶದ ನಾಯಕ ನಾಸೇರರೆಂಬುದನ್ನು ಮರೆಯಲಾಗದು. ಆದರೆ ಫರೂಕರ ಆ ಭವಿಷ್ಯವಾಣಿ! "ನಿಮ್ಮದು ತುಂಬ ತ್ರಾಸದಾಯಕವಾದ ಕೆಲಸ: ಐಗುಪ್ತವನ್ನು ಆಳುವುದು ಸುಲಭವಲ್ಲ."

ಪಾಶ್ಚಾತ್ಯರ ಆಡುಂಬೊಲವಾಗಿದ್ದ ನಾಡು ಐಗುಪ್ತ: ಸಾಮ್ರಾಜ್ಯ ಲಾಲಸೆಯಿಂದಲೂ ಧನ ಮದದಿಂದಲೂ ಕೊಬ್ಬಿ ಸದಸದ್ವಿವೇಕವನ್ನು ಕಳೆದುಕೊಂಡು ರಾಷ್ಟ್ರೀಯ ಜಾಗೃತಿಯನ್ನು ಸಹಾನುಭೂತಿಯಿಂದ ಕಾಣುವ ಹೃದಯ ವೈಶಾಲ್ಯವಿಲ್ಲದ ಪಾಶ್ಚಾತ್ಯ ಪ್ರಮುಖರು ತಮ್ಮ ಕೀಟಲೆಗಳನ್ನು ಸುಲಭದಲ್ಲಿ ಬಿಡಲೊಲ್ಲರು. ಈ ಕುಟಿಲ ತಂತ್ರ ನೀತಿಗಳಿಗೆಯೇ ಐಗುಪ್ತದ ಭಾಗ್ಯೋದಯದ ಉಷಃಕಾಲ!

ಮಂಗಳೂರು

ಡಾ. ಎಚ್. ವಿ. ಅಡಪರ ಸ್ಮಾರಕ— ವೊಂದನ್ನು ರಚಿಸಲು ಧನಸಹಾಯವನ್ನಪೇಕ್ಷಿಸಿ ಶ್ರೀಗಳಾದ ಮೂಲ್ಕಿ ರಾಮಣ್ಣ ಸೆಟ್ಟಿ, ಡಾ. ನಾಗಪ್ಪಾಳ್ವ ವಕೀಲ್, ಎ. ಶಂಕರ ಆಳ್ವ, ಎನ್. ಎಮ್. ಅಡ್ಯಂತಾಯ, ಕೆ. ಟಿ. ಆಳ್ವ ಮತ್ತು ವಕೀಲ್ ಕೆ. ಸುಂದರರಾವ್ ಸೆಟ್ಟಿಯವರು ವಿನಂತಿ ಪತ್ರವೊಂದನ್ನು ಹೊರಡಿಸಿರುವರು. ಧನಸಹಾಯವನ್ನು ಶ್ರೀ ಕೆ. ಸುಂದರರಾವ್ ಸೆಟ್ಟಿ, ವಕೀಲ್, ಕದ್ರಿ ರೋಡ್, ಮಂಗಳೂರು-3, ಅಥವಾ ಶ್ರೀ ಕೆ. ಟಿ. ಆಳ್ವ, ಬಿಜೈಸ್ಟೋರ್ಸ್, ಮಂಗಳೂರು-4 ವಿಳಾಸಗಳಿಗೆ ಕಳುಹಿಸಬಹುದು.

ಜಿಲ್ಲಾ ಕಾಂಗ್ರೆಸ್ ಕಮಿಟಿ- ಇದರ ಕಾರ್ಯನಿರ್ವಾಹಕ ಸಮಿತಿಯ ವಿಶೇಷ ಸಭೆಯು ತಾ. 26ರಂದು ಜರಗಿ ಕಾಸರಗೋಡು ಪ್ರಶ್ನೆಯ ಬಗ್ಗೆ ಚರ್ಚೆಯಾಗಿ ಚಂದ್ರಗಿರಿ ನದಿಯ ಉತ್ತರ ಕಾಸರಗೋಡು ತಾಲೂಕಿನ ಭಾಗವನ್ನು ದ. ಕ. ಜಿಲ್ಲೆಯಲ್ಲಿಯೇ ಉಳಿಸುವುದು ನ್ಯಾಯವೂ ಅಗತ್ಯವೂ ಉಚಿತವೂ ಆಗಿರುವುದೆಂದು ಈ ಮುಂಚೆಯೇ ಅನೇಕ ಬಾರಿ ಮನವಿಮಾಡಿಕೊಂಡಿರುವುದರಿಂದ ಆ ಕುರಿತು ಪ್ರಯತ್ನಮಾಡಿ ಪ್ರಾಂತ್ಯ ಪುನರ್ರಚನಾ ಸಮಿತಿಯ ವರದಿಯಿಂದ ಉಂಟಾಗಿರುವ ಅನ್ಯಾಯವನ್ನು ಸರಿಗೊಳಿಸಬೇಕೆಂದು ಒತ್ತಾಯಿಸಿ ಕೇಳಿಕೊಳ್ಳುವ ಠರಾವನ್ನು ಪ್ರಧಾನ ಮಂತ್ರಿ, ಗೃಹ ಮಂತ್ರಿ ಮತ್ತು ಕಾಂಗ್ರೆಸಾಧ್ಯಕ್ಷರಿಗೆ ತಂತಿಮೂಲಕ ಕಳುಹಿಸುವ ನಿರ್ಧಾರ ಮಾಡಲಾಯಿತು.

ನಿಸರ್ಗ ಸೇವಾ ನಿಲಯದಲ್ಲಿ— ತಾ 20ರಲ್ಲಿ ಶ್ರೀ ಎಸ್. ಶಂಕರನಾರಾಯಣ ಭಟ್ಟ ಎಡ್ವೋಕೇಟ್ ಅವರ ಅಧ್ಯಕ್ಷತೆಯಲ್ಲಿ 'ವಿಜ್ಞಾನವು ಮನುಷ್ಯನನ್ನು ಮರುಳುಗಾಡಿಗೊಯ್ಯುತ್ತಿದೆ' ಎಂಬ ವಿಷಯದಲ್ಲಿ ಚರ್ಚಾಗೋಷ್ಠಿ ನಡೆಯಿತು.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ— ಬೆಂಗಳೂರು-2.
(2) ಷಾ ಕಂಪೆನಿ— ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ನ.)

ಹಿಂದುಗಳ ಉತ್ತರಾಧಿಕಾರ ಶಾಸನ, ೧೯೫೬ —

ಪ್ರಕಾಶಕರು: ಇಂಡಿಯನ್ ಇಂಡಸ್ಟ್ರೀಯಲ್ಸ್ ಎಂಡ್ ಏಜನ್ಸೀಸ್, ಕಾರ್ನಾಡು ಸದಾಶಿವರಾವ್ ರಸ್ತೆ, ಮಂಗಳೂರು ೧. ಬೆಲೆ: ರೂ. ೦—೧೨—೦.

ಮೊನ್ನೆ ಜೂನಿನ ೧೭ನೇ ದಿನಾಂಕದಿಂದ ಜ್ಯಾರಿಗೆಬಂದಿರುವ ಹಿಂದುಗಳ ಉತ್ತರಾಧಿಕಾರ ಶಾಸನದ ಅನುವಾದವನ್ನು ಈ ಪುಸ್ತಕವು ಒಳಗೊಂಡಿದೆ. ಶ್ರೀಗಳಾದ ಕಡೆಂಗೋಡ್ಲು ಈಶ್ವರ ಭಟ್ಟ ಹಾಗು ಎಂ. ಮಹಾಬಲ ಭಟ್ಟರು ಅನುವಾದದ ಸಂಪಾದನ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅನುವಾದವು ಮೂಲಕ್ಕೆ ಚೆನ್ನಾಗಿ ಒಪ್ಪುತ್ತಿದ್ದು ಪ್ರೌಢವಾದ ಭಾಷೆಯಲ್ಲಿದೆ; ಕಾನೂನಿಗೆ ಸಂಬಂಧಪಟ್ಟ ಅನೇಕ ಪದಗಳಿಗೆ ಒಳ್ಳೆಯ ಕನ್ನಡ ಶಬ್ದಗಳನ್ನು ಎರಕ ಹೊಯ್ದಿರುವುದು ಈ ಅನುವಾದದ ಮುಖ್ಯ ವೈಶಿಷ್ಟ್ಯ. ಪುಸ್ತಕದ ಪ್ರಸ್ತಾವನೆಯೂ ಪರಿಭಾಷೆಯ ವಿವರಣೆ ಎಂಬ ಎರಡನೆಯ ಭಾಗವೂ ಈ ಶಾಸನದ ತಿಳುವಳಿಕೆಯನ್ನು ಸರಿಯಾಗಿ ಮಾಡಿಕೊಳ್ಳುವುದಕ್ಕೆ ಅನುಕೂಲವಾದ ವಿಶೇಷ ಸಂಗತಿಗಳಿಂದ ಕೂಡಿವೆ. ಇದನ್ನೊಂದು ಉಪಯುಕ್ತವಾದ ಕೈಪಿಡಿಯೆಂದೇ ಹಿಂದುಗಳು ಭಾವಿಸಿ, ಪಡೆದಿಟ್ಟುಕೊಳ್ಳಬಹುದು.

ಹಿಂದೂ ಉತ್ತರಾಧಿಕಾರ (ವಾರೀಸು) ಕಾನೂನು, 1956—

ಪ್ರಕಾಶಕರು: ಕೆ. ಭೋಜರಾವ್ ಮತ್ತು ಕಂಪೆನಿ, ಕೊಡಿಯಾಲಬೈಲು, ಮಂಗಳೂರು ೩. ಬೆಲೆ: ರೂ. ೦—೮—೦.

ಕಾನೂನಿನ ತಜ್ಞರಿಂದ ಮಾಡಲಾದ ಈ ಭಾಷಾಂತರವು ಸರಳ ಭಾಷೆಯಲ್ಲಿದೆ: ಸಾಮಾನ್ಯರಿಗೆ ತಿಳಿಯಬಹುದಾದ ಭಾಷೆಯಲ್ಲಿದೆ. ಆದರೆ ಶೈಲಿಯು ಬಂಧವು ಮೂಲದ ಬಿಗಿಗೆ ಅನುಗುಣವಾಗಿದೆ ಎಂದು ಹೇಳಲು ಮಾತ್ರ ಬರುವುದಿಲ್ಲ. ಆದಾಗ್ಯೂ ಶಾಸನದ ಆಶಯವನ್ನು ತಿಳಿದುಕೊಳ್ಳುವುದಕ್ಕೆ ವಿಶೇಷ ತೊಂದರೆಯಾಗುವುದಿಲ್ಲವಾದ ಕಾರಣ, ದೊಡ್ಡ ದೋಷವಾಗಿ ನಾವಿದನ್ನು ಪರಿಗಣಿಸಬೇಕಾಗಿಲ್ಲ. ಪುಸ್ತಕದ ಕೊನೆಯಲ್ಲಿ ಈ ಶಾಸನದ ಮುಖ್ಯ ವೈಶಿಷ್ಟ್ಯಗಳನ್ನು ತಿಳಿಯಾದ ಮಾತುಗಳಲ್ಲಿ ವಿವರಿಸಿರುವುದರಿಂದ ಹಿಂದುಗಳ ಪಾಲಿಗೆ ಮಹತ್ವದ್ದಾಗುವ ಈ ನೂತನ ಕಾನೂನನ್ನು ಸುಲಭದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ. ಶಾಸನದ ಮಾಹಿತಿ ಪಡೆಯಬಯಸುವ ಎಲ್ಲ ಹಿಂದುಗಳಿಗೂ ಇದು ಉಪಯುಕ್ತವಾಗಿದೆ ಎನ್ನಬಹುದು.

ತಮ್ಮನ ತೊದಲು—

ಬರೆದವರು: ಬಿ. ಕೆ. ಗೋಪಾಲಕೃಷ್ಣ ಪ್ರಕಾಶಕರು: ತಮ್ಮನ ಸಾಹಿತ್ಯಮಾಲೆ, ಮುಂಡಾಜೆ. ಬೆಲೆ: ರೂ. ೦-೧-೩.

ಕಿರಿಯರೊಬ್ಬರು ಬರೆದ ಶಿಶುಗೀತೆಗಳ ಈ ಸಂಕಲನದಲ್ಲಿ ಮಕ್ಕಳು ಮೆಚ್ಚಬಹುದಾದಂತ ಕವಿತೆಗಳಿವೆ. ವಿದ್ಯಾರ್ಥಿಯೊಬ್ಬನ ಈ ಸಾಹಿತ್ಯ ಸೇವೆಯು ಪ್ರೋತ್ಸಾಹನೀಯವಾಗಿದೆ ಎನ್ನಲು ನಮಗೆ ಸಂತೋಷವಾಗುತ್ತದೆ

ಕನ್ನಡ ಪರೀಕ್ಷಾರ್ಥಕ—

ಬರೆದವರು: ಶ್ರೀಗಳಾದ ಎಸ್. ತಿರುಮಲೇಶ್ವರ ಭಟ್. ಮತ್ತು ಪಿ. ಲಕ್ಷ್ಮಣ ಪೈ, ಬೆಂದೂರು, ಮಂಗಳೂರು-೩. ಬೆಲೆ: ರೂ. ೦-೬-೦.

ಎಂಟನೆ ತರಗತಿಯ ಸರಕಾರಿ ಪರೀಕ್ಷೆಗೆ (೧೯೫೭) ನಿಯುಕ್ತವಾದ ಕನ್ನಡ ಪಠ್ಯಪುಸ್ತಕದ ಅಭ್ಯಾಸಿಗಳಿಗೆ ಸಹಾಯಕವಾಗಿ ಈ ಪರೀಕ್ಷಾರ್ಥಕವನ್ನು ಬರೆಯಲಾಗಿದೆ. ಕಾಠಿಣ ಶಬ್ದಗಳಿಗೆ ಅರ್ಥ, ಪ್ರತಿಪದ್ಯದ ತಾತ್ಪರ್ಯ, ಛಂದಸ್ಸಿನ ಹಾಗೂ ಕವಿಯ ಪರಿಚಯ ಮತ್ತು ಮಾದರಿ ಪ್ರಶ್ನೆಗಳು ಪದ್ಯಭಾಗದಲ್ಲಿವೆ. ಗದ್ಯಭಾಗದಲ್ಲಿ ಕೆಲವೆಡೆ ಪಾಠದ ಸಾರಾಂಶ, ಕಠಿಣ ಶಬ್ದಾರ್ಥ ಮತ್ತು ಪ್ರಶ್ನೆಗಳೂ ಬೇರೆ ಕೆಲವೆಡೆ ಕಠಿಣ ಶಬ್ದಾರ್ಥ ಮತ್ತು ಮಾದರಿ ಪ್ರಶ್ನೋತ್ತರಗಳೂ ಇವೆ. ಪರೀಕ್ಷಾರ್ಥಕಗಳನ್ನು ಬರೆದು ಪ್ರಕಟಿಸುವುದರ ಔಚಿತ್ಯದ ಕುರಿತು ಭಿನ್ನಾಭಿಪ್ರಾಯಗಳೇನೇ ಇರಲಿ ಅಧ್ಯಾಪಕರು ಕೊಡುವ ವಿವರಣೆಗೂ ಮಿಕ್ಕಿ ಪರೀಕ್ಷಾರ್ಥಕಗಳೇ ಬೇಕೆಂದು ಅಪೇಕ್ಷಿಸುವ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆಯಬಲ್ಲರು.

ಹುಚ್ಚರ ರಾಜ್ಯ—

ಬರೆದವರು: "ಶಿವಕುಮಾರ" ಪ್ರಕಾಶಕರು: ಭಾರತೀ ಸಾಹಿತ್ಯ ಭಂಡಾರ, ಯರನಾಳ, ಬಿಜಾಪುರ ಜಿಲ್ಲೆ. ಬೆಲೆ: ರೂ. ೦—೮—೦.

ಕತೆಗಳ ರೂಪದಲ್ಲಿ ಕೆಲವು ಸನ್ನಿವೇಶಗಳನ್ನು ಚಿತ್ರಿಸಿ, ಅವುಗಳಲ್ಲಿ ವ್ಯಂಗವನ್ನೂ ಗೂಢಾರ್ಥದ ನೀತಿಯನ್ನೂ ತುಂಬಿಸಿರುವುದೇ ಲೇಖಕರು ಈ ಪುಸ್ತಕದಲ್ಲಿನ ೧೭ ಶ್ಲೇಷಾಲಂಕಾರಯುಕ್ತ ರೂಪಕಗಳಲ್ಲಿ ವ್ಯಕ್ತಪಡಿಸಿರುವ ಕೌಶಲ ಅವರ ಶೈಲಿಯು ಸಹೃದಯತೆಯಿಂದ ಕೂಡಿದೆ; ಮನಸ್ಸು ಬಹಳ ನಿರ್ಮಲವಾಗಿದೆ. ಲೋಕದ ರೀತಿ, ನಡತೆಗಳ ಲೋಪದೋಷಗಳನ್ನು ಅವರ ಮಾತಿನ ಬಾಣವು ನೇರವಾಗಿ ಭೇದಿಸಿ ಸಾಗುತ್ತದೆ.

ಕವನ ಕುಸುಮ—

ಪ್ರಕಾಶಕರು: ಕನ್ನಡ ಸಾಹಿತ್ಯ ಸಂಘ, ರಂಗಂಪೇಟೆ, (ಸುರಪುರ) (ಹೈದರಾಬಾದು-ದಖ್ಖಣ) ಬೆಲೆ: ರೂ. ೦—೮—೦.

ಚೆಲ್ಲಾಪಿಲ್ಲಿಯಾಗಿ ಬಿದ್ದಂತಿರುವ ಕನ್ನಡನಾಡಿನ ಪ್ರದೇಶಗಳು ಇಷ್ಟರಲ್ಲಿಯೇ ಒಂದೇ ರಾಜ್ಯವಾಗಿ ರೂಪುಗೊಳ್ಳಲಿರುವಾಗ, ಆಯಾ ಪ್ರದೇಶದ ಜನರು ಸಾಹಿತ್ಯಸೇವೆಯಲ್ಲಿ ಎಷ್ಟು ಮುನ್ನಡೆದಿರುವರೆಂಬ ವಿಷಯವು ವಿಶೇಷ ಜಿಜ್ಞಾಸೆಗೆ ಕಾರಣವಾಗಬಹುದು. ಉತ್ತರ ಕರ್ನಾಟಕ, ಮೈಸೂರು ಕರ್ನಾಟಕ ಮತ್ತು ಪಡು ಕರಾವಳಿಯ ದಕ್ಷಿಣಕನ್ನಡಗಳು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಹೊಂದಿರುವಷ್ಟು ಪ್ರಗತಿಯನ್ನು ಹೈದರಾಬಾದಿನ ಕನ್ನಡ ಪ್ರದೇಶಗಳು ಹೊಂದಿವೆಯೇ ಎಂಬ ಅನುಮಾನ ನಮ್ಮಿಕಡೆಯವರಿಗಿದೆ ಎನ್ನಬಹುದು: ಹೈದರಾಬಾದಿನಲ್ಲಿರುವ ಕನ್ನಡಿಗರ ಚಟುವಟಿಕೆಯು ರಾಯಚೂರಿನಲ್ಲಿ ಕನ್ನಡಸಾಹಿತ್ಯ ಸಮ್ಮೇಳನವಾಗಿದ್ದರೂ ಅದಕ್ಕೆ ಹಿಂದೆ ಅಥವಾ ಆ ಬಳಿಕ ಉಳಿದೆಡೆಯ ಕನ್ನಡಿಗರ ಗಮನಕ್ಕೆ ಹೆಚ್ಚಾಗಿ ಬಂದಂತಿಲ್ಲ. ಆದರೆ ಅಲ್ಲಿಯ ಕನ್ನಡ ಬಂಧುಗಳು ಪ್ರೋತ್ಸಾಹ ಮತ್ತು ಉತ್ತೇಜನೆಯು ದೊರೆತ ಪಕ್ಷದಲ್ಲಿ ಉತ್ತಮ ರೀತಿಯ ಸಾಹಿತ್ಯ ಸೇವೆಯನ್ನು ಮಾಡಬಲ್ಲರೆಂಬುದಕ್ಕೆ ಶ್ರೀ. ಎಮ್. ಆರ್. ಬುದ್ಧಿವಂತ ಸೆಟ್ಟಿಯವರು ಸಂಪಾದಿಸಿ ಪ್ರಕಟಿಸಿದ ೨೪ ಕವನಗಳ ಈ ಸಂಕಲನವೇ ಪ್ರತ್ಯಕ್ಷ ನಿದರ್ಶನ. ಕವಿತೆಗಳಲ್ಲಿ ಪ್ರತಿಯೊಂದೂ ರಸೋಪೇತವಾಗಿದೆ; ಭಾವಪೂರ್ಣವಾಗಿದೆ.; ಕೆಲವೆಡೆ ಶೈಲಿಯು ವಿದ್ಯುಲ್ಲತೆಯಂತೆ ಮಿಂಚಿ ಹರಿಯುತ್ತದೆ; ಮತ್ತೆ ಕೆಲವೆಡೆ ಗಂಭೀರವಾಗಿ ನಡೆದಿದೆ. ಕನ್ನಡಿಗರ ಹಂಬಲ ಮತ್ತು ಹೃದ್ಗತಗಳೂ ಇಲ್ಲಿ ಅಲ್ಲಲ್ಲಿ ಮೂಡಿವೆ. ಕವಿಗಳ ಪರಿಚಯವು ಪ್ರತಿ ಕವಿತೆಯ ಕೊನೆಯಲ್ಲಿದ್ದು ಇದನ್ನು ಸಂಪರ್ಕ ಸ್ಥಾಪನೆಗೆ ನಾವೆಲ್ಲರೂ ಬಳಸಿಕೊಳ್ಳಬಹುದು.

—ವಿಮರ್ಶಕ.

ಸ್ವಿಸ್ ವಾಚ್ ಕೈಗಾರಿಕೆಯು ಕಾರ್ಮಿಕರ ವಾರ್ಷಿಕ ರಜೆಗಾಗಿ ಕೆಲಸ ನಿಲ್ಲಿಸುವುದು:— ಜಗತ್ತಿನಲ್ಲಿ ಗಡಿಯಾರ ತಯಾರಿಕೆಯ ಅತಿ ದೊಡ್ಡ ಕೇಂದ್ರವಾಗಿರುವ ಸ್ವಿಟ್ಸರ್‌ಲೇಂಡಿನಲ್ಲಿ, ಜುಲಾಯಿ 21ರಿಂದ ಆಗೋಸ್ತು 5ರ ತನಕ ಎರಡು ವಾರಗಳ ಅವಧಿಯಲ್ಲಿ ವಾಚುಗಳ ಉತ್ಪಾದನೆ ಸ್ತಬ್ಧವಾಗುವುದು. ಆಗ 60,000 ವಾಚ್ ಕೆಲಸಗಾರರು ತಮ್ಮ ಕಾರ್ಖಾನೆಗಳಿಂದ ಹೊರಬಂದು ಯುರೋಪಿನ ಕ್ರೀಡಾಸ್ಥಳಗಳಿಗೆ ತೆರಳುವರು. ಇದು ಲೋಕದಲ್ಲೇ ಅದ್ವಿತೀಯವಾಗಿರುವ ಔದ್ಯಮಿಕ ರಜಾಕಾಲದ ಪ್ರಯೋಗವಾಗಿರುತ್ತದೆ. ಸ್ವಿಟ್ಸರ್‌ಲೇಂಡಿನಲ್ಲಿ ಮತ್ತು ವಿದೇಶಗಳಲ್ಲಿ ಉದ್ಯಮಗಳ ಬಹುಭಾಗದಲ್ಲಿ ಆವರ್ತ ರಜೆಯ ಕಾರ್ಯಕ್ರಮಗಳು ರೂಢಿಯಲ್ಲಿವೆ. ಆದರೆ ಸ್ವಿಸ್ ವಾಚ್ ಉದ್ಯಮೆಯು ಹಾಗಲ್ಲ ಇಲ್ಲಿ ಪ್ರತಿವರ್ಷವೂ ಏಕ ಕಾಲದಲ್ಲಿ ಇಡೀ ಕೈಗಾರಿಕೆಯನ್ನು ನಿಲ್ಲಿಸಲಾಗುವುದು ಮತ್ತು ವ್ಯಾಪಾರಕನಿಂದ ಪರಿಚಾರಕನವರೆಗೆ ಎಲ್ಲರೂ ರಜೆಯಲ್ಲಿ ಹೋಗುವರು. ವಿದೇಶ ಪ್ರವಾಸ ಕೈಗೊಳ್ಳುವರು.

ಈ ಎರಡು ವಾರಗಳ ಅವಧಿಯಲ್ಲಿ ವಾಚ್ ಕಾರ್ಖಾನೆಗಳು ಬಹುಮಟ್ಟಿಗೆ ನಿರ್ಜನವಾಗಿದ್ದರೂ ಕ್ರಿಯಾ ಶೂನ್ಯವಾಗಿರುವುದಿಲ್ಲ. ಸ್ವಿಸ್ ವಾಚ್ ತಯಾರಕರು ಜಗತ್ತಿನಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಕಾಲಮಾಪಕ ಯಂತ್ರಗಳ ಮಾದರಿಗಳನ್ನು ಮತ್ತು ನಮೂನೆಗಳನ್ನು ತಯಾರಿಸುತ್ತಿರುವರು. ಮತ್ತವುಗಳಿಗೆ ಆಗಾಗ್ಗೆ ಉಪಕರಣಗಳನ್ನು ಬದಲಿಸುವ ಆವಶ್ಯಕತೆ ಇದೆ. ಕೈಗಾರಿಕೆಯ ಉಳಿದ ಭಾಗದವರು ವಿಹಾರಾರ್ಥವಾಗಿ ಹೋಗುವಾಗ, ಇಂಜಿನಿಯರು, ಹಾಗೂ ಯಂತ್ರ ನಿಪುಣರು ಈ ರೀತಿಯ ಕಾರ್ಯಗಳನ್ನು ಮಾಡುತ್ತಾರೆ. ಇದೇ ಅವಧಿಯಲ್ಲಿ ರಕ್ಷಣೆಯ ಸಿಬಂದಿಯವರು ಕಾರ್ಯನಿರತರಾಗುವರು ಮತ್ತು ಪ್ರತಿಯೊಂದು ಯಂತ್ರ ನಿವೇಶನವನ್ನು ನವೀಕರಿಸುವರು.

ಕೆನರಾ ಬೇಂಕ್ ಜ್ಯುಬಿಲಿ ಎಡ್ಯುಕೇಶನ್ ನಿಧಿ— ಕೆನರಾ ಬೇಂಕ್ ಜ್ಯುಬಿಲಿ ಎಡ್ಯುಕೇಶನ್ ಫಂಡ್ ವತಿಯಿಂದ ಜಾಹೀರು ಮಾಡಲಾದ ವಿನಂತಿಯನ್ನು ಮನ್ನಿಸಿ ರೂಪಾಯಿ ಒಂದು ಲಕ್ಷಕ್ಕೂ ಮಿಕ್ಕಿದ ಸಹಾಯ ಧನವು ಜಮೆಯಾಗಿರುವುದು. ಕೆನರಾ ಬೇಂಕಿನ ರೂ 20,000 ಸಹಾಯ ಧನವನ್ನು ಕೂಡಿಸಿ ಎಡ್ಯುಕೇಶನ್ ನಿಧಿಯ ಮೊತ್ತವು ರೂ. 1,22,000 ಆಗಿರುವುದು. ಮಹಾಜನರ ಈ ಸತ್ಸಹಾಯವು ಕೆನರಾ ಬೇಂಕಿನಿಂದ ಹೆಚ್ಚಿನ ತಾಂತ್ರಿಕ ಶಿಕ್ಷಣಕ್ಕಾಗಿ ಸಾಲರೂಪದ ವಿದ್ಯಾವೇತನವನ್ನು ಕೊಡಲು ತುಂಬಾ ನೆರವಾಗಿದೆ. ಆದುದರಿಂದ ಪ್ರಕೃತ ಹೆಚ್ಚಿನ ಸಹಾಯಧನವನ್ನು ಸ್ವೀಕರಿಸಲು ಈಗ ಶಕ್ಯವಿಲ್ಲ ಆದರೆ ವಿದ್ಯಾರ್ಥಿವೇತನ ಸಾಲದ ಮಿತಿಯನ್ನು ಏರಿಸಲು ಬೇಂಕಿನ ಒಪ್ಪಿಗೆ ದೊರೆತಲ್ಲಿ ಈಗ ನಿರಾಕರಿಸಿದವರಿಂದ ಸಹಾಯಧನವನ್ನು ಸ್ವೀಕರಿಸಲಾಗುವುದು.

ಚಾಲ್ತಿ ವರುಷದಲ್ಲಿ ಶಿಷ್ಯ ವೇತನ ಸಾಲವಾಗಿ ರೂಪಾಯಿ 9700ನ್ನು 14 ವಿದ್ಯಾರ್ಥಿಗಳಿಗೆ ಕೊಡಲು ಎಜ್ಯುಕೇಶನ್ ನಿಧಿಯ ಚಾಲಕರು ನಿರ್ಧರಿಸಿರುವರು. ವಿದ್ಯಾರ್ಥಿಗಳನ್ನು ಆರಿಸುವಾಗ ಅವರು ಶಾಲೆಯಲ್ಲಿ ಪಡೆದ ಯೋಗ್ಯತೆ, ಪಾಠೇತರ ಚಟುವಟಿಕೆ ಮತ್ತು ದೇಹದಾರ್ಢ್ಯತೆಗಳನ್ನು ಪರಿಗಣಿಸಲಾಗಿದೆ. ವಿದ್ಯಾರ್ಥಿಗಳ ಅರ್ಹತೆಗೊಳಪಟ್ಟು ವಿವಿಧ ಶಿಕ್ಷಣ ಶಾಖೆಗಳಿಗೆ ಕ್ಷೇತ್ರವಾರು ರೀತಿಯಲ್ಲಿ ಗ್ರಾಂಟುಗಳು ಕೊಡಲಾಗಿವೆ.

ನೋಟೀಸು

ಪೆರ್ಡೂರು ಮುಹತೇಬಾರ್ ಶ್ರೀ ಅನಂತಪದ್ಮನಾಭ ದೇವಸ್ಥಾನದ ಬಾಬ್ತು ತೋಟ್ಸಲು ಅಕ್ಕಿಮುಡಿ ಸುಮಾರು 125 (ನೂರಇಪ್ಪತ್ತೈದು) ಬೆಳ್ತಿಗೆ ಮುಡಿ 5 (ಐದು) ಸಹ ಮಾರಲಿಕ್ಕಿದೆ. ಈ ಬಾಬ್ತು ಇದೇ ತಾರೀಕು 4—8—1956ನೇ ಶನಿವಾರ ಅಪರಾಹ್ನ ಘಂಟೆ 4-30ಕ್ಕೆ ಭಂಡಾರದ ಕರ್ತರಿಗೆ ಒಳಪಟ್ಟು ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಅಪೇಕ್ಷೆ ಉಳ್ಳವರು ಆ ಸಮಯಕ್ಕೆ ಬಂದು ಏಲಂನಲ್ಲಿ ಭಾಗವಹಿಸಬಹುದು.

K. B. Shetty.
Executive Officer.
Sri Ananthapadmanabha
Temple Perdoor, S. K.

ಹಿಂದೂ ಉತ್ತರಾಧಿಕಾರ [ವಾರೀಸು] ಕಾನೂನು 1956.

ಸುಲಭ ಶೈಲಿಯಲ್ಲಿ ಯಥಾಪ್ರತಿ ಕನ್ನಡ ಭಾಷಾಂತರ ಮತ್ತು ಟಿಪ್ಪಣಿ ಸಹಿತ—

ಅನುಭವೀ ಕಾನೂನು ತಜ್ಞರಿಂದ

ಎಲ್ಲೆಲ್ಲಿಯೂ ದೊರೆಯುತ್ತದೆ;

ಬೆಲೆ 0—8—0.

1 ಪ್ರತಿ ಬೇಕಾದವರು ನೆತ್ತಾಣೆ ಅಂಚೆ ಚೀಟು ಕಳುಹಿಸಬೇಕಾಗುವುದು.

ಕೆ. ಭೋಜರಾವ್ ಮತ್ತು ಕಂಪೆನಿ

ಗವರ್ನಮೆಂಟ್ ಪುಸ್ತಕಗಳ ಏಜಂಟರು ಮತ್ತು ಶೋ ಬುಕ್ ವ್ಯಾಪಾರಿಗಳು,

ಕೊಡಿಯಾಲಬೈಲು, ಮಂಗಳೂರು.

ಉಡುಪಿ ನವಭಾರತ ಪುಸ್ತಕ ಭಂಡಾರದಲ್ಲಿಯೂ ಮಾರಾಟಕ್ಕಿವೆ.

ಗೀತೆಯ ಕೈಗನ್ನಡಿ

0—12—0

ನವಯುಗ ಪ್ರೆಸ್, ಉಡುಪಿ.

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.

ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ

ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,

ತೆಂಕಪೇಟೆ, ಉಡುಪಿ ದ. ಕನ್ನಡ.

ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.

SRI GAJANANA CLOTH STORES,

TENKAPET, UDIPI, S. KANARA.

ಕುಟುಂಬ ಯೋಜನೆಯ ಆಂದೋಲನ

(೩ನೇ ಪುಟದಿಂದ)

ಅದು ಅತ್ಯಾವಶ್ಯಕವಾದ ವಿಧಾನ. ನಮ್ಮ ಹಳ್ಳಿಯ ದಂಪತಿಗಳೂ ತಾಯಂದಿರೂ ಇದನ್ನು ರೂಢಿಸಿಕೊಳ್ಳುವುದು ಹೇಗೆ ಎಂಬುದೇ ನಿಜವಾದ ಪ್ರಶ್ನೆ.

ಗರ್ಭ ನಿರೋಧಕ ಸಲಕರಣೆಗಳು ಪೇಟೆಯಲ್ಲಿ ದೊರಕುತ್ತವೆ; ಆದರೆ ಅವನ್ನು ಬಳಸಿಕೊಳ್ಳುವಷ್ಟು ಜ್ಞಾನ ಮತ್ತು ಹಣದ ಬಲ ಹಳ್ಳಿಯ ಸಂಸಾರಿಗರಿಗಿಲ್ಲ. ಭಾರತ ಸರಕಾರಕ್ಕೆ ತಿಳಿಯದ ವಿಷಯ ಇದಲ್ಲ–ಆದದರಿಂದಲೇ ಅದು ತೀರ ಸರಳವಾದ ಮತ್ತು ವಿಶೇಷ ವೆಚ್ಚವೇನೂ ತಗಲದ ಗರ್ಭನಿರೋಧಕ ಸಾಧನದ ಸಂಶೋಧನೆಗಾಗಿ ವಿಜ್ಞಾನಿಗಳನ್ನು ಒತ್ತಾಯಿಸುತ್ತಿದೆ.

ಆಗಾಗ್ಗೆ ಒಡಲೊಳಗೆ ತೆಗೆದುಕೊಳ್ಳುವುದರಿಂದ ಗರ್ಭನಿರೋಧವಾಗಬಹುದಾದ ಔಷಧವನ್ನು ಕಂಡುಹಿಡಿಯುವುದು ಸಾಧ್ಯವಾದರೆ ಈ ಸಮಸ್ಯೆ ಪರಿಹಾರವಾದಂತೆಯೇ ಎಂದು ಹೇಳಲಾಗುತ್ತದೆ. ಭಾರತ ಸರಕಾರವೂ ಈ ಆಸೆಯನ್ನು ಹೊಂದಿದೆ. ಮೊದಲನೇ ಯೋಜನೆಯಲ್ಲಿ ಈ ವಿಷಯದ ಸಂಶೋಧನೆಗಾಗಿಯೂ ಕುಟುಂಬ ಯೋಜನೆಯನ್ನು ಜನಪ್ರಿಯಗೊಳಿಸಲಿಕ್ಕಾಗಿಯೂ ಅದು ೭೫ ಲಕ್ಷ ರೂಪಾಯಿಗಳ ಕಾರ್ಯಕ್ರಮವನ್ನು ನಿರ್ವಹಿಸಿತು; ಈಗ ಎರಡನೇ ಯೋಜನೆಯ ಅವಧಿಯಲ್ಲಿ ೫ ಕೋಟಿ ರೂಪಾಯಿಯನ್ನು ಇದಕ್ಕಾಗಿ ಮೀಸಲಿಡಲಾಗಿದೆ.

ಮಧ್ಯಮ ವರ್ಗದವರೂ ಶ್ರೀಮಂತರೂ ಈ ಸಂಶೋಧನೆಗಳ ಫಲಿತಾಂಶವನ್ನು ಕಾಯ್ದು ಕುಳಿತಿರಬೇಕಾಗಿಲ್ಲ—ಏಕೆಂದರೆ ಇನ್ನು ಮಕ್ಕಳನ್ನು ಹೆರುವುದು ಸಾಕೆಂಬುದೇ ಕುಟುಂಬ ಯೋಜನೆಯ ಉದ್ದೇಶವಲ್ಲ. ಇಪ್ಪತ್ತು ವರ್ಷಗಳ ಅವಧಿಯಲ್ಲಿ ಹತ್ತು ಮಕ್ಕಳನ್ನು ಹೆರುವ ಬದಲು, ಮೂರೋ-ನಾಲ್ಕೋ ಮಕ್ಕಳನ್ನು ಮಾತ್ರ ಹೆರುವುದು, ಎರಡು ಮಕ್ಕಳ ಜನನದ ಮಧ್ಯಾವಧಿಯು ೫ ವರ್ಷಗಳಾದರೂ ಇರುವಂತೆ ಮಾಡುವುದು, ಸಂತಾನದ ಹಾಗು ತಾಯಿಯ ಶ್ರೇಯಸ್ಸಿಗೆ ಹಿತಕರವಾದ ವಿಷಯ. ಆದುದರಿಂದ ತಮಗೆ ಸಾಧ್ಯವಾದ ರೀತಿಯಲ್ಲಿ ಈ ಉದ್ದೇಶಕ್ಕಾಗಿ ವ್ಯವಸ್ಥೆ ಏರ್ಪಡಿಸಿಕೊಳ್ಳುವುದು ಅಪೇಕ್ಷಣೀಯ.

ತಜ್ಞ ವೈದ್ಯರ ಸಲಹೆಯನ್ನು ಪಡೆದರೆ, ದಂಪತಿಗಳಿಗೆ ಈ ಸಮಸ್ಯೆಗೆ ಸುಲಭವಾದ ಪರಿಹಾರ ದೊರಕುತ್ತದೆ. ಆಂಗ್ಲ ಭಾಷೆಯಲ್ಲಿ ವಿದ್ವಾಂಸರಾದ ವೈದ್ಯರೂ ಸಾಮಾಜಿಕ ಕಾರ್ಯಕರ್ತರೂ ಈ ವಿಷಯದಲ್ಲಿ ಗ್ರಂಥಗಳನ್ನು ಬರೆದು ಸಫಲವಾಗುವ ಉತ್ತಮ ಉಪಾಯಗಳನ್ನು ವಿವರಿಸಿದ್ದಾರೆ ಇವುಗಳ ಅಧ್ಯಯನವೂ ಅನುಷ್ಠಾನವೂ ಪ್ರಯೋಜಕವಾದೀತು ಅಂತೂ, ಕುಟುಂಬ ಯೋಜನೆಯು ತಾತ್ಸಾರದ, ಸಂಕೋಚಪಡಬೇಕಾದ, ನಾಚಿಕೊಳ್ಳಬೇಕಾದ ವಿಷಯವಾಗಿ ಇಂದು ಉಳಿದಿಲ್ಲ: ರಾಷ್ಟ್ರೀಯ ಆವಶ್ಯಕತೆಯ ವಿಷಯ ಅದು!

ಹೆಚ್ಚುತ್ತಿರುವ ಜನಸಂಖ್ಯೆಯನ್ನು ನಿಯಂತ್ರಣದಲ್ಲಿಡಲು ಕುಟುಂಬಯೋಜನೆಯೊಂದೇ ಸಾಧುವಾದ ಮಾರ್ಗವೆ? ಬೇರೆ ಬಗೆಯಿಲ್ಲವೆ? ಎಂಬ ಪ್ರಶ್ನೆಗಳು ಬರಬಹುದು. ಜನರು ಉಗ್ರ ಬ್ರಹ್ಮಚರ್ಯವನ್ನು ಆಚರಿಸಿದರೆ ಸಂತಾನೋತ್ಪಾದನೆಯ ಸಂಭವವೇ ಇಲ್ಲ! ಆದರೆ ಇದು ಎಷ್ಟುಮಂದಿಗೆ ಸಾಧ್ಯವಾಗುವ ಮಾತು? ಸ್ತ್ರೀ ಪುರುಷರ ಸಹಜ ಪ್ರವೃತ್ತಿಗಳಲ್ಲಿ ಪರಸ್ಪರ ಸಹವಾಸ, ಸಮಾಗಮ ಮತ್ತು ಸಂತಾನಾಭಿಲಾಷೆ ಅತ್ಯಂತ ಪ್ರಬಲವಾದುದಾಗಿದೆ. ಅದನ್ನು ದಮನಿಸಿರಿ ಎಂದು ಹೇಳುವಷ್ಟು ಸುಲಭದಲ್ಲಿ ಕೆಲಸವಾಗದು.

ಮದುವೆಯ ವಯಸ್ಸನ್ನು ಆದಷ್ಟು ಮುಂದೆ ಹಾಕಿದರೆ, ಹುಟ್ಟುವ ಮಕ್ಕಳ ಸಂಖ್ಯೆಯು ಕಡಿಮೆಯಾದೀತೆಂಬುದೊಂದು ಸಲಹೆ ಇದೆ: ಗಂಡಸರು ೩೦ ವರ್ಷಗಳಾಗುವ ವರೆಗೆ, ಹೆಂಗಸರು ೨೫ ವರ್ಷವಾಗುವ ವರೆಗೆ, ಮದುವೆಯಾಗ ಕೂಡದು. ಈಗ ತಿಳಿದಿರುವಂತೆ ಹೆಂಗಸರು ೨೫ ವರ್ಷ ಪ್ರಾಯಕ್ಕೆ ಮುಂಚೆ ಹೆರುವ ಮಕ್ಕಳೇ ಹೆಚ್ಚು! ಮದುವೆ ಮುಂದರಿದರೆ, ಹೆರುವ ಮಕ್ಕಳ ಸಂಖ್ಯೆ ಸಹಜವಾಗಿಯೇ ಕಡಿಮೆಯಾಗುತ್ತದೆ ಎಂಬುದು ಈ ಸಲಹೆಯ ಸಾರ.

ಇದು ಉಪಯುಕ್ತವಾದ ಸಲಹೆಯಾಗಿ ತೋರುವುದೇನೋ, ನಿಜ. ಆದರೆ, ಮದುವೆ ಇಲ್ಲವೆಂದ ಮಾತ್ರಕ್ಕೆ ಸಹಜ ಪ್ರವೃತ್ತಿಯೂ ಉದಾತ್ತೀಕರಣವನ್ನು ಹೊಂದುವುದೆ? ಅದು ಅಡ್ಡ ದಾರಿಯನ್ನು ಹಿಡಿದು ಸಾಗಿದರೆ ಇದಕ್ಕಿಂದ ಘೋರವಾದ ಅಕೃತ್ಯ ಬೇರೆ ಇರಲಾರದು. ಪಾಶ್ಚಾತ್ಯ ದೇಶಗಳ ಅನುಭವವು ಇಂಥ ಅಕೃತ್ಯಗಳು ಹೆಚ್ಚುತ್ತಿರುವುದನ್ನೆ ತೋರಿಸುತ್ತಿವೆ. ಭಾರತದಲ್ಲಿ ನೀತಿ ಮತ್ತು ಭಯಗಳ ಪ್ರಾಬಲ್ಯ ಇನ್ನೂ ನಶಿಸಿಲ್ಲ: ಆದುದರಿಂದ ಮದುವೆಯನ್ನು ಮುಂದೂಡುವ ಸಾಮೂಹಿಕ ಪ್ರಯತ್ನದಿಂದ ಮೊದಮೊದಲು ಲಾಭವೆನಿಸಬಹುದು; ಆದರೆ ಕೆಲವು ದಶಕಗಳ ಬಳಿಕ, ಅಪರಾಧ ಸಹಸ್ರಗಳಿಗೆ ಎಡೆಯಾದೀತೆಂಬುದೇ ಈ ಸಲಹೆಯಲ್ಲಿರುವ ಸಂಶಯದ ಅಂಶ.

ಕುಟುಂಬ ಯೋಜನೆಯು ಅಸಾಧ್ಯವೆನಿಸುವುದೇನನ್ನೂ ಒಳಗೊಂಡಿಲ್ಲ ಜನರೆಲ್ಲರೂ ಬಯಸುವ ಅನುಕೂಲತೆಗಳನ್ನೆ ಅದು ಒದಗಿಸುತ್ತದೆ. ಗರ್ಭನಿರೋಧಕದ ಸಾಧನಗಳು ಬಹಳ ಅಗ್ಗದಲ್ಲಿ ದೊರೆತರೆ ಮತ್ತು ಅವುಗಳ ಉಪಯೋಗದ ಕುರಿತು ತೀವ್ರ ಪ್ರಚಾರವೂ ನಡೆದು ಯೋಗ್ಯ ಶಿಕ್ಷಣ ಕೊಡಲ್ಪಟ್ಟರೆ. ಕುಟುಂಬ ಯೋಜನೆಯು ನಿಜಕ್ಕೂ ಜನಪ್ರಿಯವಾಗಬಲ್ಲುದು.

ಮಹಿಳೆಯರು ಇಂದು ಸಂಶೋಧನ ನಿರತರಾಗಿದ್ದಾರೆ. ತೀವ್ರಾಸಕ್ತಿಯುಳ್ಳ ಈ ಮಹಿಳೆಯರು ಕುಟುಂಬ ಯೋಜನೆಯ ಧ್ಯೇಯವನ್ನು ಸಾಧಿಸಿ ಕೊಡಬಲ್ಲ ಅಗ್ಗದ ಉಪಾಯವನ್ನು ಕಂಡು ಹಿಡಿಯುವುದರಲ್ಲಿ ಹಿಂದುಳಿಯರೆಂದು ನಂಬಬಹುದು.

ಸದ್ಯಕ್ಕೆ ಕೆಲವು ಬಗೆಯ ಚೀಲಗಳನ್ನು ವೈದ್ಯರ ಸಲಹೆ ಪಡೆದು ಗರ್ಭನಿರೋಧಕದ ರೂಪದಲ್ಲಿ ಅತ್ಯಂತ ಯಶಸ್ವಿಯಾಗಿ ಬಳಸಲಾಗುತ್ತದೆ. ಇದಕ್ಕೆ ಸ್ವಲ್ಪ ಖರ್ಚು ಬೇಕು; ಮತ್ತು ಪೂರ್ವಸಿದ್ಧತೆಯೂ ಬೇಕು. ಈ ವಿಧಾನಕ್ಕಿಂತಲೂ ಹೆಚ್ಚು ಸುಲಭವಾದುದೆಂದರೆ ನೊರೆಕಾರುವ ಮಾತ್ರೆಗಳ ಬಳಕೆ. ಇದು ತೀರ ಸರಳವಾದ ಗರ್ಭನಿರೋಧಕದ ಸಾಧನವಾಗಿದ್ದು ಎಲ್ಲರ ಗಮನವನ್ನು ಆಕರ್ಷಿಸಲು ಯೋಗ್ಯವಾಗಿದೆಯೆಂದು ಹೇಳಲಾಗುತ್ತದೆ.

ಗರ್ಭನಿರೋಧಕ ಸಾಧನಗಳಿಗೆ ಹಾಕಲು ಹಣವಿಲ್ಲದವರು ಮತ್ತು ಮನುಷ್ಯನು ಆತ್ಮಸಂಯಮಿಯಾಗಿರಬಹುದು ಎನ್ನುವವರು ಮಧ್ಯವರ್ತಿಯಾದ ಉಪಾಯವೊಂದನ್ನು ಅನುಸರಿಸಬಹುದು: ಇದೇ ಋತುಚಕ್ರ ಪದ್ಧತಿಯ ಅನುಷ್ಠಾನ. ಕ್ರಮಪ್ರಕಾರ ಮುಟ್ಟಾಗುವ ಹೆಂಗಸಾದರೆ, ಅವಳು ಮುಟ್ಟಾಗಲಿರುವ ತಾರೀಕಿಗಿಂತ ೧೪ ದಿನ ಮೊದಲು ಗರ್ಭಧಾರಣೆಗೆ ಅನುಕೂಲವಾದ ರಜೋಪಿಂಡದ ಸೃಷ್ಟಿಯಾಗುವುದೆಂದೂ ಇದಕ್ಕೆ ಹಿಂದು ಮುಂದಿನ ನಾಲ್ಕುದಿನಗಳಲ್ಲಿ ಅವಳೊಡನೆ ಸಮಾಗಮಿಸಿದರೆ ಗರ್ಭನಿಲ್ಲುವುದೆಂದೂ ಹಾಗೆ ಸಮಾಗಮಿಸದಿರುವುದೇ ಗರ್ಭನಿಲ್ಲುವ ಸಂಭವವನ್ನು ಕಡಿಮೆಮಾಡುವ ವಿಧಾನವೆಂಬೂ ತಿಳಿದುಬಂದಿದೆ. ಇದು ಸಂಪೂರ್ಣ ಫಲಕಾರಿಯಾದ ವಿಧಾನವಲ್ಲ—ಆದರೂ ತೀರ ಸೌಮ್ಯವಾದ ಉಪಾಯ.

ಸಂತಾನೋತ್ಪಾದನೆ ಬೇಡವೆಂದು ತೋರಿದ ಗಂಡಸನ್ನೂ ಹೆಂಗಸನ್ನೂ ಶಸ್ತ್ರಕ್ರಿಯೆಯಿಂದ ನಿರ್ವೀರ್ಯರನ್ನಾಗಿ ಮಾಡಬಹುದು. ಆದರೆ ಗಂಡಸರನ್ನು ನಿರ್ವೀರ್ಯರಾಗಿ ಮಾಡುವುದರಿಂದ ಅವರಿಗೆ ಮಾನಸಿಕ ಆಘಾತವಾಗುವುದುಂಟು; ಆದುದರಿಂದ ಮಕ್ಕಳು ಬೇಡವೆನ್ನುವ ಹೆಂಗಸನ್ನೆ ನಿರ್ವೀರ್ಯಗೊಳಿಸುವುದು ಲೇಸೆಂದು ವೈದ್ಯರ ಅಭಿಪ್ರಾಯವಾಗಿದೆ.

ಹುಟ್ಟುವ ಮಕ್ಕಳು ಕ್ಷೀಣಕಾಯರೂ ರೋಗಿಗಳೂ ಅಂಗವಿಕಲರೂ ಬುದ್ಧಿಮಾಂದ್ಯರೂ ಚಿತ್ತಭ್ರಮಣರೂ ಆಗಿರದಂತೆ ನೋಡಿಕೊಳ್ಳುವುದಕ್ಕಾಗಿ ಈ ವಿಕಾರಗಳಿಂದ ಕೂಡಿದ ಸ್ತ್ರೀ ಪುರುಷರೆಲ್ಲರನ್ನೂ ನಿರ್ವೀರ್ಯಗೊಳಿಸಬೇಕೆಂದು ಚಳವಳ ನಡೆದಿದೆ. ನಮ್ಮ ರಾಜ್ಯ ಸಭೆಯಲ್ಲಿ ಕುಟುಂಬ ಯೋಜನೆಯ ದೊಡ್ಡ ಪ್ರತಿಪಾದಕರಾದ ಲೇಡಿ ಧನ್ವಂತಿರಾಮರಾಯರು ಈ ಆಶಯದ ಖಾಸಗಿ ಗೊತ್ತುವಳಿಯೊಂದನ್ನು ಕೆಲವು ಸಮಯದ ಹಿಂದೆ ಮಂಡಿಸಿದ್ದರು. ಆದರೆ ಸರಕಾರವು ಅದನ್ನು ಈಗಲೇ ಒಪ್ಪಿಕೊಳ್ಳುವಷ್ಟು ಕ್ರಾಂತಿಕಾರಿ ಹೆಜ್ಜೆಯನ್ನಿಡಲಿಲ್ಲ. ಜನರೇ ತಂತಮ್ಮ ವ್ಯಕ್ತಿಗತ ಅನುಕೂಲತೆ ಮತ್ತು ಒಲವುಗಳಿಗನುಸಾರ ನಡೆಯಲಿ ಎಂದದು ಆಗ ಹೇಳಿತು.

ಶಾಸನವೊಂದು ರಚಿತವಾದರೆ ಅದು ಕಡ್ಡಾಯವಾಗಿ ವಿಧೇಯತೆಯನ್ನೂ ಅನುಷ್ಠಾನವನ್ನೂ ಬಯಸುತ್ತದೆ. ಜನರು ಮುಂದೆ ಬರಬಹುದಾದ ಶಾಸನದ ಆಶಯವನ್ನು ಈಗಲೇ ತಿಳಿದುಕೊಂಡು, ಅದಕ್ಕೆ ಅನುಗುಣವಾದ ವ್ಯವಹಾರವನ್ನು ಇಟ್ಟುಕೊಳ್ಳಲು ಪ್ರಯತ್ನಿಸುವುದು ಯಾವಾಗಲೂ ಹಿತಕರ. ಕುಟುಂಬ ಯೋಜನೆಯ ಆಂದೋಲನವನ್ನು ಈ ದೃಷ್ಟಿಯಿಂದ ನೋಡೋಣ!

ನಿಮ್ಮ ಚಂದಾಹಣ ಬಾಕಿ ಇದೆಯೆ? ನಮ್ಮ ವಿನಂತಿಯಂತೆ ಅದನ್ನು ಬೇಗನೆ ಕಳುಹಿಸಿ ಸಹಕರಿಸುವಿರಾ?

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ**.

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಬ್ರೋಲೆಟ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—8—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66



ಮರಣ ದಂಡನೆಯು ಉಳಿಯಬೇಕೆ, ಬೇಡವೆ?

(೩ನೇ ಪುಟದಿಂದ)

ಮರಣದಂಡನೆಯನ್ನು ರದ್ದುಪಡಿಸಿದರೆ ನ್ಯಾಯದೇವತೆಯ ಕೊಲೆಯಾಗುವುದೆಂದು ಹೇಳುವಷ್ಟು ಈ ವಾದವು ಪ್ರಬಲವಾಗಿದೆ.

ಬ್ರಿಟನಿನ ಸರಕಾರಿ ಅಭಿಪ್ರಾಯಾನುಸಾರ, ಮರಣದಂಡನೆಯನ್ನು ಉಳಿಸಿಕೊಳ್ಳಲೇಬೇಕೆಂಬುದಕ್ಕೆ ಎರಡು ಕಾರಣಗಳಿವೆ: ಒಂದನೆಯದಾಗಿ, ಮರಣದಂಡನೆಯ ಭಯವು ಕೊಲೆಪಾತಕವನ್ನು ಮಾಡುವ ಹವ್ಯಾಸದಿಂದ ಮನುಷ್ಯನನ್ನು ಬಹಳಷ್ಟು ಸಂದರ್ಭಗಳಲ್ಲಿ ತಡೆದು ಹಿಡಿಯುತ್ತದೆ. ಬ್ರಿಟನಿನಲ್ಲಿ ನೇಮಕವಾದ ರಾಜ ಸಮಿತಿಯೊಂದರ ಮುಂದೆ ಸಾಕ್ಷಿಯನ್ನಿತ್ತ ಎಲ್ಲ ನ್ಯಾಯಾಧೀಶರೂ ಪೋಲೀಸು ಅಧಿಕಾರಿಗಳೂ ಇದನ್ನು ಸಮರ್ಥಿಸಿದ್ದಾರೆ.

ಎರಡನೆಯದಾಗಿ, ಮರಣ ದಂಡನೆಯನ್ನು ರದ್ದುಪಡಿಸಿದರೆ, ಮುಂದೆ ಕೊಲೆಪಾತಕದಂತಹ ಉಗ್ರವಾದ ಘಾತಕ ಕೃತ್ಯಗಳಿಗೆ ವಿಧಿಸಬಹುದಾದ ಶಿಕ್ಷೆ ಏನು? "ದೇಹಾಂತದ ವರೆಗೆ ಸೆರೆಮನೆ" ಎಂಬುದು ಈಗಿನ ಉತ್ತರ; ಆದರೆ ಈ "ಜೀವದಾನ"ದಿಂದ ಯಾರಿಗೇನು ಲಾಭ? ಸರಕಾರದ ದೃಷ್ಟಿಯಿಂದ ನೋಡಿದರೆ, ಇವರಿಗೆಲ್ಲ ಸೆರೆಮನೆಯ ಕೋಣೆಗಳನ್ನು ಕಾಯ್ದಿರಿಸುವುದು ತುಂಬ ಕಷ್ಟದ ಕೆಲಸ.

ಹತ್ತು ಹದಿನೈದು ವರ್ಷ ಕಾಲ ಕಾರಾಗಾರ ವಾಸದ ಶಿಕ್ಷೆಯನ್ನು ಅನುಭವಿಸಗೊಟ್ಟು ಆ ಬಳಿಕ ಬಿಡುಗಡೆಮಾಡಬಹುದು, ನಿಜ. ಆದರೆ ಇಷ್ಟು ದೀರ್ಘಕಾಲ ಸೆರೆಮನೆಯಲ್ಲಿದ್ದಾತನು ಹೊರಗಿನ ಪ್ರಪಂಚದಲ್ಲಿ ಸಾಮಾನ್ಯ ನಾಗರಿಕನ ಜೀವನ ವ್ಯವಹಾರಗಳಲ್ಲಿ ನಿರತನಾಗಲಾರನೆಂದು ತಜ್ಞರು ಸಂಶೋಧನೆಯಿಂದ ಕಂಡು ಕೊಂಡಿದ್ದಾರೆ. ಇದರಿಂದ, ಒಂದು ದಶಕಕ್ಕಿಂತಲೂ ಹೆಚ್ಚು ಉದ್ದದ ಅವಧಿಯ ಸೆರೆಮನೆವಾಸವು ಕೈದಿಯಲ್ಲಿ ಉಳಿದಿರಬಹುದಾದ ತಿಲಾಂಶ ಮನುಷ್ಯತ್ವವನ್ನು ಸಹ ನಶಿಸಿಬಿಡುತ್ತದೆ ಎಂದಂತಾಯಿತು.

ಇವೆಲ್ಲ ತೊಂದರೆಗಳನ್ನು ನಿವಾರಿಸಲು ಸುಲಭ ಉಪಾಯವೆಂದರೆ, ಮರಣದಂಡನೆ! ನ್ಯಾಯದರ್ಶಿಗಳ ಅಭಿಪ್ರಾಯವನ್ನು ಕೇಳಿತಿಳಿದ ತರುವಾಯ ನ್ಯಾಯಾಧೀಶರು ಪಂಜರದಲ್ಲಿ ಪೋಲೀಸು ಪಹರೆಯೊಡನೆ ನಿಂತಿರುವ ಕೊಲೆಪಾತಕಿಯನ್ನು ಉದ್ದೇಶಿಸುತ್ತಾ "ಕೊಲೆಯ ಪಾತಕ ಮಾಡಿರುವಿ ಎಂದೀಗ ಖಚಿತವಾಗಿರುವುದರಿಂದ, ಕಂಠಪಾಶದಿಂದ ನೀನು ಸಾಯಬೇಕೆಂಬುದೇ ಈ ಕೋರ್ಟಿನ ತೀರ್ಮಾನ" ಎಂದರೆ ಸಾಕು—ಮುಂದಿನದೆಲ್ಲವೂ ಸುಲಭ!

ಕೊರಳಿಗೆ ನೇಣು ಹಾಕಿ ಸಾಯಿಸುವ ಕೆಲಸಕ್ಕೆ ಹೆಚ್ಚೆಂದರೆ ೨೦-೨೫ ಕ್ಷಣಗಳು ಸಾಕೆಂದು ಬ್ರಿಟನಿನ ಸಮಿತಿಯ ಮುಂದೆ ಇದೇ ಉದ್ಯೋಗದಲ್ಲಿ ನಿರತನಾದ ತಜ್ಞ ಹೇಳಿಕೆಯಿತ್ತಿದ್ದಾನೆ! ಮರಣದಂಡನೆಗೆ ಗುರಿಯಾದವರಲ್ಲಿ ೯೯% ಜನರು ಪ್ರಸನ್ನಚಿತ್ತರಾಗಿಯೇ ಮೃತ್ಯುದೇವತೆಯನ್ನು ಸ್ವಾಗತಿಸಿದ್ದಾರೆಂದು ಹೇಳಲಾಗಿದೆ—ಮಹಿಳೆಯರೂ ಇದಕ್ಕೆ ಅಪವಾದವಲ್ಲವೆಂಬುದು ಆಶ್ಚರ್ಯ!

ನೇತಾಡಿಸುವುದಕ್ಕಿಂತ ಸುಲಭದ ರೀತಿಯಲ್ಲಿ ಮರಣ ದಂಡನೆಯನ್ನು ನಿರ್ವಹಿಸುವುದು ಇನ್ನೂ ಸಾಧ್ಯವಾಗಿಲ್ಲ ಎನ್ನಲಾಗಿದೆ. ಸೆರೆಮನೆ ವೈದ್ಯರಿಗನುಸಾರ, ಇದು ತೀರ ಸುಲಭವೂ ಶೀಘ್ರ ಪರಿಣಾಮಕಾರಿಯೂ ಆದ ವಿಧಾನ; ಕೈದಿಗೆ ಇದರಿಂದಾಗುವ ಮಾನಸಿಕ ಕ್ಲೇಶವು ಅತ್ಯಲ್ಪ.

ವಿದ್ಯುತ್ತಿನ ಕುರ್ಚಿಯಲ್ಲಿ ಕುಳ್ಳಿರಿಸಿ, ವಿದ್ಯುತ್ಪ್ರವಾಹದ ಮೂಲಕ ಕೊಲ್ಲುವುದಾಗಲೀ ಗ್ಯಾಸಿನ ಕೋಣೆಯಲ್ಲಿ ಕುಳ್ಳಿರಿಸಿ ಮರಣವನ್ನಪ್ಪುವಂತೆ ಮಾಡುವುದಾಗಲೀ ಬೇಗನೆ ಫಲಕಾರಿಯಾಗುವ ವಿಧಾನವಲ್ಲ; ಅಲ್ಲದೆ ಅದು ತೀರ ಭಯಂಕರ. ಮೃತ್ಯುವನ್ನೇ ತರುವಷ್ಟು ಪ್ರಭಾವಶಾಲಿಯಾದ ಅಮಲು ಪದಾರ್ಥಗಳನ್ನು ಇಂಜೆಕ್ಷನಿನ ಮೂಲಕ ಕೈದಿಗೆ ಚುಚ್ಚಿ ಸಾಯಿಸುವುದಂತೂ ತಜ್ಞ ವೈದ್ಯರಿಗಷ್ಟೇ ಸಾಧ್ಯವಾಗುವ—ಮತ್ತು ಕೈದಿಯ ಸಹಕಾರವು ತೀರ ಅವಶ್ಯಕವಾದ—ವಿಧಾನ ಎನ್ನಲಾಗಿದೆ.

ಗಲ್ಲಿಗೇರಿಸಿ ಕೊಲ್ಲುವುದು ಉಳಿದ ವಿಧಾನಗಳಿಗಿಂತ ಎಷ್ಟೇ ಸುಲಭವಾದುದಾಗಿರಲಿ, ಈ ಇಪ್ಪತ್ತನೇ ಶತಮಾನದಲ್ಲಿಯೂ ನಮಗೆ ಮರಣ ದಂಡನೆ ಬೇಕೆ ಎಂಬ ಪ್ರಶ್ನೆಗೆ ಅದು ಉತ್ತರವೆನಿಸಲಾರದು. ಸಾರ್ವಜನಿಕ ಅಭಿಪ್ರಾಯವು ಕೊಲೆಪಾತಕಿಗಳೊಡನೆ ಸಹ ಸಹಾನುಭೂತಿಪರವಾದ ವರ್ತನೆಯು ಅಪೇಕ್ಷಣೀಯವೆನ್ನುವ ಕಡೆಗೆ ವಾಲುತ್ತಿರುವಂತೆ ಕಾಣುತ್ತಿದೆ.

ದಂಡನೆ—ಸುಧಾರಣೆ ಎಂಬ ಎರಡು ಪ್ರಾಮುಖ್ಯ ವಿಷಯಗಳ ನಡುವೆ ಈಗ ಸ್ಪರ್ಧೆ ನಡೆದಿದೆ. ಯುರೋಪಿನಲ್ಲಿ ಈಗ ಮರಣದಂಡನೆಯು ಶಾಸನವಿರುವುದು ಕೇವಲ ಎರಡು ದೇಶಗಳಲ್ಲಿ—ಬ್ರಿಟನ್, ಮತ್ತು ಫ್ರಾನ್ಸ್! ಅಪರಾಧಗಳ ನಿಯಂತ್ರಣಕ್ಕೆ ದಂಡನೆಯೇ ತುಂಬ ಸಹಾಯಕ ಎನ್ನುತ್ತಿರುವವರು ಸುಧಾರಣೆಯ ಆಂದೋಲನದ ಬಿರುಗಾಳಿಗೆ ಇಂದು ಸಿಲುಕಿದ್ದಾರೆ.

ಮರಣದಂಡನೆಯನ್ನು ರದ್ದುಪಡಿಸಿದ ಐರೋಪ್ಯ ರಾಷ್ಟ್ರಗಳಲ್ಲಿ ಕೊಲೆಪಾತಕದಂತಹ ಘೋರ ಅಪರಾಧಗಳು ಹಿಂದಿಗಿಂತ ಹೆಚ್ಚಾಗಿಲ್ಲವೆಂಬುದನ್ನು ಸುಧಾರಕರು ಅಂಕೆ-ಸಂಖ್ಯೆಗಳ ಆಧಾರ ಸಹಿತವಾಗಿ ತೋರಿಸುತ್ತಿದ್ದಾರೆ.

ಹಿಂದಿನ ಕಾಲದಲ್ಲಿದ್ದ ಬಹಿರಂಗವಾಗಿ ಗಲ್ಲಿಗೇರಿಸುವ ಪದ್ಧತಿಯಿಂದ ಪೌರರು ಮೋಜು ಪಡೆಯುತ್ತಿದ್ದರಂತೆ-ಈಗ ಗಲ್ಲಿಗೇರಿಸುವ ಕಾರ್ಯಕ್ರಮವು ಅಧಿಕಾರಿವರ್ಗದ ನಾಲ್ಕಾರು ಮಂದಿಯ ಮುಂದೆಯಷ್ಟೇ ನಡೆಯುತ್ತದೆ. ಆದಾಗ್ಯೂ ಮರಣ ದಂಡನೆಗೆ ಗುರಿಪಡಿಸಿದೆವೆಂಬ ಹೆಗ್ಗಳಿಕೆಯಾದರೂ ಪೋಲೀಸರ ಪಾಲಿಗೆ ಉಳಿಯುತ್ತದೆ! ಅದಕ್ಕೂ ಅವಕಾಶವಿಲ್ಲದ ದೆಸೆಯಿಂದ ಕೊಲೆಪಾತಕಗಳ ಪತ್ತೆ ನಿಧಾನವಾಗಿ ಹೋಗಿದೆಯೊ ಏನೊ, ಮರಣ ದಂಡನೆಯಿಲ್ಲದ ದೇಶಗಳಲ್ಲಿ!—ಎಂದು ಆಕ್ಷೇಪಿಸುವವರು ಇಲ್ಲದಿಲ್ಲ.

ಕೊಲೆಪಾತಕಕ್ಕೂ ಮರಣ ದಂಡನೆಗೂ ಸಂಬಂಧವಿಲ್ಲ ಎಂದು ಸಹ ಹೇಳಲಾಗುತ್ತದೆ. ಅಮೇರಿಕದ ಪೆನ್ಸಿಲ್ವೇನಿಯ ವಿಶ್ವವಿದ್ಯಾನಿಲಯದ ಪ್ರೊಫೆಸರ್ ಥೋರ್ಸ್ಟನ್ ಸೆಲ್ಲಿನ್ ಈ ಸಂಬಂಧದ ಸಕಲ ಶೋಧನೆಗಳನ್ನು ಜಾಗತಿಕ ತಳಹದಿಯ ಮೇಲೆ ನಡೆಸಿದ ಬಳಿಕ "ಯಾವುದೇ ಸಮಾಜದಲ್ಲಿ ಆಗುವ ಕೊಲೆಪಾತಕದ ಮೇಲೆ ಮರಣ ದಂಡನೆಯ ಭಯ ಅಥವಾ ಅದರ ಅಭಾವ ಪರಿಣಾಮ ಮಾಡುವುದೆಂದು ಹೇಳಲಾಗದೆಂದೇ ನನ್ನ ಉಚಿತ ಅಭಿಪ್ರಾಯ" ಎಂದಿದ್ದಾರೆ.

ವೈದ್ಯಕೀಯ ತಜ್ಞರು ಮರಣ ದಂಡನೆಯು ಭೀಕರ ಅಪರಾಧಗಳನ್ನು ಮಾಡುವುದರಿಂದ ಮನುಷ್ಯನನ್ನು ತಡೆಗಟ್ಟುವುದೆಂಬ ಸಿದ್ಧಾಂತದ ವೈಜ್ಞಾನಿಕ ಪರೀಕ್ಷೆ ಅತ್ಯಾವಶ್ಯಕವಾಗಿ ನಡೆಯಬೇಕಾಗಿದೆ ಎನ್ನುತ್ತಾರೆ. ಅವರು ಮುಂದೊತ್ತುವ ಇನ್ನೊಂದು ಅಭಿಪ್ರಾಯವು ಇದಕ್ಕಿಂತಲೂ ಹೆಚ್ಚು ಮಹತ್ವಪೂರ್ಣವಾಗಿದೆ — ಅದು ಅಪರಾಧಿಗಳನ್ನು ಕಾಣುವ ದೃಷ್ಟಿಕೋನವೇ ಇಂದು ಬದಲಾಗಬೇಕು ಎನ್ನುತ್ತದೆ. ಅದಕ್ಕಿಂತ ಕಡಿಮೆ ಮಟ್ಟದ ಸುಧಾರಣೆ ಸಾಕಾಗದು!

ವೈದ್ಯಕೀಯ ವಿಜ್ಞಾನವು ಕಳೆದ ಹತ್ತೈವತ್ತು ವರ್ಷಗಳಲ್ಲಿ ಹೊಂದಿದ "ಪ್ರಗತಿ"ಯ ಹತ್ತರಲ್ಲಿ ಒಂದಂಶದಷ್ಟನ್ನು ಸಹ ಕಾನೂನು ವಿಭಾಗವು ಸಾಧಿಸಿಲ್ಲ ಎಂಬುದೇ ತಜ್ಞ ವೈದ್ಯರ ಮುಖ್ಯ ಆಕ್ಷೇಪ. ಕಾನೂನು ವಿಭಾಗವು ಇನ್ನೂ ಮಧ್ಯಯುಗೀನಾವಸ್ಥೆಯಲ್ಲಿರುವ ದೆಸೆಯಿಂದಲೇ ಮರಣ ದಂಡನೆಯಂತಹ ಕ್ರೂರ ಶಿಕ್ಷಾಕ್ರಮವು ರೂಢಿಯಲ್ಲಿ ಉಳಿದಿದೆ ಎಂಬಂತಿದೆ ಈ ತಜ್ಞರ ಮನೋಭಾವ.

ಸುಧಾರಕರು ಹೇಳುತ್ತಾರೆ — ಪ್ರತಿಯೊಬ್ಬ ನಾಗರಿಕನೂ ವಾತಾವರಣ ಮತ್ತು ಪರಿಸ್ಥಿತಿಯ ಕೈಗೂಸು; ಆದುದರಿಂದ ಎಲ್ಲ ಬಗೆಯ ಅಪರಾಧದ ಮೂಲವೂ ದಾರಿದ್ರ್ಯ, ಅವಿದ್ಯೆ, ಮಾನಸಿಕ ಕ್ಲೇಶಗಳಿಂದ ಉಂಟಾಗುತ್ತವೆ. ತನ್ನಂತೆಯೇ ಮನುಷ್ಯನಾದ ಇನ್ನೊಬ್ಬನ ಪ್ರಾಣಹರಣ ಮಾಡುವಷ್ಟು ಭೀಕರ ಕೃತ್ಯದಲ್ಲಿ ಮನುಷ್ಯನೊಬ್ಬ ನಿರತನಾಗುವುದು ಮಾನಸಿಕ ದೌರ್ಬಲ್ಯ ಮತ್ತಿತರ ಪರಿಸ್ಥಿತಿವಶವಾದ ಕಾರಣಗಳಿಂದ; ಆ ನಿಶಿಷ್ಟ ಕಾಲದಲ್ಲಿ ಆತನ ಸದಸದ್ವಿವೇಕವು ಸಂಪೂರ್ಣ ನಷ್ಟಗೊಂಡಿರುತ್ತದೆ.

ತನ್ನ ನಿಯಂತ್ರಣದಲ್ಲಿಲ್ಲದ ಪರಿಸ್ಥಿತಿಗೆ ಸಿಲುಕಿ ಭೀಕರ ಕೃತ್ಯಗಳನ್ನು ಗೈದಾತನನ್ನು ಶಿಕ್ಷಿಸುವ ಸಮಾಜದ ಕ್ರಮವನ್ನು ಸುಧಾರಕರು ದೂಷಿಸುತ್ತಿದ್ದಾರೆ. ಎಲ್ಲ ಅಪರಾಧಗಳ ಹೊಣೆಗಾರಿಕೆಯನ್ನು ಸಮಾಜವೇ ಹೊತ್ತುಕೊಳ್ಳಬೇಕೆಂದು ಇವರು ಒತ್ತಾಯಿಸುತ್ತಾರೆ. ಅಪರಾಧಿಗಳೆಂದರೆ ಮನೋರೋಗಿಗಳಿಗಿಂತ ಬೇರೆಯಲ್ಲ—ದೇಹಾರೋಗ್ಯ ನಷ್ಟರಾದವರನ್ನು ಹೇಗೆ ರುಗ್ಣಾಲಯದಲ್ಲಿರಿಸಿ, ಅಥವಾ ಮನೆಯಲ್ಲಿಯೇ ಮಲಗಿಸಿ, ಶುಶ್ರೂಷೆ ಮತ್ತು ಚಿಕಿತ್ಸೆ ನಡೆಸಲಾಗು

ಕುಂದಾಪುರ ಡಿ.ಮು. ಕೋರ್ಟಿನಲ್ಲಿ

R.E.P. 454/56 O.S. 219/50.

ಶಂಕ್ರನಾರಾಯಣ ಮಯ್ಯ —ಅರ್ಜಿದಾರ

ರಾಮಚಂದ್ರ ರಾಯ ಕ್ಕೊಡಾ—ಎದ್ರಿರು

1ನೇ ಎದ್ರಿಗೆ ಈ ಮೂಲಕ ತಿಳಿಸುವದೇನೆಂದರೆ.

1950ನೇ ಇಸವಿಯ ನಂಬ್ರ 219ನೇ ವ್ಯಾಜ್ಯದ ಡಿಕ್ರಿಯ ಅಮಲ್‌ಜ್ಯಾರಿ ಬಗ್ಗೆ ಅರ್ಜಿದಾರನು ಮೇಲ್ಕಂಡ ಕೋರ್ಟಿಗೆ ಅರ್ಜಿಮಾಡಿ ಕೊಂಡಿದ್ದಾನೆ. ಅದ್ದರಿಂದ ಅಮಲ್‌ಜ್ಯಾರಿಯು ಯಾಕೆ ನಡಿಸಕೂಡದು ಎಂಬುದಕ್ಕೆ ಸಬಬು ತೋರಿಸಲಿಕ್ಕೆ, ತಾರೀಕು 14-8-56 ನೇ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಜರು ಆಗಬೇಕೆಂತ ಇದರಿಂದ ನಿಮಗೆ ನೋಟೀಸು ಕೊಡೋಣಾಗುತ್ತದೆ.

B. Mahabala Holla.
Advocate for Petitioner.

ತಾ.25-7-56. ಮೊಕ್ಕಾಂ ಕುಂದಾಪುರ



ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ	2%
ಕರೆಂಟ್ ಎಕೌಂಟು	½%

THE MOOLKY BANK LTD., MULKI.

ತ್ತದೋ ಹಾಗೆಯೇ ಈ ಮನೋರೋಗಿಗಳಿಗೂ ಉಪಚಾರ ನಡೆಸಬೇಕು ಎಂಬ ನಿಲುವೇ ಇವರದು.

ಮನೋರೋಗವು ಅಪರಾಧವೆನಿಸುವಷ್ಟು ತೀವ್ರವಾಗಿದ್ದಾಗ ಅದರ ಮೂಲವನ್ನು ಗೊತ್ತುಪಡಿಸುವುದು ಸುಲಭವೆ? ದೇಹದಲ್ಲಿ ಗಾಯವಾಗಿದ್ದರೆ, ಯಾರೂ ನೋಡಬಹುದು; ಮೈ ಬೆಚ್ಚಗಾಗಿ ಜ್ವರ ಬರುತ್ತಿದ್ದರೆ, ಮುಟ್ಟಿ ತಿಳಿಯಬಹುದು—ಆದರೆ, ಎರಡನೆಯವನ ಮನೋವ್ಯಾಪಾರಗಳ ಪರಿಜ್ಞಾನವನ್ನು ಮಾಡಿಕೊಳ್ಳುವಷ್ಟು ಸಾಮರ್ಥ್ಯ ನಮಗಿನ್ನೂ ಬಂದಿಲ್ಲವಲ್ಲ! ಆದುದರಿಂದಲೇ ಅಪರಾಧಿಯ ಮನೋಭಾವನೆಯನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುವ ಪ್ರಯತ್ನವು ವಿಶೇಷ ಫಲದಾಯಕವಾಗಿಲ್ಲ.

ಈ ಪ್ರಯತ್ನಗಳು ಉಚಿತ ಫಲಿತಾಂಶವನ್ನು ಕೊಡುವ ವರೆಗೆ, ವೈದ್ಯಕೀಯ ವಿಜ್ಞಾನದ ನಿಲುವೆಯಲ್ಲಿ ಹೆಚ್ಚಿನ ವಿಶ್ವಾಸವನ್ನು ನಾವು ಇಡುವಂತಿಲ್ಲ—ಆದರೆ, ಈ ವಿಜ್ಞಾನ ವಿಭಾಗದಲ್ಲಾದ ಪ್ರಗತಿಯು ಮಧ್ಯಯುಗೀನ ನ್ಯಾಯಶಾಸ್ತ್ರದ ಹಿನ್ನೆಲೆಯಲ್ಲಿಯೇ ಅಪರಾಧವನ್ನೂ ಅಪರಾಧಿಯನ್ನೂ ನೋಡುವ ದೃಷ್ಟಿಯ ಪರಿಮಾರ್ಜನೆಗೈದಿರುವುದು ಮಾತ್ರ ಸಂಪೂರ್ಣ ಸತ್ಯ.

ಮನೋವ್ಯಾಪಾರಗಳನ್ನು ಗುರುತಿಸಲು ಹೆಣಗಿದಂತೆಯೇ ಹೃದಯವ್ಯಾಪಾರವನ್ನೂ ನಾವು ತಿಳಿದುಕೊಳ್ಳಬಲ್ಲೆವಾದರೆ, ವೈದ್ಯಕೀಯ ವಿಜ್ಞಾನದ ನಾಗಾಲೋಟದ ಪ್ರಗತಿಯು ವಾಯುವೇಗಗಾಮಿಯಾದೀತು. ಇದಕ್ಕಾಗಿ ನಾವು ಮಾನವೀಯವಾದ ನಿಲುವೆಯನ್ನು ತಾಳಬೇಕಾಗಿದೆ. ಕೊಲೆಪಾತಕಿಗೆ ಮರಣ ದಂಡನೆ ವಿಧಿಸುವ ಮೊದಲು ಸಮಾಜವು ತಾನು ಸರಿಯಾಗಿ ನಡೆದುಕೊಳ್ಳುತ್ತಿದ್ದೇನೆಯೆ ಎಂದು ತನ್ನಲ್ಲಿಯೇ ವಿಚಾರಿಸಿಕೊಳ್ಳಬೇಕಾಗಿದೆ.

ಕೊಲೆಪಾತಕಿಯು ಬದುಕುವ ಅಧಿಕಾರದ ಕುರಿತು ಮಾತನಾಡುವಂತಿಲ್ಲ ನಿಜ. ಆದರೆ, "ನೀನು ಸಾಯಬೇಕು" ಎಂದು ಹೇಳಲು ಉದ್ಯುಕ್ತವಾದ ಸಮಾಜವು "ಎಲ್ಲರನ್ನೂ ಬಾಳಗೊಡು" ಎಂಬ ತಾನೊಪ್ಪಿದ ತತ್ವಕ್ಕೆ ಮನ್ನಣೆಯನ್ನು ಕೊಡಬೇಡವೆ? ಕೊಲೆಪಾತಕಿಯು ಸಮಾಜದ ದೃಷ್ಟಿಯಲ್ಲಿ ಮನುಷ್ಯನಲ್ಲವೆಂದಾದರೆ, ಕೊಲ್ಲಲ್ಪಟ್ಟವನನ್ನು ಒಬ್ಬ ಮನುಷ್ಯನೆಂದು ತಾನು ಭಾವಿಸಿಯೇ ಇರಲಿಲ್ಲವೆಂಬ ಕೊಲೆಪಾತಕಿಯ ವಾದವನ್ನೂ ಒಪ್ಪಬೇಕಾಗಿ ಬಾರದೆ?

ಒಬ್ಬ ಮನುಷ್ಯನನ್ನು ಕೊಂದ ಕೊಲೆಪಾತಕಿಯು ನಿಜಕ್ಕೂ ಅಪರಾಧಿ ಎನಿಸುವನಾದರೆ, ಈ ಕೊಲೆಪಾತಕಿಗೆ ಮರಣ ದಂಡನೆ ವಿಧಿಸುವ ಸಮಾಜವೂ ಅದೇ ನ್ಯಾಯದಂತೆ ಕೊಲೆಪಾತಕಿ ಎನಿಸುತ್ತದೆ: ಇದು ಸುಧಾರಕರು ಮುಂದಿಡುವ ವಾದದ ತಿರುಳು.

"ನಾನು ಈಗಲೂ ಅಪರಾಧಿಯಾಗಿಲ್ಲ: ಕೊಲೆಪಾತಕ ಗೈದ ಆ ಕ್ಷಣದಲ್ಲಿ ಅಪರಾಧಿಯಾಗಿದ್ದುದೇನೋ ನಿಜ. ಆದರೆ ಅಂದಿನಿಂದ ಇಂದಿನವರೆಗೆ ಉರುಳಿದ ದಿನಗಳಲ್ಲಿ ನಾನು ನನ್ನ ಮನೋಭಾವನೆಯನ್ನು ಬದಲಾಯಿಸಿದ್ದೇನೆ. ನೀವು ಕೊಲೆ ಮಾಡಿದ ಪಾತಕಿಯನ್ನು ಬೇಕಾದರೆ ನಿಂದಿಸಿರಿ; ಆದರೆ ನಾನು ಇಂದು ಆ ಮನುಷ್ಯನಾಗಿಲ್ಲ-ಒಳ್ಳೆಯವನಾಗಿದ್ದೇನೆ; ನನ್ನನ್ನು ದಯಮಾಡಿ ಸರಿಯಾಗಿ ತಿಳಿದುಕೊಳ್ಳಿರಿ..." ಎಂದು ನ್ಯಾಯಾಲಯದ ಆ ಪಂಜರದಲ್ಲಿರುವ ಕೈದಿಯ ಹೃದಯ ಮೊರೆ ಇಡುತ್ತಿರುವಾಗ, ಅದನ್ನು ದಯಮಾಡಿ ಆಲಿಸಿ ಎನ್ನುತ್ತಾನೆ ಸುಧಾರಕ.

ಮಾನವನ ಅಧಿಕಾರವು ಪೂರ್ಣರೂಪದ್ದಾಗಿದೆ — ಮನುಷ್ಯನ ವ್ಯಕ್ತಿತ್ವವನ್ನೆಂದೂ ಭಾಗಗಳಲ್ಲಿ ಅಳೆದು ನೋಡಲಾಗದು. ಕೊಲೆಪಾತಕಿಯನ್ನು ಮರಣದಂಡನೆಗೆ ಗುರಿಪಡಿಸುವ ಮೊದಲು ಸಂಯುಕ್ತರಾಷ್ಟ್ರಸಂಘದ ಮಾನವನ ಅಧಿಕಾರಗಳ ಸಂಹಿತೆಯ ಪ್ರಥಮ ಸೂತ್ರವನ್ನು ನೆನಪಿಡಬೇಕು. "ಎಲ್ಲ ಮನುಷ್ಯರೂ ಸ್ವತಂತ್ರರಾಗಿ, ಗೌರವ ಮತ್ತು ಅಧಿಕಾರಗಳಲ್ಲಿ ಸಮಾನರಾಗಿ ಜನಿಸಿದ್ದಾರೆ; ಅವರೆಲ್ಲರಿಗೂ ಬುದ್ಧಿ ಮತ್ತು ಆತ್ಮಸಾಕ್ಷಿಯಿದೆ; ಅವರೆಲ್ಲರೂ ಪರಸ್ಪರ ಸೋದರಭಾವದಿಂದ ವರ್ತಿಸಲು ಬದ್ಧರಾಗಿದ್ದಾರೆ" ಕೊಲೆಪಾತಕಿ ಇದಕ್ಕೆ ತಪ್ಪಿದನೆಂದು ಸಮಾಜವೂ ಈ ಸೂತ್ರಕ್ಕೆ ವ್ಯತಿರಿಕ್ತವಾಗಿ ಹೋಗಬೇಕೆ?

ಇಪ್ಪತ್ತನೇ ಶತಮಾನದ ವಿಚಾರಕರು —ಮಾನವ ವಾದಿಗಳು—ಸಹೃದಯರು - ಈ ಪ್ರಶ್ನೆಯನ್ನು ಉತ್ತರಿಸಬೇಕಾಗಿದೆ. ನಮ್ಮ ರಾಜ್ಯಸಭೆಯು ಪ್ರತಿಭಾವಂತರ ಮತ್ತು ಸುಸಂಸ್ಕೃತರ ನೆಲೆವೀಡು—ಇಲ್ಲಿ ವ್ಯಕ್ತವಾಗುವ ಅಭಿಪ್ರಾಯಕ್ಕೆ ಈ ದೃಷ್ಟಿಯಿಂದ ಬೆಲೆಹೆಚ್ಚು. ಅದೇನೆಂದು ನೋಡೋಣ!

ಒಂದು ವಿಷಯ ಮಾತ್ರ ಸ್ಪಷ್ಟ; ಅಪರಾಧಿಗಳನ್ನು ನೋಡುವ ದೃಷ್ಟಿಕೋಣವು ಕಳೆದ ನೂರು ವರ್ಷಗಳಲ್ಲಿ ತುಂಬ ಮಾರ್ಪಾಟನ್ನು ಹೊಂದಿದೆ; ಪರಿವರ್ತನೆಯು ಇದೇ ವೇಗವನ್ನು ಉಳಿಸಿಕೊಂಡರೆ, ಮರಣ ದಂಡನೆಯನ್ನು ಭಾರತವು ಬಿಟ್ಟುಕೊಡುವ ದಿನವು ದೂರವುಳಿಯಲಾರದು. ಅಪರಾಧಿಗಳನ್ನು ನಾಗರಿಕರಾಗಿ ತರಬೇತಿಗೊಳಿಸುವ ಕಾರ್ಯಕ್ರಮವೇ ಆಗ ಸರಕಾರದ ಮತ್ತು ಸಮಾಜದ ಧ್ಯೇಯವೆನಿಸುವುದೆಂದು ನಿಸ್ಸಂದೇಹವಾಗಿ ಭಾವಿಸಬಹುದು.

(೧ನೇ ಪುಟದಿಂದ)

ರನ್ನು ಎಳೆದುಕೊಂಡು ಹೋದರು. ಇವರು ಗಡಿಯಿಂದ ಭಾರತದೊಳಗೆ ನಾಲ್ಕು ಮೈಲು ದೂರದಲ್ಲಿ ದನಗಳನ್ನು ಮೇಯಿಸುತ್ತಿದ್ದರು:

ಈಗ ಇವರು ಬಿಡುಗಡೆಗೊಂಡು ಪುನಃ ತಮ್ಮ ಹಳ್ಳಿಗೆ ಮರಳಿದ್ದಾರೆ: ಅವರ ಹಳ್ಳಿಯು ದಟ್ಟವಾದ ಅರಣ್ಯದಿಂದಲೂ ಗುಡ್ಡ ಬೆಟ್ಟಗಳಿಂದಲೂ ಕೂಡಿದೆ. ಇಲ್ಲಿ ಸುಂಕದ ಅಧಿಕಾರಿಗಳಾಗಲೀ ಕಾವಲುಮಾಡುವ ಪೋಲೀಸರಾಗಲೀ ಇಲ್ಲ. ಆದಾಗ್ಯೂ ಭಾರತ ಸರಕಾರವು ಗಡಿಯಲ್ಲಿ ದುರ್ಘಟನೆಯೇನೂ ನಡೆಯದಂತೆ ಜಾಗರೂಕರಾಗಿರಬೇಕೆಂದು ಕಾವಲುಗಾರ ಪೋಲೀಸರಿಗೆ ಆದೇಶವಿತ್ತಿದೆ.

ಗೋವೆಯಲ್ಲಿ ವಸಾಹತುಶಾಹಿ ಆಳಿಕೆಯು ಅಂತ್ಯಗೊಳ್ಳಬೇಕೆಂಬುದೇ ಭಾರತದ ಇಚ್ಛೆಯಾಗಿದೆ. ಅದರ ಈ ನಿಲುವೆಗೆ ಏಶ್ಯ ಮತ್ತು ಆಫ್ರಿಕದ ರಾಷ್ಟ್ರಗಳಲ್ಲಿ ಬೆಂಬಲ ವ್ಯಕ್ತವಾಗಿದೆ. ಪ್ರಧಾನಿಗಳು ಯಾವುದೇ ಪ್ರತ್ಯೇಕ ರಾಷ್ಟ್ರದೊಡನೆ "ಗೋವೆಯ ಕುರಿತು ನಿಮ್ಮ ನಿಲುವೆಯೇನು?" ಎಂದು ಕೇಳಲಿಲ್ಲ. ಆದಾಗ್ಯೂ ತಮ್ಮ ಭಾಷಣಗಳಲ್ಲಿ ಅವರು ಜಗತ್ತಿನ ರಾಷ್ಟ್ರಗಳೆಲ್ಲವೂ ಗೋವೆಗೆ ಸಂಬಂಧಿಸಿದಂತೆ ತಮ್ಮ ಧೋರಣೆಯನ್ನು ಬಹಿರಂಗವಾಗಿ ಸಾರಬೇಕು ಎಂದು ಹೇಳುತ್ತಾ ಬಂದಿದ್ದಾರೆ.

ಅನೌಪಚಾರಿಕ ಸ್ವರೂಪದ ಈ ವಿನಂತಿಯನ್ನು ಜಗತ್ತಿನ ರಾಷ್ಟ್ರಗಳು ಒಂದೊಂದೇಯಾಗಿ ಸಹಾನುಭೂತಿಯಿಂದ ವಿಚಾರಿಸುತ್ತಿವೆ. ನೆಹರುಗಳೇ ಹೇಳಿರುವಂತೆ "ಗೋವೆಗೆ ಸಂಬಂಧಿಸಿದಂತೆ ಭಾರತವು ತಳೆದಿರುವ ನಿಲುವೆಗೆ ಜಗತ್ತಿನ ಹೆಚ್ಚಿನ ರಾಷ್ಟ್ರಗಳಲ್ಲಿ ತಿಳುವಳಿಕೆ ಉಂಟಾಗಿದೆ." ಗೋವೆಯ ಆಕಾಶವಾಣಿಯು ಈಚೆಗೆ ಪೋರ್ಚುಗಾಲ ಮತ್ತು ಭಾರತಗಳ ನಡುವೆ ಮಾತುಕತೆ ನಡೆಯುವ ಸಂಭವದ ಬಗ್ಗೆ ಆಶಾದಾಯಕವಾದ ಹೇಳಿಕೆಯೊಂದನ್ನಿತ್ತುದಕ್ಕೆ ಪೋರ್ಚುಗಾಲದ ಮೇಲೆ ಜಾಗತಿಕ ಒತ್ತಡ ಬಿದ್ದುದೇ ಕಾರಣವಾಗಿರಬಹುದು.

ಆದರೆ ಈ ಪ್ರಸ್ತಾಪದಲ್ಲಿ ಮಾತುಕತೆಗಳ ವ್ಯಾಪಕತ್ವದ ಕುರಿತಾಗಲೀ ಪೋರ್ಚುಗಾಲದ ಈಗಿನ ಮನೋಭಾವದ ಮೇಲೆ ಹೆಚ್ಚಿನ ಪ್ರಕಾಶ ಚೆಲ್ಲುವ ವಿಷಯಗಳ ಕುರಿತಾಗಲೀ ಏನೂ ಇರಲಿಲ್ಲ. ಭಾರತ ಸರಕಾರದ ಮಟ್ಟಿಗೆ ಹೇಳುವುದಾದರೆ, ಈ ಪ್ರಶ್ನೆಯು ಅಹಿಂಸಾತ್ಮಕವೂ ಶಾಂತವೂ ಆದ ವಿಧಾನದಿಂದಲೇ ಬಗೆಹರಿಯಬೇಕು: ಪೋರ್ಚುಗೀಜರು ವಸಾಹತನ್ನು ತೊರೆದು ಹೋಗಬೇಕೆಂಬುದಕ್ಕಿಂತ ಕಡಿಮೆಯ ಯಾವ ಔದಾರ್ಯವೂ ತೃಪ್ತಿಕರವಾಗದು.

ಇದಕ್ಕಾಗಿ ಆರ್ಥಿಕ ಹಾಗು ರಾಜಕೀಯ ಕ್ರಮಗಳನ್ನು ಮುಂದೊತ್ತುತ್ತಾ ಹೋಗುವುದೇ ಭಾರತಸರಕಾರದ ಸ್ಥಿರ ಸಂಕಲ್ಪ. ಇವುಗಳು ಎಷ್ಟರಮಟ್ಟಿಗೆ ಜಯಪ್ರದವಾದಾವೆಂದು ಈಗಲೇ ಊಹಿಸುವುದು ಕಷ್ಟ. ನಮ್ಮ ದೃಷ್ಟಿಯಲ್ಲಿ ಅವು ಜಯಪ್ರದವಾದವೆಂದು ಹೇಳಬೇಕಾದರೆ, ಪೋರ್ಚುಗೀಜರ ಆಡಳಿತೆಯೇ ಗೋವೆಯಲ್ಲಿ ಅಂತ್ಯವಾಗಬೇಕು. ಅಷ್ಟು ಪರಿಣಾಮವನ್ನು ನಮ್ಮ ಈಗಿನ ಕ್ರಮಗಳು ಮಾಡಿಲ್ಲ.

ಆ ಪರಿಣಾಮವಾಗಬೇಕೆಂಬುದೇ ಭಾರತೀಯರೆಲ್ಲರ ಹಾರ್ದಿಕ ಬಯಕೆಯಾಗಿದೆ. ಆದುದರಿಂದ ಗೋವೆಯ ಹೋರಾಟಕ್ಕೆ ಸಕಲ ರೀತಿಯಿಂದ ನೆರವಾಗಬೇಕಾಗಿದೆ. ಗೋವೆಯೊಳಗೆ ಸತ್ಯಾಗ್ರಹ ನಡೆಸುವ ವಿಚಾರ ಕಳೆದ ವರ್ಷ ಈ ಹೊತ್ತಿಗೆ ಹಲವರಿಗಿತ್ತಾದರೂ ಅದು ಯೋಗ್ಯಕ್ರಮವಲ್ಲವೆಂಬ ಭಾರತ ಸರಕಾರದ ನಿಲುವೆಗೆ ಜನರು ಮೂಕ ಸಮ್ಮತಿ ನೀಡಿದ್ದಾರೆ. ಆದಾಗ್ಯೂ ಆರ್ಥಿಕ ದಿಗ್ಬಂಧನವು ಫಲಕಾರಿಯಾಗುವಂತೆ ನಾವು ಸಹಾಯ ಸಲ್ಲಿಸಬಹುದು. ಈ ಅಳಿಲಸೇವೆಯಾದರೂ ಭಾರತೀಯರಿಂದ ಗೋವೆಯ ರಾಷ್ಟ್ರೀಯರ ಉದ್ದೇಶಕ್ಕೆ ಸಲ್ಲಲಿ!

ಕುಮಾರಿ ಚಿಕ್ಕಿಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA-40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು
ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೆಗಳಿಗೆ

ಬೇಕಾಗುವ ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಿ, ಸಂಬಳ ಬಟವಾಡೆ ರಿಜಿಸ್ಟ್ರಿ, ಇನ್‌ಕಮ್ ಸರ್ಟಿಫಿಕೇಟು ಫಾರ್ಮು, ಮಂತ್ಲಿ ರಿಟರ್ನ್, ರಿಕಾರ್ಡು ಶೀಟು, ಎಡ್ಮಿಶನ್ ಫಾರ್ಮು, ಇತ್ಯಾದಿಗಳೂ ಪ್ರೊವಿಡೆಂಟ್ ಫಂಡಿಗೆ ಸಂಬಂಧಿಸಿದ ಎಲ್ಲಾ ಫಾರ್ಮುಗಳೂ ದೊರೆಯುತ್ತವೆ.

ಉತ್ತಮ ಕಾಗದ, ದರ ಸುಲಭ.

ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ.

Edited, Printed & Published ... Shetty, at the Navayuga press, Udipi S. India

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫ | ಉಡುಪಿ, 9—8—1956 | ಸಂಚಿಕೆ ೪೯

VOL. 35 | NO. 49

ಮೆಲುನಡೆಯ ಭೂಸುಧಾರಣೆ

ಮದ್ರಾಸಿನ ಶಾಸನಾಂಗದ ಉಭಯ ಸದನಗಳ ಸಂಯುಕ್ತ ಪರಿಶೀಲಕ ಸಮಿತಿಗೆ ವಹಿಸಿಕೊಟ್ಟಿದ್ದ ನ್ಯಾಯವಾದ ಗೇಣಿ ನಿರ್ಣಯ ಮಸೂದೆಯು, ಸಮಿತಿಯ ಅಧ್ಯಕ್ಷರೂ ಕಂದಾಯ ಸಚಿವರೂ ಆಗಿರುವ ಶ್ರೀ ಎಂ ಎ ಮಾಣಿಕ್ಯವೇಲು ನಾಯಕ್ಕರರೇ ಹೇಳಿರುವಂತೆ, ಪ್ರಾಮುಖ್ಯ ಸ್ವರೂಪದ ಬದಲಾವಣೆಗಳಿಗೆ ಒಳಗಾಗಿರುತ್ತದೆ ಮೂಲ ಮಸೂದೆಗೂ ("ನವಯುಗ"ದ ೫-೧ ೧೯೫೬ನೇ ಸಂಚಿಕೆಯನ್ನು ನೋಡಿರಿ) ತಿದ್ದುಪಡಿ ಹೊಂದಿ, ಹೆಚ್ಚಿನ ಚರ್ಚೆಗೆ ಬರಲಿರುವ ಈ ಮಸೂದೆಗೂ (ನಮ್ಮ ಈ ಸಂಚಿಕೆಯ ೩-೧೦ನೇ ಪುಟಗಳನ್ನು ನೋಡಿರಿ) ಪ್ರಾಮುಖ್ಯವಾದ ವ್ಯತ್ಯಾಸವಿರುವುದರಿಂದ ಪರಿಶೀಲಕ ಸಮಿತಿಯ ವರದಿ ಮತ್ತು ಮಸೂದೆಯ ಈಗಿನ ಸ್ವರೂಪವನ್ನು ಸರಕಾರವು ಗಜೆಟಿನಲ್ಲಿ ಪ್ರಕಟಿಸಿರುತ್ತದೆ

ಪರಿಶೀಲಕ ಸಮಿತಿಯ ವರದಿಯಲ್ಲಿ ಭೂಮಾಲಕರಿಂದಲೇ ಸರಕಾರಕ್ಕೆ ಹೆಚ್ಚಿನ ಮನವಿಗಳು ಬಂದವೆಂದು ಹೇಳಲಾಗಿದೆ ಹಿಂದು ಧಾರ್ಮಿಕ ಉಂಬಳಿ ವಿಭಾಗದ ಸಲಹೆಗಳನ್ನೂ ಕೇಳಿಕೊಳ್ಳಲಾಯಿತೆಂದು ಸಮಿತಿ ತಿಳಿಸಿದೆ ಭೂಮಾಲಿಕರು ಧನಿ ಮತ್ತು ಒಕ್ಕಲುಗಳ ನಡುವೆ ಉತ್ಪನ್ನದ ಅಂಶವನ್ನು ೬೦ ೪೦ ಎಂಬ ಪ್ರಮಾಣದಲ್ಲಿ ಹಂಚಿಕೊಳ್ಳುವುದೇ ಸರಿಯೆಂದು ವಾದಿಸಿದರಾಗಿ ತಿಳಿದು ಬರುತ್ತದೆ ಮೂಲ ಮಸೂದೆಯು ಉಲ್ಲೇಖಿಸಿರುವ "ನಡು ಬೆಳೆ"ಯಲ್ಲಿ ಮತ್ತು ಹುಲ್ಲು, ಧಾನ್ಯದ ಸಿಪ್ಪೆ ಮತ್ತು ಒಣದಂಟುಗಳಲ್ಲಿ ಪಾಲು ಸಿಗಬೇಕೆಂದು ಭೂಮಾಲಿಕರು ವಾದಿಸಿದರಾಗಿಯೂ ಗೊತ್ತಾಗಿದೆ

ಭೂಮಾಲಿಕರ ಈ ನಿಲುಮೆಯನ್ನು ಪರಿಶೀಲಕ ಸಮಿತಿಯು ಸಂಪೂರ್ಣವಾಗಿ ಒಪ್ಪಿಲ್ಲ ಆದಾಗ್ಯೂ ಅದು ಮೂಲಮಸೂದೆಯು ಉದ್ದೇಶಿಸಿದುದಕ್ಕಿಂತಲೂ ಹೆಚ್ಚಿನ ದಯಾಪರತೆಯನ್ನು ಭೂಮಾಲಿಕರಿಗೆ ತೋರಿಸಿದೆ, ಮತ್ತು ಹಾಗೆ ಒಕ್ಕಲುಗಳಲ್ಲಿ ಹಿಂದೆ ಮೂಡಿದ್ದ ಸಂತೋಷ ಭಾವನೆಯನ್ನು ಗಣನೀಯವಾಗಿ ಕುಗ್ಗಿಸಿದೆ. ಮಸೂದೆಯ ಉದ್ದೇಶವೇ ಕೆಟ್ಟುಹೋಗುವಷ್ಟು ಮಟ್ಟಿನ ಪ್ರಾಮುಖ್ಯ ಬದಲಾವಣೆಗಳನ್ನು ಪರಿಶೀಲಕ ಸಮಿತಿಯು ಮಾಡುವುದಕ್ಕೆ ಯಾವುದಾದರೂ ಪ್ರೇರಕವಾಗಿದ್ದರೆ, ಅದು ಭೂಮಾಲಕ ವರ್ಗದ ಸಂಘಶಕ್ತಿ ಮತ್ತು ವರ್ಚಸ್ಸಿನ ಬಲ ಎನ್ನಬಹುದು. ಒಕ್ಕಲುಗಳು ಸಂಘಟಿತವಾದ ಯಾವ ಪ್ರಯತ್ನವನ್ನೂ ಮಾಡಲಿಲ್ಲ; ಮೂಲ ಮಸೂದೆಯಲ್ಲಿ ವಿಶೇಷವಾದ ಬದಲಾವಣೆಯಾಗುವುದನ್ನು ತಡೆಯುವಂತೆ ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಲಿಲ್ಲ ಎಂಬ ವಿಷಯ ಸಮಿತಿಯ ವರದಿಯಿಂದ ಸ್ಪಷ್ಟವಾಗುತ್ತದೆ.

ಸಮಿತಿಯು ಮಾಡಿದ ಬದಲಾವಣೆಗಳೇನು, ಮಸೂದೆಯ ಈಗಿನ ರೂಪವೇನು ಎಂಬುದನ್ನು ಒಳಗಿನ ಪುಟದಲ್ಲಿ ನೋಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಪರಿಶೀಲಕ ಸಮಿತಿಯು "ಬಹುಮತದ ತೀರ್ಮಾನದಿಂದ" ಮುಖ್ಯ ಬೆಳೆಯಲ್ಲಿ ಮಾತ್ರ ಧನಿಗೆ ೪೦% ಪಾಲು ಗೇಣಿರೂಪದಲ್ಲಿ ಸಂದಾಯವಾಗಬೇಕೆಂದಿರುವ ಸೂತ್ರವನ್ನು ಬದಲಾಯಿಸಿ ಭೂಮಿಯ ಒಟ್ಟು ಉತ್ಪನ್ನದಲ್ಲಿ ೪೦% ಪಾಲು ಗೇಣಿಯಾಗಿ ಸಂದಾಯವಾಗಬೇಕೆಂದು ನಿಗದಿಗೊಳಿಸಿ, ಅಲ್ಲದೆ, ಬೈಹುಲ್ಲು, ಧಾನ್ಯದ ಸಿಪ್ಪೆ, ಒಣ ದಂಟು ಇತ್ಯಾದಿಗಳಲ್ಲಿ ಧನಿಗೆ ೨೦% ಸಲ್ಲಬೇಕೆಂದು ಹೇಳಿದೆ. ಶಾಸನದಂತೆ ಕೊಡಬೇಕಾದ ಗೇಣಿಗಿಂತಲೂ ಕಡಿಮೆ ಗೇಣಿಯನ್ನಷ್ಟೆ ಗೇಣಿಚೀಟಿನಂತೆ ಸಂದಾಯ ಮಾಡುತ್ತಾ ದೇವಾಲಯ, ಮಠ ಇತ್ಯಾದಿ ಧಾರ್ಮಿಕ ಸಂಸ್ಥೆಗಳ ನೆಲವನ್ನು ಸಾಗುವಳಿ ಮಾಡುವ ಒಕ್ಕಲುಗಳು ಆಗ ಬಿಟ್ಟ ಸೇವೆಸಲ್ಲಿಸಲು ಒಪ್ಪಿರಬೇಕೆಂದು ಸಮಿತಿ ಹೊಸ ಟಿಪ್ಪಣಿಯನ್ನ ಜೋಡಿಸಿದೆ

ದಕ್ಷಿಣ ಕನ್ನಡದಲ್ಲಿ ವಿದ್ಯಮಾನವಿರುವ ವಿಶಿಷ್ಟ ಪದ್ಧತಿಯನ್ನು ದೃಷ್ಟಿಯಲ್ಲಿರಿಸಿಕೊಂಡು, ಮೂಲಗೇಣಿದಾರನು ತನ್ನ ಭೂಮಿಯನ್ನು ಚಾಲಗೇಣಿಗೆ ಕೊಟ್ಟಿದ್ದರೆ, ಈ ಮಸೂದೆ ಶಾಸನವಾದ ಬಳಿಕ ಚಾಲಗೇಣಿಯು ಯಾವ ಪ್ರಮಾಣದಲ್ಲಿ ತಗ್ಗಬೇಕಾಗುತ್ತದೋ ಅದೇ ಪ್ರಮಾಣದಲ್ಲಿ ಮೂಲಗೇಣಿಯೂ ತಗ್ಗಬೇಕೆಂದು ಪರಿಶೀಲಕ ಸಮಿತಿ ನಿರ್ಧರಿಸಿದೆ

ಅಲ್ಲದೆ, ಈ ಶಾಸನವು ಗಜೆಟಿನಲ್ಲಿ ಪ್ರಕಟವಾದ ಮೂರು ತಿಂಗಳೊಳಗೆ ಅಥವಾ ಗೇಣಿಚೀಟು ಅನಂತರ ಮಾಡಲ್ಪಡುವುದಾದಲ್ಲಿ, ಹಾಗೆ ಗೇಣಿಚೀಟಾದ ಮೂರು ತಿಂಗಳೊಳಗೆ ತಾನು ಗೇಣಿಯನ್ನು ಯಾವ ರೀತಿಯಲ್ಲಿ ಪಾವತಿಮಾಡುವನೆಂದು ಒಕ್ಕಲು ಧನಿಗೆ ತಿಳಿಸಬೇಕು, ಇದಕ್ಕೆ ತಪ್ಪಿದರೆ ಧನಿಯು ಹೇಳಿದ ರೀತಿಯಲ್ಲಿ ಗೇಣಿಯನ್ನು ಪಾವತಿಮಾಡಲು ಬದ್ಧನಿದ್ದಾನೆ ಎನ್ನಲಾಗಿದೆ. ಒಕ್ಕಲಿಗೆ ಈ ಮಸೂದೆಯು ಶಾಸನವಾದ ಬಳಿಕ ನ್ಯಾಯವಾದ ಗೇಣಿಯಲ್ಲಿ ಸಿಗುವ ರಿಯಾಯತಿಯನ್ನು ಆತನು ಬೇಸಾಯಮಾಡುವ ಭೂಮಿಯು ೭½ ಎಕ್ರೆಗೆ ಮೀರಲಾಗದೆಂಬ ಮಿತಿಗೆ ಒಳಪಟ್ಟು ನೀಡಲಾಗಿರುವುದು ಇನ್ನೊಂದು ವೈಶಿಷ್ಟ್ಯ

ಒಟ್ಟು ಎಂಟು ಭಿನ್ನಾಭಿಪ್ರಾಯದ ಟಿಪ್ಪಣಿಗಳನ್ನು ಪರಿಶೀಲಕ ಸಮಿತಿಯ ವರದಿಗೆ ಜೋಡಿಸಲಾಗಿದೆ. ಶ್ರೀ ಎಸ್ ಎಸ್ ಕೊಳ್ಳೆಬೈಲ್ (ನಮ್ಮ ಜಿಲ್ಲೆಯ ಬ್ರಹ್ಮಾವರ ಮತದಾರ ಕ್ಷೇತ್ರದಿಂದ ಆರಿಸಲ್ಪಟ್ಟಿರುವ ಪ್ರಜಾಸಮಾಜವಾದಿ ಸದಸ್ಯ) ಇವರು ತಮ್ಮ ಟಿಪ್ಪಣಿಯಲ್ಲಿ ಕಾಂಗ್ರೆಸು ೧೯೫೪ರಲ್ಲಿ ಹೊರಡಿಸಿದ ಚುನಾವಣೆಯ ಘೋಷಣೆಯಲ್ಲಿ ಹೇಳಿದ ಮಾತುಗಳನ್ನೆ ಉಪೇಕ್ಷಿಸಿದೆ ಎಂದು ದೂರಿದ್ದಾರೆ, ಕಮ್ಯುನಿಸ್ಟೇತರ ರಾಷ್ಟ್ರಗಳಾದ ಜಪಾನ್, ಚೀನ ದೇಶಗಳು ಸಹ ಭೂಸುಧಾರಣೆಯನ್ನು ಮಾಡಿ ಈ ಸಮಸ್ಯೆಯನ್ನು ಯಶಸ್ವಿಯಾಗಿ ಎಂದೋ ಬಿಡಿಸಿರುವಾಗ ನಮ್ಮ ಸರಕಾರಗಳು ಮೆಲು ನಡೆಯ ಧೋರಣೆಯನ್ನು ವಹಿಸಿರುವುದೇಕೆ ಎಂದವರು ಆಕ್ಷೇಪಿಸಿದ್ದಾರೆ ೧೯೫೩ನೇ ವರ್ಷದ ಬಳಿಕ ಎಬ್ಬಿಸಲ್ಪಟ್ಟ ಒಕ್ಕಲುಗಳಿಗೆ ಪುನಃ ಅವರ ಬೇಸಾಯದ ಭೂಮಿಯನ್ನು ಕೊಡುವ ಸೂತ್ರವು ಈ ಮಸೂದೆಯಲ್ಲಿರಬೇಕು; ಭೂಮಿಯ ಸಾಮಾನ್ಯ ಒಟ್ಟು ಉತ್ಪನ್ನದ ೩೦%, ಅಥವಾ ನಿವ್ವಳ ಉತ್ಪನ್ನದ ೫೦% (?) (ಎರಡನೆಯದು ಬಹಳ ಹೆಚ್ಚಾಯಿತು!) ಧನಿಗೆ ಗೇಣಿಯಾಗಿ ಸಲ್ಲಬೇಕು, ಇದನ್ನು ಪ್ರತಿವರ್ಷ, ಅರ್ಧವರ್ಷ, ಕಾಲುವರ್ಷ ತೀರ್ಮಾನಿಸದೆ, ಪ್ರಾರಂಭದಲ್ಲಿಯೇ ನಿಗದಿಗೊಳಿಸಬೇಕು. ಬೈಹುಲ್ಲು ಇತ್ಯಾದಿಗಳಲ್ಲಿ ಧನಿಗೆ ಪಾಲುಕೊಡಬಾರದು ಎಂದು ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಗೊಳಿಸಿದ್ದಾರೆ

ಶ್ರೀ ಎಸ್. ಕೃಷ್ಣಪ್ರಕಾಶ್ ಎಂಬ ಸದಸ್ಯರು ಗೂಬ್ಬರಕ್ಕೆಂದು ಧನಿಯು ಕೊಡಬಹುದಾದ ಹಣಕ್ಕೊಂದು ಮಿತಿ ಹಾಕಬೇಕು, ಇಲ್ಲದಿದ್ದರೆ ಧನಿಯು ಇದಕ್ಕೆ ಸಂಬಂಧವಿಲ್ಲದ ಹಣದ ವ್ಯವಹಾರವನ್ನು ಲೆಕ್ಕದಲ್ಲಿ ಸೇರಿಸಿ ಒಕ್ಕಲನ್ನು ಪೀಡಿಸಬಹುದು, ಗೇಣಿಯನ್ನು ತಾನು ಹೇಗೆ ಪಾವತಿಮಾಡುವೆನೆಂಬುದನ್ನು ಹೇಳದಿರುವ ಒಕ್ಕಲಿಗೆ, ತಾನು ಪಾವತಿಮಾಡಬೇಕಾದ ವಿಧಾನವು ಮುಂದಾಗಿ ತಿಳಿದಿರುವಂತೆ ಧನಿಯಾದವನು ಇಂತಿಷ್ಟೆ ಸಮಯದೊಳಗೆ ತಾನು ಬಯಸುವ ಗೇಣಿ ಪಾವತಿಯ ವಿಧಾನವನ್ನು ತಿಳಿಸಬೇಕು, ಪಡಿಮಂಚದಡಿ ಬಿದ್ದಿರುವ ಧಾನ್ಯದ ರಾಶಿಯನ್ನು ಧನಿಯು ಬರುವವರೆಗೆ ಮುಟ್ಟಬಾರದು ಎಂದಿರುವ ನಿರ್ಬಂಧವು, ಕೆಟ್ಟ ಧನಿಗಳ ದೆಸೆ ಒಕ್ಕಲಿಗೆ ಅನ್ಯಾಯವನ್ನು ಮಾಡುತ್ತದೆ, ಇದಕ್ಕೆ ಅವಕಾಶವಿರಕೂಡದು, ಸಣ್ಣ ಹಿಡುವಳಿದಾರರಿಗೆ ಸ್ವಂತ ಸಾಗುವಳಿಗೆ ಭೂಮಿಯನ್ನು ಮರಳಿ ಪಡೆಯಲು ಅವಕಾಶವಿರಬೇಕು—ಎಂದು ಹೇಳಿದ್ದಾರೆ

ತಾನು ಸಾಗುವಳಿ ಮಾಡುವ ಭೂಮಿಯು ತನ್ನದೇ ಎಂಬ ಗ್ಯಾರಂಟಿಯನ್ನು ಕೊಡದ ಭೂಸುಧಾರಣೆಯ ಎಲ್ಲ ಪ್ರಯತ್ನವೂ ನಿಷ್ಪ್ರಯೋಜಕ, ಒಟ್ಟು ಉತ್ಪಾದನೆಯಲ್ಲಿ ೩೦% ಗೇಣಿಯನ್ನು ಕೊಟ್ಟರೆ ಸಾಕೆಂಬ ಸೂತ್ರವಿಲ್ಲದಿದ್ದರೆ ನ್ಯಾಯ ಗೇಣಿ ಮಸೂದೆಗೆ ಅರ್ಥವೇ ಇಲ್ಲ, ನಡುಬೆಳೆಯಲ್ಲೂ ಧನಿಗೆ ಪಾಲುಕೊಡಬೇಕು, ಹುಲ್ಲು, ಧಾನ್ಯದ ಸಿಪ್ಪೆ ಇತ್ಯಾದಿಗಳಲ್ಲೂ ಪಾಲು ಕೊಡಬೇಕು ಎಂದು ಹೇಳಿರುವುದು ಘೋರ ಅನ್ಯಾಯ, ಒಕ್ಕಲಾದವನು ೭½ ಎಕ್ರೆಯ ಮಿತಿಗೊಳಪಟ್ಟು ಈ ಮ

(೧೦ನೇ ಪುಟ ನೋಡಿರಿ)

ಕುಟುಂಬ ಯೋಜನೆ

ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯವು ಭದ್ರವಾದರೆನೇ ನಿಮ್ಮ ಕುಟುಂಬಯೋಜನೆ ಪರಿಪೂರ್ಣವಾಗುವುದು ಕುಟುಂಬದ ಒಬ್ಬರ ಅಭ್ಯುದಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆ ಇದೆ ನಿಮ್ಮ ಮಡದಿ, ಮಕ್ಕಳ ಪ್ರತಿಯೊಬ್ಬರ ಹೆಸರಲ್ಲಿ ಒಂದೊಂದು 'ಕ್ಯುಮುಲೆಟಿವ್ ಡಿಪೋಜಿಟ್' ಲೆಕ್ಕ ತೆರೆದು ಅವರು ಕ್ರಮವಾಗಿ ಉಳಿಸುವಂತೆ ಮಾಡಿರಿ ಇದಕ್ಕೆ ದೊಡ್ಡ ಮೊಬಲಗು ಬೇಕಾಗಿಲ್ಲ, ಕ್ರಮಬದ್ಧವಾಗಿ ನಿಶ್ಚಿತ ಹಣವನ್ನು ಉಳಿಸುವುದೇ ಮುಖ್ಯ

ಆದುದರಿಂದ ಈ ಯೋಜನೆಯನ್ನು ಅಂಗೀಕರಿಸಿ ಕುಟುಂಬದೊಂದಿಗೆ ಕುಟುಂಬಯೋಜನೆಯನ್ನು ನೆರವೇರಿಸಿರಿ

ಒಟ್ಟು ಆರ್ಥಿಕ ಆಸರೆ ರೂ **9.5** ಕೋಟಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಸ್ಥಾಪನೆ 1925] [ಪ್ರಧಾನ ಕಚೇರಿ **ಉಡುಪಿ**, ದ ಭಾರತ.

ರಾಜ್ಯಗಳ ಪುನಾರಚನೆಯಲ್ಲಿ ರಾಷ್ಟ್ರೀಯ ದೃಷ್ಟಿ ಆವಶ್ಯಕ

"ಭಾರತವು ನಕ್ಷೆಯಲ್ಲಿಯಷ್ಟೇ ಒಂದಾಗಿದ್ದರೆ ಸಾಲದು—ಜನರ ಹೃದಯದಲ್ಲೂ ಒಂದೆನಿಸಬೇಕು"

ಪಾಶ್ಚಾತ್ಯ ದೇಶಗಳಲ್ಲಿ ಪ್ರವಾಸಮಾಡಿ ಮತ್ತು ಅಲ್ಲಿಯ ಪ್ರಾಮುಖ್ಯ ಧುರೀಣರ ಭೇಟಿ ನಡೆಸಿ, ನಾನು ಸುಮಾರು ಒಂದು ವಾರದ ಹಿಂದೆ ದೇಶಕ್ಕೆ ಮರಳಿದ್ದೇನೆ. ಆ ದೇಶಗಳಲ್ಲಿರುವಾಗ ಅಲ್ಲಿ ನಡೆಯುತ್ತಿರುವ ಮಹಾ ಆಂದೋಲನದ ತಿಳಿವಳಿಕೆ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ; ಅಲ್ಲದೆ, ಯುರೋಪಿನ ಜನರು ಭಾರತದ ಬಗ್ಗೆ ಏನು ಅಭಿಪ್ರಾಯ ಹೊಂದಿರುವರೆಂಬುದನ್ನು ಮನವರಿಕೆ ಮಾಡಿಕೊಳ್ಳಲೂ ಈ ಅವಕಾಶವನ್ನು ಉಪಯೋಗಿಸಿದ್ದೇನೆ.

ಯುರೋಪಿನ ಪ್ರತಿಯೊಬ್ಬರೂ ಭಾರತದ ಬಗ್ಗೆ ವಿಶೇಷವಾದ ಆಸಕ್ತಿಯನ್ನು ವಹಿಸಿರುವರೆಂಬುದು ಆಗ ನನಗೆ ಗೊತ್ತಾಯಿತು; ಭಾರತದಲ್ಲಿ ಮಹತ್ವದ ವಿಷಯಗಳು ನಡೆಯುತ್ತಿವೆ ಎಂಬುದನ್ನು ಅವರು ತಿಳಿದಂತೆ ಕಂಡಿತು; ಮತ್ತು ಈ ಕಾರಣದಿಂದಾಗಿ ಭಾರತದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಕುತೂಹಲದಿಂದ ಅವರು ವೀಕ್ಷಿಸುತ್ತಿದ್ದರು. ಇದರಿಂದ ಭಾರತದ ಸಂಸತ್ತಿನ ಮುಂದೆ ಬಿದ್ದಿರುವ ಮಹಾ ಕಾರ್ಯದ ಮತ್ತು ಅದು ನಿರ್ವಹಿಸಬೇಕಾಗಿರುವ ಹೊಣೆಗಾರಿಕೆಯ ವಿಚಾರ ನನ್ನಲ್ಲಿ ಉಂಟಾಯಿತು.

ಒಂದು ದೇಶದ ರಾಜಧಾನಿಯಿಂದ ಇನ್ನೊಂದರ ರಾಜಧಾನಿಗೆ ಪ್ರಯಾಣಿಸುತ್ತಿದ್ದಂತೆಯೇ ನನ್ನ ಮನಸ್ಸಿಗೆ ಬೇರೊಂದು ವಿಚಾರವೂ ಹೊಳೆಯಿತು: ಹಳೆಯ ಮೇರೆಗಳು ಈಗ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡಿವೆ ಎಂಬುದೇ ಅದು. ಆಯಾ ದೇಶದ ಗಡಿಗಳಿಗಿರುವ ಮಹತ್ವವು ಆಧುನಿಕ ಸಂಭವಗಳ ಯೋಜನೆಯಲ್ಲಿ ಅತ್ಯಲ್ಪ.

ನಾನಿದನ್ನು ಎತ್ತಿಹೇಳುವುದರಲ್ಲಿ ಉದ್ದೇಶವಿಷ್ಟೇ: ಏನೆಂದರೆ ನಾವು ಇಲ್ಲಿ ದೇಶಗಳ ನಡುವೆ ಇರಬೇಕಾದ ಮೇರೆಯನ್ನಲ್ಲ, ದೇಶದೊಳಗೆ ಎರಡು ರಾಜ್ಯ ಅಥವಾ ಪ್ರಾಂತ್ಯಗಳ ನಡುವೆ ಇರಬೇಕಾದ ಮೇರೆಯ ಬಗ್ಗೆ ವಿಶೇಷವಾದ ಕಾವಿನಿಂದಲೂ ಭಾವೋದ್ರೇಕದಿಂದಲೂ ವಿಚಾರವನ್ನು ಹೊರಹೊಮ್ಮುತ್ತಿದ್ದೇವೆ. ದೇಶಗಳ ಮೇರೆಗಳೇ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿರುವಾಗ ಮತ್ತು ಮುಂದಿನ ಕೆಲವು ವರ್ಷಗಳಲ್ಲಿ ವ್ಯವಹಾರದ ಅನೇಕ ವಿಷಯಗಳ ಮಟ್ಟಿಗೆ ಈ ಮೇರೆಗಳೇ ಉಪೇಕ್ಷಿಸಲ್ಪಡುವಂತಿರುವಾಗ, ನಾವು ಈಗ ವಿಚಾರಿಸುತ್ತಿರುವ ರಾಜ್ಯಗಳ ನಡುವೆ ಇರಬೇಕಾದ ಮೇರೆಗಳ ವಿಷಯವು ಎಷ್ಟು ಕಡಿಮೆ ಮಹತ್ವದ್ದಾಗುತ್ತದೆ!

ನಾನು ಅವುಗಳ ಪ್ರಾಮುಖ್ಯತೆಯನ್ನು ಕಡಿಮೆಮಾಡುವ ಇಚ್ಛೆಯನ್ನು ಹೊಂದಿರುವೆನೆಂಬುದು ಇದರ ಅರ್ಥವಲ್ಲ; ಆದರೆ ಈ ಸಭೆಯು ಪ್ರಸ್ತುತ ಪ್ರಶ್ನೆಯನ್ನು ಸರಿಯಾದ ದೃಷ್ಟಿಕೋನದಿಂದ ವಿಚಾರಿಸಬೇಕೆಂಬುದೇ ನನ್ನ ಆಶಯ. ನಾವು ನಡೆಸುತ್ತಿರುವ ಚರ್ಚೆಯು ಕಾವು ಮತ್ತಿತರ ನೆಪಗಳಿಂದ ಸರಿಯಾದ ದೃಷ್ಟಿಕೋನವನ್ನು ಕಳೆದುಕೊಳ್ಳುವ ಸಂಭವವಿಲ್ಲದಿಲ್ಲ.

ಅತ್ಯಂತ ಆದರ್ಶ ಪ್ರಾಯವಾದ ಪರಿಹಾರ ಮಾರ್ಗವೊಂದನ್ನು ಕಂಡುಕೊಂಡರೂ ಅದು ಪ್ರತಿಯೊಬ್ಬನಿಗೂ ಸಮಾಧಾನಕರವಾದೀತೆಂದು ನಾನು ಭಾವಿಸುವುದಿಲ್ಲ. ಸರಕಾರದ ಮಟ್ಟಿಗೆ, ಯಾವ ರಾಜ್ಯದ ಮೇರೆಯೊಳಗೆ ಭಾರತದ ಈ ತುಣುಕೊಂದು ಹೋಗುತ್ತದೆ, ಅಥವಾ ಹೋಗದೆ ಉಳಿಯುತ್ತದೆ ಎಂಬುದು ನಮಗೆ ದೊಡ್ಡ ವಿಷಯವಲ್ಲ. ಅನೇಕ ದೃಷ್ಟಿಕೋನಗಳಿಂದ ಯಾವುದು ಅತ್ಯಂತ ಅಪೇಕ್ಷಣೀಯವಾದುದೆಂಬುದನ್ನು ನಾವು ವಿಚಾರಿಸಬೇಕೆಂಬುದೇನೋ ನಿಜ. ಆದರೆ ಕೊನೆಯ ವಿಶ್ಲೇಷಣೆಯಲ್ಲಿ, ಒಂದು ಭಾಗವು ಇಲ್ಲಿಗೆ ಹೋಯಿತೆ, ಅಥವಾ ಅಲ್ಲಿಗೆ ಹೋಯಿತೆ ಎಂಬುದು ಹೆಚ್ಚಿನ ವ್ಯತ್ಯಾಸವನ್ನು ಮಾಡಲಾರದು. ಒಬ್ಬ ವ್ಯಕ್ತಿಯ ದೃಷ್ಟಿಕೋನದಿಂದ ಅಥವಾ ಆಯಾ ರಾಜ್ಯದ ದೃಷ್ಟಿಕೋನದಿಂದ ಅದಕ್ಕೆ ಸ್ವಲ್ಪ ಪ್ರಾಮುಖ್ಯತೆ ಬಂದರೆ ಬಂದೀತು.

ಆದುದರಿಂದ ಭಾರತ ಸರಕಾರವು ಈ ಪ್ರಶ್ನೆಯನ್ನು ಹೆಚ್ಚು ಕಡಿಮೆ ನಿಸ್ಪೃಹಭಾವದಿಂದಲೇ ವೀಕ್ಷಿಸಿತು; ಯಾವುದೇ ನಿಶ್ಚಯವನ್ನು ಮೇಲಿನಿಂದ ಹೇರುವ ಇಚ್ಛೆಯನ್ನು ಅದು ಹೊಂದಿರಲಿಲ್ಲ. ಸರಿಯಾದ ರೀತಿಯಲ್ಲಿ ಸಮಾಲೋಚಿಸುವ ಮತ್ತು ಚರ್ಚೆ ನಡೆಸುವ ಕ್ರಮವನ್ನು ನಾವು ಅನುಸರಿಸಲಿಲ್ಲವೆಂದು ಹೇಳಲಾಗಿದೆ. ಆದರೆ, ಕಳೆದ ಆರು ಅಥವಾ ಎಂಟು ತಿಂಗಳುಗಳಲ್ಲಿ ಏನೆಲ್ಲ ನಡೆಯಿತೆಂಬುದರ ತಿಳಿವಳಿಕೆ ಇದ್ದ ಯಾರೇ ಆಗಲಿ, ನಾವು ಈ ವಿಷಯದ ಬಗ್ಗೆ ನಡೆಸಿದ ಸಮಾಲೋಚನೆ ಮತ್ತು ಚರ್ಚೆಗಳಿಗೆ ಸಾಟಿಯೇ ಇಲ್ಲವೆಂಬುದನ್ನು ಮನಗಾಣುವುದು ನಿಶ್ಚಯ. ವಾಸ್ತವವಾಗಿ, ಅನೇಕರು ನಾವು ಬೇಕಾದುದಕ್ಕಿಂತಲೂ ಹೆಚ್ಚು ಸಮಾಲೋಚನೆ ಮತ್ತು ಚರ್ಚೆ ನಡೆಸಿದೆವು ಎನ್ನುತ್ತಾರೆ. ನೂರಾರು, ಸಾವಿರಾರು ಜನರ ಸಲಹೆಗಳನ್ನು ಕೇಳಿಕೊಳ್ಳುತ್ತಾ ಗೊಂದಲವನ್ನೇ ಹೆಚ್ಚಿಸುವ ವಿಧಾನವನ್ನು ಬಿಟ್ಟುಕೊಟ್ಟಿದ್ದರೆ ನಿಜಕ್ಕೂ ಬಹಳ ಸರಳವಾಗಿ ಈ ಪ್ರಶ್ನೆಯ ಪರಿಹಾರವಾಗುತ್ತಿತ್ತೆನ್ನಬಹುದು.

ಜನರಲ್ಲಿ ಭಾವೋದ್ರೇಕಗಳನ್ನು ಈ ಪ್ರಶ್ನೆಯು ಹುಟ್ಟಿಸಿರುವುದು ಸುಳ್ಳಲ್ಲ. ಆದರೆ ಈ ಸಭೆಯು ಸರಿಯಾದ ದೃಷ್ಟಿಕೋನವನ್ನಿಟ್ಟುಕೊಂಡೇ ಪ್ರಶ್ನೆಯನ್ನು ಸಮಾಲೋಚಿಸಬೇಕೆಂಬುದು ನನ್ನ ಬಿನ್ನಹ. ಎರಡನೆಯದಾಗಿ, ಮೇರೆಯನ್ನು ನಿರ್ಣಯಿಸುವ ಈ ವಿಷಯವು ಎಷ್ಟೇ ಪ್ರಾಮುಖ್ಯವಾದುದಾಗಿರಲಿ, ದೇಶದೊಳಗೆ ಸುಗಮ ಆಡಳಿತೆಗಾಗಿ ಆಡಳಿತ ಘಟಕಗಳನ್ನಷ್ಟೆ ನಾವು ಈಗ ರೂಪಿಸುತ್ತಿದ್ದೇವೆ. ಮೂರನೆಯದಾಗಿ, ಇವತ್ತು ಏನನ್ನೇ ಮಾಡಲಿ, ಹಿಂದಿನಿಂದ ವಿಚಾರಿಸಿಕೊಂಡು ಈಗಿನ ನಿರ್ಣಯಗಳಲ್ಲಿ ಏನಾದರೂ ವ್ಯತ್ಯಾಸ ಮಾಡುವುದನ್ನು ಯಾರೂ ತಡೆಗಟ್ಟಿಲ್ಲ. ಒಂದು ವಿಷಯವನ್ನು ಪ್ರತಿದಿನ ಒರೆಗಲ್ಲಿಗೆ ಹಚ್ಚುತ್ತಾ ನಿರ್ಧಾರಗಳನ್ನು ವ್ಯತ್ಯಾಸಗೊಳಿಸುತ್ತಾ ಹೋಗುವುದನ್ನು ಯಾರೊಬ್ಬರೂ ಮೆಚ್ಚಲಿಕ್ಕಿಲ್ಲ. ಆದರೆ ಯಾವುದಾದರೂ ಕೊನೆಯ ತೀರ್ಮಾನಕ್ಕೆ ಒಳಗಾಗಿದೆ ಎಂದೇನಿಲ್ಲ; ಆದುದರಿಂದ, ಇವತ್ತು ಏನೇ ಮಾಡಲಿ, ಭವಿಷ್ಯದಲ್ಲಿ ಅದು ಬದಲಾಯಿಸಲ್ಪಡಬಹುದು.

ನಮ್ಮನ್ನು ಬಾಧಿಸಿದ ತೊಂದರೆ ಇಷ್ಟೇ: ಏನೆಂದರೆ, ನಾವು ಬಹುಶಃ ಅಗತ್ಯವಿದ್ದುದಕ್ಕಿಂತಲೂ ಹೆಚ್ಚಾಗಿ, ಸಂಬಂಧಿಸಿದ ಬೇರೆ ಬೇರೆ ದೃಷ್ಟಿಕೋನಗಳನ್ನು ಸಮತೂಕದಲ್ಲಿಡಲು ಪ್ರಯತ್ನಿಸಿದೆವು; ಮತ್ತು ಎಷ್ಟು ವಿಸ್ತಾರವಾದ ತಳಹದಿಯಲ್ಲಿ ಒಡಂಬಡಿಕೆ ಆಗುವುದು ಸಾಧ್ಯವೋ ಅಷ್ಟು ವಿಶಾಲ ಸ್ವರೂಪದ ಪ್ರಯತ್ನಕ್ಕೆ ಕೈಹಾಕಿದೆವು. ಸಹಜವಾಗಿಯೇ ಇದರಿಂದ ನಾವು ಬಹಳ ಹೆಚ್ಚು ಜನರಲ್ಲಿ ಅಪ್ರಿಯರೆನಿಸಿದೆವು! ಇದೇ ನಾವು ಸಂಪಾದಿಸಿದ ಯಶಸ್ಸು!

ಆದಾಗ್ಯೂ, ಸಮಗ್ರ ಭಾರತದ ಮೇಲೆ ಪರಿಣಾಮ ಮಾಡುವ, ಕಗ್ಗಂಟೆನೊಡನೆ ಕೆಲಸಮಾಡುವಂತಹ ಈ ವ್ಯವಹಾರವು, ಭಾರತದ ಹೆಚ್ಚಿನ ಪ್ರದೇಶಗಳ ಜನರಿಗೆ ಸಮ್ಮತವಾಯಿತೆಂದು ಸಾಮಾನ್ಯವಾಗಿ ಹೇಳಬಹುದು; ಅವರು ನಾವಿತ್ತ ಸೂಚನೆಗಳನ್ನು ಸ್ವೀಕರಿಸಿದರು. ಕೆಲವು ಅತ್ಯಂತ ಪ್ರಾಮುಖ್ಯದ ವಿಷಯಗಳು ಇನ್ನೂ ಬಾಕಿ ಉಳಿದಿವೆ ಎಂಬುದು ನಿಜ; ಇವುಗಳಲ್ಲಿ ಅತಿ ಹೆಚ್ಚು ಚರ್ಚೆಯ ವಿಷಯವಾಗಿರುವುದೇ ಮುಂಬಯಿ ಮತ್ತು ಮಹಾರಾಷ್ಟ್ರಗಳ ಸಂಬಂಧದ ವಿಷಯ.

ನಾವೆಲ್ಲರೂ ಬೇರೆ ಬೇರೆ ಮತದಾರ ಕ್ಷೇತ್ರಗಳಿಂದ ಚುನಾಯಿತರಾದ ಸದಸ್ಯರಾಗಿ ಇಲ್ಲಿ ಕುಳಿತಿದ್ದೇವೆ. ಆದುದರಿಂದ, ನಮಗೆ ಆಯಾ ಮತದಾರ ಕ್ಷೇತ್ರದ ಹಿತಾರ್ಥದ ಕಡೆಗೆ ಒಲವಿರುವುದು ಸಹಜ. ಆದರೆ, ನಾವು ಬೇರೆಯೊಂದು ನೆಲೆಯಿಂದಲೂ ಇಲ್ಲಿದ್ದೇವೆ ಎಂದು ನಾನು ಹೇಳಲು ಬಯಸುತ್ತೇನೆ. ಅಲ್ಲಹಾಬಾದು ಜಿಲ್ಲೆಯ ಪೂರ್ವಭಾಗದ ಸದಸ್ಯನೆಂಬ ಒಂದೇ ನೆಲೆಯಿಂದ ನಾನಿಲ್ಲಿ ಕುಳಿತಿಲ್ಲ; ನಾನು ಭಾರತದ ಒಬ್ಬ ಸದಸ್ಯನೆಂದು ನನ್ನನ್ನು ತಿಳಿದುಕೊಂಡಿದ್ದೇನೆ. ಸಂಸತ್ತಿನ ಪ್ರತಿಯೊಬ್ಬ ಸದಸ್ಯನೂ ಭಾರತದ ಸದಸ್ಯನಾಗಿದ್ದಾನೆಂದು ನಾನು ಹೇಳಲು ಬಯಸುತ್ತೇನೆ. ಈ ಅಥವಾ ಆ ಪ್ರತ್ಯೇಕ ಪ್ರದೇಶದ ವಿಷಯವನ್ನಷ್ಟೆ ಪರ್ಯಾಲೋಚಿಸಿ, ಭಾರತದ ಉಳಿದೆಡೆಯ ಹಿತಾಸಕ್ತಿಗಳನ್ನು ಕಡೆಗಣಿಸಿ ಬಿಡಲಿಕ್ಕೆ ನಾವು ನಗರಸಭೆ ಅಥವಾ ಜಿಲ್ಲಾಬೋರ್ಡಿನ ಸದಸ್ಯರಾಗಿಲ್ಲವಲ್ಲ! ಆದುದರಿಂದ ಪ್ರತಿಯೊಂದೂ ವಿಷಯವನ್ನು ನಮಗೆ ಸಾಧ್ಯವಿದ್ದಷ್ಟು ಉತ್ತಮವಾಗಿ ಅಖಿಲ ಭಾರತದ ದೃಷ್ಟಿಕೋನದಿಂದಲೇ ನೋಡುವುದು ನಮ್ಮ ಆದ್ಯ ಕರ್ತವ್ಯ.

ನಾನು ಅಲ್ಲಹಾಬಾದು ಜಿಲ್ಲೆಯ ಪ್ರಧಾನಮಂತ್ರಿಯಾಗಿಲ್ಲ; ಈ ಸಭೆಯ ಸೌಜನ್ಯದಿಂದ ನಾನು ಭಾರತದ ಪ್ರಧಾನ ಮಂತ್ರಿಯಾಗಿದ್ದೇನೆ ಆದುದರಿಂದ ನಾನು ಭಾರತದ ದೃಷ್ಟಿಕೋನವನ್ನು ಇಟ್ಟುಕೊಂಡು ಆಲೋಚಿಸಬೇಕಾಗಿದೆ. ಅಥವಾ ಹಾಗೆ ಆಲೋಚಿಸಲು ಪ್ರಯತ್ನಿಸಬೇಕಾಗಿದೆ. ನಾನು ತಪ್ಪುಗಳನ್ನು ಮಾಡಬಹುದು; ಆದರೆ, ಮಾಡುತ್ತಿದ್ದೇನೆ. ಆದರೆ

(೧೧ನೇ ಪುಟ ನೋಡಿರಿ)

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
* *
ಮೈಸೂರು
ಸ್ಯಾಂಡಲ್ ಸಾಬೂನು
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.
ಒಮ್ಮೆ ಉಪಯೋಗಿಸಿ ನೋಡಿ
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ
* *
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು
ಮೆಂಬರು: ಐ. ಎಸ್. ಟಿ. ಎಂ. ಎ.

ನ್ಯಾಯವಾದ ಗೇಣಿ ನಿರ್ಣಯ ಕ್ರಮ

ಪರಿಶೀಲಕ ಸಮಿತಿಯ ವರದಿಯ ಸಾರಾಂಶ

ನ್ಯಾಯವಾದ ಗೇಣಿಯನ್ನು ನಿಗದಿಗೊಳಿಸುವ ಕುರಿತು ಮದ್ರಾಸು ಸರಕಾರವು ರಚಿಸಿದ ಮಸೂದೆಯ ಮೇಲೆ ಪರಿಶೀಲಕ ಸಮಿತಿಯು ಸಮಾಲೋಚನೆಯನ್ನು ನಡೆಸಿ, ಅನೇಕ ಪ್ರಾಮುಖ್ಯ ತಿದ್ದುಪಡಿಗಳನ್ನು ಸ್ವೀಕರಿಸಿದೆ.

ಯೋಜನಾ ಆಯೋಗವು ಒಟ್ಟು ಉತ್ಪನ್ನದಲ್ಲಿ ೨೦% ಮಾತ್ರ ಗೇಣಿಯಾಗಿರಬೇಕೆಂದು ಹೇಳಿದ್ದರೂ ಸಮಿತಿಯು ಅದನ್ನು ಉದ್ದೇಶಪೂರ್ವಕವೆಂಬಂತೆ ಕಡೆಗಣಿಸಿ, ಧನಿಗಳಿಗೆ ೪೦% ಪಾಲನ್ನು ಕೊಡುವಷ್ಟು ಔದಾರ್ಯದಿಂದ ವರ್ತಿಸಿದೆ. ಬೇರೆ ಅನೇಕ ತಿದ್ದುಪಡಿಗಳೂ ಮಹತ್ವದಿಂದ ಕೂಡಿವೆ.

ಒಕ್ಕಲುಗಳೂ ಧನಿಗಳೂ ಇವನ್ನು ತಿಳಿದಿರುವುದು ಅಪೇಕ್ಷಣೀಯವೆಂದು ಭಾವಿಸಿ, ಪರಿಶೀಲಕ ಸಮಿತಿಯು ಸಾದರಪಡಿಸಿದಂತಿರುವ ಮಸೂದೆಯ ಮುಖ್ಯಾಂಶಗಳನ್ನು ಕೆಳಗೆತ್ತಿಕೊಟ್ಟಿದ್ದೇವೆ. ಮದ್ರಾಸಿನಲ್ಲಿ ಈಗ ಜರಗುತ್ತಿರುವ ಅಧಿವೇಶನದಲ್ಲಿ ಇದಕ್ಕೆ ತಿದ್ದುಪಡಿಯಾಗಬಹುದು. ಆದುದರಿಂದ ಕೆಳಗೆ ಕೊಟ್ಟಿರುವ ವಿಷಯಗಳೇ ಕೊನೆಯ ತೀರ್ಮಾನಗಳೆಂದು ಯಾರೂ ಭಾವಿಸಬಾರದು.

ಮಸೂದೆಯ ೧ನೇ ಸೂತ್ರವು ಮಲಬಾರು ಸಾಗುವಳಿದಾರ ಒಕ್ಕಲುತನ ಶಾಸನವು ಅನ್ವಯಿಸುವ ಪ್ರದೇಶವನ್ನು ಬಿಟ್ಟು ಮದ್ರಾಸು ರಾಜ್ಯದ ಉಳಿದ ಎಲ್ಲ ಭಾಗಕ್ಕೂ ಈ ಶಾಸನವು ಅನ್ವಯವಾಗಬೇಕೆಂದು ಹೇಳುತ್ತದೆ; ಉದ್ದೇಶಿತವಾದ ಈ ಶಾಸನವು ೧ನೇ ಜುಲಾಯಿ ೧೯೫೬ನೇ ತಾರೀಕಿನಿಂದ ಜ್ಯಾರಿಗೆ ಬಂದಂತೆ ಭಾವಿಸಲ್ಪಡಬೇಕೆಂದೂ ತಿದ್ದುಪಡಿ ಮಾಡಲಾಗಿದೆ.

ಮಸೂದೆಯ ೨ನೇ ಸೂತ್ರವು ಅನೇಕ ಶಬ್ದಗಳ ಅರ್ಥವನ್ನು ವಿವರಿಸುತ್ತದೆ. "ಸಾಗುವಳಿ ವರ್ಷ" ಎಂದರೆ ಎಪ್ರೀಲಿನ ೧ನೇ ತಾರೀಕಿನಿಂದ ಅಥವಾ ಕಲೆಕ್ಟರರು ಜಿಲ್ಲೆಯ ಗಜೆಟಿನಲ್ಲಿ ಪ್ರಸಿದ್ಧಿಪಡಿಸಬಹುದಾದ ತಾರೀಕಿನಿಂದ ಪ್ರಾರಂಭವಾಗುವ ವರ್ಷವಾಗಿದೆ.

"ಸಾಗುವಳಿದಾರ ಒಕ್ಕಲು" ಎಂದರೆ, ಉಚಿತ ದಾಖಲೆಯಿಂದಲಿ, ಅಥವಾ ಸೂಚಿತ ರೀತಿಯ ದಾಖಲೆಯಿಂದಾಗಲಿ ಊರ್ಜಿತವಲ್ಲಿರುವ ಒಕ್ಕಲುತನದ ಒಪ್ಪಂದಪನ್ವಯ ಸ್ವತಃ ಅಥವಾ ತನ್ನ ಕುಟುಂಬದ ಸದಸ್ಯರ ದೈಹಿಕ ಶ್ರಮದಿಂದ ಇನ್ನೊಬ್ಬನ ಪಟ್ಟೆಗೆ ಸೇರಿರುವ ಭೂಮಿಯನ್ನು ಸಾಗುವಳಿ ಮಾಡುವಾತನೆಂದು ಅರ್ಥ; ಆದರೆ ಮಧ್ಯವರ್ತಿಯಾಗಿರುವವನಾಗಲೀ ಆತನ ಉತ್ತರಾಧಿಕಾರಿಯಾಗಲೀ ಈ ವಿವರಣೆಯಲ್ಲಿ ಬರುವುದಿಲ್ಲ. ಭೂಮಿಯನ್ನು ಹೀಗೆ ಸಾಗುವಳಿಗಾಗಿ ಒಕ್ಕಲೊಬ್ಬನಿಗೆ ವಹಿಸಿಕೊಡುವಾತನೇ ಧನಿ.

ಬಾವಿ ಅಥವಾ ಬೇರೆ ಬಗೆಯಿಂದ ನೀರೆತ್ತಿ ಸಾಗುವಳಿ ಮಾಡುವ ಪುಂಜಭೂಮಿಯೇ "ಬಾಗಾಯತು". ಈ ಶಾಸನಂತೆ ಕೊಡಬೇಕಾದ ಗೇಣಿಯೇ "ನ್ಯಾಯವಾದ ಗೇಣಿ." ಮಳೆ ಮತ್ತು ಹವಾಮಾನವು ಸಾಮಾನ್ಯ ಪರಿಸ್ಥಿತಿಯಲ್ಲಿದ್ದಾಗ ಆ ಜಾತಿಯ ಮತ್ತು ಅದೇ ಪರಿಸ್ಥಿತಿ ಮತ್ತು ಅನುಕೂಲತೆಗಳುಳ್ಳ ಭೂಮಿಯಲ್ಲಿ ಪಡೆಯಬಹುದಾದ ಉತ್ಪನ್ನವೇ "ಸಾಮಾನ್ಯ ಒಟ್ಟು ಉತ್ಪನ್ನ."

ಇದೇ ಸೂತ್ರದ ೩ನೇ ಉಪನಿಯಮದ ಪ್ರಕಾರ, ಒಂದು ಭೂಮಿಯು ನಂಜವೊ, ಪುಂಜವೊ, ಬಾಗಾಯತೊ ಎಂಬ ಪ್ರಶ್ನೆ ಎತ್ತಲ್ಪಟ್ಟಾಗ, ಆ ಪ್ರಶ್ನೆಯು ಯಾವ ಸಮಯಕ್ಕೆ ಸಂಬಂಧಿಸಿರುವುದೊ ಅಂದಿನ ವಾಸ್ತವಾಂಶಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ತೀರ್ಮಾನ ಮಾಡಬೇಕಾಗಿದೆ.

ಮಸೂದೆಯ ೩ನೇ ಸೂತ್ರವು ಧನಿ ಮತ್ತು ಒಕ್ಕಲುಗಳು ನಿರ್ವಹಿಸಬೇಕಾದ ಕೆಲಸ ಮತ್ತು ಅವರಿಗಿರುವ ಬಾಧ್ಯತೆಯನ್ನು ವಿವರಿಸುತ್ತದೆ. ೧ನೇ ಜುಲಾಯಿ ೧೯೫೬ನೇ ತಾರೀಕಿನಿಂದ ಪ್ರತಿಯೊಬ್ಬ ಒಕ್ಕಲು ಈ ಶಾಸನದಂತೆ ಪಾವತಿಯಾಗಬೇಕಾಗಿರುವ ಗೇಣಿಯನ್ನು ತನ್ನ ಧನಿಗೆ ಪಾವತಿ ಮಾಡಲು ಬದ್ಧನಾಗಿದ್ದಾನೆ; ಧನಿಯು ಇದನ್ನು ಸ್ವೀಕರಿಸಲೂ ಬದ್ಧನಾಗಿದ್ದಾನೆ.

ನೀರಾವರಿಯು ಸುವ್ಯವಸ್ಥಿತವಾಗಿಲ್ಲದಿದ್ದರೆ, ಧನಿಯು ತನ್ನ ಇಚ್ಛೆಯನ್ನು ಅವಲಂಬಿಸಿ, ಒಂದೇ ಉತ್ಪನ್ನದಲ್ಲಿ ತನ್ನ ಪಾಲನ್ನು ಪಡೆದು ತನ್ನ ಪಾಲಿಗೆ ಅನುಗುಣವಾದ ದಾಮಾಶಯದಲ್ಲಿ ಸುವ್ಯವಸ್ಥಿತವಾಗಿಲ್ಲದ ನೀರಾವರಿಗಾಗಿ ಕೊಡಬೇಕಾದ ಹೆಚ್ಚಿಗೆ ಕಂದಾಯದ ಪಾಲನ್ನು ವಹಿಸಬಹುದು; ಅಥವಾ ಸುವ್ಯವಸ್ಥಿತವಲ್ಲದ ನೀರಾವರಿ ಕ್ರಮವನ್ನು ಅನುಸರಿಸದಿದ್ದರೆ ಏನು ಉತ್ಪನ್ನವಾಗುತ್ತಿತ್ತೋ ಅದರಲ್ಲಿ ತನ್ನ ಪಾಲನ್ನು ಮಾತ್ರ ತೆಗೆದುಕೊಂಡು ನೀರಾವರಿಗಾಗಿ ಕೊಡಬೇಕಾದ ಹೆಚ್ಚಿಗೆ ಕಂದಾಯದ ಪಾಲನ್ನು ಸಾಗುವಳಿದಾರ ಒಕ್ಕಲೇ ವಹಿಸಬೇಕೆಂದು ಹೇಳಬಹುದು.

ಸಾಗುವಳಿದಾರ ಒಕ್ಕಲು ಉದಾಸೀನ ಮಾಡಿದಾಗ ಅಥವಾ ಯಾವುದಾದರೂ ಬೆಳೆಯನ್ನು ಬೆಳೆಸದೆ ಸುಮ್ಮನೆ ಕುಳಿತಾಗ ಸಹ ಧನಿಯು ನ್ಯಾಯವಾದ ಗೇಣಿಯನ್ನು ವಸೂಲುಮಾಡಲು ಬಾಧ್ಯಸ್ಥನೇ ಆಗುತ್ತಾನೆ.

ಬೇರೆಡೆ ಸೂಚಿಸಿದ ವಿಷಯಗಳಿಗೆ ಒಳಪಟ್ಟು, ಬೀಜದ ಬೆಲೆ, ಗೊಬ್ಬರ, ಉಳುಮೆ, ಪೈರು ಕೊಯ್ಯುವಿಕೆ, ಧಾನ್ಯ ಮಾಡುವಿಕೆ ಇತ್ಯಾದಿ ಎಲ್ಲ ಬಗೆಯ ಸಾಗುವಳಿ ವೆಚ್ಚವನ್ನೂ ಸಾಗುವಳಿದಾರ ಒಕ್ಕಲೇ ನೋಡಿಕೊಳ್ಳಬೇಕಾಗಿದೆ.

ಶಾಸನದಲ್ಲಿ ಪ್ರಕಟವಾಗಿ ಹೇಳಲಾಗಿರುವ ಸಾರ್ವಜನಿಕ ವೆಚ್ಚಗಳನ್ನು ಸಾಗುವಳಿದಾರ ಒಕ್ಕಲಿನಿಂದ ಧನಿಯು ವಸೂಲು ಮಾಡಬಲ್ಲನು; ಆದರೆ ಸರಕಾರಕ್ಕೂ ಸ್ಥಳೀಯ ಸಂಸ್ಥೆಗಳಿಗೂ ಪಾವತಿಯಾಗಬೇಕಾಗಿರುವ ಎಲ್ಲವನ್ನೂ ಧನಿಯೇ ತೆರಬೇಕಾಗಿದೆ.

ಗದ್ದೆಯಲ್ಲಿರುವ ನೀರಿನ ಕಾಲುವೆಗಳ ದುರಸ್ತಿ ಮತ್ತು ಮಣ್ಣನ್ನು ತೆಗಿಸುವ ಜವಾಬ್ದಾರಿಯು ಒಕ್ಕಲಿನದು; ಬೇರೆ ಬಗೆಯ ಕಾಲುವೆಗಳಾದರೆ ಈ ಸಂಬಂಧದ ವೆಚ್ಚವನ್ನು ಧನಿಯು ವಹಿಸಬೇಕಾಗಿದೆ. ಭೂಮಿಯನ್ನೂ ಬಾವಿಗಳನ್ನೂ ಯೋಗ್ಯ ಸ್ಥಿತಿಯಲ್ಲಿಡಲು ತಗಲುವ ಎಲ್ಲ ಮೂಲ ವೆಚ್ಚಗಳನ್ನು ಧನಿಯೇ ವಹಿಸಬೇಕಾಗಿದೆ.

ಈ ಶಾಸನವು ಜ್ಯಾರಿಗೆ ಬಂದ ಬಳಿಕ ಯಾವನೇ ಧನಿಯು ನ್ಯಾಯವಾದ ಗೇಣಿಯನ್ನೂ, ಶಾಸನದಲ್ಲಿ ಬೇರೆಡೆ ಪ್ರಕಟವಾಗಿ ಹೇಳಲಾಗಿರುವ ಸಾರ್ವಜನಿಕ ವೆಚ್ಚಗಳನ್ನೂ ಬಿಟ್ಟು ಅದಕ್ಕಿಂತ ಹೆಚ್ಚಿಗೆ ಏನನ್ನೂ ಸಾಗುವಳಿದಾರ ಒಕ್ಕಲಿನಿಂದ ಕೇಳಲಾಗದು; ನ್ಯಾಯವಾದ ಗೇಣಿಯನ್ನಲ್ಲದೆ ಬೇರೆ ಯಾವುದೇ ವಸ್ತು ಅಥವಾ ಸರಕನ್ನೂ ಕೇಳಲಾಗದು.

ನ್ಯಾಯವಾದ ಗೇಣಿಗಿಂತ ಒಕ್ಕಲುತನದ ಒಪ್ಪಂದದಂತೆ ಪಾವತಿಯಾಗಬೇಕಾಗಿರುವ ಗೇಣಿಯು ಕಡಿಮೆಯಾದ ಸಂದರ್ಭಗಳಲ್ಲಿ ಬಿಟ್ಟು, ಸಾಗುವಳಿದಾರ ಒಕ್ಕಲಿನಿಂದ ಯಾವನೇ ಧನಿಯು ಬಿಟ್ಟಿ ಕೆಲಸವನ್ನಾಗಲೀ ಆತನ ಜಾನುವಾರುಗಳ ಧರ್ಮಾರ್ಥ ಉಪಯೋಗವನ್ನಾಗಲೀ ಕೇಳಲಾಗದು.

ಆದರೆ, ಭೂಮಿಗೆ ಗೇಣಿಯನ್ನು ವಹಿಸಿಕೊಡುವ ಹೊತ್ತಿಗೆ ಇದ್ದ ಯಾವುದೇ ವಸ್ತುವಿಗೆ ಅಥವಾ ಭೂಮಿಗೆ ಒಕ್ಕಲು ನಷ್ಟವನ್ನುಂಟು ಮಾಡಿದರೆ ಅದಕ್ಕೆ ಧನಿಯು ಪರಿಹಾರವನ್ನು ಕೇಳಬಲ್ಲನು.

ಧನಿಯು ಮೂಲಗೇಣಿದಾರನಾಗಿದ್ದಲ್ಲಿ ಮತ್ತು ಆತನು ತನ್ನ ಒಕ್ಕಲಿನಿಂದ ಪಡೆಯುವ ಗೇಣಿಯು ಈ ಶಾಸನದಿಂದಾಗಿ ಕಡಿಮೆಯಾಗುವುದಾದಲ್ಲಿ ಆತನು ತಾನು ಮೂಲಗೇಣಿಗೆ ಯಾರಿಂದ ಭೂಮಿಯನ್ನು ಪಡೆದಿರುವನೊ ಆ ಮೂಲಗಾರನಿಗೆ ತನ್ನ ಒಕ್ಕಲಿನಿಂದ ಪಡೆಯುವ ಗೇಣಿಯು ಯಾವ ದಾಮಾಶಯದಲ್ಲಿ ಕಡಿಮೆಯಾಗಿದೆಯೋ ಅದೇ ದಾಮಾಶಯದಲ್ಲಿ ತಾನು ಪಾವತಿಮಾಡಬೇಕಾದ ಗೇಣಿಯನ್ನೂ ಕಡಿಮೆ ಮಾಡಿಕೊಡಬಲ್ಲನು.

ಅಲ್ಲದೆ, ಒಬ್ಬ ಧನಿಯು ತನ್ನ ಒಕ್ಕಲಿಗೆ ಗೊಬ್ಬರಕ್ಕಾಗಿ ಸಾಲವನ್ನು ಕೊಡಬಲ್ಲನು. ಹೀಗೆ ಕೊಟ್ಟಸಾಲದಮಟ್ಟಿಗೆ ಉತ್ಪನ್ನದಲ್ಲಿ ಸಾಗುವಳಿದಾರ ಒಕ್ಕಲಿಗೆ ಸಿಗಬೇಕಾದ ಪಾಲಿನ ಮೇಲೆ ಧನಿಗೆ ಅಧಿಕಾರವು ಬರುತ್ತದೆ.

ನ್ಯಾಯವಾದ ಗೇಣಿಯ ಪ್ರಮಾಣವೆಷ್ಟೆಂಬುದನ್ನು ೪ನೇ ಸೂತ್ರವು ಹೇಳುತ್ತದೆ. ನಂಜಭೂಮಿಯಾದರೆ ಸಾಮಾನ್ಯ ಒಟ್ಟು ಉತ್ಪನ್ನದ ೪೦% ಅಥವಾ ಅದಕ್ಕೆ ಸಮನಾದ ಹಣವು ಗೇಣಿ. ಪುಂಜ ಭೂಮಿಯಾದರೆ, ಸಾಮಾನ್ಯ ಒಟ್ಟು ಉತ್ಪನ್ನದ ೨೫% ಅಥವಾ ಅದಕ್ಕೆ ಸಮನಾದ ಹಣವು ಗೇಣಿ.

ನೀರು ಮೊಗೆಯುವಿಕೆಯಿಂದ ನೀರಾವರಿಯು ನಡೆಯುವ ನಂಜಭೂಮಿಯಾದರೆ ಸಾಮಾನ್ಯ ಒಟ್ಟು ಉತ್ಪನ್ನದ ೩೫% ಅಥವಾ ಅದಕ್ಕೆ ಸಮಾನವಾದ ಹಣವು ಗೇಣಿ! ಬಾಗಾಯತು ಭೂಮಿಯಾದರೆ ಒಟ್ಟು ಉತ್ಪನ್ನದ ೩೩ ೧/೩ ಅಥವಾ ಅದಕ್ಕೆ ಸಮನಾದ ಹಣವು ಗೇಣಿ.

ಕೊನೆಯವೆರಡು ಬಗೆಯ ಭೂಮಿಯ ಮಟ್ಟಿಗೆ, ನೀರನ್ನು ಧನಿಯು ಸ್ಥಾಪಿಸಿದ ಪಂಪು ಸೆಟ್ಟಿನಿಂದ ಎತ್ತುವುದಾದಲ್ಲಿ ಗೇಣಿಯನ್ನು ೪೦% ಪ್ರಮಾಣಕ್ಕೆ ಏರಿಸಲಾಗುತ್ತದೆ. ಈ ಪಂಪು ಸೆಟ್ಟನ್ನು ದುರಸ್ತಿಗೊಳಿಸುವ ವೆಚ್ಚವನ್ನು ಧನಿಯೂ ಅದನ್ನು ನಡೆಸುವ ವೆಚ್ಚವನ್ನು ಒಕ್ಕಲೂ ವಹಿಸಿಕೊಳ್ಳಬೇಕಾಗಿದೆ. ಪಂಪು ಸೆಟ್ಟನ್ನು ಇಡುವ ವಿಷಯದಲ್ಲಿ ಧನಿಯ ಇಚ್ಛೆಗೆಯೇ ಮಾನ್ಯತೆ ಸಿಗುತ್ತದೆ.

ಮೇಲಿನಂತೆ, ಒಟ್ಟು ಉತ್ಪನ್ನದಲ್ಲಿ ಪಾಲಲ್ಲದೆ ಹೈಹುಲ್ಲು, ಧಾನ್ಯದ ಸಿಪ್ಪೆ, ಒಣ ದಂಟು ಇತ್ಯಾದಿಗಳಲ್ಲಿ ೨೦% ಧನಿಗೆ ಸಲ್ಲಬೇಕಾಗಿದೆ.

ಒಕ್ಕಲುತನದ ಒಪ್ಪಂದವು ಮೇಲೆ ಹೇಳಿದುದಕ್ಕಿಂತಲೂ ಕಡಿಮೆ ದರಗಳಲ್ಲಿ ಗೇಣಿಯನ್ನು ಪಾವತಿಮಾಡುವುದಕ್ಕೆ ಅವಕಾಶವಿತ್ತಿದ್ದರೆ, ಆ ಒಪ್ಪಂದದ ಅವಧಿಯ ಮಟ್ಟಿಗೆ ಕಡಿಮೆ ದರಗಳೇ ಅನ್ವಯವಾಗುತ್ತವೆ.

ಮಸೂದೆಯ ೫ನೇ ಸೂತ್ರವು ಗೇಣಿಯನ್ನು ಹೇಗೆ ಪಾವತಿಮಾಡಬಹುದೆಂದು

(೧೦ನೇ ಪುಟ ನೋಡಿರಿ)

ನಿಮ್ಮ ಅಮೂಲ್ಯ ಒಡವೆ ವಸ್ತುಗಳನ್ನು ಭದ್ರತೆಯಿಂದ ಇರಗೊಡಿಸುವುದು ನಿಮ್ಮ ಹೊಣೆಯಲ್ಲವೇ?

ಈ ಅಪಾರ ಜವಾಬ್ದಾರಿಯನ್ನು ಕಿಂಚಿತ್ ಪ್ರತಿಫಲಕ್ಕೆ ನಾವು ವಹಿಸಿಕೊಳ್ಳುವೆವೆಂಬುದು ನಿಮಗೆ ಗೊತ್ತೆ?

ಹೆಚ್ಚಿನ ಮಾಹಿತಿಗೆ ನಮ್ಮೊಡನೆ ವಿಚಾರಿಸಿರಿ:

ದಿ ವಿಜಯ ಬೇಂಕ್ ಲಿಮಿಟೆಡ್

ಸೇಫ್ ಡೆಪೊಸಿಟ್ ವಾಲ್ಟ್

ಮಂಗಳೂರು—3.



ಸುಯೇಜಿನ ಕಾಲುವೆ ತಂಟೆಗೆ ಪರಿಹಾರೋಪಾಯ

ಅಂತಾರಾಷ್ಟ್ರೀಯ ನಿಯಂತ್ರಣವೇ ಯೋಗ್ಯವೆಂದು ಪ್ರಮುಖ ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯ

ಸುಯೇಜಿನ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸಿದುದರಿಂದ ಬ್ರಿಟನು ಮತ್ತು ಫ್ರಾನ್ಸುಗಳಷ್ಟು ಉದ್ವಿಗ್ನತೆಗೊಂಡ ರಾಷ್ಟ್ರಗಳು ಬೇರೆ ಯಾವುದೂ ಕಾಣುವುದಿಲ್ಲ. ಕಾಲುವೆ ಕಂಪೆನಿಯ ರಾಷ್ಟ್ರೀಕರಣಕ್ಕೆ ತಾತ್ಕಾಲಿಕ ನೆಪವನ್ನೊದಗಿಸಿದ ಅಮೇರಿಕವು ತನ್ನ ಮಿತ್ರ ರಾಷ್ಟ್ರಗಳಿಗಾದ ಮುಖಭಂಗವನ್ನು ತನ್ನ ಮುಖಭಂಗವೆಂದೇ ಭಾವಿಸಿದೆಯಾದರೂ ಮಿತ್ರ ರಾಷ್ಟ್ರಗಳ ಭಾವೋದ್ರಿಕ್ತತೆಯನ್ನು ಅದು ಮೆಚ್ಚಿಕೊಂಡಿಲ್ಲವೆಂಬಂತೆ ಅದರ ವ್ಯವಹಾರಗಳು ವ್ಯಕ್ತಪಡಿಸುತ್ತವೆ.

ಪ್ರತೀಕಾರ ಕ್ರಮ

ಕಾಲುವೆಯ ರಾಷ್ಟ್ರೀಕರಣವನ್ನು ಐಗುಪ್ತದ ಅಧ್ಯಕ್ಷ ನಾಸೇರರು ಸಾರಿದೊಡನೆಯೇ ಬ್ರಿಟನು ಮತ್ತು ಫ್ರಾನ್ಸುಗಳು ಆ ದೇಶದ ಹಣಕಾಸಿನ ವ್ಯವಹಾರಗಳ ಮೇಲೆ ಬಲಾತ್ಕಾರವನ್ನು ಹೇರುವ ಕ್ರಮಗಳನ್ನು ಕೈಗೊಂಡಿವೆ; ಅಮೇರಿಕವು ಸಹ ಇದೀಗ ಈ ಮಿತ್ರರಾಷ್ಟ್ರಗಳ ಮೇಲ್ಪಂಕ್ತಿಯನ್ನು ಅನುಸರಿಸಿದೆ. ಐಗುಪ್ತವು ಮೊದಲು ಈ ನಿರ್ಬಂಧಕ್ಕೆ ಸಮಾನವಾದ ಪ್ರತೀಕಾರ ಕ್ರಮಗಳನ್ನು ಸಾರಿತು; ಆದರೆ, ಹಿಂದಿನಿಂದ ತಾನು ಅಪರಾಧಿಯ ಸ್ಥಾನದಲ್ಲಿ ಇರಬಾರದೆಂಬ ವಿವೇಕದಿಂದಲೋ ಏನೋ, ಇವುಗಳನ್ನು ಹಿಂದೆಗೆದುಕೊಂಡಿತು.

ಪಾಶ್ಚಾತ್ಯರ ಯುದ್ಧ ಸಿದ್ಧತೆ

ರಾಷ್ಟ್ರೀಕರಣದಿಂದ ಹುಚ್ಚು ಹಿಡಿದಂತೆ ಬ್ರಿಟನು ಮತ್ತು ಫ್ರಾನ್ಸುಗಳು ವರ್ತಿಸುತ್ತಿವೆ. ಇವೆರಡೂ ರಾಷ್ಟ್ರಗಳು ತಮ್ಮ ಸೈನ್ಯ ಬಲವನ್ನು ಭೂಮಧ್ಯ ಸಮುದ್ರದ ಆಯಕಟ್ಟಿನ ಪ್ರದೇಶಗಳಲ್ಲಿ ಶೇಖರಿಸಿಡಲು ಆಜ್ಞೆಗಳನ್ನು ನೀಡಿವೆ. ವೈಮಾನಿಕರನ್ನು ಹೊತ್ತುಕೊಂಡು ಯುದ್ಧ ಹಡಗುಗಳು ಭೂಮಧ್ಯ ಸಮುದ್ರದ ಠಾಣ್ಯಗಳಿಗೆ ಸಾಗಿವೆ. ಐಗುಪ್ತದಲ್ಲಿರುವ ಬ್ರಿಟನಿನ ಪ್ರಜೆಗಳೆಲ್ಲರೂ ಸ್ವದೇಶಕ್ಕೆ ಮರಳಿ ಬರಬೇಕೆಂದು ಎಚ್ಚರಿಕೆಯನ್ನು ಕೊಡಲಾಗಿದೆ. ಯಾವ ಕಾಲದಲ್ಲಿ ಏನು ಸಂಭವಿಸಬಹುದೆಂಬುದನ್ನು ಹೇಳಲಾಗದು ಎಂಬಂತೆ ಯುದ್ಧ ಸಿದ್ಧತೆಗಳನ್ನು ಫ್ರಾನ್ಸು ಮತ್ತು ಬ್ರಿಟನುಗಳು ನಡೆಸಿವೆ.

ಐಗುಪ್ತವು ಹಿಂದುಳಿದಿಲ್ಲ

ಐಗುಪ್ತವು ಇದನ್ನು ನೋಡಿ ಸುಮ್ಮನೆ ಕುಳಿತಿದೆ ಎಂದೇನಿಲ್ಲ. ಅಲ್ಲಿಯ ಮುಸ್ಲಿಂ ಮುಂದಾಳೊಬ್ಬರು ಧರ್ಮಯುದ್ಧದ ಕರೆಯನ್ನಿತ್ತು ಸುಯೇಜಿನ ಕಾಲುವೆಗಾಗಿ ಪ್ರಾಣಾರ್ಪಣ ಮಾಡುವುದು ಪ್ರತಿಯೊಬ್ಬ ಪ್ರಜೆಯ ಕರ್ತವ್ಯವೆಂದು ಸಾರಿದ್ದಾರೆ. ಐಗುಪ್ತದ ಸೈನ್ಯ ಬಲವನ್ನು ಸಂವರ್ಧಿಸಲಾಗುತ್ತಿದೆ. ಲಕ್ಷಾಂತರ ಪ್ರಬುದ್ಧ ಪ್ರಜೆಗಳು ಸೈನಿಕ ಶಿಕ್ಷಣವನ್ನು ಹೊಂದಲು ಮತ್ತು ಸುಯೇಜಿನ ರಕ್ಷಣೆಗಾಗಿ ಹೋರಾಡಲು ಮುಂಬಂದಿದ್ದಾರೆ. ಐಗುಪ್ತವನ್ನು ಬಲಪ್ರದರ್ಶನದಿಂದ ಮಣಿಸಬಹುದು ಎಂಬುದಾಗಿ ಫ್ರಾನ್ಸಾಗಲೀ ಬ್ರಿಟನಾಗಲೀ ಭಾವಿಸಿರುವವಾದರೆ ಅದರಷ್ಟು ದೊಡ್ಡ ತಪ್ಪು ಬೇರೆ ಇರಲಾರದು.

ದುಡುಕಿದರೆ ಗಂಡಾಂತರ

ಫರೂಕ ಅರಸರ ಕಾಲದಲ್ಲಿದ್ದಷ್ಟು ಕ್ಷೀಣವಾದ ರಾಷ್ಟ್ರವಾಗಿ ಐಗುಪ್ತವು ಇಂದು ಉಳಿದಿಲ್ಲ; ಅದು ಸೈನಿಕ ಆಡಳಿತೆಗಾರರ ನೇತೃತ್ವದಲ್ಲಿ ಈಗ ತುಂಬ ಬಲಶಾಲಿಯಾಗಿದೆ. ಬ್ರಿಟನು ಮತ್ತು ಫ್ರಾನ್ಸುಗಳು ಭೂಮಧ್ಯ ಸಮುದ್ರದಲ್ಲಿ ತಂದು ಹಾಕಬಹುದಾದ ಸೈನ್ಯ ಬಲವು ಐಗುಪ್ತದ ಶಕ್ತಿಯನ್ನು ಕುಂದಿಸುವಷ್ಟು ಸಾಮರ್ಥ್ಯವನ್ನು ಹೊಂದಿಲ್ಲವೆಂದೇ ನಿರೀಕ್ಷಕರ ಅಭಿಪ್ರಾಯ. ಅದಲ್ಲದೆ, ಐಗುಪ್ತಕ್ಕೆ ಬುದ್ಧಿ ಹೇಳಲು ಸೈನಿಕ ಕ್ರಮಗಳನ್ನು ಪಾಶ್ಚಾತ್ಯ ರಾಷ್ಟ್ರಗಳು ಕೈಗೊಂಡರೆ ಅದು ತೃತೀಯ ಮಹಾಯುದ್ಧಕ್ಕೆ ನಾಂದಿಯಾಗುವುದು ಖಂಡಿತ.

ಅಮೇರಿಕದ ಅಂತರ್ಯ

ಇನ್ನೊಂದು ಮಹಾಯುದ್ಧಕ್ಕೆ ಸುಯೇಜಿನ ಕಾಲುವೆಯ ರಾಷ್ಟ್ರೀಕರಣವು ನೆಪವನ್ನೊದಗಿಸಿದರೆ, ಅದರಷ್ಟು ಶೋಚನೀಯವಾದ ವಿಷಯ ಬೇರೆ ಇರಲಾರದು. ಇದನ್ನು ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯಾವುದಾದರೂ ತಿಳಿದಿದ್ದರೆ ಅಮೇರಿಕ ಮಾತ್ರ ಎಂದು ಹೇಳಬಹುದು. ಬ್ರಿಟನಿನಲ್ಲಿಯೂ ಫ್ರಾನ್ಸಿನಲ್ಲಿಯೂ ಧುರೀಣರು ಮತ್ತು ಪತ್ರಿಕೋದ್ಯಮಿಗಳು ಯುದ್ಧ ಮುಖದಲ್ಲಿಯೇ ನಾಸೇರರಿಗೆ ಬುದ್ಧಿ ಕಲಿಸಿ, ಸುಯೇಜಿನ ಕಾಲುವೆ ಪ್ರದೇಶದಲ್ಲಿ ಅಧಿಕಾರವನ್ನು ಸ್ಥಾಪಿಸಬೇಕೆಂಬುದಾಗಿ ದೀರ್ಘ ಭಾಷಣಗಳನ್ನು ಮಾಡುತ್ತಿರುವಾಗ, ಅಮೇರಿಕವು ಭಾವೋದ್ರೇಕದ ಬದಲು ವ್ಯವಹಾರ ಚಾತುರ್ಯವನ್ನು ಬೋಧಿಸುತ್ತಿದೆ. ರಾಷ್ಟ್ರೀಕರಣದಿಂದ ಉಂಟಾದ ಉದ್ವಿಗ್ನತೆಯು ತನ್ನ ಮಿತ್ರ ರಾಷ್ಟ್ರಗಳು ಕೈಗೊಳ್ಳಬಹುದಾದ ಕ್ರಮಗಳನ್ನು ಲೋಕದ ಜನರ ದೃಷ್ಟಿಯಲ್ಲಿ ನಿಂದನೀಯವಾಗಗೊಡಬಾರದೆಂಬುದೇ ಅಮೇರಿಕದ ಅಂತರ್ಯ.

ತ್ರಿರಾಷ್ಟ್ರ ಸಮ್ಮೇಳನ

ರಾಷ್ಟ್ರೀಕರಣದ ಸುದ್ದಿ ಬಂದೊಡನೆಯೇ ಲಂಡನಿನಲ್ಲಿ ಬ್ರಿಟನು, ಫ್ರಾನ್ಸು ಮತ್ತು ಅಮೇರಿಕದ ಮುತ್ಸದ್ದಿಗಳು ಸಮಾಲೋಚನೆಗಳನ್ನು ಪ್ರಾರಂಭಿಸಿದಾಗ, ಡಲ್ಲೇಸರು ಇದರಲ್ಲಿ ಭಾಗವಹಿಸಿರಲಿಲ್ಲ; ಅವರ ಸಹಾಯಕರು ಮಾತ್ರ ಬಂದಿದ್ದರು. ಆದರೆ, ಮಿತ್ರ ರಾಷ್ಟ್ರಗಳು ತಪ್ಪು ಹೆಜ್ಜೆಯನ್ನಿಡಬಹುದೆಂದು ಸಂಶಯವಾದುದರಿಂದಲೋ ಏನೋ, ಅನಿರೀಕ್ಷಿತವಾಗಿ ಡಲ್ಲೇಸರು ಲಂಡನಿಗೆ ಸಮಾಲೋಚನೆ ಕೊನೆಯ ಹಂತದಲ್ಲಿದ್ದಾಗ ಬಂದರು. ಈ ತ್ರಿರಾಷ್ಟ್ರ ಸಮ್ಮೇಳನವು ಸುಯೇಜಿನ ಕಾಲುವೆಯನ್ನು ಅಂತಾರಾಷ್ಟ್ರೀಯ ಸ್ವರೂಪದ ಆಡಳಿತ ವ್ಯವಸ್ಥೆಗೆ ಒಳಪಡಿಸುವುದೇ ಸೂಕ್ತವೆಂದು ತೀರ್ಮಾನಿಸಿದೆ; ಮತ್ತು ಈ ಬಗ್ಗೆ ಹೆಚ್ಚಿನ ಪರ್ಯಾಲೋಚನೆಗಾಗಿ ೨೪ ರಾಷ್ಟ್ರಗಳ ಸಮ್ಮೇಳನವನ್ನು ಕರೆದಿದೆ.

ಭಾರತದ ಸಂಶಯ

ಇದೇ ೧೬ನೇ ಆಗೋಸ್ತಿನಂದು ೨೪ ರಾಷ್ಟ್ರಗಳ ಸಮ್ಮೇಳನವು ಲಂಡನಿನಲ್ಲಿ ಸೇರಬೇಕೆಂದು ತ್ರಿರಾಷ್ಟ್ರಗಳು ಸೂಚಿಸಿವೆ. ಐಗುಪ್ತ, ಭಾರತ, ರಶಿಯ ಮುಂತಾದ ರಾಷ್ಟ್ರಗಳಿಗೂ ಸಮ್ಮೇಳನದಲ್ಲಿ ಸಹಭಾಗಿಗಳಾಗಬೇಕೆಂದು ಆಮಂತ್ರಣ ಬಂದಿದೆ. ಭಾರತದ ನಿಲುವೆಯು ಈ ಸಮ್ಮೇಳನದ ಬಗ್ಗೆ ಇನ್ನೂ ಖಚಿತವಾಗಿ ತಿಳಿದು ಬಂದಿಲ್ಲ. ಸುಯೇಜಿನ ಪ್ರಕರಣವು ಲೋಕ ಶಾಂತಿಯನ್ನು ಕೆಡಿಸಿ, ಇನ್ನೊಂದು ಯುದ್ಧಕ್ಕೆ ಪೀಠಿಕೆಯಾಗುವುದನ್ನು ತಡೆಗಟ್ಟಬೇಕೆಂಬುದೇ ಭಾರತದ ನಿರ್ಧಾರ. ಆದರೆ ಉದ್ದೇಶಿತವಾದ ಸಮ್ಮೇಳನವು ಇಷ್ಟು ಘನವಾದ ಧ್ಯೇಯವನ್ನು ಇಟ್ಟುಕೊಂಡೀತೆ, ಆ ಧ್ಯೇಯಕ್ಕೆ ಅನುಗುಣವಾದ ನಡವಳಿಕೆಯ ಕ್ರಮಗಳನ್ನು ಅನುಸರಿಸೀತೆ ಎಂಬುದು ತುಂಬ ಸಂಶಯ.

ಕ್ರಮಬದ್ಧವಾದ ನಿಶ್ಚಯ

ಐಗುಪ್ತವು ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸಿದುದು ಕ್ರಮಬದ್ಧವಾದ ನಿಶ್ಚಯವೆಂದು ಭಾರತವು ಭಾವಿಸಿದೆ; ಆಫ್ರಿಕ ಮತ್ತು ಏಶ್ಯದ ಹೆಚ್ಚಿನ ರಾಷ್ಟ್ರಗಳು ಇದೇ ಅಭಿಪ್ರಾಯವನ್ನು ಹೊಂದಿವೆ. ಸಾಮ್ಯವಾದಿ ರಾಷ್ಟ್ರಗಳಾದ ರಶಿಯ ಮತ್ತು ಕೆಂಪು ಚೀನಗಳೂ ಇದೇ ನಿಲುವೆಯನ್ನು ಹೊಂದಿವೆ. ಹಾಗಿರುವಾಗ ಐಗುಪ್ತದ ಭಾಗವಾಗಿರುವ ಸುಯೇಜಿನ ಕಾಲುವೆ ಪ್ರದೇಶವನ್ನು ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಒಪ್ಪಿಸಬೇಕೆಂದು ಕೇಳುವುದಾದರೂ ಹೇಗೆ? ಅದು ಪ್ರಾಮುಖ್ಯವಾದ ನೀರು ದಾರಿಯೇನೋ ನಿಜ. ಅಮೇರಿಕದ ಒಡೆತನದಲ್ಲಿರುವ ಪನಾಮಾ ಕಾಲುವೆಯೂ ಲೋಕದ ದೃಷ್ಟಿಯಿಂದ ಪ್ರಾಮುಖ್ಯವಾದ ನೀರು ದಾರಿ; ಜಿಬ್ರಾಲ್ಟರ್, ಡೋವರ್ ಮುಂತಾಗಿ ಬ್ರಿಟನಿನ ಒಡೆತನದಲ್ಲಿರುವ ಜಲಸಂಧಿಗಳು ಸಹ ಅಂತಾರಾಷ್ಟ್ರೀಯ ಪ್ರಾಮುಖ್ಯದ ಹಡಗು ಸಂಚಾರ ಪ್ರದೇಶಗಳಾಗಿವೆ. ಇವನ್ನು ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಒಪ್ಪಿಸಿಕೊಡಬೇಕೆಂದು ಕೇಳಲು ಸಾಧ್ಯವಿದೆಯೆ?

ನಿರಾಧಾರವಾದ ಭಯ

ಅಮೇರಿಕದ ಅಧ್ಯಕ್ಷ ಐಕರು ಪನಾಮಾದ ಕಾಲುವೆಯ ಪ್ರಸಂಗವನ್ನು ಸುಯೇಜಿನ ಕಾಲುವೆಯ ರಾಷ್ಟ್ರೀಕರಣಕ್ಕೆ ಹೋಲಿಸಬಾರದು ಎಂದಿದ್ದಾರೆ. ಸುಯೇಜಿನ ಕಾಲುವೆ ಕಂಪೆನಿಯು ಅಂತಾರಾಷ್ಟ್ರೀಯ ಸ್ವರೂಪದ ನೀರು ದಾರಿ ಎಂಬುದಾಗಿ ಕಾನ್‌ಸ್ಟಾಂಟಿನೋಪಲ್ ಒಪ್ಪಂದದಲ್ಲಿ ಹೇಳಲಾಗಿದೆ—ಇಲ್ಲಿ ಹಡಗು ಚಲಾವಣೆಗೆ ಆತಂಕ ಬರುವ ಸಂಭವವು ನಾಸೇರರ ಕೃತಿಗಳಿಂದ ಸ್ಪಷ್ಟವಾಗಿದೆ; ಆದುದರಿಂದ ಈ ಒಪ್ಪಂದವು ಭಂಗಿಸಲ್ಪಡುವ ಭಯವಿದೆ ಎಂದು ಐಕರ ಅಭಿಪ್ರಾಯ. ಆದರೆ, ನೀರು ದಾರಿಯ ಉಪಯೋಗದ ಮಟ್ಟಿಗೆ ತಾನು ಎಲ್ಲ ಕರಾರುಗಳನ್ನು ಪಾಲಿಸುವೆನೆಂದು ಐಗುಪ್ತದ ಸರಕಾರ ಸಾರಿ ಹೇಳಿದೆ. ಕಾರಣ, ಈ ಭಯವು ನಿರಾಧಾರವಾದುದಾಗಿದೆ.

ಅಂತಾರಾಷ್ಟ್ರೀಯ ನಿಯಂತ್ರಣ

ಐಗುಪ್ತಕ್ಕೆ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸುವ ಅಧಿಕಾರವಿದೆ ಎಂಬುದನ್ನು ತ್ರಿರಾಷ್ಟ್ರ ಸಮ್ಮೇಳನವೂ ಒಪ್ಪಿದೆ; ಆದರೆ ಐಗುಪ್ತವು ನೀರುದಾರಿಯನ್ನು ತನ್ನ ಸ್ವಾರ್ಥಕ್ಕಾಗಿ ಉಪಯೋಗಿಸಿಕೊಳ್ಳುವುದನ್ನು ತಡೆಯಬೇಕೆಂಬುದಕ್ಕಾಗಿ ಅಂತಾರಾಷ್ಟ್ರೀಯ ನಿಯಂತ್ರಣವು ಆವಶ್ಯಕವೆನ್ನಲಾಗಿದೆ. ಇದು ಸರಿಯಾದ ಕ್ರಮವೆಂದು ಹೇಳಲಾಗುವುದಿಲ್ಲ—ತನ್ನ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟ ಪ್ರದೇಶವನ್ನು ಸ್ವೇಚ್ಛೆಯಿಂದ ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಒಳಪಡಿಸುವುದು ಐಗುಪ್ತದ ಅಭಿಮಾನಕ್ಕೆ ಭೂಷಣವಾದ ವಿಷಯವಲ್ಲ. ಈ ನೀರು ದಾರಿಯು ಎಷ್ಟೇ ಮಹತ್ವದ್ದಾಗಿರಲಿ, ಯುದ್ಧ ಮತ್ತಿತರ ಗಂಡಾಂತರ ಪ್ರಸಂಗಗಳಲ್ಲಿ ಈ ದಾರಿಯ ಉಪಯೋಗವನ್ನು ಬ್ರಿಟನು ಹಿಂದೆ

(೯ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.
[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)
1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956
THE CANARA BANKING CORPORATION LIMITED
H. Office: UDIPI (S.India).

५० वर्षों से जगप्रसिद्ध और विजयी होनेवाला।
प्रत्येक स्टोर में और सब स्थानों पर बिकता है।
बाटलीवाला एग्यूमिक्चर
और गोलीयां
मलेरिया इन्फ्लुएंजा और प्रत्येक प्रकारके बुखार के लिये।
सोल मेन्युफेक्चरर: डो. एच. एल. बाटलीवाला सन्स एण्ड कं. लि.
बाटलीवाला बिल्डिंग, ९३ बी. पोर्तुगीझ चर्च स्ट्रीट,
Tele. Add. "CAWASHABAD" दादर, बम्बई २८.

ಮಹಾರಾಷ್ಟ್ರ - ಗುಜರಾತಗಳನ್ನು ಸೇರಿಸಿದ ದ್ವಿಭಾಷಾರಾಜ್ಯ

ಕರ್ನಾಟಕದಲ್ಲಿ ಕಾಸರಗೋಡಿನ ಉತ್ತರ ಭಾಗವನ್ನುಳಿಸಲು ಶಿವರಾಯರ ಬಿನ್ನಹ

ರಾಜ್ಯಗಳ ಪುನಾರಚನೆಯ ಮೇಲಿ ಚರ್ಚೆಯು ವಿವರವಾಗಿ ಕಳೆದ ವಾರ ನಡೆದಾಗ ನಮ್ಮ ಜಿಲ್ಲೆಯ ದಕ್ಷಿಣ ವಿಭಾಗದಿಂದ ಲೋಕ ಸಭೆಗೆ ಆರಿಸಲ್ಪಟ್ಟ ಸದಸ್ಯ ಶ್ರೀ ಬಿ. ಶಿವರಾಯರು ಕಾಸರಗೋಡು ತಾಲೂಕಿನ ಉತ್ತರ ಭಾಗವನ್ನು ಕರ್ನಾಟಕಕ್ಕೆ ಸೇರಿಸಬೇಕೆಂದೂ ಈ ಪ್ರದೇಶವನ್ನು ಕೇರಳಕ್ಕೆ ವರ್ಗಾಯಿಸಬಾರದೆಂದೂ ಆಗ್ರಹಪೂರ್ವಕ ವಿನಂತಿಸಿದರು. ಅಲ್ಲದೆ, ತತ್ಪ್ರಯುಕ್ತ ತಿದ್ದುಪಡಿಗಳನ್ನೂ ಮಂಡಿಸಿದರು.

ಶಿವರಾಯರ ವಾದ

ಚಂದ್ರಗಿರಿ-ಪಯಸ್ವಿನಿ ನದಿಗಳ ದಕ್ಷಿಣ ಭಾಗದಲ್ಲಿ ಇರುವ ಕಾಸರಗೋಡು ತಾಲೂಕಿನ ಭಾಗವನ್ನು ಕೇರಳಕ್ಕೆ ಬಿಟ್ಟು ಕೊಡಲು ಯಾರದೂ ಆಕ್ಷೇಪವಿಲ್ಲವೆಂದೂ ಆದರೆ ಅದರ ಉತ್ತರಕ್ಕಿರುವ ಪ್ರದೇಶದ ಮೇಲೆ ಕೇರಳದ ಹಕ್ಕು ಏನೇನೂ ಇಲ್ಲವೆಂದೂ ಅವರು ಸಾಧಾರವಾಗಿ ವಾದಿಸಿದರು; ಪ್ರಜಾಸತ್ತಾತ್ಮಕ ಪದ್ಧತಿಗೆ ತುಂಬ ಮಹತ್ವವನ್ನು ಕೊಡುವ ನಾವು ಕಾಸರಗೋಡು ತಾಲೂಕಿನ ಉತ್ತರ ಭಾಗದಲ್ಲಿರುವ ೩೬ ಗ್ರಾಮ ಪಂಚಾಯತುಗಳಲ್ಲಿ ೩೪ ಕೇರಳಕ್ಕೆ ಈ ಭಾಗವನ್ನು ಸೇರಿಸುವುದರ ವಿರುದ್ಧವಿರುವುದನ್ನು ಕಡೆಗಣಿಸಲಾಗದು ಎಂದವರು ಒತ್ತಿ ಹೇಳಿದರು. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲ ಚುನಾಯಿತ ಪ್ರತಿನಿಧಿಗಳೂ, ಅಲ್ಲದೆ ಎಲ್ಲ ರಾಜಕೀಯ ಪಕ್ಷಗಳೂ, ಪ್ರಾತಿನಿಧಿಕ ಸಂಸ್ಥೆಗಳೂ, ಕಾಸರಗೋಡು ತಾಲೂಕಿನ ಉತ್ತರ ಭಾಗವನ್ನು ಕರ್ನಾಟಕದಲ್ಲಿಯೇ ಇರಗೊಳಿಸಬೇಕೆಂದು ಹೇಳುತ್ತಿರುವುದರ ಕಡೆಗೆ ಅವರು ಸಭೆಯ ಗಮನವನ್ನು ಸೆಳೆದರು.

ಕೇರಳೀಯರ ನಿಲುವು

ಶಿವರಾಯರ ಈ ವಾದಕ್ಕೆ ತಿರು-ಕೊಚ್ಚಿಯ ಕಾಂಗ್ರೆಸು ಸದಸ್ಯರಾದ ಶ್ರೀ ಎ. ಎಂ. ಥೋಮಸರು ವಿಲಕ್ಷಣವಾದ ಉತ್ತರವನ್ನಿತ್ತರೆಂದು ತಿಳಿದುಬರುತ್ತದೆ. ಕಾಸರಗೋಡು ತಾಲೂಕಿನ ಉತ್ತರ ಭಾಗವು ತುಳುನಾಡು ಎಂಬುದಾಗಿ ಶಿವರಾಯರು ತಮ್ಮ ಭಾಷಣದಲ್ಲಿ ಸ್ಪಷ್ಟವಾಗಿ ಹೇಳಿದ್ದರು; ಅಲ್ಲದೆ ಈ ಉತ್ತರ ಭಾಗದಲ್ಲಿ ೫೧% ಮಲೆಯಾಳಿ ಭಾಷೆ ಮಾಡುವವರಿರುವರಾದರೂ ನೇಕಾರ ಮತ್ತು ಮೀನುಗಾರ ಕುಟುಂಬಗಳು ಕೇರಳಕ್ಕೆ ಈ ಪ್ರದೇಶ ಹೋಗಬೇಕೆಂದು ಬಯಸುವುದಿಲ್ಲವೆಂದು ಶಿವರಾಯರು ಸ್ಪಷ್ಟಗೊಳಿಸಿದ್ದರು. ಕೆಲವು ಮಾಪಿಳ್ಳೆಯರು ಕೇರಳಕ್ಕೆ ಈ ಭಾಗವನ್ನು ಸೇರಿಸಬೇಕೆಂದು ಹೇಳುತ್ತಿರುವುದು ನಿಜವಾದರೂ ಅದು ಮಲಬಾರಿನಲ್ಲಿ ಮುಸ್ಲಿಂ ಲೀಗಿನ ಪ್ರಾಬಲ್ಯವನ್ನು ಹೆಚ್ಚಿಸುವ ರಾಜಕೀಯ ದುರುದ್ದೇಶದಿಂದ ಕೂಡಿದೆ ಎಂದು ಶಿವರಾಯರು ಸ್ಪಷ್ಟಪಡಿಸಿದ್ದರು. ಆದಾಗ್ಯೂ ತಿರು-ಕೊಚ್ಚಿಯ ಈ ಕಾಂಗ್ರೆಸು ಸದಸ್ಯರು ನೆಲದ ದುರಭಿಮಾನದಿಂದೆಂಬಂತೆ, ಕಾಸರಗೋಡಿನ ಉತ್ತರ ಭಾಗದಲ್ಲಿರುವ ೧೮೫೦೦೦ ಪ್ರಜೆಗಳಲ್ಲಿ ಕನ್ನಡಿಗರ ಸಂಖ್ಯೆ ಕೇವಲ ೧೭೦೦೦ ಎಂದು ಅಂಕೆಸಂಖ್ಯೆಯ ಮಾಯಾಮೋಡಿಯಿಂದ ವಾಸ್ತವಾಂಶವನ್ನು ಮರೆಮಾಡಲು ಪ್ರಯತ್ನಿಸಿದರು. ಗ್ರಾಮ ಪಂಚಾಯತುಗಳ ಅಭಿಪ್ರಾಯವನ್ನು ಪುರಸ್ಕರಿಸಬೇಕಾಗಿಲ್ಲವೆಂದೂ ಏಕೆಂದರೆ ಈ ಪಂಚಾಯತುಗಳ ರಚನೆಯ ಕಾಲದಲ್ಲಿ ಅವುಗಳ ಮುಂದೆ ಕಾಸರಗೋಡು ತಾಲೂಕಿನ ಈ ಭಾಗವು ಎಲ್ಲಿಗೆ ಸೇರಬೇಕೆಂಬ ವಿಷಯವಿರಲಿಲ್ಲವೆಂದೂ ಅವರು ಹೇಳಿದರು.

ಇನ್ನೂ ಪ್ರಹಾರ!

ಕನ್ನಡ ಪ್ರದೇಶಗಳ ಮೇಲೆ ಮಹಾರಾಷ್ಟ್ರದ ಪ್ರತಿನಿಧಿಗಳೂ ಆಂಧ್ರರೂ ಕೇರಳೀಯರಷ್ಟೇ ದುರಾಕ್ರಮಣ ಮಾಡಲು ಪ್ರಯತ್ನಿಸಿದರೆಂದು ಹೇಳಬಹುದು. ಅರ್ಥ ಸಚಿವ ಸ್ಥಾನದಂತಹ ಹೊಣೆಗಾರ ಪದವಿಯನ್ನು ನಿರ್ವಹಿಸಿದ ಶ್ರೀ ಸಿ. ಡಿ. ದೇಶಮುಖರು ಬೆಳಗಾಂವಿ ನಗರದಲ್ಲಿ ಮಹಾರಾಷ್ಟ್ರೀಯರ ಸಂಖ್ಯೆ ಹೆಚ್ಚಿದೆ ಎನ್ನುತ್ತಾ ಬೆಳಗಾಂವಿಯನ್ನು ಕರ್ನಾಟಕದಿಂದ ಬೇರ್ಪಡಿಸಲು ಕೇಳಿಕೊಂಡರು. ಉತ್ತರ ಕನ್ನಡ ಜಿಲ್ಲೆಯ ಉತ್ತರ ಭಾಗದ ಮೇಲೂ ಮಹಾರಾಷ್ಟ್ರೀಯ ಸದಸ್ಯರು ತಮ್ಮ ಅಧಿಕಾರವನ್ನು ಹೇರಲು ನೋಡಿದರು. ಆಂಧ್ರ ಸದಸ್ಯರು ಬಳ್ಳಾರಿಯ ಪ್ರಶ್ನೆಯನ್ನು—ಅಲ್ಲಿ ಉಪಚುನಾವಣೆಯು ನಡೆದು ಕನ್ನಡದ ಪ್ರತಿನಿಧಿಗಳು ಬಹುಮತದಿಂದ ಆರಿಸಿ ಬಂದಿರುವುದನ್ನೂ ಲೆಕ್ಕಿಸದೆ—ಪುನಃ ಎತ್ತಲು ನೋಡಿದರು. ಆದರೆ, ಈ ಪ್ರದೇಶಗಳ ರಕ್ಷಣೆಗೆ ಶ್ರೀಗಳಾದ ಕರಮರಕರ, ದಾತಾರ ಮುಂತಾದ ದಕ್ಷ ಮಂತ್ರಿಗಳು ಕೇಂದ್ರದಲ್ಲಿರುವರೆಂಬ ಕಾರಣದಿಂದಾಗಿ, ಮಹಾರಾಷ್ಟ್ರದ ಮತ್ತು ಆಂಧ್ರದ ಪ್ರತಿನಿಧಿಗಳ ಒತ್ತಾಯಕ್ಕೆ ಹೆಚ್ಚು ಪುಷ್ಟಿಯು ವ್ಯಕ್ತವಾಗಲಿಲ್ಲ. ಕಾಸರಗೋಡಿನ ಕನ್ನಡಿಗರ ವಿಷಯದಲ್ಲಿ ಉಚ್ಚ ಮಟ್ಟದ ಆಸಕ್ತಿಯನ್ನು ತೆಗೆದುಕೊಳ್ಳುವವರು ಯಾರೂ ಇಲ್ಲದೆ ಹೋದುದರಿಂದ ನಮ್ಮ ಬಾಂಧವರು ಪರದೇಶಿಗಳಂತೆ ಏಕಾಕಿಯಾಗಿ ಉಳಿಯಬೇಕಾಯಿತಲ್ಲವೆ—ಎಂದೆನ್ನುವ ಕೊರಗು ಬಳ್ಳಾರಿ ಮತ್ತು ಬೆಳಗಾಂವಿ ಪ್ರಶ್ನೆಯ ಚರ್ಚೆಯ ಕಾಲದಲ್ಲಿ ವ್ಯಕ್ತವಾಗುವಂತಾಯಿತು.

ಆಕಸ್ಮಿಕ ಬಿನ್ನಹ

ಮುಂಬಯಿ ನಗರದ ಪ್ರಶ್ನೆಯು ಲೋಕ ಸಭೆಯ ಚರ್ಚೆಯ ವೇಳೆ ತುಂಬ ಮಹತ್ವವನ್ನು ಪಡೆಯಿತು. ಶ್ರೀ ದೇಶಮುಖರಂತಹ ಆರ್ಥಿಕ ತಜ್ಞರು ಸಹ ಸಾಮಾನ್ಯ ರಾಜಕಾರಣಿಯಂತೆ ಮುಂಬಯಿ ನಗರದ ಭವಿಷ್ಯದ ಕುರಿತು ಮಾತನಾಡಿ, ರಾಜೀನಾಮೆಯನ್ನಿತ್ತು ಹೊರಬಂದುದರಿಂದ ಲೋಕಸಭೆಯ ಪ್ರತಿನಿಧಿಗಳ ಹೃದಯ ಪರಿವರ್ತನೆಯಾಯಿತೋ ಎಂಬಂತೆ, ಹಾಜರಿದ್ದ ಇನ್ನೂರೈವತ್ತಕ್ಕಿಂತಲೂ ಕಡಿಮೆ ಸಂಖ್ಯೆಯ ಲೋಕಸಭಾ ಸದಸ್ಯರಲ್ಲಿ ಸುಮಾರು ೨೨೦ ಮಂದಿ ಪ್ರಧಾನ ಮಂತ್ರಿಗಳಿಗೊಂದು ಮನವಿಯನ್ನರ್ಪಿಸಿ, ಮುಂಬಯಿ ನಗರ, ಮರಾಠವಾಡ, ವಿದರ್ಭ, ಮಹಾರಾಷ್ಟ್ರ, ಕಚ್ಛ, ಸೌರಾಷ್ಟ್ರ ಮತ್ತು ಗುಜರಾತಗಳನ್ನೊಳಗೊಂಡ ದ್ವಿಭಾಷಾ ರಾಜ್ಯವೊಂದನ್ನು ರಚಿಸಬೇಕೆಂದು ಸೂಚನೆಯನ್ನಿತ್ತರು. ಕಮ್ಯೂನಿಸ್ಟರೂ ಕಾಂಗ್ರೆಸಿನ ಕೆಲವು ಸದಸ್ಯರೂ ಈ ಮನವಿಗೆ ಅಂಕಿತ ಹಾಕಲಿಲ್ಲವೆಂದು ತಿಳಿದುಬರುತ್ತದೆ. ಕಮ್ಯೂನಿಸ್ಟರ ಧುರೀಣರಾದ ಶ್ರೀ ಗೋಪಾಲನ್ನರು ಈ ಬಗೆಯಾಗಿ ದ್ವಿಭಾಷಾ ರಾಜ್ಯ ರಚಿಸುವುದನ್ನು ಕುಟಿಲ ತಂತ್ರವೆಂದು ಕರೆದಿದ್ದಾರೆ. ಈ ಸೂಚನೆಯನ್ನು ಒಪ್ಪದ ಕಾಂಗ್ರೆಸಿಗರ ಅಭಿಪ್ರಾಯಕ್ಕನುಸಾರ, ಮಹಾರಾಷ್ಟ್ರಕ್ಕೆ ಇಂದಲ್ಲದಿದ್ದರೆ ನಾಳೆಯಾದರೂ ಮುಂಬಯಿ ನಗರವು ಸೇರುವ ಸಂಭವವನ್ನು ತಪ್ಪಿಸುವುದೇ ಈ ಹೊಸ ಸೂಚನೆಯ ಉದ್ದೇಶ.

ಗಂಭೀರ ಒಳಸಂಚು

ಕೇಂದ್ರದ ಮಾಜಿ ಮಂತ್ರಿ ಶ್ರೀ ಗಾಡ್ಗೀಳರು ಈ ಅಭಿಪ್ರಾಯವನ್ನು ಕಾಂಗ್ರೆಸು ಪಕ್ಷದ ಸಭೆಯಲ್ಲಿ ಪ್ರಕಟವಾಗಿ ಹೇಳಿದ್ದಾರೆ. ಪ್ರಧಾನ ಮಂತ್ರಿಗಳು ಮುಂಬಯಿಯು ಮಹಾರಾಷ್ಟ್ರದ್ದೆಂದು ಪದೇ ಪದೇ ಹೇಳಿದ್ದರು; ಅಲ್ಲದೆ, ಲೋಕ ಸಭೆಯಲ್ಲಿ ಮಾತನಾಡಿದ ಸದಸ್ಯರಲ್ಲಿ ಹೆಚ್ಚಿನವರು ಮುಂಬಯಿ ನಗರವನ್ನು ಮಹಾ

(೮ನೇ ಪುಟ ನೋಡಿರಿ)

In the Court of the District Munsif of Mangalore

S. C. No. 384/1956

Between:-

Lingappa Bhandary —Plaitiff.

and

Ramanna Shetty —Defendant.

Notice

To:

Ramanna Shetty Nephew of Venkappa Shetty, Talapady Guthu Talapadi Village, Mangalore Taluk.

Please take notice that the above suit filed against you is posted for your appearence to 30—8-1956. If you fail to appear before this court at 11 A. M. on the said date either in person or by a duly authorised pleader, the suit will be heard exparte.

(By order of the court)

Sd. A. S. Nayak.

Advocate for Plaintiff.

Mangalore, 3—8—1956.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 262/1956.

ಪಾರ್ವತಿ ಯಾನೆ ಲಕ್ಷ್ಮಿ ಅಮ್ಮ —ವಾದಿ

ಮಹಾಬಲ ಹೆಗ್ಡೆ ಕೂಡಾ —ಪ್ರತಿವಾದಿರು

೧ನೇ ಪ್ರತಿವಾದಿ ಮಹಾಬಲ ಹೆಗ್ಡೆ, ೩ನೇ ಪ್ರತಿವಾದಿ ತುಂಗಮ್ಮ ಸೆಟ್ತಿ, ಶಂಕರಮ್ಮ ಸೆಟ್ತಿ ಮಕ್ಕಳು

ಕುಂದಾಪುರ ತಾಲ್ಲೂಕ ಕೆದೂರು ಗ್ರಾಮದ ಸೇನಾಡಿಯಲ್ಲಿರುವವರು. Kota P. O.

ಇವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ವಾದಿಗೆ ಪ್ರತಿವಾದಿಯಿಂದ ಕಳೆದ ವಿಜಯ, ಜಯ, ಮತ್ತು ಮನ್ಮಥ ಸಂವತ್ಸರಗಳಿಗೆ ಬಾಬ್ತು ಅರ್ಧ ಮೂಲಗೇಣಿ ಗೇಣಿಯನ್ನು ಬರಮಾಡಿಕೊಳ್ಳುವರೇ ಜರಗಿಸಿದ ಮೇಲಣ ದಾವೆಯನ್ನು ತಾ. ೨೪-೮-೧೯೫೬ಕ್ಕೆ ಇಟ್ಟಿರುತ್ತಾರೆ. ಆ ಸಂಬಂಧವಾಗಿ ನಿಮ್ಮದೇನಾದರೂ ಉದಾಹರಣೆ ಇದ್ದಲ್ಲಿ ಸದ್ರಿ ತಾರೀಕಿನ ದಿನ 11 ಗಂಟೆಗೆ ಸರಿಯಾಗಿ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದು ಎಂಬ ಸಂಗತಿಯನ್ನು ಕೋರ್ಟು ಹುಕುಂ ಮೇರೆಗೆ ಈ ಮೂಲಕ ತಿಳಿಸಲಾಗಿದೆ.

A. N. Rao.

Advocate, for Plff.

Coondapoor. 6—8—56.

ದಿ ಉಡುಪಿ ಶುಗರ್‌ಕೇನ್ ಗ್ರೋವರ್ಸ್ ಕೋಪರೇಟಿವ್ ಯೂನಿಯನ್ ಲಿಮಿಟೆಡ್, ಉಡುಪಿ

ಇದರ ಎಲ್ಲಾ ಮೆಂಬರರಿಗೆ ನೋಟೀಸು

ದ. ಕ. ಜಿಲ್ಲಾ ಸೆಂಟ್ರಲ್ ಕೋಪರೇಟಿವ್ ಬೇಂಕ್, ಲಿಮಿಟೆಡ್, ಮಂಗಳೂರು ಇವರ ಉಪನಿಬಂಧನೆ 26(4) ಪ್ರಕಾರ ಉಡುಪಿ ಶುಗರ್‌ಕೇನ್ ಗ್ರೋವರ್ಸ್ ಕೋಪರೇಟಿವ್ ಯೂನಿಯನ್ನಿನ ಮಹಾ ಸಭೆಯನ್ನು ತಾ. 2-9-56ನೇ ಆದಿತ್ಯವಾರ ಅಪರಾಹ್ನ 3 ಗಂಟೆಗೆ ಉಡುಪಿ ಬಡಗಬೆಟ್ಟು ಸಹಕಾರ ಸಂಘ ಲಿಮಿಟೆಡ್, ಅದರ ಕಾರ್ಯಾಲಯದಲ್ಲಿ (ಕ್ರಿಶ್ಚಿಯನ್ ಹೈಸ್ಕೂಲು ಎದುರುಗಡೆ) ಕರೆಯಲಾಗಿದೆ. ಎಲ್ಲಾ ಸದಸ್ಯರೂ ಸಭೆಗೆ ಹಾಜರಾಗಬೇಕಾಗಿ ವಿನಂತಿ.

S. C. C. C. Bank, Ltd.
Mangalore-3.
ತಾ. 24—7—1956.

(ಸಹಿ) ಎ. ಎಮ್. ಮೊಂತೆರೊ,
ಅಧ್ಯಕ್ಷ.

ಕಾರ್ಯಕ್ರಮ

1. ಮಹಾ ಸಭೆಗೆ ಅಧ್ಯಕ್ಷರ ಆಯ್ಕೆ.
2. ಡೈರೆಕ್ಟರರ ಚುನಾವಣೆ.
3. ತಾ. 30-6-1956ನೇ ವರ್ಷದ ವರೆಗಿನ ಹಿಂದಿನ ವರ್ಷಗಳ ಡಿವಿಡೆಂಟ್ ಹಂಚೋಣ.
4. ಯೂನಿಯನ್ ಬಲಪಡಿಸುವ ವಿಚಾರ ಪರಿಶೀಲನೆ.
5. ಅಧ್ಯಕ್ಷರ ಅನುಮತಿಯಿಂದ ಬರಬಹುದಾದ ಇತರ ವಿಷಯಗಳು.

NAVAYUGA
Popular Kannada Weekly
Founder:—
A. B. SHETTY, *M. L. A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೯-೮-'೫೬	೪೯

ಪ್ರಥಮ ಅಣುಶಕ್ತಿಜನಕ ಯಂತ್ರ

ನೊನ್ನೆ ೪ನೇ ದಿನಾಂಕ ಮುಂಬಯಿಗೆ ಸಮೀಪದ ಟ್ರಾಂಬೇಯಲ್ಲಿ ಅಣುಶಕ್ತಿಯನ್ನು ಉತ್ಪಾದಿಸಲು ಪ್ರಾರಂಭಿಸಿರುವ ಅಣುಶಕ್ತಿಜನಕ ಯಂತ್ರವು ಭಾರತದ ಮಹಾ ಸಾಧನೆಗಳಲ್ಲಿ ಚಿರಸ್ಮರಣೀಯವಾದುದೆಂದು ಹೇಳಬಹುದು. ಜಗತ್ತಿನ ಪ್ರಬಲ ರಾಷ್ಟ್ರಗಳು ಅಣುಶಕ್ತಿಯನ್ನು ಬಾಂಬುಗಳ ತಯಾರಿಕೆಗಾಗಿ ಉಪಯೋಗಿಸುವುದರಲ್ಲಿಯೇ ವಿಶೇಷವಾದ ಆಸಕ್ತಿಯನ್ನೂ ಉತ್ಸಾಹವನ್ನೂ ತೋರಿಸುತ್ತಿರುವಾಗ, ಶಾಂತಿಯನ್ನೆ ಸದಾಕಾಲ ಪ್ರತಿಪಾದಿಸುವ ಭಾರತವು ಅಣುಶಕ್ತಿಯನ್ನು ಮಾನವ ಕಲ್ಯಾಣ ಕಾರ್ಯಗಳಿಗೆ ಬಳಸಬೇಕೆಂದು ಒತ್ತಾಯಿಸುತ್ತಿದೆ. ಅಣುಶಕ್ತಿಯ ಸ್ಫೋಟನ ಪ್ರಯೋಗಗಳು ಸಂಪೂರ್ಣ ನಿಲ್ಲಬೇಕೆಂಬುದೇ ಭಾರತದ ಹಾರ್ದಿಕ ಇಚ್ಛೆಯಾಗಿದೆ ಎಂಬುದನ್ನು ಪ್ರಧಾನಿ ನೆಹರು ಲೋಕಸಭೆಯಲ್ಲಿ ಇದೇ ೬ನೇ ದಿನಾಂಕ ಸ್ಪಷ್ಟಪಡಿಸಿದ್ದಾರೆ. ಈ ವಾರ ಜಪಾನಿನಲ್ಲಿ ಅಣುಬಾಂಬುಗಳ ಪ್ರಯೋಗದ ವಿರುದ್ಧ ಸುಮಾರು ೩೦೦೦ ಪ್ರತಿನಿಧಿಗಳಿಂದ ಕೂಡಿದ ಮಹಾಧಿವೇಶನವೊಂದು ನಡೆಯುತ್ತಿದೆ. ಹಿರೋಶಿಮಾ ಮತ್ತು ನಾಗಸಾಕಿಗಳ ಮೇಲೆ ಅಣುಬಾಂಬುಗಳನ್ನು ಕಳೆದ ಮಹಾಯುದ್ಧ ಕಾಲದಲ್ಲಿ ಹಾಕಲಾದ ದಿನಗಳ ಹಿನ್ನೆಲೆಯಲ್ಲಿ ನಡೆಯುವ ಈ ಸಮ್ಮೇಳನಕ್ಕೆ ಕಳುಹಿಸಿದ ಸಂದೇಶದಲ್ಲಿ ಸಹ ನೆಹರುಗಳು ಅಣುಶಕ್ತಿಯನ್ನು ಮಾನವನ ಸುಖಾನುಕೂಲತೆಗಳ ಹೆಚ್ಚಳಕ್ಕಾಗಿ ಬಳಸಬೇಕೆಂದು ಹೇಳಿದ್ದಾರೆ. ಮಾನವ ಜನಾಂಗದ ವಿನಾಶಕ್ಕಲ್ಲ—ಅತನ ಉಪಯೋಗಕ್ಕೆ ಅಣುಶಕ್ತಿಯನ್ನು ಬಳಸುವ ಕ್ರಮವೇನೆಂಬುದನ್ನು ಜಗತ್ತಿಗೆ ಮೊದಲ ಬಾರಿಗೆಂಬಂತೆ ಭಾರತವು ಟ್ರಾಂಬೇಯಲ್ಲಿ ತನ್ನ ಪ್ರಥಮ ಅಣುಶಕ್ತಿ ಜನಕ ಯಂತ್ರವನ್ನು ನೆಲೆಗೊಳಿಸುವ ಮೂಲಕ ತೋರಿಸಿ ಕೊಟ್ಟಿದೆ ಎನ್ನಬಹುದು. ಇಂತಹ ಅಣುಶಕ್ತಿ ಜನಕ ಯಂತ್ರಗಳು ಪ್ರಬಲ ಪಾಶ್ಚಾತ್ಯ ರಾಷ್ಟ್ರಗಳನ್ನು ಬಿಟ್ಟರೆ, ಬೇರೆ ಯಾವ ದೇಶದಲ್ಲಿಯೂ ಇಷ್ಟರವರೆಗೆ ಕಟ್ಟಲ್ಪಟ್ಟಿಲ್ಲ. ಕೈಗಾರಿಕೆಗಳಲ್ಲಿ ತುಂಬ ಮುಂದುವರಿದಿರುವ ಏಶ್ಯದ ರಾಷ್ಟ್ರವಾದ ಜಪಾನಿನಲ್ಲಿ ಸಹ ಈ ಯಂತ್ರವಿಲ್ಲ. ಕೆಂಪು ಚೀನದಲ್ಲಿ ರಶ್ಯದ ಸಹಾಯದಿಂದ ಒಂದು ಯಂತ್ರವು ಕಟ್ಟಲ್ಪಡುತ್ತಿದ್ದರೂ ಈ ಕೆಲಸ ಮುಗಿದಿಲ್ಲ; ಹಾಗಾಗಿ ಅಣುಶಕ್ತಿಯ ಉತ್ಪಾದನೆ ಅಲ್ಲಿ ಇನ್ನೂ ಪ್ರಾರಂಭವಾಗಿಲ್ಲ. ಭಾರತವು ಅಣುಶಕ್ತಿ ವಿಜ್ಞಾನದಲ್ಲಿ ಜಗತ್ತಿನಲ್ಲಿ ಆರನೇ ಸ್ಥಾನವನ್ನು ಪಡೆಯುತ್ತದೆ ಎಂದು ಪ್ರಧಾನಿ ನೆಹರು ಕೆಲವು ಸಮಯದ ಹಿಂದೆ ಹೇಳಿದ್ದರು. ಟ್ರಾಂಬೇಯಲ್ಲಿ ನೆಲೆಗೊಳಿಸಿದ ಯಂತ್ರವು ಈ ಮಾತಿನ ಸತ್ಯವನ್ನು ನಿಸ್ಸಂದೇಹವಾಗಿ ವ್ಯಕ್ತಪಡಿಸುತ್ತದೆ. ಭಾರತದ ಈ ಮಹಾಸಾಧನೆಯ ಶ್ರೇಯಸ್ಸೆಲ್ಲವೂ ಪ್ರಸಿದ್ಧ ಅಣುಶಕ್ತಿ ವಿಜ್ಞಾನಿಗಳಾದ ಡಾ. ಭಾಭಾ ಮತ್ತು ಅವರ ಸಹಾಯಕರಾಗಿ ಅನುನಿತ್ಯವೂ ಕೆಲಸ ಮಾಡುತ್ತಿರುವ ಸುಮಾರು ೫೦ ಮಂದಿ ವಿಜ್ಞಾನಿಗಳಿಗೆ ಸಲ್ಲುತ್ತದೆ. ಟ್ರಾಂಬೇಯ ಯಂತ್ರವು ಉತ್ಪಾದನೆಯನ್ನು ಪ್ರಾರಂಭಿಸಿದ ಸುದ್ದಿ ಕೇಳಿ ಪ್ರಧಾನಿಗಳು ಈ ವಿಜ್ಞಾನಿಗಳ ದಕ್ಷತೆಯನ್ನೂ ಕಾರ್ಯಕ್ಷಮತೆಯನ್ನೂ ಬುದ್ಧಿವಂತಿಕೆಯನ್ನೂ ಮೆಚ್ಚಿ ತಮ್ಮ ಶುಭಾಶಯಗಳನ್ನು ಅರ್ಪಿಸಿದ್ದಾರೆ; ಭಾರತೀಯರೆಲ್ಲರ ಶುಭಾಶಯವೂ ಈ ವಿಜ್ಞಾನಿಗಳಿಗೆ ಅವಶ್ಯವಾಗಿ ಸಲ್ಲಬೇಕಾಗಿದೆ. ಏಕೆಂದರೆ, ಈ ವಿಜ್ಞಾನಿಗಳು ಹೊರಗಿನ ಯಾರ ಸಹಾಯವೂ ಇಲ್ಲದೆ, ಎಲ್ಲವನ್ನೂ ತಮ್ಮ ಕೈಯಳವಿನಲ್ಲಿದ್ದ ಸಾಧನ ಸಂಪತ್ತುಗಳಿಂದಲೇ ಪಡೆದು ಕೊಂಡು, ಸ್ವಂತ ಮೇಧಾಶಕ್ತಿಯನ್ನೆ ಉಪಯೋಗಿಸಿ ಟ್ರಾಂಬೇಯಲ್ಲಿ ಸುಮಾರು ೨೫ ಲಕ್ಷ ರೂಪಾಯಿ ವೆಚ್ಚದ ಈ ಯಂತ್ರವನ್ನು ಸ್ಥಾಪಿಸಿದ್ದಾರೆ. ಯಂತ್ರದ ನಕಾಶೆಯ ರಚನೆ, ಅದರ ನಿರ್ಮಾಣ ಕಾರ್ಯ, ಅದರಿಂದ ಅಪಾಯವೇನೂ ಆಗದಂತೆ ರಕ್ಷಣಾ ವಿಧಾನಗಳ ಯೋಜನೆ, ಇತ್ಯಾದಿ ಎಲ್ಲ ವಿಷಯಗಳಲ್ಲೂ ಭಾರತೀಯ ವಿಜ್ಞಾನಿಗಳೇ ತಂತಮ್ಮಲ್ಲಿ ವಿಚಾರಿಸಿ ಕಟ್ಟಿರುವ ಈ ಯಂತ್ರವು ಪಾಶ್ಚಾತ್ಯ ರಾಷ್ಟ್ರಗಳು ಪಡೆದಿರುವ ಅನುಕೂಲತೆಗಳು ಇಲ್ಲಿ ಇಲ್ಲದಿದ್ದರೂ ವೈಜ್ಞಾನಿಕ ಕ್ಷೇತ್ರದಲ್ಲಿ ಅದ್ಭುತ ಪ್ರಗತಿಯನ್ನು ಸಾಧಿಸಿಯೇ ತೀರಬೇಕೆನ್ನುವಷ್ಟು ಉತ್ಸಾಹವೂ ಅದಕ್ಕೆ ಪೋಷಕವಾದ ಪ್ರತಿಭೆಯೂ ನಮ್ಮ ವಿಜ್ಞಾನಿಗಳಲ್ಲಿದೆ ಎಂಬುದನ್ನು ತೋರಿಸಿ ಕೊಡುತ್ತದೆ. ಡಾ. ಭಾಭಾ ಹೇಳಿರುವಂತೆ ಈ ವಿಜ್ಞಾನಿಗಳು ಇನ್ನೂ ಎಳೆ ವಯಸ್ಸಿನವರಾಗಿದ್ದಾರೆ; ಆದುದರಿಂದ ಅವರ ಅನುಭವವು ಪಕ್ವವಾದಂತೆ ನಾವು ಇನ್ನೂ ಹೆಚ್ಚು ಪರಿಣಾಮಕಾರಿಯಾದ ಸಾಧನೆಗಳನ್ನು ನಿರೀಕ್ಷಿಸಬಹುದು. ಈ ಯಂತ್ರ ನಿರ್ಮಾಣದಲ್ಲಿ ಅವರು ಹೊರಗಿನಿಂದ (ಅಂದರೆ ಬ್ರಿಟನಿನಿಂದ) ಪಡೆದದೆಂದರೆ ಇಂಧನವನ್ನು ಮಾತ್ರ. ಶ್ರೇಷ್ಠ ಮಟ್ಟದ ಯುರೇನಿಯಂ ೨೩೫ ಧಾತುವನ್ನು ಬ್ರಿಟನಿನ ಅಣುಶಕ್ತಿ ಮಂಡಳದೊಡನೆ ಮಾಡಿಕೊಂಡ ಒಂದು ಒಪ್ಪಂದದಂತೆ ತರಿಸಿಕೊಳ್ಳಲಾಯಿತು. ಬ್ರಿಟನು ಹೀಗೆ ಸಹಕಾರ ಇತ್ತುದಕ್ಕೆ ನಾವೆಲ್ಲರೂ ಕೃತಜ್ಞರಾಗಿರಬೇಕೆನ್ನುವುದು ಬಾಯಿಮಾತಿನ ಉಪಚಾರವಾದೀತು; ಅಣುಶಕ್ತಿಯನ್ನು ಶಾಂತಿಕಾಲದ ಕಾರ್ಯಗಳಿಗೆ ಹೇಗೆ ಬಳಸಬಹುದೆಂಬುದನ್ನು ಏಶ್ಯ ಮತ್ತು ಆಫ್ರಿಕದ ಬೇರೆ ರಾಷ್ಟ್ರಗಳಿಗೆ ತೋರಿಸಿಕೊಡಲೂ ಆ ರಾಷ್ಟ್ರಗಳ ವಿಜ್ಞಾನಿಗಳಿಗೆ ಯೋಗ್ಯ ತರಬೇತಿಯನ್ನು ಕೊಡಲೂ ಅನುಕೂಲತೆ ಕಲ್ಪಿಸುವ ಮೂಲಕ ಈ ಋಣಭಾರವನ್ನು ತಗ್ಗಿಸಿಕೊಳ್ಳಬೇಕೆಂದು ಭಾರತ ಸರಕಾರ ನಿರ್ಧರಿಸಿರುವುದು ನಿಜಕ್ಕೂ ಕೃತಜ್ಞತೆಯನ್ನು ವ್ಯಕ್ತಪಡಿಸುವ ಸಾರ್ಥಕ ವಿಧಾನವೆಂದು ನಾವು ಭಾವಿಸುತ್ತೇವೆ. ಸದ್ಯಕ್ಕೆ ಟ್ರಾಂಬೇಯ ಯಂತ್ರವು ವಿದ್ಯುಚ್ಛಕ್ತಿಯನ್ನೂ ಕೃಷಿ ಕೈಗಾರಿಕೆ ಮತ್ತು ವೈದ್ಯಕೀಯ ಕ್ಷೇತ್ರಗಳ ಅಭಿವೃದ್ಧಿಗೆ ಸಹಾಯಕವಾದ ಐಸೋಟೋಪುಗಳನ್ನೂ ಉತ್ಪಾದಿಸಲು ಬಳಸಲ್ಪಡುತ್ತದೆ; ಮತ್ತು ಭೌತ ವಿಜ್ಞಾನ ಶಾಸ್ತ್ರದಲ್ಲಿ ತರಬೇತಿಯನ್ನು ಕೊಟ್ಟು ದೊಡ್ಡ ಮಾದರಿಯ ಅಣುಶಕ್ತಿ ಯಂತ್ರಗಳನ್ನು ಕಟ್ಟುವುದಕ್ಕಾಗಿ ಮಾಹಿತಿಯನ್ನು ವಿಜ್ಞಾನಿಗಳಿಗೆ ಪೂರೈಸಲೂ ಈ ಯಂತ್ರವನ್ನು ಬಳಸಲಾಗುತ್ತದೆ. ಡಾ. ಭಾಭಾರ ಅಭಿಪ್ರಾಯದಂತೆ ಭಾರತದಲ್ಲಿ ಎಲ್ಲವೂ ಸರಿಯಾಗಿ ನಡೆದರೆ ಇನ್ನು ಹತ್ತು ವರ್ಷಗಳ ಅವಧಿಯೊಳಗೆ ಪ್ರಾಮುಖ್ಯ ಸ್ಥಳಗಳಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಅಣುಶಕ್ತಿಯನ್ನು ಬಳಸುವ ಕೇಂದ್ರಗಳು ಸ್ಥಾಪಿಸಲ್ಪಡಬಹುದು. ಒಂದು ಲಕ್ಷ ಕಿಲೋವಾಟಿನಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಅಣುಶಕ್ತಿ ಕೇಂದ್ರಕ್ಕೆ ೨೦ ಕೋಟಿ ರೂಪಾಯಿಗಳ ವೆಚ್ಚ ತಗಲಬಹುದೆಂದು ಅಂದಾಜು. ಈ ವೆಚ್ಚದ ದೃಷ್ಟಿಯಿಂದ ಭಾರತವು ಈ ಬಗೆಯ ಯೋಜನೆಗಳ ಭಾರವನ್ನು ಹೊರಬಲ್ಲುದೇ ಎಂಬ ವಿಷಯದಲ್ಲಿ ಸಂಶಯ ಸಮಗಿದೆ— ಅದೇನೇ ಇರಲಿ, ಭಾರತವು ಅಣುಶಕ್ತಿಯನ್ನು ಶಾಂತಿ ಕಾಲದ ಉದ್ದೇಶಗಳಿಗೆ ಮಾತ್ರವೇ ಬಳಸಲು ದೃಢ ಸಂಕಲ್ಪವನ್ನು ಹೊಂದಿರುವುದೂ ಈ ದಿಸೆಯಲ್ಲಿ ಪ್ರಗತಿಪರವಾದ ಹೆಜ್ಜೆಗಳನ್ನು ತ್ವರಿತಗತಿಯಿಂದ ಇಡುತ್ತಿರುವುದೂ ತುಂಬ ಸಂತೋಷದಾಯಕವೂ ಸಮಾಧಾನಕರವೂ ಆದ ವಿಷಯ. ಟ್ರಾಂಬೇಯಲ್ಲಿ ಕೆನಡದ ಸಹಾಯದಿಂದ ೭ ಕೋಟಿ ರೂಪಾಯಿ ವೆಚ್ಚದಲ್ಲಿ ಕಟ್ಟಲ್ಪಟ್ಟು ೧೯೫೮ನೇ ಇಸವಿಯ ಹೊತ್ತಿಗೆ ಕೆಲಸವನ್ನು ಪ್ರಾರಂಭಿಸಲಿರುವ ಅಣುಶಕ್ತಿ ಜನಕ ಯಂತ್ರವು ನಮ್ಮ ಸಾಧನೆಯ ಇನ್ನೊಂದು ಮೈಲುಗಲ್ಲಾಗಲಿದೆ. ಅಷ್ಟು ಹೊತ್ತಿಗೆ ಭಾರಜಲ, ಶ್ರೇಷ್ಠ ವರ್ಗದ ಯುರೇನಿಯಂ ೨೩೫ ಧಾತುವಿನ ಸರಬರಾಜು ಇತ್ಯಾದಿ ವಿಷಯಗಳಲ್ಲಿ ಭಾರತವು ಸ್ವಾವಲಂಬಿಯಾಗುವಂತೆ ನಮ್ಮ ವಿಜ್ಞಾನಿಗಳು ನೋಡಿಕೊಳ್ಳುವರೆಂದು ನಾವು ನಿರೀಕ್ಷಿಸುತ್ತೇವೆ. ಡಾ. ಭಾಭಾ ಮತ್ತು ಅವರ ಸಂಗಡಿಗರ ಕಾರ್ಯೋತ್ಸಾಹವನ್ನು ಕಂಡವರಿಗೆ ಈ ಹಾರೈಕೆ ಹುಸಿ ಹೋಗಲಾರದೆಂಬ ಭರವಸೆ ಸಹಜವಾಗಿ ಉಂಟಾಗುತ್ತದೆ.

ಕಾಂಗ್ರೆಸಿನ ಚುನಾವಣಾ ಘೋಷಣೆಯ ಪತ್ರ

ಇಂದೋರಿನ ಅಧಿವೇಶನದಲ್ಲಿ ಪ್ರಕಾಶನ

ಕಾಂಗ್ರೆಸಿನ ಕಾರ್ಯಕಾರಿ ಸಮಿತಿಯ ಸಭೆಯು ೩ನೇ ೫ನೇ ದಿನಾಂಕ ಹೊಸ ದಿಹಲಿಯಲ್ಲಿ ಸೇರಿದಾಗ ಮುಂದಿನ ಚುನಾವಣೆಯ ಬಗ್ಗೆ ಕಾಂಗ್ರೆಸಿನ ಘೋಷಣಾ ಪತ್ರದ ಕರಡನ್ನು ತಯಾರಿಸಲು ಉಪಸಮಿತಿಯೊಂದನ್ನು ನೇಮಿಸಲಾಯಿತು. ಈ ಕರಡನ್ನು ಸಪ್ಟಂಬರ ತಿಂಗಳಲ್ಲಿ ಸೇರಲಿರುವ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಪರಿಶೀಲಿಸಲಾಗುವುದೆಂದೂ ಅಕ್ಟೋಬರದಲ್ಲಿ ಕಲ್ಕತ್ತದಲ್ಲಿ ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಇದರ ಚರ್ಚೆ ನಡೆಯುವುದೆಂದೂ ಇಂದೋರಿನಲ್ಲಿ ಬರುವ ವರ್ಷದ ಪ್ರಾರಂಭದಲ್ಲಿ ಸೇರುವ ಕಾಂಗ್ರೆಸಿನ ೬೨ನೇ ಮಹಾಧಿವೇಶನದಲ್ಲಿ ಇದನ್ನು ಪ್ರಕಟಿಸಲಾಗುವುದೆಂದೂ ತಿಳಿದು ಬರುತ್ತದೆ.

೬೨ನೇ ಮಹಾಧಿವೇಶನದ ದಿನ

ಈ ಸಭೆಯಲ್ಲಿ ಕಾಂಗ್ರೆಸಿನ ೬೨ನೇ ಮಹಾಧಿವೇಶನವನ್ನು ಈಗಿನ ಮಧ್ಯಭಾರತದ ಇಂದೋರಿನಲ್ಲಿ ೧೯೫೭ನೇ ಜನವರಿ ತಿಂಗಳ ೬-೭ನೇ ದಿನಾಂಕ ಜರಗಿಸಬೇಕೆಂದು ನಿರ್ಧರಿಸಲಾಯಿತು. ಇದಕ್ಕೆ ಮುಂಚೆ ಜನವರಿ ೨ನೇ ದಿನಾಂಕ ಕಾರ್ಯಕಾರಿ ಸಮಿತಿಯ ಸಭೆ ಜರಗಲಿದೆ; ೩, ೪ ಮತ್ತು ೫ನೇ ದಿನಾಂಕಗಳಲ್ಲಿ ವಿಷಯನಿಯಾಮಕ ಸಮಿತಿಯ ಸಭೆ ಸೇರಲಿದೆ.

ಕಾಂಗ್ರೆಸಿನ ಸದಸ್ಯತ್ವ

ಕಾಂಗ್ರೆಸಿನಲ್ಲಿ ಕಳೆದ ವರ್ಷ ಸುಮಾರು ೬೫೮೦೦೦ ಸಾಮಾನ್ಯ ಸದಸ್ಯರಿದ್ದರೆಂದೂ ೬೩೦೦೦ ಸಕ್ರಿಯ ಸದಸ್ಯರಿದ್ದರೆಂದೂ ಹೇಳಲಾಗಿದೆ. ಸದಸ್ಯತನದ ಹಾಸಲನ್ನು ಹೆಚ್ಚಿಸಿದುದರಿಂದಲೇ ಸಕ್ರಿಯ ಸದಸ್ಯರ ಸಂಖ್ಯೆಯು ೧೯೫೩ರಲ್ಲಿ ೮೭೦೦೦ ಇದ್ದುದು ಎರಡೇ ವರ್ಷಗಳಲ್ಲಿ ಒಂಭತ್ತು ಸಾವಿರದಷ್ಟು ಕಡಿಮೆಯಾಗಲು ಕಾರಣವೆಂದು ಹೇಳಲಾಗಿದೆ. ಸಾಮಾನ್ಯ ಸದಸ್ಯರ ಸಂಖ್ಯೆಯು ೧೯೫೩ರಲ್ಲಿ ೬೨೫೦೦೦೦ ಇದ್ದುದು ಈಗ ಗಣನೀಯವಾಗಿ ಹೆಚ್ಚಿದೆ. ಕಾಂಗ್ರೆಸಿನ ಚಟುವಟಿಕೆಗಳು ಅನೇಕ ಮುಖವಾಗಿ ಹೆಚ್ಚಿಕೊಳ್ಳುತ್ತಿರುವುದರಿಂದ ಜನಪ್ರಿಯತೆಯನ್ನು ಈ ಸಂಸ್ಥೆ ಗಳಿಸಿಕೊಳ್ಳುತ್ತಿದೆ ಎನ್ನಲಾಗಿದೆ.

ಜಾತಿ ಕೇಳಲಾಗದು

ಶಿಸ್ತು ಭಂಗಕ್ಕೆ ಏನೇನೂ ಅವಕಾಶವನ್ನು ಕೊಡಲಾಗದೆಂದು ಹೊಸ ದೆಹಲಿಯ ಸಭೆಯಲ್ಲಿ ಖಚಿತ ನಿರ್ಧಾರವನ್ನು ಮಾಡಲಾಗಿದೆ. ನೆರೆಹಾವಳಿ ಪೀಡಿತರಿಗೆ ವಿಶೇಷ ಸಹಾಯ ಸಲ್ಲಿಸಬೇಕೆಂದೂ ನಿರ್ಧರಿಸಿ, ಎಲ್ಲ ಬಗೆಯ ಸಹಾಯವನ್ನು ಯಾಚಿಸಲಾಗಿದೆ. ಸರಕಾರಿ ದಾಖಲೆಗಳಲ್ಲಿಯೂ ಶಿಕ್ಷಣಾಲಯಗಳಲ್ಲಿಯೂ ಜಾತಿಯನ್ನು ನಮೂದಿಸುವ ಅಥವಾ ಕೇಳುವ ಕ್ರಮವನ್ನು ಬಿಟ್ಟುಗೊಡಲು ಯೋಗ್ಯ ವಿಧಾನವನ್ನು ಅನುಸರಿಸಬೇಕೆಂಬ ಖಾಸಗಿ ಗೊತ್ತುವಳಿಯನ್ನೂ ಈ ಸಭೆಯಲ್ಲಿ ಅನುಮೋದಿಸಲಾಗಿದೆ.

ಮೈಸೂರಿನ ಬಿಕ್ಕಟ್ಟು

ಮೈಸೂರಿನ ಮುಖ್ಯಮಂತ್ರಿ ಸ್ಥಾನಕ್ಕೆ ಶ್ರೀ ಹನುಮಂತಯ್ಯನವರು ರಾಜೀನಾಮೆಯನ್ನು ಕೊಟ್ಟಿದ್ದು, ಈ ಬಗ್ಗೆ ಇದೇ ೧೬ನೇ ದಿನಾಂಕ ಶಾಸನಾಂಗದ ಕಾಂಗ್ರೆಸು ಪಕ್ಷದ ಸಭೆಯು ಸೇರಲಿದೆಯಾಗಿ ತಿಳಿದುಬರುತ್ತದೆ. ಈ ರಾಜೀನಾಮೆಯು ಅಂಗೀಕಾರವಾದರೆ, ಹೊಸ ನಾಯಕನನ್ನು ಸಭೆಯು ಆರಿಸಬೇಕಾಗಿದೆ.

ಸರಕಾರದ ಸಾಲ

ಮದ್ರಾಸು ಸರಕಾರವು ಇಷ್ಟರಲ್ಲಿಯೇ

೧೨ ಕೋಟಿ ರೂಪಾಯಿಗಳ ಸಾಲವನ್ನೆತ್ತುವುದೆಂದೂ ಇದು ಆಕರ್ಷಕವಾದ ಬಡ್ಡಿಯಿಂದ ಕೂಡಿರುವುದೆಂದೂ ತಿಳಿದು ಬರುತ್ತದೆ. ಭಾರತ ಸರಕಾರದ ಸಾಲವು ಕೂಡಬಂದ ಬಗೆಯನ್ನು ನೋಡಿದರೆ, ಈ ಸಾಲಪತ್ರದೊಷ್ಟವೊತ್ತದ್ದಾಗಿದ್ದರೂ ಸುಲಭದಲ್ಲಿ ವಂತಿಗೆಯು ತುಂಬಿಬರುವುದೆಂದು ಆಶಿಸಬಹುದು.

ಪೋರ್ಚುಗಾಲದ ದೂರು

ಭಾರತದಲ್ಲಿರುವ ತನ್ನ ಪ್ರದೇಶಗಳಿಗೆ ಸೈನ್ಯ ಮತ್ತು ಸರಕುಗಳನ್ನು ಸಾಗಿಸಲು ಭಾರತ ಸರಕಾರವು ಆತಂಕಿಸುತ್ತಿದೆಯೆಂದು ಪೋರ್ಚುಗಾಲವು ಅಂತಾರಾಷ್ಟ್ರೀಯ ನ್ಯಾಯಸ್ಥಾನಕ್ಕೆ ಮಾಡಿಕೊಂಡಿರುವ ದೂರಿಗೆ ಉತ್ತರವನ್ನು ಕೊಡಲು ಈ ವರ್ಷದ ಕೊನೆಯ ವರೆಗೆ ಅವಧಿ ಇದೆ. ಇಂತಹ ದೂರನ್ನು ವಿಚಾರಿಸಲು ನ್ಯಾಯಸ್ಥಾನಕ್ಕೆ ಅರ್ಹತೆ ಇದೆಯೆ ಎಂಬ ಭಾರತವು ಮೊದಲಾಗಿ ಆಕ್ಷೇಪವೆತ್ತಲಿದೆ. ಅಲ್ಲದೆ ಪೋರ್ಚುಗಾಲದ ದೂರಿಗೆ ತಕ್ಕ ಉತ್ತರವನ್ನೂ ಕೊಡಲಿದೆ—ಎಂದು ಪ್ರಧಾನಿಗಳು ಲೋಕಸಭೆಯಲ್ಲಿತ್ತ ಉತ್ತರದಿಂದ ತಿಳಿದುಬರುತ್ತದೆ.

ಚುನಾವಣೆಯ ವಿಧಾನ

ಕಾಂಗ್ರೆಸಿನ ಪ್ರಮುಖ ಧುರೀಣರು ಚುನಾವಣೆಯು ಪರೋಕ್ಷ ರೀತಿಯದಾಗಿರಬೇಕೆಂಬ ವಿಚಾರದತ್ತ ಒಲಿಯುತ್ತಿದ್ದಾರೆಂದು ಹೇಳಲಾಗಿದೆ. ಈಗಿನ ನೇರವಾದ ಚುನಾವಣೆಯ ವಿಧಾನದಿಂದ ಉಮೇದುವಾರರ ಅಸಂತುಷ್ಟಿಗೆ ಒಳಗಾಗಬೇಕಾಗಿ ಬರುತ್ತದೆಂದು ಎಲ್ಲ ರಾಜಕೀಯ ಪಕ್ಷಗಳೂ ತಿಳಿಯತೊಡಗಿವೆ ಎನ್ನಲಾಗಿದೆ. ಆದರೆ ಪರೋಕ್ಷ ಚುನಾವಣೆಯು ಪ್ರಜಾಪ್ರಭುತ್ವದ ಮುಖ್ಯ ಆಕರ್ಷಣೆಯೊಂದಕ್ಕೆ ಪೆಟ್ಟುಕೊಡಲಾರದೆ ಎಂಬ ಟೀಕೆಗೆ ಇಲ್ಲಿ ಅವಕಾಶವಿದೆ.

ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಗದಾರರ ಆಸ್ತಿಯ ಕುಮ್ಕಿ ವ, ಲಗ್ತೀ ಸ್ಥಳಗಳನ್ನೆಲ್ಲಾ ಬೇರೀಜಿಗೆ ಕೊಡುವ ಕುರಿತು ಜಿಲ್ಲಾ ಕಲೆಕ್ಟರರಿಂದ ಕೊಡೋಣಾದ ಸರ್ಕ್ಯುಲರಿನ ವಿಚಾರವಾಗಿ ಆಲೋಚಿಸುವ ಬಗ್ಗೆ ಇದೇ ತಿಂಗಳ ತಾ. 19ನೇ ಆದಿತ್ಯವಾರ ದಿವಸ ಮಧ್ಯಾಹ್ನ 3 ಗಂಟೆಗೆ ಉಡುಪಿ ಕಸಬೆಯಲ್ಲಿರುವ ಬಡಗಬೆಟ್ಟು ಪರಸ್ಪರ ಸಹಾಯಕ ಸಂಘದ (ಕ್ರಿಶ್ಚಿಯನ್ ಹೈಸ್ಕೂಲಿನ ಎದುರು) ಕಟ್ಟೋಣದಲ್ಲಿ ವರ್ಗದಾರರ ಸಭೆಯನ್ನು ಜರಗಿಸುವುದಾಗಿ ನಿಶ್ಚಯಿಸಿರುತ್ತದೆ. ಎಲ್ಲಾ ವರ್ಗದಾರರೂ ಈ ಸಭೆಗೆ ಸಕಾಲದಲ್ಲಿ ದಯಮಾಡಿ ಬಂದು ಸಹಕರಿಸಬೇಕಾಗಿ ಅಪೇಕ್ಷಿಸಲಾಗಿದೆ.

ಉಡುಪಿ **ಕೆ. ಜೆ. ಬಲ್ಲಾಳ,**
ತಾ. 8—8—1956. ವಕೀಲ್.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 35ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 36ನೇ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.

ಉಡುಪಿ

ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಜನ್ಮೋತ್ಸವ— ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ಸಂಸ್ಥೆಯ ಅಧ್ಯಕ್ಷ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಯವರ 73ನೇ ಜನ್ಮದಿನೋತ್ಸವವು ಸ್ಥಳೀಯ ಬೊಂಬಾಯಿ ಲ್ಯಾಂಡ್ ಕಟ್ಟಡದಲ್ಲಿ ತಾ. 2ರಲ್ಲಿ ಶ್ರೀ ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಉಪಾಹಾರ ನಂತರ ಕಂಪೆನಿ ಉದ್ಯೋಗಸ್ಥ ಮಂಡಳಿಯ ಪರವಾಗಿ ಶ್ರೀ ಎನ್. ಎಸ್. ಸೆಟ್ಟಿಯರೂ, ವಿವಾಹಕಾರ್ಯೋದ್ಯೋಗಿಗಳ ಪರವಾಗಿ ಶ್ರೀ ಟಿ. ಸಂಜೀವ ಪೈಗಳೂ ಶ್ರೀ ಪೈಗಳನ್ನು ಅಭಿನಂದಿಸಿ ಶುಭ ಹಾರೈಸಿದರು. ಸಭಿಕರ ಕಡೆಯಿಂದ ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ. ಡಾ. ಎಸ್. ಆರ್. ಪೈ, ಟಿ. ರಮೇಶ ಪೈ, ಎಮ್. ಡಿ. ಕಾಮತ್, ಎನ್. ಸೀತಾರಾಮ ಕಾಮತ್ ಮತ್ತು ಡಾ. ಟಿ. ಎಮ್. ಎ. ಪೈಗಳು ಮುಖ್ಯ ಅತಿಥಿಯ ಗುಣಗಾನಮಾಡಿದರು. ಅಧ್ಯಕ್ಷರ ಸಂದರ್ಭೋಚಿತ ಮಾತುಗಳಾದ ಬಳಿಕ ಡಿಪ್ಯುಟಿ ಮೆನೇಜರ್ ಶ್ರೀ ವರದರಾಮ ಶರ್ಮರು ಧನ್ಯವಾದಗಳನ್ನಿತ್ತರು.

ತಿಲಕ ಜಯಂತಿ ಶತಾಬ್ದಿ ಸಮಾರಂಭವು— ತಾ. 1ರಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ನೇತೃತ್ವದಲ್ಲಿ ಪರ್ಯಾಯ ಆದಮಾರು ಮಠದ ಶ್ರೀ ವಿಬುಧೇಶತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಸರ್ಕಲ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಬಾಳ್ತಿಲ್ಲು ಕೃಷ್ಣಯ್ಯ ಹೆಗ್ಡೆಯರು ಶ್ರೀ ಶ್ರೀಗಳವರನ್ನು ಸ್ವಾಗತಿಸಿ ಹೂವಮಾಲಿಕೆಯನ್ನರ್ಪಿಸಿದರು. ಶ್ರೀಗಳಾದ ಟಿ. ಎ. ಪೈ, ಎಮ್. ಎಲ್. ಎ. ಪಡುಮನ್ನೂರು ನಾರಾಯಣ ಆಚಾರ್ಯ, ಕೆ. ಶ್ರೀನಿವಾಸ ಪೈ, ವಾಸುದೇವ ಆಚಾರ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶ್ರೀ ಎ ಜೆ. ಆಳ್ವೆಯವರು ಧನ್ಯವಾದಗಳನ್ನರ್ಪಿಸಿದರು.

ವಿಜಯ ಫಲಕೋತ್ಸವ— ಬೋರ್ಡ್ ಹ್ಯಾಸ್ಕೂಲುಗಳಲ್ಲೆಲ್ಲಾ ಕಳೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಸ್ಥಳೀಯ ಬೋರ್ಡ್ ಹ್ಯಾಸ್ಕೂಲು ಪ್ರಥಮಸ್ಥಾನ ಪಡೆದ ಬಗ್ಗೆ ಜಿಲ್ಲಾ ಬೋರ್ಡಿನಿಂದ ಶೀಲ್ಡ್ ಸಿಕ್ಕಿದ ಸಲುವಾಗಿ ವಿಜಯ ಫಲಕೋತ್ಸವವು ತಾ. 16—8—1956ನೇ ಗುರುವಾರ ಅಪರಾಹ್ನ 4 ಗಂಟೆಗೆ ಬೋರ್ಡ್ ಹ್ಯಾಸ್ಕೂಲಿನ ಜನತಾ ಭವನದಲ್ಲಿ ಶ್ರೀ ಯು. ಎಸ್. ನಾಯಕರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಹಳೆ ವಿದ್ಯಾರ್ಥಿಗಳೆಲ್ಲರೂ ಬಂದು ಸಹಕರಿಸಬೇಕೆಂದೂ ಹೆಡ್ಮಾಸ್ತರ್ ಶ್ರೀ ಬಿ. ಅನಂತ ಕೃಷ್ಣ ಸಾಮಗರು ಅಪೇಕ್ಷಿಸುತ್ತಾರೆ.

ಬೋರ್ಡ್ ಹ್ಯಾಸ್ಕೂಲ್ ಹಳೆ ವಿದ್ಯಾರ್ಥಿ ಸಂಘ— ಉಡುಪಿ ಬೋರ್ಡ್ ಹ್ಯಾಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ಆಡಳಿತ ಸಮಿತಿಯ ಸಭೆಯು ತಾ. 2ರಲ್ಲಿ ಸಂಘದ ಅಧ್ಯಕ್ಷ ಶ್ರೀ ಟಿ ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ವಾರ್ಷಿಕ ಅಧಿವೇಶನವನ್ನು ಇದೇ ತಾ. 25ರಲ್ಲು ಹ್ಯಾಸ್ಕೂಲಿನ ಜನತಾ ಭವನದಲ್ಲಿ ಜರಗಿಸುವುದೆಂದು ನಿಶ್ಚಯಿಸಲಾಯಿತು. ಆ ಬಗ್ಗೆ ಉಪಸಮಿತಿಯೊಂದು ರಚಿಸಲ್ಪಟ್ಟಿತು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮಸಂಖ್ಯೆ 200/1956.

ವನಜ ಶೆಡ್ತಿ ಕೂಡಾ —ವಾದಿರು

ಮತ್ತು

ಗೋಪಿ ಶೆಡ್ತಿ ಕೂಡಾ —ಪ್ರತಿವಾದಿರು

ಇವರೊಳಗೆ

ಮೇಲ್ಕಂಡ ವ್ಯಾಜ್ಯದಲ್ಲಿ 32ನೇ ಪ್ರತಿವಾದಿ ಜಗನ್ನಾಥ ಶೆಟ್ಟಿಗೆ ಆಗತಕ್ಕ ವ್ಯಾಜ್ಯದ ನೋಟೀಸು ಈ ಕೋರ್ಟಿನಲ್ಲಿ ತಾ. 27-8-1956ಕ್ಕೆ ಇಟ್ಟಿರುವದ್ರಿಂದ ಆ ದಿವಸ ಸದ್ರಿ ಪ್ರತಿವಾದಿಯು ತನ್ನ ಆಕ್ಷೇಪ ಹೇಳುವವನ್ನು ಸದ್ರಿ ಕೋರ್ಟಿನಮುಂದೆ ಹಾಜ್ರಿ ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao.
Vakil for Plaintiff.
Dated 6—8—56, Udipi.

ಮುಖ್ಯೋಪಾಧ್ಯಾಯರಿಂದ ಆರಿಸಲ್ಪಡುವ 25 ಹುಡುಗರಿಗೆ ಅಂಗಿವಸ್ತ್ರಗಳನ್ನು ಕೊಡಬೇಕೆಂದೂ ಆ ಪೈಕಿ ಐದು ಹುಡುಗರ ಅಂಗಿ ವಸ್ತ್ರಗಳ ವೆಚ್ಚವನ್ನು ಶ್ರೀ ಟಿ. ಎ. ಪೈಗಳೇ ವಹಿಸಿಕೊಳ್ಳುವುದೆಂದೂ ನಿಶ್ಚಯಿಸಲಾಯಿತು. ಮುಖ್ಯೋಪಾಧ್ಯಾಯರಿಂದ ಶೀರ ಬಡ ಹುಡುಗರೆಂದು ಆರಿಸಲ್ಪಡುವ ಇಬ್ಬರು ವಿದ್ಯಾರ್ಥಿನಿಗೆ S. S. L. C. ಪರೀಕ್ಷಾ ಹಣವೆಂದು ರೂ. 30ನ್ನು, ಎಮ್. ಜಿ. ಎಮ್. ಕಾಲೇಜಿನಲ್ಲಿ ಕಲಿಯುತ್ತಿರುವ ಒಬ್ಬ ವಿದ್ಯಾರ್ಥಿಗೆ ವಿದ್ಯಾರ್ಥಿ ವೇತನ ರೂ. 50ನ್ನು ಕೊಡುವುದೆಂದು ತೀರ್ಮಾನಿಸಲಾಯಿತು.

ಸರ್ಕಲ್ ಕಾಂಗ್ರೆಸ್ ಕಮಿಟಿ: ಇದರ ಕಾರ್ಯಕಾರಿಸಮಿತಿ ಸಭೆಯು ಶ್ರೀ ಬಾಳ್ತಿಲ್ಲು ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ವಿನೋಬಾರವರು ಉಡುಪಿಗೆ ಬರುವಾಗ್ಗೆ ಅವರಿಗೆ ಎಲ್ಲಾ ರೀತಿಯ ಸಹಕಾರವೀಯಬೇಕೆಂದು ನಿರ್ಧರಿಸಲಾಯಿತು. ಸರಕಾರಿ ಅಕ್ಕಿಯ ವಿತರಣೆಯನ್ನು ಭಾರತ ಸೇವಕ ಸಮಾಜದ ಪರಿಯಿಂದ ನಡೆಸಬೇಕೆನ್ನುವ, ಅಧ್ಯಾಪಕರ ನಿವೃತ್ತಿ ವೇತನ ಯೋಜನೆಯನ್ನು ಸ್ವಾಗತಿಸುವ, ವಕ್ಕಲು ಹಿತ ಮಸೂದೆಯು ಮುಂದಿನ ಅಸೆಂಬ್ಲಿ ಅಧಿವೇಶನದಲ್ಲಿ ಅಂಗೀಕಾರಯೋಗ್ಯವಾಗಲೆಂದು ಆಶಿಸುವ, ಅಜೆಪೂರು ಕಡೆಕಾರು ಗ್ರಾಮಗಳಿಗೆ ವಿದ್ಯುತ್ ಪ್ರಸರಣೆಯಾಗಬೇಕೆನ್ನುವ, ರೈತರಿಗೆ ಪಂಪು ಸೆಟ್ಟುಗಳು ದೊರೆಯಬೇಕೆನ್ನುವ ಇತ್ಯಾದಿ ನಿರ್ಣಯಗಳು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳ ಸೂಚನೆಗಳೊಂದಿಗೆ ಸ್ವೀಕೃತವಾದುವು.

ಎಂ. ಜಿ. ಎಂ. ಕಾಲೇಜು ಯೂನಿಯನಿನ ಉದ್ಘಾಟನಾ ಸಮಾರಂಭವು— ತಾ. 7ರಂದು ನಿವೃತ್ತ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಬಿ. ಎಲ್. ಎನ್. ರೈಗಳವರಿಂದ ಜರಗಿತು. ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದ ಬಳಿಕ ಕಾಲೇಜು ಯೂನಿಯನಿನ ಅಧ್ಯಕ್ಷರಾದ ಶ್ರೀ ವಿ. ಜಯರಾಮ ಶೆಟ್ಟರು ಅತಿಥಿಗಳನ್ನು ಸ್ವಾಗತಿಸುತ್ತಾ, ಅವರ ಪರಿಚಯವನ್ನು ತಿಳಿಸಿದರಲ್ಲದೆ, ಕಾಲೇಜಿನ ಇತಿಹಾಸವನ್ನು ಸಂಕ್ಷಿಪ್ತವಾಗಿ ಹೇಳಿದರು.

ಶ್ರೀ ರೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ-"ದೇವರ ಭಯವೇ ಜ್ಞಾನದ ಆರಂಭ" ವೆಂದು ಸೂಚಿಸಿದರಲ್ಲದೆ-"ಶಿಸ್ತು ಮತ್ತು ನಡತೆ ಒಟ್ಟಿಗೆ ಹೋಗುವುದರಿಂದ, ಶಿಸ್ತು ತಪ್ಪಿದರೆ ಮಾನವನ ನಡತೆಯೂ ತಪ್ಪುತ್ತದೆ, ಆದುದರಿಂದ ವಿದ್ಯಾರ್ಥಿಗಳು ಶಿಸ್ತಿಗೆ ಒಳಪಟ್ಟಿರಬೇಕು; ತಮಾಷೆಗಾಗಿಯಾದರೂ ತಮಾಷೆ ಮಾಡಬಾರದು; ನಮ್ಮ ತಮಾಷೆಯಿಂದ ಇತರರಿಗೆಷ್ಟು ತೊಂದರೆಯಾಗುತ್ತದೆ ಎಂದು ನೋಡಿಕೊಳ್ಳಬೇಕು" ಎಂದರು. ಭಾಷಣವನ್ನು ಮುಂದುವರಿಸುತ್ತ— "ದೇವರಿಗೂ ಮಾನವನಿಗೂ ಇರುವ ಮುಖ್ಯ ವ್ಯತ್ಯಾಸವೆಂದರೆ—ಮಾನವನು ಹಿಂದಿನ ವಿಷಯಗಳನ್ನು ಮರೆತಿರುತ್ತಾನೆ, ಮುಂದಿನ ವಿಷಯವು ಆತನಿಗೆ ಗೊತ್ತಿಲ್ಲ, ಇಂದಿನ ದೇನಾಗುವುದೆಂದು ಆತನು ತಿಳಿಯ. ಆದರೆ ದೇವರಿಗೆ ಇಂದಿನ—ಹಿಂದಿನ—ಮುಂದಿನ ಎಲ್ಲಾ ವಿಷಯಗಳು ತಿಳಿದಿರುವುದರಿಂದಲೇ ನಾವು ಆತನನ್ನು ಗೌರವಿಸಬೇಕು." ಎಂದು ಹೇಳಿ, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಹೇಗೆ ನಡೆದುಕೊಳ್ಳಬೇಕು ಎಂದು ಸರಳವಾದ ಮಾತುಗಳಿಂದ ಸೂಚಿಸಿದರು.

ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರರಾಯರು ತಮ್ಮ ಮುಕ್ತಾಯ ಭಾಷಣದಲ್ಲಿ— "ನಾವು ಕೇವಲ ತೋಟದ ಪುಷ್ಪಗಳಿಂದ ತೃಪ್ತಿ ಹೊಂದಲಾರೆವು ನಮ್ಮ ಕಾಲೇಜು ಎಷ್ಟು ಮಾನವ ಪುಷ್ಪಗಳನ್ನು ಸೃಷ್ಟಿಸುವುದೋ ಅಷ್ಟು ನಮಗೆ ತೃಪ್ತಿ" ಯೆಂದರು. ಕೊನೆಗೆ ಯೂನಿಯನಿನ ಕಾರ್ಯದರ್ಶಿಗಳು ಧನ್ಯವಾದಾರ್ಪಣೆ ಮಾಡಿದರು.

ವಯಸ್ಕರ ರಾತ್ರಿ ಶಾಲೆಯ ಉದ್ಘಾಟನೆ— ಕಡಿಯಾಳಿ ಸಾ. ಎ. ಶಾಲೆಯ ಹಳೆ ವಿದ್ಯಾರ್ಥಿ ಸಂಘದ ಪರವಾಗಿ ವಯಸ್ಕರ ರಾತ್ರಿ ಶಾಲೆಯನ್ನು ಶ್ರೀ ಕೆ. ಶೀನಪ್ಪ ಹೆಗ್ಡೆಯವರೂ ಸಾರ್ವಜನಿಕ ವಾಚನಾಲಯವನ್ನು ಡಾ. ಪಿ. ಜಿ. ಆಚಾರ್ ಇವರೂ ತಾ. 5ರಂದು ಉದ್ಘಾಟಿಸಿದರು. ಸಂಘದ ಅಧ್ಯಕ್ಷ ಶ್ರೀ ಕೆ. ಕೆ. ಪೈಯವರು ಸ್ವಾಗತ ಭಾಷಣವನ್ನು ಮಾಡಿದರು. ಶ್ರೀಗಳಾದ ಕು. ಶಿ. ಹರಿದಾಸ ಭಟ್ಟ ಮತ್ತು ಕೆ. ಗುರುರಾಜ ಭಟ್ಟ ಇವರು ಸಮಯೋಚಿತವಾಗಿ ನಾಲ್ಕು ಮಾತುಗಳನ್ನಾಡಿದರು. ಸುಶ್ರಾವ್ಯವಾದ ಕೊಳಲುವಾದನ ಮತ್ತು ಕೃಷ್ಣಸಂಧಾನ ಪ್ರಸಂಗದಿಂದ ಆಯ್ದ ಭಾಗವೊಂದರ ಸ್ವಾರಸ್ಯವಾದ ತಾಳಮದ್ದಳೆ ನಡೆದು, ಸಂಘದ ಉಪಕಾರ್ಯದರ್ಶಿ ಶ್ರೀ ಎಸ್. ಗೋಪೀಚಂದ ರಾಯರು ಧನ್ಯವಾದವನ್ನು ಅರ್ಪಿಸಿದ ಬಳಿಕ ಸಮಾರಂಭವು ಮುಕ್ತಾಯವಾಯಿತು.

ಶೋಚನೀಯ ನಿಧನ— ಉಡುಪಿ ನಗರಸಭೆಯ ರೆವಿನ್ಯೂ ಇನ್ಸ್ಪೆಕ್ಟರ್ ಶ್ರೀ ವಿಲ್ಲಿಯಮ್ ಕರ್ನೇಲಿಯೋರವರ ಶವವು ತಾ. 3ರಲ್ಲಿ ಉದ್ಯಾವರದ ಸ್ಯಾಬರ ತೋಟದ ವಿಶಾಲವಾದ ಬಾವಿಯಲ್ಲಿ ತೇಲಾಡುತ್ತಿರುವುದನ್ನು ಪತ್ತೆಹಚ್ಚಲಾಯಿತು. ಆಕಸ್ಮಿಕ ನಿಧನದ ಕುರಿತು ತಪಾಸಣೆ ನಡೆಯುತ್ತಿದೆ.

ಮಲ್ಪೆ ಕೊಡವೂರು— ಜನತಾ ಸೇವಾಸಂಘದ ಆಶ್ರಯದಲ್ಲಿ ತಾ 30ರಂದು ಕಲ್ಮಾಡಿಯಲ್ಲಿ ಸಾರ್ವಜನಿಕ ಸಭೆಯು ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಅಗ್ಗ ಬೆಲೆಯ ಅಂಗಡಿಗಳನ್ನು ತೆರೆದು ಬಡವರಿಗೆ ಅವಶ್ಯವಿರುವಷ್ಟು ಅಕ್ಕಿ ದೊರೆಯುವ ಏರ್ಪಾಡು ಮಾಡುವಂತೆ ಸರಕಾರವನ್ನು ವಿನಂತಿಸುವ ನಿರ್ಣಯವಾಯಿತು.

ಮಣಿಪಾಲ— ಇಲ್ಲಿಯ ಹ್ಯಾಸ್ಕೂಲಿನಲ್ಲಿ ಕಳೆದ ತಾ 30ರಲ್ಲು ಜಾಗತಿಕ ಆರೋಗ್ಯ ದಿನಾಚರಣೆಯು ಡಾ. ಕೆ. ಮೋಹನದಾಸ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಹೆಡ್ಮಾಸ್ತರ್ ಶ್ರೀ ಬಿ. ಶ್ಯಾಮರಾಯ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀ ಕೃಷ್ಣ ನಾಯ್ಕರು ಧನ್ಯವಾದಗಳನ್ನಿತ್ತರು.

ಬ್ರಹ್ಮಾವರ— ಇದೇ ತಾ. 4ರಂದು ಬ್ರಹ್ಮಾವರ ಕರ್ನಾಟಕ ಸಂಘದ ಉದ್ಘಾಟನೆಯನ್ನು ಶ್ರೀ ಕೋಟ ಶಿವರಾಮ ಕಾರಂತರು, ಬೈಲೂರು ಹೈಸ್ಕೂಲಿನ ಪ್ರಧಾನ ಅಧ್ಯಾಪಕ ಶ್ರೀ ಬಿ. ನರಸಿಂಹ ಆಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿಸುತ್ತಾ ಪ್ರಪಂಚದ ಆಗುಹೋಗುಗಳನ್ನು ಅರಿಯದೆ ನಾವು ಬದುಕುವುದೇ ಅಸಾಧ್ಯವಾದುದರಿಂದ ಜನ ಮುಂದಾಗಿ ಪ್ರಪಂಚವನ್ನು ತಿಳಿಯಲಿ, ತಿಳಿಸುವುದನ್ನು ನಾವೆಲ್ಲ ಕನ್ನಡ ಭಾಷೆಯಲ್ಲಿಯೇ ತಿಳಿಸೋಣ ಎಂದು ಮುಂತಾಗಿ ವಿಚಾರಪೂರ್ಣ ಭಾಷಣ ಮಾಡಿದರು. ಕಾರ್ಯದರ್ಶಿ ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಆರಂಭದಲ್ಲಿ ವರದಿ ವಾಚನಮಾಡಿದರು. ಇದೇ ಸಂದರ್ಭದಲ್ಲಿ ಸಂಘದ ಪರಿಯಿಂದ ಪ್ರಸಿದ್ಧ ಯಕ್ಷಗಾನ ಭಾಗವತರಾದ ಶ್ರೀ ಶೇಷಗಿರಿ ಭಾಗವತರಿಗೆ ಮಾನಪತ್ರವೊಂದನ್ನು ಶ್ರೀ ಕಾರಂತರು ಅರ್ಪಿಸಿ, ಶ್ರೀ ಭಾಗವತರ ಶುದ್ಧವಾದ ಯಕ್ಷಗಾನ ಪದ್ಧತಿಯನ್ನು ಪ್ರಶಂಸಿಸಿದರು.

ಕುಂಜಾಲು— ಸ್ಥಳೀಯ ಶ್ರೀ ದುರ್ಗಾದೇವಿ ಯಕ್ಷಗಾನ ಮಂಡಳಿಯ ದ್ವಿತೀಯ ವಾರ್ಷಿಕೋತ್ಸವವು ಕಳೆದ ತಾ. 28ರಲ್ಲಿ ವಕೀಲ್ ಶ್ರೀ ಕೆ. ವಿಶ್ವನಾಥ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಕೆ. ಪಿ. ಸಿ. ಸಿ. ಸಭೆ— ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಾಧಾರಣ ಸಭೆಯು ಇದೇ ತಾ 25ರಲ್ಲು ಹುಬ್ಬಳ್ಳಿ ಕಾಂಗ್ರೆಸ್ ಭವನದಲ್ಲಿ ಮಧ್ಯಾಹ್ನ 4 ಗಂಟೆಗೆ ಕೂಡುವುದು. ಸಭೆಯಲ್ಲಿ ಇದೇ ತಾ 5ಕ್ಕೆ ಕರೆದ ಸಭೆಯ ನೋಟೀಸಿನಲ್ಲಿಯ ವಿಷಯಗಳೇ ವಿಚಾರಿಸಲ್ಪಡುವುವು.

ಬರುವ ವಾರ

ಸ್ವಾತಂತ್ರ್ಯದಿನೋತ್ಸವ

ವಿಶೇಷ ಸಂಚಿಕೆ—

28 ಪುಟಗಳು .... ಮಾಮೂಲಿ ಬೆಲೆ

ನಿರೀಕ್ಷಿಸಿರಿ!

(೫ನೇ ಪುಟದಿಂದ)

ರಾಷ್ಟ್ರಕ್ಕೆ ಬಿಟ್ಟುಕೊಡುವುದೇ ಲೇಸೆಂದಿದ್ದರು. ಇದರಿಂದ ಮಹಾರಾಷ್ಟ್ರದ ನಿಲುವಿಗೆ ಹೆಚ್ಚುಬೆಂಬಲ ವ್ಯಕ್ತವಾದಂತಾಯಿತು. ಮಹಾರಾಷ್ಟ್ರರು ಹೀಗೆ ಜಯಶಾಲಿಗಳಾಗಬಾರದು; ಮುಂಬಯಿ ನಗರವು ಮಹಾರಾಷ್ಟ್ರೀಯರ ಸೊತ್ತಾಗಕೂಡದು ಎಂಬುವಕ್ಕಾಗಿಯೇ ಈ ಕೊನೆಯ ಗಳಿಗೆಯಲ್ಲಿ ಹೊಸ ಸೂಚನೆ ಮಾಡಲಾಗಿದೆ ಎಂದು ಗಾಡ್ಗೀಳರು ಸ್ಪಷ್ಟವಾಗಿ ಹೇಳಿದ್ದಾರೆ. ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸು ಕಳೆದ ಒಕ್ಟೋಬರದಲ್ಲಿ ಈಗ ಮಾಡಲಾಗಿರುವ ಸೂಚನೆಗೆ ಎಳ್ಳಷ್ಟೂ ವ್ಯತಿರಿಕ್ತವಾಗಿರದ ದ್ವಿಭಾಷಾರಾಜ್ಯದ ಗೊತ್ತುವಳಿಯನ್ನು ಸ್ವೀಕರಿಸಿದಾಗ, ಕಾಂಗ್ರೆಸಿನ ಪರಿಷ್ಕಾರು ಗುಜರಾತಿಗಳಿಗೆ ಅದು ಸಮ್ಮತವಿಲ್ಲ ಎಂದು ಮಹಾರಾಷ್ಟ್ರೀಯರ ಅಭಿಮಾನವನ್ನು ಕುಕ್ಕಿದರು. ಆಗಲೇ ಗೊತ್ತುವಳಿಯನ್ನು ಎತ್ತಿ ಹಿಡಿದಿದ್ದರೆ ಎಲ್ಲ ವಿವಾದವೂ ನಿಲ್ಲುತ್ತಿತ್ತೆಂಬುದು ನಿಸ್ಸಂಶಯ. ಪರಿಸ್ಥಿತಿಯನ್ನು ಇಲ್ಲಿಯ ವರೆಗೆ ...

In the Court of the District Munsiff of Mangalore

S. C. 321/1956.

Between-

Sri M. N. Chowta, B. A. B L. Advocate, Receiver appointed in O. S. 97/49 on the file of Sub-Court of S. Kanara —Plaintiff.

and

Narayana Naika —Defendent.

To,

Defendent Narayana Naika Son of Aithappa Naika, residing at Poyathabail in Kodlamogru village, Kasaragod Taluq.

Please take notice that the Plaintiff has filed the above suit for the reliefs claimed in the plaint and the same is posted to 16-8-56 at 11 A. M. in the above Court.

You are hereby requested to appear on that day in person or by a Pleader, in default the suit will be heard and determined in your absence.

(By order of the Court)

K. Shantharama Shetty.

Advocate for Plaintiff.

Mangalore 31—7—1956.

ಮೂಲ್ಕಿ ಬೇಂಕ್ ಲಿಮಿಟೆಡ್,

ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%

ಸೇವಿಂಗ್ಸ್ ಬೇಂಕ್ ಲೆಕ್ಕ 2%

ಕರೆಂಟ್ ಎಕೌಂಟು ½%

THE MOOLKY BANK LTD., MULKI.

ಸ್ವೀಕಾರ-ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. ಸಂ. ಸ.)

ಗೆಳೆಯ ನಿನಗೆ ಶುಭೋದಯ—

ಅನುವಾದಕರು: ಧನ್ವಂತ. ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಬೆಲೆ: ರೂ. ೧.೮.೦.

ದಿವಂಗತ ರವೀಂದ್ರನಾಥ ಠಾಕೂರರ ಕಾದಂಬರಿಯ ಈ ಅನುವಾದವು ಕಾವ್ಯಮಯ ಶೈಲಿಯಿಂದ ಕಳೆತುಂಬಿದೆ. ಕಾದಂಬರಿಯ ವಸ್ತುವೂ ಹಾಗೆಯೇ—ತುಂಬ ಕುತೂಹಲ ಮಯಿಯಾಗಿದೆ. ನಿಸರ್ಗ ಸಹಜವಾದ ಗಂಡು-ಹೆಣ್ಣಿನ ಆಕರ್ಷಣೆ ಮತ್ತು ಪ್ರೇಮದ ಸುತ್ತಲೂ ಇಲ್ಲಿಯ ಸನ್ನಿವೇಶಗಳನ್ನು ಹೆಣೆಯಲಾಗಿದ್ದರೂ ಉತ್ತಮ ಸಂಸ್ಕಾರವನ್ನು ಇಲ್ಲಿಯ ಪಾತ್ರಚಿತ್ರಣಗಳಲ್ಲಿ ಕಾಣಬಹುದು.

ಬೆಳೆಯುಗೊಟ್ಟುದು ನಿಜಕ್ಕೂ ವಿಷಾದಕರ.

ಪ್ರಥಮ ದ್ವಿಭಾಷಾ ರಾಜ್ಯ

ಅದೇನೇ ಇರಲಿ, ಈಗ ಮುಂಬಯಿ ನಗರದ ಕುರಿತಾಗಿ ಎದ್ದಿರುವ ವಿವಾದವು ವಿಶಾಲವಾದ ದ್ವಿಭಾಷಾರಾಜ್ಯವಾಗಿ ಈಗಿನಮುಂಬಯಿಯು ರೂಪುಗೊಳ್ಳುವ ನಿರ್ಧಾರದಲ್ಲಿ ಅಂತ್ಯವಾಗಿದೆ. ಇದನ್ನು ಅನೇಕರು ಅನೇಕ ಬಗೆಯಾಗಿ ವರ್ಣಿಸಿದ್ದಾರೆ. ಅಮೃತಸರದಲ್ಲಿ ಆಕಸ್ಮಿಕವಾಗಿ ಪುಷ್ಟಿಯನ್ನು ಹೊಂದಿದ್ದ ದ್ವಿಭಾಷಾರಾಜ್ಯಗಳ ರಚನೆಯ ಕಲ್ಪನೆಯು ಅಷ್ಟೇ ಆಕಸ್ಮಿಕವಾಗಿ ಲೋಕ ಸಭೆಯಲ್ಲಿ ಮುಂಬಯಿ ನಗರದ ಭವಿಷ್ಯತ್ತಿನ ಬಗ್ಗೆ ನಡೆದ ಚರ್ಚೆಯ ಹೊತ್ತಿಗೆ ವಿಶೇಷ ರೀತಿಯ ಬೆಳವಣಿಗೆಯನ್ನು ಹೊಂದಿತು. ಅಂತೂ ಬಹಳ ಸಮಯದಿಂದ ತಲೆದೋರಿದ ವಿವಾದವೊಂದು ಅಂತ್ಯವಾದಂತಾಯಿತು. ಬಂಗಾಳ-ಬಿಹಾರಗಳ ಸೇರ್ಪಡೆಯಿಂದಾಗ ಬಹುದಾಗಿದ್ದ ಪೂರ್ವ ಪ್ರದೇಶದ ಬದಲಿಗೆ, ಪಶ್ಚಿಮ ಪ್ರದೇಶವೊಂದು ತಲೆಎತ್ತುವಂತಾಗಿರುವುದು ಚಾರಿತ್ರಿಕ ಸೋಜಿಗ! ಏಕಭಾಷೆಯ ತತ್ತ್ವವನ್ನು ಅನುಸರಿಸಿ ಗುಜರಾತ ಮತ್ತು ಮಹಾರಾಷ್ಟ್ರಗಳೆಂಬ ಪ್ರತ್ಯೇಕ ರಾಜ್ಯಗಳನ್ನೆ ರಚಿಸುವುದು ಹಿತಕರವಾಗಿತ್ತೆಂದೂ ಮುಂಬಯಿಯನ್ನು ಅದರ ನ್ಯಾಯವಾದ ಹಿನ್ನಾಡಾದ ಮಹಾರಾಷ್ಟ್ರಕ್ಕೆ ಒಪ್ಪಿಸಲು ಧುರೀಣರು ಹಿಂದೆ ಮುಂದೆ ನೋಡಬಾರದಿತ್ತೆಂದೂ ನಮ್ಮ ಪ್ರಾಮಾಣಿಕ ಅಭಿಪ್ರಾಯ—ಆದರೆ, ಈಗ ಪರಿಸ್ಥಿತಿ ಅಚ್ಚರಿಯಾದ ರೀತಿಯಲ್ಲಿ ಅಂತ್ಯವಾಗಿರುವುದರಿಂದ ಎಲ್ಲ ವಾದ-ವಿವಾದವನ್ನೂ ಇಲ್ಲಿಗೆ ಕೊನೆಗೊಳಿಸುವುದು ಶ್ರೇಯಸ್ಕರ. ರಾಜ್ಯ ಸಭೆಯಲ್ಲಿ ನಡೆಯಬಹುದಾದ ಚರ್ಚೆಗೆ ನಾವು ಕೊಡುವ ನಿಲುಹ ಇದು.

ಸೂರ್ಯೋಪಾಸನೆ—

ಬರೆದವರು: ಅಂಬಿಕಾತನಯದತ್ತ. ಪ್ರಕಾಶಕರು: ಸಮಾಜ ಪುಸ್ತಕಾಲಯ, ಧಾರವಾಡ. ಬೆಲೆ: ರೂ ೨—೦—೦.

ಕನ್ನಡದ ಪ್ರಸಿದ್ಧ ಕವಿಗಳಾದ ಶ್ರೀ ದ. ರಾ. ಬೇಂದ್ರೆಯವರಿಗೆ ಅರುವತ್ತು ವಯಸ್ಸು ತುಂಬಿದ ಶುಭ ಸಂದರ್ಭದಲ್ಲಿ ಅವರಿಂದ ಈಚೆಗೆ ರಚಿಸಲಾದ ೬೦ ಕವನಗಳ ಈ ಸಂಕಲನವನ್ನು ಪ್ರಕಟಿಸಿರುವುದು ಔಚಿತ್ಯೋಚಿತವಾದ ಸಾಹಸವಾಗಿದೆ. ತುಸು ದೊಡ್ಡ ಅಕ್ಷರಗಳಲ್ಲಿ ಮುದ್ದಾದ ಮುದ್ರಣದೊಡನೆ ಬೆಳಕು ಕಂಡಿರುವ ಈ ಸಂಕಲನವು ಬೇಂದ್ರೆಯವರನ್ನು ನವ್ಯ ಕವಿಗಳಾಗಿ, ಅಧ್ಯಾತ್ಮ ವಿದ್ಯಾಸಂಪನ್ನರಾಗಿ, ಅನುಭಾವಿಗಳಾಗಿ, ಸಹೃದಯಿಗಳಾಗಿ, ರಸಋಷಿಗಳಾಗಿ, ಕಲ್ಪನೆಯ ಕಲ್ಪದ್ರುಮವಾಗಿ, ಕವಿ ಸಾರ್ವಭೌಮರಾಗಿ ಮೆರೆಸಿದೆ. ಸಹಜ ಕವಿಗಳಾಗಿರುವ ಬೇಂದ್ರೆಯವರ ದಿವ್ಯಶಕ್ತಿಯು ಕವಿತೆಗಳ ಅಂತಃಸತ್ತ್ವವನ್ನು ಭಾವಮಾಧುರ್ಯ ಯುಕ್ತವಾಗಿಯೂ ಜೀವನದರ್ಶನ ಪೂರ್ಣವಾಗಿಯೂ ಮಾಡಿದೆ ಎನ್ನಬಹುದು.

ಚತುರಂಗ—

ಅನುವಾದಕರು: ಸ್ವಾಮಿ ಶಂಕರಾನಂದ ಸರಸ್ವತಿ. ಪ್ರಕಾಶಕರು: ನೇತ್ರಾವತಿ ಪ್ರಕಾಶನ, ಇಂಡಿಯನ್ ಪ್ರೆಸ್ ಬಿಲ್ಡಿಂಗ್ಸ್ ಬಳೇಪೇಟೆ, ಬೆಂಗಳೂರು ೨. ಬೆಲೆ: ರೂ. ೧-೦-೦,

ಕವೀಂದ್ರ ರವೀಂದ್ರರ ಕಾದಂಬರಿಯೊಂದರ ಈ ಅನುವಾದವು ಸರಳವಾಗಿದೆ; ಮೊದಲಿನ ಪುಟಗಳಿಗಿಂತಲೂ ಕೊನೆಕೊನೆಗೆ ಶೈಲಿಯು ಸುಂದರವಾಗುತ್ತಾ ಹೋಗಿದೆ. ಕತೆಯಾದರೂ ಹೀಗೆಯೇ—ಸ್ತ್ರೀಪುರುಷರ ಪರಸ್ಪರ ಒಲವಿನ ನೆಲಗಟ್ಟಿನ ಮೇಲೆ ನಿಂತಿದ್ದರೆ ಸಾನುಭೂತಿಯು ಕಾದಂಬರಿಯ ಉತ್ತರಾರ್ಧದಲ್ಲಿಯೇ ಆಗುತ್ತದೆ. ಪಾತ್ರಚಿತ್ರಣವು ಉತ್ತಮ ಮನೋಧರ್ಮದ ಮೂಲ ಲೇಖಕರ ದೃಷ್ಟಿಕೋಣಕ್ಕೆ ಅನುಗುಣವಾಗಿ ಉದಾತ್ತವಾದ ರೀತಿಯಲ್ಲಿ ಮಾಡಲಾಗಿದೆ. ಸನ್ನಿವೇಶಗಳನ್ನು ಚಮತ್ಕಾರವಾಗಿ ಹೆಣೆಯಲಾಗಿದ್ದು ಕುತೂಹಲವನ್ನು ಕೆರಳಿಸುತ್ತಲೇ ಇವು ಹೋಗುತ್ತವೆ.

ತದ್ಭವ-ಸಂಸ್ಕೃತ ಶಬ್ದಕೋಶ—

ಸಂಪಾದಕ ಮತ್ತು ಪ್ರಕಾಶಕ: ಬಿ. ವಿ. ಹೊಳ್ಳ, ವಿದ್ವಾನ್, ಕುಂದಾಪುರ, ದಕ್ಷಿಣ ಕನ್ನಡ. ಬೆಲೆ: ರೂ. ೨—೮—೦

ಕನ್ನಡ ಭಾಷಾಭ್ಯಾಸಿಗಳಿಗೆ ಸಂಸ್ಕೃತ ಮತ್ತು ತದ್ಭವ ಶಬ್ದಗಳ ಪರಿಚಯವನ್ನು ಮಾಡಿಕೊಳ್ಳಬೇಕಾದ ಪ್ರಸಂಗಗಳು ಅನುಸಿತ್ಯವೂ ಬರುತ್ತವೆ. ಈ ಚಿಕ್ಕ ಪುಸ್ತಕದಲ್ಲಿ ಸುಮಾರು ೨೫೦೦ ತದ್ಭವ ಶಬ್ದಗಳನ್ನು ಅಕ್ಷರಾನುಕ್ರಮದಲ್ಲಿ ಆಯ್ದು, ಅವಕ್ಕನುಗುಣವಾದ ಸಂಸ್ಕೃತ ಶಬ್ದಗಳನ್ನು ಎದುರುಗಡೆ ಕೊಡಲಾಗಿದೆ. ಅಷ್ಟೇಯಲ್ಲದೆ, ಕಠಿಣ ಶಬ್ದಗಳ ಅರ್ಥ ವಿವರಣೆಯನ್ನು ಸಹ ಮಾಡಲಾಗಿದೆ. ಹೀಗೆ ಸಾಹಿತ್ಯದ ಉತ್ತಮಾಭ್ಯಾಸಕ್ಕೆ ಉಪಯುಕ್ತವಾಗಬಹುದಾದ ಕೈಪಿಡಿಗಳಲ್ಲಿ ಇದು ಸ್ಥಾನವನ್ನು ಪಡೆದಿದೆ ಎನ್ನಬಹುದು.

ಪ್ರಕಟಣೆ

ವಿಜ್ಞಾನ ಧಾಮ ಉಡುಪಿ ಬ್ರಾಹ್ಮಣರ ಉತ್ತಮ ಜೀವನ ಸಹಕಾರ ಸಂಘ ಲಿಮಿಟೆಡ್

ಮೇಲ್ಕಂಡ ಸಂಘದ ಮಹಾ ಸಭೆಯು ತಾ. 17-8-56ನೇ ಶುಕ್ರವಾರ ಸಂಜೆ 5 ಗಂಟೆಗೆ ಉಡುಪಿ ರಥಬೀದಿಯಲ್ಲಿರುವ ಭಾರದ್ವಾಜ ಚಿಕಿತ್ಸಾ ಮಂದಿರದಲ್ಲಿ ಜರಗುವುದು. ಸದಸ್ಯರೆಲ್ಲರೂ ಸಕಾಲದಲ್ಲಿ ಹಾಜರಿರಬೇಕಾಗಿ ಅಪೇಕ್ಷಿಸೋಣಾಗಿದೆ.

ವಿಷಯಗಳು:-

1954-55ನೇ ವರ್ಷದ ಆಡಿಟ ರಿಪೋರ್ಟ ಸ್ವೀಕಾರ, 1956-57ನೇ ವರ್ಷದ ಅಂದಾಜು ಆಯವ್ಯಯ ಮಂಜೂರಾತಿ, 1956-57ನೇ ವರ್ಷಕ್ಕೆ ಹೊಸ ಕಾರ್ಯಕಾರೀ ಮಂಡಳಿಗೆ ಸದಸ್ಯರ ಚುನಾವಣೆ, ಅಧ್ಯಕ್ಷರ ಅನುಮತಿಯಿಂದ ಬರಬಹುದಾದ ಇತರ ಪ್ರಾಮುಖ್ಯ ವಿಷಯಗಳು.

ಉಡುಪಿ, 1—8—56. **ಯು. ಕೃಷ್ಣ ಭಟ್ಟ,** ಕಾರ್ಯದರ್ಶಿ.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸ್ಥಾಪನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ಮಾರಲ್ಪಡುತ್ತದೆ!!

P. DEVEE & Co. (N. J.) CALCUTTA—40.

ಸ್ಟಾಕಿಸ್ಟರು: **ಷಾ ಕಂಪೆನಿ, ಮಂಗಳೂರು—1.**

ಪಾದೂರು— ಇಲ್ಲಿಯ ಪಂಚಾಯತ ಬೋರ್ಡಿನ ಅಧ್ಯಕ್ಷರ ಚುನಾವಣೆಯು ತಾ. 27ರಲ್ಲು ನಡೆದು ಶ್ರೀ ಕೊಲ್ಲಬೆಟ್ಟುಗುತ್ತು ಪದುಮನೆ ಸಂಕಪ್ಪ ಹೆಗ್ಡೆಯವರು ಅವಿರೋಧವಾಗಿ ಆರಿಸಲ್ಪಟ್ಟಿರುವರು

ಮೂಡುಬಿದ್ರೆ— ಕಳೆದ ತಾ 25ರಲ್ಲಿ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ರವರ ಅಧ್ಯಕ್ಷತೆಯಲ್ಲಿ ಸುತ್ತಲಿನ ಗ್ರಾಮಗಳಿಗೆ ವಿದ್ಯುತ್ ಪೂರೈಕೆಯ ಉದ್ಘಾಟನೆಯು ಜಿಲ್ಲಾ ಕಲೆಕ್ಟರ್ ಶ್ರೀ ಎಂ. ಜಿ. ರಾಜಾರಾಮರಿಂದ ನೆರವೇರಿಸಲ್ಪಟ್ಟಿತು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಗೋಪಾಲ ಹೆಗ್ಡೆಯವರು ಸ್ವಾಗತಿಸಿದರು.

ಒಡ್ಡರಸೆ— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ದೇವಸ್ಥಾನಕ್ಕೆ ಕಳೆದ ತಾ. 23ರಲ್ಲಿ ಆಸುಪಾಸಿನ ಗ್ರಾಮ ಮುಖಂಡರ ಸಮ್ಮುಖದಲ್ಲಿ ಹರಿಜನ ವೆಲ್‌ಫೇರ್ ಬೋರ್ಡ ಸೇವಕರಾದ ಶ್ರೀ ಡಿ. ಬಿ. ಅಂತೈ ಸೆಟ್ರ ನೇತೃತ್ವದಲ್ಲಿ ಹರಿಜನ ಪ್ರವೇಶವು ನಡೆಯಿತು.

In the Court of the District Munsiff at Puttur.

R. I. A. No. 513/1956 in O. S. No. 43/1953.

Savithriamma ... ... —Petitioner Plaintiff

Thimmakke and others ... —Respondents, Defendants.

To,

5th Respondent:—Madda Rai alias Narayana Rai also known as Narayana Rao, residing at Sathyanarayana Vilas Coffee Hotel, Kamman Bazaar, Kammamettu Taluk, Varangal District, Hyderabad State.

7th Respt:—Devaki, daughter of Appu Hengsu and wife of Sithamogru Mahabala Shetty, residing at Ichlangode Village, Kasaragod Taluk.

8th Respt:—Kanthappa also known as Sanjiva Rao, residing at Ananda Bhavan, MadrasBrahmin's Vasathi Griha, Kamman Bazaar Kammamettu Taluk, Varangal District, Hyderabad State.

Hereby take notice that the above final decree petition filed by the petitioner in the above suit against you is posted to 11-8-56 for your appearance and objections if any personally or through lawyer on failure of which the above petition will be decided treating you exparte.

(By order of the Court)

M. Sadashiva Rao,

Vakil for Petr.

Puttur, 29-7-1956.

(೪ನೇ ಪುಟದಿಂದ)

ಜರ್ಮನಿ ಮತ್ತಿತರ ಶತ್ರು ರಾಷ್ಟ್ರಗಳಿಗೆ ಮಾಡಿಕೊಳ್ಳಲು ಬಿಟ್ಟಿಲ್ಲ.

ಶಕ್ತಿ ರಕ್ಷಣೆಯ ಉದ್ದೇಶ

ಯಾವ ರಾಷ್ಟ್ರವೂ ಶತ್ರುಗಳಿಗೆ ಪ್ರಯೋಜನವಾಗುವಂತೆ ತನ್ನ ಅಧಿಕಾರ ಕ್ಷೇತ್ರ ದಲ್ಲಿರುವ ಸೌಲಭ್ಯಗಳನ್ನು ನೀಡಬಾರದು. ಬ್ರಿಟನಿನೊಡನೆ ಐಗುಪ್ತವು ಶತ್ರು ಭಾವದಿಂದಿದೆ ಎಂದು ಬ್ರಿಟನಿನ ತಿಳಿಗಳಿಕೆಯೆ? ಆಗಿರಬಹುದು— ಏಕೆಂದರೆ, ಐಗುಪ್ತದ ಶೋಷಣೆಯನ್ನು ಯಾವುದಾದರೊಂದು ರಾಷ್ಟ್ರವು ಮಾಡಿದ್ದರೆ ಅದು ಬ್ರಿಟನು ಎಂದು ಇತಿಹಾಸವೇ ಹೇಳುತ್ತದೆ. ಈಗಲ್ಲದಿದ್ದರೆ, ಸ್ವಲ್ಪ ಸಮಯದ ಬಳಿಕ, ತನಗೆ ಈ ಕಾಲುವೆಯು ಪ್ರಯೋಜನವಾಗದಂತೆ ಐಗುಪ್ತವು ಪ್ರತಿಬಂಧಿಸಬಹುದೆಂದು ಬ್ರಿಟನು (ಮತ್ತು ಫ್ರಾನ್ಸು) ತಿಳಿದುಕೊಂಡಿರುವಂತಿದೆ. ಆದಕ್ಕಾಗಿಯೇ ಅಂತಾರಾಷ್ಟ್ರೀಯ ನಿಯಂತ್ರಣ ಸೂಚನೆ ಎತ್ತಿ ಮಾಡಲಾಗಿದೆ. ಬ್ರಿಟನಿಗೆ ತನ್ನ ವ್ಯಾಪಾರ, ಕೈಗಾರಿಕೆಗಳ ಕ್ಷೇಮಾಭಿವೃದ್ಧಿಯ ದೃಷ್ಟಿಯೊಂದಷ್ಟೇ ಯಲ್ಲ, ಭೂಮಧ್ಯ ಸಮುದ್ರ ಪ್ರದೇಶದಲ್ಲಿ ಶಕ್ತಿ ರಕ್ಷಣೆಯ ಉದ್ದೇಶವೂ ಇದೆ.

ಸಮ್ಮೇಳನದ ಒಳಗುಟ್ಟು

ನಾಸೇರರು ಇದನ್ನು ತಿಳಿದಿಲ್ಲವೆಂದು ಭಾವಿಸಬಾರದು: ಅವರ ಪರವಾಗಿ ತ್ರಿರಾಷ್ಟ್ರ ಸಮ್ಮೇಳನದ ಅಂತ್ಯದಲ್ಲಿ ಹೊರಟ ಪ್ರಕಟಣೆಗೆ ಕೂಲಂಕಷವಾದ ಉತ್ತರವನ್ನು ಕೊಡಲಾಗಿದೆ. ಐಗುಪ್ತದ ತಪ್ಪು ಎಳ್ಳಷ್ಟೂ ಇಲ್ಲವೆಂದು ಈ ಉತ್ತರದಿಂದ ಯಾರಿಗಾದರೂ ಸ್ಪಷ್ಟವಾಗುತ್ತದೆ. ಆದರೆ, ಬ್ರಿಟನು ಮತ್ತು ಫ್ರಾನ್ಸು ಗಳಿಗೆ ತಮ್ಮ ಸ್ವಾರ್ಥದ ಕಣ್ಣಡಕವನ್ನು ತೆಗೆದಿಟ್ಟುಕೊಂಡು ನೋಡುವುದು ಬೇಕಾಗಿಲ್ಲ. ಅಂತಾರಾಷ್ಟ್ರೀಯ ನಿಯಂತ್ರಣದ ಯೋಜನೆಯನ್ನು ತಯಾರಿಸಿ, ೨೪ ರಾಷ್ಟ್ರಗಳ ಪರಿಷತ್ತಿನ ಮುಂದೆ ಅದನ್ನಿಟ್ಟು, ಅವಸರದಿಂದ ಅನುಮೋದನೆಯನ್ನು ದೊರಕಿಸಿಕೊಂಡು ಐಗುಪ್ತದ ಹೆಜ್ಜೆಗೆ ಪ್ರತಿ ಹೆಜ್ಜೆಯನ್ನಿಡಬೇಕೆಂದು ಬ್ರಿಟನು— ಫ್ರಾನ್ಸು—ಅಮೇರಿಕಗಳ ಗುಟ್ಟಿನ ನಿರ್ಧಾರವಾಗಿದೆ. ಈ ೨೪ ರಾಷ್ಟ್ರಗಳ ಸಮ್ಮೇಳನದಲ್ಲಿ ಐಗುಪ್ತದ ಸ್ಥಾನ ಅಪರಾಧಿಯದೆಂಬುದು ಸ್ಪಷ್ಟ.

ನಾಸೇರರ ನಿಲುವು

ಆದರೆ ತಾನು ಮಾಡಿರದ ಅಪರಾಧಕ್ಕಾಗಿ ಅಪಮಾನವನ್ನು ಹೊಂದುವಷ್ಟು ಮತಿಗೇಡಿ ರಾಷ್ಟ್ರವಾಗಿ ಐಗುಪ್ತವು ಕಾಣಿಸುತ್ತಿಲ್ಲ. ನಿರೀಕ್ಷಕರಿಗನುಸಾರ, ಐಗುಪ್ತವು ಈ ಸಮ್ಮೇಳನದಲ್ಲಿ ಭಾಗಿಯಾಗಲು ಒಪ್ಪಲಿಕ್ಕಿಲ್ಲ. ಒಪ್ಪಿದರೆ, ಆಟು ಸಮ್ಮೇಳನದ ಉದ್ದೇಶಕ್ಕೆ ಪರೋಕ್ಷವಾಗಿಯೇ ಆಗಲಿ, ಕೈಗುಟ್ಟಿದಂತಾಗುವುದಿಲ್ಲವೆ? ಅಲ್ಲಿ ಬ್ರಿಟನಿನ ಯೋಜನೆಗೆ ಆದು ಪ್ರತಿಭಟನೆಯನ್ನು ವ್ಯಕ್ತಗೊಳಿಸಿದರೂ ಬೇರೆ ೨೩ ರಾಷ್ಟ್ರಗಳಲ್ಲಿ ಹೆಚ್ಚಿನವು ಪಾಶ್ಚಾತ್ಯರ ಪಕ್ಷಪಾತಿಗಳಾಗಿರುವುದರಿಂದ ಅಂತಾರಾಷ್ಟ್ರೀಯ ನಿಯಂತ್ರಣದ ಯೋಜನೆಯು ಅದರ ಮೇಲೆ ಹೇರಲ್ಪಡುವ ಸಂಭವವನ್ನು ಅಲ್ಲಗಳೆಯುವುದೇ ಸಾಧ್ಯವಿಲ್ಲ. ಆದುದರಿಂದ, ಐಗುಪ್ತವು ಈ ಸಮ್ಮೇಳನದಲ್ಲಿ ಭಾಗವಹಿಸಲು ನಿರಾಕರಿಸಬಹುದು; ಅಥವಾ ತನ್ನ ಪ್ರತಿ ಸೂಚನೆಗಳನ್ನು ನೀಡಬಹುದು ಎಂದು ತಜ್ಞರ ಅಭಿಪ್ರಾಯ.

ಮಂಗಳೂರು

ಶ್ರೀ ಕೆ. ನಾರಾಯಣ ರೈ, ಎಡಿಷನಲ್ ಪಬ್ಲಿಕ್ ಪ್ರಾಸಿಕ್ಯೂಟರ್— ಇವರು ಸುಮಾರು ಸಮಯದಿಂದ ಅಸ್ವಸ್ಥರಾಗಿದ್ದು, ಈಗ ಗುಣವಾಗಿ ಮದ್ರಾಸಿನಿಂದ ಹಿಂದಿರುಗಿ ಬಂದು, ಶ್ರೀ ಇವರಿಗೆ ಆನಂದ ಶೆಟ್ಟರಿಂದ ಚಾರ್ಜ್ ವಹಿಸಿಕೊಂಡು ಕೆಲಸಕ್ಕೆ ಹಾಜರಾಗಿದ್ದಾರೆ.

ತಿಲಕರ ಪುಣ್ಯತಿಥಿ ಆಚರಣೆಯು ತಾ. 1ರಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಶ್ರೀ ದಾಮೋದರ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಕೆ. ತಿಂಗಳಾಯರು ಸ್ವಾಗತಭಾಷಣ ಮಾಡಿದರು. ಡಾ. ಎಫ್. ಎಚ್. ಒಡೆಯರ್ ಮತ್ತು ಶ್ರೀ ಕೆ. ಕೆ. ಶೆಟ್ಟರು ಮಾತನಾಡಿದರು. ಶ್ರೀ ಲೋಕಯ್ಯ ಶೆಟ್ಟರು ವಂದನೆಗಳನ್ನಿತ್ತರು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P. 39/1956

ಪಿ. ವೆಂಕಟ ರಾವ್. —ಅರ್ಜಿದಾರ

ಗಂಗಾಧರ್ ರಾವ್ ಕೂಡಾ —ಎದ್ರಿರು

1. ಗಂಗಾಧರ್ ರಾವ್, 2. ಗೋಪಾಲ ರಾವ್, ಯಾನೆ ಕೇಶವ ರಾವ್- ರಾಮಚಂದ್ರರಾಯರ ಮಕ್ಕಳು. —ಎದ್ರಿರು.

1ನೇ ಎದ್ರಿ Rayapuram Madras. 2ನೇ ಎದ್ರಿ ಕುಂದಾಪುರ ತಾಲ್ಲೂಕು ಪಟ್ಟಂಗಡಿ.

ಇವರಿಗೆ

ನಾಗಪ್ಪಯ್ಯನು ವಿಠಲರಾಯರಿಗೆ ತಾರೀಕು 30—6—1880ರಲ್ಲಿ ಬರಕೊಟ್ಟ ರೂಪಾಯಿ 500-0-0ರ ಭೋಗ್ಯಾದಿ ಆಡವು ದಸ್ತಾವೇಜಿನ ಖುಲಾಸಿನ ಬಗ್ಗೆ ರೂಪಾಯಿ 515—0 0 ಮೇಲ್ಕಂಡ ಕೋರ್ಟಿನಲ್ಲಿ ಡಿಪೋಜಿಟ್ಟು ಮಾಡಿ ಸದ್ರಿ ಭೋಗ್ಯಾದಿ ಆಡವು ದಸ್ತಾವೇಜು ಖುಲಾಸು ಬಗ್ಗೆ ಅರ್ಜಿದಾರನು ಅರ್ಜಿಕೊಟ್ಟಿರುವುದರಿಂದ ಆ ಕುರಿತು ನಿಮ್ಮ ದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 20—8—1956ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಿ ಆಗಿ ತ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಪ್ರತಿನಿಧ್ಯ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

K. Raghunatha Shenai.
Pleader for Petr.
Goondapoor 28—7—1956.

The Vijaya Bank, Ltd, Brahmavar

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬ್ರಹ್ಮಾವರ

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲು ವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿ ಕೊಂಡಿರುವುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ 18-8-56 ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಈ ಬ್ಯಾಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಹೊಣೆಗಳು ಬಡ್ಡಿ ಸಮೇತ ತಾ. 30-6-56ರ ವರೆಗೆ	
35/55	ಆನಂತ ಶೆಟ್ಟಿ, ರಾಮಣ್ಣ ಶೆಟ್ರ ಅಳಿಯ, ಹಾರಾಡಿ ಕೆಳಮನೆ ಪೋಸ್ಟು ಸಾಲಿಕೇರಿ.	102	8
180/55	ತೇಜಪ್ಪ ಶೆಟ್ಟಿ, ನರ್ಸಮ್ಮ ಶೆಡ್ತಿಯವರ ಮಗ, ಬನ್ನಿಬೈಲು ಹೊಸಾಳ ಗ್ರಾಮ, ಪೋಸ್ಟು ಬಾರಕೂರು.	58	5
260/55	ಮಂಜಪ್ಪ ಶೆಟ್ಟಿ. ಜಿ. ಶೀನ ಶೆಟ್ರ ಅಳಿಯ, ವಾರಂಬಳ್ಳಿ ಗ್ರಾಮ ಪೋಸ್ಟು ಬ್ರಹ್ಮಾವರ.	89	2
276/55	ಪಾಲು ಮೆಂಡೋನ್ಸ್ ಲೂವಿಸ್, ಕ್ಲೆಮೆಂತ್ ಲೂವಿಸರ ಮಗ. ಹಂದಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ	45	15
325/55	ಬಿ. ಕೃಷ್ಣಪ್ಪ ವಾರಂಬಳ್ಳಿ, ಶಿವರಾಮ ವಾರಂಬಳ್ಳಿಯವರ ಮಗ. ವಾರಂಬಳ್ಳಿ, ಗ್ರಾಮ ಪೋಸ್ಟು ಬ್ರಹ್ಮಾವರ.	101¼	15
563/55	ಜಿ. ಶೀನ ಶೆಟ್ಟಿ, ಗಿರಿಯಮ್ಮ ಶೆಡ್ತಿಯರ ಮಗ. ಗುಡ್ಡೆ ಬೆಟ್ಟು ವಾರಂಬಳ್ಳಿ ಗ್ರಾಮ ಪೋಸ್ಟು ಬ್ರಹ್ಮಾವರ.	268	13
582/55	ಕೆ. ಚಂದ್ರಶೇಖರ ಶೆಟ್ಟಿ, ಗಿರಿಯಣ್ಣ ಶೆಟ್ರ ಅಳಿಯ. ಕೊಕ್ಕೆರ್ಣೆ ಬೈಲು, ಶಿರಿಯಾರ ಗ್ರಾಮ ಪೋಸ್ಟು ಸ್ವಾಬಕಟ್ಟೆ.	153	6
780/55	ಜೆ. ಯಮ್. ಲೂವಿಸ್, ಪೀಟರ್ ಯಮ್‌ಜಲೀಸ್ ಲೂವಿಸ್‌ರ ಮಗ. ಹಾರಾಡಿ ಗ್ರಾಮ ಪೋಸ್ಟು ಬ್ರಹ್ಮಾವರ.	54	7
790/55	ನಾಗಪ್ಪ ನ್ಯಾಕ, ಶಿವ ನ್ಯಾಕರ ಮಗ. ಹಂದಾಡಿ ಗ್ರಾಮ ತೆಂಕ ಬೆಟ್ಟು, ಪೋಸ್ಟು ಬ್ರಹ್ಮಾವರ.	49	0
805/55	ಸಿ. ನಾರಾಯಣ ಶೆಟ್ಟಿ, ಶೀನ ಶೆಟ್ರ ಅಳಿಯ, ಚೇರ್ಕಾಡಿ ಗ್ರಾಮ ಪೋಸ್ಟು ಚೇರ್ಕಾಡಿ.	23	15
904/ 5	ಬಿ. ವಿಶ್ವನಾಥ ಶೆಟ್ಟಿ, ಚಂದಯ್ಯ ಶೆಟ್ಟಿ ಮಗ. ಉಪ್ಪಿನಕೋಟೆ ವಾರಂಬಳ್ಳಿ ಗ್ರಾಮ ಪೋಸ್ಟು ಬ್ರಹ್ಮಾವರ.	130	13
937/55	ನಾರಾಯಣ ಶೆಟ್ಟಿ, ಗಣಪಯ್ಯ ಶೆಟ್ರ ಅಳಿಯ, ಹಂದಾಡಿ ಗ್ರಾಮ ಪೋಸ್ಟು ಬ್ರಹ್ಮಾವರ.	53	8
948/55	ಟಿ. ರಘುರಾಮ ಹೆಗ್ಡೆ, ವೆಂಕಪ್ಪ ಹೆಗ್ಡೆಯರ ಮಗ. ನೀಲಾವರ ಗ್ರಾಮ ಪೋಸ್ಟು ನೀಲಾವರ.	72	8
984/55	ಕಳತ್ತೂರು ಕೃಷ್ಣಯ್ಯ ಶೆಟ್ಟಿ, ಮುತ್ತಮ್ಮ ಶೆಡ್ತಿಯರ ಮಗ. ಕಳತ್ತೂರು ಗ್ರಾಮ ಪೋಸ್ಟು ಹೆಬ್ರಿ.	200	5
1007/55	ಟಿ. ರಘುರಾಮ ಹೆಗ್ಡೆ ವೆಂಕಪ್ಪ ಹೆಗ್ಡೆಯರ ಮಗ. ನೀಲಾವರ ಗ್ರಾಮ ಪೋಸ್ಟು ನೀಲಾವರ.	95	3

ಬ್ರಹ್ಮಾವರ
ತಾ. 1—8—56.

ಬಿ ಭಾಸ್ಕರ ಶೆಟ್ಟಿ,
ಏಜಂಟ್.

ಸಕ್ರಿ ವಾರ್ಡ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಕಳೆದ ತಾ. 22ರಲ್ಲಿ ಮುನಿಸಿಪಲ್ ಚೇರ್ಮನ್ ಶ್ರೀ ಸತ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಶಂಕರನಾರಾಯಣ ರಾಯರು ಸ್ವಾಗತಭಾಷಣ ಗೈದರು. ಶ್ರೀ ಕೆ. ರಾಮಚಂದ್ರ ಉಪಾಧ್ಯಾಯರು ಕಾರ್ಯಕ್ರಮ ಭಾಷಣವಿತ್ತರು.

ದ. ಕ. ಜಿಲ್ಲಾ ಬೋರ್ಡ್ ಸಭೆಯು — ಕಳೆದ ತಾ. 30ರಲ್ಲಿ ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಕೇಂದ್ರ ಸರಕಾರದಿಂದ ಶೇಕಡಾ 50ರಷ್ಟು ಸಹಾಯಧನವು ದೊರೆಯುತ್ತಿರುವ ಕೇಂದ್ರಗಳನ್ನು ತೆರೆಯಲು ಈ ಜಿಲ್ಲೆಯ ಮೂರು ಕೇಂದ್ರಗಳ ಬಗ್ಗೆ ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡುವಂತೆ ಮದ್ರಾಸಿನ ಜಿಲ್ಲಾ ಬೋರ್ಡುಗಳ ಅಧ್ಯಕ್ಷರುಗಳ ಜೊತೆಗೆ ನಿರ್ಧರಿಸಲಾಯಿತು. ಜಿಲ್ಲೆಯಲ್ಲಿ 19 ಹಿರಿಯ ಪ್ರಾಥಮಿಕ ಶಾಲೆಗಳಿಗೆ ರೂ. 200 ರಂತೆ ಉಪಕರಣ ಮತ್ತು ಬೆಂಚು ಕುರ್ಚಿಗಳನ್ನು ಒದಗಿಸುವ ಬಗ್ಗೆ ಒಟ್ಟು ರೂ. 3800/— ಮಂಜೂರು ಮಾಡಲಾಯಿತು. ಬೋರ್ಡಿನ 1955-56ರ ಆಡಳಿತ ವರದಿಯನ್ನು ಚರ್ಚಿಸಿ ಮಂಜೂರು ಮಾಡಲಾಯಿತು. 1956ನೆ ಮಾರ್ಚಿಯಲ್ಲಿ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶೇಕಡಾ 69-2ರಷ್ಟು ಫಲಿತಾಂಶ ಪಡೆದು ಬೋರ್ಡ್ ಹೈಸ್ಕೂಲುಗಳ ಪೈಕಿ ಪ್ರಥಮ ಸ್ಥಾನ ಪಡೆದ ಉಡುಪಿ ಬೋರ್ಡ್ ಹೈಸ್ಕೂಲಿಗೆ ರೋಲಿಂಗ್ ಶೀಲ್ಡನ್ನು ಸದ್ರಿ ಶಾಲಾ ಹೆಡ್ಮಾಸ್ಟರ್ ಶ್ರೀ ಅನಂತಕೃಷ್ಣ ಸಾಮಗರಿಗೆ ಅಧ್ಯಕ್ಷರು ಒಪ್ಪಿಸಿದುದನ್ನು ಅವರು ಧನ್ಯವಾದ ಪೂರ್ವಕ ಸ್ವೀಕರಿಸಿದರು.

ಆಡಳಿತ ವರದಿಯ ಕುರಿತು ಚರ್ಚೆಯಾಗಿ ಸಾಮಾನ್ಯವಾಗಿ ಚರ್ಚೆಯಲ್ಲಿ ಭಾಗವಹಿಸಿದ ಸದಸ್ಯರೆಲ್ಲರೂ ಹದಿ ವರ್ಷದಲ್ಲಿ ಬೋರ್ಡು ಸಾಧಿಸಿರುವ ಪ್ರಗತಿ ಸಾಧಿಸಿದೆಯೆಂದು ಮನದಭಿಪ್ರಾಯ ವ್ಯಕ್ತಪಡಿಸಿದರು. ಆದರೆ ಇಂಜಿನಿಯರಿಂಗ್ ಇಲಾಖೆಯ ಮೇಲೆ ಬೋರ್ಡಿಗೆ ಹತೋಟಿ ಇಲ್ಲವಾದ್ದರಿಂದ ಸಾಕಷ್ಟು ಕಾರ್ಯದಲ್ಲಿ ಸಾಕಷ್ಟು ಪ್ರಗತಿ ಆಗಿಲ್ಲವೆಂದರು. ಚರ್ಚೆಯಲ್ಲಿ ಶ್ರೀಗಳಾದ ಕೆ. ಕೆ. ಶೆಟ್ಟಿ, ಟಿ. ನಾರಾಯಣ ಭಟ್, ಎಸ್. ಎಸ್. ಪರಮೇಶ್ವರಯ್ಯ, ಎ. ಕೃಷ್ಣ ಶೆಟ್ಟಿ, ಡಾ. ನಾಗಪ್ಪಾಳ್ವ, ಎಂ. ಎಂ. ಹೆಗ್ಡೆ, ಎಸ್. ಟಿ. ಧರ್ಮಸಾಮ್ರಾಜ್ಯ, ಆರ್. ಕೆ. ಸಂಜೀವರಾವ್, ಜಿ. ಆರ್ ಕರ್ಕೇರ ಮೊದಲಾದವರು ಭಾಗವಹಿಸಿದ್ದರು. ಅಧ್ಯಕ್ಷ ಡಾ. ಹೆಗ್ಡೆಯವರು ಉತ್ತರವಿತ್ತು ಸದಸ್ಯರ ಸಹಕಾರಕ್ಕಾಗಿ ಆಭಾರ ಸೂಚಿಸಿದರು.

ದ. ಕ. ಲೇಬರ್ ಯೂನಿಯನ್ ನ ಮಹಾಸಭೆಯು—ಕಳೆದ ತಾ. 29ರಲ್ಲಿ ಶ್ರೀ ವಿ. ವೆಂಕಟರಾಮನ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಪ್ರ. ಸೋ. ಪಕ್ಷದ ಅಧ್ಯಕ್ಷ ಶ್ರೀ ಕೆ. ಆರ್. ಕಾರಂತರು ಕಾರ್ಮಿಕರ ಸಮಸ್ಯೆಗಳ ಕುರಿತು, ಆಹಾರ ಸಾಮಗ್ರಿಗಳ ಏರುತ್ತಿರುವ ಬೆಲೆಯ ವಿಚಾರವಾಗಿಯೂ ಮಾತನಾಡಿದರು. ಕಾರ್ಯದರ್ಶಿ ಶ್ರೀ ಸಿ. ಗೋಪಿನಾಥರವರು ವರದಿಯೊಪ್ಪಿಸಿದರು. ಹಂಚಿನ ಕೈಗಾರಿಕೆಗೆ ಸಂಬಂಧಿಸಿದ ಸಂಘಟನೆ ಮತ್ತು ಇತರ ಚಟುವಟಿಕೆಗಳಿಗಾಗಿ ಕಮಿಟಿ ರಚಿಸಲಾಯಿತು. ಶ್ರೀ ಸಿ. ಶ್ರೀನಿವಾಸ ಶೆಟ್ಟಿ ರು, ಪ್ರ. ಸೋ. ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷಗಳ ಪರ ಶುಭ ಅಭಿಪ್ರಾಯಗಳನ್ನಿತ್ತರು.

ಯುವಕ ಕಾಂಗ್ರೆಸಿನ ಸಪ್ತಾಹಿಕ ಸಭೆಯು—ತಾ. ೨ರಲ್ಲಿ ಶ್ರೀ. ಪಿ. ನಾರಾಯಣ ನಾಯಕರ ಅಧ್ಯಕ್ಷತೆಯಲ್ಲಿ ಜರಗಿತು. ರಾಷ್ಟ್ರ ಮತ್ತು ಸಂಸ್ಥೆಯ ಏಳಿಗೆಯಲ್ಲಿ ಯುವಕ ಕಾಂಗ್ರೆಸಿನರ ಪಾತ್ರವೆಂಬ ವಿಷಯದ ಮೇಲೆ ಶ್ರೀಗಳಾದ ಎಫ್. ಸ್ಟಾಕ್. ಒಡೆಯರ್, ಡಾ. ಯು ಪಿ. ಮಲ್ಯ ಡಾ ಕೆ. ನಾಗಪ್ಪ ಆಳ್ವ, ಕೆ. ಕೆ. ಶೆಟ್ಟಿ ಮೊದಲಾದವರು ಭಾಷಣವಿತ್ತರು. ಶ್ರೀ ಲೋಕಯ್ಯ ಶೆಟ್ಟರು ಧನ್ಯವಾದವಿತ್ತರು.

ಮೋಟಾರ್ ಟ್ರಸ್ಟಿನ ಸದಸ್ಯರು— ಮಂಗಳೂರು ಮೋಟಾರ್ ಟ್ರಸ್ಟಿಗೆ ಶ್ರೀಗಳಾದ ವಿ. ಎಸ್. ಕುಡ್ವ, ಸಿ. ನರಸಿಂಗ ರಾವ್, ಎಸ್. ದಾಮೋದರ ನಾಯಕ್ ಮತ್ತು ಸಿ. ರಘುನಾಥ ಶೆಣೈಯವರು ಆರಿಸಲ್ಪಟ್ಟಿರುವರು. ಶ್ರೀಗಳಾದ ಬಿ ಎಸ್. ಭಾಸ್ಕರ ರೈ ಮತ್ತು ಎಮ್. ರಘುರಾಮರು ಸರಕಾರದಿಂದ ಸ್ಥಳೀಯ ಶಾಸಕರಾಗಿ ಮೋಟಾರ್ ಟ್ರಸ್ಟಿಗೆ ಆರಿಸಲ್ಪಟ್ಟರು.

ನ್ಯಾಯವಾದ ಗೇಣಿ ನಿರ್ಣಯ ಕ್ರಮ

(೩ನೇ ಪುಟದಿಂದ)

ವಿವರಿಸುತ್ತದೆ. ಧನಿಗೂ ಒಕ್ಕಲಿಗೂ ನಡುವೆ ಆಗಿರುವ ಒಪ್ಪಂದದ ಪ್ರಕಾರ, ಸಂಪೂರ್ಣ ಧಾನ್ಯದ ರೂಪದಲ್ಲಿ ಅಥವಾ ಸಂಪೂರ್ಣ ನಗದಿಯಾಗಿ, ಅಥವಾ ಸ್ವಲ್ಪ ಧಾನ್ಯ ಮತ್ತು ಸ್ವಲ್ಪ ನಗದಿಯಾಗಿ ಗೇಣಿಯನ್ನು ಪಾವತಿಮಾಡಬಹುದು.

ಇಂತಹ ಒಪ್ಪಂದವಿಲ್ಲದಿದ್ದರೆ, ಮೇಲೆ ಹೇಳಿದ ರೀತಿಗಳಲ್ಲಿ ಯಾವುದಾದರೊಂದು ಬಗೆಯಿಂದ ಒಕ್ಕಲು ತನ್ನ ಇಚ್ಛಾನುಸಾರ ಗೇಣಿಯನ್ನು ಪಾವತಿಮಾಡಬಹುದು. ಆದರೆ ತನ್ನ ಇಚ್ಛೆ ಏನೆಂಬುದನ್ನು ಈ ಶಾಸನವು ಸರಕಾರಿ ಗಜೆಟಿನಲ್ಲಿ ಮೊದಲು ಪ್ರಕಟವಾದ ತಾರೀಕಿನಿಂದ ಮೂರು ತಿಂಗಳೊಳಗೆ ಧನಿಗೆ ತಿಳಿಸಬೇಕು; ಆ ತಾರೀಕಿನ ಬಳಿಕ ಮಾಡಲಾದ ಒಕ್ಕಲುತನದ ಒಪ್ಪಂದವಾದಲ್ಲಿ, ಆ ಒಪ್ಪಂದದ ತಾರೀಕಿನಿಂದ ಮೂರು ತಿಂಗಳೊಳಗೆ ಧನಿಗೆ ಒಕ್ಕಲು ತಾನು ಗೇಣಿ ಪಾವತಿ ಮಾಡುವ ವಿಧಾನ ಏನೆಂಬುದನ್ನು ತಿಳಿಸಬೇಕು.

ಮೇಲೆ ಹೇಳಿದ ಅವಧಿಯೊಳಗೆ ಒಕ್ಕಲು ತನ್ನ ಇಚ್ಛೆಯನ್ನು ತಿಳಿಸದಿದ್ದರೆ, ಧನಿಯು ಬರಹಮೂಲಕವಾದ ಸೂಚನೆಯನ್ನು ಕೊಟ್ಟು ಒಕ್ಕಲು ತನಗೆ ಯಾವ ಪ್ರಕಾರ ಗೇಣಿ ಪಾವತಿ ಮಾಡಬೇಕೆಂದು ಹೇಳಲು ಅಧಿಕಾರ ಹೊಂದಿದ್ದಾನೆ.

ಯಾರೇ ಆಗಲಿ, ಒಮ್ಮೆ ನಿರ್ಧರಿಸಿದ ವಿಧಾನವನ್ನು ಪರಸ್ಪರ ಸಮ್ಮತಿಯಿಂದಲ್ಲದೆ ಬದಲಾಯಿಸುವಂತಿಲ್ಲ.

ಪ್ರತಿಕೂಲವಾದ ಹವಾಮಾನ ಮತ್ತು ಪರಿಸ್ಥಿತಿಗಳಿಂದಾಗಿ ಯಾವುದಾದರೊಂದು ಬೆಳೆಯಿಂದಾಗುವ ಒಟ್ಟು ಉತ್ಪನ್ನದಲ್ಲಿ ೨೫% ಅಥವಾ ಅದಕ್ಕೆ ಹೆಚ್ಚಿನ ನಷ್ಟವುಂಟಾದರೆ, ಆ ಅವಧಿಯ ಮಟ್ಟಿಗೆ ಧನಿಯು ಒಕ್ಕಲಿನಿಂದ ಬರಬೇಕಾದ ಗೇಣಿಯನ್ನು ನಷ್ಟವಾದ ಪ್ರಮಾಣಕ್ಕೆ ಅನುಗುಣವಾದ ದಾಮಾಶಯದಲ್ಲಿ ಕಡಿಮೆ ಮಾಡಲು ಬದ್ಧನಾಗಿದ್ದಾನೆ.

ಹೀಗೆ ಗೇಣಿ ಕಡಿಮೆಯಾಗಬೇಕೆಂದು ಗೇಣಿ ನಿರ್ಣಯ ನ್ಯಾಯಾಲಯಕ್ಕೆ ಒಕ್ಕಲು ಮಾಡಿದ ಅರ್ಜಿಯನ್ನು ಸ್ವೀಕರಿಸುವುದಕ್ಕೆ ಅಥವಾ ವಿಚಾರಿಸುವುದಕ್ಕೆ ಮೊದಲು ಆ ನ್ಯಾಯಾಲಯವು ಒಕ್ಕಲು ಒಪ್ಪಿಕೊಳ್ಳುವ ಗೇಣಿಯನ್ನು ಮುಂಗಡವಾಗಿ ನ್ಯಾಯಾಲಯದಲ್ಲಿ ಠೇವಣಾತಿಯಾಗಿ ಸಲ್ಲಿಸಬೇಕೆಂಬ ಶರ್ತಸಹಿತವಾಗಿ ಆಯಾ ಪರಿಸ್ಥಿತಿಗನುಗುಣವಾದ ಬೇರೆ ಬೇರೆ ಶರ್ತಗಳನ್ನು ಹಾಕಬಲ್ಲುದು.

ನ್ಯಾಯವಾದ ಗೇಣಿಯು ಬದಲಾವಣೆ ಸಂಬಂಧಿಸಿದ ನಿಯಮಗಳನ್ನು ಮಸೂದೆಯ ೬ನೇ ಸೂತ್ರ ಹೇಳುತ್ತದೆ. ಈ ಶಾಸನದಂತೆ ಒಮ್ಮೆ ನಿಗದಿಗೊಳಿಸಲಾದ ನ್ಯಾಯವಾದ ಗೇಣಿಯು ಐದು ವರ್ಷ ಕಾಲದ ವರೆಗೆ ಊರ್ಜಿತವಲ್ಲಿ ಉಳಿಯುತ್ತದೆ.

ಆದರೆ, ಗೇಣಿ ನಿರ್ಣಯ ನ್ಯಾಯಾಲಯವು ಒಕ್ಕಲಿನಿಂದ ಮಾಡಲ್ಪಟ್ಟ ಅರ್ಜಿಯನ್ನು ವಿಚಾರಿಸಿ, ಒಕ್ಕಲಿನ ನಿಯಂತ್ರಣಕ್ಕೆ ಮೀರಿದ ನೆರೆ ಮತ್ತಿತರ ಬೇರೆ ಯಾವುದೇ ಕಾರಣಗಳಿಂದಾಗಿ ಭೂಮಿಯು ಸಂಪೂರ್ಣವಾಗಿಯಾಗಲೀ ಅಂಶಿಕವಾಗಿಯಾಗಲೀ ಕೃಷಿಗೆ ಅಯೋಗ್ಯವಾಗಿ ಪರಿಣಮಿಸಿದೆ ಎಂದು ಸಮಾಧಾನಪಟ್ಟಲ್ಲಿ ನ್ಯಾಯವಾದ ಗೇಣಿಯನ್ನು ತಗ್ಗಿಸಬಲ್ಲುದು.

ಹಾಗೆಯೇ ಗೇಣಿ ನಿರ್ಣಯ ನ್ಯಾಯಾಲಯವು ಧನಿಯಿಂದ ಮಾಡಲ್ಪಟ್ಟ ಅರ್ಜಿಯನ್ನು ವಿಚಾರಿಸಿ, ಧನಿಯ ವೆಚ್ಚದಿಂದ ಅಥವಾ ಸ್ವತಃ ಧನಿಯಿಂದ ಮಾಡಲಾದ ಅಭಿವೃದ್ಧಿ ಪ್ರಯತ್ನಗಳ ಪರಿಣಾಮವಾಗಿ ಭೂಮಿಯ ಒಟ್ಟು ಉತ್ಪನ್ನವು ಹೆಚ್ಚಾಗಿದೆ ಎಂದು ಸಮಾಧಾನಪಟ್ಟಲ್ಲಿ ನ್ಯಾಯವಾದ ಗೇಣಿಯನ್ನು ಏರಿಸಬಲ್ಲುದು.

ಧಾನ್ಯರೂಪದಲ್ಲಿಯೇ ಉತ್ಪನ್ನದಲ್ಲಿ ಪಾಲನ್ನು ಪಡೆಯುವುದಾದಲ್ಲಿ ಪಡಿಮಂಚದಲ್ಲಿ ಬಡಿದು ಧಾನ್ಯ ಸಂಗ್ರಹಿಸುವಾಗಲೇ ಪಾಲು ನಡೆಯಬೇಕು; ಕ್ಲುಪ್ತಕಾಲದಲ್ಲಿ ಪಾಲು ನಡೆಯುವುದಕ್ಕೆ ಆತಂಕಿಸುವಂತೆ ಉತ್ಪನ್ನದ ಯಾವುದೇ ಭಾಗವನ್ನು ಅಲ್ಲಿಂದ ತೆಗೆದುಕೊಂಡು ಹೋಗಬಾರದು ಎಂದು ಮಸೂದೆಯ ೭ನೇ ಸೂತ್ರವು ವಿಧಿಸುತ್ತದೆ.

ಸರಕಾರವು ಪ್ರಸಿದ್ಧಿ ಪತ್ರದ ಮೂಲಕ ಗೇಣಿ ನಿರ್ಣಯ ನ್ಯಾಯಾಲಯಗಳನ್ನೂ ಗೇಣಿ ನಿರ್ಣಯ ನ್ಯಾಯಮಂಡಳಿಗಳನ್ನೂ ಸ್ಥಾಪಿಸಬಲ್ಲುದು; ಪ್ರತಿಯೊಂದು ಗೇಣಿ ನಿರ್ಣಯ ನ್ಯಾಯಾಲಯಕ್ಕೆ ತಹಸೀಲ್ದಾರರಿಗಿಂತ ಕಡಿಮೆಯಲ್ಲದ ಅಂತಸ್ತಿನ ಅಧಿಕಾರಿಯು ಅಧ್ಯಕ್ಷನಾಗಬೇಕು; ನ್ಯಾಯಮಂಡಳಿಕ್ಕೆ ಜಿಲ್ಲಾ ಮುನ್ಸೀಫರಿಗಿಂತ ಕಡಿಮೆಯಲ್ಲದ ಅಂತಸ್ತಿನ ಅಧಿಕಾರಿಯು ಅಧ್ಯಕ್ಷನಾಗಬೇಕು.

ಧನಿಗೂ ಒಕ್ಕಲಿಗೂ ನಡುವೆ ಇರುವ ಯಾವುದೇ ಒಪ್ಪಂದವನ್ನಾಗಲೀ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ತೀರ್ಮಾನವನ್ನಾಗಲೀ, ಲೆಕ್ಕಿಸದೆ ಧನಿ ಮತ್ತು ಒಕ್ಕಲುಗಳಲ್ಲಿ ಯಾರು ಬೇಕಾದರೂ ಗೇಣಿ ನಿರ್ಣಯ ನ್ಯಾಯಾಲಯಕ್ಕೆ ನ್ಯಾಯವಾದ ಗೇಣಿಯನ್ನು ನಿಗದಿಗೊಳಿಸಬೇಕೆಂದು ಅಥವಾ ವಿವಾದವನ್ನು ತೀರ್ಮಾನಿಸಿಕೊಡಬೇಕೆಂದು ಅರ್ಜಿಮಾಡಬಹುದು.

ಈ ನ್ಯಾಯಾಲಯದ ತೀರ್ಮಾನದ ವಿರುದ್ಧ ಗೇಣಿ ನಿರ್ಣಯ ನ್ಯಾಯಮಂಡಳಿಕ್ಕೆ ಅಪೀಲುಮಾಡಬಹುದು; ಇಲ್ಲಿಯ ತೀರ್ಮಾನವೇ ಕೊನೆಯದು. ಹೀಗೆ ನ್ಯಾಯ-ದಾನವನ್ನು ಪಡೆಯುವುದಕ್ಕೆ ತಗಲಿದ ವೆಚ್ಚವನ್ನು ಯಾರು ಮತ್ತು ಹೇಗೆ ವಹಿಸಬೇಕೆಂಬ ವಿಷಯವನ್ನು ಆಯಾ ನ್ಯಾಯಾಧಿಕಾರಿಗಳ ತೀರ್ಮಾನಕ್ಕೆ ಬಿಡಲಾಗಿದೆ ಎಂದು ಮಸೂದೆಯ ೮, ೯ ಮತ್ತು ೧೦ನೇ ಸೂತ್ರಗಳು ಹೇಳುತ್ತವೆ.

ಜಿಲ್ಲಾ ಕಲೆಕ್ಟರರು ಪ್ರತಿವರ್ಷದ ಜನವರಿ, ಎಪ್ರಿಲ್, ಜುಲಾಯಿ ಮತ್ತು ಅಕ್ಟೋಬರ ತಿಂಗಳುಗಳಲ್ಲಿ ತತ್ಪೂರ್ವದ ಮೂರು ತಿಂಗಳುಗಳಿಗೆ ಅನ್ವಯಿಸಿ ಜಿಲ್ಲೆಯ ಮುಖ್ಯ ಬೆಳೆಗಳಿಗೆ ಆಯಾ ತಾಲೂಕಿನ ಮುಖ್ಯ ಪಟ್ಟಣಗಳಲ್ಲಿದ್ದ ಸರಾಸರಿ ಪೇಟೆಯ ಧಾರಣೆಯನ್ನು ಜಿಲ್ಲಾ ಗಜೇಟಿನಲ್ಲಿ ಪ್ರಕಟಿಸಬೇಕು.

ಯಾವುದೇ ಒಕ್ಕಲಿನಿಂದ ಸಂದಾಯವಾಗಬೇಕಾಗಿರುವ ಗೇಣಿಯ ನಗದಿ ಬೆಲೆಯನ್ನು ನಿರ್ಧರಿಸಬೇಕಾಗಿದ್ದರೆ, ಆ ಗೇಣಿಯು ಪಾವತಿಯಾಗಬೇಕಾದ ತಾರೀಕಿನ ಮುಂಚೆ ಪ್ರಕಟವಾದ ಆ ತಾಲೂಕಿನ ಮುಖ್ಯ ಪಟ್ಟಣದ ಸರಾಸರಿ ಪೇಟೆಯ ಧಾರಣೆಯನ್ನೇ ಪರಿಗಣಿಸಬೇಕು.

ಕಲೆಕ್ಟರರು ಬೆಲೆಯನ್ನು ಪ್ರಕಟಿಸಿರದ ಆ ಮುಖ್ಯ ಬೆಳೆಗಳ ಬೆಲೆಯನ್ನು ಧನಿ ಮತ್ತು ಒಕ್ಕಲುಗಳು ಪರಸ್ಪರ ಒಪ್ಪಿಗೆಯಿಂದ ತೀರ್ಮಾನಿಸಬೇಕು; ಇಂತಹ ಒಪ್ಪಿಗೆಯಾಗದಿದ್ದರೆ, ಗೇಣಿ ನಿರ್ಣಯ ನ್ಯಾಯಾಲಯವು ನಿರ್ಧರಿಸಿದ ಬೆಲೆಯೇ ಸಿಂಧುವಾಗುತ್ತದೆ ಎಂಬುದು ಮಸೂದೆಯ ೧೧ನೇ ಸೂತ್ರದ ಆಶಯ.

ಮಸೂದೆಯ ೧೩ನೇ ಸೂತ್ರವು ಈ ಗೇಣಿಯಿಂದ ಲಾಭ ಪಡೆಯುವ ಭೂಮಿಗೊಂದು ಮಿತಿಯನ್ನು ಹೇಳುತ್ತದೆ. ಸಾಗುವಳಿದಾರನಾದ ಒಕ್ಕಲೊಬ್ಬನ ವಶದಲ್ಲಿ ಸ್ವಂತ ಭೂಮಿಯೆಂದಾಗಲೀ ಒಕ್ಕಲೆಂದಾಗಲೀ ಅಥವಾ ಎರಡೂ ವಿಧದಿಂದಾಗಲೀ ೬ ೨/೩ ಎಕ್ರೆಗಿಂತ ಹೆಚ್ಚು ನಂಜ ಭೂಮಿಯಿದ್ದರೆ, ಆ ಹೆಚ್ಚಿಗೆ ಭೂಮಿಯು ಈ ಶಾಸನದ ಅಧಿಕಾರ ವ್ಯಾಪ್ತಿಗೆ ಒಳಪಡಲಾರದು

ಹೀಗೆ ೬ ೨/೩ ಎಕ್ರೆಗಿಂತ ಹೆಚ್ಚು, ಆದರೆ ೧೦ ಎಕ್ರೆಗಿಂತ ಕಡಿಮೆ ಭೂಮಿಯನ್ನು ಸಾಗುವಳಿ ಮಾಡುತ್ತಿರುವಾತನು ೧೯೫೭ನೇ ಇಸವಿಯಲ್ಲಿ ಯಾವ ತಾರೀಕಿನಂದು ಸಾಗುವಳಿ ವರ್ಷವು ಕೊನೆಗೊಳ್ಳುವುದೋ ಅಂದು ಹಾಗೆ ೬ ೨/೩ ಎಕ್ರೆಗಿಂತ ಹೆಚ್ಚಿಗಿದ್ದ ಭೂಮಿಯನ್ನು ಬಿಟ್ಟುಕೊಡುತ್ತೇನೆಂದು ಧನಿಗೆ ಬರಹಮೂಲಕವಾದ ಸೂಚನೆಯಿಂದ ತಿಳಿಸಿದರೆ ಈ ಶಾಸನದ ಲಾಭಗಳಿಗೆ ಭಾಗಿಯಾಗಬಲ್ಲನು. ಅನ್ಯಥಾ ಆತನಿಗೆ ೧೯೫೭ನೇ ಇಸವಿಯಲ್ಲಿ ಯಾವ ತಾರೀಕಿನಂದು ಸಾಗುವಳಿವರ್ಷವು ಕೊನೆಗೊಳ್ಳುವುದೋ ಅಂದಿನವರೆಗೆ ಮಾತ್ರ ಈ ಶಾಸನದ ಪ್ರಯೋಜನವು ಸಿಗುತ್ತದೆ.

ಒಬ್ಬನೊಡನೆ ಎಷ್ಟು ಭೂಮಿಯಿದೆ ಎಂಬುದನ್ನು ಈ ಮಿತಿನಿರ್ಧಾರಕ್ಕಾಗಿ ಲೆಕ್ಕಮಾಡುವಾಗ ೧ ಎಕ್ರೆ ನಂಜವು ೧/೨ ಎಕ್ರೆ ಬಾಗಾಯತಿಗೆ ೩ ಎಕ್ರೆ ಪುಂಜಕ್ಕೆ ಸಮವೆಂಬ ಸೂತ್ರವನ್ನು ಅನುಸರಿಸಲಾಗುತ್ತದೆ

ಮಸೂದೆಯ ೧೪ನೇ ಸೂತ್ರವು ವೀಳ್ಯದೆಲೆ, ಬಾಳೆ ಅಥವಾ ಕಬ್ಬು ಇವುಗಳನ್ನು ಮುಖ್ಯ ಬೆಳೆಯಾಗಿ ಬೆಳೆಸುವ ಭೂಮಿಗೆ ಆ ಬೆಳೆಗಳಾಗುತ್ತಿರುವ ಅವಧಿಯಲ್ಲಿಯೂ ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಕಾಲದ ವರೆಗೆ ಏನೂ ಫಲವನ್ನು ಕೊಡದ ಬೆಳೆಯನ್ನು ಬೆಳೆಸುವ ಭೂಮಿಗೂ ಈ ಶಾಸನವು ಅನ್ವಯಿಸುವುದಿಲ್ಲವೆಂದು ಹೇಳುತ್ತದೆ.

ಮಸೂದೆಯ ೧೬ನೇ ಸೂತ್ರವು ಸಾಮಾನ್ಯ ಒಟ್ಟು ಉತ್ಪನ್ನವನ್ನು ನಿಗದಿಗೊಳಿಸುವಾಗ ಗಮನಿಸಬೇಕಾದ ವಿಷಯ, ನ್ಯಾಯಾಲಯಕ್ಕೆ ಸಲ್ಲಿಸಬೇಕಾದ ಅರ್ಜಿಯ ಹಾಸಲಿನ ದರ, ಅಪೀಲನ್ನು ಎಷ್ಟು ಸಮಯದೊಳಗೆ ಮಾಡಬೇಕೆಂದು ನಿರ್ಧರಿಸುವ ವಿಷಯ, ಉತ್ಪನ್ನದ ನಗದಿ ಬೆಲೆಯನ್ನು ಪ್ರಸಿದ್ಧಗೊಳಿಸುವುದಕ್ಕೆ ಸಂಬಂಧಿಸಿದ ವಿಷಯ ಇತ್ಯಾದಿಗಳಲ್ಲಿ ನಿಯಮಗಳನ್ನು ರಚಿಸಲು ಸರಕಾರಕ್ಕೆ ಅಧಿಕಾರ ನೀಡುತ್ತದೆ.

ಈ ನಿಯಮಗಳನ್ನು ರಚಿಸಿದ ಬಳಿಕ ಆದಷ್ಟು ಬೇಗನೇ ಶಾಸನಾಂಗದ ಉಭಯ ಸದನಗಳ ಮುಂದೆ ಮಂಡಿಸಬೇಕೆಂದೂ ಶಾಸನಾಂಗದ ಕೆಳಮನೆಯು ಅಧಿವೇಶನದಲ್ಲಿ ಸೇರಿದ ೧೪ ದಿನಗಳೊಳಗೆ ತಿದ್ದುಪಡಿ ಅಥವಾ ಪರಿಷ್ಕಾರದ ರೂಪದಲ್ಲಿ ಮಾಡುವ ಬದಲಾವಣೆಗಳಿಗೆ ಅವು ಒಳಪಡಬೇಕೆಂದೂ ಸಹ ಈ ಸೂತ್ರವು ಹೇಳುತ್ತದೆ.

ದ. ಕ. ಸಬೋರ್ಡಿನೇಟ್ ಜಡ್ಜರ ಕೋರ್ಟಿನಲ್ಲಿ

O. P. No. 160/1955.

Between:-

ಗೋವಿಂದ ಭಟ್ಟ ಕೂಡಾ —ಅರ್ಜಿದಾರರು

ಮತ್ತು

ಶಂಕರನಾರಾಯಣ ಭಟ್ಟ ಕೂಡಾ —ರೆಸ್ಪೋಂಡೆಂಟರು.

12ನೇ ಪ್ರತಿವಾದಿ:-

ಪುತ್ತೂರು ತಾಲೂಕು ಪಡ್ನೂರು ಗ್ರಾಮದ ಬೆನಿಲ ಎಂಬಲ್ಲಿರುವ ಗೋವಿಂದ ಭಟ್ಟರ ಮಗ, ರಾಮಭಟ್ಟರಿಗೆ.

ಸದ್ರಿ ಅರ್ಜಿದಾರರು ದಾಖಲುಮಾಡಿರುವ ಹಿಸೆ ವ್ಯಾಜ್ಯವನ್ನು ಪಾಪ್ರಿಯಾಗಿ ದಾಖಲು ಮಾಡಿಕೊಳ್ಳಬೇಕೆಂತ ದಾಖಲು ಮಾಡಿರುವ ಅರ್ಜಿಯನ್ನು ಸದ್ರಿ ಕೋರ್ಟಿನಲ್ಲಿ ತಾ. 11—9—56ಕ್ಕೆ 11 ಗಂಟೆಗೆ ನಿಮ್ಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ಅಂದು ನೀವು ಸದ್ರಿ ಕೋರ್ಟಿನಲ್ಲಿ ಹಾಜರು ಆಗಿ ವ್ಯವಹರಿಸದಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದೆಂದು ತಿಳಿದಿರಲಿ.

ಕೆ. ಸೂರ್ಯನಾರಾಯಣ ಅಡಿಗ.
ಅರ್ಜಿದಾರರ ಕಡೆ ವಕೀಲ.

ಮಂಗಳೂರು:

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನ್ಯೂ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮುದ್ದುಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—56ರಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

ರಾಜ್ಯಗಳ ಪುನಾರಚನೆಯಲ್ಲಿ ರಾಷ್ಟ್ರೀಯ ದೃಷ್ಟಿ ಆವಶ್ಯಕ

(೨ನೇ ಪುಟದಿಂದ)

ನಾವು ಒಬ್ಬರಿನ್ನೊಬ್ಬರನ್ನು ಸಂದೇಹಪೂರಿತ ದೃಷ್ಟಿಯಿಂದ ನೋಡ ರಣಾಹ್ವಾನ ಕೊಡುತ್ತಿದ್ದರೆ, ಯೋಗ್ಯತೆಯ ಮೇಲಿಂದ ಯಾವುದೇ ಸಮಸ್ಯೆಯ ಚರ್ಚೆ ನಡೆಸಿ, ವಿಚಾರ ಮಾಡುವುದು ತುಸು ಕಷ್ಟವಾಗಿಯೇ ಪರಿಣಮಿಸುತ್ತದೆ.

ಸಮಸ್ಯೆಯನ್ನು ವಿಶಾಲವಾದ ದೃಷ್ಟಿಕೋನದಿಂದ ವಿಚಾರಿಸುವುದು ಅತ್ಯವಶ್ಯ. ಒಬ್ಬನಿಗೆ ತೀರ ಅಪ್ರಿಯವಾದ ನಿರ್ಣಯವೊಂದನ್ನು ಮಾಡಲಾಗಿದೆ ಎಂದಿಟ್ಟುಕೊಂಡರೂ ಅದು ಭಯಂಕರ ವ್ಯತ್ಯಾಸವನ್ನು ಮಾಡುತ್ತದೆ ಎಂದು ಭಾವಿಸಬಾರದು; ಅದೇ ಹೊತ್ತಿಗೆ, ಎಂತಹ ತಪ್ಪನ್ನೂ ಹಿಂದಿನಿಂದ ತಿದ್ದಿಕೊಳ್ಳಬಹುದು ಎಂಬುದನ್ನು ಮರೆತು ಬಿಡಬಾರದು. ನಾವು ಮಾಡಬಹುದಾದ ತಪ್ಪುಗಳಲ್ಲೆಲ್ಲ ಅತ್ಯಂತ ದೊಡ್ಡದಾದುದೆಂದರೆ, ಈ ಸಮಸ್ಯೆಯನ್ನು ತಪ್ಪು ದೃಷ್ಟಿಕೋನದಿಂದ ವೀಕ್ಷಿಸಿ, ತಪ್ಪು ವಿಧಾನಗಳನ್ನು ಅನುಸರಿಸುವುದಾಗಿದೆ; ಮತ್ತು ಹೀಗೆ ಕಳವಳಕ್ಕೂ ಘರ್ಷಣೆಗೂ ಎಡೆಕೊಡುವುದಾಗಿದೆ.

ಸದಸ್ಯರಲ್ಲಿ ಯಾರಾದರೊಬ್ಬರು ಹೀಗೆ ಹೇಳಬಹುದು—"ಅದೆಲ್ಲ ಸರಿ ನಿಮ್ಮ ಉದ್ದೇಶಗಳೆಲ್ಲ ಒಳ್ಳೆಯದೆಂದೇ ಕಟ್ಟಿಕೊಳ್ಳೋಣ! ಆದರೆ, ನಮ್ಮನ್ನು ಎಲ್ಲಿ ಇಳಿಸಿರುವಿರೆಂಬುದನ್ನು, ಸ್ವಲ್ಪ ನೋಡಿರಿ!" ಗಲಿಬಿಲಿಯಲ್ಲಿ ನಾವೆಲ್ಲ ಬಿದ್ದಿದ್ದೇವೆ ಎಂಬುದು ಸಂಪೂರ್ಣ ಸತ್ಯ. ನಾನದನ್ನು ಒಪ್ಪಿಕೊಳ್ಳುತ್ತೇನೆ; ಈ ಬಗ್ಗೆ ನನ್ನ ಜವಾಬ್ದಾರಿಯನ್ನು ನಾನು ಒಪ್ಪಿಕೊಳ್ಳುತ್ತೇನೆ. ಪ್ರಧಾನಮಂತ್ರಿಯಾದುದರಿಂದ ನಾನಿದನ್ನು ಒಪ್ಪಿಕೊಳ್ಳಬೇಕಾಗುತ್ತದೆ; ನೈತಿಕವಾಗಿಯಾದರೂ ಇದಕ್ಕೆ ಜವಾಬ್ದಾರನೇ ಆಗಿದ್ದೇನೆ. ಅದರಿಂದ ಓಡಿ ಹೋಗಲು ನಾನು ಬಯಸುವುದಿಲ್ಲ. ಕೆಲವೊಮ್ಮೆ ನಾವು ಒಂದು ಸಮಸ್ಯೆಯನ್ನು ಬಿಡಿಸಲು ಹೋಗುವಾಗ ಇನ್ನೊಂದರ ಜಾಲದಲ್ಲಿ ಬೀಳುತ್ತೇವೆ!

ಕಳೆದ ಎಂಟು ತಿಂಗಳುಗಳ ಚರಿತ್ರೆಯನ್ನು ಪ್ರಸ್ತಾಪಿಸಲು ನಾನು ಬಯಸುವುದಿಲ್ಲ. ಆದರೆ, ನಾವು ಒಂದು ಘಟ್ಟಕ್ಕೆ ಈಗ ಬಂದು ನಿಂತಿದ್ದೇವೆ; ಮತ್ತು ಈಗಿರುವ ರೀತಿಯಲ್ಲಿ ನಾವು ಪ್ರಶ್ನೆಯನ್ನು ನೋಡಬೇಕಾಗಿದೆ. ಎಷ್ಟೋ ವಿಷಯಗಳನ್ನು ಮಾಡಬಹುದಿತ್ತೆಂದು ಹೇಳಬಹುದು—ಉದಾಹರಣೆಗಾಗಿ ವಿಶಾಲವಾದ ದ್ವಿಭಾಷಾ ರಾಜ್ಯಗಳ ರಚನೆ—ಮತ್ತು ಬೇರೆ ಅನೇಕ ಸಂಗತಿಗಳನ್ನು ಹಿಂದಿನಿಂದ ಮಾಡುತ್ತಿರಲೂ ಬಹುದು. ಆದರೆ, ನಾವು ಈಗ ನಿಜವಾಗಿ ಏನನ್ನು ಮಾಡಬೇಕಾಗಿದೆ? ಪರಸ್ಪರ ಸಹಕಾರದ ವಾತಾವರಣವನ್ನು ಪೋಷಿಸಿ, ಉಳಿಸುವುದೇ ನಮ್ಮ ಈಗಿನ ಪ್ರಯತ್ನವಾಗಲಿ!

ಯಾವುದೇ ವಿಷಯದ ಅಂತಿಮ ಪರಿಣಾಮ ಸದಾಶಯವನ್ನು ನಿರ್ಮಿಸುವುದೋ ಅಥವಾ ಸದಾಶಯವನ್ನು ಕೆಡಿಸುವುದೋ ಎಂಬುದೇ ನನ್ನ ದೃಷ್ಟಿಯಲ್ಲಿ ಮಹತ್ವದ ವಿಷಯ. ಮುಂಬಯಿ ಮತ್ತು ಮಹಾರಾಷ್ಟ್ರದ ಪ್ರಸ್ತಾಪ ಮಾಡಿದಾಗಲೆಲ್ಲ ಹೇಳುವುದು ಈ ಸಂಗತಿಯನ್ನೊಂದವೆ ತಪ್ಪಿಗದು. ನಾವು ಹಿಂದೆ ಕೈಗೊಂಡ ನಿರ್ಣಯಗಳನ್ನು ಬದಲಿಸುತ್ತಾ ಹೋದೆವು — ಮತ್ತು ಹೀಗೆ ಬದಲಿಸಿದಂತೆಲ್ಲ ಹೊಸ ಕಷ್ಟಗಳಲ್ಲಿ ಸಿಲುಕಿಕೊಂಡೆವು! ಒಬ್ಬರ ಸಲಹೆಯಂತೆ ನಾವು ನಿರ್ಣಯವನ್ನು ಬದಲಿಸಿದೆವು; ಅಷ್ಟರಲ್ಲಿ ಅವರೇ ಬೇರೆ ಸೂಚನೆಗಳನ್ನು ಮುಂದಿಟ್ಟರು! ಹೀಗೆ ಉಂಟಾದ ತೊಂದರೆಯಿದು.

ಶ್ರೀ ದೇಶಮುಖರು (ಮಾಜಿ ಅರ್ಥ ಸಚಿವ) ನಗರ—ರಾಜ್ಯವಾಗಿ ಮುಂಬಯಿ ನಗರ ಉಳಿಯುವುದೇ ಈಗಿನ ತೀರ್ಮಾನಕ್ಕಿಂತ ವಾಸಿ ಎಂದಿದ್ದಾರೆ. ನಾವಾದರೂ ಅದನ್ನೆ ಬಯಸಿದ್ದೆವು; ಮತ್ತು ಅದೇ ನಮ್ಮ ಪ್ರಥಮ ನಿಶ್ಚಯ. ಮಾನ್ಯ ಸದಸ್ಯರು ತಾನು ಕೇವಲ ತನ್ನ ಪರವಾಗಿಯಷ್ಟೇಯಲ್ಲ, ಉಳಿದವರ ಪರವಾಗಿಯೂ ನಗರ ರಾಜ್ಯದ ಸಿದ್ಧಾಂತವನ್ನು ಸ್ವೀಕರಿಸಬೇಕೆಂದು ಹೊಣೆಗಾರಿಕೆಯಿಂದಲೂ ಅಧಿಕಾರಯುಕ್ತವಾಗಿಯೂ ಹೇಳಿರುವುದನ್ನು ಅವರು ಮರೆತಿರಲಿಕ್ಕಿಲ್ಲ. ನಾವದನ್ನು ಕೂಡಲೇ ಒಪ್ಪಿಕೊಂಡೆವು ಏಕೆಂದರೆ ನಗರಿಗೆ ಸಂಬಂಧಿಸಿದ ಜನರನ್ನು ಸಂತೋಷಪಡಿಸುವುದೇ ಬೇಕಾಗಿದ್ದಿತು. ಆದರೆ, ಹೀಗೆ ಬದಲಾವಣೆ ಮಾಡಿದ ಕೆಲ ತಾಸುಗಳೊಳಗೆ, "ನೀವೇನು ನಿರ್ಧರಿಸಿರುವಿರೊ ಅದನ್ನೀಗ ಬದಲಿಸಿರಿ; ನಮಗದು ಬೇಡವಾಗಿದೆ" ಎಂದು ಹೇಳಲಾಯಿತು. ಆದುದರಿಂದ ನಾವು ಹಿಂದೆಸರಿದೆವು! ಆದಷ್ಟು ಹೆಚ್ಚು ಜನರಿಗೆ ಸಮ್ಮತವೂ ತೃಪ್ತಿಕರವೂ ಆದ ಒಂದು ನಿರ್ಣಯವಾಗಲಿ ಎಂಬುದೇ ನಮ್ಮ ನಿಲುವೆಯನ್ನು ಬದಲಿಸಲು ಕಾರಣ.

ಮಾನ್ಯ ಶ್ರೀ ದೇಶಮುಖರು "ಎರಡು ವಿಪತ್ಕಾರಕ ನಿರ್ಧಾರ"ಗಳೆಂದು ತಾವು ಕರೆದಿರುವ ವಿಷಯಗಳು ಪರ್ಯಾಲೋಚನೆಯಿಲ್ಲದೆ ಮಾಡಿದ ನಿರ್ಣಯಗಳೆಂದು ಹೇಳಿದ್ದಾರೆ. ಈ ಸಂಗತಿಯನ್ನು ಅವರು ಹೇಗೆ ತಿಳಿದುಕೊಂಡರೆಂಬುದು ನನಗೆ ಗೊತ್ತಿಲ್ಲ. ನಾನು ನನ್ನ ಎಲ್ಲ ಕಾಗದಪತ್ರಗಳನ್ನು—ಸಚಿವ ಸಂಪುಟದ ಕಾಗದಪತ್ರಗಳನ್ನು—ಮತ್ತಿತರ ಎಲ್ಲ ಬಗೆಯ ದಾಖಲೆಗಳನ್ನು—ನೋಡಿದ್ದೇನೆ. ಇವೆರಡೂ ನಿರ್ಧಾರಗಳು ಸಚಿವ ಸಂಪುಟದಲ್ಲಿದ್ದ ಪ್ರತಿಯೊಬ್ಬನನ್ನೂ ಪುನಃ ಪುನಃ ವಿಚಾರಿಸಿದ ಬಳಿಕ ಮತ್ತು ಸಚಿವ ಸಂಪುಟದ ಪೂರ್ಣಾನುಮತಿಯ ಬಳಿಕವೇ ಮಾಡಿದವುಗಳಾಗಿವೆ ಎಂದು ಸ್ಪಷ್ಟಪಡಿಸಲಿಚ್ಛಿಸುತ್ತೇನೆ. ಪ್ರಸ್ತುತ ವಿಧೇಯಕವನ್ನೆ—ಬೇರೆಲ್ಲ ವಿಷಯಗಳನ್ನು ಬೇಕಾದರೆ ಬಿಟ್ಟು ಬಿಡೋಣ—ಸಚಿವ ಸಂಪುಟದ ಮುಂದೆ ಮಂಡಿಸಲಾಯಿತು. ಸಚಿವ ಸಂಪುಟದ ನಿರ್ಧಾರಗಳನ್ನು ಈ ವಿಧೇಯಕವು ಒಳಗೊಂಡಿದೆ. ಆದುದರಿಂದ ಯಾರೇ ಆಗಲಿ, ನಿರ್ಧಾರಗಳನ್ನು ಸಲಹೆ ಕೇಳದೆಯೇ ಕೈಗೊಳ್ಳಲಾಯಿತೆಂದು ಹೇಗೆ ಹೇಳಬಲ್ಲರೋ ನನಗೆ ತಿಳಿಯದು. ನಾನು ಪ್ರಧಾನ ಮಂತ್ರಿಯಾದಂದಿನಿಂದ ಇಂದಿನವರೆಗೆ ಈ ವಿಷಯದಲ್ಲಿ ನಡೆಸಿದಷ್ಟು ಹೆಚ್ಚು ಸಮಾಲೋಚನೆಯನ್ನು ಬೇರೆ ಯಾವ ವಿಷಯದಲ್ಲೂ ಮಾಡಿದ್ದಿಲ್ಲ.

ನಾನು ಏನಾಗಿದ್ದೇನೆ ಅಥವಾ ನಾನು ಏನು ತಪ್ಪು ಮಾಡಿದ್ದೇನೆ ಎನ್ನುವುದು ದೊಡ್ಡ ವಿಷಯವಲ್ಲ. ಆದರೆ, ಸರಕಾರದ ಪದ್ಧತಿಗಳೇನು, ಸಚಿವ ಸಂಪುಟದ ಕಾರ್ಯಕಲಾಪಗಳ ಬಗ್ಗೆ ನಾವು ಅನುಸರಿಸುವ ವಿಧಾನಗಳೇನು, ಈ ಸಂಸತ್ತಿನಲ್ಲಿ ಅನುಸರಿಸುವ ಕ್ರಮಗಳೇನು ಎಂದು ಮುಂತಾದವುಗಳು ನಿಜಕ್ಕೂ ಅತ್ಯಂತ ಮಹತ್ವದ ವಿಷಯಗಳೆನಿಸುತ್ತವೆ. ನಾವು ತಪ್ಪು ಪದ್ಧತಿಯನ್ನು ಅನುಸರಿಸುತ್ತಿದ್ದೇವೆಯೆ? ನಾವು ಬೇರೆ ಎಲ್ಲರನ್ನೂ ಬಿಟ್ಟುಗೊಟ್ಟು, ಈ ಸರಕಾರದ ಮೇಲೆ, ಈ ಸಂಸತ್ತಿನ ಮೇಲೆ, ಈ ದೇಶದ ಮೇಲೆ ಕೇವಲ ಒರ್ವವ್ಯಕ್ತಿಯ ಇಚ್ಛೆಯನ್ನೆ ಹೇರುತ್ತಿದ್ದೇವೆಯೆ? ಇದು ತೀರ ಮುಖ್ಯವಾದ ವಿಷಯ—ರಾಜ್ಯಗಳ ಪುನಾರಚನೆಯ ಇಡೀ ಪ್ರಶ್ನೆಗಿಂತಲೂ ಮುಖ್ಯವಾದ ವಿಷಯ. ಹೀಗೆ ಮಾಡುತ್ತೇವೆ ಎಂದು ಹೇಳುವುದು ಬಹಳ ಗಂಭೀರವಾದ ಆರೋಪ.

ಮಾನ್ಯ ಶ್ರೀ ದೇಶಮುಖರು ಸಚಿವ ಸಂಪುಟದಲ್ಲಿದ್ದ ತಮ್ಮ ಸಹೋದ್ಯೋಗಿಗಳಿಗೆ ಏನೇನೂ ನ್ಯಾಯವನ್ನು ಮಾಡಿಲ್ಲವೆಂದು ನಾನು ಹೇಳಲಿಚ್ಛಿಸುತ್ತೇನೆ. ಆ ಆರೋಪವನ್ನು ಮಾಡಿದಾಗ, ಸ್ವತಃ ತಮಗೆಯೇ ಅವರು ನ್ಯಾಯವನ್ನು ಮಾಡಲಿಲ್ಲವೆಂದೂ ಹೇಳಲು ಬಯಸುತ್ತೇನೆ. ಆರು ವರ್ಷಗಳಿಗಿಂತಲೂ ದೀರ್ಘಕಾಲ ಅವರು ಆ ಸಚಿವ ಸಂಪುಟದಲ್ಲಿ ಕೆಲಸ ಮಾಡಿದರು; ಅವರಿಗೆ ನಾವೆಲ್ಲರೂ ಗೌರವಾರ್ಹ ಸಹೋದ್ಯೋಗಿಯಾಗಿಯೇ ಬೆಲೆ ಕೊಡುತ್ತಿದ್ದೆವು. ಈಗ ಅವರು ಆರೋಪವೊಂದನ್ನು ಮಾಡುತ್ತಿದ್ದಾರೆ: ನಾನ. ಈ ಮಟ್ಟಿಗೆ ಎಷ್ಟೇ ಅಪರಾಧಿಯಾಗಿದ್ದರೂ ಅಥವಾ ಅದಕ್ಕೆ ಅರ್ಹನಾಗಿದ್ದರೂ ಅದು ಬಹಳವಾಗಿ ಅನುಚಿತವಾದ ಆರೋಪವಾಗಿ ಸಚಿವ ಸಂಪುಟದಲ್ಲಿರುವ ನನ್ನ ಇತರ ಸಹೋದ್ಯೋಗಿಗಳ ಪಾಲಿಗೆ ಪರಿಣಮಿಸಿದೆ ಎಂದು ಹೇಳಲಿಚ್ಛಿಸುತ್ತೇನೆ.

ನಾನು ಮುಂಬಯಿಯಲ್ಲಿ ಕೊಟ್ಟ ಹೇಳಿಕೆಯ ಪ್ರಶ್ನೆಯೊಂದಿದೆ: ನಾನು ಕೈಗೊಂಡ ವಿಪತ್ಕಾರಕ ನಿರ್ಧಾರ ಮತ್ತು ಮುಂಬಯಿಯಲ್ಲಿ ಮಾಡಿದ ಗಂಭೀರವಾದ ಹೇಳಿಕೆಯಾದರೂ ಏನು? ನಾನು ಅಮೃತಸರದ ಕಾಂಗ್ರೆಸಿನಲ್ಲಿಯೂ ಅನಂತರ ಬೇರೆ ಬೇರೆ ಸ್ಥಳಗಳಲ್ಲಿಯೂ ಮುಂಬಯಿಗೆ ತಾನು ಯಾವ ಪ್ರದೇಶಕ್ಕೆ ಸೇರಬೇಕೆಂದು ನಿರ್ಧರಿಸುವ ಪ್ರಜಾಸತ್ತಾತ್ಮಕ ಅವಕಾಶವನ್ನು ಒದಗಿಸಿಕೊಡಲಾಗುವುದೆಂದು ಮರಳಿ ಮರಳಿ ಹೇಳಿದ್ದೇನೆ. ನನ್ನ ಮಟ್ಟಿಗೆ ಹೇಳುವುದಾದರೆ ಮುಂಬಯಿಯು ಮಹಾರಾಷ್ಟ್ರಕ್ಕೆ ಹೋದರೆ ನನಗೆ ಅತೀವ ಸಂತೋಷವಾಗುತ್ತದೆ. ಅದರ ವಿರುದ್ಧವಾಗುವುದಕ್ಕೆ ನನಗೇನೂ ಕಾರಣ ಕಾಣುವುದಿಲ್ಲ. ಈ ಸಭೆಯ ಮುಂದೆ ನಾನು ಸಂಪೂರ್ಣವಾಗಿ ಮುಚ್ಚುಮರೆಯಿಲ್ಲದೆ ಇದನ್ನು ಹೇಳಲು ಬಯಸುತ್ತೇನೆ ಮುಂಬಯಿ ನಗರವು ಮಹಾರಾಷ್ಟ್ರಕ್ಕೆ ಸೇರಲು ಬಲವಾದ ಮತ್ತು ಒಳ್ಳೆಯ ಕಾರಣಗಳಿವೆ ಎಂದು ನಾನೂ ಹೇಳುತ್ತೇನೆ.

ಆದರೆ, ಇನ್ನೊಂದು ಪಕ್ಷದವಾದವನ್ನೂ ವಿಚಾರಿಸಬೇಕಾಗಿದೆ. ಆದುದರಿಂದಲೇ ಈಗ ವಾತಾವರಣವು ಭಾವೋದ್ರಿಕ್ತವಾಗಿರುವಾಗ ನಿರ್ಧಾರ ಕೈಗೊಳ್ಳುವುದು ಉಚಿತವಲ್ಲವೆಂದು ನಾನು ಹೇಳಿದೆ. ಸಾಮಾನ್ಯಾವಸ್ಥೆಯುಂಟಾಗಲಿ — ಆಗ ನಿರ್ಧಾರವೂ ಆಗಲಿ. ನಿರ್ಧಾರ ಎಂದ ಮಾತ್ರಕ್ಕೆ ನಾವು ಜನಮತಗಣನೆಯನ್ನು ನಡೆಸುತ್ತೇವೆ ಎಂದರ್ಥವಲ್ಲ. ವಾತಾವರಣವು ಉತ್ತಮವಾಗಿದ್ದರೆ, ಅಂಥ ತ್ರಾಸದಾಯಕವಾದ ವಿಧಾನವನ್ನು ಬಿಟ್ಟು ಬೇರೆ ಬಗೆಯಿಂದ ಪರಿಹಾರವನ್ನು ಕಂಡುಕೊಳ್ಳಲು ನನಗೆ ಕಷ್ಟವಾಗದು. ನಾನು ಅದನ್ನೆ ಆಶಿಸುತ್ತಿದ್ದೆ; ಈಗಲಾದರೂ ನಾನು ಅದನ್ನೇ ನಿರೀಕ್ಷಿಸುತ್ತಿದ್ದೇನೆ.

ಹೀಗೆ ನಾನು ಅಖಿಲ ಭಾರತ ಕಾಂಗ್ರೆಸಿನ ಸಭೆಯಲ್ಲಿ ಹೇಳಿದೆ—ನನ್ನ ಮಟ್ಟಿಗೆ ನಾನು ಮಹಾ ಹೇಳಿಕೆಯೊಂದನ್ನು ಕೊಡುತ್ತಿರುವೆನೆಂದು ಎಣಿಸಲೇ ಇಲ್ಲ. ಅದು ಅದ್ಭುತ ಹೇಳಿಕೆಯಾಗಿರಲೂ ಇಲ್ಲ—ಇತರೆಡೆ ನಾನು ಬೇರೆ ಬೇರೆ ಸಂದರ್ಭಗಳಲ್ಲಿ ಏನನ್ನು ಹೇಳಿದ್ದೆನೊ ಅದನ್ನೆ ಅಲ್ಲಿ ಪುನರುಚ್ಚರಿಸಿದುದಾಗಿದೆ. ಏನೇ ಆಗಲಿ, ನಾನು ಭಾರತದ ಪ್ರಧಾನ ಮಂತ್ರಿಯಾಗಿದ್ದೇನೆ. ಪ್ರಧಾನ ಮಂತ್ರಿಯು ಸರಕಾರದ ಧೋರಣೆಗಳನ್ನು ರೂಪಿಸಬಲ್ಲನು.

ಪ್ರಜಾಸತ್ತಾತ್ಮಕ ವಿಧಾನದ ಪರಿಚಯವೂ ನನಗೆ ಸಾಕಷ್ಟಿದೆ; ಪಕ್ಷ ಪದ್ಧತಿಯೂ ನನಗೆ ತಿಳಿಯದುದಲ್ಲ. ಪ್ರಧಾನ ಮಂತ್ರಿಯ ಕರ್ತವ್ಯಗಳೇನೆಂಬುದು ಸಹ ನನಗೆ ಗೊತ್ತಿದೆ. ನಮ್ಮ ರಾಜ್ಯಾಂಗ ಘಟನೆಗನುಸಾರ ಪ್ರಧಾನ ಮಂತ್ರಿಯೇ ಸರಕಾರದ ಕರ್ಣಧಾರನಾಗಿದ್ದಾನೆ. ಪ್ರಧಾನಮಂತ್ರಿಯು ಒಂದು ಹೇಳಿಕೆಯನ್ನು ಕೊಡಲಾರನೆಂದು ಹೇಳುವುದೇ ಕ್ರೂರವಾದ ಹೇಳಿಕೆಯಾಗಿದೆ—ನಾನು ಈ ದೇಶದ ಪ್ರಧಾನಮಂತ್ರಿಗಿಂತಲೂ ತುಸು ಬೇರೆಯಾಗಿಯೂ ಇದ್ದೇನೆ. ನಾವೆಲ್ಲರೂ ಭಾರತದ ಕ್ರಾಂತಿ ಪುತ್ರರು! ನಾವು ಹಿಂದೆ ಏನು ಮಾಡಿರುವೆವೆಂಬುದನ್ನು ತುಸು ಮರೆತಿರಬಹುದು; ನಾವು ತುಸು ಜಡರೂ ಆಗಿರ

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ
ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು
ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ, ದ. ಕನ್ನಡ.
ಯಾವದೇ ತರದ ಹೇಂಡ್‌ಲೂಮ್, ಮಿಲ್ ಬಟ್ಟೆಗಳೂ ಶಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, UDIPI, S. KANARA.

ಬಹುದು. ಆದರೆ ನಮ್ಮಲ್ಲಿ ಈಗಲೂ ಆ ಕ್ರಾಂತಿಯ ಅಗ್ನಿಯ ಅಂಶವೊಂದಿದೆ. ನಮ್ಮಲ್ಲಿ ಹೆಚ್ಚಿನವರು ಭಾರತದ ಜನತೆಯ ಪರಿಚಯವನ್ನು ಸಾಕಷ್ಟು ಹೊಂದಿದ್ದಾರೆ; ರೈತರ ಕುರಿತು ಉದ್ದ ಮಾತನಾಡುತ್ತಿರುವವರಿಗಿಂತಲೂ ರೈತರ ಕುರಿತು ನಮಗೆ ಹೆಚ್ಚು ತಿಳಿದಿದೆ. ರೈತರ ಮತ್ತು ಬಡಜನರ ನಡುವೆ ನಾವು ಅನೇಕ ಕೆಲಸಗಳನ್ನು ಮಾಡಿದವರೇ ಆಗಿದ್ದೇವೆ. ಆದುದರಿಂದ ನಮ್ಮ ಪಕ್ಷದ ಕುರಿತಾಗಲೀ ಸರಕಾರದ ಕುರಿತಾಗಲೀ ಸಂಕೇತಿಸುವಾಗ, ದುಡ್ಡಿನ ಚೀಲಗಳ ಪ್ರಸ್ತಾಪವನ್ನೆತ್ತುವ ಆಗತ್ಯವಿಲ್ಲ.

ನನ್ನ ವಯಸ್ಸು ಹೆಚ್ಚಿದಂತೆಲ್ಲ, ಗುರಿಗೆ ಕೊಡಬೇಕಾದುದಕ್ಕಿಂತಲೂ ಹೆಚ್ಚು ಗಮನವನ್ನು ಸಾಧನೆಯ ಮಾರ್ಗದ ಕಡೆಗೆ ಕೊಡಬೇಕೆಂದು ತೋರ ತೊಡಗಿದೆ. ಪ್ರಸ್ತುತ ವಿಷಯದಲ್ಲಿ ಎದ್ದ ಎಲ್ಲ ತೊಂದರೆಗಳ ಮೂಲವೂ ಒಂದೇ—ಅದೇನೆಂದರೆ, ನಮ್ಮ ಉದ್ದೇಶವು ಎಷ್ಟೇ ಘನವಾದುದಾಗಿರಲಿ, ಅನುಸರಿಸಿದ ಮಾರ್ಗವು ಹೇಗೋ ಏನೋ, ತಪ್ಪು ಕಲೆಯಿಂದ ಕೂಡಿತು; ಮತ್ತು ಕಷ್ಟಗಳಿಗೆ ಎಡೆ ಕೊಟ್ಟಿತು. ನಾನು ಯಾರನ್ನಾದರೂ ದೂರುವೆನಾದರೆ, ಆಗ ನನ್ನನ್ನೆ ನಾನು ದೂರಿಕೊಳ್ಳುತ್ತೇನೆ. ಮುಂಬಯಿಯಲ್ಲಿ ನಾನಿತ್ತ ಹೇಳಿಕೆಯು ರಾಜ್ಯಗಳ ಪುನಾರಚನೆಯ ವಿಧೇಯಕದಲ್ಲಿದ್ದುದನ್ನು ಮೆಚ್ಚಿಕೊಳ್ಳದವರಿಗಾಗಿದ್ದ ಆಘಾತವನ್ನು ಕಡಿಮೆ ಮಾಡುವ ಉದ್ದೇಶವನ್ನಷ್ಟೆ ಹೊಂದಿದ್ದಿತು. ಮಹಾರಾಷ್ಟ್ರದ ದಾರಿಗೆ ಅಡ್ಡ ನಿಲ್ಲುವ ಇಚ್ಛೆ ಅದರಲ್ಲಿರಲಿಲ್ಲ.

ರಾಜ್ಯಗಳ ಪುನಾರಚನೆಯ ಆಯೋಗವು ಅಲ್ಪಸಂಖ್ಯಾಕ ವರ್ಗಗಳಿಗೆ ರಕ್ಷಣೆ ಕೊಡುವ ಸಂಗತಿಯನ್ನು ಪ್ರಸ್ತಾಪಿಸಿದೆ. ಗಡಿ ರೇಖೆಯೊಂದನ್ನು ಎಲ್ಲಿ ಹಾಕಲಾಯಿತೆಂಬುದೇ ದೊಡ್ಡ ವಿಷಯವಲ್ಲ; ಜನರನ್ನು ಹೇಗೆ ನಡೆಸಿಕೊಳ್ಳಲಾಗುತ್ತದೆ ಎಂಬ ಕುರಿತೇ ನಾವು ಗಮನವೀಯಬೇಕು. ಆಯೋಗದ ವರದಿಯು ಭಾಷೆಯ ದೃಷ್ಟಿಯಿಂದ ಅಲ್ಪಸಂಖ್ಯಾಕರಾದವರಿಗೆ ಕೆಲವು ರಕ್ಷಣೆಗಳನ್ನು ಕೊಡಬೇಕೆಂದೂ ಇದಕ್ಕಾಗಿ ಶಾಸನಿಕ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದೂ ಹೇಳಿದೆ. ಇದನ್ನು ಮಾಡಬೇಕೆಂದು ನಾನು ಆತುರಗೊಂಡಿದ್ದೇನೆ. ಗಡಿ ಪ್ರದೇಶದಲ್ಲಿರುವ ಅಲ್ಪಸಂಖ್ಯಾಕರ ದೂರುಗಳನ್ನು ಪರಿಹರಿಸುವುದು ಅತ್ಯಾವಶ್ಯಕ. ಇದಕ್ಕಾಗಿ ನಿರ್ದಿಷ್ಟವೂ ಪರಿಣಾಮಕಾರಿಯೂ ಆದ ಸೂಚನೆಗಳೇ ಬೇಕು. ಇದನ್ನು ಮಾಡಿದರೆ, ಭಾರತದ ಎಲ್ಲ ಭಾಗದಿಂದಲೂ ಈ ದೂರು ಮಾಯವಾಗದಿರದು.

ನಮ್ಮ ಘಟನೆಯಲ್ಲಿ ಹದಿನಾಲ್ಕು ಭಾಷೆಗಳನ್ನು ಉಲ್ಲೇಖಿಸಲಾಗಿದೆ. ಅವೆಲ್ಲವೂ ರಾಷ್ಟ್ರಭಾಷೆಗಳಾಗಿವೆ—ಹಿಂದಿಯೊಂದೇಯಲ್ಲ. ಹಿಂದಿಯು ಉತ್ತಮ ಭಾಷೆಯೆಂಬುದಕ್ಕಾಗಿಯಲ್ಲ, ವಿಸ್ತಾರವಾದ ಪ್ರದೇಶದಲ್ಲಿ ಆಡಲ್ಪಡುವ ಭಾಷೆ ಎಂಬ ಕಾರಣದಿಂದ ಕೆಲವು ಸಮಯಾನಂತರ ಸರಕಾರದ ಅಧಿಕೃತ ಭಾಷೆಯಾಗಿರಬೇಕೆಂದು ಹೇಳಲಾಗಿದೆ. ಆದರೆ, ಉಳಿದ ಭಾಷೆಗಳೂ ಸರಕಾರದ ಅಧಿಕೃತ ಭಾಷೆಗಳೇ ಆಗಿವೆ. ಭಾರತದ ಯಾವ ಪ್ರಜೆಯೇ ಆಗಲಿ, ಯಾವ ನ್ಯಾಯಾಲಯದಲ್ಲಿಯೇ ಬೇಕಾದರೆ ಆಗಲಿ, ಆ ಹದಿನಾಲ್ಕು ಭಾಷೆಗಳಲ್ಲಿ ಯಾವುದರಲ್ಲಿಯೇ ಬೇಕಾದರೆ ಆಗಲಿ, ತನ್ನ ಅರ್ಜಿಯನ್ನು ಕೊಡಬಹುದು. ಅದನ್ನು ಯಾವ ನ್ಯಾಯಾಲಯವೂ ತಿರಸ್ಕರಿಸಲಾರದು. ಅದು ಆ ನ್ಯಾಯಾಲಯಕ್ಕೆ ಪರಿಚಿತವಲ್ಲದ ಭಾಷೆಯಲ್ಲಿದ್ದರೆ, ಅರ್ಜಿಯ ವಿಚಾರಣೆ ನಡೆಸುವುದಕ್ಕೆ ಸ್ವಲ್ಪ ಸಮಯ ತಗಲಬಹುದು ಅದು ಕೇವಲ ಅನುಕೂಲತೆಯ ವಿಷಯ. ಅದೇನೇ ಇರಲಿ, ದೆಹಲಿಯ ನ್ಯಾಯಾಲಯವೊಂದು ಮಲಯಾಳಂ, ತಮಿಳು ಅಥವಾ ಕನ್ನಡ ಯಾವುದೇ ಭಾಷೆಯಲ್ಲಿ ಅರ್ಜಿಯಿರಲಿ, ಅದನ್ನು ಸ್ವೀಕರಿಸಲು ಬದ್ಧವಾಗಿದೆ; ಅದನ್ನು ಅನುವಾದಿಸಬೇಕಾದೀತು; ಇದಕ್ಕಾಗಿ ಸ್ವಲ್ಪ ಸಮಯ ಬೇಕಾದೀತು. ಸರಕಾರದ ಪ್ರಕಟಣೆಗಳನ್ನು ಆಯಾ ಭಾಗದ ಜನರಿಗೆ ಅರ್ಥವಾಗುವ ಭಾಷೆಯಲ್ಲಿಯೇ ಮಾಡಬೇಕು. ಇದರಿಂದ ಜನರಿಗೆ ವಿಷಯವನ್ನು ತಿಳಿದುಕೊಳ್ಳಲು ಸಾಧ್ಯವಾಗುತ್ತದೆ.

ಭಾರತವು ನಕ್ಷೆಯಲ್ಲಿಯಷ್ಟೆ ಒಂದು ದೇಶವಾಗಿ ಉಳಿದರೆ ಸಾಲದು; ಮನಸ್ಸಿನಿಂದಲೂ ಭಾರತವು ಒಂದಾಗಬೇಕು; ಕಳೆದ ಕೆಲವು ತಿಂಗಳುಗಳ ದುರಂತ ಘಟನೆಗಳು ನಮ್ಮ ಮನಸ್ಸು ಮತ್ತು ಹೃದಯಗಳು ಇನ್ನೂ ಒಂದಾಗಿಲ್ಲವೆಂಬುದನ್ನೆ ನಮಗೂ ದೇಶದ ಹೊರಗಿನವರಿಗೂ ತೋರಿಸಿಕೊಟ್ಟಿವೆ— ಇದು ವಿಷಾದಕರವಾದ ವಿಷಯ. ನಾವು ನಮ್ಮ ತಪ್ಪುಗಳನ್ನು ಸ್ವೀಕರಿಸಿದರೂ ಚಿಂತಿಲ್ಲ— ಈ ಪರಿಸ್ಥಿತಿಯಿಂದ ದೂರವಾಗಬೇಕು. ಭಾರತ ಸರಕಾರವು ಒಂದು ತಪ್ಪನ್ನು ಮಾಡಿದರೆ, ಅದನ್ನು ಬದಲಾಯಿಸಿರಿ. ನಾವು ಇಂದೇನಾದರೂ ತಪ್ಪು ಮಾಡಿದರೆ, ಕುಸು ಸಮಯದ ಬಳಿಕ ಅದನ್ನು ಶಾಂತವಾಗಿಯೂ ಮೌನವಾಗಿಯೂ ಪರಿಹರಿಸೋಣ! ಜಗತ್ತಿನಲ್ಲಿ ಇವತ್ತು ನಡೆಯುತ್ತಿರುವ ಬದಲಾವಣೆಗಳನ್ನು ನೋಡಿದರೆ, ನಾವು ಭೂತ ಕಾಲಕ್ಕೆಂದೂ ಹೋಗುವಂತಿಲ್ಲವೆಂಬುದು ಸ್ಪಷ್ಟವಾಗುತ್ತದೆ. ನಾವು ಶೀಘ್ರ ಪರಿವರ್ತನೆಯನ್ನು ಹೊಂದಬೇಕಾಗಿದೆ. ಇದಕ್ಕಾಗಿ ಅಖಿಲ ಭಾರತ ದೃಷ್ಟಿಯನ್ನೆ ಬೆಳೆಸಿಕೊಳ್ಳಬೇಕಾಗಿದೆ; ಪ್ರಾಂತೀಯ ದೃಷ್ಟಿಕೋಣವು ಯಾವುದೇ ರಾಷ್ಟ್ರದ ಸಮಸ್ಯೆಯನ್ನು ನಿವಾರಿಸಲಾರದು; ಭಾರತದಲ್ಲಂತೂ ಇದು ಅಸಾಧ್ಯ ವಿಷಯ.

ನನ್ನ ಹಿರಿಯರು ಕಾಶ್ಮೀರದಿಂದ ಬಂದವರಾಗಿದ್ದರೂ ಕನ್ಯಾಕುಮಾರಿಯಿಂದ ಹಿಮಾಲಯದ ವರೆಗೆ ಹಬ್ಬಿರುವ ಭಾರತದ ಎಲ್ಲ ಉಜ್ವಲ ಸಂಪ್ರದಾಯಗಳಿಂದ ಪ್ರಭಾವಿತನಾದವನು ನಾನಾಗಿದ್ದೇನೆ. ಮ ನನ್ನ ಅಭಿಪ್ರಾಯ ಭಾರತದ ಕೆಲವೇ ಪ್ರದೇಶಗಳ ಜನರು ಮಾತ್ರ ಶೂರರೂ ಸಾಹಸಿಗಳೂ ಆಗಿರುವರೆಂಬಂತೆ ಕೆಲವು ಭಾಷಣಕಾರರು ಮಾತನಾಡಿರುವುದು ನನಗೆ ಸರಿ ಕಾಣುವುದಿಲ್ಲ. ಯಾವ ಪ್ರಾಂತ್ಯಕ್ಕೆ ತನ್ನದೇ ಆದ ಉಜ್ವಲ ಪರಂಪರೆಯಿಲ್ಲ? ದಕ್ಷಿಣಕ್ಕೆ ಹೋಗಿರಿ, ತಮಿಳರ ಪರಂಪರೆ ಉಜ್ವಲವಾಗಿದೆ; ಆಂಧ್ರರದೂ ಹಾಗೆಯೇ — ಕನ್ನಡಿಗರನ್ನು ಕೇಳಿರಿ! ವಿಜಯ ನಗರ ಸಾಮ್ರಾಜ್ಯ ಅಲ್ಲಿದೆ! ನಾನು ನನ್ನನ್ನು ಇವೆಲ್ಲ ಪರಂಪರೆಗಳನ್ನು ಹೊತ್ತವನೆಂದು ತಿಳಿದುಕೊಂಡಿದ್ದೇನೆ. ಇದೇ ಸರಿಯಾದ ದೃಷ್ಟಿಕೋಣ.

[ಪ್ರಧಾನ ಮಂತ್ರಿ ಶ್ರೀ ಜವಾಹರಲಾಲ ನೆಹರುಗಳು ತಾ. ೩೦—೭—೧೯೫೬ರಂದು ಲೋಕ ಸಭೆಯಲ್ಲಿ ರಾಜ್ಯಗಳ ಪುನಾರಚನೆಯ ವಿಧೇಯಕದ ಮೇಲೆ ಮಾಡಿದ ಭಾಷಣದಿಂದ ಉದ್ಧೃತ. ಸರಕಾರದ ನಡವಳಿಕೆಯ ಮೇಲೆ ಮಾಡಲಾದ ಆರೋಪಗಳ ನಿರಾಕರಣೆಯು ಇಲ್ಲಿ ಆನುಷಂಗಿಕವಾಗಿ ಬಂದಿದೆ— ರಾಷ್ಟ್ರೀಯ ದೃಷ್ಟಿಕೋಣವನ್ನು ಬೆಳೆಸಿಕೊಳ್ಳಬೇಕೆಂಬುದೇ ಇಲ್ಲಿ ಪ್ರತಿಪಾದಿತವಾದ ಮುಖ್ಯ ವಿಷಯ. ರಾಜ್ಯಗಳ ಪುನಾರಚನೆಯ ಪ್ರಶ್ನೆಯನ್ನು ಬದಿಗೊತ್ತಿ ನಾವು ಈ ಬಗ್ಗೆ ವಿಚಾರ ಮಾಡಿದರೂ ಹೌದೆಂದು ತೋರುವ ಹಲವು ಸಂಗತಿಗಳು ಹೊಳೆಯಬಹುದು.]

(೧ನೇ ಪುಟದಿಂದ)

ಸೂದೆಯಂತೆ ನಿರ್ಧರಿಸಲಾಗುವ ಗೇಣಿಗೆ ಅರ್ಹನಾಗುವನೆಂಬ ಹೊಸ ವಿವರಣೆಯು ಒಕ್ಕಲುಗಳಿಂದ ಭೂಮಿಯನ್ನು ಭೂಮಾಲಿಕರು ಮರಳಿ ಪಡೆಯುವುದಕ್ಕೆ ಅವಕಾಶ ಕೊಡುವುದು ನಿಶ್ಚಯ; ಈ ಭೂಮಿಯನ್ನು ಭೂರಹಿತರಿಗೆ ಹಂಚುವ ವ್ಯವಸ್ಥೆಯನ್ನು ಮಸೂದೆ ಮಾಡಿಲ್ಲವಾದ ಕಾರಣ ಭೂಮಾಲಿಕರಿಗಾಗುವ ಲಾಭವೇ ಹೆಚ್ಚು; ಇದು ಸಲ್ಲದು ಎಂದು ಶ್ರೀಗಳಾದ ಸಿ. ಕಂದಸ್ವಾಮಿ ಮತ್ತು ಎಸ್. ರಾಮಲಿಂಗಮ್ ಆಕ್ಷೇಪಿಸಿದ್ದಾರೆ.

ಡಾ. ವಿ. ಕೆ. ಜೋನ್ ಎಂಬ ಸದಸ್ಯರು ಜರ್ಮನಿಯಲ್ಲಿ ಭೂಸುಧಾರಣೆಯನ್ನು ಮಾಡಿದ ಕ್ರಮವನ್ನು ವಿವರಿಸುತ್ತಾ, ತಾನು ನಾಗುವಳಿ ಮಾಡುವ ಭೂಮಿಯನ್ನು ಒಕ್ಕಲ ಬೆಲೆ ಕೊಟ್ಟು ಪಡೆಯುವುದಕ್ಕೆ ಅಲ್ಲಿ ಅವಕಾಶ ವೀಯಲಾಯಿತೆಂದೂ ಭಾರತದಲ್ಲಿಯೂ ಇದೇ ಸೂಕ್ತವೆಂದೂ ಹೇಳಿದ್ದಾರೆ. ಅಲ್ಲಿ ೪೭೧/೨ ವರ್ಷಗಳಲ್ಲಿ ಪಾವತಿಯಾಗುವ ಸಾಲ ಪತ್ರಗಳ ರೂಪದಲ್ಲಿ ಧನಿಗಳಿಗೆ ಅವರ ಭೂಮಿಗಾಗಿ ಬೆಲೆ ಕೊಡುವ ನಿರ್ಧಾರವಾಯಿತು. ಇದರಿಂದ ಉತ್ಸಾಹಗೊಂಡು ಕೇವಲ ಹತ್ತೇ ವರ್ಷಗಳಲ್ಲಿ ಭೂಮಿಯ ಎಲ್ಲ ಬೆಲೆಯನ್ನೂ ಒಕ್ಕಲುಗಳು ತೀರಿಸಿದರು; ಇಂಥ ಯೋಜನೆಯನ್ನು ತಯಾರಿಸಿದ ಬಳಿಕ ಒಕ್ಕಲುಗಳು ಒಂದಕ್ಕೆ ಮೂರು ಪಾಲಿನಷ್ಟು ಬೆಳೆಯನ್ನು ಉತ್ಸಾಹಗೊಂಡು ಬೆಳೆಸಿದುದರಿಂದಲೇ ಹೀಗೆ ಅತ್ಯಲ್ಪಾವಧಿಯಲ್ಲಿ ಭೂಮಿಯ ಬೆಲೆ ತೆತ್ತು ತಾವೇ ಭೂಸ್ವಾಮಿಗಳಾಗಲು ಅವರಿಗೆ ಸಾಧ್ಯವಾಯಿತು; ಇಂಥ ಕ್ರಮವನ್ನೇನೂ ಯೋಜಿಸದ ಈ ಮಸೂದೆಯು ಅತಿಮನಸ್ಸಿನದಾಗಿದೆ; ಸಂದರ್ಭಸಾಧಕ ಗುಣದಿಂದ ಕೂಡಿದೆ; ಒಳ್ಳೆಯದಕ್ಕಿಂತಲೂ ಕೆಟ್ಟದನ್ನೆ ಮಾಡುತ್ತದೆ; ಭೂ ಸಮಸ್ಯೆಯನ್ನು ಇದು ಎಷ್ಟಕ್ಕೂ ಪರಿಹಾರ ಮಾಡದು ಎಂದು ಈ ಸದಸ್ಯರು ಅಭಿಪ್ರಾಯಪಟ್ಟಿದ್ದಾರೆ.

ಭೂಮಾಲಿಕರು ಗೊಬ್ಬರ, ಬೀಜ ಇತ್ಯಾದಿಗಳಿಗೆಂದು ಕೊಡಬಹುದಾದ ಹಣವು ಒಟ್ಟು ಉತ್ಪನ್ನದ ೧೨% ಎಂಬ ಮಿತಿಗೆ ಮೀರದಂತಿರಬೇಕು ಎಂದು ಶ್ರೀ ಪಿ. ಬಿ. ಕೆ. ರಾಜ ಚಿದಂಬರಂ ಎಂಬ ಸದಸ್ಯರು ಸೂಚಿಸಿದ್ದಾರೆ. ಶ್ರೀ ಕೆ. ಬಾಲಸುಬ್ರಮಣ್ಯ ಅಯ್ಯರ್ ಎಂಬ ಸದಸ್ಯರೊಬ್ಬರು ಭೂಮಾಲಿಕರ ಪರವಾಗಿ ವಕಾಲತು ನಡೆಸಿದ್ದಾರೆ: ಭೂಮಿಯಲ್ಲಿ ಯಾವ ಬೆಳೆಯನ್ನು ಬೆಳೆಸಬೇಕೆಂದು ಹೇಳುವ ಅಧಿಕಾರವನ್ನು ಧನಿಗೆ ಕೊಟ್ಟಿಲ್ಲ; ತಾನು ಬಯಸಿದಾಗ, ತನ್ನ ಪಟ್ಟಿಯಲ್ಲಿರುವ ಭೂಮಿಯನ್ನು ಸ್ವಂತ ನಾಗುವಳಿಗಾಗಿ ಮರಳಿ ಪಡೆಯಲು ಮಸೂದೆ ಅವಕಾಶವಿತ್ತಿಲ್ಲ; ಗೇಣಿಯನ್ನು ತನಗೆ ಧಾನ್ಯದ ರೂಪದಲ್ಲಿ ಪಾವತಿ ಮಾಡಬೇಕೊ ಅಥವಾ ನಗದಿಯಾಗಿಯೊ ಎಂದು ಹೇಳುವ ಅಧಿಕಾರವನ್ನೂ ಧನಿಗೆ ಮಸೂದೆ ಕೊಟ್ಟಿಲ್ಲ; ಭೂಮಾಲಿಕನು ಭೂಮಿಯನ್ನಷ್ಟೆ ನೀಡಿದವನೆಂಬ ತಪ್ಪು ಅಭಿಪ್ರಾಯದ ಮೇಲೆ ಈ ಮಸೂದೆ ನಿಂತಿದೆ; ಪರಿಣಾಮವಾಗಿ ಆತನು ಸಂಪ್ರದಾಯಾನುಸಾರ ಪಡೆಯುತ್ತಿರುವ ಗೇಣಿಗಿಂತ ಎಷ್ಟೋ ಕಡಿಮೆ, ಅಂದರೆ ಕೇವಲ ೪೦%, ಮಾತ್ರ ಗೇಣಿಯಿಂದ ತೃಪ್ತನಾಗಿರಬೇಕೆಂದು ಮಸೂದೆ ವಿಧಿಸಿದೆ; ಧಾನ್ಯಗಳ ಪೇಟೆಧಾರಣೆಯು ಏರಿಕೆಯಲ್ಲಿದ್ದರೆ ಈ ಗೇಣಿಯ ೧೦% ಕಂದಾಯ ರೂಪದಲ್ಲಿ ಆತನ ಕೈಬಿಡುತ್ತದೆ; ಪೇಟೆಧಾರಣೆ ಕಡಿಮೆಯಾದರೆ ಕಂದಾಯಕ್ಕಾಗಿ ಗೇಣಿಯ ೨೦% ವಿನಿಯೋಗವಾದರೂ ಆಶ್ಚರ್ಯಪಡಬೇಕಾಗಿಲ್ಲ! ಆಗ ಧನಿಗೆ ಉಳಿಯುವ ಪಾಲು ಕೇವಲ ೨೦%; ಇದು ಆ ಭೂಮಿಗಾಗಿ ಸುರಿದ ಹಣಕ್ಕೆ ತಕ್ಕ ಬಡ್ಡಿಯಷ್ಟೂ ಆಗುವುದಿಲ್ಲ— ಎಂದು ಮುಂತಾಗಿ ಇವರು ಹೇಳಿದ್ದಾರೆ. ಶ್ರೀ ಟಿ. ಪುರುಷೋತ್ತಮ ಮುದಲಿಯಾರರೆಂಬ ಸದಸ್ಯರು ಶಾಸನಾಂಗದ ಕೆಳಮನೆಗೆ ಮಾತ್ರವೇ ಈ ಮಸೂದೆಯ ಸಂಬಂಧದಲ್ಲಿ ಮಾಡಲಾದ ನಿಯಮಗಳನ್ನು ತಿದ್ದುವ ಅಧಿಕಾರವಿರುವುದು ಮೇಲ್ಮನೆಗೆ ಮಾಡಿದ ಅನ್ಯಾಯವೆಂದು ಹೇಳಿ ಭಿನ್ನಾಭಿಪ್ರಾಯದ ಟಿಪ್ಪಣಿಯನ್ನು ಜೋಡಿಸಿದ್ದಾರೆ.

ಮಸೂದೆಯ ಚರ್ಚೆಯು ಈಗ ಮದ್ರಾಸಿನಲ್ಲಿ ಪ್ರಾರಂಭವಾಗಿರುವ ಅಧಿವೇಶನದಲ್ಲಿ ನಡೆದಿದೆ; ಸಮಾಜವಾದಿ ಮಾದರಿಯ ಸಮಾಜರಚನೆಯ ಆದರ್ಶವೊಂದೇ ಒಕ್ಕಲುಗಳ ಪಕ್ಷಪಾತಿಯಾಗಿದೆ; ಭೂಮಾಲಿಕರ ಸ್ವರವು ಈ ಆದರ್ಶ ಸಮಾಜ ರಚನೆಯ ಘೋಷಣೆಯನ್ನು ಕ್ಷೀಣಿಸುವಷ್ಟು ಈಗಲೂ ಪ್ರಭಾವಶಾಲಿಯಾಗಿದೆ ಎನ್ನುವುದಕ್ಕೆ ಪರಿಶೀಲಕ ಸಮಿತಿಯು ಮಾಡಿದ ತಿದ್ದುಪಡಿಯೇ ಪ್ರತ್ಯಕ್ಷ ನಿದರ್ಶನ.

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

S. C. 373/1956.

ಯು. ಯನ್. ಚೌಟ ವಕೀಲ್ ಮತ್ತು ದ. ಕ. ಜಿಲ್ಲಾ ಸಬ್‌ಕೋರ್ಟ್ O. S. 97/49ನೇ ವ್ಯಾಜ್ಯದಲ್ಲಿ ನೇಮಕಪಟ್ಟ ರಿಸೀವರರು. —ವಾದಿ

ಮತ್ತು

ನಾರಾಯಣ ನ್ಯಾಕ— ಅತಪ್ಪ ನ್ಯಾಕರ ಮಗ ಕಾಸ್ರಗೋಡು ತಾಲೂಕು ಕೊಡ್ಲ ಮೊಗ್ರು ಗ್ರಾಮದಲ್ಲಿರುವವ —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇನಂದ್ರೆ:-

ಪ್ರತಿವಾದಿಯಿಂದ ವಾದಿಗೆ ಬರತಕ್ಕ ಗೇಣಿಯ ಬ್ಯಾನೇಜಿಗೆ ಮೇಲ್ಕಂಡ ವಾದಿಯು ಪ್ರತಿವಾದಿಯ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ವ್ಯಾಜ್ಯ ದಾಖಲು ಮಾಡಿರುತ್ತಾರೆ. ಸದ್ರಿ ವ್ಯಾಜ್ಯವು ತನ್ನಿಬಗ್ಗೆ ತಾ. 28_8_56ಕ್ಕೆ ಇಟ್ಟಿರುತ್ತದೆ. ಆ ಕುರಿತು ಪ್ರತಿವಾದಿಯ ಆಕ್ಷೇಪ ಇದ್ದರೆ ಆ ದಿವಸ ಹಗಲು 11ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಉಪಾಪರಣೆಗಳನ್ನು ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮ ಮೇಲೆ ವ್ಯಾಜ್ಯವು ಏಕಪಾರ್ಟಿಯಾಗಿ ತೀರ್ಮಾನಿಸಲಾದೀತು. ತಿಳಿದಿರಲಿ.

K. S. Alva.
Advocate for Plff.

ಮಂಗ್ಳೂರು 2_8_1956.

NAVAYUGA
Independance Day
Special 1956



ಸ್ವಾತಂತ್ರ್ಯ ದಿನೋತ್ಸವ
ಸಂಚಿಕೆ ೧೯೫೬
(ಬೆಲೆ: ಮೂರಾಣೆ)

ಕರ್ನಾಟಕದ ಜನತೆಗೆ.....
೧೦ನೇ ಸ್ವಾತಂತ್ರ್ಯ ದಿನೋತ್ಸವದ ಸಂತೋಷ ಸಂದರ್ಭದಲ್ಲಿ
ನಮ್ಮ ಹಾರ್ದಿಕ ಶುಭಾಶಯಗಳು!

ಸ್ವಾತಂತ್ರ್ಯದ ೯ ವರುಷಗಳ ಅವಧಿಯಲ್ಲಿ ರಾಷ್ಟ್ರವು ವಿಶೇಷ ಪ್ರಗತಿಯನ್ನು ಪಡೆದಿದೆ. ಅಂತೆಯೇ ನಿಮ್ಮ ಬೇಂಕು ಕೂಡ ಹೆಚ್ಚಿನ ಅಭಿವೃದ್ಧಿಯನ್ನು ಹೊಂದಿ ಮುನ್ನಡೆಯನ್ನಿಟ್ಟಿದೆ. ನಾವಿಂದು ೩೧ ವರ್ಷಗಳ ನುರಿತ ಅನುಭವವನ್ನೂ ೯೩ ಶಾಖಾ ಕಚೇರಿಗಳ, ಅದರಲ್ಲಿಯೂ ಕರ್ನಾಟಕದಲ್ಲಿಯೇ ೬೦ಕ್ಕೂ ಮಿಕ್ಕಿ ಇರುವ ಶಾಖಾ ಕಚೇರಿಗಳ ಕಾರ್ಯಕ್ಷೇತ್ರಗಳಿಂದ ನೆರವೇರುವ ಸಮರ್ಥ ಹಾಗೂ ಶೀಘ್ರ ಸಂಗ್ರಹದ ಅನುಕೂಲತೆಯನ್ನೂ ನಿಮ್ಮ ಮುಂದಿಡುತ್ತೇವೆ. ಮುಂದೆಯೂ ತೃಪ್ತಿಕರವಾಗಿ ನಿಮಗೆ ಸೇವೆಯನ್ನು ನಲ್ಲಿಸಲು ಪ್ರತಿಜ್ಞಾಬದ್ಧರಾಗಿದ್ದೇವೆ.

ಚಲಾವಣೆ ಭಂಡವಾಳ ರೂ. ೯.೫ ಕೋಟಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಸ್ಥಾಪನೆ ೧೯೨೫ | ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ

The Canara Industrial & Banking Syndicate, Limited

ಪ್ರಮುಖ ಪ್ರಗತಿ.....

ಇಂದಿನ ಸಂಸ್ಮರಣೀಯ ದಿನದಲ್ಲಿ, ಒಂಭತ್ತು ವರ್ಷಗಳ ಹಿಂದೆ ನಮ್ಮ ದೇಶವು ಸ್ವತಂತ್ರವಾಯಿತು.

ಸ್ವಾತಂತ್ರ್ಯದೊರೆತ ಬಳಿಕ ನಮ್ಮ ದೇಶವು ರಾಷ್ಟ್ರನಿರ್ಮಾಣ ಕಾರ್ಯಗಳ ಸರ್ವಸಾಮಾನ್ಯ ಎಲ್ಲಾ ರಂಗಗಳಲ್ಲಿಯೂ ಪ್ರಮುಖ ಪ್ರಗತಿ ಹೊಂದಿದೆ.

ದೇಶದ ಅಭಿವೃದ್ಧಿಗೆ ಕಾರಣವಾದ ಕೈಗಾರಿಕೆ ಉದ್ಯಮ, ವ್ಯಾಪಾರಾದಿಗಳ ಬೆಳವಣಿಗೆಗೆ, **ಕೆನರಾ ಬೇಂಕು** ತನ್ನ ಪಾಲಿನ ವಿನೀತ ಸೇವೆಯನ್ನು ಸ್ವಾಭಿಮಾನದಿಂದ ಸಲ್ಲಿಸಿರುತ್ತದೆ.

ಕೆನರಾ ಬೇಂಕು ದೇಶದ ಪ್ರಮುಖ ಬೇಂಕುಗಳಲ್ಲೊಂದಾಗುವಂತಾಗಲು ಸಹಕರಿಸಿ ಪ್ರೋತ್ಸಾಹಿಸಿದ ನಮ್ಮ ಅಸಂಖ್ಯ ಗ್ರಾಹಕರಿಗೂ ಹಿತೈಷಿಗಳಿಗೂ ನಾವೀ ಸಂದರ್ಭದಲ್ಲಿ ವಂದನೆಗಳನ್ನರ್ಪಿಸುತ್ತೇವೆ; ಅಲ್ಲದೆ ಮುಂದೆಯೂ ಉತ್ತಮೋತ್ತಮ ರೀತಿಯಲ್ಲಿ ಸೇವೆ ಸಲ್ಲಿಸಲು ಸಿದ್ಧರಿರುವೆವು ಎಂದು ಪ್ರತಿಜ್ಞಾಬದ್ಧರಾಗುತ್ತೇವೆ.

1906 ಕೆನರಾ ಬೇಂಕ್ ಲಿಮಿಟೆಡ್ 1956

ಎಲ್ಲಾ ಜನತೆಗೂ ಬೇಕಾದ ಬೇಂಕು.

ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ಭಾರತದಲ್ಲಿ ಸಾರಿಗೆಯ ಸ್ಥಾನವು ಮಹತ್ವದ್ದಿದೆ.

ಮೋಟಾರು ಮತ್ತು ಲೋರಿಗಳು ಓಡಾಡಿದಷ್ಟು ಹೆಚ್ಚು ಸಾರಿಗೆ ಮತ್ತು ವ್ಯಾಪಾರವು ಅಭಿವೃದ್ಧಿಯನ್ನು ಹೊಂದುತ್ತದೆ.

ಮೋಟಾರು, ಲೋರಿಗಳ ಸಾರಿಗೆಯ ಜೀವನಾಡಿಯೇ ಅತ್ಯುತ್ತಮ ಸ್ಪ್ರಿಂಗುಗಳು

ಅವು **ಕೆನರಾ ಸ್ಪ್ರಿಂಗುಗಳು**

- ಅವಕ್ಕೆ ಆಯಾಸವೆಂಬುದಿಲ್ಲ.
- ಅವು ಹೆಚ್ಚು ಭಾರವನ್ನು ಹೊರಬಲ್ಲುವು.
- ಅವು ದೀರ್ಘಕಾಲ ಬಾಳುವವು.

ಕೆನರಾ ಸ್ಪ್ರಿಂಗುಗಳು ಅತ್ಯುತ್ತಮ ಉಕ್ಕಿನಿಂದ, ಅತ್ಯಾಧುನಿಕ ತಂತ್ರ ಕೌಶಲ್ಯದಿಂದ ಮತ್ತು ಅನುಭವಪೂರ್ವಕ ತಯಾರಿಸಲ್ಪಟ್ಟಿದ್ದು ಸರಿಯಾಗಿ ದೃಢೀಕರಿಸಿ ಹದಗೊಳಿಸಲ್ಪಟ್ಟಿವೆ.

ತಯಾರಕರು—

THE CANARA WORKSHOPS LIMITED,

MANGALORE - 3.

Vol. 35
No. 50
16-8-1956
ಸಂಪುಟ ೩೫
ಸಂಚಿಕೆ ೫೦

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೬

Navayuga Independence Day Special 1956

"ಭಾರತವೀಗ ಸ್ವತಂತ್ರವಾಗಿದೆ. ಇದರ ವಾಸ್ತವಿಕ ಚಿತ್ರವು ನನ್ನ ಕಣ್ಣಿಗೆ ನಿಚ್ಚಳವಾಗಿ ಗೋಚರವಾಗಿದೆ. ಪರಸತ್ತೆಯ ನೊಗವನ್ನು ತೆಗೆದೊಗೆದಿರುವುದರಿಂದ ಎಲ್ಲ ಒಳ್ಳೆಯ ಶಕ್ತಿಗಳನ್ನು ಈಗ ಒಂದು ಮಹಾ ಪ್ರಯತ್ನದಲ್ಲಿ ಒಂದುಗೂಡಿಸಬೇಕಾಗಿದೆ. ಮಾನವೀಯ ಬಿಕ್ಕಟ್ಟುಗಳನ್ನು ತೊಲಗಿಸಲು ಪಾದಿಕೆಯ ಹಿಂಸಾಮಾರ್ಗವನ್ನು ತ್ಯಜಿಸಿರುವ—ಈ ಬಿಕ್ಕಟ್ಟುಗಳು ಎರಡು ರಾಜ್ಯಗಳ ನಡುವೆ ಇರಲಿ ಇಲ್ಲವೆ ಒಂದೇ ಜನಾಂಗದ ಎರಡು ಪಂಗಡಗಳ ನಡುವೆ ಇರಲಿ— ಒಂದು ರಾಷ್ಟ್ರವನ್ನು ಕಟ್ಟುವುದೇ ಆ ಮಹಾ ಪ್ರಯತ್ನ."

ಮ। ಗಾಂಧೀ.

"ಭಾರತವು ಸಮಯಕ್ಕೆ ತಕ್ಕಂತೆ ಸಾವರಿಸಿಕೊಂಡು, ಎರಡು ರಾಷ್ಟ್ರಗಳ ನಿರ್ಮಾಣವು ಜಗತ್ತಿಗೆ ಭಯಪ್ರದವಾಗದ ಒಂದು ಅಭಯ ಸಾಧಕವಾಗುವದೆಂದು ಸಿದ್ಧಗೊಳಿಸುವ ಬಗ್ಗೆ ನನಗೆ ವಿಶ್ವಾಸವಿದೆ. ಗಳಿಸಿದ ಸ್ವಾತಂತ್ರ್ಯಕ್ಕೆ ನಿಜವಾದ ಮಹತ್ವ ಬರಬೇಕಾದಲ್ಲಿ ಸಾಮೂಹಿಕ ಬಿಕ್ಕಟ್ಟುಗಳನ್ನು ಬಗೆಹರಿಸಲು ಅಹಿಂಸೆಯ ಸಾಧನವನ್ನು ಪರಿಪೂರ್ಣಗೊಳಿಸಿಕೊಳ್ಳುವದು ಸ್ವತಂತ್ರ ಭಾರತದ ಕರ್ತವ್ಯವಾಗಿದೆ."

ಮ। ಗಾಂಧೀ.

ಪವಿತ್ರವಾದ ಎರಡು ರಾಷ್ಟ್ರೀಯ ಉತ್ಸವಗಳು

ಸ್ವಾತಂತ್ರ್ಯ ಪ್ರಾಪ್ತಿಯಾದ ಮತ್ತು ಗಣರಾಜ್ಯವಾಗಿ ಭಾರತವು ರೂಪುಗೊಂಡ ಎರಡು ದಿನಗಳು ರಾಷ್ಟ್ರೀಯ ಮಹತ್ವದ ಉತ್ಸವಾಚರಣೆಗೆ ಯೋಗ್ಯವಾಗಿವೆ; ಎಲ್ಲ ಪ್ರಜೆಗಳೂ ರಾಜಕೀಯ ಪಕ್ಷ ಭೇದವನ್ನು ಮರೆತು ಈ ಉತ್ಸವಗಳಲ್ಲಿ ಭಾಗಿಯಾಗಿ, ಅವನ್ನು ಯಶಸ್ವಿಯಾಗಿಸಿ, ರಾಷ್ಟ್ರ ನಿಷ್ಠೆಯನ್ನು ಪ್ರದರ್ಶಿಸಬೇಕಾಗಿದೆ.

ಬರೆದವರು: ಶ್ರೀ ರಂಗನಾಥ ದಿವಾಕರ,
ಬಿಹಾರಿನ ರಾಜ್ಯಪಾಲರು.

ಆಗಸ್ಟ ಹದಿನೈದು ಮತ್ತು ಜನವರಿ ಇಪ್ಪತ್ತಾರು ನಮ್ಮ ಎರಡು ರಾಷ್ಟ್ರೀಯ ಉತ್ಸವಗಳೆಂದು ಪರಿಗಣಿಸಲ್ಪಟ್ಟಿವೆ. ಸ್ವಾತಂತ್ರ್ಯದ ಪುಣ್ಯಸ್ಮರಣೆಗಳನ್ನು ಪಾವನವಾಗಿ ಎಣಿಸುವ ಪ್ರತಿ ದೇಶದಲ್ಲಿಯೂ ಇಂಥ ಉತ್ಸವಗಳನ್ನು ವೈಭವದಿಂದ ಆಚರಿಸಲಾಗುತ್ತದೆ. ನಮ್ಮ ಸಹೋದರ ಗಣರಾಜ್ಯವಾದ ಅಮೇರಿಕದಲ್ಲಿ (U. S. A.) ನಾಲ್ಕನೆಯ ಜುಲಾಯಿಯಂದು ಸ್ವಾತಂತ್ರ್ಯ ಘೋಷಣೆಯ ದಿನಾಚರಣೆಯನ್ನು ಅತ್ಯಂತ ಆನಂದದಿಂದ ಆಚರಿಸುತ್ತಿದ್ದಾರೆ. ಇದೀಗ ತರುಣ ಗಣರಾಜ್ಯವಾದ ನಾವು ಇಂಥ ಉತ್ಸವಗಳನ್ನು ರಾಷ್ಟ್ರೀಯ ಪ್ರಮಾಣದಲ್ಲಿ ಯಥಾಯೋಗ್ಯವಾಗಿ ಆಚರಿಸುವ ರೀತಿಯನ್ನು ಕಲಿತುಕೊಳ್ಳಬೇಕಾಗಿದೆ. ಇದು ಒಂದು ಪುಣ್ಯದಿನವೆಂದು ಎಲ್ಲ ಪಕ್ಷಗಳವರೂ ಭಾವಿಸಿ, ಈ ದಿನ ರಾಜಕೀಯ ವಿವಾದಗಳಿಗೋ ಪ್ರಚಾರಕ್ಕೋ ಆಸ್ಪದವನ್ನು ಕೊಡದೆ ದೇಶದ ಐಕ್ಯವನ್ನು ಸಾರುವ ಉತ್ಸವವೆಂದು ಈ ದಿನವನ್ನು ತಿಳಿಯತಕ್ಕದು. ನಮ್ಮ ನಿಷ್ಠೆ ಇಡಿಯ ಭಾರತ ರಾಷ್ಟ್ರಕ್ಕೆ ಭಾರತದ ಸಂವಿಧಾನಕ್ಕೆ ಎನ್ನುವುದನ್ನು ನಾವು ತೋರಿಸಿಕೊಡತಕ್ಕದು. ಈ ಎರಡು ದಿವಸಗಳಲ್ಲಿಯೂ ರಚನಾತ್ಮಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸದವಕಾಶವು ದೊರೆತು ತನ್ಮೂಲಕ ದೇಶದ ಹೃದಯದ ಐಕ್ಯತೆಯು ಪ್ರಕಟವಾಗುವಂತಿರತಕ್ಕದು. 'ರಾಷ್ಟ್ರೀಯ' ವೆಂಬ ಪದವು ಇತರ ಸಣ್ಣಪುಟ್ಟ ನಿಷ್ಠೆಗಳನ್ನು ಮೀರಿ, ಜಯಿಸಿನಿಲ್ಲುವ ಹಾಗಾಗಬೇಕು. ನಾವು ಭಾರತದ ಪರಮಗೌರವಾನ್ವಿತ ಪ್ರಜೆಗಳು, ಭಾರತೀಯ ಗಣ ರಾಜ್ಯದ ನಾಗರಿಕರೆಂಬಭಾವವು ಈ ದಿನ ನಮ್ಮ ಅಂತರಂಗವನ್ನು ಮಿಡಿಯುತ್ತಿರಬೇಕು.

ಆಧುನಿಕ ರಾಷ್ಟ್ರೀಯತೆ ಮತ್ತು ಸ್ವದೇಶಾಭಿಮಾನ ಈ ಭಾವನೆಗಳು ವಿವಿಧ ವರ್ಣ ಧರ್ಮ, ಭಾಷಾ ಭೇದಗಳುಳ್ಳ ಜನರು ಒಂದೇ ದೇಶದಲ್ಲಿ ಕೂಡು ಬಾಳು ನಡೆಸಬೇಕಾದ ಸಂದರ್ಭದಲ್ಲಿ ಈ ಭಿನ್ನಭಿನ್ನ ರಾಜಕೀಯ—ಆರ್ಥಿಕ ಹಿತಗಳನ್ನು ಒಂದು ಗೂಡಿಸಲು ನೆರವಾದ ಭಾವನೆಗಳು. ರಾಜಕೀಯ ಆರ್ಥಿಕ ಸ್ವಾತಂತ್ರ್ಯದ ಸಿದ್ಧಿಗೆ ದೇಶವು ಸ್ವತಂತ್ರವಾಗಬೇಕಾದುದೂ. ಅಂತಾರಾಷ್ಟ್ರೀಯ ರಂಗದಲ್ಲಿ ಪ್ರತ್ಯೇಕ ಸ್ಥಾನವನ್ನು ನಿರ್ಮಿಸಿಕೊಂಡು ತಲೆ ಎತ್ತಿ ಬಾಳುವುದೂ ಅನಿವಾರ್ಯ ವಿಷಯಗಳು. ಇಟಲಿಯ ರಾಷ್ಟ್ರ ನಿರ್ಮಾತೃವಾದ ಮೆಝಿನಿ ರಾಷ್ಟ್ರೀಯತೆಗೆ ಧರ್ಮದ ಮಹತ್ತ್ವವುಂಟೆಂದು ಹೇಳಿರುವುದು ಇದರಿಂದಲೇ. ಧರ್ಮವು ತನ್ನ ಸೂತ್ರಗಳ ಮೂಲಕ, ಅವನ್ನನುಸರಿಸಿದವರಿಗೆ ಮುಕ್ತಿಯ ಮಾರ್ಗವನ್ನು ತೋರಿಸುತ್ತದೆ; ರಾಷ್ಟ್ರೀಯತೆಯು ದೇಶದೊಳಗಿನ ಜನರಲ್ಲಿ ಪರಸ್ಪರ ಐಕಮತ್ಯವನ್ನು ಸಾಧಿಸಿ, ಪ್ರಗತಿ ಸಾಧಕವಾದ ಸ್ವಾತಂತ್ರ್ಯವನ್ನು ಪೋಷಿಸುತ್ತದೆ. ಭಾರತೀಯ ರಾಷ್ಟ್ರೀಯತೆಯ ಪ್ರವರ್ತಕ ಮಹರ್ಷಿ ಅರವಿಂದರು ರಾಷ್ಟ್ರೀಯತೆ ಎಂದರೂ ಸನಾತನ ಧರ್ಮವೆಂದರೂ ಒಂದೇ ಎಂದಿದ್ದಾರೆ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದು ಹೇಳಿದ ಹಿರಿಯರು ತಾಯಿಯನ್ನೂ, ತಾಯ್ನಾಡನ್ನೂ ಸ್ವರ್ಗಕ್ಕಿಂತ ಶ್ರೇಷ್ಠ ಸ್ಥಾನದಲ್ಲಿರಿಸಿ ರಾಷ್ಟ್ರೀಯತೆಗೆ ಒಂದು ಉನ್ನತ ಸ್ಥಾನವನ್ನು ಕಲ್ಪಿಸಿದ್ದಾರೆ. ಸ್ವರ್ಗ ಇರುವುದು ಇಲ್ಲಲ್ಲ, ಇನ್ನೂ ಮುಂದೆ; ಜನನಿ, ಜನ್ಮಭೂಮಿ ಇತ್ತಮಾತ್ರ ನಮ್ಮನು ಆಧರಿಸಿ, ಬೆಳೆಸುವ ಜೀವಚೇತನಗಳು; ಆದ್ದರಿಂದ ಅದಕ್ಕಿಂತ ಇವು ಶ್ರೇಷ್ಠ.

೧೮೫೭ರಲ್ಲಿ ನಮ್ಮ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ನಡೆದು ವಿಫಲವಾಯಿತು. ಆದರೂ ಸ್ವಾತಂತ್ರ್ಯದ ಕಿಡಿ ಒಳಗಿಂದೊಳಗೆ ಸುಡುತ್ತಲೇ ಇತ್ತು. ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸು ಜನ್ಮವೆತ್ತಿತು; ೧೯೦೫ರಲ್ಲಿ ಸ್ವದೇಶೀ ಚಳವಳ, ೧೯೨೧ರಲ್ಲಿ ಅಹಿಂಸಾತ್ಮಕ ಅಸಹಕಾರ; ೧೯೩೦ರಲ್ಲಿ ಸವಿನಯ ಕಾಯಿದೇ ಭಂಗ; ೧೯೪೨ರಲ್ಲಿ 'ಚಲೇಜಾವ್' ಚಳವಳ— ಇವೆಲ್ಲವುಗಳಲ್ಲಿಯೂ ಭಾರತದ ಸ್ವಾತಂತ್ರ್ಯಪಥ ಪ್ರಕಟವಾಯಿತೆಂದು ನಾವು ಬಲ್ಲೆವು. ಸ್ವಾತಂತ್ರ್ಯದ ಹೋರಾಟ ಮುನ್ನಡೆದಂತೆ ಅದರ ಪ್ರಭಾವ ವಲಯವು ವಿಸ್ತಾರವಾಗಿ ಇಡೀ ದೇಶವನ್ನೇ ತನ್ನ ಕಕ್ಷೆಯಲ್ಲಿ ಸೇರಿಸಿಕೊಂಡಿತು. ಇಡೀ ರಾಷ್ಟ್ರವೇ ಆಲಸ್ಯವನ್ನು ಕೊಡಹಿ ಎದ್ದುನಿಂತು ಆಗಸ್ಟ ೧೫, ೧೯೪೭ ರಂದು ತನ್ನ ಜನ್ಮಸಿದ್ಧ ಹಕ್ಕನ್ನು ಪಡೆದು ಜಗತ್ತಿನೆದಿರು ಅಹಿಂಸಾತ್ಮಕ ಹೋರಾಟದ ಹೊಸ ವಿಧಾನವನ್ನು ಪ್ರಕಟಿಸಿತು.

ಪ್ರತಿ ಸ್ವತಂತ್ರ ರಾಷ್ಟ್ರಕ್ಕೂ ತನ್ನದೇ ಆದ ರಾಷ್ಟ್ರಮುದ್ರೆ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಇವೆ ಇವು ರಾಷ್ಟ್ರದ ಸಾಕಾರ ರೂಪಗಳು, ಸಂಕೇತಗಳು ಇವುಗಳ ಮೇಲೆ ರಾಷ್ಟ್ರಕರಿಗೆ ಪ್ರೀತಿ, ವಿಶ್ವಾಸ. ಇವುಗಳ ರಕ್ಷಣೆಗಾಗಿ ಪ್ರಾಣವನ್ನಾದರೂ ಬಲಿಕೊಡಲು ಅವರು ಸಿದ್ಧರು. ಅಶೋಕನ ಸಿಂಹಸ್ತಂಭವು ನಮ್ಮ ಮುದ್ರೆ ಇದು ಧರ್ಮದ ಶ್ರೇಷ್ಠತೆಯನ್ನು ಸಾರುವ ಸಂಕೇತವಾಗಿದೆ. 'ವಂದೇಮಾತರಂ,' 'ಜನಗಣಮನ,' ಎಂಬೆರಡು ರಾಷ್ಟ್ರಗೀತೆಗಳು ನಮ್ಮ ಮಾತೆಯ ಮೇಲೆ ನಮಗಿರುವ ಭಕ್ತಿಯನ್ನು ಸೂಚಿಸುವಂಥವು ನಮ್ಮ ರಾಷ್ಟ್ರಧ್ವಜವು ಇಂದು ಸ್ವಾತಂತ್ರ್ಯ, ಶಾಂತಿ ಮತ್ತು ಧರ್ಮರಾಜ್ಯವನ್ನು ಸಾರುವ ದ್ಯೋತಕಗಳಾಗಿವೆ. ಅದು ಹಾರಾಡುವಾಗ ನಮ್ಮ ನರನಾಡಿಗಳಲ್ಲಿ ನವೀನ ಜೀವನಸಂಚಾರವಾಗಬೇಕು; ನಮಗೆ ನವೀನ ದರ್ಶನವು ಸಾಧ್ಯವಾಗಬೇಕು.

ಏಶಿಯದಲ್ಲಿ ನಮ್ಮ ಭೌಗೋಲಿಕ ಸ್ಥಾನವು ಅತ್ಯಂತ ಮಹತ್ತ್ವದ್ದಾಗಿದೆ. ಆದುದರಿಂದ ನಮ್ಮ ನಾಡಿನ ಐಕ್ಯವೂ, ನಮ್ಮ ನಾಡು ಈ ತನಕ ಪಾಲಿಸಿಕೊಂಡು ಬಂದ ಕ್ರಿಯಾತ್ಮಕ ಮತ್ತು ಅಹಿಂಸಾತ್ಮಕ ಜೀವನಮಾರ್ಗವೂ, ನಾಗರಿಕತೆಯ ಭವ್ಯತೆಗೆ ಪ್ರಬಲ ಪೋಷಕಗಳಾಗಿವೆ. ನಮ್ಮ ಮನಸ್ಸಿನಲ್ಲಿರುವ ಚಿಕ್ಕಪುಟ್ಟ ನಿಷ್ಠೆಗಳನ್ನು ನಾವು ದೂರಮಾಡಿ ಏಕಾಗ್ರತೆಯಿಂದ ದೇಶನಿಷ್ಠೆಯನ್ನೇ ಸಾಧಿಸುವುದು ಅಗತ್ಯವಾಗಿದೆ. ಯಾವುದು ನಮ್ಮ ಐಕ್ಯಕ್ಕೆ ವಿಘಾತಕವೋ ಅದನ್ನು ನಾವೆಲ್ಲಾದರೂ ಬೆಳೆಸಿದಲ್ಲಿ ನಾವು ಸ್ವಾತಂತ್ರ್ಯ ಪೂರ್ವದ ವಿಪನ್ನಾವಸ್ಥೆಗೆ ಮರಳಿ ತಲಪುವುದರಲ್ಲಿ ಸಂದೇಹವಿಲ್ಲ. ಜಾತೀಯ ಕಲಹವಾಗಲಿ, ವರ್ಗಕಲಹವಾಗಲಿ, ಭಾಷಾದ್ವೇಷವಾಗಲಿ ನಮ್ಮ ದೃಷ್ಟಿಯನ್ನೇ ಮಂದಗೊಳಿಸಿ ಐಕ್ಯವನ್ನು ಮರೆಸುವಂತಾದಲ್ಲಿ ದೇಶಕ್ಕೆ ಗಂಡಾಂತರವು ತಪ್ಪಿದಲ್ಲವೆಂದು ನಾವು ಎಚ್ಚರಿಕೆಯಿಂದಿರಬೇಕು.

೧೫ನೆಯ ಆಗಸ್ಟು ನಮಗೊಂದು ಸ್ಮಾರಕ ದಿನ; ಅಂದು ನಮ್ಮ ಸ್ವಾತಂತ್ರ್ಯಕ್ಕೆ ಕಾರಣರಾದ, ಸ್ವಾತಂತ್ರ್ಯಕ್ಕೋಸ್ಕರ ಜೀವನವನ್ನು ಅರ್ಪಿಸಿ ಧನ್ಯರಾದ ಮಹನೀಯರ ಪುಣ್ಯಸ್ಮರಣೆಯಿಂದ ನಾವು ಪಾವನರಾಗಬೇಕು. ಸ್ವಾತಂತ್ರ್ಯವೇ ಒಂದು ಸ್ವತಂತ್ರ ಮೌಲ್ಯವೆಂದು ನಾವು ಪರಿಗಣಿಸಬೇಕು. ಆಚಂದ್ರಾರ್ಕವಾಗಿ ನಾವು ಇದನ್ನು ಸ್ಮರಿಸುವಂತಾಗಬೇಕು. ನಾವು ಸದಾಜಾಗ್ರತರಾಗಿಯೂ ಇರಬೇಕು.

೨೬ನೆಯ ಜನವರಿ ನಮ್ಮ ಗಣರಾಜ್ಯೋತ್ಸವ. ಇದಕ್ಕೂ ಒಂದು ದೊಡ್ಡ ಅರ್ಥವಿದೆ. ಬರಿಯ ರಾಜಕೀಯ ಪಾರತಂತ್ರ್ಯ ವಿಮೋಚನೆಯು ಸ್ವಾತಂತ್ರ್ಯವೆಂದೆನಿಸದು. ಹಿಂಸೆಗೆ ಎಲ್ಲೂ ಆಸ್ಪದವಿಲ್ಲದೆ ಜನ ತಮ್ಮ ಕಾರ್ಯಭಾರಗಳ ಯೋಜನೆಯನ್ನೇ ಚರ್ಚೆಯಿಂದ ತೀರ್ಮಾನಿಸಿಕೊಳ್ಳುವುದು ಪ್ರಜಾಪ್ರಭುತ್ವದ ಲಕ್ಷಣವಂತೆ. ಸ್ವಿಝರ್ಲೆಂಡಿನ ಜಿಲ್ಲೆಗಳಲ್ಲಿ ಎಲ್ಲ ವಯಸ್ಕರೂ ಒಂದೆಡೆ ಸೇರಿ ಬೇಕಾದಷ್ಟು ಚರ್ಚಿಸಿ, ತಮಗೆ ಬೇಕಾದ ಶಾಸನಗಳನ್ನು ತಾವೇ ರಚಿಸಿಕೊಳ್ಳುವ ರೂಢಿ ಇದೆಯಂತೆ. ಆದರೆ ಇದೊಂದು ಆದರ್ಶವೇನೊ. ನಮ್ಮಂಥ ದೊಡ್ಡ ದೇಶಕ್ಕೆ ಪ್ರತಿನಿಧಿ ಸರಕಾರದ ರಚನೆಯೇ ವಿಹಿತ ಮಾರ್ಗ. ಕಾಲಕಾಲಕ್ಕೆ ನಮಗೆ ಪ್ರತಿನಿಧಿಗಳನ್ನಾರಿಸುವ ಸ್ವಾತಂತ್ರ್ಯವಿದ್ದರೆ ಅಷ್ಟೇ ಪ್ರಜಾಪ್ರಭುತ್ವದಿಂದ ನಾವು ತೃಪ್ತರಾಗಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಅಡಗಿರುವ ಮೂಲಭೂತ ಹಕ್ಕುಗಳಲ್ಲಿ

(೨೪ನೇ ಪುಟ ನೋಡಿರಿ)

ಪ್ರಮುಖ ಪ್ರಗತಿ.....

ಇಂದಿನ ಸಂಸ್ಮರಣೀಯ ದಿನದಲ್ಲಿ, ಒಂಭತ್ತು ವರ್ಷಗಳ ಹಿಂದೆ ನಮ್ಮ ದೇಶವು ಸ್ವತಂತ್ರವಾಯಿತು.

ಸ್ವಾತಂತ್ರ್ಯದೊರೆತ ಬಳಿಕ ನಮ್ಮ ದೇಶವು ರಾಷ್ಟ್ರನಿರ್ಮಾಣ ಕಾರ್ಯಗಳ ಸರ್ವಸಾಮಾನ್ಯ ಎಲ್ಲಾ ರಂಗಗಳಲ್ಲಿಯೂ ಪ್ರಮುಖ ಪ್ರಗತಿ ಹೊಂದಿದೆ.

ದೇಶದ ಅಭಿವೃದ್ಧಿಗೆ ಕಾರಣವಾದ ಕೈಗಾರಿಕೆ ಉದ್ಯಮ, ವ್ಯಾಪಾರಾದಿಗಳ ಬೆಳವಣಿಗೆಗೆ, **ಕೆನರಾ ಬೇಂಕು** ತನ್ನ ಪಾಲಿನ ವಿನೀತ ಸೇವೆಯನ್ನು ಸ್ವಾಭಿಮಾನದಿಂದ ಸಲ್ಲಿಸಿರುತ್ತದೆ.

ಕೆನರಾ ಬೇಂಕು ದೇಶದ ಪ್ರಮುಖ ಬೇಂಕುಗಳಲ್ಲೊಂದಾಗುವಂತಾಗಲು ಸಹಕರಿಸಿ ಪ್ರೋತ್ಸಾಹಿಸಿದ ನಮ್ಮ ಅಸಂಖ್ಯ ಗ್ರಾಹಕರಿಗೂ ಹಿತೈಷಿಗಳಿಗೂ ನಾವೀ ಸಂದರ್ಭದಲ್ಲಿ ವಂದನೆಗಳನ್ನರ್ಪಿಸುತ್ತೇವೆ; ಅಲ್ಲದೆ ಮುಂದೆಯೂ ಉತ್ತಮೋತ್ತಮ ರೀತಿಯಲ್ಲಿ ಸೇವೆ ಸಲ್ಲಿಸಲು ಸಿದ್ಧರಿರುವೆವು ಎಂದು ಪ್ರತಿಜ್ಞಾಬದ್ಧರಾಗುತ್ತೇವೆ.

1906 ಕೆನರಾ ಬೇಂಕ್ ಲಿಮಿಟೆಡ್ 1956

ಎಲ್ಲಾ ಜನತೆಗೂ ಬೇಕಾದ ಬೇಂಕು.

ಪ್ರಗತಿಪಥದಲ್ಲಿ ಮುನ್ನಡೆಯುತ್ತಿರುವ ಭಾರತದಲ್ಲಿ ಸಾರಿಗೆಯ ಸ್ಥಾನವು ಮಹತ್ವದ್ದಿದೆ.

ಮೋಟಾರು ಮತ್ತು ಲೋರಿಗಳು ಓಡಾಡಿದಷ್ಟು ಹೆಚ್ಚು ಸಾರಿಗೆ ಮತ್ತು ವ್ಯಾಪಾರವು ಅಭಿವೃದ್ಧಿಯನ್ನು ಹೊಂದುತ್ತದೆ.

ಮೋಟಾರು, ಲೋರಿಗಳ ಸಾರಿಗೆಯ ಜೀವನಾಡಿಯೇ ಅತ್ಯುತ್ತಮ ಸ್ಪ್ರಿಂಗುಗಳು

ಅವು Canara SPRINGS ಕೆನರಾ ಸ್ಪ್ರಿಂಗುಗಳು

- ಅವಕ್ಕೆ ಆಯಾಸವೆಂಬುದಿಲ್ಲ.
- ಅವು ಹೆಚ್ಚು ಭಾರವನ್ನು ಹೊರಬಲ್ಲುವು.
- ಅವು ದೀರ್ಘಕಾಲ ಬಾಳುವವು.

ಕೆನರಾ ಸ್ಪ್ರಿಂಗುಗಳು ಅತ್ಯುತ್ತಮ ಉಕ್ಕಿನಿಂದ, ಅತ್ಯಾಧುನಿಕ ತಂತ್ರ ಕೌಶಲ್ಯದಿಂದ ಮತ್ತು ಅನುಭವಪೂರ್ವಕ ತಯಾರಿಸಲ್ಪಟ್ಟಿದ್ದು ಸರಿಯಾಗಿ ದೃಢೀಕರಿಸಿ ಹದಗೊಳಿಸಲ್ಪಟ್ಟಿವೆ.

ತಯಾರಕರು—

THE CANARA WORKSHOPS LIMITED,
MANGALORE - 3.

Vol. 35
No. 50
16-8-1956
ಸಂಪುಟ ೩೫
ಸಂಚಿಕೆ ೫೦

ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ ೧೯೫೬

Navayuga Independence Day Special 1956

"ಭಾರತವೀಗ ಸ್ವತಂತ್ರವಾಗಿದೆ. ಇದರ ವಾಸ್ತವಿಕ ಚಿತ್ರವು ನನ್ನ ಕಣ್ಣಿಗೆ ಸ್ಪಷ್ಟವಾಗಿ ಗೋಚರವಾಗಿದೆ. ಪರಶಕ್ತಿಯ ನೊಗವನ್ನು ತೆಗೆದೊಗೆದಿರುವುದರಿಂದ ಎಲ್ಲ ಒಳ್ಳೆಯ ಶಕ್ತಿಗಳನ್ನು ಈಗ ಒಂದು ಮಹಾ ಪ್ರಯತ್ನದಲ್ಲಿ ಒಂದುಗೂಡಿಸಬೇಕಾಗಿದೆ. ಮಾನವೀಯ ತಿಕ್ಕಾಟಗಳನ್ನು ತೊಲಗಿಸಲು ವಾಡಿಕೆಯ ಹಿಂಸಾಮಾರ್ಗವನ್ನು ತ್ಯಜಿಸಿರುವ— ಈ ತಿಕ್ಕಾಟಗಳು ಎರಡು ರಾಜ್ಯಗಳ ನಡುವೆ ಇರಲಿ ಇಲ್ಲವೆ ಒಂದೇ ಜನಾಂಗದ ಎರಡು ಪಂಗಡಗಳ ನಡುವೆ ಇರಲಿ— ಒಂದು ರಾಷ್ಟ್ರವನ್ನು ಕಟ್ಟುವುದೇ ಆ ಮಹಾ ಪ್ರಯತ್ನ."

ಮ। ಗಾಂಧೀ.

"ಭಾರತವು ಸಮಯಕ್ಕೆ ತಕ್ಕಂತೆ ಸಾವರಿಸಿಕೊಂಡು, ಎರಡು ರಾಷ್ಟ್ರಗಳ ನಿರ್ಮಾಣವು ಜಗತ್ತಿಗೆ ಭಯಪ್ರದವಾಗದ ಒಂದು ಅಭಯ ಸಾಧಕವಾಗುವದೆಂದು ಸಿದ್ಧಗೊಳಿಸುವ ಬಗ್ಗೆ ನನಗೆ ವಿಶ್ವಾಸವಿದೆ. ಗಳಿಸಿದ ಸ್ವಾತಂತ್ರ್ಯಕ್ಕೆ ನಿಜವಾದ ಮಹತ್ವ ಬರಬೇಕಾದಲ್ಲಿ ಸಾಮಾಜಿಕ ತಿಕ್ಕಾಟಗಳನ್ನು ಬಗೆಹರಿಸಲು ಅಹಿಂಸೆಯ ಸಾಧನವನ್ನು ಪರಿಪೂರ್ಣಗೊಳಿಸಿಕೊಳ್ಳುವದು ಸ್ವತಂತ್ರ ಭಾರತದ ಕರ್ತವ್ಯವಾಗಿದೆ."

ಮ। ಗಾಂಧೀ.

ಪವಿತ್ರವಾದ ಎರಡು ರಾಷ್ಟ್ರೀಯ ಉತ್ಸವಗಳು

ಸ್ವಾತಂತ್ರ್ಯ ಪ್ರಾಪ್ತಿಯಾದ ಮತ್ತು ಗಣರಾಜ್ಯವಾಗಿ ಭಾರತವು ರೂಪುಗೊಂಡ ಎರಡು ದಿನಗಳು ರಾಷ್ಟ್ರೀಯ ಮಹತ್ವದ ಉತ್ಸವಾಚರಣೆಗೆ ಯೋಗ್ಯವಾಗಿವೆ; ಎಲ್ಲ ಪ್ರಜೆಗಳೂ ರಾಜಕೀಯ ಪಕ್ಷ ಭೇದವನ್ನು ಮರೆತು ಈ ಉತ್ಸವಗಳಲ್ಲಿ ಭಾಗಿಯಾಗಿ, ಅವನ್ನು ಯಶಸ್ವಿಯಾಗಿಸಿ, ರಾಷ್ಟ್ರನಿಷ್ಠೆಯನ್ನು ಪ್ರವರ್ಧಿಸಬೇಕಾಗಿದೆ.

ಬರೆದವರು: ಶ್ರೀ ರಂಗನಾಥ ದಿವಾಕರ,
ಬಿಹಾರಿನ ರಾಜ್ಯಪಾಲರು.

ಆಗಸ್ಟ ಹದಿನೈದು ಮತ್ತು ಜನವರಿ ಇಪ್ಪತ್ತಾರು ನಮ್ಮ ಎರಡು ರಾಷ್ಟ್ರೀಯ ಉತ್ಸವಗಳೆಂದು ಪರಿಗಣಿಸಲ್ಪಟ್ಟಿವೆ. ಸ್ವಾತಂತ್ರ್ಯದ ಪುಣ್ಯಸ್ಮರಣೆಗಳನ್ನು ಪಾವನವಾಗಿ ಎಣಿಸುವ ಪ್ರತಿ ದೇಶದಲ್ಲಿಯೂ ಇಂಥ ಉತ್ಸವಗಳನ್ನು ವೈಭವದಿಂದ ಆಚರಿಸಲಾಗುತ್ತದೆ. ನಮ್ಮ ಸಹೋದರ ಗಣರಾಜ್ಯವಾದ ಅಮೇರಿಕದಲ್ಲಿ (U. S. A.) ನಾಲ್ಕನೆಯ ಜುಲಾಯಿಯಂದು ಸ್ವಾತಂತ್ರ್ಯ ಘೋಷಣೆಯ ದಿನಾಚರಣೆಯನ್ನು ಅತ್ಯಂತ ಆನಂದದಿಂದ ಆಚರಿಸುತ್ತಿದ್ದಾರೆ. ಇದೀಗ ತರುಣ ಗಣರಾಜ್ಯವಾದ ನಾವು ಇಂಥ ಉತ್ಸವಗಳನ್ನು ರಾಷ್ಟ್ರೀಯ ಪ್ರಮಾಣದಲ್ಲಿ ಯಥಾಯೋಗ್ಯವಾಗಿ ಆಚರಿಸುವ ರೀತಿಯನ್ನು ಕಲಿತುಕೊಳ್ಳಬೇಕಾಗಿದೆ. ಇದು ಒಂದು ಪುಣ್ಯದಿನವೆಂದು ಎಲ್ಲ ಪಕ್ಷಗಳವರೂ ಭಾವಿಸಿ, ಈ ದಿನ ರಾಜಕೀಯ ವಿವಾದಗಳಿಗೋ ಪ್ರಚಾರಕ್ಕೋ ಅಸ್ಪದವನ್ನು ಕೊಡದೆ ದೇಶದ ಐಕ್ಯವನ್ನು ಸಾರುವ ಉತ್ಸವವೆಂದು ಈ ದಿನವನ್ನು ತಿಳಿಯತಕ್ಕದು. ನಮ್ಮ ನಿಷ್ಠೆ ಇಡಿಯ ಭಾರತ ರಾಷ್ಟ್ರಕ್ಕೆ ಭಾರತದ ಸಂವಿಧಾನಕ್ಕೆ ಎನ್ನುವುದನ್ನು ನಾವು ತೋರಿಸಿಕೊಡತಕ್ಕದು. ಈ ಎರಡು ದಿವಸಗಳಲ್ಲಿಯೂ ರಚನಾತ್ಮಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸದವಕಾಶವು ದೊರೆತು ತನ್ಮೂಲಕ ದೇಶದ ಹೃದಯದ ಐಕ್ಯತೆಯು ಪ್ರಕಟವಾಗುವಂತಿರತಕ್ಕದು. 'ರಾಷ್ಟ್ರೀಯ' ವೆಂಬ ಪದವು ಇತರ ಸಣ್ಣಪುಟ್ಟ ನಿಷ್ಠೆಗಳನ್ನು ಮೀರಿ, ಜಯಿಸಿನಿಲ್ಲುವ ಹಾಗಾಗಬೇಕು. ನಾವು ಭಾರತದ ಪರಮಗೌರವಾನ್ವಿತ ಪ್ರಜೆಗಳು, ಭಾರತೀಯ ಗಣ ರಾಜ್ಯದ ನಾಗರಿಕರೆಂಬಭಾವವು ಈ ದಿನ ನಮ್ಮ ಅಂತರಂಗವನ್ನು ಮಿಡಿಯುತ್ತಿರಬೇಕು.

ಆಧುನಿಕ ರಾಷ್ಟ್ರೀಯತೆ ಮತ್ತು ಸ್ವದೇಶಾಭಿಮಾನ ಈ ಭಾವನೆಗಳು ವಿವಿಧ ವರ್ಣ ಧರ್ಮ, ಭಾಷಾ ಭೇದಗಳುಳ್ಳ ಜನರು ಒಂದೇ ದೇಶದಲ್ಲಿ ಕೂಡಿ ಬಾಳು ನಡೆಸಬೇಕಾದ ಸಂದರ್ಭದಲ್ಲಿ ಈ ಭಿನ್ನ ಭಿನ್ನ ರಾಜಕೀಯ—ಆರ್ಥಿಕ ಹಿತಗಳನ್ನು ಒಂದುಗೂಡಿಸಲು ನೆರವಾದ ಭಾವನೆಗಳು. ರಾಜಕೀಯ ಆರ್ಥಿಕ ಸ್ವಾತಂತ್ರ್ಯದ ಸಿದ್ಧಿಗೆ ದೇಶವು ಸ್ವತಂತ್ರವಾಗಬೇಕಾದುದೂ. ಅಂತರರಾಷ್ಟ್ರೀಯ ರಂಗದಲ್ಲಿ ಪ್ರತ್ಯೇಕ ಸ್ಥಾನವನ್ನು ನಿರ್ಮಿಸಿಕೊಂಡು ತಲೆ ಎತ್ತಿ ಬಾಳುವುದೂ ಅನಿವಾರ್ಯ ವಿಷಯಗಳು. ಇಟಲಿಯ ರಾಷ್ಟ್ರನಿರ್ಮಾತೃವಾದ ಮೆಝಿನಿ ರಾಷ್ಟ್ರೀಯತೆಗೆ ಧರ್ಮದ ಮಹತ್ತ್ವವುಂಟೆಂದು ಹೇಳಿರುವುದು ಇದರಿಂದಲೇ. ಧರ್ಮವು ತನ್ನ ಸೂತ್ರಗಳ ಮೂಲಕ, ಅವನ್ನನುಸರಿಸಿದವರಿಗೆ ಮುಕ್ತಿಯ ಮಾರ್ಗವನ್ನು ತೋರಿಸುತ್ತದೆ; ರಾಷ್ಟ್ರೀಯತೆಯು ದೇಶದೊಳಗಿನ ಜನರಲ್ಲಿ ಪರಸ್ಪರ ಐಕಮತ್ಯವನ್ನು ಸಾಧಿಸಿ, ಪ್ರಗತಿ ಸಾಧಕವಾದ ಸ್ವಾತಂತ್ರ್ಯವನ್ನು ಪೋಷಿಸುತ್ತದೆ. ಭಾರತೀಯ ರಾಷ್ಟ್ರೀಯತೆಯ ಪ್ರವರ್ತಕ ಮಹರ್ಷಿ ಅರವಿಂದರು ರಾಷ್ಟ್ರೀಯತೆ ಎಂದರೂ ಸನಾತನ ಧರ್ಮವೆಂದರೂ ಒಂದೇ ಎಂದಿದ್ದಾರೆ. 'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸಿ' ಎಂದು ಹೇಳಿದ ಹಿರಿಯರು ತಾಯಿಯನ್ನೂ, ತಾಯ್ನಾಡನ್ನೂ ಸ್ವರ್ಗಕ್ಕಿಂತ ಶ್ರೇಷ್ಠ ಸ್ಥಾನದಲ್ಲಿರಿಸಿ ರಾಷ್ಟ್ರೀಯತೆಗೆ ಒಂದು ಉನ್ನತ ಸ್ಥಾನವನ್ನು ಕಲ್ಪಿಸಿದ್ದಾರೆ. ಸ್ವರ್ಗ ಇರುವುದು ಇಲ್ಲಲ್ಲ, ಇನ್ನೂ ಮುಂದೆ; ಜನನಿ, ಜನ್ಮಭೂಮಿ ಇತ್ತಮಾತ್ರ ನಮ್ಮನು ಆಧರಿಸಿ, ಬೆಳೆಸುವ ಜೀವಚೇತನಗಳು; ಆದ್ದರಿಂದ ಅದಕ್ಕಿಂತ ಇವು ಶ್ರೇಷ್ಠ.

೧೮೫೭ರಲ್ಲಿ ನಮ್ಮ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವು ನಡೆದು ವಿಫಲವಾಯಿತು. ಆದರೂ ಸ್ವಾತಂತ್ರ್ಯದ ಕಿಡಿ ಒಳಗಿಂದೊಳಗೆ ಸುಡುತ್ತಲೇ ಇತ್ತು. ೧೮೮೫ರಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸು ಜನ್ಮವೆತ್ತಿತು; ೧೯೦೫ರಲ್ಲಿ ಸ್ವದೇಶೀ ಚಳವಳಿ, ೧೯೨೧ರಲ್ಲಿ ಅಹಿಂಸಾತ್ಮಕ ಅಸಹಕಾರ; ೧೯೩೦ರಲ್ಲಿ ಸವಿನಯ ಕಾಯಿದೇ ಭಂಗ; ೧೯೪೨ರಲ್ಲಿ 'ಚಲೇಜಾವ್' ಚಳವಳಿ— ಇವೆಲ್ಲವುಗಳಲ್ಲಿಯೂ ಭಾರತದ ಸ್ವಾತಂತ್ರ್ಯವನ್ನು ಪ್ರಕಟವಾಯಿತೆಂದು ನಾವು ಬಲ್ಲೆವು. ಸ್ವಾತಂತ್ರ್ಯದ ಹೋರಾಟ ಮುನ್ನಡೆದಂತೆ ಅದರ ಪ್ರಭಾವ ವಲಯವು ವಿಸ್ತಾರವಾಗಿ ಇಡೀ ದೇಶವನ್ನೇ ತನ್ನ ಕಕ್ಷೆಯಲ್ಲಿ ಸೇರಿಸಿಕೊಂಡಿತು. ಇಡೀ ರಾಷ್ಟ್ರವೇ ಆಲಸ್ಯವನ್ನು ಕೊಡಹಿ ಎದ್ದುನಿಂತು ಆಗಸ್ಟ ೧೫, ೧೯೪೭ ರಂದು ತನ್ನ ಜನ್ಮಸಿದ್ಧ ಹಕ್ಕನ್ನು ಪಡೆದು ಜಗತ್ತಿನೆದಿರು ಅಹಿಂಸಾತ್ಮಕ ಹೋರಾಟದ ಹೊಸ ವಿಧಾನವನ್ನು ಪ್ರಕಟಿಸಿತು.

ಪ್ರತಿ ಸ್ವತಂತ್ರ ರಾಷ್ಟ್ರಕ್ಕೂ ತನ್ನದೇ ಆದ ರಾಷ್ಟ್ರಮುದ್ರೆ, ರಾಷ್ಟ್ರಧ್ವಜ, ರಾಷ್ಟ್ರಗೀತೆ ಇವೆ. ಇವು ರಾಷ್ಟ್ರದ ಸಾಕಾರ ರೂಪಗಳು, ಸಂಕೇತಗಳು. ಇವುಗಳ ಮೇಲೆ ರಾಷ್ಟ್ರಕರಿಗೆ ಪ್ರೀತಿ, ವಿಶ್ವಾಸ. ಇವುಗಳ ರಕ್ಷಣೆಗಾಗಿ ಪ್ರಾಣವನ್ನಾದರೂ ಬಲಿಕೊಡಲು ಅವರು ಸಿದ್ಧರು. ಅಶೋಕನ ಸಿಂಹಸ್ತಂಭವು ನಮ್ಮ ಮುದ್ರೆ. ಇದು ಧರ್ಮದ ಶ್ರೇಷ್ಠತೆಯನ್ನು ಸಾರುವ ಸಂಕೇತವಾಗಿದೆ. 'ವಂದೇಮಾತರಂ,' 'ಜನಗಣಮನ' ಎಂಬೆರಡು ರಾಷ್ಟ್ರಗೀತೆಗಳು ನಮ್ಮ ಮಾತೆಯ ಮೇಲೆ ನಮಗಿರುವ ಭಕ್ತಿಯನ್ನು ಸೂಚಿಸುವಂಥವು. ನಮ್ಮ ರಾಷ್ಟ್ರಧ್ವಜವು ಇಂದು ಸ್ವಾತಂತ್ರ್ಯ, ಶಾಂತಿ ಮತ್ತು ಧರ್ಮರಾಜ್ಯವನ್ನು ಸಾರುವ ದ್ಯೋತಕಗಳಾಗಿವೆ. ಅದು ಹಾರಾಡುವಾಗ ನಮ್ಮ ನರನಾಡಿಗಳಲ್ಲಿ ನವೀನ ಜೀವನಸಂಚಾರವಾಗಬೇಕು; ನಮಗೆ ನವೀನ ದರ್ಶನವು ಸಾಧ್ಯವಾಗಬೇಕು.

ಏಶಿಯದಲ್ಲಿ ನಮ್ಮ ಭೌಗೋಲಿಕ ಸ್ಥಾನವು ಅತ್ಯಂತ ಮಹತ್ತ್ವದ್ದಾಗಿದೆ. ಆದುದರಿಂದ ನಮ್ಮ ನಾಡಿನ ಐಕ್ಯವೂ, ನಮ್ಮ ನಾಡು ಈ ತನಕ ಪಾಲಿಸಿಕೊಂಡು ಬಂದ ಕ್ರಿಯಾತ್ಮಕ ಮತ್ತು ಅಹಿಂಸಾತ್ಮಕ ಜೀವನಮಾರ್ಗವೂ, ನಾಗರಿಕತೆಯ ಭವ್ಯತೆಗೆ ಪ್ರಬಲ ಪೋಷಕಗಳಾಗಿವೆ. ನಮ್ಮ ಮನಸ್ಸಿನಲ್ಲಿರುವ ಚಿಕ್ಕ ಪುಟ್ಟ ನಿಷ್ಠೆಗಳನ್ನು ನಾವು ದೂರಮಾಡಿ ಏಕಾಗ್ರತೆಯಿಂದ ದೇಶನಿಷ್ಠೆಯನ್ನೇ ಸಾಧಿಸುವುದು ಆಗತ್ಯವಾಗಿದೆ. ಯಾವುದು ನಮ್ಮ ಐಕ್ಯಕ್ಕೆ ವಿಘಾತಕವೋ ಅದನ್ನು ನಾವೆಲ್ಲಾದರೂ ಬೆಳೆಸಿದಲ್ಲಿ ನಾವು ಸ್ವಾತಂತ್ರ್ಯ ಪೂರ್ವದ ವಿಪನ್ನಾವಸ್ಥೆಗೆ ಮರಳಿ ತಲಪುವುದರಲ್ಲಿ ಸಂದೇಹವಿಲ್ಲ. ಜಾತೀಯ ಕಲಹವಾಗಲಿ, ವರ್ಗಕಲಹವಾಗಲಿ, ಭಾಷಾದ್ವೇಷವಾಗಲಿ ನಮ್ಮ ದೃಷ್ಟಿಯನ್ನೇ ಮಂದಗೊಳಿಸಿ ಐಕ್ಯವನ್ನು ಮರೆಸುವಂತಾದಲ್ಲಿ ದೇಶಕ್ಕೆ ಗಂಡಾಂತರವು ತಪ್ಪಿದಲ್ಲವೆಂದು ನಾವು ಎಚ್ಚರಿಕೆಯಿಂದಿರಬೇಕು.

೧೫ನೆಯ ಆಗಸ್ಟು ನಮಗೊಂದು ಸ್ಮಾರಕ ದಿನ; ಅಂದು ನಮ್ಮ ಸ್ವಾತಂತ್ರ್ಯಕ್ಕೆ ಕಾರಣರಾದ, ಸ್ವಾತಂತ್ರ್ಯಕ್ಕೋಸ್ಕರ ಜೀವನವನ್ನು ಅರ್ಪಿಸಿ ಧನ್ಯರಾದ ಮಹನೀಯರ ಪುಣ್ಯಸ್ಮರಣೆಯಿಂದ ನಾವು ಪಾವನರಾಗಬೇಕು. ಸ್ವಾತಂತ್ರ್ಯವೇ ಒಂದು ಸ್ವತಂತ್ರ ಮೌಲ್ಯವೆಂದು ನಾವು ಪರಿಗಣಿಸಬೇಕು. ಆಚಂದ್ರಾರ್ಕವಾಗಿ ನಾವು ಇದನ್ನು ಸ್ಮರಿಸುವಂತಾಗಬೇಕು. ನಾವು ಸದಾ ಜಾಗ್ರತರಾಗಿಯೂ ಇರಬೇಕು.

೨೬ನೆಯ ಜನವರಿ ನಮ್ಮ ಗಣರಾಜ್ಯೋತ್ಸವ. ಇದಕ್ಕೂ ಒಂದು ದೊಡ್ಡ ಅರ್ಥವಿದೆ. ಬರಿಯ ರಾಜಕೀಯ ಪಾರತಂತ್ರ್ಯ ವಿಮೋಚನೆಯು ಸ್ವಾತಂತ್ರ್ಯವೆಂದೆನಿಸದು. ಹಿಂಸೆಗೆ ಎಲ್ಲೂ ಆಸ್ಪದವಿಲ್ಲದೆ ಜನ ತಮ್ಮ ಕಾರ್ಯಭಾರಗಳ ಯೋಜನೆಯನ್ನೇ ಚರ್ಚೆಯಿಂದ ತೀರ್ಮಾನಿಸಿಕೊಳ್ಳುವುದು ಪ್ರಜಾಪ್ರಭುತ್ವದ ಲಕ್ಷಣವಂತೆ. ಸ್ವಿಝರ್ಲೆಂಡಿನ ಜಿಲ್ಲೆಗಳಲ್ಲಿ ಎಲ್ಲ ವಯಸ್ಕರೂ ಒಂದೆಡೆ ಸೇರಿ ಬೇಕಾದಷ್ಟು ಚರ್ಚಿಸಿ, ತಮಗೆ ಬೇಕಾದ ಶಾಸನಗಳನ್ನು ತಾವೇ ರಚಿಸಿಕೊಳ್ಳುವ ರೂಢಿ ಇದೆಯಂತೆ. ಆದರೆ ಇದೊಂದು ಆದರ್ಶವೇನೊ. ನಮ್ಮಂಥ ದೊಡ್ಡ ದೇಶಕ್ಕೆ ಪ್ರತಿನಿಧಿ ಸರಕಾರದ ರಚನೆಯೇ ವಿಹಿತ ಮಾರ್ಗ. ಕಾಲಕಾಲಕ್ಕೆ ನಮಗೆ ಪ್ರತಿನಿಧಿಗಳನ್ನಾರಿಸುವ ಸ್ವಾತಂತ್ರ್ಯವಿದ್ದರೆ ಅಷ್ಟೇ ಪ್ರಜಾಪ್ರಭುತ್ವದಿಂದ ನಾವು ತೃಪ್ತರಾಗಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಅಡಗಿರುವ ಮೂಲಭೂತ ಹಕ್ಕುಗಳಲ್ಲಿ

(೨೪ನೇ ಪುಟ ನೋಡಿರಿ)

ಉತ್ತಮ ಆಡಳಿತ ಮತ್ತು ಸ್ವರಾಜ್ಯ

ನಮಗೆ ಬೇಕಾದದ್ದು ಒಳ್ಳೆಯ ಆಡಳಿತ; ಸ್ವರಾಜ್ಯವು ಅದಕ್ಕೆ ಅವಕಾಶ ಒತ್ತಿದೆ. ಆದರೆ ನಮ್ಮ ಜನರು ಉತ್ತಮ ಚರಿತ್ರ ಸಂಪನ್ನರಾಗಿದ್ದರೆ ಮಾತ್ರ ರಾಜಕೀಯ ಪಕ್ಷ ಹಾಗು ಸರಕಾರಗಳಿಂದ ಒಳ್ಳೆಯದನ್ನು ನಿರೀಕ್ಷಿಸಬಹುದು.

ಬರೆದವರು: ಶ್ರೀ ಸಿ. ರಾಜಗೋಪಾಲಾಚಾರಿ.

ನಮ್ಮ ದೇಶವು ಕೆಲವು ವರ್ಷಗಳ ಹಿಂದೆ ಸ್ವಾತಂತ್ರ್ಯವನ್ನು ಸಂಪಾದಿಸಿತು. ಇದರ ಹಿನ್ನೆಲೆಯ ನೇರವಾದ ಪರಿಚಯ ನಮ್ಮ ಎಳೆಯರಿಗೆ ಏನೇನೂ ಇಲ್ಲ; ಅದನ್ನು ಮಾಡಿಕೊಳ್ಳುವ ಅವಲವಿಕೆಯೂ ಅವರಲ್ಲಿಲ್ಲ. ಈಚೆಗೆ ನನ್ನ ಮನಸ್ಸನ್ನು ಇದೊಂದು ವಿಷಯ ತುಂಬ ಚಿಂತೆಗೀಡುಮಾಡಿದೆ.

ಸ್ವಾತಂತ್ರ್ಯಕ್ಕಾಗಿ ಹೋರಾಡಬೇಕಾಗಿದ್ದ ಆ ಕಾಲದೊಡನೆ ನಮ್ಮ ಎಳೆಯರಿಗೆ ಸಂಪರ್ಕ ಇಷ್ಟಿರಲಿಲ್ಲ. ಈಗ ಒಂಭತ್ತು ವರ್ಷಗಳಿಂದ ನಾವೆಲ್ಲರೂ ಸ್ವತಂತ್ರರಾಗಿದ್ದೇವೆ; ಆದರೆ, ಪರಕೀಯರ ಆಡಳಿತ ಹೇಗಿದ್ದಿರಬಹುದೆಂಬುದನ್ನು ನಮ್ಮ ಎಳೆಯರು ಸ್ಪಷ್ಟವಾಗಿ ತಿಳಿದುಕೊಂಡಿಲ್ಲ. ರಾಮಾಯಣ, ಅಥವಾ ಮಹಾಭಾರತದಂತೆ ಎಳೆಯರ ಪಾಲಿಗೆ ಭಾರತದ ದಾಸ್ಯದ ಚರಿತ್ರೆಯೂ ಒಂದು ಪುರಾಣವೆನಿಸುವ ದಿನವಿದು!

ಆದರೆ, ವಯಸ್ಸು ಹೆಚ್ಚಿರುವ ನನ್ನಂತಹ ಜನರಿಗೆ ಪರಕೀಯ ಆಡಳಿತದ ಸಂಪೂರ್ಣ ಪರಿಚಯವಿದೆ; ಅದರ ವಿಲಕ್ಷಣ ಸ್ವರೂಪವೂ ನೆನಪಿದೆ. ಏಕೆಂದರೆ ನಾವು ಪರಕೀಯ ಆಡಳಿತದ ವಾತಾವರಣದಲ್ಲಿಯೇ ದೇಹ, ಮನಸ್ಸು ಮತ್ತು ಆತ್ಮಗಳ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಹೂಡಿದ ಅನುಭವಿಗಳಾಗಿದ್ದೇವೆ.

ಕಳೆದ ಶತಮಾನದ ಕೊನೆಯಲ್ಲಿ ಪರಕೀಯರ ಆಡಳಿತದ ವಿರುದ್ಧ ದಂಗೆಯು ಪ್ರಾರಂಭವಾಯಿತು. ದಾದಾಭಾಯಿ ನವರೋಜಿ, ಲೋಕಮಾನ್ಯ ತಿಲಕ, ಲಾಲಾ ಲಜಪತ ರ್ರಾ, ಚಿತ್ತರಂಜನ ದಾಸ ಮತ್ತಿತರರು ಈ ಆಂದೋಲನದ ನೇತೃತ್ವವನ್ನು ವಹಿಸಿದರು. ಹಿಂದಿನಿಂದ, ಮಹಾತ್ಮಾ ಗಾಂಧೀಜಿಯವರು ಈ ಧುರೀಣರ ಸಾಲಿಗೆ ಸೇರಿದರು.

ಇಂದಿನ ಎಳೆಯರ ಪಾಲಿಗೆ ಇವೆಲ್ಲ ಕೇವಲ ಹೆಸರುಗಳಾಗಬಹುದು— ಆದರೆ, ನನ್ನಂತಹ ವೃದ್ಧರ ತಾರುಣ್ಯದಲ್ಲಿ ಇವರೆಲ್ಲರೂ ತುಂಬ ಪರಿಚಿತರಾಗಿದ್ದ ಮಹನೀಯರಾಗಿದ್ದರು. ಶ್ರೀ ಜವಾಹರಲಾಲ ನೆಹರುಗಳ ಹೆಸರು ಇವತ್ತಿನ ಜನಾಂಗಕ್ಕೆ ಎಷ್ಟು ಪರಿಚಿತವಾದುದಾಗಿದೆಯೋ ಮತ್ತು ಎಷ್ಟು ಸ್ಫೂರ್ತಿದಾಯಕವಾದುದಾಗಿದೆಯೊ ಅಷ್ಟೇ ಪ್ರಭಾವಶಾಲಿ ಹೆಸರುಗಳಾಗಿ ಮೇಲಿನವು ನನ್ನ ಕಾಲದಲ್ಲಿದ್ದವೆಂದು ಹೇಳಬಹುದು.

ಪರಕೀಯ ಪ್ರಭುತ್ವದ ವಿರುದ್ಧ ಹೋರಾಟವನ್ನು ತ್ರಿಕರಣಪೂರ್ವಕವಾಗಿ ಇವರೆಲ್ಲರೂ ನಡೆಸುತ್ತಿದ್ದರು; ಆಳವಾದ ಸತ್ಯಶೋಧನೆಯಲ್ಲಿ ಜನರೆಲ್ಲ ಸ್ವಸಂತೋಷದಿಂದ ನಿರತರಾಗುತ್ತಿದ್ದರು. ಈ ಹೋರಾಟಕ್ಕೆ ಜನರಿಂದ ಹೆಚ್ಚಿನ ಸಹಕಾರ ದೊರೆಯಿತು.

ಆಕ್ಷೇಪವೆತ್ತುವವರು ಆಗಲೂ ಇದ್ದರು—"ನೀವು ಪ್ರಬಲವಾದ ಸೈನ್ಯಶಕ್ತಿಯ ಬೆಂಬಲವನ್ನು ಪಡೆದಿರುವ ಆಡಳಿತದ ವಿರುದ್ಧ ಹೋರಾಡುತ್ತಿದ್ದೀರಿ! ನಿಮ್ಮ ಬೆಂಬಲಕ್ಕೆ ಪ್ರತ್ಯಕ್ಷವಾದ ಶಕ್ತಿಶಾಲಿ ಸೈನ್ಯವಿಲ್ಲದೆ, ಬ್ರಿಟಿಷರದಕ್ಕಿಂತ ದೊಡ್ಡದಾದ ಸೈನ್ಯವಿಲ್ಲದೆ, ನೀವು ಪರಕೀಯ ಪ್ರಭುತ್ವವನ್ನು ಹೇಗೆ ಮಣಿಸಬಲ್ಲಿರಿ?" ಇಂತಹ ಸಂಶಯಗಳನ್ನು ಅನೇಕ ಟೀಕಾಕಾರರು ಆಗ ಎತ್ತುತ್ತಿದ್ದರು.

ಲೋಕಮಾನ್ಯ ತಿಲಕರು ಇದಕ್ಕೆ ಪರಿಣಾಮಕಾರಿಯಾದ ಉತ್ತರವನ್ನಿತ್ತರು— ಮೇಲೆ ದೇವರಿದ್ದರೆ, ಮತ್ತು ಜನರು ಸ್ವಾತಂತ್ರ್ಯಪೇಕ್ಷಿಗಳಾಗಿ ನಿಜವಾಗಿಯೂ ಇದ್ದರೆ, ಅವರಲ್ಲಿ ಶಕ್ತಿ ಇದ್ದೇ ಇರುತ್ತದೆ. ಎಂದು ಅವರು ಸಾರಿದರು. ಮಹಾತ್ಮಾ ಗಾಂಧೀಯವರು ಧುರೀಣನೆನಿಸಿದಾಗ, ಹೋರಾಟಕ್ಕೆ ಹಿಂಸೆಯು ಅತ್ಯಾವಶ್ಯಕವಾದುದೇನೂ ಆಗಿಲ್ಲ ಎಂದು ಸ್ಪಷ್ಟವಾಗಿ ಹೇಳಿದರು. ಪರಪೀಡನೆಯನ್ನು ಸಹಿಸಿಯೂ ಧ್ಯೇಯ ಸಾಧನೆಗಾಗಿ ಹೋರಾಡುವ ಶಕ್ತಿಯು ಅದನ್ನು ಎಂದವರು ಹೇಳತೊಡಗಿದರು.

ಇವೆರಡೂ ತತ್ತ್ವಗಳನ್ನು ಜನರು ಸಂತೋಷದಿಂದ ಅಂಗೀಕರಿಸಿದರು; ಮತ್ತು ವ್ಯವಹಾರದಲ್ಲಿ ಅನುಷ್ಠಾನಕ್ಕೆ ತಂದು ತೋರಿಸಿದರು. ಕಾಂಗ್ರೆಸು ಸಂಸ್ಥೆಯು ಈ ಸಿದ್ಧಾಂತಗಳ ಸಂದೇಶವನ್ನು ಜನರಲ್ಲಿ ಚೆನ್ನಾಗಿ ಪ್ರಚಾರ ಮಾಡಿತು.

ಕಳೆದ ಮಹಾ ಯುದ್ಧವು ಅಂತ್ಯವಾದ ಬಳಿಕ ಬ್ರಿಟಿಷರ ಕಣ್ಣಿಗೆ ಸತ್ಯಾಂಶವು ಗೋಚರಿಸಿತು: ಏನೆಂದರೆ, ಒಂದು ದೇಶವು ಇನ್ನೊಂದರ ಆಡಳಿತವನ್ನು ಒಪ್ಪಿಕೊಂಡಿರುವ ವರೆಗೆ ಮತ್ತು ಮೌನವಾಗಿ ಈ ಪೀಡನೆಯನ್ನು ಅನುಭವಿಸುತ್ತಿರುವ ವರೆಗೆ ಮಾತ್ರವೇ ಆ ದೇಶದ ಮೇಲೆ ಪರಕೀಯ ಆಡಳಿತ ನಡೆಯಬಹುದು; ಇಲ್ಲದಿದ್ದರೆ ಸಾಧ್ಯವಿಲ್ಲ.

ಭಾರತವು ಬ್ರಿಟಿಷರ ಆಡಳಿತವನ್ನು ಒಪ್ಪಿಕೊಳ್ಳಲಿಲ್ಲ; ಅದು ನಿಷ್ಕ್ರಿಯವಾಗದೆ, ಆಂದೋಲನವನ್ನು ಮುಂದುವರಿಸಿಕೊಂಡು ಹೋಯಿತು. ಆದುದರಿಂದಲೇ ಭಾರತೀಯರ ಮೇಲೆ ಬ್ರಿಟಿಷರು ಬೀರಿದ್ದ ಮಂಕು ಪ್ರಭಾವವು ಮಾಸಿ ಗುಂಪಾಗಿ ೧೯೪೭ನೇ ಆಗೋಸ್ತು ೧೫ರಂದು ದೇಶವು ಸ್ವತಂತ್ರವಾದ ರಾಷ್ಟ್ರವಾಯಿತು.

೧೯೪೭ನೇ ಆಗೋಸ್ತು ೧೫ ಮತ್ತು ೧೯೫೦ನೇ ಜನವರಿ ೨೬ ಎಂಬ ಎರಡು ಪರ್ವದಿನಗಳು ಭಾರತೀಯ ಸ್ವರಾಜ್ಯದ ಎರಡು ಬಗೆಗಳನ್ನು ದ್ಯೋತಿಸುತ್ತವೆ, ದಾಸ್ಯದಿಂದ ಮುಕ್ತಿಯನ್ನು ಪಡೆದುದರ ಸಂಕೇತವೇ ಮೊದಲನೆಯದು; ಅದನ್ನು ಸ್ವರಾಜ್ಯದ ಪರೋಕ್ಷಮುಖವೆಂದು ಕರೆಯಬಹುದು. ನವ ವಿಧಾನವೊಂದನ್ನು ರೂಪಿಸಿಕೊಳ್ಳುವ ದೃಢ ಸಂಕಲ್ಪದ ಪ್ರತೀಕವೇ ಎರಡನೆಯದಾಗಿದ್ದು ಇದನ್ನು ಸ್ವರಾಜ್ಯದ ಪ್ರತ್ಯಕ್ಷ ಮುಖವೆಂದು ಭಾವಿಸಬಹುದು.

ಪ್ರತ್ಯಕ್ಷ ರಂಗದಲ್ಲಿ ನಾವು ನಿರ್ವಹಿಸಬೇಕಾದ ಕರ್ತವ್ಯ ಭಾರದ ಮುಂದೆ ಪರೋಕ್ಷ ಮುಖದ ಮಹತ್ವವು ಕಳೆಗುಂದುವುದೇನೊ ನಿಜ. ಆದರೆ, ಸ್ವಾತಂತ್ರ್ಯವು ನಮಗೆ ನವ ವಿಧಾನವನ್ನು ರೂಪುಗೊಳಿಸುವ ಅವಕಾಶವನ್ನು ಕಲ್ಪಿಸಿತು; ಸ್ವರಾಜ್ಯಕ್ಕೆ ನಾಂದಿಯಾಯಿತು ಎಂಬುದನ್ನು ಮರೆಯಲಾಗದು.

ಬ್ರಿಟನಿನ ಮಾಜಿ ಪ್ರಧಾನಿಯೊಬ್ಬರು "ಒಳ್ಳೆಯ ಆಡಳಿತೆಯಲ್ಲಿ ಸ್ವಕೀಯ ಆಡಳಿತೆಯ ಸಲ್ಲಕ್ಷಣಗಳೆಲ್ಲ ಇವೆ ಎನ್ನಲಾಗದು" ಎನ್ನುವಷ್ಟು ಔದಾರ್ಯದ ಮಾತನ್ನಾಡಿದ್ದರು ಈಗ ನಮಗೆ ಸ್ವಕೀಯ ಆಡಳಿತೆಯ ಭಾಗ್ಯ ದೊರಕಿದೆ. ಆದುದರಿಂದ, ನಾನು ಮೇಲಿನ ಪಲ್ಲವಿಯನ್ನು ತಿದ್ದಬೇಕೆಂದಿದ್ದೇನೆ.

"ಸ್ವಕೀಯ ಆಡಳಿತೆಯಲ್ಲಿ ಒಳ್ಳೆಯ ಆಡಳಿತೆಯ ಸಲ್ಲಕ್ಷಣಗಳೆಲ್ಲ ಇವೆ ಎನ್ನಲಾಗದು" ಎಂಬುದೇ ತಿದ್ದಿದ ಪಲ್ಲವಿಯಾಗಿದೆ. ನಮ್ಮೊಡನೆ ಈಗ ಸ್ವಕೀಯ ಆಡಳಿತೆಯಿದೆ ಆದರೆ, ನಮಗೆ ಇಷ್ಟರಿಂದಲೇ ತೃಪ್ತಿಯಾಗಲಾರದು. ನಮಗೆ ಒಳ್ಳೆಯ ಆಡಳಿತೆಯೂ ಬೇಕು ಆಡಳಿತೆಯು ಸ್ವಕೀಯವಾಗಿರಬೇಕು. ಮತ್ತು ಒಳ್ಳೆಯದಾಗಿರಬೇಕು ಎಂಬುದೇ ಉಚಿತವಾದ ಧ್ಯೇಯವೆಂದು ನನ್ನ ಅಭಿಪ್ರಾಯ.

ಸ್ವಾತಂತ್ರ್ಯ ಪ್ರಾಪ್ತಿಯಾಯಿತೆಂದ ಮಾತ್ರಕ್ಕೆ ನಮಗೆ ಸ್ವಕೀಯ ಆಡಳಿತೆಯ ಲಾಭವೂ ದೊರಕಿತೆನ್ನುವಂತಿರಲಿಲ್ಲ. ಬ್ರಿಟಿಷರು ನಮ್ಮ ದೇಶವನ್ನು ಬಿಟ್ಟು ತೆರಳಿದ ಬಳಿಕ, ನಮ್ಮ ನಡುವೆ ಅನ್ಯಾಯಕತ್ವವೂ ಅನೈತಿಕತೆಯೂ ಈರ್ಷ್ಯಾಸೂಯೆಗಳೂ ತಾಂಡವವಾಡುತ್ತಿದ್ದರೆ ಸ್ವಾತಂತ್ರ್ಯದಿಂದ ದೊರಕುತ್ತಿದ್ದ ಲಾಭವಾದರೂ ಏನು?

ಇದೇ ರೀತಿಯಲ್ಲಿ ವಿಚಾರಿಸುತ್ತಾ ಹೋದರೆ ನಾವು ಕೊನೆಯ ನಿರ್ಣಯವೊಂದಕ್ಕೆ ಬಂದು ಮುಟ್ಟುತ್ತೇವೆ; ಅದೇನೆಂದರೆ, ಪ್ರತಿಯೊಬ್ಬ ಪ್ರಜೆಯೂ ತನ್ನನ್ನು ತಾನೇ ಆಳಿಕೊಳ್ಳುವನಾದರೆ, ಆಗ ಮಾತ್ರ ಸ್ವಕೀಯ ಆಡಳಿತೆಯು ಯಶಸ್ವಿಯಾಯಿತು ಎನ್ನಬಹುದು.

ರಾಷ್ಟ್ರವನ್ನು ರೂಪಿಸುವ ಪ್ರತಿಯೊಬ್ಬ ವ್ಯಕ್ತಿಯೂ ಸ್ವನಿಯಂತ್ರಣಕ್ಕೆ ಮನಸ್ಸು ಮಾಡದಿದ್ದರೆ ಮತ್ತಿದರಲ್ಲಿ ಜಯಗಳಿಸದಿದ್ದರೆ ನಾವು ಒಳ್ಳೆಯ ರಾಷ್ಟ್ರೀಯ ಸರಕಾರವನ್ನು ಪಡೆಯುವುದು ಸಾಧ್ಯವಿಲ್ಲ. ಇದೇ ನಾನು ಎಳೆಯ ಜನಾಂಗಕ್ಕೆ ತಿಳಿಸಿ ಹೇಳಲು ಬಯಸುವ ಸಂದೇಶ.

ವ್ಯಕ್ತಿಯಲ್ಲಿರುವ ಲೋಭ, ಕಪಟ, ಅಸತ್ಯ ಭಾವಗಳೂ ಪಾಶವಿಕ ನಡವಳಿಕೆಗಳೂ ಕೊನೆಗೊಳ್ಳದಿದ್ದರೆ ನಮ್ಮ ರಾಷ್ಟ್ರದಲ್ಲಿ ಒಳ್ಳೆಯ ಸರಕಾರವನ್ನು ಸ್ಥಾಪಿಸುವುದು ಕಷ್ಟಕರ. ವ್ಯಕ್ತಿಯು ತನ್ನ ಮೇಲೆ ಹೇರಿಕೊಳ್ಳಬಹುದಾದ ನಿಯಂತ್ರಣವೇ ನಿಜವಾದ ಸ್ವರಾಜ್ಯದ ಅಡಿಗಲ್ಲು. ಎಂದು ಸ್ವನಿಯಂತ್ರಣದಿಂದ ಜನರು ಪರಾಙ್ಮುಖರಾದರೋ ಅಂದಿಗೇ ಸ್ವಕೀಯ ಸರಕಾರವೂ ಪತನವಾಯಿತೆಂಬುದನ್ನು ಚರಿತ್ರೆಯ ಪಾಠದಿಂದ ಕಲಿಯಬಹುದು.

(೨೩ನೇ ಪುಟ ನೋಡಿರಿ)

DO YOU KNOW?

That we have replaced

19 Vehicles

by brand new Stage Carriages providing maximum comforts since Oct. 1953 at a cost of

4½ LAKHS OF RUPEES ?

This has been made possible because of the improvement of road condition in general and black topping of Udipi—Karkal—Mangalore road in particular.

Insist upon good roads to have better buses!

THE HANUMAN TRANSPORT CO. PRIVATE LTD.,

P. B. No. 27,

UDIPI, S. K.

Tel { Gram — HANUMANCO.
{ Phone— 19 Managing Director.
19A Works Manager.

ಸ್ವಾತಂತ್ರ್ಯದ ಉದ್ದೇಶಕ್ಕೆ ಅನುಗುಣವಾದ ಉಚ್ಚ ವ್ಯವಹಾರ

ಭಾರತೀಯರ ಜೀವನದ ಪ್ರತಿಯೊಂದು ರಂಗದಲ್ಲಿ ಸಹನೆ, ಪ್ರೀತಿ ಮತ್ತು ಐಕ್ಯ ಭಾವನೆಗಳು ಬಲಿತರೆ ಮಾತ್ರವೇ ನಮ್ಮ ಸ್ವಾತಂತ್ರ್ಯವು ಅರ್ಥಪೂರ್ಣವಾಗಬಲ್ಲುದು; ಪ್ರಜಾಪ್ರಭುತ್ವವು ಪೋಷಣೆಯನ್ನು ಹೊಂದಬಲ್ಲುದು.

ಬರೆದವರು: ಡಾ. ಹರೇಕೃಷ್ಣ ಮಹತಾಬ.

ಮುಂಬಯಿಯ ರಾಜ್ಯಪಾಲರು.

ಪ್ರಜಾಪ್ರಭುತ್ವವೆಂಬ ರಾಜಕೀಯ ಪದ್ಧತಿಯು ನಮ್ಮೆಲ್ಲರನ್ನೂ ವಿಶೇಷವಾಗಿ ಆಕರ್ಷಿಸುತ್ತಿದೆಯಾದರೂ, ಪರಸ್ಪರ ಅಂತಃಕರಣ ಮತ್ತು ತಿಳಿವಳಿಕೆಯ ವಾತಾವರಣವಿಲ್ಲದ ದೇಶದಲ್ಲಿ ಅದು ಅಭಿವೃದ್ಧಿಗೊಳ್ಳಲಾರದೆಂಬ ಅಂಶವನ್ನು ನಾವು ನೆನಪಿನಲ್ಲಿಡಬೇಕಾಗುತ್ತದೆ. ಪ್ರತಿ ಪ್ರಶ್ನೆಗೂ ನಾವು ಕೊಡುವ ಉತ್ತರ, ನಮಗೆ ಪ್ರಿಯವಾದ ಉತ್ತರ ಇದಲ್ಲದೆ, ಇನ್ನೊಂದು ಮುಖವೂ, ಉತ್ತರವೂ ಇವೆ ಎಂದು ನಮಗೆ ತಿಳಿದಿರಬೇಕು. ಎಲ್ಲ ದೃಷ್ಟಿಕೋನಗಳಿಂದಲೂ ಕೂಲಂಕಷ ವಿಚಾರ ಮಾಡುವ, ನಮ್ಮಿಂದಲೇ ನಿಯೋಜಿತವಾದ ಅಧಿಕಾರ ವರ್ಗದ ನಿರ್ಣಯವನ್ನು ನಯದಿಂದಲೂ, ಶಿಸ್ತಿನಿಂದಲೂ ಒಪ್ಪಿಕೊಳ್ಳುವುದು ಪ್ರಜಾಪ್ರಭುತ್ವದ ಸಲ್ಲಕ್ಷಣ. ನಮಗೆ ಪ್ರಿಯವಲ್ಲದ ಒಂದು ನಿರ್ಣಯವನ್ನು ತಾಳ್ಮೆಯಿಂದ ಸ್ವೀಕರಿಸಬೇಕಾದರೆ ಬುದ್ಧನಿಂದ ಆರಂಭಿಸಿ ಎಷ್ಟೆಷ್ಟೋ ಸಾಧುಸಂತರೂ ಮಹರ್ಷಿಗಳೂ ಉಪದೇಶಿಸಿದ ತತ್ತ್ವಗಳನ್ನೆ ನಾವು ಮನಗಾಣಬೇಕಾಗುವುದು

ನಮ್ಮ ದೇಶದಲ್ಲಿ ಪ್ರೀತಿ, ವಿಶ್ವಾಸ, ಅಂತಃಕರಣದ ವಿಷಯ ಉಪನ್ಯಾಸಗಳ ಸುರಿಮಳೆ ಕರೆಯುವುದು ವಾಸ್ತವವಾದರೂ, ಬೇರೆ ಪ್ರಜಾಪ್ರಭುತ್ವಗಳಲ್ಲಿರುವ ಹಾಗೆ ಬಹುಮತೀಯರ ಮತ್ತು ಅಲ್ಪಮತೀಯರ ನಡುವೆ ಸೌಹಾರ್ದಪೂರ್ಣ ಅನ್ಯೋನ್ಯತೆ ಕಂಡುಬರುವುದಿಲ್ಲ. ಪ್ರೀತಿ, ಸೌಹಾರ್ದದ ಕುರಿತು ಆ ದೇಶಗಳ ಜನ ದಾರ್ಶನಿಕರಂತೆ ಉದ್ದುದ್ದ ಮಾತನಾಡದೆ ಇದ್ದರೂ ನಿತ್ಯಜೀವನದಲ್ಲಿ, ರಾಜಕೀಯ ವ್ಯವಹಾರದಲ್ಲಿ, ಮುಖ್ಯವಾಗಿ ಸಾಮಾಜಿಕ ಜೀವನದಲ್ಲಿ ಈ ಗುಣಗಳನ್ನು ಸಾಕಷ್ಟು ಯೋಗ್ಯ ಪ್ರಮಾಣದಲ್ಲಿ ಅಳವಡಿಸಿ ಕೃತಾರ್ಥರಾಗಿದ್ದಾರೆ. ಭಾರತದಲ್ಲಿ ಈ ಉನ್ನತ ಆದರ್ಶಗಳ ದಾರ್ಶನಿಕ, ವೈಚಾರಿಕ ವಿವೇಚನೆಯನ್ನೇನೋ ನಾವು ಜೋರಾಗಿ ನಡೆಸಿದರೂ ಅದನ್ನು ವ್ಯವಹಾರದಲ್ಲಿ ಪ್ರಯೋಗಿಸಲು ನಾವು ಅಸಮರ್ಥರೂ, ಆ ಪ್ರಯತ್ನದಲ್ಲಿ ವಿಫಲರೂ ಆಗಿರುವೆವು. ಇಹಲೋಕದ ಎಲ್ಲ ಕಾರ್ಯಭಾರಗಳ ಕಡೆಗೂ ನಮ್ಮಲ್ಲಿ ಅನೂಚಾನವಾಗಿ ಬೆಳೆದು ಬಂದ ತಾತ್ಸಾರ ನಮಗೆ ತಿಳಿಯದೆ ಹೋದ ಇದಕ್ಕೂ ಹೆಚ್ಚಿನ ಯಾವುದೋ ಒಂದು ಪಾರಮಾರ್ಥಿಕ ಜೀವನದ ಮೇಲಿನ ವ್ಯಾಮೋಹ ಇವು ನಮ್ಮಲ್ಲಿ ಅತಿಶಯವಾಗಿವೆ. ಈ ಪ್ರಪಂಚವು ಕೇವಲ ಆದರ್ಶಜೀವನದ ರಂಗಶಾಲೆಯಾಗಿದ್ದರೆ ಎಷ್ಟು ಚೆನ್ನಾಗಿರುತಿತ್ತು ಎಂದು ನಾವು ಆಶಿಸಿದರೂ ವಾಸ್ತವವಾಗಿ ಇಲ್ಲಿ ಸಾಧ್ಯವಾಗುವುದು ಸಾಮಾನ್ಯ ಜೀವನ ಮಾತ್ರ; ಆದರ್ಶಜೀವನವು ಪ್ರಪಂಚದ ಆಚೆಗೆ ಇರಬಹುದೇನೋ, ಇಲ್ಲಿಲ್ಲ. ಈ ಸಾಮಾನ್ಯ ಜೀವನದಲ್ಲಿ ನಾವೆಲ್ಲ ಸೇರಿದವರು, ಮುಳುಗಿದವರು. ಪ್ರಪಂಚದಿಂದ ಓಡಿ ಹೋಗುವುದು ಸುಲಭವಲ್ಲ. ಎಲ್ಲ ದರ್ಶನಗಳನ್ನೂ (philosophies) ಸಾಮಾನ್ಯ ಜೀವನಕ್ಕೆ ಇವು ಅನ್ವಯವಾಗತಕ್ಕುವೇ ಅಲ್ಲವೇ, ಇವನ್ನು ಪ್ರಯೋಗದಲ್ಲಿ, ವ್ಯವಹಾರದಲ್ಲಿ ತರಲು ಸಾಧ್ಯವಿದೆಯೇ ಇಲ್ಲವೇ, ಎಂಬ ಮಾನದಂಡದಲ್ಲಿ ಅಳೆಯಬೇಕು. ಸಮಾಜದಲ್ಲಿ ಸಾಮಾನ್ಯವಾಗಿ ಬದುಕು ಹೇಗೆ ಸಾಗಿದೆ? ಎಂಬುದರ ಯಥಾರ್ಥಜ್ಞಾನದಿಂದ ಸಮಾಜಕ್ಕೂ, ದೇಶಕ್ಕೂ ಶ್ರೇಯಸ್ಸಿದೆ.

ಕಳೆದ ಏಳೆಂಟು ವರ್ಷಗಳಲ್ಲಿ ಜಾತೀಯ ಅಥವಾ ಭಾಷಾವಾರು ಪ್ರಶ್ನೆಯ ಕುರಿತು ನಾವು ಯಾವ ರೀತಿ ವೈಷಮ್ಯವನ್ನೂ, ತಿಕ್ಕಾಟವನ್ನೂ ಬೆಳೆಸಿಕೊಂಡು ಬಂದಿದ್ದೇವೆ, ಯಾವ ರೀತಿಯ ಸಾಮಾಜಿಕ ವರ್ತನೆಯನ್ನು ಈ ವಿಷಯದಲ್ಲಿ ಪ್ರದರ್ಶಿಸಿದ್ದೇವೆ ಎಂಬುದನ್ನು ನಾವು ವಿಚಾರಿಸಬೇಕು. ಅಂಥ ಸಂದರ್ಭಗಳಲ್ಲಿ ನಮ್ಮ ದಾರ್ಶನಿಕ ವಿಚಾರಗಳೂ, ಆದರ್ಶಗಳೂ ಅದೃಶ್ಯವಾಗಿ ನಾವು ಅನಾಗರಿಕರಂತೆ ವರ್ತಿಸಿದ್ದೇವೆ. ಸಾಲದುದಕ್ಕೆ ಇಂಥ ವರ್ತನೆಗೆ ಪುಷ್ಟಿಕೊಡುವ, ಸಮರ್ಥಿಸುವ ವಿಚಾರ ಪ್ರಣಾಳಿಯನ್ನು ಮುಂದೊಡ್ಡುತ್ತೇವೆ. ಆದರೆ ಮೇಲಾಟದ ಈ ಪ್ರಗತಿಶೀಲ ಪ್ರಪಂಚದಲ್ಲಿ ನಾವು ತಲೆಎತ್ತಿ ಬಾಳಬೇಕಾದರೆ ನಮ್ಮ ಕೊರತೆಗಳನ್ನು ನೀಗಿಸಿಕೊಳ್ಳಬೇಕು. ದೊಡ್ಡ ಮಾತುಗಳನ್ನಾಡುವ ಚಟವನ್ನು ಬಿಟ್ಟು ಪ್ರಜಾಪ್ರಭುತ್ವಕ್ಕೆ ಪೋಷಕವಾಗುವ ಪ್ರವೃತ್ತಿಗಳನ್ನು ಮೈಗೂಡಿಸಿಕೊಳ್ಳಬೇಕು. ಕೋಮುವಾರು, ಭಾಷಾವಾರು ಭೇದಗಳ ಮೇಲಿಂದ ದ್ವೇಷಾಸೂಯೆಗಳನ್ನೂ, ಸಂದೇಹದ ವಿಷ ವಾತಾವರಣವನ್ನೂ ಬೆಳೆಸುವುದು ನಮ್ಮ ಘನತೆಗೆ ಅವಮಾನಾಸ್ಪದವಾದ ವಿಚಾರ. ಈ ರೀತಿಯ ವಿಚಾರಗಳು ತಲೆದೋರಿದೊಡನೆ ಅವನ್ನಲ್ಲೇ ಹತ್ತಿಕ್ಕುವುದು ಶ್ರೇಯಸ್ಕರ.

ಭಾರತದ ದರ್ಶನದ ಔನ್ನತ್ಯವನ್ನೆ ಕಂಡು ಇತರ ದೇಶಗಳು ನಮ್ಮ ಕಡೆಗೆ ಆಶೆಯಿಂದ ಮಾರ್ಗದರ್ಶನವನ್ನು ಬೇಡುತ್ತಿವೆ. ನಮಗೂ ಅಂಥ ಮಾರ್ಗದರ್ಶನವನ್ನು ನೀಡಬೇಕೆಂಬ ಉತ್ಸುಕತೆ ಇದೆ. ಆದರೆ ನಮ್ಮ ದರ್ಶನದ ಪ್ರಕಾರ ನಾವೇ ನಡೆಯದೆ ಇತರರಿಗೆ ಅದನ್ನು ಹೇಳಹೊರಟರೆ ಅದು ಪರೋಪದೇಶ ಪಾಂಡಿತ್ಯದಂತೆ ವ್ಯರ್ಥವಾಗದೆ? ನನ್ನ ಅಭಿಪ್ರಾಯದಂತೆ ದಾರ್ಶನಿಕ ತತ್ವಗಳ ಹೆಗ್ಗಳಿಕೆಯನ್ನು ನಾವು ಸ್ವಲ್ಪ ನಿಲ್ಲಿಸಿ, ಸಮಾಜದ ಮುನ್ನಡೆಗೆ ಅನಿವಾರ್ಯವಾದ ಸಾಮಾಜಿಕ ನಡವಳಿಕೆಯನ್ನು ನಾವು ಬೆಳೆಸಿಕೊಂಡರೆ ಒಳ್ಳೆಯದೆಂದು ತೋರುತ್ತದೆ.

ನಮ್ಮ ದರ್ಶನದ ಪರೀಕ್ಷೆ ನಮ್ಮ ನಡವಳಿಕೆಯ, ಶೀಲದ ಮೂಲಕ ನಡೆಯಬೇಕಾಗಿದೆ ಇದಕ್ಕೋಸ್ಕರವೇ ಭಗವಾನ್ ಬುದ್ಧನು ಬೌದ್ಧಿಕ ಸಂಸ್ಕಾರಗಳಿಗಿಂತ ಹೆಚ್ಚಾಗಿ ಶೀಲದ ಕಡೆಗೆ ಹೆಚ್ಚು ಗಮನವನ್ನು ಕೊಟ್ಟುದು. ಆತನ ಉಪದೇಶವು ದೇಶದಲ್ಲೆಲ್ಲ ಸಂಘಟಿತ ಧರ್ಮವಾಗಿ ಹರಡಿ ಸಮಾಜವನ್ನು ಪಲ್ಲಟಿಸಿದಂತೆ, ಇಂದಿನ ಈ ಯುಗದಲ್ಲಿ ಸಹನೆಯೇ ಸಂಘಟಿತವಾಗಿ ಸಮಾಜಕ್ಕೆ ಜೀವಚಲನೆಯನ್ನೂ, ಚೈತನ್ಯವನ್ನೂ ನೀಡಿ ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಬದುಕಿಸಬೇಕಾಗಿದೆ. ಜೀವನದ ಎಲ್ಲ ಕ್ಷೇತ್ರಗಳಲ್ಲಿ, ಜಾತಿ—ಭಾಷೆ ಮುಂತಾದ ವಿವಾದಾಸ್ಪದ ರಂಗಗಳಲ್ಲಿ, ಸಹನೆಯು ದ್ವೇಷವನ್ನೂ, ಸಂದೇಹವನ್ನೂ ಜಯಿಸಬೇಕಾಗಿದೆ.

ಭವ್ಯ ಭಾರತ ನಿರ್ಮಾಣವಾಗಬೇಕಾದ್ದು ಹೀಗೆ. ನಮ್ಮ ಗತಕಾಲದ ಇತಿಹಾಸವು ವೈಭವಯುಕ್ತವಾಗಿದೆ ಎಂದ ಮಾತ್ರಕ್ಕೆ ಪ್ರಜಾಪ್ರಭುತ್ವವನ್ನು ಈ ದೇಶದಲ್ಲಿ ಯಶಸ್ವಿಗೊಳಿಸುವ ಶಕ್ತಿ, ಶೀಲಗಳು ನಮ್ಮಲ್ಲಿವೆಯೆಂದು ನಾವು ಭ್ರಮಿಸಲಾಗದು, ಗತಕಾಲದ ವೈಭವ ಗತಕಾಲದ ಪರಿಸರದಲ್ಲಿ ಸಾಧ್ಯವಾಯಿತು. ಮುಂದಿನ ವೈಭವ ಇಂದಿನ—ಮುಂದಿನ ಪರಿಸರದಲ್ಲಿ ನಾವು ಕಟ್ಟಬೇಕಾದ್ದು. ಹೊಸ ಪ್ರಪಂಚದ ಹೊಸ ಸನ್ನಿವೇಶಗಳು ನಮ್ಮನ್ನು ಆಹ್ವಾನಿಸುತ್ತಿವೆ. ನಮ್ಮ ದೇಶದ ಗೌರವಕ್ಕೆ ಸರಿಯಾದ ಉತ್ತರವನ್ನು ಕೊಡಲು ನಾವು ಸಮರ್ಥರಾಗಬೇಕು. ಆಗ ನಾವು ಧನ್ಯರು.

ಅನುವಾದಕರು:

ಶ್ರೀ ಕು. ಶಿ. ಹರಿದಾಸ ಭಟ್ಟ. ಎಂ. ಎ.

ಲೇಖಕರೊಡನೆ ನಿವೇದನೆ

ವಾರ ವಾರವೂ ಬಹುಮಾನ

ಕನ್ನಡ ನಾಡಿನಲ್ಲಿ ಉತ್ತಮ ಸಾಹಿತ್ಯಾಭಿರುಚಿಯುಳ್ಳವರೂ ಪ್ರಚಲಿತ ರಾಜಕೀಯ, ಸಾಂಸ್ಕೃತಿಕ ಹಾಗು ವೈಜ್ಞಾನಿಕ ವಿಷಯಗಳಲ್ಲಿ ಹೆಚ್ಚಿನ ಆಸಕ್ತಿಯುಳ್ಳವರೂ ಅನೇಕರಿದ್ದಾರೆ. ಇವರಲ್ಲಿ ತಮ್ಮ ಅಭಿಪ್ರಾಯಗಳನ್ನೂ ಸಲಹೆ-ಸೂಚನೆಗಳನ್ನೂ ತಾವು ಗಳಿಸಿದ ಅತ್ಯಮೂಲ್ಯವಾದ ಜ್ಞಾನ ಮತ್ತು ಅನುಭವಗಳನ್ನೂ ಸಾರ್ವಜನಿಕರ ಪ್ರಯೋಜನಕ್ಕಾಗಿ ಲೇಖನ ರೂಪದಲ್ಲಿ ವ್ಯಕ್ತಪಡಿಸಲು ಸಮರ್ಥರಾಗಿರುವವರಿಗೇನೂ ಕೊರತೆ ಇಲ್ಲ.

ಇವರೆಲ್ಲರಿಗೂ ನಮ್ಮ ಪತ್ರಿಕೆಯ ಮಾಧ್ಯಮವನ್ನು ಬಳಸಿಕೊಳ್ಳಲು ಹೆಚ್ಚಿನ ಅವಕಾಶವನ್ನು ಕೊಡಬೇಕೆಂದೂ ಹಾಗೆ ಈ ಪತ್ರಿಕೆಯು ನವಯುಗದ ಸಂದೇಶವನ್ನು ಪರಿಣಾಮಕಾರಿಯಾಗಿ ಚಿತ್ರಿಸುವಂತಾಗಬೇಕೆಂದೂ ನಾವು ಬಯಸಿದ್ದೇವೆ; ಮತ್ತು, ಇದಕ್ಕೋಸ್ಕರ "ನವಯುಗ"ದ ನೂತನ ವರ್ಷಾರಂಭದಿಂದ (ಸಾಧ್ಯವಾದರೆ ೬–೯–೧೯೫೩ನೇ ಸಂಚಿಕೆಯಿಂದ) ಸಾಕಷ್ಟು ಹೆಚ್ಚು ಸ್ಥಳವನ್ನು ಪತ್ರಿಕೆಯಲ್ಲಿ ಇಂತಹ ಲೇಖನಗಳಿಗಾಗಿ ಮೀಸಲಿಡಬೇಕೆಂದು ನಾವು ನಿರ್ಧರಿಸಿದ್ದೇವೆ.

ಲೇಖನಗಳು ಆದಷ್ಟು ಚಿಕ್ಕವಾಗಿರಬೇಕು; ಅಲ್ಲದೆ ವಿಷಯ ಗಾಂಭೀರ್ಯಯುಕ್ತವಾಗಿದ್ದು ಪ್ರಚಲಿತ ವಿಷಯಗಳಿಗೆ ಹೆಚ್ಚಿನ ಸಂಬಂಧವನ್ನು ಹೊಂದಿರಬೇಕು ಎಂಬುದು ನಮ್ಮ ಆಶಯ. ಈ ಮಟ್ಟಿಗೆ ಲೇಖಕರು ನಮ್ಮೊಡನೆ ಸಹಕರಿಸಬೇಕೆಂದು ವಿನಂತಿಸಿಕೊಳ್ಳುತ್ತೇವೆ.

ಲೇಖಕರನ್ನು ಪ್ರೋತ್ಸಾಹಿಸಿ ನಮ್ಮ ಈ ನೂತನ ಉಪಕ್ರಮವನ್ನು ಯಶಸ್ವಿಗೊಳಿಸುವ ಉದ್ದೇಶದಿಂದ ವಾರವಾರವೂ ನಮ್ಮ ಸಂಚಿಕೆಯಲ್ಲಿ ಪ್ರಕಟವಾದ ಉತ್ತಮ ಲೇಖನವೊಂದಕ್ಕೆ ಪುರಸ್ಕಾರವನ್ನು ಕೊಡಲು ಯೋಜಿಸಿದ್ದೇವೆ.

ಪುರಸ್ಕಾರವು ಒಂದು ವರ್ಷದ ವರೆಗೆ "ನವಯುಗ" ಪತ್ರಿಕೆಯನ್ನು ಉಚಿತವಾಗಿ ಕಳುಹಿಸಿಕೊಡುವ ರೂಪದಲ್ಲಿರುತ್ತದೆ. ಸಂಪಾದಕರು ಉತ್ತಮವಾದುದೆಂದು ಪ್ರತಿವಾರವೂ ತೀರ್ಮಾನಿಸಿದ ಲೇಖನದ ಲೇಖಕರಿಗೆ ಅಥವಾ ಈ ಲೇಖಕರು ತಮ್ಮ ಇಷ್ಟಮಿತ್ರ ವೃಂದದಲ್ಲಿ ಯಾರ ಹೆಸರನ್ನು ಸೂಚಿಸುತ್ತಾರೋ ಅಂತಹವರಿಗೆ ಈ ಲೇಖಕರ ಶುಭಾಶಯದೊಡನೆ ಅವರ ಹೆಸರಿನಲ್ಲಿ ಪುಕ್ಕಟೆ ಪ್ರತಿಯನ್ನು ತಪ್ಪದೆ ಮುಟ್ಟಿಸಲಾಗುತ್ತದೆ.

ಇದಕ್ಕಾಗಿ ಪ್ರತಿಯೊಂದು ಲೇಖನವನ್ನು ಬುಕ್‌ಪೋಸ್ಟ್ ಮೂಲಕ ಲೇಖಕರು ತಮ್ಮ ಹೆಸರು ವಿಳಾಸಾದಿಗಳನ್ನು ಸ್ಪಷ್ಟವಾಗಿ ಮಾಮೂಲಿನಂತೆ ನಮೂದಿಸಿ ಕಳುಹಿಸುವುದಲ್ಲದೆ, ತಮ್ಮ ಈ ಲೇಖನಕ್ಕೆ ಪುರಸ್ಕಾರವು ಪ್ರಾಪ್ತವಾಗುವುದಾದಲ್ಲಿ ಯಾರಿಗೆ ತಮ್ಮ ಶುಭಾಶಯದೊಡನೆ ಮೇಲಿನಂತೆ ಉಚಿತ ಪ್ರತಿಯನ್ನು ಕಳುಹಿಸಬೇಕೆಂದು ತಾವು ಬಯಸುವರೋ ಆ ಮಹನೀಯರ ಹೆಸರು, ವಿಳಾಸಾದಿಗಳನ್ನೂ ಸ್ಪಷ್ಟವಾಗಿ ಪ್ರತ್ಯೇಕ ಕಾರ್ಡಿನ ಮೂಲಕ ಸೂಚಿಸಬೇಕೆಂದೂ ಕೋರುತ್ತೇವೆ.

ಸಂ. "ನವಯುಗ"

ರಾಷ್ಟ್ರೀಯ ವಾರಪತ್ರಿಕೆ, ಉಡುಪಿ.

ಸ್ವಾತಂತ್ರ್ಯೋತ್ತರದ ಶೈಕ್ಷಣಿಕ ಸಮಸ್ಯೆಗಳು

ರಾಜ್ಯಾಂಗ ಘಟನೆಯಲ್ಲಿ ಹೇಳಲಾದ ಅವಧಿಯೊಳಗೆ ನಾವು ಸಾಕ್ಷರತೆಯ ಪ್ರಚಾರವನ್ನಾದರೂ ಮಾಡುವ ಕಾರ್ಯಕ್ರಮವನ್ನು ನೆರವೇರಿಸುವುದು ಕಷ್ಟಸಾಧ್ಯವೆಂದೇ ಇಷ್ಟರ ವರೆಗಿನ ಅನುಭವವು ಹೇಳುತ್ತದೆ.

ಬರೆದವರು: ಡಾ. ಕೆ. ಎಲ್. ಶ್ರೀಮಾಲಿ,
ಭಾರತ ಸರಕಾರದ ಶಿಕ್ಷಣ ಖಾತೆಯ ಉಪಮಂತ್ರಿಗಳು.

ಸ್ವಾತಂತ್ರ್ಯೋತ್ಸವ ದಿನದಂದು, ನಾವು ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಳ್ಳುತ್ತ, ವಿವಿಧ ಕ್ಷೇತ್ರಗಳಲ್ಲಿ ನಡೆದಿರುವ ಪ್ರಗತಿಯನ್ನು ಪುನರಾಮರ್ಶಿಸಿ, ಪರಿಹಾರಗಳನ್ನು ಕೈಗೊಳ್ಳಬೇಕಾಗಿರುವ ಸಮಸ್ಯೆಗಳನ್ನು ಕುರಿತು ಸಮಾಲೋಚನೆ ನಡೆಸುವುದು ಅಗತ್ಯ. ಪೂರ್ಣಗೊಳ್ಳದೆ ಉಳಿದುಕೊಂಡಿರುವ ಮಹತ್ಸಾಧನೆಗಳಲ್ಲಿ ಶಿಕ್ಷಣವೂ ಒಂದು. ಪ್ರಸ್ತುತದಲ್ಲಿ ಅದು ಅತ್ಯಂತ ಕಷ್ಟಕರವಾದ, ತೊಡಕಾದ ಸಮಸ್ಯೆಗಳನ್ನು ಹೊಂದಿರುವುದು.

ಭಾರತದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಅತ್ಯಂತ ಮುಖ್ಯವಾದ ಹಾಗೂ ತೀವ್ರವಾದ ಸಮಸ್ಯೆಯೆಂದರೆ, ಭಾರತದ ರಾಜ್ಯಾಂಗದಲ್ಲಿ ವಿಧಿಸಿರುವಂತೆ, 14 ವರ್ಷದ ವಯಸ್ಸಿನ ವರೆಗಿನ ಎಲ್ಲಾ ಬಾಲಕ ಬಾಲಕಿಯರಿಗೆ, ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನೀಯುವ ಸಮಸ್ಯೆ. ಸಂವಿಧಾನದಲ್ಲಿನ ಸೂಚನೆಯ ಜೊತೆಗೆ, ಪ್ರಜಾಸತ್ತಾತ್ಮಕ ಸಮಾಜದಲ್ಲಿ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಕೈಗೊಳ್ಳುವುದು ಅನಿವಾರ್ಯವಾಗುತ್ತದೆ.

ಪ್ರಜಾಪ್ರಭುತ್ವದ ಉದ್ದೇಶ ವೈಯಕ್ತಿಕ ಅಭಿವೃದ್ಧಿ. ಒಂದು ದೇಶದಲ್ಲಿ ಬಹುಸಂಖ್ಯಾಕರು ನಿರಕ್ಷರಸ್ಥರಾಗಿಯೂ, ಅವರ ಮಕ್ಕಳಿಗೆ ಶಾಲಾ ಶಿಕ್ಷಣವಿಲ್ಲದೆಯೂ ಇದ್ದರೆ, ಪ್ರಜಾಪ್ರಭುತ್ವವು ಯಶಸ್ವಿಯಾಗದು. ಜನತೆಯು ತಾನಿರುವ ಪರಿಸ್ಥಿತಿ ಮತ್ತು ತಾವು ಎದುರಿಸಬೇಕಾದ ಸಮಸ್ಯೆಯನ್ನು ಅರ್ಥಮಾಡಿಕೊಳ್ಳದೆ ಹೋದರೆ, ಪ್ರಜಾಸತ್ತೆಗೆ ಅರ್ಥವಿಲ್ಲದಂತಾಗುವುದು.

ಪ್ರಜಾಸತ್ತಾತ್ಮಕ ಸಮಾಜದಲ್ಲಿನ ಜನತೆ ತಮ್ಮ ಮೂಲಭೂತ ಹಕ್ಕು ಬಾಧ್ಯತೆಗಳನ್ನು ಚಲಾಯಿಸಲು, ಅವರು ಪರಸ್ಪರ ವಿಚಾರ ವಿನಿಮಯ ಮಾಡಿಕೊಳ್ಳಲು, ಸಮಾಲೋಚನೆ ನಡೆಸಲು ಸಮರ್ಥರಾಗಬೇಕಾಗುವುದು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ, ಸಾಕ್ಷರತೆಯು ಒಂದು ಮುಖ್ಯವಾದ ಸಾಧನವಾಗುವುದು. ಆದ್ದರಿಂದ ಭಾರತ, ಇತರ ಪಾಶ್ಚಾತ್ಯ ರಾಷ್ಟ್ರಗಳಂತೆ, ಶಿಕ್ಷಣ ಕ್ರಾಂತಿಯನ್ನು ನಡೆಸಿ ತನ್ಮೂಲಕ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಕೈಗೊಳ್ಳಬೇಕು.

ಶಿಕ್ಷಣ ಸಂಬಂಧದಲ್ಲಿ ದ್ವಿತೀಯ ಪಂಚವಾರ್ಷಿಕ ಯೋಜನೆಯು ಅಷ್ಟು ಆಶಾದಾಯಕವಾಗಿಲ್ಲ. ಭಾರತ ಸಂವಿಧಾನದಲ್ಲಿ ಹಾಕಿಕೊಂಡಿರುವ ಗುರಿಯು ಹಿಂದು ಹಿಂದಕ್ಕೆ ಹೋಗುತ್ತಿದೆ. ನಾವು ಈಗಿನ ರೀತಿಯಲ್ಲೇ, ಪ್ರಗತಿ ಸಾಧಿಸಿದರೆ, ತೃತೀಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿಯೂ ಸಹ ನಾವು ಗುರಿಯನ್ನು ಮುಟ್ಟುತ್ತೇವೆಯೇ ಎಂಬ ಬಗ್ಗೆ ಅನುಮಾನ ಬರುವುದು. ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ 6—11 ವಯಸ್ಸಿನ ಒಟ್ಟು ಬಾಲಕ-ಬಾಲಕಿಯರಲ್ಲಿ, ನೂರಕ್ಕೆ 62·7ರಷ್ಟು ಬಾಲಕ ಬಾಲಕಿಯರಿಗೆ ಮಾತ್ರ ಶಾಲೆಯ ಶಿಕ್ಷಣ ಸೌಲಭ್ಯಗಳನ್ನು ಒದಗಿಸಲಾಗುವುದು. 11—14 ವಯಸ್ಸಿನ ಬಾಲಕ-ಬಾಲಿಕೆಯರಲ್ಲಿ ನೂರಕ್ಕೆ 22·5ರಷ್ಟು ಮಂದಿಗೆ ಮಾತ್ರ ಶಿಕ್ಷಣ ಸೌಲಭ್ಯ ಒದಗುವುದು.

ಪ್ರಾಥಮಿಕ ಶಿಕ್ಷಣ

ಪ್ರಾಥಮಿಕ ಶಿಕ್ಷಣವನ್ನು ನಿಧಾನವಾಗಿ ಅಭಿವೃದ್ಧಿಪಡಿಸುವ ಮುಖ್ಯ ಜವಾಬ್ದಾರಿಯು ಸರಕಾರದವರಿಗೆ ಸೇರಿದೆ. ಭಾರತದ ಸಂವಿಧಾನದಲ್ಲಿರುವ ಈ ನಿರ್ಧಾರವನ್ನು ಪೂರ್ಣಗೊಳಿಸುವ ಜವಾಬ್ದಾರಿಯನ್ನು ಸರಕಾರಕ್ಕೆ ವಹಿಸಲಾಗಿದೆ. ಸ್ಥಳೀಯ ಜನತೆಯ ಪ್ರಯತ್ನಕ್ಕೂ ಸ್ವಾಗತವಿರುವುದು. ಆದ್ದರಿಂದ ನಮ್ಮ ಜನರು ಶಿಕ್ಷಣ ಅಭಿವೃದ್ಧಿಯ ಕಾರ್ಯಕ್ರಮಗಳೊಂದಿಗೆ ನಿಕಟ ಸಂಬಂಧವನ್ನು ಹೊಂದಿ, ಪ್ರಯತ್ನ ನಡೆಸಬೇಕು. ಆದಾಗ್ಯೂ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಅಂತಿಮ ಜವಾಬ್ದಾರಿಯು ಸರ್ಕಾರದ ಅಂದರೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಜವಾಬ್ದಾರಿಯಾಗಿರುವುದು, ಕೇಂದ್ರ ಹಾಗೂ ರಾಜ್ಯ ಸರಕಾರಗಳೆರಡೂ, ತಮ್ಮ ಹಣಕಾಸಿನ ಸಾಧನ ಸಂಪತ್ತುಗಳನ್ನು ಒಂದುಗೂಡಿಸಿಕೊಂಡು ಭಾರತದ ಸಂವಿಧಾನದಲ್ಲಿ ವಿಧಿಸಿರುವ ಈ ಜವಾಬ್ದಾರಿಯನ್ನು ನಿರ್ವಹಿಸಬೇಕು.

ಪ್ರಾಥಮಿಕ ಘಟ್ಟದಲ್ಲಿ ಶಿಕ್ಷಣಾಭಿವೃದ್ಧಿಯ ಜವಾಬ್ದಾರಿಯನ್ನು ಪೂರ್ಣವಾಗಿ ಸ್ಥಳೀಯ ಸಂಸ್ಥೆಗಳ ಅಥವಾ ರಾಜ್ಯ ಸರ್ಕಾರಗಳ ಸಾಧನ ಸಂಪತ್ತುಗಳ ವಶಕ್ಕೆ ಬಿಡಲಾಗಿದೆ ಕೆಲವು ರಾಜ್ಯಗಳು ಈಗಾಗಲೇ ತಮ್ಮ ಒಟ್ಟು ಆಯವ್ಯಯ ಪಟ್ಟಿಯಲ್ಲಿ ನೂರಕ್ಕೆ 20 ರಷ್ಟು ಹಣವನ್ನು ಶಿಕ್ಷಣಕ್ಕಾಗಿ ವಿನಿಯೋಗಿಸುತ್ತಿವೆ. ಹೊಸ ಶಾಲೆಗಳನ್ನು ತೆರೆಯಲು ಹಣವನ್ನು, ಹೊಸ ತೆರಿಗೆಗಳನ್ನು ವಿಧಿಸುವುದರಿಂದ ಪಡೆಯಲು, ನಿಜವಾದ ತೊಂದರೆಗಳು ಆ ರಾಜ್ಯಗಳಿಗಿರಬಹುದು. ಅದೂ ಅಲ್ಲದೆ, ಹಲವು ರಾಜ್ಯಗಳು ಆರ್ಥಿಕವಾಗಿ ಹಿಂದೆ ಬಿದ್ದಿವೆ. ಅವು ಕ್ಷಿಪ್ರದಲ್ಲಿ ಯಾವ ಹೆಚ್ಚಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಮರ್ಪಕವಾದ ಸಾಧನ ಸಂಪತ್ತುಗಳನ್ನು ಹೊಂದಿರುವುದಿಲ್ಲ.

ಪ್ರಾಥಮಿಕ ಶಿಕ್ಷಣ ಸಂಬಂಧದಲ್ಲಿ ರಾಷ್ಟ್ರವು, ಶಿಕ್ಷಣ ಮಟ್ಟದಲ್ಲಿ ರಾಜ್ಯ ರಾಜ್ಯಗಳಲ್ಲಿ ವೈವಿಧ್ಯತೆಯನ್ನು ಹೊಂದಿರಲು ಸಾಧ್ಯವಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದವರು ದೇಶದ ಎಲ್ಲಾ ಭಾಗಗಳಲ್ಲಿ ಸಮಾನವಾದ ಆರ್ಥಿಕ ಸಹಕಾರಗಳನ್ನು ಒದಗಿಸುವ ಮತ್ತು ಸಂವಿಧಾನದ ನಿರ್ದೇಶನವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಿಕೊಳ್ಳುವರು.

ಭಾಷೆಗಳ ವ್ಯಾಸಂಗ

ಸರ್ಕಾರದವರು ಎದುರಿಸಬೇಕಾದ ಮತ್ತೊಂದು ತೊಡಕಿನ ಸಮಸ್ಯೆಯೆಂದರೆ, ಭಾಷೆ. ನಮ್ಮ ಶಿಕ್ಷಣ ಸಂಸ್ಥೆಗಳಲ್ಲಿ ಭಾಷೆಯ ಸ್ಥಾನದ ನಿರ್ಣಯ ಸಮಸ್ಯೆ. ಈ ಸಮಸ್ಯೆಗೆ ಸಮಗ್ರವಾದ ಪ್ರಯತ್ನವನ್ನು ಮಾಡುವುದರಿಂದ ಮಾತ್ರ ಪರಿಹಾರ ಸಾಧ್ಯ. ಮಾತೃಭಾಷೆ, ಅಥವಾ ಪ್ರಾದೇಶಿಕ ಭಾಷೆಯೇ ಶಿಕ್ಷಣ ಮಾಧ್ಯಮವಾಗಿರಬೇಕೆಂಬ ನಿಯಮವನ್ನು ಸಾಮಾನ್ಯವಾಗಿ ಎಲ್ಲರೂ ಅಂಗೀಕರಿಸಿರುವರು. ಪ್ರಾಥಮಿಕ ಅಥವಾ ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷ್ ಮಾಧ್ಯಮವನ್ನೇ ಇಟ್ಟುಕೊಂಡಿರುವ ಶಾಲೆಗಳು ಅಲ್ಲೊಂದು ಇಲ್ಲೊಂದು ಇರುವುವು ಆದರೆ, ಎಲ್ಲಾ ರಾಜ್ಯಗಳೂ, ಮಾತೃಭಾಷೆಯನ್ನೇ ಶಿಕ್ಷಣ ಮಾಧ್ಯಮವನ್ನಾಗಿ ಅಂಗೀಕರಿಸಿವೆ.

ಶಿಕ್ಷಣ ವ್ಯವಸ್ಥೆಯಲ್ಲಿ ಹಿಂದಿ ಮತ್ತು ಇಂಗ್ಲೀಷಿನ ಸ್ಥಾನದ ಬಗ್ಗೆ ಇನ್ನೂ ಏಕತ್ರವಾದ ಅಭಿಪ್ರಾಯ ಮೂಡಿಲ್ಲ. ಹಿಂದಿಯನ್ನು ಭಾರತದ ಅಧಿಕೃತ ಭಾಷೆಯನ್ನಾಗಿ ಅಂಗೀಕರಿಸುವುದು ಅದು ಪ್ರಾಚೀನ ಭಾಷೆ ಅಥವಾ ಇತರ ಭಾರತೀಯ ಭಾಷೆಗಳಿಗಿಂತ ಅದು ಹೆಚ್ಚಿನ ಭಾಷಾ ಸಂಪತ್ತನ್ನು ಹೊಂದಿದೆಯೆಂದಲ್ಲ. ಈ ಭಾಷೆಯನ್ನು ಬಹು ಮಂದಿ ಆಡುತ್ತಾರೆ; ಬಹು ಮಂದಿ ಅರ್ಥಮಾಡಿಕೊಳ್ಳುತ್ತಾರೆ— ಎಂದು ಕೇವಲ ಅಧಿಕೃತ ಭಾಷೆಯಲ್ಲದೆ ಅಂತರ ರಾಜ್ಯಗಳ ವ್ಯವಹಾರಕ್ಕೂ, ವಿವಿಧ ಭಾಷಾ ಜನರ ನಡುವಿನ ವ್ಯವಹಾರಕ್ಕೂ ನಾವು ಒಂದು ಭಾಷೆಯನ್ನು ಆರಿಸಬೇಕು.

ವ್ಯವಹಾರ ಭಾಷೆ

ಅಧಿಕ ಪ್ರಮಾಣದಲ್ಲಿ ಶಿಕ್ಷಣವು ನಡೆದಂತೆಲ್ಲಾ ವಿವಿಧ ಭಾಷಾ ವರ್ಗಗಳ ನಡುವೆ ವ್ಯವಹಾರ ನಡೆಸುವ ಅಗತ್ಯ ಹೆಚ್ಚುತ್ತದೆ. ವಿವಿಧ ಭಾಷಾ ವರ್ಗಗಳನ್ನು ಅಂಗೀಕರಿಸಿ, ಪ್ರಾದೇಶಿಕ ಭಾಷೆಗಳನ್ನು ಅಭಿವೃದ್ಧಿಪಡಿಸಲು, ಸಾಧ್ಯವಾದ ಪ್ರಯತ್ನವೆಲ್ಲವನ್ನೂ ಮಾಡುತ್ತಿರುವಾಗ ಪ್ರತಿಯೊಂದು ಭಾಷಾ ವರ್ಗವು ಅಂತರರಾಷ್ಟ್ರದ ಕೇವಲವೊಂದು ಅಂಶಮಾತ್ರವೇ ಹೊರತು ಪೂರ್ಣವಲ್ಲವೆಂಬುದನ್ನು ಮರೆಯಬಾರದು. ವಿವಿಧ ವರ್ಗಗಳ ನಡುವೆ ವ್ಯವಹಾರ ಬೆಳೆದರೆ ಪ್ರಜಾಪ್ರಭುತ್ವದ ಸಮಾಜ ವ್ಯವಸ್ಥೆಯು ಪ್ರಬಲಗೊಳ್ಳುವುದು. ಧಾರಾಳವಾದ ಪರಸ್ಪರ ಸಂಪರ್ಕದಿಂದ ಪ್ರಜಾಪ್ರಭುತ್ವ ಸಂಸ್ಕೃತಿಯು ಬೆಳೆಯುವುದು. ವಿವಿಧ ಭಾಷಾವರ್ಗಗಳು ಪರಸ್ಪರ ಸಂಪರ್ಕವಿಲ್ಲದೆ ಒಂಟಿಯಾಗಿ ಬಾಳಲಾರವು. ಉತ್ತರ, ದಕ್ಷಿಣ, ಪೂರ್ವ, ಮತ್ತು ಪಶ್ಚಿಮ ಭಾರತದಲ್ಲಿರುವ ಭಾರತೀಯರು ಅರ್ಥಮಾಡಿಕೊಳ್ಳುವಂತಹ, ಸಾಮಾನ್ಯವಾದ ಒಂದು ಭಾಷೆಯನ್ನು ಹೊಂದಿರಬೇಕಾದುದು ಅಗತ್ಯ. ವಿವಿಧ ಭಾಷಾ ವರ್ಗಗಳ ನಡುವೆ ವ್ಯವಹಾರಕ್ಕಾಗಿ ನಾವು ಇಂಗ್ಲೀಷನ್ನು ಹೊಂದಿರಲು ಸಾಧ್ಯವಿಲ್ಲ. ಕೇವಲ ಕೆಲವು ಜನರು ಹಾಗೂ ಕೆಲವು ವರ್ಗಗಳು ಆಳಿಕೆ ನಡೆಸುತ್ತಿದ್ದ ಕಾಲದಲ್ಲಿ ಅದು ಸರಿಯಾಗಿತ್ತು. ಆದರೆ ಪ್ರಜಾಪ್ರಭುತ್ವ ಸಮಾಜದಲ್ಲಿ ಸರ್ಕಾರದ ಕೆಲಸಗಳಲ್ಲಿ ಜನತೆಯ ಪಾತ್ರ ಹೆಚ್ಚಾಗಿರುವುದು. ಅತ್ಯುತ್ತಮವಾದ ಸಾಂಸ್ಕೃತಿಕ ಸಂಬಂಧವು ಏರ್ಪಡುವುದಕ್ಕೂ ಅದು ಅಗತ್ಯ. ಈ ದೃಷ್ಟಿಯಿಂದ ಭಾರತದಲ್ಲಿ ನಾವು ನಮ್ಮ ಮಕ್ಕಳಿಗೆ ಹಿಂದಿಯನ್ನು ಕಲಿಸಲೇಬೇಕಾಗುವುದು. ನಮ್ಮ ರಾಷ್ಟ್ರೀಯ ಒಗ್ಗಟ್ಟಿನ ನಮ್ಮ ಸಂಸ್ಕೃತಿಯ ಸಂಘಟನೆಗೆ ಅದು ಒಂದು ಪ್ರಬಲವಾದ ಅಂಶ.

ಇಂಗ್ಲೀಷಿನ ಸ್ಥಾನ

ಭಾರತದಲ್ಲಿ ವಿದೇಶೀಯರ ಆಳ್ವಿಕೆಯ ಪರಿಣಾಮವಾಗಿ ಇಂಗ್ಲೀಷಿಗೆ ಒಂದು ವಿಶಿಷ್ಟ ಸ್ಥಾನ ದೊರಕಿತ್ತು ಆದರೆ ಭಾರತದಲ್ಲಿ ರಾಷ್ಟ್ರೀಯ ಭಾವನೆ ಮೂಡತೊಡಗಿದಂತೆ, ಇಂಗ್ಲೀಷಿನ ವಿರುದ್ಧವಾದ ಪ್ರತಿಕ್ರಿಯೆಗೆ ಸಹಾಯ ದೊರೆಯಿತು. ಆದರೂ ಸಹ, ನಮ್ಮ ಶಿಕ್ಷಣ ಪದ್ಧತಿಯಲ್ಲಿ, ಇಂಗ್ಲೀಷಿನ ಪ್ರಾಮುಖ್ಯವನ್ನು ಅರಿತಿದ್ದ ಜನನಾಯಕರೂ ಇದ್ದರು.

ಸ್ವಾತಂತ್ರ್ಯನಂತರ, ಈ ಸಮಸ್ಯೆಯನ್ನು ನಾವು ತೀವ್ರವಾಗಿ ಪರಿಶೀಲಿಸಲು ಸಾಧ್ಯವಾಯಿತು ಸೆಕೆಂಡರಿ ಶಾಲೆಗಳಲ್ಲಿ ಇಂಗ್ಲೀಷನ್ನು ಉಳಿಸಿಕೊಳ್ಳುವುದಕ್ಕೆ ಎರಡು ಪ್ರಬಲ ಕಾರಣಗಳಿವೆ.

1, ಇಂಗ್ಲೀಷ್ ಕೇವಲ ಒಂದು ರಾಷ್ಟ್ರದ ಭಾಷೆಯಾಗಿಲ್ಲ ಅದು ಅಂತರ—

(೨೦ ನೇ ಪುಟ ನೋಡಿರಿ)

ನಿಮಗೆ ತಿಳಿದಿರುವುದೇ?

ನಮ್ಮ ಬ್ಯಾಂಕಿನಲ್ಲಿ

(1) **"ನಿತ್ಯನಿಧಿ"** ಠೇವಣಾತಿ ಯೋಜನೆಯ ಪ್ರಕಾರ **ದಿನಂಪ್ರತಿ 4 ಆಣೆಯಂತೆ** ಡಿಪೊಜಿಟ್ ಮಾಡುವುದರಿಂದ **5** ವರ್ಷಗಳ ಅವಧಿಯಲ್ಲಿ ಅನುಕೂಲವಾಗುವ **ರೂ. 500 ರ ಏಕಗಂಟಿನ ಕ್ಷೇಮನಿಧಿಯು ದೊರೆಯುವುದು.**

(2) ಕೇವಲ 5 ರೂಪಾಯಿ ಇಲ್ಲವೆ ಅಧಿಕ ಪ್ರಮಾಣದಲ್ಲಿ **ಸೇವಿಂಗ್ಸ್ ಖಾತೆ**ಯನ್ನು ಪ್ರಾರಂಭಿಸಿ ಸೇಕಡಾ 2½ಯಂತೆ ಬಡ್ಡಿಯನ್ನು ಪಡೆಯಬಹುದು. ಸದ್ರಿ ಖಾತೆಯಿಂದ ನಿಮಗೆ ಅಗತ್ಯವಿರುವಾಗ **ಯಾವತ್ತೂ ನಿರ್ಬಂಧಗಳಿಲ್ಲದೆ** ಚಕ್ಕುಗಳ ಮುಖಾಂತರ ಹಣವನ್ನು ಪಡೆಯಬಹುದು.

ದಿ ಪಾಂಗಾಳ ನಾಯಕ್ ಬೇಂಕ್, ಲಿಮಿಟೆಡ್,
ಸ್ಥಾಪನೆ: 1920.
ಪ್ರಧಾನ ಕಚೇರಿ: **ಉಡುಪಿ,** ದ. ಹಿಂದುಸ್ಥಾನ.

ನವ ವರ್ಷಗಳ ಸಾಧನೆಯ ಸಿಂಹಾವಲೋಕನ

ನಾವು ನಡೆದು ಬಂದ ದಾರಿಯೆಡೆಗೆ ತಿರುಗಿ ನೋಡಿದಾಗ ನ್ಯಾಯವಾಗಿಯೇ ಅಭಿಮಾನ ಮೂಡುತ್ತದೆ; ಇನ್ನು ಮುಂದೆ ಇಡಬೇಕಾದ ಹೆಜ್ಜೆ ಹೇಗಿರಬೇಕೆಂಬುದರ ದಿಗ್ದರ್ಶನವೂ ಆಗುತ್ತದೆ.

ಬರೆದವರು: ಶ್ರೀ ಪಿ. ರಾಮಕೃಷ್ಣ ರಾವ್, ಬಿ. ಎ., ಎಲ್. ಟಿ.

ನಾವು ಸ್ವಾತಂತ್ರ್ಯವನ್ನು ಪಡೆದು ಇಂದಿಗೆ ಒಂಭತ್ತು ವರ್ಷಗಳು ಕಳೆದವು. ಈ ಅಲ್ಪಾವಧಿಯಲ್ಲಿ ಸ್ವತಂತ್ರ ಭಾರತವು ಸಾಧಿಸಿದ ಪ್ರಗತಿಯನ್ನು ಕುರಿತು ಹಿನ್ನೋಟವನ್ನು ಮಾಡುವುದೇ ಈ ಲೇಖನದ ಮುಖ್ಯೋದ್ದೇಶವು.

೧೯೨೦ನೇ ಇಸವಿಯಿಂದ ಕಳೆದ ಜಾಗತಿಕ ಯುದ್ಧಾಂತ್ಯದ ವರೆಗೂ ಮಹಾತ್ಮಾಗಾಂಧಿಯವರು ಹೂಡಿದ ಅಸಹಕಾರ ಚಳವಳದಿಂದಲೂ, ಅವರು ಪದೇಪದೇ ಬೋಧಿಸುತ್ತಿದ್ದ ಅಹಿಂಸಾತತ್ವದಿಂದಲೂ, ಅವರು ಕೈಕೊಂಡ ಅಸ್ಪೃಶ್ಯತಾ ನಿವಾರಣೆ ಖಾದಿ ಪ್ರಸಾರ ಮೊದಲಾದ ರಚನಾತ್ಮಕ ಕಾರ್ಯಗಳಿಂದಲೂ ರಕ್ತಪಾತವಿಲ್ಲದೆ ನಮಗೆ ಸ್ವರಾಜ್ಯವು ದೊರಕಿತು. ಮಹಾತ್ಮ ಗಾಂಧಿಯವರ ಅನುಯಾಯಿಗಳಾಗಿದ್ದು ಅಂದಿನಿಂದ ಕೊನೆಯ ತನಕವೂ ಅವಿಶ್ರಾಂತವಾಗಿ ಹೋರಾಡಿ ದುಡಿದ ಪಂಡಿತ ಜವಹರಲಾಲ್ ನೆಹರು, ವಲ್ಲಭಾಯಿ ಪಟೇಲ, ಬಾಬು ರಾಜೇಂದ್ರ ಪ್ರಸಾದ, ಚಕ್ರವರ್ತಿ ರಾಜಗೋಪಾಲಾಚಾರ್ಯ ಮೊದಲಾದ ಮುಖಂಡರ ಪೋಷಣೆಯಲ್ಲಿ ನಮ್ಮ ಸ್ವಾತಂತ್ರ್ಯ ಶಿಶುವು ಆರಂಭದಿಂದಲೇ ದಷ್ಟಪುಷ್ಟವಾಗಿ ಬೆಳೆದು ಬಂದುದರಿಂದ ೯ ವರ್ಷಗಳ ಎಳೆ ವಯಸ್ಸಿನಲ್ಲೇ ಅದು ಎಲ್ಲಾ ರಾಷ್ಟ್ರಗಳ ಪ್ರೇಮಾದರಗಳಿಗೆ ಒಳಗಾಗಿಯದೆ.

ಬ್ರಿಟಿಷರು ರಾಜ್ಯಸೂತ್ರವನ್ನು ಬಿಟ್ಟು ನಮ್ಮವರಿಗೆ ವಹಿಸಿಕೊಟ್ಟಾಗ ನಾವು ಹಲವಾರು ಸಮಸ್ಯೆಗಳನ್ನು ಇದಿರಿಸಿ ಬಗೆಹರಿಸಬೇಕಾಗಿತ್ತು. ಒಂದೆಡೆಯಲ್ಲಿ ಆಗ ತಾನೆ ನಿರ್ಮಾಣವಾದ ಪಾಕಿಸ್ಥಾನದಿಂದುಂಟಾದ ನಿರಾಶ್ರಿತರ ಸಮಸ್ಯೆ. ಇನ್ನೊಂದೆಡೆಯಲ್ಲಿ ಬ್ರಿಟಿಷರ ಅಂಕೆಯಲ್ಲಿದ್ದು ಅವರು ಕುಣಿಸಿದಂತೆ ಕುಣಿಯುತ್ತಿದ್ದ ಆಶ್ರಿತ ರಾಜರು. ಅವರಲ್ಲೂ ಕೆಲವರು ಮುಸ್ಲಿಮ್ ಮತಾವಲಂಬಿಗಳಾಗಿದ್ದು ಪಾಕಿಸ್ಥಾನದ ಕಡೆ ಒಲವು ಉಳ್ಳವರು. ಮೂರನೆಯದಾಗಿ ದೇಶದ ಎಲ್ಲಾ ಕಡೆಗಳಲ್ಲೂ ಆಹಾರಾಭಾವ. ಇವೆಲ್ಲವುಗಳನ್ನೂ ನಮ್ಮ ಮುಖಂಡ ಕಾರ್ಯಧುರೀಣರು ದಕ್ಷತೆಯಿಂದ ಬಗೆಹರಿಸಿದರು. ನಿರಾಶ್ರಿತರಿಗೆ ವಸಾಹತುಗಳನ್ನು ಕಲ್ಪಿಸಿ ಗುಡಿಕೈಗಾರಿಕೆ ಮೊದಲಾದವುಗಳಿಗೆ ಧನ ಸಹಾಯವನ್ನಿತ್ತು ಅವರ ಕಷ್ಟವನ್ನು ನೀಗಿದರು, ಶ್ರೀ ವಲ್ಲಭಾಯಿ ಪಟೇಲರು ತಮ್ಮ ಅಮೋಘವಾದ ಚಾಣಾಕ್ಷತೆಯಿಂದ ಆಶ್ರಿತ ರಾಜ್ಯಗಳನ್ನೆಲ್ಲಾ ಕೇಂದ್ರೀಕರಿಸಿ ರಾಜರುಗಳ ರೆಕ್ಕೆ ಮುರಿದು ದೇಶದೊಳಗಿರತಕ್ಕ ಹುಳುಕುಗಳನ್ನು ಕಿತ್ತೊಗೆದು ಸಂಪೂರ್ಣ ಭಾರತದ ಪ್ರಗತಿಗೆ ಬಲವಾದ ಅಸ್ತಿವಾರವನ್ನು ಹಾಕಿದರು. ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯಿಂದಾಗಿ ಹಲವು ನೀರಾವರಿ ಯೋಜನೆಗಳು ಪೂರ್ತಿಯಾಗಿ ನಮ್ಮ ಆಹಾರ ಸಮಸ್ಯೆಯೂ ಬಗೆಹರಿದು ನಮಗೆ ಬೇಕಾದ ಆಹಾರವನ್ನು ನಾವೇ ಬೆಳೆಸುವಂತಾಗಿಯದೆ.

ಮೇಲೆ ಹೇಳಿದ ಸಮಸ್ಯೆಗಳನ್ನು ಇದಿರಿಸುವುದರೊಂದಿಗೆ ನಮ್ಮ ಮುಂದಾಳುಗಳು ರಾಜ್ಯಾಂಗ ಘಟನೆಯನ್ನು ನಿರ್ಮಿಸಬೇಕಾಗಿತ್ತು. ಹಲವಾರು ಭಾಷೆಗಳಿಂದಲೂ, ಮತಗಳಿಂದಲೂ ಒಳಭೇದಗಳಿಂದಲೂ ಝರ್ಝರಿತವಾಗಿದ್ದ ಭಾರತದಲ್ಲಿ ಎಲ್ಲರೂ ಒಪ್ಪುವ ಘಟನೆಯನ್ನು ರೂಪಿಸುವುದು ಸುಲಭವಾಗಿರಲಿಲ್ಲ. ಆದರೂ ಹಲವು ಸುಶಿಕ್ಷಿತ ರಾಜಕೀಯ ಪ್ರಮುಖರೂ ತಜ್ಞ ವಕೀಲರೂ ಸೇರಿ ೩ ವರ್ಷಗಳೊಳಗಾಗಿ ಘಟನೆಯನ್ನು ನಿರ್ಮಿಸಿ ೧೯೫೦ನೇ ಇಸವಿ ಜನವರಿ ತಾ- ೨೬ರಲ್ಲಿ ನಮ್ಮ ಗಣ ರಾಜ್ಯವು ಉದ್ಘೋಷಿಸಲ್ಪಟ್ಟಿತು. ಕೂಡಲೇ ನಮ್ಮ ಭಾವೀ ಕಲ್ಯಾಣಕ್ಕೋಸ್ಕರ ಪ್ರಥಮ ಪಂಚವಾರ್ಷಿಕ ಯೋಜನೆಯೊಂದು ರೂಪುಗೊಂಡಿತು. ಯೋಜನೆಯ ಶೇಕಡಾ ಲಂರಷ್ಟನ್ನು ಪೂರೈಸಿ ದ್ವಿತೀಯ ಪಂಚವಾರ್ಷಿಕ ಯೋಜನೆಯ ತಳಹದಿಯನ್ನು ಈಗಾಗಲೆ ಹಾಕಿರುವೆವು. ಬ್ರಿಟಿಷರ ಆಡಳಿತೆಯಲ್ಲಿ ನಮ್ಮ ಕೈಗಾರಿಕೋದ್ಯಮವು ಬಹಳ ಹೀನಾವಸ್ಥೆಯಲ್ಲಿತ್ತು. ನಮ್ಮ ಅಲ್ಪ ಸ್ವಲ್ಪ ಕೈಗಾರಿಕೆಗಳಪೂರೈಕೆಗೆ ಬೇಕಾಗಿದ್ದ ಕಬ್ಬಿಣ, ಉಕ್ಕು, ಹತ್ತಿ ಮೊದಲಾದ ಕಚ್ಚಾ ಸಾಮುಗ್ರಿಗಳು ಹೊರಗಿಂದಲೇ ಬರಬೇಕಾಗಿತ್ತು. ನಮ್ಮ ಖನಿಜ ಸಂಪತ್ತಿನ ನೆಲೆಯನ್ನು ಹುಡುಕಿರಲಿಲ್ಲ. ಹೆಚ್ಚೇಕೆ ನಮ್ಮಲ್ಲಿ ವಿಶಾಲವಾದ ಸಾಗುವಳಿಡದ ಬಯಲು ಪ್ರದೇಶಗಳೂ, ಅನೇಕ ನದಿ, ಕೆರೆ ಕುಂಟೆಗಳಿದ್ದರೂ ಮಿಲಿಯಟನ್‌ಗಟ್ಟಲೆ ಗೋಧಿ, ಅಕ್ಕಿ ಮೊದಲಾದ ಆಹಾರ ಸಾಮುಗ್ರಿಗಳನ್ನು ಕೂಡಾ ಹೊರಗಿನಿಂದ ತರಿಸಿ ನಮ್ಮ ಆಹಾರದ ಪೂರೈಕೆ ಯಾಗ ಬೇಕಾಗಿತ್ತು. ಆದರೆ ನಮ್ಮ ಇತ್ತೀಚೆಗಿನ ಹಲವಾರು ನೀರಾವರಿಗಳಿಂದಲೂ, ಹೊಸ ಹೊಸ ರೀತಿಯ ಕೃಷಿ ವಿಧಾನದಿಂದಲೂ ಈ ಸಮಸ್ಯೆಯು ಬಗೆಹರಿದುದು ಮಾತ್ರವಲ್ಲದೆ ಕ್ಷಾಮ, ನೆರೆ ಮೊದಲಾದ ಅನಿರೀಕ್ಷಿತ ಸಂದರ್ಭದಲ್ಲಿ ಕೂಡಲೇ ಒದಗಿಸಬಹುದಾದ ಧಾನ್ಯಗಳ ಶೇಖರಣೆ ಕೂಡ ಮಾಡುವಂತಾಗಿದೆ. ಕಬ್ಬಿಣ, ಕಲ್ಲಿದ್ದಲು, ಸೀಮೆಎಣ್ಣೆ, ಮೊದಲಾದುವುಗಳ ಪೂರೈಕೆಗೆ ಬೇಕಾಗಿದ್ದ ಹಲವಾರು ಯೋಜನೆಗಳ ಬಗ್ಗೆ ರಶ್ಯಾ, ಬ್ರಿಟನ್, ಜರ್ಮನಿ ಮೊದಲಾದ ಪರರಾಷ್ಟ್ರಗಳೊಂದಿಗೆ ವಿಚಾರ ವಿನಿಮಯಗಳನ್ನು ನಡೆಸಿ ಕಾರ್ಯೋನ್ಮುಖರಾಗಿರುವೆವು.

ನಮ್ಮ ಆಂತರಿಕ ಪ್ರಗತಿಗಿಂತಲೂ ನಮ್ಮ ವಿದೇಶಾಂಗ ಧೋರಣೆಯು ಹಾಗೂ ನೀತಿಯು ಪರರಾಷ್ಟ್ರಗಳನ್ನು ಆಶ್ಚರ್ಯಪಡಿಸುತ್ತಿದೆ. ವಿಮಾನಪಡೆ, ನೌಕಾದಳ, ಮೆಶೀನ್ ಗನ್‌ಗಳು ಭೂನೌಕೆಗಳು ಮೊದಲಾದ ಪಾಶವೀ ಶಕ್ತಿಯನ್ನು ಪ್ರದರ್ಶಿಸುವ ಯುದ್ಧೋಪಕರಣಗಳು ಹೇಳಿಕೊಳ್ಳುವಷ್ಟು ನಮ್ಮಲ್ಲಿ ಇಲ್ಲ. ಆದಾಗ್ಯೂ ನಮ್ಮ ನೈತಿಕ ಶಕ್ತಿಯ ಧೈರ್ಯದಿಂದ ನಾವು ತಾಟಸ್ಥ್ಯದ ಸ್ವತಂತ್ರ ಧೋರಣೆಯನ್ನು ಕೈಕೊಂಡು ವಿಶ್ವಶಾಂತಿಗೋಸ್ಕರ ಪ್ರಯತ್ನಿಸುತ್ತಿರುವೆವು. ಏಸ್ಯಾ ಖಂಡದ ಇತರ ರಾಷ್ಟ್ರಗಳು ನಮ್ಮ ಮೇಲ್ಪಂಕ್ತಿಯನ್ನು ಅವಲಂಬಿಸುತ್ತಿರುವುವು. ಜನಾಂಗಸಂಘದಲ್ಲೂ ಕೂಡ ನಾವು ಗಣ್ಯಸ್ಥಾನವನ್ನು ಪಡೆದಿರುವೆವು. ಪರರಾಷ್ಟ್ರಗಳೆಲ್ಲವೂ ನಮ್ಮ ಮೈತ್ರಿಯನ್ನು ಕೋರುತ್ತಿವೆ. ನಮ್ಮ ಮುಖ್ಯ ಮಂತ್ರಿ ಪಂಡಿತ ಜವಹರಲಾಲರು ಇತ್ತೀಚೆಗೆ ಕೈಕೊಂಡ ಪರದೇಶಗಳ ಪ್ರವಾಸದಲ್ಲಿ ಅವರಿಗೆ ದೊರೆತ ಸ್ವಾಗತ ಸನ್ಮಾನಗಳೇ ಇದಕ್ಕೆ ಸಾಕ್ಷಿ. ಜನಾಂಗ ಸಂಘದ ಸಮಸ್ಯೆಗಳನ್ನು ಬಗೆಹರಿಸಲು ಎಲ್ಲರೂ ನಮ್ಮ ಸಹಾಯವನ್ನೆ ಕೋರುತ್ತಿರುವರು. ಹೆಚ್ಚೇಕೆ ನಮ್ಮನ್ನು ಬಿಟ್ಟು ಹೋದ ಆಂಗ್ಲೇಯರೂ ಕೂಡಾ ನಮ್ಮ ಸಲಹೆಗಳಿಗೆ ಮನ್ನಣೆಯನ್ನು ಕೊಡುತ್ತಿರುವರು.

ಈ ಅಲ್ಪಾವಧಿಯಲ್ಲಿ ಇಷ್ಟೊಂದು ಪ್ರತಿಷ್ಠೆಯನ್ನು ಬೀರಿ ನಮ್ಮ ಧವಳ ಕೀರ್ತಿಯನ್ನು ಸರ್ವತ್ರ ಪಸರಿಸಲು ಹೇಗೆ ಸಾಧ್ಯವಾಯಿತು ಎಂಬುದನ್ನು ಆಲೋಚಿಸುವುದು ನಮ್ಮ ಕರ್ತವ್ಯ. ಭಾರತೀಯರ ಸಾವಿರಾರು ವರ್ಷಗಳ ಸಂಸ್ಕೃತಿಯೇ ಇದಕ್ಕೆ ಕಾರಣ. ನಮ್ಮ ಮಹರ್ಷಿಗಳು ತಮ್ಮ ತಪೋಬಲದಿಂದಲೂ ಸ್ವಾನುಭವದಿಂದಲೂ ಕಂಡುಕೊಂಡ ಜ್ಞಾನಸಂಪತ್ತುಗಳಭಂಡಾರಗಳಾದ ವೇದಗಳು, ಉಪನಿಷತ್ತುಗಳು, ರಾಮಾಯಣ, ಮಹಾಭಾರತ ಮೊದಲಾದ ಪುರಾಣೇತಿಹಾಸಗಳು ನಮ್ಮ ಪುರಾತನ ಸಂಸ್ಕೃತಿಯ ನೆಲೆಯನ್ನು ಒಡೆದು ಕಾಣಿಸುತ್ತಿವೆ. ಕಾಳಿದಾಸ, ಬಾಣಭಟ್ಟ, ಭರ್ತೃಹರಿ ಮೊದಲಾದ ಕವಿ ಪುಂಗವರೂ. ಚಂದ್ರಗುಪ್ತ, ಹರ್ಷವರ್ಧನ, ಅಶೋಕ ಮೊದಲಾದ ನೃಪ ತುಂಗರೂ, ನಮ್ಮ ಭೌತಿಕ ಅಧಃಪತನ ಕಾಲದಲ್ಲಿ ಸನ್ಮಾರ್ಗದರ್ಶಿಗಳಾಗಿದ್ದ ಶಂಕರಾಚಾರ್ಯ, ಮಧ್ವಾಚಾರ್ಯ ಮೊದಲಾದ ಆಚಾರ್ಯ ಶ್ರೇಷ್ಠರೂ, ತುಲಸೀದಾಸ್, ಕಬೀರದಾಸ್, ಸಂತ ತುಕಾರಾಮ, ಪುರಂದರದಾಸ ಮೊದಲಾದ ಪರಮ ಭಕ್ತಾಗ್ರಣಿಗಳೂ, ರಾಮಕೃಷ್ಣ ಪರಮಹಂಸ, ವಿವೇಕಾನಂದ, ರವೀಂದ್ರನಾಥ ಠಾಕೋರ್ ಮೊದಲಾದ ಇತ್ತೀಚೆಗಿನ ದಿವ್ಯ ಜ್ಯೋತಿಗಳೂ ನಮ್ಮ ಹೆಗ್ಗಳಿಕೆಯ ವಿಭೂತಿಗಳಾಗಿದ್ದರು. ನ್ಯಾಯ, ಗಣಿತ, ತರ್ಕ, ವೈದ್ಯ, ಖಗೋಳ, ಅರ್ಥಶಾಸ್ತ್ರ ಮೊದಲಾದ ವಿವಿಧ ಶಾಸ್ತ್ರಗಳಲ್ಲೂ ಹೆಸರನ್ನು ಪಡೆದಿದ್ದೆವು. ಸಂಗೀತ, ಶಿಲ್ಪ ಮೊದಲಾದ ಲಲಿತ ಕಲೆಗಳೂ ಅಭಿವೃದ್ಧಿ ಸ್ಥಿತಿಯಲ್ಲಿದ್ದವು. ಆಸೇತು ಹಿಮಾಚಲದ ವರೆಗೂ ಒಂದು ರೀತಿಯ ಸಾಮಾನ್ಯ ಸಂಸ್ಕೃತಿಯು ನಮ್ಮಲ್ಲಿ ಬೇರೂರಿತ್ತು.

ಇಂತಹ ಪರಂಪರಾಗತವಾದ ಸಂಸ್ಕೃತಿಯ ಹಿನ್ನೆಲೆಯಲ್ಲಿ ಜನಿಸಿದ್ದ ನಮ್ಮ ರಾಷ್ಟ್ರದ ಮುಖಂಡರು ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ಬೆರೆತು ಸ್ವಾತಂತ್ರ್ಯ ಸಂಗ್ರಾಮಕ್ಕೆ ತಕ್ಕ ಯೋಧರಾದರು. ಅದನ್ನು ಪಡೆದ ಮೇಲೆ ನಮ್ಮ ಪ್ರಗತಿಯನ್ನು ಸಾಧಿಸಿದರು, ಸಾಧಿಸುತ್ತಿರುವರು. ತಿಲಕ, ಲಾಲಾಲಜಪತ್ ರಾಯ್, ಪಂಡಿತ ಮಾಲವೀಯ, ಮೋತಿಲಾಲ್ ನೆಹರು, ಜವಾಹರಲಾಲ್ ನೆಹರು ವಲ್ಲಭಾಯಿಪಟೇಲ, ರಾಜಗೋಪಾಲಾಚಾರಿ, ರಾಜೇಂದ್ರಪ್ರಸಾದ ಮೊದಲಾದವರೆಲ್ಲರೂ ನಮ್ಮ ಸ್ವರಾಜ್ಯ ಕದನದಲ್ಲಿ ಮುಂದಾಳುಗಳಾಗಿದ್ದು ಇವರೆಲ್ಲರೂ ಆಧುನಿಕ ಆಂಗ್ಲವಿದ್ಯೆಯಲ್ಲಿ ಉಚ್ಚ ಪದವೀಧರರಾಗಿದ್ದರೂ ನಮ್ಮ ಪ್ರಾಚೀನ ಸಂಸ್ಕೃತಿಯ ವಾತಾವರಣದಲ್ಲಿ ಬೆಳೆದವರಾಗಿದ್ದು ಪಾಶ್ಚಾತ್ಯ ಸಂಸ್ಕೃತಿಯ ಗುಣಗ್ರಾಹಿಗಳಾಗಿ ಎರಡೂ ಸಂಸ್ಕೃತಿಗಳ ಮಿಶ್ರಣದ ಹೊಸ ವಾತಾವರಣವನ್ನು ಕಲ್ಪಿಸಿಕೊಂಡಿದ್ದರು. ಆಧ್ಯಾತ್ಮವು ಇವರ ಹುಟ್ಟುಗುಣವಾಗಿತ್ತು. ಹೀಗಾಗಿ ಭಗವಾನ್ ಬುದ್ಧದೇವನ ಸಂದೇಶವನ್ನು ಶಿರಸಾವಹಿಸಿ ರಾಜಕೀಯ ಕ್ರಾಂತಿಯ ಹೊಸ ಹಾದಿಯನ್ನು ಹಾಕಿಕೊಟ್ಟ ಮಹಾತ್ಮಾ ಗಾಂಧಿಯವರು ತನ್ನ ಜೀವಿತದಲ್ಲೇ ಸ್ವಾತಂತ್ರ್ಯವನ್ನು ದೊರಕಿಸಿದರು ಇವರಿಂದ ಸ್ಫೂರ್ತಿ ವಡೆದ ಜವಾಹರಲಾಲ್, ವಲ್ಲಭಾಯಿ ಪಟೇಲ, ರಾಜಗೋಪಾಲಾಚಾರ್ಯ ಮೊದಲಾದವರು ರಾಜ್ಯದ ಪ್ರಥಮ ಸಂಚಾಲಕತ್ವವನ್ನು ವಹಿಸಿಕೊಂಡು ಸ್ವಲ್ಪ ಸಮಯದೊಳಗಾಗಿಯೇ ತಮ್ಮ ದಕ್ಷತೆಯನ್ನು ತೋರ್ಪಡಿಸಿದರು. ಭೌತಿಕ ಸುಖಶಾಂತಿಯ ಪಥದಲ್ಲಿ ಲೋಲುಪ್ತರಾಗಿದ್ದು ತಮ್ಮ ತಮ್ಮ ಪಾಶವೀಶಕ್ತಿಯನ್ನು ಹೆಚ್ಚಿಸಿಕೊಂಡಿದ್ದರೂ ಶಾಂತಿಯನ್ನು ಪಡೆಯದೆ ಸದಾ ಯುದ್ಧ ಸನ್ನದ್ಧರಾಗಿರುವ ಪಾಶ್ಚಾತ್ಯರು ನಮ್ಮಿಂದ ಪಾಠ ಕಲಿತು ಆತ್ಮಬಲವನ್ನು ಹೆಚ್ಚಿಸಿಕೊಂಡು ಆಧ್ಯಾತ್ಮಿಕ ಪ್ರಗತಿಯನ್ನು ಸಾಧಿಸಿ ನೈಜ ಶಾಂತಿಯನ್ನು ಇನ್ನು ಪಡೆಯಬೇಕಾಗಿದೆ.

ಯಾವ ಆಧ್ಯಾತ್ಮ ಸಂಪತ್ತಿನಿಂದ ಪೂಜ್ಯ ಬಾಪೂಜಿಯವರು ರಕ್ತಪಾತವಿಲ್ಲದೆ ಸ್ವರಾಜ್ಯವನ್ನು ಗಳಿಸಿ ವಿಶ್ವಪ್ರೇಮವನ್ನು ಸಾರಿದರೋ ಯಾವ ಪ್ರಾಚೀನ ಸಂಸ್ಕೃತಿಯ ಬೆಂಬಲದಿಂದ

(೨ನೇ ಪುಟ ನೋಡಿರಿ)

'NAVAYUGA' WEEKLY
is in the list of periodicals and Newspapers approved for use in Secondary Schools as per proceedings Roc· No· 466 N/50 dated 12-12-1950 of the Director of public Instruction, Madras·

ಶ್ರೀಮಾತೃಭೂಮೀಶ್ವರಾಷ್ಟಕ

೧

ಶ್ರೀಪಾದಂ ೧ಕಮಲಾಸನಂ ಬಿಗಿಯೆ, ೨ಕಣ್ಮೊಗ್ಗಾಗೆ, ೩ನಿರೋಧಂಗೊಳಲ್
ಪ್ರಾಣಂಗಳ್, ವಿಷಯಂಗಳಿಂ ವಿಮುಖಿಸಲ್ ಸರ್ವೇಂದ್ರಿಯಂ, ನಿಲ್ಲೆ ತ |
ನ್ನಾತ್ಮಂ ತನ್ನೊಳೆ, ತತ್ತ್ವದೃಷ್ಟಿಯೊಳೆ ನೋಳ್ಪಾಳಂ೪ ಸಮಾಧಿಕ್ರಮಂ
ತಾಳ್ದಂಗಾ ನಿನಗಾದಿಯೋಗಿಗೆ ನಮಃ ಶ್ರೀಮಾತೃಭೂಮೀಶ್ವರಾ ||

೨

ನೀಲಗ್ರೀವದ, ೫ಗಂಡುಹೆಣ್ಣರಕೆ ಮೆಯ್ಯಯ್ಯೊರೆ ಮೂಗಣ್ಣಿನಾ,
ತಿಂಗಳ್ಸಿತ್ತಿಯ, ೬ಬಗ್ಗದೋಲುಡೆಯ, ಗಂಗಾಜೂಟ ಭೂಷಾಹಿಯಾ |
೭ಶೂಲೇಷ್ವಾಸದ ಕೆಯ್ಯ ವಾಲಸರದಾ, ೮ಬೆಳ್ಗೂಳಿವೈಹಾಳಿಯಾ,
ನಿನ್ನತ್ಯದ್ಭುತ ಮೂರ್ತಿಗಾಂ ಮಣಿದಪೆಂ ಶ್ರೀಮಾತೃಭೂಮೀಶ್ವರಾ ||

೩

೯ಮೂಗಾಲಂ ಶ್ರುತಿಯೂಡೆ, ೧೦ನಿರ್ಜರನಿವಾಸಂ ಬೀಣೆಯಂ ಬಾಜಿಸಲ್,
ವಾತಾಳಂ ಕರತಾಳವಿಕ್ಕೆ, ೧೧ಮುರಜಂ ಭೂಮಂಡಲಂ ತಟ್ಟೆ, ಸಂ |
ಗೀತಂ ಗೀತಿಸೆ ಮಾಯೆ, ಕೈಪಮರುಗಂ ಫುಲ್ಲಿಸ್ಸಲಾನಂತ್ಯದೊಳ್
ಕಲ್ಪಾಂತಂಬರ ನರ್ತಿಸೈ ನಟವರಾ! ಶ್ರೀಮಾತೃಭೂಮೀಶ್ವರಾ ||

೪

ನೀನಾತ್ಮಂ, ಮತಿಯಂಬೆ,೧೨ ದೇಗುಲವೊಡಲ್, ನೇತ್ರಂ ಪ್ರದೀಪಂ, ಭವ
ದ್ಧ್ಯಾನಂ ನಿದ್ರೆ, ನಡೆ ಪ್ರದಕ್ಷಿಣೆ, ೧೩ಯಥಾಭೀಷ್ಟಂ ಸುಖಾಸ್ವಾದನಂ |
ನೈವೇದ್ಯಂ, ೧೪ಶ್ರುತಿಮಂತ್ರಮಾನ್ನುಡಿವ ಮಾತಾಯುಷ್ಯಮಾರಾತ್ರಿಕಂ,೧೫
ನಿನ್ನಾರಾಧನೆ ನನ್ನ ಕರ್ಮವಖಿಲಂ, ಶ್ರೀಮಾತೃಭೂಮೀಶ್ವರಾ ||

೫

ದೇವಾ, ನನ್ನಪರಾಧವಂ ಕ್ಷಮಿಸಹೋ ೧೬ಸಾಕಾರಗೆತ್ತೆಂ ನಿರಾ
ಕಾರಂ ನಿನ್ನನು! ೧೭ಕಾಲಕಾಲಗೊಡಲೇ? ೧೮ತೇಜೋತಿತೇಜಂಗೆ ವೈ? |
ಬಾನೊಳ್ಪಾರುವ ಹಕ್ಕಿಗಾ ನಭಮೆ ಗೂಡಪ್ಪಂತೆ ನೀನಾದಿಯೊಳ್
ನಿನ್ನೊಳ್ಪುಟ್ಟಿದ ಮಾನವರ್ಗೆ ಮನುಜಂ! ಶ್ರೀಮಾತೃಭೂಮೀಶ್ವರಾ ||

೬

ಬೇಡೆಂ ಕೀರ್ತಿಯ, ಬೇಡೆನಾಂ ೧೯ಪ್ರಭುತೆಯನ್ನೈಶ್ವರ್ಯಮಾಯುಷ್ಯಮಂ,
ನಾ ೨೦ನಾಕೌಕವ ಬೇಡೆ, ಮೋಕ್ಷವನೆ ಬೇಡೆಂ! ಜನ್ಮಜನ್ಮಂಗಳೊಳ್ |
ಹಿಂದೂಧರ್ಮದೊಳೆನ್ನ ಭಾರತದೊಳೆನ್ನಂ ಪುಟ್ಟಿಸೈ, ಬೇಡುವೆಂ
ಕಾಯೆಮ್ಮೊಳ್ ೨೧ಜನನೀಸ್ತನಂಧಯತೆಯಂ! ಶ್ರೀಮಾತೃಭೂಮೀಶ್ವರಾ ||

೭

ಧನ್ಯಂ ತೋರ್ದೆನಗೆಂದು ಪುಣ್ಯಭರತಭೂ೨೨ಸ್ವಾತಂತ್ರ್ಯಸಂಪ್ರಾಪ್ತಿಯ
ನೈಕ್ಯಂ ಬಾರದೆ, ಶಾಂತಿ ಸಾರದೆಮಗೀ ಸ್ವಾತಂತ್ರ್ಯದಿಂದೇಂ ಗುಣಂ? |
೨೩ಅಧ್ವಶ್ರಾಂತಗೆ ಬೆಲ್ಲವಿತ್ತೊಡನೆ ನೀರಂ ನೀಡಬೇಡಾ? ಪ್ರಭೋ,
ತಾರಾ ಶಾಂತಿಯನೆಮ್ಮೊಳೈಕ್ಯವ ಸದಾ! ಶ್ರೀಮಾತೃಭೂಮೀಶ್ವರಾ ||

೮

ಕಾಯ್ದೈ ನೀನೆಮಗಿತ್ತು ಪೂರ್ಣ ವರಮಂ ಸ್ವಾತಂತ್ರ್ಯಮಂ ಸರ್ವದಾ!
೨೪ಒಮ್ಮೆಯ್ಯಾಗಿಸು ಭಿನ್ನ ಭಾರತವ! ಭಕ್ತಿಸ್ತನ್ಯವನ್ನೂಡಿಸೈ!೨೫ |
ಹಿಂದೂಧರ್ಮವ ತಿದ್ದಿ, ನೂರೊಡೆದ ನಮ್ಮನ್ನೇಕಿಸೈ! ಬಾಳಿಸೈ
ಸೂರ್ಯಾಚಂದ್ರಮರುಳ್ಳಿನಂ! ಜಯಜಯಾ ಶ್ರೀಮಾತೃಭೂಮೀಶ್ವರಾ ||

ಗೋವಿಂದ ಪೈ

೧ ಪದ್ಮಾಸನ. ೨ ಕಣ್ಣು ಮುಚ್ಚಿರಲು. ೩ ಬಿಗುವಾಗಿ ಕಟ್ಟಿಕೊಂಡಿರಲು. ೪ ಆಳಂ=ಆಳವಾದ, ಗಾಢವಾದ. ೫ ಅರ್ಧ ಗಂಡು ಅರ್ಧ ಹೆಣ್ಣು ಆಗಿರುವ ಶರೀರವುಳ್ಳ (ಅರ್ಧನಾರೀಶ್ವರ). ೬ ಬಗ್ಗದೋಲ್=ಹುಲಿಯ ಚರ್ಮ. ೭ ಇಷ್ವಾಸ=ಬಿಲ್ಲು, ಚಾಪ. ೮ ಬೆಳ್ಗೂಳಿ=ಬಿಳೀ ನಂದಿ; ವೈಹಾಳಿ=ಸವಾರಿ. ೯ ಮೂಗಾಲಂ=ವರ್ತಮಾನ, ಭೂತ ಮತ್ತು ಭವಿಷ್ಯ ಕಾಲಗಳು. ೧೦ ಸ್ವರ್ಗ. ೧೧ ಮದ್ದಳೆ. ೧೨ ಅಂಬೆ=ಪಾರ್ವತಿ. ೧೩ ಮನಸ್ಸಿಗೆ ಬಂದಂತೆ ಸುಖವಾಗಿ ತಿನ್ನುತ್ತಿರುವಿಕೆ. ೧೪ ಶ್ರುತಿಮಂತ್ರ=ವೇದಮಂತ್ರ. ೧೫ ಆರಾತ್ರಿಕ=ಆರತಿ. ೧೬ ನಿನಗೆ ಆಕಾರವಿದೆ ಎಂದು ನಾನು ಭಾವಿಸಿದೆ. ೧೭ =ಕಾಲನಿಗೆ ಕಾಲನಾಗಿರುವವನಿಗೆ ೧೮ ತೇಜಕ್ಕೂ ಮಿಗಿಲಾದ ತೇಜವಾಗಿರುವವನಿಗೆ. ೧೯ ಪ್ರಭುತೆ=ಅಧಿಕಾರ. ೨೦ ನಾಕೌಕ=ಸ್ವರ್ಗವೇ ಮನೆಯಾಗಿರುವಿಕೆ, ಅಂದರೆ ಸ್ವರ್ಗಪ್ರಾಪ್ತಿ. ೨೧ ಜನನೀಸ್ತನಂಧಯತೆ=(ನೀನೂ ನಾನೂ ಪರಸ್ಪರ) ತಾಯಿ ಮತ್ತು (ಆಕೆಯ) ಮೊಲೆ ಗೂಸು ಆಗಿರೋಣ. ೨೨ ಭರತಭೂ=ಭಾರತವರ್ಷ. ೨೩ ಅಧ್ವಶ್ರಾಂತ=ದಾರಿ ನಡೆದು ದೈಗುಂದಿದವನು. ೨೪ ಒಮ್ಮೆಯ್ಯಾಗಿಸು=ಒಟ್ಟುಗೂಡಿಸು. ೨೫ ಸ್ತನ್ಯವನ್ನೂಡಿಸು=ಮೊಲೆಯ ಹಾಲನ್ನು ಕುಡಿಸು.

ಟೆಲಿಗ್ರಾಂ: "ZACMAR". ಟೆಲಿಫೋನ್: 317 & 317A.

ಸೈಂಟ್ ಜೋರ್ಜರ
ಹೋಮಿಯೋಪಥಿಕ್ ಕ್ಲಿನಿಕ್ & ಫಾರ್ಮೆಸಿ,
ಮೈದಾನ್ ಕ್ರಾಸ್ ರೋಡ್, (N. Y.)
ಮಂಗಳೂರು-1.

ಅಮೇರಿಕದ ಬೋರಿಕ್ ಮತ್ತು ಟಾಫೆಲ್ ಕಂಪೆನಿಯ ಹೋಮಿಯೋಪೆಥಿಕ್ ಔಷಧಿಗಳ ಮಾತೃದ್ರಾವಕಗಳೂ, ಹುಡಿಗಳೂ, ಮಾತ್ರೆಗಳೂ; ಅಮೇರಿಕದ ಲೂಟಿಸ್ ಕಂಪೆನಿ ಮತ್ತು ಜರ್ಮನಿಯ ವಿಲ್ಮಾರ್ ಶೋಭೆ, ಮತ್ತು ಡಾ. ಮೂಡಸ್‌ರವರ ಸಿದ್ಧೌಷಧಗಳೂ ಯಾವಾಗಲೂ ದೊರೆಯುತ್ತವೆ.

ಹೋಮಿಯೋಪೆಥಿ ಮತ್ತು ಟಿಶ್ಯೂ ಔಷಧಗಳನ್ನೊಳಗೊಂಡ ಗೃಹೋಪಯೋಗದ ಸಾಗುವಾನಿ ಪೆಟ್ಟಿಗೆಗಳೂ, ಚಿಕಿತ್ಸಾ ಕ್ರಮವನ್ನು ಸುಲಭವಾಗಿ ತಿಳಿಸುವ "ಗೃಹ ವೈದ್ಯ" ಪುಸ್ತಕವೂ (ಬೆಲೆ 12 ಆಣೆ) ದೊರೆಯುತ್ತವೆ.

ಒಮ್ಮೆ ಸಂದರ್ಶಿಸಿರಿ.

ಹೊಸಕೆರೆ
ಚಿದಂಬರಯ್ಯನವರು
ಅನುವಾದಿಸಿದ
ಭಗವದ್ಗೀತೆಯು
ಸಮೂಲ ಭಾಷಾಂತರ
ಪೋಕೆಟ್ ಎಡಿಷನ್.
ಸುಮಾರು 450 ಪುಟಗಳು
ಕ್ರಯ 0—12—0

ಘಂಟೆಮಾರಾ
ಇಗ್ನೇಸಿಯೋ ಸಿಲೋನೆಯ ಇಟಾಲಿಯನ್ ಕಾದಂಬರಿಯ ಅನುವಾದ
ಅನುವಾದಕರು:— ಕು. ಶಿ. ಹರಿದಾಸ ಭಟ್ಟ, ಎಂ. ಎ.
—ಕೆಲವು ಅಭಿಪ್ರಾಯಗಳು—
"ಈ ಶತಮಾನದ ಅತ್ಯಂತ ಮರ್ಮಸ್ಪರ್ಶಿ ಕಾದಂಬರಿಗಳಲ್ಲೊಂದು"
—ಕರ್ಮವೀರ.
"ಮೂಲಗ್ರಂಥದ ವೈಶಿಷ್ಟ್ಯಗಳೆಲ್ಲ ಸಮರ್ಪಕವಾಗಿ ಕನ್ನಡಿಸಲ್ಪಟ್ಟಿರುವುದನ್ನು ನೋಡುವಾಗ ಅನುವಾದವು ಸರ್ವೋತ್ತಮವೆಂದು ಹೇಳಲು ಅಡ್ಡಿಯಿಲ್ಲ. ಅನುವಾದ ಮಾಡಿದ ಶ್ರೀ ಭಟ್ಟರೂ ಮಾಡಿಸಿದ ಪ್ರಕಾಶಕರೂ ಅಭಿನಂದನೀಯರು."
—ಇಂಡಿಯನ್ ಎಕ್ಸ್‌ಪ್ರೆಸ್.
200 ಪುಟಗಳ ಈ ಕಾದಂಬರಿಯ ಬೆಲೆ ರೂ.2—0—0
ಪ್ರತಿಗಳು ಸಿಗುವ ಸ್ಥಳ:
ನವಯುಗ ಪ್ರೆಸ್, ಉಡುಪಿ.

ಪ್ರತೀಕಗಳ ಭಾಷೆ

ಆಡುವ ಭಾಷೆಯಲ್ಲಿ, ಮತ್ತು ಭಾಷೆಯೇ ಮಾಧ್ಯಮವಾದ ಸಾಹಿತ್ಯದಲ್ಲಿ, ಪ್ರತೀಕ ಪ್ರಕಟಣಾ ವೈಖರಿಯು ಜನರಿಗೆ ಅರ್ಥವಾಗುವಂತಿದ್ದರೆ ಮಾತ್ರ ಪ್ರಯೋಜನ.

ಬರೆದವರು: ಶ್ರೀ ಗೌರೀಶ ಕಾಯ್ಕಿಣಿ.

ಮನುಷ್ಯನೆಂಬ ರೆಕ್ಕೆ ಇಲ್ಲದ ದ್ವಿಪಾದ ಚಾರಿಯಾದ ಪ್ರಾಣಿಯ ವ್ಯಾಖ್ಯೆಯನ್ನು ಹಲವು ಬಲ್ಲವರು ಹಲವು ಬಗೆಯಾಗಿ ಮಾಡಿದ್ದಾರೆ. "ಮನುಷ್ಯನು ಸಮುದಾಯ ಜೀವಿಯಾದ ಪ್ರಾಣಿ" ಅಂದರು ಒಬ್ಬರು. ಇದು ನಿಜ. ಆದರೆ ಅಂಥ ಪ್ರಾಣಿ ಮನುಷ್ಯನೊಬ್ಬನೆ ತಾನೇ? ಇಲ್ಲ. ಹಿಂಸ್ರವಲ್ಲದ ಪಸ್ತನ ಪ್ರಾಣಿಗಳೆಲ್ಲ ಬಹುತೇಕ ಗುಂಪು ಗಟ್ಟಿ ಹಿಂಡು ಸೇರಿ ಬದುಕುತ್ತವೆ. "ಮನುಷ್ಯನು ಉಪಕರಣಗಳನ್ನು ಉಪಯೋಗಿಸುವ ಪ್ರಾಣಿ" ಎಂದರು ಇನ್ನೊಬ್ಬರು. ಆದರೆ ಇಲ್ಲಿಯೂ ಉಪಕರಣವೆಂದರೇನೆಂಬುದರ ಪರಿಷ್ಕಾರವಾಗುವತನಕವೂ ವ್ಯಾಖ್ಯೆ ವ್ಯಾಜ್ಯಕ್ಕೆ ಕಾರಣವಾಗದೇ ಇಲ್ಲ! ಚುಂಚುವಿನಿಂದ ನೆಯ್ಯುವ, ಮುಂಗಾಲಿನಿಂದ ಟೊಂಗೆ ಮುರಿಯುವ, ಸೊಂಡಿಲಿನಿಂದ ಕೊಪ್ಪರಿಗೆಯನ್ನು ಎತ್ತುವ, ಬಾಲದಿಂದ ನೊಣ ಝಾಡಿಸುವ—ಪ್ರಾಣಿಗಳೆಲ್ಲ ಒಂದಲ್ಲ ಒಂದು ರೀತಿ ಉಪಕರಣೋಪಯೋಗಿಗಳೇ ಅಲ್ಲವೆ? "ಮನುಷ್ಯ ಮನೆಕಟ್ಟುವ ಸುಕ್ಕಳಾರ್ಯಕೆ ಮಾಡುವ ಪ್ರಾಣಿ" ಎಂದರು ಇನ್ನೊಬ್ಬರು. ಆದರೆ ಇದೂ ಸಾಧುವಲ್ಲ, ಹಕ್ಕಿ ಗೂಡು ಕಟ್ಟುತ್ತದೆ. ಇಲಿ ಬಿಲ ಅಗೆಯುತ್ತದೆ. ಜೇನ್ನೊಣ—ಇರುವೆಗಳು ಅದ್ಭುತವಾಗಿ ತಮ್ಮ ಹುಟ್ಟು—ಹುತ್ತಗಳನ್ನು ರಚಿಸಿಕೊಳ್ಳುತ್ತವೆ. ಮನುಷ್ಯರನ್ನೂ ನಾಚಿಸುವ ಸಾಮುದಾಯಿಕ ಜೀವನ ನಡೆಯಿಸುತ್ತವೆ. ಅಂದ ಮಾತ್ರಕ್ಕೆ ಅವೆಲ್ಲ ಈ ವ್ಯಾಖ್ಯೆಗೊಳಪಡುತ್ತವೆ. ಮಂಗದಿಂದ ಕ್ಯಾಂಗ್ರೂ ತನಕವೂ ಹಕ್ಕಿಯಿಂದ ಹಸುವಿನ ತನಕವೂ ಮರಿಗಳ ಮುದ್ದು ಸಸ್ತನ ಪ್ರಾಣಿವರ್ಗದ ಒಂದು ಪ್ರಕೃತಿ ಧರ್ಮವೇ ಆಗಿದೆ. "ವಾತ್ಸಲ್ಯ" ವೆಂಬ ಶಬ್ದವೇ "ವತ್ಸ" ಅಂದರೆ "ಹಸು" ಎಂಬ ಪಶುವಾಚಕ ಶಬ್ದದಿಂದ ಮಾನವ ಮಾಡಿಕೊಂಡಿದ್ದಾನೆ—ತನ್ನ ಅಭಾವನನ್ನು ಸೂಚಿಸಲು. ಅಂದ ಮೇಲೆ—

ಹಾಂ, ಅನ್ನುವದು ಆ ಮೇಲೆ. ಇಲ್ಲಿಯೇ ಸಿಕ್ಕಿತು ನಮಗೆ ಮನುಷ್ಯನ ಮನುಷ್ಯತ್ವದ ಮೂರ್ಲಿಕ ಲಕ್ಷಣ. "ಮನುಷ್ಯ ಭಾವವನ್ನು ಸೂಚಿಸಲು ಶಬ್ದವನ್ನೂ ಮಾಡಿಕೊಂಡಿದ್ದಾನೆ" ಇದೊಂದು ಮಾತು ಕೋಲ್ಮಿಂಚಿನಂತೆ ಮಾನವನ ಪ್ರಗತಿಯ ಐತಿಹಾಸಿಕ ಉನ್ನಯನದ "ನಡೆದು ಬಂದ ದಾರಿ"ಯನ್ನೆಲ್ಲ ಝಗ್ಗನೆ ಬೆಳಗುತ್ತದೆ. ಮನುಷ್ಯನ ವ್ಯಾಖ್ಯೆಯನ್ನು ಸಯುಕ್ತಿಕವಾಗಿ ಅಥವಾ ಹೆಚ್ಚು ಸಮಂಜಸವಾಗಿ ನಾವು ಇಲ್ಲಿ ಮಾಡಬಹುದು. ಇತರ ಪ್ರಾಣಿವರ್ಗದಿಂದ ಭಿನ್ನ ಲಕ್ಷಣ ವಂತಿಕೆಯಿಂದ ಲಕ್ಷಿತವಾಗುವ ಮನುಷ್ಯತ್ವದ ಒಂದು ಅನುಕೂಲ ವ್ಯಾಖ್ಯೆ—"ಮನುಷ್ಯ ಮಾತನಾಡುವ ಪ್ರಾಣಿ". ಸರಿ, ಇದಕ್ಕೂ ಅನೇಕರು ಹುಬ್ಬು ಎತ್ತಿದಿರಿ, ನಾಲಿಗೆ ಕುರುಚಿದಿರಿ—ಪ್ರತಿವಾದ ಹೂಡಲಿಕ್ಕೆ. ಆದರೆ ಆ ಪ್ರತಿವಾದಕ್ಕೆಪ್ರತಿಮಾತೂ ಉಂಟು. ನಾಯಿಯ ಬೊಗಳುವಿಕೆ, ಹಕ್ಕಿಯ ಇಂಚರ, ಗೋವಿನ ಅಂಬೆಗೂಗು, ಒಂದಲ್ಲ ಎರಡಲ್ಲ ಅನೇಕ ಧ್ವನಿಗಳಿಂದ ಅನೇಕ ಪಶು ಪಕ್ಷಿಗಳು ತಮ್ಮ ಅಸ್ತಿತ್ವವನ್ನು ಸಾರುತ್ತವೆ. ಪ್ರೀತಿ-ಭೀತಿ-ಜಾತಿ ವೈರವೇ ಮೊದಲಾದವುಗಳನ್ನೂ ವ್ಯಕ್ತಪಡಿಸುತ್ತವೆ. ಆದರೆ ಇವೆಲ್ಲ ಮಾತಲ್ಲ—ಭಾಷೆಯೇ ಅಲ್ಲ. ಇದೆಲ್ಲ ವಿಕಾರ ವ್ಯಂಜಕ ಧ್ವನಿಗಳು, ಕೇವಲ ಕೂಗುಗಳು. ಜೈಜೈ ಕಾರಗಳು ಹೇಗೆ ರಾಜನೀತಿಯಾಗಲಾರವೋ ಹಾಗೆಯೇ ಈ ಕೂಗುಗಳೂ ಚಿಲಿಪಿಲಿಗಳೂ ಗಳಹು-ಕುಕಿಲು—ಉಲಿಗಳೂ ಭಾಷೆ ಆಗಲಾರವು. ತುಸು ಪಕ್ಕವಾಗಿ ಹೇಳುವುದಾದರೆ ಸಮಜಕ್ಕೂ ಸಮಾಜಕ್ಕೂ ಯಾವ ವ್ಯತ್ಯಾಸವೋ ಭಷಣಕ್ಕೂ ಭಾಷಣಕ್ಕೂ ಅದೇ ಅಭ್ಯಂತರ! ಆ ಧ್ವನಿಗಳೆಲ್ಲ ಒಂದುರೀತಿ ಪ್ರತಿಕ್ಷಿಪ್ತ ಕ್ರಿಯೆಗಳು, ಅಥವಾ ಬುದ್ಧಿ ಹೇತು ಪುರಸ್ಸರ ವಲ್ಲದ ಪ್ರತಿಕ್ರಿಯೆಗಳು. ಅವು ಒಡಮೂಡಿಸುವುದು ಭಾವವನ್ನಲ್ಲ, ತಾತ್ಕಾಲಿಕ ವಿಚಾರಗಳನ್ನು—ನಾವು ತೇಗಿದಂತೆ, ಆಕಳಿಸಿದಂತೆ, ಮರುಗಿದಂತೆ.

ಅಂದ ಮೇಲೆ ಭಾಷೆಯನ್ನು ಉಂಟು ಮಾಡುವ ಆವಶ್ಯಕತೆಯನ್ನು ಕಂಡುಕೊಂಡ ಪ್ರಾಣಿಯೇ ಮನುಷ್ಯ ಕೆಲವೊಂದು ಧ್ವನಿ ಶಬ್ದ ಸಮುಚ್ಚಯ, ಉಚ್ಚಾರ ವೈವಿಧ್ಯ, ಕೆಲವೊಂದು ಭಾವಗಳಿಗೆ ವ್ಯಂಜಕವೂ ವಾಹಕವೂ ವಾಚಕವೂ ಆಗುವದು ಒಂದು ಪ್ರಯತ್ನ—ಪ್ರಯೋಗಪೂರ್ವಕವಾದ ಸಾಧನೆ. ಅದೂ ವ್ಯಕ್ತಿಯದಲ್ಲ; ಜನಾಂಗದ್ದು. ಹೀಗೆ ಒಂದು ಶಬ್ದ ಒಂದು ಅರ್ಥವನ್ನು ಆದೇ ಶಬ್ದ ಅದೇ ಅರ್ಥವನ್ನು ಸೂಚಿಸುವದೆಂದರೇನು? ಅದನ್ನು ಒಬ್ಬರಂತೆ ಇನ್ನೊಬ್ಬರು ಎಲ್ಲರೂ ಒಪ್ಪಿಕೊಳ್ಳುವದೆಂದರೇನು? ಇದಕ್ಕೇ ಸಂಕೇತ ಇಲ್ಲವೆ ಪ್ರತೀಕವೆನ್ನುವದು. ಶಬ್ದ, ಧ್ವನಿ, ಉಚ್ಚಾರ ಇದು ಕಿವಿಗೆ ಗೋಚರ. ಅದನ್ನು ನಾವು ಮನಸ್ಸಿಗೆ ಗೋಚರವಾಗುವ ಭಾವದ ಬಗ್ಗೆ ಅಥವಾ ಕಣ್ಣು, ಮೂಗು, ನಾಲಗೆ ಮುಂತಾದ ಇತರ ಇಂದ್ರಿಯಗಳಿಗೆ ಗೋಚರವಾಗುವ ಪದಾರ್ಥಗಳ ಬಗ್ಗೆ ಬದಲಾಗಿ ಬಳಸುತ್ತೇವೆ. ಇಲ್ಲಿ ಬಂತು ಪ್ರತೀಕ ಕ್ರಿಯೆ. ಇನ್ನು ಇಂತಹದೇ ಒಂದು ಶಬ್ದ ಪ್ರತೀಕವನ್ನು ಇಂತಿಂತಹದೇ ಓರೆ ನೇರ ಗೆರೆಗಳಿಂದ ಸೂಚಿಸಬೇಕೆಂಬ ಇನ್ನೊಂದು ಸಂಕೇತ ಜನಸಮುದಾಯ ಒಪ್ಪಿಕೊಂಡಾಗಲೇ ಅಲ್ಲಿ ಬಂತು ಇನ್ನೊಂದು ಪ್ರತೀಕ ಕ್ರಿಯೆ—ಲಿಪಿ ಅಥವಾ ವರ್ಣಮಾಲೆ.

ಅಂದರೆ ಪ್ರತೀಕವು ಏನು? "ಒಂದು ಸಂಗತಿ ಇನ್ನೊಂದು ಸಂಗತಿಯ ಸಲುವಾಗಿ, ಬದಲಾಗಿ ನಿಂತರೆ ಅದು ಪ್ರತೀಕ." ಪ್ರತೀಕವೂ ಒಂದು ಪ್ರತಿನಿಧಿ. ಆದರೆ ಯಾತರ ಪ್ರತಿನಿಧಿ? ವ್ಯಕ್ತಿಯದೇ, ಅಥವಾ ವಸ್ತುವಿನದೇ, ಅಲ್ಲ. ಹಿಂದೆ ಪಶುಗಳನ್ನು ಕೊಂದು ಶ್ರಾದ್ಧ ತರ್ಪಣಾದಿಗಳ ನೈವೇದ್ಯಕ್ಕೆ ಉಪಯೋಗಿಸುತ್ತಿದ್ದರು. ಇಂದು ಉಪ್ಪಿನ ಒಡೆ—ಕಡುಬು ಅದಕ್ಕೆ ಉಪಯೋಗಿಸುತ್ತಾರೆ! ಹಿಂದೆ ನರರುಂಡದ ಬಲಿ ಅರ್ಪಿಸುತ್ತಿದ್ದರು. ಇಂದು ತೆಂಗಿನಕಾಯಿ ಒಡೆಯುತ್ತಾರೆ ಹೀಗೆ ಕೆಲವೊಂದು ಸಂಗತಿಗಳ ಬದಲು ಕೆಲವೊಂದು ಸಂಗತಿಗಳು ರೂಢಿಯಲ್ಲಿ ಬಂದರೆ ಅವು ಪ್ರತೀಕಗಳೇ? ಸ್ಥೂಲವಾಗಿ ಹಾಗೆ ಇಟ್ಟುಕೊಳ್ಳಬಹುದು. ಆದರೆ ನಿಜವಾದ ಪ್ರತೀಕವೆನಿಸಿಕೊಳ್ಳಲು ಇದಕ್ಕೂ ಸೂಕ್ಷ್ಮ ಒಳಹೊಂದಿಕೆ ಅವಶ್ಯ. ಅಂದರೆ ರುಂಡಕ್ಕೆ ಬದಲು ತೆಂಗಿನಕಾಯಿಯೆಂದಲ್ಲ, ನರಬಲಿಯ ಕೃತ್ಯದ ಪ್ರತೀಕವಾಗಿ ಕಾಯಿ ಒಡೆಯುವ ಕ್ರಿಯೆಯೆಂಬ ರೀತಿಯಲ್ಲಿ ಈ ಪ್ರತೀಕವನ್ನು ಅರ್ಥಮಾಡಿಕೊಳ್ಳಬೇಕು. ಅಂದರೆ ನಿಜವಾದ ಪ್ರತೀಕದ ಅಗತ್ಯ ಅಥವಾ ಉಗಮ ಎಲ್ಲಿ? ಹೇಗೆ?

ಕಲ್ಪನೆ ಮಾಡಿರಿ, ನಿಮಗೆ ಬೆಲ್ಲ ಮತ್ತು ಜೇನು ಇವೆರಡರ ಸವಿಯ ರುಚಿ ಭೇದವನ್ನು ತಿಳಿಸಿ ಹೇಳುವದಿದೆ. ಅದನ್ನು ಹೇಗೆ ತಿಳಿಸುವಿರಿ? ಅದೇನು ಮಹಾ! ಪ್ರತಿಯೊಬ್ಬನಿಗೂ ಗೊತ್ತು. ತಿಂದವರಿಗೆ ತಾನೇ ಗೊತ್ತಾಗುತ್ತದೆ. ಆದರೆ ತಿನ್ನದವರಿಗೆ ತಿಳಿಸುವದು ಹೇಗೆ? ತಿಂದವರಿಗೆ ತಿಳಿಸಬೇಕಾಗಿಲ್ಲ; ತಿನ್ನದವರಿಗೆ ತಿಳಿಸಬರುವಂತಿಲ್ಲ! ಹೀಗಿದೆ ಈ ಉಭಯ ಪೇಚು! ಆಗ ನೀವು ಹೇಳುವದಿಷ್ಟೇ!—"ಸುಮ್ಮನೇ ತಲೆ ಹರಟೆ ಬೇಡ. ಇಕೊ, ಇದು ಬೆಲ್ಲ. ಇದು ಜೇನು. ಎರಡೂ ನಾಲಿಗೆಗೆ ಇಟ್ಟು ಚಪ್ಪರಿಸಿ ನೋಡಿ. ಎಲ್ಲ ಭೇದ ತಾನೇ ತಿಳಿಯುತ್ತದೆ!" ಎಂಥ ಚೋದ್ಯ ನೋಡಿ! ನಿಮ್ಮ ನಿಘಂಟುವಿನಲ್ಲಿ ಲಕ್ಷಾಂತರ ಶಬ್ದಗಳಿವೆ. ನಿಮ್ಮ ವರ್ಣನಾಶಕ್ತಿ ಅಪಾರವಿದೆ. ಅತ್ಯಂತ ಜಟಿಲ ಮತ್ತು ಜಂಜಾಳದ ಯಂತ್ರ—ತಂತ್ರಗಳನ್ನೂ ನೀವು ಸಾದ್ಯಂತ ವಿವರಿಸಬಲ್ಲಿರಿ.—ತಲೆ ಕೂದಲೆಣಿಸಿ ಸೀಳಿ ಚೆಲ್ಲಬಲ್ಲಿರಿ. ಆದರೆ ಬೆಲ್ಲ—ಜೇನುಗಳ ಸವಿಯ ವ್ಯತ್ಯಾಸ ತಿಳಿಸಲಾರದೇ ಜೊಲ್ಲು ಸುರಿಸುವಿರಿ! ಹೀಗೆ ಆಗುವದೇಕೆ? ಈ ಭೇದ—ಬೋಧ ಒಂದು ಚಿಕ್ಕ ರುಚಿಯ ಅನುಭವದ ವಿಷಯ. ಯಂತ್ರ—ತಂತ್ರಗಳ ವಿಷಯ. ಅವಲೋಕನೆಯದು— ಆಲೋಚನೆಯದು. ಅನುಭವದ ಅಂಶವನ್ನು ತಿಳಿಸಿಹೇಳಲು ಹವಣಿಸಿದಾಗ ಶಬ್ದಗಳು ಸಲ್ಲಲಾರವು, ಸಾಲಲಾರವು.

ರುಚಿಯ ಅನುಭವ ಹೇಗೋ ಹಾಗೆಯೇ ಭಾವನೆಯ ಅನುಭವ, ಮನಸ್ಸಿನ ಉದ್ವೇಗ, ಉಲ್ಲಾಸ, ಶೂನ್ಯತೆ, ಧನ್ಯತೆ, ಹರ್ಷ, ಶೋಕ, ಕೃತಜ್ಞತೆ, ಸಂತೃಪ್ತಿ ಮುಂತಾದ ಆಳವಾದ ತೀವ್ರವಾದ ಭಾವನೆಗಳನ್ನು ಮೂಡಿಸುವಲ್ಲಿ ಭಾಷೆ ಕುಂಠಿತವಾಗುವದು. ಮಾತು ಕುಂಟುವದು, ಶಬ್ದಗಳು ವ್ಯರ್ಥವೆನಿಸುವವು. ಹಾಗಾದರೆ ಮುಂದೆ ಗತಿಯೇನು? ಭಾವ—ಭಾವನೆಗಳ ಆವಿಷ್ಕಾರ ಪ್ರಕಟಣೆ ಮನುಷ್ಯನಿಗೆ ಅತ್ಯವಶ್ಯ. ಅದಕ್ಕೆ ಸಾಧನವಾದ ಭಾಷೆಯೇ ಪೆಚ್ಚುಬಿದ್ದರೆ ಆ ಪೇಚಿನಿಂದ ನಮ್ಮನ್ನು ಪಾರುಮಾಡುವವರ ಯುಕ್ತಿ ಯಾವದು? ಆ ಯುಕ್ತಿಯೇ ಪ್ರತೀಕ. ಒಂದು ಭಾವವನ್ನು ವ್ಯಕ್ತಮಾಡಲು ಆ ಭಾವಕ್ಕೆ ಪೋಷಕವಾದ ಉತ್ತೇಜಕವಾದ ಉದ್ದೀಪಕವಾದ ಕೆಲವೊಂದು ಸಂಗತಿಗಳ ಚಿತ್ರಗಳನ್ನು ನಿಮ್ಮ ಕಣ್ಣೆದುರಿಗೆ ಇಟ್ಟು ಅದರಿಂದ ಯೋಗ್ಯ ಬೋಧವನ್ನು ಅಂದರೆ ಮೂಲ ಭಾವದ ಪ್ರತಿಬಿಂಬವನ್ನು ನಿಮ್ಮ ಹೃದಯದಲ್ಲಿ ಮೂಡಿಸಲು ನಾವು ಹೆಣಗುತ್ತೇವೆ. ಹೀಗೆ **ಒಳಗಿನ** ಭಾವಕ್ಕೆ **ಹೊರಗಿನ** ಒಂದು ಚಿತ್ರ ಪ್ರತಿಯಾಗಿ ನಿಲ್ಲುತ್ತದೆ. ಅದೇ ಪ್ರತೀಕ. ಭಾವಗಮ್ಯವಾದ, ಪ್ರಮಾಣಾಗೋಚರವಾದ ತತ್ವವನ್ನೂ ಭಾವನೆಯನ್ನೋ ಸ್ಥಾಯಿಯನ್ನೂ ಬಹಿರಿಂದ್ರಿಯ ಗೋಚರವಾದ ಕೆಲವೊಂದು ಸಂಗತಿಗಳಿಂದ

(೧೮ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

ಅಧಿಕಾರದ ವಿಕೇಂದ್ರೀಕರಣ

ಜನರಲ್ಲಿ ಲವಲವಿಕೆಯನ್ನೂ ಆಡಳಿತೆಯಲ್ಲಿ ಮಹತ್ವವನ್ನೂ ಉಂಟು ಮಾಡಲು ಅಧಿಕಾರದ ವಿಕೇಂದ್ರೀಕರಣವು ತುಂಬ ಸಹಾಯಕ.

ಬರೆದವರು: ಶ್ರೀ ಸೇವನಮಿರಾಜ ಮಲ್ಲ, ಎಂ. ಎ., ಬಿ. ಎಲ್.

ಸರ್ಕಾರದ ಅಧಿಕಾರದ ಕೇಂದ್ರೀಕರಣ ಮತ್ತು ವಿಕೇಂದ್ರೀಕರಣದ ಭಿನ್ನಾಭಿಪ್ರಾಯ ಪಡುವ ಎರಡು ಪಂಗಡಗಳು ಇಂದು ಭಾರತದಲ್ಲಿವೆ. ಇಂದಿನ ಸರ್ಕಾರದಲ್ಲಿ ಕೇಂದ್ರೀಕೃತ ಅಧಿಕಾರವೇ ಹೆಚ್ಚೆಚ್ಚಾಗಿ ತೋರಿಬರುತ್ತಿದ್ದರೂ ಗಾಂಧೀಜೀ ಸಂಪ್ರದಾಯದಲ್ಲಿ ಬೆಳೆದ ನಮ್ಮ ಹಿರಿಯ ಮುತ್ಸದ್ದಿಗಳನೇಕರು ವಿಕೇಂದ್ರೀಕೃತ ಆಡಳಿತ ಪದ್ಧತಿಯ ಬಗ್ಗೆ ತುಂಬಾ ಉತ್ತೇಜನವನ್ನು ತೋರಿಸುತ್ತಿದ್ದಾರೆ.

ಆದರೆ ಇತ್ತೀಚೆಗೆ ದೇಶದಲ್ಲಿ ಉಂಟಾಗಿರುವ ಕ್ಷೋಭೆಯ ಪರಿಸ್ಥಿತಿಯಲ್ಲಿ ಅನೇಕರು ಅಧಿಕಾರದ ಕೇಂದ್ರೀಕರಣವಾಗಬೇಕೆಂದು ಪ್ರತಿಪಾದಿಸತೊಡಗಿದ್ದಾರೆ. ಭಾರತಕ್ಕೊಬ್ಬ ಸರ್ವಾಧಿಕಾರಿ ಬೇಕೆಂಬ ಹೇಳಿಕೆಗಳು ಹಲವು ನಾಯಕರ ಬಾಯಿಯಿಂದ ಪದೇಪದೇ ಕೇಳಿಬರುತ್ತಿವೆ. ಪ್ರಾಂತ್ಯಗಳ ಪುನಾರಚನೆಯಾಗುವಾಗ ಚಿಕ್ಕ ಚಿಕ್ಕ ಪ್ರಾಂತ್ಯಗಳಿಗೆ ಎಡೆಯಿರಬಾರದಿತ್ತು ಎಂಬ ಅಭಿಪ್ರಾಯವನ್ನು ಹಿರಿಯ ರಾಜಕಾರಣಿ ಶ್ರೀ ರಾಜಗೋಪಾಲಾಚಾರಿಯಂಥವರು ಕೂಡಾ ವ್ಯಕ್ತಪಡಿಸುತಿದ್ದಾರೆ.

ಅಧಿಕಾರದ ವಿಕೇಂದ್ರೀಕರಣಕ್ಕೂ ಪ್ರಾಂತ್ಯ ಪುನಾರಚನೆಗೂ ಸಂಬಂಧವಿಲ್ಲದೆ ಇಲ್ಲ. ಪ್ರಗತಿಪರ ರಾಜಕೀಯ ಪಕ್ಷಗಳು ಏಕ ಸರ್ಕಾರದ ಸ್ಥಾಪನೆಗೆ ಬೆಂಬಲವನ್ನೀಯದಿದ್ದರೂ, ಹಿಂದೂ ಮಹಾಸಭೆಯಂಥ ಪಕ್ಷಗಳು ಒಮ್ಮೆ ಇಡೀಭಾರತವು ಏಕಾಧಿಕಾರ ಛತ್ರದೊಳಗೆ ಬರಲಿ ಎಂದು ಹಾರೈಸುತ್ತಿವೆ.

ನಮ್ಮ ಈ ಕೇಂದ್ರೀಕೃತ ಸರ್ಕಾರದ ಒಲವಿಗೆ ನಮ್ಮ ಐತಿಹಾಸಿಕ ಪರಂಪರೆಯೇ ಮೂಲ ಕಾರಣವೆನ್ನಬಹುದು. ಅರಸೊತ್ತಿಗೆಗೆ ಆಶ್ರಯಕೊಟ್ಟ ದೇಶಗಳ ಪೈಕಿ ನಮ್ಮ ದೇಶಕ್ಕೆ ಅಗ್ರಗಣ್ಯ ಸ್ಥಾನವಿದೆ. ಚಾರಿತ್ರಿಕವಾಗಿ ಮೌರ್ಯರ ಕಾಲದಿಂದ ಹಿಡಿದು ಒಂಭತ್ತು ವರ್ಷಗಳ ಹಿಂದೆ ಬ್ರಿಟಿಷರು ತೊಲಗುವ ತನಕ ಅರಸೊತ್ತಿಗೆಯ ನಾನಾ ಅವತಾರಗಳು ನಮ್ಮ ದೇಶದಲ್ಲಿ ತಾಂಡವವಾಡಿದ್ದುವು. ಅರಸನ, ಅಂದರೆ, ಅಧಿಕಾರದ ಆಜ್ಞೆಯನ್ನು ಪಾಲಿಸುವುದೇ ಪ್ರಜೆಗಳ ಕರ್ತವ್ಯವಾಗಿತ್ತು. ಆ ಪರಂಪರೆ ನಮ್ಮ ರಕ್ತಗತವಾಗಿದೆ. ಸರ್ಕಾರವನ್ನು ನಡೆಸುವ ಹೊಣೆಗಾರಿಕೆಯನ್ನು ಯಾರಿಗಾದರೂ ಬಿಟ್ಟು ಕೊಟ್ಟು, ಆಡಳಿತೆಯ ಹೊಣೆಗಾರಿಕೆಯ ಸಂಪರ್ಕವಿಲ್ಲದೆ ಒಂದು ವಿಧದ ಪಲಾಯನವಾದದ ಸುಖವನ್ನು ನಾವು ಅನುಭವಿಸುತ್ತಿದ್ದೆವು. ಅಂಥ ಹೊಣೆಗಾರಿಕೆಗೆ ಅಂಜುವ ಮನೋಭೂಮಿಕೆಗೆ ಇಂದಿನ ಪ್ರಜಾಸತ್ತಾತ್ಮಕ ಪದ್ಧತಿ ತುಸು ಅಸ್ವಾಭಾವಿಕವಾಗಿಯೂ ಅರುಚಿಕರವಾಗಿಯೂ ತೋರುವುದರಲ್ಲಿ ಆಶ್ಚರ್ಯವಿಲ್ಲ. ಆದ್ದರಿಂದ ಮತದಾನದ ಹಕ್ಕಿನ ಚಲಾವಣೆಯ ಮೂಲಕ ನಮ್ಮ ಸರ್ಕಾರವನ್ನು ನಾವೇ ನಡೆಸುವ ಬದಲು ಆ ಜವಾಬುದಾರಿಯನ್ನು ಒಬ್ಬ ಸರ್ವಾಧಿಕಾರಿಗೋ, ಒಬ್ಬ ಅರಸನಿಗೋ, ಒಬ್ಬ ಸೇನಾಪತಿಗೋ ಬಿಟ್ಟು ಬಿಡೋಣ, ಈ ರಾಜಕೀಯ ಚರ್ಚೆ—ತಿಕ್ಕಾಟಗಳನ್ನು ಅನುಭವಿಸದಿರೋಣ ಎಂಬ ಮನೋಭಾವಕ್ಕೆ ಹೆಚ್ಚಿನವರು ಎಡೆ ಕೊಡುತ್ತಾರೆ.

ನಮಗೆ ಸ್ವಾತಂತ್ರ್ಯ ಸಿಕ್ಕಿದ ಬಳಿಕವೂ ಏಕಾಡಳಿತೆಯ ಪ್ರಯೋಗದಲ್ಲಿ ಸಿಕ್ಕಿದ ಪ್ರತಿಫಲಗಳು ನಮ್ಮ ಮನಸ್ಸನ್ನು ಸೆಳೆದಿವೆ. ಸರ್ದಾರ್ ವಲ್ಲಭಭಾಯಿ ಪಟೇಲರು ನಮ್ಮ ಸ್ವಾತಂತ್ರ್ಯಾನಂತರದ ಸರ್ಕಾರದಲ್ಲಿ ಉಪಪ್ರಧಾನಿಗಳಾಗಿದ್ದರೇನೋ ನಿಜ. ಆದರೆ ಅವರು ಚಲಾಯಿಸುತಿದ್ದ ಅಧಿಕಾರವನ್ನು ನಮ್ಮ ಪ್ರಧಾನಿಗಳು ಕೂಡಾ ಈ ವರೆಗೆ ಚಲಾಯಿಸಿದ್ದಾರೋ ಎಂಬುದನ್ನು ಹೇಳುವುದು ಕಷ್ಟ. ಐನೂರಕ್ಕಿಂತಲೂ ಮಿಕ್ಕಿ ಇದ್ದ ದೇಶೀಯ ರಾಜರ ರಾಜ್ಯಗಳನ್ನು ನಾಮಾವಶೇಷ ಮಾಡಿ, ಆಧುನಿಕ ಭಾರತದ ಶಿಲ್ಪಿ ಎಂಬ ಕೀರ್ತಿಯನ್ನು ಅವರು ಗಳಿಸಿದರು. ಅಧಿಕಾರವು ಕೇಂದ್ರೀಕೃತವಾಗದಿರುತ್ತಿದ್ದಲ್ಲಿ ಅವರು ಈ ಮಹತ್ಕಾರ್ಯವನ್ನು ಸಾಧಿಸುತ್ತಿರಲಿಲ್ಲವೆನ್ನುವುದರಲ್ಲಿ ಸಂಶಯವಿಲ್ಲ. ಕೇವಲ ಮಾತುಕತೆ, ಪ್ರಜಾಸತ್ತಾತ್ಮಕವಾದ ಮತಗಣನೆ ಮುಂತಾದ ವಿಧಾನಗಳಲ್ಲಿ ನಮಗೆ ಒಂದೇ ಒಂದು ರಾಜ್ಯವನ್ನಾದರೂ ಈ ತನಕ ಭಾರತದೊಡನೆ ವಿಲೀನಗೊಳಿಸಲು ಸಾಧ್ಯವಾಗುತ್ತಿರಲಿಲ್ಲವೆಂಬುದಕ್ಕೆ ಹೈದರಾಬಾದ್ ಪ್ರಕರಣವೇ ಸಾಕ್ಷಿ. ಸ್ವಾತಂತ್ರ್ಯೋದಯ ಕಾಲದಲ್ಲಿ ಭಾರತದಲ್ಲೇ ಹಿರಿಯ ದೇಶೀ ರಾಜ್ಯಗಳಾದ ಹೈದರಾಬಾದ್, ಮೈಸೂರು, ತಿರುವಾಂಕೂರುಗಳಲ್ಲಿ "ಸ್ವಾತಂತ್ರ್ಯ"ದ ಅಪಸ್ವರ ಕೇಳತೊಡಗಿತ್ತು. ತಿರುವಾಂಕೂರಲ್ಲಿ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರರು ರಾಜವಂಶವನ್ನು ರಕ್ಷಿಸಲು ಯತ್ನಿಸಿದರು; ಮೈಸೂರಲ್ಲಿ ಸರ್ ಆರ್ಕಾಟ್ ರಾಮಸ್ವಾಮಿ ಮುದಲಿಯಾರರು ಪ್ರಜಾಭಿಪ್ರಾಯವನ್ನು ಕಡೆಗಣಿಸಿ ಅದನ್ನು ಪ್ರತ್ಯೇಕವಾಗಿರಿಸಲು ಪ್ರಯತ್ನಮಾಡಿದರು. ಹೈದರಾಬಾದಿನ ರಜಕಾರರಿಗಂತೂ ಪೋಲೀಸ್ ಕಾರ್ಯಾಚರಣೆಯನ್ನೇ ಕೈಗೊಳ್ಳಬೇಕಾಯಿತು.

ಇಂದು ಕೂಡಾ ಕಾಶ್ಮೀರ, ಪಾಕಿಸ್ತಾನದ ನಿರಾಶ್ರಿತರ ಸಮಸ್ಯೆ ಮುಂತಾದವುಗಳ ಪ್ರಸ್ತಾಪ ಎತ್ತುವಾಗ 'ಇಂದು ಪಟೇಲರಿರಬೇಕಿತ್ತು" ಎಂಬ ಉದ್ಗಾರವನ್ನು ತೆಗೆಯದ ಜನರು ನಮ್ಮಲ್ಲಿ ಇಲ್ಲವೇ ಇಲ್ಲವೆನ್ನಬಹುದು. ಅಧಿಕಾರದ ದೃಷ್ಟಿಯಿಂದ ನೋಡಿದರೆ ಸರ್ದಾರ್ ಪಟೇಲರಲ್ಲಿ ಸರ್ವಾಧಿಕಾರಿಯ ಲಕ್ಷಣಗಳೆಲ್ಲಾ ಇದ್ದುವು. ಮತ್ತೆ ಪೌರುಷ—ಪರಾಕ್ರಮಗಳ ದೃಷ್ಟಿಯಲ್ಲಿ ಅವರು ಹಿಂದಿನ ಚಕ್ರವರ್ತಿಗಳನ್ನು ಬಿಟ್ಟಿರಲಿಲ್ಲ.

ಆದ್ದರಿಂದಲೇ ಇಂದು ದೇಶವು ಪ್ರಾಂತ್ಯಪುನಾರಚನೆಯ ಗೊಂದಲದಲ್ಲಿ ಸಿಕ್ಕಿಬಿದ್ದಿರುವಾಗ "ನಮಗೊಬ್ಬ ಸರ್ವಾಧಿಕಾರಿಯ ಅಗತ್ಯವಿದೆ" ಎಂದು ಹೆಚ್ಚಿನವರ ಬಾಯಿಯಿಂದ ಬರತೊಡಗಿದೆ. ಸರ್ವಾಧಿಕಾರಿಯ ಆಡಳಿತೆಯಲ್ಲಿ ಫಜ್ಲಾಲಿ ಸಮಿತಿಯಂತಹ ಸಮಿತಿಯೇ ನಿರ್ಮಾಣವಾಗುತ್ತಿದ್ದಿಲ್ಲ. ಹಾಗೆ ಆಗುತ್ತಿದ್ದರೂ ಅದರ ವರದಿ ಇಷ್ಟು ತೀಕ್ಷ್ಣವಾಗಿ, ಇಷ್ಟು ಉಗ್ರವಾಗಿ ಚರ್ಚಾಸ್ಪದವಾಗುತ್ತಿರಲಿಲ್ಲ. ಒಂದು ವೇಳೆ ಅಸಂತೃಪ್ತಿಗೊಂಡ ಪ್ರಜೆಗಳು ಏನಾದರೂ ಆಕ್ಷೇಪವನ್ನೆತ್ತುತ್ತಿದ್ದರೆ, ಒಂದೋ ತಕ್ಕ ಬದಲಾವಣೆಯನ್ನು ಅವನು ಮಾಡುತ್ತಿದ್ದ, ಇಲ್ಲವೇ ಹಾಗೆ ಆಕ್ಷೇಪವೆತ್ತುವವರ ಮೇಲೆ ತಕ್ಕುದಾದ ಕ್ರಮವನ್ನು ಕೈಗೊಳ್ಳುತ್ತಿದ್ದ. ಪರಿಸ್ಥಿತಿ ಮತ್ತೂ ಹದಗೆಟ್ಟರೆ ಅವನು ಆ ವರದಿಯ ಶಿಫಾರಸುಗಳನ್ನೇ ಹಿಂದೆ ತೆಗೆದುಕೊಂಡು ದೇಶವನ್ನು ಯಥಾಸ್ಥಿತಿ ಇರಗೊಡಿಸಬಹುದಿತ್ತು. ಈ ಮತ ಪ್ರದರ್ಶನಗಳನ್ನು ಹೆಚ್ಚು ಗಲಭೆಯಿಲ್ಲದೆ ಹೆಚ್ಚು ಕ್ರೂರವಾಗಿ ಹತ್ತಿಕ್ಕುತ್ತಿದ್ದ.

ಮತ್ತೆ ಯುದ್ಧವೇ ಮೊದಲಾದ ತ್ವರಿತದ ಪ್ರಸಂಗಗಳಲ್ಲಿ ಕೇಂದ್ರೀಕೃತ ಅಧಿಕಾರ ಯಾವ ದೇಶದಲ್ಲೂ ಅನಿವಾರ್ಯವಾಗಿ ರೂಪಗೊಳ್ಳುತ್ತದೆ. ಪ್ರಜಾಸತ್ತಾತ್ಮಕ ದೇಶವೆಂದು ಪ್ರಸಿದ್ಧಿ ಹೊಂದಿರುವ ಅಮೇರಿಕದ ಸಂಯುಕ್ತ ಸಂಸ್ಥಾನದಲ್ಲಿ ಕಳೆದ ಮಹಾಯುದ್ಧದ ಸಮಯ ಆಗಿನ ಅಧ್ಯಕ್ಷ ಫ್ರಾಂಕ್ಲಿನ್ ಡಿಲಾನೋ ರೂಸ್ವೆಲ್ಟರು ಆಡಳಿತೆಯ ಮುಖ್ಯಸ್ಥರಾಗಿದ್ದರಲ್ಲದೆ ಸೇನೆಯ ಮುಖ್ಯಾಧಿಕಾರಿಯೂ ಆಗಿದ್ದರು. ಹಾಗೆಯೇ ಅದೇ ಯುದ್ಧದ ಸಮಯ ಬ್ರಿಟನಿನಲ್ಲಿ ಆಗಿನ ಪ್ರಧಾನಿ ಸರ್ ವಿನ್ಸ್ಟನ್ ಚರ್ಚಿಲ್ಲರು ಸರ್ವಾಧಿಕಾರದ ಸಕಲ ಲಕ್ಷಣವನ್ನೂ ತೋರಿಸುತಿದ್ದರು. ಅವರ ಸರ್ವಾಧಿಕಾರದ ಬೇಗೆ ನಮ್ಮ ದೇಶದಲ್ಲಿ ಕೂಡಾ ಪರಿಣಾಮವನ್ನುಂಟುಮಾಡಿತ್ತು.

ಅಧಿಕಾರವು ಕೇಂದ್ರೀಕೃತವಾಗುವುದರ ದುಷ್ಪರಿಣಾಮಗಳನ್ನು ದಿವಂಗತ ಜಾರ್ಜ್ ಓರ್ವೆಲ್ ತಮ್ಮ '1984" ಎಂಬ ಕಾಲ್ಪನಿಕ ಕಾದಂಬರಿಯಲ್ಲಿ ಭಾವಪೂರ್ಣವಾಗಿ ನಿರೂಪಿಸಿದ್ದಾರೆ. ಅಧಿಕಾರವು ಕೇಂದ್ರೀಕೃತವಾದೊಡನೆ ವ್ಯಕ್ತಿಪೂಜೆಯು ಅನಿವಾರ್ಯವಾಗಿ ನಡೆಯುತ್ತದೆಂಬುದರ ಬಗ್ಗೆ 'ಹಿರಿಯ ಸಹೋದರ' (Big Brother) ನ ಪಾತ್ರವನ್ನು

(೧೭ನೇ ಪುಟ ನೋಡಿರಿ)

ಝಂಡುರವರ 'ಕೇಸರಿ ಜೀವನ'

(KESARI JEEVANA)

ಇದನ್ನೇ ಉಪಯೋಗಿಸಿರಿ.

ಆಬಾಲವೃದ್ಧರೆಲ್ಲರಿಗೂ ಅತ್ಯುತ್ತಮ ರಸಾಯನ.

ಕೆಮ್ಮು, ಶೀತ, ಅಸ್ತ್ಮಾ ಗೂರಲು ಇತ್ಯಾದಿಗಳಿಗೆ ಅತ್ಯುಪಯುಕ್ತವಾಗಿದೆ. ಹೊಸ ಶಕ್ತಿಯನ್ನೂ ಚೈತನ್ಯವನ್ನೂ ಕೊಡುವುದು. ಬುದ್ಧಿ ಜೀವಿಗಳಿಗೆ ತುಂಬ ಪ್ರಯೋಜನಕಾರಿಯಾಗಿದೆ. 1 ರಾತಲಿಗೆ ರೂ 6/8; ¼ ರಾತಲಿಗೆ ರೂ. 1/13

ದ. ಕನ್ನಡದ ಕೆಳಗಿನ ಏಜಂಟರಲ್ಲಿ ಸಿಗುವುದು.

1. ಶಾ ಕಂಪೆನಿ, ಮಂಗಳೂರು.
2. ವಿ. ವಿ. ಶೆಣೈ, ಕಾರ್ಕಳ.
3. ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್ಸ್ಟಿಟ್ಯೂಟ್, ಉಡುಪಿ,

ವಿವರವಾದ ಕೆಟಲಾಗು ಬೇಕಿದ್ದರೆ ಇವರಿಗೆ ಬರೆಯಿರಿ.

ZANDU ದಾಮೋದರ & ಕೊ, ಮದ್ರಾಸ್—3.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ|| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯಂತ ಅನುಕೂಲವಾದ ಸ್ವಯಂಬೋಧಿನಿ

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಪ್ರತಿಗಳು ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಗ್ರಾಮಗಳೇ ಭಾರತದ ಸರ್ವಸ್ವ

ನಮ್ಮ ಹಳ್ಳಿಗಳಲ್ಲಿ ಸುಖ ಸಂತೋಷಗಳನ್ನು ನೆಲೆಗೊಳಿಸುವುದಕ್ಕೆ ಅನುಕೂಲಿಸುವ ಸೇವೆಯ ದೀಕ್ಷೆಯನ್ನೆ ಪ್ರತಿಯೊಬ್ಬ ಸುಶಿಕ್ಷಿತ ಸ್ತ್ರೀ-ಪುರುಷ ನಾಗರಿಕನು ವಹಿಸಬೇಕೆಂಬುದೇ ಸ್ವಾತಂತ್ರ್ಯ ದಿನೋತ್ಸವದ ಸಂದೇಶ.

ಬರೆದವರು: ರಾಜಕುಮಾರಿ ಅಮೃತ ಕೌರ,
ಕೇಂದ್ರ ಆರೋಗ್ಯ ಮಂತ್ರಿಗಳು.

* *

ಇಂದು ಸೇವಾಕಾರ್ಯಕ್ಕೆ ತುಂಬಾ ಅವಕಾಶಗಳಿವೆ. ಇಂಥ ಸೇವೆಯನ್ನು ವಿವಿಧ ರಂಗಗಳಲ್ಲಿ ಗಂಡಸರೂ, ಅಂತೆಯೇ ಹೆಂಗುಸರೂ ಮಾಡುತ್ತ ವಿವಿಧ ಚಟುವಟಿಕೆಗಳೇ ಜೀವಾಳವಾಗಿರುವ ಇಂದಿನ 'ಕರ್ಮಯುಗದಲ್ಲಿ' ತಂತಮ್ಮ ಅಳಿಲುಸೇವೆಯನ್ನು ಸಲ್ಲಿಸಿ ಯಶೋಭಾಜನರಾಗಬಹುದು. ಯಾವುದಾದರೊಂದು ಕಾರ್ಯದಲ್ಲಿ ನಿರತನಾಗಿರುವುದು, ಉದ್ಯೋಗಶೀಲನಾಗಿರುವುದು ಮಾನವಧರ್ಮ. ಮಾನವನು ಸೇವಾನಿರತನಾದರೇನೆ ತನ್ನ ಸಮಾಜವನ್ನು ಸುಧಾರಿಸಬಹುದು. ಇಂಥ ಸೇವೆಗೆ ಅಂತಃಪ್ರೇರಣೆಯೇ ಮುಖ್ಯ. ಇಂಥ ಅಂತಃಪ್ರೇರಣೆಯಿಂದ ಪ್ರಚೋದಿತವಾದ ಸಾಮಾಜಿಕ ಸೇವೆಯೆಲ್ಲವೂ, ಎಲ್ಲ ಪ್ರಾಮಾಣಿಕ ಕಾರ್ಯಾಚರಣೆಗಳೂ ನಮ್ಮ ಸುಖಕ್ಕೆ, ಇತರರ ಸುಖಕ್ಕೆ ಹಾಗೂ ಸಾಮೂಹಿಕ ಸುಖಕ್ಕೆ ಕಾರಣವಾಗುತ್ತದೆ.

ಇಂದು ಎಲ್ಲ ಜನರೂ ರಾಜಕೀಯ ವಿಚಾರಗಳಲ್ಲಿ ಆಸಕ್ತಿಯನ್ನು ತೋರುತ್ತಿದ್ದಾರೆ. ಈ ಆಸಕ್ತಿಯು ಹಲವರನ್ನು ತಮ್ಮ ಮುಖ್ಯವಾಗಿ ಕಾರ್ಮಿಕರ, ಹಕ್ಕು ಸವಲತ್ತುಗಳ ಬಗ್ಗೆ ಹೆಣಗುವಂತೆ ಮಾಡಿದರೆ, ಇತರರನ್ನು ಕಾರ್ಮಿಕರ ಮುಷ್ಕರಗಳನ್ನು ಪ್ರೋತ್ಸಾಹಿಸುವಂತೆ ಮಾಡುತ್ತದೆ. ಕೆಲವರಂತೂ, ತೋಟಿಗಳು ಕೆಲಸವನ್ನು ತಂತಮ್ಮ ಬೇಡಿಕೆಗಳು ಪೂರೈಕೆಯಾಗುವ ತನಕ ಖಂಡಿತಮಾಡಬಾರದು ಎಂದು ಉಪದೇಶಿಸುತ್ತಿದ್ದಾರೆ. ಪ್ರತಿಯೊಬ್ಬನೂ ಸಮಾನ ಹಕ್ಕುಗಳನ್ನೂ ಅವಕಾಶಗಳನ್ನೂ ಪಡೆದಿರಬೇಕೆಂಬುದು ಸಹಜ ಇದೇ ಸಮಾಜವಾದದ ಸೂತ್ರಗಳ, ಈ ಸೂತ್ರಗಳನ್ನು ತಾಂತ್ರಿಕವಾಗಿ ಅಂಗೀಕರಿಸಿರುವ ಜನತೆಯ ಘನವಾದ ಉದ್ದೇಶವಾಗಿರುತ್ತದೆ. ಈ ಉದ್ದೇಶದ ಸಾಧನೆಯ ಬಗ್ಗೆ ನಾವು ಅವಶ್ಯವಾಗಿ ರಚನಾತ್ಮಕ ಕಾರ್ಯಾಚರಣೆಗಳನ್ನೇ ಯೋಚಿಸಿಕೊಳ್ಳತಕ್ಕದು. ಮುಷ್ಕರ, ಸತ್ಯಾಗ್ರಹಗಳನ್ನು ಪ್ರೋತ್ಸಾಹಿಸುತ್ತ, ತಡೆದುನಿಲ್ಲುವ ಕಾರ್ಯಾಚರಣೆಗೆ ತಕ್ಕ ಅವಕಾಶಗಳನ್ನು ಕಲ್ಪಿಸದೆ ಹೋದಲ್ಲಿ, ಅಂಥ ಕಾರ್ಯಕ್ರಮವು ಎಂದಿಗೂ ಸ್ತುತ್ಯವೆನಿಸಲಾರದು. ಅಂಥ ಜನರು ಜನಹಿತೈಷಿಗಳೆನಿಸಲಾರರು. ಇವರಿಂದ ರಾಜ್ಯಭಾರ ಕ್ರಮಕ್ಕೆ ಧಕ್ಕೆ, ಹಾನಿಗಳೊದಗುವವಲ್ಲದೆ, ಕ್ರಮಶ, ಒಂದೆಡೆ ಆರಂಭವಾದ ಹಾನಿಯೂ ಇತರ ಎಡೆಗಳಿಗೂ ಪಸರಿಸಿಕೊಳ್ಳುವುದು. ಅಂತೂ ಇವರ ಮುಖ್ಯ ಪರಿಣಾಮಗಳೋ ಶಿಸ್ತುಭಂಗ ಹಾಗೂ ಸಾರ್ವತ್ರಿಕ ಸೇವೆಯ ಹಾನಿಗಳು. ಹಲವರ ರಾಗದ್ವೇಷಗಳಿಂದ, ಸಾಮಾನ್ಯ ಜನರಲ್ಲಿಯೂ ದ್ವೇಷಾಸೂಯಾದಿಗಳು ಮೊಳೆತು, ಇವುಗಳ ಕಾರಣದಿಂದಲೇ ಜನರು ಆ ಸ್ಪರ್ಧಿಗಳ ಸಿಹಿಮಾತುಗಳಿಗೆ ಬಲಿ ಬೀಳುತ್ತಾರೆ. ಜನರು ರಾಜಕೀಯದಲ್ಲಿ ಭಾಗವಹಿಸಬಾರದು ಎಂದು ನಾನೇನೂ ಹೇಳಲಾರೆ. ಆದರೆ, ಅವರು ಅವಶ್ಯವಾಗಿ ರಾಜಕೀಯದಲ್ಲಿ, ರಚನಾತ್ಮಕ ಕಾರ್ಯಾಚರಣೆಗಳಿಗೇನೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಬೇಕಾಗುತ್ತದೆ.

ಇಂಥ ಸಂದರ್ಭಗಳಲ್ಲಿ ಗಾಂಧೀಜಿಯವರ ಮಾತುಗಳು ನೆನಪಿಗೆ ಬರುತ್ತವೆ. ರಚನಾತ್ಮಕ ಕಾರ್ಯಾಚರಣೆಯು ಅವಶ್ಯವೆಂದು ಅವರು ಸದಾ ಉಪದೇಶಿಸುತ್ತಿದ್ದರು. ಖಾದಿ, ಹರಿಜನ ಸೇವೆ, ಬುನಾದಿ ಶಿಕ್ಷಣ ಮೊದಲಾದ ಸೇವಾ ಮುಖಗಳಲ್ಲೇ ಅವರು ಸದಾ ದುಡಿಯುತ್ತಿದ್ದರು. ಅವರು ಹಾಕಿಕೊಟ್ಟ ಮಾರ್ಗವನ್ನು ನಾವು ಸದಾ ನೆನಸುತ್ತಿದ್ದರೆ, ನಾವೂ ಸಾಮೂಹಿಕ ಹಿತಕ್ಕಾಗಿ ದುಡಿಯಲು ಅವಕಾಶವು ಸಿಗುತ್ತದೆ. ಈ ಬಗ್ಗೆ ನಾವು ಸರ್ವದಾ ಸರಕಾರವನ್ನೇ ಅವಲಂಬಿಸಿರಬಾರದು ಕೇವಲ ವಿಧಾಯಕ ನೀತಿಯಿಂದಲೇ ಜನಹಿತವು ಸಾಧ್ಯವಾಗುವಂತಿಲ್ಲ. ಜನರ ಸಹಕಾರವು ಇಲ್ಲದೆ ಹೋದರೆ ವಿಧಾಯಕ ಕಾರ್ಯಕ್ರಮಗಳೂ ಫಲಪ್ರದವಾಗಲಾರವು ನಿದರ್ಶನಕ್ಕಾಗಿ, ಅಸ್ಪೃಶ್ಯತೆಯನ್ನು ನ್ಯಾಯಬಾಹಿರವೆಂದು ಸರಕಾರವು ಸಾರಿದ ಮಾತ್ರಕ್ಕೆ ಎಲ್ಲ ಜನರೂ ಇದನ್ನು ಮಾನ್ಯವೆಂದು ಪರಿಗ್ರಹಿಸಿರುವುದಿಲ್ಲ. ಈ ಬಗ್ಗೆ ಜನತೆಯಲ್ಲಿ ತಕ್ಕ ಜಾಗೃತಿಯು ಅತ್ಯವಶ್ಯವಿರುತ್ತದೆ; ಜನರಲ್ಲಿ ನಿಸ್ವಾರ್ಥ ಭಾವನೆಯು ಉದಯವಾಗಲೇಬೇಕು.

ಅಂತೂ ನಮ್ಮ ಸಮಾಜದ ಏಳಿಗೆಯ ಬಗ್ಗೆ ಪ್ರತಿಯೊಬ್ಬನೂ ನೆರವಾಗಬಲ್ಲನು; ನೆರವಾಗುವ ಆವಶ್ಯಕತೆಯೂ ಇರುತ್ತದೆ. ನಮ್ಮಲ್ಲಿ ಹೆಚ್ಚಿನ ಜನ ಗ್ರಾಮನಿವಾಸಿಗಳು. ಆದ್ದರಿಂದ ಗ್ರಾಮಗಳ ಸೇವೆಯೇ ನಮ್ಮೆಲ್ಲರ ಮುಖ್ಯ ಹಾಗೂ ಆದ್ಯ ಕರ್ತವ್ಯವಾಗಿರುತ್ತದೆ. ನಮ್ಮ ಪಾರ್ಲಿಮೆಂಟು ಮತ್ತು ನ್ಯಾಯವಿಧಾಯಕ ಸಭೆಗಳಲ್ಲೇ ಜನಹಿತದ ಕಾರ್ಯಕ್ರಮಗಳು ಸಾಧ್ಯವೆಂಬ ಭಾವನೆಗಳನ್ನು ನಾವು ಅಂಗೀಕರಿಸಬಾರದು. ಜನರನ್ನೆಲ್ಲ ಸುಖಿಗಳನ್ನಾಗಿ ಮಾಡಲು ಸರಕಾರವು ಹವಣಿಸುತ್ತಿದೆ. ಆದರೆ

(೧೬ ನೇ ಪುಟ ನೋಡಿರಿ)

ವೈದ್ಯರತ್ನಂ ಪಿ. ಎಸ್. ವಾರಿಯರವರ

ಆರ್ಯ ವೈದ್ಯಶಾಲಾ, ಕೋಟಕ್ಕಲ್.

ಸ್ಥಾಪನೆ: **1902.**

ನಮ್ಮ ಔಷಧಗಳ ಪೇಕಿಂಗನ್ನು ಒಂದೇ ಮಟ್ಟಕ್ಕೆ ತರುವ ಉದ್ದೇಶದಿಂದ ತಾ. 1—4—1956ರಿಂದ ಅರಿಷ್ಟ ಮತ್ತು ಆಸವಗಳನ್ನೂ, ಘೃತ, ತೈಲ ಮೊದಲಾದ ನಮ್ಮ ಇತರ ಔಷಧಗಳಂತೆ 24 ಔನ್ಸ್‌ಗಳ ಬಾಟ್ಲಿಗಳ ಬದಲು 16 ಔನ್ಸ್ ಬಾಟ್ಲಿಗಳಲ್ಲೇ ಪೇಕ್ ಮಾಡಲಾಗುವುದು. ಈಗ ನಮ್ಮ ಕ್ಯಾಟಲಾಗುಗಳಲ್ಲಿ ಆಸವ ಮತ್ತು ಅರಿಷ್ಟಗಳ ಬೆಲೆಯು 24 ಔನ್ಸ್ ಬಾಟ್ಲಿಗಳಿಗಾಗಿರುವುದರಿಂದ, ಅದೇ ಅನುಪಾತದಲ್ಲಿ 16 ಔನ್ಸ್ ಬಾಟ್ಲಿಗಳಿಗೆ ಪೇಕಿಂಗ್‌ನಲ್ಲಿ ಕಡಿಮೆ ಮಾಡಲಾಗುವುದು ಎಂದು ತಿಳಿಸಲು ತುಂಬಾ ಸಂತೋಷಪಡುತ್ತೇವೆ.

ಗೋಲ್ಡನ್ ಜ್ಯುಬಿಲಿ ನರ್ಸಿಂಗ್ ಹೋಮಿನಲ್ಲಿ

ನವೀನ ಸೌಕರ್ಯಗಳೂ, ನವರ್ಕಿಳಿ, ಧಾರೆ, ಶಿರೋವಸ್ತಿ ಮೊದಲಾದ ಕೇರಳೀಯ ಚಿಕಿತ್ಸೆಗಳಿರುವ ಪ್ರತ್ಯೇಕ ಸೌಕರ್ಯಗಳೂ ಇರುತ್ತವೆ.

For effective AYURVEDIC TREATMENT & MEDICINES
APPROACH
Vaidya Ratnam P. S. VARIAR'S

ARYA VAIDYA SALA

ESTABLISHED IN 1902.
KOTTAKKAL (S. Malabar).

ಮುಂದಿನ ಮಹಾಚುನಾವಣೆ ಸಮೀಪಿಸಿತು!

ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಎರಡನೇ ಸಲ ನಡೆಯುವ ಚುನಾವಣೆ ಸಮೀಪಿಸಿದಾಗ ಮತದಾರರು ಗಮನಿಸಬೇಕಾದ ವಿಷಯಗಳೇನು? ವ್ಯಕ್ತಿಯ ಯೋಗ್ಯತೆ, ಮತ್ತು ಪಕ್ಷದ ಬಲ ಎರಡೇ ಎನ್ನಬಹುದು.

ಬರೆದವರು: ಶ್ರೀ ಟಿ. ಎ. ಪೈ, ಎಂ. ಎಲ್. ಎ.

ಸದ್ಯದಲ್ಲೇ ಮಹಾ ಚುನಾವಣೆ ಬರಲಿದೆ; ಇದರ ಉದ್ವೇಗಕ್ಕೆ ಜನರು ಅಣಿಯಾಗುತ್ತಿದ್ದಾರೆ. ಆದರೆ ಶಾಂತ ವಾತಾವರಣದಲ್ಲಿ ಚುನಾವಣೆಗೆ ಸಂಬಂಧಿಸಿದ ಕೆಲವೊಂದು ಮೂಲ ವಿಷಯಗಳನ್ನು ಸಾರ್ವಜನಿಕರೂ, ಉಮೇದ್ವಾರರುಗಳೂ ಪರ್ಯಾಲೋಚಿಸುವುದು ಇಂದು ಸಮಯೋಚಿತವಿದೆ.

ಕಾಂಗ್ರೆಸು ದೇಶದಲ್ಲಿ ಪ್ರಬುದ್ಧ ರಾಜಕೀಯ ಪಕ್ಷವಾಗಿರುವುದು. ಇದಕ್ಕೆ ಅಂತಾರಾಷ್ಟ್ರೀಯ ಖ್ಯಾತಿಯ ಧುರೀಣತ್ವವಿದೆ. ದೇಶದಾದ್ಯಂತ್ಯ ಪಸರಿಸಿರುವ ವ್ಯವಸ್ಥಿತ ಸಂಸ್ಥೆಯಾಗಿರುವುದು. ಸಮಾಜವಾದೀ ಮಾದರಿಯ ಆರ್ಥಿಕ ಪದ್ಧತಿಯನ್ನು ಕೈಗೂಡಿಸುವ ನಿರ್ದಿಷ್ಟ ತತ್ವ ಧೋರಣೆಗಳು ಈ ಪಕ್ಷದಲ್ಲಿವೆ. ಮೇಲಾಗಿ ಆಡಳಿತೆಯ ಅನುಭವ, ನಿಸ್ವಾರ್ಥ ಹಾಗೂ ತ್ಯಾಗಶೀಲ ಚಾರಿತ್ರಿಕ ಹಿನ್ನೆಲೆಯಿಂದ ರಾಜಕೀಯ ಪಕ್ಷದ ಪರಿಪೂರ್ಣತೆಗೆ ಆವಶ್ಯವಿರುವ ನಾನಾರೀತಿಯ ಅರ್ಹತೆ ಕಾಂಗ್ರೆಸಿಗಿದೆ.

ಇದಕ್ಕೆ ವಿರುದ್ಧವಾಗಿರುವ ಪಕ್ಷಗಳಲ್ಲಿ ಕೆಲವು ಜಾತೀಯವೂ, ಕೆಲವು ಪಾರ್ಶ್ವವೂ ಇನ್ನು ಕೆಲವು ವೈಯುಕ್ತಿಕವೂ ಆಗಿದ್ದು ಸ್ಪಷ್ಟ ಧೋರಣೆ ಇಲ್ಲದವುಗಳಾಗಿರುವುವು. ಇವುಗಳು ತಮ್ಮನ್ನು 'ಪ್ರಜಾಸತ್ತಾತ್ಮಕ' ಪಕ್ಷಗಳೆಂದು ಕರೆದುಕೊಳ್ಳುವುವು. ಕಾಂಗ್ರೆಸನ್ನು ವಿರೋಧಿಸಲು ಇವುಗಳು ಒಂದುಗೂಡಿದಾಗ "ಪ್ರಜಾಸತ್ತಾತ್ಮಕ ಸಂಯುಕ್ತ ರಂಗ"ವೆಂದು ನಾಮಕರಣ ಮಾಡಿಕೊಳ್ಳುವಾಗ ತಾವು ವಿರೋಧಿಸುವ ಕಾಂಗ್ರೆಸು ಪ್ರಜಾಸತ್ತಾತ್ಮಕ ಪಕ್ಷವಲ್ಲವೆಂದು ತಿಳಿಯುತ್ತಾರೋ ಏನೋ! ಕಮ್ಯುನಿಸ್ಟರೂ ತಾವು "ಪ್ರಜಾಪ್ರಭುತ್ವ"ವಾದಿಗಳೆಂದು ಹೇಳುವಾಗ, ಪ್ರಾಯಶಃ ಪ್ರಜಾಸತ್ತೆಯ ಸೂತ್ರದ ಪುನರ್ವಿವರಣೆ ಅಗತ್ಯ ಬೀಳಬಹುದು! ಪಕ್ಷಗಳಿಗೆ ಇಂಥ ಹೆಸರಿನಿಂದ ಕರೆಯುವುದೇ ಮುಖ್ಯ, ತಾವು ಅನುಸರಿಸುವ ತತ್ವ, ಧ್ಯೇಯಗಳಾಗಲೀ, ಅವುಗಳನ್ನು ಕೈಗೂಡಿಸುವ ಕಾರ್ಯಕ್ರಮಗಳಾಗಲೀ, ಮುಖ್ಯವೆಂದು ಇವರು ಬಗೆಯುವುದಿಲ್ಲ. ಇವರು ಹೇಳುವಂತೆ ಈ ಪಕ್ಷಗಳು 'ಎಡ' ಪಕ್ಷಗಳು, ಕಾಂಗ್ರೆಸು ಬಂಡವಾಳಶಾಹೀ ಪಕ್ಷವಂತೆ. ಆದರೆ ತತ್ವ ಭೇದವೇನಿಲ್ಲದಿದ್ದರೂ ವೈಯುಕ್ತಿಕ ಕಾರಣಗಳಿಂದಾಗಿ ಕೋಪದಿಂದ ಅಥವಾ ಭಿನ್ನ ಮನೋರಥರಾಗಿ ಕಾಂಗ್ರೆಸ್ಸನ್ನು ಬಿಟ್ಟು ಹೊರ ಹೋಗಿದ್ದವರೇ ಈ ಪಕ್ಷಗಳ ಧುರೀಣರಾಗಿರುತ್ತಾರೆ.

ಇಂದು ಕಾಂಗ್ರೆಸು ದೋಷರಹಿತವಾಗಿರುವುದೆಂದು ನಾನು ಹೇಳುವುದಿಲ್ಲ. ಪಕ್ಷದ ಬೆಳವಣಿಗೆಯೊಂದಿಗೆ ಸ್ವಲ್ಪ ಕೊಳಕು ಉತ್ಪನ್ನವಾಗುವುದು ಸಹಜವೇ. ಆದರೆ ಬೆಳವಣಿಗೆಯು ಪಕ್ಷವೇ ಆ ಕೊಳಕನ್ನು ಕಿತ್ತೊಗೆಯಲು, ಪರಿಶುದ್ಧತೆಯನ್ನು ಕಾಪಾಡಿಕೊಳ್ಳಲು ಸಹಕಾರಿಯಾಗುತ್ತದೆ. ಇದಕ್ಕೆ ಕಾಂಗ್ರೆಸಿಗರು ಸಂಕೋಚಪಡಬೇಕಾಗಿಲ್ಲ. ಆದರೆ ಕಾಂಗ್ರೆಸು ವಿರೋಧಿ ಪಕ್ಷಗಳ ಪರಿಸ್ಥಿತಿಯೇನು?

ಸ್ವಂತ ಪಕ್ಷಗಳನ್ನು ಕಟ್ಟಲು ಅನೇಕರು ಕಾಂಗ್ರೆಸಿನಿಂದ ಹೊರಬಂದರು. ಆ ಮೇಲೆ ಇವರು ನೆಲೆ ಬದಲಾಯಿಸುತ್ತಲೇ ಇದ್ದು, ಸಾರ್ವಜನಿಕರಲ್ಲಿ ವಿಶೇಷ ಗಲಿಬಿಲಿ ಹುಟ್ಟಿಸಲು ಕಾರಣರಾಗಿರುತ್ತಾರೆ. ಪ್ರತಿಗಾಮಿ ಬಂಡವಾಳ ಶಾಹಿಗಳು, ಜಾತೀಯತಾವಾದಿಗಳು ಅಥವಾ ಕಮ್ಯುನಿಸ್ಟರೊಂದಿಗೆ ಸಂದರ್ಭ ಒದಗಿದಾಗ ಒಡಂಬಡಿಕೆ ಮಾಡಿಕೊಂಡು ತಮ್ಮ ಮಾತುಗಳನ್ನೆ ತಾವು ತಿನ್ನುತ್ತಿರುವ ಹವ್ಯಾಸವನ್ನು ನಾವಿವರಲ್ಲಿ ಕಾಣಬಹುದು. ಕಳೆದ ಮಹಾ ಚುನಾವಣೆಯಲ್ಲಿದ್ದ ಸೋಶಲಿಸ್ಟ್ ಪಕ್ಷವು ಪ್ರತಿಗಾಮಿ ಪ್ರಜಾ ಪಕ್ಷದೊಂದಿಗೆ ಕೂಡಿಕೊಂಡು ಆತ್ಮಹತ್ಯೆ ಮಾಡಿಕೊಂಡಿತು. ಇದರಿಂದ ಹುಟ್ಟಿ ಪ್ರಜಾ ಸೋಶಿಯಲಿಸ್ಟ್ ಪಕ್ಷವು ತಾವು ಕಮ್ಯುನಿಸ್ಟರೊಂದಿಗೆ ಎನ್ನು ಮಾತ್ರಕ್ಕೂ ಕೂಡಿ ನಡೆಯವುದಿಲ್ಲವೆಂದು ನಿರ್ಧರಿಸಿತು. ಆದರೆ ಇಂದು ಇದರ ಮೇಲೆ ಕಮ್ಯುನಿಸ್ಟರಿಗೂ ತುಚ್ಛೀಕಾರ ಭಾವನೆ ಇದೆ ಎಂದು ತಿಳಿದೂ ಜಯಪ್ರಕಾಶ ನಾರಾಯಣರಂತಹ ಸಾತ್ವಿಕ ಧುರೀಣರೂ ಪಿ. ಎಸ್. ಪಿ. ಕಮ್ಯುನಿಸ್ಟ್ ಚುನಾವಣಾ ಒಡಂಬಡಿಕೆಯನ್ನು ಬಯಸುತ್ತಾರಂತೆ. ಪಿ. ಎಸ್. ಪಿ. ಪಕ್ಷದಿಂದ ಕೆಲಸಮಯದ ಹಿಂದೆ ಹೊರತಳ್ಳಲ್ಪಟ್ಟ ಲೋಹಿಯಾ ಮತ್ತು ಅವರ ಸೋಶಿಯಲಿಸ್ಟ್ ಪಕ್ಷವೂ ಇಂದು ಚುನಾವಣೆ ಬರುವಾಗ ಅದರೊಡನೆ ಒಂದುಗೂಡಿದರೆ ಪ್ರಜಾಸೋಶಲಿಸ್ಟರಿಗೆ ಬಹು ಸಂತೋಷ! ಜನಸಂಘದವರು ಕಮ್ಯುನಿಸ್ಟರ ಬದ್ಧ ವಿರೋಧಿಗಳು. ಆದರೆ ಚುನಾವಣಾಜ್ವರ ಇವರನ್ನು ಯಾವ ತಳಕ್ಕೆ ತಂದು ಮುಟ್ಟಿಸುವುದೂ ನೋಡಬೇಕಾಗಿದೆ.

ಎಲ್ಲಾ ರಾಜಕೀಯ ಪಕ್ಷಗಳು ತಾವೇ ಜನಸಾಮಾನ್ಯರ ಉದ್ಧಾರಕರೆಂದು ಹೇಳುತ್ತಿವೆ ಆದರೆ ಜನಸಾಮಾನ್ಯರ ಹಿತರಕ್ಷಣೆ ಹಾಗೂ ದೇಶ ಪುನಾರಚನೆಯ ಕಾರ್ಯಕ್ರಮಗಳಲ್ಲಿ ಸಹಕರಿಸುವ ಘನತೆ ಕಾಂಗ್ರೆಸು ವಿರೋಧಿ ಪಕ್ಷಗಳಲ್ಲಿ ಕಂಡು ಬರುವುದಿಲ್ಲ. ಆಡಳಿತೆಯ ಪಕ್ಷವನ್ನು ಟೀಕಿಸುವ ನಕಾರಾತ್ಮಕ ಧೋರಣೆಯಲ್ಲೇ ಇವರು ತೃಪ್ತರು. ವಾಕ್ ಸ್ವಾತಂತ್ರ, ಲೇಖನ ಸ್ವಾತಂತ್ರ್ಯದ ಹೆಸರಲ್ಲಿ ಒಂದಿಷ್ಟೂ ಅಂಕೆಯಿಲ್ಲದೆ ಈ ಸ್ವಾತಂತ್ರ್ಯದ ದುರುಪಯೋಗಗೊಳಿಸುತ್ತಿದ್ದಾರೆ ಚಳುವಳಿಯ ಬೊಬ್ಬೆ ಹಾಕಲು ಎಂತಹ ಸಂದರ್ಭವನ್ನೂ ಯೋಗ್ಯ ಸಾಧನವೆಂದು ಪರಿಗಣಿಸುತ್ತಾರೆ. ಆದರೆ ಇದರಿಂದ ಜನರಿಗೆ ಎಳ್ಳಷ್ಟೂ ಹಿತ ಉಂಟಾಗಿಲ್ಲ. ಹಳ್ಳಿಗಳಲ್ಲಿ ರಚನಾತ್ಮಕ ಕಾರ್ಯಗಳಲ್ಲಿ ಪ್ರತಿಯೊಬ್ಬನ ಶಕ್ತಿ, ಸಾಮರ್ಥ್ಯದ ಉಪಯೋಗವಾಗಬೇಕಿದ್ದರೂ, ವಿರೋಧಿಪಕ್ಷಗಳವರು ಅಸಹಕಾರ ತೋರಿಸುತ್ತಿರುವರಲ್ಲದೆ ಸರಕಾರಿ ಪಕ್ಷದ ಮೇಲಣ ದ್ವೇಷಾಸೂಯೆಯಿಂದ ತೊಡಕನ್ನ ತರುತ್ತಿರುವರು. ಅವರ ಪ್ರತಿಯೊಂದು ಪಕ್ಷವೂ ಮುಂದಿನ ಚುನಾವಣೆಯ ಮೇಲಣ ದೃಷ್ಟಿಯನ್ನು ಸೂಚಿಸುತ್ತದೆ. ಜಾತೀಯ, ವರ್ಗೀಯ, ಭಾಷಾ ಅಥವಾ ಇನ್ನಾವುದೇ ವ್ಯತ್ಯಾಸಕ್ಕೆ ಗಾಳಿ ಹಾಕಿ ಬೇಡವಾದ ಚಳುವಳಿಯನ್ನು ಕಾಣುತ್ತಿದ್ದೇವೆ. ಇದು ಪಕ್ಷದ ಇರುವಿಕೆಗೊಂದು ಸಾರ್ವಜನಿಕರಿಗೆ ಸಾಕ್ಷ್ಯರೂಪದಲ್ಲಿ ನಡೆಯುತ್ತಿದ್ದರೂ ಧುರೀಣತ್ವದ ದುರ್ಬಲತೆಯನ್ನು ಪ್ರತ್ಯಕ್ಷೀಕರಿಸುತ್ತದೆ.

ಪಕ್ಷಗಳಿಗೆ ತತ್ವ, ಧ್ಯೇಯಗಳು ಮುಖ್ಯ. ಇವುಗಳ ಪ್ರಾಮಾಣಿಕ ಕಾರ್ಯಾಚರಣೆಯಲ್ಲಿ ಜನತೆಯ ವಿಶ್ವಾಸ ದೊರಕಿಸಿಕೊಳ್ಳಬೇಕಾಗಿದೆ. ಭೂಮಾಲಕರು ಒಕ್ಕಲಿಗರ ಹಿತರಕ್ಷಕರೆಂದು ಹೇಳುತ್ತಾ, ಅವರ ಯೋಗ್ಯ ಪ್ರತಿನಿಧಿಗಳಾಗ ಬಯಸಿದರೆ? ಅಥವಾ ಧುರೀಣರು ತಮ್ಮ ಸ್ವಂತ ಅಕ್ಕಿಯನ್ನು ಹೆಚ್ಚಿನ ಬೆಲೆಯಲ್ಲಿ ಮಾರಿಕೊಂಡು ಹಳ್ಳಿಗಳಲ್ಲಿ ಸಭೆ ಏರ್ಪಡಿಸಿ, ಬಡವರಿಗಾಗಿ ಅಕ್ಕಿಯ ಬೆಲೆ ಕಡಿಮೆಯಾಗಬೇಕೆಂದು ಕಣ್ಣೀರು ಸುರಿಸಿದರೆ? ಸಮಾಜ ವಿಘಾತಕ ಚಟುವಟಿಕೆಗಳನ್ನು ನಡೆ ಬಡಿಯುವ ಬದಲು, ತಾನೇ ಅವುಗಳಲ್ಲಿ ಭಾಗಿಯಾಗಿ ಸರಕಾರವನ್ನು ಹೊಣೆಗೊಳಿಸಿದರೆ ಎಂತಹ ಅವಹೇಳನ!

ಜನತಾ ಭಾವನೆಯನ್ನು ಪಕ್ಷದ ಪರವಾಗಿ ದುರುಪಯೋಗಗೊಳಿಸಿಕೊಳ್ಳುವುದು ಪ್ರಜಾಪ್ರಭುತ್ವದ ಮಹಾ ವೈರಿ.

ಚುನಾವಣಾ ಸಂದರ್ಭದಲ್ಲಿ ಜನರು ಮಾಡಬೇಕಾದುದೇನು? ಅಧಿಕಾರಕ್ಕೆ ಬರಬಹುದಾದ ಪಕ್ಷ ಯಾವುದಿರಬಹುದೆಂದು ಸ್ಪಷ್ಟವಾಗಿ ಆಲೋಚಿಸಬೇಕು. ದೇಶದ ಪರಿಸ್ಥಿತಿಯ ವಿಶಾಲ ದೃಷ್ಟಿಕೋನದಲ್ಲಿ ಈ ಪ್ರಶ್ನೆಯನ್ನು ಉತ್ತರಿಸಿ, ಆ ಮೇಲೆ ನಮ್ಮ ಜಿಲ್ಲೆಯನ್ನ ಎಸೆಂಬ್ಲಿ ಅಥವಾ ಪಾರ್ಲಿಮೆಂಟಿನಲ್ಲಿ ಪ್ರತಿನಿಧೀಕರಿಸಲು ಯಾವ ಪಕ್ಷವು ಉತ್ತಮವೆಂದು ನಿರ್ಣಯಿಸಿಕೊಳ್ಳಬೇಕು. ಪ್ರಾಂತದಲ್ಲಿ ಯಾವ ಪಕ್ಷವು ಅಧಿಕಾರಕ್ಕೆ ಬರಬಹುದೋ ಆ ಪಕ್ಷವನ್ನೆ ಜಿಲ್ಲೆಯು ಬೆಂಬಲಿಸುವುದರಿಂದ ಜಿಲ್ಲೆಗೆ ಹೆಚ್ಚಿನ ಪ್ರಯೋಜನ ಪಡೆಕೊಳ್ಳಬಹುದೆಂಬುದು ನಿಜ. ವಿರುದ್ಧ ಪಕ್ಷದಲ್ಲಿದ್ದು ಮಾತನಾಡಲು ಜನ ಬೇಕೆಂಬ ಕಾರಣದಿಂದ ಪ್ರತಿನಿಧಿಗಳನ್ನು ಆರಿಸಿ ಕಳಿಸುವುದು ಅಪ್ರಯೋಜಕವೆಂದು ಮತದಾರರು ತಿಳಿದಿದ್ದಾರೆ. ಆದರೆ ಅಧಿಕಾರಕ್ಕೆ ಬರುವ ಪಕ್ಷವು ಇಷ್ಟಾನುವರ್ತಿಯಾಗಿರದೆ ಸಾರ್ವಜನಿಕರ ಪ್ರೀತಿ, ವಿಶ್ವಾಸಕ್ಕೆ ಪಾತ್ರವಾಗಿರುವ ಪ್ರತಿನಿಧಿಗಳನ್ನೆ ನಿಲ್ಲಿಸಬೇಕಾದುದು ಅಗತ್ಯ.

ಉತ್ತಮ ಗುಣ ನಡತೆಯ, ಸಮರ್ಥ ವ್ಯಕ್ತಿಗಳನ್ನೆ ಚುನಾವಣೆಗೆ ಹುರಿಯಾಳಾಗಿ ನೇಮಿಸಬೇಕೆಂದು ರಾಜಾಜಿ ಕೊಟ್ಟ ಕರೆ ಸಮಯೋಚಿತವಿದೆ. ರಾಜಕೀಯವೆಂದರೆ ಕರ್ಚಿನ ದಾರಿ. ಆದರೆ ಚುನಾವಣೆಯಲ್ಲಿ ಹುರಿಯಾಳುಗಳು ಹೇರಳ ಹಣ ಕರ್ಚು ಮಾಡಬೇಕೆಂದು ಸಾರ್ವಜನಿಕರು ನಿರೀಕ್ಷಿಸಿದರೆ. ಚುನಾವಣೆಯ ಬಳಿಕ ಈ ಮಹಾಶಯರು ತಮ್ಮ ಸ್ಥಾನವನ್ನು ದುರುಪಯೋಗಗೊಳಿಸಿಕೊಂಡು ಕರ್ಚಾದ ಹಣವನ್ನು ಮರಳಿ ಸಂಪಾದಿಸಲು ಉದ್ಯುಕ್ತರಾಗುವುದು ಅನಿವಾರ್ಯ. ಹುರಿಯಾಳಾಗಬೇಕೆಂಬವನು ತಾನು ಒಂದು ಲಕ್ಷ ರೂಪಾಯಿ ಕರ್ಚು ಮಾಡುವೆನೆಂದು ಹೇಳುತ್ತಿರುವುದು ನನಗೆ ಆಶ್ಚರ್ಯವನ್ನುಂಟು ಮಾಡುತ್ತಿದೆ. ಎಸೆಂಬ್ಲಿ ಚುನಾವಣೆಗೆ ನಿರ್ದಿಷ್ಟಗೊಳಿಸಲ್ಪಟ್ಟ ರೂ. 8000ವೂ ಹೆಚ್ಚೆನ್ನಬಹುದು. ಇಷ್ಟು ಕರ್ಚು ಮಾಡುವ ಚೈತನ್ಯ ಎಲ್ಲರಲ್ಲೂ ಇಲ್ಲ. ಇದ್ದರೂ ನಾಲ್ಕೈದು ಬಾರಿ ಚುನಾವಣೆಗೆ ನಿಂತರೆ ಮೂವತ್ತು ನಲುವತ್ತು ಸಾವಿರ ರೂಪಾಯಿ ಕರ್ಚು ಮಾಡಲು ಪ್ರಾಮಾಣಿಕ ಸಾರ್ವಜನಿಕ ಸೇವಾಸಕ್ತರೆಷ್ಟು ಮಂದಿ ರಾಜಕೀಯದಲ್ಲಿ ಶಕ್ತರು? ಅವರಿಗೆ ಸಿಗುವ ರೂ 150ರ ತಿಂಗಳ ಸಂಬಳ ಮತದಾರರೊಡನೆ ಸಂಪರ್ಕ ಇಟ್ಟುಕೊಳ್ಳಲು ಕೊಡಲ್ಪಡುತ್ತಿದೆ. ಇದರಲ್ಲೇ ಜೀವನ ನಿರ್ವಹಿಸಿಕೊಂಡು, ಸ್ವಂತ ಪಕ್ಷದ ಬೇಡಿಕೆಯನ್ನು ಪೂರೈಸಿಕೊಳ್ಳಬೇಕು. ಆದುದರಿಂದ ಸಾಮಾನ್ಯವಾಗಿ ಹಣವುಳ್ಳವರನ್ನು ಪಕ್ಷದವರು ಹುರಿಯಾಳಾಗಿ ಆರಿಸಿಕೊಳ್ಳುತ್ತಿದ್ದಾರೆ. ಆದರೆ ಈ ಪದ್ಧತಿಯೇ ಮುಂದುವರಿಯಬೇಕೆ? ಹುರಿಯಾಳುಗಳ ಸಾರ್ವಜನಿಕ ಹಾಗೂ ವೈಯುಕ್ತಿಕ ಜೀವನ ಪರಿಶುದ್ಧತೆಯು ಅನಗತ್ಯವೇ? ಆರಿಸಲ್ಪಟ್ಟ ಪ್ರತಿನಿಧಿಯಿಂದ ಉತ್ತಮ ಮಟ್ಟದ

(೧೫ನೇ ಪುಟ ನೋಡಿರಿ)

ಗೋವಿಜಯ

(ಗೋವಿನ ಕಥೆ)

ಶ್ರೀ. ಮುಖ್ಯಪ್ರಾಣ ಉಪಾಧ್ಯಾಯರಿಂದ ಗಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ, ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕ ಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

66 ಪುಟಗಳು : ಬೆಲೆ 0—8—0

— ನವಯುಗ ಪ್ರೆಸ್, ಉಡುಪಿ. —

ಸ್ವರಾಜ್ಯದಿಂದ ರಾಮರಾಜ್ಯಕ್ಕೆ....

ರಾಷ್ಟ್ರಪಿತ ಮಹಾತ್ಮಾ ಗಾಂಧೀಯವರು ಸ್ವರಾಜ್ಯವು ರಾಮರಾಜ್ಯವಾಗಿ ಪರಿಣಮಿಸಬೇಕೆಂಬ ಮಹದಾಸೆಯನ್ನಿಟ್ಟುಕೊಂಡಿದ್ದರು: ಆ ರಾಮರಾಜ್ಯದಲ್ಲಿ ಪ್ರತಿಯೊಬ್ಬನೂ ಪ್ರಬುದ್ಧ ಪ್ರಜೆಯಾಗಿದ್ದನು.

ಬರೆದವರು: ಶ್ರೀ ಟಿ. ಶ್ರೀನಿವಾಸ ರಾಘವಾಚಾರ್ಯ

ರಾಜನೀತಿ ಶಾಸ್ತ್ರದ ತಿರುಳಿನ ಸಾಮಾನ್ಯ ಜ್ಞಾನವು ಜೀವನದ ಪ್ರತಿಯೊಂದೂ ರಂಗದಲ್ಲಿದ್ದ ಜನರಿಗೆ ಆವಶ್ಯವೆಂದೂ ಆದುದರಿಂದ ಪ್ರತಿಯೊಬ್ಬನ ಪ್ರಾರಂಭಿಕ ಶಿಕ್ಷಣದಲ್ಲಿ ಅದೊಂದು ಭಾಗವಾಗಿರಬೇಕೆಂದೂ ಸೂಚಿಸುವ ಅನೇಕ ನಿದರ್ಶನಗಳು ರಾಮಾಯಣದಲ್ಲಿವೆ.

ಅರಸೊತ್ತಿಗೆ ಅಥವಾ ಉದಾರವಾದ ಸರ್ವಾಧಿಕಾರವೇ ರಾಮಾಯಣ ಕಾಲದಲ್ಲಿ ಸಾರ್ವಭೌಮಾಧಿಕಾರವು ವ್ಯಕ್ತವಾಗುತ್ತಿದ್ದ ಸಾಮಾನ್ಯ ಸ್ವರೂಪವೆಂದು ಹೇಳಬಹುದು. ರಾಜನಿಗೆ ಸಂಪೂರ್ಣ ಅಧಿಕಾರವಿದ್ದಿತು; ಆದರೆ ಆತನ ಕೈಗಳು ಧರ್ಮ ಸೂತ್ರಗಳಿಂದ ಬಂಧಿತವಾಗಿದ್ದವು.

ಪ್ರಜೆಗಳ ಪರಿಪಾಲನೆಯಲ್ಲಿ ಮತ್ತು ಅವರಿಗೆ ನ್ಯಾಯ ದಾನವನ್ನು ಮಾಡುವಲ್ಲಿ ರಾಜನು ವಿಷ್ಣು ಭಗವಾನನ ಅವತಾರವೆಂದು ಜೀವನದ ಪ್ರತಿಯೊಂದೂ ಘಟ್ಟದಲ್ಲಿ ಆತನನ್ನು ಎಚ್ಚರಿಸಲಾಗುತ್ತಿತ್ತೆನ್ನಬಹುದು.

ಸಾಮಾನ್ಯವಾಗಿ ಅರಸೊತ್ತಿಗೆಯು ಸಂತಾನ ಪಾರಂಪರ್ಯವಾಗಿ ನಡೆಯುತ್ತಿದ್ದರೂ ಪ್ರಜೆಗಳ ಒಪ್ಪಿಗೆಯು ಇದಕ್ಕೆ ಅವಶ್ಯವಾಗಿದ್ದಿತು. ಸೂರ್ಯವಂಶದ ಅರಸುಗುವರ ಅಸಮಂಜಸನು ಕೆಟ್ಟ ವ್ಯವಹಾರಗಳ ಪರಿಣಾಮವಾಗಿ ಅರಸೊತ್ತಿಗೆಯನ್ನು ಬಿಟ್ಟುಬಿಡಬೇಕಾಗಿ ಬಂದ ನಿದರ್ಶನದ ಮೇಲಿಂದ, ಪ್ರಜೆಗಳಿಗೆ ಉಚಿತ ಸಂದರ್ಭಗಳಲ್ಲಿ ಕೆಟ್ಟವನೊಬ್ಬನು ಸಿಂಹಾಸನಕ್ಕೆ ಏರುವುದನ್ನು ತಡೆಯುವ, ಅಥವಾ ಸಿಂಹಾಸನದಿಂದ ಪದಚ್ಯುತನಾಗಿ ಮಾಡುವ ಅಧಿಕಾರವಿತ್ತೆಂದೂ ಭಾವಿಸಬಹುದು.

ಅರಸನು ನಿಯಮನಿಷ್ಠವಾದ ಜೀವನವನ್ನು ನಡೆಸಬೇಕು; ಸುವಿಚಾರಿಯಾಗಿರಬೇಕು; ತ್ರಿಕರಣಗಳಲ್ಲಿಯೂ ಶುದ್ಧನಾಗಿರಬೇಕು; ಎಲ್ಲ ಪ್ರಜೆಗಳೂ ತನ್ನನ್ನು ಅನುಸರಿಸುವಷ್ಟು ಮಾದರಿ ಯೋಗ್ಯತೆಯಿಂದ ಕೂಡಿರಬೇಕು— ಎಂಬಿತ್ಯಾದಿ ವಿಷಯಗಳನ್ನು "ಯಥಾ ರಾಜಾ ತಥಾ ಪ್ರಜಾ" ಎಂಬ ಆರ್ಯೋಕ್ತಿಯಿಂದ ಕಂಡುಕೊಳ್ಳಬಹುದು.

ರಾಜಕೀಯ ಶಾಸ್ತ್ರ ಮತ್ತು ಆದರ್ಶ ರೀತಿಯ ಕುಟುಂಬ ಸಂಸಾರದ ಸಾರ್ವಜನಿಕ ಆಡಳಿತ ವಿಧಾನ ಇವುಗಳ ಮೇಲೆ ವಿಶೇಷವಾದ ಪ್ರಕಾಶವನ್ನು ವಾಲ್ಮೀಕಿ ರಾಮಾಯಣದಲ್ಲಿ ಬರುವ ಒಂದು ಪ್ರಸಂಗವು ಬೀರುತ್ತದೆ. ಚಿತ್ರಕೂಟ ಪರ್ವತದಲ್ಲಿ ರಾಮ ಮತ್ತು ಭರತರ ನಡುವೆ ನಡೆಯುವ ಪ್ರಸಿದ್ಧ ಸಂಭಾಷಣೆಯೇ ಈ ಪ್ರಸಂಗವಾಗಿದೆ.

ಅರಸನಂತೆ ಆತನ ಸಚಿವರಿಗೂ ಹಲವು ಅರ್ಹತೆಗಳಿರಬೇಕೆಂದು ಹೇಳಲಾಗಿದೆ. ಸಚಿವರ ಸ್ಥಾನವು ಅರಸನಿಗೆ ಹೆಚ್ಚು ಕಡಿಮೆ ಸಮಾನವಾದುದಾಗಿದೆ. ಆದುದರಿಂದ ಇವರು ಶೂರರೂ ಕೋಪವನ್ನು ಜಯಿಸಿದವರೂ ಜಿತೇಂದ್ರಿಯರೂ ಕುಲೀನರೂ ಇಂಗಿತಜ್ಞರೂ ಸಕಲ ಶಾಸ್ತ್ರ ಪಾರಂಗತರೂ ಆಗಿರಬೇಕು.

[ಕಚ್ಚಿದಾತ್ಮ ಸಮಾಶ್ಶೂರಾ: ಜಿತಕ್ರೋಧಾ: ಜಿತೇಂದ್ರಿಯಾ:
ಕುಲೀನಶ್ಚೇಂಗಿತಜ್ಞಶ್ಚ ಕೃತಾಸ್ತೇ ತಾತ ಮಂತ್ರಿಣ:]

ಸಾಮ್ರಾಜ್ಯದ ಭದ್ರತೆ ಮತ್ತು ಅಭ್ಯುದಯವು ಬುದ್ಧಿವಂತರೂ ಅನುಭವಿಗಳೂ ಉತ್ತಮ ಚರಿತ್ರರೂ ಸತ್ಯ ನ್ಯಾಯಗಳನ್ನು ಗುರುತಿಸುವ ಯೋಗ್ಯತೆಯುಳ್ಳವರೂ ಆದ ಮಂತ್ರಿಗಳು ಕೊಡುವ ಸಲಹೆ ಸೂಚನೆಗಳನ್ನೆ ಅವಲಂಬಿಸಿದೆ.

[ಮಂತ್ರೋ ವಿಜಯ ಮೂಲಂಹಿ ರಾಜ್ಞಾಂ ಭವತಿ ರಾಘವ
ಸುಸಂವೃತೋ ಮಂತ್ರಧರೈರಮಾತ್ಯೈ: ಶಾಸ್ತ್ರಕೋವಿದೈ:]

ಪ್ರಧಾನಾಮಾತ್ಯನು ಸಚಿವ ಸಂಪುಟದ ಎಲ್ಲ ಸದಸ್ಯರ ಸಾಮೂಹಿಕ ಪ್ರತಿನಿಧಿಯಾಗಿ ಶೌರ್ಯ, ದಕ್ಷತೆ, ವಿಚಕ್ಷಣತೆ ಇತ್ಯಾದಿ ಗುಣಗಳಲ್ಲಿ ಮೆರೆಯುವವನಾಗಿದ್ದರೆ ಮಾತ್ರ ಅರಸನ ಮತ್ತವನ ರಾಜ್ಯದ ಶ್ರೇಯಸ್ಸು ಆಗಬಲ್ಲುದು.

[ಏಕೋಪ್ಯಮಾತ್ಯೋ ಮೇಧಾವೀ ಶೂರೋದಕ್ಷೋ ವಿಚಕ್ಷಣ:
ರಾಜಾನಂ ರಾಜಮಾತ್ರಂ ವಾ ಪ್ರಾಪಯೇನ್ಮಹತೀಂ ಶ್ರಿಯಂ]

ಪ್ರಾಮುಖ್ಯ ವಿಷಯಗಳಲ್ಲಿ ರಾಜನು ತಾನೊಬ್ಬನೇ ನಿರ್ಣಯಗಳನ್ನು ಕೈಗೊಳ್ಳಕೂಡದು; ಆತನು ಸಾಮಾನ್ಯ ಜನರ ಸಲಹೆಯನ್ನು ಕೇಳಲೂ ಹೋಗಬಾರದು. ಸಚಿವ ಸಂಪುಟವು ಮಾಡಿದ ನಿರ್ಧಾರಗಳನ್ನು ಆ ನಿರ್ಣಯವು ರೂಢಿಗೆ ಬರತಕ್ಕ ಸಮಯದ ವರೆಗೆ ಗೋಪ್ಯವಾಗಿ ಕಾಯ್ದಿಡಬೇಕು.

[ಕಚ್ಚಿನ್ಮಂತ್ರಯಸೇ ನೈಕ: ಕಚ್ಚಿನ್ನ ಬಹುಭಿಸ್ಸಹ
ಕಚ್ಚಿತ್ತೇ ಮಂತ್ರಿತಂ ಮಂತ್ರಂ ರಾಷ್ಟ್ರಂ ನ ಪರಿಧಾವತಿ]

ಏನು ಕಾರ್ಯವನ್ನೆ ಕೈಗೊಳ್ಳಲಿ, ಅಭಿವೃದ್ಧಿಯ ಯಾವ ಪ್ರಯತ್ನವನ್ನೆ ಪ್ರಾರಂಭಿಸಲಿ, ಅದು ಕಡಿಮೆ ಭಂಡವಾಳದಿಂದ ಮೊದಲಾಗಬೇಕು; ಮತ್ತು ರಾಜ್ಯಕ್ಕೆ ಸದಾಕಾಲ ಲಾಭವನ್ನು ತರುವಂತಹ ಪ್ರತಿಫಲವನ್ನು ಕೊಡಬೇಕು. ಇಂತಹ ಯೋಜನೆಗಳನ್ನು ಶೀಘ್ರವಾಗಿ ಮುಂದೊತ್ತಬೇಕು; ವಿಳಂಬವು ಆದಷ್ಟು ಕಡಿಮೆಯಾಗಿರಬೇಕು; ಎಷ್ಟು ಮಾತ್ರಕ್ಕೂ ಅನಿಶ್ಚಿತ ಅವಧಿಯವರೆಗೆ ಈ ಕೆಲಸದ ನೆರವೇರುವಿಕೆಯನ್ನು ಮುಂದೂಡಲಾಗದು.

[ಕಚ್ಚಿದರ್ಥಂ ವಿನಿಶ್ಚಿತ್ಯ ಲಘುಮೂಲಂ ಮಹೋದಯಂ
ಕ್ಷಿಪ್ರಮಾರಭಸೇ ಕರ್ತುಂ ನಾದೀರ್ಘಯಸಿ ರಾಘವ]

ಸರಕಾರವು ಕೈಗೊಂಡ ಕೆಲಸವಾಗಲೀ ಯೋಜನೆಯಾಗಲೀ ವಿಫಲವಾಗಬಾರದು; ವ್ಯರ್ಥವಾಗಬಾರದು. ಆದುದರಿಂದ ಪ್ರಾರಂಭದಿಂದಲೇ ವಿಶೇಷ ಜಾಗರೂಕತೆಯನ್ನು ವಹಿಸಬೇಕು. ಸಮಯವನ್ನಾಗಲೀ ಹಣವನ್ನಾಗಲೀ ಲಾಭದಾಯಕವಲ್ಲದ ಉದ್ದೇಶಗಳಿಗಾಗಿ ಅನಾವಶ್ಯವಾಗಿ ವ್ಯಯಿಸಲಾಗದು.

[ಕಚ್ಚಿತ್ತೇ ಸುಕೃತಾನ್ಯೇವ ಕೃತರೂಪಾಣಿ ವಾ ಪುನ:
ವಿದುಸ್ತೇ ಸರ್ವಕಾರ್ಯಾಣಿ ನಕರ್ತವ್ಯಾನಿ ಪಾರ್ಥಿವಾ:]

ರಾಜ್ಯವನ್ನು ಸೈನ್ಯಶಕ್ತಿಯ ಮೇಲೆ ಆಳುವ ಹವ್ಯಾಸಕ್ಕೆ ಹೋಗಬಾರದು: ರಾಜನು ಪ್ರಜಾವತ್ಸಲನಾಗಿದ್ದುಕೊಂಡು ಅವರ ಪ್ರೀತಿಗೆ ಪಾತ್ರನಾಗಿ ರಾಜ್ಯಭಾರ ನಿರ್ವಹಣೆಯ ಕೆಲಸ ನಡೆಯಬೇಕು.

[ಕಚ್ಚಿನ್ನೋಗ್ರೇಣ ದಂಡೇನ ಭೃಶಮುದ್ವೇಜಿತ ಪ್ರಜಂ
ರಾಜ್ಯಂ ತವಾನುಜಾನಂತಿ ಭರತಕ್ಕೈಕಯಾಸುತ]

ಆಯವ್ಯಯ ಪಟ್ಟಿಯು ಯಾವಾಗಲೂ ಸಮತೂಕದಿಂದ ತಯಾರಿಸಿದುದಾಗಿರಬೇಕು. ಕೊರತೆಯನ್ನು ಆಯವ್ಯಯ ಪಟ್ಟಿಯು ಕಾಣಿಸಲೇಕೂಡದು. ಬೇಡವಾದ ಕಾರ್ಯಗಳಲ್ಲಾಗಲೀ ಅಪಾತ್ರ ದಾನದಲ್ಲಿಯಾಗಲೀ ಸರಕಾರಿ ಹಣದ ದುಂದುಗಾರಿಕೆ ನಡೆಯಬಾರದು.

[ಆಯಸ್ತೇ ವಿಪುಲ: ಕಚ್ಚಿತ್ ಕಚ್ಚಿದಲ್ಪತರೋ ವ್ಯಯ:
ಅಪಾತ್ರೇಷು ನ ತೇ ಕಚ್ಚಿತ್ ಕೋಶೋ ಗಚ್ಛಂತಿ ರಾಘವ]

ನ್ಯಾಯದಾನಾದಿ ಕಾರ್ಯಗಳಲ್ಲಿ ಸಮಾಜದ ಆಢ್ಯರು ತಮ್ಮ ವರ್ಚಸ್ಸನ್ನು ಪ್ರಯೋಗಿಸಿ ವಿರುದ್ಧವಾದ ತೀರ್ಮಾನಗಳು ಹೇರಲ್ಪಡುವುದಕ್ಕೆ ಅವಕಾಶವಿರಲಾಗದು. ಧನಾಢ್ಯರಿಗೂ ದರಿದ್ರರಿಗೂ ನಡುವೆ ಮನಸ್ತಾಪ ಅಥವಾ ನ್ಯಾಯಕ್ಕಾಗಿ ತಿಕ್ಕಾಟ ನಡೆದಾಗ ಧನಪ್ರಭಾವದಿಂದ ನ್ಯಾಯದಾನಕ್ಕೆ ಚ್ಯುತಿಯಾಗದಿರುವಷ್ಟು ನ್ಯಾಯದಾನದ ಪಾವಿತ್ರ್ಯ ಉಚ್ಚಸ್ಥಾನದಲ್ಲಿರಬೇಕಾಗಿದೆ.

[ವ್ಯಸನೇನ ಕಚ್ಚಿದಾಢ್ಯಸ್ಯ ದುರ್ಗತಸ್ಯ ಚ ರಾಘವ
ಅರ್ಥಂ ವಿರಾಗಾ: ಪಶ್ಯಂತಿತವಾಮಾತ್ಯಾ: ಬಹುಶ್ರುತಾ:]

ನ್ಯಾಯದರ್ಶಿಗಳೂ ನ್ಯಾಯಾಧೀಶರೂ ಆರೋಪಿಯು ತಮ್ಮ ಮಗನೇ ಬೇಕಾದರೆ ಆಗಿರಲಿ, ಅಪರಾಧಿ ಅವನು ಹೌದೆಂದು ಸಿದ್ಧವಾದರೆ ನ್ಯಾಯದಾನವನ್ನು ಹಿಂದೆ ಮುಂದೆ ನೋಡದೆ ಮಾಡುವಷ್ಟು ನಿಷ್ಪಕ್ಷಪಾತಿಗಳಾಗಿರಬೇಕು.

[ಪ್ರಾಪ್ತಕಾಲಂ ತು ತೇ ದಂಡಂ ಧಾರಯೇಯುಸ್ತು ತೇಷ್ವಪಿ]

(೧೯ನೇ ಪುಟ ನೋಡಿರಿ)

TENDER NOTICE

Sealed tenders are invited by the undersigned from the registered contractors up to 4 P. M. on 18—8—1956 (Saterday) for the works shown below (To be executed at the temple)

The tenders should be sent in sealed cover, accompanied by a chalan in token of having remitted the prescribed Earnest money deposit into the temple treasury. Intending tenderers can peruse the estimate in the office of the undersigned during the office hours on any working day. Tenderers, or their authorised agents may be present in the office of the undersigned at 4-15 P. M. on 18-8-1956 when the tenders will be opened. The undersigned reserves to himself the right of rejecting any tender, without assigning reasons therefor.

	Name of work	Amount of Estimate	Earnest money Deposit.
1	Constructing a market shed of Sri Ananthapadmanabha Temple, Perdur, Udipi Tq. S K. (Wood work not included)	Rs. 1300/-	Rs. 40/-
2	Constructing 2 shop buildings in front of Sri Ananthapadmanabha Temple. Perdur, Udipi Tq. (Wood work not included)	Rs. 2850/-	Rs. 75/-

Sri Ananthapadmanabha Temple, Perdur, S. K.

Perdoor,
Date 12—8—1956

K. B. SHETTY,
Executive Officer.

ಆಭರಣಗಳಿಗೆ ಆಕರ್ಷಣೆ ಬೇಕು!

ಆಕರ್ಷಣೀಯವಾಗಿ ತಯಾರಿಸಲು ನುರಿತ ಅನುಭವ ಬೇಕು!

29 ವರ್ಷಗಳಿಗೂ ಮಿಕ್ಕಿದ ಅನುಭವದಿಂದ, ನಿಪುಣ ಕೆಲಸಗಾರರಿಂದ ಚಿನ್ನ ಬೆಳ್ಳಿ ಆಭರಣ ಮೊದಲಾದುವನ್ನು ಸುಲಭ ದರದಲ್ಲಿ ಸಕಾಲದಲ್ಲಿ ತಯಾರಿಸಿ ಕೊಡುವೆವು.

ಎನ್. ಜಿ. ಗೋಪಾಲಕೃಷ್ಣ ಶೇಟ್

ಚಿನ್ನ ಬೆಳ್ಳಿ ವ್ಯಾಪಾರಿ, ಸಂತೆಕಟ್ಟೆ, ಉಡುಪಿ.

(ನವಯುಗ ಪ್ರೆಸ್ಸಿನ ಎದುರು)

NAVAYUGA

Popular Kannada Weekly

Founder:—

A. B. SHETTY, *M. L. A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೧೬-೮-'೫೬	೫೦

ಪ್ರಗತಿ ಮತ್ತು ಸ್ವಾತಂತ್ರ್ಯ

ಆಗೋಸ್ತು ೧೫ — ಮರಳಿ ಬಂದಿದೆ: ಸ್ವಾತಂತ್ರ್ಯವನ್ನು ಒಂಭತ್ತು ವರ್ಷಗಳ ಕಾಲ ಅನುಭವಿಸಿದ ನಾವು ತೃಪ್ತಿ ಮತ್ತು ಸಮಾಧಾನದ ನಸುನಗೆಯಿಂದ ಕೂಡಿರುವೆವೆ, ಅಥವಾ ದುಃಖತಪ್ತರಾಗಿ ಇನ್ನೂ ನಿಟ್ಟುಸಿರನ್ನು ಬಿಡುತ್ತಿರುವೆವೆ— ಎಂದು ಪ್ರಶ್ನಿಸಿದ ಪಕ್ಷದಲ್ಲಿ, ನಾವು ತೃಪ್ತರೂ ಸುಖಿಗಳೂ ಆಗಿರುವೆವೆಂಬ ಉತ್ತರವೇ ಪ್ರತಿಯೊಬ್ಬ ಪ್ರಬುದ್ಧ ಪ್ರಜೆಯಿಂದ ಬಂದೀತು, ನಿಶ್ಚಯ. "ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು" ಎಂದು ಉದ್ಘೋಷಿಸಿದ ಲೋಕಮಾನ್ಯ ತಿಲಕರ ಭವ್ಯ ಸ್ಮರಣೆಯನ್ನು ಈಗಷ್ಟೇ ಮಾಡಿರುವ ಭಾರತೀಯರು ಎಂದಿಗೂ ಸ್ವಾತಂತ್ರ್ಯದ ಅವಹೇಳನೆಯನ್ನು ಮಾಡಲಾರರೆಂದೇ ನಾವು ನಂಬಿದ್ದೇವೆ. ಸ್ವಾತಂತ್ರ್ಯವು ನಮ್ಮ ಪ್ರಗತಿಯ ಅಡಿಗಲ್ಲು—ಅದರ ಮೇಲೆಯೇ ನಮ್ಮ ಪ್ರಜಾರಾಜ್ಯದ ಭವ್ಯ ಭವನವು ನಿಂತಿದೆ: ಕಲ್ಯಾಣ ರಾಷ್ಟ್ರದ ಸಾಧನವು ನಿರ್ಮಾಣವಾಗುತ್ತಿದೆ, ಎನ್ನಬಹುದು. ನಾವು ನಮ್ಮ ಒಂಭತ್ತು ವರ್ಷಗಳ ಸಾಧನೆಗಾಗಿ ನಿಜಕ್ಕೂ ಹೆಮ್ಮೆಪಟ್ಟುಕೊಳ್ಳಬಹುದು. ದೇಶದ ಯಾವ ಮೂಲೆಯನ್ನೇ ಪ್ರವೇಶಿಸಲಿ—ನವಚೇತನಯುಕ್ತವಾದ ಚಟುವಟಿಕೆಗಳಲ್ಲಿ ಏನಾದರೊಂದು ಅಲ್ಲಿ ನಡೆದಿರುವುದನ್ನು ನಾವು ಕಾಣಬಹುದು. ಸ್ವಾತಂತ್ರ್ಯ ಪ್ರಾಪ್ತಿಯ ಕಾಲದಲ್ಲಿದ್ದ ಗೊಂದಲಮಯ ವಾತಾವರಣವು ಈಗ ಇಲ್ಲವಾಗಿದೆ; ಅನ್ನಕ್ಷಾಮ, ವಸ್ತ್ರಕ್ಷಾಮ ಮತ್ತು ಆಡಳಿತ ಯಂತ್ರವು ಕುಸಿದು ಬೀಳುವ ಭಯ ಇಂದು ಎಳ್ಳಷ್ಟೂ ಇಲ್ಲ. ದಾರಿದ್ರ್ಯ ನಿರ್ಮೂಲನದ ದೃಢವಾದ ಸಂಕಲ್ಪವನ್ನು ಸರಕಾರವು ಕೈಗೊಂಡಿದೆ; ಮತ್ತು ಪ್ರಥಮ ಪಂಚವಾರ್ಷಿಕ ಯೋಜನೆಯು ಅನ್ನ ಮತ್ತು ವಸ್ತ್ರಗಳ ಮೂಲಭೂತ ಸಮಸ್ಯೆಯನ್ನು ಗಣನೀಯವಾಗಿ ಮತ್ತು ಶೀಘ್ರ ಕ್ಷಿಪ್ರದಲ್ಲಿ ಪರಿಹರಿಸಿದೆ. ಸಾಮಾಜಿಕ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಹಿಂದಿನ ಶೋಷಕ ಹಾಗೂ ತಾರತಮ್ಯ ಬುದ್ಧಿಯ ಪದ್ಧತಿಗಳನ್ನು ಕಿತ್ತೊಗೆದು ನ್ಯಾಯದಾನವನ್ನೂ ಸಮಾನಾವಕಾಶ ಮತ್ತು ಅಧಿಕಾರಗಳನ್ನೂ ನೀಡುವ ಸುಧಾರಣೆಗಳು ನಡೆದಿವೆ; ನಡೆಯುತ್ತಿವೆ. ಭಾರತವು ಹಿಂದುಳಿದ ದೇಶವೆಂದು ಆರ್ಥಿಕ ಹಾಗೂ ಸಾಮಾಜಿಕ ಶಾಸ್ತ್ರಜ್ಞರು ಪರಿಗಣಿಸುತ್ತಿದ್ದರೂ ಭಾರತ ಸರಕಾರದ ಶುಭಕರವಾದ ನಡವಳಿಕೆಯು ಲೋಕದಲ್ಲಿಯೇ ಸುಸಂಸ್ಕೃತವಾದುದೆಂಬ ಹೆಗ್ಗಳಿಕೆಯನ್ನು ಸಂಪಾದಿಸಿದೆ. ರಾಷ್ಟ್ರದ ಪ್ರಗತಿಯು ಒಳ್ಳೆಯ ರಾಜಕೀಯಪಕ್ಷವನ್ನೆಂತೋ ಅಂತೆಯೇ ಉತ್ತಮ ವ್ಯಕ್ತಿತ್ವ ಸಂಪನ್ನರನ್ನೂ ಹೊಂದಿಕೊಂಡಿದೆ. ಭಾರತೀಯರ ಸುದೈವದಿಂದ ಕಾಂಗ್ರೆಸಿನಂತಹ ಚಾರಿತ್ರಿಕ ಹಿನ್ನೆಲೆಯ ಸಂಸ್ಥೆಯು ಭಾರತದ ರಾಜಕೀಯ ಜೀವನಾಡಿಯಾಗಿದೆ; ಶ್ರೀ ಜವಾಹರಲಾಲ ನೆಹರುಗಳಂತಹ ಪ್ರತಿಭಾನ್ವಿತ ಕ್ರಾಂತಿಪುತ್ರರು ಸರಕಾರದ ಕರ್ಣಧಾರರಾಗಿದ್ದಾರೆ. ನಮಗೆ ಇನ್ನೆರಡು ದಶಕಗಳವರೆಗೆ ರಾಜಕೀಯದಲ್ಲಿ ಮಾಡಲಿಕ್ಕೇನೂ ಕೆಲಸವಿಲ್ಲ; ನಮ್ಮ ಎಲ್ಲ ಶಕ್ತಿಯೂ ಸಾಮಾಜಿಕ ಮತ್ತು ಆರ್ಥಿಕರಂಗದಲ್ಲಿ ಕೇಂದ್ರಿತವಾಗಬೇಕಾಗಿದೆ; ಆದುದರಿಂದ ನಮ್ಮಲ್ಲಿ ರಾಜಕೀಯ ಪಕ್ಷಗಳು ಜನರನ್ನು ರಾಜಕೀಯದ ಕೆಸರಾಟದಲ್ಲಿ ಧುಮುಕಿಸದೆ, ರಾಷ್ಟ್ರ ಪುನಾರಚನೆಯ ಯಶೋಮಾರ್ಗದಲ್ಲಿ ಮುನ್ನಡೆಸುವುದು ವಿಹಿತ—ಎಂಬುದಾಗಿ ಪ್ರಾಜ್ಞರ ಅಭಿಪ್ರಾಯವು ಆಗಿಂದಾಗ್ಗೆ ಕೇಳಿ ಬರುತ್ತಿದೆ. ನಮ್ಮ ರಾಜಕೀಯ ಪಕ್ಷಗಳು ಚುನಾವಣೆಯ ಮೇಲೆಯೇ ಕಣ್ಣಿಟ್ಟವುಗಳಾಗಿರುವುದನ್ನು ಕಂಡು ನುಡಿದ ಮಾತಿದು. ಈಗ ಇನ್ನೊಂದು ಚುನಾವಣೆಯು ಸಮೀಪಿಸಿದೆ—ರಾಜಕೀಯ ಪಕ್ಷಗಳು ಪುನಃ ಜಾಗೃತವಾಗ ತೊಡಗಿವೆ. ಆದಷ್ಟು ಹೆಚ್ಚು ಸ್ಥಾನಗಳನ್ನು ಶಾಸನಾಂಗ ಮತ್ತು ಸಂಸತ್ತಿನಲ್ಲಿ ಪಡೆಯುವುದೇ ರಾಜಕೀಯ ಪಕ್ಷಗಳ ಏಕಮೇವ ಉದ್ದೇಶವಾಗಿರುವಂತಿದೆ. ಚುನಾವಣೆಯ ಜ್ವರವು ಏರಿರುವಾಗ, ನಮ್ಮ ಸಾಧನೆಯ ಚಿತ್ರವು ವಿಕೃತವಾಗಿ ತೋರುವುದು ಪ್ರತಿ ಪಕ್ಷಗಳಿಗೆ ಮತ್ತವುಗಳ ಅಭಿಮಾನಿಗಳಿಗೆ ಸಹಜವಾದುದಾಗಿದೆ; ಕಾಂಗ್ರೆಸಿನ ಪಾಲಿಗೆ ಈ ಚಿತ್ರಗಳು ಅತ್ಯಂತ ರಮ್ಯವೂ ತೀರ ತೃಪ್ತಿಕರವೂ ಆಗಿ ತೋರುವುದೂ ಸಹಜ. ಆದರೆ ನಿಷ್ಪಕ್ಷಪಾತವಾಗಿ ನೋಡಿದರೆ, ನಾವು ಮಧ್ಯ ಮಾರ್ಗದಲ್ಲಿದ್ದೇವೆ: ನಮ್ಮ ನವ ವರ್ಷಗಳ ಸಾಧನೆಯು ಎಷ್ಟು ಮಾತ್ರಕ್ಕೂ ಕ್ಷುಲ್ಲಕವಾದುದಲ್ಲ. ಭಾರತವು ಸ್ವಾತಂತ್ರ್ಯನಂತರ ಪ್ರಗತಿಯನ್ನು ಹೊಂದಿಲ್ಲವೆಂದು ಹೇಳುವವರು ಈ ದೇಶದಲ್ಲಿ ಇತ್ತೀಚಿನ ವರ್ಷಗಳಲ್ಲಿ ವ್ಯಕ್ತವಾದ ಅಗಾಧ ರಚನಾತ್ಮಕ ಚಟುವಟಿಕೆಗಳ ಪರಿಚಯವನ್ನು ಹೊಂದಿದವರೇ ಅಲ್ಲ! ಆದರೆ ನಾವು ಸಂತೃಪ್ತಿಯನ್ನು ಹೊಂದಿ, ಇನ್ನು ಮುಂದೆ ಉದಾಸೀನರಾಗುವುದಾಗಲೀ ಮಾಡಿದ ಕೆಲಸವೇ ದೊಡ್ಡದೆಂಬ ದುರಭಿಮಾನಕ್ಕೆ ಒಳಗಾಗುವುದಾಗಲೀ ಸಲ್ಲದು. ಮಾಡಿರುವ ಕೆಲಸವು ಅನೇಕ ಲೋಪದೋಷಗಳಿಂದ ಕೂಡಿದೆ —ಇವುಗಳ ಪರಿಹಾರಕ್ಕೆ ವಿಳಂಬವಿಲ್ಲದೆ ಮನಸ್ಸು ಕೊಡಬೇಕಾಗಿದೆ. ನಾವು ಅಭಿಮಾನಿಗಳಾಗೋಣ; ಸ್ವಂತ ವಿವೇಕಿಗಳಾಗೋಣ—ದುರಭಿಮಾನಿಗಳೂ ಅಹಂಕಾರಿಗಳೂ ವಿಧಾಯಕ ಚಟುವಟಿಕೆಗಿಂತಲೂ ಟೀಕೆಯೇ ಭಂಡವಾಳವಾಗಿರುವವರೂ ಮಾತ್ರ ಆಗೋಣಬೇಡ. ವೆಚ್ಚ ಮಾಡಿದ ರೂಪಾಯಿಗಳನ್ನು ನೋಡಿಯೇ ರಾಷ್ಟ್ರವು ಪ್ರಗತಿಪರವಾಗಿದೆ ಎನ್ನಲು ಬರುವುದಿಲ್ಲ, ನಿಜ; ಏಕೆಂದರೆ, ಹಣದ ದುಂದುಗಾರಿಕೆ ನಡೆದಿರುವುದೂ ಸಾಧ್ಯ. ನಾವು ಮಾಡಬೇಕಾದ ಕೆಲಸಗಳು ಬಹಳಷ್ಟಿವೆ ಎಂಬ ನೆನಪನ್ನೇ ಸದಾ ಹುಟ್ಟಿಸಿಕೊಂಡು, ತಾವೇನೂ ಕೆಲಸ ಮಾಡದೆ, ಇತರರು ಮಾಡಿದ ಕೆಲಸಗಳು ಸಾಲವೆಂದು ಮಾತ್ರ ಹೇಳುತ್ತಿರುವವರ 'ಭೇದೋಪಾಯಕ್ಕೆ' ಭಾರತೀಯರು ಮರುಳಾಗುವುದು ಉಚಿತವಲ್ಲ. "ನಮ್ಮ ಕೈಗೆ ಸರಕಾರ ಬಂದ ಮೇಲೆಯೇ ಒಳ್ಳೆಯ ಕೆಲಸ ಮಾಡುವವರು ನಾವು" ಎನ್ನುವ ಪ್ರತಿಗಾಮಿ ಧೋರಣೆಯ ರಾಜಕೀಯ ಪಕ್ಷಗಳನ್ನು ಪ್ರೋತ್ಸಾಹಿಸುವುದರಿಂದ ಭಾರತದ ಏಳಿಗೆಯು ಕ್ಷಿಪ್ರದಲ್ಲಿ ಎಷ್ಟು ಮಾತ್ರಕ್ಕೂ ಕೈಗೂಡಿ ಬರಲಾರದು. ಅದು ಸರಕಾರದ ಸಮರ್ಥಕರ ಸಂಖ್ಯೆಯನ್ನು ವರ್ಷ ಹೋದಂತೆ ಕಡಿಮೆಮಾಡುತ್ತಾ ಹೋಗಬಹುದು; ಪರಿಣಾಮವಾಗಿ ಸರಕಾರಿ ಪಕ್ಷದ ಶಕ್ತಿಯನ್ನೂ ಕ್ಷೀಣಿಸಿ, ಅದರ ಚಟುವಟಿಕೆಗಳನ್ನು ತಗ್ಗಿಸಿ, ಆಗಬಹುದಾಗಿದ್ದ ಒಳ್ಳೆಯ ಕೆಲಸಗಳು ಆಗದಂತಹ ಘಾತಕ ಪರಿಣಾಮವನ್ನೇ ಮಾಡೀತು. ಆದುದರಿಂದ ನಾವು ಸ್ವಾತಂತ್ರ್ಯದ ಉತ್ಸವದಲ್ಲಿ ಭಾಗಿಯಾಗಿ, ಮನೆಗೆ ಮರಳುವಾಗ ರಾಜಕೀಯ ಅಂತಃಕಲಹಕ್ಕಿಂತಲೂ ರಾಷ್ಟ್ರನಿರ್ಮಾಣದ ರಚನಾತ್ಮಕ ಚಟುವಟಿಕೆಯೇ ಭಾರತದ ಮುಂದಿರುವ ಆದರ್ಶವೆಂಬ ಭಾವನೆಯನ್ನು ಹೊಂದುವುದು ಆವಶ್ಯಕವಾಗಿದೆ. ಮುಖ್ಯವಾಗಿ ಭಾರತದ ವಿದೇಶ ಧೋರಣೆಯನ್ನು ಆಂತರಿಕ ಧೋರಣೆಯು ಯಶಸ್ವಿಯಾಗಿಲ್ಲವೆಂದು ಆಕ್ಷೇಪಿಸುವ ಜನ ವರ್ಗವು ಈ ಮಾತನ್ನು ಮೆಲುಕು ಹಾಕಬೇಕಾಗಿದೆ. ವಿದೇಶ ನೀತಿಯಲ್ಲಿ ಪ್ರತಿಪಕ್ಷಗಳು ವಹಿಸುವ ಪಾತ್ರವೇನೂ ಅತಿಶಯವಾಗಿಲ್ಲ. ಆದುದರಿಂದಲೇ ಅದು ಪವಿತ್ರವಾಗಿದೆ; ಶುಭಕರವಾದ ಪರಿಣಾಮವನ್ನು ಮಾಡಿದೆ. ಆದರೆ, ಒಳಧೋರಣೆಯಲ್ಲಿ ನಮ್ಮ ರಾಜಕೀಯ ಪ್ರತಿಪಕ್ಷಗಳು ಸದಾಕಾಲ ಗೊಂದಲವನ್ನೇ ಚೆಲ್ಲುತ್ತಿರುತ್ತವೆ; ಆದುದರಿಂದಾಗಿಯೇ ಸರಕಾರಿ ಪಕ್ಷವು ಮಾಡಿದ ಸುಂದರವಾದ ಕೆಲಸವು ಸಹ ವಿಕಾರವಾಗಿ ಬಿಡುತ್ತದೆ. ರೈತರ ಸತ್ಯಾಗ್ರಹ, ಮತ ಪ್ರದರ್ಶನ, ಮುಷ್ಕರ ಇತ್ಯಾದಿಗಳನ್ನು ದೇಶದೊಳಗೆ ನಡೆಸುವ ನಮ್ಮ ಪ್ರತಿಪಕ್ಷಗಳವರಿಗೆ ಕೊರಿಯದ ತಟಸ್ಥ ಕ್ಷೇತ್ರದಲ್ಲಿಯಾಗಲೀ ಇಂಡೋಚೀನದ ಕದನ ವಿರಾಮ ಕಾರ್ಯಾಲಯದ ಮುಂದೆಯಾಗಲೀ ಸಂಯುಕ್ತ ರಾಷ್ಟ್ರ ಸಂಘದ ಭವನದ ಹೊರಗಾಗಲೀ ಕೇಕೆ ಹಾಕಲು ಮತ್ತು ಸತ್ಯಾಗ್ರಹದ ಹೆಸರಿನಲ್ಲಿ ಡೊಂಬಿ ನಡೆಸಲು ಬಿಟ್ಟಿದ್ದರೆ, ಭಾರತದ ವಿದೇಶ ಧೋರಣೆಯೂ ಅಯಶಸ್ವಿಯಾಗುತ್ತಿತ್ತೆಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಇದಕ್ಕೆ ಅವಕಾಶವಿಲ್ಲದಿರುವುದು ನಮ್ಮ ಸುದೈವ! ಪ್ರತಿಪಕ್ಷಗಳ ಅಪಪ್ರಚಾರಕ್ಕೆ ಮೋಸಹೋಗಿ ಭಾರತದ ಆಂತರಿಕ ಸಾಧನೆಯನ್ನು ಅವಹೇಳನೆ ಮಾಡಬಾರದೆನ್ನುವುದರ ರಹಸ್ಯವಿದು. ಈ ಗುಟ್ಟನ್ನು ಸ್ವಾತಂತ್ರ್ಯ ಪ್ರಾಪ್ತಿಯಾದ ಒಂಭತ್ತು ವರ್ಷಗಳ ಮೇಲಾದರೂ ನಾವು ತಿಳಿದುಕೊಂಡಿದ್ದರೆ ಲೇಸು!

ದ. ಕ. ಜಿಲ್ಲಾ ಬೋರ್ಡಿನ ಅಧ್ಯಕ್ಷ
ಡಾ. ಕೆ. ಕೆ. ಹೆಗ್ಡೆಯವರು.

ಇವರು ಉಡುಪಿ ತಾಲೂಕಿನ ಓರಿಯಡ್ಕ ಸರ್ಕಲಿನಿಂದ ಜಿಲ್ಲಾ ಬೋರ್ಡಿಗೆ ಎರಡನೇ ಬಾರಿಯೂ ಕಾಂಗ್ರೆಸು ಟಿಕೇಟಿನಲ್ಲಿ ನಿಂತು ವಿಜಯಿಗಳಾದ ಜನಪ್ರಿಯರು. ಬಳಿಕ ತಾ. 12-11-1954ರಲ್ಲಿ ಜಿಲ್ಲಾ ಬೋರ್ಡಿನ ಹೊಸ ಸದಸ್ಯರ ಸಭೆ ಜರಗಿದಾಗ ಬಹುಮತದ ಬೆಂಬಲ ಪಡೆದು ಬೋರ್ಡಿನ ಅಧ್ಯಕ್ಷಗದ್ದುಗೆಯನ್ನು ಅಲಂಕರಿಸಿದರು. ಶಿಸ್ತು ಅವರ ಜೀವನದ ಜೀವಾಳ. ಶ್ರೀಯುತರು ಮಾತಿನ ಮಲ್ಲರಲ್ಲ; ಕೃತಿವೀರರು ಅಧ್ಯಕ್ಷ ಪೀಠದಲ್ಲಿ ಉತ್ಸವಮೂರ್ತಿಗಳಾಗಿ ಮೆರೆಯದೆ ನಾಡಿಗಾಗಿ ಅಹೋರಾತ್ರಿ ದುಡಿಯುವ ದಕ್ಷರು. ಸರ್ವರ ಸಹಕಾರ ದೊರೆತು, ಅವರ ಆಡಳಿತೆಯಲ್ಲಿ ಜಿಲ್ಲೆಯು ಸರ್ವತೋಮುಖ ಪ್ರಗತಿಯನ್ನು ಪಡೆದು ಆದರ್ಶಜಿಲ್ಲೆಯಾಗಲಿ ಎಂದು ಹಾರೈಕೆ.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 35ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 36ನೇ ವರ್ಷಾರಂಭವಾಗುವುದು. ಈ ನಿಮಿತ್ತ ಚಂದಾ ಅವಧಿ ಮುಗಿಯುವ ಚಂದಾದಾರರೂ ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ.

ಮೆನೇಜರ್.
ನವಯುಗ, ಉಡುಪಿ.

— ಕನ್ನಡದಲ್ಲಿ ಹೊಸ ಬಗೆಯ ಗ್ರಂಥ —

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

- ಬಾಳಿನ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಉತ್ತಮ ಪ್ರತಿ ರೂ. 1-8-0; ಸಾಧಾರಣ ಪ್ರತಿ ರೂ. 1-4-0

ಪ್ರತಿಗಳು ಕರ್ನಾಟಕದ ಪುಸ್ತಕ ವ್ಯಾಪಾರಿಗಳಲ್ಲೆಲ್ಲ ಸಿಗುತ್ತವೆ.

ಪ್ರಕಾಶಕರು: **ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್. ಉಡುಪಿ.**

ಪ್ರಾಚೀನ ಸಂಸ್ಕೃತಿಯ ಕೇಂದ್ರಗಳು

ಈಚೆಗೆ ಭಾರತ ಸರಕಾರದ ಪ್ರಾಚ್ಯ ಸಂಶೋಧನ ಖಾತೆಯವರು ಉಜ್ಜಯಿನಿ, ಕನೋಜ ಮತ್ತು ನಾಗ್ದ ಇತ್ಯಾದಿ ಪ್ರದೇಶಗಳಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ ಅನೇಕ ಸಂಗತಿಗಳು ಬೆಳಕಿಗೆ ಬಂದಿವೆ.

ಸುಮಾರು ಮೂರು ಸಾವಿರ ವರ್ಷಕ್ಕೂ ಪೂರ್ವದ ಭಾರತೀಯ ಸಂಸ್ಕೃತಿಯ ಮೇಲೆ ಈ ವಿಷಯಗಳು ಪ್ರಕಾಶವನ್ನು ಚೆಲ್ಲುತ್ತವೆ. ಕಬ್ಬಿಣದ ಉಪಯೋಗವನ್ನು ಇನ್ನೂ ಜನರು ಆಗ ತಿಳಿದಿರಲಿಲ್ಲ. ತಾಮ್ರ ಮತ್ತು ಶಿಲೆಯಿಂದ ತಯಾರಿಸಲಾದ ಆಯುಧ ಮತ್ತು ಸಲಕರಣೆಗಳನ್ನೆ ಈ ಪ್ರಾಚೀನ ಜನಾಂಗದವರು ಬಳಸುತ್ತಿದ್ದರು.

ಅವರ ನಗರಗಳೂ ಬೀದಿಗಳೂ ಸುಂದರವೂ ಸಾಂಸ್ಕೃತಿಕ ಅಭಿರುಚಿಯುಕ್ತವೂ ಆಗಿದ್ದವಲ್ಲದೆ, ವರ್ಣರಂಜಿತವೂ ಚಿತ್ರಯುಕ್ತವೂ ಆದ ಪಾತ್ರೆ ಪರಡಿಗಳನ್ನು ತಯಾರಿಸುವಷ್ಟು ಅವರು ಮುಂದುವರೆದಿದ್ದರು. ಈ ಚಿತ್ರದಲ್ಲಿ ಆಗಿನ ಚಿತ್ರ ಮತ್ತು ಕಲೆಯ ಮಾದರಿಯನ್ನು ನೋಡಬಹುದು.

(೧೪ನೇ ಪುಟದಿಂದ)

ಸುಮಾರು ಒಂದು ಸಾವಿರ ವರ್ಷದಿಂದ ಅಭಾದಿತವಾಗಿ ಉತ್ತರ ಮಲಬಾರನ್ನು ಆಳುತಿದ್ದ ಕೋಲತಿರಿರಾಜವಂಶದ ಮೂಲಪುರುಷನೆಂದು ಪ್ರಸಿದ್ಧನಾದ ಉದಯ ವರ್ಮನ ತಾಯಿಯ ತಂದೆಯಾಗಿದ್ದನು ನೌಕಾ ಶಕ್ತಿಸಂಪನ್ನರಾಗಿದ್ದ ಕೋಲತಿರಿ ವಂಶಜರು ಒಂದು ಕಾಲದಲ್ಲಿ ಕೊರಪುಜ ಹೊಳೆಯಿಂದ ಗೋಕರ್ಣದವರೆಗೆ ಹಬ್ಬಿದ್ದ ಪ್ರದೇಶವನ್ನು ಆಳುತ್ತಿದ್ದರು; ಮತ್ತು ಈ ಭೂಭಾಗದಲ್ಲಿ ತುಳುನಾಡಿನ ಎಲ್ಲ ಅಂಶವಿಲ್ಲದಿದ್ದರೂ ದ್ವೀಪ ಸಮುದಾಯಗಳನ್ನೂ ತುಳುನಾಡಿನ ಹೆಚ್ಚು ಸಂಶವನ್ನೂ ಇದು ಒಳಗೊಂಡಿತ್ತೆಂಬುದು ನಿಸ್ಸಂಶಯ.

ಪ್ರಾಚೀನ ಕೇರಳದ ಮರುಮಕ್ಕತ್ತಾಯ ಕುಟುಂಬಗಳು ಈಗಲೂ ತುಳುನಾಡು ಪ್ರದೇಶದಲ್ಲಿ ತಮ್ಮ ಸಂಪ್ರದಾಯವನ್ನು ಮುಂದರಿಸಿಕೊಂಡು ಹೋಗುತ್ತಿವೆ. ಕನ್ಯಾಕುಮಾರಿಯಿಂದ ಗೋಕರ್ಣದವರೆಗೆ ಮಲೆಯಾಳಿಗಳೇ ತುಂಬಿದ್ದ ಭೂಭಾಗದ ಮೇಲೆ ಸಾರ್ವಭೌಮಾಧಿಕಾರವನ್ನು ಕೇರಳವು ಪಡೆದಿದ್ದುದರ ಅವಶೇಷವೇ ಇದು.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. S. No. 283/1956

ಉಪ್ಪಿ ಮುದ್ದಂಣ ಶೆಟ್ಟಿ —ವಾದಿ.

ಮತ್ತು

1 ಕುಂಗು ಹೆಂಗ್ಸು—ನಾಗಪ್ಪನ ವಿಧವೆ. 2 ಕೃಷ್ಣಪ್ಪ, 3 ಲಕ್ಷ್ಮಣ, 4 ಗುರುವ, 5 ಅಣ್ಣಯ್ಯ, 6 ಶೀನ 1ನೇ ಪ್ರತಿವಾದಿಯ ಮಕ್ಕಳು–ಉಪ್ಪಿ ಕ್ಸಬಾ ಮೂಡನಿಡಂಬೂರು ಗ್ರಾಮದ ಬನ್ನಂಜೆಯಲ್ಲಿರುವವರು —ಪ್ರತಿವಾದಿರು.

ಮೇಲ್ಕಾಣಿಸಿದ 1, 2, 3 ವ, 6ನೆ ಪ್ರತಿವಾದಿರಿಗೆ ತಿಳಿಯಪಡಿಸುವುದೇನೆಂದರೆ:

ತಾ. 10—9—1951 ರಲ್ಲು ಪ್ರತಿವಾದಿರು ವಾದಿಗೆ ರೂ. 1400/-ಕ್ಕೆ ಬರಕೊಟ್ಟ ಸ್ಥಿರಾಸ್ತಿ ಈದಿನ ಬಾಬ್ತು ಸಂಪೂರ್ಣ ಅಸಲು ಐವೇಜು ವ, ಅದರ ಮೇಲಣ ತಾ. 11—9—1955ರ ಉಾಗ್ಯಾತಿನ ಬಡ್ಡಿ ವಸೂಲು ವಸ್ಯೆರೆ ನಿವೃತ್ತಿ ಕೇಳಿ ವಾದಿಯು ಪ್ರತಿವಾದಿರ ಮೇಲೆ ಮಾಡಿದ ದಾವೆಯನ್ನು ಮೇಲ್ಕಾಣಿಸಿದ 1, 2, 3 ವ 6ನೇ ಪ್ರತಿವಾದಿರ ಹಾಜರಾತಿ ಬಗ್ಗೆ ತಾ.30-8-56ಕ್ಕೆ ಇಟ್ಟಿದೆ.

ಈ ಬಾಬಿನಲ್ಲಿ ಸದ್ರಿ ಪ್ರತಿವಾದಿರಿಗೆ ಆಕ್ಷೇಪವಿದ್ದರೆ ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜವಾಬು ಹೇರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಸದ್ರಿ ದಾವೆಯನ್ನು ವಾದಿಯ ಅಪೇಕ್ಷೆ ಮೇರೆಗೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟಿನ ಹುಕುಂ ಮೇರೆಗೆ)

ಯು. ಬಿ. ಕೃಷ್ಣರಾವ್,
ವಾದಿಪರ ಎಡ್ವೊಕೇಟ್,

ಹಿಂದೂ ಉತ್ತರಾಧಿಕಾರ ಶಾಸನ

1, ಕನ್ನಡ ಪ್ರತಿ	0–12–0
2, ,,	0—8—0
3, ಇಂಗ್ಲಿಷ್	0—6—0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಎಮ್. ಗಣಪಯ್ಯ ಎಂಡ್ ಸನ್ಸ್,

ಆಯುರ್ವೇದಿಕ್ ಫಿಜಿಸಿಯನ್ಸ್,
ರಥಬೀದಿ, ಮಂಗಳೂರು.

ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಿಗಳು

ಧಾತುಪುಷ್ಟಿ ಲೇಹ (ಸುವರ್ಣ, ಸಾಲಾಮಿಶ್ರಿ ಕಲ್ಕದ ಮಿಶ್ರಿತ)

ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ವೀರ್ಯವೃದ್ಧಿ ಉಂಟುಮಾಡುವುದು.

ಡಬ್ಬಿ 1ರ ರೂ. 3—8—0

ಚ್ಯವನಪ್ರಾಶ ಲೇಹ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ. ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಧಾತುಪುಷ್ಟಿ ಉಂಟುಮಾಡುವುದು. ಪೌಂಡು 1ರ ರೂ.5—3—0, ½ ಪೌಂಡು ರೂ. 3—0—0.

ಗರ್ಭ ರಕ್ಷಕ

ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಇದು ದೋಷ ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು.

ಬಾಟ್ಲಿ 1ರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಬಾಣಂತಿಯರ ಪ್ರಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನರುದ್ದೀಪ್ತಿಸಿ, ರಕ್ತ ಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವುದು.

24 ಔನ್ಸ್ ರೂ. 5/-. 12 ಔನ್ಸ್ ರೂ. 2—12. 8 ಔನ್ಸ್ ರೂ. 1—12.

ಅಶೋಕಾರಿಷ್ಟ ಮತ್ತು ಮಾತ್ರೆ

ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಋತುಸ್ರಾವ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದ, ಬಿಳಿಸೆರಗು, ಸಂತಾನ ಹೀನತೆ, ರಕ್ತ ಹೀನತೆ, ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು.

ಬಾಟ್ಲಿ 1ರ ರೂ. 3—8—0.

ಬಾಲಗ್ರಹ ಗುಟಿಕೆ

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಉಬ್ಬಸ, ಮಲಮೂತ್ರ ಬದ್ಧತೆ ಎನೆಯಲ್ಲಿ ಗುರುಗುರು ಶಬ್ದ ಜ್ವರ, ಮೂರ್ಛೆ, ಅಪಸ್ಮಾರ, ಮೊಲೆಹಾಲು ತಿನ್ನದಿರುವಿಕೆ ಇವುಗಳನ್ನೆಲ್ಲಾ ಶೀಘ್ರದಲ್ಲಿಯೇ ಗುಣಪಡಿಸುತ್ತದೆ. ಬಾಟ್ಲಿ 1ರ ಆಣೆ 14.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ಸಿಗುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಸಿಗುವ ಸ್ಥಳ:- 1) ನ್ಯೂ ಬಾಕುಲ್ಲಾ ಸ್ಟೋರ್ಸ್, ಕೆಮಿಸ್ಟ್ಸ್, 648-A, ಡಿಲ್ಯಾಲ್ ರೋಡ್, ಬಾಕುಲ್ಲಾ, ಬೊಂಬಾಯಿ-27. 2) ಜನರಲ್ ಸ್ಟೋರ್ಸ್, G I. P. ಮಾಟುಂಗಾ, ಬೊಂಬಾಯಿ—19. 3) ಯ. ಗಣಪತಿ ನಾಯ್ಕ್, ಮರ್ಚಂಟ್, ಕಾಸ್ರಗೋಡು. 4) ಪೈ ಸ್ಟೋರ್ಸ್, ಪುತ್ತೂರು. 5) ಶ್ರೀಧರ ಭಟ್, ಬ್ರದರ್ಸ್ ಪುತ್ತೂರು. 6) ಕಾಂತಾವರ ವಾಸುದೇವ ಕಾಮತ್, ಬೆಳ್ತಂಗಡಿ. 7) ಕೆ. ವೆಂಕಟೇಶ ನಾಯ್ಕ್, ಗುರುವಾಯನ ಕೆರೆ. 8) ಹೋಮ್ಯೋಪೆಥಿಕ್ ಡಿಸ್ಪೆನ್ಸರಿ, ಪಂಜ. 9) ಬಿ. ಗೋಪಾಲ ಶೆಣೈ, ಬೆಳ್ಮಣ್ಣು.

(೧೧ನೇ ಪುಟದಿಂದ)

ಒಂದು ವಿಷಯದ ಮೇಲೆ ಚರ್ಚೆಯು ನಡೆಯುವಾಗ ಒಂದು ಸಮಯದಲ್ಲಿ ಒಬ್ಬನಿಗಿಂತ ಹೆಚ್ಚು ಜನರು ಮಾತನಾಡುತ್ತಿರಬಾರದು.

[ತಸ್ಮಾದೇಕೈಕಶಸ್ತ್ವತ್ ಬ್ರುವಂತು ಸಚಿವಾಸ್ತವ]

ಆಡಳಿತ ವಿಭಾಗವು ಮೂರು ವರ್ಗದ ಜನರಿಂದ ಯುಕ್ತವಾಗಿರಬೇಕು. ಮುಖ್ಯ ಸ್ಥಾನದಲ್ಲಿರುವ ಪ್ರಥಮ ಶ್ರೇಣಿಯ ಅಧಿಕಾರಿಗಳು ಅತ್ಯುತ್ತಮ ಯೋಗ್ಯತಾ ಸಂಪನ್ನರಾಗಿರಬೇಕು; ಮೇಧಾವಿಗಳಾಗಿರಬೇಕು. ದ್ವಿತೀಯ ಶ್ರೇಣಿಯ ಅಧಿಕಾರಿಗಳಾಗಿ ಸಾಮಾನ್ಯವಾಗಿ ತೀಕ್ಷ್ಣ ಬುದ್ಧಿಯುಳ್ಳವರನ್ನು ನೇಮಿಸಬೇಕು; ಅದಕ್ಕೂ ಕೆಳಗಿನ ಜನರು ಭೃತ್ಯವರ್ಗಕ್ಕೆ ಮಾತ್ರ ಯೋಗ್ಯರು.

[ಕಚ್ಚಿನ್ಮುಖ್ಯಾ ಮಹತ್ಸ್ವೇವ ಮಧ್ಯಮೇಷು ಚ ಮಧ್ಯಮಾಃ
ಜಘನ್ಯಾಶ್ಚ ಜಘನ್ಯೇಷು ಭೃತ್ಯಾಃ ಕರ್ಮಸು ಯೋಜಿತಾಃ]

ರಾಯಭಾರಿಗಳು ಅಪ್ರತಿಮ ಬುದ್ಧಿಶಕ್ತಿಯುಳ್ಳವರೂ ಪ್ರಾಜ್ಞರೂ ಉತ್ತಮ ಗುಣಶೀಲರೂ ವಿದ್ವಾಂಸರೂ ಪ್ರತಿಭಾನ್ವಿತರೂ ಆಗಿರಬೇಕು.

[ಕಚ್ಚಿಜ್ಜನಪದೋ ವಿದ್ವಾನ್ ದಕ್ಷಿಣಃ ಪ್ರತಿಭಾನವಾನ್
ಯಥೋಕ್ತವಾದೀ ದೂತಸ್ತೇ ಕೃತೋ ಭರತ ಪಂಡಿತಃ]

ಕೇವಲ ಪುಸ್ತಕೀಯ ಜ್ಞಾನವನ್ನಷ್ಟೇ ಹೊಂದಿ, ವ್ಯಾವಹಾರಿಕ ತಿಳುವಳಿಕೆಯು ಅಷ್ಟೇನೂ ಇಲ್ಲದ ಪಂಡಿತರನ್ನು ರಾಜನು ಪ್ರೋತ್ಸಾಹಿಸಬಾರದು; ಅಥವಾ ಅವಲಂಬಿಸಬಾರದು. ಏಕೆಂದರೆ, ಇವರು ಪದ ಸಮುಚ್ಚಯಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಬದಲಾಯಿಸಿ ಶಾಸ್ತ್ರಾರ್ಥವನ್ನು ವಿಪರೀತಗೊಳಿಸಬಹುದು.

[ಧರ್ಮಶಾಸ್ತ್ರೇಷು ಮುಖ್ಯೇಷು ವಿದ್ಯಮಾನೇಷು ದುರ್ಬುಧಾಃ
ಬುದ್ಧಿಮಾನ್ವೀಕ್ಷಿಕೀ ಪ್ರಾಪ್ಯ ನಿರರ್ಥಂ ಪ್ರವದಂತಿ ತೇ]

ಸೈನ್ಯಕ್ಕೆ ಯೋಧರನ್ನು ಶಿಸ್ತುಬದ್ಧ ನಡವಳಿಕೆಯುಳ್ಳ, ಸಾಹಸಿಗರೂ ನಿರ್ಭಯರೂ ಶೂರರೂ ಆದ ಜನವರ್ಗದಿಂದಲೇ ಸೇರಿಸಬೇಕು. ಸೇನಾಧಿಕಾರಿಗಳಾಗಿ ಯುದ್ಧವಿದ್ಯೆಯಲ್ಲಿ ನಿಪುಣರೂ ವ್ಯವಹಾರಾನುಭವಿಗಳೂ ಉತ್ತಮ ಕೀರ್ತಿ ಸಂಪನ್ನರೂ ಆದ ವ್ಯಕ್ತಿಗಳನ್ನೆ ನೇಮಿಸಬೇಕು.

[ಕಚ್ಚಿದ್ ಧೃಷ್ಟ ಶೂರಶ್ಚ ಮತಿಮಾನ್ ಧೃತಿಮಾಂಶುಚಿಃ
ಕುಲೀನಶ್ಚಾನು ರಕ್ತಶ್ಚ ದಕ್ಷ ಸೇನಾಪತಿಃ ಕೃತಃ]

ಇವರೆಲ್ಲರನ್ನೂ ಸರಕಾರವು ಭೋಜನದಿಂದ ಸಂತೃಪ್ತಿಪಡಿಸಬೇಕಲ್ಲದೆ, ಕ್ಲಪ್ತ ಕಾಲಕ್ಕೆ ಅವರವರ ಸಂಬಳವನ್ನು ತಪ್ಪದೆ ಪಾವತಿಮಾಡಬೇಕು. ಈ ನಿಯಮ ಪಾಲನೆಗೆ ತಪ್ಪಿದಲ್ಲಿ ರಾಜ್ಯಕ್ಕೆ ಮತ್ತು ರಾಜನಿಗೆ ಅಪಾಯವಾದೀತು

[ಕಚ್ಚಿತ್ ಬಲಸ್ಯ ಭಕ್ತಂ ಚ ವೇತನಂ ಚ ಯಥೋಚಿತಂ
ಸಂಪ್ರಾಪ್ತ ಕಾಲಂ ದಾತವ್ಯಂ ದದಾಸಿ ನ ವಿಲಂಭಸೇ ||
ಕಾಲಾತಿಕ್ರಮಣಾಚ್ಚೈವ ಭಕ್ತವೇತನಯೋರ್ಭೃತಾಃ
ಭರ್ತುಃ ಕುಪ್ಯಂತಿ ದುಷ್ಯಂತಿ ಸೋ ನರ್ಥಃ ಸುಮಹಾನ್ ಸ್ಮೃತಃ]

ರಾಜನು ನಾಸ್ತಿಕತೆ, ಅಸತ್ಯ, ಕೋಪ, ಪ್ರಮಾದ ದೀರ್ಘ ಸೂತ್ರತೆ ಅಥವಾ ವಿಳಂಬ ವಿದ್ವಾಂಸರ ಬಗ್ಗೆ ಅಶ್ರದ್ಧೆ, ಆಲಸ್ಯ, ಇಂದ್ರಿಯಗಳ ದಾಸ್ಯ, ಧನ ಸಂಗ್ರಹದ ಲೋಭ, ಅಯೋಗ್ಯರೊಡನೆ ಮಂತ್ರಾಲೋಚನೆ, ಗೋಪ್ಯ ರಕ್ಷಣೆಗೆ ಗಮನ ಕೊಡದಿರುವುದು, ಅಸಮಯದಲ್ಲಿ ಕಾರ್ಯಾರಂಭಿಸುವುದು ಅಪಾತ್ರರೂ ನೀಚರೂ ಆದವರೊಡನೆ ಒಡನಾಟ ಬೆಳೆಸುವುದು ಇತ್ಯಾದಿ ಕೆಟ್ಟ ಚಟಗಳಿಂದ ದೂರವಿರಬೇಕು

[ನಾಸ್ತಿಕ್ಯಮನೃತಂ ಕ್ರೋಧಂ ಪ್ರಮಾದಂ ದೀರ್ಘಸೂತ್ರತಾಂ
ಅದರ್ಶನಂ ಜ್ಞಾನವತಾಂ ಆಲಸ್ಯಂ ಪಂಚವೃತ್ತಿತಾಂ ||
ಏಕಚಿಂತನ ಮರ್ಥಾನಾಂ ಅನರ್ಥಜ್ಞೈಶ್ಚ ಮಂತ್ರಣಾಂ
ನಿಶ್ಚಿತಾನಾಮನಾರಂಭಂ ಮಂತ್ರಸ್ಯಾಪರಿರಕ್ಷಣಂ ||
ಮಂಗಲಸ್ಯಾಪ್ರಯೋಗಂ ಚ ಪ್ರತ್ಯುತ್ಥಾನಂ ಚ ಸರ್ವತಃ]

ಅರಸೊತ್ತಿಗೆ ಅಥವಾ ರಾಜಸಿಂಹಾಸನವು ಹೂವಿನ ಹಾಸಿಗೆಯಲ್ಲ; ಮುಳ್ಳಿನ ಮಂಚ. ರಾಜನಾದವನು ಹಗಲಿರುಳೂ ಪ್ರಜಾಹಿತ ಚಿಂತಕನಾಗಿರಬೇಕು. ಪ್ರಜೆಗಳ ಸಂತೋಷವೇ ಆತನ ಸಂತೋಷ; ಪ್ರಜೆಗಳ ಕಲ್ಯಾಣವೇ ಆತನ ಕಲ್ಯಾಣ; ಪ್ರಜೆಗಳ ಶ್ರೇಯಸ್ಸೇ ಆತನದೂ ಶ್ರೇಯಸ್ಸು.

ಮೇಲಿನಂತೆ ಪ್ರಭು ರಾಮಚಂದ್ರನು ಹಾಕಿಕೊಟ್ಟಿರುವ ರಾಜನೀತಿ ಶಾಸ್ತ್ರದ ಸಾಮಾನ್ಯ ಪರಿಚಯವನ್ನು ಪ್ರತಿಯೊಬ್ಬನೂ ಮಾಡಿಕೊಂಡು ತನ್ನ ವರ್ತನೆಯನ್ನು ಆಮಟ್ಟಕ್ಕೆ ಅನುಗುಣವಾಗಿ ಇಡದಿದ್ದರೆ, ಮಹಾತ್ಮಾಗಾಂಧೀಯವರು ಯಾವಾಗಲೂ ಪ್ರತಿಪಾದಿಸುತ್ತಿದ್ದ ರಾಮರಾಜ್ಯದ ಸ್ಥಾಪನೆಯನ್ನು ಮಾಡುವುದು ಸುಲಭವಾಗದು.

(Courtesy: Bhavan's Journal)

ಕೇರಳೀಯರ ಕಾಸರಗೋಡು!

[ಮದ್ರಾಸಿನ "ಹಿಂದು" ದೈನಿಕದ ಇದೇ ೧೦ನೇ ಆಗೋಸ್ತಿನ ಸಂಚಿಕೆಯಲ್ಲಿ ಶ್ರೀ ಪಿ. ನಾರಾಯಣ ಕುರುಪರೆಂಬ ಮಹನೀಯರು ಕಾಸರಗೋಡಿನ ಉತ್ತರ ಭಾಗವು ತುಳುನಾಡು ಎಂಬುದಾಗಿ ಹೇಳಿ, ಶ್ರೀ ಶಿವರಾಯರು ಕೇರಳದೊಡನೆ ಇದನ್ನು ಸೇರಿಸತಕ್ಕದ್ದಲ್ಲವೆಂದೂ ಕರ್ನಾಟಕದಲ್ಲಿಯೇ ಈ ಭೂಭಾಗವು ಇತರ ತುಳು ಭಾಷೆಯಾಡುವ ಪ್ರದೇಶದೊಡನೆ ಸೇರ್ಪಡೆಯಾಗಬೇಕೆಂದೂ ಹೇಳಿರುವುದಕ್ಕೆ ಆಕ್ಷೇಪವಾಗಿಯೋ ಎಂಬಂತೆ ಬರೆದ ಒಂದು ಪತ್ರವು ಪ್ರಕಟವಾಗಿದೆ. ಅದರ ಸಾರವನ್ನು ಕೆಳಗೆ ಕೊಟ್ಟಿದ್ದೇವೆ. ಶ್ರೀ ಕುರುಪರ ನಿಲುವಿನ ಬಗ್ಗೆ ಓದುಗರಿಂದ ಬರಬಹುದಾದ ಸಂಕ್ಷಿಪ್ತ ಹಾಗು ಸಮಂಜಸವಾದ ವಿಮರ್ಶೆಯನ್ನು ನಾವು ಹೃತ್ಪೂರ್ವಕ ಸ್ವಾಗತಿಸುತ್ತೇವೆ.—ಸಂ. ನ.]

ಚಂದ್ರಗಿರಿ ಮತ್ತು ಪಯಸ್ವಿನಿ ಎಂಬ ಎರಡು ನದಿಗಳ ಮೇಲ್ಭಾಗ (ಉತ್ತರ)ದಲ್ಲಿರುವ ಜಿಲ್ಲೆಯು ಕನ್ನಡಿಗರಿಗಾಗಲೀ ಮಲೆಯಾಳಿಗಳಿಗಾಗಲೀ ಸೇರಿದುದಲ್ಲ; ಅದು ಜನಸಂಖ್ಯೆಯಲ್ಲಿ ಸುಮಾರು ಹತ್ತು ಲಕ್ಷದಷ್ಟಿದ್ದು ತಮ್ಮ ಗತವೈಭವ ಮತ್ತು ತಮ್ಮ ಸಂಸ್ಕೃತಿಯ ಕುರಿತು ಹೆಮ್ಮೆಯಿರುವ ಹಾಗು ತುಳು ಎಂಬ ತಮ್ಮದೇ ಆದ ಪ್ರತ್ಯೇಕ ಭಾಷೆಯನ್ನು ಆಡುವ ಪ್ರಾಚೀನ ತೌಳವ ಸಾಮ್ರಾಜ್ಯ ಎಂಬುದಾಗಿ ಲೋಕ ಸಭೆಯ (ರಾಜ್ಯ ಪುನಾರಚನೆಯ) ಚರ್ಚೆಯ ಕಾಲಕ್ಕೆ ಆಗೋಸ್ತು ೧ನೇ ದಿನಾಂಕ ಶ್ರೀ. ಬಿ. ಶಿವರಾಯರು ಹೇಳಿರುವರೆಂದು ವರದಿಯಾಗಿದೆ.

ಇಲ್ಲಿ ಉಕ್ತವಾದ ತೌಳವ ಸಾಮ್ರಾಜ್ಯವು ಗತಕಾಲದ ಮಲೆಯಾಳಿಗಳು ತುಳುನಾಡು ಎಂಬುದಾಗಿ ಕರೆಯುತ್ತಿದ್ದ ಮತ್ತು ಪ್ರಾಚೀನ ಕೇರಳದ ಅವಿಚ್ಛಿನ್ನ ಅಂಗವಾಗಿದ್ದ—ಭಾಗವಾಗಿದೆ. ಸ್ಥಳೀಯರಿಂದ ಆಳಲ್ಪಡುತ್ತಿದ್ದ ಕೇರಳದ ಅನೇಕ ಭಾಗಗಳು "ನಾಡು" ಎಂಬುದಾಗಿ ಕರೆಯಲ್ಪಡುತ್ತಿದ್ದವು: ಉದಾಹರಣೆಗಾಗಿ, ಕಡತನಾಡು, ಕುರುಂಪ್ರನಾಡು, ವೈನಾಡು, ವಳ್ಳುವನಾಡು ಇತ್ಯಾದಿ ದಕ್ಷಿಣದಲ್ಲಿ ಕನ್ಯಾ ಕುಮಾರಿಯಿಂದ ಉತ್ತರದಲ್ಲಿ ಗೋಕರ್ಣದ ವರೆಗೆ ಅಖಂಡವಾಗಿ ಹಬ್ಬಿದ್ದ ಪ್ರಾಚೀನ ಕೇರಳ ರಾಜ್ಯದ ಒಂದು ಭಾಗವಾಗಿ ತುಳುನಾಡು ಇತ್ತೆಂಬುದರಲ್ಲಿ ಯಾವುದೇ ಅನುಮಾನವಿಲ್ಲ.

ತಮಿಳು ನಾಡಿನ ಅರಸರಾದ ಪೆರುಮಾಳರು ಕೇರಳವನ್ನು ಆಳುತ್ತಿದ್ದಾಗ, ಅವರು ಪಶ್ಚಿಮ ಕರಾವಳಿಯ ಈ ಪ್ರದೇಶಗಳ ಮೇಲೆ ಆ ತುದಿಯಿಂದ ಈ ಕೊನೆಯತನಕವೂ ತುಳುನಾಡು ಮತ್ತು ಕೊಡಗಿನ ಸಹಿತ—ಆಡಳಿತ ನಡೆಸಿದರು. ಈಗ ತುಳುವರೆಂದು ಹೇಳಲಾಗುವ ಜನರು ಪ್ರಾಚೀನ ಕೇರಳದೇಶೀಯರಲ್ಲದೆ ಬೇರೆಯಾರೂ ಅಲ್ಲ. ಪ್ರಾಕೃತಕ್ಕೂ ಸಂಸ್ಕೃತಕ್ಕೂ ಹೇಗೆ ಸಂಬಂಧವಿದೆಯೋ ತದ್ರೀತಿ ಮಲೆಯಾಳಕ್ಕೆ ಸಂಬಂಧವಿರುವ ಭಾಷೆಯೊಂದನ್ನು ಇವರು ಆಡುತ್ತಿದ್ದರು. (ಇದೇ ತುಳು) ಆ ಕಾಲದಲ್ಲಿ ಮಲೆಯಾಳವನ್ನು ಕೇರಳದ ಬೇರೆ ಬೇರೆ ಭಾಗಗಳಲ್ಲಿ ಬೇರೆ ಬೇರೆ ರೀತಿಯಾಗಿ ಆಡುತ್ತಿದ್ದರು. ಇವತ್ತಿಗೂ ಇದನ್ನು ಕಾಣಬಹುದು. ಹೀಗೆ ಕೇರಳದ ಉತ್ತರ ತುದಿಯಲ್ಲಿದ್ದ ಹಳೆ ಮಾದರಿಯ ಭಾಷೆಯು ಲಿಪಿಇಲ್ಲದಿದ್ದರೂ ಸ್ವತಂತ್ರ ಸ್ವರೂಪವನ್ನು ನಿಧಾನವಾಗಿ ಹೊಂದಿತು; ತುಳುನಾಡು ಎಂಬ ಪದದಿಂದ ಈ ಭಾಷೆಗೂ ಬೇರೆಯೇ ಹೆಸರು ಉಂಟಾಯಿತು.

ಇದೆಲ್ಲವೂ ಕೇರಳದ ಉಳಿದ ಭಾಗದೊಡನೆ ಸಂಪರ್ಕದ ಅಭಾವವಿದ್ದುದರಿಂದ ನಡೆಯಿತು. ಕೇರಳದ ಆ (ಬೇರೆ) ಭಾಗಗಳಲ್ಲಿ ನಂಬೂದ್ರಿ ಅರಸರ ಮೂರು ಸಾವಿರ ವರ್ಷಗಳ ಆಳ್ವಿಕೆ ನಡೆವಾಗ ಸಂಸ್ಕೃತವೇ ಅಪಾರವಾಗಿ ಅಭಿವೃದ್ಧಿಯನ್ನು ಹೊಂದಿತು. ಅನಂತರವೂ ಅದು ಅರಸರ ಆಸ್ಥಾನ ಭಾಷೆಯಾಗಿಮೆರೆಯಿತು. ಒಂಭತ್ತನೇ ಶತಮಾನದ ಆಸುಪಾಸಿನಲ್ಲಿ ಪ್ರಖ್ಯಾತನಾಗಿದ್ದ ಕಲ್ಲಿಕೋಟೆಯ ಜಾಮೋರಿನನಾದ ಮಾನವಿಕ್ರಮನ ಕಾಲದಲ್ಲಿ ಸಹ ಇದೇ ಪರಿಸ್ಥಿತಿ ಇದ್ದಿತು.

ಆದುದರಿಂದ ತುಳು ಭಾಷೆಯು ಇಂದು ತೋರಿಕೆಗೆ ಮಲೆಯಾಳಿಗಿಂತ ಭಿನ್ನವಾಗಿದೆ ಎಂಬ ಕಾರಣದಿಂದಾಗಲೀ ಕೇರಳದಲ್ಲಿ ಬಹು ದೀರ್ಘಕಾಲದವರೆಗೆ ಆಳಿದ ಅರಸರ ಅರಸೊತ್ತಿಗೆಯು ಸಮಯಪಾಳೆಯಗಾರಿಕೆಯು ಆಡಳಿತದ ವೈಶಿಷ್ಟ್ಯವಾಗಿದ್ದಿತಾದ ದೆಸೆಯಿಂದ ಸ್ವೇ ತುಳುನಾಡು ಪ್ರತ್ಯೇಕ ಪಾಳೆಯಗಾರಿಕೆಯ ಅಧೀನವಿರುವಂತಾದ ಕಾರಣದಿಂದಾಗಲೀ ತುಳುನಾಡನ್ನು ಭೌಗೋಲಿಕವಾಗಿ ಕೇರಳದಿಂದ ಹೆಚ್ಚಿಹೊರಗಿಡುವಂತೆ ಮಾಡುವಂತಿಲ್ಲ; ಅಲ್ಲದೆ, ರಾಜಕೀಯವಾಗಿ ಕೇರಳವು ಪ್ರಾಚೀನಕಾಲದಲ್ಲಿ ತುಳುನಾಡಿನ ಮೇಲೆ ಅನುಭವಿಸುತ್ತಿದ್ದ ಸಾರ್ವಭೌಮಾಧಿಕಾರವನ್ನು ತ್ಯಜಿಸಿಬಿಡುವಂತೆಯೂ ಇಲ್ಲ

ಕ್ರಿಸ್ತಶಕ ೬೭೧—೭೦೩ನೇ ಇಸವಿಯ ನಡುವೆ ಆಳಿದ ಪೆರುಮಾಳ ಅರಸನೊಬ್ಬನು ತುಳುವನ್ ಪೆರುಮಾಳ್ ಎಂಬ ಬಿರುದನ್ನಿಟ್ಟುಕೊಂಡಿರುವುದು ತುಳುನಾಡಿನೊಡನೆ ತನಗಿರುವ ಸಂಬಂಧವನ್ನು ಸೂಚಿಸುವಂತಿದೆ. ಈತನಿಗೆ ಕುಂದವರ್ಮ ಮೂಷಿಕನ್, ವೀರ ರಾಜೇಂದ್ರ ಚೇರನ್(ಇವನಿಂದಾಗಿಯೇ ಕೊಡಗಿನ ಒಂದು ಪಟ್ಟಣಕ್ಕೆ ವೀರ ರಾಜೇಂದ್ರ ಪೇಟೆ ಎಂದು ಹೆಸರಾಯಿತು), ಭೂತರಾಯ ಪಾಂಡ್ಯನ್ ಅಥವಾ ಭೂತಾಳ ಪಾಂಡ್ಯನ್ ಎಂಬಿತ್ಯಾದಿ ಬೇರೆ ಬಿರುದು ಸೂಚಕ ಹೆಸರುಗಳೂ ಇದ್ದುವು.

ಕಲ್ಲಿಬನ ಪೆರುಮಾಳನ ಸಹೋದರನಾಗಿದ್ದು ಚೇರಮಾನ ಪೆರುಮಾಳನೆಂಬ ನಿಜ ನಾಮದಿಂದ ಖ್ಯಾತನಾಗಿರುವ ಈ ಅರಸನು ಬ್ರಿಟಿಷರ ಆಳ್ವಿಕೆಗೆ ತೀರ ಮುಂಚಿನವರೆಗೂ

(೧೩ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶ್ಯಲ್ ನಂ. ೧ (ರಿಜಿಸ್ಟರ್ಡ)

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭಗಳನ್ನು ಕೊಡುತ್ತದೆ.

ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತವೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು (ಎಲ್ಲಾ ಋತುಗಳಲ್ಲಿ ಅನುಕೂಲವಿದೆ. ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ. ಇದೇ ಎಣ್ಣೆಯನ್ನೇ ಕೇಳಿರಿ

ತೈಲದ ಕ್ರಯ ದೊಡ್ಡ ಬಾಟ್ಲ ರೂ. ೩-೮-೦. ಸಣ್ಣ ಬಾಟ್ಲ ರೂ. ೨-೦-೦.

ಶರೀರವನ್ನು ಆರೋಗ್ಯದಲ್ಲಿಡಲಿಕ್ಕೆ "ಆಸನ ಚಿತ್ರಪಟ" ಅವಶ್ಯ ತರಿಸಿಕೊಳ್ಳಿರಿ. ಬೆಲೆ ಅಂಚೆ ವೆಚ್ಚ ಸೇರಿ ರೂ. ೧-೨-೦.

ಶ್ರೀ ರಾಮತೀರ್ಥ ಯೋಗಾಶ್ರಮ

ದಾದರ (ಸೆಂಟ್ರಲ ರೇಲ್ವೆ) ಮುಂಬಯಿ, ೧೪.

ಬಿಡುಗಡೆಯ ಬಯಕೆ

ಕವಿ: ಶ್ರೀ ಕಯ್ಯಾರ ಕಿಞ್ಞಣ್ಣ ರೈ.

೧

ಸ್ವಾತಂತ್ರ್ಯವೃಂದಾವನದೊಳೆಸೆವ ಸಸಿ ತುಲಸಿ-
ಯಾಗಿ ನಾದೇವ ಪೂಜೆಯ ಬಯಸಲೊಲ್ಲೆ;
ತಾಯ್ನೆಲದ ತೋಟದಲಿ ಹೂಬಿಗುರು ಹೆಚ್ಚಿಸುವ,
ಗೊಬ್ಬರದ ಪುಡಿಯಾದರದೆ ಭಾಗ್ಯಬಲ್ಲೆ.

೨

ಸ್ವಚ್ಛಂದ ವಿಶ್ವಸಂಚಾರಿ ವಾಯು ವಿಹಾರಿ
ಪುಷ್ಪಕವಿಮಾನಯಾನದೊಳಾಸೆಯಿಲ್ಲ;
ಜನನಿಧರಣಿಯ ಪುಣ್ಯಪಾದ ಧೂಳಿಯ ಹೊರುವ,
ತಿರುಕನೆನ್ನೀಸಿರಿಗೆ ಮೇರೆಯಿಲ್ಲ!

೩

ಸ್ವಾತಂತ್ರ್ಯ ಹಿಮಗಿರಿಯ ಗೌರಿಶಂಕರವಾಗಿ,
ಲೋಕನಾಕವ ಬೆರಗುಗೊಳಿಸಲೆಳಸೆ;
ಹುಟ್ಟೂರ ತಗ್ಗು ಗದ್ದೆಯ ಹುಣಿಯ ಹುಲ್ಲಾಗಿ,
ಗೋವು ಮೇವಿಸ ಬದುಕಿಗೊದಗುವಾಸೆ.

೪

ಸ್ವಾರಾಜ್ಯದುದ್ಯಾನವರಕಲ್ಪತರುವೆನಿಸಿ,
ಅಜರಾಮರರನುಣಿಸಿ ತಣಿಸಲೇಕೆ?
ಎನ್ನತಾಯ್ನಾಡ ಬಡವನ ಗಂಟಲಾರುತಿರೆ,
ಗಂಜಿತಿಳಿಯಾಗುವೆನೆ?—ಪುಣ್ಯನಾಕೆ?

೫

ಸ್ವಾತಂತ್ರ್ಯಧರಣಿಭಾರವ ಹೊತ್ತ ಶೇಷನೆನಿಸಿ
ಗರ್ವಾಂಧಕಾರ ಮನೆ ಮುಸುಕದಿರಲಿ;
ಬಿಡುಗಡೆಯ ಬಂಡಿಯೆಳೆಯುವ ಹೋರಿಯ ಹೆಗ್ಗದಲಿ
ಕಿರುಕಣ್ಣಿಯೆನಿಪೆ,-ತೇರ್ಮಾನ್ನಡೆಯಲಿ!

೬

ಸ್ವಾತಂತ್ರ್ಯಸಾಮ್ರಾಜ್ಯ ಸಾರ್ವಭೌಮತೆ ಪಡೆದು,
ಅಧಿಕಾರ ತಾಂಡವವ ನೆನೆಯಲೊಲ್ಲೆ;
ತಾಯ್ನೆಲದ ಹಿಡಿಮಣ್ಣು ಸ್ವರ್ಣಪರ್ವತವಾಗಿ
ಗೈವ ಬಲ ಬೇಕೆನಗೆ,—ದುಡಿತದಲ್ಲೆ.

೭

ಸ್ವಾತಂತ್ರ್ಯಸ್ವರ್ಗಸೋಪಾನ ಸಾವಿರವೇರಿ,
ಸೌಖ್ಯನಂದನವಿಹಾರದೊಳಿಷ್ಟವಿಲ್ಲ;
ಹುಟ್ಟೂರ ಹೊಲದಿ ನೇಗಿಲ ಕುಳದ ಹಾದಿಯಲಿ,
ಕೆಸರಿನೊಳೆ ಕಾಲ್ತೊಳೆವೆ,—ಕಷ್ಟವಲ್ಲ.

೮

ನೀಲಿಮಾಕಾಶದಲಿ ರವಿಚಂದ್ರತಾರಾಳಿ
ಮಿರುಗುವಂತಿರೆ, ಮೆರೆಯಲೊಲ್ಲೆ ನಾನು;
ದೀನದಲಿತರ ದುಃಖಮಯ ಜೀವನಘನಿಯಲಿ
ಮಿಂಚು ಹೊಳವಾಗುವುದೆ ಹಿರಿಮೆಂಬೆನು!

೯

ಸ್ವಾತಂತ್ರ್ಯ ಸಾಗರ ತಿಮಿಂಗಿಲಂ ತಾನಾಗಿ,
ಸುಖಸಂಕುಲವ ಗಿಳಂಕರಿಸಲೆಳಸೆ;
ಎನ್ನೂರ ಕೊರೆ ಕೆರೆಯ ಕೊಳೆನೀರ ತಿಳಿಗೊಳಿಪ,
ಹೆಸರು ಹಾವಸೆಯಾಗೆ—ಚಿತೆಯನೆಣಿಸೆ!

೧೦

ಎಲ್ಲಿಯೋ—, ವೈಕುಂಠದಲ್ಲಿಯೋ ಜನಿಸಿದರು
ದೇವತ್ವದೊರಕಿದರು,—ತೆಗೆಯೆಂಬೆನು;
ಇಲ್ಲಿಯೇ—, ಭರತ ಮಾತೆಯ ಮಂಗಳೋದರದೆ
ಹುಳವಾಗಿ ಹುಟ್ಟಿದರು,—ಸೊಗಗೊಂಬೆನು!

೧೧

ಬುದ್ಧಿಯಲಿ, ಸಂಪತ್ಸಮೃದ್ಧಿಯಲಿ, ವೃದ್ಧಿಯಲಿ,
ಶುದ್ಧ ಮಾನವನೆಂಬ ಹಿರಿಮೆ ಬೇಡ;
ಹುಟ್ಟೂರ ಸಿರಿಗುಡಿಯ ಹೊರಗಿನಂಗಳದ ಕಸ
ಹೆಕ್ಕುವಾಹಕ್ಕೆನಗೆ—ಹೆಮ್ಮೆ ನೋಡ!

೧೨

ವೇದ ಶಾಸ್ತ್ರ ಪುರಾಣ ಕಾವ್ಯೇತಿಹಾಸಗಳ,
ಪೂರ್ಣಿಸಿದ ಜೀರ್ಣಿಸಿದ ಧೀಮಂತನಹೆನೆ?
ಎನ್ನ ತಾಯ್ನಾಡ ನಿರ್ಭಾಗ್ಯ ಬಾಂಧವನ ಬಳಿ
ಕುಳಿತು ಮೆಲ್ನುಡಿಯಲದೆ ಸೊಪೆಯ ಸೋನೆ!

೧೩

ಕಾಶಿಯೋ, ರಾಮೇಶ್ವರವೊ, ಗಂಗೆ ತುಂಗೆಯೋ,
ತೀರ್ಥ ಯಾತ್ರಾಟನದ ಪುಣ್ಯವೊಲ್ಲೆ,
ಹುಟ್ಟೂರ ಮಣ್ಣುಮುದ್ದೆಯ ಹಸಾದವ ಹೊತ್ತು,
ಹರ್ಷ ಪುಳಕಿತನಪ್ಪೆ-ಧನ್ಯನಿಲ್ಲೆ!

೧೪

ಸ್ವಾತಂತ್ರ್ಯ ಮಧುಪಾನಮುದಿತ ಷಟ್ಪದನೆನಿಸಿ,
ಝೇಂಕೃತಿಯ ಹಂಕೃತಿಯ ಸೋಂಕದಿರಲಿ;
ತಾಯ್ನೆಲನ ಮುತ್ತಿಡುವ ಕಟ್ಟಿರುವೆ ಸಾಲಾಗಿ,
ನೀರವಂ ಜೀವನಂ ಸಾಗುತಿರಲಿ!

೧೫

ಯಾರಿಗೂ ಪಾಲಿಡದ. ಯಾರನೂ ತಿನೆ ಬಿಡದ,
ಧನ ಕನಕರತ್ನ ರಾಶಿಯ ಭಾಗ್ಯ ಬಯಸೆ;
ಎನ್ನ ನೆರೆಹೊರೆಯ ಸೋದರನ ದೀನಾನನದ
ಕಣ್ಣೀರ ಕಳೆಯಬಲ್ಲೆನೆ?—ತೀರ್ಥವೊರಸೆ!

೧೬

ವ್ಯಾಸ ವಾಲ್ಮೀಕಿ ಹೋಮರಹಾಂಟೆ ಪಂಪರೊಲು,
ಕಾವ್ಯಸಾಮ್ರಾಜ್ಯದೊಡೆತನ ವಣಿಸೆನು;
ಶುಕವಾಗಿ, ಪಿಕವಾಗಿ, ಕಿರುದುಂಬಿ ಮರಿಯಾಗಿ,
ತಾಯ್ನಾಡ ನುತಿಪೆ ದಿನದಿನ,—ದಣಿಯೆನು!

೧೭

ವಿಶ್ವವಿಭವ ಚರಿತ್ರ ಗ್ರಂಥ ಸಂಪುಟದಲ್ಲಿ,
ಸ್ವರ್ಣವರ್ಣದಿ ನಾಮದುಲ್ಲೇಖವೊಲ್ಲೆ,
ಈ ಧರಣಿ ಧೂಳಿಯಲಿ, ಪಾವನಸ್ಪರ್ಶದಲಿ,
ಬೆರೆವ ಭಾಗ್ಯವೆ ಸಾಕು,—ಸಾಯುಜ್ಯವಿಲ್ಲೆ!

೧೮

ಸ್ವಾತಂತ್ರ್ಯದಮೃತಪಾನವೊಳಮರರಾಗಿರಲಿ,
ಸೋದರರು ಸರ್ವರೂ ಸೌಖ್ಯವಿರಲಿ;
ಅಮೃತ ಮಥನದಿ ವಿಷವ ನುಂಗಿದ ಮಹಾತ್ಮನಾ
ಚರಣರೇಣುಗಳೆನ್ನ ಶಿರದೊಳಿರಲಿ!

[ಇದೇ 15—8—56ರ ಸ್ವಾತಂತ್ರ್ಯೋತ್ಸವ ದಿನದಂದು, ಬೆಂಗಳೂರು ಆಕಾಶವಾಣಿಯ ಆಶ್ರಯದಲ್ಲಿ, ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ, ಆ ದಿನ ಸಂಜೆ 5ರಿಂದ 6ಗಂಟೆಯತನಕ ಜರಗಲಿರುವ ಕವಿ ಸಮ್ಮೇಳನದಲ್ಲಿ ಹಾಡಲಾದ ಕವನ.]

(೧೦ನೇ ಪುಟದಿಂದ)

ಡತೆಯನ್ನು ಜನ ನಿರೀಕ್ಷಿಸುತ್ತಾರೆ. ...ನೆಯಲ್ಲಿ ಒಬ್ಬ ಅಡಿಗೆಯವನನ್ನು ಆರಿ...ವಾಗಲೂ ನಾವು ಜಾಗರೂಕರಾಗಿರು...ವೆ. ಅವನನ್ನು ಯಾವ ಹೊತ್ತಿಗೂ ...ರತಳ್ಳಬಹುದಾದರೂ, ನೇಮಕಕೊ...ವ ಮೊದಲು ಅವನ ಗುಣಾವಗುಣ...ಳ ಹಿನ್ನೆಲೆಯನ್ನು ಪರಿಶೀಲಿಸುತ್ತೇವೆ. ...ದರೆ ಪಂಚಾಯತ ಅಧ್ಯಕ್ಷ, ಜಿಲ್ಲಾ ...ರ್ಡ್ ಅಥವಾ ಅಸೆಂಬ್ಲಿ ಅಥವಾ ...ರ್ಲಿಮೆಂಟು ಸದಸ್ಯತನಕ್ಕೆ ಯಾರನ್ನು...ೂ ಆರಿಸುವ ಮೊದಲು ಈ ಮುಂಜಾ...ತೆ ನಮ್ಮ ಬುದ್ಧಿಯ ಮುಂದೆ ಸುಳಿ...ವುದಿಲ್ಲ. ಇದರಲ್ಲಿ ನಮ್ಮ ಭವಿಷ್ಯದ ...ಕ್ಷೆಯಿದೆ. ಆರಿಸಲ್ಪಟ್ಟ ಪ್ರತಿನಿಧಿ ಕೆಲ...ಡಲಿ, ಮಾಡದಿರಲಿ, ಒಳ್ಳೆಯವನಿ...ರಲಿ, ಕೆಟ್ಟವನಿರಲಿ;—ನಿರ್ದಿಷ್ಟ ಅವಧಿಯ ತನಕ ಅವನನ್ನು ಹಿಂದೆ ಕರೆಸುವ ಸುಲಭ ಅನುಕೂಲತೆಯು ನಮಗಿರುವುದಿಲ್ಲ! ನಮ್ಮ ಹಿತೇಚ್ಛು ಅಥವಾ ಇನ್ನೊಬ್ಬರ ದ್ವೇಷ ಪ್ರದರ್ಶನವೇ ಚುನಾವಣೆಗೆ ನೀಡುವ ಅವಕಾಶವೆಂದು ತಿಳಿಯಲಾಗಿರುವುದು. ಜನರನ್ನು ಭಾವನಾಪರವಶರನ್ನಾಗಿ ಮಾಡುವುದೂ ಜಾತಿಗೊಂದು ಗಂಡಾಂತರ ಬಂತೆಂದು ಬೊಬ್ಬಿಡುವುದೂ ಹುರಿಯಾಳು, ಅವನ ಪಕ್ಷ ಅಥವಾ ಮಕ್ಕಳ ಮೇಲಣ ಪ್ರೀತಿಯನ್ನು ನೆನಪಿಗೆ ತಂದುಕೊಡುವುದೂ, ಓಟುಗಿಟ್ಟಿಸಿಕೊಳ್ಳಲು ಯಾವ ಮಾರ್ಗವು ಸುಮಾರ್ಗವೆಂದು ಪರಿಗಣಿಸಲ್ಪಡುವುದೂ ಚುನಾವಣೆಯ ಇಂದಿನ ವೈಶಿಷ್ಟ್ಯ. ಬಡತನದ ಬೇಗೆಯಲ್ಲಿರುವವರಿಂದ ಒಂದೆರಡು ನಾಣ್ಯಗಳೂ ಓಟನ್ನು ಸೆಳೆಯಬಲ್ಲವು. ಆದರೆ ಹೀಗೆ ಮಾಡುವುದರಿಂದ ನಮ್ಮ ಜನರ ಶೀಲ ಗುಣಗಳ ಮೇಲೆ ಅತ್ಯಾಚಾರಮಾಡುತ್ತಿರುವೆವೆಂಬ ಭಾವನೆ ಬರುವುದಿಲ್ಲ. ಚುನಾವಣೆಯಲ್ಲಿ ಗೆಲಬೇಕು – ಅದರ ಸಾಧನಾಕ್ರಮ ಉಚ್ಚವಿರಲಿ, ನೀಚವಿರಲಿ—ನಮಗದು ಮುಖ್ಯವಲ್ಲ.

ದಕ್ಷಿಣ ಕನ್ನಡಿಗರು ರಾಜಕೀಯದಲ್ಲಿ ಹೆಚ್ಚಿನ ಪರಿಪಕ್ವತೆಯುಳ್ಳವರು. ಇವರ ಅನುಭವ ಈ ಹಿಂದೆಯೇ ನಮಗಾಗಿರುವುದು. ಇನ್ನು ಮುಂದೆಯೂ ಅವರಲ್ಲಿ ಈ ವಿಷಯದಲ್ಲಿ ವಿಶ್ವಾಸ ಇಡಬಹುದು. ಕಾಂಗ್ರೆಸು ಯೋಗ್ಯ ಹುರಿಯಾಳುಗಳನ್ನೆ ನೇಮಿಸುವದೆಂದು ನಂಬಬಹುದು. ಜನರೂ ತಮ್ಮ ಭವಿತವ್ಯದ ದೃಷ್ಟಿಯಿಂದ ಕಾಂಗ್ರೆಸನ್ನು ಬೆಂಬಲಿಸುವರು. ಏಕೆಂದರೆ ಒಬ್ಬ ವ್ಯಕ್ತಿ, ಒಂದು ಪಕ್ಷ ಓಟು ಬೇಡಿದರೆಂದು ಕೊಡುವುದಲ್ಲ. ಓಟು ಕೊಡುವ ಮೊದಲು ಅಂತಹ ವ್ಯಕ್ತಿ ಅಥವಾ ಪಕ್ಷದಿಂದ ನಮ್ಮ ಹಿತರಕ್ಷಣೆಯಾದೀತೇ ಎಂಬುವನ್ನು ಪರಿಶೀಲಿಸುವುದು ಅಗತ್ಯ.

ಜೈಭಾರತ್ ಮಿಲ್ಸ್ ಪ್ರೈವೇಟ್ ಲಿ;
ಚಿತ್ತರಂಜನ್ ಬಿಲ್ಡಿಂಗ್ಸ್, ಉಡುಪಿ.

ಗ್ರಾಮಗಳೇ ಭಾರತದ ಸರ್ವಸ್ವ

(೯ನೇ ಪುಟದಿಂದ)

ತೊಂದರೆಗಳು ಅನೇಕವಿವೆ. ಉದಾಹರಣೆಗೆ ಹಳ್ಳಿಗಳಲ್ಲಿ ಸಾಂಕ್ರಾಮಿಕ ರೋಗರುಜಿನಗಳು ಹಾವಳಿಮಾಡಹತ್ತಿದಲ್ಲಿ ಸೇವಾತತ್ಪರರಾಗಿ ದುಡಿಯಬಲ್ಲ ಡಾಕ್ಟರರೂ, ವೈದ್ಯರೂ ತಕ್ಕಸಂಖ್ಯೆಯಲ್ಲಿ ನಮ್ಮ ದೇಶದಲ್ಲಿ, ಮುಖ್ಯ ಹಳ್ಳಿಗಳಲ್ಲಿ ಇನ್ನೂ ಸಿಗುತ್ತಿಲ್ಲ. ಇದು ಕೇವಲ ಅಪ್ರಿಯವಾದ ಸತ್ಯ. ಇದಕ್ಕಾದರೋ ನಾವೇ ಹೊಣೆಗಾರರು ನಮ್ಮ ದೃಷ್ಟಿಕೋನವನ್ನು ಬದಲಿಸದೆ ಹೋದರೆ, ತಕ್ಕ ಯತ್ನವನ್ನೂ ಈಗಿನಿಂದಲೇ ಮಾಡದೆ ಹೋದರೆ ಸುಧಾರಣೆಯು ಕನಸಿನ ಗಂಟೆನಿಸಬಹುದು.

ನೈರ್ಮಲ್ಯದ ವಿಚಾರ ಮಾತನಾಡುವ ನಾವುಗಳು ನಮ್ಮ ಮನೆಗಳನ್ನು ಶುಚಿಯಾಗಿಟ್ಟಿರುವೆವ? ನಮ್ಮ ನೆರೆಕರೆಯಲ್ಲೂ ಶುಚಿತ್ವದ ಸ್ಥಾಪನೆ, ಸಾಧನೆಗಳ ಬಗ್ಗೆ ತಕ್ಕ ಆಸ್ಥೆಯನ್ನು ಪ್ರಕಟಿಸಿರುವೆವೆ? ಮಾತಿಗಿಂತ ಕೃತಿಯೇ ಮೇಲು, ಹೀಗಿರುತ್ತ ನಾವು ಇಂಥ ಶುಚಿತ್ವವನ್ನು ಸಾಧಿಸಬೇಕು ಪರಸೇವೆಯಲ್ಲೇ ನಿರತರಾಗಬೇಕು. ಇಂಥ ಅನೇಕ ಜನರನ್ನು ನಾವು ನಮ್ಮ ನಿತ್ಯಜೀವನದಲ್ಲಿ ಕಾಣಬಹುದು. ಅವರು ನಿಃಸ್ವಾರ್ಥಿಗಳಾಗಿ, ಪರಾರ್ಥಕ್ಕಾಗಿಯೇ ತಮ್ಮ ತನುಗಳನ್ನು ಕಾಯಕಷ್ಟದ ಮೂಲಕ ಸವೆಸುವ ಮಹಾ ತ್ಯಾಗಿಗಳು ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಇವರು ವಾಸಿಸುತ್ತಿರದೆ, ಚಿಕ್ಕ ಪುಟ್ಟ ಕುಗ್ರಾಮಗಳಲ್ಲಿ ಇವರು ದೀನರ ದಲಿತರ ಉದ್ಧಾರಕ್ಕಾಗಿ ಹಗಲು ರಾತ್ರಿಯನ್ನದೆ ದುಡಿಯುವವರು ಎಂದೂ ಇವರು ಬಿರುದುಬಾವಲಿಗಳನ್ನಾಗಲೀ, ಸ್ತುತಿ ಪ್ರಶಂಸೆಗಳನ್ನಾಗಲೀ ಆಶಿಸಿ ದುಡಿಯುವವರಲ್ಲ. ಇಂತಹರ ಆದರ್ಶವನ್ನು ನಮ್ಮ ಯುವಕರು ಅನುಸರಿಸಬೇಕು. ಕೊನೆಯ ಪಕ್ಷ ನಮ್ಮ ಯುವಕರು ಹಳ್ಳಿಹಳ್ಳಿಗಳನ್ನು ಸೇರಿ, ನೈರ್ಮಲ್ಯ ಶುಚಿತ್ವಗಳ ಪಾಠಗಳನ್ನಾದರೂ ತಮ್ಮ ಸೋದರರಿಗೆ, ಅನಕ್ಷರಸ್ಥರಾದ ಹಳ್ಳಿಗರಿಗೆ ಕಲಿಸಲಿ. ಈ ಬಗ್ಗೆ ವ್ಯವಸ್ಥಿತವಾದ ಕಾರ್ಯಕ್ರಮವು ಇಂದು ಅತ್ಯವಶ್ಯವೆನಿಸಿದೆ. ಆಗಿಂದಾಗ್ಯೆ ಸೇವಾಪರರಾದ ಯುವಕರನ್ನು ನಮ್ಮ ಹಳ್ಳಿಗಳಿಗೆ ಕಳುಹಿ; ಅವುಗಳ ನೈರ್ಮಲ್ಯವನ್ನೊದಗಿಸಿಕೊಳ್ಳಬೇಕು. ಇಂಥ ಕಾರ್ಯಾಚರಣೆಗಳಿಂದಲೇ ನಮ್ಮ ಹಳ್ಳಿಗರು ಶುಚಿತ್ವ, ನೈರ್ಮಲ್ಯಗಳ ಪಾಠವನ್ನು ಕಲಿತಾರು

ಇನ್ನು ಆಹಾರಕ್ರಮಗಳ ವಿಚಾರ: ನಮ್ಮ ಹಳ್ಳಿಗರ ಆಹಾರ ಕ್ರಮಗಳಲ್ಲಿ ತುಂಬಾ ಸುಧಾರಣೆಯು ಅವಶ್ಯವಿದೆ. ತಮಗೆ ಎಂಥ ಆಹಾರವು ಅಗತ್ಯ ಮತ್ತು ಹಿತಕರವೆಂಬುದನ್ನು ಅನೇಕರು ಅರಿತಿಲ್ಲ. ಈ ಅಜ್ಞಾನವೇ ಹೆಚ್ಚಿನ ಅನಾಹುತಕ್ಕೆ ಕಾರಣವಾಗಿರುತ್ತದೆ ನಮ್ಮ ಬಾಪೂಜಿಯ ಮಾತುಗಳನ್ನು ನೆನಪಿಸಿಕೊಳ್ಳಿರಿ: "ನಿಸರ್ಗಕ್ಕೆ ವಿರೋಧವಾಗಿ ಮನುಷ್ಯ ವರ್ತಿಸಿದಾಗಲೇ ಆತನು ಯಾತನೆಗೀಡಾಗುತ್ತಾನೆ." ಮನುಷ್ಯನ ಆಹಾರವು ಸಮತೂಕವಿದ್ದು ಆತನ ಶಾರೀರಿಕ ಹಾಗೂ ಮಾನಸಿಕ ಬೆಳವಣಿಗೆಗೆ ಪೋಷಕನಾಗಬೇಕು' ದೇಹ ಮನಸ್ಸುಗಳೆರಡೂ ಆರೋಗ್ಯದಲ್ಲಿಲ್ಲದೆ ಹೋದರೆ, ಮನುಷ್ಯ ಸುಖಿಯಾಗಿರಲಾರ. ಮನುಷ್ಯ ಸುಖಿಯಾಗಿದ್ದರೇನೆ, ಮುಖ್ಯ ಆತನ ಮನಸ್ಸು ನೆಮ್ಮದಿಯಲ್ಲಿದ್ದರೇನೆ ಆತ ರಚನಾತ್ಮಕ ಕಾರ್ಯಗಳಲ್ಲಿ ಪ್ರವೃತ್ತನಾಗಬಲ್ಲ; ಅನ್ಯಥಾ ಅಲ್ಲ ಅಂತೂ ಇಂಥ ಸ್ಥಿತಿ ಇದ್ದರೇನೆ ಆತನ ಧಾರ್ಮಿಕ ಮೇಲ್ಮೆಯೂ ಸಾಧ್ಯವೆನಿಸುತ್ತದೆ.

ರಾಷ್ಟ್ರೀಯ ದೃಷ್ಟಿಯು ನಮ್ಮಲ್ಲಿ ನೆಲೆನಿಸಬೇಕು. ಇದು ಸಂಕುಚಿತಗೊಂಡು, ಪ್ರಾದೇಶಿಕ ಭಾವನೆಯಾಗಿ ಪರಿಣಮಿಸಬಾರದು. ನಾವೆಲ್ಲರೂ ಭಾರತೀಯರು: ಇದೇ ಮೊದಲ ಭಾವನೆ. ಪ್ರಾದೇಶಿಕ ಪ್ರಾಂತೀಯ ಭಾವನೆಗಳು ಗೌಣವಾದುವುಗಳು. ಪ್ರಾಂತೀಯ ಪುನರ್ರಚನೆಯ ವಿಚಾರದಲ್ಲಿ ಇತ್ತೀಚೆಗೆ ನಡೆದಿರುವ ದುರ್ಘಟನೆಗಳು ಅತ್ಯಂತ ಶೋಚನೀಯವಿವೆ ಆದ್ದರಿಂದಲೇ ನಾವೆಲ್ಲರೂ ಒಂದೇ ದೇಶದ ಪ್ರಜೆಗಳು ಒಂದೇ ತಾಯಿಯ ಮಕ್ಕಳೆಂಬ ಭಾವನೆ ನಮ್ಮೆಲ್ಲರಲ್ಲೂ ಉದಿಸಬೇಕು. ಇಂಥ ಭಾವನೆಯು ಉದಯವಾಗಿ, ಎಲ್ಲರೂ ನಮ್ಮ ಅಖಂಡ ದೇಶದ ಮೇಲ್ಮೆಗಾಗಿಯೇ ದುಡಿಯಬೇಕು ಎಂಬುದೇ ನನ್ನ ಆಶಯಗಳು.

ಅನುವಾದಕರು:
ಶ್ರೀ ಉ. ಲಕ್ಷ್ಮೀನಾರಾಯಣಾಚಾರ್ಯ,
ಎಂ. ಎ., ಎಲ್. ಟಿ.

ಸೂಚನೆ

'ನವಯುಗ'ದ ಚಂದಾ ಹಣ ಮತ್ತು ಜಾಹೀರಾತಿನ ಹಣವನ್ನು ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇದರ ಯಾವುದೇ ಶಾಖೆಯಲ್ಲಿ ಯಾವದೊಂದು ತರದ ಖರ್ಚೂ ಇಲ್ಲದೆ (ನವಯುಗದ ಖಾತೆಗೆ) ಪಾವತಿ ಮಾಡಬಹುದು.

ಮೆನೇಜರ್.
ನವಯುಗ, ಉಡುಪಿ.

ಓ, ರಾಷ್ಟ್ರಪಿತ, ಗಾಂಧಿಜೀ

ಓ, ರಾಷ್ಟ್ರಪಿತ ಗಾಂಧಿಜೀಯೆಮ್ಮ ಮರೆತೆಯೋ
ನೀ ತಂದೆ; ತಂದೆ, ಭಾರತಕೆ ಸ್ವಾತಂತ್ರ್ಯವನು
ನೀನಿಲ್ಲ ನಮ್ಮಲ್ಲಿ; ನಮ್ಮನೀ ದಿವ್ಯಚ-
ಕ್ಷುಗಳಿಂದ ನೋಡುತಿಹೆ ಸಗ್ಗದಾಸನದಿಂದ.
ಕಲ್ಲಕೊನರಿಸಿದ ಮಣ್ಣನು ಮಿಸುನಿಸಿದ ನಿನ್ನ
ದಿವ್ಯತೇಜದ ಬೆಳಕ ಮಗುಳೊಮ್ಮೆ ತೋರಿಸೆಯಾ
ನೋಡೆಯಾ, ನಿನ್ನ ಹೆಸರಲಿ ನಡೆವ ಕೆಸರಕೃತಿ
ಗಳನೆಲ್ಲ; ಗಾಂಧಿ ಹೆಸರನು ತಮ್ಮ ಸ್ವಾರ್ಥತೆಗೆ
ನಾಂದಿಗೊಳಿಸುವ ಜನರ; ಪ್ರಾಂತ್ಯಾಭಿಮಾನದಲಿ
ಭಾಷೆಯಾ ನೆಪನದಲಿ ಎಸಗುತಿಹ ಸೋದರರ
ಹೊಯ್ದಾಟ ಕಲಹಗಳ; ಎಲ್ಲೆಲ್ಲೂ ಜಾತೀಯ
ಕೋಮುವಾರಿನ ಭೇದ ಭಾವಗಳ, ದ್ವೇಷಗಳ
ಛಿದ್ರವಾಗುತಿದೆ ನೀ ಬಂಧಿಸಿದ ಭಾರತವು.

ನಿನ್ನ ಶಿಷ್ಯನು ನೆಹರು ಪಡುವ ಬನ್ನಗಳ ಹಾ
ಜಗಗೆದ್ದ ಪಂಡಿತಗೆ ಮನೆ ಮುಗ್ಧಗೊಳಿಸುತಿದೆ.
ಕಾಣೆಯಾ? ದೇಶವೇ ನಿನ್ನ ಪಥದಿಂದೂರ
ಸರಿಯುವಂತಿದೆ ಅಯ್ಯೊ, ಕೊಡು ತಂದೆ
ನಮ್ಮ ಕತ್ತಲೆ ಕಳೆವ ದಿವ್ಯ ತೇಜವ ನೀಡು
ಸೋದರರು ಒಂದಾಗಿ ಒಮ್ಮನದಿ ದೇಶಹಿತ
ಕಾಗಿ ದುಡಿಯಲು ಬಲುಹ; ಭಾರತದ ಭಾಗ್ಯದಾ
ತನ ಬೇಡಿ ನೀ ಕಳುಹು. ನಿನ್ನಾತ್ಮ ನಗಲಿ.
ನಮ್ಮನೂ ನಗಿಸು. ಪುಳಕವನಳಿಸು. ತಾ ತಂದೆ
ಭಾರತಕೆ ಇನ್ನೊಮ್ಮೆ ಬೆಳಕತಾ, ಸರ್ವಥಾ

—ಶ್ರೀ. ದಾಂತಿ

ಬೈಂಡಿಂಗ್ ತರಬೇತಿ ಕ್ಲಾಸು

ಉಮೇದ್ವಾರಿಗಳು ಬೇಕಾಗಿದ್ದಾರೆ!

ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಲ

ಇವರು ಸದರ್ನ್ ಇಂಡಿಯಾ ಎಪೆಕ್ಸ್ ಬೇಂಕಿನವರಿಂದ ಪಡಕೊಂಡಿರುವ ಕಲ್ಸಂಕದಲ್ಲಿರುವ ತಮ್ಮ ಸ್ವಂತ ಕಟ್ಟಡದಲ್ಲಿ ಇದೇ ತಾ. 21—8—1956ರಿಂದ ಬುಕ್ ಬೈಂಡಿಂಗ್ ತರಬೇತಿ ಕ್ಲಾಸನ್ನು ಆರಂಭಿಸಲು ನಿರ್ಧರಿಸಿರುತ್ತಾರೆ. ಇಲ್ಲಿ ಬುಕ್ ಬೈಂಡಿಂಗಿನ ಎಲ್ಲಾ ತರದ ತರಬೇತಿಯನ್ನು ಕೊಡಲಾಗುವುದು.

ಕನಿಷ್ಠ ಐದನೇ ತರಗತಿ ತನಕ ಓದಿದ 14 ವರ್ಷಕ್ಕೆ ಮೇಲ್ಪಟ್ಟು 21 ವರ್ಷದೊಳಗಿನ ಉಮೇದ್ವಾರಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ತರಬೇತಿ ಕ್ಲಾಸುಗಳು ಬೆಳಿಗ್ಗೆ ಗಂಟೆ 8½ಯಿಂದ 12½ ಮತ್ತು ಮಧ್ಯಾಹ್ನ 2ರಿಂದ 5½ ತನಕ ದಿನಾಲೂ ನಡೆಯುವುವು ಹೆಮ್ಮಕ್ಕಳಿಗೆ ತರಬೇತಿ ಶಾಖೆಯಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗುವುದು.

ತರಬೇತಿಯ ಆರಂಭದಲ್ಲಿ ಮೂರು ತಿಂಗಳ ಅವಧಿವರೆಗೆ ತಿಂಗಳಿಗೆ ರೂ. 10/- ರಂತೆ ವಿದ್ಯಾರ್ಥಿ ವೇತನ (ಸ್ಟೈಪೆಂಡ್) ಕೊಡಲಾಗುವುದು ಅನಂತರ ಪ್ರತಿ ಮೂರು ತಿಂಗಳಿಗೊಮ್ಮೆ ಪರೀಕ್ಷೆಯ ಆಧಾರದ ಮೇಲೆ ರೂ. 1/-ರಂತೆ ವಿದ್ಯಾರ್ಥಿ ವೇತನವನ್ನು ಏರಿಸಿ ಕೊಡಲಾಗುವುದು. ಈ ತರಬೇತಿಯ ಅವಧಿಯು 30 ತಿಂಗಳು ವರೆಗೆ ಮಾತ್ರ ಇರುವುದು. ಆದರೆ ತಕ್ಕ ಪ್ರೋತ್ಸಾಹವಿಲ್ಲದೆ ನಷ್ಟಕರವಾಗಿ ನಡೆಯಲು ತಡೆಯುಂಟಾದಲ್ಲಿ ತರಬೇತಿ ಕ್ಲಾಸನ್ನು ಯಾವ ಕಾಲಕ್ಕೂ ನಿಲ್ಲಿಸಿ ಬಿಡುವ ಸ್ವಾತಂತ್ರ್ಯವನ್ನು ಎಕೆಡಮಿಯು ಇಟ್ಟುಕೊಂಡಿದೆ.

ಆಸಕ್ತಿಯುಳ್ಳ ಉಮೇದ್ವಾರಿಗಳು ಇದೇ ತಾ. 19ರೊಳಗೆ ಕೆಳಗಿನ ವಿಳಾಸಕ್ಕೆ ಅರ್ಜಿಗಳನ್ನು ಮಾಡತಕ್ಕದ್ದು ಮತ್ತು ತಾ. 19ನೇ ಆದಿತ್ಯವಾರ ಅಪರಾಹ್ನ 3 ಗಂಟೆ ಸಮಯಕ್ಕೆ ಮೇಲೆ ಹೇಳಿದ ಕಲ್ಸಂಕ ಕಟ್ಟಡದಲ್ಲಿ ಆಯ್ಕೆ ಬಗ್ಗೆ ಸ್ವತಹ ಹಾಜರಾಗತಕ್ಕದ್ದು.

ಎಕೆಡಮಿ ಒಫ್ ಜನರಲ್ ಎಡ್ಯುಕೇಶನ್, ಮಣಿಪಾಲ.

ಡಾ। ಟಿ. ಎಮ್. ಎ. ಪೈ,
ರಿಜಿಸ್ಟ್ರಾರ್.

MRS. P. DEVEE'S (F. D. S.)

ಕುಮಾರಿ ಬಿಲ್ಲೆಗಳು

(ಸರಕಾರಿ ರಿಜಿಸ್ಟರ್ಡ್)



ಆರೋಗ್ಯ, ಸೌಂದರ್ಯ ಮತ್ತು ಸುಖ ಸಂತೋಷಗಳನ್ನು ಕಾದಿಡಲು ತಾಯಂದಿರಿಗೆ ಆದರ್ಶಸಹಕಾರಿಯಾದುದು. ವೈದ್ಯಕೀಯ ಸಂಸ್ಥೆಗಳೂ, ವೈಯಕ್ತಿಕ ಜನರೂ ಎಷ್ಟೋ ವರುಷಗಳಿಂದ ಅಪಾರ ಉಪಯೋಗವನ್ನು ಪಡೆದು ಪ್ರೋತ್ಸಾಹಿಸಿರುವದಾಗಿದೆ.

— ವಿವಿಧ ತರದ ಕಾಯಿಲೆಗಳಿಗೆ —

ಕಿಮ್ಮತ್ತು:— ರೂಪಾಯಿ 3/-, 5/-, ಮತ್ತು 8/-

ಸ್ಟಾಕಿಸ್ಟರು:—(1) ಷಾ ಕಂಪನಿ, ಮಂಗಳೂರು-1.
(2) ರಾಜಾ ಮೆಡಿಕಲ್ ಹಾಲ್, 31 ಧರ್ಮರಾಜ ಬೀದಿ, ಬೆಂಗಳೂರು ಕಂಟೋನ್‌ಮೆಂಟ್.
(3) ಕುಮಟಾ ಫಾರ್ಮಸಿ, ಕುಮಟಾ (ಉ. ಕನ್ನಡ).

ಅಧಿಕಾರದ ವಿಕೇಂದ್ರೀಕರಣ

(೮ನೇ ಪುಟದಿಂದ)

ಅವರು ಮಾರ್ಮಿಕವಾಗಿ ಚಿತ್ರಿಸಿದ್ದಾರೆ. ಆ ಅಗೋಚರ ವ್ಯಕ್ತಿಯ ಹೆಸರಿನಲ್ಲಿ ಪತ್ರಿಕೆಗಳನ್ನೂ, ಜನರ ಖಾಸಗಿ ಜೀವನವನ್ನೂ ಕೆಲವು ಮಂದಿ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡ, ಜನರಾಡುವ ಭಾಷೆಯನ್ನು ಕೂಡಾ ಸುಧಾರಿಸಲು ಯತ್ನಿಸುತ್ತಾರೆ. ಜನರ ಸಂಭಾಷಣೆಗಳನ್ನು ಕಂಡುಹಿಡಿಯಲು ಎಲ್ಲೆಡೆಯಲ್ಲೂ ಧ್ವನಿಗ್ರಾಹಕಗಳು ಗೋಪ್ಯವಾಗಿ ಜೋಡಿಸಲ್ಪಟ್ಟಿರುತ್ತವೆ. ತಮ್ಮ ಹೆತ್ತವರ, ಗಂಡಂದಿರ "ಹಾಳು ಯೋಚನೆ"ಗಳ ಕುರಿತು ಮನೆಯ ಮಂದಿಯೇ ಅಧಿಕಾರಿಗಳಿಗೆ ತಿಳಿಸಿ ಅವರನ್ನು ಶಿಕ್ಷೆಗೊಳಪಡಿಸುತ್ತಾರೆ. ಜನರ ಯೋಚನೆ—ಭಾವನೆಗಳನ್ನು ಪರಿವರ್ತಿಸಿ ಏಕರೂಪವಾದ ವಿಧೇಯತೆಯನ್ನುಂಟು ಮಾಡಲು ಅತ್ಯುಗ್ರ ಶಿಕ್ಷೆಯನ್ನು ಕೊಡಬಲ್ಲ ಸಾಧನಗಳಿವೆ. ಅವು ವ್ಯಕ್ತಿಯ ದೇಹವನ್ನು ಝರ್ಝರಿತಗೊಳಿಸಬಲ್ಲವು.

ಒರ್ವೆಲ್ಲರ ಈ ಕಲ್ಪನೆಯಲ್ಲಿ ಮಿತಿಮೀರಿದ ಅತಿರೇಕವಿದೆಯೆನ್ನಲಡ್ಡಿಯಿಲ್ಲ. ಆದರೆ ಇತ್ತೀಚೆಗೆ ಮೋಸ್ಕೋದಿಂದಲೇ ಹೊರಟಿರುವ ಸ್ಟಾಲಿನರ "ವ್ಯಕ್ತಿ ಪೂಜೆಯ ಪಂಥ", ವಿರೋಧಿಗಳನ್ನು ಹತ್ತಿಕ್ಕಲು ಅವರು ಕೊಡುತ್ತಿದ್ದ ಶಿಕ್ಷೆಗಳ ವಿವರಗಳನ್ನು ನಾವು ಪರಿಶೀಲಿಸಿದರೆ ಸಾಹಿತಿ ಒರ್ವೆಲ್ಲರ ಕಲ್ಪನೆ ವಾಸ್ತವಿಕತೆಯಿಂದ ಅಷ್ಟೊಂದು ದೂರ ಹೋಗಿಲ್ಲವೆಂದು ಭಾಸವಾಗುತ್ತದೆ.

ಅಧಿಕಾರವೇ ಭ್ರಷ್ಟಾಚರಣೆಯನ್ನುಂಟು ಮಾಡುತ್ತದೆ; ಅದರಲ್ಲೂ ಸಂಪೂರ್ಣ ಅಧಿಕಾರವು ಸಂಪೂರ್ಣ ಭ್ರಷ್ಟಾಚರಣೆಯನ್ನು ಮಾಡುತ್ತದೆನ್ನುವ ಲಾರ್ಡ್ ಆಕ್ಟನರ ಮಾತೂ ಇಲ್ಲಿ ಸ್ಮರಣೀಯವಾದುದು. ಮಾನವನ ವೈಯಕ್ತಿಕ ನೀತಿಗೆ ತುಂಬಾ ಇತಿ ಮಿತಿಗಳಿವೆಯೆಂಬುದನ್ನು ನಾವು ಮರೆಯುವುದು ಸಾಧ್ಯವಿಲ್ಲ: ಅದರಲ್ಲಿ ಅವನ ಸದ್ಭಾವನೆಗಳ ಪ್ರಮಾಣ ಎಷ್ಟಿದೆಯೋ ಅದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ಅವನಲ್ಲಿರುವ ಮೂಲಭೂತವಾದ ಕುಂದು ಕೊರತೆಗಳೂ ಕಾಣದಿಲ್ಲ. ಒಮ್ಮೆ ಅಧಿಕಾರದ ಲಗಾಮನ್ನು ಹಿಡಿದೊಡನೆ ಅವನಿಗೆ ತಾನು ಮಾಡಿದ್ದೇ ಸರಿ ಎಂಬ ಭಾವನೆ ಉಂಟಾಗದಿಲ್ಲ.

ಹಾಗಾಗಿ ಅಧಿಕಾರದ ವಿಕೇಂದ್ರೀಕರಣಕ್ಕೆ ಇಂದು ಹೆಚ್ಚು ಪ್ರಾಶಸ್ತ್ಯ ಕೊಡಲಾಗುತ್ತದೆ. ಒಂದು ಮೂಲೆಯ ಹಳ್ಳಿಯಲ್ಲಿ ಒಂದು ರಸ್ತೆಯಾಗಬೇಕಾದರೆ, ಇಲ್ಲವೇ ಒಂದು ಶಾಲೆಯನ್ನು ತೆರೆಯಬೇಕಾದರೆ ರಾಷ್ಟ್ರೀಯ ಇಲ್ಲವೇ ರಾಜ್ಯದ ಅಧಿಕಾರಿಗಳಿಂದಲೇ ಅನುಮತಿ ದೊರೆಯಬೇಕೆಂದಿದ್ದರೆ ಯಾವ ಸುಧಾರಣೆಯೂ ಕಾಲ ಕಾಲಕ್ಕೆ ಆಗುವುದು ಸಾಧ್ಯವಿಲ್ಲ. ಬ್ರಿಟಿಷರ ಆಡಳಿತೆಯಲ್ಲಿ ಸರ್ವ ವ್ಯಾಪಕವಾಗಿದ್ದ ನೌಕರಶಾಹಿಯ ಆಡಳಿತೆಯಲ್ಲಿ ನಾವು ಕೇಂದ್ರೀಕೃತ ಆಡಳಿತೆಯ ದುಷ್ಪರಿಣಾಮಗಳನ್ನು ಸಾಕಷ್ಟು ಅನುಭವಿಸಿದ್ದೇವೆ. ಆದರೆ ಈಗ ನಮಗೆ ಸ್ವಾತಂತ್ರ್ಯ ದೊರಕಿದ ಬಳಿಕವಾದರೂ ಈ ಪದ್ಧತಿಯನ್ನು ಸುಧಾರಿಸುವುದರಲ್ಲಿ ನಾವು ಸಾಕಷ್ಟು ಪ್ರಗತಿಯನ್ನು ಹೊಂದಿಲ್ಲವೆನ್ನುವುದು ಚಿಂತಾಜನಕ ಸಂಗತಿ.

ಜನರಿಗೆ ತಮ್ಮ ಹೊಣೆಗಾರಿಕೆಗಳು ತಿಳಿಯಬೇಕಾದರೆ ಆಡಳಿತದ ನೆಲೆಯು ಬುಡಕ್ಕೆ ಬರಬೇಕಾದುದು ಅವಶ್ಯವಿದೆ. ಗ್ರಾಮ ಪಂಚಾಯಿತಿಗಳು ಸರ್ಕಾರೀ ಆಡಳಿತೆಯ ತಳಹದಿಯಾದರೆ ಜನರಿಗೆ ತಮ್ಮ ಆಡಳಿತೆಯಲ್ಲಿ ಪ್ರತ್ಯಕ್ಷವಾದ ಭೂಮಿಕೆಯನ್ನು ವಹಿಸಲು ತಕ್ಕ ಅವಕಾಶ ದೊರೆಯುವುದಲ್ಲದೆ, ಆಡಳಿತ ತತ್ತ್ವದ ಮೇಲೆ ಹೆಚ್ಚಿನ ಆಸಕ್ತಿ, ಅಭಿಮಾನ ಮತ್ತು ವಿಶ್ವಾಸಗಳು ಹುಟ್ಟುವುವು. ದಾರಿದ್ರ್ಯ, ದಬ್ಬಾಳಿಕೆಗಳಿಂದಾಗಿ ಸರ್ಕಾರದ ಹಿತಕಾರೀ ಸ್ವಭಾವದ ಮೇಲೆಯೇ ವಿಶ್ವಾಸವಿಲ್ಲದ ನಮ್ಮ ಜನತೆಯ ದೃಷ್ಟಿಕೋನವು ಹೀಗಾದರೆ ಮಾರ್ಪಾಟು ಹೊಂದಲಿಕ್ಕೆ ಸಾಧ್ಯವಿದೆ.

ತಾತ್ವಿಕವಾಗಿ ಈಗ ನಮಗೆ ಪ್ರಜಾಸತ್ತಾತ್ಮಕ ಪದ್ಧತಿಯಿದ್ದರೂ ನಾವು ಒಮ್ಮೆ ನಮ್ಮ ಪ್ರತಿನಿಧಿಗಳನ್ನು ಶಾಸನ ಸಭೆಗೆ ಕಳಿಸಿದೆವೆಂದರೆ ಆ ಮೇಲೆ ನಮಗೆ ಅವರ ಮೇಲೆ ಯಾವೊಂದು ತರಹದ ಹಿಡಿತವಿಲ್ಲವಾಗುತ್ತದೆ. ಅವರಾದರೂ ತಮ್ಮ ರಾಜಕೀಯ ಪಕ್ಷದ ಧೋರಣೆಯನ್ನನುಸರಿಸಿಯೇ ಮುಂದುವರಿಯುತ್ತಾರೆ ನಿಜ: ತಮ್ಮ ಮತದಾರರ ಬೇಕು—ಬೇಡಗಳನ್ನು ಹೆಚ್ಚಿನ ಮಟ್ಟಿಗೆ ಲಕ್ಷ್ಯದಲ್ಲಿಟ್ಟು ಕೊಳ್ಳುವುದಿಲ್ಲ. ಹೀಗಾಗಿ ಜನರ ಕೊರಗು—ಕೊರತೆಗಳು ಅವ್ಯಕ್ತವಾಗಿಯೇ ಉಳಿದು ಸಾರ್ವತ್ರಿಕ ಅತೃಪ್ತಿ—ಅಸಮಾಧಾನಗಳನ್ನುಂಟು ಮಾಡುತ್ತವೆ. ಬ್ರಿಟನ್, ಅಮೇರಿಕ ಮುಂತಾದೆಡೆ ಶಾಸನ ಸಭಾ ಪ್ರತಿನಿಧಿಗಳಿಗೆ ಅವರ ಮತದಾರರಿಂದ ದಿನಕ್ಕೆ ನೂರಾರು ಪತ್ರಗಳು ಬರುತ್ತಿವೆಯಂತೆ. ಆ ಪತ್ರಗಳಲ್ಲಿದ್ದ ಸೂಚನೆ—ವಿನಂತಿಗಳಿಗೆ ಸವಸ್ಕರು ಉತ್ತರವನ್ನೀಯುವರಲ್ಲದೆ, ಅವುಗಳನ್ನು ಸರ್ಕಾರದ ಗಮನಕ್ಕೆ ತರಲೂ ಯತ್ನಿಸುವರಂತೆ. ಆದರೆ ನಮ್ಮ ಜನರಿಗೆ ನಮ್ಮ ಪ್ರತಿನಿಧಿಗಳಿಂದ ಇಷ್ಟು ಸೇವೆ ಸದ್ಯಕ್ಕೆ ದೊರೆಯುವಂತಿಲ್ಲ.

ನಮ್ಮ ಈ ಹಿಂದುಳಿದ ಜನ ಜೀವನದ ಪರಿಸ್ಥಿತಿಯಲ್ಲಿ ಅಧಿಕಾರದ ವಿಕೇಂದ್ರೀಕರಣವು ಜನರಲ್ಲಿ ನವಚೇತನವನ್ನೂ ಆತ್ಮವಿಶ್ವಾಸವನ್ನೂ ಉಂಟು ಮಾಡುವುದರಲ್ಲಿ ಸಂದೇಹವಿಲ್ಲ. ಪ್ರಜಾಸತ್ತೆಯು ಹಿತಕರವಾಗಿ, ಶಾಶ್ವತವಾಗಿ ಬಾಳಬೇಕಾದರೆ ಅದರಲ್ಲಿ ಪ್ರತಿಯೊಬ್ಬನಿಗೂ ಭಾಗವಹಿಸಲು ಆದಷ್ಟು ಹೆಚ್ಚು ಅವಕಾಶವಿರಬೇಕು ಎಂಬುದನ್ನು ನಮ್ಮ ಉದ್ದಾಮ ರಾಜಕಾರಣಿಗಳು ಈ ಪರಿವರ್ತನೆಯ ಸಂಧಿಕಾಲದಲ್ಲಿ ಮರೆಯಬಾರದು.

"ಸರಸ್ವತಿ"
(Estd. 1920)
ಕನ್ನಡ ಮಾಸಪತ್ರಿಕೆ
ಕಳೆದ ಮೂವತ್ತೈದು ವರ್ಷಗಳಿಂದ ಮಹಿಳೆಯರ ಹಾಗೂ ಮಕ್ಕಳ ಸೇವೆಯನ್ನು ಸಲ್ಲಿಸಿ ಇಡೀ ಕರ್ನಾಟಕದಲ್ಲಿ ಹೆಸರಾಂತ ಮಾಸಪತ್ರಿಕೆ. ಜಾಹೀರಾತು ಕೊಡಲು ಉತ್ತಮ ಪತ್ರಿಕೆ. ಶಾಲಾ ಮಕ್ಕಳಿಗೆ ಅಗತ್ಯವಾದ ಪತ್ರಿಕೆ.
ಸಂಪಾದಕಿ:— ಆರ್. ಕಲ್ಯಾಣಮ್ಮ.
ವಾರ್ಷಿಕ ಚಂದಾ ರೂ. 3 ಮನಿಯಾರ್ಡರ್ ಮಾಡಿರಿ.
ಮ್ಯಾನೇಜರ್,
ಸರಸ್ವತಿ ಕಾರ್ಯಾಲಯ,
ಅರಳೆಪೇಟೆ, ಬೆಂಗಳೂರು2.
ಫೋನ್ ನಂ. 3303.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ
ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?
ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್, ಎಲ್. ಐ. ಎಮ್.
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಪರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.
ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ. ಕೆ. ಹೊನ್ನಯ್ಯ ಶೆಟ್ಟರ

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ
ವಿದ್ಯಾರ್ಥಿಗಳು ನಲಿನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೬ನೇ ಮುದ್ರಣವನ್ನು ಕಂಡಿದೆ—
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ).
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:
(1) ಸುದರ್ಶನ ಆಯುರ್ವೇದ ವೈದ್ಯಶಾಲಾ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಪ್ರತೀಕಗಳ ಭಾಷೆ

(೭ನೇ ಪುಟದಿಂದ)

ಅಥವಾ ಅವುಗಳ ಪ್ರತಿಕೃತಿಗಳಿಂದನಾವು ವ್ಯಕ್ತಪಡಿಸಲು ಯತ್ನಿಸುತ್ತೇವೆ. ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳ ಮುಖಾಂತರ ನಮ್ಮ ಒಂದು ಅಂತರಂಗಿಕ ಸತ್ಯವನ್ನು ಅತೀಂದ್ರಿಯ ಜ್ಞಾನವನ್ನು ಪ್ರತ್ಯಕ್ಷವೂ ಅಲ್ಲದ ಪರೋಕ್ಷವೂ ಆಗದ ಅಪರೋಕ್ಷಾನುಭವವನ್ನು ವ್ಯಂಗ್ಯವಾಗಿ, ವಕ್ರವಾಗಿ, ಪರ್ಯಾಯವಾಗಿ, ನಾವು ಪ್ರಕಟಿಸುತ್ತೇವೆ. ಈ ಪ್ರಕಟಣೆಯ ಆಲಂಬನವೇ ಪ್ರತೀಕ. ಪ್ರತೀಕ ಹೊರಗಿನದು ಬಹಿರಂಗದ್ದು. ಪ್ರತೀಕ ಪ್ರತಿಪಾದಿಸಿದ ಸಂಗತಿ ನಮ್ಮೊಳಗಿನದು, ಅಂತರಂಗದ್ದು.

ಪ್ರತೀಕಗಳ ಭಾಷೆಯಲ್ಲಿ ನಮ್ಮ ಅಂತರಂಗಿಕ ಅನುಭವಗಳೂ ಅಭಿಪ್ರಾಯಗಳೂ ಇಂದ್ರಿಯ ಬೋಧದ ತಥ್ಯಗಳಾಗಿ ಚಿತ್ರಿಸಿ ರೂಪಿಸಿ ವ್ಯಕ್ತವಾಗುವವು, ಈ ಭಾಷೆಗೆ ವಸ್ತುಜಾತವೆಲ್ಲವೂ ಪ್ರತೀಕಗಳ ಚಿತ್ರಶಾಲೆ ಆಗಬಲ್ಲುದು. ವ್ಯಕ್ತಿಯೇ ಒಂದು ಪ್ರತೀಕವೆನಿಸಬಹುದು. ಯಾವ ಮಟ್ಟಿಗೆ ಎಷ್ಟುಪಟ್ಟು ಅಂತರಂಗಿಕ ಅನುಭವ ಅಥವಾ ಭಾವನಾ ಜೀವನ ಇಲ್ಲವೆ ಕಲ್ಪನಾಶೀಲತೆ ಹೆಚ್ಚಿನದೋ ಅಷ್ಟು ಮಾತ್ರೆಯಲ್ಲಿ ಆ ಜೀವನದ ಆ ಅನುಭವದ ಅಭಿವ್ಯಕ್ತಿಗೆ ಅಳವಡಿಸುವ ಪ್ರತೀಕಗಳು ವಿಪುಲ ಮತ್ತು ವಿವಿಧ.

ನಮಗೆ ಗೊತ್ತು; ಪ್ರಪಂಚದ ಸಾಧು, ಸಂತರು, ಕವಿ ಅನುಭಾವಿಗಳು ಆಡುವ ಭಾಷೆಯಲ್ಲಿ ವಾಚ್ಯಕ್ಕಿಂತ ಸೂಚ್ಯವೇ ಹೆಚ್ಚಿರುತ್ತವೆ. ಕ್ರೈಸ್ತ, ಬುದ್ಧರಿಂದ ಮೊದಲಾಗಿ ರಾಮಕೃಷ್ಣ ಪರಮಹಂಸ, ವಿನೋಬಾಜೀಯವರ ತನಕವೂ ಮಹಾನುಭಾವಿಗಳೆಲ್ಲಅಪ್ರಮೇಯವನ್ನುಅನಿರ್ವಚನೀಯವನ್ನು ಅತೀಂದ್ರಿಯ ಅನುಭವವನ್ನು ಸತ್ಯ ಸೌಂದರ್ಯಗಳನ್ನು ಕಥೋಪಕಥನಗಳ ಮುಖಾಂತರ ದೃಷ್ಟಾಂತಗಳ ದ್ವಾರದಿಂದ ;ಸೊಗಸಾಗಿ ಸಲಿಸವಾಗಿ ಬೋಧಿಸುತ್ತಾ ಬಂದಿದ್ದಾರೆ. ಇದಕ್ಕೆ ಕೇವಲ ಮನೋರಂಜನೆಯೇ ಮುಖ್ಯ ಹೇತುವಲ್ಲ. ಭಾವ ವ್ಯಂಜನೆಯೇ ಇದರ ಮೂಲದ ಒತ್ತಾಯ.

ಜೀವನದಲ್ಲಿ ಪ್ರತೀಕಗಳಿಲ್ಲದೆ ಭಾವಾವಿಷ್ಕಾರ ಸಾಧ್ಯವೇ ಇಲ್ಲ. ಇನ್ನು ಪ್ರತೀಕ ಮತ್ತು ಅದರ ಪ್ರತಿಪಾದ್ಯ ಸಂಗತಿ ಇವೆರಡರಲ್ಲಿ ವಿಶಿಷ್ಟವಾದ ನಿರ್ದಿಷ್ಟವಾದ ಸಂಬಂಧವೇನು? ಈ ದೃಷ್ಟಿಯಿಂದ ವಿಚಾರಿಸಿದರೆ ಪ್ರತೀಕಗಳಲ್ಲಿ ಮೂರು ಪ್ರಕಾರಗಳು ಕಂಡುಬರುತ್ತವೆ. ಅವನ್ನು ೧ ಸಾಂಪ್ರದಾಯಿಕ, ೨. ನೈಮಿತ್ತಿಕ, ಮತ್ತು ೩. ಸಾರ್ವತ್ರಿಕ ಅಥವಾ ನಿತ್ಯವೆಂದು ನಾವು ಕರೆಯೋಣ. ಅವು ಇಂತಿವೆ:—

೧) **ಸಾಂಪ್ರದಾಯಿಕ** ಪ್ರತೀಕಗಳಲ್ಲಿ ಸರ್ವ ಪರಿಚಿತವಾದದ್ದು ಭಾಷೆಯೇ. 'ಕು-ದು-ರೆ' ಎಂಬ ಅಕ್ಷರಗಳ ಗುಂಪಿಗೂ ಆ ಹೆಸರಿನಿಂದ ದ್ಯೋತಿಸಲ್ಪಡುವ ಪಶುವಿಗೂ ಯಾವ ಹೊಂದಿಕೆ? ಎಲ್ಲಿಯ ಹೋಲಿಕೆ? ಕುದುರೆಗೂ ಅದರ ಆ ಹೆಸರಿಗೂ ತಾನೇ ತಾನಾದ ಸಂಬಂಧವೇನಾದರೂ ಇದೆಯೇ?ಸರ್ವಥಾ ಇಲ್ಲ. ಈ ಸಂಬಂಧ ಸ್ಥಾಪಿತವಾದದ್ದು ಪ್ರತಿಷ್ಠೆ ಪಡೆದದ್ದು ಕೇವಲ ಸಮಾಜದ ಸಂಪ್ರದಾಯದಿಂದ; ಜನನೆಲ್ಲ ಹಾಗೆ ಒಪ್ಪಿ ಬಂದದ್ದರಿಂದ. ಇಂಥ ರೂಪಕ್ಕೆ ಇಂಥ ನಾಮವೆಂಬ ವಾಗರ್ಥ ಸಂಸ್ಕೃತಿಯನ್ನು ನಾವು ಚಿಕ್ಕಂದಿನಿಂದಲೂ ಕೇಳಿ ನಂಬಿ ನುಡಿದು ರೂಢಿಗೊಳಿಸಿಬಂದಿದ್ದೇವೆ. ಕೆಲವೊಮ್ಮೆ ಯೌಗಿಕವಾಗಿ ಒಂದು ಶಬ್ದ ಮೂಲಾರ್ಥ ದ್ಯೋತಕವಾಗಿದ್ದರೂ ಅದುಮುಂದೆ ಬೇರೆಯೊಂದು ಸರಿಸಮವಾದ ಸಂಗತಿಯ ದ್ಯೋತಕವೂ ಆಗುತ್ತದೆ. ಮೂಲದಲ್ಲಿ 'ಸೀತಾಂಬರ' ಅರಸಿನ ಬಟ್ಟೆಯದೇ ಇದ್ದಿರಬೇಕು. ಆದರೆ ಮುಂದೆ ಎಲ್ಲ ಪಟ್ಟೆಯ ಮಡಗಳಿಗೆ ಅದು ರೂಢವಾಯಿತು!

ಭಾಷೆಯಂತೆಯೇ ಅನೇಕ ವಸ್ತುಗಳೂ ಚಿಹ್ನಗಳೂ ಸಾಂಪ್ರದಾಯಿಕವಾಗಿ ಕೆಲವೊಂದು ಭಾವನೆಯ, ತತ್ವದ ಅಥವಾ ಶಕ್ತಿಯ ಪ್ರತೀಕಗಳಾಗಿವೆ. ಉದಾಹರಣೆಗೆ ಒಂದು ರಾಷ್ಟ್ರದ ಧ್ವಜ, ಒಂದು ದೇವತೆಯ ವಿಗ್ರಹ, ಶಾಲಗ್ರಾಮ, ಕ್ರೈಸ್ತ ನೇರಿದ ಸಿಲುಬೆ, ಸ್ವಸ್ತಿಕ್ ಚಿಹ್ನೆ, ಓಂಕಾರ, ಕಮಲ, ಕಲಶ, ಇತ್ಯಾದಿ ಇದೇರೀತಿ ಕೆಲವೊಂದು ಮುದ್ರೆ, ಕೃತಿಗಳೂ ಸಾಂಪ್ರದಾಯಿಕವಾಗಿ ಪ್ರತೀಕತ್ವವನ್ನು ಹೊಂದಿವೆ. ಕೈ ಮುಗಿಯುವದು, ಕೈ ಕುಲುಕುವದು, ಕುರ್ನಿಸಾತು, ಕಮ್ಯುನಿಸ್ಟರ ಎತ್ತಿದ ಮುಷ್ಟಿ, ಚಿನ್ಮುದ್ರೆ ಇತ್ಯಾದಿ.

೨) **ನೈಮಿತ್ತಿಕ**:— ಇವು ಸಾಂಪ್ರದಾಯಿಕಕ್ಕೆ ತೀರ ವಿರುದ್ಧ. ಅವು ಸಾಮುದಾಯಿಕ, ಸಾಮಾಜಿಕ ಪ್ರಜ್ಞೆಯ ವಿಷಯವಾಗಿದ್ದರೆ ಇವು ವೈಯಕ್ತಿಕ ಪ್ರಜ್ಞೆಯ ವಿಷಯ. ಒಬ್ಬನಿಗೆ ಒಂದು ಊರಿನಲ್ಲಿ ಅತ್ಯಂತ ಹೃದಯದ್ರಾವಕ ದುರ್ಘಟನೆ ಒದಗಿದ್ದರೆ, ಅನಂತರ ಆ ಊರ ಹೆಸರು ಬಂದಾಗೆಲ್ಲ ಆತನಿಗೆ ಅಸಹ್ಯವೆನಿಸಬಹುದು. ಹಾಗೆಯೇ ಒಂದು ಮನೆ, ಒಂದು ಕೇರಿ, ಒಂದು ಉಡುಪು, ಒಂದು ದೃಶ್ಯ, ಒಂದು ವಸ್ತು ಹಿಂದೊಮ್ಮೆ ಯಾವದೊಂದು ಉತ್ಕಟ ಮನೋಭಾವದೊಂದಿಗೆ ಹೊಂದಿಕೊಂಡಿದ್ದರಿಂದ ಮುಂದೆಲ್ಲ ಅದೇ ಭಾವವನ್ನು ಮೂಡಿಸಬಹುದು. ಈ ಪ್ರತೀಕಗಳು ವೈಯಕ್ತಿಕವಾದ್ದರಿಂದ ಇತರರಿಗೆ ಅರ್ಥವಾಗವು. ಆದ್ದರಿಂದ ಗಾದೆಗಳು, ಹಳೆಯ ಕಥೆಗಳು, ಕಲ್ಪನಾರಮ್ಯ ಆಖ್ಯಾನಗಳು, ಕಲಾಕೃತಿಗಳು ಇವೆಲ್ಲವುಗಳಲ್ಲಿ ನೈಮಿತ್ತಿಕ ಪ್ರತೀಕಗಳ ಬಳಕೆ ಇರುವದಿಲ್ಲ. ಆದರೆ ವ್ಯಕ್ತಿಯ ಕನಸಿನಲ್ಲಿ ಇವೇ ವಿಶೇಷ.

೩) **ಸಾರ್ವತ್ರಿಕ ಪ್ರತೀಕಗಳು**:— ಈ ಪ್ರತೀಕಗಳು ದೇಶ ಕಾಲಗಳ ಬಂಧನಗಳಿಂದ ಆಚೆಯವು. ಅಲ್ಲದೆ ಇವುಗಳಲ್ಲಿ ಮಾತ್ರ ಪ್ರತೀಕ ವಸ್ತು ಮತ್ತು ಅದು ಪ್ರತಿನಿಧಿಸುವ ಭಾವ ಇವೆರಡರಲ್ಲಿ ಮೂಲತಃ ಮರ್ಮತಃ ಒಂದು ಸಂಬಂಧ ಇದ್ದೇ ಇರುತ್ತದೆ. ಈ ಸಂಬಂಧದ ಅನುಭವವಿದ್ದವರಿಗೆಲ್ಲ ಈ ಪ್ರತೀಕಗಳ ನೆನಪು ಬಳಕೆ ಸೊಗಸು ಸಹಜವಾಗುತ್ತದೆ. ಉದಾಹರಣೆಗೆ ಬೆಂಕಿ. ನೀರು, ಬೆಟ್ಟ ಇತ್ಯಾದಿ. ಬೆಂಕಿಯ ಪ್ರತೀಕವನ್ನು ಎಲ್ಲ ದೇಶದ ಎಲ್ಲ ಕಾಲದ ಜನ ಉಪಯೋಗಿಸಿದ್ದುಂಟು. ಬೆಂಕಿಯು ಚಂಚಲ. ಆದರೂ ಅಚಲ. ಅದರ ಕಾಂತಿ,ಅದರ ಶಕ್ತಿ,ಅದರ ಪ್ರಭೆ, ಅದರ ಪ್ರತಾಪ. ಇವೆಲ್ಲ ಗಮನಿಸಿ ಈ ಪ್ರತೀಕ ಬೇರೆ ಬೇರೆ ಸಂದರ್ಭದಲ್ಲಿ ಬೇರೆ ಬೇರೆ ಜನಾಂಗದಲ್ಲಿ ಬಳಸಿದ್ದುಂಟು. ಶಕ್ತಿ—ಶೋಭೆ, ಚಲನೆ, ಉಲ್ಲಾಸ, ಜೀವನ ಇವಕ್ಕೆಲ್ಲ ಬೆಂಕಿ ಪ್ರತೀಕವಾಗುವದುಂಟು. ಅದೇ ರೀತಿ ನೀರು,—ಹರಿದಲ್ಲಿ ಹರಿದು ಇದ್ದಲ್ಲಿ ಇರುತ್ತದೆ. ಬೆಂಕಿಯ ಎಲ್ಲ ದ್ಯೋತಕ ಗುಣಗಳು ನೀರಿಗೂ ಇವೆ. ಆದರೆ ಒಂದು ಭೇದ, ಬೆಂಕಿ ಸಾಹಸ ಕಾರ್ಯ ತೇಜಸ್ವಿತೆಗೇ ಕುರುಹು. ನೀರು ಗಾಂಭೀರ್ಯ ಸ್ಥಿರತೆ ಶಾಂತತೆಗೆ ಪ್ರತೀಕ. ಅದೇರೀತಿ ಇನ್ನೊಂದು ಸರ್ವ ಸಾಮಾನ್ಯ ಪ್ರತೀಕ ಸೂರ್ಯ. ಇನ್ನೂ ಈ ವಿಷಯ ವಿಸ್ತರಿಸುವದನ್ನು ವಿಸ್ತಾರ ಭಯದಿಂದ ಬಿಡಬೇಕಾಗಿದೆ.

ಇಂಥ ಪ್ರತೀಕಗಳು ಸಾರ್ವತ್ರಿಕವೇಕೆ! ಇವುಗಳ ಅನುಭವ ಅನಾದಿಯದು ಮಾನವ ಕೋಟಿಗೇ ಅನಿಸುತ್ತ ಬಂದಿದ್ದು ಇಂಥ ಪ್ರತೀಕಗಳ ಮೂಲ ನಮ್ಮ ಶರೀರದ, ಇಂದ್ರಿಯಗಳ ಮನಸ್ಸಿನ ಆಳದಲ್ಲಿ ಹುದುಗಿದ್ದು ಅನುಮಾನವು ಸಾಮಾನ್ಯವಾಗಿದೆ. ಈ ರೀತಿ ನಮ್ಮ ಕಣ್ಣು, ಕೈ, ಮುಖ, ತಲೆ, ದೇಹವೇ ಒಂದು ಪ್ರತೀಕವಾಗುವದುಂಟು. ವಿಶಿಷ್ಟ ಭಾವಗುಣ ಪ್ರಕಟೀಕರಣಕ್ಕಾಗಿ.

ಸಾಂಪ್ರದಾಯಿಕ ಪ್ರತೀಕಗಳಿಗಿಂತ ಸಾರ್ವತ್ರಿಕ ಪ್ರತೀಕಗಳ ಆಕರ್ಷಣೆ ಆಸರೆ ವ್ಯಾಪ್ತಿ ವ್ಯವಹರಣೆ ಎಲ್ಲ ಹೆಚ್ಚು. ಕಾವ್ಯದಲ್ಲಿ, ಆಖ್ಯಾಯಿಕೆಗಳಲ್ಲಿ ಪ್ರಾಚೀನ ಐತಿಹ್ಯಗಳಲ್ಲಿ ಗಾದೆಗಳಲ್ಲಿ ಜಾನಪದ ಹಾಡುಗಳಲ್ಲಿ ಈ ಪ್ರತೀಕಗಳ ಸುಗ್ಗಿ ಆರಳುತ್ತವೆ. ಅನಂತಶೇಷಶಯನ, ಬಲಿವಾಮನ, ಪದ್ಮಾವತಿ ಪರಿಣಯ ಇವೆಲ್ಲ ಅಂಥ ಭೌಗೋಲಿಕ ಸತ್ಯದ ಪ್ರತೀಕ ಕಥೆಗಳು. ಕಾಲೀಯ ಮರ್ದನ, ರೇಣುಕಾವಧೆ, ಕಾಂಚನಮೃಗ, ಕ್ರೌಂಚವಧ ಮುಂತಾದುವು ಮಾರ್ಮಿಕವಾದ ಮನೋವೈಜ್ಞಾನಿಕ ಇಲ್ಲವೇ ಕಲಾತಕ ಪ್ರತೀಕಗಳು ಮಾನವನ ಅಂತಸ್ತಮ ಮನಸ್ತರಗಳಲ್ಲಿ ಆದಿಮಾನವ ಸಮಾಜದ ವಿಕಾಸದಿಂದಲೂ ಅಚ್ಚೊತ್ತಿ ಬಂದ ಕೆಲವು ಕಟ್ಟುನಿಟ್ಟಿದ ಸ್ಥಾಯೀ ಮುದ್ರೆಗಳು ಅಂತಹಿನವಾಗಿ ಅಧ್ಯಾಹೃತವಾಗಿ ಬಂದಿವೆ. ಅವುಗಳ ಪ್ರತೀಕಗಳಾಗಿ ವಲಯ, ಸರ್ಪ, ಪದ್ಮ, ಮುಂತಾದವು ಕನಸಿನಲ್ಲಿಯೂ ಕವಿ ಕಲ್ಪನೆಯಲ್ಲಿಯೂ ಆಖ್ಯಾಯಿಕೆಗಳಲ್ಲಿಯೂ ಆಗಾಗ್ಗೆ ಎಲ್ಲೆಲ್ಲೂ ಕಾಣಿಸಿಕೊಳ್ಳುತ್ತದೆ.

ಈ ಪ್ರತೀಕಗಳ ಭಾಷೆ ಮಾನವನ ಮನೋಗತದ ಅರಿವಿನಾದ ಭಾಷೆ ದೇಶ ಕಾಲಗಳ ಮರ್ಯಾದೆಯನ್ನು ಮೀರಿ ಅಂತರಾಳವನ್ನು ವೇಧಿಸಿ ಭೇದಿಸಿ ವೇದ್ಯವಾಗುವ ಭಾಷೆ. ಮಾನವಕೋಟಿಯು ಸಾಮೂಹಿಕವಾಗಿ ಹುಡುಕಿಕೊಂಡ ಪಳಗಿಸಿಕೊಂಡ ಏಕಮೇವ ಅಂತರ್ ರಾಷ್ಟ್ರೀಯ ಭಾಷೆಯು ಅದೊಂದೇ! ಮೊಹೆಂಜೋದಾರೊ, ಸುಮೇರಿಯಾ, ಐಜಿಪ್ತ, ಪ್ರಾರಂಭಿಕ ಬ್ರಿಟನ್, ಮಯ, ದ್ರವಿಡ –ಇಂತೆಲ್ಲ ಸಂಸ್ಕೃತಿಗಳ ಭಗ್ನಾವಶೇಷಗಳಲ್ಲಿಯೂ ಈ ಭಾಷೆಯ ವರ್ಣಮಾಲೆ —ಭಗ್ನಾವಶೇಷ ಪ್ರತೀಕಗಳು—ಈಗಲೂ ಕಂಡು ಬರುತ್ತವೆ. ಕಾಣುವ ಕಣ್ಣಿಗೆ ಬೆಳಕು ತರುತ್ತವೆ!

ನಮ್ಮ ಕಾವ್ಯಕ್ಕೆ ಪುಟವೇರಿಸುವ ಧ್ವನಿಶಕ್ತಿಯ ಜೀವನಾಡಿಯು ಈ ಪ್ರತೀಕಗಳ ಭಾಷೆಯಲ್ಲಿಯೇ ಮಿಡಿಯುತ್ತದೆ. ಕವಿ ಬಳಸುವ ಪ್ರತೀಕಗಳು ಸಾರ್ವತ್ರಿಕವಿದ್ದಾಗ ಅಥವಾ ಸಾಂಪ್ರದಾಯಿಕವಿದ್ದಾಗ ಅವುಗಳ ಆಸ್ವಾದ ರಸಿಕರಿಗೆಲ್ಲ ಹೃದ್ಯವಾಗುತ್ತದೆ. ಆದರೆ ಕವಿ ನೈಮಿತ್ತಿಕ ಪ್ರತೀಕಗಳನ್ನು ಬಳಸಿಕೊಂಡು ತನ್ನದೇ ಒಂದು ಸಂಜ್ಞಾ ಪಲ್ಲವಿಯನ್ನು ಪ್ರಯೋಗಿಸಿದಲ್ಲೆಲ್ಲ ಕಾವ್ಯ ದುರೂಹವಾಗುತ್ತದೆ. ಈ ರೀತಿಯಿಂದ ಹೊಸಗನ್ನಡ ಕವಿಗಳ ಅದರಲ್ಲಿಯೂ ಅತ್ಯಾಧುನಿಕ ನವ್ಯಕವಿಗಳ ಪ್ರತೀಕ–ಪ್ರಕಟಣಾವೈಖರಿಯನ್ನು ವಿಶ್ಲೇಷಿಸಿ ನೋಡುವದು ಕಾವ್ಯವಿಮರ್ಶೆಗೆ ರಕ್ತದಾನವನ್ನೇ ನೀಡುವ ಅಥವಾ ವಿದ್ಯುತ್ ಚಿಕಿತ್ಸೆಕೊಡುವ ಪ್ರಯೋಗ. ಅದು ಕನ್ನಡದಲ್ಲಿ ಇನ್ನೂ ಸಿಗುವದಗತ್ಯ. ಶ್ರೀಯುತರಾದ ಬೇಂದ್ರೆ, ಪುಟ್ಟಪ್ಪ, ಗೋಕಾಕ, ಮುಗಳಿ, ಬೆಟಗೇರಿ, ಕರ್ಕಿ, ಅಡಿಗ, ಕಣವಿ, ಚಿತ್ತಾಲ, ಪುರಾಣಿಕ, ಶ್ರೀಧರ, ಸಾಲಿ, ರಾಮಚಂದ್ರ ಶರ್ಮಾ, ಅರವಿಂದ ನಾಡಕರ್ಣಿ, ಎಕ್ಕುಂಡಿ ಮುಂತಾದ ಕವಿಗಳ ಕೃತಿಗಳಲ್ಲಿ ಪುನಃ ಪುನಃ ಮೂಡುವ ಪಾಪರಿಯಾಗಿ ಛಾಯೆಗಾಣಿಸಿಕೊಳ್ಳುವ ಪ್ರತೀಕಗಳ ಸಂವಿಧಾನ ಯಾವುವು? ಅವುಗಳ "ನಾದ, ಬಿಂದು, ಕಲೆ"ಗಳು ಎಂತಹವು? ಅವುಗಳಿಂದ ಸ್ಫುಟವಾಗಲು ಹೆಣಗುವ ಕವಿಯ ಅಂತರ್ಯದ ಹೃದ್ಗತವೇನು? ಅದು ಕನ್ನಡ ಜನತೆಯ ಅಂತಃ ಪ್ರಜ್ಞೆಗೆ ಯಾವ ಹತ್ತಿರಕ್ಕೆ ಯಾವ ಹಂತದಲ್ಲಿ ನಿಲ್ಲಬಲ್ಲದು—ಇವೆಲ್ಲ ಪ್ರಶ್ನೆಗಳನ್ನು ಕನ್ನಡ ಸಾಹಿತ್ಯದ ಹೊಸ ಕಾಲದ ಯಕ್ಷನು ಸಾಹಿತ್ಯದ ಧರ್ಮಜ್ಞರ ಮುಂದೆ ಇಟ್ಟಿಂತಿದೆ. ಅವುಗಳ ಉತ್ತರದಲ್ಲಿಯೇ ಕನ್ನಡ ಕಾವ್ಯದ ಆಶೋತ್ತರಗಳು ಫಲಿಸಲಿವೆ. ಆದರೆ ಸಧ್ಯಕಂತೂ ಈ ಪ್ರಶ್ನೆಗಳಿಗೆ ಪ್ರತಿಧ್ವನಿಯೇ ಪ್ರತ್ಯುತ್ತರವಾಗಿದೆ!

ಸ್ವತಂತ್ರ ಜೀವನೋಪಾಯ

(ಬರೆದವರು: ಕೆ. ಹೊನ್ನಯ್ಯ ಶೆಟ್ಟಿ)

ಜೀವನದ ಹೋರಾಟವನ್ನು ಕಣ್ಣ ಮುಂದಿರಿಸಿ, ಸ್ವತಂತ್ರ ಜೀವನ ನಡೆಸುವ ವಿಧಾನವನ್ನು ವಿವರಿಸುವ ಚಿಕ್ಕ ಪುಸ್ತಕ.

"ಸಂವಾದದಲ್ಲೆಲ್ಲ ಪ್ರತಿಯೊಂದು ವೃತ್ತದಲ್ಲಿ, ನಾನಾ ಗಾದೆಗಳೂ, ಉಪಮೆಗಳೂ ಅವಿರಳವಾಗಿ ಪೋಣಿಸಲ್ಪಟ್ಟಿವೆ........ಶೈಲಿಯು ಚಲೋದಿದೆ"

—'ಕಂಠೀರವ'.

ಬಿಳಿ ಕಾಗದ – ಸುಂದರ ಮುದ್ರಣ – ಬೆಲೆ: 0–4–0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಾಯಾಮೃಗ

ಕವಿ: ಎಸ್. ವೆಂಕಟರಾಜ.

* *

ಬಾನ ಕಡೆಯುಳ್ಳುರಿಸಿ ಮುಂಬೆಳಕು ತೋರಿತ್ತು
ತಂಗಾಳಿ ಮೆಲ್ಮೆಲನೆ ತೀಡಿತ್ತು. ತಳು ತಳುಕಿ
ಅವಳೋ ನಸುನಗುತ ನಡೆದಿರುವಳು
ಬೆಳಗಿನಾ ಗಾಳಿಯಲಿ ಮೇಲ್ಸೆರಗ ಮುಸುಕಿಕ್ಕಿ
ಗುಣುಗುಣಿಪ ಮೆಲುದನಿಯ ಗಾನದಲಿ ಹಮ್ಮೈಸಿ
ಅವಳೋ ತಲೆಬಾಗಿ ಬರುತಿರುವಳು.

ಇವಳಾವಳೋ ಕಾಣೆ ಬಿನ್ನಣದ ಬಲುಜಾಣೆ
ಬಿಗಿದಪುಟಿಯುಕ್ಕರಿಯಿಸುಗುವ ಮುಗ್ಧೋದಕದ
ಕಿರುನಗೆಯ ಸೇಸೆಯಲಿ ಬರುತಿರುವಳು
ಇವಳಾವಳೋ ಕಾಣೆ ಮಧುನೃಪನ ಮುದ್ದಾನೆ
ಅಳುಕಿ ಬಳುಕುತಲಿಡುವ ಹೆಜ್ಜೆಗಳ ಹಮ್ಮಿಯಲಿ
ತೂಗುತೊಯ್ಯೊಯ್ಯನೇ ಬರುತಿರುವಳು.

ಇವಳಾವಳೋ ರಮಣಿ ಕಳೆದಿರುಳ ಚೆಲುರಾಣಿ
ರಸದ ಸೇಚನೆಗೊಂಡು ತುಸುಮುಗಿದ ಕಂಗಳಲಿ
ಮಮತೆಯನೆ ಮೇಳೈಸಿ ಬರುತಿರುವಳು
ಇವಳಾವಳೋ ತರುಣಿ ಬಯಕೆತೂರಿದ ದೋಣಿ
ಸುಖದುಃಖಗಳ ತೆರೆಯ ತುಮುಲಿನಲಿ ತತ್ತರಿಸಿ
ಹಾಯೊಡೆದಗಿದಂತೆ ಅದೊ ಬರುತಿರುವಳು,

ಇವಳಾವಳೋ ಬೆಡಗುಗಾತಿ ಸಂಗದಿಗಳತಿ
ನವವಸಂತಾಗಮದ ಪದಪಿನಲಿ ದಿಗ್ವಿಜಯ
ಕೆಂದು ನಿಂದಿರುವ ಮನ್ಮಥನಿಯೋಗ
ಇವಳಾವಳೋ ನಾರಿ ಯುವಹೃದಯ ಸಂಚಾರಿ
ಕಾಡಿನಲಿ ಕಮರಿಯಲಿ ಬೆಟ್ಟದಲಿ ಬಯಲಿನಲಿ
ಹೊಳಲಿನಲಿ ಸುಳಿಸುಳಿವ ಮಾಯಾಮೃಗ!

ಮಾತು ಮಂತ್ರಣವಲ್ಲ ಪ್ರೀತಿ ಪಾತ್ರವಿದಲ್ಲ
ನೀತಿ ನಡೆಗಳ ಬಟ್ಟೆಯಿವಳಡಿಗೆ ಸಾಲದಿದೆ
ಪ್ರೀತ ಪುರುಷರ ಕಾಮಧೇನುಯಿವಳು
ನಾರಿಯಲಿನಿಂದು ಮತ್ತಾರಿಗೂ ನಿಲುಕದಿರು
ವೇರಿಕೆಯ ತುತ್ತತುದಿ ಬೆಲೆಯ ನಿಚ್ಚಣಿಕೆ ಮೇ
ಲೇರಿ ಕೊಯ್ಯುವ ಕಲ್ಪವೃಕ್ಷಯಿವಳು.

ಇವಳ ಬಗೆ ಬಾನಿನಲಿ ನಗೆಯು ಸುರಲೋಕದಲಿ
ಬಯಕೆ ಕಡಲಾಳದಲಿ ಮಾತು ತೆಂಗಾಳಿಯಲಿ
ಪ್ರೀತಿ ಪಾತಾಳದಲಿ ಹುದುಗಿರುವುದು
ಇವಳ ಮೌನವೆ ಮಾತು ಮಾತೆ ಹೊಂಚುವ ಮಮತೆ
ಮಮತೆ ಕಣ್ಣೀರಿನಲಿ ತೋಯ್ದು ತೋರುವ ರಸವು
ರಸವು ಬೇಸಗೆಯಾಗಿ ಬತ್ತಿರುವುದು.

ಇವಳು ಹೊಸ ಪೇಟೆಯಲಿ ತೋಳ ಬಲೆಯನು ಬೀಸಿ
ಕಣ್ಣ ಕೊನೆಯಲಿ ತಿವಿವ ನಿಟ್ಟುಸಿರಸೇದೆಯಲಿ
ಸುಡುವ ಸಖ್ಯದ ಸಾವು ಸುತ್ತಿರುವಳು
ಇವಳು ಸೆರಗಿಲಿ ಹಲವು ಜೀವಿಗಳ ಬಿಗಿಬಿಗಿದು
ಬಯಕೆಯಲಿ ಕಾವನಿಟ್ಟಿದೆಯ ಮೂಸೆಗೆ ಹೊಯ್ದು
ಸೊಡೆವಂತು ಪೆ ಸವಿಸುಸಿ ಕೆಂಡಿರುವಳು.

ಇವಳು ಸತ್ಯಕೆ ಕೊಟ್ಟ ಶಾಪ—ಸುಳ್ಳಿನ ರೂಪ
ಇವಳು ವಿಶ್ವದ ಸೊಗಸು ಕೊಸರು ಕೊಂಡಿಹ ಪಾಪ
ಬಸರತಿಯ ನಿಟ್ಟುಸಿರ ವಿರಹ ತಾಪ
ಇವಳು ಕರ್ಪೂರದ ಕೂಪಕೊಲಿದ ಕಾಮ ನಿರೂಪ
ಇವಳು ಕಾರಿರುಳ ಕಳ್ಳಲೆ ಸೆಳೆದ ಸುರಚಾಪ
ಸುಖದ ಕುಣಿತಕೆ ಸಂದ ಮಧು ಮಂಟಪ.

ಇವಳಿಗೆಪೆಯಿಲ್ಲ. ಮೊಗವೊಂದು ನಾಲಿಗೆಯೆರಡು
ಮುಕ್ಕಣ್ಣು ನಾಲ್ಕು ಕಾಲ್ಕೈಸೂಗು, ಬಾಯಾರು
ಏಳು ಕಿವಿಯೆಂಟು ದೆಸೆಗೈಗಳುಂಟು
ಇವಳ ರೂಪವ ಕಂಡುಕಂಡವರ ಕಂಗಳಿಗೆ
ಹೊಸತಾಗಿ ಸೆರೆಗೊಂಡು ಸೆಳೆಯುತಿದೆ. ಮಾಯೆಯಲಿ
ಮುಚ್ಚಿಟ್ಟ ಮುಸ್ಸುರಿಯ ಹೊಸೆದಗಂಟು.

ಇವಳು ಕತ್ತಿಯ ಮಸೆಯಲಿಲ್ಲ. ಕೊರಳನು ಹಿಸುಕ
ಲಿಲ್ಲ ಸುಡಿಗುಂಡುಗಳನೆಸೆದಿಲ್ಲ. ನಿತ್ಯವೂ
ಮೌನದಲಿ ಗೆಲುಗೊಂಡ ಹವಣವೇನು!
ಇವಳ ಬಾಯನು ಬಿಗಿದು ಕಣ್ಣಕೊನೆ ಕುಣಿಕುಣಿದು
ಸರಸದೇಕಾಂತದಲಿ ಸುರಿದ ಕಂಬನಿಯದೇ
ಸೊಗಸು ಮುತ್ತಾಗಿ ಮನೆ ತುಂಬಿತೇನು!

ಇವಳ ಮನೆಯಲಿ ತೈಲವಿನಿತಿಲ್ಲ. ಭೋಗಗಳ
ಬರಿದು ಭಾಂಡಾಗಾರ. ದಿನದಿನವು ಕಣ್ಣುಕ್ಕಿ
ಬೆಳಕು ಪಜ್ಜಳವಾಗುತಿರುವುದಂತೆ!
ಆರೊ ಸಂಸಾರಿಗರು ಮೂರು ಸಂಜೆಯ ಹೊತ್ತು
ಈ ಪುಣ್ಯ ಪೀಠಿಕೆಯ ಬಾಗಿಲೆಡೆಗೈತಂದು
ಸುರಿದ ಸಿರಿಹಂತ ನಿಚ್ಚಟದ ಸಂತೆ!

ಇವಳಗೆಳೆತನಗೊಂಡು ಬಾಳಿದವರಿನ್ನುಂಟು
ಹಗೆತನದ ಹಾದಿಯಲಿ ನಡೆಯದಿರು. ಹೆಡೆ ಜಡೆಯ
ಸುತ್ತರಿಸಿ ಕಾಳಿಂಗ ಕಾದಿರುವುದು!
ಇವಳ ಮೈಯೊಪ್ಪದಲಿ ಬಂಗಾರ ಬಳಲುತಿದೆ
ಬೆಳ್ಳಿ ಬೆಂಡಾಗುತಿದೆ. ಹೃದಯದಾವರ್ತದಲಿ
ಕಬ್ಬಿಣದ ಕಾವಲಿಯು ಕುದಿದಿರುವುದು!

ಇದು ಬೀಣೆಯಲ್ಲ ಕೈಬಿಡದಿರುವ ತಂಬೂರಿ
ಇದುಗಾನವಲ್ಲ ಬಗೆಬಯಕೆಗಳಲೆಸೆಯಾರಿ
ಬಾಯ್ಬಿಡುವ ಬದುಕುಗಳ ಕರುಳಕೂಗು
ಇದು ನಾಟ್ಯವಲ್ಲ ಕೊಲೆಕವಡುಗಳ ಕುಣಿಕುಣಿತ
ಇದು ಮೋಹವಲ್ಲ ಹೃದ್ವಾಪಗಳ ದಳ್ಳುರಿಯು
ಕೆಂಪು ಕಾದಲ್ಮೆಗಳ ಕರೆಯು ಸೋಗು.

ಇದು ಸೊಗಸಿನೇಕಾಂತ ಗೈಮೆಗೊಡಗಿದ ಗುಟ್ಟು
ಹರಯ ಹುಚ್ಚಿನಗೋಷ್ಠಿ ರತಿಸುಖದ ನೇಪಥ್ಯ
ಕವಡು ಕೈಬಿಗಿದ ಕಣ್ಮುಚ್ಚಲಾಟ!
ಇದು ಕಲೆಯ ತಲೆಮುಸುಕು ಕಾಮನೆಗಳಂತಪುರ
ಕೂರ್ಮೆಗಳ ಕಗ್ಗವಿ ವಿಲಾಸಗಳ ಮುಚ್ಚುಮರೆ
ಮಾನಾಪಮಾನಗಳ ನೊವಲ ಪಾತ!

ಇದು ನಿತ್ಯದನುಭಾವ ಭವಯಂತ್ರದಾವೇಗ
ಸೋತವರು ಗೆಲ್ಲುವರು ಕೂಡಿಕೊಂಡಾಟದಲಿ
ಕುಡಿದು ತಣಿಯದಲೇಪ ಸೋಮ ಪಾನ!
ಈ ಸುಖದ ನೇಮದಲಿ ಸ್ವರ್ಗದಾರಾಮದಲಿ
ಕ್ಷಣಿಕವಿಶ್ವವ ಮರೆತು ಕಾಮಿತದ ಕೈವಾರಿ
ತಮ್ಮನೇ ತಾವರಿವ ಮಧುರ ಮೌನ!

ಮುಂದೆ ನಿಂದವನ ಕಡೆ ನೋಡಿ ಕೆಲಬಲದೆ ಕಣ್
ಮಾಡಿ ಪರಕುಂಪಿರಿದು ಮಾತಾಡಿ ಮೋಹದಲಿ
ಕೂಡಿ ಕಾಮನೆಗೆಳಸುವ ದಿವ್ಯದೃಷ್ಟಿ
ಒಬ್ಬ ಬಂದಿಹನಲ್ಲಿ ಮತ್ತೊಬ್ಬ ಕಾದಿಹನು
ಹಿತ್ತಲಲಿ ನಿಂದಿಹನು ಮಗದೊಬ್ಬನೊಳಗಿಹನು
ಇನಿಬರನು ಮೆಚ್ಚಿಸುವ ಸುಖದ ಸೃಷ್ಟಿ.

ನಿನ್ನೆಯಯುಗಮದ ಕಾಮನೆಯೊಳು ತಪಂಬಡೆದು
ಇಂದಿನೊಲುಮೆಯ ಪೂಜೆ ಪಾರಣೆಯ ಪುಣ್ಯದಲಿ
ನಾಳೆಯನು ಬಿಗಿದಿಡುವ ಚಮರಿಯಿವಳು
ನಿನ್ನೆಯೆಂಬುದು ಸುಳ್ಳು ನಾಳೆಯೆಂಬುದು ಸಲ್ಲ
ದಿಂದೆ ಕಲ್ಪನೆಯ ಚೆಂಗುಡಿಗೆ ದೋಹಳವಿತ್ತು
ಹೂತು ಹಣ್ಗೊಳುವ ಹೊಂಬಾಳೆಯಿವಳು.

ಮಾತಿನಲಿ ಮಧುಸುರಿಸಿ ಗೀತೆಯಲಿ ಬಗೆಯರಿಸಿ
ರೀತಿ ರೀತಿಯ ಕಣ್ಣ ಸನ್ನೆಯಲಿ ಸೂಳರಿಸಿ
ಮಾತು ಬಗೆಗೊಡಗದಿಹ ನಿತ್ಯ ಸುಭಗೆ!
ಓತು ಸಂಜೆಯ ತನಕ ಸುಳಿಸುಳಿದು ಸೊರಗಿ ಕೈ
ಸೋತು ನೆಮ್ಮದಿಗಾಗಿ ಬರುವ ಮೇಳಂಬಗಳ
ಕಾತರಕೆ ಕಣ್ಮಸೆವ ಸಿರಿ ಸಂಪಗೆ!

ಸೊಬಗಿನಿತ್ತಡಿಗಳಲಿ ಲಾವಣ್ಯ ಪೂರದಲಿ
ಮುಳುಗಿ ಮಿಂದೆದ್ದವನು ಕಿತ್ತಡಿಯೊ ಕಾಮುಕನೊ
ಏನೊ ಪೂಜೆಗೆ ಬಂದ ಪುಣ್ಯವಂತ!
ಈ ಕಡೆಯ ತೀರದಲಿ ತೆರೆಗಳೋಕುಳಿಯಾಡಿ
ಈ ಕೂಲ ತಲ್ಪದಲಿ ತೆರವು ತೆಪ್ಪನನಾಡಿ
ಆವನೋ ನೀರಡಿಕೆಗೊಲಿದ ಪಾಂಥ!

ಇಲ್ಲಿ ಕಾಣುವ ಬೆಳಕು ಬೇರೆ ಗಾಳಿಯು ಬೇರೆ
ಇಲ್ಲಿ ಸೇರುವ ಸುಗ್ಗಿ ಸಿಂಗಾರವಲ್ಲ ವ-
ರ್ಷಾಗಮದ ಪೂರ್ವಿಕೆಯ ತಣ್ಪನೊಸಗೆ
ಇಲ್ಲಿ ತೋರುವ ಮಿಂಚು ಗುಡುಗು ಸಿಡಿಲಿನ ಸಂಚು
ಸಣ್ಣ ಹನಿ ಸೋರುಮಳೆ ಹಿಂಗಾರು ಮುಂಗಾರು
ನಡುವ ನೆಮ್ಮದಿಗಲ್ಲ— ಸೂರೆ ಸುಳಿಗೆ!

ಇಲ್ಲಿ ಮಾತಾಡಿದರೆ ಕಿವುಡೆನಿಸಿ ಮುಂದೆ ನಡೆ
ಇಲ್ಲಿ ಕಣ್ಗೂಡಿದರೆ ಕುರುಡೆಂದು ಹಿಂದೆ ನಿಲು
ಇಲ್ಲಿ ಸೋಲ್ಗೆಲವುಗಳ ಕಂತೆ ಬೇಡ
ಇಲ್ಲಿ ಹೊಗಳುವ ಮಾತಿಗಾಗಿ ಹೆಚ್ಚಳಿಸದಿರು
ತೆಗಳು ತಳತಂತ್ರದಲಿ ಸಿಲುಕದಿರು, ಕಾದಿರುವ
ಬಿಡುಗಣ್ಣರಿವರು ಬಾಯ್ದೆರೆಯ ಬೇಡ!

ಇವಳತ್ತ ನೋಡದಿರು, ನೋಡಿದರೆ ಸೋಲದಿರು
ಸೋತು ಬಳಿಸಾರದಿರು, ಸಾರಿ ಸುಖಕೆಳಸದಿರು
ಬದುಕಿದರೆ ನೀನೆ ಹೊಗಣೆಯನಯ್ಯ!
ಮಾತು ಜೇನಿನ ಮುದ್ದು ಮಮತೆ ಮಯಣದ ಗೂಡು
ಪ್ರೀತಿ ಪರಮೆಯ ರೀತಿ ಕುಡಿಕುಡಿದು ತಣಿಯದಿದೆ
ತಣಿದಾಗ ಹೂವು ನಿಸ್ಸಾರವಯ್ಯ!

ಅದೊ ನೋಡು! ಮುಗಿಲೊಂದು ಮೇಲಮೇಲಕೆ ಸಂಬು
ಕಡಲಿನಾಳವನಳೆದು ಬೆಟ್ಟಮುದಿಗಳನೇರಿ
ತುಂಬು ನೀರಬ್ಬರದೆ ಮೆರೆದುದೇನು!
ಅದು ಬದುಕು ಹೊತ್ತಿಗೆಯನುರಿಸಿ ತೀರಿದ ಮೇಲೆ
ಜೀವನಂಬರಿದೆನಿಸಿ ಮತ್ತೆ ಬಾನತ್ತ ಕಡೆ
ಬೆಳ್ಳನೆ ತೇಲಿ ಬೆಂಡಾದುದೇನು!

ಬಾನಕಡೆಯುಳ್ಳುರಿಸಿ ಹೊಸ ಬೆಳಕು ಮೂಡಿತ್ತು
ಬಿಸು ಗಾಳಿ ಮೆಲ್ಮೆಲನೆ ತೀಡಿತ್ತು, ನಡನಡಿಸಿ
ಅವಳೋ ಮೈದೂಗಿ ನಡೆದಿರುವಳು!
ಬೆಳಗಿನಾ ಬಿಸಿಲಿನಲಿ ಮೇಲ್ಸೆರಗ ಮುಸುಕಿಕ್ಕಿ
ಹೊಸತು ಹೂದೋಟದಲಿ ತಣಿನ ತುಂಬಿಯ ರೀತಿ
ಹೃದಯದಾನಂದಲಿ ನಡೆದಿರುವಳು!

ಎಸ್. ವೆಂಕಟರಾಜರ
ಮೂರು ಸರಸ ಕಾದಂಬರಿಗಳು.
೧. ಅಂಬುಜಾಕ್ಷಿ.
೨. ಧರ್ಮಶಾಲೆ.
೩. ತುಂಗಮ್ಮನ ತವರುಮನೆ.
ಇಂದೇ ಓದಿರಿ!—

ನವ ವರ್ಷಗಳ ಸಾಧನೆಯ ಸಿಂಹಾವಲೋಕನ

(೫ನೇ ಪುಟದಿಂದ)

ಅವರ ಅನುಯಾಯಿಗಳು ಭಾರತದ ಪ್ರತಿಷ್ಠೆಯನ್ನು ಬೀರಿದರೋ ಅವುಗಳನ್ನು ಉಜ್ಜೀವನಗೊಳಿಸಿ ನಮ್ಮ ದೇಶವನ್ನು ಪ್ರಪಂಚಕ್ಕೆ ಆದರ್ಶಪ್ರಾಯವಾಗಿ ಮಾಡಿ ವಿಶ್ವಶಾಂತಿಯುಂಟಾಗುವಂತೆ ಮಾಡುವುದು ನಮ್ಮ ಕರ್ತವ್ಯ. ಈ ಧೋರಣೆಯಿಂದಲೇ ನಮ್ಮ ಮುಖಂಡರು ಕಾರ್ಯವನ್ನು ನಿರ್ವಹಿಸುತ್ತಿರುವರು. ನಶಿಸಿ ಹೋಗಿದ್ದ ನಮ್ಮ ಕಲೆಗಳ ಸಂಶೋಧನಾ ಕ್ಷೇತ್ರಗಳು ಸ್ಥಾಪಿತವಾಗಿವೆ. ಸಂಗೀತ, ನೃತ್ಯ ಮೊದಲಾದ ಲಲಿತ ಕಲೆಗಳ ಪ್ರೋತ್ಸಾಹವನ್ನೂ ಸರಕಾರವು ಕೈಗೊಂಡಿದೆ.

ಆದರೆ ಸುಮಾರು ಇನ್ನೂರು ಮುನ್ನೂರು ವರ್ಷಗಳಿಂದ ಪಾಶ್ಚಾತ್ಯರ ಭೌತಿಕ ಸಂಸ್ಕೃತಿಯ ಮೋಹಕ ಬಲೆಯು ನಮ್ಮನ್ನು ಆವರಿಸಿಕೊಂಡುದರಿಂದ ನಮ್ಮ ಆಧ್ಯಾತ್ಮದ ಮಟ್ಟವು ಹೀನಸ್ಥಿತಿಯನ್ನು ಹೊಂದಿರುವುದು. ನಮ್ಮ ಪುರಾತನ ಸಂಸ್ಥೆಗಳು ಹಾಗೂ ಕಟ್ಟಳೆಗಳನ್ನು ನಾವು ಕಡೆಗಣಿಸುತ್ತಿದ್ದೇವೆ. ಪುರಾಣಗಳೆಲ್ಲವೂ ನಮಗೆ ಮಂಕು ಬೂದಿಯನ್ನು ಹಚ್ಚುವ ಬ್ರಾಹ್ಮಣ ನಿರ್ಮಿತ ಸಾಧನಗಳು. ಕಟ್ಟಳೆಗಳೆಲ್ಲವೂ ಅಂಧಶ್ರದ್ಧೆಯನ್ನು ಪ್ರದರ್ಶಿಸತಕ್ಕವು ಎಂಬ ಭಾವನೆಯು ನಮ್ಮಲ್ಲಿರುವ ಹೆಚ್ಚಿನ ವಿದ್ಯಾವಂತರಲ್ಲಿರುವುದು. ಪಾಶ್ಚಾತ್ಯರ ಭೌತಿಕ ಸಂಪತ್ಸುಖಗಳೇ ಮಾನವನ ಪರಮ ಧ್ಯೇಯವೆಂದು ಹಲವರ ಎಣಿಕೆ. ವಿಜ್ಞಾನದಿಂದ ಕಂಡುಕೊಂಡ ಹೊಸ ಹೊಸ ಸುಖ ಸಾಧನಗಳು ಜನಸಾಮಾನ್ಯರನ್ನು ವೈವರೆಸುತ್ತಿವೆ. ಮನುಷ್ಯನು ಇಂದ್ರಿಯಗಳ ಗುಲಾಮನಾಗಿದ್ದು ತನ್ನ ಆತ್ಮವನ್ನು ಮರೆತಿಹನು. ನೀತಿಯ ಮಟ್ಟವು ಇಳಿಮುಖವಾಗಿದೆ. ವ್ಯಕ್ತಿ ಸ್ವಾತಂತ್ರ್ಯದ ಹೆಳೆಯಿಂದ ಹೆಂಗಸು ತನ್ನ ನೈಸರ್ಗಿಕ ಸ್ಥಾನವನ್ನು ಮರೆತು ಗಂಡಸಿಗೆ ಸರಿಸಾಟಿ ಎನಿಸಿಕೊಳ್ಳುವ ಹವ್ಯಾಸದಲ್ಲಿದ್ದಾಳೆ. ಗಂಡಸರ ಸ್ಥಾನಮಾನಗಳನ್ನು ಆಕ್ರಮಿಸುತ್ತಿರುವಳವಳು. ಇದರಿಂದ ಸಮಾಜದಲ್ಲಿ ಸರಳವಾದ ಶಾಂತಿಮಯವಾದ ದಾಂಪತ್ಯ ಜೀವನಕ್ಕೆ ಧಕ್ಕೆ ತಗಲಿ ಸಾಮಾಜಿಕ ಅವ್ಯವಸ್ಥೆಯು ದಿನೇ ದಿನೇ ವೃದ್ಧಿಗೊಳ್ಳುತ್ತಾ ಬರುತ್ತಿದೆ.

ಪುರಾತನ ಕಾಲದಲ್ಲಿ ಅಂದರೆ ನಮ್ಮ ಸಂಸ್ಕೃತಿಯು ಪೂರ್ವ ದೇಶಗಳಲ್ಲಿಯೂ ಭೂಮಧ್ಯ ಪ್ರದೇಶಗಳಲ್ಲಿಯೂ ಹಬ್ಬಿಕೊಂಡಿದ್ದ ಸಮಯ ಸಂಸ್ಕೃತಭಾಷೆಯು ನಮ್ಮ ರಾಷ್ಟ್ರಭಾಷೆಯಾಗಿದ್ದು ನಮ್ಮಲ್ಲಿ ಒಂದು ರೀತಿಯ ಒಕ್ಕಟ್ಟು ಇತ್ತು. ಆದರೆ ಕ್ರಮೇಣ ಹೂಣರ ಹಾಗೂ ಮುಸಲ್ಮಾನರ ಧಾಳಿಯಿಂದಾಗಿ ಕಟ್ಟು ಸಡಲಿ ನಾವು ಹರಿಹಂಚಾದೆವು. ನಮ್ಮ ರಾಷ್ಟ್ರಭಾಷೆಯು ನಾಮಾವಶೇಷವಾಯಿತು ನಮ್ಮ ವಿಶಾಲ ದೃಷ್ಟಿಯು ಸಂಕುಚಿತವಾಗಿ ಪ್ರಾಂತ್ಯಭಾವನೆಯು ಪ್ರಬಲವಾಯಿತು ಒಂದು ರೀತಿಯ ಅರಾಜಕತ್ವವು ಸರ್ವತ್ರ ವ್ಯಾಪಿಸಿಕೊಂಡಿದ್ದುದರಿಂದ ಪಾಶ್ಚಾತ್ಯರಿಗೆ ಎಡೆಯಾಯಿತು. ಹಾಗೆಯೇ ರಾಜಕೀಯದಲ್ಲಿ ನುರಿತ ಬ್ರಿಟಿಷರು ಇಲ್ಲಿ ಬೇರೂರುವಂತಾಗಿ ನೂರಾರು ವರ್ಷಗಳ ಆಡಳಿತವನ್ನು ಮಾಡಿದರು. ಇವರ ಆಳ್ವಿಕೆಯಲ್ಲಿ ಕೇಂದ್ರ ಸರಕಾರವೆಂಬುದೊಂದಿದ್ದರೂ ದೇಶವನ್ನು ಅವರಿಗೆ ಅನುಕೂಲವಿರುವ ರೀತಿಯಲ್ಲಿ ಪ್ರಾಂತ್ಯಗಳನ್ನಾಗಿ ವಿಭಜಿಸಿ ಹಲವಾರು ಆಶ್ರಿತರಾಜರೆಂಬ ಕೈಗೊಂಬೆಗಳನ್ನು ಕುಣಿಸುತ್ತಾ ಸ್ವಾರ್ಥಾವಲಂಬಿಗಳಾಗಿ ರಾಜ್ಯಾಡಳಿತವು ಸಾಗಿತು. ತಮ್ಮ ಪ್ರತಿಷ್ಠೆಯನ್ನು ಬಲಪಡಿಸುವುದಕ್ಕೂ ತಮ್ಮ ಸ್ವತಂತ್ರ ಕೈಗಾರಿಕೆ ವಾಣಿಜ್ಯಗಳನ್ನು ವೃದ್ಧಿಗೊಳಿಸುವುದಕ್ಕೆಂದೂ ನಮಗೆ ಸೇವಾವೃತ್ತಿಗೆ ಅನುಕೂಲಿಸುವಷ್ಟು ಆಂಗ್ಲ ವಿದ್ಯೆಯನ್ನು ಕಲಿಸಿ ಪಾಶ್ಚಾತ್ಯ ಸಂಸ್ಕೃತಿಯನ್ನು ತಂದೊಡ್ಡಿದ್ದರು. ಪರಿಸ್ಥಿತಿ ಹೀಗಿದ್ದರೂ ಪರರಿಗಿಟ್ಟ ಶೂಲತನಗೆಂಬಂತೆ ಇದೇ ಆಂಗ್ಲ ವಿದ್ಯೆಯು ಭಾರತದ ಏಕೀಕರಣಕ್ಕೆ ಅಂದರೆ ಸಮಗ್ರ ಭಾರತವು ಒಂದೇ ಎಂಬ ಉದಾತ್ತವಾದ ಭಾವನೆಯು ನಮ್ಮಲ್ಲುಂಟಾಗುವುದಕ್ಕೆ ಸಹಾಯಮಾಡಿ ಸ್ವರಾಜ್ಯದ ಆಂದೋಲನೆಯನ್ನುಂಟು ಮಾಡಿತು.

ಆದರೆ ಮಾಡುವುದೇನು? ಸ್ವರಾಜ್ಯವನ್ನು ಪಡೆದ ನಂತರ ನಾವು ನಮ್ಮ ಏಕೀಭಾವವನ್ನು ಮರೆತು ಭಾಷಾವಾರು ಪ್ರಾಂತ್ಯಗಳೆಂಬ ಸಂಕುಚಿತ ಮನೋವೃತ್ತಿಗೆ ಬಲಿಬಿದ್ದಿರುವೆವು. ಸಮಗ್ರ ಭಾರತದ ಹಿತವನ್ನು ನಮ್ಮ ಒಂದನೇ ಗುರಿಯಾಗಿರಿಸುವ ಬದಲು ಭಾಷಾವಾರು ಪ್ರಾಂತ್ಯಗಳ ನೆಪದಲ್ಲಿ ಪಾಳ್ಯದೊಳಗೆ ಕಚ್ಚಾಟವೆಂಬಂತೆ ಹಿಡಿತ ಬಿಗಿತಗಳನ್ನು ಮರೆತು ರಾಕ್ಷಸೀ ಕೃತ್ಯಗಳನ್ನು ಮಾಡುವುದಕ್ಕೂ ಹೇಸದೆ ನಮ್ಮ ಸ್ವಾರ್ಥಧ್ಯೇಯವನ್ನು ಸಾಧಿಸುವುದರಲ್ಲಿರುವೆವು. ಇದರಿಂದ ದೇಶದ ಏಳಿಗೆಯ ಧ್ಯೇಯವನ್ನು ನಾವು ಪ್ರಕೃತ ಮರೆತಂತಿದೆ.

ಇನ್ನು ನಮ್ಮ ರಾಷ್ಟ್ರ ಸಂಚಾಲಕರು ಭರತಖಂಡವು ಕೃಷಿಪ್ರಧಾನ್ಯದ ದೇಶವೆಂಬುದನ್ನು ಮರೆತಂತಿದೆ. ದೊಡ್ಡ ದೊಡ್ಡ ಕೈಗಾರಿಕೋದ್ಯಮಗಳಿಗೆಂದು ಕೋಟಿಯಾಂತರ ರೂಪಾಯಿಗಳನ್ನು ಮೀಸಲಾಗಿಟ್ಟು ನಮ್ಮ ಹಳ್ಳಿಗರ ಜೀವಾಳದಂತಿರುವ ಕೃಷಿ, ಗುಡಿಕೈಗಾರಿಕೆಗಳಿಗೆ ಸಾಕಷ್ಟು ಪ್ರೋತ್ಸಾಹವನ್ನು ಕೊಡುವಂತೆ ಕಾಣುವುದಿಲ್ಲ. ಮಾತ್ರವಲ್ಲದೆ ದೊಡ್ಡ ದೊಡ್ಡ ಕೈಗಾರಿಕೆಗಳು ಚಿಕ್ಕಪುಟ್ಟ ಉದ್ಯಮಗಳೊಂದಿಗೆ ಸ್ಪರ್ಧಿಸುವಂತಿದ್ದು ಜನಸಾಮಾನ್ಯರಸಾಂಪತ್ತಿಕ ಮಟ್ಟವು ಏರುವುದರ ಬದಲು ತಗ್ಗುವಂತಿದೆ. ದೊಡ್ಡ ದೊಡ್ಡ ಕೈಗಾರಿಕೆಗಳಿಂದ ನಮ್ಮ ದೇಶದ ಸರಾಸರಿ ಉತ್ಪತ್ತಿಯು ಜಾಸ್ತಿಯಾಗಿದೆ ಎಂದು ಅಂಕೆ ಸಂಖ್ಯಾ ವಿಮರ್ಶಕರು ಅಭಿಪ್ರಾಯಪಟ್ಟರೂ ಈ ಸರಾಸರಿ ಮಟ್ಟಕ್ಕಿಂತ ಕಡಿಮೆ ಉತ್ಪತ್ತಿ ಇರುವವರ ಸಂಖ್ಯೆಯೂ ಜಾಸ್ತಿಆಗಿಯದೆ. ಆದುದರಿಂದ ಈ ಎರಡೂ ಕೈಗಾರಿಕೆ ಕ್ಷೇತ್ರಗಳು ಪರಸ್ಪರ ಹೊಂದಿಕೊಂಡಿರುವಂತೆ ನಮ್ಮ ಯೋಜನೆಗಳನ್ನು ಸಿದ್ಧಪಡಿಸಿ ಹಾಗಾಗುವಂತೆ ಮಾಡಿದರೇನೇ ನಾವು ಸಮತಾವಾದ ಸಮಾಜವನ್ನು ಕಟ್ಟಬಹುದು.

ಹಾಗಾದರೆ ನಾವು ನಮ್ಮ ಗತ ವೈಭವವನ್ನು ಹೇಗೆ ಮರಳಿ ತಂದುಕೊಳ್ಳಬಹುದು? ನಮ್ಮ ಜನಸಾಮಾನ್ಯರ ಆರ್ಥಿಕ ಜೀವನದ ಮಟ್ಟವನ್ನು ಮೇಲಕ್ಕೆತ್ತಿ ದುಲಕ್ಷಾಧಿಪತಿ, ಭಿಕ್ಷಾಧಿಪತಿಗಳೊಳಗಿನ ಆರ್ಥಿಕ ವ್ಯತ್ಯಾಸವನ್ನು ತಗ್ಗಿಸಿ ಜಾತಿವಿಹೀನ ಸಮಾನಶೀಲ ಸಮಾಜವನ್ನು ಕಟ್ಟುವ ಧ್ಯೇಯವನ್ನು ಹೇಗೆ ಸಾಧಿಸಬಹುದು? ನಮ್ಮ ಪ್ರಾಚೀನ ಸಂಸ್ಕೃತಿಯೆಂಬ ಬಲವಾದ ಅಸ್ತಿವಾರದ ಮೇಲೆ ಪಾಶ್ಚಾತ್ಯ ಸಂಸ್ಕೃತಿಯಿಂದ ಕಲಿಯಬಹುದಾದ ಉದ್ಯೋಗೋತ್ಸುಕತೆ, ಶ್ರದ್ಧೆ, ಶ್ರಮಜೀವನದ ಪಾಠಗಳನ್ನು ಉಪಯೋಗಿಸಿ ನಮ್ಮದೇ ಆದ ಹೊಸ ಹಾದಿಯನ್ನು ಹಿಡಿದುಕೊಂಡು ಕಾರ್ಯೋನ್ಮುಖರಾದರೇನೇ ನಮ್ಮ ಭಾವೀ ಕಲ್ಯಾಣವನ್ನು ಕಾಣಬಹುದಾಗಿದೆ. ನಮ್ಮ ಆಧ್ಯಾತ್ಮಿಕ ಸಂಸ್ಥೆಗಳಿಗೆ ತಗಲಿದ ವ್ಯಾವಹಾರಿಕ ಮುಸುಕನ್ನು ಉಜ್ಜಿ ಅವುಗಳನ್ನು ಊರ್ಜಿತಗೊಳಿಸಿ ಅವುಗಳಲ್ಲಿ ಜನಸಾಮಾನ್ಯರಿಗೆ ಭಕ್ತಿ, ವಿಶ್ವಾಸಗಳುಂಟಾಗುವಂತೆ ಮಾಡಬೇಕು. ಭಾರತೀಯರಾದ ನಾವೆಲ್ಲರೂ ಭಾರತಾಂಬೆಯ ಪುತ್ರರು, ಮತಭೇದಗಳ ಅಂಧಶ್ರದ್ಧೆಗೆ ಎಡೆ ಇಲ್ಲ, ಪ್ರಾಂತಿಕ ಭಾಷೆಗಳ ಸಂಕುಚಿತ ಮನೋಭಾವವು ನಮ್ಮ ಏಳಿಗೆಗೆ ಕುಠಾರವಂತಿರುವುದು, ನಮ್ಮ ದೇಶದ ಧವಳ ಕೀರ್ತಿಯನ್ನು ಇಡೀ ಜಗತ್ತಿನಲ್ಲೇ ಹರಡುವುದಕ್ಕೆ ನಾವೆಲ್ಲರೂ ಒಗ್ಗಟ್ಟಿನಿಂದ ದುಡಿಯಬೇಕು ಎಂಬ ಉದಾತ್ತವಾದ ಧ್ಯೇಯವು ನಮ್ಮೆಲ್ಲರಲ್ಲಿಯೂ ಇರಬೇಕು. ನಮ್ಮ ಸರಕಾರವಾದರೋ ರಾಷ್ಟ್ರದ ಅವಿಭಕ್ತ ಕನಿಷ್ಠ ಮಾನವು ಒಂದು ಗಂಡ ಹೆಂಡಿರು ಮಕ್ಕಳಿಂದ ಕೂಡಿದ ಚಿಕ್ಕ ಸಂಸಾರ ಎಂಬ ಭಾವನೆಯ ತಳಹದಿಯ ಮೇಲೆ ತಮ್ಮ ಕಾರ್ಯಕಲಾಪಗಳನ್ನು ನಡೆಸುತ್ತಿರಬೇಕು. ನಮ್ಮ ಗಣರಾಜ್ಯವು ವ್ಯಕ್ತಿ ಸ್ವಾತಂತ್ರ್ಯವನ್ನು ಮನ್ನಿಸಿದರೂ ಅದು ಹೇಗೆ ಸಮಾಜದ ಏಳಿಗೆಯ ಮಿತಿಯನ್ನು ಹೊಂದಿಕೊಂಡಿರುವುದೋ ಹಾಗೆಯೇ ಸ್ತ್ರೀ ಸ್ವಾತಂತ್ರ್ಯವನ್ನು ಗೃಹಧರ್ಮದ ಮಿತಿಯನ್ನು ಹೊಂದಿಕೊಂಡಿರುವಂತೆ ಮಾಡುವುದು ಹಿತಕರ. ಸ್ತ್ರೀಯು 'ಗೃಹಿಣಿ' ಎಂಬ ನೈಸರ್ಗಿಕ ಸ್ಥಾನಕ್ಕೆ ಅರ್ಹಳು ಎಂಬ ಪ್ರಗತಿಪರ ಭಾವನೆಯ ಮೇಲೆ ನಮ್ಮ ಯಾವತ್ತೂ ಕಾರ್ಯಕಲಾಪಗಳನ್ನು ನಿರ್ಣಯಿಸಿದರೆ ದೇಶ ಕಲ್ಯಾಣವಾಗುವುದು.

ನಮ್ಮ ಯುವತಿಯರು ಉಚ್ಚ ಗೃಹಿಣಿಯರಾಗುವಂತೆ ಯೋಗ್ಯ ಶಿಕ್ಷಣವನ್ನು ಪಡೆದು ಯುವಕರೊಂದಿಗೆ ಪ್ರಜಾಭಿವೃದ್ಧಿಯ ದೈವಿಕ ಸಂಬಂಧವನ್ನು ಬೆಳೆಸಿ ತಮ್ಮ ಶಿಶುಗಳ ಪರಿಪಾಲನೆ, ಆ ಮಕ್ಕಳ ಭಾವೀ ಶಿಕ್ಷಣದ ತಳಹದಿಯನ್ನು ಹಾಕುವಿಕೆ, ಗೃಹಕೃತ್ಯಾವಲಂಬನ ಮೊದಲಾದುವುಗಳಲ್ಲಿ ನಿರತರಾದರೆ ನಮ್ಮ ಭಾರತ ದೇಶವು ಸುಖ ಸಂತೋಷಗಳಿಂದ ಕೂಡಿದ ಸಂಸಾರಗಳುಳ್ಳ ಸಮಾಜಗಳಿಂದ ತುಂಬಿ ತುಳುಕುವಂತಾಗಿ ಜಗತ್ತಿಗೆ ಆದರ್ಶಪ್ರಾಯವಾಗುವುದು.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ '**ನವಯುಗ**' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N./50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿ ಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್, ಅಮೆರಿಕನ್ ಮತ್ತು ಕೆಮಿಕಲ್ ನಕ್ಲಿ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ ಕಪ್, ಶೀಲ್ಡ್ ಮತ್ತು ಇನ್ನಿತರ ಮ್ಹಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 29—3—50ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**, S. K. *Phone:* 66

NAVAYUGA WEEKLY

ADVERTISEMENT RATES

Display Advertisements:— Rs. 2-8/ per column inch for contracts of 50" or more and Rs. 3/-per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ಮಕ್ಕಳ ಮಗ್ಗಿಪುಸ್ತಕ

0—1—0

ನವಯುಗ ಪ್ರೆಸ್, ಉಡುಪಿ.

ನಮೋ ನಮಃ ಧರ್ಮಚಕ್ರ

೧

ನಮೋ ನಮೋ ಧರ್ಮ ಚಕ್ರ!
ತಿರುತಿರುಗುವ ಕಾಲ ಚಕ್ರ!
ನಿನ್ನಡಿಯಲಿ ನಿಂತಿರುವೆವು,
ಕನಸನೆಸಿತೊ ಹೆಣೆಯುತಿಹೆವು,
ದಣಿಯುತಿಹೆವು, ತಣಿಯುತಿಹೆವು,
ನಿನ್ನಡಿಗಿದೊ, ಮಣಿಯುತಿಹೆವು!
ಮುಂಜಾವಿನ ಸ್ವರ್ಣವರ್ಣ
ಕುಣಿಸಿದೆ ತರುಲತೆಯ ಪರ್ಣ!
ನಡುನಡುವೆಯೆ ನಸುನಗುತಿವೆ
ಪರಿಮಳಿಸುವ ಪುಷ್ಪಪೂರ್ಣ!
ನಿನ್ನೆಡೆಗಿದೊ ಧಾವಿಸಿಹೆವು
ಕಲ್ಲು ಮುಳ್ಳು ತುಳಿಯುತಾ—
ಏರಿಳಿತವನೇರಿಳಿಯುತ
ಮೇಲು ಕೀಳ ಮರೆಯುತಾ!
ನೀನು ನಿಂತ ನೆಲವೆ ಸಮತೆ—
ಸ್ವಾತಂತ್ರ್ಯದ ಮಮತೆ!

೨

ನಮೋ ನಮೋ ಧರ್ಮ ಚಕ್ರ—
ತಿರು ತಿರುಗುವ ಕಾಲಚಕ್ರ!
ಬುದ್ಧ ಬಸವರೆದ್ದು ಬಂದು
ಮಾನವತೆಯ ತಿದ್ದಲೆಂದು,
ರಕ್ತ ನದಿಗೆ ಒಡ್ಡು ಕಟ್ಟಿ,
ಹಿಂಸೆಯ ಕಲ್ಮಿಲವ ಕುಟ್ಟಿ,
ಸಮತೆಯೆಂಬ ನೀರನುಣಿಸಿ
ಸ್ನೇಹವೆಂಬ ಬೆಳೆಯ ಗುಣಿಸಿ,
ಒಂದೆ ಜಾತಿ, ಒಂದೆ ನೀತಿ,
ಒಂದೆ ಧರ್ಮ ದೇವರೆಂದು
ನುಡಿದು, ನಡೆದು, ಹೋದರೂ,
ನಿಂತಲ್ಲಿಯೆ ನಿಂತ ನೀರು!
ಪಾತಾಳಕೆ ಬಟ್ಟೆಬೇರು!
ಅತಿವರ್ತನ ತೊಲಗದು,
ಭೇದ ಬುದ್ಧಿ ಹೋಗದು!

೩

ನಮೋ ನಮೋ ಧರ್ಮ ಚಕ್ರ—
ತಿರುತಿರುಗುವ ಕಾಲ ಚಕ್ರ!
ಯುಗ ಶಕಟವನೆಳೆದು ತಂದೆ,
ಅವತಾರವನಿಳಿಸಿ ಬಂದೆ,
ರಕ್ತ ನದಿಯೊಳಿಳಿದು ಮಿಂದೆ!
ಇನ್ನೇನಿದೆ ಮುಂದೆ?
ಅತಿವರ್ತನ, ಭೇದ ಬುದ್ಧಿ,
ಕುರುಪಾಂಡವ ಕುಲವನದ್ದಿ
ಅತಿವಂತರ, ಮಿತಿವಂತರ
ಸರ್ವನಾಶ ತಂದಿತು—
ದುಷ್ಟರೊಡನೆ ಶಿಷ್ಟರನೂ
ಕ್ರೂರತೆಯಲಿ ಕೊಂದಿತು!
ನಾಗರಿಕತೆ ನಂದಿತು!
ಭೂಭಾರವು ಸಂದಿತು!!

೪

ನಮೋ ನಮೋ ಧರ್ಮ ಚಕ್ರ—
ತಿರುತಿರುಗುವ ಕಾಲಚಕ್ರ!
ಹಿಂದು, ಕ್ರೈಸ್ತ, ಮುಸಲ್ಮಾನ
ನಮ್ಮೊಳೊಂದೆ ಸ್ವಾಭಿಮಾನ!
ಹೋರಾಡುವ ರಣಕಣದಲಿ,
ನಲಿದಾಡುವ ಮನೆತನದಲಿ,
ಸರ್ವ ಸುಖದ ಸಮಾನತೆ,
ಸ್ನೇಹ ಧರ್ಮ ಕೋಮಲತೆ,
ಹೊಳೆಯುತಿರಲಿ, ಬೆಳೆಯುತಿರಲಿ,
ಲೋಕವನ್ನೆ ಸೆಳೆಯುತಿರಲಿ!
ನೀನು ನಿಂತ ನೆಲವೆ ಸಮತೆ,
ಸ್ವಾತಂತ್ರ್ಯದ ಮಮತೆ!
ನಮೋ ನಮೋ ಧರ್ಮ ಚಕ್ರ!
ತಿರುತಿರುಗುವ ಕಾಲಚಕ್ರ!!

—ಜಿ. ಆರ್. ಪಾಂಡೇಶ್ವರ್,
ಧಾರವಾಡ.

ನಂಬಿಕೆಗೆ ಅರ್ಹತೆ
ಅತ್ಯುತ್ತಮ ಬೀಡಿಗಳಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್. ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.
★
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
S. R. Beedi Works UDIPI S.K.

ಕರ್ನಾಟಕದ ಪ್ರಸಿದ್ಧ ವಿಡಂಬನಕಾರ ಶ್ರೀ ಕುಡ್ಪಿ ವಾಸುದೇವ ಶೆಣೈಯವರ
ಓದಲೇಬೇಕಾದ ಮೂರು ಪುಸ್ತಕಗಳು

ನೀರೆ ಮತ್ತು ನಾನು (೧೫ ವಿನೋದ ಕತೆಗಳು)	1—0—0
ಜಪಾನ್ ಬೆಳಕು ಮತ್ತು ಇತರ ಕಥೆಗಳು	1—0—0
ಕಸದ ಡಬ್ಬಿಗಳು (೨೪ ಹರಟೆಗಳು)	1—0—0

ಪ್ರತಿಗಳಿಗೆ ಬರೆಯಿರಿ:— ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವಾತಂತ್ರ್ಯೋತ್ತರದ ಶೈಕ್ಷಣಿಕ ಸಮಸ್ಯೆಗಳು

(೯ನೇ ಪುಟದಿಂದ)

ರಾಷ್ಟ್ರೀಯ ಭಾಷೆಯಾಗುತ್ತಿದೆ. ಭಾರತವು ಅಂತರ-ರಾಷ್ಟ್ರೀಯ ವ್ಯವಹಾರಗಳಲ್ಲಿ ಪ್ರಧಾನ ಪಾತ್ರವನ್ನು ನಿರ್ವಹಿಸುತ್ತಿದೆ. ವಿಪುಲ ಸಂಸ್ಕೃತಿ ಪರಂಪರೆಯನ್ನುಳ್ಳ ಭಾರತವು ವಿಶ್ವಸಮಾಜ ಹಾಗೂ ಮಾನವ ನಾಗರಿಕತೆಯ ರಚನೆಗೆ, ಇಂಗ್ಲೀಷಿನ ಮೂಲಕವಾಗಿ ಹೆಚ್ಚಿನ ಸಹಾಯವನ್ನು ನೀಡಬಹುದು.

(2 ಇಂಗ್ಲೀಷ್ ವಿಜ್ಞಾನ ಹಾಗೂ, ಔದ್ಯೋಗಿಕ ತಂತ್ರಶಾಸ್ತ್ರದ ಭಾಷೆಯಾಗಿದೆ. ಭಾರತವು ತನ್ನ ರಾಷ್ಟ್ರದ ಪ್ರಗತಿಗಾಗಿ ಭಾರತೀಯ ಜನ ಜೀವನದ ಮಟ್ಟವನ್ನು ಹೆಚ್ಚಿಸುವುದಕ್ಕಾಗಿ ಉದ್ಯೋಗ ಹಾಗೂ ವಿಜ್ಞಾನ ತಂತ್ರವನ್ನು ಬಳಸಲು ನಿರ್ಧರಿಸಿದೆ.

ಹಿಂದಿ ಅಥವಾ ಇನ್ನಾವುದೇ ಪ್ರಾದೇಶಿಕ ಭಾಷೆಯಾಗಲಿ, ವಿಜ್ಞಾನ ಅಥವಾ ಉದ್ಯೋಗ ತಂತ್ರ ಸಂಬಂಧಪಟ್ಟ ಸಾಹಿತ್ಯವು ಗಮನಾರ್ಹವಾದ ಪ್ರಮಾಣದಲ್ಲಿಲ್ಲ ವಿಜ್ಞಾನ ಸಂಬಂಧ ಜ್ಞಾನವನ್ನು ಪಡೆಯಲು ನಮ್ಮ ಬಾಲಕರಿಗೆ ಇಂಗ್ಲೀಷ್ ಭಾಷೆಯ ಪರಿಚಯವಿರಬೇಕು.

ವಿದ್ಯಾರ್ಥಿಯು ಹೈಸ್ಕೂಲನ್ನು ಬಿಡುವ ಮುಂಚೆ ಮೂರು ಭಾಷೆಗಳಲ್ಲಿ: ಅಂದರೆ ಪ್ರಾದೇಶಿಕ ಭಾಷೆ, ಹಿಂದಿ, ಮತ್ತು ಇಂಗ್ಲೀಷ್‌ಗಳಲ್ಲಿ ತಿಳುವಳಿಕೆಯನ್ನು ಪಡೆಯುವನು, ಹಿಂದಿಯನ್ನು ಮಾತೃ ಭಾಷೆಯಾಗುಳ್ಳ ವಿದ್ಯಾರ್ಥಿಗಳು ಇತರ ಯಾವುದಾದರೊಂದು ದೇಶ ಭಾಷೆಯನ್ನು ಕಲಿಯಬೇಕು. ಈ ರೀತಿ ಹಿಂದಿ ಮಾತನಾಡುವ ಹಾಗೂ ಹಿಂದಿ ಮಾತನಾಡದ ಪ್ರದೇಶಗಳ ಜನರ ನಡುವೆ, ಸಾಮರಸ್ಯವನ್ನು ಏರ್ಪಡಿಸಲಾಗುವುದು.

ಇತರ ವಿಷಯಗಳ ಜೊತೆಗೆ ಮೂರು ಭಾಷೆಗಳನ್ನು ಕಲಿಯಬೇಕೆಂಬ ಭಯವೂ ಕೆಲ ಸಂದರ್ಭಗಳಲ್ಲಿ, ಮೂಡಬಹುದು. ಆದರೆ ಈ ಭಯಕ್ಕೆ ಆಧಾರವಿಲ್ಲ, ಅನೇಕ ರೂಪಗಳಲ್ಲಿ ಮಾಧ್ಯಮಿಕ ಘಟ್ಟದಲ್ಲಿಯೇ, ಮಕ್ಕಳು ಭಾಷೆಗಳನ್ನು ಕಲಿಯುತ್ತಿರುವರು. ಯಾವುದೇ ಪ್ರಸಂಗದಲ್ಲಾದರೂ, ಸಾಂಸ್ಕೃತಿಕ ಸಂಘಟಿತ ರಾಷ್ಟ್ರೀಯ ಐಕ್ಯತೆ ಮತ್ತು ಅಂತರರಾಷ್ಟ್ರೀಯ ಜ್ಞಾನಕ್ಕಾಗಿ ಮೂರು ಭಾಷೆಗಳನ್ನು ಕಲಿಯುವುದು, ಅನಿವಾರ್ಯವಾಗಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಮನ್ವಯ

ರಾಷ್ಟ್ರೀಯ ಶಿಕ್ಷಣ ಪದ್ಧತಿಯಲ್ಲಿ ಕೇಂದ್ರ ಹಾಗೂ ರಾಜ್ಯಗಳ ನಡುವೆ ಸಮನ್ವಯವನ್ನು ತರುವುದು ಮತ್ತೊಂದು ಕಷ್ಟತರವಾದ ಹಾಗೂ ತೀವ್ರ ಲಕ್ಷ್ಯವನ್ನಪೇಕ್ಷಿಸುವ ಸಮಸ್ಯೆಯಾಗಿದೆ. ರಾಜ್ಯ ಸರ್ಕಾರದ ಸಂವಿಧಾನದಲ್ಲಿ ವಿವರಿಸಿರುವಂತೆ ಸ್ವಯಮಧಿಕಾರವನ್ನು ಹೊಂದಿದ್ದರೂ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಶಿಕ್ಷಣ ಸಂಬಂಧ ಸರ್ವ ಸಾಮಾನ್ಯ ರಾಷ್ಟ್ರೀಯ ಕಾರ್ಯನೀತಿ ಹಾಗೂ ಕಾರ್ಯಕ್ರಮಗಳನ್ನು ಏರ್ಪಡಿಸಲು ಸತತ ಪ್ರಯತ್ನವನ್ನು ಮಾಡುವುವು.

ಈ ಗುರಿಯನ್ನಿಟ್ಟುಕೊಂಡು ಕೇಂದ್ರ ಸರ್ಕಾರದವರು ಕೇಂದ್ರ ಶಿಕ್ಷಣ ಸಲಹಾ ಸಮಿತಿ, ವಿಶ್ವವಿದ್ಯಾನಿಲಯ ಗ್ರಾಂಟ್ ಕಮಿಷನ್, ಅಖಿಲ ಭಾರತ ತಾಂತ್ರಿಕ ಶಿಕ್ಷಣ ಕೌನ್ಸಿಲ್, ಗ್ರಾಮಾಂತರ ಶಿಕ್ಷಣದ ರಾಷ್ಟ್ರೀಯ ಕೌನ್ಸಿಲ್, ಇತ್ಯಾದಿ ಸಂಸ್ಥೆಗಳನ್ನು ಸ್ಥಾಪಿಸಿರುವರು, ಮೂಲ ಶಿಕ್ಷಣಕ್ಕಾಗಿ ಅಖಿಲ ಭಾರತ ಕೌನ್ಸಿಲನ್ನು ರಚಿಸಲು ಭಾರತ ಸರ್ಕಾರದವರು ಉದ್ದೇಶಪಟ್ಟಿರುವರು.

ಈ ಮಂಡಳಿಗಳು ಮತ್ತು ಕೌನ್ಸಿಲ್‌ಗಳು ನಮ್ಮ ಶಿಕ್ಷಣ ಪದ್ಧತಿಯಲ್ಲಿ ಅಗತ್ಯವಾದ ಸುಧಾರಣೆಗಳನ್ನು ತರಲು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಹೆಚ್ಚಿನ ಸೌಹಾರ್ದ ಹಾಗೂ ಪರಸ್ಪರ ತಿಳುವಳಿಕೆ ವೃದ್ಧಿಗೊಳ್ಳಬೇಕು. ರಾಜ್ಯಗಳು ಹಾಗೂ ಕೇಂದ್ರವು ಒಂದುಗೂಡಿ ಶಿಕ್ಷಣ ಸಂಬಂಧದ ರಾಷ್ಟ್ರೀಯ ಕಾರ್ಯಕ್ರಮಗಳನ್ನು ನಿರ್ವಹಿಸದಿದ್ದರೆ ರಾಷ್ಟ್ರದ ಒಗ್ಗಟ್ಟು ಸಡಿಲುಗೊಳ್ಳುವುದು.

ರಾಷ್ಟ್ರೀಯ ನೋಟ

ರಾಷ್ಟ್ರದ ಒಗ್ಗಟ್ಟನ್ನು ನಿರ್ಮಿಸುವುದರಲ್ಲಿ ರಾಷ್ಟ್ರೀಯ ದೃಷ್ಟಿಯನ್ನು ಬೆಳೆಸುವಲ್ಲಿ, ಶಿಕ್ಷಣವು ಯಾವತ್ತೂ ಒಂದು ಪ್ರಬಲವಾದ ಸಾಧನೆಯೇ ಸರಿ. ಕೇಂದ್ರ ಸರಕಾರದವರು ಶಿಕ್ಷಣ ಸಂಬಂಧ ಯೋಜನೆಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಹಣಕಾಸಿನ ಜವಾಬ್ದಾರಿಯನ್ನು ಹೆಚ್ಚು ಹೆಚ್ಚಾಗಿ ವಹಿಸಿಕೊಂಡಂತೆಲ್ಲಾ, ಅದು ರಾಜ್ಯಗಳ ಅಧಿಕಾರ ವಲಯದಲ್ಲಿ ಪ್ರವೇಶಿಸುತ್ತಿರುವದೆಂದು ತಪ್ಪು ಕಲ್ಪನೆಯನ್ನು ಮಾಡಿಕೊಳ್ಳಬಾರದು. ಅಖಂಡ ಭಾರತದಲ್ಲಿ ವಿವಿಧ ಭಾಗಗಳು ಪರಸ್ಪರ ಅವಲಂಬಿಗಳು ಎಂಬ ವಿಷಯವನ್ನು ಗಮನದಲ್ಲಿಟ್ಟುಕೊಂಡಿರಬೇಕು. ಗ್ರಾಮಾಂತರ ಹಾಗೂ ನಗರ ಪ್ರದೇಶಗಳಲ್ಲಿ, ಹಿಂದುಳಿದ ಹಾಗೂ ಕೈಗಾರಿಕೆಗಳಲ್ಲಿ ಮುಂದುವರಿದ ರಾಜ್ಯಗಳ ನಡುವೆ ಇರುವ ತಾರತಮ್ಯ, ವಿವಿಧ ವರ್ಗಗಳ ನಡುವೆ ಇರುವ ಶಿಕ್ಷಣ ಮಟ್ಟದ ತಾರತಮ್ಯವನ್ನು ತೊಡೆದು ಹಾಕಲು ರಾಜ್ಯಗಳಿಗೆ ಕೇಂದ್ರ ಸರಕಾರದವರು ಅಗತ್ಯವಾದ ಸಲಹೆಯನ್ನೂ ಮತ್ತು ಮಾರ್ಗದರ್ಶನಗಳನ್ನು ನೀಡುತ್ತಿರುವುದನ್ನೂ ರಾಜ್ಯಗಳು ಆದರದಿಂದ ಸ್ವಾಗತಿಸಬೇಕು.

ಕೇಂದ್ರೀಕರಣ ಹಾಗೂ ವಿಕೇಂದ್ರೀಕರಣಗಳ ಸೀಮಾರೇಖೆಯನ್ನು ನಾವು ಸ್ಪಷ್ಟವಾಗಿ ತಿಳಿಯಬೇಕು ಅನುಕೂಲ ಪ್ರತಿಕೂಲಗಳೆರಡನ್ನೂ ಉಳ್ಳ ಈ ಎರಡು ಪರಸ್ಪರ ವಿರುದ್ಧ ಭಾವನೆಗಳ ನಡುವಿನ ಸಮತೂಕವುಳ್ಳ ಸಾರ್ವಭೌಮ್ಯವನ್ನು ಅರಿತುಕೊಂಡು ಅದನ್ನು ಅನುಸರಿಸಬೇಕು. ಇದೊಂದು ಮಹತ್ವಾಕಾಂಕ್ಷೆಯೇ ಸರಿ ಸಹನೆ, ಪರಸ್ಪರ ತಿಳಿವಳಿಕೆ ಮತ್ತು ಪ್ರತಿಭಾಪೂರ್ಣವಾದ ವ್ಯವಹಾರ ಕುಶಲತೆಯಿಂದ ಮಾತ್ರ ಇದನ್ನು ಸಾಧಿಸಬಹುದು.

ಶಾಲೆಗಳಿಗೆ

ಬೇಕಾಗುವ ಮಕ್ಕಳ ಮತ್ತು ಉಪಾಧ್ಯಾಯರ ಹಾಜರಿ ರಿಜಿಸ್ಟ್ರಿ, ಸಂಬಳ ಬಟವಾಡೆ ರಿಜಿಸ್ಟ್ರಿ, ಇನ್‌ಕಮ್ ಸರ್ಟಿಫಿಕೇಟು ಫಾರ್ಮು, ಮಂತ್ಲಿ ರಿಟರ್ನ್, ರಿಕಾರ್ಡು ಶೀಟು, ಎಡ್ಮಿಶನ್ ಫಾರ್ಮು, ಇತ್ಯಾದಿಗಳೂ ಪ್ರೊವಿಡೆಂಟ್ ಫಂಡಿಗೆ ಸಂಬಂಧಿಸಿದ ಎಲ್ಲಾ ಫಾರ್ಮುಗಳೂ ದೊರೆಯುತ್ತವೆ.

ಉತ್ತಮ ಕಾಗದ, ದರ ಸುಲಭ.
ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ.

ಹಿಂದುಳಿದವರೆ? ಏಕೆ?

ಅಭಿವೃದ್ಧಿ ಪ್ರಯತ್ನಗಳು ಸರ್ವಾಂಗೀಣವಾಗಿಯೂ ರಾಷ್ಟ್ರವ್ಯಾಪಿಯಾಗಿಯೂ ಈಗ ಹಿಂದುಳಿದ ಪ್ರದೇಶಗಳಿಗೆ ಪ್ರಾಶಸ್ತ್ಯವನ್ನಿತ್ತೂ ಕೈಗೊಳ್ಳಲ್ಪಟ್ಟರೆ ಹಿಂದುಳಿದ ಜನ ವರ್ಗವು ಶಾಶ್ವತವಾಗಿ ಹಾಗೆ ಕರೆದುಕೊಳ್ಳಲ್ಪಡಲಾರದು.

ಬರೆದವರು: ಶ್ರೀಮತಿ ಸರೋಜಿನಿ ಮಹಿಷಿ.
ಎಂ. ಎ., ಎಲ್‌ಎಲ್. ಬಿ.

'ಹಿಂದುಳಿದವರು', ಎಂದು ಒಂದು ವರ್ಗಕ್ಕೆ ಹೆಸರಿಟ್ಟು ಕರೆಯುವ ಜನಾಂಗ ಎಷ್ಟು ಮಟ್ಟಿಗೆ ಮುಂದುವರಿದಿದೆ?— ಯಾವ ವಿಷಯದಲ್ಲಿ ಮುಂದುವರಿದಿದೆ? —ಎಂದು ಯೋಚಿಸಿದರೆ ಮುಂದುವರಿಯುವದು, ಹಿಂದುಳಿಯುವದು ಇವುಗಳ ವ್ಯಾಖ್ಯೆಯೇ ಒಂದೊಂದು ಜನಾಂಗದಲ್ಲಿ ಒಂದೊಂದು ತೆರನಾಗಿ ಕಂಡು ಬರುತ್ತದೆ. ಉದ್ಯೋಗ, ವ್ಯವಸಾಯ, ಕೃಷಿ,—ಇವುಗಳನ್ನು ಹೆಚ್ಚಾಗಿ ಬೆಳೆಸಿಕೊಂಡು ಬರದೇ ಇದ್ದವರು, ಹಾಗೆ ಬೆಳೆಸಿಕೊಳ್ಳಲು ಸಾಧನಗಳೇನಿದೆಯೆಂಬುದನ್ನು ಅರಿಯದವರು, ಅರಿತರೂ ಉಪಯೋಗಿಸಿಕೊಳ್ಳಲು ಅಸಮರ್ಥರಾದವರು ಸಾಮಾನ್ಯವಾಗಿ ಹಿಂದುಳಿದವರು ಎಂದು ನಾವು ಹೇಳುವೆವು. ಆರ್ಥಿಕ ದೃಷ್ಟಿಯಿಂದ ಕೊರತೆಯು ಪ್ರದೇಶ ಜನತೆಯ ಬೇಡಿಕೆಗಳನ್ನು ಪೂರೈಸಲು ಅಸಮರ್ಥವಾಗಿರುವದು. ಕೆಲವು ಭೌಗೋಲಿಕ ಕಾರಣಗಳಿಂದಲೂ, ಮುಂದುವರಿದ ಇನ್ನೊಂದು ಪ್ರಾಂತದೊಡನೆ ಸಂಪರ್ಕವುಂಟಾಗದೆ ಯಾವುದೋ ಒಂದು ಜನಾಂಗ ಹೊಸ ವಿಚಾರಗಳ ಸಂಪರ್ಕದಿಂದ ದೂರವಾಗಿಯೇ ಉಳಿದುಬಿಡಬಹುದು. ಗುಡ್ಡಗಾಡು ಪ್ರದೇಶದಲ್ಲಿ ವಾಸಿಸುವ ಜನರನ್ನು ಈ ವರ್ಗದಲ್ಲಿ ಸೇರಿಸಬಹುದು. ಇನ್ನು ಕೆಲವೆಡೆಗಳಲ್ಲಿ ದೊರೆತ ವಿಶೇಷ ಸವಲತ್ತಿನ ಮೂಲಕ ಆ ವಿಶಿಷ್ಟ ಭಾಗ ಹೆಚ್ಚು ಮುಂದುವರಿದದ್ದೆಂದು ಕಂಡು ಬರುವದು: ಹಿಂದುಸ್ಥಾನದಲ್ಲಿದ್ದ ಕೆಲವು ಸಂಸ್ಥಾನಗಳನ್ನು ಕುರಿತು ಈ ಮಾತನ್ನು ಹೇಳಬಹುದು. ಬಡೋದೆ, ಮೈಸೂರು ಸಂಸ್ಥಾನಗಳು ಹೆಚ್ಚು ಮುಂದುವರಿದಿವೆ ಎಂದು ನಾವು ತಿಳಿಯುವದಾದರೂ ಹಿಂದುಳಿದವರ ಸಂಖ್ಯೆಗೆ ಇಲ್ಲಿಯೂ ಕೊರತೆಯಿಲ್ಲ. ಅಂದರೆ ಕೇವಲ ಭೌತಿಕವಾಗಿ ಪ್ರತ್ಯಕ್ಷ ಸೌಕರ್ಯಗಳನ್ನು ನಾವು ಪೂರೈಸಿದರೆ ಆಗದು, ಮಾನಸಿಕ ಪರಿವರ್ತನೆ ಅವರಲ್ಲಾಗುವದು ಅತ್ಯವಶ್ಯ ಎಂಬ ಮಾತು ಕಂಡು ಬರುವದು. ಸೌಕರ್ಯಗಳೇನಿದ್ದರೂ ಅವುಗಳ ಉಪಯೋಗಮಾಡಿಕೊಳ್ಳಲು ಮುಂದುವರಿಯುವ ಧೈರ್ಯ ಬೇಕು. ಹಿಂದುಸ್ಥಾನದಲ್ಲಿ ಇವರ ಸಂಖ್ಯೆ ಆದಿವಾಸಿಗಳು ಅಪರಾಧಿ ಮನೋವೃತ್ತಿಯ ವರ್ಗಗಳು—ಎಲ್ಲ ಸೇರಿ ಸುಮಾರು ೨೦೦ ಲಕ್ಷದ ವರೆಗಿದೆ. ಸಂಚಾರ ಸೌಕರ್ಯ, ಶಿಕ್ಷಣ, ವೈದ್ಯಕೀಯ ಸಹಾಯ- ಇವುಗಳನ್ನೆಲ್ಲ ಉಚಿತವಾಗಿ ಕೊಟ್ಟು ಪ್ರೋತ್ಸಾಹಿಸುವದರ ಜೊತೆಗೆ, ಹಿಂದುಳಿಯಲು ಕಾರಣವಾದ ಅವರ ಈಗಿನ ಪರಿಸ್ಥಿತಿಯೂ ಹೋಗುವಂತೆ ನೋಡಿಕೊಳ್ಳಬೇಕಾದುದು ಅವಶ್ಯಕವಾಗಿದೆ. ದಾರಿದ್ರ್ಯದ ದುಷ್ಪರಿಣಾಮ, ಹಿಂದುಳಿದ ವರ್ಗ ಹಿಂದೇ ಉಳಿಯಲು ಬಹುಪಟ್ಟಿಗೆ ಕಾರಣವಾಗುತ್ತದೆ. ಹರಿಜನನೆಂದು ಅಸ್ಪೃಶ್ಯನಾಗಿ ಹಿಂದೆ ಉಳಿದು ದಾರಿದ್ರ್ಯವನ್ನು ಅನುಭವಿಸುವದಕ್ಕಿಂತ ಈಸಾಯಿ ಧರ್ಮವನ್ನು ಸ್ವೀಕರಿಸಿ, ಸ್ಪೃಶ್ಯನಾಗಿ ತನ್ನ ದಾರಿದ್ರ್ಯನಿವಾರಣೆಯ ಉಪಾಯವನ್ನು ಸುಲಭವಾಗಿ ಕಂಡುಕೊಳ್ಳುವದು ಅವನಿಗೆ ಹಿತವಾಗಿ ಕಾಣಬಹುದೇ?

ಅಸ್ಪೃಶ್ಯತೆ ಕಾನೂನಿನ ಮೂಲಕ ದೂರವಾಗಿದೆಯೆನ್ನೋ ಸರಿ! ಆದರೂ ಅದು ಜನತೆಯ ಮನಸ್ಸಿನಿಂದ, ಕೃತಿಯಿಂದ ದೂರವಾಗದೆ, ಕಾನೂನಿನ ನಿರ್ಬಂಧದಿಂದಲೇ ಅಸಾಧ್ಯ! ಸಾರ್ವಜನಿಕ ತೋಟ, ಹೊಟೆಲ್ಲುಗಳಲ್ಲಿ ಪ್ರವೇಶಮಾಡಲು, ಸಾರ್ವಜನಿಕ ಬಾವಿ ಕೆರೆಗಳಿಂದ ನೀರು ತೆಗೆದುಕೊಳ್ಳಲು ಸ್ಪೃಶ್ಯಾಸ್ಪೃಶ್ಯತೆಯು ಯಾವುದೇ ನಿರ್ಬಂಧವಿರಕೂಡದು: ಹಾಗೆ ಯಾರಾದರೂ, ಯಾವ ರೀತಿಯಲ್ಲಾದರೂ ನಿರ್ಬಂಧಮಾಡಿದರೆ ಅವರು ಗುನ್ಹೆಮಾಡಿದ ಶಿಕ್ಷೆಗೆ ಗುರಿಯಾಗುವರು ಎಂದು ರಾಜ್ಯಘಟನೆಯು ಹೇಳುವದಾದರೂ, ಈ ಗುನ್ಹೆ ನಡೆಯಬಹುದಾದ ಎಲ್ಲ ಸ್ಥಳಗಳಲ್ಲಿಯೂ, ಕಾನೂನಿನ ಪರವಾಗಿ ಹೋರಾಡುವ ಅಧಿಕಾರಿಗಳು ಹಾಜರಿದ್ದು, ಅದನ್ನು ಬಳಕೆಯಲ್ಲಿ ತರಲು ಯತ್ನಿಸುವುದು ಸಾಧ್ಯವಿದೆಯೇ? ಅಧಿಕಾರಿಗಳೂ ಇರಬಹುದು, ಆದರೆ ಯತ್ನ ಸಾಗಲಿಕ್ಕಿಲ್ಲ.

ಹರಿಜನರ ಯುವತಿ ಬರಿಗೊಡವನ್ನಿಟ್ಟುಕೊಂಡು ಬಾವಿಯ ದಂಡೆಯಮೇಲೆ, ಕಂಡವರನ್ನು ಅಂಗಲಾಚುತ್ತ ನೀರಿಗಾಗಿ ಬಾಯ್ತೆರೆದು ಕುಳಿತಿರುವ ದೃಶ್ಯಗಳನ್ನು ನಿತ್ಯವೂ ನಮ್ಮ ಹಳ್ಳಿಗಳಲ್ಲಿ ಕಾಣಬಹುದಾಗಿದೆ. ಅವಾಗತ್ತ ಹೊರಳುವ ಕಣ್ಗಳ ದೃಷ್ಟಿ, ಆಶೆಯ ನೋಟ, ನೋಡುವ ಯುವಕರನ್ನು ಮೈಲಿಗೆ ಮಾಡಲಾರವು. ಅವಳಿಗೆ ನೀರು ಹನಿಸಿದರೆ ಮಾತ್ರ, ಎಲ್ಲಿ ಧಾರೆಯೊಂದಾಗಿ ನೀರು ಆಚೆಗೆ ಸರಿದು ಮೈಲಿಗೆಯಾದೀತೋ ಎಂದು ಭಯ! ಹಿಂದುಳಿದ ವರ್ಗಗಳಲ್ಲಿ ಬೇರುಬಿಟ್ಟ ಅಂಧಶ್ರದ್ಧೆ- ಪಾಪ ಪುಣ್ಯಗಳ ವಿಚಾರ, ಜೊತೆಗೆ ಭಯ—ಇವೆಲ್ಲವೂ ಇದರಲ್ಲಿ ಅಡಕವಾಗಿವೆ: ಅಸ್ಪೃಶ್ಯತೆಯ ನಿವಾರಣೆಯಾದರೆ, ಸ್ಪೃಶ್ಯ- ಅಸ್ಪೃಶ್ಯರಿಬ್ಬರಿಗೂ ಯಾವುದೋ ಒಂದು ಬಗೆಯ ನರಕಕಾದಿದೆ ಎಂದು ಸಾಮಾನ್ಯವಾಗಿ ತಿಳಿಯುವರು! ಮಳೆ ಜೋರ ಹೆಚ್ಚಾದರೆ, ಮಳೆ ಬೀಳದೆ ಹೋದರೆ, ಬಂದ ಬೆಳೆಯನ್ನು ಕಳ್ಳರು ಕದ್ದೊಯ್ದರೆ-ಇವೆಲ್ಲವುಗಳಿಗೂ ಕಾರಣವೆಂದರೆ ಹಿಂದುಳಿದವರು ಹಿಂದುಳಿದವರಂತೆ ನಡೆಕೊಳ್ಳದಿರುವದೇ!—ಮುಂದುವರಿದವರೆನ್ನಿಸಿಕೊಳ್ಳುವವರಲ್ಲಿಯೂ ಹಿಂದುಳಿದ ವಿಚಾರಗಳಿಷ್ಟಿರುತ್ತದೆಂಬುದನ್ನು ಪ್ರತ್ಯಕ್ಷ ಕಾರ್ಯರೂಪದಲ್ಲಿ ಕಂಡಾಗಲೇ ಅನುಭವವುಂಟಾಗುವುದು.

ಈ ಅಂಧಶ್ರದ್ಧೆಯ ಜೊತೆಗೆ ಉಚ್ಚಕುಲದಲ್ಲಿ ಹುಟ್ಟಿಬಂದವರ, ಅಧಿಕಾರಿಗಳ ಭಯವೂ ಕಾರಣವಾಗಿದೆ. ಸಾರ್ವಜನಿಕ ಬಾವಿಯಿಂದ ನೀರು ಎತ್ತುವ ಉದ್ಘಾಟನಾ ಸಮಾರಂಭಕ್ಕೆ ಮಂತ್ರಿಗಳು ಹಳ್ಳಿಯ ವರೆಗೆ ದಯಮಾಡಿಸಿದರೆ, ಅವರು ಅಲ್ಲಿರುವದು ಅರ್ಧ ಗಂಟೆ. ಅಷ್ಟು ಸಮಯ ಹಳ್ಳಿಯ ಅಧಿಕಾರಿಗಳೂ ಸರಕಾರದ ಉದ್ದೇಶದೊಡನೆ ಒಂದಾಗಿ ಹಿಂದುಳಿದವರಿಗೆ ಮುಂದುವರಿದು ಬಾವಿಯ ನೀರು ಎಳೆಯಲು ಅಪ್ಪಣೆಕೊಡುವರು; ಮಂತ್ರಿಗಳು ಹೊರಡುವುದೇ ತಡ, ಬಾವಿಯನ್ನು ತಮಗೆ ತಿಳಿದಂತೆ ಶುದ್ಧಗೊಳಿಸಿ, ಮತ್ತೆ ಮುಟ್ಟುವಂತಿಲ್ಲ ಎಂದು ಕಟ್ಟಪ್ಪಣೆ ವಿಧಿಸಿ ಹೊರಹೊರಡುವರು. ಮೊದಲು ಪ್ರೋತ್ಸಾಹಕೊಡುವದು, ಬಳಿಕ ತಣ್ಣೀರೆರಚುವದು—ಇದೇ ಪ್ರಾಮುಖ್ಯವಾಗಿ ಹಳ್ಳಿಗರಿಗೆ ಮೊದಲನೆಯ ಪಂಚವಾರ್ಷಿಕ ಯೋಜನೆಯವಧಿಯಲ್ಲಿ ಮೈಯ್ಯುಂಡಿವೆ!

ದೇವಾಲಯ ಪ್ರವೇಶದ ಬಗ್ಗೆಯಾದರೂ ಇದೇ ಮಾತೇ ಅನ್ವಯಿಸುತ್ತದೆ. ಅಧ್ಯಕ್ಷರ ಜೊತೆಗೆ ದೇವಾಲಯದೊಳಗೆ ಬಂದ ಹರಿಜನರಿಗೆ ಪ್ರವೇಶವಿದೆ—ಇದು ವ್ಯಕ್ತಿ ಹಾಗೂ ಅಧಿಕಾರ ಮಾಹಾತ್ಮ್ಯ! ಮೇಲಿನ ವರ್ಗದವರನ್ನು ನೋಡಿಕೊಂಡು, ಅನುಕರಣೀಯವೆಂದು ಅನುಕರಿಸಿದರೋ ಏನೋ, ಹಿಂದುಳಿದ ವರ್ಗಗಳಲ್ಲಿಯೂ ಒಳಪಂಗಡಗಳು ಬಹಳವಾಗಿವೆ: ಹೆಣ್ಣು—ಗಂಡಿನ ಸಂಬಂಧ ಕೆಲ ಪಂಗಡಗಳಲ್ಲಿ ಪರಸ್ಪರ ನಡೆಯಲಾರವು. ಇನ್ನು ಕೆಲವುಗಳಲ್ಲಿ ಆಹಾರದ ಮಟ್ಟಿಗೇ ಇದು ಸೀಮಿತವಾಗಿ ರೂಢಿಯಲ್ಲುಳಿದಿದೆ. ಈ ಒಳಪಂಗಡಗಳಲ್ಲಿಯ ಭೇದಗಳನ್ನು ಗುರುತಿಸಲು ಅವರದೇ ಆದ ಕೆಲವು ಭೇದಸೂಚಕ ರೂಢಿ ನಿಯಮಗಳೂ ಇವೆ.

(೨೪ ನೇ ಪುಟ ನೋಡಿರಿ)

ಬಿಲ್ಡಿಂಗ್ ಇಂಜಿನಿಯರು ನಿರ್ದಿಷ್ಟವಾಗಿ ಹೇಳುತ್ತಾರೆ....

ಎಣೆಯಿಲ್ಲದ ಖಾತರಿಗೆ ಚಾಮುಂಡಿ ಸಿಮೆಂಟ್

ರೋಲ್ಡ್ ಮೈಲ್ಡ್ ಸ್ಟೀಲ್ ಸೆಕ್ಷನ್ನುಗಳು
ರೌಂಡ್ಸ್ ... ಸ್ಕ್ವೇರುಗಳು
ಪ್ಲ್ಯಾಟ್ಸ್ ... ಆಂಗಲ್ಸ್
ಹೂಪ್ಸ್ ಮತ್ತು ಸ್ಟ್ರಿಪ್ಸ್

ಬಳಕೆಯ ಎಲ್ಲಾ ಸೈಜುಗಳಲ್ಲಿಯೂ ದೊರೆಯುತ್ತವೆ.
ನಿಮ್ಮ ಕಟ್ಟಡ ರಚನೆಗೆ ಮೈಸೂರು ಉಕ್ಕು ಮತ್ತು ಚಾಮುಂಡಿ ಸಿಮೆಂಟ್ ಉಪಯೋಗಿಸುವುದು ಅವಶ್ಯಕವೆಂಬುದನ್ನು ಅವಕ್ಕೆ ಇರುವ ಬೇಡಿಕೆ ನಿರೂಪಿಸುತ್ತದೆ.

ಮೈಸೂರು
ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ
ಭದ್ರಾವತಿ (ಸದರನ್ ರೈಲ್ವೆ)

ಬ್ರ್ಯಾಂಚ್ ಆಫೀಸುಗಳು

"ವ್ಯಾನ್‌ಗಾರ್ಡ್ ಹೌಸ್"
೧ನೇ ಫ್ಲೋರ್, ಸೆಕೆಂಡ್ ಲೈನ್ ಬೀಚ್,
ಮದರಾಸು, ಜಿ. ಟಿ.

ಲಕ್ಷ್ಮಿ ಬಿಲ್ಡಿಂಗ್—೫ನೇ ಫ್ಲೋರ್
ಸರ್ ಪಿ. ಎಂ. ರೋಡ್,
ಫೋರ್ಟ್, ಬೊಂಬಾಯಿ.

ಮಹಾಲಕ್ಷ್ಮಿ ಮ್ಯಾನ್ಷನ್,
ಜೇಮ್ಸ್ ಸ್ಟ್ರೀಟ್,
ಸಿಕಂದರಾಬಾದ್.

'ನಾಯಕ್ಸ್'
ಗೋಡೆ ಗಡಿಯಾರಗಳು
ಭಾರತದಲ್ಲೆಲ್ಲ ಅತೀ ಶ್ರೇಷ್ಠ
ಮತ್ತು ಸುಲಭ ಕ್ರಯವೆಂದು
ಗಣಿಸಲ್ಪಟ್ಟಿವೆ!



ಪ್ರತಿಯೊಂದು "ನಾಯಕ್ಸ್" ಗಡಿಯಾರಕ್ಕೂ ಮೂರು ವರ್ಷ ಗ್ಯಾರಂಟಿ ಕೊಡಲಾಗುವುದು.
"NAYAKS" Wall clock Striking Hour & Half hour, 8 Days Winding Height 21" Width 10" Enamelled Dial 7" Diameter. M. No. 113
RS. 35/-
M. VAMAN NAYAK & SONS
Show Room K. S. Road, Mangalore 1
Office Jeppoo P. B. No 8, Mangalore 2
Phone No 458 & 457 Telegrams-Venus

ಉತ್ತಮ ಆಡಳಿತ ಮತ್ತು ಸ್ವರಾಜ್ಯ

(೨ನೇ ಪುಟದಿಂದ)

ಪ್ರಜೆಯ ಗುಣಶೀಲಗಳನ್ನು ಸುಧಾರಿಸಲು ವ್ಯಾಪಕವಾದ ಪ್ರಯತ್ನಗಳು ನಡೆಯಬೇಕಾದುದು ನಮ್ಮ ಈ ಗಣರಾಜ್ಯದ ಶ್ರೇಯದಲ್ಲಿ ಒಳ್ಳೆಯ ಸರಕಾರವನ್ನು ನೆಲೆಗೊಳಿಸಲು ಅತ್ಯಾವಶ್ಯಕ. ವಿಚಾರ, ಮಾತು ಮತ್ತು ಆಚಾರದಲ್ಲಿ ಸ್ವನಿಯಂತ್ರಣವೇ ಗೀತೆಯಲ್ಲಿ ಹೇಳಲಾದ ಯೋಗಾಭ್ಯಾಸವಾಗಿದೆ. ಇದೇ ಒಂದು ಸಮಾಜಕ್ಕೆ ಸುಖಸಂತೋಷಗಳನ್ನು ತರಬಲ್ಲ ಸಾಧನವಾಗಿದೆ.

ಗೀತೆಯಲ್ಲಿ ಹೇಳಲಾದ ಯೋಗವು ವ್ಯಕ್ತಿಯೊಬ್ಬನ ಶ್ರೇಯಸ್ಸನ್ನು ಧ್ಯೇಯವಾಗಿ ಇಟ್ಟುಕೊಂಡಿಲ್ಲ. ಸಮಾಜವನ್ನು ಉತ್ತಮಾವಸ್ಥೆಯಲ್ಲಿಡುವ ಉಪಾಯವಾಗಿಯೂ ಇದನ್ನು ಗೀತೆಯು ಉಲ್ಲೇಖಿಸುತ್ತದೆ. ನಾವು ಗಣರಾಜ್ಯವಾಗಿ ಈ ರಾಷ್ಟ್ರವನ್ನು ರೂಪಿಸಿರುವುದು ಕೇವಲ ಪ್ರತಿಷ್ಠೆ ಅಥವಾ ಅಹಂಕಾರಕ್ಕಾಗಿಯಲ್ಲ—ಪ್ರತಿಯೊಬ್ಬ ಪ್ರಜೆಯ ಸಾರ್ವಾಂಗಿಕ ಅಭಿವೃದ್ಧಿಗಾಗಿ ಎಂಬುದನ್ನು ನೆನಪಿಡಬೇಕು.

ಈ ಯೋಗದ ತಳಹದಿಯನ್ನು ಕಿತ್ತುಬಿಟ್ಟರೆ, ನಮ್ಮ ಸ್ವರಾಜ್ಯವು ಅರ್ಥಹೀನವಾಗುತ್ತದೆ. ಏಕೆಂದರೆ, ಕೆಟ್ಟ ಜನರ ಸಮುದಾಯದಿಂದಲೇ ರೂಪುಗೊಂಡ ಬಹುಸಂಖ್ಯಾತ ವರ್ಗದ ಸರಕಾರವೇ ನಮಗೆ ಆಗ ಗತಿಯಾಗುತ್ತದೆ. ಆದುದರಿಂದ ಒಳ್ಳೆಯ ಸರಕಾರವನ್ನು ಅಪೇಕ್ಷಿಸಿ, ಒಳ್ಳೆಯ ಕೆಲಸಗಳನ್ನು ಮಾಡಬೇಕೆನ್ನುವುದು ನಮ್ಮ ರಾಷ್ಟ್ರೀಯ ಹಂಬಲವಾಗಿದ್ದರೆ ನಾವೆಲ್ಲರೂ ವ್ಯಕ್ತಿಶಃ ಒಳ್ಳೆಯ ಗುಣಶೀಲ ಸಂಪನ್ನರಾಗಿರಲು ಪ್ರಯತ್ನಶೀಲರಾಗಬೇಕು.

ನಾವು ಸರಕಾರವನ್ನು ರಾಜಕೀಯ ಪಕ್ಷಗಳ ಬಲಾಬಲದ ತಳಹದಿಯ ಮೇಲೆ ಕಟ್ಟಲು ನಿರ್ಧರಿಸಿದ್ದೇವೆ. ಯಾವ ರಾಜಕೀಯ ಪಕ್ಷವು ಬಹುಸಂಖ್ಯಾಕ ಜನರ ಬೆಂಬಲವನ್ನು ಪಡೆಯಿತೊ ಅದಕ್ಕೆ ಸರಕಾರವನ್ನು ನಿರ್ವಹಿಸುವ ಹೊಣೆಗಾರಿಕೆಯನ್ನು ನಾವು ಒಪ್ಪಿಸಿ ಕೊಡುತ್ತಿದ್ದೇವೆ.

ಸರಕಾರಿ ಅಧಿಕಾರಕ್ಕೇರುವಷ್ಟು ಬಹುಮತವನ್ನು ಸಂಪಾದಿಸದ ಪಕ್ಷ ಅನಾವಶ್ಯಕವೆಂದು ನಾವು ತಿಳಿಯಬಾರದು. ಏಕೆಂದರೆ ಸರಕಾರಿ ಪಕ್ಷದ ಮತ್ತು ಸರಕಾರದ ನಡವಳಿಕೆ ಮತ್ತು ಚಟುವಟಿಕೆಗಳನ್ನು ವಿಶ್ಲೇಷಿಸಿ ಅವುಗಳ ಸಾಧಕ ಬಾಧಕಾಂಶಗಳನ್ನು ಕಂಡುಕೊಂಡು ಯೋಗ್ಯವಾದ ರೀತಿಯಲ್ಲಿ ವಿರೋಧವನ್ನು ಶಕ್ತಿಯುತವಾಗಿ ಇವು ಮಾಡುತ್ತಿರುವುದು ಪ್ರಜಾಪ್ರಭುತ್ವಕ್ಕೆ ಪೋಷಕವಾದ ಕಾರ್ಯ.

ಆದುದರಿಂದ ಆರೋಗ್ಯದಾಯಕವಾಗಿ ಸ್ವಕೀಯ ಆಡಳಿತೆಯು ಬಾಳಬೇಕಾದರೆ, ಮತ್ತು ಉಳಿಯಬೇಕಾದರೆ ರಾಜಕೀಯ ಪಕ್ಷಗಳು ಉತ್ತಮವಾಗಿರಬೇಕು ಎಂದಾಯಿತು. ರಾಜಕೀಯ ಪಕ್ಷಗಳಲ್ಲಿರುವ ಜನರು ಒಳ್ಳೆಯವರಾಗಿದ್ದರೆ ಮಾತ್ರ ಅವರಿಂದ ನೆರವೇರುವ ಆಡಳಿತೆಯೂ ಒಳ್ಳೆಯದಾದೀತು.

ಭಾರತದಲ್ಲಿ ಚಾರಿತ್ರಿಕ ಮಹತ್ವದ ರಾಜಕೀಯ ಸಂಸ್ಥೆಯಾಗಿ ಕಾಂಗ್ರೆಸು ಮೆರೆಯುತ್ತಿದ್ದು ಇಂದು ಅದು ಅಧಿಕಾರಾರೂಢವಾದ ಪಕ್ಷವಾಗಿದೆ. ನಮ್ಮ ಸರಕಾರವು ಒಳ್ಳೆಯದಾಗಬೇಕಾಗಿದ್ದರೆ, ಈ ಪಕ್ಷದಲ್ಲಿ ಒಳ್ಳೆಯ ಜನರ ಕೈವಾಡವೇ ನಡೆಯಬೇಕು ಎಂಬುದು ಸ್ವತಃ ಸಿದ್ಧ.

ಪ್ರತಿಯೊಂದೂ ರಾಜಕೀಯ ಪಕ್ಷವು—ಅದು ಬೇಕಾದರೆ ಇಂದು ಅಧಿಕಾರಾರೂಢವಾದುದಾಗಿರಲಿ, ಅಥವಾ ಪ್ರತಿಸ್ಪರ್ಧಿ ಸ್ಥಾನದಲ್ಲಿದ್ದುಕೊಂಡು ವಿರೋಧ ಸೂಚಿಸುವುದಾಗಿರಲಿ, ಎರಡಕ್ಕೂ ಈ ನ್ಯಾಯವು ಸಮನಾಗಿಯೇ ಅನ್ವಯಿಸುತ್ತದೆ—ರಾಜಕೀಯದ ಬಂಡವಾಳದಿಂದ ಹೊಟ್ಟೆ ತುಂಬಿಸಿಕೊಳ್ಳುವ ವ್ಯಕ್ತಿಗಳಿಂದ ದೂರವಾಗಿರಬೇಕೆಂದು ನನ್ನ ಅಭಿಪ್ರಾಯ. ರಾಜಕೀಯ ಪಕ್ಷಗಳ ಸದಸ್ಯರಿಗೆ ತಮ್ಮದೇ ಆದ ಸ್ವತಂತ್ರ ಉದ್ಯೋಗವಿರುವುದು ಸಾರ್ವಜನಿಕ ದೃಷ್ಟಿಯಿಂದ ತುಂಬ ಹಿತಕರ.

ಸಾರ್ವಜನಿಕರ ಟೀಕೆ ಮತ್ತು ವಿಮರ್ಶೆಗಳಿಗೆ ಎದುರಾದಾಗ ಜಯಶಾಲಿಯಾಗುವಷ್ಟು ಉತ್ತಮವಾದ ಚಾರಿತ್ರ್ಯ ಸಂಪನ್ನರಾಗಿ ರಾಜಕೀಯ ಪಕ್ಷಗಳ ಸದಸ್ಯರು ಇರಬೇಕಾಗಿದೆ. ಒಬ್ಬನು ವಕೀಲನಾಗಿರಬಹುದು; ಅಥವಾ ಮೋಟಾರು ಚಾಲಕನಾಗಿರಬಹುದು. ಆದರೆ ಆತನು 'ನಾನಿದನ್ನು ವೃತ್ತಿಯಾಗಿ ಸ್ವೀಕರಿಸಿದ್ದೇನೆ; ಮತ್ತು ನಾನು ಇದರಿಂದಲೇ ಜೀವನ ನಿರ್ವಹಣ ಮಾಡುತ್ತಿದ್ದೇನೆ" ಎಂದು ಹೇಳುವಷ್ಟು ನಿಸ್ಪೃಹತೆಯಿಂದ ಕೂಡಿರುವುದು ಶುಭಕರ.

ರಾಜಕೀಯ ಪಕ್ಷದಲ್ಲಿ ಗಳಿಸಿರಬಹುದಾದ ಸ್ಥಾನಮಾನದ ದುರುಪಯೋಗವನ್ನು ಯಾವ ವ್ಯಕ್ತಿಯೂ ಮಾಡುವಂತಿರಬಾರದು ಎಂಬುದೇ ನನ್ನ ಆಶಯ. ಆಗ ಮಾತ್ರ ಕಡು ಬಡವನಾದ ವ್ಯಕ್ತಿಯೂ ರಾಜಕೀಯ ಪಕ್ಷದ ಸದಸ್ಯನಾಗಿ ಕೆಲಸ ಮಾಡಬಲ್ಲನು.

ಪಕ್ಷದ ಸಂಘಟನೆ ಮತ್ತಿತರ ಕೆಲಸಗಳಿಗಾಗಿ ರಾಜಕೀಯ ಗುಂಪು ತನ್ನ ಸದಸ್ಯರಲ್ಲಿ ಹಲವರಿಗೆ ಸಂಬಳವನ್ನು ಕೊಡುವುದು ತಪ್ಪೆಂದು ನಾನೇನೂ ಹೇಳುವುದಿಲ್ಲ. ಆದರೆ, ಹೀಗೆ ಹಣವನ್ನು ಬಹಿರಂಗವಾಗಿಯೇ ರಾಜಕೀಯ ಪಕ್ಷವು ಕೊಡಬೇಕು; ಎಲ್ಲ ಜನರಿಗೂ ಈ ವಿಷಯವು ಗೊತ್ತಾಗುವಂತಿರಬೇಕು. ರಾಜಕೀಯ ಪಕ್ಷದ ಸದಸ್ಯರು ಸಾರ್ವಜನಿಕರ ದೃಷ್ಟಿಯಲ್ಲಿ ಶುದ್ಧರೂ ಪವಿತ್ರ ಚರಿತ್ರರೂ ಆಗಿ ಉಳಿಯುವುದಕ್ಕೆ ಇದು ಅತ್ಯಾವಶ್ಯಕ.

ಕೇವಲ ಸ್ವಕೀಯ ಆಡಳಿತೆ ಇದ್ದರೆ ಸಾಲದು—ಆಡಳಿತೆಯು ಉತ್ತಮವಾಗಿರಲೂ ಬೇಕು ಎಂಬುದಕ್ಕಾಗಿ ಇಷ್ಟೆಲ್ಲ ವಿಶೇಷ ಜಾಗರೂಕತೆ ಬೇಕಾಗಿದೆ. ರಾಜಕೀಯ ಪಕ್ಷಗಳು ಒಳ್ಳೆಯವಿರಬೇಕಾಗಿವೆ; ಅಲ್ಲದೆ ಅವುಗಳ ಸದಸ್ಯತ್ವವು ದೋಷರಹಿತವಾದ ರೀತಿಯದಾಗಿರಬೇಕಾಗಿದೆ.

ಹಿಂದಿನ ಕಾಲದಲ್ಲಿ ಅರಸನು ಒಳ್ಳೆಯ ವ್ಯಕ್ತಿತ್ವದಿಂದ ಕೂಡಿರದಿದ್ದಾಗಲೆಲ್ಲ ಆತನ ಆಡಳಿತವು ತೀರ ಕೆಟ್ಟದಾಗಿ ಪರಿಣಮಿಸಿದುದನ್ನು ನಾವು ಕೇಳಿದ್ದೇವೆ. ಇದನ್ನೆ ಈಗಿನ ಕಾಲಕ್ಕೆ ಅನ್ವಯಿಸಿ ಹೇಳುವುದಾದರೆ, ಯಾವ ರಾಜಕೀಯ ಪಕ್ಷಗಳ ಸದಸ್ಯರು ಒಳ್ಳೆಯವರಾಗಿಲ್ಲವೊ ಆ ಪಕ್ಷದ ಆಡಳಿತೆಯು ದೂಷ್ಯವಾಗುತ್ತದೆ; ನಿಕೃಷ್ಟತರದ್ದಾಗುತ್ತದೆ.

ಆಡಳಿತೆಯ ಹೊಣೆಗಾರಿಕೆಯು ರಾಜಕೀಯ ಪಕ್ಷಗಳ ಮೇಲಷ್ಟೇಯಲ್ಲ—ಸರಕಾರದಿಂದ ನಿಯುಕ್ತರಾದ ಅಧಿಕಾರಿಗಳಗಳ ಮೇಲೂ ಕೆಲಮಟ್ಟಿಗಿದೆ. ಸರಕಾರಿ ನೌಕರಿಯಲ್ಲಿರುವ ಈ ವ್ಯಕ್ತಿಗಳೆಲ್ಲರೂ ಕಾರ್ಯಕ್ಷಮತೆಯುಳ್ಳವರಾಗಿರಬೇಕು; ಮತ್ತು ತೀರ ಪ್ರಾಮಾಣಿಕರಾಗಿರಬೇಕು. ಬುಡದಿಂದ ತುದಿಯ ವರೆಗಿನ ಎಲ್ಲ ಅಧಿಕಾರಿಗಳ ಮತ್ತು ನೌಕರರ ಶೀಲವು ಸಂದೇಹಾತೀತವೆನಿಸಿ, ಒಳ್ಳೆಯದಾಗಿರಬೇಕು.

ಸಿಬ್ಬಂದಿಯಲ್ಲಿ ಈ ಯೋಗ್ಯತೆಯು ತುಂಬಿರುವಂತೆ ನೋಡಿಕೊಳ್ಳುವ ಜವಾಬ್ದಾರಿ ಸರಕಾರಕ್ಕೆ ಸೇರಿದೆ. ನೌಕರವರ್ಗಕ್ಕೆ ನಾಗರಿಕರನ್ನು ಆರಿಸುವಾಗಲೇ ಈ ಬಗ್ಗೆ ಮುಂಜಾಗರೂಕತೆ ವಹಿಸಬೇಕಾಗಿದೆ. ತನಂತರವೂ ವಿಚಕ್ಷಣತೆಯಿಂದ ಕೂಡಿದ ಮೇಲ್ತನಿಖೆ ಆವಶ್ಯಕ.

ಸರಕಾರವು ಬಹುಮತವನ್ನು ಪಡೆದ ರಾಜಕೀಯ ಪಕ್ಷದಿಂದ ರಚಿಸಲ್ಪಟ್ಟದ್ದಾದರೂ ಅದು ಬಹುಸಂಖ್ಯಾಕ ಪ್ರಜಾವರ್ಗದ ಹಿತಕ್ಕಾಗಿಯಷ್ಟೇ ಇರುವುದಲ್ಲ—ಎಲ್ಲ ಪ್ರಜೆಗಳ ಕ್ಷೇಮಾಭ್ಯುದಯಕ್ಕೋಸ್ಕರ ಎಂಬುದನ್ನು ಮರೆಯಲೇ ಬಾರದು. ಆದುದರಿಂದ ಸರಕಾರಿ ನೌಕರರ ಮೇಲೆ ರಾಜಕೀಯ ಪಕ್ಷಗಳ ಪ್ರಭಾವಕ್ಕೆ ಅವಕಾಶವಿರಬಾರದು. ಪಕ್ಷದ ಸ್ಥಾನಬಲದಿಂದ ಸರಕಾರಿ ಯಂತ್ರದ ಮೇಲೆ ಹೊರಗಿನವರ ಒತ್ತಾಯ ಬೀಳಲಾಗದು.

ಸರಕಾರದ ನೌಕರರು ಎಲ್ಲರನ್ನೂ ಸಮಾನತೆಯಿಂದ ನಡೆಸಿಕೊಳ್ಳಬೇಕು. ಆದರೆ, ಸರಕಾರಿ ಸೇವೆಯು ಅಕ್ಕಿ, ಗೋಧಿ ಅಥವಾ ಬಟ್ಟೆಯಂತೆ ಎಲ್ಲ ನಾಗರಿಕರಲ್ಲೂ ಸಮಾನವಾಗಿ ವಿತರಣೆಯಾಗುವ ಸರಕಲ್ಲ. ಅದು ಬಡ ಜನರಿಗೆ ಹೆಚ್ಚು ಹೆಚ್ಚಾಗಿ ಸಂದು ಅವರ ದುಃಖ ಪರಿಹಾರದ ಧ್ಯೇಯವಿರುವ ಪವಿತ್ರರಂಗ.

ಹಿಂದುಳಿದ ವರ್ಗಗಳಿಗೆ ಸರಕಾರಿ ನೌಕರಿಯಲ್ಲಿ ಸ್ಥಾನಗಳನ್ನು ಕಾಯ್ದಿಟ್ಟ ಮಾತ್ರಕ್ಕೆ ಹಾಗೆ ಹಿಂದುಳಿದವರ ದುಃಖ ನಿವಾರಣೆಯಾಗಲಾರದು. ಇದನ್ನು ನೆನಪಿಟ್ಟುಕೊಂಡು ಎಲ್ಲ ನಾಗರಿಕರಿಗೂ ನೀಡಲಾದ ಕಾರ್ಯಕ್ಷಮಪೂರ್ಣವೂ ದಕ್ಷವೂ ವಿಳಂಬರಹಿತವೂ ಆದ ಸೇವೆಯೇ ನಿಜವಾಗಿ ಸರಕಾರದ ಒಳ್ಳೆಯತನದ ಹೆಗ್ಗುರುತು. ಇಂತಹ ಸೇವೆಯು ಬೇರೆ ಬೇರೆ ಘಟ್ಟಗಳೇ ಸ್ವರಾಜ್ಯದಲ್ಲಿ ಸಾಧಿಸಲಾದ ಪ್ರಗತಿಯನ್ನು ತೋರಿಸಿಕೊಡುವ ಮೈಲುಗಲ್ಲಿನ ಸಾಲು!

[ರಾಜಾಜಿಯ ಭಾಷಣದಿಂದ ಈ ಲೇಖನವನ್ನು ಸಿದ್ಧಪಡಿಸಿದವರು:
ಶ್ರೀ. ಕುಮಾರಸ್ವಾಮಿ]

ಮುದ್ರಣ ಕಾರ್ಯಗಳಿಗೆ ನವಯುಗ ಪ್ರೆಸ್ ಉಡುಪಿ.

ಮೂಲ್ಕಿ ಬೇಂಕ್ ಲಿಮಿಟೆಡ್, ಮುಲ್ಕಿ.

ಕಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ಸ್ಥಿರಖು ಠೇವಣಾತಿ.

24	ತಿಂಗಳಿಗೆ	4%
12	,,	3¾%
6	,,	3½%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಜೈಭಾರತ್ ಮಿಲ್ಸ್ ಪ್ರೈವೇಟ್ ಲಿ:
ಚಿತ್ತರಂಜನ್ ಬಿಲ್ಡಿಂಗ್ಸ್, ಉಡುಪಿ.

ಹಂಚುಗಳನ್ನು ಆರಿಸುವಾಗ ಜಾಗರೂಕರಾಗಿರಿ!
ತಾಳಿಕೆಯಲ್ಲಿ—ಬಾಳಿಕೆಯಲ್ಲಿ—ನಾಜೂಕಿನಲ್ಲಿ ಸರ್ವೋತ್ಕೃಷ್ಟವೆಂದು ಸರ್ವತ್ರ ಪ್ರಸಿದ್ಧವಾಗಿರುವ ಹಂಚುಗಳೆಂದರೆ
ಕೋಮನ್ ವೆಲ್ತ್‌ನವರ
ಬಾಸೆಲ್ ಮಿಶನ್ ಹಂಚು, ದಂಬೆ ಇತ್ಯಾದಿ
ಬುದ್ಧಿವಂತರು ಇವನ್ನೇ ಆರಿಸಿ ಉಪಯೋಗಿಸುತ್ತಾರೆ.
ಉತ್ತಮ ಹಂಚು, ದಂಬೆ ಯಾವುದು ಬೇಕಾದರೂ ನಮ್ಮೊಡನೆ ವಿಚಾರಿಸಿ ಪಡಕೊಳ್ಳಿರಿ.
ಕಾನಾರ್ಡ ಪಾಂಡುರಂಗ ರಾವ್,
ಕಮಿಶನ್ ಏಜಂಟ್, ಉಡುಪಿ. (ಬಸ್‌ಸ್ಟೆಂಡಿನ ಸಮೀಪ)

ಹಿಂದುಳಿದವರೆ? ಏಕೆ?

(೨೨ನೇ ಪುಟದಿಂದ)

ಹಿಂದುಳಿದ ವರ್ಗಗಳಿಗೆ ಕೊಡುವ ವಿಶೇಷ ಸವಲತ್ತುಗಳ ಮೂಲಕ, ಅವರು ಏರಿಕುಳಿತು, ಮುಂದುವರಿದ ವರ್ಗವನ್ನೇ ಲೆಕ್ಕಿಸದಂತಾಗಿದ್ದಾರೆ, ಎಂಬ ಪ್ರತಿಕ್ರಿಯೆಯು ಕೂಗೂ ಕೆಲವೊಂದು ಮೂಲೆಗಳಲ್ಲಿ ಕೇಳಿಬರುತ್ತಿದೆ. ಒಮ್ಮೆಲೇ ದೊರೆತ ಸೌಕರ್ಯದ ಸದುಪಯೋಗ ತಿಳಿಯದೆ, ಹಿಂದುಳಿದ ವರ್ಗದವರು ಈ ರೀತಿ ಆಚರಿಸುವದೂ ಸಾಧ್ಯವಿದೆ: ಆದರೆ ಅದರೊಂದಿಗೆ ಅಧಿಕಾರದ ದರ್ಪದಿಂದ ಅವರ ಬಳಿ ಹೋಗಿ ನೆಲಕ್ಕೆ ಬಡಿದವರನ್ನು, ಅಧಿಕಾರದ ಸೌಕರ್ಯದಿಂದಲೇ ಎದುರಿಸಬೇಕೆಂಬ ಪ್ರತೀಕಾರದ ಭಾವನೆ ಬರುವದೂ ಸಾಧ್ಯವಿದೆ. ಮಾನವತೆಯಿಂದ ಹಿಂದುಳಿದ ವರ್ಗದವರನ್ನು ಅಂದು ಕಂಡಿದ್ದರೆ, ಇಂದು ಈ ಪ್ರಸಂಗ ಬರುತ್ತಿರಲಿಲ್ಲ! ಇಂದಾದರೂ ಯಾವುದೇ ಪ್ರತೀಕಾರದ ಭಾವನೆಗೆ ಆಸ್ಪದಕೊಡದಂತೆ ಮಾನವತೆಯಿಂದ ನಡೆದರೆ, ತೀವ್ರವಾಗಲಿರುವ ಸಾಮಾಜಿಕ ಸಂಘರ್ಷವನ್ನು ತಪ್ಪಿಸಲು ಸಹಾಯಕಾರಿಯಾಗಬಹುದಾಗಿದೆ.

ಹಿಂದುಳಿದ ಹಾಗೂ ಮುಂದುವರಿದ ವರ್ಗಗಳಲ್ಲಿರುವ ಸಂಘರ್ಷಕ್ಕಿಂತ, ಹಿಂದುಳಿದ ವರ್ಗಗಳಲ್ಲಿಯೇ, ಹೊಸ ವಿಚಾರಗಳ ಸೆಳವಿನಲ್ಲಿ ಸಿಕ್ಕ ಯುವಕರಿಗೂ, ಪರಂಪರೆಗಂಟಿಕೊಂಡು ಬಂದ ಹಿರಿಯರಿಗೂ ಇಂದು ಹೊಸ ಸಮಸ್ಯೆಗಳುದ್ಭವಿಸಿ, ಹೊಸ ಬಗೆಯ ಸಂಘರ್ಷಕ್ಕೆ ಅನುವು ಮಾಡಿಕೊಟ್ಟಿವೆ. ಮನೆಯ ಮಗಳನ್ನು ದೇವರಿಗೆ ದಾಸಿಯೆಂದು ಸಲ್ಲಿಸದಿದ್ದರೆ, ದೇವತೆ ಕುಪಿತಳಾಗಿ ಇನ್ನೂ ಅನಾಹುತಕ್ಕೆ ಕುಟುಂಬದ ಜನರನ್ನು ಈಡುಮಾಡಬಹುದೆಂದು ಹಿರಿಯ ನಂಬಿದರೆ, ಕಿರಿಯ ಅದನ್ನು ಪ್ರತಿಭಟಿಸಿ ನಿಲ್ಲುತ್ತಾನೆ! ಮನೆಮನೆಯಲ್ಲಿಯೂ ತೋರಿದ ಕ್ರಾಂತಿಯೇ, ಒಟ್ಟು ಸಾಮಾಜಿಕ ಕ್ರಾಂತಿಯ ರೂಪವನ್ನು ತಾಳುವದು! ಇಂದು ಪ್ರಾರಂಭವಾದ ಕ್ರಾಂತಿಯ ಬೀಜ, ಮುಂದಿನ ಪೀಳಿಗೆಯಲ್ಲಾದರೂ ಮೊಳಕೆಯೊಡೆದೀತು.

ಅದೇ ರೀತಿ ಮುಂದುವರಿದ ಹಾಗೂ ಹಿಂದುಳಿದ ವರ್ಗಗಳಲ್ಲಿ ನಡೆದಿರುವ ಸಂಘರ್ಷವಾದರೂ, ಜನತೆಗೆ ಪರಿಚಿತವಾಗಲು ಅಲ್ಪ ಸಮಯಬೇಕು. ಸದ್ಯದ ಸಂಘರ್ಷ ಮುಂದುವರಿದವರ ಸ್ವಾರ್ಥವನ್ನವಲಂಬಿಸಿದ್ದು, ಹಿಂದುಳಿದವರಿಗೆ ಕೊಟ್ಟ ವಿಶೇಷ ಸವಲತ್ತುಗಳನ್ನು ಕುರಿತಾದದ್ದು; ದೇಶದ ಸಮಗ್ರ ಸಂಪತ್ತುಗಳನ್ನು ವಿನಿಯೋಗಿಸುವ ಕಾಲ ಬರಬೇಕಾದರೆ, ಅಖಂಡವಾದ ಮಾನವ ಬಲವನ್ನೂ ಯೋಗ್ಯವಾಗಿ ಉಪಯೋಗಿಸಿಕೊಳ್ಳಬೇಕಾಗುತ್ತದೆ. ಹಿಂದುಳಿದವರು ಮುಂದುವರಿದವರು ಎನ್ನುವ ಭೇದವಿಲ್ಲದೆ: ಆದರೆ ಅದಕ್ಕೆ ಮೊದಲು ಯಾವುದೊಂದು ವ್ಯಕ್ತಿಗೆ, ಸುಳ್ಳುಬೆಲೆಯನ್ನು ಕೊಟ್ಟು ಅದನ್ನು ಏರಿಸುವ ಅಥವಾ ಇಳಿಸುವ ಪರಿಪಾಠದ ನಮ್ಮ ಮನೋವೃತ್ತಿಯಲ್ಲಿ ಮೊದಲು ಪರಿವರ್ತನೆಯಾಗಬೇಕು

ವೈದ್ಯಕೀಯ ಸಹಾಯದ ಸೌಕರ್ಯವನ್ನು, ಶಿಕ್ಷಣ ಉದ್ಯೋಗಗಳ ಅನುಕೂಲತೆಯನ್ನು ಹಿಂದುಳಿದ ವರ್ಗದವರಿಗೆ ಕಲ್ಪಿಸಿಕೊಡಲು ಪ್ರಥಮ ಪಂಚವಾರ್ಷಿಕ ಯೋಜನೆಯಲ್ಲಿ ೩೭ ಕೋಟಿ ರೂಪಾಯಿಗಳನ್ನು ತೆಗೆದಿರಿಸಲಾಗಿತ್ತು. ಗೃಹ ಕೈಗಾರಿಕೆಗಳನ್ನು ವೈಯಕ್ತಿಕವಾಗಿ ಇಲ್ಲವೆ ಸಾಂಘಿಕವಾಗಿ ಬಲಪಡಿಸುವದು, ಸಹಕಾರಿ ಸಂಘಗಳನ್ನು ಮಾಡಿಕೊಂಡು ಹೊಲಗಳನ್ನು ಸಾಗುವಳಿ ಮಾಡುವದು, ಒಳ್ಳೇ ಬೀಜಗಳನ್ನು ಸಂಗ್ರಹಿಸುವದು, ಶಾಸ್ತ್ರೀಯ ರೀತ್ಯಾ ಗೊಬ್ಬರ ತಯಾರಿಸುವದು, ಕಾಲ ಕಾಲಕ್ಕೆ ಆಯಾ ಭಾಗಗಳಲ್ಲಿ ಪ್ರದರ್ಶನಗಳನ್ನೇರ್ಪಡಿಸುವದು, ಸಾಮಾಜಿಕ ಆರೋಗ್ಯವನ್ನು ಕಾಪಾಡುವದು, ಸ್ವಚ್ಛವಾದ ನೀರು ಸುಲಭವಾಗಿ ದೊರೆಯುವಂತೆ ವ್ಯವಸ್ಥೆ ಮಾಡುವದು—ಇವುಗಳ ಪ್ರಯೋಗವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕೈಕೊಳ್ಳುವದು ಅವಶ್ಯಕವಾಗಿದೆ. ಆಸಾಮುದಲ್ಲಿ ಇಂತಹ ಸ್ವಾವಲಂಬಿ ಘಟಕವೊಂದನ್ನು ಆದಿವಾಸಿಗಳ ಮಧ್ಯದಲ್ಲಿ ನಿರ್ಮಾಣಮಾಡುವ ಕಾರ್ಯವನ್ನು ಪ್ರಾರಂಭಮಾಡಿದ್ದು, ಅದರಿಂದ ದೊರೆತ ಅನುಭವ ಉಳಿದೆಡೆಗಳಲ್ಲೂ ಉಪಯುಕ್ತವೆನಿಸಬಹುದು.

'ಅಪರಾಧೀ ಮನೋವೃತ್ತಿ'ಯ ವರ್ಗವನ್ನು—ಅವರಿಗೆ ಪುನರ್ನಿವೇಶನ ಕಲ್ಪಿಸಿಕೊಟ್ಟು ವಿಧಾಯಕ ಕಾರ್ಯಗಳಲ್ಲಿ ತೊಡಗಿಸಿ, ಅವರಿಗಿದ್ದ 'ಅಪರಾಧೀ ಮನೋವೃತ್ತಿ'ಯ ಅಪವಾದವನ್ನು ಹೋಗಲಾಡಿಸಬೇಕಾಗಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ಕೊನೆಯಲ್ಲಿ, ನಡೆಯಬಹುದಾದ ಎಲ್ಲ ಪ್ರಯೋಗಗಳಿಂದ, ರಾಷ್ಟ್ರದ ಎಲ್ಲ ಸಂಪತ್ತನ್ನೂ—ಮಾನವ ಬಲವನ್ನೂ ಒಳಕೊಂಡು—ರಾಷ್ಟ್ರಕ್ಕಾಗಿ ಉಪಯೋಗಿಸಿಕೊಂಡು ಬೆಳೆಯುವ ಸಮಯ ಬರಬಹುದು: ಆಗ 'ಹಿಂದುಳಿದವರು' ಎಂಬ ಶಬ್ದ ಈಗಿದ್ದ ಅರ್ಥದಲ್ಲಿ ಉಳಿಯಲಿಕ್ಕಿಲ್ಲ!

(೧ನೇ ಪುಟದಿಂದ)

ಪ್ರತಿ ವ್ಯಕ್ತಿಯ ಮತ್ತು ಪ್ರತಿ ಗುಂಪಿನ ಸ್ವಾತಂತ್ರ್ಯವನ್ನು ರಕ್ಷಿಸುವ ಹೊಣೆ ಇದೆ.

ಈ ಎರಡು ದಿನಗಳು ಬೇರೆ ಬೇರಾದರೂ ಅವು ಒಂದಕ್ಕೊಂದು ಪೂರಕವೆಂದು ನನ್ನ ಮತ. ಸ್ವಾತಂತ್ರ್ಯವೂ ಗಣರಾಜ್ಯವೂ ಒಂದನ್ನೊಂದು ಅಗಲಿರಲಾರವು. ಭಾರತದ ಇತಿಹಾಸದಲ್ಲಿ ಏರಿಳಿತಗಳೂ, ಸಂಘರ್ಷಗಳೂ ಅನೇಕ ನಡೆದುಹೋಗಿವೆ. ಹೊಸದಾಗಿ ಸ್ವಾತಂತ್ರ್ಯ ಸಂಪಾದನೆ ಮಾಡುವ ಕಾಲದಲ್ಲಿ ನಾವು ಉಪಯೋಗಿಸಿದ ಅಹಿಂಸಾ ಶಸ್ತ್ರವು ಜಗತ್ತಿಗೇ ಆದರ್ಶವಾಗಿದೆ. ಸ್ವಾತಂತ್ರ್ಯದೊರೆತ ಈ ಒಂಭತ್ತು ವರ್ಷಗಳ ಕಾಲದಲ್ಲಿ ನಮ್ಮ ದೇಶ ಪ್ರಗತಿಯ ಹೆಜ್ಜೆಯನ್ನಿಡುತ್ತ ಮುನ್ನಡೆದಿದೆ. ಇತರ ಸೋದರ ರಾಷ್ಟ್ರಗಳೊಡನೆ ನಾವು ಸಮಾನಸ್ಕಂಧರಾಗಿ ನಿಂತಿದ್ದೇವೆ. ಸ್ವಾತಂತ್ರ್ಯ ಧ್ವಜವನ್ನು ಸರ್ವದಾ ಎತ್ತಿಹಿಡಿದು ಜಗತ್ತಿಗೆ ಮೈತ್ರಿ, ಸಹಕಾರ, ಅಭಿವೃದ್ಧಿ, ಮತ್ತು ಶಾಂತಿಯ ಸಂದೇಶವನ್ನು ನೀಡುವ ಕರ್ತವ್ಯವು ನಮ್ಮದಾಗಲಿ!

ಅನುವಾದಕರು:
ಶ್ರೀ ಕು. ಶಿ. ಹರಿದಾಸ ಭಟ್ಟ, ಎಂ. ಎ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬ್ಯಾಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED
H. Office: UDIPI (S.India).

ಎಕೆಡೆಮಿ ಪಬ್ಲಿಕ್ ಲೈಬ್ರೆರಿ, ಉಡುಪಿ.

ಬೇಕಾಗಿದ್ದಾರೆ

ತಾ. 1-8-56ರಂದು ಉಡುಪಿ ಬ್ರಹ್ಮಗಿರಿಯಲ್ಲಿ, ಎಕೆಡೆಮಿ ಓಫ್ ಜನರಲ್ ಎಜ್ಯುಕೇಶನಿನ ವತಿಯಿಂದ ಪ್ರಾರಂಭವಾದ ಎಕೆಡೆಮಿ ಪಬ್ಲಿಕ್ ಲೈಬ್ರೆರಿಗೆ ಒಬ್ಬರು ಲೈಬ್ರೆರಿಯನ್, ಮತ್ತೊಬ್ಬರು ಸಹಾಯಕ ಲೈಬ್ರೆರಿಯನ್ ಬೇಕಾಗಿದ್ದಾರೆ.

ನಿವೃತ್ತ ಬಿ. ಎ. ಎಲ್. ಟಿ., ಉಪಾಧ್ಯಾಯರಾಗಲೀ, ನಿವೃತ್ತ ಸರಕಾರಿ ಗ್ರಾಜ್ಯುವೇಟ್ ಆಫೀಸರರಾಗಲೀ, ಲೈಬ್ರೆರಿಯನ್ ಕೆಲಸಕ್ಕೂ, ನಿವೃತ್ತ ಸೆಕೆಂಡರಿ ಗ್ರೇಡ್ ಉಪಾಧ್ಯಾಯರಾಗಲೀ, ನಿವೃತ್ತ ಯಸ್. ಯಸ್. ಯಲ್. ಸಿ. ಸರಕಾರಿ ನೌಕರರಾಗಲೀ ಸಹಾಯಕ ಲೈಬ್ರೆರಿಯನ್ ಕೆಲಸಕ್ಕೂ ಅರ್ಜಿ ಹಾಕಬಹುದು.

ಲೈಬ್ರೆರಿಯನ್‌ರಿಗೆ ರೂ. 55ರಂತೆ, ಸಹಾಯಕ ಲೈಬ್ರೆರಿಯನ್‌ರಿಗೆ ರೂ. 45ರಂತೆ ಗೌರವ ಮಾಸಿಕ ವೇತನ ಕೊಡಲಾಗುವುದು.

ಅಲ್ಲದೆ ಬೆಳಿಗ್ಗೆ ಕೆಲಸ ಮಾಡಲು ಒಬ್ಬ, ಸಾಯಂಕಾಲ ಇನ್ನೊಬ್ಬ, ಹೀಗೆ ಪ್ರತ್ಯಪ್ರತ್ಯೇಕ ಇಬ್ಬರು 12 ವರ್ಷಕ್ಕೆ ಮೀರದ ಎಟೆಂಡರ್ ಹುಡುಗರು ಸಹಾ ಬೇಕಾಗಿದ್ದಾರೆ. ಅವರಿಗೆ ರೂ. 10ರಂತೆ ಮಾಸಿಕ ವೇತನಕೊಡಲಾಗುವುದು.

ಅರ್ಜಿಗಳನ್ನು ಇದೇ ತಾ. 18-8-56ರೊಳಗೆ ಕೆಳಗಿನ ವಿಳಾಸದಾರರಿಗೆ ಸಲ್ಲಿಸತಕ್ಕದ್ದು.

ಎಕೆಡೆಮಿ ಒಫ್ ಜನರಲ್ ಎಜ್ಯುಕೇಶನ್, ಮಣಿಪಾಲ. ಡಾ। ಟಿ. ಎಮ್. ಎ. ಪೈ, ರಿಜಿಸ್ಟ್ರಾರ್.

ಸ್ಥಾಪನೆ: 1935.
ಸರ್ವ ವಿಧದ ಇಲೆಕ್ಟ್ರಿಕ್ ಸಾಮಗ್ರಿಗಳಿಗೂ, ಇಲೆಕ್ಟ್ರಿಕ್ ಮೋಟರುಗಳಿಗೂ ನೀರಿನ ಪಂಪು ಸೆಟ್ಟುಗಳಿಗೂ ನಾಜೂಕಾದ ಫಿಟ್ಟಿಂಗ್ ಕೆಲಸಗಳಿಗೂ ಧ್ವನಿವಾಹಕ (ಲೌಡ್ ಸ್ಪೀಕರ್) ಯಂತ್ರಕ್ಕೂ ನಮ್ಮನ್ನು ವಿಚಾರಿಸಿರಿ.

ಉಡುಪಿ ಇಲೆಕ್ಟ್ರಿಕ್ ಸ್ಟೋರ್ಸ್

ಚರ್ಚ್ ರೋಡ್, ಉಡುಪಿ.

ಮಠದ ಸಕಲ ಬಗೆಯ ಆಕರ್ಷಕ ಸಾಮಗ್ರಿಗಳಿಗೆ

ಉಡುಪಿ ಭಾರತ್ ಉಡ್ ಇಂಡಸ್ಟ್ರೀಸ್

ಚರ್ಚ್ ರೋಡ್, ಉಡುಪಿ.
ಇವರನ್ನು ಸಂದರ್ಶಿಸಿರಿ, ಇಲ್ಲವೇ ಪತ್ರವ್ಯವಹಾರ ನಡೆಸಿರಿ.

ಶುಚಿ-ರುಚಿ ಇದ್ದಲ್ಲಿ ಸುಖವಿದೆ.

ನೀವು ಊಟದಲ್ಲಿ, ಉಪಾಹಾರದಲ್ಲಿ ಸುಖವನ್ನು ಬಯಸುವಿರಲ್ಲವೆ?
ಹಾಗಿದ್ದರೆ ಸಂದರ್ಶಿಸಲು ಮರೆಯದಿರಿ.

ಸುಖನಿವಾಸ

(ಬೋರ್ಡಿಂಗ್ ಮತ್ತು ಲೋಜಿಂಗ್)
ತಾಲೂಕು ಕಚೇರಿ ಬಳಿ, ಉಡುಪಿ.
ಉಳಕೊಳ್ಳಲು ಸುವ್ಯವಸ್ಥಿತ ಕೊಟಡಿಗಳಿವೆ.
ಮ್ಯಾನೇಜರ್— ಎಚ್. ವೆಂಕಟೇಶ ನಾಯಕ್.

ನಿಮ್ಮ ಮನರಂಜನೆಗೆ
ಉತ್ತಮ ಚಿತ್ರಗಳ ಪ್ರದರ್ಶನ!
ವ್ಯಾಪಾರ ಅಭಿವೃದ್ಧಿಗೆ ಸ್ಲೈಡ್ ಮತ್ತು
ಪತ್ರಿಕಾ ಜಾಹೀರಾತಿನ ನಿದರ್ಶನ!!

❖ "ಪ್ರಕಾಶ" ವಾರಪತ್ರಿಕೆಯ ಮೂಲಕ ವರ್ತಮಾನ ಪ್ರಸಾರ, ಪ್ರಚಲಿತ ವಿಚಾರಗಳ ಮೇಲೆ ಕ್ಷ-ಕಿರಣ—

❖ ಮೋಟಾರು, ರೇಡಿಯೋ ಬೆಟ್ರಿಗಳನ್ನು ಅತ್ಯುತ್ತಮವಾಗಿ ಚಾರ್ಜ್ ಮಾಡಿಕೊಡುವುದು—

❖ ಸಭೆ, ಸತ್ಕಾರ ಕೂಟದಲ್ಲಿ ಉಪಯೋಗವಾಗುವ ಧ್ವನಿವರ್ಧಕ ಯಂತ್ರವನ್ನು ಒದಗಿಸುವುದು—

❖ ಮದುವೆ, ಮುಂಜಿಗಳಿಗೆಲು ಯೋಗ್ಯ ಸನ್ನಾಹ—

ಇವೆಲ್ಲವುಗಳ ವ್ಯವಸ್ಥೆ ಎಲ್ಲಿ?

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್,
ಉಡುಪಿ—ಇಲ್ಲಿ!

SRI RAMAKRISHNA THEATRE LIMITED,
UDIPI.

BHUVANENDRA PRODUCTS PRIVATE LTD.
KATAPADI, S. K.

Regd.

Head Office & Factory: Katapadi, S. Kanara

Depot: UDIPI, S. K. 2, Maharata Galli, Hubli.

Trade Mark

ಎಲ್ಲಾ ನಮ್ಮ ಗ್ರಾಹಕರಿಗೂ, ಹಿತಚಿಂತಕರಿಗೂ
ಸ್ವಾತಂತ್ರ್ಯ ದಿನಾಚರಣೆಯ ಶುಭಾಶಯಗಳು.

"ಭುವನೇಂದ್ರ"
ಬ್ರಾಹ್ಮೀ ತೈಲ (ಸುಗಂಧಯುಕ್ತ)

ಕಣ್ಣಿಗೂ ಮೆದುಳಿಗೂ ತಂಪು ಬುದ್ಧಿಶಕ್ತಿಯನ್ನೂ, ಜ್ಞಾಪಕ ಶಕ್ತಿಯನ್ನೂ ಅಭಿವೃದ್ಧಿಗೊಳಿಸುವುದು. ಕೂದಲು ನುಣುಪಾಗಿ, ಹೊಳಪಾಗಿ ಬೆಳೆಯುವಂತೆ ಸಹಾಯಮಾಡಿ ಸೌಂದರ್ಯವನ್ನು ಹೆಚ್ಚಿಸುವುದು. ಹಿತವಾದ ಮಿತವಾದ ಪರಿಮಳದಿಂದ ನಿತ್ಯ ಉಪಯೋಗಕ್ಕೆ ಅನುಕೂಲ.

ಭುವನೇಂದ್ರ ಪ್ರೊಡಕ್ಟ್ಸ್ ಪ್ರೈವೇಟ್ ಲಿ.,
ಕಟಪಾಡಿ, ದ. ಕನ್ನಡ.
ಡಿಪೋ:— (1) ಉಡುಪಿ. 2. ಮರಾಠಗಲ್ಲಿ, ಹುಬ್ಬಳ್ಳಿ.

IN AND
OUT OF SEASON
YOU CAN
GET THE WIDEST
RANGE OF SELECTIONS
AT
CHANDARANA BROTHERS
MANGALORE.

Regd. No. M. 3618

LICENCE NO. 31
Licensed to Post without Prepayment

25
ವರ್ಷದ
ಬೇಂಕಿನ ಬೆಳವಣಿಗೆ

1931 — 1956



ವಿಜಯಾ ಬೇಂಕಿನ ಪ್ರಧಾನ [illegible] ಮಂಗಳೂರು—3.

ನಮ್ಮ ಬೇಂಕಿನ ಜೀವನ ಮತ್ತು ಪ್ರಗತಿಯಲ್ಲಿ ಒಂದು ಶತಮಾನದ ಕಾಲಂಶವನ್ನು ಈ ವರ್ಷವೇ ನಾವು ದಾಟಲಿರುವೆವು. ಇಷ್ಟರಲ್ಲೇ ನಾವು ಹೆಚ್ಚಿನ ಬೆಂಬಲ ಮತ್ತು ಜನಾದರವನ್ನು ಗಳಿಸಿರುವೆವೆಂದು ನಿಮಗೆ ತಿಳಿಸಲು ಸಂತೋಷಪಡುತ್ತೇವೆ. ಈ ಸುಸಂದರ್ಭದಲ್ಲಿ ಬೇಂಕಿನ "ರಜತೋತ್ಸವ" ಸಮಾರಂಭವನ್ನು ಆಚರಿಸಲಿದ್ದೇವೆಂದು ನಮ್ಮೆಲ್ಲಾ ಹಿತಚಿಂತಕರ ನೆನಪಿಗೆ ತರುವುದು ನಮ್ಮ ಕರ್ತವ್ಯ.

ವಿನಯಶೀಲ ಶಿಬಂದಿ — ಕ್ಷಿಪ್ರ ಸೇವೆ — ಠೇವಣಾತಿಗಳಿಗೆ ಉತ್ತಮ ಬಡ್ಡಿ — ವಿವಿಧ ಉಳಿತಾಯ ಯೋಜನೆಗಳು — ಸಾಲಗಳಿಗೆ ಸುಲಭ ಶರ್ತಗಳು — ಸೇಫ್ ಡಿಪೊಸಿಟು ವಾಲ್ಟು ಸೌಕರ್ಯಗಳು.

ದಿ ವಿಜಯ ಬೇಂಕ್, ಲಿಮಿಟೆಡ್.

ಜುಮ್ಲಾ ವಹಿವಾಟು ಮೊಬಲಗು

1954	1955	1956—ಜುಲೈ
ರೂ. 65,00,000	ರೂ. 78,00,000	ರೂ. 88,00,000

ಕೆ. ಸುಂದರರಾಮ ಶೆಟ್ಟಿ, ಬಿ. ಎ, ಬಿ. ಎಲ್,
(ಡೈರೆಕ್ಟರರ ಮಂಡಳಿಯ ಅಧ್ಯಕ್ಷ)

THE VIJAYA BANK, LTD.

Edited, Printed, & Published by K. H. Shetty at the Navayuga Press, Udipi, S. India.

REGD. NO. M. 3618

LICENCE NO. 31
Licensed to Post without Prepayment

ನವಯುಗ

ಸಂಪುಟ ೩೫
VOL. 35

ಉಡುಪಿ, 23—8—1956

ಸಂಚಿಕೆ ೫೧
NO. 51

"ದ್ರಾವಿಡ ಪ್ರಾಣಾಯಾಮ"

ಕೆಲವು ದಿನಗಳ ಹಿಂದೆ ಪಾರ್ಲಿಮೆಂಟಿನಲ್ಲಿ ಪ್ರಶ್ನೋತ್ತರ ನಡೆಯುತ್ತಿದ್ದಾಗ ಪ್ರಧಾನಿ ನೆಹರುಗಳು ಲಕ್ಷಾಂತರ ರೂಪಾಯಿಯಷ್ಟು ವೆಚ್ಚವು ಪ್ರತಿಸಿತ್ಯವೂ ತಗಲುವ ಯೋಜನೆಗಳ ಕಾರ್ಯಾಚರಣೆಯನ್ನು ಹತ್ತು-ಹದಿನೈದು ಸಾವಿರ ರೂಪಾಯಿಗಳ ವೆಚ್ಚವನ್ನೊಳಗೊಳ್ಳುವ ಸಣ್ಣ ವಿಷಯವೊಂದರ ಬಗ್ಗೆ ವಿಶೇಷ ಪರವಾನಿಗೆಯನ್ನು ಪಡೆಯಲಿಕ್ಕಾಗಲೀ ಅಷ್ಟು ವೆಚ್ಚ ಅಗತ್ಯವೋ ಅನಗತ್ಯವೋ ಎಂದು ಮೇಲಿನವರಿಂದ ವಿವರಣೆಯನ್ನು ಪಡೆಯಲಿಕ್ಕಾಗಿಯಾಗಲೀ ಅತಿಸಿ ಇಡೀ ಕೆಲಸವನ್ನೆ ಈ ಸಣ್ಣ ವಿಷಯಕ್ಕೋಸ್ಕರ ನಿಲ್ಲಿಸಿ ಬಿಡುವುದು ಇಷ್ಟವಾದುದಕ್ಕ ಎಂಬ ಹಾಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು

ಇದೀಗ ಪಾರ್ಲಿಮೆಂಟಿನ ಮುಂದೆ ಮಂಡಿಸಲಾಗಿರುವ ಡಾ. ಆ್ಯಪ್ಲೆಬಿ ಎಂಬ ಆಡಳಿತ ತಜ್ಞರ ವರದಿಯಾದರೂ ಇದೇ ಮಾತನ್ನು ಒತ್ತಿ ಹೇಳುತ್ತದೆ. ಕೋಟ್ಯಾಂತರ ರೂಪಾಯಿಗಳ ವೆಚ್ಚವಾಗುವ ಯೋಜನೆಗಳ ಹಿನ್ನೆಲೆಯಲ್ಲಿ ಹತ್ತು-ಹದಿನೈದು ಸಾವಿರ ರೂಪಾಯಿಗಳು ದೊಡ್ಡ ಮೊತ್ತವಾಗುವುದಿಲ್ಲ, ಈ ಹದಿನೈದು ಸಾವಿರ ರೂಪಾಯಿಯ ಉಳಿತಾಯಕ್ಕಾಗಿ ಯೋಜನೆಯನ್ನು ತಡೆದು ಹಿಡಿಯುವುದರಿಂದ ಕೆಲವು ಲಕ್ಷ ರೂಪಾಯಿಗಳ ಲಾಭ ನಾಳೆ ಆಗುವುದು ತಪ್ಪಬಹುದು, ಪ್ರಗತಿಯ ವೇಗವು ಕಡಿಮೆಯಾಗಬಹುದು

ಮೇಲಿನವರ ಒಪ್ಪಿಗೆ ಅನಗತ್ಯವೆಂದಾಗಲೀ ರೂಪಾಯಿಗಳ ಅಪವ್ಯಯವನ್ನು ತಡೆಗಟ್ಟಬಾರದೆಂದಾಗಲೀ ಇದರ ಅಭಿಪ್ರಾಯವಲ್ಲ ಆದರೆ ಡಾ ಆ್ಯಪ್ಲೆಬಿಯವರು ಹೇಳಿದಂತೆ "ಸಂಕುಚಿತ ವಿಚಾರ"ವನ್ನು ಇಂತಹ ವಿಷಯಗಳಲ್ಲಿ ಇಟ್ಟುಕೊಳ್ಳುವುದು ಅಪೇಕ್ಷಣೀಯವಲ್ಲ ಪ್ರಗತಿಯ ಮೈಲುಗಲ್ಲುಗಳಂತಿರುವ ಅನೇಕ ಅಭಿವೃದ್ಧಿ ಪ್ರಯತ್ನಗಳು ಯಶಸ್ಸು ಪಡೆಯಬೇಕಾದರೆ, ಅವುಗಳ ಕಾರ್ಯಾಚರಣೆಯಲ್ಲಿ ಆದಷ್ಟು ಹೆಚ್ಚು ಸ್ವಾತಂತ್ರ್ಯವನ್ನು ಆಯಾ ಸ್ಥಳದ ಕಾರ್ಯಕರ್ತರಿಗೆ ವಹಿಸಿಕೊಡಬೇಕು. ಅಲ್ಲಲ್ಲಿಯ ವಿದ್ಯಮಾನಗಳಿಗೆ, ಆಯಾ ಪ್ರಸಂಗಕ್ಕೆ, ಹೊಂದಿಕೊಂಡು ಕೆಲಸವನ್ನು ನಡೆಸುವ ಸ್ವಾತಂತ್ರ್ಯ ಕೆಳಗಿನ ಅಧಿಕಾರಿ ವರ್ಗಕ್ಕೆ ಇರಬೇಕು.

ಭಾರತದಲ್ಲಿ ಆದರ್ಶವಾದದ ಕೊರತೆಯಾಗಲೀ ಭವಿಷ್ಯತ್ತಿನ ಭವ್ಯ ಚಿತ್ರವನ್ನು ಕಾಣುವ ದೃಷ್ಟಿಯ ಅಭಾವವಾಗಲೀ ಇಲ್ಲ—ಆದರೆ, ಆಡಳಿತ ವಿಧಾನದಲ್ಲಿರುವ ದ್ರಾವಿಡ ಪ್ರಾಣಾಯಾಮ ಮಾತ್ರ ಬಹಳ ಹೆಚ್ಚಾಯಿತು ಎಂದಿದ್ದಾರೆ ಆ್ಯಪ್ಲೆಬಿ ಏನಾಗಬೇಕೆಂದು ನಿರ್ಧಾರವಾಗಿದೆಯೋ ಆ ಕಾರ್ಯವಾಗುವುದಕ್ಕೆ ಸುವ್ಯವಸ್ಥಿತವಾದ ಮತ್ತು ಕ್ರಮ ನಿಯಮಗಳ ಸೋಗಿನಲ್ಲಿರುವ ಆತಂಕಗಳು ಭಾರತದಲ್ಲಿರುವಷ್ಟು ಬೇರೆ ಎಲ್ಲಿಯೂ ಇದ್ದಂತಿಲ್ಲವೆಂದು ಈ ತಜ್ಞರ ಅಭಿಪ್ರಾಯ. ಇದರಲ್ಲಿ ಅತಿಶಯೋಕ್ತಿ ಏನೇನೂ ಇಲ್ಲ ಎನ್ನಬಹುದು.

ಹಣವನ್ನು ಕಲಸವೊಂದಕ್ಕೆ ಸರಕಾರ ಒಮ್ಮೆ ಮಂಜೂರು ಮಾಡಿಯಾಗಿದೆ; ಆ ಕೆಲಸದ ಸಾಮಾನ್ಯ ತತ್ತ್ವ ಮತ್ತು ಕಾರ್ಯ ವಿಭಾಗದ ಬಗ್ಗೆ ಸಹ ಒಮ್ಮೆ ತೀರ್ಮಾನವನ್ನು ಸ್ವೀಕರಿಸಿಯಾಗಿದೆ. ಹಾಗಿದ್ದರೂ ಪುನಃ ಇದೇ ಕೆಲಸದ ವಿಮರ್ಶೆಯನ್ನು ದೂರದಲ್ಲಿ ಇದ್ದುಕೊಂಡೇ ಬೇಡವಾದ ಹಲವಾರು ಮನುಷ್ಯರು ಮರಳಿ ಮರಳಿ ಮಾಡುತ್ತಿರುತ್ತಾರೆ, ಇದನ್ನೆ ಮೇಲ್ವಿಚಾರಣೆ ಎನ್ನಲಾಗುತ್ತದೆ! ಅವರಲ್ಲಿ ಯಾರಿಗೂ ವಾಸ್ತವವಾದ ಜ್ಞಾನವಿರುವುದಿಲ್ಲ ಎಂಬುದು ಕಠೋರವಾದ ಸತ್ಯ ಇಂತಹ ಆಡಳಿತ ವಿಧಾನ ತೀರ ನಿಷ್ಪ್ರಯೋಜಕ ಎಂದು ತಜ್ಞರ ವರದಿಯು ಸ್ಪಷ್ಟಪಡಿಸುತ್ತದೆ.

ಅನಾವಶ್ಯಕವಾದ ಮೇಲ್ವಿಚಾರಣೆಯ ಕ್ರಮಗಳಿಂದ ಮತ್ತು ವಾಸ್ತವಿಕ ಜ್ಞಾನವಿಲ್ಲದವರಿಂದಲೂ ಅಪ್ಪಣೆಯನ್ನು ಮುಂದಾಗಿ ಪಡೆದುಕೊಳ್ಳಬೇಕೆಂಬ ನಿಯಮದಿಂದ ಕೆಲಸ ಒಳ್ಳೆಯದಾಗಲಿ, ಕೆಟ್ಟದಾಗಲಿ ಅದಕ್ಕೆ ಯಾರಾದರೊಬ್ಬರನ್ನು ಜವಾಬ್ದಾರರನ್ನಾಗಿ ಮಾಡಲು ಸಾಧ್ಯವಾಗುತ್ತಿಲ್ಲ ಎಲ್ಲರೂ ಹೊಣೆಯನ್ನು ಇನ್ನೊಬ್ಬರ ಮೇಲೆಯೇ ಹಾಕುತ್ತಾರೆ ಕಾರಕೂನನು ಮೇಲಿನವರ ಅಪ್ಪಣೆ ಹಾಗಿದೆ ಎನ್ನುತ್ತಾನೆ, ಮೇಲಿನ ಅಧಿಕಾರಿಯು ಕಾರಕೂನನು ಹೀಗೆ ಬರೆದು ಕಳಿಸಿದ ಎನ್ನುತ್ತಾನೆ! ನಿಗದಿಗೊಳಿಸಲಾದ ಕೆಲಸ ಮಾತ್ರ ಒಂದು ಹೆಜ್ಜೆಯನ್ನೂ ಪ್ರಗತಿಪಥದಲ್ಲಿ ಇಟ್ಟಿರುವುದಿಲ್ಲ!

ಆಡಳಿತ ವಿಧಾನದಲ್ಲಿರುವ ಇನ್ನೊಂದು ದೊಡ್ಡ ಕೊರತೆಯು ಈಗಿನ ಅವಶ್ಯಕತೆಗಳಿಗೆ ತಕ್ಕಂತೆ ಅಧಿಕಾರಿ ವರ್ಗದ ವಿತರಣೆ ಇಲ್ಲದಿರುವುದಾಗಿದೆ ಒಂದೆಡೆ ಸಣ್ಣ ಕಲಸಕ್ಕಾಗಿ ದೊಡ್ಡ ತಂಡವಿದ್ದರೆ, ಇನ್ನೊಂದೆಡೆ ದೊಡ್ಡ ಕೆಲಸಕ್ಕೆ ಸಣ್ಣ ತಂಡವೊಂದು ನೇಮಕವಾಗಿರುತ್ತದೆ. ಒಬ್ಬನೇ ಅಧಿಕಾರಿಗೆ ಹತ್ತೈವತ್ತು ಕೆಲಸಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳಬೇಕೆಂದು ಹೇಳಲಾಗುತ್ತದೆ. ನಮ್ಮ ಜಿಲ್ಲಾ ಕಲೆಕ್ಟರರ ಈಗಿನ ಜವಾಬ್ದಾರಿಯನ್ನು ನೋಡಿದರೆ ಇದು ವೇದ್ಯವಾಗುತ್ತದೆ! ಹೀಗೆ ಕೆಲವೇ ಅಧಿಕಾರಿಗಳನ್ನು ಹಗಲಿರುಳು ಕೆಲಸ ಭಾರದಿಂದ ನಾವು ಎಷ್ಟರ ವರೆಗೆ ಸತಾಯಿಸುತ್ತಾ ಹೋಗಬಹುದು? ಈ ಅಧಿಕಾರಿಗಳಾದರೂ ಯಾವ ಕೆಲಸವನ್ನು ಸಂಪೂರ್ಣ ಶ್ರದ್ಧೆ ಮತ್ತು ಅನುಭವದ ಬಲದಿಂದ ಮಾಡಬಲ್ಲರು?

ವ್ಯಕ್ತಿಯನ್ನು ಗೌರವಿಸುವ ಅದವಾ ಆತನ ಕಾರ್ಯ ದಕ್ಷತೆಗಾಗಿ ಮೆಚ್ಚಿಕೆ ವ್ಯಕ್ತಪಡಿಸುವ ಕ್ರಮಕ್ಕೂ ಸರಕಾರದ ಆಡಳಿತ ವಿಧಾನಕ್ಕೂ ಇಂದು ಸೀಗೆ ಮತ್ತು ಎಣ್ಣೆಯ ಸಂಬಂಧ. ಹೀಗಿದ್ದಲ್ಲಿ ಅಧಿಕಾರಿಗಳಾದರೂ ಏಕೆ ಮನಃಪೂರ್ವಕ ಕೆಲಸ ಮಾಡಬೇಕು? ಅವರು ಮೇಲಿನವರ ಮುಖವನ್ನೆ ನೋಡುತ್ತಿರಬೇಕಾದಷ್ಟು ಸಮಯದ ವರೆಗೆ ಜವಾಬ್ದಾರಿಗೆ ಅವರು ತಗಲುಕೊಡುವುದು ಸಾಧ್ಯವಿಲ್ಲ, ತಾನೇ ಜವಾಬ್ದಾರನಾಗುವ ವರೆಗೆ ಯಾವ ಮನುಷ್ಯನಿಂದಲೂ ಸಾಹಸ ಪೂರ್ಣ ನಿರ್ಣಯವಾಗಲೀ ಕಾರ್ಯವಾಗಲೀ ನಡೆಯಲಾರದು ಯೋಗ್ಯತೆಗೆ ತಕ್ಕ ಸಂಬಳ ಸಿಗದೆ ಹೋದಾಗಲೂ ವ್ಯಕ್ತಿಯು ತನ್ನ ಬುದ್ಧಿವಂತಿಕೆಯನ್ನು ಉಪಯೋಗಿಸುವನೆಂದು, ಅಥವಾ ಉಪಯೋಗಿಸಬೇಕೆಂದು ನಂಬುವುದು ಇಂದಿನ ಭೌತಿಕ ಜಗತ್ತಿನಲ್ಲಿ ಹಾಸ್ಯಾಸ್ಪದ ಕೆಲಸಕ್ಕೆ ತಕ್ಕ ಪ್ರತಿಫಲವು ಸಂಬಳದ ರೂಪದಲ್ಲಿ, ಮೆಚ್ಚಿಕೆಯ ರೂಪದಲ್ಲಿ ಭಡ್ತಿಯ ರೂಪದಲ್ಲಿ ಸಿಗಬೇಕು. ಒಂದು ಖಾತೆಯಲ್ಲಿ ಆಯುಷ್ಯವನ್ನು ತೇದ ಬಳಿಕ ಭಡ್ತಿಯಂತಹ ವಿಷಯಗಳಲ್ಲಿ ಅಪ್ರಮುಖ್ಯತೆಯನ್ನು ಪಡೆಯಬಾರದು.

ಆಡಳಿತವು ಸುಗಮವಾಗುವುದಕ್ಕೆ, ಸುಖಕರವಾಗುವುದಕ್ಕೆ ಮತ್ತು ಪ್ರಗತಿಯು ಶೀಘ್ರತರವಾಗಿ ಕೈಗೂಡುವುದಕ್ಕೆ ಈ ಮೂಲಭೂತ ವಿಷಯಗಳನ್ನು ಮರೆಯಲಾಗದು. ಸರಕಾರದಲ್ಲಿ ಒಳ್ಳೆಯ ಅಧಿಕಾರಿಗಳುಬೇಕು; ನಿಜ. ಆ ಒಳ್ಳೆಯ ಅಧಿಕಾರಿಗಳಿಂದ ಒಳ್ಳೆಯ ಕೆಲಸಗಳನ್ನು ಮಾಡಿಸುವಷ್ಟು ಚಾತುರ್ಯವೂ ಸರಕಾರಕ್ಕಿರಬೇಕು. ದ್ರಾವಿಡ ಪ್ರಾಣಾಯಾಮವು ಎಷ್ಟಕ್ಕೂ ಇಷ್ಟವಾದುದಲ್ಲ

ನಿಮ್ಮ ಬೇಂಕರರನ್ನು ಹೇಗೆ ಆರಿಸುವಿರಿ?

ನಿಮ್ಮ ಬೇಂಕು ಭದ್ರ ಮತ್ತು ಸುರಕ್ಷಿತವಾಗಿರಬೇಕು, ಮಾತ್ರವಲ್ಲ ಅದರ ನೌಕರವರ್ಗವೂ ಕ್ಷಿಪ್ರ ಮತ್ತು ವಿನಯಶೀಲ ಕಾರ್ಯಪ್ರವೃತ್ತಿಯವರಾಗಿರಬೇಕು

ಎಲ್ಲಕ್ಕಿಂತಲೂ, ನಿಮಗೆ ಅವಶ್ಯಕತೆಯಿರುವಾಗ, ಬೇಂಕು ನಿಮ್ಮ ಸಹಾಯಕ್ಕೊದಗಬೇಕು,

ನೀವು ಉಳಿತಾಯ ಮಾಡಲು ಶಕ್ತರಾದಾಗ, ನಿಮ್ಮ ಠೇವಣಾತಿ ಪಡೆಯುವುದು ಮಾತ್ರ ಬೇಂಕಿನ ಕೆಲಸವಲ್ಲ ನಿಮ್ಮ ವ್ಯಾಪಾರ ವ್ಯವಹಾರಗಳಲ್ಲಿ ಬೇಂಕಿನ ಸಹಕಾರವು ಅಗತ್ಯ ಬಿದ್ದಲ್ಲಿ ನಿಮಗೆ ಸಹಾಯ ಮಾಡಲು ಬೇಂಕು ಪ್ರಯತ್ನಿಸಬೇಕು.

ಮೇಲಿನ ತತ್ವಗಳನ್ನು ನಾವು ಕಳೆದ 25 ವರ್ಷಗಳಿಂದ ಯಶಸ್ವಿಯಾಗಿ ಕಾರ್ಯಾಚರಣೆ ಗಳಿಸಿದ್ದೇವೆ.

ದಿ ವಿಜಯ ಬೇಂಕ್ ಲಿಮಿಟೆಡ್.

ಹೆಡ್ ಆಫೀಸು ಮಂಗಳೂರು—3

(ಸ್ಥಾಪನೆ—1931)

ಕೆತ್ತ ಭಂಡವಾಳ ಮತ್ತು ಕ್ಷೇಮನಿಧಿ- ರೂ 11 ಲಕ್ಷಕ್ಕೂ ಮಿಕ್ಕಿದೆ.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 35ನೇ ವರ್ಷವು ಅಂತ್ಯವಾಗಿ ಸಪ್ಟಂಬರದಿಂದ 36ನೇ ವರ್ಷಾರಂಭವಾಗುವುದು ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೂ ಚಂದಾ ಹಣ ಬಾಕಿ ಇರುವ ಮಹನೀಯರೂ ತಮ್ಮ ಚಂದಾ ಹಣವನ್ನು ದಯಮಾಡಿ ಕಳುಹಿಸಿಕೊಟ್ಟು ನಮಗೆ ನೆರವಾಗಬೇಕಾಗಿ ಕೇಳಿಕೊಳ್ಳುತ್ತೇವೆ

ಮೆನೇಜರ್
ನವಯುಗ ಉಡುಪಿ.

ಆದರ್ಶ ಪತ್ರಿಕೋದ್ಯಮಿ—ಟಿಳಕ

ಭಾರತದ ಹಲವೆಡೆ ಈ ಸಲದ ಸ್ವಾತಂತ್ರ್ಯೋತ್ಸವವನ್ನು ಟಿಳಕರ ಸ್ಮಾರಕ ರೂಪದಲ್ಲಿ ಆಚರಿಸಲಾಗಿದೆ. ಟಿಳಕರನ್ನು ಜನಪ್ರಿಯ ಧುರೀಣರನ್ನಾಗಿ ಮಾಡಿದ ಸಂಗತಿಗಳಲ್ಲಿ ಅವರು ಪತ್ರಿಕೋದ್ಯಮಿಯಾಗಿ ಸಲ್ಲಿಸಿದ ಸೇವೆಯೂ ಮಹತ್ವವನ್ನು ಪಡೆಯುತ್ತದೆ.

ಬರೆದವರು: ಶ್ರೀಮತಿ ರತ್ನಾ ಶಾಸ್ತ್ರಿ.

ಭಾರತ ಮಾತೆಯು ಜನ್ಮವಿತ್ತ ಅನೇಕ ಸುಪುತ್ರರಲ್ಲಿ ಲೋಕಮಾನ್ಯ ಬಾಳ ಗಂಗಾಧರ ಟಿಳಕರೂ ಒಬ್ಬರೆಂಬ ಮಾತು ನಿರ್ವಿವಾದವಾದುದೆಂದು— ಬೇರೆ ಹೇಳಬೇಕಾದುದಿಲ್ಲ. ಇವರ ಕೀರ್ತಿಯು ಭಾರತ ದೇಶವನ್ನಷ್ಟೆ ಮೇರೆಯನ್ನಾಗಿರಿಸಿಕೊಳ್ಳದೆ ಪ್ರಪಂಚದ ಮೇರೆಯನ್ನೆಲ್ಲ ವ್ಯಾಪಿಸಿಬಿಟ್ಟಿದೆ. ಕರ್ಮವೀರರೆಂದು, ಖಗೋಲ ಶಾಸ್ತ್ರಜ್ಞರೆಂದು, ಅರ್ಥಶಾಸ್ತ್ರ ಪಾರಂಗತರೆಂದು, ಸಂಸ್ಕೃತ ಪಂಡಿತರೆಂದು, ಪ್ರಸಿದ್ಧ ರಾಜಕಾರಣಿಗಳೆಂದು, ಇತಿಹಾಸ ಸಂಶೋಧಕರೆಂದು ಮತ್ತು ಪ್ರಸಿದ್ಧ ಪತ್ರಕಾರರೆಂದು ಇವರ ಹೆಸರು ಪ್ರಪಂಚದಲ್ಲಿಯೆ ಪ್ರಸಿದ್ಧವಾಗಿರುವದು. ಇವರ ಹೆಸರನ್ನರಿಯದವ ಪಾಮರನೆಂದು ಹೇಳಬಹುದಲ್ಲವೆ ಸ್ವರಾಜ್ಯಕ್ಕಾಗಿ ಹೆಣಗಾಡಿದ ಅನೇಕ ವಿಭೂತಿಗಳಲ್ಲಿ ಇವರು ಅಗ್ರೇಸರರೆಂದು ಹೇಳಬಹುದು. ಇವರು ಸ್ವರಾಜ್ಯವೆಂದರೆ ದ್ರೋಹವಾಗಿ ಎಣಿಸಲ್ಪಡುವ ಸಮಯದಲ್ಲಿ—ಸ್ವರಾಜ್ಯವೇ ನನ್ನ ಜನ್ಮಸಿದ್ಧವಾದ ಹಕ್ಕೆಂದು ಪ್ರಪಂಚಕ್ಕೆ ಸಾರಿ ಹೇಳಿದರು. ಇವರ ಜನನ ಮರಣಗಳನ್ನು ಬರೆಯುತ್ತ ಹೋಗುವಷ್ಟು ಈಗ-ಪರಿಸ್ಥಿತಿ ಉಳಿದಿಲ್ಲ! ಅದು ಎಲ್ಲರಿಗೂ ಗೊತ್ತಾದ ಸಂಗತಿಯಾಗಿರುವದು. ಅವರುಹೆಚ್ಚಾಗಿ—ಪ್ರಸಿದ್ಧಿಯನ್ನು ಪಡೆದುದು ಈ ಪತ್ರಿಕಾವ್ಯವಸಾಯದಿಂದವೆಂದೇ ಹೇಳಬಹುದು. ಅವರು ಪತ್ರಕಾರರೆಂದು ಯಾವ ಯಾವ ಸಂದರ್ಭಗಳಲ್ಲಿ ಕೆಲಸವನ್ನು ಮಾಡಿದರೆಂಬುದನ್ನು ಅವಲೋಕಿಸುವದು ಅವಶ್ಯವಾದ ಸಂಗತಿಯೆಂದು ಬೇರೆ ಹೇಳಬೇಕಾಗಿಲ್ಲ.

ಕೊಲ್ಹಾಪುರ ಪ್ರಕರಣ

ಲೋಕಮಾನ್ಯರು ಕಾಲೇಜು ಕಲಿಯುತ್ತಿರುವಾಗಲೆ ತಮ್ಮ ಆಯುಷ್ಯದ ಧ್ಯೇಯವನ್ನು ನಿರ್ಧರಿಸಿಕೊಂಡಿದ್ದರು. ಶಿಕ್ಷಕ ವೃತ್ತಿಯನ್ನು ಕೈಕೊಂಡು ಜನರಲ್ಲಿಯ ಅಜ್ಞಾನಾಂಧಕಾರವನ್ನು ಕಳೆಯುವದನ್ನು ಅವರು ನಿರ್ಧರಿಸಿದರು. ಅದರಂತೆ ೧೮೮೦ ರಲ್ಲಿ ನ್ಯೂ ಇಂಗ್ಲೀಷ ಸ್ಕೂಲ ಇದರ ಸ್ಥಾಪನೆಮಾಡಿದರು. ಆದರೆ ಇದರಿಂದ ಟಿಳಕರಿಗೆ ಸಮಾಧಾನವಾಗಲಿಲ್ಲ ಅಜ್ಞಾನಾಂಧಕಾರವನ್ನು ಕಳೆಯುವದರ ಜೊತೆಯಲ್ಲಿಯೆ ಭಾರತೀಯರ ರಾಜಕೀಯ ಅಂಧಕಾರವನ್ನೂ ಕಳೆಯುವದು ಮಹತ್ವವಾದ ಸಂಗತಿಯೆಂದು ಅವರಿಗೆ ಅನಿಸಿತು. ಇದರಿಂದ ಅವರು ಕ್ರಿ. ಶ. ೧೮೮೧ರಲ್ಲಿ ಕೇಸರಿ(ಮರಾಠಿ) ಮರಾಠಾ (ಇಂಗ್ಲೀಷ್) ಪತ್ರಿಕೆಗಳನ್ನು ಹೊರಡಿಸುವುದಕ್ಕೆ ಆರಂಭಿಸಿದರು.

ಟಿಳಕರು ೧೫ನೇ ಅಕ್ಟೋಬರ ೧೮೮೧ರ ಕೇಸರಿಯಲ್ಲಿ ಈ ರೀತಿಯಾಗಿಪ್ರಸಿದ್ಧಿಸಿದರು— 'ಕೊಲ್ಹಾಪುರ ಛತ್ರಪತಿ ಮಹಾರಾಜರ ಸದ್ಯದ ಪರಿಸ್ಥಿತಿಯನ್ನು ಕಂಡು ಪಾಷಾಣ ಹೃದಯಿಯು ಸಹ ಮರುಗಬಹುದು. ಯಾವುದೇ ಕಾರಣದಿಂದ ಛತ್ರಪತಿಯ ಜೀವಕ್ಕೆ ಅಪಾಯವಾದಲ್ಲಿ ಅವರ ಕಲಂಕವು ಬಾದಶಾಹಿ ರಾಣಿಯ ಮತ್ತು ಅವಳ ಪ್ರತಿನಿಧಿಗಳ ಪಾಲಿಗೆ ಬರದ ಹೊರತು— ಉಳಿಯುವದಿಲ್ಲ.' ಈ ರೀತಿಯಲ್ಲಿ ನೈಜವಾದ ಸಂಗತಿಯನ್ನು ಸಾಧಾರವಾಗಿ ಟಿಳಕರು ಪ್ರಕಟಿಸಿದರು. ಬ್ರಿಟಿಷ ಸತ್ತೆಯ ವಿರುದ್ಧವಾಗಿ ಹೀಗೆ ಬರೆಯುವದು-- ಆಗಿನ ಕಾಲದಲ್ಲಿ ಕಠಿಣವಾದ ಸಂಗತಿಯೆ ಆಗಿದ್ದಿತು. ಆದರೂ ಟಿಳಕರು ಅಂಜದೆ ಜನಪದದ ಸುಖ ದುಃಖಗಳನ್ನು ಪತ್ರಿಯಕೆಳ್ಳಿ ಪ್ರಕಟಿಸುತ್ತ ಸಮಾಜದ ಗಮನಕ್ಕೆ ಅದನ್ನು ತಂದುಕೊಡುವುದಕ್ಕೆ ಆರಂಭಿಸಿದರು. ಇದರಿಂದ ಪತ್ರಿಕಾಕರ್ತರೆಂದು ಅವರು ತೋರಿಸಿದ ಧೈರ್ಯ ಸಾಹಸಗಳು ವರ್ಣಿಸತಕ್ಕಂಥವುಇರುವವು.ಆಗಿನ ಸಮಯದಲ್ಲಿ ಶ್ರೀ. ಬರ್ವೆ ಇವರು ಕೋಲ್ಹಾಪುರದಲ್ಲಿ ದಿವಾಣರಾಗಿದ್ದರು. ಅವರು ಟಿಳಕರ ಮೇಲೆ ಮುಂಬಯಿ ಕೋರ್ಟಿನಲ್ಲಿ ಫಿರ್ಯಾದಿಯನ್ನು ಮಾಡಿದರು. ಆದರೆ ಕಾರಣಾಂತರದಿಂದ ಕೊನೆಗೆ ಟಿಳಕರಿಗೆ ಶ್ರೀ ಬರ್ವೆಯವರ ಕ್ಷಮೆಯನ್ನು ಬೇಡುವ ಪ್ರಸಂಗ ಬಂದಿತು. ಟಿಳಕರು ಬೇಡಿದರು. ಆದರೆ ಬರ್ವೆಯವರು ಕೇಳಲಿಲ್ಲ. ಕೊನೆಗೆ ಟಿಳಕರಿಗೆ ೪ ತಿಂಗಳ ಶಿಕ್ಷೆಯು ವಿಧಿಸಲ್ಪಟ್ಟಿತು. ಅದು ಅವರ ಚರಿತ್ರೆಯಲ್ಲಿ ಮೊದಲನೆಯ ಶಿಕ್ಷೆ ಮತ್ತು ಜೇಲುವಾಸ. ಅದು ೧೦೧ ದಿನಗಳ ಶಿಕ್ಷೆಯೆಂಮ ಅವರ ಆಯುಷ್ಯದಲ್ಲಿ ಪ್ರಸಿದ್ಧವಾಗಿದೆ. ಇಲ್ಲಿಂದಲೆ ಅವರನೈಜವಾದ ಜೀವನ ಆರಂಭವಾಯಿತು.

ಖಂಡ ತುಂಡವಾದ ಲೇಖನಗಳು

ಟಿಳಕರು ಯಾರದೇಭೀತಿ ಮುರವತ್ತುಗಳಿಗೆ ಒಳಗಾಗದೆ ಇದ್ದುದನ್ನು ಇದ್ದಂತೆ ಮತ್ತು ತಮಗೆ ಸರಿಕಂಡಂತೆ ಬರೆಯುತ್ತಿದ್ದರು. ಎರಡನೆಯವರ ಬೊಗಸೆಯಿಂದ ನೀರು ಕುಡಿಯುವ ಕಾರ್ಯವನ್ನು ಟಿಳಕರೆಂದಿಗೂ ತಮ್ಮ ಆಯುಷ್ಯದಲ್ಲಿ ಮಾಡಲಿಲ್ಲ. ಇವರು ಖಂಡತುಂಡವಾದಿಗಳು, ಸ್ವತಂತ್ರ ವೃತ್ತಿಯವರು. ಅದರಂತೆಯೆ ಅವರ ಬರವಣಿಗೆ! ಇವರ ಪ್ರಭಾವವು ಆಗಿನ ಜನತೆಯಮೇಲೆ ಸಾಕಷ್ಟು ಆಯಿತೆಂದು ನಾವು ಹೇಳಬಹುದು. ೧೮೯೩—೯೪ರಲ್ಲಿ ಮುಂಬಯಿಯಲ್ಲಿ ಹಿಂದು—ಮುಸಲ್ಮಾನರ ದಂಗೆಗಳು ಸಾಕಷ್ಟು ಆಗುತ್ತಿದ್ದವು. ಅದರ ಬಗ್ಗೆ—ಟಿಳಕರು ಪತ್ರಿಕಾ ಪ್ರಸಾರದಿಂದ ತಮ್ಮ ಸ್ಪಷ್ಟವಾದ ಅಭಿಪ್ರಾಯಗಳನ್ನು ಪ್ರಕಟಗೊಳಿಸಿದರು. ೧೮೯೪ರಲ್ಲಿ ಕೇಸರಿ ಪತ್ರಿಕೆಗಳಲ್ಲಿ ಅನೇಕ ಅಗ್ರ ಲೇಖನಗಳನ್ನು ಮುಂಬಯಿಯ ದಂಗೆಯ ವಿಷಯದಲ್ಲಿ—ಟಿಳಕರು ಬರೆದರು. ಇದರಿಂದ—ಮುಂಬಯಿಯ ಗುಜರಾಥಿ ಜನರ ಪ್ರೇಮವನ್ನು ಸಂಪಾದಿಸುವದರ ಜೊತೆಯಲ್ಲಿ ಬ್ರಿಟಿಷರ ವಿರೋಧವನ್ನೂ ಟಿಳಕರಿಗೆ ಸಂಪಾದಿಸಿಕೊಳ್ಳಬೇಕಾಯಿತು.

'ಕ್ರಾಫರ್ಡ' ಪ್ರಕರಣ

ಕ್ರಾಫರ್ಡ ಮಾಮಲೇದಾರ ಪ್ರಕರಣವೆಂದು ಟಿಳಕರ ಆಯುಷ್ಯದಲ್ಲಿ ಇದೊಂದು ಪ್ರಕರಣವು ಪ್ರಸಿದ್ಧವಿದೆ. ಈತನು ಲಂಚಗುಳಿಯೆಂದು ಆಗಿನ ಸಮಯದಲ್ಲಿ ಹೆಸರಾಗಿದ್ದನು. ಕುಡಿಯುವದರಲ್ಲಿ—ಕುಣಿಯುವದರಲ್ಲಿ ಈತನು ಅಗ್ರೇಸರ! ಅಷ್ಟೇ ಲಂಚಗುಳಿಗಾಗಿ ಸಹ ಪ್ರಸಿದ್ಧ! ತನ್ನ ಮನೆಯನ್ನು ನೃತ್ಯಶಾಲೆಯನ್ನಾಗಿ ಅವನು ಮಾಡಿದ್ದನು. ಇವನ್ನೆಲ್ಲ ಟಿಳಕರು ಪತ್ರಿಕೆಗಳಲ್ಲಿ ಬರೆದು ಬ್ರಿಟಿಷ ಅಧಿಕಾರಿಗಳ ಕರ್ತವ್ಯಶೂನ್ಯತೆಯನ್ನು ಎತ್ತಿತೋರಿಸಿದರು. ಇದರಿಂದ ಆಗಿನ ಸಮಯದಲ್ಲಿ ಅವನ ಕಾರಭಾರಿಗಳಾದ ಶ್ರೀ ಪೇಣಸೆ ಇವರ ಪರಿಸ್ಥಿತಿಯು ಬಹಳ ಚಿಂತಾಜನಕವಾಗಿದ್ದಿತು. 'ರಾಜಾಕಾಲಸ್ಯ ಕಾರಣಂ' ಎಂಬ ಶಿರೋನಾಮದ ಕೆಳಗೆ ಬರೆದ ಅವರ ಆಗಿನ ಲೇಖನವು ಅವರು ಪ್ರಸಿದ್ಧರಾದ ಪತ್ರಿಕಾಕರ್ತರೆನ್ನುವುದಕ್ಕೆ ಸಾಕ್ಷಿಯಾಗಿರುವದು.

೧೮೯೬ರಲ್ಲಿ ಮುಂಬಯಿಯಲ್ಲಿದೊಡ್ಡ ಬರಬಿದ್ದಿತು. ಇದೇ ಸಮಯದಲ್ಲಿ ಪುಣೆಯಲ್ಲಿ ಪ್ಲೇಗಿನ ಹಾವಳಿ ಆರಂಭವಾಗಿದ್ದಿತು. ಟಿಳಕರು ಅಗ್ಗೆ ಬಹಳ ಶ್ರಮವಹಿಸಿದರು. ಪ್ಲೇಗಿನ ವಿಚಾರಣೆಯೆಂದು ಆಗ್ಗೆ 'ರ್‍ಯಾಂಡ್' ಸಾಹೇಬನನ್ನು ಸರಕಾರದವರು ನಿಯಮಿಸಿದರು. ಆಗಿನ ಸಮಯದಲ್ಲಿ ಈ ರ್‍ಯಾಂಡ್ ಸಾಹೇಬ ಎಲ್ಲೆಡೆಯಲ್ಲಿ ಅಪ್ರಿಯನಾಗಿದ್ದ, ಪುಣೆಯಲ್ಲಿಯೂ ಈತನು ಅನೇಕ ಅನಾಹುತಿಗಳನ್ನು ಮಾಡಿದನು. ಆದ್ದರಿಂದ 'ಗಣೇಶ ಖಿಂಡ'' ಎಂಬಲ್ಲಿ ರ್‍ಯಾಂಡ್ ಸಾಹೇಬನ ಕೊಲೆ ಮಾಡುವುದರಲ್ಲಿ ಬಂದಿತು. ಆಗ ಇಂಗ್ಲೀಷ ಪತ್ರಿಕೆಗಳಲ್ಲಿ 'ಪುಣೆಯಲ್ಲಿ ಬ್ರಾಹ್ಮಣರ ಬಂಡು' ಎಂಬ ಶಿರೋನಾಮದ ಕೆಳಗೆ ಲೇಖನಗಳು ಪ್ರಕಟವಾದವು. ಆಗ ಟಿಳಕರು ಬ್ರಿಟಿಷ್ ಪತ್ರಿಕೆಗಳ ವಿಷಯವಾಗಿ ತಮ್ಮ ಪತ್ರಿಕೆಗಳಲ್ಲಿ ಲೇಖನಗಳ ಸುರಿಮಳೆಯನ್ನು ಸುರಿಸಿದರು. ಟಿಳಕರ ಲೇಖನಗಳ ಮೂಲಕ ಉಳಿದ ಪತ್ರಿಕಾಕರ್ತರು ದಂಗಾದರು. 'ರಾಜ್ಯಮಾಳುವದೆಂದರೆ ಸೇಡು ತೀರಿಸಿಕೊಳ್ಳುವುದಲ್ಲದೆ' ಎಂದು ಮೊದಲಾಗಿ ಸ್ಪಷ್ಟವಾಗಿ ಬರೆದರು. ಬ್ರಿಟಿಷ್ ರಾಜ್ಯಕಾರಣದೊಂದಿಗೆ ಪ್ರಪಂಚದ ರಾಜ್ಯಕಾರಣವನ್ನು ಟಿಳಕರು ತಮ್ಮ ಪತ್ರಿಕೆಗಳಲ್ಲಿ ಬರೆಯುವುದಕ್ಕೆ ಆರಂಭಿಸಿದರು. ಇವರ ಲೇಖನಗಳ ವಿಷಯದಲ್ಲಿ ಇಂಗ್ಲೆಂಡಿನ ಪಾರ್ಲಿಮೆಂಟು ನಡುಗಿತು ಆಗ ಟಿಳಕರ ಮೇಲೆ ಅವರ ಲೇಖನಗಳ ಮೂಲಕ ೧೨೪(ಅ) ಕಲಮಿನ ಅನ್ವಯ ಖಟ್ಲೆ ಹಾಕುವುದರಲ್ಲಿ ಬಂದಿತು. ಟಿಳಕರು ಅದಕ್ಕೂ ವಿರೋಧಿಸಿದರು. ಆದರೆ ಅದರಿಂದಲೂ ಪ್ರಯೋಜನವಾಗದೆ ಅವರಿಗೆ ೬ ವರ್ಷದ ಶಿಕ್ಷೆಯು ವಿಧಿಸಲ್ಪಟ್ಟಿತು. ಪತ್ರಿಕಾಕರ್ತರೆಂದು ಅವರಿಗೆ ಎರಡನೆಯ ಸಾರಿ ಶಿಕ್ಷೆಯನ್ನು ಅನುಭೋಗಿಸಬೇಕಾಯಿತು.

ವಂಗಭಂಗ

ಕ್ರಿ. ಶ. ೧೯೦೫ರಲ್ಲಿ ವಂಗಭಂಗ ಚಳವಳಿಯು ಆರಂಭವಾಯಿತು. ಬ್ರಿಟಿಷ್ ನವರದ ಮೇಲೆ ಬಹಿಷ್ಕಾರವನ್ನು ಹಾಕಲಾಯಿತು. ೧೯೦೭ರಲ್ಲಿ ಬ್ರಿಟಿಷರು ವಿಚಾರ ಮಾಡದೆ ಲಾಲಾಲಜಪತರಾಯ ಇವರಿಗೆ ಹದ್ದುಪಾರಿನಶಿಕ್ಷೆಯನ್ನು ವಿಧಿಸಿದರು. ಟಿಳಕರು ಈ ಸಂದರ್ಭದಲ್ಲಿ ಸುಮ್ಮನೆ ಕುಳಿತುಕೊಳ್ಳಲಿಲ್ಲ. ಮಿಡಿದೆದ್ದರು. ಇದು ಅವರಿಗೆ ಸಹನವಾಗಲಿಲ್ಲ. ಆಗ ಪತ್ರಿಕೆಯಲ್ಲಿ—"ಬ್ರಿಟಿಷ್‌ರ ಶತ್ರುಗಳು ನಾವಲ್ಲ! ಆ ಕೆಂಪು ತೊಗಲಿನ ಅಧಿಕಾರಿವರ್ಗವೆ ಅವರ ಶತ್ರುವಾಗಿರುವದು. ಈ ರೀತಿಯ ರಾಜ್ಯವಾದರೆ ರಶಿಯದ ಪ್ರಜೆಗಳಂತೆಯೇ ಭಾರತೀಯ ಪ್ರಜೆಗಳು ವರ್ತಿಸಬೇಕಾದೀತು" ಎಂಬ ಎಚ್ಚರಿಕೆಯನ್ನು ಬ್ರಿಟಿಷರಿಗೆ ಲೇಖನಗಳ ಮೂಲಕ ಟಿಳಕರು ಕೊಟ್ಟರು. ಈ ರೀತಿಯ ಲೇಖನಗಳನ್ನು ಟಿಳಕರು ಬರೆಯುವದಕ್ಕೆ ಆರಂಭಿಸಿದ್ದರಿಂದ ಬ್ರಿಟಿಷ್ ಸರಕಾರ ವೃತ್ತಪತ್ರಿಕೆಗಳ ಮೇಲೆ ಬಂಧನ, ಉಳಿದ ಅನೇಕ ಸಂಗತಿಗಳ ಮೇಲೆ ಪ್ರತಿಬಂಧನವನ್ನು ಹಾಕಿತು. ಇದರಿಂದ ಟಿಳಕರು ಶಕ್ತಿವಂತರಾದರು. ಧೈರ್ಯದಿಂದ ಹೋರಾಡುವದಕ್ಕಾಗಿ ಮುಂದಾಗಿ ಬಂದರು. ಪೇಪರಿನ ಮೇಲೆ ಬಂಧನ ಹಾಕಿದರೆ—ಅನೇಕ ಉತ್ಸವಗಳಲ್ಲಿ— ಗಣೇಶ, ಶಿವಾಜಿ ಉತ್ಸವಗಳಲ್ಲಿ ವೇದಿಕೆಯ ಮೇಲೆ ನಿಂತ ಮಾತಾಡಿದರು.

(ಮುಂದಿನ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತ ನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತವೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಟಿಳಕರ ಲೇಖನ ಚೂರಿಯ ಅಲಗಿನಂತೆ ಹರಿತ!

ರಾಷ್ಟ್ರದ ಜಾಡ್ಯ ಪರಿಹಾರವೇ ಅವರ ಬರವಣಿಗೆಯ ಧ್ಯೇಯ

ಇದೇ ಸಮಯದಲ್ಲಿ ಮುಂಬಯಿ ಪ್ರಾಂತೀಯ ಸಭೆ ಮುಂಬಯಿಯಲ್ಲಿ ಜರಗಿತು. ಶ್ರೀ ಬಾವೆಡೇಕರ ಇವರು ಅಧ್ಯಕ್ಷರಾಗಿದ್ದರು. ಅವರ ನಿರ್ವೀರ್ಯ ಏವಂ ತೇಜೋಹೀನ ಭಾಷಣದ ಮೇಲೆ ಟಿಳಕರು—ಪತ್ರಿಕೆಯಲ್ಲಿ ಲೇಖನ ಬರೆದು ಟೀಕಿಸಿದರು. ಪತ್ರಕಾರರಲ್ಲಿಯ ಧೈರ್ಯ ಪ್ರಸಂಗಾವಧಾನವನ್ನು ಈ ಸಮಯದಲ್ಲಿ ಟಿಳಕರು ಚೆನ್ನಾಗಿಯೇ ತೋರಿಸಿದರು. ಮೋರ್ಲೆ ಸಾಹೇಬರು ಬ್ರಿಟಿಷರ ಅಧಿಕಾರ ಭಾರತದಲ್ಲಿ ಸ್ಥಿರವಾಗಬೇಕಾದರೆ—ಕಾಯ್ದೆ-ಕಾನೂನುಗಳು ಭಾರತೀಯರ ಮೇಲೆ—ಹೆಚ್ಚು ಉಗ್ರವಾಗಬೇಕೆಂಬುದಾಗಿ ತಮ್ಮ ಅಭಿಪ್ರಾಯವನ್ನು ಸೂಚಿಸಿದರು. ಇದರ ಬಗ್ಗೆ ಟಿಳಕರು ಪತ್ರಿಕೆಯಲ್ಲಿ ಕಟುವಾಗಿ ಹಲವಾರು ಲೇಖನಗಳನ್ನು ಬರೆದರು. ಅಷ್ಟರಿಂದಲೇ ಬ್ರಿಟಿಷರು ಟಿಳಕರ ಮೇಲೆ ಬೆಂಕಿಕಾರುವುದಕ್ಕೆ ಆರಂಭಿಸಿದರು. ಟಿಳಕರು ಇದೇ ಸಮಯದಲ್ಲಿ ಸುರತ್ತಿನ ಸಭೆಯನ್ನು ಮುರಿಯುವದಕ್ಕೆ ಕಾರಣೀಭೂತರಾದ ವಾದಿಷ್ಟರ ಅರ್ಜಿಯನ್ನು ತೆಗೆದುಕೊಳ್ಳದೆ ಬಿಡಲಿಲ್ಲ. ದೊಡ್ಡ ದೊಡ್ಡ ಅಗ್ರಲೇಖನಗಳನ್ನೆ ಆಗಿನ ಸಮಯದಲ್ಲಿ ಅವರು ಬರೆದರು.

ದಿನದಿನಕ್ಕೆ ಸರಕಾರದ ದಬ್ಬಾಳಿಕೆಯು ಹೆಚ್ಚುತ್ತಲೇ ನಡೆದಿದ್ದಿತು. ಬ್ರಿಟಿಷರಿಗಿಂತಲೂ ಸ್ವಜನ ಶತ್ರುಗಳ ವಿಷಯದಲ್ಲಿ ಟಿಳಕರು ಮಳೆಯ ಹನಿಗಳೋಪಾದಿಯಲ್ಲಿ ಲೇಖನಗಳನ್ನು ಬರೆದು ಅವರ ಬಾಯಬಡಾಯಿ ಏವಂ ಕುಕೃತ್ಯಗಳಿಗೆ ಅಡ್ಡಿಮಾಡಿದರು. ಇಂಗ್ಲೀಷ್ ಪತ್ರಿಕೆಗಳಲ್ಲಿ ಬರುವ ರಾಜಕೀಯ ಲೇಖನಗಳಿಗೆ ವಿಮರ್ಶೆಯನ್ನು ಟಿಳಕರು ಬರೆಯುವದಕ್ಕೆ ಆರಂಭಿಸಿದರು. ಪತ್ರಿಕಾ ಕರ್ತರೆಂದು ಟಿಳಕರು ಈ ಸಮಯದಲ್ಲಿಯೆ ಹೆಚ್ಚಾಗಿ ಪ್ರಸಿದ್ಧಿಯನ್ನು ಪಡೆದರು. ಅಲ್ಲದೆ ಅವರ ಕಾಯ್ದೆಜ್ಞಾನದ ಕಲ್ಪನೆಯೂ ಬ್ರಿಟಿಷರಿಗೆ ಬಂದಿತು.

ಶ್ರೀ ಗ್ಲಾರನರ್ ಮುಂಬಯಿ ಪ್ರಾಂತದ ಗವ್ಹರ್ನರರು ಆಗಿದ್ದರು. ಟಿಳಕರನ್ನು ಜೇಲಿನಲ್ಲಿ ಹಾಕುವುದಕ್ಕೆ ಯೋಗ್ಯ ಸಮಯವೆಂದು ಮನಗಂಡು—ಸಂಸ್ಕಾರಿ ಕಾಯ್ದೆ ಪಂಡಿತರಿಗೆ ಇಂಡಿಯನ್ 'ಪೀನಲ ಕೋಡ್'ತಿರುವಿ ಹಾಕುವುದಕ್ಕೆ ಹೇಳಿದರು. ಟಿಳಕರನ್ನು ಕಾರಣವಿಲ್ಲದೆ ಜೇಲಿನಲ್ಲಿ ಹಾಕುವುದೂ ಆಗಿನ ಸಮಯದಲ್ಲಿ ಕಠಿಣವೆ ಆಗಿದ್ದಿತೆಂದು ಹೇಳಬಹುದು. ಯಾಕೆಂದರೆ ಟಿಳಕರು ಅಷ್ಟೊಂದು ರಾಜಕೀಯ ಕೀರ್ತಿಯನ್ನು ಆಗಿನ ಸಮಯದಲ್ಲಿ ಪಡೆದವರಾಗಿದ್ದರು. ಕೊನೆಗೆ ಸರಕಾರ ಟಿಳಕರ ಮೇಲೆ ರಾಜದ್ರೋಹದ ಆರೋಪ ಹೊರಿಸಿ ಖಟ್ಲೆ ಹಾಕಿತು. ಸಾಕ್ಷಿಗಳು ನಡೆದುವು. ಟಿಳಕರು ತಮ್ಮ ಡಿಫೆನ್ಸಿಗಾಗಿ [illegible] ವಾರದ ವರೆಗೆ ಭಾಷಣ ಮಾಡಿದರು. ಪತ್ರಿಕಾಕಾರರೆಂದು ಅವರು ಬರೆದ ಲೇಖನಗಳೆಲ್ಲದರ ಸಂಗ್ರಹವನ್ನು ಮಾಡುವದರಲ್ಲಿ [illegible]ವಿದ್ದಿತು. ತಮ್ಮ ಪತ್ರಿಕೆಯಲ್ಲಿ ಬರೆ[illegible]ದು ನಿಜವಿದೆಯೆಂದು ವಾದ ಹೂಡಿದ[illegible] ಆದರೆ ಅದರಿಂದ ಉಪಯೋಗವಾ[illegible]ಗುವ ಲಕ್ಷಣವೇನೂ ತೋರಲಿಲ್ಲ. ಲೇಖನ ಛಾಪಿಸುವವರ ಹಿಂದೆ ಇದ್ದ ಕೆಟ್ಟ ಹೇತುವನ್ನು ತೋರಿಸಿಕೊಡುವುದಕ್ಕಾಗಿ ಟಿಳಕರು ಸರಕಾರಕ್ಕೆ ಹೇಳಿದರಲ್ಲದೆ ಲೋಕಸತ್ತೆಯ ವಿಷಯದಲ್ಲಿ ವಾದ ವಿವಾದ ವಿಲಾಯತಿಯಲ್ಲಿಯೂ ನಡೆಯುವದು. ಆದೂ ರಾಜದ್ರೋಹವೇನು? ವಿಲಾಯತಿಯಲ್ಲಿಯ ರಾಜದ್ರೋಹ, ಭಾರತದಲ್ಲಿಯ ರಾಜದ್ರೋಹ ಒಂದೇ ಇರುವವು. ಆಂಗ್ಲೋ ಇಂಡಿಯನ್ ಪತ್ರಿಕೆಗಳು ಚಳವಳಿಯವರಿಗೆ ಘಟಕಿಯ ಶಿಕ್ಷೆಯನ್ನು ಕೊಡಲು ಬರೆದಿರುವು. ಇಷ್ಟೊಂದು ಕಠೋರ ಏವಂ ತೀಕ್ಷ್ಣವಾದ ಲೇಖನಗಳು ನನ್ನವಲ್ಲವೆಂದು ಅವರು ಅಂದರು. ಪ್ರೀತಿ—ಅಪ್ರೀತಿ (disaffection) ಈ ಶಬ್ದದ ಮೇಲೆ—ದೊಡ್ಡ ವಾದವೆ ಜರುಗಿತು. ಪತ್ರಿಕಾಕಾರ ಟಿಳಕರು ಈ ಸಮಯದಲ್ಲಿ ತಮ್ಮ ಬುದ್ಧಿಯ ಮಹತಿಯನ್ನು ಸರಕಾರಕ್ಕೆ ತೋರಿಸಿ ಅವರ ಕಣ್ಣುಗಳು ಕುಕ್ಕುವಂತೆ ಮಾಡಿದರು. ಟಿಳಕರ ಮೇಲಿನ ಖಟ್ಲೆ ಅಂದರೆ—ಭಾರತೀಯ ಖಟ್ಲೆಯೆಂದು ಎಲ್ಲರೂ ಆಗಿನ ಸಮಯದಲ್ಲಿ ಭಾವಿಸಿದರು. ಟಿಳಕರಿಗೆ ಪರಿಪರಿಯಿಂದ ಸಹಾಯ ಮಾಡುವುದಕ್ಕೆ ಮುಂದಾಗಿ ಬಂದರು—ಆದರೆ ಕೊನೆಗೆ ಟಿಳಕರು ದ್ವೇಷಿಗಳೆಂದು ನಿಶ್ಚಯಿಸಿ ಅವರ ಲೇಖನಗಳ ಮೂಲಕ ಅವರಿಗೆ ಕಠಿಣತರದ ಶಿಕ್ಷೆಯು ವಿಧಿಸಲ್ಪಟ್ಟಿತು. ಅವರನ್ನು ಮಂಡಾಲೆಗೆ ವ್ಯಯವ್ಯವದರಲ್ಲಿ ಬಂದಿತು.

ಟಿಳಕರ ಬಂಧನದಿಂದ ಮುಂಬಯಿಯಲ್ಲಿ ದಂಗೆಯಾಯಿತು—ಗಿರಣಿಗಳು ಮುಚ್ಚಲ್ಪಟ್ಟವು. ಸರಕಾರದ ಆಗ್ರಹದ ಮೂಲಕ ಕೆಲವೊಂದು ಗಿರಣಿಗಳು ತೆರೆಯಲ್ಪಟ್ಟರೆ ಕಾರ್ಮಿಕರು ಕಲ್ಲೆಸೆದು ಅದನ್ನು ಬಂದು ಮಾಡಿದರು. ಸರಕಾರದ ಅಭಿಮಾನಕ್ಕೆ ಧಕ್ಕೆ ತಗುಲಿತು. ಹಲವಷ್ಟು ಜನರು ಈ ಸಮಯದಲ್ಲಿ ಮರಣ ಹೊಂದಿದರು. ಮಂಡಾಲೆಯಲ್ಲಿಯೇ 'ಗೀತಾ ರಹಸ್ಯ'ವನ್ನು ಟಿಳಕರು ಬರೆದರು.

ಚಿರೋಲ ಪ್ರಕರಣ

ಕ್ರಿ. ಶ. ೧೯೧೪ರಲ್ಲಿ ಟಿಳಕರನ್ನು ಮಂಡಾಲೆಯಿಂದ ಬಿಡುವುದರಲ್ಲಿ ಬಂದಿತು. ಇವರು ಬರುವ ಮುಂಚೆ 'ತಾಯೀ ಮಹಾರಾಜ' ಪ್ರಕರಣದ ನಿಕಾಲೆಯಾಗಿದ್ದಿತು. ಅದರಲ್ಲಿ ಟಿಳಕರಂತೆ ನ್ಯಾಯ ದೊರೆತಿದ್ದಿತು. ಆಗಿನ ಸಮಯದಲ್ಲಿಯೆ ವ್ಹೆಲಂಟಾಯಿನ್ ಚಿರೋಲ ಎಂಬವನು ಇಂಗ್ಲಂಡಿನ ಟಾಯಿಮ್ಸ್ ಪತ್ರಿಕೆಯ ವಾರ್ತಾಕಾರನಾಗಿ ಬಂದಿದ್ದನು. ಅವನು ಕೊಲ್ಹಾಪುರದ ಮಹತ್ವವಾದ ಪತ್ರಗಳನ್ನು, ಪೋಲೀಸರ ಮಹತ್ವದ ರಿಪೋರ್ಟುಗಳನ್ನು, ಸೆಕ್ರೆಟರಿಯೇಟಿನಲ್ಲಿಯ ಮಹತ್ವದ ಗುಪ್ತವಾದ ಕಾಗದ ಪತ್ರಗಳನ್ನು 'ಇಂಗ್ಲಂಡಿನ ಟಾಯಿಮ್ಸ್' ಪತ್ರಿಕೆಯಲ್ಲಿ ಪ್ರಕಟಗೊಳಿಸಿದನು. ಕೊನೆಗೆ ಇದರದೊಂದು ಪುಸ್ತಕ ಮಾಡಿ ಮೋರ್ಲೆ ಸಾಹೇಬರಿಗೆ ಅರ್ಪಿಸಿದನು. ಇದರಲ್ಲಿ ಟಿಳಕರ ವಿಷಯದಲ್ಲಿ ಅನೇಕ ಆರೋಪಸಹಿತ ಟೀಕೆಯನ್ನು ಬರೆದನು. ಟಿಳಕರು ಕ್ರಾಂತಿಪ್ರಚೋದಕರು, ಅಸಂತೋಷದ ಜನಕರು, ಅತ್ಯಾಚಾರ ಪ್ರವರ್ತಕರೆಂದು ಮತ್ತು ಹಿಂಸೆಯ ಸಾಗರವೆಂದು ಬರೆದಿದ್ದನು. ಟಿಳಕರ ವಿರೋಧಕರು ಚಿರೋಲ ಸಾಹೇಬನನ್ನು ಮುಂದೆ ಮಾಡಿ ತಮ್ಮ ಸೇಡು ತೀರಿಸಿಕೊಳ್ಳುವ ಪ್ರಯತ್ನವನ್ನು ಮಾಡಿದರು. ಪರ ಶತ್ರುಗಳಿಗಿಂತ ಟಿಳಕರಿಗೆ ಸ್ವಶತ್ರುಗಳ ಜೊತೆಯಲ್ಲಿ ದೊಡ್ಡ ಪ್ರಮಾಣದಿಂದ ಜಗಳಾಡುವ ಪ್ರಸಂಗಬಂದಿತು.

ಟಿಳಕರು ಚಿರೋಲಿನ ವಿರುದ್ಧವಾಗಿ ಕಾಯಕವನ್ನು ಕೈಕೊಂಡರು. ಚಿರೋಲನ ಮೇಲೆ ಅಬ್ರುಲುಕ್ಸಾನದ ದಾವೆ ಮಾಡಿದರು! ಚಿರೋಲಿನ ಪುಸ್ತಕದಲ್ಲಿಯ ಅನೇಕ ತಪ್ಪು ವಿಧಾನಗಳನ್ನು ಖಂಡಿಸಿದರು! ಇಬ್ಬರು ಪತ್ರಿಕಾಕರ್ತರಲ್ಲಿ ನಡೆದ ಇದೊಂದು ದೊಡ್ಡ ಜಗಳವೆ ಎಂದು ಹೇಳಬಹುದು! ಚಿರೋಲ ಆಗಿನ ಸಮಯದಲ್ಲಿ ಪ್ರಸಿದ್ಧನಾದ ಪತ್ರಿಕಾಕರ್ತನೆಂದು ಹೆಸರಾಗಿದ್ದನು. ಅಂಥವನ ವಿರುದ್ಧ ಟಿಳಕರು ವಿಲಾಯತಿಯಲ್ಲಿ ದಾವೆಯನ್ನು ಮಾಡಿದರು. ಕ್ರಿ. ಶ ೧೯೧೫ರಲ್ಲಿ ಇಂಗ್ಲಂಡದ ಸೊಲೀಸೀಟರ ಡಾವ್ರನರ ಇವರಿಂದ ಟಿಳಕರು ಚಿರೋಲರಿಗೆ ನೋಟೀಸು ಕೊಡಿಸಿದರು. ಅದರಲ್ಲಿ ಅವರು ಮೂರು ವಿಧಾನಗಳನ್ನು ಮಂಡಿಸಿದ್ದರು. ಅವು ಟಿಳಕರ ಪತ್ರಿಕಾವ್ಯವಸಾಯದ ಆಳವಾದ ಜ್ಞಾನದ ದ್ಯೋತಕವಾಗಿರುವವು.

೧) ಬೇಕಬ್ರು ಎಂದು ನಿರ್ದಿಷ್ಟವಾದ ವಿಧಾನಗಳನ್ನು ಹಿಂದಿರುಗಿ ತೆಗೆದುಕೊಳ್ಳಬೇಕು. ಮತ್ತು ನಾವು ಹೇಳಿದಂತೆ ಟಿಳಕರು ಮಾಫಿಯನ್ನು ಬೇಡಬೇಕು ಮತ್ತು ನಾವು ಹೇಳುವ ಪತ್ರಿಕೆಯಲ್ಲಿ ಅದನ್ನು ಛಾಪಿಸಬೇಕು.

೨) ಮಾಫಿ ಬೇಡಿದ ನಂತರ ಪುಸ್ತಕದ ವಿಕ್ರಯ ಆಗಬೇಕು.

೩) ಇಂಡಿಯನ್ ವಾರ ರಿಲೀಫ ಫಂಡಕ್ಕೆ ಸಹಾಯಮಾಡಬೇಕು.

ಈ ನೋಟೀಸಿಗೆ ಚಿರೋಲ ಸಾಹೇಬ ಬೆಲೆಯನ್ನು ಕೊಡಲಿಲ್ಲ. ಹಿಂದುಸ್ಥಾನದಲ್ಲಿಂದ ಮಾಹಿತಿಯನ್ನು ತೆಗೆದುಕೊಳ್ಳುವದಕ್ಕಾಗಿ ಒಂದು ಕಮಿಶನ್ ನಿಯಮಿಸುವದರಲ್ಲಿ ಬಂದಿತು. ಟಿಳಕರ ವಕಾಲಿ ಪತ್ರವನ್ನು ಸಾಯಮನ್ನರು ಮತ್ತು ಚಿರೋಲನ ವಕೀಲಿ ಪತ್ರವನ್ನು ಕಾರ್ಸನಾನ್ನರು ವಹಿಸಿದ್ದರು. ಕಾರ್ಸನಾನ್ನರು ಟಿಳಕರ ಮೇಲೆ ಅನೇಕ ಆರೋಪ ಹೊರಿಸಿ ತನ್ನ ಭಾಷಣದಲ್ಲಿ ಮಾತಾಡಿ ನ್ಯಾಯಾಧೀಶರ ಮನವನ್ನು ಕಲುಷಿತಗೊಳಿಸಿದರು. ಸಾಯಮನ್ನರು ಅವರ ಖಂಡನೆ ಮಾಡುತ್ತ—ಟಿಳಕರು—ಉಚ್ಚಕುಲದಲ್ಲಿ ಹುಟ್ಟಿದ್ದಾರೆ. ರಾಜಕೀಯ ಕೀರ್ತಿಯನ್ನು ಪಡೆದಿದ್ದಾರೆ. ಅಂಥವರ ವಿಷಯದಲ್ಲಿ ಸರಕಾರ ವಿಚಾರಿಸಬೇಕೆಂದು ಬಿನ್ನವಿಸಿಕೊಂಡರು.

ನ್ಯಾ. ಡಾರ್ಲಿಂಗ ಅವರು ತಮ್ಮ ಸಮಾರೋಪ ಭಾಷಣದಲ್ಲಿ ಟಿಳಕರ ವಿರುದ್ಧವಾಗಿ ತೀರ್ಪು ಕೊಟ್ಟರು. ಚಿರೋಲನು ನ್ಯಾಯಸ್ಥಾನದಲ್ಲಿ ನಡಿಸಿದ ಕಾರಸ್ಥಾನಗಳೇ ಹೀಗೆ ತೀರ್ಪು ಕೊಡುವುದಕ್ಕೆ ಕಾರಣವೆಂದು ಎಲ್ಲರಿಗೂ ಗೊತ್ತಿದ್ದ ಮಾತಾಗಿದ್ದಿತು. ಅಪೀಲು ಮಾಡುವುದರಲ್ಲಿ ಯಾವುದೇ ರೀತಿಯ ಅರ್ಥವಿಲ್ಲವೆಂದು ಟಿಳಕರಿಗೆ ಅನಿಸಿತು. ಯಾಕೆಂದರೆ ಈ ಪ್ರಕರಣದಲ್ಲಿ ೩೫೦೦೦ ಪೌಂಡು ಟಿಳಕರಿಗೆ ವೆಚ್ಚಮಾಡಬೇಕಾಗಿ ಬಂದಿತು. ಟಿಳಕರ ಅನುಯಾಯಿಗಳು ಹಣ ಕೊಡಿಸಿ ಟಿಳಕರಿಗೆ ಎಲ್ಲ ಬಗೆಯಿಂದಲೂ ಸಹಾಯ ಮಾಡಿದರು.

ಟಿಳಕರ ಯೋಗ್ಯತೆ ಕುರಿತು, ಪತ್ರಕಾರರೆಂಬ ಅವರ ಖ್ಯಾತಿ ಕುರಿತು ಚಿರೋಲ ಸಾಹೇಬರು ಬರೆದ ಒಂದು ಪುಸ್ತಕದಲ್ಲಿ ಬರೆದಿದ್ದಾರೆ. "ಟಿಳಕರಷ್ಟು—ದಾಣ ಮತ್ತು ಪತ್ರಿಕಾ ವ್ಯವಸಾಯದಲ್ಲಿ ನುರಿತ ಚಾಣಾಕ್ಷ ಮನುಷ್ಯನನ್ನು ನಾನು ನನ್ನ ಆಯುಷ್ಯದಲ್ಲಿ ನೋಡಲಿಲ್ಲ, ನನ್ನನ್ನು ನಿಲ್ಲಿಸಿ ಜಬಾಬು ಕೇಳಿದವರೆಂದರೆ—ಜರ್ಮನಿಯ ಬಾದಶಹ ಮತ್ತು ಟಿಳಕರು! ಮೇರು ಪರ್ವತದಂತಹ ಅತಿಧೈರ್ಯ, ಸಾಹಸಗಳಿಗೆ ಎಲ್ಲರೂ ಅಂಜಲೆಬೇಕು. ಗಾಂಧೀಜಿಯವರಿಗಿಂತ ಟಿಳಕರು ಬುದ್ಧಿವಂತರು. ರಾಜಕಾರ ಪಟುಗಳು, ಪ್ರಸಂಗದ ಮಹತ್ವವನ್ನು ಅರಿತು ಕೆಲಸ ಮಾಡುವವರು, ಸುಪ್ರಸಿದ್ಧ ಪತ್ರಿಕೋದ್ಯಮಿಗಳು."

ಟಿಳಕರು ವಿವಿಧವಿಷಯ ಪಂಡಿತರು. ಆದರೆ ಅವರು—ಇಷ್ಟೊಂದು ಜನಪ್ರಿಯರಾಗುವದಕ್ಕೆ ಅವರಲ್ಲಿಯ ಪತ್ರಿಕಾಕರ್ತರಿಂದ, ಕೆಲಸಮಾಡುವ ಗುಣವೆ ಕಾರಣಭೂತವೆಂದು ಹೇಳಬಹುದು.

ಕುಟುಂಬ ಯೋಜನೆ

ಕುಟುಂಬದ ಪ್ರತಿಯೊಬ್ಬ ವ್ಯಕ್ತಿಯ ಭವಿಷ್ಯವು ಭದ್ರವಾದರೆನೇ ನಿಮ್ಮ ಕುಟುಂಬಯೋಜನೆ ಪರಿಪೂರ್ಣವಾಗುವುದು. ಕುಟುಂಬದ ಒಬ್ಬರ ಅಭ್ಯುದಯದಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆ ಇದೆ. ನಿಮ್ಮ ಮಡದಿ, ಮಕ್ಕಳ ಪ್ರತಿಯೊಬ್ಬರ ಹೆಸರಲ್ಲಿ ಒಂದೊಂದು 'ಕ್ಯುಮುಲೆಟಿವ್ ಡಿಪೋಜಿಟ್' ಲೆಕ್ಕ ತೆರೆದು ಅವರು ಕ್ರಮವಾಗಿ ಉಳಿಸುವಂತೆ ಮಾಡಿರಿ. ಇದಕ್ಕೆ ದೊಡ್ಡ ಮೊಬಲಗು ಬೇಕಾಗಿಲ್ಲ; ಕ್ರಮಬದ್ಧವಾಗಿ ನಿಶ್ಚಿತ ಹಣವನ್ನು ಉಳಿಸುವುದೇ ಮುಖ್ಯ.

ಆದುದರಿಂದ ಈ ಯೋಜನೆಯನ್ನು ಅಂಗೀಕರಿಸಿ ಕುಟುಂಬದೊಂದಿಗೆ ಕುಟುಂಬಯೋಜನೆಯನ್ನು ನೆರವೇರಿಸಿರಿ.

ಒಟ್ಟು ಆರ್ಥಿಕ ಆಸರೆ ರೂ. **9.5** ಕೋಟಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್

ಸ್ಥಾಪನೆ: 1925] [ಪ್ರಧಾನ ಕಚೇರಿ: **ಉಡುಪಿ**, ದ. ಭಾರತ.

ಮೈಸೂರಿನಲ್ಲಿ ಶ್ರೀ ಕಡಿದಾಳ ಮಂಜಪ್ಪನವರ ಮಂತ್ರಿಮಂಡಳ

ತನ್ನ ಪರಾಭವಕ್ಕೆ ಏಕೀಕರಣದ ಪ್ರಶ್ನೆಯೇ ಕಾರಣವೆಂದು ಶ್ರೀ ಹನುಮಂತಯ್ಯ

ಈಗಿನ ಮೈಸೂರು ರಾಜ್ಯವು ನೆರೆಯ ಕನ್ನಡ ಪ್ರದೇಶಗಳ ಸೇರ್ಪಡೆಯಿಂದ ಬೃಹನ್ಮೈಸೂರು ಎಂಬ ಹೆಸರಿನಿಂದ ಮೆರೆಯಲು ಕೇವಲ ಎರಡೂವರೆ ತಿಂಗಳುಗಳ ಅವಧಿ ಇದ್ದಾಗ, ಮೈಸೂರಿನ ಮಂತ್ರಿ ಮಂಡಳದಲ್ಲಿ ಬದಲಾವಣೆ ನಡೆದಿದೆ. ಇಷ್ಟರ ವರೆಗೆ ಮುಖ್ಯ ಮಂತ್ರಿಗಳಾಗಿದ್ದ ಶ್ರೀ ಕೆ. ಹನುಮಂತಯ್ಯನವರು ಶಾಸನ ಸಭೆಯ ಕಾಂಗ್ರೆಸು ಪಕ್ಷದ ವಿಶ್ವಾಸವನ್ನು ಕಳೆದುಕೊಂಡವರಾಗಿ, ನಿವೃತ್ತರಾದರು. ಅವರ ಸ್ಥಾನಕ್ಕೆ ಹಿಂದೆ ಶ್ರೀ ಹನುಮಂತಯ್ಯನವರ ಮಂತ್ರಿ ಮಂಡಳದಲ್ಲಿಯೇ ಮಂತ್ರಿಗಳಾಗಿದ್ದ ಶ್ರೀ ಕಡಿದಾಳ್ ಮಂಜಪ್ಪನವರು ಆಯ್ಕೆಗೊಂಡು, ಮುಖ್ಯ ಮಂತ್ರಿಯಾಗಿ ಪ್ರತಿಜ್ಞಾವಚನವನ್ನು ಸ್ವೀಕರಿಸಿದ್ದಾರೆ.

ಹಿನ್ನೆಲೆಯ ದೃಶ್ಯ

ಮೈಸೂರು ಶಾಸನಾಂಗದ ಕಾಂಗ್ರೆಸು ಪಕ್ಷದ ಸದಸ್ಯರಾಗಿರುವ ೮೫ ಮಂದಿಯಲ್ಲಿ ೫೭ ಮಂದಿ ಶ್ರೀ ಹನುಮಂತಯ್ಯನವರ ಧುರೀಣತ್ವವನ್ನು ಒಪ್ಪದೆ ಕಾಂಗ್ರೆಸಿನ ವರಿಷ್ಠರಿಗೆ ದೂರನ್ನಿತ್ತಿದ್ದರು. ತಾನು ಹೀಗೆ ಬಹುಮತದ ವಿಶ್ವಾಸವನ್ನು ಕಳೆದುಕೊಂಡೆನೆಂದು ತಿಳಿದೊಡನೆಯೇ, ಕಳೆದ ಜೂನಿನಲ್ಲಿ ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಪತ್ರವನ್ನು ಕಾಂಗ್ರೆಸಿನ ವರಿಷ್ಠರಿಗೆ ಕಳುಹಿಸಿದ್ದರು. ಕಾಂಗ್ರೆಸಿನ ವರಿಷ್ಠರು ಶ್ರೀ ಹನುಮಂತಯ್ಯನವರ ರಾಜೀನಾಮೆಯನ್ನು ಸ್ವೀಕರಿಸುವ ಅಥವಾ ಬಿಡುವ ಕೆಲಸವನ್ನು ಮೈಸೂರಿನ ಶಾಸನಾಂಗದ ಕಾಂಗ್ರೆಸು ಪಕ್ಷಕ್ಕೆಯೇ ಬಿಟ್ಟರು. ಅದರಂತೆ ಇದೇ ೧೯ನೇ ದಿನಾಂಕ ಸೇರಿದ ಸಭೆಯಲ್ಲಿ ಮೇಲಿನ ಬದಲಾವಣೆ ನಡೆಯಿತು.

ವರಿಷ್ಠರ ಪ್ರತಿನಿಧಿ

ಕಾಂಗ್ರೆಸು ಪಕ್ಷದ ಈ ಸಭೆಯ ಕಾರ್ಯಕಲಾಪಗಳ ನಿರೀಕ್ಷಣೆಗಾಗಿ ಅಖಿಲ ಭಾರತ ಕಾಂಗ್ರೆಸಿನ ಕಾರ್ಯದರ್ಶಿಗಳಾದ ಶ್ರೀ ಕೆ. ಪಿ. ಮಾಧವನ್ ನಾಯರ್ ಆಗಮಿಸಿದ್ದರು. ಪಕ್ಷದ ನಾಯಕನ ಸ್ಥಾನದಿಂದ ಶ್ರೀ ಹನುಮಂತಯ್ಯನವರು ಪ್ರಾರಂಭ ಭಾಷಣವನ್ನು ಮಾಡುತ್ತಾ ಸಭೆಯ ಕಾರ್ಯಕಲಾಪಗಳು ತನಗೆ ನೇರಾಗಿ ಅನ್ವಯಿಸುವುದರಿಂದ ತಾನು ಅಧ್ಯಕ್ಷನಾಗುವುದು ಉಚಿತವಾಗಲಾರದೆಂದೂ ಆದುದರಿಂದ ಶ್ರೀ ನಾಯರರೇ ಅಧ್ಯಕ್ಷಸ್ಥಾನವನ್ನು ವಹಿಸಿ ಈ ಕಾರ್ಯಕಲಾಪವನ್ನು ನೆರವೇರಿಸಿಕೊಡುವುದು ಒಳ್ಳೆಯದೆಂದೂ ಬಿನ್ನವಿಸಿದರು. ಶ್ರೀ ನಾಯರರು ಇದಕ್ಕೆ ಒಪ್ಪಿ, ಎಲ್ಲ ಸದಸ್ಯರು ಪೂರ್ವಾಗ್ರಹದೂಷಿತವಾದ ಭಾವನೆಗಳೇನಿದ್ದರೂ ಅವನ್ನು ಬಿಟ್ಟುಕೊಟ್ಟು ಪ್ರಸ್ತುತ ಸಭೆಯ ಹಿನ್ನೆಲೆಯಾಗಿ ತಾನು ಕೊಡುವ ವಿವರಣೆಯ ನ್ನೇ ಶೆಮೇ ಗಮನವೀಯಬೇಕೆಂದು ವಿನಂತಿಸಿ, ಉಪರೋಕ್ತ ಸಂಗತಿಗಳನ್ನು ನಿವೇದಿಸಿದರು.

ರಾಜೀನಾಮೆಯ ಅಂಗೀಕಾರ

ತನ್ನ ನಿಲುವೆಯನ್ನು ಶ್ರೀ ಹನುಮಂತಯ್ಯನವರು ವಿವರಿಸುತ್ತಾ ಸಭೆಯು ತನ್ನ ರಾಜೀನಾಮೆಯನ್ನು ಸಂಕೋಚವಿಲ್ಲದೆ ಸ್ವೀಕರಿಸಬೇಕೆಂದು ಕೇಳಿಕೊಂಡರು. ಆದರೆ ಹೊಸ ನಾಯಕನ ಆಯ್ಕೆಯ ಉದ್ದೇಶದಿಂದ ಯಾರಾದರೂ ತನ್ನ ಹೆಸರನ್ನು ಸೂಚಿಸುವರಾದರೆ, ತಾನು ಪುನಃ ಮುಖ್ಯಮಂತ್ರಿ ಸ್ಥಾನಕ್ಕೆ ಉಮೇದ್ವಾರನಾಗಿ ನಿಲ್ಲುವೆನು ಎಂದೂ ಅವರು ಹೇಳಿದರು. ಸಭೆಯು ಸರ್ವಾನುಮತದಿಂದ ಶ್ರೀ ಹನುಮಂತಯ್ಯನವರು ಮುಖ್ಯ ಮಂತ್ರಿ ಸ್ಥಾನಕ್ಕಿತ್ತ ರಾಜೀನಾಮೆಯನ್ನು ಅಂಗೀಕರಿಸಿತು. ಹೊಸ ಧುರೀಣನ ಆಯ್ಕೆಯ ಪ್ರಶ್ನೆ ಬಂದಾಗ ಶ್ರೀ ಕಡಿದಾಳ ಮಂಜಪ್ಪನವರ ಹೆಸರಲ್ಲದೆ ಶ್ರೀ ಹನುಮಂತಯ್ಯನವರ ಹೆಸರು ಸಹ ಸೂಚಿಸಲ್ಪಟ್ಟಿತು.

ನೂತನ ಸಚಿವ ಸಂಪುಟ

ಬಳಿಕ ನಡೆದ ಗುಪ್ತ ಮತದಾನದಲ್ಲಿ ಶ್ರೀ ಕಡಿದಾಳ ಮಂಜಪ್ಪನವರು ಗಣನೀಯವಾದ ಬಹುಮತದಿಂದ(ಇದು ೩೫೧% ಎಂದು ಅಂದಾಜು) ಆರಿಸಿ ಬಂದರೆಂದು ಶ್ರೀ ನಾಯರರು ಸಾರಿದರು. ಶ್ರೀ. ಕೆ. ಹನುಮಂತಯ್ಯನವರು ಶನಿವಾರ ರಾಜಪ್ರಮುಖರಿಗೆ ತಮ್ಮ ಮಂತ್ರಿ ಮಂಡಳದ ರಾಜೀನಾಮೆಯನ್ನು ಸಲ್ಲಿಸಿದರು. ಮರುದಿನ ರಾಜಪ್ರಮುಖರ ಮುಂದೆ ಶ್ರೀ ಕಡಿದಾಳ ಮಂಜಪ್ಪನವರು ಮುಖ್ಯ ಮಂತ್ರಿಯೆಂದು ಪ್ರತಿಜ್ಞೆಯನ್ನು ಕೈಗೊಂಡರು. ಅವರಜೊತೆಗೆ ಬೇರೆ ಐದು ಮಂದಿ ಸಚಿವರೂ ಪ್ರತಿಜ್ಞಾವಚನಬದ್ಧರಾದರು. ಇವರೈವರೂ ಶ್ರೀ ಹನುಮಂತಯ್ಯನವರ ಮಂತ್ರಿಮಂಡಳದಲ್ಲಿದ್ದ ಮಂತ್ರಿಗಳೇ ಆಗಿರುವುದೊಂದು ವೈಶಿಷ್ಟ್ಯ.

ಮಂಜಪ್ಪನವರ ವ್ಯಕ್ತಿತ್ವ

ಹೀಗೆ ಎರಡೂವರೆ ತಿಂಗಳುಗಳ ವರೆಗೆ ಮಾತ್ರ ಬಾಳುವ ಮೈಸೂರಿನ ಹೊಸ ಸಚಿವ ಸಂಪುಟದಲ್ಲಿ ಶ್ರೀ ಹನುಮಂತಯ್ಯನವರಿಲ್ಲವೆಂಬುದೊಂದು ವಿಷಯವನ್ನು ಬಿಟ್ಟರೆ "ನೂತನ"ವಾದುದೇನೂ ಇಲ್ಲ. ಶ್ರೀ ಕಡಿದಾಳ ಮಂಜಪ್ಪನವರು ತಮ್ಮದೊಂದು ಹೇಳಿಕೆಯಲ್ಲಿ ತಾನು ಕಾಂಗ್ರೆಸು ಪಕ್ಷದ ಎರಡು ಗುಂಪುಗಳಲ್ಲಿ ಯಾರ ಕಡೆಗೂ ವಾಲದೆ, ಉಭಯತರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾದವನೆಂದು ತನ್ನನ್ನು ವರ್ಣಿಸಿಕೊಂಡಿದ್ದಾರೆ. ಮಂತ್ರಿಯಾಗಿ ಇವರು ದಕ್ಷರೆಂದೂ ಕಾರ್ಯ ನಿಪುಣರೆಂದೂ ಜನರಲ್ಲಿ ಈಗಾಗಲೇ ಹೆಸರು ಗಳಿಸಿದ್ದಾರೆ. ಹೊರಗಿನ ಕನ್ನಡಿಗರ ದೃಷ್ಟಿಯಲ್ಲಿ ಇವರು ಕರ್ನಾಟಕ ಏಕೀಕರಣಕ್ಕೆ ವಿರೋಧವನ್ನು ವ್ಯಕ್ತಪಡಿಸಿ ಕಳೆದ ಅಕ್ಟೋಬರದಲ್ಲಿ ಕಾಂಗ್ರೆಸು ವರಿಷ್ಠರೆಡೆಗೆ ಮನವಿಗಳನ್ನು ಹೊತ್ತು ಸಾಗಿದ ಪ್ರಭೃತಿಗಳಲ್ಲಿ ಒಬ್ಬರೆಂಬೊಂದು ಕೊರಗು ಇದೆ

ಪತನದ ಕಾರಣ

ಮೈಸೂರಿನಲ್ಲಿರುವ ಕರ್ನಾಟಕ ಏಕೀಕರಣ ವಿರೋಧಿಗಳೇ ತನ್ನ ಪದಚ್ಯುತಿಗೆ ಕಾರಣ ಭೂತರೆಂಬುದನ್ನು ಶ್ರೀ ಹನುಮಂತಯ್ಯನವರು ತಮ್ಮ ವಿದಾಯ ಸಂದೇಶದಲ್ಲಿಯೂ ಹೇಳಿಕೊಂಡಿದ್ದಾರೆ. "ರಾಜ್ಯಗಳ ಪುನಾರಚನೆಯ ವಿಧೇಯಕವು ಪ್ರಕಟವಾಗುವ ವರೆಗೆ ನನ್ನ ಧುರೀಣತ್ವವು ದೃಢವೂ ಅಬಾಧಿತವೂ ಆಗಿದ್ದಿತು. ನನ್ನ ರಾಜಕೀಯ ಜೀವನದಲ್ಲಿ ಮೊದಲಿನಿಂದಲೂ ನನಗೆ ಬೆಂಬಲನಾಗಿದ್ದ ೩೦-೩೫ ಮಂದಿ ಸದಸ್ಯರೇ ಇದಕ್ಕೆ ಆಧಾರವಾಗಿದ್ದರು. ಆದರೆ ಕರ್ನಾಟಕ ಏಕೀಕರಣದ ಕುರಿತು ನಾನು ವಹಿಸಿದ ನಿಲುವೆಯಿಂದ ಇವರೆಲ್ಲರೂ ನನ್ನ ಬಗ್ಗೆ ಬೇಸರಪಟ್ಟುಕೊಂಡರು; ಮತ್ತು ಕ್ರುದ್ಧರಾದರು. ಕಳೆದ ಅಕ್ಟೋಬರದಲ್ಲಿ ಪಕ್ಷದ ಮುಖ್ಯ ಪ್ರತೋದರಾದ ಶ್ರೀ ಹುಚ್ಚಮಾಸ್ತಿ ಗೌಡರು ನಾನು ನನ್ನ ಬೆಂಬಲಿಗರ ಆಧಾರವನ್ನೂ ಕಳೆದುಕೊಂಡಿದ್ದೇನೆ; ಹಿಂದಿನ ವಿರೋಧಿಗಳಂತೂ ಈಗಲೂ ಪ್ರಬಲ ವಿರೋಧಿಗಳಾಗಿದ್ದಾರೆ ಎಂದುದನ್ನು ಇಲ್ಲಿ ಸ್ಮರಿಸಬಹುದು." ಎಂಬುದಾಗಿ ಶ್ರೀ ಹನುಮಂತಯ್ಯ ನುಡಿದಿದ್ದಾರೆ.

ಏಕೀಕರಣದ ಫಲ

ತನ್ನ ಮಂತ್ರಿಮಂಡಳವು ಕಳೆದ ಅಕ್ಟೋಬರದಲ್ಲಿಯೇ ಪತನಗೊಳ್ಳುತ್ತಿತ್ತೆಂದೂ ಆದರೆ ಮಂತ್ರಿಗಳಲ್ಲಿ ಯಾರೇ ಆಗಲಿ, ರಾಜ್ಯಗಳ ಪುನಾರಚನೆಯ ಬಗ್ಗೆ ರಾಜೀನಾಮೆಯನ್ನು ಕೊಡಲಾಗದೆಂಬ ಕಾಂಗ್ರೆಸಾಧ್ಯಕ್ಷರ ಆದೇಶ ಬಂದ ದೆಸೆಯಿಂದ ತಾನು ಆಗ ಅಧಿಕಾರ ಸ್ಥಾನದಲ್ಲಿ ಉಳಿಯುವಂತಾಯಿತೆಂದೂ ಶ್ರೀ ಹನುಮಂತಯ್ಯ ಹೇಳಿದ್ದಾರೆ. ಕರ್ನಾಟಕ ಏಕೀಕರಣಕ್ಕೆ ತಾನು ಅನುಕೂಲಾಭಿಪ್ರಾಯವನ್ನು ಹೊಂದಿದುದಕ್ಕಾಗಿ ತನ್ನೊಡನೆ ಅಸಂತುಷ್ಟರಾದ ತನ್ನ ಬೆಂಬಲಿಗರನ್ನು ತನ್ನ ವಿರೋಧಿ ಗುಂಪು ಒಲಿಸಿಕೊಂಡು ತನ್ನ ಪತನವನ್ನು ಸಾಧಿಸಿತೆಂಬೇ ತನ್ನ ಅಭಿಪ್ರಾಯವೆಂದು ಅವರು ಸ್ಪಷ್ಟಪಡಿಸಿದ್ದಾರೆ. ಇದೊಂದು ಕಾರಣವಲ್ಲದೆ, ತನ್ನ ಬಗ್ಗೆ ಕಾಂಗ್ರೆಸಿನ ವರಿಷ್ಠರಾಗಲೀ ಪಕ್ಷದ ಸದಸ್ಯರಾಗಲೀ ಯಾವುದೇ ಆರೋಪವನ್ನು ಮಾಡಿದ್ದಿಲ್ಲ; ತನ್ನ ವಿವರಣೆಯನ್ನು ಯಾವದೇ ಅಪಾದನೆಯ ಬಗ್ಗೆ ಕೇಳಿದುದೂ ಇಲ್ಲ ಎಂದವರು ಕಂಠೋಕ್ತವಾಗಿ ಸಾರಿದ್ದಾರೆ.

ಮುಂದೇನು?

ಅಂತೂ ಶ್ರೀ ಕಡಿದಾಳ ಮಂಜಪ್ಪನವರಿಗೆ ಈಗ ಕಿರೀಟ ದೊರೆತಿದೆ. ಇದು ತಾತ್ಕಾಲಿಕವಾದುದೆಂಬ ತಿಳುವಳಿಕೆ ತನಗಿದೆ; ಅಲ್ಲದೆ ಯಾವ ಪ್ರಸಂಗದಲ್ಲಿ ತನಗೆ ಈ ಕಿರೀಟ ದೊರೆತಿದೆ ಎಂಬ ಪ್ರಜ್ಞಾನವೂ ಇದೆ ಎಂದು ಈ ಹೊಸ ಮುಖ್ಯ ಮಂತ್ರಿ ಹೇಳಿದ್ದಾರೆ. ಇವರು ಮೈಸೂರು ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಚೆನ್ನಯ್ಯನವರ ಆಯ್ಕೆಯೆಂದ. ಹೇಳಲಾಗಿದೆ. ಹೊಸರಾಜ್ಯವು ಅಸ್ತಿತ್ವದಲ್ಲಿ ಉಳಿಯುವ

(೯ನೇ ಪುಟ ನೋಡಿರಿ)

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

* *

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು ವೃದ್ಧಿಮಾಡಲು
ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ದೊರೆಯುತ್ತದೆ

* *

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಮೆಂಬರು: ಐ. ಎಸ್. ಟಿ. ಎಂ. ಎ.

ಅಹಮ್ಮದಾಬಾದಿನಲ್ಲಿ ದ್ವಿಭಾಷಾರಾಜ್ಯಕ್ಕೆ ವಿರೋಧ

ಗುಜರಾತಿಗಳ ಮನಃಪರಿವರ್ತನೆಗಾಗಿ ಮುರಾರ್ಜಿಯವರ ಉಪವಾಸ

ಮುಂಬಯಿ ನಗರದ ಭವಿಷ್ಯದ ಕುರಿತು ಎದ್ದಿರುವ ವಿವಾದಕ್ಕೆ ಲೋಕಸಭೆಯು ಒಂದು ಪರಿಹಾರೋಪಾಯವನ್ನು ಪರ್ಯಾಲೋಚಿಸಿ ಅಂಗೀಕರಿಸಿತು. ಪರಿಣಾಮದಲ್ಲಿ ಮಹಾರಾಷ್ಟ್ರ ಮತ್ತು ಗುಜರಾತ ಪ್ರದೇಶಗಳಿಗೆ ಮುಂಬಯಿ ನಗರವು ರಾಜಧಾನಿಯಾಗಿರುವ ನೂತನ ದ್ವಿಭಾಷಾರಾಜ್ಯದ ರಚನೆಯಾಗುವಂತಾಯಿತು. ಆದರೆ, ಈ ಕ್ಷಿಪ್ರನಿರ್ಣಯವು ಗುಜರಾತದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯನ್ನು ನಿರ್ಮಿಸಿದೆ. ಮುಖ್ಯವಾಗಿ ಅಹಮ್ಮದಾಬಾದಿನಲ್ಲಿ ಗೊಂದಲ ನಡೆದಿದೆ.

ಯಾರು ಹಿತವರು?

ಮರಾಠರು ಮುಂಬಯಿಯನ್ನು ಕೇಂದ್ರಾಧೀನ ಪ್ರದೇಶವಾಗಿ ಅಥವಾ ಪ್ರತ್ಯೇಕವಾದ ನಗರರಾಜ್ಯವಾಗಿ ರೂಪಿಸುವ ಸೂಚನೆಯನ್ನು ತಿರಸ್ಕರಿಸಿ, ಮುಂಬಯಿ ನಗರದಲ್ಲಿ ಹಿಂದೊಮ್ಮೆ ಗಲಭೆ ನಡೆಸಿದಾಗ ಮಹಾರಾಷ್ಟ್ರೀಯರು ನೈತಿಕ ಪತನವನ್ನು ಹೊಂದಿದ್ದಾರೆಂದು ದೇಶದ ಎಲ್ಲೆಡೆಯಿಂದಲೂ ಆರೋಪಿಸಲಾಯಿತು. ಸ್ವತಃ ಗುಜರಾತಿಗಳೇ ಈ ಆರೋಪವನ್ನು ಸಂತೋಷದಿಂದ ಮಾಡಿದರು. ಆದರೆ ಈಗ ಅಹಮ್ಮದಾಬಾದಿನಲ್ಲಿ ನಡೆದಿರುವ ವಿಧ್ವಂಸಕ ಕೃತ್ಯಗಳಲ್ಲಿ ಯಾರ ಕೈವಾಡವಿದೆ? ಗುಜರಾತಿಗಳಲ್ಲದೆ ಅಲ್ಲಿ ಬೇರೆ ಯಾರಿದ್ದಾರೆ? ಮರಾಠರನ್ನು ಹುನಬಂದಂತೆ ಬಯ್ದ ಗುಜರಾತಿಗಳು ಈಗ ತಮ್ಮನ್ನೆ ದೂರುವಂತಾಗಿದೆ.

ಪೋಲೀಸರ ಕಾರ್ಯಾಚರಣೆ

ದ್ವಿಭಾಷಾ ರಾಜ್ಯವು ಒಳ್ಳೆಯದೆ, ಕೆಟ್ಟದೆ ಎಂಬ ಪ್ರಶ್ನೆಯನ್ನು ಶಾಂತವಾಗಿ ಪರ್ಯಾಲೋಚಿಸುವಷ್ಟು ಸ್ಥಿಮಿತ ಬುದ್ಧಿಯನ್ನು ತೋರಿಸದೆ ಗೊಂದಲ ನಡೆಸಿದುದರಿಂದ ಅಲ್ಲಿ ಕಳೆದ ಕೆಲವು ದಿನಗಳಲ್ಲಿ ಪದೇ ಪದೇ ಪೋಲೀಸರು ಎಚ್ಚರಿಕೆಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗಿ ಬಂತು. ಗುಂಡಿನೇಟನ್ನೂ ನಡೆಸು ಕೆಲವು ಸಾವುಗಳಾದವಲ್ಲದೆ ಹಲವರು ಜಖಮುಗೊಂಡರು. ಕರ್ಫ್ಯೂ ಆಜ್ಞೆಯನ್ನು ಸಹ ಹೇರಲಾಯಿತು. ಶಾಂತಿ ಮತ್ತು ಸುವ್ಯವಸ್ಥೆಯ ಪಾಲನೆಗಾಗಿ ಇವೆಲ್ಲ ಅಗತ್ಯವಾಯಿತು. ಮುಂಬಯಿ ನಗರದಲ್ಲಿ ಹಿಂದೆ ಏನು ನಡೆದಿತ್ತೋ ಅವೆಲ್ಲದರ ಪುನರಾವರ್ತನೆ ಈಗ ಅಹಮ್ಮದಾಬಾದಿನಲ್ಲಿ ನಡೆಯಿತು.

ಗುಜರಾತಿಗಳಿಂದ ಅಪರಾಧ

ಆದುದರಿಂದ ಗುಜರಾತಿಗಳು ಮರಾಠರಿಂದ ಮೇಲೆಂದಾಗಲೀ ಮರಾಠರು ಗುಜರಾತಿಗಳಿಂದ ಮೇಲೆಂದಾಗಲೀ ಯಾರೂ ಹೇಳುವಂತಿಲ್ಲ. ನಿಷ್ಪಕ್ಷಪಾತವಾಗಿ ಹೇಳುವುದಾದರೆ ಮರಾಠರೇ ಮೇಲು—ಏಕೆಂದರೆ, ತಮ್ಮ ಪ್ರದೇಶದ ಅವಿಭಾಜ್ಯ ಭಾಗವೆಂದು ಪ್ರಧಾನಿ ನೆಹರೂ ಸಹ ಒಪ್ಪಿದ್ದ ಮುಂಬಯಿ ನಗರದ ಮೇಲೆ ತಮ್ಮ ಹಕ್ಕನ್ನು ದ್ವಿಭಾಷಾರಾಜ್ಯದ ರಚನೆಗೆ ಒಪ್ಪಿಗೆ ಕೊಡುವ ಮೂಲಕ ಮರಾಠರು ಈಗ ಬಿಟ್ಟುಕೊಟ್ಟಿದ್ದಾರೆ; ಆದರೆ ಗುಜರಾತಿಗಳು ಹಿಂದೆ ದ್ವಿಭಾಷಾ ರಾಜ್ಯ ರಚನೆಯ ಸೂತ್ರಕ್ಕೆ ಒಪ್ಪಿಕೊಂಡು ಈಗ ಅದು ಸಲ್ಲದೆಂದು ಹೇಳಲು ಹೊರಟಿದ್ದಾರೆ.

ಪ್ರತಿಪಕ್ಷಗಳ ಕೈವಾಡ

ಇನ್ನೂ ಆಳವಾಗಿ ವಿಚಾರಿಸಿದರೆ, ಈ ಗೊಂದಲದ ಹಿಂದಿರುವುದು ಕೆಲವು ರಾಜಕೀಯ ಪಕ್ಷಗಳೆಂದು ಹೇಳಬಹುದು. ಸರಕಾರಿ ಪಕ್ಷವು ಏನು ನಿರ್ಣಯವನ್ನು ಕೈಗೊಂಡರೂ ಅದಕ್ಕೆ ಪ್ರತಿಭಟನೆಯನ್ನು ವ್ಯಕ್ತಪಡಿಸುವುದೇ ಪುರುಷಾರ್ಥವೆಂದು ಭಾವಿಸಿರುವ ಪ್ರತಿಪಕ್ಷಗಳ ಕೈವಾಡವೇ ಮುಂಬಯಿ— ಅಹಮ್ಮದಾಬಾದುಗಳ ಗಲಭೆಯ ಮುಖ್ಯ ಕಾರಣ. ಪ್ರಧಾನಿ ನೆಹರೂಗಳು ಹೇಳಿದಂತೆ ಈ ಪ್ರತಿಪಕ್ಷಗಳ ಧುರೀಣರು ದೇಶದ ಯಾವ ಮೂಲೆಯಲ್ಲಿ ಒಡಕಿನ ಅಪಸ್ವರ ಕೇಳಿ ಬಂತೋ ಅಲ್ಲಿಗೆ ಒಡನೆಯೇ ಧಾವಿಸುತ್ತಾರೆ. ಇಲ್ಲದಿದ್ದರೆ ಅಹಮ್ಮದಾಬಾದಿನ ವಿದ್ಯಾರ್ಥಿಗಳು ಮೊದಲು ಎಬ್ಬಿಸಿದ ಗೊಂದಲಕ್ಕೆ ಗಿರಣಿಯ ಕೆಲಸಗಾರರ "ಬೆಂಬಲ" ದೊರೆಯುತ್ತಿರಲಿಲ್ಲ. ರಾಜಕಾರಣದಲ್ಲಿ ವಿದ್ಯಾರ್ಥಿಗಳಿಗಿರುವ ಆಸಕ್ತಿಯಾದರೂ ಏನು? ಗಿರಣಿಯ ಕಾರ್ಮಿಕರಿಗೆ ಇರುವ ಆಸಕ್ತಿಯಾದರೂ ಎಷ್ಟು?

ಅಸಂಗತವಾದ ಮಾರ್ಗ

ನಿಜವಾದ ಆಸಕ್ತಿ ಇರುವುದು ಪ್ರತಿಪಕ್ಷಗಳಿಗೆ—ಏಕೆಂದರೆ ಜನಪ್ರಿಯತೆಯನ್ನು ಅಗ್ಗದಲ್ಲಿ ಸಂಪಾದಿಸಲು ಇದೊಂದು ಸುಸಂದರ್ಭವಾಗಿದೆ. ಜನ ಸಮುದಾಯದ ಭಾವನೆಗಳನ್ನು ಉದ್ರಿಕ್ತಗೊಳಿಸಿ ಮೆರೆದಾಡುವುದೇ ಈ ಪ್ರತಿಪಕ್ಷಗಳು ಬಳಸುವ ಮುಖ್ಯತಂತ್ರ. ಪ್ರಜಾಪ್ರಭುತ್ವದ ಹೆಸರಿನಲ್ಲಿಯೇ ಇವರು ಹೀಗೆಲ್ಲ ಗೊಂದಲದ ಕಾರ್ಯವನ್ನು ನಡೆಸುತ್ತಾರೆ. ಆದರೆ, ಲೋಕಸಭೆಯಂತಹ ಪ್ರಜಾಸತ್ತಾತ್ಮಕ ರಾಜಕೀಯ ಸಂಸ್ಥೆಯು ಅತ್ಯಧಿಕ ಬಹುಮತದಿಂದ ಪ್ರಜಾಸತ್ತಾತ್ಮಕವಾಗಿಯೇ ಸ್ವೀಕರಿಸಿದ ನಿರ್ಣಯಕ್ಕೆ ಹಿಂಸಾತ್ಮಕ ಪ್ರತಿಭಟನೆಯನ್ನು ವ್ಯಕ್ತಪಡಿಸುವುದು ಈ ಪ್ರತಿಪಕ್ಷಗಳು ಪವಿತ್ರವೆಂದು ಭಾವಿಸಿರುವ ಪ್ರಜಾಪ್ರಭುತ್ವದ ತತ್ತ್ವಕ್ಕೆ ಅನುಗುಣವಾಗಿದೆಯೇ?

ರಾಷ್ಟ್ರಘಾತಕ ಕೃತ್ಯ

ಸ್ವಾತಂತ್ರ್ಯ ದಿನದಂದು ಕೆಂಪು ಕೋಟೆಯ ಮೇಲೆ ಧ್ವಜವನ್ನೇರಿಳಿಸುತ್ತಾ ಭಾಷಣ ಮಾಡುವಾಗ ಪ್ರಧಾನಿಗಳು ಇದನ್ನೆ ಒತ್ತಿ ಹೇಳಿದ್ದಾರೆ— ಸಂಸತ್ತು ಒಮ್ಮೆ ನಿರ್ಣಯವನ್ನು ಸ್ವೀಕರಿಸಿದ ಬಳಿಕ ಅದನ್ನು ಪ್ರಜಾಸತ್ತಾತ್ಮಕ ತಂತ್ರಗಳಿಂದ ಮಾತ್ರವೇ ಬದಲಾಯಿಸಬೇಕು; ಪ್ರಜಾಪ್ರಭುತ್ವಕ್ಕೆ ಹಿಂಸಾಮಾರ್ಗವು ತೀರ ನಿಷಿದ್ಧ. ಇದನ್ನು ಮರೆತು, 'ಗೊಂದಲ ನಡೆಸುವ ಪುಂಡರೊಡನೆ ತಾವೂ ಬೆರೆತು ಗಲಭೆಯನ್ನು ಪ್ರೋತ್ಸಾಹಿಸುತ್ತಾ ಹೋದರೆ ಪ್ರತಿಪಕ್ಷಗಳು ಪ್ರಜಾಪ್ರಭುತ್ವಕ್ಕಾಗಲೀ ರಾಷ್ಟ್ರಕ್ಕಾಗಲೀ ಜನತೆಗಾಗಲೀ ಒಳ್ಳೆಯದನ್ನು ಮಾಡುತ್ತವೆ ಎನ್ನಲಾಗದು.

ಕಾಂಗ್ರೆಸಿನ ಅಭಿಪ್ರಾಯ

ಗುಜರಾತಿಗಳಲ್ಲಿ ಎಲ್ಲರೂ ದ್ವಿಭಾಷಾ ರಾಜ್ಯರಚನೆಗೆ ವಿರೋಧವಿದ್ದಾರೆ ಎನ್ನುವಂತಿಲ್ಲ. ಗುಜರಾತ ಪ್ರದೇಶ ಕಾಂಗ್ರೆಸಿನಂತಹ ಪ್ರಬಲ ಪ್ರಾತಿನಿಧಿಕ ಸಂಸ್ಥೆಯು ದ್ವಿಭಾಷಾ ರಾಜ್ಯರಚನೆಯನ್ನು ಸ್ವಾಗತಿಸಿ ಬೆಂಬಲಿಸಿವೆ. ಉದ್ರಿಕ್ತರಾದ ಜನರು ಮಾತ್ರ ಗುಂಡಾಟಿಕೆಯಲ್ಲಿಯೇ ಸಂತೋಷವನ್ನು ಹೊಂದುತ್ತಿದ್ದಾರೆ. ಮುಂಬಯಿ ರಾಜ್ಯದ ಮುಖ್ಯಮಂತ್ರಿಗಳು ಜನರಿಗೆ ದ್ವಿಭಾಷಾ ರಾಜ್ಯದ ಉಪಯುಕ್ತತೆಯನ್ನು ತಿಳಿಸಿ ಹೇಳಲು ಸಾರ್ವಜನಿಕ ಸಭೆಯೊಂದನ್ನು ಕರೆದರು. ಆದರೆ ಈ ಸಭೆಗೆ— ಏನು ಕಾರಣದಿಂದಲೋ – ಯಾರೊಬ್ಬರೂ ಸಭಾಸದರಾಗಿ ಬರಲಿಲ್ಲ. ಪ್ರತಿಪಕ್ಷಗಳ ಅಪಪ್ರಚಾರದಿಂದ ಹೀಗಾಗಿರಬಹುದು; ಅಥವಾ ಪುಂಡಾಟಿಕೆಯು ಈ ಸಭೆಯಲ್ಲಿ ನಡೆದು, ತಮ್ಮ ಜೀವಕ್ಕೆ ಅಪಾಯವಾದೀತೆಂಬ ಭಯದಿಂದ ಜನರು ಮನೆ ಬಿಟ್ಟು ಹೊರಬೀಳದಿರಲೂ ಸಾಕು.

ಮುರಾರ್ಜಿಯವರ ಉಪವಾಸ

ಈಗ ಶ್ರೀ ಮುರಾರ್ಜಿ ದೇಸಾಯಿಯವರು ಗುಜರಾತಿಗಳು ದ್ವಿಭಾಷಾ ರಾಜ್ಯ ರಚನೆಯ ವಿಷಯದಲ್ಲಿ ತಾನು ಹೇಳುವುದನ್ನು ಶಾಂತ ಭಾವದಿಂದ ಕೇಳಲು ಸಿದ್ಧರಾಗುವ ವರೆಗೆ ಉಪವಾಸವನ್ನು ಮಾಡುವುದಾಗಿ ಹೇಳಿ ಕಠೋರವಾದ ಅನಶನ ವ್ರತವನ್ನು ಕೈಗೊಂಡಿದ್ದಾರೆ. ಗುಜರಾತು ಪತನಗೊಂಡುದುದಕ್ಕೆ ಮುಂಚೆ ತನ್ನ ಮರಣವಾದರೆನೇ ಲೇಸು ಎಂಬ ಘೋರಣೆ ಅವರದು. ತನಗೆ ಉಪವಾಸದಲ್ಲಿ ಅಷ್ಟು ನಂಬಿಕೆ ಇಲ್ಲದಿದ್ದರೂ ಗುಜರಾತಿನ ಸಾಮಾನ್ಯ ಜನರು ನಡೆದುಕೊಳ್ಳುತ್ತಿರುವ ಇಂದಿನ ರೀತಿಗೆ ಬೇಸರಪಟ್ಟು ಉಪವಾಸದ ನಿರ್ಧಾರವನ್ನು ಕೈಗೊಂಡುದಾಗಿ ಅವರು ಹೇಳಿದ್ದಾರೆ. ಈ ಉಪವಾಸವು ರಾಷ್ಟ್ರದಾದ್ಯಂತ ಉದ್ವೇಗವನ್ನು ಹೆಚ್ಚಿಸಿದೆ. ಪುಂಡಾಟಿಕೆಯ ಗೊಂದಲದೊಡನೆ ಈ ಭಾವಾವೇಗವೂ ಸೇರಿಕೊಂಡಿರುವುದು ದೊಡ್ಡ ದುರಂತವೇ ನಿಜ.

ಖಂಡನೀಯ ಹಿಂಸಾಚಾರ

ತಮ್ಮ ಉಪವಾಸದ ನಿರ್ಧಾರವನ್ನು ಶ್ರೀ ಮುರಾರ್ಜಿಯವರು ಕಾಂಗ್ರೆಸಾಧ್ಯಕ್ಷ ಶ್ರೀ ಢೇಬರರಿಗೂ ಪ್ರಧಾನಿ ನೆಹರುಗಳಿಗೂ ಮುಂದಾಗಿ ತಿಳಿಸಿರುತ್ತಾರೆ. ಜನರನ್ನು ಸಮಾಧಾನದ ಮಾತುಗಳಿಂದ ಒಲಿಸಿಕೊಳ್ಳುವುದು ಸಾಧ್ಯವಾಗದೆ ಹೋದುದರಿಂದ ಈ ಉಗ್ರನಿರ್ಣಯಕ್ಕೆ ಶ್ರೀ ದೇಸಾಯಿಯವರು ಬಂದಂತೆ ಕಾಣುತ್ತದೆ. ಉಪವಾಸದ ಪ್ರಯೋಜನಾಂಶಗಳ ಬಗ್ಗೆ ಭಿನ್ನಾಭಿಪ್ರಾಯವೇನೇ ಇರಲಿ - ಗುಜರಾತಿನಲ್ಲಿ ನಡೆದಿರುವ ಪುಂಡಾಟಿಕೆ ಮತ್ತು ಗೊಂದಲವು ಯೋಗ್ಯವಾದುದೆಂದು ಯಾರೊಬ್ಬರೂ ಹೇಳುವಂತಿಲ್ಲ. ರಾಜಕೀಯವಾಗಿ ಪ್ರಬುದ್ಧವಾದ ರಾಷ್ಟ್ರವೆಂದು ಭಾರತವು ರೂಪುಗೊಳ್ಳುವುದಕ್ಕೆ ಪೋಷಕವಾದ ವರ್ತನೆಯಂತೂ ಈ ಪುಂಡಾಟಿಕೆ ಆಗಲಾರದು.

ಗೋವಿಜಯ

(ಗೋವಿನ ಕಥೆ)

ಶ್ರೀ. ಮುಖ್ಯಪ್ರಾಣ ಉಪಾಧ್ಯಾಯರಿಂದ ರಚಿತವಾದ, ಮಕ್ಕಳಿಗೂ, ವಯಸ್ಕರ ಶಿಕ್ಷಣಕ್ಕೂ ಅನುಕೂಲವಾದ ಕಥಾಪ್ರಸಂಗ.

ತಮ್ಮಷ್ಟಕ್ಕೆ ತಾವೇ ಕತೆ, ಹಾಡು, ಅರ್ಥ, ಸಂಭಾಷಣೆ, ವಿಷಯ ಜ್ಞಾನ, ಹಾಸ್ಯ, ಶಾರೀರಿಕ ಶಿಕ್ಷಣ ಮೊದಲಾದುವನ್ನು ಏಕಕಾಲದಲ್ಲಿ ಕಲಿತು ನಿಮ್ಮ ಮಕ್ಕಳು ಜಾಣರಾಗಬೇಕೇ? ಹಾಗಿದ್ದರೆ ಈ ಪುಸ್ತಕವನ್ನು ಅವಶ್ಯ ಅವರ ಕೈಗೆ ಕೊಡಿರಿ.

60 ಪುಟಗಳು: ಬೆಲೆ 0—3—0

— ನವಯುಗ ಪ್ರೆಸ್, ಉಡುಪಿ. —

೩೦ ವರ್ಷಗಳಿಂದಲೂ ಪ್ರಸಿದ್ಧ ಇದೆ.

ಮಲೇರಿಯಾ

ಇನ್‌ಫ್ಲುಯೆಂಜಾ ಮತ್ತು ಎಲ್ಲ ಜ್ವರಗಳಿಗೆ

ಎಲ್ಲ ಕೆಮಿಸ್ಟರಲ್ಲಿ ಗ್ರೋಸರರಲ್ಲಿ ದೊರೆಯುತ್ತವೆ.

ಬಾಟ್ಲಿವಾಲಾ ಎಗ್ಯೂಮಿಕ್ಶ್ಚರ

ಮತ್ತು ಗುಳಿಗೆಗಳು

ಸೋಲ ಮ್ಯಾನುಫ್ಯಾಕ್ಚರರು:

ಡಾ. ಎಚ್. ಎಲ್. ಬಾಟ್ಲಿವಾಲಾ ಸನ್ಸ ಮತ್ತು ಕಂ. ಲಿ.,

ಬಾಟ್ಲಿವಾಲಾ ಬಿಲ್ಡಿಂಗ, ೯೭ ಬಿ, ಪೋರ್ತುಗೀಜ ಚರ್ಚಸ್ಟ್ರೀಟ, ದಾದರ, ಮುಂಬಯಿ ೨೮.

Tele add "CAWASHABAD"

ದಿ ಕೆನರಾ ಬ್ಯಾಂಕಿಂಗ್ ಕೋರ್ಪೋರೇಶನ್ ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

1906 ಇದೀಗ ನಡೆಯುತ್ತಲಿರುವ ವರುಷವೇ ಬೇಂಕಿನ ಸುವರ್ಣ ಮಹೋತ್ಸವದ ವರುಷ! 1956

THE CANARA BANKING CORPORATION LIMITED

H. Office: UDIPI (S.India).

NAVAYUGA

Popular Kannada Weekly

Founder:—

A. B. SHETTY, *M. L. A.*
Minister for Public Health,
Govt. of Madras.

ನವಯುಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೫	೨೩–೮–'೫೬	೫೧

ಹಿಂದೂಡಬಾರದ ಹಿಂದಿ

ರಾಷ್ಟ್ರಾಧ್ಯಕ್ಷ ಡಾ. ರಾಜೇಂದ್ರ ಪ್ರಸಾದರು ಸ್ವಾತಂತ್ರ್ಯೋತ್ಸವವನ್ನು ದಕ್ಷಿಣ ಭಾರತದಲ್ಲಿ ಆಚರಿಸುವ ಸಂಪ್ರದಾಯವನ್ನು ಕಳೆದ ಮೂರು ವರ್ಷಗಳಿಂದ ಅನುಸರಿಸುತ್ತಾ ಬಂದಿದ್ದಾರೆ; ಅಲ್ಲದೆ, ಹೈದರಾಬಾದನ್ನು ತಮ್ಮ ದಕ್ಷಿಣ ಕೇಂದ್ರವಾಗಿಯೂ ಆರಿಸಿಕೊಂಡಿದ್ದಾರೆ. ಭಾರತದ ನಾಗರಿಕರಲ್ಲಿ ಔತ್ತರೇಯರ್ ಮತ್ತು ದಾಕ್ಷಿಣಾತ್ಯರು ಎಂಬ ಭೇದ ಭಾವಕ್ಕೆ ಎಡೆ ದೊರಕಬಾರದು, ರಾಷ್ಟ್ರಾಧ್ಯಕ್ಷರಂತಹ ಉಚ್ಚ ಪದಾಧಿಕಾರಿಗಳು ಉತ್ತರಭಾರತದೊಡನೆಯಷ್ಟೇ ನಿಕಟಸಂಪರ್ಕ ಹೊಂದಿರುವರೆಂಬ ಆಕ್ಷೇಪಕ್ಕೆ ಅವಕಾಶವಿರಕೂಡದು—ಎಂಬುದೇ ರಾಷ್ಟ್ರಾಧ್ಯಕ್ಷರು ವ್ಯಕ್ತಪಡಿಸುತ್ತಿರುವ ಸೌಜನ್ಯದ ಮುಖ್ಯ ಕಾರಣ. ಭಾರತವು ಅಖಂಡವಾದುದು ಮತ್ತು ಭಾರತೀಯ ನಾಗರಿಕತೆಯೂ ಭೇದ ಭಾವರಹಿತವಾದುದು ಎಂಬುದನ್ನು ಸೋಷಿಸಲು ಇಂತಹ ಸೌಹಾರ್ದಪೂರ್ಣ ನಡವಳಿಕೆಯಿಂದ ಸಹಾಯವಾಗುತ್ತದೆ. ಆದರೆ ದಾಕ್ಷಿಣಾತ್ಯ ಮತ್ತು ಔತ್ತರೇಯ ಭೇದಭಾವವನ್ನು ತುಸು ತೀವ್ರವಾಗಿಸುವ ಒಂದು ಮುಖ್ಯ ವಿಷಯವಿದೆ: ಅದೆಂದರೆ ಹಿಂದೀ ಭಾಷೆಯ ಬಳಕೆ. ಹಿಂದೀ ಭಾಷೆಯ ಸ್ಥಾನಮಾನವೇನು? ಎಂಬ ಬಗ್ಗೆ ಸರಿಯಾದ ತಿಳಿವಳಿಕೆ ಇಲ್ಲದ ದೆಸೆಯಿಂದಲೇ ದಕ್ಷಿಣ ಭಾರತದಲ್ಲಿ—ಮುಖ್ಯವಾಗಿ ತಮಿಳುನಾಡಿನಲ್ಲಿ—ಗೊಂದಲದ ಭಾವನೆ ಮನೆಮಾಡಿಕೊಂಡಿದೆ. ರಾಷ್ಟ್ರಾಧ್ಯಕ್ಷರು ಈಚೆಗೆ ಹೈದರಾಬಾದಿನಲ್ಲಿಯೂ ಮೊನ್ನೆ ೧೮ನೇ ದಿನಾಂಕ ಮದ್ರಾಸಿನಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪದವೀದಾನ ಭಾಷಣವನ್ನು ಮಾಡುವಾಗಲೂ ಹಿಂದೀ ಭಾಷೆಯ ಬಳಕೆಯ ಬಗ್ಗೆ ಯಾರೊಬ್ಬರೂ ಭಯಪಡಲಾಗದೆಂದು ಸ್ಪಷ್ಟಪಡಿಸಿ ಉಪಕಾರಮಾಡಿದ್ದಾರೆ. ಹಿಂದೀ ಭಾಷೆಯು ಯಾವುದೇ ಇತರ ಭಾರತೀಯ ಭಾಷೆಗಳ ಸ್ಥಾನವನ್ನು ಆಕ್ರಮಿಸಲು ಬಯಸುತ್ತಿಲ್ಲ—ನಮ್ಮ ಸಂವಿಧಾನದಲ್ಲಿ ಎಲ್ಲ ಭಾರತೀಯ ಭಾಷೆಗಳಿಗೂ ಸಮಾನವಾದ ಸ್ಥಾನವು ಕೊಡಲ್ಪಟ್ಟಿದೆ. ಹಿಂದಿಗೆ ಉಚ್ಚ ಪದವಿಯನ್ನು ಕೊಟ್ಟದ್ದಿಲ್ಲ. ಆದುದರಿಂದ ಹಿಂದಿಯು ಇತರ ಭಾರತೀಯ ಭಾಷೆಗಳ ಪ್ರಗತಿಯನ್ನು ಆತಂಕಿಸುವುದು ಅಥವಾ ಹಿಂದೂಡುವುದು ಎಂಬ ಭಯವು ನಿರಾಧಾರವಾದುದಾಗಿದೆ ಎಂದವರು ನುಡಿದಿದ್ದಾರೆ. ಕೇಂದ್ರ ಸರಕಾರವು ಅಖಿಲ ಭಾರತ ಸ್ವರೂಪದ ಉದ್ದೇಶಗಳಿಗಾಗಿ ಹಿಂದಿಯನ್ನು ಬಳಸ[illegible] ಬ್ಬಿದೆ—ಹಿಂದಿಯು ಬೇರೆ ಭಾರತೀಯ ಭಾಷೆಗಳಿಗಿಂತ ಉಚ್ಚಸ್ಥಾನವನ್ನು ಹೊಂದಿದೆಎಂಬುದು ಇದರಕಾರಣವಲ್ಲ—ಭಾರತೀಯರಲ್ಲಿ ಹೆಚ್ಚಿನವರಿಗೆ ಹಿಂದಿಯು ಅರ್ಥವಾಗುತ್ತದೆ ಎಂಬುದೇ ಇದರ ಒಳಗುಟ್ಟು ಎಂದೂ ರಾಷ್ಟ್ರಾಧ್ಯಕ್ಷರು ಸ್ಪಷ್ಟಪಡಿಸಿದ್ದಾರೆ. ಪುನಾರಚಿತ ರಾಜ್ಯಗಳು ಸಾಮಾನ್ಯವಾಗಿ ಭಾಷೆಯ ತಳಹದಿಯ ಮೇಲೆಯೇ ರೂಪುಗೊಂಡವುಗಳಾಗುತ್ತವೆ; ಆಗ ಆಯಾ ರಾಜ್ಯದಲ್ಲಿ ಸಾಮಾನ್ಯವಾಗಿರುವ ಭಾಷೆಯನ್ನೇ ಆ ರಾಜ್ಯದ ಮಟ್ಟಿಗೆ ಸರಕಾರಿ ಭಾಷೆಯಾಗಿ ಸಾರುವುದಕ್ಕೆ ಯಾವುದೇ ಘಟನಾತ್ಮಕ ಆತಂಕವಿರುವುದಿಲ್ಲ. ಹೀಗೆ ಮುಂದಿನ ಮದ್ರಾಸು ರಾಜ್ಯದಲ್ಲಿ ತಮಿಳು ಸರಕಾರಿ ಭಾಷೆಯಾಗುವುದಾದರೆ ಅದರಿಂದ ತನಗೆ ಸಂತೋಷವೇ ಸರಿ ಎಂದಿದ್ದಾರೆ ಡಾ. ಪ್ರಸಾದ. ಕೇಂದ್ರ ಸರಕಾರವು ಈಗ ಇಂಗ್ಲೀಷನ್ನು ಬಳಸುತ್ತಿದೆ; ಇದನ್ನು ತಪ್ಪಿಸಿ ಹಿಂದಿಯ ಬಳಕೆಯಾಗುವಂತೆ ಮಾಡುವುದೇ ಈಗಿನ ಗುರಿಯಾಗಿದೆ. ಆದುದರಿಂದ ಹಿಂದೀ ಭಾಷೆಯು ಇತರ ಯಾವುದೇ ಭಾರತೀಯ ಭಾಷೆಯನ್ನು ಹಿಂದೂಡದೆ ಇಂಗ್ಲೀಷಿನ ಬಳಕೆಯನ್ನು ತಗ್ಗಿಸುತ್ತವೆ. ಆದರೆ ಭಾಷೆಯ ರಂಗದಲ್ಲಿ ನಿಜವಾಗಿ ಇಂದು ಸ್ಪರ್ಧೆ ಅಥವಾ ತಿಕ್ಕಾಟ ಇರುವುದಾದರೆ, ಆಗ ಹಿಂದಿಯು ಸಹಿತ ಭಾರತೀಯ ಭಾಷೆಗಳೆಲ್ಲ ಒಂದು ಪಕ್ಷ ಮತ್ತು ಇಂಗ್ಲಿಷೊಂದೇ ಇನ್ನೊಂದು ಪಕ್ಷ ಆಗುತ್ತದೆ. ನಾವು ಇಂಗ್ಲಿಷನ್ನು ಮರೆತು ಬಿಡಬೇಕೆಂದು ಇದರ ಅರ್ಥವಲ್ಲ—ಸ್ಥಳೀಯ ಉದ್ದೇಶಗಳಿಗಾಗಿ ಮಾತೃಭಾಷೆ ಅಥವಾ ಪ್ರಾದೇಶಿಕ ಭಾಷೆ, ರಾಷ್ಟ್ರೀಯ ಉದ್ದೇಶಗಳಿಗಾಗಿ ಹಿಂದೀ ಭಾಷೆ ಮತ್ತು ಅಂತಾರಾಷ್ಟ್ರೀಯ ಉದ್ದೇಶಗಳಿಗಾಗಿ ಇಂಗ್ಲಿಷನ್ನು ಬಳಸಿಕೊಳ್ಳಲಿ. ನಾವು ನೋಡುವುದು ಹಿತಕರ. ಹಿಂದಿ ಮತ್ತು ಇಂಗ್ಲಿಷುಗಳ ಅಭ್ಯಾಸವನ್ನು ವಿದ್ಯಾರ್ಥಿಗಳಿಗೆ ಈ ದೃಷ್ಟಿಯಿಂದ ಯೋಗ್ಯವಾದ ಕಾಲದಲ್ಲಿ ಮಾಡಿಕೊಡಬೇಕು. ಹಿಂದಿಯೇ ಪ್ರಾದೇಶಿಕ ಭಾಷೆಯಾಗಿರುವ ಪ್ರದೇಶಗಳಲ್ಲಿ ವಿದ್ಯಾರ್ಥಿಗಳೂ ಜನರೂ ಭಾರತದ ಬೇರೆ ಪ್ರಮುಖ ಭಾಷೆಗಳಲ್ಲಿ ಯಾವುದಾದರೊಂದರಲ್ಲಿಯಾದರೂ ಪ್ರಾವೀಣ್ಯವನ್ನು ಸಂಪಾದಿಸಲು ಪ್ರಯತ್ನಿಸಬೇಕು. ಹೀಗೆ ಹಿಂದಿ ಭಾಷೆಯಾಡುವ ಜನರಿಗೆ ವಿಶೇಷ ಅನುಕೂಲತೆ ಇದೆ ಎಂಬ ಭಾವನೆಯ ನಿವಾರಣೆಯಾಗಬೇಕು, ಅಲ್ಲದೆ ಭಾರತದಲ್ಲೆಲ್ಲ ಸಾಂಸ್ಕೃತಿಕ ಪುನರುಜ್ಜೀವನ ಭಾವ ಉದಯಿಸಬೇಕು. "ಬಿಹಾರಿನ ನಾಗರಿಕನೊಬ್ಬನು ತಮಿಳಿನಲ್ಲಿ ಪದ್ಯ ಕಟ್ಟುವ ಮತ್ತು ತಮಿಳು ನಾಡಿನ ವ್ಯಕ್ತಿಯೊಬ್ಬನು ಪಂಜಾಬಿಯಲ್ಲಿ ಹಾಡನ್ನು ರಚಿಸಬಲ್ಲ ಭವ್ಯ ದಿನಗಳನ್ನು ನಾನು ಇದಿರು ನೋಡುತ್ತಿದ್ದೇನೆ. ಆ ದಿನ ಹತ್ತಿರವಾಗಲಿ!" ಎಂದು ರಾಷ್ಟ್ರಾಧ್ಯಕ್ಷರು ಆಶಿಸಿದ್ದಾರೆ. ನಾವಾದರೂ ಈ ಮಾತುಗಳನ್ನೇ ಒತ್ತಿ ಹೇಳಲಿಚ್ಛಿಸುತ್ತೇವೆ; ಮತ್ತು ಹಿಂದೀ ಭಾಷೆಯ ಬಗ್ಗೆ ಅನಾವಶ್ಯಕವಾದ ಟೀಕೆಗಳನ್ನು ಮಾಡಬಾರದೆಂದೂ ಸಾರ್ವಜನಿಕರನ್ನು ವಿನಂತಿಸಿಕೊಳ್ಳುತ್ತೇವೆ.

ಸುಖ—ದುಃಖ

ನಮ್ಮ ಈ ಸಂಚಿಕೆಯೊಂದಿಗೆ "ನವಯುಗ"ದ ೩೫ನೇ ವರ್ಷವು ಕೊನೆಗೊಳ್ಳುತ್ತದೆ. ನೂತನ ವರ್ಷದ ಪ್ರಥಮ ಸಂಚಿಕೆಯು ಬರುವ ೬-೯-೧೯೫೬ನೇ ದಿನಾಂಕ ಹೊರಡಲಿದೆ. ಪತ್ರಿಕೆಯು ಬದುಕಲಿಕ್ಕೆ ಮತ್ತು ಪ್ರಗತಿಯನ್ನು ಹೊಂದಲಿಕ್ಕೆ ಸಾರ್ವಜನಿಕರ, ಮುಖ್ಯವಾಗಿ ಚಂದಾದಾರ ಬಂಧುಗಳ, ಹಾರ್ದಿಕ ಸಹಕಾರವು ಅತ್ಯಾವಶ್ಯಕವೆಂಬುದು ಎಲ್ಲರಿಗೂ ತಿಳಿದ ವಿಷಯ. ನಮ್ಮ ಮೇಲೆ ಅಭಿಮಾನವಿಟ್ಟಿರುವ ಚಂದಾದಾರ ಬಂಧುಗಳೆಲ್ಲರೂ ನಮ್ಮನ್ನು ಇತೋಪ್ಯತಿಶಯವಾಗಿ ಪ್ರೋತ್ಸಾಹಿಸಬೇಕೆಂದು ನಾವು ಅಪೇಕ್ಷಿಸುತ್ತೇವೆ. ಎಲ್ಲ ಚಂದಾದಾರರೂ ತಮ್ಮ ಹಳೆ ಬಾಕಿಯನ್ನು ಒಡನೆಯೇ ಕಳುಹಿಸಿಕೊಟ್ಟು ಪತ್ರಿಕೆಯ ಆರ್ಥಿಕ ಬಲವನ್ನು ಸಂವರ್ಧಿಸಬೇಕೆಂದು ವಿನಂತಿಸುತ್ತೇವೆ;

ಅಲ್ಲದೆ, ಪ್ರತಿಯೊಬ್ಬ ಚಂದಾದಾರ ಬಂಧುವು ಒಬ್ಬನಾದರೂ ಹೊಸ ಚಂದಾದಾರರನ್ನು ಒದಗಿಸಿಕೊಡಲು ಪ್ರಯತ್ನಿಸಿ ನಮ್ಮ ಶಕ್ತಿಯನ್ನು ಹೆಚ್ಚಿಸಲು ತ್ರಿಕರಣಪೂರ್ವಕ ದುಡಿಯಬೇಕೆಂದು ನಾವು ಪ್ರಾರ್ಥಿಸುತ್ತೇವೆ. ಈ ಪತ್ರಿಕೆಯು ಯಾವುದೇ ಒಂದು ಗುಂಪನ್ನು ಎತ್ತಿಕಟ್ಟುತ್ತಿಲ್ಲ—ವ್ಯಕ್ತಿಯೊಬ್ಬನ ಪ್ರಭಾವಲಯದಲ್ಲಿ ಕೆಲಸ ಮಾಡುತ್ತಲೂ ಇಲ್ಲ. ಜನರ ಪರವಾಗಿ ಮಾತನಾಡುತ್ತದೆ; ಜನರಿಗಾಗಿ ಒಳ್ಳೆಯ ಅಭಿರುಚಿಯುಕ್ತವಾದ ಲೇಖನಗಳನ್ನೇ ಪ್ರಕಟಿಸುತ್ತಾ ಬಂದಿದೆ; ಆದಷ್ಟು ವೈವಿಧ್ಯವಿರುವಂತೆ ವಿಷಯಗಳನ್ನು ಅಳವಡಿಸಿಕೊಂಡು ಆಯಾ ವಾರದ ಪ್ರಮುಖ ವಿದ್ಯಮಾನಗಳ ಮೇಲೆ ವಿಶೇಷ ಪ್ರಕಾಶವನ್ನು ಬೀರುವಂತೆ ಸಂಪಾದಕೀಯ ವಿಭಾಗವು ದುಡಿದಿದೆ. ಪತ್ರಿಕೆಯ ಸೂಕ್ಷ್ಮಾವಲೋಕನ ಮಾಡಿದವರೆಲ್ಲರಿಗೂ ಗೊತ್ತಾಗಿರಬಹುದಾದ ಸಂಗತಿ ಇದಾಗಿದ್ದು ನಾವು ಹೆಚ್ಚಿಗೇನೂ ಹೇಳುವುದು ಯುಕ್ತವಲ್ಲ. ಚಂದಾದಾರರು ನಮ್ಮನ್ನು ಪ್ರೋತ್ಸಾಹಿಸಲಿ, ಸಾರ್ವಜನಿಕರು ಚಂದಾದಾರರಾಗಿ ಸಹಕರಿಸಲಿ ಎಂಬುದೇ ನಮ್ಮ ವಿನೀತ ವಿನಂತಿಯಾಗಿದೆ. ಇದೇ ನಮ್ಮ ನಿಮ್ಮ ಸುಖ ದುಃಖದ ಮಾತು.

Proceedings of the meeting of the Wargadars of Udipi Taluk held at 4 P. M. on Sunday, the 19th August 1956 in the Badagabettu Co-operative Society Building with Shri K. J. Ballal, B. A., LL. B., Vakil in the chair.

Read notice of meeting published in the Navayuga dated 9-8-56 and also the circular of the Collector of South Kanara Ref. C. No. 17122/56-B6 and connected orders.

This meeting views with alarm the Board's resolution Rt. 2180/ dated 8-4-48 and Bt. Rt. 3432/ dated 30-5-50 and the circular of the Collector of South Kanara Ref. C. No. 17122/56-B5 based thereon and considers the above steps and restrictions imposed on assignment of lands within kumki limits in South Kanara District has highly expropriatory and prejudicial to the time honoured rights and previleges enjoyed by the wargdars in this District.

It points out that the kumki lands i. e., lands within 100 yards of the kadim land used to be guarded, protected and possessed and enjoyed practically as part and parcel of the warg land and the tree growth, if any, thereon reared and conserved by the concerned wargdars often securely enclosed by hedges and stonewalls. But for this amount of care and protection exercised by the wargdars the tree growth on such kumki lands would not have been there. Therefore it was that the Government used to recognise these rights and previleges and assign the kumki lands to the adjoining wargdars irrespective of their extent or the value of the tree growth thereon.

This meeting, therefore, urges upon the Government to remove or remedy all ristrictions envisaged by the above quoted and other similar proceedings and circular and continue to extend to the wargadars the right and privileges of enjoyment and of getting on darakhast, of their kumki lands according to pre-existing rules.

Sd. K. J. Ballal,
Chairman.

ಅಗ್ಗದರದ ಅಕ್ಕಿ ಅಂಗಡಿಗಳು—ತಾ. ೧೫ರಂದು ಕಲೆಕ್ಟರರ ಪರ್ಸನಲ್ ಅಸಿಸ್ಟಂಟ್ ಶ್ರೀ ಪರಮೇಶ್ವರ ನಾಯ್ಕರವರಿಂದ ಉಡುಪಿಯಲ್ಲಿಯೂ ಮಲ್ಪೆಯಲ್ಲಿಯೂ ಉದ್ಘಾಟಿಸಲ್ಪಟ್ಟವೆ.

ಜನಪ್ರಿಯ ಪುಸ್ತಕದ ಮೂರನೇ ಆವೃತ್ತಿ ಇದೀಗ ತಯಾರಾಗಿದೆ

ಮನೆಯಲ್ಲಿ ಕಾಹಿಲೆಯಾದರೆ ಕಳವಳವೇಕೆ?

ಮನೆಯಲ್ಲೇ "ಮನೆ ಮದ್ದು" ಇದ್ದರೆ ಗಾಬರಿಯೇಕೆ?

ಮನೆ-ಮದ್ದು

HOME REMEDIES

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟರಾವ್, ಎಲ್. ಐ. ಎಮ್.

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ವಿವರಿಸಲ್ಪಟ್ಟಿದೆ.

ಬೆಲೆ: ರೂ. ೨—೦—೦ (ಟ. ಖರ್ಚು ಬೇರೆ).

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುಯೇಜಿನ ಕಾಲುವೆ ತಂಟೆ

ಲಂಡನಿನಲ್ಲಿ ೨೨ ರಾಷ್ಟ್ರಗಳ ಸಮ್ಮೇಲನ

ಸುಯೇಜಿನ ಕಾಲುವೆ ತಂಟೆಯ ಬಗ್ಗೆ ಲಂಡನಿನಲ್ಲಿ ಸಮ್ಮೇಳನವು ಸಮಾವೇಶಗೊಂಡಿದೆ. ಆಮಂತ್ರಿತವಾದ ೨೪ ರಾಷ್ಟ್ರಗಳಲ್ಲಿ ಐಗುಪ್ತ ಮತ್ತು ಗ್ರೀಸುಗಳನ್ನು ಬಿಟ್ಟುಳಿದ ೨೨ ರಾಷ್ಟ್ರಗಳು ಈ ಸಮ್ಮೇಳನದಲ್ಲಿ ಭಾಗವಹಿಸಿವೆ. ಭಾರತವನ್ನು ಶ್ರೀ ವಿ. ಕೆ. ಕೃಷ್ಣಮೆನನ್ ಪ್ರತಿನಿಧಿಸುತ್ತಾರೆ.

ಅಂತಾರಾಷ್ಟ್ರೀಯ ನಿಯಂತ್ರಣ

ಸಮ್ಮೇಳನದಲ್ಲಿ ಅಮೇರಿಕವು ಯೋಜನೆಯೊಂದನ್ನು ಮಂಡಿಸಿ, ಅಂತಾರಾಷ್ಟ್ರೀಯ ನಿಯಂತ್ರಣಕ್ಕೆ ಕಾಲುವೆಯನ್ನು ಒಪ್ಪಿಸಿಕೊಡುವುದೇ ತಂಟೆಗೆ ಸೂಕ್ತವಾದ ಪರಿಹಾರ ಎಂದಿದ್ದಾರೆ. ಈ ಯೋಜನೆಯನ್ನು ಐಗುಪ್ತವು ಎಷ್ಟು ಮಾತ್ರಕ್ಕೂ ಒಪ್ಪಿಗೆಯಾಗಲಾರದೆಂದು ಕೈರೋದಿಂದ ವರದಿಯಾಗಿದೆ.

ಭಾರತದ ಅಭಿಮತ

ರಷ್ಯವು ತನ್ನದೊಂದು ಸೂಚನೆಯನ್ನು ಮಂಡಿಸಿ ವಿಸ್ತೃತ ಸ್ವರೂಪದ ಸಮ್ಮೇಳನವನ್ನು ಕರೆಯುವುದು ಅವಶ್ಯಕ ಎಂದಿದೆ. ಭಾರತದ ಪರವಾಗಿ ಮಂಡಿಸಿದ ಯೋಜನೆಯೊಂದು ಕಾಲುವೆ ಕಂಪೆನಿಯ ರಾಷ್ಟ್ರೀಕರಣವನ್ನು ಮನ್ನಿಸಬೇಕೆಂದೂ ಕಾಲುವೆಯು ಐಗುಪ್ತದ ಸಾರ್ವಭೌಮಾಧಿಕಾರಕ್ಕೆ ಒಳಪಟ್ಟ ಪ್ರದೇಶದಲ್ಲಿದೆಯೆಂದು ಒಪ್ಪಬೇಕೆಂದೂ ಕಾಲುವೆಯಲ್ಲಿ ಹಡಗು ಸಂಚಾರ ಸ್ವಾತಂತ್ರ್ಯದ ಮಟ್ಟಿಗೆ ಮಾತ್ರ ಅಂತಾರಾಷ್ಟ್ರೀಯ ಸ್ವರೂಪದ ಒಪ್ಪಂದಕ್ಕೆ ಬರಲು ಪ್ರಯತ್ನಪಡುವುದು ಲೇಸೆಂದೂ ಹೇಳುತ್ತದೆ. ಇದಕ್ಕೆ ರಷ್ಯದ ಬೆಂಬಲ ದೊರೆತಿದೆ.

ಮೆನನ್ನರ ಎಚ್ಚರಿಕೆ

ಭಾರತದ ಪರವಾಗಿ ಮಾತನಾಡುತ್ತಾ ಶ್ರೀ ಮೆನನ್ನರು ಸುಯೇಜಿನ ತಂಟೆಯನ್ನು ಅಂತಾರಾಷ್ಟ್ರೀಯ ನಿಯಂತ್ರಣ ಯೋಜನೆಯನ್ನನುಸರಿಸಿ ಬಿಡಿಸ ಹೋಗುವುದರಿಂದ ಐಗುಪ್ತದ ಸಾರ್ವಭೌಮಾಧಿಕಾರಕ್ಕೆ ತಿರಸ್ಕಾರ ತೋರಿಸಿದಂತಾಗುತ್ತದೆ ಎಂದಿದ್ದಾರೆ. ತಂಟೆಯನ್ನು ಶಾಂತವಾದ ವಿಧಾನದ ಮೂಲಕವೇ ಪರಿಹರಿಸಿಕೊಳ್ಳಬೇಕು; ಶಕ್ತಿ ಪ್ರದರ್ಶನಕ್ಕೆ ಮನಸ್ಸು ಮಾಡಿದರೆ ಘರ್ಷಣೆಯು ಮಿತವಾದ ಕ್ಷೇತ್ರವನ್ನಷ್ಟೆ ವ್ಯಾಪಿಸದೆ ಲೋಕದ ಇತರೆಡೆಗೆ ಸಹ ಅದರ ಜ್ವಾಲೆ ಹತ್ತಬಹುದು ಎಂದು ಹೇಳಿದ್ದಾರೆ.

ಕಾಸರಗೋಡು ಹೋಯಿತು!

ಕಾಸರಗೋಡು ತಾಲೂಕಿನ ಉತ್ತರ ಭಾಗವನ್ನು ಕರ್ನಾಟಕದಲ್ಲಿ ಉಳಿಯಗೊಡಬೇಕೆಂಬು ಶ್ರೀ ಶಿವರಾಯರು ಲೋಕಸಭೆಯ ಮುಂದೆ ತಂದಿದ್ದ ತಿದ್ದುಪಡಿಯು ತಿರಸ್ಕೃತವಾಗಿದೆ. ಗೃಹಮಂತ್ರಿ ಪಂಡಿತ ಪಂತರು ಕೇರಳದ ಸಮಸ್ಯೆಗೆ ಸಮ್ಮತವಲ್ಲದ ತಿದ್ದುಪಡಿಯನ್ನು ಈ ಸಂಬಂಧದಲ್ಲಿ ಒಪ್ಪಲಾರೆನೆಂದು ಹೇಳಿದುದರಿಂದ ಹೀಗಾಯಿತು. ರಾಜ್ಯಸಭೆಯಲ್ಲಿಯೂ ಇಂತಹ ತಿದ್ದುಪಡಿ ತರಲು ಪ್ರಯತ್ನ ನಡೆದಿದೆ; ಆದರೆ ಗೃಹಮಂತ್ರಿಗಳ ಧೋರಣೆಯಲ್ಲಿ ಬದಲಾವಣೆಯಾದಂತೆ ಕಾಣುವುದಿಲ್ಲ.

ಗೇಣಿ ನಿರ್ಣಯ ಮುಸೂದೆ

ಮದ್ರಾಸಿನ ಶಾಸನಾಂಗದ ಅಧಿವೇಶನವು "ಓಣಂ" ಹಬ್ಬದ ನಿಮಿತ್ತ ಮುಂದರಿಯುವುದಕ್ಕೆ ಮುಂಚೆ ನ್ಯಾಯವಾದ ಗೇಣಿ ನಿರ್ಣಯ ಮುಸೂದೆಯ ಚರ್ಚೆ ನಡೆಯುವುದೆಂದು ಹಿಂದೆ ವರದಿಯಾಗಿದ್ದರೂ ಸಪ್ಟಂಬರ ತಿಂಗಳಿಗೆ ಈ ಚರ್ಚೆ ಮುಂದರಿದಿದೆ. ಕಂದಾಯ ಮಂತ್ರಿಗಳೊಡನೆ ಯೋಜನಾ ಆಯೋಗವು ಸಮಾಲೋಚನೆ ನಡೆಸಲು ಬಯಸಿದುದರಿಂದ ಹೀಗೆ ವಿಳಂಬವಾಗಿದೆ. ಈ ಸಮಾಲೋಚನೆಯ ಫಲವೇನೆಂದು ಇನ್ನೂ ವ್ಯಕ್ತವಾಗಿಲ್ಲ.

ಪ್ರದೇಶ ಕಾಂಗ್ರೆಸು

ಎಲ್ಲ ಕನ್ನಡ ಪ್ರದೇಶಗಳ ಸೇರ್ಪಡೆಯಿಂದ ಹೊಸ ರಾಜ್ಯವು ಬೃಹನ್ಮೈಸೂರು ಎಂಬ ಹೆಸರಿನಿಂದ ರೂಪುಗೊಳ್ಳುವಾಗ ಈಗಿನ ಕರ್ನಾಟಕ ಪ್ರದೇಶ ಹಾಗು ಮೈಸೂರು ಪ್ರದೇಶ ಕಾಂಗ್ರೆಸುಗಳು ಒಂದುಗೂಡಿ, ಒಂದೇ ಪ್ರದೇಶ ಕಾಂಗ್ರೆಸು ತಲೆಎತ್ತಲಿದೆ ಎಂದು ಶ್ರೀ ಮಾಧವನ್ ನಾಯರ್ ತಿಳಿಸಿದ್ದಾರೆ. ಪುನರ್ಘಟಿತ ರಾಜ್ಯಗಳಲ್ಲಿ ಮಂತ್ರಿಮಂಡಳವು ಹೊಸತಾಗಿ ಆವಶ್ಯಕತಾನುಸಾರ ರೂಪುಗೊಳ್ಳುವುದೆಂದು ತಿಳಿದುಬರುತ್ತದೆ.

"ಮೈಸೂರೇತರರಿಗೆ ಸ್ವಾಗತ"

ಈಗಿನ ಮೈಸೂರು ರಾಜ್ಯದ ನೂತನ ಮುಖ್ಯಮಂತ್ರಿ ಶ್ರೀ ಕಡಿದಾಳ ಮಂಜಪ್ಪನವರು "ಹಿಂದಿನದೆಲ್ಲವನ್ನೂ ಮರೆತು ಬಿಡೋಣ; ಎಲ್ಲ ಕನ್ನಡಿಗರನ್ನೂ ಆದರದಿಂದ ಬರಮಾಡಿಕೊಳ್ಳೋಣ; ಹೊಸ ರಾಜ್ಯವು ಸುಖಕರವಾದ ವಾತಾವರಣದಲ್ಲಿ ಸುಗಮವಾಗಿ ತಲೆಎತ್ತುವಂತೆ ನೋಡಿಕೊಳ್ಳೋಣ" ಎಂದು ಹೇಳಿರುತ್ತಾರೆ. ಹೊಸರಾಜ್ಯದಲ್ಲಿ ಸೇರುವ ಜನರು ತಮ್ಮ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಬೇಕೆಂದೂ ಅವರು ಅಪೇಕ್ಷಿಸಿದ್ದಾರೆ.

ಬರುವ ವಾರ ರಜೆ

ಶ್ರೀ ಕೃಷ್ಣಾಷ್ಟಮಿ ಮತ್ತು ವಿಟ್ಲಪಿಂಡಿ ಸಂಬಂಧ ತಾ. 28 ಮತ್ತು 29ಕ್ಕೆ ಪ್ರೆಸ್ಸಿಗೆ ರಜೆ ಇರುವುದರಿಂದ ಬರುವ ವಾರದ (ತಾ. 30 8-56) ನವಯುಗ ಸಂಚಿಕೆಯನ್ನು ನಿಲ್ಲಿಸಲಾಗಿದೆ.

ಮೆನೇಜರ್.

ಉಡುಪಿ

ಸ್ವಾತಂತ್ರ್ಯ ದಿನಾಚರಣೆಯು— ತಾ. 15ರಲ್ಲು ಸಾಂಗವಾಗಿ ಜರಗಿತು. ಅಂದು ಬೆಳಿಗ್ಗೆ ಪ್ರಭಾತಫೇರಿಯಾದ ಬಳಿಕ ಅಜ್ಜರಕಾಡು ಮೈದಾನಿನಲ್ಲಿ ಮುನಿಸಿಪಲ್ ಚೇರ್ಮನ್ ಶ್ರೀ ಕೆ. ಕೆ. ಪೈಗಳು ಧ್ವಜಾರೋಹಣ ಮಾಡಿದರು. ಡಾ. ಟಿ. ಮಾಧವ ಪೈಗಳು ಪಾನಪಿತ್ತ ಡ್ರೆಸ್ಸುಗಳನ್ನು ಶ್ರೀ ಕೊಚ್ಚಿಕಾರ್ ನಾಗನಾಥ ಪೈಗಳು ಬನ್ನಂಜೆ ಹರಿಜನ ಶಾಲೆಯ ಹರಿಜನ ವಿದ್ಯಾರ್ಥಿಗಳಿಗೆ ವಿತರಣೆ ಮಾಡಿದರು. ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಸಂಜೆ ಬೋರ್ಡು ಹೈಸ್ಕೂಲಿನ ಜನತಾ ಭವನದಲ್ಲಿ ಕಲೆಕ್ಟರ್ಸ್ ಪರ್ಸನಲ್ ಅಸಿಸ್ಟೆಂಟ್ ಶ್ರೀ ಪರಶುರಾಮ ನಾಯ್ಡುರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀ ಎ. ಜೆ. ಆಳ್ವರವರು ಸ್ವಾಗತಭಾಷಣ ಮಾಡಿದರು. ಕುಂದಾಪುರ ಆರ್. ಡಿ. ಓ. ಶ್ರೀ ಸೂರ್ಯನಾರಾಯಣ ರಾಯರು ಭಾಷಣವಿತ್ತರು. ಕಳೆದ ವರುಂಬರ ತಿಂಗಳಲ್ಲಿ ಸುತ್ತೆ ಸಮುದ್ರದಲ್ಲಿ ಓರ್ವ ಹೆಂಗಸಿನ ಜೀವ ಉಳಿಸಿದುದಕ್ಕೆ ಮಲ್ಪೆ ಸಿಟಿಜನ್ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ ಅಂಗರ ಪೂಜಾರಿಗೆ ಬೆಳ್ಳಿಯ ಮೆಡಲ್ ಮತ್ತು ಸರ್ಟಿಫಿಕೇಟು ಕೊಡಲಾಯಿತು. ಶ್ರೀಗಳಾದ ಡಿ. ಬಿ. ಅಂತಯ್ಯ ಸೆಟ್ಟಿ ಮತ್ತು ಕೋಟಿಯಾನರಿಗೆ ಕೂಡಾ ಸರ್ಟಿಫಿಕೇಟು ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಿವಾಜಿ ಹನುಮಾನ್ ವ್ಯಾಯಾಮ ಶಾಲೆ ಉದ್ಯಾವರ, ಬಾಬಾಚಾರ್ಯರ ಹಿರಿಯಡ್ಕ ವ್ಯಾಯಾಮ ಶಾಲೆ ಹಾಗೂ ಮಲಬಾರ್ ತಾಲೀಂ ಶಾಲೆ ಉಡುಪಿ, ಇವರಿಂದ ವ್ಯಾಯಾಮ ಪ್ರದರ್ಶನ ಯಶಸ್ವಿಯಾಗಿ ಜರಗಿತು.

ಸರಕಾರಿ ಬುನಾದಿ ಶಿಕ್ಷಣ ತರಬೇತಿ ಶಾಲೆಯಲ್ಲಿ— ಡಾ. ಕೊಚ್ಚಿಕಾರ್ ನಾಗನಾಥ ಪೈಗಳವರಿಂದ ಧ್ವಜಾರೋಹಣವಾಯಿತು. ಸಂಜೆ ಎಮ್. ಜಿ. ಎಮ್. ಕಾಲೇಜ್ ಲೆಕ್ಚರರ್ ಶ್ರೀ ಗುರುರಾಜ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಯಕ್ಷಗಾನಗಳಾದುವು.

ಎಮ್. ಜಿ. ಎಮ್. ಕಾಲೇಜಿನಲ್ಲಿ— ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಧ್ವಜಾರೋಹಣಮಾಡಿದರು. ನಂತರ ಯೂನಿಯನ್ ಅಧ್ಯಕ್ಷ ಶ್ರೀ ಪಿ. ಜಯರಾಮ ಸೆಟ್ಟರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ನಗರಸಭೆಯಲ್ಲಿ— ಉಡುಪಿ ಡಿ. ಮುನ್ಸಿಫ್ ಶ್ರೀ ರಾಮಚಂದ್ರ ರಾಯರು ಧ್ವಜಾರೋಹಣಮಾಡಿದರು.

ಫಯರ್ ಸರ್ವಿಸ್ ಆಫೀಸಿನಲ್ಲಿ— ಸಬ್ ಆಫೀಸರ್ ಶ್ರೀ ಇ. ಗೋಪಾಲ್ಪಿಳ್ಳೆ ಧ್ವಜವನ್ನರಳಿಸಿದರು.

ಸೈಂಟ್ ಸಿಸಿಲೀಸ್ ಹೈಸ್ಕೂಲಲ್ಲಿ— ಶ್ರೀ ಬಿ. ಶ್ರೀನಿವಾಸಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಮೊದಲಾದ ಕಾರ್ಯಕ್ರಮಗಳಾದುವು.

ಫ್ರೆಂಡ್ಸ್ ಯೂನಿಯನ್‌ನಲ್ಲಿ— ಶ್ರೀ ಎ. ಜೆ. ಆಳ್ವರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

ಫಲಕೋತ್ಸವ— ಉಡುಪಿ ಬೋರ್ಡು ಹೈಸ್ಕೂಲಿನ ಜನತಾ ಮಂದಿರದಲ್ಲಿ ತಾ. 16ರಲ್ಲಿ ದ. ಕ. ಜಿಲ್ಲಾ ಬೋರ್ಡು ಹೈಸ್ಕೂಲುಗಳಲ್ಲಿ 1956ರಲ್ಲಿ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತಮ ಫಲಿತಾಂಶವನ್ನು ಪಡೆದ ಉಡುಪಿ ಬೋರ್ಡು ಹೈಸ್ಕೂಲಿಗೆ ಜಿಲ್ಲಾ ಬೋರ್ಡಿನಿಂದ ಕೊಡಲ್ಪಟ್ಟ ಫಲಕದ ಸಮಾರಂಭವು ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಹೆಡ್ಮಾಸ್ಟರ್ ಶ್ರೀ. ಅನಂತಕೃಷ್ಣ ಸಾಮಗರು ಸ್ವಾಗತಭಾಷಣ ಮಾಡುತ್ತಾ ಈ ಶಾಲೆಯು ಫಲಕವನ್ನು ಪಡೆಯುವಂತಾಗಲು ವಿದ್ಯಾರ್ಥಿಗಳ ಹಾಗೂ ಅಧ್ಯಾಪಕರ ಪ್ರಯತ್ನವೇ ಕಾರಣವೆಂದರು. ಸಭೆಯಲ್ಲಿ ಶ್ರೀಗಳಾದ ಗೋವಿಂದ್ರಾವ್, ಬಿ. ವಿಠ್ಠಲರಾಯ ಶೆಟ್ಟಿ, ಎಸ್. ಎಲ್. ನಾರಾಯಣ ಭಟ್ಟರೂ ವಿದ್ಯಾರ್ಥಿಗಳೂ ಮಾತನಾಡಿದರು. ಅಧ್ಯಕ್ಷರು ಈ ಶಾಲಾಧ್ಯಾಪಕರ ಪ್ರಯತ್ನವನ್ನು ಕೊಂಡಾಡಿ ಫಲಕ ಪಡೆದುದು ಶಿಕ್ಷಣ ರಂಗಕ್ಕೂ ಉಡುಪಿಗೂ ಕೀರ್ತಿಯೆಂದರು. ಶಾಲಾ ಮುಖಂಡ ಎಂ. ಸುಬ್ರಹ್ಮಣ್ಯ ಹೆಬ್ಬಾರರು ಧನ್ಯವಾದಗಳನ್ನಿತ್ತರು.

ಓಣಂ ಆಚರಣೆ— ಸ್ಥಳೀಯ ಕೇರಳ ಸಮಾಜ ಮತ್ತು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಮಲೆಯಾಳಿ ಪ್ರೊಫೆಸರ್ಸ್ ಹಾಗೂ ವಿದ್ಯಾರ್ಥಿಗಳು ತಾ. 20ರಲ್ಲಿ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪಟಾರದಲ್ಲಿ ಓಣಂ ಹಬ್ಬವನ್ನು ಆಚರಿಸಿದರು. ಡಾ. ಎ ಸ್. ಎ ಸ್ ಗೋಪ್ಬಲೆ, ಅವರು ಅಧ್ಯಕ್ಷತೆವಹಿಸಿದ್ದರು. ಶ್ರೀ ಟಿ. ಎ. ವಾಸುದೇವನ್‌ರವರು ವರದಿವಾಚನಮಾಡಿದರು. ಮಿಸ್ ಸಿ. ಪದ್ಮಲಾ ನಂಬಿಯಾರ್, ಶ್ರೀ ಎಮ್. ಕೆ. ಜಿ. ಪಣಿಕರ್ ಮೊದಲಾದವರು ಮಾತನಾಡಿದರು. ಬಹುಮಾನ ವಿತರಣೆ ವಿವಿಧ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಾಗಿ ಸಮಾರಂಭವು ಜಯಶೀಲವಾಗಿ ಕೊನೆಗೊಂಡಿತು.

ಉಡುಪಿ ತಾಲೂಕು ವರ್ತಕರ ಸಭೆಯು— ತಾ. 26ನೇ ಆದಿತ್ಯವಾರ ಮಧ್ಯಾಹ್ನ 2ಗಂಟೆಗೆ ಬಡಗಬೆಟ್ಟು ಸಹಕಾರ ಸಂಘದಲ್ಲಿ (ಕ್ರಿಶ್ಚಿಯನ್ ಹೈಸ್ಕೂಲ್ ಎದುರುಗಡೆ) ಜರಗಲಿದ್ದು ವರ್ತಕರೆಲ್ಲರೂ ಬರಬೇಕಾಗಿ ವಕೀಲ್ ಕೆ. ಜೆ. ಬಲ್ಲಾಳರು ವಿನಂತಿಸುತ್ತಾರೆ.

ವಿದಾಯ ಸತ್ಕಾರ— ಉಡುಪಿ ಪ್ರಧಾನ ಅಂಚೆ ಕಚೇರಿಯಲ್ಲಿ ಅಲ್ಲಿಯ ಎಕೌಂಟೆಂಟ್ ಆಗಿದ್ದ ಶ್ರೀ ಬಿ. ಬಾಲಕೃಷ್ಣನವರು ಹೊಸ ಉದ್ಯೋಗದ ಮೇಲೆ ಹರ್ಪಿಯಕ್ಕೆ ಹೋಗಲಿರುವ ನಿಮಿತ್ತ ಅವರಿಗೆ ತಾ. 18ರಲ್ಲಿ ಉಡುಪಿ ಅಂಚೆ ಮತ್ತು ತಂತಿ ರಿಕ್ರಿಯೇಶನ್ ಕ್ಲಬ್ಬಿನ ವತಿಯಿಂದ ಸತ್ಕರಿಸಲಾಯಿತು. ಶ್ರೀ ಕೊಚ್ಚಿಕಾರ್ ವರದರಾಯ ಪೈಗಳು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಎನ್. ಕೆ. ಮೆನೋನ್ (ಪೋಸ್ಟಲ್ ಇನ್ಸ್‌ಪೆಕ್ಟರು) ಕೆ. ಮಾಲಿಂಗ, ಆರ್. ಎಸ್. ಪೈಲಾಯ, ಕೆ. ರಘುಶೆಟ್ಟಿ, ಗೋಪಾಲ ಭಟ್, ಎಚ್. ರಾಜಗೋಪಾಲ ರಾವ್, ಬೋಜ ರಾವ್ ಬಾಗ್ಲೋಡಿ, ಟಿ. ಕೇಶವ, ಶೇಕ್‌ಅಲ್ಲಿ ಸಾಹೇಬ್, ಪ್ರೇಮಾನಂದ ಶೆಣೈ, ಆನಂದ ಪಟ್ಟಿಗಾರ, ಬಿ. ಶಿವಾನಂದ ಪೊಳ್ಳ ಮೊದಲಾದವರು ಅತಿಥಿಯ ಗುಣಗಾನಮಾಡಿದರು. ಅಧ್ಯಕ್ಷರು ಮುಖ್ಯ ಅತಿಥಿಗೆ ಸಕಲ ಯಶಸ್ಸನ್ನೂ ಹಾರೈಸಿದರು.

ಸಪ್ತಾಹ ಮುಕ್ತಾಯ— ಉಡುಪಿ ಗೌಡಸಾರಸ್ವತ ಸಮಾಜದ ಶ್ರೀ ವೆಂಕಟ್ರಮಣ ದೇವಸ್ಥಾನದಲ್ಲಿ ತಾ. 11ರಲ್ಲಿ ಪ್ರಾರಂಭವಾದ ಸಪ್ತಾಹವು ತಾ. 18ರಂದು ಮಂಗಲೋತ್ಸವದೊಡನೆ ಯಶಸ್ವಿಯಾಗಿ ಕೊನೆಗೊಂಡಿತು.

ಬೈಂಡಿಂಗ್ ತರಬೇತಿ ತರಗತಿಯು— ತಾ. ೪೧೦ರಿಂದ ಕಲ್ಸಂಕದಲ್ಲಿ ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನಿನ ವತಿಯಿಂದ ಪ್ರಾರಂಭವಾಗಿದೆ. ಈಗಾಗಲೇ 20ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಸೇರಿರುವರು.

ಪ್ರಚಲಿತ ವಿಷಯಗಳಿಗೆ ಸಂಬಂಧಪಟ್ಟ ಚಿಕ್ಕ ಚಿಕ್ಕ ಲೇಖನಗಳಿಗೂ ಉತ್ತಮ ಸಣ್ಣ ಕತೆಗಳಿಗೂ, ವಿನೋದ, ಹರಟೆಗಳಿಗೂ ಸ್ವಾಗತವಿದೆ

ಬರಹಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸ್ಪಷ್ಟವಾಗಿ ಬರೆದಿರಬೇಕು.

ಸಂ. ನವಯುಗ, ಉಡುಪಿ.

ಸಮಯ ಮತ್ತು ಶ್ರಮ ಕಡಿಮೆಯಾಗುವುದರಿಂದಲೇ ಬೇಕಾದ ಬಟ್ಟೆಬರೆಗಳನ್ನು ಒಂದೇ ಜವುಳಿ ಅಂಗಡಿಯಲ್ಲಿ ಆರಿಸಿಕೊಳ್ಳಲು ಗ್ರಾಹಕರು ಇಷ್ಟಪಡುತ್ತಾರೆ.
ಅಂತಹ ವಿವಿಧ ಜವುಳಿಯ ವಸ್ತ್ರ ಭಂಡಾರವೆಂದರೆ
ಶ್ರೀ ಗಜಾನನ ಕ್ಲೋತ್ ಸ್ಟೋರ್ಸ್,
ತೆಂಕಪೇಟೆ, ಉಡುಪಿ, ದ. ಕನ್ನಡ.
ಯಾವದೇ ತರದ ಹ್ಯಾಂಡ್‌ಲೂಮ್, ಮಿಲ್ ಬಟ್ಟೆಗಳೂ ಸಿಲ್ಕ್, ಉಲನ್ ಗುಡ್ಸ್‌ಗಳೂ ಚಿಲ್ಲರೆಯಾಗಿಯೂ ರಖಂ ಆಗಿಯೂ ದೊರೆಯುತ್ತವೆ. ಒಮ್ಮೆ ಸಂದರ್ಶಿಸಿ ಸಂತೃಪ್ತರಾಗಿರಿ.
SRI GAJANANA CLOTH STORES,
TENKAPET, **UDIPI,** S. KANARA.

ಜಿಲ್ಲೆಯಲ್ಲಿ ಎಲ್ಲೆಲ್ಲೂ ಸ್ವಾತಂತ್ರ್ಯ ದಿನಾಚರಣೆ

(ಸ್ಥಳಾಭಾವದಿಂದ ವಾರ್ತೆಗಳನ್ನು ಸಂಕ್ಷೇಪಿಸಿ ಕೊಡಲಾಗಿದೆ—ಸಂ. ನ.)

ಸುರತ್ಕಲ್— ಮುಕ್ಕ ಮಿತ್ರ ಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿಶಾಲೆ ಮತ್ತು ಸುರತ್ಕಲ್ ಅಗ್ನಿದಕರಿಯ ಹಾ. ಪ್ರಾ. ಶಾಲಾ ಹಿಡನಾಟದಿಂದ ತಾ. 15ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಶೀನ, ಜೆ. ಕುಂದರರ ಅಧ್ಯಕ್ಷತೆಯಲ್ಲಿ ಸಾಂಗವಾಯಿತು.

ಸಾದೆಬೆಟ್ಟು— ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ, ವಿವಿಧ ಕಾರ್ಯಕ್ರಮಗಳಿಂದ ಜರಗಿತು.

ಬೈದೆಬೆಟ್ಟು— ಶ್ರೀ ರಾಮಾ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಚಂದ್ರಶೇಖರಯ್ಯ, ಸೂಪರ್‌ವೈಸರ್ ಅರಮನೆ, ಅವರ ಅಧ್ಯಕ್ಷತೆಯಲ್ಲಿ ನೆರವೇರಿತು.

ಅಲೆವೂರು ಶ್ರೀ ಶಾರದಾ ಪುಸ್ತಕ ಭಂಡಾರ ಮತ್ತು ವಾಚನಾಲಯದಲ್ಲಿ ಶ್ರೀ ಎ. ನಾಗಪ್ಪಯ್ಯನವರ ಅಧ್ಯಕ್ಷತೆಯಲ್ಲಿ, ಸಾಂಗವಾಯಿತು.

ಬಂಟ್ವಾಳ— ಡಾ. ಎಮ್. ಎಸ್ ಹೆಗ್ಡೆ ಯವರು ಲೋಕಲ್ ಫಂಡ್ ಆಸ್ಪತ್ರೆಯಲ್ಲಿ ಧ್ವಜಾರೋಹಣಮಾಡಿದರು. ಎಸ್. ವಿ. ಎಸ್. ಹೈಸ್ಕೂಲಿನಲ್ಲಿ ಶ್ರೀ ಐರ್ಯ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

ವೇಣೂರು ಬೋರ್ಡ್ ಹೈಸ್ಕೂಲಿನಲ್ಲಿ ಶ್ರೀ ಧರ್ಣಪ್ಪ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಕೆ. ಎಮ್. ಭಂಡಾರಿ, ಡಿ. ಮೋನಪ್ಪ, ಎಸ್. ವಿಶ್ವನಾಥ ಸೆಟ್ಟಿ ಮೊದಲಾದವರ ಭಾಷಣಗಳಾದುವು.

ಹಿರೆಬೆಟ್ಟು— ಪಟ್ಲ ಲೋಕಮಾನ್ಯ ತಿಲಕ ಹಾ. ಪ್ರಾ. ಶಾಲೆಯಲ್ಲಿ ಶ್ರೀ ಎಚ್. ಸದಾಶಿವ ಹೆಗ್ಡೆ ಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು.

ಚಿತ್ರಪಾಡಿ— ಬೋರ್ಡ್ ಶಾಲೆಯಲ್ಲಿ ಶ್ರೀ ಪಿ. ರಾಮದೇವರು ಹಂದೆಯವರಿಂದ ಧ್ವಜಾರೋಹಣವಾಗಿ, ಶ್ರೀ ಬಿ. ಪದ್ಮನಾಭ ಶ್ಯಾನುಭಾಗರು ದಾನವಿತ್ತ ಪುಸ್ತಕಗಳನ್ನು ಮಕ್ಕಳಿಗೆ ಹಂಚಲಾಯಿತು.

ಕುಕ್ಕಿಕಟ್ಟೆ— ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ವಿಠಲನವರ ಅಧ್ಯಕ್ಷತೆಯಲ್ಲಿ ಸಭೆ, ತಿಂಡಿ ಹಂಚೋಣಗಳಾದುವು.

ಕಡಿರುದ್ಯಾವರ— ಪಂಚಾಯತ ಶಾಲೆಯಲ್ಲಿ ಶ್ರೀ ಎಚ್. ನಮಿರಾಜ ಅಜ್ರಿಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಮಕ್ಕಳಿಗೆ ತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳಾದುವು.

ನಿಂಜೂರು ಶ್ರೀ ವಿವೇಕಾನಂದ ಸೇವಾ ಸಂಘದಲ್ಲಿ ಪಂಚಾಯತ ಬೋರ್ಡ್ ಮತ್ತು ಶಾಲೆಯವರ ಕೂಡುವಿಕೆಯಿಂದ ಧ್ವಜವಂದನೆ, ಭಾಷಣಾದಿಗಳಾದುವು

ಪೆಡೂರು ಬಿ. ಇ. ಎಮ್. ಹಾ. ಪ್ರಾ. ಶಾಲೆಯಲ್ಲಿ ಶ್ರೀ ಅಲಂಗಾರು ಉಮಾನಾಥ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಡಾ. ಎನ್. ಪದ್ಮನಾಭ ಸೆಟ್ಟರು ರಾಷ್ಟ್ರಧ್ವಜವನ್ನರಳಿಸಿದರು. ಡಾ. ಎಮ್. ಆರ್. ಹೆಗ್ಡೆಯವರು ಕಲಾಮಂಡಳಿಯ 'ಸುಪ್ತಶಕ್ತಿ' ಹಸ್ತಲಿಖಿತ ಪತ್ರಿಕೆಯ ಸ್ವಾತಂತ್ರ್ಯ ವಿಶೇಷಾಂಕವನ್ನು ಉದ್ಘಾಟಿಸಿದರು. ಶ್ರೀ ಅನಂತಪದ್ಮನಾಭ ದೇವಸ್ಥಾನದ ಶಾಲೆಯಲ್ಲಿ ಶ್ರೀ ಗೋಪಾಲಕೃಷ್ಣ ಉಪಾಧ್ಯಾಯರು ಧ್ವಜಾರೋಹಣ ನಡೆಸಿದರು.

ಅಜೆಕಾರು – ಬೋರ್ಡ್ ಹಾ. ಪ್ರಾ. ಶಾಲೆಯಲ್ಲಿ ಪಂಚಾಯತ ಅಧ್ಯಕ್ಷ ಶ್ರೀ ಕೆ. ನಾರಾಯಣ ಅತಿಕಾರಿಯವರು ರಾಷ್ಟ್ರಧ್ವಜವನ್ನರಳಿಸಿದರು. ಬಳಿಕ ನೂಲುವ ಸ್ಪರ್ಧೆ ಮೊದಲಾದ ಕಾರ್ಯಕ್ರಮಗಳಾದುವು.

ಕೊಳಂಬೆ— ಕಿರಿಯ ಬುನಾದಿ ಶಾಲೆಯಲ್ಲಿ ಹಳೇ ವಿದ್ಯಾರ್ಥಿ ಕೂಟ ಉದ್ಘಾಟನಾ ಮತ್ತು ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಕೆ. ವಿಠಲ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಶ್ರೀ ಎನ್. ಜಯಶೀಲ ಹೆಗ್ಡೆ ಮೊದಲಾದವರ ಭಾಷಣಗಳಾದುವು.

ಕಡಬ— ಯುವಕ ಸಂಘದ ವತಿಯಲ್ಲಿ ಡಾ. ಎನ್. ಪದ್ಮನಾಭರಾಯರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾಗಿ ಯುವಕ ಸಂಘದ ವಾರ್ಷಿಕೋತ್ಸವವೂ ಆಚರಿಸಲ್ಪಟ್ಟಿತು.

ಬೆಳ್ಮಣ್ಣು— ಸ್ಯಾಂಟ್ ಜೋಸೆಫ್ ಹಾ. ಪ್ರಾ. ಶಾಲೆಯಲ್ಲಿ ರೆ. ಫಾ. ಪಿ ಎಲ್. ಬೊತೆಲ್ಲೋರವರ ಅಧ್ಯಕ್ಷತೆಯಲ್ಲಿ ಡಾ. ಕೊರಡ್ಕಲ್ ವೆಂಕಟರಾಯರು ರಾಷ್ಟ್ರಧ್ವಜವನ್ನು ಅರಳಿಸಿ ಮಕ್ಕಳಿಗೆ ಸಿಹಿ ತಿಂಡಿ ಹಂಚಿದರು.

ಬಡಗ ಬೆಳ್ಳೂರು— ಪಂಚಾಯತ ಆಫೀಸು ಪಟಾರದಲ್ಲಿ ಪಂಚಾಯತ ಉಪಾಧ್ಯಕ್ಷ ಶ್ರೀ ಟಿ. ಮುತ್ತಣ್ಣ ರೈಗಳು ಧ್ವಜಾರೋಹಣ ಮಾಡಿದರು. ಪಂಚಾಯತಧ್ಯಕ್ಷ ಶ್ರೀ ಪಿ. ತ್ಯಾಂಪಣ್ಣ ಭಂಡಾರಿಗಳ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾದುವು. ಈ ಸಂದರ್ಭದಲ್ಲಿ ಶ್ರೀ ಜೆರೋಮ್ ಫೆರ್ನಾಂಡೀಸರು ಸಾರ್ವಜನಿಕ ಪುಸ್ತಕಭಂಡಾರ ಮತ್ತು ವಾಚನಾಲಯವನ್ನು ಉದ್ಘಾಟಿಸಿದರು.

ಕುಕ್ಕೆರ್ಲು— ಕುಂಜಾರು ಗಿರಿಜಾ ಹಾ। ಪ್ರಾ। ಶಾಲೆ, ಮಹಿಳಾ ಕೇಂದ್ರಗಳಲ್ಲಿ ಶ್ರೀಮತಿ ಸುನಂದಾ ಬಲ್ಲಾಳ ಮತ್ತು ಚಿಕ್ಕಮಗಳೂರಿನ ಶ್ರೀಮತಿ ರಮಾಬಾಯಿ ಶೆಣೈಯವರು ಅನುಕ್ರಮವಾಗಿ ಧ್ವಜಾರೋಹಣ ನಡೆಸಿದರು. ಸಾರ್ವಜನಿಕ ಸಭೆಯು ಶ್ರೀ ಕುರುಕಾಲು ಗಣಪಯ್ಯ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು. ಶಾಲಾ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು

ಮೂಲ್ಕಿ— ಸ್ಥಳೀಯ ಸಮಾಜ ಮಂದಿರದ ಉದ್ಘಾಟನೆಯನ್ನು ತಾ 15ರಂದು ಶ್ರೀ ವಿ. ಎಸ್. ಕುಡ್ವರು ನೆರವೇರಿಸಿದರು. ಅಂದು ಬೆಳಿಗ್ಗೆ ಶ್ರೀ ಎಮ್. ಶ್ರೀನಿವಾಸ ನಾಯ್ಕರು ಧ್ವಜಾರೋಹಣ ಮಾಡಿದರು. ಪ್ರಾರ್ಥನಾನಂತರ ಶ್ರೀ ಎಮ್ ಆರ್. ಹರಿ ಪೂಂಜರು ವರದಿ ಮತ್ತು ಲೆಕ್ಕಪತ್ರಗಳನ್ನೊಪ್ಪಿಸಿದರು. ರೆ| ಫಾ| ಬಿ. ಎ. ಡಿ'ಸೋಜರು ಗಾಂಧೀಜಿಯವರ ಭಾವಚಿತ್ರವನ್ನೂ ಶ್ರೀ ಎಸ್. ನರ್ಸಪ್ಪಯ್ಯ, ಎಮ್. ಎಲ್. ಸಿ. ಯವರು ದಿ| ಮುಚ್ಚೂರ್ ಅಣ್ಣಪ್ಪ ನಾಯ್ಕರ ಭಾವಚಿತ್ರವನ್ನೂ ಡಾ| ಟಿ. ಮಾಧವ ಪೈಗಳು ಶ್ರೀ ಯು. ಶ್ರೀನಿವಾಸ ಮಲ್ಯ, ಎಮ್. ಪಿ. ಅವರ ಭಾವಚಿತ್ರವನ್ನೂ ಅನಾವರಣಮಾಡಿದರು. ಶ್ರೀ ಬಿ. ಆರ್. ಕರ್ಕೇರರು ವಿವಿಧ ವಿನೋದಾವಳಿಗಳಲ್ಲಿ ಭಾಗವಹಿಸಿದವರಿಗೆ ಬಹುಮಾನ ಹಂಚಿದರು. ಶ್ರೀ ಬಿ. ಎಸ್. ಭಾಸ್ಕರ ರೈಗಳು ದಿ| ಎಮ್. ಆರ್. ಪೂಂಜರ ಸ್ಮಾರಕ ಗುರಾಣಿಯು ಅವರ ಪರಿಶ್ರಮದಿಂದ ಸ್ಥಾಪಿತವಾದ ಸರಕಾರಿ ಹೈಸ್ಕೂಲಿಗೇನೇ ಸೇರಿದ ಬಗ್ಗೆ ಸಂತೋಷ ವ್ಯಕ್ತಪಡಿಸಿದರು. ಡಾ. ರಾಯಪ್ಪ ನಾಯ್ಕರು ಧನ್ಯವಾದಗಳನ್ನಿತ್ತರು.

ಮಂಚಿನ— ಸ್ಥಳೀಯ ಹಾ. ಪ್ರಾ. ಶಾಲಾ ತರಗತಿಯನ್ನು ತಾ. 17ರಲ್ಲಿ ಶ್ರೀ ಕೆ. ಆರ್. ಆಚಾರ್ಯರು ಉದ್ಘಾಟಿಸಿದರು. ಡಾ. ಜೆ. ನಾಗಪ್ಪ ಆಳ್ವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎನ್. ಕೃಷ್ಣ ರಾಯರು ಧ್ವಜಾರೋಹಣ ಮಾಡಿದರು. ಶ್ರೀ ಡಿ. ಸುಬ್ಬರಾಯರು ಗಾಂಧೀಜಿಯವರ ಭಾವಚಿತ್ರ ಅನಾವರಣಮಾಡಿದರು. ಶ್ರೀ ಕೆ. ಧರ್ಣಪ್ಪನವರು ವರದಿವಾಚನ ಮಾಡಿದರು. ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ ಬಿ. ಶ್ರೀನಿವಾಸ ರೈಗಳು ಮಾನಪತ್ರ ಅರ್ಪಿಸಿದರು. ಹಲವರ ಭಾಷಣಗಳಿದ್ದುವು.

ಕಿದಿಯೂರು – ಸ್ಥಳೀಯ ಹಾ. ಪ್ರಾ. ಶಾಲೆಯಲ್ಲಿ ತಾ. 15ರಲ್ಲಿ ಬೆಳಗ್ಗೆ ಡಾ. ಕೆ. ಆರ್. ಭಾಗವತರು ರಾಷ್ಟ್ರಧ್ವಜವನ್ನರಳಿಸಿದರು ನಂತರ ಮೆರವಣಿಗೆಯಾಗಿ ಸ್ವಾತಂತ್ರ್ಯ ದಿನಾಚರಣಾ ಸಭೆಯು ಜರಗಿ ಭಾಷಣಗಳಾದುವು.

ಕೊಡವೂರು – ಇಲ್ಲಿಯ ಜನತಾ ಸೇವಾ ಸಂಘದ ಆಶ್ರಯದಲ್ಲಿ ತಾ. 19ರಲ್ಲಿ ಉಡುಪಿ ಎಮ್. ಜಿ. ಎಮ್. ಕಾಲೇಜಿನ ಶ್ರೀ ಕು. ಶಿ. ಹರಿದಾಸ ಭಟ್ಟರು ಮೂಡಬೆಟ್ಟು ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ವಾಚನಾಲಯವೊಂದನ್ನು ಉದ್ಘಾಟಿಸಿದರು. ಶ್ರೀ ಕಾಂಗಾಳ ಉಪೇಂದ್ರ ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಹಲವರು ಭಾಷಣವಿತ್ತರು.

ಪಂಚಾಯತ ಬೋರ್ಡ್, ಹೈಸ್ಕೂಲ್ ಮೊದಲಾದ ಲೈಬ್ರರಿಗಳಿಗೆ

ಉಪಯುಕ್ತವಾದ ಕನ್ನಡ ಪುಸ್ತಕಗಳು ವಿಶೇಷ ಸವಲತ್ತಿನಿಂದ ದೊರೆಯುತ್ತವೆ.

ನವಭಾರತ ಪುಸ್ತಕ ಭಂಡಾರ ಉಡುಪಿ

ಮಲಬಾರಿನ ಜಲಮಾರ್ಗ



ಕಳೆದ ವಾರ ನಮ್ಮೆಲ್ಲರ ನೋಟವು ಅಂತಾರಾಷ್ಟ್ರೀಯ ರಂಗದ ಸುಟ್ಟಿಗೆ ಸುಯೋಜಿನ ಕಾಲುವೆ ಸಂಬಂಧದಲ್ಲಿ ಲಂಡನಿನಲ್ಲಿ ನೆರೆದ ಪರಿಷತ್ತಿನ ಕಡೆಗೆ ಹೊರಳಿದ್ದಿತು.

ಆದರೆ ನಮ್ಮ ದೇಶದಲ್ಲಿ ಸಹ ಸುಯೋಜಿನಂತೆಯೇ ಪ್ರಾಮುಖ್ಯತೆ ಪಡೆದ ಜಲಮಾರ್ಗಗಳಿವೆ. ಅಂತಾರಾಷ್ಟ್ರೀಯ ಮಹತ್ವವಿಲ್ಲದಿದ್ದರೂ ಒಳನಾಡಿನ ಅನುಕೂಲತೆಗಳನ್ನು ಪೋಷಿಸುವ ದೃಷ್ಟಿಯಿಂದ ಈ ನೀರು ದಾರಿಗಳಿಗೆ ಮಹತ್ವಸಲ್ಲುತ್ತದೆ.

ಮಲಬಾರಿನ ಜಲಮಾರ್ಗಗಳನ್ನು ನಾವು ಈ ದೃಷ್ಟಿಯಿಂದ ನೋಡಬೇಕಾಗಿದೆ. ನೀರು ದಾರಿಗಳಿಗಾಗಿ ಹೆಸರಾಗಿರುವ ಮಲಬಾರು ಮತ್ತು ಕೇರಳಗಳು ಪ್ರಕೃತಿ ಸೌಂದರ್ಯಕ್ಕೂ ಹೆಸರಾಗಿವೆ. "ಓಣಂ" ಹಬ್ಬವನ್ನು ನೊನ್ನೆ (ಸೋಮವಾರ) ಆಚರಿಸಿದ ಕೇರಳೀಯರ ನಾಡಿಗೆ ಪ್ರಕೃತಿ ದೇವಿಯು ನಿಡಿಕ್ಕೂ ಒಲಿದಿದ್ದಾಳೆ.

ಮಲಬಾರಿನ ನೀರು ದಾರಿಗಳಲ್ಲಿ ಸಂಚರಿಸುವುದೇ ಮಹದಾನಂದ. ಇಲ್ಲಿ ಸಣ್ಣ ಸಣ್ಣ ದೋಣಿಗಳು ಸರಕನ್ನೂ ಪ್ರವಾಸಿಕರನ್ನೂ ಹೇರಿಕೊಂಡು ಸದಾಕಾಲ ಓಡಾಡುತ್ತಿರುತ್ತವೆ. ತೆಂಗಿನ ತೋಟಗಳು ಉಲ್ಲಾಸದಿಂದ ತಲೆತೂಗುತ್ತಿರುವುದನ್ನು ಕಾಣುತ್ತಿದ್ದರೆ, ಪ್ರಯಾಣದ ಆಯಾಸವೇ ಮರೆತು ಹೋಗುತ್ತದೆ.

ಭಾರತದಲ್ಲಿ ಬಿಹಾರ, ಬಂಗಾಳ, ಅಸ್ಸಾಂ ಮತ್ತು ಕೇರಳಗಳಲ್ಲಿಯಷ್ಟೇ ಜಲಮಾರ್ಗಗಳು ಪ್ರಾಮುಖ್ಯತೆ ಪಡೆದಿವೆ. ರೈಲು ದಾರಿಗಳು ಹಾಕುವುದಕ್ಕೆ ಮುಂಚೆ ನೀರು ದಾರಿಗಳೇ ಭಾರತದ ಜೀವನಾಡಿಯಾಗಿದ್ದವೆಂದು ಹೇಳಬಹುದು. ಕಂಪೆನಿಯ ಆಡಳಿತ ಕಾಲದಲ್ಲಿ ಈ ನೀರು ದಾರಿಗಳೇ ಇತಿಹಾಸವನ್ನು ರೂಪಿಸುವ ಶಕ್ತಿಯಾಗಿ ಪರಿಣಮಿಸಿದವೆಂದರೂ ಅತಿಶಯೋಕ್ತಿಯಾಗದು.

ಜಲಮಾರ್ಗಗಳು ಆರ್ಥಿಕಾಭಿವೃದ್ಧಿಗೆ ಸಹಕಾರಿಯಾಗಿವೆ ಎಂಬುದನ್ನು ಸ್ವಾತಂತ್ರ್ಯೋತ್ತರದಲ್ಲಿ ಹೆಚ್ಚು ಹೆಚ್ಚಾಗಿ ಮನಗಾಣಲಾಗಿದೆ. ರೈಲ್ವೆಗಳ ಅಭಿವೃದ್ಧಿಗೆ ಕೊಡುತ್ತಿರುವಷ್ಟೆ ಗಮನವನ್ನು ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ನೀರು ದಾರಿಗಳ ಸುಧಾರಣೆಗೆ ಸಹ ಸರಕಾರ ಕೊಡುತ್ತಿದೆ.

ಮಂಗಳೂರು

ಸ್ವಾತಂತ್ರ್ಯ ದಿನ ಆಚರಣೆ— ಇಲ್ಲಿ ತಾ. 15ರಲ್ಲಿ ಬೆಳಿಗ್ಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರು ಕೇಂದ್ರ ಮೈದಾನಿನಲ್ಲಿ ರಾಷ್ಟ್ರಧ್ವಜಾರೋಹಣಮಾಡಿ ಪೋಲೀಸು ದಳದವರಿತ್ತ ಗೌರವ ರಕ್ಷೆಯನ್ನು ಸ್ವೀಕರಿಸಿದರು ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು. **ಕಾಂಗ್ರೆಸ್ ಕಚೇರಿಯಲ್ಲಿ** ಡಾ. ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಬಾಲ ಗಂಗಾಧರ ತಿಲಕರ ಭಾವಚಿತ್ರವನ್ನು ಶ್ರೀ ಎಮ್. ಮಾಧವ ರಾಯರು ಅನಾವರಣಮಾಡಿದರು. ಭಾವಚಿತ್ರವನ್ನು ದಾನವಿತ್ತ ಶ್ರೀ ಕುಡ್ಪಿ ಶ್ರೀನಿವಾಸ ಶೆಣೈಯವರನ್ನು ಶ್ರೀ ಕೆ.ಕೆ. ಶೆಟ್ಟರು ಅಭಿನಂದಿಸಿದರು. ನಂತರ ಸೂತ್ರಯಜ್ಞ ನಡೆಯಿತು. **ಕೇಂದ್ರ ಮೈದಾನಿನಲ್ಲಿ** ಶ್ರೀ ಎಚ್. ಕೆ. ತಿಂಗಳಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಕೆ. ಕೆ. ಶೆಟ್ಟಿ, ನವೀನ ಚಂದ್ರ ತಿಂಗಳಾಯ, ಡಾ. ನಾಗಪ್ಪ ಆಳ್ವ, ಎಸ್. ಎಚ್. ಒಡೆಯರ್, ಎಸ್. ಎನ್. ಹೊಳ್ಳ ಮೊದಲಾದವರ ಭಾಷಣಗಳಾದುವು. ನಂತರ ಯಕ್ಷಗಾನ ತಾಲಮದ್ದಳೆ ನಡೆಯಿತು.

ಮೆಡಿಕಲ್ ಕಾಲೇಜಿನಲ್ಲಿ— ಪ್ರಿನ್ಸಿಪಾಲ್ ಡಾ. ಎಮ್. ವಿ. ರಮಣಮೂರ್ತಿಯವರು ತಿಲಕರ ಭಾವಚಿತ್ರ ಅನಾವರಣ ಮಾಡಿದರು. **ಜೆಪ್ಪು ಸೈಂಟ್ ಜೋನ್ಸ್** ಕಾಶಿಯಾ ಶಾಲೆಯ ಹಳೆವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ ಹಾಗೂ ಸ್ವಾತಂತ್ರ್ಯೋತ್ಸವವು ನಗರಸಭಾಪತಿ ಶ್ರೀ ಕೆ. ಎಸ್. ಎನ್. ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಎಮ್. ಶಾಲಿಹಿಯವರು ಸ್ವಾಗತ ಭಾಷಣವಿತ್ತು ವರದಿವಾಚನಮಾಡಿದರು.

ಸ್ವಾಮಿ ಶ್ರದ್ಧಾನಂದ ಸೇವಾಶ್ರಮದಲ್ಲಿ ಶ್ರೀ ಎಸ್. ನರಸಿಂಹಯ್ಯ, ಎಮ್. ಎಲ್. ಸಿ. ಯವರು ಧ್ವಜಾರೋಹಣಮಾಡಿದರು. ಶ್ರೀ ಎಸ್. ಯು. ಪರಶುರಾಮ ನಾಯ್ಕರು ಸಭಾಧ್ಯಕ್ಷತೆ ವಹಿಸಿದ್ದರು. ಚಂದ್ರ ನಾ ಬ್ರದರ್ಸ್ ಮೊದಲಾದವರು ದಾನವಿತ್ತ ಉಡುಪುಗಳನ್ನು ಮಕ್ಕಳಿಗೆ ಹಂಚಲಾಯಿತು.

ಮಂಗಳೂರು ಪೋರ್ಟ್ ಟ್ರಸ್ಟ್ ಬೋರ್ಡಿನ ಸತ್ಕಾರ— ಹೊಸ ಸದಸ್ಯರ ಸಭೆಯು ತಾ. 14ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಮ್. ಜಿ. ರಾಜಾರಾಮರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ವಿ. ಎಸ್. ಕುಡ್ವರು ಬೋರ್ಡಿನ ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರು.

ಸತ್ಕಾರ ಸಮಾರಂಭ— ಕೆನರಾ ವಾಣಿಜ್ಯ ಸಂಘದ ಪ್ರತಿನಿಧಿಗಳಾಗಿ ಮಂಗಳೂರು ಪೋರ್ಟ್ ಟ್ರಸ್ಟಿಗೆ ಆರಿಸಲ್ಪಟ್ಟ ಶ್ರೀಗಳಾದ ವಿ. ಎಸ್. ಕುಡ್ವ, ಪಿ. ನರಸಿಂಗ ರಾವ್, ಎಸ್. ದಾಮೋದರ ನಾಯಕ್ ಮತ್ತು ಪಿ. ರಘುನಾಥ ಶೆಣೈಯವರನ್ನು ಅಭಿನಂದಿಸಿ ಸತ್ಕರಿಸುವ ಸಮಾರಂಭವು ತಾ 16ರಲ್ಲಿ ವಾಣಿಜ್ಯ ಸಂಘದ ಕಚೇರಿಯಲ್ಲಿ ಶ್ರೀ ಕುಡ್ಪಿ ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ಯು ಪಿ. ಮಲ್ಯ ಮತ್ತು ಶ್ರೀ ರಾಘವೇಂದ್ರ ಪೈಗಳು ಮುಖ್ಯ ಅತಿಥಿಗಳ ಕಾರ್ಯದಕ್ಷತೆಯ ಕುರಿತು ಮಾತನಾಡಿದರು ಶ್ರೀ ಕುಡ್ವರು ತಮ್ಮನ್ನು ಪೋರ್ಟ್ ಟ್ರಸ್ಟಿನ ಸದಸ್ಯರಾಗಿ ಆರಿಸಿದುದಕ್ಕೆ ಪ್ರಥಮತಃ ಅಭಿನಂದನೆಗಳನ್ನು ಸಲ್ಲಿಸಿ ತಮ್ಮಿಂದ ಸಾಧ್ಯವಿರುವ ಕೆಲಸವನ್ನು ಮಂಗಳೂರು ಬಂದರದ ಅಭಿವೃದ್ಧಿಗಾಗಿ ಮಾಡುವೆನೆಂಬುದಾಗಿ ಆಶ್ವಾಸನೆಯಿತ್ತರು.

ದ. ಕ ಜಿಲ್ಲಾ ಖಾಸಗಿ ಶಾಲೆಗಳ— ಆಡಳಿತೆಯವರ ಮತ್ತು ಉಪಾಧ್ಯಾಯರ ಸಂಯುಕ್ತ ಸಭೆಯೊಂದು ತಾ. 18ರಲ್ಲಿ ಗಣಪತಿ ಹೈಸ್ಕೂಲಿನಲ್ಲಿ ಜಿಲ್ಲಾ ಹೈಸ್ಕೂಲ್ ಮುಖ್ಯೋಪಾಧ್ಯಾಯ ಸಂಘದ ಅಧ್ಯಕ್ಷ ಶ್ರೀ ಎಚ್. ಪಾಂಡುರಂಗರಾಯರ ಅಧ್ಯಕ್ಷತೆಯಲ್ಲಿ ಜರಗಿತು. ದ. ಭಾರತ ಅಧ್ಯಾಪಕ ಸಂಘ, ಮದ್ರಾಸ್, ಇದರ ಅಧ್ಯಕ್ಷ ಶ್ರೀ ಪಿ. ಟಿ. ಶ್ರೀನಿವಾಸ ವರದನ್ ಅವರು ಭಾಷಣವಿತ್ತರು. ಸದ್ಯದಲ್ಲಿಯೇ ಮೈಸೂರು ಮತ್ತು ಕೇರಳ ರಾಜ್ಯಗಳೊಡನೆ ವಿಲೀನವಾಗಲಿರುವ ದಕ್ಷಿಣ ಕನ್ನಡ ಮತ್ತು ಮಲಬಾರ್ ಜಿಲ್ಲೆಗಳಲ್ಲಿರುವ ಹಲವು ಖಾಸಗಿ ಶಾಲೆಗಳ ಭವಿಷ್ಯದ ಕುರಿತು ವಿವೇಚನೆ ಮಾಡಿದರು. ದಕ್ಷಿಣ ಕನ್ನಡದಲ್ಲಿರುವಷ್ಟು ಹೆಚ್ಚು ಪ್ರಮಾಣದಲ್ಲಿ ಖಾಸಗಿ ಶಾಲೆಗಳು ಮೈಸೂರಿನಲ್ಲಿಲ್ಲವೆಂದೂ ಮೈಸೂರಲ್ಲಿ ಅಧ್ಯಾಪಕರ ವೇತನವು ತೀರ ಕಡಿಮೆಯೆಂದೂ ಮೈಸೂರು ಸರಕಾರವು ಖಾಸಗಿ ಶಾಲೆಗಳಿಗೆ ಗ್ರಾಂಟು ಕೊಡುವ ಕ್ರಮವು ಮದ್ರಾಸಿನ ಗ್ರಾಂಟ್ ಪದ್ಧತಿಯಷ್ಟು ಸಮರ್ಪಕವಾಗಿಲ್ಲವೆಂದೂ ತಿಳಿಸಿದರು. ದಕ್ಷಿಣ ಕನ್ನಡದ ಖಾಸಗಿ ಶಾಲೆಗಳೂ ಅಧ್ಯಾಪಕರೂ ತಮ್ಮ ಭವಿಷ್ಯವು ಹಾಳಾಗದಂತೆ ಆದಷ್ಟು ಮುಂಜಾಗ್ರತೆ ವಹಿಸಬೇಕೆಂದೂ, ಸಂಘಟನೆಯಿಂದ ಮಾತ್ರ ಅದು ಸಾಧ್ಯವೆಂದೂ ಸೂಚಿಸಿದರು. ಕೆನರಾ ಹೈಸ್ಕೂಲಿನ ಹೆಡ್ಮಾಸ್ತರ್ ಶ್ರೀ ಶ್ರೀನಿವಾಸ ಕಿಣಿಯವರು ಧನ್ಯವಾದವನ್ನಿತ್ತರು.

ಜೋಗ್ ವಿದ್ಯುತ್ ಪ್ರಸರಣೆ— ತಾ 17ರಲ್ಲು ಸಂಜೆ ಪಚ್ಚನಾಡಿ ಮತ್ತು ಪದುರೆಡ್ಡೆ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಬೋಂದೆಲ್ ಇಗರ್ಜಿಯ ವಠಾರದಲ್ಲಿ ರಿ[ಫಾ] ದೇಸರು ನೆರವೇರಿಸಿದರು. ಜಿಲ್ಲಾ ಬೋರ್ಡು ಅಧ್ಯಕ್ಷ ಡಾ. ಕೆ. ಕೆ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ರೆ. ಫಾ. ವಿ. ಸಲ್ಡಾನರು ಸ್ವಾಗತಭಾಷಣಮಾಡಿದರು. ಡಿವಿಜನಲ್ ಇಲೆಕ್ಟ್ರಿಕ್ ಇಂಜಿನಿಯರ್ ಶ್ರೀ ಯು. ಪಿ. ನಾಯ್ಕರು, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ದ. ಕ. ಜಿಲ್ಲೆಯಲ್ಲಿ 150 ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿಕೊಡಬೇಕೆಂಬ ಕಾರ್ಯಕ್ರಮವನ್ನಿಟ್ಟುಕೊಂಡಿದ್ದು ಆ ಮೇರೆಗೆ ಕಾರ್ಯವೆಸಗಲಾಗುವುದೆಂದರು. ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ ಎಸ್. ಸಿಲ್ವೆಸ್ಟರ್ ಆರ್. ಪಿಂಟೋ ಶ್ರೀಗಳಾದ ಸೀತಾರಾಮ ಅಡಪ, ಭುಜಂಗ ಶೆಟ್ಟಿ, ಮೊದಲಾದವರು ಮಾತನಾಡಿದರು. ಅಧ್ಯಕ್ಷ ಡಾ. ಹೆಗ್ಡೆಯವರು ಮಾತನಾಡುತ್ತಾ ಗ್ರಾಮಸ್ಥರು ವಿದ್ಯುಚ್ಛಕ್ತಿಯ ಸದುಪಯೋಗ ಪಡೆಯಬೇಕೆಂದರು. ವಿನ್ಸೆಂಟ್ ಫೋಚೋರವರು ಧನ್ಯವಾದಗಳನ್ನಿತ್ತರು.

ಪುಸ್ತಕ ಭಂಡಾರ ಉದ್ಘಾಟನೆ— ಲೇಡಿಹಿಲ್ ವಿಕ್ಟೋರಿಯಾ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ವತಿಯಿಂದ ಪುಸ್ತಕ ಭಂಡಾರವೊಂದನ್ನು ಶ್ರೀಮತಿ ಕಲ್ಯಾಣಿ ಡಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಾಯಿತು.

ಸುಯೇಜ್ ದಿನಾಚರಣೆ— ತಾ. 19ರಲ್ಲು ಸಂಜೆ ಮಂಗಳೂರು ಶಾಂತಿ ಸಮಿತಿಯ ಆಶ್ರಯದಲ್ಲಿ ಗಣಪತಿ ಹೈಸ್ಕೂಲಿನ ಸಭಾಭವನದಲ್ಲಿ 'ಸುಯೇಜ್' ದಿನಾಚರಣೆಯು ಆಚರಿಸಲ್ಪಟ್ಟಿತು. ಅ. ಭಾ. ಶಾಂತಿ ಸಮಿತಿಯ ಜತೆ ಕಾರ್ಯದರ್ಶಿಗಳಾದ ಶ್ರೀ ಕೆ. ಪರಮೇಶ್ವರನ್‌ರವರು ಸುಯೇಜ್ ಕಾಲುವೆ ಕಂಪೆನಿಯ ರಾಷ್ಟ್ರೀಕರಣದ ಹಿನ್ನೆಲೆ ಕುರಿತು ಮಾತನಾಡಿದರು. ಸುಯೇಜ್ ಕಾಲುವೆ ಕಂಪೆನಿಯ ರಾಷ್ಟ್ರೀಕರಣ ನ್ಯಾಯಸಮ್ಮತವಾದುದೆನ್ನುವ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಈಜಿಪ್ಟಿನ ವಿರುದ್ಧ ಕೈಕೊಳ್ಳಲುದ್ಯುಕ್ತವಾಗಿರುವ ಸೇನಾ ಕ್ರಮವನ್ನು ಖಂಡಿಸುವ ಇತ್ಯಾದಿ ನಿರ್ಣಯಗಳಾದುವು

(೪ನೇ ಪುಟದಿಂದ)

ವರೆಗೆ ಶ್ರೀ ಕಡಿದಾಳರಿಗೇನೂ ಭಯ ಇರಲಾರದು. ಆದರೆ ಆ ಬಳಿಕ ಶ್ರೀ ಹನುಮಂತಯ್ಯನವರು ಪುನಃ ಅಧಿಕಾರ ಸ್ಥಾನಕ್ಕೆ ಬಂದರೂ ಬರಬಹುದು ಹೊಸ ರಾಜ್ಯದ ಮುಖ್ಯ ಮಂತ್ರಿ ಸ್ಥಾನಕ್ಕೆ ಸ್ಪರ್ಧಿಸುವ ಮನಸ್ಸು ನಿಮಗಿದೆಯೆ ಎಂದು ಪತ್ರಿಕೋದ್ಯಮಿಯೊಬ್ಬರು ಹಾಕಿದ ಪ್ರಶ್ನೆಗೆ ಶ್ರೀ ಹನುಮಂತಯ್ಯನವರು ಉತ್ತರ ಕೊಡಲಿಲ್ಲ; ಹಾಗೆಯೇ, ನೀವು ರಾಜೀನಾಮೆಯಿತ್ತ ಬಳಿಕ ಪುನಃ ಚುನಾವಣೆಗೆ ನಿಂತುದೇಕೆ ಎಂಬ ಪ್ರಶ್ನೆಗೂ ಅವರು ವಿವರಣೆ ನೀಡಲಿಲ್ಲ. ಈಗ ತನ್ನ ಬೆಂಬಲಕ್ಕೆ ಮೈಸೂರಿನ ಶಾಸನಾಂಗದಲ್ಲಿರುವ ಜನರೆಷ್ಟು ಎಂಬುದನ್ನು ಗೊತ್ತು ಹಚ್ಚಲಿಕ್ಕಾಗಿ ಶ್ರೀ ಹನುಮಂತಯ್ಯ ಮರುಚುನಾವಣೆಗೆ ನಿಂತರು ಎನ್ನುವುದೇ ಸತ್ಯ. ಕರ್ನಾಟಕ ಏಕೀಕರಣಕ್ಕೆ ಅನುಕೂಲಾಭಿಪ್ರಾಯ ಹೊಂದಿರುವುದರಿಂದ ತನ್ನ ಪತನವಾಯಿತು ಎಂದವರು ಹೇಳುತ್ತಿರುವುದಾದರೂ ಮೈಸೂರೇತರ ಕನ್ನಡಿಗರ ಮನವೊಲಿಸುವ ಉಪಾಯವೆಂಬುದು ಸ್ಪಷ್ಟ.

ಪ್ರಕಟಣೆ

ಶ್ರೀ ಗೋಪಾಲಕೃಷ್ಣಾಯ ನಮಃ

28—6—56ರಲ್ಲಿ ನೇರಂಬಳ್ಳಿ ಮಠಕ್ಕೆ ಹೋಗಿ ಮಾಡಿರುವ ಜಮಾ ಖರ್ಚುಗಳ ವಿವರ.

ಜಮಾ ರೂಪಾಯಿ.		ಖರ್ಚು ರೂಪಾಯಿ.
	1-7-56ರ ವರೆಗೆ ಈ ನಾಲ್ಕು ದಿವಸಗಳಲ್ಲಿ ಮಠ ರಿಪೇರಿ ಬಗ್ಗೆ	50 0 0
	ಈ ದಿನ ರಾತ್ರಿ ವಾಸ್ತುರಕ್ಷೋಘ್ನ ಹೋಮ ಬಲಿ ವಗೈರೆ ನಡೆದಿರುತ್ತದೆ.	
10 0 0	ಈ ದಿನ ರಾತ್ರಿ ನಾರಾಯಣ ಪುರಾಣಿಕರಿಂದ.	10 0 0
10 0 0	2-7-56ರಲ್ಲಿ ಪಡುಮನೆ ವೆಂಕಟ್ರಾಯರಿಂದ.	10 0 0
	ಬೆಳಿಗ್ಗೆ ಮಹಾಭಿಷೇಕ ಮಧ್ಯಾಹ್ನ ಮಹಾಪೂಜೆ ಬ್ರಾಹ್ಮಣಾರಾಧನೆ ಸಂಜೆ ಪ್ರಾಣದೇವರಿಗೆ ಹೂವಿನ ಪೂಜೆ ರಂಗಪೂಜೆ ವಗೈರೆ	40 0 0
10 0 0	3-7-56ರಲ್ಲಿ ಪಡುಮನೆ ರಾಘವೇಂದ್ರಾಚಾರ್ಯರ ಮಗ ನಾರಾಯಣನವರಿಂದ.	10 0 0
10 0 0	5-7-56 ಗುರುವಾರ ನೇರಂಬಳ್ಳಿ ಪಡುಮನೆ ರಂಗಯ್ಯನವರಿಂದ.	10 0 0
10 0 0	6-7-56ರಲ್ಲಿ ಪಡುಮನೆ ಸುಂದರ ಹೆಬ್ಬಾರರಿಂದ.	10 0 0
10 0 0	7-7-56ರಲ್ಲಿ ಗೋಪಿ ಮನೆ ಸುಬ್ಬಣ್ಣನಿಂದ.	10 0 0
10 0 0	8-7-56ರಲ್ಲಿ ಗೋಪಿ ಪದ್ಮನಾಭಯ್ಯನವರ ಮಗ ಸುಬ್ಬಣ್ಣನವರಿಂದ.	10 0 0
10 0 0	9-7-56ರಲ್ಲಿ ಕೋಟೇಶ್ವರ ಡಾಕ್ಟರ್ ಆಚಾರ್ಯರಿಂದ.	10 0 0
10 0 0	10-7-56ರಲ್ಲಿ ದೇವರ ಪುರಾಣಿಕರ ಮಗಳು ಅಕ್ಕಯ್ಯನಿಂದ.	10 0 0
5 0 0	11-7-56ರಲ್ಲಿ ಪೂಜೆ ತಂತ್ರಿಗಳಿಂದ.	5 0 0
10 0 0	12-7-56ರಲ್ಲಿ ಕೇರಿಗಾರ ವಕ್ತಲುಗಳಿಂದ.	10 0 0
5 0 0	13-7-56ರಲ್ಲಿ ಅಡಿಗೆ ಶೇಷಭಟ್ಟರಿಂದ.	5 0 0
10 0 0	14-7-56ರಲ್ಲಿ ನೇರಂಬಳ್ಳಿ ಹನುಮಂತಾಚಾರ್ಯರಿಂದ.	10 0 0
10 0 0	15-7-56ರಲ್ಲಿ ನೇರಂಬಳ್ಳಿ ಶ್ರೀನಿವಾಸಾಚಾರ್ಯರಿಂದ.	10 0 0
10 0 0	16-7-56ರಲ್ಲಿ ನೇರಂಬಳ್ಳಿ ನಾರಾಯಣಾಚಾರ್ಯರಿಂದ.	10 0 0
10 0 0	17-7-56ರಲ್ಲಿ ಉಡುಪಿ ವಿಶ್ವನಾಥ ಭಟ್ರಿಂದ.	10 0 0

30-7-56ರಲ್ಲಿ ನೇರಂಬಳ್ಳಿ ಸೀತಾರಾಮಾಚಾರ್ಯರಿಂದ ಬ್ರಾಹ್ಮಣ ಸಂತರ್ಪಣೆ ರಂಗಪೂಜೆ ನಡೆದಿರುತ್ತದೆ.

ಯನ್. ಸೀತಾರಾಮಾಚಾರ್ಯ. ಗೋಪಿನಾಥ ದೇವಾಲಯ,
ಹಂಗ್ಲೂರು ಗ್ರಾಮ. ನೇರಂಬಳ್ಳಿ, ಪೋಸ್ಟು ಕೋಟೇಶ್ವರ,
ದಕ್ಷಿಣ ಕನ್ನಡ ಜಿಲ್ಲಾ. ಕುಂದಾಪುರ ತಾಲೂಕು.

ಮುಲ್ಕಿ ಬೇಂಕ್ ಲಿಮಿಟೆಡ್,
ಮುಲ್ಕಿ.

ಹಳ್ಳಿಗರ ಹಿತಸಾಧನೆಗಾಗಿ 1929ರಲ್ಲಿ ಸ್ಥಾಪಿತವಾಗಿ ಪ್ರಗತಿ ಪಥದಲ್ಲಿ ಮುಂದುವರಿಯುತ್ತಿರುವ ಬ್ಯಾಂಕಿಂಗ್ ಸಂಸ್ಥೆ.

ನಮ್ಮ ಮೂರು ವರ್ಷದ ಸರ್ಟಿಫಿಕೇಟುಗಳು 4½% ಬಡ್ಡಿ ಗಳಿಸುತ್ತವೆ.

ನಮ್ಮ ಬಡ್ಡಿ ದರಗಳು.

ನಿಯಮಿತ ಠೇವಣಾತಿ.

24	ತಿಂಗಳಿಗೆ	4%
12	,,	3½%
6	,,	3¼%
3	,,	3%
ಸೇವಿಂಗ್ಸ್ ಬೇಂಕ್ ಲೆಕ್ಕ		2%
ಕರೆಂಟ್ ಎಕೌಂಟು		½%

THE MOOLKY BANK LTD., MULKI.

ಕುಮಾರಿ ಬಿಲ್ಲೆಗಳು

(Govt. Regd.)

ಹೆಂಗಸರ ಹಿತಮಿತವಾದ ಆರೋಗ್ಯ ಸಾಧನೆಗೂ ಅವರಲ್ಲಿ ತಲೆದೋರುವ ಸರ್ವಸಾಧಾರಣ ಕಾಯಿಲೆಗಳ ನಿವಾರಣೆಗೂ ಅತ್ಯುತ್ತಮ ಔಷಧಿ. ಬೆಲೆ ರೂ. 5/- ದೀರ್ಘಕಾಲದ ಬಾಧೆಗೆ ರೂ. 8/- (ವಿ. ಪಿ. ಪ್ರತ್ಯೇಕ). ಎಲ್ಲೆಲ್ಲೂ ದೊರಕುತ್ತದೆ!!

P. DEVEE & CO. (N. J.) CALCUTTA—40.

ಸ್ಟಾಕಿಸ್ಟರು: ಷಾ ಕಂಪೆನಿ, ಮಂಗಳೂರು—1.

ಸೆಕೆಂಡರಿ ಶಾಲೆಗಳು

ತಮ್ಮ ಉಪಯೋಗಾರ್ಥವಾಗಿ 'ನವಯುಗ' ವಾರಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು Roc. No. 466-N /50 ತಾ. 12-12-50ನೇ ಪ್ರೊಸಿಡಿಂಗ್ಸಿನಂತೆ ಮದ್ರಾಸು ಸರಕಾರದ ಡೈರೆಕ್ಟರ್ ಆಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್‌ನವರು ಮಂಜೂರು ಮಾಡಿದ್ದಾರೆ.

ಈ ವರೆಗೆ ಚಂದಾದಾರರಾಗದ ಯಾವತ್ತೂ ಸೆಕೆಂಡರಿಶಾಲೆಗಳವರು 'ನವಯುಗ'ಕ್ಕೆ ಚಂದಾದಾರರಾಗಿ ತರಿಸಿಕೊಂಡು ಪ್ರೋತ್ಸಾಹಿಸುವಂತೆ ಈಮೂಲಕ ವಿನಂತಿಸಿಕೊಳ್ಳಲಾಗಿದೆ.

ಮೆನೇಜರ್.

ಹರಿಭಕ್ತಿಸಾರ

'ಮುಕ್ತಿಗೆ ಭಕ್ತಿಯೇ ಕಾರಣ' ವೆಂದು ಸಾರುತ್ತಾ ಕನಕದಾಸರು ಪರಮಾತ್ಮನ ಗುಣಕಥನವನ್ನೂ ಮಹಿಮಾ ವರ್ಣನೆಯನ್ನೂ ಬಹುವಿಧವಾಗಿ ಮಾಡಿರುವ ಕಾವ್ಯ. ಬೆಲೆ: 0—2—0

ನವಯುಗ ಪ್ರೆಸ್, ಉಡುಪಿ.

ದ್ವಿತೀಯ ಯೋಜನೆಯಲ್ಲಿ ವೈದ್ಯಕೀಯ ಸಂಶೋಧನೆ

ವೈದ್ಯಕೀಯ ಸಂಶೋಧನೆಯನ್ನು ಅನೇಕ ಸಂದರ್ಭಗಳಲ್ಲಿ ಮಾನವನ ರೋಗಗಳು ಹಾಗೂ ದೌರ್ಬಲ್ಯಗಳ ಅಧ್ಯಯನವೆಂದು ಪರಿಗಣಿಸಲ್ಪಟ್ಟಿದೆ. ಆದಾಗ್ಯೂ, ಆಧುನಿಕ ವೈಜ್ಞಾನಿಕ ಸಂಶೋಧನೆಯ ಮತ್ತು ಅನುಭವದ ದೃಷ್ಟಿಯಿಂದ ಈ ಮಾತಿನ ಅರ್ಥವು ಪರಿವರ್ತನಗೊಂಡಿದ್ದು, ವೈದ್ಯಕೀಯ ಸಂಶೋಧನೆಯ ನೂತನ ವಿವರಣೆಯಲ್ಲಿ ಮಾನಸಿಕ ಹಾಗೂ ಶಾರೀರಿಕ ಸ್ವಾಸ್ಥ್ಯದ ಬಗ್ಗೆ ಪ್ರಭಾವ ಬೀರುವಂತಹ ಸಾಮಾಜಿಕ, ಆರ್ಥಿಕ ಹಾಗೂ ಪರಿವೇಷನೆಯ ಅಂಶಗಳ ವಿಚಾರದಲ್ಲಿ ಸಂಶೋಧನೆಗಳನ್ನು ನಡೆಸುವುದನ್ನೂ ಸೇರಿಸಲಾಗಿದೆ.

ವೈದ್ಯಕೀಯ ಸಂಶೋಧನೆಯು ಸಮಾಜವಾದಿ ಸ್ವರೂಪದ ಸಮಾಜದ ಉದ್ದೇಶಕ್ಕೆ ಅನುಗುಣವಾಗಿರುವುದು. ವೈದ್ಯಕೀಯ ಸಂಶೋಧನೆಯು ತನ್ನದೇ ಆದ ಇತಿಹಾಸವನ್ನು ಪಡೆದಿರುತ್ತದೆ. ಕ್ರಿಯಾತ್ಮಕ ಹಾಗೂ ಪರಿವರ್ತನಶೀಲ ಜಗತ್ತಿನಲ್ಲಿ ಸಂಶೋಧನೆಯ ರೂಪರೇಖೆ ಹಾಗೂ ದೃಷ್ಟಿಕೋಣವು ಐತಿಹಾಸಿಕ ಹಾಗೂ ಸಮಾಜದ ನಾನಾ ಅಂಶಗಳ ಪ್ರಭಾವಕ್ಕೆ ಬೀಳುವ ಸಂಭವವಿದೆ. ಆದ್ದರಿಂದ ವೈದ್ಯಕೀಯ ಸಂಶೋಧನೆಯನ್ನು ಪ್ರತ್ಯೇಕವಾಗಿ ಪರಿಶೀಲಿಸಲು ಸಾಧ್ಯವಿಲ್ಲ.

ವೈದ್ಯಕೀಯ ರೋಗ ಸಂಬಂಧವಾದ ಸಮಸ್ಯೆಗಳು ಬದಲಾಯಿಸುತ್ತಾ ಬರುವುವು. ಹಳೆಯ ಸಮಸ್ಯೆಗಳನ್ನು ಬಗೆಹರಿಸಿದಂತೆ ಹೊಸ ಸಮಸ್ಯೆಗಳು ಉದ್ಭವವಾಗುವುವು. ಆದ್ದರಿಂದ, ಸಂಶೋಧನೆಯ ವಿಚಾರದಲ್ಲಿ ದೂರದ— ದೃಷ್ಟಿಕೋಣವನ್ನು ಹೊಂದುವುದು ಆವಶ್ಯಕವಾಗಿರುವುದು.

ಮೂಲಭೂತ ತತ್ವಗಳು

ಆರೋಗ್ಯ ಸಮೀಕ್ಷಾ ಹಾಗೂ ಅಭಿವೃದ್ಧಿ ಸಮಿತಿಯವರು 1946ರಲ್ಲಿ ವೈದ್ಯಕೀಯ ಸಂಶೋಧನೆಯ ಇಡೀ ಕ್ಷೇತ್ರದಷ್ಟನ್ನೂ ಪರಾಮರ್ಶಿಸಿದರು. ವೈದ್ಯಕೀಯ ಕ್ಷೇತ್ರದಲ್ಲಿ ಸಂಶೋಧನಾ ಕಾರ್ಯದ ಕೊರತೆ ಇರುವುದನ್ನು ಖಂಡಿಸಿ, ಸಮಿತಿಯವರು ಈ ಸಂಶೋಧನೆಯನ್ನು ಆಧುನಿಕ ಮಾರ್ಗಗಳಲ್ಲಿ ಅಭಿವೃದ್ಧಿಪಡಿಸುವ ಪ್ರಾಮುಖ್ಯತೆಯನ್ನು ಒತ್ತಿ ಸೂಚಿಸಿದರು. "ವೈದ್ಯಕೀಯ ಕಾಲೇಜುಗಳ ವಿವಿಧ ವಿಭಾಗಗಳಲ್ಲಿ ವ್ಯವಸ್ಥಿತ ರೀತಿಯ ವೈದ್ಯಕೀಯ ಸಂಶೋಧನೆ ಸಂಪೂರ್ಣವಾಗಿ ಇಲ್ಲದಿದ್ದನ್ನು" ಸಮಿತಿಯವರು ಎತ್ತಿ ತೋರಿಸಿದ್ದಾರೆ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಮುಖ್ಯವಾಗಿ ಸಂಶೋಧನಾ ಕಾರ್ಯಕ್ಕೆಂದು ಸ್ಥಾಪಿಸಿದ ವಿಶೇಷ ಸಂಸ್ಥೆಗಳಲ್ಲಿಯೂ ವೈದ್ಯಕೀಯ ಸಂಶೋಧನೆ ಇಲ್ಲದಿದ್ದುದನ್ನು ಸಮಿತಿಯವರು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ.

1947ಕ್ಕೆ ಪೂರ್ವದಲ್ಲಿ, ಭಾರತದಲ್ಲಿ ವೈದ್ಯಕೀಯ ಸಂಶೋಧನೆಯು ಬಹುಮಟ್ಟಿಗೆ ವಿಶೇಷ ಸಂಸ್ಥೆಗಳು ನಡೆಸುತ್ತಿದ್ದ ಸಂಶೋಧನಾ ಕಾರ್ಯಗಳಿಗೆ ಮಾತ್ರ ಸಂಬಂಧಿಸಿತ್ತು. ಹಾಗೂ 1911ರಲ್ಲಿ ಸ್ಥಾಪಿತವಾದ ಭಾರತದ ಸಂಶೋಧನಾ ನಿಧಿ ಸಂಸ್ಥೆಯ (ಇಂಡಿಯನ್ ರಿಸರ್ಚ್ ಫಂಡ್ ಅಸೋಸಿಯೇಶನ್) ಧನ ಸಹಾಯ ಕಾರ್ಯಕ್ರಮದ ಪ್ರಕಾರ ವಿಶೇಷ ಸಂಸ್ಥೆಗಳು ಸಂಶೋಧನಾ ಕಾರ್ಯಗಳನ್ನು ಕೈಗೊಳ್ಳುತ್ತಿದ್ದುವು. ವಾಸ್ತವವಾಗಿ ನೋಡುವುದಾದರೆ, ವೈದ್ಯಕೀಯ ಸಂಶೋಧನೆಯ ಬಗ್ಗೆ ಸುವ್ಯವಸ್ಥಿತ ಕಾರ್ಯಕ್ರಮವಾವುದೂ ಇರಲಿಲ್ಲ.

ರಾಷ್ಟ್ರೀಯ ಸರಕಾರವು ದೇಶದ ಆಡಳಿತ ಸೂತ್ರಗಳನ್ನು ವಹಿಸಿಕೊಂಡ ಬಳಿಕ ಪರಿಸ್ಥಿತಿ ಬದಲಾಯಿಸತೊಡಗಿತು. ರಾಷ್ಟ್ರೀಯ ಸರ್ಕಾರವು ವೈದ್ಯಕೀಯ ಸಂಶೋಧನೆಯನ್ನು ಸ್ಥಿರ ಆಧಾರದ ಮೇಲೆ ಪುನರ್ವ್ಯವಸ್ಥೆಗೊಳಿಸುವ ಬಗ್ಗೆ ಕ್ರಮ ಕೈಗೊಂಡಿತು. ಭಾರತೀಯ ನಿಧಿ ಸಂಶೋಧನಾ ಸಂಸ್ಥೆಯು ಪುನರ್ವ್ಯವಸ್ಥೆಗೊಂಡು ಭಾರತೀಯ ವೈದ್ಯಕೀಯ ಸಂಶೋಧನಾ ಪರಿಷತ್ತು ಎಂದು ಹೊಸ ಹೆಸರನ್ನು ಪಡೆಯಿತು. ಕೇಂದ್ರ ಸರ್ಕಾರವು ದೇಶದಲ್ಲಿ ವ್ಯವಸ್ಥಿತ ಸಂಶೋಧನೆಯನ್ನು ಪರಿಷತ್ತಿನ ಮೂಲಕ ವ್ಯವಸ್ಥೆಗೊಳಿಸಿವೆ.

ಕಳೆದ ಕೆಲವು ವರ್ಷಗಳಲ್ಲಿ ವೈದ್ಯಕೀಯ ಸಂಶೋಧನಾ ಪರಿಷತ್ತು ವೈದ್ಯಕೀಯ ವಿಜ್ಞಾನದ ಎಲ್ಲ ಕ್ಷೇತ್ರಗಳಲ್ಲಿಯೂ ಸಂಶೋಧನಾ ಕಾರ್ಯವನ್ನು ನಡೆಸಿದೆ. ದ್ವಿತೀಯ ಯೋಜನೆಯಲ್ಲಿ ದೇಶದಲ್ಲಿ ವೈದ್ಯಕೀಯ ಸಂಶೋಧನಾ ಕಾರ್ಯಕ್ರಮಗಳಿಗಾಗಿ ನಾಲ್ಕು ಕೋಟಿ ರೂ. ಗಳಷ್ಟು ಹಣವನ್ನು ಒದಗಿಸಲಾಗಿದೆ.

ವಿಭಿನ್ನ ಸಂಶೋಧನಾ ಯೋಜನೆಗಳು

ದ್ವಿತೀಯ ಯೋಜನೆಯಲ್ಲಿ ಅಡಕವಾಗಿರುವ ವೈದ್ಯಕೀಯ ಸಂಶೋಧನಾ ಕಾರ್ಯಕ್ರಮವು ಈ ರೀತಿ ಇರುವುದು:-

1, ದೇಶದಲ್ಲಿ ಈಗಿರುವ ಸಂಸ್ಥೆಗಳಲ್ಲಿ ಸಂಶೋಧನಾ ಕಾರ್ಯದ ಬಗ್ಗೆ ಅಧಿಕ ಸೌಲಭ್ಯಗಳನ್ನು ಒದಗಿಸುವುದು, 2, ವಿಷಿಷ್ಟ ಕ್ಷೇತ್ರಗಳಲ್ಲಿ ಸಂಶೋಧನೆಗಾಗಿ ನೂತನ ಸಂಸ್ಥೆಗಳನ್ನು ಸ್ಥಾಪಿಸುವುದು, 3, ಪ್ರೌಢ ವ್ಯಾಸಂಗ ವೇತನ ಮುಂತಾದವನ್ನು ಕೊಟ್ಟು ಸಂಶೋಧನಾ ಕಾರ್ಯಕರ್ತರಿಗೆ ತರಬೇತಿಕೊಡುವುದು. ಮತ್ತು 4, ಚಿಕಿತ್ಸಾ ಸೇವೆಗಾಗಿ ಸಂಶೋಧನಾ 'ಕೇಡರ್' ಒಂದನ್ನು ಸ್ಥಾಪಿಸುವುದು ಹಾಗೂ ಔದ್ಯಮಿಕ ಹಾಗೂ ಸಾರ್ವಜನಿಕ ಆರೋಗ್ಯಕ್ಷೇತ್ರಗಳಲ್ಲಿನ ಅನೇಕ ಕಠಿಣ ಸಮಸ್ಯೆಗಳಿಗೆ ನಿವಾರಣೆಯನ್ನು ಕಂಡುಹಿಡಿಯುವ ಬಗ್ಗೆ ಸಂಶೋಧನಾ ಯೋಜನೆಗಳನ್ನು ಪ್ರಾರಂಭಿಸುವುದು. ಇವಲ್ಲದೆ, ಸಂಶೋಧನೆಗೆ ಸಂಬಂಧಿಸಿದ ಎಲ್ಲ ವಿಷಯಗಳಲ್ಲಿಯೂ ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಂಸ್ಥೆಗಳ ನಡುವೆ ನಿಕಟ ಸಂಪರ್ಕ ಏರ್ಪಡುವಂತೆ ಸಂತತವಾದ ಪ್ರಯತ್ನ ನಡೆಸಬೇಕು.

ವಿಚಾರಣೀಯ ಸಮಸ್ಯೆಗಳು

ವೈದ್ಯಕೀಯ ಸಂಶೋಧನೆಯ ಬಗ್ಗೆ ಸ್ಪಷ್ಟವಾದ ಯೋಜನೆಯೊಂದನ್ನು ನಿರೂಪಿಸಿದ ನಂತರ, ನಮ್ಮ ಕಾರ್ಯಕ್ರಮಗಳಲ್ಲಿ ಕಠಿಣ ಗಮನ ಸೆಳೆಯುವ, ಔಷಧಿಯ ಹಾಗೂ ಸಾರ್ವಜನಿಕ ಆರೋಗ್ಯ ಸಮಸ್ಯೆಗಳಿಗೆ ಅಗ್ರ ಪ್ರಾಧಾನ್ಯತೆಗಳನ್ನು ಕೊಡುವ ಪ್ರಶ್ನೆಯು ಉದ್ಭವಿಸುವುದು. ಈ ಪ್ರಶ್ನೆಯನ್ನು ವೈದ್ಯಕೀಯ ಸಂಶೋಧನಾ ಪರಿಷತ್ತಿನ ನಾನಾ ಸಲಹಾ ಸಮಿತಿಗಳು ಪರಿಶೀಲಿಸಿ ಸಂಶೋಧನೆಯ ವಿಶಿಷ್ಟ ಸಮಸ್ಯೆಗಳನ್ನು ಪಟ್ಟಿಹಾಕಿತು.



ಮಲೇರಿಯದ ಸುಸಿಗಳ ಪರಿಶೀಲನೆ ನಡೆಸುವ ನೋಟ

ಈ ಸಮಸ್ಯೆಗಳಲ್ಲಿ ಮೂಲಭೂತ ಸಂಶೋಧನೆ, ಪೌಷ್ಟಿಕ ಆಹಾರ, ಸ್ವಚ್ಛ ವಾತಾವರಣ, ತಾಯಿ ಹಾಗೂ ಶಿಶು ಆರೋಗ್ಯ, ಕೈಗಾರಿಕಾ ಆರೋಗ್ಯ ಔಷಧಿ ಸಂಬಂಧವಾದ ಸಂಶೋಧನೆ ಮುಂತಾದವು ಸೇರಿವೆ. ಕುಷ್ಠರೋಗ, ಕ್ಷಯರೋಗಗಳಂತಹ ಅಂಟು ಜಾಡ್ಯಗಳನ್ನು ನಿಯಂತ್ರಿಸುವ ವಿಧಾನಗಳಿಗೆ ಕೂಡ ಸಂಶೋಧನ ಕಾರ್ಯಕ್ರಮದಲ್ಲಿ ಮಹತ್ವವನ್ನೀಯಲಾಗಿದೆ.

ಈ ರೀತಿಯಾಗಿ ಮಹೀರಾಜ್ಯದಲ್ಲಿನ ಸಂಶೋಧನಾ ಕಾರ್ಯಕ್ರಮವು ಹಲವು ಮುಖಗಳನ್ನು ಪಡೆದಿರುವುದು. ಇದು ರಾಜ್ಯ ಹಾಗೂ ಕೇಂದ್ರಸರ್ಕಾರಗಳ ಸಾರ್ವಜನಿಕ ಆರೋಗ್ಯ ಸಂಬಂಧವಾದ ಕಾರ್ಯನೀತಿಗಳೊಂದಿಗೆ ನಿಕಟಸಂಬಂಧ ಪಡೆದಿರಬೇಕು. ದೇಶದ ಸಂಶೋಧನಾ ಸಾಮರಸ್ಯವನ್ನು ಹೆಚ್ಚಿಸುವುದು, ಸುವ್ಯವಸ್ಥಿತ ವೈದ್ಯಕೀಯ ಸಂಶೋಧನಾ ಕಾರ್ಯಕ್ರಮವೊಂದನ್ನು ಪ್ರಾರಂಭಿಸುವ ಮುಂದಿರುವ ಅತಿ ಮುಖ್ಯ ಸಮಸ್ಯೆಯಾಗಿರುವುದು. ಇದಕ್ಕಾಗಿ ದ್ವಿತೀಯ ಯೋಜನೆಯಲ್ಲಿ ಗೊತ್ತಾದ ನಿಧಿಗಳನ್ನು ಒದಗಿಸಬೇಕಾಗುವುದು. ಈಗಿರುವ ವೈದ್ಯಕೀಯ ಸಂಸ್ಥೆಗಳಲ್ಲಿ ಸಂಶೋಧಕರಿಂದ ತರಬೇತಿಯನ್ನೀಯುವ ವ್ಯವಸ್ಥೆಮಾಡಲಾಗಿದೆ. ಜನತೆಗೆ 'ಕೆಲಸದಲ್ಲಿರುವಾಗಲೇ ತರಬೇತಿ ಪಡೆಯುವ ಕಾರ್ಯಕ್ರಮ' ಒಂದನ್ನು ಜಾರಿಗೆ ತರಲು ಉದ್ದೇಶಿಸಿದೆ.

ಸಂಶೋಧನಾ ಚೌಕಟ್ಟು

ಸಂಶೋಧಕರು ಸಂತುಷ್ಟರಾಗಿ ಸಹಾನುಭೂತಿ ಪೂರ್ಣವಾದ ವಾತಾವರಣದಲ್ಲಿ ಕೆಲಸಮಾಡುವವರೆವಿಗೂ, ಎಷ್ಟೇ ಆಶಾದಾಯಕವಾದ ಯೋಜನೆ ಇರಲಿ, ಅದು ಸಫಲವಾಗಲಾರದು. ಆದ್ದರಿಂದ ವೈದ್ಯಕೀಯ ಸಂಶೋಧನಾ ಪರಿಷತ್ತು ಸ್ಥಿರ ಸ್ವರೂಪದ ಸಂಶೋಧನಾ ಚೌಕಟ್ಟನ್ನು (ಕೇಡರ್, ಸ್ಥಾಪಿಸಬೇಕೆಂದು ಸರ್ಕಾರಕ್ಕೆ ಶಿಫಾರಸು ಮಾಡಿದೆ.

(೧೨ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ
ಅತ್ಯುತ್ತಮ ಬೀಡಿಗಳಲ್ಲಿ
ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ
ಅವೆಲ್ಲಾ
ಎಸ್. ಆರ್.
ಬೀಡಿಗಳಲ್ಲಿ ಇರುವವು ಎಂದು ಖಚಿತವಾಗಿ
ಹೇಳುತ್ತೇವೆ.
ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.
S. R. Beedi Works UDIPI S.K.

ಕೃಷಿ ಕ್ಷೇತ್ರದ ಅಭಿವೃದ್ಧಿಯಲ್ಲಿ ಕೃತಕ ಗೊಬ್ಬರಗಳ ಪಾತ್ರ

ಆರು ಮಕ್ಕಳ ಸ್ಥಾನದಲ್ಲಿ ಮೂರರಿಂದಲೇ ತೃಪ್ತರಾಗುವುದು, ಬದಲಿಗೆ ಮೂರು ತೆನೆ ಬರುವಲ್ಲಿ ಆರು ತೆನೆ ಭತ್ತವನ್ನು ಬೆಳೆಸಲು ಸಹಾಯಕವಾಗುವುದು ರಾಷ್ಟ್ರದ ಇಂದಿನ ಅವಶ್ಯಕತೆಯಾಗಿದೆ. ಕಾರಣ, ಫಲವರ್ಧಕ ಗೊಬ್ಬರಗಳ ಉಪಯೋಗವನ್ನು ನಮ್ಮ ಕೃಷಿಕರು ತಿಳಿದುಕೊಂಡು ಬಳಸುವುದು ಅತ್ಯಂತ ಆವಶ್ಯಕ.

ಭಾರತವು, ಭೌಗೋಳಿಕ ಕ್ಷೇತ್ರದಲ್ಲಿ, ಇತರ ರಾಷ್ಟ್ರಗಳಿಗಿಂತ ಹೆಚ್ಚು ಪ್ರಮಾಣದಲ್ಲಿ ಸಾಗುವಳಿಗೆ ತಕ್ಕ ಭೂಮಿಯನ್ನು ಹೊಂದಿದೆ. ಆದರೆ, ವ್ಯಾವಸಾಯಿಕ ವಸ್ತುಗಳ ಎಕರೆವಾರು ಉತ್ಪಾದನೆಯು ಬಹಳ ಕಡಿಮೆ. ಉದಾಹರಣೆಗೆ: ವಿಶ್ವದ ಗೋಧಿ ಬೆಳೆಯುವ ಪ್ರಮುಖ ಕ್ಷೇತ್ರಗಳಿಗೆ ಹೋಲಿಸಿದರೆ, ಭಾರತದಲ್ಲಿ ಗೋಧಿ ಉತ್ಪಾದನೆಯು ಅತ್ಯಂತ ಕಡಿಮೆ.

ಈ ಎರಡು ಮಹತ್ವದ ಅಂಶಗಳೂ ಸೇರಿ, ರಾಷ್ಟ್ರದ ಅತಿ ಮುಖ್ಯ ಸಮಸ್ಯೆಯೊಂದನ್ನು ಮುಂದೊಡ್ಡುತ್ತವೆ. ಬೇಕಾದಷ್ಟು ವ್ಯವಸಾಯ ಯೋಗ್ಯ ಭೂಮಿಯಿರುವಾಗ, ರಾಷ್ಟ್ರದಲ್ಲಿ ಆಹಾರ ಸಮಸ್ಯೆಯು ಬಹು ಕಾಲದ, ಒಂದು ಕೊರತೆಯಾಗಿರುವುದೇತಕ್ಕೆ? ಬೇಸಾಯ ಸಂಪತ್ತನ್ನು ಉಪಯೋಗಿಸಿಕೊಂಡು ಆಹಾರ ವಸ್ತುಗಳನ್ನು ಉತ್ಪಾದಿಸುವುದರಲ್ಲಿ ಭಾರತೀಯ ರೈತಾದಿ ಜನರು ಅಸಮರ್ಥರೆ ಅಥವಾ ಅವರ ಉತ್ಪಾದನಾ ವಿಧಾನ ಹಾಗೂ ಉಪಕರಣಗಳು ಈಗಿನ ಬೇಡಿಕೆಗಳನ್ನು ಪೂರೈಸವಷ್ಟು ಹಳೆಯ ಕಾಲದವೆ? ಅಥವಾ ನಮ್ಮ ಭೂಮಿಯು ಮಿತ ವೆಚ್ಚಗಳಲ್ಲಿ ವ್ಯಾವಸಾಯಿಕ ಬೆಳೆಗಳನ್ನು ಉತ್ಪತ್ತಿ ಮಾಡಲು ಸಾಕಷ್ಟು ಫಲವತ್ತಾಗಿಲ್ಲವೆ?

ಅಸಮರ್ಪಕ ವ್ಯವಸಾಯ ವಿಧಾನ

ವ್ಯಾವಸಾಯಿಕ ಸಂಶೋಧನೆ ಮತ್ತು ಶಿಕ್ಷಣದ, ಭಾರತ_ಅಮೇರಿಕಗಳ ತಂಡವೊಂದು, ವ್ಯವಸಾಯದಲ್ಲಿ ಭಾರತೀಯ ರೈತನ ಎಲ್ಲಾ ಅಪವಾದಗಳನ್ನೂ ಮನ್ನಿಸಿದೆ. ಈ ತಂಡವು, ಭಾರತದಲ್ಲಿ ಅಸಮರ್ಪಕ ವ್ಯಾವಸಾಯಿಕ ತಂತ್ರದ ವಿಧಾನವಿರುವುದೇ ಇದಕ್ಕೆ ಕಾರಣವೆಂದು ತಿಳಿಸಿದೆ. "ಭಾರತದಲ್ಲಿ ಬೇಸಾಯದ ಕೆಲಸಗಾರರು ಈಗಿನ ಉಪಕರಣಗಳು ಹಾಗೂ ಸಾಮರ್ಥ್ಯಗಳಿಂದಲೇ ನಿರೀಕ್ಷೆಗಿಂತ ಹೆಚ್ಚಿನ ಉತ್ಪಾದನೆಯನ್ನು ನಡೆಸುತ್ತಿರುವರು. ಅದರ ಜೊತೆಗೆ ಅವರು ಬೇಸಾಯ ಕ್ಷೇತ್ರದಲ್ಲಿನ ಅನೇಕ ಗಂಡಾಂತರಗಳನ್ನೂ ಎದುರಿಸುತ್ತಿರುವರು" ಎಂದು ಈ ತಂಡದ ವರದಿಯು ತಿಳಿಸುತ್ತದೆ.

ಸುಧಾರಿಸಿದ ವ್ಯವಸಾಯ ತಂತ್ರದಲ್ಲಿ ಹೆಚ್ಚು ಸಮರ್ಥವಾದ, ಯಂತ್ರೋಪಕರಣ ಬಳಕೆಯಿಂದ ಮತ್ತು ಆಧುನಿಕ ವಿಜ್ಞಾನ ವಿಧಾನಗಳಿಂದ ಹೆಚ್ಚಿನ ವ್ಯಾವಸಾಯಿಕ ಉತ್ಪಾದನೆಯನ್ನು ಸಾಧಿಸಬಹುದು. ವ್ಯಾವಸಾಯಿಕ ಉತ್ಪಾದನೆಗೆ ಅತ್ಯಂತ ಅಗತ್ಯವಾದ ವಸ್ತುಗಳೆಂದರೆ, ಪ್ರಾಕೃತಿಕ ಮತ್ತು ರಾಸಾಯನಿಕ ಕೃತಕ ಗೊಬ್ಬರಗಳ ಸರಿಯಾದ ಬಳಕೆ. ಉತ್ತಮ ಭೂಮಿಯು ನಮಗೆ ಆಹಾರವನ್ನೊದಗಿಸುವುದು. ಆದರೆ, ಅದಕ್ಕೆ ಬದಲಾಗಿ ಆ ಭೂಮಿಗೆ ನಾವು ಪೋಷಕ ವಸ್ತುಗಳನ್ನು ಒದಗಿಸಬೇಕು.

ಸಾರಜನಕ ಮತ್ತು ರಂಜಕ ಸಂಬಂಧ ಕೃತಕ ಗೊಬ್ಬರಗಳ ಬಳಕೆಯನ್ನು ಜನಪ್ರಿಯಗೊಳಿಸುವ ಚಳವಳಿಯು ಈಗಾಗಲೇ ರಾಷ್ಟ್ರದಲ್ಲಿ ನಡೆಯುತ್ತಿದೆ. ದ್ವಿತೀಯ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ, ವರ್ಷಕ್ಕೆ, ಸುಮಾರು 18.5 ಲಕ್ಷ ಟನ್ನುಗಳಷ್ಟು ಸಾರಜನಕ ಸಂಬಂಧ ಕೃತಕ ಗೊಬ್ಬರಗಳು ಮತ್ತು 7.2 ಲಕ್ಷ ಟನ್ನುಗಳಷ್ಟು ರಂಜಕ ಸಂಬಂಧ ಕೃತಕ ಗೊಬ್ಬರಗಳನ್ನು ಉಪಯೋಗಿಸಲಾಗುವುದು. ಪ್ರಥಮ ಪಂಚವಾರ್ಷಿಕ ಯೋಜನೆಯ ಕೊನೆಯ ವರ್ಷದಲ್ಲಿ ಅಂದರೆ, 1955_56ರಲ್ಲಿ ಕ್ರಮವಾಗಿ 6 ಮತ್ತು 1.06 ಲಕ್ಷ ಟನ್ನುಗಳಷ್ಟು ಕೃತಕ ಗೊಬ್ಬರಗಳನ್ನು ಬಳಸಲಾಯಿತು.

ಸೂಕ್ತ ರೀತಿಯಲ್ಲಿ ಗೊಬ್ಬರಗಳು ಹಾಗೂ ಕೃತಕ ಗೊಬ್ಬರಗಳನ್ನು ಬಳಸುವುದರಿಂದ, 1960-61ರಲ್ಲಿ, ಭಾರತದಲ್ಲಿ 25 ಟನ್ನುಗಳಷ್ಟು ಹೆಚ್ಚು ಆಹಾರ ಧಾನ್ಯಗಳು ದೊರೆಯುವುವೆಂದು ಅಂದಾಜು ಮಾಡಲಾಗಿದೆ. ಈ ದೃಷ್ಟಿಯಿಂದ, ದ್ವಿತೀಯ ಯೋಜನೆಯ ಅವಧಿಯಲ್ಲಿ ವ್ಯಾವಸಾಯಿಕ ಉತ್ಪಾದನೆಯ ಗುರಿಗಳನ್ನು ಹೆಚ್ಚಿಸುವ ಇತ್ತೀಚಿನ ನಿಲುಹೆಗಳಿಂದ ಕೃತಕ ಗೊಬ್ಬರಗಳ ಬಳಕೆಯನ್ನು ಮತ್ತಷ್ಟು ಹೆಚ್ಚಿಸಬೇಕಾಗುವುದು.

ಹೊಸ ಕಾರ್ಖಾನೆಗಳು

ಭಾರತಕ್ಕೆ ಬೇಕಾಗುವ ಅಮೋನಿಯಂ ಸಲ್ಫೇಟಿನಲ್ಲಿ ಭಾರತದಲ್ಲಿ ಈಗ ಒಂದು ನಿರ್ದಿಷ್ಟ ಪ್ರಮಾಣದಲ್ಲಿ ಮಾತ್ರ ಅಮೋನಿಯಂ ಸಲ್ಫೇಟನ್ನು ಉತ್ಪಾದಿಸಲಾಗುತ್ತಿದೆ. ಎರಡು ಅತಿ ಮುಖ್ಯ ಸಾರಜನಕ ಸಂಬಂಧ ಕೃತಕ ಗೊಬ್ಬರಗಳಾದ ಅಮೋನಿಯಂ ಸಲ್ಫೇಟ್ ನೈಟ್ರೇಟ್ ಮತ್ತು ಯೂರಿಯಾಗಳ ಉತ್ಪಾದನೆಗಾಗಿ ಸಿಂಧ್ರಿಯ ಕೃತಕ ಗೊಬ್ಬರಗಳ ಕಾರ್ಖಾನೆಯಲ್ಲಿ ಹೊಸ ಯಂತ್ರೋಪಕರಣಗಳನ್ನು ಸ್ಥಾಪಿಸಲಾಗುತ್ತಿದೆ. ಈ ಯಂತ್ರೋಪಕರಣಗಳು 1958-59ರಲ್ಲಿ ಉತ್ಪಾದನೆಯನ್ನಾರಂಭಿಸಿ, ವರ್ಷಕ್ಕೆ 150,000 ಟನ್ನುಗಳಷ್ಟು ಹೆಚ್ಚು ಕೃತಕ ಗೊಬ್ಬರಗಳು ಅಥವಾ ಸಾರಜನಕದ ರೂಪದಲ್ಲಿ, 44,000 ಟನ್ನುಗಳಷ್ಟು ಹೆಚ್ಚು ಸಾರಜನಕವನ್ನು 1960—61ರ ನಂತರ ಉತ್ಪಾದಿಸುವ ನಿರೀಕ್ಷೆಯಿದೆ. 1960—61ರ ಕೊನೆಯ ವೇಳೆಗೆ ಮೂರು ಕೃತಕ ಗೊಬ್ಬರ ಕಾರ್ಖಾನೆಗಳನ್ನು ನಂಗಲ್, ರೂರ್ಕೇಲಾ ಮತ್ತು ನೇವೇಲಿಗಳಲ್ಲಿ ಸ್ಥಾಪಿಸುವ ನಿರೀಕ್ಷೆಯಿದೆ. ಅವು 2,20,000 ಟನ್ನುಗಳಷ್ಟು ಸಾರಜನಕ ಸಂಬಂಧ ಕೃತಕ ಗೊಬ್ಬರಗಳನ್ನು ಉತ್ಪಾದಿಸುವ ಗುರಿಯನ್ನು ಹೊಂದಿವೆ.

ಕೃತಕ ಗೊಬ್ಬರಗಳಲ್ಲಿರುವ ಮುಖ್ಯ ವಸ್ತುಗಳಾದ, ಸಾರಜನಕ, ರಂಜಕ ಮತ್ತು ಪೊಟ್ಯಾಸಿಯಂ ಇತ್ಯಾದಿಗಳು ಸಸ್ಯಗಳ ಬೇರು ವಸ್ತುಗಳಾಗಿ ಅವುಗಳ ಬೆಳವಣಿಗೆಯನ್ನು ಉತ್ತೇಜಿಸುವ ಅಂಶವನ್ನು ಈಗಾಗಲೇ ಖಚಿತಪಡಿಸಿದೆ. ಸಾರಜನಕವು ಸಸ್ಯಗಳಲ್ಲಿ ಪ್ರೋಟೀನ್‌ಗಳನ್ನು ನಿರ್ಮಿಸುವುದು ಪೊಟ್ಯಾಸಿಯಂ ಅವುಗಳಲ್ಲಿ ಸಕ್ಕರೆ ಮತ್ತು ಪಿಷ್ಟಗಳನ್ನು ಹೆಚ್ಚಿಸಲು ಅಗತ್ಯವಾಗುವುದು. ಅದಲ್ಲದೆ, ಸಾರಜನಕವು ಸಸ್ಯಗಳಿಗೆ ಆರೋಗ್ಯಕರ ಪತ್ರ ಹರಿತ್ತನ್ನು ಕೊಟ್ಟರೆ, ರಂಜಕವು ಸಸ್ಯಗಳ ಬೆಳವಣಿಗೆಯನ್ನು ಹೆಚ್ಚಿಸಿ, ಜಾಗ್ರತೆಯಾಗಿ ಬೀಜಗಳು ಮೊಳೆಯುವಂತೆ ವ್ಯವಸ್ಥೆಗೊಳಿಸಿ, ಬೆಳೆಯು ಪರಿಪಕ್ವತೆಗೆ ಬರಲು ತ್ವರಿತಗೊಳಿಸುವುದು. ಅದರಂತೆಯೆ, ಸಸ್ಯಗಳಿಗೆ, ಪಿಡುಗುಗಳು ಮತ್ತು ರೋಗಗಳನ್ನು ತಡೆದು ನಿಲ್ಲುವಂತೆ, ಪೊಟ್ಯಾಸಿಯಂ, ಸಸ್ಯಗಳ ಸಹನಶಕ್ತಿಯನ್ನು ಅಭಿವೃದ್ಧಿಪಡಿಸುವುದು.

ಮುಖ್ಯ ಸಂಗ್ರಹಣ ಕೇಂದ್ರ

ರಾಜ್ಯಗಳಿಗೆ ಸಾರಜನಕ ಸಂಬಂಧ ಕೃತಕ ಗೊಬ್ಬರಗಳ ಹಂಚಿಕೆ ಮತ್ತು ಸಂಗ್ರಹಣೆಗಾಗಿ, ಸರಕಾರಿ ಟ್ರೇಡಿಂಗ್ ಕಾರ್ಯಕ್ರಮದ ಪ್ರಕಾರ, 1944ರಿಂದ ಒಂದು "ಕೃತಕ ಗೊಬ್ಬರಗಳ ಮುಖ್ಯಸಂಗ್ರಹಣ ಕೇಂದ್ರ" ಪ್ರಕಲಿಸಿ ನಡೆಸುತ್ತಿದೆ. ಉತ್ಪಾದನೆಯಾದ ಎಲ್ಲಾ ಅಮೋನಿಯಂ ಸಲ್ಫೇಟ್‌ನ್ನು ಈ ಸಂಗ್ರಹಣ ಕೇಂದ್ರವು ಕೊಂಡುಕೊಳ್ಳುವುದು. ಈ ಗೊಬ್ಬರದ ಕೊರತೆಯನ್ನು ನೀಗುವುದಕ್ಕಾಗಿ ಭಾರತ ಸರಕಾರದವರು ಆಮದು ಮಾಡಿಕೊಂಡ ಕೃತಕ ಗೊಬ್ಬರಗಳು ಸಹ ಈ ಸಂಗ್ರಹಣ ಕೇಂದ್ರಕ್ಕೆ ಹೋಗುವುವು.

ಈ ಸಂಗ್ರಹಣಕೇಂದ್ರವು ರಾಷ್ಟ್ರದಲ್ಲಿ ದೊರೆಯುವ ಕೃತಕ ಗೊಬ್ಬರಗಳನ್ನು ಸಮಭಾಗಗಳಲ್ಲಿ, ಸೂಕ್ತ ಪ್ರಮಾಣಗಳಲ್ಲಿ ಹಂಚುವ ಉದ್ದೇಶವುಳ್ಳದ್ದು. ವ್ಯಾವಸಾಯಿಕ ಉತ್ಪಾದನೆಯು ಹೆಚ್ಚುವರೀತಿಯಲ್ಲಿ ಅವುಗಳನ್ನು ಉಪಯೋಗಿಸುವ ಭರವಸೆಯನ್ನು ಈ ಕೇಂದ್ರವು ನೀಡುವುದು.

ರಾಜ್ಯಗಳಲ್ಲಿ ಇದುವರೆಗೆ ಕೃತಕ ಗೊಬ್ಬರಗಳ ಹಂಚಿಕೆಯನ್ನು ಈ ಕೆಳಕಂಡ ಸಂಸ್ಥೆಗಳ ಮೂಲಕ ವ್ಯವಸ್ಥೆ ಮಾಡಲಾಗಿದೆ. (1) ಸಹಕಾರ ಸಂಸ್ಥೆಗಳು, (2) ಖಾಸಗಿ ವ್ಯಾಪಾರಸ್ಥರು, (3) ಸರ್ಕಾರಿ ಮಾರಾಟ ದಡಿಪೋಗಳು, ಜೊತೆಗೆ ಪಂಚಾಯತಿಗಳು, ಸಾಮುದಾಯಿಕ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣ ಸೇವಾಕೇಂದ್ರಗಳ ಮೂಲಕವೂ ವ್ಯವಸಾಯಗಾರರಿಗೆ ಕೃತಕ ಗೊಬ್ಬರಗಳನ್ನು ಒದಗಿಸುವ ಉದ್ದೇಶವಿದೆ

ಸಾಲದ ನೀಡಿಕೆ

ಪ್ರತಿವರ್ಷವೂ ಎರಡು ಲಕ್ಷ ಪ್ರದರ್ಶನಾ ಸ್ಥಳಗಳಲ್ಲಿ, ಕೃತಕ ಗೊಬ್ಬರಗಳ ಉಪಯೋಗವನ್ನು ಅಭಿವೃದ್ಧಿ ಪಡಿಸಲು ಪ್ರದರ್ಶನವೀಯು ಲಾಗುತ್ತಿದೆ. ರಾಜ್ಯಸರ್ಕಾರಗಳು, ಸಂಗ್ರಹಣ ಕೇಂದ್ರದಿಂದ, ಅಮೋನಿಯಂ ಸಲ್ಫೇಟನ್ನು ಕೊಂಡು ಕೊಂಡು ವ್ಯವಸಾಯಗಾರರಿಗೆ ಸಾಲವಾಗಿ ಹಂಚಲು ಸಾಧ್ಯವಾಗುವಂತೆ, ಕೇಂದ್ರ ಸರ್ಕಾರವು ಅಲ್ಪಕಾಲಾವಧಿ ಸಾಲಗಳನ್ನು ನೀಡುತ್ತಿರುವುದು ಮತ್ತೊಂದು ಸಹಾಯಕ ಕ್ರಮವಾಗಿದೆ. 1951ರಲ್ಲಿ ಟನ್ ಒಂದಕ್ಕೆ ಸಂಗ್ರಹಣ ಕೇಂದ್ರದ ಬೆಲೆಯು 390ರೂ ಗಳಿದ್ದುದನ್ನು, 1954ರಲ್ಲಿ 315ರೂ ಗಳಿಗಿಳಿಸಿ, ರಾಷ್ಟ್ರದಲ್ಲಿ ಸಾರಜನಕ ಸಂಬಂಧ ಕೃತಕ ಗೊಬ್ಬರಗಳ ಬಳಕೆಯನ್ನು ಗಮನಾರ್ಹವಾಗಿ ಹೆಚ್ಚಿಸಲು ಅನುಕೂಲವಾಯಿತು.

ದೇಶದಲ್ಲಿ, ಜಪಾನಿ ವಿಧಾನ ಅಥವಾ ಮತ್ತಿತರ ವಿಧಾನಗಳಲ್ಲಿ, ಅನೇಕ ಕಡೆಗಳಲ್ಲಿ ತೀವ್ರತರ ವ್ಯವಸಾಯವನ್ನು ಅನುಸರಿಸುತ್ತಿರುವುದು, ಮಣ್ಣಿನಲ್ಲಿ ರಂಜಕ ಸಂಬಂಧ ಅಂಶವನ್ನು ಒಂದು ನೋಡುವುದೆಂದು ತಿಳಿದು ಬಂದಿದೆ. ಸೂಪರ್ —ಫಾಸ್ಫೇಟ್‌ಗಳ ಬಳಕೆಯಿಂದ ಮಣ್ಣಿನಲ್ಲಿ ರಂಜಕ ಸಂಬಂಧ ಅಂಶವನ್ನು ತಿರುಗಿ ಭರ್ತಿ ಮಾಡದಿದ್ದರೆ, ಮಣ್ಣು ಸತ್ವಹೀನವಾಗುವ ಸಂಭವವುಂಟು. ಅನೇಕ ವಿದೇಶಿರಾಷ್ಟ್ರಗಳಲ್ಲಿ, ಸಾರಜನಕ ಸಂಬಂಧ ಕೃತಕ ಗೊಬ್ಬರಗಳಿಗಿಂತ ಹೆಚ್ಚಾಗಿ ಫಾಸ್ಫೇಟ್‌ಗಳನ್ನು ಬಳಸಲಾಗುತ್ತಿದೆ. ಆದರೆ, ಭಾರತದಲ್ಲಿ ಇದು ಅದಲು ಬದಲಾಗಿದೆ. ಭಾರತದಲ್ಲಿ ಈಗ ಒಂದು ಲಕ್ಷಟನ್‌ಗಳಷ್ಟು ಫಾಸ್ಫೇಟ್‌ಗಳನ್ನೂ ಮತ್ತು 6 ಲಕ್ಷ ಟನ್ ಗಳಷ್ಟು ಅಮೋನಿಯಂ ಸಲ್ಫೇಟ್‌ಗಳನ್ನೂ ಬಳಸಲಾಗುತ್ತಿದೆ. ಈ ಸಮಸ್ಯೆಯು ಕೃತಕ ಗೊಬ್ಬರಗಳ ಬಳಕೆಯ ತೂಕದಲ್ಲಿ ಸ್ವಲ್ಪಕೊರತೆಯನ್ನು ಸೂಚಿಸಿದರೂ ಸಹ, ವೈಜ್ಞಾನಿಕ ರೀತಿಯಲ್ಲಿ ಮಣ್ಣಿನ ಪರೀಕ್ಷೆಗಳನ್ನು ನಡೆಸಿದ್ದಾದರೆ ಮಾತ್ರ, ಸಮಸ್ಯೆಯ ಸರಿಯಾದ ಮಾರ್ಗವನ್ನು ನಿರ್ಧರಿಸಬಹುದು. ಈ ಪರೀಕ್ಷೆಗಳ ಫಲಿತಾಂಶಗಳು, ವಿವಿಧ ಮಣ್ಣುಗಳಿಗೆ ಬೇಕಾದ ಕೃತಕ ಗೊಬ್ಬರಗಳ ಅಗತ್ಯವನ್ನು ನಿರ್ಧರಿಸಲು ಸಹಾಯವಾಗುವುವು.

ರಾಷ್ಟ್ರದಲ್ಲಿ ಸೂಪರ್ ಫಾಸ್ಫೇಟ್‌ಗಳ ಪೂರೈಕೆಯನ್ನು ಹೆಚ್ಚಿಸುವ ಅಗತ್ಯವಿರುವುದರಿಂದ, ದ್ವಿತೀಯ ಯೋಜನೆಯ ಅಂತ್ಯದ ವೇಳೆಗೆ ಖಾಸಗಿ ಕ್ಷೇತ್ರದಲ್ಲಿ ಉತ್ಪಾದನಾ ಗುರಿಯನ್ನು ವರ್ಷಕ್ಕೆ 7,20,000 ಟನ್ನುಗಳಿಗೆ ನಿಗದಿ ಮಾಡಲಾಗಿದೆ.

ಈ ಉಪಯುಕ್ತ ಕೃತಕ ಗೊಬ್ಬರವನ್ನು ಪರ್ಯಾಯ ಆಕರಗಳಿಂದಲೂ ಪಡೆಯಲಾಗುತ್ತಿದೆ. ಮೂಳೆ ಗೊಬ್ಬರವು ಒಂದು ಉತ್ತಮ ರಂಜಕ ಗೊಬ್ಬರವಾಗಿದೆ. ಅದನ್ನು ಜನಾನುರಾಗಗೊಳಿಸಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ.

ರಾಷ್ಟ್ರೀಯ ಭೌತಿಕ ಪ್ರಯೋಗ ಶಾಲೆಯಲ್ಲಿ ಮೂಳೆ ಗೊಬ್ಬರವನ್ನು ತಯಾರಿಸುವುದಕ್ಕೆ ಅನುಕೂಲವಾದ ಯಂತ್ರವೊಂದನ್ನು ಆವಿಷ್ಕರಿಸಲಾಗಿದೆ. ರಾಜ್ಯ ಸರ್ಕಾರಗಳು ಗ್ರಾಮಾಂತರ ಪ್ರದೇಶಗಳಲ್ಲಿ ಹಲವು ಕಡೆ ಈ ಯಂತ್ರಗಳನ್ನು ಸ್ಥಾಪಿಸಿ ಮೂಳೆ ಗೊಬ್ಬರದ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ತಿಳಿಸಲಾಗಿದೆ.

ರಾಸಾಯನಿಕ ಗೊಬ್ಬರವನ್ನು ಸೂಕ್ತ ರೀತಿಯಲ್ಲಿ ಉಪಯೋಗಿಸಬೇಕೆಂದು ಹೇಳಿದರೆ, ಸಾರದ ಗೊಬ್ಬರವನ್ನು ಪೂರ್ತಿಯಾಗಿ ಉಪಯೋಗಿಸಬಾರದೆಂದು ಅರ್ಥವಲ್ಲ. ಈ ಎರಡು ಬಗೆಯ ಗೊಬ್ಬರಗಳನ್ನು ಸಂದರ್ಭಾನುಸಾರ ಸೂಕ್ತ ರೀತಿಯಲ್ಲಿ ಉಪಯೋಗಿಸುವುದರಿಂದ ಭೂಮಿಯ ಸಾರವು ಕಡಿಮೆಯಾಗುವುದಿಲ್ಲವೆಂದು ತಜ್ಞರು ಅಭಿಪ್ರಾಯಪಟ್ಟಿರುವರು.

ಶ್ರೀ ಕೃಷ್ಣ ಜುವೆಲ್ಲರಿ ಮಾರ್ಟ್

ಪ್ರೊಪ್ರೈಟರ್ಸ್: ಯು. ರಾಘವೇಂದ್ರ ಕೃಷ್ಣ ಭಟ್ & ಸನ್ಸ್,
ಸರಾಫ್ ಮತ್ತು ಕಮಿಷನ್ ಏಜಂಟ್ಸ್, **ಉಡುಪಿ.**

ನಮ್ಮಲ್ಲಿ ಖಾತ್ರಿಯಾದ ಪವನು, ಚಿನ್ನ, ಬೆಳ್ಳಿ, ಮುತ್ತು, ಕೆಂಪು, ಪುಷ್ಯರಾಗ, ರಂಗೂನ್ ಡೈಮಂಡ್ಸ್ ಅಮೆರಿಕನ್ ಮತ್ತು ಕೆಮಿಕಲ್ ನಕ್ಲಿ ಡೈಮಂಡ್ಸ್, ಚಿನ್ನದ ಕೆಲಸದವರಿಗೆ ಬೇಕಾಗುವ ಸಾಮಾನುಗಳು, ಉಡುಗೊರೆಗೆ ಬೇಕಾಗುವ ಫೇನ್ಸಿ ಬೆಳ್ಳಿ ಸಾಮಗ್ರಿಗಳು, ನುರಿತ ಕೆಲಸಗಾರರಿಂದ ಖಾತ್ರಿಯಾಗಿ ತಯಾರಿಸಿದ ನೆಕಲೇಸ್, ಲೋಲಕ್, ಬಳೆಗಳು, ರಜತ ಪದಕ, ಕಪ್, ಸ್ಪೋರ್ಟ್ಸ್ ಕಪ್, ಶೀಲ್ಡ್ ಮತ್ತು ಇನ್ನಿತರ ಮಾಲುಗಳು ಮಾಫಕ್ ದರದಲ್ಲಿ ಸಿಗುತ್ತವೆ.

ತಾ. 20—3—56ರಿಂದ ಜನತಾ ಸೌಕರ್ಯಕ್ಕಾಗಿ ತೆಂಕಪೇಟೆಯಲ್ಲಿ ಒಂದು ಶಾಖೆಯನ್ನು ತೆರೆಯಲಾಗಿದೆ.

SRI KRISHNA JEWELLERY MART
Head Office: Tenkapet, **Udipi**. S. K. *Phone:* 66



ಹಿಂದೂ ಉತ್ತರಾಧಿಕಾರ ಶಾಸನ

1, ಕನ್ನಡ ಪ್ರತಿ	0_12_0
2, ,,	0—8—0
3, ಇಂಗ್ಲೀಷ್	0—6—0

ನವಭಾರತ ಪುಸ್ತಕ ಭಂಡಾರ,
ಉಡುಪಿ.

(೧೦ನೇ ಪುಟದಿಂದ)

ಮಾನಸಿಕ ಆರೋಗ್ಯ ಕ್ಷೇತ್ರದಂತಹ ಅನೇಕ ಕ್ಷೇತ್ರಗಳಲ್ಲಿ ಈಗ ಸಂಶೋಧನಾ ವ್ಯವಸ್ಥೆಯೇ ಇಲ್ಲವೆನ್ನಬಹುದು. ದೇಶದಲ್ಲಿ ಮಾನಸಿಕ ಅನಾರೋಗ್ಯದ ಸ್ಥಿತಿಗತಿಗಳ ವಿಚಾರದಲ್ಲಿ ಸಮಾಚಾರ ದೊರೆಯುವಂತಿಲ್ಲ. ಮಾನಸಿಕ ರೋಗಗಳಿಂದ ನರಳುತ್ತಿರುವ ರೋಗಿಗಳನ್ನು ನೋಡಿಕೊಳ್ಳುವುದಕ್ಕಾಗಿ ವೈದ್ಯರಿಗೆ ತರಬೇತಿಯನ್ನೀಯುವ ಕಾರ್ಯಕ್ರಮವೊಂದನ್ನು ಪರಿಷತ್ತು ರೂಪಿಸಿದೆ.

ದೇಶದಲ್ಲಿರುವ ಕೆಲವು ವೈದ್ಯಕೀಯ ಕಾಲೇಜುಗಳಲ್ಲಿ ಶಿಶು ಚಿಕಿತ್ಸಾ ಸಂಬಂಧವಾದ ಕಾರ್ಯವನ್ನು (ಪೆಡಿಯಾಟ್ರಿಕ್) ಅಭಿವೃದ್ಧಿಪಡಿಸುವ ತುರ್ತಿನ ಅಗತ್ಯವಿದೆ. ಈ ಶಿಶು ಚಿಕಿತ್ಸಾ ಸಂಬಂಧವಾದ ಶಾಖೆಗಳಲ್ಲಿ ಕಾರ್ಯಕರ್ತರಿಗೆ ತರಬೇತಿಯನ್ನೀಯಬಹುದಾಗಿದೆ. ಅಲ್ಲದೆ ಶಿಶು ಚಿಕಿತ್ಸಾ ಸಂಬಂಧವಾದ ಸಮಸ್ಯೆಗಳ ಬಗ್ಗೆ ಸಂಶೋಧನೆಯನ್ನು ಉತ್ತೇಜಿಸುವುದು ಅಗತ್ಯವಾಗಿದೆ. ಇತ್ತೀಚೆಗೆ ರಷ್ಯಾದ ಪ್ರವೀಣರ ನೆರವಿನಿಂದ ದೆಹಲಿಯಲ್ಲಿರುವ ಲೇಡಿ ಹಾರ್ಡಿಂಜ್ ಮೆಡಿಕಲ್ ಕಾಲೇಜಿನಲ್ಲಿ ಶಿಶು ಚಿಕಿತ್ಸಾ ಕೇಂದ್ರವನ್ನು ಸ್ಥಾಪಿಸಲಾಗಿದೆ.

ರಾಷ್ಟ್ರೀಯ ಕಾರ್ಯಕ್ರಮ

ವೈದ್ಯಕೀಯ ಸಂಶೋಧನಾ ಕಾರ್ಯಕ್ರಮದಲ್ಲಿ ಮುಖ್ಯ ಸೋಂಕುರೋಗಗಳ ನಿಯಂತ್ರಣ ಸಂಬಂಧವಾದ ರಾಷ್ಟ್ರೀಯ ಕಾರ್ಯಕ್ರಮಗಳ ಬಗ್ಗೆ ವಿಶೇಷ ಪ್ರಾಶಸ್ತ್ಯವನ್ನೀಯಬೇಕಾಗುವುದು. ಕ್ಷಯರೋಗ, ಆನೆಕಾಲು ರೋಗ (ಫೈಲೇರಿಯಾ) ಮತ್ತು ಕುಷ್ಠರೋಗಗಳ ವಿಚಾರದಲ್ಲಿ ರಾಸಾಯನಿಕ ಚಿಕಿತ್ಸಾ ಪದ್ಧತಿಯೊಂದನ್ನು ರೂಪಿಸಲಾಗುತ್ತಿದೆ. ಈ ರೋಗಗಳ ವಿಚಾರದಲ್ಲಿ ಸಿದ್ಧಗೊಳಿಸುತ್ತಿರುವ ಯೋಜನೆಗಳು ಸಂಶೋಧನಾ ಸ್ವರೂಪದ್ದಾಗಿವೆ. ತನ್ನ ಕರ್ತವ್ಯ ನಿರ್ವಹಣೆಯಲ್ಲಿ ಪರಿಷತ್ತಿನವರು ಭಾರಿ ಹೊಣೆಯನ್ನು ಹೊತ್ತಿರುವರು. ಸೋಂಕು ರೋಗಗಳ ಸಂಬಂಧವಾಗಿ ಸಲಹಾ ಸಮಿತಿಯೊಂದನ್ನು ಸ್ವಚ್ಛ ವಾತಾವರಣದಲ್ಲಿ ಪರಿಷತ್ತಿನವರು ಇತ್ತೀಚೆಗೆ ಸ್ಥಾಪಿಸಿರುವರು.

ಪೌಷ್ಟಿಕ ಆಹಾರ ಕ್ಷೇತ್ರದಲ್ಲಿ ವೈದ್ಯಕೀಯ ಸಂಶೋಧನಾ ಪರಿಷತ್ತು ಹಲವಾರು ಕಾರ್ಯಕ್ರಮಗಳನ್ನು ಹೊಂದಿದೆ. ಪೌಷ್ಟಿಕ ಆಹಾರ ನ್ಯೂನತೆಯಿಂದ ಜನರ ನಿರ್ದಿಷ್ಟ ರೋಗಗಳನ್ನು ಹತೋಟಿಗೆ ತರುವ ಸಂಬಂಧವಾದ ಸಂಶೋಧನೆ ಜನಸಾಮಾನ್ಯರಿಗೆ ಪೌಷ್ಟಿಕ ಆಹಾರ ಸಂಬಂಧವಾದ ಶಿಕ್ಷಣಕೊಡುವುದು, ರಾಜ್ಯಗಳಲ್ಲಿ ಪೌಷ್ಟಿಕ ಆಹಾರ ಸಂಬಂಧ ಕಾರ್ಯವನ್ನು ಸಂಘಟಿಸುವುದು. ಪ್ರೋಟೀನ್ ಪೌಷ್ಟಿಕ ಆಹಾರ ನ್ಯೂನತೆಯಿಂದ ಬರುವ ರೋಗಗಳ ಸಮೀಕ್ಷೆ ಹಾಗೂ ಪ್ರತಿಬಂಧ ಮುಂತಾದ ವಿಚಾರಗಳ ಬಗ್ಗೆ ಪರಿಷತ್ತು ಕಾರ್ಯಕ್ರಮಗಳನ್ನು ಹೊಂದಿದೆ.

ಈ ಕ್ಷೇತ್ರದಲ್ಲಿರುವ ಮತ್ತೊಂದು ಅಮೂಲ್ಯವಾ ಕಾರ್ಯಕ್ರಮವೆಂದರೆ ಶಾಲಾ ಮಕ್ಕಳಿಗೆ ಮಧ್ಯಾಹ್ನದ ವೇಳೆಯಲ್ಲಿ ಆಹಾರವನ್ನೊದಗಿಸುವ ಸಂಬಂಧವಾದ ಯೋಜನೆ. ದ್ವಿತೀಯ ಯೋಜನಾವಧಿಯಲ್ಲಿ ಈ ಯೋಜನೆಗೆ ಪ್ರಾಧಾನ್ಯತೆಯನ್ನೀಯಬೇಕೆಂದು ವೈದ್ಯಕೀಯ ಪರಿಷತ್ತಿನ ಪೌಷ್ಟಿಕ ಆಹಾರ ಸಮಿತಿಯು ಸರಕಾರಕ್ಕೆ ಶಿಫಾರಸು ಮಾಡಿದೆ. ಮಧ್ಯಾಹ್ನ ಕಾಲದಲ್ಲಿ ಒದಗಿಸುವ ಆಹಾರಕ್ಕೆ ಸರಾಸರಿ ಎರಡು ಆಣೆಗಳ ವೆಚ್ಚವಾಗುವುದೆಂದು ಸಮಿತಿಯು ಅಂದಾಜುಮಾಡಿದೆ. ಎಲ್ಲ ಪ್ರಾಥಮಿಕ ಶಾಲಾ ಮಕ್ಕಳಿಗೂ ವರ್ಷಕ್ಕೆ 220 ದಿನಗಳ ಕಾಲ ಮಧ್ಯಾಹ್ನದ ಆಹಾರವನ್ನು ಒದಗಿಸಲು ವರ್ಷಕ್ಕೆ 42 ಕೋಟಿ ರೂ. ಗಳ ವೆಚ್ಚ ತಗಲುವುದೆಂದು ಅಂದಾಜು ಮಾಡಲಾಗಿದೆ; ಈ ರೀತಿ ಮಾಡುವ ವೆಚ್ಚವು ಅರ್ಥವಾದುದೆಂದೂ ಬೆಳೆಯುವ ಮಕ್ಕಳ ಆರೋಗ್ಯ ಸುಧಾರಿಸುವುದೆಂದೂ ಸಮಿತಿಯು ಅಭಿಪ್ರಾಯಪಟ್ಟಿದೆ. ಪೌಷ್ಟಿಕ ಆಹಾರ ಸಂಶೋಧನಾ ಪ್ರಯೋಗ ಶಾಲೆಗಳನ್ನು ಸ್ಥಾಪಿಸಬೇಕೆಂದು ಸಮಿತಿಯು ಶಿಫಾರಸು ಮಾಡಿದೆ.

ವಿಷಾಣು ಸಂಶೋಧನಾ ಕೇಂದ್ರ

ಸೋಂಕು ರೋಗಗಳ ಕ್ಷೇತ್ರದಲ್ಲಿ ಕ್ಷಯ ಹಾಗೂ ವಿಷಾಣು (ವೈರಸ್) ಸಂಬಂಧವಾದ ಸಂಶೋಧನಾ ಕಾರ್ಯಕ್ರಮಗಳು ಸಾರ್ವಜನಿಕ ಆರೋಗ್ಯ ದೃಷ್ಟಿಯಿಂದ ಮಹತ್ವಪೂರ್ಣವಾದವು. ಮುಂದಿನ ಐದು ವರ್ಷಗಳಲ್ಲಿ ವೈದ್ಯಕೀಯ ಸಂಶೋಧನಾ ಪರಿಷತ್ತು ಅಖಿಲಭಾರತದ ರೋಗ ಸಮೀಕ್ಷೆಯೊಂದನ್ನು ಕೈಗೊಳ್ಳಲು ಉದ್ದೇಶಿಸಿದುದಲ್ಲದೆ ಸಾಂಕ್ರಾಮಿಕ ರೋಗಗಳ ಬಗ್ಗೆ ಸಂಶೋಧನೆಯನ್ನು ಶೀಘ್ರಗೊಳಿಸಲು ಉದ್ದೇಶಿಸಿವೆ. ವಾಸ್ತವವಾಗಿ ವಿಷಾಣು ಸಂಶೋಧನೆಯು ಭಾರತದಲ್ಲಿ ಇನ್ನೂ ಅಭಿವೃದ್ಧಿಗೊಂಡಿಲ್ಲ.

ಇನ್‌ಫ್ಲುಯಂಜಾ ಮುಂತಾದ ಸಾಂಕ್ರಾಮಿಕ ರೋಗಗಳ ವಿಚಾರದಲ್ಲಿ ಇತ್ತೀಚೆಗೆ ಕೆಲವು ಸಂಶೋಧಕರು ಪರಿಷತ್ತಿನ ನೆರವಿನಿಂದ ಸಂಶೋಧನಾ ಕಾರ್ಯವನ್ನು ಕೈಗೊಂಡಿರುವರು. ಮುಂಬೈನಲ್ಲಿ 1950ರಲ್ಲಿ ಶಿಶುಪಾರ್ಶ್ವರೋಗವು (ಪೋಲಿಯೋ ಮೈಟಿಸ್) ತಲೆದೋರಿದಾಗ, ಪರಿಷತ್ತು ಈ ರೋಗ ಸಂಬಂಧವಾದ ಸಮಸ್ಯೆಯ ಅಧ್ಯಯನಕ್ಕಾಗಿ ಇಲ್ಲಿ ಕೇಂದ್ರವೊಂದನ್ನು ಸ್ಥಾಪಿಸಿತು. ಈ ಕೇಂದ್ರವು ನಡೆಸಿದ ಉಪಯುಕ್ತ ಕಾರ್ಯವು ಎಲ್ಲರಿಗೂ ತಿಳಿದ ವಿಷಯವೇ ಆಗಿರುವುದು.

ಕಾಮಾಲೆ ರೋಗವು (ಜಾಂಡೀಸ್) ಈಚೆಗೆ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿ ಗಮನ ಸೆಳೆಯುತ್ತಿದೆ. ಉತ್ತರ ಭಾರತದ ಅನೇಕ ಸ್ಥಳಗಳಲ್ಲಿ ಪ್ರಸಿದ್ಧಿ ಪಡೆದ ವಿಸ್ಮಯ ರೋಗವಿದೊಂದು ಹಾಗೂ ಮಕ್ಕಳಿಗೇ ಮುಖ್ಯವಾಗಿ ತಗಲುವ ಮೆದುಳಿನ ರೋಗವು (ಎಂಕೆಫೆಲೈಟಿಸ್) ಹೊರಕಾಣಿಸಿದೆ ಎಂದು ವರದಿಯಾಗಿದೆ. ಈ ರೋಗದ ವಿಚಾರದಲ್ಲಿ ಪರಿಷತ್ತು ತೀವ್ರವಾಗಿ ಪರಿಶೀಲನೆ ನಡೆಸುತ್ತಿದೆ.

ವಿಷಾಣು ರೋಗಗಳ ನಿವಾರಣೆಯ ಬಗ್ಗೆ ಪರಿಷತ್ತು ರಾಕೆಫೆಲ್ಲರ್ ಫೌಂಡೇಶನ್ ಸಂಸ್ಥೆಯ ನೆರವಿನೊಂದಿಗೆ 1950ರಲ್ಲಿ ಪುಣೆಯಲ್ಲಿ ವಿಷಾಣು ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸಿತು. ಈ ಕೇಂದ್ರವು ಸಂಧಿಪದಿಗಳ (ಅರ್ಥೋಪಾಡ್) ಮೂಲಕ ತಗಲುವ ಸಾಂಕ್ರಾಮಿಕ ರೋಗಗಳ ಸಂಬಂಧವಾದ ಸಮಸ್ಯೆಗಳನ್ನು ಕುರಿತು ಸಂಶೋಧನೆ ನಡೆಸುತ್ತಿದೆ.

ವಿಷಾಣು ಸಂಶೋಧನಾ ಸಂಬಂಧವಾದ ಕ್ಷೇತ್ರಗಳಲ್ಲಿ ಸಂಶೋಧಕರಿಗೆ ತರಬೇತಿ ಕೊಡುವುದು ಮತ್ತು ಸಾಂಕ್ರಾಮಿಕ ರೋಗಗಳ ವಿಚಾರದಲ್ಲಿ ಸಮಿತಿಯೇ ಪರಿಶೀಲನೆ ನಡೆಸಲು ಸೌಲಭ್ಯಗಳನ್ನು ಕಲ್ಪಿಸುವುದು ಪರಿಷತ್ತಿನ ಕಾರ್ಯಕ್ರಮವಾಗಿದೆ. ಇದಕ್ಕಾಗಿ ಪುಣೆಯ ವಿಷಾಣು ಸಂಶೋಧನಾ ಕೇಂದ್ರದ ವ್ಯಾಪ್ತಿಯನ್ನು ವಿಸ್ತರಿಸಲು ಉದ್ದೇಶಿಸಿದೆ.

ಪರಿಷತ್ತಿನ ವೈದ್ಯಕೀಯ ಸಂಶೋಧನಾ ಕಾರ್ಯವು ವಿಪುಲವಾಗಿ ವಿಸ್ತರಿಸಿದೆ. 1947ರಲ್ಲಿ ಪರಿಷತ್ತಿನ ಒಟ್ಟು ಆದಾಯದಲ್ಲಿ ನೂರಕ್ಕೆ ಕೇವಲ ಎರಡರಷ್ಟನ್ನು ಕಾಲೇಜುಗಳಲ್ಲಿ ವೈದ್ಯಕೀಯ ಸಂಶೋಧನೆಗಾಗಿ ವಿನಿಯೋಗಿಸಲಾಗುತ್ತಿತ್ತು. ಆದರೆ ಈಗ ನೂರಕ್ಕೆ 40ರಷ್ಟನ್ನು ವಿನಿಯೋಗಿಸಲಾಗುತ್ತಿದೆ.

ವೈದ್ಯಕೀಯ ಕ್ಷೇತ್ರದಲ್ಲಿ ಇಂದು ಇಂತಹ ನೂರಾರು ಮೇಧಾವಿಗಳು ಮನುಷ್ಯನನ್ನು ರೋಗಮುಕ್ತನಾಗಿ ಮಾಡುವ ಉಪಾಯವನ್ನು ಕಂಡುಕೊಳ್ಳಲು ಹಗಲಿರುಳು ಶ್ರಮಿಸುತ್ತಿದ್ದಾರೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 287/56.

ಶಿರೂರಿ ಶ್ರೀ ಭವಾನಿ ಶಂಕರ ದೇವರ ಭಂಡಾರ —ವಾದಿ

ಲಕ್ಷ್ಮಿ ಹೆಂಗ್ಸು ಸಹಾ. —ಪ್ರತಿವಾದಿರು

ಸದ್ರಿ ವಾದಿ ಕಡೆಯಿಂದ ಈ ಮೂಲಕ ಜಾಹೀರುಮಾಡಿಕೊಳ್ಳುವದೇನೆಂದ್ರೆ,

2. ಗೋವಿಂದ ಜವಾನಿ ಮಂಚನ ತಮ್ಮ ಹೆಮ್ಮಾಡಿಗ್ರಾಮ.

ಪ್ರತಿವಾದಿರಿಂದ ಮನ್ಮಥ ಸಂವತ್ಸರಕ್ಕೆ ಬರತಕ್ಕ ಬಹಾ ಚಾಲಗೇಣಿ ಗೇಣಿ ಬಗ್ಗೂ ಆಸ್ತಿ ಸ್ವಾಧೀನತೆ ಮತ್ತು ನಂತ್ರದ ಹುಟ್ಟುವಳಿಯ ಬಗ್ಗೂ ಪ್ರತಿವಾದಿ ಕೂಡಾ ವ ಸ್ಥಳದಲ್ಲಿ ಮಾಡಿದ ನಷ್ಟದ ಬಗ್ಗೂ ಕೂಡಾ ಮಾಡಿದ ಮೇಲ್ಕಂಡ ದಾವೆಯು ತಾ. 31-8-56ಕ್ಕೆ ತಸ್ಸಿಗೆ ಇಡೋಣಾಗಿಯದೆ. ಆ ಕುರಿತು ನಿಮ್ಮ ದೇನಾದರೂ ಉದಾಹರಣೆಯಿದ್ರೆ ಸದ್ರಿ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ವಾದಿ ಕಡೆಯಿಂದ ಈ ಮೂಲಕ ತಿಳಿಯಪಡಿಸಿಯದೆ.

G. Sanjiva Rao.
Vakil for Plff.
Kundapoor Dated 11 8 56.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

O. S. No. 192/1956.

ಗುಣಪಾಲ ಶೆಟ್ಟಿ —ವಾದಿ

ಮತ್ತು

ಪುಟ್ಟಪ್ಪ ಕನ್ನಡ. ಮಂಜಪ್ಪ ಕನ್ನಡರ ಮಗ. ಕಾರ್ಕಳ ತಾಲೂಕು ಬಡಗಕಾರಂದೂರು ಗ್ರಾಮದ ಹಾಣಂಜೆ ಎಂಬಲ್ಲಿರುವವ —ಪ್ರತಿವಾದಿ

ಕೋರ್ಟು ಹುಕುಂಪ್ರಕಾರ ಸದ್ರಿ ದಾವೆಯ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ,

ಸದ್ರಿ ದಾವೆಯ ವಾದಿಯು ಪ್ರತಿವಾದಿಯ ಮೇಲೆ ಗೇಣಿ ಬಾಕಿಗೂ, ಆಸ್ತಿ ಸ್ವಾಧೀನತೆಗೂ, ಹುಟ್ಟುವಳಿಗೂ ಮಾಡಿದ ಸದ್ರಿ ದಾವೆಯು ಪ್ರತಿವಾದಿಯ ಉದಾಹರಣೆಯ ಬಗ್ಗೆ ತಾ 10—9—1956ಕ್ಕೆ ಇಟ್ಟಿದೆ. ಆದ್ರಿಂದ ಸದ್ರಿ ದಾವೆ ಕುರಿತು ಆಕ್ಷೇಪಯಿದ್ದಲ್ಲಿ ಪ್ರತಿವಾದಿಯು ಸದ್ರಿ 10—9—1956 ನೇ ದಿವಸ ಬೆಳಿಗ್ಗೆ 11 ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಜಾಹೀರುಮಾಡಿಕೊಳ್ಳತಕ್ಕದ್ದು.

(Sd)
H. K. Gopalkrishna Rao.
Vakil for Plff.
Karkala 14—8—1956.

'NAVAYUGA' WEEKLY is in the list of periodicals and Newspapers approved for use in Secondary Schools as per proceedings Roc. No. 466 N/50 dated 12-12-1950 of the Director of public Instruction, Madras.

Edited, Printed & Published by K. H. Shetty, at the Navayuga press, Udipi S. India

ನವಯುಗ.

1956 - 1957